ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು
ದಿನಾಂಕ 31/8/95

ಅಧಿಕೃತ ವರದಿ

OFFICIAL REPORT

ಒಂಬತ್ತನೇ ಅಧಿವೇಶನ

NINTH SESSION

ಸಂಪುಟ ೪ - (ಕ್ರಮಾಂಕ ೧ ರಿಂದ ೫)

VOLUME IV - (Nos. 1 to 5)

(೨೩ನೇ ಫೆಬ್ರವರಿ ಯಿಂದ ೨೫ನೇ ಫೆಬ್ರವರಿ
ಮತ್ತು ೧ನೇ ಮಾರ್ಚ್ ರಿಂದ ೨ನೇ ಮಾರ್ಚ್ ೧೯೯೩ ರ ವರೆಗೆ)

*(23rd February to 25th February and
1st March to 2nd March 1993)*

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ, ಬೆಂಗಳೂರು

Karanataka Legislative Secretariat, Bangalore

ವಿಷಯಾನುಕ್ರಮಣಿಕೆ

23-2-93

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ
ಶ್ರೀ ಬಿ.ಎಸ್. ಯಡಿಯೂರಪ್ಪ (ಎಂ.ಎಲ್.ಎ) ರವರ ಬಂಧನ 1
2. ಸಂತಾಪ ಸೂಚನೆ 2
3. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 3-39
4. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 39-99
5. ದಿನಾಂಕ: 22–2–93ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ
ಪ್ರಶ್ನೋತ್ತರಗಳು. 100-126
6. ಕಾರ್ಯದರ್ಶಿಯವರ ವರದಿ. 126
7. ಹಕ್ಕು ಚ್ಯುತಿ ನಿರ್ಣಯ 127-135

ಬಸ್ಸಿನ ದರ ಏರಿಕೆಯನ್ನು ವಾಪಸ್ ಪಡೆದಿರುವ ಬಗ್ಗೆ ಸ್ಪಷ್ಟೀಕರಣ.

8. ಮಂತ್ರಿಗಳ ಹೇಳಿಕೆ 136-136

"ಬಿ.ಜೆ.ಪಿ. ಕಾರ್ಯಕರ್ತರ ಬಂಧನ–ಬಿಡುಗಡೆ"

-ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

9. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ 136-145
ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ಅರೆಸ್ಟ್ ಮಾಡಿರುವುದು.
(ಅನುಮತಿ ನಿರಾಕರಿಸಲಾಯಿತು)
10. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ 145-153

ರಾಜ್ಯದಲ್ಲಿ ವಿದ್ಯುತ್ ಕೊರತೆಯಿಂದ ರೈತರ ಬೆಳೆಗಳ ಹಾನಿ

11. ನಿಯಮ 334ರ ಮೇರೆಗೆ 153-155
   1. ಹಾಸನದ ಸಿಟಿ ಬಸ್ ಸ್ಟ್ಯಾಂಡಿಗೆ ನುಗ್ಗುತ್ತಿರುವ ಮಳೆಯ ನೀರನ್ನು ತಡೆಯುವುದು.
   2. ಕೌಂಡಿನ್ಯ ನದಿಗೆ ಅಡ್ಡಲಾಗಿ ಸೇತುವೆಯನ್ನು ಕಟ್ಟುವುದು.
   3. ಆಶ್ರಯ ಯೋಜನೆಯಲ್ಲಿ ಸರ್ವೆ ನಂದ 24 ನಿಂಬೆಮರದ ಹಳ್ಳಿಯಲ್ಲಿ 4 ಎಕರೆ ಜಮೀನನ್ನು ಸೈಟುಗಳನ್ನಾಗಿ ಮಾಡುವುದು.
   4. 5 ಹೆಚ್.ಪಿ. ಹಾಗೂ 10 ಹೆಚ್.ಪಿ.ಗೆ ಎಲೆಕ್ಟ್ರಿಕಲ್ ಪಂಪ್‌ಸೆಟ್ಟಿಗೆ ಸರ್ಕಾರದಿಂದ ವಾರ್ಷಿಕ ಬಾಡಿಗೆ ವಿನಾಯಿತಿ ಮಾಡುವುದು.
12. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ
ಮೇಲಿನ ಚರ್ಚೆ (ಮುಂದುವರೆದುದು) 155-194

24-2-93

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 195-227

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 227-307

3. ಪ್ರಕಟಣೆ. 308-310

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ. 310-334

1. ಅರಣ್ಯ [illegible]
2. ಹೊರ ರಾಜ್ಯಕ್ಕೆ [illegible] ಹೋಗುತ್ತಿರುವ [illegible]
3. ಸಮನಾಂತರ [illegible] ಬಗ್ಗೆ [illegible]

5. ನಿಯಮ 334ರ ಮೇರೆಗೆ 334-340

1. ಹಾಸನದ ಸಂತೆ ಮತ್ತು ಜಾತ್ರೆ ಮೈದಾನಕ್ಕೆ ಭೂಸ್ವಾಧೀನ
2. ಮೂಡುಬಿದರೆ ಕ್ಷೇತ್ರದ ಕೆಮ್ರಾಲ್ ಗ್ರಾಮ ಹರಿಪಾದೆ ಎಂಬಲ್ಲಿ ಕಲ್ಲುಗಣಿ ಕೈಗಾರಿಕೆಗಳಿಂದ [illegible] ಜೀವ ಅಪಾಯ.
3. ಹುಬ್ಬಳ್ಳಿ – ಧಾರವಾಡ ಅವಳಿ ನಗರಗಳ ಮಧ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿ.
4. ಕರ್ನಾಟಕ ರಾಜ್ಯ ಮಂಡಲ ಪಂಚಾಯತ್ [illegible]
5. ಕರ್ನಾಟಕ ವಿದ್ಯುತ್ ಮಂಡಳಿಯಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ಪದವೀಧರರಾದ [illegible] ಮುಂಬಡ್ತಿ ನೀಡಲಾಗುತ್ತಿದ್ದು ಕಲಾ ಪದವೀಧರರಿಗೆ ([illegible])
6. ಬೆಂಗಳೂರು ನಗರದ ಶ್ರೀರಾಮಪುರ [illegible] ವೋಲ್ಟೇಜ್‌ನಿಂದ ವಿದ್ಯುತ್ ಉಪಕರಣಗಳು [illegible] ಸುಟ್ಟು ಹೋಗಿದ್ದು ಅದಕ್ಕಾಗಿ ವಿದ್ಯುತ್ ಮಂಡಳಿಯವರಿಂದ ಸೂಕ್ತ ಪರಿಹಾರ.
7. ಸಂಗಮೇಶ್ವರ ಹಾಗೂ ಬೆಳಗಲಿ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯ.

6. ಮಂತ್ರಿಗಳ ಹೇಳಿಕೆ.

17.2.1993 ರಂದು ವಿದ್ಯುತ್ ಜಾಲದಲ್ಲಿ ಆದ ಅಡಚಣೆ 340-352

7. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ 352-401

25-2-93

1. ಕೇಂದ್ರದ ರೈಲ್ವೆ ನೀತಿಯಿಂದ ಕರ್ನಾಟಕಕ್ಕೆ ಅನ್ಯಾಯ 403

2. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 403-440

3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 440-462

4. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು. 462-485

III

IV

1. ಕರ್ನಾಟಕದಲ್ಲಿ ಹೊಗೇಸೊಪ್ಪು ಬೆಳೆಗಾರರಿಗೆ ಹೊಗೇಸೊಪ್ಪು
ಖರೀದಿಯಲ್ಲಿ ತೊಂದರೆ
2. ಬಿ.ಜೆ.ಪಿ. ಕಾರ್ಯಕರ್ತರನ್ನು ಹಾಗೂ ನಾಯಕರುಗಳನ್ನು ಜೈಲಿಗೆ ಹಾಕಿರುವುದು.
3. ಸಮಾನಂತರ ಕಾಲುವೆ ವಿಚಾರ

5. ನಿಯಮ 334ರ ಮೇರೆಗೆ 486-517

1) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ಪಾರುಬೆಳ್ಳೆ ಗ್ರಾಮದಲ್ಲಿರುವ ಸಾಲಕೇರಿಯಲ್ಲಿನ ಶ್ರೀ ಬ್ರಹ್ಮಲಿಂಗ ವೀರಭದ್ರ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಹೊಂದಿಕೊಂಡಿರುವ ಜಮೀನಿನ ಬಗ್ಗೆ ಕುರಿತು.
2) ಬೆಂಗಳೂರು ಮಾತೃ ಡೈರಿಯ ಅಧೀನದಲ್ಲಿರುವ ಶ್ರೀರಾಮಪುರದಲ್ಲಿರುವ ಬಲ್ಕ್ ವೆಂಡಿಂಗ್ ಬೂತ್.
3) ಕರ್ನಾಟಕದಲ್ಲಿ ರಾಜ್ಯ ಸರ್ಕಾರ ವಿಶ್ವಬ್ಯಾಂಕಿನ ನೆರವಿನಿಂದ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಪ್ರೇರಕ-ಪ್ರೇರಕಿಯರನ್ನು ಖಾಯಂ ಮಾಡುವುದು.
4) ಗದಗ್ ತಾಲ್ಲೂಕಿನ ತಿಮ್ಮಾಪುರ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ.
5. ಕರ್ನಾಟಕ ಮೀನುಗಾರರ ಅಭಿವೃದ್ಧಿ ನಿಗಮದ ಬಗ್ಗೆ ಕುರಿತು.
6. ಚಿಕ್ಕಮಗಳೂರಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ.
7. ಕರ್ನಾಟಕ ರಾಜ್ಯದಲ್ಲಿನ ಖಾಯಂ ಹುದ್ದೆಯಲ್ಲಿರುವವರ ವಿದೇಶಗಳಲ್ಲಿ ಉದ್ಯೋಗವಕಾಶ ಪಡೆದಿರುವುದು.

6. ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರೆದುದು) 517-540

1-3-93

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು. 541-549
2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 550-555
3. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು. 555-589
4. ದಿನಾಂಕ:26–2–93ರ ಚುಕ್ಕೆ ಗುರುತು ಮತ್ತು ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು. 589-604
5. ಅಧ್ಯಕ್ಷರ ಅಪ್ಪಣೆ ಪಡೆದು ಪ್ರಸ್ತಾಪಿಸಲಾದ ವಿಷಯಗಳು. 604-616
   1. "ಡಂಕಲ್ ಪ್ರಸ್ತಾವನೆಯನ್ನು ವಿರೋಧಿಸಲು ದೆಹಲಿಗೆ ಹೊರಟ ರೈತರ ಬಂಧನ"
   2. ಹಿಂದುಳಿದ ವರ್ಗಗಳ ರಚನೆಯ ಪ್ರಕಟಣೆಯನ್ನು ಸದನದಲ್ಲಿ ಮಾಡದಿರುವ ಬಗ್ಗೆ.
6. ನಿಯಮ 334ರ ಮೇರೆಗೆ 616-619
   1. ಬೆಂಗಳೂರು ನಗರದ ರಸ್ತೆಗಳ ದುರಸ್ತೆ.

2. ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರ ಪೇಟೆಗಳಲ್ಲಿ ಮನೆ ನಿವೇಶನಗಳನ್ನು ಹಂಚುವುದರ ಕುರಿತು.

3. ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ಗೋರೂರು ಹತ್ತಿರ ಹೇಮಾವತಿ ನದಿಗೆ ಡ್ಯಾಂ ಕಟ್ಟಿರುವುದರಿಂದ ಹಾಸನ ತಾಲ್ಲೂಕಿನ ಫಲವತ್ತಾದ ಜಮೀನು ಮುಳುಗಡೆಯಾಗಿರುವುದು

4. 1990ನೇ ಇಸವಿಯ ಕೋಮುಗಲಭೆಗಳಲ್ಲಿ ಉಂಟಾದ ನಷ್ಟಕ್ಕೆ ಪರಿಹಾರ.

7. ಪ್ರಕಟಣೆ 619

8. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪದ ಮೇಲಿನ ಚರ್ಚೆ (ಮುಂದುವರೆದುದು) 619-643

9. ಸಚಿವರಿಂದ ಹೇಳಿಕೆ

ರೈತ ಸಂಘದ ದಸ್ತಗಿರಿ ಕುರಿತು. 643-651

10. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪದ ಮೇಲಿನ ಚರ್ಚೆ ಹಾಗೂ ಮುಖ್ಯಮಂತ್ರಿಗಳಿಂದ ಉತ್ತರ. 651-754

2-3-93

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು. 755-799

2. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು. 799-918

3. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ. 918-929

(1) ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯವರ ವಿಚಾರ.

(2) ಡಂಕಲ್ ವರದಿ ಪ್ರಸ್ತಾವನೆಯ ವಿಚಾರಣೆಯಲ್ಲಿ ರೈತರ ದಸ್ತಗಿರಿ.

4. ಗಮನ ಸೆಳೆಯುವ ಸೂಚನೆಗಳು 929-943

(1) ಭಾರತ ಸರ್ಕಾರದ ಹತ್ತಿ ನಿಗಮದವರಿಂದ ಕರ್ನಾಟಕ ರಾಜ್ಯದಿಂದ ಹತ್ತಿ ಖರೀದಿ.

(2) ರಾಜ್ಯ ಹಾಲು ಉತ್ಪಾದಕರ ಒಕ್ಕೂಟಗಳು ರೈತರಿಗೆ ಹಣವನ್ನು ಬಟವಾಡೆ ಮಾಡದಿರುವುದು.

5. ನಿಯಮ 334ರ ಮೇರೆಗೆ 943-949

1. ಮೈಸೂರು ನಗರದ ಜಯಲಕ್ಷ್ಮಿಪುರಂನಲ್ಲಿರುವ 5 ಎಕರೆ ಪ್ರದೇಶದಲ್ಲಿ ಆಸ್ಪತ್ರೆ ಕಟ್ಟಲು ಒತ್ತಾಯ.

2. ಹಾಸನ ಕ್ಷೇತ್ರದ ಶಾಂತಿ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆಗೆ ಹೆರಿಗೆ ವಾರ್ಡ್.

3. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೇನು ಕೃಷಿ.

4. ಅರಣ್ಯ ಇಲಾಖೆಯ ಗಾರ್ಡ್ಸ್ ಸಿಬ್ಬಂದಿಗಳ ವರ್ಗಾವಣೆ.

5. ಬೆಳಗಾಂ ತಾಲ್ಲೂಕು ನೀಲಜಿ ಗ್ರಾಮದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಪ್ರಾರಂಭಿಸುವುದು.

6. ರಾಜ್ಯದಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ರೈತರ ಜಮೀನನ್ನು ಸಕ್ರಮಗೊಳಿಸುವುದು.

7. ಮಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯ ಎಕ್ಸ್‌ಪ್ರೆಸ್ ಮತ್ತು ನಾನ್ ಸ್ಟಾಪ್ ಸರ್ವಿಸ್ ಬಸ್ಸುಗಳನ್ನು ಓಡಿಸುವುದು.

6.	ಚುನಾವಣಾ ಪ್ರಸ್ತಾವನೆ	949-951
7.	ಸರ್ಕಾರಿ ನಿರ್ಣಯಗಳು	951-952
	"ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368(2)ನೇ ಅನುಚ್ಛೇದದ (ಸಿ) ಮತ್ತು (ಇ) ಖಂಡಗಳ ವ್ಯಾಪ್ತಿಯಲ್ಲಿ ಬರುವ 1991ನೇ ಇಸವಿಯ ಸಂವಿಧಾನದ 72ನೇ ತಿದ್ದುಪಡಿ ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ ಎಂದು ಸೂಚಿಸುವುದು.	
8.	ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ ರಾಜ್ಯದಲ್ಲಿ ಓಲ್ಟೇಜ್ ಕಡತಕ್ಕೆ ಹೇಳಿಕೆ ನೀಡುವಂತೆ ಒತ್ತಾಯ.	952-964
9.	ಸರ್ಕಾರಿ ನಿರ್ಣಯಗಳು (ಮುಂದುವರೆದದ್ದು)	964-992
10.	ಪ್ರಕಟಣೆ	992

ಕರ್ನಾಟಕ ವಿಧಾನಸಭೆ

ಮಂಗಳವಾರ 23ನೇ ಫೆಬ್ರವರಿ 1993 ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ. ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಶಾಸಕ ಶ್ರೀ. ಬಿ.ಎಸ್. ಯಡಿಯೂರಪ್ಪನವರ ಬಂಧನ

ಶ್ರೀ ಕೆ.ಎಸ್. ಈಶ್ವರಪ್ಪ:- ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯ ಘಟಕದ ಅಧ್ಯಕ್ಷರಾದ ಯಡಿಯೂರಪ್ಪನವರನ್ನು ಮತ್ತು ಇತರೆ ಶಾಸಕರನ್ನೆಲ್ಲಾ ಬಂಧಿಸಿ ಇವತ್ತು ಜೈಲಿನಲ್ಲಿ ಹಾಕಿದ್ದಾರೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ವೇಳೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಒಂದು ವಿರೋಧ ಪಕ್ಷವಾಗಿ ಕೆಲಸ ಮಾಡಬೇಕೆಂಬ ಇಚ್ಛೆ ನಮಗೆ ಇದೆ. ಇಲ್ಲಿ ವಿರೋಧ ಪಕ್ಷವಾಗಿ ಕೆಲಸ ಮಾಡುವುದಕ್ಕೆ ತುಂಬಾ ತೊಂದರೆಯಾಗುತ್ತಿದೆ. ಈ ಸರ್ಕಾರಕ್ಕೆ ವಿರೋಧ ಪಕ್ಷಗಳು ಕೆಲಸ ಮಾಡಬೇಕು ಎನ್ನುವ ಅಪೇಕ್ಷೆ ಇಲ್ಲವೋ ಏನೋ?

ಅಧ್ಯಕ್ಷರು:- ಪ್ರಶ್ನೋತ್ತರ ವೇಳೆ.

† ಶ್ರೀ ಆರ್.ವಿ. ದೇಶಪಾಂಡೆ:- ನಾವು ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇವೆ ಎಂದರೆ ಎಂ.ಎಲ್.ಎ.ಗಳನ್ನು ಅಧಿವೇಶನ ನಡೆಯುವಾಗ ತಾವು ಅರೆಸ್ಟ್ ಮಾಡಿರುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ರ್‍ಯಾಲಿ ಮಾಡುವುದಕ್ಕೆ ನಮ್ಮ ದೃಷ್ಟಿಯಿಂದ ಕೇಂದ್ರ ಸರ್ಕಾರ ಅದಕ್ಕೆ ಪರ್ಮಿಷನ್ ಕೊಡಬೇಕಾಗಿತ್ತು. ಪ್ರಜಾಪ್ರಭುತ್ವದಲ್ಲಿ ಯಾರೇ ರ್‍ಯಾಲಿ ಮಾಡಬೇಕಾದರೂ ಪೀಸ್‌ಫುಲ್ ಆಗಿ ಮಾಡಬಹುದು. ಅದು ಅವರಿಗೆ ಅಧಿಕಾರ ಇದೆ. ಆ ಅಧಿಕಾರವನ್ನು ಯಾರು ಕಸಿದುಕೊಳ್ಳುವುದಕ್ಕೆ ಆಗುವುದಿಲ್ಲ. ಆದರೆ ನಿಮ್ಮ ಕೇಂದ್ರ ಸರ್ಕಾರದವರು ಆ ಅಧಿಕಾರವನ್ನು ಕಸಿದುಕೊಂಡಿದ್ದಾರೆ. ಏತಕ್ಕೆ ಕಸಿದುಕೊಂಡಿದ್ದಾರೆ, ಏತಕ್ಕೆ ಈ ರೀತಿ ಮಾಡಿದ್ದಾರೋ ನನಗಂತೂ ಗೊತ್ತಿಲ್ಲ. ಅಧಿವೇಶನ ನಡೆಯುವಾಗ ಎಂ.ಎಲ್.ಎ.ಗಳನ್ನು ಅರೆಸ್ಟ್ ಮಾಡಿ ಇಟ್ಟುಕೊಳ್ಳುವುದು ಸರಿಯಲ್ಲ. ಇಲ್ಲಿ ಯಾವ ಪಕ್ಷದವರೇ ಇರಲಿ, ಪ್ರಜಾಪ್ರಭುತ್ವದಲ್ಲಿ ಫ್ರೀಯಾಗಿ ಮಾತನಾಡುವುದಕ್ಕೆ ಚರ್ಚೆ ಮಾಡುವುದಕ್ಕೆ ಅವಕಾಶ ಇರಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದು ಸರಿಯಲ್ಲ. ಇಮ್ಮಿಡಿಯೇಟ್ಟಾಗಿ ಅವರನ್ನು ರಿಲೀಸ್ ಮಾಡಿ, ಅವರು ಇಲ್ಲಿ ಪಾರ್ಟಿಸಿಪೇಟ್ ಮಾಡಲಿ. ಈ ಸರ್ಕಾರ ಏನು ಕೆಲಸವನ್ನು ಮಾಡಿದೆ, ಅದು ಸರಿಯಲ್ಲ ಎಂದು ನಾನು ಖಂಡನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಈ ತುರ್ತು ಪರಿಸ್ಥಿತಿಯನ್ನು ಗಮನಕ್ಕೆ ತರುತ್ತಿದೆ. ಅಧ್ಯಕ್ಷರು ನಮಗೆ ರಕ್ಷಣೆಯನ್ನು ಕೊಡಬೇಕಾದವರು ಶಾಸಕರುಗಳಿಗೆ ರಕ್ಷಣೆಯನ್ನು ಕೊಡಬೇಕಾದವರು ತಾವು.

ಅಧ್ಯಕ್ಷರು:- ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಈ ಶಾಸನಸಭೆ ನಡೆಯುವಾಗ ತಾವು ಈ ಬಗ್ಗೆ ಗಮನ ಹರಿಸಬೇಕು. ನಿನ್ನೆ ಶ್ರೀ ಯಡಿಯೂರಪ್ಪನವರು ಈ ಸದನದಲ್ಲಿ ಇದ್ದರು. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯವನ್ನು ಮಂಡಿಸುವಾಗ ಬಹಳ ಸಂತೋಷದಿಂದ ಇದ್ದರು. ಆದರೆ ಇವತ್ತಿನ ದಿನ ಇದ್ದಕ್ಕಿದ್ದ ಹಾಗೆ ಏಕಾಏಕಿಯಾಗಿ ಅವರನ್ನು ಬಂಧಿಸಿರತಕ್ಕಂಥದ್ದು ಯಾವ ನೀತಿ ಎಂದು ದಯಮಾಡಿ ಹೇಳಬೇಕು.

ಅಧ್ಯಕ್ಷರು:- ನಾನು ಅದಕ್ಕೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು:- ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರ ಬಂಧನ ಏತಕ್ಕೆ, ಯಾವ ಉದ್ದೇಶಕ್ಕೋಸ್ಕರ ಬಂಧಿಸಿದ್ದಾರೆ ಎಂಬುದನ್ನು ಸದನಕ್ಕೆ ತಾವು ತಿಳಿಸಬೇಕು. ನಮಗೆ ಇದು ಗೊತ್ತಾಗುತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಅವರು ಪೋಲೀಸ್ ವ್ಯಾನ್‌ನಲ್ಲಿ ಹೋಗುತ್ತಿರುವುದನ್ನು ನೋಡಿದ ಮೇಲೆ ಗೊತ್ತಾಯಿತು. ಈ ಬಂಧನದ ಉದ್ದೇಶ ಏನು ? ದೆಹಲಿಯಲ್ಲಿ ಯಾವುದೋ ಮೇಳ ಮಾಡಿದರೆ, ಆ ಮೇಳವನ್ನು ಕೇಂದ್ರ ಸರ್ಕಾರ ರದ್ದುಪಡಿಸಿ ಈ ದೇಶಕ್ಕೆ ಒಂದು ರೀತಿಯ ಅಪಚಾರ ಮಾಡಿದೆ., ಇದನ್ನು ಯಾರೂ ಒಪ್ಪುತ್ತಿಲ್ಲ. ಯಾವ ಪಕ್ಷದವರೂ ಸಹ ಈ ಮೇಳವನ್ನು ಸಹ ರದ್ದು ಮಾಡಬೇಕೆಂದು ಒಪ್ಪುತ್ತಿಲ್ಲ. ರಾಜ್ಯ ಸರ್ಕಾರಕ್ಕೆ ಯಾವ ನೀತಿ ಇದೆ, ಶಾಸನಸಭೆ ನಡೆಯುವಾಗ ಶಾಸಕರು ಬಂದು, ಈ ಪ್ರಜಾಪ್ರಭುತ್ವದ ಮನೆಯಲ್ಲಿ ಮಾತನಾಡತಕ್ಕ ಅವಕಾಶ ಇಲ್ಲ ಎನ್ನುವುದಾದರೆ ಹೇಗೆ ?

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ನಿಮಗೆ ಅವಕಾಶವನ್ನು ಕಲ್ಪಿಸಿಕೊಡುತ್ತೇವೆಂದು ಹೇಳಿದ್ದೇನೆ. ಈಗ ಪ್ರಶ್ನೋತ್ತರ ಸಮಯ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಪ್ರಶ್ನೋತ್ತರ ಸಮಯವನ್ನು ಬದಿಗೊತ್ತಿ. ದಯವಿಟ್ಟು ವಿರೋಧ ಪಕ್ಷದ ನಾಯಕರ ಗಮನಕ್ಕಾದರೂ ... ಪ್ರಶ್ನೋತ್ತರ ಸಮಯ ಬೇಡ ಅಂತ ಹೇಳುವುದಿಲ್ಲ. ಆದರೆ ಒಬ್ಬ ವಿರೋಧ ಪಕ್ಷದವರನ್ನು ಈ ರೀತಿ ......

ಅಧ್ಯಕ್ಷರು:- ಇದಾದ ತಕ್ಷಣ ಸಮಯ ಕೊಡುತ್ತೇನೆ.

ಸಂತಾಪ ಸೂಚನೆ ನಿರ್ಣಯ

ಅಧ್ಯಕ್ಷರು:- ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಹಾಗೂ ಗಡಿನಾಡಿನ ಕನ್ನಡದ ದೀಪ ಡಾ।। ಶ್ರೀ ಮುಗುಳಿಯವರು ದಿನಾಂಕ: 20-2-1993ರಂದು ನಿಧನ ಹೊಂದಿದರು. ಕನ್ನಡ ಸಾಹಿತ್ಯ ಲೋಕದ ರಸಿಕರೆಂದು ಖ್ಯಾತರಾಗಿದ್ದ ಡಾ।। ಮುಗುಳಿಯವರು ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಸಾಹಿತ್ಯ ಚರಿತ್ರೆಗಳಲ್ಲಿ ವೈವಿಧ್ಯಮಯ ಸೇವೆಯನ್ನು ಸಲ್ಲಿಸಿ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಶಿಲ್ಪಿಯಾಗಿ ಕನ್ನಡನಾಡನ್ನು ಶ್ರೀಮಂತಗೊಳಿಸಿರುತ್ತಾರೆ. ಕನ್ನಡ ಮತ್ತು ಮರಾಠಿ ಭಾಷೆ ಸಾಹಿತ್ಯಗಳ ಸ್ನೇಹಸೇತುವೆಯಾಗಿ ಸುಮಧುರ ಬಾಂಧವ್ಯವನ್ನು ಬೆಳೆಸಿದರಲ್ಲದೆ ಶಿಕ್ಷಣ ರಂಗದಲ್ಲಿಯೂ ಸಹ ಅಮೋಘವಾದ ಸೇವೆಯನ್ನು ಸಲ್ಲಿಸಿರುತ್ತಾರೆ. ಸ್ವಾತಂತ್ರ್ಯ ಚಳುವಳಿ ಹಾಗೂ ಮಹಾತ್ಮಾ ಗಾಂಧಿಯವರು ಕರೆ ನೀಡಿದ್ದ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಈ ದೇಶಪ್ರೇಮಿಯ ಹಿರಿಮೆಗಾಗಿ ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿಯನ್ನು, ವಿಶ್ವವಿದ್ಯಾನಿಲಯದವರು ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ. 1963ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವ ಕೀರ್ತಿ ಶ್ರೀಯುತರಿಗೆ ಸಲ್ಲುತ್ತದೆ.

ಶ್ರೀಯುತರ ಗೌರವಾರ್ಥ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಎಲ್ಲಾ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದದ ಉತ್ತರಗಳು

ನೆಲಮಂಗಲ ಕ್ಷೇತ್ರದಲ್ಲಿ ಆರಕ್ಷಕ ಠಾಣೆಗಳ ಸ್ಥಾಪನೆ

81 (491) ಶ್ರೀ ಅಂಜನ ಮೂರ್ತಿ (ನೆಲಮಂಗಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ಮತ ಕ್ಷೇತ್ರಕ್ಕೆ ಸೇರಿದ, ದೊಡ್ಡಬಳ್ಳಾಪುರ ತಾಲ್ಲೂಕು, ಮಧುರೆ ಹೋಬಳಿ.

1) ಕನಸಲಾಡಿ ಸಮೀಪ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ

2) ಅಂಚೆಪಾಳ್ಯ ಸಮೀಪ ಮಾಗಡಿ ತಾಲ್ಲೂಕು ಸೋಲೂರು ಹೋಬಳಿ

3) ಸೋಲೂರು ಗ್ರಾಮದ ಸಮೀಪದಲ್ಲಿ ಆಗಾಗ್ಗೆ ಗಲಭೆ, ಕಳ್ಳತನ, ಕೊಲೆ, ದರೋಡೆ ಮುಂತಾದವು ಜರುಗುತ್ತಿರುವುದನ್ನು ತಡೆಗಟ್ಟಲು ಸದರಿ ಸ್ಥಳಗಳನ್ನು ಒಂದೊಂದು ಪೋಲೀಸ್ ಠಾಣೆ ತೆರೆಯಬೇಕೆಂದು ಒತ್ತಾಯಿಸಿ ಮನವಿಗಳೇನಾದರೂ ಬಂದಿದೆಯೇ ?

ಆ) ಹಾಗಿದ್ದಲ್ಲಿ , ಈ ದಿಸೆಯಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀ ಅಂಜನಮೂರ್ತಿ:– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರಕ್ಕೆ ಸೇರಿದ ಮೂರು ಜಾಗಗಳಲ್ಲಿ ಹೊಸದಾಗಿ ಪೋಲೀಸ್ ಠಾಣೆಗಳನ್ನು ಮಂಜೂರು ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಕಾರಣವೇನೆಂದರೆ ಅಲ್ಲಿ ಹೆಚ್ಚಿನ ವಾಹನ ಸಂಚಾರ, ಜನಸಂದಣಿ ಇದ್ದು ಆಗ್ಗಾಗ್ಗೆ ಸಮಾಜಘಾತುಕರಿಂದ ಕೊಲೆ, ಸುಲಿಗೆ, ದರೋಡೆ, ಹೆಚ್ಚಿನ ಅಪಘಾತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಎರಡನೆಯದಾಗಿ ನಾನು ಸತತವಾಗಿ ಕಳೆದ ಮೂರು ವರ್ಷಗಳಿಂದ ನಾಗರೀಕರ ಹಿತದೃಷ್ಟಿಯಿಂದ ಆ ಮೂರು ಜಾಗಗಳಲ್ಲಿ ಪೋಲೀಸ್ ಠಾಣೆ ಆಗಬೇಕೆಂದು ಒತ್ತಾಯ ಮಾಡುತ್ತಿದ್ದರೂ ಅವರು ಉತ್ತರದಲ್ಲಿ ಮನವಿ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ಕಳೆದ ವರ್ಷ ಆಗಿನ ಗೃಹ ಸಚಿವವಾಗಿದ್ದ ಮಾನ್ಯ ಧರ್ಮಸಿಂಗ್‌ರವವು ಸ್ಥಳಕ್ಕೆ ಬಂದಾಗ ನಾಗರೀಕರ ಮನವಿ ಮೇರೆಗೆ ಪೋಲೀಸ್ ಠಾಣೆಯನ್ನು ಮಂಜೂರು ಮಾಡಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿರುವುದು ಸರ್ಕಾರದ ಗಮನದಲ್ಲಿಲ್ಲವೇ ? ಆದರೂ ಕೂಡ ಅವರ ಈ ಉತ್ತರ ನೋಡಿದಾಗ ನಿರಾಸೆಯಾಗುತ್ತದೆ. ಕೆಲವು ಅಮಾಯಕ ನಾಗರೀಕರಿಗೆ ಆಗುತ್ತಿರುವ ತೊಂದರೆ, ಕಿರುಕುಳವನ್ನು ತಪ್ಪಿಸಲು ಅಲ್ಲಿ ಮೂರು ಪೋಲೀಸ್ ಠಾಣೆಗಳನ್ನು ಸರ್ಕಾರ ಹೊಸದಾಗಿ ಮಂಜೂರು ಮಾಡುವುದಕ್ಕೆ ಕ್ರಮ ಕೈಗೊಳ್ಳುವುದೇ ? ಇದರ ಬಗ್ಗೆ ಖಚಿತವಾಗಿ ಉತ್ತರ ಕೊಡಬೇಕೆಂದು ನಾನು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮನಾಥ ರೈ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಆದರೂ ಕೂಡ ಈಗ ಅವರು ಕೇಳಿದಂತಹ ಮೂರು ಜಾಗಗಳ ಪ್ರದೇಶವನ್ನು

ನೋಡಿದಾಗ ಹತ್ತಿರದಲ್ಲಿ 9 ಕಿ.ಮೀ.ನಲ್ಲಿ ಕನಸುವಾಡಿಯಿಂದ ದೊಡ್ಡಬೆಲಮಂಗಲದಲ್ಲಿ ಪೋಲೀಸ್ ಠಾಣೆ ಇದೆ. ಇದೇ ರೀತಿಯಲ್ಲಿ ದಾಸನಪುರ ಅಲ್ಲಿಂದ 7 ಕಿ.ಮೀ. ದಲ್ಲಿ ನೆಲಮಂಗಲ ಪೋಲೀಸ್ ಠಾಣೆ ಇದೆ. ಅಂಚೆಪಾಳ್ಯ ಅಲ್ಲಿಂದ 12 ಕಿ.ಮೀ. ದೂರದಲ್ಲಿ ನೆಲಮಂಗಲ ಸಿಗುತ್ತದೆ. ಆದ್ದರಿಂದ ಅವರ ಪ್ರಶ್ನೆಯಲ್ಲಿ ಕೇಳಿದ್ದನ್ನು ನಾವು ಅಗತ್ಯತೆ, ಆದ್ಯತೆ ಮತ್ತು ಸಂಪನ್ಮೂಲಗಳನ್ನು ಆಧರಿಸಿ, ಪೋಲೀಸ್ ಠಾಣೆಗಳನ್ನು ತೆರೆಯಲು ಪರಿಶೀಲಿಸುತ್ತೇವೆ.

ಶ್ರೀ ಅಂಜನಮೂರ್ತಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಸಂಬಂಧಪಟ್ಟಂಥ ಅಧಿಕಾರಿಗಳು ಸರಿಯಾದ ಉತ್ತರ ಕೊಟ್ಟಿಲ್ಲವೆಂದು ಕಾಣುತ್ತದೆ. ಮಾನ್ಯ ಸಚಿವರು ದೊಡ್ಡಬೆಳ್ಳಾವುರದಿಂದ ಕನಸವಾಡಿಗೆ 9 ಕಿಲೋಮೀಟರ್ ಆಗುತ್ತದೆಂದು ಹೇಳುತ್ತಾರೆ. ಆದರೆ ನಿಜವಾಗಿಯೂ 15 ಕಿಲೋಮೀಟರ್ ದೂರ ಅಂತರದಲ್ಲಿದೆ. ಅಲ್ಲೊಂದು ಶನಿದೇವರ ದೇವಸ್ಥಾನವಿರುವುದರಿಂದ, ಆಗಾಗ್ಗೆ ಹೆಚ್ಚಿನ ಜನ ಸಂದಣಿ ಸೇರುವುದರಿಂದ ಅಲ್ಲಿ ಅಪಘಾತ, ಕಳ್ಳತನ, ದರೋಡೆಯಾಗುತ್ತದೆ. ಅದೇ ರೀತಿ ಅಂಚೆಪಾಳ್ಯದಿಂದ ನೆಲಮಂಗಲ ಪೋಲೀಸ್ ಠಾಣೆಗೆ 15-16 ಕಿಲೋಮೀಟರ್ ಆಗುತ್ತದೆ. ಆದ್ದುದರಿಂದ, ಅಂಚೆಪಾಳ್ಯದಲ್ಲಿರುವ ಅಮಾಯಕ ಜನರು ತುಂಬಾ ತೊಂದರೆ ಅನುಭವಿಸುತ್ತಿರುವುದರಿಂದ, ಕೂಡಲೇ ಅಲ್ಲೊಂದು ಹೊಸ ಪೋಲೀಸ್ ಠಾಣೆಯನ್ನು ತೆರೆಯುವ ಬಗ್ಗೆ ಖಚಿತವಾದ ಉತ್ತರ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ರಮಾನಾಥ ರೈ:- ಅಲ್ಲಿನ ಅಗತ್ಯತೆ ಮತ್ತು ಆದ್ಯತೆಯನ್ನು ಮನಗಂಡು ಸಂಪನ್ಮೂಲಗಳನ್ನು ಆದರಿಸಿ ಅಲ್ಲೊಂದು ಹೊಸ ಪೋಲೀಸ್ ಠಾಣೆ ತೆರೆಯಲು ನಾವು ಪರಿಶೀಲಿಸುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ನಾರಾಯಣ ರಾವ್ ಮನಹಳ್ಳಿಯವರು ಈಗ ಜೈಲಿನಲ್ಲಿದ್ದಾರೆ. ಹಾಗಾಗಿ ಅವರು ಇಲ್ಲಿ ಪ್ರಶ್ನೆ ಕೇಳುವಂಥ ಸ್ಥಿತಿಯಲ್ಲಿಲ್ಲವಾದ್ದರಿಂದ, ನನಗೆ ಅವರ ಪ್ರಶ್ನೆ ಸಂಖ್ಯೆ: 82 (1003) ಕೇಳುವುದಕ್ಕೆ ತಾವು ಅವಕಾಶ ಮಾಡಿಕೊಡುತ್ತೀರಾ?

ಶ್ರೀ ಸಿ. ಭೈರೇಗೌಡ:- ಈಗ ಮಾನ್ಯ ಸದಸ್ಯರಾದ ಶ್ರೀ ನಾರಾಯಣ ರಾವ್ ಮನಹಳ್ಳಿಯವರ ಪ್ರಶ್ನೆ ಇದೆ. ಅವರು ಪ್ರಶ್ನೆಯನ್ನು ಕೇಳುವ ಪರಿಸ್ಥಿತಿಯಲ್ಲಿಲ್ಲ. ನಿಯಮಾವಳಿ ಪ್ರಕಾರ ತಾವೇ ಪ್ರಶ್ನೆ ಕೇಳುವಂಥ ಅವಕಾಶವಿರುವುದರಿಂದ ದಯವಿಟ್ಟು ಪ್ರಶ್ನೆ ಕೇಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು:- ಈ ಪ್ರಶ್ನೆಯನ್ನು ನಾನು ತಡೆ ಹಿಡಿದಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಅವರು ಸದನಕ್ಕೆ ಬರಬೇಕಾಗಿತ್ತು. ಅವರನ್ನು ಜೈಲಿನಲ್ಲಿಟ್ಟಿದ್ದರಿಂದ

ಶ್ರೀ ಸಿ. ಭೈರೇಗೌಡ:- ಈಗ ವಿಶೇಷ ಪರಿಸ್ಥಿತಿಯಿರುವುದರಿಂದ ನಿಯಮಾವಳಿಯಲ್ಲಿ ಮಾನ್ಯ ಅಧ್ಯಕ್ಷರೇ ತಾವು ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ. ಇದು ಬಹಳ ಪ್ರಮುಖವಾಗಿರತಕ್ಕಂಥ ಪ್ರಶ್ನೆಯಾಗಿದ್ದು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಪಟ್ಟಿರುವುದರಿಂದ ತಾವೇ ಸಂಬಂಧಪಟ್ಟ ಸಚಿವರಿಗೆ ಪ್ರಶ್ನೆ ಕೇಳಬಹುದಾಗಿದೆ. ಅಲ್ಲದೆ, ಮಾನ್ಯ ಸದಸ್ಯರನ್ನು ಬಂಧಿಸುವುದಕ್ಕೆ ಯಾವುದೇ ಸೂಚನೆ ಇರಲಿಲ್ಲ.

ಅಧ್ಯಕ್ಷರು:- ಈ ಪ್ರಶ್ನೆಯನ್ನು ತಡೆ ಹಿಡಿದಿದ್ದೇನೆ.

ರಾಜ್ಯದ ಮಾರಾಟ ತೆರಿಗೆಯ ಪ್ರಮಾಣ

83 (590) ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂವ್):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:

ಅ) ರಾಜ್ಯದಲ್ಲಿ ಸರ್ಕಾರಕ್ಕೆ ಮಾರಾಟ ಕರ ಪ್ರತಿವರ್ಷ ಎಷ್ಟು ಜಮೆ ಆಗುತ್ತಿದೆ;

ಆ) ರಾಜ್ಯದಲ್ಲಿ ಬರಬೇಕಾದ ಮಾರಾಟ ಕರದ ಹಣ ಸೋರಿಕೆಯನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಂಡ ಕ್ರಮಗಳು ಯಾವುವು;

ಇ) ರಾಜ್ಯದಲ್ಲಿ ತೆರಿಗೆ ಬಾಕಿ ಕೊಡುವವರ ವಿವರ ನೀಡುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಮಾರಾಟ ತೆರಿಗೆ [illegible] ನಿರ್ವಹಿಸುತ್ತಿರುವುದಾಗಿ [illegible] ವಿವರಗಳನ್ನು ಕೆಳಗೆ ಒದಗಿಸಿದೆ (ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ವಿಭಾಗಗಳು	1989-90	1990-91	1991-92
1.	ಬೆಂಗಳೂರು ನಗರ-1	423.72	402.59	536.35
2.	ಬೆಂಗಳೂರು ನಗರ - 2	200.17	231.56	267.72
3.	ಬೆಂಗಳೂರು [illegible]		200.67	251.24
4.	[illegible]	148.46	120.64	142.81
5.	ಮೈಸೂರು	53.02	67.57	81.46
6.	ಮಂಗಳೂರು	56.45	68.47	83.84
7.	ಧಾರವಾಡ	56.60	68.91	88.38
8.	ಬೆಳಗಾಂ	47.83	69.31	75.81
9.	ಗುಲ್ಬರ್ಗಾ	30.88	43.24	57.55
10.	ದಾವಣಗೆರೆ	53.09	65.48	84.46
11.	ದಕ್ಷಿಣ ವಲಯ (ಗುಪ್ತ ವಾರ್ತೆ)	6.15	7.32	10.35
12.	ಉತ್ತರ ವಲಯ (")	1.18	1.81	2.96
13.	ಪೂರ್ವ ವಲಯ (")		1.78	1.88
14.	ಪಶ್ಚಿಮ ವಲಯ (")		2.76	2.28
	ಒಟ್ಟು	1077.55	1351.61	1707.60

ಆ) ಮಾರಾಟ ತೆರಿಗೆ ಸೋರಿಕೆಯನ್ನು ತಡೆಗಟ್ಟಲು [illegible] ಕಛೇರಿಗಳ ಜೊತೆಗೆ ಗುಪ್ತ ವಾರ್ತೆ ವಿಭಾಗಗಳು ಕೆಲಸ ಮಾಡುತ್ತವೆ. ರಾಜ್ಯದಲ್ಲಿ 8 ಗುಪ್ತ ವಾರ್ತೆ ವಿಭಾಗಗಳ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುತ್ತವೆ [illegible] 51 ತನಿಖಾ ಠಾಣೆಗಳು [illegible] ಅವುಗಳು ಸರಕು ಸಾಗಾಣಿಕೆಯ ವಾಹನಗಳನ್ನು ತಪಾಸಣೆ ಮಾಡುತ್ತಿರುತ್ತವೆ.

ಇ) ತೆರಿಗೆ ಬಾಕಿದಾರರ ಪಟ್ಟಿಯನ್ನು ರಾಜ್ಯಾದ್ಯಂತ ಇರುವ ವಿಭಾಗೀಯ ಕಛೇರಿಗಳ ಹಂತದಲ್ಲಿ [illegible]

ನಿರ್ವಹಿಸುತ್ತಿದೆಯಾಗಿ ಎಲ್ಲಾ ಕಛೇರಿಗಳಿಂದ ಪೂರ್ಣ ಮಾಹಿತಿ ತರಿಸಿ ಕ್ರೋಢೀಕರಿಸಲು, ಕಾಲಾವಕಾಶ ಬೇಕಾಗುತ್ತಿದೆಯಾಗಿ ಇಂಥ ವಿವರಣಾಪಟ್ಟಿ ಕ್ರೋಢೀಕರಿಸಿದ ನಂತರ ಒದಗಿಸಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರ್:– ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಮಾರಾಟ ಕರ ಪ್ರತಿ ವರ್ಷ ಎಷ್ಟು ಜಮವಾಗುವುದು ಎಂದು ಕೇಳಿದ್ದಕ್ಕೆ ಉತ್ತರವಾಗಿ 1989–90 ರಿಂದ 1991–92ನೇ ಸಾಲಿನವರೆಗೆ ಒಟ್ಟು ಮಾಹಿತಿಯನ್ನು ಕೊಟ್ಟಿದ್ದಾರೆ. ಹಾಗೆಯೇ 1992–93ನೇ ಸಾಲಿನ ಮಾಹಿತಿಯನ್ನು ಸಹ ಕೊಡಬೇಕೆಂದು ತಮ್ಮ ಮುಖೇನ ಅವರಲ್ಲಿ ಕೇಳುತ್ತಿದ್ದೇನೆ. ಎರಡನೆಯದಾಗಿ, ರಾಜ್ಯದಲ್ಲಿ ಬರಬೇಕಾದ ಮಾರಾಟಕರದ ಸೋರಿಕೆಯನ್ನು ತಡೆಗಟ್ಟಲು ಸರ್ಕಾರದವರು ತೆಗೆದುಕೊಂಡ ಕ್ರಮಗಳಾವುವು ? ಎಂದು ಕೇಳಿದ್ದಕ್ಕೆ ಉತ್ತರವಾಗಿ 51 ತನಿಖಾ ಠಾಣೆಗಳನ್ನು, ವಾಹನಗಳನ್ನು, ತಪಾಸಣೆ ಮಾಡುವುದಕ್ಕೆ ಹಾಗೂ 8 ಗುಪ್ತ ವಾರ್ತಾ ವಿಭಾಗಗಳನ್ನು ರಚಿಸಲಾಗಿದೆಯೆಂದು ಹೇಳಿದ್ದಾರೆ. ಆದರೆ, 8 ಗುಪ್ತ ವಾರ್ತಾ ವಿಭಾಗಗಳನ್ನು ಅಥವಾ 51 ತನಿಖಾ ಠಾಣೆಗಳಾಗಲಿ ಎಷ್ಟರಮಟ್ಟಿಗೆ ಸರಿಯಾಗಿ ಕೆಲಸ ಮಾಡುತ್ತಿವೆ ಎನ್ನುವುದರ ಬಗ್ಗೆ ಸರ್ಕಾರಕ್ಕೆ ಅವುಗಳ ಮೇಲೆ ಸಂಪೂರ್ಣ ವಿಶ್ವಾಸ ಇದೆಯೆ ? ಹೇಗೆ ? ಎನ್ನತಕ್ಕಂಥಾದ್ದು ತಿಳಿಸಬೇಕು. ಮತ್ತು ರಾಜ್ಯಸರ್ಕಾರಕ್ಕೆ ತೆರಿಗೆ ಬಾಕಿ ಕೊಡುವವರ ವಿವರಗಳನ್ನು ನೀಡಬೇಕೆಂದು ಕೇಳಿದ್ದಕ್ಕೆ ಮಾಹಿತಿ ಇನ್ನೂ ದೊರೆತಿಲ್ಲವಾದ್ದರಿಂದ ಅನಂತರ ಕೊಡುವುದಾಗಿ ಮಾನ್ಯ ಸಚಿವರು ಹೇಳಿದ್ದಾರೆ. ಈ ಎಲ್ಲಾ ಮಾಹಿತಿಗಳನ್ನು ಆದಷ್ಟು ಬೇಗ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ (ಹಣಕಾಸು ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರಕ್ಕೆ 1992–93ನೇ ಸಾಲಿನಲ್ಲಿ ಮಾರಾಟ ಕರದಿಂದ 1451.39 ಕೋಟಿ ರೂಪಾಯಿಗಳ ಜಮೆಯಾಗಿದೆ. ಅನಂತರ, ತೆರಿಗೆ ಬಾಕಿದಾರರಪಟ್ಟಿ ಕೇಳಿರುವುದರಿಂದ ಅದನ್ನು ಸಹ ಒದಗಿಸಿಕೊಡುತ್ತೇನೆ. ಮಾರಾಟ ತೆರಿಗೆ ಸೋರಿಕೆಯನ್ನು ತಡೆಗಟ್ಟಲು ರಾಜ್ಯದಲ್ಲಿ 8 ಗುಪ್ತ ವಾರ್ತಾ ವಿಭಾಗಗಳು ಮತ್ತು 51 ತನಿಖಾ ಠಾಣೆಗಳಿದ್ದು, ಇನ್ನು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್:– ವಾಹನಗಳ ಮಾಲೀಕರು ಸಾಮಾನ್ಯವಾಗಿ ಯಾವುದೇ ವಸ್ತುಗಳನ್ನು ಖರೀದಿಸುವಾಗ ವಸ್ತುವಿನ ಸುಮಾರು ಶೇಕಡಾ 25ರಷ್ಟು ಮಾತ್ರ ಬಿಲ್ಲನ್ನು ಪಡೆದುಕೊಂಡು ಶೇಕಡ 75ರಷ್ಟು ಮಾರಾಟ ತೆರಿಗೆ ಸೋರಿಕೆಯಾಗತಕ್ಕಂಥ ಅನೇಕ ಪ್ರಕರಣಗಳು ಗಮನಕ್ಕೆ ಬಂದಿದೆ. ಚೆಕ್‌ಪೋಸ್ಟ್‌ಗಳಲ್ಲೂ ಸಹ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆನ್ನತಕ್ಕಂಥ ದೂರು ಬಂದಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದಂಥ ತೆರಿಗೆ ಸೋರಿ ಹೋಗುತ್ತಿರುವುದರಿಂದ ಸಂಬಂಧಪಟ್ಟವರ ಮೇಲೆ ಯಾವುದಾದರೂ ಕೇಸ್‌ಗಳನ್ನು ದಾಖಲಿಸಿ, ಯಾವ ರೀತಿ ಮುಂದಿನ ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕೆಂದು ಅಧ್ಯಕ್ಷರ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ರಾಮಲಿಂಗಾರೆಡ್ಡಿ:– ಇದರ ಬಗ್ಗೆ ವಿವರಗಳಿಲ್ಲ. ತಮಗೆ ವಿವರಗಳು ಬೇಕಾದರೆ ಅನಂತರ ಒದಗಿಸಿ ಕೊಡುತ್ತೇನೆ.

ರಾಜ್ಯದಲ್ಲಿರುವ ಸಾರಾಯಿಯ ಬಾಟ್ಲಿಂಗ್ ಗುತ್ತಿಗೆದಾರರ ವಿಳಾಸ

84 (777): ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಸಾರಾಯಿ ಬಾಟ್ಲಿಂಗ್ ಗುತ್ತಿಗೆದಾರರು ಯಾರ್‍ಯಾರು (ಅವರ ಹೆಸರು ಮತ್ತು ಪೂರ್ಣವಾದ ವಿಳಾಸ ಒದಗಿಸುವುದು);

ಆ) ಬಾಟ್ಲಿಂಗ್ ಗುತ್ತಿಗೆದಾರರ ಪೈಕಿ ಬಹಳ ಬೇನಾಮಿ ಗುತ್ತಿಗೆದಾರರು ಇರುವರೆಂಬುದು ಸರಿಯೆ ?

ಇ) ಇಂತಹ ಗುತ್ತಿಗೆದಾರರ ವಿರುದ್ಧ ಸರ್ಕಾರ ತೆಗೆದುಕೊಳ್ಳಬಹುದಾದ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಅನುಬಂಧ 'ಎ' ನಲ್ಲಿ ಮಾಹಿತಿ ನೀಡಲಾಗಿದೆ.

ಆ) –ಇಲ್ಲ–

ಇ) 'ಆ'ಗೆ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ANNEXURE - A

LIST OF ARRACK BOTTLING UNITS FOR 1-7-1992.

Sl. No.	Name and address of the Unit	District allotted
1.	M/s. Ravindra & Co. (P) Ltd., Bidar.	1) Gulbarga 2) Bidar
2.	M/s. India Brewery & Distillery Ltd., Ameerabad/Bidar District.	1) Bellary 2) Belgaum 3) Hassan 4) Raichur
3.	M/s. Saptagiri Distilleries, Sammerwadi, Bijapur District.	1) Dharwar 2) Mangalore 3) Udupi 4) Bijapur
4.	M/s. Gemini Distilleries, Mysore.	1) Mysore 2) Kodagu (Depot)
5.	M/s. B.T. & F.C. (P) Ltd., Hiriyur	1) Tumkur 2) Karwar
6.	M/s. Karnataka Breweries and Distilleries Ltd., Bangalore.	1) Bangalore Urban 2) Bangalore Rural (Depot) 3) Kolar

	M/s. Distillers Co. (P) Ltd., Shimoga.	1) Chitradurga 2) Chikamagalur Depot 3) Shimoga.
8.	M/s. Mysore Sugar Co. Mandya.	1) Mandya

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ ಬಾಟ್ಲಿಂಗ್ ಕಂಟ್ರಾಕ್ಟ್ ಅನ್ನು ಯಾವ 8 ಜನರಿಗೆ ಕೊಟ್ಟಿದ್ದೀರೋ ಅವರ ಪೈಕಿ ಬಹಳ ಬೇನಾಮಿ ಕಂಟ್ರಾಕ್ಟರ್‌ಗಳಿದ್ದಾರೆಂದು ಕೇಳಿದರೆ ಉತ್ತರವಾಗಿ ಇಲ್ಲವೆಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಸದರಿ ಪ್ರಶ್ನೆಗೆ ಇದೇ ಪ್ರಕಾರ ಉತ್ತರ ಕೊಡಬೇಕಾಗುತ್ತದೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದುದರಿಂದ, ಇದರ ಬಗ್ಗೆ ಸ್ಪಷ್ಟ ಉತ್ತರವನ್ನು ಬಯಸಿ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಕೇಳುತ್ತಿದ್ದೇನೆ. ಮೊದಲನೆಯದಾಗಿ, ಬಾಟ್ಲಿಂಗ್ ಕಂಟ್ರಾಕ್ಟರ್‌ಗಳು ಬೇನಾಮಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ?

ಎರಡನೆಯದಾಗಿ ಈ ಬಾಟ್ಲಿಂಗ್‌ನ್ನು ಗುತ್ತಿಗೆದಾರರಿಗೆ, ಕೊಡುವಾಗ ಸಹಕಾರಿ ಸಂಘಗಳಿಗೆ ಪ್ರಾಧಾನ್ಯತೆಯನ್ನು ಕೊಡಬೇಕೆಂದು ಕಾಯಿದೆಯಲ್ಲಿದೆ. ಆ ರೀತಿ ಪ್ರಾಧಾನ್ಯತೆಯನ್ನು ತಮ್ಮ ಸರ್ಕಾರದವರು ಕೊಟ್ಟಿಲ್ಲ. ಅದು ಸರಿಯೋ ಅಥವಾ ತಪ್ಪೋ, ಒಂದು ವೇಳೆ ಅದು ಸರಿಯಾಗಿದ್ದರೆ ಏಕೆ ಸಹಕಾರಿ ಸಂಸ್ಥೆಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟಿಲ್ಲ? [illegible], ನನಗೆ ಭಯ. ಏಕೆಂದರೆ, ಈ ಬೇನಾಮಿ ಗುತ್ತಿಗೆದಾರರು ಏನಾದರೂ ಓಡಿಹೋದರೆ ಸರ್ಕಾರ ಏನನ್ನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ತಾವು ಇದರ ಬಗ್ಗೆ ಏನು ವಿಚಾರ ಮಾಡಿದ್ದೀರಿ ?

ಶ್ರೀ ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಬಾಟ್ಲಿಂಗ್ ಗುತ್ತಿಗೆಯಲ್ಲಿ ಬೇನಾಮಿ ಗುತ್ತಿಗೆದಾರರು ಬಹಳವಾಗಿ ಇರುವ ಬಗ್ಗೆ ಪ್ರಶ್ನೆಯನ್ನು ಎತ್ತಿದ್ದಾರೆ. ಈ ಬಾಟ್ಲಿಂಗ್ ಲೈಸೆನ್ಸಿಂಗ್‌ನ ನಿಬಂಧನೆಯ ಪ್ರಕಾರ 9ನೇ ಷರತ್ತು ಏನಿದೆ ಎಂದರೆ, ಲೈಸೆನ್ಸ್‌ದಾರರು ಯಾರಿದ್ದಾರೆ, ಅವರುಗಳು ತಮ್ಮ ಹಕ್ಕನ್ನು ಬೇರೆಯವರಿಗೆ ಮಾಡಬಾರದು, ವರ್ಗಾವಣೆ ಮಾಡಬಾರದು, ಸಬ್‌ಲೀಸ್ ಮಾಡಬಾರದು ಎಂದು ಇದೆ. ತುಮಕೂರು ಮತ್ತು ಮೈಸೂರಿನ ಭಾಗಗಳಲ್ಲಿ ಈ ಲೈಸೆನ್ಸ್‌ದಾರರು ಏನು ಮಾಡಿದ್ದಾರೆಂದರೆ, ಮೂರನೆಯ ವ್ಯಕ್ತಿಗಳಿಗೆ ಬಾಟ್ಲಿಂಗ್ ಮೇನೆಜ್ ಮಾಡುವುದಕ್ಕೆ ಪವರ್ ಆಫ್ ಅಟಾರ್ನಿಗೆ ಕೊಡುವುದಕ್ಕೆ ನಮಗೆ ಅನುಮತಿಯನ್ನು ಕೊಡಬೇಕೆಂದು ಸರ್ಕಾರಕ್ಕೆ ಕೇಳಿದ್ದಾರೆ. ನಾವು ಅದಕ್ಕೆ ನಿಯಮದ ಪ್ರಕಾರ ಆ ರೀತಿ ಬಾಟ್ಲಿಂಗ್ ಯುನಿಟ್‌ಗಳನ್ನು ನಡೆಸುವ ಹಕ್ಕನ್ನು ಬೇರೆಯವರಿಗೆ ಕೊಡಲು ಸಾಧ್ಯವಾಗುವುದಿಲ್ಲ, ಆದರೆ ಇದರ ಬಗ್ಗೆ ಕಾನೂನು ಇಲಾಖೆಗೆ ಕಳುಹಿಸಿ ಇದನ್ನು ಕೊಡಲು ಸಾಧ್ಯವಾಗುತ್ತದೆಯೇ ಎನ್ನುವ ಬಗ್ಗೆ ನಾವು ಕೇಳಿ ಈಗಾಗಲೇ ಬರೆದಿದ್ದೇವೆ. ನಿಯಮದ ಪ್ರಕಾರ ಇದನ್ನು ಯಾವುದೇ ಸ್ವರೂಪದಲ್ಲಿಯೂ ಸಹ ಬೇನಾಮಿ ಮಾಡುವುದಕ್ಕೆ, ಬೇರೆಯವರಿಗೆ ವರ್ಗಾವಣೆಗೆ, ಸಬ್‌ಲೀಸ್‌ಗೆ ಅವಕಾಶವಾಗುವುದಿಲ್ಲ. ಆದರೆ ಇಂಥ ವರ್ಗಾವಣೆ ಆಗಿದೆ ಎಂದು ಹೇಗೆ ತಮ್ಮ ಗಮನಕ್ಕೆ ಬಂದಿದೆಯೋ ಅದೇ ರೀತಿಯಲ್ಲಿ ನಮ್ಮ ಗಮನಕ್ಕೂ ಬಂದಿದೆ. ಆ ರೀತಿ ಏನಾದರೂ ವರ್ಗಾವಣೆಯಾಗಿದ್ದರೆ ಅದು ಕಾನೂನು ಬಾಹಿರವಾಗುತ್ತದೆ, ಆ ರೀತಿ ಏನಾದರೂ ಕೊಟ್ಟಿದ್ದರೆ ಆ ರೀತಿ ಕೊಟ್ಟಿರುವವರ ಲೈಸೆನ್ಸ್‌ಅನ್ನು ರದ್ದು ಮಾಡಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮತ್ತು ಅದನ್ನು ತೆಗೆದುಕೊಂಡಿರುವವರು ಕೂಡ ಮುಂದೆ ನಡೆಸಲಿಕ್ಕೆ ಆಗುವುದಿಲ್ಲ. ಇದರ ಬಗ್ಗೆ ಅಮೂಲಾಗ್ರವಾದಂಥ ತನಿಖೆಯನ್ನು ಮಾಡುತ್ತೇವೆ.

ಇನ್ನು ತಾವು ಎರಡನೆಯದಾಗಿ ಸಹಕಾರ ಸಕ್ಕರೆ ಕಾರ್ಖಾನೆಗಳೇನಿವೆ ಅವರ ಹತ್ತಿರ ಡಿಸ್ಟಿಲರಿಗಳು

ಇದ್ದ ಪಕ್ಷದಲ್ಲಿ ಅವರಿಗೆ ಆಧ್ಯತೆಯನ್ನು ನಿಬಂಧನೆ ಪ್ರಕಾರ ಕೊಡಬೇಕಾಗುತ್ತಿವೆ ಎಂದು ಹೇಳಿದ್ದಾರೆ. ಆ ರೀತಿ ಏಕೆ ಆದ್ಯತೆಯನ್ನು ಕೊಟ್ಟಿಲ್ಲ, ಅದರ ಬಗ್ಗೆ ವಿಚಾರಣೆ ಮಾಡಬೇಕಾಗುತ್ತದೆ ಒಂದು ವೇಳೆ ಆ ರೀತಿ ಏನಾದರೂ ಆದ್ಯತೆಯನ್ನು ಕೊಡುವುದಾದರೆ ಅದನ್ನು ಸರಿಪಡಿಸಲು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:– ಕೆಲವು ಬಾಟ್ಲಿಂಗ್ ಗುತ್ತಿಗೆದಾರರು ಬಾಟಲ್‌ಗಳಲ್ಲಿ ಸಾರಾಯಿಯನ್ನು ಮಾರಾಟ ಮಾಡದೆ ಇವತ್ತು ಸ್ಯಾಚೆಟ್ಸ್ bulk ನಲ್ಲಿ ಸಾರಾಯಿ ಮಾರಾಟವನ್ನು ಮಾಡಿ ಬಾಟಲ್ ರೇಟನ್ನು ತೆಗೆದುಕೊಳ್ಳುತ್ತಿದ್ದಾರೆ. ಅದು ನಿಮ್ಮ ಗಮನಕ್ಕೆ ಬಂದಿದೆ ಎಂದು ತಾವು ಒಪ್ಪಿಕೊಂಡಿದ್ದೀರಿ, ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವೀರಪ್ಪಮೊಯಿಲಿ:– ನಮ್ಮ ನಿಬಂಧನೆಯ ಪ್ರಕಾರ ಬಾಟಲ್‌ನಲ್ಲೇ ಸಾರಾಯಿಯನ್ನು ಸಪ್ಲೈ ಮಾಡಬೇಕು. ಆದರೆ ಸ್ಯಾಚೆಟ್ಸ್‌ನಲ್ಲಿ ಸಾರಾಯಿಯನ್ನು ಸಪ್ಲೈ ಮಾಡುತ್ತಿರತಕ್ಕದ್ದು ಕೆಲವು ಕಡೆ ಕಂಡು ಬಂದಿರುವುದರಿಂದ ಅದರ ಬಗ್ಗೆ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ, ಅಪ್ಪಿತಪ್ಪಿ ಇನ್ನೂ ಏನಾದರೂ ಆ ರೀತಿ ಕೆಲವರು ಮಾಡುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದರೆ ಅದನ್ನೂ ಕೂಡ ತಡೆಗಟ್ಟಲು ಏನು ಬೇಕೋ ಅದನ್ನು ಮಾಡುತ್ತೇವೆ. ಎರಡನೆಯದಾಗಿ ಬಾಟ್ಲಿಂಗ್ ಆಗದಿದ್ದರೆ ಅದನ್ನು ಬಲ್ಕ್ ಸಪ್ಲೈ ಮಾಡಬಹುದೆಂದು ನಿಬಂಧನೆ ಇದೆ. ಅದಕ್ಕೆ ಅನುಮತಿಯನ್ನು ಕೊಡಬಹುದು, ಏಕೆಂದರೆ ಸಾರಾಯಿಯನ್ನು ಸಪ್ಲೈ ಮಾಡದಿದ್ದರೆ ನಮ್ಮ ಮೇಲೆ ಡ್ಯಾಮೇಜನ್ನು ಕ್ಲೇಮ್ ಮಾಡಬಹುದು. ಎಲ್ಲೆಲ್ಲಿ ಬಾಟ್ಲಿಂಗ್‌ನ್ನು ಮಾಡಲು ಆಗುವುದಿಲ್ಲವೋ ಅಲ್ಲಿ ಈ ರೀತಿ ಬಲ್ಕ್ ಆಗಿ ಮಾಡಬಹುದು. ಆದರೆ ಮುಂದೆ ಬರತಕ್ಕ ವರ್ಷಗಳಲ್ಲಿ ನಾವು ಏನು ನಿಬಂಧನೆಗಳನ್ನು ಮಾಡಿದ್ದೇವೋ ಅದರಲ್ಲಿ ಯಾವುದನ್ನೂ ಕೂಡ ಉಲ್ಲಂಘಿಸದೆ ಆ ನಿಬಂಧನೆಗಳನ್ನು ಅನುಸರಿಸಿಯೇ ಮಾಡಬೇಕಾಗುತ್ತದೆ. ಆದರೆ ನಿಬಂಧನೆಯ ಪ್ರಕಾರ ನಡೆಯದೆ ಬಾಟ್ಲಿಂಗ್ ಮಾಡತಕ್ಕದ್ದು ಮತ್ತು ಅದರ ನಿಯಮದ ಪ್ರಕಾರ ನಡೆಯದಿರತಕ್ಕದ್ದು ಈ ವಿಚಾರ ಇನ್ನು ಮುಂದೆ ನಡೆಯುವುದಕ್ಕೆ ನಾವುಗಳಂತೂ ಬಿಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಕೆಲವು ಕಡೆ ಬಾಟ್ಲಿಂಗ್‌ನಲ್ಲಿ ಸಾರಾಯಿಯನ್ನು ಮಾರಾಟ ಮಾಡದೆ ಸ್ಯಾಚೆಟ್ಸ್‌ನಲ್ಲಿ ಮಾರಾಟ ಮಾಡುತ್ತಿದ್ದಾರೆ ಅದನ್ನು ನಿಲ್ಲಿಸುತ್ತೇವೆಂದು ತಾವು ಈಗಾಗಲೆ ಹೇಳಿದ್ದೀರಿ, ಅದನ್ನು ತಾವು ಒಪ್ಪಿಕೊಂಡಿದ್ದೀರಿ, ಅದರ ಬಗ್ಗೆ ಪ್ರಯತ್ನವನ್ನೂ ಕೂಡ ತಾವು ಮಾಡಿದ್ದೀರಿ. ನಾನು ಏನು ಕೇಳುತ್ತಿದ್ದೇನೆಂದರೆ ಬಾಟಲ್‌ನಲ್ಲಿ ಸಾರಾಯಿಯನ್ನು ಮಾರಾಟ ಮಾಡದೆ ಸ್ಯಾಚೆಟ್ಸ್‌ನಲ್ಲಿ ಮಾರಾಟ ಮಾಡುತ್ತಿರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆ. They have claimed bottling charges illegally. ಆ ರೀತಿ ವಸೂಲಿ ಮಾಡುವುದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಏನು ಹೇಳಿದ್ದೀರಿ. ಅದು ಗಂಭೀರವಾದ ವಿಚಾರ. ಬಾಟಲ್‌ನಲ್ಲಿ ಸಾರಾಯಿಯನ್ನು ಮಾರಾಟ ಮಾಡದೆ ಬಾಟ್ಲಿಂಗ್ ಚಾರ್ಜಸ್ಸ್‌ನ್ನು ತೆಗೆದುಕೊಂಡರೆ ಅದರ ಬಗ್ಗೆ ಒಬ್ಬ ನಿಷ್ಪಕ್ಷಪಾತವಾದ ಅಧಿಕಾರಿಯನ್ನು ಪ್ರತ್ಯೇಕವಾಗಿ ತನಿಖೆ ಮಾಡಲು ನೇಮಕ ಮಾಡುತ್ತೇನೆ. ಒಂದು ವೇಳೆ ಅಂಥದ್ದು ನಡೆದಿದ್ದರೆ They are not entitled for the bottling charges.

ಶ್ರೀ ಸಿ. ಬೈರೇಗೌಡ:– ಸನ್ಮಾನ್ಯ ಅಧ್ಯಕ್ಷರೆ, ಬಾಟ್ಲಿಂಗ್ ಮಾಡತಕ್ಕ ಸಾಮರ್ಥ್ಯ ಇದ್ದರೂ ಕೂಡ ಕಳ್ಳ ವ್ಯವಹಾರ ನಡೆಸಬಹುದು ಎನ್ನತಕ್ಕ ದೃಷ್ಟಿಯಿಂದ ಬಲ್ಕ್ ಆಗಿ ಸಾರಾಯಿ ಮಾರಾಟ ಮಾಡಲು ಆ ಬಾಟ್ಲಿಂಗ್ ಯೂನಿಟ್‌ನಲ್ಲಿ ಸಾರಾಯಿಯನ್ನು ಮಾಡುವುದಕ್ಕಾಗುವುದಿಲ್ಲವೆಂದು ಪ್ರಮಾಣ ಪತ್ರವನ್ನು ತೆಗೆದುಕೊಂಡಿರುತ್ತಾರೆ. ಅಂದರೆ ಕೆಲವು ಕಡೆ ಸಾರಾಯಿ ಮಾರಾಟಗಾರರೂ ಅವರೇ ಮತ್ತೆ

ಬಾಟ್ಲಿಂಗ್ ಮಾಡುವವರೂ ಅವರೇ ಕೈ, ಬಾಯಿ, ಎರಡೂ ಕೂಡ ಅವರದ್ದೇ, ಆಗಿರುವುದರಿಂದ ಈ ರೀತಿಯಾದ ಅಕೃತ್ಯಗಳು ನಡೆಯುತ್ತಿವೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಬಂದಿದ್ದರೆ, ಕೆಲವು ಕಡೆ ಬಾಟ್ಲಿಂಗ್ ಯೂನಿಟ್‌ನಲ್ಲಿ ಬಲ್ಕ್ ಮಾಡುವಂತಹ ಕೆಪಾಸಿಟಿ ಇದ್ದರೂ ಸಹ ಅದನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಏಕೆಂದರೆ ಮಾಡುವುದಕ್ಕೆ ಆಗದಿದ್ದರೆ ಬಲ್ಕ್ ಕೊಡಬೇಕು. ಇಂದು ನೀವು ನಿಯಮಾವಳಿಗೆ ತಿದ್ದುಪಡಿ ಮಾಡಿದ್ದೀರಿ. ಬಲ್ಕ್ ಸಾರಾಯಿಯನ್ನು ಮಾರಾಟ ಮಾಡಬಾರದು ಎನ್ನತಕ್ಕದ್ದು ಸರ್ಕಾರದ ನೀತಿಯಾಗಿದೆ. ಸರ್ಕಾರದ ನೀತಿಗೆ ವಿರುದ್ಧವಾಗಿ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಆ ತಿದ್ದುಪಡಿ ಇವತ್ತಿನ ದಿವಸ ದುರುಪಯೋಗ ಆಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತೀರಿ ? ಮತ್ತು ಇವತ್ತಿನ ದಿವಸ ಬಾಟ್ಲಿಂಗ್ ಚಾರ್ಜ್‌ಗೆ ತಾವು ಅವಕಾಶ ಕೊಡಬೇಕು. ಏಕೆಂದರೆ 180 ಎಂ.ಎಲ್. ಬಾಟಲ್ ಸಾರಾಯಿ ಮಾರಾಟ ಮಾಡಿದರೆ ಆ ಬಾಟಲ್‌ನ ಅಸಲು ಅಂದರೆ ಸಾರಾಯಿ ಬಲ್ಕ್ ಲೀಟರ್ ಕಾಸ್ಟ್ ಎಷ್ಟು ಆಗುತ್ತದೆ ಎಂದರೆ ರೂ. 12.91 ಪೈಸೆ. ಬಾಟ್ಲಿಂಗ್ ಮಾಡಿದರೆ ಅದೇ ಸಾರಾಯಿಗೆ ಟ್ಯಾಕ್ಸ್ ಇಲ್ಲ. ನಾನು ಹೇಳತಕ್ಕ ರೂ. 12.91 ಬಲ್ಕ್ ಲೀಟರ್‌ನ್ನು ಬರೀ ಬಾಟ್ಲಿಂಗ್ ಮಾಡಿದರೆ ಅದು ಎಷ್ಟು ಆಗುತ್ತದೆ ಎಂದರೆ ರೂ. 25.44ಪೈ ಆಗುತ್ತದೆ. 180ಎಂ. ಎಲ್ ಬಾಟಲ್‌ನಲ್ಲಿ ಮಾಡಿದರೆ ಬಾಟ್ಲಿಂಗ್ ಛಾರ್ಜ್ ಎಷ್ಟು ಆಗುತ್ತದೆ ಎಂದರೆ ಸುಮಾರು ನೂರಕ್ಕೆ ನೂರರಷ್ಟು ಆಗುತ್ತದೆ. ಇದರಿಂದ ನೀವು ಸಾಮಾನ್ಯ ಜನಕ್ಕೆ ಕಡಿಮೆ ದರದಲ್ಲಿ ಇದನ್ನು ಅಂದರೆ ಸಾರಾಯಿಯನ್ನು ಕೊಡಬೇಕಾದಂಥ ಉದ್ದೇಶವೇನು ಇದೆ. ಅದು ಇದಕ್ಕೆ ತದ್ವಿರುದ್ಧವಾದ ದಿಕ್ಕಿನಲ್ಲಿ ಇದೆ. ಇದು ಹಿಂದೆ ತಿದ್ದುಪಡಿಯಾಗಿದ್ದು ಸರ್ಕಾರ ಒಪ್ಪಿದೆ. ಇದನ್ನು ರದ್ದು ಮಾಡುತ್ತೀರಾ ? ಬಾಟ್ಲಿಂಗ್ ಚಾರ್ಜಸ್ ಏನು ಇದೆ. ಇದು ಜನರ ತಲೆ ಒಡೆಯತಕ್ಕಂಥ ಕೆಲಸ. ಇದನ್ನು ತತ್‌ಕ್ಷಣದಿಂದ ರದ್ದು ಮಾಡಿ ಜನಕ್ಕೆ ಕಡಿಮೆ ದರದಲ್ಲಿ ಸಾರಾಯಿ ಸಿಕ್ಕುವಂತಹ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಸಾರಾಯಿ ಸರಬರಾಜು ಮಾಡುವುದನ್ನು ನಿಲ್ಲಿಸಬಾರದು. ಅದಕ್ಕೆ ಬಾಟ್ಲಿಂಗ್ ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲ ಅಲ್ಲಿ ಬಲ್ಕ್ ಸಪ್ಲೈ ಮಾಡುತ್ತಾರೆ. ಅದನ್ನು ಯಾರಾದರೂ ವಸೂಲು ಮಾಡಿದ್ದರೆ ಅದನ್ನು ಹಿಂದೆ ತೆಗೆದುಕೊಳ್ಳುತ್ತೇವೆ. ಇನ್ನೊಂದು ನೀತಿಯ ಬಗ್ಗೆ ಹೇಳೀದ್ದೀರಿ. ಇದು ಸದನಕ್ಕೆ ಬಿಟ್ಟಿದ್ದುದು. ಏಕೆಂದರೆ ಬಾಟ್ಲಿಂಗ್ ಮಾಡಬೇಕು ಎಂದು ಹೇಳಿ ಶ್ರೀ ರಾಮಕೃಷ್ಣ ಹೆಗಡೆಯವರು ಅಧಿಕಾರದಲ್ಲಿರುವಾಗಲೇ ಒಂದು ನಿರ್ಣಯವನ್ನು ಮಾಡಿದ್ದಾರೆ. ಅದು ದೇಸಾಯಿ ಕಮೀಷನ್ ಪ್ರಕಾರ ಮಾಡಿದ್ದಾರೆ. ಈಗ ಅದನ್ನು ಕೈಬಿಟ್ಟು ನಾವು ಈಗ ಸ್ಯಾಚಟ್ಸ್‌ಗೆ ಹೋಗತಕ್ಕಂಥದ್ದು ಬಲ್ಕ್‌ಗೆ ಹೋಗತಕ್ಕಂಥದ್ದು ವಿವಾದಾತ್ಮಕವಾದ ವಿವರವಾಗುತ್ತದೆ. ಏತಕ್ಕೆ ಎಂದು ಹೇಳಿದರೆ ಬಾಟ್ಲಿಂಗ್ ಚಾರ್ಜ್ ಆಗುತ್ತದೆ. ಸದನದಲ್ಲಿ ಎಲ್ಲರೂ ಒಪ್ಪಿದರೆ, I don't mind a fool–proof arrangement is done.

ಆದರೆ ತಾವೆಲ್ಲಾ ಒಪ್ಪದೇ ಬಾಟ್ಲಿಂಗ್ ಮಾಡದೇ ಅವರು ಬಾಟ್ಲಿಂಗ್ ಚಾರ್ಜ್‌ನ್ನು ತೆಗೆದುಕೊಂಡರೆ ನಾವು ಖಂಡಿತವಾಗಿ ಅದನ್ನು ಕಂಡುಹಿಡಿಯಬೇಕಾಗುತ್ತದೆ. ನಾವು ಬಾಟ್ಲಿಂಗ್ ಚಾರ್ಜ್‌ಗೆ ಅನಾವಶ್ಯಕವಾಗಿ ಕೊಟ್ಟಿದ್ದರೆ ಅದನ್ನು ಹಿಂದಕ್ಕೆ ವಸೂಲು ಮಾಡಬೇಕಾಗುತ್ತದೆ. I am for it.

ಆದರೆ ಎನ್‌ಕ್ವಾಯರಿ ಎಲ್ಲಿಂದ ಪ್ರಾರಂಭ, ಮಾಡಬೇಕೆಂದು ಹೇಳಿ. ಬಾಟ್ಲಿಂಗ್ ಆದಂದಿನಿಂದ ಪ್ರಾರಂಭ ಮಾಡಿದರೆ ಎಲ್ಲಾ ವಸೂಲು ಮಾಡಬೇಕಾಗುತ್ತದೆ. I am not blaming anyone.

ಶ್ರೀ ಸಿ. ಬೈರೇಗೌಡ:– ಇದರಲ್ಲಿ ಮುಲಾಜು ಏನೂ ಬೇಡ. ಯಾರ್‍ಯಾರು ಇದ್ದಾರೋ ಅವರ ಹೆಸರುಗಳು ಹೊರಗಡೆ ಬರಲಿ.

SRI M. VEERAPPA MOILY:– Whatever system we adopt it should not be a hypocracy. That is what I believe.

SRI C. BYRE GOWDA:– Inquiry must be initiated since beginning.

ಶ್ರೀ ವೈ.ಕೆ. ರಾಮಯ್ಯ:– ಮೊಗುಮ್ಮಾಗಿ ಹೇಳುವುದಕ್ಕೆ ಬದಲು ನೇರವಾಗಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಮ್ಮದು ಏನೂ ಇಲ್ಲ. I am as open as you. ಆದುದರಿಂದ ಈ ಬಾಟ್ಲಿಂಗ್ ನಿಬಂಧನೆ ಇರುವಾಗ ಬಾಟ್ಲಿಂಗ್ ಮಾಡದೇ ಸ್ಯಾಚೆಟ್ ಮುಖಾಂತರ ಕೊಡತಕ್ಕಂಥದ್ದು ಸರಿಯಲ್ಲವೆಂದು ಹೇಳಿ ಎರಡು ತಿಂಗಳಿಂದ ನಾವು ಅದನ್ನು......

ಶ್ರೀ ಸಿ. ಬೈರೇಗೌಡ:– ತಪ್ಪಾಗಿ ಅರ್ಥ ಮಾಡಿಕೊಂಡಿದ್ದೀರಿ. ಸ್ಯಾಚೆಟ್ ಮಾರಾಟ ಮಾಡುವಂಥದ್ದು ಈಗ ಕಾನೂನಿನಲ್ಲಿ ಅವಕಾಶವಿಲ್ಲ. ಅದನ್ನು ಕಳ್ಳತನದಲ್ಲಿ ಮಾರಾಟ ಮಾಡುತ್ತಿದ್ದಾರೆ. ಅದನ್ನು ತಾವು ದಯಮಾಡಿ ಗಮನಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ಕಳ್ಳತನದಲ್ಲಿ ಮಾರಾಟ ಮಾಡಬಾರದೆಂದು ಕಟ್ಟುನಿಟ್ಟಾದ ಕಾರ್ಯಕ್ರಮ ತೆಗೆದುಕೊಂಡ ಮೇಲೆ ಈ ಬಾಟ್ಲಿಂಗ್ ಯೂನಿಟ್‌ನವರು ಬಾಟ್ಲಿಂಗ್ ಸಪ್ಲೈ ಮಾಡಲಿಕ್ಕೆ ಬೇಕಾದಂತಹ ವ್ಯವಸ್ಥೆ ಎರಡು ತಿಂಗಳಲ್ಲಿ ಮಾಡಿದ್ದಾರೆ. Capacity they have created. ಅದರಿಂದ ಆ ಪ್ರಶ್ನೆ ಇರುವುದಿಲ್ಲ. ಬಾಟ್ಲಿಂಗ್ ಕ್ರಯ ಜಾಸ್ತಿಯಾಗುತ್ತದೆ. ಹೆಚ್ಚು ದುಬಾರಿಯಾಗುತ್ತದೆ. ಅಂದರೆ ಆಗ ಬಾಟ್ಲಿಂಗ್ ಕೈ ಬಿಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:– ಆಂಧ್ರಪ್ರದೇಶದಲ್ಲಿ ಸರ್ಕಾರ ಇವತ್ತು ಸ್ಯಾಚೆಟ್‌ನಲ್ಲಿ ಸಾರಾಯಿ ಮಾರಾಟ ಮಾಡುತ್ತಿವೆ ನೀವು ಅದನ್ನು ದಯವಿಟ್ಟು ಗಮನಿಸಿ. ನಮ್ಮ ರಾಜ್ಯದಲ್ಲೂ ಸಹಾ ಸ್ಯಾಚೆಟ್‌ನಲ್ಲಿ ಕೇವಲ ಒಂದು ಬಲ್ಕ್ ಲೀಟರ್‌ನ್ನು ಕೇವಲ ಎರಡು ರೂಪಾಯಿನಲ್ಲಿ ಪ್ಯಾಕ್ ಮಾಡತಕ್ಕಂಥ ಅವಕಾಶ ಇದೆ. ಅದನ್ನು ಆಂಧ್ರ ಪ್ರದೇಶದಲ್ಲಿ ಅಳವಡಿಸಿದ್ದಾರೆ. ಅದನ್ನು ಜಾರಿಗೆ ತರುತ್ತೀರಾ.

ಶ್ರೀ ಎಂ. ವೀರಪ್ಪಮೊಯಿಲಿ:– ನಿಮ್ಮ ಪ್ರಶ್ನೆಯಂತೆ ಬಾಟ್ಲಿಂಗ್‌ನಲ್ಲಿ ಮಾಡಬೇಕೆ, ಸ್ಯಾಚೆಟ್‌ನಲ್ಲಿ ಮಾಡಬೇಕೆ ಎಂದು ಎರಡು ಪ್ರಶ್ನೆ ಇದೆ. ಈಗ ಸ್ಯಾಚೆಟ್‌ನಲ್ಲಿ ಮಾಡಿದರೆ ಅದರಿಂದ ಸಾಕಷ್ಟು ಇಲ್‌ಲೀಗಲ್ ಮಾಡಬಹುದು ಮತ್ತು ಸ್ಯಾಚೆಟ್‌ನಿಂದ ತೊಂದರೆ ಆಗಬಹುದು ಎಂಬ ಶಂಕೆ ಇದೆ. ಆದ್ದರಿಂದ ತಾವು ಏನು ಸೂಚನೆ ಕೊಟ್ಟಿದ್ದೀರ ಅದನ್ನು ಪುನಃ ವಿಚಾರ ಮಾಡೋಣ.

ಕರ್ನಾಟಕದಲ್ಲಿ ನಡೆದ ಕೋಮು ಗಲಭೆಯಲ್ಲಿ ಸತ್ತವರ ಸಂಖ್ಯೆ

86 (759) ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿನಗರ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇತ್ತೀಚಿನ ಮತೀಯ ಗಲಭೆಯಲ್ಲಿ ಮೃತಪಟ್ಟವರ ಹಾಗೂ ಗಾಯಗೊಂಡಿರುವ ಒಟ್ಟು ಸಂಖ್ಯೆ; (ಕೋಮುವಾರು ಸಂಖ್ಯೆ ಒದಗಿಸುವುದು):

ಆ) ಮೃತಪಟ್ಟವರ ಹಾಗೂ ಗಾಯಗೊಂಡವರ, ಕುಟುಂಬಗಳಿಗೆ ನೀಡಲಾದ ಒಟ್ಟು ಪರಿಹಾರ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಮೃತಪಟ್ಟವರ ಸಂಖ್ಯೆ 78

ಗಾಯಗೊಂಡವರ ಸಂಖ್ಯೆ 1035

ಆ) ರೂ. 92,39.000 ಅಲ್ಲದೆ ಮೃತಪಟ್ಟ ವ್ಯಕ್ತಿಗಳ ಸಂಬಂಧಿಕರಿಗೆ ತಲಾ ಒಂದು ಲಕ್ಷ ರೂಪಾಯಿಗಳ ಹೆಚ್ಚುವರಿ ಪರಿಹಾರ ಧನ ನೀಡಲು ಆದೇಶಿಸಲಾಗಿದೆ.

ಶ್ರೀ ಎ.ಎಂ. ಹಿಂಡಸಗೇರಿ:– ಅಧ್ಯಕ್ಷರೇ ಈವರೆಗೆ ಯಾರು ಕೋಮು ಗಲಭೆಯಿಂದ ಮೃತಪಟ್ಟಿದ್ದಾರೆ ಅವರಿಗೆ ತೊಂಬತ್ತೆರಡು ಲಕ್ಷದ ಮೂವತ್ತೊಂಬತ್ತು ಸಾವಿರ ರೂಪಾಯಿ ಸಹಾಯ ಧನವನ್ನು ಕೊಟ್ಟಿದ್ದೇವೆಂದು ಮಂತ್ರಿಗಳು ಹೇಳಿದ್ದಾರೆ. ಆದರೆ ಇದುವರೆಗೂ ನಮ್ಮ ಮಹಾನಗರದಲ್ಲಿ ಯಾರು ಇಂಜುರ್ಡ್ ಆಗಿದ್ದಾರೆ ಮತ್ತು ಆಸ್ತಿಪಾಸ್ತಿ ನಷ್ಟವಾಗಿದೆ ಅವರಿಗೆ ಇದುವರೆಗೆ ಸರಿಯಾದ ಪರಿಹಾರ ಧನ ಸಿಗಲಿಲ್ಲ ಮತ್ತು ಯಾರು ವ್ಯಾಪಾರಸ್ಥರಿಗೆ ಲುಕ್ಸಾನು ಆಗಿದೆ. ಅವರು ಬಡ್ಡಿ ರಹಿತ ಸಾಲವನ್ನು ಕೇಳಿದ್ದಾರೆ. ಇದುವರೆಗೂ ಆ ಸಾಲವನ್ನು ಸಹಾ ಮಂಜೂರು ಮಾಡಿಲ್ಲ. ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ ಆದಷ್ಟು ಬೇಗನೆ ಅವರಿಗೆ ಸಹಾಯಧನ ಮತ್ತು ಬಡ್ಡಿ ರಹಿತ ಸಾಲವನ್ನು ಕೊಡಿಸುವುದಕ್ಕೆ ಸರ್ಕಾರ ಆದೇಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ರಮಾನಾಥ್ ರೈ:– ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಮತೀಯ ಗಲಭೆಯಿಂದ ಪ್ರಾಣ ಕಳೆದುಕೊಂಡವರಿಗೆ ರಾಜ್ಯ ಸರ್ಕಾರ ಒಂದು ಲಕ್ಷ ಹಾಗೂ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಒಂದು ಲಕ್ಷ ತಲಾ ಎರಡು ಲಕ್ಷ ರೂಪಾಯಿಗಳನ್ನು ಮೃತ ಪಟ್ಟಿರುವವರಿಗೆ ಕೊಡಲಾಗಿದೆ. ರಾಜ್ಯದಲ್ಲಿ ಆದ ಹಾನಿಯ ಅಂದಾಜು 70,58,763. ಪರಿಹಾರ ಧನವಾಗಿ ಇಲ್ಲಿಯುವರೆಗೆ 1,36,26.900 ರೂಪಾಯಿಗಳನ್ನು ಈಗಾಗಲೇ ವಿತರಣೆ ಮಾಡಲಾಗಿದೆ. ಅದೇ ರೀತಿಯಲ್ಲಿ ಬ್ಯಾಂಕ್‌ನಿಂದ ಸಾಲ ಕೊಡಿಸ ತಕ್ಕಂಥ ಕಾರ್ಯವನ್ನು ಮಾಡುತ್ತೇವೆಂದು ಸರ್ಕಾರ ಮಾತು ಕೊಟ್ಟಿದೆ. ಆ ಮಾತಿನಂತೆ ಈಗಾಗಲೇ ಲೀಡ್ ಬ್ಯಾಂಕ್‌ನಲ್ಲಿ ವ್ಯವಹರಿಸಿ ಒಂದು ವರ್ಷದವರೆಗೆ ಸಾಲ ಮಂಜೂರು ಮಾಡುವಂತೆ ನಾವು ವ್ಯವಹರಿಸಿ ಮಾತುಕತೆ ನಡೆಸಿದ್ದೇವೆ. ಈ ಪರಿಹಾರ ಕೊಡುವ ದೃಷ್ಟಿಯಲ್ಲಿ ನಾವು ಹೆಚ್ಚಾಗಿ ಪರಿಣಾಮಕಾರಿಯಾಗಿ ಪ್ರಯತ್ನಪಡುತ್ತಿದ್ದೇವೆನ್ನುವ ಮಾತನ್ನು ಹೇಳಬಯಸುತ್ತೇನೆ.

11.40 ಎ.ಎಂ.

ಶ್ರೀ ಎ.ಎಂ. ಹಿಂಡಸಗೇರಿ:– ನಮ್ಮ ಕಡೆ ಇಲ್ಲಿಯವರೆಗೆ ಆ ಹಣವನ್ನು ಕೊಟ್ಟಿಲ್ಲ. ದಯವಿಟ್ಟು ಸರ್ಕಾರ ಆ ಹಣವನ್ನು ಕೊಡಿಸಬೇಕು. ಇನ್ನು ಎರಡನೆಯದಾಗಿ ಅನ್‌ನೆಸಸರಿಯಾಗಿ ಇನ್ನೋಸೆಂಟ್ ಪೀಪಲ್ ಮೇಲೆ ಕೇಸ್ ಹಾಕಲಾಗಿದೆ. ತಾವು ದಯವಿಟ್ಟು ಆ ಕೇಸ್‌ಗಳನ್ನು ವಿಥ್–ಡ್ರಾ ಮಾಡುತ್ತೀರಾ ?

ಶ್ರೀ ರಮಾನಾಥ ರೈ:– ಸನ್ಮಾನ್ಯ ಅಧ್ಯಕ್ಷರೆ, ಇನ್ನೂ ಪರಿಹಾರ ಕೊಡದಿದ್ದರೇ ಆದಷ್ಟು ಬೇಗ ಸಂಬಂಧಪಟ್ಟವರಿಗೆ ತಿಳಿಸಿ ಪರಿಹಾರ ಕೊಡಿಸಲು ವ್ಯವಸ್ಥೆ ಮಾಡುತ್ತೇವೆ. ಕೇಸ್‌ಗಳನ್ನು ವಿಥ್‌ಡ್ರಾ ಮಾಡುವ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇವೆ.

ಶ್ರೀ ಶಫೀ ಅಹ್ಮದ್:– ಮಾನ್ಯ ಹಿಂಡಸಗೇರಿಯವರ ಪ್ರಶ್ನೆಗೆ ಉತ್ತರವಾಗಿ 92 ಲಕ್ಷದ 39 ಸಾವಿರ ಪರಿಹಾರವನ್ನು ಮೃತಪಟ್ಟವರ ಹಾಗೂ ಗಾಯಗೊಂಡವರ ಕುಟುಂಬಗಳಿಗೆ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ ನನ್ನ ಉತ್ತರದಲ್ಲಿ ಒಟ್ಟು 1,36,26,99.00 ಬಾಕಿ ಇದೆ, ರೂ. 758.736 ಲಕ್ಷ ಆಸ್ತಿ ಪಾಸ್ತಿ ನಷ್ಟಕ್ಕಾಗಿ ಪರಿಹಾರ ನೀಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ಯಾವುದು ಸರಿಯಾದುದು ಎಂಬುದರ ಬಗ್ಗೆ ಮಾಹಿತಿ ನೀಡಬೇಕು. 135 ಲಕ್ಷ ಬಾಕಿ ಉಳಿದಿದೆ. ಅದನ್ನು ಕೂಡಲೇ ಒದಗಿಸಲು ಕ್ರಮ ಕೈಗೊಳ್ಳಬೇಕು. ಯಾರು ಗಾಯಗೊಂಡಿದ್ದಾರೆ ಅವರಿಗು ಕೂಡ ಕಾಂಪೆನ್ಸೇಷನ್ ಕೊಡಬೇಕು. ಸರಕಾರದವರು ಆದೇಶ ಹೊರಡಿಸಿ, ಕೆಲವರ ಪ್ರೈವೇಟ್ ನರ್ಸಿಂಗ್

ಹೋಂಗಳಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಂಡಿದ್ದು ಬಿಲ್ ಕೊಟ್ಟರೆ ಪರಿಹಾರ ಕೊಡುತ್ತೇವೆಂದು ಹೇಳಿದ್ದಾರೆ. 500 ರೂಪಾಯಿ ಪರಿಹಾರ ಕೊಟ್ಟರೆ ಸಾಕಾಗುವುದಿಲ್ಲ. ಅವರೂ ಎಷ್ಟು ಹಣ ಟ್ರೀಟ್‌ಮೆಂಟಿಗೆ ಖರ್ಚು ಮಾಡುತ್ತಾರೋ ಅಷ್ಟನ್ನು ಕೊಡಿಸಬೇಕು. 1990ರಲ್ಲಿ ಗಲಭೆಯಾದಾಗ ನಷ್ಟ ಹೊಂದಿರುವವರೆಗೆ ಇನ್ನೂ ಪರಿಹಾರ ಕೊಟ್ಟಿಲ್ಲ. ಕೋಲಾರ ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಗಲಭೆಯಾಗಿ ಬೆಳೆಗಳು ಕೂಡ ನಷ್ಟವಾಯಿತು. ಅವರುಗಳಿಗೆ ಯಾವ ಪರಿಹಾರವನ್ನು ಕೊಟ್ಟಿಲ್ಲ. ದಯವಿಟ್ಟು ಸರ್ಕಾರ ಇದರ ಬಗ್ಗೆ ಪರಿಶೀಲಿಸಿ ಆದಷ್ಟು ಜಾಗ್ರತೆ ಪರಿಹಾರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮಾನಾಥ ರೈ:– ಮಾನ್ಯ ಅಧ್ಯಕ್ಷರೇ, ಪ್ರಶ್ನೆಗಳಿಗೆ ಉತ್ತರಗಳು ಸರಿಯಾಗಿವೆ. ನಾನು ಉತ್ತರದಲ್ಲಿ 92–93ರಲ್ಲಿ ನಡೆದ ಗಲಭೆಯಲ್ಲಿ 7,58,76,300.00 ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದೇನೆ. ಹಾಗೂ ನಾವು ನೀಡಲಾಗಿರುವ ಪರಿಹಾರ ಧನ 1,36,26,900 ರೂಪಾಯಿ ಎಂದೂ ಸಹ ಹೇಳಿದ್ದೇನೆ. ಮಾನ್ಯ ಹಿಂಡಸಗೇರಿಯವರ ಪ್ರಶ್ನೆಗೆ ಉತ್ತರವಾಗಿ ರೂ. 92,39.000 ಗಳನ್ನು ಮೃತಪಟ್ಟವರು ಹಾಗೂ ಗಾಯಗೊಂಡವರ ಕುಟುಂಬಗಳಿಗೆ ನೀಡಲಾದ ಪರಿಹಾರ ಧನವೆಂದು ಹೇಳಿದ್ದೇನೆ. ಮೃತಪಟ್ಟವರ ಕುಟುಂಬದವರಿಗೆ ನೀಡಲಾದ ಪರಿಹಾರ ಎಷ್ಟು ಎಂದರೆ 184 ಲಕ್ಷ. ಇತರೆ ತೊಂದರೆಗೊಳಗಾದವರಿಗೂ ಕೂಡ ಪರಿಹಾರ ಕೊಡಬೇಕೆಂದು ಹೇಳಿದ್ದಾರೆ, ನಾನು ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಶಫಿ ಅಹ್ಮದ್:– ಸರ್ಕಾರದ ವತಿಯಿಂದ ಪರಿಹಾರ ಕೊಡುವುದು ಅಷ್ಟೇ ಅಲ್ಲ, ಮೃತಪಟ್ಟ ಕುಟುಂಬದವರಿಗೆ ನೌಕರಿ ಕೊಡುವುದಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ. ಅದರ ಬಗ್ಗೆ ತಾವು ಉತ್ತರ ಏನು ಕೊಡುತ್ತೀರಿ ?

ಶ್ರೀ ರಮಾನಾಥ್ ರೈ:– ವಿಶೇಷವಾಗಿ ಮೃತಪಟ್ಟ ಕುಟುಂಬ ವರ್ಗದವರು ನಿರ್ಗತಿಕರಾದರೆ ಸರ್ಕಾರಿ ಉದ್ಯೋಗ ನೀಡುವ ಭರವಸೆ ಕೊಟ್ಟಿದ್ದೇವೆ. ಆ ಮಾತಿನಂತೆ ನಡೆಯಲಿಕ್ಕೆ ಕ್ರಮ ಕೈಗೊಳ್ಳುತ್ತೇವೆ. ಇದರ ಜೊತೆಗೆ ಶಾಶ್ವತವಾಗಿ ಅಂಗವಿಕಲರಾದವರಿಗೆ ಮಾಸಿಕ 250 ರೂ. ಕೊಡುವಂತಹ ಕಾರ್ಯಕ್ರಮವನ್ನು ಕೂಡ ಸರ್ಕಾರ ಹಾಕಿಕೊಂಡಿದೆ.

ಸಾರಿಗೆ ಸಂಸ್ಥೆಯ ಚಾಲಕ ಮತ್ತು ನಿರ್ವಾಹಕರ ನಡವಳಿಕೆ ಕುರಿತು

87 (1004) ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು):–

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಾಲಕ ಮತ್ತು ನಿರ್ವಾಹಕರುಗಳಿಗೆ ನೀತಿ ಸಂಹಿತೆ ತರಬೇತಿ ನೀಡಲಾಗುತ್ತಿದೆಯೆ;

ಆ) ಹಾಗಿದ್ದಲ್ಲಿ ತರಬೇತಿಯ ಉದ್ದೇಶವೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಹೌದು

ಆ) ಈ ಕೆಳಗೆ ಸೂಚಿಸಿರುವ ಉದ್ದೇಶಗಳನ್ನು ಈಡೇರಿಸಲು ಚಾಲಕ ಮತ್ತು ನಿರ್ವಾಹಕರುಗಳಿಗೆ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ:–

1. ಪ್ರಯಾಣಿಕರನ್ನು ಗೌರವದಿಂದ ಕಂಡು ಅವರಿಗೆ ಅತ್ಯಂತ ಸೌಜನ್ಯಪೂರ್ಣವಾದ ಸೇವೆಯನ್ನು

ಕೊಡಲು ಅನುವಾಗುವಂತೆ ಚಾಲಕರು ಮತ್ತು ನಿರ್ವಾಹಕರುಗಳಲ್ಲಿ ಸೇವಾಮನೋಭಾವನೆಯನ್ನು ರೂಢಿಸುವುದು.

2. ಚಾಲಕರಲ್ಲಿ ಉತ್ತಮವಾದ ಚಾಲಕ ಪ್ರವೃತ್ತಿಗಳನ್ನು ರೂಢಿಸಿ, ತನ್ಮೂಲಕ ಪ್ರಯಾಣಿಕರಿಗೆ ಸುರಕ್ಷಿತ ಪ್ರಯಾಣ ಮತ್ತು ಅಪಘಾತ ರಹಿತ ಸೇವೆಯನ್ನು ಕೊಡುವುದು.

3. ಮೋಟಾರು ವಾಹನ ಕಾಯ್ದೆ, ಮೋಟಾರು ಸಾರಿಗೆ ನೌಕರರ ಕಾಯ್ದೆ ಮತ್ತು ಮೋಟಾರು ವಾಹನ ನಿಯಮಾವಳಿಗಳ ಸಂಕ್ಷಿಪ್ತ ಪರಿಚಯ ಮತ್ತು ಸಂಬಂಧಪಟ್ಟ ವಿಧಿಗಳ ಪೂರ್ಣ ತಿಳುವಳಿಕೆ ಕೊಡುವುದು.

4.ಬಸ್ಸು ಮತ್ತು ಅದರಲ್ಲಿ ಅಳವಡಿಸಿರುವ ಪ್ರಮುಖ ಜೋಡಣೆಗಳ ಮತ್ತು ಅದರ ಕಾರ್ಯನಿರ್ವಹಣೆ ಬಗ್ಗೆ ತಿಳುವಳಿಕೆಯನ್ನು ಕೊಡುವುದು ಹಾಗೂ ಸಂಸ್ಥೆಯಲ್ಲಿ ಬಸ್ಸುಗಳನ್ನು ದುರಸ್ತಿಗೊಳಿಸಲು ಅಳವಡಿಸಿರುವ ಪದ್ಧತಿಗಳ ಬಗ್ಗೆ ಪೂರ್ಣ ತಿಳುವಳಿಕೆ ಕೊಡುವುದು.

5.ನಿಗದಿತ ವೇಳೆಗೆ ಸರಿಯಾಗಿ ಬಸ್ಸುಗಳನ್ನು ಓಡಿಸುವುದರ ಬಗ್ಗೆ ಕಟ್ಟುನಿಟ್ಟಿನ ಶಿಸ್ತನ್ನು ರೂಪಿಸುವುದು.

6.ಸಂಸ್ಥೆಯಲ್ಲಿ ರೂಪಿಸಿರುವ ನಿಯಾಮವಳಿಗಳು ಸ್ಥಾಯಿ ಆದೇಶಗಳ ಬಗ್ಗೆ ಪೂರ್ಣ ತಿಳುವಳಿಕೆಯನ್ನು ಕೊಡುವುದು. ಅದರಲ್ಲಿ ಮುಖ್ಯವಾಗಿ ಸಂಸ್ಥೆಯಲ್ಲಿ ಅಳವಡಿಸಿರುವ ನಡತೆ ಮತ್ತು ಶಿಸ್ತು ನಿಯಮಾವಳಿಗಳ ಬಗ್ಗೆ ಪೂರ್ಣ ಪರಿಚಯವನ್ನು ಮನದಟ್ಟು ಮಾಡಿ ಕೊಡುವುದು. ಹಾಗೂ ಸಂಸ್ಥೆಯಲ್ಲಿ ಚಾಲಕ ಮತ್ತು ನಿರ್ವಾಹಕರ ಮಹತ್ತರ ಪಾತ್ರವನ್ನು ಮನದಟ್ಟು ಮಾಡಿಕೊಡುವುದು.

ಶ್ರೀ ಬಾಬಾಗೌಡ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಈ ಬಸ್ ಡ್ರೈವರ್‌ಗಳು ಮತ್ತು ಕಂಡಕ್ಟರ್‌ಗಳು ಯಾವ ರೀತಿ ವರ್ತನೆ ಮಾಡುತ್ತಿದ್ದಾರೆ ಎಂಬುದನ್ನು ತಾವು ನೋಡಿದಂತೆ ಕಾಣುವುದಿಲ್ಲ. ಬಸ್ಸನ್ನು ರಸ್ತೆಯ ಮಧ್ಯೆದಲ್ಲೇ ತರುತ್ತಾರೆ. ಹಿಂದಿನಿಂದ ಕಾರ್ ಬಂದು ಹಾರ್ನ್ ಹೊಡೆದರೂ ಸಹ ಪಕ್ಕಕ್ಕೆ ಹೋಗುವುದಿಲ್ಲ. ಒಂದು ತರಹ ಮನರಂಜನೆ ರೀತಿಯಲ್ಲಿ ಇವರುಗಳು ನಡೆದುಕೊಳ್ಳುತ್ತಿದ್ದಾರೆ. 2 ಬಸ್ಸುಗಳ ಡ್ರೈವರ್‌ಗಳ ರಸ್ತೆಯ ಮಧ್ಯದಲ್ಲಿ ನಿಲ್ಲಿಸಿ ಮಾತನಾಡಲು ಪ್ರಾರಂಭ ಮಾಡುತ್ತಾರೆ. ಇದಷ್ಟೇ ಅಲ್ಲ, ಎಲ್ಲಾ ರಸ್ತೆಗಳಿಗೆ ಒಂದೇ ತರಹ ಸ್ಪೀಡ್ ಇದೆಯೇ ಅಥವಾ ಬೇರೆ ಬೇರೆ ರಸ್ತೆಗಳಿಗೆ ಬೇರೆ ಬೇರೆ ಸ್ಪೀಡ್ ಇದೆಯೇ ಎಂಬ ಬಗ್ಗೆ ತಾವು ತಿಳಿವಳಿಕೆ ಕೊಡಬೇಕು. 3ನೇಯದಾಗಿ ಶಿಷ್ಟಾಚಾರ ಅವರಿಗೆ ಕಲಿಸಬೇಕು. ಹೆಣ್ಣು ಮಕ್ಕಳೊಡನೆ ಯಾವ ರೀತಿ ವರ್ತಿಸುತ್ತಾರೆ. ಹಿರಿಯರ ಜೊತೆಗೆ ಯಾವ ರೀತಿ ಮಾತನಾಡುತ್ತಾರೆ ಎಂಬುದನ್ನು ತಾವು ಗಮನಿಸಬೇಕು ಹಾಗೂ ಮುದುಕರ ಜೊತೆ ಸಣ್ಣ ಮಕ್ಕಳ ಜೊತೆಯಲ್ಲಿ ಮಾತನಾಡುವುದರ ರೀತಿಯಲ್ಲಿ ಮಾತನಾಡುತ್ತಾರೆ. ಸನ್ಮಾನ್ಯ ಮಂತ್ರಿಗಳು ಇವರನ್ನು ಮತ್ತೇ ಹಾದಿಯ ಮೇಲಕ್ಕೆ ತಂದು ಇವರು ಸರಿಯಾದ ರೀತಿಯಲ್ಲಿ ಸೇವೆ ಮಾಡಲು ಅನುವು ಮಾಡಿಕೊಡುತ್ತಾರೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತಹ ಮಾತು ವಾಸ್ತವಿಕವಾದದ್ದು. ಡ್ರೈವರ್‌ಗಾಗಲಿ, ಅಥವಾ ಕಂಡಕ್ಟರ್‌ಗಾಗಲಿ ಅವರು ಲೈಸನ್ಸ್ ತೆಗೆದುಕೊಂಡ ನಂತರ ಅವರಿಗೆ ಟ್ರೈನಿಂಗ್ ಬೇಕು. ಅದರ ಪ್ರಕಾರ ಅವರು ಯಾವ ರೀತಿ ಬಿಹೇವ್ ಮಾಡಬೇಕು, ಯಾವ ರೀತಿ ಶಿಸ್ತು ಇರಬೇಕು, ಯಾವ ಪ್ರಕಾರ ಪಂಕ್ಚುಯಾಲಿಟಿ ಇರಬೇಕು ಎಂದು ಹೇಳಿಕೊಡುವುದಕ್ಕೆ ಒಂದು ಟ್ರೈನಿಂಗ್ ಸೆಂಟರ್ ಇದೆ. ಆ ಟ್ರೈನಿಂಗ್ ಸೆಂಟರ್‌ನಲ್ಲಿ ರೀಜನಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಎಂದು ಏನು ಇದೆ, ಅದು ಹಾಸನ, ಕೋಲಾರ, ಕೆಂಗೇರಿ, ಬಾಗಲಕೋಟೆ, ಹುಬ್ಬಳ್ಳಿ ಮತ್ತು ಹುಮ್ನಾಬಾದ್ ಈ ಆರು ಸ್ಥಳಗಳಲ್ಲಿ ನಾವು ಟ್ರೈನಿಂಗ್‌ನ್ನು ನಾನ್ ಸೂಪರ್‌ವೈಸ್ ಸ್ಟಾಫ್‌ಗೆ ಎಂದು ಇಟ್ಟಿದ್ದೇವೆ. ಅಲ್ಲಿ ಟ್ರೈನಿಂಗ್ ಕೊಡುತ್ತಾ ಇದ್ದೇವೆ. ಅದಲ್ಲದೆ ಸೆಂಟ್ರಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಮೈಸೂರಿನಲ್ಲಿ ಸೂಪರ್‌ವೈಸ್ ಸ್ಟಾಫ್ ಏನು ಇದೆ ಅದಕ್ಕೆ ಟ್ರೈನಿಂಗ್ ಕೊಡುತ್ತಾ ಇದ್ದೇವೆ. Principals were appointed in July 1992. Buildings are not yet ready.

ಬಿಲ್ಡಿಂಗ್ ಕಟ್ಟಿಸುತ್ತಾ ಇದ್ದೇವೆ. ಹಾಗೆ improving fuel efficiency ಮತ್ತು ಪ್ರತಿಯೊಂದು ಡಿಪೋದಲ್ಲೂ ಬಸ್ ಸಾಧಾರಣವಾಗಿ ಕೆಟ್ಟರೆ, ಅದನ್ನು ಯಾವ ರೀತಿ ರಿಪೇರಿ ಮಾಡಬೇಕು ಎಂದು ಹೇಳಿಕೊಡುವುದಕ್ಕೆ ಟ್ರೈನಿಂಗ್ ಇದೆ.

ಶ್ರೀ ಬಾಬಾಗೌಡ ಪಾಟೀಲ್:- ಅವರಿಗೆ ಇಷ್ಟೆಲ್ಲಾ ಟ್ರೈನಿಂಗ್ ಕೊಟ್ಟರೂ, ಆ ರೀತಿಯ ವರ್ತನೆ ಏಕೆ ನಿಂತಿಲ್ಲ, ಎನ್ನುವುದು ನನ್ನ ಸಮಸ್ಯೆ. ನೀವು ಅಸಭ್ಯ ವರ್ತನೆ ಮತ್ತು ರಸ್ತೆ ನಿಯಮಗಳ ಸಲುವಾಗಿ ಎಷ್ಟು ಕ್ರಮ ಕೈಗೊಂಡಿದ್ದೀರಿ ಸ್ವಲ್ಪ ತಿಳಿಸುತ್ತೀರಾ ? ಅದರಲ್ಲೂ ಆ ಸ್ಪೀಡ್ ಇದೆಯಲ್ಲ, ಆ ಸ್ಪೀಡ್‌ನ್ನು ಹೇಳಬಾರದು ಅಷ್ಟು ಸ್ಪೀಡ್ ಇರುತ್ತದೆ. ನೀವು ಇಷ್ಟೆಲ್ಲಾ ಟ್ರೈನಿಂಗ್ ಕೊಡುತ್ತೀವಿ ಎಂದು ಹೇಳುತ್ತೀರಿ, ಅವರು ಇಷ್ಟೆಲ್ಲಾ ಟ್ರೈನಿಂಗ್ ಪಡೆದರೂ ಅದೇ ರೀತಿಯ ವರ್ತನೆ ಮಾಡುತ್ತಾರಲ್ಲ, ಇದಕ್ಕೆ ಕಾರಣವೇನು ಎಂದು ನಾನು ಕೇಳಬಯಸುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ:- ನಾವು ಕ್ರಮ ತೆಗೆದುಕೊಂಡಿದ್ದೇವೆ ಮತ್ತು ಸ್ಟ್ರಿಕ್ಟ್ ಆಗಿ ರಿಸ್ಟ್ರಿಕ್ಷನ್ ಕೊಟ್ಟಿದ್ದೇವೆ. ನಾವು ಅದರ ಬಗ್ಗೆ ಹೈಯರ್ ಆಫೀಸರನ್ನು ಸೂಪರ್‌ವಿಷನ್‌ಗೆ ಕಳಿಸಿ ನಂತರ ವ್ಯವಸ್ಥೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಸರ್ಕಾರಿ ಬಸ್ಸುಗಳಿಗೆ ಬ್ರೇಕ್ ಇಲ್ಲ. ತಾವು ಬಸ್‌ನಲ್ಲಿ ಯಾವತ್ತಾದರೂ ಹತ್ತಿ ಕುಳಿತು ಹೋಗಿದ್ದೀರಾ ? ತಾವು ಅದನ್ನು ಅನುಭವಿಸಬೇಕು. ಅವುಗಳಿಗೆ ಬ್ರೇಕ್ ಇಲ್ಲ. ಅವು ಯಾರಿಗೆ ಬೇಕಾದರೂ ಹೊಡೀತಾವೆ ಅವರಿಗೆ ಹೇಳುವವರು ಕೇಳುವವರು ಯಾರು ಇಲ್ಲ. ನಿಮ್ಮ ಬಸ್‌ಗಳಿಗೆ ಏನಾದರೂ ನೀತಿ ನಿಯಮಗಳು ಇದೆಯೇ ? ತಮ್ಮ ಬಸ್‌ಗಳಿಗೆ ಬ್ರೇಕ್ ಹಾಕತಕ್ಕಂಥಾದ್ದು, ನಿಲ್ಲಿಸತಕ್ಕಂಥಾದ್ದು ಏನಾದರೂ ಇದೆಯೇ ?

ಶ್ರೀ ಬಸವರಾಜ್ ರಾಯರೆಡ್ಡಿ:- ಅಧ್ಯಕ್ಷರೇ, ಇವರ ಬಾಯಿಗೂ ಬ್ರೇಕ್ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಮ್ಮ ಬಾಯಿಗೆ ಬ್ರೇಕ್ ಇಲ್ಲ ಎಂದು ಹೇಳಿ ಬೇಜವಾಬ್ದಾರಿತನದ ಮಾತನಾಡತಕ್ಕಂಥಹ ಈ ಸದಸ್ಯರ ಬಗ್ಗೆ ನಾನು ಬಹಳ ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಾ ಇದ್ದೇನೆ, ದಯಮಾಡಿ ತಾವು ಆ ಮಾತನ್ನು ಹಿಂದೆ ತೆಗೆದುಕೊಳ್ಳಬೇಕು. ಯಾವುದಕ್ಕೆ ಇವರು ಬ್ರೇಕ್ ಇಲ್ಲ ಮಾತನಾಡತಕ್ಕಂಥಾದ್ದು ಹೇಳಿ ? ಅವರ ಪಕ್ಷದವರೇ ಕುಳಿತಿದ್ದಾರೆ ಅಧ್ಯಕ್ಷರೆ ದಯಮಾಡಿ ಈ ಮಾತು ಕೇಳಿ. ನಮ್ಮ ಬಾಯಿಗೆ ಬ್ರೇಕ್ ಇಲ್ಲ ಎಂದು ಹೇಳುವುದಕ್ಕೆ ಇವರು ಯಾರು ? ನನಗೂ ಈ ಸದನದಲ್ಲಿ ಮಾತನಾಡುವುದಕ್ಕೂ ಹಕ್ಕು ಇದೆ. ಈ ಮಾತನ್ನು ಹಿಂದೆ ತೆಗೆದುಕೊಳ್ಳದಿದ್ದರೆ ನಾನು ಧರಣಿ ಮಾಡುತ್ತೇನೆ. ಅಧ್ಯಕ್ಷರೆ ಇದು ಸರಿಯಲ್ಲ. ಇದು ಅವಿವೇಕದ ಪರಮಾವಧಿ. ಇದಕ್ಕೆ ಒಂದು ಲಿಮಿಟ್ ಇದೆ.

(ಗೊಂದಲ)

ಸಭಾಧ್ಯಕ್ಷರು:- ಬಸವರಾಜ ರಾಯರೆಡ್ಡಿಯವರೇ ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಾಬಾಗೌಡ ಪಾಟೀಲ್:- ಅವರು ಈ ರೀತಿ ಹಗುರವಾಗಿ ಮಾತನಾಡಬಾರದು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಇಲ್ಲಿ ಹಿಂದೆ ಸದಸ್ಯರು ಮಾತನಾಡುವುದಕ್ಕೆ ಆಗುತ್ತಿಲ್ಲ, ಅದಕ್ಕೆ

ನೀವು ಸ್ವಲ್ಪ ಬ್ರೇಕ್ ಹಾಕಿಕೊಂಡರೆ ನಮಗೆ ಒಂದು ಅವಕಾಶ ಸಿಗುತ್ತದೆ ಎಂದು ಹೇಳಿದೆನೇ ಹೊರತು ಇನ್ನು ಯಾವ ದೃಷ್ಟಿಯೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್:– ಪ್ರತಿಸಾರಿ ನಾನು ನೋಡುತ್ತಾ ಇದ್ದೇನೆ, ಇವರ ವರ್ತನೆ ನನಗೆ ಸರಿ ಕಾಣುತ್ತಾ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ವಾಟಾಳ್ ಅವರ ಬಗ್ಗೆ ನನಗೆ ಅತ್ಯಂತ ಗೌರವ ಇದೆ. ನಾನು ಬೇರೆ ಯಾವ ದೃಷ್ಟಿಯಿಂದ ಹೇಳಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೇ, ಮಾನ್ಯ ಶಿವರಾಮೇ ಗೌಡರು ಒಂದು ಮಾತು ಹೇಳಿದರು ಎಂದು ವಿರೋಧ ಪಕ್ಷದ ನಾಯಕರಾದಂತಹ ಶ್ರೀಮಾನ್ ಚಂದ್ರೇಗೌಡರು ಹೊರಗಡೆ ಹೋದರು.

ಶ್ರೀ ಬಾಬಾಗೌಡ ಪಾಟೀಲ್:– ಬಸ್ಸಿನ ಡ್ರೈವರ್ಸ್, ಕಂಡಕ್ಟರ್ ಕುಡಿದೇ ಕೆಲಸಕ್ಕೆ ಹೋಗುತ್ತಾರೆ, ಕೆಲವರು ಪ್ಯಾಸೆಂಜರ್ಸ್ ಕುಡುಕರು ಇರುತ್ತಾರೆ. ಅವರವರಲ್ಲೇ ಜಗಳ ಆಗಿ ಮರುದಿವಸ ಪಿರ್ಯಾದೆ, ಕಂಪ್ಲೆಂಟ್ ಎಂದು ಬರುತ್ತದೆ. ಇದು ಪ್ರತಿದಿವಸ ನಡೆಯುತ್ತಾ ಇದೆ. ಆ ಕಾರಣ ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ವಿಚಾರ ಮಾಡಿದ್ದೀರ ?

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಸದಸ್ಯರು ಹೇಳಿದ ಮಾತನಲ್ಲಿ ಅರ್ಥ ಇದೆ. ಸ್ವಲ್ಪ ಜನ ಕುಡಿದು ಡ್ರೈವಿಂಗ್ ಮಾಡುತ್ತಿದ್ದಾರೆ. ಸರಿಯಾದ ಪಂಕ್ಚುಯಾಲಿಟಿ ಇಲ್ಲ. ಅದರ ಬಗ್ಗೆ ಸರಿಯಾದ ವ್ಯವಸ್ಥೆ ಮಾಡುತ್ತಿದ್ದೇವೆ. We will take action.

ಶ್ರೀ ಬಾಬಾಗೌಡ ಪಾಟೀಲ್:– ಕ್ರಮ ಕೈಗೊಳ್ಳುವುದರ ಬಗ್ಗೆ ಏನಾದರೂ ವಿವರಗಳು ಕೊಡುತ್ತೀರ ?

ಶ್ರೀ ಭೀಮಣ್ಣ ಖಂಡ್ರೆ:– ಕ್ರಮ ಕೈಗೊಂಡಿದ್ದೇವೆ. ಸಾವಿರಾರು ಕೇಸ್‌ಗಳು ಇವೆ. ಈಗ ಅದನ್ನು ಮಾಡದಿದ್ದರೂ ಮುಂದೆ ಅದನ್ನು ಮಾಡುತ್ತೇವೆ.

ನಿಯೋಜಿತ ಪ್ರವಾಸಗಳಿಗೆ ನೀಡಲಾದ ಗೌರವ ಅಪ್ಪಣೆ ಚೀಟಿಗಳು

88 (1015) ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ):–

ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಿವಿಧ ನಿಯೋಜಿತ ಪ್ರವಾಸಿಗಳಿಗೆ ಗೌರವ ಅಪ್ಪಣೆ ಚೀಟಿಯನ್ನು (ಕಾಂಪ್ಲಿಮೆಂಟರಿ ಪಾಸ್) ನೀಡಲಾಗುತ್ತದೆಯೆ ?

ಆ) ಹಾಗಿದ್ದಲ್ಲಿ, ಜನವರಿ 90ರಿಂದ ಡಿಸೆಂಬರ್ 92ರ ಅಂತ್ಯದವರೆಗೆ ಎಷ್ಟು ಚೀಟಿಗಳನ್ನು (ಪಾಸ್) ನೀಡಲಾಗಿದೆ.

ಇ) ಸಾರ್ವಜನಿಕರ ಹಿತದೃಷ್ಟಿಯಿಂದ ಗೌರವ ಅಪ್ಪಣೆ ಚೀಟಿ (ಕಾಂಪ್ಲಿಮೆಂಟರಿ ಪಾಸ್) ಕೊಡುವುದನ್ನು ನಿಲ್ಲಿಸುವ ಪ್ರಸ್ತಾವನೆ ಇದೆಯೆ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ) ಹೌದು.

ಆ) ಸರಾಸರಿ ಸುಮಾರು ತಿಂಗಳಿಗೆ 4 ಪಾಸ್ ನೀಡಲಾಗುತ್ತಿದೆ.

ಇ) ಈ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:– ಮಾನ್ಯ ಅಧ್ಯಕ್ಷರೆ, ಪ್ರವಾಸೋದ್ಯಮ ನಿಗಮದವರು ಕಾಂಪ್ಲಿಮೆಂಟರಿ ಪಾಸ್‌ಗಳನ್ನು ಕೊಡುತ್ತಾ ಇದ್ದಾರೆ. ಇದರಿಂದ ನಿಗಮಕ್ಕೆ ಬಹಳಷ್ಟು ನಷ್ಟವಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಈ ಪಾಸ್‌ಗಳನ್ನು ತೆಗೆದುಕೊಂಡು ಹೋಗುವವರು ಪ್ರವಾಸಿ ಕೇಂದ್ರಗಳನ್ನು ನೋಡಿಕೊಂಡು ಬರುವ ಪ್ರವೃತ್ತಿಯಿಂದ ಹೋಗುತ್ತಾರೆಯೇ ಹೊರತು, ಯಾವುದೇ ವಿಧವಾದಂಥ ಆದಾಯವನ್ನು ಉಂಟು ಮಾಡುವುದಿಲ್ಲ. ಈ ಪಾಸನ್ನು ನೌಕರ ವರ್ಗದವರಿಗೂ ಕೊಡತಕ್ಕಂಥ ಮನಸ್ಸನ್ನು ಮಾಡಿದ್ದೀರಿ ಇದರಿಂದ ನಿಗಮಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಉತ್ಪತ್ತಿ ಹೋಗುತ್ತಿದೆ ಎನ್ನತಕ್ಕಂಥಾದ್ದು ಸರಿಯೇ ?

ಶ್ರೀ ಎಂ. ಪೆರಿಕಲ್ ಮಲ್ಲಪ್ಪ:– ಮಾನ್ಯ ಸಭಾಧ್ಯಕ್ಷರೇ, ಪ್ರವಾಸೋದ್ಯಮ ನಿಗಮದಲ್ಲಿ ಕೆ.ಎಸ್.ಟಿ.ಡಿ.ಸಿ ವತಿಯಿಂದ ಕೆಲವು ಕೇಂದ್ರ ಮತ್ತು ನೆರೆಹೊರೆ ರಾಜ್ಯಗಳ ಪ್ರವಾಸೋದ್ಯಮ ಇಲಾಖಾ ಅಧಿಕಾರಿಗಳು ಬಂದಾಗ ಅವರಿಗೆ ಕೆಲವು ಕಾಂಪ್ಲಿಮೆಂಟರಿ ಪಾಸ್‌ಗಳನ್ನು ಕೊಡುತ್ತೇವೆ. ಮತ್ತು ಕೆಲವು ಟ್ರಾವಲ್ ಏಜೆಂಟ್‌ಗಳು ಟೂರಿಸಂನ್ನು ಪ್ರಮೋಟ್ ಮಾಡುವುದಕ್ಕೋಸ್ಕರವಾಗಿ ಅವರಿಗೂ ಕೆಲವು ಸಲ ಪಾಸ್‌ಗಳನ್ನು ಕೊಡುತ್ತಾ ಇದ್ದೇವೆ. ಹೀಗೆ ಒಂದು ವರ್ಷದಲ್ಲಿ ಕೇವಲ 50–60 ಪಾಸ್‌ಗಳನ್ನು ಮಾತ್ರ ಕೊಡುತ್ತಾ ಇದ್ದೇವೆ. ತಿಂಗಳಿಗೆ 4–5 ಪಾಸ್‌ಗಳು ಮಾತ್ರ ಆಗಬಹುದು. ಆದ್ದರಿಂದ ನಮ್ಮ ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳ ನಷ್ಟ ಆಗವುದಿಲ್ಲ. ನಮ್ಮ ಕೆ.ಎಸ್.ಟಿ.ಡಿ.ಸಿ ಸ್ಟಾಫ್ ಆಗಲೀ, ಟೂರಿಸಂ ಸ್ಟಾಫ್ ಆಗಲಿ, ಖಾಲಿ ಇದ್ದಾಗ ಮಾತ್ರ ಅವರಿಗೆ ರಜೆ ತೆಗೆದುಕೊಂಡು ಊರುಗಳಿಗೆ ಹೋಗಬೇಕಾದರೆ ಅಂಥ ಸಮಯದಲ್ಲಿ ಮಾತ್ರ ಕೊಡುತ್ತಾ ಇದ್ದೇವೆ. ಪಾಸ್ ಕೊಡುವುದರಿಂದ ಯಾವ ನಷ್ಟವೂ ಆಗುತ್ತಾ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:– ಈ ಕಾಂಪ್ಲಿಮೆಂಟರಿ ಪಾಸ್‌ಗಳನ್ನು ತೆಗೆದು ಹಾಕುವುದರಿಂದ ಸರಕಾರಕ್ಕೆ ಆಗುವ ತೊಂದರೆಗಳಾದರೂ ಏನು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಕಾಂಪ್ಲಿಮೆಂಟರಿ ಪಾಸ್‌ಗಳನ್ನು ನಾವು ಟೂರಿಸಂನ್ನು ಪ್ರಮೋಟ್ ಮಾಡುವುದಕ್ಕೆ ಕೊಡುತ್ತಿದ್ದೇವೆ. ಕೆಲವರು ನೆರೆ ರಾಜ್ಯಗಳಿಂದ ಬರುತ್ತಾರೆ ಮತ್ತು ಕೇಂದ್ರದ ಐ.ಟಿ.ಡಿ.ಸಿ ಅಧಿಕಾರಿಗಳು ಬಂದಾಗ ಕೂಡಲೇ ಬೇಕಾಗುತ್ತದೆ ಟೂರಿಸಂನ್ನು ಪ್ರಮೋಟ್ ಮಾಡಲು ಮತ್ತು ಒಂದು ಸ್ನೇಹ ರೀತಿಯ ವಾತಾವರಣವನ್ನು ಇಟ್ಟುಕೊಳ್ಳಲು ಹೀಗೆ ಮಾಡಬೇಕಾಗುತ್ತದೆ, ಇದರಿಂದ ಯಾವ ತೊಂದರೆಯೂ ಆಗುವುದಿಲ್ಲ, ಇದನ್ನು ಬಹಳ ಕಡಿಮೆ ಪ್ರಮಾಣದಲ್ಲಿ ಕೊಡುತ್ತಿದ್ದೇವೆ. ಇದನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:– ಬೇರೆ ರಾಜ್ಯಗಳಲ್ಲಿ ಕಾಂಪ್ಲಿಮೆಂಟರಿ ಪಾಸ್ ಕೊಡುವ ಪದ್ಧತಿ ಇದೆಯೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಬೇರೆ ರಾಜ್ಯಗಳಿಗೆ ನಮ್ಮ ಅಧಿಕಾರಿಗಳು ಮತ್ತು ಟ್ರಾವಲ್

ಏಜಂಟ್ಸ್ ಹೋದರೆ ಒಂದು ಸಂಪ್ರದಾಯ ಇಟ್ಟುಕೊಂಡಿದ್ದಾರೆ. ಅದನ್ನು ನಾವು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ.

1991 ರಿಂದ 1993 ರವರೆಗಿನ ಅಬಕಾರಿ ಆದಾಯ

89 (1030) ಶ್ರೀ ಶಿವಶೇಖರಪ್ಪಗೌಡ ಶಿರವಾಲ್ (ಶಹಾಪುರ):–

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. 1991–92ನೇ ಸಾಲಿನಲ್ಲಿ ಅಬಕಾರಿ ಬಾಬಿನಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ?

2. 1992–93ನೇ ಸಾಲಿನಲ್ಲಿ ಸೆಕೆಂಡ್ಸ್ ಮದ್ಯ ತಡೆಗಟ್ಟುವವರೆಗೆ ಬಂದ ಆದಾಯವೆಷ್ಟು ? ಮತ್ತು ತಡೆಗಟ್ಟಿದ ನಂತರ ಬಂದ ಆದಾಯವೆಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

1. ರೂ. 510.32 ಕೋಟಿ ಆದಾಯ ಬಂದಿರುತ್ತದೆ.

2. ತಿಂಗಳವಾರು ಮದ್ಯ ಮಾರಾಟದಿಂದ ಬಂದ ಆದಾಯಕರ ಈ ಕೆಳಕಂಡಂತೆ ಇರುತ್ತದೆ.

1992–93 ತಿಂಗಳು	ಆದಾಯ ಕೋಟಿ ರೂ.ಗಳಲ್ಲಿ
ಏಪ್ರಿಲ್	2.93
ಮೇ	2.96
ಜೂನ್	3.25
ಜುಲೈ	3.09
ಆಗಸ್ಟ್	3.61
ಸೆಪ್ಟೆಂಬರ್	3.85
ಅಕ್ಟೋಬರ್	4.06
ನವೆಂಬರ್	4.30
ಡಿಸೆಂಬರ್	4.70
ಜನವರಿ	7.08
ಒಟ್ಟು	39.83

ಶ್ರೀ ಶಿವಶೇಖರಪ್ಪಗೌಡ ಶಿರವಾಳ:– ಮಾನ್ಯ ಸಭಾಧ್ಯಕ್ಷರೇ, 1991–92ನೇ ಸಾಲಿನಲ್ಲಿ ಅಬಕಾರಿಯಿಂದ ಸರಕಾರಕ್ಕೆ ಬಂದ ಆದಾಯ 510–32 ಕೋಟಿ ರೂ.ಗಳು. ಹಾಗೆಯೇ ಸೆಕೆಂಡ್ಸ್ ಮಾರಾಟದಲ್ಲಿ ಈ ತಿಂಗಳಲ್ಲಿ ಬಂದ ಆದಾಯವನ್ನು ಕೊಟ್ಟಿದ್ದಾರೆ. ನಾನು ಕೇಳತಕ್ಕಂಥಾದ್ದು ಸರಕಾರದವರು ಯಾವ ದಿನಾಂಕದಿಂದ ಸೆಕೆಂಡ್ಸ್‌ನ್ನು ಬಂದ್ ಮಾಡಿದರು ? ಮತ್ತು ಕಳೆದ 6 ತಿಂಗಳುಗಳಿಂದ ಬಂದಿರತಕ್ಕ ಆದಾಯ ಎಷ್ಟು ಎಂದು ಕೇಳಿದ್ದೇನೆ. 1992–93ರಲ್ಲಿ ಎಷ್ಟು ಆದಾಯ ಸರ್ಕಾರಕ್ಕೆ ಬರುತ್ತದೆ ಎಂಬುದನ್ನು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ ಇದರಲ್ಲಿ ಟೋಟಲ್ ರೆವಿನ್ಯೂ, ಡಿಸೆಂಬರ್

1991ರಲ್ಲಿ 35.36 ಕೋಟಿ ಬಂದಿತ್ತು. ಈಗ ಅದೇ ಡಿಸೆಂಬರ್ 1992ಕ್ಕೆ 43.02 ಕೋಟಿ ರೂ.ಗಳು ಬಂದಿವೆ.

ಅದೇ ಪ್ರಕಾರ 92ನೇ ಡಿಸೆಂಬರ್‌ನಲ್ಲಿ 40.66 ಕೋಟಿ ಬಂದಿದ್ದರೆ 93ರ ಜನವರಿಯಲ್ಲಿ 49.40 ಕೋಟಿ ಅಂದರೆ 9 ಕೋಟಿ ಒಂದು ತಿಂಗಳಲ್ಲೇ ಬಂದಿದೆ. ಐಎಂಎಲ್ ಮತ್ತು ಬಿಎಫ್ ಎರಡರ ಇನ್‌ಕಂ ನವೆಂಬರ್ 91ರಲ್ಲಿ 30.69ಕೋಟಿ ಇದ್ದರೆ 92ನವೆಂಬರ್‌ನಲ್ಲಿ 36.44ಕೋಟಿ, ಡಿಸೆಂಬರ್‌ನ 91ರಲ್ಲಿ 3.81 ಕೋಟಿ ಆದರೆ ಡಿಸೆಂಬರ್ 92ರಲ್ಲಿ 5.48 ಕೋಟಿ ಸುಮಾರು 2 ಕೋಟಿ ಹೆಚ್ಚು ಬಂದಿದೆ. 92ನೇ ಜನವರಿಯಲ್ಲಿ 4.40 ಕೋಟಿಯಾದರೆ 93 ಜನವರಿಯಲ್ಲಿ 8.22 ಕೋಟಿ ಅಂದರೆ ಡಬಲ್ ಆಗಿದೆ. ಆದ್ದರಿಂದ ಇದೇನು ಸೂಚನೆ ಕೊಡುತ್ತದೆ ಅಂದರೆ ಸೆಕೆಂಡ್ಸ್‌ನ್ನು ನಿಲ್ಲಿಸಿದ್ದರಿಂದ ಒಂದಕ್ಕೆ ಎರಡು ಪಟ್ಟು ಆದಾಯ ಬಂದಿದೆ ಎನ್ನುವುದು ಎರಡು ಮೂರು ತಿಂಗಳಿಂದ ಸ್ಪಷ್ಟವಾಗಿ ಕಾಣುತ್ತದೆ.

ಶ್ರೀ ಶಿವಶೇಖರಪ್ಪ ಶಿರವಾಳ್:– ಈ ಬಗೆಯ ಕಟ್ಟುನಿಟ್ಟಿನ ಕ್ರಮ ತೆಗೆದು ಕೊಂಡ ನಂತರ ಒಂದು ಬಿಲ್ಲನ್ನು ಹಚ್ಚಿ ಅದರ ಮೂಲಕ ಎರಡು ಮೂರು ಕಡೆ ವ್ಯವಹಾರ ಮಾಡುವ ಸುದ್ದಿಯಿದೆ, ಅದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವಾಟಾಳ್ ನಾಗರಾಜ್:– ಇದರ ವಿಚಾರ ಅವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ ಪಾಪ. ಅದೇ ಸೆಕೆಂಡ್ಸ್.

ಶ್ರೀ ಎಂ. ವೀರಪ್ಪ ಮೊಯಿಲಿ:– ಸ್ಪಷ್ಟವಾಗಿ ಹೇಳುವುದಿದ್ದರೆ ಎರಡು ತಿಂಗಳಿಂದ ಡಿಸ್ಟಿಲರಿಯಿಂದ ಯಾವ ಸೆಕೆಂಡ್ಸೂ ಬರುವುದಿಲ್ಲ. ಹೊರಗೆ ಬಂದಿದ್ದರೆ ಎಲ್ಲೆಲ್ಲಿ ಸಿಗುತ್ತದೆ ಅಲ್ಲಿ ಹಿಡಿಯುತ್ತೇವೆ. ಡಿಸ್ಟಿಲರಿಯಿಂದ ಯಾವತ್ತೂ ಬರದ ಹಾಗೆ ನಾವು ಸಂಪೂರ್ಣ ನಿಲ್ಲಿಸುತ್ತೇವೆ. ಬಾಕಿ ಕಡೆ ಕೂಡ ಎಲ್ಲೆಲ್ಲಿ ಇದೆ ಸಾಕಷ್ಟು ನಾವು ರೈಡ್ ಮಾಡಿ ಹಿಡಿಸಿದ್ದೇವೆ. ಒಮ್ಮೆ ಒಂದು ಆಲೋಚನೆ ಇತ್ತು, ಅದು ನೈತಿಕವಾಗಿ ಒಳ್ಳೆಯದಲ್ಲ ಎಂದು ನಾನು ಕೈಬಿಟ್ಟೆ. ಇಲ್ಲದಿದ್ದರೆ ನನ್ನ ಆಲೋಚನೆ ಇತ್ತು, ಡಿಸ್ಟಿಲರಿಯಿಂದ ಹೊರಗೆ ಈಗಾಗಲೇ ಬಂದಿದ್ದು ಇದ್ದರೆ ಆ ಬಗ್ಗೆ ವಾಲಂಟರಿ ಡಿಸ್‌ಕ್ಲೋಸರ್ ಸ್ಕೀಮ್ ಮಾಡಿ ತನಿಖೆ ಮಾಡಿದರೆ ಸ್ವಲ್ಪ ಆದಾಯ ಬರಬಹುದು ಮತ್ತು ಸತ್ಯಸಂಗತಿ ತಿಳಿದ ಹಾಗೆ ಆಗುತ್ತದೆಂದು ಒಂದು ಅಂದಾಜು ಮಾಡಿದೆ. ಇದು ಒಂದು ಅನೈತಿಕ ಕಾರ್ಯಕ್ರಮ ಮಾಡಿದ ಹಾಗೆ ಆಗುತ್ತದೆ ನನಗೆ ಅನ್ನಿಸಿತ್ತು. ಆದರೆ ಇದಕ್ಕೆ ನಾನು ಪ್ರೋತ್ಸಾಹ ಕೊಡಬಾರದು ಎಂದು ಮಧ್ಯದಲ್ಲೇ ಕೈಬಿಟ್ಟೆ.

ಶ್ರೀ ಶಿವಶೇಖರಪ್ಪ ಶಿರವಾಳ್:– 92–93ರಲ್ಲಿ ಅಬ್ಕಾರಿಯಿಂದ ಎಷ್ಟು ಆದಾಯ ಬರಬಹುದು ?

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಉತ್ತರದಿಂದ ಒಂದು ಜಿಜ್ಞಾಸೆ ಉಂಟಾಗಿದೆ. ಇಲ್ಲಿಯವರೆಗೆ ಇವರು ಕೊಟ್ಟ ಅಂಕಿಗಳು ಮದ್ಯದ ಮಾರಾಟದಿಂದ ಬಂದ ಆದಾಯಕರವೆಂದು ಹೇಳಿದ್ದಾರೆ. ಇದು ಆದಾಯಕರವೇ ?

(ಉತ್ತರವಿಲ್ಲ)

ರಾಜ್ಯದಲ್ಲಿ ಕಲಾಮಂದಿರಗಳ ನಿರ್ಮಾಣದ ಸ್ಥಳಗಳು

92 (875) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):–

ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರದ ವತಿಯಿಂದ ಕಲಾಮಂದಿರಗಳನ್ನು ನಿರ್ಮಿಸಲಾಗುತ್ತಿರುವ ಸ್ಥಳಗಳಾವುವು;

ಆ) ಈ ನಿರ್ಮಾಣ ಕಾರ್ಯಕ್ಕೆ ವಾರ್ಷಿಕವಾಗಿ ನಿಗಧಿಯಾಗಿರುವ ಹಣದ ಮೊತ್ತವೆಷ್ಟು;

ಇ) ಈವರೆಗೆ ಸರ್ಕಾರದ ವತಿಯಿಂದ ಮಾಸಾಶನವನ್ನು ಮಂಜೂರು ಮಾಡಲಾಗಿರುವ ಕಲಾವಿದರ ಸಂಖ್ಯೆ ಎಷ್ಟು;

ಈ) ಕಳೆದ ಎರಡು–ಮೂರು ವರ್ಷಗಳಿಂದ ಕಲಾವಿದರಿಗೆ ಮಾಸಾಶನವನ್ನು ಮಂಜೂರು ಮಾಡದಿರಲು ಕಾರಣವೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):–

ಅ) ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಕೋಲಾರ, ಮಂಡ್ಯ, ಹಾಸನ, ಮಂಗಳೂರು ಚಿಕ್ಕಮಗಳೂರು, ಬೆಳಗಾಂ, ಬಿಜಾಪುರ, ಧಾರವಾಡ, ಕಾರವಾರ, ಗುಲ್ಬರ್ಗಾ, ಬಳ್ಳಾರಿ, ಬೀದರ್, ರಾಯಚೂರು.

ಆ) 1992–93ನೇ ಸಾಲಿನಲ್ಲಿ ರೂ. 24.17 ಲಕ್ಷ

ಇ) 3771

ಈ) ಕಳೆದ ಎರಡು – ಮೂರು ವರ್ಷಗಳಿಂದ ಆರ್ಥಿಕ ತೊಂದರೆಯಿಂದ ಹೊಸದಾಗಿ ಮಾಸಾಶನಗಳನ್ನು ಮಂಜೂರು ಮಾಡುತ್ತಿಲ್ಲ; ಆದಾಗ್ಯೂ ಈಗ ನೀಡುತ್ತಿರುವ ಫಲಾನುಭವಿಗಳಿಗೆ ಇದನ್ನು ಮುಂದುವರಿಸಲಾಗುತ್ತಿದೆ.

ಶ್ರೀ ಎಂ.ಎಸ್. ಆತ್ಮಾನಂದ:– ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸುಮಾರು 16 ಜಿಲ್ಲೆಗಳಲ್ಲಿ ಕಲಾ ಮಂದಿರಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ಅದು ಯಾವ ಹಂತದಲ್ಲಿದೆ ? ಮತ್ತು ಮಂಡ್ಯ ನಗರದಲ್ಲಿ ನಿರ್ಮಾಣವಾಗುತ್ತಿರುವ ಕಲಾಮಂದಿರಕ್ಕೆ ಸರ್ಕಾರದಿಂದ ಎಷ್ಟು ಅನುದಾನ ನಿಗದಿ ಮಾಡಲ್ಪಟ್ಟಿತ್ತು ? ಈವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್:– ಮಾನ್ಯ ಅಧ್ಯಕ್ಷರೇ, ವಿವಿಧ ಜಿಲ್ಲೆಗಳಲ್ಲಿ ಈ ರಂಗಮಂದಿರಗಳ ಕಟ್ಟಡದ ಕೆಲಸ ವಿವಿಧ ಹಂತದಲ್ಲಿದೆ. ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಮುಗಿದಿದೆ. ಕೋಲಾರ ಮುಗಿದಿದೆ, ಪ್ರಾರಂಭ ಮಾಡಬೇಕು. ಕಾರವಾರದಲ್ಲಿ ಮುಗಿದಿದೆ, ಪ್ರಾರಂಭ ಮಾಡಬೇಕು. ಹೀಗೆ ಹಲವು ಹಂತಗಳಲ್ಲಿ ನಡೆಯುತ್ತಿದೆ. ಕೋಲಾರದಲ್ಲಿ ಸಧ್ಯದಲ್ಲಿಯೇ ಪ್ರಾರಂಭ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಮುಗಿದು ಎರಡು ವರ್ಷವಾಗಿದೆ. ಅದರ ಬೀಗವನ್ನು ತೆಗೆಸುವುದಕ್ಕೆ ಸರ್ಕಾರದ ಕೈಯಲ್ಲಿ ಆಗಿಲ್ಲ.

ಶ್ರೀ ಹೆಚ್. ವಿಶ್ವನಾಥ್:– ಮತ್ತೆ ಮಂಡ್ಯದಲ್ಲಿ ಅದರ ಮೂಲ ಅಂದಾಜು 17 ಲಕ್ಷ ರೂಪಾಯಿ. ಈಗ ಪರಿಷ್ಕೃತ ಅಂದಾಜು 38 ಲಕ್ಷ ರೂಪಾಯಿ ಆಗಿದೆ. ಮತ್ತೆ ಮುಗಿಸಲು ಬೇಕಾದಂಥ ಹಣ 24 ಲಕ್ಷ ರೂಪಾಯಿ ಬೇಕಾಗಿದೆ. ನಾವು ಸಾರ್ವಜನಿಕರಿಂದ ವಂತಿಕೆಯನ್ನು ಸಂಗ್ರಹ ಮಾಡಬೇಕಾಗಿತ್ತು. ಅದಕ್ಕೆ ನಿರ್ಬಂಧ ಇದ್ದುದರಿಂದ ಆ ಕೆಲಸ ಆಗಲಿಲ್ಲ. ಈಗ ಆ ನಿರ್ಬಂಧವನ್ನು ಸಡಿಲಿಸಲಾಗಿದೆ. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಕೂಡ ಈಗ ಮಾಡಲಾಗಿದೆ. ಒಂದು ವರ್ಷದಲ್ಲೇ ಅದನ್ನು ಸಂಪೂರ್ಣ ಮಾಡತಕ್ಕಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:- ಕಳೆದ ಐದು ವರ್ಷಗಳಿಂದ ಕಲಾವಿದರಿಗೆ ಮಾಸಾಶನವನ್ನು ಕೊಡುತ್ತಿಲ್ಲ. ಈ ಮಾಸಾಶನವನ್ನು ಮಂಜೂರು ಮಾಡದಿರುವುದಕ್ಕೆ ಆರ್ಥಿಕ ಕೊರತೆ ಕಾರಣ ಎಂದು ಹೇಳಿದ್ದಾರೆ. ಈ ಒಂದು ಮಾಸಾಶನಕ್ಕೆ ಬಹಳಷ್ಟು ಜನರು ಬೇಡಿಕೆ ಸಲ್ಲಿಸಿ ಕಾಯುತ್ತಿದ್ದಾರೆ. ಇದರ ಬಗ್ಗೆ ಶೀಘ್ರವಾಗಿ ಏನಾದರೂ ಪ್ರಯತ್ನವನ್ನು ಮಾಡುತ್ತಾರೆಯೇ ಎನ್ನುವ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್:- ಸುಮಾರು 87ನೇ ಇಸವಿಯಿಂದಲೂ ಕೂಡ ಈ ಕಲಾವಿದರಿಗೆ ಮಾಸಾಶನವನ್ನು ಕೊಡತಕ್ಕಂಥದ್ದನ್ನು ಸ್ಥಗಿತ ಮಾಡಲಾಗಿದೆ. ಹೊಸದಾಗಿ ಮಂಜೂರು ಮಾಡತಕ್ಕಂಥದ್ದನ್ನು ಸ್ಥಗಿತ ಮಾಡಲಾಗಿದೆ. ಆದರೆ 3771 ಜನ ಕಲಾವಿದರುಗಳಿಗೆ ಈಗಾಗಲೇ ಸರ್ಕಾರದವರು ಕೊಡುತ್ತಿದ್ದಾರೆ. ಅದನ್ನು ನಿಲ್ಲಿಸಿಲ್ಲ. ಸಾವಿರಾರು ಅರ್ಜಿಗಳು ಏನು ಇವೆ ಅವುಗಳನ್ನು ಇನ್ನೊಂದು ತಿಂಗಳಲ್ಲಿ ಅದನ್ನು ಪರಿಷ್ಕರಣೆ ಮಾಡಿ ಅಕಾಡೆಮಿಗಳ ಮೂಲಕ ಶೀಘ್ರವಾಗಿ ಕೊಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ರಾಜ್ಯಕ್ಕೆ ಬರುವ ಪ್ರವಾಸಿಗಳ ಸಂಖ್ಯೆ

94 (25) ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):-

ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992-93ನೇ ಸಾಲಿನಲ್ಲಿ ರಾಜ್ಯಕ್ಕೆ ಬಂದ ಪ್ರವಾಸಿಗರ ಸಂಖ್ಯೆ ಎಷ್ಟು;

ಆ) ದೇಶೀಯ ಮತ್ತು ವಿದೇಶಿಯ ಪ್ರವಾಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಸರ್ಕಾರ ಹಮ್ಮಿಕೊಂಡಿರುವ ಹೊಸ ಕಾರ್ಯಕ್ರಮಗಳೇನು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):-

ಅ) 1992-93ರ ಅಂಕಿ ಅಂಶಗಳು 31 ನೇ ಮಾರ್ಚಿ 93ರ ನಂತರ ತಿಳಿಯುತ್ತದೆ.

ಆ) 1. ಪ್ರವಾಸೋದ್ಯಮ ಯೋಜನೆಗಳನ್ನು ಖಾಸಗಿ ಉದ್ಯಮಿಗಳು ಕೈಗೊಳ್ಳಲು ಉತ್ತೇಜಿಸಲು ಅನೇಕ ರಿಯಾಯಿತಿ ಮತ್ತು ಉತ್ತೇಜನಗಳನ್ನೊಳಗೊಂಡ ಕರ್ನಾಟಕ ಪ್ರವಾಸೋದ್ಯಮ ನೀತಿ ಪ್ರಕಟಣೆ.
2. ಸಾಹಸ ಪ್ರವಾಸೋದ್ಯಮ ಅಭಿವೃದ್ಧಿ.
3. ರಾಷ್ಟ್ರೀಯ ಉತ್ಸವಗಳ ಆಚರಣೆ ಜೊತೆಗೆ ಜಿಲ್ಲಾವಾರು ಪ್ರವಾಸೋದ್ಯಮ ಉತ್ಸವ ಆಚರಣೆ.
4. ಪ್ರೇಕ್ಷಣೀಯ ಸ್ಮಾರಕಗಳ ಅಂದ ಹೆಚ್ಚಿಸಲು ಹೊನಲು ಬೆಳಕು ವ್ಯವಸ್ಥೆ.
5. ಬಣ್ಣದ ಕಿರುಹೊತ್ತಿಗೆ ಹಾಗೂ ವೀಡಿಯೋ ಫಿಲಂ ನಿರ್ಮಾಣ.
6. ಪ್ರೇಕ್ಷಣೀಯ ಸ್ಥಳಗಳಲ್ಲಿ ಮಾರ್ಗದರ್ಶಿ ಸೌಲಭ್ಯ ಒದಗಿಸಲು ಮಾರ್ಗದರ್ಶಿ ತರಬೇತಿ ನೀಡುವ ಕಾರ್ಯಕ್ರಮ.
7. ಯಾತ್ರ ಕೇಂದ್ರಗಳ ಅಭಿವೃದ್ಧಿ

ಶ್ರೀ ಕೆ. ಹರ್ಷಕುಮಾರ ಗೌಡ:- ಮಾನ್ಯ ಅಧ್ಯಕ್ಷರೇ ನಾನು ಕೇಳಿದ ಪ್ರಶ್ನೆಗೆ 1992-93ನೇ ಸಾಲಿನಲ್ಲಿ ರಾಜ್ಯದ ಪ್ರವಾಸಿಗರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಅದು ಮಾರ್ಚಿ ನಂತರ ನೀಡುತ್ತೇವೆ ಎಂದು ಹೇಳಿ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಜೊತೆಗೆ ಕರ್ನಾಟಕ ರಾಜ್ಯಕ್ಕೆ ಬರುವಂಥ

ವಿದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದಕ್ಕೆ ಏನೇನು ರೀತಿಯ ವ್ಯವಸ್ಥೆಗಳನ್ನು ಸರ್ಕಾರ ಮಾಡಿದೆ? ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂದು ಕೇಳಿದ್ದಕ್ಕೆ ನಾಲ್ಕೈದು ತರಹದ ಉತ್ತರಗಳನ್ನು ಕೊಟ್ಟಿದ್ದಾರೆ. ನಾನಾದರೂ ಕೂಡ ತಮ್ಮ ಮೂಲಕ ಮಂತ್ರಿಗಳನ್ನು ಕೇಳುತ್ತೇನೆ, ಮೈಸೂರು ಜಿಲ್ಲೆಯಲ್ಲಿ ಸುಮಾರಾಗಿ ಮೈಸೂರು ಜಿಲ್ಲೆ ಜೊತೆಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮೈಸೂರು ಜಿಲ್ಲೆಯ ಸೋಮನಾಥಪುರ, ಬಂಡಿಪುರ, ಅದಕ್ಕೆ ಹೊಂದಿಕೊಂಡಂತೆ ನಾಗರಹೊಳೆ, ಕಾರಾಪುರ, ಮೈಸೂರು ನಗರದ ಅರಮನೆ, ಮೃಗಾಲಯ, ಚಾಮರಾಜೇಂದ್ರ ವಸ್ತು ಪ್ರದರ್ಶನ ಇವುಗಳನ್ನು ನೋಡುವುದಕ್ಕೆ ಬರುವಂಥ ಪ್ರವಾಸಿಗರಿಗೆ ಮಾಹಿತಿಯನ್ನು ಕೊಡುವಂಥ ಸರಿಯಾದಂಥ ವ್ಯವಸ್ಥೆ ಇಲ್ಲ. ಹಲವಾರು ವರ್ಷಗಳಿಂದಲೂ ಪ್ರವಾಸೋದ್ಯಮ ಮಂತ್ರಿಗಳು ಅಲ್ಲಿ ಬೆಳಕು ಮತ್ತು ಶಬ್ದದ ವ್ಯವಸ್ಥೆ (ಲೈಟ್ ಅಂಡ್ ಸೌಂಡ್) ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳುತ್ತಿರುತ್ತಾರೆ. ಆದರೆ ಇದುವರೆಗೂ ಕೂಡ ಅದು ಕಾರ್ಯಗತವಾಗಿಲ್ಲ. ಇದರ ಜೊತೆಗೆ ಮೈಸೂರು ಜಿಲ್ಲೆಯ ನಮ್ಮ ವೆಂಕಟೇಶ್ ಕ್ಷೇತ್ರ ಕಾರಾಪುರ ಜಂಗಲ್ ಲಾಡ್ಜ್‌ಗೆ ಫ್ರಾನ್ಸ್‌ನಿಂದ, ಸಿಂಗಾಪೂರ್‌ನಿಂದ, ಹಾಂಕಾಂಗ್‌ನಿಂದ ಪ್ರವಾಸಿಗರು ಬರುತ್ತಾರೆ.

ಅವರು ಬರುವುದಕ್ಕೆ ಯಾವುದೇ ರೀತಿ ವಿಮಾನ ವ್ಯವಸ್ಥೆಯಾಗಲಿ ಕರ್ನಾಟಕಕ್ಕೆ ಬಂದು ಮತ್ತೆ ಖಾರಾಪುರಕ್ಕೆ ಹೋಗುವುದಕ್ಕೆ ರಸ್ತೆ ವ್ಯವಸ್ಥೆಯಾಗಲಿ, ಅವರಿಗೆ ಮಾಹಿತಿ ಕೊಡುವಂತಹ ವ್ಯವಸ್ಥೆಯಾಗಲೀ ಇಲ್ಲ. ಇದರ ಜೊತೆಗೆ ಮೂರನೆಯದಾಗಿ ಮೇಕೆದಾಟು ಇದೆ. ಮೇಕೆದಾಟಿನಲ್ಲಿ ಸಹಸ್ರಾರು ಜನ ರಾಜ್ಯದ ಹಾಗೂ ಹೊರ ರಾಜ್ಯದ ಪ್ರವಾಸಿಗಳು ಬರುತ್ತಾರೆ. ಅಲ್ಲಿ ನೀರು ಇದ್ದರೂ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ರಸ್ತೆ ಇಲ್ಲ. ಪ್ರವಾಸೋದ್ಯಮ ಇಲಾಖೆ ಇದನ್ನು ಏಕೆ ಕಡೆಗಣಿಸುತ್ತಿದೆ ಮತ್ತು ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಿದ್ದೀರೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಹರ್ಷಕುಮಾರಗೌಡರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ, ಅದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ಆದರೂ ಅವರು ಕೆಲವು ಮೈಸೂರು, ಮಂಡ್ಯ ಮತ್ತು ಮೈಸೂರು ಅರಮನೆ, ಖಾರಾಪುರ್ ಇಂತಹ ಪ್ರೇಕ್ಷಣೀಯ ಸ್ಥಳಗಳಲ್ಲೆ ಕೆಲವು ಪ್ರವಾಸಿಗರಿಗೆ ಅನುಕೂಲವನ್ನು ಮಾಡಿಕೊಡಲು ಸರ್ಕಾರ ಏನು ಮಾಡುತ್ತಿದೆ ಎಂದು ಕೇಳುತ್ತಿದ್ದಾರೆ. ಈ ಸ್ಥಳಗಳಲ್ಲಿ ಈಗಾಗಲೇ ನಾವು ನಮ್ಮ ಸರ್ಕಾರ ಘೋಷಿಸಿದಂತೆ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಕರ್ನಾಟಕ ಪ್ರವಾಸೋದ್ಯಮ ನೀತಿಯನ್ನು ದಿನಾಂಕ: 30-5-92ರಲ್ಲಿ ಸರ್ಕಾರ ಘೋಷಿಸಿದೆ. ಪ್ರವಾಸೋದ್ಯಮ ಯೋಜನೆಗಳಲ್ಲಿ ಖಾಸಗಿ ಉದ್ಯಮಗಳನ್ನು ತೊಡಗಿಸಲು ಉತ್ತೇಜಿಸುವುದೇ ಸರ್ಕಾರದ ನೀತಿಯಾಗಿದೆ. ಈ ನಿಲುವಿನಲ್ಲಿ ಸಬ್ಸಿಡಿ ರಿಯಾಯಿತಿ, ನೋಂದಣಿ ರಿಯಾಯಿತಿ ಮತ್ತು ಸ್ಟಾಂಪ್ ಡ್ಯೂಟಿ ಮನ್ನ, ಮಾರಾಟ ಹಾಗೂ ತೆರಿಗೆ ರಿಯಾಯಿತಿಗಳು, ಕೈಗಾರಿಕೆಗಳಿಗೆ ನೀಡುವಂತಹ ದಿಸೆಯಲ್ಲಿ ವಿದ್ಯುಚ್ಛಕ್ತಿ ಪೂರೈಕೆ ಸಂಪ್ರದಾಯವಲ್ಲದ ಇಂಧನ ಬಳಕೆಗೆ ಉತ್ತೇಜನ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಲ್ಪ ಸಂಖ್ಯಾತ ವರ್ಗ ಅಂಗವಿಕಲರು ಮಾಜಿ ಸೈನಿಕರು, ವಿಶೇಷ ವರ್ಗದ ಉದ್ಯಮಿಗಳಿಗೆ ಹೆಚ್ಚು ರಿಯಾಯಿತಿ ದೊಡ್ಡ ಬಂಡವಾಳ ಹೂಡಿಕೆಗೆ ಹೆಚ್ಚು ರಿಯಾಯಿತಿ ಉತ್ತೇಜನ ಒಳಗೊಂಡಿವೆ. ಪ್ರವಾಸೋದ್ಯಮದಲ್ಲಿ ಎಲ್ಲಾ ಖಾಸಗಿಯವರು ಮುಂದೆ ಬರುವುದಿಲ್ಲವೋ ಅಂತಹ ಕಡೆ ಸರ್ಕಾರದವರು ಹೋಟೆಲ್‌ಗಳನ್ನಾಗಲಿ, ಲಾಡ್ಜ್‌ಗಳನ್ನಾಗಲಿ ಕಟ್ಟಲು ಪ್ರೋಗ್ರಾಮ್‌ಗಳನ್ನು ಹಾಕಿಕೊಂಡಿದ್ದೇವೆ. ಕೆಲವು ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದಿಂದ ನೆರವು ಬರುತ್ತದೆ. ಕೆಲವು ರಾಜ್ಯ ಸರ್ಕಾರದಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ? ಮೈಸೂರು ಅರಮನೆಯಲ್ಲಿ ಮತ್ತು ಖಾರಾಪುರ ಕಡೆ ಅಲ್ಲಿ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

1993–94ನೇ ಸಾಲಿಗೆ ಆ ಪ್ರೋಗ್ರಾಂಗಳನ್ನು ಕಂಪ್ಲೀಟ್ ಮಾಡುತ್ತೇವೆ ಎನ್ನುವಂತಹ ಭರವಸೆ ನಮಗೆ ಇದೆ. ಮೇಲುಕೋಟೆಯಲ್ಲಿ ಈಗ ಒಂದು ಹೊಟೇಲ್ ಕಟ್ಟಲಾಗಿದೆ. ಅಲ್ಲಿ ರೋಡ್ ಬಗ್ಗೆ ಹೇಳಿದ್ದಾರೆ, ರೋಡ್ ಬಗ್ಗೆ ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್‌ಗೆ ನಾವು ಕೂಡ ನಮ್ಮ ಇಲಾಖೆಯಿಂದ ಕಾಗದ ಬರೆದು ಆ ರೋಡನ್ನು ಸರಿಪಡಿಸಬೇಕೆಂದು ಕೇಳಿಕೊಂಡಿದ್ದೇವೆ.

ಶ್ರೀ ಕೆ. ಹರ್ಷಕುಮಾರು ಗೌಡ:– ಖಾರಾಪುರ ರಸ್ತೆ ಬಗ್ಗೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಖಾರಾಪುರ ರಸ್ತೆಯ ಬಗ್ಗೆ ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟಿಗೆ ಒಂದು ಪತ್ರವನ್ನು ಬರೆದು ರೋಡ್ ಅನ್ನು ರಿಪೇರಿ ಮಾಡುವುದಕ್ಕೆ ಪ್ರಾರ್ಥಿಸಿಕೊಂಡಿದ್ದೇವೆ ಮತ್ತು ಇನ್ನಿತರ ಯೋಜನೆಗಳನ್ನು ಮಾಡುತ್ತೇವೆ. ಈಗ ಪ್ರವಾಸೋದ್ಯಮ ಒಂದು ದೊಡ್ಡ ಉದ್ದಿಮೆಯಾಗಿದೆ. ಆ ಉದ್ದಿಮೆಯನ್ನು ಪ್ರೋತ್ಸಾಹಿಸಲು ಖಾಸಗಿಯವರಿಗೆ ನಾವು ಸಬ್ಸಿಡಿಯನ್ನು ರಿಯಾಯಿತಿಯನ್ನು ಶೇಕಡ 25 ರವರೆಗೆ ಕೊಡುತ್ತೇವೆ. ಯಾರೇ ಖಾಸಗೀಯವರು ಮುಂದೆ ಬಂದರೆ ಕೊಡುತ್ತೇವೆ. ಅಂತಹ ಮುಂದೆ ಬಂದವರಿಗೆ ಸರ್ಕಾರ ಉತ್ತೇಜನ ಕೊಡುವುದು ಸರ್ಕಾರ ನೀತಿಯಾಗಿ ಆ ನೀತಿಯನ್ನು ಸಹ ಘೋಷಣೆ ಮಾಡಲಾಗಿದೆ.

ಶ್ರೀ ಹರ್ಷಕುಮಾರ ಗೌಡ:– ಮೈಸೂರು ನಗರದಲ್ಲಿ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ?

ಅಧ್ಯಕ್ಷರು:– ಮಾಹಿತಿಯನ್ನು ಒದಗಿಸುತ್ತಾರೆ ಬಿಡಿ.

ಇತಿಹಾಸ ಪ್ರಸಿದ್ಧವಾದ ಮುಲ್ಕಿಗೆ ಸುವಿಹಾರಿ ಬಸ್

96 (688) ಶ್ರೀ ಕೆ. ಸೋಮಪ್ಪ ಸುವರ್ಣ (ಮುಲ್ಕಿ – ಮೂಡಬಿದರೆ):–

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಲ್ಕಿಗೆ ಮತ್ತು ಆಸುಪಾಸಿನ ಜನರಿಗೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸುವಿಹಾರಿ ಬಸ್ ಮುಲ್ಕಿಯಿಂದ ಹೊರಡದೇ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತೊಂದರೆಯಾಗಿದ್ದಲ್ಲಿ, ಒಂದು ಸುವಿಹಾರಿ ಬಸ್ಸನ್ನು ಹಾಕುವ ವಿಷಯದ ಬಗ್ಗೆ, ಸರ್ಕಾರ ಆಸಕ್ತಿ ತೋರದಿರಲು ಕಾರಣವೇನು;

ಇ) ಸುವಿಹಾರಿ ಬಸ್ಸನ್ನು ಹಾಕದೆ ಆದಾಯ ಕಡಿಮೆ ಇದೆ ಎಂದು ತೋರಿಸುವುದು ಸರಿಯೇ;

ಈ) ಕಳೆದ ಅಧಿವೇಶನದ ಸಮಯದಲ್ಲಿ ಮಾನ್ಯ ಸಾರಿಗೆ ಮಂತ್ರಿಗಳು ಎಲ್ಲ ಬಸ್‌ಗಳಿಗೂ ಮುಲ್ಕಿಯಲ್ಲಿ ನಿಲುಗಡೆ ಇದೆಯೆಂದು ತಿಳಿಸಿದ್ದು ಯಾವ ಯಾವ ಬಸ್‌ಗೆ ನಿಲುಗಡೆ ಇದೆಯೆಂದು ತಿಳಿಸಿರುವರು;

ಉ) ಕುಂದಾಪುರ ಉಡುಪಿಗಳಿಂದ ಬೆಂಗಳೂರಿಗೆ ಬರುವ ಯಾವ ಬಸ್‌ಗೆ ಮುಲ್ಕಿಯಲ್ಲಿ ನಿಲುಗಡೆ ಅವಕಾಶ ಕಲ್ಪಿಸಲಾಗಿದೆ ?

ಶ್ರೀ ಭೀಮಣ್ಣ ಖಂಡ್ರ, (ಸಾರಿಗೆ ಸಚಿವರು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ದಿನಾಂಕ: 1–4–80ರಿಂದ ಅರೆ ಸುಖಾಸೀನ ಸಾರಿಗೆಯನ್ನು ಮುಲ್ಕಿಯಿಂದ ಪ್ರಾರಂಭಿಸಿ

ಪ್ರಯಾಣಿಕರ ಪ್ರೋತ್ಸಾಹವಿಲ್ಲದ ಕಾರಣ ಸದರಿ ಸಾರಿಗೆಯನ್ನು ದಿನಾಂಕ: 25–11–83ರಂದು ಉಡುಪಿಗೆ ಮುಂದುವರಿಸಲಾಯಿತು.

ಈ) ಕ.ರಾ.ರ.ಸಾ. ಸಂಸ್ಥೆಯ ಈ ಕೆಳಕಂಡ ಸಾರಿಗೆಗಳಿಗೆ ಮುಲ್ಕಿಯಲ್ಲಿ ನಿಲುಗಡೆಯನ್ನು ಕಲ್ಪಿಸಲಾಗಿದೆ.

1) ಕುಂದಾಪುರ – ಬೆಂಗಳೂರು (ವೇಗದೂತ)

2) ಕುಂದಾಪುರ – ಬೆಂಗಳೂರು (ಸುವಿಹಾರಿ)

3) ಎಲ್ಲಾ ಅಂತರರಾಜ್ಯದ ಸಾರಿಗೆಗಳಾದ ಗೋವಾ ಬೊಂಬಾಯಿ ಹಾಗೂ ಕಾರವಾರ, ಸಿರಸಿ, ಹುಬ್ಬಳ್ಳಿ, ಬೆಳಗಾಂ ಮತ್ತು ಬಿಜಾಪುರದ ಕಡೆಗೆ ಹೋಗುವ ಸಾರಿಗೆಗಳು.

ಉ) ಕುಂದಾಪುರದಿಂದ – ಬೆಂಗಳೂರಿಗೆ (ಸುವಿಹಾರಿ) ಕುಂದಾಪುರ 1900 ಗಂಟೆಗೆ ಬಿಡುವ ಸಾರಿಗೆಗೆ ಮತ್ತು ಕುಂದಾಪುರ – ಬೆಂಗಳೂರು (ವೇಗದೂತ) ಕುಂದಾಪುರವನ್ನು 600 ಗಂಟೆಗೆ ಬಿಡುವ ಸಾರಿಗೆಗಳಿಗೆ ಮುಲ್ಕಿಯಲ್ಲಿ ನಿಲುಗಡೆಯನ್ನು ಕಲ್ಪಿಸಲಾಗಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ:– ಮಾನ್ಯ ಅಧ್ಯಕ್ಷರೆ, ಮುಲ್ಕಿಯಲ್ಲಿ ಫೇರ್ ಸ್ಟೇಜ್ ಸೌಲಭ್ಯವನ್ನು ಕೊಟ್ಟು ತಮ್ಮ ಸುವಿಹಾರಿ ಬಸ್ಸುಗಳನ್ನು ಕುಂದಾಪುರದಿಂದ ಹೊರಡುವುದನ್ನು ನಿಲ್ಲಿಸುತ್ತೇವೆಂದು ತಾವು ಉತ್ತರ ಕೊಟ್ಟಿದ್ದೀರಿ. ನಾನು ಬಸ್ಸನ್ನು ನಿಲ್ಲಿಸಲಿಕ್ಕೆ ಕೈಯನ್ನು ಅಡ್ಡ ಇಟ್ಟರೂ ಬಸ್ಸು ನಿಲ್ಲಿಸುವುದಿಲ್ಲ. ಏಕೆಂದರೆ ಕುಂದಾಪುರದಿಂದ ಬರುವಾಗಲೇ ಜನ ತುಂಬಿಕೊಂಡು ಫುಲ್ ಆಗಿ ಬರುತ್ತದೆ. ಬಹುಶಃ ನಾನು ಮಧ್ಯದಲ್ಲಿ ನಿಂತು ನಮ್ಮ ಜನರಿಗೆ ಅನುಕೂಲವಾಗಬೇಕಾದರೆ ಯಾರಾದರೂ ಒಬ್ಬರು ಜೀವಕೊಟ್ಟು ಆ ಬಸ್ಸನ್ನು ತಡೆಯುವಂತಹ ಕೆಲಸವನ್ನು ಮಾಡಬೇಕಾಗಿದೆ. ನಾನು ಈ ಪ್ರಶ್ನೆಯನ್ನು 7ನೇ ಸಾರಿ ಕೇಳುತ್ತಿದ್ದೇನೆ. 1980ನೇ ಇಸವಿಯ ತನಕ ಇದ್ದಂತಹ ಬಸ್ಸಿನ ಸೌಲಭ್ಯವನ್ನು ಆ ಜನತೆಗೆ ನೀವು ಕೊಡದೆ, 1980ನೇ ಇಸವಿಯಲ್ಲಿ ನಷ್ಟವಾಗಿದೆ ಎಂದು ಹೇಳಿದ್ದೀರಿ. ಸುವಿಹಾರಿ ಬಸ್ಸು ಕೊಡದೆ, ಸೋರುವ ಬಸ್, ಸಾಮಾನ್ಯ ಬಸ್ಸನ್ನು ಕೊಟ್ಟು ಜನರು ಬಾರದಂತಹ ರೀತಿಯಲ್ಲಿ ಬಸ್ಸನ್ನು ಕೊಟ್ಟರೆ ಅಲ್ಲಿ ಜನರು ಹೇಗೆ ಬರುವುದು. ಕೊಂಕಣ ರೈಲ್ವೆಯವರು ಮುಲ್ಕಿಯಲ್ಲಿ ರೈಲ್ವೆ ನಿಲ್ದಾಣವನ್ನು ಮಾಡಿದ್ದಾರೆ. ನಮ್ಮ ಕೆ.ಎಸ್.ಆರ್.ಟಿ.ಸಿ ಯವರಿಗೆ ಒಂದು ಬಸ್ ನಿಲ್ದಾಣವನ್ನು ಮಾಡುವುದಕ್ಕೆ ಆಗಿಲ್ಲ. ನಿಮ್ಮ ಹತ್ತಿರ ಬಸ್ಸನ್ನು ಕೊಡಿ ಎಂದು 7ನೇ ಸಲ ಪ್ರಶ್ನೆಯನ್ನು ಕೇಳಿದರೂ ನೀವು ಅದಕ್ಕೆ ಕುಂದಾಪುರದಿಂದ ಬಸ್ಸು ಬರುವಾಗ ಅಲ್ಲಿ ನಿಲ್ಲಿಸುತ್ತೇವೆ, ಸೌಲಭ್ಯ ಕೊಡುತ್ತೇವೆಂದು ಹೇಳುತ್ತೀರಿ. ಕುಂದಾಪುರದಿಂದ ಬರುವಂತಹ ಎರಡು ಬಸ್ಸುಗಳಲ್ಲಿ ಜನ ಫುಲ್ ಆಗಿಬಿಟ್ಟರೆ, ನಾವು ಅಡ್ಡಬಿದ್ದು ಬಸ್ಸನ್ನು ನಿಲ್ಲಿಸಬೇಕೇ ಅಥವಾ ಹೇಗೆ ಬರಬೇಕೆಂದು ತಾವು ಉತ್ತರ ಕೊಡಬೇಕಾಗಿ ಕೇಳುತ್ತೇನೆ. ಇನ್ನು ಫೇರ್ ಸ್ಟೇಜ್ ಕೊಟ್ಟಿದ್ದೇವೆಂದು ಹೇಳುತ್ತೀರಿ, ಆದರೆ ನಾವು ಬೆಂಗಳೂರಿನಿಂದ ಮುಲ್ಕಿಗೆ ಹೋಗುವಾಗ ಉಡುಪಿ ಬಸ್ಸಿನಲ್ಲಿ ಫೇರ್ ಸ್ಟೇಜ್ ಇಲ್ಲ ಎಂದು ಅವರು ಹೇಳುತ್ತಾರೆ.

12.10 ಪಿ.ಎಂ.

ಇದು ಏನೆಂದು ಗೊತ್ತಾಗುವುದಿಲ್ಲ. ಇದರ ಬಗ್ಗೆ ಪತ್ರಿಕಾ ಪ್ರಕಟಣೆ ಕೊಡಬೇಕು. ಇಲ್ಲದಿದ್ದರೆ, ಈ ಬಗ್ಗೆ ಸರಿಯಾದ ಉತ್ತರವನ್ನಾದರೂ ಕೊಡಬೇಕೆಂದು ಕಡೆಯದಾಗಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೆ, ಮುಲ್ಕಿ ಎನ್ನುವ ಊರು ಮಂಗಳೂರು–ಉಡುಪಿಯ ಹೈವೇಯಲ್ಲಿದೆ. ಇದು ನಾನ್–ಮನೋಪಲಿ ಸೆಕ್ಟರ್ ಆಗಿದೆ. ಇಲ್ಲಿರುವ 30 ಕಿಲೋಮೀಟರ್‌ಗಳಷ್ಟು ದೂರವನ್ನು ಪ್ರೈವೇಟ್ ಬಸ್ ಸರ್ವಿಸ್‌ನವರು ಓಡಿಸುತ್ತಿದ್ದು, ಸೆಮಿ ಲಕ್ಸುರಿ ಬಸ್ ಸರ್ವಿಸ್

ಯಾವುದಿದೆ, ಇದನ್ನು ಸಾರ್ವಜನಿಕರ ಬೇಡಿಕೆಯಂತೆ ದಿನಾಂಕ 1.4.80ರಿಂದ 15.11.83ರವರೆಗೆ ನಡೆಸಲಾಗಿದೆ. ಇದರಿಂದ ಯಾವುದೇ ರೀತಿಯ ಆದಾಯ ಬರದೆ ನಷ್ಟ ಹೆಚ್ಚಾಗುತ್ತಿತ್ತು. ಈಗ ಅಲ್ಲಿನ ಜನರಿಗೆ ಬಸ್ಸಿನ ಸೌಕರ್ಯವಿದೆ. ಅಲ್ಲದೆ, ಅವರಿಗೆ ಕನ್‌ವೇಯನ್ಸ್ ಕೊಡುವ ಸಲುವಾಗಿ ಕುಂದಾಪುರ-ಬೆಂಗಳೂರು ಎಕ್ಸ್‌ಪ್ರೆಸ್ leaving Coondapur at 6.00 hours ಸ್ಟಾಪ್ ಮಾಡಬೇಕೆಂದು ಆದೇಶ ಹೊರಡಿಸಿದ್ದೇವೆ, ಈಗ ಅಲ್ಲಿ ಸ್ಟಾಪ್ ಆಗುತ್ತಿದೆ ಮತ್ತು Coondapur to Bangalore Super Deluxe leaving Coondapur at 19.00 hours ಅದು ಸಹ ಸ್ಟಾಪ್ ಆಗುತ್ತಿದೆ. ಈ ಪ್ರಕಾರ ಮುಲ್ಕಿಗೆ ಯಾವ ರೀತಿ ಬಸ್ಸಿನ ಸೌಕರ್ಯ ಬೇಕೋ ಆ ಪ್ರಕಾರ ಒದಗಿಸಿಕೊಡುತ್ತಿದ್ದೇವೆ. ಇನ್ನು ಹೆಚ್ಚು ಬಸ್ ಬೇಕೆಂದರೆ ಸಮೀಕ್ಷೆ ನಡೆಸಿ ಅವಶ್ಯಕತೆಯಿದ್ದರೆ ಬಸ್ಸನ್ನು ಒದಗಿಸಲಾಗುತ್ತದೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಅಲ್ಲಿ ಬಸ್ ನಿಲ್ಲಿಸಬೇಕೆಂದು ತಾವು ಹೇಳಿದ್ದೀರಿ, ಆದರೆ, ಈಗ ಅಲ್ಲಿ ಬಸ್ ನಿಲ್ಲುವುದಿಲ್ಲ. ನಾನು ಕೇಳಿರುವ ಪ್ರಶ್ನೆಗೆ ಸಚಿವರಿಂದ ನನ್ನ ಕಣ್ಣೊರೆಸುವ ಉತ್ತರ ಮಾತ್ರ ಬಂದಿದೆ, ನಮ್ಮ ಜನರ ಕಣ್ಣೀರು ಕಣ್ಣೀರಾಗೆ ಉಳಿದಿದೆ. ನಾವು ವಿಧಾನಸಭೆಯಲ್ಲಿ ಆಡಿದ ಮಾತು, ಮಾಡಿದಂಥ ಭಾಷಣ ಕೇವಲ ಅರಣ್ಯರೋಧನವಾಗಿ ಧೂಳಿಪಟವಾಗಿ ಹಾರಾಡುತ್ತಿದೆ. ಆದುದರಿಂದ, ಇದರ ಬಗ್ಗೆ ಮಾತನಾಡಿ, ಅದು ಬರೀ ಮಾತಾಗಿ ಉಳಿಯದೆ ಅನುಷ್ಠಾನಕ್ಕೆ ಬರಬೇಕು. ಮುಲ್ಕಿಯ ಜನತೆಗೆ, ಆ ಒಂದು ಸಣ್ಣ ಹಳ್ಳಿಯ ಕಡೆ ಹೋಗುವಂಥ ಬಸ್ಸುಗಳನ್ನು ಅಲ್ಲಿ ನಿಲ್ಲಿಸಿ ತದನಂತರ ಹೋಗುವಂತೆ ಮಾಡಬೇಕು. ಇಲ್ಲದಿದ್ದರೆ ಹಿಂದೆ ಇದ್ದಂಥ ಕೆ.ಎಸ್.ಆರ್.ಟಿ.ಸಿಯ ಒಂದು ಸೌಲಭ್ಯದಿಂದ 10 ವರ್ಷಗಳಾದ ನಂತರ ನಮ್ಮ ಊರು ತುಂಬಾ ಬದಲಾಗಿ ಬೆಳವಣಿಗೆಯಾಗಿದೆ. ಅಲ್ಲಿಂದ ಬೇಕಾದಷ್ಟು ಜನರು ಬೆಂಗಳೂರಿಗೆ ಬರುವವರಿದ್ದಾರೆ. ಇದರ ಬಗ್ಗೆ ಒಂದು ದಶಕದ ಹಿಂದಿನ ಅಜ್ಜಿ ಕಥೆಯನ್ನು ಹೇಳುವುದು ಬೇಡ. ಹೊಸದಾಗಿ ಬಸ್ ಹಾಕುವಂಥ ವ್ಯವಸ್ಥೆ ಮಾಡಿ ಇಲ್ಲದಿದ್ದರೆ ಇರುವ ಬಸ್ಸುಗಳನ್ನು ತೆಗೆಯಿರಿ. ಸುಮ್ಮನೆ ಹಿಂದಿನ ಕಾಲದ ಕಥೆ ಹೇಳಿ ನಮ್ಮ ಕಣ್ಣೊರೆಸುವ ಕೆಲಸ ಮಾಡಬೇಡಿ. ಆದುದರಿಂದ, ಕಡೆಯದಾಗಿ ಆ ಕಡೆಗೆ ಬಸ್ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕಳಕಳಿಯಿಂದ ಮಾನ್ಯ ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

SRI BHIMANNA KHANDRE:- I have already replied. KSRTC had introduced a Semi-luxury service on 1.4.1980. Owing to poor patronage, the service has been extended to Udupi w.e.f. 25.11.1983.

ಕುಂದಾಪುರ - ಬೆಂಗಳೂರು ಎಕ್ಸ್‌ಪ್ರೆಸ್ ಅಲ್ಲಿ ನಿಲ್ಲಬೇಕು. ಸ್ಟಾಪ್ ಇದೆ, ಹಾಗೆಯೇ ಕುಂದಾಪುರ ಬೆಂಗಳೂರು ಲಕ್ಸುರಿ ಬಸ್ ಸಹ ಅಲ್ಲಿ ನಿಲ್ಲಬೇಕು. ಅಲ್ಲದೆ, KSRTC has provided stop at Mulki, the following services - 1) Coondapur-Bangalore (Express), 2) Coondapur-Bangalore (Luxury), 3) All inter-State towards Goa, Bombay and services towards Karwar, Sirsi, Hubli, Belguam and Bijapur.

ಬಸ್ಸುಗಳೆಲ್ಲವೂ ಅಲ್ಲಿ ನಿಲ್ಲುತ್ತದೆ. ಇನ್ನು ಹೆಚ್ಚು ಬಸ್‌ಗಳು ಬೇಕಾದರೆ ಅದರ ಬಗ್ಗೆ ಗಮನ ಹರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನಾನು ಒಂದು ಪ್ರಶ್ನೆ ಕೇಳುವುದಕ್ಕೆ ತಾವು ನನಗೆ ಅವಕಾಶ ಕೊಡುತ್ತಿಲ್ಲ, ಇದಕ್ಕಾಗಿ ನಾನು ಮೂರು ಬಾರಿ ಎದ್ದು ನಿಂತೆ. ಇಂತಹ ಪ್ರಮುಖವಾದಂಥ ಪ್ರಶ್ನೆಗಳು ಬಂದಾಗ ಇದರ ಬಗ್ಗೆ ಒಂದು ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುತ್ತಿಲ್ಲವೆಂದರೆ....

MR. SPEAKER:– Hon. Member cannot question me.

ಶ್ರೀ ವಾಟಾಳ್ ನಾಗರಾಜ್:– ತಾವು ಸರ್ವಾಧಿಕಾರಿಯೆಂದು ಇಲ್ಲಿ ಮಾತನಾಡಬಾರದು. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಪಂಚವಾರ್ಷಿಕ ಯೋಜನೆಗಳಲ್ಲಿ ರಾಜ್ಯದ ಪ್ರಗತಿ ಕುಂಠಿತ

97 (404) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ರಾಜ್ಯ ಯೋಜನಾ ಮತ್ತು ಸಾಂಸ್ಥಿಕ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಷ್ಟ್ರದ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡುತ್ತಿರುವ ವೆಚ್ಚದ ಪ್ರಮಾಣವು ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯವು ಪ್ರಗತಿಯ ಹಾದಿಯಲ್ಲಿ ಹಿಂದೆ ಬೀಳುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಬಂದಿದಲ್ಲಿ, ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಟಿ.ಎಂ. ಮಂಜುನಾಥ (ರಾಜ್ಯ ಯೋಜನಾ ಮತ್ತು ಸಾಂಸ್ಥಿಕ ಹಣಕಾಸು ಮಂತ್ರಿಗಳು):–

ಅ) ಹೌದು. ಆದರೆ ಈ ಮಾತು ಆರನೆಯ ಮತ್ತು ಏಳನೇ ಪಂಚವಾರ್ಷಿಕ ಯೋಜನೆಗಳ ಕಾಲಾವಧಿಗೆ ಮಾತ್ರ ಸರಿ.

ಆ) ರಾಜ್ಯದ ಯೋಜನೆಗಾಗಿ ಸಂಪನ್ಮೂಲ ಕ್ರೋಢೀಕರಿಸಲು ಹಲವು ಕ್ರಮಗಳನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ. ಅಲ್ಲದೆ ರಾಜ್ಯದ ಪಾಲು ಎಲ್ಲಾ ರಾಜ್ಯಗಳ ಯೋಜನಾ ಮೊತ್ತದಲ್ಲಿ 1990–91 ರಿಂದ ಪ್ರತಿ ವರ್ಷ ಜಾಸ್ತಿಯಾಗುತ್ತಾ ಬಂದಿದೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೆ, ರಾಷ್ಟ್ರದ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡುತ್ತಿರತಕ್ಕಂಥ ವೆಚ್ಚದ ಪ್ರಮಾಣವನ್ನು ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯ ಪ್ರಗತಿಯ ಹಾದಿಯಲ್ಲಿ ಹಿಂದೆ ಬೀಳುತ್ತಿದೆ ಎನ್ನುವ ಮಾತನ್ನು ಸರ್ಕಾರ ಒಪ್ಪಿಕೊಂಡಿದೆ. ಸರ್ಕಾರದ ಈ ಮಾತು 6 ಮತ್ತು 7ನೇ ಪಂಚವಾರ್ಷಿಕ ಯೋಜನೆಗಳಿಗೆ ಮಾತ್ರ ಅನ್ವಯವಾಗುತ್ತದೆ. ಆರ್ಥಿಕ ಪ್ರಮಾಣದಲ್ಲಿ ರಾಜ್ಯ ಹಿಂದೆ ಬಿದ್ದಿದೆಯೆಂದು ಸರ್ಕಾರ ಒಪ್ಪಿಕೊಂಡ ನಂತರ ಇದನ್ನು ಸರಿಪಡಿಸುವುದಕ್ಕೆ ಸಂಪನ್ಮೂಲಗಳ ಕ್ರೋಢಿಕರಣಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆಯೆಂದು ಮಾನ್ಯ ಸಚಿವರು ಹೇಳುತ್ತಾರೆ. ಆದರೆ, ನಾನು ತಮ್ಮ ಮೂಲಕ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಕೇಳುತ್ತೇನೆ.

ಇದರ ಬಗ್ಗೆ ನಿರ್ದಿಷ್ಟವಾದಂಥ ಏನಾದರೂ ಕಾರ್ಯಕ್ರಮವಿದೆಯೆ ? ಎರಡನೆಯದಾಗಿ ಈ ಪ್ರಶ್ನೆಯಲ್ಲಿ ವೆಚ್ಚದ ಪ್ರಮಾಣ ಮತ್ತು ದರ ಇವೆರಡನ್ನೂ ಕೊಡುತ್ತೀರೆಂದು ನಾನು ಭಾವಿಸಿದ್ದೆ, ಆದರೆ ವೆಚ್ಚವನ್ನು ಮಾತ್ರ ಕೊಟ್ಟಿದ್ದೀರಿ ದರದ ಪ್ರಮಾಣವನ್ನು ಕೊಟ್ಟಿಲ್ಲ. 1992–93ರಲ್ಲಿ ನಿಗದಿ ಮಾಡಿದಂಥ ನಮ್ಮ ಯೋಜನಾ ವೆಚ್ಚ 1915 ಕೋಟಿ ರೂಪಾಯಿಗಳು. ಇದರಲ್ಲಿ ಖರ್ಚಾಗಿರತಕ್ಕ ಹಣವೆಷ್ಟು ? ಮತ್ತು ಸಾಧನೆ ಆಗಿರತಕ್ಕ ಶೇಕಡವಾರು ಗುರಿ ಎಷ್ಟು ? ದಯಮಾಡಿ ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದೇ ರೀತಿ ರಾಜ್ಯದ ಆರ್ಥಿಕ ಪ್ರಗತಿಯು ಕುಂಠಿತವಾಗಿರತಕ್ಕದ್ದು ಕೇವಲ ಪ್ರಮಾಣದಲ್ಲಿ ಮಾತ್ರವಲ್ಲ ಬಹುಶಃ ದರದ ಏರಿಕೆಯಲ್ಲಿಯೂ ಸಹರಾಜ್ಯ ಹಿಂದಕ್ಕೆ ಬಿದ್ದಿದೆ ಎಂದು ನನಗೆ ಗೊತ್ತಿರತಕ್ಕ ಅಂಕಿ ಅಂಶಗಳ ಪ್ರಕಾರವಾಗಿ

ನಂಬಿಕೊಂಡಿದ್ದೇನೆ. ಯೋಜನಾ ವೆಚ್ಚದ ಏರಿಕೆಯು ದರ ಎಷ್ಟು ಎಂಬ ಬಗ್ಗೆ ದಯಮಾಡಿ ಮಾನ್ಯ ಮಂತ್ರಿಯವರು ಅಂಕಿಅಂಶಗಳನ್ನು ಒದಗಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್:– ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರು ಹೇಳಿರತಕ್ಕಂಥ ಮಾತು ಕೆಲವು ಭಾಗ ತಾವು ಅಂಕಿಅಂಶಗಳನ್ನು ನೋಡಿದಾಗ ತಮಗೆ ಅನ್ನಿಸುತ್ತದೆ. 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಸರ್ಕಾರದ ಯೋಜನಾ ಕಾರ್ಯಕ್ರಮ ಶೇಕಡಾವಾರುನಲ್ಲಿ ಬಹಳ ಕಡಿಮೆ ಇತ್ತು. ಈಗ 8ನೇ ಪಂಚವಾರ್ಷಿಕ ಯೋಜನೆಯು ಬಂದ ಮೇಲೆ, ಉದಾಹರಣೆಗೆ 1989–90, 1991–92ರಿಂದ ತೆಗೆದುಕೊಂಡಾಗ ಏನು ಒಂದು ಆನ್ಯುಯಲ್ ಪ್ಲಾನ್ ಇದೆ, ನಾನು ಹೇಳತಕ್ಕದ್ದು 1990–91ರಲ್ಲಿ 1128 ಕೋಟಿ ರೂಪಾಯಿ ಯೋಜನಾ ವೆಚ್ಚವಿದ್ದರೆ ಈ ವರ್ಷ ಅಂದರೆ 1993–94ರಲ್ಲಿ 3025 ಕೋಟಿ ರೂಪಾಯಿಗಳು ಅಂದರೆ ದಕ್ಷಿಣದ ರಾಜ್ಯಗಳಿಗೆ ಹೋಲಿಸಿ ನೋಡಿದರೆ ನಮ್ಮದು 10.4 ಪರ್ಸೆಂಟ್ ಆಗುತ್ತದೆ. ಇದು ತಮಿಳುನಾಡಿನಲ್ಲಿ 7 ಪರ್‌ಸೆಂಟ್, ಆಂಧ್ರ ಪ್ರದೇಶದಲ್ಲಿ 6 ಪರ್ಸೆಂಟ್, ಕೇರಳದಲ್ಲಿ 3 ಪರ್ಸೆಂಟ್ ಮಹಾರಾಷ್ಟ್ರ ಬಹಳ ದೊಡ್ಡ ರಾಜ್ಯ ಅದರ ಸಂಪನ್ಮೂಲ 13 ಪರ್ಸೆಂಟ್ ಇದೆ, ಅದು ಜಾಸ್ತಿ ಇದೆ. ಆದುದರಿಂದ ಸನ್ಮಾನ್ಯ ಅಧ್ಯಕ್ಷರೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದೇನೆಂದರೆ ನಮಗೆ ಬರತಕ್ಕ ಕರವನ್ನು ಸರಿಯಾದ ರೀತಿಯಲ್ಲಿ ವಸೂಲಿ ಮಾಡುವುದು ಮತ್ತು ಸೋರುವಿಕೆಯನ್ನು ತಡೆಗಟ್ಟಿ ಜನಗಳ ಅಭಿವೃದ್ಧಿಗೋಸ್ಕರ ವೆಚ್ಚವನ್ನು ಮಾಡುವುದು.

ರಾಷ್ಟ್ರಮಟ್ಟದಲ್ಲಿಯೂ ಸಹ ನಮ್ಮ ಕರ್ನಾಟಕ ರಾಜ್ಯದ ಯೋಜನಾ ಗಾತ್ರ ಏನಿದೆ ಅದನ್ನು ಒಪ್ಪಿಕೊಂಡಿದ್ದಾರೆ, ಈ ಯೋಜನಾ ಗಾತ್ರವು ಸರಿಯಾಗಿದೆ, ಇದನ್ನು ಸರಿಯಾದ ರೀತಿಯಲ್ಲಿ ಮಾಡಿಕೊಂಡು ಬಂದಿದ್ದೀರಿ, ಹೆಚ್ಚು ಗಳಿಸಿದ್ದೀರಿ ಎನ್ನತಕ್ಕ ಮಾತನ್ನು ಕೇಂದ್ರ ಹೇಳಿದೆ. ಇದನ್ನು ಈ ಸಭೆಯ ಮಾನ್ಯ ಸದಸ್ಯರುಗಳಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ನನ್ನ ಪ್ರಶ್ನೆ ಏನೆಂದರೆ 3ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯದ ವೆಚ್ಚಕ್ಕಾಗಿ ನಿಗದಿ ಮಾಡತಕ್ಕದ್ದು ಸುಮಾರು 12,300 ಕೋಟಿ ಎಂದು ನನ್ನ ಭಾವನೆ. ಇದನ್ನು ಆಧಾರವಾಗಿಟ್ಟುಕೊಂಡು ಈಗ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೊರರಾಜ್ಯಗಳಿಗೆ ಹೋಲಿಸಿ ಕರ್ನಾಟಕದ ಪರಿಸ್ಥಿತಿ ಏನು ಎಂದು ಹೇಳಿದ್ದೇನೆಯೇ ಹೊರತು ಈ ವರ್ಷದ ವಾರ್ಷಿಕ ಯೋಜನೆಯನ್ನಲ್ಲ. ನನಗೆ ತಿಳಿದಮಟ್ಟಿಗೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ನಿಗದಿಯಾಗಿರತಕ್ಕ 12,300 ಕೋಟಿ ರೂಪಾಯಿಗಳು. ಇದನ್ನು ಆಧಾರವಾಗಿಟ್ಟುಕೊಂಡು ಶೇಕಡವಾರು ಎಷ್ಟು ಈ ರಾಜ್ಯ ಎಲ್ಲಿಗೆ ನಿಲ್ಲುತ್ತದೆ ಎನ್ನುವ ಬಗ್ಗೆ ಮಾಹಿತಿಯನ್ನು ಕೊಡಬೇಕೆಂದು ಕೇಳಿದ್ದೇನೆ.

ಶ್ರೀ ಟಿ.ಎಂ. ಮಂಜುನಾಥ್:– 8ನೇ ಪಂಚವಾರ್ಷಿಕ ಯೋಜನೆಯನ್ನು ತೆಗೆದುಕೊಂಡಾಗ ನಮ್ಮ ಸರ್ಕಾರ 7.7 ಪರ್ಸೆಂಟಿನ ಪ್ರಗತಿಯನ್ನು ಮಾಡಿದೆ.

ಶ್ರೀ ವೈ.ಕೆ. ರಾಮಯ್ಯ:– ಅಲ್ಲಿಯೂ ಕೂಡ ರಾಜ್ಯವು ಎಷ್ಟನೇ ಸ್ಥಾನದಲ್ಲಿ ನಿಲ್ಲುತ್ತದೆ ಎನ್ನುವುದನ್ನು ಹೇಳಲಿಲ್ಲ.

ಶ್ರೀ ಟಿ.ಎಂ. ಮಂಜುನಾಥ್:– ಉತ್ತರ ಪ್ರದೇಶ ಒಂದನ್ನು ಬಿಟ್ಟರೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯ ಪ್ರಥಮ ಸ್ಥಾನವನ್ನು ಪಡೆಯುವುದರಲ್ಲಿ ಸಂಶಯವೇ ಇಲ್ಲ. ನಮ್ಮ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ನಿರ್ಮಾಣ ಮಾಡಿದ್ದೇವೆ. ಆ ರೀತಿಯಲ್ಲಿ ನಾವು ಯೋಜನಾ ವೆಚ್ಚವನ್ನು ಮಾಡಿದ್ದೇವೆ. ಅದಕ್ಕೆ ನಮ್ಮ ಹಿರಿಯರಾದ ಮಾನ್ಯ ರಾಮಕೃಷ್ಣಹೆಗಡೆಯವರು

ಮುಖ್ಯಮಂತ್ರಿಗಳಾಗಿದ್ದಾಗ ಅವರೂ ಕೂಡ ಮಾಡಿದ್ದಾರೆ, ಅದಕ್ಕೆ ಅನುಗುಣವಾಗಿ ನಾವು ಮಾಡುತ್ತಿದ್ದೇವೆ ಮತ್ತು ಇದರಲ್ಲಿ ಪೂರ್ಣವಾದ ಯಶಸ್ಸನ್ನು ಪಡೆದಿದ್ದೇವೆ, ಜನರ ಅಭಿವೃದ್ಧಿಗೋಸ್ಕರ, ಜನರ ಸಹಕಾರಕ್ಕೋಸ್ಕರ, ದೇಶದ ಅಭಿವೃದ್ಧಿಗೋಸ್ಕರ ಯೋಜನೆಯನ್ನು ನಾವು ಪರಿಪೂರ್ಣವಾಗಿ ಮಾಡಿದ್ದೇವೆಂದು ಸರ್ಕಾರದ ಪರವಾಗಿ ಅವರಿಗೆ ಹೇಳುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ನಿವೇಶನಗಳ ಹಂಚಿಕೆ

98 (318) ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಲಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಎಷ್ಟು ಜನರಿಗೆ ನಿವೇಶನಗಳನ್ನು ಕೊಡಬೇಕಾದ ಅವಶ್ಯಕತೆ ಇದೆ;

ಆ) ನಿವೇಶನಗಳನ್ನು ಕೋರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಜನರು ಅರ್ಜಿ ಸಲ್ಲಿಸಿದ್ದಾರೆ.;

ಇ) ಅಷ್ಟು ಜನರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನ ನೀಡಲು ಹಾಕಿಕೊಂಡಿರುವ ಯೋಜನೆಗಳಾವುವು;

ಈ) ಬೆಂಗಳೂರು ಹಾಗೂ ಸುತ್ತಮುತ್ತಲೂ ಇರುವ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಹೊರತುಪಡಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರೇ ನಿವೇಶನಗಳನ್ನು ಹಂಚಲು ಸಮರ್ಥರಿದ್ದಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ನಗರದಲ್ಲಿ ಎಷ್ಟು ಜನರಿಗೆ ನಿವೇಶನದ ಅವಶ್ಯಕತೆ ಇದೆ ಎನ್ನುವ ಬಗ್ಗೆ ಸರ್ವೆ ಮಾಡಲಾಗುವುದಿಲ್ಲ.

ಆ) ನಿವೇಶನಗಳನ್ನು ಕೋರಿ ಒಟ್ಟು 86,988 ಜನರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಇ) ಸರ್ಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಒಟ್ಟು 11 ಹೊಸ ಬಡಾವಣೆಗಳನ್ನು ನಿರ್ಮಿಸುವ ಯೋಜನೆಗಳಿಗೆ ಮಂಜೂರಾತಿ ನೀಡಿದೆ. ಈ ಬಡಾವಣೆಗಳಲ್ಲಿ ಒಟ್ಟು 8207 ಎಕರೆ 35 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡು ನಿವೇಶನ ಹಂಚಲು ಕ್ರಮ ಕೈಗೊಳ್ಳಲಾಗುವುದು.

ಈ) ಹೌದು.

ಶ್ರೀ ಸಿ.ಎಂ. ಲಿಂಗಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮತ್ತು ಸುತ್ತಮುತ್ತಲಿರತಕ್ಕ ಗೃಹನಿರ್ಮಾಣ ಸಹಕಾರಿ ಸಂಘಗಳನ್ನು ಹೊರತುಪಡಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ನಿವೇಶನಗಳನ್ನು ಹಂಚತಕ್ಕ ಸಾಮರ್ಥ್ಯ ಹೊಂದಿದ್ದಾರೆಯೇ ಎನ್ನತಕ್ಕ ಪ್ರಶ್ನೆಗೆ ಉತ್ತರದಲ್ಲಿ ಹೌದು ಎಂದು ಕೊಟ್ಟಿದ್ದಾರೆ. ಅದರಲ್ಲಿ ಇದು ಒಂದು ಜಟಿಲವಾದಂಥ ಸಮಸ್ಯೆ. ಬೆಂಗಳೂರು ಹಾಗೂ ಸುತ್ತಮುತ್ತಲೂ ಸುಮಾರು 100 ಗೃಹನಿರ್ಮಾಣ ಸಹಕಾರ ಸಂಘಗಳು ಕೆಲಸ ಮಾಡುತ್ತಿವೆ. ಸರ್ಕಾರ ಈಗಾಗಲೇ ಬಿ.ಡಿ.ಎ. ವತಿಯಿಂದ ಸುಮಾರು 8 ಸಾವಿರ ಎಕರೆ ಭೂಮಿಯನ್ನು ಅವರಿಗೆ ಸ್ವಾಧೀನಪಡಿಸಿಕೊಟ್ಟು ಅವರು ಬಡಾವಣೆಗಳನ್ನು ನಿರ್ಮಿಸುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟಿದ್ದಾರೆ. ಈ

ಉತ್ತರದ ಅರ್ಥ ಅವರಿಗೆ ಸ್ವಾಧೀನ ಮಾಡಿಕೊಟ್ಟಿರುವಂಥ ಜಮೀನನ್ನು ಹೊರತುಪಡಿಸಿ, ಆ ಜಮೀನುಗಳಲ್ಲಿ ಅವರಿಗೆ ನಿವೇಶನಗಳನ್ನು ಹಂಚುವುದಕ್ಕೆ ಅವಕಾಶ ಮಾಡಿಕೊಟ್ಟು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಉಳಿದ ಭಾಗದಲ್ಲಿ ನಿವೇಶನಗಳನ್ನು ಹಂಚುತ್ತಾರೆಯೆ ? ಎನ್ನತಕ್ಕ ಪ್ರಶ್ನೆಯನ್ನು ಕೇಳುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ 8,207 ಎಕರೆ 35 ಗುಂಟೆ ಜಾಗವನ್ನು ಸ್ವಾಧೀನ ಪಡಿಸಬೇಕು ಎಂದು ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. 1988ರಲ್ಲಿ ನಾವು ನೋಟಿಫಿಕೇಷನ್ ಕೊಟ್ಟ ಪ್ರಕಾರ ಅದಕ್ಕೆ 86,988 ಅರ್ಜಿಗಳು ಈಗ ಇದೆ. ನಿಜವಾಗಿಯೂ ನಾವು ಎಲ್ಲಾ ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡರೆ ಸುಮಾರು 1,23,000 ಸೈಟ್‌ಗಳನ್ನು ನಾವು ನಿಗದಿಪಡಿಸುವುದಕ್ಕೆ ಸಾಧ್ಯವಿದೆ. ಆದರೆ ಇದರಲ್ಲಿ ಕೆಲವು ರೆಗ್ಯುಲರೈಜೇಷನ್ ಮಾಡಿರುವುದು. ಮತ್ತೆ ಅದರಲ್ಲಿ ಕೆಲವು ಆಕ್ಯುಪೈ ಮಾಡಿದಂಥ ಜಾಗಗಳು ಇವೆ. ಆದರೂ ಕೂಡ ಒಂದು ಸಾವಿರ ಎಕರೆ ಅವಾರ್ಡ್ ಸ್ಟೇಜ್‌ನಲ್ಲಿ ಇದೆ. ಉಳಿದದ್ದು ಫೈನಲ್ ನೋಟಿಫಿಕೇಷನ್ ಸ್ಟೇಜ್‌ನಲ್ಲಿ ಇದೆ. ಎರಡನ್ನೂ ಕ್ಯಾಬಿನೆಟ್‌ನಲ್ಲಿ ಇಟ್ಟು ಇದರ ಬಗ್ಗೆ ಯು.ಎಲ್.ಸಿ.ಯಲ್ಲಿ ತೆಗೆದುಕೊಳ್ಳಬೇಕೆ, ಅಥವಾ ಭೂ ಸ್ವಾಧೀನ ಮಾಡಿ ಅದನ್ನು ತೆಗೆದುಕೊಳ್ಳಬೇಕೆ ಎಂಬ ಒಂದು ವಿವಾದದಿಂದಲೇ ಬಹುಶಃ ಎರಡು ಮೂರು ವರ್ಷಗಳ ಕಾಲ ಇದು ನೆನೆಗುದಿಗೆ ಬಿದ್ದಿತ್ತು. ಈ ಬಗ್ಗೆ ಕ್ಯಾಬಿನೆಟ್‌ನಲ್ಲಿ ಅಂತಿಮವಾದಂತಹ ನಿರ್ಣಯವನ್ನು ತೆಗೆದುಕೊಂಡು ಭೂಸ್ವಾಧೀನ ಕಾರ್ಯಕ್ರಮ ಏನು ಇದೆ ಅವಾರ್ಡ್ ಸ್ಟೇಜ್‌ನಲ್ಲಿರುವುದನ್ನು ಅಥವಾ ಫೈನಲ್ ನೋಟಿಫಿಕೇಷನ್ ಸ್ಟೇಜ್‌ನಲ್ಲಿರುವುದನ್ನು ನೋಟಿಫೈ ಮಾಡಬೇಕು; ಎಂದು ಹೇಳಿ ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿರುವುದರಿಂದ ಈ ರೀತಿಯ ಅಡೆತಡೆಗಳು ಕೂಡ ತೆರವಾಗಿದೆ. ಆದುದರಿಂದ ಮುಂದಿನ ಕಾರ್ಯಕ್ರಮ ತೆಗೆದುಕೊಂಡು ಯಾರು ಅರ್ಜಿಗಳನ್ನು ಹಾಕಿದ್ದಾರೆ ಆ ಅರ್ಜಿಗಳನ್ನು ಪರಿಶೀಲನೆ ಮಾಡಿ ಇವುಗಳನ್ನು ಹಂಚುವಂತಹ ಕಾರ್ಯಕ್ರಮವನ್ನು ಮಾಡುತ್ತೇನೆ.

ಪಡಿತರ ವ್ಯವಸ್ಥೆಯಲ್ಲಿ ಅವಶ್ಯಕ ಆಹಾರ ಸಾಮಗ್ರಿಗಳ ವಿತರಣೆಯ ಪ್ರಮಾಣ

99 (934) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):–

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ಬದಲಿಸಿ ಪಡಿತರ ವ್ಯವಸ್ಥೆಯ ಮೂಲಕ ಪ್ರತಿ ತಿಂಗಳು ವಿತರಣೆ ಮಾಡುತ್ತಿರುವ ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆ ಪದಾರ್ಥಗಳ ಪ್ರಮಾಣ ಎಷ್ಟು; (1992–93ನೇ ಸಾಲಿನಲ್ಲಿ ಪ್ರತಿ ತಿಂಗಳ ವಿವರ ನೀಡುವುದು);

ಆ) ಈ ಪ್ರಮಾಣ ಕಳೆದ ವರ್ಷಕ್ಕಿಂತ ಕಡಿಮೆ ಇದೆಯೇ ಹಾಗಿದ್ದಲ್ಲಿ ಕಾರಣವೇನು;

ಇ) ಈಗಿರುವ ಹಸಿರು ಬಣ್ಣದ ಪಡಿತರ ಕಾರ್ಡುಗಳನ್ನು ಬದಲಾಯಿಸಿ, ತ್ರಿವರ್ಣದ ಕಾರ್ಡುಗಳನ್ನು ಕೊಡುತ್ತಿರುವುದರಿಂದ, ಕಾರ್ಡುಗಳ ಸಂಖ್ಯೆ ಹೆಚ್ಚಾಗುವುದರ ಪ್ರಮಾಣದಲ್ಲಿಯೇ ಆಹಾರ ಸಾಮಗ್ರಿಗಳ ಪ್ರಮಾಣವನ್ನು ಹೆಚ್ಚಿಸಲಾಗಿದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) 1992–93ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಹಸಿರು ಕಾರ್ಡುಗಳನ್ನು ಬದಲಿಸಿ ವಿತರಣೆ ಮಾಡಿರುವ ಪ್ರತಿ ತ್ರಿವರ್ಣ ಪಡಿತರ ಚೀಟಿಗಳಿಗೆ ಪ್ರತಿ ತಿಂಗಳು ಪಡಿತರ ವ್ಯವಸ್ಥೆಯ ಮೂಲಕ ಈ

ಕೆಳಗೆ ವಿವರಿಸಿರುವ ಪ್ರಮಾಣದಲ್ಲಿ ಅಕ್ಕಿ, ಗೋಧಿ, ಸಕ್ಕರೆ ಮತ್ತು ಸೀಮೆಎಣ್ಣೆಯನ್ನು ವಿತರಿಸಲಾಗುತ್ತಿದೆ.

ಅಕ್ಕಿ	ಗೋಧಿ	ಸಕ್ಕರೆ	ಸೀಮೆಎಣ್ಣೆ
5 ಕೆ.ಜಿ.	5 ಕೆ.ಜಿ.	1.750 ಕೆ.ಜಿ.	4 ಲೀಟರ್

(ಮಾಹೆವಾರು ವಿವರಗಳ ತಃಖ್ತೆ ಲಗತ್ತಿಸಿದೆ)

ಆ) ಕಡಿಮೆ ಇರುವುದಿಲ್ಲ.

ಇ) ಹಸಿರು ಪಡಿತರ ಕಾರ್ಡುಗಳನ್ನು ಬದಲಾಯಿಸಿ ತ್ರಿವರ್ಣದ ಕಾರ್ಡುಗಳನ್ನು ವಿತರಣೆ ಮಾಡುತ್ತಿದ್ದು, ಇದರಿಂದ ತ್ರಿವರ್ಣ ಕಾರ್ಡುಗಳು ಹೆಚ್ಚಾದಲ್ಲಿ, ಅದೇ ಪ್ರಮಾಣದಲ್ಲಿ ಆಹಾರ ಧಾನ್ಯಗಳ ಪ್ರಮಾಣವನ್ನು ಹಂಚಿಕೆಯಲ್ಲಿ ಸಹ ಹೆಚ್ಚುವರಿ ಮಾಡಿ, ಬಿಡುಗಡೆ ಮಾಡುತ್ತಿದೆ. ಕೇಂದ್ರ ಸರ್ಕಾರದ ವತಿಯಿಂದ ಹೆಚ್ಚುವರಿ ಹಂಚಿಕೆ ಬಿಡುಗಡೆಯಾಗಬೇಕಾಗಿದ್ದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

1992ನೇ ಏಪ್ರಿಲ್ ಮಾಹೆಯಿಂದ ಡಿಸೆಂಬರ್ 92ರವರೆಗೆ ಹಸಿರು/ತ್ರಿವರ್ಣ ಪಡಿತರ ಚೀಟಿದಾರರಿಗೆ ಅಕ್ಕಿ, ಗೋಧಿ ಸಕ್ಕರೆ ಮತ್ತು ಸೀಮೆಎಣ್ಣೆ ಹಂಚಿಕೆ ಹಾಗೂ ಎತ್ತುವಳಿ ಮಾಡಿರುವ ಬಗ್ಗೆ

ಕ್ರ. ಸಂ.	ಮಾಹೆ	ಅಕ್ಕಿ		ಗೋಧಿ		ಸಕ್ಕರೆ (ಪ್ರತಿ ಕಾರ್ಡ್‌ಗೆ)		ಸೀಮೆಎಣ್ಣೆ (ಪ್ರತಿ ಕಾರ್ಡ್‌ಗೆ 4 ಲೀಟರ್)	
		ಹಂಚಿಕೆ	ಎತ್ತುವಳಿ	ಹಂಚಿಕೆ	ಎತ್ತುವಳಿ	ಹಂಚಿಕೆ	ಎತ್ತುವಳಿ	ಹಂಚಿಕೆ	ಎತ್ತುವಳಿ
1.	ಏಪ್ರಿಲ್ 92	15682.8	15474.1	20745.0	19293.0	5447085.0	5447085.0	12450480	12450480
2.	ಮೇ 92	17975.3	17836.0	14514.5	14211.0	5451141.5	5451141.5	12459752	12459752
3.	ಜೂನ್ 92	21868.1	21793.0	19899.1	19558.1	5476947.0	5476947.0	12518736	12518736
4.	ಜುಲೈ 92	17594.3	17495.3	14100.8	13703.8	5476826.2	12518430	12518460	12518460
5.	ಆಗಸ್ಟ್ 92	20274.4	20265.1	14193.2	14040.0	5479341.0	5479341.0	12524208	12524208
6.	ಸೆಪ್ಟೆಂಬರ್ 92	18773.6	18772.6	14982.5	14974.3	5502217.0	5502217.0	12576496	12576496
7.	ಅಕ್ಟೋಬರ್ 92	17321.0	17243.0	13300.3	13188.2	5541943.7	5541943.7	12667300	12667300
8.	ನವೆಂಬರ್ 92	18072.8	17822.9	13414.1	13125.8	5767286.0	5767286.0	13182368	1318268
9.	ಡಿಸೆಂಬರ್ 92	17616.3	16838.2	13326.3	13219.8	5915122.5	5915122.5	13520280	13520280

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಈಗ ರಾಜ್ಯಸರ್ಕಾರ ಈ ತ್ರಿವರ್ಣ ಕಾರ್ಡ್‌ಗಳನ್ನು ಪಡೆಯುತಕ್ಕಂತಹ ಫಲಾನುಭವಿಗಳು ಯಾರು ಇದ್ದಾರೆ ಅವರ ಇನ್‌ಕಮ್ ಲಿಮಿಟ್ ಎಲ್ಲಾ ಹೆಚ್ಚು ಮಾಡಿದ್ದೀರಿ. ಹಿಂದೆ ಹಸಿರು ಕಾರ್ಡಿಗೆ ಇದ್ದಂತೆ ಇಲ್ಲ. ಇದರಿಂದ ಕಾರ್ಡುದಾರರ ಸಂಖ್ಯೆ ಹೆಚ್ಚಾಗುತ್ತದೆ. ಅಂದರೆ ಶೇಕಡ 40ರಷ್ಟು ಹೆಚ್ಚಾಗುತ್ತದೆ. ಅಂದರೆ ಶೇಕಡಾ 40ರಷ್ಟು ಆಹಾರದ ಪ್ರಮಾಣವನ್ನು ತಾವು ಹೆಚ್ಚು ಮಾಡುವವರಿದ್ದೀರಾ, ಕೇಂದ್ರಸರ್ಕಾರಕ್ಕೆ ಬರೆದಿದ್ದೇಂದು ಹೇಳಿದ್ದೀರ. ಕೇಂದ್ರ ಸರ್ಕಾರ ತಾವು ಕೇಳಿದ ಆಹಾರ ಪ್ರಮಾಣವನ್ನು ಕೊಡದೆ ಹೋದರೆ ಏನು ಮಾಡುತ್ತೀರಿ. 3ನೇಯ ಪ್ರಶ್ನೆ ಈಗ ಕೆಳಮಟ್ಟದಲ್ಲಿ ಇರುವಂತಹ ತಹಾಸೀಲ್ದಾರರು ಮಾಡದೇ ಇತರೆ ಅಧಿಕಾರಿಗಳು ಪೇಚಿನಲ್ಲಿದ್ದಾರೆ. ಅವರು ನಿಜವಾಗಿಯೂ ತ್ರಿವರ್ಣ ಕಾರ್ಡ್‌ಗಳನ್ನು ಹಂಚುತ್ತಿಲ್ಲ. ಏಕೆ ಎಂದು ಸ್ಪೆಸಿಫಿಕ್ಕಾಗಿ ಡೆಪ್ಯೂಟಿ ಕಮೀಷನರು ಅವರಿಗೆ ಡೈರೆಕ್ಷನ್ ಇಲ್ಲ. ಇನ್‌ಕಮ್ 8,000 ಪ್ರಕಾರ ನೀವು ತ್ರಿವರ್ಣ ಕಾರ್ಡ್ ಕೊಡುತ್ತೀರಿ. ಆದರೆ ಅಷ್ಟೊಂದು ಆಹಾರ ಸಿಕ್ಕುತ್ತಿಲ್ಲ. ಆದುದರಿಂದ ಹಸಿರು ಕಾರ್ಡ್‌ಗಳು ಬದಲಾವಣೆ ಮಾಡಿ ತ್ರಿವರ್ಣ ಕಾರ್ಡ್‌ಗಳನ್ನು ಹಂಚತಕ್ಕಂಥದ್ದನ್ನು ಅಧಿಕಾರಿಗಳು ನಿಲ್ಲಿಸಿದಾಗ ಕೊಡುತ್ತಿಲ್ಲವೆಂದು ಕೇಳಿದ್ದಕ್ಕೆ ಅವರು ಏನು ಹೇಳುತ್ತಾರೆ ಫುಡ್ ಅಲಾಟ್‌ಮೆಂಟ್ ಹೆಚ್ಚಾಗುತ್ತಿಲ್ಲ. ಆದುದರಿಂದ ನಾವು ಏನು ಮಾಡೋಣ, ಎಂದು ಹೇಳುತ್ತಿದ್ದಾರೆ.

ಶ್ರೀಮತಿ ಮನೋರಮಾ ಮಧ್ವರಾಜ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಬಹಳ ಗಹನವಾದದ್ದು. ಇದರಲ್ಲಿ ಏನಾಗಿದೆ ಎಂದರೆ ತ್ರಿವರ್ಣ ಪಡಿತರ ಕಾರ್ಡಿಗೆ ಏನು ಅಕ್ಕಿ ಕೊಡುತ್ತಿದ್ದೇವೆ. ಅದು ಅಕ್ಕಿ, ಫುಡ್ ರೈಸ್ ಆ ಕಮಿಟ್‌ಮೆಂಟ್ ಸರ್ಕಾರಕ್ಕೆ ಉಂಟು. ಈಗ 68,500 ಮೆಟ್ರಿಕ್ ಟನ್ ಒಂದು ತಿಂಗಳಿಗೆ ಬರುತ್ತದೆ. ಗೋಧಿ ಕೂಡ 25 ಸಾವಿರ ಟನ್ ಬರುತ್ತದೆ. ಗೋಧಿ ನಿಜಕ್ಕೂ ಸಾಕಾಗುವುದಿಲ್ಲ. ಅಕ್ಕಿ ಅಂತೂ ಖಂಡಿತವಾಗಿಯೂ ಸಾಕಾಗುವುದಿಲ್ಲ. ನಾವು ಕೇಸರಿ ಬಣ್ಣದ ಕಾರ್ಡಿಗೆ ಸ್ವಲ್ಪ ಕಡಿಮೆ ಮಾಡಿಕೊಂಡು ಇದಕ್ಕೆ ಇರುವಷ್ಟೆ ಕೊಡಬೇಕು; ಎಂದು ಆದೇಶ ಕೊಟ್ಟಿದ್ದೇವೆ. ಒಂದು ವೇಳೆ ಅಂಥದ್ದು ಏನಾದರೂ ಇದ್ದರೆ ಅಧಿಕಾರಿಗಳಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ವಿತರಣೆ ಮಾಡುವ ಹಾಗೆ ದೇಶ ಕೊಡುತ್ತೇವೆ. ಯಾವ ಕಾಲಕ್ಕೂ ಅದು ಕಡಿಮೆ ಆಗುವುದಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ಆದೇಶ ಕೊಟ್ಟು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನಾನು ಮಾನ್ಯ ಮಂತ್ರಿಗಳಿಗೆ ಕೇಳುತ್ತಾ ಇರುವುದು ಇಷ್ಟೇನೆ, ಈಗ ಇರತಕ್ಕಂಥ ಕಾರ್ಡುಗಳಿಗೆ ಕಡಿಮೆ ಮಾಡಿದ್ದೀರೆಂದು ನಾನು ಅಪಾದನೆ ಮಾಡುತ್ತಿಲ್ಲ. ನಿಮ್ಮ ಸರ್ಕಾರ ಬಂದ ಮೇಲೆ 8 ಕೆ.ಜಿ. ಇದ್ದುದನ್ನು 5ಕೆ.ಜಿ.ಗೆ ಇಳಿಸಿದ್ದೀರಿ. ಗೋಧಿ, ಅಕ್ಕಿ, ಸೀಮೆಎಣ್ಣೆಯನ್ನು 1.75 ಲೀಟರ್ ಕೊಡಬೇಕೆಂದು ಮಾಡಿದ್ದೀರಿ ಹಸಿರು ಕಾರ್ಡಿನವರಿಗೆ ಕೊಡಿ. ನಾನು ಕೇಳುತ್ತಿರುವುದು ಹಸಿರು ಕಾರ್ಡುಗಳಿಗೆ ಬದಲಾಗಿ ಸುಮಾರು 40 ಲಕ್ಷ ರೂಪಾಯಿ ಖರ್ಚು ಮಾಡಿ ತ್ರಿವರ್ಣ ಕಾರ್ಡು ಮಾಡಿ ಇನ್‌ಕಮ್ ಲಿಮಿಟ್ ಹೆಚ್ಚು ಮಾಡಿ ಎಲ್ಲಾ ಹಳ್ಳಿಗರಿಗೂ ಇದನ್ನು ಕೊಡಬೇಕೆಂದು ಮಾಡಿದ್ದೀರಿ. ನಾನು ತಹಶೀಲ್ದಾರ್‌ಗೆ ಕೇಳಿದೆ ಮತ್ತು ಅನೇಕ ತಾಲ್ಲೂಕುಗಳಲ್ಲಿ ಕೇಳಿದ್ದೇನೆ. ಏಕೆ ನೀವು ಹಸಿರು ಕಾರ್ಡುಗಳ ಬದಲಿಗೆ ತ್ರಿವರ್ಣ ಕಾರ್ಡು ಕೊಡುತ್ತಿಲ್ಲವೆಂದು ಅದಕ್ಕೆ ಏನು ಹೇಳಿದರೆಂದರೆ ಸಾರ್, ನಾವು ಹಸಿರು ಕಾರ್ಡುಗಳನ್ನು ಮಾಡಿರತಕ್ಕದ್ದು ನಾಲ್ಕು ಸಾವಿರ ಇನ್‌ಕಮ್ ಲಿಮಿಟ್‌ಗೆ. ಈಗ ಇದು 7 ಸಾವಿರ ಆಗಿದೆ ಆದ್ದರಿಂದ ಕಾರ್ಡುಗಳ ಸಂಖ್ಯೆ ಶೇಕಡ 50ರಷ್ಟು ಪ್ರತಿ ತಾಲ್ಲೂಕಿನಲ್ಲೂ ಹೆಚ್ಚಾಗುತ್ತದೆ. ಆಹಾರದ ಪ್ರಮಾಣ ಅಷ್ಟೇ ಇವರು ಕೊಡುತ್ತಿರುವುದು. ಆದ್ದರಿಂದ ನಾವು ಒಂದು ಸಾರಿ ತ್ರಿವರ್ಣ ಕಾರ್ಡು ಕೊಟ್ಟ ಮೇಲೆ ಹಸಿರು ಕಾರ್ಡು ಪ್ರಶ್ನೆ ಬರುವುದೇ ಇಲ್ಲ. ಅಕ್ಕಿ ಪ್ರಮಾಣ, ಗೋಧಿ ಪ್ರಮಾಣ ಸೀಮೆಎಣ್ಣೆ ಪ್ರಮಾಣ ಜಾಸ್ತಿ ಮಾಡಬೇಕು. ಜಾಸ್ತಿ ಮಾಡುತ್ತೀರಾ ? ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆಂದು ಹೇಳುತ್ತೀರಿ. ಕೇಂದ್ರ ಸರ್ಕಾರ ಕೊಡಲಿಲ್ಲ. ಅಂದರೆ ಆಗ ಏನು ಮಾಡುತ್ತೀರಿ ? ನಾನು ಹೇಳೋದು ಇಷ್ಟೇ ನೀವು ತ್ರಿವರ್ಣ ಕಾರ್ಡುಗಳನ್ನು ಆಹಾರದ ಪ್ರಮಾಣ

ಹೆಚ್ಚು ಮಾಡುವವರೆಗೆ ಡಿಸ್ಟ್ರಿಬ್ಯೂಷನ್ ಮಾಡಬೇಡಿ. ಇಲ್ಲದೇ ಹೋದರೆ ಹೆಚ್ಚು ಮಾಡಿ ಕಾರ್ಡನ್ನು ಸಹಿತ ಕೊಡಿ. ಇಲ್ಲದೇ ಹೋದರೆ ಬಹಳ ಗೊಂದಲ ಉಂಟಾಗುತ್ತದೆ.

ಶ್ರೀಮತಿ ಮನೋರಮ ಮಧ್ವರಾಜ್:- ಮಾನ್ಯ ಸಭಾಧ್ಯಕ್ಷರೇ ಈಗಾಗಲೇ ಇನ್‌ಕಮ್ 6400ಕ್ಕಿಂತ ಕೆಳಗಿರುವ 27ಸಾವಿರ ಜನರನ್ನು ನಾವು ಗುರುತಿಸಿ ಆಗಿದೆ. ಅವರಿಗೆ ತ್ರಿವರ್ಣ ಪಡಿತರ ಚೀಟಿ ಹಂಚಲಾಗುವುದು. ನಮ್ಮದು ಸಾಧಾರಣ ಗುರಿ 46 ಸಾವಿರ ತ್ರಿವರ್ಣ ಪಡಿತರ ಚೀಟಿಯನ್ನು ಗುರುತಿಸುವಂಥ ಕೆಲಸ ಮಾಡಬೇಕಾಗಿದೆ. ಆದರೆ ಈಗ ನಾನು ಹೇಳಿದ ಹಾಗೆ ಅಕ್ಕಿ ವಿಚಾರದಲ್ಲಿ ಏನೂ ತೊಂದರೆ ಇಲ್ಲ. ಇನ್ನೂ 46ಸಾವಿರ ತ್ರಿವರ್ಣ ಪಡಿತರ ಚೀಟಿಯವರಿಗೆ ಕೊಡುವಷ್ಟು ಉಂಟು. ಗೋಧಿ ಮಾತ್ರ ಅಷ್ಟು ಇಲ್ಲ. ಅದಕ್ಕೆ ನಾವು ಕೇಂದ್ರ ಸರ್ಕಾರವನ್ನು ಕೇಳಿಕೊಂಡಿದ್ದೇವೆ. ನಾವು ಹೋದಾಗ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ಅವರ ಮುಂದೆ ಈ ಬೇಡಿಕೆಯನ್ನು ಇಟ್ಟಿದ್ದೇವೆ. ಅಲ್ಲಿಯತನಕ ಅದನ್ನು ನಿಲ್ಲಿಸಿದ್ದೇವೆ.

ನಮ್ಮಲ್ಲಿ ಈಗ ಇರುವಂತಹ ಅಕ್ಕಿ ಮತ್ತು ಸೀಮೆಎಣ್ಣೆಯನ್ನು ಕೇಸರಿ ಕಾರ್ಡುಗಳಿಗೆ ಕಡಿಮೆ ಮಾಡಿ ಇವರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಬಹುದು. ಅದು ನಮಗೆ ಕಮಿಟ್‌ಮೆಂಟ್ ಅಲ್ಲ. 6400 ಕ್ಕಿಂತ ಜಾಸ್ತಿ ಇನ್‌ಕಮ್ ಅವರಿಗೆ ಏನು ಕೊಡಬೇಕು ಎನ್ನುವುದೂ ಕಮಿಟ್‌ಮೆಂಟೂ ಇಲ್ಲ. ಅಂತೂ ಈ ಕಮಿಟ್‌ಮೆಂಟ್ ಎಂದು ತಿಳಿದುಕೊಂಡು ಅದನ್ನು ಫುಲ್‌ಫಿಲ್ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಹಾಗಾದರೆ ಒಂದು ಮಾಡಿ, ಈಗ ಹಸಿರು ಕಾರ್ಡು ಬದಲಿದೆ ಎಲ್ಲರಿಗೂ ಸಹಿತ ತಾವು ಹೊಸ ಇನ್‌ಕಮ್ ಲಿಮಿಟ್ ಪ್ರಕಾರವಾಗಿ ತ್ರಿವರ್ಣ ಕಾರ್ಡು ಏನು ಕೊಡುತ್ತೀರೋ ಆ ಕಾರ್ಡುಗಳನ್ನು ಕೊಡತಕ್ಕಂಥದ್ದು ಅನ್ನು ನಿಲ್ಲಿಸಿದ್ದಾರೆ. ಜಿಲ್ಲಾಧಿಕಾರಿಗಳು ಅದನ್ನು ಎಲ್ಲರಿಗೂ ಕೊಡುವ ಹಾಗೆ ಮಾಡುತ್ತೀರಾ ಮತ್ತು ಕೊಟ್ಟಿರತಕ್ಕಂಥವರಿಗೆ ಎಷ್ಟು ಮಿನಿಮಮ್ ಕೊಡಬೇಕೋ ಅಷ್ಟು ಕೊಡುತ್ತೇವೆ ಎನ್ನುವ ಭರವಸೆ ಕೊಡಿ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ ಬರೀ ಕಾರ್ಡುಗಳನ್ನು ಹಂಚುವುದರಲ್ಲಿ ನಿಮ್ಮ ಆಡಳಿತ ನಡೆಸುವುದಕ್ಕೆ ಹೋಗಬೇಡಿ. ಅನೇಕ ಹಳ್ಳಿಗಳಲ್ಲಿ ಎಷ್ಟು ಕೊರತೆ ಇದೆ. ಆಹಾರ ಪದಾರ್ಥಗಳ ಕೊರತೆ ಇದೆ ಆ ಕೊರತೆಯನ್ನು ನೀಗುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ತಾವು ಹೇಳಬೇಕು. ಬರೀ ಕಾರ್ಡು ಹಂಚುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ನೀವು ಅದಕ್ಕೆ ತಕ್ಕಂತೆ ಸೀಮೆ ಎಣ್ಣೆ ಮತ್ತು ಆಹಾರಪದಾರ್ಥಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ತಾವು ಮಾಡುತ್ತೇವೆಂದು ಹೇಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್:- ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿ ಆಗಿದೆ. We are committed. ತ್ರಿವರ್ಣ ಪಡಿತರ ಚೀಟಿ ಹೊರತು ಬೇರೆಯವರಿಗೆ ಅಲ್ಲ. ಹಾಗಾಗಿ ಬೇರೆಯವರಿಗೆ ಕಡಿಮೆ ಮಾಡಿ ಇದಕ್ಕೆ ಖಂಡಿತ ಹೆಚ್ಚು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಕರಿಯಣ್ಣ:- ಮಾನ್ಯ ಅಧ್ಯಕ್ಷರೆ ನಮ್ಮ ಜಿಲ್ಲೆಯಲ್ಲಿ ಹಸಿರು ಕಾರ್ಡು ಕೊಟ್ಟಿಲ್ಲ ಮತ್ತು ತ್ರಿವರ್ಣ ಕಾರ್ಡು ಸಹ ಕೊಟ್ಟಿಲ್ಲ ಸಂಪೂರ್ಣವಾಗಿ ಹೊಸ ಕಾರ್ಡು ಕೊಡಿ ಎಂದು ಎಷ್ಟು ಹೇಳಿದರು ಜಿಲ್ಲಾಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು ಸ್ಟ್ರೈಕ್ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಆ ಕಾರ್ಡು ಇಲ್ಲದೆ ಇದ್ದರೆ ನಮಗೆ ರೇಷನ್ ಹೇಗೆ ಬರುತ್ತದೆ ಆ ಟೈಪ್ ಆಗಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂದು ನಾನು ಕೇಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:- ಶಾಸಕರು ತಮ್ಮ ಜಿಲ್ಲಾ ಅಧಿಕಾರಿಗಳನ್ನು ಕೇಳಿ

ಸರಿಪಡಿಸಿಕೊಳ್ಳಬೇಕು. ಈಗ ನಮಗೆ ತಿಳಿಸಿದ್ದೀರಿ ನಾವು ಜಿಲ್ಲಾಧಿಕಾರಿಗಳಿಗೆ ಈ ವಿಚಾರದಲ್ಲಿ ಕೂಡಲೇ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

ಮದ್ಯದ ಅಂಗಡಿ ಹಾಗೂ ಪಬ್‌ಬಾರ್‌ಗಳಿಗೆ ಪರವಾನಿಗೆ

100 (715) ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1989ರಿಂದ ಈವರೆಗೆ ರಾಜ್ಯದಲ್ಲಿ ಎಷ್ಟು ಸಗಟು ಮಾರಾಟ ಮತ್ತು ಚಿಲ್ಲರೆ ಮಾರಾಟದ ಮದ್ಯದಂಗಡಿಗಳಿಗೆ ಮತ್ತು ಪಬ್ ಬಾರ್‌ಗಳಿಗೆ ಪರವಾನಿಗೆ ನೀಡಲಾಗಿದೆ (ಜಿಲ್ಲೆ ತಾಲ್ಲೂಕು ಮತ್ತು ಊರಿನ ಹೆಸರನ್ನು ತಿಳಿಸುವುದು).

ಆ) ಬಸ್‌ಸ್ಟಾಂಡ್, ಆಸ್ಪತ್ರೆ ಮತ್ತು ರೈಲು ನಿಲ್ದಾಣಗಳ ಹತ್ತಿರ ಮದ್ಯದಂಗಡಿ ಮತ್ತು ಪಬ್ ಬಾರ್‌ಗಳನ್ನು ತೆರೆಯಲು ನಿಷೇಧಿಸಲಾಗಿದೆಯೇ;

ಇ) ಪಬ್ ಬಾರ್‌ಗಳಲ್ಲಿ ಹಾಗೂ ಮದ್ಯದಂಗಡಿಗಳಲ್ಲಿ 21 ವರ್ಷ ವಯಸ್ಸಿನ ಯುವಕರು, ಯುವತಿಯರು ಮತ್ತು ಎಲ್ಲಾ ವಯಸ್ಸಿನ ಮಹಿಳೆಯರು ಮದ್ಯಪಾನ ಮಾಡುವುದು ಹಾಗೂ ಪ್ರವೇಶಿಸುವುದನ್ನು ನಿಷೇದಿಸಲು ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಯಾವಾಗ ಕ್ರಮವನ್ನು ತೆಗೆದುಕೊಳ್ಳುವುದು;

ಉ) ಪಬ್, ಬಾರ್ ಹಾಗೂ ಮದ್ಯದಂಗಡಿಗಳ ವ್ಯಾಪಾರ ವಹಿವಾಟಿಗೆ ವೇಳೆಯನ್ನು ಏನಾದರೂ ನಿಗದಿ ಮಾಡಲಾಗಿದೆಯೇ;

ಊ) ಹಾಗಿದ್ದಲ್ಲಿ ವಹಿವಾಟಿನ ವೇಳೆಯನ್ನು ತಿಳಿಸಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) 1989ರಿಂದ ಮಂಜೂರಾದ ಜಿಲ್ಲಾವಾರು ಮದ್ಯದಂಗಡಿಗಳ ಸಂಖ್ಯೆಗಳ ವಿವರಗಳನ್ನು ಅನುಬಂಧ 'ಅ'ದಲ್ಲಿ ನೀಡಲಾಗಿದೆ.

ಆ) ಇದನ್ನು ನಿಷೇದಿಸುವ ಸಲುವಾಗಿ, ಕಾನೂನು ತಿದ್ದುಪಡಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು. ಪಬ್ ಬಾರ್‌ಗಳಲ್ಲಿ ಹಾಗೂ ಮದ್ಯದಂಗಡಿಗಳಲ್ಲಿ 21 ವರ್ಷ ವಯಸ್ಸಿನೊಳಗಿರುವ ಯುವಕರು, ಯುವತಿಯರು ಮದ್ಯಪಾನ ಮಾಡುವುದು ಹಾಗೂ ಪ್ರವೇಶಿಸುವುದನ್ನು ನಿಷೇದಿಸಲಾಗಿದೆ. ಮಹಿಳೆಯರು ಮದ್ಯಪಾನ ಮಾಡುವುದು ಹಾಗೂ ಪ್ರವೇಶಿಸುವುದನ್ನು ತಡೆಗಟ್ಟಲು ಕಾನೂನು ಇರುವುದಿಲ್ಲ.

ಈ) ಸಂಬಂಧಪಟ್ಟ ಅಬಕಾರಿ ಅಧಿಕಾರಿಗಳಿಗೆ ಸುತ್ತೋಲೆಯ ಮೂಲಕ ಸೂಕ್ತ ಆದೇಶ ನೀಡಲಾಗಿದೆ.

ಉ) ಹೌದು.

ಊ) 1. ಸಾರಾಯಿ ಅಂಗಡಿ – ಬೆಳಿಗ್ಗೆ 9 ರಿಂದ ರಾತ್ರಿ 9.30 ರವರೆಗೆ
2. ಶೇಂದಿ ಅಂಗಡಿ – ಬೆಳಿಗ್ಗೆ 9 ರಿಂದ 9.30 ರವರೆಗೆ

3. ಸಿಎಲ್ – 2 – ಬೆಳಿಗ್ಗೆ 9 ರಿಂದ ರಾತ್ರಿ 10 ರವರೆಗೆ

4. ಸಿಎಲ್ – 9 – ಬೆಳಿಗ್ಗೆ 9 ರಿಂದ ಮಧ್ಯಾಹ್ನ 2.30 ರವರೆಗೆ ಮತ್ತು 5.30 ರಿಂದ ರಾತ್ರಿ 11.00 ರವರೆಗೆ

5. ಆರ್‌ವಿಬಿ (ಪಬ್) – ಬೆಳಿಗ್ಗೆ 9 ರಿಂದ ಮಧ್ಯಾಹ್ನ 2.30 ರವರೆಗೆ ಸಂಜೆ 5.30 ರಿಂದ ರಾತ್ರಿ 11.00 ರವರೆಗೆ

ANNEXURE 'A'

No. of CL-1,CL-2 & R.V.B. Licences issued in the State (Upto the end of Dec. 1992)

Sl. No.	District	CL-1	CL-2	CL-9	RVB	CL-1	CL-2	CL-9	RVB	CL-1	CL-2	CL-9	RVB	CL-1	CL-2	CL-9	RVB
1.	Bangalore (U)	107	144	666	127	121	810	735	158	128	878	1117	193	127	896	1256	204
2.	Bangalore (R)	2	100	63	3	2	121	78	6	7	145	93	8	9	146	107	8
3.	Belguam	17	223	69	-	20	245	82	-	20	239	89	-	19	250	95	-
4.	Bellary	8	138	26	-	8	133	29	1	10	159	35	1	10	158	38	1
5.	Bidar	5	58	19	-	6	72	25	-	7	71	28	-	7	74	30	-
6.	Bijapur	11	151	34	-	13	147	49	1	15	178	66	1	16	182	71	1
7.	Chickmagalur	10	75	60	-	10	75	50	-	12	83	47	-	12	80	49	-
8.	Chitradurga	18	121	109	-	19	126	114	1	26	169	149	2	22	259	204	2
9.	D. Kannada	39	202	310	5	39	227	351	6	41	230	372	5	41	236	400	5
10.	Dharwad	31	232	74	-	24	164	57	-	25	182	107	-	25	186	115	-
11.	Gulbarga	12	100	49	-	11	149	–	48	8	165	64		8	160	66	-
12.	Hassan	8	121	46	-	6	132	48	1	7	138	52	1	7	139	57	1
13.	Kodagu	8	71	42	1	7	85	50	-	5	87	54	-	7	98	53	-
14.	Kolar	13	116	40	2	17	158	79	1	17	168	97	2	14	170	104	2
15.	Mandya	5	99	60	-	8	22	64	3	9	99	72	3	8	104	83	3

17. Raichur	7	110	32	-	9	133	41	-	9	143	46	-	2	147	55	-
18. Shimoga	12	129	89	-	13	136	69	-	13	146	67	-	16	162	68	-
19. Tumkur	12	121	32	1	9	138	36	2	10	174	62	2	12	178	64	2
20. U. Kannada	8	77	24	-	10	81	28	-	9	83	30	-	10	86	35	-
TOTAL	347	3166	1925	142	367	3445	2180	184	394	3769	2764	224	398	3935	3083	235

ಶ್ರೀ ಬಸವರಾಜ ರಾಯರೆಡ್ಡಿ:– ಅಧ್ಯಕ್ಷರೇ, 1989ರಿಂದ ಇಲ್ಲಿಯವರೆಗೂ ನಾಲ್ಕು ವರ್ಷಗಳಲ್ಲಿ ಸಿಎಲ್ 1, ಸಿಎಲ್ 2, ಸಿಎಲ್ 9 ಪಬ್‌ಗಳನ್ನು ಜಿಲ್ಲಾವಾರು ಆದರಲ್ಲಿ ಕೇಳಿದ್ದೆ. ಬೆಂಗಳೂರು ನಗರದಲ್ಲಿ ಅತೀ ಹೆಚ್ಚು ಬಾರ್ ಮತ್ತು ಪಬ್‌ಗಳನ್ನು ಕೊಟ್ಟಿದ್ದರೆ ಅಂದರೆ 4 ವರ್ಷಗಳ ಕಾಲದಲ್ಲಿ 682 ಪಬ್‌ನ್ನು ಬೆಂಗಳೂರು ನಗರದಲ್ಲಿ ಕೊಟ್ಟಿದ್ದಾರೆ. 3874 ಸಿಎಲ್ 9 ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಕೊಟ್ಟಿದ್ದಾರೆ.

ಈ ನಾಲ್ಕು ವರ್ಷಗಳಲ್ಲಿ ಶೇಕಡಾ 50ಕ್ಕೂ ಹೆಚ್ಚು ಬಾರ್ ಮತ್ತು ಪಬ್ಬುಗಳನ್ನು ಕೊಟ್ಟಿದ್ದೀರಿ. ಇನ್ನು ಮುಂದೇ ಬೆಂಗಳೂರು ನಗರದಲ್ಲಿ ಪಬ್‌ಗಳನ್ನು, ಬಾರ್ ಮತ್ತು ರೆಸ್ಟೋರೆಂಟ್ ಲೈಸನ್ಸ್‌ಗಳನ್ನು ಕೊಡದೆ ಹಾಗೇ ನೋಡಿಕೊಳ್ಳುತ್ತೀರೋ ಹೇಗೆ ಎಂಬುದನ್ನು ದಯವಿಟ್ಟು ತಿಳಿಸಬೇಕು. 2ನೆಯದಾಗಿ ಈಗ ಬಾರ್‌ಗಳನ್ನು ಬಸ್ ಸ್ಟ್ಯಾಂಡ್, ಆಸ್ಪತ್ರೆ ಮತ್ತು ರೈಲ್ವೆ ನಿಲ್ದಾಣದ ಹತ್ತಿರ ನಡೆಸುವುದಕ್ಕೆ ಪರವಾನಿಗೆ ಕೊಡುತ್ತಿದ್ದೀರಿ. ಬಸ್ ಸ್ಟ್ಯಾಂಡ್ ಹತ್ತಿರ ಬಾರ್‌ಗಳು ರಿಟೇಲ್ ಶಾಪ್‌ಗಳು ಎಲ್ಲಾ ಇರುವುದರಿಂದ ಕೆ.ಎಸ್.ಆರ್.ಟಿ.ಸಿ. ಡ್ರೈವರ್‌ಗಳು ಕಂಡಕ್ಟರ್‌ಗಳು ಕುಡಿದು ಬಸ್ ಹತ್ತುತ್ತಾರೆ. ಹಾಗೇ ಕೆಲವು ಜನ ಪ್ರಯಾಣಿಕರೂ ಸಹ ಕುಡಿದು ಬಸ್ ಹತ್ತಿ ಗಲಾಟೆ ಮಾಡುತ್ತಾರೆ. ಇದೇ ರೀತಿ ರೈಲ್ವೆ ನಿಲ್ದಾಣದಲ್ಲೂ ಕೂಡ ಆಗಿದೆ. ಹಾಗೆಯೇ ಆಸ್ಪತ್ರೆಗಳ ಮುಂದೆ ಈ ಅಂಗಡಿಗಳಿಗೆ ಪರವಾನಿಗೆ ಕೊಡುತ್ತಿದ್ದೀರಿ. ಮೊನ್ನೆ ವಾಣಿವಿಲಾಸ ಆಸ್ಪತ್ರೆ ಹತ್ತಿರ ಯಾರೋ ಒಬ್ಬ ಕುಡಿದು ಆಸ್ಪತ್ರೆಯಲ್ಲಿ ಗಲಾಟೆ ಮಾಡುತ್ತಿದ್ದ. ಆ ಆಸ್ಪತ್ರೆ ಹತ್ತಿರನೇ ಅಂಗಡಿ ಇರುವುದರಿಂದ ಈ ರೀತಿ ನಡೆಯುತ್ತಿದೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಉತ್ತರದಲ್ಲಿ ಪಬ್ ಬಾರ್‌ಗಳಲ್ಲಿ ಹಾಗೂ ಮಧ್ಯದಂಗಡಿಗಳಲ್ಲಿ 21 ವರ್ಷ ವಯಸ್ಸಿನೊಳಗಿರುವ ಯುವಕರು, ಯುವತಿಯರು ಮಧ್ಯಪಾನ ಮಾಡುವುದು ಹಾಗೂ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ ಎಂದು ಹೇಳಿದ್ದೀರಿ. ಆದರೆ ಈ 21 ವರ್ಷ ವಯಸ್ಸಿನ ಬಗ್ಗೆ ಸರ್ಟಿಫಿಕೇಟ್ ಕೊಡುವುದು ಯಾರು ? ಇವರನ್ನು ಹೇಗೆ ಗುರುತು ಹಿಡಿಯುತ್ತೀರಿ ? ಎ ಸರ್ಟಿಫಿಕೇಟ್ ಕೊಡಲು ಆಫೀಸರ್‌ಗಳನ್ನು ಏನಾದರೂ ನೇಮಕ ಮಾಡುತ್ತೀರಾ ಎಂಬುದನ್ನು ದಯವಿಟ್ಟು ತಿಳಿಸಬೇಕು. ಮಹಿಳೆಯರು ಮದ್ಯಪಾನ ಮಾಡುವುದು ಹಾಗೂ ಪ್ರವೇಶಿಸುವುದನ್ನು ತಡೆಗಟ್ಟಲು ಕಾನೂನು ಇರುವುದಿಲ್ಲ ಎಂದು ಹೇಳಿದ್ದೀರಿ. ವಯಸ್ಸಾದ ಮಹಿಳೆಯರು ಮಧ್ಯಪಾನ ಮಾಡುವುದನ್ನು ಏತಕ್ಕೆ ನಿಷೇದಿಸುವುದಿಲ್ಲ. ಉದಾಹರಣೆಗೆ ಬೆಂಗಳೂರಿನ ಪಬ್ ಮತ್ತು ಬಾರ್‌ಗಳಲ್ಲಿ ವೇಶ್ಯಾವಾಟಿಕೆ ಅದರಿಂದ ಜಾಸ್ತಿಯಾಗುತ್ತಿದೆ. ಆದ್ದರಿಂದ ಇವರುಗಳನ್ನು ನಿಷೇದಿಸುವ ಬಗ್ಗೆ ಪರಿಶೀಲನೆ ಮಾಡಬೇಕು. ಕೊನೆಯದಾಗಿ ಈ ಪಬ್ ಮತ್ತು ಬಾರ್‌ಗಳನ್ನು ರಾತ್ರಿ 11 ಗಂಟೆಯವರೆಗೆ ಬೆಂಗಳೂರಿನಲ್ಲಿ ತೆಗೆದಿರುತ್ತಾರೆ. ಇದಕ್ಕೆ ಬದಲು 6.30 ಕ್ಕೆ ಮುಚ್ಚುವ ಹಾಗೇ ಮಾಡಬೇಕು. ಅದೇ ರೀತಿ ಸಾರಾಯಿ ಅಂಗಡಿಗಳನ್ನು 5.30 ಕ್ಕೆ ಮುಚ್ಚುವ ಹಾಗೆ ಮಾಡಬೇಕು.

ಶ್ರೀ ಕೆ. ಶಿವಮೂರ್ತಿ:– ಕುಡಿಯುವ ವಿಚಾರದಲ್ಲಿ ಹೆಣ್ಣು ಮಕ್ಕಳು, ಗಂಡು ಮಕ್ಕಳು ಎಂದು ಡಿಫರೆನ್ಸಿಯೇಟ್ ಮಾಡಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾವು ಕೆಲವು ಕಟ್ಟುನಿಟ್ಟಾದ ಕ್ರಮವನ್ನು ಹಾಕಿಕೊಂಡಿದ್ದೇವೆ. ಹಾಗೂ ಕೆಲವು ಕಟ್ಟುಪಾಡುಗಳನ್ನು ಹಾಕಿದ್ದೇವೆ. ಒಂದನೆಯದಾಗಿ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಯ ಪಕ್ಕದಲ್ಲಿ 200 ಮೀಟರ್ ಪಕ್ಕದಲ್ಲಿ ಯಾವುದೇ ಬಾರ್ ಲೈಸೆನ್ಸ್‌ನನ್ನು, ಪಬ್, ವೈನ್ ಹಾಗೂ ಆರ್ಯಾಕ್ ಶಾಪ್‌ಗಳನ್ನು ಕೊಡಬಾರದು ಎಂದು, ಕಟ್ಟುನಿಟ್ಟಾಗಿ 1.7.93ರಿಂದ ಈ ನಿಯಮಗಳನ್ನು ಅಳವಡಿಸಿಕೊಂಡು ಕ್ರಮ ಕೈಗೊಳ್ಳಲು ಈಗಾಗಲೇ ನಿರ್ಧರಿಸಿದ್ದೇವೆ. ಇನ್ನು ದೇವಸ್ಥಾನಗಳು, ಶಾಲೆಗಳು ಎಲ್ಲೆಲ್ಲಿ ಇವೆ ಅಲ್ಲಿ ಇವುಗಳನ್ನು ತೆರೆಯಕೂಡದು ಎಂಬ ನಿಯಮವಿದೆ. ಅದೂ ಸಹ ಮುಂದೆ ರಿನ್ಯೂ ಮಾಡುವಾಗ ದೇವಸ್ಥಾನಗಳು, ಶಾಲೆಗಳು ಹಾಗೂ ಆಸ್ಪತ್ರೆಗಳ ಬಳಿ

ಇರತಕ್ಕ ಅಂಗಡಿಗಳ ಲೈಸನ್ಸ್‌ಗಳನ್ನು ರಿನ್ಯೂ ಮಾಡುವುದಿಲ್ಲ. ಇನ್ನು 21 ವರ್ಷ ವಯಸ್ಸಿನ ನೀತಿಯನ್ನು ನಿಷ್ಕರ್ಶೆ ಮಾಡುವ ಬಗ್ಗೆ ಯಾವುದೇ ತೊಂದರೆ ಇಲ್ಲ. ನಿಮ್ಮ ವಯಸ್ಸು ಹಾಗೂ ನಮ್ಮ ವಯಸ್ಸನ್ನು ನಿಷ್ಕರ್ಶೆ ಮಾಡುವುದು ಸಾಧ್ಯವಿದ್ದರೇ 21 ವರ್ಷ ವಯಸ್ಸಿನ ಬಗ್ಗೆ ಕೂಡ ನಿಷ್ಕರ್ಶೆ ಮಾಡಬಹುದು Ultimately the owners will be the persons to disprove it.

ಇದು ಒಂದು ಹೊಸ ನಿಯಮವನ್ನು ಪ್ರಯೋಗ ಮಾಡಲಿದ್ದೇವೆ. ಇದನ್ನು ಮಾಡುವಾಗ ಇದರಿಂದ ಹಲವಾರು ಅನುಕೂಲಗಳಾಗುತ್ತವೆ. ಆದರೆ ಜಾಸ್ತಿ ಅನಾಹುತ ಆಗುವುದನ್ನು ನಿಲ್ಲಿಸಬಹುದು.

SRI BASAVARAJA RAYAREDDY:– It leads to corruption.

ಅಂಥವರು ಜಾಸ್ತಿ ದುಡ್ಡು ಕೊಟ್ಟು ಅವನು ಅಂಗಡಿಯಲ್ಲಿ ಕುಡಿಯುತ್ತಾನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಇದರಿಂದ 2 ಪರಿಣಾಮಗಳು ಆಗುತ್ತವೆ. ಒಂದು ಸ್ವಲ್ಪ ಮರ್ಯಾದಸ್ತ ಮನೆತನದ ಮಕ್ಕಳು ಈ ಒಂದು ರೆಸ್ಟ್ರಿಕ್ಷನ್‌ನಿಂದ ಕುಡಿಯಲಿಕ್ಕೆ ಅಲ್ಲಿಗೆ ಹೋಗುವುದಿಲ್ಲ. ಒಂದು ಮಾನಸಿಕವಾದ ಅಂಜಿಕೆ ಈ ಕಾನೂನಿನಿಂದ ಅವರಿಗೆ ಬರುತ್ತದೆ. ಮತ್ತೇ ಇದರಿಂದ ಇನ್ನೂ ಹಲವಾರು ಪರಿಣಾಮಗಳು ಆಗುತ್ತವೆ. ಇದನ್ನು ಪ್ರಯೋಗ ಮಾಡೋಣ, ಇನ್ನು ತಮ್ಮಲ್ಲಿ ಹೊಸ ಸಲಹೆಗಳು ಇದ್ದರೆ ದಯಮಾಡಿ ಕೊಡಬೇಕು, ಆ ಸಲಹೆಗಳನ್ನು ಪರಿಶೀಲಿಸೋಣ. 35ವಯಸ್ಸಿನವರೆಗೆ ಹೋಗುವುದು ಬೇಡ ಎಂಬ ಸಲಹೆಯನ್ನು ಕೊಟ್ಟರೇ ಅದನ್ನು ನಾವು ಒಪ್ಪುತ್ತೇವೆ.

ಶ್ರೀ ಬಸವರಾಜ ರಾಯರೆಡ್ಡಿ:– ಮಹಿಳೆಯರ ಬಗ್ಗೆ ಹೇಳಲಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಸಚಿವರು):– ಸನ್ಮಾನ್ಯ ಅಧ್ಯಕ್ಷರೇ 23.2.93ರಂದು ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇವೆ.

ಇದರ ಜೊತೆಗೆ 22.2.1993ನೇ ಸೋಮವಾರ ಸದನದಲ್ಲಿ ಪ್ರಶ್ನೋತ್ತರ ನಡೆಯದಿದ್ದ ಪ್ರಯುಕ್ತ ಆ ದಿನದ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

I.P.C. 302 ರ ಪ್ರಕಾರ ನೋಂದಾವಣೆಯಾದ ಮೊಕದ್ದಮೆಗಳ ಸಂಖ್ಯೆ

24 (484) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) 1992–93ರಲ್ಲಿ ರಾಜ್ಯದಲ್ಲಿ ಭಾರತದ ದಂಡ ಸಂಹಿತೆಯ ಕಲಂ 302 (ಐ.ಪಿ.ಸಿ. 302) ಕೆಳಗೆ ಪೊಲೀಸ್ ಠಾಣೆಗಳಲ್ಲಿ ನೋಂದಾವಣೆಯಾದ ಮೊಕದ್ದಮೆಗಳ ಸಂಖ್ಯೆ ಎಷ್ಟು;

2) ಈ ರೀತಿ ನೋಂದಾವಣೆಯಾದ ಕೊಲೆ ಮೊಕದ್ದಮೆಗಳಲ್ಲಿ ಅಪರಾಧಿಯನ್ನು ಬಂಧಿಸದೆ ಇರುವ ನಿದರ್ಶನ ಇದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

1) ದಿನಾಂಕ 30–11–1992ರವರೆಗೆ ಒಟ್ಟು 1311 ಮೊಕದ್ದಮೆಗಳನ್ನು ನೋಂದಾಯಿಸಲಾಗಿದೆ.

2) ಇಲ್ಲ

ರಾಜ್ಯದ ಯೋಜನಾ ವೆಚ್ಚದ ಬಗ್ಗೆ

247 (485) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ರಾಜ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992-93ರಲ್ಲಿ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಸೂಚಿಸಿರುವ ವೆಚ್ಚದ ಹಣಕ್ಕೂ ಯೋಜನಾ ಆಯೋಗವು ನಿಗದಿ ಮಾಡಿರುವ ವೆಚ್ಚದ ಹಣಕ್ಕೂ ಇರುವ ಅಂತರವೆಷ್ಟು;

ಆ) ಈ ಅಂತರಕ್ಕೆ ಕಾರಣವನ್ನು ಮತ್ತು ಇದನ್ನು ಹೋಗಲಾಡಿಸಲು ಸಾಧ್ಯವಿಲ್ಲವೆ;

ಇ) 1993-94ಕ್ಕೆ ಯೋಜನಾ ಆಯೋಗವು ವೆಚ್ಚಕ್ಕಾಗಿ ರಾಜ್ಯಕ್ಕೆ ನಿಗದಿ ಮಾಡಿರುವ ಹಣವೆಷ್ಟು;

ಈ) ಈ ರೀತಿ ಯೋಜನಾ ಆಯೋಗವು ನಿಗದಿ ಮಾಡಿರುವಷ್ಟು ವೆಚ್ಚವನ್ನು ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಸೂಚಿಸುವುದೇ ?

ಶ್ರೀ ಟಿ.ಎಂ. ಮಂಜುನಾಥ್ (ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯಮಂತ್ರಿಗಳು):-

ಅ) 1992-93ನೇ ಸಾಲಿನಲ್ಲಿ ರಾಜ್ಯದ ಆಯವ್ಯಯದಲ್ಲಿ ರೂ. 244ಕೋಟಿಯಷ್ಟನ್ನು ಯೋಜನಾ ಆಯೋಗವು ಒಪ್ಪಿಗೆ ಕೊಟ್ಟಿದ್ದಕ್ಕಿಂತ ಹೆಚ್ಚಾಗಿ ನಿಗದಿಪಡಿಸಲಾಗಿದೆ.

ಆ) ರಾಜ್ಯದ ಸಂಪನ್ಮೂಲದ ಕ್ರೋಢೀಕರಣದಲ್ಲಿ ಉತ್ತಮ ಫಲಿತಾಂಶವಾಗಿದ್ದುದರಿದ ಮತ್ತು ಕೆಲವು ಮುಖ್ಯ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ಉದ್ದೇಶವು ಈ ಅಂತರಕ್ಕೆ ಕಾರಣ. ಇದನ್ನು ನಿವಾರಿಸುವ ಅವಶ್ಯಕತೆ ಇಲ್ಲ.

ಇ) ರೂ. 3025 ಕೋಟಿಗಳು.

ಈ) ಹೌದು.

ಸೋಮವಾರಪೇಟೆ ತಾಲ್ಲೂಕಿನ ಹೆಬ್ಬಾರೆಯಲ್ಲಿ ಪೋಲೀಸ್ ಔಟ್-ಪೋಸ್ಟ್

231 (557) ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):-

ರಾಜ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೋಮವಾರಪೇಟೆ ತಾಲ್ಲೂಕಿನ ಹೆಬ್ಬಾರೆಯಲ್ಲಿ ಒಂದು ಪೋಲೀಸ್ ಔಟ್‌ಪೋಸ್ಟ್ ಸ್ಟೇಷನ್‌ನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ರಮಾನಾಥ ರೈ (ರಾಜ್ಯ ಗೃಹ ಸಚಿವರು):-

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಹಾಸನದಿಂದ ಕ್ಯಾಲಿಕಟ್‌ಗೆ ಅಂತರರಾಜ್ಯ ಕೆ.ಎಸ್.ಆರ್.ಟಿ.ಸಿ. ಬಸ್

232 (556) ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನದಿಂದ ಕೇರಳದ ಕ್ಯಾಲಿಕಟ್‌ಗೆ ಅಂತರರಾಜ್ಯ ಬಸ್ ವ್ಯವಸ್ಥೆಯು ಕೆ.ಎಸ್.ಆರ್.ಟಿ.ಸಿ.ಯಿಂದ ಮಂಜೂರಾಗಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಇದುವರೆವಿಗೂ ಅದನ್ನು ಏಕೆ ಪ್ರಾರಂಭಿಸಿರುವುದಿಲ್ಲ ಹಾಗೂ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ) ಹೌದು

ಆ) ತೆರಿಗೆ ವಿನಾಯಿತಿ ಅಧಿಸೂಚನೆಯನ್ನು ಹೊರಡಿಸಿದ ನಂತರ ಸೇವೆಯನ್ನು ಪ್ರಾರಂಭಿಸಲಾಗುವುದು.

ಕೊಡಗು ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ

229 (559) ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡು ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಒಟ್ಟು ಎಷ್ಟು ಹುದ್ದೆಗಳು ಖಾಲಿ ಇವೆ;

ಆ) ಹಾಗಿದ್ದಲ್ಲಿ ಅದನ್ನು ಭರ್ತಿ ಮಾಡದಿರಲು ಕಾರಣವೇನು ಹಾಗೂ ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಅ) ಕೊಡಗು ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಒಟ್ಟು 103 ಹುದ್ದೆಗಳು ಖಾಲಿ ಇವೆ.

ಆ) ಈ ಹುದ್ದೆಗಳಲ್ಲಿ ಕೆಲವು ಹೊಸದಾಗಿ ಸೃಷ್ಟಿಸಲಾಗಿದ್ದು, ಗ್ರೂಫ್-ಎ ಮತ್ತು ಸಿ ವೃಂದಗಳ ಹುದ್ದೆಗಳನ್ನು ತುಂಬುವ ಬಗ್ಗೆ ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುತ್ತಿದೆ. ಬಡ್ತಿಯಿಂದ ಖಾಲಿ ಇರುವ ಹಾಗೂ ಗ್ರೂಫ್- 'ಡಿ' ವೃಂದದಲ್ಲಿ ಖಾಲಿಯಿರುವ ಹುದ್ದೆಗಳನ್ನು ಈಗಾಗಲೇ ಪೊಲೀಸ್ ಅಧೀಕ್ಷಕರಿಂದ ಬಡ್ತಿ ಮತ್ತು ಸಂದರ್ಶನದ ಮೂಲಕ ತುಂಬಲಾಗುತ್ತಿದೆ.

ಕೊಡಗು ಜಿಲ್ಲೆಗೆ ಮಲೆನಾಡು ಅಭಿವೃದ್ಧಿ ಮಂಡಲಿಯಿಂದ ಹಣ ಬಿಡುಗಡೆ

230 (558) ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):-

ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ? (ತಾಲ್ಲೂಕುವಾರು ವಿವರ ಒದಗಿಸುವುದು);

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ವಿಜ್ಞಾನ ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ) ಈವರೆಗೆ ಯಾವ ತಾಲ್ಲೂಕುಗಳಿಗೂ ಹಣ ಬಿಡುಗಡೆ ಮಾಡಿಲ್ಲ.

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ಹೊಸ ಯೋಜನೆಗಳನ್ನು ರೂಪಿಸಲು ಒತ್ತಾಯ

203 (904) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರ ವಿಮಾ ಇಲಾಖೆಯ ಮೂಲ ಉದ್ದೇಶಗಳೇನು;

ಆ) ಭಾರತೀಯ ಜೀವ ನಿಗಮದಂತೆ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ವಿಭಿನ್ನ ಅಭಿವೃದ್ಧಿ ಸ್ವರೂಪ ಪಡೆದಿಲ್ಲದಿರುವುದಕ್ಕೆ ಕಾರಣವೇನು;

ಇ) ಸರ್ಕಾರಿ ನೌಕರರು ಆದಾಯ ತೆರಿಗೆಯಿಂದ ರಿಯಾಯ್ತಿ ಪಡೆಯಲು ಉಳಿತಾಯ ಮಾಡುವ ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಅಂಚೆ ಕಛೇರಿ ಮತ್ತಿತರ ಸಂಸ್ಥೆಗಳಲ್ಲಿ ರೂಪಿಸಿರುವಂತೆ ಸರ್ಕಾರ ವಿಮಾ ಇಲಾಖೆಯೂ ಸಹ ಉಳಿತಾಯ ಮಾಡುವಂತೆ ವಿವಿಧ ಯೋಜನೆಗಳನ್ನು ಜಾರಿ ಮಾಡದಿರಲು ಕಾರಣಗಳೇನು;

ಈ) ನೌಕರರು ವಿಮಾ ಪಾಲಿಸಿ ಪಡೆದಿರುವ ಸರ್ಕಾರಿ ನೌಕರರ ಸಂಖ್ಯೆ ಎಷ್ಟು; (ಪೂರ್ಣ ಪ್ರತ್ಯೇಕ ವಿವರಗಳನ್ನು ನೀಡುವುದು);

ಉ) ವಿಮಾ ಇಲಾಖೆಯಲ್ಲಿರುವ ಪಾಲಿಸಿದಾರರ ವಿಮಾ ನಿಧಿ ಮೊತ್ತವೆಷ್ಟು ? ಆ ಹಣವನ್ನು ಯಾವುದಕ್ಕೆ ಬಳಸುತ್ತಿದ್ದಾರೆ; ವಿಮಾ ನಿಧಿಯನ್ನು ಸರ್ಕಾರಿ ಕಲ್ಯಾಣ ಅಭಿವೃದ್ಧಿಗೆ ಬಳಸದಿರಲು ಕಾರಣಗಳೇನು;

ಊ) ಜೀವ ವಿಮಾ ನಿಗಮದಂತೆ ಕರ್ನಾಟಕ ಸರ್ಕಾರಿ ವಿಮಾ ನಿಧಿಯನ್ನು ಹೌಸಿಂಗ್ ಕಾರ್ಪೋರೇಷನ್ನು ಸೃಷ್ಟಿಸುವ ಮೂಲಕ ಸರ್ಕಾರಿ ನೌಕರರ ವಸತಿ ಸಮಸ್ಯೆ ಬಗೆಹರಿಸುವಲ್ಲಿ ಸರ್ಕಾರಕ್ಕಿರುವ ತೊಂದರೆಗಳೇನು;

ಋ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯನ್ನು ಜೀವ ವಿಮಾ ನಿಗಮದಂತೆ ಒಂದು ಉದ್ದಿಮೆಯನ್ನಾಗಿ ಪರಿವರ್ತಿಸಲು ರಾಜ್ಯದ ಹೈಕೋರ್ಟು ಹಾಗೂ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದಲ್ಲಿ 1984 ಮತ್ತು 1987ರಲ್ಲಿ ತೀರ್ಪು ನೀಡಿದ್ದರೂ ಸಹ ಸರ್ಕಾರ ಈ ಇಲಾಖೆಯನ್ನು ಉದ್ದಿಮೆಯನ್ನಾಗಿ ಪರಿವರ್ತಿಸದಿರಲು ಕಾರಣಗಳೇನು ?

ಶ್ರೀ ರಾಮಲಿಂಗರೆಡ್ಡಿ (ಹಣಕಾಸಿನ ರಾಜ್ಯ ಸಚಿವರು):–

ಅ) ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮಾ) ನಿಯಮ 1958 ರನ್ವಯ ಸರ್ಕಾರಿ ನೌಕರರನ್ನು ಕಡ್ಡಾಯ ವಿಮೆಗೆ ಒಳಪಡಿಸುವುದು ಹಾಗೂ ಕರ್ನಾಟಕ ಸರ್ಕಾರದ ಮತ್ತು ಸರ್ಕಾರದ ಆರ್ಥಿಕ ಹಿತಾಸಕ್ತಿಯನ್ನು ಹೊಂದಿದ ವಾಹನಗಳನ್ನು ಕಡ್ಡಾಯ ವಿಮೆಗೆ ಒಳಪಡಿಸುವುದು.

ಆ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ಭಾರತೀಯ ಜೀವ ವಿಮಾ ನಿಗಮ (ಕಾಯಿದೆ 1956ರ ಸೆಕ್ಷನ್ 44 (ಎಫ್)ರ ವಿನಾಯ್ತಿಯ ಮೇರೆಗೆ ತನ್ನ ಕಾರ್ಯಕ್ಷೇತ್ರವನ್ನು ರಾಜ್ಯ ಸರ್ಕಾರಿ

ನೌಕರರಿಗೆ ಮಾತ್ರ ಸೀಮಿತಗೊಳಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುವುದರಿಂದ ಮತ್ತು ರಾಷ್ಟ್ರವ್ಯಾಪ್ತಿ ಕಾರ್ಯ ಕ್ಷೇತ್ರವಿರುವ ಭಾರತೀಯ ಜೀವ ವಿಮಾ ನಿಗಮಕ್ಕೆ ಸ್ಪರ್ಧಾತ್ಮಕ ನಿಲುವು ತಾಳಬಾರದ ಕಾರಣಕ್ಕಾಗಿ ಈ ಇಲಾಖೆಯು ಭಾರತೀಯ ಜೀವ ವಿಮಾ ನಿಗಮದಂತೆ ವಿಭಿನ್ನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಿಲ್ಲ.

ಇ) ವಿಮಾ ಪಾಲಿಸಿಗಳನ್ನು ವಿಮಾ ಇಲಾಖೆಯಿಂದ ಪಡೆಯಲು ಗರಿಷ್ಠ ಮಿತಿಯನ್ನು ನಿಗದಿಪಡಿಸಿಲ್ಲದ ಕಾರಣ ವಿಮಾ ಕಂತಿನ ಮೊತ್ತಕ್ಕೆ ಆದಾಯ ತೆರಿಗೆಯಲ್ಲಿ ವಿನಾಯಿತಿ ಸೌಲಭ್ಯ ಇರುತ್ತೆ.

ಈ) ದಿನಾಂಕ 31–3–1992 ರಂದಿನಂತೆ ಈ ಇಲಾಖೆಯಲ್ಲಿ ವಿಮೆಗೊಳಪಟ್ಟ ಸರ್ಕಾರಿ ನೌಕರರ ಸಂಖ್ಯೆ: 3,51,105 ಆಗಿರುತ್ತದೆ.

ಉ) ದಿನಾಂಕ 31–10–92 ರಂದಿನಂತೆ ವಿಮಾ ನಿಧಿಯ ಮೊತ್ತ ರೂ. 451.19 ಕೋಟಿ ರೂಪಾಯಿಗಳಾಗಿರುತ್ತದೆ.

ಈ ಹಣವನ್ನು ಕೆಳಕಂಡಂತೆ ವಿನಿಯೋಗಿಸಲಾಗುತ್ತಿದೆ:–

1) ಸರ್ಕಾರಿ ನೌಕರರಿಗೆ ನಿಯಮಾನುಸಾರ ಪಾಲಿಸಿ ಆಧಾರಿತ ಸಾಲ ನೀಡಲು
2) ವಿವಿಧ ಹಕ್ಕು ಪ್ರಕರಣಗಳ ಪಾವತಿಗೆ
3) ಉಳಿದ ಹಣವು ಸರ್ಕಾರದ ಸಂಚಿತ ನಿಧಿಯಲ್ಲಿ ತೊಡಗಿಸಿದ್ದು, ಈ ಹಣವನ್ನು ಆಯವ್ಯಯ ಸಂಪನ್ಮೂಲವೆಂದು ಪರಿಗಣಿಸಲಾಗುತ್ತಿದೆ.

ಊ) ರಾಜ್ಯ ಸರ್ಕಾರಿ ನೌಕರರ ಸಂಘದ ಜಂಟಿ ಸಮಾಲೋಚನಾ ಸಮಿತಿಯು ಹೌಸಿಂಗ್ ಕಾರ್ಪೋರೇಷನ್ ರಚಿಸುವ ಬಗ್ಗೆ ಕೋರಿದ್ದು, ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಊ) ಶ್ರೇಷ್ಠ ಉಚ್ಚ ನ್ಯಾಯಾಲಯಗಳ ತೀರ್ಪಿನಂತೆ ಹಾಗೂ ಕಾರ್ಮಿಕ ಆಯುಕ್ತರ ಉಲ್ಲೇಖದ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದ್ದು, ಕಾನೂನು ಇಲಾಖೆ ಅಭಿಪ್ರಾಯ ಬಂದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಕೋಮು ಗಲಭೆಯ ದೃಷ್ಟಿಯಲ್ಲಿ ತೆಗೆದುಕೊಂಡ ಸೌಹಾರ್ದತಾ ಕ್ರಮ

201 (1050) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇತ್ತೀಚೆಗೆ ನಡೆದ ಕೋಮು ಗಲಭೆಯಿಂದ ಅಭಿವೃದ್ಧಿ ಕೆಲಸಗಳಿಗೆ ಧಕ್ಕೆಯಾಗಿದೆಯೆ;

ಆ) ಕೋಮು ಸೌಹಾರ್ದತೆಗಾಗಿ ಸರ್ಕಾರವು ಕೈಗೊಂಡ ಕ್ರಮಗಳೇನು;

ಇ) ಕೋಮು ಗಲಭೆಗಳನ್ನು ಹುಟ್ಟು ಹಾಕುವವರ ವಿರುದ್ಧ ಸರ್ಕಾರವು ಕಠಿಣ ಕ್ರಮ ಕೈಗೊಳ್ಳುವುದೆ;

ಈ) ಹಾಗಿದ್ದಲ್ಲಿ ಅಂತಹ ಪ್ರಕರಣಗಳೆಷ್ಟು;

ಉ) ರಾಜ್ಯದಲ್ಲಿ ಇತ್ತೀಚಿನ ಕೋಮು ಗಲಭೆಗಳಲ್ಲಿ ನೊಂದವರಿಗೆ ನೀಡಿದ ಪರಿಹಾರ ಮೊತ್ತವೆಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಇಲ್ಲ

ಆ) 1) ರಾಜ್ಯಮಟ್ಟದಲ್ಲಿ ರಾಜ್ಯ ಐಕ್ಯತಾ ಸಮಿತಿ ಇದೆ. ಅದೇ ರೀತಿ ಜಿಲ್ಲಾ ಮಟ್ಟ ಹಾಗೂ ತಾಲ್ಲೂಕಾ ಮಟ್ಟದಲ್ಲಿ ಐಕ್ಯತಾ ಸಮಿತಿಗಳನ್ನು ಸ್ಥಾಪಿಸಿದೆ.

2) ಅಲ್ಪ ಸಂಖ್ಯಾತರ ಹಿತರಕ್ಷಣೆಗಾಗಿ 15 ಅಂಶಗಳ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ.

3) ಅಲ್ಪ ಸಂಖ್ಯಾತರ ಆಯೋಗವು ಅವರ ಸಮಸ್ಯೆಗಳನ್ನು ಗುರುತಿಸಿ, ಪರಿಹಾರ ಸೂಚಿಸುವುದು.

4) ಅಲ್ಪ ಸಂಖ್ಯಾತರ ಆರ್ಥಿಕ ಅಭಿವೃದ್ಧಿ ಕ್ರಮಗಳು.

5) ಇತ್ತೀಚಿನ ಮತೀಯ ಗಲಭೆಗಳ ಹಿನ್ನಲೆಯಲ್ಲಿ ದಿನಾಂಕ: 25–1–93ರಿಂದ 30–1–93ರವರೆಗೆ ಕೋಮು ಸೌಹಾರ್ದ ಸಪ್ತಾಹ ಆಚರಿಸಿ ಅನೇಕ ವಿಧಾಯಕ ಕಾರ್ಯಕ್ರಮವನ್ನು ನಡೆಸಲಾಯಿತು.

ಇ) ಹೌದು

ಈ) 2749

ಉ) ಇಲ್ಲಿಯವರೆಗೆ, ರೂ. 2,28,65,900–00 ಗಳನ್ನು ನೀಡಲಾಗಿದೆ. ಮೃತಪಟ್ಟ ವ್ಯಕ್ತಿಗಳ ಸಂಬಂಧಿತರಿಗೆ ತಲಾ ಒಂದು ಲಕ್ಷ ರೂಪಾಯಿಗಳ ಹೆಚ್ಚುವರಿ ಪರಿಹಾರ ಧನ ನೀಡಲು ಆದೇಶಿಸಲಾಗಿದೆ.

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿನ ನೌಕರರ ಸಂಖ್ಯೆ

202 (905) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿರವ ನೌಕರರ ಸಂಖ್ಯೆ ಎಷ್ಟು ? ಪ್ರೋರೇಟಾ ಆಧಾರದ ಮೇಲೆ ಬೇಕಾಗಿರುವ ಸಿಬ್ಬಂದಿ ಎಷ್ಟು; ಸಿಬ್ಬಂದಿ ನೇಮಕ ಮಾಡದಿರಲು ಕಾರಣಗಳೇನು;

ಆ) ಈ ಇಲಾಖೆಯಲ್ಲಿ ಕಂಪ್ಯೂಟರೀಕರಣವನ್ನು ಪ್ರಾಯೋಗಿಕವಾಗಿ ಅಳವಡಿಸಿ ವಿಫಲವಾಗಿರುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ, ಕೊರತೆ ಇರುವ ಸಿಬ್ಬಂದಿಯನ್ನು ಕೂಡಲೇ ಭರ್ತಿ ಮಾಡಲು ಸರ್ಕಾರದವರು ಕ್ರಮ ಕೈಕೊಳ್ಳುವರೆ ?

ಶ್ರೀ ರಾಮಲಿಂಗಾ ರೆಡ್ಡಿ (ಹಣಕಾಸಿನ ರಾಜ್ಯ ಸಚಿವರು):–

ದಿನಾಂಕ 31–1–1993ರಲ್ಲಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ 891 ನೌಕರರು: ಅಧಿಕಾರಿಗಳ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ)ಯು ಕಾರ್ಯಾಧ್ಯಯನ ವರದಿಯಲ್ಲಿ 265 ಹೆಚ್ಚಿನ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲು ಶಿಫಾರಸ್ಸು ಮಾಡಿರುತ್ತೆ. ವಿಮಾ ಇಲಾಖೆಯಲ್ಲಿ ಗಣಕೀಕರಣ ಮಾಡಿದರೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಶಿಫಾರಸ್ಸು ಮಾಡಿರುವ ಹುದ್ದೆಗಳ ಅಗತ್ಯತೆ ಇಲ್ಲ. ಈ

ಕಾರಣ, ಇಲಾಖೆಯಲ್ಲಿ ಗಣಕೀಕರಣವನ್ನು ಅಳವಡಿಸುವ ಬಗ್ಗೆ ಉದ್ದೇಶಿಸಿದ್ದು, ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಬೆಂಗಳೂರು ನಗರ ಗ್ರಾಹಕ ಹಿತರಕ್ಷಣ ವೇದಿಕೆಯಲ್ಲಿ ಸ್ವೀಕೃತವಾಗಿರುವ ದೂರುಗಳ ಸಂಖ್ಯೆ

183 (1013) ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):-

ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992ರ ಡಿಸೆಂಬರ್ ಅಂತ್ಯದವರೆಗೆ ಬೆಂಗಳೂರು ನಗರ ಗ್ರಾಹಕ ಹಿತರಕ್ಷಣ ವೇದಿಕೆಯಲ್ಲಿ ಸ್ವೀಕೃತವಾಗಿರುವ ಒಟ್ಟು ದೂರುಗಳ ಸಂಖ್ಯೆ ಎಷ್ಟು;

ಆ) ಬೆಂಗಳೂರು ನಗರದಲ್ಲಿ ಹೆಚ್ಚಿನ ಒತ್ತಡವಿರುವುದರಿಂದ, ಹೆಚ್ಚುವರಿ ಗ್ರಾಹಕ ಹಿತರಕ್ಷಣಾ ವೇದಿಕೆಯನ್ನು ಸ್ಥಾಪಿಸುವ ಪ್ರಸ್ತಾವನೆ ಏನಾದರೂ ಇದೆಯೆ;

ಇ) ಹಾಗಿದ್ದಲ್ಲಿ ಸಂಬಂಧಿಸಿದ ಕಾಯಿದೆಯನ್ನು ತಿದ್ದುಪಡಿ ಮಾಡಲು ಹಾಗೂ ಹೆಚ್ಚುವರಿ ವೇದಿಕೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಅನುಮತಿಗಾಗಿ ಕೇಂದ್ರ ಸರ್ಕಾರಕ್ಕೆ ಬರಲಾಗಿದೆಯೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ) 8,349

ಆ) ಬೆಂಗಳೂರಿನಲ್ಲಿ ಹೆಚ್ಚುವರಿ ವೇದಿಕೆಯನ್ನು ಸ್ಥಾಪಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

ಇ) ಉದ್ಭವಿಸುವುದಿಲ್ಲ.

ಡಾ।। ರೋರಿಚ್ ತಾತಗುಣಿ ಎಸ್ಟೇಟ್

185 (1012) ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ):-

ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಡಾ।। ರೋರಿಚ್ ತಾತಗುಣಿ ಎಸ್ಟೇಟನ್ನು ವಶಕ್ಕೆ ತೆಗೆದುಕೊಂಡು ರಾಷ್ಟ್ರೀಯ ಕಲೆ ಮತ್ತು ಸಂಸ್ಕೃತಿ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆ ಇದೆಯೆ;

ಆ) ಹಾಗಿದ್ದಲ್ಲಿ ಸಿಗುವ ಭೂ ವಿಸ್ತೀರ್ಣವೆಷ್ಟು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):-

ಅ) ಅಂತಹ ಪ್ರಸ್ತಾವನೆ ಈ ಇಲಾಖೆಯ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಸಂಗೀತ ಕಲಾವಿದರ ಮಾಶಾಸನ

200 (1051) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮಾಶಾಸನವನ್ನು ಪಡೆಯುತ್ತಿರುವ ಸಾಹಿತಿ ಕಲಾವಿದರುಗಳ ಸಂಖ್ಯೆ ಎಷ್ಟು ?

ಆ) ಮಾಸಾಶನಕ್ಕಾಗಿ ಕೋರಿ ಬಂದಿರುವ ಅರ್ಜಿಗಳಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಸಂಖ್ಯೆ ಎಷ್ಟು;

ಇ) ಅವುಗಳನ್ನು ಯಾವಾಗ ಇತ್ಯರ್ಥ ಮಾಡಲಾಗುವುದು;

ಈ) ಮಾಸಾಶನವನ್ನು ಹೆಚ್ಚಿಸುವ ಉದ್ದೇಶವು ಸರ್ಕಾರಕ್ಕಿದೆಯೇ;

ಉ) ಮಾಗಡಿ ತಾಲ್ಲೂಕಿನಿಂದ ಮಾಸಾಶನ ಕೋರಿ ಬಂದಿರುವ ಅರ್ಜಿಗಳೆಷ್ಟು ಮತ್ತು ಹಾಲಿ ಮಾಸಾಶನ ಪಡೆಯುತ್ತಿರುವವರ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು):–

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):–

ಅ) 3771

ಆ) 1279

ಇ) ಮಿತವ್ಯಯ ಕ್ರಮವನ್ನು ಸಡಿಲಗೊಳಿಸಿದ ನಂತರ ಇತ್ಯರ್ಥಗೊಳಿಸಲು ಕ್ರಮ ತೆಗೆದುಕೊಳ್ಳುವುದು.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಮಾಗಡಿ ತಾಲ್ಲೂಕಿನಿಂದ ಮಾಸಾಶನ ಕೋರಿ ಬಂದಿರುವ ಅರ್ಜಿಗಳು : 13

ಮಾಸಾಶನ ಪಡೆಯುತ್ತಿರುವವರ ಸಂಖ್ಯೆ : 18

(ವಿಮೆಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಅನುಬಂಧ

1. ಹೆಚ್.ವಿ. ವೆಂಕಟಪ್ಪ
ಪರಂಗಿ ಚಿಕ್ಕಣ್ಣ ಪಾಳ್ಯ
ಮಾಗಡಿ ತಾಲ್ಲೂಕು

2. ಕೆ.ಎಸ್. ಮಹಾದೇವ ಶಾಸ್ತ್ರಿ
ಕೋರಮಂಗಲ, ಚಕ್ರಬಾವಿ ಅಂಚೆ
ಮದಬಾಲಹೋಬಳಿ,
ಮಾಗಡಿ ತಾಲ್ಲೂಕು

3. ಮರಿಮೋಹನಾಚಾರ್,
ಮನಿಗಾನಹಳ್ಳಿ,
ಸೋಲುರು ಹೋಬಳಿ,
ಮಾಗಡಿ ತಾಲ್ಲೂಕು

4. ಗುಡ್ಡಯ್ಯ,
ಮಡಿಗೊಂಡನಹಳ್ಳಿ,
ಮಾಗಡಿ ತಾಲ್ಲೂಕು

5. ಸಂಜೀವಯ್ಯ,
ಮಡಬಾಳು ಅಂಚೆ,
ಮಾಗಡಿ ತಾಲ್ಲೂಕು

6. ಶರಬಾಚಾರ್
ಮಾಣಿಗನಹಳ್ಳಿ,
ಮಾಗಡಿ ತಾಲ್ಲೂಕು

7. ರಾಮಕೃಷ್ಣಯ್ಯ
ಚಕ್ರಭಾವಿ,
ಮಾಗಡಿ ತಾಲ್ಲೂಕು,

8. ರಾಮಯ್ಯ
ಚಕ್ರಭಾವಿ,
ಮಾಗಡಿ ತಾಲ್ಲೂಕು

9. ನರಸಿಂಹಯ್ಯ ಮಡಿವಾಳರ,
ತೂಬಿನಕೆರೆ,
ಕೆಂಪಸಾಗರ ಅಂಚೆ,
ಮಾಗಡಿ ತಾಲ್ಲೂಕು

10. ಚಿಕ್ಕಬೋರಯ್ಯ,
ಕೊಂಡಹಳ್ಳಿ ಗ್ರಾಮ,
ಮಾಗಡಿ ತಾಲ್ಲೂಕು

11. ನರಸಿಂಹರಂಗಯ್ಯ,
ಚಾಚನಹಳ್ಳಿ ಅಂಚೆ,
ಕಲ್ಲೂರು ಕಸಬಾ ಹೋಬಳಿ,
ಮಾಗಡಿ ತಾಲ್ಲೂಕು

12. ಎಂ.ವಿ. ನರಸಿಂಹಾಚಾರ್ಯ,
ಮರಿಗೊಂಡನ ಹಳ್ಳಿ,
ಮಾಗಡಿ ತಾಲ್ಲೂಕು

13. ಪುಟ್ಟಯ್ಯ,
ಕಲ್ಲದೇವನ ಹಳ್ಳಿ,
ಚಕ್ರಭಾವಿ ಅಂಚೆ,
ಮಡಬಾಳ ಹೋಬಳಿ,
ಮಾಗಡಿ ತಾಲ್ಲೂಕು

14. ಕೆ.ಸಿ. ಗಂಗಪ್ಪ
ಗುಂಡಿಗೆರೆ,
ಕುದೂರು ಹೋಬಳಿ,
ಮಾಗಡಿ ತಾಲ್ಲೂಕು

15. ಹೆಚ್.ಬಿ. ಗಂಗನರಸಯ್ಯ
ಹೊನಾಪುರ,
ಮಾಗಡಿ ತಾಲ್ಲೂಕು

16. ತಬಲ ನರಸಿಂಹಯ್ಯ
ಕಲಾಗೇಟ್,
ಮಾಗಡಿ ಟೌನ್

17. ಲಕ್ಷ್ಮಿ ನರಸಿಂಹಯ್ಯ
ಬಿನ್ ಲೇಟ್ ನರಸಯ್ಯ,
ಚೋಳನಾಯ್ಕನ ಹಳ್ಳಿ,
ಮಾಗಡಿ ತಾಲ್ಲೂಕು

18. ಗಂಗಪ್ಪ,
ಸಿದಗನಹರ್ಕಿ ಅಂಚೆ,
ಕಸಬಾ ಹೋಬಳಿ,
ಮಾಗಡಿ ತಾಲ್ಲೂಕು

ರಾಜ್ಯದ ಸಿಬ್ಬಂದಿ ವರ್ಗದ ವಿವರ

188 (1079 ಎ) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದಲ್ಲಿನ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು ಹಾಗೂ ಅವುಗಳ ದರ್ಜೆಗಳ ವಿವರ ಏನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ದಿನಾಂಕ 1-04-1992ರಲ್ಲಿರುವಂತೆ:-

5,63,210

ವಿವರಗಳು:

ಗ್ರೂಪ್ - ಎ - 69,360
ಗ್ರೂಪ್ - ಬಿ - 25,954
ಗ್ರೂಪ್ - ಸಿ - 3,59,769
ಗ್ರೂಪ್ - ಡಿ - 1,08,127

ಚಾಮರಾಜನಗರಕ್ಕೆ ಹೆಚ್ಚಿನ ಬಸ್‌ಗಳು

1090 (1076) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರಕ್ಕೆ ಬೆಂಗಳೂರು ಮತ್ತು ಮೈಸೂರುಗಳಿಂದ ಹೆಚ್ಚಿನ ಬಸ್‌ಗಳನ್ನು ಓಡಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ) ಚಾಮರಾಜನಗರವು ರಾಷ್ಟ್ರೀಕೃತವಾಗದ ಪ್ರದೇಶದಲ್ಲಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಟ್ಟು 31 ಟ್ರಿಪ್‌ಗಳನ್ನು ಮೈಸೂರಿನಿಂದಲೂ 20 ಟ್ರಿಪ್‌ಗಳನ್ನು ಮೈಸೂರಿನಿಂದಲೂ ಚಾಮರಾಜನಗರಕ್ಕೆ ಕಾರ್ಯಾಚರಣೆ ನಡೆಸುತ್ತಿದೆ.

ಈ ಮೇಲಿನ ಸಾರಿಗೆಗಳು ಚಾಮರಾಜ ನಗರದ ಪ್ರಯಾಣಿಕರ ಬೇಡಿಕೆಗಳನ್ನು ತೃಪ್ತಿಕರವಾಗಿ ಪೂರೈಸುತ್ತಿದೆ.

ಸಾರಿಗೆ ಸಂಸ್ಥೆಯ ಚಾಲ್ತಿ ಬಸ್‌ಗಳ ಸಂಖ್ಯೆ

191 (1077) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿರುವ ರಸ್ತೆ ಸಾರಿಗೆ ಸಂಸ್ಥೆಯ ಚಾಲ್ತಿ ಬಸ್ಸುಗಳ ಸಂಖ್ಯೆ ಎಷ್ಟು, (ಅವುಗಳ ಜಿಲ್ಲಾವಾರು ಸಂಖ್ಯೆ ನೀಡುವುದು);

ಆ) ಅವುಗಳಲ್ಲಿ ಕೆಟ್ಟು ನಿಂತಿರುವ ಬಸ್ಸುಗಳು ಎಷ್ಟು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ದಿನಾಂಕ: 30–1–93 ಕ್ಕೆ ಸಂಸ್ಥೆಯ ವಿಭಾಗಗಳಲ್ಲಿ ಒಟ್ಟು 9371 ವಾಹನಗಳಿದ್ದು ಅವುಗಳಲ್ಲಿ ಚಾಲನೆಯಲ್ಲಿರುವ ವಾಹನಗಳು 8661. ವಿಭಾಗಾವಾರು ಸಂಖ್ಯೆ ಈ ಕೆಳಕಂಡಂತಿದೆ:–

ವಿಭಾಗಗಳು	
ಬೆಂಗಳೂರು (ಕೇಂದ್ರ)	501
ಬೆಂಗಳೂರು (ಗ್ರಾಮಾಂತರ)	281
ಕೋಲಾರ	487
ಮೈಸೂರು	603
ಹಾಸನ	469
ಮಂಗಳೂರು	420
ಹುಬ್ಬಳ್ಳಿ	559
ಗದಗ	342
ದಾವಣಗೆರೆ	312
ಉತ್ತರ ಕನ್ನಡ, ಸಿರ್ಸಿ	422
ಬೆಳಗಾವಿ	750
ವಿಜಾಪುರ	417
ಬಾಗಲಕೋಟೆ	278
ಗುಲ್ಬರ್ಗ	359
ಬೀದರ್	261
ರಾಯಚೂರು	302
ಬಳ್ಳಾರಿ	363
ಬೆಂಗಳೂರು ನಗರ ಸಾರಿಗೆ (ಉತ್ತರ)	753
ಬೆಂಗಳೂರು ನಗರ ಸಾರಿಗೆ (ದಕ್ಷಿಣ)	792
ಒಟ್ಟು	8661

ಆ) ಒಟ್ಟು 710 ವಾಹನಗಳು ಚಾಲನೆಯಲ್ಲಿರುವುದಿಲ್ಲ ಅವುಗಳು ನಿಯತಕಾಲಿಕ ಸುಧಾರಣೆ ಅರ್ಹತಾ ಪತ್ರ ನವೀಕರಣ ಹಾಗೂ ವಿವಿಧ ದುರಸ್ತಿ ಹಂತಗಳಲ್ಲಿದ್ದು ಚಾಲನೆಯಲ್ಲಿರುವುದಿಲ್ಲ.

ರಾಜ್ಯದಲ್ಲಿ ರಾಷ್ಟ್ರೀಕರಣಗೊಳಿಸಲಾದ ಮಾರ್ಗಗಳ ವಿವರ

215 (655) ಶ್ರೀ ನಾರಾಯಣರಾವ್ ಮನ್ನಳ್ಳಿ (ಬಿದರ್) ಮತ್ತು ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):–

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸಲಾಗಿದೆ. (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು);

ಆ) ರಾಷ್ಟ್ರೀಕರಣಗೊಳಿಸಿದ ಯಾವ ಯಾವ ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳನ್ನು ಓಡಿಸಲು ಅನುಮತಿ ನೀಡಲಾಗಿದೆ;

ಇ) ಬೀದರ್ ಜಿಲ್ಲೆಯಲ್ಲಿ ಯಾವ ಯಾವ ಮಾರ್ಗಗಳಲ್ಲಿ ಖಾಸಗಿ ಬಸ್ಸು ಸಂಚಾರಕ್ಕೆ ಅನುಮತಿ ನೀಡಲಾಗಿದೆ;

ಈ) ಹಾಗಿಲ್ಲದಿದ್ದಲ್ಲಿ ಈಗ ಅನುಮತಿ ನೀಡಲಾಗುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

(ಕ.ರಾ.ರ.ಸಾ.ಸಂ. ವಿಭಾಗ)

ಜಿಲ್ಲೆ	ಮಾರ್ಗಗಳ ಸಂಖ್ಯೆ
1. ಬೆಳಗಾವಿ	175
2. ಉತ್ತರ ಕನ್ನಡ	55
3. ಧಾರವಾಡ	115
4. ಬಿಜಾಪುರ	173
5. ಬಳ್ಳಾರಿ	86
6. ಗುಲ್ಬರ್ಗ	194
7. ಹಾಸನ	98
8. ರಾಯಚೂರು	174
9. ಬೀದರ್	82
10. ಶಿವಮೊಗ್ಗ	48
11. ದಕ್ಷಿಣ ಕನ್ನಡ	31
12. ಚಿತ್ರದುರ್ಗ	1
13. ಮೈಸೂರು	64
14. ಕೋಲಾರ	87
15. ಬೆಂಗಳೂರು (ಗ್ರಾ)	57
16. ಬೆಂಗಳೂರು (ನ) ಆನೇಕಲ್	14

ಆ) ಅಂತರ ರಾಜ್ಯಗಳ ಮಾರ್ಗದ ಮೇಲೆ ಸ್ಕೀಂನಲ್ಲಿ ಹೊರತುಪಡಿಸಿರುವ ಖಾಸಗೀಯವರನ್ನು ಬಿಟ್ಟು ರಾಷ್ಟ್ರೀಕರಿಸಲಾದ ಮಾರ್ಗಗಳ ಮೇಲೆ ಯಾವುದೇ ಖಾಸಗೀ ಮಾಲೀಕರ ವಾಹನಗಳು ಓಡಾಡುವಂತಿಲ್ಲ.

ಬೀದರ್ ಒಂದು ಪೂರ್ತಿಯಾಗಿ ರಾಷ್ಟ್ರೀಕರಿಸಲಾದ ಜಿಲ್ಲೆಯಾಗಿದೆ ಮತ್ತು ಯಾವುದೇ ಖಾಸಗೀಯವರ ವಾಹನ ಓಡಾಟ ನಡೆಸುವಂತಿಲ್ಲ.

ಈ) ಇಲ್ಲಾ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಸ್ವಾಧೀನಪಡಿಸಿಕೊಂಡ ವಿವರ

206 (708) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):-

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ..........

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಷ್ಟು ಎಕರೆ ಜಮೀನುಗಳನ್ನು ವಶಪಡಿಸಿಕೊಳ್ಳಲು ಅಧಿಸೂಚನೆಯನ್ನು ಹೊರಡಿಸಿರುವುದು;

ಆ) ಕಳೆದ ಮೂರು ವರ್ಷಗಳಿಂದ ಅಧಿಸೂಚನೆ ಹೊರಡಿಸಿದ್ದ ಜಮೀನುಗಳು ಬಿಡುಗಡೆಗಾಗಿ ಮರು ಸೂಚನೆ (ಡೀನೋಟಿಫಿಕೇಷನ್) ಮಾಡಿರುವ ಎಕರೆಗಳೆಷ್ಟು;

ಇ) ಡೀನೋಟಿಫಿಕೇಷನ್‌ಗೆ ಕಾರಣಗಳೇನು;

ಈ) ಡೀನೋಟಿಫಿಕೇಷನ್ ಮಾಡುವ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಉ) ಹಾಗಿದ್ದಲ್ಲಿ ಅವರ ಮೇಲೆ ತೆಗೆದುಕೊಂಡ ಶಿಸ್ತಿನ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) 1976ರಿಂದ 27,863 ಎಕರೆ 28 ಗುಂಟೆ ಜಮೀನನ್ನು ಅಧಿಸೂಚನೆಗೊಳಿಸಲಾಗಿದೆ.

ಆ) 130 ಎರೆ 39 ಗುಂಟೆ

ಇ) ಕಾರಣಗಳು ಈ ಕೆಳಕಂಡಂತೆ ಇರುತ್ತವೆ:–

1. ಜಮೀನು ಪೂರ್ತಾ ಕಟ್ಟಡಗಳು (ಕೆಲವೊಮ್ಮೆ ಅನಧಿಕೃತವಾಗಿ) ಬಂದಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಬಡಾವಣೆ ನಿರ್ಮಿಸಲು ಕಷ್ಟವಾಗಿರುವುದು.
2. ಈ ಜಮೀನು ಆಸ್ಪತ್ರೆ, ಶಾಲೆ ಮುಂತಾದ ಜನೋಪಯೋಗಿ ಕಾರ್ಯಗಳಿಗಾಗಿ ಬೇಕಾಗಿರುವುದು.
3. ಜಮೀನು ತೋಟಗಾರಿಕೆಗಾಗಿ ಉಪಯೋಗಿಸುತ್ತಿರುವುದು.
4. ಸಮೂಹ ಗೃಹ ನಿರ್ಮಾಣ ಯೋಜನೆಗಾಗಿ ಜಮೀನನ್ನು ಕೈ ಬಿಟ್ಟಿರುವುದು.

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ ಮೀಸಲಾತಿ ನಿಯಮಗಳನ್ನು ಪಾಲಿಸದಿರುವುದು

197 (1140) ಶ್ರೀಮತಿ ಮೋಟಮ್ಮ (ಮೂಡಿಗೆರೆ):–

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಬರುವ ಎಲ್ಲಾ ನಿಗಮ ಮಂಡಳಿಗಳನ್ನೊಳಗೊಂಡು ರೋಸ್ಟರ್ ಪದ್ಧತಿಯನ್ನು ಅನುಷ್ಠಾನಕ್ಕೆ ತರಲಾಗಿದೆಯೇ (ಪೂರ್ಣ ವಿವರಗಳನ್ನು ನೀಡುವುದು);

2. ಹಾಗಿದ್ದಲ್ಲಿ, ಸದರಿ ನಿಯಮದ ಅಡಿಯಲ್ಲಿ ಮುಂಬಡ್ತಿ ನೀಡಲಾಗಿರುವುದೇ;

3. ಈ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಒಟ್ಟು ಸಂಖ್ಯೆ ಎಷ್ಟು (ಹುದ್ದೆವಾರು ಇಲಾಖಾವಾರು–) ಮಾಹಿತಿಯನ್ನು ನೀಡುವುದು;

4. ಈ ಇಲಾಖೆಯಲ್ಲಿ ಹಿಂಬಾಕಿ (ಬ್ಯಾಕಲಾಗ್) ಹುದ್ದೆಗಳಾವುವು;

5. ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕಾರ್ಯಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಹೌದು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹೌದು

ಇ) ಅಧಿಕಾರಿಗಳ ನೌಕರರ ಸಂಖ್ಯೆ

ಗ್ರೂಪ್ ಎ	– 33
ಗ್ರೂಪ್ ಬಿ	– 36
ಗ್ರೂಪ್ ಸಿ	– 925
ಗ್ರೂಪ್ ಡಿ	– 511
ಒಟ್ಟು	1505

4.	ಪ.ಜಾತಿ	ಪ. ಪಂಗಡ
ಹಿರಿಯ ಸಹಾಯಕರು	2	1
ಕಛೇರಿಯ ವ್ಯವಸ್ಥಾಪಕರು	1	0
ಸಹಾಯಕ ವ್ಯವಸ್ಥಾಪಕರು	1	2
ಜಿಲ್ಲಾ ವ್ಯವಸ್ಥಾಪಕರು	0	1

5. ಈ ಬ್ಯಾಕಲಾಗನ್ನು ಈಗ ಖಾಲಿ ಇರುವ ಹಾಗೂ ಇನ್ನು ಮುಂದೆ ಖಾಲಿ ಬೀಳುವ ಹುದ್ದೆಗಳನ್ನು ತುಂಬುವಾಗ ಗಮನದಲ್ಲಿರಿಸಿ ಭರ್ತಿ ಮಾಡಬೇಕೆಂದು ನಿರ್ದೇಶನ ನೀಡಲಾಗಿದೆ.

ANNEXURE

Statement showing the total number of promotions to the cadre of Senior Assistant, Office Manager, Assistant Manager and District Manager in the Karnataka Food and Civil Supplies Corporation Ltd., and backlog of promotional vacancies for SC and ST.

Sl. No.	Cadre	Total No. of promotions	Quota earmarked for		Quota actually filled		Backlog Short-fall	
			SC	ST	SC	ST	SC	ST
1.	Senior Asst.	121	19	04	17	03	02	01
2.	Office Manager	133	21	04	24	05	01	00
3.	Assistant Manager	41	07	02	06	00	01	02
4.	District Manager	25	04	01	04	00	00	01

ಮಹಿಳೆಯರಿಗೆ ಶೇಕಡ 30 ಹುದ್ದೆಗಳನ್ನು ನೇಮಕಾತಿಗಳಲ್ಲಿ ಮೀಸಲು

198 (618) ಶ್ರೀಮತಿ ಮೋಟಮ್ಮ (ಮೂಡಿಗೆರೆ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ನೇಮಕಾತಿಗಳಲ್ಲಿ ಶೇಕಡ 30ರಷ್ಟು ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡುವುದರ ಸಂಬಂಧದಲ್ಲಿ ಸರ್ಕಾರದ ಆದೇಶದ ಹೊರಡಿಸಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಇದುವರೆವಿಗೂ ಯಾವ ಯಾವ ಇಲಾಖೆಗಳಲ್ಲಿ ಈ ಆದೇಶವನ್ನು ಅನುಷ್ಠಾನಕ್ಕೆ ತರಲಾಗಿದೆ (ಪೂರ್ಣ ವಿವರಗಳನ್ನೊದಗಿಸುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಸರ್ಕಾರಿ ನೇಮಕಾತಿಯಲ್ಲಿ ಶೇಕಡ 30ರಷ್ಟು ರಿಕ್ತ ಸ್ಥಾನವನ್ನು ಮಹಿಳೆಯರಿಗಾಗಿ ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ.

ಆ) ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರುವ ವಿಷಯ ಪರಿಶೀಲಿಸಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ

ವಿವಿಧ ಸಚಿವರುಗಳ ಆಪ್ತ ಶಾಖೆಗಳಲ್ಲಿ ಓಓಡಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರ ಬಗ್ಗೆ

214 (656) ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ವಿವಿಧ ಸಚಿವರುಗಳ ಆಪ್ತ ಶಾಖೆಗಳಲ್ಲಿ ಓಓಡಿ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಸರ್ಕಾರದ ಮಂಡಳಿ: ನಿಗಮಗಳ ನೌಕರರುಗಳ ಸಂಖ್ಯೆ (ಹೆಸರು, ಅವರ ಪದನಾಮಗಳು ಇತ್ಯಾದಿಗಳನ್ನು ನೀಡುವುದು);

2. ಪ್ರತಿಯೊಂದು ಸಚಿವರ ಆಪ್ತ ಶಾಖೆಗಳಿಗೆ ನೀಡಲಾಗಿರುವ ಕ್ರಮಬದ್ಧ ನೌಕರರ ಸಂಖ್ಯೆ;

3. ಸರ್ಕಾರದ ಇಲಾಖೆ: ಮಂಡಳಿ: ನಿಗಮಗಳ ನೌಕರರನ್ನು ಸಚಿವರ ಆಪ್ತಶಾಖೆಗಳಿಗೆ ಓಓಡಿ ಆಧಾರದ ಮೇಲೆ ಕಳುಹಿಸುವುದರಿಂದ ಅವುಗಳ ಕೆಲಸದ ಮೇಲೆ ಕಳುಹಿಸವುದರಿಂದ ಅವುಗಳ ಕೆಲಸದ ಮೇಲೆ ಪರಿಣಾಮ ಬೀರುವುದಿಲ್ಲವೇ;

4. ವಾರ್ತಾ, ಕಂದಾಯ, ಪೊಲೀಸ್ ಇಲಾಖೆಗಳ ಹಲವು ಸರ್ಕಾರಿ ನೌಕರರು ತಮ್ಮ ಇಲಾಖೆಗಳಿಗೆ ಸಂಬಂಧವಿಲ್ಲದ ಸಚಿವರ ಹತ್ತಿರ ಓಓಡಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

5. ಸಚಿವರುಗಳಿಗೆ ಈಗಾಗಲೇ ಸಾಕಷ್ಟು ಸಿಬ್ಬಂದಿಯನ್ನು ನೀಡಲಾಗಿರುವುದರಿಂದ ಎಲ್ಲಾ ಸರ್ಕಾರಿ ನೌಕರರನ್ನು ಅವರವರ ಇಲಾಖೆ: ಮಂಡಳಿ: ನಿಗಮಳಿಗೆ ಹಿಂದಿರುಗಿಸಲು ಸರಕಾರವು ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

1. ಗ್ರೂಪ್ 'ಬಿ' – 1
ಗ್ರೂಪ್ 'ಸಿ' – 43
ಡ್ರೈವರ್ಸ್ – 11
ಗ್ರೂಪ್ 'ಡಿ' – 27

(ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

2. ಮುಖ್ಯಮಂತ್ರಿಯವರ ಕಾರ್ಯಾಲಯ

ಗ್ರೂಪ್ 'ಎ' ಅಧಿಕಾರಿಗಳು	– 11
ಗ್ರೂಪ್ 'ಬಿ' ಅಧಿಕಾರಿಗಳು	– 09
ಗ್ರೂಪ್ 'ಸಿ' ನೌಕರರು	– 71
ಡ್ರೈವರ್ಸ್	– 03
ಗ್ರೂಪ್ 'ಡಿ' ನೌಕರರು	– 32

ಸಚಿವರುಗಳ ಆಪ್ತಶಾಖೆ

(ಸಂಪುಟ ದರ್ಜೆ ಹಾಗೂ ರಾಜ್ಯಸಚಿವರು)

ಆಪ್ತ ಕಾರ್ಯದರ್ಶಿ – 1

ಆಪ್ತ ಸಹಾಯಕರು – 5 (ಒಬ್ಬರು ಕನ್ನಡ ಶೀಘ್ರಲಿಪಿಗಾರರನ್ನು ಸೇರಿಸಿದಂತೆ)

ಡ್ರೈವರ್ಸ್ – 2

ಗರೂಪ್ 'ಡಿ' ನೌಕರರು 4

3. ಇಲ್ಲ

4. ಇಲ್ಲ

5. ಉದ್ಭವಿಸುವುದಿಲ್ಲ

ಅನುಬಂಧ

ಮುಖ್ಯಮಂತ್ರಿಯವರ ಕಾರ್ಯಾಲಯ ಮತ್ತು ಸಚಿವರ ಆಪ್ತ ಶಾಖೆಗಳಲ್ಲಿ ಓ.ಓ.ಡಿ. ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರುಗಳು

ಕ್ರ. ಸಂ.	ಮುಖ್ಯಮಂತ್ರಿಯವರ ಕಾರ್ಯಾಲಯ: ಸಚಿವರ ಆಪ್ತ ಶಾಖೆಗಳು	ಓ.ಓ.ಡಿ. ಆಧಾರದ ಮೇಲೆ ಕಾರ್ಯನ ನಿರ್ವಹಿಸುತ್ತಿರುವ ನೌಕರರ ವಿವರಗಳು		
		ಹೆಸರು	ಪದನಾಮ	ಇಲಾಖೆ:ಮಂಡಳಿ:ನಿಗಮಗಳು
1	2	3	4	5
		ಶ್ರಿ/ಶ್ರೀಮತಿ:-		
1.	ಮುಖ್ಯಮಂತ್ರಿಯವರ ಕಾರ್ಯಾಲಯ	1. ರಮೇಶ್ ಬಗ್ಗಾನ್	ಸಹಾಯಕ	ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
		2. ಕೆ. ರವಿಚಂದರ್	ಶೀಘ್ರಲಿಪಿಗಾರ	,,
		3. ಪುಟ್ಟವೀರಯ್ಯ	ಕಿರಿಯ ಸಹಾಯಕ	,,
		4. ಹೆಚ್. ಶಿವಕುಮಾರಸ್ವಾಮಿ	ಶೀಘ್ರಲಿಪಿಗಾರ	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
		5. ವಿಜಯಕುಮಾರ್	ಬೆರಳಚ್ಚುಗಾರ	ಲೋಕೋಪಯೋಗಿ ಇಲಾಖೆ (ಕಟ್ಟಡಗಳು)
		6. ನಾರಾಯಣರಾವ್	,,	ಸಾರ್ವಜನಿಕ ಶಿಕ್ಷಣ ಇಲಾಖೆ
		7. ಅನ್ನಪೂರ್ಣ	ಟೆಲಿಫೋನ್ ಆಪರೇಟರ್	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ)
		8. ಭುವನೇಶ್	ಡ್ರೈವರ್	ಕುಮಾರಕೃಪ ಅತಿಥಿ ಗೃಹ
		9. ರಾಮಯ್ಯ	,,	,,
		10. ವೆಂಕಟೇಶ್	,,	,,
		11. ನಾರಾಯಣ	,,	,,
		12. ಲಂಬುಲಮ್ಮಾಣಿ	,,	,,
		13. ಆರ್.ಆರ್. ನಾಡಗೌಡ	,,	ವೃತ್ತಿ ಶಿಕ್ಷಣ ಇಲಾಖೆ (ನಿರ್ದೇಶನಾಲಯ)

		14. ಜಾರ್ಜ್ ದಾಸ್	”	ಉಪ ಆಯುಕ್ತರು (ಪೊಲೀಸ್) ಸಿ.ಎ.ಆರ್. (ಕೇಂದ್ರ ಸ್ಥಾನ) ಬೆಂಗಳೂರು
		15. ಜಯಕುಮಾರ್	”	”
		16. ಲಕ್ಷ್ಮೀನಾರಾಯಣ	”	”
		17. ಕೆ. ತಿಮ್ಮಯ್ಯ (ಹೆಚ್.ಸಿ.)	ಮೋಟಾರ್ ಸೈಕಲ್ ಮೆಸೆಂಜರ್	
ಅ) ಬೆಳಗಾವಿ ಜಿಲ್ಲೆಯಲ್ಲಿ ಮಲಪ್ರಭಾ ಯೋಜನೆಯಡಿಯಲ್ಲಿ ಮುಳುಗಡೆಯಾದ ಪುನರ್ವಸತಿ ತಾಲ್ಲೂಕುಗಳಾದ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಒಳಚರಂಡಿ ಯೋಜನೆ ಕೈಗೊಳ್ಳಬೇಕೆಂದು ಪರಿಸರ ಸಚಿವರಾದ ಮಾನ್ಯ ದಿ. ಶ್ರೀ ಬಸವಲಿಂಗಪ್ಪನವರು ಕ್ರ.ಸ.ಎನ್. ಇಇಎಂಎಲ್ಎ 25/91–92 ದಿನಾಂಕ 23–3–92ರಂದು ಕಾರ್ಯದರ್ಶಿ ನೀರಾವರಿ ಇಲಾಖೆ, ಬೆಂಗಳೂರು ಹಾಗೂ ನೀರಾವರಿ ಇಲಾಖೆ, ಬೆಂಗಳೂರು ಹಾಗೂ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ ಉತ್ತರವಲಯ (ಮಲಪ್ರಭಾ ಪ್ರಾಜೆಕ್ಟ್, ಬೆಳಗಾವಿ) ಇವರಿಗೆ ಆದೇಶ ನೀಡಿದ ಸಂಗತಿ ನಿಜವೇ ಹಾಗಿದ್ದಲ್ಲಿ ಮಾನ್ಯ ಸಚಿವರ ಆದೇಶದ ಪ್ರಕಾರ ಒಳಚರಂಡಿ ಯೋಜನೆ ಕೈಗೊಳ್ಳಲು ಸರ್ಕಾರದವರು ಕೈಗೊಂಡ ಕ್ರಮಗಳಾವುವು;

ಆ) ಪುನಃ ಪರಿಸರ ಸಚಿವರಾದ ಮಾನ್ಯ ದಿ. ಶ್ರೀ ಬಸವಲಿಂಗಪ್ಪನವರು ದಿನಾಂಕ 8–9–92ರಂದು ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಒಳಚರಂಡಿ ಯೋಜನೆ ಕೈಗೊಳ್ಳಬೇಕೆಂದು ಹಾಗೂ ಒಳಚರಂಡಿ ಕೈಗೊಳ್ಳದೇ ಇದ್ದ ಕಾರಣ ನೀರಾವರಿ ಇಲಾಖೆ, ಕಾರ್ಯದರ್ಶಿಗಳು ಹಾಗೂ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಮಲಪ್ರಭಾ ಪ್ರಾಜೆಕ್ಟ್, ಬೆಳಗಾವಿ ಇವರ ಮೇಲೆ ಕಾಯ್ದೆ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಆದೇಶ ನೀಡಿದ ಸಂಗತಿ ನಿಜವೆ;

ಇ) ಹಾಗಿದ್ದಲ್ಲಿ, ಮಾನ್ಯ ಮಂತ್ರಿಗಳ ಆದೇಶದ ಪ್ರಕಾರ ನೀರಾವರಿ ಅಧಿಕಾರಿಗಳ ಮೇಲೆ ಒಳಚರಂಡಿ ಯೋಜನೆಯನ್ನು ಮಾಡದೇ ಇದ್ದ ಕಾರಣ ಇವರ ವಿರುದ್ಧ ಕೈಗೊಂಡ ಕ್ರಮಗಳಾವುವು;

ಈ) ದಿನಾಂಕ 12–1–93ರಂದು ನೀರಾವರಿ ಸಚಿವರುಗಳ ಪರವಾಗಿ ಕಂದಾಯ ಸಚಿವರು ವಿಧಾನ ಸಭೆಯಲ್ಲಿ ಶ್ರೀ ಶಿವಾನಂದ ಹೆಚ್. ಕೌಜಲಗಿ ಇವರು ಕೃಷ್ಣ ಪ್ರಾಜೆಕ್ಟ್ ದರ್ಜೆಯಲ್ಲಿ ಕೇಳಿದ ಪ್ರಶ್ನೆಗೆ

ಒಳಚರಂಡಿ ಯೋಜನೆ ಮಾಡುವುದಾಗಿ ಆಶ್ವಾಸನೆ ಕೊಟ್ಟ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಮಾನ್ಯ ಸಚಿವರ ಆಶ್ವಾಸನೆ ಪ್ರಕಾರ ಒಳಚರಂಡಿ ಯೋಜನೆ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳಾವುವು ?

ಶ್ರೀ ಎನ್.ಜಿ. ಹಾಲಪ್ಪ (ವಿಜ್ಞಾನ, ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿಯ ರಾಜ್ಯ ಸಚಿವರು):-

ಅ) ಹೌದು, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರಾಗಿದ್ದ ದಿವಂಗತ ಶ್ರೀ ಬಸವಲಿಂಗಪ್ಪನವರು ದಿನಾಂಕ 23-3-92ರ ಪತ್ರದಲ್ಲಿ ಆದೇಶಿಸಿದಂತೆ ಕಾರ್ಯದರ್ಶಿಗಳು, ನೀರಾವರಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ದಿನಾಂಕ 20-4-92ರಂದು ಒಂದು ದೀರ್ಘ ಪತ್ರ ಬರೆದು ಎಲ್ಲಾ ಅಗತ್ಯ ಕ್ರಮಗಳನ್ನು ಪರಿಸರ (ರಕ್ಷಣಾ ಕಾಯ್ದೆ) 1986 ಕಾಯ್ದೆ 3 ಮತ್ತು 5ರತ್ತ ಗಮನ ಸೆಳೆದು, ಅದರ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಕೋರಲಾಗಿತ್ತು. ನೀರಾವರಿ ಇಲಾಖೆಯು ಈಗಾಗಲೇ ಮುಖ್ಯ ಅಭಿಯಂತರು (ಉತ್ತರ) ಬೆಳಗಾವಿ ಇವರಿಗೆ ಪತ್ರ ಬರೆದು ಜಾಗ್ರತೆಯಾಗಿ ಒಂದು ವರದಿ ಕಳುಹಿಸಿಕೊಡಬೇಕೆಂದು ಈ ಇಲಾಖೆಗೆ ತಿಳಿಸಿರುತ್ತಾರೆ. ಉತ್ತರವು ಸದ್ಯದಲ್ಲಿ ಬರುವ ನಿರೀಕ್ಷೆಯಿದೆ.

ಆ) ಹೌದು, - ಅದೇ -

ಇ) ಈ ವಿಷಯದ ಮೇಲೆ ಈಗಾಗಲೇ ಮುಖ್ಯ ಅಭಿಯಂತರರು (ಉತ್ತರ), ಬೆಳಗಾವಿ ಇವರೊಡನೆ ಪತ್ರ ವ್ಯವಹಾರ ನಡೆದಿದ್ದು, ಉತ್ತರವನ್ನು ನಿರೀಕ್ಷಿಸಲಾಗಿದೆ.

ಈ) ಕರ್ನಾಟಕ ವಿಧಾನ ಮಂಡಲ ಕಾರ್ಯಾಲಯದಿಂದ ಕಂದಾಯ ಸಚಿವರು ಕೊಟ್ಟಿರುವ ಆಶ್ವಾಸನೆಯು ಇದುವರೆವಿಗೂ ಈ ಇಲಾಖೆಗೆ ಬಂದಿರುವುದಿಲ್ಲ. ಆಶ್ವಾಸನೆಯು ಬಂದ ನಂತರ ಆಶ್ವಾಸನೆಯನ್ನು ಈಡೇರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಬಸ್ ದರ ಏರಿಕೆಯ ನಂತರದ ಆದಾಯ

209 (935) ಶ್ರೀ ಪಿ.ಜಿ.ಆರ್. ಸಿಂಧ್ಯಾ, (ಕನಕಪುರ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಸ್ತೆ ಸಾರಿಗೆ ಸಂಸ್ಥೆಯ ದರಗಳನ್ನು ಪರಿಷ್ಕರಿಸಿದ ನಂತರ ಸಾರಿಗೆ ಸಂಸ್ಥೆಗೆ ಪ್ರತಿದಿನ ಬರುತ್ತಿರುವ ಹಣ ಎಷ್ಟು; ಹಾಗೂ ಪರಿಷ್ಕರಿಸುವ ಮುನ್ನ ಬರುತ್ತಿದ್ದ ಹಣ ಎಷ್ಟು;

ಆ) ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ) ಬಸ್ ಪ್ರಯಾಣ ದರಗಳನ್ನು ಪರಿಷ್ಕರಿಸುವ ಮುನ್ನ ಹಾಗೂ ಪರಿಷ್ಕರಿಸಿದ ನಂತರದ ಆದಾಯವನ್ನು ಈ ಕೆಳಗೆ ನಮೂದಿಸಲಾಗಿದೆ.

ಆ)

ಬಸ್ ಪ್ರಯಾಣದ ದರಗಳನ್ನು ಪರಿಷ್ಕರಿಸುವ ಮುನ್ನ ಆದಾಯ		ಬಸ್ ಪ್ರಯಾಣ ದರಗಳನ್ನು ಪರಿಷ್ಕರಿಸಿದ ನಂತರ ಆದಾಯವನ್ನು ನಮೂದಿಸಲಾಗಿದೆ.			
(ರೂ. ಲಕ್ಷಗಳಲ್ಲಿ)		(ರೂ. ಲಕ್ಷಗಳಲ್ಲಿ)			
ದಿನಾಂಕ	ಆದಾಯ	ದಿನಾಂಕ	ಆದಾಯ	ವ್ಯತ್ಯಾಸ	ಶೇಕಡ ಗಳಿಕೆ
ಭಾನು 31-1-93	151.45	7-2-93	172.10	20.65	13.61
ಸೋಮ 1-2-93	166.94	8-2-93	194.02	27.08	16.22
ಮಂಗಳ 2-2-93	158.85	9-2-93	188.19	29.34	18.47
ಬುಧ 3-2-93	157.60	10-2-93	191.25	33.65	21.35
ಗುರು 4-2-93	161.83	11-2-93	189.64	27.81	17.18
ಶುಕ್ರ 5-2-93	161.38	12-2-93	180.85	19.47	12.06
ಶನಿ 6-2-93	158.00	13-2-93	180.79	22.79	14.42

ದಿನಾಂಕ 22-2-1993ರ ಚುಕ್ಕೆ ಗುರುತಿನ ಹಾಗೂ ಚುಕ್ಕೆರಹಿತ ಪ್ರಶ್ನೋತ್ತರಗಳು

ಸವಣೂರ ಮತ್ತು ಶಿಗ್ಗಾಂ ತಾಲ್ಲೂಕುಗಳ ರಸ್ತೆಗಳ ದುರಸ್ತಿ

64 (581) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈ ಬಾರಿಯ ನೆರೆಹಾವಳಿಯಿಂದಾಗಿ ಧಾರವಾಡ ಜಿಲ್ಲಾ ಶಿಗ್ಗಾಂವ ಮತ್ತು ಸವಣೂರ ತಾಲ್ಲೂಕುಗಳ ಲೋಕೋಪಯೋಗಿ ಮತ್ತು ಜಿಲ್ಲಾ ಪರಿಷತ್ತಿಗೆ ಸೇರಿದ ರಸ್ತೆಗಳು ತುಂಬಾ ದುಸ್ಥಿತಿಯಲ್ಲಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಗಳ ದುರಸ್ತಿಗಾಗಿ ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಪರಿಷತ್ ವತಿಯಿಂದ ಯೋಜನೆ ನಕ್ಷೆ ಹಾಗೂ ಅಂದಾಜು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಎಷ್ಟು ಹಣ ಬೇಕಾಗಿದೆ ಎಂದು ಅಂದಾಜು ಮಾಡಲಾಗಿದೆ ಮತ್ತು ದುರಸ್ತಿ ಕೆಲಸ ಏಂದಿನಿಂದ ಪ್ರಾರಂಭಿಸಲಾಗುವುದು;

ಈ) ರಾಜ್ಯದಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಗಳ ದುರಸ್ತಿಗಾಗಿ ಸ್ಥೂಲವಾದ ಅಂದಾಜು ಸರ್ಕಾರದಲ್ಲಿ ಸ್ವೀಕೃತವಾಗಿದೆ. ಯೋಜನಾ ನಕ್ಷೆಯನ್ನು ಮಾಡಿರುವುದಿಲ್ಲ.

ಇ) ಧಾರವಾಡ ಜಿಲ್ಲೆಯ ವ್ಯಾಪ್ತಿಯಲ್ಲಿ ಹಾನಿಗೀಡಾದ ಲೋಕೋಪಯೋಗಿ ಇಲಾಖೆ ರಸ್ತೆಗಳ ದುರಸ್ತಿಗೆ 180.00 ಲಕ್ಷ ರೂ.ಗಳ ಸ್ಥೂಲವಾದ ಅಂದಾಜು ಮಾಡಲಾಗಿದೆ. ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಹಾನಿಗೀಡಾದ ರಸ್ತೆಗಳ ದುರಸ್ತಿಗೆ 388.00 ಲಕ್ಷ ರೂ.ಗಳ ಸ್ಥೂಲವಾದ ಅಂದಾಜು ಮಾಡಲಾಗಿದೆ.

ಈ) ಚಂಡಮಾರುತಗಳ ದೆಸೆಯಿಂದ ಹಾನಿಗೊಳಗಾದ ರಸ್ತೆಗಳ ದುರಸ್ತಿಗೆ ಅತಿವೃಷ್ಟಿ ಪರಿಹಾರ ನಿಧಿಯಿಂದ ಕಂದಾಯ ಇಲಾಖೆಯು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ.

ಜಿಲ್ಲೆ	ಅನುದಾನ (ಲಕ್ಷ. ರೂಗಳಲ್ಲಿ)
ಚಿತ್ರದುರ್ಗ	35.00
ಶಿವಮೊಗ್ಗ	25.00
ಚಿಕ್ಕಮಗಳೂರು	20.00
ದಕ್ಷಿಣ ಕನ್ನಡ	10.00
ಮೈಸೂರು	15.00
ಧಾರವಾಡ	45.00

ಕರ್ನಾಟಕ ರಾಜ್ಯ ಪತ್ರಾಗಾರ,101
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ಕ್ರ.ಸಂ. 639 ದಿನಾಂಕ 31-8-93

ಬಳ್ಳಾರಿ	55.00
ರಾಯಚೂರು	45.00
ಒಟ್ಟು	250.00

ಹುಡಿಕೇರಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಒಡ್ಡುಗಳ ನಿರ್ಮಾಣ

68 (796) ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯ ವೀರಾಜಪೇಟೆ ತಾಲ್ಲೂಕು ಹುಡಿಕೇರಿ ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಕೊಲ್ಲಿತೋಡು ಗ್ರಾಮದಲ್ಲಿ ಸಾವಿರಾರು ಎಕರೆ ಗದ್ದೆ ವ್ಯವಸಾಯವಾಗದೆ ಜನರಿಗೆ ತೊಂದರೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇ) ಹಿಂದೆ ಈ ಬಗ್ಗೆ ಒಡ್ಡು ತೆಗೆಸಲು ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು ಮತ್ತು ಆ ಪೈಕಿ ಎಷ್ಟು ಹಣ ವೆಚ್ಚವಾಯಿತು ಮತ್ತು ಆಯವ್ಯಯದಲ್ಲಿ ಒದಗಿಸಿದ್ದ ಹಣವೆಷ್ಟು ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಗೊತ್ತಿದೆ

ಆ) ಈ ಸ್ಥಳದಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು ಕೈಗೊಳ್ಳಲು ರೂ. 49.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, 93–94ನೇ ಸಾಲಿಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

1991–92ನೇ ಸಾಲಿನ ಆಯವ್ಯಯದಲ್ಲಿ 0.50 ಲಕ್ಷ ರೂ.ಗಳನ್ನು ಮತ್ತು 1992–93ನೇ ಸಾಲಿನಲ್ಲಿ ರೂ. 12.00 ಲಕ್ಷಗಳನ್ನು ಒದಗಿಸಲಾಗಿದ್ದು ಈ ಪೈಕಿ ಯಾವುದೇ ಹಣ ವೆಚ್ಚ ಮಾಡಿರುವುದಿಲ್ಲ.

ಸುರ್ಗೀತೋಪು ಏತ ನೀರಾವರಿ ಯೋಜನೆ

71 (828) ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುರ್ಗೀತೋಪು 'ಏತ ನೀರಾವರಿ' (ಮಳವಳ್ಳಿ ತಾಲ್ಲೂಕು) ಯೋಜನೆ ಕೆಲಸ ಈಗ ಯಾವ ಹಂತದಲ್ಲಿದೆ, ಪೂರ್ಣಗೊಳ್ಳಲು ಬೇಕಾಗುವ ಕಾಲಾವಧಿ ಎಷ್ಟು;

ಆ) ಇಷ್ಟು ಮಂದಗತಿಯಲ್ಲಿ ನಡೆಯಲು ಕಾರಣವೇನು, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?

ಡಾ|| ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ವಿಲ್ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿವೆ. ಈವರೆಗೆ 29.50 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಪಂಪ್ ಹೌಸ್, ಶಾಲೆಗಳು, ನೌಕರರ ವಸತಿಗೃಹಗಳು ಮತ್ತು ತೊಟ್ಟಿಗಳು

ಇವುಗಳ ಕೆಲಸಗಳು ಮುಗಿದಿದ್ದು ಶಾಲೆಯ ಲೈನಿಂಗ್ ಕಾರ್ಯವು ಮುಗಿಯುವ ಹಂತದಲ್ಲಿದೆ. ರೈಸಿಂಗ್ ಮ್ಯೆನ್ ಮತ್ತು ಯಂತ್ರೋಪಕರಣಗಳನ್ನು ಜೋಡಣೆ ಮಾಡಬೇಕಾಗಿದೆ. ಸದರಿ ಯೋಜನೆಯನ್ನು 1994–95ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) ಮೂಲ ಅಂದಾಜಿನಲ್ಲಿ 1500 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸಲು ಯೋಜಿಸಲಾಗಿದ್ದು ನಂತರ ಸ್ಥಳೀಯರ ಮನವಿಯ ಮೇರೆಗೆ ಪರಿಶೀಲಿಸಿ 250 ಎಕರೆ ಅಚ್ಚುಕಟ್ಟನ್ನು ಈ ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ ಅಳವಡಿಸಲಾಯಿತು. ಈ ಕಾರಣದಿಂದ ಮೂಲ ಯೋಜನೆಯಲ್ಲಿ ಮಂಜೂರಾಗಿದ್ದ ನೀರೆತ್ತುವ ಪಂಪಿನ ಸಾಮರ್ಥ್ಯ, ರೈಸಿಂಗ್ ಮ್ಯೆನ್, ನಾಲೆಯ ಸೆಕ್ಷನ್‌ಗಳನ್ನು ಬದಲಾಯಿಸಬೇಕಾಗಿ ಬಂದು 250 ಎಕರೆ ಹೆಚ್ಚುವರಿ ಅಚ್ಚುಕಟ್ಟಿಗೆ ನೀರು ಸರಬರಾಜು ಮಾಡಲು ಒಂದು ಉಪನಾಲೆಯ ಅವಶ್ಯಕತೆ ಕಂಡುಬಂದಿತು. ಈ ಮೇಲೆ ನಮೂದಿಸಿರುವ ಕಾರಣಗಳಿಂದ ಮತ್ತು ವಿನ್ಯಾಸಗಳನ್ನು ಬದಲಾಯಿಸಬೇಕಾಗಿ ಬಂದುದರಿಂದ ಕಾಮಗಾರಿಯ ಪ್ರಗತಿಯು ಧಾನವಾಯಿತು.

ವಿ.ಸಿ. ನಾಲೆಯ ಆಧುನೀಕರಣ

72 (825) ಶ್ರೀ ಎಮ್.ಎಸ್. ಆತ್ಮಾನಂದ (ಮಂಡ್ಯ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿ.ಸಿ. ನಾಲಾ ಆಧುನೀಕರಣದ ಯೋಜನೆಯ ಉದ್ದೇಶಿತ 2ನೇ ಹಂತದ ಕಾಮಗಾರಿಯ ಪ್ರಸ್ತಾವೆಯನ್ನು ರೈತರ ಹಿತದೃಷ್ಟಿಯಿಂದ ಕಾರ್ಯಗತ ಮಾಡಬೇಕಾಗಿರುವ ಅವಶ್ಯಕ ಪರಿಸ್ಥಿತಿಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿ.ಸಿ. ನಾಲಾ ಆಧುನೀಕರಣದ ಯೋಜನೆಯ ಉದ್ದೇಶಿತ 2ನೇ ಹಂತದ ಅನುಷ್ಠಾನದ ಬಗ್ಗೆ ಸರ್ಕಾರವು ಈವರೆಗೆ ಕೈಗೊಂಡ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು

ಆ) ವಿ.ಸಿ. ನಾಲೆಯ ಆಧುನೀಕರಣದ ಎರಡನೇ ಹಂತದ ಅಂಗವಾಗಿ ಹೊಳಲು ಮತ್ತು ಮಾರ್ಕಾಲು ಪಿಕ್‌ಅಪ್ ಮತ್ತು ನಾಲೆಗಳ ಅಭಿವೃದ್ಧಿ ಕೆಲಸವನ್ನು ಪ್ರಾರಂಭಿಸಲಾಗಿದೆ.

ಮಂಗಳ ಜಲಾಶಯಕ್ಕೆ ಬಾಗಿಲುಗಳನ್ನು ಅಳವಡಿಸದಿರುವುದು

75 (449) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಣಿಗಲ್ ತಾಲ್ಲೂಕಿನ ಮಂಗಳ ಜಲಾಶಯಕ್ಕೆ ಬಾಗಿಲುಗಳನ್ನು ಅಳವಡಿಸುವ ಕಾರ್ಯ ಸುಮಾರು ಒಂದು ದಶಕದಿಂದ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಬಾಗಿಲುಗಳನ್ನು ಅಳವಡಿಸುವ ಕೆಲಸ ಪೂರ್ಣಗೊಂಡರೆ ಎಷ್ಟು ಎಕರೆ ಜಮೀನಿಗೆ ನೀರು ಒದಗಿಸಲು ಸಾಧ್ಯವಾಗುತ್ತದೆ;

ಇ) ಇನ್ನೂ ಎಷ್ಟು ದಿನಗಳಲ್ಲಿ ಈ ಕೆಲಸ ಮುಗಿಸಿ ರೈತರಿಗೆ ನೀರು ಒದಗಿಸಲು ಸಾಧ್ಯವಾಗುತ್ತದೆ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಬಂದಿದೆ

ಆ) ಹಾಲಿ ಇರುವ 2320 ಎಕರೆ ಜೊತೆಗೆ 1720 ಎಕರೆ ಹೆಚ್ಚಿನ ಅಚ್ಚುಕಟ್ಟಿಗೆ ನೀರೊದಗಿಸಲು ಸಾಧ್ಯವಾಗುತ್ತದೆ.

ಇ) ಅನುದಾನದ ಲಭ್ಯತೆ ಮೇರೆಗೆ ಶೀಘ್ರವಾಗಿ ಕೆಲಸ ಮುಗಿಸಿ ಮುಂದಿನ ಮುಂಗಾರಿನಲ್ಲಿ ನೀರೊದಗಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಉಚಿತ ಕಾನೂನು ನೆರವು

76 (136) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಉಚಿತ ಕಾನೂನು ನೆರವು ಯೋಜನೆ ಜಾರಿಗೆ ಯಾವಾಗ ಬಂತು ಹಾಗೂ ಇದರಿಂದಾಗಿ ರಾಜ್ಯದಲ್ಲಿ ಎಷ್ಟು ಜನರಿಗೆ ಅನುಕೂಲವಾಗಿರುತ್ತದೆ;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆಯಿಂದ ಪ್ರಯೋಜನ ಪಡೆದವರ ಸಂಖ್ಯೆ ಎಷ್ಟು;

ಇ) ಈ ಯೋಜನೆಯನ್ನು ಇನ್ನೂ ವ್ಯಾಪಕಗೊಳಿಸಲು ಸರ್ಕಾರವು ಕೈಗೊಂಡ ಕಾರ್ಯಕ್ರಮಗಳೇನು ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರು):–

ಅ) ರಾಜ್ಯದಲ್ಲಿ ಕಾನೂನು ನೆರವು ಯೋಜನೆಯು 1977ನೇ ಸಾಲಿನಿಂದ ಜಾರಿಗೆ ಬಂದಿದೆ. 1977–78ನೇ ಸಾಲಿನಿಂದ ಡಿಸೆಂಬರ್ 1992ರ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟು 6,28,943 ಜನಗಳು ಕಾನೂನು ನೆರವು ಕಾರ್ಯಕ್ರಮಗಳಿಂದ ಪ್ರಯೋಜನವನ್ನು ಪಡೆದಿರುತ್ತಾರೆ.

ಆ) 15,174

ಇ) ಕಾನೂನು ನೆರವು ಯೋಜನೆಗಳನ್ನು ವ್ಯಾಪಕಗೊಳಿಸುವ ಸಲುವಾಗಿ ಜನತಾ ನ್ಯಾಯಾಲಯದ ಅಡಿಯಲ್ಲಿ ವಾಹನ ಅಪಘಾತ ಸಿವಿಲ್ ಕ್ರಿಮಿನಲ್ ಪ್ರಕರಣಗಳಂತೆ ಬ್ಯಾಂಕ್ ಸ್ಯೂಟ್‌ಗಳು, ಕಾರ್ಮಿಕ ವಿವಾದಗಳು, ಭೂ ಸ್ವಾಧೀನ ಪ್ರಕರಣಗಳು ಮುಂತಾದ ಹೊಸ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗುತ್ತಿದೆ. ಅಲ್ಲದೆ ಕೌಟುಂಬಿಕ ನ್ಯಾಯಾಲಯ ಮತ್ತು ಸೇವೆಗಳ ಪ್ರಕರಣಗಳಲ್ಲಿಯೂ ಸಹ ಕಾನೂನು ನೆರವು ನೀಡಲು ವಿಚಾರ ಮಾಡುವ ಸಲುವಾಗಿ ವಿಚಾರ ಸಂಕೀರ್ಣ (ಸೆಮಿನಾರ್ಸ್) ವರ್ಕ್ಸ್ ಶಾಪ್ಸ್ ಮತ್ತು ಶಿಬಿರಗಳನ್ನು ಪ್ರಾರಂಭಗೊಳಿಸಲಾಗಿದೆ. ಅವುಗಳಲ್ಲಿ ಕಾನೂನು ಕಾಲೇಜುಗಳ ವಿದ್ಯಾರ್ಥಿಗಳು ಸಹ ಭಾಗವಹಿಸುತ್ತಿದ್ದಾರೆ. ಹಾಗೂ ಉಚಿತ ಕಾನೂನು ನೆರವು ನೀಡಲಾಗುತ್ತಿರುವ ವಿಷಯದ ಪ್ರಚಾರಕ್ಕಾಗಿ ಕಾನೂನು ವಿದ್ಯಾಪ್ರಸಾರ ಕಾರ್ಯಕ್ರಮದ ಅಡಿಯಲ್ಲಿ ವಿವಿಧ ಕಾನೂನು ವಿಷಯಗಳ ಬಗ್ಗೆ ಕಿರುಹೊತ್ತಿಗೆ (ಕರಪತ್ರ) ಗಳನ್ನು ಸಾರ್ವಜನಿಕರಿಗೆ ಹಂಚಲಾಗುತ್ತಿದೆ. ಮತ್ತು ದೂರದರ್ಶನ, ಆಕಾಶವಾಣಿ ಮೂಲಕ ಕಾನೂನು ವಿಷಯಗಳಲ್ಲಿ ಪ್ರಸಾರ ಮಾಡಲಾಗುತ್ತಿದೆ.

ಕೃಷ್ಣಾ ಹಾಗೂ ಗೋದಾವರಿ ನೀರಿನ ಬಳಕೆಗೆ ಸರ್ಕಾರ ಕೈಗೊಂಡ ಕ್ರಮಗಳು

77 (196) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಚಾವತ್ ಆಯೋಗದ ತೀರ್ಪಿನನ್ವಯ ಕೃಷ್ಣಾ ಮತ್ತು ಗೋದಾವರಿಯಿಂದ ಎಷ್ಟು ಪ್ರಮಾಣದ ನೀರನ್ನು ನಾವು 2000 ಇಸವಿಯೊಳಗೆ ಉಪಯೋಗಿಸಬೇಕಾಗಿದೆ;

ಆ) ಇಂದಿನವರೆಗೆ ನಾವು ಉಪಯೋಗ ಮಾಡಿಕೊಂಡಿರುವ ನೀರಿನ ಪ್ರಮಾಣವೆಷ್ಟು;

ಇ) ಮೇಲ್ಕಂಡ 2 ಬೇಸಿನ್‌ಗಳಿಂದ 2000 ಇಸವಿಯೊಳಗೆ ನಮ್ಮ ಪಾಲಿನ ನೀರನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಯೋಜನೆಗಳನ್ನು ಅವಧಿಯೊಳಗೆ ಪೂರ್ಣಗೊಳಿಸಲು ಹೆಚ್ಚು ಪ್ರಮಾಣದ ಹಣಕಾಸಿನ ನೆರವನ್ನು ಬಿಡುಗಡೆ ಮಾಡಲಾಗುವುದೇ;

ಉ) ಮೇಲ್ಕಂಡ ಬಚಾವತ್ ಆಯೋಗದ ತೀರ್ಪಿನ ವಿಷಯವಾಗಿ ಇತ್ತೀಚೆಗೆ ಗುಲ್ಬರ್ಗಾ ಜಿಲ್ಲೆಯಲ್ಲಿ ಆಂಧ್ರದ ಮುಖ್ಯಮಂತ್ರಿಗಳ ಪ್ರಚಲಿತ ಪ್ರವಾಸ ಮಾಡಿದ ಸಂದರ್ಭದಲ್ಲಿ ನೀಡಿರುವ ಹೇಳಿಕೆಯ ಬಗ್ಗೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಏನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):—

ಅ) ಬಚಾವತ್ ನ್ಯಾಯಾಧೀಕರಣ ತೀರ್ಪಿನ ಪ್ರಕಾರ ಕರ್ನಾಟಕಕ್ಕೆ ಕೃಷ್ಣಾ ಕೊಳ್ಳದಲ್ಲಿ 734 ಟಿಎಂಸಿ ಮತ್ತು ಗೋದಾವರಿ ಕೊಳ್ಳದಲ್ಲಿ 22.37 ಟಿಎಂಸಿ ನೀರು ಲಭ್ಯವಾಗಿದೆ. ಕೃಷ್ಣಾ ನೀರಿನ ಹಂಚಿಕೆ 31–5–2000ದಲ್ಲಿ ಪುನರ್ ಪರಿಶೀಲನೆ ಆಗಬಹುದಾಗಿದ್ದು, ರಾಜ್ಯದ ಹಿತಾಸಕ್ತಿಯಿಂದ ಕೃಷ್ಣಾ ನದಿ ನೀರಿನ ಪಾಲನ್ನು ಈ ದಿನಾಂಕದ ಒಳಗೆ ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ಗೋದಾವರಿ ಕೊಳ್ಳದಲ್ಲಿ ಪ್ರಾಪ್ತವಾಗಿರುವ ನೀರನ್ನು ಉಪಯೋಗಿಸಿಕೊಳ್ಳಲು ನ್ಯಾಯಾಧೀಕರಣವು ಯಾವ ಗಡುವನ್ನೂ ನಿಗದಿಪಡಿಸಿಲ್ಲ.

ಆ) ದಿನಾಂಕ 31–3–92ರವರೆಗೆ ಪೂರ್ಣಗೊಂಡಿರುವ ಹಾಗೂ ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳಿಂದ ಕೃಷ್ಣಾ ಕೊಳ್ಳದಲ್ಲಿ 472.21 ಟಿಎಂಸಿ ಹಾಗೂ ಗೋದಾವರಿ ಕೊಳ್ಳದಲ್ಲಿ 6.88 ಟಿಎಂಸಿ ನೀರನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ.

ಕೃಷ್ಣಾ ಮತ್ತು ಗೋದಾವರಿ ಕೊಳ್ಳಗಳಲ್ಲಿ ರಾಜ್ಯಕ್ಕೆ ಲಭಿಸಿರುವ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಬೃಹತ್ ಯೋಜನೆಗಳನ್ನು (Master Plans) ತಯಾರಿಸಿದ್ದು ಈ ಯೋಜನೆಗಳ ಪ್ರಕಾರ ಎರಡೂ ಕೊಳ್ಳಗಳ ನೀರಾವರಿ ಯೋಜನೆಗಳನ್ನು ಕೈಗೊಂಡು ಪೂರ್ಣಗೊಳಿಸುವ ಉದ್ದೇಶವಿದ್ದು, ಈ ಯೋಜನೆಗಳಿಗೆ ಅಗತ್ಯವಿರುವ ಬಾಕಿ ಹಣವನ್ನು ಒದಗಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಉ) ಕೃಷ್ಣಾ ನದಿ ನೀರಿನ ನ್ಯಾಯಾಧೀಕರಣದ ಪ್ರಸ್ತುತ ತೀರ್ಪಿನ ಪ್ರಕಾರ ರಾಜ್ಯಕ್ಕೆ ಲಭ್ಯವಾಗಿರುವ ನೀರನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇದಲ್ಲದೆ, ಕೃಷ್ಣಾ ನದಿಯ ಹೆಚ್ಚುವರಿ ನೀರಿನ ಹಂಚಿಕೆಯ ಬಗ್ಗೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ

ರಾಜ್ಯಗಳೊಡನೆ ಚರ್ಚಿಸಲಾಗುತ್ತಿದ್ದು, ರಾಜ್ಯದ ಹಿತಾಸಕ್ತಿಯನ್ನು ಕಾಪಾಡಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು.

ಬೆಂಗಳೂರು – ಮೈಸೂರು ರಸ್ತೆಯನ್ನು ಜೋಡಿ ರಸ್ತೆಯ ಪರಿವರ್ತನೆ

80 (946) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು–ಮೈಸೂರು ಜೋಡಿ ರಸ್ತೆ ಮಾಡಲು ಸರ್ಕಾರದವರು ನಿರ್ಧರಿಸುವರೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಇಲ್ಲ

ಬೈಲಹೊಂಗಲ ತಾಲ್ಲೂಕಿನಲ್ಲಿ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಕೊಳ್ಳಲು ಶಿಫಾರಸ್ಸು

119 (652) ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ವಿಧಾನಸಭೆಯ ಅಂದಾಜು ಸಮಿತಿಯವರು ಸೂಚಿಸಿದ 9ನೇ ವಿಧಾನಸಭೆಯ 4ನೇ ವರದಿಯಲ್ಲಿ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದ ಜನರ ಅನುಕೂಲತೆಗಾಗಿ ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ವಕ್ಕುಂದ, ದೇವಲಾಪೂರ, ಸಂಗೊಳ್ಳಿ, ಅನಿಗೋಳ, ಹಾಗೂ ಸವದತ್ತಿ ತಾಲ್ಲೂಕಿನ ಮೊಟ್ಬೊಳ್ಳಿ, ಏಣಗಿ ಗ್ರಾಮಗಳಲ್ಲಿ ಆಗ್‌ಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ಅಥವಾ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ;

ಆ) ಈ ಯೋಜನೆಗಳನ್ನು ಅಂದಾಜು ಸಮಿತಿಯವರು 3 ತಿಂಗಳೊಳಗಾಗಿ ಕೈಕೊಳ್ಳಬೇಕೆಂದು ಹಾಗೂ ಅದಕ್ಕೆ ಬೇಕಾಗುವ ಹಣವನ್ನು ಒದಗಿಸಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ;

ಇ) ಅಂದಾಜು ಸಮಿತಿಯವರು ಸೂಚಿಸಿದ ಪ್ರಕಾರ ಈ ಕೆಲಸಗಳನ್ನು 1993–94ನೇ ಸಾಲಿನಲ್ಲಿ ತೆಗೆದುಕೊಳ್ಳಬೇಕೆಂದು ಹಾಗೂ ಇದಕ್ಕೆ ಹಣ ಒದಗಿಸಲು ಮುಖ್ಯ ಇಂಜನೀಯರ್, ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ ಇವರಿಗೆ ಸೂಚಿಸಿರುವರೆ;

ಈ) ಸಮಿತಿಯವರು ಶಿಫಾರಸ್ಸು ಮಾಡಿದ ಪ್ರಕಾರ ಇನ್ನೂವರೆಗೂ ಕೆಲಸ ಪ್ರಾರಂಭವಾಗದೇ ಇದ್ದದ್ದರಿಂದ ಸರಕಾರದವರು ಈ ಕೆಲಸಗಳನ್ನು ಬೇಗನೆ ಪ್ರಾರಂಭಿಸಲು ಯಾವ ಕ್ರಮ ಕೈಕೊಂಡಿರುವರು;

ಉ) ಸಮಿತಿಯವರು ಶಿಫಾರಸ್ಸು ಮಾಡಿದ ಪ್ರಕಾರ ಆಗ್‌ಮೆಂಟೇಶನ್ ಆಫ್ ಲಿಫ್ಟ್ ಇರಿಗೇಶನ್ ಯೋಜನೆಗಳನ್ನು ಪ್ರಾರಂಭಿಸಲು ಸರಕಾರದವರು ಕ್ರಮ ಕೈಕೊಳ್ಳುವರೇ;

ಊ) ಈ ಪ್ರತಿಯೊಂದೂ ಏತ ನೀರಾವರಿ ಯೋಜನೆಗೆ ಎಷ್ಟು ಹಣ ಬೇಕಾಗುವುದು ಹಾಗೂ ಎಷ್ಟು ಎಕರೆ ನೀರಾವರಿ ಆಗುವುದು (ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಎಷ್ಟು ಗ್ರಾಮಗಳಿಗೆ ಎಷ್ಟು ಎಷ್ಟು ಎಕರೆ ನೀರಾವರಿ ಆಗುವುದು ಎಲ್ಲಿ ಸಂಪೂರ್ಣ ವಿವರ ಒದಗಿಸುವುದು) ?

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):-

ಅ) ಹೌದು

ಆ) ಹೌದು

ಇ) ಈ ವಿಷಯದ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಂಡು ವರದಿ ಕಳುಹಿಸಬೇಕೆಂದು ಬೆಳಗಾವಿಯ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರಿಗೆ ದಿನಾಂಕ 25.8.1992ರ ಸರ್ಕಾರಿ ಪತ್ರದಲ್ಲಿ ಸೂಚನೆ ನೀಡಲಾಗಿದೆ.

ಈ) ಯೋಜನೆಗಳು ತಾಂತ್ರಿಕ ಪರಿಶೀಲನೆಯಲ್ಲಿ ಇವೆ.

ಉ) ತಾಂತ್ರಿಕ ಪರಿಶೀಲನೆ ಪೂರ್ಣಗೊಂಡನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಊ) ಪೂರ್ಣ ವಿವರಗಳು ತಾಂತ್ರಿಕ ಪರಿಶೀಲನೆ ಪೂರ್ಣಗೊಂಡ ನಂತರ ತಿಳಿದು ಬರುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜಿಲ್ಲಾಪರಿಷತ್ ರಸ್ತೆಗಳ ಕುರಿತು

120 (5) ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿರುವ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆ ವಹಿಸಿಕೊಂಡಿರುವುದೇ;

ಆ) ವಹಿಸಿಕೊಂಡಿದ್ದಲ್ಲಿ ಆ ರಸ್ತೆಗಳ ಕೆಲಸಗಳನ್ನು ಪ್ರಾರಂಭ ಮಾಡಲಾಗಿದೆಯೆ;

ಇ) ಉಳ್ಳಾಲ ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ರಸ್ತೆ ವಹಿಸಿಕೊಳ್ಳಲಾಗಿದೆ ಹಾಗೂ ಅದಕ್ಕಾಗಿ ಎಷ್ಟು ಹಣ ಬಿಡುಗಡೆಯಾಗಿದೆ;

ಈ) ಉಳ್ಳಾಲ ಕ್ಷೇತ್ರದ ರಸ್ತೆ ಕೆಲಸ ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 705.70 ಕಿ.ಮೀ. ಜಿಲ್ಲಾ ಪರಿಷತ್ ರಸ್ತೆಗಳನ್ನು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

ಆ) ಸಮಾನ್ಯ ದುರಸ್ತಿಯ ಕಾರ್ಯಕ್ರಮದಲ್ಲಿ ರಿಪೇರಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಅಭಿವೃದ್ಧಿ ಕಾಮಗಾರಿಗಳನ್ನು 1993–94ನೇ ಸಾಲಿನಲ್ಲಿ ಅನುಧಾನವನ್ನು ಅನುಸರಿಸಿ, ತೆಗೆದುಕೊಳ್ಳಲಾಗುವುದು.

ಇ) 47.50 ಕಿ.ಮೀ. ಪ್ರತ್ಯೇಕವಾಗಿ ಹಣ ಬಿಡುಗಡೆ ಆಗಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ರಸ್ತೆಗಳನ್ನು ನಿರ್ಮಿಸಲು ನಿಯಮಗಳು

121 (23) ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ರಸ್ತೆಗಳನ್ನು ನಿರ್ಮಿಸಲು ಯಾವ ನಿಯಮಗಳನ್ನು ಅನುಸರಿಸಲಾಗುತ್ತಿದೆ;

ಆ) ಸರ್ಕಾರವು ಈ ನಿಟ್ಟಿನಲ್ಲಿ ರಸ್ತೆ ಕಾಯ್ದೆಯನ್ನು ಮಾಡಿರುವುದೇ;

ಇ) ಪ್ರಸಕ್ತ ನಿರ್ಮಿಸಲ್ಪಟ್ಟಿರುವ ರಸ್ತೆಗಳಿಗೆ ಹೊಂದಿಕೊಂಡಂತೆ ಇಕ್ಕೆಲಗಳಲ್ಲಿ, ಇಂತಿಷ್ಟು ಪ್ರಮಾಣದ ಖಾಲಿ ಜಾಗ ಬಿಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಭಾರತ ರಸ್ತೆ ಕಾಂಗ್ರೆಸ್ ನಿಯಮಗಳನ್ನು ಅನುಸರಿಸಲಾಗುತ್ತದೆ.

ಆ) ಮಾಡಿದೆ.

ಇ) ನಗರ ಪ್ರದೇಶ ವ್ಯಾಪ್ತಿಯಲ್ಲಿ ನಿಗದಿತ ಪ್ರಮಾಣದಷ್ಟು ಜಾಗ ಬಿಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಮೈಸೂರು ಜಿಲ್ಲೆಯ ವರುಣಾ ನಾಲೆಯ ಪ್ರಗತಿ

122 (24) ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯ ವರುಣಾ ನಾಲೆಯ ಯೋಜನೆ ಯಾವ ಹಂತದಲ್ಲಿದೆ, ಮತ್ತು ಅದನ್ನು ಯಾವಾಗ ಪೂರೈಸಲಾಗುವುದು;

ಆ) ಈ ವರ್ಷ ಈ ನಾಲೆಯ ಯೋಜನೆಗೆ ಬಿಡುಗಡೆ ಮಾಡಿದ ಹಣವೆಷ್ಟು;

ಇ) ಈ ಯೋಜನೆಯ ಕಾರ್ಯದ ಮಧ್ಯದಲ್ಲಿ ನ್ಯಾಯಾಲಯದ ತಡೆಯಾಜ್ಞೆ ರದ್ದಾಗಿದೆಯೆ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಮುಖ್ಯ ನಾಲೆಯು 50ನೇ ಕಿ.ಮೀ.ವರೆಗೆ ಮತ್ತು 20ನೇ ಕಿ.ಮೀ.ವರೆಗಿನ ವಿತರಣಾ ನಾಲೆಗಳು ಪೂರ್ಣಗೊಳ್ಳುತ್ತಿವೆ. ಮುಖ್ಯ ನಾಲೆಯ 50ನೇ ಕಿ.ಮೀ.ನಿಂದ 62 ಕಿ.ಮೀ.ವರೆಗಿನ ಮತ್ತು 20ನೇ ಕಿ.ಮೀ.ಯಿಂದ 50ನೇ ಕಿ.ಮೀ.ವರೆಗಿನ ವಿತರಣಾ ನಾಲೆಗಳು ಹಾಗೂ 18ನೇ ಕಿ.ಮೀ.ನಲ್ಲಿನ ಅಕ್ವಿಡಕ್ಟ್‌ಗೆ ಸಂಬಂಧಪಟ್ಟ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) 8.00 ಕೋಟಿ ರೂಪಾಯಿಗಳು

ಇ) ಈ ನಾಲೆಯ ಹೆಡ್‌ವರ್ಕ್ಸ್ ಕಾಮಗಾರಿಯ ಮೇಲೆ ನ್ಯಾಯಾಲಯವು ವಿಧಿಸಿರುವ ತಡೆಯಾಜ್ಞೆಯನ್ನು ಇನ್ನೂ ತೆರವು ಮಾಡಿಲ್ಲ.

ತುಂಗಾ ಮೇಲ್ದಂಡೆ ಯೋಜನೆಯ ಪ್ರಗತಿ

123 (77) ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯ ಪ್ರಗತಿಯು ಯಾವ ಹಂತದಲ್ಲಿದೆ;

ಆ) ಈ ಯೋಜನೆಗೆ ಕೇಂದ್ರ ಸರ್ಕಾರದ ಮನ್ನಣೆ ಪಡೆದಿದೆಯೇ;

ಇ) ಆಗದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಈ) ರಾಜ್ಯ ಸರ್ಕಾರದಿಂದ ಇಲ್ಲಿಯವರೆಗೆ ಸದರಿ ಯೋಜನೆ ಅನುಷ್ಠಾನಕ್ಕೆ ತಗುಲಿರುವ ವೆಚ್ಚವೆಷ್ಟು;

ಉ) ಸದರಿ ಯೋಜನೆಯ ಸಲುವಾಗಿ ಮುಂಬರುವ 93–94ನೇ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ), ಆ), ಇ) ಈ ಯೋಜನೆಯ ವರದಿಯನ್ನು ಒಪ್ಪಿಗೆಗಾಗಿ ಕೇಂದ್ರ ಜಲ ಆಯೋಗಕ್ಕೆ ಕಳುಹಿಸಲಾಗಿದೆ. ಸದರಿ ಆಯೋಗವು ಪ್ರಸ್ತಾಪಿಸಿರುವ ಹಲವು ತಾಂತ್ರಿಕ ವಿಚಾರಗಳ ಬಗ್ಗೆ ಉತ್ತರವನ್ನು ನೀಡಲಾಗಿದ್ದು, ಪುನಃ ಪ್ರಸ್ತಾಪಿಸಿರುವ ಹಲವು ವಿಚಾರಗಳ ಬಗ್ಗೆ ಉತ್ತರ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಯ ಕ್ಷೇತ್ರದ ಏರಿಯಲ್ ಸರ್ವೆ ಹಾಗೂ ನಾಲೆಯ ಮೊದಲನೇ 10 ಕಿ.ಮೀ. ಉದ್ದದ ಸರ್ವೆ ಕೆಲಸಗಳನ್ನು ಮುಗಿಸಲಾಗುತ್ತಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದ ಒಪ್ಪಿಗೆಗೆ ಇನ್ನು ದೊರೆತಿಲ್ಲ.

ಈ) 1992ರ ಡಿಸೆಂಬರ್ ಅಂತ್ಯದವರೆಗೆ ಈ ಯೋಜನೆಯ ಮೇಲೆ 1.43 ಕೋಟಿ ರೂ.ಗಳು ವೆಚ್ಚ ಮಾಡಲಾಗಿದೆ.

ಉ) 1993–94ನೇ ಸಾಲಿನ ಆಯವ್ಯಯ ಪಟ್ಟಿಯ ತಯಾರಿಕೆಯು ಅಂತಿಮ ಹಂತದಲ್ಲಿದೆ.

ವೈ–ಪಂಕ್ತೀಕರಣದ ಆಳ ಕಾಲುವೆಯ ಕೆಲಸ

124 (160) ಶ್ರೀ ಎಸ್.ಶಫಿ ಅಹಮದ್ (ತುಮಕೂರು):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ವೈ-ಪಂಕ್ತೀಕರಣದ ಆಳ ಕಾಲುವೆಯ ಕೆಲಸವು ಯಾವ ಹಂತದಲ್ಲಿದೆ;

2. ವೈ-ಪಂಕ್ತೀಕರಣದ ಆಳ ಕಾಲುವೆಯ ಒಟ್ಟು ಅಂದಾಜುಪಟ್ಟಿಯ ಮೊತ್ತವೆಷ್ಟು;

3. ವೆಚ್ಚ ಮಾಡಿದ ಮೊಬಲಗು ಹಾಗೂ ಉಳಿಕೆ ಕೆಲಸದ ಬಗ್ಗೆ ವಿವರಗಳನ್ನು ಕೊಡುವುದು;

4. ವೈ-ಪಂಕ್ತೀಕರಣ ಆಳಕಾಲುವೆಯ ಕೆಲಸವನ್ನು ಯಾವಾಗ ಮುಗಿಸುವಿರಿ;

5. ಅಡ್ಡ ಮೋರಿ ಹಾಗೂ ವಿತರಣಾ ನಾಲೆಗಳ ಕಾಮಗಾರಿಗಳ ಕೆಲಸದ ಹಂತ ಹಾಗೂ ಕೈಗೊಂಡ ಕೆಲಸಗಳ ಸಂಖ್ಯೆ ಮತ್ತು ಅವುಗಳ ಅಂದಾಜು ವೆಚ್ಚ ಎಷ್ಟು;

6. ವಿತರಣಾ ನಾಲೆಯ ಕಾಮಗಾರಿಯನ್ನು ಒಟ್ಟಾಗಿ ಪ್ರಾರಂಭಿಸಿದ್ದಾರೆಯೇ ? ಮತ್ತು ಯಾವಾಗ ಮುಗಿಯುತ್ತದೆ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–.

1. ವೈ-ಪಂಕ್ತೀಕರಣದ ಆಳ ಕಾಲುವೆಯು ಕಿ.ಮೀ. 16, 17, 18, 19 ಮತ್ತು 20ರ ಮಣ್ಣು ಅಗೆತದ ಕೆಲಸವು ಪ್ರಗತಿಯಲ್ಲಿದೆ. ಕಿ.ಮೀ 21 ಮತ್ತು 22ರ ಮಣ್ಣಿನ ಅಗೆತದ ಕೆಲಸಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಆರು ಅಡ್ಡಮೋರಿ ಕೆಲಸಗಳು ಪ್ರಗತಿಯಲ್ಲಿದೆ.

2. ಒಟ್ಟು ಮೊತ್ತ ರೂ. 1351–70 ಲಕ್ಷಗಳು.

3. 1) ಜನವರಿ – 1993ರ ಕೊನೆಯವರೆಗೆ ಆರ್ಥಿಕ ಪ್ರಗತಿ ರೂ. 225.0 ಲಕ್ಷಗಳು.

(ವೈ-ಪಂಕ್ತೀಕರಣದ ಆಳಕಾಲುವೆ ಕೆಲಸ)

2) ಉಳಿಕೆ ಕೆಲಸಕ್ಕೆ ತಗಲುವ ವೆಚ್ಚ ರೂ. 1126.62 ಲಕ್ಷಗಳು.

4. ಡಿಸೆಂಬರ್ 1993ರ ವೇಳೆಗೆ ಈ ಕೆಲಸವನ್ನು ಮುಗಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

5. ತುಮಕೂರು ಶಾಖಾ ನಾಲೆಯಲ್ಲಿ 26 ವಿತರಣಾ ನಾಲೆಗಳು ಮತ್ತು ನಾಗಮಂಗಲ ಶಾಖಾ ನಾಲೆಯಲ್ಲಿ 15 ವಿತರಣಾ ನಾಲೆಗಳಿವೆ. ಈ ಪೈಕಿ ತುಮಕೂರು ಶಾಖಾ ನಾಲೆಯಲ್ಲಿ 12 ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 8 ವಿತರಣಾ ನಾಲೆಗಳಿಗೆ ವಾಟರ್ ಪ್ಲಾನಿಂಗ್ ಅನುಮೋದನೆಯಾಗಿದ್ದು, ವಿತರಣಾ ನಾಲೆಯ ಕಾಮಗಾರಿಗಳು ಈಗಾಗಲೇ ಪ್ರಾರಂಭವಾಗಿದ್ದು, ಅವುಗಳ ಪ್ರಗತಿಯು ವಿವಿಧ ಹಂತಗಳಲ್ಲಿವೆ. ತುಮಕೂರು ಶಾಖಾ ನಾಲೆಯಲ್ಲಿ 247 ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 143 ಅಡ್ಡಮೋರಿಗಳು ಬರಲಿದ್ದು, ಅವುಗಳಲ್ಲಿ ತುಮಕೂರು ಶಾಖಾ ನಾಲೆಯಲ್ಲಿ 199ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 132ಅಡ್ಡಮೋರಿಯ ಕೆಲಸಗಳಿಗೆ ಅಂದಾಜು-ಪಟ್ಟಿಯನ್ನು ತಯಾರಿಸಲಾಗಿದೆ. ಆ ಪೈಕಿ ತುಮಕೂರು ಶಾಖಾ ನಾಲೆಯಲ್ಲಿ 160 ಹಾಗೂ ನಾಗಮಂಗಲ ಶಾಖಾ ನಾಲೆಯಲ್ಲಿ 102 ಅಡ್ಡಮೋರಿ ಕೆಲಸಗಳ ಅಂದಾಜುಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಒಟ್ಟು ಅಡ್ಡ ಮೋರಿಗಳಲ್ಲಿ 210 ಅಡ್ಡಮೋರಿಯ ಕೆಲಸಗಳು ಪ್ರಗತಿಯಲ್ಲಿದೆ ಹಾಗೂ 52 ಅಡ್ಡ ಮೋರಿಯ ಕೆಲಸವು ಪೂರ್ಣಗೊಂಡಿರುತ್ತದೆ. ಮೇಲಿನ ಎಲ್ಲಾ ಅಡ್ಡಮೋರಿಯ ಕೆಲಸಗಳ ಅಂದಾಜು ವೆಚ್ಚವು ಸುಮಾರು ರೂ. 4,866.46 ಲಕ್ಷಗಳಾಗಿರುತ್ತದೆ.

6. ತುಮಕೂರು ಶಾಖಾ ನಾಲೆಯಲ್ಲಿ ಕಿ.ಮೀ. 0 ರಿಂದ 76.00 ವರೆಗೆ, 1 ರಿಂದ 12ನೇ ವಿತರಣಾ ನಾಲೆ ಕೆಲಸಗಳು ಹಾಗೂ ನಾಗಮಂಗಲ ಶಾಖಾ ನಾಲೆಯ ಕಿ.ಮೀ.0 ರಿಂದ 40 ರವರೆಗೆ 1 ರಿಂದ 5 ಹಾಗೂ 8, 9 ವಿತರಣಾ ನಾಲೆ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ.
ಈ ವಿತರಣಾ ನಾಲೆಯ ಕೆಲಸಗಳನ್ನು ಪೂರೈಸಿ 1992–93ರಿಂದ ಪ್ರಾರಂಭಿಸಿ ಹಂತಹಂತವಾಗಿ 1996–97ರವರೆಗೆ ನೀರಾವರಿ ಸಾಮರ್ಥ್ಯ ಕಲ್ಪಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ.

ಹೈದರಾಬಾದ್-ಕರ್ನಾಟಕ ಪ್ರದೇಶಗಳಲ್ಲಿನ ರಸ್ತೆಗಳ ದುರಸ್ತಿ

124 (197) ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ .

ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು ಅತ್ಯಂತ ದುಸ್ಥಿತಿ ತಲುಪಿರುವುದನ್ನು ಸರ್ಕಾರದ ಗಮನಕ್ಕಿದೆಯೇ;

ಆ) ಹಾಗಿದ್ದಲ್ಲಿ ಈ ರಸ್ತೆಗಳ ದುರಸ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿನ ರಸ್ತೆಗಳ ಅಭಿವೃದ್ಧಿಯನ್ನು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಶಾಸಕರ ಹೆಸರಿನಲ್ಲಿ 25 ಲಕ್ಷ ರೂ.ಗಳನ್ನು ನೀಡುವ ವಿಚಾರದ ಬಗ್ಗೆ ಸರ್ಕಾರದ ಪರಿಶೀಲಿಸುತ್ತಿದೆಯೇ ? (ಈಗ ಅಭಿವೃದ್ಧಿಯ ಕಾರ್ಯದ ಸಲುವಾಗಿ ಶಾಸಕರ ಹೆಸರಿನಲ್ಲಿ ನೀಡುತ್ತಿರುವ 50 ಲಕ್ಷ ರೂ.ಗಳು ಅನುದಾನವನ್ನು ಹೊರತುಪಡಿಸಿ);

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿನ ಲೋಕೋಪಯೋಗಿ ಇಲಾಖೆಯ ರಸ್ತೆಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನದಲ್ಲಿದೆ.

ಆ) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಅಭಿವೃದ್ಧಿ ಯೋಜನೆ ಅಡಿ ಲೋಕೋಪಯೋಗಿ ಇಲಾಖೆ ರಸ್ತೆಗಳ ವಿಶೇಷ ಅಭಿವೃದ್ಧಿಯನ್ನು ಸುಮಾರು 6585 ಲಕ್ಷ ರೂ.ಗಳ ಅಂದಾಜಿನಲ್ಲಿ 1990–91ನೇ ಸಾಲಿನಲ್ಲಿ ತೆಗೆದುಕೊಂಡಿದ್ದು ಅಭಿವೃದ್ಧಿ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದೆ. ಅನುದಾನ ಲಭ್ಯತೆಯನ್ನು ಸರಿಸಿ ಒಟ್ಟು 4 ವರ್ಷಗಳ ಅವಧಿಯಲ್ಲಿ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು.

ಇ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಶಾಸಕರ ಹೆಸರಿನಲ್ಲಿ 25 ಲಕ್ಷ ರೂ.ಗಳನ್ನು ನೀಡುವ ಪ್ರಸ್ತಾಪವು ಇರುವುದಿಲ್ಲ.

ಧಾರವಾಡ ಜಿಲ್ಲಾ ಪರಿಷತ್ ರಸ್ತೆಗಳ ಡಾಂಬರೀಕರಣದ ವಿವರ

132 (303) ಶ್ರೀ ಪಿ.ಸಿ. ಸಿದ್ದನಗೌಡರ (ಕಲಘಟಗಿ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜಿಲ್ಲಾ ಪರಿಷತ್, ಧಾರವಾಡ ಇವರು ಎಷ್ಟು ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಲು ಯೋಜನೆ ಮಾಡಿದ್ದರು, ಹಾಗೂ ಸರ್ಕಾರದಿಂದ ಮಂಜೂರಾದ ಕಿ.ಮೀ. ಎಷ್ಟು;

ಆ) 1990–91, 91–92, ಹಾಗೂ 92–93ರಲ್ಲಿ ಪೂರ್ತಿ ಮಾಡಿದ ಡಾಂಬರೀಕರಣ ರಸ್ತೆ ಎಷ್ಟು (ಕಿ.ಮೀ.ಗಳಲ್ಲಿ);

ಇ) ಬೆಳಗಾಂವ್ ಜಿಲ್ಲಾಪರಿಷತ್ತಿನವರು ಎಷ್ಟು ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಿರುವುದು;

ಈ) ಧಾರವಾಡ ಜಿಲ್ಲಾಪರಿಷತ್ತಿನವರು ಮಂಜೂರಾದ ಡಾಂಬರ್ ರಸ್ತೆಯನ್ನು ಡಾಂಬರೀಕರಣ ಮಾಡದೇ ಇರಲು ಕಾರಣವೇನು;

ಉ) ಮಂಜೂರಾದ ಡಾಂಬರ್ ರಸ್ತೆಯನ್ನು ಪೂರ್ಣ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ;

ಊ) ಈ ರಸ್ತೆಗಳನ್ನು ಡಾಂಬರೀಕರಣ ಮೊದಲು ನೇಮಿಸಿರುವ ಕಂಟ್ರ್ಯಾಕ್ಟದಾರರುಗಳು ಯಾರ್‍ಯಾರು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 1992–93ನೇ ಸಾಲಿನಲ್ಲಿ ಧಾರವಾಡ ಜಿಲ್ಲಾ ಪರಿಷತ್‌ನ ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಒಟ್ಟು 20ಕಿ.ಮೀ. ಗಳಿಗೆ ಡಾಂಬರೀಕರಣ ಮಾಡಲು ಯೋಜಿಸಲಾಗಿದೆ. ಸರ್ಕಾರದ ಮಂಜೂರಾತಿಯ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಧಾರವಾಡ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ 1990–91ರಲ್ಲಿ 1 ಕಿ.ಮೀ. 1991–92ರಲ್ಲಿ 6 ಕಿ.ಮೀ. ಡಾಂಬರೀಕರಣ ಮಾಡಿ ಮುಗಿಸಲಾಗಿದೆ. 1992–93ನೇ ಸಾಲಿನಲ್ಲಿ ಇಲ್ಲಿಯವರೆಗೆ 3ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಿ ಮುಗಿಸಲಾಗಿದೆ.

ಇ) ಬೆಳಗಾಂವ್ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ 1992–93ನೇ ಸಾಲಿನಲ್ಲಿ 87 ಕಿ.ಮೀ. ಡಾಂಬರೀಕರಣ ಮಾಡಲು ಯೋಚಿಸಿದ್ದು ಇಲ್ಲಿಯವರೆಗೆ 37.90ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಲಾಗಿದೆ.

ಈ) ಸಕಾಲದಲ್ಲಿ ಡಾಂಬರು ಲಭ್ಯವಾಗದಿದ್ದುದ್ದರಿಂದಲೂ ಹಾಗೂ ಸಗಟು ಡಾಂಬರನ್ನು ಶೇಖರಿಸಿಕೊಳ್ಳಲು ವ್ಯವಸ್ಥೆ ಇಲ್ಲದಿರುವುದರಿಂದಲೂ, ಡಾಂಬರೀಕರಣದ ನಿರ್ದಿಷ್ಟ ಗುರಿಯನ್ನು ಸಾಧಿಸಿರುವುದಿಲ್ಲ.

ಉ) ಆವಶ್ಯವಿರುವ ಡಾಂಬರನ್ನು ಕ್ರಮ್ಮುಗ್ರಳಲ್ಲಿ ಪಡೆಯಲು ಜಿಲ್ಲಾ ಪರಿಷತ್ತಿನವರಿಂದ ಪ್ರಯತ್ನ ಮಾಡಲಾಗುತ್ತಿದೆ. ಸಗಟು ಡಾಂಬರನ್ನು ಶೇಖರಿಸಲು ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಊ) ಡಾಂಬರೀಕರಣ ಕೆಲಸ ಮಾಡಲು ಈ ಕೆಳಗೆ ನಮೂದಿಸಿದ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ ಹಾಗೂ ಕೆಲವು ಡಾಂಬರೀಕರಣ ಕಾಮಗಾರಿಗಳನ್ನು ಇಲಾಖಾ ವತಿಯಿಂದ ಕೈಗೊಳ್ಳಲಾಗುತ್ತಿದೆ.

1. ಶ್ರೀ ಎಂ.ಎಸ್. ಸಂಕನಗೌಡಶಾನಿ – ಹುಬ್ಬಳ್ಳಿ
2. ಶ್ರೀ ಬಿ.ಎಸ್. ವಾಲಿ – ಗದಗ
3. ಶ್ರೀ ಎನ್.ಎಂ. ಮುಗಳಿ – ಎಲಿವಾಳ

ರಾಜ್ಯದಲ್ಲಿರುವ ಜಲಾನಯನ ಪ್ರದೇಶಗಳಿಂದ ನೀರಾವರಿಯಾದ ಜಮೀನಿನ ವಿಸ್ತೀರ್ಣ

135 (306) ಶ್ರೀ ಜಿ. ರಾಜುಗೌಡ (ಹನೂರು):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಷ್ಟು ಜಲಾನಯನ ಪ್ರದೇಶಗಳಿವೆ;

ಆ) ಯಾವ ಯಾವ ಜಲಾನಯನಗಳಿಂದ ಈಗ ಎಷ್ಟು ಟಿ.ಎಂ.ಸಿ. ನೀರು ದೊರೆಯುತ್ತದೆ;

ಇ) ಇದರಿಂದ ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಟ್ಟಿದೆ.

ಈ) ಎಲ್ಲಾ ಯೋಜನೆಗಳು ಪೂರ್ಣವಾಗಿ ಕಾರ್ಯಗತಗೊಂಡಲ್ಲಿ ರಾಜ್ಯಕ್ಕೆ ದೊರೆಯುವ ನೀರಿನ ಪ್ರಮಾಣ ಎಷ್ಟು;

ಉ) ಇದಕ್ಕೆ ಬೇಕಾಗುವ ಕಾಲ, ಹಣದ ಜಲ ಸಂಪನ್ಮೂಲಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ), ಆ), ಇ), ಈ) ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಉ) ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗುವ ಕಾಲ ರಾಜ್ಯದ ಸಂಪನ್ಮೂಲವನ್ನವಲಂಬಿಸಿರುತ್ತದೆ. ಈ ಯೋಜನೆಗಳನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು.

ಅನುಬಂಧ

(ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 306)

ಕರ್ನಾಟಕದ ಜಲಾನಯನ ಪ್ರದೇಶಗಳು ಮತ್ತು ಇವುಗಳಿಂದ ಉಪಯೋಗಿಸಿಕೊಳ್ಳುವ ನೀರಿನ ಪ್ರಮಾಣದ ವಿವರಗಳು

ಕ್ರ. ಸಂ.	ಜಲಾನಯನ	ಸರಾಸರಿ ವಾರ್ಷಿಕ ಜಲ ಸಂಪತ್ತು (ಟಿ.ಎಂ.ಸಿ.ಗಳಲ್ಲಿ)	ನೀರಾವರಿಗೆ ನಿಗದಿಪಡಿಸಿರುವ ನೀರಿನ ಪ್ರಮಾಣ (ಟಿ.ಎಂ.ಸಿ.ಗಳಲ್ಲಿ)	ಇದುವರೆಗೆ ಉಪಯೋಗಿಸಿಕೊಳ್ಳಲಾಗುತ್ತಿರುವ ನೀರು (ಟಿ.ಎಂ.ಸಿ.ಗಳಲ್ಲಿ)	ಇದುವರೆಗೆ ನೀರಾವರಿಗೆ ಒಳಪಟ್ಟಿರುವ ಪ್ರದೇಶ (ಲಕ್ಷ ಹೆಕ್ಟೇರ್‌ಗಳಲ್ಲಿ)
1	2	3	4	5	6
1.	ಕೃಷ್ಣಾ ಜಲಾನಯನ	970	757.00	472.21	14.55
2.	ಕಾವೇರಿ ಜಲಾನಯನ	425	408.00	275.61	5.91
3.	ಗೋದಾವರಿ ಜಲಾನಯನ	50	22.37	6.88	0.23
4.	ಉತ್ತರ ಪೆನ್ನಾರ್ ಜಲಾನಯನ				
5.	ದಕ್ಷಿಣ ಪೆನ್ನಾರ್ ಜಲಾನಯನ	32	27.30	26.82	0.23
6.	ಪಾಲಾರ್ ಜಲಾನಯನ				
7.	ಪಶ್ಚಿಮಕ್ಕೆ ಹರಿಯುವ ನದಿಗಳು	2000	66.95	13.20	1.05
	ಒಟ್ಟು	3477	1281.62	794.72	22.84

ವಳಬಳ್ಳಾರಿ ಮತ್ತು ಹುಡಾ ಗ್ರಾಮದ ಏತ ನೀರಾವರಿ ಯೋಜನೆ

138 (402) ಶ್ರೀ ಪಿ. ಹಂಪನಗೌಡ (ಸಿಂಧನೂರ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1993-94ನೇ ಸಾಲಿನಲ್ಲಿ ಸಿಂಧನೂರ ತಾಲ್ಲೂಕಿನಲ್ಲಿ ಬರುವ ವಳಬಳ್ಳಾರಿ ಮತ್ತು ಹುಡಾ ಗ್ರಾಮಗಳ ಏತನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇರುವುದೇ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಈ ಯೋಜನೆಗಳ ಶಕ್ಯತೆ ಬಗ್ಗೆ ಇನ್ನೂ ಪರಿಶೀಲಿಸಬೇಕಾಗಿದೆ. ಶಕ್ಯವೆಂದು ಕಂಡುಬಂದ ನಂತರವೇ ಕೈಗೆತ್ತಿಕೊಳ್ಳುವ ಪ್ರಶ್ನೆ ಉದ್ಭವಿಸುವುದು.

ಮೂಡಬಿದರೆ ಕ್ಷೇತ್ರದಲ್ಲಿ ಜಿಲ್ಲಾ ಪರಿಷತ್ತಿನಿಂದ ಪಡೆದ ರಸ್ತೆಗಳ ಅಭಿವೃದ್ಧಿ

139 (398) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಬಿದರೆ ಕ್ಷೇತ್ರದಲ್ಲಿ – ಜಿಲ್ಲಾ ಪರಿಷತ್‌ನಿಂದ ಹಿಂದೆ ಪಡೆದ ರಸ್ತೆಗಳ ಉದ್ದವೆಷ್ಟು;

ಆ) ಸರ್ಕಾರ ರಸ್ತೆಯನ್ನು ಪಡೆದ ಬಳಿಕ ಈ ರಸ್ತೆಗಳ ಬಗ್ಗೆ ಎಷ್ಟು ಖರ್ಚು ಮಾಡಿದೆ;

ಇ) ಪಟ್ಲ ಎಂಬ ಸೇತುವೆ ಪೂರ್ಣಗೊಂಡಿದ್ದು ಅದಕ್ಕೆ ಸಂಪರ್ಕ ರಸ್ತೆ ಇಲ್ಲದೆ ಮುಂದಿನ ಮಳೆಗಾಲದಲ್ಲಿ ತೊಂದರೆ ಉಂಟಾಗುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) 30.40 ಕಿ.ಮೀ.

ಆ) ಈ ರಸ್ತೆಗಳ ನಿರ್ವಹಣೆಗಾಗಿ 24,060 ರೂ. ಮತ್ತು ನವೀಕರಣ ಕಾಮಗಾರಿಗಾಗಿ 11.310 ರೂ.ಗಳ ವೆಚ್ಚ ಮಾಡಲಾಗಿದೆ.

ಇ) ಬಂದಿದೆ.

ಈ) ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಗೆ ಇದನ್ನು ಇತ್ತೀಚೆಗೆ ಹಸ್ತಾಂತರಿಸಿರುವುದರಿಂದ, ಈ ಹೊಸ ಸೇತುವೆಯ ಬಾಕಿ ಕೆಲಸಗಳು ಮತ್ತು ಕೂಡುರಸ್ತೆಯ ರಚನೆಯು ಪೂರ್ಣಗೊಳ್ಳುವವರೆಗೆ ಹಾಲಿ ಇರುವ ಮುಳುಗು ಸೇತುವೆಯನ್ನು ದುರಸ್ತಿಪಡಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಲಾಗುವುದು.

ಬೆಳಗಾವಿ ಜಿಲ್ಲೆಯಲ್ಲಿ ರಸ್ತೆಗಳ ರಿಪೇರಿ

141 (443) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಜಿಲ್ಲಾಪರಿಷತ್ ಹಾಗೂ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರದವರು ಎಷ್ಟು ಹಣವನ್ನು ವಿವಿಧ ಇಲಾಖೆಗಳಿಗೆ ಬಿಡುಗಡೆ ಮಾಡಿರುವುದು ಮತ್ತು ಯಾವ ರಸ್ತೆಗಳನ್ನು ಸುಧಾರಣೆ ಮಾಡಲು ಬಿಡುಗಡೆ ಮಾಡಿರುವುದು (ಎಲ್ಲಾ ಸಂಪೂರ್ಣ ವಿವರ ಒದಗಿಸುವುದು);

ಇ) ಹಾಗಿಲ್ಲದಿದ್ದಲ್ಲಿ, ಇನ್ನು ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು;

ಈ) ಬೈಲಹೊಂಗಲ ತಾಲ್ಲೂಕಿನ ವಣ್ಣೂರ, ಮೇಕಲಮರಡಿ ಹಾಗೂ ಸವದತ್ತಿ ತಾಲ್ಲೂಕಿನ ಚಚಡಿ ಮರಕುಂಬಿ ರಸ್ತೆ ಇತ್ತೀಚೆಗೆ ಬಿದ್ದ ಮಳೆಯಲ್ಲಿ ದುರಸ್ತಿಗೆ ಬಂದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ ಈ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬೆಳಗಾವಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ರಸ್ತೆಗಳಿಗೆ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಚಿಕ್ಕೊಡಿ ತಾಲ್ಲೂಕಿನ ಯಡೂರ ಮಾರ್ಗವಾಗಿ ಜೆ.ಎಸ್. ರಸ್ತೆಗೆ ಮಾಂಜ್ರೆ ಹತ್ತಿರ ಸೇರುವ ರಸ್ತೆಯ ಕುಸಿದ ಭಾಗವನ್ನು ದುರಸ್ತಿ ಮಾಡುವುದಕ್ಕೆ 2.00 ಲಕ್ಷ ರೂ.ಗಳನ್ನು ಹಾಗೂ ಅಥಣಿ ತಾಲ್ಲೂಕಿನ ಮುರಗೂಡಿ ಮದಭಾವಿ–ಜುಮನಾಳ ರಸ್ತೆ ಸುಧಾರಣೆಗಾಗಿ 0.55 ಲಕ್ಷ ರೂ.ಗಳನ್ನು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.

ಇ) ಅತಿವೃಷ್ಟಿ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆಯ ಬಗ್ಗೆ ಬೇಡಿಕೆ ಸಲ್ಲಿಸಲಾಗಿದ್ದು ವಿಷಯವು ಪರಿಶೀಲನೆಯಲ್ಲಿದೆ.

ಈ) ಬಂದಿದೆ.

ಉ) ಬೈಲಹೊಂಗಲ ತಾಲ್ಲೂಕಿನ ವಣ್ಣೂರ ಮೇಕಲಮರಡಿ ರಸ್ತೆ ಹಾಗೂ ಸವದತ್ತಿ ತಾಲ್ಲೂಕಿನ ಚಚಡಿ–ಮರಕುಂಬಿ ರಸ್ತೆಗಳು ಅತಿ ಕೆಟ್ಟು ಹೋದ ಭಾಗಗಳನ್ನು ವಿಶೇಷ ದುರಸ್ತಿಯನ್ನು ಲಭ್ಯವಿರುವ ಅನುದಾನದಲ್ಲಿ ತೆಗೆದುಕೊಳ್ಳಲಾಗಿದೆ.

ಮಲಪ್ರಭಾ ಮತ್ತು ಘಟಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ತೆಗೆದುಕೊಂಡ ಕೆಲಸಗಳು

144 (646 ಎ) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೈಲಹೊಂಗಲ ಮತ್ತು ಸವದತ್ತಿ ಪುನರ್ವಸತಿ ಏರಿಯಾದಲ್ಲಿ ಹಾಗೂ ಕಮಾಂಡ್ ಏರಿಯಾದಲ್ಲಿ ಅಚ್ಚುಕಟ್ಟು ಪ್ರದೇಶದ ಜನರಿಗೆ ಸೌಕರ್ಯವನ್ನು ಕೊಡುವುದರಲ್ಲಿ ಬಹಳ ವಿಳಂಬವಾದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಇಲ್ಲಿ ಯಾವ ಯಾವ ಕೆಲಸ ತೆಗೆದುಕೊಳ್ಳಲಾಗಿದೆ ಮತ್ತು ಯಾವ ಯಾವ ಕೆಲಸಗಳಿಗೆ ಎಷ್ಟು ಎಷ್ಟು ಹಣ ಒದಗಿಸಲಾಗಿದೆ ಮತ್ತು ಎಷ್ಟು ಹಣ ಖರ್ಚಾಗಿರುವುದು (ಸಂಪೂರ್ಣ ವಿವರ ಕೊಡುವುದು);

ಆ) ಇಂಥ ವಿಳಂಬ ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಮಲಪ್ರಭಾ ಯೋಜನೆಯು 33 ಪುನರ್ವಸತಿ ಕೇಂದ್ರಗಳಲ್ಲಿ 1970ರ ಆದೇಶದ ಪ್ರಕಾರ ಸೌಕರ್ಯಗಳನ್ನು ಬಹಳ ಹಿಂದೆಯೇ ಒದಗಿಸಿ 1982ರ ಸರ್ಕಾರಿ ಆದೇಶದಂತೆ ಸಂಬಂಧಪಟ್ಟ ಇಲಾಖೆಗಳಿಗೆ ಹಸ್ತಾಂತರಿಸಲಾಗಿರುವುದರಿಂದ ಈಗ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಆದಾಗ್ಯೂ

ಪುನರ್ವಸತಿ ಕೇಂದ್ರಗಳಲ್ಲಿ ಹೆಚ್ಚಿನ ಸೌಲಭ್ಯದ ಬಗ್ಗೆ ಬೇಡಿಕೆಗಳು ಬರುತ್ತಿದ್ದು ಅವುಗಳನ್ನು ಪರಿಶೀಲಿಸಲಾಗುತ್ತಿದೆ.

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅಡಿಯ ಕಾರ್ಯಕ್ರಮದಲ್ಲಿ ಆಯಕಟ್ಟು ರಸ್ತೆ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದ್ದು, 1992–93ನೇ ಸಾಲಿನಲ್ಲಿ 3ಕಿ.ಮೀ. ಉದ್ದದ ಆಯಕಟ್ಟು ರಸ್ತೆ ನಿರ್ಮಾಣಕ್ಕೆ 5 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ಜನವರಿ 1993ರ ಅಂತ್ಯದವರೆಗೆ 0.94 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ವಿಶ್ವ ಆಹಾರ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶಗಳಲ್ಲಿ ರಸ್ತೆ ಕಟ್ಟಡ ಮತ್ತು ಇನ್ನಿತರ ಸೌಕರ್ಯಗಳನ್ನು ಕೂಡಾ ಒದಗಿಸಲಾಗುತ್ತಿದೆ. ಇದರಂತೆ, ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ 1992–93ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳು ಈ ರೀತಿ ಇದೆ:–

ವಿಶ್ವ ಆಹಾರ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶಗಳಲ್ಲಿ ರಸ್ತೆ ಕಟ್ಟಡ ಮತ್ತು ಇನ್ನಿತರ ಸೌಕರ್ಯಗಳನ್ನು ಕೂಡಾ ಒದಗಿಸಲಾಗುತ್ತಿದೆ. ಇದರಂತೆ, ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ 1992–93ನೇ ಸಾಲಿನಲ್ಲಿ 3ಕಿ.ಮೀ. ಉದ್ದದ ಆಯಕಟ್ಟು ರಸ್ತೆ ನಿರ್ಮಾಣಕ್ಕೆ 5 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿದೆ. ಜನವರಿ 1993ರ ಅಂತ್ಯದವರೆಗೆ 0.94 ಲಕ್ಷ ರೂ. ವೆಚ್ಚ ಮಾಡಲಾಗಿದೆ.

ವಿಶ್ವ ಆಹಾರ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶಗಳಲ್ಲಿ ರಸ್ತೆ ಕಟ್ಟಡ ಮತ್ತು ಇನ್ನಿತರ ಸೌಕರ್ಯಗಳನ್ನು ಕೂಡಾ ಒದಗಿಸಲಾಗುತ್ತಿದೆ. ಇದರಂತೆ, ಸವದತ್ತಿ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ 1992–93ನೇ ಸಾಲಿನಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳು ಈ ರೀತಿ ಇದೆ:–

ಕಾಮಗಾರಿಗಳ ಹೆಸರು	92–93ರ ಕಾರ್ಯಕ್ರಮ (ಲಕ್ಷ ರೂ.)	ಡಿಸೆಂಬರ್ 92ರವರೆಗಿನ ವೆಚ್ಚ (ಲಕ್ಷ ರೂ.)
ಸವದತ್ತಿ ತಾಲ್ಲೂಕು		
1. ಹೂಲಿಯಿಂದ ಚುಳಕಿವರೆಗಿನ ರಸ್ತೆ	9.55	4.98
2. ಆಲದಕಟ್ಟಿಯಲ್ಲಿ ಎರಡು ಕೊಠಡಿ ಪ್ರಾಥಮಿಕ ಶಾಲೆ,	1.60	0.55
ಬೈಲಹೊಂಗಲ ತಾಲ್ಲೂಕು		
3. ನಯಾನಗರದಲ್ಲಿ ವಿವಿದೋದ್ದೇಶ ಕಮ್ಯೂನಿಟಿ ಕಟ್ಟಡ	3.79	3.65

ಆ) ಉದ್ಭವಿಸುವುದಿಲ್ಲ

ಏತನೀರಾವರಿ ನಿಗಮದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ

146 (445) ಶ್ರೀ ಉಮೇಶ್ ವಿ.ಕತ್ತಿ, (ಹುಕ್ಕೇರಿ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಐತ ನೀರಾವರಿ ನಿಗಮದಲ್ಲಿ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು (ಹುದ್ದೆವಾರು ವಿವರ ನೀಡುವುದು);

ಆ) ಅವುಗಳಲ್ಲಿ ಖಾಯಂ ಆದವರ ಸಂಖ್ಯೆ ಎಷ್ಟು ಹಾಗೂ ಆಗದೇ ಇದ್ದವರ ಸಂಖ್ಯೆ ಎಷ್ಟು;

ಇ) ಅವರುಗಳನ್ನು ಖಾಯಂ ಯಾವಾಗ ಮಾಡಲಾಗುವುದು ಮತ್ತು ಖಾಯಂ ಮಾಡಲು ಇರುವ ತೊಂದರೆಗಳೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 420
ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಯಾರೂ ಖಾಯಂ ಆಗಿರುವುದಿಲ್ಲ. ಕಾವೇರಿ ಜಲಾನಯನ ಐತ ನೀರಾವರಿ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ 197 ನಿಗಮದ ನೌಕರರನ್ನು ಸಕ್ರಮಗೊಳಿಸಲು ದಿನಾಂಕ 19–2–92ರಂದು ಜರುಗಿದ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಿರುವ ಬಗ್ಗೆ ಈಗ ಸರ್ಕಾರದ ಗಮನಕ್ಕೆ ಬಂದಿದ್ದು, ಸರ್ಕಾರ ಈ ಬಗ್ಗೆ ಪರಿಶೀಲಿಸುತ್ತಿದೆ.

ಇ) ಖಾಯಂ ಮಾಡುವ ಪ್ರಸ್ತಾವನೆ ಬಗ್ಗೆ ಸರ್ಕಾರ ಇನ್ನು ಪರಿಶೀಲಿಸಿರುವುದಿಲ್ಲ.

ಅನುಬಂಧ

(ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 445– ಶ್ರೀ ಉಮೇಶ ವಿ.ಕತ್ತಿ. ವಿಧಾನಸಭಾ ಸದಸ್ಯ)

ಕಾವೇರಿ ಮತ್ತು ಕೃಷ್ಣಾ ಜಲಾನಯನ ಏತನೀರಾವರಿ ನಿಗಮದಲ್ಲಿ ಕೆಲಸ ಮಾಡುತ್ತಿರುವ ನೌಕರರ ವಿವರಗಳು.

ಕ್ರ. ಸಂ.	ಹುದ್ದೆಯ ಪದನಾಮ	ನಿಗಮದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಖ್ಯೆ			
		ಕೃಷ್ಣಾ ಏ.ನೀ.ನಿ.		ಕಾವೇರಿ ಏ.ನೀ.ನಿ.	
		ಎರವಲು	ನಿಗಮದ ನೌಕರರು	ಎರವಲು	ನಿಗಮದ ನೌಕರರು
1.	ವ್ಯವಸ್ಥಾಪಕ ನಿರ್ದೇಶಕರು	1	–	–	–
2.	ಉಪ ನಿರ್ದೇಶಕರು	1	–	1	–
3.	ಕಾರ್ಯಪಾಲಕ ಇಂಜಿನಿಯರ್	2	–	3	–
4.	ಮುಖ್ಯ ಲೆಕ್ಕಾಧಿಕಾರಿ	1	–	1	–
5.	ಸಹಾಯಕ ಕಾರ್ಯಪಾಲಕ ಇಂಜಿನಿಯರು	5	–	9	–
6.	ಕಾರ್ಯದರ್ಶಿ (ಆಡಳಿತಾಧಿಕಾರಿ)	–	–	–	–
7.	ಆಡಳಿತಾಧಿಕಾರಿ	–	–	–	1
8.	ಸಹಾಯಕ ಇಂಜಿನಿಯರ್	–	52	1	62
9.	ಕಿರಿಯ ಇಂಜಿನಿಯರ್	–	29	–	24
10.	ಸೂಪರಿಂಟೆಂಡೆಂಟ್	1	–	–	–
11.	ಲೆಕ್ಕ ಅಧೀಕ್ಷಕರು	3	–	4	
12.	ಲೆಕ್ಕ ಪರಿಶೋಧಕರು	–	–	1	–
13.	ವ್ಯವಸ್ಥಾಪಕರು	–	–	1	–
14.	ರೇಖಿ ಚಿತ್ರಾಕಾರರು	–	–	–	3
15.	ಪ್ರಥಮ ದರ್ಜೆ ಸಹಾಯಕರು	6	5+1=6	3	19
16.	ಪ್ರಥಮ ದರ್ಜೆ ಲೆಕ್ಕ ಸಹಾಯಕರು	1	2	–	–
17.	ಪ್ರಥಮ ದರ್ಜೆ ಉಗ್ರಾಣ ಪಾಲಕರು	3	–	–	–
18.	ಪ್ರಥಮ ದರ್ಜೆ ರೆವಿನ್ಯೂ ಸರ್ವೆಯರ್	1	–	–	–
19.	ಪ್ರಥಮ ದರ್ಜೆ ಭೂಮಾಪಕರು	–	–	3	–
20.	ಶೀಘ್ರಲಿಪಿಗಾರರು	–	1	–	1
21.	ದ್ವಿತೀಯ ದರ್ಜೆ ಸಹಾಯಕರು	–	14	–	28
22.	ದ್ವಿತೀಯ ದರ್ಜೆ ಲೆಕ್ಕಸಹಾಯಕರು	2	2	–	–

23.	ಬೆರಳಚ್ಚುಗಾರರು	–	15	–	13
24.	ಟ್ರೇಸರ್	–	3	–	–
25.	ಬ್ಲೂಪ್ರಿಂಟರ್	–	3	–	–
26.	ಅನುಚರರು (ಅಟೆಂಡರ್)	–	1	–	1
27.	ನಾಲ್ಕನೇ ದರ್ಜೆ ನೌಕರರು (ಪೀವನ್)	1	15	–	34
28.	ಕಾವಲುಗಾರರು (ವಾಚ್‌ಮನ್)	1	11	–	–
29.	ವಾಹನ ಚಾಲಕರು	1	12	–	11
	ಒಟ್ಟು	30	166	27	197

ಪ್ರತಿವಿಧಾನ ಸಭಾಕ್ಷೇತ್ರಕ್ಕೆ 40 ಲಕ್ಷ ರೂಪಾಯಿಗಳನ್ನು ಒದಗಿಸುವ ತೀರ್ಮಾನ

151 (452) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿ ಕೆಲಸಗಳಿಗೆ ಲೋಕೋಪಯೋಗಿ ಇಲಾಖೆ ಮುಖಾಂತರ 40 ಲಕ್ಷ ರೂಪಾಯಿ ಒದಗಿಸಲು (1992–93)ರಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದು ನಿಜವೆ;

ಆ) ಹಾಗಿದ್ದಲ್ಲಿ ಅದಕ್ಕೆ ಹಣ ಒದಗಿಸಲಾಗಿದೆಯೆ;

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಪ್ರಸ್ತಾಪವು ಪರಿಶೀಲನೆಯಲ್ಲಿದೆ.

ಆ) ಇಲ್ಲ

ಇ) ಅನುದಾನ ನಿಗದಿಪಡಿಸುವ ವಿಷಯವು ಪರಿಶೀಲನೆಯಲ್ಲಿದೆ.

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಅತೀವೃಷ್ಟಿಯಿಂದ ಹಾಳಾದ ರಸ್ತೆಗಳ ದುರಸ್ತಿಗೆ ಹಣ

152 (544) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ವಿಧಾನಸಭಾ ಕ್ಷೇತ್ರದ ಕಸಬ ಕಟ್ಟಾಯ ಮತ್ತು ಶಾಂತ ಗ್ರಾಮದ ಹೋಬಳಿಗಳಲ್ಲಿ ಕಳೆದ ವರ್ಷದ ಅತೀವೃಷ್ಟಿಯಿಂದ ಯಾವ ಯಾವ ಊರಿನ ಕೂಡ ರಸ್ತೆಗಳು ಕೊಚ್ಚಿ ಹೋಗಿದ್ದು ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ (ವಿವರ ಕೊಡುವುದು);

ಆ) ಈ ರಸ್ತೆಗಳ ರಿಪೇರಿಗೆ ಅಂದಾಜುಗಳು ತಯಾರಾಗಿದೆಯೆ (ವಿವರ ಕೊಡುವುದು);

ಇ) ಈ ಅಂದಾಜುಗಳ ಒಟ್ಟು ಮೊಬಲಗೆಷ್ಟು (ವಿವರ ಕೊಡುವುದು);

ಈ) ಈ ರಸ್ತೆಗಳ ರಿಪೇರಿಗೆ ಇದುವರೆವಿಗೆ ಎಷ್ಟು ಹಣ ಖರ್ಚಾಗಿದೆ (ವಿವರ ಕೊಡುವುದು);

ಉ) ಈ ರಸ್ತೆಗಳ ರಿಪೇರಿಗಳು ಇನ್ನೆಷ್ಟು ಕಾಲಾವಧಿಯಲ್ಲಿ ಮುಗಿಯಲಿವೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಯವರು):–

ಅ) ಹಾಸನ ಜಿಲ್ಲೆಯ ಕಸಬ, ಕಟ್ಟಾಯ ಹಾಗೂ ಶಾಂತಿ ಗ್ರಾಮದಲ್ಲಿ 1992ರಂದು ಆದ ಅತೀವೃಷ್ಟಿಯಿಂದ ರಸ್ತೆಗಳಿಗೆ ಆಗಿರುವ ಹಾನಿಯ ವಿವರ ಲಗತ್ತಿಸಿರುವ ಪಟ್ಟಿಯನ್ನು ವಿವರಿಸಿದೆ.

ಆ) ಅಂದಾಜು ಮಾಡಿದೆ. ವಿವರವನ್ನು ಪಟ್ಟಿಯಲ್ಲಿ ತೋರಿಸಲಾಗಿದೆ.

ಇ) 22.61 ಲಕ್ಷ ರೂ.ಗಳು ವಿವರವನ್ನು ಪಟ್ಟಿಯಲ್ಲಿ ತೋರಿಸಲಾಗಿದೆ.

ಈ) 0.90 ಲಕ್ಷ ರೂಗಳ ವಿವರವನ್ನು ಪಟ್ಟಿಯಲ್ಲಿ ತೋರಿಸಲಾಗಿದೆ.

ಉ) ವಿವರವನ್ನು ಪಟ್ಟಿಯಲ್ಲಿ ನೀಡಲಾಗಿದೆ.

ಪ್ರಶ್ನೆ ಸಂಖ್ಯೆ 544ಕ್ಕೆ ಅನುಬಂಧ

1992ರಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ರಸ್ತೆಗಳ ವಿವರ	ರಸ್ತೆಗಳ ದುರಸ್ತಿಗೆ ಅಂದಾಜು	ತುರ್ತು ದುರಸ್ತಿಗೆ ಆಗಿರುವ ವೆಚ್ಚ	ಷರಾ
	(ಲಕ್ಷ ರೂ.ಗಳಲ್ಲಿ)		
ಕಸಬಾ ಹೋಬಳಿ			
1. ಬಿಳಿಕೆರೆ – ಕರಿಕೆರೆ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)	0.90	0.08	ಅತೀವೃಷ್ಟಿ ಪರಿಹಾರ ಅನುದಾನದ ಲಭ್ಯತೆ ಇಲ್ಲದಿದ್ದುದರಿಂದ ಅಂದಾಜು ಮಂಜೂರಾಗಿಲ್ಲ. ಆದಾಗ್ಯೂ ಕೆಲವು ತುರ್ತು ದುರಸ್ತಿಯನ್ನು ಲೋಕೋಪಯೋಗಿ ಇಲಾಖೆ ಎನ್.ಎಂ.ಆರ್. ನೌಕರ ವರ್ಗದವರಿಂದ ಮಾಡಿಸಲಾಗಿದೆ. ಪೂರ್ಣ ದುರಸ್ತಿಯನ್ನು ಅನುದಾನ ದೊರೆತ ನಂತರ ಮಾಡಲಾಗುವುದು.
ಕಟ್ಟಾಯ ಹೋಬಳಿ			
1. ಕಟ್ಟಾಯ–ಹಳ್ಳಿಬೈಲು ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)	6.40	0.08	
2. ಗೋರುರ–ಬಿನಕುರಳಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)			

ಶಾಂತಿ ಗ್ರಾಮ ಹೋಬಳಿ			
1. ಗೋರುರು–ಬಿನಕುರಳಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)	13.90	0.14	
2. ಹೊಸಹಳ್ಳಿ – ಬಿಡಿಗನವಿಕೆ ಹಳ್ಳಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)			
3. ಬೆಟ್ಟದಪುರ – ಹೆರಗು – ಶಾಂತಿ ಗ್ರಾಮ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)			
4. ಕಾಶಿಕ – ಮರ್ಕುಲಿ ರಸ್ತೆ (ಲೋಕೋಪಯೋಗಿ ಇಲಾಖೆ ವ್ಯಾಪ್ತಿ)			
5. ಕಾಶಿಕ – ಮರ್ಕುಲಿ ರಸ್ತೆ (ಜಿಲ್ಲಾ ಪರಿಷತ್ ವ್ಯಾಪ್ತಿ)	0.20	0.26	ದುರಸ್ಥಿ ಮುಗಿದಿದೆ
6. ಅಂಜುಗ–ಗುಡುಗನಹಳ್ಳಿ – ಬನವಾಸಿ (ಜಿಲ್ಲಾ ಪರಿಷತ್ ವ್ಯಾಪ್ತಿ)	1.00	0.57	ಮಾರ್ಚ್ 93ರ ಒಳಗಾಗಿ ಮುಗಿಸಲಾಗುವುದು
7. ಬಿ.ಎಂ. ರಸ್ತೆಯಿಂದ ಕಾಶಿಕ – ಮರ್ಕುಲಿ ವಯಾ ದೊಡ್ಡಗೇಣೆಗೆರೆ ರಸ್ತೆ (ಜಿಲ್ಲಾ ಪರಿಷತ್ ವ್ಯಾಪ್ತಿ)	0.15	0.07	
	22.81	1.20	

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಅತಿವೃಷ್ಟಿಯಿಂದ ಡ್ಯಾಮೇಜ್ ಆದ ಕೆರೆಗಳು

153 (543) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಕ್ಷೇತ್ರದ ಕಸಬ ಕಟ್ಟಾಯ ಮತ್ತು ಶಾಂತಿಗ್ರಾಮದ ಹೋಬಳಿಗಳಲ್ಲಿ ಕಳೆದ ವರ್ಷದ ಧಾರಾಕಾರ ಮಳೆಯಿಂದ ಯಾವ ಯಾವ ಊರುಗಳಲ್ಲಿ ಯಾವ ಯಾವ ಸಣ್ಣ ಕೆರೆಗಳಿಗೆ ಹಾನಿಯಾಗಿದೆ (ವಿವರ ಕೊಡುವುದು);

ಆ) ಈ ಎಲ್ಲಾ ಕೆರೆಗಳ ದುರಸ್ತಿಗೆ ಅಂದಾಜುಗಳು ತಯಾರಾಗಿವೆಯೇ (ವಿವರ ಕೊಡುವುದು);

ಇ) ಈ ಬಾಬ್ತಿನಲ್ಲಿ ಇದುವರೆವಿಗೆ ಆ ಕೆರೆಗಳ ದುರಸ್ತಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಉ) ಆ ಕೆರೆಗಳ ದುರಸ್ತಿಯು ಎಷ್ಟು ಕಾಲಾವಧಿಯಲ್ಲಿ ಮುಗಿಯಲಿದೆ ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 1992ನೇ ಸಾಲಿನಲ್ಲಿ ಬಿದ್ದ ಧಾರಾಕಾರ ಮಳೆಯಿಂದ ಹಾಸನ ಕ್ಷೇತ್ರದ ಕಟ್ಟಾಯ ಮತ್ತು ಶಾಂತಿಗ್ರಾಮ ಹೋಬಳಿಗಳಲ್ಲಿ ಒಟ್ಟು 5 ಕೆರೆಗಳಿಗೆ ಹಾನಿಯಾಗಿರುತ್ತದೆ.

(ಅಂದಾಜು ಲಕ್ಷರೂ.ಗಳಲ್ಲಿ)

1. ಕಸಬ ಹೋಬಳಿಯಲ್ಲಿ ಯಾವುದೇ ಕೆರೆ ಹಾನಿ ಆಗಿರುವುದಿಲ್ಲ	0.000
2. ಕಟ್ಟಾಯ ಹೋಬಳಿ	
ಅ) ಹಂದಿನಕೆರೆ	0.655
ಆ) ನಾಯ್ಕನಹಳ್ಳಿ ದೊಡ್ಡ ಕೆರೆ	1.31
ಇ) ಕಿತ್ತನೆಕೆರೆ ದೊಡ್ಡ ಕೆರೆ	0.50
3. ಶಾಂತಿಗ್ರಾಮ ಹೋಬಳಿ	
ಅ) ಕೌಶಿಕಾ ದೊಡ್ಡಕೆರೆ	3.20
ಆ) ಹೊಳಲು ದೊಡ್ಡಕೆರೆ	3.00
ಒಟ್ಟು	8.665

ಆ) ಹೌದು
(ವಿವರ ಮೇಲಿನಂತಿದೆ)

ಇ) ಒಟ್ಟು ರೂ. 8.665 ಲಕ್ಷ

ಈ) ರೂ. 6.30 ಲಕ್ಷ

ಉ) ಹಣಕಾಸಿನ ಲಭ್ಯತೆಯ ಮೇರೆಗೆ ಶೀಘ್ರವಾಗಿ ಮುಗಿಸಲಾಗುವುದು.

ಭದ್ರಾವತಿ – ಶಿವನಿ ರಸ್ತೆ ರಿಪೇರಿ

164 (749) ಶ್ರೀ ಕರಿಯಣ್ಣ (ಹೊಳೆಹೊನ್ನೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿಯಿಂದ ಚನ್ನಗಿರಿ, ತಾಲ್ಲೂಕು ಶಿವನಿಗೆ ಕೇವಲ 15 ಕಿ.ಮೀ.ನಿಂದ 18 ಕಿ.ಮೀ. ಒಳಗೆ ತಲುಪುವ ರಸ್ತೆಯನ್ನು ಸುಮಾರು 10 ವರ್ಷದಿಂದ ದುರಸ್ತಿ ಮಾಡಿದರೂ ಪೂರ್ಣವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇದರಿಂದ ಶಿವನಿಗೆ ಹೋಗುವವರು ಸುಮಾರು 60 ಕಿ.ಮೀ. ಬಳಸಿ ಹೋಗಬೇಕಾಗುವುದು ನಿಜವೆ;

ಇ) ಈ ರಸ್ತೆಯನ್ನು ಯಾವಾಗ ಪೂರ್ಣ ಮಾಡಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಭದ್ರಾವತಿ–ಶಿವನಿ ರಸ್ತೆಯು 20.80 ಕಿ.ಮೀ. ಉದ್ದವಿದ್ದು ಹಂತ ಹಂತವಾಗಿ ಡಾಂಬರು ಮಾಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇಲ್ಲ

ಇ) ಭದ್ರಾವತಿ ತಾಲ್ಲೂಕಿನ ವ್ಯಾಪ್ತಿಯಲ್ಲಿ 0 ಕಿ.ಮೀ.ನಿಂದ 9ನೇ ಕಿ.ಮೀ.ವರೆಗೆ ಡಾಂಬರು ರಸ್ತೆಯಾಗಿದೆ. 10ನೇ ಕಿ.ಮೀ. ನಲ್ಲಿ ಡಾಂಬರೀಕರಣವು ಪ್ರಗತಿಯಲ್ಲಿದ್ದು ಈ ಸಾಲಿನಲ್ಲಿ ಮುಗಿಸಲಾಗುವುದು. ಉಳಿದ ಉದ್ದವು ಜಲ್ಲಿ ರಸ್ತೆಯಾಗಿದ್ದು ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತಹಂತವಾಗಿ ಡಾಂಬರಿಕರಣ ಮಾಡಲಾಗುವುದು.

ಭದ್ರಕಾಡಕ್ಕೆ, ರಸ್ತೆ ಮಾಡಲು ಫೀಲ್ಡ್ ಚಾನಲ್ ಮತ್ತು ಗ್ರಾಮಗಳ ವರ್ಗಾವಣೆಗೆ ಹಣ ಬಿಡುಗಡೆ

165 (752) ಶ್ರೀ ಕರಿಯಣ್ಣ (ಹೊಳೇಹೊನ್ನೂರು):-

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಕಾಡದ ಪೂರ್ಣ ಕೆಲಸವಾಗಿಲ್ಲವೆಂದು 1991–92ನೇ ಸಾಲಿನಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದದ್ದು ನಿಜವೆ;

ಆ) ಇದಕ್ಕೆ ವರ್ಷಕ್ಕೆ 5 ಕೋಟಿಯಂತೆ ಮೂರು ವರ್ಷಗಳಲ್ಲಿ 15 ಕೋಟಿಯನ್ನು 1991–92, 92–93, 93–94ನೇ ಸಾಲುಗಳಲ್ಲಿ ರಸ್ತೆ ಮಾಡುವುದಕ್ಕೆ ಸೇತುವೆ ಕಟ್ಟುವುದಕ್ಕೆ, ಫೀಲ್ಡ್ ಚಾನಲ್ ಹಾಗೂ ಗ್ರಾಮಗಳ ವರ್ಗಾವಣೆಗೆ ಕೊಡಬೇಕೆಂದು ತೀರ್ಮಾನ ಮಾಡಲಾಗಿದೆಯೇ;

ಇ) ಹಾಗಿದ್ದಲ್ಲಿ, ಇದನ್ನು ಜಾರಿಗೆ ತಂದು ಹಣ ಬಿಡುಗಡೆ ಮಾಡಲಾಗುವುದೇ ?

ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಸಚಿವರು):–

ಅ) ನಿಜ. ಆದರೆ ಮುಖ್ಯಮಂತ್ರಿಗಳ ಪರವಾಗಿ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರು ಅಂದಿನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಆ) ಹೌದು

ಇ) 1991–92ನೇ ಸಾಲಿನಲ್ಲಿ ರೂ. 297.75 ಲಕ್ಷಗಳನ್ನು ಹೆಚ್ಚುವರಿ ಬಿಡುಗಡೆ ಮಾಡಲಾಗಿದೆ. 1992–93ನೇ ಸಾಲಿನಲ್ಲಿ ಹೆಚ್ಚುವರಿ ಹಣ ಬಿಡುಗಡೆ ಮಾಡಲು ಸರ್ಕಾರ ಪರಿಶೀಲಿಸುತ್ತಿದೆ. 1993–94ನೇ ಸಾಲಿಗೆ ಬಿಡುಗಡೆ ಮಾಡುವುದನ್ನು ಹಣಕಾಸು ವರ್ಷದಲ್ಲಿ ಪರಿಶೀಲಿಸಲಾಗುವುದು.

ಸೋಮವಾರಪೇಟೆ ಏತ ನೀರಾವರಿ ತಾಲ್ಲೂಕಿನಲ್ಲಿ ಸೌಲಭ್ಯ

156 (555) ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೋಮವಾರಪೇಟೆ ತಾಲ್ಲೂಕಿನ ಆಲೂರು ಸಿದ್ದಾಪುರ, ಚಿಕ್ಕತ್ತೂರು, ಬಸವನಹಳ್ಳಿ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಏತ ನೀರಾವರಿ ನಿರ್ಮಿಸಲಾಗುವುದೇ;

ಆ) ಸದರಿ ಕಾರ್ಯವು ಯಾವ ಹಂತದಲ್ಲಿದೆ ಹಾಗೂ ಇದಕ್ಕಾಗಿ ಎಷ್ಟು ಹಣ ಮಂಜೂರಾಗಿದೆ;

ಇ) ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಪ್ರಶ್ನೆ (ಅ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಯೋಜನೆ ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಶಕ್ಯರೆಂದು ಕಂಡುಬಂದಲ್ಲಿ ಮತ್ತು ಹಣಕಾಸಿನ ಲಭ್ಯತೆಯ ಮೇಲೆ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶಾಸಕರ ಮತಕ್ಷೇತ್ರದಂತೆ ಉಪವಿಭಾಗ ರಚನೆ

158 (641) ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಶಹಾಬಾದ್ ಮತಕ್ಷೇತ್ರಕ್ಕೆ ಬರುವ ಲೋಕೋಪಯೋಗಿ ಇಲಾಖೆ ಉಪವಿಭಾಗಗಳೆಷ್ಟು ? ಹಾಗೂ ಅವುಗಳ ಕೇಂದ್ರ ಸ್ಥಾನಗಳಾವುವು;

2. ಈ ಮತಕ್ಷೇತ್ರಕ್ಕೆ ಎರಡು ಉಪವಿಭಾಗಗಳು ಇರುವುದನ್ನು ತೆಗೆದು ಹಾಕಿ ಯಾವುದಾದರೂ ಒಂದು ಉಪವಿಭಾಗ ಮಾಡಲು ಸಾಧ್ಯವೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

1. ಶಹಾಬಾದ್ ಮತಕ್ಷೇತ್ರವು ಈ ಕೆಳಗಿನ 2 ಲೋಕೋಪಯೋಗಿ ಇಲಾಖೆ ಉಪವಿಭಾಗಗಳ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ.

1. ಲೋಕೋಪಯೋಗಿ ಇಲಾಖೆ ಉಪವಿಭಾಗ, ಗುಲ್ಬರ್ಗಾ (ಕೇಂದ್ರ ಸ್ಥಾನ ಗುಲ್ಬರ್ಗಾ),
2. ಲೋಕೋಪಯೋಗಿ ಇಲಾಖೆ ಉಪವಿಭಾಗ, ಯಾದಗೀರ್ (ಕೇಂದ್ರ ಸ್ಥಾನ ಯಾದಗೀರ್)

2. ಲೋಕೋಪಯೋಗಿ ಉಪವಿಭಾಗಗಳನ್ನು ಮಾಡುವಾಗ "ತಾಲ್ಲೂಕನ್ನು" ಘಟಕವನ್ನಾಗಿ ಪರಿಗಣಿಸಿದ್ದು "ಮತಕ್ಷೇತ್ರದ" ಘಟಕವನ್ನು ಪರಿಗಣಿಸಿರುವುದಿಲ್ಲ. ಆದುದರಿಂದ, ಒಂದು ಉಪವಿಭಾಗ ಮಾಡಲು ಸಾಧ್ಯವಿಲ್ಲ.

ಕೃಷ್ಣ ಮೇಲ್ದಂಡೆ ಯೋಜನೆಗೆ ಮಂತ್ರಿಮಂಡಲದ ಉಪಸಮಿತಿ ರಚನೆ

160 (717) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ):–

ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಾವೇರಿ ನದಿಗೆ ಉಪಸಮಿತಿ ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ ಅದೇ ರೀತಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಮಂತ್ರಿ ಮಂಡಲದ ಉಪಸಮಿತಿ ರಚಿಸುವ ಯೋಜನೆ ಸರ್ಕಾರಕ್ಕೆ ಏನಾದರೂ ಇದೆಯೇ;

ಇ) ಇದ್ದಲ್ಲಿ ಯೋಜನೆಯ ಉಪಸಮಿತಿಯನ್ನು ರಚಿಸಲಾಗುವುದು;

ಈ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಹೌದು

ಆ), ಇ), ಈ) ಸದ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಭದ್ರಾವತಿ ತಾಲ್ಲೂಕು ಕೊಡ್ಲಿಗೆರೆ ಕಮ್ಮರಘಟ್ಟ ರಸ್ತೆಯ ರಿಪೇರಿ

166 (750) ಶ್ರೀ ಕರಿಯಣ್ಣ (ಹೊಳೇಹೊನ್ನೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ತಾಲ್ಲೂಕು, ಕೊಡ್ಲಿಗೆರೆ ಕಮ್ಮರಘಟ್ಟ ರಸ್ತೆಯಲ್ಲಿ ಬಸ್ಸು, ಎತ್ತಿನಗಾಡಿ ಓಡಾಡುವುದಕ್ಕೆ ಆಗದೆ ಕೆಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಲು ಸರ್ಕಾರದವರು ಕ್ರಮ ಕೈಕೊಳ್ಳುವರೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಭದ್ರಾವತಿ ತಾಲ್ಲೂಕು ಕೂಡ್ಲಿಗೆರೆ, ಕಮ್ಮರಗಟ್ಟ ರಸ್ತೆಯು ವಾಹನ ಸಂಚಾರಕ್ಕೆ ಅಡಚಣೆ ಆಗುವಷ್ಟು ಕೆಟ್ಟಿರುವುದಿಲ್ಲ.

ಆ) ರಸ್ತೆಯ ಆಯ್ದ ಭಾಗಗಳಲ್ಲಿ 90–91ನೇ ಸಾಲಿನಲ್ಲಿ 0.95 ಲಕ್ಷ ರೂ.ಗಳು, 91–92ರಲ್ಲಿ 14.54 ಲಕ್ಷ ರೂ.ಗಳು ಹಾಗೂ 92–93ರಲ್ಲಿ 1.45 ಲಕ್ಷ ರೂ.ಗಳಲ್ಲಿ ವೆಚ್ಚದಲ್ಲಿ ರಸ್ತೆಯನ್ನು ಆದಷ್ಟು ಸುಸ್ಥಿತಿಯಲ್ಲಿಡಲಾಗುತ್ತಿದೆ. ಪ್ರಸಕ್ತ 9.5 ಕಿ.ಮೀ.ನಿಂದ 20ನೇ ಕಿ.ಮೀ. ವರೆವಿಗೆ ಆಯ್ದ ಭಾಗಗಳಲ್ಲಿ ಡಾಂಬರಿನ ಕಾಮಗಾರಿಯು ಪ್ರಗತಿಯಲ್ಲಿದೆ.

ಕೊಡಗು ಜಿಲ್ಲೆಯಲ್ಲಿ ಹಾನಿಗೀಡಾದ ರಸ್ತೆ ರಿಪೇರಿಗಾಗಿ ಬಿಡುಗಡೆಯಾದ ಹಣ

167 (795) ಶ್ರೀಮತಿ ಸುಮಾವಸಂತ (ವೀರಾಜಪೇಟೆ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1991–92ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ರಸ್ತೆ ಮೋರಿ ಹಾಗೂ ಹೆಮವಾಳೆದಂಡೆಗಳು ಹಾನಿಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಎಲ್ಲೆಲ್ಲಿ ಹಾನಿಗೀಡಾಗಿದೆ;

ಆ) ದುರಸ್ತಿಗಾಗಿ ಹಣ ಬಿಡುಗಡೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಇಲ್ಲದಿದ್ದಲ್ಲಿ, ಬಿಡುಗಡೆ ಮಾಡಲಾಗುವುದೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 1991–92ನೇ ಸಾಲಿನಲ್ಲಿ ಕೊಡಗು ಜಿಲ್ಲೆ, ಮಡಿಕೇರಿ ಸೋಮವಾರಪೇಟೆ ಹಾಗೂ ವೀರಾಜಪೇಟೆ ತಾಲ್ಲೂಕುಗಳಲ್ಲಿ ಲೋಕೋಪಯೋಗಿ ವ್ಯಾಪ್ತಿಯಲ್ಲಿ ಒಟ್ಟು 131.18 ಕಿ.ಮೀ. ಉದ್ದದ ರಸ್ತೆ, 80 ಮೋರಿಗಳು, 7 ಸೇತುವೆಗಳು ಹಾಗೂ 10 ಕಟ್ಟಡಗಳು ಅತೀವೃಷ್ಟಿಯಿಂದ ಹಾನಿ ಉಂಟಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರೀತಿ ಹಾನಿಗೊಳಗಾದ ರಸ್ತೆ, ಸೇತುವೆ ಮತ್ತು ಕಟ್ಟಡಗಳ ದುರಸ್ಥಿಗೆ 43.50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರತಿ ವರ್ಷವೂ ಲಭ್ಯವಾಗುವ ನಿರ್ವಹಣ ಅನುದಾನದಲ್ಲಿ ರಸ್ತೆಗಳನ್ನು ದುರಸ್ಥಿಪಡಿಸಿ ವಾಹನ ಸಂಹಾರಕ್ಕೆ ಸುಗಮಗೊಳಿಸಲಾಗಿದೆ.

ಕೃಷ್ಣಾನದಿ ಕೊಳ್ಳದ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾದ ಹಣದ ಬಗ್ಗೆ

173 (706) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಲಿ ಅಂದಾಜಿನ ಪ್ರಕಾರ ಕೃಷ್ಣಾನದಿ ಕೊಳ್ಳದ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾದ ಹಣದ ಪ್ರಮಾಣವೇನು (ಭಾರಿ, ಸಣ್ಣ ಮತ್ತು ಮಧ್ಯಮ ನೀರಾವರಿಯನ್ನೊಳಗೊಂಡಂತೆ ಕೃಷ್ಣಾನದಿ ಪ್ರದೇಶದಲ್ಲಿ);

ಆ) ಈ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾದ ವರ್ಷಗಳೆಷ್ಟು;

ಇ) ಕೃಷ್ಣಾನದಿ ಕೊಳ್ಳಕ್ಕೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಮೀಸಲಿಟ್ಟಿರುವ ಹಣವೆಷ್ಟು;

ಈ) ಕೃಷ್ಣಾನದಿ ಕೊಳ್ಳದ ನೀರಾವರಿ ಯೋಜನೆಗಳನ್ನು ಸಂಪೂರ್ಣಗೊಳಿಸಲು ಸರ್ಕಾರವು ನೀರಾವರಿ ಬಾಂಡುಗಳನ್ನು ತೇಲಿಬಿಡಲು ಉದ್ದೇಶಿಸಿದೆಯೆ;

ಉ) ಹಾಗಿದ್ದಲ್ಲಿ, ನೀರಾವರಿ ಬಾಂಡುಗಳನ್ನು ಬಿಡುಗಡೆ ಮಾಡಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಈಗಿನ ದರಗಳ ಪ್ರಕಾರ 3942 ಕೋಟಿ ರೂ.ಗಳು

ಆ) ಈ ಎಲ್ಲಾ ಯೋಜನೆಗಳನ್ನು ಕ್ರಿ.ಶ. 2000ನೇ ಇಸವಿಯೊಳಗೆ ಮುಗಿಸಬೇಕಾಗಿದೆ.

ಇ) 1890.44 ಕೋಟಿ ರೂ.ಗಳು.

ಈ) ಹೌದು.

ಉ) ನೀರಾವರಿ ಬಾಂಡುಗಳನ್ನು ಬಿಡುಗಡೆ ಮಾಡಲು ಅನುಮತಿಗಾಗಿ ಕೇಂದ್ರ ಸರ್ಕಾರವನ್ನು ಕೋರಿದ್ದು ಅನುಮತಿಗಾಗಿ ವ್ಯವಹರಿಸಲಾಗುತ್ತಿದೆ.

ಪ್ರತಿ ಚುನಾವಣಾ ಕ್ಷೇತ್ರದಲ್ಲಿ 50 ಕಿ.ಮೀ. ಜಿಲ್ಲಾ ಪರಿಷತ್ ರಸ್ತೆಗಳನ್ನು ಜಿಲ್ಲಾ ಹೆದ್ದಾರಿಯಾಗಿ ಪರಿವರ್ತನೆ

176 (947) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ಚುನಾವಣಾ ಕ್ಷೇತ್ರದ 50 ಕಿ.ಮೀ. ಉದ್ದದ ರಸ್ತೆಗಳನ್ನು ಜಿಲ್ಲಾ ಪರಿಷತ್ತಿನಿಂದ ತೆಗೆದುಕೊಂಡು ಜಿಲ್ಲಾ ಹೆದ್ದಾರಿ ರಸ್ತೆಗಳಾಗಿ ಪರಿವರ್ತಿಸುವ ಕಾರ್ಯದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಜಿಲ್ಲಾ ಪರಿಷತ್ತಿನಿಂದ, ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 50 ಕಿ.ಮೀ. ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಸೇರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ. 1993–94ನೇ ಸಾಲಿನಿಂದ ಅಭಿವೃದ್ಧಿಯನ್ನು ಹಂತಹಂತವಾಗಿ ತೆಗೆದುಕೊಳ್ಳಲಾಗುವುದು. ಈ ರಸ್ತೆಗಳ

ಅತಿ ಕೆಟ್ಟುಹೋದ ಭಾಗಗಳನ್ನು ದುರಸ್ಥಿಪಡಿಸಿ ಸಂಚಾರಕ್ಕೆ ಅಡಚಣೆ ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ.

ಕರ್ನಾಟಕ ವಿಧಾನ ಮಂಡಲದಿಂದ ಅಂಗೀಕೃತವಾದ ಮಸೂದೆಗಳು

181 (948) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಾಗರ):-

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ರಾಜ್ಯ ವಿಧಾನ ಮಂಡಲದಿಂದ ಅಂಗೀಕೃತವಾದ ಎಷ್ಟು ವಿಧೇಯಕಗಳು ರಾಷ್ಟ್ರಪತಿಯವರ ಒಪ್ಪಿಗೆ ಪಡೆಯದೇ ಬಾಕಿ ಉಳಿದಿವೆ;

ಬಿ) ಅವುಗಳು ಯಾವುವು ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-

ಎ) ಒಂಬತ್ತು ವಿಧೇಯಕಗಳು.

ಬಿ) 1. ಕರ್ನಾಟಕ ಶಿಕ್ಷಣ ವಿಧೇಯಕ, 1983.
2. ಕರ್ನಾಟಕ ಯೋಜನೆಯಿಂದ ನಿರ್ವಸಿತರಾದ ವ್ಯಕ್ತಿಗಳ ಪುನರ್ವಸತಿ ವಿಧೇಯಕ, 1987.
3. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 1992.
4. ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮ್‌ಗಳ ರದ್ದಿಯಾತಿ ತಿದ್ದುಪಡಿ) ವಿಧೇಯಕ, 1992.
5. ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವಿಧೇಯಕ, 1992.
6. ಕರ್ನಾಟಕ ಬಾಡಿಗೆ ನಿಯಂತ್ರಣ ಪೂರ್ವಾನ್ವಯದಿಂದ ವಿತರಿಸಲಾದ ಅವಧಿ ವಿಧೇಯಕ, 1993.
7. ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1992.
8. ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕ 1990.
9. ಕರ್ನಾಟಕ ವರ್ಕ್ ಮಂಡಳಿ (ವಿಶೇಷ ಅಧಿಕಾರಿಯ ನೇಮಕ) ವಿಧೇಯಕ, 1992.

ಸಭಾಧ್ಯಕ್ಷರು:- ಸಭೆಯ ಮುಂದಿಡಲಾಗಿದೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ:- ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 125 (1)ನೇ ನಿಯಮದ ಮೇರೆಗೆ –

"ರಾಜ್ಯಸಭೆಯಿಂದ ಬಂದ 1991ನೇ ಇಸವಿಯ ಸಂವಿಧಾನದ (72ನೇ ತಿದ್ದುಪಡಿ) ಹಾಗೂ (73ನೇ ತಿದ್ದುಪಡಿ) ವಿಧೇಯಕಗಳ ಪ್ರತಿಗಳೊಂದಿಗೆ ಸಂದೇಶವನ್ನು ಸಭೆಯ ಮುಂದಿಡುತ್ತಿದ್ದೇನೆ.

ಸಭಾಧ್ಯಕ್ಷರು:- ಸಭೆಯ ಮುಂದಿಡಲಾಗಿದೆ.

ಹಕ್ಕುಚ್ಯುತಿ ನಿರ್ಣಯ

ಬಸ್ ದರ ಏರಿಕೆಯನ್ನು ವಾಪಸ್ ಪಡೆದಿರುವ ಬಗ್ಗೆ ಸ್ಪಷ್ಟೀಕರಣ

† ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಯವರು ಕೆ.ಎಸ್.ಆರ್.ಟಿ.ಸಿ ಬಸ್ಸಿನ ದರವನ್ನು ಏಳು ಪರ್ಸೆಂಟ್ ಇಳಿಸಿದ್ದೇವೆ ಎಂದು ಘೋಷಣೆ ಮಾಡಿದರು. ನಮಗೆ ಅದಕ್ಕೂ ವಿರೋಧ ಇದೆ ಎಂದು ಹೇಳಿದ್ದೆವು ಹಾಗೂ ಎಲ್ಲಾ 25 ಪರ್ಸೆಂಟನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡಿದ್ದೆವು. ಅದಕ್ಕೆ ಸರ್ಕಾರ ಒಪ್ಪಿಲ್ಲ. ಆದರೆ ಇವರು ಏಳು ಪರ್ಸೆಂಟನ್ನೂ ಸಹ ಕಡಿಮೆ ಮಾಡಿಲ್ಲ. ಇವತ್ತು ಎಲ್ಲಿ ಒಂದು ರೂಪಾಯಿ ಟಿಕೇಟ್ ಇತ್ತು, ಅದನ್ನು ಹೆಚ್ಚು ಮಾಡಿ ಒಂದು ರೂಪಾಯಿ 25 ಪೈಸೆ ಮಾಡಿದ್ದರು. 1–25 ಪೈಸೆ ಇದ್ದದ್ದು, 1–50 ಪೈಸೆಯಾಗಿದೆ. ಸರ್ಕಾರ 7 ಪರ್ಸೆಂಟನ್ನೂ ಕಡಿಮೆ ಮಾಡಿಲ್ಲ; ಇದರಿಂದ ನಾಡಿನ ಪ್ರಯಾಣಿಕರಿಗೆ ಮೋಸವಾಗಿದೆ ಮತ್ತು ಸದನಕ್ಕೂ ಮೋಸವಾಗಿದೆ. ಇವತ್ತು ನಾವು ಸರ್ಕಾರದ ಮುಂದೆ ಪ್ರಿವಿಲೇಜ್ ಮೂವ್ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲ ಇವತ್ತು ಒಂದರಿಂದ 6ನೇ ಸ್ಟೇಜ್ ತನಕ ಪ್ರವಾಸ ಮಾಡುವವರು ಕಡುಬಡವರು. ಆ ಜನರಿಗೂ ಸಹ ಸಾಕಷ್ಟು ಇದರಿಂದ ಭಾರವಾಗಿದೆ. ಇದರ ಬಗ್ಗೆ ವಿವರವಾಗಿ ನಮ್ಮ ಮಿತ್ರರಾದಂತಹ ಮಾನ್ಯ ಸಿಂಧ್ಯಾರವರು ಮಾನ್ಯ ಬೈರೇಗೌಡರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮತ್ತು ಮಾನ್ಯ ಶಿವಾನಂದ ಕೌಜಲಗಿಯವರು ಸಹ ಇದಕ್ಕೆ ತಮ್ಮ ಸಮ್ಮತಿಯನ್ನು ಕೇಳಿದ್ದಾರೆ. ಅವರಿಗೂ ಸಹ ತಾವು ಅವಕಾಶ ಮಾಡಿಕೊಡಬೇಕು ಮತ್ತು ಸರ್ಕಾರ ಇದಕ್ಕೆ ಸ್ಪಷ್ಟೀಕರಣವನ್ನು ನೀಡಬೇಕಾಗುತ್ತದೆ. ತಾವು ಏಕೆ ಮೋಸ ಮಾಡಿದಿರಿ ಮತ್ತು ಇಲ್ಲಿ ತಾವು ಏನು ಹೇಳಿದ್ದೀರಿ ಆ ಪ್ರಕಾರ ಏಕೆ ತಮಗೆ ಮಾಡುವುದಕ್ಕೆ ಆಗಿಲ್ಲ ಎಂದು ಸರ್ಕಾರ ಸ್ಪಷ್ಟೀಕರಣ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಅಧ್ಯಕ್ಷರೇ, ನಮ್ಮ ನಾಯಕರು ಜೈಲಿನಲ್ಲಿ ಬಿದ್ದಿದ್ದಾರೆ. ನಾನು ನಿಮ್ಮ ಹತ್ತಿರ ಬಂದು ದಯವಿಟ್ಟು ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು ಎಂದು ಕೇಳಿದೆ. ನೀವು ಮಾಡಿಕೊಡುತ್ತೇನೆ ಎಂದು ಹೇಳಿದಿರಿ. ಈಗ ತಾವು ಮಾಡಿಕೊಡಿ, ಇಲ್ಲಿ ಚರ್ಚೆ ನಡೆಯುತ್ತ ಇದೆ.

ಅಧ್ಯಕ್ಷರು:– ಮಾನ್ಯ ಈಶ್ವರಪ್ಪನವರೇ, ನಾನು ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಅಧ್ಯಕ್ಷರೇ, ನಮ್ಮ ಪಕ್ಷದ ನಾಯಕರಿಗೆ ತಾವು ಈ ರೀತಿ ಮಾಡುವುದು ನ್ಯಾಯವೇ ಹೇಳಿ? ನಾನು ನಿಮ್ಮಲ್ಲಿ ಮನವಿಯನ್ನು ಮಾಡಿಕೊಂಡಿದ್ದೆ. ಈ ರಾಜ್ಯ ಸರ್ಕಾರದ ಧೋರಣೆ ಇದು. ನಾನು ನಿನ್ನೆ ಬಳ್ಳಾರಿ ಜೈಲಿನಲ್ಲಿದ್ದೆ. ನನ್ನನ್ನು ಬಿಟ್ಟರು. ಇಲ್ಲಿ ಅರೆಸ್ಟ್ ಆಗಿರುವವರನ್ನು ಜೈಲಿಗೆ ಕಳುಹಿಸಿದ್ದಾರೆ. ನನಗೆ ಅವಕಾಶ ಕೊಡಿ.

† ಶ್ರೀ ಪಿ.ಜಿ.ಆರ್ ಸಿಂಧ್ಯ:– ಅಧ್ಯಕ್ಷರೇ ನಾವು ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇವೆ. ತಾವು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ಒಂದು ಮಹತ್ವ ವಿಚಾರ. ತಾವು ದಯವಿಟ್ಟು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಅಧ್ಯಕ್ಷರೇ, ನಿನ್ನೆಯ ದಿನ ಪ್ರಜಾವಾಣಿ ಪತ್ರಿಕೆಯಲ್ಲಿ ಹೊಸಕೋಟೆಯಲ್ಲಿ ಏರಿದ ದರ ಶೇಕಡ 40ರಷ್ಟು ಆಗಿ ನಾಗರೀಕರು ಆತಂಕಗೊಂಡಿದ್ದಾರೆ ಎನ್ನುವ ಒಂದು ವರದಿ ಪ್ರಕಟವಾಗಿತ್ತು. ನಮ್ಮ ರೈತ ಸಂಘದ ಕಾರ್ಯಕರ್ತರು ನಿನ್ನೆ ಮಂಡ್ಯದಲ್ಲಿ ಬಸ್ ಪ್ರಯಾಣ ದರವನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಬಸ್ ನಿಲ್ದಾಣದ ಬಳಿ ಸುಮಾರು 40 ನಿಮಿಷ ರಸ್ತೆ ಚಳುವಳಿ ಮಾಡಿದರು. ಪ್ರಯಾಣ ದರವನ್ನು ಶೇಕಡ 75ರಷ್ಟು ಹೆಚ್ಚಿಸಿ ನಂತರ ಅದರಲ್ಲಿ ಶೇಕಡ 7 ಪರ್ಸೆಂಟ್ ಇಳಿಸಿ, ದರ ನಿಗದಿ

ಮಾಡುವಾಗ, ಮೊದಲ ಹಂತದ ದರವನ್ನು ಹೆಚ್ಚಿಸಿ ಜನತೆಯನ್ನು ಸುಲಿಗೆ ಮಾಡಲಾಗುತ್ತಿದೆ ಎಂದು ಹೇಳಿ ಬೂದನೂರು, ಗೆಜ್ಜಲಗೆರೆ ಮತ್ತು ಮದ್ದೂರು ಸಮೀಪದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಈ ವಿಷಯ ಪತ್ರಿಕೆಗಳಲ್ಲಿ ಬಂದ ಮೇಲೆ ಸಾರಿಗೆ ಸಂಸ್ಥೆಯ ಅಧಿಕಾರಿಗಳ ಜೊತೆಯಲ್ಲಿ ಸಂಪರ್ಕ ಮಾಡಿದೆ, ನನ್ನ ಕ್ಷೇತ್ರಕ್ಕೂ ಹೋಗಿದ್ದಾಗ ಅನೇಕ ಜನ ಪ್ರಯಾಣಿಕರು ಇದನ್ನು ನನ್ನ ಗಮನಕ್ಕೆ ತಂದರು.

12.40 ಪಿ.ಎಂ.

ಮಾನ್ಯ ಅಧ್ಯಕ್ಷರೇ ಕೆ.ಎಸ್.ಆರ್.ಟಿ.ಸಿಯಲ್ಲಿ ಜನರಲ್ ಸ್ಟ್ಯಾಂಡಿಂಗ್ ಆರ್ಡರ್ ಎಂದು ಹೇಳುತ್ತಾರೆ. ಅದರಂತೆ ಕ್ರಮಾಂಕ 389ರ ಪ್ರಕಾರವಾಗಿ 7–2–1993ರಿಂದ ಇಫೆಕ್ಟಿಗೆ ಬರತಕ್ಕಂಥ ಆರ್ಡಿನರಿ, ಎಕ್ಸ್‌ಪ್ರೆಸ್, ಸೆಮಿಲಕ್ಸರಿ, ಲಕ್ಸುರಿ ಬಸ್ ರೇಟ್‌ಗಳನ್ನು ಹೆಚ್ಚು ಮಾಡಿ, ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಅದರಲ್ಲಿ ಆರ್ಡಿನರಿ ಬಸ್‌ನಲ್ಲಿ ಮೊದಲನೆಯ ಸ್ಟೇಜ್‌ಗೆ 1–25 ಪೈಸೆ, ಹಿಂದೆ 1 ರೂಪಾಯಿ ಇತ್ತು, ಎರಡನೆಯ ಸ್ಟೇಜ್ 2–50 ಪೈಸೆ, 3ನೇ ಸ್ಟೇಜ್‌ಗೆ 3–50 ಪೈಸೆ, 4ನೇ ಸ್ಟೇಜ್‌ಗೆ 4–50 ಪೈಸೆ ಎಂದು ಮಾಡಿದರು. ಒಂದು ಸ್ಟೇಜ್ ಅಂದರೆ 6–4 ಕಿ.ಮೀ.ಗಳು. ಅಂದರೆ ನಾಲ್ಕು ಸ್ಟೇಜ್‌ಗಳ ಉದಾಹರಣೆಯನ್ನು ಮಾತ್ರ ನಾನು ಕೊಡುತ್ತಾ ಇದ್ದೇನೆ. ನಾಲ್ಕು ಸ್ಟೇಜ್ ಪ್ರಯಾಣ ಮಾಡತಕ್ಕಂಥವರು 25.3 ಕಿ.ಮೀ. ಪ್ರಯಾಣ ಮಾಡುತ್ತಾರೆ. ನಮ್ಮ ರಾಜ್ಯದ ಬಸ್‌ಗಳನ್ನು ಸುಮಾರು 52 ಲಕ್ಷ ಜನರು ದಿನನಿತ್ಯವೂ ಪ್ರಯಾಣ ಮಾಡುತ್ತಾರೆ. ಇದರಲ್ಲಿ ಕೂಡ 40ರಷ್ಟು ಜನರು ಈ 25–30 ಕಿ.ಮೀ. ಒಳಗಡೆ ಪ್ರಯಾಣ ಮಾಡುವವರು ಇದ್ದಾರೆ. ಇವರೆಲ್ಲರೂ ತಾಲ್ಲೂಕು ಕಚೇರಿಗಳಿಗೆ ಬರುವವರು, ತರಕಾರಿ ತರುವವರು, ಆಸ್ಪತ್ರೆಗೆ ಹೋಗುವವರು, ಮುಂತಾಗಿ ಇರುತ್ತಾರೆ ಶೇಕಡ 50ರಷ್ಟು ಜನ ಪ್ರಯಾಣಿಕರು 1–2–3–4 ಸ್ಟೇಜ್‌ಗಳನ್ನು ಕವರ್ ಮಾಡತಕ್ಕಂಥವರು. ಅದೇ ರೀತಿ ಎಕ್ಸ್‌ಪ್ರೆಸ್ ಬಸ್‌ಗಳಲ್ಲಿಯೂ ಕೂಡ ಒಂದು ರೇಟನ್ನು ಫಿಕ್ಸ್ ಮಾಡಿದ್ದಾರೆ. ಫಸ್ಟ್ ಸ್ಟೇಜ್‌ಗೆ 8 ರೂಪಾಯಿಗಳು, ಸೆಕೆಂಡ್ ಸ್ಟೇಜ್‌ಗೆ 8 ರೂಪಾಯಿಗಳು, ಥರ್ಡ್ ಸ್ಟೇಜ್‌ಗೆ 8 ರೂಪಾಯಿ. ಫೋರ್ಥ್‌ಸ್ಟೇಜ್‌ಗೆ 8 ರೂಪಾಯಿ ಎಂದು ಮಾಡಿದ್ದಾರೆ. ಇದು ಜನರಲ್ ಸ್ಟ್ಯಾಂಡಿಂಗ್ ಆರ್ಡರ್, 7–2–93 ದಿನಾಂಕದ್ದು. ಇದನ್ನು ಮುಖ್ಯಮಂತ್ರಿಯವರಿಗೆ ಕಳುಹಿಸಿಕೊಡುತ್ತೇನೆ. ಇದಾದ ನಂತರ ಜಿಎಸ್‌ಓ – 390, 4–2–93 ಮಾಡಿ ಇದು 7ನೇ ತಾರೀಖಿನಿಂದ ಎಫೆಕ್ಟ್‌ಗೆ ಬರುತ್ತದೆ ಎಂದು ಹೇಳಿದ್ದಾರೆ. ಇದಾದ ನಂತರ ವಿತ್ ಎಫೆಕ್ಟ್ ಫ್ರಮ್ 18–2–93 ಅಂದರೆ ಇಲ್ಲೆಲ್ಲಾ ಚರ್ಚೆಯಾದ ಮೇಲೆ, 18ನೇ ತಾರೀಖಿನಿಂದ ಇದು ಎಫೆಕ್ಟ್‌ಗೆ ಬರುತ್ತದೆ ಎಂದು ಮತ್ತೊಂದು ಆರ್ಡರ್‌ನ್ನು ಹೊರಡಿಸಿದ್ದಾರೆ. ಇದರಲ್ಲಿ ಆರ್ಡಿನರಿ ಬಸ್‌ಗೆ ಮೊದಲನೆಯ ಸ್ಟೇಜ್‌ಗೆ 1–50 ಪೈಸೆ ಎಂದು ಹೇಳಿದ್ದಾರೆ. 1 ರೂಪಾಯಿ ಇದ್ದುದನ್ನು 1–25 ರೂಪಾಯಿ ಎಂದು ಮಾಡಿದರು 7ನೇ ತಾರೀಖಿನಿಂದ ಎಫೆಕ್ಟ್ ಬರುವುದು. 18ನೇ ತಾರೀಖಿನಿಂದ ಬರುವುದಕ್ಕೆ 1–50 ರೂ. ಎಂದು ಮಾಡಿದರು. ಸೆಕೆಂಡ್ ಸ್ಟೇಜ್, ಥರ್ಡ್ ಮತ್ತು ಫೋರ್ತ್ ಸ್ಟೇಜ್‌ಗೆ ಹಿಂದಿನ ರೇಟನ್ನು ಇಟ್ಟರು. ಅಂದರೆ ಇವರು ಏನು 7 ಪರ್ಸೆಂಟ್ ಕಡಿಮೆ ಮಾಡಿದ್ದಾರೆ, ಈ 40 ಪರ್ಸೆಂಟ್‌ನವರಿಗೆ ಒಂದಿಷ್ಟೂ ಕಡಿಮೆ ಮಾಡಲಿಲ್ಲ. ಕೆ.ಎಸ್.ಆರ್.ಟಿ.ಸಿ. ರೆವಿನ್ಯೂದಲ್ಲಿ 50ರಷ್ಟು ರೆವಿನ್ಯೂ ರಿಯಲೈಸ್ ಆಗುವುದು, ಈ 40 ಪರ್ಸೆಂಟಿನ ಪ್ರಯಾಣಿಕರಿಂದ. ಇವರ್‍ಯಾರೂ ಲಕ್ಸುರಿ, ಸೆಮಿಲಕ್ಸುರಿ ಬಸ್‌ಗಳಲ್ಲಿ ಹೋಗತಕ್ಕಂಥವರು ಇಲ್ಲ, ದೊಡ್ಡ ಪ್ರಯಾಣಿಕರೂ ಅಲ್ಲ. ಅದೇ ರೀತಿಯಲ್ಲಿ 18ನೇ ತಾರೀಖಿನಿಂದ ಇವರು ಹೊರಡಿಸಿರತಕ್ಕಂಥ ಜಿ.ಎಸ್.ಓನಲ್ಲಿ ಸಹಿತ, ಲಕ್ಸುರಿ, ಸೆಮಿಲಕ್ಸುರಿಗೆ ಅದೇ ರೇಟನ್ನು ಇಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ ಬಿಟಿಎಸ್ ದರ ಕಡಿಮೆ ಮಾಡಿ ಅಂದರೆ ಮಾಡಿಲ್ಲ ಎಕ್ಸ್‌ಪ್ರೆಸ್ ಬಸ್‌ಗಳಲ್ಲಿ 5ನೇ ಸ್ಟೇಜ್‌ನಲ್ಲಿ 6.50 ಪೈಸೆ ಇದ್ದುದನ್ನು 7 ರೂ. ಮಾಡಿದ್ದಾರೆ.

ಈ ಆರ್ಡರನ್ನು ಕೂಡ ಮುಖ್ಯಮಂತ್ರಿಯವರಿಗೆ ಕಳುಹಿಸಿಕೊಡುತ್ತೇನೆ. ಫಸ್ಟ್ ಮತ್ತು ಸೆಕೆಂಡ್ ಸ್ಟೇಜ್‌ನ್ನು 1–25 ಪೈಸೆ ಮಾಡಿ, 7 ಪರ್ಸೆಂಟ್ ಕಡಿಮೆ ಮಾಡುತ್ತೇವೆ ಎಂದು ಹೇಳಿ 1.50 ಪೈಸೆ ಮಾಡಿದ್ದಾರೆ ಅಂದರೆ, ಜಾಸ್ತಿಯಾಗಿದೆ ಎಂದು ಹೊಸಕೋಟೆಯವರು, ಮಂಡ್ಯದರು ಹೇಳುವುದು ಸರಿಯಾಗಿಯೇ ಇದೆ. ಜೊತೆಗೆ ಒಂದು ಸ್ಟೇಜ್‌ಗೆ 6.4 ಕಿ.ಮೀ. ಇರುತ್ತದೆ. ಹೀಗೆ ಐದು ಸ್ಟೇಜ್‌ಗೆ ಹೋಗತಕ್ಕಂಥವರಿಗೆ ಹೆಚ್ಚಿಗೆ ಆಗುತ್ತಾ ಹೋಗುತ್ತದೆ. ಇಲ್ಲಿ ನಮಗೆ ಅನ್ನಿಸತಕ್ಕಂಥದ್ದು ಕೇವಲ 22 ಪರ್ಸೆಂಟ್ ಎಂದು. ಈ 22 ಪರ್ಸೆಂಟ್‌ಗಳು ನಾಲ್ಕು ಸ್ಟೇಜ್‌ಗಳಿಗೆ ಎಷ್ಟಾಗುತ್ತದೆ ? ಇದರ ಲೆಕ್ಕಾಚಾರ ಹಾಕಬೇಕು. ಇದನ್ನು ಮಾನ್ಯ ಮುಖ್ಯ ಮಂತ್ರಿಯವರು ಬಹಳ ಗಂಭೀರವಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಚರ್ಚೆ ಮಾಡಲು ಮಾನ್ಯ ಸಾರಿಗೆ ಮಂತ್ರಿಯವರನ್ನು ಕರೆಸಿದ್ದರು. ಅಲ್ಲಿಯ ಎಂ.ಡಿ.ಯವರು ಇದು ಮಿಸ್ಟೇಕ್ ಆಗಿದೆ, ಕಂಪ್ಯೂಟರ್‌ಗೆ ಇದನ್ನು ನಾವು ಹಾಕಿದ್ದೇವೆ, ಅದು ರಾಂಗ್ ಆಗಿ ಫೀಡ್ ಮಾಡಿದೆ ಹಾಗಾಗಿ ಇದನ್ನು ಮಾಡಿದ್ದೇವೆ ಎಂದು ಹೇಳುತ್ತಾರೆ. ದೇಶಪಾಂಡೆಯವರು ಮತ್ತು ನಾನು ಅದರಲ್ಲಿ ಭಾಗವಹಿಸಿದ್ದೇವೆ. ಇದು ಏನಾಗುತ್ತದೆ ಅಂದರೆ 550 ಕೋಟಿ ರೂಪಾಯಿಗಳ ನಿವ್ವಳ ಆದಾಯ ಇರತಕ್ಕಂಥ ಸಾರಿಗೆ ಸಂಸ್ಥೆಯಲ್ಲಿ, ಸಾವಿರಾರು ಕೋಟಿ ರೂಪಾಯಿಗಳ ಬಂಡವಾಳ ಇರತಕ್ಕಂಥ ಸಂಸ್ಥೆಯಲ್ಲಿ ನೀವು ರೆವಿನ್ಯೂ ಹೆಚ್ಚು ಮಾಡತಕ್ಕಂಥ ಒಂದು ವಿಚಾರದಲ್ಲಿ ಇವೊತ್ತು ಒಂದು ಸ್ವಾರಸ್ಯಕರವಾದಂಥ ಉತ್ತರವನ್ನು ಮಾನ್ಯ ಸಾರಿಗೆ ಮಂತ್ರಿಗಳು ನನಗೆ ಕೊಟ್ಟಿದ್ದಾರೆ.

ಸಾರಿಗೆ ಇಲಾಖೆ ಬಗ್ಗೆ ಮಾತನಾಡುವಾಗ ನಾನು ಭವಿಷ್ಯ ಹೇಳಿದ್ದೆ ಏನೆಂದರೆ 28 ಪರ್ಸೆಂಟ್ ಹೆಚ್ಚು ಮಾಡಿದ್ದರಿಂದ ಭ್ರಷ್ಟಾಚಾರ ಜಾಸ್ತಿಯಾಗುತ್ತದೆ ಹೊರತು ನಿಮ್ಮ ಆದಾಯ ಜಾಸ್ತಿಯಾಗುವುದಿಲ್ಲ ಎಂದು; ಅದು ನಿಜವಾಗಿದೆ. ಇವರೇ ಕೊಟ್ಟಿರುವ ಉತ್ತರ ಇದು. 10ನೇ ಫೆಬ್ರವರಿ 7ನೇ ತಾರೀಖಾದ ಮೇಲೆ ರೆವಿನ್ಯೂ ರಿಯಲೈಸೇಶನ್ 12 ಪರ್ಸೆಂಟ್ ಆಗಿದೆ ಕೊನೆ ದಿನಗಳಲ್ಲಿ. ಕಾರಣ ಏನು ? ಭ್ರಷ್ಟಾಚಾರಕ್ಕೆ ಇದು ಇನ್‌ಡೈರೆಕ್ಟಾಗಿ ಎನ್‌ಕರೇಜ್ ಮಾಡಿದಂತಾಗುತ್ತದೆ. ಅವರು ಟಿಕೇಟ್ ಕೊಡುವುದೇ ಇಲ್ಲ. ಅದರಿಂದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ. ತಾವು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಒಂದು, ಎರಡು, ನಾಲ್ಕು ಮತ್ತು 5ನೇ ಸ್ಟೇಜ್‌ನಲ್ಲಿ ಕಡಿಮೆ ಮಾಡುತ್ತೇವೆಂದು ಹೇಳಿ ಅದನ್ನು ಜಾಸ್ತಿ ಮಾಡಿದ್ದೀರಿ. ಇದರ ಬಗ್ಗೆ ಅಧಿಕಾರಿಗಳು ನಿಮಗೆ ಮಿಸ್‌ಲೀಡ್ ಮಾಡಿದ್ದಾರೆಯೆ ? ಏಕೆ ಅನ್ನೋದು ನನಗೆ ಅರ್ಥವಾಗುತ್ತಿಲ್ಲ. ಪ್ರಯಾಣಿಕರಿಗೆ ಯಾವುದೇ ರೀತಿಯ ರಿಯಾಯಿತಿ ಕೊಟ್ಟಿಲ್ಲ. ದರಗಳನ್ನು ಇಳಿಸುತ್ತೇವೆ ಅನ್ನುವುದು ಕಣ್ಣೊರೆಸುವ ತಂತ್ರ ಎಂದು ಹೇಳಬೇಕಾಗುತ್ತದೆ. ಶೇಕಡ 7 ರಷ್ಟು ಕಡಿಮೆ ಮಾಡುತ್ತೇವೆಂದು ಹೇಳಿದ್ದೀರಿ, ನನ್ನ ಪ್ರಕಾರ ಶೇಕಡ 5 ರಷ್ಟು ಕಮ್ಮಿಗಿಂತ ಹೆಚ್ಚಿಗೆ ದೂರ ಹೋಗುವವರಿಗೆ ಕನ್‌ಸೇಷನ್ ಕೊಟ್ಟರೆ ಪ್ರಯಾಣಿಕರಿಗೆ ಏನು ಅನುಕೂಲವಾಗುತ್ತದೆ ಅದರಿಂದಾಗಿ ಇದು ಹಕ್ಕು ಚ್ಯುತಿಗೂ ಬರುತ್ತದೆ. ಏಕೆಂದರೆ 7 ಪರ್ಸೆಂಟ್ ಸಾರಿಗೆ ದರ ಕಡಿಮೆ ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಸಾರಿಗೆ ಸಚಿವರು ಹೇಳಿಕೆ ಕೊಟ್ಟಿದ್ದಾರೆ, ಅದನ್ನು ಪ್ರತ್ಯೇಕವಾಗಿ ನಾವು ತೆಗೆದುಕೊಳ್ಳುತ್ತೇವೆ. ಆದರೆ ತಮ್ಮಲ್ಲಿ ವಿನಂತಿ ಮಾಡುವುದು ಇದು ಸರ್ಕಾರದ ಕಣ್ಣು ಒರೆಸುವ ಜನ ವಿರೋಧಿ ಕ್ರಮ. ನಾವು 7 ಪರ್ಸೆಂಟ್ ಕಡಿಮೆ ಮಾಡುತ್ತೇವೆ. ಹೌಸ್ ಕಮಿಟಿ ಮಾಡುತ್ತೇವೆ ಎಂದು ಹೇಳಿದಾಗ ನಾವೆಲ್ಲರೂ ಒಪ್ಪದೆ ವಿರೋಧಿಸಿ ಆಚೆ ಹೋಗಿದ್ದೇವೆ. ಯಾವ ಬೇಸಿಸ್ ಮೇಲೆ ? ನಮ್ಮ ಸಮ್ಮತಿ ಇತ್ತಲ್ಲದೆ, ತಾವು ಮಾಡಬಹುದೇ ? ನಮ್ಮನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ನಮ್ಮ ಸಜೆಷನ್ಸ್ ತೆಗೆದುಕೊಂಡು ಜಾಸ್ತಿ ಮಾಡಿಲ್ಲ, ಇದನ್ನು ನಾವು ವಿರೋಧ ಮಾಡುತ್ತೇವೆಂದು ವಾಕ್ ಔಟ್ ಮಾಡಿದ್ದೇನೆ. ಆದರೆ ಏನು ಉಪಯೋಗ ಆಯಿತು. ನಾವು ಈ ಸದನ ಚೆನ್ನಾಗಿ ನಡೆಯಬೇಕು, ಅನೇಕ ಮಹತ್ವದ ವಿಚಾರಗಳಿವೆ, ಬಜೆಟ್ ಬಗ್ಗೆ ನಾವು ಚರ್ಚೆ

ಮಾಡಬೇಕೆಂದು ಗೌರವ ಕೊಟ್ಟು ಪ್ರಜಾತಂತ್ರದ ಮೌಲ್ಯಗಳನ್ನು ಎತ್ತಿ ಹಿಡಿಯಬೇಕೆಂದು ನಾವು ಮಾಡಿದರೆ, ಮತ್ತೆ ತಾವು ಈ ರೀತಿ ಮಾಡಿದ್ದೀರಲ್ಲ, ಅಂದರೆ ನಿಮ್ಮ ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ನಿಯಂತ್ರಣ ಇಲ್ಲವೆಂದು ಕಾಣುತ್ತದೆ. ಕಂಪ್ಯೂಟರ್‌ಗೆ ಕೊಡುವಾಗ ಏನಾಗಿದೆ ? ಅಧಿಕಾರಿಗಳಲ್ಲಿ ಸಮನ್ವಯ ಇಲ್ಲವೆಂದು ನನಗೆ ಗೊತ್ತಿದೆ. ಅದನ್ನು ಇಲ್ಲಿ ಹೇಳಲಿಕ್ಕೆ ನಾನು ತಯಾರಿಲ್ಲ. ಅಧಿಕಾರಿಗಳು ಬಹಳ ಲೈಟಾಗಿ ತೆಗೆದುಕೊಂಡಿದ್ದಾರೆ, ಏನಾಗಿಬಿಡುತ್ತದೆ, ನಾವು ಏರಿಸಿದ್ದೇವೆನ್ನುವ ಭಾವನೆ ಅವರಲ್ಲಿ ಇದೆ. ಆದ್ದರಿಂದ ಮುಖ್ಯಮಂತ್ರಿಗಳನ್ನು ನಾನು ಒತ್ತಾಯ ಮಾಡುತ್ತಿದ್ದೇನೆ. 30 ಪರ್ಸೆಂಟ್ ರೆವಿನ್ಯೂ ರಿಯಲೈಸ್ ಆಗತಕ್ಕ –40 ಪರ್ಸೆಂಟ್ ಕಮ್ಯುಟರ್ಸ್ ಇರತಕ್ಕ ಜನಗಳಿಗೆ ಮೋಸ ಆಗಿದೆ, ಅದನ್ನು ಸರಿ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಇವತ್ತು ಬೆಳಿಗ್ಗೆ ನಾನೂ ಸಿಂಧ್ಯಾರು ಹೋಗಿದ್ದಾಗ ಸಾರಿಗೆ ಸಚಿವರು ಒಪ್ಪಿಕೊಂಡಿದ್ದಾರೆ.

† ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೇ ಇದು ಸರ್ಕಾರ ಜನರಿಗೆ ಮಾಡಿದ ಮಹಾಮೋಸ. ಒಂದನೇ ಎರಡನೇ ಮೂರನೇ ಮತ್ತು ನಾಲ್ಕನೇ ಹಂತಗಳಲ್ಲಿ ಯಾವ ರೀತಿ ದರ ವಸೂಲು ಮಾಡಬೇಕೆಂಬುದನ್ನು ವೈಜ್ಞಾನಿಕವಾಗಿ ಮಾಡಿಲ್ಲ. ಈ ಸದನದಲ್ಲೇ ಒಂದು ರೀತಿ ಹೇಳಿದರು. ಶೇಕಡ ಏಳೂವರೆ ಭಾಗ ನಾವು ಕಡಿಮೆ ಮಾಡಿದ್ದೇವೆಂದು. ಹೀಗೆ ಹೇಳಿದಾಗ ನಮಗೇನೋ ಜನಕ್ಕೇನೋ ಬಹಳ ಅನುಕೂಲ ಮಾಡಿದ್ದಾರೆಂಬ ಭಾವನೆಯನ್ನು ಪ್ರದರ್ಶನ ಮಾಡಿದ್ದಾರೆ. ನನ್ನ ಪ್ರಕಾರ ಮೋಸದ ರೀತಿಯಲ್ಲಿ ಇವರು ಜನರನ್ನು ವಂಚನೆ ಮಾಡಿದ್ದಾರೆ. ಈ ಸದನವನ್ನು ಬಹಿಷ್ಕರಿಸಿ ನಾವು ಹೊರಗೆ ಪ್ರತಿಭಟನೆ ಮಾಡಬೇಕೆಂಬ ಮೊದಲ ಉದ್ದೇಶ ನಮಗಿತ್ತು. ಪ್ರಾಮಾಣಿಕವಾಗಿ ಹೇಳುವುದಾದರೆ ಹೋದ ವರ್ಷ ಆಯವ್ಯಯ ಮಂಡನೆಯ ಸಂದರ್ಭದಲ್ಲಿ ಬಹಿಷ್ಕಾರ ಮಾಡಿ ಹೊರಗೆ ಹೋಗಿ ಅನೇಕ ವಿಚಾರಗಳಲ್ಲಿ ಚರ್ಚೆಯಾಗದೆ ಹೊರಗಡೆ ಹೋದೆವು, ಎನ್ನುವುದು ಒಂದು ಮತ್ತು ಹೊಸದಾಗಿ ಮುಖ್ಯಮಂತ್ರಿಗಳು ಬಂದಿದ್ದರೆ, ಬಂದ ನಂತರವೇ ಬಹಿಷ್ಕರಿಸಿ ಹೊರಗೆ ಹೋಗುತ್ತೇವೆಲ್ಲ ಎನ್ನುವ ಭಾವನೆ ಜನರಲ್ಲೂ ಬರಬಾರದೆಂಬ ದೃಷ್ಟಿಯಿಂದ ತಮ್ಮ ಕಾರ್ಯಾಲಯದಲ್ಲಿ ಕುಳಿತು ಮಾತನಾಡಿ ಪರಿಣಾಮಕಾರಿಯಾದ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳಿದ್ದೇವೆ.

ನಾವು ಹೊರಗಡೆಯೂ ಹೇಳುತ್ತೇವೆ. ಈ ಸದನದಲ್ಲಿಯೂ ಹೇಳುತ್ತೇವೆ. ಸದನದ ಸಮಿತಿ ಮಾಡಿದ ತಕ್ಷಣವೇ ಇದಕ್ಕೆ ಪರಿಹಾರ ಸಿಗುವುದಿಲ್ಲ. ನೀವು ಪರಿಣಾಮಕಾರಿಯಾಗಿ ವೈಜ್ಞಾನಿಕವಾಗಿ, ದರವನ್ನು ಕಡಿಮೆ ಮಾಡಬೇಕು. ಸುಮ್ಮನೆ ನಾವು ಕಂಪ್ಯೂಟರ್‌ಗೆ ಕೊಟ್ಟಿದ್ದೇವೆ, ಅದು ತಪ್ಪು ಮಾಡಿದೆ ಎಂದು ಹೇಳಿದರೆ ಇಲ್ಲಿ ಸಾರಿಗೆ ಮಂತ್ರಿ ಕುಳಿತುಕೊಳ್ಳುವ ಬದಲು ಒಂದು ಕಂಪ್ಯೂಟರ್ ಯಂತ್ರವನ್ನು ತಂದಿಡುವುದು ಒಳ್ಳೆಯದು. ಆ ಕಂಪ್ಯೂಟರ್ ನಮಗೆ ಉತ್ತರ ಕೊಡಲಿ. ಜನರಿಗೂ ಅದೇ ಉತ್ತರ ಕೊಡಲಿ. ಇದು ಕಂಪ್ಯೂಟರ್ ಸರ್ಕಾರ ಆಗಬಾರದು.

ಶ್ರೀ ಸಿ. ಭೈರೇಗೌಡ:– ಕಂಪ್ಯೂಟರ್ ಏನು ಮಾಡುತ್ತದೆ, ನಾವು ಏನು ಫೀಡ್ ಮಾಡುತ್ತೇವೆ, ಅದು ಉತ್ತರ ಕೊಡುತ್ತದೆ ಅಷ್ಟೆ. ಫೀಡ್ ಮಾಡತಕ್ಕಂಥದ್ದೇ ತಪ್ಪಾದರೆ ಕಂಪ್ಯೂಟರದು ಏನು ತಪ್ಪಿದೆ ? ಕಂಪ್ಯೂಟರ್ ಮೇಲೆ ಏತಕ್ಕೆ ಹೇಳಬೇಕು ?

ಶ್ರೀ ವಾಟಾಳ್ ನಾಗರಾಜ್:– ಯಂತ್ರದ ಮೇಲೆ ನನ್ನದು ವಿರೋಧ ಇಲ್ಲ. ಆ ಯಂತ್ರಕ್ಕೆ ಏನು ಮಾನವೀಯತೆ ಇರುತ್ತದೆ ? ಅದು ಯಂತ್ರ ತಾನೇ ? ಅದೇನು ಮನುಷ್ಯನಲ್ಲವಲ್ಲ. ಯಂತ್ರಕ್ಕೆ ಇವರು ಏನು ಒದಗಿಸುತ್ತಾರೆ, ಅದು ಕೊಡುತ್ತದೆ. ಆದ್ದರಿಂದ ಈ ಕಂಪ್ಯೂಟರ್ ಸರ್ಕಾರ ಏನಿದೆ, ಇದನ್ನು ನಿಜವಾಗಿಯೂ ಸಹಾ ಮಾನವೀಯತೆ ದೃಷ್ಟಿಯಿಂದ ನೋಡುತ್ತಿಲ್ಲ. ಪರಿಣಾಮಕಾರಿಯಾಗಿ ನೋಡುತ್ತಿಲ್ಲ. ವೈಜ್ಞಾನಿಕವಾಗಿ ಇವರು ದರವನ್ನು ಏರಿಸಿಲ್ಲ. ಎಲ್ಲಾ ದೃಷ್ಟಿಯಿಂದಲೂ ಸರ್ಕಾರ

ಸಂಪೂರ್ಣವಾಗಿ ವಿಫಲವಾಗಿದೆ. ಈ ಸದನಕ್ಕೆ ಮೋಸ ಮಾಡಿದ್ದಾರೆ ಮತ್ತು ಸದನಕ್ಕೆ ಅಗೌರವವನ್ನು ಮಾಡಿದ್ದಾರೆ, ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ ಎನ್ನತಕ್ಕ ದೃಷ್ಟಿಯಿಂದ ನಾವು ಹಕ್ಕುಚ್ಯುತಿಯನ್ನು ತರಬೇಕಾಗುತ್ತದೆ. ತರುತ್ತೇವೆ ಎನ್ನತಕ್ಕಂಥ ವಿಚಾರವನ್ನು ತಮ್ಮ ಮೂಲಕ ನಾವು ಹೇಳುತ್ತೇವೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ನಾವು ಬಹಳ ವೀರಾವೇಶದಿಂದ ಈ ಸದನದಲ್ಲಿ ಹಿಂದೆ ಈ ವಿಚಾರದಲ್ಲಿ ಚರ್ಚೆ ಮಾಡಿದ್ದೆವು. ಸರ್ಕಾರ ಮಾಡಿಯೇ ಮಾಡುತ್ತದೆ. ಬಹಳ ರಿಲೀಫ್ ಜನರಿಗೆ ಸಿಗುತ್ತದೆ ಎನ್ನತಕ್ಕ ಭಾವನೆಯಿಂದ ನಾವು ಆ ದಿವಸ ಅವರು ಹೇಳಿದ್ದನ್ನು ತಾತ್ವಿಕವಾಗಿ ಒಪ್ಪದೆ ಇದ್ದರೂ ಸಹಾ ನಾವು ಬಹಿಷ್ಕಾರ ಹಾಕಿ ಸದನದಿಂದ ಹೊರಗಡೆ ಹೋದೆವು. ಶೇಕಡ 7ಕ್ಕಿಂತ ಬಸ್ ಕಡಿಮೆಯಾಗಿದೆ ಎನ್ನುವುದು ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಂತು. ಬಸ್ ದರ ಕಡಿಮೆಯಾಗಿಲ್ಲ, ಅದಕ್ಕಿಂತ ಮಿಗಿಲಾಗಿ ಹೆಚ್ಚಾಗಿದೆ. ಅದನ್ನು ವಿವರವಾಗಿ ಮಾನ್ಯ ಸಿಂಧ್ಯರವರು ಹೇಳಿದ್ದಾರೆ. ಪುನಃ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಸದನಕ್ಕೆ ಹೇಳುವುದು ಒಂದು ಮಾತು, ಅದನ್ನು ಕೃತಿಗೆ ಇಳಿಸುವುದರಲ್ಲಿ ತದ್ವಿರುದ್ಧವಾಗಿ ಸರ್ಕಾರ ನಡೆದುಕೊಳ್ಳುತ್ತಿದೆ, ನಮಗೆ ಇದು ಆಶ್ಚರ್ಯವಾಗುತ್ತಿದೆ. ಸದನವನ್ನೇ ತಪ್ಪು ದಾರಿಗೆ ಎಳೆಯುತಕ್ಕಂಥ ಒಂದು ಹುಚ್ಚು ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ. ಮಾನ್ಯ ವೀರಪ್ಪಮೊಯಿಲಿಯವರು ಸಂಸದೀಯ ಸಚಿವರಾಗಿ ಬಹಳ ವರ್ಷ ಇಲ್ಲಿ ಕೆಲಸ ಮಾಡಿದ್ದಾರೆ. ಇದನ್ನೆಲ್ಲಾ ಅವರು ಒಪ್ಪಿದರೆ ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಇದು ಅವರಿಗೆ ಭೂಷಣ ತರತಕ್ಕಂಥದ್ದಲ್ಲ. ಇವರು ಕೊಡುವ ಕಾರಣವಾದರೂ ಏನು, ಕಂಪ್ಯೂಟರ್‌ಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಕಂಪ್ಯೂಟರ್ ಏನು ಮಾಡುತ್ತದೆ, ಇವರು ಏನು ಫೀಡ್ ಮಾಡುತ್ತಾರೆ, ಕಂಪ್ಯೂಟರ್ ಅದಕ್ಕೆ ಉತ್ತರ ಕೊಡುತ್ತದೆಯೇ ವಿನಹಾ ಅದು ಆಲೋಚನೆ ಮಾಡಿ ಕೊಡುವುದಿಲ್ಲ. ಬಸ್ ಛಾರ್ಜ್ ಏರಿಸುವುದು ಇಳಿಸುವುದು ಕಂಪ್ಯೂಟರ್ ಮಾಡಿರತಕ್ಕ ಕೆಲಸವೇ ? ನೀವೇ ಮಾಡಿರತಕ್ಕಂಥ ಕೆಲಸದ ದರವನ್ನು ಇಳಿಸುತ್ತೇವೆ ಎಂದು ಏರಿಸಿದ್ದೀರಿ, ಕಂಪ್ಯೂಟರ್ ಮೇಲೆ ದೋಷ ಹೊರಿಸುತ್ತೀರಿ, ಇದು ಅರ್ಥವಿಲ್ಲದ್ದು. ನಿಮಗೆ ಏನೋ ಒಂದು ನೆಪ ಬೇಕು, ನಮ್ಮ ಕಡೆ ಒಂದು ಗಾದೆ ಇದೆ. "ಕಳ್ಳನಿಗೆ ಒಂದು ಪಿಳ್ಳೆ ನೆವ" ಎಂದು ಹೇಳಿ ಕಂಪ್ಯೂಟರನ್ನು ನೆಪ ಮಾಡಿಕೊಂಡು ಜನತೆಯನ್ನು ಕ್ಷೌರ ಮಾಡತಕ್ಕಂಥ ಕೆಲಸಕ್ಕೆ ಸರ್ಕಾರ ಕೈಹಾಕಿದೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನನಗೇ ಒಂದು ತರಹ ನಾಚಿಕೆಯಾಗುತ್ತದೆ. ಕಾರಣವೇನೆಂದರೆ ಈ ಸದನದ ವೇಳೆಯನ್ನು ಇನ್ನೂ ಗುರುತಿಸವಾಗಿರತಕ್ಕಂಥ ವಿಚಾರಗಳಿಗೆ ಬಳಸಿಕೊಳ್ಳಬೇಕಾಗಿದೆ. ಆದರೆ ಇವತ್ತು ಸರ್ಕಾರ ಗತ್ಯಂತರವಿಲ್ಲದ ಪರಿಸ್ಥಿತಿಗೆ ನಮ್ಮನ್ನು ದೂಡಿದೆ. ನೀವು ಹೇಳಿರತಕ್ಕಂಥ ಮಾತಿಗಾದರೂ ಕಟ್ಟುಬಿದ್ದು ಶೇಕಡ 7ರಷ್ಟನ್ನು ಕಡಿಮೆ ಮಾಡಿ ಎಲ್ಲಾ ಹಂತದಲ್ಲೂ ಕೂಡ ಇದನ್ನು ಜಾರಿಗೆ ಕೊಡುವುದಕ್ಕೆ ಆಶ್ವಾಸನೆ ನೀಡಿ. ಇವತ್ತು ಹಕ್ಕುಚ್ಯುತಿ ನಿರ್ಣಯ ಏನು ತಂದಿದ್ದೇವೆ, ಇದರ ಬಗ್ಗೆ ತಾವು ತೀವ್ರವಾಗಿ ಆಲೋಚನೆ ಮಾಡತಕ್ಕಂಥ ಅವಶ್ಯಕತೆ ಇದೆ. ಕೇವಲ ಒಬ್ಬರಿಗೋ ಇಬ್ಬರಿಗೋ ಅನ್ಯಾಯವಾಗಿದ್ದರೆ ನಾವು ಅದನ್ನು ತೀವ್ರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಪ್ರತಿದಿವಸ ನಲವತ್ತು ಲಕ್ಷ ಜನರು ಪ್ರಯಾಣಿಕರು ಬಸ್‌ನಲ್ಲಿ ಓಡಾಡುತ್ತಿದ್ದಾರೆ. ಇದು ಇಡೀ ರಾಜ್ಯದ ಜನರಿಗೆ ಮಾಡಿರತಕ್ಕಂಥ ಮೋಸ. ಇದಕ್ಕೆ ತಕ್ಕಂಥ ಶಿಕ್ಷೆ ಸರ್ಕಾರಕ್ಕೆ ಆಗಬೇಕಾಗಿದೆ. ಆದ್ದರಿಂದ ದಯವಿಟ್ಟು ಹಕ್ಕುಚ್ಯುತಿ ನಿರ್ಣಯ ತರಲು ತಾವು ಅವಕಾಶ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

† ಶ್ರೀ ಎಸ್.ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಕೆ.ಎಸ್.ಆರ್.ಟಿ.ಸಿಯವರು ಬರೀ ದರೋಡೆ ಮಾಡುತ್ತಿಲ್ಲ. ಹಗಲು ದರೋಡೆಯನ್ನು ಮಾಡುತ್ತಿದ್ದಾರೆ. ಏಕೆಂದರೆ ಒಂದು ಕಿ.ಮೀಟರಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸನ್ನು ಓಡಿಸಬೇಕಾದರೆ 8.50 ರೂಪಾಯಿ ಖರ್ಚು ಬರುತ್ತದೆ. ಆದರೆ ತಾವು 10ರೂಪಾಯಿಯ ಲಾಭವನ್ನು ಮಾಡಿದ್ದೀರಿ. ಇವತ್ತಿನ

ದಿವಸ 22ರಿಂದ 27ಪೈಸೆ ಏರಿಸುವುದರಿಂದ ಸುಮಾರು 18ರೂಪಾಯಿ ಎಕ್ಸ್‌ಪೆಂಡಿಚರ್ ಬರುತ್ತದೆ. ದರವನ್ನು ಇಳಿಸಿದ ನಂತರ 20 ರೂಪಾಯಿ ಆಯಿತು. 20 ರೂಪಾಯಿ ಆದಾಗ ಇದು ದರೋಡೆ ಅಲ್ಲ. ಹಗಲು ದರೋಡೆಯಾಯಿತು. ಇದು ಏತಕ್ಕೆ ಆಯಿತು ಅಂದರೆ ಸ್ಟೇಜ್ ನಂ.1 ರಿಂದ 4ರವರೆಗೆ ದರದಲ್ಲಿ ವ್ಯತ್ಯಾಸ ಮಾಡಿದ್ದರಿಂದ ಮತ್ತೆ ಹೆಚ್ಚಾಯಿತು. ಮೊದಲು ಒಂದು ರೂಪಾಯಿ ಇತ್ತು, ತಾವು ಏರಿಸಿದ ನಂತರ 1.25ಪೈಸೆ ಆಯಿತು, ನಾವು ಮೊನ್ನೆ ಊರಿಗೆ ಹೋಗಿ ಬರುವಾಗ ಶೇಕಡ 7ರಷ್ಟು ಇಳಿದಿದ್ದು, ಈಗ 1.50 ರೂಪಾಯಿ ಆಗಿದೆ ಎಂದು ಹೇಳುತ್ತಾರೆ. 1.25 ಪೈಸೆ ಇದ್ದಿದ್ದು 1.50 ರೂಪಾಯಿ ಯಾವ ಪ್ರಕಾರ ಆಯಿತು ? 1.50 ರೂಪಾಯಿ ಆಗಬೇಕಾದರೆ ಕಾರಣವೇನು ಅಂದರೆ ಕಂಪ್ಯೂಟರ್‌ನಿಂದ ಆಗಿದೆ ಎಂದು ಹೇಳುತ್ತಾರೆ. ಪ್ರಾಫಿಟ್ ಆಗಬೇಕೆಂದರೆ ಈ ರೀತಿ ಪ್ರಯಾಣಿಕರನ್ನು ಸುಲಿಗೆ ಮಾಡುವುದು ಸರಿಯಲ್ಲ. ಏಕೆಂದರೆ ಈ ರಾಜ್ಯದೊಳಗೆ ಯಾರು ಹೇಳುವವರೂ ಇಲ್ಲ, ಕೇಳುವವರೂ ಯಾರೂ ಇಲ್ಲ. ಆ ರೀತಿ ಇದ್ದರೆ ಯಾವುದಕ್ಕೂ ಒಂದು ಮಿತಿ ಇರುತ್ತದೆ. ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಟಾಪ್ ಮೇಲೆ ಕುಳಿತುಕೊಳ್ಳಬೇಕು. ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಕುಳಿತುಕೊಂಡು ಪೊಲೀಸಿನವರಿಂದ ಬಡಿಸಿಕೊಂಡು, ಒದ್ದಿಸಿಕೊಂಡು ಸತ್ತು, ಇವರಿಗೆ ಮತ್ತೆ ದುಡ್ಡನ್ನು ಕೊಡಬೇಕು ಎಂತಹ ಪರಿಸ್ಥಿತಿ ಇದೆ ಎನ್ನುವುದನ್ನು ನೋಡಿ. ಶೇಕಡ 22ರಷ್ಟು ದುಡ್ಡನ್ನು ಕೊಡಬೇಕು. ಆದ್ದರಿಂದ ಮಾನ್ಯ ವೀರಪ್ಪ ಮೊಯಿಲಿಯವರು ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಪ್ರಯಾಣ ಮಾಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು):- ಈಗ ಹೆಚ್ಚಾಗಿರುವ ದರವನ್ನು ಇಳಿಕೆ ಮಾಡತಕ್ಕದ್ದರಲ್ಲಿ ಕಂಪ್ಯೂಟರ್‌ನಲ್ಲಿ ತಪ್ಪಾಗಿದೆ ಎಂದು ಹೇಳುತ್ತಿದ್ದಾರೆ. ಈ ಸದನದಲ್ಲಿ ಜನತೆಗೆ ಕೊಟ್ಟಂತಹ ಮಾತಿಗೆ ಸರ್ಕಾರ ಮತ್ತು ಈ ಅಧಿಕಾರಿಗಳು ಯಾವ ರೀತಿ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ, ಈ ಆಡಳಿತ ಯಂತ್ರ ಎಷ್ಟೊಂದು ಹದಗೆಟ್ಟು ಹೋಗಿದೆ ಅಂದರೆ ಅಲ್ಲಿ ಇದ್ದಂತಹ ಅಧಿಕಾರಿಗಳು ದರ ಇಳಿಕೆಯಾಗಿದೆಯೇ ಅಥವಾ ಹೆಚ್ಚಾಗಿದೆಯೇ ಎಂದು ಆ ಯಂತ್ರಕ್ಕೆ ಫೀಡ್ ಮಾಡುವಾಗ ಪರಿಶೀಲನೆ ಮಾಡಬೇಕಾಗಿತ್ತು, ಅಥವಾ ಅನಂತರವಾದರೂ ಅದನ್ನು ಪರಿಶೀಲನೆ ಮಾಡಿಲ್ಲವೆಂದು ಇಲ್ಲಿ ಸ್ಪಷ್ಟವಾಗುತ್ತದೆ. ಅಲ್ಲಿ ಸಂಬಂಧಪಟ್ಟಂಥ ಸಚಿವರೂ ಸಹಿತ ತಾವು ಸದನಕ್ಕೆ ಕೊಟ್ಟಂತಹ ಭರವಸೆಯನ್ನು ಸರಿಯಾಗಿ ಸಮರ್ಪಕವಾಗಿ ಆಡಳಿತದಲ್ಲಿರತಕ್ಕಂಥ ಅಧಿಕಾರಿಗಳು ಮಾಡಿದ್ದಾರೆಯೇ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಲಿಲ್ಲ ಎಂದು ಸ್ಪಷ್ಟವಾಗುತ್ತದೆ. ನಾವೇನೋ ಮಾನ್ಯ ವೀರಪ್ಪ ಮೊಯಿಲಿಯವರ ಹೊಸ ಸರ್ಕಾರ ಕಾನೂನುಬದ್ಧವಾಗಿ ಈ ಸಭೆಗೆ ಮತ್ತು ನಾಡಿನ ಜನತೆಗೆ ತಾವು ಆಡಿದಂಥ, ಹೇಳಿದಂಥ ಮಾತುಗಳಿಗೆ ಬದ್ಧವಾಗಿರುತ್ತಾರೆಂದು ತಿಳಿದುಕೊಂಡಿದ್ದೆವು, ಆದರೆ ಇಲ್ಲಿ ನಡೆಯಕ್ಕಂಥ ವ್ಯವಸ್ಥೆಯನ್ನು ನೋಡಿದರೆ ಇಲ್ಲಿ ಆಡಳಿತ ಸಂಪೂರ್ಣವಾಗಿ ಹದಗೆಟ್ಟಿದೆ. ಕುಸಿದು ಹೋಗಿದೆ ಜನತೆಯನ್ನು ಅವರು ಲಘುವಾಗಿ ಇಲ್ಲಿ ಕಾಣುತ್ತಿದ್ದಾರೆ ಎಂದು ನಾವು ತಿಳಿಯಬೇಕಾಗಿದೆ. ನಿನ್ನೆ ತಾನೆ ನಾನು ಬಸ್‌ನಲ್ಲಿ ಬರುತ್ತಿರುವಾಗ ಹೇಳಿದರು, ಬಸ್ಸುಗಳಲ್ಲಿ ಸೀಟುಗಳಿಲ್ಲ; ಅಷ್ಟೇ ಅಲ್ಲ. ಅಲ್ಲಿರತಕ್ಕಂಥ ಸ್ಕ್ರೂಮಳೆಗಳಿಂದ ಒಬ್ಬ ಮನುಷ್ಯನ ಬೆನ್ನಿಗೆ ತಗುಲಿ ಆಸ್ಪತ್ರೆಗೆ ಹೋಗುವಂತಹ ಪರಿಸ್ಥಿತಿ ಬಂತು. ಮಾನ್ಯ ಮುಖ್ಯಮಂತ್ರಿಗಳು ಇದನ್ನು ದಯವಿಟ್ಟು ಕೇಳಬೇಕು. ಸೀಟುಗಳಲ್ಲಿ ಮಳೆಗಳನ್ನು ನೆಟ್ಟಿದ್ದು ಪ್ರಯಾಣ ಮಾಡುವ ಪ್ರಯಾಣಿಕರಿಗೆ ತಗುಲಿ ದವಾಖಾನೆಗೆ ಹೋಗುತ್ತಿದ್ದಾರೆ. ಇಂತಹ ಬಸ್‌ಗಳಿಗೆ ಇಷ್ಟೊಂದು ದರವನ್ನು ಕೊಟ್ಟು ಈ ರಾಜ್ಯದಲ್ಲಿ ಜನ ಪ್ರವಾಸ ಮಾಡಬೇಕಾಗಿದೆ. ದಯವಿಟ್ಟು ಇದನ್ನು ಕಡಿಮೆ ಮಾಡಿ. ಅಲ್ಲಿ ಸುವ್ಯವಸ್ಥಿತವಾದ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡಬೇಕು ಈ ರೀತಿಯಾಗಿ ಪದೇ ಪದೇ ಜನತೆಗೆ ಮೋಸ ಮಾಡಿದರೆ ಜನತೆಯ ತಾಳ್ಮೆಯ ಕಟ್ಟೆ ಹೊಡೆಯುತ್ತದೆ. ಪರೀಕ್ಷೆ ಮಾಡಲು ಹೋಗಬಾರದೆಂದು ತಮ್ಮ ಮೂಲಕ ಹೇಳುತ್ತಿದ್ದೇನೆ.

† ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ-ಗ್ರಾಮಾಂತರ):– ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾಧ್ಯಕ್ಷರು ಬೆಳಗಿನಿಂದ ನನ್ನ ಕಡೆ ನೋಡುತ್ತಲೇ ಇಲ್ಲ. ಕೆಂಪು ಬಸ್ಸಿನಲ್ಲಿ ಓಡಾಡುವವರೇ ನಾವು. ಇವರು ಶೇಕಡ 25ರಷ್ಟು ದರ ಹೆಚ್ಚು ಮಾಡಿದರೂ ಈ ಸಾರಿಗೆ ಸಂಸ್ಥೆಯನ್ನು ಸರಿಯಾದಂತಹ ದಾರಿಗೆ ತರುವುದಕ್ಕಾಗವುದಿಲ್ಲ. ನೀವು ಶೇಕಡ 50 ರಷ್ಟು ಹೆಚ್ಚಿಸಿದರೂ ಈ ಸಾರಿಗೆ ಸಂಸ್ಥೆಯನ್ನು ಹಾದಿಗೆ ತರುವುದಕ್ಕಾಗುವುದಿಲ್ಲ; ಲಾಭಕ್ಕೆ ತರುವುದಕ್ಕೆ ಆಗುವುದಿಲ್ಲ.

ಇಂದಿನ ಸಾರಿಗೆ ಮಂತ್ರಿಗಳು ಹೇಳಿದ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನೀವು ಸಾರಿಗೆ ದರವನ್ನು ಏನು ಹೆಚ್ಚು ಮಾಡುತ್ತೀರಿ, ಅದರಿಂದ ಭ್ರಷ್ಟಾಚಾರ ಇನ್ನೂ ಹೆಚ್ಚಾಗುತ್ತದೆಯೇ ಹೊರತು ಆದಾಯ ಹೆಚ್ಚಾಗುವುದಿಲ್ಲ. ಇದರ ಬಗ್ಗೆ ಸದನದಲ್ಲಿ ಬಹಳಷ್ಟು ಸಾರಿ ಪ್ರತಿಪಾದನೆ ಮಾಡಿದ್ದೇನೆ. ತಾವು ಸಾರಿಗೆ ಸಂಸ್ಥೆಯ ಆಡಳಿತದಲ್ಲಿ ಸಾಂಸ್ಥಿಕ ಬದಲಾವಣೆಗಳನ್ನು ಮಾಡದೆ ಹೋದರೆ ಸುಮ್ಮನೆ ಎರಡು ವರ್ಷಗಳಿಗೊಂದು ಸಾರಿ ಸಾರಿಗೆ ದರವನ್ನು ಏರಿಸುವ ಮೂಲಕ ಜನರಿಗೆ ಅನಗತ್ಯ ಕಿರುಕುಳ ಕೊಡುತ್ತಿದ್ದೀರೆಂದು ನಾನು ಹೇಳಬೇಕಾಗುತ್ತದೆ. ಸಾರಿಗೆ ಸಂಸ್ಥೆಗೆ ಬಂದಿರುವಂಥ ಖಾಯಿಲೆಗೆ ಮೂಲ ಕಾರಣ ಅತಿ ಕೇಂದ್ರೀಕರಣ. Over centralisation in its administration is the reason for corruption and inefficiency in that Corporation.

ಇದ್ನು ನೀವು ಸರಿಪಡಿಸದ ಹೊರತು, ನೀವು ಆ ಸಂಸ್ಥೆಯನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಆ ಕಾರಣ ನಾನು ಪದೇ ಪದೇ ವಿನಂತಿಸಿಕೊಳ್ಳುತ್ತಿದ್ದೇನೆ. ಏಕೆಂದರೆ, ನಾವು ನಿಂತು ಓಡಾಡುವವರು, ಬಸ್ಸಿನ ಮೇಲೆ ಕುಳಿತು ಪ್ರಯಾಣ ಮಾಡುವವರು. ಈ ರಾಜ್ಯದ ಜನತೆಗೆ ಪರವಾಗಿ, ರೈತರ ಪರವಾಗಿ ವಿಶೇಷವಾಗಿ 'ಸ್ಟ್ಯಾಂಡಿಂಗ್ ಸೀಟ್' ಎಂದು ಏನು ಕರೆಯುತ್ತಿದ್ದೇವೆ ಇದೊಂದು ವಿರೋಧಾಭಾಸ. A seat cannot be standing. This is a contradiction in terms. How can a seat be standing?

ಇದನ್ನು ಸ್ಟ್ಯಾಂಡಿಂಗ್ ಸೀಟ್ ಎಂದು ಕರೆಯುವುದು ಉಂಟೆ ? A seat can be sitting. A seat cannot be standing. It is a contradiction in terms.

ಆ ಕಾರಣದಿಂದ ಹೇಳುತ್ತಿದ್ದೇವೆ. ನಾವು ಸ್ಟ್ಯಾಂಡಿಂಗ್ ಸೀಟ್‌ಗೆ ದುಡ್ಡು ಕೊಡುವುದಿಲ್ಲ, ಬಸ್ಸಿನ ಮೇಲೆ ಕುಳಿತರೂ ಸಹ ದುಡ್ಡು ಕೊಡುವುದಿಲ್ಲ. ಇದರ ಬಗ್ಗೆ ನಾನು ಕೊನೆಯದಾಗಿ ಎಚ್ಚರಿಕೆ ಕೊಡುತ್ತಿದ್ದೇನೆ. ಏಕೆಂದರೆ, 50 ಸೀಟುಗಳಿರುವ ಒಂದು ಬಸ್ಸಿನಲ್ಲಿ ನಾವು 150 ಜನರು ಪ್ರಯಾಣ ಮಾಡುತ್ತಿದ್ದೇವೆ. ಆದರೂ ಈ ಸಂಸ್ಥೆಗೆ ಏಕೆ ನಷ್ಟವಾಗುತ್ತದೆ ? ಏಕೆ ನಷ್ಟಕ್ಕೆ ಬರಬೇಕು ? ಸಾಮಾನ್ಯ ದನ ಕಾಯುವ ಹುಡುಗರೂ ಸಹ ಅರ್ಥಮಾಡಿಕೊಳ್ಳಬೇಕಾದಂಥ ವಿಚಾರ ಇದು.

ಶ್ರೀ ಕೆ.ಹೆಚ್. ರಂಗನಾಥ್:– ಬಸ್ಸಿನ ಮೇಲೆ ಕುಳಿತುಕೊಳ್ಳುವ ಪ್ರಯಾಣಿಕರು ಟಿಕೇಟ್ ತೆಗೆದುಕೊಳ್ಳುವುದಿಲ್ಲವೆಂದು ತಮಗೆ ಖಾಯಂ ಆಗಿ ಗೊತ್ತಿದೆ. ಮೇಲೆ ಕುಳಿತಿರುವವರು ಒಳಗಡೆ ಇರುವವರಿಗೆ ಹೇಳುತ್ತಾರೆ, ಒಳಗಡೆಯಿರುವವರು ಮೇಲೆ ಕುಳಿತಿರುವವರನ್ನು ತೋರಿಸುತ್ತಾರೆ.

ಶ್ರೀ ಸಿ. ಭೈರೇಗೌಡ:– ನಮ್ಮ ಕಡೆ ಮೇಲುಗಡೆ ಕುಳಿತುಕೊಳ್ಳುವುದಕ್ಕೆ 'ಬಾಲ್ಕನಿ ಸೀಟ್' ಎಂದು ಕರೆಯುತ್ತಾರೆ. ಬಾಲ್ಕನಿ ಸೀಟಿಗೆ ದೊಡ್ಡ ಮನುಷ್ಯರು ತಾನೇ ಹೋಗತಕ್ಕಂಥಾದ್ದು. ಅವರಿಗೆ ಯಾರಿಗೂ ಸಹ ಟಿಕೇಟ್ ಕೊಡತಕ್ಕಂಥಾದ್ದು ಅಥವಾ ಅವರು ಕೇಳತಕ್ಕಂಥ ಅಭ್ಯಾಸ ಇಲ್ಲ. ಒಳಗಡೆ ಸೀಟ್ ಇದ್ದರೂ ಕೂಡ ಬಹಳಷ್ಟು ಜನರು ಬಾಲ್ಕನಿ ಸೀಟಿಗೆ ಹೋಗುತ್ತಾರೆ. ಕಾರಣವೇನೆಂದರೆ, ಒಳಗಡೆ ಕುಳಿತುಕೊಂಡಿದ್ದರೆ ಕಂಡಕ್ಟರ್ ಟಿಕೇಟ್ ಕೇಳುತ್ತಾನೆ. ಆದರೆ, ಬಾಲ್ಕನಿಯಲ್ಲಿ ಕುಳಿತುಕೊಂಡರೆ ಕಂಡಕ್ಟರ್ ಅಲ್ಲಿಗೆ ಹೋಗಿ ಟಿಕೇಟ್ ಕೇಳುವುದಕ್ಕಾಗುವುದಿಲ್ಲ. ಆದುದರಿಂದ, ಪ್ರಯಾಣಿಕರು

ಎಲ್ಲೆಂದರಲ್ಲಿ ಹತ್ತುಕೊಳ್ಳುತ್ತಾರೆ, ಬೇಕಾದ ಕಡೆ ಇಳಿಯುತ್ತಾರೆ. ಅಲ್ಲದೆ, ಬಸ್ಸಿನೊಳಗಡೆ ಸೀಟುಗಳೆಲ್ಲಾ ಖಾಲಿ ಇದ್ದು, ಬಾಲ್ಕನಿ ಮಾತ್ರ ಭರ್ತಿಯಾಗಿರುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾವು ಇದನ್ನು ಲಘುವಾದ ಸಮಸ್ಯೆಯನ್ನಾಗಿ ತೆಗೆದುಕೊಂಡು ಚರ್ಚೆ ಮಾಡುವುದನ್ನು ಮೊದಲು ನಿಲ್ಲಿಸಬೇಕು. ಏಕೆಂದರೆ, ಸನ್ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು 'ಬಸ್ಸಿನ ಮೇಲೆ ಕುಳಿತುಕೊಳ್ಳುವವರು ಟಿಕೇಟ್ ತೆಗೆದುಕೊಳ್ಳುತ್ತಾರೆಯೆ ?' ಎಂದು ಕೇಳಿದರು. ಅವರು ಟಿಕೇಟ್ ತೆಗೆದುಕೊಳ್ಳುವುದಿಲ್ಲವೆಂಬುದು ನನಗೂ ಗೊತ್ತಿದೆ. ಆದ್ದರಿಂದಲೇ ಭ್ರಷ್ಟಾಚಾರ ಇನ್ನೂ ಜಾಸ್ತಿಯಾಗುತ್ತಿರುವುದು. ಬಸ್ಸಿನ ಮೇಲೆ ಕುಳಿತುಕೊಳ್ಳುವ ಪ್ರಯಾಣಿಕರು ಎಷ್ಟು ಕಾಸು ಕೊಡುತ್ತಾರೋ ಅಷ್ಟನ್ನು ತೆಗೆದುಕೊಂಡು ಕಂಡಕ್ಟರ್ ತನ್ನ ಜೇಬಿಗೆ ಹಾಕಿಕೊಳ್ಳುತ್ತಾನೆಯೇ ಹೊರತು ಆ ಹಣ ಸಂಸ್ಥೆಗೆ ತಲುಪುತ್ತಿಲ್ಲ. ಇದು ನನಗೆ ಚೆನ್ನಾಗಿ ಗೊತ್ತಿದೆ. ಇದೇ ರೀತಿ ಮುಂದುವರಿದರೆ ಏನಾಗುತ್ತದೆ ? ಮಾನ್ಯ ಸಭಾಧ್ಯಕ್ಷರಿಗೆ ಚೆನ್ನಾಗಿ ಗೊತ್ತಿದೆ, ಉತ್ತರ ಕರ್ನಾಟಕದ ರಸ್ತೆಗಳು ಯಾವ ರೀತಿ ಇದೆಯೆಂದು ? ಉತ್ತರ ಕರ್ನಾಟಕದಲ್ಲಿ ಬಸ್ಸಿನ ಮೇಲೆ ಪ್ರಯಾಣಿಸುವವರು ಕೆಳಗೆ ಬಿದ್ದು ಈಗಾಗಲೇ ನೂರಾರು ಸಾವುಗಳು ಸಂಭವಿಸಿವೆ. ಇವೊತ್ತಿಗೂ ಕೂಡ ಶಾಲೆಗೆ ಹೋಗುವ ಮಕ್ಕಳು ತಮ್ಮ ಪುಸ್ತಕ ಮತ್ತು ಟಿಫಿನ್ ಕ್ಯಾರಿಯರ್ ಇಟ್ಟುಕೊಂಡು ಬಸ್ಸಿನ ಮೇಲೆ ಕುಳಿತುಕೊಂಡು ಪ್ರಯಾಣಿಸುತ್ತಿರುತ್ತಾರೆ. ಇದನ್ನು ಸರಿಪಡಿಸುವುದಕ್ಕೆ ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಬೇಕು. ಆದ್ದರಿಂದ, ನನ್ನ ಸಲಹೆ ಇಷ್ಟೆ. ಇದೇ ಕೇಂದ್ರೀಕೃತ ಆಡಳಿತವನ್ನು ನೀವೇನಾದರೂ ಮುಂದುವರೆಸಿದರೆ ಈ ಸಂಸ್ಥೆಯನ್ನು ಸರಿ ಮಾಡುವುದಕ್ಕಾಗುವುದಿಲ್ಲ. ಈ ಸಂಸ್ಥೆಯನ್ನು ವಿಕೇಂದ್ರೀಕರಿಸಬೇಕು. ಸಾರಿಗೆ ಸಂಸ್ಥೆಯಲ್ಲಿ ಭ್ರಷ್ಟಾಚಾರ ಯಾವ ಮಟ್ಟಕ್ಕೆ ಸಿಸ್ಟಮಟೈಸ್ ಆಗಿದೆಯೆಂದರೆ unleess you make people to participate in the administration of this Corporation, you cannot eradicate corruption in this Corporation.

ಮೊದಲು ವಿಕೇಂದ್ರೀಕರಣವನ್ನು ಯಾವ ಮಟ್ಟಕ್ಕೆ ಮಾಡುತ್ತೀರೋ ಮಾಡಿ, ನಾನು ಸಾರಿಗೆ ಸಂಸ್ಥೆಯ ನೌಕರರ ಸಂಘದವರು ಯಾರಿದ್ದಾರೆ, ಅವರ ಹತ್ತಿರ ಈಗಾಗಲೇ ಮಾತನಾಡಿದ್ದೇನೆ.

ಡಿಪೋ ಲೆವಲ್‌ನಲ್ಲಿ ವಿಕೇಂದ್ರೀಕರಣ ಮಾಡಬೇಕೆಂದು ಅವರು ಹೇಳುವುದು. ಆ ರೀತಿ ಮಾಡಿ ಡಿಪೋ ಲೆವೆಲ್‌ನಲ್ಲಿ ಆಯಾಯ ಪ್ರದೇಶದ ಸಾರ್ವಜನಿಕರೇನಿದ್ದಾರೆ ಅವರ ಪ್ರತಿನಿಧಿಗಳಿರತಕ್ಕ ಒಂದು ಮಂಡಳಿಯನ್ನು ರಚನೆ ಮಾಡಿ ನೀವು ಏನಾದರೂ ಕೆಲಸ ಮಾಡುವುದಾದರೆ ಮಾತ್ರ ಈ ಸಂಸ್ಥೆಗೆ ಬಂದಿರತಕ್ಕ ಠೋಗವನ್ನು, ಖಾಯಿಲೆಯನ್ನು ತಪ್ಪಿಸಬಹುದು. ಇದ್ನು ಮಾಡದಿದ್ದರೆ ನೀವು ಇನ್ನು ಎರಡು ವರ್ಷಗಳಲ್ಲಿ ಮತ್ತೆ ಇದರ ದರವನ್ನು ಹೆಚ್ಚು ಮಾಡಿ ನಮಗೆ ಕಿರುಕುಳವನ್ನು ಕೊಡುತ್ತೀರಿಯೇ ಹೊರತು ಈ ಸಂಸ್ಥೆಯನ್ನು ಆರೋಗ್ಯದ ಹಾದಿಯಲ್ಲಿ ತರಲು ನಿಮ್ಮಿಂದ ಸಾಧ್ಯವಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೆ, ಪ್ರೊ. ನಂಜುಂಡಸ್ವಾಮಿಯವರು, ಮಾನ್ಯ ಶಿವಾನಂದ ಕೌಜಲಗಿಯವರು ಮತ್ತು ಇತರ ಕೆಲವರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ, ಪರಿಶೀಲನೆಗೆ ಮತ್ತು ಆಚರಣೆಗೆ ಯೋಗ್ಯವಾದ ಸಲಹೆಯನ್ನು ಕೊಟ್ಟಿರತಕ್ಕ ವಿಚಾರವಿದು. ಆದರೆ ವಿರೋಧ ಪಕ್ಷದ ನಾಯಕರು, ಸಿಂಧ್ಯರವರು ಮತ್ತು ಇತರರು ಎತ್ತಿರತಕ್ಕ ಪ್ರಶ್ನೆ ಏನೆಂದರೆ ಮೊದಲನೆಯ ಸ್ಟೇಜ್‌ನಲ್ಲಿ 1–25 ರೂ. ಇದ್ದದ್ದು 1–50 ಆಯಿತು, ದರಗಳನ್ನು ಕಡಿಮೆ ಮಾಡಿದ ಮೇಲೂ ಜಾಸ್ತಿಯಾಯಿತು, ಇದರ ಏನು ಎನ್ನತಕ್ಕ ಮಾತನ್ನು ಎತ್ತಿದರು. ಅವರು ಈಗಾಗಲೇ ಸಾರಿಗೆ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದಾರೆ, ಕಂಪ್ಯೂಟರ್‌ನ ತೊಂದರೆಯ ಜೊತೆಗೆ ಮೂಲ ವ್ಯತ್ಯಾಸವೇನಾಯಿತು ಎಂದರೆ ಯಾವುದೇ ದರವನ್ನು ನಿಗದಿ ಮಾಡಬೇಕಾದರೆ 50 ಪೈಸೆಯಂತೆ ರೌಂಡ್ ಆಫ್ ಮಾಡಬೇಕೆಂದು ಮಾಡಿದರೆ ಅದರಿಂದ 25 ಪೈಸೆ ಇದ್ದದ್ದು 50 ಪೈಸೆಯಾಗಿ

ರೌಂಡ್ ಆಫ್ ಮಾಡಿದರು, ಇದರ ಪರಿಣಾಮವಾಗಿ ಮೊದಲನೆಯ ಸ್ಟೇಜ್‌ಗೆ 1–25 ಇದ್ದುದು 1–50 ಆಯಿತು, ಇದೇ ರೀತಿಯಲ್ಲಿ ಬೇರೆ ಸ್ಟೇಜ್‌ಗಳಲ್ಲಿ ಅಂದರೆ ಉದಾಹರಣೆಗೆ 10ನೇ ಸ್ಟೇಜ್‌ನಲ್ಲಿ 1–50 ನ್ನು 10ರಿಂದ ಗುಣಾಕಾರ ಮಾಡಿದ್ದರಿಂದ ಉದ್ದಕ್ಕೂ ಜಾಸ್ತಿಯಾಯಿತು. ಈಗ ಅದನ್ನು ಮನಗಂಡು ತಾವೆಲ್ಲಾ ಚರ್ಚೆ ಮಾಡಿದ ಮೇಲೆ. ತಮ್ಮ ಸಲಹೆಯನ್ನು ತೆಗೆದುಕೊಂಡು 25 ಪೈಸೆಗೇ ರೌಂಡ್ ಆಫ್ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಇದು 1–3–93ರಿಂದ ಜಾರಿಗೆ ಬರುತ್ತದೆ.

18–3–93 ರಿಂದ ಸಾಮಾನ್ಯ ಗ್ರಾಮಾಂತರ ಬಸ್ಸುಗಳ ದರದ ಏರಿಕೆಯು ಶೇಕಡ 7ರಷ್ಟನ್ನು ಕಡಿತಗೊಳಿಸಿರುವುದರಿಂದ ದರದ ರಚನೆಯನ್ನು 50 ಪೈಸೆಗೆ ರೌಂಡ್ ಆಫ್ ಮಾಡಲಾಯಿತು. ಈಗ ಇದನ್ನು 25 ಪೈಸೆಗೆ ರೌಂಡ್ ಆಫ್ ಮಾಡಲು ನಿರ್ಧರಿಸಲಾಗಿದೆ. ಇದು ಸಾಮಾನ್ಯ ಗ್ರಾಮೀಣ ಬಸ್ಸುಗಳ ದರಗಳಿಗೆ ಮೊದಲ ನಾಲ್ಕು ಸ್ಟೇಜುಗಳಿಗೆ ಸೀಮಿತವಾಗಿರುತ್ತದೆ. ನಾಲ್ಕು ಸ್ಟೇಜ್‌ನ ನಂತರದ ಪ್ರಯಾಣಕ್ಕೆ ಇದು ಅನ್ವಯವಾಗುವುದಿಲ್ಲ. ಈ ಬದಲಾವಣೆಯು 1–3–93ರಿಂದ ಜಾರಿಗೆ ಬರುತ್ತದೆ ಎನ್ನತಕ್ಕ ಹೇಳಿಕೆಯನ್ನು ಸಾರಿಗೆ ಸಚಿವರು ಕೊಟ್ಟಿದ್ದಾರೆ.

ಶ್ರೀ ಬಸವರಾಜ್ ರಾಯರೆಡ್ಡಿ:– ಹಾಗಾದರೆ ಇನ್ನೂ ಒಂದು ವಾರದವರೆಗೆ ಜನರು ಟ್ಯಾಕ್ಸ್‌ನ್ನು ಕೊಡಬೇಕಾದಂತಾಯಿತು.

SRI HARNAHALLI RAMASWAMY:– Fares are calculated by multiplying the distance by the basic fare. Resultant fare has been rounded off to 50 paise in case of ordinary services and the next rupee in the case of express, semi–luxury and luxury services. As a result no change in the fares of the first four stages of ordinary service. ಸಾಮಾನ್ಯವಾಗಿರತಕ್ಕ ಬಸ್‌ಸರ್ವಿಸ್‌ಗಳಿಗೆ 21–2–93ರಿಂದಲೇ ಇದು ಕಡಿಮೆಯಾಗಿದೆ ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಸಾರಿಗೆ ಸಚಿವರ ಪರವಾಗಿ ಹೇಳುವುದಾದರೆ ಯಾವುದೇ ಕಾರಣದಿಂದಲೂ ಶೇಕಡ 7 ಪರ್ಸೆಂಟ್ ಕಡಿಮೆ ಮಾಡಿದ್ದೇವಲ್ಲಾ ಈ ಒಂದು ಮಿತಿಗೆ ಎಲ್ಲವೂ ಆಗಿರುತ್ತದೆಯೇ ವಿನಹ ಅದಕ್ಕಿಂತ ಮೇಲೆ ಹೋಗುವುದಿಲ್ಲ, ಏನಾದರೂ ಲೆಕ್ಕಾಚಾರದಲ್ಲಿ ತಪ್ಪಾಗಿದ್ದರೆ ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ.

SRI P.G.R. SINDIA:– The only assurance we want from the Chief Minister is, ಮೊದಲ ನಾಲ್ಕು ಸ್ಟೇಜ್‌ನಲ್ಲಿ 7 ಪರ್ಸೆಂಟ್ ದರವೇನು ಕಡಿಮೆಯಾಗಿಲ್ಲ, ಅದು ಹೆಚ್ಚಾಗಿದೆ, ಆದುದರಿಂದ 7 ಪರ್ಸೆಂಟನ್ನು ಕಡಿಮೆ ಮಾಡುತ್ತೇವೆಂದು ಆಶ್ವಾಸನೆಯನ್ನು ನಮಗೆ ಕೊಟ್ಟರೆ ಸಾಕು, ಅದು 1–3–1993ರಿಂದ ಕೊಡಬೇಕು. That is all the assurance we want.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಆಗಬಹುದು.

1.10 ಪಿ.ಎಂ.

ಮಂತ್ರಿಗಳ ಹೇಳಿಕೆ

ಬಿ.ಜೆ.ಪಿ. ಕಾರ್ಯಕರ್ತರ ಬಂಧನ, ಬಿಡುಗಡೆ

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಮತ್ತು ವಿರೋಧಪಕ್ಷದ ನಾಯಕರು ಮಾನ್ಯ ಯಡಿಯೂರಪ್ಪನವರು ಶ್ರೀ ರುಕ್ಮಯ್ಯ ಪೂಜಾರಿ,

ಶ್ರೀ ಶಂಕರಮೂರ್ತಿ ಮತ್ತು ನಾರಾಯಣ್ ರಾವ್ ಮನಹಳ್ಳಿ ಅವರ ಬಂಧನದ ಬಗ್ಗೆ ಹೇಳಿದರು. ಈಗಾಗಲೇ ಅವರು ಬಿಡುಗಡೆಯಾಗಿ ಸಧ್ಯಕ್ಕೆ ಇಲ್ಲಿಗೆ ಬರುತ್ತಿದ್ದಾರೆ.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಬಿ.ಜೆ.ಪಿ. ಕಾರ್ಯಕರ್ತರ ಬಂಧನ.

ಶ್ರೀ ಕೆ.ಎಸ್. ಈಶ್ವರಪ್ಪ:– ಸನ್ಮಾನ್ಯ ಮುಖ್ಯಮಂತ್ರಿಗಳ ಉತ್ತರ ಒಂದು ರೀತಿಯ ಹುಡುಗಾಟಿಕೆಯ ಉತ್ತರವಾಗಿದೆ. ನಿನ್ನೆ ದಿನ ಬಳ್ಳಾರಿಯಲ್ಲಿ ನನ್ನನ್ನು ಅರೆಸ್ಟ್ ಮಾಡಿದರು. ನಮ್ಮನ್ನೆಲ್ಲಾ ಬಳ್ಳಾರಿ ಪೋಲೀಸ್ ಸ್ಟೇಷನ್‌ನಲ್ಲಿ ಬಿಟ್ಟರು. ಇಲ್ಲೂ ಅರೆಸ್ಟ್ ಮಾಡಿದರು ಏಕೆ ಅರೆಸ್ಟ್ ಮಾಡಿದರು, ಏನು ಕೇಸ್ ಹಾಕಿದರು, ಏಕೆ ಈಗ ಬಿಡುಗಡೆ ಮಾಡಿದರು. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಇಂಥ ಕೆಲಸ ಮಾಡುತ್ತಿರುವುದು ಹೊಸದೇನೂ ಅಲ್ಲ. ಹುಬ್ಬಳ್ಳಿಯಲ್ಲಿ ಸಾರ್ವಜನಿಕ ಸಭೆಯನ್ನು ಮಾಡುತ್ತೇವೆಂದು ಶ್ರೀ ಯಡಿಯೂರಪ್ಪನವರು ಕುಳಿತರು ಆ ಸಂದರ್ಭದಲ್ಲೂ ಕೂಡ ಅರೆಸ್ಟ್ ಮಾಡಿದರು. ಅರೆಸ್ಟ್ ಮಾಡಿ 28ನೇ ತಾರೀಖು ತನಕ ಅವರನ್ನು ಜೈಲ್ಲಿನಲ್ಲಿ ಇಡುತ್ತೇವೆಂದು ಹೇಳಿದರು. ಕೊನೆಗೆ 28ನೇ ತಾರೀಖಿಗಿಂತ ಮುಂಚೆ ಅಂದರೆ 2–3 ದಿವಸಗಳ ಮುಂಚೆ ಬೇಷರತ್ ಬಿಡುಗಡೆ ಮಾಡಿದರು. ಇದು ಸರ್ಕಾರದ ನೀತಿಯೇ ? ಸರ್ಕಾರ ಇದೆಯೋ ಇಲ್ಲವೋ ? ಇವರು ಸಂಬಂಧಪಟ್ಟ ಅಧಿಕಾರಿಗಳಿಗೆ, ಪೋಲೀಸ್ ಅಧಿಕಾರಿಗಳಿಗೆ ಅರೆಸ್ಟ್ ಮಾಡಿ ಎಂದು ಸೂಚನೆ ಕೊಟ್ಟಿದ್ದಾರೋ ? ಅಥವಾ ಅವರಷ್ಟಕ್ಕೆ ಅವರೇ ಮಾಡಿದ್ದಾರೋ, ಈ ಸರ್ಕಾರ ಏನು ಕೆಲಸ ಮಾಡುತ್ತಿದ್ದೆ. ನಾವು ಒಂದು ವಿರೋಧಪಕ್ಷವಾಗಿ, ಇಲ್ಲ ಪ್ರಜಾಪ್ರಭುತ್ವವನ್ನು ಉಳಿಸುತ್ತೇವೆಂದು ಹೇಳುವುದಕ್ಕೆ ನಮಗೆ ಹಕ್ಕು ಇಲ್ಲವೇ, ಅಥವಾ ಸಂಘಟನಾತ್ಮಕವಾಗಿ ಜನರ ವಿಚಾರಗಳನ್ನು ತೆಗೆದುಕೊಂಡು ನಾಲ್ಕು ರಾಜ್ಯಗಳಲ್ಲಿ ಜನತೆಯಿಂದ ಚುನಾಯಿತವಾದ ಬಿ.ಜೆ.ಪಿ. ಸರ್ಕಾರಗಳನ್ನು ವಜಾ ಮಾಡಿದ ವಿರುದ್ಧ ಚುನಾವಣೆ ಮಾಡಿ ಎಂದು ಜೈಲು ಸೇರುವುದು ತಪ್ಪೇ ? ಏಕೆ ಈ ರೀತಿ ಮಾನ್ಯ ಮುಖ್ಯಮಂತ್ರಿಗಳು ಮಾಡುತ್ತಾರೋ, ನಮಗೆ ಅರ್ಥ ಆಗುತ್ತಿಲ್ಲ. ಅದಕ್ಕೋಸ್ಕರ ನಾನು ಕೇಳುವುದು ಇಷ್ಟೇ. ತಾವು ಒಂದು ರಾಜ್ಯದ ಮುಖ್ಯಮಂತ್ರಿಗಳಾಗಿ ವಿಧಾನಸಭೆ ನಡೆಯುತ್ತಿರುವ ಸಂದರ್ಭದಲ್ಲಿ ಒಬ್ಬ ಶಾಸಕರು ಪ್ರಜಾಪ್ರಭುತ್ವ ಉಳಿಸುತ್ತೇವೆಂದು ಜನರ ಸಂಘಟನೆ ಮಾಡಿಕೊಂಡು ಹೋಗಿರುವಂತಹ ಸಂದರ್ಭದಲ್ಲಿ ಇವನ್ನು ಬಂಧನ ಮಾಡಿದ್ದಾರೆ, ಇದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೊ, ಎಲ್ಲೆಲ್ಲಿ ಪ್ರದರ್ಶನ ಮಾಡಿದ್ದಾರೆ ಅವರನ್ನೆಲ್ಲಾ ಬಂಧನ ಮಾಡಬೇಕು ಎಂಬುದು ಇವರ ಅಪೇಕ್ಷೆ ಇತ್ತೋ ಏನು ಎಂಬುದನ್ನು ದಯಮಾಡಿ ತಿಳಿಸಬೇಕು.

ಡಾ।। ವೈ. ನಾಗಪ್ಪ:– ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಎಸ್. ಈಶ್ವರಪ್ಪ:– ಉತ್ತರಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೋ, ಕೊಡಲಿ ನನಗೆ ಅಭ್ಯಂತರವಿಲ್ಲ. ಆದರೆ ಇಲ್ಲಿ ಮುಖ್ಯಮಂತ್ರಿಗಳು ನಾಗಪ್ಪನವರೋ ಅಥವಾ ವೀರಪ್ಪಮೊಯಿಲಿಯವರೋ ನನಗೆ ಗೊತ್ತಿಲ್ಲ, ಅವರು ಮುಖ್ಯಮಂತ್ರಿಗಳು ಆದರೆ ಸಂತೋಷ 4ನೇಯ ಮುಖ್ಯಮಂತ್ರಿಗಗಳು ನಾಗಪ್ಪನವರು ಆಗಿದ್ದಾರೆಯೇ ಎಂದು ನನಗೆ ಅನುಮಾನವಾಗುತ್ತಿದೆ.

ಡಾ।। ಜೀವರಾಜ ಆಳ್ವ:– ಮಾನ್ಯ ಅಧ್ಯಕ್ಷರೇ, ಈಶ್ವರಪ್ಪನವರು ಯಡಿಯೂರಪ್ಪನವರ ಅರೆಸ್ಟ್ ಆಯಿತು ವೆಂದು ಹೇಳಿದರು. ಏಕೆ ಬಂಧನಕ್ಕೆ ಒಳಗಾಗಿದ್ದಾರೆ ಅದು ಪ್ರಶ್ನೆ ಬೇರೆ. ಆದರೆ ನನಗೆ ಗೊತ್ತಿದ್ದ ಹಾಗೆ ನನ್ನ ಬಡಾವಣೆಯ ಪೋಲಿಸರಿಗೆ ಒಂದು ಟಾರ್‌ಗೇಟ್ ಫಿಗರ್ ಕೊಟ್ಟಿದ್ದಾರೆ ಬಿ.ಜೆ.ಪಿ. ಅವರಿಗೆ ಹೆಗ್ಗಳಿಕೆ ಸಹಸ್ರ ಸಹಸ್ರ ಕಾರ್ಯಕರ್ತರ ಬಿ.ಜೆ.ಪಿ.ಯ ಬಂಧನ. ಟಿಕೇಟ್ ತೆಗೆದುಕೊಂಡಿಲ್ಲ, ರೈಲು ಹತ್ತಿದ್ದಾರೆ, ಅದಕ್ಕೆ ಇಳಿಸಿದ್ದಾರೆ ....

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ಟಿಕೇಟ್ ತೆಗೆದುಕೊಂಡು ಬಳ್ಳಾರಿಗೆ ಹೋಗಿದ್ದೇನೆ. ನಾನು ಟಿಕೇಟ್ ಇಲ್ಲಿ ತೋರಿಸುವುದಕ್ಕೆ ನಾನು ತಯಾರು ಇದ್ದೇನೆ ಏಕೆ ಬಂಧಿಸಿದರು, ಏಕೆ ಬಿಡುಗಡೆ ಮಾಡಿದರು.

(ಗೊಂದಲ)

ಡಾ।। ಜೀವರಾಜ ಆಳ್ವ:- ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕು ಇವತ್ತು ಸ್ಟೇಷನ್ ಸ್ಟೇಷನ್‌ಗಳಲ್ಲಿ ಬಿ.ಜೆ.ಪಿ.ಯ ನಿಜವಾದ ಕಾರ್ಯಕರ್ತರನ್ನು ಬಂಧನ ಮಾಡಿಲ್ಲ. ಅಲ್ಲಿ ಬಂಧನ ಮಾಡಿರುವುದು ರೌಡಿ ಸೀಟಿನಲ್ಲಿರುವ 50-60 ಜನರನ್ನು, ಇದರ ಬಗ್ಗೆ ತಾವು ಗಮನಿಸಬೇಕು. ಈ ಪೋಲೀಸ್ ವ್ಯವಸ್ಥೆ ಹೇಗಿದೆ ಎಂದರೆ ಇದನ್ನು ಬಹಳ ಗಂಭೀರವಾಗಿ ಗಮನಿಸದಿದ್ದರೆ ಇದು ಒಂದು ದೊಡ್ಡ ದುರಂತವಾಗುತ್ತದೆ. ಅಧಿಕಾರಿಗಳು ನಿಮಗೆ ಹೇಳುತ್ತಾರೆ. ಬೆಂಗಳೂರು ನಗರದಲ್ಲಿ ಮೂರು ಸಹಸ್ರ, ನಾಲ್ಕು ಸಹಸ್ರ ಜನ ಬಿ.ಜೆ.ಪಿ. ಕಾರ್ಯಕರ್ತರ ಬಂಧನವಾಯಿತು ಎಂದು. ಯಾರೂ ಬಂಧನ ಆಗಿಲ್ಲ. ನೀವು ರ್‍ಯಾಲಿ ಕ್ಯಾನ್ಸಲ್ ಮಾಡಿದ್ದೇ ತಪ್ಪು, ಇವರಿಗೆ ಅವಕಾಶ ಕೊಡಬೇಕಾಗಿತ್ತು.

Instead of meeting them politically ನಾವು ಏಕೆ ಮಾಡುತ್ತಿರೋ, ಏನು ತೊಂದರೆ ಮಾಡುತ್ತಿರೋ, ಯಾವ ದುರಂತಕ್ಕೆ ನಿಮ್ಮನ್ನು ನೀವು ಹಾಕಿಕೊಳ್ಳುತ್ತಿರೋ ನಮಗೆ ಅರ್ಥವಾಗುವುದಿಲ್ಲ. ಅದರ ಬದಲು ಇಲ್ಲಿ ಸ್ಟೇಷನ್‌ಗೆ ಹೋಗುತ್ತಾರೆ ಅಲ್ಲಿ ಪತ್ರಿಕೋದ್ಯಮಿಗಳು ಫೋಟೊ ಹಾಕುತ್ತಾರೆ. ರಾಮಚಂದ್ರೇಗೌಡರು, ಈಶ್ವರಪ್ಪನವರು ಯಡಿಯೂರಪ್ಪನವರು ಇರುತ್ತಾರೆ. ಆದರೆ ನನ್ನ ನೋವು ಏನು ಎಂದು ಹೇಳಿದರೆ ಏನೂ ಸಂಬಂಧ ಇಲ್ಲದಂಥ ಅಯೋಧ್ಯೆಗೆ ಸಂಬಂಧ ಇಲ್ಲದಂಥ, ಯಡಿಯೂರಪ್ಪನವರಿಗೆ ಸಂಬಂಧ ಇಲ್ಲದೆ ಇರತಕ್ಕಂಥ ಬಿ.ಜೆ.ಪಿ. ಕಾರ್ಯಕರ್ತರು ಅಲ್ಲದಂಥ ಸಹಸ್ರಾರು ವ್ಯಕ್ತಿಗಳ ಬಂಧನ ಆಗಿದೆ. ಇದಕ್ಕೆ ನಾನು ಗಂಭೀರವಾದಂಥ ಆಪಾದನೆ ಮಾಡುತ್ತಿದ್ದೇನೆ. It shows non-performance of the Government ...... ಆದ್ದರಿಂದ ಇದನ್ನು ಸರಿಪಡಿಸಿ ಇದರಲ್ಲಿ ನಾನು ಗಂಭೀರ ಅಪಾದನೆ ಮಾಡುತ್ತಿರುವುದು ಅಧಿಕಾರ ವರ್ಗದಲ್ಲೂ ಕೂಡ ಒಂದು ತರಹ ಷಾಮಿಲುತನ ಇದೆ. ಇದನ್ನು ಇವತ್ತು ಸರಿಪಡಿಸದೇ ಇದ್ದರೆ ಮುಂದೆ ಚರಿತ್ರೆ ನಿಮ್ಮನ್ನು ಕ್ಷಮೆ ಮಾಡುವುದಿಲ್ಲವೆಂದು ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೇ, ಡಾ।। ಜೀವರಾಜ್ ಆಳ್ವ ಹೇಳಿದಂಥ ಮೊದಲನೆಯ ಭಾಗವನ್ನು ನಾನು ಸಮರ್ಥಿಸುತ್ತೇನೆ. ಕೆಲವು ನಿರಪರಾಧಿಗಳನ್ನು ಬೆಂಗಳೂರು ನಗರದಲ್ಲಿ ಪೋಲೀಸ್‌ನವರು ಹಿಡಿದುಕೊಂಡು ಹೋಗಿ ರಾತ್ರಿಯೆಲ್ಲಾ ಕೂಡಿಸಿದ್ದಾರೆ. ಆ ವಿಷಯ ನನ್ನ ಗಮನಕ್ಕೂ ಬಂತು. ಈ ಬಗೆ ಪೋಲೀಸ್‌ನವರನ್ನು ವಿಚಾರಿಸಲು ಪ್ರಯತ್ನ ಮಾಡಿದೆ ಯಾವ ಸ್ಟೇಷನ್‌ನಲ್ಲಿಯು, ಮಾತನಾಡುವಂಥವರು ಇರಲಿಲ್ಲ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಇಂದು ಸ್ಪಷ್ಟವಾಗಿ ಗೋಚರವಾಗುತ್ತಿದೆ ಏನು ಎಂದರೆ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಸರ್ಕಾರ ಮತ್ತು ಬಿ.ಜೆ.ಪಿ. ಇಬ್ಬರೂ ಒಂದೇ, ವ್ಯತ್ಯಾಸ ಏನೂ ಇಲ್ಲ. ಇವರನ್ನು ವೃದ್ಧಿ ಮಾಡಿಸಬೇಕು, ಇವರನ್ನು ಬೆಳೆಸಬೇಕು, ಈ ಮತಾಂಧ ಶಕ್ತಿಯನ್ನು ಬೆಳೆಸಬೇಕು ಎನ್ನುವುದು ಸರ್ಕಾರದ ಇಚ್ಛೆ. ಅವರನ್ನು ಯಾವ ಯಾವ ರೀತಿಯಲ್ಲಿ ಬೆಳೆಸಲು ಅವಕಾಶ ಮಾಡಿಕೊಡಬಹುದೋ ಅವೆಲ್ಲವನ್ನು ಕೇಂದ್ರ ಸರ್ಕಾರ ಇವತ್ತಿನ ದಿವಸ ಮಾಡುತ್ತಿದೆ. ದೆಹಲ್ಲಿಯಲ್ಲಿ ನಡೆಯುವ ರ್‍ಯಾಲಿಯನ್ನು ನಿಷೇಧ ಮಾಡಬೇಕಾದಂಥ ಅವಶ್ಯಕತೆ ಇರಲಿಲ್ಲ. ಜನ ಅಲ್ಲಿ ಸೇರಿದ್ದರೆ ಏನೂ ಆಗುತ್ತಿರಲಿಲ್ಲ. ದೆಹಲಿ ಏನು ತಲೆ ಕೆಳಗೆ ಆಗುತ್ತಿರಲಿಲ್ಲ. ಅಕಸ್ಮಾತಾಗಿ ಅಲ್ಲಿ ಗಲಾಟೆ ಮಾಡಿದ್ದರೆ ಕೈಕಾಲು ಮುರಿದು ಒಳಗೆ ಹಾಕಬಹುದಾಗಿತ್ತು ಆ ಕೆಲಸ ಮಾಡಲಿಲ್ಲ. ಅದಕ್ಕೆ ಬದಲಾಗಿ ದೆಹಲಿಯನ್ನು ಇವತ್ತಿನ ದಿವಸ ಒಂದು ಕೋಟೆಯಂತೆ ಮಾಡಿ ದೆಹಲಿಯನ್ನು ಸುತ್ತುವರಿದಿದ್ದಾರೆ. ಅದೇ ಕೆಲಸ

ಬೆಂಗಳೂರಿನಲ್ಲಿಯೂ ಕೂಡ ನಡೆಯುತ್ತಿದೆ. ಕಾನೂನು ಇದೆ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಿ. ಮತೀಯ ಶಕ್ತಿಗಳನ್ನು ಬೆಳೆಸಬೇಕು ಎಂಬುದು ಆಡಳಿತ ಪಕ್ಷದ ಇಚ್ಛೆ ಆಗಿದೆ. ಈ ದೇಶವನ್ನು ಮತಾಂಧ ಶಕ್ತಿಯ ಕೈಗೆ ಒಪ್ಪಿಸಬೇಕೆಂದು ಇವರು ತೀರ್ಮಾನ ಮಾಡಿಕೊಂಡಿದ್ದಾರೆ. ಆದ್ದರಿಂದ ಇವತ್ತಿನ ದಿವಸ ಬೆಂಗಳೂರಿನಲ್ಲೂ ಅದರ ಪ್ರತಿಕ್ರಿಯೆ, ಅದರ ಪ್ರತಿಫಲ ಆಗಿ ಸಂಬಂಧ ಇಲ್ಲದೆ ಇರತಕ್ಕಂತವರನ್ನು ಬಂಧಿಸಿದ್ದಾರೆ. ನಾಳೆ ಪತ್ರಿಕೆಯಲ್ಲಿ ದೊಡ್ಡ ದೊಡ್ಡ ಅಕ್ಷರದಲ್ಲಿ ಎಷ್ಟೋ ಸಾವಿರ ಜನರು ಬಂಧನ ಆದರು ಎಂದು ಬರುತ್ತದೆ. ಬಿ.ಜೆ.ಪಿ.ಗೆ ಸಂಬಂಧಪಡದವರನ್ನು ಬಂಧಿಸತಕ್ಕ ಅವಶ್ಯಕತೆ ಏನುಇದೆ. ಅವರನ್ನು ಬೆಳೆಸಬೇಕು ಎನ್ನುವ ಉದ್ದೇಶ ಅಲ್ಲದೆ ಅವರನ್ನು ಬಂದಿಸಲು ಮತ್ತೇನು ಕಾರಣ ಇದೆ. ದಯವಿಟ್ಟು ಅವರ ಜೊತೆಯಲ್ಲಿ ಶಾಮಿಲು ಆಗಿರುವುದನ್ನು ಮೊದಲು ಬಿಡಿ. ನೀವು ಶಾಮೀಲು ಆಗಬೇಡಿ ಎನ್ನತಕ್ಕಂಥ ಮಾತನ್ನು ನಿಮ್ಮ ಪ್ರಧಾನ ಮಂತ್ರಿಗಳಿಗೆ ಹೇಳಿ. ಅವರು ಶಾಮೀಲು ಆಗಿರುವುದರಿಂದ ಈ ದೇಶದಲ್ಲಿ ಅನಾಹುತ ನಡೆಯುತ್ತಿದೆ, ಮತಾಂಧ ಶಕ್ತಿ ಬೆಳೆಯುತ್ತಾ ಇದೆ. ದಯವಿಟ್ಟು ಮುಖ್ಯಮಂತ್ರಿಗಳು ಇದನ್ನು ತೀವ್ರವಾಗಿ ತೆಗೆದುಕೊಂಡು ಇದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿ. ನೀವು ಸುಮ್ಮನೆ ಅವರನ್ನು ಅರೆಸ್ಟ್ ಮಾಡಿ ದೊಡ್ಡದಾಗಿ ಪತ್ರಿಕೆಗಳಲ್ಲಿ ಫೋಟೋ ಬರುವ ರೀತಿಯಲ್ಲಿ ಮಾಡಿದಾಗ ಇನ್ನು ಮುಂದೆ ಬರತಕ್ಕವರು ಬಿ.ಜೆ.ಪಿ.ಯವರೇ ಎಂದು ಜನ ಅಂದುಕೊಳ್ಳುತ್ತಾರೆ. ಪಾರ್ಥೇನಿಯಂ ಬೆಳೆದಂತೆ ಆಗಿದೆ. ಪಾರ್ಥೇನಿಯಂ ಗಿಡಕ್ಕೆ ಯಾರೂ ಬೀಜ, ಗೊಬ್ಬರ ನೀರು ಹಾಕುವುದಿಲ್ಲ. ಪಾರ್ಥೇನಿಯಂ ರೀತಿಯಲ್ಲಿ ಈ ಮತಾಂಧ ಶಕ್ತಿಗಳನ್ನು ಬೆಳೆಸತಕ್ಕ ಪ್ರಯತ್ನ ದೇಶದಲ್ಲಿ ನಡೆಯುತ್ತಾ ಇದೆ. ದೆಹಲಿಯಲ್ಲಿ ನಡೆಯತಕ್ಕಂಥ ರ್‍ಯಾಲಿಯನ್ನು ತಡೆಗಟ್ಟುವುದರಿಂದ ಈ ಪಾರ್ಥೇನಿಯಂ ಕಿತ್ತು ಹೋಗುತ್ತದೆ ಅಂದರೆ ಅದು ಮೂರ್ಖತನದ ಪರಮಾವಧಿ ಎಂದು ಹೇಳಬೇಕಾಗುತ್ತದೆ.

ಈ ಮೂರ್ಖತನ ಬಿಟ್ಟು ಅವರನ್ನು ಯಾವ ರೀತಿಯಲ್ಲಿ ಎದುರಿಸಬೇಕೋ ಆ ರೀತಿ ಎದುರಿಸುವುದುಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಇಡೀ ದೇಶಾದ್ಯಾಂತ ಬಿ.ಜೆ.ಪಿ. ಕಾರ್ಯಕರ್ತರುಗಳ ಬಂಧನ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲೂ ಅನೇಕರನ್ನು ಬಂಧಿಸಿದ್ದಾರೆ. ಈಗ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಯಡಿಯೂರಪ್ಪರವವನ್ನು ಬಿಡುಗಡೆ ಮಾಡಲಾಗುತ್ತಿದೆಂದು ಹೇಳಿದರು. ದುರ್ದೈವಶಾತ್ ಬಿಜೆಪಿ ಕಾರ್ಯಕರ್ತರನ್ನು ಬಂಧನ ಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ನೂರಾರು ಜನರನ್ನು ಬಂಧನ ಮಾಡಿದ್ದಾರೆಂದು ವರದಿಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಶ್ರೀ ಯಡಿಯೂರಪ್ಪನವರನ್ನು ಬಿಡುಗಡೆ ಮಾಡಿದ್ದಾರೆಂದು ಹೇಳಿದ್ದಾರೆ. ಅವರ ಬಿಡುಗಡೆ ಆಗುತ್ತಿದೆ. ಅವರು ಇಲ್ಲಿಗೆ ಬರುತ್ತಾ ಇರಬಹುದು. ಶ್ರೀ ಈಶ್ವರಪ್ಪನವರು ಬಿಡುಗಡೆ ಮಾಡಿಕೊಂಡು ಈಗಾಗಲೇ ಇಲ್ಲಿಗೆ ಬಂದಿದ್ದಾರೆ. ಈ ರೀತಿ ದಸ್ತಗಿರಿ ಮಾಡತಕ್ಕ, ಬಿಡುಗಡೆ ಮಾಡತಕ್ಕ ನಾಟಕ ಏತಕ್ಕೆ ಬೇಕು ? ಶ್ರೀ ಬೈರೇಗೌಡರು ಕೈಕಾಲು ಮುರಿದು ಹಾಕಲಿ ಎಂದು ಹೇಳಿದರು ನಾನು ಆ ಮಾತನ್ನು ಒಪ್ಪುವುದಿಲ್ಲ ಪೋಲಿಸರು ಬಿಜೆಪಿ ಒಬ್ಬರಿಗೆ ಅಲ್ಲ ಯಾವುದೇ ಚಳುವಳಿಯಾಗಲಿ, ಯಾವುದೇ ಸರ್ಕಾರ ಇರಲಿ ಪೋಲಿಸರು ನಮಗೇನು ಕರೆದುಕೊಂಡು ಹೋಗಿ ಮಂಗಳಾರತಿ ಮಾಡುವುದಿಲ್ಲ. ಅವರು ಕೈಕಾಲನ್ನು ಮುರಿದಿದ್ದಾರೆ, ಬುರುಡೆ ಒಡೆದಿದ್ದಾರೆ, ಇದು ನಡೆಯುತ್ತಿದೆ.

ಶ್ರೀ ಎ.ಕೆ. ಅನಂತಕೃಷ್ಣ:– ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದಾರೆ, ಮುಂದೆ ಕೂಡ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:– ಮುಂದೆ ಕೂಡ ಮಾಡುತ್ತಾರೆ. ಪೋಲಿಸನವರದು ಒಂದೇ ಮಂತ್ರ,

ಇದರ ಬಗ್ಗೆ ಎರಡು ಅಭಿಪ್ರಾಯ ಇಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರಜಾತಂತ್ರದಲ್ಲಿ ನಂಬಿಕೆ ಇರತಕ್ಕ ನಾವೆಲ್ಲರೂ ಸಹ ದೆಹಲಿಯಲ್ಲಿ ಒಂದು ಮೇಳ ಮಾಡುತ್ತೇವೆಂದು ಹೇಳಿದರೆ, ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಇದು ತುರ್ತು ಪರಿಸ್ಥಿತಿಯನ್ನು ಮತ್ತೆ ಜ್ಞಾಪಕಕ್ಕೆ ತರುತ್ತದೆಂದು ಹೇಳಬೇಕಾಗುತ್ತದೆ. ನಾನು ಬಿಜೆಪಿಯವರ ಪರವಾಗಿ ಮಾತನಾಡುತ್ತಿಲ್ಲ. ನಾವು ಎಲ್ಲಿಯವರೆಗೆ ಪ್ರಜಾಪ್ರಭುತ್ವವನ್ನು ಪ್ರಜಾತಂತ್ರ, ಒಪ್ಪುತ್ತೇವೆ, ಅಲ್ಲಿಯವರೆಗೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಇಂತಹ ಮೆರವಣಿಗೆಗಳಿಗೆ ಪ್ರತಿಭಟನೆಗೆ ಅವಕಾಶ ಕೊಡಬೇಕು. ಅದು ನಮ್ಮ ಕರ್ತವ್ಯ. ಈ ರೀತಿ ಮೇಳಗಳನ್ನು ಬಹಿಷ್ಕರಿಸುವುದರಿಂದ ಉತ್ತಮವಾದ ವಾತಾವರಣ ಬರುವುದಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರ ತೆಗೆದುಕೊಂಡಿರತಕ್ಕ ನೀತಿ ಮೂರ್ಖತನದ ಪರಮಾವಧಿ ಎಂದು ಹೇಳುತ್ತೇನೆ. ಇವೊತ್ತು ಮೆರವಣಿಗೆಗೆ ಬಿಟ್ಟಿದ್ದರೆ ಏನಾಗುತ್ತಿತ್ತು. ಯಡಿಯೂರಪ್ಪ, ಈಶ್ವರಪ್ಪನವರು ಹೋಗುತ್ತಿದ್ದರು.

ಅವರು ಹೋಗುವುದಕ್ಕೆ ರೆಡಿಯಾಗಿದ್ದರು, ಟಿಕೇಟ್ ಕೂಡ ತೆಗೆದುಕೊಂಡಿದ್ದರು. ಕೆಲವರು ತೆಗೆದುಕೊಳ್ಳದೆ ಇರಬಹುದು. ಆದರೆ ಈಶ್ವರಪ್ಪನವರು ಟಿಕೇಟ್ ತೆಗೆದುಕೊಂಡಿದ್ದರು. ಜೀವರಾಜ ಆಳ್ವರವರು ಟಿಕೇಟ್ ತೆಗೆದುಕೊಳ್ಳದೆ ಹೋದರು ಎಂದರು, ಆದರೆ ಅವರು ಟಿಕೇಟ್ ತೆಗೆದುಕೊಂಡು ಹೋಗಿದ್ದರು ......

ಶ್ರೀ ಸಿ. ಬೈರೇಗೌಡ:– ಈಶ್ವರಪ್ಪನವರು ಟಿಕೇಟ್‌ನ್ನು ತೋರಿಸಲಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಈ ರಾಜ್ಯದ ಜನ ಯಾರು ಯಾರಿಗೆ ಟಿಕೇಟ್ ಕೊಡಬೇಕು ಎಂಬುದನ್ನು ತೋರಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್:– ಟಿಕೇಟ್ ಕೇಳಬೇಕಾದುದು ಬೈರೇಗೌಡರಲ್ಲ. ರೈಲ್ವೆಯವರು ಅದನ್ನು ಕೇಳಲು ಅಧಿಕಾರಿಗಳನ್ನು ಇಟ್ಟಿದ್ದಾರೆ. ಇಂತಹ ಒಂದು ಪರಿಸ್ಥಿತಿ ಆಗಬಾರದಾಗಿತ್ತು. ತುರ್ತು ಪರಿಸ್ಥಿತಿಯ ಕೆಟ್ಟ ಕನಸ್ಸನ್ನು ಯಾರೂ ಕಾಣಬಾರದು. ಬಿಜೆಪಿ ಇರಲಿ ಜನತಾದಳ ಇರಲಿ ಎಲ್ಲರೂ ಇದನ್ನು ಒಪ್ಪುತ್ತಾರೆ. ರಾಜ್ಯದಲ್ಲಿ ಯಾರು ಯಾರು ಪ್ರಜಾ ಪ್ರಭುತ್ವವಾದಿಗಳು ಇದ್ದಾರೆ ಅವರೆಲ್ಲರೂ ಇದನ್ನು ಒಪ್ಪುತ್ತಾರೆ. ಕನ್ನಡ ಚಳುವಳಿಗಾರರು ಹಗಲೂ ರಾತ್ರಿ ಪೋಲಿಸನವರ ಜೊತೆಯಲ್ಲಿ ಕಷ್ಟಗಳನ್ನು ಅನುಭವಿಸಿದ್ದಾರೆ. ಪೋಲಿಸರು ಯಾರಿಗೂ ಬಿಡುವುದಿಲ್ಲ. ಅನೇಕ ಸಾರಿ ನಮಗೆ ಏಟು ಬಿದ್ದಿದೆ, ಹೊಡೆದಿದ್ದಾರೆ. ಇವರು ಏನು ನಮ್ಮಗಳ ಬಗ್ಗೆ ಗೌರವದಿಂದ ನಡೆದುಕೊಂಡಿಲ್ಲ. ನಿಜವಾಗಿಯೂ ಅವರು ಯಾವ ರೀತಿ ಮಾಡುತ್ತಿದ್ದಾರೆಂದರೆ ಪ್ರತಿಯೊಂದು ಸ್ಟೇಶನ್‌ನಲ್ಲೂ ಒಂದು ಲಿಸ್ಟ್ ಇಟ್ಟು ಕೊಂಡಿದ್ದಾರೆ. ರಾತ್ರೋರಾತ್ರಿ ಬಂದು ಲಿಸ್ಟ್‌ನಲ್ಲಿರುವವರನ್ನು ಬಂಧಿಸುತ್ತಾರೆ. 3,500 ಜನರನ್ನು ಬಂಧಿಸಿದ್ದೇವೆಂದು ಹೇಳಿಕೆ ಕೊಟ್ಟಿದ್ದಾರೆ ಇದರಲ್ಲಿ ಸಮಾಜ ಘಾತಕರು ಎಷ್ಟು? ನಮ್ಮೆಲ್ಲರನ್ನು ಸಮಾಜಘಾತಕರ ಪಟ್ಟಿಯಲ್ಲಿ ಅವರು ಸೇರಿಸಿದ್ದಾರೆ. ಈ ರೀತಿ ಪ್ರವೃತ್ತಿಯಾಗುವುದು ಬೇಡ. ಯಾವ ಯಾವ ಪಕ್ಷದವರನ್ನು ಎಷ್ಟು ಎಷ್ಟು ಜನರನ್ನು ಬಂಧಿಸಿದ್ದೀರಿ ? ಈ ರೀತಿ ಬಂಧಿಸಲು ಕಾರಣ ಏನು ಎಂಬುದನ್ನು ಕೂಡಲೇ ಬಹಿರಂಗ ಪಡಿಸಬೇಕು. ಈ ರೀತಿ 3,500 ಜನರನ್ನು ಬಂಧನ ಮಾಡಿದ್ದಾರೆ ಎಂಬುದನ್ನು ಹೇಳಿಕೊಳ್ಳುವ ನೀತಿ ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ಚಳುವಳಿ ಮಾಡಿದಾಗ ದಸ್ತಗಿರಿ ಆಗತಕ್ಕ ಸುದ್ದಿ ಇರಬೇಕು ಅದು ಬರುತ್ತಿದೆ. ಇದನ್ನು ಎಲ್ಲರು ಮಾಡುತ್ತಾರೆ.

ಬಾಬರಿ ಮಸೀದಿ ಬಗ್ಗೆ ಹಿಂದೆ ಮಾಡದಂಥಹ ನಿರ್ಧಾರದಿಂದ ಏನೇನು ಅನಾಹುತಗಳು ಆಗಿವೆ ಎಂಬುದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ಆದರೆ ಲೋಕಸಭೆಯಲ್ಲಿ ವಿರೋಧಪಕ್ಷದ ನಾಯಕರಾದ ಶ್ರೀ ಅದ್ವಾನಿಯವರ ಬಗ್ಗೆ ನಮಗೆ ಒಳ್ಳೆಯ ಅಭಿಪ್ರಾಯವಿದೆ. ಅವರ ಪಕ್ಷದ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲದೆ ಇರಬಹುದು. ಆದರೆ ಅವರನ್ನು ಲೋಕಸಭೆ ನಡೆಯುವಾಗ ಹೊರಗೆ ಇಟ್ಟು

ಲೋಕಸಭೆಯನ್ನು ನಡೆಸತಕ್ಕಂತಹ ಒಂದು ಕೆಲಸ ಈ ದೇಶಕ್ಕೆ ಅಗೌರವವನ್ನುಂಟು ಮಾಡಿದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಇಂತಹ ಅನಾಹುತಗಳು ಆಗದೇ ಇರಲು ಕ್ರಮಕೈಗೊಳ್ಳಬೇಕು. ಎಲ್ಲಾ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳ ಬಳಿಗೆ ಹೋಗಿ ಈ ಬಗ್ಗೆ ತಮ್ಮ ಬೆಂಬಲವನ್ನು ತಿಳಿಸಿದ್ದೀರಿ. ಇಂತಹ ಪರಿಸ್ಥಿತಿ ಇರುವಾಗ ನೀವೂ ಸಹ ಈ ಕೇಂದ್ರ ಸರ್ಕಾರದ ನೀತಿಯ ಬಗ್ಗೆ ಹೇಳಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ:– ಈಗಾಗಲೇ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಮೂಲತಃ ರ್‍ಯಾಲಿಯನ್ನು ಬ್ಯಾನ್ ಮಾಡಿದ ಅಭಿಪ್ರಾಯ ತಪ್ಪು. ಏತಕ್ಕೆಂದರೆ ಪ್ರಜಾಪ್ರಭುತ್ವದಲ್ಲಿ ನಾವು ಪೀಸ್‌ಫುಲ್ ಆಗಿ ಏನೊಂದು ವಿಚಾರವನ್ನು ನಾಡಿನ ಜನತೆಗೆ ಹೇಳಬೇಕು ಈ ದೇಶದ ಜನತೆಗೆ ಹೇಳಬೇಕು ಅದಕ್ಕೆ ಅವಕಾಶ ಇರಲೇ ಬೇಕು. ನಾಳೆ ಈ ಪ್ರಸಂಗ ನಮಗೆ ಬರಬಹುದು. ತಾವು ಒಂದು very bad precedent ಹಾಕಿದ್ದೀರಿ. ಬ್ಯಾನ್ ಮಾಡದಿದ್ದರೆ ಏನೂ ಆಗುತ್ತಿರಲಿಲ್ಲ. ರ್‍ಯಾಲಿ ಆಗುತ್ತಿತ್ತು. ಒಂದು ವೇಳೆ ಅನ್‌ಲಾಫುಲ್ ಆ್ಯಕ್ಟಿವಿಟಿಸ್ ಮಾಡಿದ್ದಾರೆ ಕ್ರಮ ತೆಗೆದುಕೊಳ್ಳಲು ಅವಕಾಶವಿತ್ತು.

ಅದು ಬಿಟ್ಟು ತಾವು ಇವತ್ತು ಬ್ಯಾನ್ ಮಾಡಿ ನಿಜವಾಗಿಯೂ ಮಾನ್ಯ ಬೈರೇಗೌಡರು ಹೇಳಿದ ಹಾಗೆ ಬಿಜೆಪಿಗೆ ಬೆಳೆಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು ಸ್ಪಷ್ಟವಾಗಿ ನಾನೂ ಹೇಳಬೇಕಾಗುತ್ತದೆ. ಯಾವ ಸಮಯದಲ್ಲಿ ಅವರನ್ನು ಕೇಂದ್ರ ಸರ್ಕಾರದವರು ತಡೆಯಬೇಕಾಗಿತ್ತು, ಆಗ ತಡೆಯಲಿಲ್ಲ. ಆ ಸಮಯದಲ್ಲಿ ತಾವು ಈ ಕೆಲಸ ಮಾಡಬೇಕಾಗಿತ್ತು ಆದರೆ ಮಾಡಲಿಲ್ಲ. ಡಿಸೆಂಬರ್ ನಾಲ್ಕು ಮತ್ತು ಐದನೇ ತಾರೀಖು ಕರಸೇವೆಗೆ ಹೋಗುವುದಕ್ಕೆ ತಾವು ಅನುಮತಿ ಕೊಡದಿದ್ದರೆ ಏನು ಆಗುತ್ತಾ ಇರಲಿಲ್ಲ. ಬಿಹಾರದಲ್ಲಿ ಮತ್ತು ಒರಿಸ್ಸಾದಲ್ಲಿ ಏನು ಮಾಡಿದರು, ಅಲ್ಲೇ ಸ್ಟಾಪ್ ಮಾಡಿದರು. ಹಾಗಾಗಿ ಅಲ್ಲಿ ಏನೂ ಅನಾಹುತವಾಗಿಲ್ಲ. ಆ ಸಮಯದಲ್ಲಿ ತಾವು ಅವರಿಗೆ ಅವಕಾಶ ಕೊಟ್ಟು ಮಸೀದಿ ನಾಶವಾಯಿತು. ಈಗ ನಿಮಗೆ ಬುದ್ಧಿ ಬಂದಿದೆ ಎಂದು ಬ್ಯಾನ್ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಇವತ್ತು ನೀವು ಅವರಿಗೆ ಅವಕಾಶ ಮಾಡಿಕೊಡಬೇಕಾಗಿತ್ತು. ಮಾನ್ಯ ಯಡಿಯೂರಪ್ಪನವರನ್ನು ಆಗಲಿ ಅಥವಾ ಬೇರೆ ಮಿತ್ರರನ್ನಾಗಲಿ ತಾವು ಅರೆಸ್ಟ್ ಮಾಡಿದ್ದುದು ಸರಿಯಲ್ಲ. ಅವರ ರ್‍ಯಾಲಿಗೆ ಸರ್ಕಾರ ಅಡ್ಡಿ ಬರಬಾರದು, ಯಾರು ಬೇಕಾದರೂ ರ್‍ಯಾಲಿಗೆ ಹೋಗಲಿ. 25ನೇ ತಾರೀಖು ಅಲ್ಲಿ ಮುಟ್ಟಬೇಕಾದರೆ, ಟ್ರೈನಿನಲ್ಲಿ ಹೋಗಿ ಮುಟ್ಟುವುದಕ್ಕೆ ಸಾಧ್ಯವಿಲ್ಲ, ಸರ್ಕಾರ ಅವರುಗಳನ್ನು ಅರೆಸ್ಟ್ ಮಾಡಿ ಇಟ್ಟಿರಿ. ಆದ್ದರಿಂದ ನಾನು ಒಂದು ಸಲಹೆ ಮಾಡುತ್ತೇನೆ, ಅವರನ್ನು ಪ್ಲೇನಿನಲ್ಲಿ ಕಳುಹಿಸಿ. ಏನೂ ಕಷ್ಟ ಆಗುವುದಿಲ್ಲ ಅವರು ಡೆಲ್ಲಿಗೆ ಹೋಗಲಿ. ಏಕೆಂದರೆ ಅವರಿಗೂ ಅಧಿಕಾರ ಇದೆ. ನೀವು ನಮಗೂ ಅಡ್ಡಿ ಬರಬಹುದು, ಜನತಾ ರ್‍ಯಾಲಿ ಹೋಗುವುದಕ್ಕೆ ಬರುವುದಿಲ್ಲ ಎಂದು ಹೇಳಬಹುದು. ಅಥವಾ ನಾವು ಅಧಿಕಾರದಲ್ಲಿ ಕುಳಿತು ನಿಮಗೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳಬಹುದು. ಆ ರೀತಿ ಆದರೆ ನಾವು ಎಲ್ಲಿಗೆ ಮುಟ್ಟುತ್ತೇವೆ. ಅವರು ಬಿಡುಗಡೆ ಆದದ್ದನ್ನು ತಾವು ಹೇಳಿದಿರಿ, ತುಂಬಾ ಸಂತೋಷ. ನಮ್ಮ ಮಿತ್ರರಾದಂತಹ ಮಾನ್ಯ ಜೀವರಾಜ್ ಆಳ್ವರವರು ಹೇಳಿದ ಹಾಗೆ ಇನ್ನೋಸೆಂಟ್ ಮತ್ತು ನಿಷ್ಪಕ್ಷಪಾತ ಜನ ಯಾರು ಅರೆಸ್ಟ್ ಆಗಿದ್ದಾರೆ ಅವರನ್ನು ಸಹ ತಕ್ಷಣ ಬಿಡುಗಡೆ ಮಾಡಬೇಕು ಮತ್ತು ಸರ್ಕಾರ ರ್‍ಯಾಲಿ ವಿಚಾರದಲ್ಲಿ ಹೆಚ್ಚಿನ ಹಸ್ತಕ್ಷೇಪ ಮಾಡಬಾರದು ಎಂದು ಮಾನ್ಯ ಸಭಾಪತಿಯವರ ಮೂಲಕ ತಮಗೆ ನಾನು ಸಲಹೆ ಮಾಡುತ್ತಿದ್ದೇನೆ.

ಪ್ರೊ.ಎಂ.ಡಿ. ನಂಜುಂಡಸ್ವಾಮಿ:– ಅಧ್ಯಕ್ಷರೇ, ಕಾನೂನು ಮಂತ್ರಿಗಳು ಇಲ್ಲಿಯೇ ಇದ್ದಾರೆ. ಇದು ಕಾನೂನಿಗೆ ಸಂಬಂಧಪಟ್ಟ ವಿಚಾರ. ನಮ್ಮ ಮುಖ್ಯಮಂತ್ರಿಗಳು ಕಾನೂನು ಮಂತ್ರಿಗಳಾಗಿದ್ದರು. ಮತ್ತು ಕಾನೂನು ಪಂಡಿತರು ಆಗಿದ್ದಾರೆ. ಆದುದರಿಂದ ನಾನು ಒಂದೆರಡು ಪ್ರಶ್ನೆಗಳನ್ನು ಅವರಲ್ಲಿ ಕೇಳುತ್ತೇನೆ.

ದೆಹಲಿ ನಗರದಲ್ಲಿ ಸೆಕ್ಷನ್ 144 ಸಿಆರ್‌ಪಿಸಿಯನ್ನು ಮೂರು ತಿಂಗಳಿಗೆ ಜಾರಿಗೆ ತಂದಿದ್ದಾರೆ. ನಾವು ಸಂವಿಧಾನದಲ್ಲಿ ತುರ್ತು ಪರಿಸ್ಥಿತಿಯನ್ನು ಆರು ತಿಂಗಳಿಗೆ ತರುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ನನ್ನ ಮೊದಲನೆಯ ಪ್ರಶ್ನೆ, ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿದ್ದುದು ನಿಮಗಲ್ಲ my first question whether emergency can be promulgated under the Criminal Procedure Code for a period of three months ......

ನಿಮ್ಮ ಸರ್ಕಾರಕ್ಕೆ ಇದು ನೇರವಾಗಿ ಸಂಬಂಧಪಟ್ಟಿದ್ದುದು, ಸೆಕ್ಷನ್ 144 ಇರುವುದು ಡೆಲ್ಲಿ ನಗರದಲ್ಲಿ. ನೀವು ನಿನ್ನೆ ಇಲ್ಲಿ ಸದನದ ಒಬ್ಬ ಸದಸ್ಯರನ್ನು ಅರೆಸ್ಟ್ ಮಾಡಿರುವುದು ಪ್ರಿವೆಂಟೀವ್ ಡಿಟೆನ್‌ಷನ್ ಆಗುತ್ತದೆ. I am asking you when will this preventive detention start in a situation where the ban is about thousands of kilometre away. When will it start? ಈ ತರಹ ಪ್ರಿವೆಂಟಿವ್ ಡಿಟೆನ್ಷನ್ ಮಾಡುವುದಕ್ಕೆ ನಿಮಗೆ ನಮ್ಮ ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಇದೆಯೇ ? ಇದನ್ನು ಹೇಳಿ. ನಂತರ ನೀವು ಏನು ಮಾಡಿದಿರಿ, ಬಳ್ಳಾರಿಯಲ್ಲಿ ಅವರನ್ನು ಬಿಟ್ಟಿರಿ, ಮತ್ತು ಇಲ್ಲಿ ಅರ್ಧ ದಿನ ಶಾಸನಸಭೆಯಲ್ಲಿ ಬರದೇ ಇದ್ದ ಹಾಗೆ ಮಾಡಿದಿರಿ. ಇವೆಲ್ಲಾ ಡಿಟೇಲ್ಸ್‌ಗೆ ನಂತರ ಬರೋಣ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಸೆಕ್ಷನ್ 144 ಸಿ.ಆರ್.ಪಿ.ಸಿ. ಇದರ ಕೆಳಗಡೆ ಎಮರ್ಜೆನ್ಸಿ ಆಗುವುದಿಲ್ಲ. It cannot be termed as an emergency ......

Prof. M.D. Nanjundaswamy:– I was just joking on your Union Government that they tried to promolugate Emergency under the Criminal Procedure Code. It is a stupid Government.

Sri Haranahally Ramaswamy:– There is no such stupid orders and stupid steps taken. The understanding of the Hon. Member is I should not use the word–is not correct.

Dr. Y. Nagappa: He has called our Government 'stupid'.

Prof. M.D. Nanjundaswamy:– If the Hon'ble Member persists I will repeat it again. I will repeat 100 times .... It is not unparliamentary. It is not a unparliamentary word ......

Dr. Y. Nagappa: It is a well decision of this BJP militanants miscreants of this country they should be under the Detention Act they have been arrested. Prof. Nanjundaswamy should take back that word. As a Professor he used a unparliamentary word ....

Prof. M.D. Nanjundaswamy: I used it as a Professor ....

ಶ್ರೀ ವಾಟಾಳ್ ನಾಗರಾಜ್:– ವಿವೇಕ, ಅವಿವೇಕ, ಇವುಗಳು ಸಂಸದೀಯ ಪದಗಳು. ಅದೇನು ತಪ್ಪು ಪದಗಳಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಆದರೆ ನಾನು ಆ ತರಹ ಪದಗಳನ್ನು ಉಪಯೋಗಿಸಲು ಇಷ್ಟಪಡುವುದಿಲ್ಲ. ಏನಾದರೂ ಘಟನೆ ಅಥವಾ ತೊಂದರೆಗಳು ಆಗುವ ಸಂದರ್ಭಗಳಲ್ಲಿ ಅದನ್ನು

ಪೂರ್ವ ಭಾಗದಲ್ಲಿ ನಿಲ್ಲಿಸುವುದಕ್ಕೆ ಸಿ.ಆರ್.ಪಿ.ಸಿ.ಯಲ್ಲಿ ಅವಕಾಶ ಇದೆ. ಆ ಪ್ರಕಾರವೇ ಮಾಡಿದ್ದಾರೆ, ಮತ್ತು ಇಲ್ಲಿಂದ ನಾನು with the intention and with that object if somebody is going to Delhi to participate in a procession or a rally which has been banned.

ಆದರ ಪ್ರಕಾರ ಸರಕಾರದವರಿಗೆ ರ್‍ಯಾಲಿಗೆ ಹೋಗುವವರನ್ನು ಇಲ್ಲಿ ನಿಲ್ಲಿಸುವುದಕ್ಕೆ ಅವಕಾಶ ಇದೆ.

ಶ್ರೀ ವಾಟಾಳ್ ನಾಗರಾಜ್:- ಅವರನ್ನು ತಡೆಹಿಡಿಯುವುದಕ್ಕೆ ನೀವು ಯಾರು ?

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಪೋಲೀಸ್ ಆಕ್ಟ್‌ನ 71ನೇ ಸೆಕ್ಷನ್‌ನಲ್ಲಿ ಇದು ಬರುತ್ತದೆ. ಇಲ್ಲ ನಾವು ಯಾವ ರೀತಿಯಲ್ಲಿ ಕ್ರಮವನ್ನು ಜರುಗಿಸಿದರೂ ಕೂಡ ಅದು ಸರಿಯಲ್ಲ ಎಂದು ಹೇಳುವ ಪರಿಸ್ಥಿತಿಯು ಬಂದಿದೆ. ಪ್ರೈಮರಿ ಸ್ಕೂಲ್‌ನಲ್ಲಿ ಓದಿದ ಒಂದು ಕಥೆ ನನಗೆ ನೆನಪು ಬರುತ್ತದೆ. ಅಪ್ಪ ಕುದುರೆಯ ಮೇಲೆ ಕುಳಿತು ಮಗ ನಡೆದುಕೊಂಡು ಹೋಗುವುದನ್ನು ನೋಡಿದ ಜನರು ಅಪ್ಪನನ್ನು ಗೇಲಿ ಮಾಡಿದರು, ಮಗ ಕುದುರೆಯ ಮೇಲೆ ಕುಳಿತುಕೊಂಡು ಅಪ್ಪ ನಡೆದುಕೊಂಡು ಹೋಗುತ್ತಿರುವುದನ್ನು ನೋಡಿದ ಜನರೂ ಕೂಡ ಅಪ್ಪನನ್ನು ಗೇಲಿ ಮಾಡಿದರು. ಅನಂತರ ಅಪ್ಪ - ಮಗ ಇಬ್ಬರೂ ಕುದುರೆಯನ್ನು ಹೊತ್ತುಕೊಂಡು ಹೋಗುವುದನ್ನು ನೋಡಿದ ಜನರೂ ಕೂಡ ಅವರಿಬ್ಬರನ್ನೂ ಗೇಲಿ ಮಾಡಿದರು. ಹೀಗೆ ಆಗುತ್ತಿರುವುದನ್ನು ನೋಡಿ ಸಂತೋಷ ಪಡುವವರೇ ಇಲ್ಲಿ ಹೆಚ್ಚಾಗಿದ್ದಾರೆ.

ಯಾವ ಆಧಾರದ ಮೇಲೆ ಡೆಲ್ಲಿಯಲ್ಲಿ ಸಭೆ ಮಾಡಲು ಹಕ್ಕು ಇದೆ ಎಂದು ಹೇಳುತ್ತಾ ಇದ್ದಾರೋ, ಅದೇ ಆಧಾರದ ಮೇಲೆ ಆಯೋಧ್ಯೆಯಲ್ಲಿ ಮೀಟಿಂಗ್ ಮಾಡುವುದಕ್ಕೆ ಅವರಿಗೆ ಹಕ್ಕು ಇತ್ತು. ಅಲ್ಲಿ ಏನೂ ಮಾಡುವುದಿಲ್ಲ ಎಂದು ಹೇಳಿ ಅನಾಹುತವನ್ನೇ ಮಾಡಿದರು. ಅದೇ ರೀತಿಯಲ್ಲಿ 10 ಲಕ್ಷ ಜನರು ಡೆಲ್ಲಿಯಲ್ಲಿ ಸಭೆ ಸೇರಿ, ಯಾವುದಾದರೂ ಒಂದು ಮಸೀದಿಗೆ ಅನಾಹುತ ಮಾಡಿದರೆ, ಆಗಲೂ ನೀವೇ ಹೇಳುತ್ತೀರಿ, ನಿಮ್ಮ ಬಾಯಿಂದಲೇ ನಮಗೆ ಅವಹೇಳನ ಬರುತ್ತಾ ಇತ್ತು, ಆದ್ದರಿಂದ ಹಾಗೆ ಪುನಃ ಅನಾಹುತವಾಗದೇ ಇರಲಿ ಎಂದು ನಮ್ಮ ಪ್ರಧಾನಿಯವರು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಹೀಗೆ ನಾವು ನಿರ್ಣಯ ತೆಗೆದುಕೊಂಡರೂ ತಪ್ಪು, ಬಿಟ್ಟರೂ ತಪ್ಪು ಎಂದು ಹೇಳುತ್ತೀರಿ. 'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' ಎನ್ನುವ ಹಾಗೆ ಆಗಿದೆ. ಹೀಗೆ ಏನಾದರೂ ಮಾಡಲಿ, ನಮ್ಮ ಪ್ರಧಾನಿಯವರ ಮೇಲೆ ಗೂಬೆ ಕೂರಿಸುವುದು ಸಾಧುವಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ಬಹಳ ಚೆನ್ನಾಗಿ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಸಂಸದೀಯ ಸಚಿವರು ಜಟಕಾ ಗಾಡಿ ಕುದುರೆ ಕೊಟ್ಟಿದ್ದಾರೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ವಾಟಾಳ್ ನಾಗರಾಜ್‌ರವರು ವಾಟ್ ? ಆಲ್ ? ನಾಗರಾಜ್ ಎಂದು ಕರೆಯಿಸಿಕೊಳ್ಳುತ್ತಾರೆ. ಅವರು ಸಾವಿರಾರು ಸಾರಿ ಅರೆಸ್ಟ್ ಮಾಡಿಸಿಕೊಂಡಿದ್ದಾರೆ. ಅವರು ಮಾಡುತ್ತಿರುವುದನ್ನು ನಾವು ದಿನನಿತ್ಯವೂ ನೋಡುತ್ತಾ ಇರುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಹಾಗಾದರೆ ನಾವೂ ನೀವು ಒಟ್ಟಾಗಿ ದಸ್ತಗಿರಿಯಾಗಿ ಒಂದು ಫೋಟೋ ಹಾಕಿಸಿಕೊಳ್ಳಬೇಕಾಗುತ್ತದೆ....

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಸಂಸದೀಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಮೊದಲು ಬಿಜೆಪಿಯವರು ಅಯ್ಯೋಧೆಯಲ್ಲಿ ಸಮಾಧಾನದಿಂದ ಭಜನೆ ಮಾಡಿದ್ದು

ಆಮೇಲೆ ಏನೆಲ್ಲಾ ಮಾಡಿದರು ಎಂಬುದು ಎಲ್ಲರಿಗೂ ಗೊತ್ತಿದೆ. ಹಾಗೆಯೇ ಡೆಲ್ಲಿಯಲ್ಲಿ ಯಾವ ರೀತಿಯ ಭಜನೆ ಮಾಡುತ್ತಾರೆ ಎಂಬುದು ಯಾವ ದೇವರಿಗೆ ಗೊತ್ತು ? ಆದ್ದರಿಂದ ಇನ್ನೊಮ್ಮೆ ಅವರ ಸಮಾಧಾನ ಎಂಬ ಶಬ್ದಕ್ಕೆ ನಾವು ಬಲಿಯಾಗುವುದು ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ:– ಈ ದೇಶದ ಜನರು ಎಲ್ಲರ ಬಗ್ಗೆಯೂ ತಿಳಿದುಕೊಂಡಿದ್ದಾರೆ ....

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ನಮ್ಮ ಬಿಜೆಪಿ ಸದಸ್ಯರನ್ನು ಅರೆಸ್ಟ್ ಮಾಡಬೇಕೆಂಬ ಉದ್ದೇಶ ನಮ್ಮಲ್ಲಿ ಇಲ್ಲ. ಆದರೆ ಡೆಲ್ಲಿಯಲ್ಲಿ ರ್‍ಯಾಲಿ ಮಾಡುವ ಮೂಲಕ ಜನರ ಮನಸ್ಸನ್ನು ಹಾಳು ಮಾಡಲು ಏನು ಹೊರಟಿದ್ದಾರೆ ಅದು ಸರಿಯಲ್ಲ. ನೀವು ಸಮಾಧಾನದಿಂದ ಯಾವುದೇ ರ್‍ಯಾಲಿ ಮಾಡಿದರೆ ನಮಗೆ ಅಡ್ಡಿ ಇಲ್ಲ.

ಇವರು ಕರ್ನಾಟಕ ರಾಜ್ಯದ ಹಿತಾಸಕ್ತಿಯಿಂದ ರ್‍ಯಾಲಿ ಮಾಡುತ್ತಿಲ್ಲ, ದೇಶದ ಹಿತಾಸಕ್ತಿಯಿಂದ, ಬಡವರ ಉದ್ಧಾರಕ್ಕಾಗಿ ರ್‍ಯಾಲಿ ಮಾಡುತ್ತ ಇಲ್ಲ. ಯಾವ ದೇಶದ ಪ್ರಜಾಪ್ರಭುತ್ವಕ್ಕಾಗಿ ನೀವು ರ್‍ಯಾಲಿ ಮಾಡ್ತಿದ್ದೀರಿ ? ಪ್ರಜಾಪ್ರಭುತ್ವದ ನಾಶ ಮಾಡಲಿಕ್ಕಾಗಿ ನೀವು ರ್‍ಯಾಲಿ ಮಾಡುತ್ತಿದ್ದೀರಿ.

(ಗೊಂದಲ)

ಈ ದೇಶದ ಸಮಾಧಿ ಮೇಲೆ ನೀವು ರ್‍ಯಾಲಿ ಮಾಡುವುದಕ್ಕೆ ಹೊರಟಿದ್ದೀರಿ. ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಸುಮ್ಮನಿರಿ. ನಾವೆಲ್ಲ ಒಗ್ಗಟ್ಟಾಗಿದ್ದೇವೆ, ನೀವೇ ಈಗ ಪ್ರತ್ಯೇಕ.

(ಗೊಂದಲ)

ಪ್ರಜಾಪ್ರಭುತ್ವದ ಸಮಾಧಿ ಮೇಲೆ ನೃತ್ಯ ಮಾಡುವುದಕ್ಕೆ ಈ ದೇಶದಲ್ಲಿ ಯಾರಿಗೂ ನಾವು ಅವಕಾಶ ಕೊಡುವುದಿಲ್ಲ, ಅದನ್ನು ಬರೆದಿಟ್ಟುಕೊಳ್ಳಿ ದಯ ಮಾಡಿ. ಆ ಕಾಲ ಹೊರಟುಹೋಯಿತು.

(ಗೊಂದಲ)

ಇವರ ದೇಶ ಯಾವುದೂ ಎಂದು ನಾವು ದುರ್ಬೀನು ಇಟ್ಟು ನೋಡಬೇಕು. ಖಂಡಿತ, ಈ ಭಾರತ ಅಂತೂ ನಿಮ್ಮ ದೇಶವಲ್ಲವೆಂದು ತಿಳಿದುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಭಾರತ ದೇಶ ಅಂದರೆ ಹಿಂದೂಸ್ಥಾನ ಕೂಡ ನಮ್ಮ ದೇಶವೇ. ಈ ದೇಶ ಭಾರತ ದೇಶ. ಹಿಂದೂಸ್ಥಾನ ನಮ್ಮದು. ಇಂಡಿಯಾ, ಭಾರತ ಹಿಂದೂಸ್ಥಾನ ಎಲ್ಲ ನಮ್ಮವೇ.

(ಗೊಂದಲ)

Dr. Jeevaraj Alva:– I am on a point of order. I am on very clear point of order. The very solidarity of the country he has questioned. ನೀವ್ಯಾರು ಗಮನ ಕೊಟ್ಟಿಲ್ಲ, ಭಾರತ ದೇಶವಲ್ಲ, ನಮ್ಮದು ಹಿಂದೂ ದೇಶ ಎಂದು ಅವರು ಕ್ಲಿಯರಾಗಿ ಹೇಳಿದ್ರೆ. ಮುಖ್ಯ ಮಂತ್ರಿಗಳ ಮಾತಿಗೆ ಉತ್ತರವಾಗಿ ಹೇಳಿದ ಮಾತನ್ನು ನೀವು ರೆಕಾರ್ಡ್ ತರಿಸಿ, ನೋಡಿ. ಯಾವ ಹಿಂದೂ ದೇಶ ನಿಮ್ಮದು, ಯಾವ ಹಿಂದೂರಾಷ್ಟ್ರ ನಿಮ್ಮದು ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ನಮ್ಮದೇ ಹಿಂದೂರಾಷ್ಟ್ರ, ಹೌದು.

ಡಾ|| ಜೀವರಾಜ ಆಳ್ವ:– ಯಾವ ಹಿಂದೂ ರಾಷ್ಟ್ರ ? ಸಂವಿಧಾನಬದ್ಧವಾಗಿ ಎಲ್ಲಿದೆ ?

(ಗೊಂದಲ)

Dr. Jeevaraj Alva:– I cannot be a party to it. ಪುನಃ ಅವರು .... I am on a point of order. ಹಿಂದೂರಾಷ್ಟ್ರವಂತೆ. ಯಾವ ಹಿಂದೂರಾಷ್ಟ್ರ. ಇದು ಭಾರತ. I must be given an answer. I am on a point of order.

ಶ್ರೀ ಕೆ.ಎಸ್. ಈಶ್ವರಪ್ಪ:– ನನಗೆ ಅವಕಾಶ ಕೊಡಿ ಹೇಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಇವರು ರಾಜ್ಯಾಂಗಕ್ಕೆ ವಿರೋಧವಾಗಿ ದೇಶದ್ರೋಹದ ಕೆಲಸವನ್ನು ಸದನದಲ್ಲಿ ಮಾಡುತ್ತಿದ್ದಾರೆ. ಭಾರತ ಜಾತ್ಯಾತೀತ ರಾಷ್ಟ್ರ, ಹಿಂದೂರಾಷ್ಟ್ರವೆಂದು ಹೇಳುತ್ತಾರೆ. It is a democratic and secular republic of India. It is anti–constitutional. ಇದನ್ನು ಮುಂದುವರೆಸೋಕೆ ಹೋಗಬೇಡಿ.

ಅಧ್ಯಕ್ಷರು:– ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್. ರಂಗನಾಥ್:– ಈಗ ಅಷ್ಟು ಸಾಕು, ಮತ್ತೆ ಕೇಳೋದು ಬೇಕಾಗಿಲ್ಲ. ಅವರು ಹೇಳೋದು ರೆಕಾರ್ಡಿಗೆ ಹೋಗಿದ್ದರೆ ಅದನ್ನು ತೆಗೆಸಿಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಅಧ್ಯಕ್ಷರೇ, ನಾನು ಒಂದು ಮಾತು ಹೇಳುತ್ತೇನೆ. ಹಿಂದೂರಾಷ್ಟ್ರ ಹಿಂದೂ ದೇಶ ಎನ್ನುವುದು ಇವತ್ತಿನಿಂದ ಬಂದದ್ದಲ್ಲ, ಸಾವಿರಾರು ವರ್ಷದಿಂದ ಇದೆ, ಇದನ್ನು ರಿಕಾರ್ಡಿನಿಂದ ತೆಗೆಸಿದರೆ ತಪ್ಪಾಗುತ್ತದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– ಅಧ್ಯಕ್ಷರೇ ಮತ್ತೊಂದು ಸ್ಪಷ್ಟೀಕರಣ ....

(ಗೊಂದಲ)

Mr. Speaker:– It will not go on record. ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಆ ಈಶ್ವರಪ್ಪ ಒಬ್ಬ ನಿಂತಾಗ ಇಷ್ಟೊಂದು ಜನ ನಿಲ್ಲುತ್ತಾರೆ ಮಾತನಾಡುವುದಕ್ಕೆ ಅವಕಾಶ ಕೊಡಿ, ಈ ತರಹ ಧಾಳಿ ಮಾಡಿದರೆ ಹೇಗೆ ? ನಿಮಗೆ ಅವರ ವಿಚಾರ ಒಪ್ಪದೇ ಇರಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಜೀವರಾಜ ಆಳ್ವರು ಮತ್ತು ಮಾನ್ಯ ಅನಂತಕೃಷ್ಣರು ಏನು ಹೇಳಿದ್ದಾರೆ, ಇದರ ಜೊತೆಯಲ್ಲಿ ಬಿಜೆಪಿಯವರನ್ನು ಅರೆಸ್ಟ್ ಮಾಡುವ ಕಾರ್ಯಕ್ರಮ ನಮ್ಮದು ಏನೂ ಇಲ್ಲ.

1.40 ಪಿ.ಎಂ.

ಆದರೆ ನಿಷೇಧ ಆದಂಥ ರ್‍ಯಾಲಿಗೆ ಯಾರು ಹೋಗುತ್ತಿದ್ದಾರೆ, ಅವರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆಯೇ ಹೊರತು ಬಿ.ಜೆ.ಪಿ. ಅವರನ್ನು ಹಿಡಿದು ಹಿಡಿದು ಒಳಗೆ ಹಾಕತಕ್ಕಂಥ ಪ್ರಶ್ನೆ ಇಲ್ಲ. ನಿರಪರಾಧಿಗಳನ್ನು ಕೂಡ ಅರೆಸ್ಟ್ ಮಾಡಿದ್ದಾರೆಂದು ತಾವು ಹೇಳಿದ್ದೀರಿ, ಬಿಜೆಪಿ ಅವರು ನಿಷೇಧ ಉಲ್ಲಂಘಿಸಿ ಅವರು ಹೋಗುತ್ತಿರುವಾಗ ಬೇರೆ ಆರ್ಡಿನರಿ ಕ್ರೈಮ್ಸ್‌ಗಳನ್ನೂ ಅಲ್ಲೋಲ ಕಲ್ಲೋಲ .... ಮಾಡಿ ಇಡುತ್ತಾರೆ. ಅವರು ಕೂಡ ಅರೆಸ್ಟ್ ಆದರೆ ಇವರ ಜೊತೆಯಲ್ಲಿ ಬಿಡುಗಡೆ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ. ಆದ್ದರಿಂದ ತಾವು ಏನು ಹೇಳಿದಿರಿ,

(ಗೊಂದಲ)

Sri A.K. Ananthakrishna:– I would like to make the Chair very clear ......

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ದಯವಿಟ್ಟು ರೆಕಾರ್ಡ್ ತೆಗೆದು ಕ್ರಿಮಿನಲ್ಸ್ ಯಾವ ಪಕ್ಷದಲ್ಲಿದ್ದಾರೆ ಎಂದು ನೋಡಲಿ. ಯಾರ್‍ಯಾರು ಕ್ರಿಮಿನಲ್ಸ್ ಕಾಂಗ್ರೆಸ್‌ನಲ್ಲಿದ್ದಾರೆ ಎಂದು ನೋಡಲಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– ಆ ವಿವರ ದಯ ಮಾಡಿ ಕೊಡಿ. No. it is alright. You have already told me. Kindly give the particulars. ಎಲ್ಲಿ ಎಂದು ಹೇಳಿ ನನಗೆ ಕೊಡಿ. ಅಂಥದ್ದು ಇದ್ದರೆ ನಾವು ಸ್ಕ್ರೀನ್ ಮಾಡಿ ಬಿಡುಗಡೆ ಮಾಡುತ್ತೇನೆ.

ಶ್ರೀ ಕೆ. ಹರ್ಷಕುಮಾರಗೌಡ:– ಕ್ರಿಮಿನಲ್ಸ್‌ಗಳು ಚಾಕು, ಚೂರಿ ಅವರೆಲ್ಲಾ ಅವರ ಪಾರ್ಟಿಯಲ್ಲಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಸಭಾಧ್ಯಕ್ಷರೇ, ನನಗೂ ಅವಕಾಶವನ್ನು ಮಾಡಿ ಕೊಡಬೇಕು ತಾವು ಅದನ್ನು ರೆಕಾರ್ಡ್‌ನಿಂದ ತೆಗೆಸಬೇಕು. ಅವರು ಕ್ರಿಮಿನಲ್ಸ್‌ಗಳಲ್ಲಾ ನಮ್ಮ ಪಾರ್ಟಿಯಲ್ಲಿದ್ದಾರೆಂದು ಹೇಳುತ್ತಿದ್ದಾರೆ. ನಾನು ತಮ್ಮ ಮುಖಾಂತರ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ತನಿಖೆ ಮಾಡಿ. ಕ್ರಿಮಿನಲ್ಸ್ ಜಾಸ್ತಿ ಜನರು ನಿಮ್ಮ ಪಕ್ಷದಲ್ಲಿದ್ದಾರೆ. ನಿಮ್ಮ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆಗ ಗೊತ್ತಾಗುತ್ತದೆ, ತನಿಖೆಯಾಗಲಿ, ಯಾರ್‍ಯಾರು ಕೊಲೆಗಡುಕರು. ಯಾರ್‍ಯಾರು ಕ್ರಿಮಿನಲ್ಸ್ ಯಾರ್‍ಯಾರು ಲೂಟಿ ಮಾಡಿದ್ದಾರೆ ಎಂದು ತನಿಖೆಯಾಗಲಿ.

(ಗೊಂದಲ)

ಅಧ್ಯಕ್ಷರು:– ನಾನು ಮುಖ್ಯಮಂತ್ರಿಗಳಿಗೆ ಮಾತನಾಡುವುದಕ್ಕೆ ಹೇಳಿದ್ದೇನೆ. ನೀವು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್:– ಈಶ್ವರಪ್ಪನದು ಬಹಳ ಆಯಿತು ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರನ್ನು ಮತ್ತು ಇತರೆ ಶಾಸಕರನ್ನು ಬಿಡುಗಡೆ ಮಾಡತಕ್ಕಂಥ ಕ್ರಮ ಕೈಗೊಂಡಿದ್ದೇವೆ. ಬಹುಶಃ 10–15 ನಿಮಿಷದಲ್ಲಿ ಅವರು ಬಿಡುಗಡೆಯಾಗುತ್ತಾರೆ. ಏನೂ ಆತಂಕ ಇಲ್ಲ. ಅವರು ಬರುತ್ತಾರೆ ಕೆಲವು ಡಾಕ್ಯುಮೆಂಟ್ಸ್ ದಸ್ಕತ್ ಆಗುತ್ತಿದೆ. ಅದನ್ನು ಮಾಡುತ್ತಿದ್ದಾರೆ. ಇನ್ನು 10 – 15 ನಿಮಿಷದಲ್ಲಿ ಅವರು ಬಿಡುಗಡೆಯಾಗುತ್ತಾರೆ.

ಶ್ರೀ ಆರ್.ವಿ. ದೇಶ್‌ಪಾಂಡೆ:– ನಾನು ತಮ್ಮ ಅನುಮತಿಯನ್ನು ಪಡೆದುಕೊಂಡಿದ್ದೇನೆ.

ಅಧ್ಯಕ್ಷರು:– ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪ ಮತ್ತು ಅನೇಕ ಸದಸ್ಯರು ಶಾಸಕರನ್ನು ಬಂಧಿಸಿದ್ದು ಕಾರಾಗೃಹದಲ್ಲಿ ಇಟ್ಟಿರುವ ವಿಷಯದ ಬಗ್ಗೆ ಎತ್ತಿದ ನಿಲುವಳಿ ಸೂಚನೆ ಪೂರ್ವಭಾವಿಯ ಅನುಮತಿಯ ಚರ್ಚೆಗೆ ಸರ್ಕಾರದವರು ಉತ್ತರ ನೀಡಿರುವ ಹಿನ್ನೆಲೆಯಲ್ಲಿ ಈ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಲಾಗಿದೆ.

ರಾಜ್ಯದಲ್ಲಿ ವಿದ್ಯುತ್ ಕೊರತೆಯಿಂದ ರೈತರ ಬೆಳೆಗಳ ಹಾನಿ.

† ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹಾಜರಿದ್ದಾರೆ. ಈ ಸದನದಲ್ಲಿ ಅವರು ಒಂದು ಹೇಳಿಕೆ ಕೊಡುತ್ತೇನೆ ಎಂದು ಆಶ್ವಾಸನೆಯನ್ನು

ಕೊಟ್ಟಿದ್ದರು. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ರೈತರ ವಿದ್ಯುತ್ ಪಂಪ್‌ಸೆಟ್ಟುಗಳಿಗೆ ಅನೇಕ ಕಡೆ ದಿನದ 24 ಗಂಟೆಯಲ್ಲಿ ಕೊನೆಯ ಪಕ್ಷ 2 ಗಂಟೆಯಾದರೂ ಕೂಡ ವಿದ್ಯುತ್ ಕೊಡಿ ಎಂದು ವಿಧವಿಧವಾಗಿ ಕಾಡಿ ಬೇಡಿದ್ದೇವೆ ಅವರಿಗೆ ಪಾದ ಮುಟ್ಟಿ ನಮಸ್ಕಾರ ಮಾಡಲಿಲ್ಲ, ಮಿಕ್ಕ ಎಲ್ಲಾ ಕೆಲಸ ಕೂಡ ಮಾಡಿದ್ದೇವೆ ಆದರೂ ವಿದ್ಯುತ್ ಸರಬರಾಜು ಆಗುತ್ತಿಲ್ಲ. ನಾನು ಒಂದು ಸಲಹೆಯನ್ನು ಕೂಡ ಕೊಟ್ಟಿದ್ದೇನೆ. ಇದು ಉತ್ಪಾದನೆಯಾಗುವುದಕ್ಕೆ ದೊಡ್ಡದಾಗಿ ಹೇಳಿಕೆಯನ್ನು ತಾವು ಕೊಡುತ್ತೀರಿ, ಕೊಡಿ. ಉತ್ಪಾದನೆ ಕಡಿಮೆಯಾಗುತ್ತಿದೆ, ಬಳಕೆ ಜಾಸ್ತಿಯಾಗುತ್ತಿದೆ. ಬೇಡಿಕೆ ಜಾಸ್ತಿಯಾಗುತ್ತಿದೆ ಇವೆಲ್ಲಾ ನಿಜ. ಒಂದೇ ದಿವಸದಲ್ಲಿ, ಯಾರೇ ಮಂತ್ರಿಗಳಾಗಲೀ, ನಾನೇ ಮಂತ್ರಿಯಾಗಲೀ ಇದನ್ನೆಲ್ಲಾ ಸರಿಪಡಿಸುತ್ತೇವೆ ಎಂದರೆ ಅದು ಅಸಾಧ್ಯವಾದ ಕೆಲಸ. ಈಗ ನಾನು ವಿವರಕ್ಕೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. ಆದರೆ, ಒಂದು ಸಲಹೆ ಏನೆಂದರೆ ಈ ಕೈಗಾರಿಕೆಗಳಿಗೆ 25 ರಿಂದ 40 ರಷ್ಟರವರೆಗೆ ವಿದ್ಯುತ್ ಕಡಿತ ಏನಿದೆ, ಅದನ್ನು ಕನಿಷ್ಟ ಪಕ್ಷ ಶೇಕಡ 60ಕ್ಕಾದರೂ ಹೆಚ್ಚು ಮಾಡಿಸಿ ಆ ವಿದ್ಯುತ್ತನ್ನು ವ್ಯವಸಾಯಗಾರರಿಗೆ ಕೊಡಿ. ನಾನು ಹತ್ತಾರು ಬಾರಿ ಮನವಿ ಮಾಡಿದರೂ ಗಮನ ಹರಿಸಿಲ್ಲ. ತಾವು 5 ಗಂಟೆಗೆ ಸಭೆಯನ್ನು ಕರೆದಿದ್ದೀರಿ, ಸಂತೋಷ. ಒಳ್ಳೆಯ ಕೆಲಸ ಮಾಡುತ್ತಿದ್ದೀರಿ, ಸಭೆಗೂ ಕೂಡ ಬರುತ್ತೇವೆ. ವಿದ್ಯುತ್ ಕಡಿತವನ್ನು ಕೈಗಾರಿಕೆಗಳಿಗೆ ಹೆಚ್ಚು ಮಾಡಿ ಅದನ್ನು ವ್ಯವಸಾಯಗಾರರಿಗೆ ಐಪಿ ಕೊಡುತ್ತೇವೆಂದು ತಾವು ಒಂದು ಹೇಳಿಕೆ ಮಾಡಿ. ಸೆಟ್ಟುಗಳಿಗೆ ವಿದ್ಯುತ್ ಕೊಡಿ. ಇವತ್ತು ಕೇವಲ ಎರಡು ಗಂಟೆ ಕಾಲ ನಮ್ಮಲ್ಲಿ ಸರಬರಾಜಾಗುತ್ತದೆ.

ಎರಡು ಗಂಟೆಯಲ್ಲೂ ಕೂಡ 150–170 ವೋಲ್ಟೇಜ್ ಇರುತ್ತದೆ. ವೋಲ್ಟೇಜ್ ಇಲ್ಲ, ಸರಬರಾಜು ಇಲ್ಲ. ರೈತರ ಪರಿಸ್ಥಿತಿ ಅಧೋಗತಿಗೆ ಇಳಿಯತಕ್ಕಂಥದ್ದನ್ನು ಎಷ್ಟು ಸಾರಿ ಹೇಳಿದರೂ ಸಹ ಅದರ ಬಗ್ಗೆ ಗಮನವವನ್ನು ಹರಿಸಿಲ್ಲ. ಪವರ್‌ಕಟ್‌ಅನ್ನು ಜಾಸ್ತಿ ಮಾಡಿ ರೈತರಿಗೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ತಾವು ದಯವಿಟ್ಟು ಹೇಳಬೇಕು. ಆಮೇಲೆ ಉಳಿದ ವಿಚಾರಗಳನ್ನು ವಿಚಾರ ಮಾಡೋಣ ಎಂದು ಹೇಳಿ ನಾನು ತಮ್ಮ ಮೂಲಕ ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಉಪ ಮುಖ್ಯಮಂತ್ರಿಗಳು ಈ ಸದನದಲ್ಲಿ ಅವರು ಮಾತನಾಡುವಾಗ ಎಲ್ಲಾ ವಿರೋಧಿ ಮುಖಂಡರುಗಳನ್ನು ಕರೆದು ಮಾತನಾಡುತ್ತೇವೆಂದು ಹೇಳಿದರು. ನಮಗೆ ಯಾರಿಗೂ ಕರೆದಿರತಕ್ಕಂಥ ಸೂಚನೆಗಳು ಬಂದಿಲ್ಲ. ನಮ್ಮನ್ನು ಕರೆಯುತ್ತಾರೋ ಬಿಡುತ್ತಾರೋ ಗೊತ್ತಿಲ್ಲ; ಆ ಪ್ರಶ್ನೆ ಬೇರೆ. ಆದರೆ ಇವತ್ತಿನವರೆಗೂ ಸಹ ವಿದ್ಯುಚ್ಛಕ್ತಿಯ ಬಗ್ಗೆ ನಾವೇನು ಇಲ್ಲಿ ಚರ್ಚೆ ಮಾಡಿದ್ದೇವೆ ಅದನ್ನು ಸರಿಪಡಿಸತಕ್ಕಂಥ ವ್ಯವಸ್ಥೆಯನ್ನು ಅವರು ಪ್ರಾಮಾಣಿಕರಾಗಿ ಮಾಡಿದ್ದರೂ ಆ ವ್ಯವಸ್ಥೆ ಇವತ್ತಿನವರೆಗೆ ಸರಿಯಾಗಿ ಆಗಿಲ್ಲ. ನಾನು ನಿನ್ನೆ ತಾನೆ ತಮಗೆ ಹೇಳಿದೆ, ಗಡಿ ಪ್ರದೇಶವಾದ ಚಾಮರಾಜನಗರ ಇಡೀ ಕಗ್ಗತ್ತಲು ಅನೇಕ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇಲ್ಲ. ಈ ದುಸ್ಥಿತಿ ಕೋಲಾರದಲ್ಲೂ ಆಗಿದೆ, ರಾಜ್ಯದಲ್ಲಿಯೂ ಆಗಿದೆ. ಇದನ್ನು ಸರಿಪಡಿಸುವುದರ ಬಗ್ಗೆ ನಾವು ನಿರಂತರವಾಗಿ ಈ ಸದನದಲ್ಲಿ ಒಂದಲ್ಲ ಹತ್ತು ಬಾರಿ ಹೇಳಿದ್ದೇವೆ. ಮಾನ್ಯ ಉಪ ಮುಖ್ಯಮಂತ್ರಿಗಳು, ದಕ್ಷರು ಅವರು ಸರಿಪಡಿಸುತ್ತಾರೆ ಎನ್ನತಕ್ಕ ನಂಬಿಕೆ ನಮಗೆ ಇದ್ದರೂ ಸಹ 2–3 ದಿವಸದಿಂದ ನೋಡಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ಆ ನಂಬಿಕೆಗೆ ಏನೋ ಸ್ವಲ್ಪ ವ್ಯತ್ಯಾಸ ಬರುವ ಸೂಚನೆಗಳು ಕಾಣುತ್ತಿವೆ. ಈ ಬಗ್ಗೆ ತಾವು ಪರಿಣಾಮಕಾರಿಯಾದಂತಹ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ನನ್ನ ಒಂದು ತಾಲ್ಲೂಕಿನಲ್ಲಿ 5 ಕೋಟಿ ರೂಪಾಯಿಯ ಬೆಳೆ ನಾಶವಾಗುತ್ತಿದೆ. ಈ ರೀತಿ ರಾಜ್ಯದ ಮೂಲೆ ಮೂಲೆಗಳಲ್ಲಿ ನೂರಾರು ಕೋಟಿ ರೂಪಾಯಿ ಬೆಳೆ ನಷ್ಟವಾಗುತ್ತಿರತಕ್ಕಂಥ ಪರಿಸ್ಥಿತಿ ಇದೆ. ಈ ಕೈಗಾರಿಕೆಗಳಿಗೆ ಕೊಡತಕ್ಕಂಥ ವಿದ್ಯುಚ್ಛಕ್ತಿಯನ್ನು ಕಡಿಮೆ ಮಾಡಲಿ. ಮಾನ್ಯ ಉಪ ಮುಖ್ಯಮಂತ್ರಿಗಳು ರೈತರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಗಮನ ಕೊಡಬೇಕಾದದ್ದು ಅತಿ ಮುಖ್ಯವಾದುದು. ನೀವು ಸಭೆಯನ್ನು ಕರೆಯುವಾಗ ನಾವೇನು ಅತ್ತು ಕರೆದು ಔತಣಕ್ಕೆ ಬರುವುದಿಲ್ಲ.

ತಮಗೇನಾದರೂ ಇಚ್ಛೆ ಇದ್ದರೆ ನಮ್ಮನ್ನು ಕರೆಯಿರಿ, ನಮ್ಮದೇನೂ ಅಭ್ಯಂತರವಿಲ್ಲ. ಅವರೊಬ್ಬರನ್ನೇ ಕರೆದುಕೊಳ್ಳಬೇಕೆಂದರೆ ಕರೆದುಕೊಳ್ಳಬಹುದು ಅದು ನಿಮಗೆ ಸೇರಿದ್ದುದು ಅದನ್ನು ತಾವು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪ ಮುಖ್ಯಮಂತ್ರಿಗಳು ಸಭೆಯನ್ನು ಕರೆದಿರುವುದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಆದರೆ ಈ ರೀತಿ ಸಭೆಗಳು ಸಹಿತ ಬಹಳ ಜಾಸ್ತಿಯಾಗಿವೆ. ಪ್ರಾಮಾಣಿಕವಾಗಿ ಅತ್ಯಂತ ಕಳಕಳಿಯಿಂದ ನೊಂದು ನಾನು ಕೇಳಿಕೊಳ್ಳುತ್ತಿದ್ದೇನೆ. You are carrying a legacy as you have said. ನಾನು ಡೈರೆಕ್ಟಾಗಿ ನೀವೇ ಜವಾಬ್ದಾರರು ಅಂತ ನಾನು ಖಂಡಿತವಾಗಿಯೂ ಹೇಳುವುದಿಲ್ಲ. ಅನೇಕ ಕಾರಣಗಳಿಂದ ಇರಬಹುದು, ನಾನು ಬಹಳ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾವು ರಾಜಧಾನಿಗೆ ಹತ್ತಿರ ಇದ್ದರೂ ಸಹ ದೀಪದ ಕೆಳಗೆ ಬರೀದು. ಚೆನ್ನಪಟ್ಟಣ, ರಾಮನಗರ, ಸಾತನೂರು, ಕನಕಪುರ, ಇಲ್ಲಿ ಒಂದು ದಿವಸದಲ್ಲಿ ಒಂದು ಗಂಟೆ ಕರೆಂಟ್ ಇರುವುದಿಲ್ಲ. ಹೀಗಾದರೆ ರೈತರು ಬದುಕುವುದು ಹೇಗೆ ದಯವಿಟ್ಟು ಹೇಳಿ. ದಯವಿಟ್ಟು ನಾನು ಬಹಳ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ತತ್‌ಕ್ಷಣ ಸರಿ ಮಾಡಲಿಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ಗಂಭೀರವಾದಂತಹ ಸಮಸ್ಯೆಯಾಗಿದೆ. ಇದನ್ನು ನಾಲ್ಕೈದು ದಿವಸಗಳ ಹಿಂದೆಯೇ ತಮ್ಮ ಗಮನಕ್ಕೆ ತಂದಿದ್ದೇವೆ. ತಾವೂ ಸಹ ಸ್ಟೇಟ್‌ಮೆಂಟ್‌ನ್ನು ನಾಳೆ ಮಾಡುತ್ತೇವೆಂದು ಹೇಳಿದ್ದೀರಿ. ರೈತರು ಬಹಳ ಕಷ್ಟದಲ್ಲಿದ್ದಾರೆ. ಬೆಳೆಗಳು ಈಗಾಗಲೇ ಹಾಳಾಗಿ ಹೋಗಿದೆ. ಈ ಸಮಸ್ಯೆಯನ್ನು ತಾವು ಬಗೆಹರಿಸಿದರು, ಎಷ್ಟೊಂದು ರೈತರಿಗೆ ಸಹಾಯ ಆಗಬಹುದು ಎನ್ನುವ ಬಗ್ಗೆ ನನಗೆ ಸಂದೇಹ ಇದೆ. ಆದರೆ ಇನ್ನು ಸ್ವಲ್ಪ ಅಲ್ಪ ಸ್ವಲ್ಪ ಬೆಳೆ ಇದೆ. ಅದು ಉಳಿಯಬಹುದು. ಮಾನ್ಯ ಬೈರೇಗೌಡರು ಒಂದು ಸಲಹೆಯನ್ನು ಕೊಟ್ಟರು. ಕೈಗಾರಿಕೆಯ ಮೇಲೆ ತಾವು ಹೆಚ್ಚಿನ ಪವರ್ ಕಟ್ ಅನ್ನು ಹಾಕಿ ಈ ಸಮಸ್ಯೆಯನ್ನು ಬಗೆಹರಿಸಿ ಎಂದು ಹೇಳಿದರು. ತಮಗೆ ಗೊತ್ತು ಎಲ್ಲಿ ಪವರ್ ಜನರೇಟ್ ಆಗುತ್ತದೆ ಆ ಭಾಗದಿಂದ ನಾವು ಬರುತ್ತೇವೆ. ನನಗೆ ಬಂದಿರುವ ಮಾಹಿತಿಯ ಪ್ರಕಾರ ಇವತ್ತು ಪವರ್ ಕಟ್ ಹಾಕುವ ಅವಶ್ಯಕತೆ ಇಲ್ಲ. ಸಾಕಷ್ಟು ಪವರ್ ಜನರೇಟ್ ಮಾಡಲಿಕ್ಕೆ ಸಾಧ್ಯವಿದೆ. ವೋಲ್ಟೇಜ್ ಫ್ಲಕ್ಚ್ಯುಯೇಷನ್ ಏನು ಬರುತ್ತಿದೆ ಅದು ಮುಖ್ಯವಾಗಿ ನಿಮ್ಮ ಮ್ಯಾನೇಜ್‌ಮೆಂಟ್ ಸರಿಯಲ್ಲದಿರುವುದಿಂದ. Transmission ಲಾಸ್ ಹೆಚ್ಚಾಗಿದೆ. ಹಾಗಾಗಿ Power cut thinking should be secondary one. ಮೂಲಭೂತವಾಗಿ ಇವತ್ತು ನಿಮ್ಮ ಕಡೆ ಪವರ್ ಜನರೇಟ್ ಮಾಡಲಿಕ್ಕೆ ಸಾಧ್ಯವಿದೆ ಅದರಲ್ಲಿ ಪ್ರಿಯಾರಿಟಿಯನ್ನು ರೈತರಿಗೆ ಕೊಟ್ಟರೆ ನೀವು ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೇ ವಿನಹ ಪವರ್ ಕಟ್ ಪವರ್ ಕಾರ್ಪೊರೇಷನ್ ಮಾಡಬಹುದು. ಯಾರಾದರೂ ಮಾಡಬಹುದು. That is not a solution. ನೀವು ಸಲಹೆಯನ್ನು ತೆಗೆದುಕೊಂಡು ಹೆಚ್ಚು ಪವರ್ ಕಟ್ ಮಾಡಿ ರೈತರಿಗೆ ಕೊಬಹುದು. that is not the proper remedy also.

ಆದರಿಂದ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ. ಏಕೆಂದರೆ ಮತ್ತು ಕೃಷಿ ಎರಡರ ಉತ್ಪಾದನೆಯಿಂದ ನಮ್ಮ ರಾಜ್ಯದ ಸಂಪನ್ಮೂಲಗಳು ಹೆಚ್ಚಾಗಲಿಕ್ಕೆ ಅವಕಾಶ ಇದೆ. ಈ ಎರಡು ಕೈಗಾರಿಕೆಗಳ ಮೇಲೆ ಪರಿಣಾಮವಾದರೆ ನಿಮಗೆ ಟ್ಯಾಕ್ಸಸ್ ಎಲ್ಲಿಂದ ಬರಬೇಕು, ರೆವಿನ್ಯೂ ಎಲ್ಲಿಂದ ಬರಬೇಕು. ಹಾಗಾಗಿ ಸುಲಭ ಮಾರ್ಗ ನಿಮಗೇನು ಹೇಳಿದ್ದಾರೆ, ಆ ಮಾರ್ಗಕ್ಕೆ ತಾವು ಕೈ ಹಾಕಬಾರದು.

ಶ್ರೀ ಸಿ. ಬೈರೇಗೌಡ:- ನೀವು ಈ ರೀತಿ ಅರ್ಥವಿಲ್ಲದೆ ಮಾತನಾಡುವುದು ಸರಿಯಲ್ಲ. ಇದರ

ವಿಚಾರ ನಿಮಗೆ ಗೊತ್ತಿದೆ. ನೀವು ದಯವಿಟ್ಟು ಕುಳಿತುಕೊಳ್ಳಿ, ವಿಚಾರ ಗೊತ್ತಿದ್ದರೆ ಮಾತನಾಡಿ ಇಲ್ಲದಿದ್ದರೆ ಸುಮ್ಮನೆ ಕುಳಿತುಕೊಳ್ಳಿ. ಅರ್ಥವಿಲ್ಲದೆ ಮಾತನಾಡಬೇಡಿ.

ಶ್ರೀ ಆರ್.ವಿ. ದೇಶಪಾಂಡೆ:– ಹಾಗಾಗಿ ನಾವು ರೈತರಿಗೆ ಪ್ರಾಧಾನ್ಯತೆಯನ್ನು ಕೊಟ್ಟು ರೈತರಿಗೆ ಕಷ್ಟವಾಗಬಾರದು, ರೈತರಿಗೆ ಬೆಳೆ ಬೆಳೆಯಲು ನೀರು ಸಿಗಬೇಕು. ಆ ದೃಷ್ಟಿಯಿಂದ ನೀವು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು.

ಮಾನ್ಯ ಬೈರೇಗೌಡರು ತಪ್ಪು ತಿಳಿದುಕೊಂಡಿದ್ದಾರೆ, ಕೈಗಾರಿಕೆಗಳು ರಾಜ್ಯದಲ್ಲಿ ಬೆಳೆಯಬೇಕು, ಆದರೆ, ನಾವು ಮೊದಲ ಆದ್ಯತೆ ರೈತರಿಗೆ ಕೊಡಬೇಕೆಂದು ಹೇಳಿದೆ. ಈ ಮಾತನ್ನು ಮಾನ್ಯ ಸದಸ್ಯರು ಸರಿಯಾಗಿ ಕೇಳಲಿಲ್ಲ. ಪ್ರಾಧಾನ್ಯತೆ ಮೇಲೆ ಮುಖ್ಯವಾಗಿ ನೀವು ರೈತರಿಗೆ ನೀರು ಕೊಡುವ ವ್ಯವಸ್ಥೆ ಮಾಡಿ, ಕನಿಷ್ಠ ಪಕ್ಷ 5–6 ಗಂಟೆಗಳ ಕಾಲವಾದರೂ ನೀರು ಕೊಡುವ ವ್ಯವಸ್ಥೆ ಮಾಡಬೇಕು. ಒಂದು ತಾಸು ನೀರು ಸಿಗುತ್ತಿಲ್ಲ. ಈ ರೀತಿಯ ವ್ಯವಸ್ಥೆ ಮಾಡುವಾಗ ತಾವು ಸುಲಭದ ಮಾರ್ಗ ಹಿಡಿಯುವುದಕ್ಕೆ ಪ್ರಯತ್ನ ಪಡಬೇಡಿ. ಅವರ ಬಗ್ಗೆ ಸಂಪೂರ್ಣ ಗಹನವಾಗಿ ವಿಚಾರ ಮಾಡಿ. ತಾವು ಇದರ ಬಗ್ಗೆ ಸಭೆ ಸೇರಿ ಚರ್ಚಿಸಲು ವಿರೋಧ ಪಕ್ಷದ ಕೆಲವು ನಾಯಕರನ್ನು ಕರೆಯುತ್ತಿದ್ದೀರಿ. ಆದರೆ, ನಿರ್ಣಯ ತೆಗೆದುಕೊಳ್ಳುವಾಗ ರೈತರ ಸಮಸ್ಯೆ ಏನಿದೆ, ಅದು ತುಂಬಾ ಗಂಭೀರವಾದಂಥ ಸಮಸ್ಯೆ. ಅದಕ್ಕೆ ಹೆಚ್ಚಿನ ನೀವು ಪ್ರಾಧಾನ್ಯತೆ ಕೊಟ್ಟು, ಅವರ ಸಮಸ್ಯೆಯನ್ನು ತಕ್ಷಣ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಲೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

† ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವ ಎಂಟೂವರೆ ಲಕ್ಷ ಪಂಪುಸೆಟ್ಟುಗಳಲ್ಲಿ ಸುಮಾರು ಒಂದು ಲಕ್ಷ ಪಂಪುಸೆಟ್ಟುಗಳು ಕೋಲಾರ ಜಿಲ್ಲೆಯಲ್ಲಿದೆ. ಖಂಡಿತವಾಗಿ ಹೆಚ್ಚು ತೊಂದರೆ ಪಡುತ್ತಿರುವವರು ಕೋಲಾರ ಜಿಲ್ಲೆಯವರೇ. ಮೂರು ವರ್ಷಗಳಿಂದ ನಾನು ನೋಡುತ್ತಿದ್ದೇನೆ: ಡೀಸೆಲ್ ಜನರೇಟರ್ ಹಾಕುತ್ತೇವೆ, ಎಷ್ಟೋ ಮೆಗಾವ್ಯಾಟ್‌ಗಳ ಟ್ರಾನ್ಸ್‌ಫಾರ್ಮರ್ಸ್ ಅಲ್ಲಿಗೆ ಕೊಡುತ್ತೇವೆಂದು ಹೇಳುತ್ತಾರೆಯೇ ವಿನಹ ಒಂದು ಜನರೇಟರ್ ಮತ್ತು ಟ್ರಾನ್ಸ್‌ಫಾರ್ಮರ್ ಆಗಲಿ ಕಳುಹಿಸುವುದಿಲ್ಲ. ಬಹುಶಃ ಒಂದು ವಾರದ ಹಿಂದೆ ಇಲ್ಲಿಂದ 5 ಮೆಗಾವ್ಯಾಟ್‌ನ ಟ್ರಾನ್ಸ್‌ಫಾರ್ಮರ್‌ಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಲು ಲಾರಿಯಲ್ಲಿ ಕಳುಹಿಸಿಕೊಟ್ಟರೂ ಅಲ್ಲಿರುವ ಅಧಿಕಾರಿಗಳು, ಟ್ರಾನ್ಸ್‌ಫಾರ್ಮರ್‌ಗಳನ್ನು ಇಳಿಸದೆ ಹಾಗೆಯೇ ವಾಪಸ್ಸು ಕಳುಹಿಸಿಕೊಟ್ಟಿದ್ದಾರೆ. ಇದು ನಮಗೆ ಗೊತ್ತಿರುವ ವಿಷಯ, ನನಗೆ ಮೊನ್ನೆ ದಿವಸ ಗೊತ್ತಾಯಿತು. ಅಧಿಕಾರಿಗಳು ಕೂಡ ಇದರಲ್ಲಿ ಶಾಮೀಲಾಗಿದ್ದಾರೆಂದು ತಿಳಿದು ಬಂದಿದೆ. ಅಲ್ಲದೆ, ಆದಷ್ಟು ಬೇಗ ಕೈಗಾರಿಕೆಗಳಿಗೆ ಕೊಡುತ್ತಿರುವ ಪವರ್ ಅನ್ನು ಕಟ್ ಮಾಡಿ ನಮಗೆ ಕನಿಷ್ಠ ಪಕ್ಷ 3–4 ಗಂಟೆಗಳ ಕಾಲ ವಿದ್ಯುತ್ ಅನ್ನು ಒಂದೊಂದು ಪ್ರದೇಶ, ಹೋಬಳಿ, ಮಂಡ್ಯಕ್ಕೆ ಯಾವ ರೀತಿ ಕೊಡುವ ವ್ಯವಸ್ಥೆ ಇದೆಯೋ ಆ ರೀತಿ ಅದನ್ನು ಬೇಗ ಮಾಡದೆ ಹೋದರೆ ನಮ್ಮ ಕ್ಷೇತ್ರಕ್ಕೆ ನಾವು ಹೋಗುವುದಕ್ಕಾಗುವುದಿಲ್ಲ. ಈ ಸಮಸ್ಯೆ ವರ್ಷೇ ವರ್ಷೇ ಇದ್ದದ್ದೇ. ನೀವು ವಿದ್ಯುತ್ ಕೊಡುವುದನ್ನು ಇನ್ನೊಂದು ತಿಂಗಳು ನಿಧಾನ ಮಾಡಿ ಯುಗಾದಿ ಸಮಯದಲ್ಲಿ ಮಳೆ ಬರುತ್ತದೆ. ಮಳೆಗಾಲದಲ್ಲಿ ವಿದ್ಯುತ್ ಅಷ್ಟಾಗಿ ಬೇಕಾಗುವುದಿಲ್ಲ. ಜೊತೆಗೆ ಕೋಲಾರದಲ್ಲಿ 300–400 ಅಡಿ ಬೋರ್‌ವೆಲ್‌ಗಳನ್ನು ಹಾಕಿ ನೀರನ್ನು ಎತ್ತುತ್ತೇವೆ. ಕೋಲಾರದಲ್ಲಿ ಕಾವೇರಿ, ತುಂಗಭದ್ರಾ, ಭೀಮಾ ಮುಂತಾದ ಯಾವುದೇ ದೊಡ್ಡ ನದಿಗಳು ಇಲ್ಲ. ಆದರಿಂದ, ಬೋರ್ ವೆಲ್‌ನಿಂದ ನೀರು ಎತ್ತಬೇಕಾದರೆ ವೋಲ್ಟೇಜ್ ಫ್ಲಕ್ಚುಯೇಷನ್ ಆಗುತ್ತದೆ. ನಾನು ಹೋದ ವಾರ ಯಾವುದೋ ಒಂದು ಹೋಬಳಿಯ ಹೆಡ್‌ಕ್ವಾರ್ಟರ್ಸ್‌ಗೆ ಹೋಗಿದ್ದಾಗ ಒಂಭತ್ತು ಮೋಟಾರುಗಳು ಒಂದೇ ಕಡೆ ಸುಟ್ಟು ಹೋಗಿದ್ದವು. ಆ ಸ್ಥಳಕ್ಕೆ ನನ್ನನ್ನು ರೈತರು ಕರೆದುಕೊಂಡು ಹೋದರು. ಅವರು ಘೇರಾವ್ ಒಂದು ಮಾಡುವುದನ್ನು

ಬಿಟ್ಟು ಬೇರೆ ಏನೇನು ಮಾಡಬೇಕೋ ಎಲ್ಲಾ ಮಾಡಿದ್ದಾರೆ. ಅದಕ್ಕೋಸ್ಕರ ಇದರ ಸಲುವಾಗಿ ಚರ್ಚೆ ಮಾಡುವುದಕ್ಕೆ ಇವೊತ್ತು ಸಂಜೆ ಮಾನ್ಯ ಉಪ ಮುಖ್ಯಮಂತ್ರಿಗಳು ಸಭೆ ಕರೆದಿದ್ದಾರೆ. ವೋಲ್ಟೇಜ್ ಸ್ಟೆಬಿಲೈಸ್ ಆಗುವುದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ನಾಳೆಯಿಂದಲೇ ಮಾಡುತ್ತೀರೆಂದು ನಾನು ನಂಬಿದ್ದೇನೆ.

ಶ್ರೀ ಕೆ.ಎಸ್ ಈಶ್ವರಪ್ಪ:– ಸ್ಪೆಸಿಫಿಕ್ಕಾಗಿ ಇಷ್ಟು ಗಂಟೆಯಿಂದ ಇಷ್ಟು ಗಂಟೆಯ ತನಕ ಕರೆಂಟ್ ನಿಲ್ಲಿಸುತ್ತೇವೆಂದು ಮತ್ತು ಇಷ್ಟು ಗಂಟೆಯಿಂದ ಇಷ್ಟು ಗಂಟೆಯ ತನಕ ವಿದ್ಯುತ್ ಪೂರೈಸಲಾಗುವುದೆಂದು ಹೇಳಿದರೆ ಸಾಕು. ಕರೆಂಟ್ ಯಾವುತ್ತೋ ಬರುತ್ತದೆ, ಯಾವತ್ತೋ ಹೋಗುತ್ತದೆ. ಆದುದರಿಂದ, ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸುಭಾಷ್ ಶ್ರೀಧರ್ ಜೋಷಿ (ನಿಪ್ಪಾಣಿ):– ನಮ್ಮ ಜಿಲ್ಲೆಯಲ್ಲಿ ಅದರಲ್ಲೂ-ಚಿಕ್ಕೋಡಿ ತಾಲ್ಲೂಕಿನಲ್ಲಿ ರೈತರು ನೀರು ಉಳಿಸಬೇಕಾದರೆ ಬಹಳ ಕಷ್ಟದಲ್ಲಿದ್ದಾರೆ. ಏಕೆಂದರೆ, ಹಗಲೆಲ್ಲಾ ವಿದ್ಯುತ್ ಹೋಗುತ್ತಿದ್ದು, ರಾತ್ರಿ ಹೊತ್ತು ಪೂರೈಕೆಯಾಗುತ್ತಿರುವುದರಿಂದ, ಅವರು ತಮ್ಮ ಬೆಳೆಗಳಿಗೆ ನೀರು ಹಾಯಿಸಲು ರಾತ್ರಿ ಹೋಗಬೇಕಾಗುತ್ತದೆ. ಆ ಸಮಯದಲ್ಲಿ ಹಾವು ಕಡಿದರೆ ರೈತ ಬದುಕುವುದು ತುಂಬಾ ಕಷ್ಟವಿದೆ. ಆದುದರಿಂದ, ಹಗಲು ಹೊತ್ತಿನಲ್ಲಿ ವಿದ್ಯುತ್ ಸರಬರಾಜು ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ನಮಗೆ ಸ್ಪಷ್ಟವಾಗಿ ಹೇಳಬೇಕು. ಚಿಕ್ಕೋಡಿ ತಾಲ್ಲೂಕಿಗೆ 220 ಕೆವಿ ಟ್ರಾನ್ಸ್‌ಫಾರ್ಮರ್ ಅನ್ನು ಬೇಗ ಹಾಕಿಸುತ್ತೀರಾ ? ಹೇಗೆ ? ಎಂದು ಈ ಸಂದರ್ಭದಲ್ಲಿ ಕೇಳ ಬಯಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು):– ಮಾನ್ಯ ಅಧ್ಯಕ್ಷರೆ, ಒಂದು ತಾಸು, ಎರಡು ತಾಸು ಅಥವಾ ನಾಲ್ಕು ತಾಸುಗಳು ವಿದ್ಯುತ್ ಕೊಡಿ ಎಂಬುದರ ಬಗ್ಗೆ ನಮಗಂತೂ ಒಪ್ಪಿಗೆ ಇಲ್ಲ. ಪಕ್ಕದ ಮಹಾರಾಷ್ಟ್ರ ರಾಜ್ಯದಲ್ಲಿ ಒಂದು ದಿವಸ ಪೂರ್ತಿ ವಿದ್ಯುತ್ ಕಟ್ ಮಾಡುತ್ತಾರೆ. ಒಂದು ದಿನ ಪೂರ್ತಿ ವಿದ್ಯುತ್ ಕಟ್ ಮಾಡಿದರೆ, ನಮಗೆ ಇವೊತ್ತು ಕೃಷಿ ಕೆಲಸ ಇಲ್ಲವೆಂದು ಹಾಯಾಗಿ ಬೇರೆ ಕೆಲಸವನ್ನಾದರೂ ಮಾಡುತ್ತಾರೆ. ಅದೇ ರೀತಿ ಈ ರಾಜ್ಯದಲ್ಲೂ ಮಾಡುವುದಕ್ಕೆ ಏನು ತೊಂದರೆ ಇದೆ ? ಇದರ ಬಗ್ಗೆ ಸ್ವಲ್ಪ ತಿಳಿದುಕೊಂಡು ಮಾಡಿದರೆ ಒಳ್ಳೆಯದು.

ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ):– ಮಾನ್ಯ ಅಧ್ಯಕ್ಷರೆ, ವಿದ್ಯುತ್ ಇಂದು ಕೋಟ್ಯಾಂತರ ಜನರ ಸಮಸ್ಯೆಯಾಗಿದೆ. ಅದರಲ್ಲೂ ಸಾಲ ಮಾಡಿ ಒಂದಕ್ಕೆರಡರಷ್ಟು, ಎರಡೂವರೆಯಷ್ಟು ಬೆಲೆ ಹೆಚ್ಚಾಗಿರುವ ಗೊಬ್ಬರವನ್ನು ಬೆಳೆಗಳಿಗೆ ಹಾಕಿ ಬೆಳೆಗಳೆಲ್ಲಾ ಹಾಳಾಗುತ್ತಿದ್ದರೆ ರೈತರ ಪರಿಸ್ಥಿತಿ ಏನಾಗಬಹುದು ಎಂಬುದನ್ನು ತಾವು ಯೋಜನೆ ಮಾಡಬೇಕು. ತಾವು ಸಹ ರೈತನ ಮಕ್ಕಳಾಗಿದ್ದೀರಿ. ಬೆಳಿಗ್ಗೆ ಅಥವಾ ಮಧ್ಯಾಹ್ನ ಆರು ಗಂಟೆಗಳ ಕಾಲ ವಿದ್ಯುತ್ ಕೊಡುವುದಿಲ್ಲವೆಂದರೆ ಬೇಡ, ಇನ್ನು ಉಳಿದ ಆರು ಗಂಟೆಗಳ ಕಾಲ ವಿದ್ಯುತ್ ಕೊಡುತ್ತೀರಲ್ಲಾ, ಆ ವೇಳೆಯಲ್ಲಾದರೂ ಸತತವಾಗಿ ವಿದ್ಯುತ್ ಪೂರೈಕೆ ಮಾಡುತ್ತೀರಾ ?

† ಪ್ರೊ. ಎಂ.ಡಿ. ನಂಜುಂಡಸ್ವಾಮಿ:– 6 ತಾಸು, 4 ತಾಸುಗಳ ಕಾಲ ವಿದ್ಯುತ್ ಕೊಟ್ಟರೆ ಪರವಾಗಿಲ್ಲವೆಂದು ಮಾನ್ಯ ಹಿರಿಯ ಸದಸ್ಯರಾದ ಶ್ರೀ ಜಾಲಪ್ಪನವರು ಹೇಳುತ್ತಿದ್ದಾರೆ. ಅವರು ಬಹಳ ಹಿರಿಯ ಸದಸ್ಯರಾಗಿದ್ದು, ನಾನು ಇದರ ಬಗ್ಗೆ ಒಂದು ಮಾತನಾಡಿದರೆ ನನ್ನನ್ನು ಕ್ಷಮಿಸಬೇಕು. ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸುವ ಯಾವ್ಯಾವ ಘಟಕಗಳನ್ನು ಸ್ಥಾಪಿಸಲಾಗಿದೆಯೋ, ಅವುಗಳೆಲ್ಲವೂ ನಮ್ಮ ಹಣದಲ್ಲಿ, ರೈತರ ಹಣದಲ್ಲಿ ಸ್ಥಾಪಿಸಲಾಗಿದೆ.

ಅಲ್ಲಿ ಏನು ವಿದ್ಯುಚ್ಛಕ್ತಿ ತಯಾರಾಗುತ್ತಿದೆ ಅದರಲ್ಲಿ ನಮಗೆ ಸಮಾನವಾದ ಹಿಸ್ಸೆಯನ್ನು ಕೇಳುವವರು ನಾವು, ನಾಲ್ಕು ತಾಸು ಆರು ತಾಸು ಒಂದು ದಿನ ಎಂದು ಕೇಳುವುದಿಲ್ಲ, ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳಿಬಿಡಿ ನಾವು ಹಾಯಾಗಿ ನಿದ್ದೆ ಮಾಡುತ್ತೇವೆ, ಈ ರೀತಿಯಾಗಿ ಮಾತು ಬಂದದ್ದು ಬಹಳ ದುಃಖಕರವಾದ ವಿಚಾರ. ನಾನು ರೈತರ ಪರವಾಗಿ ಮಾತನಾಡುತ್ತಿದ್ದೇನೆ. ಕರ್ನಾಟಕದಲ್ಲಿ ನೂರಕ್ಕೆ ಎಪ್ಪತ್ತಾರು ಜನರು ರೈತರು ಇದ್ದೇವೆ, ಈ ರಾಜ್ಯದಲ್ಲಿ ನಮ್ಮ ಹಣದಲ್ಲಿ ವಿದ್ಯುತ್‌ನಲ್ಲಿ ಶೇಕಡ 76 ಭಾಗ ವಿದ್ಯುತ್ ನಮಗೆ ಹಿಸ್ಸೆಯಾಗಬೇಕು, ಕೇವಲ ಪಂಪುಸೆಟ್‌ಗೆ ಮಾತ್ರವಲ್ಲ, ವಿದ್ಯುತ್ ಇಲ್ಲದೆ ನಮ್ಮ ಮಕ್ಕಳು ಓದಲು ಆಗುತ್ತಿಲ್ಲ, ಕಾನೂನಿನಲ್ಲಿ, ಸೀಮೆ ಎಣ್ಣೆ ದೀಪದಲ್ಲಿ ಓದಬೇಕೆಂದು ಇಲ್ಲ, ಆ ವಿದ್ಯುತ್ ನಮ್ಮ ಹಣದಲ್ಲಿ ತಯಾರಾಗಿರತಕ್ಕದ್ದು.

ಡಾ।। ವೈ. ನಾಗಪ್ಪ:– ಸೀಮೆ ಎಣ್ಣೆಯೂ ಸಹ ಸಿಗುತ್ತಿಲ್ಲ;

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ನಾಗಪ್ಪನವರು ನನಗೆ ಬೆಂಬಲವನ್ನು ಕೊಡುತ್ತಿದ್ದಾರೆ. ಇದರ ಬಗ್ಗೆ ಆಲೋಚನೆ ಮಾಡಿ ನೋಡಿ ? ಸನ್ಮಾನ್ಯ ಅಧ್ಯಕ್ಷರು, ವಿದ್ಯುತ್ ಮಂತ್ರಿಗಳು ಎಲ್ಲರೂ ಕೂಡ ರೈತರ ಮಕ್ಕಳೆ, ನನ್ನ ಹಣದಲ್ಲಿ ತಯಾರಾಗುತ್ತಿದೆ ವಿದ್ಯುತ್.

I have a rightful share in the power that is generated in the Karnataka State and my share according to the per capita distribution is 76%.

ಇದನ್ನು ಮಾಡಿಕೊಡುತ್ತೀರ ? ಇದರ ಬಗ್ಗೆ ದಯಮಾಡಿ ಹೇಳಬೇಕಾಗುತ್ತದೆ, ಇದರಲ್ಲಿ ಚೌಕಾಸಿ ಮಾತು ಬೇಡ ಜಾಲಪ್ಪನವರೇ ?

ಶ್ರೀ ಆರ್.ಎಲ್ ಜಾಲಪ್ಪ:– 24 ಗಂಟೆಗಳ ಕಾಲ ವಿದ್ಯುತ್‌ನ್ನು ಕೊಟ್ಟರೆ ಯಾರು ಬೇಡವೆಂದು ಹೇಳುತ್ತಾರೆ, ಬಹಳ ಸಂತೋಷವಲ್ಲವೆ. ಆದರೆ ಅದು ಸಾಧ್ಯವಾಗುವುದಿಲ್ಲ. ನನ್ನ ಹಕ್ಕಿನಿಂದ 12 ಗಂಟೆಗಳಾದರೂ ಕೂಡ ಕೊಡಿ ಎಂದು ಕೇಳುತ್ತಿದ್ದೇನೆ. ತಮ್ಮ ಪರಿಸ್ಥಿತಿಯ ಬಗ್ಗೆ ಕೂಡ ನಮಗೆ ಅರ್ಥವಾಗುತ್ತದೆ. ಏನು ಸೋರಿಕೆಯಾಗುತ್ತದೆ ಎಂಬ ಬಗ್ಗೆ ನಮಗೆ ಅರ್ಥವಾಗುತ್ತದೆ. ರೈತರಿಗೆ ವಿದ್ಯುತ್‌ನ್ನು ಕೊಡಲು ಆಗುವುದಿಲ್ಲ ಆದರೆ ಡಾಕ್ಟರ್‌ಗಳಿಗೆ, ಸಿನಿಮಾಗಳಿಗೆ ಕೊಡುತ್ತಿದ್ದೀರಿ ? ಮೊನ್ನೆ ತಾನೆ ಗೌರಿಬಿದನೂರಿನಲ್ಲಿ ಒಂದು ಸಿನಿಮಾ ಮಂದಿರವನ್ನು ರೈಡ್ ಮಾಡಿ ಒಂದು ಲಕ್ಷ 20 ಸಾವಿರ ಬ್ಯಾಕ್ ಬಿಲ್‌ನ್ನು ಮಾಡಿದ್ದೀರಿ. ನಮಗೆ ವಿದ್ಯುತ್ ಸಿಗುವುದಿಲ್ಲ ಅವರಿಗೆ ವಿದ್ಯುತ್ ಸಿಗುತ್ತದೆ ಎಂದು ಕೇಳಿದರೆ ಲೋಡ್ ಸರಿಯಾಗಿ ಬರದಿದ್ದರೆ ಕಿತ್ತುಹಾಕ್ತಾರಂತೆ, ಸಂಜೆ 6 ಗಂಟೆಗೆ ವಿದ್ಯುತ್‌ನ್ನು ಕೊಡುತ್ತಾರೆ ಅರ್ಧ ಗಂಟೆಯೊಳಗೆ ತೆಗೆದುಹಾಕುತ್ತಾರೆ, ಸಿಂಗಲ್ ಫ್ಯೂಝು ಮಾಡುತ್ತಾರೆ. 11 ಗಂಟೆಗೆ 12 ಗಂಟೆಗೋ ಅದನ್ನು ಚಾರ್ಜ್ ಮಾಡುತ್ತಾರೆ ಅದು 4–5 ಸಾರಿ ಹೋಗುತ್ತದೆ, ನಾವು ಏನು ಮಾಡಿದ್ದೇವೆಂದರೆ ಈ ಕಷ್ಟ ಹೋದರೂ ಹೋಗಲಿ ಎಂದು ಇನ್ನೂ ಹೆಚ್ಚು ಸಾಲವನ್ನು ಮಾಡಿ ಆಟೋಮೆಟಿಕ್ ಸ್ವಿಚ್ ತಂದು ಹಾಕಿದ್ದೇವೆ. ಮಲಗಿದ್ದಾಗ ಯಾರೂ ಅಷ್ಟೊತ್ತಿನಲ್ಲಿ ಮೋಟಾರ್‌ನ್ನು ಸ್ಟಾರ್ಟ್ ಮಾಡುವುದಿಲ್ಲ, ಇದು ಆಟೋಮೆಟಿಕ್ ಆಗಿ ಸ್ಟಾರ್ಟ್ ಆಗುತ್ತದೆಂದು ಅದನ್ನು ತಂದು ಹಾಕಿದ್ದೆವು, ಅದನ್ನು ಹಾಕಿದಾಗ ಸಿಂಗಲ್ ಫ್ಯೂಝುನಿಂದ ಮೋಟಾರ್ ಸುಟ್ಟು ಹೋಗುತ್ತದೆ, ಒಂದು ಮೋಟಾರ್ ಸುಟ್ಟು ಹೋದರೆ ಕಡೆಯ ಪಕ್ಷ 3 ರಿಂದ 4 ಸಾವಿರ ರೂಪಾಯಿ ಬೇಕಾಗುತ್ತದೆ. ಎತ್ತಿ ಇಳಿಸುವುದಕ್ಕೆ 500 ಬೇಕು. ನಾವು 5 ಹೆಚ್.ಪಿ.ಗೆ ಕೊಟ್ಟರೆ ಅವನು 7 ಹೆಚ್.ಪಿ.ಗೆ ಅಥವಾ 3 ಹೆಚ್.ಪಿ. ಮಾಡುತ್ತಾನೋ ನಮಗೆ ಅದು ಗೊತ್ತಿಲ್ಲ, ಇಂಥ ಚಿಂತಾಜನಕ ಪರಿಸ್ಥಿತಿಯಲ್ಲಿದ್ದೇವೆ. ಸಿನಿಮಾಗಳಿಗೆ, ಕೈಗಾರಿಕೆಗಳಿಗೆ ಕೊಡಬೇಡಿ ಎಂದ ನಾವು ಹೇಳುವುದಿಲ್ಲ, ಆದರೆ ಇದರಲ್ಲಿ ಆಗತಕ್ಕ ಸೋರಿಕೆಯನ್ನು ಕಂಟ್ರೋಲ್ ಮಾಡಿ, ಜೊತೆಗೆ ಅನ್ನ ಬೆಳೆಯುವುದಕ್ಕೆ ಮೊದಲು ವಿದ್ಯುತ್ ಕೊಡುವ ಅವಶ್ಯಕತೆ ಇದೆ, ಈಗಾಗಲೇ ಗೊಬ್ಬರದ ಬೆಲೆ ಜಾಸ್ತಿಯಾಗಿದೆ, ಇದರಿಂದಾಗಿ ತಮ್ಮ ಸರ್ಕಾರದ

ಕರ್ನಾಟಕ ರಾಜ್ಯ ಪತ್ರಾಗಾರ,
ಗ್ರಂಥಾಲಯಂ,

ಅಂಕಿ ಅಂಶಗಳ ಪ್ರಕಾರ ಸುಮಾರು 25 ಪರ್‌ಸೆಂಟ್‌ನಷ್ಟು [illegible] ಉತ್ಪಾದನೆಯಾಗಿದೆ. ವಿದ್ಯುತ್‌ನ್ನು ನಮಗೆ ಕೊಡಿ, ನಾವು ಅದನ್ನು ಎಲ್ಲಿಂದ ತರುವುದು ? ಕುಡಿಯುವ ನೀರು ಇಲ್ಲ, ಮಾನ್ಯ ನಂಜುಂಡಸ್ವಾಮಿಯವರು ಹೇಳಿದಂತೆ ನಮ್ಮ ಮಕ್ಕಳಿಗೆ ಓದುವುದಕ್ಕೆ ದೀಪವಿಲ್ಲದೆ ತೊಂದರೆಯಾಗಿದೆ. ಕೆಲವು ಊರುಗಳಲ್ಲಿ ಊಟಕ್ಕೆ ಏನನ್ನು ಬಡಿಸಿದ್ದಾರೆದು ಗೊತ್ತಾಗುವುದಿಲ್ಲ, ನಾನು ಇದನ್ನು ಅನುಭವಿಸಿ ಹೇಳುತ್ತಿದ್ದೇನೆ. ದಯ ಮಾಡಿ ಇದರ ಬಗ್ಗೆ ಏನಾದರೂ ಮಾಡಿ, ರೈತರು, ಜನರು ತಮ್ಮ ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದಾರೆ, ನಾವುಗಳು ಕದ್ದು ತಿರುಗುತ್ತಿದ್ದೇವೆ. ಅವರು ವಿದ್ಯುತ್ ಕಛೇರಿಗೆ ಹೋಗಬೇಕು, ಗಲಾಟೆ ಮಾಡಬೇಕು ಎಂದರೆ ಅದು ನಮ್ಮ ಪ್ರಾಪರ್ಟಿ, ಅದು ಡ್ಯಾಮೇಜ್ ಆದರೆ ಅನ್ಯಾಯ, ಆ ರೀತಿ ಅನ್ಯಾಯ ಮಾಡಬಾರದು, ಜನರಿಗೆ ನಾವು ಮಂತ್ರಿಗಳ ಜೊತೆ ಮಾತನಾಡಿದ್ದೇವೆ, ಅವರು ಒಂದು ಸಭೆಯನ್ನು ಕರೆಯುತ್ತಾರೆ. ಅದರಲ್ಲಿ ಅದನ್ನು ನಿರ್ಧರಿಸುತ್ತೇವೆ ಎಂದು ಹೇಳುತ್ತಿದ್ದೇವೆ. ಕೆಲವು ಕಡೆ ಟ್ರಾನ್ಸ್‌ಫಾರ್ಮರ್‌ನ್ನು ಹಾಕಿ ಓಲ್ಟೇಜ್‌ನ್ನು ಜಾಸ್ತಿ ಮಾಡುವ ಅವಕಾಶ ಇದೆ, ಅದನ್ನು ಮಾಡಿ. ಈಗ ಏನಾಗಿದೆ ಎಂದರೆ 50 ಕೆ.ವಿ.ಯ ಟ್ರಾನ್ಸ್‌ಪಾರ್ಮರ್‌ನ್ನು ಹಾಕಿದ್ದಾರೆ, ಅದು 50 ಹೆಚ್.ಪಿ.ಗೆ ವಿದ್ಯುತ್‌ನ್ನು ಕೊಡುವುದು, ನಮ್ಮ ಮೋಟಾರ್ ಸುಟ್ಟು ಹೋಗುವುದರಿಂದ ಅದನ್ನು ರೀವೈಂಡ್ ಮಾಡಬೇಕೆಂದು ಬಂದಾಗ ಅದು 70 ಹೆಚ್.ಪಿ.ಗೆ ಆಗಿರುತ್ತದೆ. ಆಗ 70 ಹೆಚ್.ಪಿ.ಗೆ ವಿದ್ಯುತ್‌ನ್ನು ಉಪಯೋಗ ಮಾಡುತ್ತೇವೆ, automatically that will get burnt. ಅದನ್ನ ಪಡೆಯಲು ಆಗುವುದಿಲ್ಲ, ಇದು ಇಲಾಖೆಯವರಿಗೆ ಗೊತ್ತಿದೆ. ಕಳೆದ ವರ್ಷವೂ ಸಹ ಇದರ ಬಗ್ಗೆ ಹೇಳಿದ್ದೇನೆ, ಕಳೆದ ವರ್ಷದ ಮಂತ್ರಿಗಳು, ಮುಖ್ಯಮಂತ್ರಿಗಳು ಟ್ರಾನ್ಸ್‌ಫಾರ್ಮರ್‌ನ್ನು ಸಪ್ಲೈ ಮಾಡುತ್ತೇವೆಂದು ಹೇಳಿದ್ದರು. ದಯ ಮಾಡಿ ಎಲ್ಲೆಲ್ಲಿ ಟ್ರಾನ್ಸ್‌ಫಾರ್ಮರ್‌ಗಳು ಬೇಕು ಎಂಬುದನ್ನು ನೋಡಿ ಒದಗಿಸಿಕೊಡಿ.

ನಮ್ಮಲ್ಲಿ Express Lines ... ... ಎನ್ನತಕ್ಕದನ್ನು ಕೆಲವು ಕಡೆ ಹಾಕಿದರೆ ವಿದ್ಯುತ್ ಪೂರೈಕೆಯಲ್ಲಿ ಸುಧಾರಣೆಯಾಗುತ್ತದೆ ಎಂದು ಹೇಳಿದ್ದಾರೆ. ನಮಗೆ ಅದರ ಬಗ್ಗೆ ಅಷ್ಟೊಂದು ಗೊತ್ತಿಲ್ಲ, ತಾವು ಇಲಾಖೆಯವರನ್ನೇ ಕೇಳಬೇಕು, ಇದರ ಬಗ್ಗೆ ಏನಾದರೂ ಸ್ವಲ್ಪ ಮಾಡದಿದ್ದರೆ ರೈತರು ವಿಕೋಪಕ್ಕೆ ಹೋಗುತ್ತಾರೆ, ಅವರು ತಾಳ್ಮೆ ಕೆಟ್ಟರೆ ಅದನ್ನು ತಡೆಯುವುದಕ್ಕಾಗುವುದಿಲ್ಲ, ನಮಗೂ ಕಷ್ಟವಾಗುತ್ತದೆ ನಿಮಗೂ ಕಷ್ಟವಾಗುತ್ತದೆ. ರಾಜ್ಯದ, ಸರ್ಕಾರದ, ನಮ್ಮೆಲ್ಲರ ಪ್ರಾಪರ್ಟಿಯೂ ಸಹ ನಷ್ಟವಾಗುತ್ತದೆ. ಅವರಿಗೆ ಏನಾದರೂ ಕೋಪ ಬಂದರೆ ಮೊನ್ನೆ ದೇವನಹಳ್ಳಿಯಲ್ಲಿ ಘಟನೆಯಾಯಿತಲ್ಲಾ ಅದೇ ರೀತಿ ಆಗುತ್ತದೆ ಅದು ಆಗಬಾರದು ಎನ್ನತಕ್ಕ ಉದ್ದೇಶದಿಂದ ನಮ್ಮಲ್ಲಿ ವಿನಯದಿಂದ ಕೇಳಿಕೊಳ್ಳುತ್ತೇನೆ ದಯಮಾಡಿ ಬೇಗನೆ ಇದಕ್ಕೆ ಏನಾದರೂ ಸ್ವಲ್ಪ ರಿಲೀಫ್ ಕೊಡಿ.

ನಾನು ಎಲ್ಲಾ ಅರೇಂಜ್‌ಮೆಂಟ್ಸ್ ಇಟ್ಟುಕೊಂಡರೂ ಕೂಡ I feel like I don't have anything. ನಾನು ಮೂರು ದಿವಸಗಳ ಹಿಂದ ಊರಿಗೆ ಹೋಗಿದ್ದೆ. ಅಲ್ಲಿ ರಾತ್ರಿ 11–12 ಗಂಟೆಯಾದರೂ ಪವರ್ ಬರುವುದಿಲ್ಲ. ಸಾಯಂಕಾಲ ಪವರ್ ಸಿಕ್ಕುವುದಿಲ್ಲ ಒಂದು ದಿವಸ ಬೆಳ್ಳಿಗ್ಗೆ 6 ಗಂಟೆಗೆ ಕೊಡುತ್ತಾರೆ, ಒಂದು ದಿವಸ ಸಾಯಂಕಾಲ 6 ಗಂಟೆಗೆ ಪವರ್ ಕೊಡುತ್ತಾರೆ, ಇಂಜಿನಿಯರ್‌ಗಳನ್ನು ಕೇಳಿದರೆ ಫಿನ್ ಕಿತ್ತುಹಾಕಿಬಿಡುತ್ತಾರೆಂದು ಹೇಳುತ್ತಾರೆ. ತಾವು 24 ಗಂಟೆಗಳು ಪವರ್ ಕೊಡುವುದಕ್ಕಾಗುವುದಿಲ್ಲ. ಕೊಟ್ಟರೆ ಬಹಳ ಸಂತೋಷ. 24 ಗಂಟೆಯಲ್ಲ, 32 ಗಂಟೆಗಳು ಕೊಟ್ಟರೂ, 365 ದಿವಸಗಳು ಕೊಟ್ಟರೂ ಬಹಳ ಸಂತೋಷ ನಾವು ಬೇಡ ಎನ್ನುವುದಿಲ್ಲ. ತಾವು ಎಷ್ಟು ಸಾಧ್ಯವೊ ಅಷ್ಟು ವ್ಯವಸ್ಥೆ ಮಾಡಿ ಕಂಟಿನ್ಯೂ ಆಗಿ ಕರೆಂಟ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಾದರಹಳ್ಳಿ ಹಂಪನಗೌಡ:– ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಅಭಾವದ ಬಗ್ಗೆ ಸಮಸ್ಯೆಗಳು ಹೆಚ್ಚಾಗಿವೆ. ರಾಯಚೂರು ಜಿಲ್ಲೆ ಶಿವಪುರದ ಹತ್ತಿರ ಮಿನಿ

ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್ ರೆಡಿಯಾಗಿದೆ. ಇದು ಹೋದ ವರ್ಷ ಮಾರ್ಚ್ ತಿಗಂಳಲ್ಲಿ ರೆಡಿಯಾಗಿದೆ. ಬೋರ್ಡ್‌ನವರನ್ನು ಪರ್‌ಮಿಷನ್ ಕೊಡಿ ಎಂದು ಕೇಳಿದರೆ ಪರ್‌ಮಿಷನ್ ಕೊಡುತ್ತಿಲ್ಲ. ಇದಕ್ಕೆ ಪರ್‌ಮಿಷನ್ ಕೊಟ್ಟರೆ ಇದರಿಂದ 2 ಮೆಗಾವಾಟ್ ಕರೆಂಟ್ ಉತ್ಪಾದನೆಯಾಗುತ್ತದೆ. ಇದರಿಂದ ಗಂಗಾವತಿ ತಾಲ್ಲೂಕಿದಾದರೂ ವಿದ್ಯುತ್ತಿನ ಅಭಾವವನ್ನು ಸರಿಪಡಿಸಿದಂತಾಗುತ್ತದೆ. ದಯಮಾಡಿ ಸರ್ಕಾರ ಇದರ ಬಗ್ಗೆ ಗಮನಹರಿಸಿ ಪರ್‌ಮಿಷನ್ ಕೊಟ್ಟರೆ ಉತ್ಪಾದನೆಗೆ ಅವಕಾಶವಾಗುತ್ತದೆ. ನನ್ನ ಕ್ಷೇತ್ರವಾದ ಸಿಂಧನೂರನಲ್ಲಿ ನೆರೆಹಾವಳಿ ಬಂದು ರೈತರ ಕೊಟ್ಯಾಂತರ ರೂಪಾಯಿಗಳ ಬೆಳೆಗಳ ನಷ್ಟವಾಗಿದೆ. ದಯವಿಟ್ಟು ಅವರಿಗೆ 2-3 ತಾಸುಗಳು ಸಹ ಪವರ್ ಕಟ್ ಮಾಡಬೇಡಿ. ಈ ಬಗ್ಗೆ ಸರ್ಕಾರ ಗಮನಿಸಬೇಕೆಂದು ಕೇಳುತ್ತೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:– ಎಲ್ಲಾ ತಾಲ್ಲೂಕಗಳಲ್ಲೂ 2–3 ಸ್ಟೇಷನ್‌ಗಳಿವೆ.

† ಶ್ರೀ ಎಸ್.ಎಮ್. ಕೃಷ್ಣ (ಉಪ ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ವ್ಯಕ್ತಪಡಿಸಿರತಕ್ಕಂತಹ ಅಭಿಪ್ರಾಯಗಳು ಬಹಳ ಗಂಭೀರವಾದಂತಹ ಸಮಸ್ಯೆಯ ಬಗ್ಗೆ ಇದ್ದು ಅದರ ಬಗ್ಗೆ ನನ್ನ ಗಮನ ಸೆಳೆದಿದ್ದಾರೆ. ವಿದ್ಯುಚ್ಛಕ್ತಿ ಇಲಾಖೆ ಸಮರ್ಪಕವಾದ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳುವ ಧೈರ್ಯ ನನ್ನಲ್ಲಿಲ್ಲ. ಮತ್ತು ಸಮರ್ಪಕವಾಗಿ ಕೆಲಸ ಮಾಡದೆ ಇರುವುದಕ್ಕೆ ಇರತಕ್ಕಂತಹ ಅಡ್ಡಿ ಆತಂಕಗಳನ್ನು ಕೂಡ ಗುರುತಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇದರ ಬಗ್ಗೆ ಸದನದ ಮಾರ್ಗದರ್ಶನವನ್ನು ಪಡೆಯುವುದಕ್ಕೋಸ್ಕರ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ವಿವಿಧ ಪಕ್ಷದ ನಾಯಕರು ಈ ಬಗ್ಗೆ ನಿರ್ವಿಕಾರ ಮುಕ್ತ ಮನಸ್ಸಿನಿಂದ ನಮ್ಮನ್ನು ನಾವೇ ತೊಡಗಿಸಿಕೊಂಡು ನಾಳೆ ಮಧ್ಯಾಹ್ನ 4 ಗಂಟೆಗೆ ಸಭೆ ಸೇರೋಣ. ವಿದ್ಯುಚ್ಛಕ್ತಿ ಇಲಾಖೆಯವರನ್ನು ಕರೆಯುತ್ತೇವೆ. ನಾವು ನೀವು ಎಲ್ಲಾ ಸೇರಿ ಇದನ್ನು ಸರಿಪಡಿಸುವುದಕ್ಕೆ ಮಾನವನಿಂದ ಏನೆಲ್ಲಾ ಸಾಧ್ಯವೋ ಅಷ್ಟು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡೋಣ. ಎರಡನೆಯದಾಗಿ ಕೋಲಾರ ಜಿಲ್ಲೆಯಲ್ಲಿ ಆಗಿಂದಾಗ್ಗೆ ಸಮಸ್ಯೆಗಳು ಬರುತ್ತಿರುವುದರಿಂದ ಕೋಲಾರ ಜಿಲ್ಲೆಯ ಎಲ್ಲಾ ಸದಸ್ಯರನ್ನು ವಿಚಾರ ವಿನಿಮಯಕ್ಕೋಸ್ಕರ ಬರಮಾಡುತ್ತೇನೆ.

ಈ ಸಭೆಯಲ್ಲಿ ಯಾರು ಇದರ ಬಗ್ಗೆ ನನಗೆ ಮಾರ್ಗದರ್ಶನ ಮಾಡುವುದಕ್ಕೆ ಶಕ್ಯ ಇದೆಯೋ ಅವರೆಲ್ಲರೂ ನಾಳೆ ಬಂದು ನಮ್ಮ ಸಭೆಗೆ ಸೇರಿ ನಿಮ್ಮ ನಿಮ್ಮ ಸಲಹೆಗಳನ್ನು, ಆಲೋಚನೆಗಳನ್ನು ಕೊಟ್ಟರೆ ಆ ಸಲಹೆಗಳನ್ನು ನಾನಂತೂ ಅತ್ಯಂತ ಗಂಭೀರವಾಗಿ ಯಾವ ವಿಧವಾದಂಥ ಪೂರ್ವಗ್ರಹ ಪೀಡಿತನಾಗದೆ ಅದರ ಬಗ್ಗೆ ಕಾರ್ಯಾಚರಣೆಗೆ ನಿಮ್ಮ ಸಹಕಾರವನ್ನು ಕೋರುತ್ತೇನೆ. ಕೈಗಾರಿಕೆಗಳ ಮೇಲೆ ವಿದ್ಯುಚ್ಛಕ್ತಿ ನಿಯಂತ್ರಣ ಮಾಡತಕ್ಕಂಥದ್ದು, ಅದೂ ಕೂಡ ನಾಳೆ ನಡೆಯತಕ್ಕ ನಮ್ಮ ಸಭೆಯಲ್ಲಿ ಚರ್ಚಿಸಿ ಬರುವುದಿದೆ.

ಶ್ರೀ ಸಿ. ಬೈರೇಗೌಡ:– ಕಳೆದ ನಮ್ಮ ಆರ್.ಟಿ.ಪಿ.ಸಿ. ಏನು ಹೋಯಿತೋ ಅವತ್ತಿನಿಂದ ಇಲ್ಲಿಯವರೆಗೂ ಅನೇಕ ಹಳ್ಳಿಗಳಲ್ಲಿ ದಿವಸಕ್ಕೆ 2 ಗಂಟೆ ವಿದ್ಯುತ್ ಸಿಕ್ಕಿಲ್ಲ. ಈಗಾಗಲೇ ತಡವಾಗಿದೆ. ತೋಟಗಳಿಗೆ 15 ದಿವಸವಾಗಿದೆ ಕಲ್ಲಂಗಡಿ ಆಗಲೀ ಅಥವಾ ಆಲೂಗಡ್ಡೆ ಆಗಲಿ ಅಥವಾ ಬೇರೆ ತರಕಾರಿಗಳಿಗೆ ಅನೇಕ ಕಡೆ 15 ದಿವಸದಿಂದ ನೀರು ಕಟ್ಟಿಲ್ಲ; ಆದರೆ ಇದು ನಾಳೆವರೆಗೂ ಈಗಾಗಲೇ ತಡವಾಗಿರುವುದರಿಂದ ದಯವಿಟ್ಟು ತಾವು ವಿದ್ಯುತ್ ಕಡಿತವನ್ನು ಇವತ್ತಿನಿಂದಲೇ ಕೈಗಾರಿಕೆಗಳಿಗೆ ಜಾಸ್ತಿ ಮಾಡಿ ರೈತರಿಗೆ ಇದನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ದಯವಿಟ್ಟು ಹೇಳಿ.

ಶ್ರೀ ಎಸ್.ಎಂ. ಕೃಷ್ಣ:– ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ನಿಯಂತ್ರಣ ಹೆಚ್ಚು ಮಾಡುವುದರಿಂದ ರೈತಾಪಿ

ಜನಗಳಿಗೆ ಅನುಕೂಲ ಮಾಡುವುದಕ್ಕೆ ಈಗಿರತಕ್ಕಂಥ ಸಿಸ್ಟಮ್‌ನಲ್ಲಿ ಸಾಧ್ಯವಾದರೆ ಅದಕ್ಕೆ ಕೂಡ ನಾನು ತಯಾರಿದ್ದೇನೆ. ಅದನ್ನು ನಾನು ರೂಲ್ ಔಟ್ ಮಾಡುತ್ತಿಲ್ಲ ಆದರೆ ನಾನು ಬೈರೇಗೌಡರಿಗೆ ಹೇಳತಕ್ಕಂಥದ್ದು "ವ್ರತ ಕೆಟ್ಟರೂ ಸುಖ ಸಿಗಬೇಕಲ್ಲ". ನಮಗೆ ಆದ್ದರಿಂದ ನಮ್ಮ ಸಿಸ್ಟಮ್ ಏನು ಇದೆ, ನಮ್ಮ ಗ್ರಿಡ್ ಏನು ಇದೆ ಯಾವ ಯಾವ ಲೈನ್ ಎಷ್ಟೆಷ್ಟು ಸಾಮರ್ಥ್ಯದ ಪವರ್ ಎನರ್ಜಿಯನ್ನು ತೆಗೆದುಕೊಂಡು ಹೋಗಬಲ್ಲದು ಬಾಗೆಪಲ್ಲಿಗೆ ಶಿಡ್ಲಘಟ್ಟಕ್ಕೆ, ಚಿಂತಾಮಣಿಗೆ, ಚಿಕ್ಕಾಬಳ್ಳಾಪುರಕ್ಕೆ, ಗೌರಿಬಿದನೂರಿಗೆ ಬೆಳಗಾವಿಗೆ ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಸಾಯಂಕಾಲ ಹೇಗಿದ್ದರೂ ತಾವು ಬರುತ್ತೀರಿ ಇದನ್ನು ಕೂಡ ಪ್ರಧಾನವಾಗಿ ಅಲ್ಲಿ ಚರ್ಚೆ ಮಾಡೋಣ. ಶಿವಪುರ ವಿಚಾರ ಹೇಳಿದಿರಿ. ಈಗಾಗಲೇ ಒಂದು ಘಟಕ ಅಲ್ಲಿ ಕಾರ್ಯಾಚರಣೆ ಮಾಡುತ್ತಾ ಇದೆ. ಅದು ನಮ್ಮ ಕೆ.ಇ.ಬಿ. ಗೆ ಅಲ್ಲಿ ಜನರೇಟ್ ಆಗತಕ್ಕಂಥ ಪವರ್‌ನ್ನು ಸಿಂಕ್ರನೈಜ್ ಮಾಡಿದ್ದಾರೆ. ಇನ್ನು ಒಂದು ಘಟಕದ ಬಗ್ಗೆ ನೀರಾವರಿ ಇಲಾಖೆಯಿಂದ ಕೆಲವು ಆಕ್ಷೇಪಣೆಗಳು ಬಂದಿತ್ತು. ಅದರ ಬಗ್ಗೆಯೂ ಕೂಡ ನಾಳೆ ಒಂದು ತೀರ್ಮಾನ ತೆಗೆದುಕೊಳ್ಳೋಣ ಮತ್ತು ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿ ಬಹಳ ಹಳಿ ತಪ್ಪುತ್ತಿದೆ ಎನ್ನತಕ್ಕಂತದ್ದನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಒಳಗೂ ಹೇಳಿದ್ದಾರೆ. ಹೊರಗಡೆಗೂ ನನಗೆ ಹೇಳಿದ್ದಾರೆ ಅದನ್ನು ಕೂಡ ನಾಳೆ ನಾವು ನೀವು ಸೇರಿ ಸರಿಪಡಿಸುವ ಪ್ರಯತ್ನ ಮಾಡೋಣ.

ಶ್ರೀ ಆರ್.ಎಲ್. ಜಾಲಪ್ಪ:– ಯಲಹಂಕದ ಡೀಸೆಲ್ ಜನರೇಟರ್ ಗತಿ ಏನು ಆಯಿತು.

ಶ್ರೀ ಎಸ್.ಎಂ. ಕೃಷ್ಣ:– ಈ ಮಾರ್ಚ್ ತಿಂಗಳಲ್ಲಿ ಕಾರ್ಯಗತ ಮಾಡುವುದಕ್ಕೆ ಏರ್ಪಾಡುಗಳನ್ನು ಮಾಡುತ್ತೇವೆ.

ಅಧ್ಯಕ್ಷರು:– ಈಗ ಸಭೆಯು ಇಲ್ಲಿಗೆ ಮುಕ್ತಾಯವಾಗಿ ಮತ್ತೆ 4 ಗಂಟೆಗೆ ಸೇರುತ್ತದೆ.

(ಸದನವು ಮಧ್ಯಾಹ್ನ 2.04 ಗಂಟೆಗೆ ಮುಕ್ತಾಯವಾಗಿ ಮತ್ತೆ 4 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

(ಶ್ರೀ ವಿ.ಎಸ್. ಕೌಜಲಗಿಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ನಿಯಮ 334ರ ಮೇರೆಗೆ

ಶ್ರೀ ಶಿವಾನಂದ ಎಚ್. ಕೌಜಲಗಿ:– ಅಧ್ಯಕ್ಷರೆ ಮಾನ್ಯ ಗುರುಪಾದಪ್ಪ ನಾಗ್ಮಾರಪಳ್ಳಿಯವರು ಅವರ ವಿಚಾರವನ್ನು ಪ್ರಸ್ತಾಪಿಸಲು ನನಗೆ ಆಥರೈಸ್ ಮಾಡಿದ್ದಾರೆ.

MR. SPEAKER:– It cannot be authorised.

1. ಹಾಸನ ಬಸ್ ನಿಲ್ದಾಣಕ್ಕೆ ನುಗ್ಗುತ್ತಿದ್ದ ನೀರನ್ನು ತಡೆಯಲು ಕೈಗೊಂಡ ಕಾಮಗಾರಿಯಲ್ಲಿ ವಿಳಂಬ

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):– ಸನ್ಮಾನ್ಯ ಅಧ್ಯಕ್ಷರೇ, ಹಾಸನ ಪುರಸಭೆಯವರು ಹಾಸನದ ಸಿಟಿಯ ಬಸ್‌ಸ್ಟ್ಯಾಂಡಿಗೆ ನುಗ್ಗುತ್ತಿದ್ದ ಮಳೆಯ ನೀರನ್ನು ಬಸ್‌ಸ್ಟ್ಯಾಂಡಿನ ಪೂರ್ವಭಾಗದಿಂದ ಚರಂಡಿಯ ಮುಖಾಂತರ ಹಾದು ಹೋಗುವಂತ ಅನುಕೂಲ ಕಲ್ಪಿಸಲು ಒಂದು ವರ್ಷದ ಹಿಂದೆ ಸುಮಾರು 27 ಲಕ್ಷ ರೂ.ಗಳ ಅಂದಾಜಿನಲ್ಲಿ ಚರಂಡಿಯ ಕೆಲಸವನ್ನು ಪ್ರಾರಂಭಿಸಿ ಈ ಕೆಲಸವನ್ನು ಪೂರೈಸದೆ ಇರುವುದರಿಂದ ಈ ರಸ್ತೆಯಲ್ಲಿ ತಿರುಗಾಡುವ ಜನರಿಗೆ ತೊಂದರೆಯಾಗಿರುತ್ತದೆ. ಹಾಗೂ ಈ ಕೆಲಸಕ್ಕೆ ಕೆ.ಎಸ್.ಆರ್.ಟಿ.ಸಿ. ತಮ್ಮ ವಂತಿಗೆ ಹಣವನ್ನು ಪೂರ್ಣ ಬಿಡುಗಡೆ ಮಾಡಿರುತ್ತದೆ. ಈ

ಕೆಲಸದ ಕಾಮಗಾರಿಯನ್ನು ಹಾಸನ ಪುರಸಭೆಯವರು ವಿನಾಕಾರಣ ಮುಂದೂಡುತ್ತಾ ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಈ ಬಗ್ಗೆ ಮಾನ್ಯ ಸಚಿವರು ಸಂಬಂಧಿಸಿದ ಅಧಿಕಾರಿ ವರ್ಗದವರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶ ನೀಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಚೌಡರೆಡ್ಡಿ(ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೆ, ಹಾಸನ ಸಿಟಿಯ ಬಸ್ ಸ್ಟ್ಯಾಂಡಿಗೆ ನುಗ್ಗುತ್ತಿದ್ದ ಮಳೆಯ ನೀರನ್ನು ತಡೆಯುವ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನಿಸಿದ್ದಾರೆ. ಸದರಿ ಬಸ್ ಸ್ಟ್ಯಾಂಡಿನಲ್ಲಿ ನುಗ್ಗುತ್ತಿದ್ದ ನೀರನ್ನು ತಡೆಯುವ ಕ್ರಮವಾಗಿ ಹಾಸನ ನಗರಸಭೆಯು ಆರ್.ಸಿ.ಸಿ. ಚರಂಡಿ ನಿರ್ಮಾಣ ಕೆಲಸ ಕೈಗೆತ್ತಿಕೊಂಡಿದ್ದು, ಆ ಹಂತದಲ್ಲಿ ನಗರಸಭೆಯು ಕೆಲವೊಂದು ನಿಯಮಗಳನ್ನು ಉಲ್ಲಂಘನೆ ಮಾಡಿರುವುದಾಗಿ ಆರೋಪ ಬಂದಿದ್ದು, ಮತ್ತು ಇತರೆ ಆರೋಪಗಳ ಬಗ್ಗೆ 1964ರ ಕರ್ನಾಟಕ ಪುರಸಭೆಗಳ ಕಾಯ್ದೆಯ ಕಲಂ 316ರ ಪ್ರಕಾರ ಹಾಸನ ನಗರಸಭೆಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಕಾರಣ ಕೇಳಿ ಅಂದರೆ ಹಾಸನ ನಗರಸಭೆಯನ್ನು ಏಕೆ ರದ್ದುಪಡಿಸಬಾರದೆಂಬುದರ ಬಗ್ಗೆ ನೋಟೀಸನ್ನು ದಿನಾಂಕ : 12.2.1993 ಮತ್ತು 15.2.1993ರಂದು ಪೌರಾಯುಕ್ತರ ಮುಖಾಂತರ ನೀಡಲಾಗಿದೆ. ಸದರಿ ನೋಟೀಸಿಗೆ ಉತ್ತರ ಬಂದ ನಂತರ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು.

ಹಾಸನ ಸಿಟಿಯ ಬಸ್‌ಸ್ಟ್ಯಾಂಡಿಗೆ ಈಗಲೂ ನೀರು ನುಗ್ಗುತ್ತಿರುವುದು ಮುಂದುವರಿದಲ್ಲಿ ಇದಕ್ಕೆ ಬೇಕಾದ ಕಾಮಗಾರಿಗಳನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಹಾಸನ ನಗರಸಭೆಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಶ್ರೀ ಕೆ.ಹೆಚ್. ಹನುಮೇಗೌಡ:– ಸ್ವಾಮಿ ಜನರು ಚರಂಡಿಯೊಳಗೆ ಬೀಳುತ್ತಿದ್ದಾರೆ. ಹುಡುಗರು, ಮಕ್ಕಳು ಬೀಳುತ್ತಿದ್ದಾರೆಂದು ನಾನು ಹೇಳಿದರೆ ನೀವು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ಹೇಳಿ ನಾನು 334 ಅಡಿಯಲ್ಲಿ ಪ್ರಶ್ನೆ ಕೇಳಿದ್ದು ಅವರು ಹೇಳಿದ್ದನ್ನು ಕೇಳಿ ಸುಮ್ಮನೆ ಕುಳಿತುಕೊಳ್ಳಲು ಅಲ್ಲ.

(2) ಕೌಂಡಿನ್ಯ ನದಿಗೆ ಅಡ್ಡಲಾಗಿ ಕಟ್ಟುವ ಸೇತುವೆ.

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಮುಳಬಾಗಲು ತಾಲ್ಲೂಕಿನಲ್ಲಿ ಕೌಂಡಿನ್ಯ ನದಿಗೆ ಅಡ್ಡಲಾಗಿ ಒಂದು ಸೇತುವೆಯನ್ನು ಕಟ್ಟಲು ಸುಮಾರು ಮೂರು ವರ್ಷಗಳಿಂದ ಒತ್ತಾಯಿಸುತ್ತಿದ್ದೇನೆ. ಇದಕ್ಕೆ ಸುಮಾರು 6 ಲಕ್ಷ ರೂ.ಗಳನ್ನು ಕೋಲಾರ ಜಿಲ್ಲಾ ಪರಿಷತ್ತಿನವರು ಅಂದಾಜು ಮಾಡಿ 92–93 ನೇ ಬಜೆಟ್‌ನಲ್ಲಿ ನಮೂದಿಸಲಾಗಿತ್ತು. ಇದನ್ನು 93ನೇ ಮಾರ್ಚ್‌ಯೊಳಗೆ ಪ್ರಾರಂಭ ಮಾಡಬೇಕಾಗಿತ್ತು. ಆದರೆ ಈಗ ಇದನ್ನು ಪ್ರಾರಂಭ ಮಾಡುವ ಯಾವ ಸೂಚನೆಯೂ ಕಾಣುತ್ತಿಲ್ಲ. ಈಗ ಪ್ರಾರಂಭ ಮಾಡದಿದ್ದ ಪಕ್ಷದಲ್ಲಿ ಪುನಃ ಮಳೆಗಾಲ ಪ್ರಾರಂಭವಾಗಿ ಮತ್ತೊಂದು ವರ್ಷ ನಿಧಾನವಾಗುವ ಪರಿಸ್ಥಿತಿ ಇದೆ. ಇದಕ್ಕೆ ಕಾರಣಗಳೇನು ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ನಿಧಾನ ಪ್ರವೃತ್ತಿಯಿಂದ ಜನತೆ ಕಂಗಾಲಾಗಿದ್ದಾರೆ ದಿನವೂ ಸಾವಿರಾರು ಜನರಿಗೆ ತೊಂದರೆಯಾಗುತ್ತಿದೆ. ಮಾರ್ಚ್, 93 ರೊಳಗೆ ಪ್ರಾರಂಭ ಮಾಡಲು ಕೂಡಲೇ ಕಾರ್ಯಕ್ರಮ ಕೈಗೊಳ್ಳುವುದು ಮತ್ತು ಇದು ನಿಧಾನವಾಗುವುದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಾಸ್ತಾಪಿಸಿದ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಉತ್ತರವನ್ನು ಒದಗಿಸಿಕೊಡುತ್ತೇನೆ.

(3) ಆಶ್ರಯ ಯೋಜನೆಯಲ್ಲಿ ಸರ್ವೆ ನಂ. 24 ನಿಂಬೇಮಠದ ಹಳ್ಳಿಯ 4 ಎಕರೆ ಜಮೀನಿನಲ್ಲಿ ಸೈಟುಗಳನ್ನಾಗಿ ಮಾಡುವುದು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೇ, ಶಿರಾತಾಲ್ಲೂಕಿನ ವಡ್ಡನ ಹಳ್ಳಿ, ನಿಂಬೇ ಮಠದ ಹಳ್ಳಿ ಮತ್ತು ಅಕ್ಕಪಕ್ಕದ ಗ್ರಾಮದಲ್ಲಿರುವ ನಿವೇಶನರಹಿತ ರೈತರು ಅದೇ ಗ್ರಾಮದ ಮಧ್ಯದಲ್ಲಿ ಬರುವ ಸರ್ವೆ ನಂಬರ್. 24 ನಿಂಬೇ ಮಠದಹಳ್ಳಿ 4 ಎಕರೆ ಸರ್ಕಾರಿ ಜಮೀನಿನಲ್ಲಿ ಸೈಟುಗಳನ್ನಾಗಿ ವಿಂಗಡಿಸಲು ಆಶ್ರಯ ಸಮಿತಿ ತೀರ್ಮಾನಿಸಿದ್ದು, ಇದುವರೆವಿಗೂ ಸೈಟುಗಳನ್ನು ವಿಂಗಡಿಸಲು ಸಾಧ್ಯವಾಗಿಲ್ಲ. ಸ್ಥಳೀಯ ಮುಖಂಡರು ಸೈಟುಗಳನ್ನು ವಿಂಗಡಿಸಲು ತೊಂದರೆ ಉಂಟು ಮಾಡಿದ್ದು, ನಿವೇಶನರಹಿತರಿಗೆ ತೊಂದರೆಯಾಗಿ ಎಷ್ಟೋ ಜನರು ಖಾಸಗಿಯವರ ಜಮೀನಿನಲ್ಲಿ ವಾಸವಾಗಿದ್ದವರನ್ನು ಹೊರದೂಡಲಾಗಿದೆ. ಆದುದರಿಂದ, ಸನ್ಮಾನ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳು ಈ ಕೂಡಲೇ ಸ್ಥಳಕ್ಕೆ ಕಳುಹಿಸಿ ಈ ಸ್ಥಳದಲ್ಲಿ ಸೈಟುಗಳನ್ನು ವಿಂಗಡಿಸಿ ಸಮಿತಿಯವರು ಹಂಚಲು ಅವಕಾಶ ಮಾಡುವಿರೆಂದು ನಿಮ್ಮಲ್ಲಿ ಅರಿಕೆ ಮಾಡಲಿಚ್ಛಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರವನ್ನು ಗಮನಿಸಿದೆ. ಉತ್ತರವನ್ನು ನಂತರ ಒದಗಿಸಿಕೊಡುತ್ತೇನೆ.

(4) 5 ಹೆಚ್.ಪಿ. ಹಾಗೂ 10 ಹೆಚ್.ಪಿ. ಎಲೆಕ್ಟ್ರಿಕಲ್ ಪಂಪ್‌ಸೆಟ್ಟಿಗೆ ಸರ್ಕಾರದಿಂದ ವಾರ್ಷಿಕ ಬಾಡಿಗೆ ವಿನಾಯಿತಿ.

ಶ್ರೀ ಎಂ.ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೇ, 5 ಹೆಚ್.ಪಿ. ಹಾಗೂ 10 ಹೆಚ್.ಪಿ. ಇಲೆಕ್ಟ್ರಿಕ್ ಪಂಪು ಸೆಟ್ಟಿಗೆ ಸರ್ಕಾರದಿಂದ ವಾರ್ಷಿಕ ಬಾಡಿಗೆ ವಿನಾಯಿತಿ ಮಾಡಿದ್ದು ಈಗ ಪ್ರತಿ ಯೂನಿಟ್‌ಗೆ 40 ಪೈಸೆಯಂತೆ ಆಕಾರ ಮಾಡುವುದನ್ನು ಸರ್ಕಾರ ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ. 5 ಹೆಚ್.ಪಿ. ಹಾಗೂ 10 ಹೆಚ್‌ಪಿಗಳಿಗೆ ವಿದ್ಯುತ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಡಿಪಾಸಿಟ್ ಹಣ ಎಷ್ಟು ಇರಬೇಕು ಮತ್ತು ಪ್ರತಿಯೊಂದು ಪೋಲುಗಳಿಗೆ ಎಷ್ಟು ಹಣ ಹೆಚ್ಚಿಗೆ ತುಂಬಬೇಕಾಗುತ್ತದೆ ? 5 ಹೆಚ್.ಪಿ. ಮತ್ತು 10 ಹೆಚ್.ಪಿ. ಮೋಟರ್ ಕನೆಕ್ಷನ್ ತೆಗೆದುಕೊಳ್ಳಬೇಕಾದರೆ ಹುಕ್ಕೇರಿ ತಾಲ್ಲೂಕು ರೂರಲ್ ಇಲೆಕ್ಟ್ರಿಕ್ ಸೊಸೈಟಿಯವರು ಎಷ್ಟು ಹಣ ಡಿಪಾಸಿಟ್ ಎಂದು ತೆಗೆದುಕೊಳ್ಳುತ್ತಾರೆ ? ಷೇರು ಹಣ ಎಷ್ಟು ಕೊಡಲು ಹಣಕಾಸಿನ ವ್ಯತ್ಯಾಸ ಎಷ್ಟು ಈ ವಿಷಯವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ವಿದ್ಯುತ್ ಮಂತ್ರಿಗಳಿಂದ ಸದನದಲ್ಲಿ ದಿನಾಂಕ: 23–2–93 ರಂದು ಉತ್ತರವನ್ನು ಬಯಸಿದ್ದೇನು.

ಶ್ರೀ ಕೆ.ಎ. ನಿಸಾರ್ ಅಹಮದ್:– ಮಾನ್ಯ ಸದಸ್ಯರಿಗೆ ಉತ್ತರವನ್ನು ನಾಳೆಯ ದಿನ ಒದಗಿಸಿಕೊಡುತ್ತೇನೆ.

ರಾಜ್ಯಪಾಲರು ಸಲ್ಲಿಸತಕ್ಕ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಮುಂದುವರಿದ ಚರ್ಚೆ.

ಅಧ್ಯಕ್ಷರು:– ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲಿನ ಚರ್ಚೆ. ಶ್ರೀ ಯಡಿಯೂರಪ್ಪನವರು.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಸನ್ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾವುಗಳು ರಾಜ್ಯಪಾಲರು ದಯಪಾಲಿಸಿದ ಭಾಷಣದ ಮೇಲೆ ಅಭಿನಂದನೆಯನ್ನು ಸಲ್ಲಿಸಿ

ಮಾತನಾಡಬೇಕಾಗಿದೆ. ಆದರೆ ಅನಿವಾರ್ಯವಾಗಿ ಈ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರವು ನಾಡಿನ ಜನರ ಅಭಿವೃದ್ಧಿಯ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ರೂಪಿಸುವ ಬಗ್ಗೆ ಕಳಕಳಿ ಇಲ್ಲದೆ ಇರುವ ಕಾರಣದಿಂದಾಗಿ ನಾವು ಇದನ್ನು ಅನಿವಾರ್ಯವಾಗಿ ವಿರೋಧ ಮಾಡಬೇಕಾಗಿದೆ.

ನಾನು ಪ್ರಾರಂಭದಲ್ಲಿ ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ, ಕಳೆದ ಮೂರು ವರ್ಷಗಳಲ್ಲಿ ಇದು 4ನೇ ರಾಜ್ಯಪಾಲರ ಭಾಷಣವಾಗಿದೆ. ತಾವುಗಳು ಮಾನ್ಯ ರಾಜ್ಯಪಾಲರಿಂದ ಏನೆಲ್ಲಾ ಹೇಳಿಸಿದ್ದೀರಿ. ಅದಕ್ಕನುಗುಣವಾಗಿ ಏನು ಸುಧಾರಣೆಗಳನ್ನು ಮಾಡಿದ್ದೀರಿ ಎಂಬ ಬಗ್ಗೆ ತಾವುಗಳು ಅದರ ವಿವರಗಳನ್ನು ನಾಡಿನ ಜನರಿಗೆ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಕಳೆದ ಎರಡು ವರ್ಷಗಳಿಂದ ಬಣ್ಣಬಣ್ಣದ ಮಾತುಗಳನ್ನು ಆಡಿ, ಬಣ್ಣ ಬಣ್ಣದ ಸಾಹಿತ್ಯ ಪ್ರಕಟಣೆಗಳನ್ನು ಪ್ರಕಟಿಸಿ, ಜನರನ್ನು ಮರುಳುಗೊಳಿಸುವಂಥ ಪ್ರಯತ್ನವನ್ನು ನಿಮ್ಮ ಸರಕಾರ ಮಾಡಿತು. ಇವೊತ್ತಿನ ದಿವಸ ರಾಜ್ಯಪಾಲರ ಭಾಷಣವನ್ನು ಎರಡು ವಿಧದಲ್ಲಿ ಇದೊಂದು ನಿರುಪಯುಕ್ತ ಸಂವಿಧಾನಿಕ ಕಸರತ್ತನ್ನು ಮಾಡುವ ಪ್ರಯತ್ನವನ್ನು ಸರಕಾರದವರು ಮಾಡಿದ್ದಾರೆಂದು ಹೇಳಬೇಕಾಗುತ್ತದೆ.

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದ ಆಡಳಿತದಲ್ಲಿ ಒಂದು ಅಸಂಬದ್ಧ ಪ್ರಲಾಪ ಮಾಡುವ ಪ್ರಯತ್ನ ಮಾಡಿದ್ದೀರಿ. ಅದು ಬಿಟ್ಟು ಬೇರೇನೂ ನಾವು ರಾಜ್ಯಪಾಲರ ಭಾಷಣದಲ್ಲಿ ಕಾಣುವುದಿಲ್ಲ. ಈ ಬಾಷಣವನ್ನು ನೋಡಿದಾಗ ಮುಂಬರುವ ಒಂದು ವರ್ಷ, ರಾಜ್ಯದ ಜನತೆಯನ್ನು ತನ್ನ ಶಬ್ದಜಾಲಗಳ ಮೂಲಕ ಬಂಧಿಸುವ ರೀತಿಯಲ್ಲಿ ರಾಜ್ಯಪಾಲರಿಂದ ಭಾಷಣ ಮಾಡಿಸುವ ಪ್ರಯತ್ನ ಮಾಡಿದ್ದೀರಿ. ರಾಜ್ಯಪಾಲರ ಭಾಷಣದಲ್ಲಿ ವಿಶೇಷವಾದದ್ದೇನಾದರೂ ಇರಬಹುದೇನೋ ಎಂದು ನಾನು ನೋಡಿದೆ, ರಾಮಸ್ವಾಮಿಗಳವರಿಗೆ ಗೊತ್ತಿರಬಹುದು ಮನೆಯಲ್ಲಿ ಹಿರಿಯರ ಶ್ರಾದ್ಧ ಮಾಡುತ್ತೇವೆ. ಅದು ಒಂದು ಪದ್ಧತಿ. ಆ ರೀತಿ ರಾಜ್ಯಪಾಲರಿಂದ ಭಾಷಣ ಮಾಡಿಸುವ ಪ್ರಯತ್ನ ಮಾಡಿದ್ದೀರಿ ಎಂದು ಅನಿವಾರ್ಯವಾಗಿ ನಾನು ಹೇಳಬೇಕಾಗಿದೆ. ನಿಮಗೆ ಯಾವುದೇ ಒಂದು ಪೊಲಿಟಿಕಲ್ ವಿಲ್ ಇದ್ದಂತೆ ಕಾಣುವುದಿಲ್ಲ. ಅದಿದ್ದರೆ ಬಹುಶಃ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಧೋರಣೆ, ಮುಂದಿನ ಕಾರ್ಯಕ್ರಮ, ಹಿಂದಿನ ವರ್ಷಗಳ ಸಾಧನೆಯ ಕ್ರೋಢೀಕರಣದ ಚಿತ್ರಣ ಅವರಲ್ಲಿರಬೇಕಾಗಿತ್ತು. ನಿಮ್ಮ ನಡವಳಿಕೆ ಹೇಗಿದೆ ಎಂದರೆ ಯಾರೋ ಹೊಸದಾಗಿ ಮದುವೆ ಮಾಡಿಕೊಂಡಂಥ ಒಬ್ಬ ಯುವಕ ತನ್ನ ಹೆಂಡ್ತಿ ಕಿವಿಯಲ್ಲಿ ಹೇಳಿದನಂತೆ, ನಿನ್ನ ತುಂಬ ಚೆನ್ನಾಗಿ ನೋಡಿಕೊಳ್ತೀನಿ, ಆದರೆ, ತಿನ್ನುವುದಕ್ಕೆ ಏನು ಕೇಳಬೇಡ, ಉಡುವುದಕ್ಕೆ ಬಟ್ಟೆಬರೆ ಕೇಳಬೇಡ ಎಂದು. ಏಕೇ ನಾನು ಈ ಮಾತು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆಂಗರೆ ತಮಗೆ ಜ್ಞಾಪಕ ಇರಬಹುದು, ನಿಮ್ಮ ವಿಧಾನಸಭಾ ಚುನಾವಣೆ ಮೂರು ವರ್ಷಗಳ ಹಿಂದೆ ನಡೆದಾಗ ಸನ್ಮಾನ್ಯ ವೀರೇಂದ್ರ ಪಾಟೀಲರು ಈ ನಾಡಿನ ಜನರಿಗೆ ಒಂದು ಭರವಸೆ ಕೊಟ್ಟಿದ್ದರು. ಹಿಂದೆ ಮಾಡಿದ ತಪ್ಪನ್ನು ನಾನು ಮತ್ತೆ ಮಾಡುವುದಿಲ್ಲ ನಾವು ಮಾಡಿದ ತಪ್ಪಿಗೆ ಎರಡು ಬಾರಿ ಶಿಕ್ಷೆ ಕೊಟ್ಟು ವಿರೋಧಪಕ್ಷನಾಗಿ ಕುಳಿತುಕೊಳ್ಳುವ ಕೆಲಸ ಮಾಡಿದಿರಿ, ಆ ತಪ್ಪು ಮಾಡದೆ ನ್ಯಾಯಯುತವಾಗಿ ಕೆಲಸ ಮಾಡುತ್ತೇವೆ ಅಭಿವೃದ್ಧಿ ಕೆಲಸಗಳ ಗಮನ ಕೊಡುತ್ತೇವೆ ಎಂದು ಹೇಳಿದ್ದರು. ನಾನು ಅಂಕಿಅಂಶಕ್ಕೆ ಬರುತ್ತೇನೆ. ಆತ್ಮಸಾಕ್ಷಿ ನಿಮಗೇನಾದರೂ ಇದ್ದಿದ್ದರೆ ನಿಮ್ಮ ಆತ್ಮಸಾಕ್ಷಿಗೆ ಪ್ರಶ್ನೆ ಹಾಕಿಕೊಳ್ಳಿ. ಈ ನಾಡಿನ ಜನರಿಗೆ ಏನು ಭರವಸೆ ಕೊಟ್ಟು ಅಧಿಕಾರಕ್ಕೆ ಬಂದಿರಿ, ಅದನ್ನು ಕಾರ್ಯರೂಪಕ್ಕೆ ತರುವಂತಹ ಯಾವುದಾದರೂ ಒಂದು ಪ್ರಾಮಾಣಿಕ ಪ್ರಯತ್ನ ಕಳೆದ ಮೂರು ವರ್ಷಗಳಲ್ಲಿ ತಾವು ಮಾಡಲಿಕ್ಕೆ ಸಾಧ್ಯವಾಯಿತೇನು ? ಅಜೀರ್ಣವಾಗುವಷ್ಟು ಬಹುಮತ ನಿಮಗೆ ಇದ್ದರೂ ಸಹ ಪರಸ್ಪರ ಸ್ಥಾನಮಾನಕ್ಕಾಗಿ ಕಚ್ಚಾಟ ಬಡಿದಾಟ ರಾಜಕೀಯ ಅಸ್ಥಿರತೆ ವ್ಯಾಪಕ ಭ್ರಷ್ಟಾಚಾರ ಆರ್ಥಿಕ ದಿವಾಳಿತನದಲ್ಲಿ ತೊಡಗಿದರೇ ಹೊರತು ಅಭಿವೃದ್ಧಿ ಕಾರ್ಯದ ಕಡೆ ಜನರ ಕಲ್ಯಾಣದ ಕಡೆ ಯಾವುದೇ ವಿಶೇಷ ಪ್ರಯತ್ನವನ್ನು ತಾವು ಮಾಡಲಿಲ್ಲ.

ಸನ್ಮಾನ್ಯ ವೀರಪ್ಪ ಮೊಯಿಲಿಯವರು ಈ ರಾಜ್ಯದ ಮುಖ್ಯಮಂತ್ರಿಗಳಾದ ಮೇಲೆ ಆಡಳಿತದಲ್ಲಿ ಮೇಜರ್ ಸರ್ಜರಿ ಮಾಡುತ್ತೇನೆಂದು ಬಂಗಾರಪ್ಪನವರ ಜೊತೆ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರು ಹೇಳಿದಂಥ ಮಾತು. ಆದರೆ ಇವೊತ್ತು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸುವ ಅವಕಾಶ ಸಿಕ್ಕಿದಾಗ ಮೇಜರ್ ಸರ್ಜರಿ ಏನು ಮಾಡಿದಿರಿ ? ಹಿಂದೆ ಆದ ಅವ್ಯವಹಾರಗಳ ಬಗ್ಗೆ ಭ್ರಷ್ಟಾಚಾರದ ಹಗರಣಗಳ ಬಗ್ಗೆ, ಸರ್ಕಾರೀ ಬೊಕ್ಕಸ ಲೂಟಿ ಮಾಡಿದ ಹಗಲುದರೋಡೆ ಬಗ್ಗೆ, ಏನಾದರೂ ನಿರ್ದಿಷ್ಟ ಕಾರ್ಯಕ್ರಮ ತೆಗೆದುಕೊಂಡು ಈ ರೀತಿಯ ಅಪರಾಧಗಳು ತಪ್ಪು, ಮತ್ತು ಇವು ಆಗದಂತೆ ಮಾಡುವ ಯಾವುದರೂ ದಿಟ್ಟ ಕಾರ್ಯಕ್ರಮ ಕೈಕೊಂಡಿರಾ ? ಅವರು ಬಂದ ಮೇಲೆ ನಾವು ಅಂದುಕೊಂಡೆವು ಹಿರಿಯರಾದ ಸನ್ಮಾನ್ಯ ರಂಗನಾಥ್ ಇದ್ದಾರೆ. ರಾಮಸ್ವಾಮಿಗಳಿದ್ದಾರೆ, ರಾಜಶೇಖರಮೂರ್ತಿಗಳಿದ್ದಾರೆ, ಇಂತಹ ಪ್ರಮುಖರೆಲ್ಲರೂ ಇದ್ದಾಗ ನಿಮ್ಮ ಜೊತೆಗೆ ವಿಶ್ವಾಸ ಇಟ್ಟುಕೊಂಡು ಸಹಕಾರ ಪಡೆದು ಅಧಿಕಾರ ನಡೆಸುವ ಪ್ರಯತ್ನ ಮಾಡುತ್ತಾರಾ ? ನನಗೆ ಆಶ್ಚರ್ಯವಾಗುತ್ತದೆ, ವೀರಪ್ಪ ಮೊಯಿಲಿಯವರನ್ನು ಮುಖ್ಯಮಂತ್ರಿಗಳಾದ ಮೇಲೆ ನೋಡುವುದಕ್ಕೆ, ಕೇವಲ ಕೆಲವು ಅಧಿಕಾರಿಗಳ ಕಿವಿಮಾತು ಕೇಳಿಕೊಂಡು ನಮ್ಮನ್ನು ನಂಬುವುದು ಬೇಡ, ವಿರೋಧ ಪಕ್ಷದ ಮುಖಂಡರ ಮಾತು ಕೇಳುವುದು ಬೇಡ, ಕ್ಯಾಬಿನೆಟ್‌ನಲ್ಲಿರುವ ಹಿರಿಯ ಸಚಿವರನ್ನೇ ವಿಶ್ವಾಸಕ್ಕೆ ತೆಗೆದುಕೊಳ್ಳದೇ ಅಧಿಕಾರ ನಡೆಸುವ ಪ್ರಯತ್ನ ಏನು ನಡೆಯುತ್ತಿದೆ ಇದರಿಂದ ಜನರ ಕಲ್ಯಾಣದ ಯಾವುದೇ ಕೆಲಸ ಮಾಡಲು ನಿಮ್ಮಿಂದ ಸಾಧ್ಯವಿಲ್ಲ. ಅದು 90 ದಿವಸಗಳ ನಿಮ್ಮ ಆಡಳಿತ ವೈಖರಿ ನೋಡಿದಾಗ ಸ್ಪಷ್ಟವಾಗಿ ನಮಗೆ ಕಾಣುತ್ತದೆ. ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ, ನಿಮ್ಮ ಹಣಕಾಸಿನ ಪರಿಸ್ಥಿತಿ ಏನು ? ಬಜೆಟ್ ಮುಗಿದ ತಕ್ಷಣ ಏಪ್ರಿಲ್ ಮೇ ನಲ್ಲಿ ಬೇಕಾದ ಪ್ಲಾನ್ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡಿ ವರ್ಕ್ ಪ್ರಾರಂಭ ಆಗಬೇಕು.ಆದರೆ ಈಗ ಫೆಬ್ರವರಿ ಮಧ್ಯಭಾಗ ಕಳೆಯುತ್ತಿದೆ. ಎಲ್ಲಾದರೂ ರಾಜ್ಯದಲ್ಲಿ, ಅಭಿವೃದ್ಧಿ ಕಾರ್ಯಗಳು ಯಡಿಯೂರಪ್ಪನವರೇ ನಡೆಯುತ್ತಿದೆ ಎಂದು ಹೇಳುವುದಕ್ಕೆ ತಾವು ಬರುತ್ತೀರಾ ? ನೀರಾವರಿ ಯೋಜನೆ ಇರಬಹುದು, ಬೇರೆ ಪ್ರಮುಖ ಕೆಲಸ ಕಾರ್ಯಗಳಿರಬಹುದು, ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿವೆ. ಇವತ್ತು ಯಾವ ರೀತಿ ಹಣಕಾಸಿನ ಪರಿಸ್ಥಿತಿ ಅಧೋಗತಿಗೆ ಬಂದಿದೆ ಎಂದರೆ ಫೆಬ್ರವರಿಯಲ್ಲಿ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೆ ಅಲ್ಲಿ ಇಲ್ಲಿ ಬಡಿದಾಡಿ ಹುಡುಕಾಡಿ ಸಂಬಳ ಕೊಡುವಂಥ ಪರಿಸ್ಥಿತಿಗೆ ಬಂದಿದ್ದೀರಿ.

ಪಿಡಬ್ಲ್ಯೂಡಿ ಸಚಿವರು ಇಲ್ಲಿ ಇದ್ದಾರೆ, ಹಿರಿಯರಾದ ರಾಮಸ್ವಾಮಿಯವರು ಇದ್ದಾರೆ. ನಾನು ನಿಮ್ಮನ್ನು ಕೇಳುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ನೀರಾವರಿ ಇಲಾಖೆಗೆ, ಪಿಡಬ್ಲ್ಯೂಡಿ ಇಲಾಖೆಗೆ ಸುಮಾರು 40 ಕೋಟಿ ರೂಪಾಯಿಗೂ ಹೆಚ್ಚು ಬಿಲ್ ಬಾಕಿ ಇದೆ. ಪಾವತಿ ಮಾಡಬೇಕು. ಎಲ್.ಓ.ಸಿ. ಬಿಡುಗಡೆಯಾಗಿಲ್ಲ. ತಮಗೆ ಗೊತ್ತಿದೆಯೇ ? ಅದಕ್ಕೆ ನಾನು ಇವತ್ತು ಸರ್ಕಾರವನ್ನು ಒತ್ತಾಯವನ್ನು ಮಾಡುತ್ತೇನೆ ನಮ್ಮ ಜನರು ಕೊಟ್ಟಂಥ ತೆರಿಗೆ ಹಣ ಏನಾಯಿತು ? ಕಳೆದ ನಾಲ್ಕೈದು ತಿಂಗಳಿಂದ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿ, ಗೊಂದಲದ ವಾತಾವರಣ ಈ ರಾಜ್ಯದಲ್ಲಿ ಇರಬೇಕಾದರೆ ಜನವರಿ, ಫೆಬ್ರವರಿ ಮಾರ್ಚಿನಲ್ಲಿ ಹಗಲು ರಾತ್ರಿ ಅಭಿವೃದ್ಧಿ ಕಾರ್ಯ ನಡೆಯಬೇಕಾದಂಥ ಈ ಸಂದರ್ಭದಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಿದೆ. ದಯಮಾಡಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ನಿಮ್ಮ ಹಣಕಾಸಿನ ಪರಿಸ್ಥಿತಿಯ ಬಗ್ಗೆ ತಕ್ಷಣ ಒಂದು ವೈಟ್ ಪೇಪರನ್ನು ಬಿಡುಗಡೆ ಮಾಡಿ. ನಿಮ್ಮ ಹಣಕಾಸಿನ ಪರಿಸ್ಥಿತಿಯನ್ನು ದಯಮಾಡಿ ಹೇಳಿ. ನಾನು ಕೆಲವು ಅಂಕಿಅಂಶಗಳನ್ನು ನಿಮಗೆ ಕೊಟ್ಟರೆ ಆಶ್ಚರ್ಯವಾಗಬಹುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಹಣಕಾಸಿನ ಸ್ಥಿತಿ ಸರಿಯಲ್ಲ, ಈ ವರ್ಷದ ಬಜೆಟಿನಲ್ಲಿ ಯಾವುದೇ ಹಣ ಕೊಟ್ಟಿಲ್ಲ ಎಂದು ಹೇಳಿ ಈಗಾಗಲೇ ಪ್ರೇಮಚಂದ್ರ ಸಾಗರ್‌ರವರು ರಾಜೀನಾಮೆಯನ್ನು ಕೊಟ್ಟಿದ್ದಾರೆ ಮುಂದಿನ ವರ್ಷ ಆಯವ್ಯಯದ ಪಟ್ಟಿಯಲ್ಲಿ ನನ್ನ

ಇಲಾಖೆಗೆ ಯಾವುದೇ ಹಣ ಒದಗಿಸಿಲ್ಲ, ಮತ್ತೆ ಹಣಕಾಸಿನ ಸ್ಥಿತಿ ಈ ಸರ್ಕಾರದಲ್ಲಿ ಚೆನ್ನಾಗಿಲ್ಲ ಎನ್ನುವ ಸಲುವಾಗಿ ಪ್ರೇಮಚಂದ್ರ ಸಾಗರ್‌ರವರು ಮುಖ್ಯಮಂತ್ರಿಗಳಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅದನ್ನೇ ನಾನು ಹೇಳುವುದಕ್ಕೆ ಹೊರಟಿದ್ದೇನೆ. ಇವತ್ತು ನಮ್ಮಂಥ ಒಂದು ಒಕ್ಕೂಟದ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂಥ ಒಂದು ಜನಕಲ್ಯಾಣದ ವಲಯಗಳಾದಂಥ ಶಿಕ್ಷಣ, ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಉದ್ಯೋಗ, ಆರೋಗ್ಯ, ಸಾರಿಗೆ ಮತ್ತು ವಸತಿ ಈ ಎಲ್ಲಾ ಪ್ರಮುಖವಾದಂಥ ರಂಗಗಳಲ್ಲಿ ಪರಿಸ್ಥಿತಿಯನ್ನು ನೋಡಿದಾಗ ಕಳೆದ ಮೂರು ವರ್ಷಗಳು ಒಂದು ವಿಫಲತೆಯ ವರ್ಷಗಳೆಂದು ಹೇಳಿದರೆ ಬಹುಶಃ ಆ ಕಡೆ ಕುಳಿತಿರತಕ್ಕಂಥವರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ.

ಇವತ್ತು ನಾನು ಹಣಕಾಸಿನ ಪರಿಸ್ಥಿತಿ ಬಗ್ಗೆ ವೈಟ್ ಪೇಪರ್ ಹೊರಡಿಸಿ ಎಂದು ನಾನು ನಿಮಗೆ ಹೇಳಿದೆ. ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿ ವ್ಯವಸ್ಥೆ ಬಂತು. ಆ ಚುನಾವಣೆಯು ಮಾಡಲಿಲ್ಲ. ಅದರ ಬಗ್ಗೆ ನಾನು ಮುಂದೆ ಬರುತ್ತೇನೆ. ಆದರೆ ಇವತ್ತು ನಾನು ಕೇಳುತ್ತೇನೆ, ಡಿಸೆಂಬರ್‌ನಿಂದ ಇವತ್ತಿನವರೆಗೆ ಈ ರಾಜ್ಯದಲ್ಲಿ ಜಿಲ್ಲಾಪರಿಷತ್ತು ಅಭಿವೃದ್ಧಿ ಕಾರ್ಯಕ್ಕೋಸ್ಕರ ಮಂಡಲ ಪಂಚಾಯಿತಿಗೆ ಸರ್ಕಾರದಿಂದ ಒಂದು ಪೈಸೆ ಬಿಡುಗಡೆ ನೀವು ಮಾಡಿಲ್ಲ, ಇದು ನಿಜ ತಾನೇ. ಎಲ್ಲಾ ಕಾರ್ಯಗಳು ಸ್ಥಗಿತವಾಗಿದೆ. ಜವಹರ್ ರೋಜಗಾರ್ ಯೋಜನೆಯಲ್ಲಿ ನಿಮಗೆ ಒಂದು ತಾಜಾ ಉದಾಹರಣೆಯನ್ನು ಕೊಡಬೇಕೆಂದರೆ ಸುಮಾರು 65 ರಿಂದ 70 ಕೋಟಿ ರೂಪಾಯಿ ನೀವೇನು ಬಿಡುಗಡೆ ಮಾಡಬೇಕಾಗಿತ್ತು, ಬಿಡುಗಡೆ ಮಾಡಿಲ್ಲ. ಫೆಬ್ರವರಿ ಮಧ್ಯಬಾಗ ಕಳೆದುಹೋಯಿತು. ನೀವು ಯಾವಾಗ ಬಿಡುಗಡೆ ಮಾಡುವುದು ? ಗ್ರಾಮೀಣ ಜನರ ಒಂದು ಉದ್ಯೋಗಕ್ಕೆ ಆ ಬಡವರ ಕೈಗೆ ಕೆಲಸ ಮಾಡಬೇಕಾದಂಥ ಅತ್ಯಂತ ಪ್ರಮುಖರಾದಂಥ ಜವಹರ್ ರೋಜ್‌ಗಾರ್ ಯೋಜನೆ ಇವತ್ತು ಸ್ಥಗಿತವಾಗಿದೆ. ನಿಮಗೆ ಗ್ರಾಮೀಣ ಜನರ ಬಗ್ಗೆ ಕಳಕಳಿ ಇದ್ದರೆ ಹಣ ಬಿಡುಗಡೆ ಮಾಡಬೇಕಾಗಿತ್ತು ? ಎಷ್ಟು ಹಣವನ್ನು ಜವಹರ್ ರೋಜಗಾರ್ ಯೋಜನೆಯಲ್ಲಿ ಬಿಡುಗಡೆ ಮಾಡಬೇಕು ? ಬಿಡುಗಡೆ ಮಾಡದೇ ಇರುವುದಕ್ಕೆ ಕಾರಣವೇನು ? ಇದನ್ನ ದಯಮಾಡಿ ಸ್ಪಷ್ಟಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಇಚ್ಛೆ ಮಾಡುತ್ತೇನೆ. ರಾಜಕೀಯ ಅಂತಃಕಲಹದಲ್ಲಿ ಗೊಂದಲದಲ್ಲಿ ನೀವು ತಲ್ಲೀನರಾಗಿದ್ದಾರೆಯೇ ವಿನಹ ಹೊಸ ಸರ್ಕಾರ ಬಂದ ಮೇಲೆ, ಹೊಸ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಂಡ ಮೇಲೆ ನೀವು ಶಾಂತ ರೀತಿಯಿಂದ ಮಂತ್ರಿಮಂಡಲದ ಸಭೆಯನ್ನು ಕರೆದು ಹಿಂದಿನ ಎರಡು ವರ್ಷಗಳಲ್ಲಿ ಅನೇಕ ತಪ್ಪುಗಳು ಏನು ಆಯಿತು ಎಂದು ಹೇಳಿ ಅವರನ್ನು ಅಧಿಕಾರದಿಂದ ಇಳಿಸಿದರೋ ಆ ತಪ್ಪುಗಳಾಗದಂತೆ ದಿಟ್ಟ ಹೆಜ್ಜೆ ಇಡುವಂಥ ಒಂದು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೀರೇನು ? ಇವತ್ತು ಜವಹರ್ ರೋಜಗಾರ್ ಯೋಜನೆಯಂಥ ಒಂದು ಪ್ರಮುಖವಾದ ಬಾಬಿಗೆ ನೀವು 65 ಕೋಟಿಗೂ ಹೆಚ್ಚು ಹಣ ಬಿಡುಗಡೆ ಮಾಡಿಲ್ಲ ಎಂದು ಹೇಳುವುದಾದರೆ ಬಹುಶಃ ಇದಕ್ಕಿಂತ ಒಂದು ಬೇಜವಾಬ್ದಾರಿ, ರೈತ ವಿರೋಧಿ ಗ್ರಾಮೀಣ ಜನರ ವಿರೋಧಿ ಸರ್ಕಾರ ಇದೆ ಎಂದು ನಾವು ಹೇಳಬಹುದೇನು ? ಖಾದಿ ಗ್ರಾಮೋದ್ಯೋಗ ಇಲಾಖೆಗೆ 3 ಕೋಟಿ ರೂಪಾಯಿ ಸಬ್ಸಿಡಿ ಕೊಡಬೇಕು, ಕೊಟ್ಟಿಲ್ಲ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗೆ ಸಬ್ಸಿಡಿ ಬಿಡುಗಡೆ ಮಾಡಬೇಕು, ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ. ಸಣ್ಣಪುಟ್ಟ ಕಾರ್ಖಾನೆಗಳು ಬಾಗಿಲು ಮುಚ್ಚುವಂಥ ಒಂದು ಸ್ಥಿತಿಗೆ ಬಂದಿವೆ. ನಾನು ಪ್ರಾರಂಭದಲ್ಲೇ ಹೇಳಿದಂತೆ ಪಿಡಬ್ಲ್ಯೂಡಿ ಮತ್ತೆ ಇರಿಗೇಷನ್‌ಗೆ ನನಗೆ ಗೊತ್ತಿರುವ ಪ್ರಕಾರ ಸುಮಾರು 40 ಕೋಟಿಗೂ ಹೆಚ್ಚು ಎಲ್.ಒ.ಸಿ. ಬಿಡುಗಡೆ ನೀವು ಮಾಡಬೇಕು. ಇವತ್ತು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ ಈ ರಾಜ್ಯದಲ್ಲಿ ಯಾವುದೇ ಪಿಡಬ್ಲ್ಯೂಡಿ ಕಂಟ್ರಾಕ್ಟರ್ಸ್ ನಿಮಗೆ ಇಲಾಖೆಯ ಯಾವುದೇ ಕೆಲಸಕಾರ್ಯಗಳಿಗೆ ಮುಂದೆ ಬರುತ್ತಿಲ್ಲ.

ಮೊನ್ನೆ ನನಗೆ ಗೊತ್ತಿದೆ, ತಾವು ಅಧಿಕಾರ ವಹಿಸಿಕೊಂಡ ಮೇಲೆ ಆ ಸಿಮೆಂಟು, ಕಬ್ಬಿಣ ಪರ್ಚೇಸ್ ಮಾಡಿದ್ದೇವೆ ಎಂದು ಅದನ್ನೆಲ್ಲಾ ತೋರಿಸಿಕೊಳ್ಳಬೇಕಲ್ಲ ಮಾರ್ಚ್ ಎಂಡ್‌ನಲ್ಲಿ ಅದಕ್ಕೋಸ್ಕರ ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದೀರಿ. ನಾನು ನಿಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ, ಫೆಬ್ರವರಿ ತಿಂಗಳಲ್ಲಿ ಈ ರೀತಿ ಹಣಕಾಸಿನ ಪರಿಸ್ಥಿತಿ ಇರಬೇಕಾದರೆ ಇವತ್ತು ಜನರು ಕೊಟ್ಟಂಥ ತೆರಿಗೆ ಹಣ ಎಲ್ಲಿ ಹೋಯಿತು ?

ಬಜೆಟ್ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಪ್ರಾಮಿಸ್ ಮಾಡಿದಂತಹ ಯಾವುದಾದರೂ ಒಂದು ಕಾರ್ಯಕ್ರಮವನ್ನ ಕಾರ್ಯರೂಪಕ್ಕೆ ತಂದಿರುವಂತಹ ಒಂದು ಉದಾಹರಣೆಯನ್ನ ತಾವೇನಾದರೂ ಇವತ್ತುಕೊಡುತ್ತೀರಾ ? ಈ ನಾಡಿನ ಜನ ಗ್ರಾಮೀಣ ಜನರು ಮೊದಲ ಬಾರಿಗೆ ವಿಚಿತ್ರವಾದಂತಹ ನೆರೆಹಾವಳಿಗೆ ಸಿಕ್ಕಿಕೊಂಡರು. ಇಲ್ಲಿ ಚರ್ಚೆಯಾಯಿತು ದು ಕಲೆದು ಹೋಗಿ ಮೂರು ತಿಂಗಳಾಯತು. ಮತ್ತೆ ನಾವು ಈಗ ಸದನದಲ್ಲಿ ಬಂದು ಸೇರಿದ್ದೇವೆ. ನಾವು ನಿಮ್ಮನ್ನು ಕೇಳುತ್ತೇವೆ. ಬೇರೆ ಏನು ಬೇಡ ತಾವೇನು ಭಿಕ್ಷೆಯನ್ನು ಕೊಡುವ ರೀತಿಯಲ್ಲಿ ಹೆಕ್ಟೇರಿಗೆ 50 ರೂಪಾಯಿಯನ್ನು ಪರಿಹಾರವನ್ನು ಕೊಡುತ್ತೇವೆಂದು ಹೇಳಿದ್ದೀರಿ ಅದನ್ನು ಕೊಟ್ಟಿದ್ದಿರಾ ? ನನಗೆ ಅನ್ನಿಸುತ್ತದೆ ಈ ಸದನದ ಒಳಗಡೆ ಬಂದು ಏತಕ್ಕೋಸ್ಕರ ಚರ್ಚ ಮಾಡಬೇಕು ? ತಮಗೆ ಗೊತ್ತಿರಬಹುದು ಬಡವರ ಬಗ್ಗೆ, ಕೃಷಿ ಕಾರ್ಮಿಕರ ಬಗ್ಗೆ, ನಿರುದ್ಯೋಗಿ ಯುವಕರ ಬಗ್ಗೆ, ಹರಿಜನ ಗಿರಿಜನರ ಬಗ್ಗೆ ಪ್ರಸ್ತಾಪ ಮಾಡಿದಾದ ಜನವರಿ, 12ನೇ ತಾರೀಖು ಈ ಸದನದಲ್ಲಿ ಒಂದು ಮಾತನ್ನು ಹೇಳಿದರು. ಅದನ್ನ ಸೀರಿಯಸ್ ಆಗಿ ತೆಗೆದುಕೊಂಡು ಅದನ್ನ ಕಾರ್ಯರೂಪಕ್ಕೆ ತರುವ ಕಳಕಳಿ ಇಲ್ಲವೋ ? ಇಲ್ಲಿ ಚರ್ಚೆ ಮಾಡುವುದರ ಬದಲಾಗಿ ರಾಜ್ಯದ ಉದ್ದಕ್ಕೂ ಹೋಗಿ ನಿಮ್ಮನ್ನು ನಂಬಿ ನಿಮಗೆ ಅಜೀರ್ಣವಾಗುವಷ್ಟು ಬಹುಮತ ಕೊಟಂತಹ ಜನ ಆ ಬಡ ಜನರನ್ನು ಹೋಗಿ ಭೇಟಿ ಮಾಡಿದ್ದೀರಾ ? ಬಹುಶಃ ನಿಮಗೆ ವರದಿ ಬಂದಿರಬಹುದು, ಜನವರಿ 12ನೇ ತಾರೀಖಿನಿಂದ ಇವತ್ತಿನವರೆಗೆ ಕರ್ನಾಟಕ ರಾಜ್ಯದಲ್ಲಿ ಸುಮಾರು 450 ಸಾರ್ವಜನಿಕ ಸಭೆಗಳನ್ನು ಮಾಡಿಬಿಟ್ಟು ಬಂದಿದ್ದೇವೆ. ನಮ್ಮ ಶಾಸಕರು ನಮ್ಮ ಲೋಕಸಭಾ ಸಗಸ್ಯರು ನಮ್ಮ ರಾಜ್ಯಪದಾಧಿಕಾರಿಗಳು ಸುಮಾರು 13 ತಾಲ್ಲೂಕ್ ಕೇಂದ್ರಗಳನ್ನು ಬಿಟ್ಟು ಎಲ್ಲಾ ತಾಲ್ಲೂಕ್ ಕೇಂದ್ರಗಳಿಗೆ ಹೋದೆವು). ಸಾವಿರಾರು ಜನ ಬಂದು ಸೇರಿದರು. ತಮ್ಮ ಅಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಅಂದರೆ ಯಾವ ನಾಡಿನ ಜನ ನಿಮಗೆ ಅಜೀರ್ಣವಾಗುವಷ್ಟು ಬಹುಮತವನ್ನು ಕೊಟ್ಟರೋ ಆ ಜನರನ್ನು ಹೋಗಿ ಭೇಟಿ ಮಾಡುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ನೀವು ಮಾಡಿದ್ದೀರಾ ? ನೀವು ಕೊಟ್ಟಂಥ ಭರವಸೆಯು ಈಡೇರಿದೆಯೋ ಇಲ್ಲವೋ ಇದನ್ನು ನೋಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರೋ, ನಿಮ್ಮ ಸಾಧನೆ ಏನು ? ನಿಮ್ಮ ಸಾಧನೆ ಒಂದೇ, ಇರುವಂತಹ 184–185 ಜನ ಶಾಸಕರಲ್ಲಿ ನೂರಕ್ಕೂ ಹೆಚ್ಚು ಜನ ಶಾಸಕರರ ಕಳೆದ ಮೂರು ವರ್ಷದಲ್ಲಿ ಮಂತ್ರಿಗಳಾದರು. ನಮ್ಮ ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದ ತಕ್ಷಣ ಹೇಳಿದರು. ಈ ಆನೆಯ ಗಾತ್ರದ ಮಂತ್ರಿಮಂಡಲ ಏಕೆ ಎಂದು ನಾವು ಕೇಳಿದಾಗ ಅವು ಕೇವಲ ಇನ್ನು ಒಂದು ಮುಕ್ಕಾಲು ಎರಡು ವರ್ಷ ಅವಧಿ ಇದೆ, ಸಂಖ್ಯೆ ಜಾಸ್ತಿಯಾದರೆ ಬೇಗ ಅಭಿವೃದ್ಧಿ ಕಾರ್ಯ ಮಾಡಬಹುದೆಂದು ಈಗ 95 ದಿವಸ ಕಳೆದು ಹೋಯಿತು. ತಾವು 100 ದಿವಸದ ಪ್ರಗತಿಯ ಬಗ್ಗೆ ಹೇಳಿದ್ದೀರಿ. 95 ದಿವಸದಲ್ಲಿ ಅಥವಾ 100 ದಿವಸ ದಾಟಿದ ತಕ್ಷಣ ಯಾವ್ಯಾವ ಬಾಬಿನಲ್ಲಿ ನೀರಾವರಿಯಲ್ಲಿ, ಕೃಷಿ ಬಾಬಿನಲ್ಲಿ, ಗ್ರಾಮೀಣಾಭಿವೃದ್ಧಿ ಬಾಬಿನಲ್ಲಿ, ನಿರುದ್ಯೋಗ ಯುವಕರಿಗೆ ಉದ್ಯೋಗವನ್ನು ಒದಗಿಸಿಕೊಡುವುದರಲ್ಲಿ ಎಷ್ಟೆಷ್ಟು ಪ್ರಗತಿಯಾಗಿದೆ ಇದನ್ನು ನೀವು ತಿಳಿಸುತ್ತೀರಾ ? ನಾವು ನಿಮ್ಮ ಮುಖ್ಯಮಂತ್ರಿಗಳನ್ನು ಕೇಳಿದ್ದೇವೆಯೇ ? ನಾವು ಮಂತ್ರಿಗಳನ್ನು ಮಾಡಬೇಕಾದರೆ ಯಾರು ಲೋಕಾಯುಕ್ತಕ್ಕೆ ಅವರ ಆಸ್ತಿಪಾಸ್ತಿಗಳನ್ನು ಘೋಷಣೆ ಮಾಡಿಕೊಂಡಿರುವುದಿಲ್ಲವರನ್ನು ಮಂತ್ರಿಗಳನ್ನು ಮಾಡುವುದಿಲ್ಲ, ನಾವು ಇವರನ್ನು ಕೇಳಿದ್ದೇವೇಯೇ ?

ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ನಿಮ್ಮ ಮಂತ್ರಿಮಂಡಲದಲ್ಲಿ ಇರುವಂತಹ ಸದಸ್ಯರು ಲೋಕಾಯುಕ್ತಕ್ಕೆ ತಮ್ಮ ಆಸ್ತಿಯನ್ನು ಡಿಕ್ಲೇರ್ ಮಾಡಿಕೊಂಡಿದ್ದಾರೆಯೇ ? ಮಾಡಿಕೊಳ್ಳದಿದ್ದರೆ ನಾನು ಅದರ ಬಗ್ಗೆ ಚಿಂತನೆ ಮಾಡುವುದಿಲ್ಲ. ಆದರೆ ಈ ರೀತಿ ಅಧಿಕಾರಕ್ಕೆ ಬಂದ ತಕ್ಷಣ ಜನರಿಗೆ ಸುಳ್ಳು ಭರವಸೆಯನ್ನು ಕೊಡುವಂತಹ ಪ್ರವೃತ್ತಿ ಏನಿದೆ. ಈ ಪ್ರವೃತ್ತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಬಿಡಬೇಕಾಗಿದೆ. ನಾನು ಅನೇಕ ಜನ ಮಂತ್ರಿಗಳನ್ನು ಭೇಟಿ ಮಾಡಿದ್ದೇನೆ. ಅಧಿಕಾರಿಗಳು ನಮ್ಮ ಮಾತನ್ನ ಕೇಳುವುದಿಲ್ಲ ಎಂದು ಹೇಳುತ್ತಾರೆ. ನಾನು ಮುಖ್ಯಮಂತ್ರಿಗಳನ್ನು ಇವತ್ತು ಕೇಳುವುದಕ್ಕೆ ಇಚ್ಛಿಪಡುತ್ತೇವೆ, ಈ ಸರ್ಕಾರವನ್ನು ಕೇಳುವುದಕ್ಕೆ ಇಚ್ಛಿಪಡುತ್ತೇರೆ, ವಿರೋಧ ಪಕ್ಷದ ಮುಖಂಡರ ಮಾತಿಗೆ ಬೆಲೆಯಿಲ್ಲ. ಇವತ್ತು ನಿಮ್ಮ ಕ್ಯಾಬಿನೆಟ್‌ನ ಹಿರಿಯ ಸಚಿವರ ಜೊತೆಗೆ ವಿಶ್ವಾಸವನ್ನು ತೆಗೆದುಕೊಂಡು ಕೆಲಸಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಸಿದ್ಧವಿಲ್ಲ ಎನ್ನುವುದಾದರೆ ಮೂರು ಕಾಲು ವರ್ಷ ಕಳೆದು ಹೋಯಿತು ಇದೇ ರೀತಿಯಲ್ಲಿ ಅಧಿಕಾರವನ್ನು ಮುಂದುವರಿಸಿಕೊಂಡು ಹೋದರೆ ನಮ್ಮ ಜನರ ಪರಿಸ್ಥಿತಿಗಳು ಏನಾಗಬಹುದು. ಎಲ್ಲಿಗೆ ಮುಟ್ಟಬಹುದು.

ಶ್ರೀ ಆರ್. ದಯಾನಂದರಾವ್:- ತಾವು ಆಸ್ತಿಯನ್ನು ಡಿಕ್ಲೇರ್ ಮಾಡಿದ್ದೀರೋ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಯಡಿಯೂರಪ್ಪನ ಆಸ್ತಿ ಎಷ್ಟಿದೆ ಅವನು ಡಿಕ್ಲೇರ್ ಮಾಡಿಕೊಂಡಿದ್ದನೋ ಇಲ್ಲವೋ ಇದರ ಬಗ್ಗೆ ಬೇರೆ ಪ್ರಶ್ನೆ. ನಾನೇನು ಹೇಳುವುದಕ್ಕೆ ಹೊರಟಿದ್ದೇನೆಂದರೆ ....

ಶ್ರೀ ಆರ್. ದಯಾನಂದರಾವ್:- ತಾವು ಡಿಕ್ಲೇರ್ ಮಾಡಿದ್ದಿರೋ, when you are questioning others, you should be perfect first. Let us know whether you have declared or not. that is all.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಅವರು ಹೇಳಿದಂತೆ ಯಾವ್ಯಾವ ಸದಸ್ಯರು ಲೋಕಾಯುಕ್ತಕ್ಕೆ ಅವರ ಆಸ್ತಿಪಾಸ್ತಿಯನ್ನು ಘೋಷಣೆ ಮಾಡಿಕೊಂಡಿದ್ದಾರೋ ಇದು ಬೇರೆ ಪ್ರಶ್ನೆ. ಇದು ಇಡೀ ಜಗತ್ತಿಗೆ ಗೊತ್ತಿರುವಂಥದ್ದು. ಆದರೆ ನಾನು ಕೇಳುವುದಕ್ಕೆ ಹೊರಟಿರುವುದೇನೆಂದರೆ ಯಾವ ಒಂದು ಪ್ರಮುಖವಾದಂತಹ ಸಚಿವರ ಹುದ್ದೆಯನ್ನು ಕೊಡುವುದಕ್ಕೆ ಮುಂಚೆ ಲೋಕಾಯುಕ್ತಕ್ಕೆ ಅವರ ಆಸ್ತಿಪಾಸ್ತಿಯನ್ನು ಘೋಷಣೆ ಮಾಡಿಕೊಂಡಂಥ ವ್ಯಕ್ತಿಗಳಿಗೆ ಮಾತ್ರ ಮಂತ್ರಿಗಳನ್ನು ಮಾಡುತ್ತೇವೆಂದು ಹೇಳಿದಂತಹ ಈ ಮುಖ್ಯಮಂತ್ರಿಗಳು ಇವತ್ತು ಮಂತ್ರಿಗಳನ್ನು ಮಾಡಿರುವಂತಹ ಈ ಸಂದರ್ಭದಲ್ಲಿ ಲೋಕಾಯುಕ್ತಕ್ಕೆ ಅವರ ಆಸ್ತಿಪಾಸ್ತಿಗಳನ್ನು ಘೋಷಣೆ ಮಾಡಿಕೊಂಡಿದ್ದಾರೆಯೇ ಇಲ್ಲವೇ ? ಅದರ ಬಗ್ಗೆ ಉತ್ತರವನ್ನು ಕೊಡಿ ಎಂದು ನಾನು ಕೇಳಿದ್ದೇನೆ. ಈ ಕಡೆ ಇರುವಂಥವರು ಆ ಕಡೆ ಇರುವಂಥವರು ಸದಸ್ಯರು ಯಾರು ಲೋಕಾಯುಕ್ತಕ್ಕೆ ಆಸ್ತಿಪಾಸ್ತಿಗಳನ್ನು ಘೋಷಣೆ ಮಾಡಿಕೊಂಡಿಲ್ಲ ಇದರ ಬಗ್ಗೆ ನಾನು ಚರ್ಚೆ ಮಾಡುತ್ತಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಲೋಕಾಯುಕ್ತ ಈಗ ಇಲ್ಲ. ನಿಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಆಸ್ತಿ ವಿವರಣೆಯನ್ನು ಕೊಡುವ ಪ್ರಶ್ನೆ ಎಲ್ಲಿ ಬರುತ್ತದೆ. ಅಲ್ಲಿ ನಿಮ್ಮಲ್ಲಿ ಟಿ.ವಿ. ಇದೆಯೋ ಎಂದು ಕೇಳುತ್ತಾರೆ. ಮೋಟಾರ್ ಸೈಕಲ್ ಇದೆಯೋ ಎಂದು ಕೇಳುತ್ತಾರೆ. ಇದೆಲ್ಲಾ ಕಾನೂನನ್ನು ನಾವೇ ಮಾಡಿದ್ದುದು. ನಿಮ್ಮಲ್ಲಿಯೂ ಟಿ.ವಿ. ಇದೆ. ನನ್ನಲ್ಲಿಯೂ ಟಿ.ವಿ. ಇದೆ. ಏನೇನು ಮಾಡಬೇಕೆಂದು ನನಗೆ ಗೊತ್ತಿಲ್ಲ. ಈ ಪರಿಸ್ಥಿತಿ ನಮಗೆ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮ್ಮ ಪರಿಸ್ಥಿತಿ ಹದಗೆಟ್ಟಿದೆ ಎಂದು ನನಗೆ ಗೊತ್ತಿದೆ. ಆದರೆ ಪ್ರಶ್ನೆ ಇರುವಂಥದ್ದು ಏನಾಗಿದೆ....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ನಮ್ಮ ಪರಿಸ್ಥಿತಿ ಹದಗೆಟ್ಟಿರುವುದು ನಿಮಗೆ ಗೊತ್ತಿರುವುದಕ್ಕೆ ಬಹಳ ಸಂತೋಷ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ಇವೊತ್ತು ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದ ನಂತರದ 95 ದಿವಸಗಳಲ್ಲಿ ಅವರು ಒಳ್ಳೆಯ ಕೆಲಸ ಮಾಡಬೇಕೆಂದು ಏನು ಕಳಕಳಿ ಇಟ್ಟುಕೊಂಡು ಹೊರಟಿದ್ದಾರೆ, ಅದನ್ನಾದರೂ ಮಾಡುವುದಕ್ಕೆ ನೀವು ಬಿಡುತ್ತಿದ್ದೀರೋ ಈಗಾಗಲೇ ಅವರ ಕಾಲು ಹಿಡಿದು ಎಳೆಯುವುದಕ್ಕೆ ಪ್ರಾರಂಭವಾಗಿದೆ. ಅವರ ಬಗ್ಗೆ ಅವಿಶ್ವಾಸ ಸೂಚಿಸುವ ಕಸರತ್ತು ಪ್ರಾರಂಭವಾಗಿದೆ. ಅನೇಕ ಜನ ಪ್ರಮುಖರು ಇವೊತ್ತು ಹೇಗಾದರೂ ಮಾಡಿ ನಾಲ್ಕನೇ ಮುಖ್ಯಮಂತ್ರಿಯನ್ನು ಮಾಡುವುದಕ್ಕೆ ಮತ್ತು ಮಂತ್ರಿ ಸ್ಥಾನ ಸಿಗದಿದ್ದವರು ಮಂತ್ರಿಯಾಗುವುದು ಹೇಗೆನ್ನುವುದರ ಬಗ್ಗೆ ಚಿಂತೆ ಮಾಡುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ನಾನು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿಯವರನ್ನು ಒತ್ತಾಯಿಸುತ್ತಿದ್ದೇನೆ. ಯಾರಿಗೆ ಮಂತ್ರಿಯಾಗಲು ಆಸೆ ಇದೆಯೋ, ಅವರೆಲ್ಲರಿಗೆ ಒಂದೇ ಸಾರಿ ಮಂತ್ರಿಗಳನ್ನಾಗಿ ಮಾಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಮುಕ್ಕಾಲು ವರ್ಷದಲ್ಲಿ ಆಗುವಂಥ ಸಾಧನೆ 9 ತಿಂಗಳಿನಲ್ಲಿಯೇ ಆಗುವುದಕ್ಕೆ ನಿಮಗೆ ಶಕ್ತಿ ಇದ್ದರೆ.....

ಶ್ರೀ ಆರ್.ಎಲ್. ಜಾಲಪ್ಪ:– ಒಂದು ವಿಚಾರವನ್ನು ಸನ್ಮಾನ್ಯ ವೀರಪ್ಪ ಮೊಯಿಲಿಯವರು ಯೋಚನೆ ಮಾಡಬಹುದು. ಏನೆಂದರೆ, ಶ್ರೀ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ನಮಗೆ ಮಂತ್ರಿ ಸ್ಥಾನ ಸಿಗಲಿಲ್ಲವೆಂದು ಕೆಲವರು ಏನೇನೋ ಪ್ರಯತ್ನ ಮಾಡಿದರು. ಆದರೂ, ಕಡೆಗೆ ಬಂಗಾರಪ್ಪನವರು ಹೋದರು. ಈಗ ವೀರಪ್ಪ ಮೊಯಿಲಿಯವರು ಬಂದಿದ್ದಾರೆ. ಇವರ ಬಗ್ಗೆ ಈಗಾಗಲೇ ಭಿನ್ನಮತ ಚಟುವಟಿಕೆಗಳು ಪ್ರಾರಂಭವಾಗಿವೆ. ಈಗ ಆಡಳಿತದ ಅವಧಿ ಕೇವಲ 18 ತಿಂಗಳುಗಳು ಮಾತ್ರ ಇರುವುದರಿಂದ ಈಗಿರುವ ಸದಸ್ಯರುಗಳೆಲ್ಲರನ್ನೂ ಮೂರನೆಯ ಒಂದು ಭಾಗದಂತೆ ವಿಭಜಿಸಿ, ಅಪೆಕ್ಸ್ ಬ್ಯಾಂಕಿನಲ್ಲಿ ಎಕ್ಸಿಕ್ಯೂಟಿವ್ ಕಮಿಟಿ ಎಂದು ಮೂರು ತಿಂಗಳಿಗೆ ಒಂದು ಸಾರಿ ಬದಲಾವಣೆ ಮಾಡುತ್ತಾರಲ್ಲಾ ಹಾಗೆ 6–6 ತಿಂಗಳು ಒಬ್ಬೊಬ್ಬರಿಗೆ ಮಂತ್ರಿಗಳನ್ನಾಗಿ ಮಾಡಿದರೆ ಎಲ್ಲಾ ಸದಸ್ಯರು ಪೂರ್ತಿಯಾಗಿ ಮಂತ್ರಿಗಳಾಗುತ್ತಾರೆ. ಆಗ ಸಮಾಧಾನದಿಂದ ಆಡಳಿತ ನಡೆಸಬಹುದು. ಆದುದರಿಂದ, ನನ್ನ ಈ ಒಂದು ಸಲಹೆಯನ್ನು ತಮ್ಮ ಮುಂದಿಡುತ್ತಿದ್ದೇನೆ, ಇದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಜಿ. ರಾಜುಗೌಡ:– ಆ ಸೂತ್ರವನ್ನು ತಾವು ಕಂಡುಕೊಂಡಿದ್ದರೆ ಬೊಮ್ಮಾಯಿಯವರ ಸರ್ಕಾರ ಹೋಗುತ್ತಿರಲಿಲ್ಲ, ರಾಮಕೃಷ್ಣ ಹೆಗಡೆಯವರ ಸರ್ಕಾರ ಹೋಗುತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಈಗ ಸರ್ಕಾರ ಬದಲಾವಣೆಯಾದಷ್ಟು ಹೆಚ್ಚು ಜನ ಸದಸ್ಯರಿಗೆ ಮಂತ್ರಿ ಸ್ಥಾನ ಸಿಗುತ್ತದೆ. ನೀವು ಏಕೆ ಹೀಗೆ ಆಡುತ್ತಿದ್ದೀರಿ ?

ಶ್ರೀ ಸಿ. ಬೈರೇಗೌಡ:– ರಾಜುಗೌಡರೆ, ನಾವು ಇಷ್ಟೊಂದು ತಾಪತ್ರಯ, ಬಾಧೆ ಪಡುತ್ತಿರುವುದು ನಿಮಗೋಸ್ಕರವಾಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಒಂದು ಮಾತನ್ನು ನೋವಿನಿಂದ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಕಳೆದ ಎರಡು ವರ್ಷಗಳ ಕಾಲದಲ್ಲಿ ನೀವು ರಾಜಕೀಯ ಗೊಂದಲದಲ್ಲಿ ಮುಳುಗಿ ಪರಸ್ಪರ ಕಚ್ಚಾಟ, ಬಡಿದಾಟಗಳಲ್ಲಿ ತಲ್ಲೀನರಾಗಿ ಕೊನೆಗೆ ನೀವುಗಳೆಲ್ಲರೂ ಸೇರಿ ಒಂದು

ಬದಲಾವಣೆ ತಂದುಕೊಂಡು ಹೊಸ ಒಬ್ಬ ನಾಯಕನನ್ನು ಆಯ್ಕೆ ಮಾಡಿ ಮುಖ್ಯಮಂತ್ರಿಯಾಗಿ ಮಾಡಿದ ನಂತರ ಈ ಕಡೆ ಇರುವ ನಾವುಗಳು ಅವರ ಬಗ್ಗೆ ಟೀಕೆ ಮಾಡುವುದಕ್ಕೆ ಸ್ವಲ್ಪ ಸಮಯ ಕಾಯುತ್ತಿದ್ದೇವೆ. ಪತ್ರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರತಕ್ಕಂಥವರೂ ಸಹ ಟೀಕೆ–ಟಿಪ್ಪಣಿ ಮಾಡುವುದಕ್ಕೆ ನೂರು ದಿವಸ ಕಳೆಯಲಿ. ಎಂದು ಕಾಯುತ್ತಿದ್ದಾರೆ. ಆದರೆ, ನೀವು ಇನ್ನು ಕಾಯುವುದಕ್ಕೆ ಸಿದ್ಧವಿಲ್ಲ. ಈಗಾಗಲೇ ಒಂದು ರಾಜಕೀಯ ಅಸ್ಥಿರತೆ ತಾಂಡವವಾಡುವ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಲ್ಲಾ, ಇದರ ಬಗ್ಗೆ ಈ ರಾಜ್ಯದ ಜನರ ಹಿತದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸಾಧ್ಯವಾದರೆ ಮುಖ್ಯಮಂತ್ರಿಗಳಿಗೆ ಸಹಕಾರ ಕೊಡಿ, ಇಲ್ಲವೆ ತಮಗೆ ಈಗಾಗಲೇ ಮನದಟ್ಟಾಗಿದ್ದರೆ, ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಯಾವುದೇ ಒಂದು ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ ಸಾಧ್ಯವಿಲ್ಲವೆನ್ನುವ ಶಕ್ತಿಯನ್ನು ಕಳೆದುಕೊಂಡಿದ್ದಾರೆಂದು ನಿಮಗೆ ಅನ್ನಿಸಿದ್ದರೆ ದಯಮಾಡಿ ವಿಧಾನಸಭೆಯನ್ನು ವಿಸರ್ಜನೆ ಮಾಡಿ, ಚುನಾವಣೆ ನಡೆಸೋಣ. ಈ ರೀತಿ ಮಾಡುವುದರ ಬದಲಾಗಿ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಹದಗೆಡಿಸಿಕೊಂಡು ಗೊಂದಲದ ವಾತಾವರಣದಲ್ಲಿ ತಾವೆಲ್ಲರೂ ಏನಿದ್ದೀರಿ. ಇದು ಸರಿಯಲ್ಲ.

ಶ್ರೀ ಕೆ.ಎಚ್. ರಂಗನಾಥ್:– ಯಡಿಯೂರಪ್ಪನವರೇ, ನೀವು ಬಹಳ ಅವಸರದಲ್ಲಿದ್ದೀರೆಂದು ಕಾಣುತ್ತದೆ. ದೆಹಲಿಯಲ್ಲಿ ನಿಮ್ಮ ಪಕ್ಷದ ಪ್ರಮುಖ ನಾಯಕರಾದ ಅದ್ವಾನಿಯವರು ಲೋಕಸಭೆಯನ್ನು ವಿಸರ್ಜನೆ ಮಾಡಿ ಎಂದು ಹೇಳುತ್ತಿದ್ದು, ಇಲ್ಲಿ ನೀವು ವಿಧಾನಸಭೆಯನ್ನು ವಿಸರ್ಜನೆ ಮಾಡಿ ಎಂದು ಹೇಳುತ್ತಿದ್ದೀರಿ. ಇದರಿಂದ ನೀವು ನಿರಾಶೆಗೆ ಒಳಗಾಗುತ್ತಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ:– ಅವರು ರಾಮ ಒಬ್ಬನೇ ನಮಗೆ ವೋಟು ಕೊಡಿಸುತ್ತಾನೆಂದು, ರಾಮ ಒಬ್ಬನೇ ಓಟ್ ಕೊಟ್ಟರೆ ಸಾಕು ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್:– ಜನರು ರಾಮನನ್ನು ಪೂಜೆ ಮಾಡುತ್ತಾರೆ. ರಾಮನ ಹೆಸರಿನಲ್ಲಿ ಓಟು ಕೊಡಿ ಎಂದು ಕರ್ನಾಟಕಕ್ಕೆ ಬಂದು ಕೇಳಿದರೆ ಯಾರು ಓಟು ಕೊಡುತ್ತಾರೆ ?

ಶ್ರೀ ವಾಟಾಳ್ ನಾಗರಾಜ್:– ಅವರದೇ ಅಂಥ ಮೂಢ ಸರ್ಕಾರಗಳು, ಭಾರತೀಯ ಜನತಾ ಪಕ್ಷದ ಸರ್ಕಾರಗಳು ವಜಾ ಆಗಿದ್ದುದು ಅನ್ಯಾಯವೆಂದು ಹೇಳುತ್ತಾರೆ. ಅಲ್ಲದೆ, ಈ ವಿಧಾನಸಭೆಯನ್ನೂ ಸಹ ವಿಸರ್ಜನೆ ಮಾಡಿ ಎಂದೂ ಸಹ ಹೇಳುತ್ತಿದ್ದಾರೆ. ಇವರ ಗೊಂದಲ ಏನೆಂದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವೊತ್ತು ನಾನು ಏನು ಹೇಳುತ್ತಿದ್ದೇನೆಂದರೆ, ನಾನು ನಿಮ್ಮ ಸರ್ಕಾರಕ್ಕೆ ಬೆಂಬಲವನ್ನು ಕೊಡುತ್ತಿದ್ದೇನೆ. ಇದು ನಿಮ್ಮ ಕಾಲದಲ್ಲೇ ಕೊನೆಯಾಗಬೇಕೆಂಬುದು ನಮ್ಮ ಆಸೆ. ಇನ್ನು ಎರಡು ವರ್ಷಗಳ ಕಾಲ ಇದ್ದು, 5 ವರ್ಷಗಳನ್ನು ಪೂರ್ತಿಯಾಗಿ ಮುಗಿಸುವುದರ ಬಗ್ಗೆ ನಮಗೆ ಅಪೇಕ್ಷೆ ಇದೆ.

ಶ್ರೀ ಕೆ.ಎಚ್. ರಂಗನಾಥ್:– ನಿಮ್ಮ ಅಪೇಕ್ಷೆ ನಮಗೆ ಬೇಕಾಗಿಲ್ಲ. ನಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ. ನಿಮಗೆ ಏಕಿಷ್ಟು ಅನುಮಾನ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಅನೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪಿಸುವುದಕ್ಕೆ ಇಷ್ಟಪಡುವುದಿಲ್ಲ. ಕಾರಣವೇನೆಂದರೆ ನೀವು ಹೋಗುತ್ತಿರುವ ದಾರಿ ಸರಿಯಾಗಿದೆ. ಇದು ಹೀಗೆ ಬಹಳ ದಿವಸ ಮುಂದುವರಿದರೆ....

ಶ್ರೀ ಕೆ.ಹೆಚ್. ರಂಗನಾಥ್:– ಚುನಾವಣೆಯಾಗಿ ನಮ್ಮ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೆ.

ಇಲ್ಲವೇ–ಅವರು ಜನತಾದಳ ಅಧಿಕಾರಕ್ಕೆ ಬರುತ್ತಾರೆ. ನೀವು ಬಿಜೆಪಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದಿಲ್ಲ. ಸುಮ್ಮನೆ ಕಂಠ ಶೋಷಣೆ ನಿಮ್ಮದು.

ಶ್ರೀ ವಾಟಾಳ್ ನಾಗರಾಜ್:– ಇವರು ಜನತಾದಳ ಮತ್ತು ಅಧಿಕಾರಕ್ಕೆ ಬರುವುದು ನಿಮಗೆ ಖಚಿತವಾಗಿದೆಯೆ ?

ಶ್ರೀ ಕೆ.ಎಚ್. ರಂಗನಾಥ್:– ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರದೆ ಹೋದರೆ ಜನತಾ ದಳದವರು ಅಧಿಕಾರಕ್ಕೆ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್:– ಹಾಗಾದರೆ, ನೀವಿಬ್ಬರೂ ದಾಯಾದಿಗಳೆಂದು ಕಾಣುತ್ತದೆ. ಈ ರಾಜ್ಯ ನಿಮ್ಮಿಬ್ಬರ ಕೈಯಲ್ಲೇ ಇರಬೇಕೆಂದು ಕಾಣುತ್ತದೆ.

ಶ್ರೀ ಕೆ.ಎಚ್. ರಂಗನಾಥ್:– ಈಗ ಹಾಗೆಯೇ ಆಗಿರುವುದು.

ಶ್ರೀ ವಾಟಾಳ್ ನಾಗರಾಜ್:– ಹಾಗಾದರೆ, ಏನೋ ಪಿತೂರಿ ನಡೆದಿರಬಹುದು.

ಶ್ರೀ ಕೆ.ಹೆಚ್. ರಂಗನಾಥ್:– ಪಿತೂರಿ ಸ್ವಾತಂತ್ರ್ಯ ಬಂದ ದಿವಸದಿಂದ ನಡೆದುಕೊಂಡು ಬಂದಿದೆ. ಮಾನ್ಯ ಜಾಲಪ್ಪನವರು ಹಿಂದೆ ಎಂ.ಎಲ್.ಸಿ. ಆಗಿದ್ದಾಗ ಎಲ್ಲಿದ್ದರು ? ಬನ್ನಿಕೋಡ್‌ರವರು ಎಲ್ಲಿದ್ದರು ? ಇದರ ಬಗ್ಗೆ ಕೆದಕುತ್ತಾ ಹೋದರೆ ಎಲ್ಲಿಗೇ ಹೋಗುತ್ತದೆ.

ನಾವು ನಾವು ಬೇರೆ ಅಲ್ಲ, ಒಂದಾಗಿದ್ದವಲ್ಲ......

ಶ್ರೀ ವಾಟಾಳ್ ನಾಗರಾಜ್:– ನಿಮಗೂ ಅವರಿಗೂ ಇತ್ತೀಚೆಗೆ ಏನಾದರೂ ಮಾತುಕತೆ ಶುರುವಾಗಿದೆಯೇ ?

ಶ್ರೀ ಬಿ.ಹೆಚ್. ಬನ್ನಿಕೋಡ್:– ಇಲ್ಲಿ ಅವರ ಕಾರ್ಯಕ್ರಮ ರೈತರ ಪರವಾಗಿ, ಬಡವರ ಪರವಾಗಿ, ದೀನದಲಿತರ ಪರವಾಗಿ ಇರತಕ್ಕದ್ದು, ಅದಕ್ಕೆ ನಾವು ಬರುತ್ತೇವೆಂದು ಹೇಳಿದರೆ ಅವರೂ ಬರುತ್ತೇನೆಂದು ಹೇಳುತ್ತಿದ್ದಾರೆ. ಅವರು ರಾಜ್ಯದ ಜನತೆಯ ಬಗ್ಗೆ ನೀತಿಯ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಹಿರಿಯ ಸಚಿವರಾದಂಥ ರಂಗನಾಥ್‌ರವರ ಕಳಕಳಿಯನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ತಾವೇ ಅಧಿಕಾರದಲ್ಲಿರಬೇಕು. ನಾವುಗಳು ವಿರೋಧಪಕ್ಷದಲ್ಲೇ ಕುಳಿತುಕೊಳ್ಳಬೇಕೆನ್ನುವ ಒಂದು ಕಾಲವಿತ್ತು, ಆದರೆ 45 ವರ್ಷಗಳ ನಿಮ್ಮ ಆಡಳಿತ ವೈಖರಿ.... ಏನು ? ಆಗ ನಿಮಗೆ ಒಬ್ಬರ ನಾಯಕತ್ವವಿತ್ತು. ಆದರೆ ಇವತ್ತು ಯಾರು ಇದ್ದಾರೆ, ನೀವು ತಬ್ಬಲಿಗಳಾಗಿದ್ದೀರಿ.

ಶ್ರೀ ಕೆ. ಹೆಚ್. ರಂಗನಾಥ್:– ನಿಮ್ಮನ್ನು ನಂಬಿ ರಾಷ್ಟ್ರದ ಜನತೆಯು 1977ರಲ್ಲಿ ಬರೀ ಸಣ್ಣಪುಟ್ಟ ಅಧಿಕಾರಗಳಾದ ತಾಲ್ಲೂಕು ಬೋರ್ಡ್, ಮುನಿಸಿಪಾಲಿಟಿ, ಕಾರ್ಪೊರೇಷನ್, ರಾಜ್ಯಸರ್ಕಾರದ ಆಡಳಿತವಲ್ಲ, ಇಡೀ ರಾಷ್ಟ್ರದ ಅಧಿಕಾರವನ್ನು ಆಳಲುಕೊಟ್ಟರು, ಅದೇ ರೀತಿ 1989ರಲ್ಲಿಯೂ ಕೂಡ ಕೊಟ್ಟರು. ಆದರೆ ತಾವೇನು ಆಡಳಿತ ಮಾಡಿದಿರಿ ? ನಿಮಗೆ ಈಗ ಇರತಕ್ಕಂಥ ರೀತಿಯಲ್ಲೇ ಅಂದು ಬಹುಮತವನ್ನು ಕೊಟ್ಟರು. ಆದರೆ ತಾವು ಏನು ಮಾಡಿದಿರಿ ? ಮತ್ತೆ ಮೊನ್ನೆತಾನೆ ರಾಷ್ಟ್ರದಲ್ಲಿಯೇ ಅತ್ಯಂತ ದೊಡ್ಡ ರಾಜ್ಯವಾದ ಉತ್ತರ ಪ್ರದೇಶದ ಆಡಳಿತವನ್ನು ಮಾಡಲು ಜನರು ಅವಕಾಶ ಕೊಟ್ಟರು, ಆದರೆ ತಾವು ಏನು ಮಾಡಿದಿರಿ ? ಜನರು ತಮಗೆ ಅಧಿಕಾರವನ್ನು ಮಾಡತಕ್ಕ ಜವಾಬ್ದಾರಿಯನ್ನು ಕೊಟ್ಟರೆ ಅದನ್ನು ತಾವು ನಿರ್ವಹಣೆ ಮಾಡಿದಿರಾ ? ಇದು ಜನರಿಗೆಲ್ಲಾ ಗೊತ್ತಿದೆ, ಎರಡು ಸಾಲ

ತಾವು ನಿರಾಸೆಯನ್ನು ಮಾಡಿದ್ದೀರಿ, ಆದುದರಿಂದ ಮತ್ತೆ ನೀವು ಅಧಿಕಾರಕ್ಕೆ ಬರುತ್ತೇನೆಂದು ಭ್ರಾಂತಿಯನ್ನು ಇಟ್ಟುಕೊಳ್ಳಬೇಡಿ, ಅದು ಸಫಲವಾಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:– ಅವರು ತಬ್ಬಲಿಗಳಾದರು ಎಂದು ಹೇಳಿದರು, ತಬ್ಬಲಿಯನ್ನಾದರೂ ನಂಬಬಹುದು ಆದರೆ ಹೆಬ್ಬುಲಿಯನ್ನಂತೂ ಅಲ್ಲ;

ಶ್ರೀ ಬಿ.ಎಸ್. ಯಡಿಯೂರಪ್ಪ:– 1977ರಲ್ಲಿ ಮತ್ತು ನಂತರ ನಮಗೆ ಅಧಿಕಾರ ಸಿಕ್ಕಿತು ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲ ಎನ್ನತಕ್ಕದ್ದು ನಿಜ. ಈ ದೇಶದಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ್‌ರ ನೇತೃತ್ವದಲ್ಲಿ ಸಮಗ್ರವಾದ ಕ್ರಾಂತಿಯಾಗಿ ದೊಡ್ಡ ಹೋರಾಟ ನಡೆಯಿತು. ಆ ಹೋರಾಟದಿಂದ ಜನರಲ್ಲಿ ಬದಲಾವಣೆಯನ್ನು ತಂದಂಥ ಕಾಲದಲ್ಲಿ ನಮ್ಮ ಜನತಾ, ಜನತಾದಳದ ಸ್ನೇಹಿತರು ಸರಿಯಾದ ರೀತಿಯಲ್ಲಿ ಅದನ್ನು ಉಪಯೋಗ ಮಾಡಿಕೊಳ್ಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ಅವರು ಯಾವಾಗ ನೋಡಿದರೂ ಕೂಡ ಮೋಸ ಮಾಡತಕ್ಕ ಕೆಲಸವನ್ನೇ ಮಾಡುತ್ತಾರೆ. 1977 ಮತ್ತು 1989ರಲ್ಲೂ ಅದೇ ರೀತಿ ಮಾಡಿದ್ದಾರೆ. ನಿಮ್ಮ ಸ್ವಾರ್ಥ ಜಾಸ್ತಿಯಾಗಿದೆ, ಇವರು ಮಿತ್ರ ದ್ರೋಹಿಗಳು, ಅದರಿಂದಾಗಿಯೇ ಅಂದು ನಾವು ಅಧಿಕಾರವನ್ನು ಕಳೆದುಕೊಂಡೆವು ನಾವು ಸತ್ಯವಂತರಾಗಿ ಉಳಿದುಕೊಂಡೆವು, ನಾವು ನಿಮ್ಮಂತೆ ಮೋಸವನ್ನು ಮಾಡಲಿಲ್ಲ.

ಶ್ರೀ ರುಕ್ಮಯ್ಯ ಪೂಜಾರಿ:– 1979ರಲ್ಲಿ ನಾವೇನು ಹೊರಗೆ ಹೋಗಲಿಲ್ಲ. ನಿಮ್ಮ ಪಕ್ಷದವರೇ ಹೋದರು. ನಿಮ್ಮನ್ನು ನಿಮ್ಮವರೇ ಅಡ್ಡಿ ಮಾಡಿದರು. ಅದನ್ನು ಗಮನದಲ್ಲಿಟ್ಟುಕೊಳ್ಳಿ, ನಾವು ಏನೂ ಮಾಡಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ:– ಬ್ಯಾಕ್‌ವರ್ಡ್ ಕ್ಲಾಸ್‌ನ ಜನರು ಜನತಾದಳಕ್ಕೆ ಹೋಗುತ್ತಾರೆಂದು ಮಂದಿರ ಮತ್ತು ಮಸೀದಿಯ ಪ್ರಶ್ನೆಯನ್ನು ತೆಗೆದುಕೊಂಡು ಬಂದರು. ಏಕೆಂದರೆ ನಿಮ್ಮಲ್ಲಿರುವ ಹಿಂದುತ್ವದಿಂದಾಗಿ. ನಾವು ಹಿಂದುಳಿದ ವರ್ಗದವರು ಇನ್ನೂ ಶೂದ್ರರಾಗಿ ಇನ್ನೊಂದು ಸಾವಿರ ವರ್ಷ ನಿಮ್ಮಗಳ ಸೇವೆಯನ್ನು ಮಾಡಿಕೊಡಬೇಕೆಂದು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರುವುದರಿಂದ ನೀವು ನಮಗೆ ಮೋಸ ಮಾಡಿ ನಮಗೆ ಕೈಕೊಟ್ಟು ಹೋದುದರಿಂದ ನಾವು ಕೆಟ್ಟೆವು, ನೀವೂ ಸಹ ಕೆಟ್ಟಿರಿ, ಆದರೆ ನಾವು ಶಾಶ್ವತವಾಗಿ ಕೆಡಲಿಲ್ಲ, ನಾವು ಪುನಃ ಅಧಿಕಾರಕ್ಕೆ ಬರುತ್ತೇವೆ, ಆದರೆ ನೀವಂತೂ ಈ ಶತಮಾನದಲ್ಲಿ ಅಧಿಕಾರಕ್ಕೆ ಮತ್ತೆ ಬರಲು ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ಅವರು ಕೈಯನ್ನು ಕೊಡಲಿಲ್ಲ. ಪಲ್ಲಕ್ಕಿಯನ್ನು ಕೊಟ್ಟಿದ್ದರು. ಅದನ್ನು ನೀವು ಬಿಟ್ಟುಬಿಟ್ಟಿರಿ, ಅವರು ಹೆಚ್ಚಾಗಿ ಬಿಟ್ಟರು.

ಶ್ರೀ ಆರ್.ಎಲ್. ಜಾಲಪ್ಪ:– ಅದರ ಜೊತೆಗೆ ನೀವೂ ಕೂಡ ಸೇರಿಕೊಂಡಿರಲ್ಲ, ಅವರನ್ನು ತೆಗೆದುಕೊಂಡು ಹೋಗಿ ಡೆಪ್ಯೂಟಿ ಸ್ಪೀಕರ್ ಆಗಿ ಮಾಡಿದಿರಲ್ಲ. ಒಂದು ಕಾಲದಲ್ಲಿ ನಿಮಗೆ ನೀತಿ ಇತ್ತು. ಆದರೆ ಆ ನೀತಿ ಈಗೇನೂ ಇಲ್ಲ, ಎಲ್ಲಾ ಹೊರಟುಹೋಯಿತು.

ಶ್ರೀ ಕೆ.ಹೆಚ್. ರಂಗನಾಥ್:– ನಾವು ಏನು ಮಾಡುತ್ತೇವೆಂದರೆ ನಿಮ್ಮದು ಏನೆಂದು ನೋಡಿ ಮಾಡುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ:– ನಮಗಿಬ್ಬರಿಗೂ ಕೈಕೊಡುವವರು ತಾವು.

ಶ್ರೀ ಕೆ.ಹೆಚ್. ರಂಗನಾಥ್:– ನಾವಷ್ಟು ದಡ್ಡರಲ್ಲ.

ಶ್ರೀ ವಾಟಾಳ್ ನಾಗರಾಜ್:– ಕಳ್ಳ ಕಳ್ಳರೆಲ್ಲಾ ಒಂದು ಕಡೆ ಸಂತೆಗೆ ಸೇರಿದರು ಎನ್ನುವ ಗಾದೆ ಇದೆ. ಆದರಂತಾಯಿತು.

ಶ್ರೀ ಸಿ. ಬೈರರೇಗೌಡ:– ನಾವು ಡೆಲ್ಲಿಯಲ್ಲಿ ಏನು ಮಾಡುತ್ತೇವೆಂದು ತಾವು ಹೇಳಿದ್ದೀರಿ, ತಾವು ಡೆಲ್ಲಿಯಲ್ಲಿ ಕುಳಿತುಕೊಂಡು ಬರೀ ಕುರ್ಚಿಯ ಕಡೆಗೆಯೇ ನೋಡುತ್ತಿರುತ್ತೀರಿ. ಆದುದರಿಂದ ಈ ಪರಿಸ್ಥಿತಿ ಬಂದಿದೆ.

ಶ್ರೀ ಕೆ.ಹೆಚ್. ರಂಗನಾಥ್:– ಎರಡು ಸಾರಿ ಈ ರಾಷ್ಟ್ರದ ಜನರು ನಿಮಗೆ ಅಧಿಕಾರವನ್ನು ಈ ರಾಷ್ಟ್ರದ ಅಧಿಕಾರವನ್ನು ಕೊಟ್ಟಂಥ ಕಾಲದಲ್ಲಿ ಅದನ್ನು ಜವಾಬ್ದಾರಿಯಿಂದ ನಿರ್ವಹಿಸಲು ನಿಮ್ಮಿಂದ ಸಾಧ್ಯವಾಗದಿದ್ದರೆ ನಾವೇ ಆ ಕುರ್ಚಿಯನ್ನು ನೋಡಬೇಕಾಗುತ್ತದೆ. ಏಕೆಂದರೆ ಆ ಜವಾಬ್ದಾರಿಯನ್ನು ಹೊರುವುದಕ್ಕೆ ತಯಾರಾಗಿರುವವರು ನಾವೇ, ಆದಕ್ಕೋಸ್ಕರವೇ ನಾವು ಕುರ್ಚಿಯ ಕಡೆಗೆ ನೋಡಬೇಕಾಗುತ್ತದೆ. ಇಲ್ಲದಿದ್ದರೆ ರಾಷ್ಟ್ರವನ್ನು ಹಾಳು ಮಾಡುವುದಕ್ಕೆ ಸಾಧ್ಯವಿಲ್ಲ.

(ಸದಸ್ಯರೆಲ್ಲರೂ ಮೇಜು ತಟ್ಟಿ ಸಂತೋಷವನ್ನು ವ್ಯಕ್ತ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ರಂಗನಾಥ್‌ರವರು ಹೇಳಿದ ಮಾತುಗಳು ಸತ್ಯವಾಗಿದೆ. ನಮ್ಮ ದೇಶದ ಜನರು ನಮಗೆ ಎರಡು ಸಾರಿ ಅಧಿಕಾರವನ್ನು ಕೊಟ್ಟಿದ್ದಾರೆ. 1977 ಮತ್ತು 1989ರಲ್ಲಿ ಎರಡು ಸಾರಿ ನಮಗೆ ಅಧಿಕಾರವನ್ನು ಕೊಟ್ಟರು. ಆದರೆ ನಮಗೆ ಎರಡೂ ಸಾರಿ ಸಹವಾಸ ದೋಷದಿಂದ ಹೀಗಾಯಿತು. ನಮಗೆ ಇವರ ಸಹವಾಸದಿಂದ ಕೆಟ್ಟದ್ದು ಆಯಿತು. ಅವರಿಗೆ ಬಹುಶಃ ಜ್ಞಾಪಕ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ, 1979ರಲ್ಲಿ ಡ್ಯುಯಲ್ ಮೆಂಬರ್‌ಶಿಪ್ ಮೇಲೆ ನಮ್ಮ ಪಾರ್ಟಿಯನ್ನು ಬಿಟ್ಟು ಹೋದರು. ಇವರು ಹೇಳುವುದೊಂದು ಮಾಡುವುದು ಒಂದು. ನಿಮ್ಮ ಪಾರ್ಟಿಯ ಬಾವುಟ ಬೇಕು, ಆದರೆ ನಮ್ಮದ್ದನ್ನು ನಾವು ಮಾಡುತ್ತೇವೆ ಎಂದು ಹೇಳುವುದು. ನಾವು ಮಂಡಲ್ ಕಮೀಷನ್‌ನನ್ನು ಇಂಪ್ಲಿಮೆಂಟ್ ಮಾಡದೇ ಹೋಗದಿದ್ದರೆ ನಮ್ಮ ಪಲ್ಲಕ್ಕಿಯನ್ನೇ ಇವರು ಹೊತ್ತುಕೊಂಡು ಹೋಗುತ್ತಿದ್ದರು. ವಿ.ಪಿ. ಸಿಂಗ್ ಜಗತ್ತಿನಲ್ಲಿಯೇ ದೊಡ್ಡ ಮನುಷ್ಯ ಎಂದು ಹೊತ್ತುಕೊಂಡು ತಿರುಗಾಡುತ್ತಾ ಇರುತ್ತಿದ್ದರು. ನಾವು ಮಂಡಳ್ ಕಮಿಷನ್ ಮಾಡುತ್ತೇವೆ ಎಂದು ಹೇಳಿದೆವು ಆಗ ನಮಗೆ ಮುಳುಗಿಸಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಪ್ರಸ್ತಾಪ ಮಾಡಿದರು. ಸತ್ಯವಾದ ಮಾತುಗಳನ್ನು ಅವರು ಹೇಳಿದ್ದಾರೆ. ವಿರೋಧ ಪಕ್ಷಕ್ಕೆ ದೈವಿಕ ಪುಣ್ಯಾತ್ಮ ಲೋಕನಾಯಕ ಜಯಪ್ರಕಾಶ್ ನಾರಾಯಣರವರ ಹೋರಾಟದ ಫಲದ ಅವಕಾಶವನ್ನು ಕಳೆದುಕೊಂಡರು.

ಶ್ರೀ ಆರ್.ಎಲ್. ಜಾಲಪ್ಪ:– ಜಯಪ್ರಕಾಶ ನಾರಾಯಣ್‌ರವರ ಹೆಸರನ್ನು ಏಕೆ ಹೇಳುತೀರಿ ? ನಿಮಗೆ ಬೇಕಾಗಿರುವುದು ಅಧಿಕಾರ ಅದಕ್ಕೆ ಏನು ಹೇಳಬೇಕೋ ಅದನ್ನು ಹೇಳಿ, ಏಕೆ ದೊಡ್ಡ ದೊಡ್ಡ ಮನುಷ್ಯರ ಹೆಸರುಗಳನ್ನು ಹೇಳುತ್ತೀರಿ ?

ಶ್ರೀ ಕೆ.ಹೆಚ್. ರಂಗನಾಥ್:– ತಮಗೆ 1956–57 ರ ವಿಚಾರ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಬೆಂಗಳೂರಿನಲ್ಲಿ ಮೊದಲನೆಯ ಅಖಿಲ ಭಾರತ ಪ್ರಜಾಸೋಸಲಿಸ್ಟ್ ಪಕ್ಷದ ಸಭೆಯು ಟೌನ್‌ಹಾಲ್‌ನಲ್ಲಿ ಆಯಿತು. 1952ರ ಚುನಾವಣೆಯಾದ ನಂತರ ಮೊದಲಬಾರಿಗೆ ಕಾಂಗ್ರೆಸ್‌ಗೆ ಎಲ್ಲಾ ಪಕ್ಷಗಳೂ ವಿರೋಧ ಪಕ್ಷವಾಗಬೇಕೆಂಬ ಒಂದು ವಿಚಾರವು ಬಂದಾಗ, ನಿಮ್ಮ ಜೊತೆಗೆ ಬೇಡ, ಕಮ್ಯೂನಿಸ್ಟ್ ಜೊತೆಗೆ ಬೇಡ ಎಂದು ಹೇಳಿ, ವಿರೋಧ ಮಾಡಿದಂಥವರು ಜಯಪ್ರಕಾಶ್ ನಾರಾಯಣ್‌ರವರು. ಆದರೆ 1952 ರಿಂದ 1977 ರ ವರೆಗೂ 1976 ರಲ್ಲಿ ಎಮರ್ಜನ್ಸಿ ಆದಂಥ

ಕಾಲದಲ್ಲಿ ಅವರಿಗೆ ಏನೋ ಅಭಿಪ್ರಾಯ ಬದಲಾವಣೆಯಾಗಿ, ಇರಲಿ ನೋಡೋಣ, ಸರಿಯಾಗಿರಬಹುದು ಎಂದುಕೊಂಡರು. 1971 ರಲ್ಲಿ ಗ್ರ್ಯಾಂಡ್ ಆಲಿಯನ್ಸ್ ಮಾಡಿಕೊಂಡು ಎಲ್ಲಾ ನಾಲ್ಕು ಪಕ್ಷದವರು ಸೇರಿಕೊಂಡು, ಪಾಪ ತಾವು ಆಗ ಟೌನ್‌ನೊಳಗೆ ಇದ್ದೀರಿ. ಟೌನ್‌ನೊಳಗೆ ಇದ್ದವರನ್ನು ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಬಿಟ್ಟು .ಬಂದರು. ಹೀಗಾಗಿ ನೀವು ಅಲ್ಲಿ, ಇಲ್ಲಿ ಎಂದು ಚಿಗುರಿದ್ದೀರಿ. ಜಯಪ್ರಕಾಶ್ ನಾರಾಯಣ ನಿಮಗೆ ಅನುಕೂಲವಾಗಿದ್ದರು ಎಂದು ಅವರ ಹೆಸರು ಹೇಳುತ್ತೀರಿ, ವಿವೇಕಾನಂದರ ಹೆಸರನ್ನೂ ಹೇಳುತ್ತೀರಿ. ಇಲ್ಲವಾದರೆ ಎಲ್ಲಿ ಅವರ ಹೆಸರನ್ನು ಹೇಳುತ್ತಿದ್ದೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವುಗಳು ಪಿಎಸ್‌ಪಿಯಲ್ಲಿದ್ದವರು. ಅಲ್ಲಿ ಹೋರಾಟ ಮಾಡಿದವರು. ಜೆ.ಪಿ.ಯವರು ಹೋರಾಟ ಮಾಡಿದಂಥ ಸಂದರ್ಭದಲ್ಲಿ ಲಕ್ಷಾಂತರ ಜನರು ಜೈಲ್‌ನಲ್ಲಿ ಕುಳಿತು ಆ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟ ಮಾಡಿದಾಗ, ಆಗಿನ ಅಂಕಿಅಂಶಗಳನ್ನು ತೆಗೆಯಬೇಕು. ಅವೊತ್ತು ಜೆ.ಪಿ.ಯವರ ವಿಚಾರಧಾರೆಗೆ ಬೆಂಬಲಕೊಟ್ಟು, ಜೈಲ್‌ನಲ್ಲಿ ಕುಳಿತು ಹೋರಾಟ ಮಾಡಿ ಅಲ್ಲಿಂದ ವಾಪಸ್ ಬರುತ್ತೇವೆ ಎಂಬುದು ನಮಗೆ ಗೊತ್ತಿರಲಿಲ್ಲ. ನಾವು ಏಕೆ ಹೋರಾಟ ಮಾಡಿದ್ದೇವೆ ಅಂದರೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಲ್ಲಿ ಜನರಿಗೆ ಬೇಕಾದ ಕನಿಷ್ಠ ಸೌಲಭ್ಯಗಳನ್ನು ಕೂಡ ಕೊಡದೇ ತಮ್ಮ ಸ್ವಾರ್ಥದಲ್ಲಿಯೇ ನಿರತರಾಗಿರತಕ್ಕಂಥ ಕಾಂಗ್ರೆಸ್ ಪಕ್ಷವು ಅಧಿಕಾರದಿಂದ ಮೊದಲು ಪಕ್ಕಕ್ಕೆ ಸರಿದು, ಯಾರಾದರೂ ಒಬ್ಬರು ಅಧಿಕಾರಕ್ಕೆ ಬರಲಿ ಎಂದು ನಾವು ಹೋರಾಟ ಮಾಡಿದ್ದೇವೆ. ಆದರೆ ಏನಾಯಿತು ? ನಾನು ಜನತಾ ದಳದ ಸ್ನೇಹಿತರನ್ನು ಕೇಳುವುದಕ್ಕೆ ಇಚ್ಛೆ ಪಡುವುದೇನೆಂದರೆ, 1983ರಲ್ಲಿ ಬಿಜೆಪಿಯ 18 ಜನರ ಬೇಷರತ್ ಬೆಂಬಲ ಇಲ್ಲದಿದ್ದರೆ, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಇಲ್ಲಿ ಮುಖ್ಯಮಂತ್ರಿಗಳಾಗಿ ಇರುತ್ತಿದ್ದರೆ ?

ಶ್ರೀ ಕೆ.ಹೆಚ್. ರಂಗನಾಥ್:– ನೀವು ಅಲೈಯನ್ಸ್ ಮಾಡಿ ಕಾಂಗ್ರೆಸ್ ವಿರುದ್ಧ ಎಂದು ಹೇಳಿ ಗೆದ್ದು ಬಂದಿದ್ದೀರಿ. ಇಲ್ಲವಾದರೆ ನೀವಲ್ಲಿ ಗೆಲ್ಲುತ್ತಿದ್ದೀರಿ ?

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಯಡಿಯೂರಪ್ಪನವರು ಹೇಳತಕ್ಕಂಥ ಮೂರು ವಿಚಾರಗಳೂ ಸರಿಯಾಗಿದೆ. 1977ರಲ್ಲಿ ಅಧಿಕಾರಕ್ಕೆ ಬಂದಾಗಲೂ ನಾವು, ನೀವು ಜೊತೆಯಲ್ಲಿದ್ದೆವು. ರಾಮಕೃಷ್ಣ ಹೆಗಡೆಯವರು ಕೂಡ ಮುಖ್ಯಮಂತ್ರಿಯಾಗಿದ್ದುದು ಕೂಡ ನಿಮ್ಮ ಬೆಂಬಲ ಪಡೆದುಕೊಂಡೆ ಆಗಿದ್ದಾರೆ ಮತ್ತು ವಿ.ಪಿ. ಸಿಂಗ್‌ರವರು ಕೂಡ ನಿಮ್ಮ ಬೆಂಬಲ ಪಡೆದುಕೊಂಡೇ ಪ್ರಧಾನಿಯಾಗಿದ್ದಾರೆ. ಆದರೆ ಈಗ ನಮಗೆ ಅರ್ಥವಾಗಿದೆ, ನಿಮ್ಮ ಸಹವಾಸ ಮಾಡುವುದು ಬಹಳ ಕಷ್ಟದಾಯಕ.

ಶ್ರೀ ಆರ್.ವಿ. ದೇಶಪಾಂಡೆ:– ನಿಮ್ಮ ಸಹವಾಸ ಮಾಡುವುದು ಕಷ್ಟ. ಆದರೆ ನಿಮಗೆ ಗ್ರಾಮಾಂತರ ಪ್ರದೇಶವನ್ನು ಪರಿಚಯ ಮಾಡಿಸಿದವರು ನಾವು ಎಂಬುದನ್ನು ನೀವು ಮರೆಯಬಾರದು.

ಶ್ರೀ ಆರ್. ಎಲ್. ಜಾಲಪ್ಪ:– 85ರಲ್ಲಿ ಚುನಾವಣೆ ಆಯಿತಲ್ಲ ಏನಾಯಿತು ? 89ರಲ್ಲಿ ನೀವು ಏಕೆ ಬರಲಿಲ್ಲ ? ನಿಮ್ಮ ಕಾಟ ಸಾಕಾಗಿ ನೀವು ಹೋದರೆ ಸಾಕು ಎನ್ನುವಂತಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಒಂದು ಮಾತಂತೂ ಸತ್ಯ. ಈ ಕಡೆಯವರು ಹೇಳಿದರೆ 45 ವರ್ಷದ ನಮ್ಮ ಜನತಾ, ಜನತಾದಳದ ಆಡಳಿತ ವೈಖರಿ ಬಹುತೇಕ 45 ವರ್ಷಗಳ ಕಾಂಗ್ರೆಸಿನವರು ನಡೆಸಿದ ಆಡಳಿತ ವೈಖರಿ ಇದರ ಪರಿಣಾಮ ತಾವು ಒಪ್ಪುತ್ತೀರಿ ತಾನೇ. ಸ್ವಂತಶಕ್ತಿಯಾಗಿ ನಮ್ಮ ಶಕ್ತಿ ಆಧಾರದ ಮೇಲೆ ನಾಲ್ಕು ರಾಜ್ಯದಲ್ಲಿ ಅಧಿಕಾರಕ್ಕೆ ಬಂದೆವು.

ಶ್ರೀ ಆರ್.ವಿ. ದೇಶಪಾಂಡೆ:- 77ರಲ್ಲಿ ನೀವು ಸಹ ಅಧಿಕಾರದಲ್ಲಿರಿ. ಕಾರ್ಯವೈಖರಿ ಅಂದರೆ ನಿಮ್ಮದೂ ಬರುತ್ತದಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- 77ರಲ್ಲಿ ಯಾರು ಪ್ರಧಾನಿಯಾಗಬೇಕು ಎಂದು ಕಚ್ಚಾಡುವ ಪರಿಸ್ಥಿತಿ ಬಂದಾಗ, ಯಾರು ಮಂತ್ರಿಗಳಿರಬೇಕೆಂದು ಕಚ್ಚಾಡಬೇಕಾದರೆ, ಲಾಲ್‌ಕೃಷ್ಣ ಆದ್ವಾನಿಯವರು ನಮಗಿರುವ ನಮಗೆ ಇರತಕ್ಕ ನಾಲ್ಕು ಮಂತ್ರಿಸ್ಥಾನ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು. ಆದರೆ ಜನತೆಯ ಅಣತಿಯನ್ನು ಹಾಳು ಮಾಡಬೇಡಿ, ಎಂದು ವಿನಂತಿ ಮಾಡಿದರು.

ಶ್ರೀ ಹೆಚ್. ಏಕಾಂತಯ್ಯ:- ಅಧ್ಯಕ್ಷರೇ ಇದಕ್ಕೆ ಮಂಗಳ ಹಾಡುವುದು ಉತ್ತಮ. ಮಾನ್ಯ ಯಡಿಯೂರಪ್ಪನವರು ಏನು ಹೇಳ್ತಿದ್ದಾರೆ. ಅಥವಾ ಹಿರಿಯ ಸಚಿವರಾದ ರಂಗನಾಥ್‌ರವರೂ ನಮ್ಮ ಪಕ್ಷದವರೂ ಹೇಳುವುದರ ಹಿನ್ನಲೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿರುವ ಚುನಾವಣಾ ಪದ್ಧತಿ, ಪಾರ್ಲಿಮೆಂಟರಿ ಪ್ರಜಾಸತ್ತೆಯನ್ನು ಹಿಡಿದುಕೊಂಡಿರುವ ಜನ ಬೇರೆ ಇದ್ದಾರೆ. ನಾವೆಷ್ಟೇ ಇಲ್ಲಿ ಸೈದ್ಧಾಂತಿಕವಾಗಿ ಮಾತನಾಡಿದರೂ ಸಹ ನಮ್ಮ ದೇಶದ ಮತ್ತು ಅಂತರರಾಷ್ಟ್ರೀಯ ಬಂಡವಾಳಶಾಹಿಗಳು ನಮ್ಮ ದೇಶವನ್ನಾಳುವ ಸ್ಥಿತಿಯಲ್ಲಿದ್ದಾರೆ. ನಮ್ಮ ಚುನಾವಣೆ ಪದ್ಧತಿ ಸುಧಾರಣೆಯಾಗದೆ ಬಂಡವಾಳಶಾಹಿ ಗುತ್ತಿಗೆಯಿಂದ ಹೊರಬರಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಬಂಡವಾಳಶಾಹಿಗಳ ಅಪೇಕ್ಷೆಯಂತೆ ನಾವು ಆಡಳಿತ ನಡೆಸುತ್ತೇವೆ. ರಾಜ್ಯಸರ್ಕಾರ ಇರಬಹುದು, ರಾಷ್ಟ್ರಸರ್ಕಾರ ಇರಬಹುದು; ಆದರೆ ಯಾವ ಒಂದು ವರ್ಗ ರಾಷ್ಟ್ರದಲ್ಲಿ ಆಡಳಿತ ಮಾಡಲು ಪ್ರಯತ್ನ ಮಾಡುತ್ತಿದೆ ಮೊದಲಿಂದಲೂ ಅದು ಗುತ್ತಿಗೆ ತೆಗೆದುಕೊಂಡಿದೆ. ಅದರ ತಕ್ಕ ವಿರುದ್ಧವಾಗಿ ನಾವು ಮಾತನಾಡಿದಾಗ ಕಾರ್ಯಕ್ರಮ ಜಾರಿಗೊಳಿಸಲು ಪ್ರಯತ್ನಿಸಿದಾಗ ಅವರು ನಮ್ಮನ್ನು ಒಡೆಯಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದು ಪಕ್ಷದ ಹೆಸರಲ್ಲಿರಬಹುದು ಜಾತಿ ಹೆಸರಲ್ಲಿರಬಹುದು, ಧರ್ಮದ ಹೆಸರಲ್ಲಿರಬಹುದು. ಮಾನ್ಯ ಯಡಿಯೂರಪ್ಪನವರು ಎಲ್ಲಿಯವರೆಗೆ ಇರಲು ಸಾಧ್ಯ ? ಎಲ್ಲಿಯವರೆಗೆ ಈ ಮೇಲ್ವರ್ಗದ ಜನಗಳ ಹಿಡಿತಕ್ಕೆ ಅವರು ಒಳಗಾಗಿದ್ದಾರೆ, ಬಂಡವಾಳಶಾಹಿಗಳ ಬೆಂಬಲ ಎಲ್ಲಿಯವರೆಗೆ ಅವರಿಗಿರುತ್ತದೆ. ಅಲ್ಲಿಯವರೆಗೆ ಅವರು ಸುರಕ್ಷಿತವಾಗಿರುತ್ತಾರೆ. ಆದರೆ ಯಾವಾಗ ಜನಪದವಾದ ಯೋಜನೆಗಳನ್ನು ಜಾರಿಗೆ ಕೊಡಲು ಪ್ರಯತ್ನ ಮಾಡಿದಾಗ ಅದು ಕಾಂಗ್ರೆಸ್ ಸರ್ಕಾರ ಇರಬಹುದು ಜನತಾದಳ ಸರ್ಕಾರ ಇರಬಹುದು. ಅದನ್ನು ಅಸ್ಥಿರಗೊಳಿಸಿದ ಪರಿಸ್ಥಿತಿ ನಮ್ಮ ರಾಷ್ಟ್ರದಲ್ಲಿ ಯಾವತ್ತೂ ಇದೆ. ಇವತ್ತೂ ಇದೆ. ನಮ್ಮಲ್ಲಿರುವ ಪ್ರಭಾವಿ ವಲಯದ ವಿರುದ್ಧ ನಾವು ಮಾತನಾಡಲು ಹೋದರೆ ಅವರೆಲ್ಲ ಒಂದಾಗಿ ಎಲ್ಲಾ ಸರ್ಕಾರಗಳನ್ನು ತೆಗೆಯುವ ಶಕ್ತಿ ಅವರಿಗೆ ಇದೆ. ನಮ್ಮ ಯಡಿಯೂರಪ್ಪನವರು ಆದ್ದರಿಂದ ಮೇಲ್ವರ್ಗದ ಪರವಾಗಿರುವವರೆಗೆ ಮಾತ್ರ ಅವರಿಗೆ ರಕ್ಷಣೆ ಇರುತ್ತದೆ, ಜನಪರವಾದ ಕಾರ್ಯಕ್ರಮ ಜಾರಿ ಮಾಡಲು ಇರಲಿಕ್ಕೆ ಸಾಧ್ಯವಿಲ್ಲ. ನಾವೆಲ್ಲ ಎಷ್ಟೇ ಸೈದ್ಧಾಂತಿಕವಾಗಿ ಮಾತನಾಡಿದರೂ ನಮ್ಮ ರಾಷ್ಟ್ರದ ಚುನಾವಣೆ ಮತ್ತು ಆಡಳಿತ ಪದ್ಧತಿ ಏನಿದೆ ಅಲ್ಲಿಯವರೆಗೆ ನಾವೆಲ್ಲ ಅವರ ಗುಲಾಮರಂತೆ ಇಲ್ಲಿ ಕೆಲಸ ಮಾಡುತ್ತಿದ್ದೇವೆಂದರೆ ತಪ್ಪಾಗುವುದಿಲ್ಲ.

ಪ್ರೊ..ಎಂ.ಡಿ. ನಂಜುಂಡಸ್ವಾಮಿ:- ಏಕಾಂತಯ್ಯನವರು ಈ ವಿಷಯಕ್ಕೆ ಮಂಗಳ ಹಾಡ ಬೇಕೆಂದರು. ಹಾಗಾದರೆ ಒಂದು ಮಾತು ಹೇಳ್ತೀನೆ. ಮುಂದೆ ಏನಾಗಬಹುದೆಂಬ ಬಗ್ಗೆ ಭ್ರಮೆಗಳಿರಬಹುದು ಎಂದು ರಂಗನಾಥ್ ಹೇಳುತ್ತಿದ್ದರು. ಇವರಿಗೇನಾದರೂ ಅವಕಾಶ ಇದ್ದರೆ ಸ್ವಲ್ಪ ಉತ್ತರ ಭಾರತದಲ್ಲಿ ಇರಬಹುದು ಏಕೆಂದರೆ ಪರಸ್ಪರ ಭೇಟಿ ಮಾಡಿದಾಗ ರಾಮರಾಮ ಅನ್ನುತ್ತಾರೆ. ಆದರೆ ನಾವೆಲ್ಲ ಶಿವ ಶಿವ ಅನ್ನುತ್ತೇವೆ ಇದನ್ನು ತಿಳಿದುಕೊಳ್ಳಬೇಕು. ಇದನ್ನು ನಾನು ತಮಾಷೆಗೆ ಹೇಳ್ತಿಲ್ಲ, ಆ ಭ್ರಮೆ ಹೋಗಿಬಿಡಲಿ ಎಂದು ಸ್ವಲ್ಪ ಅವಕಾಶ ಇದ್ದರೆ ಆ ರಾಮ ಬೆಲ್ಟಲ್ಲಿ ನಾವಿರುವುದು ಶಿವ ಬೆಲ್ಟಲ್ಲಿ, ಬಿಜೆಪಿಗೆ ಕೊನೆಗೆ ಸಿಕ್ಕೋದು ಶಿವ ಶಿವಾನೇ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಲ್ಕೈದು ವರ್ಷದ ಹಿಂದಿನ ರಾಜಕೀಯ ಪರಿಸ್ಥಿತಿ ನೋಡಿದಾಗ ದೇಶದ ಸ್ಥಿತಿ ಹೇಗಿತ್ತು?

ಚುನಾವಣೆಗಳು ಬಂದಾಗ ಕಾಂಗ್ರೆಸ್‌ನ ವಿರುದ್ಧ ನಿಮ್ಮನ್ನು ಸೋಲಿಸುವುದಕ್ಕೆ ಎಲ್ಲಾ ರಾಜಕೀಯ ಪಕ್ಷದವರು ಒಂದಾಗಿ ಹೋರಾಟ ಮಾಡುವಂಥ ಪರಿಸ್ಥಿತಿ ಇತ್ತು. ಆದರೆ ಈ ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟೆವು ಎಂದು ಹೇಳಿ.....

ಶ್ರೀ ಕೆ.ಹೆಚ್. ರಂಗನಾಥ್:– ಅದು 57ರಲ್ಲಿ ನಡೆದಿದೆ. 67ರಲ್ಲಿ ನಡೆದಿದೆ. 77ರಲ್ಲಿ ನಡೆದಿದೆ, 89ರಲ್ಲಿ ನಡೆಯಿತು. ಕಾಂಗ್ರೆಸ್ ವಿರುದ್ಧ ಎಲ್ಲಾ ಪಕ್ಷದವರು ಸೇರಿ 67ರಲ್ಲಿ ಚುನಾವಣೆ ನಡೆದಾಗ ಕೇಂದ್ರದಲ್ಲಿ ಹತ್ತಿರ ಹತ್ತಿರ ಬಂದರು. 32 ಓಟಿನಿಂದ ಮಾತ್ರ ಕೇಂದ್ರಸರ್ಕಾರದಲ್ಲಿ ಅಧಿಕಾರವನ್ನು ಕಾಂಗ್ರೆಸ್ ಪಕ್ಷ ಉಳಿಸಿಕೊಂಡಿತು. ಆದ್ದರಿಂದ ಇದು ನಿನ್ನೆ ಮೊನ್ನೆಯದಲ್ಲ. ಇದು ನಡೆದಿದೆ. ಮಾನ್ಯ ಏಕಾಂತಯ್ಯನವರು ಚೆನ್ನಾಗಿ ಹೇಳಿದರು, ತಮ್ಮ ಬೇಸ್ ಯಾವುದು ಸ್ವಾಮಿ ? ಬಂಡವಾಳಶಾಹಿಗಳು ಏನು ಇದ್ದಾರೆ, ಅವರನ್ನು ಬಿಟ್ಟು ನೀವು ದೂರ ಇದ್ದೀರೋ ? ನಿಮ್ಮ ಆರ್ಥಿಕ ಸ್ಪಷ್ಟ ನೀತಿ ಏನು ? ರೈತರ ಬಗ್ಗೆ ನೀತಿ ಏನು ? ಕಾರ್ಮಿಕರ ಬಗ್ಗೆ ನಿಮ್ಮ ನೀತಿಯೇನು ?

ಶ್ರೀ ಬಿ.ಹೆಚ್. ಬನ್ನಿಕೋಡ್:– ಅವರದು ಮಾರ್ವಾಡಿ ನೀತಿ. ಅದಕ್ಕಾಗಿ ಈ ಮಾತನಾಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಏತಕ್ಕೋಸ್ಕರ ಇಲ್ಲಿರುವ ಬನ್ನಿಕೋಡ್‌ರವರು ನಮ್ಮ ರೈತ ಸಂಘದ ಮುಖಂಡರು ಮಾತನಾಡಬೇಕು, ಅದು ರೆಕಾರ್ಡ್‌ನಲ್ಲಿ ಬರಬೇಕು ಎಂದು ಹೇಳಿ ಸುಮ್ಮನೆ ಇದ್ದೇನೆ ಎಂದು ಹೇಳಿದರೆ ದಯಮಾಡಿ ಸ್ವಲ್ಪ ಶಾಂತವಾಗಿ ನಿಮ್ಮ ಪರಿಸ್ಥಿತಿಯ ಬಗ್ಗೆ ಯೋಚನೆ ಮಾಡಿ ಎರಡೂ ಕಡೆ ಇರತಕ್ಕಂಥವರು. ಈ ದೇಶದಲ್ಲಿ ಬಹುತೇಕ 45 ವರ್ಷಗಳ ಅಧಿಕಾರ ಮಾಡಿದಂಥ ಕಾಂಗ್ರೆಸ್ ಪಕ್ಷದ ವಿರುದ್ಧ ನಾವೆಲ್ಲಾ ರಾಜಕೀಯ ಪಕ್ಷಗಳು ಒಂದಾಗಿ ಹೋರಾಟ ಮಾಡುವಂಥಾದ್ದು ಒಂದು ಕಾಲ ಇತ್ತು. ನಮ್ಮ ವಿರುದ್ಧ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದಿರಿ. ನಿಮ್ಮ ಆರ್ಥಿಕ ನೀತಿಯೇನು ? ಕೃಷಿಕರ ಬಗ್ಗೆ ನಿಮ್ಮ ನೀತಿಯೇನು ? ನಿಮಗೆ ತಿಳಿಸುವ ಅಗತ್ಯ ಇಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಇವತ್ತು ನಿಮ್ಮ ಪರಿಸ್ಥಿತಿ ಏನು ?

ಶ್ರೀ ಕೆ.ಹೆಚ್. ರಂಗನಾಥ್:– ಇದರ ಜೊತೆಗೆ ಸಮಾಜವಾದ ಪಕ್ಷ ಕಮ್ಯುನಿಸ್ಟ್ ಪಕ್ಷದಲ್ಲಿ ಇದ್ದಂಥವರು, ಕೆಲಸ ಮಾಡಿದಂಥವರೇ. ಈ ರಾಷ್ಟ್ರದ ಸ್ವಾತಂತ್ರ್ಯಕ್ಕೆ ತಮ್ಮ ಕೊಡುಗೆ ಏನು ? 1948ರಲ್ಲಿ ಕಾಂಗ್ರೆಸ್‌ನಲ್ಲಿದ್ದಂಥ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷ ಹರಿದುಹೋಯಿತು. ಪ್ರಜಾಪ್ರಭುತ್ವ ಬೇಕು ಎನ್ನುವ ಸಿದ್ಧಾಂತದ ಮೇಲೆ ಅದು ಹೊರಗೆ ಹೋಯಿತು. ಪಕ್ಷ ಕಟ್ಟಿದರು. ತದನಂತರ ರಾಜಕೀಯ ಬದಲಾವಣೆಗಳು ಏನೇನೋ ಆಗಿದೆ. ತಮ್ಮ ಕೊಡುಗೆ ಏನು ಈ ರಾಷ್ಟ್ರದ ಸ್ವಾತಂತ್ರ್ಯಕ್ಕೆ ರಾಷ್ಟ್ರದ ಸ್ವಾತಂತ್ರ್ಯಕ್ಕೆ ತಮ್ಮ ಕೊಡುಗೆ ಇಲ್ಲದೇ ಇರುವಾಗ ಇನ್ನು ಆರ್ಥಿಕ ನೀತಿಗೆ ತಮ್ಮ ಕೊಡುಗೆ ಎಲ್ಲಿಂದ ಇರುತ್ತದೆ ?

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಹಾತ್ಮ ಗಾಂಧೀಜಿಗೆ ಗುಂಡಿಟ್ಟಂಥ ಜನರು ಅವರು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಂಥ ಹುಚ್ಚು ಜನರಿಗೆ ಏನು ಹೇಳುತ್ತೀರಿ ? ಇದು ಹುಚ್ಚುತನದ ಪರಮಾವಧಿ. ನೀವು ಒಂದು ಭ್ರಮೆಯಲ್ಲಿ ಇದ್ದೀರಿ.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ:– ಚರಿತ್ರೆಯಲ್ಲಿ ಭ್ರಮೆ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಏನು ಭ್ರಮೆಯಲ್ಲಿ ಇದ್ದೀರಿ. ಸ್ವಾತಂತ್ರ್ಯಪೂರ್ವದಲ್ಲಿ ಈ ದೇಶಕ್ಕೆ ಸ್ವಾತಂತ್ರ್ಯಕ್ಕೆ ಬೇಕು ಎಂದು ಹೋರಾಟ ಮಾಡಿದಂಥ ಕಾಂಗ್ರೆಸ್ ಅದೊಂದು ರಾಜಕೀಯ ಪಕ್ಷ ಅಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ಬೇಕು ಎಂದು ಹೇಳಿ ಎಲ್ಲಾ ಸ್ವಾತಂತ್ರ್ಯ ಸಂಗ್ರಾಮಿಗಳನ್ನು ಕಟ್ಟಿಕೊಂಡು ಹೋರಾಟ ಮಾಡಿದಂಥ ಮಹಾನ್ ಸಂಸ್ಥೆ ಅದು. ಈ ದೇಶಕ್ಕೆ ಸ್ವಾತಂತ್ರ್ಯ ಬಂದ ತಕ್ಷಣ ಮಹಾತ್ಮಗಾಂಧಿಯವರು ಒಂದು ಕಿವಿ ಮಾತನ್ನು ಹೇಳಿದರು. ಈ ದೇಶಕ್ಕೆ ಸ್ವಾತಂತ್ರ್ಯಗಳಿಸಿಕೊಟ್ಟವರು ನಾವು ಎಂದು ಹೇಳಿ ದೇಶದ ಜನತೆಗೆ ಎಲ್ಲಿ ಅನ್ಯಾಯ ಮಾಡುತ್ತೀರೋ ಎಂದು ಹೇಳಿ ಕಾಂಗ್ರೆಸನ್ನು ವಿಸರ್ಜನೆ ಮಾಡಿ ನಿಮಗೆ ಬೇಕಾದಂಥ ರಾಜಕೀಯ ಪಕ್ಷ ಕಟ್ಟಿಕೊಳ್ಳಿ ಎಂದು ಅವತ್ತು ಮಹಾತ್ಮ ಗಾಂಧೀಜಿಯವರು ಹೇಳಿದರು. ಇವತ್ತು ನಾನು ನಿಮ್ಮನ್ನು ಕೇಳುತ್ತಾನೆ, 45 ವರ್ಷ ಯಾವುದೋ ಒಂದು ಪುಣ್ಯ ನಾವು ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟೆವು ಎಂದು ಅದರ ಹೆಸರನ್ನು ಹೇಳಿಕೊಂಡು 45 ವರ್ಷಗಳಲ್ಲಿ ನಮ್ಮ ಸಾಧನೆ ಬೇಡವೆ ? ಬಿಜೆಪಿ ಬೇಡ. ನಿಮ್ಮನ್ನು ಕೇಳುತ್ತೇನೆ, 45 ವರ್ಷದಲ್ಲಿ ನಿಮ್ಮ ಸಾಧನೆಯೇನು, ಗ್ರಾಮೀಣ ಜನ ಬಗ್ಗೆ, ಬಡವರ ಬಗ್ಗೆ ಕೂಲಿ ಕಾರ್ಮಿಕರ ಬಗ್ಗೆ ನಿಮ್ಮ ಸಾಧನೆಯೇನು ? ಇದರ ಬಗ್ಗೆ ತಾವು ಹೇಳಬೇಕಾಗುತ್ತದೆ.

ದಯಮಾಡಿ, ರಾಮಸ್ವಾಮಿಯಂಥ ಹಿರಿಯರು, ನಿಮ್ಮಂಥ ಹಿರಿಯರು ಯೋಜನೆ ಮಾಡುವಂಥ ಕಾಲ. 45 ವರ್ಷಗಳ ಕಾಂಗ್ರೆಸ್‌ನ ತಪ್ಪು ನೀತಿಯಿಂದ ಈ ದೇಶದ ಪ್ರಧಾನಿ ಲೋಕಸಭೆಯಲ್ಲಿ ನಿಂತುಕೊಂಡು ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಇತರ ಎಲ್ಲಾ ರಾಜಕೀಯ ಪಕ್ಷಗಳ ಸಹಕಾರ ಕೇಳುವಂಥ ದುಃಸ್ಥಿತಿ ಬಂದಿದೆ, ಇವತ್ತು ಕೇಂದ್ರದಲ್ಲಿ ನಿಮ್ಮದು ಬಹುಮತ ಇಲ್ಲ. ಬಿ.ಜೆ.ಪಿ. ಯಾವ ಸ್ಥಾನದಲ್ಲಿದೆ. ಭಾರತೀಯ ಜನತಾ ಪಾರ್ಟಿ ವಿರುದ್ಧ ಇದೇ ದೇಶದಲ್ಲಿ ಕಾಂಗ್ರೆಸ್ ಸೇರಿ, ಜನತಾ, ಜನತಾದಳ, ಕಮ್ಯುನಿಸ್ಟರು ಎಲ್ಲರೂ ಸೇರಿ, ಬಿ.ಜೆ.ಪಿ.ಯನ್ನು ಎದುರಿಸುವಂಥ ಒಂದು ದುಃಸ್ಥಿತಿಗೆ ಬಂದಿದ್ದೀರಿ ಅಂದರೆ ಬಿ.ಜೆ.ಪಿ. ಎಲ್ಲಿಗೆ ಬೆಳೆದಿದೆ. ನೀವು ಎಲ್ಲಿಗೆ ಇಳಿದಿದ್ದೀರಿ ನಿಮಗೆ ನಿಮ್ಮ ಆತ್ಮಸಾಕ್ಷಿಗೆ ಪ್ರಶ್ನೆಯನ್ನು ಕೇಳಕೊಳ್ಳಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್:- ರಾಮರಾಜ್ಯ ಪರಿಷತ್ತು, ತದನಂತರ ಜನಸಂಘ ಅವರ ಜೊತೆಗೆ ಸೇರಿದ ಮೇಲೆ ಜನತಾಪಾರ್ಟಿ ಬೇರೆಯಾದ ಮೇಲೆ ಬಿ.ಜೆ.ಪಿ. ಎಲ್ಲಿತ್ತು ಬಿ.ಜೆ.ಪಿ. ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಇತ್ತು ಎಂದು ಹೇಳುತ್ತಿಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ.

ಶ್ರೀ ಕೆ.ಹೆಚ್. ರಂಗನಾಥ್:- ನೀವು ಹಿಂದೆ ಮಹಾಸಭೆಯಲ್ಲಿ ಇದ್ದವರು, ರಾಮರಾಜ್ಯ ಪರಿಷತ್ತಿನಲ್ಲಿದ್ದಂಥವರು ತದನಂತರ ಜನಸಂಘವಾದ್ದಂತಹವರು, 71ರಲ್ಲಿ ಅಲ್ಲಿಗೆ ಕರೆದುಕೊಂಡು ಹೋದರು. 1977ರಲ್ಲಿ ಜನತಾ ಪಾರ್ಟಿಯಾದಿರಿ. ಭಾಗ ಆದಮೇಲೆ ಬಿ.ಜೆ.ಪಿ. ಆದಿರಿ, ಬಿ.ಜೆ.ಪಿ.ಯ ಕೊಡುಗೆ ಏನಿದೆ. ಬಿ.ಜೆ.ಪಿ. ಯಾವ ಸಿದ್ಧಾಂತದ ಮೇಲೆ ಪ್ರಾರಂಭವಾಗಿದೆ, ಆಗಿಲ್ಲ. ಇದಕ್ಕೆ ಹಿಸ್ಟಾರಿಕಲ್ ಫ್ಯಾಕ್ಟ್ಸ್ ಏತಕ್ಕೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಕಾಂಗ್ರೆಸ್ಸಿನ ಚರಿತ್ರೆಯ ಬಗ್ಗೆ....

ಶ್ರೀ ಎ.ಕೆ. ಅನಂತಕೃಷ್ಣ:- ರಾಮಾಯಣ ಇದೆ ಎಲ್ಲಾ ಇದೆ. ಎಲ್ಲಾ ಅಂದರೆ ಹೇಗಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದನ್ನು ತೀರ್ಮಾನ ಮಾಡುವವರು ಯಾರು ? ಇವತ್ತು ಈ ದೇಶದ ರಾಜಕೀಯ ಪರಿಸ್ಥಿತಿಯ ಬಗ್ಗೆ ಜನ ಏನು ಹೇಳುತ್ತಿದ್ದಾರೆ. ಅದು ಮುಖ್ಯ. ನೀವು ಇದನ್ನು ಮರೆಯಬೇಡಿ. ನೀವು ಹೇಳಿದ್ದುದು ಸರಿ ಇದೆ. ಬಿ.ಜೆ.ಪಿ. ಇರಲಿಲ್ಲ. ಜನಸಂಘ ಇರಲಿಲ್ಲ. ನಿಮ್ಮ ಪರಿಸ್ಥಿತಿಯ ಬಗ್ಗೆ ಎರಡು ವಿಷಯಗಳನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಮೊದಲನೆಯದು ಇಷ್ಟು ವರ್ಷ ಅಧಿಕಾರವನ್ನು ನಡೆಸಿದಂಥ ಕಾಂಗ್ರೆಸ್ ಪಕ್ಷ ಅಧಿಕಾರದ ಮುಂಚೂಣಿಯಲ್ಲಿದ್ದಂತಹ ಜನತಾದಳ, ಕಮ್ಯೂನಿಸ್ಟ್ ಇವರೆಲ್ಲಾ ಒಂದಾಗಿ ಬಿ.ಜೆ.ಪಿ. ಯನ್ನು ಎದುರಿಸುವಂತಹ ಒಂದು ಪರಿಸ್ಥಿತಿಗೆ ನೀವು ಒಂದು ಮುಟ್ಟಿದ್ದೀರಿ. ಎರಡನೆಯದಾಗಿ ಇವತ್ತು ಲೋಕಸಭೆಯಲ್ಲಿ ಏನು ಸ್ಥಿತಿ, ಯಾವ ಜನಸಂಘ ಯಾವ ಬಿ.ಜೆ.ಪಿ. ಎಲ್ಲಿಗೆ ಎಂದು ಪ್ರಶ್ನೆಯನ್ನು ಕೇಳುತ್ತಿದ್ದೀರಿ, ನನ್ನನ್ನು ಕೇಳಬೇಡಿ. ಲೋಕಸಭೆಗೆ ಹೋಗಿ, ಅಧಿಕೃತ ವಿರೋಧ ಪಕ್ಷ ಲೋಕಸಭೆಯಲ್ಲಿ ಭಾರತೀಯ ಜನತಾ ಪಾರ್ಟಿ, ಲಾಲ್ ಕೃಷ್ಣ ಅದ್ವಾನಿ ಅದರ ನಾಯಕ. ರಾಜ್ಯಸಭೆಯಲ್ಲಿ ಅಧಿಕೃತ ವಿರೋಧ ಪಕ್ಷ ಭಾರತೀಯ ಜನತಾಪಾರ್ಟಿಯ ಸಿಖಂದರ್ ಭಕ್ತ ಅಧರ ನಾಯಕ. ಎಲ್ಲಿದ್ದಾರೆ ನಮ್ಮ ಸ್ನೇಹಿತರು. ಜನತಾ ಆಯಿತು, ಜನತಾದಳ ಆಯಿತು, ವಿ.ಪಿ. ಸಿಂಗ್ ಆಯಿತು. ಚಂದ್ರಶೇಖರ್ ಆಯಿತು. ಇವರ ಬಗ್ಗೆ ಟೀಕೆ ಮಾಡುತ್ತಿಲ್ಲ. ಇದೇ ಅನಾಹುತ ದೇಶದಲ್ಲಿ ಆಯಿತು. ನಮ್ಮ ದೇಶದ ಅಚಾತುರ್ಯದಿಂದ ನಾಯಕತ್ವದ ಕಚ್ಚಾಟಕ್ಕೋಸ್ಕರ ವಿರೋಧ ಪಕ್ಷಗಳ ಬಗ್ಗೆ ಇದ್ದಂಥ ನಂಬಿಕೆಯನ್ನು ಹಾಳು ಮಾಡುವಂತಹ ಪರಿಸ್ಥಿತಿಗೆ ತಂದುಬಿಟ್ಟರು. ಇದರ ಪರಿಣಾಮದಿಂದ ಇವತ್ತು ನಿಮ್ಮ ಸಹವಾಸವಾನ್ನು ನಾವು ಕಳೆದುಕೊಳ್ಳಬೇಕಾಯಿತು.

ಶ್ರೀ ಆರ್.ಎಲ್ ಜಾಲಪ್ಪ:– ನೀವು ಮಾಡಿದ ನಂಬಿಕೆ ದ್ರೋಹದಿಂದ ಹಾಗಾಯಿತೆ ವಿನಹ ನಾವು ಫೇಲ್ ಆಗಿಲ್ಲ. ಇವತ್ತು ಏನಾದರೂ credibility ಇದ್ದರೆ ನಮಗೆ ಇದೆ. ನಮದ್ದೇನೂ ಇಲ್ಲ. ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಮಾನ್ಯ ಯಡಿಯೂರಪ್ಪನವರು ಗೌರ್ನರ್ ಭಾಷಣಕ್ಕೆ ಯಾವಾಗ ಬರುತ್ತಾರೆ. ದೇಶದ ಇತಿಹಾಸದ ಬಗ್ಗೆ ಮಾತನಾಡುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಪದೇ ಪದೇ ಅವರು ನಮ್ಮ ಬೆಂಬಲದಿಂದ, ನಮ್ಮ ಬೆಂಬಲದಿಂದ, ನಮ್ಮ ಬೆಂಬಲದಿಂದ ಎಂದು ಹೇಳುತ್ತಾರೆ. I want to put the records straight. ನಾನು ಲೋಕಸಭೆಯ ಚುನಾವಣೆಯನ್ನು ಎದುರಿಸಿದ್ದುದು ಎಂದಿನ ಮಾನ್ಯ ಹಿರಿಯ ಸದಸ್ಯರು ರೆಫರ್ ಮಾಡಿದಂತಹ ಜನ ಸಂಘವನ್ನು ಕಳೆದ ಮೂರು ವಿಧಾನಸಭಾ ಚುನಾವಣೆಗಳಲ್ಲಿ ನಾನೆಂದು ಇವರ ಜೊತೆಯಲ್ಲಿ ಕಾಂಪರ್‌ಮೈಸ್ ಮಾಡಿಕೊಂಡಿಲ್ಲ. ನಾನು ಬಿ.ಜೆ.ಪಿ. ವಿರುದ್ಧ ಕಾಂಗ್ರೆಸ್ ವಿರುದ್ಧ ಫೈಟ್ ಮಾಡಿಕೊಂಡು ಬಂದಿದ್ದೇನೆ. ಇವರಿಗೆ ನನ್ನದು ಎಂದೂ ಸಹಾಯ ಇಲ್ಲ ನಾನು ಮುಂದೆಯೂ ಸಹಾಯವನ್ನು ಕೇಳುವುದಿಲ್ಲ. Let it not go into the record.

ಜನರಲ್ ಆಗಿ ಬೇಕಾದರೆ ಹೇಳಲಿ, ಯಾರಾದರೂ ಕಾಂಪರ್ ಮೈಸ್ ಮಾಡಿ ಕೊಂಡಿರಬಹುದು. ನಮ್ಮ ಪಾರ್ಟಿ ಹೊಂದಾಣಿಕೆ ಮಾಡಿಕೊಂಡಿತ್ತು. 1992ರಲ್ಲಿ ಚುನಾವಣೆಯಲ್ಲಿ 1985, 1989 ಎಂದು ಏನು ಹೇಳಿದ್ದಾರೆ. ಅದು ನನ್ನ ಕ್ಷೇತ್ರದಲ್ಲಿ. ಹೊಂದಾಣಿಕೆ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ನಮ್ಮ ಜೊತೆಗೆ ಬನ್ನಿ ಎಂದು ಕರೆಯುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನನ್ನದೊಂದು ಸಲಹೆ ಈ ಸದನದಲ್ಲಿ ಪಕ್ಷಗಳ ಪ್ರಣಾಳಿಕೆಗಳ ಬಗ್ಗೆ, ಯಾವ್ಯಾವ ಪಕ್ಷಗಳ ಸಿದ್ಧಾಂತಗಳ ಬಗ್ಗೆ ಚರ್ಚೆ ಮಾಡೋಣ. ಅವರ ಮಾತನಾಡಲಿ ಅವರಿಗೆ ಅವಕಾಶ ಕೊಡೋಣ.

ಚೇರ್ಮನ್:– ಈಗ ಪ್ರಶ್ನೆ ಉತ್ತರ ಬೇಡ. ನಿಮ್ಮ ಭಾಷಣವ ಮುಂದುವರೆಸಿ ಪ್ರಾರಂಭ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವತ್ತು ನಮ್ಮ ಪರಿಸ್ಥಿತಿಯನ್ನು ನೀವು ಯೋಚನೆ ಮಾಡುತ್ತಿಲ್ಲ. ನಿಮ್ಮ ತಪ್ಪು ನೀತಿಯಿಂದ ಜನರಿಗೆ ಕೊಟ್ಟಂತಹ ಭರವಸೆಯನ್ನು ಈಡೇರಿಸದ ಪರಿಣಾಮ.

ಶ್ರೀ ಎ.ಕೆ. ಅನಂತಕೃಷ್ಣ:- ಅವರು ಮಾತನಾಡುವಾಗ ಮಧ್ಯೆ ಮಾತನಾಡಬೇಡಿ.

ಚೇರ್ಮನ್:- ಅವರು ಈಲ್ಡ್ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಇವತ್ತು ನಾನು ನಿಮ್ಮನ್ನು ಕೇಳುತ್ತೇನೆ. ಯಾವ ಮಧ್ಯಪ್ರದೇಶ ಹಿಮಾಚಲ ಪ್ರದೇಶ, ರಾಜಸ್ಥಾನ; ಉತ್ತರಪ್ರದೇಶ ಈ ಮೂರು ದೊಡ್ಡ ರಾಜ್ಯಗಳಲ್ಲಿ ಕಾಂಗ್ರೆಸ್ ನಿರ್ನಾಮ ಆಗಿ ಅಧಿಕಾರವನ್ನು ಕಳೆದುಕೊಂಡು ಭಾರತೀಯ ಜನತಾ ಪಾರ್ಟಿ ನಾಲ್ಕು ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದಕ್ಕೆ ನೀವು ಹಿಂದೆ ಅಧಿಕಾರದಲ್ಲಿ ನಡೆಸಿಕೊಂಡು ಬಂದಂಥ ತಪ್ಪು ನೀತಿಯ ಕಾರಣ.

ಭಾರತೀಯ ಜನತಾ ಪಕ್ಷವು ಅಧಿಕಾರಕ್ಕೆ ಬಂದಿದ್ದಂಥ ನಾಲ್ಕು ರಾಜ್ಯಗಳನ್ನು ಇವೊತ್ತು ಯಾವುದೋ ಒಂದು ಕಾರಣಕ್ಕೋಸ್ಕರ ವಜಾ ಮಾಡಿದಿರಿ. ನಾವು ಅದರ ಬಗ್ಗೆ ಚಿಂತೆ ಮಾಡುವುದಿಲ್ಲ. ಆದರೆ, ಜನರು ಆಯ್ಕೆ ಮಾಡಿ ಕಳುಹಿಸಿದಂಥ ಮಧ್ಯಪ್ರದೇಶ, ರಾಜಸ್ಥಾನ, ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿದ್ದಂಥ ಭಾರತೀಯ ಜನತಾ ಪಕ್ಷದ ಸರ್ಕಾರವನ್ನು ಎದುರಿಸಲಿಕ್ಕಾಗದೆ ಐದು ವರ್ಷಗಳ ಕಾಲ ಪೂರ್ಣ ಅಧಿಕಾರವಿದ್ದ ಕಾಂಗ್ರೆಸ್ ಪಕ್ಷ ನಿರ್ನಾಮವಾಗುತ್ತದೆನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಪ್ರಜಾತಂತ್ರ ವ್ಯವಸ್ಥೆಯನ್ನು ಕಗ್ಗೊಲೆ ಮಾಡಿ ಮೂರು ರಾಜ್ಯಗಳಲ್ಲಿದ್ದ ಚುನಾಯಿತ ಬಿಜೆಪಿ ಸರ್ಕಾರವನ್ನು ವಜಾ ಮಾಡಿದವರು ನೀವೇ ತಾನೆ ?

ಚೇರ್ಮನ್:- ನೀವು ಹೀಗೆ ಪ್ರಶ್ನೆ ಹಾಕಿಕೊಂಡು ಹೋಗಬೇಡಿ. ಹೀಗೆ ಪ್ರಶ್ನೆ ಹಾಕಿದರೆ ಅವರು ಉತ್ತರ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇವೊತ್ತು ರಾಜಕೀಯ ವಿಚಾರದಲ್ಲಿ ಯಾವುದೇ ಚರ್ಚೆ ಮಾಡಬೇಕಾದರೆ ಬಿಜೆಪಿ ಬಿಟ್ಟು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ನಾವು ಪೊಲಿಟಿಕಲ್ ಅಜೆಂಡಾವನ್ನು ತರುವುದಕ್ಕೆ ಹೊರಟಿದ್ದೇವೆ. ನಿಮ್ಮ ಪರಿಸ್ಥಿತಿ ಬೇರೆ ಎಲ್ಲಿದೆ ? ಒಂದು ಸಂಗತಿಯನ್ನು ತಾವು ಮರೆಯಬೇಡಿ. ಇಂಡಿಯಾ ಟುಡೆ ತೆಗೆದು ನೋಡಿ, ದಿ ವೀಕ್ ತೆಗೆದು ನೋಡಿ, ದಿ ಹಿಂದೂ ಪತ್ರಿಕೆ ತೆಗೆದು ನೋಡಿ. ಅದರಲ್ಲಿ ಇಡೀ ದೇಶದಲ್ಲಿರುವ ಜನರನ್ನು ಸಮೀಕ್ಷೆ ಮಾಡಿದ್ದಾರೆ. ಪತ್ರಿಕೆಗಳ ವರದಿಗಳು ಏನು ಹೇಳುತ್ತವೆ ? ನಿಮಗೆ ಕುಂತಲ್ಲಿ, ನಿಂತಲ್ಲಿ ಬಿಜೆಪಿ ಬಗ್ಗೆ ಭಯ ಏಕೆ ? ಇವೊತ್ತು ನಾನು ನಿಮ್ಮನ್ನು ಕೇಳುತ್ತಿದ್ದೇನೆ: ಕೇಂದ್ರದಲ್ಲಿ ನಾಯಕತ್ವವಿಲ್ಲದೆ, ಪರಸ್ಪರ ಉನ್ನತ ಸ್ಥಾನದಲ್ಲಿರುವವರು ಬಡಿದಾಡುವಂಥ ಒಂದು ವಿಚಿತ್ರ ಪರಿಸ್ಥಿತಿ ಬಂದಿದೆ. ರಾಜಕೀಯ ಅಸ್ಥಿರತೆ ತಾಂಡವವಾಡುತ್ತಿದೆ, ಒಬ್ಬ ಪ್ರಧಾನಿಗೆ, ಒಬ್ಬ ಗೃಹ ಮಂತ್ರಿಗೆ, ಒಬ್ಬ ರಕ್ಷಣಾ ಸಚಿವರಿಗೆ ಪರಸ್ಪರ ಸಂಬಂಧ ಸರಿಯಿಲ್ಲದಂಥ ವಾತಾವರಣ ನಿರ್ಮಾಣವಾಗಿದೆ. ಮಹಾರಾಷ್ಟ್ರ ರಾಜ್ಯದ ಮುಖ್ಯಮಂತ್ರಿಯವರು ಒಬ್ಬ ರಕ್ಷಣಾ ಸಚಿವರ ರಾಜೀನಾಮೆ ಕೊಡಿಸಬೇಕೆಂದು ಕಾಂಗ್ರೆಸ್ ಪಕ್ಷದಿಂದ ಶರಧ್-ಪವಾರರಿಗೆ ಕೇಳುವಂಥ ಒಂದು ದುಸ್ಥಿತಿಯೊದಗಿದೆ. ಕರ್ನಾಟಕ ರಾಜಕೀಯದಲ್ಲಿ ಅಸ್ಥಿರತೆ ಇರುವುದಕ್ಕೂ ಇದಕ್ಕೂ ಸಂಬಂಧವಿದೆ. ಕರ್ನಾಟಕ ರಾಜ್ಯದ ಜನರಿಗೆ ಇವೊತ್ತಿನ ನಿಮ್ಮ ಸರ್ಕಾರದ ರಾಕೀಯ ಅಸ್ಥಿರತೆಗೂ ಕೇಂದ್ರ ಸರ್ಕಾರದ ಒಂದು ರಾಜಕೀಯ ಅಸ್ಥಿರತೆಗೂ ಪರಸ್ಪರ ಬಡಿದಾಡುವುದಕ್ಕೂ ಸಂಬಂಧವಿದೆ, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುತ್ತಿದೆ. ಆದಕ್ಕಾಗಿ ನಾನು ತಮ್ಮಲ್ಲಿ ಈ ದೇಶದ ಜನರ ಹಿತದೃಷ್ಟಿಯಿಂದ ಜನರೇ ಮುಂದೆ ಬಂದು ಕಾಂಗ್ರೆಸ್ ಸರ್ಕಾರವನ್ನು ವಿಸರ್ಜನೆ ಮಾಡುವುದಕ್ಕಿಂತ ಮುಂಚೆ ನಿಮ್ಮ ತಪ್ಪನ್ನು ತಿದ್ದಿಕೊಳ್ಳಿ, ಸರಿಯಾದ ದಾರಿಯಲ್ಲಿ ಹೋಗುವುದಕ್ಕೆ ಪ್ರಯತ್ನ ಮಾಡಿ, ಕಚ್ಚಾಟದಲ್ಲಿ ತಲ್ಲೀನರಾಗಬೇಡಿ. ಈ ರೀತಿ ಮಾಡುತ್ತಿದ್ದರೆ ಪ್ರಜಾತಂತ್ರ ವ್ಯವಸ್ಥೆಗೆ ಏನಾದರೂ ಅರ್ಥವಿದೆಯೆ ? ನಾನು ನಿನ್ನೆ ದಿವಸ ದೆಹಲಿಗೆ ದೊಡ್ಡ ರ್‍ಯಾಲಿಗೆ ಹೋಗಬೇಕೆಂದು ಹೊರಟರೆ ಯಾವ ದೊಡ್ಡ ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ಮಾತನಾಡುತ್ತಿರುವ,

ಮಹಾತ್ಮ ಗಾಂಧೀಜಿ ಬಗ್ಗೆ ಮಾತನಾಡುತ್ತಿರುವವರು ನನ್ನನ್ನು ರೈಲ್ವೆ ನಿಲ್ದಾಣದಲ್ಲಿ ಬಂಧನ ಮಾಡಿದವು ನೀವೇ ತಾನೇ ? ಜನವರಿ, 21, 1993ರಂದು ಧಾರವಾಡದಲ್ಲಿ ಸಾರ್ವಜನಿಕ ಸಭೆಗೆ ಹೋದಾಗ ಅಲ್ಲಿ ಸುಮಾರು ಹತ್ತು ಸಾವಿರ ಜನರು ಸೇರಿದ್ದರು. ಆ ಸಭೆಗೆ ಹೋಗಲು ನನಗೆ ಅವಕಾಶ ಮಾಡಿಕೊಡದೆ ವಿನಾ ಕಾರಣ ನನ್ನನ್ನು ಬಂಧಿಸಿ ಬೆಳಗಾಂ ಜೈಲಿನಲ್ಲಿಟ್ಟಿದ್ದು ನೀವೇ ತಾನೆ ? ನಿಮಗೆ ಬಿಜೆಪಿ ಬಗ್ಗೆ ಏಕೆ ಭಯ ? ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಭೆ–ಸಮಾರಂಭಗಳನ್ನು ನಡೆಸುವುದಕ್ಕೆ ನಿಮಗೆ ಇಷ್ಟವಿಲ್ಲವೆ ? ನಮಗೆ ಅಧಿಕಾರವಿಲ್ಲವೇ ? ಅಥವಾ ಈ ದೇಶವನ್ನು ನೀವೇನಾದರೂ ಕೊಂಡುಕೊಂಡಿದ್ದೀರಾ ? ನಾನು ಏನು ಹೇಳುತ್ತಿದ್ದೇನೆಂದರೆ, ಕಾಂಗ್ರೆಸ್ಸಿನಲ್ಲಿ ಹೇಳುತ್ತಿರುವ ಮಾತು ಸತ್ಯವೇ ?.....

ಶ್ರೀ ಕೆ.ಹೆಚ್. ರಂಗನಾಥ್:– ಡಿಸೆಂಬರ್ 6, 1992ರಂದು ಅಯೋಧ್ಯೆಯಲ್ಲಿ ನಡೆದ ಘಟನೆಯ ಅನಾಹುತ ಸರಿಯಿಲ್ಲವೆಂದು ಶ್ರೀ ಅದ್ವಾನಿಯವರು ವ್ಯಥೆ ಪಡುತ್ತಿರುವಾಗ ನೀವು ಇದೇ ತರಹದ ಮತ್ತೊಂದು ರ್‍ಯಾಲಿ ಮಾಡುತ್ತೇವೆ, ಆ ರ್‍ಯಾಲಿಗೆ ನಾನು ಹೋಗುತ್ತೇನೆಂದು ಹೊರಟಿದ್ದೀರಲ್ಲಾ, ಇದಕ್ಕೆ ನಾವೇನು ಹೇಳಬೇಕು ? ಉತ್ತರ ಪ್ರದೇಶದಲ್ಲಿ ರಾಮ ಜನ್ಮಭೂಮಿ ಎಂದು ಹೇಳುವ ಅಯೋಧ್ಯೆಯಲ್ಲಿ ಜಗಳ ತರಬೇಕೆಂದು ಜನರು ನಿಮಗೆ ಓಟು ಕೊಟ್ಟರೆ ? ನಮಗೆ ಅನುಕೂಲ ಮಾಡಿಕೊಡುವ ಕೆಲಸ ಮಾಡಬಹುದೆಂದು ಬಡಬಗ್ಗರು ನಿಮಗೆ ಓಟು ಕೊಟ್ಟರೆ ನೀವು ರಾಮನನ್ನು ಹಿಡಿದುಕೊಂಡು ಸರ್ಕಾರ ಕಳೆದುಕೊಂಡು ನಾವು ಈಗ ಏನೋ ಮಾಡಿದ್ದೇವೆಂದು ಹೇಳುತ್ತಿದ್ದೀರಲ್ಲಾ, ಇದನ್ನು ಜನರು ನೋಡುವುದಿಲ್ಲವೆಂದು ಈ ರೀತಿ ಮಾಡುತ್ತಿದ್ದೀರಾ ? ಹೇಗೆ ? ಅದಕ್ಕೋಸ್ಕರ ಇದರ ಬಗ್ಗೆ ಪ್ರೊ. ನಂಜುಂಡ ಸ್ವಾಮಿಯವರು ಒಂದು ಮಾತು ಹೇಳಿದ್ದುದು. ಏನೆಂದರೆ, ಅಲ್ಲಿ 'ರಾಮನಾಮ' ಎಂದು ಹೇಳುತ್ತಾರೆ, ಅದು ಅಲ್ಲಿ ಸ್ವಲ್ಪ ಚಲಾವಣೆಯಾದರೂ ಆಗಬಹುದು, ಆದರೆ, ಇದು ಹನುಮನ ನಾಡು, ಅದರ ಚಲಾವಣೆ ಇಲ್ಲಿ ನಡೆಯುವುದಿಲ್ಲ ಎಂದು ಹೇಳಿದರು. ನಿಮಗಿದು ಒಂದು ತರಹದ ಭ್ರಾಂತಿ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೆ, ನನ್ನ ಹೆಸರನ್ನು ಬದಲಾಯಿಸಬೇಕೆಂದು ಕಾಣುತ್ತದೆ. ನನ್ನ ಹೆಸರನ್ನು ಬದಲಾಯಿಸುವ ಪರಿಸ್ಥಿತಿ ಬಂದಿದೆ. ಇವರು ನನ್ನ ಹೆಸರನ್ನು ಹಿಡಿದು, ಜಗ್ಗಿ ಎಳೆದು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ....

ಶ್ರೀ ಡಿ.ಬಿ. ಚಂದ್ರೇಗೌಡ:– ಅವರು ಅಂದದ್ದು ನಿಮಗಲ್ಲ. (ಕಾಂಗ್ರೆಸ್‌ದಲ್ಲಿದ್ದಾರಲ್ಲಾ, ಆ ರಾಮನಿಗೆ (ಹಾರನಹಳ್ಳಿ ರಾಮಸ್ವಾಮಿಯವರಿಗೆ) ಹೇಳಿದ್ದುದು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ನಿಜವಾದ ರಾಮ ನಮ್ಮ ಕಡೆಗೆ ಇರುವುದು.

ಶ್ರೀ ಕೆ.ಹೆಚ್. ರಂಗನಾಥ್:– ತಾವು ಉತ್ತರ ಪ್ರದೇಶದಂಥ ದೊಡ್ಡ ರಾಜ್ಯವನ್ನು ಆಳಿದಿರಿ, ಬಡವರಿಗೆ ಅನುಕೂಲ ಮಾಡಿಕೊಡಿ, ಕಾಂಗ್ರೆಸ್ಸಿನವರು ತಪ್ಪು ಮಾಡಿದ್ದಾರೆಂದು ಆಡಳಿತವನ್ನು ನಡೆಸುವ ಅಧಿಕಾರವನ್ನು ನಿಮಗೆ ಕೊಟ್ಟರೆ, ಅಯೋಧ್ಯೆಯಲ್ಲಿ ರಾಮನ ದೇವಸ್ಥಾನ, ಮಸೀದಿ ಕಟ್ಟಿರಿ ಎಂದು ಮೊದಲು ನಿಮಗೆ ಅಜೆಂಡಾ ಹಾಕಿಕೊಟ್ಟಿದ್ದರೆ ? ನೀವು ಅದೇ ರೀತಿ ಎಲ್ಲಾ ಊರುಗಳಿಗೆ ಹೋಗಿ ಹಳುತ್ತೀರಾ ? ಉತ್ತರ ಪ್ರದೇಶ ರಾಜ್ಯದಲ್ಲಿ ಸುಮಾರು 56–57 ಜಿಲ್ಲೆಗಳಿವೆ, ಆ ರಾಜ್ಯವನ್ನು ನೋಡಿದರೆ ನಮಗೆ ಆಶ್ಚರ್ಯವಾಗುತ್ತದೆ, ನಾನು ಆ ರಾಜ್ಯವನ್ನು ನೋಡಿದ್ದೇನೆ. ಆ ರಾಜ್ಯಕ್ಕೂ ಈ ರಾಜ್ಯಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅಂತಹುದನ್ನು ಸರಿ ಮಾಡಿ ಎಂದು ನಿಮಗೆ ಜವಾಬ್ದಾರಿ ಕೊಟ್ಟರೆ ಅದನ್ನು ಕೈಬಿಟ್ಟು ನೀವು ಒಂದು ತರಹ ಪಲಾಯನವಾದಿಗಳಾಗಿದ್ದೀರಿ.

Your party is an escapist party. ನೀವು ಆ ಜವಾಬ್ದಾರಿಯನ್ನು ಕಾಯಾ ವಾಚಾ ಮನಸಾ ಮಾಡುವುದನ್ನು ಬಿಟ್ಟು ಯಾವುದೋ ಒಂದು ವಿಷಯವನ್ನು, ವ್ಯಾಜ್ಯವನ್ನು ಮಧ್ಯೆ ತಂದು ಇಟ್ಟುಕೊಂಡಿರಿ. ಹಳ್ಳಿಯ ಕಡೆ ಸೌದೇ ವ್ಯಾಜ್ಯವೆಂದು ಗಾದೆ ಹೇಳುತ್ತಾರೆ. ಆ ರೀತಿಯಲ್ಲಿ ವ್ಯಾಜ್ಯವನ್ನು ಮಾಡಿಕೊಂಡು ಹೋದಿರಿ. ನಾವು ಅಲ್ಲಿಗೆ ಹೋಗುತ್ತಿದ್ದವು. ನಮ್ಮನ್ನು ಅರೆಸ್ಟ್ ಮಾಡಿದರು ಎಂದರೆ ನಾವು ಏನು ಹೇಳಬೇಕಾಗುತ್ತದೆ ? ನೀವು ಏಕೆ 10 ಲಕ್ಷ ಜನರೊಂದಿಗೆ ಅಲ್ಲಿಗೆ ಹೋಗುತ್ತಿದ್ದಿರಿ ? ಏಕೆ ಅಲ್ಲಿ ಹೋಗಿ ಸೇರಬೇಕಾಗಿತ್ತು ? ಅಲ್ಲಿ ಏನು ಕೆಲಸವಿತ್ತು ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಹೇಳುತ್ತೇನೆ.

ಶ್ರೀ ಕೆ.ಹೆಚ್ ರಂಗನಾಥ್:– ನೀವು ನನಗೆ ಹೇಳುವುದು ಬೇಡ, ಈ ರಾಜ್ಯದ ಜನರಿಗೆ ಹೇಳಿ ಸಾಕು ನೀವು ನಾಳೆ ಭಾಷಣ ಮಾಡಲು ಹೋಗುತ್ತೀರಲ್ಲಾ ಆಗ ಏಕೆ ಹೋಗಿದ್ದೇವೆಂದು ಹೇಳಿ. ಸ್ವಾಮಿ ನಿಮಗೆ ಕುದಿಯುವ ನೀರು ಮುಖ್ಯವೊ ಅಥವಾ ರಾಮ ಮುಖ್ಯವೋ ? ಕಡಿಮೆ ಬೆಲೆಯಲ್ಲಿ ವಸ್ತುಗಳು ಸಿಗುವುದು ಮುಖ್ಯವೊ ಅಥವಾ ರಾಮ ಮುಖ್ಯವೋ ಎಂಬುದನ್ನು ಕೇಳಿ, ಅವರುಗಳು ಒಪ್ಪಿಕೊಂಡರೆ ಆಗಬಹುದು, ನೀವು ಅಲ್ಲಿಗೆ ಹೋಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವು ದೆಹಲಿಗೆ ಹೋಗುತ್ತಿದ್ದಂಥದ್ದು ಪ್ರಮುಖವಾಗಿ ಎರಡು ಕಾರಣಗಳಿಂದಾಗಿ ಮೊದಲನೆಯದಾಗಿ ಮ್ಯಾಂಡೇಟನ್ನು ಕಳೆದುಕೊಂಡಿರತಕ್ಕ, ಜನರು ಬಹುಮತವನ್ನು ಕಳೆದುಕೊಂಡಿರತಕ್ಕ ಅಲ್ಪಸಂಖ್ಯಾತ ಕೇಂದ್ರಸರ್ಕಾರವು ಇವತ್ತು ದೇಶವನ್ನು ಆಳತಕ್ಕಂಥ ಸ್ಥಿತಿಯಲ್ಲಿ ಇಲ್ಲ, ಆದ್ದರಿಂದ ಲೋಕಸಭೆಯನ್ನು ವಿಸರ್ಜನೆ ಮಾಡಿ ಚುನಾವಣೆಯನ್ನು ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಮಾಡಬೇಕೆನ್ನುವುದಕ್ಕೋಸ್ಕರ ಹೋಗಿದ್ದೆವು.

ಉಪಾಧ್ಯಕ್ಷರು:– ತಾವು ಚರ್ಚೆಯನ್ನೇ ಬೇರೆ ಕಡೆಗೆ ತೆಗೆದುಕೊಂಡು ಹೋಗುತ್ತಿದ್ದೀರಲ್ಲಾ, ಅವರಿಗೆ ಪ್ರಶ್ನೆಯನ್ನು ಕೇಳಿದ್ದಕ್ಕೆ ಉತ್ತರವನ್ನು ಕೊಡುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ರಾಜ್ಯಪಾಲರ ಭಾಷಣದಲ್ಲಿ ಏನೂ ವಿಷಯವೇ ಇಲ್ಲ, ಹೀಗಿದ್ದಾಗ ಏನು ಚರ್ಚೆ ಮಾಡುತ್ತೀರಿ ಸಮಯವನ್ನು ಕಳೆಯಬೇಕಲ್ಲವೆ ಆದ್ದರಿಂದ ಹೀಗೆ. ನಮ್ಮನ್ನು ಈ ನಾಲ್ಕೂ ರಾಜ್ಯಗಳಲ್ಲಿ ಪ್ರಜಾತಂತ್ರ ವ್ಯವಸ್ಥೆಯಂತೆ ಜನರು ಆಯ್ಕೆ ಮಾಡಿ ಕಳಿಸಿದ್ದರೆ ಅದನ್ನು ವಿಸರ್ಜನೆ ಮಾಡಿ ಅಲ್ಲಿ ರಾಷ್ಟ್ರಪತಿಗಳ ಆಡಳಿತವನ್ನು ಏರಿದ್ದೀರಲ್ಲಾ ಅದಕ್ಕೆ ತಕ್ಷಣ ಚುನಾವಣೆಯನ್ನು ನಡೆಸಬೇಕೆಂದು ಒತ್ತಾಯ ಮಾಡಲು ದೆಹಲಿಗೆ ಹೋಗುತ್ತಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್:– ಅದನ್ನು ಇಲ್ಲೇ ತೀರ್ಮಾನ ಮಾಡಬಹುದಲ್ಲ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಿರಿಯ ರಾಜಕಾರಣಿಗಳಾದ ತಾವು ಈ ರೀತಿ ಹೇಳಿದರೆ ಹೇಗೆ ? ಎಲ್ಲಿ ತೀರ್ಮಾನ ಮಾಡಬೇಕೆಂಬ ಬಗ್ಗೆ ತೀರ್ಮಾನ ಮಾಡುವವರು ನೀವಲ್ಲ.

ಚೇರ್ಮನ್:– ಈಗ ಅವರು ನಿಮ್ಮ ಪ್ರಶ್ನೆಗೆ ಉತ್ತರವನ್ನು ಕೊಡುತ್ತಿದ್ದಾರೆ. ಆದರೆ ಆ ಉತ್ತರಕ್ಕೆ ನೀವು ಒಪ್ಪಿಗೆ ಕೊಡುವುದಿಲ್ಲ, ಆದ್ದರಿಂದ ಈಗ ತಾವು ನೇರವಾಗಿ ರಾಜ್ಯಪಾಲರ ಭಾಷಣಕ್ಕೆ ಬನ್ನಿ.

ಶ್ರೀ ಕಾಗೋಡುತಿಮ್ಮಪ್ಪ:– ಇದುವರೆಗೆ ರಾಮ ಮಂದಿರವನ್ನು ಕಟ್ಟಬೇಕು, ನಾವು ಮಸೀದಿಯನ್ನು ಹೊಡೆದಿರುವುದು ಸರಿ ಎನ್ನುವುದನ್ನು ಪ್ರತಿಪಾದನೆ ಮಾಡಲು ದೆಹಲಿಗೆ ಹೊರಟಿದ್ದರು. ಆದರೆ ಈಗ 3–4ರಾಜ್ಯಗಳಲ್ಲಿ ನಮ್ಮ ಸರ್ಕಾರವನ್ನು ವಿಸರ್ಜನೆ ಮಾಡಿ ರಾಷ್ಟ್ರಪತಿಯವರ ಆಳ್ವಿಕೆಯನ್ನು ಏರಿದ್ದರಿಂದ ಅದನ್ನು ಪ್ರತಿಭಟನೆ ಮಾಡುವುದಕ್ಕಾಗಿ ಹೋಗುತ್ತಿದ್ದೇವೆಂದು ಹೇಳುತ್ತಿದ್ದಾರೆ. ಮೊದಲೇ ಇದನ್ನು ಅವರು ಹೇಳಿದ್ದರೆ ಅವರನ್ನು ಯಾರು ತಡೆಯುತ್ತಿದ್ದರು. ನಮಗೆ ಏನಾಗಿದೆ ಎಂದರೆ ಪೂಜೆಯನ್ನು

ಮಾಡಲು ಹೋಗುತ್ತೇವೆಂದು ಕರಸೇವೆಯನ್ನು ಮಾಡುವುದಕ್ಕೆ ಹೋಗಿ ಅಲ್ಲಿರತಕ್ಕ ಮಸೀದಿಯನ್ನು ಹೊಡೆದುಬಂದಿರಿ, ಅಲ್ಲಿ ಆ ರೀತಿ ಮಾಡಿದ್ದು ತಪ್ಪಾಯಿತೆಂದು ಆದ್ವಾನಿಯವರು ಹೇಳಿದ್ದಾರೆ. ಮತ್ತೆ ಕಾಶ್ಮೀರದಲ್ಲಿ ದೇವಾಲಯವನ್ನು ಹೊಡೆದು ಹಾಕಿದಾಗ ಯಾರೂ ಕೇಳಲಿಲ್ಲ, ಆದರೆ ಈಗ ಮಸೀದಿಯನ್ನು ಹೊಡೆದು ಹಾಕಿದ ಮೇಲೆ ಇದನ್ನು ಏಕೆ ಕೇಳಬೇಕು ಎನ್ನತಕ್ಕಂಥ ವಾದವನ್ನು ಮಾಡುತ್ತಿದ್ದೀರಿ, ನಮಗೇನಾಗಿದೆ ಎಂದರೆ ಈ ರೀತಿ ಏನಾದರೂ ಭಾಷಣ ಮಾಡುತ್ತೇವೆಂದು ಹೋಗಿ ದೆಹಲಿಯಲ್ಲಿರತಕ್ಕ ಮಸೀದಿಯನ್ನು ಹೊಡೆದು ಹಾಕುತ್ತೀರೇನೋ ಎನ್ನುವ ಸಂಶಯ ಅಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಜಾತಿಯೆಂಬ ವಿಷ ಬೀಜವನ್ನು ಕಾಂಗ್ರೆಸ್‌ನ ಕುತಂತ್ರವೆಂದು ಇದಕ್ಕೇ ಹೇಳುವುದು. ತಾವು ಒಂದು ವಿಷಯವನ್ನು ಮರೆಯಬೇಡಿ. ಚುನಾವಣೆಯ ಕಾಲದಲ್ಲಿ ತಾವು ಉತ್ತರ ಪ್ರದೇಶದಲ್ಲಿ ಸ್ಪಷ್ಟವಾಗಿ ನಮಗೆ ಅಧಿಕಾರವನ್ನು ತಂದುಕೊಟ್ಟರೆ ಪ್ರಭು ರಾಮಚಂದ್ರರ ಭವ್ಯ ಮಂದಿರವನ್ನು ಅವರ ಜನ್ಮ ಸ್ಥಾನವಾದ ಅಯೋಧ್ಯೆಯಲ್ಲಿ ಕಟ್ಟುತ್ತೇವೆಂದು ಚುನಾವಣಾ ಪ್ರನಾಳಿಕೆಯಲ್ಲಿ ಹೇಳಿದ್ದುದು ಇದೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:– ಮಂದಿರವನ್ನು ಹೊಡೆದು ಕಟ್ಟುತ್ತೇವೆಂದು ಹೇಳಿದ್ದೇವೆಯೇ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನೋಡಿ ನನ್ನೊಬ್ಬನ ಪರಿಸ್ಥಿತಿ ಎಲ್ಲಿಗೆ ಬಂತು.

ಚೇರ್ಮನ್:– ನೀವು ಈಲ್ಡ್ ಆಗುತ್ತೀರಿ ಆದ್ದರಿಂದ ಹೀಗೆ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಲ್ಲಿ ಏನಾಗಿದೆ ಎಂದರೆ, ನಮ್ಮ ಕಾಂಗ್ರೆಸ್ ಪಕ್ಷದಲ್ಲಿ ಇರತಕ್ಕ ನಮ್ಮ ಸ್ನೇಹಿತರು ಕಾಂಗ್ರೆಸನ್ನು ಬಿಟ್ಟು ಈ ಕಡೆಗೆ ಕುಳಿತುಕೊಂಡರೆ ಅಧಿಕಾರ ಸಿಗುತ್ತದೆ. ಈ ಕಡೆ ಬಂದವರು, ಎರಡೂ ಕಡೆ ಅಧಿಕಾರ ಕಳೆದುಕೊಂಡು ಬಿ.ಜೆ.ಪಿ.ಗೆ ಅಧಿಕಾರ ಹೋಗಿಬಿಡುತ್ತದೆ ಎಂದು ರಾತ್ರಿ ಹಗಲು ನಿದ್ರೆಗೆಟ್ಟಿರತಕ್ಕ ಅವರ ಮುಖದ ಪರಿಸ್ಥಿತಿಯನ್ನು ನೋಡಿ ನನಗೆ ಅಯ್ಯೋ ಪಾಪ ಅನ್ನಿಸುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಯಡಿಯೂರಪ್ಪನವರೆ ನೀವು ಮಾತನಾಡಿ ನಾನು ಬೇಡ ಎಂದು ಹೇಳುವುದಿಲ್ಲ, ನೀವು ಮಾತನಾಡತಕ್ಕದ್ದು ತೀರಾ ವೈಜ್ಞಾನಿಕವಾಗಿದೆ, ದೇಶವನ್ನು ಕಟ್ಟಬೇಕು, ದೇಶಪ್ರೇಮಿಗಳು ನಾವು. ನಮ್ಮೆಲ್ಲರನ್ನೂ ಟೀಕೆ ಮಾಡಿ.

5.10 ಪಿ.ಎಂ

ಆದರೆ ಅದರಲ್ಲಿ ಆಶಾಡಭೂತಿತನ ಇರಬಾರದು. ನಿಮ್ಮಲ್ಲಿ ಅದರ ವಾಸನೆ ಎಷ್ಟೊಂದು ರೀತಿಯಲ್ಲಿ ಹೊಡೆಯುತ್ತಿದೆ ಅಂದರೆ, ಕಾಂಗ್ರೆಸ್‌ನಲ್ಲಿರತಕ್ಕಂಥ ಮುಖಂಡರುಗಳನ್ನು ಸೇರಿಸಿಕೊಂಡಿದ್ದೀರಿ. ಪ್ರೊ. ವೆಂಕಟಗಿರಿಗೌಡರು ನಮ್ಮ ಪ್ರೊಫೆಸರ್ ಆಗಿದ್ದವರು ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಕಾಂಗ್ರೆಸ್ ಪಾರ್ಟಿಯಿಂದ ನಿಂತಿದ್ದರು ಅವರು. ಅವರನ್ನು ಅತ್ತು ಕರೆದದು ಪಾರ್ಟಿಗೆ ಸೇರಿಸಿಕೊಂಡು ಇಲ್ಲಿ ಒಕ್ಕಲಿಗರನ್ನು ನಿಲ್ಲಿಸಬೇಕೆಂದು ಹೇಳಿ ವೆಂಕಟಗಿರಿ ಗೌಡರನ್ನು ಕರೆದುಕೊಂಡು ಬಂದು, ನಿಲ್ಲಿಸಿದ್ದೀರಿ ಅವರು ಕಾಂಗ್ರೆಸ್‌ನವರು ಎನ್ನುವುದನ್ನು ಮರೆತ್ತಿದ್ದೀರಿ. ಎಲ್.ಜಿ. ಹಾವನೂರ್‌ರವರು ಕಾಂಗ್ರೆಸ್‌ನಲ್ಲಿದ್ದು ಮಂತ್ರಿಗಳಾಗಿದ್ದವರು. ನಿಮ್ಮ ಲೆಕ್ಕಾಚಾರ ಹೇಗೆ ಅಂದರೆ ಗಂಗಾನದಿ ಮುಳುಗಿದರೆ ಎಲ್ಲವೂ ಪವಿತ್ರವಾಗಿ ಬಿಡುತ್ತದೆ. ನಿಮಗೆ ಅಧಿಕಾರವೇ ಬೇಡವೆ, ಬೇಡ. ಮೊನ್ನೆ ರಾಜಸ್ಥಾನದಲ್ಲಿ ಕಾಂಗ್ರೆಸ್ ಮತ್ತು ಜನತಾದಳದ 165 ಜನ ಎಕ್ಸ್ ಎಂ.ಎಲ್.ಎಗಳನ್ನು ಸೇರಿಸಿಕೊಂಡಿರಿ ಅವರೆಲ್ಲಾ ಕಾಂಗ್ರೆಸ್‌ನವರಲ್ಲವೆ ? ಈ ರೀತಿಯಲ್ಲಿ ಆಶಾಢಭೂತಿತನ ಬೇಡ. ನಿಮಗೆ

ಅಧಿಕಾರವನ್ನು ತೆಗೆದುಕೊಳ್ಳಬೇಕೆಂದು ಪ್ರಭು ರಾಮಚಂದ್ರರ ಹೆಸರಿನಲ್ಲಿ ಹೊರಟಿದ್ದೀರಿ ದೇಶದ ಜನರು ಅಧಿಕಾರ ಕೊಟ್ಟರೆ ಅಧಿಕಾರಕ್ಕೆ ಬನ್ನಿ. ಅದೆಲ್ಲ ಬಿಟ್ಟು ನಾವು ಸತ್ಯಹರಿಶ್ಚಂದ್ರರು ಎಂದು ಹೇಳುವುದು ಬೇಡ. ಇದು ಆಶಾಢಭೂತಿತನದ ಪರಮಾವಧಿ ಆಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮ್ಮ ಎಲ್.ಜಿ. ಹಾವನೂರ್‌ರವರು ರಾಜ್ಯಕ್ಕೆ ಹಿದುಳಿದ ಆಯೋಗದ ವರದಿಯನ್ನು ಕೊಟ್ಟಂಥ ವ್ಯಕ್ತಿ. ಕಾಂಗ್ರೆಸ್‌ನಲ್ಲಿ ನಿಂತು ಪ್ರೊ.ವೆಂಕಟಗಿರಿ ಗೌಡರನ್ನು ಸೋಲಿಸಿ, ಅಲ್ಲಿದ್ದಂಥ ನಂಬಿಕೆ ಮತ್ತು ವಿಶ್ವಾಸವನ್ನು ಅವರು ಕಳೆದುಕೊಂಡು, ಈ ದೇಶದಲ್ಲಿ ಕಾಂಗ್ರೆಸ್‌ನಲ್ಲಿದ್ದು ಮೋಸ ಹೋಗುವುದು ಬೇಡ, ಇಲ್ಲಿ ಒಂದು ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಿದ್ದರೆ, ಲೋಕ ನಾಯಕ ಜಯಪ್ರಕಾಶ್ ನಾರಾಯಣರ ಇಚ್ಛೆ ಪೂರೈಸುವುದಕ್ಕೆ ಸಾಧ್ಯವಿದ್ದರೆ, ಅದು ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಹಾವನೂರ್‌ರವರು ನಮ್ಮಲ್ಲಿ ಬಂದಿದ್ದಾರೆ. ಪ್ರೊ. ವೆಂಕಟಗಿರಿ ಗೌಡರರಂಥವರು ಬಂದಿದ್ದಾರೆ. ನಿಮ್ಮ ಬಗ್ಗೆ ಇದ್ದ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂಬ ಅರಿವು ನಿಮಗೆ ಇಲ್ಲವಲ್ಲ ಎಂದು ನನಗೆ ಕನಿಕರವಾಗುತ್ತಿದೆ. ನಾವು ಯಾರನ್ನು ಬೇಕಾದರೂ ವಿದ್ಯುಕ್ತವಾಗಿ ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನೀವು ಯಾರನ್ನು ಬೇಕಾದರೂ ತೆಗೆದುಕೊಳ್ಳುತ್ತೀರಿ. ಕಮ್ಯುನಿಸ್ಟರು, ಸೋಶಿಯಲಿಸ್ಟರು, ಮುಸ್ಲೀಮ್ ಲೀಗ್‌ನವರನ್ನು ಕೂಡ ತೆಗೆದುಕೊಳ್ಳುತ್ತೀರಿ. ನೀವು ಅಧಿಕಾರಕ್ಕೆ ಬರಬೇಕು, ಮಾತನಾಡಿ ಸುಮ್ಮನೆ ಅವರು ಬೇಡ ಇವರು ಬೇಡ ಎಂದು ಹೇಳುವುದು ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವೊತ್ತು ಜನತಾದಳದ ಅನೇಕ ಜನ ಪ್ರಮಾಣಿಕ ಸ್ನೇಹಿತರು ಇದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:– ವೆಂಕಟಗಿರಿಗೌಡರ ಆರ್ಥಿಕ ಸಿದ್ಧಾಂತ ಜೆ.ಪಿ. ಅವರ ಆರ್ಥಿಕ ಸಿದ್ಧಾಂತ ಒಂದೇ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮ್ಮ ಆರ್ಥಿಕ ಪರಿಸ್ಥಿತಿ ನೋಡಿದರೆ ಅಯ್ಯೋ ಪಾಪ ಅನ್ನಿಸುತ್ತದೆ.

ಮಾನ್ಯ ಅಧ್ಯಕ್ಷರೇ ನಾನು ಈ ವಿಷಯಕ್ಕೆ ಮಂಗಳ ಹಾಡುತ್ತೇನೆ. ನಾನು ಒಂದು ಕಿವಿ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷ ಇದ್ದರೂ ಕೂಡ ಅವರು ತಮ್ಮ ಸಿದ್ಧಾಂತವನ್ನು ಹೇಳುತ್ತಾ ಹೋಗುತ್ತಾರೆ. ಅವೊತ್ತಿನ ಜನಸಂಘದ ವಿಚಾರವನ್ನು, ಇವೊತ್ತಿನ ಭಾರತೀಯ ಜನತಾ ಪಕ್ಷದ ವಿಚಾರವನ್ನು ಈ ದೇಶದ ಜನರಲ್ಲಿ ಅದರ ಬಗ್ಗೆ ನಂಬಿಕೆ, ವಿಶ್ವಾಸವನ್ನು ಹುಟ್ಟಿಸುವುದಕ್ಕೆ 35–40 ವರ್ಷಗಳ ಕಾಲ ನಮಗೆ ಬೇಕಾಯಿತು. ನಿಮ್ಮ 45 ವರ್ಷಗಳ ಆಡಳಿತ ವೈಖರಿಯ ಪರಿಣಾಮ ಕಾಂಗ್ರೆಸ್‌ನ ನೀತಿ ಸಿದ್ಧಾಂತಗಳಲ್ಲಿ ಬಗ್ಗೆ ದೇಶದ ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್:– ನಿಮ್ಮ ತತ್ವವನ್ನು ಒಪ್ಪಿ ಯಾರೂ ನಿಮಗೆ ಓಟು ಕೊಟ್ಟಿಲ್ಲ. ನಾವು ತಪ್ಪು ಮಾಡಿದ್ದೇವೆ ಅದಕ್ಕಾಗಿ ನಿಮಗೆ ಕೊಟ್ಟರು. ನೀವು ಹೇಳುವ ಪ್ರಕಾರ ಜನರನ್ನು ನಿಮ್ಮ ಬಗ್ಗೆ ನಂಬಿಸುವುದಕ್ಕೆ 35–40 ವರ್ಷಗಳು ಬೇಕಾಯಿತು ಎಂದು ಹೇಳುತ್ತೀರಿ ಅದು ಸರಿಯಲ್ಲ. ನಿಮ್ಮ ಎಕಾನಮಿಕ್ ಪಾಲಿಸಿ ಏನು ? ಎಂದು ಹೇಳುತ್ತೀರಾ ?

What is your Election Manifesto? ರಾಜಾಸ್ಥಾನದಲ್ಲಿ ಮೊನ್ನೆವರೆಗೂ ಕಚ್ಚಾಟ ನಡೀತಿರಲಿಲ್ಲವೋ ? ಪಾರ್ಟಿಯೊಳಗೆ ಹೊಡೆದಾಟ ನಡೀತಿರಲಿಲ್ಲವೋ ? ಯಾವುದೇ ಪಕ್ಷ ಅಧಿಕಾರಕ್ಕೆ

ಬಂದರೆ ಸ್ವಾಭಾವಿಕವಾಗಿ ಇದು ಬರುತ್ತದೆ. Wherever human element is there, these things do happen. ಅದನ್ನು ಬಿಡಿ. ಆದರೆ ನಾವು ನಂಬಿಸಿದ್ದೇವೆ ಎನ್ನುವುಧು ತಪ್ಪು. ಅದಕ್ಕಾಗಿ ನಾನು ತಮಗೆ ಕೇಳಿದ್ದುದು, 84ರಲ್ಲಿ ತಾವು ಸ್ವತಂತ್ರವಾಗಿ ನಿಂತಿದ್ದರಲ್ಲ ಲೋಕಸಭೆಗೆ ಎಷ್ಟು ಬಂದಿತ್ತು? ಇರಬಹುದು, ನಾವು ತಪ್ಪು ಮಾಡಿದರೆ ನೀವು ಅಧಿಕಾರಕ್ಕೆ ಬರಬಹುದು, ಆ ಮಾತು ಬೇರೆ. ಜನ ಅಧಿಕಾರ ಕೊಟ್ಟರೆ ನೀವು ಇರಬೇಕಾಗುತ್ತವೆ. ಅತಿ ದೊಡ್ಡ ರಾಜ್ಯ ಉತ್ತರಪ್ರದೇಶ, 86–87 ಪಾರ್ಲಿಮೆಂಟರಿ ಸೀಟಿರುವ ರಾಜ್ಯ, ನಿಮ್ಮನ್ನು ಅಧಿಕಾಕ್ಕೆ ಕೂರಿಸಿದರೆ ನೀವು ಜನಸಾಮಾನ್ಯರ ಕೆಲಸ ಬಿಟ್ಟು ಇದನ್ನು ಹಿಡಿದುಕೊಂಡು ಕುಳಿತಿದ್ದೀರಲ್ಲ, ನೀವಾದರೂ ಕೇಳಬಾರದೆ ನಮ್ಮ ರಾಷ್ಟ್ರೀಯ ಮುಖಂಡರಿಗೆ, ಏನು ಸ್ವಾಮಿ ಹೀಗೆ ಮಾಡ್ತಿದೀರಿ, ದಕ್ಷಿಣದಲ್ಲಿ ನಮಗೆ ಕಷ್ಟವಾಗುತ್ತದೆ, ಎಷ್ಟು ದಿವಸ ನಿಮ್ಮನ್ನೇ ನಂಬಿ ನಾವು ಬದುಕಿಕೊಂಡಿರೋದು ನೀವು ಬದಲಾವಣೆ ಮಾಡಿ ಎಂದು ಹೇಳಬಾರದೆ, ಅದು ಬಿಟ್ಟು ಅವರು ಮಾಡಿದ್ದೇ ಸರಿ ಎಂದು ಹೇಳ್ತಿದೀರಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮ್ಮ ಆರ್ಥಿಕ ನೀತಿ ಬಗ್ಗೆ ನೀವು ಚಿಂತಿಸಬೇಡಿ.

ಶ್ರೀ ಆರ್.ವಿ. ದೇಶಪಾಂಡೆ:– ಆರ್ಥಿಕ ನೀತಿ ಬಗ್ ಚಿಂತನೆ ಮಾಡಬಾರದೆನ್ನುವುದೇ ಅವರ ಕಾರ್ಯಕ್ರಮ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಹೇಳುತ್ತೇನೆ. ನಮ್ಮಲ್ಲಿ ನಾಲ್ಕು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದ ಮೇಲೆ ಅಲ್ಲಿರುವ ರೈತರ ಬಗ್ಗೆ, ಕೃಷಿ ಕಾರ್ಮಿಕನ ಬಗ್ಗೆ, ನಿರುದ್ಯೋಗಿ ಯುವಕರ ಬಗ್ಗೆ ಹರಿಜನ ಗಿರಿಜನರ ಬಗ್ಗೆ ಅಧಿಕೃತವಾಗಿ ನಿಮ್ಮ ಮುಖ್ಯ ಕಾರ್ಯದರ್ಶಿಗಳಿಂದ ಕಾಗದ ಬರೆಯಿಸಿ ನೀವು ಅಧಿಕಾರದಲ್ಲಿದ್ದಾಗ ನೀವು ಮಾಡಿದ ಸಾಧನೆ ಏನು? ಭಾರತೀಯ ಜನತಾ ಪಾರ್ಟಿ ಎರಡೂವರೆ ವರ್ಷದಲ್ಲಿ ಈ ನಾಲ್ಕು ರಾಜ್ಯಗಳಲ್ಲಿ ಏನು ಸಾಧನೆ ಮಾಡಿದೆ ಎಂದು ಅಂಕಿ ಅಂಶ ತರಿಸಿಕೊಳ್ಳಿ. ನಾನು ಉದಾಹರಣೆ ಕೊಡುತ್ತೇನೆ. ಉತ್ತರ ಪ್ರದೇಶದಲ್ಲಿ ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಅಲ್ಲಿರುವ ಲಕ್ಷಾಂತರ ಹರಿಜನ ಗಿರಿಜನ ಬಡವರು, ಹಿಂದುಳಿದ ಬಂಧುಗಳು, ಒಂದೆ ಕಡೆ ಎರಡು ಮೂರು ಎಕರೆ ಇಟ್ಟುಕೊಂಡು ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರೋ ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನ ನೀವು ಮಾಡಿದುದು. ಅಧಿಕಾರಕ್ಕೆ ಬಂದ ಒಂದು ವರ್ಷದೊಳಗಾಗಿ ಆ ಜನರಿಗೆಲ್ಲ ಒಬ್ಬರನ್ನೂ ಬಿಡದೆ ಹಳ್ಳಿಹಳ್ಳಿಗೆ ಹೋಗಿ ಬಗರ್‌ಹುಕುಂ ಸಾಗುವಳಿ ಖಾಯಂ ಮಾಡಿ ಸಾಗುವಳಿ ಚೀಟಿ ಕೊಟ್ಟು ಬಂದದ್ದು ಬಿಜೆಪಿ.

ಯಾವ ಹರಿಜನ ಗಿರಿಜನರ ಉದ್ಧಾರದ ಬಗ್ಗೆ ನೀವು ಮಾತನಾಡುತ್ತಿದ್ದೀರೋ, ಕರ್ನಾಟಕದ ರಾಜ್ಯದ ಬಗ್ಗೆ ಮಾತನಾಡಿ. ಆರ್ಥಿಕ ಸ್ಥಿತಿ ಬಗ್ಗೆ ಮಾತನಾಡುತ್ತೀರಿ ಏನಾಗಿದೆ ಇವತ್ತು ಆರ್ಥಿಕ ಸ್ಥಿತಿ ನಮ್ಮ ರಾಜ್ಯದ್ದು? ಗ್ರಾಮೀಣ ಜನರ ಸ್ಥಿತಿ ಏನಾಗಿದೆ? ನಲವತ್ತೈದು ವರ್ಷಗಳಲ್ಲಿ ಊರ ಹೊರಗಡೆ ಹರಿಜನ ಗಿರಿಜನರನ್ನು ಉದ್ಧಾರ ಮಾಡುತ್ತೀರಿ ಎಂದು, ರಸ್ತೆ ಇಲ್ಲದೆ ದೀಪ ಇಲ್ಲದೆ ಕೈಗೆ ಕೆಲಸ ಇಲ್ಲದೇನೆ ಸಾಯುವಂತಹ ಸ್ಥಿತಿಗೆ ಅವರನ್ನು ತಂದಿರುವುದು ನೀವೆ ತಾನೇ? ಲಕ್ಷಾಂತರ ರೈತರ ಮಕ್ಕಳಿಗೆ ಉದ್ಯೋಗ ಇಲ್ಲದೆ ಭಿಕ್ಷೆ ಬೇಡುವಂತೆ, ತಲೆತಗ್ಗಿಸಿ ಓಡುವಂತಹ ಸ್ಥಿತಿ ತಂದವರು ನೀವೇ ತಾನೇ? ನಿಮ್ಮ ಕೇಂದ್ರದ ಸಚಿವರು ಮೊನ್ನೆ ಹೇಳಿಕೆ ಕೊಟ್ಟರು. ಇದೇ ಪರಿಸ್ಥಿತಿ ಮುಂದುವರೆದರೆ 2000 ಎ.ಡಿ. ಒಳಗೆ ಒಂದು ದಿವಸಕ್ಕೆ ನಾಲ್ಕು ಗಂಟೆ ಸಹ ವಿದ್ಯುತ್ ಸರಬರಾಜು ಮಾಡುವುದಕ್ಕೆ ಆಗುವುದಿಲ್ಲವೆಂದು.

ಶ್ರೀ ಹೆಚ್. ಏಕಾಂತಯ್ಯ:– ಇದಕ್ಕೆಲ್ಲಾ ಪರ್ಯಾಯವಾಗಿ ನಿಮ್ಮ ಕೈಗಾರಿಕಾ ನೀತಿ ಏನು? ಈ ದೇಶದ ನಿರುದ್ಯೋಗಿಗಳಿಗೆ ಕೆಲಸ ಕೊಡುವಂತಹ ನೀತಿ ಏನು? ನೀವು ಹೇಳ್ತೀರಿ ದೊಡ್ಡ ಬಂಡವಾಳ ಹಾಕಿ ಉತ್ಪಾದನೆಯನ್ನು ಬಂಡವಾಳದ ಮೂಲಕ ಮಾಡುತ್ತೇವೆಂದು ಹೇಳ್ತೀರೋ ಹೊರತು ಹೆಚ್ಚು

ಜನರಿಗೆ ಉದ್ಯೋಗ ಕೊಡುವಂತಹ ಕೈಗಾರಿಕಾ ನೀತಿಯನ್ನು ಕೇಂದ್ರ ಸರ್ಕಾರದಲ್ಲಿದ್ದಾಗಲಿ, ಈಗಾಗಲೇ ಏನಾದರೂ ಹೇಳಿಕೊಂಡಿದ್ದೀರಾ? ಈ ಎಲ್ಲಾ ವಿಚಾರಗಳಲ್ಲಿ ತಾವು ಯಾರ ಪರವಾಗಿದ್ದೀರಿ? ಸಾಮಾನ್ಯ ಜನರು, ಬಡವರು, ನಿರುದ್ಯೋಗಿಗಳಿರಬಹುದು ಅವನ್ನು ಹೋಗಲಾಡಿಸುವ. ಬಗ್ಗೆ ನಿಮ್ಮ ಕಾರ್ಯಕ್ರಮಗಳೇನು ಹೇಳಿ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಕರ್ನಾಟಕ ರಾಜ್ಯಗಳಲ್ಲಿ ಅಧಿಕಾರದಲ್ಲಿ ನೀವಿದ್ದಿರಿ, ಇವರಿದ್ದರು. ನಮ್ಮ ಆರ್ಥಿಕ ನೀತಿ ಕೈಗಾರಿಕಾ ನೀತಿ ಏನು ಎಂಬ ಬಗ್ಗೆ ನಮ್ಮ ಪ್ರಣಾಳಿಕೆಯ ಪುಸ್ತಕ ವಿತರಣೆ ಮಾಡುತ್ತೇನೆ. ಇಲ್ಲಿ ಒಂದು ದಿವಸ ಚರ್ಚೆ ಮಾಡೋಣ. ನಾವು ಇಲ್ಲಿ ಬಿಜೆಪಿಯವರು 4 ಜನ ಇದ್ದೇವೆ, ಆಯಿತು. ನಮ್ಮ ನೀತಿ ಇಲ್ಲ ಎಂದು ತಿಳಿದುಕೊಳ್ಳಿ. ನಿಮ್ಮ ನೀತಿ ಏನು? ಐದು ವರ್ಷ ಅಧಿಕಾರದಲ್ಲಿದ್ದ ರಾಮಕೃಷ್ಣಹೆಗಡೆಯವರು ಮೌಲ್ಯಾಧಾರಿತ ರಾಜಕಾರಣ ಮಾಡುತ್ತೇವೆ ಎಂದು ಹೇಳಿದರು. ಏನಾಯಿತು, ಮೌಲ್ಯ ಎನ್ನುವ ಶಬ್ದವನ್ನು ಅಪಮೌಲ್ಯ ಮಾಡಿಬಿಟ್ಟರಿ.

ಜನರ ಬಗ್ಗೆ ಇದ್ದ ನಂಬಿಕೆ ವಿಶ್ವಾಸವನ್ನು ಹಾಳು ಮಾಡಿದಿರಿ. ನಾನು ಅದರ ಬಗ್ಗೆ ಟೀಕೆ ಮಾಡುತ್ತಿಲ್ಲ. ಅವರೇನು ಮಾಡುತ್ತಾರೆ ಪಾಪ ಅವರೇನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಯಡಿಯೂರಪ್ಪನವರೇ, ನಾನು ಈಗಾಗಲೇ ಹೇಳಿದೆ. ಈ ಎಲ್ಲದಕ್ಕೂ ಸಹಾ ಹಿನ್ನೆಲೆ ಇರುವಂಥ ಶಕ್ತಿ ಏನೆಂಬುದನ್ನು ನಾನು ಹೇಳಿದೆ. ಎಲ್ಲಿಯವರೆಗೆ ಆ ಪಟ್ಟಭದ್ರ ಹಿತಾಸಕ್ತಿಗಳು ನಮ್ಮ ಮೇಲೆ ನಿಮ್ಮ ಮೇಲೆ ಪ್ರಭಾವ ಬೀರುತ್ತವೆ, ಬೀರುವಂಥ ಪರಿಸ್ಥಿತಿ ಈ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಇರುತ್ತದೆ. ಅಲ್ಲಿಯವರೆಗೂ ಸಹಾ ಹೊಸ ಸಾಮಾಜಿಕ ವ್ಯವಸ್ಥೆ ತಾವು ಏನು ಹೇಳುತ್ತೀರಿ. ಅದು ಬರುವುದಕ್ಕೆ ಸಾಧ್ಯವಿಲ್ಲ. ನೀವೂ ಸಹಾ ಅದನ್ನು ಆಯ್ಕೆ ಮಾಡಿದಿರಿ ಆ ಸ್ಥಾನದಿಂದ ಕೊಚ್ಚಿಕೊಂಡು ಹೋಗುತ್ತೀರಿ. ಅದರ ಬಗ್ಗೆ ಏನೂ ಅನುಮಾನ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮ್ಮ ನೀತಿ ಸ್ಪಷ್ಟ ಇದೆ. ಹಳ್ಳಿಯಲ್ಲಿರುವಂಥ ರೈತ ಉಳಿದಾಗ ಮಾತ್ರ ರಾಜ್ಯ ಉಳಿಯುವುದು, ದೇಶ ಉಳಿಯುವುದು. ಅದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿರುವಂಥ ಕೈಗಾರಿಕೆಗಳಿಗೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು...

ಚೇರ್ಮನ್:– ನನಗೆ ಒಂದು ಭಯ. ಏನಾಗಿದೆ ಎಂದರೆ ಈ ರಾಜ್ಯಪಾಲರ ಭಾಷಣ ಬಿಟ್ಟು....

ಶ್ರೀ ಪಿ.ಜಿ. ಆರ್. ಸಿಂಧ್ಯ:– ಸನ್ಮಾನ್ಯ ಯಡಿಯೂರಪ್ಪನವರು ರಾಮಕೃಷ್ಣ ಹೆಗಡೆಯವರ ಮೌಲ್ಯಾಧಾತ ಸರ್ಕಾರದ ಬಗ್ಗೆ ಮಾತನಾಡಿದರು. ಈ ಮೌಲ್ಯಾಧಾರಿತ ಸರ್ಕಾರಕ್ಕೆ 83ರಿಂದ 85ರವರೆಗ ಇವರು ಬೆಂಬಲವನ್ನು ಕೊಟ್ಟರು. 85 ನೇ ಚುನಾವಣೆಯಲ್ಲಿ ಇವರು 18 ಸೀಟು ನಾವು ಗೆದ್ದು ಬಂದಿದ್ದೇವೆ, ನಮಗೆ 36 ಸೀಟು ಬಿಟ್ಟುಕೊಡಿ ಎಂದು ಹೇಳಿದರು. ನಾವು 36 ಆಗುವುದಿಲ್ಲ. ಬೇಕಾದರೆ ನಿಮಗೆ 18 ಸೀಟು ಕೊಡುತ್ತೇವೆ. ಇಲ್ಲದಿದ್ದರೆ ನಿಮ್ಮ ದಾರಿ ನಿಮಗೆ ಎಂದು ಹೇಳಿದರು. ಆಗ ಏತಕ್ಕೆ ಈ ಯೋಚನೆ ನಿಮಗೆ ಬರಲಿಲ್ಲ. 85ರಲ್ಲಿ ನೀವು ನಮ್ಮ ಜೊತೆ ಅಲಯನ್ಸ್ ಮಾಡಿಕೊಳ್ಳುವುದಕ್ಕೆ ಬಂದಿದ್ದರಲ್ಲಾ, ನಾವು ನೀವು ಕುಳಿತು ಮಾತುಕತೆ ಮಾಡಿದೆವು. ಆಗ ಏತಕ್ಕೆ ಹೆಗಡೆ ಮೌಲ್ಯ ಮಾಡಲಿಲ್ಲ ಎಂದು ಹೇಳಿ, ನಮಗೆ ಹೆಗಡೆಯವರ ಮೌಲ್ಯಾಧಾರಿತ ಇಲ್ಲ. ರಾಜಕಾರಣ ಹಿಡಿಸುವುದಿಲ್ಲವೆಂದು ಹೇಳಿ. ಮಾನ್ಯ ಬಂಗಾರಪ್ಪನವರನ್ನು ನಾನು ಅಪ್ರಿಸಿಯೇಟ್ ಮಾಡುತ್ತೇನೆ. ಏಕೆಂದರೆ ಅವರು ಹೇಳಿದರು, ನಮಗೂ ನಿಮಗೂ ಹೊಂದಾಣಿಕೆಯಾಗುವುದಿಲ್ಲ, ಹೋಗುತ್ತೇನೆ ಎಂದು ಹೇಳಿ ಹಠ ಸಾಧನೆ ಮಾಡಿದರು. ನೀವು ಏತಕ್ಕೆ ಆ ರೀತಿ ಮಾಡುವುದಕ್ಕೆ ಹೋಗಲಿಲ್ಲ. ನಮಗೆ ಏತಕ್ಕೆ ದುಂಬಾಲು ಬಿದ್ದಿದ್ದೀರಿ? ದಯವಿಟ್ಟು ಇವೆಲ್ಲಾ ಬೇಡ. ಮಾನ್ಯ ರಂಗನಾಥ್‌ರವರು

ಏನು ನಿಮಗೆ ಕೇಳಿದರು, ನೀವು ಏನು ಮಾಡಬೇಕು ಎಂದು ಹೊರಟಿದ್ದೀರಿ ? ಯಾರ ಪರವಾಗಿದ್ದೀರಿ ? ನಿಮ್ಮ ಆರ್ಥಿಕ ನೀತಿ ಏನು ? ನಿಮ್ಮನ್ನು ಏನಾದರೂ ಕೇಳುವುದಕ್ಕೆ ಹೋದರೆ ನಾನು ಇಲ್ಲಿ ಹೇಳುವುದಿಲ್ಲ. ನಾನು ಹೊರಗಡೆ ಹೋಗುತ್ತೇನೆ. ನನಗೆ ಇಲ್ಲಿ ನಂಬಿಕೆ ಇಲ್ಲ; ಎಂದು ಹೇಳಿ ಪಬ್ಲಿಕ್ ಮೀಟಿಂಗ್ ಅಡ್ರೆಸ್ ಮಾಡುವುದಕ್ಕೆ ಹೋಗುತ್ತೀರಿ. ಇಲ್ಲಿ ಹೇಳಿ ಎಂದರೆ ನಿಮಗೆ ಏತಕ್ಕೆ ನಾವು ಹೇಳಬೇಕು, ನಿಮ್ಮ ಜವಾಬ್ದಾರಿ ಅದು ಎಂದು ಹೇಳುತ್ತೀರಿ. ನಾವು ಇದಕ್ಕೆ ಏನು ಹೇಳುವುದು ? ನಿಮ್ಮ ಖಚಿತವಾದ ನಿಲುವೇನು ? ಯಾರ ಪರವಾಗಿ ನೀವು ಇದ್ದೀರಿ ? ದಯವಿಟ್ಟು ಅದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಸತ್ಯಕ್ಕೆ ಅಪಚಾರ ಮಾಡುವಂಥ ಒಂದು ಮಾತನ್ನು ನೀವು ಹೇಳುತ್ತಿದ್ದೀರಿ. ನಾನು ಸನ್ಮಾನ್ಯ ಸಿಂಧ್ಯಾರವರನ್ನು, ದೇಶಪಾಂಡೆಯವರನ್ನು, ಏಕಾಂತಯ್ಯನವರನ್ನು ಕೇಳುತ್ತೇನೆ. ಬಿ.ಜೆ.ಪಿ. ಕರ್ನಾಟಕದಲ್ಲಿ ಯಾವುದಾದರೂ ಒಂದು ಸಂದರ್ಭದಲ್ಲಿ ನಿಮಗೂ ನಮಗೂ ಹೊಂದಾಣಿಕೆಯನ್ನು ಮಾಡಿಕೊಂಡು ವಿಧಾನಸಭೆಗೆ ಚುನಾವಣೆಯನ್ನು ನಡೆಸಿದ್ದೇವೆಯೋ ? ಇಲ್ಲ. ಹೊಂದಾಣಿಕೆಯಾಗಿಲ್ಲ. ದಯಮಾಡಿ ಸತ್ಯವನ್ನು ತಿಳಿದುಕೊಳ್ಳುವಂಥ ಪ್ರಯತ್ನವನ್ನು ಮಾಡಿ. 18 ಜನರು ನಾವು ಗೆದ್ದಾಗ ನಾವು ಸ್ವತಂತ್ರ್ಯವಾಗಿ ನಾವು ಗೆದ್ದವರು. ನಿಮಗೆ 18 ಜನರ ಬೇಷರತ್ ಬೆಂಬಲ ಕೊಟ್ಟು ವಿರೋಧ ಪಕ್ಷಗಳ ಬಗ್ಗೆ ಇದ್ದ ನಂಬಿಕೆಯನ್ನು ಹಾಳು ಮಾಡಿಕೊಂಡು ಹತ್ತು ವರ್ಷ ನಮ್ಮ ಬೆಳವಣಿಗೆಯನ್ನು ಹಾಳು ಮಾಡಿಕೊಂಡಂಥ ಜನರು ನಾವು. ಇದರ ಅರಿವು ನಮಗಾಗಿದೆ. ಆದರೆ ನಾವು ಇವತ್ತು ನಿಮ್ಮನ್ನು ಕೇಳುತ್ತೇವೆ. ಇವತ್ತು ಬಿಜೆಪಿ.ಯಿಂದ 18 ಜನರು ಬೆಂಬಲವನ್ನು ತೆಗೆದುಕೊಂಡು ನೀವು ಅಧಿಕಾರ ನಡೆಸಿದರಲ್ಲಾ, ಯಾವತ್ತಾದರೂ ಒಂದು ದಿವಸ ಆ ಎರಡು ವರ್ಷದಲ್ಲಿ ಅಧಿಕಾರ ಕಾಲದಲ್ಲಿ ಇದ್ದಂಥ ವ್ಯತ್ಯಾಸ ಅದು ಆದಾದ ಮೇಲೆ ನಮ್ಮನ್ನು ಬಿಟ್ಟು ನೀವು ಹೋದ ಮೇಲೆ ನಿಮ್ಮ ಪರಿಸ್ಥಿತಿ ಏನಾಯಿತು ? ನಿರ್ನಾಮವಾದಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– 146 ಸೀಟು ಗೆದ್ದೆವು.

ಶ್ರೀ ಆರ್.ವಿ. ದೇಶಪಾಂಡೆ:– ನಮಗೆ 146 ಸೀಟುಗಳು ಬಂದೆವು.

ನೀವು ಆರು ಜನರು ಬಂದಿರಿ, ನಾವು 146 ಜನರು ಬಂದೆವು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಜ. ಕರ್ನಾಟಕದಲ್ಲಿ ಲೋಕಸಭೆ ನಿಮ್ಮ ಪರಿಸ್ಥಿತಿ ಏನು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಏನಾಯಿತು ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಯಾರಿದ್ದಾರೆ. ಸ್ವಾಮಿ ? 28 ಪರ್ಸೆಂಟ್ ವೋಟು ತೆಗೆದುಕೊಂಡು ಮೊನ್ನೆ ಲೋಕಸಭೆ ಚುನಾವಣೆಯಲ್ಲಿ ನಾಲ್ಕು ಜನ ಲೋಕಸಭೆಗೆ ಆಯ್ಕೆಯಾಗಿ ಹೋದರು. ನಿಮ್ಮವರು ಒಬ್ಬರು ಅಡ್ರೆಸ್ ಇರಲಿಲ್ಲ. 5 ವರ್ಷ ಅಧಿಕಾರ ನಡೆಸಿದಂಥ ನೀವು ಲೋಕಸಭೆಯಲ್ಲಿ ಒಂದು ಸೀಟು ತೆಗೆದು ಕೊಳ್ಳುವುದಕ್ಕೆ ಆಗದೆ ಜನರಿಂದ ದೂರ ಸರಿದಂಥ ಪಕ್ಷ ನಿಮ್ಮದು.

ಶ್ರೀ ಆರ್.ವಿ. ದೇಶಪಾಂಡೆ:– ಲೋಕಸಭೆಯಲ್ಲಿ ನಾವು ಸೀಟು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ನೀವು ರಾಮ, ಮತ್ತೊಂದು ಎಮೋಷನಲ್ ಇಷ್ಯೂ ರೇಜ್ ಮಾಡಿ ಆ ಸಮಯದಲ್ಲಿ ಕೆಲವು ಮಟ್ಟಿಗೆ ನಿಮಗೆ ಯಶಸ್ಸು ಕೂಡ ಬಂತು. ಆದರೆ ಆ ಯಶಸ್ಸು ಎಷ್ಟು ದಿನ ಉಳಿಯಿತು ? ಅಸೆಂಬ್ಲಿ ಚುನಾವಣೆಯಾಯಿತು. ಯಾವ ಗದಗ್ ಕ್ಷೇತ್ರದಲ್ಲಿ ನೀವು ಲೀಡ್ ಮಾಡಿದ್ದೀರಿ

ಪಾರ್ಲಿಮೆಂಟಿಗೆ Your forfeited your deposit. ಕುಣಿಗಲ್ ನೀವು ಎಲ್ಲಿ ಲೀಡ್ ಮಾಡಿದ್ದಿರಿ. You forfeited your deposit within six months. ಹಾಗಾಗಿ ನೀವು ತಿಳಿದುಕೊಳ್ಳಬೇಕು. ಜನರನ್ನು ಖಾಯಂ ಆಗಿ ಮೋಸ ಮಾಡುವುದಕ್ಕಾಗುವುದಿಲ್ಲ. ಅದೇ ಪ್ರಕಾರ ಜಾತಿ ಮೇಲೆ, ದೇವರ ಹೆಸರಿನ ಮೇಲೆ ವೋಟು ಬರಲಿಕ್ಕೆ ಸಾಧ್ಯವಾಗಲಿಲ್ಲ. ಟೆಂಪೊರರಿ ಚುನಾವಣೆ ಬರಬಹುದು. ಅದರ ಲಾಭ ಟೆಂಪೊರರಿ ತೆಗೆದುಕೊಂಡಿರಿ. ಅದನ್ನು ತೆಗದುಕೊಂಡಿರಿ. ಅದು ಹೋಯಿತು. ಇಷ್ಟೆ ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಏಕೆ ಇವರು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅಂದರೆ ಇವರಿಗೆ ಕನ್‌ವಿನಿಯೆಂಟ್ ಆಗಿ ಇಲ್ಲ. ಇವರು ಶೇಕಡ 28ರಷ್ಟು ಓಟು ಬಂತು ಎಂದು ಹೇಳುತ್ತಾರೆ. ನಿಮಗೆ ವಿರುದ್ಧವಾಗಿ ಶೇಕಡ 62 ರಷ್ಟು ಓಟು ಇತ್ತು ಎಂದು ಹೇಳಿದರೆ, 72 ಪರ್ಸೆಂಟ್ ಓಟು ಇತ್ತು. ಅಂದರೆ ಅವರಿಗೆ ಸ್ವಲ್ಪ ಹೌದಲ್ಲಾ 72 ಪರ್ಸೆಂಟ್ ಓಟು ಇದೆ ಎನ್ನುತ್ತಾರೆ. ಅದು ಇನ್‌ಕನ್ವಿಯೆಂಟ್.

ಚೇರ್ಮನ್:– ಮಾನ್ಯ ಯಡಿಯೂರಪ್ಪನವರು ನೀವು ಎದ್ದೇಳಿ ಎಂದು ನಿಮಗೆ ಪ್ರಶ್ನೆ ಹಾಕುತ್ತಾರೆ. ಆದ್ದರಿಂದ ನೀವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ವಾಸ್ತವಿಕವಾಗಿ ಅವರು ಪರಿಸ್ಥಿತಿ ಅರಿವಿಲ್ಲದೆ ಒದ್ದಾಡುತ್ತಿದ್ದಾಲ್ಲಾ ಎಂದು ನನಗೆ ಇವರನ್ನು ನೋಡಿ ದುಃಖವಾಗುತ್ತದೆ. ಇರುವ 24 ಜನರಲ್ಲಿ ಒಬ್ಬ ಮುಖಂಡರ ಬಗ್ಗೆ ನಿಮಗೆ ವಿಶ್ವಾಸ ಇಲ್ಲ. ಇನ್ನೊಬ್ಬರನ್ನು ಮುಖಂಡರನ್ನಾಗಿ ಮಾಡಿಕೊಂಡರೆ.

ಶ್ರೀ ಆರ್. ವಿ. ದೇಶಪಾಂಡೆ:– ವಿಷಯಕ್ಕೆ ಬನ್ನಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅಧಿಕೃತವಾದ ವಿರೋಧ ಪಕ್ಷ.

ಚೇರ್ಮನ್:– ನಮ್ಮ ಮುಂದೆ ಇರುವುದು ರಾಜ್ಯಪಾಲರ ಭಾಷಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಅಲ್ಲಿ ಯಾರು ಬೇಕಾದರೂ ಕುಳಿತುಕೊಳ್ಳಬಹುದು. ವಿರೋಧಪಕ್ಷದಲ್ಲಿ ಕುಳಿತುಕೊಂಡು ಸರ್ಕಾರದ ವೈಫಲ್ಯತೆಯನ್ನು ತೆಗೆದುಹಾಕಿ, ಜನರಲ್ಲಿ ಜಾಗೃತಿಯನ್ನು ಉಂಟು ಮಾಡಿ ಜನಕಲ್ಯಾಣ ಮಾಡುವಂತಹ ಕೆಲಸದಲ್ಲಿ ಸಂಪೂರ್ಣ ವಿಫಲವಾಗಿರತಕ್ಕಂಥ ಒಂದು ವಿರೋಧ ಪಕ್ಷ ಇಲ್ಲಿ ಕುಳಿತುಕೊಂಡು ನಿಮ್ಮ ಶಾಪದಿಂದ ನಿಮ್ಮ ನಡುವಳಿಕೆತನದಿಂದ ಈ ರಾಜ್ಯದ ಜನ ವಿರೋಧ ಪಕ್ಷಗಳ ಬಗ್ಗೆ ಇದ್ದಂತಹ ನಂಬಿಕೆಯನ್ನು ಹಾಳು ಮಾಡಿಕೊಂಡ ಪರಿಣಾಮದಿಂದ ನಮ್ಮನ್ನು ಹಾಳು ಮಾಡುವಂತಹ ಸ್ಥಿತಿಗೆ ತಂದಿರಿ. ಬದುಕಿರುವವವರೆಗೆ ನಾನು ರಾಜಕಾರಣದಲ್ಲಿ ಇರುವವರೆಗೆ ನಿಮ್ಮನ್ನು ನಂಬಿ ನಿಮ್ಮಷ್ಟೆ ಬೆಂಬಲ ಕೊಟ್ಟು ಜನಕ್ಕೆ ಒಳ್ಳೆಯ ಕೆಲಸ ಮಾಡಬಹುದು ತಿಳಿದು, ನಮಗೇನು ಇದರಿಂದ ಲಾಭವಾಗುತ್ತದೆ ಎಂದು ಅಲ್ಲ. 40–45 ವರ್ಷ ಅಧಿಕಾರದಲ್ಲಿದ್ದಂತಹ ಕಾಂಗ್ರೆಸ್ಸಿನ ಸ್ನೇಹಿತರು ಮಾಡಬಾರದ್ದನ್ನು ಮಾಡಿ ದೇಶವನ್ನು ವಿನಾಶದತ್ತ ತೆಗೆದುಕೊಂಡು ಹೋದುದು ನೀವಾದರೂ ಒಳ್ಳೆಯ ಕೆಲಸ ಮಾಡಬಹುದೆಂದು ಜನ ನಂಬಿಕೊಂಡು, ಜಯಪ್ರಕಾಶ್ ನಾರಾಯಣ್‌ರವರ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ನೀವು ಸಹ ದ್ರೋಹ ಮಾಡಿ ಈ ಸ್ಥಿತಿಗೆ ಬಂದಿರಲ್ಲಾ ಎಂದು ಜನ ಇವತ್ತು ನಿಮ್ಮ ಎಲ್ಲಿ ಇಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಆ ದ್ರೋಹಿಗಳನ್ನು ನೀವು ಏಕೆ ಪಾರ್ಟಿಗೆ ಸೇರಿಕೊಳ್ಳುತ್ತಿದ್ದೀರಿ. ಸೇರಿಸಿಕೊಳ್ಳಬೇಕು. ತಿರುಗಿ ಅದೇ ಮಾತನಾಡುತ್ತೀರಿ. ನೀವು ಸತ್ಯಹರಿಶ್ಚಂದ್ರರ ಮೊಮ್ಮಕ್ಕಳು ಅಂತ ಮಾತನಾಡುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವ ರಾಜಕೀಯ ಪಕ್ಷ....

ಚೇರ್ಮನ್:- ಮಾನ್ಯ ಯಡಿಯೂರಪ್ಪನವರೇ ಇಲ್ಲಿಗೆ ಸಾಕು ಮಾಡಿ. ವಿಷಯಾಂತರವಾಗುತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಸದನದ ಮೂಲಕ ನಾನು ಒಂದು ಕರೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಿಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಯಾರು ಪ್ರಾಮಾಣಿಕರಿದ್ದಾರೆ, ಕಾಂಗ್ರೆಸ್ಸಿನ ತತ್ವ ನೀತಿ, ಸಿದ್ಧಾಂತವನ್ನು ಕಳೆದುಕೊಂಡಿದ್ದಾರೆ, ಜನತಾದಳದ ನಮ್ಮ ಸ್ನೇಹಿತರು ಏನು ನಂಬಿಕೆ ವಿಶ್ವಾಸವನ್ನು ಕಳೆದುಕೊಂಡಿದ್ದೀರಿ. ನಿಮಗೆ ಇರುವ ಜಾಗ ಒಂದೇ ಒಂದು ಭಾರತೀಯ ಪಾರ್ಟಿ ಇದನ್ನು ಮರೆಯಬೇಡಿ. ನಮ್ಮ ಜೊತೆಗೆ ಸೇರಿಸಿಕೊಳ್ಳುತ್ತೀರಿ ಅಂತ ಅಲ್ಲಿ ಬಂದು ಕೇಳುತ್ತೀರಾ ? ಇಲ್ಲಿ ಬಂದು ಏನೇನೋ ಮಾಡತ್ತೀರಿ ? ನಮಗೆ ಇವರನ್ನು ನೋಡಿ ಅಯ್ಯೋ ಪಾಪ ಅನ್ನಿಸುತ್ತದೆ.

ಚೇರ್ಮನ್:- ಮಾನ್ಯ ನಂಜಪ್ಪನವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ.

Dr. N.B. NANJAPPA:- You please follow the fundamental rules and regulations of this House.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಇಂಗ್ಲೀಷ್ ನಂಜಪ್ಪನವರು ನನ್ನ ಒಂದು ನಿಮಿಷ ಕೇಳಬೇಕು.

ಚೇರ್ಮನ್:- ಅದೇನು ಹೇಳುತ್ತಾರೆ ಹೇಳಿಬಿಡಲಿ.

ಡಾ।। ಎನ್. ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷರೆ, ಅವರು 45 ವರ್ಷಗಳ ಕಾಲ, ಕಾಂಗ್ರೆಸ್ ಈ ದೇಶವನ್ನು ಹಾಳು ಮಾಡಿ ಸರ್ವನಾಶ ಮಾಡಿದೆ ಎನ್ನತಕ್ಕ ಮಾತನ್ನಾಡಿದ್ದಾರೆ. ನಾನು ಅವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವರ ಇತಿಹಾಸ ಏನು, ಇವರ ಚರಿತ್ರೆ ಏನು, ಇವರು 42 ವರ್ಷಗಳಲ್ಲಿ ಈ ದೇಶವನ್ನು ಯಾವ ಸ್ಥಿತಿಗೆ ತಂದಿಟ್ಟಿದ್ದಾರೆ. ಇವರಿಗೆ ಈ ದೇಶದ ಇಂಟರ್‌ಗ್ರಿಟಿ ಬಗ್ಗೆ ಈ ದೇಶಕ್ಕೆ ಕಷ್ಟಪಟ್ಟು ಸ್ವಾತಂತ್ರ್ಯವನ್ನು ಸಂಪಾದನೆ ಮಾಡಿದ ಬಗ್ಗೆ ಯೋಜನೆ ಮಾಡತಕ್ಕ ಯೋಗ್ಯತೆ ಇವರಿಗೆ ಇದೆಯೋ ? ಈ ದೇಶದ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಿದಂತಹ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ, ಒಂದು ಪಕ್ಷವನ್ನು ಸರ್ವ ನಾಶ ಮಾಡಿದ ಪಕ್ಷ ಎಂದು ಹೇಳುವುದಕ್ಕೆ ಯೋಗ್ಯತೆ ಅವರಿಗೆ ಇದೆಯೋ ? ಈ ದೇಶದಲ್ಲಿ ಜನಗಳನ್ನು ಮುಕ್ತ...

ಚೇರ್ಮನ್:- ಇದರೊಳಗೆ ಪಾಯಿಂಟ್ ಆಫ್ ಆರ್ಡರ್ ಏನು ?

ಶ್ರೀ ವಾಟಾಳ್ ನಾಗರಾಜ್:- ಇದರಲ್ಲಿ ಕ್ರಿಯಾನೂ ಇಲ್ಲ ಲೋಪನೂ ಇಲ್ಲ.

ಡಾ।। ಎನ್. ಬಿ. ನಂಜಪ್ಪ:- ದೇಶದ ಸ್ವಾತಂತ್ರ್ಯಕ್ಕೆ ಇವರು ಗಂಡಾತರವನ್ನು ಮಾಡತಕ್ಕಂಥ ಇವರಿಗೆ ಈ ತರಹ ಮಾತನಾಡಬೇಕೇ ಇಲ್ಲಿ ಸದಾವಕಾಶ ಇದೆ ಎಂದು ಹೇಳಿ ಬಾಯಿಗೆ ಬಂದ ಹಾಗೆ ಹರಡತಕ್ಕಂಥದ್ದನ್ನು ಕೊನೆ ಮಾಡಬೇಕೆಂದು ನಾನು ಅಧ್ಯಕ್ಷರ ಮೂಲಕ, ರೆಸ್ಪಾನಿಬಿಲಿಟಿ ಇಡತಕ್ಕಂಥ ಒಂದು ಪಕ್ಷದ ರಾಜ್ಯದ ಅಧ್ಯಕ್ಷರಾಗಿತಕ್ಕಂಥ ಮಾನ್ಯ ಯಡಿಯೂರಪ್ಪನವರು ಇಂತಹ ಅಶ್ಲೀಲ ಪದಗಳನ್ನು ಈಗ ಜಾಗದಲ್ಲಿ ಹೇಳಬಾರದು.

ಚೇರ್ಮನ್:- ನಿಮಗೆ ಅವಕಾಶ ಇದೆ. ಮಾತನಾಡುವಾಗ ಉತ್ತರ ಕೊಡಬಹುದು. ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಯಡಿಯೂರಪ್ಪನವರು...

ಚೇರ್ಮನ್:- ಪಾಯಿಂಟ್ ಆಫ್ ಇದೆಯೇ ?

ಶ್ರೀ ವಾಟಾಳ್ ನಾಗರಾಜ್:- ನಾನು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳುವುದಿಲ್ಲ.

ಚೇರ್ಮನ್:- ಅವರಿಗೆ ಉತ್ತರ ಹೇಗೆ ಕೊಡುತ್ತೀರಿ ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಯಡಿಯೂರಪ್ಪನವರು ಕುಳಿತಿದ್ದಾರೆ.

ಶ್ರೀ ಪಿ.ಜಿ. ಸಿಂಧ್ಯ:- ಮಾನ್ಯ ಯಡಿಯೂರಪ್ಪನವರಿಗೆ ಏನಾಗಿದೆ ಎಂದರೆ ಅವರು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವುದಕ್ಕೆ ಪ್ರಿಪೇರ್ ಆಗಿ ಬಂದಿರಲಿಲ್ಲ. ಆದರಿಂದ ಕಾಂಗ್ರೆಸ್ ಜನತಾ ದಳದ ಬಗ್ಗೆ ವಿಶ್ಲೇಷಣೆ ಮಾಡುತ್ತಾ ಕುಳಿತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಅದೊಂದು ಸತ್ಯ ಅದು ಇರಲಿ. ಇಷ್ಟೊಂದು ಮಾನ್ಯ ಯಡಿಯೂರಪ್ಪನವರ ಮಾತನ್ನು ಕೇಳಿದ್ದೆವು. ಅವರು ಬಹಳ ಬುದ್ಧಿವಂತರು. ಇಷ್ಟೊಂದು ಜನರನ್ನು ಅವರು ಎದ್ದು ಎದ್ದು ಕೂರಿಸಿ ಮಾಡಿದ್ದಾರೆ. ನೀವು ಯಾರಾದರೂ ಅವರನ್ನು ತಪ್ಪು ತಿಳಿದುಕೊಂಡರೆ ತಪ್ಪಾಗುತ್ತದೆ. ಇಡೀ ಸದನವನ್ನೇ ಎದ್ದು ಕೂರಿಸಿ ಸರ್ಕಸ್ ಮಾಡಿದ್ದಾರೆ. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ ಅವರು ಒಂದು ಮಾತನ್ನು ಈಗ ಹೇಳಿದರು.

ಅಂದರೆ, ಯಡಿಯೂರಪ್ಪನವರ ಪಕ್ಷಕ್ಕೆ ಆ ಕಡೆಯ ಕೆಲವರು ಸೇರತಕ್ಕಂಥ ಸುದ್ದಿ ಇದೆ, ಮತ್ತು ಇವರೂ ಸಹ ಅವರ ಕಡೆಯವರನ್ನು ತಮ್ಮ ಕಡೆಗೆ ಎಳೆಯತಕ್ಕಂಥ ಸುದ್ದಿ ಕೂಡ ಇದೆ. ಅಂದ ಮೇಲೆ ಈ ಪಕ್ಷ ಸರಿಯಲ್ಲವೆಂದು ಮತ್ತೆ ಆ ಪಕ್ಷದವರ ಜೊತೆ ಒಳಗೊಳಗೆ ಒಂದು ಸಂಧಾನ ನಡೆದಿದ್ದರೆ ಆ ವಿಷಯ ಈ ಬಹಿರಂಗವಾಗಿ ಸದನದಲ್ಲಿ ರಾಜ್ಯದ ಜನತೆಗೆ ಗೊತ್ತಾಗಲಿ. ಯಡಿಯೂರಪ್ಪನವರ ಹತ್ತಿರ ಯಾರ್‍ಯಾರೂ ಮಾತನಾಡುವುದಕ್ಕೆ ಬಂದಿದ್ದರು ? ಎಂಬುದನ್ನು ಸ್ಪಷ್ಟಪಡಿಸಬೇಕು. ಅದನ್ನು ಬಿಟ್ಟು ಸುಮ್ಮನೆ ಒಂದು ಚಿತ್ರ ಇಟ್ಟು ಒಳಗೇನೋ ಇದೆ, ತೋರಿಸುತ್ತೇವೆ ನೋಡಿ ಎಂದು ಮಾಡುವುದು ಬೇಡ. ನಮ್ಮ ಹಳ್ಳಿಗಳ ಕಡೆ ಒಂದು ಹಬ್ಬದೊಳಗೆ ಚಿತ್ರಗಳನ್ನು ತೋರಿಸುತ್ತಾ, ತಾಜ್‌ಮಹಲ್ ನೋಡು, ರಾಜನ ಅರಮನೆ ನೋಡು ಎಂದು ತೋರಿಸುತ್ತಾರೆ. ಹಾಗೆ ನನಗೆ ಯಡಿಯೂರಪ್ಪನವರ ಬಗ್ಗೆ.....

ಚೇರ್ಮನ್:- ಸ್ವಲ್ಪ ಲಘುವಾಗಿ ಮಾತನಾಡಿ ಸದಸ್ಯರು ತಮ್ಮ ಬೇಜಾರು ಕಳೆದುಕೊಳ್ಳಲಿ ಎಂದು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಸದನದ ಉದ್ದೇಶವನ್ನು ಎಲ್ಲಿಗೋ ಎತ್ತಿಕೊಂಡು ಹೋಗುತ್ತಿದ್ದೀರಲ್ಲಾ. ಆದುದರಿಂದ, ಸದನದ ಘನತೆ-ಗೌರವವನ್ನು ಕಾಪಾಡಿಕೊಂಡು ಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಲಿ. ಮತ್ತು ವಿಷಯಕ್ಕೆ ಬಂದರೆ ಒಳ್ಳೆಯದು. ಏಕೆಂದರೆ, ಸದನದಲ್ಲಿ ಪಾರ್ಟಿಗಳ ಪ್ರಣಾಳಿಕೆಗಳ ಬಗ್ಗೆ ಚರ್ಚೆ ಮಾಡುತ್ತಿಲ್ಲ. ತಾವು ಮಾತನಾಡುವಾಗ ನೀವು ಅವರಿಗೆ ಪ್ರಶ್ನೆ ಕೇಳುವುದು, ಅದಕ್ಕೆ ಅವರು ಉತ್ತರ ಕೊಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:- ತಾವು ಹೇಳಿದಂತೆ ಇದು ಬೇಜಾರು ಕಳೆಯುವಂಥ ಸಭೆಯಾಗಬಾರದು. ಇದು ಗುಪ್ತವಾದಂಥ ಸಭೆಯೂ ಅಲ್ಲ. ಈ ರೀತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆದಿದೆ, ಆದುದರಿಂದ, ಇಂತಹ ಮಾತುಗಳು ಬಂದೇ ಬರುತ್ತವೆ. ಆದರೆ, ಸುದೀರ್ಘವಾಗಿ ಈ ಮಾತುಗಳೇ ಚರ್ಚೆಯಾಗಬಾರದು ಎನ್ನತಕ್ಕಂಥಾದ್ದು ತಮ್ಮ ಅಭಿಲಾಷೆ. ಇದರ ಬಗ್ಗೆ ಚರ್ಚೆಯಾದರೆ

ನಿಜವಾಗಿಯೂ ಅರ್ಥಪೂರ್ಣವಾಗಿ ನಡೆಯಬೇಕು. ಅದಕ್ಕೋಸ್ಕರ ಈ ಸದನವಿದೆ. ಸುಮ್ಮನೆ ಒಳಗಡೆ ನಾಲ್ಕು ಜನರು ಕುಳಿತುಕೊಂಡು ಮಾಡತಕ್ಕಂಥ ಸಭೆ ಇದಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತಿದ್ದೇನೆ. ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ತಮ್ಮ ಭಾಷಣ ಮಾಡುತ್ತಿದ್ದಾರೆ, ಅವರ ವಿಚಾರಗಳನ್ನು ಹೇಳುತ್ತಿದ್ದಾರೆ. ಆದರೆ, ಇದರ ಬಗ್ಗೆ ಸರ್ಕಾರದಲ್ಲಿ ಯಾವುದೇ ರೀತಿಯಾದಂಥ ಗಾಂಭೀರ್ಯವಿದ್ದಂತೆ ಕಾಣಿಸುವುದಿಲ್ಲ. ಏಕೆಂದರೆ, ಈಗ ಸದನದಲ್ಲಿ ಮಂತ್ರಿಗಳಿಲ್ಲ. ಮಾನ್ಯ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಕುಳಿತಿದ್ದಾರೆ. ಹಾರನಹಳ್ಳಿ ರಾಮಸ್ವಾಮಿಯವರು ಕುಳಿತಿದ್ದಾರೆ. ಹಾಗಾಗಿ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಇದನ್ನು ಯಾರೂ ಬರೆದುಕೊಳ್ಳುತ್ತಿಲ್ಲ. ಅಷ್ಟೇ ಅಲ್ಲ, ಇವೊತ್ತಿನ ಪತ್ರಿಕೆಯಲ್ಲಿ ಓದಿರುವಂತೆ ಯುವಜನ ಖಾತೆ ಮಂತ್ರಿಗಳಾದ ಡಾ।। ಪ್ರೇಮಚಂದ್ರ ಸಾಗರ್‌ರವರು ರಾಜೀನಾಮೆ ಕೊಟ್ಟಿದ್ದಾರೆಂದು ಸುದ್ದಿ ಇದೆ. ಇಲ್ಲಿ ಶಾಸನ ಸಭೆ ನಡೆಯುತ್ತಿದೆ, ಇಂತಹ ಪರಿಸ್ಥಿತಿಯಲ್ಲಿ ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದರೆ ಸದನದಲ್ಲಿ ಮಂತ್ರಿಗಳಿಲ್ಲ, ಮುಖ್ಯಮಂತ್ರಿಗಳಿಲ್ಲ, ಶಾಸಕರಿಲ್ಲ. ಈ ವಿಷಯ ನಮಗೆ ಗೊತ್ತಾಗಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಕಚ್ಚಾಟ ನಡೆಯುತ್ತಿದೆ. ಸಧ್ಯಕ್ಕೆ ನಿಮ್ಮ ಕಚ್ಚಾಟ ಅಶೋಕ ಹೋಟೆಲಿನಲ್ಲಿ ಡಿನ್ನರ್, ಲಂಚ್‌ವರೆಗೂ ಹೋಗಿದೆ. ಮಂತ್ರಿಗಳು ರಾಜೀನಾಮೆ ಕೊಟ್ಟಿರುವುದರಿಂದ ಒಂದು ವಿಷಯ ಸ್ಪಷ್ಟವಾಗಿದೆ. ಏನೆಂದರೆ, ಇವೊತ್ತಿನ ಆಡಳಿತದಲ್ಲಿ ಯಾವುದೂ ಹಿಡಿತ ಉಳಿದಿಲ್ಲ, ನಮ್ಮ ಪಕ್ಷದಲ್ಲಿ ವಿಶ್ವಾಸವಿಲ್ಲದೆ ಗುಂಪುಗಾರಿಕೆ ಬೆಳೆಯುತ್ತಿದೆ. ಅಲ್ಲದೆ, ಮಂತ್ರಿಗಳ ರಾಜೀನಾಮೆ ಕೇಳುವಲ್ಲಿ ಮಂತ್ರಿಮಂಡಲದ ಕೆಲವು ಸದಸ್ಯರು ಒತ್ತಾಯ ಮಾಡಿದ್ದಾರೆಂದು ಸುದ್ದಿಯಿದೆ ಮತ್ತು ಇನ್ನೂ ಕೆಲವು ಜನ ಮಂತ್ರಿಗಳು ತಮ್ಮ ರಾಜೀನಾಮೆ ಕೊಡುವ ಸುದ್ದಿ ನಮಗೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಇದರ ಬಗ್ಗೆ ಬಂದು ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆಯೆ ? ರಾಜೀನಾಮೆ ಕೊಟ್ಟಿದ್ದರೆ ಏತಕ್ಕೆ ಕೊಟ್ಟರು ? ಅವರ ರಾಜೀನಾಮೆಯನ್ನು ತಾವು ಅಂಗೀಕರಿಸಿದ್ದೀರಾ ? ಇಲ್ಲವೆ ? ಎಂಬುದು ಸಹ ನಮಗೆ ಗೊತ್ತಾಗಬೇಕು. ಆದುದರಿಂದ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಯಾವುದೇ ತರಹದ ಸ್ಪಷ್ಟೀಕರಣವನ್ನು ಸರ್ಕಾರ ಕೊಡುವುದಿಲ್ಲವೋ, ಅಲ್ಲಿಯ ತನಕ ಸದನದಲ್ಲಿ ನಡೆಯುವ ಚರ್ಚೆ ನಿಲ್ಲಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ರಾಜ್ಯಪಾಲರ ಭಾಷಣದ ಬಗ್ಗೆ, ವಂದನಾ ನಿರ್ಣಯವನ್ನು ಸ್ವೀಕಾರ ಮಾಡತಕ್ಕಂಥ ಚರ್ಚೆಯನ್ನು ಮಾಡುತ್ತಿದ್ದೇವೆ. ಈ ವಂದನೆಯನ್ನು ಮಾಡುವಾಗ ಸರ್ಕಾರ ಎನ್ನತಕ್ಕಂಥ ಒಂದು ವ್ಯವಸ್ಥೆ ಇದಕ್ಕೆ ನಿರ್ಣಯವನ್ನು ಮಂಡಿಸಿದ್ದಾರೆ. ಈಗ ಸರ್ಕಾರವಿದೆಯೋ ಅಥವಾ ಇಲ್ಲವೋ, ಅದು ಸ್ಥಿರವಾಗಿದೆಯೇ ನಮ್ಮ ಆಡಳಿತವು ವಿಧಾನ ಮಂಡಲದಿಂದ ನಡೆಯತಕ್ಕಂಥ ಸಂದರ್ಭದಲ್ಲಿ, ಅದರ ಪರಿಣಾಮದಿಂದ ಇದರ ಮೇಲೆ ಇವತ್ತು ಏನು ಹೇಳುತ್ತೇನೆಂದರೆ ಯುವಜನ ಸೇವಾ ಇಲಾಖೆಯ ಮಂತ್ರಿಗಳಾಗಿದ್ದ ಪ್ರೇಮಚಂದ್ರ ಸಾಗರ್‌ರವರು ರಾಜೀನಾಮೆಯನ್ನು ಕೊಟ್ಟಿದ್ದಾರೆ, ಅದು ಪತ್ರಿಕೆಗಳಲ್ಲಿ ಸೂತ್ರ ಬಂದಿರತಕ್ಕಲ್ಲ, ಅವರ ಇಲಾಖೆಗೆ ಬಜೆಟಿನಲ್ಲಿ ಸಾಕಷ್ಟು ಹಣವನ್ನು ಕೊಡಲಿಲ್ಲ, ಅವರನ್ನು ಬಜೆಟಿನಲ್ಲಿ ಮಾತಿಗೆ ಕರೆಯಲಿಲ್ಲವೆನ್ನತಕ್ಕ ಕಾರಣದಿಂದಾಗಿ ಅವರು ರಾಜೀನಾಮೆಯನ್ನು ಕೊಟ್ಟರು ಎನ್ನುವುದು ಒಂದು. ಪ್ರೇಮಚಂದ್ರ ಸಾಗರ್‌ರವರು ರಾಜ್ಯ ಮಂತ್ರಿಗಳು. ಆದರೆ ಕ್ಯಾಬಿನೇಟ್‌ನ ಕೆಲವು ಮಂತ್ರಿಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ಇಲಾಖೆಗೆ ನೀವು ಸರಿಯಾಗಿ ಹಣವನ್ನು ಕೊಟ್ಟಿಲ್ಲ ಆದ್ದರಿಂದ ನಾವೂ ಕೂಡ ರಾಜೀನಾಮೆಯನ್ನು ಕೊಡಬೇಕಾಗುತ್ತದೆ ಎನ್ನತಕ್ಕದನ್ನೂ ಸಹ ಹೇಳಿದ್ದಾರೆಂದು ನನಗೆ ಖಚಿತವಾಗಿ ತಿಳಿದು ಬಂದಿದೆ. ಇದರಿಂದ ಏನಾಗುತ್ತದೆಂದರೆ ಸರ್ಕಾರ ಆಡಳಿತದ ಯಂತ್ರದ ಮೇಲೆ ಬಹಳ ಕೆಟ್ಟ ಪರಿಣಾಮವಾಗುತ್ತದೆ. ದಯಮಾಡಿ ಪ್ರೇಮ ಚಂದ್ರಸಾಗರ್‌ರವರು ರಾಜೀನಾಮೆಯನ್ನು ಕೊಟ್ಟಿಲ್ಲ,

ಅವರ ರಾಜೀನಾಮೆಯನ್ನು ರಾಜ್ಯಪಾಲರಿಗೆ ಕಳಿಸುವುದಿಲ್ಲ ಎನ್ನತಕ್ಕ ಬಗ್ಗೆ ಇಲ್ಲಿ ಸ್ಪಷ್ಟವಾಗಿ, ಖಚಿತವಾಗಿ ಹೇಳಬೇಕು. ಅಥವಾ ಸಂಬಂಧಪಟ್ಟ ಬೇರೆ ಮಂತ್ರಿಗಳು ರಾಜೀನಾಮೆ ಕೊಟ್ಟಿಲ್ಲ ಎನ್ನತಕ್ಕ ವಿಷಯವನ್ನು ತಿಳಿಸಿದಾಗ ನಮಗಿಂತಲೂ ನಿಮಗೆ ಹೆಚ್ಚಾಗಿ ಅನುಕೂಲವಾಗುತ್ತದೆ. ಮತ್ತು ಆಡಳಿತ ಯಂತ್ರದ ಮೇಲೆ ಆಗತಕ್ಕಂಥ ದುಷ್ಪರಿಣಾಮ ಕಡಿಮೆಯಾಗುತ್ತದೆ. ಪಾಪ ಮಾನ್ಯ ರಾಮಸ್ವಾಮಿಯವರ ಮೇಲೆ ನನಗೆ ಬಹಳ ಗೌರವವಿದೆ, ಒಳ್ಳೆಯ ಜನ, ಬಹಳ ಚೆನ್ನಾಗಿ ಉತ್ತರ ಕೊಡುತ್ತಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ ಇಲ್ಲಿ ಅದಕ್ಕೆ ಹಾರನಳ್ಳಿ ರಾಮಸ್ವಾಮಿಯವರು ಉತ್ತರವನ್ನು ಕೊಡುವುದಲ್ಲ, ಅವರು ಈ ಸಭೆಗೆ ಬಂದು ಉತ್ತರವನ್ನು ಕೊಡಬೇಕಾಗುತ್ತದೆ. ಅಥವಾ ರಾಜಕೀಯವಾಗಿ ನನಗೆ ಸ್ಥಿರತೆ ಇದೆ, ನಾನು ಗಟ್ಟಿಯಾದ ನೆಲದ ಮೇಲೆ ನಿಂತುಕೊಂಡಿದ್ದೇನೆ, ಎಂ.ಎಲ್.ಎಗಳಲ್ಲಿ ಗುಂಪುಗಾರಿಕೆ ಇಲ್ಲ, ನನಗೆ ಬಹುಮತವಿದೆ, ಸಪೋರ್ಟ್ ಇದೆ, ಎನ್ನತಕ್ಕದ್ದನ್ನು ಸಾಧಿಸುವುದಾದರೆ You must sack the Minister.

ಮಂತ್ರಿಮಂಡಲದಿಂದ ತೆಗೆಯಬೇಕು. ಮತ್ತೆ ನಾನು ವಿಧಾನಸಭೆಯಲ್ಲಿ ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಗಿ ಹೇಳುತ್ತೇನೆ, ಅದೇನೆಂದರೆ ಅಶೋಕ ಹೊಟೆಲ್‌ನಲ್ಲಿ ನಡೆಯತಕ್ಕ ಸಭೆ ಇರಬಹುದು, ಹೊರಗೆ ನಡೆಯತಕ್ಕಂಥ ಸಭೆ ಇರಬಹುದು. ಮುಖ್ಯಮಂತ್ರಿಗಳು ಈ ಸದನದಲ್ಲಿ ತಮಗಿರುವ ವಿಶ್ವಾಸವನ್ನು ವ್ಯಕ್ತಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಇವತ್ತು ನಾನು ಹೇಳುತ್ತಿದ್ದೇನೆ. ಆ ಕಡೆ ಕುಳಿತಿರತಕ್ಕ ಸದಸ್ಯರಿಂದ ನಿಮಗೆ ಬಹುಮತವಿಲ್ಲ, ತಮಗೆ ಬಹುಮತವಿದ್ದರೆ ಸ್ಪಷ್ಟವಾಗಿ ಅದನ್ನು ಸಾಬೀತುಪಡಿಸಿ, ಇವತ್ತು ಸರ್ಕಾರ ನಡೆಯುತ್ತಿಲ್ಲ, ಸರ್ಕಾರಿ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಿಲ್ಲ, ವಿರೋಧ ಪಕ್ಷದ ನಾಯಕರು ಭಾಷಣ ಮಾಡುತ್ತಾರೆಂದರೆ ಒಬ್ಬ ಸರ್ಕಾರಿ ಅಧಿಕಾರಿಯೂ ಕೂಡ ಅದಕ್ಕೋಸ್ಕರ ಬರುವುದಿಲ್ಲ, ಫ್ಲೋರ್ ಲೀಡರ್ ಮಾತನಾಡುತ್ತಾರೆಂದರೆ ಯಾರೂ ಬರುವುದಿಲ್ಲ, ಇದು ಸರಿಯೋ ಅಥವಾ ತಪ್ಪೋ, ಮಾನ್ಯ ಯಡಿಯೂರಪ್ಪನವರು ಒಬ್ಬ ಪ್ರಮುಖವಾದ ನಾಯಕರು ಅವರು ಹೇಳಿದಂತೆ ಅವರಿಗೆ 28 ಪರ್ಸೆಂಟ್ ಓಟು ಬಂದಿದೆ. ಅವರು ಮಾತನಾಡುತ್ತಾರೆಂದರೆ ಒಬ್ಬ ಅಧಿಕಾರಿ ಇರುತ್ತಾರೆಯೇ ? ಪಾಪ ಅಧಿಕಾರಿಗಳು ಒಳ್ಳೆಯವರು, ನಾವು ಕೂಡ ಅವರನ್ನು ಇಟ್ಟುಕೊಂಡೇ, ಅವಲಂಬನೆ ಮಾಡಿಕೊಂಡೆ ಆಳ್ವಿಕೆಯನ್ನು ಮಾಡತಕ್ಕದ್ದು. ಆದರೆ ನಿಮ್ಮ ಮಾತಿಗೆ ಬೆಲೆ ಇಲ್ಲ ಅವರ ಹತ್ತಿರ. ಮಾನ್ಯ ಅಧ್ಯಕ್ಷರೆ ತಾವು ಅನುಭವಸ್ಥರು. ತಾವು ಹಲವಾರು ವರ್ಷಗಳ ಕಾಲ ಶಾಸಕರಾಗಿ ಕೆಲಸ ಮಾಡಿದ್ದೀರಿ, ವಿರೋಧ ಪಕ್ಷದಲ್ಲಿ ಇದ್ದೀರಿ ನೀವು ನಮಗೆ ಬೆಂಬಲವನ್ನು ನೀಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಶ್ರೀಮಾನ್ ಸಿಂಧ್ಯರವರು ಹೇಳಿರತಕ್ಕದ್ದು ನಿಜ, ಆ ಕಡೆ ಇರುವವರು ಅದು ಸತ್ಯವೆಂದು ಒಪ್ಪಿಕೊಳ್ಳುತ್ತಿದ್ದಾರೆ.

(ಗೊಂದಲ)

ಚೇರ್ಮನ್:– ಯಡಿಯೂರಪ್ಪನವರೆ ದಯಮಾಡಿ ಕುಳಿತುಕೊಳ್ಳಿ, ಅವರು ಮಾತನಾಡಿದ ಮೇಲೆ ಇದರ ಬಗ್ಗೆ ತಾವು ಮಾತನಾಡುವಿರಂತೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಿಮ್ಮ ಸರ್ಕಾರಕ್ಕೆ ಸ್ಥಿರತೆ ಇದೆ ಎಂದು ಹೇಳಬೇಕಾದರೆ ಈ ರೀತಿ ಊಹಾಪೋಹಗಳಿಗೆ, ಪ್ರಕಾರಗಳಿಗೆ ಅವಕಾಶವನ್ನು ಮಾಡಿ ಕೊಡಬೇಡಿ. ರಾಜಕೀಯವಾಗಿ ನಮಗೆ ತಾಕತ್ತು ಇದ್ದರೆ ರಾಜೀನಾಮೆಯನ್ನು ಕೊಟ್ಟ ಮಂತ್ರಿಯನ್ನು ತೆಗೆದುಹಾಕಿ, ಅಥವಾ ಅವರಿಗೆ ಬೆಣ್ಣೆ ಹೊಡೆದು ಇಟ್ಟುಕೊಳ್ಳಿ. ನಾನು ಇದರ ಬಗ್ಗೆ ನೇರವಾಗಿ ಆಪಾದನೆಯನ್ನು ಮಾಡುತ್ತಿದ್ದೇನೆ. ಮುಖ್ಯಮಂತ್ರಿಗಳಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ವಿಶ್ವಾಸವಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ತಮಗೇನಾದರೂ ವಿಶ್ವಾಸವಿದ್ದರೆ ಅದನ್ನು ತೆಗೆದುಕೊಳ್ಳಿ.

ಚೇರ್ಮನ್:– ಮಾನ್ಯ ಯಡಿಯೂರಪ್ಪನವರೆ ದಯಮಾಡಿ ಕುಳಿತುಕೊಳ್ಳಿ ಅವರು ಹೇಳಿದ ಮೇಲೆ ಕೇಳುವಿರಂತೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಹಾರನಹಳ್ಳಿ ರಾಮಸ್ವಾಮಿಯವರು ಇದಕ್ಕೆ ಉತ್ತರ ಕೊಡುವುದೆಂದರೆ ಯಾವ ವಿಪರ್ಯಾಸ ಅಧ್ಯಕ್ಷರೆ, ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಸಂಜೆಯೊಳಗೆ ಕರೆಯಿಸಿ.

ಶ್ರೀ ವಾಟಾಳ್ ನಾಗರಾಜ್:– ಅಧ್ಯಕ್ಷರೆ, ಹೊಸದಾಗಿ ಮಂತ್ರಿಮಂಡಲ ಬಂದನಂತರ ಯಾರ್‍ಯಾರು ಮಂತ್ರಿಗಳಾಗಿದ್ದಾರೆ, ಸಚಿವ ಸಂಪುಟದ ಮಂತ್ರಿಗಳಾರು ಎಂಬ ಬಗ್ಗೆ ಈ ಸಭೆಯಲ್ಲಿ, ಈ ಸದನದಲ್ಲಿ ನಮಗೆ ಪರಿಚಯವನ್ನು ಮಾಡಿಸಬೇಕಾಗಿರತಕ್ಕದ್ದು ಒಂದು ಸಂಪ್ರದಾಯ. ಆದರೆ ಅದು ಆಗಿಲ್ಲ. ನಮಗೆ ಇವತ್ತು ಯಾರು ರಾಜೀನಾಮೆ ಕೊಟ್ಟರೋ, ಯಾರು ಮಂತ್ರಿಗಳೋ, ಯಾರೋ, ಏನೋ ಎಂಬ ಬಗ್ಗೆ ಗೊತ್ತಾಗುತ್ತಿಲ್ಲ. ನಾವು ದಿಕ್ಕು ತಪ್ಪಿದ್ದೇವೆ. ನಾನು ಅನೇಕ ಸಾರಿ ಅವರು ಯಾವ ಮಂತ್ರಿ ಇವರು ಯಾವ ಮಂತ್ರಿ ಎಂದು ಕೇಳುತ್ತಿದ್ದೇವೆ.

5.40 ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ:– ಈ ಪ್ರಶ್ನೆಯನ್ನು ಎತ್ತುವುದು ಯಾವಾಗ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ನಾನು ಕೇಳಿಕೊಳ್ಳುವುದೇನೆಂದರೆ, ನಾನು ನಿನ್ನೆಯಿಂದಲೂ ಎಚ್ಚರದಿಂದ ನೋಡುತ್ತಾ ಇದ್ದೇನೆ. 41 ಜನ ಸಚಿವರು ಎಂದು ಕೆಲವರು ಹೇಳಿದರೆ, ಕೆಲವರು 35 ಜನರು ಎಂದು ಹೇಳಿದರು. ನನಗಂತೂ ಈ ಮಂತ್ರಿಗಳ ಸಂಖ್ಯೆ ಬಗ್ಗೆ ನಂಬಿಕೆ ಹೋಗಿಬಿಟ್ಟಿದೆ. 41–45 ಎಂಬ ಬಗ್ಗೆ ಸಂಶಯ ಬಂದಿದೆ ಮತ್ತು ಈ ಮಂತ್ರಿಗಳು ಯಾರು ? ಎಂಬ ಪ್ರಶ್ನೆಯೂ ಇಲ್ಲ. ಪತ್ರಿಕೆಯಲ್ಲಿ ಒಬ್ಬ ರಾಜ್ಯಸಚಿವರು ರಾಜೀನಾಮೆ ಕೊಟ್ಟಿದ್ದಾರೆ ಎಂದು ಬಂದಿದೆ. ಅವರು ಮಂತ್ರಿಗಳಾಗಿ ಈ ಸದನದಲ್ಲಿ ಇದ್ದರೋ ? ಈ ಸದನದಲ್ಲಿ ಮುಖ್ಯಮಂತ್ರಿಗಳು ಇಂಥವರು ನಮ್ಮ ಸಚಿವ ಸಂಪುಟದ ಸದಸ್ಯರ ಎಂದು ಹೇಳಬೇಕು. ಈಗ ಗಂಭೀರವಾದಂಥ ಒಂದು ಪರಿಸ್ಥಿತಿಯು ನಿರ್ಮಾಣವಾಗಿದೆ. ಹಾಗೆಯೇ ಅತೃಪ್ತರ ಚಟುವಟಿಕೆಗಳು ಜಾಸ್ತಿಯಾಗಿವೆ ಎಂದು ಹೇಳಿ, ಪತ್ರಿಕೆಗಳಲ್ಲಿ ಬಂದಿದೆ, ಎಲ್ಲಾ ಹೋಟೆಲ್‌ಗಳಲ್ಲಿ ಸದಸ್ಯರು ಸೇರುತ್ತಾ ಇದ್ದಾರೆ, ಹಾಗಾದರೆ ರಾಜ್ಯದಲ್ಲಿ ಆಡಳಿತವು ಸುಗಮವಾಗಿದೆಯೇ ಆಡಳಿತವು ಕುಸಿದು ಬೀಳುತ್ತಾ ಇದೆಯೇ ? ಮೊನ್ನೆ ರಾಜ್ಯಪಾಲರ ಭಾಷಣವಾಗಿದೆ, ಈಗ ತಾನೆ ಹೊಸ ಸರಕಾರದ ಆಯವ್ಯಯ ಮಂಡನೆಯಾಗಿದೆ. ಮೊದಲನೆಯ ಬಾರಿಗೆ ಒಬ್ಬ ರಾಜ್ಯಸಚಿವರು ರಾಜೀನಾಮೆ ಕೊಡತಕ್ಕಂಥ ಪರಿಸ್ಥಿತಿಗೆ ಹೋಗಬೇಕಾದರೆ, ಈ ರೀತಿಯಲ್ಲಿ ಹೆಜ್ಜೆ ಹೆಜ್ಜೆಗೂ ಮುನಿಸಿಕೊಂಡು ರಾಜೀನಾಮೆ ಕೊಡತಕ್ಕಂಥವರನ್ನು ಅವರ ಚಾರಿತ್ರ್ಯ ಮತ್ತು ಹಿನ್ನೆಲೆಗಳನ್ನು ನೋಡಿ, ಅಂಥವರನ್ನು ಸಚಿವರಾಗಿ ಮಾಡಬೇಕೇ ? ಇದನ್ನು ಬಿಟ್ಟು ದಿನಕ್ಕೆ ಒಬ್ಬ ಹೇಳಿಕೆ ಕೊಡತಕ್ಕಂಥಾದ್ದು, ರಾಜೀನಾಮೆ ಕೊಡತಕ್ಕಂಥಾದ್ದು, ಈ ಸದನಕ್ಕೆ ಬಾರದೆ ಇರತಕ್ಕಂಥಾದ್ದು ಇದೇಕೆ ಮಂತ್ರಿಮಂಡಲ ಎಂದು ಹೇಳುತ್ತಾರೆಯೇ ? 40 ಜನರಲ್ಲಿ ಒಬ್ಬರು ಹೋದರೂ ಅಡ್ಡಿ ಇಲ್ಲ. ನಿಮ್ಮಲ್ಲಿ ಒಬ್ಬ ಕಣಗಲಿ ಎಂದು ಮಂತ್ರಿ ಇದ್ದಾರೆ. ಅವರು ಯಾರು ಸ್ವಾಮಿ ? ನಮಗೆ ಗೊತ್ತಿಲ್ಲ. ನಾನು ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ನಾನು ಮೊನ್ನೆ ಗಡಿ ಇಲಾಖೆಗೆ ಸಂಬಂಧಪಟ್ಟಂಥ ಸಚಿವರು ಯಾರು ಎಂದು ಹೇಳಿ, ಪತ್ತೆ ಹಚ್ಚಲು ಮೂರು ದಿನಗಳ ಬೇಕಾಯಿತು.

ಅಧ್ಯಕ್ಷರು:– ಈ ವಿಷಯಗಳೆಲ್ಲವೂ ಪತ್ರಿಕೆಯಲ್ಲಿ ಬಂದಿವೆ. ವಿಧಾನಸೌಧದಲ್ಲಿ ಬೋರ್ಡ್ ಹಾಕಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಸ್ವಾಮಿ ಈ ಸದನ ನಡೆಯುವಾಗ ವಿಧಾನಸೌಧದಲ್ಲಿ ನಾಮಫಲಕ ಹಾಕಿದ್ದಾರೆ ಎಂದು ಹೇಳಿ ನಾವು ನಂಬಿಕೊಳ್ಳುವುದಲ್ಲ. ನಮ್ಮ ಮುಖ್ಯಮಂತ್ರಿಯವರು ಈಗ ದಯಮಾಡಿಸಿದ್ದಾರೆ, ಅವರಲ್ಲಿ ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿಮ್ಮ ಸಚಿವ ಸಂಪುಟದ ಸಚಿವರು ಯಾರ್‍ಯಾರೂ ಎಂಬುದನ್ನು ಅವರು ದಯಮಾಡಿ ಪರಿಚಯ ಮಾಡಿ ಕೊಡಬೇಕು. ಇವೊತ್ತು ಪತ್ರಿಕೆಗಳಲ್ಲಿ ಒಬ್ಬ ಸಚಿವರು ರಾಜೀನಾಮೆ ಕೊಟ್ಟಿದ್ದಾರೆ ಎಂದು ಬಂದಿದೆ ಅದು ನಿಜವೆ ? ಈ ಸಭೆಯು ನಡೆಯುವಾಗ ಪತ್ರಿಕೆಯಲ್ಲಿ ವಿಷಯ ಬಂದಿದೆ. ನೀವು ಅವರ ಪರಿಚಯ ಮಾಡಿಸಲಿಲ್ಲ. ಅವರು ರಾಜೀನಾಮೆ ಕೊಟ್ಟಿದ್ದಾರೋ, ಇದ್ದಾರೋ ಎಂಬ ಬಗ್ಗೆ ನಮಗೆ ಅನುಮಾನ ಇದೆ. ಅವರು ರಾಜೀನಾಮೆ ಕೊಟ್ಟಿರುವುದನ್ನು ತಾವುಗಳು ಒಪ್ಪಿ ಅದನ್ನು ರಾಜ್ಯಪಾಲರಿಗೆ ಕಳುಹಿಸಿದ್ದಾರಾ ? ಆ ಬಗ್ಗೆ ತಾವುಗಳು ಹೇಳಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಸುಮಾರು 67 ನಿಮಿಷಗಳಿಂದ ಈ ಸದನದಲ್ಲಿ ಚರ್ಚೆಯು ನಡೆಯುತ್ತಾ ಇದೆ. ವಿಷಯ ಏನೆಂದರೆ ಯಾವ ಪಕ್ಷದವರು ಏನು ಮಾಡಬೇಕು ? ಮತ್ತು ಯಾವ ಯಾವ ಪಕ್ಷದವರು ಏನೇನು ಮಾಡಿದ್ದಾರೆ ? ಭಾರತೀಯ ಜನತಾ ಪಕ್ಷದ ಶ್ರೀ ಯಡಿಯೂರಪ್ಪನವರನ್ನು ನಾನು ಒಂದು ಪ್ರಶ್ನೆ ಕೇಳುತ್ತೇನೆ. ಲೋಕಸಭೆಯ ಉಪಾಧ್ಯಕ್ಷರು ಕೇವಲ ಬಿ.ಜೆ.ಪಿ.ಯವರಿಂದಲೇ ಹುಟ್ಟಿ ಬರಲಿಲ್ಲ. ಕಾಂಗ್ರೆಸ್‌ನ ಬೆಂಬಲವನ್ನು ತೆಗೆದುಕೊಂಡು ಅವರು ಉಪಾಧ್ಯಕ್ಷರಾದರು. ಕಾಂಗ್ರೆಸ್ ಪಕ್ಷವು ಇವರಿಗೆ ಮೈಲಿಗೆ ಆಗಲಿಲ್ಲ. ಕಾಂಗ್ರೆಸ್‌ಗೆ ಜೊತೆಗೆ ಇದ್ದಂಥ ವಿ.ಪಿ.ಸಿಂಗ್‌ರವರನ್ನು ಕರೆದುಕೊಂಡು ಬಂದು ಇವರು ರಾಷ್ಟ್ರದ ಪ್ರಧಾನಿಯಾಗಿ ಮಾಡಿದರು ಅವಾಗ ವಿರೋಧ ಪಕ್ಷದವರಿಗೆ ಕಾಂಗ್ರೆಸ್‌ನವರು ಮೈಲಿಗೆ ಆಗಿರಲಿಲ್ಲ. ವಿರೋಧ ಪಕ್ಷದಲ್ಲಿದ್ದಂಥ ಚಂದ್ರಶೇಖರ್‌ರವರನ್ನು ಅವರು ಕರೆದುಕೊಂಡು ಹೋಗಿ ಪ್ರಧಾನಿ ಮಾಡಿದರು, ಅವೊತ್ತು ಕೂಡ ಇವರಿಗೆ ಮೈಲಿಗೆ ಆಗಿರಲಿಲ್ಲ. ಆದ್ದರಿಂದ ಯಾವ ಯಾವ ಪಕ್ಷದವರು ಹಿಂದೆ ಏನೇನು ಮಾಡಿದ್ದಾರೆ, ಎಂಬ ಬಗ್ಗೆ ಅಜೆಂಡಾದಲ್ಲಿ ಹಾಕಿ ಚರ್ಚೆ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ವೈಟ್ ಪೇಪರ್ ಹೊರಡಿಸಿ.

ಶ್ರೀ ವೈ. ಕೆ. ರಾಮಯ್ಯ:– ಆಗಬಹುದು. ಆದ್ದರಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಭೆಯನ್ನು ಯಾವುದಾದರೂ ಒಂದು ವಿಷಯಕ್ಕೆ ಸೀಮಿತಗೊಳಿಸಿ ಮುಂದುವರೆಸಿಕೊಂಡು ಹೋಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮುಖ್ಯಮಂತ್ರಿಗಳೂ ಬಂದಿದ್ದಾರೆ. ಇಲ್ಲಿ ಚರ್ಚೆಯಾಗುತ್ತಿರುವುದು ಪ್ರೇಮಚಂದ್ರ ಸಾಗರ್ ಅವರು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ನಾವು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇವೆ, ಅವು ರಾಜೀನಾಮೆ ಕೊಟ್ಟಿದ್ದಾರೆಯೇ ಅದನ್ನು ನೀವು ಒಪ್ಪಿಕೊಂಡಿದ್ದೀರೆ ಇನ್ನೂ ಅನೇಕ ಜನ ಕ್ಯಾಬಿನೆಟ್ ಸಚಿವರು ರಾಜೀನಾಮೆ ಕೊಟ್ಟಿದ್ದಾರೆಂದು ಸುದ್ದಿ ನಮಗಿದೆ. ಮಾನ್ಯ ರಾಮಯ್ಯನವರು ಪಕ್ಷದ ಬಗ್ಗೆ ಹೇಳಿದರು. ತಮ್ಮ ಪಕ್ಷ ಯಾವುದು ಗೊತ್ತಿಲ್ಲ ಎಂದು ಹೇಳಿದ ರಾಮಯ್ಯನವರು ಮಾತಾಡ್ತಿದ್ದಾರೆ. ರಾಮಯ್ಯನವರ ಬಗ್ಗೆ ನನಗೆ ಗೌರವ ಇದೆ. ಆಮೇಲೆ ಅವರು ತಾವು ಯಾವ ಪಕ್ಷದಲ್ಲಿದ್ದರೆ ಎಂದು ತಿಳಿದುಕೊಳ್ಳುವುದಕ್ಕೆ ನಾನು ಪ್ರಯತ್ನಿಸುತ್ತಿದ್ದೇನೆ. ಅವರು ಹೇಳಿದರೆ ತುಂಬ ಸಂತೋಷ. ಈ ಕಡೆ ಇರುವ ಅನೇಕ ಜನತಾದಳ ಸದಸ್ಯರು ಆ ಕಡೆ ಹೋಗಬೇಕೆಂದಿದ್ದಾರೆ. ಅವರು ಈ ಕಡೆ ಬರಬೇಕೆಂದಿದ್ದಾರೆ. ಯಾರ್‍ಯಾರು ಎಲ್ಲೆಲ್ಲಿ ಹೋಗಬೇಕೋ ಹೋಗಿಬಿಡಿ. ಪ್ರೇಮಚಂದ್ರಸಾಗರರ ಬಗ್ಗೆ ಹೇಳಿಕೆ ಕೊಡುವ ಮುಂಚೆ, ಒಂದು ರಾಜಕೀಯ ಅಸ್ಥಿರತೆ ತಾಂಡವವಾಡುತ್ತಿರುವ ಈ ಸಂದರ್ಭದಲ್ಲಿ

ನಾವೆಲ್ಲಿದ್ದೇವೆ, ಎಲ್ಲಿ ಹೋಗುತ್ತೇವೆ ಎಂದು ಸ್ಪಷ್ಟವಾದರೆ ಮುಖ್ಯಮಂತ್ರಿಗಳು ಆಡಳಿತ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:- ಅಧ್ಯಕ್ಷರೇ, ಬಹುಶಃ ನಾನೇ ಯಾವತ್ತಾದರೂ ಪ್ರಸ್ತಾಪ ಮಾಡಬೇಕಾಗಿದ್ದ ವಿಷಯವನ್ನು ಯಡಿಯೂರಪ್ಪನವರು ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ. ರಾಮಯ್ಯನವರು ಯಾವ ಪಕ್ಷದವರು ಎಂದು ಸಭೆಗೆ ತಿಳಿಸಬೇಕೆಂದು ಕೇಳಿದರು. ನಾನು ನೇಗಿಲು ಹೊತ್ತ ರೈತನ ಚಿಹ್ನೆ ಇರುವ ಜನತಾ ಪಕ್ಷದ ವತಿಯಿಂದ ಕರ್ನಾಟಕ ವಿಧಾನಸಭೆಗೆ ಆರಿಸಿಬಂದಿದ್ದೇನೆ. ಈ ಗೊಂದಲ ನಿವಾರಣೆ ಮಾಡಬೇಕೆಂಬ ಉದ್ದೇಶದಿಂದಲೇ ಈ ಸಭೆಯ ಅಧ್ಯಕ್ಷರಿಗೆ ಪತ್ರ ಬರೆದಿದ್ದೇನೆ. ಅವರಿಂದ ಉತ್ತರ ಬಂದಿದೆ ನೀವು ಜನತಾ ಪಕ್ಷದ ಸದಸ್ಯರು ಎಂದು. ಇದರಿಂದ ಯಡಿಯೂರಪ್ಪನವರಿಗಾಗಲೀ ಪತ್ರಿಕಾ ಮಿತ್ರರಿಗಾಗಲೀ ಇನ್ನು ಗೊಂದಲ ಬೇಕಾಗಿಲ್ಲ. ನಾನು ನೇಗಿಲು ಹೊತ್ತ ರೈತನ ಚಿಹ್ನೆ ಮೇಲೆ ಆರಿಸಿಬಂದಿರುವ ಜನತಾಪಕ್ಷದ ಸದಸ್ಯ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಮುಖ್ಯಮಂತ್ರಿಗಳಿಗೆ ಪ್ರಶ್ನೆ ಮಾಡುವುದೇನೆಂದರೆ ಈಗ ತಾನೇ ಸಂಜೆ ಪತ್ರಿಕೆಗಳಲ್ಲಿ ನಿಮ್ಮ ಸಚಿವರೊಬ್ಬರು ರಾಜೀನಾಮೆ ಕೊಟ್ಟಿದ್ದಾರೆಂದು. ಅಶೋಕಾ ಹೋಟೆಲ್‌ನಲ್ಲಿ ಸಭೆ ನಡೆದದ್ದು ಆಯಿತು. ಈ ದಿವಸ ಒಕ್ಕಲಿಗರೆಲ್ಲಾ ಕಾವೇರಿ ಕಾಂಟಿನೆಂಟಲ್ ಹೋಟಲ್‌ನಲ್ಲಿ ಸಭೆ ಸೇರುತ್ತಿದ್ದಾರಂತೆ, ನಾಳೆ ರಾಜಶೇಖರ ಮೂರ್ತಿಯವರ ಮನೆಯಲ್ಲಿ ಒಂದು ಸಭೆ ಇದೆಯಂತೆ. ಇವತ್ತು ಸಂಜೆ ಅಜೀಜ್‌ಸೇಠರ ಮನೆಯಲ್ಲಿ ಒಂದು ಸಭೆ ಇದೆಯಂತೆ. ಇವೆಲ್ಲ ಸುದ್ದಿಗಳಲ್ಲಿ, ಸಭೆಯಲ್ಲಿ ನಡೆಯುತ್ತಿದೆ ಆದರಿಂದ ಇಲ್ಲಿ ಅನೇಕರು ಬಂದಿಲ್ಲ. ನಾನು ಏಕೆ ಹೇಳ್ತಿದೇನೆಂದರೆ ಇದು ಸರ್ಕಾರದ ಅಸ್ಥಿರತೆಯನ್ನು ವ್ಯಕ್ತ ಮಾಡುತ್ತದೆ. ನಾನು ವೈಯಕ್ತಿಕವಾಗಿ ನಿಮ್ಮ ವಿರುದ್ಧವಾಗಿ ಪಿತೂರಿ ಮಾಡಿ ನಾವು 22 ಜನ ಆ ಕಡೆ ಬಂದು ಕುಳಿತುಕೊಳ್ಳುವುದಕ್ಕಾಗುವುದಿಲ್ಲ ಎಂದು ನಮಗೆ ಗೊತ್ತಿದೆ. ಆದರೆ ಸರ್ಕಾರದ ಅಸ್ಥಿರತೆಯಿಂದಾಗಿ ರಾಜ್ಯದ ಜನರಿಗೆ ಆಗುವ ಗೊಂದಲ ಏನಿದೆ ಇದರ ಬಗ್ಗೆ ತಾವು ಬರುವ ಮುಂಚೆ ನಾವು ಸಾಕಷ್ಟು ವಿಷಯುವನ್ನು ಪ್ರಸ್ತಾಪಿಸಿದ್ದೇವೆ, ತಾವು ಬಂದಿರೋದು ಬಹಳ ಒಳ್ಳೆಯದು. ದಯವಿಟ್ಟು ಸರ್ಕಾರದ ಸ್ಥಿರತೆ ಬಗ್ಗೆ ನಿಮ್ಮ ವಿಚಾರ ತಿಳಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:- ನಾನು ಕ್ರಿಯಾಲೋಪದ ಮೇಲೆ ನಿಂತಿದ್ದೇನೆ. ಈಗ ನಮ್ಮ ಮುಂದಿರುವುದು ರಾಜ್ಯಪಾಲರ ಭಾಷಣ, ಅದರ ಮೇಲೆ ಚರ್ಚೆ ಆಗಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಓಹೋ ಇವರು ರಾತ್ರಿಯಲ್ಲ ರಾಮಾಯಣ ನೋಡಿ ಬೆಳಿಗ್ಗೆ ರಾಮನಿಗೂ ಸೀತೆಗೂ ಏನಾಯಿತು ಎಂದು ಕೇಳುತ್ತಿದ್ದಾರೆ.

ಶ್ರೀ ಎ.ಕೆ. ಅನಂತಕೃಷ್ಣ:- ವಾಟಾಳ್ ನಾಗರಾಜರಿಗೆ ನಾವು ಹೇಳುವುದನ್ನು ಕೇಳುವ ತಾಳ್ಮೆ ಇಲ್ಲ, ದಯಮಾಡಿ ತಾವು ಕೇಳಬೇಕು. ನಾವು ರಾಜ್ಯಪಾಲರ ಭಾಷಣ ಏನಿದೆ ಅದರ ಮೇಲೆ ಚರ್ಚೆ ಮಾಡಬೇಕೆಂದು ಕಾತುರರಾಗಿ ನಾವು ಕುಳಿತಿದ್ದೇವೆ.

ಇದು ಇಂದಲ್ಲ ನಾಳೆಯಾದರೂ ಮುಗಿಸಲೇಬೇಕು. ಈ ಭಾಷಣವನ್ನು ಮುಂದಿಟ್ಟುಕೊಂಡು ಅದರ ಮೇಲೆ ನಾವು ವಿಶ್ಲೇಷಣೆ ಮಾಡುವುದಕ್ಕ ಸಾಧ್ಯವಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಹಾಗೇನೂ ಇಲ್ಲ. ಅಷ್ಟರೊಳಗೆ ಮಂತ್ರಿ ಮಂಡಲ ಬಿದ್ದು ಹೋದರೆ ಮುಗಿಸಲೇಬೇಕಾಗುತ್ತದೆ.

ಶ್ರೀ ಎ.ಕೆ. ಅನಂತಕೃಷ್ಣ:- ಕೇಳಿ ಸ್ವಾಮಿ ಚಂದ್ರೇಗೌಡರೇ. ತಮಗೂ ತಾಳ್ಮೆ ಇಲ್ಲ ಎಂದು ಹೇಳಿದರೆ ನನಗೆ ಬಹಳ ಕಷ್ಟವಾಗುತ್ತದೆ. ನಾನು ಹೇಳುವುದು ಇಷ್ಟೆ. ರಾಜ್ಯಪಾಲರ ಭಾಷಣದ ವಿಷಯದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಮಾತನಾಡುವಾಗ ಕೆಲವು ವಿಷಯಗಳು ಬಂತು. ಅದರ ಮೇಲೆ ಬಹಳ ಪ್ರಸ್ತಾಪ ನಡೆಯಿತು. ಆಗ ನಾನು ಎದ್ದು ನಿಂತು ಅಡಚಣೆ ಮಾಡಲಿಲ್ಲ. ಈ ಕಮ್ಯುನಿಸಂ, ಕಮ್ಯುನಲ್, ಫ್ಯಾಕ್ಟರ್, ಕಮ್ಯುನಲ್ ಕ್ಲಾಷಸ್ ಈ ವಿಷಯಗಳೆಲ್ಲಾ ಬಂದಿತ್ತು. ಆ ಸಂದರ್ಭದಲ್ಲಿ ಅಯೋಧ್ಯೆಯೂ ಬಂತು, ದಿಲ್ಲಿಯೂ ಬಂತು. ಆದ್ದರಿಂದ ಆ ವಿಷಯದಲ್ಲಿಯೂ ನಾನು ಅಡ್ಡ ಬರಲಿಲ್ಲ. ಆದರೆ ಈಗ ಏನು ನಡೆಯುತ್ತಿದೆ. ಮಾನ್ಯ ಯಡಿಯೂರಪ್ಪನವರು ತಾವು ಭಾಷಣ ಮಾಡಬೇಕಾದದ್ದು, ತಮ್ಮ ಸಿದ್ಧಾಂತ ಏನು, ತಮ್ಮ ನಿಲುವೇನು ? ತಾವೇನು ವಿಶ್ಲೇಷಣೆ ಮಾಡಬೇಕು, ಅದನ್ನು ಸಂಪೂರ್ಣವಾಗಿ, ಸಮಗ್ರವಾಗಿ, ಸವಿಸ್ತಾರವಾಗಿ ಮಾಡಿದರೆ ನಾವು ಅಡ್ಡ ಬರುವುದಕ್ಕೆ ತಯಾರಾಗಿರಲಿಲ್ಲ. ಕೆಲವು ಕಡೆ ಅವರು ಪ್ರಚೋದನೆಯನ್ನು ಮಾಡಿದರು, ಬೇರೆಯವರು ಕೂಡ ಪ್ರಶ್ನೆಗಳನ್ನು ಹಾಕಿದರು. ಆದರೆ ಒಬ್ಬರಿಂದ ಒಬ್ಬರಿಗೆ ಪ್ರಶ್ನೆ ಉತ್ತರ ಸರಿಯಲ್ಲ ಎಂದು ಹೇಳಿ ತಾವು ಭಾಷಣ ಮುಂದುವರೆಸಬೇಕು ಎಂದು ತಮ್ಮ ಪೀಠದಿಂದ ಹೇಳಿದ್ದೀರಿ. ಆದರೂ ಅದು ನಡೆಯಲಿಲ್ಲ. ಆಮೇಲೆ ಪಕ್ಷಗಳಲ್ಲಿರುವಂಥ ವಾದವಿವಾದ ಭಿನ್ನಾಭಿಪ್ರಾಯಗಳು ಬಂತು. ಇದು ರಾಜ್ಯಪಾಲರ ಭಾಷಣಕ್ಕೆ ಸಂಬಂಧ ಇಲ್ಲ. ದಯವಿಟ್ಟು ಕೇಳಬೇಕು. ನಾವು ಸಾಕಷ್ಟು ತಾಳ್ಮೆಯಿಂದ ಕುಳಿತಿದ್ದೇವೆ.

ಶ್ರೀ ಪಿ.ಜಿ.ಆರ್ ಸಿಂಧ್ಯ:- ಇದರಲ್ಲಿ ಪಾಯಿಂಟೂ ಇಲ್ಲ. ಆರ್ಡರೂ ಇಲ್ಲ.

ಶ್ರೀ ಎ.ಕೆ. ಅನಂತಕೃಷ್ಣ:- ನಾವು ಬಹಳ ತಾಳ್ಮೆಯಿಂದ ಕುಳಿತಿದ್ದೇವೆ.

ಈಗ ಏನು ಬಂತು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಪ್ರೇಮಚಂದ್ರ ಸಾಗರ್‌ರವರ ರಾಜೀನಾಮೆಯನ್ನು ರಾಜ್ಯಪಾಲರು ಅಕ್ಸೆಪ್ಟ್ ಮಾಡಿಕೊಂಡರೇನು ? ಅದರ ಬಗ್ಗೆ ಹೇಳಿ.

ಶ್ರೀ ಎ.ಕೆ. ಅನಂತಕೃಷ್ಣ:- ಅಲ್ಲಿಗೆ ಬರುತ್ತಿದ್ದೇನೆ ನಾನು. ತಾವು ಸುಮಾರು ಒಂದೂವರೆ ಗಂಟೆ ಹೊತ್ತು ರಾಜ್ಯಪಾಲರ ಭಾಷಣದ ವಿಷಯದಲ್ಲಿ ವಿಶ್ಲೇಷಣೆ ಮಾಡುವಂಥ ಕೆಲಸವನ್ನು ಸಂಪೂರ್ಣವಾಗಿ ಮಾಡಿಲ್ಲ. ದಾರಿ ತಪ್ಪಿ ಬಹಳ ಕಡೆ ಎಲ್ಲೆಲ್ಲೂ ಹೋಗಿದ್ದೀರಿ . ಅದನ್ನೆಲ್ಲಾ ನಾವು ತಾಳ್ಮೆಯಿಂದ ಕೇಳಿಕೊಂಡಿದ್ದೇವೆ. ಆದರೆ ಈಗ ನಾನು ಪಾಯಿಂಟ್ ಆಫ್ ಆರ್ಡರ್ ಮೇಲೆ ನಿಂತಿದ್ದೇನೆ. ಆ ಒಂದು ಎಲ್ಲೆಯನ್ನು ಬಿಟ್ಟು ನಾನು ಪಕ್ಕದಲ್ಲಿ ಹೋಗುವುದಿಲ್ಲ. ಈಗ ಏನಾಗಿದೆ. ಮಂತ್ರಿಮಂಡಲದಲ್ಲಿ ಯಾರೊಬ್ಬ ಮಂತ್ರಿ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಮತ್ತೆ ಬೇರೆ ಕಡೆ ಇನ್ನೇನೂ ಸಭೆಗಳು ನಡೆಯುತ್ತಿವೆ. ಇದೆಲ್ಲಾ ವಾಸ್ತವಾಂಶ ಸ್ವಾಮಿ ರಾಜ್ಯಪಾಲರ ಭಾಷಣದಲ್ಲಿ ಇದೆಲ್ಲಾ ಇಲ್ಲ. ಅದರ ಅವಶ್ಯಕತೆ ಇಲ್ಲ. ಪಕ್ಷದಲ್ಲಿ ಏನಾದರೂ ಭಿನ್ನಾಭಿಪ್ರಾಯಗಳು ಇದ್ದರೆ, ಮಂತ್ರಿ ಮಂಡಲದಲ್ಲಿ ಏನಾದರೂ ಭಿನ್ನಾಭಿಪ್ರಾಯ ಇದ್ದರೆ ಆ ವಿಷಯ it is purely an internal matter. ಅದು ಪ್ರತಿಯೊಂದು ಸರ್ಕಾರದಲ್ಲೂ, ಪ್ರತಿ ಮಂತ್ರಿಮಂಡಲದಲ್ಲೂ ಪ್ರತಿಯೊಂದು ಪಕ್ಷದಲ್ಲಿ ಕೂಡ ಇರುವ ಮಾತು. ಬೆಳಿಗ್ಗೆ ಇರುತ್ತದೆ. ಮಧ್ಯಾಹ್ನ ಸರಿಹೋಗುತ್ತದೆ. ಮಧ್ಯಾಹ್ನ ಇರುತ್ತದೆ. ರಾತ್ರಿ ಸರಿಹೋಗುತ್ತದೆ. ಮಾರನೇಯ ದಿವಸ ಇರುತ್ತದೆ. ಇದನ್ನು ನೋಡಿ vicarious pleasure, satisfaction.

ಅವರು ಸಫಲರಾಗುವುದಿಲ್ಲ ಎನ್ನುತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಆದ್ದರಿಂದ ಆ

ವಿಷಯದಲ್ಲಿ ಹೆಚ್ಚು ಬೆಳೆಸಿಕೊಂಡು ಹೋಗುವುದು ಬೇಕಾಗಿಲ್ಲ. ಈಗ ರಾಜ್ಯಪಾಲರ ಭಾಷಣ ಏನು ಇದೆ, ಅದು ತಮ್ಮದೇ ಆದ ನಿಲುವು.

SRI D.B. CHANDREGOWDA:– I have a Point of Order.

ಶ್ರೀ ಎ.ಕೆ. ಅನಂತಕೃಷ್ಣ:– ನನ್ನ ಪಾಯಿಂಟ್ ಆಫ್ ಆರ್ಡರ್ ಮೇಲೆ ಅವರು ಪಾಯಿಂಟ್ ಆಫ್ ಆರ್ಡರನ್ನು ರೈಜ್ ಮಾಡುತ್ತಿದ್ದಾರೆಯೇ ?

SRI D.B. CHANDRE GOWDA:– I have a Point of Order.

ಶ್ರೀ ಎ.ಕೆ. ಅನಂತಕೃಷ್ಣ:– ತಮ್ಮ ಆದೇಶವನ್ನು ನಾನು ಹೇಳುತ್ತಿದ್ದೇನೆ. ತಾವೇ ಹೇಳಿದ್ದೀರಿ. ರಾಜ್ಯಪಾಲರ ಭಾಷಣ ಏನು ಇದೆ, ಆ ವಂದನಾರ್ಪಣೆ ವಿಷಯದಲ್ಲಿ ಮಾತ್ರ ಅದಕ್ಕೆ ಸೀಮಿತವಾಗಿ ಮಾತನಾಡಬೇಕು ಎಂದು ಹೇಳಿ. ಅದು ದಾರೀ ತಪ್ಪಿ ಹೋಗುತ್ತಿದೆ. ತಮ್ಮ ಒಂದು ಆದೇಶ ಏನು ಇದೆ, ಅದಕ್ಕೂ ಕೂಡ ಗಮನ ಕೊಡುತ್ತಿಲ್ಲ ಎಂದು ನಾನು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ನಿನ್ನೆ ಮಾನ್ಯ ಏಕಾಂತಯ್ಯನವರು ಒಂದು ವಿಧಿ ಬಿಂದುವನ್ನು ಎತ್ತಿದರು. ರಾಜ್ಯಪಾಲರ ಭಾಷಣ ಶುರುವಾದ ಮೇಲೆ ಬೇರೆ ಯಾವ ವಿಷಯವನ್ನು ಆ ಮಧ್ಯದಲ್ಲಿ ತೆಗೆದುಕೊಳ್ಳಕೂಡದು ಎನ್ನುವ ತೀರ್ಮಾನವನ್ನು ಸಭಾಧ್ಯಕ್ಷರು ಕೊಟ್ಟಿದ್ದಾರೆ. ಅದನ್ನು ಬಿಟ್ಟು ಬಹಳ ಆಸಕ್ತಿಯಿಂದ ಅವರ ಭಾಷಣವನ್ನು ಕೇಳುವುದಕ್ಕೆ ಆಗಿನಿಂದಲೂ ಎಲ್ಲಿಗೂ ಹೋಗದೆ ಕುಳಿತ್ತಿದ್ದೇವೆ. ಚೆನ್ನಾಗಿ ಮಾತನಾಡುತ್ತಿದ್ದಾರೆ. ಎಲ್ಲರ ವಿರೋಧವನ್ನು ಎದುರಿಸಿ ಮಾತನಾಡುತ್ತಿದ್ದಾರೆ. ಅದನ್ನು ಬಿಟ್ಟು ಪ್ರತಿಯೊಂದು ಹೆಜ್ಜೆಯಲ್ಲೂ ಅವರು ಅದು ಹೋಯಿತು, ಇದು ಹೋಯಿತು. ಸರ್ಕಾರ ಗುಂಡುಕಲ್ಲಿನ ಹಾಗೆ ಎರಡು ವರ್ಷ ಇರುತ್ತದೆ. ಏನೂ ಭಯ ಇಲ್ಲ. ಈಗ ಆ ವಿಷಯ ಇಲ್ಲಿ ಅಪ್ರಸ್ತುತತ.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಸಂಸದೀಯ ಮಂತ್ರಿಗಳಲ್ಲಿ ನನ್ನ ವಿಜ್ಞಾಪನೆ ಇಷ್ಟೆ. ತೀರ್ಮಾನಗಳು ಆದದ್ದು ಪಾಯಿಂಟ್ ಆಫ್ ಆರ್ಡರ್ ಮೇಲೆ ನಿನ್ನೆ. ಇವತ್ತು ನನ್ನ ಪಾಯಿಂಟ್ ಆಫ್ ಆರ್ಡರೊಂದು ಇದೆ. ರಾಜ್ಯಾಪಾಲರ ಭಾಷಣದ ಮೇಲೆ ಚರ್ಚೆ ನಡೆಯುವ ಕಾಲಕ್ಕೆ ಯಾವ ಮಂತ್ರಿಗಳಿಗೆ ರಾಜ್ಯಪಾಲರು ರಾಜ್ಯಾಂಗದತ್ತವಾಗಿ ಶಪಥವನ್ನು ಮತ್ತು ಗೌಪ್ಯವಾಗಿ ಬೋಧನೆ ಮಾಡಿದ್ದರೋ ಆ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟರೆ ಅದನ್ನು ಸ್ವೀಕರಿಸತಕ್ಕಂಥ ತಿರಸ್ಕರಿಸತಕ್ಕಂಥ ಅಧಿಕಾರ ಅವರಿಗೇ ಇದೆ. ಆದ್ದರಿಂದ ಇದಕ್ಕಿಂತ ರೆಲೆವೆಂಟ್ ಪಾಯಿಂಟ್ ಮತ್ತೊಂದು ಇಲ್ಲ.

ಎರಡನೆಯದು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವಂತಹ ಕಾಲದಲ್ಲಿ ರಾಜೀನಾಮೆ ಬಂದಿದೆ ಎನ್ನುವ ಕಾರಣದಿಂದ ಸ್ವಲ್ಪ ಹೇಳಬೇಕಾಗಿದೆ. ನಮ್ಮಲ್ಲಿ ಈಗ ಕ್ರಿಕೆಟ್ ಫೀವರ್ ದೇಶದಲ್ಲೆಲ್ಲಾ ತುಂಬಾ ಇದೆ. ಇನ್ನು ಓಪನಿಂಗ್ ಬ್ಯಾಟ್ಸಮನ್ ಮೊದಲೇ ಬಂದಾಗ ಸ್ವಲ್ಪ ಫಾಸ್ಟ್ ಬೌಲಿಂಗ್ ಮೀಡಿಯಂ ಫಾಸ್ಟ್ ಬೌಲಿಂಗ್ ಹಾಕುತ್ತಾರೆ. ಇನ್ನು ಪಿಚ್ ಸ್ಪಿನ್ ತೆಗೆದುಕೊಂಡಿಲ್ಲ. ಅದಕ್ಕಾಗಿ ನಾವು ಸುಮ್ಮನೆ ಕುಳಿತಿದ್ದೇವೆ. ಆದರೆ ಇವತ್ತು ಏನಾಗಿದೆ ಅಂದರೆ ನಾವು ಬೌಲ್ ಮಾಡದೆ ಎರಡು ವಿಕೆಟ್ ಬಿದ್ದಿದೆ. ಇವತ್ತು ಬಿದ್ದಿರುವ ವಿಕೆಟ್‌ಗೆ ಬೌಲಿಂಗೇ ಬೇಕಾಗಿಲ್ಲ. ಬ್ಯಾಟ್ಸ್‌ಮನ್ ವಿಕೆಟ್ ಅನ್ನು ಕಿತ್ತುಹಾಕಬೇಕೆಂದು ಹೇಳುತ್ತಿದ್ದಾನೆ ಅದರ ಬಗ್ಗೆ ಇವರದು ಏನು ? ಕ್ಯಾಪ್ಟನ್ ಏನು ಕೇಳುತ್ತಾರೆ. ಪಾಯಿಂಟ್ ಆಫ್ ಆರ್ಡರ್ ಅಷ್ಟೆ. ರಾಜ್ಯಪಾಲರ ಭಾಷಣದಲ್ಲಿ ಅವರು ಬೋಧಿಸಿದಂತಹ ಗೌಪ್ಯತೆ ಮತ್ತು ಶಪಥ ಆ ಮಂತ್ರಿ ಇವತ್ತು ಇಲ್ಲ ಅಂದರೆ ಹೇಗೆ ? ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ವಿಚಾರ ಇದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲವೋ ? ಇದರ ಬಗ್ಗೆ ಮುಖ್ಯಮಂತ್ರಿಗಳು

ಏನು ಹೇಳುತ್ತಾರೋ ಅದನ್ನು ಹೇಳಲಿ, ನಾವು ಕೇಳೋಣ. ಅವರ ಕಷ್ಟ ನೋಡಿ ನಮಗೆ ಸಂಕಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೋಯಿಲಿ:– ಮಾನ್ಯ ಅಧ್ಯಕ್ಷರೆ, ನನಗೆ ಒಂದು ಬಹಳ ಸಂತೋಷದ ವಿಚಾರ ಅಂದರೆ ನಮ್ಮ ವಿರೋಧ ಪಕ್ಷದ ನಾಯಕರಾದ ತಮಗೆ ನಮ್ಮ ಭದ್ರತೆಯ ಬಗ್ಗೆ ಇರತಕ್ಕಂಥ ಚಿಂತನೆ ಮತ್ತು ಕಾಳಜಿಯನ್ನು ನೋಡಿದರೆ ನಮ್ಮ ಪರವಾಗಿ ವಿಷವಾದಂತಹ ಕೃತಜ್ಞತೆಗಳನ್ನು ಮತ್ತು ಧನ್ಯವಾದಗಳನ್ನು ತಮಗೆ ಅರ್ಪಿಸುತ್ತೇವೆ. ಇದು ಸದಾ ಇರಲಿ, ಅದರಿಂದ ಮುಂದೆ ಬರತಕ್ಕಂಥ ಚುನಾವಣೆಯಗಳಲ್ಲಿಯೂ ಕೂಡ ತಾವು ಈ ರೀತಿಯ ಕಾಳದರ್ಜಿಯನ್ನು ನಮ್ಮ ಭದ್ರತೆಯ ಬಗ್ಗೆ ಇಡುತ್ತೀರಿ ಎನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಧೃತರಾಷ್ಟ್ರ ನಾನು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನಾನು ಆಗಲೇ ಹೊಂದಾಣಿಕೆ ನಡೆಯುತ್ತಿದೆ ಎಂದು ಹೇಳಿದೆ. ಪಿತೂರಿ ನಡೆಯುತ್ತಿದೆ ಎಂದು ನಾನು ಆಗಲೇ ಹೇಳಿಧೆ. ಇದೊಂದು ರಹಸ್ಯ ಬಹಳ ದೀರ್ಘವಾಗಿದೆ. ಇದು ಬಹಳ ತೀರ ಆಳವಾಗಿದೆ. ಆದರ ಬಗ್ಗೆ ರಾಜ್ಯಾದ್ಯಂತ ಚರ್ಚೆಯು ನಡೆಯಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಪುಟ್ಟಪ್ಪನವರು ಒಂದು ಮಾತನ್ನು ಹೇಳುತ್ತಾರೆ. ಅದೇನೆಂದರೆ 'ಮುಳುಗುವಾತ ಬದುಕಲಿಕ್ಕೆ ಮೊಸಳೆಯ ಮಾತು ಎಂಬಂತೆ' ಹಾಗೆಯೇ ನೀವು ಎಲ್ಲೇಲ್ಲೋ ನೀವು ಯಾರನ್ನೋ ಆಯ್ದುಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ನನಗೆ ಇಲ್ಲಿಯವರೆಗೆ ಏನಾಗಿತ್ತು ಅಂದರೆ ನನಗೆ ಈ ಕಡೆಯ ಬೆಂಬಲ ಅಂತೂ ಇದೆ, ನಿಮ್ಮ ಬೆಂಬಲವೂ ಇದೆ. ಆದರೆ ಮಾನ್ಯ ಯಡಿಯೂರಪ್ಪನವರು ಬಗ್ಗೆ ಬೆಂಬಲ ಇಲ್ಲ. ಅತ ಸಂಶಯ ಇತ್ತು. ಈಗ ಅವರು ತೋರಿಸತಕ್ಕಂಥ ಆಸಕ್ತಿ ನೋಡಿದರೆ ಈ ಕಡೆ ಬೆಂಬಲ ಇದೆ ಎಂದು ನಮಗೆ ಸಮಾಧಾನ ಬಂದಿವೆ. ಆದ್ದರಿಂದ ನಾನು ಏತಕ್ಕೆ ಹೆದರಬೇಕು. ಹೆದರಬೇಕಾದಂತಹ ಅವಶ್ಯಕತೆ ಇಲ್ಲ. ಎಲ್ಲಾ ಭದ್ರವಾಗಿದೆ. ರಾಜೀನಾಮೆಯ ವಿಚಾರ ಬರುತ್ತಲೆ ಹೋಗುತ್ತದೆ. ಇಲ್ಲಿಯವರೆಗೆ ಭದ್ರವಾಗಿದೆ. ಡಾ|| ಪ್ರೇಮಾಚಂದ್ರ ಸಾಗರ್ ಕೂಡ ನಮ್ಮ ಮಂತ್ರಿಮಂಡಲದಲ್ಲಿ ಇದ್ದಾರೆ. ರಾಜೀನಾಮೆಯನ್ನು ಅವರು ಕೊಟ್ಟಿದ್ದು ಇದ್ದರೆ ನಾನು ತಮಗೆ ಬಂದು ಹೇಳುತ್ತೇನೆ. ತಮಗೆ ಈ ರೀತಿಯ ಆತುರ ಏತಕ್ಕೆ.

ಶ್ರೀ ಡಿ.ಬಿ. ಚಂದ್ರೇಗೌಡರು:– ಅಧಿಕೃತವಾದ ಸುದ್ದಿ ಬಂದಿದೆ.

SRI R.V. DESHAPANDE:– "Karnataka Minister of State for Sports and Culture Premachandra Sagar to–day resigned from Mr. M. Veerappa Moily's Ministry.

Official source said here that he had tendered the resignation to the Chief Minister in the morning. Poor allowcation of funds to his department in the Budget presented yesterday was stated to be the reason for his resignation." This is officaial source.

SRI M. VEERAPPA MOILY:– I don't think which source is official; not from my source.

ಶ್ರೀ ವಾಟಾಳ್ ನಾಗರಾಜ್:– ನಾನು ಅದಕ್ಕೆ 40 ಜನ ಮಂತ್ರಿಗಳನ್ನು ಮಾಡಬೇಡಿ. ಸುಮ್ಮನೆ ಕಾಲಿಗೆ, ಕೈಗೆ ಸಿಗುವಂತಹ ಮಂತ್ರಿಗಳನ್ನು ಮಾಡಬೇಡಿ ಎಂದು ಹೇಳಿದೆ.

SRI D.B. CHANDRE GOWDA:– Have you not received the resignation? Acceptance is differrent. Have you received it or not?

SRI M. VEERAPPA MOILY:– It will be made known to this House at the appropriate time.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಬೇಕಾದಾಗ ಅಂದರೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ರಾಜೀನಾಮೆಯನ್ನು ಕೊಟ್ಟಿದ್ದಾರೆಂದು ತೀರ್ಮಾನವಾಯಿತು.

SRI P.G.R. SCINDHIA:– If he has submitted his resignation, you kindly tell us.

SRI M. VEERAPPA MOILY:– If it is to-day or it it is tomorrow, we will tell. ಮತ್ತೆ ಕೊಡುವವರು ಯಾರಿದ್ದಾರೆ ಹೇಳಿಬಿಡಿ. ಇದರ ಜೊತೆಯಲ್ಲಿ ಯಾರ್ಯಾರೂ ಕೊಟ್ಟಿದ್ದಾರೆಂದು ಒಳಗೆ ಗೌಪ್ಯವಾಗಿದ್ದರೆ ನನಗೆ ಗೊತ್ತಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾಳೆ ಇದರ ಬಗ್ಗೆ ಹೇಳಿಕೆಯನ್ನು ಕೊಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಅಗತ್ಯ ಬಿದ್ದರೆ ಕೊಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಅಗತ್ಯ ಬಿದ್ದರೆ ಅಂದರೆ ಹೇಗೆ ? ಸರ್ಕಾರದಲ್ಲಿ ಒಬ್ಬ ಜವಾಬ್ದಾರಿ ಇರತಕ್ಕಂಥ ಮಂತ್ರಿ ರಾಜೀನಾಮೆಯನ್ನು ಕೊಟ್ಟಿದ್ದಾರೆ ಅನ್ನುವುದು. it is the prerogative of this House to know whether he has submitted his resgination or not. ತಾವು ಅವರ ರಾಜೀನಾಮೆಯನ್ನು ಅಕ್ಸೆಪ್ಟ್ ಮಾಡುವುದು ಬಿಡುವುದು it is your prerogative and it is the choice of the Governor.

ಅಷ್ಟೆ ನಾವು ಕೇಳುತ್ತಿರುವುದು. ನಿಮಗೆ ರಾಜೀನಾಮೆಯನ್ನು ಅವರು ಕೊಟ್ಟಿದ್ದಾರೆಯೇ ?

ನಿಮಗೆ ಮಂತ್ರಿಗಳು ರಾಜೀನಾಮೆ ಪತ್ರ ಕೊಟ್ಟಿದ್ದಾರೆಯೇ ? ಅಷ್ಟೇ ನಾವು ಕೇಳುತ್ತಿರುವುದು. ತಾವು ಹೀಗೆ ಹೇಳಿದರೆ ಹೇಗೆ ? ಸಂಸದೀಯ ವ್ಯವಹಾರಗಳಲ್ಲಿ ತಾವು ಬಹಳ ಪರಿಣಿತರು. ಈ ಕಡೆ ಕುಳಿತು ಪಳಗಿದವರು, ಸುಮಾರು 22 ವರ್ಷಗಳ ಕಾಲ ಅನುಭವವಿರತಕ್ಕಂಥವರು. ಅದರಲ್ಲಿ ಕಿರಿಕಿರಿಯಾಗುವುದು ಅಥವಾ ಪೇಚಿಗೆ ಸಿಕ್ಕಿಕೊಳ್ಳುವಂಥಾದ್ದೇನಿಲ್ಲ. ಮಂತ್ರಿಗಳು ತಮಗೆ ರಾಜೀನಾಮೆ ಕೊಟ್ಟಿದ್ದರೆ ಕೊಟ್ಟಿದ್ದಾರೆಂದು ಹೇಳಿ. You may not accept it, that is different this. You may persuade him to remain in your Cabinet. It all depends upon the political conveniences. The question what we would say here is, it is out prerogative to know whether he has tendered his resignation?

ಶ್ರೀ ವಾಟಾಳ್ ನಾಗರಾಜ್:– ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸಬೇಕೆಂಬುದು ನಮ್ಮ ಉದ್ದೇಶವಲ್ಲ. ಆ ರೀತಿಯ ಭಾವನೆಗಳು ನಮ್ಮದು ಯಾರದು ಅಲ್ಲವೆಂಬುದು ಸ್ಪಷ್ಟವಾಗಿದೆ. ಎರಡನೆಯದಾಗಿ, ನಿಮಗೆ ನಮ್ಮ ಸಲಹೆಯೇನೆಂದರೆ, ಈಗಾಗಲೇ ಮಂತ್ರಿಮಂಡಲದ ಸದಸ್ಯರ ಸಂಖ್ಯೆ ವಿಪರೀತ ಜಾಸ್ತಿಯಾಗಿರುವುದರಿಂದ, ಕೆಲವರನ್ನು ಕೈಬಿಡಬೇಕಾದರೆ ಬಿಟ್ಟುಬಿಡಿ, 5–6 ಸಚಿವರನ್ನು ತೆಗೆದುಬಿಡಿ.

ಶ್ರೀ ಬಿ.ಎಚ್. ಬನ್ನಿಕೋಡ್:– ಈಗ ಮುಖ್ಯಮಂತ್ರಿಗಳಿಗೆ ಮಾನ್ಯ ಮಂತ್ರಿಗಳಿಂದ ರಾಜೀನಾಮೆ ಪತ್ರ ಬಂದಿದೆಯೇ ? ಎನ್ನುವ ಪ್ರಶ್ನೆ ಉದ್ಭವಿಸಿದೆ. ಆದರೆ, ತಾವು ಅವರಿಗೆ ಹೇಳಿ ಅವರ ಮನವೊಲಿಸಿ, ತಾವು ಒಪ್ಪದಿರಬಹುದು. ರಾಜೀನಾಮೆ ಪತ್ರ ತಮಗೆ ಬಂದಿರುವ ಬಗ್ಗೆ ಖಚಿವಾಗಿ......

ಚೇರ್ಮನ್:– ಯಡಿಯೂರಪ್ಪನವರೆ, ನೀವು ಯಾವ ಸಮಯದಲ್ಲಿ ಕೇಳುತ್ತೀರಿ, ಆ ಸಮಯದಲ್ಲಿ ನಾನು ಹೇಳುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:– ರಾಜೀನಾಮೆ ಕೊಡುವ ವಿಚಾರ ಮಂತ್ರಿಗಳಿಗೆ ಬಿಟ್ಟಿದ್ದುದು, ಅದನ್ನು ಅಂಗೀಕರಿಸುವುದು ಮುಖ್ಯಮಂತ್ರಿಗಳಿಗೆ ಬಿಟ್ಟ ವಿಚಾರ. ನಮ್ಮ ಪ್ರಶ್ನೆ ಏನೆಂದರೆ, ಮಂತ್ರಿಗಳ ರಾಜೀನಾಮೆಯನ್ನು ತಾವು ಅಂಗೀಕರಿಸಿದ್ದೀರಾ ? ಇಲ್ಲವೆ ? ಎಂಬುದನ್ನು ಹೇಳುತ್ತಿಲ್ಲ. That is your prerogative ಮೂಲಭೂತವಾಗಿ ನಾವು ಕೇಳುತ್ತಿದ್ದೇವೆ. ಇವೊತ್ತು ಶಾಸನ ಸಭೆ ನಡೆಯುತ್ತಿದೆ. ಅದರಲ್ಲೂ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ನಾನು ನಿಮ್ಮನ್ನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ನಿಮ್ಮ ಮಂತ್ರಿಗಳು ರಾಜೀನಾಮೆ ಸಲ್ಲಿಸಿದ್ದಾರೆಯೆ ? ಇಲ್ಲವೇ ? ಪ್ರಶ್ನೆಯೇನೆಂದರೆ, ತಾವು ಯಾವಾಗ ಸ್ಪಷ್ಟವಾಗಿ ನನಗೆ 'ಮಂತ್ರಿಗಳು ರಾಜೀನಾಮೆ ಕೊಟ್ಟಿಲ್ಲ' ಎಂದು ಹೇಳುವುದಿಲ್ಲವೋ ಅದರ ಅರ್ಥ ರಾಜೀನಾಮೆ ಕೊಟ್ಟಂತಾಗುತ್ತದೆ. It means like that. Chief Minister categorically should have stated 'No. I have not received'. You would have said it. In the normal course if any Chief Minister had not received the resignation, he would have said 'No. I have not received the resignaiton'. You have not denied, nor you are accepting it. It means that he has submitted his resignation. So, I would request....

SRI D.B. CHANDRE GOWDA:– It is the privilege and prerogative of this House to know the truth. When the media has covered it, can the House be kept in darkness?

SRI R.V. DESHAPANDE:– It may not be from your source. Official sources UNI......

ಶ್ರೀ ಡಿ.ಬಿ. ಚಂದ್ರೇಗೌಡ:– ನಿಮ್ಮ ಮನೆ (ಸರ್ಕಾರದ) ಯ ಮೂಲೆ ಕಲ್ಲು ಕಿತ್ತುಬಂದಿದೆ. ಬಂಗಾರಪ್ಪನವರಿದ್ದಾಗ ಅವರು ಹೀಗೆ ಹೇಳುತ್ತಿದ್ದರು. ಆದರೆ, ಮನೆ ಕುಸಿದ ಮೇಲೆ ಅವರಿಗೆ ಗೊತ್ತಾಯಿತು. ನಿಮಗೆ ಹಾಗಾಗಬಾರದು. ಏಕೆಂದರೆ ಬಂಗಾರಪ್ಪನವರು ನಂಬಿಕೆಟ್ಟರು, ನೀವು ನಂಬಿ ಕೆಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಮ್ಮ ಕಳಕಳಿ ಏನೆಂದರೆ, ಖಂಡಿತವಾಗಿ, ನಿಶ್ಚಿತವಾಗಿ ರಾಜ್ಯದ ಜನರ ಹಿತದೃಷ್ಟಿಯಿಂದ ಇನ್ನು 1992–93ರ ವರ್ಷ ಕಳೆಯದಿರುವಂಥ ಶ್ರೀಮಾನ್ ವೀರಪ್ಪ ಮೊಯಿಲಿಯವರ ಮಂತ್ರಿಮಂಡಲದಲ್ಲಿರುವ ಸದಸ್ಯರು, ಆ ಕಡೆ ಕುಳಿತಿರತಕ್ಕಂಥ ಶಾಸಕರು ಅವರ ಕಾಲೆಳೆಯುವಂತ ಪ್ರವೃತಿಯನ್ನು ಕೈಬಿಡಬೇಕೆಂದು ನಾನು ವಿನಂತಿಸಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದು ದೊಂಬರಾಟವಲ್ಲ. ಜನರು ನಿಮಗೆ ಐದು ವರ್ಷಗಳ ಕಾಲ ಆಡಳಿತ ನಡೆಸಲು ಅಧಿಕಾರ ಕೊಟ್ಟಾಗ 184 ಜನ ಅಜೀರ್ಣವಾಗುವಷ್ಟು ಬಹುಮತ ಸಿಕ್ಕಿದ್ದರೂ ನಿಮಗೆ ವಿಫಲತೆ ಎಂದರೆ, ಇದರ ಪರಿಣಾಮವೇನಾಗುತ್ತದೆ ? ನಾನು ಏನು ಹೇಳುತ್ತಿದ್ದೇನೆಂದರೆ, ಇಷ್ಟು ಬೇಗ ಏನಾದರೊಂದು ಒಳ್ಳೆಯ ಕೆಲಸ ಮಾಡಬೇಕೆಂದು ಒಂದು ಜವಾಬ್ದಾರಿಯುತ ಸ್ಥಾನದಲ್ಲಿ

ಕುಳಿತಿರತಕ್ಕಂಥ ಒಬ್ಬ ಮುಖ್ಯಮಂತ್ರಿಗಳ ಕಾಲೆಳೆಯುತಕ್ಕಂಥ ಕಾಂಗ್ರೆಸ್ಸಿನ ಒಂದು ಪ್ರವೃತ್ತಿ ಏನಿದೆ, ಇದರಿಂದ ಜನರ ಮೇಲೆ ಕೆಟ್ಟ ಪರಿಣಾಮವಾಗುತ್ತದೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಚೇರ್ಮನ್:– ತಾವು ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭಿಸಿದ್ದೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಹೌದು.

SRI D.B. CHANDRE GOWDA:– It is the prerogative of this House. Let the Chief Minister come out with some sort of statement.

ಶ್ರೀ ವಾಟಾಳ್ ನಾಗರಾಜ್:– 6–6 ತಿಂಗಳಿಗೋಸ್ಕರ ನಿಮ್ಮ ಮಂತ್ರಿಮಂಡಲ ಉರುಳಬೇಕೆನ್ನುವ ಇಚ್ಛೆ ನಮಗ್ಯಾರಿಗೂ ಸಹ ಇಲ್ಲ. ಇದು ಆಡಳಿತದ ದೃಷ್ಟಿಯಿಂದ ಒಳ್ಳೆಯದಲ್ಲ. ಆದುದರಿಂದ, ಮಂತ್ರಿಗಳಿಂದ ತಮಗೆ ರಾಜೀನಾಮೆ ಬಂದಿದೆಯೆಂದು ಧೈರ್ಯವಾಗಿ ಹೇಳಿ. ಇದರಲ್ಲಿ ಹಿಂದು–ಮುಂದು ನೋಡುವಂಥದ್ದೇನಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೆ, ಈಗ ಇದರ ವಿಷಯವಾಗಿ ಕೇಳುವುದಕ್ಕೆ ವಿರೋಧ ಪಕ್ಷದ ನಾಯಕರು ಬಹಳ ಆತುರದಲ್ಲಿದ್ದಾರೆ. ನಿಮ್ಮ ಸ್ವದೀಚ್ಛೆ ನನಗರ್ಥವಾಯಿತು. ನಾವು ಭದ್ರವಾಗಿರಬೇಕೆಂಬುದು ತಮ್ಮ ಅಭಿಲಾಷೆಯಾಗಿರುವುದರಿಂದ ಮಂತ್ರಿಮಂಡಲದ ಗಾತ್ರ ದೊಡ್ಡದಾಯಿತೆಂದು ತಾವೇ ಹೇಳುತ್ತೀರಿ, ಈಗ ಅದರ ಗಾತ್ರ ಸ್ವಲ್ಪ ಕಡಿಮೆಯಾದರೆ ತಾವು ಸಂತೋಷ ಪಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಬಹಳ ಸಂತೋಷಪಡುತ್ತೇವೆ. ಆಮೇಲೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳುವುದೇನೆಂದರೆ ಇನ್ನೊಂದು 3–4 ಮಂತ್ರಿಗಳನ್ನು ತೆಗೆದುಹಾಕುವುದಾದರೆ ನಾಳೆನೇ ತೆಗೆದುಬಿಡಿ.

ಚೇರ್ಮನ್:– ತೆಗೆಯುವುದು, ಬಿಡುವುದನ್ನು ಅವರಿಗೆ ಬಿಟ್ಟುಬಿಡಿ, ಈಗ ಯಡಿಯೂರಪ್ಪನವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೆ, ಯಾವ ಶುಭ ಮುಹೂರ್ತದಲ್ಲಿ ಯಡಿಯೂರಪ್ಪ ರಾಜ್ಯಪಾರ ಭಾಷಣದ ಮೇಲೆ ಮಾತನಾಡಲು ಪ್ರಾರಂಭ ಮಾಡಿದರೋ ಎಂದು ನನ್ನ ಮೇಲೆ ತಮ್ಮ ದುಸ್ಥಿತಿಯನ್ನು ಹಾಕಬೇಡಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಈ ಹಿಂದೆ ಸದನದಲ್ಲಿ ಒಂದು ಪಕ್ಷದ ಒಳಗಿನ ವಿಷಯದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡಬಾರದು ಎಂದು ಅನೇಕ ಸಲ ತೀರ್ಮಾನವಾಗಿದೆ. ಪುನಃ ಹೇಳಿದ್ದೇ ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆ ವಿಷಯಕ್ಕೆ ಬರುವುದಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ನಿಮ್ಮ ಪಕ್ಷದ ಬಗ್ಗೆ ನಾಳೆಯೇ ನಾವು ಪ್ರಾರಂಭ ಮಾಡುತ್ತೇವೆ.

ಮಾನ್ಯ ಸದ್ಯರೊಬ್ಬರು:– ಅವರಿಗೆ ಇದನ್ನು ಬಿಟ್ಟರೆ ಬೇರೆ ವಿಷಯವೇ ಇಲ್ಲ.

(ಗೊಂದಲ)

ಚೇರ್ಮನ್:– ಯಡಿಯೂರಪ್ಪನವರೆ ಇದರ ಬಗ್ಗೆ ಬಹಳವಾಗಿ ಪ್ರಸ್ತಾವನೆ ಮಾಡಿದ್ದೀರಿ, ಇನ್ನು ತಾವು ನೇರವಾಗಿ ರಾಜ್ಯಪಾಲರ ಭಾಷಣಕ್ಕೆ ಬನ್ನಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮೂರು ಮೂರು ತಿಂಗಳಿಗೆ ಮುಖ್ಯಮಂತ್ರಿಗಳು ಬದಲಾವಣೆಯಾಗುವುದು ಶೋಭೆಯನ್ನು ತರತಕ್ಕದ್ದಲ್ಲ. ಅವರು ತೆಗೆದುಕೊಂಡಿರತಕ್ಕ ನಿರ್ಧಾರ ಸ್ಪಷ್ಟವಾಗಿದೆ. ಅದರಲ್ಲಿ ರಾಜೀ ಎನ್ನುವ ಪ್ರಶ್ನೆಯೇ ಬೇಕಾಗಿಲ್ಲ.

ಚೇರ್ಮನ್:- ಪಟ್ಟಿಯಲ್ಲಿ ನಿಮ್ಮ ಹೆಸರು ಕೂಡ ಇದೆ. ನಿಮ್ಮ ಹೆಸರು ಬಂದಾಗ ಭಾಷಣ ಮಾಡಿ.

ಶ್ರೀ ಕರಿಯಣ್ಣ:- ಈಗಾಗಲೇ ಅವರಿಗೆ ಎರಡು ಗಂಟೆಗಳ ಕಾಲ ಸಮಯವನ್ನು ಕೊಟ್ಟಿದ್ದೀರಿ, ಇದುವರೆಗೆ ಬಿ.ಜೆ.ಪಿಯವರು ಭಾಷಣ ಮಾಡಿದ್ದಾರೆ. ಆದರೆ ಯಡಿಯೂರಪ್ಪನವರು ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತೇನೆಂದು ಹೇಳುತ್ತಾರಲ್ಲಾ ಆದಕ್ಕೆ ನೀವು ಸಮಯ ಕೊಡುತ್ತೇನೆಂದು ಹೇಳುತ್ತೀರಲ್ಲಾ ಹೇಗೆ ? ತಾವೇ ಹೇಳಿ ಎರಡು ಗಂಟೆಗಳ ಕಾಲ ಮಾತನಾಡಿದ್ದಾರೆ, ಮತ್ತೆ ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಪ್ರಾರಂಭ ಮಾಡುತ್ತೇನೆಂದು ಹೇಳಿದರೆ ಹೇಗೆ ? ಬಿ.ಜೆ.ಪಿ.ಯವರು ಪಕ್ಷದ ಬಗ್ಗೆ ಮಾತನಾಡಲು ಬಂದಿದ್ದಾರೋ ಅಥವಾ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡಲು ಬಂದಿದ್ದಾರೋ.

ಚೇರ್ಮನ್:- ಅವರಿಗೆ ಮಾತನಾಡಲು ಬಿಡಿ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್:- ಅವರಿಗೆ ಎಷ್ಟು ಸಮಯ ಕೊಡುತ್ತೀರಿ ?

ಚೇರ್ಮನ್:- ಅವರಿಗೆ ಮಾತನಾಡಲು ಈ ರೀತಿ ಅಡ್ಡ ಬಂದರೆ ಹೇಗೆ ಪೂರೈಸುತ್ತಾರೆ. ಈಗ ಅವರು ಮಾತನಾಡಲು ಎದ್ದು ನಿಂತಿದ್ದಾರೆ, ಅವರು ಎದ್ದು ನಿಂತು ಮಾತನಾಡುತ್ತಾರೆಂದರೆ ಬೇರೆ ಸದಸ್ಯರು ಮಾತನಾಡುವುದು ಕಡತಕ್ಕೆ ಹೋಗುವುದಿಲ್ಲವೆಂದು ತಮಗೆ ಗೊತ್ತಿದೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ:- ಅವರ ಮಾತನಾಡಲು ಎದ್ದು ನಿಂತರು ನಾವೆಲ್ಲಾ ಕುಳಿತುಕೊಂಡೆವು ಆದರೆ ಅವರಿಗೆ ಭಾಷಣ ಮಾಡಲು 2 ಗಂಟೆ ಬಿಟ್ಟರೆ ಹೇಗೆ ?

ಚೇರ್ಮನ್:- ಕರಿಯಣ್ಣನವರೆ ದಯಮಾಡಿ ಕುಳಿತುಕೊಳ್ಳಿ. ಅವರಿಗೆ ಏಕೆ ತೊಂದರೆಯನ್ನು ಕೊಡುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ ತಮ್ಮ ಮೂಲಕ ನಮ್ಮ ಮಾನ್ಯ ಸ್ನೇಹಿತರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ದಯಮಾಡಿ ಒಬ್ಬ ಜವಾಬ್ದಾರಿ ಸದಸ್ಯರು ಈ ರೀತಿ ಸುಮ್ಮನೆ ಅನಗತ್ಯವಾಗಿ, ಮಾತನಾಡಿದರು, ಸಮಯ ಹಾಳು ಮಾಡಿದರು ಎನ್ನುವುದು ಜವಾಬ್ದಾರಿ ಸದಸ್ಯರು ಮಾತನಾಡತಕ್ಕದ್ದಲ್ಲ.

ಶ್ರೀ ಕರಿಯಣ್ಣ:- ಅಧ್ಯಕ್ಷರೆ ನಾನೇ ಹೇಳಿದ್ದುದು ಆ ರೀತಿ, ಸಮಯ ಪ್ರಜ್ಞೆ ಇರತಕ್ಕವರು ಎರಡು ಗಂಟೆ ತೆಗೆದುಕೊಂಡರೆ ಹೇಗೆ ಎಂದು. ಇವರು ವಿಧಾನಸಭೆಯ ವೇಳೆಯನ್ನು ಹಾಳು ಮಾಡಿದ್ದಾರೆ.

(ಗೊಂದಲ)

ಚೇರ್ಮನ್:- ಕರಿಯಣ್ಣನವರೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ:- ತಮ್ಮ ಆಜ್ಞೆಯನ್ನು ಪಾಲಿಸುತ್ತೇವೆ. ಆದರೆ ಅವರು ಹೇಳುತ್ತಾರೆ. ನಾವು ಜವಾಬ್ದಾರಿಯಿಂದ ಮಾತನಾಡುವುದಿಲ್ಲವೆಂದು.

ಚೇರ್ಮನ್:- ಅವರು ಈಲ್ಡ್ ಆಗಿಲ್ಲ. ನೀವು ಏಕೆ ಸುಮ್ಮನೆ ಮಾತನಾಡುತ್ತೀರಿ ?

ಶ್ರೀ ಕರಿಯಣ್ಣ:- ನೀವು ವಿಷಯಕ್ಕೆ ಬಂದು ಮಾತನಾಡಿ, ವಿಷಯಕ್ಕೆ ಬಾರದೆ ಎರಡು ಗಂಟೆ ಮಾತನಾಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದನ್ನು ಹೇಳುವುದಕ್ಕೆ ನೀವು ಯಾರು ?

ಚೇರ್ಮನ್:- ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುತ್ತಾ ಹೇಳುತ್ತಿದ್ದೇನೆ.

6.10 ಪಿ.ಎಂ.

ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಗಮನ ಕೊಡದೇ, ರೈತರ ಸಂಕಷ್ಟಗಳನ್ನು ಬಗೆಹರಿಸದೆ, ಪಕ್ಷದಲ್ಲಿ ಪರಸ್ಪರ ಕಚ್ಚಾಟ ಮಾಡಿಕೊಂಡು ಇರತಕ್ಕಂಥ ಒಂದು ವಿಚಿತ್ರ ಪರಿಸ್ಥಿತಿಯು ನಿರ್ಮಾಣವಾಗಿದೆ. ನಾವುಗಳು ಒಂದು ಅವಧಿಯಲ್ಲಿ ಮೂರನೆಯ ಮುಖ್ಯಮಂತ್ರಿಯವರನ್ನು ಕೂಡ ನೋಡಿದ್ದು ಆಯಿತು. ತಮ್ಮ ಸ್ಥಾನಮಾನಕ್ಕೋಸ್ಕರವಾಗಿ, ಅಧಿಕಾರ ಮತ್ತು ಸ್ವಾರ್ಥಕ್ಕೋಸ್ಕರವಾಗಿ, ಕಳೆದ ಎರಡು ವರ್ಷಗಳಿಂದ ಈ ರಾಜ್ಯದಲ್ಲಿ ನಡೆದು ಬಂದ ವಿಚಾರವನ್ನು ಹೇಳಬೇಕಾಗುತ್ತದೆ. ಏಕೆಂದರೆ......

ಅಧ್ಯಕ್ಷರು:- ತಾವುಗಳು ಈಗ ಚರ್ಚೆ ಪ್ರಾರಂಭ ಮಾಡಿದ್ದೀರಿ, ಅದನ್ನು ನಾಳೆ ಮುಂದುವರಿಸಿ. ಸಭೆಯು ನಾಳೆ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು 6-12 ಗಂಟೆಗೆ ಮುಕ್ತಾಯಗೊಂಡು ದಿನಾಂಕ: 24-2-1993ರಂದು ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು).

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕರ್ನಾಟಕ ವಿಧಾನಸಭೆ

ಬುಧವಾರ 24ನೇ ಫೆಬ್ರವರಿ 1993 ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಕ್ಫ್ ಅನುದಾನದಲ್ಲಿ ಹೆಚ್ಚುವರಿ ಬಗ್ಗೆ

101 (758) ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿನಗರ):-

ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಅರ್ಹ ವಕ್ಫ್ ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕಾದ ಅನುದಾನದ ಹಣವನ್ನು ರೂ. 60.00 ಲಕ್ಷದಿಂದ ರೂ. 40.00 ಲಕ್ಷಕ್ಕೆ ಕಡಿತಗೊಳಿಸಿರುವುದು ನಿಜವೆ;

ಬಿ. ಸರ್ಕಾರವು ವಕ್ಫ್ ಅನುದಾನವನ್ನು ಹೆಚ್ಚಿಸಲು ಉದ್ದೇಶಿಸಿದೆಯೆ: ಹಾಗಿದ್ದಲ್ಲಿ ಇದರ ಮೊತ್ತವೆಷ್ಟು ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):-

ಎ. ಹೌದು. 1991-92ರಲ್ಲಿ ರೂ. 52.50 ಲಕ್ಷದಿಂದ ರೂ. 40.00 ಲಕ್ಷಕ್ಕೆ ಕಡಿತಗೊಳಿಸಲಾಗಿದೆ.

ಬಿ. ಹೌದು. ಸಾಧ್ಯವಾದಷ್ಟು.

ಶ್ರೀ ಎ.ಎಂ. ಹಿಂಡಸಗೇರಿ:- ಮಾನ್ಯ ಅಧ್ಯಕ್ಷರೆ, ವಕ್ಫ್ ಗ್ರಾಂಟ್ 50 ಲಕ್ಷ ರೂಪಾಯಿ ಇದ್ದಿದ್ದನ್ನು 40 ಲಕ್ಷ ರೂಪಾಯಿಗೆ ಇಳಿಸಿದ್ದಾರೆ. 1991 ಮತ್ತು 1992ನೇ ಸಾಲಿನಲ್ಲಿ ಕಡಿಮೆ ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ವರ್ಷ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟು ಸಾಧ್ಯವಾಗಬಹುದೆಂದು ಹೇಳಿದ್ದಾರೆ. ಕಡಿಮೆ ಏತಕ್ಕೆ ಆಯಿತು ? 12 ಲಕ್ಷ ರೂಪಾಯಿ ವಕ್ಫ್ ಸಂಸ್ಥೆಗೆ ಕಡಿಮೆ ಗ್ರಾಂಟನ್ನು ಏತಕ್ಕೆ ಕೊಟ್ಟಿದ್ದಾರೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಿಗೆ ಕೇಳ ಬಯಸುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ:- ಈ ವಕ್ಫ್ ಸಂಸ್ಥೆಗೆ ಬರುವಂತಹ ಹಣ 1991-92ರಲ್ಲಿಯೇ 60 ಲಕ್ಷದಿಂದ 40 ಲಕ್ಷಕ್ಕೆ ಇಳಿದಿದೆ. ಅದನ್ನು ಹೆಚ್ಚು ಮಾಡಬೇಕೆಂದು. ನಾನು ಮುಖ್ಯಮಂತ್ರಿಯವರಿಗೆ ಕೇಳಿಕೊಂಡಿದ್ದೇನೆ. ಅವರಿಗೂ ಸಹ ಪತ್ರವನ್ನು ಬರೆದಿದ್ದೇನೆ. ಇದನ್ನು ಖಂಡಿತವಾಗಿಯೂ ಸರ್ಕಾರ ಹೆಚ್ಚು ಮಾಡಬೇಕೆಂದು ತೀರ್ಮಾನ ಮಾಡಿದೆ. ಎರಡನೆಯದಾಗಿ ವಕ್ಫ್‌ಗೆ ಬರುವಂತಹ ಗ್ರಾಂಟ್ಸ್ ಸರ್ಕಾರದವರು -

There is new orientation in wakf policy on utilisation of wakf funds and wakf grants. We have formulated other polices to help the economically poor people and Government has been kind enough to provide funds for

women upliftment, self-employment for women and for certain educational and other matters. So, funds have been given. Another Rs. 25 lakhs have been given for that also. We have formed the schemes for those and it will be implemented.

ಶ್ರೀ ಎ. ಎಂ. ಹಿಂಡಸಗೇರಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ವಕ್ಫ್ ವುಮನ್ ವೆಲ್‌ಫೇರ್ ಫೌಂಡೇಷನ್ ಮಾಡಲು 25 ಲಕ್ಷ ರೂಪಾಯಿಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ಬೇರೆ ಆಯಿತು, ಆದರೆ ಸತತವಾಗಿ ವಕ್ಫ್ ಬೋರ್ಡಿಗೆ ಮಾತ್ರ 60 ಲಕ್ಷ ರೂಪಾಯಿ ಬರುತ್ತಿತ್ತು 20 ಲಕ್ಷ ರೂಪಾಯಿಯನ್ನು ಅದರಲ್ಲಿ ಕಡಿಮೆ ಮಾಡಿ, ಬೇರೆ ಹೆಡ್‌ಗೆ ಕೊಡುವುದು ಸಮಂಜಸವಲ್ಲವೆಂದು ನಾನು ಹೇಳುತ್ತೇನೆ. ಈ ಬೋರ್ಡಿಗೆ ಜಾಸ್ತಿ ಗ್ರಾಂಟ್ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ:– ನಿಮ್ಮ ಅಭಿಪ್ರಾಯಕ್ಕೂ ನಮ್ಮ ಅಭಿಪ್ರಾಯಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಆ ವಕ್ಫ್ ಸಂಸ್ಥೆಗಳಿಗೆ ಇನ್ನೂ ಹೆಚ್ಚು ಮೊತ್ತದ ಅನುದಾನವನ್ನು ಕೊಡಬೇಕೆಂದು ಖಂಡಿತವಾಗಿ ಉದ್ದೇಶಿಸಿದ್ದೇವೆ. ಇದರ ಬಗ್ಗೆ ನಾನು ಮುಖ್ಯಮಂತ್ರಿಯವರಿಗೆ ಪತ್ರ ಬರೆದು ತಿಳಿಸಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, 15 ಅಂಶಗಳ ಕಾರ್ಯಕ್ರಮದ ಸಂಬಂಧದಲ್ಲಿ ಅಲ್ಪಸಂಖ್ಯಾತರನ್ನು ರಾಷ್ಟ್ರದ ಮುಖ್ಯವಾಹಿನಿಯ ಪ್ರವಾಹಕ್ಕೆ ತರಬೇಕೆಂದು ಉದ್ದೇಶಿಸಿ ಸರ್ಕಾರ ಪ್ರತಿ ವರ್ಷ ಸಹ ಕೊಡುವ ಹಣವನ್ನು ಕಡಿಮೆ ಮಾಡುತ್ತಿದೆ. ಈಗ ನಾವು ವಿಧಾನಸಭೆಯಲ್ಲಿ ಪ್ರಶ್ನೆ ಕೇಳತಕ್ಕಂಥ ಉದ್ದೇಶ ಖಚಿತವಾದ ಉತ್ತರವನ್ನು ಗಳಿಸುವುದಕ್ಕಾಗಿ. 'ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ, ಅವರು ಹಣ ಕೊಡಬಹುದು, ಸಾಧ್ಯವಾದಷ್ಟು ಜಾಸ್ತಿ ಮಾಡುತ್ತೇವೆ' ಎನ್ನುವ ಮಾತು ಸರಿಯಾದ ಉತ್ತರ ಆಗುವುದಿಲ್ಲ. ತಮಗೆ ಗೊತ್ತಿರುವಂತೆ ರಾಜ್ಯದಲ್ಲಿ ಸಾವಿರಾರು ವಕ್ಫ್ ಇನ್ಸ್‌ಟಿಟ್ಯೂಷನ್ಸ್ ಇದೆ. ಅವುಗಳಿಗೆ ಕೊಡತಕ್ಕ 5–6 ಲಕ್ಷ ರೂಪಾಯಿಗಳು ಲೆಕ್ಕಕ್ಕೆ ಸಿಗುವುದಿಲ್ಲ. ಆದುದರಿಂದ, ಈ ವರ್ಷವಾದರೂ ವಿಶೇಷವಾಗಿ ಈ ಸಂಸ್ಥೆಗಳಿಗೆ 2 ಕೋಟಿ ರೂಪಾಯಿಗಳನ್ನಾದರೂ ಮುಡುಪಾಗಿಡಲು ಸಾಧ್ಯವೇ ?

ಶ್ರೀ ಎಸ್. ಎಂ. ಯಾಹ್ಯಾ:– 40 ಲಕ್ಷ ರೂಪಾಯಿಗಳನ್ನು renovation, repairs and others ಸ್ಕೀಮ್‌ಗೆ ಇಡಲಾಗಿದೆ. ಇನ್ನೊಂದು ಕರ್ನಾಟಕ ಸ್ಟೇಟ್ ವಕ್ಫ್ ಕೌನ್ಸಿಲ್ ಎಂದು, development of the wakf property ಇದಕ್ಕೆ 63 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಅನಂತರ, ಕರ್ನಾಟಕ ಸ್ಟೇಟ್ ವಕ್ಫ್ ಫೌಂಡೇಷನ್ ಫಾರ್ ವುಮನ್ ಡೆವಲಪ್‌ಮೆಂಟ್ ಎಂದು ಇದಕ್ಕೆ 25 ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಇಷ್ಟಲ್ಲದೆ ಇನ್ನು ಹೆಚ್ಚಿನ ಹಣ ಕೊಡಬೇಕೆಂಬುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ವಿತ್ತ ಮಂತ್ರಿಯವರನ್ನು ಕೇಳಿಕೊಂಡಿದ್ದೇವೆ. ಇದಕ್ಕೆ ಮೀಸಲಾಗಿಟ್ಟಿದ್ದ 42 ಲಕ್ಷ ರೂಪಾಯಿಗಳನ್ನು 60 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಖಂಡಿತವಾಗಿ ನನ್ನ ಲೆಕ್ಕದಲ್ಲಿ ಒಂದು ಕೋಟಿ ರೂಪಾಯಿ ಬಜೆಟ್‌ನಲ್ಲಿ ಹೆಚ್ಚಾಗುತ್ತದೆಂದು ಭಾವಿಸುತ್ತಾ ನಿಮ್ಮೆಲ್ಲರ ಸಹಕಾರ ಕೋರುತ್ತಾ ನಿಮಗೆ ಅಭಿನಂದಿಸಲಿಚ್ಛಿಸುತ್ತೇನೆ.

ಸಂಕೇನಹಳ್ಳಿ ಗ್ರಾಮಕ್ಕೆ ಪಶು ವೈದ್ಯ ಆಸ್ಪತ್ರೆ ಮಂಜೂರಾತಿ

102 (952) ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯನಿಟ್ಟು ಉತ್ತರಿಸುವರೇ ?

ಅ. ಬೇಲೂರು ತಾಲ್ಲೂಕು ಬಲ್ಲೇನಹಳ್ಳಿ ಮಂಡಲ ಪಂಚಾಯಿತಿ ವ್ಯಾಪ್ತಿಗೆ ಬರುವ ಸಂಕೇನಹಳ್ಳಿ ಗ್ರಾಮಕ್ಕೆ 1982ರಲ್ಲಿ ಪಶುವೈದ್ಯ ಶಾಲೆ ಮಂಜೂರಾಗಿದ್ದುದು ನಿಜವೆ:

ಆ. ಹಾಗಿದ್ದಲ್ಲಿ ಅದರ ಪ್ರಾರಂಭೋತ್ಸವ ಸಹಾ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಈಗ ಅದನ್ನು ಮುಚ್ಚಿರಲು ಕಾರಣವೇನು:

ಇ. ಪುನಃ ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ಮತ್ತು ಪಶುವೈದ್ಯ ರಾಜ್ಯ ಸಚಿವರು):-

ಅ. 1979-80ರಲ್ಲಿ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ. ಮುಚ್ಚಿರುವ ಕಾರಣ ಉದ್ಭವಿಸುವುದಿಲ್ಲ.

ಇ. ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಕ್ಕೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ:- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಎರಡನೆಯ ಪ್ರಶ್ನೆಯಲ್ಲಿ ಪಶುವೈದ್ಯ ಶಾಲೆಯ ಪ್ರಾರಂಭೋತ್ಸವ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗೂ ಈಗ ಅದನ್ನು ಮುಚ್ಚಿರಲು ಕಾರಣವೇನು ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಮುಚ್ಚಿರುವ ಕಾರಣ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಏನಾದರೂ ತೆಗೆದು ಹಾಕಲಾಗಿದೆಯೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಸಂಕೇನಹಳ್ಳಿ ಗ್ರಾಮಕ್ಕೆ ಪಶು ವೈದ್ಯ ಶಾಲೆಯನ್ನು 1982ರಲ್ಲಿ ಮಂಜೂರು ಮಾಡಿದ್ದು, ಇದಕ್ಕೆ ಸರ್ಕಾರ ತಡೆಯಾಜ್ಞೆ ಕೊಟ್ಟಿರುತ್ತದೆ. ತಡೆಯಾಜ್ಞೆ ಕೊಟ್ಟ ನಂತರ ಪಶು ವೈದ್ಯಶಾಲೆ ಮುಚ್ಚಿರುವುದರಿಂದ, ತೆರೆಯುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ:- ಮಾನ್ಯ ಸಚಿವರು ತಡೆಯಾಜ್ಞೆ ಕೊಟ್ಟಿದೆಯೆಂದು ಹೇಳಿದರು. ಸರ್ಕಾರ ತಡೆಯಾಜ್ಞೆ ಏಕೆ ಕೊಟ್ಟಿತು ? ಪಶು ವೈದ್ಯಶಾಲೆಯನ್ನು ಮಂಜೂರು ಮಾಡುವಾಗ ಎಷ್ಟು ಜನ ಸಿಬ್ಬಂದಿ ಇರಬೇಕೆಂದು ಸರ್ಕಾರ ಮಂಜೂರಾತಿ ನೀಡಿತು ? ಅಲ್ಲದೆ, ಪಶು ವೈದ್ಯಶಾಲೆಯನ್ನು ಪುನಃ ಪ್ರಾರಂಭ ಮಾಡುವುದಕ್ಕೆ ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಕ್ಕೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ತಿಳಿಸಿದ್ದಾರೆ. ಇದರ ಅರ್ಥವೇನು ? ನಿಯಮಗಳನ್ನನುಸರಿಸುವುದೆಂದರೆ ಪಶು ವೈದ್ಯ ಶಾಲೆಯನ್ನು ಮಂಜೂರು ಮಾಡಿರಲಿಲ್ಲವೇ ? ಈಗ ಯಾವ ನಿಯಮವನ್ನು ಅನುಸರಿಸುತ್ತಿದ್ದೀರಿ ? ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕೆ.ಎನ್. ನಾಗೇಗೌಡ:- 1982ರಲ್ಲಿ 144 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳಿದ್ದು ಹಾಗೂ ಅವುಗಳಲ್ಲಿ 50 ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆ. ಪಶು ವೈದ್ಯ ಶಾಲೆಯನ್ನು ಅಲ್ಲಿ ಮಂಜೂರು ಮಾಡುವುದಕ್ಕೆ ಅನುಮತಿ ಕೊಟ್ಟಿದ್ದರೂ ಹಣದ ಕೊರತೆಯಿಂದಾಗಿ ಸ್ಥಾಪನೆ ಮಾಡುವುದಕ್ಕಾಗಲಿಲ್ಲ. ಈಗ ಸರ್ಕಾರದಲ್ಲಿ ಹಣವಿರುವುದರಿಂದ ಸ್ಥಾಪನೆ ಮಾಡುತ್ತೇವೆ.

ಸೇಡಂ ಕ್ಷೇತ್ರದ ಪಶುಚಿಕಿತ್ಸಾಲಯಗಳಿಗೆ ಔಷಧಿಗಳ ಸರಬರಾಜು.

103 (881) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992–93ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿರುವ ಎಲ್ಲಾ ಪಶುಚಿಕಿತ್ಸಾಲಯಗಳಿಗೆ ಸರಬರಾಜು ಮಾಡಿರುವ ಔಷಧಿಗಳ ಮೌಲ್ಯ ಎಷ್ಟು: (ಪಶುಚಿಕಿತ್ಸಾಲಯಗಳವಾರು ವಿವರ ನೀಡುವುದು):

ಆ. ಈ ಪಶುಚಿಕಿತ್ಸಾಲಯಗಳಲ್ಲಿ ದಿನಂಪ್ರತಿ ಜಾನುವಾರುಗಳಿಗೆ ರಾಜ್ಯಾದ್ಯಂತ ಔಷಧಿಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಇ. ಸಾಕಷ್ಟು ಔಷಧಿಗಳ ದಾಸ್ತಾನಿಲ್ಲದೆ ರೈತರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಈ. ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ. ರೂ. 1.60 ಲಕ್ಷಗಳು (ವಿವರಗಳನ್ನು ಲಗತ್ತಿಸಲಾಗಿದೆ).

ಆ. ಹೌದು.

ಇ. ಹೌದು.

ಈ. 1993–94ನೇ ಸಾಲಿಗೆ ಹೆಚ್ಚಿನ ಅನುದಾನವನ್ನು ಅಳವಡಿಸಿಕೊಂಡು, ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಬಸವಂತರೆಡ್ಡಿ ಮೋತಕಪಲ್ಲಿರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 881ಕ್ಕೆ ಅನುಬಂಧ:–

ಗುಲ್ಬರ್ಗ ಜಿಲ್ಲೆ ಸೇಡಂ ಕ್ಷೇತ್ರದಲ್ಲಿರುವ ಪಶು ಚಿಕಿತ್ಸಾ ಕೇಂದ್ರಗಳಿಗೆ 1992–93ನೇ ಸಾಲಿಗೆ ಮೊದಲನೇ ಅರ್ಧ ವಾರ್ಷಿಕದಲ್ಲಿ ಔಷಧಗಳನ್ನು ಸರಬರಾಜು ಮಾಡಲು ಖರ್ಚು ಮಾಡಲಿರುವ ಮೊತ್ತದ ವಿವರ ಈ ಕೆಳಕಂಡಂತಿದೆ:–

	ರೂ.
ಪಶು ಆಸ್ಪತ್ರೆ, ಸೇಡಂ	70,000–00
ಪಶು ಚಿಕಿತ್ಸಾಲಯ, ಲಿಖೇಡ	20,000–00
ಮೋತಕಪಲ್ಲಿ (ಫೆಬ್ರವರಿ 93ರಲ್ಲಿ ಪ್ರಾರಂಭಿಸಲಿದ್ದು ಒಬ್ಬ ಪಶುವೈದ್ಯ ಸಹಾಯಕ ಕೆಲಸ ನಿರ್ವಹಿಸುತ್ತಿದ್ದಾನೆ)	5,000–00
ಈ ಕೆಳಕಂಡ ಪ್ರಾಥಮಿಕ ಪಶು ಚಿಕಿತ್ಸಾಲಯಗಳಿಗೆ ಸರ್ಕಾರದ ಮಂಜೂರಾತಿ ದೊರೆತಿದ್ದು ಈಗ ಕಾರ್ಯ ನಿರ್ವಹಿಸುತ್ತಿವೆ.	
1. ಮುಧೋಳ	6,000–00
(ಒಬ್ಬ ಪಶುವೈದ್ಯ ಪರೀಕ್ಷಕರು, ಒಬ್ಬ ಪಶುವೈದ್ಯ ಸಹಾಯಕ ಹಾಗೂ 'ಡಿ' ಗ್ರೂಪ್ ನೌಕರರು ಕೆಲಸ ಮಾಡುತ್ತಿರುತ್ತಾರೆ)	
2. ಅಡಕಿ	6,000–00
(ಪಶುವೈದ್ಯ ಸಹಾಯಕರು ಮಾತ್ರ ಕೆಲಸ ನಿರ್ವಹಿಸುತ್ತಿರುತ್ತಾರೆ.)	

3. ಮಧನ	6,000–00
(ಪಶುವೈದ್ಯ ಸಹಾಯಕರು ಮಾತ್ರ, ಕಾರ್ಯನಿರ್ವಹಿಸುತ್ತಿರುತ್ತಾರೆ)	
4. ಕೋಡ್ಲಾ	6,000–00
(ಒಬ್ಬ ಪಶುವೈದ್ಯ ಪರೀಕ್ಷಕರು, ಒಬ್ಬ ಪಶುವೈದ್ಯ ಸಹಾಯಕ ಹಾಗೂ ಗ್ರೂಪ್ 'ಡಿ' ನೌಕರರು ಕೆಲಸ ಮಾಡುತ್ತಿರುತ್ತಾರೆ)	
5. ಕೋಲ್‌ಕುಂದಾ	6,000–00
(ಒಬ್ಬ ಪಶುವೈದ್ಯ ಸಹಾಯಕರು ಕೆಲಸ ಮಾಡುತ್ತಿರುತ್ತಾರೆ)	
6. ನಾದೇಪಲ್ಲಿ	6,000–00
(ಒಬ್ಬ ಪಶುವೈದ್ಯ ಸಹಾಯಕರು ಕೆಲಸ ನಿರ್ವಹಿಸುತ್ತಿರುತ್ತಾರೆ)	
ಈ ಕೆಳಕಂಡ ಪ್ರಾಥಮಿಕ ಪಶು ಚಿಕಿತ್ಸಾಲಯಗಳು ಜಿಲ್ಲಾ ಪರಿಷತ್‌ನಿಂದ ಮಂಜೂರಾತಿ ಪಡೆದು ಪ್ರಾರಂಭವಾಗಿದ್ದು ಇವುಗಳಿಗೆ ಸರ್ಕಾರದ ಮಂಜೂರಾತಿ ದೊರೆತಿರುವುದಿಲ್ಲ)	
1. ರಿಬ್ಬನ್‌ಪಲ್ಲಿ (ಒಬ್ಬ ಪಶುವೈದ್ಯ ಸಹಾಯಕರು ಕೆಲಸ ನಿರ್ವಹಿಸುತ್ತಿದ್ದಾರೆ)	6,000–00
2. ಕುರುಕುಂಟಾ (ಒಬ್ಬ ಪಶುವೈದ್ಯ ಸಹಾಯಕ ಹಾಗೂ ಒಬ್ಬ ಪಶುವೈದ್ಯ ಪರೀಕ್ಷಕ ಕೆಲಸ ನಿರ್ವಹಿಸುತ್ತಿದ್ದಾರೆ)	6,000–00
3. ರಂಜೋಳ (ಒಬ್ಬ ಪಶುವೈದ್ಯ ಸಹಾಯಕರು ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ)	6,000–00
4. ಕೆಲಗಡ್ಡ (ಒಬ್ಬ ಪಶುವೈದ್ಯ ಸಹಾಯಕರು ಮಾತ್ರ ಕೆಲಸ ನಿರ್ವಹಿಸುತ್ತಿದ್ದಾರೆ)	6,000–00
5. ಬಡೇಪಲ್ಲಿ	5,000–00

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ:– ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿರುವ ಸೇಡಂ ತಾಲ್ಲೂಕಿನ ಕ್ಷೇತ್ರದಲ್ಲಿರುವ ಎಲ್ಲಾ ಪಶು ಚಿಕಿತ್ಸಾಲಯಗಳಿಗೆ ಸರಬರಾಜು ಮಾಡಿರುವ ಔಷಧಗಳ ಮೌಲ್ಯ ಎಷ್ಟು ? ಎಂದು ಕೇಳಿದ್ದಕ್ಕೆ ಉತ್ತರವಾಗಿ 1.60 ಲಕ್ಷ ರೂಪಾಯಿಗಳೆಂದು ತಿಳಿಸಿದ್ದಾರೆ. ಎರಡನೆಯದಾಗಿ, ಈ ಪಶು ಚಿಕಿತ್ಸಾಲಯಗಳಲ್ಲಿ ದಿನಂಪ್ರತಿ ಜಾನುವಾರುಗಳಿಗೆ ರಾಜ್ಯಾದ್ಯಂತ ಔಷಧಿಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಎಂದಿದ್ದಕ್ಕೆ ಉತ್ತರವಾಗಿ 'ಹೌದು' ಎಂದು ಹೇಳಿದ್ದಾರೆ.

ಸಾಕಷ್ಟು ಔಷಧಿಗಳ ದಾಸ್ತಾನಿಲ್ಲದೆ ರೈತರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದಿದ್ದಕ್ಕೆ, ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಆ ಪ್ರಕಾರವಾಗಿ ಗ್ರಾಮಾಂತರ ಪ್ರದೇಶದಲ್ಲಿ ಜಾನುವಾರುಗಳಿಗೆ ಏನಾದರೂ ಖಾಯಿಲೆ ಬಂದರೆ ಅದನ್ನು ಪರಿಹರಿಸಲು ಪಶು ಚಿಕಿತ್ಸಾಲಯಗಳಲ್ಲಿ ಔಷಧಿಗಳು ಇಲ್ಲದಿದ್ದರೆ ಜಾನುವಾರುಗಳಿಗೆ ಮಾಡತಕ್ಕ ಚಿಕಿತ್ಸೆಯಾದರೂ ಏನು ? ಅಲ್ಲದೆ ಒಂದು ವೇಳೆ ದೊಡ್ಡ ನಗರಗಳಲ್ಲಿ ಔಷಧಿಗಳು ಸಿಕ್ಕಿದರೂ ಸಹ ಅಲ್ಲಿಗೆ ಹೋಗಿಬರುವ ಮತ್ತು ಔಷಧಿಗಳನ್ನು ಖರೀದಿ ಮಾಡಲು ನೂರಾರು ಬಡ ರೈತರ ಹತ್ತಿರ ಹಣವಿಲ್ಲದೆ ಅವರ ಜಾನುವಾರುಗಳಿಗೆ ಚಿಕಿತ್ಸೆ ಕೊಡಿಸಲು ಅನರ್ಹರಾಗಿದ್ದಾರೆ, ಇದರ ವ್ಯವಸ್ಥೆ ಮಾಡುವುದಕ್ಕೆ ಏನು ಮಾಡುತ್ತೀರಿ ? ಆ ಪಶು ಚಿಕಿತ್ಸಾಲಯವಿದ್ದೂ ಪ್ರಯೋಜನವೇನು ?

ಶ್ರೀ ಕೆ.ಎನ್. ನಾಗೇಗೌಡ:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕದ್ದು ಬಹಳಷ್ಟು ನಿಜ. ಪಶುವೈದ್ಯ ಚಿಕಿತ್ಸಾಲಯಗಳಲ್ಲಿ ಔಷಧಿಗಳ ಕೊರತೆಯು ಕಂಡುಬಂದುದರಿಂದ ಅದನ್ನು ಮನಗಂಡು ಈಗ ನೂರು ಪರ್ಸೆಂಟ್ ಹೆಚ್ಚು ಔಷಧಿಗಳನ್ನು ಕೊಳ್ಳಲು ಮಾಡಿದ್ದೇವೆ. 1992–93ರಲ್ಲಿ ಎರಡೂವರೆ ಕೋಟಿ ರೂಪಾಯಿಗಳ ಔಷಧಿಗಳನ್ನು ಕೊಂಡಿದ್ದರು. ಈಗ ಅಂದರೆ 1993–94ಕ್ಕೆ, ಬರುವ ವರ್ಷಕ್ಕೆ ಸುಮಾರು 5 ಕೋಟಿ ರೂಪಾಯಿಗಳ ಔಷಧಿಯನ್ನು ಕೊಂಡುಕೊಳ್ಳುತ್ತೇವೆ. ಇದರ ಬಗ್ಗೆ ನಮ್ಮ ಮಾನ್ಯ ಸದಸ್ಯರಾದ ಬಸವಂತರೆಡ್ಡಿಯವರು 5 ಕೋಟಿಗೂ ಸಾಕಾಗುವುದಿಲ್ಲ ಎಂದು ಕೇಳಿದ್ದಾರೆ, ಪರಿಸ್ಥಿತಿಯನ್ನು ಸುಧಾರಣೆ ಮಾಡುತ್ತೇನೆ ಮತ್ತು ಅದಕ್ಕೆ ಬೇಕಾದಷ್ಟು ಅಂದರೆ ನೂರು ಪರ್ಸೆಂಟ್ ಹೆಚ್ಚು ಮಾಡಿದ್ದೇವೆ ಎನ್ನತಕ್ಕದ್ದನ್ನು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್:– ಮಾನ್ಯ ನಾಗೇಗೌಡರು ಬಹಳ ಹಿರಿಯ ಸಚಿವರು. ಈ ರೀತಿ ಔಷಧಿಗಳು ಕಡಿಮೆ ಇರುವುದು ಅವರು ಎಂ.ಎಲ್.ಸಿ. ಆಗಿದ್ದಾಗ ಗೊತ್ತಾಯಿತೋ? ಅಥವಾ ಅವರು ಮಂತ್ರಿಗಳಾದ ಮೇಲೆ ಗೊತ್ತಾಯಿತೂ?

ಶ್ರೀ ಕೆ.ಎನ್. ನಾಗೇಗೌಡ:– ಅದೇನೇ ಇರಲಿ, ಸದಸ್ಯರು ಸದಸ್ಯರೇ, ಸರ್ಕಾರ ಸರ್ಕಾರವೆ, ಅವರು ಅವರವರ ಹಕ್ಕಿನೊಳಗೆ ಕೆಲಸ ಮಾಡುತ್ತಾರೆ, ಮಂತ್ರಿಯಾಗಿ ನಾನು ಸರ್ಕಾರದ ಕೆಳಗೆ ಕೆಲಸ ಮಾಡುತ್ತೇವೆ. ಆದರೆ ಒಂದು ಮಾತು ನಿಜ, ಸಾರ್ವಜನಿಕ ಜೀವನದಲ್ಲಿರತಕ್ಕ ನಾವುಗಳು ಆಸ್ಪತ್ರೆಯನ್ನು ನೋಡಿದ ಕಡೆ ಔಷಧಿಗಳು ಇರಲಿಲ್ಲ. ಅದನ್ನು ಮನಗಂಡು ನಾನು ಬಂದ ನಂತರ ಸರ್ಕಾರಕ್ಕೆ ಎರಡೂವರೆ ಕೋಟಿ ರೂಪಾಯಿಗಳ ಔಷಧಿ ಸಾಕಾಗುವುದಿಲ್ಲ 5 ಕೋಟಿ ಕೊಡಬೇಕೆಂದು ಹೇಳಿದೆ ಅದರಂತೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಜಾನುವಾರುಗಳನ್ನು ಆರೋಗ್ಯವನ್ನು ಸುಧಾರಣೆ ಮಾಡುತ್ತೇವೆ ಎಂಬುದನ್ನು ನಮ್ಮ ಸ್ನೇಹಿತರಿಗೆ ಹೇಳುತ್ತೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯಾಧಿಕಾರಿಗಳ ನೇಮಕ

106 (1037) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳೆಷ್ಟು;

ಆ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಇಲ್ಲದೆ ಇರುವುದರಿಂದ ಸಾರ್ವಜನಿಕ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಸರ್ಕಾರವು ಕೂಡಲೇ ಭರ್ತಿ ಮಾಡುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) 375

ಆ) ಬಂದಿದೆ.

ಇ) ಗ್ರಾಮಾಂತರ ಪ್ರದೇಶದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಅಕ್ಟೋಬರ್, 1992ರಲ್ಲಿ 380 ವೈದ್ಯಾಧಿಕಾರಿಗಳನ್ನು ನೇಮಕ ಮಾಡಿದ್ದು ಈ ಪೈಕಿ 288 ಮಂದಿ ಕೆಲಸಕ್ಕೆ ಹಾಜರಾಗಿರುತ್ತಾರೆ. ವೈದ್ಯರುಗಳು ಇಲ್ಲದ ಆಸ್ಪತ್ರೆಗಳಿಗೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ರಜೆ ಮೀಸಲು ವೈದ್ಯರುಗಳನ್ನು ಹಾಗೂ ಹೆಚ್ಚು ವೈದ್ಯರು ಇರುವ ಕಡೆಯಿಂದ ಖಾಲಿ ಇರುವ ಸ್ಥಳದಲ್ಲಿ ಪ್ರಭಾರದ ಮೇಲೆ ಕಾರ್ಯ ನಿರ್ವಹಿಸಲು ವೈದ್ಯರುಗಳನ್ನು ನೇಮಿಸಲಾಗಿದೆ.

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ......

ಸ್ನಾತಕೋತ್ತರ ವ್ಯಾಸಂಗಕ್ಕೆ ತೆರಳಿದ 122 ಸಹಾಯಕ ಶಸ್ತ್ರ ಚಿಕಿತ್ಸಕರುಗಳು, 1993ರ ಮಾರ್ಚ್ ತಿಂಗಳಲ್ಲಿ ತಮ್ಮ ವ್ಯಾಸಂಗವನ್ನು ಪೂರೈಸಿ ವಾಪಸ್ ಬರುವವರಿದ್ದು ಇವರಿಗೆ ನೇಮಕಾತಿ ಆದೇಶವನ್ನು ನೀಡುವಾಗ ಖಾಲಿ ಇರುವ ಹುದ್ದೆಗಳನ್ನು ಸಾಧ್ಯವಾದಷ್ಟು ಭರ್ತಿ ಮಾಡಲು ಹಾಗೂ ಬೇರೆ ವಿಧಾನಗಳಿಂದ ಈ ಹುದ್ದೆಗಳನ್ನು ತುಂಬಲು ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಸನ್ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಹೆಚ್ಚಿನ ಆರೋಗ್ಯ ಕೇಂದ್ರಗಳಲ್ಲಿ ಬಾಗಿಲನ್ನು ತೆರೆಯುವುದಿಲ್ಲ, ಏಕೆಂದರೆ ಇಡೀ ರಾಜ್ಯದಲ್ಲಿ ವೈದ್ಯಾಧಿಕಾರಿಗಳು ಇಲ್ಲ, ಇದರಿಂದ ಗ್ರಾಮಾಂತರದ ಸಾಮಾನ್ಯ ಜನರಿಗೆ ತೊಂದರೆಯಾಗಿದೆ, ಯಾವ ಔಷಧ ಇಲ್ಲ, ಚಿಕಿತ್ಸೆ ಇರುವುದಿಲ್ಲ, ಆರೋಗ್ಯ ಕೇಂದ್ರದ ಬಾಗಿಲನ್ನೇ ತೆರೆಯುವುದಿಲ್ಲ. ಇದರ ಬಗ್ಗೆ ನಾನು ಖಾಲಿ ಇರುವ ವೈದ್ಯರ ಹುದ್ದೆಗಳೆಷ್ಟು ಎಂದಿದ್ದರೆ ಇದಕ್ಕೆ 370 ಎಂದು ಹೇಳಿದ್ದಾರೆ. ಮೂರು ವರ್ಷಗಳಿಂದಲೂ ಕೂಡ ಅವುಗಳನ್ನು ಭರ್ತಿ ಮಾಡುತ್ತೇವೆಂದು ಸರ್ಕಾರದವರು ಆಶ್ವಾಸನೆಯನ್ನು ಕೊಡುತ್ತಿದ್ದಾರೆ ಆದರೆ ಇವತ್ತಿನವರೆಗೆ ಅದನ್ನು ಭರ್ತಿ ಮಾಡಿಲ್ಲ, ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ ಈ ಸಂದರ್ಭದಲ್ಲಿ ಈ ಹುದ್ದೆಗಳನ್ನು ನಿರ್ಧಿಷ್ಟವಾಗಿ ಯಾವಾಗ ಭರ್ತಿ ಮಾಡುತ್ತೀರಿ ಎನ್ನುವ ಬಗ್ಗೆ ಉತ್ತರ ಬೇಕಾಗುತ್ತದೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮುಖ್ಯಮಂತ್ರಿಗಳ ಪರವಾಗಿ):– ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ 380 ವೈದ್ಯರುಗಳನ್ನು ಗುತ್ತಿಗೆಯ ಆಧಾರದ ಮೇಲೆ ತೆಗೆದುಕೊಂಡಿದ್ದೆವು. ಅದರಲ್ಲಿ 288 ಜನರು ಕೆಲಸಕ್ಕೆ ಸೇರಿದ್ದಾರೆ. ಅದೇ ರೀತಿಯಲ್ಲಿ 122 ಪೋಸ್ಟ್ ಗ್ರಾಜ್ಯುಯೇಟ್ಸ್‌ನ್ನು ಈ ಮಾರ್ಚ್‌ನೊಳಗೆ ಎಲ್ಲೆಲ್ಲಿ ಹುದ್ದೆಗಳು ಖಾಲಿ ಇವೆ ಅಲ್ಲಿಗೆ ಭರ್ತಿ ಮಾಡುತ್ತೇವೆ ಮತ್ತು 92 ವೈದ್ಯರನ್ನು ಗುತ್ತಿಗೆಯ ಆಧಾರದ ಮೇಲೆ ಅವರಿಗೆ ನೇಮಕಾತಿಯನ್ನು ಮಾಡಬೇಕೆಂದು ಆದೇಶವನ್ನು ಹೊರಡಿಸಿದ್ದೇವೆ. ಇವೆಲ್ಲಾ ಸೇರಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೂ ವೈದ್ಯರನ್ನು ಭರ್ತಿ ಮಾಡುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಬೇಗನೆ ಎನ್ನತಕ್ಕದ್ದು ಬೇಡ. ನಿರ್ದಿಷ್ಟವಾದ ಉತ್ತರ ಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ರಾಜ್ಯದಲ್ಲಿ 370 ಪ್ರಾಥಮಿಕ ಕೇಂದ್ರಗಳಲ್ಲಿ ಡಾಕ್ಟರ್‌ಗಳಿಲ್ಲವೆಂದು ತಾವು ಹೇಳುತ್ತಿದ್ದೀರಿ; ಈ ವೈದ್ಯರನ್ನು ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ತೆಗೆದುಕೊಳ್ಳುತ್ತೀರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ 100 ದಿವಸದ ಕಾರ್ಯಕ್ರಮದಲ್ಲಿ ಈ ಎಲ್ಲಾ ಹುದ್ದೆಗಳನ್ನೂ ಭರ್ತಿ ಮಾಡುತ್ತೇವೆಂದು ತಾವು ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೀರಿ. ಅನೇಕ ಸಂದರ್ಭಗಳಲ್ಲಿ ಆಶ್ವಾಸನೆಗಳನ್ನು ಕೊಟ್ಟು ಹೇಳಿದ್ದೀರಿ. ದೊಡ್ಡ ದೊಡ್ಡ ಜನರಲ್ ಆಸ್ಪತ್ರೆಗಳಲ್ಲಿ ಇವತ್ತು ಡಾಕ್ಟರ್‌ಗಳಿಲ್ಲ. ತಾಲ್ಲೂಕು ಕೇಂದ್ರಗಳಲ್ಲಿ ಡಾಕ್ಟರ್‌ಗಳಿಲ್ಲ. ನಮ್ಮ ಶಿಕಾರಿಪುರದಲ್ಲಿ ಡಾಕ್ಟರ್‌ಗಳಿಲ್ಲವೆಂದು ಮಾನ್ಯ ಮಂತ್ರಿಗಳನ್ನು, ಮಾನ್ಯ ಮುಖ್ಯಮಂತ್ರಿಗಳನ್ನು ಅನೇಕ ಸಾರಿ ಕೇಳಿಕೊಂಡರೂ ಅಲ್ಲಿಗೆ ಡಾಕ್ಟರ್‌ಗಳನ್ನು ಪೋಸ್ಟ್ ಮಾಡಲಿಲ್ಲ. ಆದ್ದರಿಂದ ತಮ್ಮ 100 ದಿವಸದ ಕಾರ್ಯಕ್ರಮದೊಳಗೆ ಈ 370 ಪ್ರಾಥಮಿಕ ಕೇಂದ್ರಗಳಿಗೂ ಡಾಕ್ಟರ್‌ಗಳನ್ನು ಭರ್ತಿ ಮಾಡುತ್ತೀರೋ ಏನೋ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಬರುವ ಮಾರ್ಚ್ ತಿಂಗಳೊಳಗೆ 122 ಜನ ಡಾಕ್ಟರ್‌ಗಳು ಪೋಸ್ಟ್ ಗ್ರ್ಯಾಜುಯೇಷನ್‌ನ್ನು ಮುಗಿಸಿಕೊಂಡು ಬರುತ್ತಾರೆ. ಅವರನ್ನು ಖಾಲಿ ಹುದ್ದೆಗಳಿಗೆ ಭರ್ತಿ ಮಾಡುತ್ತೇವೆ. ಇದರ ಜೊತೆಗೆ 92 ಜನರನ್ನು ಕಂಟ್ರ್ಯಾಕ್ಟ್ ಬೇಸಿಸ್ ಮೇಲೆ ತೆಗೆದುಕೊಳ್ಳುತ್ತೇವೆ. ಇದನ್ನು ಹೊರತು ಪಡಿಸಿ 100 ಜನ ಡಾಕ್ಟರ್‌ಗಳ ಹುದ್ದೆಯನ್ನು ಆದಷ್ಟು ಬೇಗ ಭರ್ತಿ ಮಾಡುತ್ತೇವೆ.

LA-Vol-4 14

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಮುಖ್ಯಮಂತ್ರಿಗಳೇ ಘೋಷಣೆ ಮಾಡಿರುವ ಪ್ರಕಾರ 100 ದಿವಸದ ಕಾರ್ಯಕ್ರಮದೊಳಗೆ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದ್ದೀರಿ. ನಾನು ಈ ಸದನದಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. 100 ದಿವಸದ ಕಾರ್ಯಕ್ರಮದೊಳಗೆ ಈ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳ ಹುದ್ದೆಗಳನ್ನು ತುಂಬುತ್ತೀರಾ ? ಇದರ ಬಗ್ಗೆ ನಮಗೆ ಆಶ್ವಾಸನೆ ಕೊಡಬೇಕು. ತುಂಬುತ್ತೇವೆ, ಪರಿಶೀಲಿಸುತ್ತೇವೆ, ವಿಚಾರ ಮಾಡುತ್ತೇವೆ ಎಂದು ಉತ್ತರ ಹೇಳತಕ್ಕದ್ದು ಮಂತ್ರಿಗಳಿಗೆ ಅಥವಾ ಮುಖ್ಯಮಂತ್ರಿಗಳಿಗೆ ಸರಿಯಾದುದಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸದಸ್ಯರು ಕೇಳುವ ಎಲ್ಲ ಪ್ರಶ್ನೆಗಳಿಗೂ ಪರಿಶೀಲನೆ ಮಾಡುತ್ತೇವೆ, ಹೆಚ್ಚು ಮಾಡುವಂತೆ ಬರೆದಿದ್ದೇವೆ, ಪರಿಶೀಲಿಸುತ್ತೇವೆಂದು, ಇದು ಮುಖ್ಯಮಂತ್ರಿಗಳಿಗೆ ಬರುತ್ತದೆಂದು ಹೇಳುವುದಾದರೆ ಇದು ನನಗೆ ಅರ್ಥವಾಗುತ್ತಿಲ್ಲ. ಈ ರೀತಿ ಹೇಳುವುದಾದರೆ ಈ ಅಸೆಂಬ್ಲಿ ಏತಕ್ಕೆ ಬೇಕು ? ಇಲ್ಲಿ ನಾವು ಪ್ರಶ್ನೆಯನ್ನು ಕೇಳಿದಾಗ ನಮಗೆ ಖಚಿತವಾದ ಉತ್ತರ ಬೇಕು ? ಇಲ್ಲಿ ಉತ್ತರ ಕೊಡುವುದಕ್ಕೆ ಮುಂಚಿತವಾಗಿ ಮಾನ್ಯಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಮಾಲೋಚನೆ ನೋಡಿಕೊಂಡು ಬಂದು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:– ಇದು ಕೇವಲ ಭರವಸೆಯ ಸಚಿವಸಂಪುಟ ಎಂದು ಹೇಳುವುದಾದರೆ ಅದನ್ನಾದರೂ ಹೇಳಿ. ನಾವು ಕೇವಲ ಭರವಸೆಯನ್ನು ಕೊಡತಕ್ಕವರು ಎಂದಾದರೂ ಹೇಳಿ.

ಶ್ರೀ ಕೆ. ಸೋಮಪ್ಪ ಸುವರ್ಣ:– ಮಾನ್ಯ ಅಧ್ಯಕ್ಷರೆ, ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಡಾಕ್ಟರ್‌ಗಳನ್ನು ನೇಮಕಾತಿ ಮಾಡುವಾಗ ಕೇವಲ ಬೆಂಗಳೂರಿನಿಂದಲೇ ಅವರನ್ನು ಕಳುಹಿಸುವಂಥ ಸಂದರ್ಭವನ್ನು ನಾವು ಕಲ್ಪಿಸಿಕೊಡುತ್ತಿರುವುದರಿಂದ ಇವತ್ತು ಹಳ್ಳಿಗಾಡಿಗೆ ಯಾವ ಡಾಕ್ಟರ್‌ಗಳೂ ಬರುತ್ತಿಲ್ಲ. ಜಿಲ್ಲಾ ಮಟ್ಟದಲ್ಲಿ ಡಾಕ್ಟರ್‌ಗಳನ್ನು ಕಂಟ್ರ್ಯಾಕ್ಟ್ ಬೇಸಿಸ್ ಮೇಲೆ ನೇಮಕಾತಿ ಮಾಡಿದರೆ ಮಾತ್ರ ಡಾಕ್ಟರ್‌ಗಳು ಹಳ್ಳಿಗಳಿಗೆ ಬರುತ್ತಾರೆ. ಇಲ್ಲದೇ ಹೋದರೆ ಎಲ್ಲರೂ ಬೆಂಗಳೂರಿನಲ್ಲೇ ಸ್ಥಳವನ್ನು ಹುಡುಕುತ್ತಾ, ಅಲ್ಲೇ ಇರುವುದಕ್ಕೆ ಬಯಸುತ್ತಾರೆ. ಆದ್ದರಿಂದ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ನೇಮಕಾತಿಯನ್ನು ಮಾಡುವಾಗ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡತಕ್ಕದ್ದು ಸೂಕ್ತವೆಂದು ನನ್ನ ಅಭಿಪ್ರಾಯ.

ಶ್ರೀ ಕರಿಯಣ್ಣ:– ಮಾನ್ಯ ಅಧ್ಯಕ್ಷರೆ, 290 ಜನ ಪಿ.ಜಿ. ಡಾಕ್ಟರ್‌ಗಳು ವಾಪಸ್ಸು ಬರುತ್ತಾರೆ ಅವರನ್ನು ನೇಮಕಾತಿ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಅವರನ್ನು ತುಂಬಿದ ಮೇಲೆ ಮತ್ತೆ ಮುಂದಿನ ವರ್ಷ 290 ಜನ ಡಾಕ್ಟರ್‌ಗಳನ್ನು ಪಿ.ಜಿ. ಕೋರ್ಸಿಗೆ ಸರ್ಕಾರದಿಂದ ಕಳುಹಿಸಿಕೊಡುತ್ತಾರೆ. ಆಗ ಮತ್ತೆ 290 ಜನ ಡಾಕ್ಟರ್‌ಗಳ ಹುದ್ದೆ ಖಾಲಿ ಬೀಳುತ್ತವೆ. ಇದು ಪ್ರತಿವರ್ಷ ಹೀಗೇ ಆಗುತ್ತಿರುತ್ತದೆ. ಆದ್ದರಿಂದ ಅವರು ಬರುತ್ತಾರೆ, ಅವರನ್ನು ತುಂಬುತ್ತೇವೆ ಎಂದು ಹೇಳುವುದು ಬೇಡ. ಈಗ ಈ ಹುದ್ದೆಗಳನ್ನು ಖಾಯಂ ಆಗಿ ತುಂಬುವುದಕ್ಕೆ ಏನು ಮಾಡುತ್ತೀರೆಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಡಾಕ್ಟರ್‌ಗಳನ್ನು ಟ್ರಾನ್ಸ್‌ಫರ್ ಮಾಡಿದ ಕೂಡಲೇ ಅವರು ಹೊರಟುಹೋಗುತ್ತಾರೆ. ಆ ಜಾಗಗಳಿಗೆ ಕೂಡಲೇ ಡಾಕ್ಟರ್‌ಗಳನ್ನು ತುಂಬುವುದಿಲ್ಲ. ಆದ್ದರಿಂದ ಪ್ರಶ್ನೆ ಇಡೀ ರಾಜ್ಯದ ತುಂಬ ಇದೆ. ಇದನ್ನು ಬಗೆಹರಿಸುವ ದೃಷ್ಟಿ ಇರಬೇಕು. ಮಾನ್ಯ ಮುಖ್ಯಮಂತ್ರಿಗಳಾಗಿ ಮೊಯಿಲಿಯವರು ಅಧಿಕಾರಕ್ಕೆ ಬಂದಾಗಿನಿಂದಲೂ ಸರ್ಕಾರಕ್ಕೆ ಕಳಕಳಿ ಇದೆ ಎಂದು ತಾವು ಹೇಳಿದ್ದೀರಿ; ಸ್ಪೆಸಿಫಿಕ್ ಆಗಿ ಕೇಳಿದರೆ ಶೀಘ್ರವಾಗಿ ಪರಿಶೀಲಿಸುತ್ತೇವೆಂದು ಹೇಳುತ್ತಾರೆ. 100 ದಿನದ ಕಾರ್ಯಕ್ರಮದಲ್ಲಿ ಖಾಲಿ ಹುದ್ದೆಗಳನ್ನು ತುಂಬುತ್ತೇವೆಂದು ಹೇಳಿದರೆ ಎಲ್ಲಾ ಹಳ್ಳಿಗಳಲ್ಲೂ ಜನರು ತೃಪ್ತಿ ಪಡುತ್ತಾರೆ. 100 ದಿನ ಅಲ್ಲದಿದ್ದರೆ 110 ದಿನದಲ್ಲಿ ಭರ್ತಿ ಮಾಡುತ್ತೇವೆಂದು ನಿರ್ದಿಷ್ಟವಾಗಿ ಹೇಳಿದರೆ ನಾವೂ ಕೂಡ ನಮ್ಮ ನಮ್ಮ

ಹಳ್ಳಿಗಳಿಗೆ ಹೋದಾಗ ಇಷ್ಟು ದಿವಸದಲ್ಲಿ ಡಾಕ್ಟರ್‌ಗಳು ಬರುತ್ತಾರೆಂದು ಅಲ್ಲಿನ ಜನರಿಗೆ ಹೇಳಬಹುದು. ನಮಗೆ ಸ್ಪಷ್ಟವಾದ ಉತ್ತರಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಮಾನ್ಯ ಅಧ್ಯಕ್ಷರೆ, ಬಹಳಷ್ಟು ಕಾಲದಿಂದ ಡಾಕ್ಟರ್‌ಗಳ ಹುದ್ದೆಗಳು ಖಾಲಿ ಇದ್ದವು. ನಮಗೆ ಡಾಕ್ಟರ್‌ಗಳು ಸರಿಯಾಗಿ ಸಿಗದೆ ಇರುವಾಗ, ಖಾಲಿ ಹುದ್ದೆಗಳನ್ನು ತುಂಬುವಾಗ ನಮಗೆ ಬೆಂಗಳೂರು ಬೇಕು, ಮೈಸೂರು ಬೇಕು ಅಥವಾ ಅವರವರ ಮನೆಯ ಹತ್ತಿರ ಇರಬೇಕೆಂದು ಒತ್ತಡ ತರುತ್ತಾರೆ. ಈಗ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ 380 ಜನರನ್ನು ನೇಮಕ ಮಾಡಿದ್ದೇವೆ. ಅದೇ ರೀತಿ 375 ಖಾಲಿ ಹುದ್ದೆಗಳು ಇವೆ. ಅದರ ಜೊತೆಗೆ 122 ಜನ ಪಿ.ಜಿ. ಆದಂಥ ಡಾಕ್ಟರ್‌ಗಳನ್ನು ಸೇರಿಸುತ್ತೇವೆ. ಇಷ್ಟೇ ಅಲ್ಲದೆ ಈ ಹುದ್ದೆಗಳ ಜೊತೆಗೆ ಇನ್ನೂ 92 ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗ ತಾನೆ ಸರ್ಕಾರ ಆದೇಶವನ್ನು ಹೊರಡಿಸಿದೆ. ಹಳ್ಳಿಗಳಿಗೆ ಡಾಕ್ಟರ್‌ಗಳು ಬೇಕೆಂದು ನನಗೆ ಗೊತ್ತು.

ನಾವು ನೋಡಿದ ಹಾಗೆ ಕೆಲವು ಡಾಕ್ಟರುಗಳನ್ನು ಕೆಲವು ಆಸ್ಪತ್ರೆಗಳಿಗೆ ಇನ್ ಚಾರ್ಜ್ ಹಾಕುತ್ತಾರೆ. ಆ ಸಿಸ್ಟಮ್ ಏನಿದೆ ಅದನ್ನು ನಾವು ಇದುವರೆಗೆ ಮಾಡಿಲ್ಲ. ಇನ್ನು ಮುಂದೆ ಡಾಕ್ಟರುಗಳನ್ನೇ ಅಪಾಯಿಂಟ್ ಮಾಡುತ್ತೇವೆ. ಆದಷ್ಟು ಜಾಗ್ರತೆಯಾಗಿ 100 ಡಾಕ್ಟರುಗಳನ್ನು ಅಪಾಯಿಂಟ್ ಮಾಡಿ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ.

ಶಹಬಾದ್ ಪಟ್ಟಣದ ಆಸ್ಪತ್ರೆಯ ಮೇಲ್ದರ್ಜೇಕರಣ

107 (643) ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಬಾದ್ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಅಲ್ಲಿಯ ವೈದ್ಯರುಗಳ ಸಂಖ್ಯೆ ಎಷ್ಟು;

ಇ) ಶಹಾಬಾದ್ ಸರ್ಕಾರಿ ಆಸ್ಪತ್ರೆಗೆ ಆಂಬುಲೆನ್ಸ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈಗಲಾದರೂ ಆಂಬುಲೆನ್ಸ್ ಕೊಡಲಾಗುವುದೇ; ಮತ್ತು ಆ ಬಗ್ಗೆ ಸರ್ಕಾರದವರು ಕೈಗೊಂಡು ಕ್ರಮಗಳೇನು ?

ಶ್ರೀ ಎಂ.ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಹೌದು

ಆ) ಈ ಆಸ್ಪತ್ರೆಯನ್ನು ಮೇಲ್ದರ್ಜೇಗೇರಿಸುವ ಮೊದಲು ಮಂಜೂರಾದ ವೈದ್ಯರ ಸಂಖ್ಯೆ : 1 ಸಾರ್ವಜನಿಕ ಆಸ್ಪತ್ರೆಗೆ, ಆಸ್ಪತ್ರೆ, ಕಟ್ಟಡದ ಕೆಲಸ ನಡೆಯುತ್ತಿದೆ. ಇನ್ನು ಇಬ್ಬರು ವೈದ್ಯರುಗಳನ್ನು ನೇಮಿಸುವ ಅವಕಾಶವಿದೆ. ಸದ್ಯದಲ್ಲೆ ಇನ್ನಿಬ್ಬರು ವೈದ್ಯಾಧಿಕಾರಿಗಳನ್ನು ನೇಮಿಸಲಾಗುವುದು.

ಇ) ಬಂದಿದೆ.

ಈ) ಆಂಬುಲೆನ್ಸ್ ಒದಗಿಸಲು ಗುಲ್ಬರ್ಗ ಜಿಲ್ಲಾ ಪರಿಷತ್ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದಾಗ್ಯೂ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪರಿಷತ್‌ನ್ನು ಕೋರಲಾಗುವುದು.

ಶ್ರೀ ಬಾಬುರಾವ್ ಚವಾಣ್:– ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರದಲ್ಲಿ ಶಹಾಬಾದ್ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲಾಗಿದೆಯೇ ಎಂದು ಕೇಳಿದ್ದಕ್ಕೆ 'ಹೌದು'

ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಅಲ್ಲಿರುವ ವೈದ್ಯರುಗಳ ಸಂಖ್ಯೆ ಎಷ್ಟೆಂದರೆ 'ಒಂದಿದೆ' ಎಂದು ಹೇಳಿದ್ದಾರೆ. ಇನ್ನು ಇಬ್ಬರು ವೈದ್ಯರುಗಳು ಬೇಕು. ಸ್ವಾಮಿ ಈ ಇಬ್ಬರು ವೈದ್ಯರುಗಳನ್ನು ಯಾವಾಗ ಕೊಡುತ್ತೀರಿ ಎನ್ನುವುದಕ್ಕೆ ಸ್ಪಷ್ಟವಾದ ತಮ್ಮ ನಿಲುವನ್ನು ಹೇಳಿ. ಎರಡನೆಯದು ಶಹಾಬಾದ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಒಂದು ಆಂಬುಲೆನ್ಸ್ ಕೊಡುತ್ತೀರಾ ಎಂದು ಕೇಳಿರುವುದಕ್ಕೆ ಆಂಬುಲೆನ್ಸ್ ಕೊಡಲಿಕ್ಕೆ ಜಿಲ್ಲಾ ಪರಿಷತ್ತು ಗುಲ್ಬರ್ಗಾದವರಿಗೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಅದು ಆಗುವುದಿಲ್ಲ. ಆಂಬುಲೆನ್ಸ್‌ನ್ನು ಎಷ್ಟು ದಿವಸಗಳಲ್ಲಿ ಕೊಡುತ್ತೀರಿ. ಅದರ ಬಗ್ಗೆ ಖಚಿತವಾಗಿ ಹೇಳಬೇಕು. ಮತ್ತೆ ಇನ್ನು ಇಬ್ಬರು ಡಾಕ್ಟರುಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಎಷ್ಟು ದಿವಸಗಳಲ್ಲಿ ಕೊಡುತ್ತೀರಿ ? ಮೂರನೆಯದಾಗಿ ಗುಲ್ಬರ್ಗಾ, ಹೈದರಾಬಾದ್ – ಕರ್ನಾಟಕ ಭಾಗದ ಡಾಕ್ಟರುಗಳನ್ನೇ ಕೊಡಿ. ಈ ಭಾಗದವರು ಕೊಟ್ಟರೆ ಅವರು 10 ದಿವಸಗಳಲ್ಲಿಯೇ ಟ್ರಾನ್ಸ್‌ಫರ್ ಆಗುತ್ತಾರೆ. ಆದ್ದರಿಂದ ಈ ಮೂರು ಪ್ರಶ್ನೆಗಳಿಗೂ ನೇರವಾದ ಸ್ಪಷ್ಟವಾದ ಉತ್ತರವನ್ನು ಕೊಡಿ. ಇಷ್ಟು ದಿವಸಗಳಲ್ಲಿ ಕೊಡುತ್ತೇವೆನ್ನುವ ಮಾತನ್ನು ಖಚಿತವಾಗಿ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಮಾನ್ಯ ಅಧ್ಯಕ್ಷರೆ, ಶಹಾಬಾದ್ ಆಸ್ಪತ್ರೆ ಕಟ್ಟಡದ ಕೆಲಸ ಪೂರ್ತಿ ಆಗಿಲ್ಲ. ಆದಷ್ಟು ಬೇಗ ಈ ಆಸ್ಪತ್ರೆಗೆ ಇಬ್ಬರು ವೈದ್ಯರುಗಳನ್ನು ನೇಮಕ ಮಾಡುತ್ತೇವೆ. ಅದೇ ರೀತಿ ಆಂಬ್ಯುಲೆನ್ಸ್ ಕೇಳಿದ್ದಾರೆ. ಇದರ ಬಗ್ಗೆ ಜಿಲ್ಲಾ ಪರಿಷತ್ತಿನಿಂದ ಸರಕಾರಕ್ಕೆ ಪ್ರಪೋಸಲ್ ಬರಬೇಕು, ಅವರ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಬೇಕು, ಆಗ ಮಾತ್ರ ನಾವು ಮಂಜೂರು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಾಬುರಾವ್ ಚವಾಣ್:– ಆಸ್ಪತ್ರೆ ಕಟ್ಟಡ ನಾವು ಕೊಡುತ್ತೇವೆ. ಅಲ್ಲಿ ಸಮಸ್ಯೆ ಬಹಳ ಇದೆ. ಡಾಕ್ಟರುಗಳನ್ನು ಕೊಡುವ ವ್ಯವಸ್ಥೆ ಮೊದಲು ಮಾಡಿ. ಆ ಭಾಗದ ಡಾಕ್ಟರುಗಳನ್ನು ಕೊಡುವ ವ್ಯವಸ್ಥೆ ಮಾಡಿ, ತಾವು ನೇರವಾಗಿ ಉತ್ತರ ಹೇಳುತ್ತಿಲ್ಲ, ಆಂಬುಲೆನ್ಸ್ ಕೊಡಬೇಕೆಂದು ತಾವು ಡೈರೆಕ್ಷನ್ ಕೊಟ್ಟರೆ ಅವರು ಕೊಡುತ್ತಾರೆ. ಪ್ರಪೋಸಲ್ಸ್ ಕೊಡಬೇಕೆಂದರೆ ಆಗುವುದಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಮಾನ್ಯ ಅಧ್ಯಕ್ಷರೆ, ಈ ಆಸ್ಪತ್ರೆ ಜಿಲ್ಲಾ ಪರಿಷತ್ತಿನ ಅಧೀನದಲ್ಲಿದೆ, ಸರ್ಕಾರದ ಅಧೀನದಲ್ಲಿ ಇಲ್ಲ. ಅವರು ಆಂಬುಲೆನ್ಸ್ ಬೇಕೆಂದು ಪ್ರಪೋಸಲ್ ಮಾಡಿ ಸರ್ಕಾರಕ್ಕೆ ಮಂಜೂರಾತಿ ನೀಡುತ್ತದೆ. ಜಿಲ್ಲಾ ಪರಿಷತ್‌ನವರು ಆಂಬ್ಯುಲೆನ್ಸ್ ಬೇಕೆಂದು ಹೇಳಿ ಬಜೆಟ್ ಪ್ರಾವಿಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಸರ್ಕಾರ ಅದಕ್ಕೆ ಮಂಜೂರಾತಿಯನ್ನು ನೀಡುತ್ತದೆ. ಡಾಕ್ಟರುಗಳನ್ನು ಎಷ್ಟ ದಿವಸಗಳಲ್ಲಿ ಕೊಡುತ್ತೀರೆನ್ನುವ ಮಾತನ್ನು ಕೇಳುತ್ತಿದ್ದಾರೆ......

ಅಧ್ಯಕ್ಷರು:– ಮಾನ್ಯ ಚೌವಾಣ್‌ರವರೇ ಮಾನ್ಯ ಸಚಿವರು ಉತ್ತರವನ್ನು ಈಗಾಗಲೇ ಹೇಳಿದ್ದಾರೆ ತಾವು ಕುಳಿತುಕೊಳ್ಳಿ.

ಧಾರವಾಡ ಜಿಲ್ಲೆಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಖಾಲಿ ಹುದ್ದೆಗಳು

108 (324) ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):-

ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡು ಸರ್ಕಾರದಿಂದ ಮಂಜೂರಾತಿಗಾಗಿ ಕಳುಹಿಸಲಾಗಿದೆ;

ಆ) ಇವುಗಳ ಪೈಕಿ ಎಷ್ಟು ಹುದ್ದೆಗಳಿಗೆ ಸರ್ಕಾರವು ಮಂಜೂರಾತಿ ನೀಡಿರುವುದು;

ಇ) ಮಂಜೂರಾತಿ ನೀಡದೇ ಇರತಕ್ಕ ಹುದ್ದೆಗಳ ವಿವರ ಹಾಗೂ ನೀಡದೆ ಇರಲು ಕಾರಣಗಳನ್ನು ತಿಳಿಸುವುದು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಶಿಕ್ಷಣ ಸಚಿವರು):–

ಅ)	ಪ್ರೌಢಶಾಲೆಗಳು	– 226
	ಪ್ರಾಥಮಿಕ ಶಾಲೆಗಳು	– 50
	ಪದವಿ-ಪೂರ್ವಕಾಲೇಜು	– 23
	ತಾಂತ್ರಿಕ ಕಾಲೇಜು	– 01
	ಒಟ್ಟು	– 300
ಆ)	ಒಟ್ಟು	162
	ಪ್ರೌಢಶಾಲೆ	– 122
	ಪ್ರಾಥಮಿಕ ಶಾಲೆ	–13
	ಪದವಿ-ಪೂರ್ವ ಕಾಲೇಜು	–17
	ತಾಂತ್ರಿಕ ಕಾಲೇಜು	–10
ಇ)	ಒಟ್ಟು	151
	ಪ್ರೌಢಶಾಲಾ ಹುದ್ದೆಗಳು	–104
	ಪ್ರಾಥಮಿಕ ಶಾಲೆ ಹುದ್ದೆಗಳು-	27
	ಪದವಿ-ಪೂರ್ವ ಕಾಲೇಜು	–06
	ತಾಂತ್ರಿಕ ಕಾಲೇಜು	–04

ಸರ್ಕಾರದಲ್ಲಿ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿದ್ದು ಬಡ್ತಿಯಿಂದ ಹಾಗೂ ವರ್ಗಾವಣೆಯಿಂದ ತೆರವಾದ ಹುದ್ದೆಗಳನ್ನು ತುಂಬಲು ಅವಕಾಶವಿಲ್ಲದ ಕಾರಣ ಈ ಹುದ್ದೆಗಳನ್ನು ತುಂಬಲು ಸಾಧ್ಯವಾಗಿಲ್ಲ.

ಶ್ರೀ ಪಿ.ಸಿ. ಸಿದ್ದನಗೌಡರ್:– ಸನ್ಮಾನ್ಯ ಅಧ್ಯಕ್ಷರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಅಪ್ರೂವಲ್ ತೆಗೆದುಕೊಳ್ಳಬೇಕಾದರೆ ಬಹಳ ತಲೆನೋವು. ಉಳಿದ ಜಾಗಗಳನ್ನು ತುಂಬಲು ಎಷ್ಟು ದಿವಸಗಳಲ್ಲಿ ಮಂಜೂರಾತಿಯನ್ನು ಕೊಡುತ್ತೀರೆಂದು ಕೇಳುತ್ತಿದ್ದೇನೆ.

ಎರಡನೆಯದಾಗಿ, ಅನುದಾನ ಪಡೆಯತಕ್ಕ ಸಂಸ್ಥೆಗಳಿಗೆ ಮಂಜೂರಾತಿ ನೀಡುವಲ್ಲಿ ವಿಳಂಬ ಮಾಡುವುದರಿಂದ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದಷ್ಟು ಉಳಿದಂತೆ ಹುದ್ದೆಗಳನ್ನು ತೀವ್ರಗತಿಯಲ್ಲಿ ಕೊಡಬೇಕೆಂದು ಒತ್ತಾಯಿಸುತ್ತೇನೆ. ವರ್ಗಾವಣೆ ವಿಚಾರದಲ್ಲಿ ಹೇಳುವುದಾದರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರನ್ನು ವರ್ಗಾವಣೆ ಮಾಡುತ್ತಾರೆಂದು ಉತ್ತರ ಕೊಟ್ಟಿದ್ದಾರೆ. ನನ್ನ ತಿಳುವಳಿಕೆ ಪ್ರಕಾರ ಆ ಉತ್ತರ ಸರಿಯಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವರ್ಗಾವಣೆ ಬಹುತೇಕ ಆಗುವುದಿಲ್ಲ. ಇದರ ಬಗ್ಗೆ ಕೂಡ ತಾವು ಹೇಳಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಶಾಸಕರ ಕಳವಳ ಅರ್ಥವಾಗುತ್ತದೆ. ಹಳ್ಳಿಯ ಶಾಲೆಗಳಲ್ಲಿ ಅಧ್ಯಾಪಕರು ಇಲ್ಲವೆಂದರೆ ಆ ಶಾಲೆ ಇರುವುದರಿಂದಲೂ ಉಪಯೋಗವಾಗುವುದಿಲ್ಲ. ಆ ಶಾಲೆಗಳಿಗೆ ಅಧ್ಯಾಪಕರನ್ನು ಕೊಡಬೇಕಾಗುತ್ತದೆ. ಈಗಾಗಲೇ ಸಾಕಷ್ಟು ಅಧ್ಯಾಪಕರನ್ನು ನೇಮಿಸಿಕೊಂಡಿದ್ದೇವೆ. ಮುಂದಿನ ಏಪ್ರಿಲ್–ಮೇ ತಿಂಗಳಲ್ಲಿ 6812 ಮಂದಿ ಅಧ್ಯಾಪಕರನ್ನು ನೇಮಕ ಮಾಡುತ್ತಿದ್ದೇವೆ. ಹೈಸ್ಕೂಲ್‌ನಲ್ಲೂ ಮತ್ತು ಪ್ರೈಮರಿ ಶಾಲೆಗಳಲ್ಲೂ ಮಾಡುತ್ತಿದ್ದೇವೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ

ವರ್ಗಾವಣೆ ಆಗುವುದಿಲ್ಲವೆಂದು ಹೇಳುತ್ತಿದ್ದೀರಿ. ಅಲ್ಲಿಯೂ ಕೂಡ ವರ್ಗಾವಣೆ ಆಗುತ್ತದೆ. ಏಕೆಂದರೆ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ಅವರು ಬೇಕೆಂದು ಕೇಳುತ್ತಾರೆ. ಆಗ ಅವರು ಒಪ್ಪಿಗೆ ಕೊಡುತ್ತಾರೆ, ಅವರನ್ನು ತೆಗೆದುಕೊಳ್ಳುತ್ತಾರೆ. ಇಂಥ ಸ್ಥಾನಗಳು ಕೂಡ ಖಾಲಿ ಆಗುತ್ತವೆ. ಅವುಗಳನ್ನು ಇದುವರೆಗೆ ತುಂಬಿಲ್ಲ. ಮರಣದಿಂದ ಖಾಲಿಯಾದ ಸ್ಥಾನಗಳನ್ನು ತುಂಬಿದ್ದೇವೆ. ಉಳಿದದ್ದನ್ನು ತುಂಬುತ್ತೇವೆ. ರಾಜೀನಾಮೆ ಕೊಟ್ಟಿದ್ದರಿಂದ ಖಾಲಿಯಾದ ಸ್ಥಾನಗಳನ್ನು ತುಂಬುತ್ತೇವೆ. ಕೆಲವನ್ನು ಈಗಾಗಲೇ ತುಂಬಿದ್ದೇವೆ. ತಾವು ಬಹಳಷ್ಟು ಶಾಲೆಗಳಲ್ಲಿ ಅಧ್ಯಾಪಕರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೀರಿ, ಅವನ್ನು ತುಂಬುತ್ತೇವೆ. ಖಾಸಗಿ ಪ್ರೌಢಶಾಲೆಗಳಿಗೆ ಅನುದಾನ ಮಂಜೂರಾತಿ ಕೊಡುವುದರ ಬಗ್ಗೆ ಕೇಳಿದ್ದೀರಿ. ಮಂಜೂರಾತಿಯನ್ನು ಆದಷ್ಟು ಬೇಗ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದಷ್ಟು ಬೇಗನೆ ಎಂಬ ಶಬ್ದವನ್ನು ನಾನು ಬಹಳ ತೂಕದಿಂದ ಉಪಯೋಗ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಂತ್ರಿಮಂಡಲದಲ್ಲಿ ಬೇರೆಯವರು ಆ ಶಬ್ದವನ್ನು ತೂಕದಿಂದ ಉಪಯೋಗಿಸುವುದಿಲ್ಲವೆ ?

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಅದು ಅವರವರಿಗೆ ಸಂಬಂಧಪಟ್ಟಿದ್ದುದು. ಇದು ನನಗೆ ಸಂಬಂಧಪಟ್ಟಿದ್ದುದು. ನಾನು ತೂಕದಿಂದ ಆದಷ್ಟು ಬೇಗ ಅಂದರೆ ಬೇಗನೆ ಎಂದು ಹೇಳುತ್ತಿದ್ದೇನೆ. ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೋದಾಗ ಹೊಸ ಅಧ್ಯಾಪಕರನ್ನು ಕಾಣುತ್ತೀರಿ.

ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಕೊರತೆ

109 (1046) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):-

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದನ್ನು ಸರ್ಕಾರವು ಮನಗಂಡಿದೆಯೇ;

ಆ) ಹಾಗಿದ್ದಲ್ಲಿ ಈ ಕೊರತೆ ನಿವಾರಣೆಗೆ ಸರ್ಕಾರವು ಕೈಗೊಂಡ ಕ್ರಮವೇನು;

ಇ) ಅನೇಕ ಗ್ರಾಮಾಂತರ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಕಟ್ಟಡದ ಸೌಲಭ್ಯವಿಲ್ಲದೇ ಹಾಗೂ ಸಾಕಷ್ಟು ಕೊಠಡಿಗಳ ಕೊರತೆಯಿರುವುದನ್ನು ಸರ್ಕಾರ ಗಮನಿಸಿದೆಯೇ;

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಮನಗಂಡಿದೆ

ಆ) ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಪೈಕಿ 1356 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಇನ್ನು 6812 ಹುದ್ದೆಗಳನ್ನು ವಿಶೇಷ ನಿಯಮಾವಳಿಯಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ತೆರವಿರುವ 1405 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಬರುವ ಶೈಕ್ಷಣಿಕ ವರ್ಷದ ಪ್ರಾರಂಭದೊಳಗೆ ಭರ್ತಿ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುವುದು.

ಇ) ಗಮನಿಸಿದೆ.

ಶ್ರೀ ಎಂ.ಎಸ್. ಆತ್ಮಾನಂದ:– ಮಾನ್ಯ ಸಚಿವರ ಉತ್ತರದ ಪ್ರಕಾರ ಪ್ರಾಥಮಿಕ ಶಾಲಾ ಶಿಕ್ಷಕರ

ಕೊರತೆ ಸುಮಾರು 8168 ಹುದ್ದೆಗಳು ಇದ್ದು 1356 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆಂದು ಹೇಳಿದ್ದಾರೆ. ಉಳಿದ 6800 ಹುದ್ದೆಗಳನ್ನು ವಿಶೇಷ ನಿಯಮಾವಳಿ ಅಡಿಯಲ್ಲಿ ತುಂಬಲು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಆ ವಿಶೇಷ ನಿಯಮಾವಳಿ ಏನು ? ನಿರ್ದಿಷ್ಟವಾಗಿ ಈ 1356 ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ? ಅದಕ್ಕೆ ಒಂದು ಕಾಲ ನಿಗಧಿ ಮಾಡಿ ಹೇಳಬೇಕೆಂದು ಹೇಳುತ್ತಾ, ಪ್ರೌಢಶಾಲಾ ಶಿಕ್ಷಕರನ್ನು ತುಂಬಲು ಪ್ರಯತ್ನ ಮಾಡಲಾಗುವುದು ಎಂದು ಹೇಳಿದ್ದೀರಿ. ಸದನದಲ್ಲಿ ಅನೇಕ ಸಾರಿ ಶಿಕ್ಷಕರ ಕೊರತೆ ಬಗ್ಗೆ ಅನೇಕ ಪ್ರಶ್ನೆಗಳು ಬಂದಿದ್ದರೂ ಪ್ರಯತ್ನದ ಹಂತದಲ್ಲಿದೆ ಎಂದು ಉತ್ತರ ಬರುತ್ತಿದೆ. ಈಗ ಶೈಕ್ಷಣಿಕ ವರ್ಷ ಮುಗಿದು ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಸಮಯ ಇದು. ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಮಾನ್ಯ ಸದಸ್ಯರು ಹೇಳಿದ ಹಾಗೆ 1356 ಹುದ್ದೆಗಳು ಅಂದರೆ ಅವನ್ನು ಹಿಂದೆಯೇ ರೆಕ್ರೂಟ್ ಮಾಡಿಕೊಂಡಿದ್ದೆವು. ಆ ರೀತಿ ರೆಕ್ರೂಟ್‌ಮೆಂಟ್ ಮಾಡಿದಾಗ ಅಲ್ಲಿ ವೆಯಿಟಿಂಗ್ ಲಿಸ್ಟ್ ಮಾಡಿದ್ದರು. ಆ ಲಿಸ್ಟ್‌ನಲ್ಲಿ ಕೆಲವೊಂದು ಖಾಲಿ ಇದ್ದ ಹುದ್ದೆಗಳನ್ನು ಅಂದರೆ 1356 ಹುದ್ದೆಗಳನ್ನು ವೆಯಿಟಿಂಗ್ ಲಿಸ್ಟ್‌ನಿಂದ ತುಂಬಿಕೊಳ್ಳುವುದಕ್ಕೆ ಸಂಬಂಧಪಟ್ಟ ಜಾಯಿಂಟ್ ಡೈರೆಕ್ಟರಿಗೆ ಈಗಾಗಲೇ ತಿಳಿಸಿದ್ದೇವೆ. 1356 ಹುದ್ದೆಗಳು ವೆಯಿಟಿಂಗ್ ಲಿಸ್ಟ್‌ನಲ್ಲಿ ಇದ್ದವು. 6812 ಹುದ್ದೆಗಳು ಏನಿವೆ ಇವನ್ನು ನಾವು ಸ್ಪೆಷಲ್-ಆೆಕ್ರೂಟ್‌ಮೆಂಟ್ ಅಂದರೆ 29ವರ್ಷಕ್ಕಿಂತ ಮೇಲ್ಪಟ್ಟವರಿಗೆ ಎಸ್.ಸಿ., ಎಸ್.ಟಿ., 45 ವರ್ಷದವರೆಗೆ ಅವಕಾಶ ಮಾಡಿ ಸಧ್ಯದಲ್ಲಿ ತುಂಬುವುದಕ್ಕೆ ಈಗಾಗಲೇ ಕಾರ್ಯಕ್ರಮ ನಡೆದಿದೆ. ಸದ್ಯದಲ್ಲಿಯೇ ಅವನ್ನು ತುಂಬುತ್ತಿದ್ದೇವೆ. ಹೊಸ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಹೊಸ ಅಧ್ಯಾಪಕರನ್ನು ಕಾಣುತ್ತೀರಿ. ಅದಕ್ಕಿಂತಲೂ ಮೊದಲೇ ಈ ಕೆಲಸ ಪ್ರಾರಂಭ ಮಾಡಿದ್ದೇವೆ. ಏಪ್ರಿಲ್-ಮೇ ತಿಂಗಳಲ್ಲಿ ಜೂನ್ ಅಷ್ಟು ಹೊತ್ತಿಗೆ 6812ಅಧ್ಯಾಪಕರನ್ನು ಕೊಡುತ್ತೇವೆ.

ಶ್ರೀ ಕರಿಯಣ್ಣ:– ಕನ್ನಡ ಉಪಾಧ್ಯಾಯರನ್ನು ತುಂಬುತ್ತಿದ್ದೀರಿ. ಉರ್ದು ಶಾಲೆಗಳ ಉಪಾಧ್ಯಾಯರ ಬಗ್ಗೆ ತಾವು ಇಂಟರ್‌ವ್ಯೂ ಮಾಡುವುದಿಲ್ಲ. ಅವರನ್ನು ತಾವು ತುಂಬುವುದೂ ಇಲ್ಲ. ಹೀಗಿದ್ದರೆ ತಾವು ಉರ್ದು ಶಾಲೆಗಳನ್ನು ಮುಚ್ಚಿ. ಇಲ್ಲದಿದ್ದರೆ ತಾವು ಏನು ಮಾಡುತ್ತೀರಿ ಎಂದು ಹೇಳಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಉರ್ದು ಶಾಲೆಗಳಲ್ಲಿ ಕನ್ನಡ ಅಧ್ಯಾಪಕರ ಕೊರತೆ ಇದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಅದನ್ನೂ ಕೂಡ 6,812 ಜನರನ್ನು ತುಂಬುವಾಗ ಅಲ್ಲಿ ಎಷ್ಟು ಜಾಗ ಖಾಲಿ ಇದೆಯೋ ಅಲ್ಲಿ ಇವರನ್ನು ತುಂಬುತ್ತೇವೆ. ಉರ್ದು ಟೀಚರ್ಸ್‌ನ್ನು ಸಹ ಮುಂದಿನ ರೆಕ್ರೂಟ್‌ಮೆಂಟ್‌ನಲ್ಲಿ ತುಂಬುತ್ತೇವೆ.

ಶ್ರೀಮತಿ ಮೋಟಮ್ಮ:– ಈಗಾಗಲೇ ಸಾಕಷ್ಟು ಶಿಕ್ಷಕರ ಕೊರತೆ ಇದ್ದು ನಮ್ಮ ಹೈಸ್ಕೂಲು ಮತ್ತು ಜೂನಿಯರ್ ಕಾಲೇಜುಗಳಲ್ಲಿನ ಮಕ್ಕಳ ಭವಿಷ್ಯ ಹಾಳಾಗುತ್ತಿದೆ. ತಾವು ಮಾರ್ಚಿ, ಏಪ್ರಿಲ್ ಎಂದು ಹೇಳುತ್ತಿದ್ದೀರಿ. ತಾವು ಶಿಕ್ಷಕರನ್ನು ತುಂಬದೇ, ಸಂಬಂಧಪಟ್ಟ ಶಿಕ್ಷಕರು ಹಾಜರು ಆಗದೇ ಪಾಠ ಪ್ರವಚನಗಳು ಆಗುತ್ತಿಲ್ಲ. ಅದರಲ್ಲೂ ಮಲೆನಾಡಿನಲ್ಲಿ ಇಲ್ಲವೇ ಇಲ್ಲ. ಹೀಗಾಗಿ ಹಾಳಾಗುತ್ತಿರುವ ಮಕ್ಕಳ ಮುಂದಿನ ಸ್ಥಿತಿಯನ್ನು ಅರ್ಥ ಮಾಡಿಕೊಂಡು ಇನ್ನು ಮುಂದೆ ಆದರೂ ಇಂತಹ ಒಂದು ಅಧೋಗತಿಯ ಸನ್ನಿವೇಶ ಸೃಷ್ಟಿ ಆಗದ ಹಾಗೆ ಎಷ್ಟು ದಿವಸದಲ್ಲಿ ಹುದ್ದೆಗಳನ್ನು ಭರ್ತಿ ಮಾಡಿ ಕೊರತೆಯನ್ನು ನೀಗಿಸುತ್ತೀರಾ ಎಂದು ಹೇಳಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ. ಹೊಸ ಶೈಕ್ಷಣಿಕ ವರ್ಷದಲ್ಲಿ ಹೊಸ ಅಧ್ಯಾಪಕರನ್ನು ನಿಮ್ಮ ನಿಮ್ಮ ಶಾಲೆಗಳಲ್ಲಿ ನೋಡುತ್ತೀರಿ ಎಂದು. ಮಾನ್ಯ ಮೋಟಮ್ಮನವರು ಮೇಲಿಂದ ಮೇಲೆ ಜೂನಿಯರ್ ಕಾಲೇಜುಗಳ ಲೆಕ್ಚರರ್ಸ್ ಬಗ್ಗೆ ಹೇಳುತ್ತಿರುತ್ತಾರೆ. ಅದನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಇಲ್ಲಿ ಪ್ರಶ್ನೆ ಮಾಡಿದ್ದಾರೆ. ಈಗಾಗಲೇ ಲೆಕ್ಚರರ್ಸ್ ಸೆಲೆಕ್ಷನ್ ಆಗಿದೆ.

ಲಿಸ್ಟ್‌ನ್ನು ಪಬ್ಲಿಷ್ ಮಾಡಿದ್ದೇವೆ. ಆದರೆ, ಪೋಲೀಸ್ ರಿಪೋರ್ಟ್ ಮತ್ತು ಇನ್‌ಕಮ್ ರಿಪೋರ್ಟ್ ಬರಬೇಕಾಗುತ್ತದೆ. ಇದು ಒಂದು ಪ್ರೊಸೀಜರ್. ಇದರ ಪ್ರಕಾರ ವರದಿ ಬಂದ ಮೇಲೆ ಅವರನ್ನು ಕೂಡ ಪೋಸ್ಟಿಂಗ್ ಮಾಡುವುದು ಮಾತ್ರ ಇದೆ. ರಿಪೋರ್ಟ್ ಬಂದ ಕೂಡಲೇ ನಾವು ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ:– ಗ್ರಾಮಾಂತರ ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಲ್ಲಿ ಕಟ್ಟಡದ ಕೊರತೆ ಇದೆ ಎನ್ನುವುದು ಸರ್ಕಾರದ ಗಮನಕ್ಕ ಬಂದಿದೆ ಎಂದು ಹೇಳಿದ್ದೀರಿ. ಕಟ್ಟಡದ ಕೊರತೆ ನೀಗುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ? ಗ್ರಾಮಾಂತರ ಪ್ರದೇಶ ಹಾಗೂ ನಗರ ಪ್ರದೇಶದಲ್ಲಿ ಶಾಲೆಗಳ ರಿಪೇರಿ, ಮೇಂಟೆನೆನ್ಸ್ ಕೆಲಸ ವ್ಯವಸ್ಥಿತವಾಗಿ ಆಗುತ್ತಾ ಇಲ್ಲ. ಶಾಲೆಗಳ ನಿರ್ಮಾಣ ಮತ್ತು ರಿಪೇರಿ ಕೆಲಸಕ್ಕೆ ವಾರ್ಷಿಕವಾಗಿ ಸರ್ಕಾರ ಏನು ನಿಗದಿ ಮಾಡಿದೆ ಅದರಂತೆ ಖರ್ಚು ಮಾಡುತ್ತಿಲ್ಲ. ಈ ಬಗ್ಗೆ ಸರ್ಕಾರ ಗಮನ ಕೊಡಬೇಕು.

ಡಾ|| ಹೆಗ್ಗಪ್ಪ ಡಿ. ಲಮಾಣಿ:– ಮಾನ್ಯ ಅಧ್ಯಕ್ಷರೆ, ಹೈಸ್ಕೂಲು, ಪ್ರೈಮರಿ ಶಾಲೆಗಳು ಜಿಲ್ಲಾಪರಿಷತ್ತಿಗೆ ಬರುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯಲ್ಲಿ ಕಟ್ಟಬೇಕಾಗುತ್ತದೆ. ಕಟ್ಟಡ ಇಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಕೆಲವೊಂದು ಜಿಲ್ಲಾಪರಿಷತ್ತಿನವರು ಹೈಸ್ಕೂಲು ಮಂಜೂರು ಮಾಡಿದರು. ಸರ್ಕಾರದವರು ಸರ್ಕಾರಿ ಹೈಸ್ಕೂಲು ಮಂಜೂಗು ಮಾಡಿದರು. ಇಂತಹ ಸಮಸ್ಯೆಗಳು ಬರುವುದು ಸ್ವಾಭಾವಿಕ. ನಮ್ಮ ಸರ್ಕಾರದ ಜವಾಬ್ದಾರಿ ಇರುತ್ತದೆ. ಜಿಲ್ಲಾ ಪರಿಷತ್ತಿನವರಿಗೆ ಹೇಳಿ ಅವರ ಬಡ್ಜೆಟ್‌ನಲ್ಲಿ ಶಾಲೆಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡುತ್ತೇವೆ.

ರಾಜ್ಯದಲ್ಲಿ ಕೋಳಿಮರಿ ಉತ್ಪಾದನಾ ಉದ್ಯಮಗಳ ಸಂಖ್ಯೆ

110 (30) ಶ್ರೀ ಕೆ. ಹರ್ಷಕುಮಾರ ಗೌಡ(ಚಾಮರಾಜ):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಹ್ಯಾಚರೀಸ್ (ಕೋಳಿ ಮರಿ ಉತ್ಪಾದನೆ ಉದ್ಯಮಗಳೆಷ್ಟು);

ಆ) ಅವುಗಳಲ್ಲಿ, ಸ್ವದೇಶೀಯ ಸಂಸ್ಥೆಗಳೆಷ್ಟು, ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳೆಷ್ಟು;

ಇ) ಈ ಸಂಸ್ಥೆಗಳ ಮೇಲೆ ರಾಜ್ಯ ಸರಕಾರಿ ಹೊಂದಿರುವ ಹತೋಟಿ ಏನು;

ಈ) ಪ್ರತಿ ಹ್ಯಾಚರಿ ನಡೆಸುವ ವಾರ್ಷಿಕ ಅಂದಾಜು ವ್ಯವಹಾರ ಎಷ್ಟು?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) 21

ಆ) ಸ್ವದೇಶೀಯ –21
ವಿದೇಶೀಯ – ಇಲ್ಲ

ಇ) ಸದ್ಯಕ್ಕೆ ಯಾವ ಹತೋಟಿ ಇರುವುದಿಲ್ಲ.

ಈ) ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.

ಅನುಬಂಧ:

ಹ್ಯಾಚರಿ ನಡೆಸುವ ವಾರ್ಷಿಕ ಅಂದಾಜು ವ್ಯವಹಾರಗಳ ಪಟ್ಟಿ ಖಾಸಗಿ ಸಂಸ್ಥೆ

1. ಆಕಾಶ ಹ್ಯಾಚರಿಸ್	33,00,000
2. ಬೆಂಗಳೂರು ಬೇಸಿಕ್ ಬ್ರೀಡರ್	1,61,00,000
3. ಚಾಮುಂಡಿ ಹ್ಯಾಚರೀಸ್	6,00,000
4. ಡೀಜೇ ಹ್ಯಾಚರೀಸ್	4,73,00,000
5. ಇಂಡಿಯಾ ಪೌಲ್ಟ್ರಿ ಫಾರಂ	5,41,00,000
6. ಸೌತ್ ವೆಸ್ಟ್ ಪೌಲ್ಟ್ರಿ ಹ್ಯಾಚರೀಸ್	72,00,000
7. ತ್ರಿಪ್ತಿ ಪೌಲ್ಟ್ರಿ ಬ್ರೀಡಿಂಗ್ ಫಾರಂ	16,00,000
8. ವೆಂಕಟೇಶ್ವರ ಹ್ಯಾಚರಿಸ್	68,00,000
9. ಕೋಮಲ ಹ್ಯಾಚರಿಸ್	66,00,000
10. ಕೋಟೇಶ್ವರ ಹ್ಯಾಚರಿಸ್	2,00,000
11. ದಕ್ಷಿನ್ ಕೆಗ್ಸ್	82,00,000
12. ಸಂಡೂರ್ ಹ್ಯಾಚರಿಸ್	40,00,000
13. ವೀನಸ್ ಹ್ಯಾಚರಿಸ್	42,56,000
14. ಮೈಸೂರು ಹ್ಯಾಚರಿಸ್	80,000

ಸರ್ಕಾರಿ ಸಂಸ್ಥೆ

15. ಕೇಂದ್ರೀಯ ಕುಕ್ಕುಟ ತಳಿ ಅಭಿವೃದ್ಧಿ ಕ್ಷೇತ್ರ, ಹೆಸರಘಟ್ಟ	6,54,000
16. ರಾಜ್ಯ ಕುಕ್ಕುಟ ಅಭಿವೃದ್ಧಿ ಕ್ಷೇತ್ರ ಹೆಸರಘಟ್ಟ	16,70,000
17. ಪ್ರಾದೇಶಿಕ ಕುಕ್ಕುಟ ಕ್ಷೇತ್ರ, ಗಂಗಾವತಿ	25,000
18. ಪ್ರಾದೇಶಿಕ ಕುಕ್ಕುಟ ಕ್ಷೇತ್ರ, ಮಳವಳ್ಳಿ	97,000
19. ಮಾದರಿ ಕುಕ್ಕುಟ ಸಮೀಕ್ಷೆ ಯೋಜನೆ, ಹೆಸರಘಟ್ಟ	1,32,000
20. ಪ್ರಾದೇಶಿಕ ಕುಕ್ಕುಟ ಕ್ಷೇತ್ರ, ಹಾವೇರಿ	1,50,000
21. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು	9,50,000

ಶ್ರೀ ಕೆ. ಹರ್ಷಕುಮಾರ ಗೌಡ:– ಮಾನ್ಯ ಅಧ್ಯಕ್ಷರೇ, ಹ್ಯಾಚರೀಸ್ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನನ್ನ ಎರಡನೆಯ ಪ್ರಶ್ನೆಗೆ ಸ್ವದೇಶೀಯ ಉದ್ಯಮಗಳು 21 ಇದ್ದು, ವಿದೇಶೀಯ ಹ್ಯಾಚರೀಸ್ ಇಲ್ಲ ಎಂದಿದ್ದಾರೆ. ಮೂರನೆಯ ಪ್ರಶ್ನೆಗೆ ಈ ಸಂಸ್ಥೆಗಳ ಮೇಲೆ ಸಧ್ಯಕ್ಕೆ ಯಾವ ಹತೋಟಿ ಇರುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ.

ನಾನಾದರೂ ಕೂಡ ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಶ್ನೆ ಕೇಳುತ್ತೇನೆ. ಸ್ವದೇಶಿ ಮುಖವಾಡದ ಹೆಸರಿನಲ್ಲಿ ಇಂಡಿಯನ್ ಕಂಪನೀಸ್ ಆಕ್ಟ್ ಪ್ರಕಾರ ವಿದೇಶಿ ಕಂಪನಿಗಳು ಅವು ದಂಥೆ

ನಡೆಸುತ್ತಿವೆ. ಈಸ್ಟ್ ಇಂಡಿಯಾ ಕಂಪನಿಯವರು ಈ ದೇಶಕ್ಕೆ ವ್ಯಾಪಾರಕ್ಕೆಂದು ಬಂದು ರಾಜ್ಯವನ್ನು ಹಿಡಿದಿದ್ದರು. ಅದೇ ರೀತಿ ಉದ್ಯಮದಲ್ಲಿ ಅವರು ವಿದೇಶಿ ಕಂಪನಿಗಳು ಸ್ವದೇಶಿ ಮುಖವಾಡದಲ್ಲಿ ಉದ್ಯಮ ನಡೆಸುತ್ತಿವೆ. ಉತ್ತರದಲ್ಲಿ ಹೇಳಿರುವಂತೆ ಅವರ ವಾರ್ಷಿಕ ಅಂದಾಜು ವ್ಯವಹಾರ ಎಷ್ಟು ನಡೆಸುತ್ತಾರೆಂದು ಪ್ರಶ್ನೆ ಕೇಳಿದರೆ, ಈ ಸಂಸ್ಥೆಗಳು ಖಾಸಗಿ ಸಂಸ್ಥೆಗಳು ಸುಮಾರು 15 ಕೋಟಿ ರೂಪಾಯಿ ಲೆಕ್ಕ ಕೊಟ್ಟಿರುತ್ತಾರೆಂದು ಹೇಳಿದ್ದಾರೆ. ಲೆಕ್ಕವಿಲ್ಲದೆ ಎಷ್ಟು ಮಾಡುತ್ತಾರೋ ಗೊತ್ತಿಲ್ಲ.

ಅಧ್ಯಕ್ಷರು:– ಮಾನ್ಯ ಸದಸ್ಯರು ಉಪಪ್ರಶ್ನೆ ಕೇಳಿ.

ಶ್ರೀ ಕೆ. ಹರ್ಷಕುಮಾರ್ ಗೌಡ:– ಜೊತೆಗೆ ಸರ್ಕಾರಿ ಸಂಸ್ಥೆಗಳು ಕೇವಲ 36 ಲಕ್ಷ ರೂಪಾಯಿಗಳ ವ್ಯವಹಾರ ನಡೆಸುತ್ತಿವೆ. ಇದಕ್ಕೆ ಕಾರಣವೇನು ? ಮಾನ್ಯ ಮಂತ್ರಿಗಳು ಈಗಾಗಲೇ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಸಮರ್ಥರು ಇದ್ದೀರಿ, ಒಳ್ಳೆಯ ಚಿಂತನೆಯನ್ನು ಇಟ್ಟುಕೊಂಡು ಉತ್ಸಾಹ ಹಂಬಲದಿಂದ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. ಯಾವ ರೀತಿಯ ಹತೋಟಿಯನ್ನು ಹಾಕುತ್ತೀರಿ ಈ ಸಂಸ್ಥೆಗಳ ಮೇಲೆ. ಡೆಂಕಲ್ ಹೆಸರಿನಲ್ಲಿ ಈ ರಾಷ್ಟ್ರದಲ್ಲಿ ಅಂಡರ್ ಡೆವಲೆಪ್‌ಮೆಂಟ್ ಕಂಟ್ರೀಸ್‌ಗಳನ್ನು ಅವರು ಹತೋಟಿಯಲ್ಲಿ ಹಿಡಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲೂ ಆಗುತ್ತಿದೆ.

ಅಧ್ಯಕ್ಷರು:– ಮಾನ್ಯ ಸದಸ್ಯರು ಕನ್ಸೈಸ್ ಮಾಡಿ ಪ್ರಶ್ನೆ ಕೇಳಿ.

ಶ್ರೀ ಕೆ. ಹರ್ಷಕುಮಾರ ಗೌಡ:– ಇಡೀ ರಾಜ್ಯದಲ್ಲಿ ಉದ್ಯಮದಾರರು ಏನಿದ್ದಾರೆ ಅವರ ಶೋಷಣೆಯಾಗುತ್ತಿರುವುದನ್ನು ಹೇಗೆ ತಪ್ಪಿಸುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಸ್ವದೇಶಿ ಸಂಸ್ಥೆಗಳು 21. ಇದು ನಮಗೆ ಮಾಹಿತಿ ಕೊಟ್ಟಿರತಕ್ಕದ್ದು. ಅದು ಆದ ಮೇಲೆ ನಾನು ಅಧಿಕಾರಿಗಳನ್ನು ಕೇಳಿದೆ ನನಗೆ ಗೊತ್ತಿರುವ ಒಂದು ಸಂಸ್ಥೆಯೇ ಇಲ್ಲವೆಂದು ಹೇಳಿದೆ. 8 ಮಾಹಿತಿ ಕೊಟ್ಟಿಲ್ಲವೆಂದು ಈಗ ತಾನೇ ತಂದುಕೊಟ್ಟಿದ್ದಾರೆ. ಅಲ್ಲಿಗೆ 21 ಪ್ಲಸ್ 8 ಒಟ್ಟು 29 ಖಾಸಗಿ ಸಂಸ್ಥೆಗಳು, 7 ಸರ್ಕಾರೀ ಹ್ಯಾಚರಿಗಳಲ್ಲಿ ಸುಮಾರು 180 ಲಕ್ಷ ಕೋಳಿಮರಿಗಳು ವರ್ಷಕ್ಕೆ ಉತ್ಪಾದನೆಯಾಗುತ್ತದೆ. ಅದು ಇನ್ನು ಎರಡು ಎರಡೂವರೆ ಕೋಟಿ ಆಗಬಹುದು. ಅವರು 15 ಕೋಟಿ ಎಂದು ಹೇಳಿದರು. ಈ ಅಡಿಷನಲ್ ಇನ್‌ಫರ್ಮೇಶನ್ ನೋಡಿದರೆ 25 ಕೋಟಿ ವ್ಯವಹಾರ ಇದೆ. ಇದರ ಮೇಲೆ ಹಿಡಿತವಿಲ್ಲ, ಇದರ ಬಗ್ಗೆ ಯಾವ ವಿಧವಾದ ಸಂಶಯ ಬೇಕಾಗಿಲ್ಲ, ಯಾವಾಗ ಸರ್ಕಾರದ ಹಿಡಿತ ಇರುವುದಿಲ್ಲವೋ, ಖಾಸಗಿಯವರ ಹತ್ತಿರ ಮಾಹಿತಿ ಇರುವುದಿಲ್ಲ, ಅಂದಾಜು ವಹಿವಾಟು ಇಷ್ಟಿದೆಯೆಂದು ಕಳ್ಳ ಲೆಕ್ಕ ಸುಳ್ಳುಲೆಕ್ಕ ಇಟ್ಟುಕೊಂಡು ಹೇಳಿರುತ್ತಾರೆ. 1988ರಲ್ಲಿ ಒಂದು ಆಕ್ಟ್ ಇತ್ತು. ಕರ್ನಾಟಕ ಎಸೆನ್ಷಿಯಲ್ ಕಂಟ್ರೋಲ್ ಆಕ್ಟ್ ಪ್ರಕಾರ 1988ರಿಂದ 1990ರವರೆಗೆ ಅದರ ಕ್ವಾಲಿಟಿ ನೋಡಿಕೊಳ್ಳತಕ್ಕದ್ದು ಹ್ಯಾಚರಿ ಮತ್ತು ಎಗ್ ಪ್ರೊಡಕ್ಷನ್ ಕಮರ್ಷಿಯಲ್ ಎಗ್ ಸೇರಿಕೊಂಡು ಆಕ್ಟ್ ಇತ್ತು. ಅದು 1990ಕ್ಕೆ ಲ್ಯಾಪ್ಸ್ ಆಯಿತು. 1990ರಿಂದ 1993ರವರೆಗೆ ಏನೂ ಇಲ್ಲ. ನಾನು ಈಗಾಗಲೇ ಲಾ ಸೆಕ್ರೆಟರಿಯವರ ಹತ್ತಿರ ಮಾತನಾಡಿದ್ದೇನೆ. ಕರ್ನಾಟಕ ಎಸೆನ್ಷಿಯಲ್ ಕಂಟ್ರೋಲ್ ಆಕ್ಟ್‌ನ್ನು ಈ ಸದನ ಮುಗಿಯುವುದರೊಳಗೆ ಮಾರ್ಚಿ 31ರೊಳಗೆ ಸಭೆಯ ಮುಂದೆ ಮಂಡಿಸುತ್ತೇನೆ.

ANNOUNCEMENT

Mr. Speaker:– I welcome the Brazilian Parlimentary Delegation who are witnessing the Assembly Proceedings from the Speaker's gallery, on behalf of this House.

(ಚಪ್ಪಾಳೆ ತಟ್ಟಿ ಸ್ವಾಗತಿಸಿದರು)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹರ್ಷಕುಮಾರ ಗೌಡ:- ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಸ್ವಾಗತ. ಕಾರ್ಪೊರೇಷನ್‌ನಲ್ಲಿ ಲೈಸೆನ್ಸ್ ತೆಗೆದುಕೊಂಡು ಸುಮಾರು ಮೂರು ವರ್ಷಗಳಿಂದ ಬಹಳಷ್ಟು ಶೋಷಣೆ ಮಾಡುವಂತಹ ಈ ಸಂಸ್ಥೆಗಳಿಗೆ ಇಡೀ ರಾಜ್ಯದ ರೈತ ಸಮುದಾಯವನ್ನು ಶೋಷಣೆ ಮಾಡುವಂತಹ ಈ ಸಂಸ್ಥೆಗಳನ್ನು ಲಂಗು ಲಗಾಮು ಇಲ್ಲದೆ ಬಿಟ್ಟಿರುವುದನ್ನು ನೋಡಿದರೆ ಇಲಾಖೆಯವರ ಸಹಭಾಗಿತ್ವ ಇದೆಯೆಂದು ಕಾಣಿಸುತ್ತಿದೆ. ಮಂತ್ರಿಗಳು ಹೇಳಿದ ಪ್ರಕಾರ ಇಲ್ಲಿ ಯಾವುದೇ ಮಾಹಿತಿ ಇಲ್ಲ. ಕಳೆದ ಮೂರು ವರ್ಷಗಳಿಂದ ಯಾವುದೇ ಹತೋಟಿ ಇಲ್ಲ. ಯಾವುದೇ ರೀತಿಯ ನಿರ್ಬಂಧವಿಲ್ಲದೆ ಇರುವುದನ್ನು ನೋಡಿದರೆ ಯಾವ ರೀತಿ ಶೋಷಣೆ ಮಾಡಬಹುದು, ಎಷ್ಟರಮಟ್ಟಿಗೆ ಶೋಷಣೆಯಾಗಬಹುದು, ಅದನ್ನು ಯಾವಾಗ ತಪ್ಪಿಸುತ್ತೀರಿ ?

ಶ್ರೀ ಕೆ.ಎನ್. ನಾಗೇಗೌಡ:- ನಾನು ಈಗಾಗಲೇ ಹೇಳಿದ್ದೇನೆ. ಅದಕ್ಕೆ ಶಾಸನ ಬೇಕು. ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಬೇರೆ ಇದೆ. ಅಲ್ಲಿ ಬಿಟ್ಟಿರುವುದನ್ನು ನಮ್ಮ ಕರ್ನಾಟಕ ಆಕ್ಟ್‌ನೊಳಗಡೆ ತರುವುದಕ್ಕೆ ಅಧಿಕಾರವಿದೆ. ಅದರ ಪ್ರಕಾರ 1988ರಲ್ಲಿ ಬಂದ ಆಕ್ಟ್ 1990ರವರೆಗೆ ಇತ್ತು. ಮತ್ತೆ ಅದು ಲ್ಯಾಪ್ಸ್ ಆಗಿದೆ. 1993ರಲ್ಲಿ ಸದನದ ಮುಂದೆ ಬಂದಿದೆ ಅದನ್ನು ಪ್ರೆಸ್ ಮಾಡದಿರುವುದರಿಂದ ಅದು ಲ್ಯಾಪ್ಸ್ ಆಗಿದೆ. ಲಾ ಸೆಕ್ರೆಟರಿಯವರ ಹತ್ತಿರ ಮಾತನಾಡಿ ಸದನದಲ್ಲಿ ಇಡಬೇಕೆಂದು ಹೇಳಿದ್ದೇನೆ.

ಅದರಲ್ಲಿ ಲೈಸೆನ್ಸಿಂಗ್ ಅಥಾರಿಟಿ ಬರುತ್ತದೆ, ಕ್ವಾಲಿಟಿ ಅಥಾರಿಟಿ ಬರುತ್ತದೆ. ಅದರಲ್ಲಿ ಎಲ್ಲಾ ಕಂಟ್ರೋಲಿಂಗ್ ಬರುತ್ತದೆ. ಯಾವುದು ಸರಿ, ಯಾವುದು ಸರಿಯಲ್ಲವೆಂದು ಪರಿಶೀಲನೆ ಮಾಡುವುದಕ್ಕೆ ಈ ಸದನ ಕಾಯಿದೆ ಮಾಡಿಕೊಟ್ಟಿದೆ ನಾನು ನಿರ್ದಾಕ್ಷಿಣ್ಯವಾಗಿ ಕಾಯಿದೆಯನ್ನು ಇಂಪ್ಲಿಮೆಂಟ್ ಮಾಡಿ ಎಲ್ಲಿ exploitation ಇದೆ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಮಾನ್ಯ ಪಶುಸಂಗೋಪನಾ ಇಲಾಖೆಯ ಮಂತ್ರಿಯವರನ್ನು ವಿನಂತಿ ಮಾಡುವುದು ಏನೆಂದರೆ, ಸಧ್ಯಕ್ಕೆ ಯಾವ ಹತೋಟಿಯು ಇಲ್ಲವೆಂದು ಹೇಳಿದ್ದಾರೆ. ನಾವು ಎಷ್ಟು ಅಪಾಯದ ಪರಿಸ್ಥಿತಿಯಲ್ಲಿ ಇದ್ದೇನೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೋಸ್ಕರ ನಾನು ಎದ್ದು ನಿಂತಿದ್ದೇನೆ. ಇದರ ಒಂದು ಪ್ರತಿಯನ್ನು ಮಂತ್ರಿಗಳಿಗೆ ಕಳಿಸಿಕೊಟ್ಟಿದ್ದೇನೆ. ಇನ್ನೊಂದನ್ನು ತಮಗೆ ಕಳಿಸುತ್ತಿದ್ದೇನೆ. ನಾನು ಒಂದು ಪ್ಯಾರಾಗ್ರಾಫ್‌ನ್ನು ಮಾರ್ಕ್ ಮಾಡಿದ್ದೇನೆ. ಅದು ತಮ್ಮ ಕೈಗೆ ಬಂದ ಮೇಲೆ ನಾನು ಮಾತನ್ನು ಪ್ರಾರಂಭ ಮಾಡುತ್ತೇನೆ. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುವುದು, ತಾವು ಕೊಟ್ಟಿರುವ 21 ಸಂಸ್ಥೆಗಳ ಪಟ್ಟಿಯಲ್ಲಿ ಎಷ್ಟು ಸಂಸ್ಥೆಗಳು Indian Companies Act ನಲ್ಲಿ ನೋಂದಾವಣೆ ಮಾಡಿಕೊಂಡಿವೆ ? ಮತ್ತೆ ಎಷ್ಟು ಸಂಸ್ಥೆಗಳು Multi National Corporations ಜೊತೆಯಲ್ಲಿ Collaboration ಮಾಡಿಕೊಂಡಿವೆ ? ಈ ಮಾಹಿತಿ ಬೇಕು. ಏತಕ್ಕೆಂದರೆ ಯಾವ ರೀತಿ ತಳಿಯನ್ನು ಇಲ್ಲಿ ನಮ್ಮ ದೇಶದೊಳಗೆ ಬಿಡುತ್ತಾರೆ ಎಂದರೆ ಅದಕ್ಕೆ ಅವರೇ ತಯಾರು ಮಾಡುವಂಥ ಚಿಕನ್ ಫೀಡ್‌ನ್ನೇ ಹಾಕಿ ಬೆಳೆಸಬೇಕಾಗುತ್ತದೆ. ಅವರ ಚಿಕನ್ ಫೀಡ್‌ನಲ್ಲಿ ಏನು ಬರುತ್ತದೆ ಎನ್ನುವುದನ್ನು ಈ ಒಂದು menu card ಯಾವ ಡಿನ್ನರಿಗೆ ಸಂಬಂಧಪಟ್ಟಿದ್ದುದು ಎಂದರೆ menu for men, Washington Council where chicken was served. Washington Council on International Trade, Dinner honoring AMBASSADOR RUFUS H YERXA,

U.S. Respresentative to the General Agreement on Tariffs and Trade (GATT)and Deputy U.S. Trade Representative. This Dinner was held on Tuesday, February 4, 1992 at the Sheraton Hotel, Seattle, Washington. Here, chicken was served. One of the items was Baked Chicken Breast with Pernod Cream, 'Pernod Cream' ಇದರಲ್ಲಿ ಏನಿದೆ ಎಂದು ವಿಶ್ಲೇಷಣೆ ಮಾಡಿ chemical analysis ತಜ್ಞರು ಹೇಳಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. Imported Chicken, unfortunately fed a grain treated with Dieldrin, a pesticide currently banned in the U.S. The entree is embellished with a Cream Sauce having 3 times the Endrin levels currently allowed by FDA action hresholds. The dish may also have residues of the following for which.....

ಅಧ್ಯಕ್ಷರು:– ಇದು ಪ್ರಶ್ನೋತ್ತರ ಕಾಲ. ಪರಿಪೂರ್ಣ ಮಾಹಿತಿ ಕೊಡಬೇಕಾದರೆ ಇದು ಚರ್ಚೆಗೆ ಬಂದೇ ಬರುತ್ತದೆ. ಆಗ ಸಂಪೂರ್ಣವಾಗಿ ಹೇಳುತ್ತಾರೆ. ತಾವು ಈಗ ಸ್ವಲ್ಪದರಲ್ಲಿ ಹೇಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಇದರ ಸೀರಿಯೆಸ್‌ನೆಸ್ ಪೇಪರ್‌ನಲ್ಲಿ ಬರಲಿ ಎಂದು ಆಷ್ಟೆ. I will take just one more minute and complete. The dish may also have residues of the following for which there are no comparable U.S. standards: Bendiocarb, Bromophos – ethyl, Chlormequat, Deltamethrin, Edifenphos, Etrimfos, Fenitrothion, Methamidophos, Phenthoate, Phoxim Pirimicarb, Prochlaraz, Propoxur.

ಇಷ್ಟು ವಿಷಯಗಳು ನಮ್ಮ ಟೇಬಲ್ ಮೇಲೆ ಬರುತ್ತವೆ. ಈ ಬಗ್ಗೆ ನನಗೆ ಮಂತ್ರಿಗಳಿಂದ ಆಶ್ವಾಸನೆ ಬೇಕು. ನಮ್ಮ ರಾಜ್ಯದ ಮಟ್ಟಿಗೆ ಅವರಿಗೆ ಅಧಿಕಾರ ಇದೆ. ಅಕಸ್ಮಾತ್ ಇದು ಏನಾದರೂ ನಮ್ಮ ರಾಜ್ಯದ ಒಳಗಡೆ ಬಹುರಾಷ್ಟ್ರೀಯ ಸಂಸ್ಥೆಗಳಿಂದ ಬಂದಿದ್ದರೆ ಅದನ್ನು ಆದಷ್ಟು ಬೇಗನೆ ಉಚ್ಚಾಟನೆ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ಮಂತ್ರಿಗಳಿಂದ ನಿರೀಕ್ಷಣೆ ಮಾಡುತ್ತೇನೆ.

SRI K.N. NAGE GOWDA:– Multi National Organisations ಇವೆಯೇ ಎನ್ನತಕ್ಕದ್ದು, Indian Companies Act ಪ್ರಕಾರ..... ಇದೆಯೇ ಎಂದು ಕೇಳಿದ್ದಾರೆ. ಸದ್ಯಕ್ಕೆ ಯಾವುದೇ ಅಂತಹ ವಿದೇಶಿ ಸಂಸ್ಥೆ ಇಲ್ಲ. ಎರಡನೆಯದ್ದು, ಅವರು expert opinion ಎಂದು ಕೇಳಿದ್ದಾರೆ. ಇದರ ಬಗ್ಗೆ ಒಂದು ಆಶ್ವಾಸನೆ ಹೇಳಬಹುದು. Chemical analysisಗೆ ಕಳಿಸೋಣ. ಹಾಗೆ ಕಳಿಸಿದರೆ ಇಲ್ಲಿ poison ಇದೆಯೇ ಎಂದು ಗೊತ್ತಾಗುತ್ತದೆ. Certainly we can ask for taking licence under this Act. ನಾವು ಏನು ಆ್ಯಕ್ಟ್ ಮಾಡುತ್ತೇವೆ, ಅದರೊಳಗೆ ಇದನ್ನು ರದ್ದು ಮಾಡುವುದಕ್ಕೆ ಮಾಡೋಣ. Even we can write to the Food Department. Otherwise, ಬೇಡ, ನಮ್ಮ ಡಿಪಾರ್ಟ್‌ಮೆಂಟ್‌ನಲ್ಲೇ ಮಾಡಬೇಕೆಂದರೆ ಮಾಡೋಣ.

ಶ್ರೀ ಎನ್. ಚಿಕ್ಕೇಗೌಡ:– ವಿದೇಶಿ ಕಂಪನಿಗಳು, ಇಂಡಿಯನ್ ಕಂಪನಿ ಆಕ್ಟ್ ಪ್ರಕಾರ, ಇವು ಹುಲಿವೇಶದ ಕತ್ತೆಗಳು. ಕಾರಣ ಈ ಬಹು ರಾಷ್ಟ್ರೀಯ ಕಂಪನಿಗಳು ಕಾರ್ಗಿಲ್, ಡಂಕಲ್ ವಗ್ಗೆರೆ, ರಾಷ್ಟ್ರೀಯ ಬಿತ್ತನೆ ಬೀಜ, ರೈತರಿಗೆ ಒದಗಿಸತಕ್ಕಂಥವು ಬಹಳ ಶೋಷಣೆ ಮಾಡಿ, ಈಗಾಗಲೇ ಅವುಗಳ ಬಗ್ಗೆ ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಬಹಳ ಚರ್ಚೆಯಾಗಿದೆ. ಇವರು ಕೊಟ್ಟಿರತಕ್ಕ 21 ಹೆಚ್.ಡಿ. ಇವೆ, ಇವು ಹೊರದೇಶದ ಕಂಪನಿಗಳು. ನನಗೆ ಗೊತ್ತಿದೆ, ಇವೆಲ್ಲಾ ನೋಡಿದ್ದೇವೆ. ಡಂಕಲ್ ಅಲ್ಲ. ಇಲ್ಲಿ ಹೇಳಿರತಕ್ಕ ......

Sri K.N. Nage Gowda:- The best method is, Essential ಆಕ್ಟನ್ನು ನಾವು ತೆಗೆದುಕೊಂಡು ಬರುತ್ತೇವೆ. ನಾನು ಹೇಳಿದ್ದೇನೆ, ಮಾರ್ಚಿ 31 ರೊಳಗೆ ಕಾಯಿದೆ ತೆಗೆದುಕೊಂಡು ಬಂದು ನಾವೇ ಮಾಡುತ್ತೇವೆ ಎಂದು ಹೇಳಿದ್ದೇನೆ. ಆ ಕಾಯಿದೆ ನೀವು ಮಾಡಿ ಕೊಟ್ಟ ಮೇಲೆ, ನಾವು ಖಂಡಿತವಾಗಿಯೂ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಮೂಡಬಿದ್ರಿಯ ಸರ್ಕಾರಿ ಪ್ರೌಢಶಾಲಾ ಕಟ್ಟಡದ ನಿರ್ಮಾಣ

111 (321) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರಿ):-

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಬಿದ್ರಿಯ ಸರ್ಕಾರಿ ಪ್ರೌಢಶಾಲೆ ಪ್ರಾರಂಭಗೊಂಡು ಎಷ್ಟು ವರ್ಷಗಳಾದವು;

ಆ) ಈ ವಿದ್ಯಾಲಯವನ್ನು ಯಾವ ಕಟ್ಟಡದಲ್ಲಿ ನಡೆಸಲಾಗುತ್ತಿದೆ;

ಇ) ಈ ಕಟ್ಟಡದಲ್ಲಿ ಶಾಲೆಯನ್ನು ನಡೆಸಲು ಅಸಾಧ್ಯವಾಗಿದ್ದು, ಸ್ವಂತ ಕಟ್ಟಡದ ರಚನೆಗೆ ಸರ್ಕಾರ ಏನು ಕಾರ್ಯಕ್ರಮ ಕೈಗೊಂಡಿದೆ;

ಈ) ಮುಂದಿನ ವರ್ಷದಲ್ಲಿ ಈ ಕಟ್ಟಡದ ನಿರ್ಮಾಣಕ್ಕೆ ಸರ್ಕಾರವು ಹಣ ಒದಗಿಸುವುದೇ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):-

ಅ) 1984 ರಲ್ಲಿ ಪ್ರಾರಂಭಗೊಂಡಿರುತ್ತದೆ.

ಆ) ದಿನಾಂಕ: 14-11-92ರಿಂದ ಹೊಸದಾಗಿ ನಿರ್ಮಿಸಿದ 3 ಕೊಠಡಿಗಳಿರುವ ಸರ್ಕಾರಿ ಕಟ್ಟಡದಲ್ಲಿ ನಡೆಯುತ್ತಿದೆ.

ಇ) 6 ಕೊಠಡಿಗಳಿರುವ ಸರ್ಕಾರಿ ಕಟ್ಟಡವನ್ನು ನಿರ್ಮಿಸಲಾಗುತ್ತಿದ್ದು, ಇದರಲ್ಲಿ 3 ಕೊಠಡಿಗಳ ನಿರ್ಮಾಣವು ಪ್ರಗತಿಯಲ್ಲಿದೆ.

ಈ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅಗತ್ಯತೆ ಇದ್ದಲ್ಲಿ ಹೆಚ್ಚುವರಿ ಕೊಠಡಿಗಳರಿ ನಿರ್ಮಾಣಕ್ಕೆ ಹಣ ಒದಗಿಸುವುದರ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಅಧ್ಯಕ್ಷರೇ, ಮೂಡಬಿದ್ರೆಯ ಪ್ರೌಢಶಾಲೆಗೆ ಮೂರು ಕೊಠಡಿಗಳನ್ನು ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದರು, ಕೊಟ್ಟದ್ದು ಮಾತ್ರ ಒಂದೇ. ಆ ಶಾಲೆ ಒಂದು ಸಮಾಜ ಮಂದಿರದಲ್ಲಿ ನಡೆಯುತ್ತಾ ಇದ್ದು, ಮದುವೆಯಾಗುವಾಗ, ಅಲ್ಲಿ ಬ್ಯಾಂಡ್‌ನ ಶಬ್ದ ದಿಬ್ಬಣ ಬರುವಾಗ, ಹತ್ತೂವರೆ ಗಂಟೆಗೆ ಮಕ್ಕಳು ಶಾಲೆಯಿಂದ ಹೊರಗೆ ನಡೆದು, ಬ್ಯಾಗನ್ನು ಹಿಡಿದು ಪೇಟೆಯಲ್ಲಿ ಹೋಗುವಂಥ ಪರಿಸ್ಥಿತಿ ಇತ್ತು. ಆ ಶಾಲೆಗೆ ಊರಿನವರು 4 ಕೋಣೆಗಳನ್ನು ಕೊಟ್ಟರೆ, ಸರ್ಕಾರದವರು 2 ಕೋಣೆಗಳನ್ನು ಕೊಡುತ್ತೇವೆಂದು ಹೇಳಿದ್ದರು. ಊರಿನವರು 4 ಕೋಣೆಗಳನ್ನುಕಟ್ಟಿದರು. ಆದರೆ, ಸರ್ಕಾರದಿಂದ ಒಂದು ಕೋಣೆಗೆ ಮಾತ್ರ ಹಣ ಬಂತು. ಉಳಿದ ಒಂದು ಕೋಣೆಗೆ ಕಳೆದ ಒಂದು ವರ್ಷದಿಂದ ಬಾರದೆ ಅದಕ್ಕೆ ಕಿಟಕಿ, ಬಾಗಿಲುಗಳಿಲ್ಲದೆ, ಆ ಶಾಲೆಗೆ ಇನ್ನೂ ಸಹ ಪ್ರವೇಶ ಮಾಡಲಿಕ್ಕೆ ಆಗಲಿಲ್ಲ. ಕಡೆಗೆ ಅಲ್ಲಿನ ಸಮಾಜ ಮಂದಿರದವರು ಈ ಮಕ್ಕಳನ್ನು ಬಸ್ ಸ್ಟ್ಯಾಂಡಿನ ಹತ್ತಿರ ಇರತಕ್ಕ ಮಾಳಿಗೆ ಕರೆದುಕೊಂಡು ಹೋದರು. ಆದರೆ ಅಲ್ಲಿ ಪಾಠ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳ, ಉಪಾಧ್ಯಾಯರು, ಮಕ್ಕಳು ಗಲಾಟೆ ಮಾಡಿದರು. ನಾವು ಕಿಟಕಿ, ಬಾಗಿಲು ಇಲ್ಲದಂಥ ಶಾಲೆಗೆ ಆ ಮಕ್ಕಳನ್ನು ಕರೆದುಕೊಂಡು ಹೋಗಬೇಕಾಗಿದೆ. ಅದರಿಂದ, ತಾವು ಭರವಸೆ

ಕೊಟ್ಟಂತೆ ಎರಡು ಕೋಣೆಗಳಲ್ಲಿ ಒಂದು ಕೋಣೆಗೆ 50 ಸಾವಿರ ಕೊಟ್ಟಿದ್ದೀರಿ, ಇನ್ನು 50 ಸಾವಿರ ಬರಬೇಕು. ಆ ಹಣವನ್ನು ಕೊಟ್ಟರೆ ಅದು ಪರಿಪೂರ್ಣವಾಗುತ್ತದೆ. ಇದರ ಬಗ್ಗೆ ತಾವು ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಸನ್ಮಾನ್ಯ ಅಧ್ಯಕ್ಷರೇ, ಈ ಮೂಡಬಿದರೆಯ ಸರ್ಕಾರಿ ಪ್ರೌಢಶಾಲೆಯು 1974ರಲ್ಲಿ ಪ್ರಾರಂಭವಾಯಿತು. ಮುಂದೆ 14–11–92ರವರೆಗೆ ಅದು ಒಂದು ಖಾಸಗಿ ಕಟ್ಟಡದಲ್ಲಿ ನಡೆಯುತ್ತಿತ್ತು. ಮುಂದೆ ಅದಕ್ಕೆ 6 ಕೊಠಡಿಗಳ ಒಂದು ಕಟ್ಟಡವೂ ಮಂಜೂರಾಯಿತು. ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ, ನನಗೆ ಇಲ್ಲಿ ಮಾಹಿತಿ ಬಂದ ಪ್ರಕಾರ ಆರು ರೂಮಿನ ಒಂದು ಕಟ್ಟಡ ಮಂಜೂರಾಗಿದೆ. ಅದರಲ್ಲಿ ಮೂರು ರೂಮುಗಳನ್ನು ಈಗಾಗಲೇ ಕಟ್ಟಲಾಗಿದೆ. ಈಗಿರುವಂಥ ಮೂರು ರೂಮುಗಳಲ್ಲಿ ಅದು ನಡೆಯುತ್ತಾ ಇದೆ. ಇನ್ನು ಮೂರು ರೂಮು ಬೇಕು. ಏಕೆಂದರೆ, ಒಂದೊಂದು ತರಗತಿಗೆ 2–3 ಡಿವಿಜನ್ಸ್ ಇರುವುದರಿಂದ ಇನ್ನೂ ಮೂರು ರೂಮು ಬೇಕು. ಆ ಮೂರು ರೂಮುಗಳನ್ನೂ ಕೊಡುತ್ತೇನೆ. ಒಟ್ಟಿನಲ್ಲಿ 6 ರೂಮುಗಳನ್ನು ಕೊಟ್ಟು, ಆ ಹೈಸ್ಕೂಲು ಸುಸಜ್ಜಿತವಾಗಿ ನಡೆಯುವಂತೆ ಮಾಡುತ್ತೇವೆ. ಈ ವರ್ಷದಲ್ಲೇ ಈ ಕೆಲಸ ಮಾಡಿ, ಜೂನ್ ಹೊತ್ತಿಗೆ ಆ ಪ್ರೌಢಶಾಲೆಗಳಿಗೆ ಸರಿಯಾದ ರೀತಿಯಲ್ಲಿ ಕೊಠಡಿಗಳನ್ನು ಕಟ್ಟಿಸಿಕೊಡುತ್ತೇವೆ.

ಗ್ರಾಮಾಂತರ ಪ್ರದೇಶದಲ್ಲಿ ಗುತ್ತಿಗೆಯ ಆಧಾರದ ಮೇಲೆ ವೈದ್ಯರುಗಳ ನೇಮಕ

112 (201) ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿಂದಿನ ಸರ್ಕಾರವು ಗ್ರಾಮಾಂತರ ಪ್ರದೇಶದಲ್ಲಿ ವೈದ್ಯರನ್ನು ಕೊರತೆಯನ್ನು ತುಂಬಲು ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕ ಮಾಡಿಕೊಂಡಿತ್ತೆ, ಹಾಗಿದ್ದಲ್ಲಿ ಎಷ್ಟು ವೈದ್ಯರುಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿತ್ತು;

ಆ) ಆ ನೇಮಕಾತಿಗಳು ಈಗ ಅಸ್ತಿತ್ವದಲ್ಲಿವೆಯೇ ? ಹಾಗಿಲ್ಲದಿದ್ದಲ್ಲಿ ಅವುಗಳನ್ನು ರದ್ದುಗೊಳಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಪುನಃ ಈ ಮೇಲ್ಕಂಡ ರೀತಿಯಲ್ಲಿ ವೈದ್ಯರುಗಳನ್ನು ನೇಮಕಾತಿ ಮಾಡಿಕೊಳ್ಳಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ) ಹೌದು. 380 ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಆ) ಹೌದು. 380 ವೈದ್ಯರನ್ನು ನೇಮಕ ಮಾಡಿದ್ದು ಇವರಲ್ಲಿ 288 ವೈದ್ಯರು ಹಾಜರಾಗಿರುತ್ತಾರೆ. ವರದಿ ಮಾಡಿಕೊಂಡಿರುವ ವೈದ್ಯರುಗಳ ನೇಮಕಾತಿ ಅವವನ್ನು ನೇಮಕಾತಿ ಮಾಡಿಕೊಂಡ ಕಾಂಟ್ರಾಕ್ಟ್ ಅವಧಿಯವರೆಗೆ ಅಸ್ತಿತ್ವದಲ್ಲಿರುತ್ತವೆ.

ಇ) ಈ ವಿಷಯುವನ್ನು ಪರಿಶೀಲಿಸಲಾಗುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೇ, ನಾನು ಗುತ್ತಿಗೆ ಆಧಾರದ ಮೇಲೆ ಎಷ್ಟು ಡಾಕ್ಟರುಗಳನ್ನು ನೇಮಕ ಮಾಡಲಾಗಿದೆ ಎಂದು ಕೇಳಿದ್ದಕ್ಕೆ ಅವರು 280 ಎಂದು ಹೇಳಿದ್ದಾರೆ. ಮೇಲೆ 278ತೆಗೆದುಕೊಂಡಿದ್ದೇವೆ, ಅದರಲ್ಲಿ ಕೆಲವು ಜನ ಹಾಗೆಯೇ ಉಳಿದಿದ್ದಾರೆ ಎಂದು ಹೇಳಿದ್ದಾರೆ.

ಹಳ್ಳಿಯ ಡಾಕ್ಟರುಗಳು ಏನಿದ್ದಾರೆ. ಲೋಕಲ್ ಡಾಕ್ಟರುಗಳು ಅವರು ಯಾರೂ ಬರುತ್ತಾ ಇಲ್ಲ. ಇಲ್ಲಿ ಏನು ಮೆರಿಟ್ ಮೇಲೆ ತೆಗೆದುಕೊಳ್ಳುತ್ತಿದ್ದಾರೆ, ಇದರಲ್ಲಿ ಹಳ್ಳಿಯವರು ಒಬ್ಬರೂ ಬರುತ್ತಾ ಇಲ್ಲ. ಬೆಂಗಳೂರಿನವರು ಮಾತ್ರ ಬರುತ್ತಾರೆ.ಇವರು ಬೀದರ್‌ಗೆ ಯಾರೂ ಬರುವುದಿಲ್ಲ, ಬೆಂಗಳೂರಿಗೆ ಆದರೆ ಬರುತ್ತಾರೆ. ನಮ್ಮಲ್ಲಿ ಆಸ್ಪತ್ರೆಗಳು ಏನಿವೆ ಆ ಆಸ್ಪತ್ರೆಗಳಲ್ಲಿ ಕತ್ತೆಗಳು ನಾಯಿಗಳು ಇವೆ.ಡಾಕ್ಟರ್ಸ್ ಇಲ್ಲ, ಕಾಂಪೌಂಡರ್ಸ್ ಇಲ್ಲ. ಔಷಧಿ ಇಲ್ಲ. ಇಂತಹ ಪರಿಸ್ಥಿತಿ ಏತಕ್ಕೆ ಆಗುತ್ತದೆ ? ನೀವು ಡಾಕ್ಟರ್ಸ್‌ನ್ನು ಯಾವಾಗ ಅಪಾಯಿಂಟ್ ಮಾಡುತ್ತೀರಿ ಲೋಕಲ್‌ನಲ್ಲಿರುವವರನ್ನು ಏತಕ್ಕೆ ಅಪಾಯಿಂಟ್ ಮಾಡಬಾರದು ? ನಿಮಗೆ ಏನು ತೊಂದರೆ ಇದೆ ? ಹಳ್ಳಿ ಆಸ್ಪತ್ರೆಗಳಿಗೆ ವೈದ್ಯರುಗಳನ್ನು ಯಾವಾಗ ನೇಮಿಸುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ನಮಗೆ ಹೇಳಬೇಕಾಗುತ್ತದೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ, ಕಾಂಟ್ರಾಕ್ಟ್ ಅಪಾಯಿಂಟ್‌ಮೆಂಟ್ಸ್ ಮಾಡುವಾಗ ಹೆಚ್ಚು ಹೆಚ್ಚಾಗಿ ಅವರವರ ಕ್ಷೇತ್ರಕ್ಕೆ ಹತ್ತಿರ ಇರುವವರನ್ನೇ ನಾವು ಅಪಾಯಿಂಟ್ ಮಾಡಿದ್ದೇವೆ. ಅವರಿರುವ ಹಳ್ಳಿಗಳಿಗೆ ನಾವು ಅಪಾಯಿಂಟ್ ಮಾಡಿದ್ದೇವೆ. ಟೌನ್‌ಗಳಲ್ಲಿ ನಾವು ಅಪಾಯಿಂಟ್‌ಮೆಂಟ್ಸ್ ಮಾಡಿಲ್ಲ. ಇದರಲ್ಲಿ 380 ಜನರನ್ನು ನಾವು ಅಪಾಯಿಂಟ್‌ಮೆಂಟ್ಸ್ ಮಾಡಿದ್ದು ಅದರಲ್ಲಿ 288 ಡಾಕ್ಟರ್ಸ್ ಬಂದು ಸೇರಿದ್ದಾರೆ. ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅಪಾಯಿಂಟ್‌ಮೆಂಟ್ಸ್ ಮಾಡಿದ ಉದ್ದೇಶ, ಹಳ್ಳಿಗಳಿಗೆ ಡಾಕ್ಟರ್ಸ್ ಹೋಗಬೇಕು ಎಂದು. ನಾವು ಈ ಅಪಾಯಿಂಟ್‌ಮೆಂಟ್ಸ್‌ನ್ನು ಡಿಸ್ಟ್ರಿಕ್ಟ್ ವೈಜ್ ಇಂಟರ್‌ವ್ಯೂ ಮಾಡಿದ್ದೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮೆರಿಟ್ ಮೇಲೆ ತಾವು ಮಾಡಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ:– ಮಾನ್ಯ ಅಧ್ಯಕ್ಷರೇ ಇದು ಬಹಳ ಮುಖ್ಯವಾದ ಪ್ರಶ್ನೆ. ನನ್ನ ಸ್ವಂತ ಅನುಭವ. ನನ್ನ ಕ್ಷೇತ್ರದಲ್ಲಿ 10 ಜನ ಡಾಕ್ಟರ್ಸ್ ಇಲ್ಲ ಎಂದು ನಾನು ಪತ್ರ ಬರೆದಿದ್ದೇನೆ. ಉತ್ತರ ಬರಲಿಲ್ಲ. ಡೈರೆಕ್ಟರ್‌ನ್ನು ಕಾಂಟ್ಯಾಕ್ಟ್ ಮಾಡಿದ್ದೇನೆ. ಮಿನಿಸ್ಟರ್‌ನ್ನು ಕಾಂಟ್ಯಾಕ್ಟ್ ಮಾಡಿದ್ದೇನೆ. ಆದರೆ ಹೋದ ವರ್ಷದಿಂದ ಇದುವರೆಗೂ ಆ ಹುದ್ದೆಗಳು ಮಾತ್ರ ಭರ್ತಿಯಾಗಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಹಾಕಿಕೊಂಡಂತಹ ಸ್ಕೀಮ್ ಇದು. ಅವರು ಬಾರದೇ ಇರುವುದಕ್ಕೆ ಕಾರಣವೇನು ಗೊತ್ತಿಲ್ಲ. ತಾವು ಅಪ್ಲಿಕೇಶನ್ ಕರೆಯುವುದಕ್ಕೆ ಮುನ್ನ ಅವರ ಒಪ್ಪಿಗೆ ಪಡೆದಿದ್ದೀರಾ ? ಅವರು ಬಾರದೇ ಇರತಕ್ಕಂಥ ಜಾಗದಲ್ಲಿ ಹಿಂದೆ ಇಂಟರ್‌ವ್ಯೂ ಮಾಡಿದ್ದೀರಲ್ಲ ಅವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆಯೇ ? ಮತ್ತು ಕೆಲವು ಸ್ಪೆಷಲೈಜ್ಡ್ ಕೋರ್ಸ್‌ಗಳು ಇದ್ದಾವೆ. ಉದಾಹರಣೆಗೆ ಗೈನಾಕಲಜಿಸ್ಟ್‌ಗಳು ಇಲ್ಲ ಎಂದು ನಾನು ಒಂದು 10–12 ಕಾಗದಗಳನ್ನು ಬರೆದಿದ್ದೇನೆ. ಅಂತ ಅಪ್ಲಿಕೇಶನ್ಸ್‌ಗೆ ವಿಶೇಷವಾದ ಗಮನ ಸರ್ಕಾರದವರು ಕೊಡುತ್ತಾರೆಯೇ ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಕಾಂಟ್ರಾಕ್ಟ್ ಬೇಸಿಸ್ ಡಾಕ್ಟರ್ಸ್‌ನ್ನು ನಾವು ಮೆರಿಟ್ ಕಮ್ ರೋಸ್ಟರ್ ಸಿಸ್ಟಂ ಪ್ರಕಾರ ಅವರು ಹಳ್ಳಿಗಳಿಗೆ ಹೋಗಲು ಸಾಧ್ಯವಾಗುವುದಕ್ಕೆ ಡಿಸ್ಟ್ರಿಕ್ಟ್ –ವೈಜ್ ಮಾಡಿದ್ದೇವೆ. ಸರ್ಕಾರ ಈ ಆದೇಶ ಹೊರಿಸಿಗಾಗ 1992ರಲ್ಲಿ ಒಂದು ಸಾವಿರ ಅರ್ಜಿಗಳು ಬಂದಿದ್ದವು. ಅದರಲ್ಲಿ 380 ಡಾಕ್ಟರ್ಸ್‌ನ್ನು ಮಾತ್ರ ನಾವು ಅಪಾಯಿಂಟ್ ಮಾಡಿದ್ದೇವೆ. ಇನ್ನು 92 ಡಾಕ್ಟರ್ಸ್‌ನ್ನು ಎಕ್ಸಟ್ರಾ ಅಪಾಯಿಂಟ್ ಮಾಡಿದ್ದೇವೆ.

Sri D.B. Chandre Gowda:– I seek your protection. ತಾವೇನು ಅರ್ಜಿ ಕರೆದಿದ್ದೀರಿ ಡಾಕ್ಟರ್ಸ್‌ನ್ನು ನೇಮಕ ಮಾಡುವಾಗ ಅವರು ಒಪ್ಪಿಗೆ ಕೊಟ್ಟಿದ್ದರೇನು ? ಅವರು ಒಪ್ಪಿಗೆ ಕೊಡದೆ ಅವರು ಬಾರದೇ ಇರುವ ಜಾಗಗಳಲ್ಲಿ ಬೇರೆಯವರನ್ನು ಭರ್ತಿ ಮಾಡುವುದಕ್ಕೆ ಆಗುತ್ತದೆಯೋ ? There should be some policy.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಅವರು ಅರ್ಜಿ ಹಾಕಿದಾಗ ಅವರ ಒಪ್ಪಿಗೆ ಅವರ ಅನುಮತಿ ಇದೆ ಎಂದು ಅರ್ಥ. ಅವರಿಗೆ ಒಪ್ಪಿಗೆ ಇಲ್ಲದಿದ್ದರೆ ಅವರು ಅರ್ಜಿ ಹಾಕುವುದೇ ಇಲ್ಲ. ನಾವು ನಮ್ಮ ಅಪಾಯಿಂಟ್‌ಮೆಂಟ್‌ನಲ್ಲಿ we have given proper advertisement regarding these appointments of contract Doctors. ಇದನ್ನು ಹೇಳುವಾಗ ಒಪ್ಪಿಗೆ ಇದೆ ಎಂದು ಅರ್ಥ. ಇಲ್ಲದಿದ್ದರೆ ಅವರು ಅರ್ಜಿ ಹಾಕುವುದಿಲ್ಲ. ಮಾನ್ಯ ಸದಸ್ಯರು ಒಬ್ಬ ಗೈನಕಾಲಜಿಸ್ಟ್ ಅಪಾಯಿಂಟ್ ಮಾಡಬೇಕೆಂದು ಹೇಳಿದ್ದಾರೆ. ಅದನ್ನೂ ಸಹ ಮಾಡುತ್ತೇವೆ. ಎಲ್ಲಿ ಜಾಸ್ತಿ ಗೈನಾಕಾಲಿಜಿಸ್ಟ್‌ಗಳು ಇದ್ದಾರೆ ಅವರನ್ನು ಇಂತಹ ಆಸ್ಪತ್ರೆಗಳಿಗೆ ವರ್ಗ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಸದಸ್ಯರು ಕೇಳಿದ ಹಾಗೆ ಇದು ಬಹಳ ಮುಖ್ಯವಾದ ಮತ್ತು ಗಂಭೀರವಾದ ಸಮಸ್ಯೆ. ಪಟ್ಟಣ ಪ್ರದೇಶಗಳಲ್ಲಿ ಗೌರ್ನಮೆಂಟ್ ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಇಲ್ಲ ಎಂದರೆ ಅಷ್ಟು ಕಷ್ಟವಾಗುವುದಿಲ್ಲ. ಅಲ್ಲಿ ಬೇರೆ ಪ್ರವೇಟ್ ಡಾಕ್ಟರ್ಸ್ ಇರುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಗೌರ್ನಮೆಂಟ್ ಆಸ್ಪತ್ರೆಗಳಲ್ಲಿ ಡಾಕ್ಟರ್ಸ್ ಇಲ್ಲ ಎಂದರೆ ಬಹಳ ಕಷ್ಟ ಇದೆ. ಅದು ಎಷ್ಟು ಕಷ್ಟ ಎಂಬುದನ್ನು ಹೇಳುವುದಕ್ಕೆ ಆಗುವುದಿಲ್ಲ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಸ್ಪಷ್ಟವಾಗಿ ಕೇಳುತ್ತೇನೆ. ಈಗ ಎಷ್ಟು ವೇಕೆನ್ಸಿಗಳು ಇವೆ ಆ ವೇಕೆನ್ಸಿಗಳನ್ನು ತುಂಬಲು ಕಾಂಟ್ರಾಕ್ಟ್ ಅಪಾಯಿಂಟ್‌ಮೆಂಟ್ಸ್ ಎಷ್ಟು ದಿವಸಗಳಲ್ಲಿ ಮಾಡುತ್ತೀರಿ. ನಾನು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ಅವರೇ ಈ ಪ್ರಶ್ನೆಗೆ ಉತ್ತರ ಕೊಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಏನು ತಾವು ಹೇಳಿದ್ದುದು ?

ಶ್ರೀ ಆರ್. ವಿ. ದೇಶಪಾಂಡೆ:– ರೂರಲ್ ಕಡೆ ಡಾಕ್ಟರ್‌ಗಳ ಹುದ್ದೆಗಳು ಸಾಕಷ್ಟು ವೇಕೆನ್ಸಿ ಇವೆ. ಪಟ್ಟಣ ಪ್ರದೇಶಗಳಲ್ಲಾದರೆ ಪ್ರೈವೇಟ್ ಡಾಕ್ಟರ್ಸ್ ಇರುತ್ತಾರೆ. ಅಲ್ಲಿಗೆ ಜನರು ಹೋಗುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಡಾಕ್ಟರುಗಳು ಇಲ್ಲವೆಂದರೆ ಅವರು ಎಲ್ಲಿಗೆ ಹೋಗುಬೇಕು ? ಇದು ಇವತ್ತಿನ ಸಮಸ್ಯೆ ಅಲ್ಲ. ಎಷ್ಟೋ ವರ್ಷಗಳಿಂದ ಈ ಸಮಸ್ಯೆ ಇದೆ. ಈ ರೀತಿ ವೇಕೆನ್ಸೀಸ್ ಇವೆಯಲ್ಲಾ ಅವುಗಳನ್ನು ಯಾವಾಗ ಫಿಲಪ್ ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ, ನಾವು ನಮ್ಮ 100ದಿನಗಳ ಪ್ರೋಗ್ರಾಮ್‌ನಲ್ಲಿ ಈ ಡಾಕ್ಟರ್‌ಗಳ ಹುದ್ದೆಗಳು ಎಲ್ಲಿ ಖಾಲಿ ಇವೆಯೋ ಅಲ್ಲಿ ತುಂಬುತ್ತೇವೆಂದು ಹೇಳಿದ್ದೇವೆ. 100 days is counted from launching the programme. The consolidation of programme is by 31st March. ಅದರ ಪ್ರಕಾರ ಡಾಕ್ಟರ್‌ಗಳನ್ನು ತುಂಬತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಡಾಕ್ಟರುಗಳಾಗಲೀ ಅಥವಾ ಬೇರೆ ಹೆಲ್ತ್ ಸ್ಟಾಫ್ ಆಗಲೀ, ಶಿಕ್ಷಕರುಗಳಾಗಲೀ, ಗ್ರಾಮಾಂತರಗಳಲ್ಲಿ ಕಡಿಮೆ ಪಕ್ಷ ಒಂದು ಯೂನಿಟ್‌ನಲ್ಲಿ ಒಬ್ಬ ಡಾಕ್ಟರ್ ಆದರೂ ಇರಬೇಕು ಮತ್ತು ಶಾಲೆಗಳಲ್ಲಿ ಶಿಕ್ಷಕರು ಇರಬೇಕು, ಅಂಥ ಒಂದು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಈ ಪ್ರಶ್ನೆ ಕೇಳಿದ್ದು ನಾನು. ನನಗೇ ಉಪ ಪ್ರಶ್ನೆ ಕೇಳುವುದಕ್ಕೆ ಟೈಮ್ ಸಿಗಲಿಲ್ಲ. ಈಗ ಮಾಡುತ್ತಿರುವ ಪದ್ಧತಿ ಸರಿಯಿಲ್ಲ ಅದನ್ನು ಚೇಂಜ್ ಮಾಡಿ ಎಂದು ನಾನು ಮಂತ್ರಿಗಳಲ್ಲಿ ಹೇಳುತ್ತೇನೆ. ಮೆರಿಟ್ ಮೇಲೆ ತೆಗೆದುಕೊಳ್ಳುವುದರ ಜೊತೆಗೆ ಹಳ್ಳಿಗಳ ಕಡೆಯಿಂದ ಬರುವ ಅಭ್ಯರ್ಥಿಗಳಿಗೂ ಡಾಕ್ಟರ್ ಹುದ್ದೆ ಕೊಡುತ್ತೇವೆಂದು ಹೇಳಬೇಕು.

ನೀವು ನೇಮಕ ಮಾಡಿರುವ ಡಾಕ್ಟರುಗಳಲ್ಲಿ ಇನ್ನೂ 92 ಜನ ಡಾಕ್ಟರುಗಳು ಡ್ಯೂಟಿಗೆ ಬಂದಿಲ್ಲ ಎಂದು ಹೇಳಿದಿರಿ. ಹಳ್ಳಿಯವರನ್ನು ತೆಗೆದುಕೊಂಡಿದ್ದಿದ್ದರೆ ಅವರು ಹೋಗುತ್ತಿದ್ದರು. ಹಳ್ಳಿಗಳ

ಕಡೆಯಿಂದ ಬರುವ ಅಭ್ಯರ್ಥಿಗಳನ್ನು ತಾವು ನೇಮಕ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿ. ಆಯಾ ತಾಲ್ಲೂಕಿನವರನ್ನು ತೆಗೆದುಕೊಂಡು ಅಲ್ಲೇ ನೇಮಕ ಮಾಡಿದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾವು ಏನು ನೇಮಕ ಮಾಡುತ್ತೇವೆಯೋ ಅದರಲ್ಲಿ ಮೂರನೇ ಒಂದು ಅಂಶದಷ್ಟು ಡಾಕ್ಟರುಗಳು ರಿಪೋರ್ಟ್ ಮಾಡಿಕೊಳ್ಳುತ್ತಿಲ್ಲ. ಏಕೆಂದರೆ, ಅವರಿಗೆ ಪಟ್ಟಣ ಪ್ರದೇಶಗಳೇ ಬೇಕು. ಅದರ ಬಗ್ಗೆ ತಾವು ಏನು ಸೂಚನೆ ಕೊಟ್ಟಿದ್ದೀರಿ ಅದನ್ನು ಮಾರ್ಪಾಡು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಚಿಕ್ಕೋಡಿಯ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

113 (229) ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆ, ಚಿಕ್ಕೋಡಿ ಪಟ್ಟಣದಲ್ಲಿರುವ ಸಾರ್ವಜನಿಕ ಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರದವರ ಮುಂದಿದೆಯೇ;

ಆ)ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಪರಿವರ್ತನಾ ಕಾರ್ಯವನ್ನು ಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್. ಭೀಮಣ್ಣನವರು:– ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ ಚಿಕ್ಕೋಡಿ ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯನ್ನು 100 ಬೆಡ್‌ಗಳಿಗೆ ಪರಿವರ್ತಿಸುವ ಕಾರ್ಯಕ್ರಮವಿದೆಯೇ ಎಂದು ನಾನು ಕೇಳಿರುವುದು. ಈ ಸಾರ್ವಜನಿಕ ಆಸ್ಪತ್ರೆಗೆ ಬಿಲ್ಡಿಂಗ್ ಕಟ್ಟಿಸುವ ಸಲುವಾಗಿ ಗೌರ್ನಮೆಂಟ್‌ನಿಂದ 80 ಲಕ್ಷ ರೂಪಾಯಿಗಳು ಮಂಜೂರಾಗಿದೆ.. ಆದರೆ ಉತ್ತರದಲ್ಲಿ 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದಾರೆ. ಈ ಆಸ್ಪತ್ರೆಯ ವಿಸ್ತರಣೆಗೆ ಚಿಕ್ಕೋಡಿ ಮುನಿಸಿಪಾಲಿಟಿ ಕೌನ್ಸಿಲ್‌ನವರು ಸಹಿತಾ ಹಣ ಒದಗಿಸುತ್ತೇವೆಂದು ಹೇಳಿದ್ದಾರೆ. ಸರ್ಕಾರದಿಂದ ಇದರ ಜೊತೆಗೆ 80 ಲಕ್ಷ ರೂಪಾಯಿ ಸ್ಯಾಂಕ್ಷನ್ ಆಗಿದ್ದರೂ ಇಲ್ಲವೆಂದು ಹೇಳುತ್ತಿದ್ದಾರೆ. ಇದರಬಗ್ಗೆ ತಮಗೆ ಏನಾದರೂ ತಪ್ಪು ಮಾಹಿತಿ ಬಂದಿದೆಯೇ ? ಅಥವಾ ಇನ್ನೊಂದು ಸಾರಿ ಉತ್ತರ ತರಿಸಿಕೊಂಡು ಹೇಳುತ್ತೀರೋ ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮುಖ್ಯಮಂತ್ರಿಗಳ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ಚಿಕ್ಕೋಡಿಯಲ್ಲಿ 30 ಬೆಡ್ ಹಾಸ್ಪೆಟಲ್‌ನ್ನು 50 ಬೆಡ್‌ಗೆ ಅಪ್‌ಗ್ರೇಡ್ ಮಾಡಿದ್ದೇವೆ. The estimated cost for 50 beded Hospital is Rs. 72.71 lakhs. ಅದಕ್ಕಾಗಿ 72.81 ಲಕ್ಷ ರೂಪಾಯಿ ಮಂಜೂರಾಗಿದೆ. ಕರೆಂಟ್ ಇಯರ್ ಬಜೆಟ್‌ನಲ್ಲಿ 10.47 ಲಕ್ಷ ಪ್ರೊವೈಡ್ ಮಾಡಿದ್ದೇವೆ.ಅಲ್ಲಿ 2 ಮೆಡಿಕಲ್ ಆಫೀಸರ್ಸ್, 12 ಮೆಟರ್‌ನಿಟಿ ಬೆಡ್ಸ್, 18 ಜನರಲ್ ಬೆಡ್ಸ್ ಇದ್ದದ್ದನ್ನು, ಆದಷ್ಟು ಬೇಗನೆ 50 ಬೆಡ್ ಹಾಸ್ಪೆಟಲ್ ಆಗಿ ಪರಿವರ್ತನೆ ಮಾಡುತ್ತೇವೆ.

ಗ್ರಾಮಾಂತರ ಪ್ರದೇಶಗಳಿಂದ ಆಸ್ಪತ್ರೆಗಳ ಮಂಜೂರಾತಿಗಾಗಿ ವಂತಿಗೆ

114 (658) ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅನೇಕ ಗ್ರಾಮದ ಜನರು ಆಸ್ಪತ್ರೆಗಳ ಮಂಜೂರಾತಿಯನ್ನು ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿ, ಜನರ ವಂತಿಕೆಯ ರೂಪದಲ್ಲಿ 25,000 ರೂ.ಗಳಂತೆ ಹಣ ಪಾವತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಯಾವ ಗ್ರಾಮಸ್ಥರು ಈ ರೀತಿ ಹಣ ತುಂಬಿದ್ದಾರೆ;

ಇ) ಅನೇಕ ವರ್ಷಗಳಿಂದ ಈ ರೀತಿ ಮನವಿ ಕೊಟ್ಟು ಹಣ ತುಂಬಿದ್ದಾಗ್ಯೂ ಈ ಗ್ರಾಮಗಳಿಗೆ ಆಸ್ಪತ್ರೆಗಳನ್ನು ಮಂಜೂರು ಮಾಡದೇ ಇರಲು ಕಾರಣವೇನು;

ಈ) ಈ ಗ್ರಾಮಗಳಿಗೆ ಈಗಲಾದರೂ ಸರ್ಕಾರವು ಆಸ್ಪತ್ರೆಗಳನ್ನು ಮಂಜೂರು ಮಾಡುವುದೇ ?

ಶ್ರೀ ಎಂ. ವೀರಪ್ಪ ಮೊಯಲಿ (ಮುಖ್ಯಮಂತ್ರಿಗಳು):–

ಅ) ಬಂದಿದೆ.

ಆ) ಗ್ರಾಮಸ್ಥರು ಹಣ ತುಂಬಿರುವ 125 ಗ್ರಾಮಗಳ ಹೆಸರುಗಳ ಪಟ್ಟಿಯನ್ನು ಲಗತ್ತಿಸಿದೆ.

ಇ) ದಿನಾಂಕ 1–4–87 ರಿಂದ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವುದನ್ನು ರದ್ದುಗೊಳಿಸಲಾಗಿದೆ. ಹಣ ಪಾವತಿ ಮಾಡಿದರೂ ಪ್ರಾಥಮಿಕ ಆರೋಗ್ಯ ಘಟಕಗಳನ್ನು 1–4–86 ರಿಂದ ಮಂಜೂರು ಮಾಡಲು ಅವಕಾಶವಿಲ್ಲ.

14. Govt. Jr. College, Kanakagiri.	1. Clothing & Embroidery 2. Pre School Education
15. Mathodist P.U.C. Raichur.	1. Clothing & Embroidery
16. Govt. Jr. College, Bajjalagudda.	1. Clothing & Embroidery 2. Horticulture
17. Jawaharnagar, P.U.College, Raichur.	1. Electrical Wiring
18. A.M.E.P.U.Coll. Raichur.	1. Laboratory Technician
19. New Edn. Sc. Fransis Fathima PUC Raichur.	1. Library and Information Science

SHIMOGA DISTRICT

1. Channeshwara Jr. College, Hirekalmath, Honnali.	1. Sericulture (II Year) 2. Clothing & Embroidery
2. D.V.S. Jr. College, Shimoga.	1. Automobile Servicing 2. Electrical Wiring
3. Kasturba Girls, jr. College, Shimoga.	1. Clothing & Embroidery 2. Computer Techniques
4. Govt. Jr. College, Shimoga.	1. Library Science 2. Electrical Wiring
5. Govt. Jr. College,Sagar.	1. Banking
6. Govt. Jr. College, Channagiri.	1. Clothing & Embroidery
7. Govt. Jr. College, Rippanpet.	1. Banking 2. Electrical Wiring
8. S.J. Govt. Jr. College New Town, Bhadravathi.	1. Material Management Technology. 2. Salesmanship. 3. Banking

9. Govt. Jr. College, Boraha.	1. Clothing & Embroidery 2. Two Wheeler Servicing.
10. Govt. Jr. College, Thirthahalli.	1. Automobile Servicing
11.	
12. National PUC Shimoga.	1. T.V. & Radio Servicing
13. Govt. PUC Anavotti Shimoga Dist.	1. Clothing & Embroidery
14. Govt. Jr. College, Hithala, Shikaripur Tq.	1. Clothing & Embroidery
15. Sri. Lepakshiswamy PUC. Seathrampura, (Bhadravathi Taluk).	1. Electrical Wiring 2. Clothing & Embroidery

TUMKUR DISTRICT

1. Govt. Jr. College, Tumkur.	1. Automobile Servicing 2. Electrical Wiring 3. Clock & Watch Repair Tech 4. Land & City Surveying.
2. Govt. Empress Girls Jr. College, Tumkur.	1. Clothing & Embroidery 2. Computer Techniques
3. Kalpatharu Sc. College, Tiptur.	1. Electrical Wiring 2. Sericulture
4. Basaveshwara Jr. College, Tiptur.	1. Automobile Servicing 2. Library Science 3. T.V. & Radio Servicing 4. Laboratory Technician
5. Govt. First Grads College Sira.	1. Sericulture 2. Co.operation.
6. Ranganatha First Grade College, Sira.	1. Electrical Wiring 2. Automobile Servicing.
7. Govt. Jr. College, Koratagare.	1. Electrical Wiring 2. Sericulture 3. Clothing & Embroidery
8. Govt. Jr. College, Pavagada.	1. Electrical Wiring 2. Sericulture 3. Clothing & Embroidery

9. Govt. Jr. College, Kunigal.	1. Automobile Servicing 2. Electrical Wiring 3. Clothing & Embroidery
10. Govt. Jr. College, Madhugiri.	1. Sericulture 2. Horticulture 3. Electrical Wiring 4. Clothing & Embroidery
11. Govt. Jr. College, Gubbi.	1. Sericulture 2. Clothing & Embroidery
12. Nehru Vidya Shala, Jr. College Mayasandra. (Turuvakere Tk).	1. Electrical Wiring 2. Sericulture
13. Central Jr. College, Urdagere.	1. Sericulture
14 Govt. Jr. College, nikkanahally.	1. Electrical Wiring
15. Siddaganga Girls. Jr. College, Tumkur.	1. Library Science
16. Kalidasa PUColl. Tumkur.	1. T.V. & Radio Servicing
17. Vidya Vahini PUC Tumkur.	1. Laboratory Technician 2. Dairying 3. X ray Technician
18. Hoolihally Chickmalyaiah Gangamma. PUC Halkirke (Tiptur Tq.)	1. Electrical Wiring
19. Gangaderswar PUC. Thovanakere, Tumkur Dist.	1. Electrical Wiring
20. Sri. Basaveshwara Vidya Samesthe PUC Kolala Kortagere Tq. Tumkur Dist.	1. Sericulture
21. Visvabharathi. Comp. PUC. Mallasandra (Gubbi Taluk).	1. Dairying
24. Indra Mahaila Jr. College, Someswara Extn. Tumkur.	1. Library Science 2. Laboratory Technician
25. Bapuji Com PUC Horapeta Tumkur Dist.	1. T.V. & Radio Servicing 2. Banking
26. Govt. PUC. Dandindebba.	1. Sericulture

27. Nrupathunga PUC. SDT. Extn. Tumkur.	1. Laboratory Technician 2. Printing & Book Binding
27. Govt. P.U.C. Chiknayakanahalli. Tumkur Dist.	1. Electrical Wiring
28. S.K.V.S. Mahila PUC Tiptur.	1. Banking 2. Clothing & Embroidery
29. Govt. PUC Bramasandra. Sira Tq.	1. Horticulture
30. Govt. P.U.C. Kodlapura. Madhugiri Tq.	1. Sericulture
31. Sarvodaya Jr. College Tiptur.	1. Horticulture
32. Basaveshwara PUC. KHB Colony Tumkur.	1. Library Science
33. Sri. Malikurjanswamy PUC. C.N. Hally.	1. Clothing & Embroidery 2.Sericulture
34. Govt. Ind. PUC. Holavanhally. Kortegere Tq.	1. Clothing & Embroidery
35. Govt. PUC Tiptur.	1. Electrical Wiring
36. Govt. PUC Boornakanive C.N. Hally. Tq.	1. Sericulture 2. Electrical Wiring
37. Bicarambika PUG. Honavalli. Tumkur Tq.	1. T.V. & Radio Servicing
38. Gouthama Budda PUC. Madugiri.	1. T.V. & Radio Servicing
39. Govt. PUC. Nidasala Kunigal Tq.	1. Sericulture
40. S.R.V. PUC. Tiptur.	1. Dairying 2. Library Science
41. Srinidhi PUC Rantawala Madhugiri. Tq.	1. Sericulture
42. G.V.P. PUC. Handanakere C.K.N. Hally.	1. Electrical Wiring

UTTARA KANNADA (KARWAR) DIST.

1. Mahasathi P.U.College Ulga Karwar.	1. Co-Operation. 2. Pre School Education 3. Building & Road Construction Technology

2. Shivaji Arts & Science College, Basid Karwar.	1. Clothing & Embroidery
3. Durgadevi Arts & Science College Karawadi.	1. Clothing & Embroidery 2. Automobile Servicing 3. T.V. & Radio Servicing
4. Mallikarguna Arts & Comm. College, Siddar.	1. Clothing & Embroidery 2. Computer Techniques 3. Electrical Wiring
5. Shivaji Vidyalaya Govt. Jr. College, Haliyala.	1. Clothing & Embroidery
6. Banguranagar Comp. Rj. College, Dandali.	1. X ray Technician 2. Electrical Wiring
7. M.M. Arts & Science College, Sira.	1. Electrical Wiring 2. Dairying 3. Sericulture(WA) 4. Horticulture(WA)
8. Shivaji Education Society Jr. Coll. Chittakula Sadhashivagad.	1. Electrical Wiring 2. Automobile Servicing
9. Progressive Jr. College, Sirsi.	1. Clothing & Embroidery
10. Mahatma Gandhi Centinary College, Siddapura.	1. Computer Techniques
11. Bapuji Grameena Vidasa Samithi, Jr. College, Joyeda (Supa. N.K. Dist).	1. Clothing & Embroidery
12 Dr. A.V. Baliga Science and Arts Coll. Kumta. N.K. Dist.	1. Clothing & Embroidery
13. Bapuji Grameena Vikas Vedike Jr. College, Ramanagar, Supa Tq. N.K. Dist.	1. Automobile Servicing

LIST SHOWING THE 1992-93 Polytechnic & Engr. College.

1. Nadigar Polytechnic Manjunatha Rajajinagar.	1. Personal Computer Service.
2. Karnataka Technical Edn. 34-35 M.M. Industrieal Estate KK. Rd. B'lore-2.	1. Personal Computer Service 2. Electrical Wiring Motor Winding and Service
3. R.V. Eng. College, R.V. Vidameetan Post, Bangalore-59.	1. Personal Computer Service

4. Govt. Women Polytechnic B'lore-1.	1. Tailoring and Embroidery.
5. MET Polytechnic, Rajajinagar, Bangalore.	1. Office Automation. 2. Instrumation Servicing.
6. Venkatewara Polytechnic, Banner Ghata, Bangalore.	1. Personal Computer
7. Govt. S.K. SGT. College, K.K. Rd. B'lore.	1. Textile Technician.
8. OXford Poly. J.P. Nagar, B'lore-78.	1. Automobile Servicing 2. Personal Computer Service

BANGALORE RURAL DISTRICT

9. Govt. Polytechnic Channapatna.	1. Rural Water Supply.

BELLARY DISTRICT

1. Govt. Poly. Bellary.	1. Electrical Wiring Motor Winding and Service
2. TMEA. Poly Hospet. Bellary.	1. Electrical Wiring Motor Winding and Service 2. Mechanist.
3. S.T.J.V. Poly Harapanhally.	1. Automobile 2. Auto Servicing

BIJAPUR DISTRICT

1. B.V.V.S. Poly Bagalkote. Bijapur.	1. Automobile Servicing 2. Personal Computer Service 3. Rural Water Supply.
2. Govt Poly. Bijapur.	1. Mechanist.
3. Basaveswara Engr. College, Bagalkot.	1. Office Automation. 2. Electrical Wiring Motor Winding and Service
4. N.R.V. Rural Poly. Guledgudda.	1. Textile Technician
5. Rural Poly. Hungund.	1. Mechanist.

BIDAR DISTRICT

1. Govt. Polytechnic Bidar.	1. Electrical Wiring Motor Winding and Service

2. Nittur Edn. Society Poly. Nittur Bidur Dist.	1. Personal Computer Service
3. SML. Dr. Ambedkar Poly. Arud Bidar.	1. Electrical Wiring Motor Winding and Service

BELGAUM DISTRICT

1. Marata Mandal Poly. Opp. Police Parade Ground, Maruthi Extn. Blgm.	1. Automobile Servicing 2. Machinist.

CHICKAMANGALURE DISTRICT

1. Govt. Poly. Chickmangalore.	1. Automobile Servicing
2. Adichannagiri Engr. Coll. Chickmangalur.	1. Personal Computer Service

CHITRADRUGA DISTRICT

1. B.D.T. Coll. of Engr. P.B. No. 304. Davanagere.	1. Office Automation.
2. D.R.R. Govt. Poly, Davanagere.	1. Electrical Wiring Motor Winding and Service
3. S.S. Poly Mallapanahally. Hosadurga.	1. Electrical Wiring Motor Winding and Service
4. T.M.A.E. Poly. K.P.B. Rd. Hiriyur. Dst.	1. Personal Computer Service
5. Bapuji Institute of Technology Davanagere.	1. Mechanist. 2. Textile Technician

DHARWAR DISTRICT.

1. Govt. Women Poly. Dharwar.	1. Tailoring & Embroidery.
2. B.V.B. Engr. Coll. Hubli.	1. Instrumentation Servicing.
3. K.M. Kabbur Poly. Vidyagiri Der.	1. Automation Servicing
4. C.B. Koli, Poly. Haveri.	1. Mechaniest. 2. Electrical Wiring Motor Winding and Service
5. S.T.S.K. Poly: Gadag.	1. Mechniest. 2. Electrical Wiring Motor Winding and Service
6. Rural Poly. Ham sabavi, Hirekerur Dharwar Dist.	1. Electrical Wiring Motor Winding and Service 2. Automobile.

7. K.L.E. Society Poly. Hubli.	1. Electrical Wiring Motor Winding and Service 2. Automobile Servicing
8. S.D.M. Engr. Coll. Dharwar.	1. Office Automation.

MANGALORE D.K. DISTRICT

1. Govt. Women's Poly. Mangalore.	1. Office Automation.
2. Karnataka Poly. Mangalore.	1. Refrigeration & Air Condition.
3. Vivekananda Poly. Puttur.	1. Electrical Wiring Motor Winding and Service 2. Automobile Servicing
4. TMA Pai. Poly Manipal. Udupi. Tq.	1. Printing & Book Binding

HASSAN DISTRICT

1. Govt. Womens Poly. Hassan.	1. Tailoring & Embroidery
2. Malnad Engr. Coll. Hassan.	1. Personal Computer Service

KODAGU DISTRICT

1. Govt. Poly. Kushalnagar.	1. Electrical Wiring Motor Winding and Service

MYSORE DISTRICT

1. Jayachamarajendra Engr. Coll. Mysore.	1. Printed Circut Board Making. 2. Personal Computer Service
2. Govt. (CPE). Poly. Mysore -7	1. Automobile Servicing
3. J.S.S. Women's Poly Mysore - 6.	1. Servicing of Elec., Equipment.

MANDYA DISTRICT

1. P.E.S. Engr.. Coll. Mandya.	1. Automobile Servicing
2. M.D.S. Poly I.T. Extn. Nagamangala.	1. Electrical Wiring Motor Winding and Service 2. Mechanist.

GULBARGA DISTRICT

1. Govt. Poly. Gulbarga.	1. Electrical Wiring Motor Winding and Service
2. Nutan Vidyasanste Poly. Gulbarga.	1. Office Automation. 2. Automobile Servicing
3. SSS. Rural Poly. Jeevargi.	1. Electrical Wiring 2. Servicing of Elec. Equipment.

UTTAR KANNADA (KARWAR)

1. Govt. Poly. Karwar.	1. Electrical Wiring Motor Winding and Service 2. Mechanist.
2. Vidyadiraj Poly. Kumta.	1. Automobile Servicing 2. Vidyth.
3. R.N. Shetty Poly. Sirsi.	1. Automobile Servicing

RAICHUR DISTRICT

1. H.K.E.S. Poly, Yermarus. Raichur.	1. Textile Technician
2. V.G. Rural Poly. Kukunur.	1. Automobile Servicing

TUMKUR DISTRICT

1. S.I.T. Poly Tumkur.	1. Printing Circuit Board Making. 2. Instrumentation Servicing 3. Electrical Wiring Motor Winding and Service
2. H.M.S. Poly Tumkur.	1. Mechanist.
3. H.M.S. Poly Madhugiri.	1. Rural Water Supply. 2. Electrical Wiring Motor Winding and Service

KOLAR DISTRICT

1. Pawan Poly. Bangalore - Madras By pass Road, Pawanagar. Kolar.	1. Mechanist. 2. Electrical Wiring Motor Winding and Service 3. Servicing of Elec. Equipment.

ಬೆಳಗಾವಿ ಜಿಲ್ಲೆಯಲ್ಲಿ ಕೆ.ಎಂ.ಎಫ್.ಸಿ.ರವರು ಖರೀದಿಸುತ್ತಿರುವ ಹಾಲಿನ ಪ್ರಮಾಣ

319 (854) ಶ್ರೀ. ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೆ.ಎಂ.ಎಫ್.ಸಿ.ಯವರು (ಕರ್ನಾಟಕ ಹಾಲು ಉತ್ಪಾದಕರ ಸಂಘದವರು ಪ್ರತಿದಿನ ಕೊಳ್ಳಲಾಗುತ್ತಿರುವ ಮತ್ತು ಗ್ರಾಹಕರಿಗೆ ಮಾರುತ್ತಿರುವ ದರಗಳಾವುವು; (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು);

ಆ) ಬೆಳಗಾವಿಯಲ್ಲಿನ ಹಾಲಿನ ಸಂಗ್ರಹದ ಟ್ಯಾಂಕರ್ ಚಿಕ್ಕದಿದ್ದು ಅದರ ಹಾಲಿನ ಶೇಖರಿಸುವ ಪ್ರಮಾಣವೆಷ್ಟು ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಶೇಖರಿಸುವ ಸಾಮರ್ಥ್ಯವುಳ್ಳ ಟ್ಯಾಂಕರ್‌ಗಳನ್ನಾಗಿ ಬದಲಾಯಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ; ಹಾಗಿದ್ದಲ್ಲಿ ಕ್ರಮ ಕೈಗೊಳ್ಳುವುದು ಯಾವಾಗ;

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ಸವದತ್ತಿ ತಾಲೂಕಿನಲ್ಲಿ ಗ್ರಾಹಕರು ಕೆ.ಎಂ.ಎಫ್.ಸಿ.ರವರಿಗೆ ಹಾಲನ್ನು ಪೂರೈಸಲು ತಯಾರಿದ್ದರೂ ಕೆ.ಎಂ.ಎಫ್.ಸಿ.ರವರು ಹಾಲನ್ನು ಹೊಸ ಮಾರ್ಗದ ಮುಖಾಂತರ ತೆಗೆದುಕೊಂಡು ಹೋಗಲು ನಿರಾಕರಿಸುತ್ತಿರುವ ಸಂಗತಿ ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಹಾಲು ಉತ್ಪಾದನೆ ಹೆಚ್ಚಿಗೆ ಇದ್ದಿದ್ದರಿಂದ ಮತ್ತು ಬೆಳಗಾವಿ ಕೆ.ಎಂ.ಎಫ್.ಸಿ. ಘಟಕವು ಒಳ್ಳೆಯ ರೀತಿಯಿಂದ ನಡೆಯದೇ ಇದ್ದದ್ದರಿಂದ ಈ ತಾಲ್ಲೂಕುಗಳು ಧಾರವಾಡಕ್ಕೆ ಸಮೀಪ ಇರುವುದರಿಂದ ಈ ತಾಲೂಕಿನ ಹಾಲನ್ನು ಧಾರವಾಡ ಜಿಲ್ಲೆಗೆ ಒಯ್ಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ;

ಉ) ಕೆ.ಎಂ.ಎಫ್.ಸಿ.ರವರು ಹಾಲನ್ನು ಸಂಗ್ರಹಿಸಿಡಲು ಸಾಮರ್ಥ್ಯ ಹೊಂದಿದ ಟ್ಯಾಂಕರ್ ಇಲ್ಲದೇ ಇರುವುದರಿಂದ ಹಾಲನ್ನು ಗಟಾರಕ್ಕೆ ಚೆಲ್ಲಿದ ಸಂಗತಿ ನಿಜವೇ;

ಊ) ಬೈಲಹೊಂಗಲ ತಾಲ್ಲೂಕ್ ಪೈಕಿ ತುರ್ಕರ ಶೀಗಿಹಳ್ಳಿ ಮತ್ತು ಸವದತ್ತಿ ತಾಲ್ಲೂಕ್ ಪೈಕಿ ಚಿಕ್ಕೊಪ್ಪ, ಕಬಡಿ, ಮರಕುಂಬಿ ಗ್ರಾಮಗಳಲ್ಲಿ ಹೊಸ ತಳಿ ಆಕಳುಗಳನ್ನು ಕೆ.ಎಂ.ಎಫ್.ಸಿ. ಸಹಾಯದಿಂದ ಕೂಡಿಸಲು ಕ್ರಮ ಕೈಗೊಳ್ಳುವರೆ ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):–

ಅ) ರಾಜ್ಯದಲ್ಲಿ ಕೆ.ಎಂ.ಎಫ್.ಸಿ.ಯು 11.27 ಲಕ್ಷ ಲೀಟರ್ ಹಾಲನ್ನು ಶೇಖರಿಸುತ್ತದೆ.

ಜಿಲ್ಲೆ ಮತ್ತು ಸಂಬಂಧಿಸಿದ ತಾಲ್ಲೂಕುಗಳಲ್ಲಿ ಹಾಲಿನ ಶೇಖರಣಾ ಮತ್ತು ಮಾರಾಟ ದರ ಈ ಕೆಳಗಿನಂತೆ ಇದೆ.

ಜಿಲ್ಲೆಗಳು	ಶೇಖರಣಾ ಪ್ರತಿ ಲೀಟರ್‌ಗೆ ರೂ. ಪೈ.	ಮಾರಾಟ ದರ ಪ್ರತಿ ಲೀಟರ್‌ಗೆ ರೂ. ಪೈ.
ಬೆಂಗಳೂರು	6–00	7–50 ಶ್ಯಾಷ್ 7–00 ಬಿ.ವಿ.ಬಿ.
ಮೈಸೂರು	5–55	7–50 ಶ್ಯಾಷೆಗಳಲ್ಲಿ
ಮಂಡ್ಯ	5–60	7–50 "
ಕೋಲಾರ	6–00	–
ತುಮಕೂರು	5–55	7–50 "
ಹಾಸನ	5–35	7–50 "
ಧಾರವಾಡ	5–90	8–00 "
ಬೆಳಗಾಂ	5–90	8–00 "
ಬಳ್ಳಾರಿ	5–90	8–00 "
ಗುಲ್ಬರ್ಗಾ	5–90	8–00 "
ಶಿವಮೊಗ್ಗ	5–50	7–60 "
ಬಿಜಾಪುರ	5–90	8–50 "
ದಕ್ಷಿಣ ಕನ್ನಡ	5–50	8–00 "

ಆ) ಹಾಲು ಶೇಖರಿಸುವ ಪ್ರಮಾಣ ದಿನಂಪ್ರತಿ 20,000 ಲೀಟರ್. ಅಕ್ಟೋಬರ್ 1993ಕ್ಕೆ 60,000 ಲೀಟರ್ ಸಾಮರ್ಥ್ಯಕ್ಕೆ ಬದಲಾಯಿಸಲಾಗುತ್ತದೆ.

ಇ) ಹೌದು.

ಈ) ಹೌದು.

ಉ) ನಿಜವಲ್ಲ.

ಊ) ಆಯಾ ಗ್ರಾಮಗಳಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಬೇಡಿಕೆ ಬಂದಲ್ಲಿ ಅವಶ್ಯಕತೆ ಕ್ರಮಕೈಗೊಳ್ಳಲಾಗುವುದು.

ಅನುದಾನಿತ ಕಾಲೇಜುಗಳಿಗೆ ವೇತನ ಬಿಡುಗಡೆ

320 (818) ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ):-

ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜನವರಿ 1993ರಿಂದ ಅನುದಾನಿತ ಕಾಲೇಜುಗಳಿಗೆ ವೇತನ ಬಿಡುಗಡೆಯಾಗದಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಕಾಲಕ್ಕೆ ಸರಿಯಾಗಿ ವೇತನವನ್ನು ಬಿಡುಗಡೆ ಮಾಡದೇ ಇರಲು ಕಾರಣಗಳೇನು;

ಇ) ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ವಿಳಂಬವಿಲ್ಲದೆ ಪ್ರತಿ ವರ್ಷ ಕಾಲಕ್ಕೆ ಸರಿಯಾಗಿ ಅನುದಾನಿತ ಕಾಲೇಜುಗಳ ಸಿಬ್ಬಂದಿ ವರ್ಗದವರಿಗೆ ವೇತನವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳುವರೇ ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು):–

ಅ) ಬಂದಿದೆ.

ಆ) ಅಗತ್ಯವಿರುವ ಹೆಚ್ಚುವರಿ ಆಯವ್ಯಯದ ಪ್ರಸ್ತಾವನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ಅದನ್ನು ಈಗಾಗಲೇ ಬಿಡುಗಡೆ ಮಾಡಿದೆ.

ಇ) ಹೌದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಹಿಳಾ ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳು

321 (7) ಶ್ರೀ ಬಿ.ಎ. ಇದಿನಬ್ಬ (ಉಳ್ಳಾಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆರೋಗ್ಯ ಇಲಾಖೆಯಲ್ಲಿ ಎಷ್ಟು ವೈದ್ಯಾಧಿಕಾರಿಗಳ ಹಾಗೂ ಮಹಿಳಾ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ; (ಜಿಲ್ಲಾವಾರು ವಿವರ ಬೇಕು)

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಮಹಿಳಾ ವೈದ್ಯಾಧಿಕಾರಿ ಹಾಗೂ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ ಹಾಗೂ ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಇ) ಖಾಲಿ ಹುದ್ದೆಗಳು ಭರ್ತಿಯಾಗದೆ ಇರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಭಾರಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಪುರುಷ ವೈದ್ಯಾಧಿಕಾರಿಗಳು – 379
ಮಹಿಳಾ ವೈದ್ಯಾಧಿಕಾರಿಗಳು – 114
ಜಿಲ್ಲಾವಾರು ಹುದ್ದೆಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ – 1ರಲ್ಲಿ ತೋರಿಸಲಾಗಿದೆ.

ಆ) ಪುರುಷ ವೈದ್ಯಾಧಿಕಾರಿಗಳು –31
ಮಹಿಳಾ ವೈದ್ಯಾಧಿಕಾರಿಗಳು – 11

ಎಲ್ಲೆಲ್ಲಿ ಖಾಲಿ ಇವೆ ಎಂಬ ಬಗ್ಗೆ ಇದರೊಂದಿಗೆ ಲಗತ್ತಿಸಿರುವ ಅನುಬಂಧ – 2ರಲ್ಲಿ ತೋರಿಸಲಾಗಿದೆ. ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸಿರುವ ಸುಮಾರು 122 ಸಹಾಯಕ ಶಸ್ತ್ರಚಿಕಿತ್ಸಕರುಗಳು ತಮ್ಮ ವ್ಯಾಸಂಗವನ್ನು ಮಾರ್ಚ್ 93ರಲ್ಲಿ ಪೂರೈಸಲಿದ್ದಾರೆ. ಈ ವೈದ್ಯರುಗಳಿಗೆ ನೇಮಕಾತಿ ಆದೇಶವನ್ನು ನೀಡುವಾಗ ಮೇಲ್ಕಂಡ ಖಾಲಿ ಹುದ್ದೆಗಳನ್ನು ಸಾಧ್ಯವಾದಷ್ಟು ಭರ್ತಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು. ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿನ ಇನ್ನುಳಿದ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಹೆಚ್ಚಿನ ವೈದ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಬಂದಿದೆ. ಈಗಾಗಲೇ ಗ್ರಾಮಾಂತರ ಪ್ರದೇಶದ ಆಸ್ಪತ್ರೆಗಳಿಗೆ ಅಕ್ಟೋಬರ್ 92ರಲ್ಲಿ 380 ವೈದ್ಯಾಧಿಕಾರಿಗಳನ್ನು ನೇಮಕ ಮಾಡಿದ್ದು ಈ ಪೈಕಿ 288 ವೈದ್ಯರುಗಳನ್ನು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಉಳಿದ ಹುದ್ದೆಗಳನ್ನೂ ತ್ವರಿತವಾಗಿ ತುಂಬಲು ಮೇಲೆ ಹೇಳಿದ ಹಾಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ವೈದ್ಯಾಧಿಕಾರಿಗಳು ಹಾಗೂ ಮಹಿಳಾ ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳ ಜಿಲ್ಲಾವಾರು ವಿವರ.

ಅನುಬಂಧ I

ಕ್ರ.ಸಂ. ಜಿಲ್ಲೆ	ಪುರುಷ	ಮಹಿಳಾ	ಒಟ್ಟು
1. ಬೆಂಗಳೂರು ನಗರ	1	–	1
2. ಬೆಂಗಳೂರು ಗ್ರಾಮಾಂತರ	5	9	5
3. ತುಮಕೂರು	16	9	25
4. ಕೋಲಾರ	12	3	15
5. ಚಿತ್ರದುರ್ಗ	18	14	32
6. ಶಿವಮೊಗ್ಗ	26	5	31
7. ಮೈಸೂರು	29	5	34
8. ಮಂಡ್ಯ	7	3	10
9. ದಕ್ಷಿಣ ಕನ್ನಡ	21	11	42
10. ಕೊಡಗು	12	–	12
11. ಹಾಸನ	24	9	33
12. ಚಿಕ್ಕಮಗಳೂರು	24	2	26
13. ಬೀದರ್	10	7	17
14. ಗುಲ್ಬರ್ಗಾ	22	11	33
15. ರಾಯಚೂರು	12	3	15

16. ಬಳ್ಳಾರಿ	21	9	30
17. ಬೆಳಗಾಂ	34	3	37
18. ಬಿಜಾಪುರ	15	7	22
19. ಧಾರವಾಡ	29	11	40
20. ಉತ್ತರ ಕನ್ನಡ	31	2	33
ಒಟ್ಟು	379	114	493

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ ಮಹಿಳಾ ವೈದ್ಯರ ಮತ್ತು ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳ ವಿವರ.

ಕ್ರ.ಸಂಖ್ಯೆ	ಮಹಿಳಾ ವೈದ್ಯರ ಹುದ್ದೆಗಳು
1. ಪ್ರಾ.ಆ. ಕೇಂದ್ರ	1
2. ಪ್ರಾ.ಆ. ಕೇಂದ್ರ, ಬಿಡಕಲಕಟ್ಟೆ	1
3. ಪ್ರಾ.ಆ. ಕೇಂದ್ರ, ಬ್ರಹ್ಮಾವರ	1
4. ಪ್ರಾ.ಆ. ಕೇಂದ್ರ, ಪಣಜಿ	1
5. ಪ್ರಾ.ಆ. ಕೇಂದ್ರ, ಕಡಬ	1
6. ಪ್ರಾ.ಆ.ಕೇಂದ್ರ, ನಿಟ್ಟೆ	1
7. ಪ್ರಾ.ಆ.ಕೇಂದ್ರ, ಅಜಿಕಾರ್	1
8. ಪ್ರಾ.ಆ.ಕೇಂದ್ರ, ಪಂಜಾಲಕಟ್ಟೆ	1
9. ಸಾರ್ವಜನಿಕ ಆಸ್ಪತ್ರೆ, ಕುಂದಾಪುರ	1
10. ಪ್ರಾ.ಆ.ಕೇಂದ್ರ, ಬೆಳ್ತಂಗಡಿ	1
11. ಪ್ರಾ.ಆ.ಕೇಂದ್ರ, ಸೂಳ್ಯ	1
ಒಟ್ಟು	11

	ಪುರುಷ ವೈದ್ಯರು
1. ಎಲ್‌ಸಿಡಿಆರ್. ಮಂಗಳೂರು	3
2. ಪ್ರಾ.ಆ.ಕೇಂದ್ರ, ಮುಲ್ಕಿ	1
3. ಪ್ರಾ.ಆ.ಕೇಂದ್ರ, ಕಟ್ಟಿಪಲು	1
4. ಪ್ರಾ.ಆ.ಕೇಂದ್ರ, ಸಚ್ಚಾರಿಪೇಟೆ	1
5. ಪ್ರಾ.ಆ.ಕೇಂದ್ರ, ನಾಡ	1
6. ಪ್ರಾ.ಆ.ಕೇಂದ್ರ, ಈಶ್ವರಿ ಮಂಗಲ	1
7. ಪ್ರಾ.ಆ.ಕೇಂದ್ರ, ಕೋಯಿಲ	1
8. ಪ್ರಾ.ಆ.ಕೇಂದ್ರ, ಕೊಲ್ಲಮೊಗರು	1
9. ಪ್ರಾ.ಆ. ಕೇಂದ್ರ, ಬೆಂಗಾಲ್ ಕಸಬೆ ಬಜಾರ್	1
10. ಪ್ರಾ.ಆ.ಕೇಂದ್ರ, ಅಜೆಕಾರ್	1
11. ಪ್ರಾ.ಆ.ಕೇಂದ್ರ, ಪೆರುವಾಯಿ	1
12. ಪ್ರಾ.ಆ.ಕೇಂದ್ರ, ಮೂಡಬಿದರೆ	1
13. ಪ್ರಾ.ಆ.ಕೇಂದ್ರ, ಕುಪ್ಪಡವು	1

14.	ಪ್ರಾ.ಆ.ಕೇಂದ್ರ, ಕೆಂಬ್ರೋಲ	1
15.	ಪ್ರಾ.ಆ. ಕೇಂದ್ರ, ಬೋಲಿಯಾರ್	1
16.	ಪ್ರಾ.ಆ. ಕೇಂದ್ರ, ಮುಡಬೆಟ್ಟು	1
17.	ಪ್ರಾ.ಆ. ಕೇಂದ್ರ, ಪುಡು	1
18.	ಪ್ರಾ.ಆ. ಕೇಂದ್ರ, ರಾಯಿ	1
19.	ಪ್ರಾ.ಆ. ಕೇಂದ್ರ, ಕಲ್ಲಡಕ	1
20.	ಪ್ರಾ.ಆ.ಕೇಂದ್ರ, ಕನಿಯಾನ್	1
21.	ಪ್ರಾ.ಆ.ಕೇಂದ್ರ, ಶಿರಾಡ	1
22.	ಪ್ರಾ.ಆ.ಕೇಂದ್ರ, ಕೋಟೆಕಾರ್	1
23.	ಪ್ರಾ.ಆ. ಕೇಂದ್ರ, ಪಾಲಡ್ಕ	1
24.	ಪ್ರಾ.ಆ. ಕೇಂದ್ರ, ಕೊಲ್ಲೂರು	1
25.	ಪ್ರಾ. ಆ. ಕೇಂದ್ರ, ಬೈಲೂರು	1
26.	ಪ್ರಾ.ಆ. ಕೇಂದ್ರ, ಅಲದಂಗಡಿ	1
27.	ಪ್ರಾ.ಆ. ಕೇಂದ್ರ, ಹಕಲಡಿ	1
28.	ಪ್ರಾ.ಆ. ಕೇಂದ್ರ, ಮುಂದಾಟೆ	1
29.	ಪ್ರಾ.ಆ. ವೆನ್‌ಲಾಕ್ ಆಸ್ಪತ್ರೆ, ಮಂಗಳೂರು	1
	ಒಟ್ಟು	31

ರಾಣಿಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆಯಲ್ಲಿ ಹೆಣ್ಣು ಮಕ್ಕಳ ದವಾಖಾನೆ

322 (79) ಕೆ.ಜಿ. ಕೋಳಿವಾಡ್ (ರಾಣಿಬೆನ್ನೂರು):-

ಮುಖ್ಯಮಂತ್ರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣಿಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆಯಲ್ಲಿ ಹೆಣ್ಣು ಮಕ್ಕಳ ದವಾಖಾನೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಆ) ಇಲ್ಲಿಯವರೆಗೆ ಮಂಜೂರಾಗದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಇಲ್ಲ

ಆ) ಜಿಲ್ಲಾ ಪರಿಷತ್ತಿನಿಂದ ಪ್ರಸ್ತಾವನೆ ಬಂದಿರುವುದಿಲ್ಲ. ಆರ್ಥಿಕ ಅವಕಾಶ ಮಾಡಿಕೊಂಡು ಪ್ರಸ್ತಾವನೆ ಬಂದರೆ ಪರಿಶೀಲಿಸಿ, ಮಂಜೂರಾತಿಯನ್ನು ನೀಡಲಾಗುವುದು.

ರಾಜ್ಯದ ಹುಲಿ ಸಂರಕ್ಷಣಾ ಯೋಜನೆಗೆ ಖರ್ಚಾದ ಹಣ

323 (29) ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜನಗರ):-

ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹುಲಿ ಸಂರಕ್ಷಣಾ ಯೋಜನೆಗೆ ಪ್ರತಿ ವರ್ಷ ಸರಕಾರ ಖರ್ಚು ಮಾಡುವ ಹಣವೆಷ್ಟು ?

ಆ) ಈ ಸಂರಕ್ಷಿಸಲ್ಪಟ್ಟಿರುವ ಪ್ರದೇಶಗಳಲ್ಲಿ ಪ್ರಸಕ್ತ ಇರುವ ಹುಲಿಗಳ ಸಂಖ್ಯೆ ಎಷ್ಟು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):–

ಅ)	1989–90	81.52 ಲಕ್ಷಗಳು
	1990–91	93.39 ಲಕ್ಷಗಳು
	1991–92	162.65 ಲಕ್ಷಗಳು

ಆ) ಐವತ್ತೆಂಟು

ಮೀನುಗಾರಿಕೆ ಕಾಲೇಜುಗಳ ಸಂಖ್ಯೆ

324 (139) ಶ್ರೀ ಬಿ.ಎಂ. ಇದ್ದಿನಬ್ಬ (ಉಳ್ಳಾಲ):-

ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆ ಕಾಲೇಜುಗಳು ಎಲ್ಲೆಲ್ಲಿ ಇವೆ ?

ಆ) 1989–90, 1990–91 ಮತ್ತು 1991–92ರಲ್ಲಿ ಎಷ್ಟು ವಿದ್ಯಾರ್ಥಿಗಳು ಮೀನುಗಾರಿಕೆ ಪದವಿ ಪಡೆದು ಹೊರಬಂದಿರುತ್ತಾರೆ; (ವಾರ್ಷಿಕವಾರು ವಿವರ ನೀಡುವುದು);

ಇ) ಇವರಿಗೆಲ್ಲಾ ಉದ್ಯೋಗದ ಅವಕಾಶ ಸಿಗುತ್ತದೆಯೇ;

ಈ) ಉದ್ಯೋಗ ಸಿಗದೆ ಇದ್ದಲ್ಲಿ ಅವರ ಬವಣೆಯನ್ನು ತಪ್ಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ) ರಾಜ್ಯದಲ್ಲಿ ಒಂದು ಮೀನುಗಾರಿಕೆ ಕಾಲೇಜು ಮಂಗಳೂರಿನಲ್ಲಿವೆ.

ಆ)	1989–90ರಲ್ಲಿ	19 ವಿದ್ಯಾರ್ಥಿಗಳು
	1990–91ರಲ್ಲಿ	34 ವಿದ್ಯಾರ್ಥಿಗಳು
	1991–92ರಲ್ಲಿ	21 ವಿದ್ಯಾರ್ಥಿಗಳು

ಇ) ಸಾಮಾನ್ಯವಾಗಿ ಈ ಪದವೀಧರರಿಗೆ ಉದ್ಯೋಗಾವಕಾಶಗಳು ದೊರೆಯುತ್ತಿವೆ.

ಈ) ಉದ್ಭವಿಸುವುದಿಲ್ಲ.

ಬೆಳಗಾಂವದಲ್ಲಿ ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪನೆ

325 (855) ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ):-

ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ವಿಶ್ವವಿದ್ಯಾನಿಲಯ ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ ವೈದ್ಯಕೀಯ ಶಿಕ್ಷಣ ವಿಶ್ವವಿದ್ಯಾನಿಲಯ ಪ್ರಾರಂಭಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು (ವಿವರ ನೀಡುವುದು);

ಇ) ಈ ವೈದ್ಯಕೀಯ ವಿಶ್ವವಿದ್ಯಾನಿಲಯವು ಪ್ರಾರಂಭಿಸುವುದರಿಂದ ಎಷ್ಟು ಇದರ ಅಧೀನದಲ್ಲಿ ಬರುವ ವೈದ್ಯಕೀಯ ಕಾಲೇಜುಗಳಾವುವು (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಕಾಲೇಜುವಾರು ಹೆಸರುಗಳನ್ನು ಕೊಡುವುದಾಗಬೇಕು);

ಈ) ವೈದ್ಯಕೀಯ ವಿಶ್ವವಿದ್ಯಾನಿಲಯ ಪ್ರಾರಂಭ ಮಾಡುವುದರಿಂದ ಸರ್ಕಾರದ ಬೊಕ್ಕಸದಿಂದ ವೆಚ್ಚವಾಗುವ ಮೊತ್ತವೆಷ್ಟು; ಮತ್ತು ಈ ಹಣವನ್ನು ಒದಗಿಸಲಾಗುವ ರೀತಿ ಹೇಗೆ ?

ಉ) ವೈದ್ಯಕೀಯ ವಿಶ್ವವಿದ್ಯಾನಿಲಯ ತೆರೆದಲ್ಲಿ ವಿದ್ಯಾರ್ಥಿಗಳ ಸಲುವಾಗಿ ಅದಕ್ಕೆ ಸ್ವತಂತ್ರವಾದ ಆಧುನಿಕ ಹಾಸ್ಪಿಟಲ್‌ನ ಅವಶ್ಯಕತೆ ಇರುವುದು ನಿಜವೇ ? ಹಾಗಿದ್ದಲ್ಲಿ ಈ ಹಾಸ್ಪಿಟಲ್ ತೆರೆಯಲು ಬೇಕಾಗುವ ಹಣವೆಷ್ಟು ಮತ್ತು ಈ ಹಣವನ್ನು ಒದಗಿಸಲಾಗುವ ರೀತಿ ಹೇಗೆ ?

ಊ) ಬೆಳಗಾವಿಯು ವೈದ್ಯಕೀಯ ವಿಶ್ವವಿದ್ಯಾನಿಲಯ ಪ್ರಾರಂಭಿಸಲು ಸೂಕ್ತ ಸ್ಥಳವಾದುದರಿಂದ ಅಲ್ಲಿ ಪ್ರಾರಂಭಿಸಲು ಸರ್ಕಾರದವರು ಯೋಚಿಸಿರುವರೇ ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) ಕರ್ನಾಟಕ ಸರ್ಕಾರವು ಬೆಂಗಳೂರು ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿಗಳಾದ ಡಾ।। ಹೆಚ್. ನರಸಿಂಹಯ್ಯ ಇವರ ಅಧ್ಯಕ್ಷತೆಯಲ್ಲಿ 7.11.87ರಲ್ಲಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ಸಮಿತಿಯನ್ನು ರಚಿಸಿದೆ. ಈ ಸಮಿತಿಯು ತಮ್ಮ ಮೊದಲ ಭಾಗದ ವರದಿಯನ್ನು ಡಿಸೆಂಬರ್ 1991ರಲ್ಲಿ ಎಂ.ಎಸ್.ಎಫ್ 92, ದಿನಾಂಕ 17.7.92ರಂತೆ ಒಪ್ಪಿಗೆ ದೊರೆತಿದ್ದು ಇದೇ ಆದೇಶದಲ್ಲಿ ಸರ್ಕಾರವು ಆರೋಗ್ಯ ವಿಶ್ವವಿದ್ಯಾನಿಲಯದ ಪ್ರಾಥಮಿಕ ವಿವರಗಳಿಗಾಗಿ ವಿಶೇಷಾಧಿಕಾರಿಯ ಹುದ್ದೆಯನ್ನು ಮಂಜೂರು ಮಾಡಿತು. ಡಾ।। ಹೆಚ್. ನರಸಿಂಹಯ್ಯ ಸಮಿತಿಯು ತಮ್ಮ ಎರಡನೇ ಭಾಗದ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಸರ್ಕಾರವು ಒಪ್ಪಿಕೊಂಡು ತರೆಯಬೇಕೆಂದಿರುವ ವಿಶ್ವವಿದ್ಯಾನಿಲಯದ ಬಗ್ಗೆ ಕರಡು ಬಿಲ್‌ನ್ನು ಪರಿಶೀಲಿಸಲಾಗುತ್ತಿದೆ. ವಿಶೇಷಾಧಿಕಾರಿಗಳು ಆರೋಗ್ಯ ವಿಶ್ವವಿದ್ಯಾನಿಲಯರನ್ನು ಸ್ಥಾಪಿಸುವ ಬಗ್ಗೆ ಆರ್ಥಿಕ ವ್ಯವಸ್ಥೆಯ ವಿಷಯವಾಗಿ ತಃಖ್ತೆಯನ್ನು ಸಲ್ಲಿಸಿರುತ್ತಾರೆ ಮತ್ತು ಈಗ ಹಾಲಿ ಕೆಲಸ ನಿರ್ವಹಿಸುವ ಬಗ್ಗೆ ರೆಗ್ಯುಲೇಶನ್ ಆರ್ಡಿನೆನ್ಸ್ ಇತ್ಯಾದಿ ಮಾದರಿ ರೂಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಈ ವಿಶ್ವವಿದ್ಯಾನಿಲಯ ಪ್ರಾರಂಭವಾದಲ್ಲಿ ರಾಜ್ಯದಲ್ಲಿರುವ ಎಲ್ಲಾ ವೈದ್ಯಕೀಯ ಕಾಲೇಜುಗಳು ಇದರ ಅಧೀನದಲ್ಲಿ ಬರುತ್ತವೆ.

ಈ) ಪ್ರಾರಂಭಿಕ ವೆಚ್ಚಕ್ಕಾಗಿ, ಈ ವರ್ಷದಲ್ಲಿ 25.00 ಲಕ್ಷ ರೂ. ಅನುದಾನ ನೀಡಲಾಗಿದೆ. ವಿಶ್ವವಿದ್ಯಾನಿಲಯ ಪ್ರಾರಂಭ ಮಾಡಲು ಬೇಕಾಗುವ ಆರ್ಥಿಕ ಅನುದಾನವನ್ನು ಲೆಕ್ಕ ಮಾಡಿಲ್ಲ.

ಉ) ವೈದ್ಯಕೀಯ ವಿಶ್ವವಿದ್ಯಾನಿಲಯ ತೆರೆದ ನಂತರ ಈ ವಿಷಯವನ್ನು ಪರಿಶೀಲಿಸಲಾಗುವುದು.

ಊ) ಡಾ।। ಹೆಚ್. ನರಸಿಂಹಯ್ಯ ಸಮಿತಿಯ ಭಾಗ – 2ರಲ್ಲಿ ಸಲ್ಲಿಸಿರುವ ವರದಿಯಂತೆ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸಲಹೆ ನೀಡಿದ್ದು, ಸದರಿ ಸಲಹೆಯನ್ನು ಪರಿಶೀಲಿಸಲಾಗುತ್ತಿದೆ.

ಪ್ರಕಟಣೆ

ಅಧ್ಯಕ್ಷರು:– ದಿನಾಂಕ 23ನೆ ಫೆಬ್ರವರಿ 1993ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಪ್ರಸ್ತುತ ಅಧಿವೇಶನದಲ್ಲಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿದೆ:–

ವಿಷಯ	ದಿನಾಂಕ
1. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆ	24 ಮತ್ತು 25ನೇ ಫೆಬ್ರವರಿ 1993
ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯವರಿಂದ ಉತ್ತರ ಹಾಗೂ ಸಂವಿಧಾನ ತಿದ್ದುಪಡಿ ವಿಧೇಯಕಗಳ ಅನುಸಮರ್ಥನೆ	1ನೇ ಮಾರ್ಚಿ 1993
2. ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ	2ನೇ ಮಾರ್ಚ್‌ನಿಂದ 8ನೇ ಮಾರ್ಚ್ 1993 ತನಕ
ಮುಖ್ಯಮಂತ್ರಿಗಳಿಂದ ಉತ್ತರ	9ನೇ ಮಾರ್ಚಿ 1993
3. ವಿವಿಧ ಇಲಾಖೆಗಳ ಅನುದಾನಗಳಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆ	10ನೇ ಮಾರ್ಚ್‌ನಿಂದ 22ನೇ ಮಾರ್ಚ್‌ವರೆಗೆ
4. ಧನ ವಿನಿಯೋಗ ವಿಧೇಯಕ	23ನೇ ಮಾರ್ಚ್ 1993
5. ಶಾಸನ ರಚನಾ ಕಾರ್ಯಕಲಾಪ	3ನೇ, 8ನೇ ಹಾಗೂ 9ನೇ ಮಾರ್ಚ್ 1993

ಇನ್ನು ಮುಂದೆ ಉಪಹಾರಕ್ಕಾಗಿ ಮಧ್ಯಾಹ್ನದ ಬಿಡುವು ಇರುವುದಿಲ್ಲ.

ಈ ಸಂಬಂಧವಾಗಿ ವಿವರಗಳನ್ನೊಳಗೊಂಡ ಲಘು ಪ್ರಕಟಣೆಯೊಂದನ್ನು ಸದಸ್ಯರ ಅನುಕೂಲಕ್ಕಾಗಿ ಪ್ರತ್ಯೇಕ್ಕಾಗಿ ಹೊರಡಿಸಲಾಗುವುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೇ, ಈಗ ತಾವು ಏನು ಕಾರ್ಯಕಲಾಪಗಳ ಪಟ್ಟಿಯನ್ನು ಓದಿದ್ದೀರಿ. ಆ ಕಾರ್ಯಕಲಾಪಗಳ ಪಟ್ಟಿ ನಮಗೆ ಬಂದಿಲ್ಲ. ಶುಕ್ರವಾರ ಖಾಸಗಿ ಕಲಾಪ ಏನು ಇತ್ತು. ಅದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಎಂಬುದು ನನಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು:– ನಿಮಗೆ ಲಘು ಪ್ರಕಟಣೆಯನ್ನು ಕಳುಹಿಸುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನನಗೆ ಬಂದಿರುವ ಸುದ್ದಿ ಪ್ರಕಾರ ಈ ಸದನಕ್ಕೆ ಶುಕ್ರವಾರ ರಜ ಕೊಟ್ಟಿದ್ದೀರಿ.

ಅಧ್ಯಕ್ಷರು:– ಹೌದು. ದಿನಾಂಕ 26ರಂದು ಸಭೆ ಸೇರುವುದಿಲ್ಲ. ಈ ಬಗ್ಗೆ ಬಿಜೆನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ನನಗೆ ಗೊತ್ತಿರುವ ಪ್ರಕಾರ ಈ ಬಿಜಿನೆಸ್ ಅಡ್ವೈಜರಿ ಕಮಿಟಿಯವರು ತಾವು ಬೇಜಾರು ಮಾಡಿಕೊಂಡರೂ ಚಿಂತೆ ಇಲ್ಲ ಬೆಂಗಳೂರಿನಲ್ಲಿ ಕ್ರಿಕೆಟ್ ಆಟ ನಡೆಯುತ್ತಿರುವುದರಿಂದ ರಜ ಕೊಟ್ಟಿದ್ದಾರೆಂದು ತಿಳಿಯಿತು. ಆ ಕಾರಣಕ್ಕಾಗಿ ರಜ ಕೊಟ್ಟಿದ್ದರೆ ನಾನು ಈ ಪ್ರತಿಭಟನೆಯನ್ನು ಮಾಡಿ ಸಭಾತ್ಯಾಗ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನನ್ನದೂ ಇದಕ್ಕೆ ಬೆಂಬಲ ಇಲ್ಲ. ನನಗೆ ಗೊತ್ತಾಗಲಿಲ್ಲ. ನಾನು ತಡವಾಗಿ ಬಂದೆ. ರಜ ಕೊಡಬಾರದಾಗಿತ್ತು. ಯಾರು ಬೇಕಾದರೂ ಹೋಗಬಹುದಾಗಿತ್ತು, ಬಿಡಬಹುದಾಗಿತ್ತು ಅದು ನಮಗೆ ಬೇಕಾಗಿರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ದಿವಸ ಬಹಳ ಹೆಮ್ಮೆ ಪಡಬೇಕಾದ ವಿಷಯ ಏನೆಂದರೆ ನಮ್ಮ ದೇಶದ ಕ್ರಿಕೆಟ್ ಪಟುಗಳು ಪ್ರಬಲವಾದ ಇಂಗ್ಲೆಂಡ್ ಟೀಮನ್ನು ಮೂರು ಸಾರಿ ಸೋಲಿಸಿ ಸರಣಿಯನ್ನು ಗೆದ್ದುಕೊಂಡಿದ್ದಾರೆ. ಅವರಿಗೆ ಅಭಿನಂದನೆಯನ್ನು ಸಲ್ಲಿಸುವುದು ನಮ್ಮ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ಕೂಡ ಕ್ರಿಕೆಟ್ ಫ್ಯಾನ್‌ಗಳು. ಅವರು ಇಲ್ಲಿಗೆ ಬರುತ್ತಿದ್ದಾರೆ. ಆ ಪಂದ್ಯವನ್ನು ನೋಡಬೇಕೆಂಬ ಆಸೆ ಜನಗಳಿಗೆ ಇದೆ. ನಾವು ಹೆಮ್ಮೆ ಪಡಬೇಕಾದ ವಿಚಾರ ಏನು ಎಂದರೆ ನಮ್ಮ ದೇಶದ ಟೀಮ್ ಸರಣಿಯನ್ನು ಗೆದ್ದಿರುವುದು.....

ಶ್ರೀ ವಾಟಾಳ್ ನಾಗರಾಜ್:- ಈ ಸದನದಲ್ಲಿ ಅಭಿನಂದನೆಯನ್ನು ನಮ್ಮ ಕ್ರಿಕೆಟ್ ಪಟುಗಳಿಗೆ ನಾನು ಸಲ್ಲಿಸುತ್ತೇನೆ. ಅವರ ಬೆನ್ನು ತಟ್ಟೋಣ. ಆದರೆ ಸದನಕ್ಕೆ ರಜ ಕೊಟ್ಟು ಹೋಗಬೇಕಾಗಿರಲಿಲ್ಲ. ಇಂತಹ ಪರಿಸ್ಥಿತಿ ಯಾವ ದೇಶದಲ್ಲೂ ಕಾಣುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:- ಶುಕ್ರವಾರ ನಾವು 9.30 ಗಂಟೆಗೆ ಸೇರಬೇಕಾಗಿತ್ತು. ಹೇಗೋ ಒಂದು ಗಂಟೆಗೆ ಅಡ್ಜರ್ನ್ ಮಾಡಬೇಕಾಗಿತ್ತು. ಶನಿವಾರ ಮತ್ತು ಭಾನುವಾರ ಈ ಸದನಗಳು ನಡೆಯುವುದಿಲ್ಲ. ಹೀಗಾಗಿ ಮೂರು-ನಾಲ್ಕು ಗಂಟೆಯ ಸಲುವಾಗಿ ನಾವು ಸೇರುವುದಕ್ಕೆ ಬದಲು ಈ ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಕೆಲವು ಶಾಸಕರು ಅಂದು ಊರಿಗೆ ಹೋಗಬಹುದು. ಕೆಲವು ಶಾಸಕರು ಕ್ರಿಕೆಟ್ ಮ್ಯಾಚ್ ನೋಡಲು ಹೋಗಬಹುದು. ಆ ದಿವಸ ಸದನ ಇದ್ದಿದ್ದರೆ ಸದನ ನಡೆಸುವುದು ಕಷ್ಟವಾಗುತ್ತಿತ್ತು. ಆ ದೃಷ್ಟಿಯಿಂದ ಈ ಒಂದು ನಿರ್ಣಯವನ್ನು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ತೆಗೆದುಕೊಳ್ಳಲಾಗಿದೆ. ಇದರ ಬಗ್ಗೆ ಹೆಚ್ಚಿನ ಚರ್ಚೆಗೆ ಅವಕಾಶ ಇಲ್ಲವೆಂದು ನಾನು ಭಾವಿಸುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ನಾನು ಕ್ರಿಕೆಟ್ ನೋಡುವಂತಹ ಆರಾಮ ವರ್ಗಕ್ಕೆ ಸೇರಿದವನಲ್ಲ. ಆ ಕಾರಣಕ್ಕಾಗಿ ನಾನು ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ. ಈ ಕಾರಣಕ್ಕಾಗಿ ಏನಾದರೂ ಶುಕ್ರವಾರ ರಜ ಕೊಟ್ಟಿದ್ದರೆ ನಾನು ಅದಕ್ಕೆ ಸಭಾತ್ಯಾಗ ಮಾಡುತ್ತೇನೆ. ನಾನು ಶುಕ್ರವಾರಕ್ಕೆ ಖಾಸಗಿ ಮಸೂದೆಗಳನ್ನು ಕಳುಹಿಸಿದ್ದೇವೆ ಹಾಗೂ ಖಾಸಗೀ ನಿರ್ಣಯಗಳನ್ನು ಕಳುಹಿಸಿದ್ದೇನೆ. ಅವುಗಳಲ್ಲಿ ಕೆಲವು ಬಹಳ ಮುಖ್ಯವಾದ ವಿಷಯಗಳಾಗಿವೆ. ನಮ್ಮ ವಿಷಯವನ್ನು ಮೊಟಕು ಮಾಡುವಂತಹ ಈ ತೀರ್ಮಾನವನ್ನು ಯಾರೇ ತೆಗೆದುಕೊಂಡರು. ನಾನು ಅದನ್ನು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಪ್ರೊ. ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:- ನಾನು ಕ್ರಿಕೆಟ್ ವಿರೋಧಿಯಲ್ಲ. ಆದರೆ ರಜ ಕೊಟ್ಟಿರುವುದು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:–ಶುಕ್ರವಾರ ಖಾಸಗಿ ಕಾರ್ಯಕಲಾಪಗಳನ್ನು ನಡೆಸಬೇಕಾಗಿತ್ತು. ಇವೊತ್ತಿನ ದಿವಸ ರಜ ಎಂದು ತಾವು ಘೋಷಣೆ ಮಾಡಿದ್ದೀರಿ. ಯಾವ ಕಾರಣಗೋಸ್ಕರ ತಾವು ರಜಾ ಘೋಷಣೆ ಮಾಡಿದ್ದೀರಿ. ಆ ದಿನದ ಕಾರ್ಯಕಲಾಪಗಳನ್ನು ಮುಂದಿನ ವಾರ ಅಥವಾ ಬೇರೆ ದಿವಸ ನಿಗದಿ ಮಾಡಲು ನಿಯಮದಲ್ಲಿ ಅವಕಾಶವಿದೆ. ಶುಕ್ರವಾರ ದಿವಸ ಖಾಸಗಿ ಕಲಾಪಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಅವುಗಳನ್ನೆಲ್ಲಾ ಮುಂದಿನ ವಾರ ತಾವು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:– ಆಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಈ ಸಂದರ್ಭದಲ್ಲಿ ನಾನು ತಮಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಬೇರೆಯವರ ಅಭಿಪ್ರಾಯವು ಏನೇ ಇರಲಿ ನನ್ನ ಅಭಿಪ್ರಾಯ ಹೇಳುತ್ತೇನೆ. ನಾವು ಕ್ರಿಕೆಟ್ ಸರಣಿಯನ್ನು ಗೆದ್ದಿದ್ದೇವೆ. ಇಂಡಿಯಾ ದೇಶದ ಕ್ರೀಡಾಪಟುಗಳು ಯಾರು ಇದ್ದಾರೆ ಅವರಲ್ಲೂ ವಿಶೇಷವಾಗಿ ಕರ್ನಾಟಕದ ಆಟಗಾರರು ಯಾರು ಇದ್ದಾರೆ ಅವರೆಲ್ಲರಿಗೂ ನಾನು ನನ್ನ ಅಭಿಂದನೆಯನ್ನು ಸಲ್ಲಿಸಲು ಸಂತೋಷಪಡುತ್ತೇನೆ. ಇದನ್ನು ಕ್ರಿಕೆಟ್ ಮಂಡಳಿಯವರಿಗೆ ತಾವು ತಿಳಿಸಬೇಕು. ಹಾಗೂ ಅವರೆಲ್ಲರನ್ನೂ ಬೆಂಗಳೂರಿಗೆ ಸ್ವಾಗತಿಸುತ್ತೇನೆ ಎಂದು ತಾವು ತಿಳಿಸಬೇಕು.

ಶ್ರೀ ಬಿ.ಹೆಚ್.ಬನ್ನಿಕೋಡ್:– ನಾನೂ ಸಹ ಕೆಲವು ಖಾಸಗೀ ನಿರ್ಣಯಗಳನ್ನು ಕಳುಹಿಸಿದ್ದೆ. ಧ್ವಜಾರೋಹಣೆಯನ್ನು ಶಾಸಕರುಗಳು ಮಾಡಬೇಕು ಎಂದು ಕಳೆದ ಮೂರು ವರ್ಷಗಳಿಂದ ಖಾಸಗಿ ನಿರ್ಣಯಗಳನ್ನು ಕಳುಹಿಸುತ್ತಿದ್ದೇನೆ. ಇದು ಇಲ್ಲಿಯವರೆಗೆ ಬರದೇ ಹಾಗೆಯೇ ಉಳಿದಿದೆ. ನಮ್ಮ ಅವಧಿ ಮುಗಿಯುವುದರಲ್ಲಿ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ.

ಆಯಾ ಅವಧಿ ಮುಗಿಯುವುದಕ್ಕೆ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆಯಾ ತಾಲ್ಲೂಕುಗಳಲ್ಲಿ ಶಾಸಕರುಗಳ ಧ್ವಜಾರೋಹಣೆಯನ್ನು ಮಾಡಬೇಕು. ತಹಸೀಲ್ದಾರ್ರು ಮಾಡುವುದನ್ನು ಮಾಡಬೇಕು ಎಂಬ ಒಂದು ಸರ್ವಸಮ್ಮತವಾದ ನಿರ್ಣಯವನ್ನು ಮಾಡುವುದು ಅತೀ ಅವಶ್ಯವಿದೆ.

ಶ್ರೀ ಆರ್.ವಿ. ದೇಶಪಾಂಡೆ:– ತಮ್ಮ ಅನುಮತಿಯನ್ನು ಪಡೆದು ನಾನು ಮತ್ತು ನಮ್ಮ ಸಿಂಧ್ಯಾರವರು.......

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಅರಣ್ಯ ಮಂತ್ರಿಗಳು ಇಲ್ಲಿ ಇಷ್ಟು ಹೊತ್ತು ಇದ್ದರು. ಈಗ ತಾನೇ ಹೊರಟುಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಅರಣ್ಯ ಮಂತ್ರಿಗಳು ಯಾವ ಕಾಡಿಗೆ ಹೋಗಿದ್ದಾರೆ ಅವರನ್ನು ಕರೆದುಕೊಂಡು ಬನ್ನಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ಅರಣ್ಯ ಪ್ರೇರಕರಿಂದ ಸತ್ಯಾಗ್ರಹ

† ಶ್ರೀ ಆರ್.ವಿ. ದೇಶಪಾಂಡೆ:– ಫಾರೆಸ್ಟ್ ಮೋಟೀವೇಟರ್ಸ್ ಕಳೆದ 7–8 ದಿವಸಗಳಿಂದ ಬೆಂಗಳೂರಿನಲ್ಲಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅಲ್ಲಿ 1800 ಜನ ಅರಣ್ಯ ಇಲಾಖೆಯಲ್ಲಿ ಮತ್ತು ಮಂಡಲ ಪಂಚಾಯಿತಿಯಲ್ಲಿಯೂ ಕೆಲವರು ಕೆಲಸ ಮಾಡುತ್ತಿದ್ದಾರೆ. ಇವರು ಸೋಷಿಯಲ್ ಫಾರೆಸ್ಟ್ರಿ ಡಿಪಾರ್ಟ್‌ಮೆಂಟಿನಿಂದ ರಿಕ್ರೂಟ್ ಆಗಿದ್ದವರು. ರಿಕ್ರೂಟ್‌ಮೆಂಟ್ ಎಂದರೆ ಅವರನ್ನು ಹಾನರರಿಯಾಗಿ ಎಂಟು ವರ್ಷದ ಹಿಂದೆ ತೆಗೆದುಕೊಂಡಿದ್ದರು. 1500 ಜನರಿಗೆ ಸೋಷಿಯಲ್ ಫಾರೆಸ್ಟರಿ

ಇಲಾಖೆಯವರೇ ಇಂಟರ್‌ವ್ಯೂ ಮಾಡಿ ನಂತರ ಆ ಜನ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ 300 ಜನರನ್ನು ಸೋಷಿಯಲ್ ಫಾರೆಸ್ಟರ್ ಇಲಾಖೆಯವರು ಜವಾಹರ್ ರೋಜಗಾರ್ ಯೋಜನೆಯ ಮಂಡಲದಲ್ಲಿ ಕೆಲಸ ಮಾಡುವುದಕ್ಕೆ ಕಳುಹಿಸಿರುತ್ತಾರೆ. ಈ ಸಮಸ್ಯೆ ಏನೂ ಹೊಸದಲ್ಲ. ಕಳೆದ ವರ್ಷ ಇದೇ ಸಮಸ್ಯೆ ಸದನದಲ್ಲಿ ಬಂದಾಗ ಅವರಿಗೆ ಹಾನರರಿಯಂ ತಾವು 400 ರೂಪಾಯಿ ಕೊಡುತ್ತಿದ್ದೀರಿ, ಆ ಸಮಯದಲ್ಲಿ ನಾವು ಒತ್ತಾಯ ಮಾಡಿದ ನಂತರ ನೀವು ದಿನಾಂಕ 1-4-92ರಿಂದ 500 ರೂಪಾಯಿಯನ್ನು ಆ ಫಾರೆಸ್ಟ್ ಮೋಟಿವೇಟರ್ಸ್‌ಗೆ ಕೊಡಲಿಕ್ಕೆ ಒಪ್ಪಿಕೊಂಡಿದ್ದು ನಂತರ ಅದನ್ನು ಕೊಟ್ಟಿರಿ. ಎರಡನೆಯದಾಗಿ ಈ ಎಲ್ಲಾ ಜನರಿಗೆ ಜನರಲ್ ರಿಕ್ರೂಟ್‌ಮೆಂಟ್ ಮಾಡುವಾಗ ನೀವು ಪ್ರಿಯಾರಿಟಿ ಕೊಡುತ್ತೇವೆ ಎಂದು ಮಾತು ಕೊಟ್ಟಿದ್ದೀರಿ. ಇವತ್ತು ಏನಾಗಿದೆಯೆಂದರೆ ಮಂಡಲಿಯಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಕೇವಲ 250 ರೂಪಾಯಿ ಸಿಗುತ್ತಾ ಇದೆ. ಸ್ಯಾಲರಿಯಲ್ಲಿ ಸಾಮಾನ್ಯವಾದ ಯೂನಿಫಾರ್ಮಿಟಿ ಇಲ್ಲ. ಹಾಗಾಗಿ ಇವತ್ತು ಸರ್ಕಾರ ಆ ಸೋಷಿಯಲ್ ಫಾರೆಸ್ಟರಿಯಿಂದ ಏನು ಕೆಲವರನ್ನು ತೆಗೆದುಕೊಂಡಿದ್ದೀರಿ ಅವರ ಸ್ಯಾಲರಿಯಲ್ಲಿ ಒಂದು ಯೂನಿಫಾರ್ಮಿಟಿ ಬರಬೇಕಾಗಿದೆ. ಎರಡನೆಯದು ಅವರಿಗೆ ಸಾಕಷ್ಟು ಎಕ್ಸ್‌ಪೀರಿಯನ್ಸ್ ಇದೆ. ಅವರು 7-8 ವರ್ಷದಿಂದ ಕೆಲಸ ಮಾಡಿದ್ದಾರೆ. ಆದ್ದರಿಂದ ನೀವು ನಿಮ್ಮ ವೆಸ್ಟರನ್ ಘಾಟ್ ಪ್ರಾಜೆಕ್ಟ್ ಇದೆ, ಡ್ರೈಲ್ಯಾಂಡ್ ಪ್ರಾಜೆಕ್ಟ್ ಇದೆ, ಅಲ್ಲಿ ಬಹಳಷ್ಟು ವೇಕೆನ್ಸೀಸ್ ಇವೆ. ಅಲ್ಲಿ ಇವರುಗಳನ್ನೆಲ್ಲಾ absorb ಮಾಡಬಹುದು, ಹಾಗೂ ಈ absorbtion ಮಾಡುವುದು ಏನೂ ಹೊಸದಲ್ಲ. ಅಲ್ಲಿ ಇರುವ ಕೆಲವು ಜನರಿಗೆ ಇವತ್ತು ಏಜ್ ಬಾರ್ ಆಗುತ್ತಾ ಇದೆ. Then they will not be eligibe for any appointment. ಕಂಟ್ರಾಕ್ಟ್ appointment ವಿಚಾರದಲ್ಲಿ ಆಗಲಿ, ಮತ್ತು ಇದೇ ಪ್ರಕಾರ ರೇಷ್ಮೆ ಇಲಾಖೆಯಲ್ಲೂ ಸಹ ಹಾನರರಿಯಾಗಿ ತೆಗೆದುಕೊಂಡಿದ್ದಾರೆ. ಅವರಿಗೆ ಸಹ ರೆಗ್ಯೂಲರೈಸ್ ಮಾಡಿದಿರಿ. ಹಾಗಾಗಿ ಇವತ್ತು ತಮ್ಮ ಮುಖಾಂತರ ನಾನು ಸರಕಾರದ ಮೇಲೆ ಒತ್ತಾಯ ಮಾಡುತ್ತಿದ್ದೇನೆ. ಈಗ ಫಾರೆಸ್ಟ್ ರಿಮೋಟೀವೆವ್ಸ್ ಏನು ಇದ್ದಾರೆ. ಅವರ ಹಾನರರಿಯಲ್ಲಿ ಇಕ್ವಾಲಿಟಿ ಬರಬೇಕಾಗಿದೆ. ಇವತ್ತು ಕೇವಲ 500 ಎಕರೆ ರೂಪಾಯಿಯಿಂದಾಗಿ ಯಾರಿಗೂ ಜೀವನ ಮಾಡಲಿಕ್ಕೆ ಸಾಧ್ಯ ಇಲ್ಲ. ರೀಸನೇಬಲ್ ಆಗಿ ಅವರ ಸ್ಯಾಲರಿ ತಾವು ಹೆಚ್ಚು ಮಾಡಬೇಕಾಗುತ್ತದೆ. ಎರಡನೆಯದು ಆದಷ್ಟು ಬೇಗನೇ ಪ್ರಾಧಾನ್ಯತೆ ಮೇಲೆ ತಾವು ಅವರಿಗೆ ರೆಗ್ಯೂಲರೈಸ್ ಮಾಡುತ್ತೇವೆ ಎಂದು ಹೇಳಿದ್ದೀರಿ, ಅದು ಇನ್ನೂ ಆಗಿಲ್ಲ. ಆ ಕ್ರಮ ತಾವು ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು ಮತ್ತು ಸೋಷಿಯಲ್ ಫಾರೆಸ್ಟರಿ ಮುಖಾಂತರ (ರಿಕ್ರೂಟ್‌ಆದಂಥ) 300 ಜನ ಮಂಡಲದಲ್ಲಿ ಕೆಲಸ ಮಾಡುತ್ತಿದ್ದಾರೆ ಅವರಿಗೂ ಕೇವಲ 250 ರೂಪಾಯಿ ಏನು ಪಗಾರ ಸಿಗುತ್ತಾ ಇದೆ. ಇದು ಸರಿಯಲ್ಲ. ಫಾರೆಸ್ಟ್ ಮೋಟಿವೇಟರ್ಸ್ ಏನು ಇದ್ದಾರೆ ಅವರಿಗೆ ಇರುವ ಸ್ಕೇಲ್ ಇವರಿಗೂ ಸಿಗುವಂತಹ ವ್ಯವಸ್ಥೆ ನಮ್ಮ ಸರ್ಕಾರದಿಂದ ಆಗಬೇಕು. ಈ ಮೂರು ವಿಷಯದಲ್ಲಿ ಸರ್ಕಾರದ ಗಮನವನ್ನು ಸೆಳೆದಿದ್ದೇನೆ. ಸರ್ಕಾರ ಇದಕ್ಕೆ ಸೂಕ್ತವಾದ ಪರಿಹಾರ ಕಂಡುಹಿಡಿಯುತ್ತದೆ ಎಂದು ನನಗೆ ವಿಶ್ವಾಸ ಇದೆ. ಹಾಗೂ ಕಳೆದ 7-8 ದಿವಸದಿಂದ ಅವರುಗಳೆಲ್ಲಾ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರ್ಕಾರದ ಕಡೆಯಿಂದ ಈ ಎಲ್ಲಾ ಸಮಸ್ಯೆಗೆ ಪರಿಹಾರ ಕಂಡುಹಿಡಿಯುತ್ತಾರೆ ಎಂದು ನಾನು ಭಾವಿಸಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸನ್ಮಾನ ಅಧ್ಯಕ್ಷರೇ, ನಾವು ಕಳೆದ ವರ್ಷದ ಅಧಿವೇಶನದಲ್ಲಿ ಈ ಫಾರೆಸ್ಟ್ ಮೋಟಿವೇಟರ್ಸ್ ಬಗ್ಗೆ ಇಲ್ಲಿ ಪ್ರಸ್ತಾಪವನ್ನು ಮಾಡಿದ್ದೇವೆ. ಎಲ್ಲಾ ವಿಚಾರಗಳನ್ನು ದೀರ್ಘವಾಗಿ ಮಾನ್ಯ ದೇಶಪಾಂಡೆಯವರು ಪ್ರಸ್ತಾಪ ಮಾಡಿದ್ದಾರೆ. ಈಗ ಪ್ರಶ್ನೆ ಇರತಕ್ಕಂಥಾದ್ದು ಏನು ಅಂದರೆ ಇವರು 300-400 ರೂಪಾಯಿಯಲ್ಲಿ ಜೀವನ ಮಾಡುವುದು ಬಹಳ ಕಷ್ಟ ಆಗುತ್ತದೆ. ಅವರು ಫೀಲ್ಡ್‌ನಲ್ಲಿ ಸುಮಾರು 12-13 ಗಂಟೆ ಕೆಲಸ ಮಾಡುತ್ತಾ ಇರುವವರು. ಆದರಿಂದ ತಾವು ದಯವಿಟ್ಟು ಈಗ ಅವರಿಗೆ ಕೊಡುತ್ತಾ ಇರತಕ್ಕಂತಹ ಸಂಭಾವನೆಯನ್ನು ಸ್ವಲ್ಪವಾದರೂ ಹೆಚ್ಚು

ಮಾಡಬೇಕು ಎಂದು ಹೇಳಿ ನಾನು ಬಹಳ ಒತ್ತಾಯಪೂರ್ವಕವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ ಮತ್ತು ಅವರನ್ನು ಪರ್ಮನೆಂಟ್ ಮಾಡುವುದರ ಬಗ್ಗೆ ಕೇಳುತ್ತಿದ್ದೇನೆ. ಸರ್ಕಾರಕ್ಕೆ ಎಲ್ಲರನ್ನೂ ಒಂದೇ ಸಾರಿ ಪರ್ಮೆನೆಂಟ್ ಮಾಡುವುದಕ್ಕೆ ಆಗದೇ ಇರಬಹುದು. ಆದರೆ ಹಂತ ಹಂತವಾಗಿ ಯಾರಿಗೆ ಸೀನಿಯಾರಿಟಿ ಇದೆ. ಅವರನ್ನು ಈ ವಿಶ್ವ ಬ್ಯಾಂಕಿನ ಸಹಾಯದಿಂದ ನಾವು ಅನೇಕ ಯೋಜನೆಗಳನ್ನು ತೆಗೆದುಕೊಳ್ಳುತ್ತಾ ಇದ್ದೇವೆ, ಅದಕ್ಕೆ ಸಂಬಂಧಪಟ್ಟ ಹಾಗೆ ಇವರ ಒಂದು ಕೆಲಸವನ್ನು ಉಪಯೋಗಿಸಿಕೊಂಡು ಪರ್ಮನೆಂಟ್ ಮಾಡಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ ಈ ಅರಣ್ಯ ಪ್ರೇರಕರು ಬಹಳ ದಿವಸದಿಂದ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬೇಡಿಗೆ ಬಗ್ಗೆ ನೂರಾರು ಮನವಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅನೇಕ ಸಾರಿ ಇದೇ ವಿಧಾನ ಸೌಧದ ಮುಂದೆ ಬಂದು ಧರಣಿ ಮಾಡಿದ್ದಾರೆ. ಅವರ ಸಂಬಳದ ಸಾರಿಗೆ ಬಗ್ಗೆ ನೋಡಿದೆ. ಅದು ಕೂಲಿಗಾರರಿಗಿಂತಲೂ, ದಿನಗೂಲಿ ನೌಕರರಿಗಿಂತಲೂ ಬಹಳ ಅತ್ಯಂತ ನೋವಿನ ಪ್ರಸಂಗದಲ್ಲಿ ಅವರು ಇದ್ದಾರೆ. ದಯ ಮಾಡಿ ಸರ್ಕಾರ ಇವರ ಬಗ್ಗೆ ಒಂದು ವಿಶೇಷ ಗಮನವನ್ನು ಹರಿಸಬೇಕು ಆದಷ್ಟು ಬೇಗ ಇವರ ಬೇಡಿಕೆಯನ್ನು ಈಡೇರಿಸಬೇಕು. ಮಾನ್ಯ ಅರಣ್ಯ ಸಚಿವರು ಈಗ ಬಂದಿದ್ದಾರೆ. ತಾವು ಇದನ್ನು ಬಗೆಹರಿಸುವ ಬಗ್ಗೆ ಆ ನಿಯೋಗವನ್ನು ಕರೆದು ಮಾತನಾಡಿ ಅವರ ಸಮಸ್ಯೆ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅಧ್ಯಕ್ಷರೇ, 72ನೇ ನಿಯಮದ ಪ್ರಕಾರ ದೇಶಪಾಂಡೆಯವರು ಸಿಂಧ್ಯಾರವರು, ರುಕ್ಮಯ್ಯ ಪೂಜಾರಿಯವರು ಪ್ರಶ್ನೆ ಕೇಳಿದ ಹಾಗೆ ಸರ್ಕಾರ ಏನು ಉತ್ತರ ಕೊಟ್ಟಿದೆ ಎಂದರೆ ಈ ಬೇಡಿಕೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಸೂಕ್ತಕ್ರಮವನ್ನು ಆದಷ್ಟು ಬೇಗನೆ ನಿರ್ಧರಿಸಲಾಗುವುದು. ಎಂದು ಅರಣ್ಯಪ್ರೇರಕರು ಸಾಮಾಜಿಕ ಅರಣ್ಯೀಕರಣದ ಬಗ್ಗೆ ಅನುಭವ ಪಡೆದುಕೊಂಡಿದ್ದಾರೆ, ಕೆಲವರು ಪದವೀಧರರಾಗಿದ್ದಾರೆ ಅವರಿಗೆ ಅರಣ್ಯಪ್ರೇರಕರ ತರಬೇತಿ ಕೊಡಲಾಗಿದೆ ಇವರಿಂದಾಗಿ ಫಾರೆಸ್ಟ್ ಗಾರ್ಡ್ ಅಂಡ್ ವಾಚರ್ ಹುದ್ದೆಗಳನ್ನು ಭರ್ತಿ ಮಾಡುವಾಗ ಅವರ ದೈಹಿಕ ಅರ್ಹತೆ ವಿದ್ಯಾರ್ಹತೆಗಳನ್ನು ಪರಿಗಣಿಸಿ ಸೂಕ್ತವಾಗಿ ಪ್ರಾತಿನಿಧ್ಯ ಕೊಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ಇಲಾಖೆಯ ಸರಿಸಮಾನ ಹುದ್ದೆಗಳಿಗೆ ಇವರನ್ನು ನೇಮಿಸಿಕೊಳ್ಳಲು ಪರಿಶೀಲಿಸಿಕೊಳ್ಳಲಾಗುವುದು – ಎಂದು ಉತ್ತರಿಸಿದ್ದಾರೆ. 1500 ಜನ, ಅವರಲ್ಲಿ ಕೆಲವರು ಕೇವಲ 250 ರೂ.ನಲ್ಲಿ 300 ಜನ ಕೆಲಸ ಮಾಡುತ್ತಿದ್ದಾರೆ. 200–500 ರೂ.ಗಳಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ನಾವು ಹೋರಾಟ ಮಾಡಿದಾಗ 400 ರಿಂದ 500 ರೂಗೆ ಏರಿಸಿದಿರಿ, ಕನಿಷ್ಟ 1000 ರೂ.ಗಾದರೂ ಏರಿಸುವ ಅಗತ್ಯ ಇದೆ. ಅವರನ್ನು ಖಾಯಂ ಮಾಡಬೇಕು. ಇದರ ಬಗ್ಗೆ ನಿರ್ದಿಷ್ಟವಾದ ಉತ್ತರ ಕೊಡಬೇಕೆಂದು ಒತ್ತಾಯಿಸುತ್ತೇನೆ.

† ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):– ಅಧ್ಯಕ್ಷರೇ ಈಗಾಗಲೇ ಸದಸ್ಯ ಮಿತ್ರರು ಅರಣ್ಯಪ್ರೇರಕರ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದು ಇದೇ ವಿಷಯ ವಿಧಾನಪರಿಷತ್‌ನಲ್ಲೂ ಸದಸ್ಯರಾದ ಪೂಜಾರ್ ಅವರೂ ಪ್ರಸ್ತಾಪಿಸಿದ್ದಾರೆ. ಅವರ ಬೇಡಿಕೆಗಳ ಬಗ್ಗೆ ಪದಾಧಿಕಾರಿಗಳು ಎರಡು ಸಾರಿ ಬಂದು ನನ್ನೊಡನೆ ಚರ್ಚೆ ಮಾಡಿ ಹೋಗಿದ್ದಾರೆ. ನಿನ್ನೆಯೂ ಕೂಡ ಬಂದಿದ್ದರು, ಅರ್ಧಗಂಟೆ ಅವರ ಜೊತೆ ಮಾತನಾಡಿ ಅವರಿಗೆ ಸಮಾಧಾನಕರವಾದ ಉತ್ತರ ಕೊಟ್ಟು ಕಳುಹಿಸಿದ್ದೇನೆ. ಇವರು ಎತ್ತಿರುವುದು ಕೇವಲ ಅರಣ್ಯ ಇಲಾಖೆಯದಲ್ಲ, ಕರ್ನಾಟಕದಲ್ಲಿ ಅನೇಕ ಇಲಾಖೆಗಳಲ್ಲಿ ಇಂತಹವರು ಸಾವಿರಾರು ಜನ ಇದ್ದಾರೆ. ಇವರನ್ನು ಸಾಮಾಜಿಕ ಅರಣ್ಯ

ಯೋಜನೆಯಲ್ಲಿ ನಿರ್ದಿಷ್ಟ ಕೆಲಸಗಳಿಗಾಗಿ ಮಾತ್ರ ಹಾನರರಿಯಾಗಿ 500ರೂ ಮೇಲೆ 1468ಜನರನ್ನು ತೆಗೆದುಕೊಳ್ಳಲಾಗಿತ್ತು, ಅವರನ್ನು ಖಾಯಂ ಮಾಡುವಾಗ ರೋಸ್ಟರ್ ಪದ್ಧತಿ ಕೂಡ ಬರುತ್ತದೆ. ಸುಪ್ರೀಂ ಕೋರ್ಟಿನ ಆದೇಶದಂತೆ 1986 ರಿಂದೀಚೆಗೆ ನೇಮಕ ಆಗಿದ್ದಾರೆ ಅವರ ಪರಿಸ್ಥಿತಿ ಏನು ಮಾಡಬೇಕಾಗಿದೆ ಎಂದು ನಿದರ್ಶನಗಳನ್ನು ಕೆಲವು ಕೊಟ್ಟಿದ್ದಾರೆ. ಅದರ ಪ್ರಕಾರ ಯಾರ್ಯಾರು ಅರ್ಹರಾಗಿರುತ್ತಾರೆ. ಅವರನ್ನು ಮಾನವೀಯ ದೃಷ್ಟಿಯಿಂದ ಖಾಯಂ ಮಾಡಿಸಲು ಸೂಚನೆ ಕೊಡುತ್ತಿದ್ದೇನೆ. ಆದರೆ ಈ ಸಂದರ್ಭದಲ್ಲಿ ಹೆಚ್ಚಿನ ಮಾಹಿತಿ ಇಲ್ಲದೆ, ಅವರು ಬರುವಾಗಲೇ ಹಾನರರಿಯಾಗಿ 500 ರೂ ಕೊಡಲಾಗಿದೆ, ಆದರೆ ರೋಜಗಾರ್ ಪದ್ಧತಿಯಲ್ಲಿ ಕೂಡ ನೇಮಕವಾಗಿರುವ ಕೆಲವರಿಗೆ 250 ರೂ. ಕೊಡುತ್ತಿದ್ದಾರೆ. ಅವರಿಗೆ 500 ರೂ. ಕೊಡಬೇಕೆಂದು ಕೇಳಿದಾಗ ಅವರೂ ಅದೇ ಕೆಲಸ ಮಾಡಿದಾಗ ಆ ಬೇಡಿಕೆಯನ್ನು ನಾವು ಪರಿಶೀಲನೆ ನೂಡಿ.....

ಶ್ರೀ ವಾಟಾಳ್ ನಾಗರಾಜ್:– ಯಾವಾಗ ಎಂದು ನಿರ್ದಿಷ್ಟವಾಗಿ ಹೇಳಿ.

(ಗೊಂದಲ)

ಅಧ್ಯಕ್ಷರು:– ಕೇಳಿ ಅವರು ಏನು ಹೇಳುತ್ತಾರೆ.

ಶ್ರೀ ಎಂ.ಪಿ. ಕೇಶವಮೂರ್ತಿ:– ಅಂಗನವಾಡಿ ಕಾರ್ಯಕರ್ತರೂ ಅನೇಕ ವರ್ಷಗಳಿಂದ ಬೇಡಿಕೆ ಮಾಡಿ 250 ರೂ 350 ರೂಪಾಯಿಗಳನ್ನು ನಾವು ಪಡೆಯುತ್ತಿದ್ದೇವೆ, ನಮ್ಮ ಸೇವೆಯನ್ನು ಖಾಯಂ ಮಾಡಲು ಒತ್ತಡ ತರುತ್ತಿದ್ದಾರೆ. ನಾನು ಒಂದು ಇಲಾಖೆ ಬಗ್ಗೆ ಉತ್ತರ ಕೊಟ್ಟರೆ ಇದು ಇಡೀ ಸರ್ಕಾರದ ಎಲ್ಲಾ ಇಲಾಖೆಗಳ ಮೇಲೂ ಪರಿಣಾಮ ಬೀರುತ್ತದೆ.

(ಗೊಂದಲ)

12.40 ಪಿ.ಎಂ.

ಶ್ರೀ ಕೆ.ಎಸ್. ಈಶ್ವರಪ್ಪ:– 20 ಸಾವಿರ ರೂಪಾಯಿಗಳನ್ನು ಬಾಡಿಗೆ ಎಂದು ತೆಗೆದುಕೊಳ್ಳುತ್ತಿದ್ದಾರೆ. ಇವರಿಗೆ 500 ರೂಪಾಯಿಗಳನ್ನು ಜೀವನ ಮಾಡುವುದಕ್ಕೆ ಕೊಡುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಿದರು. ತತ್‌ಕ್ಷಣ ಇಂಥ ವಿಚಾರಗಳನ್ನು ಸಭೆಯಲ್ಲಿ ತಂದರೆ ನಾನು ಹೇಗೆ ಉತ್ತರ ಕೊಡುವುದು ಎಂದು. ಈ ರೀತಿ ಉತ್ತರವನ್ನು ಕೊಡುವುದು ಸರಿಯಲ್ಲ. ಸರ್ಕಾರದಲ್ಲಿ ನೀವು ಮಂತ್ರಿಯಾಗಿ ಏನು ಕೆಲಸ ಮಾಡುತ್ತಿದ್ದೀರಿ, ನಿಮ್ಮ ಇಲಾಖೆಯ ಸಂಪೂರ್ಣ ಸಮಸ್ಯೆಯನ್ನು ನೀವು ತಿಳಿದುಕೊಳ್ಳಬೇಕಾಗುತ್ತದೆ. ನೀವು ಹೊಸಬರು ಇದ್ದೀರಿ, ನಿಮಗೆ ಎಂಬಾರಸ್‌ಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ. ಸಡನ್‌ಲಿ ಅಂದರೆ ಏನು ? ಇಲ್ಲಿ ವಿರೋಧ ಪಕ್ಷದಲ್ಲಿ ಕೆಲಸ ಮಾಡುವಾಗ ಏನೇನು ಸಮಸ್ಯೆಗಳು ಹೇಗೇಗೆ ಬರುತ್ತದೆ. ಆ ಪ್ರಕಾರವಾಗಿ ನೀವು ನೋಡಬೇಕಾಗುತ್ತದೆ. ನಾವು ಸುಮ್ಮನೆ ಸಮಸ್ಯೆಯನ್ನು ಶುರು ಮಾಡುವುದಿಲ್ಲ. ಆದುದರಿಂದ ಒಂದು ವೇಳೆ ತಮಗೆ ಸಮಯ ಬೇಕಾದರೆ ದಯ ಮಾಡಿ ಕೇಳಿ. ನಾನು ಬೇಡ ಎಂದು ಹೇಳುವುದಿಲ್ಲ. ಇಲ್ಲಾ ತಾವು ಸಂಜೆ ಸ್ಟೇಟ್‌ಮೆಂಟನ್ನು ಮಾಡುತ್ತೇನೆ ಎಂದು ಹೇಳಿ ? ನಾಳೆ ಮಾಡುತ್ತೇವೆ ಎಂದು ಹೇಳಿ, ಅದರ ಬಗ್ಗೆ ನನ್ನ ವಿವಾದ ಇಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:– ನೀವು ಮುಂಚೆ ಅಧಿಕಾರದಲ್ಲಿದ್ದಾಗ ಮಾಡಿದ ಸ್ಟೇಟ್‌ಮೆಂಟ್ ಏನು ಇದೆ, ಅದರ ಕಾಪಿಯನ್ನು ಕೊಟ್ಟರೆ ಒಳ್ಳೆಯದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಆ ಸರ್ಕಾರ, ಈ ಸರ್ಕಾರ ಎನ್ನುವುದು ಬೇಡ. ತಾವು ಸತ್ಯಹರಿಶ್ಚಂದ್ರರು ಎಂದು ಹೇಳಿಕೊಂಡು ಬಂದಿದ್ದೀರಿ, ನಾವು ಹರಿಶ್ಚಂದ್ರರು ಭ್ರಷ್ಟಾಚಾರವನ್ನು ತೆಗೆಯುತ್ತೇವೆಂದು ಹೇಳಿದ್ದೀರಿ, ಅದು ಕಾರ್ಯಗತವಾಗಿದೆಯೇ ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ಅರಣ್ಯ ಪ್ರೇರಕರಿಗೆ ಒಂದು ಸಾವಿರ ರೂಪಾಯಿಯಾದರೂ ಕೊಡಿ. ಅವರು ಬದುಕಲಿ.

ಶ್ರೀ ಆರ್.ವಿ. ದೇಶಪಾಂಡೆ:– ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇನೆ. ಅವರಿಗೆ ಮೂರು ಸಮಸ್ಯೆಗಳು ಇವೆ. ಈ ಮೊಟಿವೇಟರ್ಸ್‌ನ್ನು ಗೌರವ ಧನದ ಮೇಲೆ ತೆಗೆದುಕೊಂಡಿರುವುದು ನಿಜ. ಸೋಷಿಯಲ್ ಫಾರೆಸ್ಟ್ರಿ ಮಾಡಬೇಕು ಎಂದು ತೆಗೆದುಕೊಂಡಿದ್ದಾರೆ. ಕೆಲವು ಜನರು ಸೋಷಿಯಲ್ ಫಾರೆಸ್ಟ್ರಿಯಲ್ಲಿ ಕೆಲಸ ಮಾಡುತ್ತಾರೆ, ಕೆಲವರು ಸೋಷಿಯಲ್ ಫಾರೆಸ್ಟ್ರಿಯವರು ಅವರು ಮಂಡಳಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ಕಳುಹಿಸಿದ್ದಾರೆ. ಅವರಿಗೆ 400 ರೂಪಾಯಿ ಸಿಗುತ್ತಿತ್ತು. ಮಂಡಳಿಯಲ್ಲೇ ಯಾರು ಕೆಲಸ ಮಾಡುತ್ತಾರೋ ಅವರಿಗೆ 250 ರೂಪಾಯಿ ಸಿಗುತ್ತದೆ. 1–4–92 ರಿಂದ ನಾವು ಇಲ್ಲಿ ಪ್ರಸ್ತಾಪ ಮಾಡಿದ ನಂತರ 500 ರೂಪಾಯಿ ಎಂದು ಮಾಡಿದ್ದಾರೆ. ನಾವು ಏನು ಹೇಳುತ್ತೇವೆಂದರೆ, 500 ರೂಪಾಯಿಗಳಲ್ಲಿ ಇವರು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ. ಕನಿಷ್ಠ ಒಂದು ಸಾವಿರ ರೂಪಾಯಿಯಾದರೂ ಮಾಡಿ. ಎರಡನೆಯದು, 250 ರೂಪಾಯಿಗೆ ಏನು ಕೆಲಸ ಮಾಡುತ್ತಿದ್ದಾರೆ, ಅವರದನ್ನು ಹೆಚ್ಚು ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದಿರಿ. ಮೂರನೆಯದು ಎಲ್ಲರಿಗೂ ಒಂದೇ ಸಾರಿ ಗೌರ್ನಮೆಂಟ್ ಜಾಬ್ ಕೊಡಿ ಎಂದು ನಾವು ಹೇಳಿದರೂ ಕಾಯ್ದೆಬದ್ಧವಾಗಿ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಕ್ರಮೇಣ ಅದನ್ನು ಮಾಡಬೇಕಾಗುತ್ತದೆ. ರೋಸ್ಟರ್ ಸಿಸ್ಟಂ ಮತ್ತೊಂದು ಇದೆ. ಇದರ ಬಗ್ಗೆ ವಿವಾದ ಮಾಡುವುದಿಲ್ಲ. ಇನರ ಬಗ್ಗ ಒಂದು ಭರವಸೆ ಇದೆ. ಕೆಲವು ವೇಕೆನ್ಸೀಸ್‌ಗಳು ಫಿಲಪ್ ಆಗಬೇಕಾದಾಗ ಆ ಸಮಯದಲ್ಲಿ ನೀವು ಈ ಜನರಿಗೆ ಪ್ರೈಯಾರಿಟಿ ಕೊಡಬೇಕಾಗುತ್ತದೆ. ಈ ಮೂರು ಸಮಸ್ಯೆಯ ಬಗ್ಗೆ ಉತ್ತರವನ್ನು ಸದನಕ್ಕೆ ಕೊಡಬೇಕಾಗುತ್ತದೆ. ತಮಗೆ ಸಮಯ ಬೇಕಾದರೆ ಕೇಳಬಹುದು. ಇವತ್ತಾದರೆ ಉತ್ತರ ಕೊಡಿ. ಇಲ್ಲ ಸಂಜೆ ಉತ್ತರವನ್ನು ಕೊಡುತ್ತೇನೆ ಎಂದು ಹೇಳಿ, ಇಲ್ಲಾ ನಾಳೆ ಕೊಡುತ್ತೇನೆ ಎಂದು ಹೇಳಿ. ಆದರೆ ಉತ್ತರವನ್ನು ತಾವು ಕೊಡುವಾಗ ನಾವು ಏನು ಸಮಸ್ಯೆಯನ್ನು ತಮ್ಮ ಮುಂದಿಟ್ಟಿದ್ದೇವೆ, ಅದರ ಬಗ್ಗೆ ಸಮರ್ಪಕವಾಗಿ ಉತ್ತರ ಕೊಟ್ಟರೆ ನಮಗೆ ಸಮಾಧಾನವಾಗುತ್ತದೆ.

ಡಾ।। ಜೀವರಾಜ ಆಳ್ವ:– ಸುಮಾರು ಒಂದು ತಿಂಗಳಲ್ಲಿ ಹಿಂದೆಯೋ ಏನೋ ಈ ಫಾರೆಸ್ಟ್ ಮೊಟಿವೇಟರ್ಸ್ ಅವರು ನನ್ನ ಹತ್ತಿರ ಬಂದರು. ಬಂದಾಗ ನಾನು ಹೇಳಿದೆ. ನಾನು ಟೀಕೆ ಮಾಡಿದೆ. 400 ಕೊಟ್ಟಾಗ ಒಂದು ತಿಂಗಳ ಕಾಲ ವಿಧಾನಸೌಧದಲ್ಲಿ ಕಳೆದಿರಿ, 100 ರೂಪಾಯಿ ಹೆಚ್ಚು ಮಾಡಿದಾಗ ವಾಪಸ್ ಹೋದಿರಿ, ಪುನಃ ವಿಧಾನಸಭೆ ಸೇರುತ್ತಿದೆ, ಈಗಲೂ ಬಂದಿದ್ದೀರಿ. ನಮ್ಮ ಗಮನ ಸೆಳೆಯುತ್ತೀರಿ. ನಮ್ಮ ವಿರೋಧ ಪಕ್ಷದ ನಾಯಕರು, ನಮ್ಮನ್ನೆಲ್ಲಾ ಕರೆದುಕೊಂಡು ಹೋಗಿ ಅಲ್ಲಿ ಸಭೆ ಸೇರಿಸುತ್ತೀರಿ. The whole gamut of the problem is to be understood. ಸರ್ಕಾರ ನೀವು ಈಗ ನಮ್ಮ ಈಶ್ವರಪ್ಪನವರು ಹೇಳುತ್ತಾರೆ, ಅಥವಾ ನಾವು ಎಲ್ಲ ಹೇಳುತ್ತೇವೆ ಎಂದು ಹೇಳಿ

100 ರೂಪಾಯಿ ಜಾಸ್ತಿ ಮಾಡಿದ್ದೇವೆ, 400 ರೂಪಾಯಿ ಜಾಸ್ತಿ ಮಾಡಿದ್ದೇವೆ ಎಂದು ಹೇಳುವುದಕ್ಕೆ ಹೊರಟರೆ ಇದು ಭಿಕ್ಷೆಯಾಗುತ್ತದೆ. ಅವರು ಮಾಡುವುದು ಸರಿಯಲ್ಲ. ಸರ್ಕಾರ ಮಾಡುವುದೂ ಸರಿಯಲ್ಲ. ಇಲ್ಲಿ ನಾವು ಕೇಳುವುದೂ ಸರಿಯಲ್ಲ ಎಂದು ನನ್ನ ಭಾವನೆ.

ಮೊಟಿವೇಟರ್ಸ್ ಬಗ್ಗೆ ಏನು ಕೆಲಸ ಆಗಿದೆ ಏನು ಕೆಲಸ ಮಾಡುತ್ತಿದ್ದಾರೆ ಇದರ ಅನಾಲಿಸಸ್ ನೀವೇನಾದರೂ ಮಾಡಿದ್ದೀರಾ ? ಈಗ ಮಾನ್ಯ ಕೇಶವಮೂರ್ತಿಯವರು ವಿಚಾರಗಳನ್ನು ಪೂರ್ಣ ತಿಳಿದುಕೊಳ್ಳುವಂತಹ ಪ್ರಯತ್ನ ಮಾಡಬೇಕಾಗುತ್ತದೆ. ಇವರು ಎಷ್ಟು ಜನ ಇದ್ದಾರೆ. ಏನು ಕೆಲಸ ಮಾಡುತ್ತಿದ್ದಾರೆ ಇದೊಂದು ತರಹ annual ritual, exercise ಆಗಿದೆ. let us not be a party of this ಎರಡು ಸಾವಿರ ಜನಕ್ಕೆ ಸಂತೋಷಪಡಿಸಲಿಕ್ಕೆ ಎಂದು ಅಲ್ಲ. ನಿಮಗೆ ನಾಚಿಕೆಯಾಗುವುದಿಲ್ಲವೇ ? ನಾವು ಬಹಳ very candidly I spoke to them, Are you sincere, committed and dedicated 100 ರೂಪಾಯಿಗಳನ್ನು ಕೊಟ್ಟು ತಕ್ಷಣ ನಿಮ್ಮ ಸ್ಟ್ರೈಕ್ ಅನ್ನು ಕಾಲ್‌ಆಫ್ ಮಾಡಿ ಹೋಗಿದ್ದೀರಿ ನಿಮ್ಮ real essence of service was given to the state. ರಿಯಲ್ ಮೋಟಿವೇಷನ್ ಮಾಡಿದ್ದರೆ ನೀವು ಮಾಡಿದಂತಹ ಕಾರ್ಯ ಏನು ? ನೀವು graph ತಂದಿದ್ದೀರಾ ? ಯಾವ್ಯಾವ ಭಾಗದಲ್ಲಿ setakite graphs better forest history. ಇದನ್ನು ಮಾಡಿ. ಇದರ ಬಗ್ಗೆ ಪೂರ್ಣವಾಗಿ ಕೂಲಂಕುಷವಾಗಿ ಮಾಡಿ. ಈಗಾಗಲೇ ನಾನು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರ ಹತ್ತಿರ ಬೇಡಿಕೆಯನ್ನು ಮಾಡಿಕೊಳ್ಳುತ್ತಿದ್ದೇನೆ. ಮಂತ್ರಿಗಳನ್ನು ಈಗಲೇ ಕಮಿಟ್ ಮಾಡಬೇಕು. ಸಾಯಂಕಾಲ ಆಯಿತು. ನಿಮ್ಮ ಅಧಿಕಾರಿಗಳು ಬಹಳ ಸುಲಭವಾಗಿ ತಪ್ಪಿಸಿಕೊಂಡು ಹೋಗುತ್ತಾರೆ. because they look at it at financial angle. ಬರೀ 1 ಕೋಟಿ ಮಾನ್ಯ ವೀರಪ್ಪ ಮೊಯಿಲಿಯವರ ಹತ್ತಿರ ತೆಗೆದುಕೊಳ್ಳೋಣ ಅಂತ ಹೇಳಿ ಅದನ್ನು ಮುಗಿಸಿಬಿಡುತ್ತೀರಿ, ಅದನ್ನು ಮಾಡಲಿಕ್ಕೆ ಹೋಗಬೇಡಿ Study the whole problem in all dimension and act. Take your own time, two or three days ನಾಯಕರುಗಳನ್ನು ಕರೆಯಿರಿ, ಅವರನ್ನು ಕರೆಸಿ ನಿಮ್ಮ ಅಧಿಕಾರಿಗಳನ್ನು ಕೂರಿಸಿ ಅದಕ್ಕೆ ಪೂರ್ಣವಾದ ಬೆಂಬಲವನ್ನು ಕೊಡುತ್ತೇವೆ. ಹಿಂದೆಯೂ ಇದನ್ನು ನಾವು ನೋಡಿದ್ದೇವೆ. ಸ್ಟೈಪೆಂಡರಿಸ್ ಆಯಿತು, ಲೋಕಲ್ ಕ್ಯಾಂಡಿಡೇಟ್ಸ್ ಆಯಿತು, ಇದೇ ಏನು ಎಲ್ಲಿಯವರೆಗೆ ಹೋಗುತ್ತೀರಾ ? ಇನ್ನು ಮುಂದೆ ಆ ಮೋಟಿವೇಟರ್ಸ್ ಅಂತ ಇರುವರರನ್ನು the whole concept of motivators are creating leadership in every faculty, it will be lost. ಆದ್ದರಿಂದ ಈ ತಪ್ಪನ್ನು ಮಾಡಬೇಡಿ. ಹಳೆಯ ತಪ್ಪುಗಳನ್ನು ನಾವು ಮಾಡಿರಬಹುದು. ಇನ್ನೊಬ್ಬರು ಮಾಡಿರಬಹುದು, ಆದರ ಪೂರ್ಣ ಡೈಮನ್‌ಷನ್ ಅನ್ನು ಅರ್ಥ ಮಾಡಿಕೊಂಡು ತೀರ್ಮಾನವನ್ನು ತೆಗೆದುಕೊಳ್ಳಿ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ತಮಗೆ ಹೇಳಿದ ಹಾಗೆ ಟೈಂ ತೆಗೆದುಕೊಳ್ಳಿ. ನಾವೇನು ನಿಮ್ಮನ್ನು ಫೋರ್ಸ್ ಮಾಡುತ್ತಿಲ್ಲ. ದಯವಿಟ್ಟು 2-3 ದಿವಸವೆ ತೆಗೆದುಕೊಳ್ಳಿ. ಅವರನ್ನು ಕರೆಯಿರಿ, ಅವರ ಹತ್ತಿರ ಚರ್ಚೆ ಮಾಡಿ. ಇಲ್ಲಿ ಕುಳಿತುಕೊಂಡ ತಕ್ಷಣ ಆಗುವುದಿಲ್ಲ. ಏಕೆಂದರೆ ನನ್ನ ಅಭಿಪ್ರಾಯಗಳಿಗೆ ಬಹಳ ತೀಕ್ಷ್ಣವಾದ ಮಾಹಿತಿ ಬರುತ್ತದೆಂದು ನನಗೆ ಗೊತ್ತಿದೆ. With all responsibility at my command, with all humility at my command, the method adopted is most unboard of. This is not the way. ಆದ್ದರಿಂದ ಈ ದೃಷ್ಟಿಯಲ್ಲಿ ಚರ್ಚೆ ಮಾಡುವುದಿಲ್ಲ. ಉಳಿದ ಸಮಯಗಳಲ್ಲಿ ಮಂತ್ರಿಗಳನ್ನು ಭೇಟಿಯಾಗುವುದಿಲ್ಲ. ವಿಧಾನ ಸಭೆ ನಡೆಯುವಾಗ ಒಂದು ತಿಂಗಳು ಇಲ್ಲಿ ಕುಳಿತುಕೊಳ್ಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅವರಿಗೆ ಅರಣ್ಯರೋಧನವಾಗಿದೆ.

ಶ್ರೀ ವಾಟಾಳ್ ನಾಗರಾಜ್:– ಸದನ ಸೇರುವಾಗ ಇದು ಅನಿವಾರ್ಯ. ಆದ್ದರಿಂದ ಇದನ್ನು ವಿರೋಧ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ಅವರು ಕೇಳಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಅರಣ್ಯ ರೋಧನವನ್ನು ಯಾರು ಕೇಳಲಿಲ್ಲ ಅಂತ ಹೇಳಿ, ಅಸೆಂಬ್ಲಿ ನಡೆಯುವಾಗ.......

(ಗೊಂದಲ)

ಡಾ।। ಜೀವರಾಜ ಆಳ್ವ:– ಬಹಳ ಒಳ್ಳೆಯ ಕೆಲಸಗಾರರಾಗಿದ್ದಾರೆ. ಆದರೆ ಇವರನ್ನು ಮೋಟಿವೆಟರ್ಸ್ ಎನ್ನುತ್ತಾರೆ. ಕಾನ್‌ಸೆಪ್ಟ್ ಆಫ್ ಪಿಲಾಸಫಿ ಎನ್ನುವುದು, ಮೋಟಿವೇಟರ್ಸ್ ಪ್ರಾರಂಭ ಮಾಡಿರುವುದು ಅವರಿಗೆ ಗೌರವ ಧನ ಎಂದು ನೀಡುವುದು. ಒಳ್ಳೆಯ ಕೆಲಸ ಮಾಡಿದ್ದಾರೆ. ಅದರ ಬಗ್ಗೆ ಪೂರ್ಣವಾಗಿ ಆಗಬೇಕೆಂದು ಮಾಡಿರುವುದು. ಕೇರ್‌ಲೆಸ್ ಆಗಿ 100 ರೂಪಾಯಿ ಕೊಟ್ಟಿದ್ದೇವೆ 200 ರೂಪಾಯಿ ಕೊಟ್ಟಿದ್ದೇವೆ ಎನ್ನುವುದು ಬೇಡ. ಕೊಡುವುದಾದರೆ ಸಾವಿರ ಕೊಡಿ, ಎರಡು ಸಾವಿರ ಗೌರವ ಧನವಾಗಿ ಕೊಡಿ ಆದರೆ ಈ ರೀತಿ ಜುಜುಬಿ ಮಾಡಿಕೊಂಡು ಅವರನ್ನು ಭಿಕ್ಷೆ ಕೊಟ್ಟ ಹಾಗೆ ಮಾಡಬೇಡಿ. The concept and philosophy should not be sacrificed. ತಾವು ಯಾರು ತಪ್ಪು ತಿಳಿದುಕೊಳ್ಳಬಾರದು. ಇದು ಅರಣ್ಯರೋಧನ ಅಂತ ಹೇಳಿದರೆ The whole dimension of it is being misguided.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅವರಿಗೆ ಸರಿಯಾಗಿ ಕೆಲಸ ಮಾಡಿಸಿಕೊಳ್ಳಲು ಆಗದಿದ್ದರೆ ನಾವು ಜವಾಬ್ದಾರರಲ್ಲ? ಅವರು ದುಡಿಯುವುದಕ್ಕೆ ಸಿದ್ಧರಿದ್ದಾರೆ. ಅವರ ಮನೆಯಲ್ಲಿ ಜೀತ ಮಾಡುವುದಕ್ಕೆ ತಯಾರಾಗಿದ್ದಾರೆ.

ಡಾ।। ಜೀವರಾಜ ಆಳ್ವ:– ಅವರಿಂದ ಪೂರ್ಣವಾಗಿ ಕೆಲಸ ಮಾಡಿಸಿಕೊಳ್ಳಿ. ಹೆಚ್ಚಿನ ಗೌರವ ಧನವನ್ನು ಅವರಿಗೆ ಕೊಡಿ.

ಶ್ರೀ ವಾಟಾಳ್ ನಾಗರಾಜ್:– ಜೀತ ಪದ್ಧತಿ ತಪ್ಪಿದ್ದರೂ ಬೇರೆ ರೀತಿಯ ಜೀತಪದ್ಧತಿಯಾಗುತ್ತಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ನನ್ನ ಮನಸ್ಸಿನಲ್ಲಿ ಏನು ಮಾತನಾಡಬೇಕೆಂದು ಭಾವಿಸಿಕೊಂಡಿದ್ದೆನೋ ಅದರ ಬಗ್ಗೆ ಪೂರ್ಣವಾಗಿ ಮಾನ್ಯ ಸದಸ್ಯರಾದ ಡಾ।। ಜೀವರಾಜ್ ಆಳ್ವರವರು ಹೇಳಿದ್ದಾರೆ. ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಯಾವುದೇ ವಿಷಯ ಬಹಳ ಪ್ರಾಮುಖ್ಯವಾದ ವಿಷಯವನ್ನು.....

ಮಾನ್ಯ ಒಬ್ಬ ಸದಸ್ಯರು:– ನೀವು ಸಲಹೆಗಳನ್ನು ಇದೇ ರೀತಿ ಮಾಡುತ್ತೀರಾ?

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಅವರು ಸರ್ಕಾರವನ್ನು ನಡೆಸಿದವರು. ಸರ್ಕಾರವನ್ನು ನಡೆಸುವವರು ಯಾವ ರೀತಿ ನಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಜವಾಬ್ದಾರಿಯಿಂದ ಅದರ ಆಗುಹೋಗುಗಳು ಏನಿವೆ? ಕಷ್ಟ ಸುಖಗಳು ಏನು ಈ ಕೆಲಸಗಾರರಿಂದ ಎಷ್ಟು ಮರ ಬೆಳೆದಿದೆ. ಎಷ್ಟು ಗಿಡ ಬೆಳೆದಿದೆ ಎಷ್ಟು ಮೋಟಿವೇಷನ್ ಆಗಿದೆ ಎಷ್ಟು ಇವರುಗಳು ಉಪಯುಕ್ತವಾಗಿದ್ದಾರೆ. ಈ ಕೆಲಸ ತೀರ್ಮಾನ ಮಾಡುವುದರಿಂದ ಬೇರೆ ಬೇರೆ ಇಲಾಖೆಗಳಲ್ಲಿ ನಮ್ಮ ಮಾನ್ಯಮಂತ್ರಿಗಳು ಹೇಳಿದ ಹಾಗೆ ಏನೇನು ಪರಿಣಾಮವಾಗುತ್ತದೆಂದು ಇದರ ಬಗ್ಗೆ ಕೂಲಂಕುಷವಾಗಿ ಯೋಜನೆ ಮಾಡಿ

ತೀರ್ಮಾನ ಮಾಡಬೇಕಾದ್ದು ವಿಷಯವಾಗಿದೆ. ಆ ಕೆಲಸಗಾರರಿಗೆ ತೊಂದರೆ ಮಾಡಬೇಕೆಂದು ಅಲ್ಲ, ಅವರ ಬೇಡಿಕೆಗಳು ಏನಿವೆ ಅದನ್ನು ತಿರಸ್ಕಾರ ಮಾಡಬೇಕೆಂದು ಅಲ್ಲ. ಒಪ್ಪಿಕೊಳ್ಳಬೇಕಾದರೆ ಇದರ ಉಪಯುಕ್ತತೆ ಎಷ್ಟಿವೆ ಇದರಲ್ಲಿ ಏನು ಮಾಡಬೇಕೆಂದು ಸ್ವಲ್ಪ ನಿಧಾನವಾಗಿ ಯೋಜನೆ ಮಾಡಬೇಕಾಗುತ್ತದೆ.

ಶೂನ್ಯ ವೇಳೆಯಲ್ಲಿ ವಿಷಯವನ್ನೆತ್ತಿ ಉತ್ತರ ಹೇಳಿ ಎಂದು ಕೇಳತಕ್ಕದ್ದು ಸಾಧುವಾದುದಲ್ಲ. ಇದರ ಬಗ್ಗೆ ಸರ್ಕಾರ ಪ್ರತ್ಯೇಕವಾಗಿ ಪರಿಶೀಲನೆ ಮಾಡುತ್ತದೆ. ಸರ್ಕಾರದವರು ಇದನ್ನು ಪರಿಶೀಲನೆ ಮಾಡಿ ಉತ್ತರ ಹೇಳಬೇಕು. ಸುಮ್ಮನೆ off hand ಉತ್ತರ ಹೇಳತಕ್ಕದ್ದಲ್ಲ.

ಶ್ರೀ ಬಿ.ಎಚ್. ಬನ್ನಿಕೋಡ್:– ತಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದ ಮಾತನ್ನು ನಾವು ಒಪ್ಪಿಕೊಳ್ಳುತ್ತೇವೆ.....

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಈ ವಿಷಯ ಕುರಿತು ಬೇರೆ ನಿಯಮದಡಿ ಒಂದು ಪ್ರತ್ಯೇಕ ನೋಟೀಸ್ ಕೊಟ್ಟರೆ ....

(ಗೊಂದಲ)

SIR HARNALLI RAMASWAMY:– This is the last word on the subject?

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಈ ವಿಷಯವನ್ನು ಪರಿಶೀಲಿಸದೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ಇದೇನೂ ಹೊಸ ಸಮಸ್ಯೆಯಲ್ಲ. ಹಿಂದೆಯೂ ವಿಧಾನ ಸಭೆಯಲ್ಲಿ ಉತ್ತರ ಕೊಟ್ಟಿದ್ದಾರೆ.......

Sri R.V. DESHPANDE:– I am not compelling the Government to answer now. You take time.

(Interruptions)

Has Mr. Ramaswamy taken over the Forest Portfolio.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸದಸ್ಯರುಗಳೆಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಇದರ ವಿಷಯವಾಗಿ ಮಾನ್ಯ ಸಚಿವರು ಒಂದು ನಿರ್ದಿಷ್ಟ ದಿನಾಂಕ ಅಥವಾ ಯಾವೊತ್ತು ಎಂದಾದರೂ ತಿಳಿಸಬೇಕು.

(ಗೊಂದಲ)

ಅಧ್ಯಕ್ಷರು:– ನಾನು ಮಾನ್ಯ ಸಚಿವರಿಗೆ ಹೇಳಿದ್ದೇನೆ, ಅವರು ಇದರ ಬಗ್ಗೆ ಹೇಳುತ್ತಾರೆ.

ಡಾ|| ಜೀವರಾಜ ಆಳ್ವ:– ಒಂದು ನಿರ್ದಿಷ್ಟ ದಿನಾಂಕ ಅಥವಾ 4–5 ದಿವಸಗಳಾಗಲಿ ಎಂದು ಹೇಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಅದಷ್ಟು ಬೇಗ.......

ಶ್ರೀ ವಾಟಾಳ್ ನಾಗರಾಜ್:- 'ಆದಷ್ಟು ಬೇಗ' ಎನ್ನುವುದು ಉತ್ತರವಾಗುವುದಿಲ್ಲ. ಅಂದರೆ ಯಾವತ್ತು ?

(ಗೊಂದಲ)

SRI R.V. DESHPANDE:– Mr. Keshavamurthy, are you not capable to answer?

SRI M.P. KESHAVA MURTHY:– I will reply, because the Senior Minister wanted to say something. I have yeilded.

SRI R.V. DESHPANDE:– It is not a healthy practice.

SRI M.P. KESHAVA MURTHY:– He is the Minister for Parlimentary Affairs.

SRI R.V. DESHPANDE:– He has nothing to do with this.

SRI M.P. KESHAVA MURHTY:– Why? It is a joint responsibility.

ಶ್ರೀ ವಾಟಾಳ್ ನಾಗರಾಜ್:- ಇದರ ವಿಷಯವಾಗಿ ಹತ್ತು ಜನರು ಉತ್ತರ ಕೊಡುವುದಕ್ಕಾಗುವುದಿಲ್ಲ. ಇದು ಬೇಜವಾಬ್ದಾರಿ ಉತ್ತರ. ಮಾನ್ಯ ಅಧ್ಯಕ್ಷರು, ನಮ್ಮ ರಕ್ಷಣೆಗೆ ಬರಬೇಕು. ಮಾನ್ಯ ಸಚಿವರು ಹೇಳುತ್ತಾರೆ. ಉತ್ತರ ಕೊಡುವುದಕ್ಕೆ ಎಲ್ಲರೂ ಸಮಾನರು ಎಂದರೆ ಏನರ್ಥ ? ಇದು ಸರಿಯಾದುದಲ್ಲ. ಜವಾಬ್ದಾರಿಯಿಂದ ಉತ್ತರ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಬೇಕಾದರೆ ಹಿಂದಿನ ಸರ್ಕಾರ ಕೊಟ್ಟಿದಂಥ ಉತ್ತರ ನೋಡಿ ಇದರ ಬಗ್ಗೆ ಉತ್ತರ ಕೊಡಲಿ. ಸುಮ್ಮನೆ ಇದರ ಬಗ್ಗೆ ಯಾವುದೋ ಇನ್ನೊಂದು ಉತ್ತರ ಕೊಡುವುದಿಲ್ಲ.

ಅಧ್ಯಕ್ಷರು:- ಮಾನ್ಯ ಸಚಿವರು ಉತ್ತರ ಕೊಟ್ಟ ನಂತರ ತಾವು ಪ್ರಶ್ನೆ ಕೇಳಬಹುದು.

ಶ್ರೀ ಎಂ.ಪಿ. ಕೇಶವಮೂರ್ತಿ:- ಮಾನ್ಯ ಅಧ್ಯಕ್ಷರೆ, ಈಗ ವಿರೋಧ ಪಕ್ಷದ ನಾಯಕರು ಹಾಗೂ ಮಿತ್ರರಾದಂಥ ಡಾ।। ಜೀವರಾಜ ಆಳ್ವರವರು ಈ ವಿಷಯದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಮಾನ್ಯ ಹಿರಿಯ ಸಚಿವರಾದಂಥ ಸನ್ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ಹೇಳಿದ ರೀತಿಯಲ್ಲಿ ಅವರೂ ಸಹ ಸರ್ಕಾರವನ್ನು ನಡೆಸಿ ಸರ್ಕಾರದಲ್ಲಾಗತಕ್ಕಂಥ ಆಗುಹೋಗುಗಳ ಬಗ್ಗೆ ಚಿಂತನೆ ಮಾಡಿ ಅವರಿಗೆ ನಾವು ಹೇಳತಕ್ಕಂಥ ಉತ್ತರವನ್ನು ಡಾ।। ಜೀವರಾಜ ಆಳ್ವರವರು ಹೇಳಿದ್ದಾರೆ.

ಡಾ।। ಜೀವರಾಜ ಆಳ್ವ:- ಸನ್ಮಾನ್ಯ ಅಧ್ಯಕ್ಷರೆ, I want to make it very clear ಯಾರನ್ನೂ ಸಹ ರಕ್ಷಣೆ ಮಾಡುವಂಥ ಗೊಂದಲಮಯ ರಾಜಕೀಯ ಇದಲ್ಲ. ಆದರೆ, ನಾನು 6–7 ವರ್ಷಗಳ ಕಾಲ ಸರ್ಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿ, ಸರ್ಕಾರದ ವ್ಯವಸ್ಥೆ ಬಗ್ಗೆ ಗಮನವಿರುವಂಥ ನಾನು ಶ್ರೀ ದೇಶಪಾಂಡೆ ಹಾಗೂ ಶ್ರೀ ಸಿಂಧ್ಯಾರವರು ಹೋದ ವರ್ಷ ಮೋಟಿವೇಟರ್ಸ್ ಹತ್ತಿರ ಹೋಗಿದ್ದೆವು. ಅವರು ಪುನಃ ನನ್ನ ಬಳಿ ಬಂದಾಗ ನಾನು ಹೇಳಿದೆ, ನಿಮಗೆ ನಾಚಿಕೆಯಾಗುವುದಿಲ್ಲ, ಪುನಃ ನನ್ನ ಹತ್ತಿರ ಬಂದಿದ್ದೀರಲ್ಲಾ, ಸರ್ಕಾರ ಕೊಡುವ 100 ರೂಪಾಯಿ ಭಿಕ್ಷೆಗೆ ನೀವು ಮುಷ್ಕರ, ಬಂದ್ ಮಾಡಿದಿರಿ.

(ಗೊಂದಲ)

ಅಧ್ಯಕ್ಷರು:- ಅವರು ಆದಷ್ಟು ಬೇಗ ಅದರ ಬಗ್ಗೆ ಒಂದು ವಿವರಣೆಯನ್ನು ಕೊಡಬೇಕು.

ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಆರ್.ವಿ.ದೇಶಪಾಂಡೆ:– ಯಾವಾಗ ಕೊಡುತ್ತಾರೆ. ದಿನಾಂಕವನ್ನು ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಜೀವರಾಜ ಆಳ್ವರವರೆ ನಮಗೆ ಗೌರವವಿದೆ.

MR. SPEAKER:– Please resume your seats.

ಡಾ॥ ಜೀವರಾಜ ಆಳ್ವ:– ನಾನು ಮಾನ್ಯ ಯಡಿಯೂರಪ್ಪನವರೆ, ಒಂದು ಪಕ್ಷದ ಕಾರ್ಯಾಧ್ಯಕ್ಷನಾಗಿ ನಾಲ್ಕು ಬಾರಿ ಈ ಸದನಕ್ಕೆ ಸತತವಾಗಿ ಬಂದಿದ್ದೇನೆ. ನಾನು ಯಾವ ಕಾಂಗ್ರೆಸ್‌ನ ಹಂಗಿನಲ್ಲೂ ಇರಬೇಕಾಗಿಲ್ಲ, ನಾನು ವಿರೋಧ ಪಕ್ಷದ ನೀತಿಯನ್ನು ಅರಿಯಬೇಕಾಗಿರತಕ್ಕಂಥ ಅಗತ್ಯವಿಲ್ಲ. ಆದರೆ I have to act, I have to make it clear. ಇದು ನಾಲ್ಕನೇ ಬಾರಿ ನಾನು ಇಲ್ಲಿಗೆ ಗೆದ್ದು ಬಂದಿರುವುದು, ಸಾರ್ವಜನಿಕರಿಗೆ ನಾನು ಉತ್ತರ ಕೊಡಬೇಕಾಗಿದೆ, ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಕೆಲವು ವಿಚಾರಗಳಿಗೆ ಬೇರೆ ಡೈಮನ್‌ಷನ್ ಇರುತ್ತದೆ. ರಾಜಕೀಯವಾಗಿ ಪ್ರತಿಯೊಂದನ್ನೂ ವಿರೋಧ ಮಾಡುತ್ತಿದ್ದೇನೆ ಎನ್ನತಕ್ಕದ್ದು ವಿರೋಧಪಕ್ಷದ ಕಾರ್ಯವಾಗಿದ್ದರೆ, ಅದು ನಾನಲ್ಲ I am not a party to it. I have to be bitterly critical. I cannot compromise on fundamental issues. ಇವತ್ತು ನಿಮ್ಮ ಹತ್ತಿರ, ಈಶ್ವರಪ್ಪನವರ ಹತ್ತಿರ ಏನು ವಿರೋಧ ಪಕ್ಷದ ನೀತಿಯನ್ನು ಕಲಿಯಬೇಕಾಗಿಲ್ಲ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:– ಹಾಗಾದರೆ ಅವರಿಗೆ 100 ರೂ. ರಿಂದ 500 ರೂ. ಕೊಡಲಿ ಬಿಡಿ.

ಡಾ॥ ಜೀವರಾಜ ಆಳ್ವ:– 500 ಮಾತ್ರವಲ್ಲ ಎರಡು ಸಾವಿರ ಕೊಡಿ ಎಂದು ಹೇಳುತ್ತೇನೆ. ನಾನು ಏನು ಹೇಳಿದೆ ಎಂದರೆ the concept, the philosophy of motivators, using the voluntary people.. that is to be understood. ಅದಕ್ಕೆ ವಿರೋಧವಾಗಿ ಇದ್ದೇನೆಂದು ಅಲ್ಲ, ನನಗೆ ಏನು ನೋವೆಂದರೆ ಮೊನ್ನೆ ಸರ್ಕಾರದ ಹತ್ತಿರ ಜುಜುಬಿ 100 ರೂ.ವನ್ನು ಭಿಕ್ಷೆಯನ್ನು ಕೇಳಿ ಕೆಲಸ ಮಾಡಬೇಡಿ, 100 ರೂ.ವನ್ನು ಕೊಟ್ಟರೆ ತಕ್ಷಣ ವಾಪಸ್ ಹೋಗಿಬಿಡಿ, ನೀವು ನಿಜವಾಗಿಯೂ ಕೆಲಸ ಮಾಡಿದ್ದೀರಿ, ನಿಮಗೆ ಎರಡು ಸಾವಿರ ಕೊಡಬೇಕು ಎಂದಿದ್ದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಟಿಕ್‌ಟ್ವೆಂಟಿಯನ್ನು ಕೊಟ್ಟು ಬಿಡಿ, ವಿಷವನ್ನು ತೆಗೆದುಕೊಳ್ಳುತ್ತಾರೆ.

(ಗೊಂದಲ)

ಅಧ್ಯಕ್ಷರು:– ದಯ ಮಾಡಿ ಎಲ್ಲರೂ ಕುಳಿತುಕೊಳ್ಳಿ

ಶ್ರೀ ಬಿ.ಎಸ್.ಯಡಿಯೂರಪ್ಪ:– ನನ್ನದು ಒಂದೇ ಒಂದು ಮಾತು ಏನೆಂದರೆ ಅವರು ಆಡಿದ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು ಅದನ್ನು ಎಕ್ಸ್‌ಚೇಂಜ್ ಮಾಡಬೇಕು.

(ಗೊಂದಲ)

ಡಾ॥ ಜೀವರಾಜ ಆಳ್ವ:– ಅದನ್ನು ಹತ್ತು ಸಾರಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಅವರು ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು:– ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ನಾನು ಅದನ್ನು ಪರಿಶೀಲನೆ ಮಾಡುತ್ತೇನೆ. ಈಗ ಮಾನ್ಯ ಬಾಬೂಗೌಡರು ಮಾತನಾಡಲಿ.

ಹೊರ ರಾಜ್ಯಕ್ಕೆ ಹೋಗತಕ್ಕ ಕಬ್ಬಿಗೆ ಪರ್ಚೇಸ್ ಟ್ಯಾಕ್ಸ್ ವಿನಾಯಿತಿ

† ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ಕಬ್ಬನ್ನು ಹೆಚ್ಚು ಬೆಳೆಯುತ್ತಾರೆ. ರೈತರನ್ನು ಕಾಡುವುದಕ್ಕೆ ಸರ್ಕಾರಕ್ಕೆ ಒಂದು ಮಿತಿ ಬೇಡವೆ? 380 ರೂ.ಗೆ ಕೀಟ್‌ನಿಂದ ಪರ್ಚೇಸ್ ಮಾಡಿಕೊಳ್ಳುವುದಕ್ಕೆ ಹತ್ತಿದ್ದಾರೆ. ಕಾರಣ ಏನೆಂದರೆ, ಪೋಲೀಸರು ಬಂದು ಗಾಡಿಯನ್ನು ಹಿಡಿದು ಒಳಗೆ ಹಾಕುತ್ತಾರೆ, ಆದ್ದರಿಂದ ಪರ್ಚೇಸ್ ಟ್ಯಾಕ್ಸ್ ಕೊಡಬೇಕು ಇದನ್ನು ರೈತರಿಂದ ನೇರವಾಗಿ ತೆಗೆದುಕೊಳ್ಳುವುದಿಲ್ಲ. ದಲ್ಲಾಳಿಗಳ ಮುಖಾಂತರ ತೆಗೆದುಕೊಳ್ಳುತ್ತಾರೆ. ಈ ಏಜೆಂಟ್‌ಗಳು ಪೋಲೀಸ್‌ನವರಿಗೆ ಸ್ವಲ್ಪ, ಟ್ರಕ್‌ನವರಿಗೆ ಸ್ವಲ್ಪ ಕೊಟ್ಟು ಉಳಿದುದನ್ನು ರೈತರಿಗೆ ಕೊಡುವುದಕ್ಕೆ ಹತ್ತಿದ್ದಾರೆ. ರೈತರು ಬದುಕುವುದಕ್ಕಾಗಿ ಹೊರಗೆ ಹೋಗತಕ್ಕ ಕಬ್ಬಿಗಾದರೂ ಪರ್ಚೇಸ್ ಟ್ಯಾಕ್ಸನ್ನು ತೆಗೆಯುತ್ತೀರಾ ಎಂದು ಕೇಳಬಯಸುತ್ತೇನೆ. ಪೋಲೀಸರು ಈಗಾಗಲೇ ನೂರಾರು ಗಾಡಿಗಳನ್ನು ತಮ್ಮ ಠಾಣೆಗೆ ಎಳೆದುಕೊಂಡು ಹೋಗಿದ್ದಾರೆ. ಅಲ್ಲಿ ಗಾಡಿಗಳಲ್ಲಿರುವ ಕಬ್ಬು ಒಣಗುತ್ತಿದೆ. ಈ ಸರ್ಕಾರದ ಉದ್ದೇಶವೇನೆಂದರೆ ಪರ್ಚೇಸ್ ಟ್ಯಾಕ್ಸನ್ನು ಕಲೆಕ್ಟ್ ಮಾಡಬೇಕೆಂಬುದು ಕಳೆದ 3 ವರ್ಷದಿಂದ ಕಾರ್ಖಾನೆಯವರು ಪರ್ಚೇಸ್ ಟ್ಯಾಕ್ಸನ್ನು ಕಲೆಕ್ಟ್ ಮಾಡಿದ್ದಾರೆ. ಈ ಸರ್ಕಾರಕ್ಕೆ ಆ ಪರ್ಚೇಸ್ ಟ್ಯಾಕ್ಸನ್ನು ಅವರು ತುಂಬಿಲ್ಲ. ಆ ಕಾರ್ಖಾನೆಯವರಿಗೆ ಮಹಾರಾಷ್ಟ್ರ ಸರ್ಕಾರದವರು ಒಂದು ಷೋಕಾಸ್ ನೋಟೀಸನ್ನು ಕೊಟ್ಟಿದ್ದಾರೆ. ಅದನ್ನು ಓದಿ ಹೇಳಬಹುದೆ? ಏಕೆಂದರೆ ಇದು ಮರಾಠಿಯಲ್ಲಿದೆ.

ಶ್ರೀ ವಾಟಾಳ್ ನಾಗರಾಜ್:--ಕನ್ನಡಕ್ಕೆ ಭಾಷಾಂತರ ಮಾಡಿ ಹೇಳಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– 1990–91ನೇ ಇಸವಿ ಹಂಗಾಮಿಗೆ ಕರ್ನಾಟಕದಿಂದ ತಂದಂಥ ಕಬ್ಬಿಗೆ 42.50ರೂ.ನಂತೆ ಪರ್ಚೇಸ್ ಟ್ಯಾಕ್ಸನ್ನು ಮುರಿದುಕೊಂಡು ಅದೊಂದೇ ವರ್ಷದಲ್ಲಿ 60 ಲಕ್ಷ ರೂ.ಗಿಂತ ಹೆಚ್ಚು ಹಣವನ್ನು ಕಾರ್ಖಾನೆಯವರು ವಾಪಸ್ಸು ಪಡೆದುಕೊಂಡಿದ್ದೀರಿ. ಆದರೆ ಆ ಹಣವನ್ನು ಕರ್ನಾಟಕ ಸರ್ಕಾರಕ್ಕೆ ತುಂಬಬೇಕಾದ ಜವಾಬ್ದಾರಿ ನಿಮಗೆ ಇತ್ತು. ಅದನ್ನೂ ನೀವು ತುಂಬಿಲ್ಲ. ಇದು ಏತಕ್ಕೆ ತುಂಬಿಲ್ಲವೆಂದು ಕಾರಣ ಕೇಳಿ ಒಂದು ನೋಟೀಸನ್ನು ಕೊಟ್ಟಿದ್ದಾರೆ. ಅದೇ ರೀತಿ ಕಳೆದ 3 ವರ್ಷಗಿಂದ ಒಂದೇ ಕಾರ್ಖಾನೆಯವರು ಸುಮಾರು 4 ಕೋಟಿ ರೂ. ವಸೂಲ್ಮಾಡಿಕೊಂಡಿದ್ದಾರೆ. ಅಲ್ಲಿ ಇದಕ್ಕೆ ಜಮೆ ಇದೆ. ಆಡಿಟ್ ಅಬ್ಜಕ್ಷನ್ ಆಗಿದೆ. ಈ ಹಣವನ್ನು ತುಂಬಬೇಕಾಗಿರುವುದು ನಿಮ್ಮ ಹೊಣೆಗಾರಿಕೆ ಎಂದು ಆ ಕಾರ್ಖಾನೆಯವರಿಗೆ ನೋಟೀಸನ್ನು ಕಳುಹಿಸುತ್ತಿದ್ದಾರೆ. ಆದರೆ ನಮ್ಮ ಕರ್ನಾಟಕ ಸರ್ಕಾರದವರು ಈ ಹಣವನ್ನು ಅವರಿಂದ ತೆಗೆದುಕೊಂಡಿಲ್ಲ. ಅಂದ ಮೇಲೆ ಇವರು ಯಾವ ರೀತಿಯ ಆಡಳಿತವನ್ನು ಮಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ. ರೈತರಿಗಂತೂ ತೊಂದರೆ ತಪ್ಪಿಲ್ಲ. ಸರ್ಕಾರಕ್ಕೆ ಹಣ ಜಮಾ ಆಗಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಆ ಹಣವನ್ನು ನೀವು ಪಡೆಯುತ್ತೀರೋ ಹೇಗೆ? ಏಕೆಂದರೆ ಆ ಹಣ ನಮ್ಮ ಸರ್ಕಾರದ್ದು. ಇನ್ನು ಎರಡನೆಯದಾಗಿ, ನಮ್ಮ ರೈತರು ರಾಜ್ಯದಿಂದ ಹೊರಗೆ ಏನು ಕಬ್ಬನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಅದಕ್ಕೆ ಪರ್ಚೇಸ್ ಟ್ಯಾಕ್ಸನ್ನು ತೆಗೆದುಕೊಳ್ಳುತ್ತಾರೆಯೇ ಎನ್ನತಕ್ಕ ಎರಡು ಪ್ರಶ್ನೆಗಳನ್ನು ನಾನು ಕೇಳಬಯಸುತ್ತೇನೆ. ಆ ಷೋಕಾಸ್ ನೋಟೀಸಿನ ಒಂದು ಕಾಪಿಯನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ.

† ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಸಕ್ಕರೆ ಖಾತೆ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ,

ಮಾನ್ಯ ಸದಸ್ಯರಾದ ಬಾಬಾಗೌಡ ಪಾಟೀಲರು ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯದಾಗಿ ನಮ್ಮ ಕರ್ನಾಟಕ ರಾಜ್ಯದಿಂದ ಮಹಾರಾಷ್ಟ್ರ ಸರ್ಕಾರಕ್ಕೆ ಹೋದಂತಹ ಕಬ್ಬಿನ ಮೇಲೆ ಸರ್‌ಛಾರ್ಜನ್ನು ವಸೂಲ್ಮಾಡಿಕೊಂಡಿದ್ದಾರೆ. ಆದರೆ ಆ ಹಣವನ್ನು ಇದುವರೆಗೂ ನಮ್ಮ ರಾಜ್ಯಕ್ಕೆ ಜಮಾ ಮಾಡಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳಿದ ವಿಷಯದಲ್ಲಿ ಬೆಳೆಗಾರರಿಂದಾಗಲೀ ನಮಗೆ ಯಾವುದೇ ಮೂಲದಿಂದಾಗಲೀ ಅಂಥ ಮಾಹಿತಿ ಲಭ್ಯವಾಗಿಲ್ಲ. ಅಂಥ ಮಾಹಿತಿಗಳು ಏನಾದರೂ ಇದ್ದಿದ್ದರೆ ನಾವು ಕ್ರಮವನ್ನು ತೆಗೆದುಕೊಳ್ಳಬಹುದಿತ್ತು. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಮಹಾರಾಷ್ಟ್ರದಲ್ಲಿ ನಮ್ಮ ಕಬ್ಬು ಬೆಳೆಗಾರರ ಹಣ ಜಮಾ ಆಗಿದ್ದರೆ ಅದರ ಬಗ್ಗೆ ಮಹಾರಾಷ್ಟ್ರ ಸರ್ಕಾರದ ಜೊತೆ ನಾವು ವ್ಯವಹಾರ ಮಾಡಿ ಆ ಹಣವನ್ನು ಜಮಾ ಮಾಡಿಸಿಕೊಳ್ಳುವುದಕ್ಕೆ ಯೋಗ್ಯ ಕ್ರಮಗಳನ್ನು ಸರ್ಕಾರ ತೆಗೆದುಕೊಳ್ಳುತ್ತೇವೆ.

ಇನ್ನು ಎರಡನೆಯದಾಗಿ ಪರ್ಚೇಸ್ ಟ್ಯಾಕ್ಸ್‌ನ್ನು ಹಾಕುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ನಮ್ಮ ರಾಜ್ಯದಿಂದ ಕೆಲವು ಸಾರಿ ಮಹಾರಾಷ್ಟ್ರಕ್ಕೆ ಕಬ್ಬು ಹೋಗುವುದು ಏಕೆಂದರೆ ನಮ್ಮ ರಾಜ್ಯದಲ್ಲಿ ಕಬ್ಬಿನ ಬೆಳೆ ಜಾಸ್ತಿಯಾದಾಗ ನೆರೆ ರಾಜ್ಯಕ್ಕೆ ತೆಗೆದುಕೊಂಡು ಹೋಗುತ್ತಾರೆ. ನಮ್ಮ ಬೆಳೆಗಾರರಿಗೆ ಅನುಕೂಲ ಮಾಡಿ ಕೊಡುವುದಕ್ಕೋಸ್ಕರ ಸಂಬಂಧಪಟ್ಟ ಅಧಿಕಾರಿಗಳಿಗೆ ಮೇಲಿಂದ ಮೇಲೆ ಲೈಸೆನ್ಸ್ ಕೊಡುವಂಥ ಅಧಿಕಾರವನ್ನು ನಮ್ಮ ರಾಜ್ಯ ಸರ್ಕಾರ ಕೊಟ್ಟಿದೆ. ಹಾಗೆ ಲೈಸೆನ್ಸ್ ಕೊಡುವಾಗ ಕಬ್ಬಿನ ಬೆಳೆ ನಮ್ಮ ರಾಜ್ಯದಲ್ಲಿ ಹೆಚ್ಚಾದಂಥ ಸಂದರ್ಭದಲ್ಲಿ ಪರ್ಚೇಸ್ ಟ್ಯಾಕ್ಸ್‌ನ್ನೂ ಕೂಡ ಕಡಿಮೆ ಮಾಡುತ್ತಿದ್ದೇವೆ.

ನಮ್ಮ ದಾಸ್ತಾನು ಕಡಿಮೆಯಾದಾಗ ಲೈಸೆನ್ಸ್‌ನ್ನು ಸ್ವಲ್ಪ ಹತೋಟಿಯಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇವೆ. ಈ ರೀತಿಯಾಗಿ ಹೋದ ವರ್ಷ ಅಂದರೆ 1-4-1992ರಿಂದ ಇವತ್ತಿನವರೆಗೆ ನಮ್ಮ ರಾಜ್ಯದಲ್ಲಿ ಪರ್ಚೇಸ್ ಟ್ಯಾಕ್ಸ್‌ನ್ನು ರೈತರಿಗೆ ಅನುಕೂಲವಾಗುವಂತೆ, ಮಹಾರಾಷ್ಟ್ರಕ್ಕೆ ಹೋಗುವ ಸಲುವಾಗಿ ಅದನ್ನು ಮುಕ್ತ ಮಾಡಿದ್ದೇವೆನ್ನುವ ಮಾತನ್ನು ಹೇಳಲಿಚ್ಛಿಸುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಮಾನ್ಯ ಸಚಿವರು ಮುಕ್ತ ಮಾಡಿದ್ದೇವೆಂದು ಹೇಳುತ್ತಾರೆ, ಆದರೆ ಪೋಲೀಸಿನವರು ಕಬ್ಬಿನ ಗಾಡಿಯನ್ನು ತೆಗೆದುಕೊಂಡು ಹೋಗುವವರನ್ನು ಅರೆಸ್ಟ್ ಮಾಡುತ್ತಿದ್ದರೆ. ಆ ಗಾಡಿಗಳನ್ನು ಪೋಲೀಸ್‌ನವರು ಹಿಡಿದುಕೊಂಡು ಕುಳಿತಿದ್ದಾರೆ. ಅವರನ್ನು ಅರೆಸ್ಟ್ ಮಾಡಿದ್ದಾರೆ. ಕಬ್ಬು ಒಣಗುತ್ತಾ ಇದೆ. ಇದರಲ್ಲಿ ಯಾವುದು ಸತ್ಯವೆನ್ನುವುದು ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಎಸ್. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ ಲೈಸೆನ್ಸ್‌ಗಳನ್ನು ಕೊಡುವ ಸಲುವಾಗಿ ಆ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:-- ಸರ್ಕಾರದ್ದು ನೈತಿಕ ಹೊಣೆ ಇತ್ತು. ರೈತರು ಹೆಚ್ಚಿನ ಕಬ್ಬನ್ನು ಬೆಳೆದಿದ್ದಾರೆ, ಪರ ರಾಜ್ಯಕ್ಕೆ ಅದನ್ನು ಕಳುಹಿಸಿ ರಕ್ಷಣೆ ಮಾಡಬೇಕು ಎನ್ನುವ ನೈತಿಕ ಹೊಣೆ ಸರ್ಕಾರಕ್ಕೆ ಇತ್ತು. ಅದನ್ನೂ ಸಹ ಮಾಡಲಿಲ್ಲ. ನಾನೇ ಹೋಯ್ತಾ ಇದ್ದೇವೆ ಅದನ್ನು ಹೋರಾಟ ಮಾಡಿ ಬಿಡುತ್ತೇವೆಂದರೆ ಇವರದು ಪ್ರತಿ ದಿವಸ ಎಂಥ ಉಪದ್ರವವೆಂಬುದನ್ನು ಮಹಾರಾಷ್ಟ್ರ ಬಾರ್ಡರ್‌ನಲ್ಲಿ ನೋಡಬೇಕು. ಈ ಕಾರಣ ಲೈಸೆನ್ಸ್ ಕೊಡುವಂಥ ಪದ್ಧತಿ ನಮಗೆ ಬೇಡ. ಪರ ರಾಜ್ಯಕ್ಕೆ ಹೋಗುವಂತ ಕಬ್ಬಿಗೆ ಪರ್ಚೇಸ್ ಟ್ಯಾಕ್ಸ್ ಇಲ್ಲವೆನ್ನುವಂಥ ಒಂದು [illegible] ಮಾಡಿದರೆ ಎಲ್ಲಾ ಸಮಸ್ಯೆ ಬಗೆ ಹರಿಯುತ್ತದೆಂದು ನನ್ನ ವಿಚಾರ.

ಶ್ರೀ ಎಸ್.ಬಿ. ಪಾಟೀಲ್:- ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವ ಲೈಸೆನ್ಸನ್ನು

ತೆಗೆದುಕೊಂಡಿರುತ್ತಾರೋ ಅವರಿಗೆ ನಾವು ನಿರ್ಬಂಧ ಮಾಡಿಲ್ಲ. ಯಾರು ಲೈಸೆನ್ಸ್ ಇಲ್ಲದೆ ಹೊರ ರಾಜ್ಯಗಳಿಗೆ ಸಾಗಿಸುತ್ತಿದ್ದಾರೆ ಅಂಥವರ ಮೇಲೆ ಟ್ಯಾಕ್ಸ್ ತಪ್ಪಿಸತಕ್ಕಂಥ ಒಂದು ಕಾರ್ಯಕ್ರಮ ಹಾಕಿಕೊಂಡಿರುತ್ತಾರೆ. ಅವರಿಗೆ ನಿರ್ಬಂಧ ಮಾಡುವ ಸಲುವಾಗಿ ನಾವು ಲೈಸೆನ್ಸ್ ಕೊಡುವಂಥ ಪದ್ಧತಿಯನ್ನು ಮಾಡಿದ್ದೇವೆ ಹೊರತು-ರೈತರಿಗೆ ತೊಂದರೆ ಮಾಡುವಂತ ರೀತಿ ಮಾಡುತ್ತಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಲೈಸೆನ್ಸ್ ಕೊಡುವುದು ಎಂದರೆ ಈ ರೀತಿ ತೊಂದರೆಯಾಗುತ್ತಿದೆ. ರೈತರು ಬದುಕಲಿ ಬಿಡಿ.

ಶ್ರೀ ಬಿ.ಎಸ್. ಯಡ್ಡಿಯೂರಪ್ಪ:- ಅವನು ಕಬ್ಬನ್ನು ಬೆಳೆದರೆ ಅವನಿಗೆ ಅರೆಯಲು ಅವಕಾಶವಿಲ್ಲ. ಅವನು ಹೊರಗಡೆ ತೆಗೆದುಕೊಂಡು ಹೋಗುತ್ತೇನೆಂದರೆ ಲೈಸೆನ್ಸ್ ಏತಕ್ಕೆ ಬೇಕು ? ನೀವು ಅವಕಾಶವನ್ನು ಮಾಡಿಕೊಟ್ಟರೆ ಅವನು ಎಲ್ಲಿಬೇಕೋ ಅಲ್ಲಿ ಮಾರಾಟ ಮಾಡಿ ಅವನು ಬದುಕಲು ಅವಕಾಶ ಮಾಡಿಕೊಡಿ. ಅವನು ಬೆಳೆದಂಥ ಕಬ್ಬಿಗೆ ಯಾರಪ್ಪನ ಅಪ್ಪಣೆ ಸ್ವಾಮಿ. ಏತಕ್ಕೆ ಪರ್ಮಿಟ್ ಬೇಕು ? ಇದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಪರ್ಚೇಸ್ ಟ್ಯಾಕ್ಸನ್ನು ನೀವು ಕಲೆಕ್ಟ್ ಮಾಡಿಲ್ಲ. ಮಹಾರಾಷ್ಟ್ರ ಸರ್ಕಾರದ ಆಡಿಟ್ ರಿಪೋರ್ಟ್ ನೋಡಿ.

ಶ್ರೀ ಬಿ.ಎಸ್. ಪಾಟೀಲ್:- ಅದು ನಮ್ಮ ನಜರಿಗೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಸಕ್ಕರೆ ಮಂತ್ರಿಗಳು ಸಿಹಿ ಉತ್ತರವನ್ನು ಕೊಡಿ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಲೈಸೆನ್ಸ್ ಪದ್ಧತಿಯನ್ನು ದಯ ಮಾಡಿ ತೆಗೆಯಬೇಕು.

ಶ್ರೀ ಬಿ.ಎಸ್. ಪಾಟೀಲ್:- ಮಾನ್ಯ ಸದಸ್ಯರು ಹೇಳಿದ ಹಾಗೆ ರೈತರ ಹಿತರಕ್ಷಣೆ ಮಾಡಬೇಕೆನ್ನುವುದು ನಮ್ಮ ಸರ್ಕಾರದ ಇಚ್ಛೆ. ಅದನ್ನು ತಾವೆಲ್ಲಾ ಒಪ್ಪುತ್ತೀರಿ. ಒಂದೊಂದು ಸಲ ನಮ್ಮ ರಾಜ್ಯದಲ್ಲಿ ಕಬ್ಬಿನ ಉತ್ಪಾದನೆ ಜಾಸ್ತಿಯಾದಂಥ ಸಮಯ ಕೆಲವು ಸಲ ಇರುತ್ತದೆ. ಅಂಥ ಸಮಯದಲ್ಲಿ ನಮ್ಮ ರೈತರಿಗೆ ತಮ್ಮ ಕಬ್ಬನ್ನು ಹೊರಗಡೆ ಕಳುಹಿಸಲಿಕ್ಕೆ ಮುಕ್ತವಾದಂಥ ಒಂದು ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಒಂದೊಂದು ವರ್ಷ ನಮ್ಮ ಕಬ್ಬಿನ ಬೆಳೆ ಕೊರತೆಯಾದಾಗ ನಮಗೆ ಇರತಕ್ಕಂಥ ಎಲ್ಲಾ ಫ್ಯಾಕ್ಟರಿಗಳಿಗೆಲ್ಲಾ ಕಬ್ಬಿನ ಸರಬರಾಜು ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಫ್ಯಾಕ್ಟರಿಗಳಿಗೆ ಕಬ್ಬಿನ ಕೊರತೆಯಾದಾಗ ಹೊರಗಡೆ ನೀವು ಮುಕ್ತವಾಗಿ ಕೊಡಬೇಕೆನ್ನುವಂಥ ಮಾತನ್ನು ಹೇಳಿದಿರಿ. ಅದು ಅಷ್ಟು ಸಮಂಜಸವಾಗುವುದಿಲ್ಲ. ಕಾರಣ ನಮ್ಮಲ್ಲಿ......

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ನಮ್ಮ ಕಾರ್ಖಾನೆಯಿಂದ ಇವತ್ತು 600 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅಲ್ಲಿ 380 ರೂಪಾಯಿಗಳನ್ನು ಕೊಡುವಂಥ ಅವಶ್ಯಕತೆ ಏನಿತ್ತು ? ಹೇಳಿ. ಕಬ್ಬು ಹೆಚ್ಚಾದ ಕಾರಣವೇ ಇದು. ಅಷ್ಟಕ್ಕೂ ಬಿಡುವುದಿಲ್ಲ, ಟನ್‌ಗೆ 20 ರೂಪಾಯಿ ಕೊಡಿರಿ ಎಂದು ಹೇಳುವುದು ಆಮೇಲೆ ಲೈಸೆನ್ಸ್ ತೆಗೆದುಕೊಳ್ಳಿ ಎಂದು ಹೇಳುವುದು ಆಮೇಲೆ ಪೋಲೀಸ್‌ನವರಿಗೂ ಕೊಡಬೇಕು. ಟ್ರಕ್‌ನವರು ಹೇಳುತ್ತಾರೆ. ಪೋಲೀಸ್‌ನವರು ಹಿಡಿಯುತ್ತಾರೆ ಆದ್ದರಿಂದ ನಮಗೆ ಸಾವಿರ ರೂಪಾಯಿಗಳನ್ನು ಕೊಡಿ ಅದನ್ನೆಲ್ಲಾ ನಾವು ನಿಭಾಯಿಸಿಕೊಳ್ಳುತ್ತೇವೆಂದು ಹೇಳತಕ್ಕಂಥದ್ದು ಇವೆಲ್ಲದರಿಂದ ರೈತರಿಗೆ ಕಬ್ಬನ್ನು ಏತಕ್ಕೆ ತಾನೆ ಹಾಕಿದೆವೋ ಎನ್ನುವಂಥ ಗೊಂದಲ ಪರಿಸ್ಥಿತಿ ಮತ್ತು ಪಶ್ಚಾತ್ತಾಪ ಉಂಟಾಗಿದೆ. ಕಾರಣ ನೀವು ಲೈಸೆನ್ಸ್ ತೆಗೆದುಕೊಳ್ಳಿ, ಅದಕ್ಕೆ ಪರ್ಚೇಸ್ ಟ್ಯಾಕ್ಸನ್ನು ತುಂಬಿರಿ ಎಂದು ಹೇಳುವುದು. ಎಲ್ಲಿ ಕಬ್ಬು ತೆಗೆದುಬಿಡಿ ಎಂದು ಹೇಳುವುದಿಲ್ಲ; ಮಹಾರಾಷ್ಟ್ರಕ್ಕೆ ಏನು ಕಬ್ಬು ಹೋಗುತ್ತಿದೆ ಅದಕ್ಕೆ ಮಾತ್ರ ಮುಕ್ತ ಮಾಡಿರಿ ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಪಾಟೀಲ್:– ಸದಾ ಕಾಲ ಮುಕ್ತ ಮಾಡುವುದಕ್ಕಾಗುವುದಿಲ್ಲ. ಕಾರಣ ಇಷ್ಟೇ, ನಮ್ಮ ಫ್ಯಾಕ್ಟರಿಗಳನ್ನೂ ರಕ್ಷಣೆ ಮಾಡಬೇಕಾಗುತ್ತದೆ, ನಮ್ಮ ರೈತರನ್ನು ರಕ್ಷಣೆ ಮಾಡಬೇಕಾಗುತ್ತದೆ. ಎರಡು ದೃಷ್ಟಿಯಿಂದ ಹೆಚ್ಚುವರಿ ಯಾವಾಗ ಇರುತ್ತದೆಯೋ ಆವಾಗ ನಾವು ಮುಕ್ತವಾಗಿ ಕೊಡುತ್ತೇವೆ ಎನ್ನುವಂಥ ಮಾತನ್ನು ಹೇಳುತ್ತೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– 600 ರೂಪಾಯಿಗಳನ್ನು ಕೊಡುವಂಥ ಕಾರ್ಖಾನೆ ಬಿಟ್ಟು 380 ರೂಪಾಯಿಗಳನ್ನು ಕೊಡುವಂಥದ್ದಕ್ಕೆ ಯಾವ ರೈತರಿಗೆ ತನ್ನ ಕಬ್ಬನ್ನು ಕೊಡಲು ಮನಸ್ಸು ಬರುತ್ತದೆ ? ನಮ್ಮ ಕಾರ್ಖಾನೆಯಲ್ಲಿ ಕಬ್ಬು ಕಡಿಮೆ ಇದೆ ಎಂದು ಹೇಳುತ್ತೀರಿ, 600 ರೂಪಾಯಿಗೆ ಕೊಡುವುದನ್ನು ಬಿಟ್ಟು ಮಹಾರಾಷ್ಟ್ರಕ್ಕೆ 380 ರೂಪಾಯಿಗೆ ಹೋಗಿ ಮಾರಾಟ ಮಾಡಿಕೊಳ್ಳುವುದಕ್ಕೆ ಯಾರು ಹೋಗುತ್ತಾರೆ.

ಶ್ರೀ ಬಿ.ಎಸ್. ಪಾಟೀಲ್:– ಈ ವರ್ಷದ 31–3–1993ರವರೆಗೆ ಮುಕ್ತ ಮಾಡಿದ್ದೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಮತ್ತೆ ಏತಕ್ಕೆ ಪೊಲೀಸ್ ಸ್ಟೇಷನ್‌ದೊಳಗೆ ಗಾಡಿಗಳನ್ನು ಹಿಡಿದು ಹಾಕುತ್ತಿದ್ದಾರೆ ?

ಶ್ರೀ ಬಿ.ಎಸ್. ಪಾಟೀಲ್:– ಪಾಟೀಲ್ ಹಿಡಿದು ಹಾಕಿರತಕ್ಕಂಥ ಪ್ರಸಂಗ ನಮ್ಮ ನಜರಿಗೆ ಬಂದಿಲ್ಲ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಈಗ ಏನು ಮಾಡುತ್ತೀರಿ ?

ಶ್ರೀ ಬಿ.ಎಸ್. ಪಾಟೀಲ್:– ಸಧ್ಯಕ್ಕೆ ಮುಕ್ತವಾಗಿ ಬಿಟ್ಟಿದ್ದೇವೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಲೈಸೆನ್ಸ್ ಇಲ್ಲ.

ಶ್ರೀ ಬಿ.ಎಸ್. ಪಾಟೀಲ್:– ಲೈಸೆನ್ಸ್ ಇದ್ದವರಿಗೆ ಅಷ್ಟೆ. ಲೈಸೆನ್ಸ್ ತೆಗೆದುಕೊಂಡು ಹೋಗಬೇಕು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಮುಕ್ತವಾಗಿ ನಡೆಯಬಹುದೆಂದ ಮೇಲೆ ಲೈಸೆನ್ಸ್ ತೆಗೆದುಕೊಳ್ಳಬೇಕಾಗಿಲ್ಲ.

ಅಧ್ಯಕ್ಷರು:– ಸಚಿವರು ಪರಿಶೀಲಿಸಿ ಉತ್ತರಿಸಿ.

ಪ್ರೊ. ಡಿ.ಎಂ. ನಂಜುಂಡಸ್ವಾಮಿ:– ಮಂತ್ರಿಗಳು ಹೇಳುತ್ತಿದ್ದರು, ಹೆಚ್ಚುವರಿ ಕಬ್ಬು ಇಲ್ಲವೆಂದು. ಅದು ತಮ್ಮ ಜಿಲ್ಲೆಗೂ ಸಂಬಂಧಪಟ್ಟದ್ದುದು. ಬೆಳಗಾಂ ಜಿಲ್ಲೆ, ಮಂತ್ರಿಗಳ ಜಿಲ್ಲೆ, ಬೀದರ್ ಜಿಲ್ಲೆ, ಮೈಸೂರು ಜಿಲ್ಲೆ, ಮಂಡ್ಯ ಜಿಲ್ಲೆ ಇಲ್ಲೆಲ್ಲ ಹೆಚ್ಚುವರಿ ಕಬ್ಬು ಇದೆ. ಮತ್ತೆ ಪ್ರತಿ ಕಾರ್ಖಾನೆಗೆ ರಿಸರ್ವ್ಡ್ ಏರಿಯ ಎಂದು ಇದೆ. ರಿಸರ್ವ್ಡ್ ಏರಿಯ ಬಿಟ್ಟು ಬೆಳೆದಿರುವ ಕಬ್ಬು ಅರೆಯುವುದಕ್ಕೆ ಶಕ್ತಿ ಇಲ್ಲ. ಹೊರಗಡೆ ಹೋಗುವುದಕ್ಕ ನಿರ್ಬಂಧ ಹಾಕಿದ್ದಾರೆ. ಅದಕ್ಕೆ ಸಂವಿಧಾನದಲ್ಲಿ ಹಕ್ಕು ಇಲ್ಲ. ಆರ್ಟಿಕಲ್ 301ನ್ನು ತೆಗೆದು ನೋಡಿ. ನಿರ್ಬಂಧ ಹಾಕುವುದಕ್ಕೆ ನಿಮಗೆ ಹಕ್ಕು ಇಲ್ಲ. ಸರ್ಕಾರ ಕಾನೂನು ಬಾಹಿರವಾಗಿ ನಡೆಯುತ್ತಿದೆ. ಬಾಬಾಗೌಡರು ಹೇಳುತ್ತಿದ್ದರು ಪರ್ಚೇಸ್ ಟ್ಯಾಕ್ಸ್‌ನ್ನು ಮಹಾರಾಷ್ಟ್ರ ಕಾರ್ಖಾನೆಯವರು ಮುರಿದುಕೊಂಡಿದ್ದಾರೆ ಎಂದು. ಮುರಿದುಕೊಂಡಿರುವುದು ನಮಗೆ, ನಿಜವು ಕಾನೂನು ಪ್ರಕಾರ ನಮಗೆ ಪರ್ಚೇಸ್ ಟ್ಯಾಕ್ಸ್ ಆ ಕಾರ್ಖಾನೆಯವರು ಕಟುಹಿಸಿಕೊಡಬೇಕು. ಅದನ್ನು ತೆಗೆದುಕೊಂಡು ಬರುವ ಯೋಗ್ಯತೆ ಈ ಸರ್ಕಾರಕ್ಕೆ ಇಲ್ಲ. ಮತ್ತೊಂದು ಕಾನೂನು ವಿಷಯ ಹೇಳುವುದಾದರೆ ಹೈಕೋರ್ಟ್ ರೂಲಿಂಗ್ ಇದೆ. You have no right to levy purchase tax for sales in Maharashtra. ಕಬ್ಬು ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿ ಮಾರಾಟವಾಗುವುದು. What right does this government has in levying any purchase tax for

sugarcane sold in Maharashtra? ಇದನ್ನು ಸರಿ ಮಾಡುತ್ತೀರಾ ? ನಮ್ಮ ರಾಜ್ಯದಿಂದ ಆಚೆ ಹೋಗುವ ಕಬ್ಬಿಗೆ ಪರ್ಚೇಸ್ ಟ್ಯಾಕ್ಸ್ ರದ್ದು ಮಾಡಬೇಕು. ನಿಮಗೆ ಆ ಅಧಿಕಾರ ಇಲ್ಲ. ನೀವು ನ್ಯಾಯಾಂಗ ನಿಂದನೆ ಮಾಡುತ್ತಿದ್ದೀರಿ. ನಮ್ಮ ಕರ್ನಾಟಕ ಹೈಕೋರ್ಟ್ ರೂಲಿಂಗ್ ಇದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಮಹಾರಾಷ್ಟ್ರ ಸಕ್ಕರೆ ಕಾರ್ಖಾನೆ ಬಗ್ಗೆ ಹೇಳುತ್ತಿದ್ದಾರೆ. ಅವರೇ ಸರ್ಕಾರಕ್ಕೆ ಟ್ಯಾಕ್ಸ್ ಕೊಡಬೇಕೆಂದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಅದು ಅಕ್ರಮವಾಗಿ ಆಗಿರುವುದು.

ಶ್ರೀ ಬಿ.ಎಸ್. ಪಾಟೀಲ್:– ಅದು ನಮ್ಮ ಸರ್ಕಾರದ ನಜರಿಗೆ ಬಂದಿಲ್ಲ. ಆ ಬಗ್ಗೆ ನಾವು ಪರಿಶೀಲಿಸಿ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಪರಿಶೀಲಿಸುವುದು ಏನೂ ಇಲ್ಲ. ಇವರಿಗೆ ಅಧಿಕಾರ ಇಲ್ಲ. ಪರ್ಚೇಸ್ ಟ್ಯಾಕ್ಸ್ ಹಾಕುವುದಕ್ಕೆ.

ಶ್ರೀ ಕೆ.ಹೆಚ್. ರಂಗನಾಥ:– ಒಂದು ಸಮಸ್ಯೆ ಬಂತು ಬಾಬಾಗೌಡರು ಪ್ರಸ್ತಾಪಿಸಿದಾಗ. ಆ ಭಾಗದಲ್ಲಿ 600 ಚಿಲ್ಲರೆ ರೇಟು ಇದೆ. ರೈತ ಅಲ್ಲಿಗೆ ಕೊಡುತ್ತಾನೆ ಎಂದು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– 380 ಅಲ್ಲಿದೆ, ಅಲ್ಲಿ 600 ಇದೆ. ಇಲ್ಲಿ 600ಕ್ಕೆ ಕೊಡುತ್ತಿದ್ದಾರೆ, ಅಲ್ಲಿ 380ಕ್ಕೆ ಮಾರಿಕೊಳ್ಳುತ್ತಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಏನಾಗುತ್ತಿದೆ ಎಂದರೆ ಇವರು ಹೇಳುತ್ತಾರೆ ನಮ್ಮ ಫ್ಯಾಕ್ಟರಿ ಎಂದು. ಅದು ಮಲಪ್ರಭ ಸಕ್ಕರೆ ಕಾರ್ಖಾನೆ, ಅದಕ್ಕೆ ರಿಸರ್ವ್ಡ್ ಏರಿಯ ಇದೆ. ಆ ಏರಿಯಾದ ಹತ್ತಿರದಲ್ಲಿ ಬೆಳೆದಿರುವುದು ಈಗ 600 ರೂಪಾಯಿಗೆ ಕೊಡುತ್ತಿದ್ದಾರೆ. ಮಲಪ್ರಭ ಸಕ್ಕರೆ ಕಾರ್ಖಾನೆಯವರು ಇಂಡಿಯಾದಲ್ಲೇ ಹೈಯಸ್ಟ್ ಪ್ರೈಸ್ ಕೊಡುತ್ತಾರೆ. ಅಲ್ಲಿಗೆ ಅವನು ಕೊಡಬಹುದು. ಆದರೆ ಹೆಚ್ಚು ಕಬ್ಬು ಇರುವುದರಿಂದ ಕಬ್ಬು ಒಣಗಿಸುವುದನ್ನು ತಪ್ಪಿಸುವುದಕ್ಕೆ ಎಲ್ಲಾದರೂ ತೆಗೆದುಕೊಂಡು ಹೋಗಿ ಕೊಡುತ್ತಿದ್ದಾನೆ. ಇವರು ಏನು ನಿರ್ಬಂಧ ಹಾಕಿದ್ದಾರೆ, ಕಾರ್ಖಾನೆಯವರಿಗೆ, ಪೊಲೀಸಿನವರಿಗೆ, ಟ್ರಕ್ ಕ್ಲೀನರ್‌ಗೆ ಅದಕ್ಕೆ ಅವರು ಲಂಚ ಕೊಡುವುದು ಮಾಡಿಕೊಂಡು 380 ರೂಪಾಯಿ ರೇಟಿಗೆ ಮಹಾರಾಷ್ಟ್ರಕ್ಕೆ ಮಾರುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ಏನು ಮಾಡುತ್ತೀರಿ ? ಅಕ್ರಮವಾಗಿ ಕಾನೂನು ಬಾಹಿರವಾಗಿ ವ್ಯವಸ್ಥೆ ಮಾಡಿದ್ದೀರಿ, ಅದನ್ನು ರದ್ದು ಮಾಡಿ. ಸಾಗಾಣಿಕೆಯ ನಿರ್ಬಂಧವನ್ನು ತೆಗೆಯಬೇಕು. The purchase tax for sales done in Maharashtra should be removed.

ಶ್ರೀ. ಬಿ.ಎಸ್. ಪಾಟೀಲ್:– ಮಾಡಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾಡಲಿಲ್ಲ. ಈಗ ಆಶ್ವಾಸನೆ ಕೊಡಿ, ಆಜ್ಞೆ ಹೊರಡಿಸಿ ಇವತ್ತೇ ಹೇಳಿ.

ಶ್ರೀ ಬಿ.ಎಸ್. ಪಾಟೀಲ್:– ಮೊದಲು ನಿರ್ಬಂಧ ಹಾಕಿತ್ತು.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಲೈಸೆನ್ಸ್ ಬೇಕಾಗಿಲ್ಲವೆಂದು ಮಂತ್ರಿಗಳು ಹೇಳಿಕೆ ಕೊಡಲಿ.

ಶ್ರೀ ಎ.ಬಿ. ಜಗಸೋಲ್ (ಸದಲಗ):– ಮಾನ್ಯ ಅಧ್ಯಕ್ಷರೇ, ಅಧಿವೇಶನ ಮೊನ್ನೆ ಸೇರಿದಾಗ ಈ ಪ್ರಶ್ನೆ ಬಂತು. ಗೋವಾ ಮತ್ತು ಮಹಾರಾಷ್ಟ್ರದ ವಿಚಾರ ಬಂದಾಗ, ನಾವು ಒತ್ತಾಯ ಮಾಡಿದ್ದರಿಂದ

31.3.1993ರವರೆಗೆ ಮಹಾರಾಷ್ಟ್ರಕ್ಕೆ ಹೋಗಲೀ ಅಥವಾ ಎಲ್ಲಿಗೇ ಹೋಗಲಿ ಅದಕ್ಕೆ ಟ್ಯಾಕ್ಸ್ ಇಲ್ಲ ಎಂದು ಮೊನ್ನೆ ಮುಖ್ಯಮಂತ್ರಿಯವರು ಹೇಳಿದ್ದಾರೆ. ಮತ್ತೆ ಮಾನ್ಯ ಸಚಿವರು ಮಾತನಾಡುತ್ತಾ ರೈತರು ಲೈಸೆನ್ಸ್ ತೆಗೆದುಕೊಂಡು ಹೋಗಬೇಕೆಂದು ಹೇಳುತ್ತಿದ್ದಾರೆ. ರೈತರು ಬೆಳೆದ ಮಾಲಿಗೆ ತಮಗೆ ಎಲ್ಲಿ ಅನುಕೂಲ ಆಗುತ್ತದೆಯೋ, ಎಲ್ಲಿ ಬೆಲೆ ಸಿಗುತ್ತದೆಯೋ ಅಲ್ಲಿಗೆ ಒಯ್ಯುವ ಅಧಿಕಾರ ಇರಬೇಕೆ ವಿನಹ ಲೈಸೆನ್ಸ್ ಕೊಡುವುದು ಅಲ್ಲ. ಕಬ್ಬು ಕಡಿಮೆ ಇದ್ದಾಗ ಹೊರಗಡೆ ಕಬ್ಬು ಬಿಡಬೇಡಿ ಎಂದು ಸಕ್ಕರೆ ಕಾರ್ಖಾನೆಯವರು ಹೇಳುತ್ತಾರೆ. ಆದರೆ ಕಬ್ಬು ಹೆಚ್ಚಾದರೆ ಅವರು ಕೇಳುವುದಕ್ಕೇ ಬರುವುದಿಲ್ಲ. ಎಲ್ಲಾ ಕಬ್ಬನ್ನು ಅವರೇ ತೆಗೆದುಕೊಂಡು ಮುಗಿಸುವುದಕ್ಕೆ ಆಗುವುದಿಲ್ಲ. ಕಡೆಗೆ ರೈತರು ತಮ್ಮ ಮಾಲನ್ನು ಹೊರಗೆ ತೆಗೆದುಕೊಂಡು ಹೋಗುವುದಕ್ಕೆ ಪರ್ಮಿಟ್ ಏಕೆ ? ಅವರು ಎಲ್ಲಿ ಬೇಕಾದರೂ ತೆಗೆದುಕೊಂಡು ಹೋಗಲಿ. ಫ್ಯಾಕ್ಟರಿಯವರೇ ಕಬ್ಬನ್ನು ಬೆಳೆದುಕೊಳ್ಳಲಿ. ರೈತರ ಮೇಲೆ ನಿರ್ಬಂಧ ಇರಬಾರದು.

ಶ್ರೀ ಬಿ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ರೈತರ ಹಿತವನ್ನು ಸಂರಕ್ಷಣೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ಮತ್ತೆ ಮತ್ತೆ ಹೇಳುತ್ತೇನೆ. ಆದರೆ ಪರ್ಮಿಟ್ ಬಗ್ಗೆ ಹೇಳಬೇಕೆಂದರೆ, ರಾಜ್ಯದಲ್ಲಿ ಕೆಲವೊಂದು ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿ ಇವೆ. ಅವು ಜೀವಂತ ಇರಬೇಕು. ಇನ್ನು ಹೆಚ್ಚು ಕಾರ್ಖಾನೆ ಮಾಡಬೇಕೆಂದು ಹೇಳುತ್ತಿರುವಾಗ ಇರುವ ಕಾರ್ಖಾನೆಗಳಿಗೇ ಕೊರತೆ ಆಗಬಾರದು. ಕೊರತೆ ಇದ್ದಾಗ ನಮ್ಮ ಕಾರ್ಖಾನೆಗಳಿಗೆ ಕೊಡಬೇಕು. ಅಂತಹ ಸನ್ನಿವೇಶದಲ್ಲಿ ಲೈಸೆನ್ಸ್ ಕೊಡುವ ಪದ್ಧತಿ ಇದೆ. ರೈತರಿಗೆ ಕಷ್ಟ ಕೊಡಬೇಕೆನ್ನುವ ಪ್ರಶ್ನೆ ಇಲ್ಲ. ರೈತರ ಸಲುವಾಗಿ ಸದಾ ಅನುಕೂಲ ಮಾಡುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತಿದ್ದೇವೆಂದು ಹೇಳುತ್ತಿದ್ದೇನೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:- ಕಬ್ಬು ಈಗ ಹೆಚ್ಚಾಗಿದೆ.

ಶ್ರೀ ಬಿ.ಎಸ್. ಪಾಟೀಲ್:- ಕಬ್ಬು ಹೆಚ್ಚು ಇದ್ದಾಗ ಕೊಡುತ್ತಿದ್ದಾರೆ. ಕಡಿಮೆ ಇದ್ದಾಗ ನಮ್ಮ ಕಾರ್ಖಾನೆಗಳಿಗೆ ಬೇಕಲ್ಲವೇ ?

3. ಸಮಾನಾಂತರ ಕಾಲುವೆ ಬಗ್ಗೆ ಬಳ್ಳಾರಿಗೆ (ಆಂಧ್ರ) ಸಚಿವರ ಭೇಟಿ

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಆಂಧ್ರಪ್ರದೇಶದ ಲೋಕೋಪಯೋಗಿ ಸಚಿವರು ಒಬ್ಬರು ಬಳ್ಳಾರಿ ಜಿಲ್ಲೆಗೆ ಆಗಮಿಸಿ 1984-85ರಲ್ಲಿ ಆಗಿನ ತೆಲುಗುದೇಶಂ ಸರ್ಕಾರ ಇದ್ದಾಗ ಸಮಾನಾಂತರ ಕಾಲುವೆ ರಚಿಸುವ ಬಗ್ಗೆ ನಿರ್ಧಾರ ಮಾಡಿ ಅದರ ಮೂಲಕ ತುಂಗಭದ್ರಾ ಹೆಚ್ಚುವರಿ ನೀರನ್ನು ಉಪಯೋಗಿಸಬೇಕೆಂದು, ಮೊದಲಿನಿಂದಲೂ ಒಂದು ಯೋಜನೆ ಇದೆ. ಈಗ ಸಮಾನಾಂತರ ಕಾಲುವೆ ಮುಖಾಂತರ ಹೆಚ್ಚುವರಿ ನೀರು ಬರುವುದಕ್ಕೆ ಅವರದೇ ಆದ ಒಂದು ರೂಪುರೇಷೆ ಮಾಡಿಕೊಂಡಿದ್ದಾರೆ. ಆ ದೃಷ್ಟಿಯಿಂದ ನೋಡುವುದಾದರೆ ಮಳೆಗಾಲದಲ್ಲಿ ಬೀಳತಕ್ಕ ಹೆಚ್ಚುವರಿ ನೀರನ್ನು ತಮ್ಮ ರೈತರಿಗೆ ಉಪಯೋಗ ಆಗದ ರೀತಿಯಲ್ಲಿ ಆಂಧ್ರಪ್ರದೇಶಕ್ಕೆ ರಾಯಲಸೀಮಾದಲ್ಲಿ ಇರುವವರ ಹಿತ ಕಾಪಾಡುವುದಕ್ಕೆ ಒಂದು ಪಿತೂರಿ ನಡೆಯುತ್ತಿದೆ. ಅಲ್ಲಿನ ಲೋಕೋಪಯೋಗಿ ಇಲಾಖೆ ಸಚಿವರು ಬಳ್ಳಾರಿ ಜಿಲ್ಲೆಗೆ ಬಂದಿದ್ದರು ಎಂದು ಒಂದು ಲೇಖನ ಪತ್ರಿಕೆಯಲ್ಲಿ ಬಂದಿದೆ. ರಾಜ್ಯದ ನೀರಾವರಿಯಲ್ಲಿ ಅಪಾರ ಅನುಭವದಿಂದ ಸೆಳೆದಿದ್ದಾರೆ, ಈ ಬಗ್ಗೆ ಹಾಸನದಲ್ಲಿ ಮಾತನಾಡಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವು ಏನು ? ಆ ಸಚಿವರು ಬಂದಿರತಕ್ಕದ್ದು ಏನು ? ಅವರು ಬಳ್ಳಾರಿ ಪ್ರದೇಶದಲ್ಲಿ ಆ ಕಡೆ ಪ್ರದೇಶದ ಶಾಸಕರನ್ನೂ ಭೇಟಿ ಮಾಡಿದ್ದರು ಎಂದು ಪ್ರಜಾವಾಣಿ ಹಾಗೂ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿದೆ. ಇದು ನಿಜವಾದರೆ ನಮಗಂತೂ ತೀರಾ ಮಾರಕವಾಗುತ್ತದೆ. ಮಳೆಯಲ್ಲಿ ಬಿದ್ದ ಹೆಚ್ಚುವರಿ ನೀರು ನಮ್ಮ ರೈತರಿಗೆ ಉಪಯೋಗ ಆಗಬೇಕೇ ಹೊರತು ಆಂಧ್ರದವರಿಗೆ ಅಲ್ಲ. ಅವರು ಹೆಜ್ಜೆ ಹೆಜ್ಜೆಗೆ ನಮಗೆ ಅನ್ಯಾಯ ಮಾಡುತ್ತಿದ್ದಾರೆ. ತೆಲುಗು ಗಂಗಾ ಯೋಜನೆ ತಂದರು. ಅದು ಮುಂದೆ ನಮ್ಮ ಕರ್ನಾಟಕದ

ರೈತರಿಗೆ ಅತ್ಯಂತ ಮಾರಣ ಹೋಮವಾಗುತ್ತದೆಂದು ನಾನು ಹೇಳುತ್ತಿದ್ದೇನೆ. ಇದುವರೆವಿಗೂ ಕರ್ನಾಟಕ ರಾಜ್ಯ ಚಿಂತನೆ ಮಾಡಿಲ್ಲ. ತೆಲುಗು–ಗಂಗಾ ಕುಡಿಯುವ ನೀರಿಗಾಗಿ ಎಂದು ಹೇಳಿ ಕುಡಿಯುವ ನೀರು ಬಿಟ್ಟು ನೀರಾವರಿಗೆ ಉಪಯೋಗ ಮಾಡತಕ್ಕ ಒಂದು ದೊಡ್ಡ ಯೋಜನೆಯನ್ನು ಮಾಡಿದ್ದಾರೆ. ಇದನ್ನು ತಡೆಹಿಡಿಯುವಲ್ಲಿ ಹಿಂದಿನ ಸರ್ಕಾರ ವಿಫಲವಾಗಿದೆ. ಅದಕ್ಕಿಂತಲೂ ಹಿಂದಿದ್ದ ಸರ್ಕಾರವೂ ವಿಫಲವಾಗಿದೆ. ಜನತಾದಳ ಸರ್ಕಾರ ಇದ್ದಾಗ ತೆಲುಗು ಗಂಗಾ ಯೋಜನೆ ಬಂತು.

ನಾವು ಅವೊತ್ತಿನಿಂದಲೂ ಇದನ್ನು ವಿರೋಧ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ನಿಮ್ಮ ಸರ್ಕಾರದ ನೀತಿಯೇನು ಎನ್ನತಕ್ಕದ್ದನ್ನು ಸ್ಪಷ್ಟಪಡಿಸಬೇಕು. ಇಲ್ಲಿರತಕ್ಕ ಉಪ ಮುಖ್ಯಮಂತ್ರಿಗಳನ್ನು ನಾನು ಕೇಳುತ್ತಿದ್ದೇನೆ. ಅದರ ಜೊತೆಗೆ ಕಾವೇರಿ ಬಗ್ಗೆ ಚರ್ಚೆ ಮಾಡಲು ಸಭೆಯನ್ನು ಕರೆಯಲಿಲ್ಲ. ಹೊಸ ಸರ್ಕಾರ ಬಂದ ನಂತರ ಸಭೆ ಕರೆಯಲಿಲ್ಲ. ಮಾನ್ಯ ಮೊಯಿಲಿಯವರು ಮುಖ್ಯಮಂತ್ರಿಗಳಾದ ನಂತರ ಕಾವೇರಿ ನದಿ ನೀರಿನ ವಿವಾದದ ಬಗ್ಗೆ ನಿಮ್ಮ ನೀತಿಯೇನು ? ನ್ಯಾಯಮಂಡಳಿಯನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ಮೊದಲಿನಿಂದಲೂ ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇನೆ. ಅದರ ಬಗ್ಗೆ ನಿಮ್ಮ ನಿಲುವೇನು ಎನ್ನುವುದನ್ನು ಇವತ್ತಿನವರೆಗೆ ಹೇಳಲಿಲ್ಲ. ತಾವು ಈ ಬಗ್ಗೆ ಮಾತುಕತೆಗೆ ಕರೆಯಲಿಲ್ಲ. ಎರಡು ಸಮಿತಿಗಳು ಆಗಿವೆ. ಒಂದು ವಿರೋಧಪಕ್ಷಗಳ ಮುಖಂಡರ ಸಮಿತಿ, ಮತ್ತೊಂದು 120 ಜನ ನೀರಿನ ತಜ್ಞರನ್ನೊಳಗೊಂಡ ಒಂದು ಸಮಿತಿ ಇದೆ. ಈ ಎರಡೂ ಸಮಿತಿಗಳನ್ನು ಇವತ್ತಿನವರೆಗೆ ತಾವು ಕರೆದಿಲ್ಲ. ನಿಮ್ಮ ನಿಲುವೇನು ? ಈಗ ಪರಿಸ್ಥಿತಿ ಏನಿದೆ ? ನಮ್ಮ ಮೊಕದ್ದಮೆಗಳು ಯಾವ ರೀತಿ ನಡೆಯುತ್ತಿವೆ ? ದೆಹಲಿಯಲ್ಲಿ ನ್ಯಾಯಪೀಠದ ತೀರ್ಮಾನಗಳೇನು ? ಅದು ಯಾವುದೂ ಇವತ್ತಿನವರೆಗೆ ನಮ್ಮ ಗಮನಕ್ಕೆ ಬರಲಿಲ್ಲ. ನಿಮ್ಮ ನಿಲುವೇನು ? ಸಮಾನಂತರ ಕಾಲುವೆ ಮುಖಾಂತರ ಕದ್ದು ನೀರನ್ನು ತೆಗೆದುಕೊಂಡು ಹೋಗತಕ್ಕ ಆಂಧ್ರಪ್ರದೇಶದ ಪಿತೂರಿ ಬಗ್ಗೆ ನಿಮ್ಮ ತೀರ್ಮಾನವೇನು ? ಅದನ್ನು ಸ್ಪಷ್ಟಪಡಿಸಬೇಕು, ಮತ್ತು ಕೃಷ್ಣಾನದಿ ನೀರಿನ ಬಗ್ಗೆ 2000 ಇಸವಿಯೊಳಗೆ ನಮ್ಮ ಯೋಜನೆಗಳು ಮುಗಿಯಬೇಕು ಎನ್ನುವುದು ಒಂದು ನಿರ್ಧಾರ. ಈ ಬಗ್ಗೆ ಅಲ್ಲಿನ ಮುಖ್ಯಮಂತ್ರಿಗಳ ಜೊತೆಯಲ್ಲಿ ಒಂದು ಸಭೆ ಸೇರತಕ್ಕ ವ್ಯವಸ್ಥೆ ನಡೆದಿದೆ. ಹಿಂದೆ ಎರಡು ಸಾರಿ ಸಭೆ ಸೇರಿದೆ. ಒಂದು ಸಾರಿ ಮೈಸೂರಿನಲ್ಲಿ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಸಭೆ ನಡೆದಿದೆ. ಮತ್ತೊಂದು ಸಭೆ ಆಂಧ್ರಪ್ರದೇಶದ ಯಾವುದೋ ಒಂದು ಮೂಲೆಯಲ್ಲಿ ಸೇರಿದೆ. ಅದು ಆದನಂತರ ಮತ್ತೆ ಸಭೆ ಸೇರಿ ಮಾತುಕತೆ ಆಡುತ್ತೇವೆ ಎನ್ನತಕ್ಕ ಮಾತು ಇತ್ತು. ಆ ಮಾತಿನ ವರದಿ ನಮಗೆ ಇದುವರೆಗೆ ಗೊತ್ತಾಗಲಿಲ್ಲ. ಇದು ನಿಜವಾಗಿಯೂ ಬಹಳ ಅತ್ಯಂತ ಗಂಭೀರವಾದಂತಹ ಪ್ರಶ್ನೆ. ನಾವು ನ್ಯಾಯಮಂಡಳಿಯನ್ನು ಬಹಿಷ್ಕರಿಸಬೇಕಾಗುತ್ತದೆ. ಈ ಸದನದಲ್ಲಿ ನಾವು ನಿರ್ಣಯ ಮಾಡಿದ್ದೇವೆ. ನ್ಯಾಯಮಂಡಳಿಯ ತೀರ್ಪನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅಂದ ಮೇಲೆ ಮತ್ತೆ ನಾವು ನ್ಯಾಯಮಂಡಳಿಯಲ್ಲಿ ವಾದ ಮಾಡತಕ್ಕದ್ದು ಸರಿಯೆ ? ಈ ಎಲ್ಲಾ ಪ್ರಶ್ನೆಗಳ ಬಗ್ಗೆ ತಾವು ಜವಾಬ್ದಾರಿಯಿಂದ ಒಂದು ನಿಲುವನ್ನು ನಮಗೆ ತಾವು ತಿಳಿಸಬೇಕು. ನಮ್ಮನ್ನು ಯಾವಾಗ ಕರೆಯುತ್ತೀರಿ ? ಬಹಳ ಕತ್ತಲೆಯಲ್ಲಿದ್ದೇವೆ. ಈ ಕತ್ತಲೆಯಿಂದ ಹೊರಗೆ ತರಬೇಕಾದರೆ ನೀವು ಬಹಳ ಪರಿಣಾಮಕಾರಿಯಾದ ಕಾರ್ಯವನ್ನು ಯಾವಾಗ ಕೈಗೊಳ್ಳುತ್ತೀರಿ ? ದೆಹಲಿಗೆ ಎರಡು ಮೂರು ಸಾರಿ ತಾವು ಹೋಗಿದ್ದೀರಿ. ನ್ಯಾಯಮಂಡಳಿಯಲ್ಲಿ ಏನೇನು ನಡೆಯುತ್ತಿದೆ ? ಏನು ಪರಿಸ್ಥಿತಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ನೀರಾವರಿ ತಜ್ಞರಾದ ಬಾಳೇಕುಂದ್ರಿಯವರು ತೀರಿಕೊಂಡಿದ್ದಾರೆ. ಮಾಜಿ ಲೋಕಸಭಾ ಸದಸ್ಯರಾದ ನಂಜೇಗೌಡರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಈ ರಾಜ್ಯದ ನೀರಾವರಿಯ ಬಗ್ಗೆ ಅವರಿಗೆ ಇರತಕ್ಕ ಕಾಳಜಿ, ತೀವ್ರವಾದ ಕಾಳಜಿ ಏನಿದೆ ಅದಕ್ಕಾಗಿ ನಾನು ಅವರನ್ನು ಮೆಚ್ಚುತ್ತೇನೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಸುಮ್ಮನೆ ಕುಳಿತಿದೆ. ಇಂತಹ ಗಂಭೀರವಾದ ಪರಿಸ್ಥಿತಿಯಲ್ಲಿ ಅವರು ಮೊನ್ನೆ ಹಾಸನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ದಯಮಾಡಿ ಈ ಬಗ್ಗೆ ಸ್ಪಷ್ಟವಾದ ನಿಲುವೇನು ಎಂದು ತಿಳಿಸಬೇಕು.

ಶ್ರೀ ವೈ.ಕೆ.ರಾಮಯ್ಯ:– ನಿನ್ನೆ ನಾನು ಈ ವಿಷಯದಲ್ಲಿ ಒಂದು ಸೂಚನೆಯನ್ನು ಕಳುಹಿಸಿದ್ದೇನೆ. ದಯಮಾಡಿ ತರಿಸಿ ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು:– ತರಿಸಿ ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– 30–40 ಟಿ.ಎಂ.ಸಿ. ಎಫ್.ಟಿ. ನೀರನ್ನು ತೆಗೆದುಕೊಳ್ಳತಕ್ಕ ಯೋಜನೆ ಅವರದು ಇದೆ. ಇದು ದೊಡ್ಡ ಪಿತೂರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಮಾನಂತರ ಕಾಲುವೆಯ ಬಗ್ಗೆ ಆ ಮಂತ್ರಿಗಳು ಶಾಸಕರನ್ನು ಭೇಟಿ ಮಾಡಿದ್ದುದು ನಿಜ. ತಮ್ಮ ಭೇಟಿ ಮಾಡಿದ್ದಾರೆಯೇ ? ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಅವರು ದೊಡ್ಡ ಅಪರಾಧ ಮಾಡಿದ್ದಾರೆ. ಅದನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಅದಕ್ಕೆ ಅವಕಾಶ ಮಾಡಿಕೊಡುತ್ತಾ ಇದ್ದೀರಿ. ಆಂಧ್ರಪ್ರದೇಶ, ಪ್ರಧಾನಮಂತ್ರಿಗಳು ಬಂದಿರುವ ರಾಜ್ಯವೆಂದು, ಅದು ಒಂದೇ ಒಂದು ಕಾರಣಕ್ಕೋಸ್ಕರ ಪ್ರೆಷರ್ ತಂದರೆ ತಾವು ಈಲ್ಡ್ ಆಗುವುದಿಲ್ಲ. ಆ ವಿಶ್ವಾಸ ನಮಗೆ ಇದೆ. ಆದರೆ ಸತ್ಯಸಂಗತಿಯನ್ನು ದಯಮಾಡಿ ಈ ಸಭೆಗೆ ಮುಖ್ಯಮಂತ್ರಿಗಳು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್:– ಆಂಧ್ರಪ್ರದೇಶದ ಲೋಕೋಪಯೋಗಿ ಸಚಿವರಾದ ದಿವಾಕರರೆಡ್ಡಿಯವರು ಬಂದಿದ್ದಾರೆ.

ಶ್ರೀ ಎಂ. ಶಂಕರರೆಡ್ಡಿ:– ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯ ಶಾಸಕನಾಗಿ ಸ್ಪಷ್ಟೀಕರಣ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದರು ಆಂಧ್ರಪ್ರದೇಶದ ಲೋಕೋಪಯೋಗಿ ಸಚಿವರು ಬಳ್ಳಾರಿಗೆ ಬಂದು ಬಳ್ಳಾರಿಯ ಶಾಸಕರ ಜೊತೆ ಮಾತನಾಡಿ ಪಿತೂರಿ ನಡೆಸಿದ್ದಾರೆಂದು ಹೇಳಿದರು. ಪಿತೂರಿ ನಡೆಸಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ಖಂಡನೆ ಮಾಡಿದ್ದರೂ ಕೂಡ ಪತ್ರಿಕೆಗಳಲ್ಲಿ ಬಂದಿದೆ. ತುಂಗಭದ್ರ ಸಮಾನಂತರ ಕಾಲುವೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಈಗಾಗಲೇ ತುಂಗಾ ಕಾಡಾ ಮೀಟಿಂಗ್‌ನ್ನು ಪತ್ರಿಕೆಗಳ ಮುಖಾಂತರ ಖಂಡನೆ ಮಾಡಿದ್ದೇವೆ. ಬಳ್ಳಾರಿಯ ಶಾಸಕರು ಪಿತೂರಿ ನಡೆಸುತ್ತಿದ್ದಾರೆಂದು ಹೇಳಿ ನಮ್ಮ ತಲೆಯ ಮೇಲೆ ಗೂಬೆ ಕೂಡಿಸುವುದು ಸರಿಯಲ್ಲ. ಏಕೆಂದರೆ ನಾವು ಖಂಡನೆ ಮಾಡಿದ್ದೇವೆ. ವಾಟಾಳ್ ನಾಗರಾಜ್‌ರವರಿಗಿಂತ ಹೆಚ್ಚಿಗೆ ಸಫರ್ ಆಗುವವರು ನಾವು. ಬಳ್ಳಾರಿ ಜಿಲ್ಲೆಯಲ್ಲಿರತಕ್ಕ ಜನರಿಗೆ ಕುಡಿಯುವ ನೀರಿಲ್ಲ. ಹೊಸಪೇಟೆಯಿಂದ ಬರತಕ್ಕ ನೀರು ಶಿರಗುಪ್ಪ ಇನ್ನಿತರ ಪಟ್ಟಣಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಾಗಿದೆ. ಕುಡಿಯುವ ನೀರಿಗೆ ತೊಂದರೆ ಇರುವುದರಿಂದ ಸಮಾನಂತರ ಕಾಲುವೆಗೆ ನಾವು ಯಾರೂ ಕೂಡ ಒಪ್ಪುವುದಿಲ್ಲ. ನಾವು ಯಾರ ಜೊತೆಯಲ್ಲೂ ಮಾತನಾಡಿಲ್ಲ. ಇದನ್ನು ದಯಮಾಡಿ ಗಮನಿಸಬೇಕು. ತುಂಗಭದ್ರಾ ಸಮಾನಂತರ ಕಾಲುವೆಗೆ ನಾವು ವಿರೋಧ ವ್ಯಕ್ತಪಡಿಸಿದ್ದೇವೆಂದು ಮತ್ತೊಂದು ಸಾರಿ ಹೇಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಕುರಿತು ನಿನ್ನೆಯೇ ನಾನು ನಿಯಮಾವಳಿ ಪ್ರಕಾರ ಸೂಚನೆಯನ್ನು ಕಳಿಸಿದ್ದೇನೆ. ಈ ಸದನದಲ್ಲಿ ಮಾತನಾಡಲಿಕ್ಕೆ ಅವಕಾಶ ಸಿಗಬೇಕಾದರೆ ಕಚೇರಿಯಲ್ಲಿ ಹೋಗಿ ಏರ್ಪಾಡು ಮಾಡಬೇಕು, ಇಲ್ಲ ಇಲ್ಲಿ ಕಿರುಚಿಕೊಳ್ಳಬೇಕು. ಬಹುಶಃ ಇವರೆಡೂ ನನ್ನ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಇದಕ್ಕೆ ತಾವೇನಾದರೂ ಪರಿಹಾರವನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಏಕಾಂತಯ್ಯ:– ಇದು ಏನಾಗಿದೆ ಎಂದರೆ, ನಿಯಮಾವಳಿ ಪ್ರಕಾರ ಚರ್ಚೆ ಮಾಡುವುದಕ್ಕೆ ನೋಟೀಸ್ ಕಳಿಸಿದಾಗ ನಮಗೆ ಅವಕಾಶ ಕೊಡಬೇಕು. ಇಲ್ಲಿ ಏನಾಗುತ್ತದೆ ?

ನಿಯಮಾವಳಿ ಪ್ರಕಾರ ಚರ್ಚೆ ಮಾಡುವುದಕ್ಕೆ, 68ನೇ ನಿಯಮದ ಪ್ರಕಾರ ನೋಟೀಸ್ ಕಳಿಸಿದ ಮೇಲೆ .....

ಅಧ್ಯಕ್ಷರು:- ನನಗೆ ಅದು ಮುಟ್ಟಿಲ್ಲ.

ಶ್ರೀ ಎಚ್. ಏಕಾಂತಯ್ಯ:- ನಾವು ಮೂವರೂ ಸೇರಿ ನೋಟೀಸ್ ಕಳಿಸಿದ್ದೇವೆ. ಆದ್ದರಿಂದ ಅದರ ಬಗ್ಗೆ ತಾವು ಏನೂ ಕ್ರಮ ತೆಗೆದುಕೊಳ್ಳದಿದ್ದರೆ ನಮಗೆ ಕಷ್ಟವಾಗುತ್ತದೆ.

ಅಧ್ಯಕ್ಷರು:- ಅದು ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಿಯಮಾವಳಿ ಪ್ರಕಾರ ಕಳಿಸಿದ್ದರೂ ಸಹ, ತುರ್ತು ವಿಷಯ ಇದ್ದಾಗ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಅದಕ್ಕೆ ತಾವು ಅವಕಾಶ ಕೊಡಬೇಕಾಗುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ನಿಯಮಾವಳಿ ಪ್ರಕಾರ ತಮಗೆ ಕಳಿಸಿದಾಗ ತಾವು ಬ್ಯಾಲೆಟ್‌ಗೆ ಹಾಕಿ ಅವಕಾಶ ಕೊಡುತ್ತೀರಿ. ಆದರೆ ವಿಶೇಷ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದಾಗ ಎಲ್ಲರೂ ಅದರಲ್ಲಿ ಭಾಗವಹಿಸುತ್ತಾರೆ. ಇದು ರೈತರಿಗೆ ಸಂಬಂಧಪಟ್ಟ ಪ್ರಶ್ನೆ ಇದೆ. ಆದ್ದರಿಂದ ಈ ಸಂದರ್ಭದಲ್ಲಿ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ:- ನಾನೊಂದು ಗಮನ ಸೆಳೆಯುವ ಸೂಚನೆ ಕೊಟ್ಟು ನಾಲ್ಕು ದಿವಸವಾಯಿತು. ಇನ್ನೂ ಅವಕಾಶ ಸಿಕ್ಕಿಲ್ಲ. ಯಾರು ಎದ್ದು ನಿಂತು ಮಾತನಾಡುತ್ತಾರೆ ಅವರಿಗೆ ಅವಕಾಶ ಸಿಗುವುದಾದರೆ, ನಾವೂ ಅದನ್ನೇ ಶುರು ಮಾಡುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:- ತಮ್ಮಲ್ಲಿ ಅತ್ಯಂತ ಸವಿನಯ ಪ್ರಾರ್ಥನೆ ಏನೆಂದರೆ, ನಾವು ಯಾವುದಾದರೂ ಸೂಚನೆಗಳನ್ನು ತಮ್ಮ ಕಚೇರಿಗೆ ಕೊಟ್ಟು ವಿಷಯ ಪ್ರಸ್ತಾವನೆ ಮಾಡಬೇಕೆಂದು ವಿಧಿಯುಕ್ತವಾಗಿ ಪ್ರಾರ್ಥನೆ ಮಾಡಿಕೊಂಡಂಥ ಸಂದರ್ಭದಲ್ಲಿ, ನಾನು ಅತ್ಯಂತ ಒತ್ತಾಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಆ ವಿಷಯ ಏನಾಯಿತು ಎಂಬುದನ್ನು ಸದಸ್ಯರಿಗೆ ತಿಳಿಸುವುದಕ್ಕೆ ಒಂದು ಕ್ರಮವನ್ನು ತಾವು ಏರ್ಪಾಡು ಮಾಡಬೇಕು. ಇದನ್ನು ಎಲ್ಲಾ ಸದಸ್ಯರ ಪರವಾಗಿ ಹೇಳುತ್ತಿದ್ದೇನೆ. ಇದಕ್ಕೆ ತಾವು ಏರ್ಪಾಡು ಮಾಡಬೇಕು.

ಈ ವಿಷಯವನ್ನು ಕುರಿತು ನನ್ನ ಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ವಿಧಾನಸಭಾ ಅಧಿವೇಶನ ಸೇರಿ ಸಾಕಷ್ಟು ದಿನವಾಯಿತು. 1600 ಅರಣ್ಯ ಪ್ರೇರಕರ ಸಮಸ್ಯೆ ಬಗ್ಗೆ ಮೂರು ಗಂಟೆ ಕಾಲ ಚರ್ಚೆ ನಡೆಯುತ್ತಿದೆ. ಸ್ವಾಮಿ, ನಮ್ಮ ರಾಜ್ಯದ ರೈತರ ದುರಾದೃಷ್ಟ ಎಂಥಾದ್ದು ಎಂದರೆ ಎರಡು ಅತ್ಯಂತ ಪ್ರಮುಖವಾದಂಥ ಪ್ರಶ್ನೆಗಳು ನಮ್ಮನ್ನು ಕಾಡುತ್ತಾ ಇವೆ. ಮೊದಲನೆಯದ್ದು, ಎರಡು ಸಾವಿರ ವರ್ಷದೊಳಗಡೆ ಕೃಷ್ಣಾ ನದಿ ನೀರನ್ನು ಬಳಸಿಕೊಳ್ಳಬೇಕು. ಇಲ್ಲದಿದ್ದರೆ ಈ ರಾಜ್ಯದ ರೈತ ಈ ನೀರಿನಿಂದ ವಂಚಿತನಾಗುತ್ತಾನೆ ಎನ್ನುವ ಕತ್ತಿ ನಮ್ಮ ಮೇಲೆ ತೂಗುತ್ತಾ ಇದೆ. ಜೊತೆಗೆ ಈ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಒಂದು ವಿವರಣಾತ್ಮಕವಾದಂಥ ಒಂದು ಆಜ್ಞೆಯನ್ನು ಮಾಡಿದೆ. ಆ ಆಜ್ಞೆಯಲ್ಲಿ ಕರ್ನಾಟಕದ ಅದರಲ್ಲೂ ಕಾವೇರಿ ಕೊಳ್ಳದಲ್ಲಿ ನಮ್ಮ ನೀರಿನ ಉಪಯೋಗದ ಮಿತಿಯನ್ನು 11 ಲಕ್ಷಕ್ಕೆ ಸೀಮಿತಗೊಳಿಸಬೇಕು ಎಂದು ಆಜ್ಞೆಯನ್ನು ಮಾಡಿದೆ. ಇದಕ್ಕಿಂತ ಗಂಭೀರವಾದ ಸಮಸ್ಯೆ ಅಥವಾ ಇದಕ್ಕಿಂತ ಈ ರಾಜ್ಯದ ರೈತನ ಬದುಕಿನಲ್ಲಿ ಇರುವಂಥ ವಿಶೇಷತೆ ಮತ್ತೊಂದು ಇರಲಾರದೆಂದು ನನ್ನ ಭಾವನೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ಸದನದ ಅಧ್ಯಕ್ಷರಿಗೆ ಎರಡಲ್ಲ ಮೂರು ವಿಧವಾದಂಥ ಸೂಚನೆಗಳನ್ನು ಕಳುಹಿಸಿದ್ದೂ ಆಯಿತು. ಇದು ಯಾರ ಅದೃಷ್ಟವೋ, ಯಾರ ದುರಾದೃಷ್ಟವೋ ಗೊತ್ತಿಲ್ಲ. ಇದುವರೆಗೂ ಈ ವಿಷಯದಲ್ಲಿ ಚಕಾರ ಶಬ್ದ ಎತ್ತಲಿಕ್ಕೆ ಸದನದ ಸದಸ್ಯರಿಗೆ ಅವಕಾಶವನ್ನು ನೀವು ಕೊಟ್ಟಿಲ್ಲ. ಎರಡು ಸಾವಿರ ವರ್ಷದೊಳಗೆ ಕರ್ನಾಟಕದ ಈ ಭಾಗದ ಜನ

ನೀರನ್ನು ಬಳಸಿಕೊಳ್ಳದಿದ್ದರೆ ಈ ನೀರಿನಿಂದ ವಂಚಿತರಾಗುತ್ತಾರೆ. 11 ಲಕ್ಷ ಎಕರೆಗೆ ಸೀಮಿತಗೊಳ್ಳಬೇಕು ಎನ್ನತಕ್ಕಂಥ ಸರ್ವೋಚ್ಚ ನ್ಯಾಯಾಲಯದ ಆಜ್ಞೆ ಅಂತಿಮವಾದರೆ, ಈ ಭಾಗದ ಜನ ನೀರಿನಿಂದ ವಂಚಿತರಾಗಿತ್ತಾರೆ ಎಂದು ಈ ವಿಷಯದ ಬಗ್ಗೆ ಬರೆದು ಅನೇಕ ರೀತಿಯಲ್ಲಿ ಕಳುಹಿಸಿದ್ದೂ ಆಯಿತು. ಆದರ ಬಗ್ಗೆ ಚಕಾರ ಶಬ್ದ ಎತ್ತಲಿಕ್ಕೆ ಅವಕಾಶ ಸಿಕ್ಕಿಲ್ಲ. ಇವತ್ತು ಅದು ಸಿಕ್ಕಿದೆ.

ನಾನು ಅಧ್ಯಕ್ಷರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ಕೇವಲ ಜೀರೋ ಅವರ್‌ನ ಪ್ರಶ್ನೆಯಾಗಿ ತೆಗೆದುಕೊಳ್ಳುವುದಾದರೆ, ನನಗೆ ಒಂದು ನಿಮಿಷ, ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ ಅದು ಸಾಧ್ಯವಿಲ್ಲ. ನೀವು ಯಾವ ಸೂಚನೆಯ ಪ್ರಕಾರ, ಯಾವ ನಿಯಮಾವಳಿಗಳ ಪ್ರಕಾರ, ಯಾವ ಕಾನೂನಿನ ಪ್ರಕಾರ ಚರ್ಚೆ ಮಾಡಬೇಕೆಂದು ಅಪ್ಪಣೆ ಕೊಡುತ್ತೀರೋ ನಾನು ಅದಕ್ಕೆ ಸಿದ್ಧವಾಗಿದ್ದೇನೆ. ಗಂಟೆಗಟ್ಟಲೆ ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಕೇವಲ ಎರಡು ಮಾತುಗಳನ್ನಾಡಿ ನಿಲ್ಲಿಸುವುದಕ್ಕೆ ನಾನಂತೂ ಸಿದ್ಧನಿಲ್ಲ. ದಯ ಮಾಡಿ, ಇದನ್ನು ಯಾವ ನಿಯಮಾವಳಿ ಪ್ರಕಾರ, ಯಾವ ಕಾನೂನಿನ ಚೌಕಟ್ಟಿನಲ್ಲಿ, ತಾವು ಚರ್ಚೆಗೆ ಅವಕಾಶ ಮಾಡಿಕೊಡುತ್ತೀರೋ ಮಾಡಿ ಕೊಡಿ. ತಾವು ಅಪ್ಪಣೆ ಕೊಡಬೇಕು.

ಶ್ರೀ ಎಚ್. ಏಕಾಂತಯ್ಯ:- ಮೊನ್ನೆ ರಾಮಯ್ಯನವರು ಮತ್ತು ನಾನು ಉಳಿದ ಸ್ನೇಹಿತರು ಒಂದು ಸೂಚನೆಯನ್ನು ತಮಗೆ ಕಳುಹಿಸಿದ್ದೇವೆ. ಆ ಸೂಚನೆ ಅನ್ವಯ ನಾವು ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ, ಮತ್ತು ಸರ್ಕಾರದವರು ಅದರ ಬಗ್ಗೆ ಹೇಳಿಕೆ ಕೊಟ್ಟರೆ ಮತ್ತು ಸರ್ಕಾರದರು ಅದರ ಬಗ್ಗೆ ಹೇಳಿಕೆ ಕೊಟ್ಟರೆ, ನಾವು ಪುನಃ ಅದರ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಆಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:- ಈ ಹಂತದಲ್ಲಿ ಸರ್ಕಾರದವರ ಹೇಳಿಕೆ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಎಚ್. ಏಕಾಂತಯ್ಯ:- ಮಾನ್ಯ ವಾಟಾಳ್ ನಾಗರಾಜರು ಹೇಳಿದ್ದುದು ನನಗೆ ಅರ್ಥವಾಗಲಿಲ್ಲ. ಸಮಾನಾಂತರ ಕಾಲುವೆಯ ಬಗ್ಗೆ ಚರ್ಚೆ ಮಾಡುವುದಕ್ಕೆ 68ನೇ ನಿಯಮದ ಪ್ರಕಾರ ತಮಗೆ ಒಂದು ನೋಟೀಸನ್ನು ಕಳುಹಿಸಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ:- ಇದು ಕೃಷ್ಣಾ ಯೋಜನೆಯೊಳಗೇ ಬರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಮೂರು ದಿವಸ ಆ ಭಾಗದಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ಸಮಸ್ಯೆಗಳನ್ನು ಕೇಳಿ ಬಂದಿದ್ದೇನೆ. ಶಾಸಕರು ಯಾರೂ ಶಾಮೀಲಾಗಿದ್ದಾರೆಂದು ನಾವು ಹೇಳುತ್ತಿಲ್ಲ. ಅವರನ್ನು ಭೇಟಿಯಾಗಿದ್ದಾರೆ, ಅವರು ಒಪ್ಪಿದ್ದಾರೆಂದು ನಾವೇನೂ ಹೇಳುತ್ತಿಲ್ಲ. ಇದು ಆಗದಂತೆ ನೋಡಿಕೊಳ್ಳಬೇಕು, ರಾಜ್ಯದ ಜನರ ಹಿತವನ್ನು ಉಳಿಸಬೇಕು. ಇಷ್ಟು ಮಾತ್ರ ನಾವು ಪ್ರಾರ್ಥನೆ ಮಾಡುತ್ತಿದ್ದೇವೆ.

ಶ್ರೀ ಎಚ್. ಏಕಾಂತಯ್ಯ:- ನಮ್ಮ ಉದ್ದೇಶ ಏನು ಬೇರೆ ಇದೆ ಎಂದು ಏಕೆ ಭಾವಿಸುತ್ತೀರಿ. ನಾವು ಸಮಾನಾಂತರ ಕಾಲುವೆಯ ಬಗ್ಗೆಯೇ, ಏನು ಆಂಧ್ರಮಂತ್ರಿಗಳು ಬಂದು, ಇಲ್ಲಿಯ ಶಾಸಕರನ್ನು ಮತ್ತು ಸರ್ಕಾರದಲ್ಲಿರುವಂಥ ಮಂತ್ರಿಗಳನ್ನು ಕಂಡು ಮಾತನಾಡಿದ್ದಾರೆ, ಅದರ ಬಗ್ಗ ಸರ್ಕಾರದಿಂದ ಹೇಳಿಕೆಯನ್ನು ಪಡೆಯುವುದಕ್ಕೆ ಇಚ್ಛೆ ಪಡುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಇದೇ ವಿಷಯಕ್ಕೆ ಸೀಮಿತವಾಗಿ ಹೇಳಬೇಕೆಂದರೆ, ನಮಗೆ ಉಪಯೋಗಿಸುವುದಕ್ಕೆ ಅವಕಾಶ ಇರುವಂಥ ನೀರು 320 ಟಿ.ಎಂ.ಸಿ. ಆದರೆ, ನನ್ನ ಮಾಹಿತಿ

ಪ್ರಕಾರ ಈಗಾಗಲೇ 304 ಟಿ ಎಂ ಸಿ ನೀರನ್ನು ನಾವು ಉಪಯೋಗಿಸಿಕೊಂಡಿದ್ದೇವೆ. ಇನ್ನು ಉಳಿದಿರುವುದು ಕೇವಲ 16 ಟಿ ಎಂ ಸಿ ಇದರಲ್ಲಿ ಯಾವ ತುಂಗಭದ್ರ ಮಾಡುತ್ತೀರಿ, ಯಾವ ಅಪ್ಪರ್ ಭದ್ರ ಮಾಡುತ್ತೀರಿ, ಆದ್ದರಿಂದ ನನ್ನ ಬೇಡಿಕೆ ಇಷ್ಟೆ. ನೀವು ಯಾವ ನಿಯಮಾವಳಿಗಳ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರಿ. ಇದು ವ್ಯಾಪಕವಾಗಿ ಚರ್ಚೆಯಾಗಬೇಕು. ನಾವು ಸರ್ಕಾರದವರ ಮೇಲೆ ಈ ವಿಷಯವಾಗಿ ಗುರುತರವಾದಂಥ ಆಪಾದನೆಯನ್ನು ಮಾಡಬೇಕಾಗಿದೆ. ಆದ್ದರಿಂದ, ದಯಮಾಡಿ, ನೀವು ಯಾವ ನಿಯಮಾವಳಿಗಳ ಪ್ರಕಾರ, ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಿ ಹೇಳಬೇಕು. 68ರ ನಮ್ಮ ಸೂಚನೆ ಮೇಲೆ ಮಾಡುವುದಾದರೆ, ಎಲ್ಲಾ ಸ್ನೇಹಿತರೂ ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಅದಕ್ಕೆ ಅವಕಾಶ ಮಾಡಿ ಕೊಡಬೇಕು. ತಾವು ಅಪ್ಪಣೆ ಕೊಟ್ಟರೆ, ಒಳ್ಳೆಯದು ಯಾವುದರ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬಹುದು ಎಂದು.

ಅಧ್ಯಕ್ಷರು:– ನೀವು ಕಳುಹಿಸಿದ್ದು ನನ್ನ ಕೈಯಲ್ಲಿ ಇದೆ. ನೀವು ಮೊನ್ನೆ ಮಧ್ಯಾಹ್ನ 1–30 ಗಂಟೆಗೆ ಕಳುಹಿಸಿದ್ದೀರಿ. ನಮ್ಮ ಆಫೀಸಿನಲ್ಲಿ 1–30ಕ್ಕೆ ಬಂದಿದೆ. ವಾಟಾಳ್ ನಾಗರಾಜರು ಬೆಳಿಗ್ಗೆ 10–40ಕ್ಕೆ ಕೊಟ್ಟಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:– ನಾನು ನಿನ್ನೆಯೇ ಕೊಟ್ಟಿದ್ದೇನೆ.

ಅಧ್ಯಕ್ಷರು:– ಅವರು ನಿನ್ನೆ ಕೊಟ್ಟಿದ್ದನ್ನು, ಇವತ್ತು ತೆಗೆದುಕೊಳ್ಳುತ್ತೇನೆಂದು ಅವರಿಗೆ ಹೇಳಿದೆ, ನಿನ್ನೆ ತಾವು ಕೊಟ್ಟಿದ್ದುದು 1–30 ಗಂಟೆಗೆ ಎಂದು ಬರೆದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ನಿನ್ನೆ ಬೆಳಿಗ್ಗೆ ನಾನು ತಮ್ಮನ್ನು ಭೇಟಿ ಮಾಡಿದ್ದೆ. ಇವತ್ತು ತೆಗೆದುಕೊಳ್ಳುತ್ತೇನೆಂದು ಹೇಳಿದಿರಿ.

ಅಧ್ಯಕ್ಷರು:– ತಾವು ದಯಮಾಡಿ ಕುಳಿತುಕೊಳ್ಳಿ ನಾನು ಹೇಳುತ್ತಾ ಇದ್ದೇನೆ. ವಾಟಾಳ್ ನಾಗರಾಜ್ ಅವರು ಬೆಳಿಗ್ಗೆ 10–40ಕ್ಕೆ ಬಂದು ಕೊಟ್ಟಿದ್ದಾರೆ. ತಾವು ಮಧ್ಯಾಹ್ನ 1–30 ಕ್ಕೆ ಕಳುಹಿಸಿದ್ದೀರಿ.

ಶ್ರೀ ವೈ.ಕೆ. ರಾಮಯ್ಯ:– ನಾವು ವಾಟಾಳ್ ನಾಗರಾಜರ ಸೂಚನೆಯ ಮೇಲೆಯೇ ವಾದ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಸ್ವಾಮಿ, ನಾಯಿ ಹೊಡೆಯುವುದಕ್ಕೆ ಬಣ್ಣದ ಕೋಲು ಬೇಕಾಗಿಲ್ಲ. ನಾಗರಾಜರಾದರೂ ಕಳುಹಿಸಲಿ, ನಾರಾಯಣ ರಾವ್‌ರವರೂ ಕಳುಹಿಸಲಿ. ವಿಷಯದ ಮೇಲೆ ಚರ್ಚೆಗೆ ಅವಕಾಶ ಬೇಕು.

ಅಧ್ಯಕ್ಷರು:– ಜೀರೋ ಅವರ್‌ನಲ್ಲಿ ಈ ವಿಷಯವನ್ನು ಎತ್ತುತ್ತೇನೆಂದು ಕೇಳಿರುವುದಕ್ಕೆ ನಾನು ಪರ್ಮಿಶನ್ ಕೊಟ್ಟಿದ್ದೇನೆ. ತಾವು ರೂಲ್ 68ರ ಕೆಳಗೆ ಕಳುಹಿಸಿದ್ದೀರಿ.

ಶ್ರೀ ಎಚ್. ಏಕಾಂತಯ್ಯ:– ಜೀರೋ ಅವರ್‌ನಲ್ಲಿ ಪ್ರಸ್ತಾಪ ಮಾಡಲು ತಾವು ಪರ್ಮಿಶನ್ ಕೊಟ್ಟಿರುವುದಕ್ಕೆ ನಮ್ಮ ಆಕ್ಷೇಪ ಇಲ್ಲ. ನಮ್ಮ ಪ್ರಶ್ನೆ ಏನೆಂದರೆ, ನಿಯಮ 68ರ ಪ್ರಕಾರ, ನೋಟೀಸ್ ಕೊಟ್ಟಿದ್ದೇವೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು:– ಅದನ್ನು ಪರಿಶೀಲನೆ ಮಾಡುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸಭಾಧ್ಯಕ್ಷರೇ, ನನ್ನದೊಂದೇ ಒಂದು ಸಲಹೆ ಇದೆ. ಈಗ ಹಲವಾರು ಜನ ಮಾತನಾಡಿದರು. ಉಪ ಕಾಲುವೆ ಬಗ್ಗೆ ಮತ್ತು ಕೃಷ್ಣಾ, ಕಾವೇರಿ ಬಗ್ಗೆ ಸನ್ಮಾನ್ಯ ರಾಮಯ್ಯನವರು ಏನು ಸೂಚನೆ ಕಳುಹಿಸಿದ್ದಾರೆ, ನಾನು ಕೇಳಿಸಿಕೊಂಡ ಹಾಗೆ, ಸದಸ್ಯರು ಬೇಜಾರು ಮಾಡಿಕೊಳ್ಳಬಾರದು. ಎಲ್ಲರೂ ತಪ್ಪು ಮಾಹಿತಿ ಇಟ್ಟುಕೊಂಡು ಮಾತನಾಡುತ್ತಿದ್ದಾರೆ. ಆ ಕಾರಣ, ನಾನು ರಾಮಯ್ಯನವರ ಅಪ್ಪಣೆ ಪಡೆದು ಒಂದು ಸಲಹೆ ಮಾಡುತ್ತಿದ್ದೇನೆ. ಈ ಚರ್ಚೆಯನ್ನು ತಾವು

ನಾಳೆಗೆ ಇಟ್ಟುಕೊಂಡರೆ ಒಳ್ಳೆಯದು. ಇದಕ್ಕೆ ಸರಿಯಾದ ಮಾಹಿತಿ ಜೊತೆಯಲ್ಲಿ ಬಂದರೆ ಒಳ್ಳೆಯದು ಅನಿಸುತ್ತದೆ. ಏಕೆಂದರೆ, ಯಾರೋ ಮಾತನಾಡುತ್ತಾ, ಮಳೆ ಬಿದ್ದು ಹೆಚ್ಚುವರಿ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಆಂಧ್ರದವರು ಪ್ರಯತ್ನ ಮಾಡುತ್ತಿದ್ದಾರೆಂದು ಮಾತನಾಡಿದರು. ಮತ್ತೆ ಅಂಕಿಅಂಶ ಹೇಳುವಾಗ, ಬಹಳ ತಪ್ಪುಗಳಾಗುತ್ತಾ ಇದೆ. ಆದಕಾರಣ, ದಯ ಮಾಡಿ ಇದನ್ನು ನಾಳೆ ಇಟ್ಟುಕೊಳ್ಳೋಣ. ಇದು ಬಹಳ ಮುಖ್ಯವಾದ ಸಮಸ್ಯೆ; ನಾಳೆ ಇಟ್ಟುಕೊಂಡರೆ, ನಮ್ಮ ಸದಸ್ಯರೆಲ್ಲರೂ ಹೋಮ್‌ವರ್ಕ್ ಮಾಡಿಕೊಂಡು ಬಂದರೆ ಒಳ್ಳೆಯದೆಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಸಮಾನಾಂತರ ಕಾಲುವೆ ಬಗ್ಗೆ ತಾವು ಏನು ಹೇಳುತ್ತೀರಿ ಹೇಳಿ. ನಿಮ್ಮಲ್ಲಿ ಏನು ಮಾಹಿತಿ ಇದೆ ಹೇಳಿ. ನಾಳೆ, ನಾಳೆ ಎಂದು ಹೇಳುವುದು ಬೇಡ. ನೀವು ಏನು ಹೇಳುತ್ತೀರಿ ಹೇಳಿ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ, ಸಮಾನಾಂತರ ಕಾಲುವೆಯ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಎತ್ತಿರುವಂತಹ ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡುವುದಕ್ಕೆ ನನ್ನ ಅಭ್ಯಂತರವಿಲ್ಲ. ನಾನು ಈಗಾಗಲೇ ತಮ್ಮ ಆಫೀಸಿಗೆ ಒಂದು ನಾಲ್ಕು ವಿಧವಾದಂತಹ ಸೂಚನೆಗಳನ್ನು ಕಳುಹಿಸಿದ್ದೇನೆ. ಅದು, ಎರಡು ಸಾವಿರ ಇಸವಿಯ ಒಳಗಾಗಿ ಕೃಷ್ಣ ನದಿ ನೀರನ್ನು ಉಪಯೋಗಿಸಿಕೊಳ್ಳುವಂತಹ ಗಂಭೀರವಾದಂತಹ ಸಮಸ್ಯೆ ಇದು. ಕೇವಲ 11 ಲಕ್ಷ ಎಕರೆಗೆ ಕಾವೇರಿ ಕೊಳದಲ್ಲಿ ಮಿತಿಯನ್ನು ಮಾಡಬೇಕು ಎನ್ನುವಂತಹ ಸಮಸ್ಯೆಯನ್ನು ಕುರಿತು ಚರ್ಚೆ ಮಾಡಲಿಕ್ಕೆ ಈ ಸದನ ಅವಕಾಶ ಮಾಡಿಕೊಡಬೇಕು. ಇವತ್ತು ಬಹುಶಃ ಇದಕ್ಕಿಂತ ಗಂಭೀರವಾದಂತಹ ಸಮಸ್ಯೆ ಈ ರಾಜ್ಯಕ್ಕೆ ಬೇರೆ ಇಲ್ಲ. ಮತ್ತು ಇದಕ್ಕಿಂತ ಸಂಕಷ್ಟದ ಸಮಸ್ಯೆ ಈ ರಾಜ್ಯದ ರೈತನಿಗೆ ಬೇರೆ ಇಲ್ಲ. ದಯಮಾಡಿ ತಾವು ಇದಕ್ಕೆ ಯಾವಾಗ ಅವಕಾಶ ಮಾಡಿಕೊಡುತ್ತೀರಿ ಎಂದು ನನಗೆ ಹೇಳಿ.

ಅಧ್ಯಕ್ಷರು:– ನಾನು ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಅದು ಈಗ ಬಂದಿದೆ. ತಾವು ಪ್ರಸ್ತಾಪ ಮಾಡಿದ ನಂತರ ತರಿಸಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ನಾನು ಇದಕ್ಕಿಂತ ಮೊದಲೇ ಕಳುಹಿಸಿದ್ದೇನೆ. ನಾನು ಅದರ ಕಾಪಿ ಕೊಡುತ್ತೇನೆ. ಇದು 68ನೇ ನಿಯಮವಲ್ಲ. ಅದಕ್ಕಿಂತ ಮೊದಲೇ ಕಳುಹಿಸಿದ್ದೇನೆ. ನದಿಯ ನೀರನ್ನು 2 ಸಾವಿರ ವರ್ಷದೊಳಗಾಗಿ ಉಪಯೋಗಿಸಿಕೊಳ್ಳಬೇಕೆನ್ನುವ ಗಂಭೀರವಾದಂತಹ ಸಮಸ್ಯೆ ಮತ್ತು ಕಾವೇರಿ ಕೊಳದ ನೀರನ್ನು 11 ಲಕ್ಷ ಎಕರೆಗೆ ಸೀಮಿತಗೊಳಿಸಬೇಕು ಎನ್ನುವಂತಹ ಸಮಸ್ಯೆ. ಇವೆರಡು ಅತ್ಯಂತ ಗಂಭೀರವಾದದ್ದು. ಇವೆರದು ಈಗ ರಾಜ್ಯದ ರೈತನನ್ನು ಸಂಕಷ್ಟಕ್ಕೆ ಸಿಕ್ಕಿಸುತ್ತಾ ಇವೆ. ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ನೀವು ಅವಕಾಶ ಕೊಡುವುದಿಲ್ಲ ಎನ್ನುವುದಾದರೆ ನನ್ನ ಅಭ್ಯಂತರ ಇಲ್ಲ. ಆದರೆ ಕೊಡುತ್ತೇನೆ ಎನ್ನುವುದಾದರೆ ಅದಕ್ಕೆ ನಾಳೆ ಅವಕಾಶ ಕೊಡುತ್ತೀರ. ನಾವು ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು:– ಈಗ ತಾವು ನಿಯಮ 68ನ್ನು ಕಳುಹಿಸಿರುವುದು ನನ್ನ ಮುಂದಿದೆ.

ಶ್ರೀ ವೈ.ಕೆ. ರಾಮಯ್ಯ:– ಅಧ್ಯಕ್ಷರೇ, ಅದಕ್ಕಿಂತ ಮೊದಲೇ ನಾನು ಒಂದು ಕಳುಹಿಸಿದ್ದೇನೆ.

ಅಧ್ಯಕ್ಷರು:– ಅದು ಇನ್ನು ನನ್ನ ಹತ್ತಿರ ಬಂದಿಲ್ಲ. ಅದು ಇನ್ನು ಸೆಕ್ಷನ್‌ಗೆ ಹೋಗಿ ಬರಬೇಕು. ಆ ವಿಷಯದ ಬಗ್ಗೆ ತಾವು ಪ್ರಸ್ತಾಪನೆ ಮಾಡಿದ್ದೀರಿ. ತಾವು ಕಳುಹಿಸಿರುವುದು 68ರ ಕೆಳಗೆ ಇದೆ. ಅದು ಪ್ರೊಸೆಸ್ ಆಗಿ ಬರಬೇಕು. ಅದು ಬಂದನಂತರ ಅದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಅಧ್ಯಕ್ಷರೇ, ನಿಯಮಾವಳಿ ಪ್ರಕಾರ ನಾಳೆ ಚರ್ಚೆಗೆ ಅವಕಾಶ

ಮಾಡಿಕೊಡುತ್ತೀರ ?

ಅಧ್ಯಕ್ಷರು:- ನಾಳೆ ಅದು ಬಂದ ನಂತರ ನೋಡಿ ಅವಕಾಶ ಮಾಡಿ ಕೊಡುತ್ತೇನೆ. ಆದರೆ ನಾಳೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ನನಗೆ ಶಕ್ತಿ ಇದ್ದಷ್ಟು ನಿಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಅಧ್ಯಕ್ಷರೇ ಇದಕ್ಕಿಂತ ಮುಖ್ಯವಾದ ವಿಷಯ ಯಾವುದು ಇದೆ ಹೇಳಿ ? ನೀವು ಶಿಕ್ಷಕರ ಬಗ್ಗೆ ಚರ್ಚೆ ಮಾಡುತ್ತೀರಿ, ಫಾರೆಸ್ಟ್ ಬಗ್ಗೆ ಚರ್ಚೆ ಮಾಡುತ್ತೀರಿ ಆದರೆ ರೈತರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು 58 ಸೂಚನೆಗಳನ್ನು ಕಳುಹಿಸಿದರೂ ನೀವು ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು:- ತಾವು ಈಗ ಬಂದು ಅವಕಾಶ ಕೊಡಬೇಕು ಎಂದು ಕೇಳಿದರೆ ಆಗುವುದಿಲ್ಲ ಯಾವ ಪದ್ಧತಿ ಪ್ರಕಾರ ನಡೆಯಬೇಕೆಂದು ಇರುತ್ತದೆಯೋ ಅದೇ ಪ್ರಕಾರ ನಡೆಯಬೇಕಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:- ಅಧ್ಯಕ್ಷರೇ, ಪದ್ಧತಿ ಪ್ರಕಾರವೇ ನಮಗೆ ಅವಕಾಶ ಮಾಡಿಕೊಡುತ್ತೀರ ? ನಿಯಮಾವಳಿ ಪ್ರಕಾರ ನಮಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ಆಯಿತು. ಅವಕಾಶ ಕೊಡುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಇಂತಹ ಗಂಭೀರವಾದಂತಹ ಮತ್ತು ಗಹನವಾದಂತಹ ವಿಚಾರಗಳನ್ನು ಸಭೆಯಲ್ಲಿ ಪ್ರಸ್ತಾಪ ಮಾಡುವ ಮುನ್ನ, ಸಾಧಾರಣವಾಗಿ ತಮ್ಮ ಒಪ್ಪಿಗೆಯನ್ನು ಪಡೆದು ಸದನದಲ್ಲಿ ಅದನ್ನು ನಮೂದು ಮಾಡುತ್ತಾರೆ. ತಮಗೆ ನನ್ನ ಅತ್ಯಂತ ವಿನಮ್ರ ಪ್ರಾರ್ಥನೆ ಏನೆಂದರೆ ತಾವು ಅವರಿಗೆ ಒಪ್ಪಿಗೆಯನ್ನು ಕೊಟ್ಟಾಗ ನಮಗೂ ಸಹ ಅದರ ಬಗ್ಗೆ ತಿಳಿಸಿಬಿಡಿ. ಅದರಿಂದ ನಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲಿಕ್ಕೆ ಅವಕಾಶ ಆಗುತ್ತದೆ. ಈಗ ತಾನೇ ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸಮಾನಾಂತರ ಕಾಲುವೆಯ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ. ಮತ್ತು ಇದೇ ವಿಚಾರದ ಬಗ್ಗೆ ಮಾನ್ಯ ವೈ.ಕೆ.ರಾಮಯ್ಯನವರು ಮತ್ತು ಮಾನ್ಯ ಏಕಾಂತಯ್ಯನವರು 68ನೇ ನಿಯಮದಡಿ ಒಂದು ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದಾರೆ ಎಂದು ತಾವೇ ಅಪ್ಪಣೆ ಕೊಡಿಸಿದ್ದೀರಿ. ಆದುದರಿಂದ ನಾನು ತಮ್ಮ ಆದೇಶವನ್ನು ಬಯಸುತ್ತೇನೆ. ಇದನ್ನು ತಾವು 68ನೇ ವಿಧಿ ಕೆಳಗೆ ತೆಗೆದುಕೊಂಡರೆ ಎಲ್ಲರೂ ಒಟ್ಟಿಗೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈ ಸಮಾನಾಂತರ ಕಾಲುವೆಯ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಇದು ಇವತ್ತು ಬಂದ ವಿಚಾರವಲ್ಲ, ಆಗಲೇ ಬಂದು 4 ದಿವಸವಾಯಿತು. ಅದಕ್ಕೆ ಸಂಬಂಧಪಟ್ಟಂತಹ ಸಚಿವರಿಗೆ ಇದರ ಬಗ್ಗೆ ಮಾಹಿತಿ ಇರಬೇಕು. ಮಾಹಿತಿ ಇಲ್ಲದೇ ನೀವು ಈ ತರಹ ಶುರು ಮಾಡಿದರೆ ಹೇಗೆ ? ಇದು 12ನೇ ತಾರೀಖಿನ ದಿವಸ ಬಂದಿದೆ. ಈಗ ನೀವೇ ನಮಗೆ ಇನ್ನು ಮಾಹಿತಿ ಬರಬೇಕು ಎಂದು ಹೇಳಿದರೆ, ನಿಜವಾಗಿಯೂ ನಾನು ಇದನ್ನು ಸತ್ಸಂಪ್ರದಾಯ ಎಂದು ಅಂದುಕೊಂಡಿಲ್ಲ. ಏಕೆಂದರೆ ಇದರ ಬಗ್ಗೆ ನೀವೇ ತರಾತುರಿಯಿಂದ ಇರಬೇಕು. ಪತ್ರಿಕೆಯಲ್ಲಿ ಈ ರೀತಿ ಬಂದಿದೆ, ಇದು ಸರಿಯಲ್ಲ ಎಂದು ಈ ಸದನಕ್ಕೆ ಹೇಳಬೇಕಾಗಿತ್ತು, ಇದು ಒಂದು ರೀತಿಯಲ್ಲಿ ವಿಚಾರವನ್ನೇ ಮುಚ್ಚಿಡತಕ್ಕಂಥಾದ್ದು ಆಗಿದೆ. ನೀವು ಈ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದು ನಮಗೆ ಸಮಾಧಾನಕರವಾದಂತ ಉತ್ತರವಲ್ಲ. ದಯ ಮಾಡಿ ನಿಮ್ಮಲ್ಲಿ ಇರತಕ್ಕಂತಹ ಮಾಹಿತಿ ಏನು ಇದೆ ಎಂದು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಕಾವೇರಿ ಮತ್ತು ಕೃಷ್ಣಾ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ನನ್ನ ಒಂದು ಸಲಹೆ ಏನೆಂದರೆ ಆಂಧ್ರಪ್ರದೇಶದ ಯಾರು ಮಂತ್ರಿಗಳು ಬಂದು

ಆ ಜಿಲ್ಲೆಯ ಶಾಸಕರ ಜೊತೆಯಲ್ಲಿ ಏನು ಚರ್ಚೆ ಮಾಡಿದರು. ಅದಕ್ಕೆ ಸೀಮಿತವಾಗಿ ತಾವು ಏನಾದರೂ ಉತ್ತರ ಕೊಡುವುದಿದ್ದರೆ ದಯಮಾಡಿ ಕೊಡಿ. ಉಳಿದ ವಿಷಯಗಳ ಬಗ್ಗೆ ಆಮೇಲೆ ಚರ್ಚೆ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ:-- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕಾವೇರಿ ರಕ್ಷಣೆ ಬಗ್ಗೆ ಸಾಕಷ್ಟು ವಿಚಾರಗಳನ್ನು ಪತ್ರಿಕೆಗಳ ಮೂಲಕ ಹೇಳಿದ್ದಾರೆ ಅದನ್ನೇ ರಾಜ್ಯಪಾಲರ ಭಾಷಣದ ಮೂಲಕ ಹೇಳಿಸಿದ್ದಾರೆ. ಇಲ್ಲಿ ಡಿಸ್ಟರ್ಬಿಂಗ್ ನ್ಯೂಸ್ ಸರ್ಕಾರಕ್ಕೆ ಒಂದು ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅದೇನೆಂದರೆ ಆಂಧ್ರಪ್ರದೇಶದ ಸಂಬಂಧಪಟ್ಟ ಮಂತ್ರಿಗಳು ಬಳ್ಳಾರಿ ಜಿಲ್ಲೆಯ ಶಾಸಕರ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆಂದು. ಅದು ಡಿಸ್ಟರ್ಬಿಂಗ್ ನ್ಯೂಸ್. ಆ ಚರ್ಚೆಯಲ್ಲಿ ಆದ ಒಪ್ಪಂದ ಏನು ?

ಶ್ರೀ ಶಂಕರ ರೆಡ್ಡಿ:-- ನಾನು ಮಾತನಾಡಿಲ್ಲ ಎಂದು ಈಗಾಗಲೇ ಸ್ಪಷ್ಟೀಕರಣ ಕೊಟ್ಟಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:-- ಇಲ್ಲಿ ಎರಡು ವಿಚಾರಗಳನ್ನು ಗಮನಿಸಬೇಕು. ಸ್ಕೀಮ್ 'ಎ' ಪ್ರಕಾರ ನೋಟಿಫೈ ಆಗಿರತಕ್ಕಂಥ ನೀರಿನ ಬಳಕೆ. ನೋಟಿಫೈ ಆಗದೆ ಇರತಕ್ಕಂಥಾದ್ದು ಇಲ್ಲಿ ಬರತಕ್ಕಂಥ ನೀರು ಇದು ನೋಟಿಫೈ ಆಗಿಲ್ಲ. ಸಮಾನಾಂತರ ಕಾಲುವೆಯಲ್ಲಿ ಎಷ್ಟು ನೀರು ನಾವು ಬಳಕೆ ಮಾಡಿಕೊಳ್ಳಬಹುದು ಎಂಬುದನ್ನು ಆಲೋಚನೆ ಮಾಡಿದ್ದೇವೆಯೇ ? ಇಲ್ಲದಿದ್ದರೆ ಅದಕ್ಕೂ ಧಕ್ಕೆ ಬರುತ್ತದೆ, ತೊಂದರೆ ಬರುತ್ತದೆಂದು ಹೇಳಬೇಕಾಗುತ್ತದೆ. ಇದರಿಂದ ತುಮಕೂರು, ಚಿತ್ರದುರ್ಗ ಅದರಲ್ಲೂ ವಿಶೇಷವಾಗಿ ಕೆಲವು ಭಾಗ ದಾವಣಗೆರೆ ಬಳ್ಳಾರಿ ಜಿಲ್ಲೆಗಳಲ್ಲಿ ಆಗುತ್ತದೆ. ಅನಿರೀಕ್ಷಿತವಾಗಿ ಆಂಧ್ರಪ್ರದೇಶದ ಮಂತ್ರಿಗಳು ಆ ಜಿಲ್ಲೆಯ ಶಾಸಕರನ್ನು ಭೇಟಿ ಮಾಡಿದ್ದಾರೆಯೇ ಇಲ್ಲವೇ ಎನ್ನುವುದು ಮುಖ್ಯವಾದುದು. ಇದು ಅತ್ಯಂತ ಮುಖ್ಯವಾದ ಪ್ರಶ್ನೆ. ರಾಜ್ಯದಲ್ಲಿ ಜವಾಬ್ದಾರಿ ಹೊಂದಿರತಕ್ಕಂಥ ಒಬ್ಬ ಉಪ ಮುಖ್ಯಮಂತ್ರಿ ಆ ಇಲಾಖೆಯನ್ನು ವಹಿಸಿಕೊಂಡಿರುವಾಗ ಇನ್ನೊಂದು ರಾಜ್ಯದ ಮಂತ್ರಿ ಸಂಬಂಧ ಇಲ್ಲದೆ ಇರತಕ್ಕಂಥ ಶಾಸಕರ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆಂದರೆ ಆಗ ತಕ್ಷಣ ಇರಿಗೇಶನ್ ಮಂತ್ರಿಗಳು ಅವರಿಗೆ ಪತ್ರ ಬರೆಯಬೇಕಾಗಿತ್ತು. ಇದರಲ್ಲಿ ಎರಡು ವಿಚಾರಗಳು ಇವೆ. ಸಮಾನಾಂತರ ಕಾಲುವೆ ಇನ್ನೊಂದು 15 ಟಿ ಎಂ ಸಿ ಎಸ್ ಟಿ ಕುಡಿಯುವ ನೀರು ತೆಗೆದುಕೊಂಡು ಹೋಗುತ್ತಾರೆ, ಇದು 3ರಾಜ್ಯಗಳಿಗೂ ಲಿಂಕ್ ಆಗುತ್ತದೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಆಗಬೇಕು ಇದನ್ನು ಮಾನ್ಯ ಮುಖ್ಯಮಂತ್ರಿಗಳು ರಾಜ್ಯ ಸರ್ಕಾರದ ಮಂತ್ರಿಗಳು ಗಮನಿಸಿದ್ದಾರೆಯೇ ?

ಶ್ರೀ ಬಿ.ಎಚ್. ಬನ್ನಿಕೋಡ್:-- ಮಾನ್ಯ ಅಧ್ಯಕ್ಷರೇ ಇದು ಬಹಳ ಗಂಭೀರವಾದ ಪ್ರಶ್ನೆ ಆಗಿರುವುದರಿಂದ ದಯವಿಟ್ಟು ನಿಯಮ 68ರ ಕೆಳಗೆ ಎಲ್ಲರೂ ಭಾಗವಹಿಸುವಂತೆ ಅನುಕೂಲ ಮಾಡಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-- ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯಕ್ಕೆ ಆಂಧ್ರಪ್ರದೇಶದ ಸಚಿವರು ಒಬ್ಬರು ಬಂದಿದ್ದರು. ನಮ್ಮ ಶಾಸಕರ ಜೊತೆಯಲ್ಲಿ ಅವರು ಸಮಾಲೋಚನೆ ಮಾಡಿದರು ಎನ್ನುವ ಪತ್ರಿಕಾ ವರದಿಯನ್ನು ನಾನು ನೋಡಿದ್ದೇನೆ. ಆಂಧ್ರಪ್ರದೇಶದ ಮಾನ್ಯ ಸಚಿವರು ಏತಕ್ಕೆ ಬಂದಿದ್ದರು ಎನ್ನುವುದು ನಮಗೆ ಗೊತ್ತಿಲ್ಲ. ಅಲ್ಲಿನ ಪ್ರತಿನಿಧಿಗಳಾಗಿರತಕ್ಕಂಥ ಶಂಕರರೆಡ್ಡಿಯವರು ಈಗಾಗಲೇ ಹೇಳಿದ್ದಾರೆ. ನಾವು ಇದನ್ನು ವಿರೋಧಿಸುತ್ತೇವೆ. ಅವರ ಜೊತೆಯಲ್ಲಿ ಪಿತೂರಿ ಮಾಡಿಲ್ಲ. ಕರ್ನಾಟಕ ರಾಜ್ಯದ ರಕ್ಷಣೆ ಬಳ್ಳಾರಿ ಶಾಸಕರು ನಾವು ಮಾಡುತ್ತೇವೆ. ಹಾಗೆ ಎಂದು ಈಗಾಗಲೇ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮತ್ತೊಮ್ಮೆ ನಾನು ಈ ಸದನದ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರಿಗೆ ಭರವಸೆ ಕೊಡುತ್ತೇನೆ ಯಾವುದೇ ವಿಧದಲ್ಲಿ ಕರ್ನಾಟಕ ರಾಜ್ಯದ ನೀರಿನ ಹಕ್ಕಿಗೆ ಚ್ಯುತಿ ಬಾರದ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳುತ್ತದೆ.

ಯಾವ ವಿಧವಾದ ಪ್ರತ್ಯಕ್ಷ ಅಪ್ರತ್ಯಕ್ಷ ಪಿತೂರಿ ರಹಸ್ಯ ಸಂಧಾನ ಇದರಲ್ಲಿ ಇಲ್ಲ. ಜೊತೆಗೆ ಇದರ ಮೇಲೂ ಹೆಚ್ಚು ಚರ್ಚೆ ಮಾಡಬೇಕೆಂದರೆ ಮಾನ್ಯ ಅಧ್ಯಕ್ಷರೇ ಅದು ತಮಗೆ ಸೇರಿದ್ದುದು.

ನಿಯಮ 334ರ ಮೇರೆಗೆ

ಅಧ್ಯಕ್ಷರು:- ನಿಯಮ 334ರ ಮೇರೆಗೆ ಬರುವ ವಿಷಯಗಳು.

ಶ್ರೀ ವಾಟಾಳ್ ನಾಗರಾಜ್:- ನಾನು ತೆಲುಗು ಗಂಗಾ ಬಗ್ಗೆ ಕೇಳಿದ್ದೇನೆ.

ಹಾಸನ ಚನ್ನಪಟ್ಟಣದ ಕೆರೆಯ ಅಚ್ಚುಕಟ್ಟು ಪ್ರದೇಶದ ತರೀ ಜಮೀನನ್ನು ಸಂತೆ ಮೈದಾನಕ್ಕೆ ಭೂಸ್ವಾಧೀನ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):- ಮಾನ್ಯ ಅಧ್ಯಕ್ಷರೇ, ಹಾಸನ ಪುರಸಭೆಯವರು ಹಾಸನದ ಸಂತೆ ಮೈದಾನದಲ್ಲಿ ಸುಮಾರು 4 ಎಕರೆ ಜಮೀನನ್ನು 98 ಲಕ್ಷ ರೂ.ಗಳಿಗೆ ಮಾರಾಟ ಮಾಡಿದ್ದು ಈ ಹಣದಿಂದ ಚನ್ನಪಟ್ಟಣದ ಕೆರೆ ಹಿಂಭಾಗದ ಬಯಲನ್ನು ಭೂಸ್ವಾಧೀನ ಪಡಿಸಿಕೊಂಡು ಹಾಸನದ ಸಂತೆ ಮತ್ತು ಜಾತ್ರೆ ಮೈದಾನಕ್ಕೆ ಸೂಕ್ತ ಲೇಔಟ್ ಮಾಡಿ ರೈತರ ಹಿತದೃಷ್ಟಿಯಿಂದ ಅನುಕೂಲ ಕಲ್ಪಿಸಬೇಕೆಂದು ಹಾಸನ ಪಟ್ಟಣದ ಜನರ ಒತ್ತಾಸೆಯಾಗಿದೆ. ಹಾಲಿ ಇರತಕ್ಕಂಥ ಪ್ರದೇಶ ಹಾಸನದ ಜಾತ್ರೆ ಮತ್ತು ಸಂತೆ ನಡೆಸಲು ಸಾಕಾಗದೆ ರೈತರಿಗೆ ಮತ್ತು ಜನರಿಗೆ ತೊಂದರೆ ಉಂಟಾಗಿರುತ್ತದೆ. ಕೆ.ಇ.ಬಿ.ಯವರು ಹಾಸನ ಪುರಸಭೆಗೆ 98 ಲಕ್ಷ ರೂಪಾಯಿಗಳನ್ನ ಕೊಟ್ಟಿದ್ದರೂ ಹಾಸನ ಪುರಸಭೆಯು ಚನ್ನಸಟ್ಟಣ ಕೆರೆಯ ಅಚ್ಚುಕಟ್ಟು ಪ್ರದೇಶದ ತರೀ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಮಾನ್ಯ ಪೌರಾಡಳಿತ ಸಚಿವರು ಹಾಸನ ಪುರಸಭೆಗೆ ಸೂಕ್ತ ಮಾರ್ಗದರ್ಶನ ನೀಡಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಚೌಡರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹಾಸನ ಪಟ್ಟಣದ ಚನ್ನಪಟ್ಟಣದ ಕೆರೆಯ ಅಚ್ಚುಕಟ್ಟು ಪ್ರದೇಶದ ತರೀ ಜಮೀನನ್ನು ಸಂತೆ ಮೈದಾನಕ್ಕೆ ಭೂ ಸ್ವಾಧೀನ ಮಾಡಿಕೊಳ್ಳುವ ಪ್ರಶ್ನಿಸಿದ್ದಾರೆ.

ಹಾಸನ ನಗರಸಭೆಗೆ ಸೇರಿದ ಜಾಗ 1,75,000 ಚದರ ಅಡಿ (ಸುಮಾರು 4 ಎಕರೆ) ಜಾಗವನ್ನು 220 ಕೆ.ವಿ. ವಿದ್ಯುತ್ ಸ್ಥಾವರ ತೆರೆಯುವುದರಿಂದ ವಿದ್ಯುಚ್ಛಕ್ತಿ ತೊಂದರೆಯನ್ನು (ವೋಲ್ಟೇಜ್ ತೊಂದರೆ) ತಪ್ಪಿಸಲು ಸಾರ್ವಜನಿಕರ ಹಿತದೃಷ್ಟಿಯಿಂದ 87,50,000 – 00 ರೂ.ಗಳಿಗೆ ಕೊಟ್ಟಿದ್ದು ಈ ಹಣದ ಪೈಕಿ ಕೆ.ಇ.ಬಿ.ಯವರು ನಗರಸಭೆಯವರು ಅವರಿಗೆ ಕೊಡಬೇಕಾದ ವಿದ್ಯುಚ್ಛಕ್ತಿಯ ಶುಲ್ಕದ ಬಾಬ್ತು 42,00,111 ರೂ.ಗಳನ್ನು ಹೊಂದಾಣಿಕೆ ಮಾಡಿಕೊಂಡು 45,49,888-00 ರೂ.ಗಳು ನಗರಸಭೆಗೆ ಕೊಟ್ಟಿರುತ್ತಾರೆ.

ನಗರಸಭೆಯು ದಿನಾಂಕ 25–6–90ರಂದು ನಡೆದ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನ ಸಂಖ್ಯೆ 10ರಲ್ಲಿ ಚನ್ನಪಟ್ಟಣದ ಕೆರೆ ಹಿಂಭಾಗ ತರೀ ಜಮೀನನ್ನು ಸಂತೆ ಮತ್ತು ಜಾತ್ರೆ ಮೈದಾನಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು ತೀರ್ಮಾನಿಸಿದ್ದು ಅದೇ ತೀರ್ಮಾನದಲ್ಲಿ ಸಂಬಂಧಪಟ್ಟ ರೈತರೊಂದಿಗೆ ನಗರಸಭೆಯ ಅಧ್ಯಕ್ಷರು ಮಾತನಾಡಿ ಕ್ರಮ ತೆಗೆದುಕೊಳ್ಳಲು ಅಧಿಕಾರ ಕೊಡಲಾಯ್ತು ಎಂದು ತೀರ್ಮಾನಿಸಿರುತ್ತದೆ. ಆ ಪ್ರಕಾರ ಈಗಾಗಲೇ ಒಂದು ಬಾರಿ ನಗರಸಭೆಯ ಅಧ್ಯಕ್ಷರು ರೈತರೊಂದಿಗೆ ವಿಚಾರ ವಿನಿಮಯ ನಡೆಸಿದ್ದಾರೆ.

ಅದೂ ಅಲ್ಲದೇ ಈಗಾಗಲೇ ಸದರಿ ತರೀ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಹಾಸನ ವಿಭಾಗಾಧಿಕಾರಿಗಳೊಂದಿಗೆ ವ್ಯವಹರಿಸಲಾಗಿದ್ದು ಭೂಸ್ವಾಧೀನಾಧಿಕಾರಿಗಳು 27–10–92ರ ಪತ್ರದಲ್ಲಿ

ಭೂಸ್ವಾಧೀನದ ಹಣದ ಶೇಕಡ 25ರಷ್ಟು ಅಂದರೆ 32,50,000 ರೂ.ಗಳನ್ನು ಪಾವತಿಸುವಂತೆ ನಗರಸಭೆಗೆ ತಿಳಿಸಿರುತ್ತಾರೆ.

ಹಾಸನ ನಗರ ಸಭಾಧ್ಯಕ್ಷರು ಈ ಬೆಲೆಯಲ್ಲಿ ಸದರಿ ಜಮೀನಿನ ಒಟ್ಟು ಮೊತ್ತ ರೂ. 1,30,00,000–00 ಗಳಾಗುವುದರಿಂದ ಮತ್ತೊಮ್ಮೆ ರೈತರೊಂದಿಗೆ ಚರ್ಚಿಸಿ ನಂತರ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಈ ಬಗ್ಗೆ ಹಾಸನ ನಗರ ಸಭಾಧ್ಯಕ್ಷರು ರೈತರೊಂದಿಗೆ ಚರ್ಚೆ ನಡೆಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಕಲ್ಲುಗಣಿ ಕೈಗಾರಿಕೆಗಳಿಂದ ಹತ್ತಿರದ ಮನೆ ಗದ್ದೆಗಳಿಗೆ ಜನ ಜಾನುವಾರುಗಳಿಗೆ ಅಪಾಯ

ಶ್ರೀ ಕೆ. ಸೋಮಪ್ಪಸುವರ್ಣ (ಮೂಡುಬಿದಿರೆ):– ಮಾನ್ಯ ಅಧ್ಯಕ್ಷರೆ, ನನ್ನ ಮತದಾರರ ಕ್ಷೇತ್ರದ ಕೆಮ್ರಾಲ್ ಗ್ರಾಮ ಹರಿಪಾದ್ ಎಂಬಲ್ಲಿ ಬಂಡೆಕಲ್ಲು ಗಣಿಗಾರಿಕೆ ನಡೆಯುವ ಹತ್ತಿರದಲ್ಲಿಯೇ ಮನೆ ಮಂದಿಯ ಬೇಸಾಯದ ಗದ್ದೆಗಳಿದ್ದು ಕಲ್ಲು ಸಿಡಿಯುವಾಗ್ಗೆ ಬಂಡೆ ಕಲ್ಲಿನ ತುಂಡುಗಳು ಹತ್ತಿರದ ಮನೆಗದ್ದೆಗಳಿಗೆ ಸಿಡಿದು ಬೀಳುವುದರಿಂದ ಬಹಳ ಅಪಾಯಕಾರಿ ವಾತಾವರಣ ಉಂಟಾಗಿರುತ್ತದೆ. ಜನ ಜಾನುವಾರುಗಳಿಗೂ ಜೀವ ಅಪಾಯದ ತೊಂದರೆ ಉಂಟಾಗಿರುತ್ತದೆ. ಹತ್ತಿರವಿರುವ ದೇವಸ್ಥಾನಕ್ಕೆ ಇದರಿಂದ ಅಪಾಯದ ತೊಂದರೆ ಉಂಟಾಗಿದೆ. ಕಳೆದ ಹಲವಾರು ವರ್ಷಗಳಿಂದ ಬಂಡೆ ಕಲ್ಲನ್ನು ಸಿಡಿಸಬಾರದೆಂದೂ ಜನರು ಮನವಿ ಅರ್ಪಿಸಿದ್ದರೂ ಯಾವ ತರಹದ ಸಹಾನುಭೂತಿಯು ಸರಕಾರದಿಂದ ದೊರೆತಿರುವುದಿಲ್ಲ. ಇಂತಹ ಅಪಾಯಕಾರಿ ವಾತಾವರಣದಲ್ಲಿ ಬಂಡೆಕಲ್ಲು ತೆಗೆಯುವವರ ಲೈಸೆನ್ಸ್‌ನ್ನು ಸರಕಾರ ಕೊಡಬಾರದೆಂದು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ತೊಂದರೆಯನ್ನು ಹೋಗಲಾಡಿಸಲು ಸರಕಾರ ಏನು ಕ್ರಮ ಕೈಗೊಳ್ಳಲಿದೆ ಎಂದು ತಿಳಿಯ ಬಯಸುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ (ಗಣಿ ಹಾಗೂ ಭೂಗರ್ಭ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಕಲ್ಲು ಗಣಿ ಗುತ್ತಿಗೆ ನಿಬಂಧನೆಯಂತೆ, ಸಾರ್ವಜನಿಕ ರಸ್ತೆ, ಕೆರೆ ಏರಿ, ರೈಲ್ವೆ ಲೈನ್, ಕಟ್ಟಡಗಳಿಂದ ಕನಿಷ್ಠ 50 ಮೀಟರುಗಳ ಸುರಕ್ಷಿತ ದೂರದಲ್ಲಿ ಗಣಿ ಕೆಲಸವನ್ನು ಯಾವುದೇ ಸಿಡಿಮದ್ದು ಉಪಯೋಗಿಸಿ ಗಣಿ ಕೆಲಸವನ್ನು ಮಾಡಬೇಕಾದ ಸಂದರ್ಭದಲ್ಲಿ ಕನಿಷ್ಟ 200ಮೀಟರುಗಳ ಅಂತರವನ್ನು ಬಿಡಬೇಕೆಂಬ ಷರತ್ತನ್ನು ಹಾಕಿರುವುದರಿಂದ ಯಾವುದೇ ಸಂದರ್ಭದಲ್ಲಿ ಗುತ್ತಿಗೆದಾರರು ನಿರ್ಬಂಧವನ್ನು ಮೀರಿದರೆ ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಈಗಾಗಲೇ ಈ ಸ್ಥಳದ ಗುತ್ತಿಗೆದಾರರಿಗೆ ಒಂದು ನೋಟಿಸನ್ನು ತಾರೀಖು 3–2–1993ರಲ್ಲಿ ಜಾರಿ ಮಾಡಲಾಗಿದ್ದು, 200 ಮೀಟರು ಅಂತರದೊಳಗೆ ಸಿಡಿಮದ್ದನ್ನು ಗುತ್ತಿಗೆದಾರರು ಮಾಡಬಾರದೆಂದು ಸೂಚಿಸಲಾಗಿದೆ. ಮಾನ್ಯ ಸದಸ್ಯರು ತಿಳಿಸುವ ಸ್ಥಳದಲ್ಲಿ ಮೇಲಿನ ನಿಬಂಧನೆಯ ಉಲ್ಲಂಘನೆಯಾಗಿದ್ದರೆ, ಗುತ್ತಿಗೆಯನ್ನು ರದ್ದು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗೆ ಆದೇಶ ನೀಡಲಾಗುತ್ತದೆ.

(ಶ್ರೀಮತಿ ಮೋಟಮ್ಮ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

BYE–PASS ROAD FROM HUBLI TO DHARWAD

Sri A.M. Hindasgari:– Respected Madam, The work of laying bye-pass road from Hubli to Dharwad. Under the National Highway Road No.4 was taken up longback. The people of the twin cities are put to hardship and

inconveniences on account of slow pace of work, I demand from the Hon'ble P.W.D. Minister a categorical statement, as to when the construction of this bye-pass road from Hubli to Dharwad would be completed and put on use for Vehicle and public.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ಗಮನಿಸುತ್ತೇನೆ ಹಾಗೂ ಈ ಹೇಳಿಕೆಯನ್ನು ಕೂಡ ಕೊಡುತ್ತೇನೆ. ರಾಷ್ಟ್ರೀಯ ಹೆದ್ದಾರಿ – 4 ಹುಬ್ಬಳ್ಳಿ ಧಾರವಾಡ ಅವಳಿ ನಗರಗಳ ಮಧ್ಯದಲ್ಲಿ ಹಾದು ಹೋಗುತ್ತದೆ. ರಾಷ್ಟ್ರೀಯ ಹೆದ್ದಾರಿಯ ವಾಹನ ಸಂಚಾರ ಹಾಗೂ ಈ ಎರಡೂ ನಗರಗಳ ಮಧ್ಯೆ ಓಡಾಡುವ ವಾಹನ ಸಂಚಾರಗಳಿಂದಾಗಿ ಈ ರಸ್ತೆಯ ಮೇಲಿನ ಸಂಚಾರದಲ್ಲಿ ಅತ್ಯಂತ ಹೆಚ್ಚಳವಾಗಿರುತ್ತದೆ. ಈ ವಿಷಯವನ್ನು ಗಮನಿಸಿ ಕೇಂದ್ರ ಸರ್ಕಾರವು ಮಹಾನಗರ ಸಭೆಯ ವ್ಯಾಪ್ತಿಯ ಹೊರಗಡೆ, ರಾಷ್ಟ್ರೀಯ ಹೆದ್ದಾರಿಯ ಈ ಭಾಗದ ರಸ್ತೆಗೆ ಹೊರ ರಸ್ತೆ (ಬೈಪಾಸ್) ನಿರ್ಮಿಸಲು ಯೋಚಿಸಿತು. ಈ ಬೈಪಾಸ್ ರಸ್ತೆಯ ಒಟ್ಟು ಉದ್ದ 29.90 ಕಿ.ಮೀ.ಗಳಾಗುತ್ತದೆ. ಈ ಬೈಪಾಸ್ ರಸ್ತೆಯನ್ನು ಎರಡು ಹಂತಗಳಲ್ಲಿ ತೆಗೆದುಕೊಳ್ಳಲು ಕೇಂದ್ರ ಸರ್ಕಾರವು ನಿರ್ಧರಿಸಿದೆ.

ಮೊದಲನೆ ಹಂತದಲ್ಲಿ 17.425 ಕಿ.ಮೀ. ಉದ್ದದ ಬೈಪಾಸ್ ರಸ್ತೆಗಾಗಿ ರೂ. 290 ಲಕ್ಷಗಳ ಅಂದಾಜು ಪಟ್ಟಿಗೆ ಫೆಬ್ರವರಿ 87ರಲ್ಲಿ (ಮಣ್ಣು ಮತ್ತು ಸಿ.ಡಿ. ಕೆಲಸಕ್ಕೆ) ಮತ್ತು ಡಿಸೆಂಬರ್ 89ರಲ್ಲಿ (ಡಾಂಬರೀಕರಣಕ್ಕೆ) ಕೇಂದ್ರ ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಜುಲೈ 87ರಲ್ಲಿ ಪ್ರಾರಂಭಿಸಲಾದ ಮಣ್ಣಿನ ಮತ್ತು ಸಿ.ಡಿ. ಕೆಲಸಗಳು ಈಗಾಗಲೇ ಮುಗಿದಿವೆ. ಜಲ್ಲಿ ಮತ್ತು ಡಾಂಬರು ಕೆಲಸಗಳನ್ನು ಗುತ್ತಿಗೆದಾರರ ಮೂಲಕ ಆಗಸ್ಟ್ 90ರಲ್ಲಿ ತೆಗೆದುಕೊಳ್ಳಲಾಯಿತು. ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಕೆಲಸವನ್ನು ಪೂರ್ಣಗೊಳಿಸದಿದ್ದ ಕಾರಣ, ಇವರ ಟೆಂಡರನ್ನು ಗುತ್ತಿಗೇದಾರರ ಜವಾಬ್ದಾರಿ ಮೇಲೆ ಡಿಸೆಂಬರ್ 91ರಲ್ಲಿ ರದ್ದುಗೊಳಿಸಿ ಕೆಲಸವನ್ನು ಇಲಾಖಾವತಿಯಿಂದ ತೆಗೆದುಕೊಂಡಿದ್ದು, ಕೆಲಸವು ಪ್ರಗತಿಯಲ್ಲಿದೆ. ವಿನ್ಯಾಸದಲ್ಲಿ ಕೆಲವು ಬದಲಾವಣೆಗಳು ಬೇಕಾಗಿದ್ದ ಕಾರಣ ಭಾರತ ಸರ್ಕಾರದ ಭೂ ಸಾರಿಗೆ ಇಲಾಖೆಯ ಒಪ್ಪಿಗೆ ಕೋರಲಾಗಿದ್ದು, ಅವರ ಒಪ್ಪಿಗೆಯನ್ನು ನಿರೀಕ್ಷಿಸಲಾಗುತ್ತಿದೆ. ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿರವರು ಈ ವಿಷಯದಲ್ಲಿ ಕೇಂದ್ರ ಸರ್ಕಾರವನ್ನು ಬಹಳವಾಗಿ ಒತ್ತಾಯಪಡಿಸುತ್ತಿರುತ್ತಾರೆ. ಮೊದಲನೇ ಹಂತದ ಕೆಲಸವು 1993ರ ಅಂತ್ಯಕ್ಕೆ ಮುಗಿಯುವ ನಿರೀಕ್ಷೆಯಿದೆ.

ಎರಡನೆ ಹಂತದ ಈ ಬೈಪಾಸ್ ರಸ್ತೆಯ ಉಳಿದ ಭಾಗದ ಕೆಲಸಕ್ಕೆ ರೂ.433 ಲಕ್ಷಗಳ ಅಂದಾಜು ಪಟ್ಟಿಯನ್ನು ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ಅವರ ಮಂಜೂರಾತಿ ದೊರತ ನಂತರ ಈ ಕೆಲಸವನ್ನು ತೆಗೆದುಕೊಳ್ಳಲಾಗುವುದು.

ಕರ್ನಾಟಕ ರಾಜ್ಯ ಮಂಡಲ ಪಂಚಾಯತ್ ನೌಕರ ಸಂಘದವರಿಂದ ಧರಣಿ

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್:– ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಮಂಡಲ ಪಂಚಾಯತ್ ನೌಕರರ ಸಂಘ, ರಾಜ್ಯ ಸಮಿತಿ, ಬೆಂಗಳೂರು, ಇವರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿ ಧರಣಿಯನ್ನು ನಡೆಸುತ್ತಿದ್ದಾರೆ. ಇಂದಿನ ಕಾಲದಲ್ಲಿ ಅತ್ಯಾವಶ್ಯಕ ವಸ್ತುಗಳೆಲ್ಲ ಬೆಲೆ ಏರಿದ್ದು, ಅವರ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಇಂಥ ಸಂದರ್ಭದಲ್ಲಿ ಅವರ ನ್ಯಾಯಬದ್ಧ ಬೇಡಿಕೆಗಳ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೇ, ಈ ಸಂಸ್ಥೆಯ ಕಡೆ ನಾವು ಪೂರ್ಣವಾಗಿ ಗಮನವನ್ನು ಕೊಡುತ್ತಾ ಇದ್ದೇವೆ. ಇದರಲ್ಲಿ ಸುಮಾರು 18 ಸಾವಿರ ಜನರು ಉದ್ಯೋಗದಲ್ಲಿದ್ದಾರೆ. ಇದರಲ್ಲಿ ಎಕ್ಸ್ ಪಂಚಾಯತ್ ಸೆಕ್ರೆಟರಿ, ಮತ್ತು ಮಂಡಲ ಪಂಚಾಯತ್‌ನವರು ನೇಮಕ ಮಾಡಿರುವ ಹಲವಾರು ಜನರಿದ್ದಾರೆ. ಇವರಲ್ಲಿ ಬಿಲ್ ಕಲೆಕ್ಟರ್ಸ್, ವಾಚ್‌ಮನ್ಸ್, ವಾಟರ್‌ಮನ್ಸ್, ಅಟೆಂಡರ್ಸ್, ಇತ್ಯಾದಿ ಇದ್ದಾರೆ. ಇವರುಗಳಿಗೆ ಸಂಬಳ ಕೊಡುವಾಗ ಮಂಡಲ ಪಂಚಾಯಿತಿಯ ಆದಾಯದಲ್ಲಿ 40 ಪರ್ಸೆಂಟ್‌ನಷ್ಟು ಅಥವಾ ಅದರೊಳಗೆ ಇರಬೇಕೆಂದು ನಿಯಮ ಇದೆ. ಹಾಗೆಯೇ ಅವರುಗಳ ಸಂಬಳದಲ್ಲಿ ಸಾಕಷ್ಟು ವ್ಯತ್ಯಾಸಗಳು ಕೂಡ ಇವೆ. ಇದನ್ನು ಸರಿಪಡಿಸಬೇಕಾದರೆ ಒಂದು ಯೂನಿಫಾರ್ಮ್ ಸರ್ವೀಸ್ ರೂಲ್‌ನ್ನು ಮಾಡಬೇಕೆಂದು ನಾವು ನಿರ್ಧಾರ ಮಾಡಿದ್ದೇವೆ. ಕಾನೂನು ಮತ್ತು ಆರ್ಥಿಕ ಇಲಾಖೆಯವರೊಂದಿಗೆ ಕನ್ಸಲ್ಟೇಶನ್ ಮಾಡಿ ಇದನ್ನು ಮಾಡುತ್ತೇವೆ. ಇದನ್ನು ಮಾಡಿದರೆ ಅವರುಗಳ ತೊಂದರೆಯನ್ನು ಬಿಡಿಸಿದ ಹಾಗೆ ಆಗುತ್ತದೆ.

ಈ ಕೆಲಸವನ್ನು ನಾವು ಆದಷ್ಟು ಬೇಗ ಮಾಡುತ್ತೇವೆ. ಮುಂದಿನ ತಿಂಗಳು 12–13ಕ್ಕೆ ಚೀಫ್ ಸೆಕ್ರೆಟರಿ ಅಡ್‌ಮಿನಿಸ್ಟ್ರೇಟರ್‌ಗಳನ್ನು ನಾವು ಕರೆಯುತ್ತೇವೆ. ಈ ಕುಡಿಯುವ ನೀರಿನ ಸಮಸ್ಯೆ ಅಲ್ಲದೆ ಈ ವಿಷಯವನ್ನೂ ಜೊತೆಗೆ ನಾವು ಚರ್ಚಿಸಿ ಆದಷ್ಟು ಬೇಗ ಒಂದು ಸ್ಪಷ್ಟವಾದ, ನಿರ್ದಿಷ್ಟವಾದಂತಹ ಒಂದು ಪರಿಹಾರವನ್ನು ಹುಡುಕುವುದಕ್ಕೆ ಮನಸ್ಸು ಮಾಡುತ್ತೇವೆ. ಇದರಲ್ಲಿ ಯಾರಿಗೂ ಅನುಮಾನ ಬೇಡ ಮತ್ತು ಮುಷ್ಕರದ ಅವಶ್ಯಕತೆ ಇಲ್ಲ. ಇದು ಹಲವಾರು ವರ್ಷಗಳಿಂದ ಇರತಕ್ಕಂಥದ್ದು. ಈ ಸರ್ಕಾರ ನ್ಯಾಯವಾದಂತಹ ಒಂದು ಪರಿಹಾರ ಹುಡುಕುತ್ತದೆ. 18,000 ಜನ ವಾಚ್‌ಮ್ಯಾನ್, ಪ್ಯೂನ್‌ಗಳು, ಮತ್ತು ಸೆಕೆಂಡ್ ದರ್ಜೆಯ ಗುಮಾಸ್ತರು ಇವರೆಲ್ಲರನ್ನು ಮಂಡಲ ಪಂಚಾಯಿತಿ ನೇಮಕ ಮಾಡಿದೆ. ಸಂಬಳ ಶೇಕಡ 40 ರಷ್ಟು ಒಳಗೆ ಇರಬೇಕು. ಅವರವರ ಶಕ್ತಿಗನುಸಾರವಾಗಿ ಕೊಡುತ್ತಾ ಬಂದಿದ್ದಾರೆ. ಈ ವಿಷಯ ಎಲ್ಲರಿಗೂ ಗೊತ್ತಿರತಕ್ಕದ್ದು. ಸಾಕಷ್ಟು ಸಂಬಳ ಬರುವುದಿಲ್ಲ. ಇದು ಯಾವ ಮುಷ್ಕರಕ್ಕೂ ಹೆದರಿ ಮಾಡತಕ್ಕಂಥದ್ದು ಅಲ್ಲ. ಈ ಬಗ್ಗೆ ಮುಷ್ಕರ ಅವಶ್ಯಕವಿಲ್ಲ. We have already initiated action to introduce uniform service rules in consultation with the legal and finance departments. ಅದು ಎಲ್ಲರಿಗೂ ಗೊತ್ತಿದೆ. ಇನ್ನು ಬೇರೆ ಬೇರೆ ಜಿಲ್ಲೆಗಳಿಗೆ ಸ್ವಲ್ಪ ವ್ಯತ್ಯಾಸ ಇರಬಹುದು. ಸೆಕ್ರೆಟರಿ ಅಡ್‌ಮಿನಿಸ್ಟ್ರೇಟರ್‌ನ್ನು ಬರಮಾಡಿಕೊಂಡು ಈ ವಿಚಾರದಲ್ಲಿ ಏನೇನು ಪರಿಸ್ಥಿತಿ ಇದೆ, ಅದನ್ನು ಅರ್ಥ ಮಾಡಿಕೊಂಡು ಎಲ್ಲರಿಗೂ ಸಮಾಧಾನ ಕೊಡತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ:– ಮುಷ್ಕರ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿ.

ಶ್ರೀ ಎಂ.ವೈ. ಘೋರ್ಪಡೆ:– ಎಷ್ಟೋ ಸಲ ಅವರು ಭೇಟಿಯಾಗಿದ್ದಾರೆ. ನಿನ್ನೆಯೂ ಸಹ ಭೇಟಿ ಆಗಿದ್ದಾರೆ.

ಕ.ವಿ.ಮಂ.ಯಲ್ಲಿ ವಿಜ್ಞಾನ ಹಾಗೂ ವಾಣಿಜ್ಯ ಪದವಿಧರರಾದ ಸಹಾಯಕ ಉಗ್ರಾಣಿಕರಿಗೆ ಹೆಚ್ಚುವರಿ ನಾಲ್ಕು ವೇತನ ಮುಂಬಡ್ತಿ ನೀಡಲಾಗುತ್ತಿದ್ದು ಕಲಾ ಪದವೀಧರರಿಗೆ ನೀಡದೇ ಇರುವುದನ್ನು ಕುರಿತು

ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):– ಮಾನ್ಯ ಅಧ್ಯಕ್ಷಿಣಿಯವರೆ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಜ್ಞಾನ ಮತ್ತು ವಾಣಿಜ್ಯ ಪದವೀಧರ ಸಹಾಯಕ ಉಗ್ರಾಣಿಕರಿಗೆ ಮಂಡಳಿಯ ಆದೇಶ ಸಂಖ್ಯೆ: ಕವಿಮಂ:ಡಬ್ಲ್ಯೂ ಎಲ್ ಪಿ ಸಿ: 18: 7 4 –75 ದಿನಾಂಕ 27–7–1976ರ ಮೇರೆಗೆ ಪ್ರಸ್ತುತ ನಾಲ್ಕು ಹೆಚ್ಚುವರಿ ವೇತನ ಮುಂಬಡ್ತಿಯನ್ನು ನೀಡಲಾಗುತ್ತಿದ್ದು, ಈ ಸೌಲಭ್ಯವನ್ನು ಕಲಾ ಪದವೀಧರರಿಗೆ ಕೊಡಲಾಗುತ್ತಿಲ್ಲ ಏಕೆ ?

ಮಂಡಳಿಯು ನೇಮಕಾತಿ ನಿಯಮಾವಳಿಗಳನ್ನು ಸೃಷ್ಟಿಸುವಾಗ (ಸಹಾಯಕ ಉಗ್ರಾಣಿಕ ಹುದ್ದೆಗೆ) ಪದವಿಯ ಬಗ್ಗೆ ನಿರ್ದಿಷ್ಟವಾದ ಸೂಚನೆಯನ್ನು ನಿಗದಿ ಪಡಿಸಿರುವುದಿಲ್ಲ. ಆದರೆ ನೇಮಕಾತಿ ಹೊಂದಿದ ನಂತರ ಸಹಾಯಕ ಉಗ್ರಾಣಿಕ ಪಡೆದಿರುವ ಪದವಿಯಲ್ಲಿ ತಾರತಮ್ಯ ಮಾಡಿ ಕೇವಲ ವಾಣಿಜ್ಯ ಮತ್ತು ವಿಜ್ಞಾನ ಪದವೀಧರರಿಗೆ ಮಾತ್ರ ಹೆಚ್ಚುವರಿ ವೇತನ ಮುಂಬಡ್ತಿ ನೀಡಿ ಈ ಸೌಲಭ್ಯದಿಂದ ಕಲಾ ಪದವೀಧರ ವಂಚಿತರಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಸಮಾನ ಪದವಿಯನ್ನು ಹೊಂದಿ ಈ ಮೇಲೆ ಹೇಳಿದ ಸೌಲಭ್ಯದಿಂದ ವಂಚಿತರಾಗಿರುವ ಕಲಾ ಪದವೀಧರರಿಗೆ ಇದನ್ನು ವಿಸ್ತರಿಸಲು ಮಂಡಳಿಗೆ ಇರುವ ತೊಂದರೆ ಏನು ? ಹಾಗಿದ್ದಲ್ಲಿ ಇದನ್ನು ಈಗಲಾದರೂ ಸರಕಾರ ಸರಿ ಪಡಿಸಿ ಸದರಿ ಸೌಲಭ್ಯವನ್ನು ಕಲಾ ಪದವೀಧರರಿಗೂ ವಿಸ್ತರಿಸುವುದೇ ? ಅಂದರೆ ಇದನ್ನು ಯಾವಾಗ ಅಮಲಿನಲ್ಲಿ ತರಲಾಗುತ್ತದೆ ?

ಈ ಮಂಡಳಿಯಲ್ಲಿ ಗುಮಾಸ್ತ ಸಿಬ್ಬಂದಿ ಅಥವಾ ಖಜಾನೆ ಶಾಖೆಯಲ್ಲಿ ಕಲಾ ಪದವಿಯನ್ನು ಹೊಂದಿರುವ ಸಿಬ್ಬಂದಿಯು ಪ್ರಸ್ತುತ ನಾಲ್ಕು ವೇತನ ಹೆಚ್ಚುವರಿ ಮುಂಬಡ್ತಿಗಳನ್ನು ಪಡೆಯುತ್ತಿದ್ದು ಈ ಸೌಲಭ್ಯದಿಂದ ಸಮಾನ ಪದವಿ ಹಾಗೂ ಹುದ್ದೆಯನ್ನು ಹೊಂದಿರುವ ಸಹಾಯಕ ಉಗ್ರಾಣಿಕರಿಗೆ ಇದನ್ನು ನೀಡಲಾಗುತ್ತಿಲ್ಲ. ಏಕೆ ?

ಸರಕಾರ ಇದನ್ನು ಈಗಲಾದರೂ ಸರಿಪಡಿಸಿ ಅಮಲಿನಲ್ಲಿ ತರಲು ಯೋಚಿಸಿದೆಯೇ ? ಅಂದರೆ ಯಾವಾಗ ಇದನ್ನು ಕೃತಿಯಲ್ಲಿ ಜಾರಿಗೊಳಿಸಲಾಗುತ್ತದೆ.

SRI K.A. NISSAR AHAMAD (Minister for Energy):– Respected Madam, as per the present Board's norms, four Advance increments are not being sanctioned to the Assistant Store Keepers with Arts Degree. The subject issued is under consideration of the Board and orders are awaited.

ಬೆಂಗಳೂರು ನಗರದ ಶ್ರೀರಾಮಪುರ ಬಡಾವಣೆಯಲ್ಲಿ ವಿದ್ಯುತ್ ಅಧಿಕ ವೋಲ್ಟೇಜಿನಿಂದಾಗಿ ವಿದ್ಯುತ್ ಉಪಕರಣಗಳು ಹಾಗೂ ಟಿ.ವಿ. ಸೆಟ್‌ಗಳು ಸುಟ್ಟು ಹೋಗಿದ್ದು ಅದಕ್ಕಾಗಿ ವಿದ್ಯುತ್ ಮಂಡಳಿಯವರಿಂದ ಸೂಕ್ತ ಪರಿಹಾರ

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):– ಮಾನ್ಯ ಅಧ್ಯಕ್ಷಿಣಿಯವರೇ, ಬೆಂಗಳೂರು ನಗರದ ಶ್ರೀರಾಮಪುರದ ಬಡಾವಣೆಯಲ್ಲಿ ದಿನಾಂಕ 21–2–93ರಂದು ಇದ್ದಕ್ಕಿದ್ದ ಹಾಗೆ 440ಕೆ.ವಿ. ವಿದ್ಯುತ್ ಪೂರೈಕೆ ಆಗಿದ್ದರಿಂದ ಹಲವಾರು ಟಿ.ವಿ. ಸೆಟ್‌ಗಳು ಹಾಗೂ ಇತರ ವಿದ್ಯುತ್ ಉಪಕರಣಗಳು ಸುಟ್ಟು ಹೋಗಿವೆ. ಈ ರೀತಿ ಅಧಿಕ ವೋಲ್ಟೇಜಿನಿಂದಾಗಿ ಸಂಭವಿಸಿದ ನಷ್ಟಕ್ಕೆ ಕರ್ನಾಟಕ ವಿದ್ಯುತ್ ಮಂಡಳಿಯವರು ಜವಾಬ್ದಾರರಾಗಿರುತ್ತಾರೆ. ಆದ್ದರಿಂದ ಇದರ ಬಗ್ಗೆ ಕೂಡಲೇ ವಿಚಾರಣೆ ನಡೆಸಬೇಕು ಹಾಗೂ ಬೆಲೆ ಬಾಳುವ ವಿದ್ಯುತ್ ಉಪಕರಣಗಳನ್ನು ಹಾಗೂ ಟಿ.ವಿ. ಮುಂತಾದ ಬೆಲೆಬಾಳುವ ಪದಾರ್ಥಗಳು ಹಾಳಾಗಿ ನಷ್ಟಕ್ಕೆ ಒಳಗಾಗಿರುವವರಿಗೆ ವಿದ್ಯುತ್ ಮಂಡಳಿಯ ವತಿಯಿಂದ ಸೂಕ್ತ ಪರಿಹಾರ ನೀಡಲು ಸನ್ಮಾನ್ಯ ವಿದ್ಯುತ್ ಸಚಿವರನ್ನು ಕೋರುತ್ತೇನೆ.

SRI K.A. NISSAR AHAMED (Minister for Energy):– It has come to the notice of the Board that on 21st February 1993, heavy reduction in the Voltage has cut across Lakshminarayanapura in Sreeampura area of Bangalore. The T.V. Sets, Radios, Taperecorders, Tube lights of the residents of that area have been burnt out. The reason for this is that on the above said date, at 4.30 P.M. some children were playing football.....

(Interruptions)

ಶ್ರೀ ಆರ್. ದಯಾನಂದ ರಾವ್:– ಕನ್ನಡದಲ್ಲಿ ಹೇಳಿಕೆ ನೀಡಬೇಕು.....

(ಗೊಂದಲ)

ಶ್ರೀ ಎಸ್.ಎಚ್. ಕೌಜಲಗಿ :– ಇವರಿಗೆ ಕನ್ನಡವೇ ಬರುವುದಿಲ್ಲವೇ ?

(ಗೊಂದಲ)

SRI K.A. NISSAR AHAMED:– The bill hit the Neutral wire which has resulted in the said loss. For this the K.E.B. staff are not responsible. Immediately after the residents of the said area brought this to the notice of the concerned O and M Unit of K.E.B. the said defect has been rectified and the arrangements have been made for supply of 220 Volts of power. Since the above incident is an accident one, the question of paying compensaiton does not arise.

ಸಂಗಮೇಶ್ವರ ಹಾಗೂ ಬೆಳಗಲಿ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯ

ಶ್ರೀ ಪಿ.ಸಿ. ಸಿದ್ದನಗೌಡರ್:– ಸನ್ಮಾನ್ಯ ಅಧ್ಯಕ್ಷಿಣಿಯವರೆ ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮದಲ್ಲಿ ಪಶು ಚಿಕಿತ್ಸಾಲಯ ಇಲ್ಲದೆ ಅಲ್ಲಿನ ಜಾನುವಾರುಗಳಿಗೆ ಮತ್ತು ಸಾರ್ವಜನಿಕರಿಗೆ ತುಂಬ ತೊಂದರೆಯಾಗಿರುತ್ತದೆ. ಅಲ್ಲಿ ಸುತ್ತಮುತ್ತಲು ಪಶುವೈದ್ಯ ಚಿಕಿತ್ಸಾಲಯಗಳು ಎಲ್ಲೂ ಇರುವುದಿಲ್ಲ. ಆದಕಾರಣ ಈ ಎರಡು ಗ್ರಾಮಗಳಲ್ಲಿ ಸರ್ಕಾರಿ ಪಶು ವೈದ್ಯ ಚಿಕಿತ್ಸಾಲಯಗಳು ಮತ್ತು ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಗ್ರಾಮದಲ್ಲಿ ಈಗಿರುವ ಪಶು ವೈದ್ಯ ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಮಾನ್ಯ ಪಶು ಸಂಗೋಪನಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಸಂಗಮೇಶ್ವರ ಹಾಗೂ ಬೆಳಗಲಿ ಗ್ರಾಮಗಳಿಗೆ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು. ನೂಲ್ವಿ ಗ್ರಾಮದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವ ದಿಸೆಯಲ್ಲಿ ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯಗಳು ಇಲ್ಲದೆ ಅಲ್ಲಿರುವ ಜಾನುವಾರುಗಳಿಗೆ ಮತ್ತು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಇಲ್ಲಿ ಸುತ್ತಮುತ್ತಲೂ ಎಲ್ಲೂ ಪಶು ಚಿಕಿತ್ಸಾಲಯಗಳಿರುವುದಿಲ್ಲ. ಆದಕಾರಣ, ಈ ಎರಡು ಗ್ರಾಮದಲ್ಲಿ ಈಗಿರುವ ಪಶು ಚಿಕಿತ್ಸಾಲಯಗಳನ್ನು ಮತ್ತು ಹುಬ್ಬಳ್ಳಿಯ ನೂಲ್ವಿ ಗ್ರಾಮದಲ್ಲಿ ಈಗಿರುವ ಪಶು ಚಿಕಿತ್ಸಾಲಯವನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕು ಸಂಗಮೇಶ್ವರ ಗ್ರಾಮಕ್ಕೆ ಹಾಗೂ ಹುಬ್ಬಳ್ಳಿ ತಾಲ್ಲೂಕಿನ ಬೆಳಗಲಿ ಗ್ರಾಮದಲ್ಲಿ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಬಗ್ಗೆ, ಕಲಘಟಗಿ ತಾಲ್ಲೂಕಿನ ಒಟ್ಟು ಜಾನುವಾರುಗಳ ಸಂಖ್ಯೆ 96,813 ಇದ್ದು, ಅದಕ್ಕನುಗುಣವಾಗಿ 66,897 ದನಗಳ ಘಟಕಗಳು ಇರುತ್ತವೆ. ಈ ದನಗಳ ಘಟಕಗಳಿಗೆ ಅನುಗುಣವಾಗಿ ಈ ತಾಲ್ಲೂಕಿಗೆ ಒಟ್ಟು 13 ಪಶು ಚಿಕಿತ್ಸಾ ಕೇಂದ್ರಗಳು ಬೇಕಾಗಿರುತ್ತವೆ. ಹಾಲಿ ಈಗ 7 ಪಶು ಚಿಕಿತ್ಸಾ ಕೇಂದ್ರಗಳಿದ್ದು ಇನ್ನೂ 6 ಪಶು ಚಿಕಿತ್ಸಾ

ಕೇಂದ್ರಗಳ ಅವಶ್ಯಕತೆ ಇರುತ್ತದೆ.

ಹುಬ್ಬಳ್ಳಿ ತಾಲ್ಲೂಕಿನಲ್ಲಿ ಜಾನುವಾರುಗಳ ಸಂಖ್ಯೆ 79,512ಗಳಿದ್ದು ಅದಕ್ಕನುಗುಣವಾಗಿ 37,020 ದನಗಳ ಘಟಕಗಳಿರುತ್ತವೆ. ಈ ದನಗಳ ಘಟಕಗಳ ಪ್ರಕಾರ ಹುಬ್ಬಳ್ಳಿ ತಾಲ್ಲೂಕಿಗೆ ಒಟ್ಟು 7 ಪಶು ಚಿಕಿತ್ಸಾ ಕೇಂದ್ರಗಳು ಬೇಕಾಗುತ್ತವೆ. ಹಾಲಿ 5 ಪಶುಚಿಕಿತ್ಸಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಇನ್ನೂ 2 ಕೇಂದ್ರಗಳ ಅವಶ್ಯಕತೆ ಇದೆ.

ಮೇಲ್ಕಂಡ ಎರಡು ಗ್ರಾಮಗಳಿಗೆ ಪಶು ಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು.

ಹುಬ್ಬಳ್ಳಿ ತಾಲ್ಲೂಕಿನ ನೂಲ್ವಿ ಗ್ರಾಮದಲ್ಲಿ ಕೃತಕ ಗರ್ಭಧಾರಣಾ ಕೇಂದ್ರ ಈಗಾಗಲೇ ಕಾರ್ಯ ನಿರ್ವಹಿಸುತ್ತಿದೆ. ಈ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸಲು ಪ್ರಸ್ತಾವನೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಚೇರ್‌ಮನ್:– ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಕೆ.ಇ.ಬಿ. ಬಗ್ಗೆ ಸ್ಟೇಟ್‌ಮೆಂಟ್‌ನ್ನು ಮಾಡುತ್ತಾರೆ.

2-10 ಪಿ.ಎಮ್.

ಮಂತ್ರಿಗಳಿಂದ ಹೇಳಿಕೆ

17-2-93 ರಂದು ವಿದ್ಯುತ್ ಜಾಲದಲ್ಲಿ ಆದ ಅಡಚಣೆ

1993ರ ಫೆಬ್ರವರಿ 17ರಂದು ರಾತ್ರಿ ಸುಮಾರು 9.20ಕ್ಕೆ ವಿದ್ಯುತ್ ವ್ಯವಸ್ಥೆಯಲ್ಲಿ ಹೆಚ್ಚಿನ ವೋಲ್ಟೇಜ್ ವ್ಯತ್ಯಾಸ ಕಂಡು ಬಂದಿತು. ಆಂಧ್ರಪ್ರದೇಶದ ನಾಗಾರ್ಜುನ ಸಾಗರದ ಬಳಿ 400–200 ಕೆ.ವಿ. ಉಪಕೇಂದ್ರದಲ್ಲಿ 220 ಕೆ.ವಿ. ಬಸ್ ತೊಂದರೆ ಉಂಟಾಗಿರುವುದಾಗಿಯೂ ಇದರಿಂದಾಗಿ ಆಂಧ್ರಪ್ರದೇಶದ ರಾಮಗುಂಡಂ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದಲ್ಲಿ ಪ್ರತಿಯೊಂದೂ 500 ಮೆ.ವಾ. ಸಾಮರ್ಥ್ಯದ ಮೂರು ಘಟಕಗಳ ಉತ್ಪಾದನೆ ನಿಂತಿದೆಯೆಂದು ದಕ್ಷಿಣ ವಲಯ ವಿದ್ಯುಚ್ಛಕ್ತಿ ಮಂಡಳಿಯಿಂದ ತಿಳಿದು ಬಂತು. ಇದೇ ಸಮಯದಲ್ಲಿ, ಕೇಂದ್ರ ಉತ್ಪಾದನಾ ಕೇಂದ್ರಗಳಿಂದ ಕರ್ನಾಟಕವು ಸೋಮನಹಳ್ಳಿ ಬಿಂದುವಿನಲ್ಲಿ 650 ಮೆ.ವಾ. ವಿದ್ಯುತ್ತನ್ನು ಪಡೆಯುತ್ತಿತ್ತು. ಆಗ ರಾಮಗುಂಡಂನ ಉತ್ಪಾದನೆ 1800 ಮೆ.ವಾ. ನೈವೇಲಿಯಲ್ 950 ಮೆ.ವಾ. ಮತ್ತು ಕಲ್ಪಾಕಂ ಅಣು ವಿದ್ಯುತ್ ಕೇಂದ್ರದಲ್ಲಿನ ಉತ್ಪಾದನೆ 310 ಮೆ.ವಾ. ಇತ್ತು.

ಫ್ರೀಕ್ವೆನ್ಸಿಯನ್ನು ಉಳಿಸಿಕೊಳ್ಳಲು ಸುಮಾರು 200 ಮೆ.ವಾ. ವಿದ್ಯುತ್ ಪ್ರಮಾಣವನ್ನು ಕಡಿಮೆ ಮಾಡಲು ಕರ್ನಾಟಕದಲ್ಲಿ ಕ್ರಮ ಕೈಗೊಳ್ಳಲಾಗಿತ್ತು. ಆದರೆ ಪುನಃ ರಾತ್ರಿ 9.50ಕ್ಕೆ ಫ್ರಿಕ್ವೇನ್ಸಿಯು 48 ಸೈಕಲ್ಸ್‌ಗಿಂತ ಕಡಿಮೆಗೆ ಇಳಿಯಿತು. ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ ಘಟಕಗಳ ಉತ್ಪಾದನೆ ನಿಂತಿದ್ದರಿಂದ ವಿದ್ಯುತ್ ಜಾಲ ಹಾಗೂ ಕರ್ನಾಟಕದಿಂದ ಆಂಧ್ರಪ್ರದೇಶಕ್ಕೆ ಹರಿಯುವ ವಿದ್ಯುತ್ತು ಕುಸಿದುಬಿತ್ತು. ಅದೇ ಸಮಯಕ್ಕೆ ಮದರಾಸು ಅಣು ವಿದ್ಯುತ್ ಕೇಂದ್ರದ ಘಟಕಗಳು ಹಾಗೂ ರಾಮಗುಂಡಂ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಉಳಿದ ಘಟಕಗಳ ಉತ್ಪಾದನೆಯೂ ನಿಂತುಹೋಯಿತು. ಈ ಎಲ್ಲ ವಿದ್ಯುತ್ ಜಾಲ ಅಡಚಣೆಗಳಿಂದಾಗಿ ಶರಾವತಿ ಮತ್ತು ನಾಗಝರಿಯ ಎಲ್ಲ ಘಟಕಗಳು ಹಾಗು ರಾಯಚೂರು ಶಾಖೋತ್ಪನ್ನ ಸ್ಥಾವರದ ಒಂದು ಘಟಕದ ಉತ್ಪಾದನೆಗಳೂ ನಿಂತುಹೋದುವು. ವರಾಹಿಯ ಒಂದು ಘಟಕವು ಮಂಗಳೂರಿಗೆ ವಿದ್ಯುತ್ ಸರಬರಾಜನ್ನು ಮುಂದುವರಿಸಿದರೆ, ಆರ್.ಟಿ.ಪಿ.ಎಸ್.ನ ಒಂದು ಘಟಕವು ರಾಯಚೂರು ಮತ್ತು ಗುಲಬರ್ಗ

ಪ್ರದೇಶಗಳಿಗೆ ವಿದ್ಯುತ್ ಪೂರೈಸುತ್ತಿತ್ತು. ಕೂಡಲೆ ಕೆ.ವಿ. ಮಂಡಳಿ, ಹಾಗೂ ಕೆ.ವಿ. ನಿಗಮ ಸಿಬ್ಬಂದಿಯು ಕಾರ್ಯ ಪ್ರವೃತ್ತರಾಗಿ ನಾಗರ್ಝರಿ ಹಾಗು ಶರಾವತಿ ಘಟಕಗಳನ್ನು ದುರಸ್ತಿ ಪಡಿಸಿ ಸುಮಾರು ರಾತ್ರಿ 11.30ರ ವೇಳೆಗೆ ಹುಬ್ಬಳ್ಳಿ ಮತ್ತು ಬೆಳಗಾವಿಗಳಿಗೆ ಮತ್ತು ಬೆಂಗಳೂರಿಗೆ 18–2–1993ರ ಬೆಳಗಿನ ಜಾವ 2.30 ಕ್ಕೆ ವಿದ್ಯುತ್ ಸರಬರಾಜನ್ನು ಸ್ಥಿರಗೊಳಿಸಿತು. ಶರಾವತಿ, ನಾಗರ್ಝರಿ, ಆರ್.ಟಿ.ಪಿ.ಎಸ್. ಹಾಗೂ ವರಾಹಿ ಕೇಂದ್ರಗಳ ಉತ್ಪಾದನೆಯನ್ನು ಹದಗೊಳಿಸುವ ಮೂಲಕ ಬೆಳಗಿನ ಜಾವ 4.30ರ ಸುಮಾರಿಗೆ ರಾಜ್ಯದಲ್ಲಿ ಮಿತವಾದ ವಿದ್ಯುತ್ ಸರಬರಾಜನ್ನು ಸ್ಥಿರಗೊಳಿಸಲಾಯಿತು. 18 ಫೆಬ್ರವರಿ 1993ರಂದು ಬೆಳಿಗ್ಗೆ ಸುಮಾರು 10.10ರ ವೇಳೆಗೆ ಎಸ್.ಟಿ.ಪಿ.ಸಿ. ವ್ಯವಸ್ಥೆಯೊಂದಿಗೆ ಕರ್ನಾಟಕದ ವ್ಯವಸ್ಥೆಯನ್ನು ಹದಗೊಳಿಸಲಾಯಿತು. ಸಂಜೆಯ ವೇಳೆಗೆ ರಾಮಗುಂಡಂನಲ್ಲಿ ಉತ್ಪಾದನೆಯನ್ನು ವೃದ್ಧಿಗೊಳಿಸಲಾಯಿತು. ಹಾಗಾಗಿ, ಸಮನಹಳ್ಳಿ ಬಿಂದುವಿನಲ್ಲಿ ತನ್ನ ಪಾಲು ಪಡೆಯಲು ಕರ್ನಾಟಕಕ್ಕೆ ಸಾಧ್ಯವಾಯಿತು. 18–2–1993ರ ರಾತ್ರಿಯ ಮೇಲ್ಕಂಡ ವಿದ್ಯುತ್ ಜಾಲ ಅಡಚಣೆಯಿಂದಾಗಿ ತಮಿಳುನಾಡು ಹಾಗೂ ಆಂಧ್ರಪ್ರದೇಶ ವಿದ್ಯುತ್ ಸರಬರಾಜಿನಲ್ಲಿಯೂ ಕೂಡ ತೊಂದರೆಯಾಯಿತು.

ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರವು 17–2–1993ರಂದು ಆದ ವಿದ್ಯುತ್ ಜಾಲ ಅಡಚಣೆಯ ಎಲ್ಲ ವಿವರಗಳ ಪರಿಶೀಲನೆಗೆ ಮತ್ತು ಭವಿಷ್ಯದಲ್ಲಿ ಅಂತಹ ಘಟನೆಯು ಜರುಗದಂತೆ ಕೈಗೊಳ್ಳಬೇಕಾದ ಮುಂಜಾಗರೂಕತೆಯ ಬಗ್ಗೆ ಸಲಹೆ ನೀಡಲು ಸಮಿತಿಯೊಂದನ್ನು ರಚಿಸುತ್ತಿದೆ.

ಈ ಸಂಬಂಧವಾಗಿ ತಿಳಿಸ ಬಯಸುವುದೇನೆಂದರೆ ಕರ್ನಾಟಕ ರಾಜ್ಯದ ಅನಿರ್ಬಂಧಿತ ದೈನಂದಿನ ವಿದ್ಯುತ್ ಬೇಡಿಕೆಯು 57 ದಶಲಕ್ಷ ಯೂನಿಟ್ಟುಗಳಾಗಿದ್ದು ಈಗ ಪ್ರಸಕ್ತ ದಿನವೊಂದಕ್ಕೆ 47 ದಶಲಕ್ಷ ಯೂನಿಟ್ಟುಗಳು ಮಾತ್ರ ಲಭ್ಯವಾಗುತ್ತಿದೆ. ಹಾಗೆಯೇ ತಿಳಿಸುವುದೇನೆಂದರೆ ವಿದ್ಯುತ್ ವ್ಯವಸ್ಥೆಗೆ ಪ್ರತಿ ವರ್ಷ ಸರಾಸರಿ ಸಮಯ 600 ಮೆ.ವಾ. ಬೇಡಿಕೆ ಸೇರ್ಪಡೆಯಾಗುತ್ತಿದ್ದು, ಉತ್ಪಾದನೆಯು ಕೇವಲ ಸುಮಾರು 100ಮೆ.ವಾ.ಗಳಾಗಿದೆ. ಇದರಿಂದಾಗಿ ಬೇಡಿಕೆ ಹಾಗು ಲಭ್ಯತೆಯ ನಡುವೆ ಹೆಚ್ಚಿನ ಅಂತರ ಉಂಟಾಗುತ್ತದೆ. ಬೇಸಿಗೆಯ ಆರಂಭದೊಂದಿಗೆ ನೀರಾವರಿ ಪಂಪುಸೆಟ್ಟುಗಳ ಬಳಕೆಯಲ್ಲಿ ವಿಪರೀತ ಹೆಚ್ಚಳವಾಗುವುದರೊಂದಿಗೆ ವ್ಯವಸ್ಥೆಯ ಮೇಲಿನ ಬೇಡಿಕೆಯು ಅಧಿಕಗೊಂಡು ವೋಲ್ಟೇಜು ಸ್ಥಿತಿಯು ಮತ್ತಷ್ಟು ವ್ಯತ್ಯಯಗೊಳ್ಳಲಿದೆ. ಈ ಸಂಬಂಧವಾಗಿ ತಿಳಿಸಬಯಸುವುದೇನೆಂದರೆ, ಬೆಂಗಳೂರು ಸಮೀಪ ಸೋಮನಹಳ್ಳಿಯ ಕೇಂದ್ರ ಸ್ವೀಕರಣಾ ಕೇಂದ್ರಗಳಲ್ಲಿ ಕಡಿಮೆ ವೋಲ್ಟೇಜು (ಅಧಿಕ ಒತ್ತಡ ಬೇಡಿಕೆ ಅವಧಿಯಲ್ಲಿ 400 ಕೆ.ವಿ.ಯ ಅಗತ್ಯಕ್ಕೆ ಬದಲಾಗಿ 295 ರಿಂದ 30 ಕೆ.ವಿ.ಗಳು ಮಾತ್ರ) ಸ್ವೀಕರಿಸುತ್ತಿರುವುದರಿಂದ ವೋಲ್ಟೇಜು ವ್ಯವಸ್ಥೆಯು ಮತ್ತಷ್ಟು ಕುಸಿಯಲಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ವಿದ್ಯುತ್ ಹರಿದು ಬರುತ್ತಿರುವ ಆಂಧ್ರಪ್ರದೇಶದಲ್ಲಿ ಹೆಚ್ಚಿನ ರಿಯಾಕ್ಟೀವ್ ಲೋಡ್ ಇರುವುದೇ ಆಗಿದೆ.

ಮೇಲಿನ ನಿರ್ಬಂಧಗಳು ಮತ್ತು ರಾಜ್ಯದಲ್ಲಿನ ಕೆಲವು ಉಪ ಕೇಂದ್ರಗಳ ಅಧಿಕ ಹೊರೆಯ ಕಾರಣಗಳಿಂದಾಗಿ ವಿದ್ಯುತ್ ನಿಲುಗಡೆಯು ಅನಿವಾರ್ಯವಾಗಿದೆ. ಹಾಗಿದ್ದರೂ ಕೂಡ ಈ ವಿದ್ಯುತ್ ನಿಲುಗಡೆಯನ್ನು ನಗರ ಹಾಗೂ ಗ್ರಾಮೀಣ ಬಳಕೆದಾರರಿಗೆ ಹೆಚ್ಚು ತೊಂದರೆಯಾಗದ ಹಾಗೆ ಆದಷ್ಟು ಕಡಿಮೆ ಮಾಡಲಾಗುವುದು.

ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸುವ ಸಲುವಾಗಿ, ಕರ್ನಾಟಕ ವಿದ್ಯುತ್ ನಿಗಮ ಹಾಗೂ ವಿದ್ಯುಚ್ಛಕ್ತಿ ಮಂಡಳಿಯು ರಾಯಚೂರು ಶಾಖೋತ್ಪನ್ನ ಕೇಂದ್ರ 3ನೇ ಘಟಕದ ಉತ್ಪಾದನಾರಂಭಕ್ಕೆ ನಿರಂತರ ಪ್ರಯತ್ನ ಮಾಡುತ್ತಿದೆ. ಇದರಿಂದ ಹೆಚ್ಚುವರಿ 200 ಮೆ.ವಾ. ಪವರ್ ಮತ್ತು 3ದಶಲಕ್ಷ ಯೂನಿಟ್ಟುಗಳ ವಿದ್ಯುಚ್ಛಕ್ತಿಯು ಲಭ್ಯವಾಗಲಿದೆ. ಈ ಘಟಕವು 18–2–1993ರಿಂದ

ಪುನಃ ಉತ್ಪಾದನಾರಂಭ ಮಾಡಿದೆ. ಅಲ್ಲದೆ ಶರಾವತಿಯ ಮೂರು ಘಟಕಗಳು ವರಾಹಿಯ ಒಂದು ಘಟಕ ಮತ್ತು ಲಿಂಗನಮಕ್ಕಿ ಅಣೆಕಟ್ಟು ವಿದ್ಯುತ್ ಉತ್ಪಾದನಾ ಕೇಂದ್ರದ ಒಂದು ಘಟಕದ ದುರಸ್ತಿ ಕೆಲಸಗಳು ಈಗ ನಡೆಯುತ್ತಿವೆ. ಹಾಗಿದ್ದರೂ ಸಹ, ಶರಾವತಿಯ ಒಂದು ಘಟಕ, ವರಾಹಿಯ ಒಂದು ಘಟಕ ಮತ್ತು ಲಿಂಗನಮಕ್ಕಿ ಅಣೆಕಟ್ಟು ವಿದ್ಯುತ್ ಉತ್ಪಾದನಾ ಕೇಂದ್ರದ ಒಂದು ಘಟಕವು ಇನ್ನು ಒಂದು ವಾರದೊಳಗೆ ಉತ್ಪಾದನಾರಂಭ ಮಾಡುವುದೆಂದು ಕೆ.ವಿ. ನಿಗಮದಿಂದ ತಿಳಿದು ಬಂದಿದ್ದು, ಇದರಿಂದ ಹೆಚ್ಚುವರಿ ವಿದ್ಯುತ್ ಲಭ್ಯವಾಗಲಿದ್ದು ವೋಲ್ಟೇಜು ಸ್ಥಿತಿಯೂ ಸುಧಾರಿಸಿದೆ. ಸೋಮನಹಳ್ಳಿಯಲ್ಲಿ ಸ್ವೀಕರಿಸಲಾಗುತ್ತಿರುವ ವೋಲ್ಟೇಜ್ ಸ್ಥಿತಿಯ ಗುಣಮಟ್ಟದ ಸುಧಾರಣೆಗೆ, ಸದರಿ ವಿಷಯವನ್ನು ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ, ಭಾರತೀಯ ವಿದ್ಯುತ್ ಜಾಲ ನಿಗಮ ದಕ್ಷಿಣ ವಲಯ ವಿದ್ಯುಚ್ಛಕ್ತಿ ಮಂಡಳಿ ಮತ್ತು ಆಂಧ್ರಪ್ರದೇಶ ವಿದ್ಯುಚ್ಛಕ್ತಿ ಮಂಡಳಿಗಳೊಂದಿಗೆ ವ್ಯವಹರಿಸಲಾಗುತ್ತಿದೆ. ಹಾಗೆಯೇ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕೋರಿಕೆಯ ಮೇರೆಗೆ ಆಂಧ್ರಪ್ರದೇಶದ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಸೋಮನಹಳ್ಳಿಯಲ್ಲಿರುವ ವಿದ್ಯುತ್ ಜಾಲ ನಿಗಮ ಕೇಂದ್ರದಲ್ಲಿ ಸ್ವೀಕರಿಸುತ್ತಿರುವ ವೋಲ್ಟೇಜ್ ಸ್ಥಿತ ಸುಧಾರಣೆಗಾಗಿ ಅಧಿಕ ಒತ್ತಡ ಅವಧಿಯಲ್ಲಿ ನಾಗಾರ್ಜುನ ನಾಗರದ ಏಳು ಘಟಕಗಳನ್ನು ಸಿಂಕ್ರೊನೈಸ್ ಕಂಡೆನ್ಸರುಗಳಾಗಿ ಉಪಯೋಗಿಸುವುದಾಗಿ ಭರವಸೆ ನೀಡಿದ್ದಾರೆ.

ಪ್ರಸರಣೆ ಮತ್ತು ವಿತರಣಾ ಜಾಲವನ್ನು ಬಲಪಡಿಸುವ ಸಲುವಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು 1992–93ನೇ ಸಾಲಿನ ಅವಧಿಯಲ್ಲಿ ಒಟ್ಟು 86 ಎಂ.ವಿ.ಎ. ಸ್ಥಾಪಿತ ಸಾಮರ್ಥ್ಯದ ಹನ್ನೊಂದು ಹೊಸ ಉಪಕೇಂದ್ರಗಳನ್ನು ಕಾರ್ಯಾರಂಭಗೊಳಿಸಿದೆ. ಅಲ್ಲದೆ 26 ಉಪಕೇಂದ್ರಗಳ ಟ್ರಾನ್ಸ್‌ಫಾರ್ಮರು ಸಾಮರ್ಥ್ಯವನ್ನು ಒಟ್ಟು 655ಎಂ.ವಿ.ಎ.ಗೆ ಬಲಪಡಿಸಿದೆ. ಹಾಗು 85ಎಂ.ಪಿ.ಆರ್. ಕೆಪಾಸಿಟರು ಬ್ಯಾಂಕುಗಳನ್ನು ಸ್ಥಾಪಿಸಿದೆ. 1992–93ನೇ ಸಾಲಿನ ಉಳಿದ ಅವಧಿಯಲ್ಲಿ 35 ಎಂ.ವಿ.ಎ. ಒಟ್ಟು ಸಾಮರ್ಥ್ಯದ ಇನ್ನೂ 6 ಹೊಸ ಉಪಕೇಂದ್ರಗಳ ಸ್ಥಾಪನೆ ಮತ್ತು 4 ಉಪಕೇಂದ್ರಗಳಲ್ಲಿ ಒಟ್ಟು 45 ಎಂ.ವಿ.ಎ.ಗೆ ಅವುಗಳ ಸಾಮರ್ಥ್ಯವನ್ನು ಬಲಪಡಿಸುವ ಕೆಲಸವನ್ನು ಪೂರ್ಣಗೊಳಿಸಲಾಗುವುದು. ಇವುಗಳ ಜೊತೆಗೆ ಪ್ರಸಕ್ತ ಸಾಲಿನ ಅವಧಿಯಲ್ಲಿ 387 ಕಿ.ಮೀ.ಗಳ ಹೆಚ್ಚುವರಿ ಹೆಚ್.ಟಿ. ಮಾರ್ಗಗಳ ಸೇರ್ಪಡೆ ಮಾಡಲಾಗಿದ್ದು, ಉಳಿದ ಅವಧಿಯೊಳಗೆ 133 ಕಿ.ಮೀ.ಗಳ ಸೇರ್ಪಡೆ ಮಾಡಲಾಗುವುದು. ವೋಲ್ಟೇಜು ಸ್ಥಿತಿಯ ಸುಧಾರಣೆಗಾಗಿ ವಿವಿಧ ಭಾಗಗಳಲ್ಲಿ ಈಗಾಗಲೇ ಸ್ಥಾಪಿಸಲಾಗಿರುವ 900 ಎಂ.ಪಿ.ಎ.ಆರ್. ಕೆಪಾಸಿಟರುಗಳ ಜೊತೆಗೆ ಉಳಿದ ಅವಧಿಯೊಳಗೆ ಹೆಚ್ಚುವರಿ 195 ಎಂ.ಪಿ.ಎ.ಆರ್. ಕೆಪಾಸಿಟರುಗಳ ಬ್ಯಾಂಕುಗಳನ್ನು ಸ್ಥಾಪಿಸಲಾಗುವುದು. ಮೇಲಿನವುಗಳ ಜೊತೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಪ್ರಸಕ್ತ ಸಾಲಿನ ಅವಧಿಯಲ್ಲಿ 1422 ಕಿ.ಮೀ. 11 ಕೆ.ವಿ. ಮಾರ್ಗಗಳು 6854 ಕಿ.ಮೀ. 400 ವೋಲ್ಟ್ಸ್ ಮಾರ್ಗಗಳನ್ನು ನಿರ್ಮಿಸಿದೆ. ಮತ್ತು 2940 ವಿತರಣಾ ಟ್ರಾನ್ಸ್‌ಫಾರ್ಮರುಗಳನ್ನು ವ್ಯವಸ್ಥೆಗೆ ಸೇರಿಸಿದೆ.

ಗ್ರಾಹಕರಿಗೆ ಗುಣಮಟ್ಟದ ವಿದ್ಯುತ್ ಸರಬರಾಜನ್ನು ನೀಡಲು ಪ್ರಸರಣಾ ಮತ್ತು ವಿತರಣ ಜಾಲವನ್ನು ಬಲಪಡಿಸುವ ಕಾರ್ಯಗಳಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತನ್ನ ಸ್ವಂತ ಆರ್ಥಿಕತೆಯ ಜೊತೆಗೆ ವಿಶ್ವಬ್ಯಾಂಕ್, ಪವರ್ ಫೈನಾನ್ಸ್ ಕಾರ್ಪೊರೇಷನ್, ಮತ್ತು ಏಷಿಯನ್ ಅಭಿವೃದ್ಧಿ ಬ್ಯಾಂಕ್, ಈ ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಪಡೆದು ಹಲವು ಕಾರ್ಯಗಳನ್ನು ನಿರ್ವಹಿಸುತ್ತಿದೆ ಮತ್ತು ಕೆಲವು ವಿದ್ಯುತ್ ಪ್ರಸರಣಾ ಮಾರ್ಗ ಮತ್ತು ವಿದ್ಯುತ್ ಕೇಂದ್ರಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ಮುಂದಿನ ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ಮಂಡಳಿಯು ಐದು 400 ಕೆ.ವಿ., ಹದಿನೆಂಟು 220 ಕೆ.ವಿ., ಇಪ್ಪತ್ತು 110 ಕೆ.ವಿ. ಮತ್ತು ಐವತ್ತು 66: 33 ಕೆ.ವಿ. ವಿದ್ಯುತ್ ಕೇಂದ್ರಗಳನ್ನು ತನ್ನ ವ್ಯವಸ್ಥೆಗೆ ಸೇರಿಸಲಿದೆ. ಅಲ್ಲದೇ, 968 ಕಿ.ಮೀ. ಉದ್ದದ 400 ಕೆ.ವಿ.,

1585 ಕಿ.ಮೀ. ಉದ್ದದ 22 ಕೆ.ವಿ. 552 ಕಿ.ಮೀ. ಉದ್ದದ 110 ಕೆ.ವಿ. ಮತ್ತು 583 ಕಿ.ಮೀ. ಉದ್ದದ 66:33 ಕೆ.ವಿ. ವಿದ್ಯುತ್ ಪ್ರಸರಣಾ ಮಾರ್ಗಗಳನ್ನು ನಿರ್ಮಾಣ ಮಾಡಲಿದೆ. ಈ ಕಾರ್ಯಗಳಲ್ಲದೇ ಏಷಿಯನ್ ಅಭಿವೃದ್ಧಿ ಬ್ಯಾಂಕು, ಪವರ್ ಫೈನಾನ್ಸ್ ಸಂಸ್ಥೆಯ ಮೂಲಕ ನೀಡುವ ಆರ್ಥಿಕ ನೆರವಿನಿಂದ, ಪ್ರಮುಖ ನಗರ ಮತ್ತು ಪಟ್ಟಣಗಳಲ್ಲಿ ವಿತರಣಾ ವ್ಯವಸ್ಥೆಯ ನವೀಕರಣ ಮತ್ತು ಬಲಪಡಿಸುವಿಕೆಯ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆ. ಮೇಲಿನ ಕಾರ್ಯಗಳು ಪೂರ್ಣಗೊಂಡಾಗ, ರಾಜ್ಯದಲ್ಲಿ ಸರಬರಾಜಾಗುತ್ತಿರುವ ವಿದ್ಯುತ್‌ನ ಗುಣಮಟ್ಟವು ಸಾಕಷ್ಟು ಪ್ರಮಾಣದಲ್ಲಿ ಉತ್ತಮಗೊಳ್ಳುವ ನಿರೀಕ್ಷೆ ಇದೆ.

ಪ್ರಸಕ್ತ ಇರುವ ವಿದ್ಯುತ್ ಕಠಿಣ ಪರಿಸ್ಥಿತಿಯನ್ನು ನಿವಾರಿಸಿ, ಹಾಲಿ ಇರುವ ಬೆಳೆಗಳನ್ನು ರಕ್ಷಿಸಲು, ಕೆಳಕಂಡ ಎಚ್.ಟಿ. ವರ್ಗಗಳಿಗೆ ಕೆಳಕಂಡಂತೆ ವಿದ್ಯುತ್ ಬೇಡಿಕೆಯನ್ನು ಕಡಿತಗೊಳಿಸಲಾಗುವುದು.

1) 251 ರಿಂದ 5000 ಕೆ.ವಿ.ಎ. ಬೇಡಿಕೆ ಒಪ್ಪಂದದ ಎಚ್.ಟಿ. ಬಳಕೆದಾರರಿಗೆ ಹಾಲಿ ಇರುವ ಶೇ.25 ವಿದ್ಯುತ್ ಕಡತವನ್ನು ಶೇ. 40ಕ್ಕೆ ಹೆಚ್ಚಿಸುವುದು.

2) 5001 ರಿಂದ ಮೇಲ್ಪಟ್ಟು ಬೇಡಿಕೆ ಒಪ್ಪಂದದ ಎಚ್.ಟಿ. ಬಳಕೆದಾರರಿಗೆ ಹಾಲಿ ಇರುವ ಶೇ. 40 ವಿದ್ಯುತ್ ಕಡಿತವನ್ನು ಶೇ. 60ಕ್ಕೆ ಹೆಚ್ಚಿಸುವುದು.

3) ಮೇಲಿನ ವರ್ಗಗಳ ಬಳಕೆದಾರರಿಗೆ ಹಾಲಿ ಇರುವ ಶೇ.20 ಬೇಡಿಕೆ ಕಡಿತವನ್ನು ಶೇ.25 ಕ್ಕೆ ಹೆಚ್ಚಿಸುವುದು.

ಉಳಿದ ಬಳಕೆದಾರರಿಗೆ ವಿದ್ಯುತ್ ಸರಬರಾಜು ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಮೇಲಿನ ನಿರ್ಧಾರಗಳನ್ನು 1-3-1993ರಿಂದ ಜಾರಿಗೆ ತರಲಾಗುವುದು.

ಉತ್ತಮ ವೋಲ್ಟೇಜ್ ಅನ್ನು ಒದಗಿಸುವ ಕಾರಣ ಗ್ರಾಮಾಂತರ ಫೀಡರ್‌ಗಳ ಮೇಲೆ ಈಗ ಇರುವ ಪ್ರತಿದಿನ 6 ಗಂಟೆಗಳ ವಿದ್ಯುತ್ ನಿಲುಗಡೆಯನ್ನು ಮುಂದುವರಿಸಲಾಗುವುದು. ಏಕೆಂದರೆ ನಮ್ಮ ಕರ್ನಾಟಕ ವಿದ್ಯುತ್ ಮಂಡಳಿ billing period is from April. ಈ ತಿಂಗಳು ಫಾರ್ಚುನೇಟ್‌ಲಿ 28 ದಿವಸ ಮಾತ್ರ ಇದೆ. ಆದುದರಿಂದ ಇನ್ನು ನಾಲ್ಕು ದಿವಸದಲ್ಲಿ ಈ ವಿದ್ಯುತ್ ಖೋತಾವನ್ನು ನಾವು ಜಾರಿ ಮಾಡುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಅದರಲ್ಲಿಯೂ ಪಂಪು ಸೆಟ್ಟುಗಳನ್ನು ಪಡೆದಿರತಕ್ಕಂಥವರ ಮೇಲೆ ಬಹಳ ಉತ್ತಮ ಪರಿಣಾಮ ಆಗಬಹುದು ಎನ್ನತಕ್ಕಂಥ ನಿರೀಕ್ಷೆ ನಮ್ಮಗಳಿಗೆ ಇದೆ. "ಉತ್ತಮ ವೋಲ್ಟೇಜನ್ನು ಒದಗಿಸುವ ಕಾರಣ ಗ್ರಾಮಾಂತರ ಫೀಡರ್‌ಗಳ ಮೇಲೆ ಈಗ ಇರುವ ಆರು ಗಂಟೆ ವಿದ್ಯುತ್ ನಿಲುಗಡೆಯನ್ನು ಮುಂದುವರೆಸಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಬಹಳ ಸುದೀರ್ಘವಾದ ಅಂಕಿ ಅಂಶಗಳನ್ನು ಒಳಗೊಂಡಿರತಕ್ಕಂಥ ಕೆ.ಇ.ಬಿ.ಯ ಮುಂದಿನ 4-5 ವರ್ಷಗಳ ಕಾರ್ಯಕ್ರಮದ ಬಗ್ಗೆ ನಮ್ಮ ಮುಂದೆ ಹೇಳಿಕೆಯನ್ನು ಇಟ್ಟಿದ್ದಾರೆ. ಆದರೆ ನಾನು ಈಗ ಒಂದೇ ದಿವಸದಲ್ಲಿ ಅಥವಾ ಒಂದೇ ತಿಂಗಳಲ್ಲಿ ಬಹಳ ದೊಡ್ಡ ಒಂದು ಪ್ರತಿಫಲವನ್ನು ನಿರೀಕ್ಷೆ ಮಾಡತಕ್ಕಂಥದ್ದು ತಪ್ಪಾಗುತ್ತದೆ. ಆದರೆ ಇವರ ಉತ್ತರದಿಂದ ಈಗ ಕೊನೆಯಲ್ಲಿ ಉಪಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ. "ಉತ್ತಮ ವೋಲ್ಟೇಜನ್ನು ಒದಗಿಸುವ ಕಾರಣ ಗ್ರಾಮಾಂತರ ಫೀಡರ್‌ಗಳ ಮೇಲೆ ಇರುವ ಪ್ರತಿದಿನ ಆರು ಗಂಟೆಗಳ ಕಾಲ ವಿದ್ಯುತ್ ನಿಲುಗಡೆಯನ್ನು ಮುಂದುವರೆಸಲಾಗುವುದು" ಎಂದು ಹೇಳಿದ್ದೀರಿ ನಾವು ಈಗ ಅವರಿಗೆ ಕೇಳುತ್ತಿರುವುದು ಏನೆಂದರೆ

ಈಗ ತಾವು ಹೊಸದಾಗಿ ಏನನ್ನೂ ಹೇಳಿಲ್ಲ. ಆಸ್ ಇಟೀಸ್ ಆರು ಗಂಟೆ ವಿದ್ಯುತ್ ಕೊಡುತ್ತೇವೆ ಎಂದು ಹೇಳಿ ಕೆ.ಇ.ಬಿ.ಯವರು ಎಲ್ಲಾ ಕಡೆಗಳಲ್ಲೂ ಹೇಳುತ್ತಿದ್ದಾರೆ. ತಾವು ಆರು ಗಂಟೆ, ಎಂಟು ಗಂಟೆಯೋ, ಹತ್ತು ಗಂಟೆಯೋ ಮಾಡುತ್ತೀರಿ ಎನ್ನತಕ್ಕಂಥದು ನಮ್ಮದು ಆಸೆ ಏನಿತ್ತು, ಅದು ಹುಸಿಯಾಗಿದೆ ಮೊದಲನೆಯದಾಗಿ. ಈಗ ಕೊನೆಯ ಪಕ್ಷ ನಾನು ಏನು ಹೇಳಿದ್ದೇನೆಂದರೆ ನಮಗೆ ಒಂದು ಭರವಸೆಯನ್ನು ಕೊಡಿ. 1–3–93ರಿಂದ ಅಟ್‌ಲೀಸ್ಟ್ ಇಡೀ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಆರು ಗಂಟೆಗಳ ಕಾಲ ವಾರದಲ್ಲಿ ಏಳು ದಿನ ನಾವು ಸತತವಾಗಿ ನಿಮಗೆ ಕರೆಂಟನ್ನು ವೋಲ್ಟೇಜ್ ಕಡಿಮೆ ಇಲ್ಲದಂತೆ ಈಗ ಏನು ವೋಲ್ಟೇಜ್ ಇದೆ, 5 ಹೆಚ್.ಪಿ. ಹತ್ತು ಹೆಚ್.ಪಿ.ದು ನಮ್ಮ ಪಂಪುಸೆಟ್ಟುಗಳನ್ನು ಓಡಿಸುವಷ್ಟು ಕರೆಂಟನ್ನು ನಾವು ಕೊಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ತಾವು ಈ ಸದನಕ್ಕೆ ರಾಜ್ಯದ ವಿದ್ಯುತ್ ಬಳಕೆದಾರರಿಗೆ ಎಂದು ಕೊಡಬೇಕು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಎರಡನೆಯದಾಗಿ ನಮ್ಮ ಬಾಬಾಗೌಡ ಪಾಟೀಲರು ಒಂದು ಉತ್ತಮವಾದ ಸಲಹೆಯನ್ನು ಕೊಟ್ಟರು. ನೀವು ವಾರದಲ್ಲಿ ಒಂದು ದಿವಸ ವಿದ್ಯುತ್ ಕೊಡುವುದಿಲ್ಲ ಎಂದು ಹೇಳಿದರೆ ಮುಂಚಿತವಾಗಿ ನಮಗೆ ಏನೂ ತೊಂದರೆಯಾಗುವುದಿಲ್ಲ. ಅವತ್ತಿನ ದಿವಸ ನಾವು ಕೂಲಿಯವರನ್ನು ತೆಗೆದುಕೊಳ್ಳುವುದಿಲ್ಲ, ಮತ್ತೊಂದು ಮಾಡುವುದಿಲ್ಲ, ಅವತ್ತು ರಜ ಎಂದು ಹೇಳಿ ಸುಮ್ಮನೆ ಇರುತ್ತೇವೆ. ಇದರ ಬಗ್ಗೆಯೂ ಕೂಡ ಪರಿಶೀಲನೆ ಮಾಡಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:– ಇನ್ನೊಂದು ಸಲಹೆ ಇದೆ. ಆರು ಗಂಟೆ ನಿಲುಗಡೆ ಎಂದು ಇದೆ. ಅಂದರೆ 18 ಗಂಟೆ ಅಬಾಧಿತವಾಗಿ ಕೊಡುತ್ತೇವೆ ಎನ್ನತಕ್ಕಂಥದ್ದು ಅರ್ಥ. ಆರು ಗಂಟೆ ನಿಲುಗಡೆ, 18 ಗಂಟೆ ಅಬಾಧಿತವಾಗಿ ಕೊಡುತ್ತೇವೆ. ಮಾನ್ಯ ಸಿಂಧ್ಯಾರವರು ಏನು ಸಲಹೆ ಮಾಡಿದ್ರು ಎಂದರೆ ಕನಿಷ್ಟ ಆರು ಗಂಟೆ ಅಬಾಧಿತವಾಗಿ ವಿದ್ಯುತ್ ಕೊಡುತ್ತೀರಾ ಎಂದು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಕನಿಷ್ಟ ಆರು ಗಂಟೆಗಳ ಕಾಲ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ:– ಆದು ಗಂಟೆಯಾಗುವುದಿಲ್ಲ. ಎರಡನೆಯದು ಅಟ್‌ಲೀಸ್ಟ್ 12 ರಿಂದ 14 ಗಂಟೆ ಅಬಾಧಿತವಾಗಿ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ದಿನನಿತ್ಯ ಪಂಪುಸೆಟ್ಟುಗಳು ಸುಟ್ಟು ಹೋಗುತ್ತಿವೆ. ಜನರ ಸಮಸ್ಯೆ ನಮಗೆ ಗೊತ್ತಾಗಿದೆ. ಮೊನ್ನೆ ದೇವನಹಳ್ಳಿಯಲ್ಲಿ ನಡೆದಂಥ ಘಟನೆ ಬರೀ ವಿದ್ಯುತ್‌ಗಾಗಿ ನಡೆದಿದೆ. ಎರಡನೆಯದು ಬೆಳಿಗ್ಗೆ ಆರು ಗಂಟೆ ನಿಲುಗಡೆ ಎಂದು ಹೇಳುತ್ತಾರೆ. ಈಗ ಹುಡುಗರಿಗೆ ಪರೀಕ್ಷೆಯ ಕಾಲ, ಆದುದರಿಂದ ಬೆಳಿಗ್ಗೆ ಏಳು ಗಂಟೆವರೆಗಾದರೂ ಕರೆಂಟ್ ಇರುವಂಥ ವ್ಯವಸ್ಥೆಯಾಗಬೇಕು. ಮಧ್ಯಾಹ್ನದ ಹೊತ್ತು ಕರೆಂಟ್ ಸ್ವಲ್ಪ ಕಡಿಮೆಯಾದರೆ ತೊಂದರೆಯಾಗುವುದಿಲ್ಲ. ಸಾಯಂಕಾಲ ಆರು ಗಂಟಚೆ ನಿಲುಗಡೆ ಎಂದು ಹೇಳುತ್ತಾರೆ. ಈ ಟೈಮಿಂಗನ್ನು ಸ್ವಲ್ಪ ಸರಿಪಡಿಸಿಕೊಳ್ಳಬೇಕು. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ. ಕೊಡತಕ್ಕಂಥ ವಿದ್ಯುಚ್ಛಕ್ತಿಯನ್ನು ಅಬಾಧಿತವಾಗಿ ಜನರಿಗೆ ಕೊಡಬೇಕು. ವೋಲ್ಟೇಜ್ ಮೇಲೆ ಮತ್ತೊಂದರಲ್ಲಿ ಕರೆಂಟ್ ಹೋಗುತ್ತದೆ. ಅವರೇ ಹೇಳಿದ ಹಾಗೆ ಆರು ಗಂಟೆ ಕಾಲ ಕೊಟ್ಟರೂ ಜನರು ಸಂತೋಷ ಪಡುತ್ತಾರೆ. ಆದರೆ ಅದು ಅಬಾಧಿತವಾಗಿರಬೇಕು. ಮತ್ತೆ ಟೈಮಿಂಗನ್ನು ಪರಿಸ್ಥಿತಿಗೆ ಅನುಗುಣವಾಗಿ ನೋಡಿ ಸೂಕ್ತ ಕಾಲದಲ್ಲಿ ವಿದ್ಯುತ್ ಒದಗಿಸಿಕೊಡಬೇಕು.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೆ ಏನು ಎಂದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ ಕೇವಲ ಹೆಚ್.ಟಿ. ಕನ್‌ಸ್ಯೂಮರ್ಸ್‌ಗೆ ಕಡಿಮೆ ಮಾಡುವುದರ ಜೊತೆಗೆ ನಮಗೆ ಏನು ಒಂದು ತೊಂದರೆ ಇದೆ ಎಂದು ಹೇಳಿದರೆ ತಮ್ಮ ಯಾವುದೇ ವಿಭಾದಲ್ಲಿಯೇ

ತೆಗೆದುಕೊಳ್ಳಿ. ನಿಮ್ಮ ಟ್ರಾನ್ಸ್‌ಫಾರ್ಮರ್‌ಗಳು ಪ್ರತಿದಿವಸದಿಂದ ಕಳುಹಿಸುತ್ತಿದ್ದೀರಿ, ಅವುಗಳನ್ನು ಹಾಕುವುದಕ್ಕೂ ಸಾಧ್ಯವಾಗುತ್ತಿಲ್ಲ.

ಹೊಸದಾಗಿ ಟ್ರಾನ್ಸ್‌ಫಾರ್ಮರ್ಸ್ ಅನ್ನು ಕೊಡುತ್ತಿಲ್ಲ. ಅದಕ್ಕೆ ಏನು ಮಾಡುತ್ತಾರೆ ರೈತರು ಮತ್ತು ಅಧಿಕಾರಿಗಳು ಅನೇಕ ಸಂದರ್ಭದಲ್ಲಿ ಶಾಮೀಲಾಗಿ ತಾವು ಕೆಪಾಸಿಟಿಗಿಂತ ಹೆಚ್ಚಾಗಿ ನೀವು ಕೊಳವೆ ಬಾವಿಗಳಿಗೆ ಮತ್ತು ನೀರಾವರಿ ಪಂಪ್ಪುಸೆಟ್ಟುಗಳಿಗೆ ವಿದ್ಯುತ್ತನ್ನು ಪೂರೈಕೆ ಮಾಡುವುದರಿಂದ ವೋಲ್ಟೇಜ್ ಕಡಿಮೆಯಾಗುತ್ತದೆ, ಮತ್ತು ನಮ್ಮ ಮೋಟಾರುಗಳು ಸುಡುತ್ತಿವೆ. ಇದಕ್ಕೆ ಮುಖ್ಯವಾಗಿ ತಾವು ಮಾಡಬೇಕಾಗಿರುವುದೇನೆಂದರೆ ಬೇಕಾದಂತಹ ಟ್ರಾನ್ಸ್‌ಫಾರ್ಮರ್‌ಗಳನ್ನು ಸಪ್ಲೈ ಮಾಡಲಿಕ್ಕೆ ಜಾಗ್ರತೆಯಾಗಿ ಕ್ರಮ ತೆಗೆದುಕೊಳ್ಳಬೇಕು. ತಾವು ಹೊಸದಾಗಿ ಬಂದಿರುವುದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ನೀವು ರಿಪೇರಿ ಮಾಡಲಿಕ್ಕೆ ಯಾರಿಗೆ ಕೊಟ್ಟಿದ್ದೀರಿ ಅಂದರೆ ಖಾಸಗಿಯವರಿಗೆ ಕೊಟ್ಟಿದ್ದೀರಿ. ಇದೊಂದು ದೊಡ್ಡ ಜಾಲ ರಿಪೇರಿ ಮಾಡಲು ಸರಿಯಾದಂತಹ ರೀತಿಯಲ್ಲಿ ಆಗುವಂತೆ ನೋಡಿಕೊಳ್ಳಬಹುದು. ಇಲ್ಲಿಂದ ಕಳುಹಿಸುವುದೇ ತಡ ಅವುಗಳು ಕೆಟ್ಟುಹೋಗುತ್ತವೆ. ಮೊದಲು ಕೆ.ಇ.ಬಿ.ಯಲ್ಲಿ ತಮ್ಮದೆ ಆದಂತಹ ವ್ಯವಸ್ಥೆ ಇತ್ತು. ಈಗ ಅದನ್ನೆಲ್ಲಾ ತೆಗೆದುಬಿಟ್ಟು ಎಷ್ಟು ಖರ್ಚು ಮಾಡಿದ್ದೀರಿ. ನಾನು ತಮಗೆ ಕೇಳಿಕೊಳ್ಳುತ್ತೇನೆ ಮತ್ತು ಮುಂದೆ ಡಿಮಾಂಡ್ ಬಂದಾಗ ನಾನು ಹೇಳುತ್ತೇನೆ. ಟ್ರಾನ್ಸ್‌ಫಾರ್ಮರ್‌ಗಳು ಏನು ಕೆಟ್ಟಿವೆ ಅವುಗಳಿಗೆ ಅಳತೆ ಆಯಾ ಕೂಡ ಇಲ್ಲ. ಪರ್ಸೆಂಟೇಜ್ ತೆಗೆದುಕೊಂಡು ನೋಡಿ. ಇಲ್ಲಿಂದ ಚಿತ್ರದುರ್ಗಕ್ಕೆ ಹೋಗುವಷ್ಟೊತ್ತಿಗೆ ಅಲ್ಲಿ ಆಗಲೇ 5 ಕೆಟ್ಟಿರುತ್ತದೆ. ನೀವು ಇಲ್ಲಿಂದ ಮೂರು ಕಳುಹಿಸಿರುತ್ತೀರಿ. ಚಿತ್ರದುರ್ಗ ವಿಭಾಗದ ಒಂದರಲ್ಲಿಯೇ ಸುಮಾರು 250 ಟ್ರಾನ್ಸ್‌ಫಾರ್ಮರ್ಸ್ ಇವತ್ತು ಬೇಕಾದಿದೆ. ನೀವು ಇಲ್ಲಿಂದ ಕಳುಹಿಸುವುದು ಅಲ್ಲಿ ಕೆಟ್ಟು ಹೋಗತಕ್ಕ ಟ್ರಾನ್ಸ್‌ಫಾರ್ಮರುಗಳಿಗೆ ಸರಿಸಮಾನ ಆಗುವುದಿಲ್ಲ. 1990–91ನೇ ಇಸವಿಯಿಂದ ಇವತ್ತಿನವರೆಗೂ ಸಹ ಪರಿಶಿಷ್ಟ ಜಾತಿ, ಮತ್ತು ವರ್ಗದವರಿಗೆ ಯಾರಿಗೆ ಮಂಜೂರಾತಿ ವಿದ್ಯುತ್ತನ್ನು ಮಾಡಿದ್ದೀರಿ ಅವರಿಗೂ ಕೊಡಲಿಕ್ಕೆ ಸಾಧ್ಯವಾಗಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿಯೂ ತಾವು ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ತೀವ್ರವಾದಂತಹ ಪರಿಹಾರವನ್ನು ತಾವು ಕೊಡಿಸಲಿಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ವಿಜಯಕುಮಾರ್ ಶೆಟ್ಟಿ:– ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಮುಖ್ಯವಾಗಿ ಮೀನುಗಾರಿಕಾ ಕೇಂದ್ರಗಳಲ್ಲಿ ವಿದ್ಯುತ್ ಸಡ್‌ಡೌನ್ ಅನ್ನು ಇಂಪ್ಲಿಮೆಂಟ್ ಮಾಡುತ್ತಿದ್ದಾರೆ. ಇದರಿಂದ ಎಕ್ಸ್‌ಪೋರ್ಟ್ ಓರಿಯೆಂಟೆಡ್ ಯೂನಿಟ್ಸ್ ಏನಿದೆ ಇದಕ್ಕೆ ತೊಂದರೆಯಾಗುತ್ತಿದೆ. 6 ಗಂಟೆಗಿಂತ ಹೆಚ್ಚು ಸೆಡ್‌ಡೌನ್ ಮಾಡಿದರೆ ಮೀನುಗಳೆಲ್ಲ ಹಾಳಾಗುತ್ತದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಶಿಥಲೀಕರಣ ಅಗತ್ಯ ಪ್ರಮುಖ್ಯವಾಗಿದೆ. ಇದಕ್ಕೆ ಈ ಸೆಡ್‌ಡೌನ್‌ನಿಂದ ವಿನಾಯಿತಿ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದ್ದು ಏನಾದರೂ ಮಾಡಿ, ವಿದ್ಯುತ್ ಕಣ್ಣುಮುಚ್ಚಾಲೆಯಂತೆ. ತಕ್ಷಣಕ್ಕೆ ಹೋಗುವುದನ್ನು ನಿಲ್ಲಿಸಬೇಕನ್ನುವ ಕಳಕಳಿ ಇದೆ. ಆದರೆ ಅಲ್ಲಿರತಕ್ಕಂಥ ಜಾಲ ಏನಿದೆ. ಆ ತಂತಿಗಳನ್ನು ಅಲ್ಲಿರತಕ್ಕಂಥ ಟಿ.ಸಿ.ಗಳನ್ನು ಕೆ.ಇ.ಬಿ.ಯವರ ರೂಲ್ಸ್ ಕಾನೂನು ಏನಿದೆ ಆ ಪ್ರಕಾರ ಅಳವಡಿಸಿಲ್ಲ. ಅಲ್ಲಿ ಟಿ.ಸಿ.ಗಳು 9 ಕಂಬೈನ್ ಇಡಬೇಕೆಂದು ಇದೆ. ಆ ಪ್ರಕಾರ ಇಲ್ಲ. ಲೋಡ್ ಅನ್ನು ಹೆಚ್ಚಿಗೆ ಹಾಕಿದ್ದಾರೆ. ಮೇಲೆ ಮೇಲೆ ಆ ಟಿ.ಸಿ. ಸುಡುತ್ತಿವೆ. ಅವುಗಳಿಗೆ ಆಯಿಲ್ ಹಾಕಬೇಕೆಂದು ಇದೆ. ಅವುಗಳಿಗೆ ಆಯಲಿಂಗ್ ಮಾಡುವುದಿಲ್ಲ. ವಿದ್ಯುತ್‌ನ್ನು ಹೆಚ್ಚಿಗೆ ಬೆಲೆಯಿಂದ ತೆಗೆದುಕೊಂಡು ಹೋಗುತ್ತಿದ್ದಾರೆ. ಇಂತಹ ಜಾಲವನ್ನು ಸುವ್ಯವಸ್ಥಿತವಾಗಿ ಇಡಲಿಕ್ಕೆ ಮೊದಲು ಆದ್ಯತೆ ಕೊಡಬೇಕು. ಅನಂತರ ಟಿ.ಸಿ.ಗಳು ನಮ್ಮಲ್ಲಿ 15–20 ಸುಟ್ಟು ಕುಡಿಯುವ

LA-Vol-4

ನೀರಿಗೆ ತೊಂದರೆಯಾಗಿದೆ. ಇಲ್ಲಿಂದ ಅವರು ಟಿ.ಸಿ.ಗಳನ್ನು ಕಳುಹಿಸುವುದರೊಳಗೆ 15 ಅಲ್ಲಿ ಮತ್ತೆ ಸುಟ್ಟು ಹೋಗಿವೆ ಎಂದು ಬರುತ್ತಿದೆ. ಈ ಕ.ವಿ.ಮಂ ಕಂಪನಿಗಳಿಂದ ಏನು ಟಿ.ಸಿ.ಗಳನ್ನು ಕಳುಹಿಸುತ್ತಿದ್ದಾರೆ. ಅವುಗಳಲ್ಲಿ ಮೊದಲೇ ಏನಾದರೂ ಡಿಫೆಕ್ಟ್ ಇದೆಯೇ ಅಥವಾ ಯಾವುದೇ ನ್ಯೂನತೆ ಇದೆಯೋ ಎನ್ನುವುದನ್ನು ತಿಳಿದುಕೊಳ್ಳಬೇಕು. ಏಕೆಂದರೆ. ಹಿಂದೆ ತಯಾರಾದ ಟಿ.ಸಿ.ಗಳು 20 ವರ್ಷಗಳವರೆಗೆ ಸರಿಯಾಗಿ ಇರುತ್ತಿದ್ದವು. ಈಗ ಇಲ್ಲಿಂದ ಹೋಗಿ 3 ಗಂಟೆಗೆ ಒಂದೊಂದು ಟಿ.ಸಿ. ಹೋಗುತ್ತದೆ. ಅಂದರೆ ಅಲ್ಲಿ ಏನಾದರೂ ತಯಾರು ಮಾಡುವಾಗ ತೊಂದರೆ ಇದೆಯೋ ಎಂಬುದನ್ನು ಪರಿಶೀಲಿಸಬೇಕು. ವಿದ್ಯುತ್ತನ್ನು ಕೊಡುವುದು 18 ಗಂಟೆಗಳವರೆಗೆ ಕೊಡುತ್ತೇವೆಂದು ಮಾನ್ಯ ಸಚಿವರು ಏನು ಹೇಳಿದ್ದಾರೋ ಅದು ಸಾಧ್ಯವೇ ಇಲ್ಲ ಎಂದು ನಾನು ಭಾವಿಸುತ್ತಿದ್ದೇನೆ. ನೀವು 12 ಗಂಟೆಯಷ್ಟು ಕೊಡಿ ಈ ರೀತಿಯ ಕಣ್ಣುಮುಚ್ಚಾಲೆ ಬೇಡ ನಿರ್ದಿಷ್ಟವಾಗಿ ವೇಳೆಯನ್ನು ನಿಗಧಿಪಡಿಸಬೇಕು. ಜನರಿಗೆ ಬೇಕಾದರೆ ಹೇಳೋಣ. ವಿದ್ಯುತ್ ಇಷ್ಟಕ್ಕೆ ನಿಗಧಿ ಮಾಡಿಕೊಳ್ಳಬೇಕು. 10 ಎಕರೆ ಬೇಡ 5 ಎಕರೆಗೆ ನೀರಾವರಿ ಮಾಡಿಕೊಳ್ಳಿ. ಇದನ್ನು ನಾವು ಸಹಿತ ನೀರಾವರಿ ಜಮೀನುಗಳನ್ನು ಸಾಗುವಳಿ ಮಾಡಿಕೊಳ್ಳಲು ಮಿತವ್ಯಯ ಮಾಡಿಕೊಳ್ಳೋಣ. ಬೆಳೆಯನ್ನು ಹಾಳು ಮಾಡಿಕೊಳ್ಳದ ಹಾಗೆ ಸುರಕ್ಷಿತವಾಗಿ, ಲಾಭದಾಯಕವಾಗಿ ಬೆಳೆಯನ್ನು ಬೆಳೆಯೋಣ ಎಂದು ಹೇಳೋಣ. ಏಕೆಂದರೆ 10–20 ಸಾವಿರ ಖರ್ಚು ಮಾಡಿ, ಬೀಜ ಗೊಬ್ಬರ ಹಾಕಿದರೆ ಬೆಳೆ ಹಾಳಾಗುತ್ತದೆ.

ಇದ್ದ ವಿದ್ಯುತ್ತನ್ನು ಸಾಧ್ಯವಾದಷ್ಟು ರೈತರಿಗೆ ಗ್ರಾಮೀಣ ಜನರಿಗೆ ಹೆಚ್ಚಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಅದು ಸಾಧ್ಯ ಇಲ್ಲದೇ ಇದ್ದರೆ ಎಷ್ಟು ಸಾಧ್ಯ ಅಷ್ಟಾದರೂ ನಿಶ್ಚಿತವಾಗಿ ಕೊಡುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು 6 ಗಂಟೆ ವಿದ್ಯುತ್ತನ್ನು ಅಭಾದಿತವಾಗಿ ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ನಾನು ಅವರಿಗೆ ವಂದಿಸುತ್ತೇನೆ. ಹಗಲೊತ್ತು 6 ಗಂಟೆ ಕೊಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಇದಕ್ಕೆ ಏನಾದರೂ ಅವರು ಮಿಸ್‌ಇಂಟರ್‌ಪ್ರ್ಯೂ ಪ್ರಿಂಟ್ ಮಾಡಿ ನಾವು ಮಲಗಿಕೊಂಡಿದ್ದಾಗ ರಾತ್ರಿ ಒಂದು ಗಂಟೆಗೆ ಚಾರ್ಜ್ ಮಾಡಿಬಿಟ್ಟು ಬೆಳಿಗ್ಗೆ 6 ಗಂಟೆಗೆ ನಿಲ್ಲಿಸಿಬಿಟ್ಟರೆ ಮುಗಿದುಹೋಯಿತು. 6 ಗಂಟೆ ಕೊಡುತ್ತೇವೆಂದು ತಾವು ಹೇಳಿದ್ದೀರಿ, ನಾನು 6 ಗಂಟೆಯಷ್ಟು ಕೊಟ್ಟಿದ್ದೇನೆಂದು ಅವರು ಹೇಳುತ್ತಾರೆ. ಇನ್ನೊಂದು ಏನು ಕಷ್ಟ ಬಂದಿದೆ ಅಂದರೆ ಯಾರಾದರೂ ಗಲಾಟೆ ಮಾಡಿದರೆ ಹೋಗಿರಿ ಪುಕ್ಸಟ್ಟೆ ಪವರ್, ಏಕೆ ಇಲ್ಲಿ ಬಂದು ಗಲಾಟೆ ಮಾಡುತ್ತೀರಿ ಎಂದು ಹೇಳುತ್ತಾರೆ. ಅದನ್ನು ಸ್ವಲ್ಪ ತಾವು ಹದ್ದು ಬಸ್ತಿಗೆ ತರಬೇಕು. ಎರಡನೆಯದಾಗಿ 5 ಕಂಬಗಳಿಗಿಂತ ಜಾಸ್ತಿ ಬೀಳುವ ಕಡೆ ಸರ್ವೀಸ್ ಕೊಡಬೇಡಿ ಎಂದು ಆರ್ಡರ್ ಮಾಡಿದ್ದರು. ಆದರೆ ಇತ್ತೀಚೆಗೆ ಒಂದು ಆರ್ಡರ್ ಮಾಡಿ 31–3–92ರವರೆಗೆ ಏನು ನಿಮಗೆ ಬೇಡಿಕೆಗಳು ಬಂದಿದೆ ಅವರಿಗೆ ಮಾತು ಕೊಡಿ.

1-4-92ರಿಂದೀಚೆಗೆ ಬಂದಿರತಕ್ಕದ್ದನ್ನು ನೀವು ಕನ್ಸಿಡರ್ ಮಾಡಬೇಕಾಗಿಲ್ಲವೆಂದು ಸುತ್ತೋಲೆ ಹೋಗಿದೆ. ಇದರಿಂದ ಭೂಅಭಿವೃದ್ಧಿ ಬ್ಯಾಂಕಿನಿಂದ ಮತ್ತು ಕಮರ್ಷಿಯಲ್ ಬ್ಯಾಂಕಿನಿಂದ ಸಾಲ ತೆಗೆದುಕಂಡಿರುವವರು ಆಸ್ತಿಗಳು ಹರಾಜಿಗೆ ಬಂದಿದೆ. ಇದರ ಬಗ್ಗೆ ನಾನು ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಹತ್ತಿರ ಮಾತನಾಡಿದ್ದೇನೆ. ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ನನ್ನ ತಾಲ್ಲೂಕಿನ ಬೈರಾಪುರ ಎಂಬ ಹಳ್ಳಿಯಲ್ಲಿ ಹನುಮೇಗೌಡ ಎಂಬ ಬಡ ರೈತ ಸಾಲ ಮಾಡಿ ಬಾವಿ ತೆಗೆಯಿಸಿದ. ನೀರು ಬಂತು. ಈಗ ಅಧಿಕಾರಿಗಳು ಜಮೀನಿನಲ್ಲಿ ನೀರು ಬಂದರೆ ಮಾತ್ರ ಸಾಲ ಮಂಜೂರು ಮಾಡಲಾಗುವುದು. ಎಂದು ಹೇಳುತ್ತಿದ್ದಾರೆ. ಆತ ಮೂರು ವರ್ಷಗಳ ಹಿಂದೆ ಬಾವಿ ತೆಗೆಸಿದ್ದು. ತದನಂತರ ಸಾಲ ಮಂಜೂರು ಮಾಡಿದರು. ವಿದ್ಯುತ್

ಸರಬರಾಜಾಗುವುದರ ಬಗ್ಗೆಯೂ ಅನುಮತಿ ದೊರಕಿತು. ಆದರೆ, ಇವೊತ್ತಿನವರೆಗೂ ವಿದ್ಯುತ್ ಸರಬರಾಜಗಲೇ ಇಲ್ಲ. ಕಾರಣವೇನೆಂದರೆ, ವಿದ್ಯುತ್ ಸರಬರಾಜಿಗೆ 10 ಕಂಬಗಳು ಬೇಕಾಗುತ್ತದೆಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಾರೆ. ಹಾಗಾದರೆ, ಫೀಸಿಬಿಲಿಟಿ ಸರ್ಟಿಫಿಕೇಟ್ ಏಕೆ ಕೊಟ್ಟಿರಿ ? ಇದನ್ನು ಕೊಡುವುದಕ್ಕಾಗುವುದಿಲ್ಲವೆಂದು ಮೊದಲೇ ಆತನಿಗೆ ತಿಳಿಸಿದ್ದರೆ ಆತ ಸಾಲವನ್ನು ಮಾಡುತ್ತಿರಲಿಲ್ಲ, ಈಗ ಆತನ ಆಸ್ತಿ ಹರಾಜಿಗೆ ಬಂದಿದೆ, ಏನು ಮಾಡುತ್ತೀರೆಂದರೆ ನಾವೇನು ಮಾಡೋಣ, ಇದು ಸಾಧ್ಯವಾಗುವುದಿಲ್ಲ. ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಎಷ್ಟೋ ಜನ ರೈತರು ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಮತ್ತು ಕಮರ್ಷಿಯಲ್ ಬ್ಯಾಂಕುಗಳಿಂದ ಸಾಲ ಪಡೆದುಕೊಂಡು ಬೋರ್‌ವೆಲ್‌ಗಳನ್ನು ತೆಗೆಸಿದ್ದಾರೆ, ಅಂತಹ ರೈತರುಗಳ ಜಮೀನುಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕೆ ತಾವು ಯೋಚಿಸುತ್ತೀರಾ ? ಅನಂತರ 5 ಹೆಚ್.ಪಿ. ಮೇಲ್ಪಟ್ಟು ಅಥವಾ ಎಲ್ಲಾ ಹೆಚ್.ಪಿ.ಗಳ ಮೇಲ್ಪಟ್ಟಿರುವ ಕ್ರಿಸ್ ಇರಿಗೇಷನ್‌ಗಳಿಗೆ 50,000 ರೂಪಾಯಿವರೆಗೆ ಸಬ್ಸಿಡಿಯನ್ನು ಕೊಡುತ್ತೇವೆಂದು ತಾವು ಹೇಳಿದ್ದೀರಿ. ಅಂದರೆ ಕಾಸ್ಟ್‌ನ 50 ಪರ್ಸೆಂಟ್, ಗರಿಷ್ಠ 50,000 ರೂಪಾಯಿಗಳೆಂದು ಮಾಡಿದ್ದೀರಿ. This is a very good scheme. ಇದನ್ನು ಕಳೆದ ಸರ್ಕಾರದಲ್ಲೂ ಸಹ ಮಾಡಿದ್ದರು.ಈ ಯೋಜನೆಯಡಿ ರೈತರಿಗೆ ಡ್ರಿಫ್ ಇರಿಗೇಷನ್ ಮತ್ತು ಸ್ಪ್ರಿಂಕ್ಲಿಂಗ್ ಇರಿಗೇಷನ್ ಅನ್ನು ಹಾಕಿಕೊಳ್ಳಿ ಎಂದು ಅವರ ಮನವೊಲಿಸಿ, ಅವರಿಗೇನಾದರೂ ಹೆಚ್ಚಿನ ಸೌಲಭ್ಯ ಕೊಟ್ಟು ವಿದ್ಯುತ್ ಅನ್ನು ಕಡಿಮೆ ಉಪಯೋಗಿಸುವುದು ಮತ್ತು ನೀರಿನ ಬಳಕೆಯ ಮಿತವ್ಯಯದ ಬಗ್ಗೆ ತಾವು ಯೋಚನೆ ಮಾಡುವುದಕ್ಕೆ ಸಾಧ್ಯವೇ ಇದರ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ,ತಾಲ್ಲೂಕು ಪಂಚಾಯಿತಿ ಸಮಿತಿ ಸಭೆಗಳಲ್ಲಿ ನಮ್ಮ ಅನುಭವಕ್ಕೆ ಬಂದಿರುವಂಥ ಸಂಗತಿ ಏನೆಂದರೆ, ಗ್ರಾಮೀಣ ಪ್ರದೇಶಗಳಲ್ಲಿ ಮಿನಿ ವಾಟರ್ ಸಪ್ಲೈ, ರೂರಲ್ ವಾಟರ್ ಸಪ್ಲೈ ಅನ್ನು ಹೊಸದಾಗಿ ನೀವು ಏನು ಮಾಡುತ್ತಿದ್ದೀರಿ, ಅಲ್ಲಿಗೆ ಹೊಸದಾಗಿ ಸಂಪರ್ಕ ಕಲ್ಪಿಸುವುದಕ್ಕೆ ಕೆ.ಇ.ಬಿ ಇಲಾಖೆಯವರು ಹಿಂದೆ–ಮುಂದೆ ನೋಡಿದ್ದಾರೆ. ಕಾರಣವೇನೆಂದರೆ, ಅಲ್ಲಿರುವಂಥ ಜನರು ಕೆ.ಇ.ಬಿ. ಇಲಾಖೆಗೆ ಸರಿಯಾಗಿ ಹಣ ಪಾವತಿ ಮಾಡಿಲ್ಲವೆಂದು ಹೇಳುತ್ತಾರೆ. ಮಂಡಲ ಪಂಚಾಯಿತಿಗಳ ಹಣಕಾಸು ಪರಿಸ್ಥಿತಿಯ ಬಗ್ಗೆ ತಮಗೆ ಹೇಳುವಂಥ ಅಗತ್ಯವಿಲ್ಲ. ಕೊನೆಯ ಪಕ್ಷ ಕುಡಿಯುವ ನೀರಿನ ಪ್ರಶ್ನೆ ಬಂದಾಗ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಿ. ನೀವು ಯಾವುದೇ ರೀತಿಯ ಷರತ್ತುಗಳನ್ನು ವಿಧಿಸದೆ ತಕ್ಷಣದಿಂದ ಆದ್ಯತೆಯ ಮೇರೆಗೆ ತಮ್ಮ ಕಾಲದಲ್ಲಾದರೂ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ಎರಡನೆಯದಾಗಿ, ಚಿಕ್ಕ ಉದಾಹರಣೆ ಹೇಳುವುದಾದರೆ, ಶಿಕಾರಿಪುರ ತಾಲ್ಲೂಕಿನ ಕೆ.ಇ.ಬಿ.ಯಲ್ಲಿ ಒಂದೂ ಲಾರಿ ಇಲ್ಲದಿರುವ ಬಗ್ಗೆ ಈಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಇದು ನನ್ನ ತಾಲ್ಲೂಕಿನ ಪ್ರಶ್ನೆಯಲ್ಲ. ಈ ಕುರಿತು ಅನೇಕ ಬಾರಿ ಕೆ.ಇ.ಬಿ. ಇಲಾಖೆಗೆ ಪತ್ರಗಳನ್ನು ಬರೆದರೂ ಕೂಡ ನಾವು ಒಂದು ತರಹ ಅಸಹಾಯಕ ಪರಿಸ್ಥಿತಿಯಲ್ಲಿದ್ದೇವೆ, ಅಲ್ಲದೆ, ತಾಲ್ಲೂಕು ಮಟ್ಟದಲ್ಲಿರುವ ಅಧಿಕಾರಿಗಳ ವರ್ತನೆ ಸರಿಯಾದ ರೀತಿಯಲ್ಲಿಲ್ಲ. ಮತ್ತು ಟ್ರಾನ್ಸ್‌ಫಾರ್ಮರ್ಸ್ ಬಗ್ಗೆ ಎಲ್ಲರೂ ಪ್ರಸ್ತಾಪ ಮಾಡುತ್ತಿದ್ದಾರೆ. ತಮ್ಮ ಕಾಲದಲ್ಲಾದರೂ ಸಹ ಒಂದೊಂದು ಕೆ.ಇ.ಬಿ. ಇಲಾಖೆಗೆ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳ ಅಗತ್ಯವಿದೆ. ಅಷ್ಟನ್ನು ಪೂರೈಸಿಕೊಡುವ ವ್ಯವಸ್ಥೆ ಮಾಡಬೇಕು. ಕನಿಷ್ಠ ಪಕ್ಷ 2–3 ಸ್ಪೇರ್ ಟ್ರಾನ್ಸ್‌ಫಾರ್ಮರ್‌ಗಳಿಲ್ಲದಿದ್ದರೆ ಹೇಗೆ ? ರೈತ ಬದುಕುವುದಾದರೂ ಹೇಗೆ ? ಮಾನ್ಯ ಸದಸ್ಯರುಗಳು ಹೇಳಿದಂತೆ ರೈತರು ಸಾಲ–ಸೋಲ ಮಾಡಿ ಬೋರ್‌ವೆಲ್‌ಗಳನ್ನು ತೆಗೆಸಿ ವರ್ಷಾನುಗಟ್ಟಲೆ ಆಗಿದೆ. ಆತ ಸಣ್ಣ ರೈತರ ಇರಬಹುದು. ದೊಡ್ಡ ರೈತನಿರಬಹುದು. ಆದರೆ, ಬೆಳೆ ಬೆಳೆಯುವಂಥ ರೈತ ಇವೊತ್ತು ತ್ರಿಶಂಕು ಸ್ವರ್ಗದಲ್ಲಿದ್ದಾನೆ. ಆದುದರಿಂದ, ದಯ ಮಾಡಿ ರೈತರಿಗೆ

ಆದ್ಯತೆ ಕೊಟ್ಟು ವಿದ್ಯುತ್ ಸಂಪರ್ಕ ಕಲ್ಪಿಸುವುದರ ಬಗ್ಗೆ ಇವೊತ್ತು ತಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕಳುಹಿಸಿ, ಕುಡಿಯುವ ನೀರಿಗೆ ತಾವು ಅಡ್ಡಿಪಡಿಸದೆ ವಿಶೇಷ ಗಮನ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಡಾ।। ಎನ್.ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ವಿದ್ಯುಚ್ಛಕ್ತಿ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿರುವ ಸುಮಾರು ಏಳೂವರೆ ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಟ್ಟಿದ್ದಾರೆ ಮತ್ತು ಕುಡಿಯುವ ನೀರಿಗೆ ಚೆನ್ನರಾಯಪಟ್ಟಣಕ್ಕೆ ಸುಮಾರು ವರ್ಷಗಳಿಂದ ವಿದ್ಯುತ್ ಸಂಪರ್ಕ ಕೊಡುತ್ತಿದ್ದರು. ಈಗ 3-4 ತಿಂಗಳಿನಿಂದೀಚೆಗೆ ಅಲ್ಲೊಂದು 400 ಕೆ.ವಿ. ಮೋಟಾರನ್ನು ಸ್ಥಾಪಿಸಿದ್ದರೂ ಅದೂ ಕೂಡ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. 30 ಸಾವಿರ ಜನಸಂಖ್ಯೆ ಇರತಕ್ಕಂಥ ಚನ್ನರಾಯಪಟ್ಟಣಕ್ಕೆ ಮೂರು ತಿಂಗಳಿನಿಂದ ನೀರಿನ ಸರಬರಾಜು ಸಂಪೂರ್ಣವಾಗಿ ನಿಂತುಹೋಗಿದೆ, ಮತ್ತು ಇರಿಗೇಷನ್ ಪಂಪುಸೆಟ್ಟುಗಳು ಏನಿವೆ, ಅವುಗಳಿಗೆ ಸರಿಯಾಗಿ ವಿದ್ಯುತ್ ಸರಬರಾಜು ಮಾಡದಿರುವುದರಿಂದ ಮೊನ್ನೆ ದಿವಸ ರೈತರುಗಳೆಲ್ಲಾ ಸೇರಿ ರಾಷ್ಟ್ರೀಯ ಹೆದ್ದಾರಿಯನ್ನು ತಡೆ ಹಾಕಿ ದೊಡ್ಡ ಗಲಾಟೆ ಮಾಡಿದಾಗ ಅಲ್ಲಿಗೆ ಬಂದ ಕೆ.ಇ.ಬಿ. ಇಲಾಖೆಯವರು ಏನೋ ಒಂದು ಭರವಸೆ ಕೊಟ್ಟಿದ್ದಾರೆ. ಈಗ ಅಲ್ಲಿ ಏನಾಗಿದೆಯೆಂದರೆ, ಕೆ.ಇ.ಬಿ. ಇಲಾಖೆಯವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಮತ್ತು ಟ್ರಾನ್ಸ್‌ಫಾರ್ಮರ್ಸ್ ಏನಿದೆ. ಅವುಗಳಿಗೆ ವಿದ್ಯುತ್ ಸರಬರಾಜಾಗದೆ, ಸರಿಯಾದ ವೋಲ್ಟೇಜ್ ಇಲ್ಲದೆ ಈ ಸಮಸ್ಯೆ ಉದ್ಭವಿಸಿದೆಯೇ ವಿನಹ not because of the distribution system. ಅಲ್ಲಿರತಕ್ಕಂಥ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ They are helpless. ಏಕೆಂದರೆ, ವಿದ್ಯುತ್ ಸಮರ್ಪಕವಾಗಿ ಸರಬರಾಜಾಗದಿರುವುದರಿಂದ ಯಾವತ್ತೋ ಒಂದು ದಿವಸ ಸ್ಟೇಷನ್‌ನಲ್ಲಿ 25 ವರ್ಷಗಳ ಹಿಂದೆ ಒಂದು ಸಣ್ಣ ಟ್ರಾನ್ಸ್‌ಫಾರ್ಮರ್ ಅನ್ನು ಸ್ಥಾಪಿಸಿರುವುದರಿಂದ, ವಿದ್ಯುತ್ ಪೂರೈಕೆಯಲ್ಲಿ ಮತ್ತೆ ದೋಷವಿರುವುದರಿಂದ ಈ ಸಮಸ್ಯೆ ಬಂದಿದೆಯೇ ವಿನಹ ಇದನ್ನು ಅಲ್ಲಿರತಕ್ಕಂಥ ಸ್ಥಳೀಯ ಅಧಿಕಾರಿಗಳಾರೂ ಕೂಡ ಸರಿಪಡಿಸುವುದಕ್ಕಾಗುವುದಿಲ್ಲ. the supply position improves, the problem will be solved. until and unless.

ನನಗೆ ಗೊತ್ತಿರುವ ಮಟ್ಟಿಗೆ ವಿಶ್ವಬ್ಯಾಂಕಿನ ನೆರವಿನಡಿಯಲ್ಲಿ ನಮ್ಮ ಜಿಲ್ಲೆಯಾದ ಹಾಸನಕ್ಕೆ 220 ಕೆ.ವಿ.ಯ ಸ್ಟೇಷನ್ ಸ್ಯಾಂಕ್ಷನ್ ಆಗಿದೆ. ಅದಕ್ಕೆ ಜಾಗವನ್ನೂ ಕೂಡ ಕೊಟ್ಟಿದ್ದಾರೆ. ಈಗ ಏನು ಶರಾವತಿಯಿಂದ ಮೈಸೂರಿಗೆ ಹೋಗತಕ್ಕ 120 ಕೆ.ವಿ. ಟ್ರಾನ್ಸ್‌ಮಿಷನ್ ಲೈನಿದೆ ಅದನ್ನು ಬದಲಾವಣೆ ಮಾಡಬೇಕು.

ಅಧ್ಯಕ್ಷರು:- ನಿಮಗೆ ಕ್ಲಾರಿಫಿಕೇಷನ್ ಕೇಳಿ ಎಂದರೆ ಇಷ್ಟೊಂದು ಕೇಳುವುದೆ.

ಡಾ।। ಎನ್.ಬಿ. ನಂಜಪ್ಪ:- ಪೂರ್ಣವಾಗಿ ಕ್ಲಾರಿಫಿಕೇಷನ್ ಆಗಬೇಕು. ಈಗ ಸಬ್‌ಸ್ಟೇಷನ್ ಸ್ಯಾಂಕ್ಷನ್ ಆಗಿದೆ. ಅಲ್ಲಿ ಯಾವುದೋ ಒಂದು 30 ವರ್ಷದ ಹಿಂದಿನ ಟ್ರಾನ್ಸ್‌ಮಿಷನ್ ಏನು ಇದೆ. ಇದನ್ನು ಕೂಡಲೇ ಬದಲಾವಣೆ ಮಾಡಬೇಕು. 120 ಕೆ.ವಿ.ಯ ಟ್ರಾನ್ಸ್‌ಮಿಷನ್ ಲೈನ್ ಏನಿದೆ.ಅದನ್ನು 220 ಕೆ.ವಿ.ಗೆ. ಪರಿವರ್ತನೆ ಮಾಡಿದರೆ ಮಾತ್ರ ಈ ತೊಂದರೆಯನ್ನು ಪರಿಹರಿಸಲು ಸಾಧ್ಯವೇ ಹೊರತು ಈಗ ಇರತಕ್ಕ ಕಂಬ, ಲೈನ್‌ನಿಂದ, ಲೋ ಓಲ್ಟೇಜಿನಿಂದ ಟ್ರಾನ್ಸ್‌ಫಾರ್ಮರ್ಸ್ ಸುಟ್ಟು ಹೋಗುತ್ತವೆ,ನಮ್ಮಲ್ಲಿ 100-150 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿದೆ. ಕೆ.ಇ.ಬಿ.ನವರು ನಮಗೆ ಟ್ರಾನ್ಸ್‌ಫಾರ್ಮರ್‌ಗಳು ಕೊಟ್ಟಿಲ್ಲ. ಆದ್ದರಿಂದ ಕೆಲಸ ಮಾಡಲು ಆಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರುಗಳ ಟ್ರಾನ್ಸ್‌ಫಾರ್ಮರ್‌ಗಳು ಇಲ್ಲದೆ ಮ್ಯಾನೇಜ್ ಮಾಡುವುದಕ್ಕೆ

ಸಾಧ್ಯವೇ ಇಲ್ಲ. ಈ ತೊಂದರೆಯನ್ನು ಸರಿಪಡಿಸಬೇಕು. ಇದರ ಬಗ್ಗೆ ಸಂಬಂಧಪಟ್ಟ ಅಥಾರಿಟಿಯವರು ಯಾರು ಇದ್ದಾರೋ ಅವರಿಗೆ ಸೂಚನೆಯನ್ನು ಕೊಟ್ಟು ಇದನ್ನು ಆದಷ್ಟು ಬೇಗ ಸರಿ ಮಾಡಬೇಕು. ಕುಡಿಯುವ ನೀರಿನ ಸಲುವಾಗಿ ಹಳ್ಳಿಗಳಲ್ಲಿ mini–water supply ಮತ್ತು major water supply ಎಂದು ಏನು ಮಾಡಿದ್ದೇವೆ ಅಲ್ಲಿ ಲೋ ಓಲ್ಟೇಜ್ ಇರುವುದರಿಂದ ಮೋಟಾರ್‌ಗಳು ಸುಟ್ಟು ಹೋಗುತ್ತವೆ, ನಂತರ ಅದನ್ನು ರಿಪೇರಿ ಮಾಡುವುದು ಹೇಗೆಂದರೆ, ಆ ಮೋಟರ್‌ನ್ನು ತೆಗೆದುಕೊಂಡು ಹೋಗಿ ರೀವೈಂಡ್ ಮಾಡಿ ತೆಗೆದುಕೊಂಡು ಬಂದು ಹಾಕುವವರೆಗೆ ಅವರುಗಳಿಗೆ ನೀರು ಇರುವುದಿಲ್ಲ. ಹಳ್ಳಿಯ ಬಡಜನರಿಗೆ ನೀರು ಸರಬರಾಜು ಆಗುವುದಿಲ್ಲ. ಇದರ ಬಗ್ಗೆ I have requested. Actually I have written a letter to the concerned people. ಜಿಲ್ಲಾ ಪರಿಷತ್‌ನವರು 2–3 ಸ್ಪೇರ್ ಪಂಪುಗಳನ್ನು ತಾಲ್ಲೂಕು ಮಟ್ಟದಲ್ಲಿ ಇಟ್ಟುಕೊಂಡರೆ ಏನಾದರೂ ಈ ರೀತಿಯಲ್ಲಿ ಮೋಟಾರ್ ಸುಟ್ಟು ಹೋದರೆ ಆಗ ಇದನ್ನು ರೀಪ್ಲೇಸ್ ಮಾಡಬಹುದು, ಇದರ ಬಗ್ಗೆ ನೀವು ಗಮನಹರಿಸಿ ತೊಂದರೆಯನ್ನು ಸರಿಪಡಿಸಬೇಕು. ಈಗ ಬೆಳೆಗಳು ಹಾಳಾಗುತ್ತಿದೆ, ನಾವುಗಳು ಹಳ್ಳಿಗಳಿಗೆ ಹೋಗುವಂತಿಲ್ಲ, ಯಾವ ಊರಿಗೆ ಹೋದರೂ ಕೂಡ ನಮಗೆ ಲೈಟ್ ಇಲ್ಲ, ಪಂಪ್ ನಡೆಯುತ್ತಿಲ್ಲ, ಸುಟ್ಟು ಹೋಗಿದೆ, ನಮ್ಮ ಬೆಳೆ ಒಣಗಿಹೋಗುತ್ತಿದೆ, ಈ ರೀತಿಯಾದ ಗಲಾಟೆ ಇರುವುದರಿಂದ ತಾವು ಆದಷ್ಟು ಬೇಗ ಇದರ ಬಗ್ಗೆ ಗಮನ ಹರಿಸಬೇಕೆಂದು ಹೇಳಿ ತಮ್ಮನ್ನು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಒಂದೇ ಒಂದು ಕ್ಲಾರಿಫಿಕೇಷನ್ ಕೇಳಿ ಎಂದರೆ ಅವರು ಹಲವಾರು ಕೇಳಿದರು, ನೀವು ಒಂದನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಮಂತ್ರಿಗಳು ವಿದ್ಯುತ್‌ನ್ನು ಒದಗಿಸುವಲ್ಲಿ ಬಹಳ ಸರ್ಕಸ್ ಮಾಡಿದ್ದಾರೆ. ಆದರೂ ಸಹ ಅವರ ಹೇಳಕೆಯಲ್ಲಿ ಓಲ್ಟೇಜ್ ಸಾಕಾಗುವುದಿಲ್ಲ. ಇನ್ನು ಓಲ್ಟೇಜ್ ಕಡಿಮೆ ಇದೆ. ಎಂದು ಇನ್ನೂ ಸ್ವಲ್ಪ ಶಾಕ್ ಹೊಡೆದಿದೆ.

ಶ್ರೀ ಎಸ್.ಎಂ. ಕೃಷ್ಣ:– ಆದ್ದರಿಂದಲೇ ತಲೆಯ ಮೇಲೆ ಕೈಯನ್ನಿಟ್ಟು ಕುಳಿತುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಮತ್ತೆ ತಮ್ಮ ವರದಿಯಲ್ಲಿ ಪೇಜು, ಪೇಜು, ಪುಟ, ಪುಟಗಳನ್ನು ಓದಿದೆವು ಆದರೆ ತಾವು ತಾಂತ್ರಿಕವಾದ ಏನೋ ಭಾಷೆಯನ್ನು ಉಪಯೋಗ ಮಾಡಿದ್ದೀರಿ. ನಮಗೆ ಅದು ಸ್ಪಷ್ಟವಾಗಿ ಅರ್ಥವಾಗುತ್ತಿಲ್ಲ. ನಿಮಗೆ ಎಷ್ಟರಮಟ್ಟಿಗೆ ಅರ್ಥವಾಗಿದೆಯೋ ನನಗಂತೂ ಗೊತ್ತಿಲ್ಲ. ಅವರು ಒಂದು ಹೇಳಿಕೆಯನ್ನು ಮಾಡಿದ್ದಾರೆ ನೀವು ಅದಕ್ಕೆ ಏನೋ ಒಂದನ್ನು ಮಾಡಿದ್ದೀರಿ. ಈಗ ಸುತ್ತಿ ಬಳಸಿ ಹೋಗಬೇಕಾಗಿಲ್ಲ ನಮಗೆ ಸ್ಪಷ್ಟವಾಗಿ ಜನರಿಗೆ ಯಾವ ತೊಂದರೆಯೂ ಇಲ್ಲದಂತೆ ವಿದ್ಯುತ್‌ನ್ನು ಕೊಡಬೇಕು, ನೀರಾವರಿ ಪಂಪುಸೆಟ್ಟುಗಳು ನಡೆಯಬೇಕು, ಕುಡಿಯುವ ಬಾವಿಗಳಿಗೆ ತೊಂದರೆಯಾಗಬಾರದು, ತಾವು ಚಿಂತನೆ ಮಾಡಿ, ಕರ್ನಾಟಕದ ಉದ್ದಗಲಕ್ಕೂ ಎಲ್ಲೂ ಕಂಪ್ಲೇಂಟ್ ಅಥವಾ ಆಪಾದನೆ ಬರದಂತೆ ನೋಡಿಕೊಳ್ಳಬೇಕು. ನಾನು ಹಿಂದಿನ ವಿದ್ಯುತ್ ಸಚಿವರಾದ ರಾಮಪ್ಪನವರನ್ನೂ ನೋಡಿದ್ದೇನೆ, ರಾಮಪ್ಪನವರಿಂದ ಈಗ ಕೃಷ್ಣಪ್ಪನವರವರೆಗೂ ಬಂದಿದ್ದೇವೆ, ರಾಮನಿಂದ ಕೃಷ್ಣನವರೆಗೆ ಬಂದಿದೆ. ನೀವೂ ಸರಿಪಡಿಸುವುದಕ್ಕೆ ಆಗದಿದ್ದರೆ, ಸರಿ ಹೋಗುತ್ತದೋ ಇಲ್ಲವೋ ಎನ್ನತಕ್ಕ ಅನುಮಾನ ಬರುತ್ತದೆ. ತಾವು ಈಗ ಅದರ ಬಗ್ಗೆ 4 ಗಂಟೆಗೆ ಸಭೆಯನ್ನು ಕರೆದಿದ್ದೀರಿ, ನಾವು ಅಲ್ಲಿಗೆ ಬಂದು ನಿಮ್ಮ ಪರಿಸ್ಥಿತಿಯನ್ನು ಆಲೋಚಿಸುತ್ತೇವೆ. 17ನೇ ತಾರೀಖು ಅದಂಥ ವಿಷಯಕ್ಕೆ ನೀವು ಹೇಳಿಕೊಂಡು ಬಂದಿದ್ದೀರಿ. ನಮಗೆ ಈಗ ಬೇಕಾಗಿರತಕ್ಕದ್ದು ನೀವು ವಿದ್ಯುತ್ತನ್ನು ಕೊಡಬೇಕು. ನಾನು ಅನೇಕ ಸಾರಿ ನಿಮಗೆ ನನ್ನ ತಾಲ್ಲೂಕಿನಲ್ಲಿ ಒಂದರಲ್ಲೇ ಸುಮಾರು

5 ಕೋಟಿ ರೂಪಾಯಿಗಳ ಬೆಳೆ ನಾಶವಾಗಿದೆ, 50 ಹಳ್ಳಿಗಳಲ್ಲಿ ಇವತ್ತು ದೀಪವಿಲ್ಲ, ದೀಪವಿಲ್ಲವೆಂದರೆ ಕಂಬವಿದೆ, ತಂತಿ ಇದೆ, ಆದರೆ ಬೆಳಕು ಇಲ್ಲ. ಇಂಥ ಪರಿಸ್ಥಿತಿ ಉದ್ಭವವಾಗಿದೆ. ನಾವುಗಳು ಮಾನ್ಯ ಜಾಲಪ್ಪನವರು ಹೇಳಿದಂತೆ ಹಳ್ಳಿಗಳಿಗೆ ಹೋಗುವುದಕ್ಕಾಗುವುದಿಲ್ಲ, ಅದು ನಿಜ. ಆದರಲ್ಲಿಯೂ ರಾತ್ರಿಯ ವೇಳೆಯಲ್ಲಿ ಏನಾದರೂ ಹಳ್ಳಿಗೆ ಹೋದರೆ ನಮ್ಮ ಹಣೆಬರಹ ಏನಾಗಬೇಕು ? ಆದ್ದರಿಂದ ತಾವು ದಯ ಮಾಡಿ ಈ ಜನರ ಪರಿಸ್ಥಿತಿ ಏನಿದೆ, ಈ ಪರಿಸ್ಥಿತಿ ಏನು ಉದ್ದವಾಗಿದೆ ಅದನ್ನು ಪರಿಹರಿಸಲು ತಾವು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ನಿಮ್ಮ ಮಂಡಳಿ ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಹಣ ಬೇಕು. ನೂರಾರು ಕೋಟಿ ರೂಪಾಯಿಗಳು ಬೇರೆ ಬೇರೆ ಕೆರೆಗಳಿಂದ, ಕಾರ್ಖಾನೆಗಳಿಂದ ಬರಬೇಕಾಗಿದೆ. ಅದರ ವಸೂಲಿಗೆ ನೀವು ಏನು ಕ್ರಮವನ್ನು ಕೈಗೊಳ್ಳುತ್ತೀರಿ ? ನನಗೆ ತಿಳಿದ ಮಟ್ಟಿಗೆ ನಾಲ್ಕು ನೂರು ಕೋಟಿ ರೂ.ಗಿಂತ ಹೆಚ್ಚಿಗೆ ನಿಮಗೆ ಹೊರಗಡೆಯಿಂದ ಬರಬೇಕಾಗಿದೆ. ಇಷ್ಟೊಂದು ಹಣವನ್ನು ನೀವು ಹಾಗೆಯೇ ಬಿಟ್ಟುಕೊಂಡಿದ್ದೀರಿ. ಅವರು ಎಂಥವರೇ ಆಗಿರಲಿ. ನೀವು ಈ ಹಣವನ್ನು ವಸೂಲಿ ಮಾಡುವುದಕ್ಕೆ ಬಿಗಿ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ. ಈ 400 ಕೋಟಿ ರೂ. ಬಂದರೆ ನಮ್ಮ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಇನ್ನೂ ಹೆಚ್ಚಿನ ಕೆಲಸಗಳನ್ನು ಕೈಗೊಳ್ಳಬಹುದು. ನೀವು ಅವರಿಂದ 400 ಕೋಟಿ ರೂ.ಗಳನ್ನು ವಸೂಲ್ಮಾಡುವುದಕ್ಕೆ ಆಗುತ್ತಿಲ್ಲ. ಭಾಗ್ಯಜ್ಯೋತಿ ಎಂದು ಹಳ್ಳಿಗಳಲ್ಲಿ ಏನು ಕೊಟ್ಟಿದ್ದೀರಿ ಅವರಿಗೂ ಒಬ್ಬೊಬ್ಬರಿಗೂ 1070, 1080 ರೂ.ಗಳನ್ನು ಕಟ್ಟಬೇಕೆಂದು ಮಂಡಲಿಯವರು ಬಿಲ್ಲುಗಳನ್ನು ಕೊಟ್ಟಿದ್ದಾರೆ. ಕಳೆದ 10-15 ವರ್ಷಗಳಿಂದ ಹಣವನ್ನು ಕಟ್ಟಿಲ್ಲ. ಆದ್ದರಿಂದ ಈಗ ಕಟ್ಟಿ ಎಂದು ಕೊಟ್ಟಿದ್ದರೆ. ಅವರು ಕಟ್ಟಬೇಕಾದ್ದು 2–3 ರೂ. ಈ ಭಾಗ್ಯಜ್ಯೋತಿ ಕಾರ್ಯಕ್ರಮ ಮಾನ್ಯ ದೇವರಾಜ ಅರಸ್‌ರವರ ಕಾಲದಲ್ಲಿ ಪ್ರಾರಂಭವಾಯಿತು. ಇದಕ್ಕೆ ನೀವು ಹಣವನ್ನೇನೂ ಕಟ್ಟಬೇಕಾಗಿಲ್ಲ, ನಿಮಗೆ ಭಾಗ್ಯಜ್ಯೋತಿಯನ್ನು ಕೊಡುತ್ತೇವೆಂದು ಕೊಟ್ಟರು. ಇವತ್ತು ನಮ್ಮ ಕ್ಷೇತ್ರದ ಕಬ್ಬೇಪುರ ಎಂಬ ಹಳ್ಳಿಗೆ ನಾನು ಹೋದಾಗ ನೋಡಿದ್ದೇನೆ. ಅಲ್ಲಿ ಲೈಟ್ ಇಲ್ಲ. ಕೇವಲ ಮನೆಗೆ ಬಲ್ಬ್ ಹಾಕಿದ್ದಾರೆ. ಅಷ್ಟೆ. ತಾವು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ರಾತ್ರಿ ಸಮಸ್ಯೆ ಬಗ್ಗೆ ಒಂದೇ ಸಮನೆ ಈ ಸದನದಲ್ಲಿ ನಾವು ಹೇಳಿದ್ದೇವೆ. ಈ ಹೇಳಿಕೆಯನ್ನು ತಾವು ಏನು ಕೊಟ್ಟಿದ್ದೀರಿ ಇಷ್ಟೇ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದು ತಮ್ಮಲ್ಲಿ ನಾವು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಇದರ ಬಗ್ಗೆ ಇವತ್ತು 4 ಗಂಟೆಗೆ ನಮ್ಮನ್ನು ಕರೆದಿದ್ದೀರಿ. ಒಂದು ಸ್ಪಷ್ಟ ನಿರ್ಧಾರವನ್ನು ಕೈಗೊಳ್ಳಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ನೀರಾವರಿ ಮತ್ತು ವಿದ್ಯುಚ್ಛಕ್ತಿ ಖಾತೆ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಇದು ಬಹಳ ಕಠಿಣವಾದಂಥ ಸಮಸ್ಯೆ. ನನ್ನ ಮುಂದೆ ಸಾಫ್ಟ್ ಆಪ್‌ಷನ್ಸ್ ಯಾವುದೂ ಇಲ್ಲ. ಎಲ್ಲವೂ ಹಾರ್ಡ್ ಆಫ್‌ಷನ್ಸ್. ಇದರಲ್ಲಿ ಒಂದನ್ನು ಜಾರಿಗೊಳಿಸುತ್ತೇನೆ. ಒಂದು ತಮ್ಮ ಪ್ರಬಲ ಒತ್ತಾಯ ಏನಾಗಿತ್ತೆಂದರೆ, ಕೈಗಾರಿಕೆಗಳ ಮೇಲೆ ಹೆಚ್ಚು ಪವರ್ ಕಟ್‌ನ್ನು ವಿಧಿಸಬೇಕೆಂದು ಹೇಳಿದ್ದ ಮೇರೆಗೆ ಸದನದ ಒಟ್ಟಾರೆ ಅಭಿಪ್ರಾಯಕ್ಕೆ ತಲೆಬಾಗಿ 40 ಇದ್ದದ್ದನ್ನು 60 ಪರ್ಸೆಂಟ್ ಎಂದು ಮಾಡಿದ್ದೇನೆ. ಇದರಿಂದ ನಮ್ಮ ವಿದ್ಯುಚ್ಛಕ್ತಿ ಮಂಡಲಿಗೆ ರೆವಿನ್ಯೂ ಬರುವುದು ಬಹಳ ನಷ್ಟವಾಗುತ್ತದೆ. ಆದರೂ ಕೂಡ ರೈತರದೇ ನಮಗೆ ಪ್ರಧಾನವಾದಂಥ ಅಂಶ. ಅವರೇ ನಮ್ಮ ಕೇಂದ್ರ ಬಿಂದು. ಆದ್ದರಿಂದ ನಾವು ರೈತರಿಗೆ ಅನುಕೂಲವಾಗುವಂತೆ ವಿದ್ಯುತ್ ವಿತರಣಾ ಪಾಲಿಸಿಯನ್ನು ರೂಪಿಸಿದ್ದೇವೆ. ಕಳೆದ ಹತ್ತಾರು ವರ್ಷಗಳಿಂದ ಈ ಇಲಾಖೆಯ ಬಗ್ಗೆ ಉದಾಸೀನ ಏನಿತ್ತು ಆದರ ಒಟ್ಟು ಪರಿಣಾಮ ಇವತ್ತು ನಮ್ಮ ಮೇಲೆ ಬಿದ್ದಿದೆ. ಕಳೆದ ಹತ್ತಾರು ವರ್ಷಗಳಲ್ಲಿ ಹೊಸ ಆಧುನಿಕ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿದ್ದಿದ್ದರೆ, ಹೊಸ ಲೈನ್‌ಗಳನ್ನು ಎಳೆದಿದ್ದರೆ, ಅಥವಾ ಇವತ್ತು ವಿದ್ಯುತ್ ಉತ್ಪಾದನೆಗಾಗಿ ಏನು ಒತ್ತನ್ನು ಕೊಡುತ್ತಿದ್ದೇವೆ, ಇದೇ ಒತ್ತನ್ನು ಕಳೆದ ಹತ್ತಾರು ವರ್ಷಗಳಿಂದ ಕೊಟ್ಟುಕೊಂಡು

ಬಂದಿದ್ದರೆ ಇವತ್ತು ನಮ್ಮ ರಾಜ್ಯದಲ್ಲಿ ಈ ಕ್ರಿಟಿಕಲ್ ಪೊಸಿಷನ್ ಏನಿದೆ, ಅದು ಬರುತ್ತಿರಲಿಲ್ಲ ಎಂಬುದನ್ನು ತಾವೂ ಕೂಡ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ. ಇಂಥ ವಿಷಮ ಪರಿಸ್ಥಿತಿಯಲ್ಲಿ, ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಇಂದು ನಾನು ಈ ವಿದ್ಯುತ್ ಇಲಾಖೆಯ ನೇತೃತ್ವವನ್ನು ವಹಿಸಿಕೊಂಡಿರುವುದು ಒಂದು ರೀತಿಯ ಸವಾಲಿನ ರೀತಿಯಲ್ಲಿದೆ. ಆದ್ದರಿಂದ ನಾನು ಇದಕ್ಕೆ ಸ್ಪಂದಿಸಲೇಬೇಕಾಗುತ್ತದೆ. ನಾನು ಇಲ್ಲದಿದ್ದರೆ ಬೇರೆ ಯಾರೇ ಬಂದರೂ ಅವರೂ ಕೂಡ ಸ್ಪಂದಿಸಲೇಬೇಕಾಗುತ್ತದೆ. ಆದ್ದರಿಂದ ನಾನು ತಮ್ಮನ್ನು ಕೇಳುವುದೇನೆಂದರೆ, ನಾವು ಮಾಡುತ್ತಿರುವ ಕೆಲಸದಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ತಿದ್ದಿಕೊಳ್ಳುತ್ತೇನೆ. ಮಾನ್ಯ ಏಕಾಂತಯ್ಯನವರು ಟ್ರಾನ್ಸ್‌ಫಾರ್ಮರ್‌ಗಳ ರಿಪೇರಿ ಕೆಲಸವನ್ನು ಖಾಸಗಿಯವರಿಗೆ ಕೊಡುತ್ತಿದ್ದೀರೆಂದು ಹೇಳಿದರು. ಹಾಗಾದರೆ ನಾವು ಇನ್ನು ಯಾರಿಗೆ ಕೊಡಬೇಕು ? ಇವತ್ತು ನಮ್ಮ ಕರ್ನಾಟಕ ವಿದ್ಯುತ್ ಕಾರ್ಖಾನೆಯಲ್ಲಿ ಎಷ್ಟು ಟ್ರಾನ್ಸ್‌ಫಾರ್ಮರ್‌ಗಳು ಉತ್ಪಾದನೆಯಾಗುತ್ತವೆ. ಅಷ್ಟನ್ನೂ ನಾವೇ ಕೊಂಡುಕೊಳ್ಳುತ್ತಿದ್ದೇವೆ. In fact, it has become a captive transformer producing unit for the Karnataka Electricity Board. ಅದೇ ರೀತಿ ಹೊರಗಡೆ ಖಾಸಗಿಯವರು ಮಿನಿಮಂ ಸ್ಟ್ಯಾಂಡರ್ಡ್ಸ್‌ನ್ನು ಮೇನ್‌ಟೇನ್ ಮಾಡುತ್ತಾರೆ ಅವರಿಂದಲೂ ಕೂಡ ನಾವು ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಂಡುಕೊಳ್ಳುತ್ತಿದ್ದೇವೆ. ಜೊತೆಗೆ ಲಾರಿಗಳು, ಜೀಪುಗಳನ್ನೂ ವಿದ್ಯುತ್ ಮಂಡಲಿಗೆ ಒದಗಿಸಬೇಕೆಂದು ತಾವು ಹೇಳುತ್ತಿದ್ದೀರಿ ಅದಕ್ಕೆಲ್ಲಾ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಜಾಸ್ತಿಯಾಗುತ್ತದೆ. ಆದ್ದರಿಂದ, ನಿನ್ನೆ ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಲಾರಿಗಳಿಲ್ಲ ಅಲ್ಲಿ ಲಾರಿಗಳನ್ನು ಬಾಡಿಗೆಗಾದರೂ ತೆಗೆದುಕೊಂಡು ಟ್ರಾನ್ಸ್‌ಫಾರ್ಮರ್‌ಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಿ ಎಂದು ಹೇಳಿದ್ದೇವೆ. ನಮ್ಮ ಪವರ್ಸ್‌ನ್ನು ವಿಕೇಂದ್ರೀಕರಣ ಮಾಡಬೇಕೆಂದು ತಾವು ಹೇಳುತ್ತಿದ್ದೀರಿ. ಈಗಾಗಲೇ ಮಂಡಲಿಯ ಚೇರ್ಮನ್‌ರವರು ಸಾಕಷ್ಟು ವಿಕೇಂದ್ರೀಕರಣ ಕಾರ್ಯವನ್ನು ಮಾಡಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಲಾರಿಗಳಿಲ್ಲವೆಂಬ ಕಾರಣದಿಂದಲೇ ಟ್ರಾನ್ಸ್‌ಫಾರ್ಮರ್‌ಗಳನ್ನು ಕಳುಹಿಸದೇ ಬಿಟ್ಟರೆ ಅದು ಅಕ್ಷಮ್ಯ ಅಪರಾಧವೆಂದು ನಾವು ಹೇಳಿದ್ದೇವೆ.

ಎರಡನೆಯದು ಲೈನ್‌ಮ್ಯಾನ್‌ಗಳು ಎಲ್ಲೆಲ್ಲಿ ನೇಮಿಸಿದ್ದೇವೆ. ಅಲ್ಲಿ ಅವರುಗಳು ಇರಲೇಬೇಕೆಂಬುದನ್ನು ಕಡ್ಡಾಯವಾಗಿ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಯಾವ ಯಾವ ಜಾಗದಲ್ಲಿ ನೇಮಿಸಿದ್ದೇವೆ ಅವರು ಇಲ್ಲಿ ಇರುವುದಿಲ್ಲ ಎನ್ನುವುದು ನನ್ನ ಅನುಭವಕ್ಕೂ ಬಂದಿದೆ. ಅವರುಗಳು ತಮ್ಮ ಸ್ಥಳಗಳಲ್ಲಿಯೇ ಇರುವಂತೆ ಬಿಗಿ ಕ್ರಮವನ್ನು ಜಾರಿಗೊಳಿಸಲಿಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಮಾನ್ಯ ಜಾಲಪ್ಪನವರು ಯಾವುದೋ ಒಂದು ಕಟ್ ಆಫ್ ಡೇಟ್ ನಾವು ಮಾಡಿದ್ದನ್ನು ಹೇಳಿದರು ಈಗ ನಮ್ಮ ತೊಂದರೆ ಏನೆಂದರೆ ಕಳೆದ ಎರಡು ವರ್ಷಗಳಲ್ಲಿ ಒಂದು ಲಕ್ಷದ ಎಂಬತ್ತೆರಡು ಸಾವಿರ ಪಂಪ್‌ಸೆಟ್‌ಗಳನ್ನು ನಾವು ಎನರ್ಜೈಸ್ ಮಾಡಿದ್ದೇವೆ. ಆದರೆ ಉತ್ಪಾದನೆ ಆ ಪ್ರಮಾಣದಲ್ಲಿ. ಆ ದಾಮಾಷದಲ್ಲಿ ಏರುತ್ತಾ ಇಲ್ಲ. 600 ರಿಂದ 700 ಮೆಘಾವಾಟ್ಸ್ ವಿದ್ಯುತ್ತನ್ನು ಸೆಂಟ್ರಲ್ ಗೌವರ್ನಮೆಂಟ್‌ನಿಂದ ಸೆಂಟ್ರಲ್ ಇನಸ್ಟ್ಲೇಷನ್‌ನಿಂದ ನಮಗೆ ಕೊಡುತ್ತಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಅದು ಬರುತ್ತಿದೆಯಲ್ಲ ಎಂದು ಹೇಳಿದರು. ಬರತಕ್ಕಂಥ ವಿದ್ಯುಚ್ಛಕ್ತಿಯಲ್ಲಿ ಶಕ್ತಿ ಇಲ್ಲದೆ ಹೋದರೆ 400 ಕನಿಷ್ಠ ಪಕ್ಷ ಇರಬೇಕು. ಸೋಮನಹಳ್ಳಿ ಎಲ್ಲಿ ನಾವು ರಿಸೀವ್ ಮಾಡುತ್ತಿದ್ದೇವೆ, ಅಲ್ಲಿ 300–295–280 ಬರುವುದರಿಂದ ಈ ಓಲ್ಟೇಜ್ ಪ್ಲಕ್ಚ್ಯುಏಷನ್ ಆಗುತ್ತಿದೆ. ಜೊತೆಗೆ ಇನ್ನೊಂದು ತಾವು ಹೇಳಿದಿರಿ ಬೆಳಿಗ್ಗೆ 6 ರಿಂದ 9 ಗಂಟೆಯವರೆಗೆ, ಸಾಯಂಕಾಲ 6 ರಿಂದ 9 ಗಂಟೆ ಎಂದು ಹೇಳಿ. ಆಗಲೇ ನಮಗೆ ಬಂದಿರತಕ್ಕಂಥ ತೊಂದರೆ. ಇದು ಪೀಕ್‌ಅವರ್ಸ್. ಈ ಪೀಕ್‌ಅವರ್ಸ್ ಓಲ್ಟೇಜ್ ಪ್ಲಕ್ಚ್ಯುವೇಷನ್ ಜಾಸ್ತಿಯಾಗುತ್ತಿರತಕ್ಕಂಥದ್ದು ಇದೆ. ಆದ್ದರಿಂದ

ಕಾನ್ಸ್ಟ್ರೈನ್ಸ್ ಇರತಕ್ಕಂಥ ಕಾಲದಲ್ಲಿ, ನಿರ್ಭಂಧವಿರತಕ್ಕಂಥ ಕಾಲದಲ್ಲಿ, ಕಾಂಪಲ್‌ಷನ್ ಇರತಕ್ಕಂಥ ಕಾಲದಲ್ಲಿ, ನಾವು ಈ ದಕ್ಷಿಣ ವಿದ್ಯುತ್ ಜಾಲ ಏನಿದೆ ಅದರಲ್ಲಿ ನಾನು ಮೊನ್ನೆ ಆಂಧ್ರಪ್ರದೇಶದ ವಿದ್ಯುಚ್ಛಕ್ತಿಯ ಮಂತ್ರಿಗಳನ್ನು ಸಂಪರ್ಕಿಸುವುದಕ್ಕೆ ಪ್ರಯತ್ನ ಮಾಡಿದೆವು. ಅವರು ಸಿಕ್ಕಲಿಲ್ಲ. ನಮ್ಮ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರು ಆಂಧ್ರದ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರ ಜೊತೆಯಲ್ಲಿ ಪ್ರತಿದಿನ interact ಮಾಡುತ್ತಿದ್ದಾರೆ. ಇನ್ನು 2–3 ತಿಂಗಳ ಕಾಲ ಪರೀಕ್ಷಾ ಕಾಲ, ಬಹಳ ಕಠಿಣವಾದಂಥ ಕಾಲ, ವಿಷಮವಾದಂಥ ಕಾಲ. ಈಗ ಡ್ರಿಂಕಿಂಗ್ ವಾಟರ್ ಅದಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡುತ್ತಿದ್ದೇವೆ. ಎಲ್ಲೆಲ್ಲಿ ಅವರು ದುಡ್ಡನ್ನು ಕಟ್ಟದಿದ್ದರೂ ಕೂಡ ನಾವು ಡ್ರಿಂಕಿಂಗ್ ವಾಟರ್‌ಗೆ ಆದ್ಯತೆಯನ್ನು ಕೊಟ್ಟು ವಿದ್ಯುತ್ ಕೊಡಲು ಈಗಲೇ ಆದೇಶವನ್ನು ಕೊಡುತ್ತೇನೆ. ಅವರು ದುಡ್ಡು ಕೊಟ್ಟಿಲ್ಲ, ಹಣವನ್ನು ಕಟ್ಟಿಲ್ಲವೆನ್ನುವ ಕಾರಣಕ್ಕೋಸ್ಕರ ಅವರು ಪವರ್ ಕಟ್ ಮಾಡತಕ್ಕಂಥದ್ದನ್ನು ನಾವು ಸಹಿಸುವುದಕ್ಕೆ ಈ ಸದನ ತಯಾರಿಲ್ಲ. ಏತಕ್ಕೆಂದರೆ ಕೈಗಾರಿಕೋದ್ಯಮಿಗಳು ಅವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದು ಬಿಡುತ್ತಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಅವರಿಂದ ಎಷ್ಟು ಬರಬೇಕೆಂದು. ನನ್ನ ಬೇಡಿಕೆಗಳು ಬಂದಾಗ ಎಷ್ಟು ಬರಬೇಕು ? ಯಾರು ಯಾರಿಂದ ಬರಬೇಕು, ಎಲ್ಲೆಲ್ಲಿಂದ ಬರಬೇಕೆನ್ನುವುದನ್ನೆಲ್ಲ ಸವಿವರವಾಗಿ ಈ ಸದನದ ಮುಂದೆ ಇಡತಕ್ಕಂಥದು. ನನ್ನ ಕರ್ತವ್ಯ. ಮತ್ತೆ ಇದಕ್ಕೆ ಮೇಲೂ ಕೂಡ ತಮಗೆ ತಮ್ಮ ಸಲಹೆಗಳನ್ನು ಕೊಡಬೇಕೆಂದು ನಾನು ಹೇಳಿದೆ. ನಿಮ್ಮ ಮಾರ್ಗದರ್ಶನ ನನಗೆ ಬೇಕೆಂದು ಹೇಳಿ, ಇಂದೆಂದಿಗಿಂತಲೂ ಈಗ ನಿಮ್ಮ ಮಾರ್ಗದರ್ಶನ ನನಗೆ ಬೇಕಾಗಿದೆ. ನಾಲ್ಕು ಗಂಟೆಗೆ ತಾವೆಲ್ಲ ಬರುತ್ತಿದ್ದೀರಿ, ನೀವು ಕೂಡ ತಕ್ಕಂಥ ಮಾರ್ಗದರ್ಶನದ ಮೇಲೆ ಮುಂದೆ ಈ ರಾಜ್ಯದ ಜನರಿಗೆ ವಿದ್ಯುಚ್ಛಕ್ತಿ ಸುಧಾರಣೆ ಮಾಡುವುದಕ್ಕೆ ನಾವು ನೀವು ಎಲ್ಲಾ ಒಟ್ಟಾರೆ ಪ್ರಯತ್ನ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:– ಭಾಗ್ಯಜ್ಯೋತಿ ಎಲ್ಲಿ ?

ಶ್ರೀ ಎಸ್.ಎಂ. ಕೃಷ್ಣ:– ಭಾಗ್ಯಜ್ಯೋತಿಯ ಬಗ್ಗೆ ಹೇಳುತ್ತೇನೆ. ಫಿಷರೀಸ್ ಕೋಲ್ಡ್ ಸ್ಟೋರೇಜ್, ಅದನ್ನು ಮಾನ್ಯ ವಿಜಯಕುಮಾರ್ ಶೆಟ್ಟಿಯವರು ನಮೂದಿಸಿದ್ದಾರೆ. ಅದರ ಬಗ್ಗೆ ಪ್ರತ್ಯೇಕವಾಗಿ ಮಾತನಾಡಿ ಏನು ಬೇಕೋ ಅದನ್ನು ಮಾಡೋಣ.

ಒಬ್ಬ ಮಾನ್ಯ ಸದಸ್ಯರು:– ಅದನ್ನು ತಿನ್ನುವುದಕ್ಕೆ ವಾಸನೆ ಬರುತ್ತದೆ. ನಮಗೆ ಬಹಳ ತೊಂದರೆ.

ಶ್ರೀ ಎಸ್.ಎಂ. ಕೃಷ್ಣ:– ಈಗ ವಿಶ್ವವೇ ವೇಜಿಟೇರಿಯನ್ ಕಡೆಗೆ ಹೋಗುತ್ತಿದೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆ

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಂಥ ಈ ಸಂದರ್ಭದಲ್ಲಿ ನನ್ನದೇನು ಅಭ್ಯಂತರವಿಲ್ಲ. 184 ಜನ ಆಡಳಿತ ಪಕ್ಷದಲ್ಲಿ ಶಾಸಕರಲ್ಲಿ, 10–12 ಜನರು ಇದ್ದಾರೆ. ನನಗೆ ಭಯ ಇರತಕ್ಕಂಥದ್ದು, ಇವತ್ತು ಈ ಸರ್ಕಾರ ಇರುತ್ತೆ ಎನ್ನುವುದು ನಿಶ್ಚಯವಾದರೆ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಬಹಳ ಗಂಭೀರವಾದ ವಿಚಾರಗಳನ್ನು ಎತ್ತಿ ಇದನ್ನು ಮಾಡಿ ಎಂದು ಹೇಳಬಹುದು. ಯಡಿಯೂರಪ್ಪನವರೇ ಬಹಳ ದಿವಸ ಉಳಿಯುವಂಥ ಸ್ಥಿತಿಯಲ್ಲಿಲ್ಲ, ಇದರ ಬಗ್ಗೆ ದೀರ್ಘವಾದ ಚರ್ಚೆ ಮಾಡುವುದಕ್ಕೆ ನಮ್ಮಲ್ಲಿ ರಾಜಕೀಯ ಅಸ್ಥಿರತೆ ತಾಂಡವವಾಡುತ್ತಿದೆ, ಯಾವಾಗ ಇರುತ್ತದೋ ಯಾವಾಗ ಹೋಗುತ್ತದೋ, ಗೊತ್ತಿಲ್ಲ ಇದನ್ನು ಸ್ಪಷ್ಟ ಮಾಡಿದರೆ, ಅದರ ಬಗ್ಗೆ ಬೇರೆ ವಿಶೇಷವಾದಂಥ ಚರ್ಚೆ ಮಾಡಿ ಅದಕ್ಕೆ ಮಂಗಳವನ್ನು ಹಾಡಿ, ಮುಂದೆ ಸೇರುವುದಕ್ಕೆ ದಯವಿಟ್ಟು ತಾವು ಅವಕಾಶವನ್ನು ಮಾಡಿಕೊಡಿ. ಏತಕ್ಕೆಂದರೆ ಯಾವ ರೀತಿ ರಾಜಕೀಯ ಅಸ್ಥಿರತೆ ಇದೆ ಎಂದರೆ ಫಸ್ಟ್ ಓವರ್‌ನಲ್ಲಿ

ಎರಡು ವಿಕೆಟ್ ಕಿತ್ತುಕೊಂಡು ಹೋಯಿತು. ಇಬ್ಬರು ಮಂತ್ರಿಗಳು ಕ್ಲೀನ್ ಬೌಲ್ಡ್ ನನಗೆ ಭಯ ಬಂದಿರತಕ್ಕಂಥದ್ದು, ಒಳ್ಳೆಯ ಯುವಕ ಸಚಿವ ಪ್ರೇಮಚಂದ್ರ ಸಾಗರ್ ರಾಜೀನಾಮೆಯನ್ನು ಕೊಟ್ಟಿದ್ದಾರೆ. ನಿಮ್ಮ ಅಕ್ಕಪಕ್ಕದಲ್ಲಿ ಒಳ್ಳೆಯ ಕೆಲಸ ಮಾಡಬೇಕೆಂದು ಆಸಕ್ತಿ ಇರತಕ್ಕಂಥ ವ್ಯಕ್ತಿ ಅವರ ಇಲಾಖೆಗೆ ನೀವು ಕೊಟ್ಟಿರತಕ್ಕಂಥದ್ದು ಒಂದುಕೋಟಿ ಎಂಭತ್ತು ಲಕ್ಷ. ಒಬ್ಬ ಸಚಿವರಿಗೆ ಫೋನ್, ಅವರ ಟಿ.ಎ. ಡಿ.ಎ. ಸ್ಯಾಲರಿಗೆ, ಮನೆ ಖರ್ಚಿಗೆ ಇದೆಲ್ಲಾ ಸೇರಿಕೊಂಡು ಕನಿಷ್ಟ ಒಂದು ಕೋಟಿ ರೂಪಾಯಿ ಒಂದು ವರ್ಷಕ್ಕೆ ಮೇನ್‌ಟೈನ್ ಮಾಡುವುದಕ್ಕೆ ಬೇಕಾಗುತ್ತದೆ.

ಒಂದು ಇಲಾಖೆಗೆ ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ಕೊಟ್ಟು ಇಲಾಖೆ ನಡೆಸಬೇಕು ಅಂದಾಗ ಹೆಚ್ಚು ಕೇಳುವುದಕ್ಕೆ ಹೋದರೆ ಒಬ್ಬ ಅಧಿಕಾರಿ ಅಧಿಕ ಪ್ರಸಂಗತನದಿಂದ ಮಾತನಾಡುತ್ತಾರೆ. ಎನ್ನುವುದಾದರೆ ಬಹುಶಃ ವೀರಪ್ಪ ಮೊಯಿಲಿಯವರ ಮಂತ್ರಿಮಂಡಲದಲ್ಲಿ ಕೆಲಸ ಮಾಡುವುದರ ಬಗ್ಗೆ ನೀವೆಲ್ಲ ಮತ್ತೆ ಯೋಚನೆ ಮಾಡುವ ಪರಿಸ್ಥಿತಿ ಬಂದಿದೆಯೋ ಏನೋ ಗೊತ್ತಿಲ್ಲ. ಇನ್ನು ಯಾರಾದರೂ ರಾಜೀನಾಮೆ ಕೊಡಬೇಕೆಂದು ಸಲ್ಲಿಸಿದ್ದಾರೆಂದು ತಿಳಿದು ಬಂದಿದೆ. ಇದರ ಬಗ್ಗೆ ಉಪ ಮುಖ್ಯಮಂತ್ರಿಗಳು ಬೆಳಕು ಚೆಲ್ಲಿದರೆ ಆಗ ಇದರ ಬಗ್ಗೆ ಎಷ್ಟರಮಟ್ಟಿಗೆ ಚರ್ಚೆ ಮಾಡಬೇಕು, ಬೇಡ ಎಂಬ ಬಗ್ಗೆ ಯೋಚನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಾನು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕ ಸಂದರ್ಭದಲ್ಲಿ ಆಡಳಿತ ಪಕ್ಷಕ್ಕೆ ಇಷ್ಟೊಂದು ಆಲಸ್ಯ ಸಲ್ಲದು ಎಂದು ಅತ್ಯಂತ ವಿನಯದಿಂದ ಸರ್ಕಾರಕ್ಕೆ ವಿನಂತಿಸುತ್ತೇನೆ. ಎಂತಹ ಗಂಭೀರವಾದ ಪರಿಸ್ಥಿತಿ ಇದು. ರೈತ ಕಂಗಾಲಾಗಿದ್ದಾನೆ, ಕೃಷಿ ಕಾರ್ಮಿಕ ಭಿಕ್ಷೆ ಬೇಡುವ ಪರಿಸ್ಥಿತಿಗೆ ಬಂದಿದ್ದಾನೆ, ನಿರುದ್ಯೋಗಿ ಯುವಕರ ಸಮಸ್ಯೆ ಇದೆ, ಪವರ್ ಪ್ರಾಬ್ಲಂ ಇದೆ. ನೆರೆ ಹಾವಳಿಯಿಂದ ಜನರು ತತ್ತರಿಸಿ ಹೋಗಿದ್ದಾರೆ. ಇದರ ಬಗ್ಗೆ ಚರ್ಚೆಯಾಗುವ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯುವುದಕ್ಕೆ ಇಷ್ಟ ಪಡುತ್ತೇನೆ. ಆ ಕಡೆ 7–8 ಜನರು ಇಲ್ಲ. ನಾವು 4 ಜನ ಎದ್ದುಹೋದರೆ ಕೋರಂ ಇಲ್ಲದ ಪರಿಸ್ಥಿತಿ ಬರುತ್ತದೆ. ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ನಮ್ಮ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲವೆಂಬ ಕಾರಣಕ್ಕೋಸ್ಕರ ನನ್ನ ಕರ್ತವ್ಯದ ದೃಷ್ಟಿಯಿಂದ ರಾಜ್ಯಪಾಲರ ಭಾಷಣದ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಪ್ರಾರಂಭ ಮಾಡುತ್ತಿದ್ದೇನೆ. ಕಳೆದ 3 ವರ್ಷಗಳಲ್ಲಿ ರಾಜ್ಯಪಾಲರಿಂದ ತಾವು ಏನು ಹೇಳಿಸಿದ್ದೀರಿ, ಅದರಲ್ಲಿ ಏನನ್ನು ಕಾರ್ಯರೂಪಕ್ಕೆ ತಂದಿದ್ದೀರಿ, ಅದರ ಬಗ್ಗೆ ಬ್ಲೂ ಪ್ರಿಂಟ್ ನಮಗೆ ಕೊಡಿ, ಶ್ವೇತಪತ್ರ ಹೊರಡಿಸಿ. ಏಕೆಂದರೆ ಇದೊಂದು ವಾಡಿಕೆ ಆಗಬಾರದು. ರಾಜ್ಯಪಾಲರಿಂದ ಹೇಳಿಸಿದ ಮೇಲೆ ಅದನ್ನು ಮಾಡುವ ಪ್ರಾಮಾಣಿಕ ಕಳಕಳಿ ಬೇಕು. ಆ ದಿಸೆಯಲ್ಲಿ ಇಷ್ಟು ದೂರ ಹೋಗಿದ್ದೇವೆ. ಇಷ್ಟು ಪ್ರಯತ್ನ ಮಾಡಿದ್ದೇವೆ. ಈ ಕಾರಣಕ್ಕಾಗಿ ಈ ಕೆಲಸ ಮಾಡುವುದಕ್ಕಾಗುವುದಿಲ್ಲ. ಏನು ಮಾಡಲಿಲ್ಲ ಅದನ್ನು ಮುಂದಿನ ವರ್ಷ ಮಾಡುವುದಕ್ಕೆ ದಿಟ್ಟ ಹೆಜ್ಜೆ ಇಡುತ್ತಿದ್ದೇವೆಂದು ರಾಜ್ಯಪಾಲರ ಭಾಷಣದಲ್ಲಿ ಆಶ್ವಾಸನೆ ಕೊಡದಿದ್ದರೆ ಬಹುಶಃ ಬರಬರುತ್ತಾ ರಾಜ್ಯಪಾಲರ ಭಾಷಣಕ್ಕೆ ಯಾವ ಒಂದು ಮಹತ್ವವನ್ನು ಜನ ಕೊಡಬೇಕಾಗಿತ್ತು. ಈ ಕಡೆಯವರು, ಆ ಕಡೆಯವರು ಕೊಡಬೇಕಾಗಿತ್ತು. ಅದನ್ನು ಕೊಡದೆ ಒಂದು ರೀತಿಯ ಅಪಚಾರ ಮಾಡಿದಂತಾಗಬಹುದೆಂಬ ಮಾತನ್ನು ಹೇಳುತ್ತಾ, ತಮ್ಮ ಮೂಲಕ ಉಪ ಮುಖ್ಯಮಂತ್ರಿಗಳು ಇರುವ ಸಂದರ್ಭದಲ್ಲಿ, 184 ಶಾಸಕರನ್ನು ಕಂಟ್ರೋಲ್ ಮಾಡುವ ಸ್ಥಿತಿಯಲ್ಲಿ ಅವರು ಇಲ್ಲವೆಂದು ಹೇಳುತ್ತೇನೆ. ಈಗಾಗಲೇ 3–4 ಗಂಪುಗಳಾಗಿವೆ. ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದರು. ಆಶ್ವಾಸನೆ ಕೊಟ್ಟಂತೆ ಮಂತ್ರಿಮಂಡಲದಲ್ಲಿ ಅವಕಾಶ ಸಿಗಲಿಲ್ಲ. ಅನೇಕ ಕಾರಣಗಳಿಂದ ಬಡಿದಾಟದಿಂದ, ಕಚ್ಚಾಟದಿಂದ ಒಂದಾಗಿ ಇಲ್ಲದಿರುವ ವಿಚಿತ್ರ ಪರಿಸ್ಥಿತಿ ಬಂದಿರುವ ಸಂದರ್ಭದಲ್ಲಿ ರಾಜ್ಯದ ಜನರ ಹಿತದೃಷ್ಟಿಯಿಂದ ಒಂದೊಂದು ನಿಮಿಷಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುವ ಈ ಸದನದಲ್ಲಿ ಏನು ನಡೆಯುತ್ತದೆ ? ಎರಡು ಕಡೆಯವರು ಜನರ ಸಂಕಷ್ಟಗಳನ್ನು ಬಗೆಹರಿಸುವ ಬಗ್ಗೆ

ಕಳಕಳಿಯಿಂದ ಇಲ್ಲಿ ಭಾಗವಹಿಸುತ್ತಾರೆಯೇ ಎಂಬ ಬಗ್ಗೆ ದೂರದರ್ಶನ ಮುಖಾಂತರ ತೋರಿಸುವುದು ಪ್ರಾರಂಭವಾದರೆ ಕ್ಷೇತ್ರಕ್ಕೆ ಹೋದಾಗ ಜನರು ಏನನ್ನುತ್ತಾರೆಂಬ ಭಯದಿಂದಲಾದರೂ ಇಲ್ಲಿ ಕುಳಿತುಕೊಳ್ಳುವ ಪ್ರಯತ್ನ ಮಾಡಬಹುದು. ಸರ್ಕಾರ ಈ ದಿಕ್ಕಿನಲ್ಲಿ ವಿಶೇಷವಾದ ಯೋಜನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೆ, ತಮ್ಮ ಕೊಠಡಿಗ ಬಂದಾಗ ಹೇಳಿದ್ದಿರಿ. ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಅನೇಕ ಸಮಸ್ಯೆಗಳ ಬಗ್ಗೆ ಮಾತನಾಡಿ ಎಂದು ಹೇಳಿದ್ದೀರಿ. ಮಾತನಾಡುತ್ತೇನೆ. ಆದರೆ ನಾನು ತಮ್ಮನ್ನು ಒತ್ತಾಯಿಸುವುದು ಮತ್ತು ಪ್ರಾರ್ಥಿಸುವುದು ಏನೆಂದರೆ, ರಾಜ್ಯದ ಜನರ ಹಿತದೃಷ್ಟಿಯಿಂದ ನಾವು ಇಲ್ಲಿ ಏನು ಪ್ರಸ್ತಾಪಿಸಿ ಪ್ರಮುಖವಾದುದು ಎಂದು ಹೇಳುತ್ತೇವೆ ಅದರ ಬಗ್ಗೆ ಮುಖ್ಯಮಂತ್ರಿಗಳಿಂದ ಉತ್ತರ ಕೊಡುವ ಸಂದರ್ಭದಲ್ಲಿ ನಿರ್ದಿಷ್ಟವಾದ ಉತ್ತರವನ್ನು ಅಪೇಕ್ಷೆ ಪಡುತ್ತೇನೆ. ಇಲ್ಲದಿದ್ದರೆ ವಿರೋಧ ಪಕ್ಷಗಳ ಮಾತಿಗೂ ಮಾನ್ಯತೆ ಇಲ್ಲದಂತಾಗುತ್ತದೆ. ಕೇವಲ ನಮ್ಮ ಕರ್ತವ್ಯ ನಿರ್ವಹಿಸಬೇಕೆಂಬ ಸಮಾಧಾನದಿಂದ ಮಾತನಾಡುತ್ತಿದ್ದೇವೆಂಬ ಪರಿಸ್ಥಿತಿ ಬರುತ್ತದೆ, ಇದು ಸರಿಯಲ್ಲ. ಸ್ಪಷ್ಟವಾದ ಉತ್ತರ ಕೊಡಬೇಕೆಂಬ ಆದೇಶ ತಾವು ಮುಖ್ಯಮಂತ್ರಿಗಳಲ್ಲಿ ನೀಡುತ್ತೀರಿ. ಆ ಉತ್ತರ ಕೊಡಿಸುತ್ತೀರೆಂಬ ವಿಶ್ವಾಸ ನನಗೆ ಇದೆ. ತಾವು ಆ ಕೆಲಸ ಮಾಡುತ್ತೀರೆಂದು, ಪ್ರಾಮಾಣಿಕ ಪ್ರಯತ್ನ ಮಾಡುತ್ತೀರೆಂದು ನಂಬಿದ್ದೇನೆ. ಇವತ್ತು ನೆರೆ ಹಾವಳಿಗೆ ಸಿಕ್ಕಿರುವ ರೈತನ ಬಗ್ಗೆ ನೀವೇ ಹೇಳಿರುವ ಹಾಗೆ 500 ರೂಪಾಯಿ ಹೆಕ್ಟೇರಿಗೆ ಭಿಕ್ಷೆ ಕೊಡಬೇಕು ಅದನ್ನು ಕೂಡ ಇದುವರೆಗೆ ಕೊಟ್ಟಿಲ್ಲ. ಪಂಪುಸೆಟ್ಟುಗಳು ಹಾಳಾದುದಕ್ಕೆ ದುಡ್ಡು ಕೊಡುತ್ತೇವೆಂದು ಹೋದ ಜನವರಿಯಲ್ಲಿ ಹೇಳಿ ಇದುವರೆಗೆ ಒಂದು ಪೈಸೆ ಕೂಡ ಕೊಟ್ಟಿಲ್ಲ. ಲಕ್ಷಾಂತರ ಮನೆಗಳು ನೆಲಸಮವಾಗಿವೆ. ಆಶ್ರಯ ಯೋಜನೆಯಲ್ಲಿ ಮಾಡಿ ಮುಗಿಸುತ್ತೇವೆಂದು ಹೇಳಿದ್ದು ಇವತ್ತು ಅವನು ಮುಗಿದು ಹೋಗಿದ್ದಾನೆ. ಮನೆಗಳನ್ನು ಕಟ್ಟುವುದಕ್ಕೆ ಮಾತ್ರ ಪ್ರಯತ್ನ ಮಾಡಿಲ್ಲ. ನೀವೇ ಘೋಷಣೆ ಮಾಡಿದ 5 ಕೋಟಿ ರೂಪಾಯಿಗಳನ್ನು ಇದುವರೆಗೆ ಬಿಡುಗಡೆ ಮಾಡಿಲ್ಲ. ನೀವೇ ಕೊಟ್ಟ ಆಶ್ವಾಸನೆ ಪ್ರಕಾರ ನೆರೆ ಹಾವಳಿಗೆ ಸಿಕ್ಕ ರೈತರಿಗೆ ನೆರವು ಕೊಡತಕ್ಕದ್ದು, ಪರಿಹಾರ ಕೊಡತಕ್ಕದ್ದು; ಮನೆ ಕಟ್ಟಿಕೊಡತಕ್ಕದ್ದು. ಲಾಸ್ ಕಾಂಪನ್‌ಸೇಟ್ ಯಾವ ರೀತಿ ಮಾಡುತ್ತೀರಿ ಅದರ ಬಗ್ಗೆ ವಿಶೇಷ ಪ್ರಯತ್ನ ಮಾಡಬೇಕು. ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ. ಉತ್ತರ ಕೊಡುವ ಸಂದರ್ಭದಲ್ಲಿ ತಕ್ಷಣ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ನಾನು ಶಿವಮೊಗ್ಗ ಜಿಲ್ಲೆಯಿಂದ ಬಂದವನು, ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚನೆ ಮಾಡಿದ್ದೇವೆಂದು ಹೇಳಿದರು. ಹೋದ ಸಾರಿ 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಮತ್ತು ಸಂಬಂಧಪಟ್ಟ ಸಚಿವರನ್ನು ಈ ಖಾತೆಗೆ ನೇಮಕ ಮಾಡಿದ್ದೀರಾ ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಕಿತ್ತು ಹಾಕಿದ್ದೇವೆಂದು ಮಂತ್ರಿಗಳನ್ನು ಕಿತ್ತು ಹಾಕಿ, ಅವರಿಗೆ ಇನ್ನು ಯಾವುದಾದರೂ ಒಳ್ಳೆಯ ಇಲಾಖೆ ಕೊಡಿ.

ಮುಖ್ಯಮಂತ್ರಿ ಬಂಗಾರಪ್ಪನವರು ಇದ್ದಂಥ ಜಿಲ್ಲೆಯಿಂದ ಬಂದಿರುವ ಒಬ್ಬ ಮಂತ್ರಿಗಳು, ಶ್ರೀ ಹಾಲಪ್ಪನವರಿಗೆ ಮಲೆನಾಡು ಅಭಿವೃದ್ಧಿ ಮಂಡಲಿ ಕೊಟ್ಟಿದ್ದೀರಿ. ನಾನು ಒತ್ತಾಯ ಮಾಡುವುದು, 35 ಕೋಟಿ ರೂಪಾಯಿಗಳನ್ನು ಮಾರ್ಚಿ ಒಳಗೆ ಖರ್ಚು ಮಾಡಬೇಕಾಗಿತ್ತು ಅಧ್ಯಕ್ಷರೇ ಇದು ಅವರೇ ಕೊಟ್ಟ ಆಶ್ವಾಸನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಎಲ್ಲಾ ವಿರೋಧಪಕ್ಷದವರೂ ಕೂಡ ತಮ್ಮ ಮೂಲಕ ಸರ್ಕಾರಕ್ಕೆ ಒಂದು ಮನವಿ ಮಾಡಿದ್ದೇವೆ. ಏನೆಂದರೆ, ಮಂತ್ರಿಗಳ ನಾಮಫಲಕ ಇಲ್ಲಿ ಹಾಕಬೇಕು. 41 ಜನ ಮಂತ್ರಿಗಳಿದ್ದಾರೆ. ಅವರ ಇಲಾಖೆಗಳು ನಮಗೆ ಗೊತ್ತಾಗುವುದಿಲ್ಲ. ದಯವಿಟ್ಟು ಸರ್ಕಾರಕ್ಕೆ ಆದೇಶ ಕೊಟ್ಟು ನಾಮಫಲಕ ಹಾಕಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಮಲೆನಾಡು ಅಭಿವೃದ್ಧಿ ಬಗ್ಗೆ ಏನು ಮಂತ್ರಿಗಳು ಇದ್ದಾರೆ, ಅದಕ್ಕಾಗಿ ಕೋಟ್ಯಾಂತರ ರೂಪಾಯಿ ಸಚಿವ ಸಂಪುಟದ ಸಿಬ್ಬಂದಿಗೆ ಖರ್ಚು ಮಾಡುವುದಕ್ಕೆ ಹೊರಟಿದ್ದೀರಿ, ದಯ ಮಾಡಿ ತಕ್ಷಣವೇ ತಾವು ಆಶ್ವಾಸನೆ ಕೊಟ್ಟ ಹಾಗೆ 35 ಕೋಟಿ ರೂಪಾಯಿಗಳನ್ನು ಮಲೆನಾಡು ಅಭಿವೃದ್ಧಿಗಾಗಿ ಮಾರ್ಚ್ ಒಳಗೆ ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದೇನೆ. ಇಷ್ಟೊಂದು ನಿರ್ಲಕ್ಷ್ಯ ಗ್ರಾಮಾಂತರ ಪ್ರದೇಶಕ್ಕೆ ಏಕೆ ?

ಶ್ರೀ ವಾಟಾಳ್ ನಾಗರಾಜ್:– ಒಂದು ಮನವಿಯನ್ನು ಮಾಡುತ್ತಿದ್ದೇನೆ. ತಮಗೆ ಈ ಸಭೆ ನೋಡಿದರೆ ಸಂತೋಷ ಕಾಣುತ್ತದೆಯೇ ? ನಾವು ಪ್ರಾಮಾಣಿಕವಾಗಿ ಕುಳಿತಿದ್ದೇವೆ. ಇಡೀ ಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕ ಸಂದರ್ಭದಲ್ಲಿ ಮಂತ್ರಿಗಳು ಇಲ್ಲ. ಶಾಸಕರು ಇಲ್ಲ. ನಿನ್ನೆ ತಾನೇ ತಾವು ಊಟಕ್ಕೆ ಬಿಡುವು ಕೊಡುವುದು ಬೇಡ, ಕಾಲ ವ್ಯಯ ಮಾಡುವುದು ಬೇಡೆನ್ನುವುದನ್ನು ಪ್ರಾಮಾಣಿಕವಾಗಿ ಗುರುತರವಾಗಿ ತೆಗೆದುಕೊಂಡಿದ್ದೀರಿ. ಇವತ್ತು ಸಭೆ ನೋಡಿದರೆ ಮಾತನಾಡತಕ್ಕ ನಮಗಾದರೂ ಯಾರಿಗೋಸ್ಕರ ಮಾತನಾಡಬೇಕೆನ್ನುವ ಪ್ರಶ್ನೆ ಬರುತ್ತದೆ. ಈ ಪರಿಸ್ಥಿತಿಯಾದರೆ ತಾವು ಹೇಳಿ. ಇದನ್ನು ಮುಂದುವರಿಸಬೇಕೇ ? ಇಲ್ಲದಿದ್ದರೆ ಸಭೆಯನ್ನು ಮುಂದೆ ಹಾಕೋಣ. ಎಷ್ಟೊಂದು ಜನ ಮಂತ್ರಿಗಳಿದ್ದಾರೆ, ಸದಸ್ಯರಿದ್ದಾರೆ. ಇದು ನಿಜವಾಗಿಯೂ ಸಭೆಗೆ ಅಗೌರವ. ಅಧ್ಯಕ್ಷರಿಗೆ ಅಗೌರವ ಎಂದು ನಾನು ಹೇಳುತ್ತೇನೆ. ಏಕೆಂದರೆ, ತಾವು ಇಲ್ಲಿ ಬಂದು ಕುಳಿತಾಗ ಈ ಸಭೆಯ ಕನಿಷ್ಟ ಪಕ್ಷ 50 ಭಾಗದಷ್ಟು ಮಂತ್ರಿಗಳು ಇರಬೇಕು, ಶಾಸಕರು ಇರಬೇಕು. ಈ ಪರಿಸ್ಥಿತಿ ಆದರೆ ಹೇಗೆ ? ನಾನು ಮಾನ್ಯ ಯಡಿಯೂರಪ್ಪನವರು ಹೇಳಿದ ಮಾತನ್ನು ಸಮರ್ಥನೆ ಮಾಡುತ್ತೇನೆ. ದೂರದರ್ಶನದಲ್ಲಿ ನಮ್ಮನ್ನು ತೋರಿಸಬೇಕು. ಇದನ್ನು ಲೋಕಸಭೆಯಲ್ಲಿ ಮಾಡಿದ್ದಾರೆ. ಸದಸ್ಯರುಗಳನ್ನು ಆಯಾಯ ಕ್ಷೇತ್ರದ ಜನತೆ ಏನು ಆಯ್ಕೆ ಮಾಡಿ ಕಳುಹಿಸಿ ಕೊಟ್ಟಿದ್ದಾರೆ ಅವರು ಏನು ಸಭೆಯಲ್ಲಿ ಕುಳಿತಿದ್ದಾರೆಯೇ, ಎಲ್ಲಿಗಾದರೂ ಹೋಗಿದ್ದಾರೆಯೇ ಎನ್ನುವುದು ಗೊತ್ತಾಗುತ್ತದೆ ಇದು ಬಹಳ ಶೋಚನೀಯ ಪರಿಸ್ಥಿತಿ. ಇಲ್ಲಿ ಮಾನ್ಯ ಯಡಿಯೂರಪ್ಪನವರು ಯಾರಿಗೆ ಮಾತನಾಡಬೇಕು ? ಎಲ್ಲಿ, ಮಾತನಾಡಬೇಕು ? ಮತ್ತು ಪತ್ರಕರ್ತರು ಪಾಪ ಎಷ್ಟು ಹೊತ್ತು ಕುಳಿತಿರಬೇಕು ? ಮಧ್ಯಾಹ್ನದ ಊಟಕ್ಕೆ ಹೋಗಿದ್ದು, ಅಲ್ಲಿ ಕಷ್ಟದಲ್ಲಿ 4 ಜನ ಗಂಭೀರವಾಗಿ ಕುಳಿತಿದ್ದಾರೆ. ನಾನು ಅವರನ್ನು ತಪ್ಪು ಮಾಡಿದ್ದಾರೆಂದು ಹೇಳುತ್ತಿಲ್ಲ. ಈ ಪರಿಸ್ಥಿತಿಯಾದರೆ ನನಗನ್ನಿಸುತ್ತದೆ, ಮಂತ್ರಿಗಳ ಬಗ್ಗೆ ತಾವು ನಿರ್ದಾಕ್ಷಿಣ್ಯವಾಗಿ, ತೀವ್ರವಾಗಿ ಹೇಳಬೇಕು. ಅವರು ಬಾರದಿದ್ದರೆ ಕಾರಣ ಕೊಡಲಿ, ಏಕೆ ಬರುವುದಿಲ್ಲ, ಕಾರಣ ಏನು ಎಂದು ಹೇಳಲಿ. ಇಲ್ಲದಿದ್ದರೆ ಕಷ್ಟವಾಗುತ್ತದೆ. ಮತ್ತೆ ಮಂತ್ರಿಗಳು ಯಾರು ಎಂದು ಗೊತ್ತಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪರಿಚಯ ಮಾಡಬೇಕಾಗಿತ್ತು. ಯಾರದ್ದೂ ಪರಿಚಯ ಮಾಡಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಇಷ್ಟು ಮಾತ್ರ ನೊಂದು ಒಂದು ಮಾತನ್ನು ಹೇಳುತ್ತೇನೆ. ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಕೋರಂ ಇಲ್ಲದೇ ನಾನು ಮಾತನಾಡುವ ದುರ್ದೆಸೆ ಬಂದಿದೆಯಲ್ಲ, ಇದು ಒಂದು ಕರಾಳ ದಿವಸ ಎಂದು ಕರೆಯುವುದಕ್ಕೆ ನಾನು ಇಷ್ಟಪಡುತ್ತೇನೆ. ಇದು ಯಾರಿಗೂ ಶೋಭೆ ತರುವ ವಿಚಾರ ಅಲ್ಲ. ದಯ ಮಾಡಿ ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಇದರ ಬಗ್ಗೆ ವಿಶೇಷ ಚಿಂತನೆ ಮಾಡಬೇಕು. ಏನಾಗಿದೆ ನಿಮಗೆ ? 2 ವರ್ಷಗಳನ್ನು ಅದೇ ಬಡಿದಾಟದಲ್ಲಿ ಕಳೆದುಬಿಟ್ಟಿರಿ. ಇವತ್ತೂ ಸಹ ಅದೇ ರಾಜಕೀಯ ಅಸ್ಥಿರತೆ ಪರಿಸ್ಥಿತಿ ಮುಂದುವರಿಯುತ್ತಿದೆ ಎಂದರೆ, ಅವತ್ತು ದೊಡ್ಡದಾಗಿ ನಿಮ್ಮ ಮುಖ್ಯ ಮಂತ್ರಿಗಳು ಹೇಳಿದರು: ನಿಶ್ಚಿತ ಸಮಯದಲ್ಲಿ ತಮ್ಮ ಕೊಠಡಿಗಳಲ್ಲಿ ಮಂತ್ರಿಗಳು ಇರಬೇಕೆಂದು ಹೇಳಿದರು. ಆದರೆ ಸದನ ನಡೆಯುವ ಸಂದರ್ಭದಲ್ಲಿ ಮಂತ್ರಿಗಳು ಇಲ್ಲ ಎಂದರೆ, ಮಂತ್ರಿಗಿರಿ ಸಿಕ್ಕಿಲ್ಲ ಎಂದು ಶಾಸಕರು ಇಲ್ಲದಿರಬಹುದು, ಅದರ ಚಿಂತೆ ಬೇಡ. ಮಂತ್ರಿಗಳಿಗೂ ಕಳಕಳಿ ಇಲ್ಲ ಎಂದರೆ, ಈ ರಾಜ್ಯದ ಜನತೆಗೆ ಈ ಆಡಳಿತ ಪಕ್ಷ ದ್ರೋಹ

ಮಾಡುತ್ತಿದೆ, ವಂಚನೆ ಮಾಡುತ್ತಿದೆ, ತಮ್ಮ ಸ್ವಾರ್ಥದ ಅಧಿಕಾರದ ಕಚ್ಚಾಟದಲ್ಲಿ ಬಹುಶಃ ಅಜೀರ್ಣವಾಗುವಷ್ಟು ಬಹುಮತವನ್ನು ಕೊಟ್ಟ ಜನತೆಗೆ ಅಪಮಾನ ಮಾಡುವ ಕೆಲಸ ಆಡಳಿತ ಪಕ್ಷ ಮಾಡುತ್ತಿದೆ ಎಂದು ಅನಿವಾರ್ಯವಾಗಿ ಹೇಳುತ್ತೇನೆ. ಬಹುಶಃ ಇದು ಅರಣ್ಯರೋಧನವಾಗಬಹುದು. ನಾನು ನನ್ನ ಕರ್ತವ್ಯ ಮಾಡುತ್ತೇನೆ. ತಾವು ಏನು ಮಲೆನಾಡು ಅಭಿವೃದ್ಧಿ ಮಂಡಲಿ ರಚನೆ ಮಾಡಿದ್ದೀರಿ ಅದಕ್ಕೆ 35 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ತಾವೇ ಆಶ್ವಾಸನೆಯನ್ನು ಕೊಟ್ಟಿದ್ದೀರಿ. ನಾನು ಏಕೆ ಈ ವಿಷಯ ತಂದೆ ಅಧ್ಯಕ್ಷರೇ ? ಗ್ರಾಮೀಣ ಪ್ರದೇಶದ ಬಗ್ಗೆ ರೈತನ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ. ಮಾನ್ಯ ಉಪಮುಖ್ಯಮಂತ್ರಿಗಳು ಗಮನ ಕೊಡಬೇಕು. ತಮ್ಮ ಬಗ್ಗೆ ಗೌರವವಿದೆ. ಕೇಂದ್ರ ಸರ್ಕಾರ ಜವಹರ ರೋಜ್‌ಗಾರ್ ಯೋಜನೆಗೆ ಬಿಡುಗಡೆ ಮಾಡಿರುವಂತಹ 75 ಕೋಟಿ ರೂಪಾಯಿ ಹಣವನ್ನು ಆ ಬಾಬಿಗೆ ಖರ್ಚು ಮಾಡದೆ ಜಿಲ್ಲಾ ಪರಿಷತ್ ಮತ್ತು ಮಂಡಲಗಳಿಗೆ ಖರ್ಚು ಮಾಡದೆ ಆ ಹಣವನ್ನು ಬೇರೆ ಕಡೆ ಉಪಯೋಗ ಮಾಡಿಕೊಂಡು, ಗ್ರಾಮೀಣ ಜನರಿಗೆ ದ್ರೋಹ ಮಾಡಿರುವಂತಹ ಕೆಲಸವನ್ನು ಈ ಸರ್ಕಾರ ಮಾಡಿದೆ. ಕೇಂದ್ರ ಸರ್ಕಾರ ಬಿಡುಗಡೆ ಮಾಡುವ ಹಣವನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ನೇರವಾಗಿ ಬಿಡುಗಡೆ ಮಾಡಬೇಕೆಂದು ಚರ್ಚೆಯಾಯಿತು. ಏಕೆಂದರೆ ರಾಜ್ಯ ಸರ್ಕಾರದವರು ಹಣವನ್ನು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವುದಿಲ್ಲ, ತಮ್ಮ ತೀಟೆ ತೀರಿಸಿಕೊಳ್ಳುವುದಕ್ಕೆ ಅನಗತ್ಯವಾದ ಕೆಲಸಗಳಿಗೆ ಖರ್ಚು ಮಾಡುವುದಕ್ಕೋಸ್ಕರ, ಜನರ ಹೊಗ್ಗಳಿಕೆಗೆ ಮತ್ತು ಹೊಗಳಿಕೆಗೆ ಪಾತ್ರರಾಗುವುದಕ್ಕೆ ಹೊಸ ಹೊಸ ಕಾರ್ಯಕ್ರಮಗಳ ಘೋಷಣೆಗೆ ಉಪಯೋಗ ಮಾಡಿಕೊಳ್ಳಬಹುದು ಎನ್ನುವ ಭಯದಿಂದ ನೇರವಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕೆನ್ನುವ ಸಂದರ್ಭ ಬಂದಿತ್ತು. ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ 75 ಕೋಟಿ ರೂಪಾಯಿ ಜವಹರ್ ರೋಜ್‌ಗಾರ್ ಯೋಜನೆ ಗ್ರಾಮೀಣ ಜನರ ಅಭಿವೃದ್ಧಿಗೋಸ್ಕರ ಮಂಡಲ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಹಣವನ್ನು ಬೇರೆ ಬಾಬಿಗೆ ಖರ್ಚು ಮಾಡುವಂತಹ ಅಧಿಕಾರವನ್ನು ನಿಮಗೆ ಯಾರು ಕೊಟ್ಟರು ? ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇರೆ ಇಲ್ಲ. ತಕ್ಷಣ 75 ಕೋಟಿ ರೂಪಾಯಿಗಳನ್ನು ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದರೊಳಗೆ ಅದರ ವ್ಯವಸ್ಥೆಯನ್ನು ಮಾಡಿ ಸದನಕ್ಕೆ ಬರಬೇಕು. ಯಡಿಯೂರಪ್ಪನವರೇ ನೀವು ಹೇಳುವುದು ಸರಿಯಲ್ಲವೆಂದು ಹೇಳಲಿ. ನಾವು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಬೇಕು. ಅವರು ನೀವು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದೀರಿ ಎಂದು ಹೇಳಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ:- ಕಳೆದ ವಾರ ಹಣ ಬಿಡುಗಡೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹಾಗೆ ಇದ್ದರೆ ನಾನು ರಾಜೀನಾಮೆ ಕೊಟ್ಟು ಹೊರಗೆ ಹೋಗುತ್ತೇನೆ. ಎಲ್ಲಿ ಆಗಿದೆ ಸ್ವಾಮಿ ? ನೀವು ಯಾರು ? ಸಂಬಂಧಪಟ್ಟ ಮಂತ್ರಿಗಳು ಹೇಳಲಿ. ನೀವು ಹೇಳುವ ಮಾತಿಗೆ ಏನು ಬೆಲೆ ಇದೆ ? ನಮಗೆ ಬಂದಿಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:- ನಮಗೆ ಕೊಟ್ಟಿಲ್ಲವೆಂದು ಹೇಳಿ. ಎಲ್ಲರಿಗೂ ಕೊಟ್ಟಿಲ್ಲವೆಂದು ಹೇಳಬೇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಕಾಂಗ್ರೆಸ್‌ನವರು ಹಂಚಿಕೊಂಡಿರಬಹುದು ನಮಗೆ ಬಂದಿಲ್ಲ. 75 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದಂಥ ಜವಹರ್ ರೋಜ್‌ಗಾರ್ ಯೋಜನೆಯ ಹಣವನ್ನು ಈ ನಿಮಿಷದವರೆಗೆ ಬಿಡುಗಡೆ ಮಾಡಿಲ್ಲವೆಂದು ಸಾಕ್ಷ್ಯಾಧಾರ ಮತ್ತು ದಾಖಲೆಗಳೊಂದಿಗೆ ಸರ್ಕಾರದ ಮೇಲೆ ನಾನು ಚಾರ್ಜ್ ಮಾಡುತ್ತಿದ್ದೇನೆ. ಬೇಕಾದರೆ ಅಂಕಿ

ಅಂಶಗಳನ್ನು ತರಿಸಿ ನೋಡಿ. ನಿಮಗೆ ಜನ ಕೊಟ್ಟಂತಹ ತೆರಿಗೆ ಹಣವನ್ನು ಅವರ ಅಭಿವೃದ್ಧಿಗಾಗಿ ಖರ್ಚು ಮಾಡುವುದಕ್ಕೆ ಪೊಲಿಟಿಕಲ್ ವಿಲ್ ಇಲ್ಲ. ಕೇಂದ್ರ ಸರ್ಕಾರ ಕೊಟ್ಟಂತಹ ಹಣವನ್ನೂ ಸಹ ಬೇರೆ ಬಾಬುಗಳಿಗೆ ಖರ್ಚು ಮಾಡಿ ಅಕ್ಷಮ್ಯ ಅಪರಾಧ ಮಾಡುತ್ತಿದ್ದೀರಿ. ತಕ್ಷಣ 75 ಕೋಟಿ ರೂಪಾಯಿ ಹಣವನ್ನು ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಹೊಸ ಹೊಸ ಬಣ್ಣದ ಘೋಷಣೆಗಳನ್ನು ಮಾಡಿದ್ದೀರಿ. ಅಕ್ಷಯ ಯೋಜನೆ. ಅಕ್ಷಯ ಯೋಜನೆಯಡಿಯಲ್ಲಿ ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ ಈ ನಾಲ್ಕು ತಿಂಗಳು ದಿನಕ್ಕೆ ಒಂದು ರೂಪಾಯಿಯಂತೆ ಮಕ್ಕಳಿಗೆ ಕೊಟ್ಟರೆ 80 ಪರ್ಸೆಂಟ್ ಅಟೆಂಡೆನ್ಸ್ ಸಿಗಲಿಯೆನ್ನುವ ಉದ್ದೇಶದಿಂದ ಈ ಯೋಜನೆಯನ್ನು ಘೋಷಣೆ ಮಾಡಿದ್ದೀರಿ. ಕಳೆದ ಅಕ್ಟೋಬರ್, ನವೆಂಬರ್, ಡಿಸೆಂಬರ್, ಜನವರಿ ಈಗ ಫೆಬ್ರವರಿಯಲ್ಲಿದ್ದೇವೆ. ಈ ಇಲಾಖೆಯಲ್ಲಿ ಹಂಚುತ್ತೇವೆಂದು ಹೇಳಿದ್ದರು. ಈ ನಿಮಿಷದವರೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕು. ಜನರಿಗೆ ಹೊಸ ಹೊಸ ಯೋಜನೆಗಳನ್ನು ಘೋಷಣೆ ಮಾಡಿ ಹೇಳಿದರು. ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ಈ ಯೋಜನೆ ಇದೆಯೋ ಇಲ್ಲವೋ ಅದನ್ನು ಸ್ಪಷ್ಟ ಮಾಡಬೇಕು. ಯಾವ ತರಹ ಅಪರಾಧ ನಿಮ್ಮದು ? ನೀವೇ ಉತ್ತರ ಕೊಟ್ಟಿದ್ದೀರಿ. ರಸಗೊಬ್ಬರದ ಬಗ್ಗೆ ಕೇಂದ್ರ ಸರ್ಕಾರ 1992–93ನೇ ಸಾಲಿಗೆ ಮಾಡಿರುವಂತಹ 36 ಕೋಟಿ ರೂಪಾಯಿಗಳಲ್ಲಿ ಒಂದು ಪೈಸೆ ಸಹ ರೈತನ ನೆರವಿಗೆ ಖರ್ಚು ಮಾಡಲಿಲ್ಲ. ಆ ಹಣವನ್ನು ನೀವು ಇಟ್ಟು ಕೊಂಡಿದ್ದೀರಿ. ನೀವೇ ಕೊಟ್ಟಿರುವ ಉತ್ತರದಲ್ಲಿ 17 ಕೋಟಿ ರೂಪಾಯಿಗಳಲ್ಲಿ 11 1/2 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಇದರ ಬಾಬ್ತು ಉಳಿದ 5 1/2 ಕೋಟಿ ಹಣವನ್ನು ರಿಲೀಸ್ ಮಾಡಲಿಲ್ಲ. ಖರ್ಚು ಸಹ ಮಾಡಲಿಲ್ಲ. ನಿಮ್ಮ ಸರ್ಕಾರ ಬದುಕಿದೆಯೇ ರೈತನ ಪಾಲಿಗೆ. ಹೇಗೆ ಕುಳಿತು ಕೊಂಡಿದ್ದೀರಿ ಅಲ್ಲಿ ? ರೈತನ ಬಗ್ಗೆ ಮತ್ತು ಬಡವರ ಬಗ್ಗೆ ನೀತಿ ಹೇಳಿಕೊಂಡು, ಅಜೀರ್ಣವಾಗುವಷ್ಟು ಬಹುಮತವನ್ನು ಕೊಟ್ಟಂತಹ ಈ ನಾಡಿನ ಜನರಿಗೆ ದ್ರೋಹ ಮಾಡಿಕೊಂಡು, ಗ್ರಾಮೀಣ ಜನರ ಅಭಿವೃದ್ಧಿಯನ್ನು ಸಂಪೂರ್ಣ ಮರೆತು, ನೆರೆ ಹಾವಳಿಗೆ ಸಿಕ್ಕಿ ರೈತನ ಬೆಳೆ ನಾಶವಾಗಿರುವಾಗ ರೈತನಿಗೆ ಪರಿಹಾರ ರೂಪದಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವಂತಹ ಹಣವನ್ನು ಖರ್ಚು ಮಾಡದೆ ಅದನ್ನೂ ಬೇರೆ ಬಾಬಿಗೆ ಖರ್ಚು ಮಾಡುವ ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ ಧಿಕ್ಕಾರವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಂಕಿಅಂಶಗಳ ಜೊತೆಗೆ ಹೊರಗೆ ಬನ್ನಿ, ಜನ ನಿಮ್ಮನ್ನು ಆಯ್ಕೆ ಮಾಡಿ ಕಳುಹಿಸಿದ್ದು ನಿಮ್ಮ ಮೋಜಿಗೋಸ್ಕರವೇ ನಿಮ್ಮ ಸ್ವಾರ್ಥಕ್ಕೋಸ್ಕರವೇ, ನೀವು ಅಧಿಕಾರ ದುರುಪಯೋಗ ಮಾಡುವುದಕ್ಕೋಸ್ಕರವಲ್ಲ.

ನಿಮ್ಮ ಕಚ್ಚಾಟವನ್ನು ಇಲ್ಲಿ ಚರ್ಚೆ ಮಾಡುವುದಿಲ್ಲ. ಮಂತ್ರಿಮಂಡಲದಲ್ಲಿ ಯಾರು ರಾಜೀನಾಮೆ ಕೊಟ್ಟಿದ್ದಾರೆ. ಮತ್ತೊಬ್ಬರು ಬರುತ್ತಾರೆ ಇದರ ಬಗ್ಗೆ ನಾನು ಚಿಂತನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಎಲ್ಲಿಯವರೆಗೆ ಸರ್ಕಾರ ಬದುಕಿದೆ ಎಂದು ನಿಮಗೆ ಅನ್ನಿಸುತ್ತದೆಯೋ, ಅಲ್ಲಿಯವರೆಗೆ ರಾಜ್ಯದ ಮುಖ್ಯಮಂತ್ರಿಗಳನ್ನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಿಮ್ಮ ಮಂತ್ರಿಮಂಡಲದಲ್ಲಿ ಪರಸ್ಪರ ವಿಶ್ವಾಸ ಇದೆಯೇ ಯಾರನ್ನಾದರೂ ವಿಶ್ವಾಸಕ್ಕೆ ತೆಗೆದುಕೊಂಡಿದ್ದೀರಾ ? ಅಧಿಕಾರಿಗಳ ಜೊತೆಗೆ ಸೇರಿಕೊಂಡು ಜನ ಆಯ್ಕೆ ಮಾಡಿ ಕಳಿಸಿದ ನಿಮ್ಮ ಪಕ್ಷದಲ್ಲಿ ಉನ್ನತ ಸ್ಥಾನದಲ್ಲಿದ್ದೂ ಸಲಹೆ ಕೊಡುವಂಥ ಶಕ್ತಿ ಇರುವಂಥ ಮಂತ್ರಿಗಳು ಇದ್ದರೆ ಅವರ ಸಲಹೆ ತೆಗೆದುಕೊಳ್ಳದೆ ಇವತ್ತು ಒಂದು ಅಂಧಕಾರದಂಥ ವಾತಾವರಣ ರಾಜ್ಯದಲ್ಲಿ ಏನಿದೆ, ಕಳೆದ 45 ವರ್ಷಗಳಿಂದ ನಡೆಯುತ್ತಿರುವ ನಿಮ್ಮ ಕರ್ಮಕಥೆ ಏನಿದೆ, ಅಧಿಕಾರ ದಾಹಕ್ಕೋಸ್ಕರ ಬಡಿದಾಡಿ ಕಚ್ಚಾಡಿ ಜನಹಿತ ಮರೆತು ಇಂತಹ ಪರಿಸ್ಥಿತಿ ಬಂದಿರುವಾಗ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಕೃಷ್ಣಾರವರು ಈ ಸ್ಥಾನಕ್ಕೆ ಬಂದಿದ್ದಾರೆ. ನೋಡಿದರೆ ಬಹಳ

ಸಂಕಟವಾಗುತ್ತದೆ. ಎಂತಹ ದುಸ್ಥಿತಿಯಲ್ಲಿ ನೀವು ಉಪಮುಖ್ಯಮಂತ್ರಿಯಾಗಿದ್ದೀರಿ ? ನನಗನ್ನಿಸುತ್ತದೆ, ಉಸಿರು ಕಟ್ಟುವ ಈ ವಾತಾವರಣದಲ್ಲಿ ನೀವಂತೂ ಅಲ್ಲಿ ಜಾಸ್ತಿಕಾಲ ಇರಬಾರದು. ಇದನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾನು ರಾಜಕಾರಣಕ್ಕೋಸ್ಕರ ಈ ಮಾತನ್ನು ಹೇಳುತ್ತಿಲ್ಲ. ನಿಮಗೆ ಸಮಾಧಾನವಾಗುವುದಕ್ಕೆ ಸಾಧ್ಯವೇ ಇಲ್ಲ. ಈ ಪರಿಸ್ಥಿತಿಯನ್ನು, ನೀವೇ ಸಾಧ್ಯವಾದರೆ ಸರಿಪಡಿಸಿ, ನಾನು ಒಂದು ಪಕ್ಷದ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಅಂಕಿಅಂಶಗಳನ್ನು ಗೊತ್ತಿಲ್ಲದೇನೆ ಕೇವಲ ಆಪಾದನೆ ಮಾತನಾಡುವುದಕ್ಕೋಸ್ಕರ ಈ ಮಾತನ್ನು ಹೇಳುತ್ತಿಲ್ಲ ಆ ರೀತಿ ತಾವು ತಿಳಿದುಕೊಂಡರೆ, ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಆದರೆ ಹಣ ಬಂದಿದ್ದನ್ನು ಖರ್ಚು ಮಾಡದೆ, ಕೇಂದ್ರ ಸರ್ಕಾರ ಕೊಟ್ಟ ಹಣವನ್ನು ನೇರವಾಗಿ ತಲುಪಿಸದಂಥ ನೀವು ಇವತ್ತು ಫೆಬ್ರವರಿ ತಿಂಗಳು ಕಳೆಯುತ್ತಾ ಬಂದು, ಬೇಸಿಗೆ ಬೆಳೆ ನಾಟಿಯಾಗಿ ಮುಗಿಯುತ್ತಾ ಬಂದಿದ್ದರೂ ಕೂಡ 36 ಕೋಟಿ ರೂಪಾಯಿಗಳನ್ನು ಇನ್ನೂ ಬಿಡುಗಡೆ ಮಾಡಿಲ್ಲ ಎನ್ನುವುದಾದರೆ ಈ ಸದನದಲ್ಲಿ ನಾವು ಯಾವ ರೀತಿಯಲ್ಲಿ ಕೆಲಸ ಮಾಡಬೇಕು ? ಇದು ಅರಣ್ಯ ರೋಧನ ಅಲ್ಲದೆ ಮತ್ತೇನು ? ಸನ್ಮಾನ್ಯ ಅಧ್ಯಕ್ಷರೇ, ನಾವು ರಾಜ್ಯಪಾಲರ ಭಾಷಣಕ್ಕೆ ಮುಂಚೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೆವು. ಇದು ಬರೀ ಯಡಿಯೂರಪ್ಪನವರ ಪ್ರಶ್ನೆ ಅಲ್ಲ. ಈ ಸದನದಲ್ಲಿ ಚರ್ಚೆಯಾಗಿ ಒಪ್ಪಿಕೊಂಡಿರುವ ಪ್ರಕಾರ ಸನ್ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ, ಕೇಂದ್ರ ಸರ್ಕಾರ ಕೊಟ್ಟ ಭರವಸೆಯಂತೆ 2.10.89ಕ್ಕೆ ಮುಂಚೆ ಇರುವಂಥ ರೈತನ ಸಾಲ ಮನ್ನಾ ಬಗ್ಗೆ ಈ ಸರ್ಕಾರವೇ ತಡೆಯಾಜ್ಞೆಯನ್ನು ಕೊಟ್ಟಿತ್ತು. ಪ್ರಧಾನಮಂತ್ರಿಗಳ ಹತ್ತಿರ ಸಹ ನಮ್ಮನ್ನು ಕರೆದುಕೊಂಡು ಹೋದರು. ಪತ್ರಿಕೆಯವರು ಇತ್ತೀಚೆಗೆ ಬರೆಯುವುದನ್ನು ಬಿಟ್ಟಿದ್ದಾರೆ. ಬಹುಶಃ ಇದು ಆಗಲಿಕ್ಕಿಲ್ಲ ಎನ್ನುವ ತೀರ್ಮಾನಕ್ಕೆ ಅವರೂ ಬಂದಿರಬಹುದು. ಆದರೆ ನಾನು ನಿಮ್ಮನ್ನು ಕೇಳುತ್ತೇನೆ, ಆ ಸಮಯದಲ್ಲಿ ಸ್ಪಷ್ಟ ಭರವಸೆಯನ್ನು ಕೊಟ್ಟಿರಿ. ಈ ಸದನದಲ್ಲೂ ಚರ್ಚೆಯಾಯಿತು. ಈ ಒಂದು ರಾಜ್ಯಪಾಲರ ಭಾಷಣದಲ್ಲಿ ರೈತನಿಗೆ ನೆರವು ಕೊಡುವಂಥ ಸ್ಪಷ್ಟವಾದ ನಿರ್ಧಾರವನ್ನು ನೀವು ತೆಗೆದುಕೊಳ್ಳಬಹುದು ಎಂದು ನಾನು ಅಂದುಕೊಂಡಿದ್ದೆ. ಆದರೆ ರೈತನ ಸಾಲ ಮನ್ನಾ ಮಾಡುವ ಬಗ್ಗೆ ಏನೂ ಇಲ್ಲ. ಇವತ್ತು ಹತ್ತು ಸಾವಿರ ಸಾಲಕ್ಕೆ ಹತ್ತು ಸಾವಿರ ರೂಪಾಯಿ ಬಡ್ಡಿಯಾಗಿದೆ. ಇದರ ಬಗ್ಗೆ ಯಾವುದೇ ಒಂದು ಕಾರ್ಯಕ್ರಮವನ್ನು ರೂಪಿಸಿಲ್ಲದಿರುವುದು ರೈತವಿರೋಧಿ ನೀತಿಯಾಗಿದೆ. ಯಾವುದಾದರೂ ಪರಿಹಾರವನ್ನು ರೈತನಿಗೆ ಕೊಡಬೇಕು. ಹತ್ತು ಸಾವಿರ ರೂಪಾಯಿ ಸಹಕಾರ ಸಂಘದ ಸಾಲವನ್ನು ಮನ್ನಾ ಮಾಡುವಂಥ ನಿರ್ಧಾರವನ್ನು ಸರ್ಕಾರ ಮಾಡಬೇಕು ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ.

ಇನ್ನು ಹರಿಜನ–ಗಿರಿಜನ ಬಗ್ಗೆ ಭಗವಂತನೇ ಕಾಪಾಡಬೇಕು. ಅವರ ಹೆಸರು ಹೇಳಿ ಅಧಿಕಾರಕ್ಕೆ ಬಂದಂಥ ಜನ ನೀವು. ಇವತ್ತು ಅವನ ಪರಿಸ್ಥಿತಿ ಏನಾಗಿದೆ ? ಊರ ಹೊರಗಡೆ ನೀರು ಇಲ್ಲದೆ, ಕೈಗೆ ಕೆಲಸ ಇಲ್ಲದೆ ಅವನು ಸಾಯುತ್ತಿದ್ದಾನೆ. ನೀವೇ ತಾನೇ ಹೇಳಿದ್ದುದು ? ಅಂಬೇಡ್ಕರ ಶತಮಾನೋತ್ಸವ ಮಾಡುವಂಥ ಸಂದರ್ಭದಲ್ಲಿ ಪ್ರತಿ ತಾಲ್ಲೂಕಿಗೆ ನೂರು ಮನೆಗಳನ್ನು ಕೊಡುತ್ತೇವೆ ಎಂದು. ನೀವೇ ಕೊಟ್ಟಿರುವ ಉತ್ತರದಂತೆ 12 ಮನೆಗಳನ್ನು ಇಡೀ ರಾಜ್ಯದಲ್ಲಿ ಕೊಟ್ಟಿದ್ದೀರಿ ಎಂದರೆ ನೀವು ಯಾವ ಸ್ಥಿತಿಗೆ ಬಂದು ಮುಟ್ಟಿದ್ದೀರಿ ?

ಮಹಾನುಭಾವ ಅಂಬೇಡ್ಕರ್ ಭವನ ಕಟ್ಟುತ್ತೇವೆ ಎಂದು ಹೇಳಿದ್ದೀರಿ. ಕಟ್ಟುತ್ತಿದ್ದೀರಾ ? ಕೇವಲ ಕಳಕಳಿಯ ಮಾತನಾಡುವುದರಿಂದ ರೈತರ, ಹರಿಜನ ಗಿರಿಜನರ ಸಮಸ್ಯೆ ಬಗೆಹರಿಯುವುದಿಲ್ಲ. ಪ್ರಾಮಾಣಿಕವಾಗಿ ಆ ದಿಕ್ಕಿನಲ್ಲಿ ಹೆಜ್ಜೆ ಇಡುವಂಥ ದೃಢ ನಿರ್ಧಾರವನ್ನು ಮಾಡಬೇಕಾಗುತ್ತದೆ. ಈ ದೃಢ ನಿರ್ಧಾರ ಮಾಡತಕ್ಕಂಥ ನೈತಿಕ ಶಕ್ತಿಯನ್ನು ನೀವು ಕಳೆದುಕೊಂಡಿದ್ದೀರಿ. ಇದು ನಿಮಗೂ ಗೊತ್ತಾಗಿದೆ ಮತ್ತು ಜನರಿಗೂ ಗೊತ್ತಾಗಿದೆ ನನಗನ್ನಿಸುತ್ತದೆ, ಇಲ್ಲಿ ಎಲ್ಲರೂ ಏಕೆ ಬಂದಿಲ್ಲ ? ಕೊನೆಯ

ದಿವಸ ಹತ್ತಿರ ಬರುತ್ತಿದೆಯೆಂದು ಇದರಿಂದ ಸ್ಪಷ್ಟವಾಗಿದೆ. ಏಕೆಂದರೆ ಹಳ್ಳಿಗೆ ಹೋದರೆ ಜನರು ನಿಮ್ಮ ನೀತಿಯಿಂದ, ನಿಮ್ಮ ಪರಿಸ್ಥಿತಿಯಿಂದ ನಿಮ್ಮನ್ನು ಸೇರಿಸುವುದಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಈ ರೈತ, ಕೃಷಿ ಕಾರ್ಮಿಕರು ನಿಮಗೆ ಓಟು ಕೊಟ್ಟಿದ್ದಾರೆ. ಐದು ವರ್ಷ ಸ್ವಂತಕ್ಕೆ ಉಪಯೋಗ ಮಾಡಿಕೊಂಡು ಬಿಡೋಣ ಎಂದು ನಿರ್ಧಾರವನ್ನು ಕೆಲವರು ತಾವು ಮಾಡಿದ್ದರೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆಗೆ ಭರವಸೆ ಕೊಟ್ಟು ಇಲ್ಲಿ ಬಂದು ಕುಳಿತು, ಈ ರೀತಿ ಜನಹಿತವನ್ನು ಸಂಪೂರ್ಣವಾಗಿ ಮರೆಯುವಂಥಾದ್ದು ಅಕ್ಷಮ್ಯ ಅಪರಾಧ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಅದಕ್ಕೋಸ್ಕರ ಸನ್ಮಾನ್ಯ ಉಪಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ದಯ ಮಾಡಿ ಇವತ್ತಿನ ಹಣಕಾಸಿನ ಪರಿಸ್ಥಿತಿ ಬಗ್ಗೆ ಒಂದು ಶ್ವೇತಪತ್ರವನ್ನು ತಾವು ಹೊರಡಿಸಬೇಕು.

ಫೆಬ್ರವರಿ ಕೊನೆಯಲ್ಲಿದ್ದೇವೆ, ವರ್ಷದ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂಥ ತೀವ್ರಗತಿಯಲ್ಲಿ, ಅಭಿವೃದ್ಧಿ ಕಾರ್ಯಗಳು ನೀರಾವರಿ ಯೋಜನೆ ಮತ್ತೆ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಬೇರೆ ಬೇರೆ ಕಾರ್ಯಗಳು ನಡೆಯಬೇಕಾದ ಈ ಸಮಯದಲ್ಲಿ ರಾಜ್ಯದ ಎಲ್ಲಾ ಕಡೆ ನೀವು ಎಲ್.ಒ.ಸಿ.ಯನ್ನು ಬಿಡುಗಡೆ ಮಾಡದೇ ಹಣಕಾಸಿನ ತೊಂದರೆಯಿಂದ ಕೆಲಸ ಕಾರ್ಯಗಳು ಸ್ಥಗಿತವಾಗಿದೆ. ಸರ್ಕಾರಿ ನೌಕರರಿಗೆ ಸುಮ್ಮನೆ ಸಂಬಳ ಕೊಡುವಂಥ ಪರಿಸ್ಥಿತಿ ಬಂದಿದೆ. ಕಂಟ್ರಾಕ್ಟರು ನಿಮ್ಮ ಇಲಾಖೆಯ ಹತ್ತಿರ ಬರುವುದಕ್ಕೆ ಸಿದ್ಧ ಇಲ್ಲ. ಸುಮಾರು 40 ಕೋಟಿ ರೂಪಾಯಿ ನೀರಾವರಿ ಇಲಾಖೆ ಪಿ.ಡಬ್ಲ್ಯು.ಡಿ. ಇಲಾಖೆಗೆ ಏನು ಬಿಲ್ಲುಗಳು ಬಾಕಿ ಇದೆ. ಎಲ್.ಓ.ಸಿ. ಬಿಡುಗಡೆ ಮಾಡಿಲ್ಲ. ಈ ಒಂದು ವಿಚಿತ್ರವಾದ ಪರಿಸ್ಥಿತಿ ಫೆಬ್ರವರಿ ತಿಂಗಳಲ್ಲಿ ನಿಮ್ಮ ಸರ್ಕಾರದಲ್ಲಿ ಇದೆಯೆನ್ನುವುದಾದರೆ, ಹಣಕಾಸಿನ ಪರಿಸ್ಥಿತಿ ಬಗ್ಗೆ ಸ್ಪಷ್ಟವಾದಂಥ ವೈಟ್ ಪೇಪರ್‌ನ್ನು ಹೊರಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಇವತ್ತು ಯಾವ ಸ್ಥಿತಿ ನಮ್ಮದು ? ಸರ್ಕಾರಿ ನೌಕರರಿಗೋಸ್ಕರ, ಉದ್ಯೋಗ ಕೊಡುವುದಕ್ಕೋಸ್ಕರ ಸರ್ಕಾರ ನಡೆಸುತ್ತಿದ್ದೇವೆಯೇ. ಒಳ್ಳೆಯ ಸಂಬಳ ಕೊಟ್ಟು, ಆ ಜವಾಬ್ದಾರಿ ಸ್ಥಾನದ ಮೇಲೆ ಅವರನ್ನು ಕೂರಿಸಿದ ಮೇಲೆ, ಅವರಿಗೆ ಬೇಕಾದಂಥ ಹಣವನ್ನು ಬಿಡುಗಡೆ ಮಾಡಿ, ಜನಹಿತ ಮಾಡುವುದಕ್ಕಾಗಿ ಈ ಸರ್ಕಾರಿ ಕಚೇರಿಗಳು, ಈ ವ್ಯವಸ್ಥೆ ಇರುವುದು. ಇವತ್ತು ಏನಾಗಿದೆ. ಸರ್ಕಾರಿ ನೌಕರರು ಸಂಬಳ, ಟಿ.ಎ., ಡಿ.ಎ., ನಾವು ತಂದಿರುವಂಥ ಸಾಲಕ್ಕೆ ಬಡ್ಡಿ, ನಮ್ಮ ಆದಾಯದಲ್ಲಿ ಶೇಕಡ 53 ಭಾಗ ಈ ಬಾಬಿಗೆ ಖರ್ಚಾಗುತ್ತಿದೆ. ಕೇವಲ ಒಂದು ಅನ್ ಪ್ರೊಡಕ್ಟೀವ್ ಐಟಂಗೆ, ಏನು ನಾನ್-ಡೆವಲಪ್‌ಮೆಂಟ್ ಐಟಂ ಇದೆ, ಇದಕ್ಕೆ ಶೇಕಡ 53 ಭಾಗ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಉಳಿದ 47 ಭಾಗದಲ್ಲಿ ಈ ರಾಜ್ಯದ ಸರ್ವಾಂಗೀಣ ಉನ್ನತಿಯಾಗಬೇಕು; ಅಭಿವೃದ್ಧಿ ಕಾರ್ಯಗಳಾಗಬೇಕು. ಬಹುಶಃ ಅಲ್ಲಿರುವಂತವರಿಗೆ ಗೊತ್ತಿದೆ. ಈ 47 ಪರ್ಸೆಂಟ್‌ನಲ್ಲಿ ಎಷ್ಟು ಪರ್ಸೆಂಟ್ ಕಮೀಷನ್ ತೆಗೆಯೋಣ, ಲಂಚ ರುಷುವತ್ತುಗಳಿಗ ತೆಗೆಯೋಣ. 10 ಪರ್ಸೆಂಟ್ ತೆಗೆಯಬಹುದೇ, 10 ಪರ್ಸೆಂಟ್ ತೆಗೆದರೆ, ಇನ್ನು ಉಳಿಯುವ 37 ಪರ್ಸೆಂಟ್ ಅಭಿವೃದ್ಧಿ ಕಾರ್ಯಗಳಿಗೆ ಖರ್ಚಾಗಬೇಕು. ಆ ಕಡೆ ಇರುವಂಥ ಸನ್ಮಾನ್ಯ ಹಿರಿಯರಾದಂಥ ಉಪ ಮುಖ್ಯಮಂತ್ರಿಗಳಾದ ಕೃಷ್ಣರವರನ್ನು ಉದ್ದೇಶಿಸಿ ಏಕೆ ಮಾತನಾಡುತ್ತಿದ್ದೇನೆಂದರೆ, ಅಲ್ಲಿ ಗಂಭೀರವಾಗಿ ಕುಳಿತು, ಅನೇಕ ಸಾರಿ ಇದನ್ನು ಕೇಳಿದವರು; ಅನುಭವ ಇರುವಂತಹವರು. ನಿಮ್ಮ ಕಾಲದಲ್ಲಾದರೂ ಸಹ ಈ ಕೊಳೆಯನ್ನು ತೊಳೆಯುವುದಕ್ಕೆ ಸಾಧ್ಯವಾದರೆ, ಒಂದು ಟ್ರ್ಯಾಕಿಗೆ ನಿಮ್ಮಿಂದ ತರುವುದಕ್ಕೆ ಸಾಧ್ಯವಾದರೆ, ಮುಲಾಜು ಬೇಡಿ, ಎಷ್ಟು ದಿವಸ ಇರುತ್ತೀರೋ, ಇದರ ಬಗ್ಗೆ ಚಿಂತೆಯಿಲ್ಲ. ಮುಲಾಜಿಲ್ಲದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂಥ ಧೈರ್ಯ ಮಾಡಿದರೆ, ಬಹುಶಃ ಕ್ಯಾನ್ಸರ್ ಎಂಬ ರೋಗ ಏನು ನಿಮಗೆ ಬಂದಿದೆ, ನಿಮ್ಮ ಪಕ್ಷಕ್ಕೆ, ನಿಮ್ಮ ಆಡಳಿತಕ್ಕೆ ಅದು ರಿಪೇರಿಯಾಗಬಹುದು ಎಂಬ ದೃಷ್ಟಿಯಿಂದ, ಖಾರವಾಗಿ ಈ ಮಾತನ್ನು ಉದ್ದೇಶಪೂರಕವಾಗಿ ಸನ್ಮಾನ್ಯ ಉಪ

ಮುಖ್ಯಮಂತ್ರಿಗಳಿಗೆ ಸಿಟ್ಟು ಬರಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಯಾವುದೋ ನಮ್ಮ ಪುಣ್ಯ ಎಂದು ಕಾಣುತ್ತದೆ, ತಾವು ಕುಳಿತಿದ್ದೀರಿ. ನಮಗೂ ಮಾತನಾಡಲು ಉತ್ಸಾಹ ಬರುತ್ತಿದೆ. ಅದಕ್ಕಾಗಿ ಕೆಣಕಿ ಈ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರ ಸರ್ಕಾರ ಕೊಡುವಂಥ ಸವಲತ್ತು ಏನಿದೆ, ವೇಸ್ ಅಂಡ್ ಮೀನ್ಸ್ ಬಾಬ್ತು ಸುಮಾರು 55 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ನಿಮಗೆ ಅವಕಾಶ ಇದೆ. ಅದು ಪೂರ್ಣ ಉಪಯೋಗ ಮಾಡಿಕೊಂಡಿದ್ದೀರಿ. ಇನ್ನು ನಿಮ್ಮ ಹಣಕಾಸಿನ ಪರಿಸ್ಥಿತಿ ಅಂದರೆ, ಓವರ್ ಡ್ರಾಫ್ಟ್‌ಗೆ ಕೈ ಹಾಕುವ ಪರಿಸ್ಥಿತಿಗೆ ಫೆಬ್ರವರಿ ತಿಂಗಳಿಗೆ ಬಂದು ಮುಟ್ಟಿದ್ದೀರಿ. ತಾವು ಹೇಳಿದಿರಿ, ಎಂಟ್ರಿ ಟ್ಯಾಕ್ಸ್ ಮೂಲಕ ಈ ವರ್ಷ 280 ಕೋಟಿ ರೂಪಾಯಿ ಸಂಗ್ರಹ ಮಾಡಬಹುದು ಎಂದು. ಆ ಅಂಕಿಅಂಶ ತಮಗೆ ಗೊತ್ತಿದೆಯೇ ಎಂಟ್ರಿ ಟ್ಯಾಕ್ಸ್ ಮೂಲಕ 280 ಕೋಟಿ ಸಂಗ್ರಹ ಮಾಡಬಹುದು ಎಂದು ತಿಳಿದವರು, ಇವತ್ತು ಅದು 140 ಕೋಟಿ ದಾಟಿಲ್ಲ. ಅಂದರೆ ಡಿಫಿಸಿಟ್ ಈ ವರ್ಷ ಸುಮಾರು 140 ಕೋಟಿ ರೂಪಾಯಿ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ್ದು ಬರಲಿಲ್ಲ. ಏಕೆ ಬರಲಿಲ್ಲ, ಎಲ್ಲಿ ಸೋರಿ ಹೋಯಿತು ಸರಿಯಾಗಿ ಮಾನಿಟರ್ ಮಾಡುತ್ತಾ ಇದ್ದೀರಾ ? ಸರಿಪಡಿಸುವುದರ ಬಗ್ಗೆ ಯೋಚನೆ ಮಾಡುತ್ತಾ ಇದ್ದೀರಾ ? ಇನ್ನು ಎಕ್ಸೈಸ್ ಬಗ್ಗೆ ಸ್ವಾಮಿ, ನೀವೇನು ಹೇಳಿದ್ದೀರಿ. ಸೋರಿ ಹೋಗುವುದರ ಬಗ್ಗೆ ನಾನು ಮಾತನಾಡುತ್ತಿಲ್ಲ. ದೊಡ್ಡ ದೊಡ್ಡ ಮಾತುಗಳನ್ನು ಹೇಳಿದ್ದರು. ನೀವು ಹೇಳಿದಂತೆ, ನಿಮ್ಮ ನಿರೀಕ್ಷೆಯಂತೆ ಈ ವರ್ಷ ಸುಮಾರು 60 ಕೋಟಿ ರೂಪಾಯಿ ಕಡಿಮೆಯಾಗಿದೆ. ಇದು 60 ಕೋಟಿ ಮತ್ತು ಎಂಟ್ರಿಟ್ಯಾಕ್ಸ್‌ನಲ್ಲಿ 140 ಕೋಟಿ, ಒಟ್ಟಿಗೆ 200 ಕೋಟಿ ಕಡಿಮೆಯಾಯಿತು. ಓವರ್ ಡ್ರಾಫ್ಟ್ ತೆಗೆದುಕೊಳ್ಳುವ ಪರಿಸ್ಥಿತಿಗೆ ಬಂದಿದ್ದೀರಿ. ವೇಸ್ ಅಂಡ್ ಮೀನ್ಸ್‌ನಲ್ಲಿ 55 ಕೋಟಿ ರೂಪಾಯಿ ದುರುಪಯೋಗ ಮಾಡಿಕೊಂಡಾಗಿದೆ. ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ 75 ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಡದೇ, ಬೇರೆ ಕಡೆಗೆ ಉಪಯೋಗ ಮಾಡಿಕೊಳ್ಳಲಾಗಿದೆ.

ಅಂದರೆ, ಈ ಪರಿಸ್ಥಿತಿಯಲ್ಲಿ, ಹಣಕಾಸಿನ ಸ್ಪಷ್ಟ ಚಿತ್ರವನ್ನು, ಜನರ ಮುಂದೆ ಇಡದೇ ಇದ್ದರೆ, ಬಹುಶಃ ಈ ನಾಡಿನ ಜನರನ್ನು ವಂಚನೆ ಮಾಡಿದ ಹಾಗೆ ಆಗುತ್ತದೆ. ಇವತ್ತು ಸ್ಪಷ್ಟವಾಗಿ ನೀವೇನು ಮಾಡುತ್ತೀರಿ. ಏನಾಗಿದೆ, ಹಣಕಾಸಿನ, ಇವತ್ತಿನ ಈ ದುರ್ಗತಿಗೆ, ಈ ದುಸ್ಥಿತಿಗೆ ಕಾರಣ ಏನು, ಇದಕ್ಕೆ ಸರಿಯಾದಂಥ ಪರಿಹಾರ ಹುಡುಕಬೇಕಾಗಿದೆ. ಇದರ ಬಗ್ಗೆ ಸ್ಪಷ್ಟ ಚಿತ್ರವನ್ನು ಈ ನಾಡಿನ ಜನರಿಗೆ ಕೊಡಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ.

ನಾವು ಸಬ್ಸಿಡಿಗಳನ್ನು ಬೇರೆ ಬೇರೆ ರೂಪದಲ್ಲಿ ಕೊಡಬೇಕು. ಖಾದಿ ಗ್ರಾಮೋದ್ಯೋಗ ಇಲಾಖೆಗೆ ಕೊಡಬೇಕಾದಂತಹ ಮೂರು ಕೋಟಿ ರೂಪಾಯಿಗಳನ್ನು ನೀವು ಇದುವರೆಗೂ ಒಂದು ಪೈಸೆ ಕೊಟ್ಟಿಲ್ಲ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಈ ಪಿಎಲ್ ಮೂಲಕ ನೀವು ಏನು ಸುಮಾರು 5 ಕೋಟಿ ರೂಪಾಯಿ ಸಬ್ಸಿಡಿ ಕೊಡಬೇಕಾಗಿತ್ತು. ಅದನ್ನು ಬಡ್ಡಿ ಬಾಬ್ತು ಇದುವರೆಗೂ ಬಿಡುಗಡೆ ಮಾಡಿಲ್ಲ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ, ಅದನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳಿದಂತಹವರು. ಅದಕ್ಕೆ ಬೇಕಾದಂತಹ ಸಬ್ಸಿಡಿ ಹಣ ಒಂದು ಪೈಸೆ ಕೂಡ ನೀವು ಇವತ್ತು ಕೊಟ್ಟಿಲ್ಲ. ಸ್ವಾಮಿ, ಆಶ್ರಯ ಯೋಜನೆಯಲ್ಲಿ, ಹಣಕಾಸಿನ ಪರಿಸ್ಥಿತಿ ಹದಗೆಟ್ಟಿರುವಂತಹ ಈ ಸಂದರ್ಭದಲ್ಲಿ, ಅಭಿವೃದ್ಧಿ ಕಾರ್ಯಕ್ಕೆ ಹಣ ಇಲ್ಲದೆ ಇರುವಂತಹ ಸಂದರ್ಭದಲ್ಲಿ, ಕೆಲಸ ಮಾಡಿರುವಂತಹ ನಿಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟಿಗೆ, ಪಿಡಬ್ಲ್ಯೂಡಿಗೆ ದುಡ್ಡು ಕೊಡುವುದಕ್ಕೆ ಆಗದೇ ಇರುವಂತಹ ಸಂದರ್ಭದಲ್ಲಿ, ಅವರ ಬಂಧು ಬಳಗದವರಿಗೆ, ಬೇಕಾದಂತವರಿಗೆ 24 ಕೋಟಿ ರೂಪಾಯಿ ಕೊಟ್ಟು ಈ ರಾಜ್ಯದ ಬೊಕ್ಕಸವನ್ನು ಲೂಟಿ ಮಾಡಿಬಿಟ್ಟಿದ್ದೀರಲ್ಲ. ತಾವು ಯಾರಿಗೆ ಕೊಟ್ಟಿದ್ದೀರಿ ಅವರುಗಳ ಅಡ್ರೆಸ್ಸೇ ಇಲ್ಲವಲ್ಲ. ಆ 240 ಕೋಟಿ ರೂಪಾಯಿಗೆ ಬಡ್ಡಿ ಎಷ್ಟು ಆಯಿತು, ಅದನ್ನು ಅಭಿವೃದ್ಧಿ ಕಾರ್ಯಕ್ಕೆ ಉಪಯೋಗ ಮಾಡಿಕೊಂಡಿದ್ದರೆ ಒಂದು ರೀತಿ ಒಳ್ಳೆಯ ಕೆಲಸ ಆಗುತ್ತಾ ಇತ್ತು. ನಿಮ್ಮನ್ನು

ಈ ನಾಡಿನ ಜನ ನಂಬಿದ್ದಾರೆ. ಜನ ಕೊಟ್ಟ ತೆರಿಗೆ ಹಣವನ್ನು ನಿಮ್ಮ ಬಂಧುಬಳಗದವರಿಗೆ ಬೇಕಾದ ಹಾಗೆ ಕೊಟ್ಟ ಹಾಗೆ ಮಾಡಿ, ಆ ಕೈಯಿಂದ ವಾಪಸ್ಸು ತೆಗೆದುಕೊಳ್ಳುವಂತಹ ಒಂದು ಹೀನ ಪ್ರವೃತ್ತಿ ಹಿಂದೆ ಅಧಿಕಾರದಲ್ಲಿ ಇದ್ದಂತಹ ಕಾಲದಲ್ಲಿ ನಡೆದುಹೋಯಿತು ಎಂದು ಹೇಳುವುದಾದರೆ, ಬಹುಶಃ ಇದು ನನಗೆ ಅನ್ನಿಸುತ್ತದೆ, ಚುನಾಯಿತ ಪ್ರತಿನಿಧಿಗಳಾಗಿ, ಜನ ಪ್ರತಿನಿಧಿಗಳಾಗಿ ಜನತೆಗೆ ಒಂದು ದೊಡ್ಡ ಮಹಾದ್ರೋಹವನ್ನು ಮಾಡುತ್ತಿದ್ದೇವೆಂದು; ತಮಗೆ ತಾವೇ ಈ ಪ್ರಶ್ನೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಇದು ನಮ್ಮ ದೌರ್ಭಾಗ್ಯ. ನಾಡಿನ ಜನ ನಂಬಿ ಅಜೀರ್ಣ ಆಗುವಷ್ಟು ಬಹುಮತವನ್ನು ನಿಮಗೆ ಕೊಟ್ಟರು. ಇಲ್ಲಿ ಕುಳಿತಿರುವವರ ಬಗ್ಗೆ ನೀವು ಯೋಚನೆ ಮಾಡುತ್ತೀರ? ಯಡಿಯೂರಪ್ಪನವರೇ, ಏನು ಕೂಗುತ್ತೀರಿ, ಇಲ್ಲಿ ಕುಳಿತಿರುವವರು ನಾಲ್ಕೇ ಜನ, ನೀವು ಎಷ್ಟು ಮಾತನಾಡುತ್ತೀರಿ ಎನ್ನುತ್ತೀರ? ನಮ್ಮ ಜನತಾ ದಳದ ಸ್ನೇಹಿತರು ಮಾತನಾಡುವಂತಹ ನೈತಿಕ ಹಕ್ಕನ್ನು ಕಳೆದುಕೊಂಡಿದ್ದಾರೆ. ಅವರು ಪರಸ್ಪರ ಕಚ್ಚಾಟ, ಬಡಿದಾಟದಲ್ಲಿ ತಲ್ಲೀನರಾಗಿದ್ದಾರೆ. ಇವತ್ತು ಆಡಳಿತ ಪಕ್ಷ ಯಾವಾಗ ಸರಿ ಆಗುತ್ತಾ ಇತ್ತು. ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಎಷ್ಟೊಂದು ಸವಲತ್ತುಗಳು ಇದೆ. ಸರ್ಕಾರ ತಪ್ಪು ಹೆಜ್ಜೆ ಇಟ್ಟಾಗ ಅಂಕಿ ಅಂಶಗಳನ್ನು ತರಿಸಿಕೊಂಡು ಚಾವಟಿಯಲ್ಲಿ ಬಡಿದಿದ್ದರೆ, ತಪ್ಪು ಹೆಜ್ಜೆ ಇಡದಂತೆ ನೋಡಿಕೊಳ್ಳುವುದರಲ್ಲಿ ನಮ್ಮ ಈ ಕಡೆಯ ಸ್ನೇಹಿತರು. ಮಾನ್ಯ ಸಿಂಧ್ಯಾರವರು ವಿರೋಧ ಪಕ್ಷದ ನಾಯಕರಾಗಿದ್ದರೆ ಬೇರೆ ಆಗುತ್ತಿತ್ತು. ಅವರು ಬಿಗಿ ಮಾಡುತ್ತಾ ಇದ್ದರು. ಬಿಗಿ ಮಾಡುತ್ತೀರಿ ಎಂದು ನಿಮ್ಮನ್ನು ಕೂರಿಸುವುದಿಲ್ಲ. ಇದು ದೌರ್ಭಾಗ್ಯ. ನಾನು ಈಗ ಏನು ಹೇಳಬೇಕೆಂದು ಇದ್ದೇನೆಂದರೆ ಈ ಕಡೆಯಿಂದ ಚಾವಟಿಯನ್ನು ಇಟ್ಟುಕೊಂಡು ಆಡಳಿತ ಪಕ್ಷಕ್ಕೆ ಮಣಿಯದೆ ಸರಿ ಹೆಜ್ಜೆಯಲ್ಲಿ ತೆಗೆದುಕೊಂಡು ಹೋಗುವುದರಲ್ಲಿ ನೀವು ಯಶಸ್ವಿಯಾಗಿದ್ದರೆ, ಗಟ್ಟಿಯಾದಂತಹ ಜನ ಇಲ್ಲಿ ಕುಳಿತಿದ್ದರೆ, ಇವತ್ತು ಮನ ಬಂದಂತೆ ಅಧಿಕಾರವನ್ನು ನಡೆಸುವುದಕ್ಕೆ ಅವರಿಂದ ಆಗುತ್ತಾ ಇರಲಿಲ್ಲ ಎನ್ನುವಂತಹ ಮಾತನ್ನು ನಾನು ವಿರೋಧ ಪಕ್ಷದ ನಾಯಕರಿಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಅಧ್ಯಕ್ಷರೆ, ಪಾಪ ಈಗ ಮಾನ್ಯ ಯಡಿಯೂರಪ್ಪನವರು ನನ್ನ ಬಗ್ಗೆ ವೈಯುಕ್ತಿಕವಾಗಿ ಒಳ್ಳೆಯ ಮಾತನ್ನು ಹೇಳುವುದಕ್ಕೆ ಹೋಗಿ ನನ್ನನ್ನು ಪಾತಾಳಕ್ಕೆ ತುಳಿಯುವುದಕ್ಕೆ ಏನೇನು ಮಾಡಬೇಕು ಅದನ್ನೆಲ್ಲಾ ಮಾಡುತ್ತಿದ್ದಾರೆ. ಈಗ ನಾನು ಎರಡನೇ ಸ್ಥಾನದಲ್ಲಿ ಇದ್ದೇನೆ. ನನ್ನನ್ನು ಆ ಕಡೆ ಎಲ್ಲೋ ಕೂರಿಸಬೇಕು ಎಂದು ಪಿತೂರಿ ಇದು. ನಾವು ಈಗ ಕಾಂಗ್ರೆಸ್ (ಐ)ನ್ನು ಟೀಕೆ ಮಾಡುವುದರಲ್ಲಿ ಅಥವಾ ಆಡಳಿತ ಪಕ್ಷದ ತಪ್ಪುಗಳನ್ನು ಹೊರಗಡೆ ಎಳೆಯುವುದರಲ್ಲಿ ಯಾರಿಗೂ ಕಡಿಮೆ ಏನಿಲ್ಲ. ಆದರೆ ದೇಶದಲ್ಲಿ ವಿಚಿತ್ರವಾದಂತಹ ಒಂದು ಪರಿಸ್ಥಿತಿ ಇದೆ. ಈಗ ಅವರನ್ನು ಹೊರಗಡೆ ತೆಗೆಯುವುದಕ್ಕಿಂತ ಹೆಚ್ಚಾಗಿ ನಿಮ್ಮನ್ನು ಬಯಲಿಗೆಳೆಯುವಂತಹ ಒಂದು ದೊಡ್ಡ ಸಮಸ್ಯೆ ದೇಶಕ್ಕೆ ಆಗಿ ಕುಳಿತಿದೆ. ಅದು ನಮಗೆ ಬಂದಿರುವ ತೊಂದರೆ, ಆದರಿಂದ ನೀವು ಏನು ಮಾಡುತ್ತೀರ ಹೇಳಿ. ವಿಚಿತ್ರವಾದಂತಹ ಒಂದು ಸನ್ನಿವೇಶವಾಗಿದೆ ನಮ್ಮದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈಗ ಮಾನ್ಯ ಸಿಂಧ್ಯಾರವರು ಹೇಳಿರುವುದು ಒಂದು ತರಹ ಹೊಟ್ಟೆಯಲ್ಲಿ ಕಿವುಚಿಕೊಳ್ಳುವಂತಹ ಪರಿಸ್ಥಿತಿ. ಅದು ಆಪರೇಟ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಏನಾಗಿದೆಯೆಂದರೆ ರೋಗ ಉಲ್ಬಣವಾಗಿಬಿಟ್ಟಿದೆ. ಆಡಳಿತ ಪಕ್ಷದವರಿಗೆ ಮತ್ತು ವಿರೋಧ ಪಕ್ಷ ಎಂದು ಕರೆದುಕೊಂಡು ಈ ಕಡೆ ಕುಳಿತು ಅವರ ತಪ್ಪನ್ನು ಹೇಳುವುದಕ್ಕೆ ಆಗದೇ ಇರುವಂತಹ ಒಂದು ವಿಚಿತ್ರ ಪರಿಸ್ಥಿತಿಯಲ್ಲಿ ಸಿಕ್ಕಿರುವವರಿಗೆ ನಾನು ಏನು ಹೇಳಬೇಕು? ಅವರು ಬಹಳ ಸ್ಪಷ್ಟವಾಗಿ ಹೇಳುತ್ತಾರೆ, ಸ್ವಾಮಿ ನಿಮ್ಮದು ಜಾತಕ ಗೊತ್ತಿಲ್ಲವ ಎಂದು ತಕ್ಷಣ ನೀವು ಏನು ಹೇಳುತ್ತೀರಿ? ಇಲ್ಲ, ನಾವು ತಪ್ಪು ಮಾಡಿಲ್ಲ ಎಂದು ಹೇಳುವುದಿಲ್ಲ. ನಮ್ಮ ಜಾತಕ ಗೊತ್ತು, ಆದಕ್ಕೆ ಜನ ನಮ್ಮನ್ನು ಇಲ್ಲಿ ಕೂರಿಸಿದರು, ಈಗ ನಿಮ್ಮದನ್ನು ಹೇಳಿ ಎಂದು, ನಮ್ಮ ದೇಶದ್ದು ಎಂತಹ ಪರಿಸ್ಥಿತಿ ಸ್ವಾಮಿ.

ನಿಜವಾಗಿಯೂ ನಮ್ಮ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಇಲ್ಲಿ ಕುಳಿತುಕೊಂಡು ವಿರೋಧ ಪಕ್ಷದ ಬಗ್ಗೆ ಟೀಕೆಯನ್ನು ಮಾಡಿದಾಗ ಒಂದು ಅಪರಾಧ ಅಥವಾ ಒಂದು ತಪ್ಪನ್ನು ತೋರಿಸಿ ಎಂದು ಹೇಳುವಂತಹ ನೈತಿಕ ಹಕ್ಕನ್ನು ವಿರೋಧ ಪಕ್ಷದಲ್ಲಿ ಕುಳಿತಿರುವಂತಹ ನಮ್ಮ ಸ್ನೇಹಿತರು ಉಳಿಸಿಕೊಂಡಿದ್ದರೆ, ನಮ್ಮ ರಾಜ್ಯದ ಜನತೆಗೆ ಈ ರೀತಿಯ ಒಂದು ದುಸ್ಥಿತಿ ಬರುತ್ತಾ ಇರಲಿಲ್ಲ. ಈಗ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಇಂದಿನ ರಾಜಕೀಯ ಈ ಒಂದು ದುಸ್ಥಿತಿಗೆ ಮತ್ತು ಪರಿಸ್ಥಿತಿಗೆ ಹಾಗೂ ಅಭಿವೃದ್ಧಿ ಕಾರ್ಯಗಳು ಸ್ಥಗಿತ ಆಗಿರುವುದಕ್ಕೆ, ಹಣಕಾಸಿನ ಪರಿಸ್ಥಿತಿ ಪೂರ್ಣವಾಗಿ ಹದಗೆಟ್ಟಿರುವುದಕ್ಕೆ, ಆ ಕಡೆ ಕುಳಿತಿರುವಂತಹ ಆಡಳಿತ ಪಕ್ಷದ ನಮ್ಮ ಸ್ನೇಹಿತರು ಎಷ್ಟು ಜವಾಬ್ದಾರರೋ, ಅದೇ ರೀತಿ ಈ ಕಡೆ ಕುಳಿತಿರುವಂತಹ ವಿರೋಧ ಪಕ್ಷದಲ್ಲಿ ಇರುವ ಮಾನ್ಯ ಸಿಂಧ್ಯಾರವರ ಸ್ನೇಹಿತರುಗಳು ಮತ್ತು ಜವಾಬ್ದಾರಿ ಹೊತ್ತಿರುವಂತಹ ವಿರೋಧ ಪಕ್ಷದವರೂ ಸಹ ಇದರಲ್ಲಿ ಸರಿ ಸಮಾನವಾಗಿ ಪಾಲುದಾರರು. ಇವತ್ತಿನ ಈ ಪರಿಸ್ಥಿತಿಗೆ ನೀವು ಸಹ ಅಷ್ಟೇ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

ಬಹಳ ಸರಿಯಾಗಿದೆ ನಿಮಗೆ ಏನು ಇರುವುದು ರಾಜ್ಯದ ಜನರ ಹಿತ ಅಲ್ಲ. ನಮ್ಮ ಅಪರಾಧಗಳಿಂದ ಭಾರತೀಯ ಜನತಾ ಪಾರ್ಟಿ ಎಲ್ಲಿ ಅಧಿಕಾರಕ್ಕೆ ಬರುತ್ತದೆಯೋ ಅದು ಬರದಂತೆ ಯಾರ ಜೊತೆ ಸೇರಿದರೂ ಪರವಾಗಿಲ್ಲ. ಬಿ.ಜೆ.ಪಿ. ಮಾತ್ರ ಬೆಳೆಯಬಾರದು ಅಂತ ನೀವು ಹೇಳುತ್ತೀರಿ. ಕೆಲವರ ಮಾತನ್ನು ನಾವು ಕೇಳುತ್ತಿದ್ದೇವೆ. ನೀವು ಮಾತೆತ್ತಿದರೆ ಏನು ಹೇಳುತ್ತೀರಿ. ನಮ್ಮ ಸಂಸ್ಥೆ ಕೋಮು ಸಂಸ್ಥೆ ಎಂದು ಭೂತವನ್ನುಂಟು ಮಾಡಿ ನೀವು ಬೆಳೆಸಿದವರು ಎಂದು ಕಾಂಗ್ರೆಸ್‌ನವರಿಗೆ ಹೇಳುತ್ತಾರೆ. ನೀವು ಬೆಳೆಸಿದವರು ಎಂದು ಜನತಾ ದಳದವರು ಹೇಳುತ್ತಾರೆ, ಸ್ವಾಮಿ ನೀವಿಬ್ಬರು ಅಲ್ಲ. ಸ್ವಾಮಿ ನಮ್ಮ ಮಾಲೀಕರ ಜನ ಅವರು ಅಲ್ಲಿದ್ದಾರೆ. ಏಕೆ ಹೀಗೆ ಹೇಳಿ ಅಪರಾಧ ಮಾಡುತ್ತಿದ್ದೀರಿ. ಯಾರನ್ನು ಅಧಿಕಾರಕ್ಕೆ ತರಬೇಕು ಯಾರನ್ನು ತರಬಾರದು ಆ ಒಂದು ಪ್ರಜ್ಞೆ 45 ವರ್ಷಗಳಲ್ಲಿ ಸಾಮಾನ್ಯ ಮತದಾರರಿಗೆ ಬಂದಿದೆ. ಜನ ಕಾಂಗ್ರೆಸ್ ನೋಡಿದರು, ಜನತಾ ದಳವನ್ನು ನೋಡಿದರು. ಇವತ್ತು ಜನ ನಿಶ್ಚಯ ಮಾಡಿದ್ದಾರೆ. ಎಷ್ಟು ಬೇಗ ಇವರ ಅಧಿಕಾರವನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎಂದು ಈ ರಾಜ್ಯದ ಮತದಾರನಿಗೆ, ಈ ದೇಶದ ಮತದಾರನಿಗೆ ಗೊತ್ತಾಗಿದೆ ಎನ್ನುವುದು ನಿಮಗೂ ಗೊತ್ತಾಗಿದೆ. ಬಿ.ಜೆ.ಪಿಯವರು ಅಧಿಕಾರಕ್ಕೆ ಬರುವುದು ಎಷ್ಟು ನಿಧಾನವಾಗುತ್ತೋ ಅಷ್ಟು ಒಳ್ಳೆಯದು. ನೀವು ಬರುವುದನ್ನು ಇಷ್ಟು ದಿನ ತಡೆದೆವಲ್ಲಾ- ಎಂಬ ಸಮಾಧಾನವನ್ನು ನಮ್ಮ ಸ್ನೇಹಿತರಾದ ಸಿಂಧ್ಯಾರವರು ಹೇಳಿದರು. ಅವರು ಸತ್ಯ ಹೇಳಿದ್ದರಿಂದ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಅವರು ನಮ್ಮ ಗರಡಿಯಲ್ಲಿ ಬೆಳೆದವರು. ಸತ್ಯಸಂಗತಿಗಳು ಏನು ಎಂದು ಅವರಿಗೆ ಗೊತ್ತಿದೆ. ರಾಜಕಾರಣದಲ್ಲಿ ಯಾರ್ಯಾರೋ ಎಲ್ಲೆಲ್ಲೋ ಇರುತ್ತಾರೆ. ಅವರು ನಂಬಿರುವಂತಹ ತತ್ವ ಸಿದ್ಧಾಂತ ತಪ್ಪೇನು ಇಲ್ಲ. ಒಂದು ಮಾತು ಹೇಳುತ್ತೇವೆ. 45 ವರ್ಷದಲ್ಲಿ ಈ ನಾಡಿನ ಜನ ನಿಮ್ಮನ್ನು ನಂಬಿ ಅಪರಾಧ ಮಾಡಿದ್ದೇವೆ. ಎನ್ನುವಂತಹ ಅರಿವು ಅವರಿಗೆ ಮೂಡುತ್ತಿದೆ. ಇವತ್ತು ಭಾರತೀಯ ಜನತಾ ಪಾರ್ಟಿ ನೀತಿ ಸಿದ್ಧಾಂತಗಳು ಏನಿವೆ ಅವೇ ಈ ದೇಶಕ್ಕೆ ಸರಿಯಾದಂತಹ ಔಷಧಿ ಎನ್ನುವಂತಾದ್ದು ಜನರಿಗೆ ಮನದಟ್ಟು ಆಗುತ್ತಿದೆ. ಇದು ನಮ್ಮ ಸಿಂಧ್ಯಾರವರಿಗೆ ಆ ಕಡೆ ಕುಳಿತಿರುವವರಿಗೆ ಈ ಕಡೆ ಕುಳಿತಿರುವವರಿಗೆ ನಮ್ಮ ಸ್ನೇಹಿತರಿಗೆ ಮನದಟ್ಟು ಆಗಿರಬಹುದು. ಎನ್ನತಕ್ಕಂಥ ಮಾತನ್ನು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಇನ್ನು ನೀರಾವರಿ, ಇದು ಜನರ ಜೀವಾಳ. ಅವನ ಬದುಕಿನ ಅಳಿವು ಉಳಿವಿನ ಪ್ರಶ್ನೆ. ಮಾನ್ಯ ರಾಮಯ್ಯನವರು ಹೇಳಿದರು, ಸಾಕಷ್ಟು ಅನುಭವ ಇರುವಂತಹ ಸ್ನೇಹಿತರು ಈ ಕಡೆ ಇದ್ದಾರೆ, ನಾನು ಕೇಳುತ್ತೇನೆ. ಸ್ವಾಮಿ. 2 ಸಾವಿರ ಎ.ಡಿ.ಯಲ್ಲಿ ಕಾವೇರಿ ಜಲಾನಯನ ಪ್ರದೇಶ ಅಲ್ಲಿರತಕ್ಕಂಥ ನೀರಿನ ಪೂರ್ಣ ಉಪಯೋಗ ಮಾಡಿಕೊಳ್ಳಬೇಕಲ್ಲ ನಾವು. ಸನ್ಮಾನ್ಯ ಉಪ ಮುಖ್ಯಮಂತ್ರಿ ಕೃಷ್ಣರವರು

ಅಲ್ಲಿರದಿದ್ದರೆ ಬೇರೆ ಯಾರೂ ಸತ್ಯ ಹೇಳುತ್ತಿರಲಿ ಅವರು ಸತ್ಯ ಹೇಳಿದರು. ಕಳೆದ ಇಷ್ಟು ವರ್ಷಗಳಲ್ಲಿ ನಾವು ಮಾಡಿರುವ ಸಾಧನೆಯಿಂದ ಕೇವಲ ಶೇಕಡ 30 ಪರ್ಸೆಂಟ್ ಮಾತ್ರ ನೀರಾವರಿ ಮಾಡಿಕೊಳ್ಳುವುದಕ್ಕೆ ನಮಗೆ ಆಗಿದೆ ಎಂದು. ಅವರ ಅಂದಾಜಿನ ಪ್ರಕಾರ, ನಾನು ಹೇಳಿಲ್ಲ. ಅಲ್ಲಿಗೆ ತಲುಪಬೇಕಾದರೆ 6 ಸಾವಿರ ಕೋಟಿ ಬೇಕಾಗಬಹುದು ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಏನು ಚರ್ಚೆ ಮಾಡೋಣ, ಸ್ವಾಮಿ ಇಷ್ಟು ವರ್ಷ ನಿಮಗೆ ಅವಕಾಶ ಕೊಟ್ಟಾಗ ಅತ್ಯಂತ ಕಡಿಮೆ ಹಣದಲ್ಲಿ ಈ ಯೋಜನೆಗಳನ್ನು ಪೂರ್ಣ ಮಾಡುವಂತಹ ಸಂದರ್ಭ ಬಂದಾಗ ಅಣೆಕಟ್ಟುಗಳನ್ನು ಕಟ್ಟಿ ಆಗಿದ್ದರೂ ಸಹ ಕಾಲುವೆಗಳನ್ನು ತೆಗೆದು ನೀರು ಕೊಡುವಂತಹ ಯೋಗ್ಯತೆ ಇಲ್ಲ ಎಂದು ಹೇಳಲಾ ಶಕ್ತಿ ಇಲ್ಲ ಎಂತ ಹೇಳಲೇ ಕಳಕಳಿ ಇಲ್ಲ ಅಂತ ಹೇಳಲೇ, ಅಥವಾ ನೀರು ಕೊಟ್ರೆ ಜನ ಬುದ್ಧಿವಂತರಾಗಿ ನಮಗೆ ಓಟು ಕೊಡುವುದಿಲ್ಲ ಅಂತ ಹೇಳಿ ಅವರನ್ನು ಅದೇ ಸ್ಥಿತಿಯಲ್ಲಿಟ್ಟಿದ್ದೀರಾ ಎಂದು ಹೇಳಲೇ, ಇಷ್ಟು ಅಂತು ಸತ್ಯ 2ವರ್ಷಗಳಲ್ಲಿ ನಿಮ್ಮ ಕಾಲದಲ್ಲಿ ಆ ಒಂದು ಕೃಷ್ಣಾ ಜಲಾನಯನ ಪ್ರದೇಶದ ನೀರನ್ನು ಪೂರ್ಣ ಉಪಯೋಗ ಮಾಡಿಕೊಂಡು ನೀರನ್ನು ಕೊಡುವಂತಹ ಆ ಪೊಲಿಟಿಕಲ್ ವಿಲ್ ಇಲ್ಲ, ಆ ಕೆಲಸ ಮಾಡುವುದಕ್ಕೆ ನಿಮ್ಮ ಕಡೆಯಿಂದ ಸಾಧ್ಯ ಇಲ್ಲ ಎಂದು ಒಪ್ಪಿಕೊಳ್ಳಿ ಎಂದು ನಾನು ಈ ಸಂದರ್ಭದಲ್ಲಿ ಹೇಳಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ ನಿಮ್ಮನ್ನು ಉದ್ದೇಶಪೂರ್ವಕವಾಗಿ ಗೊಂದಲ ಇರುವಂತಹ ಇಲಾಖೆ ಕೊಟ್ಟಿದ್ದಾರೆ. ಉಪಮುಖ್ಯಮಂತ್ರಿಗಳು ಏನು ಭ್ರಮೆಯಲ್ಲಿದ್ದಾರೆ ಈ ನಾಡಿನ ರೈತರಿಗೆ ಸಂಬಂಧಪಟ್ಟಂತಹ ಬಹುತೇಕ ಜನರಿಗೆ ಸಂಬಂಧಪಟ್ಟಂಥ ವಿದ್ಯುತ್ ಇಲಾಖೆ ನೀರಾವರಿ ಇಲಾಖೆ ನಮಗೆ ಸಿಕ್ಕಿದೆ ಎಂದು ತಿಳಿದು ಕೊಂಡಿದ್ದಿರಿ. ನೀವೇ ಅಪೇಕ್ಷೆಪಟ್ಟು ಇದನ್ನು ರಿಪೇರಿ ಮಾಡಬೇಕೆಂದು ತೆಗೆದುಕೊಂಡಿದ್ದರೆ ವೀರಪ್ಪ ಮೊಯ್ಲಿಯವರು ಹೇಳಿದಂತೆ ಮೇಜರ್ ಸರ್ಜರಿ ಮಾಡಬೇಕೆಂದು ಇದ್ದರೆ, ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಇಲ್ಲಿ ಯಾವ ಇಲಾಖೆಯನ್ನು ಸರಿಪಡಿಸುವುದಕ್ಕೆ ಸಾಧ್ಯ ಇಲ್ಲವೋ ಎಂದು ಸ್ಪಷ್ಟವಾಗಿ, ನಿಮ್ಮನ್ನು ಇಕ್ಕಟ್ಟಿನಲ್ಲಿ ಸಿಕ್ಕಿಸುವುದಕ್ಕೆ ಏನಾದರೂ ಈ ಇಲಾಖೆ ಕೊಟ್ಟಿದ್ದಾರೋ ಏನೋ ಎನ್ನುವಂತಹ ಭಯ ನನಗೆ ಇದೆ. ನಾನು ಮಂಡ್ಯ ಜಿಲ್ಲೆಯವನು. ನಿಮ್ಮ ಜಿಲ್ಲೆಯವನು. ನಿಮ್ಮಂಥ ಕಳಕಳಿ ಇರುವಂತಹವರಿಗೆ ಈ ಇಲಾಖೆ ಸಿಕ್ಕಿದಾಗ ಇದಕ್ಕೆ ಬೇಕಾದಂತಹ ದುಡ್ಡು ತೆಗೆದುಕೊಳ್ಳುತ್ತೀರಾ ಸ್ವಾಮಿ. ತೆಗೆದುಕೊಳ್ಳುತ್ತೀರಾ ? ಇವತ್ತು ಕೃಷ್ಣಾ ಜಲಾನಯನ ಪ್ರದೇಶ ಮುಗಿಸುವುದಕ್ಕೆ 6 ಸಾವಿರ ಕೋಟಿ ರೂಪಾಯಿಗಳು ಬೇಕು 2 ಸಾವಿರ ವರ್ಷದಲ್ಲಿ ಎಂದು ಹೇಳುತ್ತೀರಲ್ಲ, ಅದಕ್ಕೆ ಯಡಿಯೂರಪ್ಪನವರೇ ನಮ್ಮ ಕಾಲದಲ್ಲಿ 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇನೆ, ಮಾನಿಟರ್ ಮಾಡುತ್ತೇನೆ ನನ್ನ ಜೊತೆ ಇರುವಂತಹ ಇನ್ನೊಬ್ಬ ಉಪಸಚಿವನನ್ನು ಅಲ್ಲಿ ತೆಗೆದುಕೊಂಡು ಹೋಗಿ ಹಾಕುತ್ತೇನೆಂದು ಹೇಳಿ. ಸ್ವಾಮಿ ಯಾರ್ಯಾರನ್ನೋ ಮಂತ್ರಿ ಮಾಡಿಬಿಟ್ಟರು ನಿಮ್ಮ ಮುಖ್ಯಮಂತ್ರಿಗಳು. ಯಾವ್ಯಾವುದೋ ಬಾಬಿಗೆ. ಯಾವ್ಯಾವುದೋ ಇಲಾಖೆಗೆ ಒಂದು ಕೋಟಿ ರೂಪಾಯಿ ಕೊಡುವುದಕ್ಕೆ ಆಗದೇ ಇರತಕ್ಕಂಥ ಇಲಾಖೆಗೆ ಒಬ್ಬ ಮಂತ್ರಿಯನ್ನು ನಾನು ಕೇಳುತ್ತೇನೆ ಸ್ವಾಮಿ ಈ ನಿಮ್ಮ ಮುಖ್ಯಮಂತ್ರಿಗಳಿಗೆ ನೀರಾವರಿ ಯೋಜನೆ ಬಗ್ಗೆ ಕಳಕಳಿ ಇದ್ದಿದ್ದರೆ ಆ ಕೃಷ್ಣ ಜಲಾನಯನ ಪ್ರದೇಶವನ್ನು ನೋಡಿಕೊಳ್ಳುವುದಕೋಸ್ಕರ ಒಬ್ಬ ಮಂತ್ರಿ ಮಾಡುವುದಕ್ಕೆ ಆಗುತ್ತಿರಲಿಲ್ಲ. ಆ ಭಾಗದಲ್ಲಿರುವಂಥ, ಅಲ್ಲೇ ಇದ್ದು ಪ್ರತಿನಿತ್ಯ ಅಲ್ಲಿ ಓಡಾಟ ಮಾಡಿ. 2 ಸಾವಿರ ವರ್ಷದಲ್ಲಿ ಮಿಗಿಸುವುದಕ್ಕೋಸ್ಕರ ಅದಕ್ಕೆ ಬೇಕಾದ ಹಣವನ್ನು ತೆಗೆದುಕೊಂಡು ಬೇಕಾದ ತೀರ್ಮಾನ ತೆಗೆದುಕೊಂಡು ಪೂರ್ಣ ಮಾಡುತ್ತೇನೆ ಎನ್ನುವ ಕಳಕಳಿ ಇತ್ತೇನು ಸ್ವಾಮಿ ನಿಮ್ಮ ಮುಖ್ಯಮಂತ್ರಿಗಳಿಗೆ. ತಾವು ಹೋಗಿ ಬಂದಿರಿ, ಪರಿಸ್ಥಿತಿಯನ್ನು ನೋಡಿದ್ದೀರಿ ತಮ್ಮ ನೋವನ್ನು ಅಳಲು ತೋಡಿಕೊಂಡಿದ್ದೀರಿ ? ಆದರೆ ನಾನು ವಿನಂತಿ ಮಾಡುತ್ತೇನೆ ಸನ್ಮಾನ್ಯ ಉಪಮುಖ್ಯಮಂತ್ರಿಗಳೇ ಈಗಲಾದರೂ ದಿಟ್ಟ ಹೆಜ್ಜೆ ಇಡಿ. ಹೇಳಿ ಯಡಿಯೂರಪ್ಪನವರೇ ಮ್ಯಾಗ್ಜಿಮಮ್ ಹಣ ಅದರಲ್ಲಿ

ನಾವು ತೊಡಗಿಸುತ್ತೇವೆ. ಆಕ್ವಿಜಿಷನ್, ಸಂಬಳ ಸಾರಿಗೆ ಮತ್ತೊಂದು ಮಗದೊಂದು ಲೂಟಿ ಇದಕ್ಕೆ 70 ಪರ್ಸೆಂಟ್ ಖರ್ಚಾಗಿದೆ ಅಂಕಿಅಂಶಗಳನ್ನು ನೋಡಿದರೆ ಗಾಬರಿ ಆಗಿಬಿಡಬಹುದು. ತುಕ್ಕು ಹಿಡಿದು ಹೋಗಿದೆ. ರಿಪೇರಿ ಮಾಡುವುದಕ್ಕೆ ಆಗದೆ ಇರುವಂತಹ ಪರಿಸ್ಥಿತಿ ಬಂದಿದೆ. ನಿಮ್ಮ ಕಾಲದಲ್ಲಿ ನೀವು. ಇದುವವರೆಗೂ ಒಬ್ಬ ಅಧಿಕಾರಿಯನ್ನು ಅಲ್ಲಿ ಹಾಕಿ ನಿಮಗೆ ಯಾರು ಬೇಕೋ ಅವರನ್ನು ಕನಿಷ್ಠ ಒಂದು 500 ಕೋಟಿ ರೂಪಾಯಿ ಖರ್ಚು ಮಾಡಿ.

ರೈತರ ಹೆಸರು ಹೇಳುತ್ತೀರಿ. ಕೃಷಿ ಕಾರ್ಮಿಕರ ಹೆಸರು ಹೇಳುತ್ತೀರಿ, ಬಡವರ ಹೆಸರು ಹೇಳುತ್ತೀರಿ, ಹರಿಜನ ಗಿರಿಜನರ ಹೆಸರು ಹೇಳುತ್ತೀರಿ ಆದರೆ ಅವರ ಅಭಿವೃದ್ಧಿಗೆ ಕಳೆದ 45 ವರ್ಷಗಳಿಂದ ಮಾಡಿದಂಥ ಸಾಧನೆ ಏನು ? ಸ್ವಾಮಿ, ನೀವು ಕೊಟ್ಟಿರತಕ್ಕಂಥ ಅಂಕಿ ಅಂಶ ನೋಡಿದ್ದೀರಿನು ? ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಲಿಫ್ಟ್ ಇರಿಗೇಷನ್, 87ರಲ್ಲಿ ಪ್ರಾರಂಭವಾಯಿತು. ಈ ಲಿಫ್ಟ್ ಇರಿಗೇಷನ್ ಜಾಸ್ತಿ ಮಾಡಬೇಕೆಂದು ಯೋಚನೆ ಮಾಡಿ ತಂದಿರಿ, ತುಂಬಾ ಸಂತೋಷ. ಆದರೆ ಇವತ್ತಿನವರೆಗೆ 86–87ರಿಂದ ನಿಮ್ಮ ಅಧಿಕಾರದಲ್ಲಿ ಹಿಂದೆ ಇದ್ದವರೂ, ಈಗ ಇರುವವರೂ ಒಪ್ಪಿಕೊಂಡಿದ್ದೀರಿ, ಇಲ್ಲ ಎಂದು ಹೇಳುವುದಕ್ಕೆ ಬರುವುದಿಲ್ಲ. ಸ್ವಾಮಿ ನೀವೇ ಕೊಟ್ಟಿರತಂಕ್ಕಂಥ ಅಂಕಿ ಅಂಶದ ಪ್ರಕಾರ 86–87ರಲ್ಲಿ ಈ ಕೃಷ್ಣಾ ಜಲಾನಯನ ಪ್ರದೇಶಕ್ಕೆ ನೀವು ಬಿಡುಗಡೆ ಮಾಡಿದಂಥ 8 ಕೋಟಿ ರೂಪಾಯಿಗಳಲ್ಲಿ 6 ಕೋಟಿ 9 ಲಕ್ಷ ರೂಪಾಯಿಗಳನ್ನು ಅಲ್ಲಿರುವಂಥ ಸಿಬ್ಬಂದಿಗೆ ಖರ್ಚು ಮಾಡಿದ್ದೇವೆಂದು ನೀವೇ ಅಂಕಿ ಅಂಶ ಕೊಟ್ಟು ಒಪ್ಪಿಕೊಂಡಿದ್ದೀರಿ. ಇದು ಎಂಥಾ ಪರಿಸ್ಥಿತಿ ಸ್ವಾಮಿ ? ಒಂದು ಲಿಫ್ಟ್ ಇರಿಗೇಷನ್ ನಿಗಮವನ್ನು ರಚನೆ ಮಾಡಿ 86–87ರಿಂದ ಆ ಮೂಲಕ ಯಾವುದೇ ಲಿಫ್ಟ್ ಇರಿಗೇಷನ್ ಮಾಡದೆ 8 ಕೋಟಿ ರೂಪಾಯಿ ಬಜೆಟ್‌ನಲ್ಲಿ 6 ಕೋಟಿ 9 ಲಕ್ಷ ರೂಪಾಯಿ ಹಣವನ್ನು ಸಿಬ್ಬಂದಿಗೇ ಖರ್ಚು ಮಾಡುತ್ತೇವೆಂದು ಹೇಳುವಂಥ ಜನ, ನೀವು ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ನೈತಿಕ ಹಕ್ಕು ಇದೆಯೇ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸ್ವಾಮಿ ಇದರ ಯೋಜನೆ ಏನು ಈ ಲಿಫ್ಟ್ ಇರಿಗೇಷನ್ ಮೂಲಕ ಆ ಕೃಷ್ಣಾ ಜಲಾನಯನದಲ್ಲಿ ನೀರನ್ನು ಎತ್ತದೇ ಇದ್ದರೆ ರೈತನ ಗತಿ ಏನು ಸ್ವಾಮಿ ? ಈ ರಾಜ್ಯದ ರೈತ ಅನ್ನ ಕೊಟ್ಟನಲ್ಲ, ನಮ್ಮನ್ನು ನಿಮ್ಮನ್ನು ಇಲ್ಲಿಗೆ ಕಳುಹಿಸುವುದಕ್ಕೆ ಅವಕಾಶ ಮಾಡಿಕೊಟ್ಟನಲ್ಲ, ಅದು ಅವನ ಅಪರಾಧ ಆಯಿತೇನು ? ಲಿಫ್ಟ್ ಇರಿಗೇಷನ್ ಮೂಲಕ ನೀರನ್ನು ಎತ್ತುವುದಕ್ಕೆ ಬೇಕಾದ ಖರ್ಚನ್ನು ರೈತ ಕೊಡಬೇಕಂತೆ ಸ್ವಾಮಿ ? ಎಲ್ಲಿದೆ ಅವನ ಹತ್ತಿರ ಹಣ ? ಬಿತ್ತನೆ ಬೀಜಕ್ಕೆ ಅವನ ಹತ್ತಿರ ಹಣ ಇಲ್ಲ, ದುಡಿಯುವ ಕೈಗಳಿಗೆ ಕೆಲಸ ಇಲ್ಲ. ಅವನು ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಇಲ್ಲ. ಲಿಫ್ಟ್ ಇರಿಗೇಷನ್ ಮೂಲಕ ನೀರನ್ನು ಅವನ ಹೊಲಕ್ಕೆ ಕೊಟ್ಟು ಬೇಕಾದಂಥ ತೆರಿಗೆಯನ್ನು ಹಾಕಿ. ಅವನನ್ನು ಉಳಿಸಬೇಕಾದಂಥ ನೀವು ರೈತನಿಂದ ದುಡ್ಡನ್ನು ಸಂಗ್ರಹ ಮಾಡಿ ಲಿಫ್ಟ್ ಇರಿಕೇಷನ್ ಮಾಡುತ್ತೇವೆಂದು ಹೇಳುವಂಥ ರೈತನ ಕಣ್ಣಿಗೆ ಮಣ್ಣು ಎರಚುವಂಥ ಪದ್ಯಂತರದ ರಾಜಕಾರಣವನ್ನು ಮಾಡಿಕೊಂಡು ಬಂದಿದ್ದೀರಿ ಕಳೆದ 45 ವರ್ಷಗಳಲ್ಲಿ. ಭಗವಂತ ಕೊಟ್ಟಂಥ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡುವುದಕ್ಕೆ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡದೆ ಭಾರತೀಯ ಜನತಾ ಪಾರ್ಟಿ ಬಗ್ಗೆ ಟೀಕೆ ಮಾಡುತ್ತೀರ ! ನಮ್ಮನ್ನು ತೆಗೆದುಕೊಂಡು ನೀವು ಏನು ಮಾಡುತ್ತೀರಿ ಸ್ವಾಮಿ ? ನಿಮ್ಮದು ಹಳೇ ಕಥೆ. ಇವತ್ತು ಲಿಫ್ಟ್ ಇರಿಗೇಷನ್ ನಿಗಮವನ್ನು ರದ್ದು ಮಾಡುವಂಥ ಪ್ರಯತ್ನ ಏನು ಮಾಡುತ್ತಿದ್ದೀರಿ ? ಅದರ ಬಗ್ಗೆ ನಾನು ಉಪಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ದಯಮಾಡಿ ಯಾವುದೋ ಆವೇಶದಲ್ಲಿ ಆ ಲಿಫ್ಟ್ ಇರಿಗೇಷನ್ ನಿಗಮವನ್ನು ಹತೋಟಿಗೆ ತರುವುದಕ್ಕೆ ಆಗದ ಈ ರೀತಿ ಮಾಡಬೇಡಿ. ಯಾರೂ ಅದರ ಬಗ್ಗೆ ಗಮನ ಕೊಡದೇ ಇದ್ದುದರಿಂದ ಈ ಪರಿಸ್ಥಿತಿಗೆ ಬಂದಿದೆಯೇ ಹೊರತು ಬೇರೆ ಏನಿಲ್ಲ. ಆದ್ದರಿಂದ ದಯಮಾಡಿ ಕಾವೇರಿ ಮತ್ತು ಕೃಷ್ಣಾ ಬೇಸಿನ್‌ನಲ್ಲಿರುವ ಲಿಫ್ಟ್ ಇರಿಗೇಷನ್ ನಿಗಮವನ್ನು ರದ್ದು ಮಾಡಬೇಡಿ. ರೈತನ ಮೇಲೆ ಯಾವ ಷರತ್ತುಗಳನ್ನು ಹಾಕಬೇಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೇ, ನಿಗಮಗಳನ್ನು ರದ್ದುಪಡಿಸಬೇಡಿ ಎಂದು ಮಾನ್ಯ ಯಡಿಯೂರಪ್ಪನವರು ಹೇಳುತ್ತಿದ್ದಾರೆ. 86ನೇ ಇಸವಿಯಲ್ಲಿ ಈ ನಿಗಮಗಳನ್ನು ಒಳ್ಳೆಯ ಉದ್ದೇಶದಿಂದ ರಚನೆ ಮಾಡಿದ್ದರೂ ಅಲ್ಲಿಂದ ಇಲ್ಲಿಯವರೆಗೆ ಅದಕ್ಕೆ ಖರ್ಚು ಮಾಡಿರುವ ಹಣ 8 ಕೋಟಿ, ಆದರೆ 1 ಎಕರೆಯೂ ನೀರಾವರಿಯಾಗಿಲ್ಲ. ಅದಕ್ಕಾಗಿ ಅಂದಾಜು ಸಮಿತಿಯಿಂದ ವರದಿಗಳನ್ನು ತರಿಸಿ ಇಲ್ಲಿ ಯಾವ ರೀತಿಯಿಂದ ನೌಕರರನ್ನು ನೇಮಕ ಮಾಡಿದ್ದಾರೆ ? ಯಾವ ರೀತಿ ಇಲ್ಲಿ ಅಕ್ರಮಗಳು ನಡೆದಿವೆ ? ಯಾವ ಸದುದ್ದೇಶಕ್ಕೆ ನಿಗಮಗಳನ್ನು ರಚನೆ ಮಾಡಲಾಗಿತ್ತೋ ಅದರ ವಿರುದ್ಧ ಕೆಲಸ ಆಗಿದೆ. ಇದು ಬಿಳಿ ಆನೆಯಾಗಿ ಸಾರ್ವಜನಿಕರ ದುಡ್ಡನ್ನು ಕೊಳ್ಳೆಯಾಗಿದೆ. ಅದನ್ನು ರದ್ದು ಪಡಿಸಬೇಕೆಂದು ನಾವು ಸರ್ಕಾರಕ್ಕೆ ತಿಳಿಸಿದ್ದೇವೆ. ಆ ನಿಗಮಗಳು ಯಾವುದೇ ಕೆಲಸ ಮಾಡಿಲ್ಲ. ಇವುಗಳು ಬಿಳಿ ಆನೇ ಆಗುವುದು ಬೇಡ. ಇಂಥ ನಿಗಮಗಳನ್ನು ರದ್ದು ಮಾಡಬೇಕೆಂದು ನಮಗನಿಸುತ್ತದೆ.

ಶ್ರೀ ಯಡಿಯೂರಪ್ಪ:– ಯಾವುದೇ ಒಂದು ಮಂಡಳಿಗಳನ್ನು ರದ್ದು ಮಾಡುವುದೇ ಒಂದು ಪರಿಹಾರವಲ್ಲ. ಹಾಗಾದರೆ ನೀವು ಏಕೆ ಬಿಟ್ಟಿದ್ದೀರಿ ? 1987ರಿಂದ ಅಜೀರ್ಣವಾಗುವಷ್ಟು ಎಲ್ಲರೂ ತಿಂದು ತೇಗಿದ ಮೇಲೆ, ಈಗ ನಿಮಗೆ ಖುಷಿ ಬಂದ ಹಾಗೆ ಎಕ್ಸ್‌ಪೆರಿಮೆಂಟ್ ಮಾಡಿ, ರದ್ದು ಮಾಡುವುದಕ್ಕೆ ಹೊರಟಿದ್ದೀರಿ. ನೀವೇ ಇರಬೇಕಲ್ಲ ? ಮುಂದೆ ಬರುವ ನಮ್ಮ ಗತಿ ಏನಾಗಬಹುದು ? ಆದ್ದರಿಂದ ದಯ ಮಾಡಿ ಈ ಒಂದು ಪರಿಸ್ಥಿತಿಗೆ ನಮ್ಮನ್ನು ತರಬೇಡಿ.

ಶ್ರೀ ವಾಟಾಳ್ ನಾಗರಾಜ್:– ಎಲ್ಲರೂ ದಯವಿಟ್ಟು ಎದ್ದು ನಿಲ್ಲಬಾರದು, ಹಾಗೆ ನಿಂತರೆ ಒಂದು ಗಂಟೆ ಕಾಲ ವ್ಯಯವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾವು ಅಂದರೆ ಈ ನಾಡಿನ ಜನರು ಯಾರನ್ನು ಆಯ್ಕೆ ಮಾಡಿ ಕಳುಹಿಸುತ್ತಾರೆ ಅವರು. ಒಂದು ವೇಳೆ ನಾವು ಬದುಕಿರುವವರೆಗೆ ವಿರೋಧ ಪಕ್ಷದಲ್ಲಿದ್ದುಕೊಂಡು ಕೆಲಸ ಮಾಡಬೇಕೆಂದು ಜನರು ಅಣತಿ ಮಾಡಿದರೆ ಅದನ್ನು ಶಿರಸಾ ವಹಿಸಿ ಮಾಡುತ್ತೇವೆ. ಇವೊತ್ತು ನಾವು ಜನರಿಂದ ಆಯ್ಕೆಯಾದಂಥ ಪ್ರತಿನಿಧಿಗಳು ಕೇವಲ ಜನರ ಮೇಲೆ ಹೊಸ ಹೊಸ ಪ್ರಯೋಗಗಳನ್ನು ಮಾಡುವುದಕ್ಕಿಂತ ಮೊದಲು, ನಿಗಮಗಳನ್ನು ರಚನೆ ಮಾಡಿ, ಅನಂತರ ಕಾರ್ಯರೂಪಕ್ಕೆ ತರುವಂತ ಕಳಕಳಿ, ಆ ಒಂದು ಪೊಲಿಟಿಕಲ್‌ವಿಲ್ ನಿಮ್ಮಲ್ಲಿ ಇಲ್ಲ ಎಂದು ನಾನು ಹೇಳುತ್ತಿದ್ದೇನೆ, ಅದನ್ನು ತಾವುಗಳು ಯೋಚನೆ ಮಾಡಬೇಕು.

ಇನ್ನು ಶಿಕ್ಷಣಕ್ಕೆ ಆದ್ಯತೆ ಎಂದು ಹೇಳಿದ್ದೀರಿ. ಯಾವ ಶಿಕ್ಷಣಕ್ಕೆ ನಿಮ್ಮ ಆದ್ಯತೆ ಸ್ವಾಮಿ ? ಪ್ರೈಮರಿ ಶಾಲೆಗಳ ಅಭಿವೃದ್ಧಿ ಬಗ್ಗೆ ತಾವುಗಳು ಹೇಳಿದ್ದೀರಿ. ಈ ನಿಮ್ಮ 'ಅಕ್ಷರತುಂಗ' ಯೋಜನೆ ಬಗ್ಗೆ ಸಾಮಾನ್ಯ ಹುಡುಗರು ಮಾತನಾಡುವಂಥೆ ಆಗಿದೆ. ಅಕ್ಷರ ತುಂಗಾ ಯೋಜನೆಯಲ್ಲಿ ಮೂರು ಕೋಟಿ ನುಂಗಲಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ಭರಾಟೆಯ ಒಂದು ಪ್ರಚಾರ, ನಿಮಗೆ ಅಧಿಕಾರ ಬಂದು 45 ವರ್ಷಗಳು ಕಳೆದು ಹೋದುವು. ಆದರೆ ಇವೊತ್ತು ಆ ಪ್ರೈಮರಿ ಶಿಕ್ಷಣವನ್ನು ಕೊಡದೇನೆ, ಅವರನ್ನು ಕೈಬಿಟ್ಟು ಹೆಬ್ಬೆಟ್ಟು ಒತ್ತುವವರನ್ನು ಕರೆದುಕೊಂಡು ಬಂದು, ಅಮ್ಮ ಅಪ್ಪ, ರಾಮು, ಬೋರ ಎಂದು ಹೆಸರು ಬರೆಸುತ್ತೇವೆ ಎಂದು ಕೈಹಿಡಿದುಕೊಂಡು ಹೊರಟಿದ್ದೀರಲ್ಲ ? ಅದರಿಂದ ಯಾವ ಸಾಧನೆಯನ್ನು ಮಾಡುತ್ತೀರಿ ? ಅದನ್ನು ಮಾಡಿ, ಬೇಡ ಎನ್ನುವುದಿಲ್ಲ. ಆದರೆ ನಾಳೆಯಿಂದ ಇಲ್ಲಿರುವ ಪ್ರತಿಯೊಂದು ಮಗುವಿಗೂ ಅಕ್ಷರ ಜ್ಞಾನವನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳುತ್ತೀರಾ ? ಆ ಬಗ್ಗೆ ಹೆಜ್ಜೆ ಇಡುತ್ತೀರಾ ? ಆಗ ನಿಮ್ಮ ಕಳಕಳಿಯನ್ನು ನಾವು ಮೆಚ್ಚಿಕೊಳ್ಳುತ್ತೇವೆ. 1991ರಲ್ಲಿ ನಮ್ಮಲ್ಲಿ ಕಪ್ಪು ಹಲಗೆ ಯೋಜನೆಯೊಂದು ಜಾರಿಗೆ ಬಂತು. 6700 ಹೊಸ ಶಾಲೆಗಳನ್ನು ಇದರ ಕೆಳಗೆ ಕಟ್ಟುವುದಕ್ಕೆ ಪ್ರಾರಂಭ ಮಾಡಿದರು. ಅದರಲ್ಲಿ ಎಷ್ಟು ಪೂರ್ಣವಾಗಿದೆ ಎಂದು ಕೇಳಿದ

ಪ್ರಶ್ನೆಗೆ 1585 ಶಾಲೆಗಳು ಪೂರ್ಣವಾಗಿವೆ, ಉಳಿದವುಗಳು ಕೆಲಸ ನಡೆಯುತ್ತಿವೆ ಎಂದು ಹೇಳಿದರು. ಆಗ 6761 ಶಾಲೆಗಳು ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರು ಆದರೆ,ಅದರಲ್ಲಿ 1585 ಶಾಲೆಗಳು ಪೂರ್ಣವಾಗಿವೆ ಎಂದು ಹೇಳುತ್ತೀರಿ. ಆದರೆ ಅಲ್ಲಿ ಕೆಲಸವಾದರೂ ಪ್ರಾರಂಭವಾಗಿದ್ದರೆ ನನಗೆ ದುಃಖವಾಗುತ್ತಿರಲಿಲ್ಲ, ಶಿಕ್ಷಣ ಸಚಿವರು ಬಂದರೆ ನಾನು ನಿಜ ಪರಿಸ್ಥಿತಿಯನ್ನು ತೋರಿಸಿಕೊಡುತ್ತೇನೆ. ಇವೊತ್ತು ಸದನದಲ್ಲಿ ಕೇಳಿದರೆ ಮಾಡುತ್ತೇವೆ ಎಂದು ಹೇಳುತ್ತೀರಿ. ಕೇಂದ್ರ ಸರಕಾರದ ಸಹಾಯವನ್ನು ಪಡೆದು ಕೆಲಸವನ್ನು ಪೂರ್ತಿ ಮಾಡುತ್ತೇವೆ ಎಂದು ಹೇಳುತ್ತೀರಿ. ಅಲ್ಲಿ ಯಾವುದಾದರೂ ಕಟ್ಟಡವಾದರೂ ಇದೆಯೇ ? ಕೇವಲ ಪಾಯ ತೆಗೆದು ಹಣ ತೆಗೆದುಕೊಂಡು ಹೋದವರು ಎಷ್ಟೋ ಜನರು ಇದ್ದಾರೆ. ಹೆಂಚುಗಳನ್ನು ಮಾರಿಕೊಂಡರವರು ಎಷ್ಟೋ ಜನರು ಇದ್ದಾರೆ. ಇವೊತ್ತು ಕಾಂಗ್ರೆಸ್‌ನವರು ಬರಬಹುದು, ನಾಳೆ ಇನ್ನೊಂದು ಸರಕಾರ ಬರಬಹುದು. ನಮ್ಮ ಹೆಸರು ಕೆಡಿಸಿ, ಅಧಿಕಾರವನ್ನು ಮಾಡಿ ಆ ಅಧಿಕಾರಿಗಳ ಮುಷ್ಟಿಯಲ್ಲಿ ಸಿಕ್ಕಿ, ಒದ್ದಾಡುತ್ತಿರುವ ಒಂದು ಪರಿಸ್ಥಿತಿಯು ಇವೊತ್ತೂ ಇದೆಯೇ ವಿನಹ ಇದನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಯಾರಿಗೆ ಬಿಡುವು ಇದೆ ? ಎರಡು ವರ್ಷಗಳಿಂದ ಪರಸ್ಪರ ಕಚ್ಚಾಟ, ಬಡಿದಾಟದಲ್ಲಿ ತಲ್ಲಿನರಾಗಿರಬೇಕಾದರೆ, ಯಾರಿಗೆ ಈ ಬಗ್ಗೆ ಸಮಯ ಇದೆ ? ಒಬ್ಬ ಉಪಮುಖ್ಯಮಂತ್ರಿಗಳಿಗೆ, ಒಬ್ಬ ಮಂತ್ರಿಗಳಿಗೆ, ಯಾವ ಸಮಯದಲ್ಲಿ ಯಾರು ಕಾಲು ಎಳೆಯುತ್ತಾರೋ ಗೊತ್ತಿಲ್ಲ, ಪಕ್ಕದಲ್ಲಿ ಕುಳಿತಿರುವವನು ಯಾವಾಗ ಚೂರಿ ಹಾಕುತ್ತಾನೋ ಎನ್ನುವುದು ಗೊತ್ತಿರದೇ ಇರುವ ಪರಿಸ್ಥಿತಿ ಇಂಥ ಒಂದು ದೊಡ್ಡ ಪಕ್ಷಕ್ಕೆ ಬಂದಿದೆ ಅಂದರೆ, ಇಂಥ ದುಸ್ಥಿತಿಯಲ್ಲಿ ಅದು ಇದ್ದರೆ, ಇನ್ನು ಜನಸಾಮಾನ್ಯರ ಕಷ್ಟ ಪರಿಹಾರವನ್ನು ಮಾಡಲು, ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಇವರಿಗೆ ಸಮಯ ಇದೆಯೆ ?

ಈ ರೀತಿಯಾದ ರಾಜಕೀಯ ಅಸ್ಥಿರತೆ ಏನಿದೆ ಇದನ್ನು ಕೊನೆ ಮಾಡದಿದ್ದರೆ ಇದು ಶಾಲಾ ಕಟ್ಟಡಗಳ ಕಪ್ಪು ಹಲಗೆ ಯೋಜನೆಯಾಗುವುದಿಲ್ಲ. ಮಾನ್ಯ ಶಿಕ್ಷಣ ಸಚಿವರು, ಮಾನ್ಯ ಮುಖ್ಯಮಂತ್ರಿಗಳು, ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಈ ಶಾಲೆಗಳನ್ನು ಪೂರ್ಣ ಮಾಡುವುದಕ್ಕೆ ತಾವು ಏನು ಕಾರ್ಯಕ್ರಮವನ್ನು ರೂಪಿಸಿದ್ದೀರಿ ಅದರ ಬಗ್ಗೆ ಸ್ಪಷ್ಟವಾದಂಥ ಒಂದು ಅಂಕಿಅಂಶಗಳನ್ನು ಕೊಡಬೇಕು. ಈ ಇಲಾಖೆಗೆ ಸಂಬಂಧಪಟ್ಟಂಥ ಅಕ್ಷಯ ಯೋಜನೆಗೆ ಕ್ಷಯ ಹಿಡಿದಿದೆ. 4-5 ತಿಂಗಳಿನಿಂದ ಬಡ ಮಕ್ಕಳಿಗೆ ಶೇಕಡ 80ರಷ್ಟು ಅಟೆಂಡ್‌ಡೆನ್ಸ್ ಇದ್ದರೆ ಅವರಿಗೆ ಒಂದು ರೂಪಾಯಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ ಅದನ್ನು ಕೊಟ್ಟಿಲ್ಲ. ಅದರ ಬಗ್ಗೆ ಸ್ಪಷ್ಟ ಮಾಹಿತಿ ಬೇಕು. ಅದಕ್ಕಾಗಿ ನಾನು ಪುನರಾವರ್ತನೆ ಮಾಡುತ್ತಿದ್ದೇನೆ. ನಿಮ್ಮ ಯೋಜನೆ ಕಾರ್ಯರೂಪಕ್ಕೆ ಬಂದಿದೆಯೋ ಇಲ್ಲವೋ ನಿಮಗೆ ಇದರ ಬಗ್ಗೆ ಕಳಕಳಿ ಇದೆಯೋ ಇಲ್ಲವೊ ಎಂಬುದನ್ನು ತಿಳಿಸಿ. ಮನೆಯಲ್ಲಿದ್ದವರಿಗೆ ಏನೇನೂ ಕೊಡುತ್ತೇವೆಂದು ಬಡಿದೆಬ್ಬಿಸಿದ್ದೀರಿ. ಮಾನ್ಯ ವೀರಪ್ಪಮೊಯಿಲಿಯವರು ಕುಳಿತಲ್ಲಿ ನಿಂತಲ್ಲಿ ಕುಡಿಯುವುದಕ್ಕೆ ನೀರು ಸಿಕ್ಕದೆ ಇದ್ದರೂ ಬಾರ್‌ಗಳನ್ನು ತೆಗೆದಿದ್ದಾರೆ. ಬಡ ಮಕ್ಕಳ ಕೈಗೆ ಉದ್ಯೋಗ ಕೊಡಲಿಲ್ಲ. ಬಾರ್‌ಗಳನ್ನು ತೆಗೆದು ಹೆಂಡ ಕುಡಿಯುವಂಥ ಅಭ್ಯಾಸ ಮಾಡಿಸಿದ್ದೀರಿ. ಯುವಕರಿಗೆ ಕುಡಿಯುವ ಅಭ್ಯಾಸ ಬೆಳೆಸಿದ್ದೀರಿ. ನಿರುದ್ಯೋಗಿ ಯುವಕರಿಗೆ ಬೇರೆ ಉದ್ಯೋಗ ಕೊಟ್ಟು ಗೌರವದಿಂದ ಬದುಕುವಂತಹ ಕಾರ್ಯಕ್ರಮ ಏನಾದರೂ ರೂಪಿಸುತ್ತೀರೇನು ? ಅದರ ಬಗ್ಗೆ ಕಾರ್ಯಕ್ರಮವೇನಾದರೂ ಇದೆ ಏನು ? ಕೇವಲ ಹೊಸ ಹೊಸ ಘೋಷಣೆಗಳನ್ನು ಮಾಡುವುದರಿಂದ ಯಾವುದೇ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಹರಿಜನ ಗಿರಿಜನರ ಅಭಿವೃದ್ಧಿ ಬಗ್ಗೆ ನೀವು ಮಾಡಿದ್ದು ಏನು ? ವಿಶ್ವವಿದ್ಯಾನಿಲಯದಿಂದ ಹೊರಬಂದು ಎಸ್.ಸಿ., ಎಸ್.ಟಿ., ಮೆರಿಟ್ ಸ್ಟೂಡೆಂಟ್ಸ್‌ಗೆ ಉತ್ತಮವಾದ ಉದ್ಯೋಗವಕಾಶಗಳನ್ನು ಕೊಡುತ್ತೇವೆಂದು ಹೇಳಿದವರು ನೀವೇ ತಾನೆ, ಈಗ ನೀವು ಎಷ್ಟು ಜನರಿಗೆ ಉದ್ಯೋಗ ಕೊಟ್ಟಿದ್ದೀರಿ ? ಎಷ್ಟು ಜನರನ್ನು ಗೆಜೆಟೆಡ್ ಆಫೀಸರ್ ಮಾಡಿದ್ದೀರಿ ? ಅವರ ಬಾಯಿಗೆ, ತುಟಿಗೆ ತುಪ್ಪ ಹಚ್ಚಿ

ನಿಮ್ಮನ್ನು ಉದ್ಧಾರ ಮಾಡುವ ರಕ್ಷಕರು ನಾವು ಎಂದು ಹೇಳಿಕೊಂಡು, ಅವರಿಗೆ ವಂಚನ ಮಾಡುವುದರಲ್ಲೀ ಯಶಸ್ವಿಯಾಗಿದ್ದೀರಿ. ಅವರಿಗೆ ಪ್ರಾಮಾಣಿಕವಾಗಿ ನ್ಯಾಯವನ್ನು ಒದಗಿಸುವಂಥ ಪ್ರಯತ್ನವನ್ನು ಇದುವರೆಗೂ ಮಾಡಿಲ್ಲ. ಡಾ।। ಅಂಬೇಡ್ಕರ್ ಭವನದ ಸ್ಥಿತಿ ಏನಾಗಿದೆ. ಇದನ್ನು ಯಾರಾದರೂ ಮಂತ್ರಿಮಂಡಲದ ಸಭೆಯಲ್ಲಿ ಕೇಳಿದ್ದೀರಾ ?

ಎಸ್.ಸಿ. ಜನಾಂಗದಿಂದ ಮಂತ್ರಿ ಸ್ಥಾನ ಸಿಕ್ಕ ಮೇಲೆ ಆ ಮಕ್ಕಳ ಅಭಿವೃದ್ಧಿ ಬಗ್ಗೆ ಎಂದಾದರೂ ಕಳಕಳಿಯನ್ನು ವ್ಯಕ್ತಪಡಿಸಿದ್ದೀರಾ ? ಡಾ।। ಅಂಬೇಡ್ಕರ್ ಶತಾಬ್ದಿಯ ಸಂದರ್ಭದಲ್ಲಿ ಅವರ ಜ್ಞಾಪಕಾರ್ಥವಾಗಿ 100 ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇನ್ನು ಆ ಮನೆಗಳನ್ನು ಕಟ್ಟಿಲ್ಲ. ಮಾನ್ಯ ಮುಖ್ಯಮಂತ್ರಿಗಳು 20 ಮನೆಗಳು ಕಟ್ಟಿದ್ದೇವೆಂದು ಉತ್ತರ ಕೊಡುತ್ತಾರೆ. ಪ್ರತಿ ತಾಲ್ಲೂಕಿಗೆ 100 ಮನೆಗಳನ್ನು ಕೊಡಬೇಕಾಗಿತ್ತು. 175 ತಾಲ್ಲೂಕುಗಳಿಗೆ ತಲಾ ನೂರು ಮನೆಗಳು ಎಂದರೆ ಎಷ್ಟಾಗಬೇಕಾಗಿತ್ತು ? ನಾವು ಫೆಬ್ರವರಿ ಎಂಡ್‌ನಲ್ಲಿ ಬಂದಿದ್ದೇವೆ. 20 ಮನೆಗಳನ್ನು ಕಟ್ಟಿದ್ದಾರೆ. ಹರಿಜನರ ಬಗ್ಗೆ ಬಡವರ ಬಗ್ಗೆ ಕಾರ್ಯಕ್ರಮಗಳು ಇವೆ ಏನು ? ಆಶ್ರಯ ಯೋಜನೆಯಲ್ಲಿ ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿ ಕೊಡಿ ಎಂದು ನಾವು ಹೇಳಿದ್ದೇವೆ ನಿಮ್ಮ ಹತ್ತಿರ ಹಣ ಇಲ್ಲವೆಂದರೆ ಏಕೆ ಹೇಳಿದ್ದೀರಿ ? ಶಾಸಕರಾದ ನಮ್ಮನ್ನು ಕರೆದುಕೊಂಡು ಸಮಿತಿ ಮಾಡಿ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಸಾವಿರ ಜನರ ಬೆನಿಫಿಷಿಯರ್ ಪಟ್ಟಿ ಮಾಡಿದೆವು. ಇದನ್ನು ಜಿಲ್ಲಾ ಅಧಿಕಾರಿಗಳು ಕಳುಹಿಸಿ ವರ್ಷವಾಯಿತು. ಅವರು ಗುಡಿಸಲು ಕಿತ್ತುಕೊಂಡು ಮನೆಗಳು ಆಗುತ್ತದೆಂದು ಕಾಯುತ್ತಿದ್ದಾರೆ. ಈಗ 500 ಮನೆಗಳನ್ನು ಕೊಡಿ ಎಂದು ಹೇಳುತ್ತೀರಾ ಹೇಗೆ 500 ಮನೆಗಳ ಪಟ್ಟಿಯನ್ನು ಕೊಡುವುದು. ಒಂದು ಹೇಳಿದ ಮೇಲೆ ಅದನ್ನು ಪೂರ್ಣ ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಇಲ್ಲದಿದ್ದರೆ ಈ ವರ್ಷ ದುಡ್ಡು ಇಲ್ಲ ಒಂದು ಮನೆಯನ್ನು ಕಟ್ಟುವುದಿಲ್ಲ, ಮ್ಯಾಗ್‌ಸಿಮಮ್ ಈ ವರ್ಷ ಸರ್ಕಾರ ಮನೆಗಳನ್ನು ಕಟ್ಟಿದೆ ಎಂದು ಹೇಳಬೇಕಾಗಿತ್ತು. ನಾವು ಶಿಕಾರಿಪುರ ತಾಲ್ಲೂಕಿನಲ್ಲಿ ಸಾವಿರ ಜನರ ಬೆನಿಫೀಸಿಯರ್ ಲಾಟರಿ ಎತ್ತಿ 500 ಜನರನ್ನು ತೆಗೆದುಕೊಟ್ಟ ನಮ್ಮ ಶಾಸಕರು ಅಧ್ಯಕ್ಷರು ನಮ್ಮ ತಾಲ್ಲೂಕು ಪಂಚಾಯಿತಿಯ ಸಮಿತಿಗಳಲ್ಲಿ ಆಶ್ರಯ ಯೋಜನೆಗೆ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಪ್ರತಿ ತಾಲ್ಲೂಕಿಗೆ ಸಾವಿರ ಮನೆಗಳನ್ನು ಕಟ್ಟಿಕೊಡುತ್ತೇವೆಂದು ಹೇಳಿದಾಗ ಬೆನಿಫೀಷಿಯರ್ ಪಟ್ಟಿ 2 ವರ್ಷಗಳದ್ದು ಕೊಟ್ಟೆವು. ಈ ವರ್ಷದ್ದು ಮತ್ತು ಹೋದ ವರ್ಷದ್ದು. ಮತ್ತೆ ಬಂಗಾರಪ್ಪನವರು ಒಂದು ಸುತ್ತೋಲೆಯನ್ನು ಅವರು ಅಧಿಕಾರವನ್ನು ಬಿಟ್ಟು ಕೊಡುವ ಕಾಲದಲ್ಲಿ ಕಳುಹಿಸಿದರು. ಈ ವರ್ಷದ್ದು, ಮುಂದಿನ ವರ್ಷದ್ದು, ಸಾವಿರ ಜನರ ಬೆನಿಫಿಸಿಯರ್ ಪಟ್ಟಿಯನ್ನು ತರಬೇಕೆಂದು ಹಳ್ಳಿಹಳ್ಳಿಗೂ ಹೋದೆವು. ಸಮಿತಿಯ ಸದಸ್ಯರು ಹೋದ ವರ್ಷದ್ದು ಸಾವಿರ ಜನರದ್ದು, ಈ ವರ್ಷದ ಸಾವಿರ ಜನರದ್ದು ಮನೆಗಳ ಪಟ್ಟಿಯನ್ನು ಕೊಟ್ಟರು. ಇದರಲ್ಲಿ ಅವರವರೇ ಕಮೀಷನ್ ವ್ಯಾಪಾರದಲ್ಲಿ ಅದನ್ನು ಹಂಚಿಕೊಂಡಿದ್ದಾರೆ. ಅದಕ್ಕೆ ನಾನು ಹೋಗುವುದಿಲ್ಲ, ಯಾರನ್ನೂ ಟೀಕೆ ಮಾಡುವುದಕ್ಕೆ ನಾನು ಇಚ್ಛಿಸುವುದಿಲ್ಲ. ಮುಖ್ಯಮಂತ್ರಿಗಳು 2 ಲಕ್ಷದ 35 ಸಾವಿರ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ಕೊಟ್ಟಿರುವಂಥದ್ದು 1,579 ಮನೆಗಳು ಮಾತ್ರ. ಅಕ್ಷಯ ಯೋಜನೆಯಲ್ಲಿ ಬೇಕು ಬೇಕಾದವರಿಗೆ 26 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಶಿವಮೊಗ್ಗ ಜಿಲ್ಲೆಯಲ್ಲಿ ಬೇಕಾಗಿರುವವರಿಗೆ ಹಣವನ್ನು ಬಿಡುಗಡೆ ಮಾಡುತ್ತಿದ್ದಾರೆ. ಆ ಹಣವನ್ನು ಹಾಗೆ ಕೊಟ್ಟು ಹೀಗೆ ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ನಾಗರಾಜು ಎಂಬುವನು ಇದ್ದಾರೆ. ಅವನು ಹೇಳುತ್ತಾನೆ ಇವನಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾನೆ. ಇದರ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿಸುತ್ತೀರಾ ?

ಶ್ರೀ ವಾಟಾಳ್ ನಾಗರಾಜ್:– ಅದು ಸಿ.ಬಿ.ಐ. ಅಲ್ಲ. ಸಿ.ಓ.ಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಿ.ಓ.ಡಿ ಹಾಗಾದರೆ ಅದು ಓ.ಓ.ಡಿ. ಆಗುತ್ತದೆ. ಅಕ್ಷಯ ಯೋಜನೆಯಲ್ಲಿ ಯಾರಿಗೆ ಅಡ್ವಾನ್ಸ್ ಕೊಟ್ಟಿದ್ದಾರೆ. ಅವರ ಅಡ್ರೆಸ್ ಸಹ ಸಿಗುತ್ತಿಲ್ಲ. ಕೆಲಸ ಮಾಡಿ ವರ್ಷಗಳಾದರೂ ಕಂಟ್ರಾಕ್ಟರ್‌ಗಳಿಗೆ ದುಡ್ಡು ಸಿಗುತ್ತಿಲ್ಲ. ಮನೆಗಳನ್ನು ಕಟ್ಟುವುದಕ್ಕೆ ಮುಂಚೆಯೇ 26 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಶಸ್ತ್ರ ಚಿಕಿತ್ಸೆ ಮಾಡುತ್ತೇವೆ, ಮೇಜರ್ ಶಸ್ತ್ರಚಿಕಿತ್ಸೆ ಮಾಡುತ್ತೇವೆ ಎಂದು ಹೇಳಿ, ಎಷ್ಟು ಜನರನ್ನು ಜೈಲಿಗೆ ಕಳುಹಿಸಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ಕೊನೆಗೂ ಅವರು ಒಂದನ್ನಾದರೂ ಮೆಚ್ಚಿಕೊಂಡು ಬಿಟ್ಟರು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ ನನಗೆ ಗೊತ್ತಿದೆ ಅವರೇ ಈ ಕಂಟ್ರಾಕ್ಟರ್‌ಗಳನ್ನು ಕರೆದರು, 15 ಸಾವಿರದಲ್ಲಿ ಮನೆ ಕಟ್ಟುವುದಕ್ಕೆ ಆಗುವುದಿಲ್ಲ. 20 ಸಾವಿರ ಬೇಕು ಎಂದು ಅರ್ಜಿಗಳನ್ನು ತರೆಸಿಕೊಂಡರು. ಎಂಥಹ ನಾಚಿಕೆಗೇಡಿನ ಸ್ಥಿತಿ, ಬೇಕು ಬೇಕಾದವರಿಗೆ ದುಡ್ಡು ಕೊಟ್ಟು ಆ ದುಡ್ಡನ್ನು ಹಿಂಬಾಗಿಲಿನಿಂದ ತೆಗೆದುಕೊಂಡರು. ನಮ್ಮ ಕೆ.ಎಸ್.ಆರ್.ಟಿ.ಸಿ. ಸಚಿವರು ಬರುತ್ತಿದ್ದಾರೆ, ಮಂತ್ರಿಗಳಾದ ತಕ್ಷಣ ಹೊಸ ಬಾಡಿಗೆ ಕಟ್ಟುವುದಕ್ಕೆ ವಾಸಿಗಳು ಬಂದ ತಕ್ಷಣ ಮುವತ್ತರಿಂದ ಮೂವತ್ತೈದು ಸಾವಿರಕ್ಕಿಂತ ಹೆಚ್ಚು ಟೆಂಡರ್ ಕರೆದು ಯಾರ್‍ಯಾರಿಗೆ ಒಳಗೆ ಕೊಟ್ಟು ಬಿಟ್ಟಿದ್ದಾರೆ, ಅದನ್ನು ರದ್ದು ಮಾಡಿದ್ದೇನೆ ಎಂದು ಹೇಳಿದರು. ಅದನ್ನು ರದ್ದು ಮಾಡಿದರೆ ಆಯಿತಾ ? ಜಾಸ್ತಿ ಕೊಟ್ಟಂತವರ ಕೈ ಕತ್ತರಿಸುತ್ತೀರಾ ? ಪನಿಷ್ ಮಾಡುತ್ತೀರೇನು. ಸ್ವಾಮಿ ರಾಜಕೀಯ ಅಪರಾಧಿಗಳಿಗೆ ಕ್ರಿಮಿನಲ್ ಪ್ರೊಸಿಜರ್ ಕೋಡ್ ಪ್ರಕಾರ ಎಲ್ಲಿಯವರೆಗೆ ಶಿಕ್ಷೆ ಆಗುವುದಿಲ್ಲ ತಪ್ಪು ಯಾವನೇ ಮಾಡಿರಲಿ ಅವನ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುವಂತ ವ್ಯವಸ್ಥೆ ಎಲ್ಲಿಯವರೆಗೆ ಬರುವುದಿಲ್ಲ ಅಲ್ಲಿಯವರೆಗೆ ಚುನಾಯಿತ ಪ್ರತಿನಿಧಿಯೆಂದು ಹೇಳಿಕೊಂಡು ಜನರ ರಕ್ತ ಹೀರುವ ಪ್ರವೃತ್ತಿ ಏನು ಇದೆ. ಅದು ಮುಂದುವರೆದುಕೊಂಡು ಹೋಗುತ್ತದೆ. ಮುಂದಿನ ಪೀಳಿಗೆ ನಮ್ಮನ್ನು ಕ್ಷಮಿಸುವುದಿಲ್ಲ, ದೊಡ್ಡ ದೊಡ್ಡ ಭಾಷಣ ಮಾಡುತ್ತೇವೆ. ಮಾತನಾಡುತ್ತೇವೆ, ಒಬ್ಬ ಮುಖ್ಯಮಂತ್ರಿಯನ್ನು ಮಾಡಿದರೆ ಅವನ ಕಾಲು ಎಳೆಯುವ ಪ್ರಯತ್ನ ಮಾಡುತ್ತೇವೆ. ಇದ್ದಾಗ ಒಂದು ತರಹ ಬಿಟ್ಟಾಗ ಒಂದು ತರಹ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನಿಮಗೆ ಏನಾಗಿದೆ ಎಂದರೆ ನೀವು ಯಾವಾಗಲೂ ವಿರೋಧಪಕ್ಷದಲ್ಲಿ ಇದ್ದೀರ ನೋಡಿ ನಿಮಗೆ ಆಡಳಿತ ಪಕ್ಷದ್ದು ಗೊತ್ತಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅದು ನಿಜ. ನಮಗೆ ಗೊತ್ತಾಗುವುದೂ ಬೇಡ. ನಿಮ್ಮ ಪರಿಸ್ಥಿತಿ ನೀವು ಹೇಳುತ್ತೀರ. ಸತ್ಯ ಹೇಳಿದರೆ ನಾನು ಯಾಕೆ ಬೇಸರ ಮಾಡಿಕೊಳ್ಳಲಿ. ಆದರೆ ಸಿಂಧ್ಯರವರೇ, ಆ ಕಡೆ ಇರುವ ಉಪ ಮುಖ್ಯಮಂತ್ರಿಗಳು ಮರೆಯಬಾರದು. ಕರ್ನಾಟಕದಲ್ಲಿ 3ನೇ ಮುಖ್ಯಮಂತ್ರಿಗಳು ಅವರು. ಯಾವುದಾದರೂ ಒಂದು ರಾಜ್ಯದಲ್ಲಿ ಒಬ್ಬ ಮುಖ್ಯಮಂತ್ರಿ 5 ವರ್ಷ ಇದ್ದವರನ್ನು ಹೇಳುತ್ತೀರಾ ? ನಾವು ನಾಲ್ಕು ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದೇವು. ಮಂತ್ರಿಗಿರಿಗೆ ಕಚ್ಚಾಡಿದ್ದು ನೋಡಿದ್ದೀರ ? ಮುಖ್ಯಮಂತ್ರಿಯನ್ನು ಬದಲಾವಣೆ ಮಾಡಿದ್ದು ನೋಡಿದ್ದೀರ ? ಸ್ವಾಮಿ ಎಲ್ಲಿಯವರೆಗೆ ಒಬ್ಬ ಮುಖ್ಯಮಂತ್ರಿ ಸ್ವತಂತ್ರವಾಗಿ 4–5 ವರ್ಷ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಬದಲಾವಣೆ ಆಗಬಾರದೆಂದು ನಾನು ಹೇಳುವುದಿಲ್ಲ ಒಂದು ವ್ಯವಸ್ಥೆ ಇದ್ದರೆ ಬೇಡ ಎಂದು ಹೇಳುವುದಿಲ್ಲ. ಆದರೆ ಅಪರಾಧ ಮಾಡಿದ ಎಂದು ಅವರನ್ನು ಬದಲಾಯಿಸಿ ಇನ್ನೊಬ್ಬರನ್ನು ತರುವ ಪರಿಸ್ಥಿತಿ ಕಾಂಗ್ರೆಸ್‌ಗೆ ಬಂದಿದೆ. ಇದೊಂದೇ ಅಲ್ಲ ಸ್ವಾಮಿ, ಒರಿಸ್ಸಾದಲ್ಲಿ ಮುಖ್ಯಮಂತ್ರಿ ಜೊತೆಗೆ ಕಾಂಗ್ರೆಸ್ ಅಧ್ಯಕ್ಷರ ಬಡಿದಾಟ ಪ್ರಾರಂಭವಾಯಿತು. ಮಹಾರಾಷ್ಟ್ರದಲ್ಲಿ ವಸಂತ್‌ದಾದಾ ಪಾಟೀಲ್, ಶರದ್ ಪವಾವರ್, ಸುಧಾಕರ್ ನಾಯಕ್ ಆಯಿತು. ಈಗ ಇರುವವರು ರಾಜೀನಾಮೆ ಕೊಟ್ಟು ಆಯಿತು. ಇನ್ನು ಯಾರು ಬರುತ್ತಾರೋ, ಯಾರು ಹೋಗುತ್ತಾರೋ ಗೊತ್ತಿಲ್ಲ. ಆಂಧ್ರದಲ್ಲಿ ಚೆನ್ನಾರೆಡ್ಡಿ

ಆಯಿತು. ಜನಾರ್ಧನ ರೆಡ್ಡಿ ಆಯಿತು ವಿಜಯ ಭಾಸ್ಕರ ರೆಡ್ಡಿ ಬಂದಿದ್ದಾರೆ. ಇನ್ನು ಯಾರು ಬರುತ್ತಾರೋ ಗೊತ್ತಿಲ್ಲ. ಗುಜರಾತ್‌ನಲ್ಲಿ ಜನತಾ ದಳದ ನಮ್ಮ ಸ್ನೇಹಿತರು ಮುಖ್ಯಮಂತ್ರಿಗಳಾಗಿದ್ದರು. ಸಿಂಧ್ಯಾರವರೇ, ಚಿಮನ್‌ಬಾಯಿ ಪಾಟೀಲ್ ಕಾಂಗ್ರೆಸ್‌ನಲ್ಲಿ ಇದ್ದರು. ಇಲ್ಲಿ ಬಂದರು ಮುಖ್ಯಮಂತ್ರಿ ಆದರು ಅವರನ್ನು ಕಾಂಗ್ರೆಸ್‌ಗೆ ಹೊತ್ತುಕೊಂಡು ಹೋಗಿ ಬಿಟ್ಟರು ನಿಮ್ಮವರು. ಆ ಪರಿಸ್ಥಿತಿ ಅಲ್ಲಿದೆ ಸ್ವಾಮಿ. ಭಾರತೀಯ ಜನತಾ ಪಾರ್ಟಿಯ ಬಗ್ಗೆ ಟೀಕೆ ಮಾಡುತ್ತಿರಲ್ಲ. ನಮ್ಮ ನೀತಿ ಸಿದ್ಧಾಂತಗಳ ಬಗ್ಗೆ ಕೇಳುತ್ತೀರಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ ನಾವೇನು ಸತ್ಯ ಹರಿಶ್ಚಂದ್ರರು ಎಂದು ಹೇಳುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ನಾನು ಒಪ್ಪಿಕೊಳ್ಳುತ್ತೇನೆ. ಚಿಮಣ್‌ಬಾಯಿ ನಮ್ಮ ಪಕ್ಷದಲ್ಲಿದ್ದರು. ಮತ್ತೊಂದು ಪಕ್ಷ ಮಾಡಿದರು ಮತ್ತು ಕಾಂಗ್ರೆಸ್‌ನಲ್ಲಿ ಸೇರಿದರು ನಾನು ನಿಮಗೆ ಕೇಳುತ್ತೇನೆ. ಉತ್ತರ ಪ್ರದೇಶದಲ್ಲಿ ನಿಮ್ಮ ಸರ್ಕಾರ ಇತ್ತು. ಮಧ್ಯಪ್ರದೇಶದಲ್ಲಿ ಇತ್ತು. ಈ ಎರಡು ರಾಜ್ಯದಲ್ಲಿ ನಿಮ್ಮ ಪಕ್ಷದಲ್ಲಿ ಕಚ್ಚಾಟ ಇರಲಿಲ್ಲವೆ, ಅಧಿಕಾರದ ಸಲುವಾಗಿ ಗಲಾಟೆ ಆಗಿಲ್ಲವೆ, ಮುಖ್ಯಮಂತ್ರಿಗಳ ಮೇಲೆ ನಿಮ್ಮ ಶಾಸಕರು ಅಪಾದನೆ ಮಾಡಲಿಲ್ಲವೆ, ಏಕೆ ಮಾಡಲಿಲ್ಲ? ಅವರು ಅಧಿಕಾರದ ಸಲುವಾಗಿ ಮಾಡಿದರು. ಹಾಗಾಗಿ ನೀವು ಈ ಮಾತನ್ನು ಹೇಳುವುದಕ್ಕೆ ಹೋಗಬೇಡಿ ನಿಮ್ಮವರು, ನಿಮ್ಮವರು ಎಂದು, ಮೊದಲಿಗೆ ನಿಮ್ಮ ಮನೆ ಸರಿಪಡಿಸಿಕೊಳ್ಳಿ, ನಿಮ್ಮ ಮನೆ ಸರಿಪಡಿಸಿಕೊಂಡು ನಮ್ಮ ಮನೆಯಲ್ಲಿ ಇಂಥ ಯಾವುದೇ ಗಲಾಟೆ ಇಲ್ಲವೆಂದು ಹೇಳಿ, ಹಾಗಾಗಿ ಯು.ಪಿ.ನಲ್ಲಿ ಏನಾಯಿತು, ನಿಮ್ಮ ಮುಖ್ಯಮಂತ್ರಿಗಳು ಏಕೆ ಚಾರ್ಜಸ್ ಮಾಡಿದರು. ರಾಜಾಸ್ಥಾನದಲ್ಲಿ ಎಷ್ಟು ಜನರನ್ನು ಸೇರಿಸಿಕೊಂಡಿರಿ ? ಮೊನ್ನೆ ಅಸೆಂಬ್ಲಿ ಡಿಸಾಲ್ವ್ ಆದ ನಂತರ ಕೆಲವು ಕಾಂಗ್ರೆಸ್ ಜನತಾದಳ ಏಕೆ ಜನರನ್ನು ಸೇರಿಸಿಕೊಂಡಿರಲ್ಲ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈ ದೇಶದಲ್ಲಿ ಪ್ರಾಥಮಿಕವಾಗಿ ರಾಜಕೀಯ ಮಾಡಿ ಜನಹಿತ ಮಾಡತಕ್ಕಂತಹ ಕಳಕಳಿ ಇರುವಂತಹ ವ್ಯಕ್ತಿಗಳು ಆ ಕಡೆಗೆ ಯಾರು ಇದ್ದಾರೆ, ಈ ಕಡೆಗೆ ಯಾರು ಇದ್ದಾರೆ ಅವರು ಭಾರತೀಯ ಜನತಾ ಪಕ್ಷಕ್ಕೆ ಬರಲೇಬೇಕು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ನೀವು ಹೇಳುವುದರಲ್ಲಿ ಸತ್ಯ ಇದೆ. ಇವೊತ್ತು ಭಾರತೀಯ ಜನತಾ ಪಕ್ಷ ಉತ್ತಮವಾಗಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ ದೇಶಪಾಂಡೆಯವರಿಗೆ ಸಮಾಧಾನವಾಗಿದೆ.

ಶ್ರೀ ಎ.ಕೆ. ಅನಂತಕೃಷ್ಣ:– ರಾಜ್ಯಪಾಲರ ಭಾಷಣದ ವಿಷಯದ ಮೇಲೆ ಮಾತನಾಡದೆ, ಬರೀ ರಾಜಕೀಯ ಭಾಷಣ ಮಾಡುತ್ತಾ ಹೋದರೆ ನಮಗೆ ಅವಕಾಶ ಸಿಗುತ್ತದೆಯೋ ಇಲ್ಲವೋ, ನಿನ್ನೆ ಪ್ರಾರಂಭವಾಗಿದ್ದುದು ಇನ್ನೂ ಮುಗಿದಿಲ್ಲ. ಆದ್ದರಿಂದ ತಾವು ದಯವಿಟ್ಟು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ, ನಮಗೂ ಮಾತನಾಡುವುದಕ್ಕೆ ಒಂದಿಷ್ಟು ಅವಕಾಶ ಸಿಗಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ ಆಯಿತು ಬೇಗ ಮುಗಿಸುತ್ತೇನೆ. ಕೊನೆಯದಾಗಿ ಇನ್ನು ನಾಲ್ಕೈದು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ದೇಶಪಾಂಡೆಯವರೇ ನೀವು ಹೇಳಿರುವುದು ನಿಜ. 45 ವರ್ಷಗಳಲ್ಲಿ ರಾಜಕಾರಣಿಗಳು ಎಷ್ಟು ಕುಲಗೆಡಿಸಿಬಿಟ್ಟಿದ್ದಾರೆಂದರೆ, ಅವನು ಎಲ್ಲಿ ಬಂದರೂ ಕುರ್ಚಿಗೋಸ್ಕರ ಬಡಿದಾಡುವಂತಹ ಒಂದು ವಿಚಿತ್ರವಾದಂತಹ ಪರಿಸ್ಥಿತಿಗೆ ತಂದಿರುವಂತಹ ಶ್ರೇಯಸ್ಸು ನಿಮ್ಮಿಬ್ಬರಿಗೆ ಹೋಗಬೇಕಾಗಿದೆ.

(ಗೊಂದಲ)

ನಮ್ಮಲ್ಲಿಯೂ ಗಲಾಟೆ ಇದೆ. ನಾನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ ನಾನು ನಿಮ್ಮನ್ನು ಕೇಳುತ್ತೇನೆ ನಮ್ಮಲ್ಲಿ ಆ ಗಲಾಟೆಯನ್ನು ಜೀರ್ಣ ಮಾಡಿಕೊಳ್ಳುವಂತಹ ಶಕ್ತಿ ಇದೆ ಎಂದರೆ ತಾವು ಒಪ್ಪುತ್ತೀರೇನು ?

ಮುಖ್ಯಮಂತ್ರಿಗಳ ಜೊತೆಗೆ ಎಳೆದಾಡಿದರು ಎಂದು ಹೇಳಿದಿರಿ, ನಾನು ಇಲ್ಲ ಅಂತ ಹೇಳುವುದಿಲ್ಲ, ಮುಂದೆ ಬರುವುದಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಕೊನೆಯ ಪಕ್ಷ ನಾವು ಮೇಜರ್ ಸರ್ಜರಿ ಮಾಡುತ್ತೇವೆ ಎಂದು ಹೇಳಿದರು ವೀರಪ್ಪ ಮೊಯಿಲಿಯವರು, ಅವರ ಕೈಯಲ್ಲಿ ಏನಾಗುತ್ತದೆ ನಾವು ಮಾಡಿರುವುದು. ಸಂದರ್ಭ ಬಂದಾಗ ಅವನು ಎಷ್ಟೇ ದೊಡ್ಡವನಿರಬಹುದು. ಸಂಘಟನೆ ಮುಖ್ಯ, ತತ್ವ, ನೀತಿ, ಸಿದ್ಧಾಂತಗಳನ್ನು ಒಪ್ಪಿಕೊಳ್ಳದೇ ಕುರ್ಚಿಗಾಗಿ ಹೊಡೆದಾಡುವಂತಹ ವ್ಯಕ್ತಿ ಅವನು ಎಷ್ಟೇ ದೊಡ್ಡವನಿದ್ದರೂ ಸಹ ಇನ್ನು 5 ವರ್ಷ ಹಿಂದೆ ಹೋದರೂ ಪರವಾಗಿಲ್ಲ ಅವನು ಅದನ್ನು ಟಾಲರೇಟ್ ಮಾಡುವಂತಹ ಪ್ರಯತ್ನ ಮಾಡುತ್ತಿಲ್ಲ. ಅವರಲ್ಲೂ ಇರಬಹುದು ವಿಶೇಷವಾಗಿ, ನಾನು ಬಿಜೆಪಿಯವರು ಸತ್ಯಹರಿಶ್ಚಂದ್ರರು ಎಂದು, ಸತ್ಯವಾಗಿ ಈ ಮಾತನ್ನು ಹೇಳುತ್ತಿಲ್ಲ. ನಮ್ಮಲ್ಲೂ ಅನೇಕ ಕೊರತೆಗಳಿವೆ. ಇವೊತ್ತಿನ ಅಗತ್ಯಕ್ಕೆ ತಕ್ಕಂತೆ ಸರಿಪಡಿಸಿಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನ ನಾವೆಲ್ಲರೂ ಮಾಡಬೇಕಾಗುತ್ತದೆ. ಏನು ತಪ್ಪಿಲ್ಲ, ನಾವು ತಪ್ಪೇ ಮಾಡಿಲ್ಲ ಎನ್ನುವ ಈ ಮಾತನ್ನು ಎಂದೂ ಹೇಳಿಲ್ಲ, ಹೇಳುವುದಿಲ್ಲ, ಹೇಳುವುದಕ್ಕೆ ಸಾಧ್ಯವಿಲ್ಲ. ಇಷ್ಟು ಈ ಸಂದರ್ಭದಲ್ಲಿ ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ ಈ ಕಾಂಗ್ರೆಸ್ ಪಕ್ಷಕ್ಕೆ ಒಂದು ಆರ್ಥಿಕ ನೀತಿ 45 ವರ್ಷಗಳಲ್ಲಿ ಇಲ್ಲ ಎಂದು ಕಾಣುತ್ತದೆ. ಕೇವಲ ಒಂದು ಪ್ರಯೋಗ ಮಾಡಿಕೊಂಡು ಇವೊತ್ತು ಒಂದು ರೀತಿಯಿಂದ ದೇಶವನ್ನು ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿಸುವಂಥ ಪ್ರಯತ್ನ ಮಾಡಿದ್ದಾರೆ. ಮಹಾತ್ಮಾ ಗಾಂಧೀಜಿಯವರು ಈ ವಿದೇಶಿ ಬಟ್ಟೆಗಳನ್ನು ಸುಟ್ಟು ಹಾಕುವುದರ ಮೂಲಕ ಈ ಸ್ವದೇಶಿ ವಿಚಾರಕ್ಕೆ ಹೆಚ್ಚು ಮಹತ್ವ ಕೊಟ್ಟರು, ಖಾದಿಗೆ ಪ್ರಾಮುಖ್ಯತೆಯನ್ನು ಕೊಟ್ಟರು. ಆದರೆ ನೀವು ಸಮಾಜವಾದದ ಹೆಸರಿನಲ್ಲಿ ನಡೆದುಕೊಂಡು ಬಂದ ರೀತಿ ಏನು ? ಏನಾದರೂ ಸ್ಪಷ್ಟವಾದಂತಹ, ಯಾವುದಾದರೊಂದು ಚಿತ್ರ ಇದೆಯೇ ನಿಮಗೆ ? ಸಾರ್ವಜನಿಕ ಉದ್ಯಮಗಳ ಬಗ್ಗೆ ಖಾಸಗೀಕರಣ ಮಾಡಬೇಕು ಅಥವಾ ರಾಷ್ಟ್ರೀಕರಣ ಮಾಡಿರುವುದು ಮುಂದುವರಿಯಬೇಕೋ ? ಎನ್ನುವ ದ್ವಂದ್ವದಲ್ಲಿದ್ದೀರಿ. ಈಗ ಲಿಬರಲೈಸೇಶನ್ ಪಾಲಿಸಿ ಇದೆ, ಅದು ಏನು ಎಂದು ಗೊತ್ತಿಲ್ಲ, ಸ್ಪಷ್ಟವಾಗಿಲ್ಲ, ನಿಮಗೆ ಒಂದು ಉದಾಹರಣೆ ಕೊಡುತ್ತೇನೆ. ಕೆ.ಎಸ್.ಆರ್.ಟಿ.ಸಿ.ಯ ನಿಮ್ಮ ಸಚಿವರು ಇಲ್ಲಿದ್ದಾರೆ. ಸ್ವಾಮಿ ಪ್ರೈವೇಟ್‌ಓನರ್ಸ್ ನಮ್ಮ ಮಕ್ಕಳು ಮರಿಯ ಮದುವೆ, ಮುಂಜಿಗಳಿಗೆ ಅವರು ಬಸ್ಸುಗಳನ್ನು ಕಳುಹಿಸುತ್ತಿದ್ದರು. ಅದನ್ನು ರದ್ದು ಮಾಡಿದ್ದೀರಿ. ಪ್ರವಾಸಿಗರಿಗೆ ತೊಂದರೆ ಮಾಡಿದ್ದೀರಿ. ನಿಮಗೆ ಬಸ್ ಕೊಡುವಂತಹ ಶಕ್ತಿ ಇಲ್ಲ. ಆ ವ್ಯವಸ್ಥೆ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ಅದನ್ನ ನಮಗೆ ಬೇಕು ಎಂದು ವಹಿಸಿಕೊಂಡಿದ್ದೀರಿ, ಈಗ ಅದರಲ್ಲಿ ವಿಫಲರಾಗುತ್ತಾ ಇದ್ದೀರಿ. ಈಗ ಮತ್ತೇ ಸಾರ್ವಜನಿಕರಿಗೆ ಮತ್ತು ಪ್ರೈವೇಟ್ ಓನರ್ಸ್‌ರವರಿಗೆ ಕೊಡಬೇಕು ಎಂದು ತಾವು ಯೋಚನೆ ಮಾಡುತ್ತಾ ಇದ್ದೀರಿ ಅಂದರೆ ನೀವು ಏನು ಮಾಡುತ್ತ ಇದ್ದೀರಿ ಅದು ಸರಿಯೋ, ತಪ್ಪೋ ಎಂಬು ತೀರ್ಮಾನ ಮಾಡುವುದಕ್ಕೆ 45 ವರ್ಷವಾಯಿತು. ಇನ್ನೂ ಸ್ಪಷ್ಟವಾಗಿಲ್ಲ.

ಶ್ರೀ ಭೀಮಣ್ಣ ಖಂಡ್ರೆ:- ಮಾನ್ಯ ಅಧ್ಯಕ್ಷರೇ ನಮ್ಮ ದೇಶದಲ್ಲಿ ಮತ್ತು ವೆಸ್ಟರ್ನ್ ದೇಶದಲ್ಲಿ ವ್ಯತ್ಯಾಸ ಏನೆಂದರೆ ನಾವು ಮೊದಲು ಮಾಡುತ್ತೇವೆಂದು ಹೇಳುತ್ತೇವೆ, ಇನ್ನು ವಿಚಾರ ಮಾಡುತ್ತ ಇರುತ್ತೇವೆ. ಅವರು ವಿಚಾರ ಮಾಡಿ ಮಾಡುತ್ತಾರೆ ಅವರು 10 ವರ್ಷದ ನಂತರ ಏನಾಗುತ್ತದೆಂದು ವಿಚಾರ ಮಾಡಿಕೊಂಡು ಮಾಡುತ್ತಾರೆ. ಇದು ನಮ್ಮದೂ ನಿಮ್ಮದೂ ಗತಿಯಲ್ಲ ಇಡೀ ದೇಶದ ಗತಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಗ್ರಾಮಗಳಿಗೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಟ್ಟು ಸೆಲ್ಫ್ ಸಫಿಸಿಯುಂಟ್ ಮಾಡಿ, ಅಗ್ರೋ ಬೇಸ್ಡ್ ಇಂಡಸ್ಟ್ರೀಗೆ ವಿಶೇಷವಾದಂತಹ ಮಹತ್ವವನ್ನು ಕೊಟ್ಟು ಆ ಗ್ರಾಮೀಣ ಜನರು ನಗರಗಳಿಗೆ ವಲಸೆ ಬರದ ಹಾಗೆ ವಿಶೇಷವಾದ ಮಹಾತ್ಮಾ ಗಾಂಧೀಜಿಯವರ ಮಾತೇನಿದೆ ಆ ಕಡೆ ವಿಶೇಷ ಗಮನ ಕೊಟ್ಟು ಮಾಡುವುದಕ್ಕೆ ಪ್ರಾರಂಭ ಮಾಡಿ ಎಂದ ಹೇಳುತ್ತಿದ್ದೇನೆ. ಈ 45 ವರ್ಷಗಳಲ್ಲಿ ಅದನ್ನು ಮಾಡಿಲ್ಲ,

ಅದು ತಪ್ಪಾಯಿತ್ತು, ಬರೀ ಅದನ್ನೇ ಕೂಗುವುದರಿಂದ ಏನೂ ಚರ್ಚೆಯಾಗುವುದಿಲ್ಲ. ಅದು ತಪ್ಪು ಎಂದು ಗೊತ್ತಾದ ಮೇಲೆ ತಾವು ಇದರ ಕಡೆಗೆ ಒಂದು ವಿಶೇಷವಾದ ಗಮನ ಕೊಡಬೇಕೆಂದು ಹೇಳುತ್ತೇನೆ. ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಲೂಟಿ ನಡೆಯುತ್ತ ಇದೆ., ಜನರು ಕೊಟ್ಟಂತಹ ತೆರಿಗೆಯಲ್ಲಿ ಸಾವಿರಾರು ಕೋಟಿ ತಾವು ಹಾಕಿದರೆ ಎಷ್ಟು ಲಾಭದಾಯಕವಾಗಿ ನಡೆಯುತ್ತಿವೆ. ಅಲ್ಲಿ ಸರಿಯಾಗಿ ನೋಡಿ ಕೊಳ್ಳುವುದಕ್ಕೆ ಆಗಿದೆಯೇ ? ಮೈಸೂರು ಸ್ಯಾಂಡಲ್ಸ್, ಸೋಪು ನಾವು ತಯಾರು ಮಾಡುತ್ತೇವೆ, ಎಷ್ಟೊಂದು ಡಿಮ್ಯಾಂಡ್ ಇದೆ ಎಂದರೆ ಕೋಟ್ಯಾಂತರ ರೂಪಾಯಿ ಲಾಸ್ ಆಗುತ್ತಿದೆ. ಎನ್‌ಜಿಎಫ್ ಯಾವಾಗ ಮಾರುತ್ತೇವೆಯೋ ಗೊತ್ತಿಲ್ಲ. ಭದ್ರಾವತಿ ಪ್ಯಾಕ್ಟರಿಯನ್ನು ಕೊಟ್ಟಾಯಿತು.

ನಿಮಗೆ ಕಳಕಳಿ ಇಲ್ಲದೆ ಇರುವುದರಿಂದ ಅದನ್ನು ಸೂಪರ್‌ವಿಷನ್ ಮಾಡುವ ಕಡೆಗೆ ವಿಶೇಷ ಗಮನ ಕೊಡದೆ ಇರುವುದರಿಂದ ಇವೊತ್ತು ಎಲ್ಲಾ ಕಡೆ ಸರ್ವನಾಶದ ಕಡೆಗೆ ಹೋಗುತ್ತಾ ಇದೆ. ಆದ್ದರಿಂದ ಆ ಕಡೆಗೆ ತಾವು ವಿಶೇಷವಾದ ಗಮನ ಕೊಟ್ಟು ಇನ್ನೂ ಈ ದುಸ್ಥಿತಿ ಮುಂದುವರಿಯದಂತೆ ತಾವು ನೋಡಿಕೊಳ್ಳಬೇಕು. ನಮ್ಮ ವಿದ್ಯುಚ್ಛಕ್ತಿ ಇಲಾಖೆಯನ್ನು ಹಿರಿಯ ಸಚಿವರು, ಉಪ ಮುಖ್ಯಮಂತ್ರಿಗಳು ವಹಿಸಿಕೊಂಡಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ತಾವು ಹೇಳಿದ್ದೀರಿ. ರಾಜ್ಯ ವಿದ್ಯುತ್ ವಿಚಾರದಲ್ಲಿ ಯುದ್ಧದೋಪಾದಿಯಲ್ಲಿ ವಿಶೇಷವಾದ ಗಮನ ಕೊಡುವುದೇ ಪ್ರಯತ್ನ ಮಾಡುತ್ತಿದ್ದೇವೆಂದು. 4 ವರ್ಷದ ನಿಮ್ಮ ಭಾಷಣದಲ್ಲಿ ಹೇಳಿದ್ದೇನು ? ಇದರಲ್ಲಿ ಖಾಸಗಿಯವರ ಸಹಭಾಗಿತ್ವದ ಮಾತು ಹೇಳಿದರು. ಮಿನಿ ಹೈಡೆಲ್ ಸ್ಕೀಮ್‌ಗಳನ್ನು ತಕ್ಷಣ ಅನುಷ್ಠಾನ ತರುವುದಾಗಿ ಹೇಳಿದ್ದಾರೆ. ಥರ್ಮಲ್ ಸ್ಕೀಮ್‌ಗಳನ್ನು ಖಾಸಗಿಯವರಿಗೆ ವಹಿಸಿಕೊಡುವುದನ್ನೂ ಹೇಳಿದ್ದೀರಿ. ತಮಗೆ ಜ್ಞಾಪಕ ಇದೆಯೇ ? ಬೊರೊಕಾದವರು 9ಮೆಗಾವ್ಯಾಟಿನ ಒಂದು ಥರ್ಮಲ್ ಪ್ಲಾಂಟ್ ಮಾಡಿದರು. ಅವರಿಗೆ ಯಾವ ಸ್ಥಿತಿ ಬಂತು ? ಹೊರಗಡೆಯವರು ನಿಮ್ಮ ಸರ್ಕಾರ ನಂಬಿ ಹೇಗೆ ಮಾಡುತ್ತಾರೆ ? ಈ ವಿದ್ಯುತ್‌ಗೆ ಲಿಂಕ್ ಮಾಡಿಕೊಡಿ ಎಂದು ವಿನಂತಿ ಮಾಡುವುದಕ್ಕೆ ಪ್ರಧಾನಿಯವರಿಂದ ಲೆಟರ್ ತರಬೇಕಾಯಿತು. ಕಮಿಷನ್ ವ್ಯವಹಾರ ಏಕೆ ತೆಗೆಸಿಕೊಡಿ. ರಿಕಾರ್ಡ್ಸ್ ಎಷ್ಟು ಡಿಲೆ ಮಾಡಿದಿರಿ ? ಒಳವ್ಯವಹಾರ ಕುದುರಲಿಲ್ಲ ಎಂದು ಅನುಮತಿ ಕೊಡಲಿಲ್ಲ. ಈಗ ವೀರಪ್ಪ ಮೊಯ್ಲಿಯವರು ಬಂದ ಮೇಲೆ ಅದು ಒಪ್ಪಿಗೆಯಾಗಿ ಅನುಷ್ಠಾನಕ್ಕೆ ಬಂದಿರುವುದು ನನಗೆ ಗೊತ್ತಿದೆ. ಆದರೆ ಯಾವ ರೀತಿ ಡಿಲೇ ಆಯಿತು, ಈ ಪರಿಸ್ಥಿತಿ ಇದ್ದರೆ ಹೊರಗಡೆಯವರು ಬರುತ್ತಾರೆಯೇ, ಇನ್‌ವೆಸ್ಟ್ ಮಾಡುತ್ತಾರೇ ? ನಮಗೆಷ್ಟು ಲಾಭ ಆಗುತ್ತದೆ ಎನ್ನುವ ಚಿಂತೆಯೇ ಹೊರತು, ಹೊರಗಿನಿಂದ ಬರುವವರಿಗೆ ಆದ್ಯತೆ ಕೊಡಬೇಕೆನ್ನುವ ಕಳಕಳಿ ಸರ್ಕಾರದಲ್ಲಿರಲಿಲ್ಲ, ಇದನ್ನು ಸರಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಅಧ್ಯಕ್ಷರೇ , ತಮಗೆ ಗೊತ್ತಿದೆ, ಪೆಸ್ಟಿಸೈಡ್ಸ್ ಸರಿ ಇಲ್ಲದೆ ಗುಲ್ಬರ್ಗದಲ್ಲಿ ತೊಗರಿಬೇಳೆ ಸಂಪೂರ್ಣ ನಾಶವಾಯಿತು. ಅವರಿಗೆ ನೆರವು ಕೊಡುತ್ತೇವೆ ಎಂದು ಹೇಳಿದ್ದಿರಿ ಆದರೆ ಇದುವರೆಗೆ ಒಂದು ಪೈಸೆ ಅವರಿಗೆ ಕೊಟ್ಟಿಲ್ಲ, ಆ ಕಡೆ ವಿಶೇಷವಾದ ಪ್ರಯತ್ನ ಮಾಡಬೇಕು. ನೂರು ದಿವಸಗಳ ಆಡಳಿತದ ಹೊಸ ಪುಸ್ತಕ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳಾದಾಗ ಮೊಯ್ಲಿಯವರಿಗೆ ಏನೋ ಮಾಡಿಬಿಡ್ತೇನೆ ಎನ್ನುವ ಕಳಕಳಿ, ಏನೋ ಒಂದು ರೀತಿಯ ಭ್ರಮೆ ವೀರಪ್ಪ ಮೊಯ್ಲಿಯವರನ್ನು ಕೇಳುತ್ತೇನೆ, ನೂರು ದಿವಸವಾದ ಮೇಲೆ ರಾಮಾಯಣ ಮಹಾಭಾರತ ಭಗವದ್ಗೀತೆ ಹೇಳಿದ್ದಾರೆ, ಕರ್ನಾಟಕದಲ್ಲಿ ಯಾವುದೇ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲದೆ ಇರುವುದಿಲ್ಲ, ಎಲ್ಲಾ ಭರ್ತಿ ಮಾಡುತ್ತೇವೆ. ಮಾಡಿ ಸಂತೋಷ ಪಡುತ್ತೇವೆ, ಮತ್ತೆ ಅಧಿಕಾರಕ್ಕೆ ಬನ್ನಿ. ನಮಗೇನು ಚಿಂತೆ ಇಲ್ಲ. ಆದರೆ ಆ ಕಳಕಳಿ ಇದೆಯೇನು ? ಶಿಕಾರಿಪುರದಿಂದ ನಾನು ಬಂದವನು. ಜೂನಿಯರ್ ಕಾಲೇಜಿಗೆ ಕಳೆದ ಆರೇಳು ತಿಂಗಳಿಂದ ಪಿಸಿಎಂಬಿಗೆ ಮೇಸ್ಟ್ರಿಲ್ಲ ನೂರು ಬಾರಿ ಅಧಿಕಾರಿಗಳಿಗೆ ಹೇಳಿದ್ದೇನೆ. ಪರೀಕ್ಷೆ ಹತ್ತಿರ ಬಂತು, ಆಸ್ಪತ್ರೆಯಲ್ಲಿ ಡಾಕ್ಟರಿಲ್ಲ, ಔಷಧಿ ಇಲ್ಲ. ಗ್ರಾಮೀಣ ಜನರ ಬಗ್ಗೆ ಇಬು ನಿಮ್ಮ

ಕಳಕಳಿ. ದಯ ಮಾಡಿ ಈ ಪರಿಸ್ಥಿತಿಯನ್ನು ಸುಧಾರಿಸಲು ತಾವು ಪ್ರಾಮಾಣಿಕ ಪ್ರಯತ್ನ ತಾವು ಮಾಡಬೇಕು. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಬಗ್ಗೆ. ಬಹಳ ಕೆಲಸ ಮಾಡುತ್ತೇವೆಂದು ಹೇಳಿಕೊಂಡು ಬಂದಿರಿ. ಅದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ನಾನು ಅದರ ಬಗ್ಗೆ ನೀಲಿ ನಕಾಶೆ ತಯಾರು ಮಾಡಿ ಅಲ್ಲಿರುವ ಲೋಪದೋಷ ಸರಿಪಡಿಸಿ ನಿಜವಾದ ಅದರ ಉದ್ದೇಶ ಸಫಲವಾಗುವಂತಹ ಪ್ರಯತ್ನ ಮಾಡಿ ಎಂದು ಹೇಳಿದ್ದೆವು. ನಿಮ್ಮಿಂದಾಗಲಿಲ್ಲವೆಂದು ಗೊತ್ತಾದ ಮೇಲೆ ನಮ್ಮ ಪಕ್ಷದವರಿಗೆ ಹೇಳಿ ಒಂದು ಸಮಿತಿ ಮಾಡಿದ್ದೆ. ಸನ್ಮಾನ್ಯ ಬಸವರಾಜ ಪಾಟೀಲ್ ಮತ್ತು ಡಾ।। ತಂಗಾ ಎಂಎಲ್‌ಸಿಗಳು ಕಮಿಟಿ ಮಾಡಿ, ಒಂದು ಬ್ಲೂಪ್ರಿಂಟ್ ಸರ್ಕಾರಕ್ಕೆ ಮಾಡಿಕೊಡಿ. ಅವರು ಪರಸ್ಪರ ಕಚ್ಚಾಟದಲ್ಲಿದ್ದಾರೆ, ಅವರಿಗೆ ಬಿಡುವಾಗುವುದಿಲ್ಲ ಎಂದು ಹೇಳಿ, ಆಗಿರುವ ಲೋಪದೋಷಗಳನ್ನು ಸರಿಪಡಿಸಲು ಮಾಡಬೇಕಾದ್ದೇನು, ಯಾವುದಕ್ಕೆ ಪ್ರಾಧಾನ್ಯತೆ ಸಿಕ್ಕಬೇಕೆಂಬ ವಿವರಣೆಯನ್ನು ತಮಗೆ ಕಳಿಸಿಕೊಡಲು ಪ್ರಯತ್ನ ಮಾಡಿದ್ದೇವೆ. ಶಿಕ್ಷಣ ಸಾರಿಗೆ ಕೃಷಿ ಉದ್ದಿಮೆ ಉದ್ಯೋಗಾವಕಾಶ ಬೇರೆ ಜಿಲ್ಲೆಗಳೊಡನೆ ಸ್ಪರ್ಧೆ ಮಾಡುವ ರೀತಿಯಲ್ಲಿ ನೀವು ಕಾರ್ಯ ಮಾಡಬೇಕೆಂಬ ದೃಷ್ಟಿಯಿಂದ ಒಂದು ನೀಲಿನಕಾಶೆ ಕೊಟ್ಟಿದ್ದೇವೆ, ಅದನ್ನು ಅಭ್ಯಾಸ ಮಾಡಿ ಅದನ್ನು ಪೂರ್ಣ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡಬೇಕು ತಾವು. ನಮ್ಮ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಹೊಸ ಕಾರ್ಯಕ್ರಮಗಳ ಘೋಷಣೆ, ಎಷ್ಟು ಆನಂದವಾಗಿತ್ತು, ಎಷ್ಟು ಚಂದಾಗಿತ್ತು ? ಇವನ್ನು ಕಾರ್ಯರೂಪಕ್ಕೆ ತಂದಿರಾ ? ಶುಶ್ರೂಷೆ, ಆಶ್ರಯ, ಆರಾಧನಾ, ಅಕ್ಷಯ ಅದಕ್ಕೆಲ್ಲ ಅಕ್ಷಯ ಹಿಡಿದುಹೋಯಿತು, ಅದನ್ನು ಕಾರ್ಯರೂಪಕ್ಕೆ ತರುವ ಒಂದು ಮಾತು ನಿಮ್ಮ ಶಬ್ದ ಬಂಡಾರದಿಂದ ನಮಗೆ ಕಾಣುತ್ತಿಲ್ಲ. ಶುಶ್ರೂಷೆ ಬಗ್ಗೆ ಏನು ಹೇಳಿದ್ದೀರಿ ? ಇಡೀ ರಾಜ್ಯದ ಜನರ ಆರೋಗ್ಯ ಸರಿ ಇದೆಯೋ ಇಲ್ಲವೋ ಎಂದು ತಪಾಸಣೆ ಮಾಡುತ್ತೇವೆಂದು ಹೇಳಿದಿರಿ. 91–92ನೇ ಸಾಲಿನಲ್ಲಿ ನೀವು ಮಾಡಿರುವುದೆಷ್ಟು ? 29, 71,921 ಜನ ಮತ್ತು ಶಾಲಾಮಕ್ಕಳಿಗೆ ತಪಾಸಣೆ ಮಾಡಿ, ನೀವು ಖರ್ಚು ಮಾಡಿರೋದು 5.86 ಕೋಟಿ. 92–93ರಲ್ಲಿ ವಾಪಸ್ ಬಂದುಬಿಟ್ಟಿರಿ. ಕೇವಲ 7,95,283 ಜನರಿಗೆ ಆರೋಗ್ಯ ತಪಾಸಣೆ, ಮಾಡಿದಿರಿ ಖರ್ಚಾಗಿರುವುದು 3 ಕೋಟಿ 27 ಲಕ್ಷ. ಇದಕ್ಕೆ ನೀವು ಖರ್ಚು ಮಾಡಿರುವ ಹಣವೆಷ್ಟು ಹೇಳಿದಂಥ ಮಾತೇನು ? ಭರವಸೆ ಏತಕ್ಕೆ ಕೊಟ್ಟಿರಿ ? ರಾಜ್ಯದ ಪ್ರತಿಯೊಂದು ಹಳ್ಳಿಹಳ್ಳಿಗೆ ಹೋಗಿ ಪ್ರತಿಯೊಬ್ಬ ವ್ಯಕ್ತಿಯನ್ನು ನೋಡಿ ಆರೋಗ್ಯ ತಪಾಸಣೆ ಮಾಡಿ ಅವನಿಗಿರುವಂಥ ರೋಗರುಜಿನಗಳನ್ನು ಗುರುತು ಮಾಡಿ ಪರಿಹಾರ ನಾವು ಮಾಡುತ್ತೇವೆ ಎಂದು ಹೇಳಿ, ಇರುವ ಆಸ್ಪತ್ರೆಗಳಲ್ಲಿಯೇ ಡಾಕ್ಟರುಗಳು ಇಲ್ಲ. ಇರುವ ಆಸ್ಪತ್ರೆಗಳಲ್ಲಿ ಔಷಧಿ ಇಲ್ಲ. ಆ ರೀತಿಯ ಒಂದು ಕಾರ್ಯಕ್ರಮವನ್ನು ಘೋಷಣೆ ಮಾಡಿದಿರಿ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಅವರ ಆರೋಗ್ಯವೇ ಸರಿ ಇಲ್ಲ. ಇನ್ನು ಜನರ ಆರೋಗ್ಯವನ್ನು ಏನು ಸುಧಾರಿಸುತ್ತಾರೆ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಆಶ್ರಯ ಯೋಜನೆಯ ಬಗ್ಗೆ ಏನು ಹೇಳೋಣ ಸ್ವಾಮಿ.

ಶ್ರೀ ಶಿವಾನಂದ ಎಚ್. ಕೌಜಲಗಿ:– ಈ ಆರೋಗ್ಯ ತಪಾಸಣೆ ಜನರದಲ್ಲ., ಮಂತ್ರಿಗಳದು, ಮಂತ್ರಿಗಳ ಆರೋಗ್ಯ ತಪಾಸಣೆಯನ್ನು ವರ್ಷದಲ್ಲಿ ಎರಡು ಸಾರಿ ಮಾಡಬೇಕು ಎನ್ನತಕ್ಕಂಥದ್ದು ಇವರ ಕಾರ್ಯಕ್ರಮ.

ಶ್ರೀ ಬಿ.ಎಸ್. ಯಡಿಯೂರಪ್ಪ:– 'ವಿಶ್ವ' ಯೋಜನೆಯಲ್ಲಿ ಉದ್ಯೋಗ ಕೊಡುತ್ತೇವೆ. ಉದ್ಧಾರ ಮಾಡುತ್ತೇವೆ ಎಂದು ಹೇಳಿ ಆ 'ವಿಶ್ವ' ಯೋಜನೆ ಇದೆಯೋ ಸತ್ತಿದೆಯೋ ಬದುಕಿದೆಯೋ ಎಂದು ಯಾರಿಗೂ ಗೊತ್ತಿಲ್ಲ. 'ಆರಾಧನ' ಯೋಜನೆ, ಗ್ರಾಮಾಂತರ ಪ್ರದೇಶದಲ್ಲಿ ಹರಿಜನ ಗಿರಿಜನರ ಬಸದಿಗಳಿಗೆ ದೇವಸ್ಥಾನಗಳನ್ನು ಕಟ್ಟತಕ್ಕಂಥ ಯೋಜನೆ. ಅದನ್ನು ಕಾರ್ಯರೂಪಕ್ಕೆ ತರುವಂಥ ಒಂದು

ಪ್ರಾಮಾಣಿಕ ಪ್ರಯತ್ನ ನೀವು ಮಾಡಬೇಕಾಗಿದೆ. 'ಅಕ್ಷಯ' ಯೋಜನೆ ಏನು ಆಗಿದೆ ಎನ್ನುವುದರ ಬಗ್ಗೆ ನಾನು ಸಾಕಷ್ಟು ವಿವರವನ್ನು ತಿಳಿಸುವಂಥ ಒಂದು ಪ್ರಯತ್ನವನ್ನು ಮಾಡಿದ್ದೇನೆ. ಈ ರೀತಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ, ಕೊನೆಯದಾಗಿ ತಮ್ಮ ಗಮನಕ್ಕೆ ತರಬೇಕಾದಂಥ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ತಾವು ಒಂದು ಸಾರಿ ದಯ ಮಾಡಿ ಆ ಭದ್ರಾ ಬಲದಂಡೆ ನಾಲೆ ಪರಿಸ್ಥಿತಿಯನ್ನು ನೋಡುವುದಕ್ಕೆ ತಾವು ನಮ್ಮ ಜೊತೆ ಬರಬೇಕು. 18-9-91ರಲ್ಲಿ ಆ ಒಂದು ಭದ್ರಾ ಬಲದಂಡೆ ನಾಲೆ ಒಡೆದುಹೋಯಿತು. 2 ಲಕ್ಷದ 32 ಸಾವಿರ ಎಕರೆ ಬೇಸಿಗೆ ಬೆಳೆ ಹೋದ ವರ್ಷ ಸಂಪೂರ್ಣ ನಾಶವಾಯಿತು. ಈಗ ಗುಡ್ಡದ ಪಕ್ಕದಲ್ಲಿ ಬೇರೆ ಒಂದು ಛಾನಲ್ ಮಾಡಿ ಟೆಂಪೊರರಿ ಆಗಿ ನೀರನ್ನು ನಾವು ಕೊಡುತ್ತಿದ್ದೇವೆ. ಇವತ್ತು 110 ಅಡಿ 115 ಅಡಿಯವರೆಗೆ ನೀರನ್ನು ನಾವು ಕೊಡುತ್ತಿದ್ದೆವು. ಇವತ್ತು 140 ಅಡಿಗೆ ಬಂದು ಬಿಟ್ಟರೆ ಮಟ್ಟ ಒಂದು ಹನಿ ನೀರು ಕೊಡುವುದಕ್ಕಾಗುವುದಿಲ್ಲ. ಇನ್ನು ಒಂದು ಲಕ್ಷ ಹೆಕ್ಟೇರ್‌ಗೆ ನೀರು ಕೊಡುವುದು ತಪ್ಪಿ ಹೋಗುತ್ತದೆ ಸ್ವಾಮಿ. ಈ ನಿಮಿಷದವರೆಗೆ ಮಾಡಿಲ್ಲ. ಜನ ಹೇಳುತ್ತಾರೆ, ತಜ್ಞರು ಹೇಳುತ್ತಾರೆ, ಬಾಳೆಕುಂದ್ರಿಯವರು ಬಂದಾಗ ನಾನು ಅವರ ಮನೆಯಲ್ಲಿ ಕುಳಿತು ಚರ್ಚೆ ಮಾಡಿದಾಗ ಹೇಳುತ್ತಾರೆ. ಟೆಂಪ್ರೊರಿಯಾಗಿ ನಾವು ಏನು ಛಾನಲ್ ಮಾಡಿದ್ದೇವೆ. ಅದರಿಂದ ಮೂಲ ಡ್ಯಾಮ್‌ಗೆ ಹೊಡೆತ ಆಗುವಂಥ ಒಂದು ಸಂದರ್ಭ. ಇದು ಒಡೆದು ಹೋದದ್ದು 18.9.91ರಿಂದಲೇ ಹೋದರೂ ಸಹಾ ಇವತ್ತಿನವರೆಗೂ ಆ ಮೂಲ ಡ್ಯಾಮನ್ನು ಒಡೆದಿರುವಂಥ ಭದ್ರಾ ಬಲದಂಡೆ ನಾಲೆ ರಿಪೇರಿ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಅದಕ್ಕೆ ಎಕ್ಸ್‌ಪರ್ಟ್ಸ್ ಕಮಿಟಿ ಆಯಿತು. ತಜ್ಞರು ಬಂದರು. ವರದಿಯನ್ನು ಕೊಡುತ್ತೇವೆ, ಕೆಲಸ ಪ್ರಾರಂಭ ಮಾಡುತ್ತೇವೆ ಎಂದು ಎಂಟು ತಿಂಗಳಿಂದ ಹೇಳಿಕೊಂಡು ಬಂದರು. ಸತ್ಯಾಗ್ರಹ, ಚಳುವಳಿ ರೈತ ಸಂಘದವರು ನಾವು ಮಾಡಿ ಮಾಡಿ ಸುಸ್ತಾದೆವು. ಸ್ವಾಮಿ ನಿಮ್ಮ ಕಾಲದಲ್ಲಾದರೂ ಈ ಬಜೆಟ್ ಅಧಿವೇಶನ ಮುಗಿಯುವುದರೊಳಗಾಗಿ ತಾವು ಹೋಗಿ ಬನ್ನಿ. ಈಗಾಗಲೇ ಸಾಕಷ್ಟು ಸಿದ್ಧತೆಗಳಾಗಿದೆ, ಮೂಲ ಡ್ಯಾಮ್‌ಗೆ ಹೊಡೆತವಾಗಬಹುದು. ಇದು ರಾಜಕಾರಣದ ಪ್ರಶ್ನೆಯಲ್ಲ. ಇದು ಯಾವುದೋ ಜಿಲ್ಲೆಯ ಪ್ರಶ್ನೆಯಲ್ಲ. ಯಾರೋ ಕಷ್ಟಪಟ್ಟು ಮಾಡಿರುವಂಥದ್ದು. ರೈತಾಪಿ ಜನರಿಗೆ ಉಪಯೋಗವಾಗುವಂಥದ್ದು ತಕ್ಷಣ ಮೂಲ ಡ್ಯಾಮ್‌ನ ಬಲದಂಡೆ ರಿಪೇರಿ ಬಗ್ಗೆ ವಿಶೇಷವಾದ ಗಮನವನ್ನು ತಾವು ಕೊಡಬೇಕು ಎಂದು ನಾನು ಒತ್ತಾಯವನ್ನು ಮಾಡುತ್ತೇನೆ. ಈ ಸಪ್ಪೆ, ಏನು ಉಪಯೋಗ ಇಲ್ಲದಂಥ ರಾಜ್ಯಪಾಲರ ಭಾಷಣದಲ್ಲಿ ಏನೂ ಹುರುಳಿಲ್ಲ. ನಾನು ಪ್ರಾರಂಭದಲ್ಲಿ ಹೇಳಿದೆ. ನಮ್ಮಲ್ಲಿ ಹಿರಿಯರ ಶ್ರಾದ್ಧ ಮಾಡುವುದು ಇದೆ. ಪ್ರತಿವರ್ಷ ಮಾಡುವಂಥದ್ದು. ಅದೇ ಒಂದು ವಾಡಿಕೆ ರಾಜ್ಯಪಾಲರ ಭಾಷಣ ಮಾಡುವಂಥದ್ದು. ಇದರಿಂದ ಏನೂ ಆಗುವುದಿಲ್ಲ. ನೀವು ಏನು ಹೇಳಿದ್ದೀರಿ, ಅದನ್ನು ಮಾಡಬೇಕು. ಕೊನೆಯದಾಗಿ ನಾನು ಪ್ರಾರಂಭದಲ್ಲಿ ಹೇಳಿದ್ದನ್ನು ಒತ್ತಾಯ ಮಾಡುತ್ತೇನೆ. ನಿಜವಾಗಿಯೂ ರಾಜ್ಯಪಾಲರ ಭಾಷಣಕ್ಕೆ ಗೌರವ ಬರಬೇಕು. ಎಂದರೆ ಅದಕ್ಕೆ ಏನಾದರೂ ಇರುವಂಥ ಗೌರವ ಉಳಿಸಬೇಕು ಎಂದು ಇದ್ದರೆ ಮೂರು ವರ್ಷದಲ್ಲಿ ನಿಮ್ಮ ಸಾಧನೆಯೇನು ? ನೀವು ಹೇಳಿದ್ದೇನು ? ನಿಮ್ಮ ಸಾಧನೆಯ ಬ್ಲೂಪ್ರಿಂಟನ್ನು ನೀವು ಕೊಡಬೇಕು. ನಿಮಗೆ ಆಗದಿದ್ದರೆ ಬಹುಶಃ ಹೈದರಾಬಾದ್-ಕರ್ನಾಟಕದ ಬಗ್ಗೆ ನಾವೇನು ಬ್ಲೂಪ್ರಿಂಟ್ ಮಾಡಿ ನಿಮಗೆ ಕೊಟ್ಟಿದ್ದೇವೆ. ನಿಮಗೆ ಪುರುಸೊತ್ತು ಇಲ್ಲ ಎಂದು ಹೇಳಿ ನಾವೇ ಪ್ರಿಂಟ್ ಮಾಡಿ ನಿಮ್ಮ ಸಾಧನೆಗಳೇನು ? ನಿಮ್ಮ ಹಣೆಬರಹ ಏನು ? ಮೂರು ವರ್ಷದ ರಾಜ್ಯಪಾಲರ ಭಾಷಣ ಏನು ಎಂದು ತಿಳಿಸುವಂಥ ಪರಿಸ್ಥಿತಿ ಬರುತ್ತದೆ. ಕಾಂಗ್ರೆಸ್ ಪಕ್ಷ ಕ್ಷೀಣವಾಗುತ್ತಿರುವ ಈ ಕಾಲದಲ್ಲಿ ಕೊನೆಯ ಒಂದು ಅವಕಾಶ ಸಿಕ್ಕಿರುವಂಥ ಈ ಸಂದರ್ಭದಲ್ಲಿ ಎಷ್ಟು ದಿವಸ ಇರುತ್ತೀರೋ ಗೊತ್ತಿಲ್ಲ, ತಿಂಗಳು ಎರಡು ತಿಂಗಳೋ, ಮೂರು ತಿಂಗಳೋ ಒಂದು ವಿಚಿತ್ರವಾದಂಥ ಪರಿಸ್ಥಿತಿಯಲ್ಲಿರಬೇಕಾದರೆ ಈಗಲಾದರೂ ಜನ ನಿಮಗೆ ಅಧಿಕಾರ ಕೊಟ್ಟಿದ್ದಕ್ಕೆ ಋಣವನ್ನು ತೀರಿಸುವುದಕ್ಕೋಸ್ಕರವಾದರೂ

ಬರುವಂಥ ದಿವಸಗಳಲ್ಲಿ ಪರಸ್ಪರ ಕಚ್ಚಾಡದೆ ಇನ್ನೊಬ್ಬ ಮುಖ್ಯಮಂತ್ರಿಯನ್ನು ನೋಡುವ ಸ್ಥಿತಿಗೆ ತರಬೇಡಿ. ಸಾಧ್ಯವಾದರೆ ವಿಧಾನಸಭೆ ವಿಸರ್ಜನೆ ಮಾಡಿ ಚುನಾವಣೆಗೆ ಹೋಗೋಣ. ಆದರೆ ಯಾವ ಕಾರಣಕ್ಕೂ ಸಹಾ ಮತ್ತೆ ನೀವು ಪರಸ್ಪರ ಬಡಿದಾಡಿ ಈ ರಾಜ್ಯದ ಜನರನ್ನು ಒಂದು ಸಂಕಷ್ಟದಲ್ಲಿ ಸಿಕ್ಕಿಸಿ ಎಂದು ವಿಚಿತ್ರವಾದಂಥ ಒಂದು ಪರಿಸ್ಥಿತಿಗೆ ಜನರನ್ನು ತಳ್ಳಬೇಡಿ ಎನ್ನುವಂಥ ಒಂದು ಎಚ್ಚರಿಕೆಯ ಒಂದು ಕಿವಿ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ತುಂಬಾ ಧಾರಾಳದಿಂದ ಸಾಕಷ್ಟು ಸಮಯ ಕೊಟ್ಟಿದ್ದೀರಿ, ತಮಗೆ ವಂದನೆಯನ್ನು ಅರ್ಪಿಸಿ, ನನ್ನ ಮಾತಿಗೆ ಅಡ್ಡಿ ಮಾಡದೆ ಸಹಕಾರ ಕೊಟ್ಟಂಥ ಈ ಕಡೆ ಇರುವಂಥ ಆ ಕಡೆ ಇರುವಂಥ ಎಲ್ಲಾ ಸದಸ್ಯರುಗಳಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ರಾಮಯ್ಯನವರೆ, ತಮಗೆ ಮಾತನಾಡುವುದಕ್ಕೆ ಎಷ್ಟು ಸಮಯ ಬೇಕಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:- ಭಾರತೀಯ ಜನತಾ ಪಕ್ಷಕ್ಕೆ ಎಷ್ಟು ಕೊಟ್ಟಿದ್ದೀರಿ ನಮಗೂ ಅಷ್ಟೆ ಕೊಡಬೇಕಾಗುತ್ತದೆ. ನಾವು ಮೂರು ಜನ ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ನಿನ್ನೆ ಇವರು ನೇಗಿಲು ಹೊತ್ತ ರೈತ ಎಂದು ಹೇಳಿ, ಇವತ್ತು ನಾವು ಮೂರು ಜನ ಇದ್ದೇವೆಂದು ಹೇಳುತ್ತಿದ್ದಾರೆ. ಅದು ಹೇಗೆ ? ಮಾನ್ಯ ವೆಂಕಟೇಶ್‌ರವರು ಒಂದು ದಾರಿ, ಇವರು ಒಂದು ದಾರಿ, ಇದು ಸರಿಯಲ್ಲ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಪತ್ರಿಕೆಯವರ ವ್ಯಾಖ್ಯಾನಕ್ಕೆ ನನ್ನ ಸದಸ್ಯರ ಚಿಂತನೆಗಳಿಗೆ ನನ್ನದು ಅಡ್ಡಿ ಇಲ್ಲ. ಆದರೆ ನನ್ನ ಪ್ರಕಾರ ಈ ರಾಷ್ಟ್ರದ ಚುನಾವಣಾ ಆಯೋಗದ ಕಡಿತದಲ್ಲಿರುವ ಪ್ರಕಾರ ಈ ಸದನದಲ್ಲಿರುವಂತಹ ಕಡಿತದಲ್ಲಿರುವ ಪ್ರಕಾರ ನಾನು ಮಾನ್ಯ ಬೈರೇಗೌಡರು, ಮತ್ತು ನನ್ನ ಪಕ್ಕದಲ್ಲಿ ಕುಳಿತುಕೊಳ್ಳುವಂತಹ ಮಾನ್ಯ ವೆಂಕಟೇಶ್‌ರವರು ನಾವು ಮೂರು ಜನರು ಜನತಾ ಪಕ್ಷದ ಸದಸ್ಯರು. ಇದು ಸರಿನೋ ತಪ್ಪೋ, ಇದು ಒಳ್ಳೆಯದೋ ಕೆಟ್ಟದೋ ಎಂದು ವಿಶ್ಲೇಷಣೆ ಮಾಡಲಿಕ್ಕೆ ನಾನು ಸಿದ್ಧನಿಲ್ಲ. ನಾವು ಮೂರು ಜನಾನೂ ಜನತಾ ಪಕ್ಷಕ್ಕೆ ಸೇರಿದಂಥವರು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ವೆಂಕಟೇಶ್‌ರವರು ಕಾಂಗ್ರೆಸಿಗೆ ಸೇರುತ್ತೇವೆಂದು ಅರ್ಜಿಯನ್ನು ಹಾಕಿಕೊಂಡಿದ್ದಾರೆ. ನಿನ್ನೆಯವರೆಗೂ ನಡೆಯುತ್ತಿದೆ. ರಾಮಯ್ಯನವರು ಈ ತೀರ್ಮಾನಕ್ಕೆ ಹೇಗೆ ಬರುತ್ತಾರೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಬೈರೇಗೌಡರು ನಾನು ಜನತಾ ಪಕ್ಷದವನು ಅಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ಅದರ ಬಗ್ಗೆ ಅವರನ್ನೇ ಕೇಳಬೇಕು. ನನಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಆಡಳಿತ ಪಕ್ಷ ....

ಶ್ರೀ. ವೈ.ಕೆ. ರಾಮಯ್ಯ (ಕುಣಿಗಲ್):- ಮಾನ್ಯ ಅಧ್ಯಕ್ಷರೆ, ನಾನು ಮತ್ತೊಂದು ಸಾರಿ ಸದನದ ನನ್ನ ಮಿತ್ರರಿಗೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ನಾನು ಲಘುವಾಗಿ ಚರ್ಚೆಯನ್ನು ಮಾಡಲಿಕ್ಕೆ ಸಿದ್ಧನಿಲ್ಲ. ನೇಗಿಲು ಹೊತ್ತ ರೈತನ ಗುರ್ತಿನ ಚಿಹ್ನೆಯ ಮೇಲೆ ಆರಿಸಿ ಬಂದಂಥ ಜನತಾ ಪಕ್ಷದ ಸದಸ್ಯ ನಾನು. ಮತ್ತೊಂದು ಸಾರಿ ಈ ವಿಷಯದಲ್ಲಿ ಯಾರೂ ಚರ್ಚೆ ಮಾಡುವ ಅವಶ್ಯಕತೆ ಇಲ್ಲ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮುಂದೆ ಏನಾಗಿದೆ ಎಂಬುದರ ಬಗ್ಗೆ ಹೊರಗಡೆ

ಬಂದು ನನ್ನ ಸ್ನೇಹಿತರು ಬಂದು ಹೇಳಲಿ. ಅದರ ಚರಿತ್ರೆಯನ್ನು ನಾನು ಹೇಳುತ್ತೇನೆ. ಇಲ್ಲಿ ಈಗ ಹೇಳುವುದು ಬೇಡ. ಸರ್ಕಾರದವರು ರಾಜ್ಯಪಾಲರ ಮುಖಾಂತರ ಮಾಡಿಸಿರುವಂತಹ ಭಾಷಣದಲ್ಲಿ ವಂದನೆಯನ್ನು ಅರ್ಪಿಸುವಂತಹ ನಿರ್ಣಯವನ್ನು ಸದನದ ಮುಂದೆ ತಂದಿದ್ದಾರೆ. ಅದನ್ನು ಕುರಿತು ಮಾತನಾಡುವದಕ್ಕೆ ನನಗೆ ಅವಕಾಶವನ್ನು ಮಾಡಿ ಕೊಡಿ. ಈ ರಾಜ್ಯಪಾಲರ ಭಾಷಣ ಹೇಗೆ ಬಂತು ಏಕೆ ಬಂತು ಎನ್ನುವುದು ನನಗಂತೂ ಗೊತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಇದನ್ನು ಶ್ರಾದ್ಧ ಎಂದು ಕರೆದರು. ನಾನು ಆ ರೀತಿ ಕರೆಯಲಿಕ್ಕೆ ಸಿದ್ಧನಿಲ್ಲ. ಇದೊಂದು ಸಂಪ್ರದಾಯ ಅನೇಕ ಸಾರಿ ಸಂಪ್ರದಾಯಗಳು ಕೆಟ್ಟವು ಎಂದು ಗೊತ್ತಿದ್ದರು ಕೂಡ ಆ ಸಂಪ್ರದಾಯಗಳನ್ನು ನಾವು ನಡೆಸಿಕೊಂಡು ಬರುತ್ತಿದ್ದೇವೆ. ಈ ಸಂಪ್ರದಾಯವನ್ನು ಏಕಕಾಲದಲ್ಲಿ ನಿಲ್ಲಿಸಿ ಎಂದು ನಾನು ಪ್ರಾರ್ಥನೆ ಮಾಡದಿದ್ದರೂ ಒಂದನ್ನು ಮಾಡಬಲ್ಲೆ. ಮುಂದೆ ಬರುವಂತಹ ಸರ್ಕಾರ ಯಾವುದಾದರೂ ಆಗಲಿ, ಈ ಭಾಷಣದ ತಲೆಬರಹವನ್ನು ಬದಲಾಯಿಸಿಕೊಂಡರೆ ಉತ್ತಮವೆಂದು ಕಾಣುತ್ತದೆ. ಕರ್ನಾಟಕದ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದ ಭಾಷಣ ಎನ್ನುವುದರ ಬದಲು, ಕರ್ನಾಟಕದ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರ ಸಿದ್ಧ ಮಾಡಿದ ಓದಿದ ಭಾಷಣ ಅಥವಾ ರಾಜ್ಯಪಾಲರು ಓದಿದಂತಹ ಸರ್ಕಾರೀ ಭಾಷಣ ಎಂದು ಯಾವುದಾದರೂ ಒಂದಕ್ಕೆ ಬದಲಾವಣೆ ಮಾಡಿಕೊಳ್ಳುವುದು ಸೂಕ್ತ. ಸೂಕ್ತ ಅಷ್ಟೆ ಅಲ್ಲ, ಇದಕ್ಕೆ ಅರ್ಥ ಕಲ್ಪನೆ ಮಾಡಿಕೊಳ್ಳಬಹುದೆಂದು ನನ್ನ ಭಾವನೆಯಾಗಿದೆ. ಸರ್ಕಾರದವರು ರಾಜ್ಯಪಾಲರ ಮುಖಾಂತರ ಓದಿಸಿರುವ ಭಾಷಣದ ಎರಡನೆಯ ಸಾಲಿನಲ್ಲಿ ಭಾರತದ ಅತ್ಯಂತ ಪ್ರಗತಿಶೀಲ ರಾಜ್ಯವೆಂದು ಕರ್ನಾಟಕವನ್ನು ವರ್ಣಿಸಿದ್ದಾರೆ. ಈ ರಾಷ್ಟ್ರ ಅತ್ಯಂತ ಪ್ರಗತಿಶೀಲವಾದಂತಹ ರಾಜ್ಯ ಕರ್ನಾಟಕ ರಾಜ್ಯ ಎಂದು ಹೇಳಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಹೇಳಿದ್ದಾರೋ ನನಗೆ ಗೊತ್ತಿಲ್ಲ. ನಿನ್ನೆ ತಾನೆ ನಮ್ಮ ಕೈಗೆ ಆರ್ಥಿಕ ಸಮೀಕ್ಷೆ ಸಿಕ್ಕಿದೆ. ಈ ಆರ್ಥಿಕ ಸಮೀಕ್ಷೆಯ ಬಗ್ಗೆ ಇವತ್ತು ಪತ್ರಿಕೆಗಳಲ್ಲಿಯೂ ಕೂಡ ಸ್ಪಷ್ಟವಾಗಿ ಇದರ ಬಗ್ಗೆ ಹೇಳಿದ್ದಾರೆ. ರಾಜ್ಯದಲ್ಲಿ ಪ್ರಗತಿಯ ವೇಗ ಕುಗ್ಗಿದೆ. ಪ್ರಗತಿಶೀಲ ರಾಜ್ಯದ ಆರ್ಥಿಕ ಅಭಿವೃದ್ಧಿಯ ವೇಗ ಕುಗ್ಗಿದೆ. ಇದು ಕೇವಲ ಪತ್ರಿಕೆಯ ವರದಿಯಲ್ಲ ರಾಜ್ಯ ಸರ್ಕಾರದವರೇ ನಮಗೆ ಒದಗಿಸುವಂತಹ ಆರ್ಥಿಕ ಸಮೀಕ್ಷೆಯಲ್ಲಿಯೂ ಕೂಡ ಹೇಳಿದ್ದಾರೆ. ಎರಡನೆಯದಾಗಿ ಇದು ನಮ್ಮ ವಾದವಲ್ಲ, ಸರ್ಕಾರದವರು ಒದಗಿಸಿರುವಂತಹ ಮಾಹಿತಿಯನ್ನು ತಮ್ಮ ಮುಂದೆ ಇಡಲಿಕ್ಕೆ ಇಷ್ಟಪಡುತ್ತೇನೆ. ರಾಷ್ಟ್ರದ ಪಂಚವಾರ್ಷಿಕ ಯೋಜನೆಗಳಲ್ಲಿ ಮಾಡುತ್ತಿರುವ ವೆಚ್ಚದ ಪ್ರಮಾಣ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ಪ್ರಗತಿ ಹಾದಿಯಲ್ಲಿ ಹಿಂದೆ ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದಕ್ಕೆ ಸರ್ಕಾರದಿಂದ ಬಂದಿರುವಂತಹ ಉತ್ತರ 'ಹೌದು' ಎಂದು.

ಯೋಜನಾ ವೆಚ್ಚದ ಪ್ರಮಾಣದಲ್ಲಾಗಲಿ, ಯೋಜನಾ ವೆಚ್ಚದ ದರದ ಏರಿಕೆಯಲ್ಲಾಗಲಿ ಅಂಕಿ–ಅಂಶಗಳನ್ನು ಪರಿಶೀಲಿಸಿದಾಗ ಈ ರಾಜ್ಯ ಅತ್ಯಂತ ಪ್ರಗತಿಶೀಲವಾಗಿರುವುದಷ್ಟೇ ಅಲ್ಲ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಪ್ರಗತಿ ಪಥದಲ್ಲಿರುವುದು ನಮ್ಮ ಕಣ್ಣಿಗೆ ಕಾಣುವುದಿಲ್ಲ. ಆದುದರಿಂದ, ಈ ಪದವನ್ನು ಉಪಯೋಗಿಸುವಾಗ ರಾಜ್ಯ ಸರ್ಕಾರದವರು ಯಾವುದನ್ನು ಗಮನದಲ್ಲಿಟ್ಟುಕೊಂಡು ಇದನ್ನು ಬಳಸಿದ್ದಾರೋ ನನಗಂತೂ ಗೊತ್ತಿಲ್ಲ. ಆದರೆ, ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ರಾಜ್ಯ ಸರ್ಕಾರದವರು ಸಿದ್ಧಮಾಡಿದಂಥ ಆರ್ಥಿಕ ಸಮೀಕ್ಷೆಯ ಪ್ರಕಾರ ಯೋಜನಾ ವೆಚ್ಚದ ದರದ ಏರಿಕೆ ಆಧಾರದ ಮೇಲೆ ಮತ್ತು ಯೋಜನಾ ವೆಚ್ಚದ ಒಂದು ಪ್ರಮಾಣವನ್ನು ಆಧಾರವಾಗಿಟ್ಟುಕೊಂಡು ನಾವು ಆಲೋಚನೆ ಮಾಡಿದಾಗ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿರುವಂತೆ, ಪ್ರಗತಿಶೀಲ ರಾಜ್ಯವೆಂಬುದು ಸರಿಯಲ್ಲವೆನ್ನುವುದು ನನ್ನ ಭಾವನೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ಮತ್ತೊಂದು ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಅತ್ಯಂತ ದುರಂತ ಘಟನೆಗಳಲ್ಲೊಂದು ಅಯೋಧ್ಯೆಯಲ್ಲಿ 1992ರ ಡಿಸೆಂಬರ್,

6ನೇ ತಾರೀಖಿನಂದು ಸಂಭವಿಸಿತು, ಇದರ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಯಿತು. ಕೋಮು ಹಿಂಸಾಚಾರವನ್ನು ನಿಯಂತ್ರಿಸಲು ನನ್ನ ಸರ್ಕಾರ ತಕ್ಷಣದ ಕ್ರಮಗಳನ್ನು ಕೈಗೊಂಡಿದ್ದರ ಪರಿಣಾಮ ತೀವ್ರತರದ ಹಾನಿಯ ಪ್ರಮಾಣ ಕಡಿಮೆಯಾಗುವಂತೆ ನೋಡಿಕೊಂಡಿದ್ದು ಎಂದು ಹೇಳಿದ್ದಾರೆ. ಈ ವಿಷಯದಲ್ಲಿ ನಿನ್ನೆಯಿಂದ ನನ್ನ ಮಿತ್ರರಾದಂಥ ಶ್ರೀಮಾನ್ ಯಡಿಯೂರಪ್ಪನವರು ಮಾಡಿದ ಭಾಷಣವನ್ನು ನಾನು ಕುಳಿತುಕೊಂಡು ಆಲಿಸಿದೆ. ಅವರು ಕೆಲವು ಸಾರಿ ಭ್ರಮೆಗೊಳಗಾಗುತ್ತಾರೆ. ನಮ್ಮೆಲ್ಲರಿಗೂ ನೇರವಾಗಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿರುವಂಥವರಿಗೆ ಒಂದು ಮಾತನ್ನು ಹೇಳಿದರು. ಏನೆಂದರೆ, ವಿರೋಧ ಪಕ್ಷದವರು ಸರ್ಕಾರವನ್ನು ಟೀಕಿಸುವಂಥ ನೈತಿಕ ಹಕ್ಕು ಇಲ್ಲವೆಂದರು. ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಯಡಿಯೂರಪ್ಪನವರು, ಈಶ್ವರಪ್ಪನವರು, ರುಕ್ಮಯ್ಯ ಪೂಜಾರಿ ಮತ್ತು ನಾರಾಯಣರಾವ್ ಮನಹಳ್ಳಿ ಈ ನಾಲ್ಕು ಜನರು ಏಕೆ ಬಿಜೆಪಿ ಪಕ್ಷವನ್ನು ಸೇರಿದ್ದಾರೋ, ಆ ಪಕ್ಷವನ್ನು ಏತಕ್ಕೆ ಒಪ್ಪಿಕೊಂಡಿದ್ದಾರೋ ನನಗಂತೂ ಗೊತ್ತಿಲ್ಲ, ಒಪ್ಪಿಕೊಳ್ಳುವಂಥ ಪರಿಸ್ಥಿತಿಯೂ ಇಲ್ಲ. ಶ್ರೀಮಾನ್ ಯಡಿಯೂರಪ್ಪನವರಿಗೆ ತಮ್ಮ ಮುಖಾಂತರ ಒಂದು ಪ್ರಶ್ನೆ ಕೇಳಿ ಉತ್ತರವನ್ನು ನಿರೀಕ್ಷಿಸಿದ್ದೇನೆ. ಈಗ ಸದನದಲ್ಲಿ ಅವರು ಉಪಸ್ಥಿತರಿಲ್ಲ. ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಂಥ ಶ್ರೀ ದೇಶಪಾಂಡೆ ಹಾಗೂ ಸಿಂಧ್ಯರವರಿಗೆ ಕಾಂಗ್ರೆಸ್ಸನ್ನು ವಿರೋಧ ಮಾಡುವಂಥ ನೈತಿಕ ಹಕ್ಕು ಇಲ್ಲವೆಂದು ಹೇಳಿದ ಇವರಿಗೆ ಈ ರಾಷ್ಟ್ರದ ಸಂಸತ್ತಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ನಡೆಸುವುದಕ್ಕೆ ಇಷ್ಟ ಪಡುತ್ತಾರೆಯೇ ? ಇದರ ಬಗ್ಗೆ ಅವರು ಉತ್ತರ ಕೊಡಲಿ. ಇವರ ಪಕ್ಷಕ್ಕೆ ಸೇರಿದಂಥ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನಯ್ಯನವರು ಭಾರತ ಸಂವಿಧಾನದ ಉಪಾಧ್ಯಕ್ಷರಾಗಿ ಸರ್ಕಾರಿ ವಾಹನದಲ್ಲಿ ಓಡಾಡುತ್ತಿದ್ದಾರೆ, ಸರ್ಕಾರದ ಎಲ್ಲಾ ಸವಲತ್ತುಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ, ಯಾರ ಕೃಪಾಕಟಾಕ್ಷದಿಂದ ಈ ಸವಲತ್ತು ಸಿಕ್ಕಿತು ? ಶ್ರೀಮಾನ್ ಯಡಿಯೂರಪ್ಪನವರು ಇದಕ್ಕೆ ಉತ್ತರಿಸುತ್ತಾರೆಯೇ ? ಇಲ್ಲಿ ಬೇಕಾದಷ್ಟು ಮಾತನಾಡಬಹುದು. ಸರ್ಕಾರದ ಎಲ್ಲಾ ಸವಲತ್ತುಗಳನ್ನು ಹೊಂದಿರುವಂಥ ಉಪಾಧ್ಯಕ್ಷರು ಗೂಟದ ಕಾರನ್ನು ಉಪಯೋಗಿಸುವುದಕ್ಕೆ, ಈ ಸವಲತ್ತನ್ನು ಅವರ ಕೃಪೆಯಿಂದ ಪಡೆದಿದ್ದು. ಶಿವರಾಜ್ ಪಾಟೀಲರನ್ನು ಅಧ್ಯಕ್ಷರನ್ನಾಗಿ ಮಾಡುವುದಕ್ಕೆ ಇವರು ಮತ್ತೊಂದನ್ನು ಕಾರಣ ಕೊಟ್ಟರು. 1969ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದಂಥ ನಾನು ಇವೊತ್ತು ಕಾಂಗ್ರೆಸ್ಸಿಗೆ ತಾತ್ವಿಕವಾಗಿ ವಿರೋಧವಾಗಿದ್ದರೂ ಹೇಳದೇ ಇರುವಂಥ ನಿರಂಕುಶ ಪ್ರಭುತ್ವಕ್ಕೆ ಹೊಂದಿಕೊಳ್ಳಲಾರದೆ ಆ ಪಕ್ಷವನ್ನು ತ್ಯಜಿಸಿ ಬಂದಿದ್ದೇನೆ.

ನನಗೆ ಕಾಂಗ್ರೆಸ್‌ನ್ನು ವಿರೋಧ ಮಾಡತಕ್ಕಂಥ ನೈತಿಕ ಹಕ್ಕು ಇಲ್ಲ ಎನ್ನತಕ್ಕ ಪಾಠವನ್ನು ಬಿ.ಜೆ.ಪಿ.ಯ ಸದಸ್ಯರು ಹೇಳಬೇಕಾಗಿಲ್ಲ. ಯಾರಲ್ಲಿ ಹೊಂದಾಣಿಕೆಯಾಗಿದೆ ಎಂದರೆ ಅವರು ಇವರಲ್ಲಿ ಹೊಂದಾಣಿಕೆಯಾಗಿದ್ದಾರೆ, ಇದಕ್ಕೆ ಅವರು ಉತ್ತರವನ್ನು ಹೇಳುತ್ತಾರೆಯೆ ? ಈ ರಾಷ್ಟ್ರದಲ್ಲಿ ಡಿಸೆಂಬರ್ 1992ರ 6ನೇ ತಾರೀಖಿನಂದು ನಡೆದಂಥ ಘಟನೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಬಂದಿದೆ. ಈ ದುರ್ಘಟನೆಯ ಹಿನ್ನೆಲೆಯಲ್ಲಿ ಮೊನ್ನೆ ಬಿ.ಜೆ.ಪಿ.ಯವರ ಸಭೆಯನ್ನು ನಿಷೇಧ ಮಾಡಿರತಕ್ಕದ್ದು ಮತ್ತು ಅನೇಕ ಬಿ.ಜೆ.ಪಿ. ಸದಸ್ಯರುಗಳನ್ನು ಬಂಧಿಸಿರತಕ್ಕದ್ದು, ಆ ಕ್ರಮವನ್ನು ನಾನು ಸಮರ್ಥಿಸುತ್ತೇನೆ. ಅದು ರಾಷ್ಟ್ರಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಬಿ.ಜೆ.ಪಿ. ಸದಸ್ಯರ ಬಂಧನ ಮತ್ತು ದೆಹಲಿಯಲ್ಲಿ ನಡೆಯಬೇಕಾಗಿರತಕ್ಕ ಸಭೆಯ ನಿಷೇಧವನ್ನೂ ಸಹ ನಾನು ಸಮರ್ಥಿಸುತ್ತೇನೆ. ಅದಕ್ಕಾಗಿ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಅಭಿನಂದಿಸುತ್ತೇನೆ. ಕಾರಣ ಏನೆಂದರೆ ಡಿಸೆಂಬರ್ 6 ರಂದು ಬಿ.ಜೆ.ಪಿ.ಯವರು ನಡೆದುಕೊಂಡಂಥ ನಡವಳಿಕೆ, ಅವರು ನಂಬಿಕೆ ದ್ರೋಹ ಮಾಡಿದ್ದಾರೆ. ರಾಷ್ಟ್ರದ ಪ್ರಧಾನಿಯವರಿಗೆ ನಾವು ಭಜನೆಯನ್ನು ಮಾಡುತ್ತೇವೆಂದು ಮಾತನ್ನು ಕೊಟ್ಟು ಅಯೋಧ್ಯೆಯಲ್ಲಿ ಸೇರಿದ್ದ ಜನರು ಭಜನೆಯನ್ನು ಮಾಡುವುದನ್ನು ಬಿಟ್ಟು ಮಂದಿರವನ್ನು ಹೊಡೆದು ಹಾಕಿದರು, ಮಸೀದಿಯನ್ನು ಹೊಡೆದು ಹಾಕಿದರು.

ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ಮುಂದೆ ಉತ್ತರ ಪ್ರದೇಶದ ಕಲ್ಯಾಣಸಿಂಗ್‌ರವರ ಸರ್ಕಾರದ ಪ್ರತಿನಿಧಿಯಿಂದ ಕೋರ್ಟ್‌ನೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದ್ದಾರೆ, ನಾವು ಭಜನೆ ಮಾಡುತ್ತೇವೆ, ಕೀರ್ತನೆ ಹೇಳುತ್ತೇವೆ, ಜೈ ರಾಮ್, ಶ್ರೀರಾಮ್ ಎಂದು ಹೇಳುತ್ತೇವೆ ಅದಕ್ಕೆ ಇನ್ನೇನನ್ನೂ ಮಾಡುವುದಿಲ್ಲವೆಂದು ಹೇಳಿ, ತಮ್ಮ ವಾಗ್ದಾನವನ್ನು ಮುರಿದು ನ್ಯಾಯಾಲಯಕ್ಕೆ ಕೊಟ್ಟಂಥ ವಚನಕ್ಕೆ ತಪ್ಪಿದ್ದಾರೆ. ಆದ್ದರಿಂದ ಇವರು ನಂಬಿಕೆಗೆ ಅನರ್ಹರು, ಇವರನ್ನು ನಂಬಿಕೊಂಡರೆ ಇವರನ್ನು ಮತ್ತೆ ದೆಹಲಿಗೆ ಕಳುಹಿಸಿದ್ದರೆ ಬಹುಶಃ ಇಲ್ಲೂ ಸಹ ಮತ್ತೊಂದು ಮಂದಿರವನ್ನು, ಮಸೀದಿಯನ್ನು ಹೊಡೆದು ಕುಚೇಷ್ಟೆಯನ್ನು ಮಾಡುತ್ತಿದ್ದರು. ಆದುದರಿಂದ ಈ ಸಭೆಯನ್ನು ನಿಷೇಧಿಸಿ, ಬಿಜೆಪಿಯ ಸದಸ್ಯರನ್ನು ಬಂಧನದಲ್ಲಿಟ್ಟಿರತಕ್ಕದ್ದನ್ನು ನಾನು ಅತ್ಯಂತ ಸಮರ್ಥಿಸುತ್ತೇನೆ. ಈ ವಿಷಯದಲ್ಲಿ ನಾನು ರಾಜ್ಯದಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ ಡಿಸೆಂಬರ್ 6ರ ಘಟನೆಯು ಆದ ಮೇಲೆ ರಾಜ್ಯದ ಅನೇಕ ಊರುಗಳಲ್ಲಿ ದುರ್ಘಟನೆ ನಡೆದು ಎಷ್ಟೋ ಆಸ್ತಿಪಾಸ್ತಿಗಳು ನಷ್ಟವಾಗಿದೆ, ಸರ್ಕಾರದ ಲೆಕ್ಕದ ಪ್ರಕಾರವೇ ಸುಮಾರು 78ಜನರು ಮರಣ ಹೊಂದಿದ್ದಾರೆ, ಅವರುಗಳ ಮನೆಯಲ್ಲಿ ನಾವು ಇಂದು ವಿಧವೆಯರನ್ನು ನೋಡಬಹುದು, ಈ 78 ಜನರ ಮನೆಯಲ್ಲಿ ತಂದೆ ತಾಯಿಗಳು ಮಕ್ಕಳನ್ನು ಕಳೆದುಕೊಂಡಿರುವುದನ್ನು ನೋಡಬಹುದು, ಅಣ್ಣತಮ್ಮಂದಿರನ್ನು ಕಳೆದುಕೊಂಡಿರತಕ್ಕ ಅಕ್ಕತಂಗಿಯರನ್ನು ನೋಡಬಹುದು, ಘಟನೆ ನಡೆಯಿತು, ಸತ್ತವರಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟೆವು, ಆದರೆ ಅಲ್ಲಿಗೇ ನಮ್ಮ ಜವಾಬ್ದಾರಿ ಮುಗಿಯಿತೆ ? ಈ ಸರ್ಕಾರಕ್ಕೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಅದಕ್ಕಿಂತ ಬೇರೆ ಅನ್ಯಾಯದ ಘಟನೆ ನಡೆದಿದ್ದರೆ ಅದಕ್ಕೆ ಬಿ.ಜೆ.ಪಿ.ಯವರೆಷ್ಟು ಜವಾಬ್ದಾರರೋ ಅಷ್ಟೆ ಪ್ರಧಾನಿಯವರೂ ಕೂಡ ಜವಾಬ್ದಾರರು. ಅದೇ ರೀತಿ ಕರ್ನಾಟಕದಲ್ಲಿ ನಡೆದಿರತಕ್ಕ ಘಟನೆಗಳಿಗೆ ರಾಜಕೀಯ ಪಕ್ಷಗಳು ದೇಣಿಗೆಯನ್ನು ಕೊಟ್ಟಿದ್ದಾರೆ. ರಾಜಕಾರಣಿಗಳು ದೇಣಿಗೆಯನ್ನು ಕೊಟ್ಟಿದ್ದಾರೆ. ಶಾಸಕರು ದೇಣಿಗೆಯನ್ನು ಕೊಟ್ಟಿದ್ದಾರೆ. ಇವೆಲ್ಲಕ್ಕೂ ಹೆಚ್ಚಾಗಿ ಈ ಅಧಿಕಾರಿಗಳ ಕರ್ತವ್ಯ ಲೋಪವೂ ಸಹ ಈ ದುರ್ಘಟನೆಗೆ ಕಾರಣವಾಗಿದೆ. ಆದುದರಿಂದ ಯಾವ ಊರಿನಲ್ಲಿ ಈ ದುರ್ಘಟನೆ ನಡೆಯಿತು ? ಇದಕ್ಕೆ ಕಾರಣಕರ್ತರಾರು ? ಎಂಬುದನ್ನು ಪತ್ತೆ ಹಚ್ಚಲು ಇದರ ಬಗ್ಗೆ ಸರ್ಕಾರದ ಪರವಾಗಿ ಯಾರಾದರೂ ಇಲ್ಲಿ ಇದ್ದರೆ ಅವರಿಗೆ ಒತ್ತಾಯ ಮಾಡುತ್ತಿದ್ದೇನೆ.

ಬಹುಶಃ ಕಾಂಗ್ರೆಸ್ ಕೂಡ ಆ ರೀತಿ ಒತ್ತಾಯ ಇದೆ ಎಂದು ನನ್ನ ಭಾವನೆ. ಅನೇಕ ಕಾಂಗ್ರೆಸ್ ಮಿತ್ರರಲ್ಲಿ ನಡೆದ ಸ್ಥಳದಲ್ಲಿ ಅದು ನಡೆಯುವುದಕ್ಕೆ ಯಾರು ಕಾರಣಕರ್ತರು ಎಂಬ ವಿಷಯದಲ್ಲಿ ಒಂದು ವಿಚಾರಣೆ ಆಗಬೇಕೆಂಬ ಒತ್ತಾಯ ಏನಿದೆ ಆ ಸ್ನೇಹಿತರ ಒತ್ತಾಯಕ್ಕೆ ನಾನು ಧ್ವನಿಗೂಡಿಸಿ ಸರ್ಕಾರವನ್ನು ಪ್ರಾರ್ಥಿಸುತ್ತಿದ್ದೇನೆ, ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಈ ದುರ್ಘಟನೆಗಳಿಗೆ ಕಾರಣ ಯಾರು ಎಂಬುದನ್ನು ಕಂಡುಹಿಡಿದು ಅವರಿಗೆ ಶಿಕ್ಷೆ ಕೊಡುವಂಥ ಕೆಲಸವನ್ನು ಸರ್ಕಾರ ಮಾಡಬೇಕು. ನನ್ನ ಸ್ನೇಹಿತರಾದ ಯಡಿಯೂರಪ್ಪನವರು ನಿನ್ನೆ ಪ್ರಸ್ತಾಪ ಮಾಡುತ್ತಾ, ಜಯಪ್ರಕಾಶ್ ನಾರಾಯಣ್ ಮತ್ತು ಹಿಂದಿನ ಸದನದ ಸದಸ್ಯರು ಮತ್ತು ಮಂತ್ರಿಗಳು ಆಗಿದ್ದ ಹಾವನೂರ್ ಅದರ ಹೆಸರು ತೆಗೆದರು. ಚರಿತ್ರೆ ಎಷ್ಟು ವಿಚಿತ್ರವಾದುದು ಎಂದರೆ ಜಯಪ್ರಕಾಶ್ ನಾರಾಯಣ್ ಅವರನ್ನು ಜೈಲಿಗೆ ಕಳುಹಿಸಿದಾಗ ಹಾವನೂರ್ ಅವರು ಕಾಂಗ್ರೆಸ್ ಪಕ್ಷದ ಮಂತ್ರಿಮಂಡಲದಲ್ಲಿ ಮಂತ್ರಿಗಳು. ಈ ರಾಷ್ಟ್ರದ ತುರ್ತು ಪರಿಸ್ಥಿತಿ ಕಾಲದಲ್ಲಿ ದೇವರಾಜ ಅರಸುರವರ ಮಂತ್ರಿಮಂಡಲದಲ್ಲಿ ಹಾವನೂರು ಅವರು ಮಂತ್ರಿಗಳಾಗಿದ್ದರು. ಅವರು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ .....

ಶ್ರೀ ಕೆ.ಹೆಚ್. ರಂಗನಾಥ್:– ಆಗ ಹಾವನೂರ್ ಅವರು ಮಂತ್ರಿಗಳಾಗಿರಲಿಲ್ಲ. ಅವರು ಮಂತ್ರಿಗಳಾಗಿದ್ದು 1978ರಲ್ಲಿ.

ಶ್ರೀ ವೈ.ಕೆ. ರಾಮಯ್ಯ:– ಸರಿ 1978ರಲ್ಲಿ, 1975ರಲ್ಲಿ ಯಾವ ಪಕ್ಷದ ಸರ್ಕಾರ ಕೇಂದ್ರದಲ್ಲಿ

ಆಡಳಿತ ಮಾಡುತ್ತಿತ್ತೋ ಆ ಸರ್ಕಾರದ ಪಕ್ಷದ ಸದಸ್ಯರಾಗಿದ್ದರು. ಅದನ್ನು ಮರೆತು ಯಡಿಯೂರಪ್ಪನವರು ಹಾವನೂರ್ ಅವರು ಮತ್ತು ಜಯಪ್ರಕಾಶ್ ನಾರಾಯಣ್ ಅವರನ್ನು ಹೊಂದಿಕೆ ತರುವುದಕ್ಕೆ ಪ್ರಯತ್ನ ಮಾಡಿದ್ದುದು ಸರಿಯಲ್ಲವೆಂದು ನನ್ನ ಭಾವನೆ. ಮತ್ತೊಂದು ವಿಷಯ. ಅಲ್ಪ ಸಂಖ್ಯಾತರ ಸಮಸ್ಯೆಗೆ ಅವರ ಅಭಿವೃದ್ಧಿಗೆ ವಕ್ಫ್ ಬೋರ್ಡ್ ಮುಖಾಂತರ ಹಣ ಸಹಾಯ ಕೊಡುವ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಿದ್ದಾರೆ. ಸರ್ಕಾರಕ್ಕೆ ಪ್ರಾರ್ಥಿಸುವುದು ಇಷ್ಟೆ. ಈ ರಾಷ್ಟ್ರದ ಅಲ್ಪ ಸಂಖ್ಯಾತರಿಗೆ ಬೇಕಾಗಿರುವುದು ಹಣ ಅಲ್ಲ, ಈ ರಾಷ್ಟ್ರದ ಅಲ್ಪ ಸಂಖ್ಯಾತರಿಗೆ ಆಶ್ರಯ ಯೋಜನೆಯ ನಿವೇಶನ ಅಲ್ಲ. ಈ ರಾಷ್ಟ್ರ ಅಲ್ಪ ಸಂಖ್ಯಾತರಿಗೆ ಬೇಕಾಗಿರುವುದು ಮಸೀದಿ ಕಟ್ಟಲಿಕ್ಕೆ ಹಣ ಅಲ್ಲ. ನನ್ನ ಪ್ರಕಾರ ಅಲ್ಪ ಸಂಖ್ಯಾತರಿಗೆ ಅತ್ಯಂತ ಅವಶ್ಯವಾಗಿ ಬೇಕಾಗಿರುವುದು ನೆಮ್ಮದಿಯ ಬದುಕು ಮತ್ತು ಬದುಕುವ ಪರಿಸರ. ನಿಮ್ಮ ಆರ್ಥಿಕ ಯೋಜನೆಗಳು ಅವರಿಗೆ ಆಮೂಲಾಗ್ರವಾದ ಅಭಿವೃದ್ಧಿಗೆ ಎಷ್ಟು ಅವಶ್ಯಕವೋ ಇದಲ್ಲಕ್ಕಿಂತ ಹೆಚ್ಚಾಗಿ ನೆಮ್ಮದಿಯಾಗಿ ರಾಷ್ಟ್ರದಲ್ಲಿ ಬದುಕುವುದಕ್ಕೆ ಬೇಕಾದ ಪರಿಸ್ಥಿತಿಯನ್ನು ಆ ಪರಿಸರವನ್ನು ಸನ್ನಿವೇಶವನ್ನು ಸೃಷ್ಟಿ ಮಾಡಿಕೊಟ್ಟರೆ ಬಹುಶಃ ಅದಕ್ಕಿಂತ ದೊಡ್ಡ ಯಾವ ದೇಣಿಗೆ ಈ ರಾಷ್ಟ್ರದ ಅಲ್ಪ ಸಂಖ್ಯಾತರಿಗೆ ಬೇಕಾಲಿಲ್ಲವೆಂದು ನಾನು ಭಾವಿಸಿಕೊಳ್ಳುತ್ತೇನೆ. ಮತ್ತೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದಿವಸ ಈ ಸದನದಲ್ಲಿ ನಿನ್ನೆಯಿಂದ ಭಾರತೀಯ ಜನತಾ ಪಕ್ಷದ ಸದಸ್ಯರು ರಾಮನನ್ನು ಹಿಡಿದುಕೊಂಡು ಜಗ್ಗುತ್ತಿರುವುದು ನೋಡಿದರೆ ಆಶ್ಚರ್ಯವಾಗುತ್ತದೆ. ನನ್ನ ಹೆಸರು ರಾಮ ಅಲ್ಲ, ಬೆಣಚಕಲ್ಲಯ್ಯ ಎಂದು ಹುಟ್ಟು ಹೆಸರು. ಬಹಳ ಜನರಿಗೆ ಅದು ಗೊತ್ತಿಲ್ಲ. ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ನಾನು ಹುಟ್ಟುವ ವೇಳೆಗೆ ಮನೆಯಲ್ಲಿ ಆಧುನಿಕತೆ ಗಾಳಿ ಬೀಸಿದೆಯೋ ಏನೋ ಎಂದು ಕಲ್ಲ–ಪಲ್ಲ ಬೇಡ ಎಂದು ರಾಮಯ್ಯ ಎಂದು ಕರೆದಿದ್ದಾರೆ. ಈ ರಾಮನ ಹೆಸರು ದುರ್ಬಲವಾಗುತ್ತಿರುವುದು ನೋಡಿದರೆ ರಾಷ್ಟ್ರದ ಹೆಸರಿನಲ್ಲಿ ಮತೀಯ ಭಾವನೆ ಕೆರಳಿಸುವ ಕುಚೋದ್ಯ ನಡೆಯುತ್ತಿದೆ ಎಂದರೆ, ರಾಮನ ಹೆಸರಿನಲ್ಲಿ ಈ ರಾಷ್ಟ್ರದ ಜನರಿಗೆ ಮತೀಯ ಪಿತ್ತವನ್ನು ಕುಡಿಸಿ ಆ ಪಿತ್ತದ ಅಮಲಿನಲ್ಲಿ ಕುಚೋದ್ಯ ನಡೆಯುತ್ತಿದೆ ಎನ್ನುವುದಾದರೆ ಆ ಶ್ರೀರಾಮ ಹುಟ್ಟಿರಲಿಲ್ಲ ಅನ್ನಿಸುತ್ತದೆ.

ಇಂಥ ಒಂದು ಕೆಟ್ಟ ವ್ಯಕ್ತಿಯ ಹೆಸರನ್ನು ಪಡೆದುಕೊಳ್ಳುವುದಕ್ಕೆ ನಾಚಿಕೆಯಾಗುತ್ತದೆ. ರಾಮಾಯಣಗಳು ಇವೆ, ನಾವು ಯಾವುಯಾವುದೋ ರಾಮಾಯಣಗಳನ್ನು ನೋಡುತ್ತಿದ್ದೆವು. ಇತ್ತೀಚಿನ ದಿವಸಗಳಲ್ಲಿ ಇಟ್ಟಿಗೆ ರಾಮಾಯಣ ಬರುತ್ತಿದೆ, ಚಪ್ಪಲಿ ರಾಮಾಯಣ ಬರುತ್ತಿದೆ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ ಇವರು ರಾಮಾಯಣದ ಹೆಸರನ್ನು ಹೇಳಿ, ರಾಮನ ಹೆಸರನ್ನು ಹೇಳಿ ಆತನ ವ್ಯಕ್ತಿತ್ವಕ್ಕೆ, ಆತನ ಆದರ್ಶಕ್ಕೆ ಆತನ ಒಂದು ಬದುಕಿಗೆ ಬಹುಶಃ ಅಪಚಾರ ಮಾಡುತ್ತಿದ್ದಾರೆಂದು ನನ್ನ ಭಾವನೆಯಾಗಿದೆ. ನಮ್ಮ ಹಳ್ಳಿಯ ಕಡೆ ಶನಿದೇವರ ಫೋಟೋ ಇಟ್ಟುಕೊಂಡು ತಟ್ಟೆ ಇಟ್ಟುಕೊಂಡು ಜನ ಕಾಸನ್ನು ವಸೂಲು ಮಾಡುವುದಕ್ಕೆ ಹೋಗುತ್ತಾರೆ. ಹಾಗೆ ಇವರು ಶ್ರೀರಾಮನ ಫೋಟೋ ಹಿಡಿದುಕೊಂಡು ಹೋಗುತ್ತಿದ್ದಾರೆ. ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ವಿನಾ ಕಾರಣಕ್ಕಾಗಿ ಕೊಲ್ಲಬೇಕು, ವಿನಾಕಾರಣಕ್ಕಾಗಿ ಮತ್ತೊಬ್ಬನನ್ನು ದ್ವೇಷ ಮಾಡಬೇಕೆಂದು ಹೇಳುವ ಹಿಂದೂ ಧರ್ಮಕ್ಕೆ ಧಿಕ್ಕಾರ ಎಂದು ನಾನು ಹೇಳಬೇಕಾಗುತ್ತದೆ. ಪಂಚಮ ಶಿಶು ಒಂದು ನೀರಲ್ಲಿ ಮುಳುಗುತ್ತಿದ್ದರೆ ಮನುಧರ್ಮ ಶಾಸ್ತ್ರವನ್ನು ಓದಿಕೊಂಡು ಬರುತ್ತೇನೆಂದು ಹೋಗುತ್ತಾರೆ. ನೀರಿನಲ್ಲಿ ಮುಳುಗುತ್ತಿರುವಂಥ ಮಗುವನ್ನು ಉಳಿಸುವುದು ಮನುಷ್ಯನಾದ ನನ್ನ ಕರ್ತವ್ಯ, ನನ್ನ ಧರ್ಮ ಎಂದು ಮಗುವನ್ನು ಉಳಿಸುವ ಪ್ರಯತ್ನ ಮಾಡದೆ ಮನುಧರ್ಮಶಾಸ್ತ್ರವನ್ನು ಓದಿಕೊಂಡು ಬರುತ್ತೇನೆಂದರೆ, ಇಂಥ ಒಂದು ಧರ್ಮ ನಿಮ್ಮ ಸ್ವಾರ್ಥಕ್ಕಾಗಿ, ನಿಮ್ಮ ರಾಜಕೀಯ ದುರ್ಲಾಭಕ್ಕೆ ಸಹಾಯ ಮಾಡುತ್ತದೆನ್ನುವುದಾದರೆ ನಾನಂತು ಆ ಧರ್ಮದಿಂದ ಈಚೆಗೆ ಬರಬೇಕೆನ್ನುವಷ್ಟು

ರೋಸಿಹೋಗಿದ್ದೇನೆ. ಆ ಧರ್ಮದ ಹೆಸರಿನಲ್ಲಿ ರಾಜಕೀಯ ದುರ್ಲಾಭ ಪಡೆಯಬೇಕೆನ್ನುವ ಆಸೆ ಇದ್ದರೆ ಆ ಧರ್ಮದಿಂದ ನಿಮ್ಮ ಮತೀಯ ಭಾವನೆಯನ್ನು ಕೆರಳಿಸಿ ಅಧಿಕಾರ ಗದ್ದುಗೆಯನ್ನು ಏರಬೇಕೆಂಬ ಆಸೆ ಇದ್ದರೆ ಅದು ಸಾಧ್ಯವಿಲ್ಲವೆನ್ನುವ ಎಚ್ಚರಿಕೆಯ ಮಾತನ್ನು ಹೇಳಲಿಚ್ಛಿಸುತ್ತೇನೆ. ಅದಕ್ಕೆ ಕಾರಣ ಇಷ್ಟೇ, ಯಾವುದೇ ಬಾವನೆಯನ್ನು ಕೆರಳಿಸಿ ವ್ಯಕ್ತಿಯನ್ನು ಪ್ರಚೋದಿಸಿ ಎಳೆದುಕೊಂಡು ಹೋಗಲಿಕ್ಕೆ ಸಾಧ್ಯವಿಲ್ಲ. ಸಮುದ್ರದ ಅಲೆಗಳು ಶಾಶ್ವತವಾಗಿ ಯಾವಾಗಲೂ ಬರುತ್ತಿರುತ್ತವೆ, ನಿರಂತರವಾಗಿ ಬರುತ್ತಿರುತ್ತವೆ. ಆದರೆ ತೋಟದಲ್ಲಿರುವಂಥ ಒಂದು ಬಾವಿಯ ನೀರಿಗೆ ಒಂದು ಕಲ್ಲನ್ನು ಎಸೆದರೆ ಅದರ ಅಗಳು ಕ್ಷಣ ಮಾತ್ರ. ಹಾಗೆ ನಮ್ಮ ಭಾರತೀಯ ಜನತಾಪಕ್ಷದ ಮಿತ್ರರು ಮಾಡುತ್ತಿರುವುದು ಅದೇ ಕೆಲಸ ಸಣ್ಣ ಒಂದು ನೀರಿನ ಕೊಳಕ್ಕೆ ಕಲ್ಲನ್ನು ಎಸೆದಾಗ ಅಲೆಅಲೆಗಳು ಏನು ಬರುತ್ತವೆ. ಅದು ಅಶಾಶ್ವತವಾದುದು ಮತ್ತು ಅದು ಬೇಗ ನಾಶವಾಗುವಂಥದ್ದು. ಸಮುದ್ರದ ಅಲೆಗಳು ಶಾಶ್ವತ. ಅಶಾಶ್ವತ ಅಲೆಗಳನ್ನು ಸೃಷ್ಟಿ ಮಾಡಿ ಅದರ ದುರ್ಲಾಭ ಪಡೆಯಬೇಕೆಂದರೆ ಬಹುಶಃ ಇದರಿಂದ ಏನೂ ಕಾರ್ಯವನ್ನು ಸಾಧನೆ ಮಾಡಲಿಕ್ಕಾಗುವುದಿಲ್ಲವೆಂದು ನನ್ನ ಭಾವನೆ. ಪ್ರಜ್ಞಾಪೂರ್ವಕವಾಗಿ ಈ ಸದನದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಯಾವುದೇ ಒಂದು ಕಾಲಕ್ಕೆ ಈ ಮತೀಯ ಭಾವನೆಯ ಪಿತ್ತವನ್ನು ನೆತ್ತಿಗೆ ಏರಿಸಿ ಜನರ ಬುದ್ಧಿಯನ್ನು ಕೆಡಿಸಿ, ಓಟನ್ನು ಪಡೆದು ಈ ರಾಜ್ಯದಲ್ಲಿ ಏನಾದರೂ ಭಾರತೀಯ ಪಕ್ಷದ ಸರ್ಕಾರ ಅಧಿಕಾರಕ್ಕೆ ಬರುವಂಥ ಸಂದರ್ಭ ಬಂದರೆ ನಾನು ಕಾಂಗ್ರೆಸ್‌ನವರಿಗೆ ಬೆಂಬಲವನ್ನು ಕೊಡುತ್ತೇನೆ. ಇವೆರಡರಲ್ಲಿ Congress is the lesser evil, ಯಾವುದು ಕಡಿಮೆ ಅಪಾಯಕಾರಿ ಎಂದು ಯೋಚನೆ ಮಾಡಿದಾಗ ಇವೆರಡೂ ಏನಾದರೂ ಅಧಿಕಾರಕ್ಕೆ ಬರುವಂಥ ಪ್ರಯತ್ನ ಮಾಡಿದರೆ ನಾನಂತೂ ಕಾಂಗ್ರೆಸ್‌ನವರ ಜೊತೆಯಲ್ಲಿ ಇರಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಈಗಲಾದರೂ ನೀವು ಜಾಸ್ತಿ ಜನರು ಬನ್ನಿ. ಇಂಥ ಬಾಷಣವನ್ನು ಮಾಡುವಾಗಲೂ ನಿಮ್ಮಲ್ಲಿ ಒಬ್ಬರೂ ಇಲ್ಲವಲ್ಲಾ ಎಂದು ನಮಗೆ ಚಿಂತೆಯಾಗಿದೆ. ಏಕೆಂದರೆ ನೀವು ಮೇಜನ್ನು ಕುಟ್ಟಿದರೂ ಶಬ್ದವೇ ಇಲ್ಲ. ಮೇಜನ್ನು ಕುಟ್ಟಲೂ ನಿಮ್ಮ ಜನರನ್ನು ಕರೆಯಿಸಿ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ರಾಜ್ಯವನ್ನು ಆಳುವುದಕ್ಕೆ ನಾವು ಬರುತ್ತೇವೆಂಬ ಭ್ರಮೆ ಏನಿದೆ ಅದು ಬೇಡ. ಆ ಎರಡನೆಯ ಕುರ್ಚಿಯಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವಷ್ಟು ವಿರೋಧ ಪಕ್ಷದ ನಾಯಕರಾಗುವಷ್ಟು ಜನರು ಗೆದ್ದು ಬರಲಿ. ಅಷ್ಟೇ ಸಾಕು. ಇದು ಅಷ್ಟು ಸುಲಭದ ಕೆಲಸವಲ್ಲ. ಅದೂ ಕೂಡ ಇವರಿಂದ ಸಾಧ್ಯವಾಗುವುದಿಲ್ಲ. ಇಷ್ಟನ್ನು ಹೇಳಿ ನನ್ನ ಸ್ನೇಹಿತರಲ್ಲಿ ಪ್ರಾರ್ಥಿಸುತ್ತೇನೆ. ದಯವಿಟ್ಟು ನಿಮ್ಮ ಭ್ರಮಾಲೋಕದಿಂದ ಹೊರಗಡೆ ಬನ್ನಿ ಈ ವಿಷಯದಲ್ಲಿ ಇಷ್ಟು ಹೇಳಿ, ನಮ್ಮ ಕರ್ನಾಟಕದಲ್ಲಿ ನಡೆದಿರುವ ಘಟನೆಗಳ ಬಗ್ಗೆ ವಿಚಾರಣೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡತಕ್ಕ ಕೆಲಸ ಮಾಡಬೇಕು ಎಂದು ಮತ್ತೊಮ್ಮೆ ಸರ್ಕಾರದಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು 9ನೇ ಪ್ಯಾರಾದಲ್ಲಿ ಸ್ವಚ್ಛ ಆಡಳಿತವನ್ನು ನೀಡಲು ಮತ್ತು ಆಡಳಿತ ವ್ಯವಸ್ಥೆಯಲ್ಲಿ ವಿಶ್ವಾಸಾರ್ಹತೆ ಹಾಗೂ ಪ್ರಾಮಾಣಿಕತೆ ಮೂಡಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತಿದೆ. ಕರ್ತವ್ಯ ನಿಷ್ಠೆ ಹಾಗೂ ದಕ್ಷತೆಯನ್ನು ರೂಢಿಸಿಕೊಳ್ಳಲು ಅಸಮರ್ಥರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂಥ ಮತ್ತು ಪ್ರಾಮಾಣಿಕ ಹಾಗೂ ದಕ್ಷ ಸರ್ಕಾರಿ ನೌಕರರಿಗೆ ಅವರ ಕಾರ್ಯಕ್ಷೇತ್ರದಲ್ಲಿ ಉತ್ಕೃಷ್ಟತೆ ಸಾಧಿಸಲು ಅಗತ್ಯವಾದ ಎಲ್ಲ ಪ್ರೋತ್ಸಾಹಗಳನ್ನೂ ನೀಡುವಂಥ ಹೊಸ ಆಡಳಿತಾತ್ಮಕ ಸಂಸ್ಕೃತಿಯೊಂದನ್ನು ಬೆಳೆಸಲಾಗುವುದು, ಅಡ್ಮಿನಿಸ್ಟ್ರೇಟಿವ್ ಕಲ್ಚರ್ ಅಂಗವಾಗಿ 1 ವಾರದಲ್ಲಿ ಎಲ್ಲಾ ಕಡತಗಳನ್ನೂ ನಾವು ರಿಲೀವಾರಿ ಮಾಡುತ್ತೇವೆ. ಆಡಳಿತಾತ್ಮಕ ಸಂಸ್ಕೃತಿಯನ್ನು ಕಾರ್ಯರೂಪಕ್ಕೆ

ತರುವುದಕ್ಕೆ ನಾವು ಅಧಿಕಾರಿಗಳಿಗೆ ಹೊಣೆಗಾರಿಕೆಯನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಮಾನ್ಯ ಮುಖ್ಯಮಂತ್ರಿಗಳ ಸರ್ಕಾರ ಮಾನ್ಯ ರಾಜ್ಯಪಾಲರ ಮುಖಾಂತರ ಹೇಳಿಸಿದೆ. ನಮ್ಮ ಆಡಳಿತದಲ್ಲಿ ಇರಬೇಕಾದಂಥ ಸಂಸ್ಕೃತಿ ಯಾವುದು ? ಈಗಿರತಕ್ಕ ಸಂಸ್ಕೃತಿ ಯಾವುದು ? ಆಡಳಿತ ಮಾಡತಕ್ಕ ನಾವು, ಈ ರಾಷ್ಟ್ರದ ಜನಸಾಮಾನ್ಯರ ತೆರಿಗೆ ಹಣದಿಂದ ಬದುಕುತ್ತಿರುವ ನಾವು ಜೀತದಾಳುಗಳು. ಈ ರಾಷ್ಟ್ರದ ಪ್ರಧಾನಿಯಿಂದ ಹಿಡಿದು 4ನೇ ದರ್ಜೆ ನೌಕರರವರೆಗೆ ಈ ಸಂಸ್ಕೃತಿ ರಕ್ತಗತವಾಗಿ ಬರಬೇಕು. Can this Government imbibe this, inject this culture? ಈ ರಾಷ್ಟ್ರದ ಪ್ರಧಾನಿಯಿಂದ ಹಿಡಿದು ನನ್ನನ್ನೂ ಸೇರಿಸಿಕೊಂಡು ರಾಷ್ಟ್ರದ ಬೊಕ್ಕಸದಿಂದ ಸಂಬಳವನ್ನು ಪಡೆಯುವ ನಾವೆಲ್ಲರೂ ತೆರಿಗೆಯನ್ನು ಕೊಡುವವರ ಗುಲಾಮರು ಎನ್ನತಕ್ಕ ಸಂಸ್ಕೃತಿಯನ್ನು ಈ ರಾಜ್ಯದಲ್ಲಿ ತರುವುದಾದರೆ ಅದನ್ನು ಸಂಸ್ಕೃತಿ ಎಂದು ಹೇಳಬಹುದು. ಇದು ರಾಷ್ಟ್ರದ ದುರಂತ, ಇಲ್ಲಿ ತೆರಿಗೆಯನ್ನು ಕೊಡತಕ್ಕ ಧಾತ ಯಾರಿದ್ದಾನೆ ಅವನು ತೆರಿಗೆಯ ಹಣದಿಂದ ಬದುಕುವ ನಮ್ಮ ಮುಂದೆ ಬಂದು ನಿಂತಾಗ ಆ ಚಿತ್ರ ಹೇಗಿರುತ್ತದೆಂದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಅವನು ತಹಸೀಲ್ದಾರನಾಗಿರಬಹುದು, ಬಿ.ಡಿ.ಓ. ಆಗಿರಬಹುದು. ತೆರಿಗೆಯನ್ನು ಕೊಡತಕ್ಕವರ ಬಗ್ಗೆ ಆಡಳಿತವನ್ನು ಮಾಡತಕ್ಕ ನಾವು ನಡೆದುಕೊಳ್ಳುವ ರೀತಿ, ಅವನನ್ನು ನಾವು ಕಾಣುವ ದೃಷ್ಟಿ ಎರಡನ್ನೂ ನೋಡಿದಾಗ ಬಹುಶಃ ನಮ್ಮ ಆಡಳಿತ ಸಂಸ್ಕೃತಿ ಬದಲಾವಣೆಯಾಗಬೇಕಾಗಿದೆ. ಇಷ್ಟು ಮಾಡಿದರೆ ಮಾತ್ರ ಮಾನ್ಯ ಮುಖ್ಯಮಂತ್ರಿಗಳು ಸಾರ್ಥಕತೆಯನ್ನು ಪಡೆಯುತ್ತಾರೆಂದು ಕಾಣಿಸುತ್ತದೆ. ಆದರೆ ಇದು ಅವರಿಂದ ಸಾಧ್ಯವಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿ ಇದ್ದಾರೆ. ಒಂದು ಸಾರಿ ಒಂದು ಸಾರ್ವಜನಿಕ ಸಭೆಯಲ್ಲಿ ನಾನೂ ಮತ್ತು ಆಡಳಿತ ಪಕ್ಷದ ಸದಸ್ಯರಾದ ಮಾನ್ಯ ನಾರಾಯಣ್‌ರವರೂ ಇಬ್ಬರೂ ಹೋಗಿ ಅವರಿಗೆ ನಾವು ಕೈಮುಗಿದಾಗ ಅವರು ಏನು ಮಾಡಿದರೆಂಬುದನ್ನು ತಾವು ಕೇಳಬೇಕು.

ನಮ್ಮ ತುಮಕೂರು ಜಿಲ್ಲೆಯಲ್ಲಿ ನಿಮ್ಮ ರಾಜ್ಯದ ಆಡಳಿತವನ್ನು ರಕ್ಷಣೆ ಮಾಡುವ ಜಿಲ್ಲಾ ಪರಿಷತ್ತಿನ ಒಬ್ಬರು ಕಾರ್ಯದರ್ಶಿಯವರಿದ್ದಾರೆ. ಅವರ ಹತ್ತಿರ ನಾನು ಮತ್ತು ನಿಮ್ಮ ಪಕ್ಷದ ಒಬ್ಬ ಸದಸ್ಯರು ಸಾರ್ವಜನಿಕ ಸಭೆಯಲ್ಲಿ ಕೈ ಮುಗಿದರೆ, ಆತ ಕುಳಿತಲ್ಲೇ ಕಾಲ ಮೇಲೆ ಕಾಲು ಹಾಕಿಕೊಂಡು ಕಣ್ಣೊಡೀತಾರೆ. ಯಾವುದೇ ಆಡಳಿತಾತ್ಮಕ ಸಂಸ್ಕೃತಿ ನಾಶ ಮಾಡುವುದಿದೆ, ಈ ಸಂಸ್ಕೃತಿಯನ್ನು ನಾಶ ಮಾಡಿ, ತೆರಿಗೆ ಕೊಡುವವನ ಗುಲಾಮರು ನಾವು ಎನ್ನುವ ಸಂಸ್ಕೃತಿಯನ್ನು ನಿಮ್ಮ ಸರ್ಕಾರ ಇನ್‌ಜೆಕ್ಟ್ ಮಾಡುವುದಾದರೆ, ನೀವು ಇದನ್ನು ಮೊದಲು ಇಂಜೆಕ್ಟ್ ಮಾಡುವುದಾದರೆ, ನೀವು ಇದನ್ನು ಮೊದಲು ಇಂಜೆಕ್ಟ್ ಮಾಡಿ. ಒಂದು ಪದವನ್ನು ತಾವು ಭಾಷಣದಲ್ಲಿ ಉಪಯೋಗಿಸಿದ್ದೀರಿ. "ಹೊಸ ಆಡಳಿತಾತ್ಮಕವಾದ ಸಂಸ್ಕೃತಿಯನ್ನು ಬೆಳೆಸಲಾಗುತ್ತದೆ" ಎಂದು. ಇಬ್ಬರು ಜನಪ್ರತಿನಿಧಿಗಳು ಕೈಮುಗಿದರೆ, ಕೂಲಿ ತೆಗೆದುಕೊಳ್ಳುವ ಆಳು ಕಣ್ಣು ಹೊಡೆಯುತ್ತಾರೆ. ಈ ಸಂಸ್ಕೃತಿ ತಪ್ಪಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುತ್ತದೆಯೇ ಎಂದು ನಾನು ಭಾವನೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ಏಕೆ ನಿರಾಶೆ ?

ಶ್ರೀ ವೈ.ಕೆ. ರಾಮಯ್ಯ:– ನಾನು ನೋಡಿದ್ದೇನೆ. ನೀವು ಎರಡನೆಯ ಸಲ ಮಂತ್ರಿಗಳಾಗಿದ್ದೀರಿ. ನಾನೂ ಕೂಡ ಸ್ವಲ್ಪ ದಿವಸ ಮಂತ್ರಿಯಾಗಿದ್ದೆ. ವೈಯುಕ್ತಿಕವಾಗಿ ನಿಮ್ಮ ಹತ್ತಿರ ಬರುವ ಅಧಿಕಾರಿಗಳನ್ನು ನೀವು ಕಂಟ್ರೋಲ್ ಮಾಡುತ್ತೀರೇನೋ. ನನ್ನ ಹತ್ತಿರ ಬರುತ್ತಿದ್ದವರನ್ನು ನಾನು ಕಂಟ್ರೋಲ್ ಮಾಡುತ್ತಿದ್ದೆ. ಆದರೆ ಸಾರ್ವತ್ರಿಕವಾಗಿ ಇದನ್ನು ತರುವುದು ಕಷ್ಟ ಎಂದು ನನ್ನ ಭಾವನೆ. ನೀವು ತರುವುದಾದರೆ ನಿಮಗೆ ನಮಸ್ಕಾರ.

ಶ್ರೀ ಕೆ.ಹೆಚ್. ರಂಗನಾಥ್:– ನಿರಾಶಾವಾದಿಗಳಾಗಬಾರದು, ಆಶಾವಾದಿಗಳಾಗಿರಬೇಕು. ನಂಬಿಕೆ ಕಳೆದುಕೊಂಡರೆ ಏನಾಗುತ್ತದೆ? ನಂಬಿಕೆ ಇರಬೇಕಾಗುತ್ತದೆ. ನಿರಾಶಾವಾದ ಇದ್ದರೆ ಏನೂ ಉಪಯೋಗ ಬೀಳಲ್ಲ.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಈ ಮಾತನ್ನು ಒಪ್ಪಿಕೊಳ್ಳುತ್ತೇನೆ. ಜೀವನದಲ್ಲಿ ನಿರಾಶೆ ಇರಬಾರದು, ಅದೇ ಸಂದರ್ಭದಲ್ಲಿ ಚಿಕ್ಕವನಾಗಿಯೂ ಹಿರಿಯರಿಗೆ ಒಂದು ವಿಷಯವನ್ನು ಗಮನಕ್ಕೆ ತರುತ್ತೇನೆ. ಇಡೀ ಜೀವನದಲ್ಲಿ ಕೇವಲ ನಂಬಿಕೆ ಮೇಲೆ ಬದುಕುವುದು ಒಳ್ಳೆಯದಲ್ಲ. ನಿಜ, ಆಸೆ ಇಟ್ಟುಕೊಳ್ಳಬೇಕು, ನಂಬಿಕೆ ಇಟ್ಟುಕೊಳ್ಳಬೇಕು. ಆದರೆ ಇಡೀ ಬದುಕಿನಲ್ಲಿ ಕೇವಲ ನಂಬಿಕೆಗಳಿಗೇ ಜೋತುಬಿದ್ದು ಬದುಕುವುದು ಸರಿಯಲ್ಲ. ಆದ್ದರಿಂದ ಏನು ಸರ್ಕಾರದವರು ಆಡಳಿತದಲ್ಲಿ ಆಡಳಿತಾತ್ಮಕ ಸಂಸ್ಕೃತಿ ತರುತ್ತೇವೆಂದು ಹೇಳಿದ್ದಾರೋ ಅದನ್ನು ನಾನು ಸ್ವಾಗತಿಸುತ್ತೇನೆ. ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಏನು ಅನುಮಾನ ವ್ಯಕ್ತ ಮಾಡುತ್ತಿದ್ದೇನೆ ಆ ಅನುಮಾನಕ್ಕೆ ಅವಕಾಶ ಆಗದ ರೀತಿಯಲ್ಲಿ ಕಾರ್ಯರೂಪಕ್ಕೆ ತರುತ್ತೀರಿ ಎಂದು ಭಾವಿಸುತ್ತೇನೆ. ಇನ್ನೂ 12ನೇ ಪ್ಯಾರಾದಲ್ಲಿ,

"ಸರ್ಕಾರಿ ನೌಕರರ ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ, ಸರ್ಕಾರಿ ನೌಕರರ ಜ್ಞಾನದ ಮಟ್ಟ ಮತ್ತು ಕೌಶಲ್ಯಗಳನ್ನು ಹೆಚ್ಚಿಸಲು ಹಾಗೂ ನ್ಯಾಯೋಚಿತ ಆಡಳಿತ ನೀಡುವಲ್ಲಿ ಅವರು ಹೊಣೆಗಾರರಾಗಿರುವಂತೆ ಮಾಡಲು ಅವರಿಗೆ ಸೂಕ್ತ ತರಬೇತಿ ನೀಡಲಾಗುವುದು."

ಎಂದು ಹೇಳಿದ್ದಾರೆ. ಯಾವುದಕ್ಕೆ? ಸರ್ಕಾರಿ ನೌಕರರಿಗೆ ಜ್ಞಾನದ ಮಟ್ಟ ಮತ್ತು ಕೌಶಲ್ಯಗಳನ್ನು ಹೆಚ್ಚಿಸುವುದಕ್ಕಾಗಿ ಈ ಸರ್ಕಾರಿ ನೌಕರರುಗಳಿಗೆ ತರಬೇತಿ ನೀಡಲಾಗುವುದು. ಮತ್ತೆ ಅಲ್ಲಿಗೇ ನಾವು ಬರಬೇಕಾಗುತ್ತದೆ. ಈ ದೇಶದ ಸಮಸ್ಯೆ, ನಮ್ಮ ಸಮಾಜದ ಸಮಸ್ಯೆ ಬುದ್ಧಿ ಕಡಿಮೆ ಆದದ್ದು ಅಲ್ಲ. ಶ್ರದ್ಧೆ ಕಡಿಮೆ ಆಗಿರುವುದು. ಬುದ್ಧಿ ಕಡಿಮೆಯಾದರೆ ಪರವಾಗಿಲ್ಲ, ಯಾವ ದೇಶಕ್ಕೂ ಅದರಿಂದ ಅಷ್ಟೊಂದು ದುರಂತ ಆಗುವುದಿಲ್ಲ. ಆದರೆ ಶ್ರದ್ಧೆ ಕಡಿಮೆಯಾಗಿದೆ. ಸನ್ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ತಕ್ಷಣದಿಂದ ಇಲ್ಲಿಯವರೆಗೆ ನಾವು ವಿಶ್ಲೇಷಣೆ ಮಾಡಿದರೆ ಏನೂ ಪ್ರಗತಿಯೇ ಆಗಿಲ್ಲ ಎಂದು ಹೇಳುವಷ್ಟು ಅವಿವೇಕಿ ನಾನಲ್ಲ. ಅಭೂತಪೂರ್ವವಾದ ಪ್ರಗತಿ ಆಗಿದೆ. ಅದೇ ಸಮಯದಲ್ಲಿ ನಾವು ಅನೇಕ ಕ್ಷೇತ್ರಗಳಲ್ಲಿ ಸೋಲನ್ನು ಕಂಡಿದ್ದೇವೆ. ಈ ಸೋಲಿಗೆ ಕಾರಣ ಏನು? ಈ ವಿಫಲತೆಗೆ ಕಾರಣ ಏನು? ನನ್ನ ಪ್ರಕಾರ ಬಹಳ ಪ್ರಾಮುಖ್ಯವಾದ ಕಾರಣ, ಅತ್ಯಂತ ಗಂಭೀರವಾದ ಕಾರಣ ಯಾವುದು ಎಂದರೆ, ಆದ್ಯತೆಯನ್ನು ಗುರ್ತಿಸುವುದರಲ್ಲಿ ನಮ್ಮ ಸೋಲು, ಯಾವುದನ್ನು ಯಾವಾಗ ಮಾಡಬೇಕು, ಯಾವುದನ್ನು ಮೊದಲು ಮಾಡಬೇಕು, ಯಾವುದನ್ನು ಕೊನೆಯಲ್ಲಿ ಮಾಡಬೇಕೆನ್ನುವ ಆದ್ಯತೆಯನ್ನು ಗುರ್ತಿಸುವ ಕೆಲಸದಲ್ಲಿ ನಾವು ಸೋತಿರುವುದು, ಈ ರಾಷ್ಟ್ರದ ಅಭಿವೃದ್ಧಿಯ ಕೆಲಸದಲ್ಲಿ ನಾವು ಕಂಡಂತಹ ಸೋಲಿಗೆ ಇದು ಮೊದಲನೆಯ ಕಾರಣ.

ಎರಡನೆಯ ಕಾರಣ ನಮ್ಮ ನೌಕರರಲ್ಲಿ ಜ್ಞಾನದಮಟ್ಟ ಕಡಿಮೆಯಾಗಿರುವುದಿಲ್ಲ. ಈ ರಾಷ್ಟ್ರದ ಸಮಸ್ಯೆಯ ಅರಿವು ಇರುವಂತಹ ಜನರ ಕೈಗೆ ಸಮಸ್ಯೆಗಳನ್ನು ಪರಿಹಾರ ಮಾಡುವಂತಹ ಯೋಜನೆಗಳನ್ನು ಸಿದ್ಧ ಮಾಡುವಂತಹ ಗುರುತರ ಜವಾಬ್ದಾರಿಯನ್ನು ವಹಿಸಿ ಈ ರಾಷ್ಟ್ರದಲ್ಲಿ 45 ವರ್ಷಗಳನ್ನು ನಾವು ಕಳೆದಿದ್ದೇವೆ. ಯಾರಿಗೆ ಯಾವ ಸಮಸ್ಯೆ ಬಗ್ಗೆ ಅರಿವು ಇಲ್ಲವೋ ಯಾರಿಗೆ ಯಾವ ಸಮಸ್ಯೆಯ ಬಗ್ಗೆ ಸ್ವಲ್ಪವಾದರೂ ಗಮನ ಇಲ್ಲವೋ? ಅಂತಹ ವ್ಯಕ್ತಿಗಳ ಕೈಗೆ ಈ ಸಮಸ್ಯೆಯನ್ನು ಬಗೆಹರಿಸುವಂತಹ ಯೋಜನೆಗಳನ್ನು ಸಿದ್ಧಮಾಡುವಂತಹ ಗುರುತರ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಇದು ಸಣ್ಣ ಕಥೆಯಲ್ಲ. ಸತ್ಯ ಕಥೆಯನ್ನು ಹೇಳಿದರೆ ಬಹುಶಃ ಎಷ್ಟು ನಿಜ ಎನ್ನುವುದು ನಮಗೆ ಗೊತ್ತಾಗುತ್ತದೆ. ಯಾರೋ ಒಬ್ಬರು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್

ಅವರು ಒಂದು ಸೀಗೆಮೆಳೆ ಸರ್ಕಾರೀ ಜಮೀನಿನಲ್ಲಿದೆ. ಅದನ್ನು ಹರಾಜು ಹಾಕಬೇಕು ಅಪ್ರೂವಲ್ ಕೊಡಿಯೆಂದು ಮೇಲಕ್ಕೆ ಕಳುಹಿಸಿದ್ದಾರೆ. ಸೀಗೆಮೆಳೆ ಎಷ್ಟು ವರ್ಷದ್ದು ಎಂದು ಕ್ಲಾರಿಫಿಕೇಶನ್ ಕೇಳಿದರು. 10 ವರ್ಷದ್ದು ಎಂದು ಕ್ಲಾರಿಫಿಕೇಶನ್‌ಗೆ ಉತ್ತರ ಬಂತು. ಅದನ್ನು ಎಷ್ಟು ರೂಪಾಯಿಗೆ ಹರಾಜು ಮಾಡಬಹುದೆಂದು ಕೆಳಗಿನ ಅಧಿಕಾರಿ ಬಿಡಿಒ ಅವರನ್ನು ಕೇಳಿದಾಗ, 50 ರೂಪಾಯಿಗೆ ಹರಾಜು ಹಾಕಬಹುದೆಂದು ಹೇಳಿದರು. ಎಲ್ಲಿಯಾದರೂ ಉಂಟೇ 10 ವರ್ಷದ ಸೀಗೆಮೆಳೆಯಲ್ಲಿ ಹಲಗೆ ಕುಯಿಸಿ ಎಂದು ಬರೆದು ಕಳುಹಿಸಿದರು. ಸೀಗೆಮೆಳೆ ಅಂದರೆ ಸೀಗೆಕಾಯಿ ಬಿಡುವ ಒಂದು ಮೆಳೆ, ಸೀಗೆಕಾಯಿ ನಾವು ಸ್ನಾನ ಮಾಡಲು ಉಪಯೋಗಿಸುತ್ತೇವೆ. ಸಭಾಧ್ಯಕ್ಷರ ಊರಿನ ಕಡೆ ಇದೆಯೋ ಏನೋ ಗೊತ್ತಿಲ್ಲ. ಸೀಗೆಮೆಳೆಯನ್ನು 50 ರೂಪಾಯಿಗೆ ಹರಾಜು ಹಾಕುವುದು ಬೇಡ ಅದರಲ್ಲಿ ಹಲಗೆ ಕುಯಿಸಿ ಎಂದು ಬರೆಯುವಂತಹ ಅಧಿಕಾರಿಗಳ ಕೈಗೆ ಈ ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸುವಂತಹ ಯೋಜನೆಗಳನ್ನು ತಯಾರು ಮಾಡಲಿಕ್ಕೆ ಅಧಿಕಾರ ಕೊಟ್ಟಿದ್ದು ಮೊದಲನೆಯ ತಪ್ಪು. ರೇಷ್ಮೆಹುಳ ನಾಗರಹಾವು ಇದ್ದ ಹಾಗೆ ಇರುತ್ತಾ, ಹೆಬ್ಬಾವು ಇದ್ದ ಹಾಗೆ ಇರುತ್ತಾ, ಕ್ಯಾರೆಹಾವು ಇದ್ದ ಹಾಗೆ ಇರುತ್ತಾ ಎಂದು ಕೇಳುವ ಅಧಿಕಾರಿಗಳಿಗೆ, ರೇಷ್ಮೆಹುಳ ಹೇಗಿದೆ ಎನ್ನುವುದು ಗೊತ್ತಿಲ್ಲದ ವ್ಯಕ್ತಿಗಳು ಅಲ್ಲಿ ಕುಳಿತುಕೊಂಡು ಯೋಜನೆಗಳನ್ನು ರೆಡಿ ಮಾಡುತ್ತಾರೆ. ನೇಗಿಲು, ನೊಗ ಅಂದರೇನು, ಎಡಗೋಲು ಅಂದರೇನು ಬಲಗೋಲು ಅಂದರೇನು, ಕಬ್ಬು ಅಂದರೇನು ರಾಗಿ ಅಂದರೇನು ಎನ್ನುವುದು ಗೊತ್ತಿಲ್ಲ. ಅವರು ಮಣಿಲಾದಲ್ಲಿ ಕುಳಿತುಕೊಂಡು ಈ ರಾಷ್ಟ್ರದ ಕೃಷಿ ಸಮಸ್ಯೆಗಳ ಪರಿಹಾರದ ಬಗ್ಗೆ ದೊಡ್ಡದಾದ ಯೋಜನೆಗಳನ್ನು ತಯಾರು ಮಾಡುತ್ತಾರೆ. ಹೀಗೆ ಮಾಡಿದರೆ ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಯೆ ? ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇದನ್ನು ತಯಾರು ಮಾಡುವುದಕ್ಕೆ ಯಾರ್ಯಾರು ನಿಮಗೆ ಬುದ್ಧಿವಾದ ಹೇಳಿದರೋ ಗೊತ್ತಾಗಲಿಲ್ಲ. ಇಲ್ಲಿ ಏನಾದರೂ ಇದ್ದರೆ ಇದು ಅಧಿಕಾರಿಗಳ ಬುದ್ಧಿವಾದದಿಂದ ತಯಾರಾದದ್ದು ಎಂದು ಕಾಣುತ್ತದೆ. ನನ್ನ ಪ್ರಾರ್ಥನೆ ಇಷ್ಟೆ, ಈ ರಾಷ್ಟ್ರದಲ್ಲಿ ಏನಾದರೂ ಆಗದಿದ್ದರೆ, ಏನೂ ಆಗಿಲ್ಲವೆಂದು ಹೇಳುವುದಿಲ್ಲ. ಆದರೆ ಇನ್ನು ಕೆಲವು ಆಗಿಲ್ಲ. ಅವು ಏನಾದರೂ ಆಗದಿದ್ದರೆ ಅದಕ್ಕೆ ಮೂಲಭೂತವಾದ ಕಾರಣ ಅಜ್ಞಾನವಲ್ಲ. ನಮ್ಮಲ್ಲಿ ಸಾಕಷ್ಟು ಜ್ಞಾನವಿದೆ. ನಮ್ಮ ಸರ್ಕಾರಿ ನೌಕರರಿಗೆ ಜ್ಞಾನ ಮತ್ತು ಕೌಶಲ್ಯವನ್ನು ಹೆಚ್ಚಿಸುವುದಕ್ಕೆ ತರಬೇತಿಯನ್ನು ಕೊಡುವುದು ಬೇಡ. ಅವರಿಗೆ ಈ ರಾಜ್ಯದ ಜನರ ಸಮಸ್ಯೆಗಳನ್ನು ದುಃಖದುಮ್ಮಾನಗಳನ್ನು ಕಷ್ಟಕಾರ್ಪಣ್ಯಗಳನ್ನು ಈ ರಾಜ್ಯದ ಜನರ ಸಮಸ್ಯೆಗಳನ್ನು ಅರಿತುಕೊಳ್ಳಲಿಕ್ಕೆ ಮೊದಲು ಬುದ್ಧಿವಾದ ಹೇಳಿ ಎಂದು ಸ್ವಾಮಿಯೆಂದು ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ಅದೇ ಮಾತು ಹೇಳುತ್ತಾರೆ.

"ಆಡಳಿತದಲ್ಲಿ ಉತ್ಕೃಷ್ಟತೆಯನ್ನು ಸಾಧಿಸುವ ಒಲವನ್ನು ನೌಕರರಲ್ಲಿ ಮೂಡಿಸುವ ಉದ್ದೇಶದಿಂದ ರಾಜ್ಯದಲ್ಲಿರುವ ಎಲ್ಲ ಹಂತದ ಸರ್ಕಾರಿ ನೌಕರರನ್ನು ಐದು ವರ್ಷಗಳ ಅವಧಿಯೊಳಗೆ ತರಬೇತುಗೊಳಿಸುವಂತಹ ಒಂದು ಯೋಜನೆಯನ್ನು ಮಹಾ ನಿರ್ದೇಶಕರು ರೂಪಿಸುತ್ತಾರೆ."

ಇದರ ಅವಶ್ಯಕತೆ ಇಲ್ಲ. ಅವರಿಗೆ ಸಾಕಷ್ಟು ಬುದ್ಧಿ ಇದೆ. ಲಂಚ ಹೊಡೆಯುವಷ್ಟು ಬುದ್ಧಿ ಇದೆ. ಮೆಜರ್‌ಮೆಂಟ್ ಕೊಟ್ಟು ಅದನ್ನು ತಿದ್ದುವಷ್ಟು ಬುದ್ಧಿ ಅವರಿಗೆ ಇದೆ. ಓಟು ಕೊಟ್ಟಂತ ಜನಗಳಿಗೆ ದ್ರೋಹ ಮಾಡುವಷ್ಟು ಬುದ್ಧಿ ಅವರಿಗೆ ಇದೆ. ಅವರಿಗೆ ಬುದ್ಧಿ ಕಲಿಸುವುದಕ್ಕೆ ಟ್ರೈನಿಂಗ್ ಏತಕ್ಕೆ ಕೊಡುತ್ತೀರಿ ಸ್ವಾಮಿ ? ಮೊದಲು ಅವರಿಗೆ ಶ್ರದ್ಧೆ ಕಲಿಸಿ.

ನಮ್ಮ ಜನರ ಬಗ್ಗೆ ಕಳಕಳಿ ಇರುವಂಥ ಪ್ರವೃತ್ತಿಯನ್ನು ಮೊದಲು ಇಂಜೆಕ್ಟ್ ಮಾಡಿ. ಇಲ್ಲಿ ಶಿಕ್ಷಣದ ಬಗ್ಗೆ ಕೂಡ ಪ್ರಸ್ತಾಪ ಇದೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ಇದೆ, ವೃತ್ತಿ ಶಿಕ್ಷಣದ ಬಗ್ಗೆ ಇದೆ. ಆಮೇಲೆ ನಮ್ಮ ಸಾಕ್ಷರತೆ ಶಿಕ್ಷಣದ ಬಗ್ಗೆ ಕೂಡ ಇದೆ. ನನಗೆ ಅರ್ಥವಾಗುತ್ತಾ ಇದೆ. ತುಮಕೂರು ಜಿಲ್ಲೆಯಲ್ಲಿ

ಸುಮಾರು ಮೂರು ಕೋಟಿಗಿಂತ ಹೆಚ್ಚಿಗೆ ಹಣವನ್ನು ಸಾಕ್ಷರತಾ ಆಂಧೋಳನಕ್ಕಾಗಿ ಖರ್ಚು ಮಾಡಿದೆ. ಅಲ್ಲಿ ಕಟ್ಟಿರುವಂಥ ಬಾವುಟಗಳು, ಬ್ಯಾನರ್‌ಗಳು, ಪೋಸ್ಟರ್‌ಗಳನ್ನು ನೋಡಿದರೆ ತುಮಕೂರು ಜಿಲ್ಲೆಯಲ್ಲಿ ಮತ್ತೆ ಏನಾದರೂ ಚುನಾವಣೆಯಾಗುತ್ತದೆಯೇ ಎಂದು ಆಚ್ಚರಿಯಾಗುತ್ತದೆ. ನಾನು ಬೇಡ ಎಂದು ಹೇಳುವುದಿಲ್ಲ. ಈ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತಂದಂಥ ನನ್ನ ಸ್ನೇಹಿತರಿಗೆ ಇದರಿಂದ ಅಕ್ಷರಜ್ಞಾನದ ಆಂಧೋಳನ ಮಾಡುವುದಕ್ಕೆ ಸಾಧ್ಯವಿದೆ ಎನ್ನುವಂಥ ಭಾವನೆಯನ್ನು ಅವರು ಇಟ್ಟುಕೊಂಡರೆ ನನ್ನ ಅಭ್ಯಂತರ ಇಲ್ಲ. ಆದರೆ ನಾನು ಹೇಳಿದ ಹಾಗೆ ಆಧ್ಯತೆಯನ್ನು ಗುರುತಿಸುವುದರಲ್ಲಿ ಈ ದೇಶದ ದುರಂತ ಆಗಿದೆ ಇಲ್ಲವೇ ವಿಫಲತೆ ಎದ್ದು ಕಾಣುತ್ತದೆ. ಮೂರು ಕೋಟಿ ರೂಪಾಯಿ ಖರ್ಚು ಮಾಡಿ ಅಪ್ಪಅಮ್ಮಂದಿರಿಗೆ ಕಲಿಸುತ್ತಿದ್ದಾರೆ. ಆದರೆ ಈ ಜಿಲ್ಲೆಯ ಒಂದೊಂದು ತಾಲ್ಲೂಕಿನಲ್ಲೂ 250 ಶಾಲಾ ಉಪಾಧ್ಯಾಯರ ಕೊರತೆ ಇದೆ. ಅವರು ಹೇಳುತ್ತಾರೆ. ನಮಗೆ ಏಕೆ ಹೇಳಿಕೊಡುತ್ತೀರಿ, ನಾವು ಬಿದ್ದು ಹೋಗುವ ಮರಗಳು. ನಮ್ಮ ಹುಡುಗರಿಗಾದರೂ ಕಲಿಸಿಕೊಡಿ ಎಂದು ಸನ್ಮಾನ್ಯ ಮಂತ್ರಿಗಳು ದಯಮಾಡಿ ಈ ಕಡೆಗೆ ಗಮನ ಕೊಡಬೇಕು. ತುಮಕೂರು ಜಿಲ್ಲೆಯ ಸಾಕ್ಷರತಾ ಆಂಧೋಳನದ ಬಗ್ಗೆ ಮಾನ್ಯ ಮಂತ್ರಿಗಳ ಜಿಲ್ಲೆಯ ಬಗ್ಗೆ ಹೇಳುತ್ತಿದ್ದೇನೆ. ನಾನು ಏನು ಹೇಳುತ್ತಿದ್ದೇನೆ ಎಂದರೆ ಹಣವನ್ನು ಖರ್ಚು ಮಾಡುವಾಗ ಆಧ್ಯತೆಯನ್ನು ಗುರುತಿಸುವುದರಲ್ಲಿ ನಾವು ಸೋತಿದ್ದೇವೆ. ಅವರು ತುಮಕೂರು ಜಿಲ್ಲೆಯ ಮಂತ್ರಿಗಳು ಇದ್ದಾರೆ. ಮೂರು ಕೋಟಿಗಿಂತ ಹೆಚ್ಚಿಗೆ ಹಣ ಮುದುಕರಿಗೆ ಸಾಕ್ಷರತಾ ಯೋಜನೆಯಿಂದ ಖರ್ಚಾಗುತ್ತಿದೆ.

ಶ್ರೀ ಕೆ.ಎಚ್. ರಂಗನಾಥ್:– ಸಾಕ್ಷರತಾ ಆಂದೋಳನ ಮುದುಕರಿಗೆ ಅಲ್ಲ.

ಶ್ರ ವೈ.ಕೆ. ರಾಮಯ್ಯ:– ಎಲ್ಲರಿಗೆ, ಸಾರ್ವತ್ರಿಕವಾಗಿ ಸಾಕ್ಷರತಾ ಯೋಜನೆಯಲ್ಲಿ ಶಾಲೆಗೆ ಹೋಗದೆ ಇರುವವರಿಗೆ, ವಿದ್ಯೆಯನ್ನು ಕಲಿಸುವಂಥಾದ್ದು. ಅಂತಹವರಿಗೆ ಅಕ್ಷರ ಕಲಿಸುವಂಥ ಒಂದು ಯೋಜನೆ. ನನ್ನ ತಕರಾರು ಏನು ಎಂದರೆ, ಅದಕ್ಕೆ ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆದರೆ ಅವರ ಕ್ಷೇತ್ರದಲ್ಲಿ 250 ಮೇಷ್ಟ್ರುಗಳು ಇಲ್ಲ. ನನ್ನ ಎರಡು ಹೋಬಳಿಗಳು ಸೇರಿದ ಹಾಗೆ 250 ಶಾಲಾ ಉಪಾಧ್ಯಾಯರ ಕೊರತೆ ಇದೆ.

ಶ್ರೀ ಕೆ.ಎಚ್. ರಂಗಾನಾಥ್:– ನನ್ನ ಕ್ಷೇತ್ರದಲ್ಲೂ ಇಲ್ಲ, ನಿಮ್ಮ ಕ್ಷೇತ್ರದಲ್ಲೂ ಇಲ್ಲ. 224 ಕ್ಷೇತ್ರಗಳಲ್ಲೂ ಇಲ್ಲ. ಹತ್ತು ವರ್ಷಗಳಿಂದ ಇದರ ಬಗ್ಗೆ ನಾವು ಅಶ್ರದ್ಧೆಯಿಂದ ನಡೆದುಕೊಂಡ ಫಲ ಇದು. ಹೈಸ್ಕೂಲ್ ಉಪಾಧ್ಯಾಯರದ್ದೂ ಕೊರತೆ ಇದೆ, ಜೂನಿಯರ್ ಕಾಲೇಜ್, ಫಸ್ಟ್ ಗ್ರೇಡ್ ಕಾಲೇಜ್‌ಗಳದ್ದೂ ಕೊರತೆ ಇದೆ. ಆದರೆ ಇದರಲ್ಲಿ ನಾವು ನೀವು ಎಲ್ಲಾ ಸೇರುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:– ನಾನು ಅಂತಹ ಭ್ರಮೆಯಲ್ಲೇನೂ ಬದುಕುವುದಿಲ್ಲ. ಇದರಲ್ಲಿ ನಮ್ಮದೂ ಕಾಂಟ್ರಿಬ್ಯೂಷನ್ ಇರುತ್ತದೆ. ನಾನು ಶಾಸಕನಾಗಿ ಸೋತ ದಿವಸ 1989ರಲ್ಲಿ ಕುಣಿಗಲ್ ತಾಲ್ಲೂಕಿನಲ್ಲಿ 67 ವೇಕೆನ್ಸಿಗಳು ಇದ್ದವು. ಏಕೆಂದರೆ ಎಲ್ಲಾ ಕಡೆ ಇದೆಯೆಂದು ಹೇಳಿದರೆ ಅದು ಸರಿ ಅಲ್ಲ. ಬೇಕಾದರೆ ಮಾನ್ಯ ಮಂತ್ರಿಗಳು ಇದನ್ನು ಪರಿಶೀಲನೆ ಮಾಡಿಸಬಹುದು.

ಆದರೆ ಇವತ್ತು 250 ಜನಕ್ಕೆ ಬಂದಿದೆ. ಮತ್ತು ಎಲ್ಲಾ ಕ್ಷೇತ್ರಗಳಲ್ಲೂ ವೇಕೆನ್ಸಿ ಇದೆಯೆಂದು ಹೇಳುವದೂ ಸರಿಯಲ್ಲವೆಂದು ನನ್ನ ಭಾವನೆ. ನಾನು ಹೇಳುವ ಮಾತು ಸರಿ ಇಲ್ಲವೆನ್ನುವುದಾದರೆ ತಾವು ವೆರಿಫೈ ಮಾಡಬಹುದು. ತುಮಕೂರು ತಾಲ್ಲೂಕಿನ ನನ್ನ ಕ್ಷೇತ್ರಕ್ಕೆ ಸೇರಿದಂಥ ಮತ್ತೆ ಎರಡು ಹೋಬಳಿಗಳು ಇವೆ. ಅಲ್ಲಿಯವರು ನಮಗೆ ಅರ್ಜಿ ಕೊಟ್ಟಿದ್ದಾರೆ, ನಮಗೆ ಒಂದೇ ಶಾಲೆ ಇರುವುದು, ಒಬ್ಬರೇ ಹುಡುಗರು ಆದರೆ ಇಬ್ಬರು ಉಪಾಧ್ಯಾಯರನ್ನು ಕಳುಹಿಸಿದ್ದಾರೆ ಎಂದು. ಈ ಪ್ರದೇಶದಲ್ಲಿ ಹೆಚ್ಚಿಗೆ ಜನರು ಇದ್ದಾರೆ, ಆ ಪ್ರದೇಶದಲ್ಲಿ 250 ಹುದ್ದೆಗಳು ಖಾಲಿ ಇವೆ. ಆದ್ದರಿಂದ ಶಾಲಾ ಉಪಾಧ್ಯಾಯರ ಕೊರತೆಯನ್ನು ನೀಗಿಸುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ನೂರು ದಿವಸದ

ಕಾರ್ಯಕ್ರಮ ಹಾಕಿಕೊಂಡು, "No rural school will remain without a teacher"

ಇದನ್ನು ಮಾರ್ಚ್ 26 ರವರೆಗೆ ಕಾಯಿರಿ ಎಂದು ಹೇಳುತ್ತೀರೋ.....

ಶ್ರೀ ಎಂ. ವೀರಪ್ಪ ಮೊಯಿಲಿ:- ಈಗಾಗಲೇ ಇದರ ಬಗ್ಗೆ ವಚನ ಕೊಟ್ಟಿದ್ದಾರೆ, ಜಿಲ್ಲೆಗಳಲ್ಲಿ ಆಯ್ಕೆ ಕಾರ್ಯ ಆಗುತ್ತಿದೆ.

ಶ್ರೀ ವೈ.ಕೆ. ರಾಮಯ್ಯ:- ಇದು ಸಾಧ್ಯವೇ ? "No rural hospital or the Health Centre will remain without doctors" ಡಾಕ್ಟರುಗಳು 4 ದಿನ ನಿಧಾನವಾಗಿ ಬಂದರೂ ಬರಲಿ, ಏನಾದರೂ ಮಾಡಿಕೊಳ್ಳುತ್ತೇವೆ. ಈ ನೂರು ದಿನದ ಕಾರ್ಯಕ್ರಮದ ಅಂಗವಾಗಿಯಾದರೂ, ಪ್ರಾಥಮಿಕ ಶಾಲೆಗಳಲ್ಲಿ ಪಾಠ ಹೇಳತಕ್ಕ ಉಪಾಧ್ಯಾಯರನ್ನು ಕೊಡುವಂಥ ಆಶ್ವಾಸನೆ ಕೊಡುತ್ತೀರಾ, ಉಳಿದುದನ್ನು ಆಮೇಲೆ ನೋಡಿಕೊಳ್ಳೋಣ. ಹೇಮಾವತಿಗೆ ಹಣ ಕೊಡದೇ ಇರುವುದು, ಇದಕ್ಕೆಲ್ಲಾ ಮುಂದೆ ಬರೋಣ. ಈ ಹಂತದಲ್ಲಿ ದಯಮಾಡಿ ಉಪಾಧ್ಯಾಯರನ್ನು ಕೊಡಿ. ಇನ್ನು ವೃತ್ತಿ ಶಿಕ್ಷಣದ ಬಗ್ಗೆಯೂ ಕೂಡ ಪ್ರಸ್ತಾಪವಾಗಿದೆ. ಈ ವಿಷಯದಲ್ಲಿ ಬೇಕಾದರೆ ರಂಗನಾಥ್‌ರವರು ನನ್ನನ್ನು ಚೇಡಿಸಲಿ, ನಾನು ಒಪ್ಪುತ್ತೇನೆ. ಈ ವೃತ್ತಿಶಿಕ್ಷಣದ ಬಗ್ಗೆ ಇರತಕ್ಕ ನೀತಿನಿಯಮ, ನಿಮ್ಮ ತತ್ವ, ಇವುಗಳನ್ನು ಸರಿ ಮಾಡುವುದಕ್ಕಾಗಲಿಲ್ಲ. ನಾವು ಹೇಳಿಕೊಂಡು ಕಾಲ ಕಳೆದೆವು, ನಾವು ಮಾಡಲಿಲ್ಲವೆಂದು, ನೀವೂ ಮಾಡಬಾರದು ಎಂದಲ್ಲ. ದಯ ಮಾಡಿ ಹಣ ಕೊಟ್ಟು ಸೀಟು ಕೊಂಡುಕೊಳ್ಳುವುದನ್ನು ತಪ್ಪಿಸುವಂಥ ಪ್ರಯತ್ನ ಮಾಡಿ. ನೀವು ಮಾಡಿದ್ದೀರಾ ಎಂದು ಕೇಳಿದರೆ, ನಾನು "ಹೌದು" ಎಂದು ಹೇಳುತ್ತೇನೆ.

ವೃತ್ತಿಶಿಕ್ಷಣದ ಬಗ್ಗೆ ಮೊಗಮ್ಮಾಗಿ ಈ ಮಾತನ್ನು ಹೇಳುತ್ತೇನೆ. ಇಷ್ಟರವರೆಗೆ ಎಲ್ಲರೂ ದೇಣಿಗೆ ಕೊಟ್ಟಿದ್ದೇವೆ, ನಾವೆಲ್ಲರೂ ಕೂಡ ಕಾರಣಕರ್ತರಾಗಿದ್ದೇವೆ. ಆದರೆ, ದುಷ್ಟರ ಕೈಯಲ್ಲಿ ಸಿಕ್ಕಿರುವಂಥ ಕೆಟ್ಟ ಪರಿಸ್ಥಿತಿ ಏನಿದೆ, ಇದನ್ನು ದಯಮಾಡಿ ನೀಗುವುದಕ್ಕೆ ಪ್ರಯತ್ನ ಮಾಡಿ ಎಂದು ಮೊಗಮ್ಮಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಆಡಳಿತದ ಬಗ್ಗೆ ಇಲ್ಲಿ ಪ್ರಸ್ತಾಪವಾಗಿದೆ. ಸಾರ್ವತ್ರಿಕ ಆಡಳಿತದ ಬಗ್ಗೆ ಇಲ್ಲಿ ಹೇಳಿದ್ದಾರೆ. ಈ ಆಡಳಿತದ ಬಗ್ಗೆ ಮಾತನಾಡುವಾಗ, ಮೊದಲನೇ ಸಾರಿ ನನಗೆ, ಇವತ್ತು ಒಂದು ಕಾಗದ ಬಂದಿದೆ. 4 ಗಂಟೆಗೆ ಒಂದು ಸಭೆ ನಡೆಯುತ್ತದೆ. ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳ ಅಪ್ಪಣೆ ಮೇರೆಗೆ ಒಂದು ಸಭೆ ನಡೆಯುತ್ತದೆ. ಆ ಸಭೆಗೆ ಕಳುಹಿಸಿರುವಂಥ ಆಹ್ವಾನಪತ್ರದಲ್ಲಿ, Office of the Deputy Cheif Minister, Vidhana Soudha, Bangalore." ಎಂದು ಇದೆ. ಇದು ಅತ್ಯಂತ ಗಂಭೀರವಾದ ಪ್ರಶ್ನೆ. ನಾನು ಸಂಬಂಧಪಟ್ಟವರಲ್ಲಿ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಉಪ ಮುಖ್ಯಮಂತ್ರಿ ಸ್ಥಾನ ಹೇಗೆ ಬಂತು ? ಈ ಚರ್ಚೆ ಶುರುವಾದ ಮೇಲೆ, ನಾನು ಈ ದೇಶದ ಸಂವಿಧಾನವನ್ನು ಮತ್ತೊಂದು ಸಾರಿ ಓದುವಂಥ ಪ್ರಯತ್ನ ಮಾಡಿದೆ. ಹಿಂದೆ ಪರೀಕ್ಷೆ ಪಾಸ್ ಮಾಡುವುದಕ್ಕೆ ಓದಿದ್ದೆ, ಈಗ ಇದಕ್ಕಾಗಿ ಮತ್ತೊಂದು ಸಾರಿ, ಸಂವಿಧಾನವನ್ನು ಓದುವಂಥ ಕಷ್ಟ ನನಗೆ ಬಂತು. ಸನ್ಮಾನ್ಯ ಅಧ್ಯಕ್ಷರೇ, ಆರ್ಟಿಕಲ್ 164, "The Chief Minister shall be appointed by the Governor and the other Ministers shall be appointed by the Governor on the advise of the Chief Minister, and the Minister shall hold the Office during the pleasure of the Governor."

ಏನು ಮಾಡಬೇಕು ಆತ.

"Before a Minister enters upon his office, the Governor shall administer

to him the oaths of office and of secrecy according to the forms set out for the purpose in the Third Schedule" ಸಂವಿಧಾನದ ಮೂರನೇ ಷೆಡ್ಯೂಲ್‌ನಲ್ಲಿರತಕ್ಕಂಥ ಪ್ರೋಫಾರ್ಮಗಳಲ್ಲಿ ಮಂತ್ರಿಗಳಿಗೆ ರಾಜ್ಯಪಾಲರು ಪ್ರಮಾಣ ವಚನ ಬೋಧನೆ ಮಾಡಬೇಕು. ಯಾವುದೋ ಒಂದು ಶಾಲೆಯಲ್ಲಿ ವೇಕೆನ್ಸಿ ಕ್ರಿಯೇಟ್ ಆಗದೆ ಪೋಸ್ಟ್ ಕ್ರಿಯೇಟ್ ಆಗದೆ ಇದ್ದುದಕ್ಕೆ ಶಿಕ್ಷಣ ಮಂತ್ರಿಗಳು ವೇಕೆನ್ಸಿ ಕ್ರಿಯೇಟ್ ಆಗಿಲ್ಲ ಎಂದು they have sent back the file. ಯಾರಿಗೆ ಹೊಡೆದುಕೊಳ್ಳಬೇಕೋ ನನಗೆ ಅರ್ಥವಾಗುತ್ತಿಲ್ಲ.

(INTERRUPTIONS)

ಒಬ್ಬ ಶಿಕ್ಷಣ ಮಂತ್ರಿಗಳಿಗೆ ಫೈಲ್ ಬಂದಿದೆ. ನನ್ನ ಕ್ಷೇತ್ರದ ಹೆಬ್ಬೂರು. ಮೇಸ್ಟರ್‌ನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು. ಅವರು ವಾಪಸ್ಸ್ ಹಾಕಿದ್ದಾರೆ. ಅಲ್ಲಿ ವೇಕೆನ್ಸಿ ಇರಲಿಲ್ಲ ಎಂದು. ಪೋಸ್ಟ್ ಅಪ್ರೂವ್ ಆಗಿಲ್ಲ ಎಂದು ಸ್ಯಾಂಕ್ಷನ್ ಪೋಸ್ಟ್ ಇಲ್ಲ ಎಂದು ನಮ್ಮ ಉಪಮುಖ್ಯಮಂತ್ರಿ ಪೋಸ್ಟ್ ಯಾರು ಸ್ಯಾಂಕ್ಷನ್ ಮಾಡಿಕೊಟ್ಟರು ? Vacancy Post approve – sanctioned post. ನಾನು ಏತಕ್ಕೆ ಇಷ್ಟು ಮಾತನಾಡಬೇಕಾಯಿತು. ಅಂದರೆ ಒಬ್ಬ ಪ್ರೈಮರಿ ಶಾಲೆ ಉಪಾಧ್ಯಾಯರ ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಅವಕಾಶ ಇಲ್ಲ ಎನ್ನುವಂತಹ ಒಂದೇ ಕಾರಣಕ್ಕೆ ಆ ಕಡತ ಹಿಂದಕ್ಕೆ ಕಳುಹಿಸತಕ್ಕಂಥ ಸರ್ಕಾರ, ಇಲ್ಲದ ಹುದ್ದೆಯನ್ನು ಹೇಗೆ ನೀವು ಸೃಷ್ಟಿಮಾಡಿ ತುಂಬಿದ್ದೀರಿ. It is clearly an unconstitutional act. I am telling with all seriousnes. It is not an easy thing.

ಪ್ರಿಸಿಡೆಂಟ್ ಇದೆ ಎಂದು ಹೇಳುತ್ತೀರಿ. ವಿ.ಪಿ.ಸಿಂಗ್ ಪ್ರಧಾನಮಂತ್ರಿಯಾದಾಗ ದೇವಿಲಾಲ್‌ರವರು ಉಪ ಪ್ರಧಾನ ಮಂತ್ರಿ ಆಗಿರಲಿಲ್ಲವೇ ಎನ್ನುವುದೇ ಪ್ರಿಸಿಡೆಂಟ್. There is no comparison. ಅಲ್ಲಿಗೂ ಇಲ್ಲಿಗೂ There is clear distinction. ಅಲ್ಲಿ ಉಪ ಪ್ರಧಾನಮಂತ್ರಿ ಎಂದು ರಾಷ್ಟ್ರಾಧ್ಯಕ್ಷರು ಪ್ರಮಾಣವಚನ ಬೋಧಿಸಲಿಲ್ಲ.

ಶ್ರೀ ಎಂ.ಡಿ. ನಂಜುಂಡಸ್ವಾಮಿ:– ಏನೂ ವ್ಯತ್ಯಾಸ ಇಲ್ಲ. That was an unconstitutional precedent. That's all. ಅಲ್ಲಿ ಮಾಡಿದ್ದೂ ಸರಿಯಲ್ಲ, ಇಲ್ಲಿ ಮಾಡಿದ್ದೂ ಸರಿಯಲ್ಲ.

ಶ್ರೀ ವೈ.ಕೆ. ರಾಮಯ್ಯ:– ನನ್ನ ವಾದ ಏನಿದೆ ಸನ್ಮಾನ್ಯ ಮಂತ್ರಿಗಳೇ ಅದಕ್ಕೂ ಇದಕ್ಕೂ ದಯಮಾಡಿ ಹೋಲಿಕೆ ತರಬೇಡಿ. ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿದರು ಅದೂ ತಪ್ಪು ಇದೂ ತಪ್ಪು ಎಂದು. ಅದಕ್ಕೂ ಇದಕ್ಕೂ ಹೋಲಿಕೆ ಇಲ್ಲ.

Prof M.D. Nanjunda Swamy:– May be, Mr. Devi lal knew the Constitution better. That is why inspite of the President telling 'Upapradhani', he was telling 'Pradhani'. ಅವರು ಎರಡು ಮೂರು ಸಾರಿ ಉಪ ಪ್ರಧಾನಮಂತ್ರಿ ಉಪ ಪ್ರಧಾನಮಂತ್ರಿ ಎಂದು ಪ್ರಮಾಣವಚನ ಸ್ವೀಕಾರ ಮಾಡಿದರು. So, Mr. Devilal knew the Constitution better.

ಶ್ರೀ ವೈ.ಕೆ. ರಾಮಯ್ಯ:– ಯಾರೇ ಮುಖ್ಯಮಂತ್ರಿಗಳಾಗಲಿ ನಾವು ಆಗುವುದಿಲ್ಲ. ಅಲ್ಲಿ ದೇವಿಲಾಲರು ಉಪ ಪ್ರಧಾನಮಂತ್ರಿ ಎಂದು ಪ್ರಮಾಣ ವಚನ ಬೋಧಿಸದಿದ್ದರೂ ಅವರೇ ಹೇಳಿಕೊಂಡರು. ಆದರೆ ಇಲ್ಲಿ ಹಾಗೆ ಆಗಲಿಲ್ಲ.

ಶ್ರೀ ಕೆ.ಎಚ್. ರಂಗನಾಥ್:– 1983ರಲ್ಲಿ ಹೆಗಡೆಯವರು ಅಧಿಕಾರಕ್ಕೆ ಬಂದಾಗ ಹೆಗಡೆಯವರಿಗೂ

ಮತ್ತು ಬಂಗಾರಪ್ಪನವರಿಗೂ ಸ್ವಲ್ಪ ವ್ಯಾಜ್ಯ ಆದಾಗ ಹೆಗಡೆಯವರು ಬಂಗಾರಪ್ಪನವರನ್ನು ಕೇಳಿದರು ನಾನು ನಿಮಗೆ ಉಪ ಮುಖ್ಯಮಂತ್ರಿ ಸ್ಥಾನ ಕೊಡುತ್ತೇನೆ ಎಂದು.

Sri Y.K. RAMAIH:– I am thinking of going on a write for the purpose of academic interest. For academic purpose I would like to have a clear answer from the Government.

ಶ್ರೀ ಕೆ.ಎಚ್. ರಂಗನಾಥ್:– ಮೊದಲಿನಿಂದ ಅದು ಬಂದಿದ್ದರಿಂದ ಹಾಗಾಗಿದೆ ಆಮೇಲೆ ಅದನ್ನು ಪ್ರಿಸಿಡೆಂಟ್ ಎಂದು ಕರೆಯುತ್ತಾರೆ. ತಪ್ಪುಗಳು ಎಲ್ಲಿ ಆಗಿದೆ ಎಂದರೆ, ಅದು ಮಾನ್ಯ ನಂಜುಂಡಸ್ವಾಮಿಯವರಿಗೆ ಗೊತ್ತು. 1952ರಲ್ಲಿ ಬಲ್ಸಾರ್ ಕ್ಷೇತ್ರದಿಂದ ಮುರಾರ್ಜಿ ದೇಸಾಯಿಯವರು ಸೋತುಬಿಟ್ಟರು. ಮೊದಲನೇ ಚುನಾವಣೆ 52ರಲ್ಲಿ. He was defeated by Amul Desai, a Socialist candidate. ದಿವಂಗತ ನೆಹರೂರವರು, ಇಲ್ಲ ನೀವು ಸೋತಿದ್ದರೂ ಚಿಂತೆ ಇಲ್ಲ. ನೀವು ಮುಖ್ಯಮಂತ್ರಿ ಆಗಿ ಎಂದು ಹೇಳಿದರು, ಮುಖ್ಯಮಂತ್ರಿಯಾದರೂ ಹೀಗೆ ರಾಜ್ಯಾಂಗವನ್ನು ಜಾರಿಗೆ ಕೊಡತಕ್ಕಂಥ ಸಮಯದಲ್ಲೇ ನಾವು ದಾರಿ ತಪ್ಪುತ್ತಾ ಬಂದಿದ್ದೇವೆ. ಹೇಳಬಹುದಾಗಿತ್ತು. ನೆಹರೂರವರು ಕೇಳಿದಾಗ, Thank you very much ನಾನು ಸೋತು ಬಿಟ್ಟಿದ್ದೇನೆ. ಅದು ಸರಿಯಾಗುವುದಿಲ್ಲ. ಗೆದ್ದು ಬಂದು ನಂತರ ಆಗುತ್ತೇನೆ ಎಂದಿದ್ದರೆ ಆಗುತ್ತಿತ್ತು. ಇಲ್ಲಿ ನಮ್ಮ ನಿಜಲಿಂಗಪ್ಪನವರು ಅದನ್ನು ಅನುಸರಿಸಿದರು. 1962ರಲ್ಲಿ ನಿಜಲಿಂಗಪ್ಪನವರು ಸೋತಾಗ ಅವರು ಮುಖ್ಯ ಮಂತ್ರಿಯಾಗಲಿಲ್ಲ. ಅವರು ಆಗಬಹುದಾಗಿತ್ತು. ಆದರೆ ಆಗಲಿಲ್ಲ.

Prof. M.D. Nanjundaswamy:– There is a provision in the Constitution that one need not be.....

SRI K.H. RANGANATH:– That provision was used as early as that, Late Dr. Ambedkar said, it is a rape on the Constitution.

ಅದು ರಾಜ್ಯಾಂಗದಲ್ಲಿ ಇದೆ ಎಂದು ಮಾಡತಕ್ಕಂಥಾದ್ದಲ್ಲ. ಅವಕಾಶ ಇದೆ ಎಂದು ತಕ್ಷಣವೇ ಮಾಡುವುದೇ ? ಅನಿವಾರ್ಯ ಸಂದರ್ಭ ಬಂದಾಗ ಮಾಡಬಹುದಾಗಿತ್ತು. ನಮ್ಮ ರಾಜ್ಯದಲ್ಲೇ ಅಲ್ಲ ಮಹಾರಾಷ್ಟ್ರದಲ್ಲೂ ಉಪ ಮುಖ್ಯಮಂತ್ರಿಗಳು ಇದ್ದರು. ಬೇರೆ ರಾಜ್ಯಗಳಲ್ಲೂ ಉಪ ಮಂತ್ರಿಗಳು ಇದ್ದರು. ಎಸ್.ಪಿ.ಡಿ. ಸರ್ಕಾರಗಳು ಅಷ್ಟರಲ್ಲಿ ಬಂದಾಗ ಉಪಮುಖ್ಯಮಂತ್ರಿಗಳಿದ್ದರು. ಹೀಗಾಗಿ ಇದು ಒಂದು ಪ್ರಿಸಿಡೆಂಟ್ ಆಗುತ್ತಾ ಬಂದಿದೆ.

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ,

ಶ್ರೀ ಕೆ.ಹೆಚ್. ರಂಗನಾಥ್:– ತಾವು ಏನು ಹೇಳುತ್ತಿದ್ದೀರಿ ? ಅದು ಕಾನ್ಸಿಟ್ಯೂಷನ್‌ನಲ್ಲಿ ಇಲ್ಲ ಎಂದು ಅದನ್ನು ನಾವು ಒಪ್ಪಿಕೊಳ್ಳಬೇಕಾದುದೇನೂ ಇಲ್ಲ.

ಶ್ರೀ ವೈ.ಕೆ. ರಾಮಯ್ಯ:– ಮುರಾರ್ಜಿದೇಸಾಯಿಯವರು ಸೋತಾಗಲೂ ಕೂಡ ಮಂತ್ರಿಗಳಾದರು ಎಂದು ನಮ್ಮ ಹಿರಿಯರು ನನ್ನ ಗಮನಕ್ಕೆ ತಂದಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್:– ರಾಜಗೋಪಾಲಚಾರಿಯವರು, ಗೌರ್ನರ್ ಜನರಲ್ ಆಗಿದ್ದರು. ಆದ ನಂತರ ಮದ್ರಾಸ್‌ನಲ್ಲಿ ಬಂದು ಮುಖ್ಯಮಂತ್ರಿಗಳಾದರು. ಹೀಗೆ ಮಾಡುತ್ತಾ ಬಂದಿದ್ದೇವೆ. ಹೀಗೆ ಮಾಡಿಯೇ ರಾಜ್ಯಾಂಗವನ್ನು ಲೇವಡಿ ಮಾಡುವ ಪರಿಸ್ಥಿತಿಗೆ ತಂದಿಟ್ಟಿರುವುದು.

ಶ್ರೀ ವೈ.ಕೆ. ರಾಮಯ್ಯ:– ಸೋತ ಮೇಲೆ ಅವರು ಮಂತ್ರಿಯಾದರು. ಬಹುಶಃ ಇದು ರಾಜಕೀಯ

ನೈತಿಕ ದೃಷ್ಟಿಯಿಂದ ತಪ್ಪು ಇರಬಹುದು. ಅದನ್ನು ನಾನು ಒಪ್ಪುತ್ತೇನೆ. ಮುಂದೆ ಕೃಷ್ಣಾ ಅವರ ಬಗ್ಗೆ ಹೇಳುವಾಗ ಅದನ್ನು ಹೇಳುತ್ತೇನೆ. ನಾನು ಇನ್ನೂ ಕಾನ್ಸಿಟ್ಯೂಷನಲ್ಲೇ ಇದ್ದೇನೆ. ನೀತಿಯ ದೃಷ್ಟಿಯಿಂದ ರಾಜಕೀಯ ತಾತ್ವಿಕ ಹಿನ್ನೆಲೆ ದೃಷ್ಟಿಯಿಂದ ಸೋತಂಥವರು ಮಂತ್ರಿಗಳಾಗುವುದಕ್ಕೆ ಒಪ್ಪಿಕೊಳ್ಳುವುದು ಸರಿಯಾದ ಮಾರ್ಗ ಅಲ್ಲ. ನಾನು ಅದನ್ನು ಒಪ್ಪಿದ್ದೇನೆ. ನಾನು ಹೇಳುತ್ತಿರುವುದು, ಸಂವಿಧಾನದ ಚೌಕಟ್ಟಿನಲ್ಲಿ ಬರದೇ ಇರುವಂಥ ಕೆಲಸವನ್ನು ಮಾಡಿ, ಇವತ್ತು ಅವರು ಮಾಡಿದರು, ಇವರು ಮಾಡಿದರು, ಇನ್ನೆಲ್ಲೋ ಮಾಡಿದರು, This is not an argument at all. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೆ, ನಾನು ಅವರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. It is very clear that it is a violation of the Indian Constitution. You may agree or may not agree. Do you know who are all the parties? The Chief Minister, your Chief Secretary and also the Governor.

ನಿಮ್ಮ ಪ್ರಮಾಣ ವಚನ ಸ್ವೀಕಾರ ಮಾಡಲಿಕ್ಕೆ ಫಾರಂ ಫಿಲಪ್ ಮಾಡಿದ್ದಾರಲ್ಲಾ ನಿಮ್ಮ ಮುಖ್ಯ ಕಾರ್ಯದರ್ಶಿಗಳು, ಅವರು ಈ ಸಂವಿಧಾನದ ಅಪಚಾರಕ್ಕೆ ಬದ್ಧರು. ಉಪ ಮುಖ್ಯಮಂತ್ರಿಗಳನ್ನಾಗಿ ಅಪಾಯಿಂಟ್ ಮಾಡಿದ್ದೇನೆಂದು ಸಂದೇಶವನ್ನು ಕಳುಹಿಸಿದಂಥ ನಿಮ್ಮ ಮುಖ್ಯಮಂತ್ರಿಗಳು ಇದಕ್ಕೆ ಹೊಣೆಗಾರರು. ಸಂವಿಧಾನದಲ್ಲಿ ಅವಕಾಶ ಇಲ್ಲದೇ ಇರುವಂಥ ಪ್ರಮಾಣ ವಚನವನ್ನು ಬೋಧನೆ ಮಾಡಿದಂಥ ನಿಮ್ಮ ಗೌರ್ನರ್ ಕೂಡ ಈ ಕಾನ್ಸಿಟ್ಯೂಷನ್ ಅಪಚಾರಕ್ಕೆ ಬದ್ಧರು. Tell me what you are going to do now? ಈ ಸಂವಿಧಾನಕ್ಕೆ ಬಗೆದಿರುವಂಥ ಅಪಚಾರ ಏನಿದೆ ಅದಕ್ಕೆ ಸಂಬಂಧಪಟ್ಟ ಈ 3 ಜನಗಳೂ ಕೂಡ ಇದನ್ನು ಈಗಲಾದರೂ ಸರಿ ಮಾಡಿಕೊಳ್ಳುವಂಥ ಪ್ರಯತ್ನ ಮಾಡಬೇಕು.

ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರನ್ನು ಉಪಮುಖ್ಯಮಂತ್ರಿಗಳನ್ನಾಗಿ ಮಾಡಿದ್ದಾರೆ. ನಮ್ಮ ಹಳ್ಳಿಗಳ ಕಡೆಗಳಲ್ಲಿ ಉಪಮಂತ್ರಿಯೆಂದು ಕರೆಯುತ್ತಾರೆ. ಇಷ್ಟರವರೆಗೆ ಉಪಮುಖ್ಯಮಂತ್ರಿಗಳನ್ನು ಮಾಡಿಲ್ಲವಲ್ಲ ? ಈಗ ಏಕೆ ಮಾಡಿದರು ಎಂದು ಕೇಳುತ್ತಾರೆ. ಅವರಿಗೆ ಉಪಮುಖ್ಯಮಂತ್ರಿಗಳಾಗಿ ಮಾಡಿದ್ದಾರೆ ಎಂದು ಹೇಳಿದ್ದೇನೆ. ಅವರನ್ನು ಉಪಮುಖ್ಯಮಂತ್ರಿಯಾಗಿ, ಸಂವಿಧಾನದಲ್ಲಿ ಅವಕಾಶ ಇಲ್ಲದಿರುವಂಥ ಸಂದರ್ಭದಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿಸಿದಂಥ ಇವರೆಲ್ಲರೂ ಸೇರಿಕೊಂಡು ಸಂವಿಧಾನಕ್ಕೆ ಅಪಚಾರ ಮಾಡಿದ್ದಾರೆ. ನಾನು ಲಾ ಡಿಗ್ರಿಯನ್ನು ಧಾರವಾಡದ ಕಾಲೇಜಿನಲ್ಲಿ ಮಾಡಿದವನು. But, Sri Krishna he has studied the Constitution Law in Teksos, if I am correct. That was his special subject if my memory is not wrong. ಸನ್ಮಾನ್ಯ ಕೃಷ್ಣಾರವರು ಸಂವಿಧಾನವನ್ನು ಅಮೇರಿಕಾದ ಟೆಕ್ಸಾಸ್ ವಿಶ್ವವಿದ್ಯಾನಿಲಯದಲ್ಲಿ ಓದಿದಂಥ ಪರಿಣಿತರು. ಇಂಥ ಪರಿಣಿತರು ಸಂವಿಧಾನ ಬಾಹಿರವಾದಂಥ ನಡವಳಿಕೆಗೆ, ಸಂವಿಧಾನಕ್ಕೆ ಅಪಚಾರ ಮಾಡುವಂಥ ಈ ನಡವಳಿಕೆಗೆ ಭಾಗಸ್ಥರಾಗುವುದಕ್ಕೆ ಒಪ್ಪಬಾರದಾಗಿತ್ತು ಎಂದು ನಾನು ಅಭಿಪ್ರಾಯ ಪಡುತ್ತೇನೆ. ಸಂವಿಧಾನವನ್ನು ಬೋಧನೆ ಮಾಡುವಂಥ ಸಂದರ್ಭದಲ್ಲಿ ಪ್ರೊಫೆಸರುಗಳೇ ಪ್ರಿಯಾರಿಟಿ ಆಗಿ ಸ್ಟಡಿ ಮಾಡಿಕೊಂಡು ಬರುತ್ತಾರೆ. ಆಗಲೂ ಕೂಡ ಇಂಡಿಯನ್ ಕಾನ್ಸಿಟ್ಯೂಷನ್ ಬರುತ್ತದೆ. ನಾನು ಸ್ವಲ್ಪ ಓದಿಕೊಂಡೇ ಹೇಳುತ್ತಿದ್ದೇನೆ. ಲಘುವಾಗಿ ಹೇಳುತ್ತಿಲ್ಲ.

DR. Y. NAGAPPA:– Ours is a democratic set up. That Constitution is different from this.

SRI Y.K. RAMAIAH:– It is true. At the same time, when a person has studied the Constitutional Law for two years, there will be constitutional

comparative studies. So, When there is comparative Studies necessarily Indian Constitution will also be included in that ಆದ್ದರಿಂದ ಈ ಉಪ ಮುಖ್ಯಮಂತ್ರಿಗಳಾದ ಹುದ್ದೆಯನ್ನು ಇವರು ಸೃಷ್ಟಿ ಮಾಡದೇ ಸಂವಿಧಾನದ ಅವಕಾಶ ಇಲ್ಲದೇ ನೀವು ಉಪ ಮುಖ್ಯಮಂತ್ರಿಗಳು ಆಗಿ ಎಂದು ಕರೆದಂಥ ಸಂದರ್ಭದಲ್ಲಿ ಸಂವಿಧಾನದ ಎಕ್ಸ್‌ಪರ್ಟ್, ಸಂವಿಧಾನವನ್ನು ಸಂಪೂರ್ಣವಾಗಿ ಓದಿಕೊಂಡು, ಅದರ ಪ್ರಕೃತೆ ಮತ್ತು ಗಂಭೀರತೆಯನ್ನು ಬಲ್ಲಂಥ ಶ್ರೀ ಕೃಷ್ಣರವರು ಇದನ್ನು ತಿರಸ್ಕರಿಸಬೇಕಾಗಿತ್ತು ಎಂದು ನನ್ನ ಭಾವನೆಯಾಗಿದೆ. ಆದರೆ ಅವರೂ ಕೂಡ ಇದನ್ನು ಮಾಡಲೇ ಹೋದುದರಿಂದ ಈ ಸಂವಿಧಾನದ ಅಪಚಾರದಲ್ಲಿ ಅವರೂ ಕೂಡ ಭಾಗಿ ಎಂದು ನಾನು ವಿಧಿ ಇಲ್ಲದೇ ನಾನು ಹೇಳಬೇಕಾಗುತ್ತದೆ. ಸಂವಿಧಾನದಲ್ಲಿ ಅವಕಾಶವಿಲ್ಲ. ಆದರೂ ಮಾಡಿಬಿಟ್ಟಿದ್ದಾರೆ.

ಶ್ರೀ ಕೆ. ಶಿವಮೂರ್ತಿ:– ತಾವುಗಳು ಉಪಮುಖ್ಯಮಂತ್ರಿಯವರ ಬಗ್ಗೆ ಕಾನ್ಸಿಟ್ಯೂಶನ್‌ಗೆ ಸಮರ್ಥನೆ ಮಾಡುತ್ತಿದ್ದೀರೋ ಅಥವಾ ಪೊಲಿಟಿಕಲ್ ಪ್ರೊವೋಕೇಶನ್ ಮಾಡುತ್ತಿದ್ದೀರೊ ?

ಶ್ರೀ ವೈ.ಕೆ. ರಾಮಯ್ಯ:– ನನಗೆ ಅಂಥ ಒಂದು ಹುಚ್ಚು ಇಲ್ಲ. ನಿಮ್ಮ ರಾಜಕಾರಣ ನನಗೆ ಏಕೆ ? ಒಂದು ವೇಳೆ ನಿಮ್ಮ ಸರಕಾರ ಹೊರಟು ಹೋದರೆ ಇನ್ನೊಬ್ಬರು ಮುಖ್ಯಮಂತ್ರಿಯಾಗುತ್ತೀರಿ..

SRI K. SHIVAMURTHY;– I want to kow your intention.

ಶ್ರೀ ವೈ.ಕೆ. ರಾಮಯ್ಯ:– ನನ್ನ ಆಸಕ್ತಿ ಅಷ್ಟೇನೆ. My intention is only limited. There shouldnotbeElection. ನಾನು ಈಗ ತಾನೆ ಚುನಾವಣೆ ಮಾಡಿಕೊಂಡು ಬಂದಿದ್ದೇನೆ. ಚುನಾವಣೆ ಅಂದರೆ ನನಗೆ ಚಳಿ ಜ್ವರ ಬರುತ್ತದೆ. ಆದ್ದರಿಂದ ಆ ಒಂದು ಪೊಲಿಟಿಕಲ್ ಪ್ರೊವೇಕೇಶನ್ ಇತ್ಯಾದಿ ನನಗೆ ಬೇಡ. ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲಾ ಮಾಡಿ, ಸಂವಿಧಾನಕ್ಕೆ ಅಪಚಾರ ಮಾಡಿ ಇಷ್ಟೆಲ್ಲಾ ಮಾಡಿದರು ಎಂದು ಇಟ್ಟುಕೊಳ್ಳಿ. ಇದಕ್ಕೆ ವಿಶೇಷವಾದಂಥ ಯಾವುದೇ ಸವಲತ್ತು ಇಲ್ಲ ಎಂದು ಕಾನೂನು ಮಂತ್ರಿಯವರು ಹೇಳುತ್ತಾರೆ. ಯಾರಾದರೂ ಒಬ್ಬ ಹುಡುಗ ಕದ್ದು ಮದುವೆ ಆದರೆ, ಹುಡುಗಿ ಚೆನ್ನಾಗಿ ಇಲ್ಲದಿದ್ದರೂ ಹೇಳುತ್ತಾರೆ, ಜಾತಿ ಕೆಟ್ಟರೂ ಕೂಡ ಸುಖ ಪಡಬೇಕೆಂದು ಹೇಳುತ್ತಾರೆ. ಹೀಗೆ ನೀವುಗಳು ಸಂವಿಧಾನಕ್ಕೆ ವಿರುದ್ಧವಾಗಿ ಅವರನ್ನು ತಂದು ಕೂಡಿಸಿದರೂ ಕೂಡ, ಅವರು ನೀರಾವರಿ ಮತ್ತು ವಿದ್ಯುತ್ ಮಂತ್ರಿಗಳಲ್ಲದೆ ಏನೇನೂ ಇಲ್ಲ. ಅಧಿಕಾರವನ್ನು ಅನುಭವಿಸುವ ದೃಷ್ಟಿಯಿಂದ ಸವಲತ್ತನ್ನು ಸವಿಯುವ ದೃಷ್ಟಿಯಿಂದ ಮತ್ತು ನಿಮ್ಮ ಕಾನೂನಿನ ದೃಷ್ಟಿಯಿಂದ ಅವರು ಸನ್ಮಾನ್ಯ ನೀರಾವರಿ ಮತ್ತು ವಿದ್ಯುತ್ ಸಚಿವರು, ಅದಕ್ಕಿಂತ ಇನ್ನೇನೇ ಇಲ್ಲ. ಮತ್ಯಾಕೆ ? ದುಡ್ಡಿಲ್ಲ ಕಾಸಿಲ್ಲ ಸಂಪತ್ ಅಯ್ಯಂಗಾರ್, ನೋಡೋಕೆ ಬಹಳ ಅಸಹ್ಯವಾಗಿರ್ತಾನೆ. ಸುಂದರರಾಜ ಅಯ್ಯಂಗಾರ್, ಚೋಟುದ್ದ ಜಡೆ ಇರುತ್ತದೆ ನಾಗವೇಣಿ, ಏಕಿ ಕೆಲಸ. ಇಷ್ಟೆಲ್ಲ ಮಾಡಿ ಅವರಿಗೆ ಅಧಿಕಾರವಾದರೂ ಕೊಡಿ, ಒಂದು ಸೈರನ್ ಊದುವ ಕಾರ್, ಎಕಸ್ಟ್ರಾ ಸೆಕ್ರೆಟೆರಿಯೇಟ್. ಆದ್ದರಿಂದ ಸಂವಿಧಾನದ ಅಪಚಾರ ಮಾಡಿ ಸೃಷ್ಟಿಸಿದಂತಹ ಈ ಸ್ಥಾನ ಬಹುಶಃ ರಾಜಕೀಯದ ಉದ್ದೇಶಕ್ಕೆಂದು ನನ್ನ ಭಾವನೆ. ಅದೂ ಸಾಧನೆಯಾಗುತ್ತಿಲ್ಲ, ಸನ್ಮಾನ್ಯ ರಂಗನಾಥ್ ಗಮನಕ್ಕೆ ತರಬಯಸುತ್ತೇನೆ, ನಿನ್ನೆ ಮೊನ್ನೆಯಿಂದ ಆಗಿರುವ ವಿದ್ಯಮಾನ ನೋಡಿದರೆ ಯಾವ ರಾಜಕೀಯ ಸಾಧನೆಗಾಗಿ ಮುಖ್ಯಮಂತ್ರಿಗಳು ಅದನ್ನು ಸೃಷ್ಟಿ ಮಾಡಿದಿರೋ ಆ ಉದ್ದೇಶವೂ ಸಾಧನೆಯಾಗುವ ಪರಿಸ್ಥಿತಿ ಇಲ್ಲ. ಬೊಮ್ಮಾಯಿಯವರೂ ಈ ತಪ್ಪೇ ಮಾಡಿಕೊಂಡರು. ಆದರೂ ಆ ಸರ್ಕಾರ 6 ತಿಂಗಳು ಉಳಿಯಲಿಲ್ಲ. ಆದ್ದರಿಂದ ಈ ಹುದ್ದೆ ಸೃಷ್ಟಿಸಿದ್ದರಿಂದ ಅವರಿಗೆ ಅನುಕೂಲ ಇಲ್ಲ ನಿಮಗೂ ಅನುಕೂಲವಿಲ್ಲ ಆದರೂ ಸಂವಿಧಾನದ ಅಪಚಾರವಂತೂ ಆಯಿತು, ಇದನ್ನು ಮಾಡಿದವರ ಬುದ್ಧಿವಂತಿಕೆಗೆ ಬಿಡುತ್ತೇನೆ. ಇನ್ನು ಆಡಳಿತದ ಚುಕ್ಕಾಣಿ ಹಿಡಿದಿರುವ ಇವರ ಮಂತ್ರಿಮಂಡಲ. ಯಾವ ಉದ್ದೇಶ ಸಾಧನೆಗಾಗಿ ಪಕ್ಷದಲ್ಲಿ

ಒಗ್ಗಟ್ಟು ತರಬೇಕೆಂದು ಅಥವಾ ಭಿನ್ನಮತೀಯ ವಾತಾವರಣ ಹತ್ತಿಕ್ಕಬೇಕೆಂದೋ ಈ ಉಪಮುಖ್ಯಮಂತ್ರಿ ಸ್ಥಾನ ಸೃಷ್ಟಿ ಮಾಡಿದರೋ ಬಹುಶಃ ಆ ಉದ್ದೇಶ ಸಾಧನೆಯಾಗಲಿಲ್ಲ ಎಂದು ನನ್ನ ನೋವು. ಈಗಾಗಲೇ ಪ್ರಾರಂಭೋತ್ಸವ ನಡೆದಿದೆ. ಯಾವುದರದ್ದು? ಭಿನ್ನಮತದ ಪ್ರಾರಂಭೋತ್ಸವ. ಅದನ್ನು ನೀವು ಭಿನ್ನಮತ ಅಂತಿರೋ ಅತೃಪ್ತರೋ ಸಮಾನ ಮನಸ್ಕರು ಅಂತ ಕರೀತಿರೋ ನನಗೆ ಗೊತ್ತಿಲ್ಲ.

ಶ್ರೀ ಆರ್. ದಯಾನಂದರಾವ್:– ರಾಮಯ್ಯನವರೇ ಇದು ಪೊಲಿಟಿಕಲ್ ಸ್ಪೀಚೋ ? ಗವರ್ನರ್ ಅಡ್ರೆಸ್ ಮೇಲೆ ಸ್ಪೀಚೋ ? ನಮಗೆ ಅರ್ಥವಾಗುವುದಿಲ್ಲ. ಎಲ್ಲೋ ಗೋಡೆ ಮೇಲೋ ರಸ್ತೆ ಬದೀಲೂ ನಿಂತುಕೊಂಡು ಭಾಷಣ ಮಾಡಿದ ಹಾಗ ಇದೆಯಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಬೆಳಿಗ್ಗೆಯಿಂದ ಇದು ಹೀಗೆ ನಡೀತಿದೆ. ಎರಡು ಮೂರು ದಿವಸದಿಂದಾನೂ ಹೀಗೆ ನಡೆದಿರಬೇಕು. ರಾಜ್ಯಪಾಲರ ಭಾಷಣದ ಮೇಲೆ ಮುಖ್ಯವಾಗಿ ಯಾರೂ ಮಾತನಾಡಿದ ಹಾಗೆ ಕಾಣುವುದಿಲ್ಲ, ಇದು ಒಂದು ರೀತಿಯ ಸರ್ವಪಕ್ಷದ ರಾಜಕೀಯ ವೇದಿಕೆ. ಇದಾಗದ ಹಾಗೆ ನೋಡಿಕೊಳ್ಳಬೇಕು.

ಶ್ರೀ ವೈ.ಕೆ.ರಾಮಯ್ಯ:– ನಾನು ಪಕ್ಷದ ವಿಚಾರ ಚರ್ಚೆ ಮಾಡುತ್ತಿಲ್ಲ, ಯಾವುದೋ ಹೊಸ ಆಡಳಿತ ಸಂಸ್ಕೃತಿ ತರುತ್ತೇನೆ ಅಂತ ಹೇಳುತ್ತಿದ್ದಾರಲ್ಲ, ಆ ಆಡಳಿತದಲ್ಲಿ ಮಂತ್ರಿಗಳ ಪಾತ್ರ ಇದೆ ಅದನ್ನು ಹೇಳುತ್ತಿದ್ದೇನೆ. ನಾನು ಭಿನ್ನಮತೀಯರು ಅತೃಪ್ತರ ಆ ವಿಷಯಕ್ಕೆ ಹೋಗುತ್ತಿಲ್ಲ. ಆದರೆ ನಾವೆಲ್ಲ ಭಿನ್ನಮತ ಮಾಡೋವಾಗ ಈ ದೇಶದ ದೊಡ್ಡ ಬರಹಗಾರರು ನಮ್ಮನ್ನು ರೆಕರ್ಸ್ ಎಂದು ಕರೆದರು, ಮನೆ ಮುರುಕರು ಎಂದು ಕರೆದರು.

ಭಿನ್ನಮತೀಯರೋ, ಅತೃಪ್ತರೋ, ಸಮಾನ ಮನಸ್ಕರೋ ನನಗೆ ಗೊತ್ತಿಲ್ಲ. ಆದರೆ ನಮ್ಮನ್ನು ಕರೆದಿದ್ದು ಸನ್ಮಾನ್ಯ ಅರುಣ್ ಶೌರಿಯವರು. ಅವರು ದೊಡ್ಡ ಸಂಪಾದಕೀಯವನ್ನು ಬರೆದು, ರೆಕರ್ಸ್, ಮನೆ ಮುರುಕರು, ಎಂದು ಬರೆದರು. ಅವರು ಏನಾದರೂ ಕರೆದುಕೊಂಡು ಹೋಗಲಿ, ಯಾರು ಏನಾದರೂ ಕರೆದುಕೊಂಡು ಹೋಗಲಿ, ನನ್ನ ಮಾತಿನ ಉದ್ದೇಶವಿಷ್ಟೆ ನಮ್ಮ ಸಂವಿಧಾನಕ್ಕೆ ವಿರುದ್ಧವಾದಂಥ ನಡವಳಿಕೆ ನಡೆದಿರುವುದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದನ್ನು ಯಾವ ಉದ್ದೇಶದಿಂದ ಮಾಡಿದರು ಎನ್ನತಕ್ಕಂಥದ್ದನ್ನು ಪ್ರಸ್ತಾಪ ಮಾಡಿದ್ದೇನೆ. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಯಾವ ಉದ್ದೇಶದಿಂದ ಇದನ್ನು ನೀವು ಮಾಡಿದಿರೋ ಅದೂ ಕೂಡ ನಿಮ್ಮ ಉದ್ದೇಶ ಸಾಧನೆಯಾಗಿಲ್ಲ. ಭಿನ್ನಮತವನ್ನು ತಡೆಯುವುದಕ್ಕೆ ನಿಮ್ಮಿಂದ ಆಗಿಲ್ಲ ಎನ್ನತಕ್ಕಂಥ ಉದ್ದೇಶದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಸದನದಲ್ಲಿ ಆಡಳಿತ ಪಕ್ಷದ ನಾಯಕರು ಇದ್ದಾರೆ, ಇಲ್ಲಿ ವಿರೋಧ ಪಕ್ಷದ ನಾಯಕರೂ ಇದ್ದಾರೆ. ದೆಹಲಿಯಲ್ಲಿ ಮುಖ್ಯಮಂತ್ರಿಗಳನ್ನು ಪತ್ರಿಕೆಯವರು ಕೇಳಿದಾಗ ಯಾವಾಗಲೂ ಹತ್ತು–ಹದಿನೈದು ಜನರು ಖಾಯಂ ಆಗಿ ಇರುತ್ತಾರೆ ಎಂದು ಹೇಳಿದ್ದಾರೆ. ಆ ರೀತಿ ಆಗುವುದಾದರೆ ಸದನದ ಅಧ್ಯಕ್ಷರ ಮೂಲಕ ಭಿನ್ನಮತೀಯ ನಾಯಕರಿಗೂ ಕೂಡ ಒಂದು ಮನ್ನಣೆಯನ್ನು ಕೊಟ್ಟು ಅವರಿಗೂ ಒಂದು ಕಾರು, ಒಂದು ಬಂಗಲೆಯನ್ನು ಕೊಟ್ಟು ಬಿಡೋಣ ಎನ್ನುವ ಯೋಚನೆ ಮಾಡೋಣ. Let us recognise. ರೆಕಗ್ನೈಸ್ ಕೂಡ ಬೇಕಾಗಿಲ್ಲ. ಇಲ್ಲದ ಉಪ ಮುಖ್ಯಮಂತ್ರಿಯನ್ನು ಮಾಡಿದಂಥ ನಿಮಗೆ ಇಲ್ಲದ ಭಿನ್ನಮತೀಯ ನಾಯಕರನ್ನಾಗಿ ಅವರಿಗೂ ಮಾಡಿ, ಅವರಿಗೂ ಸವಲತ್ತುಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಮಾಡಬಹುದು. ನಾನು ನನ್ನ ಮಿತ್ರರು ಹೇಳಿದಹಾಗೆ ರಾಜಕೀಯ ಭಾಷಣ, ಪಕ್ಷದ ಭಾಷಣವಲ್ಲ ನಾನು ಮಾಡುತ್ತಿರುವುದು. ಇರುವಂಥ ವಸ್ತು ಸ್ಥಿತಿಯನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ನೀವು ಉಪಮುಖ್ಯಮಂತ್ರಿ ಹುದ್ದೆಯನ್ನು ಮಾಡುವಾಗ ನೀವು ಸಂವಿಧಾನಬದ್ಧರಾಗಿದ್ದೀರಿ.

ಇವತ್ತು ನೀವು ಅತೃಪ್ತರೋ ರೆಕರ್ಸ್ ಎಂದು ಹೇಳಿ ಅರುಣ್ ಶೌರಿಯವರು ಹೇಳಿದ್ದು ಇಂಥದ್ದು. ಎಂಥದ್ದೋ ಒಂದು ಗುಂಪು ಎಂದು ಮಾನ್ಯ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಆ ಗುಂಪಿನ ನಾಯಕರಿಗೂ ಕೂಡ ಒಂದು ಸ್ಟೇಟಸ್‌ನ್ನು ಕೊಟ್ಟು ಒಂದು ಕಾರು, ಒಂದು ಬಂಗಲೆಯನ್ನು ಏತಕ್ಕೆ ಕೊಡಬಾರದು ? ಹಾಗೆ ಮಾಡುವುದರಿಂದ ಭಿನ್ನಮತ ಅಥವಾ ಅತೃಪ್ತಿ ಕಡಿಮೆಯಾಗಬಹುದು ಎಂದು ನನ್ನ ಭಾವನೆ. ಮಂತ್ರಿಮಂಡಲದಲ್ಲಿ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಅದು 40 ಜನ ಇದ್ದಾರೋ, 50 ಜನ ಇದ್ದಾರೋ ಗಜಗಾತ್ರದ್ದೋ, ಏರ್ ಬಸ್ಸೋ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ಅವರೇ ಬಂದಿದ್ದುದರಿಂದ ಒಳ್ಳೆಯದಾಯಿತು. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನೋಡಿದರೆ ಅಯ್ಯೋ ಪಾಪ ಅನಿಸುತ್ತದೆ. ಕೆಲಸ ಮಾಡುವುದಕ್ಕೂ ಪುರುಸೊತ್ತು ಇಲ್ಲ.

ಶ್ರೀ ಜಿ.ಎಸ್. ಶಿವನಂಜಪ್ಪ:– ಮಾನ್ಯ ಅಧ್ಯಕ್ಷರೇ, ಸಂವಿಧಾನಬದ್ಧವಾಗಿ ವ್ಯಾಖ್ಯಾನ ಮಾಡಿದರು. unconstitutional appointment is unconstitutional ಮಾನ್ಯ ಉಪ ಮುಖ್ಯಮಂತ್ರಿಯವರೇನಾದರೂ ಆರ್ಡರನ್ನು ಮಾಡಿದರೆ ಅಥವಾ ಮಾಡುತ್ತಿದ್ದರೆ ಅವುಗಳ ವ್ಯಾಲಿಡಿಟಿ ಏನು ಎಂದು ನಾನು ನಿಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ಈ ಪ್ರಶ್ನೆಗೆ ನ್ಯಾಯವಾಗಿ ಸರ್ಕಾರದಿಂದ ಉತ್ತರ ಬರಬೇಕು ನನ್ನ ಪ್ರಕಾರ. Any order passed by the person who is not an authority has no sanctity ಇದು ನನ್ನ ಅಭಿಪ್ರಾಯ. ಸರ್ಕಾರದವರು ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. Any order passed by any authority or a person who has no sanction, who has no authority, is not an order at all. ಇದು ನನ್ನ ಅಭಿಪ್ರಾಯ. ಸರ್ಕಾರದವರ ಅಭಿಪ್ರಾಯ ಏನಿದೆಯೋ ನನಗೆ ಗೊತ್ತಿಲ್ಲ. ಮಂತ್ರಿಮಂಡಲದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಿದ್ದೆ ಮಾಡುವುದಕ್ಕೂ ಪುರುಸೊತ್ತು ಇಲ್ಲದೇ ಇರುವಷ್ಟು ಕೆಲಸ, ಇನ್ನೊಂದು ಕಡೆ ಕೆಲಸ ಇಲ್ಲದೇ ನಿದ್ದೆ ಮಾಡುವಂಥ ಪರಿಸ್ಥಿತಿ. ಅವರಿಗೆ ವಿಪರೀತ ಕೆಲಸ. ಸ್ವಲ್ಪವೂ ಪುರುಸೊತ್ತು ಇಲ್ಲ ಕುಳಿತುಕೊಳ್ಳುವುದಕ್ಕೆ. ಆದರೆ ಅನೇಕ ಜನ ಮಂತ್ರಿಗಳಿಗೆ ಕೆಲಸ ಇಲ್ಲದೇ ನಿದ್ದೆ ಮಾಡತಕ್ಕಂಥ ಪರಿಸ್ಥಿತಿ. ಈಗ ನೀವು ಇನ್ನು ನಾಲ್ಕು ಜನ ಮಂತ್ರಿಗಳನ್ನು ಮಾಡಿದರೂ ನಾನು ಆ ವಿಷಯದ ಬಗ್ಗೆ ತಕರಾರು ಮಾಡುವುದಿಲ್ಲ. ಏಕೆಂದರೆ ಐಎಎಸ್ ಆಫೀಸರ್‌ಗೆ ಕಾರು ಇರುತ್ತದೆ, ಬಂಗಲೆ ಇರುತ್ತದೆ, ಸವಲತ್ತು ಇರುತ್ತದೆ, ಇಷ್ಟೆಲ್ಲಾ ಕಷ್ಟಬಿದ್ದು ಸಾರ್ವಜನಿಕ ಜೀವನದಲ್ಲಿ ಒದ್ದಾಡಿಕೊಂಡು ನಾಲ್ಕು ಜನ ನನ್ನ ಸ್ನೇಹಿತರು ಕಾರಿನಲ್ಲಿ ಓಡಾಡಿದರೆ ನಾನು ಅದಕ್ಕೆ ತಕರಾರು ಮಾಡುವುದಕ್ಕೆ ಸಿದ್ಧನಿಲ್ಲ. ಇನ್ನು ನಾಲ್ಕು ಜನ ಮಂತ್ರಿಗಳನ್ನು ಬೇಕಾದರೆ ಮಾಡಿ. ಆದರೆ ನನ್ನ ಪ್ರಾರ್ಥನೆ ಇಷ್ಟೆ. ಅವರಿಗೆ ನಿದ್ದೆ ಮಾಡುವುದಕ್ಕೆ ಆಗದೇ ಇರುವಷ್ಟು ಕೆಲಸವನ್ನು ಕೊಡಿ. ಕೆಲಸವೆಲ್ಲಾ ನೀವೇ ಇಟ್ಟುಕೊಂಡು ಬರೀ ನಿದ್ದೆ ಮಾಡುವುದಕ್ಕಾಗಿಯೇ ಅವರಿಗೆ ಮಂತ್ರಿಯನ್ನಾಗಿ ಮಾಡಿದಕ್ಕೆ, ಅಷ್ಟಕ್ಕೆ ನನ್ನ ತಕರಾರು. ಇಲ್ಲ, ಅದನ್ನು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುವುದಾದರೆ ಅವರಿಗೆ ನಿದ್ದೆ ಮಾಡದಂತೆ ಕಟ್ಟಪ್ಪಣೆಯಾದರೂ ಮಾಡಿ.

ಗ್ರಾಮೀಣ ಉದ್ಯೋಗದ ಬಗ್ಗೆ ಒಂದು ಪ್ರಸ್ತಾವನೆ ಇದರಲ್ಲಿ ಇದೆ. ಗ್ರಾಮಾಂತರ ಔದ್ಯಮೀಕರಣ ಮತ್ತು ಉದ್ಯೋಗ ಸೃಜನೆ. ಹಿಂದಿನ ಸರ್ಕಾರದಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಶೇಕಡ 15 ಕೃಪಾಂಕಗಳನ್ನು ಕೊಡುವಂತಹ ವ್ಯವಸ್ಥೆ ಇತ್ತು. ಈಗ ಸರ್ಕಾರ ಅದನ್ನು ಬದಲಾವಣೆ ಮಾಡಿ ಟೋಟಲ್ 15 ಅಂಕಗಳನ್ನು ಕೊಡುವಂತಹ ವ್ಯವಸ್ಥೆಯನ್ನು ತರುತ್ತಿದೆ, ಅಥವಾ ತಂದಿದೆ ಎನ್ನುವ ಗುಮಾನಿ ನಿಮಗೆ ಇದೆ. ಆದ್ದರಿಂದ ಆ ತರಹ ಪ್ರಸ್ತಾವನೆ ಸರ್ಕಾರದ ಮುಂದೆ ಇದ್ದರೆ ಅದನ್ನು

ದಯಮಾಡಿ ಕೈ ಬಿಡಬೇಕು. ಅತ್ಯಂತ ಪ್ರಮುಖವಾದಂತಹ ಪ್ರಸ್ತಾವನೆ 20ನೇ ಪ್ಯಾರಾದಲ್ಲಿ ಇದೆ. ರಾಜ್ಯಪಾಲರ ಭಾಷಣದಲ್ಲಿ ನೀರಾವರಿಗೆ 20ನೇ ಸ್ಥಾನ. ಗ್ರಾಮಾಭಿವೃದ್ಧಿಗೆ 30ನೇ ಸ್ಥಾನ. ಅಧಿಕಾರವನ್ನು ಕೊಟ್ಟಂತಹವರಿಗೆ ವಾಪಸ್ಸು ಕೊಡುವಂಥ ಸ್ಥಳೀಯ ಸಂಸ್ಥೆಗಳ ಬಗ್ಗೆ ಆದ್ಯತೆ 31ನೇ ಸ್ಥಾನ. ನೀರಾವರಿಯನ್ನು ಪ್ಲಾನ್ನ ಮುಖ್ಯಮಂತ್ರಿಗಳು ಜ್ಞಾಪಿಸಿಕೊಂಡು 20ನೇ ಸ್ಥಾನಕ್ಕಾದರೂ ತಂದಿದ್ದಾರೆ, ಅದಕ್ಕಾಗಿ ಅವರಿಗೆ ನಾನು ಅಭಿನಂದಿಸುತ್ತೇನೆ. ನಾನು ಇತ್ತೀಚಿನ ದಿನಗಳಲ್ಲಿ ನೋಡುತ್ತಿದ್ದೇನೆ, ಈ ನೀರಾವರಿಯ ಬಗ್ಗೆ ನೀರಾವರಿಯ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರ ಬಗ್ಗೆ ಒಂದು ದಿವ್ಯ ನಿರ್ಲಕ್ಷ್ಯವನ್ನು ನಾನು ಕಾಣುತ್ತಿದ್ದೇನೆ. ಕಾವೇರಿ ನೀರಿನ ಹಂಚಿಕೆಯ ಬಗ್ಗೆ ಕೇಂದ್ರ ಸರ್ಕಾರವು ನೇಮಿಸಿರುವ ನ್ಯಾಯಮಂಡಲಿಯ ಮಧ್ಯಂತರ ತೀರ್ಪಿನಿಂದ ಕರ್ನಾಟಕ ರಾಜ್ಯಕ್ಕೆ ಆಗಿರುವ ಅನ್ಯಾಯ ಹಾಗೂ ಅನ್ಯಾಯವನ್ನು ತಡೆಯುವಲ್ಲಿ ಸರ್ಕಾರದ ವಿಫಲತೆ ಮತ್ತು ಕೃಷ್ಣ ನದಿ ನೀರಿನ ಹಂಚಿಕೆಯ ಬಗ್ಗೆ ಬಚಾವತ್ ನ್ಯಾಯ ಮಂಡಲಿಯ ತೀರ್ಪಿನಿಂದ ನಿಗಧಿಯಾದ ಕಾಲದಲ್ಲಿ ರಾಜ್ಯಕ್ಕೆ ಸಲ್ಲಬೇಕಾದ ನೀರಿನ ಪಾಲನ್ನು ಉಪಯೋಗಿಸಿಕೊಳ್ಳಲು ಕಾರ್ಯಕ್ರಮ ನಿರೂಪಿಸುವುದರಲ್ಲಿ ರಾಜ್ಯ ಸರ್ಕಾರದ ವಿಫಲತೆ ಇವೆರಡು ವಿಷಯಗಳನ್ನು ಚರ್ಚೆ ಮಾಡಬೇಕೆಂದು 4–1–93 ಮತ್ತು ನಿಲುವಳಿ ಸೂಚನೆಯಾಗಿ 4–2–93ರಲ್ಲಿ ಎರಡು ಸಾರಿಯೂ ಈ ಸದನಕ್ಕೆ ಪ್ರಸ್ತಾವನೆಯನ್ನು ಸೂಚನೆಯನ್ನು ನಾನು ಕಾನೂನಿನ ಚೌಕಟ್ಟಿನಲ್ಲಿ ಕಳುಹಿಸಿಕೊಟ್ಟಿದ್ದೇನೆ. ಆದರೂ ಕೂಡ ವತ್ತಿನವರೆಗೂ ಮಾತನಾಡಲಿಕ್ಕೆ ನನಗೆ ಅವಕಾಶ ಸಿಗಲಿಲ್ಲ. ಇದು ಎಷ್ಟೊಂದು ಗಂಭೀರವಾದಂತಹ ವಿಷಯ ಅಂದರೆ ಒಂದು ಕಥೆ ಅಂದಿನ ರಾಷ್ಟ್ರಾಧ್ಯಕ್ಷರಾದಂತಹ ಮಾನ್ಯ ಅವರ ಹೆಸರನ್ನು ಹೇಳುವುದು ಬೇಡ, ಕಾವೇರಿ ಕೊಳ್ಳದ ಜನರಿಗೆ ಆಗಬಾರದ ಅನ್ಯಾಯವಾಯಿತು. ರಾಷ್ಟ್ರಾಧ್ಯಕ್ಷರಾಗಿದ್ದರು, ಇವತ್ತು ಈ ರಾಜ್ಯದ ಪ್ರಧಾನಿಯವರಿಂದ ಕೃಷ್ಣಾ-ಭಾಗದ ಜನರಿಗೆ ಅನ್ಯಾಯವಾಗುತ್ತಿದೆ. ಇದು ಮುಂದುವರಿಯುವಂತಹ ಕಾರ್ಯಕ್ರಮ ಅಲ್ಲ. ರಸ್ತೆಗೆ ಮಣ್ಣು ಹಾಕಿದರೆ ಮುಂದಿನ ವರ್ಷ ಕೊಚ್ಚಿಕೊಂಡು ಹೋಗುತ್ತದೆ. ಕಟ್ಟಡ ಕಟ್ಟಿದರೆ 10 ವರ್ಷಕ್ಕೆ ಬಿದ್ದು ಹೋಗುತ್ತದೆ. ಈ ಎರಡು ನದಿಗಳ ನೀರನ್ನು ಉಪಯೋಗ ಮಾಡಿಕೊಳ್ಳುವುದರ ಬಗ್ಗೆ ಹಂಚಿಕೆಯ ಬಗ್ಗೆ ಈ ರಾಜ್ಯದಲ್ಲಿರುವಂತಹ ಲಕ್ಷಾಂತರ ಜನರ ಬದುಕಿನ ಬವಣೆಯ ವಿಷಯ ಇದಾಗಿದೆ. ಈ ನೀರನ್ನು ದಕ್ಕಿಸಿಕೊಳ್ಳುವುದರಲ್ಲಿ ಈ ನೀರಿನ ಉಪಯುಕ್ತತೆಯನ್ನು ಹೊಂದುವಂತಹ ಹಕ್ಕನ್ನು ಪ್ರತಿಪಾದನೆ ಮಾಡುವುದರಲ್ಲಿ ಏನಾದರೂ ಸೋತರೆ ಬಹುಶಃ ರಾಜ್ಯದ ರೈತರಿಗೆ ಮಾಡಿದಂತಹ ನ್ಯಾಯದ ಒಂದು ಅಧ್ಯಾಯವಾಗುತ್ತದೆ.

ಈ ಅನ್ಯಾಯದ ಅಧ್ಯಾಯವನ್ನು ಚರಿತ್ರೆಕಾರರು ಬರೆಯುತ್ತಾರೆ. ಅನ್ಯಾಯದ ಅಧ್ಯಾಯವನ್ನು ಚರಿತ್ರೆಕಾರರು ಬರೆಯುವಂಥ ಸಂದರ್ಭದಲ್ಲಿ ಯಾರು ಮುಖ್ಯಮಂತ್ರಿಯಾಗಿದ್ದರು ಎಂಬುದನ್ನು ಬರೆಯುತ್ತಾರೆ. ಯಾರು ನೀರಾವರಿ ಮಂತ್ರಿಯಾಗಿದ್ದರು ಎಂಬುದನ್ನು ಬರೆಯುತ್ತಾರೆ ಮತ್ತು ಯಾರು ಶಾಸಕರಾಗಿದ್ದರು ಎಂಬುದನ್ನೂ ಸಹ ಬರೆಯುತ್ತಾರೆ. ಈ ಪಾಪದ ಅಧ್ಯಾಯಕ್ಕೆ ನಮ್ಮನ್ನು ಗುರಿಪಡಿಸಬೇಡಿ, ಇಷ್ಟೊಂದು ಗಂಭೀರವಾದಂಥ ವಿಷಯ. 1993ನೇ ಇಸವಿಯಲ್ಲಿ ನಾವುಗಳೆಲ್ಲರೂ ಇದ್ದೇವೆ. ನನ್ನ ಸದಸ್ಯ ಸ್ನೇಹಿತರು ಹೇಳಿದಂತೆ ನಾನು ರಾಜಕೀಯ ಕಾರಣಕ್ಕಾಗಿ ಇಲ್ಲಿ ಭಾಷಣ ಮಾಡುತ್ತಿಲ್ಲ, ಅದರ ಅವಶ್ಯಕತೆಯೂ ನನಗಿಲ್ಲ. ಇನ್ನು 7 ವರ್ಷಗಳಲ್ಲಿ ಬಚಾವತ್ ಆಯೋಗದ ತೀರ್ಪಿನ ಪ್ರಕಾರ ಕರ್ನಾಟಕ ರಾಜ್ಯದ ರೈತರಿಗೆ ನೀರು ಕೊಡುವಂಥ ಕೆಲಸ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಏಳು ವರ್ಷಗಳವರೆಗೆ ಇರುವುದಿಲ್ಲವೆಂಬುದು ನನಗೆ ಗೊತ್ತಿದೆ, ಬರುವ ಆ ಏಳು ವರ್ಷಗಳಲ್ಲಿ ನಾನು ಶಾಸಕನಾಗದೆ ಇರಬಹುದೆಂದು ನನಗೆ ಗೊತ್ತಿದೆ ಅಲ್ಲದೆ, ಆಗ ನೀರಾವರಿ ಮಂತ್ರಿಗಳು ಇರುವುದಿಲ್ಲವೆಂಬುದು ಸಹ ನನಗೆ ಗೊತ್ತಿದೆ. ಆದರೆ, ಈ ಪಾಪದ ಅಧ್ಯಾಯ ಮಾತ್ರ ಇದ್ದೇ ಇರುತ್ತದೆ. ಇನ್ನು 7 ವರ್ಷಗಳಲ್ಲಿ ಕೃಷ್ಣಾ ಜಲಾನಯನ ಪ್ರದೇಶದ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸಿ ನೀರು ಕೊಡುವಂಥ ಯೋಜನೆಯನ್ನು ಅನುಷ್ಠಾನಕ್ಕೆ ತರುವಂಥ

ಕಾರ್ಯಕ್ಕೆ ಯಾವ ಒತ್ತನ್ನು ಈ ಸರ್ಕಾರ ಕೊಟ್ಟಿದೆ ? ಯಾವ ವಿಶೇಷ ಯೋಜನೆಗಳನ್ನು ಈ ಸರ್ಕಾರ ಕೊಟ್ಟಿದೆ ? ನಾನು ಮುಖ್ಯಮಂತ್ರಿಗಳಲ್ಲಿ ಈ ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥ ಒಂದು ಗಂಭೀರವಾದಂಥ ಪ್ರಶ್ನೆಯ ಕುರಿತು ಅವರು ಮುಖ್ಯಮಂತ್ರಿಗಳಾಗಿ ಮೂರು ತಿಂಗಳಾದರೂ ಕೂಡ ಒಂದೇ ಒಂದು ಸಭೆ ಕರೆದು ನಮ್ಮಗಳ ಜೊತೆ ಚರ್ಚೆ ಮಾಡಲಿಲ್ಲ. ಇನ್ನು 7 ವರ್ಷಗಳಲ್ಲಿ ಕೃಷ್ಣಾ ಕಣಿವೆ ಯೋಜನೆಯನ್ನು ಪೂರ್ತಿಗೊಳಿಸಿ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಆಗದೇ ಇದ್ದರೆ ಏನಾಗುತ್ತದೆಂಬುದಕ್ಕೆ ಸಾಕ್ಷಿಯಾಗಿ ಇತ್ತೀಚೆಗೆ ಕೊಪ್ಪಳದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತಿಗಳು ನಮ್ಮ ರಾಜಕಾರಣಿಗಳ ಬಗ್ಗೆ ಆಡಿದ ಮಾತುಗಳೇ ಉದಾಹರಣೆಯಾಗಿದೆ. ಅವರು 'ಕರ್ನಾಟಕದ ಬೆನ್ನುಹುರಿ ಇಲ್ಲದಂಥ ರಾಜಕಾರಿಣಿಗಳು' ಎನ್ನುವ ಮಾತನಾಡಿದ್ದಾರೆ. ಈ ಮಾತನ್ನು ನಾನು ಆಡಿಲ್ಲ, ಸಾಹಿತಿಗಳು ಆಡಿದ್ದುದು. ಈ ಮಾತನ್ನು ನಾವು ಆಡಿದರೆ ಯಾರಾದರೂ ಗಲಾಟೆ ಮಾಡಬಹುದು. ಈ ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಮುಖ ವೇದಿಕೆಯಿಂದ ಒಂದು ಮಾತು ಬಂದಿದೆ. ಏನೆಂದರೆ, ಕೃಷ್ಣಾ ನದಿ ನೀರನ್ನು ಕ್ರಿ.ಶ. 2000 ಇಸವಿಯೊಳಗೆ ಉಪಯೋಗಿಸಿಕೊಳ್ಳುವಂಥ ಕಾರ್ಯಕ್ರಮವನ್ನು ಹಾಕದಿರುವಂಥ 'ಬೆನ್ನುಹುರಿ ಇಲ್ಲದಂಥ ರಾಜಕಾರಣಿಗಳು' ಎಂಬುದು. ಸನ್ಮಾನ್ಯ ಅಧ್ಯಕ್ಷರೇ, ಕೃಷ್ಣಾ ನೀರಿನ ಪಾಲು ಇನ್ನೊಂದು ಕಣ್ಣೀರಿನ ಕಥೆ. 'ರಾಜ್ಯಕ್ಕೆ ಬಚಾವತ್ ತೀರ್ಪಿನ ಉರುಳು', ಮತ್ತೊಂದು 'ಕೃಷ್ಣೆಯ ಯಕ್ಷ ಪ್ರಶ್ನೆ' ಎನ್ನುವ ಸಂಪಾದಕೀಯ 'ಹಣ, ಸಿಬ್ಬಂದಿ ಕೊರತೆ ಬೆನ್ನು ಹತ್ತಿದ ಬೇತಾಳ' ಹಾಗೂ 'ಕೃಷ್ಣಾ ನದಿ ಕೊಳ್ಳದ ಯೋಜನೆಗಳ ಅನುಷ್ಠಾನದಲ್ಲಿ' ಎಂಬ ಶೀರ್ಷಿಕೆಯಡಿ ಹೊತ್ತು ಬಂದಂತ ವರದಿಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಹೀಗೆ ಕೃಷ್ಣಾ ಕಣಿವೆ ನೀರಿನ ಉಪಯುಕ್ತತೆಯನ್ನು 2000 ಇಸವಿಯೊಳಗಾಗಿ ಉಪಯೋಗಿಸಿಕೊಳ್ಳಬೇಕೆಂದು ನಡೆಯುತ್ತಿರುವ ಕಾಮಗಾರಿ ಕೆಲಸ ಏನೇನೂ ಸಾಲದಾಗಿದೆ. ಅದಕ್ಕೆ ಗಂಭೀರವಾದಂಥ ಯಾವುದೇ ಯೋಜನೆ ಹಾಕಿಕೊಂಡಿಲ್ಲ. ಇನ್ನು ಕಾವೇರಿ ಕಥೆ. ಕಾವೇರಿ ನೀರಿನ ಹಂಚಿಕೆ ವಿವಾದ 1981ನೇ ಇಸವಿಯಲ್ಲಿ ಅಂದು ಈ ರಾಜ್ಯದಲ್ಲಿದ್ದಂಥ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚೆಯಾಗಿ ಇವೊತ್ತಿನವರೆವಿಗೂ ಆ ಚರ್ಚೆ ನಡೆಯುತ್ತಿದೆ. ಅದನ್ನು ನಾನು ಓದಿದೆ. ಇದು ದುರಂತವೋ, ದುರಾದೃಷ್ಟವೋ, 1981ನೇ ಇಸವಿಯಲ್ಲಿ ಮೈಸೂರಿನಲ್ಲಿ ನಡೆದಂಥ ಪ್ರಜಾಪ್ರತಿನಿಧಿ ಸಭೆಯಲ್ಲಿ ಒಬ್ಬ ಬ್ರಿಟಿಷ್ ಸಂಜಾತ ಅವನು ನಮ್ಮ ದೇಶದವನಲ್ಲ.

ನಮ್ಮ ರಾಜ್ಯದವನಲ್ಲ, ಆವತ್ತು ಮೈಸೂರಿಗೆ ಬರಬೇಕಾಗಿದ್ದಂಥ, ರಾಜ್ಯಕ್ಕೆ ಕಾವೇರಿ ನೀರಿನಿಂದ ಬರಬೇಕಾಗಿದ್ದಂಥ ಪಾಲಿನ ಬಗ್ಗೆ ಅವನು ವಾದ ಮಾಡಿದ. ಆದರೆ ಇವತ್ತಿನ ಮಂತ್ರಿಮಂಡಲಕ್ಕೆ, ಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಆತನಿಗೆ ಇದ್ದಂಥ ಆಸಕ್ತಿ ಇಲ್ಲ ಎನ್ನತಕ್ಕ ಆಪಾದನೆಯನ್ನು ನಾನು ಮಾಡುತ್ತಿದ್ದೇನೆ. ಎಂಥ ಕೆಟ್ಟ ಪರಿಸ್ಥಿತಿ ಇದೆ. ತಮಿಳುನಾಡಿನವರ ಅರ್ಜಿಯನ್ನು ಆಧರಿಸಿ ಸುಪ್ರೀಮ್ ಕೋರ್ಟ್‌ನವರು ನೇಮಕ ಮಾಡಿದಂಥ ನ್ಯಾಯಮಂಡಳಿಯವರು ಕೊಟ್ಟಿರತಕ್ಕ ತೀರ್ಪು ಅತ್ಯಂತ ಗಂಭೀರವಾದುದು. ಆ ನ್ಯಾಯಮಂಡಳಿಯನ್ನು ಯಾರು, ಯಾವ ಪಕ್ಷದವರು ನೇಮಕ ಮಾಡಿದರು ಎನ್ನತಕ್ಕ ಪ್ರಶ್ನೆ ಬೇಡ. ಆ ನ್ಯಾಯ ಮಂಡಳಿಯವರು ಕೊಟ್ಟಿರತಕ್ಕ ತೀರ್ಪನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವರು ಮೂರು ಪ್ರಮುಖವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಿಮಗೆ ನೀರು ಇರಲೀ ಇಲ್ಲದಿರಲಿ 205 ಟಿ.ಎಂ.ಸಿ.ಯಷ್ಟನ್ನು ಪ್ರತಿ ವರ್ಷ ಬಿಟ್ಟು ಕೊಡಬೇಕು ಇದು ಒಂದನೇ ಭಾಗ, ಎರಡನೆ ಭಾಗ ಅಕಸ್ಮಾತ್ ಯಾವುದಾದರೊಂದು ವಾರದಲ್ಲಿ ನಿಮಗೆ ಕಡಿಮೆ ನೀರು ಬಂದರೆ ಅದನ್ನು ಮುಂದೆ make good ಮಾಡಬೇಕು. ಎಲ್ಲದಕ್ಕಿಂತ ಅತ್ಯಂತ ಸಂಕಟದ ಭಾಗವೆಂದರೆ ಮೂರನೆಯದು ಅದೇನೆಂದರೆ Karnataka should limit its area of irrigation to the extent of 11.20 lakhs acres. 11 ಲಕ್ಷದ 20 ಸಾವಿರ ಎಕರೆಗೆ ನಿಮ್ಮ ಅಚ್ಚುಕಟ್ಟನ್ನು ಸೀಮಿತಗೊಳಿಸಬೇಕು, ಆಜ್ಞೆಯ ಪರಂಪರೆ, ಈ ಅನ್ಯಾಯದ ನಡವಳಿಕೆಯು ಇಲ್ಲಿಗೇ ನಿಲ್ಲಲಿಲ್ಲ,

ಸರ್ಕಾರದವರು ಒಂದು ಕ್ಲಾರಿಫಿಕೇಷನ್ ಆಗಿ ಅರ್ಜಿಯನ್ನು ನ್ಯಾಯಮಂಡಳಿಗೆ ಹಾಕಿದರು. ಆದರೆ ಸ್ವಾಮಿ ನಮಗೆ ಏನು ತೀರ್ಮಾನ ಸಿಕ್ಕಿತು ಎಂದರೆ ಇದಕ್ಕಿಂತ ಕೆಟ್ಟ ನ್ಯಾಯ ವಿತರಣೆಯಾಯಿತು. 11 ಲಕ್ಷ 20 ಸಾವಿರ ಎಕರೆ ಭೂಮಿಗೆ ನೀರನ್ನು ಉಣಿಸುವುದನ್ನು ಸೀಮಿತಗೊಳಿಸುವಾಗ 1974ರ ಹಿಂದೆ ಇದ್ದಂಥ ಪರಿಸ್ಥಿತಿಯನ್ನು ನೀವು ಗಣನೆಗೆ ತೆಗೆದುಕೊಳ್ಳಬೇಕೆಂದು ನ್ಯಾಯ ಮಂಡಳಿಯು ತೀರ್ಮಾನ ಕೊಟ್ಟಿತು. ಈ ಸದನದ ಮಾನ್ಯ ಸದಸ್ಯರುಗಳೆಲ್ಲಾ ಸೇರಿದಂತೆ, ನಾನಂತೂ ಅಂದು ಸದಸ್ಯನಾಗಿರಲಿಲ್ಲ there was an unanimous resolution to boycot this Tribunal. ಸ್ವಾಮಿ, ರಾಷ್ಟ್ರದ ಒಬ್ಬ ಪ್ರಜೆ ಮುಖ್ಯಮಂತ್ರಿಗಳಿಗೆ ಕಾಗದ ಬರೆದರೆ, ಅಥವಾ ಒಬ್ಬ ಶಾಸಕ ಕಾಗದ ಬರೆದರೆ, He can afford to ignore, ಅವರು ಮೊಯಿಲಿ ಮುಖ್ಯಮಂತ್ರಿಯಾಗಿರಬಹುದು, ಬಂಗಾರಪ್ಪನವರು ಮುಖ್ಯಮಂತ್ರಿಯಾಗಿರಬಹುದು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮುಖ್ಯಮಂತ್ರಿಗಳಾಗಿದ್ದರೋ ಎನ್ನತಕ್ಕ ಪ್ರಶ್ನೆಯಲ್ಲ, ನೈತಿಕವಾದ ವಿಷಯವನ್ನು ರಾಜಕೀಯದಲ್ಲಿ ನನ್ನ ಹಿರಿಯ ಸ್ನೇಹಿತರು ಹೇಳುತ್ತಾರೆ, ಈ ಸದನ ಮಾಡಿದಂಥ ಒಂದು unanimous Resolutionನ್ನು ಕಾರ್ಯರೂಪಕ್ಕೆ ತರಲಿಲ್ಲ. ಆದರೆ there is no remedy for us ಏನು ಮಾಡಬೇಕು ? ಈ ದೇಶದ, ರಾಜ್ಯದ ಜನರು ಏನು ಮಾಡಬೇಕು ? ನಾನು ಕಾಗದವನ್ನು ಬರೆದಿಲ್ಲ. ಅದನ್ನು ಕಸದ ಬುಟ್ಟಿಗೆ ಹಾಕಲು ಜನರು ಬರೆದಂಥ ಕಾಗದವಲ್ಲ, ಇಡೀ ಸದನವೇ ಸರ್ವಾನುಮತದಿಂದ ಸರ್ವಪಕ್ಷದವರೂ, ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಎಲ್ಲಾರೂ ಸೇರಿ ಕೆಟ್ಟ ತೀರ್ಮಾನವನ್ನು ಕೊಟ್ಟಂಥ abiated tribunal ಏನಿದೆ ಅದನ್ನು Boycot ಮಾಡಬೇಕೆಂದು ಯುನಾನಿಮಸ್ ಆಗಿ ತೀರ್ಮಾನ ಮಾಡಿತು. ಈ ಸದನ ಸರ್ವಾನುಮತದಿಂದ ಮಾಡಿದತಕ್ಕ ತೀರ್ಮಾನವೂ ಕೂಡ ಕಸದ ಬುಟ್ಟಿಗೆ ಹಾಕುವಷ್ಟು ನಿರ್ಲಕ್ಷ್ಯ. ಈ ರೀತಿಯಾದರೆ ನಾವು, ಈ ರಾಜ್ಯದ ಜನರು ಎಲ್ಲಿಗೆ ಹೋಗಬೇಕು ? ನೀರು ಬೇಕಾದರೆ ಎಲ್ಲಿಗೆ ಹೋಗಬೇಕು ? ಆದುದರಿಂದ ನೇರವಾಗಿ ಆಪಾದನೆ ಮಾಡುತ್ತಿದ್ದೇನೆ ಕೃಷ್ಣ ಮತ್ತು ಕಾವೇರಿ ನೀರನ್ನು ಉಳಿಸಿಕೊಳ್ಳುವುದರಲ್ಲಿ, ಅದನ್ನು ಬಳಸಿಕೊಳ್ಳುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ನೀತಿಯನ್ನು ತಾಳಿದೆ. ಈ ಮಾತನ್ನು ನಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಹೇಳುತ್ತಿಲ್ಲ. 1989ನೇ ಇಸವಿಯಲ್ಲೇ ಈ ಮಾತನ್ನು ಹೇಳಿದ್ದೇನೆ.

ಇಂಥ ಪರಿಸ್ಥಿತಿ ಬಂದರೆ ಕಾವೇರಿ ಕೊಳ್ಳದ ಜನರು ರೊಚ್ಚಿಗೇಳಬೇಕಾಗುತ್ತದೆಂದು ಹೇಳಿದ್ದೆ. ಅದರಂತೆ ಎದ್ದಿದ್ದೂ ಆಯಿತು. ಕಾವೇರಿ ನದಿಯ ನೀರಿನ ಹಂಚಿಕೆಯ ಬಗ್ಗೆ ನ್ಯಾಯಮಂಡಲಿ ನೀಡಿದ ತೀರ್ಮಾನದ ಪ್ರತಿಫಲವಾಗಿ ಕಾವೇರಿ ಕೊಳ್ಳದ ಜನರು ರೊಚ್ಚಿಗೆದ್ದಿದ್ದನ್ನು ನೀವು ಈಗಾಗಲೇ ನೋಡಿದ್ದೀರಿ. ರೈತನ ಬವಣೆಗೆ, ರೈತನ ಸಂಯಮಕ್ಕೆ ಒಂದು ಮಿತಿ ಇದೆ. ಆ ಮಿತಿಯನ್ನು ರೈತ ಮೀರಿಬಿಟ್ಟನೆಂಬುದನ್ನು ಅವರು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಯಿತು. ಅನೇಕ ಜನರ ಪ್ರಾಣ ಹಾನಿಯಾಯಿತು. ಇದರ ಅರ್ಥವೇನೆಂದರೆ, ಕಾವೇರಿ ಮತ್ತು ಕೃಷ್ಣಾ ಕೊಳ್ಳದ ನೀರಿನ ಸಾಮರ್ಥ್ಯವನ್ನು ಬಳಸಿಕೊಳ್ಳುವುದರಲ್ಲಿ ಸರ್ಕಾರ ವಿಫಲವಾದರೆ ಇದೇ ರೀತಿ ದಿವ್ಯ ನಿರ್ಲಕ್ಷ್ಯವನ್ನು ತಾಳಿದರೆ ಸಂಯಮವನ್ನು ಮೀರಿ ಈ ರಾಜ್ಯದ ರೈತ ರೊಚ್ಚಿಗೆದ್ದಾನು ಎನ್ನತಕ್ಕ ಎಚ್ಚರಿಕೆಯನ್ನು ನಾನು ಕೊಡಬಯಸುತ್ತೇನೆ. ಕಾವೇರಿ ಕೊಳ್ಳದ ಅತಿ ಪ್ರಮುಖ ಯೋಜನೆಯಾದ ಹೇಮಾವತಿಯ ಬಗ್ಗೆ ಈ ಸದನದಲ್ಲಿ ಉತ್ತರವನ್ನು ಕೊಡತಕ್ಕ ಸಂದರ್ಭ ಬಂತು. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟರು. ಈ ಸದನದಲ್ಲಿ ಇದು ಚರ್ಚೆಯಾಗುವುದು ಬೇಡ. ನಾನು ನಿಮ್ಮನ್ನೆಲ್ಲಾ ಕರೆದು ಮಾತನಾಡುತ್ತೇನೆ, ಆದರೆ ಇವತ್ತಿನವರೆಗೂ ಅದು ಕಾರ್ಯರೂಪಕ್ಕೆ ಬರಲಿಲ್ಲ. ಕಾವೇರಿ ಕೊಳ್ಳದವರೇ ಆದಂಥ ಮಾನ್ಯ ಕೃಷ್ಣಾರವರನ್ನು ನೀರಾವರಿ ಮಂತ್ರಿಗಳನ್ನಾಗಿ ಮಾಡಿದರು. ಇವತ್ತಿನವರೆಗೂ ಕಾವೇರಿ ಕೊಳ್ಳದವರ ಕಥೆ ಏನೆಂದು ಅವರೂ ನಮ್ಮನ್ನು ಕರೆದು

ಕೇಳಲಿಲ್ಲ. ಆ ಕೊಳ್ಳದ ಯೋಜನೆಗಳ ಅನುಷ್ಠಾನ ಸ್ಥಳಕ್ಕೆ ಇವತ್ತಿನವರೆಗೂ ಅವರು ಹೆಜ್ಜೆಯನ್ನು ಇಡಲಿಲ್ಲ. ಅಂದರೆ ಇದರ ಅರ್ಥ ಏನು ? ಈ ಸದನದಲ್ಲಿ ಚರ್ಚೆ ಮಾಡಲಿಕ್ಕೆ ನಾನು ಕಳುಹಿಸಿದ ಸೂಚನೆಗಳಿಗೆ ಬೆಲೆ ಇಲ್ಲ. ಅವು ಈ ಸದನದ ಮುಂದೆ ಬರಲಿಲ್ಲ. 1800 ಜನ ಅರಣ್ಯ ಪ್ರೇರೇಪಕರ ವಿಷಯವನ್ನು ಚರ್ಚೆ ಮಾಡುವುದಕ್ಕೆ ಈ ಸದನದಲ್ಲಿ 2 ಗಂಟೆ ಸಾಧ್ಯವಾಯಿತು. ಆದರೆ ಲಕ್ಷಾಂತರ ಜನರ ಬದುಕಿನ ಆಧಾರವಾದಂಥ ಈ ರಾಜ್ಯದ ರೈತರ ಬಗ್ಗೆ ಸಮಸ್ಯೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಕಳುಹಿಸಿದ ಪ್ರಶ್ನೆಗೆ ಇಲ್ಲಿ ಉತ್ತರವನ್ನು ಕೊಡಲಿಲ್ಲ. ಆ ಉತ್ತರಕ್ಕೆ ಬದಲಾಗಿ ಮಾನ್ಯ ಮುಖ್ಯಮಂತ್ರಿಗಳು ನಿಮ್ಮನ್ನೆಲ್ಲಾ ಕರೆದು ಮಾತನಾಡುತ್ತೇನೆಂದು ಕೊಟ್ಟಂಥ ಭರವಸೆಯೂ ಕೂಡ ಈಡೇರಲಿಲ್ಲ. ಏನಾಗುತ್ತಿದೆ ? ಈ ಎರಡು ಸಮಸ್ಯೆಗಳೂ ಇಷ್ಟು ಗಂಭೀರವಾಗಿದ್ದರೂ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಆಸಕ್ತಿಯನ್ನು ವಹಿಸಿಲ್ಲ. ಆಸಕ್ತಿಯನ್ನು ತೋರುತ್ತಿಲ್ಲ. ನಾನು ಈ ಮಾತನ್ನು ಹೇಳಿದರೆ ಬಹುಶಃ ಅವರ ಮನಸ್ಸಿಗೆ ನೋವಾಗಬಹುದು. ಈ ವಿಷಯದಲ್ಲಿ ಅವರು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಿಮಗೆ ಹೆಚ್ಚಿಗೆ ಅಲಾಟ್‌ಮೆಂಟ್‌ನ್ನು ಕೊಟ್ಟರೆ ನೀವು ಅಭಿನಂದಿಸುತ್ತೀರೆಂದು ಅನಿಸುತ್ತದೆ.

ಶ್ರೀ ವೈ.ಕೆ.ರಾಮಯ್ಯ:- ಆ ಅಲಾಟ್‌ಮೆಂಟ್‌ಗೂ ನಾನು ಬರುತ್ತೇನೆ. ನಾನು ಭೀತಿ ಇಲ್ಲದೆ ಹೇಳುತ್ತೇನೆ. ಅವರ ಮನಸ್ಸಿಗೆ ನೋವಾದರೂ ಚಿಂತೆ ಇಲ್ಲ. ಈ ರಾಜ್ಯದ ರೈತರ ಹಿತದೃಷ್ಟಿಯಿಂದ ಈ ಅಪಾದನೆಯನ್ನು ನಾನು ಮಾಡಬೇಕಾಗುತ್ತದೆ. ಬಹುಶಃ ಈ ಎರಡು ಕೊಳ್ಳದ ರೈತರಿಗೆ ನೀರನ್ನು ಒದಗಿಸುವ ವಿಷಯದಲ್ಲಿ ಇವರಿಗೆ ಆಸಕ್ತಿ ಇಲ್ಲವೆಂದು ನಾನು ಅಪಾದನೆ ಮಾಡಬೇಕಾಗಿದೆ. ಹಣವನ್ನು ಇವರು ಕೊಟ್ಟಿದ್ದಾರೆ. ಹಿಂದೆ ನಮ್ಮ ಸರ್ಕಾರದಲ್ಲೂ ಕೊಟ್ಟಿದ್ದೇವೆ. ಅವರು ಹಿರಿಯರಾದುದರಿಂದ ಈ ವಿಚಾರವನ್ನು ಅವರು ಪ್ರಸ್ತಾವನೆ ಮಾಡಿದ್ದರಿಂದ ನಾನು ಈ ಮಾತನ್ನು ಹೇಳಬೇಕಾಗಿದೆ. ಆಯವ್ಯಯದಲ್ಲಿ ನಾವು ಎಷ್ಟು ಹಣವನ್ನೊದಗಿಸಿದ್ದೇವೆ ಎಂಬುದು ಪ್ರಮುಖವಲ್ಲ. ಆ ಆಯವ್ಯಯದಲ್ಲಿ ನಾವು ನಿಗದಿಪಡಿಸಿದ್ದ ಹಣದಲ್ಲಿ ಎಷ್ಟು ಖರ್ಚಾಯಿತು, ನಿಗದಿಪಡಿಸಿದ್ದ ಗುರಿ ಎಷ್ಟು, ಸಾಧಿಸಿದ ಗುರಿ ಎಷ್ಟೆಂಬುದನ್ನು ನೀವು ಹೇಳಿದರೆ ಅನಂತರ ನಾನು ಹೇಳುತ್ತೇನೆ. ಆಯವ್ಯಯದಲ್ಲಿ 800 ಕೋಟಿ ರೂಪಾಯಿಗಳನ್ನು ಕೊಡುವುದು ಮುಖ್ಯವಲ್ಲ. ಹೇಮಾವತಿ ಯೋಜನೆಗಳಿಗಾಗಿ ಕೊಡಬೇಕಾದ 13 ಕೋಟಿ ರೂ.ಗಳ ಬಿಲ್ಲು ಪೆಂಡಿಂಗ್ ಇದೆ. ದಯವಿಟ್ಟು ಈ 13 ಕೋಟಿ ರೂ.ಗಳ ಬಿಲ್ಲುಗಳನ್ನು ಪಾವತಿ ಮಾಡುವುದರ ಮೂಲಕ ಸಮರೋಪಾದಿಯಲ್ಲಿ ನಡೆಯಬೇಕಾಗಿರುವ ಕೆಲಸದ ಕಡೆಗೆ ದಯವಿಟ್ಟು ಗಮನ ಕೊಡಿ. 13 ಕೋಟಿ ರೂ.ಗಳ ಬಿಲ್ಲುಗಳಿಗೆ ಎಲ್.ಒ.ಸಿ.ಯನ್ನು ನೀವು ಕೊಟ್ಟಿಲ್ಲ. ನಾವು 800 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದು ನೀವು ಈ ರಾಜ್ಯದ ಜನತೆಯ ಕಣ್ಣಿಗೆ ಮಣ್ಣೆರಚುತ್ತಿದ್ದೀರಿ. ನಾವೂ ಕೂಡ 500-600 ಕೋಟಿ ರೂ. ಕೊಟ್ಟಿದ್ದೇವೆ. ಹೇಳಿದೆವು ನೀವು ಎಷ್ಟು ಕೋಟಿ ರೂ.ಗಳನ್ನು ಕೊಟ್ಟಿದ್ದೀರೆಂಬುದು ನಮಗೆ ಮುಖ್ಯವಲ್ಲ. ಆದರೆ ಆಗುತ್ತಿರುವ ಕೆಲಸಗಳಿಗೆ ಅವಶ್ಯಕವಾಗಿ ಬೇಕಾದ ಹಣವನ್ನು ನೀವು ಒದಗಿಸಿಕೊಡುತ್ತಿಲ್ಲ. ತುಮಕೂರಿನಲ್ಲಿ ಹಾದುಹೋಗುವಂಥ ರೈಲ್ವೆ ಕ್ರಾಸಿಂಗ್ ಕಾಲುವೆಯನ್ನು ಮಾಡಲಿಕ್ಕೆ ರೈಲ್ವೇ ಇಲಾಖೆಯವರಿಗೆ ಹಣವನ್ನು ಕಟ್ಟಬೇಕು ಬಜೆಟ್‌ನಲ್ಲಿ ಇದೆ. ನಮ್ಮಲ್ಲಿ ಹೇಳುತ್ತಾರೆ ಪುಸ್ತಕದ ಬದನೆಕಾಯಿ ಎಂದು. ತಿನ್ನಲಿಕ್ಕೆ ಬೇಕಲ್ಲ ಸ್ವಾಮಿ. ಪುಸ್ತಕದ ಬದನೆಕಾಯಿಯನ್ನು ಸಾರು ಮಾಡಲಿಕ್ಕೆ ಬರುವುದಿಲ್ಲ. ಆದರೆ ಆ ಚೀಫ್ ಇಂಜನಿಯರ್‌ರವರಿಗೆ ಇವತ್ತು ರೈಲ್ವೇಗೆ ದುಡ್ಡು ಕಟ್ಟಲಿಕ್ಕೆ ಹಣವಿಲ್ಲ, ಆದ್ದರಿಂದ ಆಯವ್ಯಯದಲ್ಲಿ ಹಣವನ್ನು ಒದಗಿಸಿದ್ದೇನೆ, ಅಷ್ಟರಿಂದ ನೀವು ತೃಪ್ತರಾಗಬೇಕು ಅಂದರೆ ನಾನು ತೃಪ್ತಿಯಾಗಲಿಕ್ಕೆ ಸಿದ್ಧನಿಲ್ಲ. ಒದಗಿಸಿರುವಂಥ ಹಣವನ್ನು ಖರ್ಚು ಮಾಡುವಂಥ ಇಚ್ಛಾಶಕ್ತಿ ಅದರ ಪ್ರದರ್ಶನವನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಮಂತ್ರಿಗಳು ಮಾಡಬೇಕು.

ಇದರ ಜೊತೆಗೆ ಕಳೆದ ವರ್ಷ ಈ ಯೋಜನೆಗೆ ನಿಗದಿ ಮಾಡಿದಂಥ ಹಣ ಎಷ್ಟು ? ಖರ್ಚಾಗಿರುವಂಥ ಹಣ ಎಷ್ಟು ? ನಿಗದಿ ಮಾಡಿದಂಥ ಹಣದಲ್ಲಿ ನೀರಾವರಿ ಸೃಷ್ಟಿ ಮಾಡಬೇಕಾಗಿರತಕ್ಕಂಥ ಗುರಿ ಎಷ್ಟು. What was he potentiality that was earmarked and what is the achievement? ಎನ್ನುವಂಥ ವಿಷಯದಲ್ಲಿ ನಮಗೆ ಮಾಹಿತಿಯನ್ನು ಒದಗಿಸಿಕೊಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಈ ಎರಡು ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಕಾರ್ಯ ಇದೊಂದು ವಿಶೇಷ ಸಂದರ್ಭ. ಸಾಮಾನ್ಯ ಸಂದರ್ಭವಾಗಿದ್ದಿದ್ದರೆ ಅದಕ್ಕೆ ನಾವು ಯಾಗೂ ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲ. ಎರಡು ಸಾವಿರದ ಮಿತಿ ಇಲ್ಲದಿದ್ದಿದ್ದರೆ ಇಲ್ಲಿ 11 ಲಕ್ಷ ಮಿತಿಯನ್ನು ಏರದೆ ಇದ್ದಿದ್ದರೆ ಬಹುಶಃ ನಮಗೆ ಹಣ ಬಂದಾಗ ಸ್ವಲ್ಪ ಸ್ವಲ್ಪ ಮಾಡಿಕೊಳ್ಳಬಹುದಾಗಿತ್ತು. ಆದರೆ ಇವೆರಡು ಮಿತಿಗಳಿರುವುದರಿಂದ ಇದು ಒಂದು ವಿಶೇಷ ಸಂದರ್ಭವಾಗಿರುವುದರಿಂದ ದಯವಿಟ್ಟು ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಈ ಕೆಲಸವನ್ನು ಮಾಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ಸರ್ಕಾರ ಸಿದ್ಧ ಮಾಡಿರುವಂಥ ರಾಜ್ಯಪಾಲರು ಓದಿದಂಥ ಈ ಭಾಷಣದಲ್ಲಿ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟಿದ್ದೇವೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆದರೆ ಅವರು ಮುಂದಿನ ಮಾರ್ಚ್‌ವರೆಗೆ ಮುಖ್ಯಮಂತ್ರಿಗಳಾಗಿದ್ದಿದ್ದರೆ ಆವಾಗ ಒದಗಿಸಿಕೊಟ್ಟಂಥ ಹಣದಲ್ಲಿ ಎಷ್ಟು ಹಣ ಖರ್ಚಾಯಿತು ಎಂದು ಕೇಳುವಂಥ ಪ್ರಿವಿಲೇಜ್ ಉಳಿದುಕೊಳ್ಳಲಿ, ಅವರು ಅಷ್ಟರವರೆಗೆ ಇರಲಿ ಒಂದು ಪ್ರಾರ್ಥನೆ ಮಾಡಿಕೊಂಡು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರ ಮುಖಾಂತರ, ಅದರ ಫಲಾನುಭವಿಗಳಿಗೆ ನಾವು ಅನುಕೂಲ ಮಾಡಿಕೊಡುತ್ತೇವೆ. ಈ ರಾಜ್ಯದಲ್ಲಿ ನೀರಾವರಿ ಸವಲತ್ತುಗಳ ಫಲಾನುಭವಿಗಳಲ್ಲದ, ಸತ್ತರೆ ಹೂಳುವುದಕ್ಕೂ ಕೂಡ ಆರು ಅಡಿ ಜಮೀನು ಇಲ್ಲದಂಥ 100ಕ್ಕೆ 30 ಜನ ಕೃಷಿ ಕಾರ್ಮಿಕರು ಇದ್ದಾರೆ. ಹೇಮಾವತಿ, ಕೃಷ್ಣಾ ಮೇಲ್ದಂಡೆ ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದರಿಂದ ಭೂಮಿ ಉಳ್ಳಂತ ರೈತರಿಗೆ ಅನುಕೂಲವಾಗುತ್ತದೆ. ಆದರೆ ಈ ಸವಲತ್ತು ಹೊರತಾಗಿ ಇರತಕ್ಕಂಥ ಫಲಾನುಭವಿಗಳು 100ಕ್ಕೆ 30 ಜನ ಇದ್ದಾರೆ ಆ ಕೃಷಿ ಕಾರ್ಮಿಕರಿಗೆ, ನಿರ್ಗತಿಕರಿಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದೇ ಒಂದು ಪದವನ್ನು ಕೂಡ ಪ್ರಸ್ತಾವನೆ ಮಾಡಿಲ್ಲ, ಆದ್ದರಿಂದ ಇದು ಒಂದು ಕೊರತೆ ಎಂದು ಭಾವಿಸಿಕೊಳ್ಳಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೇ ವಿದ್ಯುಚ್ಛಕ್ತಿಯ ಬಗ್ಗೆ ಪ್ರಸ್ತಾಪವಾಯಿತು. ಮಾನ್ಯ ವಿದ್ಯುತ್ ಸಚಿವರು ಯಾವಾಗಲಾದರೂ ಬೋರ್‌ವೆಲ್‌ನಿಂದ ನೀರನ್ನು ಹಾಯಿಸಿದ್ದರೋ ಇಲ್ಲವೋ ಗೊತ್ತಿಲ್ಲ, ಬಹುಶಃ ಇಲ್ಲವೆಂದು ಕಾಣುತ್ತದೆ. ಅವರಿಗೆ ಕೆ.ಆರ್.ಎಸ್. ನೀರು ಇದೆ. ಜೊತೆಗೆ ಅವರ ಹಿನ್ನೆಲೆ ಚೆನ್ನಾಗಿ ಗೊತ್ತಿರುತ್ತದೆ. ಅವರು ಯಾವತ್ತು ಹೊಲ ಮನೆ ಕಡೆಗೆ ಹೋದವರಲ್ಲವೆಂದು ನನ್ನ ಭಾವನೆ. ಅವರಿಗೆ ಇವತ್ತಿನ ವಿದ್ಯುತ್ತಿನ ವಿತರಣೆಯ ಅನುಭವ ಬೇಕೆಂದರೆ ದಯವಿಟ್ಟು ಯಾವುದಾದರೂ ಒಂದು ತೋಟದಲ್ಲಿ ಬೋರ್‌ವೆಲ್ ಮುಖಾಂತರ ನೀರನ್ನು ಹಾಯಿಸುತ್ತಿರುವ ಕಡೆ ಹೋಗಿ ಅಲ್ಲಿ ಕೆಲಸ ಮಾಡುತ್ತಿರತಕ್ಕಂಥವರು ಏನು ಮಾತನಾಡುತ್ತಾರೆಂಬುದನ್ನು ತಿಳಿದುಕೊಳ್ಳಬೇಕು. ಏರಡನೆಯದು ನಮ್ಮ ಕುಣಿಗಲ್ ಕಡೆ ಬಂದು ಬಿಟ್ಟು 6 ಗಂಟೆಯಿಂದ 8 ಗಂಟೆಯವರೆಗೆ ಇದ್ದರೆ ಸಾಕು. ಸಾಯಂಕಾಲದ ಹೊತ್ತು ನಮ್ಮ ಹಳ್ಳಿಗಳ ಕಡೆ ನಾಟಕದಲ್ಲಿ ಡಿಪ್ ಅಂಡ್ ಡಿಮ್ ಮಾಡುತ್ತಾರೆ ಸೀನ್ ಸೀನ್‌ಗೂ. ಒಂದು ಗಂಟೆಗೆ ಎಷ್ಟು ಸಾರಿ ಕರೆಂಟ್ ಹೋಗಬೇಕು ಸ್ವಾಮಿ.

ನಮ್ಮ ಮನೆಯಲ್ಲಿ ಒಂದು ಗಂಟೆಗೆ ಕನಿಷ್ಠ 20 ಸಾರಿ ಕರೆಂಟ್ ಹೋಯಿತು. ಕರೆಂಟ್ ಹಾಗಾಗಲಿ ಎಂದರೆ ಬಲ್ಬ್ ಬರ್ನ್ ಆಯಿತು. ವೋಲ್ಟೇಜ್ ಫ್ಲಕ್ಚುಯೇಷನ್‌ನಿಂದ. ಕರೆಂಟ್‌ನ್ನು ಎರಡು ಗಂಟೆ ಆಫ್ ಮಾಡಿ ಅಭ್ಯಂತರವಿಲ್ಲ. ಆದರೆ ಈ ರೀತಿ ಆಗುವುದು ಬೇಡ. ಆದುದರಿಂದ ಮಾನ್ಯ ನೀರಾವರಿ ಮಂತ್ರಿಗಳಲ್ಲಿ ತಮ್ಮ ಮೂಲಕ ಕೋರಿಕೆ, ವಾರಕ್ಕೆ ಒಂದು ದಿವಸ ವಿದ್ಯುಚ್ಛಕ್ತಿ ನಿಲ್ಲಿಸಿ. ಎರಡು ದಿನ ಬೋರ್‌ವೆಲ್‌ಗಳಿಗೆ ಕರೆಂಟ್ ಕೊಡಬೇಡಿ. ಕೊಡುವಾಗ ವಿದ್ಯುಚ್ಛಕ್ತಿ ಸರಿಯಾಗಿ ಬರುವಂಥ ಪರಿಸ್ಥಿತಿಯನ್ನಷ್ಟೆ ಮಾಡಿ ಕೊಡಿ ಎಂದು ಪ್ರಾರ್ಥಿಸುತ್ತೇನೆ.

ಈ ಭಾಷಣದಲ್ಲಿ ಹಿಂದುಳಿದವರ ಹಿತಾಸಕ್ತಿ ಬಗ್ಗೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಸರ್ಕಾರ ಸಂಪೂರ್ಣ ಬದ್ಧವಾಗಿದೆ ಎಂದು ಹೇಳಿದ್ದಾರೆ. ಮುಖ್ಯಮಂತ್ರಿಗಳೇ, ಹಿಂದುಳಿದ ವರ್ಗದವರಿಗೆ ಏನು ಮಾಡದಿದ್ದರೂ ಪರವಾಗಿಲ್ಲ. ಇವತ್ತು ಈ ರಾಜ್ಯದಲ್ಲಿ ನೂರಕ್ಕೆ 92 ಭಾಗ ಜನರನ್ನು ಹಿಂದುಳಿದ ವರ್ಗದವರನ್ನಾಗಿ ಮಾಡಿದಂಥ ಪಾಪದ ಪರಿಸ್ಥಿತಿ ಇಲ್ಲಿದೆ. ನೀವೇ ಮಾಡಿದಿರಿ ಎಂದು ಮಾತು ಹೇಳುತ್ತೀರೆಂದು ಮಾನ್ಯ ರಂಗನಾಥ್‌ರವರು ನಗುತ್ತಿದ್ದಾರೆ. ಇದಕ್ಕೆ ರಾಜಕೀಯ ಬೇಡವೆಂದು ಆಗಲೇ ಹೇಳಿದೆ. ರಾಜ್ಯದಲ್ಲಿರುವ ಜನಸಂಖ್ಯೆಯಲ್ಲಿ 92 ಭಾಗ ಜನಸಂಖ್ಯೆಯನ್ನು ಹಿಂದುಳಿದ ವರ್ಗವನ್ನಾಗಿ ಮಾಡಿದಂಥ ಪಾಪದ ಪರಿಸ್ಥಿತಿ ಇಲ್ಲಿದೆ. ಹಿಂದುಳಿದ ವರ್ಗದ ಎಷ್ಟು ಜನರಿಗೆ ಕೆಲಸ ಕೊಡಿಸುತ್ತೀರಿ, ಮಂತ್ರಿ ಮಾಡುತ್ತೀರಿ ಅದು ಲೆಕ್ಕ ಅಲ್ಲ. ಹಿಂದುಳಿದ ವರ್ಗದಿಂದ ಬಂದ ಮುಖ್ಯಮಂತ್ರಿಯವರು ಪಾಪ ತೊಳೆಯುವುದಕ್ಕೆ ಏನು ಕಾರ್ಯಕ್ರಮ ಇದೆ. ಮುಂದುವರಿದ ವರ್ಗಕ್ಕೆ ಸೇರಿದವರು ಪಾಪ ಮಾಡಿದ್ದಾರೆ, ಅನ್ಯಾಯ ಮಾಡಿದ್ದಾರೆ. ಮುಂದುವರಿದ ವರ್ಗಕ್ಕೆ ಸೇರಿದ ಮುಖ್ಯಮಂತ್ರಿಗಳು ಮಾಡಿದ ಪಾಪವನ್ನು ಹಿಂದುಳಿದ ವರ್ಗಕ್ಕೆ ಸೇರಿದ ಇಬ್ಬರು ಮುಖ್ಯಮಂತ್ರಿಗಳು ತೊಳೆಯುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ಜಾತಿಯ ಹೆಸರಿನಲ್ಲಿ ವರ್ಗಗಳನ್ನು ಮಾಡುವಂಥ ಸಂದರ್ಭದಲ್ಲಿ ಇದು ಅನಿವಾರ್ಯವಾಗುತ್ತದೆ ಈ ಮಾತು ಹೇಳುವುದು. ಆರ್ಥಿಕ ಆಧಾರದ ಮೇಲೆ ಮಾಡುತ್ತಿದ್ದರೆ ಈ ಮಾತು ಹೇಳುತ್ತಿರಲಿಲ್ಲ. ಅವರು ಮಾಡಿದಂಥ ಪಾಪ ತೊಳೆಯುವುದಕ್ಕೆ ನೀವು ಯಾವ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ. ಕೊನೆಯದಾಗಿ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಆಗಲೇ ಹೇಳಿದ ಹಾಗೆ, ಆದ್ಯತೆಯನ್ನು ಕೊಟ್ಟು ಈ ವಿಕೇಂದ್ರೀಕರಣ ಪದ್ಧತಿಗೆ ಪಂಚಾಯತ್ ರಾಜ್‌ಗಳ ಸಮಸ್ಯೆಗಳಿಗೆ ಅಧಿಕಾರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಇನ್ನಷ್ಟು ವರ್ಗಾವಣೆ ಮಾಡುವ ಬಗ್ಗೆ ನನ್ನ ಪ್ರಾರ್ಥನೆ ಇಷ್ಟೆ. ನೀವು ಹೆಚ್ಚಿನ ಅಧಿಕಾರ, ಹಣ ಏನೂ ಕೊಡಬೇಡಿ. ಈಗ ನೀವೇನು ಅಧಿಕಾರ ಕಿತ್ತುಕೊಂಡಿದ್ದೀರಲ್ಲ ಅದನ್ನು ಮಾತ್ರ ವಾಪಸ್ಸು ಕೊಡಿ ಸಾಕು. ಇನ್ನು ಏನೂ ಮಾಡುವುದು ಬೇಡ. ಹೆಚ್ಚಿಗೆ ಕೊಡುವುದು ಇದ್ದರೆ ಕೊಡುವಿರಂತೆ. ಆದರೆ ಸಾವಿರಾರು ಮಂತ್ರಿ ಗ್ರಾಮೀಣ ಜನರ ಕೈಯಲ್ಲಿದ್ದಂಥ ಅಧಿಕಾರ ಕಿತ್ತುಕೊಂಡು ಪಾಪದ ಕೆಲಸ ಏನು ಮಾಡಿದ್ದೀರಿ, ಅನ್ಯಾಯ ಏನು ಮಾಡಿದ್ದೀರಿ ಅದನ್ನು ಮೊದಲು ಸರಿ ಮಾಡಿ. ಅವರು ಏನು ಪಾಪ ಮಾಡಿದ್ದಾರೆ ? ನನ್ನ ಪಕ್ಷದವರು, ವಿರೋಧ ಪಕ್ಷದವರು ಬೇಡ, ನಿಮ್ಮ ಕ್ಷೇತ್ರದಲ್ಲಿರುವ ಹಳೆಯ ಪ್ರಧಾನರನ್ನು ಕೇಳಿ. ನಿಮ್ಮ ಪಕ್ಷದವರು ಮಾಡಿದ್ದುದು ನ್ಯಾಯ ಎಂದು ಹೇಳುತ್ತಾನೋ ಅನ್ಯಾಯ ಎಂದು ಹೇಳುತ್ತಾನೋ ಕೇಳಿ. ನಿಮಗೆ ಏನು ತೊಂದರೆಯಾಗಿದೆ ? ದಿವಂಗತ ರಾಜೀವ್ ಗಾಂಧಿಯವರು ತಂದಿರುವಂಥ ತಿದ್ದುಪಡಿ, ಅವರದೇ ಕೂಸು ಎಂದು ಕಾಣುತ್ತದೆ. ಸದನಕ್ಕೆ ಬಂದದ್ದನ್ನು ಓದಿದೆ. ಆ ತಿದ್ದುಪಡಿಗೂ ನಾವು ಮಾಡಿರುವ ಕಾನೂನಿಗೂ ಯಾವ ವ್ಯತ್ಯಾಸವೂ ಇಲ್ಲ. ಒಂದೇ ಒಂದು ಆಪ್ಷನ್ ಏನು ಕೊಟ್ಟಿದ್ದಾರೆಂದರೆ ಅಧ್ಯಕ್ಷರನ್ನು ನೇರವಾಗಿ ನೇಮಕ ಮಾಡಬೇಕೆ ಅಥವಾ ಪರೋಕ್ಷ ಮುಖಾಂತರ ಮಾಡಿಕೊಳ್ಳಬೇಕೇ ಎಂಬುದು ರಾಜ್ಯ ಸರ್ಕಾರಕ್ಕೆ ಬಿಟ್ಟಿದೆ. ಅದು ಬಿಟ್ಟು ಬೇರೆ ಯಾವುದೂ ವ್ಯತ್ಯಾಸ ಇಲ್ಲ. ಆದರೆ ಏತಕ್ಕೆ ಚುನಾವಣೆ ಮಾಡುತ್ತಿಲ್ಲ ? ಪಂಚಾಯಿತಿ ಸಂಸ್ಥೆಗಳಿಗೆ ಇನ್ನಷ್ಟು ಹೆಚ್ಚು

ಪರಿಣಾಮಕಾರಿಯಾಗಿ ಕೊಡುವಂಥ ಕಾನೂನು ತರುವ ನಿಮಗೆ ಅಭಿನಂದಿಸುತ್ತಾ, ಸಾವಿರಾರು ಗ್ರಾಮೀಣ ಜನರಿಂದ ಕಿತ್ತುಕೊಂಡಿರುವ ಅಧಿಕಾರವನ್ನು ಬೇಗ ವಾಪಸ್ಸು ಕೊಟ್ಟು ಆ ಸಂಸ್ಥೆಗಳಿಗೆ ಚುನಾವಣೆ ಮಾಡುವ ಔದಾರ್ಯ ತೋರಬೇಕೆಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಇಷ್ಟು ಹೇಳಿ, ಇಷ್ಟು ಹೊತ್ತು ರಾಜ್ಯಪಾಲರ ಭಾಷಣವನ್ನು ಕುರಿತು ಅಭಿನಂದನಾ ನಿರ್ಣಯದ ಮೇಲೆ ನಾನು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣ ಮತ್ತು ಇಲ್ಲಿ ವಂದನಾ ನಿರ್ಣಯ; ಇದಕ್ಕೆ ನಾವು ವಂದನೆಯನ್ನು ಸಲ್ಲಿಸಬೇಕಾಗಿದೆ. ಇಡೀ ಸಭೆ ಸಲ್ಲಿಸಬೇಕು. ಈ ಭಾಷಣಕ್ಕೆ ಪೂಜ್ಯವಾಗಿ ನಾವು ಶರಣು ಎಂದು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್:- ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ಹೀಗೆ ಹೇಳಿದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್:- ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವುದರಿಂದಲೇ ಇದಕ್ಕೆ ಬರುತ್ತಿದ್ದೇನೆ. ಈ ಭಾಷಣ ತಯಾರು ಮಾಡುವವರು, ನಿಮ್ಮ ಸಚಿವ ಸಂಪುಟ. ತಾವು ಒಪ್ಪಿಗೆ ಕೊಟ್ಟು ನಮ್ಮ ಸರ್ಕಾರದ ರೀತಿ ನೀತಿಗಳು ಏನೇನು ಇದೆ ಎಂದು ಹೇಳಿ ಅದನ್ನು ತಾವು ತೀರ್ಮಾನ ಮಾಡಿದಿರಿ.

ಡಾ।। ವೈ. ನಾಗಪ್ಪ:- ಭವಿಷ್ಯ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಭವಿಷ್ಯಾನೇ ? ಹೌದು. ನೀವು ಬುಡಬುಡಕೆ ತರಬೇಕು. ಆದುದರಿಂದ ಈ ಒಂದು ಭಾಷಣದ ಪ್ರತಿ ಪದವನ್ನೂ ಸಹ ತಯಾರು ಮಾಡಿದವರು ರಾಜ್ಯಪಾಲರು ಅಲ್ಲ. ಇದನ್ನು ತಯಾರು ಮಾಡಿದವರು ನಮ್ಮ ರಾಜ್ಯ ಸರ್ಕಾರ, ಈಗ ಗೌರವಾನ್ವಿತ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪ ಮೊಯಿಲಿಯವರ ಸರ್ಕಾರ. ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ, ದೇಶದ ಎಲ್ಲಾ ಕಡೆ ಸಂವಿಧಾನಬದ್ಧವಾಗಿ ಇದು ನಡೆಯತಕ್ಕ ವಿಚಾರ. ನಮ್ಮ ಸರ್ಕಾರ ಹೊಸದಾಗಿ ಮಾಡಿದೆ, ಭಾಷಣವನ್ನು ಇವರೇ ತಯಾರು ಮಾಡಿದ್ದೇನು ಅಲ್ಲ. ನಾನು ಮೂಲಭೂತವಾಗಿ ಈ ಒಂದು ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸತಕ್ಕದ್ದು, ಸರ್ಕಾರ ತಯಾರು ಮಾಡಿದ ಭಾಷಣವನ್ನು ಅವರು ಬಂದು ಓದತಕ್ಕದ್ದು, ಒಂದು ರೀತಿ ಸರಕಾರಿಯ ಪ್ರವೇಶ ಇದ್ದ ಹಾಗೆ. ತಾವು ತಯಾರು ಮಾಡಿ, ಅವರ ಬಾಯಲ್ಲಿ, ತಾವು ದಯವಿಟ್ಟು ಇಲ್ಲಿ ಓದಬೇಕು, 4 ಗಂಟೆ ಕಾಲ ಕೊಟ್ಟಿದ್ದೇವೆ ದಯ ಮಾಡಿಸಬೇಕು, ಅವರಿಗೆ ರಾಷ್ಟ್ರಗೀತೆ ಎಲ್ಲಾ ಆಡಿಸಿ, ಕೆಂಪು ಕಂಬಳಿ ಹಾಕಿ ಅವರನ್ನು ಕರೆದುಕೊಂಡು ಬಂದು, ಬ್ಯಾಂಡ್ ಹೊಡೆಸುವದು, ಇದು ಸಂಪ್ರದಾಯ.

ಶ್ರೀ ಕೆ.ಹೆಚ್. ರಂಗನಾಥ್:- ತಾವು ಮುಖ್ಯಮಂತ್ರಿಗಳಾದರೂ ಇದನ್ನೇ ಮಾಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ ಎಂದು ಹೇಳುವುದಿಲ್ಲ, ಇವತ್ತಿನ ವಸ್ತು ಸ್ಥಿತಿ ಏನಿದೆ ಎಂದು ಹೇಳುತ್ತಿದ್ದೇನೆ. ರಾಜ್ಯಪಾಲರು ಬರುವಾಗ ನಾವೆಲ್ಲರೂ ಎದ್ದು ನಿಲ್ಲಬೇಕು. ಅವರು ಕುಳಿತುಕೊಂಡ ತಕ್ಷಣವೇ ನಾವು ಕುಳಿತುಕೊಳ್ಳಬೇಕು. ಪ್ರಜಾಪ್ರಭುತ್ವ ಚುನಾಯಿತ ಪ್ರತಿನಿಧಿಗಳ ಮನೆ ಇದು. ವಿಧಾನಪರಿಷತ್ತಿನಲ್ಲಾಗಲೀ, ವಿಧಾನಸಭೆಯಲ್ಲಾಗಲೀ, ರಾಜ್ಯಸಭೆಯಲ್ಲಾಗಲೀ, ಲೋಕಸಭೆ ಯಲ್ಲಾಗಲೀ ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇರತಕ್ಕ ಒಂದು ಪ್ರಜಾತಂತ್ರದ ಮನೆ ನಮ್ಮಲ್ಲಿ ರಾಜಾಧಿರಾಜರುಗಳು ಅಧಿಕಾರ ನಡೆಸಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬೇಕು, ರಾಜರುಗಳ ಆಳ್ವಿಕೆ ಹೋಗಬೇಕು. ರಾಜ್ಯಶಾಹೀ ಪದ್ಧತಿ ಹೋಗಬೇಕು ಎಂದಾಗ ಅನೇಕ ಸಮಸ್ಯೆಗಳ ಬಗ್ಗೆ ನಿರಂತರ

ಹೋರಾಟ ನಡೆದು ರಾಜರುಗಳೆಲ್ಲಾ ಹೋಗಿದ್ದಾರೆ. ರಾಜರನ್ನು ಹೋಗಿಸಿ ಇವತ್ತು ಆಳ್ವಿಕೆಯನ್ನು ನಡೆಸತಕ್ಕವರು ಪ್ರಜಾಪ್ರಭುತ್ವವಾದಿಗಳು ಪ್ರಜಾತಂತ್ರವಾದಿಗಳು. ಇವತ್ತು ರಾಜಭವನವೆಂದು ಹೆಸರು ಇದೆ. ನಾವು ಯಾವ ರಾಜತ್ವವನ್ನು ವಿರೋಧಿಸಿ ರಾಜತ್ವ ನಮಗೆ ಬೇಡವೆಂದು ಹೇಳಿದ್ದೇವೆ. ಇವತ್ತು ನಾವು ರಾಜಭವನ, ರಾಜ್ಯಪಾಲರು, ಈ ಹೆಸರು ಬೇಕೆ ? ಆ ಬಗ್ಗೆ ಚಿಂತನೆಯಾಗಬೇಕು. ಇದು ದೇಶದಲ್ಲಿ ಎಲ್ಲಾ ವರ್ಗದ ಚಿಂತಕರಿಂದ ಚಿಂತನೆಯಾಗಬೇಕು. ಸಂವಿಧಾನವನ್ನು ಬದಲಾವಣೆ ಮಾಡತಕ್ಕ ರೀತಿಯಲ್ಲಿ ಇವತ್ತು ಆಗಬೇಕಾಗಿದೆ, ಇದನ್ನು ಮಾಡುವುದಾದರೆ ಪ್ರಜಾತಂತ್ರ ವ್ಯವಸ್ಥೆಗೆ ಒಂದು ಹೊಸ ಶಕ್ತಿ ಬರುತ್ತದೆ. ಅದನ್ನು ಬಿಟ್ಟು ನಾವು ಯಾವ ಆಂಗ್ಲರ ಆಳ್ವಿಕೆಯಲ್ಲಿ ನಾವು ಅವರಿಗೆ ಚೌಲವನ್ನು ಬೀಸುತ್ತಾ ಕುಳಿತಿದ್ದೆವೋ, ಅದೇ ಪರಿಸ್ಥಿತಿಯನ್ನು ನಾವು ಮುಂದುವರಿಸಿಕೊಂಡು ಹೋಗುವುದಾದರೆ ಇದು ಸರಿಯಾದ ರೀತಿಯೆಂದು ನಾನಂತೂ ತಿಳಿದುಕೊಂಡಿಲ್ಲ. ನಮ್ಮ ರಾಜ್ಯದಲ್ಲಿ ಮಾತ್ರ ಈ ಪರಿಸ್ಥಿತಿ ಇದೆಯೆಂದು ಹೇಳುತ್ತಿಲ್ಲ. ಇದು ಪ್ರತಿಯೊಂದು ಸಾರಿ ಆಗುತ್ತಿದೆ ಇದು ಸರಿಯೇ ? ಸಂವಿಧಾನಬದ್ಧವಾಗಿ ನಾವು ಶಾಸನಸಭೆಯನ್ನು ಕರೆಯಬೇಕು., ಜಂಟೀ ಅಧಿವೇಶನದಲ್ಲಿ ರಾಜ್ಯಪಾಲರು ಬರುತ್ತಾರೆ, ಅವರ ಭಾಷಣವನ್ನು ನಾವು ಆಲಿಸಬೇಕು. ಅವರು ಇಲ್ಲಿಗೆ ಬಂದು ಭಾಷಣ ಓದಿ ಹೋದ ನಂತರ ನಮ್ಮ ಕರ್ತವ್ಯ ಅಂದರೆ ದಿನಾ ಬೆಳಿಗ್ಗೆ ವಂದನೆ ಸಲ್ಲಿಸತಕ್ಕದ್ದು. ವಂದನಾನಿರ್ಣಯದ ಆ ಪದವೇ ನಮಗೆ ಗುಲಾಮಗಿರಿಯ ಸಂಕೇತ. ಇದು ಪದವೇ ಇಲ್ಲವೆಂದು ನನ್ನ ಸ್ಪಷ್ಟ ಅಭಿಪ್ರಾಯ. ನಾನು ಯಾರನ್ನಾದರೂ ವಿರೋಧ ಮಾಡುತ್ತೇನೆಂದು ಅಲ್ಲ. ಇದರ ಬಗ್ಗೆ ಸಮಗ್ರವಾದಂತಹ ಒಂದು ಚಿಂತನೆ ನಡೆಯಬೇಕು. ಸಮಾಜವಾದಿಗಳು, ಚಿಂತಕರು, ಪ್ರಜಾಪ್ರಭುತ್ವವಾದಿಗಳು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕವರು ಈ ಬಗ್ಗೆ ಚಿಂತನೆ ನಡೆಸಬೇಕಾಗಿದೆ. ಇದು ಲೋಕಸಭೆಯಲ್ಲೂ ಚಿಂತನೆಯಾಗಬೇಕು, ರಾಜ್ಯಸಭೆಯಲ್ಲೂ ಆಗಬೇಕು. ರಾಜ್ಯಗಳ ವಿವಿಧ ವಿಧಾನಮಂಡಲಗಳಲ್ಲಿ ವಿಧಾನಪರಿಷತ್‌ಗಳಲ್ಲಿ ಮತ್ತು ವಕೀಲರುಗಳ ವೃಂದದಲ್ಲಿ ಎಲ್ಲಾ ಕಡೆ ಚಿಂತನೆ ನಡೆಯಬೇಕು. ನಂತರ ಒಂದು ಹೊಸ ಮಾರ್ಗದರ್ಶನಕ್ಕೆ ಹೋಗಬೇಕಾಗುತ್ತದೆ. ಇದನ್ನು ತಾವೇ ಯಾರಾದರೂ ಓದಬಹುದಾಗಿತ್ತು.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):– ರಾಜ್ಯಾಂಗದಲ್ಲಿ ರಾಜ್ಯಪಾಲರು ರಾಜ್ಯದ ಮುಖ್ಯಸ್ಥರು ಎಂದು ನಾವು ಹೇಳಿಕೊಂಡಿದ್ದೇವೆ. He is the Head of the State. ಚುನಾಯಿತ ಸಭೆ, ಚುನಾಯಿತ ಸರ್ಕಾರ, ರಾಜ್ಯಾಂಗದ ಪ್ರಕಾರ ಅವರನ್ನು ಇಟ್ಟುಕೊಂಡಿರುವುದರಿಂದ ಇವತ್ತು ನಡೆದುಕೊಂಡು ಹೋಗುತ್ತಿದೆ.

ಶ್ರೀ ಪಾಟಾಳ್ ನಾಗರಾಜ್:–ಈಗ ನಡೆದುಕೊಂಡು ಬಂದಿರತಕ್ಕ ದಾರಿ ಸರಿಯಿಲ್ಲ. ಅದು ಬದಲಾವಣೆಯಾಗಬೇಕೆಂದು ಹೇಳುತ್ತಿದ್ದೇವೆ. ಈಗಿರುವ ವ್ಯವಸ್ಥೆ ತಕ್ಷಣಕ್ಕೆ ಬದಲಾವಣೆ ಆಗಬೇಕೆಂದು ಹೇಳುತ್ತಿದ್ದೇವೆ. ಬದಲಾವಣೆಯಾಗಲಿಲ್ಲವೆಂದರೆ ಪ್ರಜಾತಂತ್ರಕ್ಕೆ ಒಳ್ಳೆಯ ಗೌರವ ಇರತಕ್ಕ ಲಕ್ಷಣವಲ್ಲ. ನಾವೆಲ್ಲರೂ ಚುನಾಯಿತ ಪ್ರತಿನಿಧಿಗಳು. ಅವರು ಒಂದು ದಿವಸ ಬರುತ್ತಾರೆ ಹೊರಟುಹೋಗುತ್ತಾರೆ. ವಂದನಾ ನಿರ್ಣಯ, ಇಲ್ಲೊಂದು ನಿರ್ಣಯ ಮಾಡಿ ನಮ್ಮ ಶಾಸಕಾಂಗದ ಕಾರ್ಯದರ್ಶಿಯವರು ವಂದನಾ ನಿರ್ಣಯವನ್ನು ಮಂಡಿಸಿದ್ದಾರೆ, ಅದಕ್ಕೆ ಒಬ್ಬರು ಸೂಚಿಸುತ್ತಾರೆ ಒಬ್ಬರು ಅನುಮೋದಿಸುತ್ತಾರೆ, ಈ ನೀತಿ ಇದೆಯಲ್ಲ ಇದು ಒಳ್ಳೆಯದಲ್ಲ, ಇದು ನನಗನಿಸುತ್ತದೆ ಬದಲಾವಣೆಯಾಗಬೇಕು. ಬರಬರುತ್ತಾ ಏನಾಗಿದೆಯೆಂದರೆ ಇದೊಂದು ತರಹ ಕಾಟಚಾರಕ್ಕೆ ರಾಜ್ಯಪಾಲರ ಭಾಷಣ. ರಾಜ್ಯಪಾಲರು ಬರುತ್ತಾರೆ ಹೊರಟುಹೋಗುತ್ತಾರೆ. ಐದಾರು ಪುಟಗಳ ಭಾಷಣವನ್ನು ಬರೆದು ಅವರಿಗೆ ಕೊಡುವುದು. ಶಕ್ತಿಯುತವಾದ ವಿಚಾರಗಳನ್ನು ಯಾವುದರಲ್ಲಿ ಹೇಳುತ್ತಾರೆ, ಆಯವ್ಯಯದಲ್ಲಿ ಹೇಳುತ್ತಾರೆ. ಅದರಲ್ಲಿ ಬರುವುದಕ್ಕೂ ಇದರಲ್ಲಿ ಬರುವುದಕ್ಕೂ ಅಜಗಜಾಂತರ ವ್ಯತ್ಯಾಸ ಇದೆ. ಇದರ ಬಗ್ಗೆ ಒಂದು ಸಮಗ್ರವಾದಂತಹ ಚಿಂತನೆ ಇಡೀ ದೇಶದಲ್ಲಿ

ನಡೆಯಬೇಕು. ನಾವು ಒಂದು ಕಡೆ, ನಮ್ಮ ಪ್ರಜಾತಂತ್ರ ವ್ಯವಸ್ಥೆ ಬಹಳ ಮುಖ್ಯವಾಗಿ ಚೈತನ್ಯಪೂರ್ಣವಾಗಿ, ಅರ್ಥಪೂರ್ಣವಾಗಿ, ಶಕ್ತಿಪೂರ್ಣವಾಗಿ ಇರಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ವೈಯಕ್ತಿಕವಾಗಿ ನನಗೆ ಅವರ ಬಗ್ಗೆ ಗೌರವ ಇದೆ, ರಾಜ್ಯಪಾಲರ ಬಗ್ಗೆ ವೈಯಕ್ತಿಕವಾಗಿ ನನಗೇನೂ ದ್ವೇಷ ಇಲ್ಲ. ನಾನು ಅವತ್ತು ಕೂಡ ಈ ವ್ಯವಸ್ಥೆಯನ್ನು ವಿರೋಧಿಸಿದ್ದೇನೆ. ರಾಜ್ಯಪಾಲರ ಭಾಷಣದ ದಿವಸ ನಾನು ಈ ವ್ಯವಸ್ಥೆಯನ್ನು ವಿರೋಧಿಸಿದ್ದೆ. ಈ ಭಾಷಣ ನಮ್ಮ ರಾಜ್ಯದ ಜನತೆಗೆ ಯಾವುದೇ ವಿಧವಾದಂಥ ಒಂದು ಉಪಯುಕ್ತವಾದ ಚಿಂತನೆಯಲ್ಲವೆಂದು ಹೇಳಿ ನಾನು ಪ್ರಾಮಾಣಿಕವಾಗಿ ಅದನ್ನು ವಿರೋಧಿಸಿದ್ದೆ. ಮಾನ್ಯ ಹಿರಿಯ ಸ್ನೇಹಿತರಾದಂಥ ಶ್ರೀ ರಾಮಕೃಷ್ಣ ಹೆಗಡೆಯವರು ಇದನ್ನು ಮಾಡಬಾರದಾಗಿತ್ತು ಎಂದರು. ನಾನು ಅವರ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ಅವರ ದೃಷ್ಟಿಯಲ್ಲಿ ಅದು ಸರಿಯಲ್ಲವೆಂದು ಹೇಳಿದರು. ವೈಯಕ್ತಿಕವಾಗಿ ನನಗೆ ರಾಜ್ಯಪಾಲರ ಬಗ್ಗೆ ವಿರೋಧ ಇಲ್ಲ. ಆದರೆ ಈ ವ್ಯವಸ್ಥೆ ಏನಿದೆ, ಇದರ ಬಗ್ಗೆ ನನ್ನದು ಸಂಪೂರ್ಣವಾದಂಥ ತಕರಾರು ಇದೆ. ಈಗಲೂ ಇದೆ, ಮುಂದಾಗಲೂ ಇದೆ. ನಾನು ಮಾನ್ಯ ಅಧ್ಯಕ್ಷರಿಗೆ ಕೇಳುತ್ತಿದ್ದೇನೆ. ಮಾನ್ಯ ರಾಜ್ಯಪಾಲರು ಒಂದು ದಿನ ಬಂದು ಭಾಷಣ ಮಾಡಿ ಹೋದನಂತರ ಸಂಪೂರ್ಣವಾಗಿ ಆ ಪೀಠವನ್ನು ಅಲಂಕರಿಸುವವರು ಈ ಶಾಸನಸಭೆಯ ಅಧ್ಯಕ್ಷರು. ರಾಜ್ಯಪಾಲರು ಬಂದರು ಎಂದರೆ ಒಬ್ಬರು ಆ ಕಡೆಗೆ ಹೋಗುತ್ತೀರಿ, ಒಬ್ಬರು ಈ ಕಡೆ ಕುಳಿತುಕೊಳ್ಳುತ್ತೀರಿ. ಈ ವ್ಯವಸ್ಥೆ ಇವತ್ತಿಗೂ ಇದೆ. ಈ ರಾಜ್ಯಾಂಗಬದ್ಧ ವ್ಯವಸ್ಥೆ ಸಮಗ್ರವಾಗಿ ಬದಲಾವಣೆ ಆಗಬೇಕಾಗಿದೆ. ಒಂದು ಕಾಲದಲ್ಲಿ ಈ ಸದನವನ್ನು ಕಟ್ಟಿಸಿದಂಥ ಹಿಮಾಲಯ ಪರ್ವತದ ಎತ್ತರಕ್ಕೆ ಬೆಳೆದಂಥ ಕೆಂಗಲ್ ಹನುಮಂತಯ್ಯನವರ ರಾಜ್ಯ ಎಲ್ಲಿ ನಡೆಯಿತು ಎಂದರೆ ನಮ್ಮ ಕೆಂಪು ಮನೆಯಲ್ಲಿ. ಈ ಸದನದಲ್ಲಿ ಅಲ್ಲ. ಈ ಸದನವನ್ನು ಕಟ್ಟಿಸಿದಂಥ ಕೆಂಗಲ್ ಹನುಮಂತಯ್ಯನವರ ಆಡಳಿತ ನಡೆದದ್ದು ಎಲ್ಲಿ ? ನಮ್ಮ ಉಚ್ಚನ್ಯಾಯಾಲಯ ಇದೆಯಲ್ಲ, ಅಲ್ಲಿ. ಆಗ ಹೇಗೆ ಇತ್ತು ಎಂದರೆ ಒಂಭತ್ತು ಜನ ಮಂತ್ರಿಗಳು. ಇವತ್ತು ಅದನ್ನು ನೆನಸಿಕೊಳ್ಳಬೇಕು. ಒಬ್ಬ ದೊಡ್ಡ ಪತ್ರಿಕಾ ಪಿತಾಮಹಾ ಶ್ರೀಮಾನ್ ಕಿಡಿಶೇಷಪ್ಪನವರು, ಅವರನ್ನು ನೆನಸಿಕೊಳ್ಳಬೇಕು. ಅವರು ರಾಜಕಾರಣಿಗಳನ್ನು ಬೈದರೂ, ಅವರನ್ನು ವಿರೋಧ ಮಾಡಿದರೂ ಆ ವರದಿಯಲ್ಲಿ ಬೈಗುಳಗಳಿದ್ದರೂ ಸಹ ಓದುವವರಿಗೆ ಸಂತೋಷವಾಗುತ್ತಿತ್ತು. ಅಂತಹ ಪದಗಳನ್ನು ಅವರು ಉಪಯೋಗಿಸುತ್ತಿದ್ದರು. ಇದು ಶ್ರೀ ರಂಗನಾಥ್ ಅವರಿಗೆ ಗೊತ್ತು. ಶ್ರೀ ಹುಚ್ಚಮಾಸ್ತಿಗೌಡರಿಗೂ ಗೊತ್ತು. ಇಲ್ಲಿ ಅನೇಕರು ಕಿಡಿಶೇಷಪ್ಪನವರನ್ನು ಬಲ್ಲರು. ಅಂತಹ ಒಬ್ಬ ದೊಡ್ಡ ವ್ಯಕ್ತಿಯನ್ನು ಇಲ್ಲಿ ನೆನೆಸಿಕೊಳ್ಳುತ್ತಿದ್ದೇವೆ. ಅವರು ನವಗ್ರಹ ಮಂತ್ರಿಮಂಡಲದ ಎಂದು ಬರೆಯುತ್ತಿದ್ದರು. ಎಚ್.ಎಂ. ಚನ್ನಬಸಪ್ಪನವರು ಇದ್ದರು, ಸಿದ್ದವೀರಪ್ಪನವರು ಇದ್ದರು, ಟಿ.ಚನ್ನಯ್ಯನವರು ಇದ್ದರು. ಅವರ ಪತ್ರಿಕೆ ನಾಲ್ಕು ಪುಟಗಳದ್ದು ಇತ್ತು. ಇವತ್ತು ಪ್ರಜಾವಾಣಿಯಲ್ಲಿ ವ್ಯಂಗ್ಯಚಿತ್ರ ಏನು ಬರೆಯುತ್ತಾರೆ ಶ್ರೀ ಮೂರ್ತಿಯವರು. ಅವರು ಅಲ್ಲಿಂದ ತಯಾರಾದಂಥವರು. ಆ ವರದಿ ನಮ್ಮನ್ನು ಬಯ್ದರೂ ಮುತ್ತಿನಂಥ ವರದಿ. ಬಯ್ಯುತಕ್ಕಂಥ ಪದಗಳು ಎಷ್ಟು ಚೆನ್ನಾಗಿವೆ ಎಂದು ಸಂತೋಷ ಬರುತ್ತಿತ್ತು. ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಇದ್ದಾಗ ಮಂತ್ರಿಗಳು ಎಲ್ಲಾ ಮೇಲಕ್ಕೆ ಬರುವಾಗ ಬೆಳ್ಳಿ ಗದೆ ಇರುತ್ತಿತ್ತು. ಆವಾಗ ಪ್ರತಿಯೊಬ್ಬ ಮಂತ್ರಿ ಹಿಂದೆ ಬೆಳ್ಳಿಗದೆ ಹಿಡಿದುಕೊಂಡು ಬರೋದು. ಒಂಭತ್ತು ಮಂತ್ರಿಗಳು ಎಂದರೆ ಒಂಭತ್ತು ಬೆಳ್ಳಿಗದೆಗಳನ್ನು ಹಿಡಿದುಕೊಂಡು ನಿಂತಿರಬೇಕು. ಮಂತ್ರಿಗಳು ಮೇಲೆ ಬಂದಿದ್ದಾರೆ ಎಂದರೆ ಇಬ್ಬರು ಬಂದಿದ್ದರೆ ಏಳುಗದೆಗಳು ಇರುತ್ತಿತ್ತು.

ಮೂರು ಜನ ಬಂದಿದ್ದರೆ, ಆರು ಇರುತ್ತಿತ್ತು. ಅಂದರೆ ಮೇಲಕ್ಕೆ ಹೋಗಿದ್ದಾರೆ ಎಂದು. ಅವರ ಹಿಂದೆ ಹಿಡಿದುಕೊಂಡು ಹೋಗಬೇಕು. ಹನುಮಂತಯ್ಯನವರು ನಿಜವಾಗಿಯೂ ಈ ರಾಜ್ಯದ ಒಂದು ಧೀಮಂತ ಶಕ್ತಿ. ಇದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ. ಈ ರಾಜ್ಯದಲ್ಲಿ ಅವರ ಆಡಳಿತವನ್ನು

ಶತಶತಮಾನಗಳ ಕಾಲಕ್ಕೂ, ಪ್ರತಿಸಾರಿಯೂ ನೆನೆದುಕೊಳ್ಳಬೇಕು. ಅವರು ಯಾವ ರೀತಿ ಆಡಳಿತವನ್ನು ನಡೆಸಿದರು, ಯಾವ ರೀತಿ ಮಾಡಿದರು ಎನ್ನತಕ್ಕಂಥದ್ದು, ಈ ಸದನದಲ್ಲಿ ನಾವೇನು ಕುಳಿತಿದ್ದೇವೆ, ನೆನೆಯಬೇಕು. ಈ ಸದನವನ್ನು ಕಟ್ಟತಕ್ಕ ಮಹಾ ಶಕ್ತಿಯನ್ನು ಹೊಂದಿದಂಥ ಒಬ್ಬ ಧೀಮಂತ ಶಕ್ತಿ. ಆದರೆ, ಅವರು ಈ ಸದನಕ್ಕೆ ಬರುವುದಕ್ಕಾಗಲಿಲ್ಲ. ಈ ಸದನವನ್ನು ಕಟ್ಟಿದಂಥ ಹನುಮಂತಯ್ಯನವರು ಇಲ್ಲಿಗೆ ಬರುವುದಕ್ಕಾಗಲಿಲ್ಲ. ಇಲ್ಲಿ ಮುಖ್ಯಮಂತ್ರಿಗಳಾಗಿ ಬರುವುದಕ್ಕಾಗಲಿಲ್ಲ. ಆ ಒಂದು ಪೀಠದಲ್ಲಿ ಕುಳಿತುಕೊಳ್ಳುವುದಕ್ಕಾಗಲಿಲ್ಲ. ಅಲ್ಲಿ ಕುಳಿತುಕೊಂಡವರು ಶ್ರೀಮಾನ್ ಕಡಿದಾಳ್ ಮಂಜಪ್ಪನವರು. ಕೊನೆಯ ಮೂರು ತಿಂಗಳಲ್ಲಿ, ಬರೀ ಮೂರು ತಿಂಗಳು ಹನುಮಂತಯ್ಯನವರ ಅಧಿಕಾರ ಹೋಯಿತು, ಕೊನೆಯ ಮೂರು ತಿಂಗಳು ಅವರು ಬಂದರು. ವಿಧಾನಸೌಧದ ಮೇಲೆ ಗೋಪುರ 9–10 ಅಡಿ ಇತ್ತು. ನನ್ನ ಆಳ್ವಿಕೆ ಒಂದು ಅದನ್ನು ಕಡಿಮೆ ಮಾಡಿದರು. ಅವರೆಲ್ಲರೂ ಸತ್ಯವಂತರೇ. ಇವತ್ತು ಕಡಿದಾಳ್ ಮಂಜಪ್ಪನವರು ಇಲ್ಲ, ಅವರನ್ನು ನಾವು ನೆನೆಯಬೇಕು. ನಿಜವಾಗಿಯೂ ಅದೊಂದು ರಾಮರಾಜ್ಯ, ಕೆಂಗಲ್ ಹನುಮಂತಯ್ಯನವರ ರಾಜ್ಯ ರಾಮರಾಜ್ಯ. ರಾಮರಾಜ್ಯದಲ್ಲಿ ಅವರೆಲ್ಲರೂ ರಾಮನ ಭಕ್ತರಾಗಿ, ಈ ರಾಜ್ಯಕ್ಕೆ ಒಳ್ಳೆಯ, ಸುಂದರವಾದ ಆಡಳಿತವನ್ನು ಕೊಟ್ಟರು. ಆಗ ಶ್ರೀಮಾನ್ ಹುಚ್ಚಮಾಸ್ತಿಗೌಡರು ಅವರ ಜೊತೆಯಲ್ಲಿ ಇದ್ದಂಥ ಧೀಮಂತ ವ್ಯಕ್ತಿ. ಶ್ರೀಮಾನ್ ರಂಗನಾಥ್‌ರವರು ಕಿಸಾನ್ ಮಜ್ದೂರ್ ಪ್ರಜಾಪಾರ್ಟಿಯಲ್ಲಿದ್ದರು ಎಂದು ಕಾಣುತ್ತದೆ ಅಥವಾ ಪ್ರಜಾ ಸೋಷಿಯಾಲಿಸ್ಟ್ ಪಾರ್ಟಿ ಎಂದು ತಾವು ಹೇಳುತ್ತೀರಾ. 1952ರಲ್ಲಿ ಕೆ.ಎಂ.ಪಿ.ಪಿ. ಇತ್ತು, ಈ ಕೆ.ಎಂ.ಪಿ.ಪಿ. ಗುರುಪಾದಸ್ವಾಮಿಯವರು ಮೊದಲು ಇದ್ದುದು, ಗುಡಿಸಲು ಗುರುತು. ಆ ಸಂದರ್ಭದಲ್ಲಿ ಎಷ್ಟು ಸೊಗಸಾದ ಆಡಳಿತವನ್ನು ಕೊಟ್ಟರು ಎಂದು ಹೇಳಿದರೆ, ನಿಜವಾಗಿಯೂ ಮೆಚ್ಚತಕ್ಕಂಥದ್ದು. ಒಳ್ಳೆಯ, ಸುಂದರವಾದ ಆಡಳಿತವನ್ನು ಕೊಟ್ಟರು. ಈ ಸದನದಲ್ಲಿ ಹೊರಗಡೆ ಬರೆದಿದ್ದಾರೆ. ತಾವು ನೋಡಬೇಕು, "ಸರ್ಕಾರದ ಕೆಲಸ ದೇವರ ಕೆಲಸ" ಇದನ್ನು ಬರೆಸಿದವರು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು. ಅದಾದ ಮೇಲೆ ರಾಜಕಾರಣ ಹೇಗಿದೆ ಎಂದು ಹೇಳಿದರೆ, ಗಂಧದ ಜೊತೆಯಲ್ಲಿ ಗುದ್ದಾಟ ಇದ್ದ ಹಾಗೆ. ನಾವು ಶ್ರೀಮಾನ್ ವೀರಣ್ಣಗೌಡರನ್ನು ಇಲ್ಲಿ ನೆನೆಯಬೇಕು, ಅವರು ಲೋಕೋಪಯೋಗಿ ಸಚಿವರಾಗಿದ್ದರು. ಮದ್ದೂರು ವೀರಣ್ಣಗೌಡರು. ಅವರು ಬಂದ ನಂತರ, ಸರ್ಕಾರದ ಕೆಲಸ ದೇವರ ಕೆಲಸ, ಸರ್ಕಾರ ಎಂದರೆ ಏನು ಎಂದು ಹನುಮಂತಯ್ಯನವರ ಜೊತೆಯಲ್ಲಿ ವಾದ ಮಾಡಿ, ಅದನ್ನು ಅಳಿಸಿ ಹಾಕಿದರು. ಮುಂದೆ ಬಂದ ಸರ್ಕಾರ ಆ ರೀತಿ ಅಳಿಸಿ ಹಾಕುವುದು ಸರಿಯಲ್ಲವೆಂದು ಮತ್ತೆ ಬರೆಸಿದರು. ಸರ್ಕಾರದ ಕೆಲಸ ದೇವರ ಕೆಲಸ ಎಂದು ಬರೆಸಿದರು.

ಶ್ರೀ ಕೆ.ಹೆಚ್. ರಂಗನಾಥ್.– ದಿವಂಗತ ಗೋಪಾಲಗೌಡರು, ದೇವರ ಕೆಲಸ ಮಾಡಿದರೆ ಮಾಡಬಹುದು, ಬಿಟ್ಟರೆ ಬಿಡಬಹುದು ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್:– ನಿಜವಾಗಿಯೂ ದೇವರ ಕೆಲಸ ಮಾಡಬೇಕು. ಇದನ್ನು ದಿಗ್ಗಜಗಳೆಲ್ಲರೂ ಹೇಳಿದ್ದರು. ನಮಗೂ ಭಗವಂತನ ದಯೆಯಿಂದ, ಆ ಸಂದರ್ಭದಲ್ಲಿ ಅವರ ಜೊತೆಯಲ್ಲಿರತಕ್ಕ ಅವಕಾಶ ಇತ್ತು. ಸಾಹುಕಾರ್ ಚೆನ್ನಯ್ಯನವರು ಇಲ್ಲಿ ಇದ್ದರು, ಬಹಳ ದೊಡ್ಡ ವ್ಯಕ್ತಿತ್ವ. ಅಲ್ಲಿ ಅಧ್ಯಕ್ಷರು ಕುಳಿತಾಗ, ಸದನದಲ್ಲಿ ಬರುವಾಗ ಕೈಯಲ್ಲಿ ಯಾವುದೇ ಸಾಮಾನು ತರಬಾರದು, ಯಾವುದೇ ಒಂದು ವಸ್ತು ತರಬಾರದು ಎಂದು ಇದ್ದರೂ ಕೂಡ, ಇವರೊಬ್ಬರಿಗೆ ಮಾತ್ರ ಕೈಯಲ್ಲಿ ಬೆತ್ತ ತರುವುದಕ್ಕೆ ಅವಕಾಶ ಇತ್ತು. ಒಂದು ಸಾರಿ ಅಧ್ಯಕ್ಷರ ಪೀಠದಲ್ಲಿ ಕೊಡಾವಳಿಯವರು ಕುಳಿತಿದ್ದರು. ಏನು, ಚನ್ನಯ್ಯನವರು ಏನು ಹೇಳುತ್ತಾರೆಂದರೆ, ಒಂದು ಸಾರಿ ಬೆತ್ತವನ್ನು ಆ ಕಡೆ ತಿರುಗಿಸುತ್ತಿದ್ದರು. ಚನ್ನಯ್ಯನವರು ಈ ರಾಜ್ಯದ ರಾಜಕಾರಣದಲ್ಲಿ ಧ್ರುವತಾರೆಯಾಗಿ ಮೆರೆದಂಥ ಒಬ್ಬ ದೊಡ್ಡ ವ್ಯಕ್ತಿ. ಅಧ್ಯಕ್ಷರೇ, ಈಗಾಗಲೇ 6 ಗಂಟೆಯಾಯಿತು, ಸಭೆಯನ್ನು ನಾಳೆಗೆ

ಮುಂದಕ್ಕೆ ಹಾಕಬಹುದು. ನಾಳೆ ಉಳಿದ ವಿಷಯಗಳನ್ನು ಮಾತನಾಡುತ್ತೇನೆ.

ವೈಸ್ ಚೇರ್ಮನ್:- ಈ ಚರ್ಚೆ ನಾಳೆಗೆ ಮುಗಿಯಬೇಕು, ಇನ್ನೂ 20 ಜನ ಮಾತನಾಡುವವರು ಇದ್ದಾರೆ.

ಶ್ರೀ ಪಾಟಾಳ್ ನಾಗರಾಜ್:- ಈಗಾಗಲೇ 6 ಗಂಟೆಯಾಯಿತು, ದಯಮಾಡಿ ಮುಂದಕ್ಕೆ ಹಾಕಿ, ನಾಳೆ ಮುಗಿಸುತ್ತೇನೆ. ಇವತ್ತು ಬೆಳಿಗ್ಗೆಯಿಂದ ಕುಳಿತಿದ್ದೇವೆ, ಪತ್ರಿಕೆಯವರೂ ಹೋಗಬೇಕಾಗಿದೆ, ಅವಕಾಶ ಮಾಡಿಕೊಡಿ. ಬೆಳಿಗ್ಗೆ ಮಾತನಾಡುತ್ತೇನೆ. ಬೆಳಿಗ್ಗೆ ನಾವು, ನೀವು ಕೇಳೋಣ. ಈ ಜಗತ್ತಿನ ಜನ ಕೇಳದಿದ್ದರೂ ಚಿಂತೆ ಇಲ್ಲ, ಕೆಲವು ಇತಿಹಾಸ ಹೇಳುತ್ತೇನೆ. ಯಾರು ಬರಲಿ, ಬರದಿರಲಿ, ಪ್ರಚಾರ ಬರಲಿ, ಬರದಿರಲಿ, ನಾನು ಅನೇಕ ವಿಚಾರಗಳನ್ನು ಹೇಳಬೇಕಾಗಿದೆ.

ವೈಸ್ ಚೇರ್ಮನ್:- ಈ ಸಭೆಯನ್ನು ನಾಳೆ ಬೆಳಿಗ್ಗೆ 11 ಗಂಟೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6.00 ಗಂಟೆಗೆ ಮುಕ್ತಾಯವಾಗಿ, 25.2.93ರಂದು ಬೆಳಿಗ್ಗೆ 11.00 ಗಂಟೆಗೆ ಮತ್ತೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

BLANK PAGE

ಕರ್ನಾಟಕ ವಿಧಾನ ಸಭೆ

ಗುರುವಾರ 25ನೇ ಫೆಬ್ರವರಿ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಪಿ. ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದರು.

ಕೇಂದ್ರದ ರೈಲ್ವೆ ನೀತಿಯಿಂದ ಕರ್ನಾಟಕಕ್ಕೆ ಅನ್ಯಾಯ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-- ಸನ್ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಕಾಲವನ್ನು ಪ್ರಾರಂಭಿಸುವುದಕ್ಕಿಂತ ಮುಂಚಿತವಾಗಿ ತಮ್ಮಲ್ಲಿ ನಾನು ಒಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ನಿನ್ನೆ ದಿನ ರೈಲ್ವೆ ಆಯವ್ಯಯ ಮಂಡನೆಯಾಗಿದೆ. ಇದರಿಂದ ಕರ್ನಾಟಕಕ್ಕೆ ತುಂಬಾ ಅನ್ಯಾಯವಾಗಿದೆ. ಚಾಮರಾಜನಗರ–ಮೆಟ್ಟುಪಾಳ್ಯ ಬ್ರಾಡ್‌ಗೇಜ್ ಆಗಿಲ್ಲ, ಯಲಹಂಕ–ಬೆಂಗಳೂರು ಉತ್ತರಹಳ್ಳಿ ಬ್ರಾಡ್‌ಗೇಜ್ ಆಗಿಲ್ಲ. ಕರ್ನಾಟಕಕ್ಕೆ ಈ ರೀತಿ ಆಗಿರತಕ್ಕ ಅನ್ಯಾಯವನ್ನು ನಾನು ಸದನದ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೇಂದ್ರ ಸರ್ಕಾರವನ್ನು ಧಿಕ್ಕಾರ ಮಾಡಿ ಪ್ರತಿಭಟಿಸುತ್ತಾ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಕೇಂದ್ರ ರೈಲ್ವೆ ಮಂತ್ರಿಗಳಾದ ಶ್ರೀ ಜಾಫರ್ ಷರೀಫರ ಬಗ್ಗೆ ನನಗೆ ಬಹಳ ಗೌರವವಿದೆ. ಅವರ ಕರ್ನಾಟಕಕ್ಕೆ ಹಿಂದೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಆದರೆ, ಈಗ ಮಂಡಿಸಿರತಕ್ಕ ರೈಲ್ವೆ ಆಯವ್ಯಯದಲ್ಲಿ ನಿಜವಾಗಿಯೂ ಕರ್ನಾಟಕಕ್ಕೆ ಬಹಳ ಅನ್ಯಾಯವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಕೇಂದ್ರ ರೈಲ್ವೆ ಸಚಿವರಿಗೆ ಅವಮಾನ ಮಾಡುತ್ತಿದ್ದೀರೆಂದು ನಾನು ಹೇಳಬೇಕಾಗುತ್ತದೆ. ಕಾರಣ, ಶ್ರೀ ಜಾಫರ್ ಷರೀಫರು ಕೇಂದ್ರ ರೈಲ್ವೆ ಮಂತ್ರಿಗಳಾಗಿ ಬಂದ ನಂತರ ಕರ್ನಾಟಕಕ್ಕೆ ಖಂಡಿತವಾಗಿ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಬೇರೆ ಯಾವುದೇ ಮಂತ್ರಿಗಳು ಇಷ್ಟು ಕೆಲಸ ಮಾಡಿಲ್ಲ. ತಾವು ಈ ರೀತಿ ಮಾತನಾಡುತ್ತಿರುವುದಕ್ಕೆ ನಿಮಗೂ ಅವರಿಗೂ ವೈಯಕ್ತಿಕ ದ್ವೇಷ ಇರಬೇಕೆಂದು ನಾನು ಹೇಳಬೇಕಾಗುತ್ತದೆ.

(ಗೊಂದಲ)

MR. SPEAKER:– Order... Order. ...

(ಈ ಸಂದರ್ಭದಲ್ಲಿ ಪಕ್ಷೇತರ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಕೇಂದ್ರ ಸರ್ಕಾರದ ರೈಲ್ವೆ ನೀತಿಯ ವಿರುದ್ಧ ಪ್ರತಿಭಟಿಸಿ ಕಪ್ಪು ಬಾವುಟ ಪ್ರದರ್ಶಿಸಿ ಸಭಾತ್ಯಾಗ ಮಾಡಿದರು)

ಶ್ರೀ ಬಿ. ಎಂ. ಇದಿನಬ್ಬ:-- ಜಾಫರ್ ಷರೀಫರು ಕರ್ನಾಟಕಕ್ಕೆ ರೈಲ್ವೆ ವಿಚಾರದಲ್ಲಿ ಬಹಳಷ್ಟು ಕೆಲಸ ಮಾಡಿದ್ದಾರೆ. ಇವರಂತೆ ಬೇರಾವ ಮಂತ್ರಿಗಳೂ ಕೂಡ ಇಷ್ಟು ಕೆಲಸ ಮಾಡಿಲ್ಲ. ಇವರು ಕರ್ನಾಟಕಕ್ಕೆ ಮಾಡಿರುವ ಉಪಕಾರವನ್ನು ಮರೆಯುವಂತಿಲ್ಲ.

(ಗೊಂದಲ)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಬೇಕಾದ ಉತ್ತರಗಳು

ಅಧ್ಯಕ್ಷರು:- ಶ್ರೀ ವಿಜಯಕುಮಾರ್ ಶೆಟ್ಟಿಯವರೆ, ತಮ್ಮ 121 (1020)ನೇ ಪ್ರಶ್ನೆಗೆ ಉತ್ತರ ಬಂದಿರುವುದಿಲ್ಲವಾದ್ದರಿಂದ, ಅದನ್ನು ಮುಂದಿನ ದಿವಸ ತೆಗೆದುಕೊಳ್ಳುತ್ತೇನೆ.

ಶ್ರೀ ವಿಜಯಕುಮಾರ ಶೆಟ್ಟಿ:- ಆಗಬಹುದು.

ಕೊಡಗು ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿ

122 (789): ಶ್ರೀಮತಿ ಸುಮಾವಸಂತ (ವೀರಾಜಪೇಟೆ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿ ಮಾಡಿರುವ ಪ್ರದೇಶವೆಷ್ಟು, (ತಾಲ್ಲೂಕಾವಾರು ಮಾಹಿತಿಯನ್ನು ಒದಗಿಸುವುದು);

ಆ) ಸಾಗುವಳಿಗಾಗಿ ಹಾಗೂ ಸಕ್ರಮಗೊಳಿಸುವುದಕ್ಕಾಗಿ ಈವರೆಗೆ ಬಂದಿರುವ ಅರ್ಜಿಗಳೆಷ್ಟು ? (ತಾಲ್ಲೂಕಾವಾರು ಮಾಹಿತಿಯನ್ನು ಒದಗಿಸುವುದು)

ಇ) ಆ ಪೈಕಿ ಈವರೆಗೆ ವಿಲೇವಾರಿಯಾದ ಅರ್ಜಿಗಳೆಷ್ಟು ? (ತಾಲ್ಲೂಕಾವಾರು ಮಾಹಿತಿಯನ್ನು ಒದಗಿಸುವುದು)

ಈ) ವಿಲೇವಾರಿಯಾದ ಅರ್ಜಿಗಳ ಪೈಕಿ ಹರಿಜನ – ಗಿರಿಜನ ಅರ್ಜಿಗಳೆಷ್ಟು ? (ತಾಲ್ಲೂಕಾವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ಎಂ. ರಾಜಶೇಖರ ಮೂರ್ತಿ ಕಂದಾಯ ಸಚಿವರು

ಅ) ಒಟ್ಟು	–	33,671-38 ಎಕರೆ
ಮಡಿಕೇರಿ	–	13,158-00 "
ವೀರಾಜಪೇಟೆ	–	7,908-90 "
ಸೋಮವಾರಪೇಟೆ	–	12,604-48 "
ಆ) ಒಟ್ಟು	–	14,612
ಮಡಿಕೇರಿ	–	4,386
ವೀರಾಜಪೇಟೆ	–	3,790
ಸೋಮವಾರಪೇಟೆ	–	6,436
ಇ) ಒಟ್ಟು	–	784
ಮಡಿಕೇರಿ	–	331
ವೀರಾಜಪೇಟೆ	–	287
ಸೋಮವಾರಪೇಟೆ	–	166
ಈ) ಒಟ್ಟು	–	159
ಮಡಿಕೇರಿ	–	40
ವೀರಾಜಪೇಟೆ	–	108
ಸೋಮವಾರಪೇಟೆ	–	11

ಶ್ರೀಮತಿ ಸುಮಾ ವಸಂತ:– ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ ಒಟ್ಟು 33 ಸಾವಿರ ಎಕರೆ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಲಾಗಿದೆಯೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಇದರಲ್ಲಿ ಅರಣ್ಯಕ್ಕೆ ಸೇರಿದ ಜಮೀನು ಎಷ್ಟು ? ದೇವರ ಕಾಡು ಎಷ್ಟು ? ಹಾಗೂ ಕಾಫಿ

ತೋಟದ ಜಮೀನು ಎಷ್ಟು ? ಮತ್ತು ಇದರಲ್ಲಿ ಎಷ್ಟು ಜನರಿಗೆ ಜಮೀನು ಕೊಡಲಾಗಿದೆಯೆಂದು ತಿಳಿಸಿಕೊಡುತ್ತೀರಾ ?

ಶ್ರೀ ಎಂ. ರಾಜಶೇಖರ ಮೂರ್ತಿ:– ಅರಣ್ಯ ಜಮೀನು, ದೇವರ ಕಾಡು ಹಾಗೂ ಕಾಫಿ ತೋಟದ ಎಷ್ಟು ಎಕರೆ ಜಮೀನುಗಳನ್ನು ಬಗರ್ ಹುಕುಂ ಮಾಡಲಾಗಿದೆಯೆಂಬುದರ ಬ್ರೇಕ್–ಅಪ್ ನನ್ನ ಬಳಿ ಇಲ್ಲ. ಆದರೆ, ಎಷ್ಟು ಡಿಸ್‌ಪೋಸ್ – ಆಫ್ ಆಗಿವೆಯೆನ್ನುವುದರ ಬಗ್ಗೆ ಉತ್ತರ ಹೇಳುತ್ತೇನೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಪೈಕಿ ಒಟ್ಟು 68 ಅಪ್ಲಿಕೇಷನ್‌ಗಳಿಗೆ ಗ್ರಾಂಟ್ ಆಗಿದೆ, 91 ಅರ್ಜಿಗಳು ರಿಜೆಕ್ಟ್ ಆಗಿದೆ. 159 ಅರ್ಜಿಗಳು ಡಿಸ್‌ಪೋಸ್ – ಆಫ್ ಆಗಿದೆ. ಅಂದರೆ, 1900 ಅರ್ಜಿಗಳು ಪೆಂಡಿಂಗ್ ಇದ್ದು ಅವುಗಳಲ್ಲಿ, 159 ಅರ್ಜಿಗಳು ಡಿಸ್‌ಪೋಸ್–ಆಫ್ ಆಗಿದ್ದು, 1741 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

ಶ್ರೀಮತಿ ಸುಮಾ ವಸಂತ:– ಇದರಲ್ಲಿ ಎಷ್ಟು ಜನರಿಗೆ ಜಮೀನನ್ನು ಕೊಡಲಾಗಿದೆ ?

ಶ್ರೀ ಎಂ. ರಾಜಶೇಖರ ಮೂರ್ತಿ:– ತಾವು ಯಾವ ಜಮೀನಿನ ಬಗ್ಗೆ ಹೇಳುತ್ತಿದ್ದೀರೆಂದು ಗೊತ್ತಾಗಿಲ್ಲ. ಅರಣ್ಯ ಜಮೀನಾದರೆ ಅದನ್ನು ಸಕ್ರಮಗೊಳಿಸುವುದಕ್ಕಾಗುವುದಿಲ್ಲ.

ಶ್ರೀಮತಿ ಸುಮಾ ವಸಂತ:– ಇದರ ಬಗ್ಗೆ ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿ ರಚನೆ ಮಾಡಲಾಗಿದೆ. ಆದರೆ, ತಾವು ಒದಗಿಸಿರುವ ಮಾಹಿತಿ ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ. ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿರುವ ಸಮಿತಿಗಳಿಗೆ ಆಯಾ ಕ್ಷೇತ್ರಗಳಲ್ಲಿರುವ ವಿಧಾನ ಸಭಾ ಸದಸ್ಯರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ನಾನು ಆ ಸಮಿತಿಯ ಅಧ್ಯಕ್ಷಳಾಗಿದ್ದೆ. ಇದರಲ್ಲಿ ಕೊಟ್ಟಿರುವ ಮಾಹಿತಿ ಸರಿಯಿಲ್ಲವೆಂದು ಹೇಳುತ್ತಿದ್ದೇನೆ. ಏಕೆಂದರೆ, ಈ ಸಮಿತಿಗೆ ಗೋಮಾಳ ಜಮೀನನ್ನು, ದೇವರ ಕಾಡಿನ ಜಮೀನನ್ನು ಹಾಗೂ ಕಾಫಿ ಗಿಡವಿರುವ ಪ್ರದೇಶದ ಜಮೀನನ್ನು ಸಕ್ರಮ ಮಾಡುವುದಕ್ಕಾಗುವುದಿಲ್ಲ. ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಪ್ರತಿಯೊಬ್ಬರು ತಮ್ಮ ಮನೆಯ ಸುತ್ತ–ಮುತ್ತ ಒಂದೆರಡು ಕಾಫಿ ಗಿಡಗಳನ್ನು ಬೆಳೆಸುತ್ತಾರೆ. ಇದನ್ನು ಸಕ್ರಮಗೊಳಿಸುವುದಕ್ಕಾಗುವುದಿಲ್ಲವೆಂದು ಅರ್ಜಿಗಳನ್ನು ಇಟ್ಟುಕೊಂಡಿದ್ದಾರೆ. ಇದಕ್ಕೇನಾದರೂ ಸಮಗ್ರ ತಿದ್ದುಪಡಿ ತರುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಸಮಗ್ರ ತಿದ್ದುಪಡಿಯನ್ನು ತರಲಿಕ್ಕೆ ಆಲೋಚನೆ ಸರ್ಕಾರಕ್ಕಿಲ್ಲ.

ಶ್ರೀ ಎ. ಎಂ. ಬೆಳ್ಳಿಯಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಂಥ ಉತ್ತರ (ಅ) ದಲ್ಲಿ ಸೋಮವಾರಪೇಟೆ ತಾಲ್ಲೂಕಿನಲ್ಲಿ 6436 ಅರ್ಜಿಗಳನ್ನು unauthorised land for regularisation ಗೋಸ್ಕರ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆದರೆ (ಇ)ಯಲ್ಲಿ 166 ಅರ್ಜಿಗಳು ಡಿಸ್‌ಪೋಸ್ ಆಗಿವೆ ಎಂದು ಹೇಳಿದ್ದಾರೆ. ನಮ್ಮ ಗೌರವಾನ್ವಿತ ಸದಸ್ಯೆಯರಾದ ಸುಮಾವಸಂತ್‌ರವರು ಹೇಳಿದಂತೆ, ಬಹುತೇಕವಾಗಿ Unauthorised land Regularisation Committee ಯಾವಾಗಲೂ ಕೆಲಸ ಮಾಡುತ್ತಿದ್ದರೂ, ಒಂದು ವರ್ಷವಾದ ಮೇಲೂ ಕೂಡ ಕೇವಲ 166 ಅರ್ಜಿಗಳನ್ನು ಮಾತ್ರ ಡಿಸ್‌ಪೋಸ್ ಆಫ್ ಆಗಲು ಕಾರಣವೇನೆಂದು ಕೇಳಿದರೆ, ಕೊಡಗಿನಲ್ಲಿ ಯಾವ ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಕಾಫಿ, ಏಲಕ್ಕಿ ಮುಂತಾದ ಪ್ಲಾಂಟೇಷನ್ ಬೆಳೆಗಳನ್ನು ಮಾತ್ರ ಬೆಳೆಯಬಹುದು. ಆ ಕಾರಣದಿಂದಾಗಿ ರೆವಿನ್ಯೂ ಅಧಿಕಾರಿಗಳು ಇದಕ್ಕೆ ಅಬ್ಜೆಕ್ಷನ್ ಮಾಡಿ ಸುಮಾರು 5 ಸಾವಿರ ಅರ್ಜಿಗಳು ಇಲ್ಲಿಯವರೆಗೆ ಪೆಂಡಿಂಗ್ ಇವೆ ಅಥವಾ ರಿಜೆಕ್ಟ್ ಆಗಿದೆ. ಆದ್ದರಿಂದ ನಾವು ಈ ವೀಕರ್ ಸೆಕ್ಷನ್‌ಗಳವರಿಗೆ ಬೆನಿಫಿಟ್‌ನ್ನು ಕೊಡಬೇಕೆಂದು ವಿಧಾನ ಸಭೆಯಲ್ಲಿ ಏನು ಒಂದು ಕಾನೂನನ್ನು ಮಾಡಿ ಆ ಒಂದು ತೀರ್ಮಾನವನ್ನು ಅಲ್ಲಿಗೆ

ಕಳಿಸಿದ್ದೇವೂ ಅವರ ಪ್ರಯೋಜನ ಆ ಜನರಿಗೆ ಸಿಗುತ್ತಿಲ್ಲ. ಎರಡು ಕಾಫಿ ಗಿಡಗಳನ್ನು ಹಾಕಿದರೆ ಸಾಕು ಅದನ್ನೇ ಆಧಾರವಾಗಿ ತೆಗೆದುಕೊಂಡು ಅರ್ಜಿಯನ್ನು ರಿಜೆಕ್ಟ್ ಮಾಡುತ್ತಿದ್ದಾರೆ. ಆದರೆ ದೊಡ್ಡ ದೊಡ್ಡ ಪ್ಲಾಂಟರ್ಸ್ ಬೇಕಾದಷ್ಟು ಮಾಡಿಕೊಂಡು ಏನು ಬೇಕಾದರೂ ಮಾಡುತ್ತಿರುವಾಗ ಬರೀ 4-5 ಎಕರೆಗಿಂತ ಕಡಿಮೆ ಭೂಮಿಯನ್ನು ಇಟ್ಟುಕೊಂಡಿರತಕ್ಕ ಬಡವರು, ಹರಿಜನ ಗಿರಿಜನರು 2-3 ಕಾಫಿ ಗಿಡಗಳನ್ನು ಹಾಕಿದ್ದರೆ ಅದನ್ನು ಪ್ಲಾಂಟೇಷನ್ ಎಂದು ತೀರ್ಮಾನ ಮಾಡಿಕೊಂಡು ಅವರ ಅರ್ಜಿಯನ್ನು ರಿಜೆಕ್ಟ್ ಮಾಡುತ್ತಿದ್ದಾರೆ. ತಾವು ಉತ್ತರದಲ್ಲಿ ಇದನ್ನು ಪುನಃ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದೀರಿ. ದಯಮಾಡಿ ಸನ್ಮಾನ್ಯ ಕಂದಾಯ ಮಂತ್ರಿಗಳಲ್ಲಿ ಈ ವಿಷಯವನ್ನು ಪುನರ್‌ವಿಮರ್ಶೆ ಮಾಡಿ ಯಾರು 5 ಎಕರೆಗಳಿಗಿಂತ ಕಡಿಮೆ ಹೊಂದಿರುವವರೋ ಅಂಥ ಬಡಜನರಿಗೆ ಪ್ರಯೋಜನವಾಗುವ ರೀತಿಯಲ್ಲಿ ಅದನ್ನು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆ ರೀತಿ ಮಾಡಲು ಸಾಧ್ಯವೂ ಎನ್ನುವ ಬಗ್ಗೆ ಕೇಳುತ್ತಿದ್ದೇನೆ.

SRI M. RAJASHEKARA MURTHY:- Honourable members, suggestion will be examined.

ಮಾಲೂರು ತಾಲ್ಲೂಕಿನ ವ್ಯವಸಾಯ ಸಹಕಾರ ಸಂಘದ ಪಾಲುದಾರರ ವ್ಯಾಪ್ತಿಗೆ ಸೇರಿದ ಸ್ಥಳ

123 (720): ಶ್ರೀ ಎ. ನಾಗರಾಜು (ಮಾಲೂರು)

ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು ತುರುಣಸಿ ಸೇವಾ ಸಹಕಾರ ಸಂಘದ ಕಾರ್ಯ ವ್ಯಾಪ್ತಿಗೆ ಸೇರದೆ ಇರುವ ಸ್ಥಳದ ಜನರನ್ನು ಸಂಘದ ಸದಸ್ಯರನ್ನಾಗಿ ಸೇರಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವರುಗಳನ್ನು ಮತದಾರರ ಪಟ್ಟಿಯಿಂದ ತೆಗೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಇ) ಸಂಘದ ಚುನಾವಣೆಯನ್ನು ಸರ್ಕಾರವು ಯಾವಾಗ ನಡೆಸಲಿದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಬಂದಿದೆ.

ಆ) ಸಂಘದ ಕಾರ್ಯ ವ್ಯಾಪ್ತಿಗೆ ಸೇರದೆ ಇರುವ ಸ್ಥಳದ ಜನರನ್ನು ಸಂಘದ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗಿದೆ ಎಂದು ಆರೋಪಿಸಿ ಸಂಘದ ಸದಸ್ಯರಿಂದ ಬಂದಿದ್ದ ದೂರಿನ ಮೇಲೆ ಕೋಲಾರ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು 1959ನೇ ಸಹಕಾರ ಸಂಘಗಳ ಕಾಯ್ದೆ ಕಲಂ 65 ರ ಪ್ರಕಾರ ಪರಿವೀಕ್ಷಣೆ ನಡೆಸಲು ದಿನಾಂಕ: 06-02-1993 ರಲ್ಲಿ ಆದೇಶಿಸಿ, ಸಹಕಾರ ಅಭಿವೃದ್ಧಿ ಅಧಿಕಾರಿ, ಮಾಲೂರು, ಇವರನ್ನು ಪರಿವೀಕ್ಷಣಾಧಿಕಾರಿಯನ್ನಾಗಿ ನೇಮಿಸಿರುತ್ತಾರೆ. ಅವರಿಂದ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಸಂಘದ ಕಾರ್ಯ ವ್ಯಾಪ್ತಿಯಿಂದ ಹೊರಗಿನವರನ್ನು ಸದಸ್ಯರನ್ನಾಗುವ ನೋಂದಾಯಿಸಿದ ಸಮಸ್ಯೆ ಪರಿಹಾರವಾದ ನಂತರ ಕಾರ್ಯಕಾರಿ ಮಂಡಳಿಗೆ ಚುನಾವಣೆಗಳನ್ನು ನಡೆಸಲು ಸಂಘಕ್ಕೆ ಸೂಕ್ತ ನಿರ್ದೇಶನ ನೀಡಲಾಗುವುದು.

ಶ್ರೀ ಎ. ನಾಗರಾಜು:– ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ತುರುವನೂರು ಸೇವಾ ಸಹಕಾರ ಸಂಘ ಇದೆ. ಅಲ್ಲಿ ಜ್ಯೂರಿಸ್‌ಡಿಕ್‌ಶನ್‌ಗೆ ಹೊರಪಟ್ಟ ಸದಸ್ಯರನ್ನು ನೋಂದಾವಣೆ ಮಾಡಿ ಚುನಾವಣೆಯಲ್ಲಿ ಬಹಳ ತಾರತಮ್ಯವಾಗುತ್ತಿದೆ. ಈಗ ಸನ್ಮಾನ್ಯ ಸಚಿವರು ಜ್ಯೂರಿಸ್‌ಡಿಕ್‌ಶನ್‌ಗೆ ಒಳಪಡದ ಸದಸ್ಯರ್ಯಾರಾದರು ನೋಂದಾವಣೆ ಮಾಡಿದ್ದಾರೆ ಅವರೆಲ್ಲರನ್ನೂ ತೆಗೆಸಿ ಶೀಘ್ರವಾಗಿ ಚುನಾವಣೆಯನ್ನು ನಡೆಸುತ್ತೀರ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಆ ಕ್ಷೇತ್ರದ ತುರುವನೂರು ಸೇವಾ ಸಹಕಾರ ಸಂಘದಲ್ಲಿ ಸುಮಾರು 189 ಜನ ಸದಸ್ಯರುಗಳು ಜ್ಯೂರಿಸ್‌ಡಿಕ್‌ಷನ್‌ಗೆ ಒಳಪಡದವರನ್ನು ಸದಸ್ಯರುಗಳಾಗಿ ಎನ್‌ರೋಲ್ ಮಾಡಿದ್ದಾರೆ ಎನ್ನತಕ್ಕ ಆಪಾದನೆ ಬಂದಿದೆ. ಅದರ ಪ್ರಕಾರವಾಗಿ ಅದನ್ನು ವಿಚಾರಣೆ ಮಾಡುವುದಕ್ಕಾಗಿ ಕೋ–ಆಪರೇಟಿವ್ ಡೆವಲಪ್‌ಮೆಂಟ್ ಆಫೀಸರನ್ನು ನೇಮಕ ಮಾಡಿದ್ದೇವೆ. ಅದರ ತಪಾಸಣೆಯ ವರದಿಯು ಬಂದ ನಂತರ ನ್ಯಾಯಸಮ್ಮತವಾಗಿ ಈ ರೀತಿಯಾಗಿ ಜ್ಯೂರಿಸ್‌ಡಿಕ್‌ಶನ್‌ಗೆ ಒಳಪಡದ ಸದಸ್ಯರುಗಳಿದ್ದಾರೋ ಅವರನ್ನು ತೆಗೆದು ಹಾಕಿ ಚುನಾವಣೆಯನ್ನು ಮಾಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಚುಪ್ರ. 254 ತೋಟಗಾರಿಕೆ ಮಂತ್ರಿಗಳಿಗೆ ಸಂಬಂಧಪಟ್ಟಿದ್ದುದು. ಅವರು ಈಗ ಇಲ್ಲದಿರುವುದರಿಂದ ಇದನ್ನು ಕೊನೆಯಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರು:– ನಮ್ಮ ಪ್ರಶ್ನೆಗಳನ್ನು ತೆಗೆದುಕೊಂಡಾಗ ಸಚಿವರುಗಳೇ ಬರುವುದಿಲ್ಲ. ಪ್ರತಿ ಸಾರಿಯೂ ಹೀಗೇ ಆಗುತ್ತಿರುತ್ತದೆ. ಈ ಅಧಿವೇಶನದಲ್ಲಿ ನೋಡಿದ್ದೇನೆ. ಬರೀ ಗೈರು ಹಾಜರಿರುತ್ತಾರೆ. ಅಲ್ಲಿ ನಮ್ಮ ಕೆಲಸವಾಗುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ತಾವು ನಮ್ಮ ರಕ್ಷಣೆಗೆ ಬರಬೇಕು. ಬೇರೆ ದಿವಸದಲ್ಲಿ ನಮ್ಮನ್ನು ಕರೆಯುವುದಿಲ್ಲ. ಬಂದ ಪ್ರಶ್ನೆಗೆ ಮಂತ್ರಿಗಳು ಇರುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:– ಪ್ರಶ್ನೋತ್ತರ ಕಾಲದಲ್ಲಿ ಮಂತ್ರಿಗಳ ಗೈರುಹಾಜರಿಯನ್ನು ತಾವು ತೀವ್ರವಾಗಿ ಪರಿಗಣಿಸಬೇಕು. ಮತ್ತು ಅವರಿಗೆ ತೀವ್ರವಾದ ಎಚ್ಚರಿಕೆಯನ್ನೂ ಕೂಡ ಕೊಡಬೇಕಾಗುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ಬಹಳ ನೋವಿನಿಂದ ನಾವು ಹೇಳಬೇಕಾಗಿದೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಪ್ರತಿದಿನ ಹೀಗೆಯೇ ಆಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸ್ವಾಮಿ, ಹೊಸದಾಗಿ ಮಂತ್ರಿಗಳಾಗಿರುವವರೇ ಈ ರೀತಿ ಮಾಡಿದರೆ ಹೇಗೆ ?

ಅಧ್ಯಕ್ಷರು:– ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು -- ಕೊಡುತ್ತಿದ್ದೇನೆ. ಸದನದಲ್ಲಿ ಪ್ರಶ್ನೋತ್ತರಕಾಲ ಮಹತ್ತರವಾದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಹಾಜರಿರಲೇಬೇಕೆಂದು ನಾನು ಕಡ್ಡಾಯವಾಗಿ ಹೇಳುತ್ತೇನೆ. ಇಲ್ಲದಿದ್ದರೆ ಮುಂದೆ ನಾನು ಅವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಈಗ ನನ್ನ ಸ್ಥಿತಿ ಏನು ಸ್ವಾಮಿ ? ನನ್ನ ಪ್ರಶ್ನೆಯನ್ನು ಆಮೇಲೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು:- ಆಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೆ, ನನ್ನದೊಂದು ಮನವಿ ಇದೆ. ನಮ್ಮ ಹೆಸರಿನಲ್ಲಿ ಒಂದು ಪ್ರಶ್ನೆ ಇದ್ದು ಅದಕ್ಕೆ ನಾವು ಉತ್ತರವನ್ನು ಕೊಡಬೇಕಾಗಿರುತ್ತದೆ. ಆದರೆ ಅದು ಬೇರೆ ಮಂತ್ರಿಗಳಿಗೆ ಸೆಕ್ರೆಟರಿಯವರ ಲೆವೆಲ್‌ನಲ್ಲೇ ಟ್ರಾನ್ಸ್‌ಫರ್ ಆಗಿರುತ್ತವೆ. ನಾವು ಸದನಕ್ಕೆ ಬಂದಮೇಲೆ ಇದು ಗೊತ್ತಾಗುತ್ತದೆ. ಮಂತ್ರಿಗಳು ಉತ್ತರ ಕೊಟ್ಟಿಲ್ಲವೆಂದು ಒಂದು ಅಭಿಪ್ರಾಯ ಬರುತ್ತದೆ ಈ ಕ್ರಮವನ್ನು ಏನಾದರೂ ಸರಿಪಡಿಸುತ್ತೀರಾ ? ಏಕೆಂದರೆ ನಾವು ಇಲ್ಲಿಗೆ ಬಂದ ಮೇಲೆ ಈ ಪ್ರಶ್ನೆಯನ್ನು ಇಂಥಾ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ ಎಂದು ಹೇಳುತ್ತಾರೆ. ಇದು ತಮಗೂ ಗೊತ್ತಿರುವುದಿಲ್ಲ.

ಅಧ್ಯಕ್ಷರು:- ಅದನ್ನು ನಾನು ಸರಿಪಡಿಸುತ್ತೇನೆ.

ಶಹಾಪುರ ತಾಲ್ಲೂಕಿನ ಕೆಂಭಾವಿ ಉಪಮಾರುಕಟ್ಟೆಗೆ ಭೂಸ್ವಾಧೀನ

126 (1032): ಶ್ರೀ ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ)

ಮಾನ್ಯ ವ್ಯವಸಾಯೋತ್ಪನ್ನ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನ ಸಗರ–ಗೋಗಿ, ಸುರಪುರ ತಾಲ್ಲೂಕಿನ ಕೆಂಭಾವಿ ಉಪಮಾರುಕಟ್ಟೆಗಳಿಗಾಗಿ ಸರ್ಕಾರದವರು ಭೂಸ್ವಾಧೀನಪಡಿಸಿಕೊಂಡಿರುವುದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ, ಉಪಮಾರುಕಟ್ಟೆಗಳನ್ನು ಯಾವಾಗ ಅಭಿವೃದ್ಧಿಪಡಿಸಲಾಗುವುದು ?

ಇ) ಯಾವ್ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗುವುದು ?

ಈ) ಇದಕ್ಕಾಗಿ ಎಷ್ಟು ಹಣ ನಿಗಧಿಪಡಿಸಲಾಗಿದೆ ?

ಉ) ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಮದನ್ ಗೋಪಾಲ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯಸಚಿವರು).

ಅ) ನಿಜ

ಆ) ಸಗರ ಮತ್ತು ಗೋಗಿ ಉಪಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿಗಾಗಿ ಸಹಾಯ ಧನ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಕೆಂಭಾವಿ ಉಪಮಾರುಕಟ್ಟೆಯನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದೆ.

ಇ) ಗೋಗಿ ಮತ್ತು ಸಗರ ಉಪಮಾರುಕಟ್ಟೆ ಪ್ರಾಂಗಣಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

<u>ಗೋಗಿ ಮತ್ತು ಸಗರ</u>

1) ಕಚೇರಿ ಕಟ್ಟಡ
2) ಕೊಳವೆ ಬಾವಿ
3) ಒಳರಸ್ತೆಗಳು
4) ತಂತಿ ಬೇಲಿ ಮತ್ತು ಗೇಟುಗಳು

5) ಹರಾಜು ಕಟ್ಟೆ
6) ಗೋದಾಮುಗಳು

ಈ) 1992–93ನೇ ಸಾಲಿನಲ್ಲಿ ಸಗರ ಮತ್ತು ಗೋಗಿ ಉಪಮಾರುಕಟ್ಟೆ ಪ್ರಾಂಗಣಗಳ ಅಭಿವೃದ್ಧಿಗೆ ಪ್ರತಿಯೊಂದಕ್ಕೂ ರೂ. 4.00 ಲಕ್ಷಗಳನ್ನು ವಿನಿಯೋಗಿಸಲು ಉದ್ದೇಶಿಸಲಾಗಿದೆ.

ಉ) ಸಹಾಯ ಧನ ಬಿಡುಗಡೆಯಾದ ನಂತರ ಕೂಡಲೇ ಪ್ರಾರಂಭಿಸಲಾಗುವುದು.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ:– ನಾನು ಕೇಳಿರುವ ಪ್ರಶ್ನೆಗೆ ಸಗರ ಮತ್ತು ಗೋಗಿ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ, ಕಛೇರಿ ಕಟ್ಟಡ, ಗೋದಾಮುಗಳು ಎಂದು ಕೊಟ್ಟಿದ್ದಾರೆ. ಇದಕ್ಕಾಗಿ ಒಟ್ಟು 4 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಈಗಿನ ಅಂದಾಜಿನ ಪ್ರಕಾರ ಇಷ್ಟೊಂದು ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ಈ 4ಲಕ್ಷ ರೂಪಾಯಿಗಳು ಸಾಕಾಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದಕ್ಕಿಂತ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಸಹಾಯಧನ ಬಿಡುಗಡೆಯಾದ ನಂತರ ಕೂಡಲೇ ಪ್ರಾರಂಭಿಸಲಾಗುವುದೆಂದು ಹೇಳಿದ್ದಾರೆ. ಈ ಸಹಾಯಧನ ಯಾವಾಗ ಬಿಡುಗಡೆಯಾಗುತ್ತದೆ, ಕೆಲಸ ಯಾವಾಗ ಪ್ರಾರಂಭವಾಗುತ್ತದೆಂದು ನಾನು ಕೇಳುತ್ತೇನೆ.

ಶ್ರೀ ಮದನಗೋಪಾಲ ನಾಯಕ್:– ಈಗಾಗಲೇ ನಾವು 4 ಲಕ್ಷ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ನೀಡಿದ್ದೇವೆ. 1993–94ರ ಸಾಲಿನಲ್ಲಿ ಈ ಕೆಲಸವನ್ನು ಪ್ರಾರಂಭಮಾಡುತ್ತೇವೆ. 4 ಲಕ್ಷ ರೂಪಾಯಿಗಳ ಯೋಜನೆ ಈಗ ಸರ್ಕಾರದ ಮುಂದಿದೆ. ಈ ವರ್ಷ ಅಂದರೆ 1993–94ರಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ. ಇನ್ನೂ ಹೆಚ್ಚಿನ ಹಣವನ್ನು ಏನು ಕೇಳಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ:– ಕಛೇರಿ ಕಟ್ಟಡ, ಕೊಳವೆ ಬಾವಿ, ಒಳರಸ್ತೆಗಳು, ತಂತಿ ಬೇಲಿ ಮತ್ತು ಗೇಟುಗಳು, ಹರಾಜು ಕಟ್ಟೆ, ಗೋದಾಮುಗಳು. ಇಷ್ಟೆಲ್ಲಾ ಕೆಲಸಗಳಿಗೆ ಕೇವಲ 4 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಇದು ಸಾಕಾಗುವುದಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಇನ್ನೂ ಹೆಚ್ಚಿನ ಹಣವನ್ನು ಕೊಟ್ಟರೆ ಈ ಕೆಲಸವಾಗುತ್ತದೆ. ಆದ್ದರಿಂದ ಈ ವರ್ಷದಲ್ಲಿಯೇ ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಮದನ ಗೋಪಾಲ ನಾಯಕ್:– ಮಾನ್ಯ ಸದಸ್ಯರ ಬೇಡಿಕೆಯನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಉಸ್ತುವಾರಿ ಸರ್ಕಾರದಿಂದ ಸಹಕಾರ ಸಂಸ್ಥೆಗಳಿಗೆ ನಾಮ–ನಿರ್ದೇಶನ

127 (729): ಶ್ರೀ. ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಉಸ್ತುವಾರಿ ಸರ್ಕಾರ ಅಸ್ತಿತ್ವದಲ್ಲಿದ್ದಾಗ ವಿವಿಧ ಸಹಕಾರಿ ಸಂಸ್ಥೆಗಳಿಗೆ ನಾಮನಿರ್ದೇಶನ ಮಾಡಲಾಗಿದೆಯೇ ?

ಆ) ಹಾಗಿದ್ದಲ್ಲಿ ನಾಮನಿರ್ದೇಶನ ಮಾಡಲಾದವರ ಮತ್ತು ಸಂಬಂಧಿಸಿದ ಸಹಕಾರಿ ಸಂಸ್ಥೆಗಳ ಹೆಸರುಗಳನ್ನು ತಿಳಿಸುವುದು ?

ಇ) ಉಸ್ತುವಾರಿ ಸರ್ಕಾರದ ಅವಧಿಯಲ್ಲಿ ಮಾಡಲಾದ ನಾಮನಿರ್ದೇಶನಗಳು ಕಾನೂನು ಬಾಹಿರ ಮತ್ತು ಅಕ್ರಮವಾದವುಗಳೆಂದು ಸರ್ಕಾರಕ್ಕೆ ತಿಳಿದಿದೆಯೇ ?

ಈ) ಇಂತಹ ನಾಮನಿರ್ದೇಶನಗಳನ್ನು ರದ್ದುಗೊಳಿಸಿ ಅವರ ಜಾಗಗಳಿಗೆ ಹೊಸಬರನ್ನು ನಾಮಕರಣ ಮಾಡಲು ಸರ್ಕಾರಿ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):-

ಅ) ಹೌದು

ಆ) ಮಾಡಲಾದ ನಾಮನಿರ್ದೇಶಕರ ಹೆಸರು ಮತ್ತು ಸಹಕಾರಿ ಸಂಸ್ಥೆಗಳ ಹೆಸರನ್ನು ಅನುಬಂಧ 'ಎ'ನಲ್ಲಿ ನೀಡಲಾಗಿದೆ.

ಇ) ಇಲ್ಲ

ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

720 ಶ್ರೀ. ಬಸವರಾಜ ಪಾಟೀಲ ಅಟ್ಟೂರ ಅವರಿಂದ:–

ಅನುಬಂಧ

	ಸಹಕಾರ ಸಂಘಗಳ ಹೆಸರು	ನಾಮನಿರ್ದೇಶನ ಮಾಡಲಾದ ಸದಸ್ಯರ ಹೆಸರು ಶ್ರೀಯುತ – ಶ್ರೀಮತಿ
1)	ಮಲಪ್ರಭಾ ಸಹಕಾರಿ ನೂಲಿನ ಗಿರಣಿ ಸವದತ್ತಿ	1) ಶ್ರೀ. ಎಸ್. ಎಸ್. ಒಂಟಿಗೌಡ 2) ಶ್ರೀ. ಟಿ. ಜಿ. ಕುಲಕರ್ಣಿ 3) ಶ್ರೀ. ಎಂ. ಆರ್. ಮೂರ್ತಣ್ಣವರ್ 4) ಶ್ರೀ. ಡಿ. ವಿ. ಸಂಗಣ್ಣವರ್
2)	ಮೀನು ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ., ಗುಬ್ಬಿ	1) ಶ್ರೀ. ನರಸಯ್ಯ ಎನ್. ದೊಡ್ಡಯ್ಯ 2) ಶ್ರೀ. ಜಿ. ಜಿ. ಚಂದ್ರಯ್ಯ ಬಿನ್‌ಜೆ. ಬಿ. ಭೀಮಯ್ಯ 3) ಶ್ರೀ. ಎಂ. ಎಸ್. ರಂಗಯ್ಯ ಬಿನ್. ಸೀಬಯ್ಯ ಮಾದಾಪುರ
3)	ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನರಗುಂದ	1) ಶ್ರೀ ಎಸ್. ಎಂ. ಬಾಳಿಕಾಯಿ
4)	ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ., ಗುಂಡ್ಲುಪೇಟೆ	1) ಶ್ರೀ ಗೋವಿಂದಸ್ವಾಮಿ 2) ಶ್ರೀ ಬಿ. ಎಸ್. ಸಿದ್ದಮಲ್ಲಪ್ಪ 3) ಶ್ರೀ ಎ. ಎಂ. ಮಹದೇವಪ್ಪ

5)	ವೀರಶೈವ ಸಹಕಾರ ಸಂಘ ನಿ., ಬೆಂಗಳೂರು	1) ಶ್ರೀ ಸಿ. ಶಿವರುದ್ರಯ್ಯ
6)	ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಲ, ಬೆಂಗಳೂರು.	1) ಶ್ರೀ ಜಿ. ಕೆ. ವೆಂಕಟಶಿವರೆಡ್ಡಿ 2) ಶ್ರೀ ಎಸ್. ಎನ್. ಪಾಟೀಲ
7)	ಕರ್ನಾಟಕ ಸಹಕಾರ ಗ್ರಾಹಕರ ಮಹಾ ಮಂಡಳಿ, ಬೆಂಗಳೂರು.	1) ಶ್ರೀ ಆರ್. ಆರ್. ಕಲ್ಲೂರ್
8)	ಮಲಪ್ರಭಾ ಸಹಕಾರಿ ನೂಲಿನ ಗಿರಣಿ, ಸವದತ್ತಿ	1) ಶ್ರೀ ದೀಪಕ್ ಎಸ್. ಚುಂಚುರೆ
9)	ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಸಂಘ ಶಿವಮೊಗ್ಗ	1) ಉಮೇಶ ಬಿನ್. ಮಂಜಪ್ಪಗೌಡ 2) ಮಂಜುನಾಥ ಟಿ. ಎಸ್. 3) ಬಿ. ಹೆಚ್. ರಾಮಚಂದ್ರಪ್ಪ ಬಿನ್. ಹನುಮಪ್ಪ
10)	ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ತುಮಕೂರು	1) ಕೆ. ಜಿ. ಆನಂದ ಬಿನ್. ಗಂಗಣ್ಣ 2) ಎಮ್. ಕೆ. ಮರುಗಪ್ಪಗೌಡ ಬಿನ್. ಕಪ್ಪಣ್ಣ 3) ಎಮ್. ಎಸ್. ಕರಿಯಪ್ಪ ಬಿನ್, ನಂಜುಂಡೇಗೌಡ
11)	ಪ್ರಾಥಮಿಕ ಸಹಕಾರಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಬಂಗಾರಪೇಟೆ	1) ಶ್ರೀ ಕುಪ್ಪಸ್ವಾಮಿ ಬಿನ್, ಪಾಪಯ್ಯ
12)	ಪ್ರಿ. ಎಸ್. ಎಸ್. ಎಸ್. ಎನ್. ನೇರಲಕೆರೆ	1) ಶ್ರೀ ನಾಗಪ್ಪ ಬಿನ್. ಪಾಪಯ್ಯ 2) ಶ್ರೀ ತಿಪ್ಪಣ್ಣ ಬಿನ್. ಕದರಪ್ಪ 3) ಶ್ರೀ ಚಿಕ್ಕಣ್ಣ ಬಿನ್. ಲಿಂಗಪ್ಪ

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಹಿಂದೆ ಉಸ್ತುವಾರಿ ಸರ್ಕಾರ ಇದ್ದ ಸಂದರ್ಭದಲ್ಲಿ ರಾಜ್ಯದಲ್ಲಿ ಹಲವಾರು ಸಂಘ ಸಂಸ್ಥೆಗಳಿಗೆ ಮಾನ್ಯ ಸದಸ್ಯರ ನಾಮಿನೇಷನ್ ಮಾಡಿದ್ದಾರೆ. ಈ ರೀತಿ ಮಾಡಿರುವಂಥ ಕ್ರಮ ಕಾನೂನುಬಾಹಿರವಾದುದು. ಜನರ ಪ್ರತಿನಿಧಿಗಳ ಸರ್ಕಾರ ಇಲ್ಲದ ಸಮಯದಲ್ಲಿ ಕೆಲವೊಂದು ಸಂಘ ಸಂಸ್ಥೆಗಳಿಗೆ ಏನು ನಾಮಿನೇಷನ್ ಮಾಡಿದ್ದಾರೆ ಆ ನಾಮಿನೇಷನನ್ನು ಸರ್ಕಾರ ಕೂಡಲೇ ರದ್ದುಪಡಿಸಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆಗ ನಾಮಿನೇಷನ್ ಮಾಡಿರತಕ್ಕದ್ದು ಕಾನೂನು ಬಾಹಿರವೇನೂ ಅಲ್ಲ. ಕೋ-ಆಪರೇಟಿವ್ ಆಕ್ಟ್‌ನಲ್ಲಿ ನಾಮಿನೇಷನ್ ಮಾಡುವುದಕ್ಕೆ ಅವಕಾಶವಿದೆ ಆ ಕಾನೂನಿನ ಪ್ರಕಾರ ಸೆಕ್ಷನ್ 69 ಮತ್ತು ಸೆಕ್ಷನ್ 53ರ ಪ್ರಕಾರ ನಾವು ನಾಮಿನೇಟ್ ಮಾಡಿದ್ದೇವೆ. ಸರ್ಕಾರ ಕಂಟಿನ್ಯೂ ಆಗಿದೆ. ಕಾಂಗ್ರೆಸ್ ಸರ್ಕಾರ ಇದೆ. ಕಾಂಗ್ರೆಸ್ ಜನರನ್ನೇ ನಾಮಿನೇಟ್ ಮಾಡಿದೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:- ಕಾಂಗ್ರೆಸ್ ಸರ್ಕಾರದ ಪ್ರಶ್ನೆ ಅಲ್ಲ. ಕೋ-ಆಪರೇಟಿವ್ ಸಂಘ ಸಂಸ್ಥೆಗಳು ಒಳ್ಳೆಯ ರೀತಿಯಿಂದ ನಡೆಯಬೇಕು, ಚೆನ್ನಾಗಿ ಕೆಲಸ ಮಾಡಬೇಕು ಎಂದು ಇತ್ತೀಚೆಗೆ ತಾವು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಹಲವಾರು ಪತ್ರಿಕೆಗಳಲ್ಲಿ ತಮ್ಮ ಸ್ಟೇಟ್‌ಮೆಂಟ್ ಬಂದಿದೆ. ಮಹಾರಾಷ್ಟ್ರದಲ್ಲಿ ಕೋ-ಆಪರೇಟಿವ್ ಸಂಘಸಂಸ್ಥೆಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಷುಗರ್

ಫ್ಯಾಕ್ಟರಿಗಳು ಚೆನ್ನಾಗಿ ನಡೆಯುತ್ತಿವೆ. ಅವರು ಅಲ್ಲಿ ರಾಜಕೀಯ ಮಾಡುವ ಹಾಗೆ ಇಲ್ಲ. ಅದೇ ರೀತಿ ನಮ್ಮ ರಾಜ್ಯದಲ್ಲಿ ಸಂಘ ಸಂಸ್ಥೆಗಳು, ಸಹಕಾರಿ ಕ್ಷೇತ್ರಗಳಲ್ಲಿ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯಬೇಕಾಗಿದೆ. ಮಾನ್ಯ ರಾಜ್ಯಪಾಲರ ಸರ್ಕಾರ ಇದ್ದಾಗಿನ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಆಗ ನಾಮಿನೇಷನ್ ಮಾಡಿರತಕ್ಕದ್ದು ತಪ್ಪು ಎಂದು ಎಲ್ಲರ ಭಾವನೆ ಇದೆ. ಇದನ್ನು ತಾವು ಸರಿಪಡಿಸಬೇಕು.

ಏತಕ್ಕೆಂದರೆ ಯಾವುದೇ ಸರ್ಕಾರ ಇಲ್ಲದಂಥ ಸಂದರ್ಭದಲ್ಲಿ ಮಾಡಲಾಗಿದೆ. ಉದಾಹರಣೆಗೆ ಹೇಳಬೇಕೆಂದರೆ, ಶ್ರೀಮಾನ್ ಪುಟ್ಟಲಿಂಗಯ್ಯ ಎನ್ನತಕ್ಕಂಥವರು ವೀರಶೈವ ಕೋ–ಆಪರೇಟೀವ್ ಸೊಸೈಟಿಯ ಸದಸ್ಯರಾಗಿದ್ದರು.

ಅಧ್ಯಕ್ಷರು:– ಪ್ರಶ್ನೆಗೆ ತಾವು ಉಪಪ್ರಶ್ನೆಯನ್ನು ಕೇಳಬೇಕು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:– ವೀರಶೈವ ಕೋ–ಆಪರೇಟಿವ್ ಸೊಸೈಟಿಯ ಸದಸ್ಯರಾದಂಥ ಶ್ರೀಮಾನ್ ಪುಟ್ಟಲಿಂಗಯ್ಯನವರನ್ನು ಕೇರ್-ಟೇಕರ್ ಸರ್ಕಾರ ಇದ್ದಂಥ ಸಮಯದಲ್ಲಿ ತೆಗೆದು ಹಾಕಿದ ಮೇಲೆ ಅವರು ಕೋರ್ಟಿಗೆ ಹೋದ ಮೇಲೆ ಅವರನ್ನು ಇಡಬೇಕೆನ್ನುವ ಆದೇಶ ಕೊಟ್ಟಿದ್ದಾರೆ. ಸರ್ಕಾರಕ್ಕೆ ಕೋರ್ಟ್‌ನವರು ಆದೇಶ ಕೊಟ್ಟ ಮೇಲೂ ಕೂಡ ನಾನು ಕೇಳುತ್ತಿರುವುದು ಇಷ್ಟೆ. ರಾಜ್ಯಪಾಲರು ಇದ್ದಂಥ ಒಂದು ಸಂದರ್ಭದಲ್ಲಿ ಬಹಳ ಜನರ ನೇಮಕಾತಿಗಳನ್ನು ಮಾಡಿದ್ದಾರೆ. ಇದು ಸರಿಯಾದ ರೀತಿಯಲ್ಲ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದಂಥದ್ದು. ಅಂಥವರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಅದಕ್ಕೆ ಹೌದು ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರಿಗೆ ಸ್ವಲ್ಪ ಕನ್‌ಫ್ಯೂಷನ್ ಆಗಿದೆ. ಏತಕ್ಕೆಂದರೆ ಮಾನ್ಯ ಸದಸ್ಯರು ಕೊಟ್ಟಿರುವ ಒರಿಜನಲ್ ಪ್ರಶ್ನೆಯನ್ನು ನಾನು ಓದುತ್ತೇನೆ. Whether nominations to various Boards of Co-operative Institutions were made during the time of the care–taker Government in the State. ಎಂದು ಕೇಳಿದ್ದಾರೆ.

ಮಾನ್ಯ ಗವರ್ನರ್ ರಿಜೀಮ್‌ನಲ್ಲಿ ಆಗಿದ್ದುದು ಎಂದು ಹೇಳಿದ್ದರೆ ನಾವು ಆವಾಗಿನದನ್ನು ತರಿಸುತ್ತಿದ್ದೆವು. ಬಹುಶಃ ಮೊನ್ನೆ ಶ್ರೀಮಾನ್ ಬಂಗಾರಪ್ಪನವರು ರೆಸಿಗ್ನೇಷನ್ ಕೊಟ್ಟ ಮೇಲೆ ಇದನ್ನು ಮುಂದುವರಿಸಬೇಕೆಂದು ಏನು ಗವರ್ನರ್ ಹೇಳಿದರು, ಕೇರ್ ಟೇಕರ್ ಅದನ್ನು ತಿಳಿದುಕೊಂಡು ಉತ್ತರವನ್ನು ಕೊಟ್ಟಿದ್ದೇವೆ. ತಾವು ಗವರ್ನರ್ ರಿಜಿಮ್‌ನಲ್ಲಿ ಮಾಡಿದ್ದುದು ಎಂದು ಸ್ಪಷ್ಟವಾಗಿ ಕೇಳಿದ್ದರೆ, ನಾವು ಮೂರು ವರ್ಷದ ಹಿಂದಿನ ಮಾಹಿತಿಯನ್ನು ಕೊಡುತ್ತಿದ್ದೆವು. ತಾವು ಬಹುಶಃ ಬೇರೆ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್:– ನಾನು ಒಂದು ಉಪಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದು ಮಾನ್ಯ ರಾಜ್ಯಪಾಲರ ಕಾಲದಲ್ಲಿ ಆದಂಥ ನಾಮಿನೇಷನ್.

(ಗೊಂದಲ)

ಶ್ರೀ ಜಿ. ಎಸ್. ಶಿವನಂಜಪ್ಪ:– ಮಾನ್ಯ ಅಧ್ಯಕ್ಷರೇ, ನನ್ನದೊಂದು ಆಕ್ಷೇಪಣೆ ಇದೆ. ತಾವು ಬರೀ ಆ ಕಡೆಗೆ ನೋಡುತ್ತಿರುತ್ತೀರಿ, ಈ ಕಡೆಗೆ ನೋಡುವುದೇ ಇಲ್ಲ. ನಾನು 2–3 ಸಲ ಕೈ ಎತ್ತಿದ್ದೇನೆ. ಬಹಳ ಮುಖ್ಯವಾದಂಥ ಪ್ರಶ್ನೆ ಇದೆ. ನಮ್ಮ ಕಡೆಯೂ ನೋಡಿ.

ಅಧ್ಯಕ್ಷರು:– ನಾನು ಎಲ್ಲಾ ಕಡೆಯೂ ನೋಡುತ್ತಿರುತ್ತೇನೆ. ಎಲ್ಲಾ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತಿದ್ದೇನೆ. ಮಾನ್ಯ ಸಚಿವರು ಪ್ರಶ್ನೆ ಸರಿಯಿಲ್ಲವೆಂದು ಹೇಳಿದ ಮೇಲೆ ಉಪಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲ. ಅದು ಪ್ರಶ್ನೆಯೇ ಸರಿಯಿಲ್ಲವೆಂದು ಅವರು ಹೇಳಿದ್ದರ ಬಗ್ಗೆ ತಾವು ಗಮನ ಕೊಟ್ಟಿಲ್ಲವೆಂದು ಕಾಣುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ:– ಯಾವುದೇ ಕಾಲದಲ್ಲಿ ನಾಮಿನೇಷನ್ ಮಾಡಿದ್ದರೆ ಆ ಪ್ರಶ್ನೆ ಕೇಳಬೇಕಾಗಿತ್ತು. ಇದು ಬಹಳ ಮುಖ್ಯವಾದ ಪ್ರಶ್ನೆ ಇದೆ.

ಗುಲ್ಬರ್ಗ ಜಿಲ್ಲಾ ಸಹಕಾರ ಬ್ಯಾಂಕಿನಿಂದ ಕೇಂದ್ರ ಬೆಳೆ ಸಾಲಗಳ ವಿತರಣೆ

128 (884): ಶ್ರೀ ಬಸಂತರೆಡ್ಡಿ, ಮೋತಕಪಲ್ಲಿ (ಸೇಡಂ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಡಿಸೆಂಬರ್ ಹಾಗೂ ಜನವರಿ ತಿಂಗಳಲ್ಲಿ ಸಹ ಬೆಳೆಸಾಲ ವಿತರಣೆ ಮಾಡಲಾಗಿದೆಯೆ ? ಮಾಡಿದರೆ ಯಾವ ಬೆಳೆಗೆ ಸಾಲ ವಿತರಣೆ ಮಾಡಲಾಗಿದೆ ?

ಆ) ಈ ಬ್ಯಾಂಕಿನವರು ಅಕ್ಟೋಬರ್ ತಿಂಗಳಲ್ಲಿ ಬಿತ್ತಣಿಕೆಯ ನಂತರ ರೈತರಿಗೆ ಸಾಲ ನೀಡಿದರೆ ಈ ಬೆಳೆ ಸಾಲ ಬೆಳೆ ಬೆಳೆಯಲು ಅನುಕೂಲವಾಗುವುದಿಲ್ಲವೆ ?

ಇ) ಸಕಾಲದಲ್ಲಿ ಸಾಲ ಕೊಡದಿದ್ದರೆ ರೈತರು ಬೇರೆ ವ್ಯವಸ್ಥೆ ಮಾಡಿಕೊಳ್ಳಲಾರದ ತೊಂದರೆಪಡುವುದು ಸರ್ಕಾರಕ್ಕೆ ತಿಳಿದಿದೆಯೆ ?

ಈ) 'ಬ' ಘಟಕದ ರಸಗೊಬ್ಬರ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಹಂಚಿರುವ ವ್ಯವಸಾಯ ಸಹಕಾರ ಸಂಘಗಳು ಯಾವ್ಯಾವು ? ರಸಗೊಬ್ಬರ ಹಂಚಿದ ನಂತರ ಹಣವನ್ನು ಹಂಚಿದ ಸಂಘಗಳು ಯಾವುವು ?

ಉ) ಈ ಪ್ರಕಾರ ರೈತರಿಗೆ ಬೆಳೆಸಾಲ ಕೊಡುವುದರಲ್ಲಿ ಅವ್ಯವಸ್ಥೆ ಆಗದಂತೆ ಮುಂದಾದರೂ ಸಕಾಲದಲ್ಲಿ ಕೊಡುವ ವ್ಯವಸ್ಥೆ ಸರ್ಕಾರ ಮಾಡಬಹುದೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಹೌದು, ಕಬ್ಬು ಬೆಳೆಗೆ

ಆ) ಹೌದು

ಇ) ಹೌದು

ಈ) ಸೆಪ್ಟೆಂಬರ್, ಅಕ್ಟೋಬರ್ ತಿಂಗಳುಗಳಲ್ಲಿ ಜಿಲ್ಲೆಯಲ್ಲಿ ಒಟ್ಟು 92 ವ್ಯವಸಾಯ ಸಹಕಾರ ಸಂಘಗಳು 'ಬ' ಘಟಕದ ರಸಗೊಬ್ಬರ ಹಂಚಿದ್ದು, ಈ ಪೈಕಿ 76 ಸಂಘಗಳು 'ಅ' ಘಟಕ ಸಾಲ ವಿತರಿಸಿರುತ್ತದೆ. (ಸಂಘಗಳ ಪಟ್ಟಿಯನ್ನು ಲಗತ್ತಿಸಲಾಗಿದೆ).

ಕ್ರಮ ತೆಗೆದುಕೊಳ್ಳಲಾಗುವುದು.

ಅನುಬಂಧ (ಅ)

ಪ್ರಶ್ನೆ (4) ಕ್ಕೆ ಹಣ ವಿತರಿಸಲಾದ ಸಂಘಗಳ ಯಾದಿ

ಕ್ರಮ ಸಂಖ್ಯೆ	ಸಂಘದ ಹೆಸರು	
1) ಗುಲ್ಬರ್ಗಾ ತಾಲ್ಲೂಕು:–		
ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ		
1	”	ನಾಗೂರ
2	”	ಕಪನೂರ
3	”	ಹಿರಾಪುರ
4	”	ಭೀಮಳ್ಳಿ
5	”	ಹಾಗರಗಾ
6	”	ಕೊಟ್ಟನೂರ
7	”	ನಂದೂರ
8	”	ಕಿರಣಗಿ
9	”	ಸೊಂತ
10	”	ತಿಳಗೊಳ
11	”	ಅಷ್ಟಾ
12	”	ಹುಣಸಿಹಡಗಿಲ್
2) ಆಳಂದ ತಾಲ್ಲೂಕು:–		
13	”	ಯಳಸಂಗಿ
14	”	ಮಾದನ ಹಿಪ್ಪರಗಾ
15	”	ನಿಂಬಾಳ
16	”	ಪಡನಾವಳಿ
17	”	ಮೋಘಟ ಕೆ.
18	”	ಬೊಮ್ಮನಹಳ್ಳಿ
19	”	ಮಡಕಿ
20	”	ಕೊರಹಳ್ಳಿ
21	”	ಕಿರಣಿಸುಲ್ತಾನ್
22	”	ಕವಲಗಾ
23	”	ಮಾಡ್ಯಾಳ್
3) ಅಫಜಲ್‌ಪೂರ ತಾಲ್ಲೂಕು		
24	”	ಮಣ್ಣೂರ
25	”	ಆತನೂರ
26	”	ಚಣ್ಣಮಗೇರಾ

27	"	ಹಸರಗುಂಡಗಿ
28	"	ನೀಲೂರ
29	"	ಬಡಪಾಳ
30	"	ಮಲ್ಲಾಬಾಧ
31	"	ದೇವಲಗಾಣಗಪೂರ
32	"	ಗೊಬ್ಬರ್
33	"	ಕಲ್ಲೂರ
34	"	ಭೋಸಗಾ

4) ಜೇವರ್ಗಿ ತಾಲ್ಲೂಕು:–

ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ

35	"	ನರೋಗಿ
36	"	ಸೊನ್ನ
37	"	ಮುತಕೊಂಡ
38	"	ಮಳ್ಳಿ
39	"	ಇಟಗಾ
40	"	ಬಳಬಟ್ಟಿ

5) ಸೇಡಂ ತಾಲ್ಲೂಕು:–

41	"	ಬಟಗೇರಾ

6) ಚಿತ್ತಾಪುರ ತಾಲ್ಲೂಕು:–

42	"	ಗುಂಡಗುರ್ತಿ
43	"	ಟೆಂಗಳಿ
44	"	ಅಳ್ಳಳ್ಳಿ
45	"	ಹೆಬ್ಬಾಳ್ ಬಿ.
46	"	ಪೇಠಸಿರೂರ

7) ಶೋರಾಪೂರ ತಾಲ್ಲೂಕು:–

47	"	ಮಲ್ಲಾ ಬಿ.
48	"	ಏವೂರ
49	"	ಹೆಮನೂರ
50	"	ಹೆಬ್ಬಾಳ
51	"	ಮರಲಭಾವಿ
52	"	ಮುದನೂರ

8) ಚಿಂಚೋಳಿ ತಾಲ್ಲೂಕು:–

53	"	ಸುಲೇಪೇಟೆ

<u>ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ:–</u>

54	"	ನಿಡಗುಂಡಾ
55	"	ಐನೋಳ್ಳಿ
56	"	ಕೊಳ್ಳೂರ
57	"	ಕರಚಖೇಡ
58	"	ಕೆರೊಳ್ಳಿ
59	"	ಚಿಮ್ಮನಚೋಡ
60	"	ಸಾಲೇಬಿರನಹಳ್ಳಿ
61	"	ಚಿಂತಪಳ್ಳಿ
62	"	ಕೊಡಲ್ಲಿ
63	"	ಗರಗಪಳ್ಳಿ
64	"	ಕಂದಕೂರ
65	"	ಬಳಿಚಕ್ರ
66	"	ಗುರಮಿಟಕಲ್
67	"	ರಾಮನ ಸಮುದ್ರ
68	"	ಗುಂಜನೂರ
69	"	ಅಲ್ಲಿಪೂರ
70	"	ಜೆಡೆಟ್ಲಾ
71	"	ಯರಗೋಳ
72	"	ಯಲಸತ್ತಿ
73	"	ಹತ್ತಿಕುಣಿ
74	"	ಪುಟಪಾರ
75	"	ಮಾಧವಾರ
76	"	ಕರಣಗಿ

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ:– ಮಾನ್ಯ ಅಧ್ಯಕ್ಷರೇ, ಗುಲ್ಬರ್ಗಾ ಜಿಲ್ಲೆಯ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ಡಿಸೆಂಬರ್ ಹಾಗೂ ಜನವರಿ ತಿಂಗಳಲ್ಲಿ ಬೆಳೆ ಸಾಲ ವಿತರಣೆ ಮಾಡಲಾಗಿದೆಯೇ? ಮಾಡಿದರೆ ಯಾವ ಬೆಳೆಗೆ ಸಾಲ ವಿತರಣೆ ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದರೆ ಹೌದು, ಕಬ್ಬು ಬೆಳೆಗೆ ಎಂದು ಉತ್ತರ ಹೇಳಿದ್ದಾರೆ. ಆದರೆ ಈ ವೇಳೆಯಲ್ಲಿ ರಬ್ಬಿ ಬೆಳೆಗೂ ಸಹ ಬ್ಯಾಂಕ್‌ನವರು ಸಾಲ ವಿತರಣೆ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಅಲ್ಲದೆ ಈ ಬ್ಯಾಂಕ್‌ನವರು ಅಕ್ಟೋಬರ್ ತಿಂಗಳಲ್ಲಿ ಬಿತ್ತಣಿಕೆಯ ನಂತರ ರೈತರಿಗೆ ಸಾಲ ನೀಡಿದರೆ ಬೆಳೆ ಬೆಳೆಯಲು ಅನಾನುಕೂಲವಾಗುವುದಿಲ್ಲವೇ ಎಂದರೆ 'ಹೌದು' ಎಂದು ಉತ್ತರ ನೀಡಿದ್ದಾರೆ. ನನ್ನ ಮೊದಲನೆಯ ಪ್ರಶ್ನೆಯಲ್ಲಿ ಗುಲ್ಬರ್ಗಾ ಕೇಂದ್ರ ಸಹಕಾರಿ ಬ್ಯಾಂಕ್‌ನಲ್ಲಿ ಬೆಳೆ ಸಾಲ ನೀಡಲು ಅಕ್ಟೋಬರ್ 30 ರ ಒಳಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ನಬಾರ್ಡ್ ಪ್ರತಿಬಂಧನೆ ಇಲ್ಲವೆ ಒಂದು ವೇಳೆ ನಬಾರ್ಡ್ ಪ್ರತಿಬಂಧನೆ ಇದ್ದರೆ ಅದನ್ನು ವಿತರಣೆ ಮಾಡಿದ್ದುದು. ಏತಕ್ಕೆ? ಅದು ಕಾನೂನು ಬಾಹಿರವಾಗುವುದಿಲ್ಲವೇ. ಅಲ್ಲದೆ ನನ್ನ ಎರಡನೇ ಪ್ರಶ್ನೆಗೆ ಅನಾನುಕೂಲವಾಗುತ್ತದೆಂದು ಒಪ್ಪಿದ್ದಾರೆ.

ಅನಾನುಕೂಲವಾದರೆ ಇದರಿಂದ ರೈತರು ಬೆಳೆವ ಬೆಳೆ ನಷ್ಟವಾಗಿ ಸಾಲ ಮರುಪಾವತಿ ಮಾಡಲು ತೊಂದರೆಯಾಗುವುದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೇ, ಈಗ ಅವರು ಹೇಳಿದ ಹಾಗೆ ಇದು ರಬ್ಬಿ ಕ್ರಾಪಿಗೆ ಕೊಡತಕ್ಕಂಥ ಸಾಲ ಅಕ್ಟೋಬರ್‌ನಲ್ಲಿಯೇ ಕೊಡಬೇಕಾಗಿತ್ತು. ಆದಾದ ಮೇಲೆ ನವೆಂಬರ್, ಡಿಸೆಂಬರ್, ಜನವರಿಯಲ್ಲಿ ಕೊಟ್ಟಿದ್ದಾರೆನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಆದರೆ ನಮ್ಮಲ್ಲಿರತಕ್ಕಂಥ ವರದಿಯ ಪ್ರಕಾರ ಪ್ರಿನ್ಸಿಪಾಲ್ ಅಗ್ರಿಕಲ್ಚರ್ ಆಫೀಸರ್ ವತಿಯಿಂದ ಒಂದು ರಿಪೋರ್ಟ್ ತೆಗೆದುಕೊಂಡು ಇಂಟರ್ ಕ್ರಾಪ್ ಏನಿದೆ ಆ ಕ್ರಾಪಿಗೆ ಜೋಳ, ಗೋಧಿ, ಕಡಲೆ, ಸೂರ್ಯಕಾಂತಿ, ಅಗಸೆ, ಕುಸುಬೆ ಮುಂತಾದ ಬೆಳೆಗಳ ಮಧ್ಯೆ ಕೆಲವು ಅಂತರ ಬೇಸಾಯ ಕಾರ್ಯಕ್ರಮವನ್ನು ಹಾಕಿಕೊಂಡು ಅಂಥದ್ದಕ್ಕೆ ಸಾಲ ಕೊಟ್ಟಿದ್ದೇವೆ ಮತ್ತು ಆಳಂದ ತಾಲ್ಲೂಕಿನಲ್ಲಿ ಶುಗರ್ ಕೇನ್ ಏನಿದೆ ಅಲ್ಲಿಯೂ ಕೂಡ 36 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎನ್ನತಕ್ಕಂಥ ವರದಿ ನಮಗೆ ಬಂದಿದೆ.

ಆದರೆ ನವೆಂಬರ್ – ಡಿಸೆಂಬರ್‌ನಲ್ಲಿ ಕೊಟ್ಟ ಸಾಲ ಕಾನೂನಿಗೆ ವಿರುದ್ಧವಾಗಿ ಅಥವಾ ನಬಾರ್ಡ್ ನಾರ್ಮ್ಸ್‌ಗೆ ವಿರುದ್ಧವಾಗಿ ಇದ್ದರೆ ರಿಪೋರ್ಟ್ ತರಿಸಿಕೊಂಡು ಪರಿಶೀಲಿಸಿ ಏನು ಕ್ರಮ ತೆಗೆದುಕೊಳ್ಳಬೇಕೊ ಅದನ್ನು ತೆಗೆದುಕೊಳ್ಳುತ್ತೇನೆ. ಎರಡನೆಯ ಪ್ರಶ್ನೆಯಲ್ಲಿ, ಇದನ್ನು ಈ ರೀತಿ ಕೊಡುವುದರಿಂದ ಜನರಿಗೆ ತೊಂದರೆಯಾಗುತ್ತದೆ, ಸಮಯಕ್ಕೆ ತಕ್ಕಂತೆ ಸಾಲ ವಿತರಣೆ ಮಾಡಬೇಕು, ಸಮಯ ಮೀರಿದ ಮೇಲೆ ಕೊಟ್ಟರೆ ಯಾರಿಗೂ ಪ್ರಯೋಜನವಾಗುವುದಿಲ್ಲ ಎಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಅನೇಕ ಸಲ ಎಲಿಜಿಬಿಲಿಟಿ ಇಲ್ಲದ ಸಮಯದಲ್ಲಿ ಏನು ಮಾಡುತ್ತಾರೆಂದರೆ, ರಿಕವರಿ ಮಾಡಿಕೊಂಡು ತೋರಿಸಿದ ಹಾಗೆ ಮಾಡಿ ಕೊನೆಗೆ ಡ್ರಾ ಮಾಡಿಕೊಂಡು ತಮಗೆ ಬೇಕಾದವರಿಗೆ ಕೊಡತಕ್ಕ ವ್ಯವಸ್ಥೆಯನ್ನು ಕೋ--ಆಪರೇಟಿವ್ ರಂಗದಲ್ಲಿ ಮಾಡುತ್ತಾರೆ. ಇಂಥದ್ದು ನನ್ನ ಗಮನಕ್ಕೆ ಈಗಾಗಲೆ ಬಂದಿದೆ. ನಾನು ಸಂಪೂರ್ಣವಾಗಿ ಅದನ್ನು ಪರಿಶೀಲಿಸಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಸಂತರೆಡ್ಡಿ ಮೋತಕಪಲ್ಲಿ:- ನನ್ನ 'ಇ' – ಪ್ರಶ್ನೆಯಲ್ಲಿ ಸಕಾಲದಲ್ಲಿ ಸಾಲ ಕೊಡದಿದ್ದರೆ ರೈತರು ಬೇರೆ ವ್ಯವಸ್ಥೆ ಮಾಡಿಕೊಳ್ಳಲಾರದೆ ತೊಂದರೆಪಡುವುದು ಸರ್ಕಾರಕ್ಕೆ ತಿಳಿದಿದೆಯೇ ಎಂದರೆ 'ಹೌದು' ಎಂದು ಉತ್ತರಿಸಿದ್ದಾರೆ. ಅದೇ ಪ್ರಕಾರ ಈ ಪ್ರಶ್ನೆಯಲ್ಲಿ 'ಬಿ' ಘಟಕದ ರಸಗೊಬ್ಬರ ಸೆಪ್ಟೆಂಬರ್ – ಅಕ್ಟೋಬರ್ ತಿಂಗಳಲ್ಲಿ ಹಂಚಿರುವ ವ್ಯವಸಾಯ ಸಹಕಾರ ಸಂಘಗಳು ಯಾವುವು ? ರಸಗೊಬ್ಬರ ಹಂಚಿದ ನಂತರ ಹಣವನ್ನು ಹಂಚಿದ ಸಂಘಗಳು ಯಾವುವು ? ಅಂದರೆ ಸೆಪ್ಟೆಂಬರ್ – ಅಕ್ಟೋಬರ್ ತಿಂಗಳುಗಳಲ್ಲಿ ಜಿಲ್ಲೆಯಲ್ಲಿ ಒಟ್ಟು 92 ವ್ಯವಸಾಯ ಸಹಕಾರ ಸಂಘಗಳು 'ಬಿ' ಘಟಕದ ರಸಗೊಬ್ಬರವನ್ನು ಹಂಚಿವೆ ಎಂದು ತಿಳಿಸಿದ್ದಾರೆ. 'ಇ'-- ಪ್ರಶ್ನೆಗೆ ಉತ್ತರ ನೀಡುವಾಗ ರೈತರಿಗೆ ತೊಂದರೆಯಾಗುತ್ತದೆಂದು ಒಪ್ಪಿದ್ದರೂ ಬೆಳೆ ಸಾಲ ವಿತರಣೆ ಮಾಡುವುದು ಏಕೆ ? ರೈತರಿಗೆ ನಷ್ಟವಾಗಿ ಸಾಲದ ಹೊರೆ ಮಾಡುವುದೇ ಸಹಕಾರ ಬ್ಯಾಂಕಿನ ಉದ್ದೇಶವೆ ? 'ಈ' ಪ್ರಶ್ನೆಗೆ ಸೆಪ್ಟೆಂಬರ್ – ಅಕ್ಟೋಬರ್ ತಿಂಗಳಲ್ಲಿ 92 ವ್ಯವಸಾಯ ಸಹಕಾರ ಸಂಘಗಳು 'ಬಿ' ಘಟಕದ ರಸಗೊಬ್ಬರವನ್ನು ಹಂಚಿವೆ ಎಂದಿದ್ದಾರೆ. ಇಲ್ಲಿಯವರೆಗೆ ಈ ಅಬ್ಜಲ್‌ಪುರ, ಜೇವರ್ಗಿ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಒಟ್ಟು 27 ಸಹಕಾರ ಸಂಘಗಳಿಂದ 'ಬಿ' ಘಟಕದ ಸಾಲದ ವಿತರಣೆ ಪತ್ರ ಇಲ್ಲಿಯವರೆಗೆ ಬಂದಿಲ್ಲ. ಅಂದರೆ ಇಲ್ಲಿಯವರೆಗೆ ಹಂಚಿಲ್ಲವೆಂದು ಅರ್ಥವಾಗುವುದಿಲ್ಲವೆ ? ಇದು ಅವ್ಯವಹಾರ ಆಗುವುದಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗಾಗಲೇ ಇದರಲ್ಲಿ ಏನಾದರೂ ಅವ್ಯವಹಾರ ಇದ್ದರೆ ಅದನ್ನು ತನಿಖೆ ಮಾಡಿಸಿ ಸೂಕ್ತ ಕ್ರಮ ತೆಗದುಕೊಳ್ಳುತ್ತೇನೆಂದು ಸ್ಪಷ್ಟಪಡಿಸಿದ್ದೇನೆ.

ಅವರ ಹತ್ತಿರ ಏನಾದರೂ ಮಾಹಿತಿ ಇದ್ದರೆ ಸೇಡಂ ತಾಲ್ಲೂಕಿನಲ್ಲಿ ಅಥವಾ ಬೇರೆ ತಾಲ್ಲೂಕುಗಳಲ್ಲಿ ಈ ರೀತಿಯಾಗಿ ನಡೆದಿದ್ದರೆ ನನಗೆ ಬರೆದುಕೊಟ್ಟರೆ ಅಥವಾ ನನ್ನ ಗಮನಕ್ಕೆ ತಂದರೆ ಖಂಡಿತ ಸೆಕ್ಷನ್ 65ರ ಪ್ರಕಾರ ಎನ್‌ಕ್ವೈರಿ ಮಾಡಿಸಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಅಥವಾ ಸಂಬಂಧಪಟ್ಟ ಸಂಸ್ಥೆಯ ಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ಸ್ಪಷ್ಟಪಡಿಸುತ್ತೇನೆ.

ರಾಸಾಯನಿಕ ಗೊಬ್ಬರಗಳ ಬಳಕೆಯಿಂದಾದ ಪರಿಣಾಮ

129 (469): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಬಳಕೆಯಿಂದ ಭೂಮಿಯ ಸತ್ವ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಭೂಮಿಯ ಸತ್ವ ನಾಶಗೊಳಿಸುತ್ತಿರುವ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕ ಬಳಕೆ ತಡೆಯಲು, ಇಲ್ಲವೇ ಕಡಿಮೆ ಮಾಡಲು ಸರ್ಕಾರ ಪರಿಶೀಲಿಸುತ್ತಿದೆಯೇ ?

ಇ) ನೈಸರ್ಗಿಕ ಗೊಬ್ಬರ ಹಾಗೂ ನೈಸರ್ಗಿಕ ಕ್ರಿಮಿನಾಶಕಗಳನ್ನು ಬಳಸಲು ರೈತರಲ್ಲಿ ಜಾಗೃತಿಯನ್ನುಂಟುಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ ?

ಈ) ಕೃಷಿ ವಿಸ್ತರಣೆ, ಘಟಕಗಳ ಮೂಲಕ ನೈಸರ್ಗಿಕ ಗೊಬ್ಬರ ಜನಪ್ರಿಯಗೊಳಿಸಲು ಕಾರ್ಯ ಕ್ರಮವನ್ನು ಇಟ್ಟುಕೊಳ್ಳಲು ಸರ್ಕಾರ ಯೋಜಿಸಿದೆಯೇ ?

ಉ) ನೈಸರ್ಗಿಕ ಕೃಷಿಯತ್ತ ರೈತರನ್ನು ಆಕರ್ಷಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಮದನ್ ಗೋಪಾಲನಾಯಕ್ (ಕೃಷಿ ಮಾರುಕಟ್ಟೆ ರಾಜ್ಯಸಚಿವರು):-

ಮಣ್ಣು ಪರೀಕ್ಷೆ ಮತ್ತು ಬೆಳೆ ಪ್ರತಿಕ್ರಿಯೆ ಆಧಾರದ ಮೇಲೆ ರಸಗೊಬ್ಬರಗಳ ಸಮತೋಲನ ಬಳಕೆಯಿಂದ ಮತ್ತು ಕ್ರಿಮಿ ನಾಶಕಗಳ ಬಳಕೆಯಿಂದ ಭೂಮಿಯ ಸತ್ವ ಕಡಿಮೆಯಾಗುತ್ತಿರುವ ಬಗ್ಗೆ ವರದಿಯಿಲ್ಲ.

ಆ) ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳ ಬಳಕೆಯಿಂದಾಗಿ ಭೂಮಿಯ ಸತ್ವ ನಾಶವಾಗುತ್ತಿರುವ ಬಗ್ಗೆ ಯಾವ ನಿಖರವಾದ ವರದಿಯೂ ಬಂದಿಲ್ಲ, ಆದಾಗ್ಯೂ ಇವುಗಳ ಜೊತೆಯಲ್ಲಿ ಭೂಮಿಯ ಸತ್ವವನ್ನು ಕಾಪಾಡಲು ನೈಸರ್ಗಿಕ ಗೊಬ್ಬರಗಳಾದ ಕಾಂಪೋಸ್ಟ್, ರೈಜೋಬಿಯಂ ಹಸಿರೆಲೆ ಗೊಬ್ಬರ ಇವುಗಳನ್ನು ಉಪಯೋಗಿಸುವಂತೆಯೂ ರೈತರಿಗೆ ತಿಳುವಳಿಕೆ ನೀಡಲಾಗುತ್ತಿದೆ.

ಈ ಬಗ್ಗೆ ರೈತರಲ್ಲಿ ಜಾಗೃತಿಯನ್ನುಂಟುಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅ) ಕೇಂದ್ರ ಸರ್ಕಾರದ ನೆರವಿನೊಂದಿಗೆ ಜಾರಿಗೊಳಿಸಲಾಗುತ್ತಿರುವ ಅನೇಕ ಯೋಜನೆಗಳಡಿಯಲ್ಲಿ ನೈಸರ್ಗಿಕ ಗೊಬ್ಬರಗಳಾದ ಕಾಂಪೋಸ್ಟ್, ಎರೆಹುಳುವಿನಿಂದ ತಯಾರಾದ ಗೊಬ್ಬರ, ರೈಜೋಬಿಯಂ, ನೀಲಿ ಹಸಿರು ಪಾಚಿ, ಮುಂತಾದವುಗಳನ್ನು ಕಡಿಮೆ ದರದಲ್ಲಿ ರೈತರಿಗೆ ಒದಗಿಸಲಾಗುತ್ತಿದೆ. ಹಾಗೂ ಇವುಗಳ ಬಳಕೆಯ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

ಆ) ವಿವಿಧ ನೈಸರ್ಗಿಕ ಗೊಬ್ಬರಗಳ ಉಪಯೋಗದ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡಲು

ಕೃಷಿ ಇಲಾಖೆ ಹಾಗೂ ರಾಜ್ಯದಲ್ಲಿರುವ ಎರಡೂ ಕೃಷಿ ವಿಶ್ವವಿದ್ಯಾನಿಲಯಗಳು ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುತ್ತಾರೆ. ಇದರಲ್ಲೆ ಕೃಷಿ ಇಲಾಖೆ ಹಸ್ತಪತ್ರಿಕೆ, ಪೋಸ್ಟರ್ ಮುಂತಾದವುಗಳ ಮುಖಾಂತರ ಇವುಗಳ ಬಗ್ಗೆ ರೈತರಲ್ಲಿ ಜಾಗೃತಿ ಉಂಟುಮಾಡಲು ಕ್ರಮ ಕೈಗೊಳ್ಳುತ್ತಿದೆ.

ಇ) ಯೋಜಿಸಿದೆ, ಹಾಗೂ ಈ ದಿಶೆಯಲ್ಲಿ, ಹಲವಾರು ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

ಈ) ನೈಸರ್ಗಿಕ ಗೊಬ್ಬರದ ಬಳಕೆಯು ಕೃಷಿ ಉತ್ಪಾದನೆಯಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ನೈಸರ್ಗಿಕ ಗೊಬ್ಬರಗಳಾದ ರೈಜೋಬಿಯಂ, ನೀಲಿ ಹಸಿರು ಪಾಚಿ, ಕಾಂಪೋಸ್ಟ್ ಹಾಗೂ ಹಸಿರೆಲೆ ಗೊಬ್ಬರಗಳ ಬಳಕೆ ರೂಢಿಯಲ್ಲಿದೆ. ಎಣ್ಣೆಕಾಳು ಬೆಳೆಗಳ ಉತ್ಪಾದನೆಯನ್ನು ಅಧಿಕಗೊಳಿಸಲು ರೈಜೋಬಿಯಂ ಜೀವಾಣು ಗೊಬ್ಬರವನ್ನು ರಿಯಾಯಿತಿ ದರದಲ್ಲಿ ರೈತರಿಗೆ ಹಂಚಲಾಗುತ್ತಿದೆ.

ಉ) ಇದಲ್ಲದೆ ನೈಸರ್ಗಿಕ ಕೃಷಿ ಬಗ್ಗೆ ಅಭ್ಯಸಿಸಲು ತಜ್ಞರ ಸಮಿತಿಯನ್ನು ಸರ್ಕಾರ ರಚಿಸಿದೆ. ವರದಿ ಸರ್ಕಾರಕ್ಕೆ ತಲುಪಿದ ನಂತರ, ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ. ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದಲ್ಲಿ, ಮಣ್ಣು ಪರೀಕ್ಷೆ ಮತ್ತು ಬೆಳೆ ಪ್ರತಿಕ್ರಿಯೆ ಆಧಾರದ ಮೇಲೆ ರಸಗೊಬ್ಬರಗಳ ಸಮತೋಲನ ಬಳಕೆಯಿಂದ ಮತ್ತು ಕ್ರಿಮಿನಾಶಕಗಳ ಬಳಕೆಯಿಂದ ಭೂಮಿಯ ಸತ್ವ ಕಡಿಮೆಯಾಗುತ್ತಿರುವ ಬಗ್ಗೆ ವರದಿ ಇಲ್ಲವೆಂದು ಹೇಳಿದ್ದಾರೆ. ಆದರೆ ನಮ್ಮ ದೇಶದ ಮತ್ತು ಹೊರದೇಶದ ಎಲ್ಲಾ ವಿಜ್ಞಾನಿಗಳು, ಸ್ವಾಮಿನಾಥನ್‌ರವರು, ದ್ವಾರಕಾನಾಥ್‌ರವರು ರಸಗೊಬ್ಬರವನ್ನು ಉಪಯೋಗ ಮಾಡುವುದರಿಂದ ಭೂಮಿಯ ಸತ್ವ ಕಡಿಮೆಯಾಗುತ್ತಿದೆ, ಉತ್ಪಾದನೆ ಕಡಿಮೆಯಾಗುತ್ತಿದೆ ಎಂದು ಹೇಳುತ್ತಾರೆ. ನಮ್ಮ ಅಧಿಕಾರಿಗಳು ಈ ರೀತಿ ಹೇಳುತ್ತಾರೆ. ಅವರು ಸರಿಯಾಗಿ ನಮ್ಮ ಸರ್ಕಾರಕ್ಕೆ, ಕೃಷಿಕರಿಗೆ ಮಾರ್ಗದರ್ಶನ ಮಾಡುವುದಿಲ್ಲವೆಂದು ನನಗೆ ಅನ್ನಿಸುತ್ತದೆ. ಇದು ಸರಿಯಾದ ಉತ್ತರವೇ ಎಂಬುದನ್ನು ಕೃಷಿ ಸಚಿವರು ಹೇಳಬೇಕು. ಆಮೇಲೆ ನೈಸರ್ಗಿಕ ಕೃಷಿ ಬಗ್ಗೆ ಅಭ್ಯಸಿಸಲು ತಜ್ಞರ ಸಮಿತಿಯನ್ನು ಸರ್ಕಾರ ರಚಿಸಿದೆ ಎಂದು ಹೇಳಿದ್ದಾರೆ. ಅದರಲ್ಲಿ ಯಾವ ಯಾವ ತಜ್ಞರು ಇದ್ದಾರೆ, ಯಾವಾಗ ಸಮಿತಿಯನ್ನು ರಚಿಸಿದೆ, ಅವರಿಂದ ಯಾವಾಗ ಸರ್ಕಾರಕ್ಕೆ ವರದಿ ಬರುತ್ತದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ – ಈಗ ತಾನೇ ಮಾನ್ಯ ಸದಸ್ಯರು ಹೇಳಿದ ಹಾಗೆ ಅನೇಕ ಜನ ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದರೂ ಒಂದು ಸ್ಪಷ್ಟವಾದ ವರದಿ ಈ ವಿಷಯದಲ್ಲಿ ಬಂದಿಲ್ಲ. ಈ ರಸಗೊಬ್ಬರಗಳ ಉಪಯೋಗದಿಂದ ಅಥವಾ ಕ್ರಿಮಿನಾಶಕ ಔಷಧಿಗಳ ಉಪಯೋಗದಿಂದ ಭೂಮಿಯ ಸಾರ ಕಡಿಮೆಯಾಗುತ್ತಿದೆ ಎಂದು ಸ್ಪಷ್ಟವಾದ ವರದಿ ಇಲ್ಲ. ಆದರೂ ಕೂಡ ಈ ವಿಷಯದಲ್ಲಿ ಅನೇಕ ಜನ ಹೇಳಿದ್ದಾರೆಂಬ ಅಭಿಪ್ರಾಯದಿಂದ ರಸಗೊಬ್ಬರಗಳ ಜೊತೆಗೆ ಇನ್ನೂ ಕೆಲವು ಎಲೆ ಗೊಬ್ಬರವಾಗಲಿ, ಸೊಪ್ಪು ಆಗಲಿ ಉಪಯೋಗಿಸುವುದರಿಂದ ಕ್ರಿಮಿನಾಶಕ ಔಷಧಿಯಿಂದ ತೊಂದರೆಯಾಗುತ್ತಿದೆ ಎಂಬ ವರದಿ ಇಲ್ಲದಿರುವುದರಿಂದ, ರಸಗೊಬ್ಬರಗಳ ಉಪಯೋಗದಿಂದ ನೇರವಾಗಿ ಈ ತೊಂದರೆಯಾಗುತ್ತಿದೆ, ಭೂಮಿಯ ಸಾರ ಕಡಿಮೆಯಾಗುತ್ತಿದೆ ಎಂಬ ವರದಿ ಇಲ್ಲದಿದ್ದರೂ ರೈತಾಪಿ ಜನರಿಗೆ ಬೇಕಾದ ರಸಗೊಬ್ಬರಗಳನ್ನು ಒದಗಿಸಿಕೊಡುವುದು ನಡೆಯುತ್ತಿದೆ. ಮತ್ತು ರಸಗೊಬ್ಬರಗಳ ಜೊತೆಗೆ ಎಲೆಗೊಬ್ಬರ, ಅದನ್ನು ಉಪಯೋಗಿಸತಕ್ಕ ಪದ್ಧತಿಯನ್ನು ಜಾರಿಯಲ್ಲಿ ತಂದಿದ್ದೇವೆ. ಜೊತೆಗ ಇದಕ್ಕೋಸ್ಕರವಾಗಿ ಆಲೋಚನೆ ಮಾಡಿ ಒಂದು ಸಮಿತಿಯನ್ನು ಸರ್ಕಾರ ಆಗಲೇ 1 ವರ್ಷದ ಹಿಂದೆ ರಚನೆ ಮಾಡಿದೆ. ಆ ಸಮಿತಿಗೆ ವ್ಯವಸಾಯ ಮಂತ್ರಿಗಳೇ ಅಧ್ಯಕ್ಷರು. ಅದರಲ್ಲಿ ಎಂ. ಎ. ಸ್ವಾಮಿನಾಥನ್, ಡೆವಲಪ್‌ಮೆಂಟ್ ಕಮೀಷನರ್, ಕಾರ್ಯದರ್ಶಿಗಳಾಗಿರುತ್ತಾರೆ. ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆಯ ನಿರ್ದೇಶಕರು.

ಅಧ್ಯಕ್ಷರು:– ಕಮಿಟಿ ಮಾಡಿದ್ದೇವೆಂದು ಹೇಳಿದರೆ ಸಾಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಸಮಿತಿ ರಚನೆಯಾಗಿದೆ. ಆ ಸಮಿತಿ ಈಗಾಗಲೆ 2 ಸಾರಿ ಸಭೆ ಸೇರಿ ಆಲೋಚನೆ ಮಾಡುತ್ತಿದ್ದಾರೆ. ಅದರ ವರದಿ ಬಂದ ಮೇಲೆ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಪರ್ಯಾಲೋಚನೆ ಮಾಡುತ್ತದೆ.

ಶ್ರೀ ಎಸ್. ಚಿಕ್ಕೇಗೌಡ:– ಮಾನ್ಯ ಅಧ್ಯಕ್ಷರೇ, ಸತತವಾಗಿ ರಸಗೊಬ್ಬರಗಳು ಮತ್ತು ಕ್ರಿಮಿನಾಶಕ ಔಷಧಿಗಳ ಉಪಯೋಗದಿಂದ ಭೂಮಿಯ ಸತ್ವ ಕಡಿಮೆಯಾಗುತ್ತದೆನ್ನುವ ವಿಷಯ ಇನ್ನೂ ಚರ್ಚೆಯ ರೂಪದಲ್ಲಿ ಇದೆ. ಜೊತೆಗೆ ರಸಗೊಬ್ಬರವನ್ನು ಸತತವಾಗಿ ಉಪಯೋಗಿಸುವುದರಿಂದ ಭೂಮಿ, ಮಣ್ಣಿನ ರಚನೆ structure of the soil ಕೆಟ್ಟು ಭೂಮಿ ಮೇಲೆ ಬಹಳ ಪರಿಣಾಮವಾಗುತ್ತದೆಂದು ಅನೇಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಜೊತೆಗೆ ಈಗಾಗಲೇ ವಿದೇಶೀ ಸಂಸ್ಥೆಗಳು, ಜಪಾನ್ ಸಂಸ್ಥೆ ಎಂ ಓ ಯು, ಅವರು ಬಂದು ನಮ್ಮ ದೇಶದಲ್ಲಿ ಅಷ್ಟೇ ಅಲ್ಲ ಬೆಂಗಳೂರಿನ ಸುತ್ತಮುತ್ತ ವಿಶ್ವವಿದ್ಯಾನಿಲಯಗಳಲ್ಲಿ ಸತತವಾಗಿ ರಸಗೊಬ್ಬರಗಳನ್ನು ಉಪಯೋಗಿಸಕೂಡದು ಮತ್ತು ಸಾವಯವ ಗೊಬ್ಬರ ಉಪಯೋಗಿಸಬೇಕು, ಕ್ರಿಮಿನಾಶಕ ಔಷಧಿಗಳನ್ನು ಉಪಯೋಗಿಸಬಾರದು, ಇದನ್ನು ಉಪಯೋಗಿಸುವುದರಿಂದ ಭೂಮಿಯ ಮೇಲೆ, ಬೆಳೆ ಮೇಲೆ ಹಾನಿಯಾಗುತ್ತದೆಂದು ತಿಳಿಸಿ ಪರೀಕ್ಷೆ, ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಅದರಿಂದ ಭೂಮಿಯ ಸತ್ವ ಕಡಿಮೆ ಆಗುವುದಿಲ್ಲ, ಭೂಮಿಯ ರಚನೆ ಮತ್ತೊಂದು ಹಾಳಾಗುವುದಿಲ್ಲ ಎಂದು ಹೇಳುವುದು ಸರ್ಕಾರದ ಸ್ಪಷ್ಟವಾದ ನಿಲುವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ, ಜಪಾನ್ ವಗ್ಗೈರೆ ದೇಶಗಳಿಂದ ಕೆಲವು ಪರಿಣಿತರು ಬಂದು ಇದನ್ನೆಲ್ಲ ಪರೀಕ್ಷೆ ಮಾಡಿರುವುದು ನಿಜ. ಆದರೆ ಸರ್ಕಾರ ರಚನೆ ಮಾಡಿರತಕ್ಕ ಸಮಿತಿಯ ತೀರ್ಮಾನಕ್ಕೋಸ್ಕರ ನಾವು ಕಾಯುತ್ತಿದ್ದೇವೆ. ಯಾವ ರೀತಿ ಮಾಡಬೇಕೆಂದು ಸಲಹೆ ಕೊಡಬೇಕೆಂದು ನಾವು ಅವರಿಗೆ ತಿಳಿಸಿದ್ದೇವೆ. ಇದರ ಜೊತೆಗೆ ನಾವು ಈಗ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸುವುದರ ಜೊತೆಗೆ ಎಲೆಗೊಬ್ಬರ ಮತ್ತು ಕೆಲವಾರು ಅವಶ್ಯಕವಾಗಿ ಬೇಕಾಗಿರತಕ್ಕ ವಸ್ತುಗಳನ್ನು ರೈತರಿಗೆ ಒದಗಿಸಿ ಅದನ್ನು ಉಪಯೋಗಿಸಬೇಕೆಂದು ಈಗಾಗಲೇ ತಿಳಿಸಿದ್ದೇವೆ. ವರದಿ ಬಂದ ಮೇಲೆ ಮುಂದಿನ ಕ್ರಮ ನಾವು ತೆಗೆದುಕೊಳ್ಳುತ್ತೇವೆ.

ಪ್ರೊ: ಎಂ. ಡಿ. ನಂಜುಂಡಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಡಿ. ಆರ್. ಪಾಟೀಲ್ ಅವರು ಬಹಳ ಮುಖ್ಯವಾದ ಪ್ರಶ್ನೆ ಎತ್ತಿದ್ದು ಅದರ ಮೇಲೆ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಈ ಮುಖ್ಯವಾದ ಪ್ರಶ್ನೆಗೆ ಸರ್ಕಾರದಿಂದ ಬಂದಿರುವ ಉತ್ತರವನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಕೃಷಿ ಇಲಾಖೆ ಕೆಲಸ ಮಾಡುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ರಸಗೊಬ್ಬರ ಮತ್ತು ರಾಸಾಯನಿಕ ಕ್ರಿಮಿ ನಾಶಕಗಳ ಬಳಕೆಯಿಂದ ಮಣ್ಣಿನ ಗುಣ ದಿನೇದಿನೇ ಕಡಿಮೆಯಾಗುತ್ತಿದೆ, ನಿಕೃಷ್ಟವಾಗುತ್ತಿದೆ ಎನ್ನುವ ಬಗ್ಗೆ ಪ್ರಪಂಚದ ಎಲ್ಲಾ ದೇಶಗಳಲ್ಲಿ ಸಂಶೋಧನೆ ಮುಗಿದು ವರದಿಗಳು ಬಂದು ಎಲ್ಲಾ ದೇಶಗಳು bio-technoiogy ಕಡೆ ಕಾರ್ಯಕ್ರಮ ಹಾಕಿವೆ. ಎಲ್ಲಾ ದೇಶಗಳು bio-technology-bio-fertilizers, bio-pesticides ಕಡೆ ಕಾರ್ಯಕ್ರಮ ಹಾಕಿ ಆಗಿದೆ. ಇಲ್ಲಿ ನಿಮ್ಮ ಇಲಾಖೆಯಿಂದ ಇದು ಏನೋ rizobiam blue green alge ಎಂದು ಉತ್ತರ ಕೊಡುತ್ತಾರೆ. ಆ ಕಾರಣಕ್ಕೇ ನಾನು ಹೇಳಿದ್ದುದು ನಿಮ್ಮ ಕೃಷಿ ಇಲಾಖೆ ಕೆಲಸ ಮಾಡುತ್ತಿಲ್ಲ ಎಂದು. ಮಾನ್ಯ ಅಧ್ಯಕ್ಷರೇ, ನಿಮ್ಮ ಮೂಲಕ ಒಂದು ಸವಾಲನ್ನು ಮಾನ್ಯ ಕೃಷಿ ಮಂತ್ರಿಗಳಿಗೆ ಹಾಕುತ್ತಿದ್ದೇನೆ.

11.40 ಎ. ಎಂ.

ಕೃಷಿಗೆ ಸಂಬಂಧಪಟ್ಟಂತಹ ರಾಷ್ಟ್ರೀಯ ಕೃಷಿ ನೀತಿಯುನ್ನು ಲೋಕಸಭೆಯಲ್ಲಿ ಏನು ಮಂಡಿಸಿದರು

ಅದರ ಪ್ರತಿ ನಮ್ಮ ಸರ್ಕಾರಕ್ಕೆ ಬಂದು ತಲುಪಿದೆಯೆ ? ಕೃಷಿಗೆ ಸಂಬಂಧಪಟ್ಟ ಹಾಗೆ ಜನರಲ್ ಅಗ್ರಿಮೆಂಟ್ ಫಾರ್ ಟ್ಯಾರಿಫ್ ಅಂಡ್ ಟ್ರೇಡ್ ಎಂದು ಏನಿದೆ ಅದಕ್ಕೆ ಸಂಬಂಧಪಟ್ಟ ಹಾಗೆ ಡಂಕಲ್ ವರದಿ ಏನಿದೆ, ಡಂಕಲ್ ಪ್ರಸ್ತಾವನೆ ಅದರ ಪ್ರತಿಯೇನಾದರೂ ನಿಮ್ಮ ಸರ್ಕಾರದಲ್ಲಿದೆಯೆ ? ನಿಮ್ಮ ಇಲಾಖೆಯಲ್ಲಿ ಇದೆಯೆ ? ಏಕೆ ಹೇಳುತ್ತಿದ್ದೇನೆಂದರೆ, ತಾವು ಇದರಲ್ಲಿ ಕಣ್ಣುಮುಚ್ಚಿಕೊಂಡು ಕುಳಿತರೆ ರೈಸೋಬಿಯಂ ಸಿಗುವುದಿಲ್ಲ, ಬ್ಲೂ ಗ್ರೀನ್ ಆಲ್ಗೆನೂ ಸಿಗುವುದಿಲ್ಲ. ಇದನ್ನು ಪೇಟೆಂಟ್ ಮಾಡಿ ಇಟ್ಟುಕೊಂಡು ಬ್ಲೂಗ್ರೀನ್ ಆಲ್ಗೆನ್ ಇಲ್ಲದೇ ಇರುವಂತಹ ಕೃಷಿ ಇಲಾಖೆಯನ್ನಾಗಿ ಪರಿವರ್ತನೆ ಮಾಡುತ್ತೀರಿ - ನೀವು. ಸಮಿತಿ ರಿಪೋರ್ಟ್‌ಗೆ ಕಾಯುತ್ತಿದ್ದೇವೆಂದು ಹೇಳಿದ್ದೀರಿ. ನಾವು ಸುಮ್ಮನಾಗುತ್ತೇವೆಂದು ಸ್ವಾಮಿನಾಥನ್‌ರವರ ಹೆಸರು ಹೇಳಿದರು. ಯಾವ ರೀತಿ ಸಮಿತಿ ರಚನೆ ಮಾಡಿ ಯಾವ ರೀತಿ ಸಮಿತಿ ಕೆಲಸ ಮಾಡಿದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ.

ಅಧ್ಯಕ್ಷರು:– ಅದಕ್ಕೆ ಅವಕಾಶ ಕೊಡುವುದಿಲ್ಲ. ಮುಂದಿನ ಪ್ರಶ್ನೆ ಅಂಜನಮೂರ್ತಿಯವರು. ಮಾನ್ಯ ಸದಸ್ಯರು ಮಾತನಾಡಬೇಕಾದರೆ ಬೇರೆ ಫಾರಂನಲ್ಲಿ ತೆಗೆದುಕೊಂಡು ಬನ್ನಿ. ಮತ್ತೆ ಪ್ರಶ್ನೆ ಕೇಳಿ. ಪ್ರಶ್ನೋತ್ತರ ವೇಳೆಯಲ್ಲಿ ಕಾಲದ ಮಿತಿ ಇದೆ. ಕಾಲದ ಮಿತಿಯಲ್ಲಿ ಜಾಸ್ತಿ ಪ್ರಶ್ನೆಗಳನ್ನು ಕೇಳಿದರೆ ನನಗೆ ಕಷ್ಟವಾಗುತ್ತದೆ. ತಾವು ಬೇರೆ ಫಾರಂನಲ್ಲಿ ತೆಗೆದುಕೊಂಡು ಬನ್ನಿ.

SRI M. RAJASHEKHARA MURTHY:– The question No. 761 is transferred to Housing and Urban Development Department.

ರಾಜ್ಯದಲ್ಲಿರುವ ಸ್ಟ್ಯಾಂಪ್ ವೆಂಡರ್‌ಗಳಿಗೆ ಹತ್ತು ಸಾವಿರ ಮೇಲ್ಪಟ್ಟ ಸ್ಟ್ಯಾಂಪ್‌ಗಳನ್ನು ಮಾರಾಟ ಮಾಡಲು ಪೂರೈಸದೇ ಇರುವ ಬಗ್ಗೆ.

131 (791): ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಸ್ಟ್ಯಾಂಪ್ ವೆಂಡರ್‌ಗಳಿಗೆ ಎಷ್ಟು ಸಾವಿರ ರೂಪಾಯಿಗಳವರೆಗೆ ಸ್ಟ್ಯಾಂಪ್ ಪೇಪರ್ ಮಾರಾಟ ಮಾಡಲು ಅಧಿಕಾರ ನೀಡಿರುವುದು ?

ಆ) ಸಾರ್ವಜನಿಕರು ಹತ್ತು ಸಾವಿರ ಮೇಲ್ಪಟ್ಟು ಸ್ಟ್ಯಾಂಪ್ ಪೇಪರ್ ಖರೀದಿಸುವಾಗ ಅವು ಸಿಗದೆ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಈ) ಸ್ಟ್ಯಾಂಪ್ ವೆಂಡರ್‌ದಾರರಿಗೆ ಹತ್ತು ಸಾವಿರಕ್ಕಿಂತ ಮೇಲ್ಪಟ್ಟ ಸ್ಟ್ಯಾಂಪ್ ಪೇಪರ್‌ಗಳನ್ನು ಮಾರಾಟ ಮಾಡಲು ಸರ್ಕಾರ ಏನಾದರೂ ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಒಂದು ವ್ಯವಹಾರದಲ್ಲಿ 'ಎ' ದರ್ಜೆ ಸ್ಟ್ಯಾಂಪ್ ವೆಂಡರ್‌ಗಳಿಗೆ ರೂ. 10,000–00 ದವರೆಗೂ ಮತ್ತು 'ಬಿ' ದರ್ಜೆ ಸ್ಟ್ಯಾಂಪ್ ವೆಂಡರ್‌ಗಳಿಗೆ ರೂ. 5,000–00 ದವರೆಗೂ ಸ್ಟ್ಯಾಂಪ್ ಪೇಪರ್ ಮಾರಾಟ ಮಾಡಲು ಅನುಮತಿ ನೀಡಿದೆ.

ಆ) ಇಂತಹ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ

ಶ್ರೀ ಪಿ.ಸಿ. ಸಿದ್ದನಗೌಡರ್:– ಮಾನ್ಯ ಅಧ್ಯಕ್ಷರೆ, ಅನ್‌ಸ್ಟಾರ್ಡ್ ಕೊಶ್ಚನ್‌ಗೆ ಕೊಟ್ಟಂತಹ ಉತ್ತರ ಬೇರೆ ಇದೆ. ಸ್ಟಾರ್ಡ್ ಕೊಶ್ಚನ್‌ಗೆ ಕೊಟ್ಟಂತಹ ಉತ್ತರ ಬೇರೆ ಇದೆ. ರೈತರು ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಹೋದಾಗ 10 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಸ್ಟಾಂಪ್ ಪೇಪರ್ ಖರೀದಿ ಮಾಡಬೇಕಾದರೆ ಅಲ್ಲಿ ಅವರಿಗೆ ಸಿಗುವುದಿಲ್ಲ. ಇಲ್ಲಿ ಉತ್ತರದಲ್ಲಿ ಹೇಳುತ್ತಾರೆ. 10 ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಸ್ಟಾಂಪ್ ಪೇಪರ್‌ಗಳನ್ನು ಎ. ಕ್ಲಾಸ್ ಸ್ಟಾಂಪ್ ವೆಂಡರ್‌ಗಳು ಕೊಡುವುದಕ್ಕೆ ಬರುವುದಿಲ್ಲವೆಂದು ಉತ್ತರದಲ್ಲಿ ಹೇಳುತ್ತಿದ್ದಾರೆ. ಇನ್ನೊಂದು ಕಡೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ಮಾತ್ರ ಇದೆಯೆಂದು ನಾನು ಕೇಳಿದ್ದೇನೆ. 10 ಸಾವಿರ ರೂಪಾಯಿ ಮೇಲೆ ಸ್ಟಾಂಪ್ ಪೇಪರ್ ಖರೀದಿ ಮಾಡಬೇಕಾದರೆ ರೈತರಿಗೆ ಸಿಗುವುದಿಲ್ಲ. ಅದಕ್ಕೆ ತಾವು ರಿಸ್ಟ್ರಿಕ್ಷನ್ ಹಾಕಿದ್ದೇವೆಂದು ಒಂದು ಕಡೆ ಹೇಳುತ್ತೀರಿ ಮತ್ತೊಂದು ಕಡೆ ಇಲ್ಲವೆಂದು ಹೇಳುತ್ತೀರಿ. ಇದರ ಬಗ್ಗೆ ಸರಿಯಾಗಿ ಹೇಳಬೇಕು.

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯ ಅಧ್ಯಕ್ಷರೆ, ಸ್ಟಾಂಪ್ ವೆಂಡರ್ಸ್‌ನಲ್ಲಿ ಎರಡು ಭಾಗ ಇದೆ. ಒಂದು ಎ–ಗ್ರೂಪ್, ಮತ್ತೊಂದು ಬಿ–ಗ್ರೂಪೆಂದು. ಎ–ಗ್ರೂಪಿನವರು 10 ಸಾವಿರ ರೂಪಾಯಿವರೆಗೆ ಕೊಡಬಹುದು. ಬಿ–ಗ್ರೂಪಿನವರು 5 ಸಾವಿರ ರೂಪಾಯಿಗಳವರೆಗೆ ಸ್ಟಾಂಪ್ ಪೇಪರ್ ಕೊಡಬಹುದು. ಅದಕ್ಕಿಂತ ಜಾಸ್ತಿ ಪೇಪರ್ ಬೇಕಾದರೆ ವಕೀಲರ ಸಹಕಾರ ಸಂಘವಿದೆ. ಮತ್ತು ಇಲಾಖೆಯಲ್ಲಿ ಒಂದು ಸಹಕಾರ ಸಂಘ ಮಾಡಿಕೊಂಡಿದ್ದಾರೆ. ಅವರು 1 ಲಕ್ಷ ರೂಪಾಯಿಗಳವರೆಗೆ ಕೊಡಬಹುದು. ಅದು ಅಲ್ಲದೆ ಎಲ್ಲಾ ತಾಲ್ಲೂಕು ಟ್ರೆಜರಿಗಳಲ್ಲಿ ಮತ್ತು ಡೆಪ್ಯೂಟಿ ಡೈರೆಕ್ಟರ್ ಆಫ್ ಟ್ರೆಜರಿ ಅದು ವಿಧಾನಸೌಧದಲ್ಲಿದೆ. ಅವರು ಅನ್‌ಲಿಮಿಟೆಡ್ ವ್ಯಾಲ್ಯೂ ಸ್ಟಾಂಪ್ ಪೇಪರ್‌ಗಳನ್ನು ಕೊಡಬಹುದು. ಆದ್ದರಿಂದ ಯಾವ ತರಹದ ತೊಂದರೆಯಾಗಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್:– ರಿಸ್ಟ್ರಿಕ್ಷನ್ ತೆಗೆದರೆ ಏನು ತೊಂದರೆಯಾಗುತ್ತದೆ ? ಏಕೆಂದರೆ ಟ್ರೆಜರಿಯಲ್ಲಿ ಹಣ ತುಂಬಿ ಅವರು ತೆಗೆದುಕೊಳ್ಳುತ್ತಾರೆ. ರಿಸ್ಟ್ರಿಕ್ಷನ್ ಹಾಕುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಮೊದಲು ತಾವು ಒಪ್ಪುವುದಿಲ್ಲವೆಂದು ಹೇಳುತ್ತೀರಿ. ಸಾರ್ವಜನಿಕರಿಗೆ ಏನೂ ತೊಂದರೆಯಿಲ್ಲವೆಂದೂ ಸರ್ಕಾರಕ್ಕೆ ತಿಳಿದಿದೆಯೆಂದು ಹೇಳುತ್ತಾರೆ. ಇಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ನನ್ನ ರಿಕ್ವೆಸ್ಟ್ ಏನೆಂದರೆ, ರಿಸ್ಟ್ರಿಕ್ಷನ್ ತೆಗೆಯಿರಿ. ನಾನು ಅನೇಕ ಸಾರಿ ಕೇಳಿದ್ದೇನೆ. ಮೂರನೆಯ ಸಲ ಕೇಳುತ್ತಾ ಇದ್ದೇನೆ. ಇದಕ್ಕೆ ತಾವು ಕಾನೂನು ತಿದ್ದುಪಡಿ ಮಾಡುವುದಾದರೆ ಮಾಡಿ.

ಶ್ರೀ ಎಂ. ರಾಜಶೇಖರ ಮೂರ್ತಿ:– ಮಾನ್ಯ ಸದಸ್ಯರು ರಿಸ್ಟ್ರಿಕ್ಷನ್ ತೆಗೆಯಬೇಕೆಂದು ಹೇಳುತ್ತಿದ್ದಾರೆ. ಈಗ 5 ಸಾವಿರ ಮತ್ತು 10 ಸಾವಿರ ಲಿಮಿಟ್ ಹಾಕಿರುವುದರಿಂದ ಸರ್ಕಾರಕ್ಕೆ 2 ಕೋಟಿ 97 ಲಕ್ಷ ಕಮೀಷನ್ ಕೊಡಬೇಕಾಗುತ್ತದೆ. ರಿಸ್ಟ್ರಿಕ್ಷನ್ ತೆಗೆದರೆ ಕಮೀಷನ್ ದರ ಜಾಸ್ತಿಯಾಗುತ್ತದೆ. ರಿಸ್ಟ್ರಿಕ್ಷನ್ ತೆಗೆಯಬೇಕೆಂದು ಒಂದು ಪ್ರಪೋಸಲ್ ಹಿಂದೆ ಬಂದಿದೆ. ಅದರ ಬಗ್ಗೆ ಸರ್ಕಾರ ಆಖೈರ್ ತೀರ್ಮಾನ ತೆಗೆದುಕೊಂಡಿಲ್ಲ. ರಿಸ್ಟ್ರಿಕ್ಷನ್ ತೆಗೆಯಬೇಕಾದರೆ ಲಿಮಿಟ್ ಜಾಸ್ತಿ ಮಾಡಿ ಕಮೀಷನ್ ಕಡಿಮೆ ಮಾಡಿ ಹೆಚ್ಚಿಗೆ ಸರ್ಕಾರಕ್ಕೆ ಹೊರೆ ಆಗದ ಹಾಗೆ ನೋಡಿಕೊಳ್ಳಬೇಕಾಗಿದೆ. ಅದು ಸರ್ಕಾರದ ಮುಂದಿದೆ.

ಶ್ರೀ ಪಿ. ಸಿ. ಸಿದ್ದನಗೌಡರ್:– ತಾವು ಏನಾದರೂ ಮಾಡಿ ಸ್ಟಾಂಪ್ ಪೇಪರ್ ಕೊಡಿ.

ಶ್ರೀ ಜಿ.ಎಸ್. ಶಿವನಂಜಪ್ಪ:– ಸ್ಟಾಂಪ್ ಪೇಪರನ್ನು 10 ಸಾವಿರದ ಮೇಲೆ ಕೇಳಿದರೆ ಸ್ಟಾಂಪ್ ವೆಂಡರ್ ಟ್ರೆಜರಿನಲ್ಲಿ ದುಡ್ಡು ತುಂಬಿ ಇಂಡೆಂಟನ್ನು ಕೊಟ್ಟು ಸ್ಟಾಂಪ್ ಪೇಪರ್‌ಗಳನ್ನು ತೆಗೆದುಕೊಂಡು

ಬಂದು ನಮಗೆ ಕೊಡುತ್ತಾರೆ. ಆದರ ಬದಲಾಗಿ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿಯೇ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ? ಆಂಧ್ರಪ್ರದೇಶದಲ್ಲಿ ಈ ವ್ಯವಸ್ಥೆಯಿದೆ. ಇದರಿಂದ ಸರ್ಕಾರಕ್ಕೆ ಹಣ ಬರುತ್ತದೆ. ನೇರವಾಗಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ?

SRI M. RAJASHEKHARA MURTHY:-- That is a new suggestion. It will be examined.

ಶ್ರೀ ಎನ್. ಹುಚ್ಚಮಾಸ್ತಿಗೌಡ:-- ಮಾನ್ಯ ಅಧ್ಯಕ್ಷರೇ, ಪ್ರಶ್ನೆ 132 (1025) ನನಗೆ ನೇರವಾಗಿ ಸಂಬಂಧಪಟ್ಟಂಥ ಪ್ರಶ್ನೆ ಅಲ್ಲ. ತೋಟಗಾರಿಕೆ ಇಲಾಖೆಯ ಮುಖಾಂತರ ಅವರಿಗೆ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು:-- ಇದನ್ನು ಹೆಲ್ಡ್ ಓವರ್ ಮಾಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ:-- ತೋಟಗಾರಿಕೆ ಮಂತ್ರಿಗಳು ಇಲ್ಲಿ ಇದ್ದಾರೆ. ಉತ್ತರ ಬಂದಿದ್ದರೆ ಅವರು ಕೊಡಲಿ. Any Minister can reply. Collective responsibility is there.

ಅಧ್ಯಕ್ಷರು:-- ಇದು ಟ್ರಾನ್ಸ್‌ಫರ್ ಆಗಿದೆ. ತೋಟಗಾರಿಕೆ ಮಂತ್ರಿಗಳು ಬಂದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಊರ್ಜಿತ

133 (1040): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಲೆತಲಾಂತರದಿಂದ ಕುಮ್ಕಿ ಹಕ್ಕು ಇರುವುದು ಸರ್ಕಾರದ ಗಮನದಲ್ಲಿದೆಯೇ ?

ಆ) ಇತ್ತೀಚೆಗೆ ಸರ್ಕಾರ ಕುಮ್ಕಿ ಹಕ್ಕು ರದ್ದು ಮಾಡಿದೆಯೆ ? ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಸರ್ಕಾರ ರೈತರಿಗೆ ಕುಮ್ಕಿ ಹಕ್ಕು ಊರ್ಜಿತಗೊಳಿಸಲು ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) ಇಲ್ಲ
ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎ. ರುಕ್ಮಯ್ಯ ಪೂಜಾರಿ:-- ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿದೆ. ರೈತರು ಕೃಷಿಗಾಗಿ ಸೊಪ್ಪು ಸದೆಗಾಗಿ ಈ ಜಮೀನನ್ನು ಉಪಯೋಗಿಸಿಕೊಳ್ಳುತ್ತಾರೆ. ಇತ್ತೀಚೆಗೆ ರೆವಿನ್ಯೂ ಅಧಿಕಾರಿಗಳು, ಗ್ರಾಮಲೆಕ್ಕಿಗರು, ತಹಸೀಲ್ದಾರ್‌ರು, ಸಂಬಂಧಪಟ್ಟ ಅಧಿಕಾರಿಗಳು ಕುಮ್ಕಿ ಹಕ್ಕು ರದ್ದಾಗಿದೆ ಎಂದು ಹೇಳುತ್ತಿದ್ದಾರೆ ಮತ್ತು ತೊಂದರೆಯನ್ನು ಕೊಡುತ್ತಿದ್ದಾರೆ. ಆದರೆ ಇಲ್ಲಿ ಕುಮ್ಕಿ ಹಕ್ಕು ರದ್ದಾಗಿಲ್ಲವೆಂದು ನನಗೆ ಉತ್ತರ

ಕೊಟ್ಟಿದ್ದಾರೆ. ಈ ಬಗ್ಗೆ ಎಷ್ಟೋ ಜನರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಕುಮ್ಕಿ ಹಕ್ಕು ರದ್ದಾಗದಿದ್ದರೆ ಅವರು ಸ್ಟೇ ತರುವ ಆವಶ್ಯಕತೆ ಏನಿರುತ್ತಿತ್ತು? ಆದ್ದರಿಂದ ಕುಮ್ಕಿ ಹಕ್ಕು ಊರ್ಜಿತ ಇದೆಯೇ? ಇದರ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ:– ಕುಮ್ಕಿ ಹಕ್ಕು ರದ್ದಾಗಿಲ್ಲ. ಅವರಿಗೆ ಸರಿಯಾದ ಮಾಹಿತಿ ದೊರೆತಿಲ್ಲವೆಂದು ಕಾಣುತ್ತದೆ. ಅಧಿಕಾರಿಗಳು ಇದನ್ನು ದುರುಪಯೋಗಪಡಿಸಿಕೊಂಡು ಜನರಿಗೆ ತೊಂದರೆ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಮತ್ತೆ ಅವರಿಗೆ ಸರ್ಕ್ಯುಲರನ್ನು ಇಶ್ಯೂ ಮಾಡಿ ಇದು ರದ್ದಾಗಿಲ್ಲವೆಂದು ಅಧಿಕಾರಿಗಳಿಗೆ ತಿಳಿಸುತ್ತೇವೆ. ಯಾವುದೇ ತೊಂದರೆ ಕೊಡಬೇಡಿ ಎಂದು ಹೇಳುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಸರ್ಕಾರ ಯಾವುದೇ ದೃಷ್ಟಿಯಿಂದ ಕೂಡ ಈ ಕುಮ್ಕಿ ಹಕ್ಕನ್ನು ರದ್ದು ಮಾಡಬಾರದು. ಇದು ಬಹಳ ಹಿಂದಿನಿಂದ ರೈತರಿಗೆ ಸಿಗುತ್ತಿರುವ ಸವಲತ್ತು. ಅದನ್ನು ರದ್ದು ಮಾಡಿದರೆ ರೈತರಿಗೆ ಕೃಷಿಗೆ ಸೊಪ್ಪು ಸೆದೆ ಉಪಯೋಗಿಸಲಿಕ್ಕೆ ತುಂಬಾ ತೊಂದರೆಯಾಗುತ್ತದೆ. ಏಕೆಂದರೆ ಅವರಿಗೆ ಬೇರೆ ಕಾಡು ಸಿಗುವುದಿಲ್ಲ. ಈಗ ರಸಗೊಬ್ಬರದ ಬೆಲೆ ಜಾಸ್ತಿಯಾಗಿದೆ. ಸೊಪ್ಪು ಸಿಗದೇ ಇದ್ದರೆ ರೈತ ಕೃಷಿ ಮಾಡಲು ಕಷ್ಟವಾಗುತ್ತದೆ. ಆದ್ದರಿಂದ ನಮ್ಮ ಜಿಲ್ಲೆಯಲ್ಲಿ ಯಾವ ಕಾರಣಕ್ಕೂ ಕುಮ್ಕಿ ಹಕ್ಕನ್ನು ರದ್ದು ಮಾಡಬಾರದೆಂದು ಹೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಇದನ್ನು ರದ್ದುಪಡಿಸಬೇಕೇ, ರದ್ದುಪಡಿಸಬಾರದೇ ಎಂದು 1980ರಿಂದ ಚರ್ಚೆ ನಡೆಯುತ್ತಿದೆ. 1980ರಲ್ಲಿ ಒಂದು ಕ್ಯಾಬಿನೆಟ್ ಸಬ್‌ಕಮಿಟಿ ಆಯಿತು. ಅವರು ಇದನ್ನು ಅಬಾಲಿಶ್ ಮಾಡಬಹುದು ಎಂದು ಶಿಫಾರಸ್ಸು ಮಾಡಿದರು. ಅಲ್ಲಿಗೆ ಆ ಸರ್ಕಾರ ಹೋಯಿತು. 1985ರಲ್ಲಿ ಮತ್ತೆ ಒಂದು ಸಬ್‌ಕಮಿಟಿ ಆಯಿತು. ಆ ಸರ್ಕಾರ ಹೋಯಿತು ಮತ್ತು ಅದೂ ನಿಂತುಹೋಯಿತು. 1989ರಲ್ಲಿ ಮತ್ತೆ ಸಬ್‌ಕಮಿಟಿ ಆಯಿತು. ಆ ಸರ್ಕಾರ ಹೋಯಿತು. ಅದು ನಿಂತುಹೋಯಿತು. 1992ರಲ್ಲಿ ಇನ್ನೊಂದು ಸಬ್‌ಕಮಿಟಿ ಆಯಿತು. ಆ ಸರ್ಕಾರ ಹೋಯಿತು ಮತ್ತು ಅದೂ ನಿಂತುಹೋಯಿತು. ಆದ್ದರಿಂದ ಇದರ ಬಗ್ಗೆ ಅಖೈರು ತೀರ್ಮಾನ ತೆಗೆದುಕೊಂಡಿಲ್ಲ. ಇದು ರದ್ದಾಗಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಇದರ ಬಗ್ಗೆ ತಿಳಿಸಿ.

ಶ್ರೀ ವಿನಯಕುಮಾರ್ ಸೊರಕೆ:– ಭೂ ಮಸೂದೆಯಲ್ಲಿ ಭೂಮಿ ಸಿಗದೇ ಇರುವ ರೈತರಿದ್ದಾರೆ. ಅವರಿಗೆ ಸಂಬಂಧಪಟ್ಟಂಥ ಕುಮ್ಕಿ ಹಕ್ಕನ್ನು ಭೂ ಮಸೂದೆ ಮುಖಾಂತರ ಕೊಟ್ಟಿಲ್ಲ. ಹಾಗಾಗಿ ಭೂ ಮಸೂದೆಯಲ್ಲಿ ಭೂಮಿ ಸಿಗದೇ ಇರುವ ರೈತರಿಗೆ ಕುಮ್ಕಿ ಹಕ್ಕು ಇಲ್ಲ ಎನ್ನುವ ಡೈರೆಕ್ಷನ್ ಸರ್ಕಾರದಿಂದ ಹೋಗಿದೆ. ಈಗ ನಮಗೆ ಸಮಸ್ಯೆ ಬಂದಿರುವುದು ಅಕ್ರಮ ಸಕ್ರಮದ ಕೆಲಸಕಾರ್ಯಗಳಲ್ಲಿ ಪಟ್ಟಾ ಕೊಡುವುದಕ್ಕೆ ಅರ್ಜಿಗಳು ಬಂದಿದ್ದು, ಅದರಲ್ಲಿ ಪಟ್ಟಾ ಕೊಡುವುದನ್ನು ಈ ಸಮಿತಿಗಳಲ್ಲಿ ನಾವು ಮಾಡುತ್ತಾ ಇದ್ದೇವೆ. ಅದೇ ರೀತಿ ಕುಮ್ಕಿದಾರನ ಪಟ್ಟಿಗೆ ಇದ್ದರೆ ಆ ಒಂದು ಜಾಗದಲ್ಲಿ ಹತ್ತು–ಮೂವತ್ತು ವರ್ಷಗಳಿಂದ ಇದ್ದು ಕೃಷಿ ಮಾಡಿದವರಿಗೆ ಹಕ್ಕುಪತ್ರ ಕೊಡುವ ರೀತಿಯಲ್ಲಿ ಕೂಡ ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು. ಹಾಗೆಯೇ ಪಟ್ಟಾದಾರರಿಗೆ ಕುಮ್ಕಿ ಹಕ್ಕನ್ನು ಉಳಿಸುವಂಥ ರೀತಿಯಲ್ಲಿ ಕಾರ್ಯ ಕ್ರಮ ಹಮ್ಮಿಕೊಳ್ಳಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

SRI M. RAJASHEKHARA MURTHY:– It will be looked into.

ಅಧ್ಯಕ್ಷರು:– ವಾಟಾಳ್ ನಾಗರಾಜ್‌ರವರೇ, ನಿಮ್ಮ 134 (1080)ನೇ ಪ್ರಶ್ನೆಗೆ ಉತ್ತರ ಬಂದಿಲ್ಲ. ಅದನ್ನು ನಾನು ಮುಂದಿನವಾರ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನನ್ನ ಪ್ರಶ್ನೆಗಿಂತ ಹೆಚ್ಚಾಗಿ ಇಲ್ಲಿ ಒಬ್ಬರು ಬಂದು ನನ್ನನ್ನು ಹೆದರಿಸಿ ಹೋಗಿದ್ದಾರೆ. ಅದನ್ನು ಆಮೇಲೆ ನಾನು ಎತ್ತುತ್ತೇನೆ. ಇಲ್ಲಿ ಒಬ್ಬರು ಬಂದು ನನಗೆ ಹೆದರಿಕೆ ಹಾಕಿದ್ದಾರೆ. ತಾವು ನನಗೆ ಅವಕಾಶ ಕೊಡಬೇಕು. ಇಲ್ಲದಿದ್ದರೆ ನಾನು ರಾಜೀನಾಮೆ ಬೇಕಾದರೆ ಕೊಡುತ್ತೇನೆ. ತಮಗೆ ಈ ಸದನದಲ್ಲಿ ನಮಗೆ ರಕ್ಷಣೆ ಕೊಡುವುದಕ್ಕೆ ಆಗಿಲ್ಲವೆಂದರೆ ನಾನು ಈ ಸದನವನ್ನು ಬಿಟ್ಟು ಹೋಗುತ್ತೇನೆ. ನಾನು 1967ನೇ ಇಸವಿಯಿಂದ ಈ ಸದನದಲ್ಲಿ ಒಬ್ಬ ಸದಸ್ಯನಾಗಿದ್ದೇನೆ. ಇಲ್ಲಿ ಯಾರೋ ಮತ್ತೊಬ್ಬ ಸದಸ್ಯರು ಬಂದು ನನಗೆ ಹುಚ್ಚುಹುಚ್ಚಾಗಿ ಮಾತನಾಡತಕ್ಕಂಥ ಬೇಜವಾಬ್ದಾರಿತನಕ್ಕೆ ಹೋಗಬಾರದು. ಆಮೇಲೆ ಪ್ರಶ್ನೋತ್ತರವಾದ ನಂತರ ತಾವು ನನಗೆ ಅವಕಾಶ ಕೊಡಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ:– ಇದು ಶಾಸಕರ ಮರ್ಯಾದೆಯ ಪ್ರಶ್ನೆಯ ಜೊತೆಗೆ ಅವರ ಹಕ್ಕಿನ ಪ್ರಶ್ನೆ ಕೂಡ ಇದೆ. ಈ ರೀತಿ ಹೆದರಿಕೆ, ಬೆದರಿಕೆ ಹಾಕಿದರೆ ನಾವು ಇಲ್ಲಿ ನಿರ್ಭಯವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು:– ಪ್ರಶ್ನೋತ್ತರ ಕಾಲ ಮುಗಿಯಲಿ.

ಶ್ರೀ ಕೆ. ಎಸ್. ಈಶ್ವರಪ್ಪ:– ವಿಧಾನ ಸಭೆ ನಡೆಯುತಕ್ಕ ಸಂದರ್ಭದಲ್ಲಿ, ಶಾಸಕರಿಗೆ ಈ ರೀತಿ ಆದರೆ, ಹೊರಗಡೆ ಗತಿ ಏನು ?

ಶ್ರೀ ವಾಟಾಳ್ ನಾಗರಾಜ್:– ಅವರು ನನ್ನನ್ನು ಹೊಡೆಯುವುದಕ್ಕೆ ಬಂದಿದ್ದಾರೆ. ನನಗೆ ರಕ್ಷಣೆ ಕೊಡಿ, ಇಲ್ಲದೇ ಹೋದರೆ, ಇವತ್ತು ನಾನು ರಾಜೀನಾಮೆ ಕೊಡುತ್ತೇನೆ. ಈ ಸದನ ಏತಕ್ಕೋಸ್ಕರ ಇರಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:– ಗೂಂಡಾಗಿರಿ, ಈ ದೇಶದಲ್ಲಿ, ಈ ರಾಜ್ಯದಲ್ಲಿ ನಡೆಯಬೇಕೇ ಎನ್ನುವುದು ತೀರ್ಮಾನವಾಗಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಅವರ ಈ ನಡವಳಿಕೆ ಸರಿಯೇ ? ನಾವು ಯಾವ ಪ್ರಶ್ನೆ ಕೇಳಬೇಕು, ಯಾವ ಪ್ರಶ್ನೆ ಕೇಳಬಾರದು ಎಂದು ಅವರನ್ನು ಕೇಳಿ, ನಾವು ಪ್ರಶ್ನೆ ಕೇಳಬೇಕೇ ?

ಅಧ್ಯಕ್ಷರು:– ಪ್ರಶ್ನೋತ್ತರವಾದ ಮೇಲೆ ತಮ್ಮ ಪ್ರಸ್ತಾವನೆಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿ.

ಸರ್ಕಾರದಿಂದ ಜಿಲ್ಲಾ ಪರಿಷತ್ತಿನ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ

136 (467): ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ? 28

LA-Vol-4

1. ಜಿಲ್ಲಾ ಪರಿಷತ್‌ನವರಿಂದ ನಡೆದಿರುವ ಅಭಿವೃದ್ಧಿ ಕೆಲಸಗಳಿಗೆ ಸರ್ಕಾರ ಬಿಡುಗಡೆ ಮಾಡಬೇಕಾದ ಹಣ, ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

2. ಹಾಗಿದ್ದಲ್ಲಿ ಬಿಡುಗಡೆ ಮಾಡದಿರಲು ಕಾರಣವೇನು ?

3. ಬಿಡುಗಡೆ ಮಾಡಬೇಕಾಗಿರುವ ಹಣವೆಷ್ಟು ? ಮತ್ತು ಅದನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

1. ಚಾಲ್ತಿ ಆರ್ಥಿಕ ವರ್ಷದಲ್ಲಿ ಜಿಲ್ಲಾ ಪರಿಷತ್‌ಗಳಿಗೆ ಹಣ ಬಿಡುಗಡೆಯ ಬಾಕಿ ಉಳಿದಿದೆ.

3. ಬಿಡುಗಡೆ ಮಾಡಬೇಕಿರುವ ಮೊತ್ತ ರೂ. 302.37 ಕೋಟಿಗಳು. ಈ ಮೊತ್ತವನ್ನು ಜಿಲ್ಲಾ ಪರಿಷತ್‌ಗಳ ಕಾರ್ಯ ಪ್ರಗತಿಯ ಪ್ರಕಾರ ಬಿಡುಗಡೆ ಮಾಡಲಾಗುವುದು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಶ್ರೀ ವೈ. ಕೆ. ರಾಮಯ್ಯನವರ ಪರವಾಗಿ):- ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಕೇಳಿದಂಥ ಪ್ರಶ್ನೆ ಬೇರೆ, ಬಂದಿರುವಂಥ ಉತ್ತರವೇ ಬೇರೆ. ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಲ್ಲಿ ಹೇಳಿದ್ದಾರೆ. ಏನೆಂದರೆ, ಚಾಲ್ತಿ ಆರ್ಥಿಕ ವರ್ಷದಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಹಣ ಬಿಡುಗಡೆಯ ಬಾಕಿ ಉಳಿದಿದೆ ಎಂದು ಹೇಳಿದ್ದಾರೆ. ಬಿಡುಗಡೆ ಮಾಡದೇ ಇರಲು ಕಾರಣ ಏನು ಕೇಳಿದ್ದಕ್ಕೆ, ಅವರು ಏನೂ ಕಾರಣವನ್ನು ಹೇಳಿಲ್ಲ. ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಕಾರಣವನ್ನು ನೀಡಬೇಕು. ಮೇಲಾಗಿ ಜಿಲ್ಲಾಪರಿಷತ್ತಿಗೆ ಹಣ ಬಿಡುಗಡೆ ಮಾಡದಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಕಾಮಗಾರಿಗಳು, ನೀರಾವರಿ ಯೋಜನೆಗಳು, ಹಾಗೂ ಕುಡಿಯುವ ನೀರಿನ ಸಮಸ್ಯೆಗಳಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಇದು ಪ್ರಗತಿಪರವಾದ ಕಾರ್ಯಕ್ರಮ. ಇದರಿಂದ ಎಲ್ಲಾ ಜಿಲ್ಲೆಗಳಿಗೂ ತೊಂದರೆಯಾಗುತ್ತಿದೆ. ಸರಿಯಾದ ಸಮಯಕ್ಕೆ ಈ ಜಿಲ್ಲಾ ಪರಿಷತ್ತುಗಳಿಗೆ ಹಣವನ್ನು ಏಕೆ ಬಿಡುಗಡೆ ಮಾಡುತ್ತಾ ಇಲ್ಲ, ಬಿಡುಗಡೆ ಮಾಡುವುದಕ್ಕೆ ತೊಂದರೆ ಏನು ಎನ್ನುವುದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ:- ಮಾನ್ಯ ಅಧ್ಯಕ್ಷರೆ, ಬಜೆಟ್‌ನಲ್ಲಿ ಎಷ್ಟು ಬಿಡುಗಡೆ ಮಾಡಬೇಕಾಗಿತ್ತು, ಅದರಲ್ಲಿ ಎಷ್ಟು ಷಾರ್ಟ್ ಫಾಲ್ ಇದೆ ಎಂಬುದನ್ನು ಉತ್ತರದಲ್ಲಿ ತಿಳಿಸಿದೆ. ಇನ್ನಷ್ಟು ವಿವರಗಳನ್ನು ಕೊಡಬೇಕಾದರೂ ಕೊಡುತ್ತೇನೆ. ಇದು 1,475 ಕೋಟಿ ಬಜೆಟ್ ಅಲೋಕೇಷನ್ ಇದೆ. ಇದರಲ್ಲಿ ರಿಲೀಸ್ ಆಗಿರವುದು 1,182 ಕೋಟಿ. ಅಂದರೆ ಇನ್ನೂ 293 ಕೋಟಿ ರಿಲೀಸ್ ಆಗಬೇಕಾಗಿದೆ. ಅಂದರೆ ಈ ಬಜೆಟ್ ಅಲೋಕೇಷನ್‌ನಲ್ಲಿ 80 ಪರ್ಸೆಂಟ್ ರಿಲೀಸ್ ಆಗಿದೆ; ಇನ್ನೂ 20 ಪರ್ಸೆಂಟ್ ರಿಲೀಸ್ ಆಗಬೇಕಾಗಿದೆ. ಇದರಲ್ಲಿ, ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ ಬಗ್ಗೆ ಕೂಡ ಕೇಂದ್ರ ಸರ್ಕಾರದಿಂದ ಸ್ವಲ್ಪ ಹಣ ಬರಬೇಕಾಗಿದೆ. ಈಗ 20 ಪರ್ಸೆಂಟ್ ಹಣ ಏನು ಬ್ಯಾಲೆನ್ಸ್ ಇದೆ, ಇದನ್ನು ರಿಲೀಸ್ ಮಾಡುತ್ತಾರೆ. ನಾನು ಮುಖ್ಯಮಂತ್ರಿಗಳಿಗೆ ನೇರವಾಗಿ ಬರೆದಿದ್ದೇನೆ ಹಾಗೂ ಹೇಳಿದ್ದೇನೆ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ರಿಲೀಸ್ ಆಗಬೇಕಾಗಿದೆ, ಅದರ ಪ್ರಕಾರ ರಿಲೀಸ್ ಮಾಡುವುದರಲ್ಲಿ ಏನೂ ತೊಂದರೆ ಇಲ್ಲ. ಈ ಅಂಕಿ ಅಂಶಗಳು ಏನಿವೆ, ಇದು ಫೆಬ್ರವರಿ ತಿಂಗಳು, ಇನ್ನೂ ಮಾರ್ಚ್ ತಿಂಗಳು ಇದೆ, ಈ ಹಣ ರಿಲೀಸ್ ಆಗುವುದಕ್ಕೆ ನಾವು ಸಾಮಾನ್ಯವಾಗಿ ಮ್ಯಾಥಮ್ಯಾಟಿಕಲ್ ಆಗಿ ನೋಡಿದರೆ, 75 ಪರ್ಸೆಂಟ್, ಮೂರು ಕ್ವಾರ್ಟರ್ಸ್‌ನಲ್ಲಿ ರಿಲೀಸ್ ಆಗಬೇಕು. ಇನ್ನುಳಿದ 25 ಪರ್ಸೆಂಟ್ 4ನೇ ಕ್ವಾರ್ಟರ್‌ನಲ್ಲಿ ರಿಲೀಸ್ ಆಗಬೇಕು. ಅದರಲ್ಲಿ ಸ್ವಲ್ಪ ತಡವಾಗಿದೆ ಎಂದು ತಿಳಿದುಕೊಂಡು, ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಬ್ಯಾಲೆನ್ಸ್ ಇನ್ನೂ ರಿಲೀಸ್ ಮಾಡಬೇಕಾಗಿದೆ ಎಂಬ ಬಗ್ಗೆ ಪಟ್ಟಿ ಮಾಡಿ ಕಳುಹಿಸಿದರೆ ರಿಲೀಸ್ ಮಾಡುತ್ತಾರೆ. ಆದ್ದರಿಂದ

ಕಾಮಗಾರಿಗಳಿಗೆ ಯಾವ ಧಕ್ಕೆ ಬರುವುದಿಲ್ಲ. ಹೊಸದಾಗಿ ಏನು ಬಜೆಟ್ ಇದೆ, ಆ ಹಣ ಕೂಡ ಆಯಾ ಜಿಲ್ಲೆಗಳಿಗೆ ಕಳುಹಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇದು ಸ್ವಲ್ಪ ತಡವಾದರೂ ಕೂಡ, ಇದರ ಬಗ್ಗೆ ಕಾಳಜಿ ಮಾಡಬೇಕಾದ್ದಿಲ್ಲ, ಬಜೆಟ್‌ನಲ್ಲಿರತಕ್ಕ ಹಣವನ್ನು ಸಂಪೂರ್ಣವಾಗಿ ನಾವು ಕಳುಹಿಸುತ್ತೇವೆ.

ಶ್ರೀ ಬಸವರಾಜಪಾಟೀಲ್ ಅಟ್ಟೂರು:– ಉದಾಹರಣೆಗೆ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಜಿಲ್ಲಾಪರಿಷತ್ತಿನಿಂದ ಸುಮಾರು 50–50 ಲಕ್ಷ ರೂಪಾಯಿಗಳಷ್ಟು ಕಂಟ್ರಾಕ್ಟ್‌ದಾರರ ಬಿಲ್ಸ್ ಪೆಂಡಿಂಗ್ ಇವೆ. ಆ ಜನರು ಗಲಾಟೆ ಮಾಡಿಕೊಂಡು ಅಧಿಕಾರಿಗಳನ್ನು ಹೊಡೆದು ದುಡ್ಡು ತೆಗೆದುಕೊಂಡು ಹೋಗಿರತಕ್ಕಂಥ ಪ್ರಸಂಗಗಳು ನಮ್ಮಲ್ಲಿ ನಡೆದಿವೆ. ನಮ್ಮ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ನಡೆದಿರತಕ್ಕಂಥ ಕಾಮಗಾರಿಗಳು ಸಂಪೂರ್ಣವಾಗಿ ನಿಂತುಹೋಗಿವೆ. ಈಗಾಗಲೆ ಆಗಿರತಕ್ಕಂಥ ಕೆಲಸಗಳ ಬಾಬ್ತು ಕಂಟ್ರಾಕ್ಟ್‌ದಾರರಿಗೆ ಕಳೆದ 4–5 ತಿಂಗಳಿಂದ ಹಣ ಪಾವತಿ ಆಗಿಲ್ಲ. ಅದು ನೀರಾವರಿ ಇರಬಹುದು, ರಸ್ತೆ ಕೆಲಸ ಇರಬಹುದು, ಯಾವುದೇ ಕೆಲಸ ಇರಬಹುದು, ಹಣ ಬಿಡುಗಡೆ ಮಾಡಿಲ್ಲ. ತಾವು ತಕ್ಷಣ ಹಣ ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು ಪೆಂಡಿಂಗ್ ಬಿಲ್ಸ್ ಪೇಮೆಂಟ್ ಮಾಡುವ ಸಲುವಾಗಿ ಹಣ ಜರೂರಾಗಿ ಬಿಡುಗಡೆ ಮಾಡುವ ವ್ಯವಸ್ಥೆ ಸರ್ಕಾರ ಮಾಡಬೇಕು.

ಶ್ರೀ ಎಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರ ಕೊಡುತ್ತಾ ಕೇಂದ್ರ ಪುರಸ್ಕೃತ ಯೋಜನೆಯ ಬಾಬ್ತು ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆ ಆಗಿಲ್ಲ ಎನ್ನುವ ಮಾತನ್ನು ಹೇಳಿದರು. ನಾನು ಮಾನ್ಯ ಮಂತ್ರಿಗಳಿಂದ ತಿಳಿಯಬಯಸುತ್ತೇನೆ. ಒಟ್ಟು ಎಷ್ಟು ಹಣ ಕೇಂದ್ರ ಪುರಸ್ಕೃತ ಯೋಜನೆಗಳ ಬಾಬ್ತು ಕೇಂದ್ರಸರ್ಕಾರ ಬಿಡುಗಡೆ ಮಾಡಿದೆ ? ಅದರಲ್ಲಿ ಎಷ್ಟು ಹಣ ಬಿಡುಗಡೆ ಮಾಡಬೇಕಾಗಿತ್ತು, ಬಿಡುಗಡೆ ಮಾಡಿದಂತಹ ಹಣದಲ್ಲಿ ನೀವು ಎಷ್ಟು ಹಣ ಜಿಲ್ಲಾ ಪರಿಷತ್ತುಗಳಿಗೆ ವರ್ಗಾವಣೆ ಮಾಡಿದ್ದೀರಿ ?

ಮಾನ್ಯ ಸ್ನೇಹಿತರು 2ನೇ ಪ್ರಶ್ನೆಯಲ್ಲಿ, ಹಾಗಿದ್ದಲ್ಲಿ ಹಣ ಬಿಡುಗಡೆ ಮಾಡದಿರಲು ಕಾರಣವೇನು ಎಂದು ಕೇಳಿದ್ದಾರೆ. ಅದಕ್ಕೆ ಉತ್ತರ ಹೇಳಲಿಲ್ಲ. ನಮ್ಮ ಸ್ನೇಹಿತರು ಸ್ಪೆಸಿಫಿಕ್ಕಾಗಿ ಕೇಳಿದ್ದಾರೆ. ಜಿಲ್ಲಾಪರಿಷತ್‌ನವರಿಂದ ನಡೆದಿರುವ ಅಭಿವೃದ್ಧಿ ಕೆಲಸಗಳಿಗೆ ಸರ್ಕಾರ ಬಿಡುಗಡೆ ಮಾಡಬೇಕಾದ ಹಣ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಬಿಡುಗಡೆ ಮಾಡದೆ ಇರಲು ಕಾರಣವೇನು ? ಎಂದು ಕೇಳಿದ್ದಾರೆ. ಅದಕ್ಕೆ ಉತ್ತರ ಇಲ್ಲ. ಯಾವುದು ಅವರಿಗೆ ಅನುಕೂಲವಾಗುತ್ತದೆಯೋ ಅದನ್ನು ಮಾತ್ರ ಹೇಳುತ್ತಾರೆ. ಯಾವುದು ಸರ್ಕಾರಕ್ಕೆ ಕಿರಿಕಿರಿ ಉಂಟಾಗುತ್ತದೆ ಅಂತಹ ಉತ್ತರ ಹೇಳಬಾರದು ಎಂದು ಏನಾದರೂ ನಿಯಮ ಇದೆಯೇ ?

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಅದಕ್ಕೆ ಪೂರಕವಾಗಿ ನೇರವಾಗಿ ನಾನು ತಮ್ಮನ್ನು ಒಂದು ಪ್ರಶ್ನೆ ಕೇಳುತ್ತೇನೆ. ತಮಗೆ ಗೊತ್ತಿರುವ ಹಾಗೆ, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳಲ್ಲಿ ಅಭಿವೃದ್ಧಿ ಕೆಲಸಗಳು ನಿಂತಿವೆ. ಡಿಸೆಂಬರ್ ತಿಂಗಳು ಆದಮೇಲೆ ಒಂದು ಪೈಸೆ ಕೂಡ ಬಿಡುಗಡೆ ಮಾಡಿಲ್ಲ. ಅದಕ್ಕೆ ನಾನು ನೇರವಾಗಿ ಕೇಳುತ್ತೇನೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳಿಗೆ ಕೇಂದ್ರ ಸರ್ಕಾರದ ಜವಾಹರ್‌ರೋಜ್‌ಗಾರ್ ಯೋಜನೆಯಡಿಯಲ್ಲಿ ಬಂದ 76 ಕೋಟಿ ರೂಪಾಯಿಗಳ ಹಣವನ್ನು ತಾವು ಬೇರೆ ಕಡೆ ಡೈವರ್ಟ್ ಮಾಡಿದ್ದೀರಿ. ಇದು ಹೌದೋ ಅಲ್ಲವೋ ಎನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಎಂ. ವೈ. ಘೋರ್ಪಡೆ:– ಇದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಇದರಲ್ಲಿ ಡೈವರ್ಟ್ ಮಾಡುವ ಪ್ರಶ್ನೆ ಬರುವುದಿಲ್ಲ. ನಾನು ಆಗಲೆ ಹೇಳಿದ ಹಾಗೆ ಒಟ್ಟು ಬಜೆಟ್

ಅಲೋಕೇಷನ್ 1485 ಕೋಟಿ ರೂಪಾಯಿಗಳು ಇದೆ. ಪ್ಲಾನ್‌ನಲ್ಲಿ 516 ಕೋಟಿ ರೂಪಾಯಿಗಳು, ನಾನ್ ಪ್ಲಾನ್‌ನಲ್ಲಿ 969 ಕೋಟಿ ರೂಪಾಯಿಗಳು. ಇವೆರಡೂ ಸೇರಿ 1485 ಕೋಟಿ ರೂಪಾಯಿಗಳು. ಇದರಲ್ಲಿ ಈಗಾಗಲೇ 1192 ಕೋಟಿ ರೂಪಾಯಿಗಳು ರಿಲೀಜ್ ಆಗಿದೆ. ರಿಲೀಜ್ ಆಗಬೇಕಾಗಿರುವುದು. 293 ಕೋಟಿ ರೂಪಾಯಿಗಳು ಮಾತ್ರ. ಈಗ 1485 ಕೋಟಿ ರೂಪಾಯಿಗಳು ಏನಿದೆ ಇದರಲ್ಲಿ ಕಾಲು ಭಾಗ ಅಂದರೆ 25 ಪರ್ಸೆಂಟ್ ಲಾಸ್ಟ್ ಕ್ವಾರ್ಟರ್‌ನಲ್ಲಿ ರಿಲೀಜ್ ಆಗಬೇಕು, ಆಗುತ್ತದೆ. ಲಾಸ್ಟ್ ಕ್ವಾರ್ಟರ್ ಇನ್ನೂ ಮುಗಿದಿಲ್ಲ. ಕಾಮಗಾರಿಗಳನ್ನು ನಾವು ತೆಗೆದುಕೊಂಡಿದ್ದೇವೆ. ಜಿಲ್ಲಾ ಪರಿಷತ್ತುಗಳ ಮೂಲಕ ಈ ಹಣ ಬಿಡುಗಡೆ ಮಾಡುತ್ತೇವೆ. ಬಿಡುಗಡೆ ಮಾಡುವುದರಲ್ಲಿ ಸ್ವಲ್ಪ ತಡ ಆಗಿದೆ. ಇಷ್ಟಾದರೂ ಕೂಡ ಹಣಕಾಸಿನ ಮಂತ್ರಿಗಳು ಮುಖ್ಯಮಂತ್ರಿಗಳೇ ಇದ್ದಾರೆ. ಈ ಬಗ್ಗೆ ಒಂದು ಪಟ್ಟಿ ಮಾಡಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಕಳುಹಿಸಬೇಕೆಂದುಕೊಟ್ಟಿದ್ದೇವೆ, ಏನೂ ತೊಂದರೆ ಇಲ್ಲ. ರಿಲೀಜ್ ಮಾಡಲು ಜಿಲ್ಲಾ ಪರಿಷತ್ತಿನ ವತಿಯಿಂದ ಏನು ಮಾಹಿತಿ ಕೊಡಬೇಕಾಗಿತ್ತು ಅದನ್ನು ಕೊಟ್ಟಿದ್ದೇವೆ. ಹಣ ರಿಲೀಜ್ ಮಾಡುತ್ತೇವೆ.

ಶ್ರೀ ಎಚ್. ಏಕಾಂತಯ್ಯ:– ಕೇಂದ್ರ ಸರ್ಕಾರದಿಂದ ಈ ಯೋಜನೆಗಳಿಗೆ ಸಂಬಂಧಿಸಿದಂತೆ ಏನು ಹಣ ಬಿಡುಗಡೆ ಆಗಿದೆ ಆ ರೀತಿ ಬಿಡುಗಡೆ ಆದಂತಹ ಹಣವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿಲ್ಲ. ಅದನ್ನು ಮುಚ್ಚಿಟ್ಟುಕೊಳ್ಳುವುದಕ್ಕೋಸ್ಕರ, ನಾನು ಕೇಳಿದ ಉಪಪ್ರಶ್ನೆಗೆ ಅವರು ಉತ್ತರ ಹೇಳುತ್ತಾ ಇಲ್ಲ ಎಂದು ಭಾವಿಸೋಣವೇ ?

ಶ್ರೀ ಎಂ. ವೈ. ಘೋರ್ಪಡೆ:– ಅದು ಸರಿಯಿಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಎಷ್ಟು ಹಣ ಬರಬೇಕಾಗಿತ್ತು ಅಷ್ಟು ಹಣ ಸಂಪೂರ್ಣವಾಗಿ ಬಂದಿಲ್ಲ. ಅದೂ ಒಂದು ಕಾರಣ ಎಂದು ನಾನು ಹೇಳಿದೆ ಅಷ್ಟೆ. ಅವರು ಕೊಟ್ಟಿರತಕ್ಕಂಥ ಹಣವನ್ನು ನಾವು ಡೈವರ್ಟ್ ಮಾಡುವಂತಹ ಪ್ರಶ್ನೆ ಬರುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ:– ಇದು ಬಹಳ ಮುಖ್ಯವಾದ ಪ್ರಶ್ನೆ. ಮೊನ್ನೆ ಇಲಾಖೆಯ ಕಾರ್ಯದರ್ಶಿಗಳು ಶಿವಮೊಗ್ಗಕ್ಕೆ ಬಂದಿದ್ದರು. ಅವರ ಜೊತೆಗೆ ನಾನು ಚರ್ಚೆ ಮಾಡಿದೆ. ಶಿವಮೊಗ್ಗ ಜಿಲ್ಲೆ ಒಂದರಲ್ಲಿ 1 ಕೋಟಿ 54 ಲಕ್ಷ ರೂಪಾಯಿಗಳು ಕಂಟ್ರಾಕ್ಟ್‌ದಾರರಿಗೆ, ಕೆಲಸ ಮಾಡಿದವರಿಗೆ ಹಣ ಒದಗಿಸಿಲ್ಲ. ಅವರು ಅರ್ಜಿ ಕೂಡ ಕೊಟ್ಟಿದ್ದಾರೆ. ಈಗ ನಾವು ವರ್ಕ್ ಇವ್ಯಾಲುಯೇಷನ್ ಮಾಡುವಾಗ ಲಾಸ್ಟ್ ಕ್ವಾರ್ಟರ್‌ನಲ್ಲಿ ಬಿಡುಗಡೆಯಾದ ಹಣ ಖರ್ಚಾಗಿದೆಯೇ ಇಲ್ಲವೇ ಎಂದು ಮಾಡುವುದಿಲ್ಲ. ಇನ್ನೂ ಹಣ ಬಿಡುಗಡೆಯೇ ಆಗಿಲ್ಲವೆಂದರೆ, ಈಗ ಫಬ್ರವರಿ. ಮಾರ್ಚಿ ತಿಂಗಳಲ್ಲಿ ಅಂದರೆ ಇನ್ನು ಒಂದು ತಿಂಗಳಲ್ಲಿ ಈ ಹಣ ಖರ್ಚಾಗುವ ರೀತಿ ಹೇಗೆ ?

ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಏನು ಹೇಳುತ್ತೇನೆಂದರೆ, ಈಗ ಮತ್ತೊಂದು ದ್ವಂದ್ವವಾಗಿದೆ. ಜಿಲ್ಲಾಪರಿಷತ್‌ನಿಂದ ಕೆಲವು ರಸ್ತೆಗಳನ್ನು ಪಿಡಬ್ಲ್ಯೂಡಿ ಇಲಾಖೆಗೆ ವರ್ಗ ಮಾಡಿದ್ದಾರೆ. ನೀವು ರಸ್ತೆ ವರ್ಗ ಮಾಡಿದ್ದೀರಿ, ಆದರೆ ದಾಮೂಷ ಅದರ ಹಣ ವರ್ಗ ಮಾಡಿಲ್ಲ. ಆದ್ದರಿಂದ ಅಲ್ಲಿ ಏನಾಗುತ್ತಿದೆ ಎಂದರೆ ಕೆಳಗಡೆ ಕೆಲಸ ಮಾಡತಕ್ಕವರು ಇದು ನಮ್ಮದಲ್ಲ ರಸ್ತೆ ಪಿಡಬ್ಲ್ಯೂಡಿಗೆ ವರ್ಗ ಮಾಡಿದ್ದಾರೆಂದು ಹೇಳುತ್ತಾರೆ. ಪಿಡಬ್ಲ್ಯೂಡಿಯವರಿಗೆ ಕೇಳಿದರೆ ವರ್ಗ ಮಾಡಿದ್ದಾರೆ, ನಮಗೆ ದುಡ್ಡು ಕೊಟ್ಟಿಲ್ಲವೆಂದು ಹೇಳುತ್ತಾರೆ. ಈ ದ್ವಂದ್ವಗಳ ಮಧ್ಯೆ ಕಂಟ್ರಾಕ್ಟರುಗಳಿಗೆ ಹಣ ಪಾವತಿಯಾಗುತ್ತಿಲ್ಲ. ಮತ್ತು ಉಳಿದಿರತಕ್ಕಂಥ 93 ಕೋಟಿ ರೂಪಾಯಿ ಬಾಕಿ ಏನಿದೆ ಇದನ್ನು ಈ ಒಂದು ತಿಂಗಳಲ್ಲಿ ಖರ್ಚು ಮಾಡುವುದಕ್ಕೆ ಯಾವ ರೀತಿ ವ್ಯವಸ್ಥೆಯಾಗುತ್ತದೆ ?

ಶ್ರೀ ಬಿ. ಎಸ್. ಯಡಿಯೂರಪ್ಪ:– 302 ಕೋಟಿ ತಾವು ಬಿಡುಗಡೆ ಮಾಡಬೇಕು. ಅದರಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿಯೂ ಕಳುಹಿಸದೇ ಇರುವ ಹಣ ಎಷ್ಟು ? ದಯಮಾಡಿ ಸ್ಪಷ್ಟವಾಗಿ

ಹೇಳಿ. ಈ ರೀತಿ ಅಭಿವೃದ್ಧಿ ಕಾರ್ಯಗಳು ಸ್ಥಗಿತವಾಗಬೇಕಾದರೆ ಕೇಂದ್ರ ಸರ್ಕಾರ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಬಿಡುಗಡೆ ಮಾಡಿರುವ ಹಣ ಫೆಬ್ರವರಿ 26 ರಂದು ಬಂದಿಲ್ಲವೇ ಸ್ವಾಮಿ ? ದಯಮಾಡಿ ಈ ಸಭೆಗೆ ಸತ್ಯ ಹೇಳಿ. ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಹಣವನ್ನು ನೀವು ನಿಮ್ಮ ಜಿಲ್ಲಾಪರಿಷತ್ತುಗಳಿಗೆ ಬಿಡುಗಡೆ ಮಾಡಿದ್ದೀರೋ ಇಲ್ಲವೊ ?

ಶ್ರೀ ಎಂ. ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೆ, ನಾನು ಹೇಳಿದೆ, ಟೋಟಲ್ ಔಟ್‌ಲೇನಲ್ಲಿ ಒಂದು ಕಾಲು ಭಾಗ ಲಾಸ್ಟ್ ಕ್ವಾರ್ಟರ್‌ನಲ್ಲಿ ಬಿಡುಗಡೆಯಾಗಿದೆ. ಅದು ಎಷ್ಟು ಇದೆ ಎಂದು ಹೇಳಿದೆ. ಬಿಡುಗಡೆ ಆಗುವುದಿಲ್ಲವೆಂದು ಹೇಳಿಲ್ಲ. ಬಿಡುಗಡೆ ಮಾಡುತ್ತೇವೆ. ಮತ್ತೆ ಡೈವರ್‌ಷನ್ ಪ್ರಶ್ನೆ ಇಲ್ಲ. ಉದಾಹರಣೆಗೆ ಜವಾಹರ್ ರೋಜ್ಗಾರ್ ಪ್ರಶ್ನೆ ನೀವು ಹೇಳಿದಿರಿ, ಎಷ್ಟು ಔಟ್‌ಲೇ ಇದೆ ಅಷ್ಟನ್ನು ಈಗಾಗಲೇ ರಿಲೀಸ್ ಮಾಡಿದ್ದೇವೆ.

SRI BASAVARAJ RAYAREDDY:– It is not a question of Jawahar Rojgar Yojana.

ಶ್ರೀ ಎಂ. ವೈ. ಘೋರ್ಪಡೆ:– ಒಟ್ಟು ಫಿಗರ್ಸ್ ನಾನು ಏನು ಹೇಳಿದೆ. ಅದರಲ್ಲಿ 3 ಅಂಶ ಸೇರಿದೆ. ಒಂದು, ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಹೋಗುವಂಥ ಹಣ, ಇನ್ನೊಂದು ಆರ್‌ಡಿಪಿಆರ್ ಮುಖಾಂತರ ಖರ್ಚಾಗುವಂಥ ಹಣ ಬೇರೆ ಡಿಪಾರ್ಟ್‌ಮೆಂಟಿನಿಂದ ಖರ್ಚಾಗುವಂಥ ಹಣ ಮೂರನೆಯದು. ಈ 3 ಅಂಶ ಸೇರಿಸಿ ಒಟ್ಟಿಗೆ ಇಷ್ಟು ಔಟ್‌ಲೇ ಇದೆ. ಅದರಲ್ಲಿ ಇಷ್ಟು ರಿಲೀಸ್ ಆಗಿದೆ, ಇಷ್ಟು ರಿಲೀಸ್ ಆಗಬೇಕಾಗಿದೆ ಎಂಬ ಮಾತನ್ನು ಹೇಳಿದೆ. ಇದರಲ್ಲ ನಾವು ಗಾಬರಿಯಾಗಬೇಕಾದುದೇನೂ ಇಲ್ಲ. ಇದು ರಿಲೀಸ್ ಆಗುತ್ತದೆ. ಅಷ್ಟೇ ಅಲ್ಲ, ಚೀಫ್ ಮಿನಿಸ್ಟರ್‌ಗೆ ಮೊನ್ನೆ ಹೇಳಿದೆ. ಇಷ್ಟಿಷ್ಟು ಇದೆ, ನಾವು ಜಿಲ್ಲಾವಾರು ಮಾಹಿತಿ ಕಳುಹಿಸಿದ್ದೇವೆ. ತೊಂದರೆ ಇದೆಯೆಂದು ಹೇಳಿದೆ. ಅದಕ್ಕೆ ಅವರು ಏನೂ ತೊಂದರೆ ಇಲ್ಲ ನಾವು ಅದರ ಪ್ರಕಾರ ರಿಲೀಸ್ ಮಾಡುತ್ತೇವೆ ಎಂಬ ಮಾತನ್ನು ಕೂಡಾ ಹೇಳಿದರು. ಹಾಗೂ ಅಸೆಂಬ್ಲಿಯಲ್ಲಿ ನನ್ನ ಪರವಾಗಿ ಈ ಪ್ರಶ್ನೆ ಬಂದಾಗ ನೀವು ಹೇಳಬಹುದೆಂಬ ಮಾತನ್ನು ಚೀಫ್ ಮಿನಿಸ್ಟರ್ ಹೇಳಿದರು.

ಶ್ರೀ ಬಿ. ಎಸ್. ಯಡಿಯೂರಪ್ಪ:– ತುಟಿಗೆ ತುಪ್ಪ ಹಚ್ಚುವ ಕೆಲಸ ಮಾಡಬೇಡಿ. ಆ ಹಣ ಯಾವಾಗ ಬಿಡುಗಡೆ ಆಗುವುದು, ಅಷ್ಟು ಹೇಳಿ.

(ಗೊಂದಲ)

MR. SPEAKER:– I have called the next question. Nothing will go on record.

ತಾವು ಮಾತನಾಡುವುದು ಯಾವುದೂ ಟಿಪ್ಪಣಿಯಲ್ಲಿ ಹೋಗುವುದಿಲ್ಲ. ಮುಂದಿನ ಪ್ರಶ್ನೆ ಶಿವಾನಂದ ಕೌಜಲಗಿಯವರು ಕೇಳಬೇಕು.

(ಗೊಂದಲ)

MR. SPEAKER:– It will not go on record.

ಶ್ರೀ ಬಸವರಾಜ ರಾಯರೆಡ್ಡಿ:– ಜಿಲ್ಲಾ ಪರಿಷತ್ತುಗಳಿಗೆ ಹಣ ಕೊಟ್ಟಿಲ್ಲ ಎಷ್ಟು ತೊಂದರೆಯಾಗಿದೆ.

MR. SPEAKER:– Leader of the opposition, kindly control hon. members.

SRI. BASAVARAJA RAYAREDDY:– I will walk out.

SRI R.V. DESHPANDE:– Sorry Sir, I will advise him.

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಬಸವರಾಜ ರಾಯರೆಡ್ಡಿಯವರು ಸಭಾ ತ್ಯಾಗ ಮಾಡಿದರು.)

ಬೈಲಹೊಂಗಲ ತಾಲ್ಲೂಕಿನ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆಗಳು

137 (980): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಣ್ಣೂರು, ತುರುಕರ ಶೀಗಿಹಳ್ಳಿ ಮತ್ತು ಮುರ್ಕಿಬಾವಿ ಗ್ರಾಮಗಳು ಹಾಗೂ ಸವದತ್ತಿ ತಾಲ್ಲೂಕು ಸುತ್ತಗಟ್ಟಿ, ಇಂಗಳಗಿ ಹಾಗೂ ಏಣಗಿ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಗಳಿಗೆ ಸರ್ಕಾರದವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಎಂದು ಕೊಡಲಾಯಿತು ?

ಆ) ಈ ಕೆಲಸಗಳಿಗೆ ಎಷ್ಟು ಹಣಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ ? ಹಾಗೂ ಇಲ್ಲಿಯವರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಇ) ಈ ಕೆಲಸಗಳು ಆರ್ಥಿಕ ಮುಗ್ಗಟ್ಟಿನಿಂದ ಸ್ಥಗಿತಗೊಂಡ ಸಂಗತಿ ಸರಕಾರದವರ ಗಮನಕ್ಕೆ ಬಂದಿದೆಯೇ ?

ಈ) ನಿರ್ದಿಷ್ಟವಾದ ಅವಧಿಯೊಳಗಾಗಿ ಈ ಯೋಜನೆಗಳು ಮುಗಿಯದೇ ಇದ್ದಲ್ಲಿ ಈ ಯೋಜನೆಗಳನ್ನು ಆದ್ಯತೆಯ ಮೇಲೆ ಬೇಗನೆ ಮುಗಿಸಲು ಸರಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್):

ಆಡಳಿತಾತ್ಮಕ ಮಂಜೂರಾತಿ ಹಾಗೂ ತಾಂತ್ರಿಕ ಮಂಜೂರಾತಿಯನ್ನು ಈ ಕೆಳಕಂಡಂತೆ ಕೊಟ್ಟಿರುತ್ತಾರೆ.

	ಗ್ರಾಮದ ಹೆಸರು	ಆಡಳಿತಾತ್ಮಕ ಮಂಜೂರಾತಿ	ತಾಂತ್ರಿಕ ಮಂಜೂರಾತಿ
	ಬೈಲಹೊಂಗಲ ತಾಲ್ಲೂಕು		
1.	ವಣ್ಣೂರು	ಮಾರ್ಚಿ 87	ಮಾರ್ಚಿ 87
2.	ತುರುಕರ ಶೀಗಿಹಳ್ಳಿ	ಮಾರ್ಚಿ 89	ಮಾರ್ಚಿ 89
3.	ಮುರ್ಕಿಬಾವಿ	ಮಾರ್ಚಿ 87	ಮಾರ್ಚಿ 87
	ಸವದತ್ತಿ ಗ್ರಾಮ		
1.	ಸುತ್ತಗಟ್ಟಿ	ಫೆಬ್ರವರಿ 87	ಫೆಬ್ರವರಿ 87
2.	ಇಂಗಳಗಿ	ಮಾರ್ಚಿ 92	ಮಾರ್ಚಿ 92
3.	ಏಣಗಿ	ಇನ್ನೂ ನೀಡಿಲ್ಲ	ಇನ್ನೂ ನೀಡಿಲ್ಲ

ಆ)	ಬೈಲಹೊಂಗಲ ತಾಲ್ಲೂಕು	ಮೂಲ ಅಂದಾಜು (ರೂ. ಲಕ್ಷಗಳಲ್ಲಿ)	ಇಲ್ಲಿಯವರೆಗೆ ಖರ್ಚಾದ ಮೊಬಲಗು
	ವಣ್ಣೂರು ಗ್ರಾಮ	4.94	7.41
	ತುರುಕರ ಶೀಗಿಹಳ್ಳಿ	2.78	3.40
	ಮುರ್ಕಿಭಾವಿ	3.645	4.28
ಸೌದತ್ತಿ ತಾಲ್ಲೂಕು			
	ಸುತ್ತಗಟ್ಟಿ	8.793	12.88
	ಇಂಗಳಗಿ	3.40	3.12
	ಏಣಗಿ	ಪ್ರಸಕ್ತ ಸಾಲಿನಲ್ಲಿ ಅಪೆಂಡಿಕ್ಸ್ 'ಇ' ನಲ್ಲಿ ಸೇರಿದ್ದು ಅದಕ್ಕೆ ಇನ್ನೂ ಆಡಳಿತಾತ್ಮಕ ಒಪ್ಪಿಗೆ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಬೇಕಾಗಿದೆ.	

ಇ) ಆರ್ಥಿಕ ಮುಗ್ಗಟ್ಟಿನಿಂದ ಈ ಕೆಲಸಗಳು ಸ್ಥಗಿತಗೊಂಡಿರುವುದಿಲ್ಲ.

ಈ) ಹೌದು

ಶ್ರೀ ಎಸ್. ಹೆಚ್. ಕೌಜಲಗಿ:– ಸನ್ಮಾನ್ಯ ಅಧ್ಯಕ್ಷರೆ, ಈ ಕುಡಿಯುವ ನೀರಿನ ಯೋಜನೆಗಳಿಗೆ 5 ವರ್ಷದಿಂದ ಆಡಳಿತಾತ್ಮಕ ಅವಧಿಯೊಳಗೆ ಮಂಜೂರ ಕೊಟ್ಟರೂ ಸಹಿತಾ ಇವತ್ತಿನವರೆಗೂ ಅವು ಮುಗಿದಿಲ್ಲ. ಇವು ನಿರ್ದಿಷ್ಟ ಅವಧಿಯೊಳಗೆ ಮುಗಿಯದೇ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿದೆ. ಇದರಿಂದ ಕಂಟ್ರಾಕ್ಟ್ ಕ್ಲೋಸ್ ಮಾಡಿ ಡಿಪಾರ್ಟ್‌ಮೆಂಟಿನವರೇ ತೆಗೆದುಕೊಂಡು ಮಾಡಿಸುವುದು ಒಳ್ಳೆಯದು. ಏಕೆಂದರೆ, ಏನು ಆಡಳಿತಾತ್ಮಕ ಮಂಜೂರು ಕೊಟ್ಟಿರುತ್ತಾರೋ ಅದಕ್ಕಿಂತಲೂ ಹೆಚ್ಚಿನ ಹಣ ಖರ್ಚಾಗಲಿಕ್ಕೆ ಹತ್ತಿದೆ. ಮತ್ತು ನಿರ್ದಿಷ್ಟ ಅವಧಿಯೊಳಗಾಗಿ ಆ ಕೆಲಸವನ್ನು ಮುಗಿಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುತ್ತಾರೆ ?

ಮೂರನೆಯದಾಗಿ, ತಾವು ಇಂಗಳಗಿ ವಿಚಾರದಲ್ಲಿ 1992ರಲ್ಲಿ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿರುವುದಾಗಿ ತಿಳಿಸಿದ್ದೀರಿ. ಆ ಉತ್ತರ ಸರಿಯಲ್ಲ, 1979ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದಾರೆ. 1992ರಲ್ಲಿ ಅದಕ್ಕೆ ರಿವೈಸ್ಡ್ ಎಸ್ಟಿಮೇಟನ್ನು ಕೊಟ್ಟಿದ್ದಾರೆ. ಆದ್ದರಿಂದ ಅದನ್ನು ಸರಿಯಾಗಿ ಹೇಳಬೇಕು.

ಶ್ರೀ ಎಂ. ವೈ. ಘೋರ್ಪಡೆ:– ಮಾನ್ಯ ಅಧ್ಯಕ್ಷರೇ, ನಮಗೆ ಎಷ್ಟು ಸಾಧ್ಯವೋ ಅಷ್ಟು ವಿವರಗಳನ್ನು ಸ್ಕೀಮ್‌ವೈಸ್ ಕೊಟ್ಟಿದ್ದೇವೆ. ಇದು ಸ್ಯಾಂಕ್ಷನ್ ಯಾವಾಗ ಆಯಿತು, ಸಾಂಕ್ಷನ್ ಆದಾಗ ಎಸ್ಟಿಮೇಟ್ ಎಷ್ಟು ಇತ್ತು ? ಇವೊತ್ತು ರಿವೈಸ್ಡ್ ಎಸ್ಟಿಮೇಟ್‌ನಲ್ಲಿ ಎಷ್ಟು ಇದೆ ? ಅದನ್ನೆಲ್ಲಾ ಕೊಟ್ಟಿದ್ದೇನೆ. ಇದನ್ನು ಪೂರ್ತಿ ಮಾಡುವುದರಲ್ಲಿ ಯಾವುದೇ ತೊಂದರೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಈ ಸ್ಕೀಮ್ಸ್ ಬಗ್ಗೆ ಮಾನ್ಯ ಸದಸ್ಯರಿಗೆ ಇನ್ನೂ ವೇಗವಾಗಿ ಮಾಡಲು ಸಾಧ್ಯವಿದೆ ಎಂದು ಏನಾದರೂ ಅನಿಸಿದರೆ, ದಯವಿಟ್ಟು ಹೇಳಿದರೆ ನಾನು ಚೀಫ್ ಎಂಜಿನೀಯರ್‌ರವರನ್ನು ಕರೆಯಿಸಿ ಅವರೊಂದಿಗೆ ಚರ್ಚಿಸುತ್ತೇನೆ. ಇಲ್ಲಿ ಹಣದ ಅಭಾವ ಇಲ್ಲ. ಇದನ್ನು ಇನ್ನೂ ವೇಗವಾಗಿ ಪೂರೈಸಲಿಕ್ಕೆ ಸಾಧ್ಯ ಎಂದು ಹೇಳುವುದಾದರೆ ನಾನು ಚೀಫ್ ಇಂಜಿನಿಯರನ್ನು ಕರೆಸಿ ಚರ್ಚಿಸಿ ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೇ, ಒಂದು ಟೆಂಡರನ್ನು ಕೊಟ್ಟ ಮೇಲೆ ಒಂದು ವರ್ಷದೊಳಗೆ ಸದರಿ ಕೆಲಸವನ್ನು ಮಾಡಿ ಮುಗಿಸಬೇಕೆಂದು ಇರುತ್ತದೆ. 1987ರಲ್ಲಿ ಮಂಜೂರಾದ ಕೆಲಸಗಳು 1993ರಲ್ಲಿಯೂ ಮುಗಿಯುವುದಿಲ್ಲ ಅಂದರೆ ಅಂಥ ಅಧಿಕಾರಿಗಳ ಮೇಲೆ ನೀವು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ಇವರುಗಳು ಏನು ಮಾಡುತ್ತಾರೆ ಅಂದರೆ ಇವೊತ್ತು ಸಾಮಗ್ರಿಗಳಿಗೆ ಖರ್ಚು ಹಾಕುತ್ತಾರೆ, ಆದರೆ ಅಮೌಂಟ್‌ನ್ನು ರಿಲೀಸ್ ಮಾಡುವುದಿಲ್ಲ.

SRI M. Y. GHORPADE:– I am prepared to sit with hon'ble member to find out the causes for delay and who is responsible for it and how to expedite the matter.

ಇಲ್ಲಿ ನಮಗೆ ಉತ್ತರ ಕೊಡಲು ಎಷ್ಟು ಸಮಯ ಇದೆ ಎಂಬುದನ್ನು ನೋಡಿಕೊಂಡು ಅದನ್ನು ಉಪಯೋಗಿಸಿಕೊಂಡು ನಾವು ಉತ್ತರವನ್ನು ಕೊಡುತ್ತೇವೆ. ಇದರ ಬಗ್ಗೆ ಇಲ್ಲಿ ಇನ್ನಷ್ಟು ವಿವರಗಳು, ಇತಿಹಾಸವನ್ನು ತಿಳಿದುಕೊಳ್ಳಬೇಕಾದರೆ ನಾವು ಇಲ್ಲಿ ಸಾಕಷ್ಟು ವೇಳೆಯನ್ನು ಕಳೆಯಬೇಕಾಗುತ್ತದೆ. ಅದನ್ನು ನಾನು ನಿಮ್ಮೊಂದಿಗೆ ಕುಳಿತು ಚರ್ಚೆ ಮಾಡಲು ತಯಾರಾಗಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಅಲ್ಲಿ ಕೆಲಸ ಆಗುತ್ತಾ ಇಲ್ಲ, ಅದನ್ನು ಮಾಡಿಸಿ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:– ಬಸವರಾಜ ರಾಯರೆಡ್ಡಿಯವರೆ ತಮ್ಮ ಪ್ರಶ್ನೆಗೆ?ಗೆ ಮಾನ್ಯ ಸಚಿವರು ಸಮಯವನ್ನು ಕೇಳಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೇ, ನನ್ನ ಎಲ್ಲಾ ಪ್ರಶ್ನೆಗಳಿಗೂ ಸಮಯ ಕೇಳುತ್ತಾ ಇದ್ದಾರೆ. ಇದು ನನ್ನ ನಾಲ್ಕನೇ ಪ್ರಶ್ನೆ. ಒಂದಕ್ಕೂ ಉತ್ತರ ಬಂದಿಲ್ಲ. ಎಲ್ಲದಕ್ಕೂ ಸಮಯವನ್ನು ಕೇಳುತ್ತಾ ಇದ್ದಾರೆ. ಅದಕ್ಕೆ ಉತ್ತರಿಸಲು ಕಷ್ಟವೇನೂ ಇಲ್ಲ ಉದ್ದೇಶಪೂರ್ವಕವಾಗಿ ಕೊಡುತ್ತಾ ಇಲ್ಲ. ಉತ್ತರವನ್ನು ಕೊಡದೆ ಜಾರಿಕೊಂಡು ಹೋಗುತ್ತಾ ಇದ್ದಾರೆ. ಇದನ್ನು ನೋಡಿದರೆ ಇದು ಬಹಳ ಅಸಮರ್ಪಕವಾದಂಥ ಸರಕಾರ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು:– ಚು.ಗು.ಪ್ರ: 139ಕ್ಕೆ ಮಂತ್ರಿಗಳು ಬಂದಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡುತ್ತೇನೆ.

ರಾಜ್ಯದಲ್ಲಿ ಭೂಸ್ವಾಧೀನ ಪ್ರಕರಣಗಳಲ್ಲಿ ರೈತರಿಗೆ ಕೊಡುವ ಪರಿಹಾರದ ವಿಳಂಬ.

140 (940): ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ)

ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಭೂಮಿಯನ್ನು ಕಳೆದುಕೊಂಡ ರೈತರಿಗೆ ಪರಿಹಾರ ಕೊಡುವಲ್ಲಿ ವಿಳಂಬವಾಗುತ್ತಿರುವುರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ವಿಳಂಬ ತಡೆಗಟ್ಟಲು ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು ? (ವಿವರ ನೀಡುವುದು)

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಮಂತ್ರಿಗಳು):

ಅ) ಹೌದು

ಆ) ಸರ್ಕಾರ ಈ ಕೆಳಕಂಡಂತೆ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದೆ.

1) ಸರ್ಕಾರಿ ಇಲಾಖೆಗಳ, ಸಂಸ್ಥೆಗಳ ಪರವಾಗಿ ಜಮೀನು ಭೂಸ್ವಾಧೀನ ಮಾಡಿಕೊಳ್ಳುವಾಗ ಸಾಕಷ್ಟು ಹಣವನ್ನು ಆಯವ್ಯಯದಲ್ಲಿ ಒದಗಿಸಲಾಗುತ್ತಿದೆ.

2) ಸರ್ಕಾರೇತರ ಸಂಸ್ಥೆಗಳ ಪರವಾಗಿ ಭೂಸ್ವಾಧೀನ ಮಾಡಿಕೊಳ್ಳುವ ಸಂದರ್ಭಗಳಲ್ಲಿ 4 (1) ಅಧಿಸೂಚನೆಯನ್ನು ಹೊರಡಿಸುವುದಕ್ಕಿಂತ ಮುಂಚೆ ಶೇ. 25ರಷ್ಟು ಠೇವಣಿ ಹಣವನ್ನು ಹಾಗೂ ಕಲಂ 6 (1) ರ ಅಧಿಸೂಚನೆಯನ್ನು ಹೊರಡಿಸುವುದಕ್ಕಿಂತ ಮುಂಚೆ ಶೇ. 75ರಷ್ಟು ಠೇವಣಿ ಹಣವನ್ನು ಪಡೆಯಲಾಗುತ್ತಿದೆ.

3) ವಿಳಂಬ ಮಾಡದೆ ಪರಿಹಾರ ಹಣವನ್ನು ವಿಳಂಬ ಮಾಡದೆ ಪಾವತಿ ಮಾಡಬೇಕೆಂದು ದಿ: 3–9–92ರಂದು ನಡೆದ ಸಭೆಯಲ್ಲಿ ಎಲ್ಲಾ ಭೂಸ್ವಾಧೀನಾಧಿಕಾರಿಗಳಿಗೆ ಕಟ್ಟುನಿಟ್ಟಾದ ಸೂಚನೆಗಳನ್ನು ನೀಡಲಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಂಥ ಉತ್ತರದಲ್ಲಿ ನಾನೊಂದು ಉಪಪ್ರಶ್ನೆಯನ್ನು ಕೇಳುತ್ತೇನೆ. ರಾಜ್ಯದಲ್ಲಿ ಪೂರ್ಣ ಪರಿಹಾರ ಕೊಡದೇ ಬಾಕಿ ಇರುವ ಭೂಮಿ ಎಷ್ಟು ? ಭಾಗಶಃ ಕೊಡತಕ್ಕಂಥ ಹಣ ಎಷ್ಟು ? ಎಷ್ಟು ಹಣ ಬಾಕಿ ಇದೆ ? ಈ ವರ್ಷ ಈ ಹಣವನ್ನು ಕೊಡುತ್ತೀರಾ ? ಎರಡನೆಯದಾಗಿ, ವಿಶೇಷತಃ ಇರಿಗೇಷನ್ ವಿಚಾರದಲ್ಲಿ, ಚಾನಲ್‌ಗೋಸ್ಕರ ಇತ್ಯಾದಿಯಾಗಿ ಏನು ಅಕ್ವಾಯರ್ ಮಾಡಿದ್ದಾರೆ, ಅವರಿಗೆ ಹಣ ಸಂದಾಯ ಮಾಡದೇ ಇರುವುದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ತಮ್ಮ ಕಾಲದಲ್ಲಾದರೂ ಇದನ್ನು ಒಂದೆರಡು ವರ್ಷಗಳಲ್ಲಿ ಬಗೆಹರಿಸುತ್ತೇವೆ ಎಂದು ಹೇಳಿ ನಿಗದಿ ಮಾಡಲು ಸಾಧ್ಯವಿದೆಯೇ ? ಹಿಂದೆ ಜನತಾ ಮನೆಗಳಿಗೆ ಎಂದು ಜಾಗವನ್ನು ತೆಗೆದುಕೊಳ್ಳುತ್ತಾ ಇದ್ದರು. ಈ ಆಶ್ರಯ ಸ್ಕೀಮ್ ಬಂದ ಮೇಲೆ, ಏನೋ ಒಂದು ನೆಗೋಶಿಯೇಟೆಡ್ ಸೆಟ್ಲಮೆಂಟ್ ಆಗುತ್ತಾ ಇದೆ. ಇರಿಗೇಷನ್ ಪ್ರಾಜೆಕ್ಟ್‌ಗೋಸ್ಕರ ಕೆಲವರು ಒಂದು, ಅರ್ಧ ಎಕರೆ ಜಮೀನು ಏನು ಕೊಟ್ಟಿದ್ದಾರೆ, ಅವರಿಗೆ ನೀವು ಹಣ ಕೊಡಲು ವಿಳಂಬ ಮಾಡಬಾರದು. ಅದರಿಂದ ಮನಿ ವ್ಯಾಲ್ಯೂ ಕೂಡ ಕಡಿಮೆಯಾಗುತ್ತವೆ. ಆ ಜನರು ಕಷ್ಟದಲ್ಲಿದ್ದಾರೆ.

12.10 ಪಿ.ಎಂ.

ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಪ್ರಾಮಾಣಿಕವಾದ ಉತ್ತರವನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಒಂದು ಹೊಸ ಕಾನೂನು ಮಾಡಿ. ಮುಂದೆ 2 ವರ್ಷದೊಳಗಾಗಿ ಅಥವಾ 3–4 ವರ್ಷಗಳಲ್ಲಿ ಇದನ್ನು ಬಗೆಹರಿಸುವುದಕ್ಕೆ ಸಾಧ್ಯವೇ ?

ಶ್ರೀ ಎಂ. ರಾಜಶೇಖರ ಮೂರ್ತಿ:– ಇಡೀ ಸ್ಟೇಟ್‌ನಲ್ಲಿ ಎಷ್ಟು ಹಣ ಬಾಕಿ ಇದೆ ಎಂದು ತಾವು ಕೇಳಿದ್ದೀರಿ. ಇದು ಮೈನ್ ಕ್ವಶ್ಚನ್‌ನಲ್ಲಿ ಬಂದಿದ್ದರೆ ನಾನು ಕಲೆಕ್ಟ್ ಮಾಡಿಕೊಡುತ್ತಿದ್ದೆ. ಆದರೆ ಈ ವಿಷಯ ಮೈನ್ ಕ್ವಶ್ಚನ್‌ನಲ್ಲಿ ಬಂದಿಲ್ಲ. It is statistical information. I don't want to give any rough figures.

ಕೆಲವು ಕಡೆ ಇದು ಬಹಳಷ್ಟು ಮಟ್ಟಿಗೆ ಬಾಕಿ ಉಳಿದಿದೆ ಎಂದು ಹೇಳಿದ್ದೀರಿ. ಇದಕ್ಕೆ ಕಾರಣವೇನೆಂದರೆ, ಟೈಟಲ್ ಡೀಡ್ ಸರಿಯಾಗಿಲ್ಲದೆ ಕೋರ್ಟ್‌ನಲ್ಲಿ ಡಿಪಾಜಿಟ್ ಇರುವುದರಿಂದ ಅದು ಸೆಟಲ್‌ಮೆಂಟ್ ಆಗಿಲ್ಲ. ಎರಡನೆಯದು ಕೆಲವು ಕಡೆ ಅವಾರ್ಡ್ ಬಂದ ಮೇಲೆ ಅವಾರ್ಡ್ ಅಮೌಂಟ್ ಸರಿಯಿಲ್ಲವೆಂದು ಡಿಪಾರ್ಟ್‌ಮೆಂಟ್‌ಗೆ ಹೇಳಿ ಕೋರ್ಟಿಗೆ ರೆಫರ್ ಮಾಡಿಸಿದ್ದಾರೆ. ಅದು

ಕೋರ್ಟಿನಲ್ಲಿ ಪೆಂಡಿಂಗ್ ಇದೆ. ಕೋರ್ಟ್‌ನಲ್ಲಿ ಪೆಂಡಿಂಗ್ ಇರುವುದರಿಂದ ಇನ್ನೂ ಪೇಮೆಂಟ್ ಮಾಡುವುದಕ್ಕೆ ಆಗಿಲ್ಲ. ಮೂರನೆಯದಾಗಿ ಕೆಲವು ಕಡೆ ಅವಾರ್ಡ್ ಅಮೌಂಟ್ ಸೆಕ್ಷನ್ 41ರ ಪ್ರಕಾರ ಇಷ್ಯೂ ಮಾಡುವುದಕ್ಕೆ ಮುಂಚೆ ಶೇಕಡ 25ರಷ್ಟು ಕಟ್ಟುತ್ತಾರೆ. ಆಮೇಲೆ ಶೇಕಡ 75ರಷ್ಟು ಅಮೌಂಟ್ ಡಿಪಾಸಿಟ್ ಮಾಡುತ್ತಾರೆ. ಇದಾದ ಮೇಲೆ ಅದು ಕೋರ್ಟಿಗೆ ಹೋಗುತ್ತದೆ. ಕೋರ್ಟಿನಲ್ಲಿ ಎಷ್ಟು excess ಅಮೌಂಟ್ ಡಿಟರ್‌ಮಿನ್ ಮಾಡುತ್ತಾರೋ ಅಷ್ಟು ಅಮೌಂಟ್ ಕೊಡಿ ಎಂದು ನಾವು ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಕೇಳಬೇಕಾಗುತ್ತದೆ. ನಂತರ ಅವರು ಅಷ್ಟು ಅಮೌಂಟ್ ಕೊಡಬೇಕಾಗುತ್ತದೆ. ಆಗ ಏನು ಡಿಫಿಕಲ್ಟಿ ಬರುತ್ತದೆ ಎಂದರೆ ಒಂದೆರಡು ವರ್ಷಗಳು ಆಗಿರುತ್ತವೆ. ಆ ಅಮೌಂಟ್ ಪ್ರಾವಿಜನ್ ಬಡ್ಜೆಟ್‌ನಲ್ಲಿ ಇರುವುದಿಲ್ಲ. ಬಡ್ಜೆಟ್‌ನಲ್ಲಿ ಇಲ್ಲದಿರುವುದರಿಂದ ಅದನ್ನು ಕೊಡಲಿಕ್ಕೆ ಆಗಿಲ್ಲ. ಈ ವಿಚಾರದಲ್ಲಿ ಸ್ವಲ್ಪ ಡಿಲೇ ಆಗಿದೆ. ನಾನು ಹೋದ ಕಡೆಗಳಲ್ಲೆಲ್ಲಾ ಹೆಸರು ಪ್ರಸ್ತಾಪ ಮಾಡಿದ್ದಾರೆ. ಲ್ಯಾಂಡ್ ಅಕ್ವಿಸಿಷನ್ ಆಫೀಸರನ್ನು ಕರೆಸಿ ರಿವ್ಯೂ ಮೀಟಿಂಗ್ ಮಾಡಿದಾಗ ಎಲ್ಲೆಲ್ಲಿ ಎಷ್ಟೆಷ್ಟು ಬಾಕಿ ಇದೆ ಏನಾಗಿದೆ ಎಂದು ಕೇಳಿದೆ. ಎಲ್ಲಾ ಕಡೆಯಿಂದ ಫಿಗರ್ ತರಿಸಿಕೊಂಡು ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆಯಲ್ಲಿ ಕುಳಿತು ಮಾತನಾಡಿ ಆದಷ್ಟು ಜಾಗ್ರತೆಯಾಗಿ ಇದನ್ನು ಸೆಟಲ್ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ಈಗ ರೈತರೂ ಸಹ ಬಂದಿರತಕ್ಕಂಥ ಕಾಂಪೆನ್‌ಸೇಷನ್ ಹಣವನ್ನು, ಪಾರ್ಟ್ ಪೇಮೆಂಟ್ ತೆಗೆದುಕೊಂಡ ಮೇಲೆ ಕೋರ್ಟಿಗೆ ಹೋಗುತ್ತಾರೆ ಎನ್ನತಕ್ಕಂಥ ವಾದವನ್ನು ನಾನು ಒಪ್ಪುತ್ತೇನೆ. ಮತ್ತೆ ಒಂದೇ ಸಾರಿ ಕೋರ್ಟ್‌ನಲ್ಲಿ ಬಗೆಹರಿಸಿದ ಮೇಲೆ ಆ ವರ್ಷದ ಬಡ್ಜೆಟ್‌ನಲ್ಲಿ ಅಷ್ಟೊಂದು ಹಣವನ್ನು ಇಡುವುದಕ್ಕಾಗುವುದಿಲ್ಲ ಎನ್ನುವಂಥ ವಾದವನ್ನೂ ಸಹ ನಾನು ಒಪ್ಪುತ್ತೇನೆ. ನಮ್ಮ ಡಿಸ್ಟ್ರಿಕ್ಟ್‌ನ ಮಂಚನಬೆಲೆ ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಹಾಗೆ ಮತ್ತು ಹಾರೋಬೆಲೆ ಪ್ರಾಜೆಕ್ಟ್‌ಗೆ ಸಂಬಂಧಪಟ್ಟ ಹಾಗೆ ಎಂಟು ವರ್ಷದಿಂದ ನೀರನ್ನು ತೆಗೆಯಬೇಕೆಂದು ರೈತರಿಗೆ ಪರ್ಸೂಯೇಟೆಡ್ ಮಾಡಿ ಚಾನಲ್‌ಗೋಸ್ಕರ, ಚಾನಲ್ ರೋಡ್‌ಗೋಸ್ಕರ ಎಂದು ಬಿಟ್ಟಿ ಬಿಟ್ಟಿದ್ದೇವೆ. ಫಸ್ಟ್ ಪೇಮೆಂಟ್ ಮಾಡಲಿಲ್ಲ. ಅದಕ್ಕೋಸ್ಕರ ತಮ್ಮಿಂದ ಅಷ್ಯೂರೆನ್ಸ್ ಕೇಳುತ್ತಿರುವುದು ಏನೆಂದರೆ, ಎಲ್ಲಿ ಫಸ್ಟ್ ಪೇಮೆಂಟ್ ಅಟ್‌ಲೀಸ್ಟ್, ಕೋರ್ಟಿಗೆ ಹೋಗಿರತಕ್ಕಂತಹ ಬಾಕಿ ಹಾಗೆಯೇ ಇರಲಿ, ಕೋರ್ಟ್ ಕೇಸ್ ಬಿಟ್ಟು ಬಾಕಿ ಕಡೆಗಳಲ್ಲಿ ಒಂದೆರಡು ವರ್ಷಗಳಲ್ಲಿ ಇದನ್ನು ಬಗೆಹರಿಸುವುದಕ್ಕೆ ಸಾಧ್ಯವೇ ? ಈಗ ಇರತಕ್ಕಂತಹ ಕಾನೂನು ಜೊತೆಗೆ ಇವತ್ತು ನೀವು ತೆಗೆದುಕೊಳ್ಳುತ್ತಿರುವ ಲ್ಯಾಂಡ್‌ಗೆ ಇನ್ನು ಎರಡು ವರ್ಷಗಳ ಒಳಗಾದರೂ ಸಹ ಸರ್ಕಾರದಿಂದ ಎಷ್ಟು ಹಣವನ್ನು ಕೊಡಬೇಕು ಎಂದು ಅಧಿಕಾರಿಗಳು ನಿಗದಿ ಮಾಡಿದ ಹಣವನ್ನು ಕೊಡುತ್ತೇವೆ ಎನ್ನತಕ್ಕಂಥ ಅಷ್ಯೂರೆನ್ಸ್ ಕೊಡಲಿಕ್ಕೆ ಸಾಧ್ಯವೇ ?

ಶ್ರೀ ಎಂ. ರಾಜಶೇಖರ ಮೂರ್ತಿ:– ರೈತರಿಗೆ ಕೊಡಬೇಕಾದ ಔಟ್ ಸ್ಟ್ಯಾಂಡಿಂಗ್ ಅಮೌಂಟ್ ಏನು ಇದೆ ಅದನ್ನು ಆದಷ್ಟು ಜಾಗ್ರತೆ ಸೆಟಲ್ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು:– ಮಾನ್ಯ ಅಧ್ಯಕ್ಷರೇ, ನನ್ನದೊಂದು ಉಪಪ್ರಶ್ನೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ನಿಮ್ಮ constituencyಯ 5 ಗ್ರಾಮಗಳಲ್ಲಿ ಅಕ್ವಿಸಿಷನ್ ವಿಚಾರ ಇದೆ. ಆ 5 ಗ್ರಾಮಗಳ ಹೆಸರು ರಾವುತನಹಳ್ಳಿ, ಮಿನಿನಗರ, ಮೇದಮಾರನಹಳ್ಳಿ, ದೊಡ್ಡಪಾಳ್ಯ, ಹಾರೋಬೆಲೆ ವಿಲೇಜ್. – ಈ 5 ಗ್ರಾಮಗಳಲ್ಲಿ ಅಕ್ವಿಸಿಷನ್ ಆಗಿದೆ.

SRI P. G. R. SINDHYA:– I appreciate the Hon. Minister. ನನ್ನ ಕ್ಷೇತ್ರದಲ್ಲಿ ನಾನು ಏನು ಉಪಪ್ರಶ್ನೆ ಕೇಳಬಹುದು ಎನ್ನುವುದಕ್ಕೂ ತಯಾರಾಗಿ ಬಂದಿದ್ದಾರೆ. ದಯವಿಟ್ಟು ಅದನ್ನು ಪೇಮೆಂಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಎಂ. ರಾಜಶೇಖರ ಮೂರ್ತಿ:– ಈ ಮೇದಮಾರನ ಹಳ್ಳಿ ಬಗ್ಗೆ ಅವಾರ್ಡ್ ಅಪ್ರೂವ್ ಮಾಡಿದ್ದೇವೆ.

'Bill is sent to the Executive Engineer for counter signature. Payment will be made shortly. In respect of other four villages, the acquisition proceedings are pending at various stages. We will get the award, approved and make payment.

ಶ್ರೀ ಎನ್. ಜಿ. ನಾಯಕ್:– ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ರಂಗಯ್ಯನ ದುರ್ಗ ಪ್ರಾಜೆಕ್ಟ್ ಇದೆ. ಇದು 1974ರಲ್ಲಿ ಪ್ರಾರಂಭವಾಯಿತು. ನನ್ನ ಕ್ಷೇತ್ರದ ಬಡಜನರು ಇದಕ್ಕೆ ಭೂಮಿಯನ್ನು ಬಿಟ್ಟುಕೊಟ್ಟಿದ್ದಾರೆ. ಇದುವರೆಗೂ ಎಷ್ಟೋ ರೈತರಿಗೆ ದುಡ್ಡು ಕೊಟ್ಟಿಲ್ಲ. ನಾನು ಎಷ್ಟೋ ಪ್ರಯತ್ನ ಮಾಡಿದ್ದೇನೆ. ಈಗ ಕೊಡುತ್ತೇನೆ, ಆಗ ಕೊಡುತ್ತೇನೆಂದು ಹೇಳುತ್ತಿದ್ದಾರೆ. ಈಗಲಾದರೂ ಎಷ್ಟು ಜನರು ಭೂಮಿ ಕೊಟ್ಟಿದ್ದಾರೆ, ಎಷ್ಟು ಜನರಿಗೆ ದುಡ್ಡು ಕೊಟ್ಟಿದ್ದಾರೆ ಎಂಬ ಮಾಹಿತಿ ನನಗೆ ಬೇಕಾಗಿದೆ. ಈಗಲಾದರೂ ಸಹ ಸರ್ಕಾರ ಈ ಬಗ್ಗೆ ಗಮನಹರಿಸಿ ಬಡರೈತರಿಗೆ ಆದಷ್ಟು ಜಾಗ್ರತೆ ದುಡ್ಡು ಕೊಡಬೇಕೆಂದು ನಾನು ಕಳಕಳಿಯಿಂದ ನನ್ನ ಜನತೆಯ ಪರವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ರಾಜಶೇಖರಮೂರ್ತಿ:– ಇದು ಜನರಲ್ ಕೊಶ್ಚನ್. ಪ್ರತಿಯೊಬ್ಬರೂ ಅವರವರ ತಾಲ್ಲೂಕು, ಅವರವರ ಜಿಲ್ಲೆ ಬಗ್ಗೆ ಕೇಳುವುದಕ್ಕೆ ಶುರು ಮಾಡಿದರೆ ಉತ್ತರ ಕೊಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಅವರು ಏನಾದರೂ ಸೆಪರೇಟ್ ಕೊಶ್ಚನ್ ಕೇಳಿದರೆ ಅದಕ್ಕೆ ಉತ್ತರ ಕೊಡಬಹುದು.

ಶ್ರೀ ಬಾಬಾ ಗೌಡ ರುದ್ರಗೌಡ ಪಾಟೀಲ್:– ಒಂದು ವರ್ಷ, ಎರಡು ವರ್ಷದೊಳಗೆ ಇದನ್ನು ಬಗೆಹರಿಸಿಬಿಡಿ ಎಂದು ಮಾನ್ಯ ಸಿಂಧ್ಯಾರವರು ಹೇಳಿದರು. ಬಹಳ ತೊಂದರೆಯಾಗುತ್ತದೆ. ಏಕೆಂದರೆ 8–10 ವರ್ಷ ಆಯಿತು, ಇದ್ದ ಭೂಮಿ ಎಲ್ಲವನ್ನೂ ರೈತರು ಕಳೆದುಕೊಂಡು ಬಿಟ್ಟರು. ಅವರು ಉಪಜೀವನ ಹೇಗೆ ಮಾಡಬೇಕು ಎನ್ನುವುದನ್ನು ಸರ್ಕಾರ ವಿಚಾರ ಮಾಡಬೇಕು. ಪಕ್ಕದ ಮಹಾರಾಷ್ಟ್ರ ಸರ್ಕಾರ ಕಬ್ಜ ಪೊಸಿಷನ್ ತೆಗೆದುಕೊಳ್ಳುವುದಕ್ಕೆ ಮೊದಲೆ ಪೂರ್ತಿ ದುಡ್ಡು ಮೊದಲನೆ ಕಂತು ಕೊಟ್ಟು ಬಿಡುತ್ತಾರೆ. ಆಮೇಲೆ ಕೋರ್ಟ್‌ಗೆ ಹೋದ ನಂತರ ಹೆಚ್ಚಿನ ಹಣ ತೆಗೆದುಕೊಳ್ಳುತ್ತಾರೆ. ನಮ್ಮ ಸರ್ಕಾರ ಕೂಡ ಆ ರೀತಿ ಕಾಯಿದೆಗೆ ತಿದ್ದುಪಡಿ ಏಕೆ ಮಾಡಬಾರದು. ಯಾವತ್ತು ಕಬ್ಜ ತೆಗೆದುಕೊಳ್ಳುತ್ತಾರೆ. ಆವತ್ತು ದುಡ್ಡು ಕೊಟ್ಟು ಕಬ್ಜ ತೆಗೆದುಕೊಳ್ಳಬೇಕು. ಇಲ್ಲವಾದರೆ ರೈತ ಭೂಮಿ ಕಳೆದುಕೊಂಡು 10 ವರ್ಷವಾದರೂ ದುಡ್ಡು ಇಲ್ಲವಾದರೆ ಅವನು ಹೇಗೆ ಬದುಕಬೇಕು ಎನ್ನುವುದನ್ನು ವಿಚಾರ ಮಾಡುತ್ತೀರ. ಆದಕಾರಣ ಪಕ್ಕದ ರಾಜ್ಯ ಮಹಾರಾಷ್ಟ್ರದಲ್ಲಿ ಏನು ಕಾನೂನು ಇದೆ ಎಂದರೆ ದುಡ್ಡು ಕೊಟ್ಟ ಮೇಲೆ ಭೂಮಿ ಸ್ವಾಧೀನಪಡಿಸುವುದು, ಆ ರೀತಿ ಕಾನೂನು ಏನಾದರೂ ಮಾಡುತ್ತೀರ ?

ಶ್ರೀ ಎಂ. ರಾಜಶೇಖರ ಮೂರ್ತಿ:– ಮಹಾರಾಷ್ಟ್ರದಲ್ಲಿ ಏನು ಕಾನೂನು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಅದನ್ನು ತರಿಸಿಕೊಂಡು ನಂತರ ಎಗ್ಸಾಮಿನ್ ಮಾಡುತ್ತೇನೆ. I am more serious than the Members with regard to the settlement of Award amounts, because I know the problem. Now I have taken up the matter with the Finance Department and I hope to settle it soon.

SRI R.V. DESHPANDE:– I am very happy that the Minister has said that he is very serious about this.

ಮೂಲಭೂತವಾಗಿ ನಾನು ಎರಡು ವಿಚಾರಗಳನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಒಂದನೆಯದು, ಮಾನ್ಯ ಬಾಬಾ ಗೌಡರು ಹೇಳಿದ ಹಾಗೆ, ಇವತ್ತು ನಾವು ಪ್ರಾಜೆಕ್ಟ್ ಬಹಳ ಸಂತೋಷದಿಂದ ತರುತ್ತೇವೆ, ಬಹಳ ಸಂತೋಷದಿಂದ ಅಡಿಗಲ್ಲು ಸಮಾರಂಭ ಮಾಡುತ್ತೇವೆ. ಆದರೆ ಮೂಲಭೂತವಾಗಿ ಈ ಪ್ರಾಜೆಕ್ಟ್‌ಗೆ ಯಾರು ಪಾಪ ತನ್ನ ಭೂಮಿ ಕಳೆದುಕೊಳ್ಳುತ್ತಾನೆ ಅವನಿಗೆ ಕಾಂಪನ್ಸೇಷನ್ ಕೊಡಬೇಕಾದರೆ ನಾವು ಯಾವುದೂ ವಿಚಾರ ಮಾಡುವುದಿಲ್ಲ. ಬಹಳಷ್ಟು ಪ್ರಾಜೆಕ್ಟ್ ಅನ್ನು without making 4 (1) Notification you start especially in minor irrigation and in roads.

ಹಾಗಾಗಿ ಮಾನ್ಯ ಬಾಬಾಗೌಡರು ಹೇಳಿದಂತೆ ಭೂಮಿ ತೆಗೆದುಕೊಂಡ ಬಗ್ಗೆ ಕಾಂಪೆನ್ಸೇಷನ್ ಕೊಡದೆ ಯಾವ ಪ್ರಾಜೆಕ್ಟ್ ಶುರು ಆಗಬಾರದು. ಇದರ ಬಗ್ಗೆ ಸರ್ಕಾರದ ನೀತಿ ಏನು ? ಎರಡನೆಯದು ಪ್ರತಿಯೊಂದು ಪ್ರಾಜೆಕ್ಟ್‌ನಲ್ಲಿ ಈ ಲ್ಯಾಂಡ್ ಅಕ್ವಿಸಿಷನ್‌ಗೆ ಪೇಮೆಂಟ್ ಮಾಡಲಿಕ್ಕೆ ಒಂದು ಪ್ರಾವಿಷನ್ ಮಾಡುತ್ತಾರೆ. ಆದರೂ ಅಡಿಕ್ವೇಟ್ ಪ್ರಾವಿಷನ್ ಮಾಡುವುದಿಲ್ಲ. Inflation they don't take into consideration.

ಕೋರ್ಟು ಅವಾರ್ಡ್ ಹೋಗಬಹುದು. ಅದನ್ನು ಅವರು ಕನ್ಸಿಡರೇಷನ್‌ಗೆ ತೆಗೆದುಕೊಳ್ಳುವುದಿಲ್ಲ. ಆದರೆ ಪ್ರಾಕ್ಟೀಸ್ ಏನಾಗಿದೆಯೆಂದರೆ ಯಾವುದೊ ಅವಾರ್ಡ್ ಆದರೆ everybody goes to court but we don't take into consideration that they will go to court and make the provision. ಹಾಗಾಗಿ ಇನ್ನು ಮುಂದೆ ಹಣ ಕೊಡದೆ ಯಾವ ಕೆಲಸವೂ ಶುರು ಆಗಬಾರದು. ಇಲ್ಲವಾದರೆ ಬಹಳ ಜನರಿಗೆ ಕಷ್ಟವಾಗುತ್ತದೆ. ಜನ ಮೊದಲೇ ಈ ಪ್ರಾಜೆಕ್ಟ್‌ಅನ್ನು ವಿರೋಧ ಮಾಡುತ್ತಿದ್ದಾರೆ. ಹಾಗಾಗಿ ಇದರ ಬಗ್ಗೆ ಸರ್ಕಾರದ ನೀತಿ ಏನು ? ಎರಡನೆಯದು ಬಡ್ಜೆಟ್‌ನಲ್ಲಿ ಸಫಿಶಿಯಂಟ್ ಪ್ರಾವಿಷನ್ ಮಾಡುವುದಕ್ಕೆ ಸರ್ಕಾರ ಏನು ಮಾಡುತ್ತದೆ ಎಂದು ತಮ್ಮನ್ನು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ:– ಬಡ್ಜೆಟ್‌ನಲ್ಲಿ ಸಾಧ್ಯವಾದಷ್ಟು ಪ್ರೊವಿಷನ್ ಮಾಡುತ್ತಾರೆ. ಒಂದೊಂದು ಸಾರಿ ಪ್ರೊವಿಷನ್ ಮೀರಿ ಕೋರ್ಟ್‌ನವರು ಅವಾರ್ಡು ಪಾಸು ಮಾಡುವಾಗ ಜಾಸ್ತಿ ಅಮೌಂಟ್ ಮಾಡುತ್ತಾರೆ. ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿರುವುದು ಕಡಿಮೆ ಇರುತ್ತದೆ. ಯಾವುದೊ ಒಂದು ಎಸ್ಟಿಮೇಟ್ ಇಟ್ಟುಕೊಂಡು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿರುತ್ತಾರೆ. ಜಾಸ್ತಿ ಅಮೌಂಟ್‌ಗೆ ಕೋರ್ಟ್‌ನವರು ಅವಾರ್ಡ್ ಕೊಟ್ಟಾಗ, ಆ ಬಡ್ಜೆಟ್ ಪ್ರೊವಿಷನ್ ಮೀರಿದಾಗ ಇನ್ನೊಂದು ಬಡ್ಜೆಟ್ ಬರುವವರೆಗೂ ಏನು ಮಾಡುವುದಕ್ಕೆ ಆಗುವುದಿಲ್ಲ, ಬಹಳ ಕಷ್ಟವಾಗುತ್ತದೆ. ಎರಡನೆಯದು. ತಾವು ಮೊದಲು ಅಮೌಂಟ್ ಅವರಿಗೆ ಕೊಟ್ಟು ನಂತರ ಕೆಲಸ ಪ್ರಾರಂಭ ಮಾಡಬೇಕೆಂದು ಹೇಳಿದ್ದೀರ. ಲ್ಯಾಂಡ್ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ನಾವು ಇನಿಷಿಯೇಟ್ ಮಾಡಿದರೆ ಆ ಪ್ರಾಪರ್ಟಿ ಮೇಲೆ ಪ್ರಾಪರ್ ಟೈಟಲ್ ಗೌರ್ನಮೆಂಟ್‌ಗೆ ಬರಬೇಕು. ಅದಕ್ಕೋಸ್ಕರ ಬೇರೆ ಬೇರೆ ಹಂತದಲ್ಲಿ ಅಂದರೆ ಫೋರ್ ಒನ್, ಫೈವ್ ಒನ್, ಸಿಕ್ಸ್ ಒನ್ ಹಂತದಲ್ಲಿ ಪ್ರಾಪರ್ ಟೈಟಲ್ ಎಸ್ಟಾಬ್ಲಿಷ್ ಮಾಡಿಕೊಂಡು ನಂತರ ಅವರಿಗೆ ಕಾಂಪೆನ್ಸೇಷನ್ ಕೊಡಬೇಕೆಂದು ಇದೆ. ಈಗಲೂ ಕೂಡ 80% of the amount is being paid to them in the beginning itself. The other 20% will be given later. That is the practice with regard to Government projects. With regard to the Corporations and other organisations, 25% of the amount will be desposited before the issue of 4 (1) notification and 75% of the amount will

be deposited before the issue of 6 (1) notification. Those things have been taken care of in the beginning itself.

SRI R. V. DESHPANDE:– What I am trying to bring to your notice is, at least you should stop that. Without 4 (1) notification they should not start the work.

MR. SPEAKER:– It is enough now.

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಚುನಾವಣೆ

44 (576): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಎಷ್ಟು ವರ್ಷದಿಂದ ಚುನಾವಣೆ ನಡೆದಿಲ್ಲ ?

ಆ) ಕರ್ನಾಟಕದಲ್ಲಿ ಇದುವರೆಗೆ ಚುನಾವಣೆ ನಡೆಯದೆ ಇರುವ ಸಹಕಾರಿ ಸಂಸ್ಥೆಗಳೆಷ್ಟು ? (ಜಿಲ್ಲಾವಾರು ವಿವರಗಳನ್ನು ನೀಡಬೇಕು ?)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–

ಅ) ದಿನಾಂಕ 30–04–1987ರಲ್ಲಿ ಆಡಳಿತ ಮಂಡಳಿಗೆ ಚುನಾವಣೆ ನಡೆದಿದ್ದು ಅನಂತರ ಚುನಾವಣೆ ನಡೆದಿರುವುದಿಲ್ಲ.

ಆ) ದಿನಾಂಕ 30–09–1992ರಲ್ಲಿ ಇದ್ದಂತೆ 2375 ಸಹಕಾರ ಸಂಘಗಳು ಚುನಾವಣೆಯನ್ನು ನಡೆಸಿರುವುದಿಲ್ಲ. (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ).

ರಾಜ್ಯದಲ್ಲಿ ಸಹಕಾರ ಸಂಘಗಳು ತನ್ನ ವಾರ್ಷಿಕ ಮಹಾ ಸಭೆ ಮತ್ತು ಚುನಾವಣೆಗಳನ್ನು ನಡೆಸದೆ ಇರುವ ಸಹಕಾರ ಸಂಘಗಳ ಪಟ್ಟಿ ದಿನಾಂಕ 30–09–1992ಕ್ಕೆ ಇದ್ದಂತೆ.

ಕ್ರ.ಸಂ.	ಜಿಲ್ಲೆಯ ಹೆಸರು	ವಾರ್ಷಿಕ ಮಹಾಸಭೆ ಮತ್ತು ಚುನಾವಣೆ ನಡೆಸದೇ ಇರುವ ಸಹಕಾರ ಸಂಘಗಳ ಸಂಖ್ಯೆ
1.	ಬೆಂಗಳೂರು (ಗ್ರಾಮಾಂತರ)	76
2.	ಬೆಂಗಳೂರು (ನಗರ ಜಿಲ್ಲೆ 1) }	
3.	ಬೆಂಗಳೂರು (ನಗರ ಜಿಲ್ಲೆ 2) }	391
4.	ಕೋಲಾರ	98
5.	ತುಮಕೂರು	148
6.	ಶಿವಮೊಗ್ಗ	83
7.	ಚಿತ್ರದುರ್ಗ	111
8.	ಮೈಸೂರು	338
9.	ಕೊಡಗು	16
10.	ಮಂಗಳೂರು	36

11.	ಮಂಡ್ಯ	418
12.	ಹಾಸನ	180
13.	ಚಿಕ್ಕಮಗಳೂರು	16
14.	ಬೆಳಗಾವಿ	55
15.	ಧಾರವಾಡ	277
16.	ಕಾರವಾರ	1
17.	ಬಿಜಾಪೂರ	1
18.	ಗುಲ್ಬರ್ಗಾ	24
19.	ರಾಯಚೂರು	04
20.	ಬಳ್ಳಾರಿ	66
21.	ಬೀದರ್	36
	ಒಟ್ಟು:	2,375

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಆರು ವರ್ಷಗಳಿಂದ ಚುನಾವಣೆ ನಡೆದಿಲ್ಲ. ಚುನಾವಣೆಗಳು ನಡೆಯದೆ ಇರಲು ಕಾರಣಗಳು ಏನು ? ಚುನಾವಣೆಗಳನ್ನು ನಡೆಸದೆ ಅಲ್ಲಿಯೇ ಅವರು ಕುಳಿತುಕೊಂಡು ದೊಡ್ಡ ರಾಜಕೀಯ ಮಾಡಿಕೊಂಡು ಇಡೀ ಒಕ್ಕೂಟವನ್ನು ಸಮಗ್ರವಾಗಿ ನಾಶ ಮಾಡಿ ಅದನ್ನು ಭ್ರಷ್ಟಾಚಾರಕ್ಕೆ ತಳ್ಳತಕ್ಕ ವ್ಯವಸ್ಥೆಗೆ ಹೋಗಿದ್ದಾರೆ. ತಾವು ದಯಮಾಡಿ ತಿಳಿಸಬೇಕು. ಏತಕ್ಕಾಗಿ ಚುನಾವಣೆ ಮಾಡುತ್ತಿಲ್ಲ ಚುನಾವಣೆ ಮಾಡದಿದ್ದರೆ ಈ ಒಕ್ಕೂಟವನ್ನು, ಆಡಳಿತ ಮಂಡಳಿಯನ್ನು ವಜಾ ಮಾಡುತ್ತೀರಾ ಎಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– 30.4.1987ರಲ್ಲಿ ಇದರ ಚುನಾವಣೆ ನಡೆಯಬೇಕಾಗಿತ್ತು. ಆದರೆ ಕಾರಣಾಂತರದಿಂದ ಇದನ್ನು ಪೋಸ್ಟ್‌ಪೋನ್ ಮಾಡಿಕೊಂಡು ಬಂದರು. 1988ರಲ್ಲಿ ಅತಿವೃಷ್ಟಿಯಿಂದ ರೈತರು ತೊಂದರೆಯಲ್ಲಿದ್ದಾರೆ. ಮುಂದಕ್ಕೆ ಹಾಕಿ ಎಂದು ಕೇಳಿಕೊಂಡ ಮೇಲೆ ಅಂದಿನಿಂದ ಪ್ರತಿವರ್ಷ ಮುಂದೆ ಮುಂದೆ ಹೋಗುತ್ತಿದೆ. ಈಗ ಕೊನೆಯದಾಗಿ ಏನಾಗಿದೆ ಎಂದರೆ ಫೆಬ್ರವರಿ ತಿಂಗಳಲ್ಲೆ ಚುನಾವಣೆ ಮಾಡಬೇಕು ಎಂದು ಒಂದು ಆದೇಶವನ್ನು ಕೊಟ್ಟಿದ್ದೇವೆ. ಆದರೆ ಆ ಆದೇಶ ಕೊಟ್ಟಮೇಲೆ ಅವರು ಹೈಕೋರ್ಟಿಗೆ ಹೋಗಿ ದಿನಾಂಕ 7.2.1992ರಲ್ಲಿ ಸ್ಟೇ ತಂದಿದ್ದಾರೆ. ಈ ಸ್ಟೇ ವೆಕೇಟ್ ಆದ ತಕ್ಷಣ ಬರತಕ್ಕ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಚುನಾವಣೆ ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆ. ಏಕೆಂದರೆ ಆ ಸ್ಟೇ ವೆಕೇಟ್ ಮಾಡಲು ಅನಿಮಲ್ ಹಸ್‌ಬೆಂಡ್ರಿ ಡಿಪಾರ್ಟ್‌ಮೆಂಟ್‌ನವರೂ ಕೂಡ ಡೈಲಿ ಪ್ರಯತ್ನ ಮಾಡುತ್ತಿದ್ದಾರೆ. ನಾನು ಕೂಡ ಸಂಬಂಧಪಟ್ಟ ಅಡ್ವೊಕೇಟ್ ಅವರನ್ನು ರಿಕ್ವೆಸ್ಟ್ ಮಾಡಿಕೊಂಡು ಆದಷ್ಟು ಬೇಗ ಸ್ಟೇ ವೆಕೇಟ್ ಮಾಡಿಸಿ ಚುನಾವಣೆ ಮಾಡಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ಇದೇ ರೀತಿ ಅವರು ತಡೆಯಾಜ್ಞೆ ತಂದು ಮೂರು ವರ್ಷದಿಂದ ಇಲ್ಲಿ ಉಳಿದಿದ್ದಾರೆ. ತಡೆಯಾಜ್ಞೆ ಕೊಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ತಾವು ದಯಮಾಡಿ ತಡೆಯಾಜ್ಞೆಯನ್ನು ತೆಗೆಸಿ ಕೂಡಲೇ ಚುನಾವಣೆಯನ್ನು ಮಾಡಲು ಸರ್ಕಾರ ಪ್ರಯತ್ನ ಮಾಡಬೇಕು. ಅದಕ್ಕೂ ಮೊದಲು ಆ ಮಂಡಳಿಯನ್ನು ವಜಾ ಮಾಡಿ ಆಡಳಿತಾಧಿಕಾರಿಯನ್ನು ತಾವು ನೇಮಕ ಮಾಡಬಹುದಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಈಗ ಈ ವಿಷಯ ಕೋರ್ಟ್‌ನಲ್ಲಿ ಇರುವುದರಿಂದ ವಜಾ ಮಾಡಲು ಸ್ವಲ್ಪ ಕಷ್ಟವಾಗುತ್ತದೆ. ಸ್ಟೇ ವೆಕೇಟ್ ಮಾಡಿಸಿ ಆದಷ್ಟು ಬೇಗನೆ ಚುನಾವಣೆ ಮಾಡುತ್ತೇವೆ.

ಅಧ್ಯಕ್ಷರು:- ಶ್ರೀ ಮಂಜುನಾಥ ಸಿ. ಕುನ್ನೂರ್‌ವರ ಮುಂದೂಡಲಾದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 56 (580)ಕ್ಕೆ ಉತ್ತರಿಸುವುದಕ್ಕೆ ಮಂತ್ರಿಗಳು ಒಂದು ವಾರ ವೇಳೆಯನ್ನು ಕೇಳಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನನ್ನದೊಂದು ತೀವ್ರವಾದ ಪ್ರತಿಭಟನೆ ಇದೆ. ಕ್ವಶ್ಚನ್ ಅವರ್ ಟೈಮ್‌ನಲ್ಲಿ ಮಂತ್ರಿಗಳು ಬರಲಿಲ್ಲ ಎನ್ನುವುದರ ಬಗ್ಗೆ ತಾವು ಪ್ರಾರಂಭದಲ್ಲೇ ಎಚ್ಚರಿಕೆ ಕೊಟ್ಟಿದ್ದೀರಿ. ಇಂತಿಂಥಾ ದಿವಸಗಳಲ್ಲಿ ಇಂಥಿಂಥಾ ಮಂತ್ರಿಗಳು ಇರಬೇಕೆಂದು ಇದೆ. ನಾವೂ ಮಂತ್ರಿಗಳಾಗಿ ಕೆಲಸ ಮಾಡಿದ್ದೇವೆ. ಸದನ ನಡೆಯುತಕ್ಕ ಸಂದರ್ಭದಲ್ಲಿ ಮಂತ್ರಿಗಳು ಬೆಂಗಳೂರಿನಿಂದ ಹೊರಗಡೆ ಹೋಗಬಾರದು, ಆ ರೀತಿ ಅಕಸ್ಮಾತ್ತಾಗಿ ಹೋದರೆ ತಮ್ಮ ಪರವಾನಿಗೆಯನ್ನು ಪಡೆಯಬೇಕಾಗುತ್ತದೆ. ತಮಗೆ ಏನಾದರೂ ಸಂಬಂಧಪಟ್ಟ ಮಂತ್ರಿಗಳು ಪರವಾನಗಿ ಕೇಳಿ ಈ ಸದನಕ್ಕೆ ನಾನು ಬರುವುದಕ್ಕೆ ಆಗುವುದಿಲ್ಲ ಎಂದು ತಿಳಿಸಿದ್ದಾರೆಯೆ ? ಕಾರಣ ಏನೆಂದರೆ ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳು ಬರಲಿ ಬರದೇ ಇರಲಿ ಅವರು ಇಲ್ಲಿ ಇರಬೇಕು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಯಾರೋ ಒಬ್ಬ ಮಂತ್ರಿಗಳು ಎದ್ದು ನಿಂತುಕೊಂಡು ಇಲ್ಲಿ ಅವರು ಪರವಾಗಿ ತಿಳಿಸಲಿಕ್ಕೆ ಅವಕಾಶ ಇದೆ. ಆದರೆ ಅವರು ಈ ಮನೆಗಿಂತ ಬಹಳ ದೊಡ್ಡ ಸ್ಥಾನದಲ್ಲಿದ್ದಾರೆಯೆ ? ನನಗೆ ಇದು ಅರ್ಥವಾಗುತ್ತಿಲ್ಲ. ತಾವು ಎಚ್ಚರಿಕೆ ಕೊಟ್ಟಿದ್ದೀರಿ. ಒಳ್ಳೆಯದು ಮಾಡಿದ್ದೀರಿ. ಹಾರ್ಟಿಕಲ್ಚರ್ ಮಿನಿಸ್ಟರರು ಈ ಹೌಸ್‌ಗೆ ಬಂದೇ ಇಲ್ಲ. ತಾವು ಎಚ್ಚರಿಕೆ ಕೊಟ್ಟ ಮೇಲೂ ಕೂಡ ಬಂದಿಲ್ಲ, ಅವರ ಮುಖ ನಮಗೆ ಇಲ್ಲಿ ಕಾಣಿಸುತ್ತಾ ಇಲ್ಲ. ಅವರು ಎಲ್ಲಿ ಹೋಗಿದ್ದಾರೆ. ಅವರು ಅವರ ಪ್ರಶ್ನೆ ಇರುವ ದಿವಸ ಇಲ್ಲಿಗೆ ಬರದೇ ಇದ್ದರೆ ಈ ಮನೆಯನ್ನು ಏಕೆ ನಡೆಸಬೇಕು. ಇದನ್ನು ತಾವು ತೀವ್ರವಾಗಿ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮತ್ತೊಂದು ವಿಚಾರವನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ರಾಜ್ಯದಲ್ಲಿರುವ ತೆಂಗಿನ ಬೆಳೆಗೆ ರೋಗ ತಗಲಿರುವ ಬಗ್ಗೆ ನಾವು ಹಾರ್ಟಿಕಲ್ಚರ್ ಮಿನಿಸ್ಟರಿಗೆ ಪ್ರಶ್ನೆ ಕೇಳಿದ್ದೇನೆ. ಆದರೆ ಅಧಿಕಾರಿಗಳು ಏನು ಉತ್ತರ ಬರೆದು ಕಳುಹಿಸಿದ್ದಾರೆ ಎಂಬುದನ್ನು ಗಮನಿಸಬೇಕು. ಬೆಂಗಳೂರು ಜಿಲ್ಲೆಯಲ್ಲಿ ರೋಗ ಒಂದು ಚೂರು ಬಂದಿಲ್ಲ ಎಂದು ಹೇಳಿದ್ದಾರೆ. ಏನು ಸ್ವಾಮಿ ಇದು ? ಎರಡು ಲಕ್ಷ ತೆಂಗಿನ ಮರಗಳು ಇನ್ನು ಮೂರು ತಿಂಗಳ ಒಳಗಾಗಿ ಸರ್ವನಾಶವಾಗಿ ಹೋಗುತ್ತವೆ. ಈ ಕಷ್ಟವನ್ನು ನಾವು ಯಾರ ಹತ್ತಿರ ಹೇಳಿಕೊಳ್ಳುವುದು ? ತಾವು ನಮಗೆ ಅವಕಾಶ ಕೊಟ್ಟಿರುವುದು ತಮ್ಮ ದೊಡ್ಡತನವನ್ನು ತೋರಿಸುತ್ತದೆ. ಆದರೆ ನಾವು ಏನು ಮಾಡುವುದಕ್ಕಾಗುತ್ತದೆ. ಮಂತ್ರಿಗಳು ವಿಧಾನ ಸೌಧಕ್ಕೂ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮಂತ್ರಿಗಳಿಗೆ ಏನೋ ನೀತಿ ಸಂಹಿತೆ ಹಾಕಿದ್ದಾರೆ. ಆದರೆ ಅವರುಗಳು ಅದನ್ನು ಜೇಬಿಗೆ ಹಾಕಿ ಇಟ್ಟುಕೊಂಡಿದ್ದಾರೆ. ಅದರಿಂದ ಏನೂ ಉಪಯೋಗ ಆಗಿಲ್ಲ. ಸದನಕ್ಕೆ ಮಂತ್ರಿಗಳು ಬರಲಿಲ್ಲ ಎಂದರೆ ಏನು ಅರ್ಥ ? ಯಾರಿಗೆ ಸ್ವಾಮಿ ನಾವು ಹೇಳಿಕೊಳ್ಳುವುದು.

ಶ್ರೀ ವಾಟಾಳ್ ನಾಗರಾಜ್:- ಅವರು ಸದನಕ್ಕೂ ಬರುವುದಿಲ್ಲ. ಅವರು ಕಾರ್ಯಾಲಯಕ್ಕೂ ಬರುವುದಿಲ್ಲ, ವಿಧಾನ ಸೌಧದಲ್ಲಿಯೂ ಇರುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತಾವು ನಮ್ಮ ರಕ್ಷಣೆಗೆ ಬರಬೇಕು. ಅವರು ಇದ್ದಾರೆ ಇಲ್ಲವೋ ಎಂಬುದನ್ನು ತಿಳಿಸಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:- ನಾನು ಮುಖ್ಯವಾಗಿ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ರವರನ್ನು ತಮ್ಮ ಮುಖಾಂತರ ಒಂದು ಮಾತನ್ನು ಕೇಳಲಿಷ್ಟಪಡುತ್ತೇನೆ.

ಎಷ್ಟೋ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ. ಹೆಲ್ಡ್ ಓವರ್ ಪ್ರಶ್ನೆಗಳಿಗೂ ಉತ್ತರ ಬರುತ್ತಾ ಇಲ್ಲ. ಈ ಸದನ ಇನ್ನು 15–20 ದಿನಗಳಲ್ಲಿ ಮುಕ್ತಾಯವಾಗುತ್ತದೆ. ಹಾಗಾದರೆ ಸದಸ್ಯರು, ಇಷ್ಟೊಂದು ಕಷ್ಟಪಟ್ಟುಕೊಂಡು ಅವರ ಕ್ಷೇತ್ರದ ಮತ್ತು ರಾಜ್ಯದ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಾಗ ಪ್ರಶ್ನೆಗೆ ಉತ್ತರವನ್ನೇ ಕೊಡುವುದಿಲ್ಲ ಎಂದು ಯಾವ ಮಟ್ಟಕ್ಕೆ ನೀವು ಹೋಗಿದ್ದೀರಿ. ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಹಾಜರಿರಬೇಕು. ಅವರಿಗೆ ಏನಾದರೂ ಕಷ್ಟ ಸುಖ ಇದ್ದರೆ ಅವರು ಸ್ಪೀಕರ್‌ರವರ ಪರ್ಮಿಷನ್ ತೆಗದುಕೊಂಡು ಹೋದರೆ ಅವರ ಪರವಾಗಿ ಬೇರೆ ಮಂತ್ರಿಗಳು ಜವಾಬ್ದಾರಿಯಾಗಿ ಉತ್ತರ ಕೊಡುವುದಕ್ಕೆ ಹಾಜರಿರಬೇಕು. ಮತ್ತು ಅಧಿಕಾರಿಗಳು ಇವತ್ತು ಯಾವುದೋ ಉತ್ತರ ಕೊಟ್ಟರೆ ಸರಿಯಲ್ಲ. ಅದಕ್ಕೆ ಸ್ವಲ್ಪ ಜವಾಬ್ದಾರಿಯಾದ ಉತ್ತರ ಕೊಡಬೇಕಾಗುತ್ತದೆ. ಅದರ ಬಗ್ಗೆ ನಾನು ನಿಮ್ಮ ಕಡೆಯಿಂದ ಕ್ಲಾರಿಫಿಕೇಷನ್ ಕೇಳುತ್ತೇನೆ. ನಿಮ್ಮ ಸರ್ಕಾರ ಇದೇ ರೀತಿ ಮನಸ್ಸು ಬಂದ ಹಾಗೆ ಕೊಡುತ್ತೇವೆ ಅಥವಾ ಕೊಡುವುದಿಲ್ಲ ಎಂದು ಹೇಳಿದರೆ ಅದು ಬೇರೆ ಪ್ರಶ್ನೆ. ನಿಮಗೂ ಸಹ ಒಳ್ಳೆಯ ಆಡಳಿತ ಕೊಡಬೇಕು, ಮತ್ತು ಈ ಸದನದ ವ್ಯವಸ್ಥೆಯಲ್ಲಿ ವಿಶ್ವಾಸ ಇದ್ದರೆ ನೀವು ಸರಿಸಮಾನವಾದ ಉತ್ತರ ಕೊಡಬೇಕಾಗುತ್ತದೆ. ಹೆಲ್ಡ್ ಓವರ್ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಇದಕ್ಕೆ ನಿಮ್ಮ ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಸಚಿವರ ಮತ್ತು ಶಾಸಕರ ಗೈರು ಹಾಜರಿ ಬಗ್ಗೆ ಅನೇಕ ಸಾರಿ ಚರ್ಚೆ ಆಗುವಾಗ ತಮ್ಮ ಗಮನಕ್ಕೆ ನಾವು ತಂದಿದ್ದೇವೆ. ಒಂದು ಸಾರಿ ಅಲ್ಲ ನೂರಾರು ಬಾರಿ ತಂದಿದ್ದೇವೆ. ಮೊದಲನೆಯದಾಗಿ ಇಲ್ಲಿ ಮಂತ್ರಿಗಳು ಇರುವುದಿಲ್ಲ ಮತ್ತು ಬೇರೆ ಕ್ಷೇತ್ರಗಳಿಗೆ ಹೋಗಿ ಬಾಯಿಗೆ ಬಂದ ಹಾಗೆ ಮಾತನಾಡುವುದು. ಈ ವಿಷಯದ ಬಗ್ಗೆ ತಾವು ಮೊದಲು ಹೇಳಿ, ಮಂತ್ರಿಗಳು ಎಲ್ಲಿಗೆ ಹೋಗಿದ್ದಾರೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:– ವಿಧಾನಸೌದದಲ್ಲಿ ಯಾವ ಮಂತ್ರಿಗಳು ಹಾಜರು ಇಲ್ಲ. 40 ಜನ ಮಂತ್ರಿಗಳು ಎಲ್ಲಿ ಇದ್ದಾರೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ:– ನಾನು ಹೋದ ಸಾರಿ ವೀರಪ್ಪನ ಬಗ್ಗೆ ಕೇಳಿದೆ. ಅದಕ್ಕೂ ಉತ್ತರ ಇಲ್ಲ. ವೀರಪ್ಪನ್ ಇದ್ದಾನೋ ಇಲ್ಲವೋ ಎಂದು ಇದುವರೆಗೂ ಅವರು ಹೇಳಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ದಿನಾಂಕ 25–2–93ರ ಲಿಖಿತ ಮೂಲಕ ಉತ್ತರಿಸುವ 7ನೆಯ ಪಟ್ಟಿಯಲ್ಲಿರುವ 34 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 331, 468, 470, 790, 798, 942, 763, 1142 ಮತ್ತು 1022 ಪ್ರಶ್ನೆಗಳನ್ನು ಹೊರತುಪಡಿಸಿ, ಇನ್ನು ಉಳಿದ 25 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿ ಹೊಸದಾಗಿ ಗೃಹನಿರ್ಮಾಣ ಸಹಕಾರ ಸಂಘಗಳನ್ನು ರಚಿಸಲು ಅನುಮತಿ

326 (153): ಶ್ರೀ ಜಿ.ಎಸ್. ಆಚಾರ್ (ಬೈಂದೂರು)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹೊಸದಾಗಿ ಗೃಹನಿರ್ಮಾಣ ಸಹಕಾರ ಸಂಘಗಳನ್ನು ರಚಿಸಲು ಅನುಮತಿ ನೀಡಲಾಗುವುದೇ ?

ಆ) ಬೆಂಗಳೂರಿನಲ್ಲಿರುವ ಗೃಹನಿರ್ಮಾಣ ಸಹಕಾರ ಸಂಘಗಳಿಗೆ ಭೂಮಿ ನೀಡುವ ಕುರಿತು ಸರ್ಕಾರ ಧೋರಣೆ ಏನು ?

ಇ) ಗೃಹನಿರ್ಮಾಣ ತುರ್ತು ಅವಶ್ಯಕತೆ ಇರುವುದರಿಂದ ಈ ಕುರಿತು ತ್ವರೆಯಿಂದ ಗಮನ ನೀಡಲಾಗಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ವಿಷಯವೂ ಸಹ – ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು

ಮೂಡಬಿದರೆಯ ತೋಟಗಾರಿಕೆ ಇಲಾಖೆಯ ಜಾಗದ ಅಭಿವೃದ್ಧಿ

327 (331): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಬಿದ್ರೆಯ ತೋಟಗಾರಿಕೆ ಇಲಾಖೆಗೆ ಎಷ್ಟು ಜಾಗವನ್ನು ಸರ್ಕಾರವು ಬಿಟ್ಟು ಕೊಟ್ಟಿದೆ ?

ಆ) ಆ ಜಾಗದ ಅಭಿವೃದ್ಧಿ ಬಗ್ಗೆ ಸರ್ಕಾರವು ಏನು ಕ್ರಮ ಅಥವಾ ಯೋಜನೆ ಕೈಗೊಂಡಿದೆ ?

ಇ) ಇದರ ಅಭಿವೃದ್ಧಿ ಕಾರ್ಯ ನಿಧಾನವಾಗಲು ಕಾರಣವೇನು ?

ಈ) ಅಭಿವೃದ್ಧಿ ಕಾರ್ಯ ತಡ ಮಾಡುವುದರಿಂದ ಜನರು ಈ ಸ್ಥಳವನ್ನು ಅತಿಕ್ರಮಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಇದರ ಅಭಿವೃದ್ಧಿ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ಸಚಿವರು):

ಅ) 8.20 ಎಕರೆ

ಆ) 5 ವರ್ಷದ, ಅವಧಿಗೆ ಸುಮಾರು 6.02 ಲಕ್ಷ ರೂಪಾಯಿಗಳ ಒಂದು ಯೋಜನೆ ತಯಾರಿಸಿದುದು, ಈ ಯೋಜನೆಯಲ್ಲಿ 6 ಎಕರೆ ಪ್ರದೇಶದಲ್ಲಿ ವಿವಿಧ ಜಾತಿಯ ಹಣ್ಣಿನ ಬೆಳೆಗಳ ತೋಟವನ್ನು ನಿರ್ಮಿಸುವುದು, ಸಸ್ಯಾಭಿವೃದ್ಧಿ ಕಾರ್ಯಕ್ರಮ, ಕಾಮಗಾರಿ ಹಾಗೂ ಒಂದು ಎಕರೆ ಪ್ರದೇಶದಲ್ಲಿ ಉದ್ಯಾನವನ್ನು ನಿರ್ಮಿಸುವುದು.

ಇ) ಸಂಪನ್ಮೂಲಗಳನ್ನು ಅನುಸರಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಈ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಉ) ದೊರೆಯುವ ಹಣದ ಸೌಲಭ್ಯವನ್ನೊದಗಿಸಿಕೊಂಡು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ 'ರಿ' ಬೆಂಗಳೂರು, ಇದರ ಸದಸ್ಯರ ಸಂಖ್ಯೆ

328 (659): ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರಿನಲ್ಲಿ ಡಿಸೆಂಬರ್ 1992ರ ಅಂತ್ಯಕ್ಕೆ ಇರುವ ಸದಸ್ಯರ ಸಂಖ್ಯೆ ಎಷ್ಟು? (ಷೇರು ಹೋಲ್ಡರ್ಸ್) ಹಾಗೂ ಅಸೋಸಿಯೇಟೆಡ್ ಸದಸ್ಯರುಗಳೆಷ್ಟು ?

ಆ) ಷೇರುಗಳನ್ನು ಕ್ಯುಮುಲೇಟಿವ್ ಡಿಪಾಜಿಟ್‌ನಲ್ಲಿ 500 ರಿಂದ 5,000 ರೂ.ಗಳನ್ನು ತೊಡಗಿಸಿದವರಿಗೆ ಮಾತ್ರ ನೀಡುತ್ತಿರುವ ಅಂಶವು ಶೃತವೇ ಅಥವಾ ಇಲ್ಲವೇ ?

ಇ) ಹಾಗಿದ್ದಲ್ಲಿ ಸರ್ಕಾರವು ಕಾನೂನಿಗೆ ವಿರುದ್ಧವಾದಾಗ ಕ್ಯುಮುಲೇಟಿವ್ ಡಿಪಾಜಿಟ್‌ನಲ್ಲಿ ಹಣ ವಸೂಲಿ ಮಾಡುತ್ತಿರುವ ಬಗ್ಗೆ ಆಡಳಿತ ಮಂಡಳಿಯ ವಿರುದ್ಧ ಕ್ರಮ ಕೈಗೊಳ್ಳುತ್ತದೆಯೇ ?

ಈ) ಕಾನೂನನ್ನು ಗಣನೆಗೆ ತೆಗೆದುಕೊಳ್ಳದೇ ಷೇರುಗಳನ್ನು ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಲಿ ಇರುವ ಸದಸ್ಯರುಗಳಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳಿಗೆ ಸೇರಿದ ಸದಸ್ಯರುಗಳೆಷ್ಟು ?

ಊ) ಈ ಮೇಲ್ಕಂಡ ಬ್ಯಾಂಕಿನಲ್ಲಿ ಹೆಚ್ಚು ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದವರುಗಳನ್ನು ಸದಸ್ಯರನ್ನಾಗಿ ತೆಗೆದುಕೊಳ್ಳಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರಿ ಸಚಿವರು):

ಅ) ಸದಸ್ಯರು (ಷೇರು ಹೋಲ್ಡರ್ಸ್) – 11,150 ಅಸೋಸಿಯೇಟೆಡ್ ಸದಸ್ಯರು – ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ.

ಉ) 86

ಊ) ಸಹಕಾರ ಸಂಘಗಳಲ್ಲಿ ಸದಸ್ಯತ್ವವು ಸ್ವಯಂಪ್ರೇರಿತವಾಗಿದೆ. ಆದಾಗ್ಯೂ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸದಸ್ಯತ್ವ ನೀಡಲು ಆಡಳಿತ ಮಂಡಳಿಗೆ ಸಲಹೆ ಮಾಡಲಾಗುವುದು.

ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿ ಚುನಾವಣೆ

329 (926): ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಜೂನ್ 1993ರ ರೊಳಗಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳಿಗೆ ಚುನಾವಣೆ ನಡೆಸುವುದಾಗಿ ಹಿಂದೆ ಆಶ್ವಾಸನೆ ಕೊಟ್ಟಿರುವುದು ಸರ್ಕಾರದ ಗಮನದಲ್ಲಿದೆಯೇ ?

ಆ) ಹಾಗಿದ್ದಲ್ಲಿ, ನ್ಯಾಯಾಲಯದ ತೀರ್ಪನ್ನು ಗೌರವಿಸಿ ಜೂನ್ 1993ರೊಳಗಾಗಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಹೌದು.

ಆ) 73ನೇ ಸಂವಿಧಾನ ತಿದ್ದುಪಡಿಗೆ ಅನುಗುಣವಾಗಿ ಒಂದು ಸಮಗ್ರ ವಿಧೇಯಕವನ್ನು ವಿಧಾನ ಮಂಡಲದಲ್ಲಿ ಮಂಡಿಸಲಾಗುವುದು. ಈ ನೂತನ ವಿಧೇಯಕದಂತೆ ಚುನಾವಣೆಗಳನ್ನು 1993ನೇ ವರ್ಷದಲ್ಲಿ ಆದಷ್ಟು ಜಾಗ್ರತೆ ನಡೆಸಲಾಗುವುದು.

ಕೊಡಗು ಜಿಲ್ಲೆಯ ಅಕ್ರಮ ಭೂಮಿಯನ್ನು ಸಕ್ರಮ ಮಾಡಲು ಇರುವ ತೊಡಕುಗಳು

332 (562) ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಅಕ್ರಮ ಭೂಮಿ ಸಕ್ರಮಗೊಳಿಸುವಾಗ ಕೆಲವೇ ಕಾಫಿ ಗಿಡಗಳು ಇದ್ದರೂ ಅದನ್ನು ಕಾಫಿ ತೋಟ ಎಂದು ಪರಿಗಣಿಸಲಾಗುತ್ತಿರುವುದರಿಂದ ಸಣ್ಣ ರೈತರು ಮತ್ತು ಬಡ ಜನರಿಗೆ ತುಂಬಾ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ ಮತ್ತು ಆ) ಇಲ್ಲ, ಅಂತಹ ಯಾವುದೇ ತೊಂದರೆಗಳು ಇರುವುದಿಲ್ಲ. ಕೆಲವು ಕಾಫಿ ಗಿಡಗಳನ್ನು ನೆಟ್ಟಿದ್ದರೂ, ಹೆಚ್ಚಿನ ವಿಸ್ತೀರ್ಣದಲ್ಲಿ ಕುಷ್ಕಿ ವ್ಯವಸಾಯ ಮಾಡಿದ್ದಲ್ಲಿ, ಅದನ್ನು ಕುಷ್ಕಿ ಎಂದೇ ಪರಿಗಣಿಸಲಾಗುತ್ತಿದೆ. ಸಣ್ಣ ಮತ್ತು ಬಡರೈತರಿಗೆ ತೊಂದರೆಯಾಗದಂತೆ ಕ್ರಮ ಕೈಗೊಂಡಿದೆ.

ಸೋಮವಾರ ಪೇಟೆ ತಾಲ್ಲೂಕಿನ ತೋಟಗಾರಿಕೆ ಫಾರಂನ ಅವ್ಯವಸ್ಥೆ

333 (560): ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಮವಾರಪೇಟೆ ತಾಲ್ಲೂಕಿನ ಮದಲಾಪುರದಲ್ಲಿ ತೋಟಗಾರಿಕೆ ಫಾರಂನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡದ (ಗಿಡಗಳು: ನರ್ಸರಿ) ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅವನ್ನು ಅಭಿವೃದ್ಧಿಪಡಿಸಲು ಸರ್ಕಾರದವರು ತೆಗದುಕೊಂಡ ಕ್ರಮಗಳೇನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕಾ ರಾಜ್ಯ ಸಚಿವರು):

ಅ) ಬಂದಿದೆ.

ಆ) ಮದಲಾಪುರ ಕ್ಷೇತ್ರವು ರಕ್ಷಿತಾರಣ್ಯದ ಮಧ್ಯದಲ್ಲಿರುವುದರಿಂದ ಕಾಡಾನೆ ಮತ್ತು ಇತರೆ ಕಾಡು ಪ್ರಾಣಿಗಳಿಂದ ಪ್ರತಿದಿನ ನಾನಾ ತರಹದ ಹಾನಿಗೆ ತುತ್ತಾಗುತ್ತದೆ. ಇಲ್ಲಿ ಬೆಳೆಸಿರುವ ಗಿಡಮರಗಳನ್ನು ಪ್ರಾಣಿಗಳು ಕಿತ್ತು ಇಲ್ಲವೆ ತುಳಿದು ಹಾಳು ಮಾಡುತ್ತವೆ. ಈ ಕಾರಣದಿಂದ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಕೈ ಬಿಡಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಸರ್ವೇಯರ್ ಹುದ್ದೆಗಳ ಭರ್ತಿ

334 (561): ಶ್ರೀ ಎ. ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ಸರ್ವೇಯರ್ ಹುದ್ದೆಗಳು ಖಾಲಿ ಇದ್ದು ಇದರಿಂದ ಸರ್ವೆ ಕೆಲಸಗಳು ಸರಿಯಾಗಿ ನಡೆಯದೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ಭರ್ತಿ ಮಾಡಲು ಸಂದರ್ಶನ ನಡೆಸಲಾಗಿದೆಯೇ ಹಾಗೂ ಆ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಬಂದಿದೆ.

ಆ) ಹೌದು. ಆದಷ್ಟು ಬೇಗನೆ ಭರ್ತಿ ಮಾಡಲು ಪ್ರಯತ್ನಿಸಲಾಗುವುದು.

ರಾಜ್ಯದಲ್ಲಿರುವ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಸ್ಟ್ಯಾಂಪ್ ಪೇಪರ್ ಖರೀದಿಸುವಾಗ ನಡೆಯುವ ಅವ್ಯವಹಾರ.

335 (789): ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ 10 ಸಾವಿರಕ್ಕಿಂತ ಹೆಚ್ಚಿನ ಸ್ಟಾಂಪ್ ಪೇಪರ್‌ಕೊಳ್ಳುವ ವ್ಯವಸ್ಥೆ ಇರುವುದು ?

ಆ) ಈ ವ್ಯವಸ್ಥೆ ಬೆಂಗಳೂರಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಕಾಗದವನ್ನು ಖರೀದಿ ಮಾಡುವಾಗ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಉ) ಬೆಂಗಳೂರಿನಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚಿನ ಸ್ಟಾಂಪ್ ಪೇಪರ್ ಕೊಳ್ಳಲು ಇರುವ ವ್ಯವಸ್ಥೆಯನ್ನು ರಾಜ್ಯದ ಇತರೆ ಜಿಲ್ಲೆಗಳಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ರಾಜ್ಯದ ಯಾವುದೇ ಜಿಲ್ಲೆಯ ಸಬ್‌ರಿಜಿಸ್ಟ್ರಾರ್ ಕಛೇರಿಗಳಲ್ಲಿ ಸ್ಟಾಂಪ್ ಪೇಪರ್ ಮಾರುವ ವ್ಯವಸ್ಥೆ ಇರುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಈಗಾಗಲೇ ಕೈಗೊಳ್ಳಲಾಗಿದೆ. ಪ್ರತಿ ತಾಲ್ಲೂಕಿನ ಉಪಖಜಾನೆಯಲ್ಲಿ ಈ ಅನುಕೂಲ ಇದೆ.

ಜವಾಹಾರ್ ರೋಜ್‌ಗಾರ್ ಯೋಜನೆಯ ಬಗ್ಗೆ

336 (788): ಶ್ರೀ ಸಿದ್ಧನಗೌಡರ್, ಪಿ. ಸಿ. (ಕಲಘಟಗಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜವಾಹರ್ ರೋಜ್‌ಗಾರ್ ಯೋಜನೆಯ ಕಾಮಗಾರಿಗಳಿಗೆ ಈಗ ಮಂಡಲ ಪಂಚಾಯ್ತಿ ಮೂಲಕ ಹಣ ಕೊಡುತ್ತಾ ಇರುವುದು ನಿಜವೇ ?

ಆ) ಹಾಗಿದ್ದಲ್ಲಿ, ಇದರಿಂದ ಕೆಲಸ ಕಾರ್ಯಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಇನ್ನು ಮುಂದೆ ಜವಾಹರ್ ರೋಜ್‌ಗಾರ್ ಯೋಜನೆಯ ಕಾರ್ಯಕ್ರಮಗಳಿಗೆ ನೀಡುವ ಹಣವನ್ನು ಬಿ. ಡಿ. ಒ.ರವರ ಮೂಲಕ ನೀಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ನಿಜ

ಆ) ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಹುಲುಮೇನ ಹಳ್ಳಿ ಗ್ರಾಮ ಪಂಚಾಯತಿಗೆ ಸೇರಿದ ಸ.ನಂ. 61ರ ವಿಸ್ತೀರ್ಣ

337 (762): ಶ್ರೀ ಪಿ. ಸಿ. ಸಿದ್ಧನಗೌಡರ್ (ಕಲಘಟಗಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೇಕೆರೆ ಹೋಬಳಿ ಹುಲುಮೇನಹಳ್ಳಿ ಗ್ರಾಮ ಪಂಚಾಯ್ತಿಗೆ ಸೇರಿದ ಮಾದಪಟ್ನ ಗ್ರಾಮದ ಸರ್ವೆ ನಂ. 61ರ ವಿಸ್ತೀರ್ಣ ಎಷ್ಟು ?

ಆ) ಮೇಲ್ಕಂಡ ಜಮೀನಿನ ಸಾಗುವಳಿ ಮಾಡುತ್ತಿರುವ ಸಾಗುವಳಿಗಾರ ಯಾರು ಇವರು ಎಷ್ಟು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ ?

ಇ) ಈ ಸಾಗುವಳಿದಾರರನ್ನು ಸರ್ಕಾರ ಈಗ ಕೈ ಬಿಡಿಸಿರಲು ಕಾರಣವೇನು ?

ಈ) ಸರ್ಕಾರ ಮತ್ತೆ ಯಾವ ಜಾಗದಲ್ಲಿ ಈ ಮೇಲ್ಕಂಡ ಸಾಗುವಳಿದಾರರಿಗೆ ಸಾಗುವಳಿ ಮಾಡಲು ಜಮೀನು ಮಂಜೂರು ಮಾಡುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಎರಡು ಎಕರೆ

ಆ) ಶ್ರೀ ಚಿಕ್ಕನರಸಯ್ಯ, ಬಿನ್ ಕೆಂಪನರಸಯ್ಯ ಎಂಬುವವರು ಸುಮಾರು 25 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ.

ಇ) ಸರದಿ ಜಮೀನು ಹಿಡುವಳಿ ಜಮೀನು ಆಗಿರುವುದರಿಂದ ಇವರನ್ನು ಖುಲ್ಲಾ ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವದಿಲ್ಲ.

ರಾಜ್ಯದಲ್ಲಿ ತೆಂಗಿನ ಬೆಳೆಗೆ ತಗುಲಿರುವ ರೋಗ ತಡೆಯಲು ತೆಗೆದುಕೊಂಡ ಕ್ರಮಗಳು

341 (941): ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ತೆಂಗು ಬೆಳೆಗೆ ರೋಗ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ಮಂತ್ರಿಗಳು):–

ಅ) ಹೌದು

ಆ) ತೆಂಗಿನ ಬೆಳೆಗೆ ಕರ್ನಾಟಕ ರಾಜ್ಯದಲ್ಲಿ ರೋಗ ಯಾವುದೂ ತೀವ್ರವಾಗಿರುವುದಿಲ್ಲ. ಆದರೆ ಕಪ್ಪುತಲೆ ಹುಳುವಿನ ಭಾದೆ ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ತುಮಕೂರು ಮೈಸೂರು, ಮಂಡ್ಯ, ಹಾಸನ, ಶಿವಮೊಗ್ಗ, ಚಿತ್ರದುರ್ಗ, ಕೋಲಾರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸ್ವಲ್ಪ ಹೆಚ್ಚಾಗಿ ಹಾಗೂ ಉತ್ತರ ಕನ್ನಡ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕಡಿಮೆ ಪ್ರಮಾಣದಲ್ಲಿ ಹರಡಿದೆ.

ಈ ಕೀಟ ನಿಯಂತ್ರಣ ಮಾಡಲು ಸರ್ಕಾರವು ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ರಾಜ್ಯದ 11 ಜಿಲ್ಲೆಗಳಲ್ಲಿ ಪರೋಪಜೀವಿಗಳನ್ನು ವೃದ್ಧಿಪಡಿಸಿ ಬಾಧೆಗೊಳಗಾದ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲು 50 ಪ್ರಯೋಗ ಶಾಲೆಗಳನ್ನು (45 ಸಣ್ಣ ಮತ್ತು 4 ದೊಡ್ಡದು ಜಿಲ್ಲಾಪರಿಷತ್ ಯೋಜನೆಯಡಿ ಮತ್ತು ಒಂದು ದೊಡ್ಡದು ರಾಜ್ಯವಲಯದಡಿ) ತೆರೆಯಲಾಗಿದೆ. ಡಿಸೆಂಬರ್ 92ರ ಅಂತ್ಯದವರೆಗೆ 57.50 ಲಕ್ಷ ಪರೋಪಜೀವಿಗಳನ್ನು 2,703 ರೈತರುಗಳ ಕೀಟ ಬಾಧೆಯಿರುವ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

2. ತೆಂಗು ಅಭಿವೃದ್ಧಿ ಮಂಡಳಿಯ ಸಹಾಯ ಧನದೊಂದಿಗೆ 3 ಬೃಹತ್ ಪ್ರಮಾಣದ ಪರೋಪಜೀವಿ ವೃದ್ಧಿಪಡಿಸುವ ಪ್ರಯೋಗಶಾಲೆಗಳನ್ನು ತಿಪಟೂರು, ಉಡುಪಿ ಮತ್ತು ಹೊಸದುರ್ಗಗಳಲ್ಲಿ ಸ್ಥಾಪಿಸಿ,

ಡಿಸೆಂಬರ್ 92ವರೆಗೆ 19.74 ಲಕ್ಷ ಪರೋಪಜೀವಿಗಳನ್ನು ಕೀಟಭಾದೆಯಿರುವ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

3. ಕೀಟಬಾಧೆ ತೀವ್ರವಾದಾಗ ಬೇರಿನ, ಕಾಂಡದ ಮುಖಾಂತರ ಸಸ್ಯಾಂತರ ಮನೋಕ್ರೋಟೋಪಾಸ್ ಕೀಟನಾಶಕವನ್ನು ಶೇಕಡ 100ರ ರಿಯಾಯಿತಿ ದರದಲ್ಲಿ ಒದಗಿಸಿ 1.07 ಲಕ್ಷ ಮರಗಳನ್ನು ಡಿಸೆಂಬರ್ 92ರ ಅಂತ್ಯದವರೆಗೆ ಸಿಂಪಡಿಸಲಾಗಿದೆ.

4. 1991–92ನೇ ಸಾಲಿನಲ್ಲಿ ನಿರುದ್ಯೋಗಿ ಯುವಕ: ಯುವತಿಯರ ಸಹಕಾರದೊಂದಿಗೆ 125 ಖಾಸಗಿ ಪ್ರಯೋಗ ಶಾಲೆಗಳನ್ನು ತೆರೆಯಲಾಗಿದೆ. 1992–93ನೇ ಸಾಲಿನಲ್ಲಿ ಡಿಸೆಂಬರ್ 92ರ ಅಂತ್ಯದವರೆಗೆ 33.01 ಲಕ್ಷ ಪರೋಪಜೀವಿಗಳನ್ನು ಖಾಸಗಿಯವರಿಂದ (ನೂರಕ್ಕೆ ರೂ. 6–00ರಂತೆ) ಪಡೆದು ಇಲಾಖೆಯ ಸಿಬ್ಬಂದಿ ಮುಖಾಂತರ ರೈತರ ತೋಟಗಳಲ್ಲಿ ಉಚಿತವಾಗಿ ಬಿಡುಗಡೆ ಮಾಡಲಾಗಿದೆ.

5. ರಾಜ್ಯವಲಯದಡಿ 28 (24 ಸಣ್ಣ ಹಾಗೂ 4 ದೊಡ್ಡ) ಪ್ರಯೋಗ ಶಾಲೆಗಳನ್ನು ತೆರೆಯಲು ಏರ್ಪಾಡು ಮಾಡಲಾಗಿದೆ. ಈ ಯೋಜನೆಯಡಿ ವಾರ್ಷಿಕ 20.00 ಲಕ್ಷ ಪರೋಪಜೀವಿಗಳನ್ನು ಉತ್ಪಾದಿಸುವ ಗುರಿಯಿದೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವು ಜನವರಿ 92ರಿಂದ ಡಿಸೆಂಬರ್ 92ರವರೆಗೆ ಖರೀದಿ ಮಾಡಿದ ವಿವಿಧ ರಸಗೊಬ್ಬರಗಳ ಪ್ರಮಾಣ

342 (1024): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳವು ಜನವರಿ 92ರಿಂದ ಡಿಸೆಂಬರ್ 92ರವರೆಗೆ ಖರೀದಿ ಮಾಡಿದ ವಿವಿಧ ರಸಗೊಬ್ಬರಗಳ ಪ್ರಮಾಣ ಎಷ್ಟು ?

ಆ) ಈ ರಸಗೊಬ್ಬರಗಳನ್ನು ಖರೀದಿ ಮಾಡಿದ ಕಂಪನಿಗಳ ಹೆಸರುಗಳೇನು ?

ಇ) ಒಂದೊಂದು ಕಂಪನಿಗೆ ಸಂದಾಯ ಮಾಡಲಾದ ಹಣ ಎಷ್ಟು ?

ಈ) ಮೇಲ್ಕಾಣಿಸಿದ ಅವಧಿಯಲ್ಲಿ ಇದ್ದ ರಸಗೊಬ್ಬರದ ಒಟ್ಟು ಬೇಡಿಕೆ ಎಷ್ಟು ?

ಉ) ದೊಡ್ಡ ಮೊತ್ತದ ರಸಗೊಬ್ಬರ ಖರೀದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) 2,98,625 ಮೆಟ್ರಿಕ್ ಟನ್.

ಆ) ಅನುಬಂಧ (ಅ)ನಲ್ಲಿ ನೀಡಲಾಗಿದೆ.

ಇ) ಅನುಬಂಧ (ಆ) ದಲ್ಲಿ ನೀಡಲಾಗಿದೆ.

ಈ) 4,98,885 ಮೆಟ್ರಿಕ್ ಟನ್.

ಉ) ಹೌದು

ANEXURE = A

Name of the Company supplying fertilisers/Name of the Fertiliser

1. Indian Farmers Fertilisers Co-op. Ltd.(IFFCO)	: IFFCO UREA, DAP, 10:26:26: 12 : 32 : 16
2. Mangalore Chemicals & Fertilisers Ltd.(MCF)	: MCF UREA, DAP
3. Rashtriya Chemicals & Fertilisers Ltd.(RCF)	: RCF UREA 20 : 20 : 0, 15 All
4. Fertiliser & Chemicals Travancoore Ltd.(FACT)	: FACT UREA, DAP, AmSo4
5. Zuari Agro Chemicals Ltd.(ZACL)	: ZUARI UREA, DAP19 All, 28 : 28 : 04
6. Southern Petro Chemicals Industries Corporation (SPIC)	: SPIC, UREA, DAP
7. Krishik Bharathi Co-op. Ltd. (KRIBHCO)	: KRIBHCO UREA
8. Madras Fertilisers Ltd.(MFL)	: MFL UREA, 17 All, 14 : 18 : 0
9. EJD Parry India Ltd.	: 16:20:0m super, Mixtures
10. Gujarath State Fertilisers Company (GSFC),	: AmSo4
11. Indian Potash Limited (IPL), :	MOP, SOP, DAP
12. National Fertilisers Ltd (NFL), :	CAN
13. Pyrites Phosphates & Chemicals Ltd.(PPCL)	: Rockphosphate, DAP
14. Steel Authority of India Ltd.(CAIL)	: CAN, AmSo4
15. Kanaka General Marketing Co.	: Super Phosphate
16. Coimbatore Pioneer Fertilisers Ltd.(CPF)	: Super Phosphate
17. Rathna Industries, :	Zinc Sulphate mixture
18. S. Boraiah & L. Ramaiah,	: Gygpsum
19. Maheshwara Agro Chemicals	
20. Gurudatta Enterprises, :	
21. Sai Agro Supplies, :	
22. Sundeep Carriers, :	
23. TAPCMS Ltd.Ranibennor,	

24. National Agricultural Co-op. Federation of India Ltd. (NAFED) : Rhyizobium Culture

25. M/s Vimpex Agencies. : "

26. Kothari Industries Corporation Ltd. : Super Phosphate

27. Deepak Fertilisers & Petro Chemicals Corporation Ltd. Pune. : 23:23:0

28. Rama Krishi Rasayana Ltd. Pune., : Super

ANEXURE - B

THE KARNATAKA CO-OPERATIVE MARKETING FEDERATION LIMITED
No. 8, CUNNINGHAM ROAD, BANGALORE - 52
STATEMENT SHOWING FIRMWISE PAYMENT FROM JANUARY 92 TO DECEMBER 92

Name of the Firm	Name of the Product	Total quantity purchased from January 92 to December 92 in Tons	Amount
1	2	3	4
M/s. IFFCO	IFFCO UREA	31	1,63,045.00
	10-26-26	20,768	8,85,10,923.00
	12-32-16	3,567	1,64,60,428.00
M/s. MCF	Mangala Urea	13,167	3,70,26,600.70
	MCF DAP	10,055	5,01,11,644.00
M/s. RCF	RCF Urea	15,997	4,44,48,732.10
	RCF 20-20-0	986	37,38,400.10
	RCF 15-15-15	12,918	4,63,70,627.25
M/s. FACT	FACT UREA	6,637	1,73,40,118.50
	AM2 SO4	3,857	94,51,826.60
	FACT DAP	10,054	4,66,81,079.60
	FACT 20-20-0	22,566	8,58,25,091.10
M/s. ZUARI	Auari Urea	9.650	2,65,46,158.00
	Zuari DAP	3,071	1,48,62,608.60
	Zuari 19-19-19	7,688	3,16,16,163.00

	Zuari 28-28-0	1,175	54,99,000.00
M/s. SPIC LTD	SPIC UREA	1,409	37,11,566.00
	SPIC DAP	1,529	72,86,743.00
KRISHCO	Kribhco Urea	53,790	13,00,86,324.70
	P.P.C.L. Urea	5,036	1,13,92,439.20
	Rock Phosphate	6,073	49,49,397.00
	P.P.C.L. D.A.P.	9,545	4,43,84,636.80
M/s. I.P.L. Ltd.	I.P.L.D.A.P.	3,359	1,57,35,361.00
	M.O.P.	23,796	4,50,93,323.00
	S.O.P.	516	27,90,270.00
MISTURE	17-17-17	5,024	1,66,58,947.25
M.F.L.	17-17-17	30,027	25,46,57,678.30
PARRY	Parry 16-20-0	1,874	65,09,905.60
	Parry Super Phosphate	1,128	23,84,200.00
M/s O.S.P.C.	Am2 SO4	3,160	78,21,736.00
M/s. N.P.L.	CAN	2,920	82,02,191.30
M/s Maheshwari and Others.	Gypsum	6,685	30,79,460.00
M/s Rathna & Mandya Chemical	Zinc Sulphate	150	14,80,375.00
		Total:	109,08,87,000.00

ರಾಜ್ಯದಲ್ಲಿ ಪ್ರತಿಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ

343 (1086): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರತಿ ಗ್ರಾಮದಲ್ಲಿ ಕುಡಿಯುವ ನೀರಿನ ಯೋಜನೆ ಸಮರ್ಪಕವಾಗಿ ಯಶಸ್ವಿಯಾಗಲು ಸರಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) 1980 ಮತ್ತು 1985ರಲ್ಲಿ ಸಮೀಕ್ಷೆ ನಡೆಸಲಾಯಿತು. ಈ ಸಮೀಕ್ಷೆಯ ಆಧಾರದ ಮೇಲೆ, ಸಮಸ್ಯಾತ್ಮಕ ಗ್ರಾಮಗಳು: ಜನವಸತಿಗಳೆಂದು ಗುರುತಿಸಲಾದ 37135 ಗ್ರಾಮಗಳು: ಜನವಸತಿಗಳು ನೀರು ಸರಬರಾಜನ್ನು ಮಾಡಬೇಕಾಯಿತು. ಈ ಗ್ರಾಮಗಳ ಪೈಕಿ ನಾಲ್ಕು ಗ್ರಾಮಗಳನ್ನು ಬಿಟ್ಟು ಮಿಕ್ಕ ಎಲ್ಲಾ ಗ್ರಾಮಗಳಿಗೆ ಒಂದು ಜಲಮೂಲವನ್ನಾದರೂ ಕೊಡಲಾಗಿದೆ. ಯಾವ ಗ್ರಾಮ: ಜನವಸತಿಗಳಲ್ಲಿ

ವಿಶೇಷವಾಗಿ ಬೇಸಿಗೆ ತಿಂಗಳುಗಳಲ್ಲಿ ಕುಡಿಯುವ ನೀರಿನ ತೀವ್ರ ತೊಂದರೆ ಅನುಭವ ಆಗುತ್ತದೆಯೋ ಅಂಥ ಗ್ರಾಮಗಳನ್ನು ಗುರುತಿಸಲು ಹೊಸದಾಗಿ ಒಂದು ಸಮೀಕ್ಷೆಯನ್ನು ತೆಗೆದುಕೊಳ್ಳಲಾಗಿದೆ. ಈ ಸಮೀಕ್ಷೆ ಆಧಾರದ ಮೇಲೆ ಈ ಎಲ್ಲಾ ಗ್ರಾಮುಗಳು: ಜನವಸತಿಗಳಿಗೆ ಇನ್ನು ಎರಡು ವರ್ಷಗಳಲ್ಲಿ ಸಾಕಷ್ಟು ಕುಡಿಯುವ ನೀರನ್ನು ಒದಗಿಸಲು ಕ್ರಿಯಾ ಯೋಜನೆಯನ್ನು ತಯಾರಿಸಲಾಗುತ್ತದೆ. ತದನುಸಾರವಾಗಿ, 1993–94ರ ಸಾಲಿಗೆ ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗೆ ಅನುದಾನ ಹಂಚಿಕೆಯನ್ನು ಶೇಕಡಾ 60ರಷ್ಟು ಹೆಚ್ಚಿಸಲಾಗಿದೆ.

ಪಟ್ಟಾ ಭೂಮಿಯಲ್ಲಿ ಗ್ರಾನೈಟ್ ಕಲ್ಲು ತೆಗೆಯದಂತೆ ತಡೆಯಾಜ್ಞೆ

344 (1088): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಟ್ಟಾ ಭೂಮಿಯಲ್ಲಿ ಗ್ರಾನೈಟ್ ಕಲ್ಲುಗಳನ್ನು ತೆಗೆಯದಂತೆ ಕಂದಾಯ ಇಲಾಖೆಯ ಕಾಯಿದೆಗೆ ತಿದ್ದುಪಡಿ ತರಲಾಗುವುದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಪಟ್ಟಾ ಜಮೀನಿನಲ್ಲಿ ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುವುದನ್ನು ತಪ್ಪಿಸುವ ಸಲುವಾಗಿ ಈಗಾಗಲೇ ಸರ್ಕಾರವು ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 70ಕ್ಕೆ ಕರ್ನಾಟಕ ಭೂ ಕಂದಾಯ ಕಾಯಿದೆ (ತಿದ್ದುಪಡಿ) ಸುಗ್ರೀವಾಜ್ಞೆ, 1993 ಮೂಲಕ ತಿದ್ದುಪಡಿ ಮಾಡಿರುತ್ತದೆ.

ರಾಜ್ಯದ ಪ್ರತಿಗ್ರಾಮದಲ್ಲಿ ಶೌಚಾಲಯಗಳು

345 (1087): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರತಿ ಗ್ರಾಮದಲ್ಲೂ ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) 1. ರಾಜ್ಯದ ಗ್ರಾಮೀಣ ಜನತೆಗೆ ಶೌಚಾಲಯಗಳನ್ನು ನಿರ್ಮಿಸಲು ಪ್ರತಿ ವರ್ಷ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತಿದ್ದು, ಹಂತಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

2. ಈ ಕಾರ್ಯಕ್ರಮವನ್ನು 1984–85ರಲ್ಲಿ ಪ್ರಾರಂಭಿಸಲಾಯಿತು. ಮತ್ತು 1986ರಲ್ಲಿ ಕೇಂದ್ರೀಯ ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮ, ಗ್ರಾಮೀಣ ಭೂರಹಿತ ಉದ್ಯೋಗ ಉತ್ಪಾದನೆ ಕಾರ್ಯಕ್ರಮ ಮತ್ತು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳಿಂದ ಪುರವಣಿಗೊಳಿಸಲಾಯಿತು.

3. 1990–91ರಲ್ಲಿ 'ನಿರ್ಮಲ ಗ್ರಾಮ ಯೋಜನೆ' ಕಾರ್ಯಕ್ರಮದಲ್ಲಿ ಮೈಸೂರು, ಕೋಲಾರ, ಬೆಳಗಾಂ ಮತ್ತು ಗುಲ್ಬರ್ಗಾ ಈ ನಾಲ್ಕು ಜಿಲ್ಲೆಗಳನ್ನು ಸೇರಿಸಲಾಯಿತು.

4. ಹೊರದೇಶಗಳಿಂದ ಸಹಾಯ ಪಡೆದಿರುವ ನೀರು ಸರಬರಾಜು ಯೋಜನೆಗಳಲ್ಲಿ ಶೌಚಾಲಯಗಳನ್ನು ಕಟ್ಟಲು ಅವಕಾಶವಿದೆ.

5. ಡಿಸೆಂಬರ್ 1992ರವರೆಗೆ, ವಿವಿಧ ಕಾರ್ಯಕ್ರಮದಡಿಗಳಲ್ಲಿ 45700 ಶೌಚಾಲಯಗಳನ್ನು ಕಟ್ಟಲಾಗಿದೆ.

ಹಾಸನ ಜಿಲ್ಲೆಯಲ್ಲಿ ಜೀತ ವಿಮುಕ್ತರ ಪುನರ್ ವಸತಿಗೆ ಒದಗಿಸಿದ ಹಣ

346 (954): ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಿಂದ ಜೀತ ವಿಮುಕ್ತಿ ಯೋಜನೆಯಲ್ಲಿ ಹಾಸನ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು ?

ಆ) ಪ್ರತಿ ತಾಲ್ಲೂಕಿನಲ್ಲಿ ಎಷ್ಟು ಜನರಿಗೆ ಪುನರ್ ವಸತಿ ಕಲ್ಪಿಸಲಾಗಿದೆ ಹಾಗೂ ಪ್ರತಿ ತಾಲ್ಲೂಕಿನಲ್ಲಿ ಖರ್ಚಾದ ಹಣವೆಷ್ಟು ?

ಇ) ಈ ಯೋಜನೆಯಲ್ಲಿ ಪ್ರತಿ ವ್ಯಕ್ತಿಗೆ ಯಾವ ಯಾವ ರೂಪದಲ್ಲಿ ಸೌಲಭ್ಯ ಒದಗಿಸಲಾಗುತ್ತಿದೆ ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹಾಸನ ಜಿಲ್ಲೆಯಲ್ಲಿ ಪುನರ್ ವಸತಿಗೊಳಿಸಬೇಕಾದ ಜೀತವಿಮುಕ್ತರು ಯಾರೂ ಇಲ್ಲದೇ ಇರುವ ಕಾರಣ ಕಳೆದ ಮೂರು ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ಯಾವ ತಾಲ್ಲೂಕಿಗೂ ಹಣ ಬಿಡುಗಡೆ ಮಾಡಿರುವುದಿಲ್ಲ.

ಆ) ಇಲ್ಲಿಯವರೆಗೆ ಹಾಸನ ಜಿಲ್ಲೆಯಲ್ಲಿ ಜೀತದಾಳುಗಳನ್ನು ಪುನರ್ ವಸತಿಗೊಳಿಸಿರುವ ವಿವರಗಳನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.

ಈ) ವಿವರಗಳನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.

ಅನುಬಂಧ -1

ಹಾಸನ ಜಿಲ್ಲೆಯಲ್ಲಿ ಗುರುತಿಸಿ,, ಬಿಡುಗಡೆ ಮಾಡಿ,, ಪುನರ್‌ವಸತಿಗೊಳಿಸಲ್ಪಟ್ಟ ಜೀತದಾಳುಗಳ ತಾಲ್ಲೂಕುವಾರು ವಿವರಗಳು.

ಕ್ರ. ಸಂ.	ತಾಲ್ಲೂಕು	ಗುರುತಿಸಲ್ಪಟ್ಟ ಜೀತದಾಳುಗಳ ಸಂಖ್ಯೆ	ಬಿಡುಗಡೆ ಹೊಂದಿದ ಜೀತ ದಾಳುಗಳ ಸಂಖ್ಯೆ	ಬಿಡುಗಡೆಯಾದ ಹಣ	ಪುನರ್‌ವಸತಿ ಹೊಂದಿದ ಜೀತ ವಿಮುಕ್ತರ ಸಂಖ್ಯೆ	ಖರ್ಚು ಮಾಡ ಲಾದ ಹಣ	ಪುನರ್‌ವಸತಿ ಯೋಜನೆಯಡಿ ಯಲ್ಲಿ ನೀಡ ಲಾದ ಸೌಲಭ್ಯ	ಎರಡು ಬಾರಿ ಗುರುತಿಸಲ್ಪಟ್ಟ ಮತ್ತು ಸುಳಿವು ಸಿಕ್ಕದವರ ಸಂಖ್ಯೆ	ಇನ್ನೂ ಪುನರ್‌ವಸತಿ ಮಾಡಬೇಕಾದ ಜೀತವಿಮುಕ್ತರ ಸಂಖ್ಯೆ
1	2	3	4	5	6	7	8	9	10
1.	ಆಲೂರು	143	143	3,48,102	126	3,48,102	ಹಾಲು ಕೊಡುವ ಹಸು,, ಎಮ್ಮೆ, ಮೇಕೆ ಮತ್ತು ಕುರಿ	17	- ಇಲ್ಲ -
2.	ಅರಕಲಗೂಡು	639	639	22,76,153	607	22,76,153	- ಅದೇ -	32	- ಇಲ್ಲ -
3.	ಅರಸೀಕೆರೆ	1813	1813	50,27,567	1554	50,27,567	- ಅದೇ -	259	- ಇಲ್ಲ -
4.	ಬೇಲೂರು	900	900	32,21.167	828	32,21,167	- ಅದೇ -	72	- ಅಲ್ಲ -
5.	ಚನ್ನರಾಯಪಟ್ಟಣ	224	224	5,34,000	203	5,34,000	- ಅದೇ -	21	- ಇಲ್ಲ -
6.	ಹಾಸನ	472	472	11,11,250	437	11,11,250	- ಅದೇ -	35	- ಇಲ್ಲ -
7.	ಹೊಳೆನರಸೀಪುರ	93	93	1,30,000	89	1,30,000	- ಅದೇ -	04	- ಇಲ್ಲ -
8.	ಸಕಲೇಶಪುರ	535	535	16,84,515	360	16,84,515	- ಅದೇ -	175	- ಇಲ್ಲ -
	ಒಟ್ಟು	4819	4819	1,43,32,754	4204	1,43,32,754		615	ಇಲ್ಲ

ರಾಸಾಯನಿಕ ಗೊಬ್ಬರಗಳ ಬೆಲೆ ಏರಿಕೆ

347 (891): ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯಾದ್ಯಂತ ಕೃಷಿ ಉತ್ಪನ್ನಗಳ ಬೆಲೆ ಗಣನೀಯವಾಗಿ ಕುಸಿಯುತ್ತಿದ್ದು, ಅದರ ರಾಸಾಯನಿಕ ಗೊಬ್ಬರಗಳ ಬೆಲೆ ಅಧಿಕವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ ರಾಸಾಯನಿಕ ಗೊಬ್ಬರದ ಅಧಿಕ ಬೆಲೆಗಳನ್ನೂ ತಗ್ಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ತಿಳಿದಿದೆ.

ಆ) ಬೆಲೆ ಹೆಚ್ಚಿರುವ ರಂಜಕ, ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಸರಬರಾಜು ಮಾಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ರಾಜ್ಯದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ತೆಗೆದುಕೊಂಡ ಕ್ರಮಗಳು

348 (660): ಶ್ರೀ ಶಿವಾನಂದ ಎಸ್. ಕೌಜಲಗಿ (ಬೈಲಹೊಂಗಲ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಯನ್ನು ಮಹಾರಾಷ್ಟ್ರದ ಮಾದರಿಯಲ್ಲಿ ಹೆಚ್ಚಿಗೆ ಅಭಿವೃದ್ಧಿ ಆಗುವಂತೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಆ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಮಂದಗತಿಯಿಂದ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಅಭಿವೃದ್ಧಿಪಡಿಸಲು ಯಾವ ಯಾವ ಕ್ರಮವನ್ನು ಸರ್ಕಾರದವರು ಹಾಕಿಕೊಂಡಿರುವರು ?

ಈ) ಮಹಾರಾಷ್ಟ್ರದಲ್ಲಿ ತೋಟಗಾರಿಕೆ ಇಲಾಖೆಯವರು ರೈತರಿಗೆ ಕೊಡುತ್ತಿರುವ ಸವಲತ್ತುಗಳನ್ನು ಕರ್ನಾಟಕದಲ್ಲಿಯೂ ಕೂಡ ತೋಟಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ಕೊಡಲು ಯೋಚಿಸುವರೇ ?

ಉ) ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಕೆಲಸಗಳು ಮಂದಗತಿಯಿಂದ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಎಷ್ಟು ಹಣ ಖರ್ಚಾಗಿರುವುದು ?

ಊ) ಹಾಗಿದ್ದಲ್ಲಿ ಇಲ್ಲಿ ಹೆಚ್ಚಿಗೆ ಅಭಿವೃದ್ಧಿಪಡಿಸಲು ಯಾವ ಯಾವ ಕ್ರಮಗಳನ್ನು ಹಾಕಿಕೊಳ್ಳಲಾಗಿದೆ ?

ಋ) ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಈ ವರ್ಷ ಒದಗಿಸಲಾಗಿದೆ ? ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು ?

ೠ) ತೋಟಗಾರಿಕೆ ಅಭಿವೃದ್ಧಿಗಾಗಿ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಹಣವನ್ನು ವೆಸ್ಟರ್ನ್‌ಘಾಟಿನಲ್ಲಿ (ಮಲೆನಾಡ ಅಭಿವೃದ್ಧಿ) ಯೋಜನೆಯಲ್ಲಿ ಒದಗಿಸಲಾಗಿದೆ.

ಎ) ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಲು ಮಾನ್ಯ ತೋಟಗಾರಿಕೆ ಸಚಿವರು ಆದೇಶ ನೀಡಿದ್ದರೂ ಇನ್ನೂ ಯಾವುದೇ ಅಭಿವೃದ್ಧಿಪಡಿಸದೇ ಇರುವುದಕ್ಕೆ ಕಾರಣಗಳೇನು ?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಮಹಾರಾಷ್ಟ್ರದಲ್ಲಿ ತೋಟಗಾರಿಕೆ ಅಭಿವೃದ್ಧಿಯ ಬಗೆಗಿನ ಮಾಹಿತಿಗಳನ್ನು ಪಡೆದು ಅಧ್ಯಯಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಇಲ್ಲ, ಅಭಿವೃದ್ಧಿ ತೀವ್ರಗತಿಯಿಂದ ನಡೆಯುತ್ತಿದೆ. ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ.

ಇ) ಉದ್ಭವಿಸುವುದಿಲ್ಲ.

ಈ) ಮಹಾರಾಷ್ಟ್ರದಲ್ಲಿ ರೈತರಿಗೆ ಕೊಡುವ ಸವಲತ್ತುಗಳ ಬಗ್ಗೆ ಇಲಾಖೆಯಲ್ಲಿ ಮಾಹಿತಿಗಳು ಇರುವುದಿಲ್ಲ. ಸದರಿಯವರಿಂದ ಮಾಹಿತಿ ಪಡೆದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ.

ಋ) 1992-93ನೇ ಸಾಲಿಗೆ ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಎಲ್ಲಾ ಜಿಲ್ಲಾವಲಯ, ರಾಜ್ಯವಲಯ, ಕೇಂದ್ರೀಯ ಮತ್ತು ಕೇಂದ್ರೀಯ ಪುರಸ್ಕೃತ ಯೋಜನೆಗಳಿಂದ ಒಟ್ಟು ರೂ. 52.372 ಲಕ್ಷಗಳನ್ನು ಒದಗಿಸಲಾಗಿದೆ. ಜನವರಿ 93ರ ಅಂತ್ಯದವರೆಗೆ ರೂ. 13.910 ಲಕ್ಷ ಖರ್ಚಾಗಿರುತ್ತದೆ.

ೠ) 1992-93ನೇ ಸಾಲಿಗೆ ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ರೂ. 9.29 ಲಕ್ಷ ಒದಗಿಸಲಾಗಿದೆ.

ಎ) ಸವದತ್ತಿ ತಾಲ್ಲೂಕಿನ ಶ್ರೀ ಕ್ಷೇತ್ರ ಸೊಗಲದಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸಲು ದೇವಾಲಯ ಟ್ರಸ್ಟ್‌ರವರು ಜಮೀನನ್ನು ತೋಟಗಾರಿಕೆ ಇಲಾಖೆಗೆ ಇದುವರೆಗೆ ವರ್ಗಾಯಿಸಿರುವುದಿಲ್ಲವಾದ್ದರಿಂದ ಇನ್ನು ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಲಾಗಿಲ್ಲ.

ರಾಜ್ಯದಲ್ಲಿ ಹತ್ತಿ ಬೆಳೆಗೆ ಯೋಗ್ಯ ಬೆಲೆ ದೊರೆಯದಿದ್ದರಿಂದ ರೈತರಿಗೆ ತೊಂದರೆ.

349 (661): ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬೆಳೆದ ಹತ್ತಿಗೆ ಯೋಗ್ಯ ಬೆಲೆ ದೊರಕದೆ ಇದ್ದ ಕಾರಣ ಹತ್ತಿಯ ಧಾರಣೆ ಕುಸಿದಿದ್ದು ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ರೈತರು ಬೆಳೆದ ಹತ್ತಿಯನ್ನು ಯೋಗ್ಯ ಬೆಲೆಗೆ ಮಾರಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು ?

ಇ) ಉತ್ತರ ಕರ್ನಾಟಕದಲ್ಲಿ ಯಾವ ಯಾವ ಎ.ಪಿ.ಎಮ್.ಸಿಯಾರ್ಡ್‌ದಲ್ಲಿ ಎಷ್ಟು ಹತ್ತಿಯು ಮಾರದೇ ಹಾಗೆಯೇ ಉಳಿದಿರುವುದು ?

ಈ) ಸಿಸಿಐದವರು ಬೆಳಗಾವಿ ಜಿಲ್ಲೆ ಬೈಲಹೊಂಗಲ ಎಪಿಎಂಸಿಯಾರ್ಡಿನಲ್ಲಿ ಹಾಗೂ ಕರ್ನಾಟಕ ಫೆಡ್‌ರೇಷನ್‌ರವರು ಹತ್ತಿಯನ್ನು ಖರೀದಿ ಮಾಡದೇ ಇರುವುದರಿಂದ ಹತ್ತಿಯ ಧಾರಣೆ ದಿನ ದಿನಕ್ಕೆ ಇಳಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ರಾಜ್ಯದಲ್ಲಿ ಸಿಸಿಐದವರು ಹಾಗೂ ಫೆಡರೇಷನ್‌ರವರು ಹತ್ತಿಯನ್ನು ಖರೀದಿ ಮಾಡುವಂತೆ ಮಾಡಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೆ ?

ಊ) ಕೃಷಿ ಇಲಾಖೆಯವರು ರೈತರಿಗೆ ಯೋಗ್ಯ ಬೆಲೆ ಬರುವಂತೆ ಮಾಡಲು ಯಾವ ಯಾವ ಕ್ರಮವನ್ನು ಕೈಗೊಂಡಿರುವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ಬಂದಿದೆ.

ಆ) ರೈತರಿಗೆ ಹತ್ತಿಯ ಉತ್ತಮ ಬೆಲೆ ದೊರಕುವ ಸಲುವಾಗಿ ಭಾರತೀಯ ಹತ್ತಿ ನಿಗಮ ಹಾಗೂ ಕೇಂದ್ರ ಸರ್ಕಾರಕ್ಕೆ ತಂತಿ ಸಂದೇಶ ಹಾಗೂ ಪತ್ರಗಳ ಮೂಲಕ ಪ್ರಾರ್ಥಿಸಿ ಹೆಚ್ಚು ಹತ್ತಿಯನ್ನು ಕೊಂಡುಕೊಳ್ಳಲು ಕೋರಲಾಗಿದೆ, ಹಾಗೂ ಭಾರತೀಯ ಹತ್ತಿ ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಹಾಗೂ ನೂಲು ಗಿರಣಿಯ ಮಹಾಮಂಡಳಿ ಇವರೊಂದಿಗೆ ಚರ್ಚಿಸಿ ಅಧಿಕ ಹತ್ತಿಯನ್ನು ಖರೀದಿಸಲು ಒತ್ತಾಯಪೂರ್ವಕವಾಗಿ ಕೋರಲಾಯಿತು. ಇದಲ್ಲದೆ, ಮಾನ್ಯ ಕೃಷಿಮಂತ್ರಿಗಳು, ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳೊಡನೆ ವಿಷಯವನ್ನು ಪ್ರಸ್ತಾಪಿಸಿ ಕೇಂದ್ರ ಸರ್ಕಾರವು ಹೆಚ್ಚಿನ ರೀತಿಯಲ್ಲಿ ಹತ್ತಿಯನ್ನು ಖರೀದಿಸಲು ಕೋರಲಾಯಿತು. ಭಾರತೀಯ ಹತ್ತಿ ನಿಗಮವು ಕರ್ನಾಟಕದಲ್ಲಿ ಹೆಚ್ಚು ಹತ್ತಿಯನ್ನು ಖರೀದಿಸಲಾಗುವುದು ಎಂದು ತಿಳಿಸಿದೆ.

ಇ) ಉತ್ತರ ಕರ್ನಾಟಕದ ಮಾರುಕಟ್ಟೆಗಳಲ್ಲಿ ದಿನಾಂಕ: 31–1–93ರ ವಾರದಲ್ಲೂ ಹಳಿಯಾಳದಲ್ಲಿ 2033 ಕ್ವಿಂಟಾಲ್, ನರಗುಂದ 5000 ಕ್ವಿಂಟಾಲ್, ರಾಣಿಬೆನ್ನೂರು 2614 ಕ್ವಿಂಟಾಲ್, ಹುಬ್ಬಳ್ಳಿ 8234 ಕ್ವಿಂಟಾಲ್, ಬಾಗಲಕೋಟೆ 115 ಕ್ವಿಂಟಾಲ್, ಬಿಜಾಪುರ 7258 ಕ್ವಿಂಟಾಲ್, ಬೈಲ ಹೊಂಗಲ, 17100 ಕ್ವಿಂಟಾಲ್ ಹಾಗೂ ಸವದತ್ತಿ ಮಾರುಕಟ್ಟೆಯಲ್ಲಿ 34497 ಕ್ವಿಂಟಾಲ್ ಒಟ್ಟು 76851 ಕ್ವಿಂಟಾಲ್ ಹತ್ತಿಯು ವಾರಾಂತ್ಯದಲ್ಲಿ ಉಳಿದಿರುತ್ತದೆ. (31–1–93ರವರೆಗೆ). ಆದರೆ ಎಲ್ಲಾ ಮಾರುಕಟ್ಟೆಗಳಲ್ಲಿ ಪ್ರತಿವಾರ ಟೆಂಡರದಲ್ಲಿ ಹತ್ತಿಯ ಮಾರಾಟ ನಡೆಯುತ್ತಿರುತ್ತದೆ.

ಈ) ಇಲ್ಲ. ಸಿಸಿಐದವರು ಬೈಲಹೊಂಗಲ ಮಾರುಕಟ್ಟೆಯಲ್ಲಿ 13–2–93ರವರೆಗೆ ಒಟ್ಟು 17253 ಕ್ವಿಂಟಾಲ್‌ದಷ್ಟು ಹತ್ತಿಯನ್ನು ಖರೀದಿ ಮಾಡಿರುತ್ತಾರೆ. ಗರಿಷ್ಟ ಬೆಲೆ ರೂ. 1510 ಕನಿಷ್ಠ ದರ 950 ರೂ.ಗಳಾಗಿರುತ್ತದೆ. ಸಿಸಿಐದವರು ಹತ್ತಿ ಬೆಲೆಯು ಕುಸಿಯುವುದನ್ನು ತಡೆಯಲು ಹತ್ತಿ ಖರೀದಿಯನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಇನ್ನು ಹೆಚ್ಚು ಖರೀದಿಸಲು ಒತ್ತಾಯಿಸಲಾಗುತ್ತಿದೆ.

ಉ) ಈ ಬಗ್ಗೆ ಸೂಕ್ತವಾದ ಕ್ರಮ ನಡೆದಿದೆ.

ಊ) 1. ರಾಜ್ಯದಲ್ಲಿ ಹತ್ತಿಯ ಗುಣಮಟ್ಟವನ್ನು ಪರೀಕ್ಷಿಸಲು ರೈತರು ಬೆಳೆದ ಹತ್ತಿಗೆ ಒಳ್ಳೆಯ ಬೆಲೆ ಬರುವಂತೆ ಮಾಡಲು 4 ಹತ್ತಿ ವರ್ಗೀಕರಣ ಕೇಂದ್ರಗಳನ್ನು ಸೌಂದತ್ತಿ, ಹುಬ್ಬಳ್ಳಿ, ಬಳ್ಳಾರಿ ಮತ್ತು ರಾಯಚೂರಿನಲ್ಲಿ ಈಗಾಗಲೇ ಸ್ಥಾಪಿಸಿ ಕಾರ್ಯ ನಿರ್ವಹಿಸುತ್ತಿವೆ.

2. ಭಾರತೀಯ ಹತ್ತಿ ನಿಗಮ, ಕರ್ನಾಟಕ ರಾಜ್ಯ ಮಹಾಮಂಡಳಿ ಹಾಗೂ ಕರ್ನಾಟಕ ರಾಜ್ಯ ನೂಲು ಗಿರಣಿಗಳ ಮಹಾಮಂಡಳದವರನ್ನು ರಾಜ್ಯದಲ್ಲಿ ಬೆಳೆದ ಹತ್ತಿಯನ್ನು ಹೆಚ್ಚಾಗಿ ಖರೀದಿ ಮಾಡಲು ಒತ್ತಾಯಿಸಲಾಗುತ್ತಿದೆ.

ದ. ಕನ್ನಡ ಜಿಲ್ಲೆಯಲ್ಲಿ ಸ್ಮಶಾನ ಮತ್ತು ದಫನ್ ಜಾಗ ನಿಗದಿ

350 (74): ಶ್ರೀ ಎಂ. ಇದಿನಬ್ಬ, (ಉಳ್ಳಾಲ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಗ್ರಾಮಗಳಲ್ಲೂ ಕಡ್ಡಾಯವಾಗಿ ಸ್ಮಶಾನ ಜಾಗವನ್ನು ಮತ್ತು ದಫನ್ ಜಾಗವನ್ನು ನಿಗದಿಪಡಿಸಲಾಗಿದೆಯೇ ?

ಆ) ಹಾಗೆ ಮಾಡದೆ ಇದ್ದಲ್ಲಿ ಸ್ಮಶಾನ ಮತ್ತು ದಫನ್‌ಗೆ ಜಮೀನು ಒದಗಿಸಿಕೊಡಲಾಗುವುದೇ ಮತ್ತು ಅದನ್ನು ಯಾವಾಗ ಒದಗಿಸಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) ಹೌದು

ಆ) ಎಲ್ಲಿ ಸಾಕಷ್ಟು ಸ್ಮಶಾನ ಭೂಮಿಯಿಲ್ಲವೋ ಅಂತಹ ಕಡೆಗಳಲ್ಲಿ ಸ್ಮಶಾನಕ್ಕಾಗಿ ಸರ್ಕಾರದ ಭೂಮಿಯು ಲಭ್ಯವಿದ್ದರೆ ಕೊಡುವುದಕ್ಕೆ ಅಥವಾ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಕೊಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು.

ಚಿತ್ತಾಪುರ ತಾಲ್ಲೂಕಿನ ಸಂಕನೂರು ಗ್ರಾಮಕ್ಕೆ ಕುಡಿಯುವ ನೀರಿನ ಸರಬರಾಜಿನ ವ್ಯವಸ್ಥೆ

352 (883): ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸಂಕನೂರು ಗ್ರಾಮಕ್ಕೆ ಕುಡಿಯುವ ನೀರಿಗಾಗಿ ಕೊಳವೆ ಬಾವಿಯನ್ನು ತೋಡುವ ಯೋಜನೆ ಮಂಜೂರಾಗಿದ್ದು, ಯಾವುದೇ ಕ್ರಮ ತೆಗೆದುಕೊಂಡಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಇಲ್ಲಿಯವರೆವಿಗೆ ಈ ಯೋಜನೆಗೆ ಖರ್ಚಾಗಿರುವ ಹಣವೆಷ್ಟು ?

ಇ) ಕಳೆದ ವರ್ಷದ ಸದನದಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಈ ಗ್ರಾಮಕ್ಕೆ ಒದಗಿಸುವುದಾಗಿ ಭರವಸೆ ನೀಡಿದ್ದು ಈ ಬಗ್ಗೆ ಕಾರ್ಯಗತಗೊಳಿಸದಿರಲು ಕಾರಣವೇನು ?

ಈ) ಈಗಲಾದರೂ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಈಗಾಗಲೇ ಯೋಜನೆಯು ಪ್ರಗತಿಯಲ್ಲಿದೆ.

ಆ) 1993 ಜನವರಿವರೆವಿಗೆ ರೂ. 50,000 ಖರ್ಚಾಗಿದೆ.

ಇ) 1992–93ರ ಅನುಬಂಧ – 'ಇ' ನಲ್ಲಿ ಈ ಯೋಜನೆಯನ್ನು ರಾಜ್ಯ ವಲಯದಡಿ ಸೇರಿಸಲಾಗಿದೆ ಮತ್ತು ಇದನ್ನು ಕಾರ್ಯಗತಗೊಳಿಸಲು ಕ್ರಮವನ್ನು ಕೈಗೊಳ್ಳಲಾಗಿದೆ.

ಈ) ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿರುವ ಪಟೇಲರಿಗೆ ಮಾಸಾಶನ

353 (1059): ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪಟೇಲರಿಗ ಮಾಸಾಶನ ನೀಡಲಾಗುತ್ತಿದೆಯೇ ?

ಆ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು ?

ಇ) ಶ್ಯಾನುಭೋಗರಿಗೆ ಮಾಸಾಶನ ನೀಡಿ ಪಟೇಲರುಗಳಿಗೆ ನೀಡದೆ ಇರುವುದು ತಾರತಮ್ಯ ಅಲ್ಲವೇ ?

ಈ) ಪಟೇಲರಿಗೆ ಮಾಸಾಶನ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಉ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಜನ ಪಟೇಲರಿದ್ದಾರೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):-

ಅ) ಹೌದು. ದಿನಾಂಕ 15-8-84ರಿಂದ ಮಾಸಿಕ 100.00 ರೂ.ಗಳ ಅನುಕಂಪ ಭತ್ಯೆ ನೀಡಲಾಗುತ್ತಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉಭಯುತ್ರಯರಿಗೂ ನೀಡಲಾಗುತ್ತಿದೆ. ಆದರೆ ಮಾಜಿ ಶ್ಯಾನುಭೋಗರಿಗೆ ದಿನಾಂಕ 1-7-90 ರಿಂದ ಮಾಸಿಕ 500.00 ರೂ.ಗಳ ಅಡ್‌ಹಾಕ್ ಪಿಂಚಣಿಯನ್ನು ಮಾಜಿ ಪಟೇಲರುಗಳಿಗೆ ದಿನಾಂಕ 15-8-84ರಿಂದ ಮಾಸಿಕ ರೂ. 100.00 ಅನುಕಂಪ ಭತ್ಯೆಯನ್ನು ನೀಡಲಾಗುತ್ತಿದೆ.

ಈ) ಪರಿಶೀಲಿಸಲಾಗುತ್ತಿದೆ.

ಉ) 40

ರಾಜ್ಯದಲ್ಲಿ ಸಣ್ಣ ನೀರು ಸರಬರಾಜು ಯೋಜನೆಯನ್ನು ಪೂರೈಕೆ ಮಾಡಿದ ಗ್ರಾಮಗಳ ಸಂಖ್ಯೆ

354 (1056): ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಷ್ಟು ಗ್ರಾಮಗಳಲ್ಲಿ ಸಣ್ಣನೀರು; ಸರಬರಾಜು ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ ?

ಆ) ಇನ್ನು ಎಷ್ಟು ಗ್ರಾಮಗಳಿಗೆ ಸಣ್ಣ ನೀರು ಸರಬರಾಜು ಯೋಜನೆಯನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ ?

ಇ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಈ ಯೋಜನೆಯನ್ನು ಒದಗಿಸಲಾಗಿದೆ ಮತ್ತು ಎಷ್ಟು ಗ್ರಾಮಗಳಿಗೆ ಒದಗಿಸಲು ಉದ್ದೇಶಿಸಲಾಗಿದೆ ?

ಈ) ಮಾಗಡಿ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಇದನ್ನು ಪರಿಗಣಿಸಲು ಸರ್ಕಾರದ ಕ್ರಮಗಳೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–

ಅ) 5263 (31–3–92 ರವರೆಗೆ)

ಆ) 670 (1992–93)

ಇ) 1) 54
2) 1992 – 93 ರ ಸಾಲಿನಲ್ಲಿ 23 ಗ್ರಾಮಗಳಲ್ಲಿ ಸಣ್ಣ ನೀರು ಸರಬರಾಜು ಯೋಜನೆಯನ್ನು ಒದಗಿಸಲು ಉದ್ದೇಶಿಸಲಾಗಿದೆ.

ಈ) ಹೌದು

ಉ) ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಲಾಗುತ್ತಿದೆ ಮತ್ತು ಆ ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜನ್ನು ಮುಂದಿನ ಎರಡು ವರ್ಷಗಳಲ್ಲಿ ಉತ್ತಮಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿರುವ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ

355 (1057): ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ತಾಂಡಾಗಳ ಸಂಖ್ಯೆ ಎಷ್ಟು ?

ಆ) ಈ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದೇ ?

ಇ) ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವಾಗ ಅನುಸರಿಸುವ ಕ್ರಮಗಳೇನು ?

ಈ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ತಾಂಡಾಗಳಿವೆ ಹಾಗೂ ಅವುಗಳನ್ನು ಯಾವಾಗ ಕಂದಾಯ ಗ್ರಾಮಗಳೆಂದು ಪರಿವರ್ತಿಸಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) 1,365

ಆ) ಹೌದು.

ಇ) ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ – 3 ರ ಪ್ರಕಾರ ನಿಗದಿಪಡಿಸಿರುವ ಜನಸಂಖ್ಯೆ, ವಿಸ್ತೀರ್ಣ ಕಂದಾಯ ಬಾಕಿ ಆಡಳಿತ ಅನುಕೂಲತೆ, ಇವುಗಳ ಆಧಾರದ ಮೇಲೆ.

ಈ) 3 ತಾಂಡಾಗಳಿವೆ.

ಅರ್ಹವಿರುವ ತಾಂಡಾಗಳನ್ನು ಗ್ರಾಮಗಳನ್ನಾಗಿ 6(ಆರು) ತಿಂಗಳೊಳಗೆ ಪರಿವರ್ತಿಸಲಾಗುವುದು.

ಬೈಲಹೊಂಗಲ ತಾಲ್ಲೂಕುಗಳ ಪೈಕಿ ದೇವಲಾಪುರ ಗ್ರಾಮದಲ್ಲಿ ಪರಿಶಿಷ್ಟರಿಗೆ ಸ್ಮಶಾನ

557 (858): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ದೇವಲಾಪ್ಪುರ ಗ್ರಾಮದಲ್ಲಿ ಪರಿಶಿಷ್ಟ ಜನಾಂಗದವರು ಹುಗಿಯುತ್ತಿದ್ದ ರುದ್ರ ಭೂಮಿಯ ಬಗ್ಗೆ ಕೋರ್ಟಿನಲ್ಲಿ ವ್ಯಾಜ್ಯ ನಡೆದದ್ದರಿಂದ ಆ ಜನರಿಗೆ ಶವ ಸಂಸ್ಕಾರಕ್ಕೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರಿಗೆ ಶವ ಸಂಸ್ಕಾರಕ್ಕೆ 2 ಎಕರೆ ಭೂಮಿಯನ್ನು ಸ್ಮಶಾನಕ್ಕಾಗಿ ಸರ್ಕಾರವು ಮಂಜೂರು ಮಾಡುವುದೇ ?

ಇ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಪೈಕಿ ಬೈಲವಾಡ ಮತ್ತು ಸವದತ್ತಿ ತಾಲ್ಲೂಕು ಪೈಕಿ ಹಾರುಗೊಪ್ಪದ ಗ್ರಾಮದ ಜನರಿಗೆ ಸ್ಮಶಾನ ಇಲ್ಲದ್ದರಿಂದ ಶವ ಸಂಸ್ಕಾರಕ್ಕೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ಗ್ರಾಮಗಳ ಜನರಿಗೆ ರುದ್ರ ಭೂಮಿಗಾಗಿ ಜಮೀನು ಮಂಜೂರು ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಈ) ಬೆಳಗಾವಿ ಜಿಲ್ಲೆಯಲ್ಲಿ ಶವ ಸಂಸ್ಕಾರಕ್ಕಾಗಿ ರುದ್ರ ಭೂಮಿ ಇಲ್ಲದಿರುವ ಗ್ರಾಮಗಳು ಹಾಗೂ ಸದರಿ ಭೂಮಿಗೆ ರಸ್ತೆ ಸೌಲಭ್ಯಗಳಿಲ್ಲದ ಗ್ರಾಮಗಳಾವುವು (ತಾಲ್ಲೂಕುವಾರು, ಗ್ರಾಮವಾರು ಪ್ರತ್ಯೇಕ ವಿವರ ನೀಡುವುದು)

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):-

ಅ) ಹೌದು

ಆ) ಹೌದು ರುದ್ರ ಭೂಮಿಗಾಗಿ ಭೂ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಇ) ಹೌದು ರುದ್ರಭೂಮಿಗಳಿಗಾಗಿ ಭೂ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಈ) ತಾಲ್ಲೂಕುವಾರು, ರುದ್ರ ಭೂಮಿಗಳು ಇಲ್ಲದ ಗ್ರಾಮಗಳ ಸಂಖ್ಯೆ:

ತಾಲ್ಲೂಕುವಾರು	ಗ್ರಾಮಗಳ ಸಂಖ್ಯೆ
ಹುಕ್ಕೇರಿ	78
ಬೈಲಹೊಂಗಲ	86
ಗೋಕಾಕ್	50
ಸೌಂದತ್ತಿ	57
ಚಿಕ್ಕೋಡಿ	29
ರಾಯ್‌ಬಾಗ್	30

ಬೈಲಹೊಂಗಲ ತಾಲ್ಲೂಕು ಉದುಕೇರಿ ಗ್ರಾಮದ ರುದ್ರಭೂಮಿಗೆ ಮಾತ್ರ ರಸ್ತೆ ಸೌಲಭ್ಯವಿಯವುದಿಲ್ಲ.

1989 ಮತ್ತು 90–31ರ ಸಾಲಿನಲ್ಲಿ ಟಿ.ಎ.ಪಿ.ಸಿ.: ಎಂ.ಎಸ್.ಗಳಿಗೆ ಸರ್ಕಾರದಿಂದ ಸಕ್ಕರೆ ವ್ಯತ್ಯಾಸ ದರ ಪಾವತಿ ಬಾಕಿ

355 (1041): ಶ್ರೀ ರುಕ್ಮಯ್ಯಾ ಪೂಜಾರಿ (ವಿಟ್ಲ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1989–90 ಮತ್ತು 1990–91ರ ಸಾಲುಗಳಲ್ಲಿ, ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳಿಗೆ ಸರ್ಕಾರದಿಂದ ಸಕ್ಕರೆ ವ್ಯತ್ಯಾಸ ದರ ಪಾವತಿಸಲು ಎಷ್ಟು ಬಾಕಿ ಇದೆ ?

ಆ) ಬಾಕಿಯಾಗಲು ಕಾರಣಗಳೇನು ? ಇದರಿಂದ ಟಿ.ಎ.ಪಿ.ಸಿ.ಎಂ.ಎಸ್‌ಗಳು ನಷ್ಟವನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಇದನ್ನು ತಕ್ಷಣ ಪಾವತಿಸಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: (ಸಹಕಾರ ಸಚಿವರು):–

ಅ) 413.16 ಲಕ್ಷ ರೂಪಾಯಿಗಳು

ಆ) ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯಿಂದ ಈ ಹಣ ಬರಬೇಕಾಗಿದ್ದು ಬಾಕಿ ಇರುತ್ತದೆ. ಹಣ ಸಕಾಲಕ್ಕೆ ಬರದೇ ಇರುವುದರಿಂದ ಸಂಘಗಳು ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಹೌದು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮೊದಲು ಮಂತ್ರಿಗಳ ಗೈರು ಹಾಜರಿ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅವರು ಅವರ ಬ್ರದರ್ ಡಾಟರ್ ಮದುವೆಗೆ ಹೋಗಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ:-- ಅವರು ಮದುವೆಗೆ ಹೋಗಿದ್ದರೆ ಬಹಳ ಸಂತೋಷ. ಆದರೆ ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಈ ಸದನಕ್ಕೆ ಬರುವುದಿಲ್ಲ ಎಂದು ಮೊದಲು ನಿಮಗೆ ತಿಳಿಸಬೇಕು. ಅವರು ನಿಮಗೆ ತಿಳಿಸಿದ್ದಾರೆಯೇ ಅಥವಾ ಪತ್ರ ಬರೆದಿದ್ದಾರೆಯೇ ಎನ್ನುವುದನ್ನು ಮೊದಲು ಹೇಳಿ.

ಅಧ್ಯಕ್ಷರು:– ಪತ್ರ ಬರೆದಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ. ತಮಗೆ ಗೊತ್ತಿರುವ ಹಾಗೆ, ರಾಜ್ಯದಲ್ಲಿ ಕಳೆದ 3–4 ದಿವಸಗಳಿಂದ ಮನೆಯಲ್ಲಿದ್ದಂತಹ ನೂರಾರು ಬಿಜೆಪಿ ಕಾರ್ಯಕರ್ತರನ್ನು ಕರೆದುಕೊಂಡು ಬಂದು ಜೈಲಿಗೆ ಹಾಕಿದ್ದಾರೆ.

ಈ ರಾಜ್ಯದಲ್ಲಿ ಏನು ಸರ್ವಾಧಿಕಾರಿ ಸರ್ಕಾರ ನಡೆಯುತ್ತಿದೆಯೇ ? ರಾಜ್ಯದಲ್ಲಿ ಹೇಳುವವರು ಕೇಳುವವರು ಯಾರು ಇಲ್ಲವೇ ಇವತ್ತು ಸೆಂಟ್ರಲ್ ಜೈಲಿನಲ್ಲಿ ಕೆಲವರು ಇದ್ದಾರೆ, ಬಳ್ಳಾರಿ ಜೈಲಿಗೆ ಕೆಲವರನ್ನು ಕಳುಹಿಸಿಕೊಟ್ಟಿದ್ದಾರೆ. ಮನೆಯಲ್ಲಿದ್ದಂತಹವರನ್ನು ಅರೆಸ್ಟ್ ಮಾಡಿ ಇವತ್ತು ಜೈಲಿಗೆ ಕಳುಹಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ಮನೆಯಲ್ಲಿದ್ದಂತಹ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರನ್ನು ಬಂಧಿಸಿ ಸೆಂಟ್ರಲ್ ಜೈಲಿಗೆ ಬಳ್ಳಾರಿ ಜೈಲಿಗೆ ಕಳುಹಿಸಿರುವ ಕಾರಣ ಏನು ?

(ಗೊಂದಲ)

ಅಧ್ಯಕ್ಷರು:- ನಾನು ಹೇಳುವುದನ್ನು ತಾವು ಕೇಳುತ್ತೀರೋ ಅಥವಾ ನೀವು ಇದೇ ರೀತಿ ಮಾತನಾಡುತ್ತೀರೋ ?

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಕರ್ನಾಟಕದಲ್ಲಿ ಹೊಗೆಸೊಪ್ಪು ಬೆಳೆಗಾರರಿಂದ ಹೊಗೆಸೊಪ್ಪು ಖರೀದಿಯಲ್ಲಿ ತೊಂದರೆ

† ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ):- ಮಾನ್ಯ ಅಧ್ಯಕ್ಷರೆ, ನಾನು ನಾಲ್ಕು ದಿವಸಗಳ ಹಿಂದೆ ಕಾಲ್ ಅಟೆನ್‌ಷನ್ ಕೊಟ್ಟಿದ್ದೆ, ಅದಕ್ಕೆ ಅವಕಾಶ ಇಲ್ಲವೆಂದು ಈಗ ಶೂನ್ಯ ವೇಳೆಯಲ್ಲಿ ಅವಕಾಶ ಕೊಟ್ಟಿದ್ದೀರಿ. ಸಂತೋಷ. ಈಗ ಕರ್ನಾಟಕದಲ್ಲಿ ಹೊಗೆಸೊಪ್ಪು ಬೆಳೆಯುತ್ತಿದ್ದಾರೆ. ಇದರಲ್ಲಿ 30–50 ಸಾವಿರ ಜನ ಹೊಗೆಸೊಪ್ಪು ಬೆಳೆದು ಜೀವನ ಮಾಡುತ್ತಿದ್ದಾರೆ. ಹೊಗೆಸೊಪ್ಪು ಬೆಳೆದು ಈಗಾಗಲೇ ಮಾರುಕಟ್ಟೆಗೆ ಬಂದಿದೆ. ಬಂದು ಎಲ್ಲಾ ಕಡೆ ಮಾರ್ಕೆಟ್ ನಡೆಯುತ್ತಿದೆ. ನಾನು ಇಷ್ಟೊಂದು ತರಾತುರಿಯಲ್ಲಿ ಈ ವಿಷಯವನ್ನು ತರಲು ಕಾರಣವೇನೆಂದರೆ, ಇನ್ನು ಎರಡು ದಿವಸಗಳಲ್ಲಿ ಮಾರ್ಕೆಟ್ ಮುಗಿಯುವ ಹಂತದಲ್ಲಿದೆ. ಇದರ ಬಗ್ಗೆ ಪ್ರಸ್ತಾಪ ಮಾಡಬೇಕಾಗುತ್ತದೆ. ಇದಕ್ಕೆ ಮಾನ್ಯ ಕೃಷಿ ಸಚಿವರು ಇರಬೇಕಾಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್:- ಇದಕ್ಕೆ ಕೃಷಿ ಸಚಿವರು ಬೇಕಾಗುತ್ತದೆ. ಅವರು ಇಲ್ಲದಿದ್ದರೆ ಮಾತನಾಡಿ ಉಪಯೋಗವಾಗುವುದಿಲ್ಲ.

ಅಧ್ಯಕ್ಷರು:- ಇಲ್ಲಿ ಕೃಷಿ ಸಚಿವರು ಬೇರೆ ಕಡೆ ಇರಬಹುದು, ಸರ್ಕಾರದವರು ಬರೆದುಕೊಂಡು ತಮಗೆ ಸರಿಯಾದ ಉತ್ತರ ಕೊಡುತ್ತಾರೆ.

ಶ್ರೀ ಕೆ. ಎನ್ ನಾಗೇಗೌಡ:- ಮಾನ್ಯ ಅಧ್ಯಕ್ಷರಲ್ಲಿ ಒಂದು ಮನವಿ, ಶೂನ್ಯ ವೇಳೆಯಲ್ಲಿ ಯಾವುದಾದರೂ ವಿಷಯವನ್ನು ಎತ್ತುವುದಿದ್ದರೆ ದಯವಿಟ್ಟು ಮಂತ್ರಿಗಳಿಗೆ ತಮ್ಮ ಕಛೇರಿಯಿಂದ 10 -15 ನಿಮಿಷ ಮುಂಚಿತವಾಗಿ ಕರೆ ಹೋದರೆ ಬರುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಕೆ ಎಸ್. ಕಾಳಮರಿಗೌಡ:- ಕರ್ನಾಟಕದಲ್ಲಿ ಇದರ ಮಾರ್ಕೆಟ್ ಶುರುವಾಗಿ ಈಗಾಗಲೇ 3 ತಿಂಗಳಾಗಿದೆ, ಇನ್ನೊಂದೆರಡು ದಿವಸಗಳಲ್ಲಿ ಇದರ ಮಾರ್ಕೆಟ್ ಮುಗಿಯುತ್ತದೆ. ಅದಕ್ಕಿಂತ ಮುಂಚೆ ಪ್ರಸ್ತಾಪಿಸುವುದೇನೆಂದರೆ, ಸುಮಾರು 8 ಹೊಗೆಸೊಪ್ಪಿನ ಮಾರ್ಕೆಟ್‌ಗಳು ನಡೆಯುತ್ತಿವೆ. 30 ಲಕ್ಷಕ್ಕೆ ಸುಮಾರು 8 ಮಾರ್ಕೆಟ್‌ಗಳು ನಡೆಯಬೇಕಾಗಿತ್ತು. ಅದರಲ್ಲಿ 6 ಮಾರ್ಕೆಟ್‌ಗಳು ನಡೆಯುತ್ತಿವೆ. ಡಿಸೆಂಬರ್‌ಗೆ ಇದರ ಮಾರ್ಕೆಟ್ ಮುಗಿಯಬೇಕಾಗಿತ್ತು.

ಈಗ ಫೆಬ್ರವರಿ ತಿಂಗಳು ಮುಗಿಯುವ ಹಂತದಲ್ಲಿದ್ದರೂ ಕೂಡ ಈ ಮಾರುಕಟ್ಟೆ ಮುಗಿದಿಲ್ಲ.

ಇದಕ್ಕೆ ಕೃಷಿ ಸಚಿವರು ಸೂಕ್ತ ವ್ಯವಸ್ಥೆಯನ್ನು ಮುಂಚೆಯೇ ತೆಗದುಕೊಳ್ಳಬೇಕಾಗಿತ್ತು. ಕೇಂದ್ರದಲ್ಲಿ ತಂಬಾಕು ಮಂಡಳಿ ಎಂದು ಇದೆ ಅಥವಾ ಕರ್ನಾಟಕಕ್ಕೆ ಸೇರಿರುವುದೋ. ಅನೇಕ ಜನ ಬ್ಯಾರನ್‌ಗಳನ್ನು ಕಟ್ಟಿದ್ದಾರೆ, ಹೊಗೆಸೊಪ್ಪು ಬೆಳೆದಿದ್ದಾರೆ ಕ್ಯೂರ್ ಮಾಡಿದ್ದಾರೆ ಆದರೂ ಕೂಡ ಹೊಗೆಸೊಪ್ಪನ್ನು ತೆಗೆದುಕೊಳ್ಳುವುದಿಲ್ಲ ಎಂದು ಟೊಬ್ಯಾಕೊ ಬೋರ್ಡಿನವರು ಹೇಳುತ್ತಿದ್ದಾರೆ. ಒಂದೊಂದು ಬ್ಯಾರನ್ ಕಟ್ಟಬೇಕಾದರೆ 30–40 ಸಾವಿರ ರೂಪಾಯಿಗಳಾಗುತ್ತದೆ. ಹೊಗೆಸೊಪ್ಪು ಬೆಳೆದಿರುವುದು ಒಂದೊಂದು ಲಕ್ಷ ರೂಪಾಯಿ ಆಗುತ್ತದೆ. ಅಂಥಾದ್ದರಲ್ಲಿ 200–300 ಜನರಿಗೆ ಹೊಗೆಸೊಪ್ಪು ಮಾರ್ಕೆಟ್ ಮಾಡಲು ಅವಕಾಶ ಕೊಟ್ಟಿಲ್ಲ. ಇನ್ನೊಂದೆರಡು ದಿವಸದಲ್ಲಿ ಮಾರ್ಕೆಟ್ ಮುಗಿಯುತ್ತದೆ. ಎರಡು ದಿವಸಗಳಲ್ಲಿ ಮಾರ್ಕೆಟ್ ಮುಗಿಯಿತು ಎಂದರೆ ಸುಮಾರು 1 ಕೋಟಿ ರೂಪಾಯಿ ಹೊಗೆಸೊಪ್ಪು ಮಾರ್ಕೆಟ್ ಮಾಡಲು ಆಗದೇ ಇರುವಂಥಾದ್ದು ಉಳಿಯುತ್ತದೆ.

ಇದನ್ನು ಕೃಷಿ ಸಚಿವರಿಗೂ, ಟೊಬ್ಯಾಕೋ ಬೋರ್ಡಿನವರಿಗೂ ಹೇಳಿದ್ದೇವೆ. ಹೊಗೆಸೊಪ್ಪನ್ನು ಮಾರ್ಕೆಟ್ ಮಾಡಲುಬಿಡಿ, ಹಾಗೆ ಬಿಡದಿದ್ದರೆ ಓಪನ್ನಾಗಿ ಮಾರ್ಕೆಟ್ ಮಾಡಲು ಬಿಡಿ ಎಂದು ಹೇಳಿದ್ದೇವೆ. ಅದಕ್ಕೆ ಟೊಬ್ಯಾಕೊ ಬೋರ್ಡಿನವರು ಒಂದು ನಿಬಂಧನೆ ಹಾಕಿಕೊಂಡು, ಇಲ್ಲ ಇಲ್ಲ, ಏನು ಬೆಳೆಯುತ್ತಾರೋ ಅದನ್ನು ಸಂಪೂರ್ಣವಾಗಿ ನಮ್ಮ ಮಾರುಕಟ್ಟೆಯಲ್ಲೇ ಮಾರಬೇಕು, ಹೊರಗಡೆ ಮಾರುಕಟ್ಟೆ ಮಾಡಲು ಬಿಡುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ. ನಾವು ಅವರಿಗೆ ಹೇಳುತ್ತಿದ್ದೇವೆ, ನೀವು ಹೊರಗಡೆ ಮಾರಲು ಬಿಡದಿದ್ದರೆ ನೀವಾದರೂ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ. ಹೀಗಾಗಿ ಕರ್ನಾಟಕದಲ್ಲಿ 100–150 ಕೋಟಿ ರೂಪಾಯಿಗಳ ಹೊಗೆಸೊಪ್ಪು ಉತ್ಪಾದನೆಯಾಗುತ್ತದೆ. ಇದಕ್ಕೆ ಸಚಿವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ನಾವು ಸಚಿವರಿಗೂ, ಬೋರ್ಡಿನವರಿಗೂ ಕೂಡ ಹೇಳಿದ್ದೇವೆ. ಯಾರ್ಯಾರು ಮಾರುಕಟ್ಟೆಗೆ ಬಿಡಲು ಅವಕಾಶವಾಗಿಲ್ಲ ಅಂಥವರಿಗೆ ಇನ್ನೂ ಒಂದು ವಾರ ಕಾಲದಲ್ಲಿ ಮಾರುಕಟ್ಟೆಗೆ ಬಿಡಲು ವ್ಯವಸ್ಥೆ ಮಾಡುತ್ತೀರಾ ? ಅದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಇನ್ನೆರಡು ದಿವಸದಲ್ಲಿ ನಾವು ಮಾರುಕಟ್ಟೆ ಮುಚ್ಚುತ್ತೇವೆಂದು ಟೊಬ್ಯಾಕೊ ಬೋರ್ಡಿನವರು ಹೇಳಿದ್ದಾರೆ. ಇನ್ನೆರಡು ಕೋಟಿ ರೂಪಾಯಿ ಮೌಲ್ಯದ ಹೊಗೆಸೊಪ್ಪು ಹೊರಗಡೆ ಉಳಿದುಕೊಳ್ಳುತ್ತದೆ. ಇದಕ್ಕೇನು ವ್ಯವಸ್ಥೆ ಮಾಡುತ್ತೀರಿ ಎಂದು ಸಚಿವರನ್ನು ಕೇಳುತ್ತೇನೆ. ಇದು ನನ್ನ ಒಂದೇ ತಾಲ್ಲೂಕಿನಲ್ಲಲ್ಲ, ಅರಕಲಗೂಡು, ಹುಣಸೂರು, ಕೋಟೆ ತಾಲೂಕಿನಲ್ಲಿದೆ.

ಶಿವಮೊಗ್ಗ ಮಾರುಕಟ್ಟೆ ಆಗಲೇ ಮುಗಿದುಹೋಗಿದೆ. ಹುಣಸೂರು, ಪಿರಿಯಾಪಟ್ಟಣ, ಅರಕಲಗೂಡು, ಕೋಟೆ ಇಂಥ ಕಡೆಗಳಲ್ಲಿ ಉಳಿದಿದೆ. ಇದನ್ನು ಮಾರುಕಟ್ಟೆ ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕು.

† ಶ್ರೀ ಎಂ. ಪಿ. ವೆಂಕಟೇಶ್:– (ಹೆಗ್ಗಡದೇವನ ಕೋಟೆ) ಮಾನ್ಯ ಅಧ್ಯಕ್ಷರೇ, ಈ ಹೊಗೆಸೊಪ್ಪಿನ ವಿಚಾರವಾಗಿ ಮಾನ್ಯ ಸಚಿವರು ಹಿಂದೆ ಶಾಸಕರ ಸಭೆಯನ್ನು ಕರೆದಿದ್ದರು. ಆಗ ನಾವು ಹೇಳಿದೆವು. ಎಷ್ಟು ಹೊಗೆಸೊಪ್ಪು ತಾವು ಪಡೆಯುತ್ತೀರಿ ಎನ್ನುವುದನ್ನು ನಿಗದಿಯಾಗಿ ಹೇಳಿಬಿಡಿ. ಆಮೇಲೆ ಅದರ ಮೇಲೆ ಪಡೆಯಬಾರದು ಎನ್ನುವ ಮಾತನ್ನು ಸಭೆಯಲ್ಲಿ ನಾವು ನಿರ್ಧಾರ ಮಾಡಿದೆವು. ಯಾರಿಗೆ ಈಗ ಹೊಗೆಸೊಪ್ಪು ಲೈಸೆನ್ಸ್ ಇತ್ತು, ಅವರೆಲ್ಲ ನಾವು ಇಷ್ಟೇ ನಿಗದಿಯೊಳಗೆ ಮಾರಾಟ ಮಾಡುತ್ತೇವೆ, ಇನ್ನು ಮುಂದೆ ತೆಗೆದುಕೊಳ್ಳುವುದಿಲ್ಲ ಎನ್ನುವ ಮಾತನ್ನು ಟೊಬ್ಯಾಕೋ ಬೋರ್ಡ್‌ನವರು ಸಚಿವರ ಎದುರಿನಲ್ಲಿ ಹೇಳಿದರು. ಯಾರು ರೈತರಿಗೆ ಲೈಸೆನ್ಸ್ ಇತ್ತೋ, ಅವರೆಲ್ಲ ಹೊಗೆಸೊಪ್ಪನ್ನು ಮಾರುಕಟ್ಟೆಗೆ ಬಿಟ್ಟರು. ಅವರಿಗೆಲ್ಲ 35 ರೂಪಾಯಿ ಬೆಲೆ ಸಿಕ್ಕಿದೆ. ಮತ್ತೆ ಯಾರು ಅನಧಿಕೃತವಾಗಿ ಹೊಗೆಸೊಪ್ಪನ್ನು ಬೆಳೆದಿದ್ದರೋ ಅವರಿಗೆ ಲೈಸೆನ್ಸನ್ನು ಹೊಗೆಸೊಪ್ಪು ಬಿಡುವುದಕ್ಕೆ ಅವಕಾಶ ಮಾಡಿಕೊಟ್ಟರೋ ಅವರಿಗೆ 60 ರೂಪಾಯಿ ರೇಟು ಸಿಕ್ಕಿದೆ. ಲೈಸೆನ್ಸ್ ಇದ್ದವರಿಗೆ 30 ರೂಪಾಯಿ. ಲೈಸೆನ್ಸ್ ಇಲ್ಲದೇ ಇದ್ದವರು

ಯಾರು ಹೊಗೆಸೊಪ್ಪನ್ನು ಇಲ್ಲೀಗಲ್ ಆಗಿ ಬೆಳೆದು ಇಟ್ಟಿದ್ದರೋ ಅವರಿಗೆ ಹೊಗೆಸೊಪ್ಪನ್ನು ಟೊಬ್ಯಾಕೋ ಬೋರ್ಡ್‌ನವರು ತೆಗೆದುಕೊಂಡು 60 ರೂಪಾಯಿ ರೇಟನ್ನು ಕೊಟ್ಟಿದ್ದಾರೆ. ಇದರಿಂದ ಮೊದಲು ಯಾರು ಹೊಗೆಸೊಪ್ಪನ್ನು ಬೆಳೆದಿದ್ದರು, ಅವರಿಗೆ ಲೈಸೆನ್ಸ್ ಇತ್ತು, ಬ್ಯಾರೆನ್ ಇತ್ತು, ಅವರಿಗೆಲ್ಲಾ ಕಡಿಮೆ ಬೆಲೆ ಸಿಕ್ಕಿದೆ. ರೈತರಿಂದ ಏನು ದಳ್ಳಾಳಿಗಳು ತೆಗೆದುಕೊಳ್ಳುತ್ತಿದ್ದಾರೆ, ಅವರ ಜೊತೆಯಲ್ಲಿ ಟೊಬ್ಯಾಕೋ ಬೋರ್ಡ್‌ನವರು ಶಾಮೀಲಾಗಿ ಈ ರೀತಿಯಾಗಿ ರೈತರಿಗೆ ಅನ್ಯಾಯ ಮಾಡಿದ್ದಾರೆ. ಮೊದಲನೆಯದಾಗಿ ಈಗಾಗಲೇ ಬ್ಯಾರೆಲ್‌ಗಳನ್ನು ಹಿಂದೆ ಕಟ್ಟಿದ್ದು, ಲೈಸೆನ್ಸ್ ಸಕಾಲದಲ್ಲಿ ಅವರಿಗೆ ದುಡ್ಡು ಬ್ಯಾಂಕ್‌ನಿಂದ ಸಿಗದೆ ಬ್ಯಾರನ್ ಕಟ್ಟದಿದ್ದವರಿಗೆ ಲೈಸೆನ್ಸ್ ರಿನ್ಯೂ ಮಾಡಲಿಲ್ಲ. ಈ ಪರಿಸ್ಥಿತಿಯ ಬಗ್ಗೆ ಮಾನ್ಯ ಸಚಿವರಿಗೆ ನಾವು ಅವತ್ತು ಸಭೆಯಲ್ಲಿ ಹೇಳಿದಾಗ ಸಚಿವರೇ ಟೊಬಾಕೊ ಬೋರ್ಡ್‌ನವರಿಗೆ ನೀವು ರೈತರಿಗೆ ಅನ್ಯಾಯ ಮಾಡುತ್ತಿದ್ದೀರಿ, ನೀವು ಈ ರೀತಿ ಮಾಡುವುದು ಸರಿಯಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ಸಚಿವರು ಹೇಳಬೇಕು. ಮತ್ತು ನಾವು ಈ ಬಗ್ಗೆ ಕೇಂದ್ರಸರ್ಕಾರಕ್ಕೆ ಒಂದು ನಿಯೋಗ ಹೋಗಬೇಕು. ಈ ಹಿಂದೆ ಇದ್ದ ಸಚಿವರು ಈಗ ಮಾಡುತ್ತಿರುವುದು ಸರಿಯಲ್ಲ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗೋಣ ಎನ್ನುವ ಮಾತನ್ನು ಹೇಳಿದ್ದರು. ಈಗಿನ ಸಚಿವರೂ ಸಹ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗಿ ಇದರ ಬಗ್ಗೆ ನಿಯಮಗಳನ್ನು ಮಾಡೋಣ ಎಂದು ಹೇಳಿದ್ದರು. ಆದರ ಬಗ್ಗೆ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಎಸ್. ಚಿಕ್ಕಮಾದು:– (ಹುಣಸೂರು):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಕಾಳಮರಿಗೌಡರು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 30 ಸಾವಿರ ಕುಟುಂಬಗಳು ಹೊಗೆಸೊಪ್ಪನ್ನೇ ನಂಬಿ ಜೀವನ ಮಾಡುತ್ತಿರತಕ್ಕಂಥವರಿದ್ದಾರೆ. ಆದರೆ ರೈತ ಏನು ಬೇರೆ ಪದಾರ್ಥಗಳನ್ನು ಬೆಳೆದು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾನೆ, ಅದಕ್ಕೂ ಹೊಗೆಸೊಪ್ಪಿನ ಬೆಳೆಗೂ ಬಹಳ ವ್ಯತ್ಯಾಸ ಇದೆ. ಹೊಗೆಸೊಪ್ಪನ್ನು ಬೆಳೆದಂಥ ರೈತರು ನಿರ್ದಿಷ್ಟವಾಗಿ ಇಂಥ ಕಡೆಯೇ ಮಾರಾಟ ಮಾಡಬೇಕು, ಇಂಥ ವ್ಯಕ್ತಿಗಳ ಮುಖಾಂತರವೇ ಮಾರಾಟ ಮಾಡಬೇಕು ಎಂದು ನಿಯಮಗಳು ಇದೆ. ಇದನ್ನು ಬೇರೆ ಕಡೆಗೆ, ಬೇರ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಾಟ ಮಾಡತಕ್ಕಂಥ ಪದ್ಧತಿ ಇಲ್ಲ. ಅದಕ್ಕೋಸ್ಕರ ಆ ಮಂಡಲಿ ಇವತ್ತು ಏನು ಮಾರಾಟದ ಅವಧಿಯನ್ನು ಏನು ನಿಗದಿ ಮಾಡಿದೆ, ಆ ಅವಧಿಯನ್ನು ಮತ್ತೊಮ್ಮೆ ವಿಸ್ತರಣೆ ಮಾಡಬೇಕು. ಈಗಾಗಲೇ ಸಾವಿರಾರು ರೈತರು ಹೊಗೆಸೊಪ್ಪನ್ನು ಬೆಳೆದಿದ್ದು ಅವರು ಆ ಹೊಗೆಸೊಪ್ಪನ್ನು ಕ್ಯೂರಿಂಗ್ ಮಾಡಿದ್ದರೂ ಕೂಡ ಮಾರಾಟ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಮಾನ್ಯ ಕಾಳಮರಿಗೌಡರು ಹೇಳಿದ ಹಾಗೆ, ಇನ್ನು ಎರಡು ದಿವಸದಲ್ಲಿ ಏನಾದರೂ ಕೂಡ ಆ ಮಾರುಕಟ್ಟೆಯನ್ನು ಕ್ಲೋಸ್ ಮಾಡಿದರೆ ನಮ್ಮ ರೈತರಿಗೆ ಅನ್ಯಾಯವಾಗುತ್ತದೆ, ಕೋಟ್ಯಾಂತರ ರೂಪಾಯಿ ನಷ್ಟ ಹೊಂದುತ್ತಾರೆ. ಒಬ್ಬ ರೈತ ಒಂದು ಬ್ಯಾರನ್‌ನ್ನು ಕಟ್ಟಿ ಹೊಗೆ ಸೊಪ್ಪನ್ನು ಕ್ಯೂರಿಂಗ್ ಮಾಡಬೇಕು ಎಂದರೆ ಅದು ಬಹಳ ಕಠಿಣವಾದಂಥ ಶ್ರಮ. ಅದು ಬೇರೆ ತರಹದ ಬೆಳೆಯ ಹಾಗೆ ಅಲ್ಲ. ಆತ ಹಗಲಿರುಳು ಕಣ್ಣಿಟ್ಟು ಕಣ್ಣಿಗೆ ಎಣ್ಣೆಯನ್ನು ಬಿಟ್ಟುಕೊಂಡು ಆ ಒಂದು ಸೊಪ್ಪನ್ನು ಕ್ಯೂರಿಂಗ್ ಮಾಡಬೇಕಾಗುತ್ತದೆ. ಈಗ ಕ್ಯೂರಿಂಗ್ ಮಾಡಿದಂಥ ಸೊಪ್ಪನ್ನು ನಾವು ಇಡುವುದಕ್ಕೂ ಆಗುವುದಿಲ್ಲ, ಅಥವಾ ಮುಂದಿನ ವರ್ಷ ಮಾರಾಟ ಮಾಡಿದರೂ ಕೂಡ ಹೆಚ್ಚಿನ ಆದಾಯ ಬರುತ್ತದೆ ಎನ್ನತಕ್ಕಂಥದ್ದು ಇಲ್ಲ. ಈ ವೇಳೆಯಲ್ಲಿ ಅದನ್ನು ನಾವು ಕ್ಯೂರಿಂಗ್ ಮಾಡಿ ಅದನ್ನು ಹದ ಮಾಡಿರುವ ದೆಸೆಯಿಂದ ಈ ತಕ್ಷಣವೇ ಮಾರಾಟ ಮಾಡುವುದಕ್ಕೆ ಅನುಮತಿ ಕೊಡಬೇಕು ಮತ್ತು ಆ ಮಂಡಲಿಯವರು ಇನ್ನೊಂದು ತೀರ್ಮಾನವನ್ನು ಕೈಗೊಂಡಿದ್ದಾರೆ. ಅದು ಬಹಳ ಅನ್ಯಾಯವಾದಂಥದ್ದು. ಯಾವ ರೈತರು ಈ ಬ್ಯಾರೆನ್ ಮನೆಗಳನ್ನು ಕಟ್ಟಿದ್ದಾರೆ, ಆ ಬ್ಯಾರನ್

ಮನೆಗಳನ್ನು ತಸಖೆ ಮಾಡುತ್ತೇವೆ ಎಂದು ಹೇಳಿ, ಸಣ್ಣಪುಟ್ಟ ಲೋಪದೋಷಗಳಿಗ್ದರೂ ಕೂಡ ಅಂಥ ರೈತರನ್ನು ತಿರಸ್ಕರಿಸಿ ನಿಮಗೆ ಮಾರಾಟ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ಅವರಿಗೆ ಅನುಮತಿಯನ್ನು ಕೂಡ ರದ್ದುಪಡಿಸುತ್ತಿದ್ದಾರೆ. ಇದು ರೈತರಿಗ ಬಹಳ ಕಠಿಣವಾದ ಶ್ರಮವಾದ ಬೆಳೆಯಿಂದ ದಯವಿಟ್ಟು ಮಾನ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಅವರ ತೀರ್ಮಾನ ಏನೇ ಇದ್ದರೂ ಕೂಡ ನಾವು ಏನು ಹೊಗೆಸೊಪ್ಪನ್ನು ಇವತ್ತು ಬೆಳೆದಿದ್ದೇವೆ, ಆ ಹೊಗೆಸೊಪ್ಪನ್ನು ಪೂರ್ಣ ಮಾರಾಟ ಮಾಡುವುದಕ್ಕೆ ಅವಧಿಯನ್ನು ವಿಸ್ತರಣೆ ಮಾಡಬೇಕು, ನಮ್ಮ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಅಲ್ಲಿ ಮತ್ತೊಂದು ಸದನ ನಡೆಯುತ್ತಿರುವ ಹಾಗೆ ಕಾಣುತ್ತದೆ. ಇದು ಸದನದಲ್ಲಿ ಸರಿಯಲ್ಲ. ತಾವು ಇದನ್ನು ಸರಿಪಡಿಸಬೇಕು ಏನೇ ಡಿಸಿಡೆಂಟ್ ಆಕ್ಟಿವಿಟೀಸ್ ಇದ್ದರೂ ಇಲ್ಲಿ ಮಾತಾಡುವುದು ಬೇಡ, ಹೊರಗೆ ಹೋಗಿ ಮಾತನಾಡಲಿ ಎಂದು ತಮ್ಮ ಗಮನಕ್ಕೆ ತರುತ್ತೇನೆ. ಅದನ್ನು ತಾವು ಸ್ವಲ್ಪ ನೋಡಬೇಕು.

† ಶ್ರೀ ಎಸ್. ಹುಚ್ಚಮಾಸ್ತಿ ಗೌಡ:- (ಕೃಷಿ ಸಚಿವರು):- ಮಾನ್ಯ ಅಧ್ಯಕ್ಷರೇ, ಟೊಬಾಕೋ ಬೋರ್ಡ್ ಇದೆ. ರೈತರು ಬೆಳೆದಂಥ ಹೊಗೆಸೊಪ್ಪನ್ನು ಮಾರತಕ್ಕಂಥ ವ್ಯವಸ್ಥೆ ಏನು ಎಂದು ಹೇಳಿದರೆ ಆರು ಪ್ಲಾಟ್ ಫಾರಮ್ಸ್ ಕಟ್ಟಿದ್ದಾರೆ. ಅಲ್ಲಿಗೆ ಹೊಗೆಸೊಪ್ಪನ್ನು ಬೆಳೆದಿದ್ದವರು ಆ ಬೆಳೆಯನ್ನು ತರಬೇಕು. ಅಲ್ಲಿಂದ ಅದು ಮಾರಾಟವಾಗಬೇಕು. ಈ ರೀತಿ ಅಲ್ಲಿನ ಪರಿಸ್ಥಿತಿ ಇದೆ. ಕೆಲವು ಕಡೆ ಅವರಿಗೆ ಕಾಲಕ್ಕೆ ಸರಿಯಾಗಿ ದುಡ್ಡು ಕೊಡದೇ ಇರಬಹುದು. ಮತ್ತೆ ಮಾರಾಟ ಆಗುವುದೂ ಕೂಡ ನಿಧಾನವಾಗಿರಬಹುದು.

12.40 ಪಿ.ಎಂ.

ಈ ವಿಷಯವನ್ನೆಲ್ಲಾ ನಾನು ತಿಳಿದು ಕೇಂದ್ರದ ವ್ಯವಸಾಯ ಮಂತ್ರಿಗಳನ್ನು ಭೇಟಿ ಮಾಡಿ ಈಗ ಇರತಕ್ಕಂಥ ವ್ಯವಸ್ಥೆ ಸರಿಯಾಗಿಲ್ಲ, 6 ಪ್ಲಾಟ್ ಫಾರಂ ಬದಲಾಗಿ 12-15 ಎಷ್ಟು ಅವಶ್ಯಕವೋ ಅಷ್ಟನ್ನು ಮಾಡಿ ಕೇವಲ ಕಡಿಮೆ ದಿವಸದಲ್ಲಿ ಅದು ಮಾರಾಟವಾಗುವ ಹಾಗೆ ವ್ಯವಸ್ಥೆ ಮಾಡಬೇಕು. ಹೆಚ್ಚು ಅನುಕೂಲ ಮಾಡಬೇಕೆಂದು ಈಗಾಗಲೇ ಅವರ ಗಮನಕ್ಕೆ ತಂದಿದ್ದೇವೆ. ಅದನ್ನು ಅವರು ಒಪ್ಪಿದ್ದಾರೆ. ಈ ಮಧ್ಯೆ ಇಲ್ಲಿ ಟೊಬ್ಯಾಕೋ ಬೋರ್ಡ್ ಮೀಟಿಂಗ್ ಆಯಿತು. ಆ ಮೀಟಿಂಗ್‌ನಲ್ಲಿ ಅವರು ಏನು ಆಕ್ಷೇಪಣೆ ಮಾಡಿದರು ಎಂದರೆ ಪೊಟ್ಟಣಗಳು ಮಾರ್ಕೆಟ್ಟಿಗೆ ಬಂದಾಗ ಒಳ್ಳೆಯ ಹೊಗೆಸೊಪ್ಪನ್ನು ಅವರು ನಮಗೆ ಕೊಡಲಿಲ್ಲ. ತೀರ ಕೆಟ್ಟು ಹೋಗಿರುವುದನ್ನು ಇಲ್ಲ ಮಾರುಕಟ್ಟೆಗೆ ತಂದಿದ್ದರು, ಆದರೂ ಕೂಡ ಅದನ್ನು ಕೊಂಡುಕೊಂಡಿದ್ದೇವೆ. ಇನ್ನು ಇತ್ತೀಚೆಗೆ ಬರುತ್ತ ಬರುತ್ತಾ ಬೆಲೆಯೂ ಜಾಸ್ತಿಯಾಗಿದೆ ಎಂದು ಹೇಳಿದರು. ಕಡೆಗೆ ಮಾನ್ಯ ಸದಸ್ಯರು ಹೇಳಿದ ಹಾಗೆ 35ರೂಪಾಯಿ ಆಗಿದ್ದುದು ಈಗ 60ರೂಪಾಯಿ ಆಗಿದೆ. ಅಲ್ಲಿಯವರೆಗೂ ಇನ್ನೂ ಮಾರಾಟವಾಗದೆ ಉಳಿದಿರತಕ್ಕಂಥ ಸೊಪ್ಪು ಎಷ್ಟಿದೆ ಎನ್ನುವುದು ನನಗೆ ಗೊತ್ತಿಲ್ಲ. ಈಗತಾನೆ ಮಾನ್ಯ ಸದಸ್ಯರು ಅದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಕೂಡಲೇ ತಂಬಾಕು ಬೋರ್ಡ್ ಮೀಟಿಂಗ್ ಕರೆಯಿಸಿ ಅಥವಾ ಅದರ ಅಧ್ಯಕ್ಷರನ್ನು ನಾನು ಭೇಟಿ ಮಾಡಿ ಇಲ್ಲಿಗತಕ್ಕಂಥ ತೊಂದರೆಗಳನ್ನೆಲ್ಲಾ ಬಗೆಹರಿಸಬೇಕೆಂದು ಹೇಳುವುದಕ್ಕೆ ನಾನು ಸಿದ್ಧನಿದ್ದೇನೆ. ಇವರಿಂದ ನಮ್ಮ ರೈತರಿಗೆ ಸಹಾಯ ಹೇಗೆ ಆಗುತ್ತದೆಂದು ನಿರೀಕ್ಷೆ ಇದೆ. ಇದು ಆಗದೆ ಇದ್ದರೆ ಕೇಂದ್ರ ಮಂತ್ರಿಗಳನ್ನು ನಾನು ಭೇಟಿಯಾಗಿ ಕೂಡಲೆ ವ್ಯವಸ್ಥೆಯನ್ನು ಮಾಡಬೇಕು. ಇರತಕ್ಕ ಹೊಗೆಸೊಪ್ಪನ್ನೆಲ್ಲ ಇಷ್ಟೇ ದಿವಸದೊಳಗಾಗಿ ವ್ಯಾಪಾರ ಮಾಡಬೇಕೆಂದು ಹೇಳಿ ನಾನು ಅದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ

ಅಧ್ಯಕ್ಷರು:– ಮಾನ್ಯ ಈಶ್ವರಪ್ಪನವರೇ, ತಾವು ಕಳುಹಿಸಿದ ನಿಲುವಳಿ ಸೂಚನೆಯನ್ನು ಈಗಾಗಲೇ ನಾನು ಒಮ್ಮೆ ನಿರಾಕರಿಸಿದ್ದೇನೆ

2) ಬಿ.ಜೆ.ಪಿ. ನಾಯಕರು ಹಾಗೂ ಕಾರ್ಯಕರ್ತರ ಜೈಲು

† ಶ್ರೀ ಕೆ.ಎಸ್. ಈಶ್ವರಪ್ಪ:– ಈಗ ಪ್ರಶ್ನೆ ಬಂದಿರುವುದು ಅದಲ್ಲ. ನಾವು ಮೊನ್ನೆ ಕಳುಹಿಸಿರುವಂತಹ ನಿಲುವಳಿ ಸೂಚನೆ ಏನಿದೆ ಅದರ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದ ನಾಯಕರಾದಂಥ ಮಾನ್ಯ ಯಡಿಯೂರಪ್ಪನವರು ಡಿ.ಎ. ಶಂಕರಮೂರ್ತಿಯವರು, ಮಾನ್ಯ ರುಕ್ಮಯ್ಯ ಪೂಜಾರಿಯವರನ್ನು, ಮಾನ್ಯ ನಾರಾಯಣರಾವ್ ಮನಹಳ್ಳಿಯವರನ್ನು ಈ ರೀತಿ ಬೇರೆ ಬೇರೆ ಶಾಸಕರನ್ನೆಲ್ಲಾ ಬಿಡುಗಡೆ ಮಾಡಿದ್ದಾರೆ. ಆದರೆ ಪ್ರಶ್ನೆ ಏನಾಗಿದೆ ಅಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಮನೆಮನೆಗೆ ಹೋಗಿ ರಾತ್ರಿ ಎಬ್ಬಿಸಿ ಕರೆದುಕೊಂಡು ಹೋಗಿ ಜೈಲಿಗೆ ಹಾಕಿದ್ದಾರೆ. ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿದ್ದಾರೆ, ಬಳ್ಳಾರಿ ಜೈಲಿನಲ್ಲಿದ್ದಾರೆ, ಬೆಳಗಾಂ ಜೈಲಿನಲ್ಲಿದ್ದಾರೆ. ಇವರು ಏನು ಪಾಪ ಮಾಡಿದ್ದಾರೆ? ಪ್ರಜಾಪ್ರಭುತ್ವದ ಪ್ರಕಾರ ಕೆಲಸ ಮಾಡುತ್ತಿರುವಂತಹ ಸಂದರ್ಭಗಳಲ್ಲಿ ಈ ರೀತಿಯ ಹೋರಾಟ ಮಾಡುವುದು ತಪ್ಪು, ನಮ್ಮ ಪಕ್ಷವನ್ನು, ನಮ್ಮ ಸಂಘಟನೆಯನ್ನು ಬಲಪಡಿಸುವುದೇ ತಪ್ಪು, ನಮ್ಮ ವಿಚಾರವನ್ನು ಇಡೀ ದೇಶದ ಮುಂದೆ ಇಡುವುದೇ ತಪ್ಪು ಎನ್ನುವ ರೀತಿಯಲ್ಲಿ ಸರ್ವಾಧಿಕಾರಿ ಧೋರಣೆಯನ್ನು ಈ ಸರ್ಕಾರ ಮಾಡುತ್ತಿದ್ದರೆ ವಿರೋಧ ಪಕ್ಷವಾಗಿ ಕೆಲಸ ಮಾಡುವವರಿಗೆ ಕಷ್ಟವಾಗುತ್ತದೆ. ಜೊತೆಗೆ ಈ ರೀತಿ ವಿರೋಧ ಪಕ್ಷ ಬೆಳೆಯುತ್ತಿರುವ ಸಂದರ್ಭದಲ್ಲಿ ಸರ್ವಾಧಿಕಾರಿ, ದಮ್ಮನಾಧಿಕಾರಿ ನೀತಿಯನ್ನು ಈ ರಾಜ್ಯ ಸರ್ಕಾರ ಮುಂದುವರಿಸುತ್ತಾ ಹೋದರೆ ಹೇಗಾಗುತ್ತದೆ. ಇದನ್ನು ಈ ಸದನದಲ್ಲಿ ನಿಲುವಳಿ ಸೂಚನೆಯ ಮುಖಾಂತರ ನಾವು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೇಳುತ್ತಿದ್ದೇವೆ. ಸರ್ಕಾರ ಇದಕ್ಕೆ ಉತ್ತರ ಕೊಡಬೇಕಾಗುತ್ತದೆ.

SRI HARANAHALLI RAMASWAMY:– I am on a Point of Order. ತಾವು ಈಗಾಗಲೇ ಈ ನಿಲುವಳಿ ಸೂಚನೆಯನ್ನು ತಳ್ಳಿಹಾಕಿದ್ದೀರಿ, ತಳ್ಳಿಹಾಕಿ ಆಗಿದೆ. ತಳ್ಳಿಹಾಕುವುದಕ್ಕೆ ಮುಂಚೆ ಅವಕಾಶ ಏನಿತ್ತು ಎಂದರೆ, You could have submitted about the reason as to why it should be admitted. ಇದನ್ನು ಏತಕ್ಕೆ ಪರಿಶೀಲನೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ವಾದ. ಅಷ್ಟರಮಟ್ಟಿಗೆ ಮಾತ್ರ ತಾವು ಹೇಳಬಹುದಾಗಿತ್ತು. ಈಗ ಅದು ವಜಾ ಆಗಿರುವುದರಿಂದ ಸಬ್‌ಮಿಷನ್‌ಗೂ ಅವಕಾಶವಿಲ್ಲ. ಆದ್ದರಿಂದ ವೃಥಾ ಯಾವ ಮಾತಿಗೂ ಅವಕಾಶವಿಲ್ಲವೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿರುವಂತಹ ಹಿರಿಯ ಸಚಿವರನ್ನು ತಮ್ಮ ಮೂಲಕ ಕೇಳಲಿಕ್ಕೆ ಇಚ್ಛೆ ಪಡುತ್ತೇನೆ. ಕಳೆದ ಮೂರು–ನಾಲ್ಕು ದಿವಸಗಳಿಂದ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರನ್ನು, ಮನೆಯಲ್ಲಿ ಇದ್ದಂಥವರನ್ನು ಏನೂ ಅಪರಾಧ ಮಾಡದೇ ಇದ್ದಂತಹ ಕಾರ್ಯಕರ್ತರನ್ನು ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಮತ್ತು ಬಳ್ಳಾರಿ ಜೈಲಿಗೆ ಕಳುಹಿಸಿರುವುದು ನಿಜವೇ? ಏತಕ್ಕೋಸ್ಕರ ಈ ರೀತಿ ಮಾಡುತ್ತಿದ್ದೀರಿ. ನಾವು ಪ್ರಜಾಪ್ರಭುತ್ವ ಈ ದೇಶದಲ್ಲಿ ಇದ್ದೇವೋ, ಪ್ರಜಾಪ್ರಭುತ್ವದ ಹಿಂದಿನ ಒಂದು ದೇಶದಲ್ಲಿದ್ದೇವೋ ಅಥವಾ ಸ್ವತಂತ್ರ ಭಾರತದಲ್ಲಿ ಇದ್ದೇವೋ, ಸ್ವತಂತ್ರ ಪೂರ್ವದ ಭಾರತದಲ್ಲಿ ಇದ್ದೇವೋ ಎಂದು ಅನುಮಾನ ಬರುವ ರೀತಿಯಲ್ಲಿ ಭಾರತೀಯ ಜನತಾ ಪಾರ್ಟಿಯ ಚಟುವಟಿಕೆಗಳನ್ನು ಹತ್ತಿಕ್ಕುವಂತಹ ಪ್ರಯತ್ನವನ್ನು ತಾವೇನು ಮಾಡುತ್ತಿದ್ದೀರಿ, ಕೊನೆಯ ಪಕ್ಷ ಈ ಸದನಕ್ಕೆ ಅವರನ್ನು ಯಾವ ಕಾರಣಕ್ಕೋಸ್ಕರ ಬಂಧಿಸಿದ್ದೀರಿ, ಎಷ್ಟು ಜನರನ್ನು ಬಂಧಿಸಿದ್ದೀರಿ, ಎಲ್ಲೆಲ್ಲಿ ಇಟ್ಟಿದ್ದೀರಿ ಎನ್ನುವುದನ್ನು ಹೇಳಬೇಕು. ಈ

ನಿಲುವಳಿ ಸೂಚನೆಯ ಬಗ್ಗೆ ನಾನು ಪ್ರಸ್ತಾಪವನ್ನೇ ಮಾಡುವುದಿಲ್ಲ. ನಾನು ಒಬ್ಬ ಶಾಸಕನಾಗಿ, ನನ್ನ ಪಕ್ಷದ ಕಾರ್ಯಕರ್ತರನ್ನು ವಿನಾಕಾರಣ ತಾವು ಬಂಧಿಸಿ ಜೈಲಿನಲ್ಲಿ ಇಟ್ಟಿರಬೇಕಾದರೆ ಅದಕ್ಕೆ ಕಾರಣವೇನು ? ದೆಹಲಿಯಲ್ಲಿ ಏನೋ ಘಟನೆ ನಡೆಯುತ್ತದೆ ಎಂದು ನಮ್ಮನ್ನು ಬಂಧನ ಮಾಡಿದ್ದೀರಿ. ಎಲ್ಲಿ ಬಂಧನ ಮಾಡಬೇಕಾಗಿತ್ತೋ ಅಲ್ಲಿ ಮಾಡಬೇಕಾಗಿತ್ತು. ಆದರ ಮನೆಯಲ್ಲಿ ಏನು ಮಾಡಿದ್ದರು. ಅವರನ್ನು ಏತಕ್ಕೆ ಬಂಧನ ಮಾಡಿದ್ದೀರಿ. ಇವತ್ತು ಪ್ರಿವೆಂಟೀವ್ ಅರೆಸ್ಟ್ ಎಂದು ಮಾಡಿದ್ದೀರಿ. ಪ್ರಿವೆಂಟೀವ್ ಅರೆಸ್ಟ್ ಮಾಡಿದರೆ ಅವರನ್ನು ತಕ್ಷಣ ನೀವು ಬಿಡಬೇಕು. ಜ್ಯುಡಿಷಿಯಲ್ ಕಸ್ಟಡಿಗೆ ಕೊಡುವುದಕ್ಕೆ ಬರುವುದಿಲ್ಲ. ಆದ್ದರಿಂದ ನಾನು ತಮ್ಮನ್ನು ಕೇಳುತ್ತಿರುವಂಥದ್ದು ಏನೆಂದರೆ, ತಾವು ಬಂಧನ ಮಾಡಿದ್ದರೆ ಏತಕ್ಕೋಸ್ಕರ ಮಾಡಿದ್ದೀರಿ, ಎಲ್ಲಿ ಇಟ್ಟಿದ್ದೀರಿ, ಎಷ್ಟು ಜನರನ್ನು ಮಾಡಿದ್ದೀರಿ, ಇವರ ಉದ್ದೇಶ ಏನು ಎನ್ನುವುದನ್ನು ತಿಳಿದುಕೊಳ್ಳುವ ಅಗತ್ಯ ಇಲ್ಲವೇ ? ಇದರ ಬಗ್ಗೆ ನಾನು ಸರ್ಕಾರವನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಇದು ನಿಜವೇ. ಈ ರೀತಿ ನೀವು ಮಾಡಿದ್ದೀರೋ ಇಲ್ಲವೋ ? ಇದರ ಬಗ್ಗೆ ನಾನು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಸರ್ಕಾರದವರನ್ನು ಕೇಳುತ್ತಿದ್ದೇನೆ. ನಾನು ಬೇರೆ ಏನೂ ಪ್ರಸ್ತಾಪ ಮಾಡುತ್ತಿಲ್ಲ. ತಾವು ಏನು ನಿಲುವಳಿ ಸೂಚನೆಯನ್ನು ಹೇಳುತ್ತಿದ್ದೀರೋ ಅದು ಬೇರೆ. ಮಾನ್ಯ ಈಶ್ವರಪ್ಪನವರು ಶಾಸಕರನ್ನು ಏತಕ್ಕೆ ಇಟ್ಟುಕೊಂಡಿದ್ದೀರೆಂದು ಪ್ರಸ್ತಾಪ ಮಾಡಿದರು. ತಾವು ಏನು ನಿಲುವಳಿ ಸೂಚನೆಯನ್ನು ಹೇಳುತ್ತಿದ್ದೀರೋ ಅದು ಬೇರೆ. ಮಾನ್ಯ ಈಶ್ವರಪ್ಪನವರು ಶಾಸಕರನ್ನು ಏತಕ್ಕೆ ಇಟ್ಟುಕೊಂಡಿದ್ದೀರೆಂದು ಪ್ರಸ್ತಾಪ ಮಾಡಿದರು. ನೀವು ಇನ್ನೂ ಹೆಚ್ಚಿಗೆ ಇಟ್ಟುಕೊಳ್ಳಿ ನಮಗೆ ಏನೂ ತೊಂದರೆ ಇಲ್ಲ. ಮುಲಾಯಂಸಿಂಗ್ ಏನೇನು ಮಾಡಿದ, ಅದರ ಪರಿಣಾಮ ಏನಾಯಿತು, ಅದನ್ನು ಅನುಭವಿಸಿದ್ದೀರಿ. ನೀವು ಮಾಡಿ, ಅದರ ಬಗ್ಗೆ ನಾವು ಚಿಂತೆ ಮಾಡುವುದಿಲ್ಲ.

ಆದರೆ, ನಮ್ಮ ಸ್ವತಂತ್ರ ಭಾರತದಲ್ಲಿ ನಮಗೆ ಸಂವಿಧಾನಬದ್ಧವಾಗಿರುವಂಥ ವಿರೋಧ ಪಕ್ಷಗಳ, ಹಕ್ಕು ಏನಿದೆ, ಅದನ್ನು ಹತ್ತಿಕ್ಕುವಂಥ ಸರ್ವಾಧಿಕಾರದ ಪ್ರವೃತ್ತಿ ತೋರಿಸುತ್ತಿರುವುದಕ್ಕೆ ಕಾರಣವೇನು ? ತಪ್ಪು ಮಾಡಿದ್ದಕ್ಕೆ ಶಿಕ್ಷೆ ಕೊಡುತ್ತೀರಿ, ನಿಜ. ಯಾವುದೇ ಪಕ್ಷ ತಪ್ಪು ಮಾಡಿದರೂ ಶಿಕ್ಷೆ ವಿಧಿಸುತ್ತೀರಿ. ಆದರೆ, ಭಾರತೀಯ ಜನತಾ ಪಕ್ಷದ ಕಾರ್ಯಕರ್ತರನ್ನು ಹತ್ತಿಕ್ಕುವುದಕ್ಕೋಸ್ಕರ, ಬಗ್ಗುಬಡಿಯುವುದಕ್ಕೋಸ್ಕರ ಇವೊತ್ತು ನೀವು ಸರ್ವಾಧಿಕಾರಿಗಳಂತೆ ಅಧಿಕಾರ ಚಲಾಯಿಸುತ್ತಿರುವ ಉದ್ದೇಶವಾದರೂ ಏನು ? ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕೆಂದು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ನಿಲುವಳಿ ಸೂಚನೆ ಮುಖಾಂತರ ಯಾವುದೇ ರೀತಿಯಾಗಿ ವಿವರಣೆಗಳನ್ನು ಕೇಳುವುದಕ್ಕೆ ಅವಕಾಶವಿಲ್ಲ. ತಮಗೆ ವಿವರಗಳು ಬೇಕಿದ್ದರೆ ಅದಕ್ಕೆ ಪ್ರತ್ಯೇಕ ನೋಟೀಸನ್ನು ಕಳುಹಿಸಿದರೆ ಉತ್ತರ ತರಿಸಿಕೊಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:– ನಮ್ಮ ರಾಜ್ಯದಲ್ಲಿ ತುರ್ತ ಪರಿಸ್ಥಿತಿಯೇನಾದರೂ ಘೋಷಣೆಯಾಗಿದೆಯೆ ? ನಮ್ಮ ದೇಶದಲ್ಲಿ ಗುಲಾಮಗಿರಿ ನಡೆಯುತ್ತಿದೆಯೆ ? ಸ್ವತಂತ್ರ ಭಾರತದಲ್ಲಿ, ನಾವು ಇಲ್ಲವೆ ? ವಿದ್ಯಾರ್ಥಿಗಳು ಪರೀಕ್ಷೆಗೆ ಓದುತ್ತಿರಬೇಕಾದರೆ ರಾತ್ರೋರಾತ್ರಿ ಅವರುಗಳ ಮನೆಗೆ ನುಗ್ಗಿ ಅವರನ್ನು ಹಾಗೂ ಬಿಜೆಪಿ ಯುವ ಕಾರ್ಯಕರ್ತರನ್ನು ಬಂಧಿಸಿ ಏಕೆ ಜೈಲಿಸಲ್ಲಿಡುತ್ತಿದ್ದೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ದೆಹಲಿಯಲ್ಲಿ 25ನೇ ತಾರೀಖು ರ್‍ಯಾಲಿ ಇದ್ದರೆ ಇಲ್ಲಿ ಕಾರ್ಯಕರ್ತರನ್ನು ಬಂಧಿಸಿ ಬಳ್ಳಾರಿಯಲ್ಲಿರುವ ಜೈಲಿಗೆ ಏಕೆ ಕಳುಹಿಸುತ್ತಿದ್ದೀರಿ ? ಈ ರಾಜ್ಯದಲ್ಲಿ ನಿಮ್ಮನ್ನು ಹೇಳುವವರು, ಕೇಳುವವರು ಯಾರೂ ಇಲ್ಲವೆ ? ನಾವು ಈ ದೇಶದ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ:– ಈ ಸ್ವತಂತ್ರ ಭಾರತದಲ್ಲಿ ಸಭೆ–ಸಮಾರಂಭಗಳನ್ನು ನಡೆಸುವುದಕ್ಕೆ ಅವಕಾಶವಿಲ್ಲವೆ ? ನೀವೇನು ಸರ್ವಾಧಿಕಾರಿಗಳೆಂದು ತೀರ್ಮಾನಿಸಿದ್ದೀರಾ ? ಅಥವಾ 'ಇಲ್ಲಿ ಯಾವುದೇ ಸಭೆ–ಸಮಾರಂಭಗಳನ್ನು ನಡೆಸಕೂಡದು, ಈ ದೇಶದಲ್ಲಿ ಗುಲಾಮಗಿರಿಯ ಸಂಕೇತವಿದೆ, ನಾವು ಒಂದು ರೀತಿಯಲ್ಲಿ ದಮನಕರಿ ಪ್ರವೃತ್ತಿಯನ್ನು ತಳೆಯುತ್ತಿದ್ದೇವೆ, ನಾವು ಸರ್ವಾಧಿಕಾರಿ' ಎಂದು ಹೇಳಿ ನೋಡೋಣ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ನೀವು ತುಘಲಕ್ ದರ್ಬಾರ್ ಮಾಡುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಮ್ಮ ರಕ್ಷಣೆಗೆ ತಾವು ಬರಬೇಕಾಗುತ್ತದೆ. ಇವತ್ತು ಯಡಿಯೂರಪ್ಪ ಈಶ್ವರಪ್ಪ ಹಾಗೂ ಇನ್ನೋರ್ವ ಬಿಜೆಪಿ ಶಾಸಕರೆಂದು ನಮಗೆ ರಕ್ಷಣೆ ಕೊಟ್ಟು ಬಿಡಿಸಿದಿರಿ. ಆದರೆ, ಸಾಮಾನ್ಯ ಜನರಿಗೆ ರಕ್ಷಣೆ ಇಲ್ಲವೆ ? ಪಕ್ಷದ ವಿಚಾರ ಮರೆತು ಬಿಡೋಣ, ಬೇರೆ ವಿಷಯ ಮರೆತುಬಿಡಿ. ಮನೆಗಳಿಗೆ ನುಗ್ಗಿ ಬಿಜೆಪಿ ಕಾರ್ಯಕರ್ತರನ್ನು ಏಕೆ ಬಂಧಿಸುತ್ತಿದ್ದೀರಿ ? ಅವರನ್ನು ಏಕೆ ಗದರಿಸುತ್ತಿದ್ದೀರಿ ?

ನಿಮ್ಮ ಉದ್ದೇಶವಾದರೂ ಏನು ? ಈ ರಾಜ್ಯದಲ್ಲಿ ಬಿಜೆಪಿ ಚಟುವಟಿಕೆ ನಡೆಯಬಾರದೆ ? ನೀವೇನಾದರೂ ತುರ್ತು ಪರಿಸ್ಥಿತಿ ಘೋಷಣೆ ಮಾಡಿದ್ದೀರಾ ? ಹಿಂದಿನ ತುಘಲಕ್ ದರ್ಬಾರ್ ನಡೆಸುವುದಕ್ಕೆ ಏನಾದರೂ ಪ್ರಾರಂಭ ಮಾಡಿದ್ದೀರಾ ? ಇದರ ಬಗ್ಗೆ ನಾವು ಪ್ರತಿಭಟಿಸಬೇಕಾಗುತ್ತದೆ. ಇಲ್ಲದಿದ್ದರೆ ನೀವು ಹೇಳಿಬಿಡಿ. ಇಲ್ಲಿ ನೀವೇನು ಇದರ ಬಗ್ಗೆ ಪ್ರಶ್ನೆ ಮಾಡುವಂತಿಲ್ಲ, ಬಿಜೆಪಿ ವಿರುದ್ಧ ನಾವು ಈ ರೀತಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ ಎಂದಾದರೂ ಹೇಳಿ ಆಗ ನಾವು ಹೊರಗಡೆ ಹೋಗಿ ನಮ್ಮ ಕೆಲಸವನ್ನಾದರೂ ಮಾಡುತ್ತೇವೆ. ಆದರೆ, ಈ ಸದನದಲ್ಲಿ ಯಾವುದೇ ಒಬ್ಬ ಸಾಮಾನ್ಯ ವ್ಯಕ್ತಿಯ ಹಕ್ಕಿಗೆ ಚ್ಯುತಿ ಬಂದಾಗ, ಈ ಪ್ರಜಾತಂತ್ರ ವ್ಯವಸ್ಥೆಯನ್ನು ಕಗ್ಗೊಲೆ ಮಾಡಲು ಮುಂದುವರೆಸುವಂಥ ಪ್ರಯತ್ನದ ಸಂದರ್ಭದಲ್ಲಿ ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಆದಕ್ಕಾಗಿ ನಾನು ನಿಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ

ಶ್ರೀ ಕೆ.ಎಸ್. ಈಶ್ವರಪ್ಪ:– ನಮ್ಮ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪ ಹಾಗೂ ರುಕ್ಮಯ್ಯ ಪೂಜಾರಿಯವರನ್ನು ಬಂಧಿಸಿ ಜೈಲಿನಲ್ಲಿಟ್ಟಾಗ ಸನ್ಮಾನ್ಯ ಮುಖ್ಯಮಂತ್ರಿಯವರು ಎಲ್ಲರನ್ನೂ ಖಂಡಿತವಾಗಿಯೂ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು. ಅಂದರೆ, ಸದನದಲ್ಲಿ ಹೇಳಲಿಲ್ಲ, ಹೊರಗಡೆ ಹೇಳಿದರು. ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿ ನಿನ್ನೆಗೆ ಮೂರು ದಿವಸಗಳಾದವು. ಇವರುಗಳನ್ನು ಬಿಡುಗಡೆ ಮಾಡಿದ್ದರೂ ಉಳಿದವರು ಏನು ಪಾಪ ಮಾಡಿದ್ದಾರೆ ? ನಮಗ್ಯಾಕೆ ಈ ರೀತಿ ತೊಂದರೆ ಕೊಡುತ್ತಿದ್ದೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದಾಗ ಯಡಿಯೂರಪ್ಪನವರೆ, ಇದು ಆಗುವುದಿಲ್ಲ, ಪೊಲೀಸ್ ಅಧಿಕಾರಿಗಳಿಂದ ಕೆಲವು ತಪ್ಪುಗಳಾಗಿರಬಹುದು, ತಕ್ಷಣ ಸೂಚನೆ ಕೊಟ್ಟು ಬಿಡುಗಡೆ ಮಾಡುತ್ತೇವೆ ಎಂದು ಭರವಸೆ ಕೊಟ್ಟ ಈ ರೀತಿಯ ಕೇಸ ಏನು ಮುಂದುವರಿಸುತ್ತಿದ್ದೀರಿ.....

ಶ್ರೀ ಕೆ.ಎಸ್. ಈಶ್ವರಪ್ಪ:– ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿದ್ದುದು ತಪ್ಪು ಎಂದು ಒಪ್ಪಿಕೊಳ್ಳುತ್ತೀರಾ ? ಹೇಗೆ ? ಇದರ ಬಗ್ಗೆ ಸರ್ಕಾರ ಉತ್ತರ ಕೊಡುತ್ತದೆಯೇ ?

ಶ್ರೀ ಹುಣಸೆ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಭಾರತೀಯ ಜನತಾ ಪಕ್ಷವು ಸರ್ವೋಚ್ಚ ನ್ಯಾಯಾಲಯಕ್ಕೆ, ಪ್ರಧಾನ ಮಂತ್ರಿಗಳಿಗೆ ಮತ್ತು ರಾಷ್ಟ್ರಕ್ಕೆ ವಚನ ಕೊಟ್ಟು ಅಯೋಧ್ಯೆಯಲ್ಲಿ.....

ಶ್ರೀ ಕೆ.ಎಸ್. ಈಶ್ವರಪ್ಪ:- ಅದಕ್ಕೂ ಇದಕ್ಕೂ ಏನು ಸಂಬಂಧ ?

(ಈ ಸಂದರ್ಭದಲ್ಲಿ, ಬಿಜೆಪಿ ಸದಸ್ಯರುಗಳಾದ ಶ್ರೀ ಕೆ.ಎಸ್. ಈಶ್ವರಪ್ಪ ಹಾಗೂ ಶ್ರೀ ಎ. ರುಕ್ಮಯ್ಯ ಪೂಜಾರಿಯವರು ಸಭಾಧ್ಯಕ್ಷರ ಪೀಠದ ಬಳಿ ಬಂದು ನಿಂತರು.)

ಶ್ರೀ ಕೆ.ಎಸ್. ಈಶ್ವರಪ್ಪ:- ಬಿಜೆಪಿ ಕಾರ್ಯಕರ್ತರು ಏನು ತಪ್ಪು ಮಾಡಿದ್ದಾರೆ ?

ರಾತ್ರೋರಾತ್ರಿ ಪರೀಕ್ಷೆಗಾಗಿ ಓದುತ್ತಿರುವಂಥ ವಿದ್ಯಾರ್ಥಿಗಳನ್ನು ಏಕೆ ಬಂಧಿಸಿದ್ದೀರಿ ? ಯಾರು ಈ ರೀತಿ ದಮನಕಾರಿ ಪ್ರವೃತ್ತಿಯನ್ನು ಅನುಸರಿಸುತ್ತಿದ್ದಾರೋ ಅವರೆಲ್ಲಾ ನಿರ್ನಾಮವಾಗುತ್ತಾರೆ ಎಂಬುದನ್ನು ನೆನಪಿಟ್ಟುಕೊಳ್ಳಿ, ಇದರ ಬಗ್ಗೆ ನಾವು ಪ್ರತಿಭಟಿಸುತ್ತಿದ್ದೇವೆ.

(ಗೊಂದಲ)

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಈಶ್ವರಪ್ಪನವರೆ, ನಾನು ಹೇಳುವ ಮಾತನ್ನು ಪೂರ್ತಿಯಾಗಿ ಕೇಳಿ ಅನಂತರ......

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಹಿರಿಯ ಸಚಿವರಾದಂಥ ಮಾನ್ಯ ಹಾರ್ನಳ್ಳಿ ರಾಮಸ್ವಾಮಿಯವರಲ್ಲಿ ಕೇಳುತಿದ್ದೇನೆ: ಈ ಹಿಂದೆ ನಾವು ಸರ್ವೋಚ್ಚ ನ್ಯಾಯಾಲಯಕ್ಕೆ ಭರವಸೆ ಕೊಟ್ಟು ಏನಾಗಿದೆಯೆಂಬುದು ಇಡೀ ದೇಶದ ಜನರಿಗೆ ಗೊತ್ತಿದೆ. ಆದರೆ, ಅದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡೋಣ. ಆ ವಿಷಯವನ್ನು ನಾನು ಪ್ರಸ್ತಾಪ ಮಾಡಿದೆನೆ ? ನಾನು ಇವೊತ್ತು ಪ್ರಸ್ತಾಪ ಮಾಡುತ್ತಿರುವಂಥದ್ದು ಏನೆಂದರೆ, ಮನೆಯಲ್ಲಿದ್ದಂಥ ಬಿಜೆಪಿ ಕಾರ್ಯಕರ್ತರುಗಳನ್ನು ಪ್ರಿವೆಂಟಿವ್ ಆರೆಸ್ಟ್ ಮಾಡುತ್ತಿದ್ದೇವೆಂದು ಹೇಳಿ ಅರೆಸ್ಟ್ ಮಾಡಿ ಸಾಯಂಕಾಲ ತಕ್ಷಣ ಬಿಡುಗಡೆಗೊಳಿಸಬೇಕಾಗಿದ್ದವರನ್ನು ಇವೊತ್ತಿನವರೆಗೂ ಪೋಲೀಸ್ ಕಸ್ಟಡಿಯಲ್ಲಿರಿಸಿದ್ದಾರೆ. ಈ ರೀತಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೆ ? ಕಾನೂನಿನ ಚೌಕಟ್ಟನ್ನು ಮೀರಿ ನಿಮ್ಮ ಪೊಲೀಸ್ ಅಧಿಕಾರಿಗಳು ದೌರ್ಜನ್ಯ ನಡೆಸುತ್ತಿದ್ದಾರೆಯೇ ? ಅಥವಾ ಪೊಲೀಸ್ ಸರ್ಕಾರವನ್ನು ನಡೆಸುವುದಕ್ಕೆ ಹೊರಟಿದ್ದೀರಾ ? ಪೊಲೀಸರನ್ನು ಉಪಯೋಗಿಸಿಕೊಂಡು ಬಿಜೆಪಿ ಕಾರ್ಯಕರ್ತರನ್ನು ಬಗ್ಗು ಬಡಿಯುವಂಥ ಕೆಲಸವನ್ನು ಯಾವ ಕಾನೂನಿನ ಚೌಕಟ್ಟಿನಲ್ಲಿ ನೀವು ಮಾಡುತ್ತಿದ್ದೀರಿ ?

ಅವರನ್ನು ಏಕೆ ಬಂಧನ ಮಾಡಿದ್ದೀರಿ ಎನ್ನುವುದರ ವಿವರಣೆಯನ್ನು ಈ ಸದನಕ್ಕೆ ಕೊಡಬೇಕಾಗುತ್ತದೆ. ಅದನ್ನು ನಾವು ಪ್ರಸ್ತಾಪ ಮಾಡಿದರೆ ನೀವು ಡೆಲ್ಲಿ ವಿಚಾರ ಕೋರ್ಟ್‌ಗೆ ಪ್ರಾಮಿಸ್ ಮಾಡಿರುವ ವಿಚಾರ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ಸದನ ನಡೆಯುವಾಗ ಈ ರಾಜ್ಯದಲ್ಲಿ ಇಷ್ಟು ಜನರನ್ನು ಬಂಧಿಸಿದ್ದೇವೆ ಎಂಬ ಬಗ್ಗೆ ಒಂದು ಹೇಳಿಕೆಯನ್ನು ಕೊಡಬಹುದಾಗಿತ್ತು. ಇದೇನೂ ದೊಡ್ಡದಲ್ಲ. ಇದರಲ್ಲಿ ಅಯೋಧ್ಯೆಯ ಪ್ರಶ್ನೆ, ಇನ್ನೊಂದು ಪ್ರಶ್ನೆ ಎತ್ತಿ ವಾದವಿವಾದವನ್ನು ಮಾಡುವ ಬದಲು ಮಾನ್ಯ ಸಂಸದೀಯ ಸಚಿವರು ಒಂದು ಹೇಳಿಕೆಯನ್ನು ಹೇಳಬಹುದಾಗಿತ್ತು. ನಾವು ಸಂಜೆ ಹೇಳಿಕೆಯನ್ನು ಕೊಡುತ್ತೇವೆ, ಇಷ್ಟು ಜನರನ್ನು ಬಂಧಿಸಿದ್ದೇವೆ, ಇಷ್ಟು ಜನರನ್ನು ಬಿಡುಗಡೆ ಮಾಡಿದ್ದೇವೆ ನಮ್ಮಲ್ಲಿ ಇಷ್ಟು ಮಾಹಿತಿ ಇದೆಯೆಂದು ಹೇಳಬಹುದಾಗಿತ್ತು. ಊರಿನಲ್ಲಿ ಹೋಗುವುದಕ್ಕೆ ಕೊಡಲಿಯನ್ನು ತೆಗೆದುಕೊಂಡಂತೆ ಆಗಿದೆ. ಇದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ಇವರು ಕೇಳಿಗತಕ್ಕ ವಿವರಗಳಿಗೆ ಬೇರೆ ಅವಕಾಶವನ್ನು ಕೊಟ್ಟರೆ ಸರ್ಕಾರ ಆ ಮಾಹಿತಿಯನ್ನು ತರಿಸಿ ಕೊಡಲು ಸಿದ್ಧವಾಗಿದೆ. ಎಷ್ಟು ಜನರನ್ನು ಬಂಧಿಸಿದ್ದೇವೆ, ಎಲ್ಲೆಲ್ಲಿ ಇಟ್ಟಿದ್ದೇವೆ ಎಂಬ ಬಗ್ಗೆ ಮಾಹಿತಿ ಕೊಡಲು ತಯಾರಾಗಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಏಕೆ ಅರೆಸ್ಟ್ ಮಾಡಿದಿರಿ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಕಾನೂನಿನ ಪ್ರಕಾರ ಅವಶ್ಯಕತೆ ಇದೆ, ಅದಕ್ಕೆ ಮಾಡಿದ್ದೇವೆ. ಇಡೀ ದೇಶದಲ್ಲಿ ಅಲ್ಲೋಲಕಲ್ಲೋಲ ಮಾಡಿದ್ದೀರಿ, ಇನ್ನೊಂದು ಸಾರಿ ದೆಹಲಿಗೆ ಹೋಗಿ ಅಲ್ಲಿರತಕ್ಕ ಜುಮ್ಮಾಮಸೀದಿಯನ್ನು ಹೊಡೆದು ಮತ್ತೆ ಅಲ್ಲೋಲಕಲ್ಲೋಲ ಮಾಡುವುದನ್ನು ತಡೆಯುವುದಕ್ಕೋಸ್ಕರವಾಗಿ ಬಂಧನ ಮಾಡಿದ್ದೇವೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ:– ತಾವು ಬಂಧನ ಮಾಡುವುದಾದರೆ ಪಾಕಿಸ್ತಾನ, ಚೈನಾದೇಶದ ಬಾರ್ಡರ್‌ಗಳಲ್ಲಿ ಮಾಡಿ. ಪಾಕಿಸ್ತಾನದಿಂದ ನುಸುಳಿ ಬರುತ್ತಿರುವವರನ್ನು ತಡೆಯತಕ್ಕ ಯೋಗ್ಯತೆ ಇದ್ದರೆ ತಡೆಯಿರಿ ಆದರೆ ಬಿಜೆಪಿಯವರನ್ನು ದೆಹಲಿಗೆ ಹೋಗುವುದನ್ನು ತಡೆಯತಕ್ಕ ಹಕ್ಕು ನಿಮಗೆಲ್ಲಿದೆ ? ದೆಹಲಿಯಲ್ಲಿ ಅಪರಾಧ ಮಾಡಬಹುದೆಂದು ನೀವೇ ಊಹಿಸಿ ಇಲ್ಲಿ ಬಂಧನ ಮಾಡುತ್ತೀರೇನು ?

SRI HARANAHALLI RAMASWAMY:– If it is illegal – there are courts you go and challenge there.....

ಶ್ರೀ ಬಿ. ಎಸ್. ಯಡಿಯೂರಪ್ಪ:– ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಬಿ.ಜೆ.ಪಿಯ ಕಾರ್ಯಕರ್ತರನ್ನು ಏಕೆ ಬಂಧನ ಮಾಡಿದಿರಿ ? ಏಕೆ ಜೈಲಿಗೆ ಹಾಕಿದಿರಿ ? ಅವರು ಏನು ಅಪರಾಧ ಮಾಡಿದ್ದಾರೆ ? ಸರ್ವಾಧಿಕಾರಿಗಳಂತೆ ವರ್ತನೆ ಮಾಡುತ್ತಾ ಇದ್ದೀರಿ. ಉತ್ತರಪ್ರದೇಶದಲ್ಲಿ ಮುಲಾಯಂಸಿಂಗ್ ಯಾದವ್‌ರವರು ಇದೇ ರೀತಿ ಮಾಡಿ ಪರಿಸ್ಥಿತಿ ಏನಾಯಿತು ? ಇದೇ ಏನು ಚುನಾಯಿತ ಸರ್ಕಾರ ನಡೆದುಕೊಳ್ಳತಕ್ಕ ರೀತಿ ?

(ಗೊಂದಲ)

ಅಧ್ಯಕ್ಷರು:– ಅವರು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ದೆಹಲಿಗೆ ಹೋಗುವುದನ್ನು ತಡೆಯಲು ನೀವು ಯಾರು ? ನಮಗೆ ಅಲ್ಲಿಗೆ ಹೋಗುವುದಕ್ಕೆ ಅಧಿಕಾರವಿಲ್ಲವೆ ? ನಮಗೆ ಅಲ್ಲಿ ಸಭೆ ಮಾಡತಕ್ಕ, ರ್‍ಯಾಲಿ ಮಾಡತಕ್ಕ ಅಧಿಕಾರವಿಲ್ಲವೆ ? ನಿಮ್ಮ ಮನಬಂದಂತೆ, ಸ್ವೇಚ್ಛಾಚಾರದಿಂದ ಅಧಿಕಾರವನ್ನು ನಡೆಸಲು ನಿಮಗೆ ಜನರು ಅಧಿಕಾರವನ್ನು ಕೊಟ್ಟಿದ್ದಾರೆಯೆ ? ಲಕ್ಷಾಂತರ ಜನರು ತಮ್ಮ ಪ್ರಾಣವನ್ನು ಕೊಟ್ಟು ಸ್ವಾತಂತ್ರ್ಯವನ್ನು ಗಳಿಸಿಕೊಟ್ಟಿದ್ದು ಇದಕ್ಕೋಸ್ಕರವೆ ? ನೀವು ಉದ್ದೇಶಪೂರ್ವಕವಾಗಿ disputed site ಅನ್ನು ಮಸೀದಿ ಮಸೀದಿ ಎಂದು ಕರೆದು ದೇಶದಲ್ಲಿ ಜಾತಿಯ ವಿಷ ಬೀಜವನ್ನು ಬಿತ್ತುತ್ತಿರತಕ್ಕ ಜನರು ನೀವು, ನಾವಲ್ಲ.

(ಗೊಂದಲ)

ಅಧ್ಯಕ್ಷರು:– ನಾನು ಎದ್ದು ನಿಂತ ಮೇಲೆ ಗೌರವವನ್ನು ಕೊಟ್ಟು ತಾವು ಕುಳಿತುಕೊಳ್ಳಬೇಕು. ಈಗ ತಾವು ಎತ್ತಿರತಕ್ಕ ಪ್ರಸ್ತಾವನೆ ಏನು ಇದೆ ಅದಕ್ಕೆ ನಾನು ಅನುಮತಿಯನ್ನು ಕೊಡುವುದಿಲ್ಲವೆಂದು ಹೇಳಿದ್ದೇನೆ. ತಾವು ವಿವರವನ್ನು ಕೇಳಿದ್ದೀರಿ. ಅವರು ಒದಗಿಸುತ್ತೇನೆಂದು ಹೇಳಿದ್ದಾರೆ. ಇಷ್ಟಕ್ಕೆ ಇದನ್ನು ನಿಲ್ಲಿಸಿಬಿಡಬೇಕು. ಅವರು ತಮಗೆ ಪ್ರಸ್ತಾವನೆಯನ್ನು ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅಪ್ಪಣೆಯನ್ನು ಪಡೆದು ಪ್ರಸ್ತಾಪ ಮಾಡುತ್ತಿದ್ದೇನೆ. ಇದರ ಬಗ್ಗೆ ನನ್ನ ವಿರೋಧವಿಲ್ಲ. ಅವರು ಅವಕಾಶವನ್ನು ಕೊಟ್ಟರೆ ನಾನು ಚರ್ಚೆ ಮಾಡುತ್ತೇನೆ, ಇಲ್ಲದಿದ್ದರೆ ಇಲ್ಲ. ನಾವು ನಿಮ್ಮ ಸೂಚನೆಗೆ ತಲೆಬಾಗುತ್ತೇವೆ. ಯಡಿಯೂರಪ್ಪನವರೆ ನೀವು ಪ್ರಸ್ತಾಪ ಮಾಡುವುದು ಬೇಡವೆಂದರೆ ನಾವು ಹೊರಗೆ ಹೋಗುತ್ತೇವೆ, ಅದರ ಬಗ್ಗೆ ಅಲ್ಲ, ತಮ್ಮ ಬಗ್ಗೆ ಅಲ್ಲ. ಆದರೆ ಇಲ್ಲಿ ಇವತ್ತು ಸರ್ಕಾರ ಸರ್ವಾಧಿಕಾರಿಯಂತ ಪ್ರಜಾತಂತ್ರ ವ್ಯವಸ್ಥೆಯನ್ನು ಕಗ್ಗೊಲೆ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತಿದೆ. ದೆಹಲಿಗೆ ಹೋಗುವವರನ್ನು ಬಂಧಿಸಲು ಇವರು ಯಾರು ? ದೆಹಲಿಗೆ ಹೋಗಿ ನಾವು ಏನು ಮಾಡುತ್ತೇವೆಂದು ಇವರು ಇಲ್ಲೀ ಕುಳಿತುಕೊಂಡು ತಿಳಿದುಕೊಳ್ಳುವುದಕ್ಕೆ ಇವರಿಗೇನು jurisdiction ಇದೆಯೆ ? preventive arrest ಎಂದರೆ ಏನು ? ಕಸ್ಟಡಿಗೆ ಕೊಡಲು ಇವರಾರು ? ಅದಕ್ಕೆ ಕಾನೂನಿನಲ್ಲಿ ಅವಕಾಶ ಇದೆಯೆ ? ಕೋರ್ಟ್‌ಗೆ ಹೋಗಿ ಎಂದು ಒಬ್ಬ ಮಾನ್ಯ ಸಂಸದೀಯ ಸಚಿವರು ಹೇಳುವುದಾದರೆ ಈ ರಾಜ್ಯದಲ್ಲಿ ಯಾರಿಗಾದರೂ ರಕ್ಷಣೆ ಇದೆಯೆ ? ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡುತ್ತೇನೆ. ದೆಹಲಿಯ ರ್‍ಯಾಲಿಯನ್ನು ತಡೆಯತಕ್ಕ ಪ್ರಯತ್ನ ಮಾಡುತ್ತಿದ್ದಾರೆ. ಅಲ್ಲಿ ಹತ್ತಾರು ಲಕ್ಷ ಜನರು ಸೇರಿದರೆ ಇವರ ಬಣ್ಣ ಬಯಲಾಗುತ್ತದೆ ಎನ್ನತಕ್ಕ ಭಯದಿಂದ ಆ ರ್‍ಯಾಲಿಯನ್ನು ನಿಲ್ಲಿಸುತ್ತಿದ್ದಾರೆ. ಇದನ್ನು ಪ್ರತಿಭಟನೆ ಮಾಡಬೇಕಾಗುತ್ತದೆ. ಒಂದು ರಾಜಕೀಯ ಪಕ್ಷಕ್ಕೆ ಸಾರ್ವಜನಿಕ ಸಭೆಯನ್ನು ನಡೆಸಲು ಅಧಿಕಾರವಿಲ್ಲವೆ ? ರ್‍ಯಾಲಿ ಮಾಡಿದರೆ ನಿಮ್ಮ ಬಣ್ಣ ಬಯಲಾಗುತ್ತದೆ ಎಂದು ಇವತ್ತು ಈ ಸೋಗಿನ ಮಾತನ್ನು ಆಡುತ್ತಿದ್ದೀರಿ. ಹಾಗಿದ್ದರೆ ಡಿಸೆಂಬರ್ 6ರಂದು ಆ ಘಟನೆ ನಡೆಯಬೇಕಾದರೆ ನೀವು ಮಲಗಿದ್ದಿರೇನು ? ಅಂದೂ ಸಹ ರಕ್ಷಣೆಯನ್ನು ಕೊಡಬೇಕಾಗಿತ್ತು ತಾಕತ್ತು ಇದ್ದರೆ ? ಅದನ್ನು ಮಾಡದೆ ದೇಶದಲ್ಲಿ ಜಾತಿಯ ವಿಷ ಬೀಜವನ್ನು ಬಿತ್ತಿ ನಮ್ಮ ನಾಯಕರ ಬಂಧನವನ್ನು ಮಾಡತಕ್ಕ ಕೆಲಸ ಮಾಡಿ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆಯತಕ್ಕ ಸಮಾರಂಭಗಳನ್ನು ಅಡ್ಡಿಮಾಡಿ, ರ್‍ಯಾಲಿಗಳನ್ನು ತಡೆಯತಕ್ಕ ಪ್ರಯತ್ನವನ್ನು ಮಾಡಿ, ದೆಹಲಿಗೆ ಹೊರಟವರನ್ನು ಬಂಧನ ಮಾಡಿ, ವಿನಾಕಾರಣ ಅವರನ್ನು ತೆಗೆದುಕೊಂಡು ಹೋಗಿ ಜೈಲಿನಲ್ಲಿ ಕುಳ್ಳಿರಿಸಿಕೊಂಡಿದ್ದೀರಿ. ಇದಕ್ಕಾಗಿ ಸರ್ಕಾರ ಕ್ಷಮಾಪಣೆ ಕೇಳಬೇಕು. ಅವರನ್ನು ಏಕೆ ಪ್ರಿವೆಂಟೀವ್ ಅರೆಸ್ಟ್ ಮಾಡಿದ್ದೀರಿ ? ಸರ್ಕಾರ ಕ್ಷಮಾಪಣೆ ಕೇಳುವವರೆಗೂ ನಾವು ಮೇಲೆ ಏಳುವುದಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ:– ರಾತ್ರಿ ಇವರ ಮಕ್ಕಳನ್ನು ಹೀಗೆಯೇ ಅರೆಸ್ಟ್ ಮಾಡಿದ್ದರೆ ಇವರು ನಿದ್ದೆ ಮಾಡುತ್ತಿದ್ದರೆ ?

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಇಲ್ಲಿ ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ತಾವು ಮಾನ್ಯ ಸದಸ್ಯರಿಗೆ ಅನುಮತಿ ಕೊಟ್ಟಾಗ ಮಾತ್ರ ಮಾತನಾಡಬೇಕು. ಗೆಸ್ಚರ್ಸ್ ಮಾಡಬಾರದೆಂದು ಇದೆ. ನಮ್ಮ ಮಾನ್ಯ ಸದಸ್ಯರು ಅವರವರ ಸ್ಥಾನದಲ್ಲಿ ಕುಳಿತುಕೊಂಡು ಮಾತನಾಡಬೇಕಾಗುತ್ತದೆ. ಆದರೆ ಇವರು ಈಗ ತಮ್ಮ ಸ್ಥಾನದಿಂದ ಹೊರಗೆ ನಿಂತು ಮಾತನಾಡುತ್ತಿದ್ದಾರೆ. ಅದನ್ನು ತಾವು ಕೇಳುತ್ತಿದ್ದೀರಿ. ಆದರೆ ಗೆಸ್ಚರ್ಸ್ ಮುಂತಾದ್ದನ್ನು ಮಾಡಕೂಡದೆಂದು ನಮ್ಮ ರೂಲ್ಸ್ ಪ್ರಕಾರ ಪ್ರೊಹಿಬಿಷನ್ ಇದೆ.

ಶ್ರೀ ಕೆ. ಎಸ್. ಈಶ್ವರಪ್ಪ:– ಕಾನೂನನ್ನು ಬಿಟ್ಟು ನೀವು ಅರೆಸ್ಟ್ ಮಾಡಿದ್ದೀರಿ. ಅಂದಮೇಲೆ ನೀವು ಕಾನೂನಿನ ವಿಚಾರ ಏತಕ್ಕೆ ಮಾತನಾಡುತ್ತೀರಿ ?

SRI K. H. RANGANATH:– Sir, I am only appealinng to you sir, not to the hon. Member. ಆದ್ದರಿಂದ ಇದರ ಬಗ್ಗೆ ತಾವು ನಿರ್ದಿಷ್ಟವಾದ ರೂಲಿಂಗನ್ನು ಕೊಡಬೇಕಾಗುತ್ತದೆ. ಏಕೆಂದರೆ, ನಾವು ಹೊರಗೆ ಏನು ಬೇಕಾದರೂ ಮಾಡಿಕೊಳ್ಳಬಹುದು. ಆದರೆ ಈ ಸಭೆಯಲ್ಲಿ ಇರತಕ್ಕದ್ದು ನಾವು ಒಪ್ಪಿಕೊಂಡಿರತಕ್ಕ ಕಾನೂನು. ನಾವು, ಈ ಸಭೆಯು ಒಪ್ಪಿಕೊಂಡಿರತಕ್ಕ ಕಾನೂನಿನ ಪ್ರಕಾರವೇ ನಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ನಿರ್ದಿಷ್ಟವಾಗ ಒಂದು ರೂಲಿಂಗನ್ನು ಕೊಡಬೇಕಾಗುತ್ತದೆ. ಏಕೆಂದರೆ ಪ್ರತಿದಿನ ಈ ರೀತಿ ನಡೆದುಕೊಂಡು ಹೋದರೆ ಬಹಳಮಟ್ಟಿಗೆ ನಮ್ಮ ನಡತೆಯನ್ನು ಈ ರಾಜ್ಯದ ಜನರು, ಯಾರೂ ಒಪ್ಪುವುದಿಲ್ಲ.

ಡಾ: ಜೀವರಾಜ ಆಳ್ವ:– ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಚಾರ ಇದೆ. ಅದು ಇದರ ಬಗ್ಗೆ ಅಲ್ಲ. ಅವರು ಮಾಡಿಕೊಂಡಿರಲಿ. ಇಲ್ಲಿ ಮಾನ್ಯ ಕಂದಾಯ ಮಂತ್ರಿಗಳಿದ್ದಾರೆ. ಇದು ಬಹಳ ಗಹನವಾದ ವಿಚಾರ.

ಅಧ್ಯಕ್ಷರು:– ಮಾನ್ಯ ಸದಸ್ಯರು ಅವರವರ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ನಾನು ಹೇಳುತ್ತಿದ್ದೇನೆ. ಯಡಿಯೂರಪ್ಪನವರೇ, ತಾವು ದಯವಿಟ್ಟು ತಮ್ಮ ಸ್ಥಾನದಲ್ಲಿ ಹೋಗಿ ಕುಳಿತುಕೊಳ್ಳಿ.

ಶ್ರೀ ಕೆ. ಎಸ್. ಈಶ್ವರಪ್ಪ:– ಸ್ವಾಮಿ, ನಮ್ಮ ಕಾರ್ಯಕರ್ತರೆಲ್ಲಾ ಜೈಲಿನಲ್ಲಿದ್ದಾರೆ. ನಾವು ಇಲ್ಲಿರುತ್ತೇವೆ. ಇದರಿಂದ ಇವರಿಗೆಲ್ಲಾ ಸಮಾಧಾನವಿರುತ್ತದೆ. ಮುಖ್ಯಮಂತ್ರಿಗಳು, ಮಂತ್ರಿಗಳು ಆರಾಮ ಜೀವನವನ್ನು ಮಾಡಿಕೊಳ್ಳಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ:– ನಮ್ಮ ಕಾರ್ಯಕರ್ತರನ್ನು ಏತಕ್ಕೆ ಅರೆಸ್ಟ್ ಮಾಡಿಕೊಂಡು ಹೋದರು ಎಂಬುದನ್ನು ತಿಳಿಸದೆ ಏತಕ್ಕೆ ಇಷ್ಟು ದುಃಖ ಕೊಡುತ್ತೀರಿ ? ಅಯೋಧ್ಯೆಯ ಬಗ್ಗೆ ಇಲ್ಲಿ ಮಾತನಾಡುತ್ತಿದ್ದಾರೆಂದರೆ ಇದು ಬೇಜವಾಬ್ದಾರಿ ಆಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್:– ಅರೆಸ್ಟ್ ಮಾಡಿದ್ದನ್ನು ಈ ಸದನಕ್ಕೆ ಅಥವಾ ಸರ್ಕಾರಕ್ಕೆ ತಿಳಿಸಬಹುದೇ ಹೊರತು, ಏತಕ್ಕೆ ಅರೆಸ್ಟ್ ಮಾಡಲಾಗಿದೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೆ ?

ಶ್ರೀ ಬಿ. ಎಸ್. ಯಡಿಯೂರಪ್ಪ:– ತಿಳಿಸಬೇಕಾದ್ದು ಸರ್ಕಾರದ ಕರ್ತವ್ಯ.

ಶ್ರೀ ಕೆ. ಹೆಚ್. ರಂಗನಾಥ್:– ಅರೆಸ್ಟ್ ಆಗಿದೆ. ಇಂಥವರನ್ನು ಅರೆಸ್ಟ್ ಮಾಡಲಾಗಿದೆ ಎಂಬುದನ್ನು ಮಾನ್ಯ ಅಧ್ಯಕ್ಷರಿಗೆ ತಿಳಿಸಬೇಕು. ಅದರಲ್ಲೂ ಈ ಸದನದ ಸದಸ್ಯರನ್ನು ಅರೆಸ್ಟ್ ಮಾಡಿದಾಗ ತಿಳಿಸದೇ ಹೋದರೆ ಅದು ಮಹಾ ದೊಡ್ಡ ಅಪರಾಧವಾಗುತ್ತದೆ. ಮಾನ್ಯ ಸದಸ್ಯರಿಗೆ ಇದನ್ನು ಕೇಳತಕ್ಕ ಹಕ್ಕಿದೆ; ಕೇಳುತ್ತಾರೆ. ಯಾವುದೋ ಕಾನೂನಿನ ಕೆಳಗೆ ಅರೆಸ್ಟ್ ಮಾಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಏತಕ್ಕೆ ಅರೆಸ್ಟ್ ಆಗಿದೆ, ಎಲ್ಲಿ ಅರೆಸ್ಟ್ ಆಗಿದೆ ಎಂದು ನಾವು ಇಲ್ಲ ಚರ್ಚೆ ಮಾಡಿಕೊಂಡು ಕುಳಿತುಕೊಳ್ಳುವುದಕ್ಕಾಗುತ್ತದೆಯೆ ? ಈ ಸಭೆ ಅದಕ್ಕಾಗಿ ಇದೆಯೆ ?

ಶ್ರೀ ವಾಟಾಳ್ ನಾಗರಾಜ್:– ಸದನದಲ್ಲೂ ಮಂತ್ರಿಗಳು ಹೇಳಿಕೆಯನ್ನು ಕೊಡುವಾಗ ಯಾವ ಕಾರಣಕ್ಕಾಗಿ ಬಂಧಿಸಿದರು ಎಂಬುದನ್ನು ಹೇಳಬೇಕಾಗುತ್ತದೆ. ಅದನ್ನು ಹೇಳಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡಿದ್ದೇನೆ. ಆದರೆ ಸುಮ್ಮಸುಮ್ಮನೆ ಯಾರನ್ನಾದರೂ ಬಂಧಿಸುವುದಕ್ಕೆ ಸಾಧ್ಯವೆ ? ರಸ್ತೆಯಲ್ಲಿ ಹೋಗುವವರನ್ನು ಬಂಧಿಸುವುದಕ್ಕೆ ಆಗುತ್ತದೆಯೆ ? ಬಂಧಿಸುವುದಕ್ಕೆ ಒಂದು ಕಾರಣ ಇರುತ್ತದೆ. ನೀವು ಮುನ್ನೆಚ್ಚರಿಕೆಯಿಂದ ಬಂಧನ ಮಾಡಬೇಕಾದರೂ ಒಂದು ಕಾರಣ ಇದ್ದೇ ಇದೆ. ಯಾವ ಕಾರಣಕ್ಕಾಗಿ ಬಂಧಿಸಿದ್ದೀರಿ ? ಎಷ್ಟು ಜನರನ್ನು ಬಂಧಿಸಿದ್ದೀರಿ, ಯಾವ ಯಾವ ಜೈಲಿನಲ್ಲಿಟ್ಟಿದ್ದೀರಿ, ಯಾವಾಗ ಬಿಡುಗಡೆ ಮಾಡುತ್ತೀರೆಂಬ ಬಗ್ಗೆ ಸಾಯಂಕಾಲ ಉತ್ತರ

ಕೊಡುತ್ತೇವೆಂದು ತಾವು ಹೇಳಿಗರೆ ಸಾಕು. ಅದನ್ನು ಬಿಟ್ಟು ಮತ್ತೆ ನೀವು ಅಯೋಧ್ಯೆಗೆ ಏತಕ್ಕೆ ಹೋಗುತ್ತಿದ್ದೀರಿ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ನಿನ್ನೆ ಮೊನ್ನೆ ಈ ಪ್ರಶ್ನೆಗೆ ಇದೇ ಸಭೆಯಲ್ಲಿ ಉತ್ತರವನ್ನು ಕೊಟ್ಟಿದ್ದಾಗಿದೆ.

ಶ್ರೀ ಕೆ. ಎಸ್. ಈಶ್ವರಪ್ಪ:– ಜೈಲಿನಲ್ಲಿಡುವುದು, ಉತ್ತರ ಕೊಡುವುದು, ಇಷ್ಟೆ ನಿಮ್ಮದು.

ಡಾ: ಜೀವರಾಜ ಆಳ್ವ:– ಮಾನ್ಯ ಅಧ್ಯಕ್ಷರೆ, ಇನ್ನು ನನ್ನ ಪ್ರಶ್ನೆಯನ್ನು ತೆಗೆದುಕೊಳ್ಳಬಹುದೆ ? ತಾವು ಅಪ್ಪಣೆ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:– ಮಾನ್ಯ ಸದಸ್ಯರೆಲ್ಲಾ ಕುಳಿತುಕೊಳ್ಳಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಹೌಸ್ ಆರ್ಡರ್‌ನಲ್ಲಿದೆ. ತಾವು ಸಭೆಯನ್ನು ಮುಂದುವರಿಸಿಕೊಂಡು ಹೋಗಿ.

ಡಾ: ಜೀವರಾಜ ಆಳ್ವ:– ಬಹಳಷ್ಟು ಸಾರಿ ಈ ರೀತಿ ಆಗಿದೆ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ನಾನು ಇನ್ನೊಂದು ಪ್ರಶ್ನೆಗೆ ಹೋಗುವುದಿಲ್ಲ. ಪುನಃ ಇನ್ನೇನಾದರೂ ಮಾತನಾಡಿದರೆ ಇವರು ಸರ್ಕಾರದ ಪರವಾಗಿ ಮಾತನಾಡುತ್ತಾರೆಂಬ ಟೀಕೆಗೆ ಒಳಗಾಗಬೇಕಾಗುತ್ತದೆಂಬ ಉದ್ದೇಶದಿಂದ ನಾನು ಕುಳಿತಿದ್ದೇನೆ. ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳೂ ಇದರ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನು ಎಂಬುದನ್ನೂ ಹೇಳಿದ್ದಾರೆ. ನಾನೂ ಕೂಡ ಈ ಪ್ರಶ್ನೆಯನ್ನು ಎತ್ತಿದ್ದೆ. ಬಿ.ಜೆ.ಪಿ. ಅಲ್ಲದಿರುವ ಸದಸ್ಯರನ್ನು ಪಕ್ಷಕ್ಕೆ ಸೇರದೇ ಇರುವವರನ್ನು ಸುಮ್ಮಸುಮ್ಮನೆ ಬಿ.ಜೆ.ಪಿ ಮೆಂಬರ್ಸ್‌ನ್ನು ಮಾಡುವುದಕ್ಕೆ ಕೊಟ್ಟಿದ್ದಾರೆ. ಒಂದು ಹೆಜ್ಜೆ ಮುಂದೆ ಹೋಗುವುದಾದರೆ, ಅಯೋಧ್ಯೆಯಲ್ಲಿ ಟಾಸ್ಕ್‌ಫೋರ್ಸ್ ಹೋದಾಗ ಲಕ್ಷಾಂತರ ಜನ ಅಲ್ಲಿ ಕುಳಿತಿದ್ದವರು ಕೇವಲ ಹತ್ತು ನಿಮಿಷದಲ್ಲಿ ಅವರೆಲ್ಲಾ ಪರಾರಿಯಾದರು. ಆದ್ದರಿಂದ ಅದರ ಬಗ್ಗೆ ಮತ್ತೆ ನಾವು ಮಾತನಾಡುವುದು ಬೇಡ. ಇಷ್ಟೇ ಅಲ್ಲ, ಹಿಂದೆ ತುರ್ತು ಪರಿಸ್ಥಿತಿಯಲ್ಲೂ ಕೂಡ ನಾವು ನೋಡಿದ್ದೇವೆ. ನಮ್ಮ ನಿಮ್ಮ ಸಹಯೋಗ, ನಮ್ಮ ನಿಮ್ಮ ಮಿತ್ರತ್ವ ನೋಡಿದ್ದೇವೆ.

ಶ್ರೀ ಕೆ. ಎಸ್. ಈಶ್ವರಪ್ಪ.– ಜೈಲಿನಲ್ಲಿದ್ದವರು ನಾವು. ನಮ್ಮ ವಿಚಾರ ನಿಮಗೇನು ಗೊತ್ತು.

ಡಾ: ಜೀವರಾಜ ಆಳ್ವ:– ನಮ್ಮ ನಿಮ್ಮ ಮಿತ್ರತ್ವ ಏನೆಂದು ಗೊತ್ತಿದೆ. ಪ್ರತಿದಿನ ಈ ರೀತಿ ಈ ಸಭೆಯಲ್ಲಿ ರಾಜಕೀಯ ಲಾಭವನ್ನು ಪಡೆಯಬೇಕೆಂಬ ದುರುದ್ದೇಶದಿಂದ ಇವರು ಮಾಡುತ್ತಿದ್ದಾರೆ. ಇವರು ಇವತ್ತು ಇಲ್ಲಿ ಕುಳಿತುಕೊಳ್ಳಲಿ. ಇದು ಜನರಿಗೆ ಗೊತ್ತಾಗಲಿ. ಸಭೆಯನ್ನು ನಾವು ನಡೆಸೋಣ. ಎಷ್ಟೋ ಸಾರಿ ನಾವೂ ಬಂದಿದ್ದೇವೆ.

ಇವತ್ತು ಅತ್ಯಂತ ಪ್ರಾಮುಖ್ಯವಾದ ವಿಚಾರ ಬಂದಾಗ ಮಾನ್ಯ ಮಂತ್ರಿಗಳು ಇಲ್ಲವೆಂದು ಹೇಳಿದಾಗ ಮಾನ್ಯ ಯಡಿಯೂರಪ್ಪನವರು, ಮಾನ್ಯ ಈಶ್ವರಪ್ಪನವರು ಮಾತನಾಡಲಿಲ್ಲ. ಇವತ್ತು ನಾವು ಕಟುವಾಗಿ ಟೀಕೆ ಮಾಡಿದೆವು. ಇದರ ಬಗ್ಗೆ ನನ್ನ ಮಾನ್ಯ ಮಿತ್ರರೊಬ್ಬರು ಮಾನ್ಯ ಯಡಿಯೂರಪ್ಪನವರು ಏತಕ್ಕೆ ಕುಳಿತಿದ್ದಾರೆಂದು ಕೇಳಿದರು. ನಿನ್ನೆ ಆಯಿತು, ಮೊನ್ನೆ ಆಯಿತು, ಬಹಳ ಗಹನವಾಗಿ ಚರ್ಚೆ ಆಯಿತು. ಇಷ್ಟು ಚರ್ಚೆಯಾದರೂ ಕೂಡ ಮಾನ್ಯ ಮುಖ್ಯಮಂತ್ರಿಯವರು ಡೀಟೇಲ್ ಆಗಿ ಹೇಳಿದರು, ಈ ಕಾರಣಕ್ಕೋಸ್ಕರವಾಗಿ ಬಂಧಿಸಲಾಗಿದೆ ಎಂದು ಹೇಳಿದರು. ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ರೀತಿಯಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ, ಯಾವ ಯಾವ ಜೈಲಿನಲ್ಲಿ ಇಟ್ಟಿದ್ದೀರೆಂದು ಮಾನ್ಯ ಯಡಿಯೂರಪ್ಪನವರು ಕೇಳಿದರು. ಮಾನ್ಯ

ಯಡಿಯೂರಪ್ಪನವರ ಬೇಡಿಕೆಗೂ ಮಾನ್ಯ ಈಶ್ವರಪ್ಪನವರ ಬೇಡಿಕೆಗೂ ಅಜಗಜಾಂತರ ವ್ಯತ್ಯಾಸವಿದೆ. ವಿರೋಧಪಕ್ಷದ ಬಿಜೆಪಿ ನಾಯಕರು.

(ಗೊಂದಲ)

ಡಾ. ಜೀವರಾಜ ಆಳ್ವ:- ಅವರು ಕೇಳಿರುವ ಪ್ರಶ್ನೆಗೆ, ಮಾನ್ಯ ಯಡಿಯೂರಪ್ಪನವರು ಕೇಳಿರುವ ಪ್ರಶ್ನೆಗೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಸದನದಲ್ಲಿ ಒಂದು ದಿವಸದಲ್ಲಿ ಒಂದು ಗಂಟೆ ಇವರು ಇರುವುದಿಲ್ಲ ಇದನ್ನು ಹೇಳುವುದಕ್ಕೆ ಇವರು ಯಾರು. ಇವರು ಯಾವಾಗಲೋ ಒಂದು ಸಂದರ್ಭದಲ್ಲಿ ಬರುತ್ತಾರೆ.

(ಗೊಂದಲ)

ಡಾ. ಜೀವರಾಜ ಆಳ್ವ:- ಯಡಿಯೂರಪ್ಪನವರೆ, ಎಲ್ಲಿ ಬರಬೇಕು ಎಂದು ಗೊತ್ತಿದೆ, ಎಲ್ಲಿ ನಿಮ್ಮ ಜೊತೆ ಹೊಡೆದಾಡಬೇಕೆಂದು ಗೊತ್ತಿದೆ. ಕಾಂಗ್ರೆಸ್‌ನವರಿಗೆ ಗೊತ್ತಿಲ್ಲ ನಿಮ್ಮ ಬಿ. ಜೆ. ಪಿ.ಯನ್ನು ನೋಡುತ್ತೇವೆ, ಶಿಕಾರಿಪುರದಲ್ಲಿ ಗೆದ್ದು ಬನ್ನಿ, ನೋಡುತ್ತೇವೆ.

ಅಧ್ಯಕ್ಷರು:- ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಆಳ್ವರವರೇ....

(ಗೊಂದಲ)

(ಈ ಸಂದರ್ಭದಲ್ಲಿ ರೆಕಾರ್ಡ್ ಮಾಡಬಾರದೆಂದು ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಡಿಸಿದರು)

ಅಧ್ಯಕ್ಷರು:- ಈ ಸದನದಲ್ಲಿ ಈ ರೀತಿ ಸದಸ್ಯರು ಒಬ್ಬರ ಮೇಲೆ ಒಬ್ಬರು ಆರೋಪ ಮಾಡುವುದು ಸರಿಯಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ:- ನಾನು ಮಾಡುತ್ತಿಲ್ಲ.

ಅಧ್ಯಕ್ಷರು:- ಯಾರೇ ಆಗಲಿ ಇದು ನಮ್ಮ ಸಭೆಗೆ ಗೌರವವನ್ನು ತರತಕ್ಕಂಥದ್ದು ಅಲ್ಲ. ಅದಕ್ಕೆ ದಯವಿಟ್ಟು ಇದನ್ನು ಬಿಟ್ಟು ತಮ್ಮ ತಮ್ಮ ಸ್ಥಳದಲ್ಲಿ ಕುಳಿತು ಮುಂದಿನ ಕಾರ್ಯ ಕಲಾಪಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಡಾ. ಜೀವರಾಜ ಆಳ್ವ:- ಏಕೆಂದರೆ ಪ್ರಚೋದನೆ ಮಾಡಿದಾಗ ಪ್ರಚೋದನೆಗೆ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು:- ನಾನು ಅದಕ್ಕೆ ಅವಕಾಶ ಕೊಟ್ಟಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಈ ತಾತ್ವಿಕವಾಗಿ ನಮಗೂ ಮಾನ್ಯ ಯಡಿಯೂರಪ್ಪನವರಿಗೂ ಬೇಕಾದಷ್ಟು ವ್ಯತ್ಯಾಸವಿದೆ. ತಾತ್ವಿಕವಾದ ಬಿನ್ನಾಭಿಪ್ರಾಯವಿದೆ. ಪಾರ್ಟಿ ವರ್ಕರ್ಸ್‌ನ್ನು ಅರೆಸ್ಟ್ ಮಾಡಿರತಕ್ಕಂಥದ್ದನ್ನು ಕೇಳತಕ್ಕಂಥ ಹಕ್ಕು ಅವರಿಗೂ ಇದೆ. ಸರ್ಕಾರಕ್ಕೆ ಉತ್ತರ ಕೊಡತಕ್ಕಂಥ ಹಕ್ಕು ಇದೆ. ಮತ್ತು ಅದು ಎಷ್ಟು ಸಮಂಜಸ ಬೇಡ ಎನ್ನತಕ್ಕಂಥದ್ದು ಅವರಿಗೆ ಸೇರಿರತಕ್ಕಂಥ ವಿಚಾರ. ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ನಮ್ಮ ಕಾರ್ಯಾಧ್ಯಕ್ಷರಿದ್ದಾರೆ, ಅವರು ಗೌರವಾನ್ವಿತ ಶಾಸಕರಿದ್ದಾರೆ. 10-12 ವರ್ಷಗಳ ಕಾಲದಿಂದ ಈ ಶಾಸನಸಭೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಸದನಕ್ಕೆ ಎಷ್ಟು ಹೊತ್ತಿಗೆ ಬರಬೇಕು, ಎಷ್ಟು ಹೊತ್ತಿಗೆ ಬರಬಾರದೆಂಬುದು ಅವರಿಗೆ ಸೇರಿರತಕ್ಕಂಥ ವಿಚಾರ. ನೀವು ಯಾವಾಗಲೋ ಒಂದು ಸಂದರ್ಭದಲ್ಲಿ ಬರುತ್ತೀರಾ ಎಂದು ಯಾರೇ ಇತರ ಸದಸ್ಯರಿಗೆ ಹೇಳತಕ್ಕಂಥ ಹಕ್ಕಿಲ್ಲ.

ಎರಡನೆಯದಾಗಿ ಏಕವಚನ ಉಪಯೋಗಿಸತಕ್ಕಂಥದ್ದು. ಈಗ ಏನಾಗಿದೆಯೆಂದರೆ ಮಾನ್ಯ ಯಡಿಯೂರಪ್ಪನವರು ಇಲ್ಲಿ ನಿಂತುಕೊಂಡು ಮಾತನಾಡಿದ್ದರ ರೆಕಾರ್ಡಿಗೆ ಹೋಗುತ್ತಿತ್ತು. ಅಲ್ಲಿ ನಿಂತುಕೊಂಡು ಮಾತನಾಡಿದ್ದಾರೆ. ಏಕವಚನದಲ್ಲಿ ಮಾತನಾಡತಕ್ಕಂಥದ್ದು ಸರಿಯೇ ? ಭಾರತೀಯ ಜನತಾಪಕ್ಷಕ್ಕೂ ನಮ್ಮ ಪಕ್ಷಕ್ಕೂ ತಾತ್ವಿಕವಾದಂಥ ಭಿನ್ನಾಭಿಪ್ರಾಯವಿದೆ. ನಮಗೆ ವೈಯಕ್ತಿಕವಾಗಿ ಏನೂ ಭಿನ್ನಾಭಿಪ್ರಾಯವಿಲ್ಲ. ಒಂದು ರಾಷ್ಟ್ರೀಯ ಪಕ್ಷ, ಒಂದು ನೀತಿ ಸಂಹಿತೆಯನ್ನು ಹಾಕಿಕೊಂಡಿರತಕ್ಕಂಥವರು ತಾವು ಇನ್ನೊಬ್ಬ ರಾಷ್ಟ್ರೀಯ ಪಕ್ಷದ ಒಬ್ಬ ಕಾರ್ಯಾಧ್ಯಕ್ಷರ ಬಗ್ಗೆ, ಹಿರಿಯ ಸದಸ್ಯರ ಬಗ್ಗೆ ತಾವು ಈ ರೀತಿ ಏಕವಚನದಲ್ಲಿ ಮಾತನಾಡುತ್ತೇವೆಂದರೆ ಈ ಸಭೆಯಲ್ಲಿ ನಾವು ಒಂದು ನಿಮಿಷ ಸಹಿತ ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ ? ಮಾನ್ಯ ಅಧ್ಯಕ್ಷರೇ, ತಾವು ಇದರ ಬಗ್ಗೆ ರೂಲಿಂಗ್ ಕೊಡಬೇಕು. ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ನನ್ನದೇನೂ ತಕರಾರು ಇಲ್ಲ. ಚುನಾವಣೆಯಲ್ಲಿ ಶಿಕಾರಿಪುರದಲ್ಲಿ ಅವರು ನಿಂತಾಗ, ಕನಕಪುರದಲ್ಲಿ ನಾನು ನಿಂತಾಗ, ಮತ್ತೊಬ್ಬರು ಮತ್ತೊಂದು ಕಡೆ ನಿಂತಾಗ ರಾಜಕೀಯವಾಗಿ ಅವೆಲ್ಲ ಹೋರಾಟ ಮಾಡತಕ್ಕಂಥದ್ದೇ ಅದು ಸ್ವಾಭಾವಿಕವಾಗಿ ಇರತಕ್ಕಂಥದ್ದು.

ಶ್ರೀ ಕೆ. ಹೆಚ್. ರಂಗನಾಥ್ ಅವರು ಈ ಮನೆಯ ಅಧ್ಯಕ್ಷರಾಗಿದ್ದವರು. ಇಡೀ ಸದನದಲ್ಲಿರತಕ್ಕ ಹತ್ತಾರು ಜನ ಹಿರಿಯ ಸದಸ್ಯರಲ್ಲಿ ಮಾನ್ಯ ರಂಗನಾಥ್ ಅವರೂ ಸಹ ಒಬ್ಬರು; ತಾವು ಈ ಕಡೆಯಿಂದ ಆ ಕಡೆ ಬರತಕ್ಕ ಸಂದರ್ಭದಲ್ಲಿ ಯಾವ ಒಂದು ಸ್ಟೈಲ್‌ನಲ್ಲಿ, ಯಾವ ಒಂದು ಲ್ಯಾಂಗ್ವೇಜ್‌ನಲ್ಲಿ ಯಾವ ರೀತಿ ಕೈಗಳನ್ನು ಮಾಡಿಕೊಂಡು ಬರುತ್ತೀರಿ, ಇದರಿಂದ ಅಲ್ಲಿರತಕ್ಕವರಿಗೆ, ನೋಡತಕ್ಕವರಿಗೆ ಏನು ಭಾವನೆ ಬರುತ್ತವೆಯೆಂದು ದಯವಿಟ್ಟು ಯೋಚಿಸಿ. ನಿಮಗೆ ಖಂಡಿತವಾಗಿ ಹೇಳುತ್ತೇನೆ. ನೀವು ಇನ್ನಷ್ಟು ಪ್ರಬಲವಾಗಿ ವಿರೋಧ ಮಾಡಿ. ಈಶ್ವರಪ್ಪನವರು ಜೀವರಾಜ ಆಳ್ವ ಅವರ ಬಗ್ಗೆ ನೀವು ಜೈಲಿನಲ್ಲಿ ಇರಲಿಲ್ಲವೆಂದು ಹೇಳಿದರು. ಡಾ. ನಾಗಪ್ಪ ಆಳ್ವ ಅವರು ವಯೋವೃದ್ಧರು. ಕಾಂಗ್ರೆಸ್ಸಿನವರಿಗೂ ನಮಗೂ, ರಾಜಕೀಯವಾಗಿ ಭಿನ್ನಾಭಿಪ್ರಾಯವಿತ್ತು. ನಮ್ಮನ್ನು ಜೈಲಿನಲ್ಲಿ ಹಾಕಿದರು, ನಾವು ಒಳಗಡೆ ಇದ್ದೆವು, ನೀವೂ ಇದ್ದಿರಿ. ಆ ಸಂದರ್ಭದಲ್ಲಿ ಜೀವರಾಜ ಆಳ್ವ ಅವರು ಮತ್ತು ನಾವು ಜೈಲಿನಲ್ಲಿ ಬಹಳ ಸೇಫ್ ಆಗಿದ್ದೆವು. ನಾಲ್ಕು ಗೋಡೆಗಳು ಇದ್ದವು. ಊಟ, ತಿಂಡಿ ಕೊಡುತ್ತಿದ್ದರು, ಪೋಲೀಸ್ ರಕ್ಷಣೆ ಇತ್ತು. ಅಂಡರ್‌ಗ್ರೌಂಡ್‌ನಲ್ಲಿ ಜೀವರಾಜ ಆಳ್ವ ಏನು ಕೆಲಸ ಮಾಡಿದ್ದಾರೆಂಬುದು ನಮಗೆ ಕೆಲವು ಜನರಿಗೆ ಮಾತ್ರ ಗೊತ್ತಿರತಕ್ಕದ್ದು. ಅದನ್ನು ಇವತ್ತಿಗೂ ಬಹಿರಂಗಪಡಿಸುವುದಕ್ಕೆ ಆಗಿಲ್ಲ. ಅವರ ಮನಸ್ಸು ನೋಯುವ ರೀತಿಯಲ್ಲಿ ನೀವು ಈ ರೀತಿ ಮಾತನಾಡಿದಾಗ ಈ ಸದನದ ಗೌರವ, ಈ ರಾಜ್ಯದ ಜನತೆ ನಮ್ಮ ಬಗ್ಗೆ ಏನು ಅನ್ನುತ್ತದೆ ? ಸಾಮಾನ್ಯವಾಗಿ ರಾಜಕಾರಣಿಗಳ ಬಗ್ಗೆ ಒಂದು ಚೂರೂ ಗೌರವ ಇಲ್ಲ. ಬಸ್ಸಿನಲ್ಲಿ ಹೋಗುವಾಗ, ಟ್ರೈನ್‌ನಲ್ಲಿ ಹೋಗುವಾಗ, ಏರೋಪ್ಲೇನ್‌ನಲ್ಲಿ ಹೋಗುವಾಗ ನಮ್ಮ ಪಕ್ಕದಲ್ಲಿರುವವರು ಏನು ವೃತ್ತಿ ಮಾಡುತ್ತೀರಿ ಅಂದರೆ, ಎಂ.ಎಲ್.ಎ. ಆಗಿದ್ದೇನೆ, ಮಿನಿಸ್ಟರ್ ಆಗಿದ್ದೇನೆ, ಎಕ್ಸ್ ಮಿನಿಸ್ಟರ್ ಎಂದು ಹೇಳಿಕೊಳ್ಳುವುದಕ್ಕೆ ನಮಗೆ ನಾಚಿಕೆಯಾಗುತ್ತದೆ ಇಂಥ ಸಂದರ್ಭದಲ್ಲಿ ತಾವು ಹೇಳಿ, ಪ್ರಬಲವಾಗಿ ಪ್ರತಿಭಟನೆ ಮಾಡಿ. ನಮಗೆ ಪ್ರಜಾತಂತ್ರದಲ್ಲಿ ನಂಬಿಕೆ ಇದೆ. ಮುಂದಿನ ಚುನಾವಣೆ ಅದನ್ನು ತೀರ್ಮಾನಿಸುತ್ತದೆ. ತಾವು ಏನು ಕಾರ್ಡ್ ಹಿಡಿದುಕೊಂಡು ಹೋಗಿದ್ದೀರಿ ಇದರ ಬಗ್ಗೆ ಏನು ಮಾಡಬೇಕೆಂಬುದಕ್ಕೆ ಜನರು ಉತ್ತರ ಕೊಡುತ್ತಾರೆ. ಅಲ್ಲಿಯವರೆಗೆ ನೀವು ಹೋರಾಟ ಮಾಡುವುದೇ, ನಾವು ಹೋರಾಟ ಮಾಡುವುದೇ ಆದುದರಿಂದ ತಾವು ದಯವಿಟ್ಟು ಬೇಷರತ್ತಾಗಿ ಕ್ಷಮಾಪಣೆ ಕೇಳಬೇಕು. ಇವತ್ತು ಅಧ್ಯಕ್ಷರ ಬಗ್ಗೆ, ಜೀವರಾಜ ಆಳ್ವ ಅವರ ಬಗ್ಗೆ ಕೆ. ಹೆಚ್. ರಂಗನಾಥ್ ಅವರ ಬಗ್ಗೆ ತಾವು ನಡೆದುಕೊಂಡ ರೀತಿ ಸರಿಯಿಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಮಾತು ನಿಮಗೆ ಶೋಭೆ ತರುತ್ತದೆಯೆ. ಕೆ.ಹೆಚ್. ರಂಗನಾಥ್ ಅವರ ಬಗ್ಗೆ ನಾನು ಏನು ನಡೆದುಕೊಂಡೆ ?

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವೇ ಯೋಚನೆ ಮಾಡಿ ನೋಡಿ, ಅದರ ಮೇಲೆ ನಿಮಗೆ ಬಿಟ್ಟಿದ್ದುದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರಿಗೆ ಹೇಳತಕ್ಕ ಅಧಿಕಾರ ಇದೆ. ಅದೇ ರೀತಿಯಲ್ಲಿ ಸರ್ಕಾರದ ಪರವಾಗಿ ಉತ್ತರಿಸುವುದಕ್ಕೆ ನಮಗೂ ಅಧಿಕಾರ ಇದೆ. ಒಂದು ವಾಕ್ಯ ಹೇಳುತ್ತಿದ್ದ ಹಾಗೆಯೇ ಎಲ್ಲರೂ ದುಡುಂ ಎಂದು ಮೇಲೆ ಎದ್ದು ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ ? ಈ ಕೂಗಿನ ಮಧ್ಯೆ ಮಾತನಾಡುವುದಕ್ಕೆ ನನಗೆ ಇಷ್ಟವಿಲ್ಲ. ಸರ್ಕಾರದ ಉತ್ತರ ಕೇಳುವಷ್ಟು ತಾಳ್ಮೆ ಇಲ್ಲದಿದ್ದರೆ ಹೇಗೆ ? ಅವರು ಹೇಳುವಾಗ ನಾನು ಅಡ್ಡ ಬರುವುದಿಲ್ಲ. ನಾನು ಹೇಳುವಾಗ, ಸರ್ಕಾರದ ಪರವಾಗಿ ಉತ್ತರಿಸುವಾಗ ಒಂದು ವಾಕ್ಯ ಹೇಳುತ್ತಿದ್ದ ಹಾಗೆ ಮೇಲೆ ಬೀಳುತ್ತಾರೆ. ಈ ಪದ್ಧತಿ ಹೋಗಬೇಕು. ಯಾರು ಎಷ್ಟು ಬೇಕಾದರೂ ಹೇಳಲಿ, ಎಷ್ಟೇ ಟೀಕೆ ಮಾಡಲಿ, ಎಷ್ಟೇ ಪ್ರತಿಭಟನೆ ಮಾಡಲಿ, ಅದು ಶಾಬ್ದಿಕವಾಗಿರಬೇಕು; ಮತ್ತು ಒಬ್ಬರ ನಂತರ ಒಬ್ಬರು ಮಾತನಾಡುವ ನಿಯಮವನ್ನು ಜಾರಿಗೆ ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ಇವತ್ತು ತಾವು ಒಂದು ನಿರ್ಣಯ ಮಾಡಬೇಕಾಗುತ್ತದೆ. ಈ ಮನೆ ಇದೇ ಪ್ರಕಾರ ನಡೆಯಬೇಕೋ ಹೇಗೆ ? ಈ ಮನೆಯ ಸಮಯ ಬಹಳ ವ್ಯಾಲ್ಯೂಯಿಡ್ ಟೈಂ. ಮಾನ್ಯ ಯಡಿಯೂರಪ್ಪನವರು ಮತ್ತು ಅವರ ಪಕ್ಷದವರು ಯಾವ ವಿಷಯ ಪ್ರಸ್ತಾಪ ಮಾಡಬೇಕು, ಯಾವುದು ಮಾಡಬಾರದೆಂಬುದು ಅವರಿಗೆ ಬಿಟ್ಟಿದ್ದುದು. ಅದರಲ್ಲಿ ನಾನು ಪ್ರವೇಶಿಸುವುದಿಲ್ಲ. 3-4 ದಿನಗಳ ಹಿಂದೆ ತಾವು ಇರಲಿಲ್ಲ; ಈಶ್ವರಪ್ಪನವರು ಪ್ರಸ್ತಾಪ ಮಾಡಿದಾಗ ನಾವು ಸಹ ಅವರನ್ನು ಅರೆಸ್ಟ್ ಮಾಡಿದ ಬಗ್ಗೆ ಮತು ರ್‍ಯಾಲಿಯನ್ನು ಬ್ಯಾನ್ ಮಾಡಿದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಆದರೆ ಯಾವ ವಿಷಯ ಇಲ್ಲಿ ಪ್ರಸ್ತಾಪವಾಗಿದೆ, ಸಾಕಷ್ಟು ಚರ್ಚೆಯಾಗಿದೆ ಆ ವಿಷಯವನ್ನು ಪುನಃ ಪುನಃ ಪ್ರಸ್ತಾಪ ಮಾಡುವುದು ಸರಿಯೆ ? ಅದರ ಸಲುವಾಗಿ ಈ ಮನೆಯ ಸಮಯ ತೆಗೆದುಕೊಳ್ಳುವುದು ಸರಿಯೆ ? ಇದರ ಬಗ್ಗೆ ಬಿಜೆಪಿ ನಾಯಕರಾದ ಶ್ರೀ ಯಡಿಯೂರಪ್ಪನವರು ವಿಚಾರ ಮಾಡಬೇಕು. ತಮ್ಮ ಪಕ್ಷದ ಕಾರ್ಯಕರ್ತರು ಅರೆಸ್ಟ್ ಆಗಿದ್ದರೆ, ತಮಗೆ ನೋವಾಗಿದ್ದರೆ ಅದನ್ನು ಪ್ರಸ್ತಾಪ ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಈಗಾಗಲೇ ಅದರ ಬಗ್ಗೆ ಪ್ರಸ್ತಾಪವಾಗಿದೆ. ಅಡ್ಜರ್ನ್‌ಮೆಂಟ್ ಮೋಷನ್ನನ್ನು ಈಶ್ವರಪ್ಪನವರು ಮೂವ್ ಮಾಡಿದರು. ನಾವೆಲ್ಲಾ ಅದರ ಬಗ್ಗೆ ಮಾತನಾಡಿದ್ದೇವೆ. ನಿಮ್ಮನ್ನು ಅರೆಸ್ಟ್ ಮಾಡಿದ್ದು ಸರಿಯಲ್ಲವೆಂದು ನಾವೂ ಹೇಳಿದ್ದೇವೆ. ರ್‍ಯಾಲಿ ಬ್ಯಾನ್ ಮಾಡಿದ್ದೂ ಸರಿಯಲ್ಲವೆಂದು ಹೇಳಿದ್ದೇವೆ. ಆ ವಿಷಯವನ್ನು ಮೊನ್ನೆಯೇ ಮುಗಿಸಿದ್ದೇವೆ. ಇವತ್ತು ಪುನಃ ಆ ವಿಷಯವನ್ನು ತಂದು ಇವತ್ತು ದೆಹಲಿಯಲ್ಲಿ ಏನು ನಡೆಯುತ್ತಿದೆ ಎಂದು ಪುನಃ ತಂದು ಪತ್ರಿಕೆಗಳಲ್ಲಿ ನಾಳೆ ಬರಬೇಕೆಂದರೆ ಮಾಡಬಹುದು. ಆದರೆ ಈ ಮನೆಯ ಸಮಯವನ್ನು ಯಾವ ವಿಷಯಕ್ಕೆ ಎಷ್ಟು ತೆಗೆದುಕೊಳ್ಳಬೇಕು ಎಂಬುದು ನಮಗೆ ಗೊತ್ತಾಗಬೇಕಾಗುತ್ತದೆ. ಎರಡನೆಯದಾಗಿ ಜೀವರಾಜ ಆಳ್ವರವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು, ಯಡಿಯೂರಪ್ಪನವರು ಪ್ರಸ್ತಾಪ ಮಾಡಿದರು. ಇಲ್ಲಿ ಹೋಗುವಾಗ ನೀವು ನೋಡಿ, ಎಂದು ಈ ಪ್ರಕಾರ ಹೋದರೆ ಏನಾಗುತ್ತದೆ ? ನೀವು ಬೇಕಾದಷ್ಟು ಟೀಕೆ ಟಿಪ್ಪಣಿ ಮಾಡಿ. ಆದರೆ ಕೈಮೇಲೆ ಶಬ್ದವನ್ನು ಮಾಡಿ. ನಾವು ಹೊರಗೆ ಬರುತ್ತೇವೆ. ನೀವು ಹೊರಗಡೆ ಬನ್ನಿ ಎಂದು ಈ ಪ್ರಕಾರ ಯಡಿಯೂರಪ್ಪನವರು, ತಮ್ಮಂಥ ಹಿರಿಯ ಸದಸ್ಯರು ಮಾಡುವುದು ಸರಿಯಲ್ಲ. ತಾವು ಹೇಳಿ, ಆ ಪದ ಉಪಯೋಗ ಮಾಡಿದಿರೋ ಇಲ್ಲವೋ ಎಂದು.

ನನ್ನ ಮನಸ್ಸಿಗೆ ನೋವಾಗಿದೆ. ತಮಗೆ ಜವಾಬ್ದಾರಿ ಇದೆ ಸಾಕಷ್ಟು ಅನುಭವ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಅನುಭವದ ಲಾಭ ಸದನಕ್ಕೆ ಆಗಬೇಕೇ ಹೊರತು ತಾವೇ ಈ ಪ್ರಕಾರ ಮಾಡಿದರೆ ಬೇರೆ ಹೊಸದಾಗಿ ಆರಿಸಿ ಬಂದಿರತಕ್ಕವರ ಮೇಲೆ ಏನು ಪರಿಣಾಮವಾಗಬೇಕು ?

1.10 ಪಿ.ಎಂ.

ಇದರ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ. ಹಾಗಾಗಿ ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಒಂದು ನಿರ್ಣಯ ಮಾಡಬೇಕಾಗುತ್ತದೆ. ಒಂದೇ ವಿಷಯವನ್ನು ಎಷ್ಟು ಸಾರಿ ನಾನು ಪ್ರಸ್ತಾಪ ಮಾಡಬಹುದು. ತಾವೂ ಕೂಡಾ ಇದರಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಇವತ್ತು ಕೆಲವು ಮಹತ್ವದ ವಿಚಾರಗಳು ಚರ್ಚೆಗೆ ಇವೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಇವತ್ತು ಮುಗಿಯಬೇಕು. ಇನ್ನೂ ವಾಟಾಳ್ ನಾಗರಾಜ್ ಅವರು ಚಂದ್ರೇಗೌಡರು, ಏಕಾಂತಯ್ಯನವರು ಮಾತನಾಡಬೇಕು. ಆ ಕಡೆಯ ಕೆಲವರು ಮಾತನಾಡಬೇಕು. ಯಾವಾಗ ಮುಗಿಸುತ್ತೀರಿ ? 1ನೇ ತಾರೀಖು ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಈ ರೀತಿಯಾದರೆ ಯಾವ ವಿಷಯವೂ ಮುಗಿಯುವುದಿಲ್ಲ. ಮತ್ತು ಸದನ ಇದೇ ಚರ್ಚೆ ಮಾಡುತ್ತಿದೆ. ಹಾಗಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಸದನದ ಸಮಯ ಯಾವ ವಿಷಯಕ್ಕೆ ಎಷ್ಟು ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಬೇಕು. ಕೇವಲ ಪತ್ರಿಕೆಯಲ್ಲಿ ಬರಬೇಕೆಂದು ಚರ್ಚೆ ಮಾಡುವುದಿದ್ದರೆ ಮಾಡೋಣ. ನಾವೂ ಮುಂಜಾನೆ ಶುರು ಮಾಡುತ್ತೇವೆ. ನನ್ನ ದೃಷ್ಟಿಯಲ್ಲಿ ಅದು ಸರಿಯಲ್ಲ. ಅದು ಅವರಿಗೆ ಬಿಟ್ಟ ಪ್ರಶ್ನೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಇವತ್ತು ನಾನು ನಮ್ಮ ಕಾರ್ಯಕರ್ತರನ್ನು ವಿನಾಕಾರಣ ಮನೆಗಳಿಗೆ ಹೋಗಿ ಬಂಧಿಸಿಬಿಟ್ಟಿದ್ದಾರೆ, ಯಾವ ಕಾರಣಕ್ಕೆ ಇಟ್ಟಿದ್ದಾರೆ ಎನ್ನುವ ಬಗ್ಗೆ ಸ್ಪಷ್ಟೀಕರಣ ಕೇಳಿದೆ. ನಾನು ಮಾತನಾಡುವ ಸಂದರ್ಭದಲ್ಲಿ ಜೀವರಾಜ ಆಳ್ವ ಅವರ ಹೆಸರು ಹೇಳಿ ಪ್ರಸ್ತಾಪ ಮಾಡಿಲ್ಲ. ಅವರು ಆ ಸಂದರ್ಭದಲ್ಲಿ ಇರಲಿಲ್ಲ. ಆದರೆ ಅವರು ಬಂದಾಗ ಏನು ಪ್ರಶ್ನೆ ಬಂತು ? ಯಡಿಯೂರಪ್ಪನವರು ವಿನಾಕಾರಣ ಸಮಯ ಹಾಳುಮಾಡುತ್ತಿದ್ದಾರೆ, ಕಳೆದ 3-4 ದಿವಸಗಳಿಂದ ಅನೇಕ ಮಹತ್ವದ ವಿಚಾರಗಳು ಬಂದವು, ಅದರ ಬಗ್ಗೆ ಚರ್ಚೆ ಮಾಡದೇ ಇವತ್ತು ಈ ರೀತಿ ಮಾತನಾಡುತ್ತಾ ಇರತಕ್ಕ ನಡವಳಿಕೆ ಸರಿಯಲ್ಲ ಎಂದಾಗ ನಾನು ಏನು ಹೇಳಿದೆ ? ಸ್ವಾಮಿ ತಾವು ಸದನದಲ್ಲೇ ಇರಲಿಲ್ಲ. ಮಹತ್ತರವಾದ ಸಮಸ್ಯೆ ಬಂದಾಗ ಯಾವುದರಲ್ಲಿಯೂ ನಾವು ಭಾಗವಹಿಸಿಲ್ಲ ? ಯಾವುದನ್ನು ನಾವು ಅಡ್ಡದಾರಿ ಹಿಡಿಸುವ ಪ್ರಯತ್ನ ಮಾಡಿದ್ದೇವೆ ? ನೀವು ಬರದೇ ಈ ಮಾತು ಹೇಳುವುದು ಸರಿಯಲ್ಲ ಎಂದು ಹೇಳಿದಾಗ, ಶಿಕಾರಿಪುರದಲ್ಲಿ ಬನ್ನಿ ನಾವು ನೋಡುತ್ತೇವೆ ಎಂದಿದ್ದಕ್ಕೆ ಏನು ಮಾಡುತ್ತೀರೋ ನೋಡಿ ಎಂದು ಹೇಳಿದ್ದು ನಿಜ. ಜೀವರಾಜ ಆಳ್ವ ಅವರ ಬಗ್ಗೆ, ಅವರ ಫಾದರ್ ಬಗ್ಗೆ ನಮಗೆ ಗೌರವ ಇದೆ. ಮಾನ್ಯ ಸಿಂಧ್ಯಾರವರಾಗಲಿ, ಹಿರಿಯ ಸಚಿವರಾದ ರಂಗನಾಥ್ ಅವರಾಗಲಿ ಮಾರ್ಗದರ್ಶನ ನಮಗೆ ಬೇಕಾಗಿದೆ. ಅವರಿಂದ ತಿಳಿದುಕೊಳ್ಳಬೇಕಾದ ಅನೇಕ ಸಂಗತಿಗಳು ಇವೆ; ನಮಗೆ ಅದರ ಅರಿವಿದೆ. ಆದರೆ ವಿರೋಧ ಪಕ್ಷದ ನಾಯಕರಾಗಲೀ, ಸಿಂಧ್ಯಾ ಅವರಾಗಲೀ ಇವತ್ತು ಯಾವುದೇ ವಿಚಾರದ ಬಗ್ಗೆ ಬಿಜೆಪಿಯವರು ನಿಂತು ಮಾತನಾಡಿದಾಗ ಒಂದು ರೀತಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಪ್ರಸ್ತಾಪ ಮಾಡುವ ಪ್ರಯತ್ನ ಏನಿದೆ ಅದು ಬೇಡ. ನೀವು ನಮಗೆ ರಕ್ಷಣೆಗೆ ಬರಬೇಕು. ಇವತ್ತು ಬಿಜೆಪಿ ಪಕ್ಷದ ಕಾರ್ಯಕರ್ತರೇ ಇರಬಹುದು, ಯಾವುದೇ ಪಕ್ಷದವರು ಇರಬಹುದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರ ಇದೆ ಎಂದು ವಿನಾಕಾರಣ ಮನೆಮನೆಗೆ ಹೋಗಿ ಅವರನ್ನು ಬಂಧನ ಮಾಡುವುದು ಕಾನೂನು ಬಾಹಿರವಾದುದು. ಇದರ ಬಗ್ಗೆ ನಾವು ಪ್ರಸ್ತಾಪ ಮಾಡಿದಾಗ ರಾಮಸ್ವಾಮಿಯವರು ಇದರ ಬಗ್ಗೆ ಉತ್ತರ ಕೊಡುವುದಿಲ್ಲ ಎಂದಿದ್ದರೆ ನಾವು ಏನೋ ಮಾಡಿಕೊಳ್ಳುತ್ತಿದ್ದೆವು, ವಾಕೌಟ್ ಮಾಡುತ್ತಿದ್ದೆವು. ಆದರೆ ಅವರು ಏನು ಮಾಡಿದರು ಎಂದರೆ,

ಅಯೋಧ್ಯೆ ವಿಚಾರ ತಂದರು. ನೀವು ಮಸೀದಿ ಒಡೆಯಲು ಹೊರಟಿದ್ದೀರಿ ಎಂದು ಹೇಳಿದರು. ನಾನು ಆ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಾದರೆ ಬೇರೆ ಸಂದರ್ಭದಲ್ಲಿ ಮಾಡೋಣ. ಮಾನ್ಯ ರಂಗನಾಥ್ ಅವರು ಆ ಸಂದರ್ಭದಲ್ಲಿ ಇರಲಿಲ್ಲ. ಇವತ್ತು ಯಾವ ರೀತಿ ನಡೆದುಕೊಳ್ಳಬೇಕು, ಯಾವ ರೀತಿ ಗೌರವ ತೆಗೆದುಕೊಳ್ಳಬೇಕು, ಸದಸ್ಯನಾಗಿ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವುದಕ್ಕೆ ಇವತ್ತು ರೆಕಾರ್ಡ್ಸ್ ಇದೆ. ಇವತ್ತು ಬೆಳಿಗ್ಗೆ ಯಾವ ರೀತಿ ನಡೆದುಕೊಂಡೆವು ಎಂದು ತಾವು ನೋಡಿದ್ದೀರಿ. ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಸದನದ ಸಮಯ ಹಾಳು ಮಾಡುವುದಕ್ಕೆ ನಾವು ಸಿದ್ಧರಿಲ್ಲ. ಒಂದೊಂದು ನಿಮಿಷವೂ ಉಪಯೋಗವಾಗಬೇಕು ಎನ್ನುವ ಕಳಕಳಿ ಇರತಕ್ಕ ವ್ಯಕ್ತಿಗಳು ನಾವು. ನಾನು ಸರ್ಕಾರಕ್ಕೆ ಹೇಳುತ್ತೇನೆ. ನೀವು ನಡೆದುಕೊಳ್ಳುತ್ತಾ ಇರತಕ್ಕ ಈ ಪದ್ಧತಿ ಸರಿಯಿಲ್ಲ, ಈ ಪ್ರವೃತ್ತಿ ಸರಿಯಲ್ಲ. ವಿನಾಕಾರಣ ಬಿಜೆಪಿ ಕಾರ್ಯಕರ್ತರನ್ನು ಏನು ಬಂಧನ ಮಾಡಿದ್ದೀರೋ ಅವರಲ್ಲಿ ಕ್ಷಮಾಪಣೆ ಕೇಳಿ ತಾವು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ಈ ಸದನದ ಕಾರ್ಯಕಲಾಪಗಳು ಸುಲಲಿತವಾಗಿ ನಡೆಯಲಿ. ನಾವು ಅಡ್ಡಿ ಮಾಡುವುದಿಲ್ಲ. ನಾವು ಈ ಒಂದು ವಿಚಾರದ ಬಗ್ಗೆ ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತೇವೆ. ಅವರು ನಡೆಸಿಕೊಂಡು ಹೋಗಲಿ, ಚಿಂತೆ ಇಲ್ಲ.

(ಈ ಸಮಯದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು).

ಡಾ. ಜೀವರಾಜ ಆಳ್ವ:- ಮಾನ್ಯ ಯಡಿಯೂರಪ್ಪನವರು ಮಾತನಾಡಿದಾಗ ನಾನು ಇದ್ದೆ.

ಅಧ್ಯಕ್ಷರು:- ಆ ಪ್ರಸ್ತಾವನೆ ಇಲ್ಲಿಗೆ ಮುಕ್ತಾಯವಾಗಿದೆ. ತಾವು ಕುಳಿತುಕೊಳ್ಳಬೇಕು. ಮತ್ತೆ ಮಾನ್ಯ ವಾಟಾಳ್ ನಾಗರಾಜ್ ಅವರು ಏನೋ ಪ್ರಸ್ತಾಪ ಮಾಡಬೇಕೆಂದಿದ್ದಾರೆ. ಅವರು ಪ್ರಸ್ತಾಪ ಮಾಡಲಿ.

3. ಸಮಾನಾಂತರ ಕಾಲುವೆ ವಿಚಾರ

†ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು ನಿನ್ನೆಯ ದಿವಸ ನಾನು ಸಮಾನಾಂತರ ಕಾಲುವೆ ವಿಚಾರದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದೆ. ತಾವು ಅದಕ್ಕೆ ಅವಕಾಶವನ್ನು ಕೊಟ್ಟರಿ. ನಾನು ಈ ಸದನದ ಯಾವ ಒಬ್ಬ ವ್ಯಕ್ತಿಯ ಹೆಸರನ್ನೂ ಎತ್ತಿಲ್ಲ. ತಾವು ಕಡತವನ್ನು ತರಿಸಿ ನೋಡಿ. ನಾನು ಯಾರೇ ಒಬ್ಬರ ಹೆಸರು, ಇಂತಹ ಶಾಸಕರ ಮನೆಗೆ ಇಂತಹ ಸಚಿವರು ಬಂದಿದ್ದರು ಎಂದು ಹೇಳಲಿಲ್ಲ. ಅದಕ್ಕೆ ಪಾಪ ಇನ್ನೊಬ್ಬ ಶಾಸಕರು ಇದ್ದರು, ನಾನು ಮಾಡಿಲ್ಲ ಎಂದರು. ಅದು ಅಲ್ಲಿಗೆ ಮುಗಿಯಿತು. ಈ ಪ್ರಸಂಗ ಆಗಿದೆ. ಸಮಾನಾಂತರ ಕಾಲುವೆ ಬಗ್ಗೆ ಪಿತೂರಿ ಆಗುತ್ತಿದೆ, ನಮ್ಮ ಗಡಿ ಪ್ರದೇಶಕ್ಕೆ ಅಲ್ಲಿಯ ಸಚಿವರು ಬಂದಿದ್ದರು, ಕೆಲವರನ್ನು ಭೇಟಿ ಮಾಡಿದ್ದಾರೆ, ಇದರ ಸತ್ಯಾಂಶದ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ತಿಳಿಸಿರಿ ಎಂದು ನಾನು ಸ್ಪಷ್ಟವಾಗಿ ಹೇಳಿದೆ. ಇದರ ಬಗ್ಗೆ ನಾನು ಒಬ್ಬನೇ ಅಲ್ಲ, ಮಾನ್ಯ ಚಂದ್ರೇಗೌಡರೂ ಮಾತನಾಡಿದರು, ದೇಶಪಾಂಡೆಯವರು ಮಾತನಾಡಿದರು. ಸಿಂಧ್ಯಾ ಅವರು, ಪ್ರೊಫೆಸರ್ ನಂಜುಂಡಸ್ವಾಮಿಯವರು ಹಾಗೂ ಮಾನ್ಯ ಯಡಿಯೂರಪ್ಪನವರೂ ಮಾತನಾಡಿದರು.

ಅನೇಕ ಜನರು ಈ ಬಗ್ಗೆ ಮಾತನಾಡಿದರು. ಕೊನೆಗೆ ಮಾನ್ಯ ಉಪಮುಖ್ಯ ಮಂತ್ರಿಯವರು, ಇದಕ್ಕೆ ಸಮಜಾಯಿಸಿ ಹೇಳಿ, ನಾವು ಈ ಬಗ್ಗೆ ನಮ್ಮ ಕನ್ನಡನಾಡಿನ ನೆಲ, ಜಲದ ಬಗ್ಗೆ ಸ್ಪಷ್ಟವಾದ ನಿಲುವಿನಲ್ಲಿದ್ದೇವೆ, ಯಾರಿಗೂ ಅನ್ಯಾಯವಾಗುವುದಿಲ್ಲವೆನ್ನುವ ಮಾತನ್ನು ಹೇಳಿದರು. ಇದು ಇಷ್ಟಕ್ಕೆ ಮುಗಿಯಿತು ಸ್ವಾಮಿ. ಇವತ್ತು ನಾನು ಇಲ್ಲಿ ಬಂದು ಪ್ರಶ್ನೋತ್ತರ ಕಾಲದಲ್ಲಿ ಕುಳಿತೆ. ಶ್ರೀಮಾನ್

ರಾಮಪ್ಪನವರು ಈ ಸದನದ ಶಾಸಕರು ನನ್ನ ಪಕ್ಕಕ್ಕೆ ಬಂದರು. ನಾನು ಏನೋ ಪಾಪ ಬಂದಿದ್ರೆ, ರಾಮಪ್ಪನವರು ಏನೋ ಹಾಸ್ಯವಾಗಿ ಮಾತನಾಡುತ್ತಾರೆಂದು ತಿಳಿದಿದ್ದೆ. ಅವರು ಶುರು ಮಾಡಿದರು. ಬಹುಶಃ ಒಂದು ರೀತಿಯಲ್ಲಿ ಈ ಶಾಸನಸಭೆಯ ಸದಸ್ಯರ ನಡವಳಿಕೆಯನ್ನು ಗಾಳಿಗೆ ತೂರಿ "ನೀನು ಅಯೋಗ್ಯ, ನೀನು ಲೋಫರ್, ನೀನು ಹೇಗೆ ಇದನ್ನು ತೆಗೆದೆ ? ಇದನ್ನು ತೆಗೆಯುವುದಕ್ಕೆ ನಿನಗೇನು ಅಧಿಕಾರವಿದೆ ? ಇದನ್ನು ನಿನಗೆ ಯಾವನು ಕೊಟ್ಟವನು ? ಹೀಗೆಲ್ಲ ಮಾಡತಕ್ಕದ್ದು ಇದೇನು ಹುಡುಗಾಟ ? ಅಯೋಗ್ಯ ಎಂದೆಲ್ಲ ಹೇಳಿದರು. ನಾನು ಏಕೆ ಈ ಮಾತನ್ನು ಅಲ್ಲಿಗೆ ತರಲಿಲ್ಲ ಎಂದರೆ, ಇತ್ತೀಚಿನ ನಿಮ್ಮ ನೀತಿಯನ್ನು ಪಾಪ ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ನಿಮಗೆ ಕೋಪ ಬರುತ್ತದೆಂದು ನಾನು ಸುಮ್ಮನೆ ಕುಳಿತೆ. ದೇವರಾಣೆ ಹೇಳುತ್ತಿದ್ದೇನೆ., ಮೊನ್ನೆ ತಾವು ಎದ್ದು ನಿಂತಿರಿ ಅಂದಿನಿಂದ ನನಗೆ ಬಹಳ ನೋವಾಗಿದೆ. ಅಧ್ಯಕ್ಷರಿಗೆ ಕೋಪ ಬರುತ್ತದೆಂದು ನಾನು ನಿಂತೆ. ನಾನು ಇಂತಹ ರಾಮಪ್ಪನವರನ್ನು ಸಾವಿರ ಜನರನ್ನು ನೋಡಿದ್ದೇನೆ. ನಾನು ಮುಂದೆ ಹೋಗುವುದಿಲ್ಲ. ನಾನು ತಮಗೆ ಮತ್ತು ಆ ಪೀಠಕ್ಕೆ ಗೌರವ ಕೊಟ್ಟೆ. ನಾನು 1967ರಿಂದ ಶಾಸಕನಾಗಿದ್ದೇನೆ. 1977ರಲ್ಲಿ ಶಾಸಕನಾಗಿದ್ದೇನೆ. ನಾನು ನೂರಾರು ಶಾಸಕರ ಜೊತೆಯಲ್ಲಿ, ಹಿರಿಯರ ಜೊತೆಯಲ್ಲಿ ಒಡನಾಟ ಮಾಡಿದ್ದೇನೆ. ಸಾಹುಕಾರ್ ಚನ್ನಯ್ಯನವರು, ನಮ್ಮ ರಂಗನಾಥ್‌ರವರು ಅವರೆಲ್ಲರಿಗೂ ಗೊತ್ತು. ನನ್ನ ಆತ್ಮೀಯತೆ ಅವರಿಗೆ ಗೊತ್ತು. ನಾನು ಒಂದು ದಿವಸವೂ ಸಹ ಇನ್ನೊಬ್ಬರ ಮನಸ್ಸನ್ನು ನೋಯಿಸಿದ ವ್ಯಕ್ತಿಯಲ್ಲ. ನಾನು ಈ ರಾಜ್ಯದಲ್ಲಿ 35 ವರ್ಷಗಳ ಕಾಲ ಯಾವ ಅಧಿಕಾರದ ಆಸೆ ಇಲ್ಲದೆ, ಯಾರ ಹತ್ತಿರವೂ ಭಿಕ್ಷೆಗೆ ಹೋಗದೆ, ಹಗಲು ರಾತ್ರಿ ನನ್ನ ನೀತಿ ಕನ್ನಡ, ನನ್ನ ನೆಲ ಕನ್ನಡ, ಕರ್ನಾಟಕದ ಉಳಿವಿಗಾಗಿ ನನ್ನ ಜೀವನವನ್ನೇ ಮುಡುಪಾಗಿ ಇಟ್ಟಿದ್ದೇನೆ. ಇದು ತಮಗೆ ಗೊತ್ತಿದೆ. ಈ ಸದನಕ್ಕೆ ಗೊತ್ತಿದೆ. ಅಂತಹದರಲ್ಲಿ ಬೇಜವಾಬ್ದಾರಿತನದಿಂದ ಬಂದು ನನಗೆ ಹೆದರಿಕೆ ಹಾಕಿದ್ದಾರೆ. ಹೆದರಿಕೆ ಹಾಕಲಿಕ್ಕೆ ಈ ಸದನ ಸರಿಯಾದ ಜಾಗವಲ್ಲ. ಹೊರಗಡೆ ಬೇಕಾದರೆ ಹೆದರಿಕೆ ಹಾಕಲಿ. ನನ್ನ ಸೈನ್ಯ ಏನಿದೆ, ಅವರ ಸೈನ್ಯ ಏನಿದೆ ಅದನ್ನು ಹೊರಗೆ ನೋಡಿಕೊಳ್ಳೋಣ. ಆದರೆ ಈ ಸದನದ ನಡವಳಿಕೆ ಪ್ರಕಾರ ನೀವು ನನಗೆ ರಕ್ಷಣೆ ಕೊಡತಕ್ಕ ವ್ಯವಸ್ಥೆ ಒಂದು. ಆ ಸದಸ್ಯರು ಮಾಡಿದಂತಹ ಆವೊಂದು ಬೆದರಿಕೆ ಸದನದಲ್ಲಿ ನಡೆದಿರತಕ್ಕದ್ದು ಅದರ ಬಗ್ಗೆ, ತಾವು ಏನು ರಕ್ಷಣೆ ಕೊಡುತ್ತೀರಿ ಅದನ್ನು ಹೇಳಬೇಕು. ನಿಮಗೆ ರಕ್ಷಣೆ ಕೊಡುವುದಕ್ಕೆ ಆಗುವುದಿಲ್ಲವೆಂದು ನೀವು ಹೇಳಿದರೆ ಈ ಕೂಡಲೇ ನನ್ನ ರಾಜೀನಾಮೆಯನ್ನು ನಿಮ್ಮ ಹತ್ತಿರ ಕೊಡುತ್ತೇನೆ. ಇಲ್ಲಿಗೆ ನನ್ನದು ಮುಗಿಯಲಿ, ಇಲ್ಲಿ ನನ್ನ ರಾಜಕೀಯ ಅಂತ್ಯವಾಗಲಿ. ನನ್ನ ಜೀವನದಲ್ಲಿ ಇದುವರೆಗೆ ಈ ರೀತಿ ನಡೆದಿರಲಿಲ್ಲ. ನಾನು ಇಲ್ಲಿ ಗೋಪಾಲ್ ಗೌಡರನ್ನು ನೋಡಿದ್ದೇನೆ. ಅವರು ಒಂದು ಸಾರಿ ರಾಜ್ಯಪಾಲರ ಭಾಷಣವನ್ನು ತುಳಿದರು. ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ರಾಜ್ಯಪಾಲರಾಗಿ ಅಲ್ಲಿ ಕುಳಿತಿದ್ದರು. ಅವರ ಭಾಷಣವನ್ನು ಕಾಲಿನ ಕೆಳಗೆ ಹಾಕಿ ತುಳಿಯುತ್ತೇನೆಂದು ಹೇಳಿ ಮೂರು ಮೂರು ಸಾರಿ ತುಳಿದು ಹೋದರು. ಅಂದಿನ ಅಧ್ಯಕ್ಷರಾದ ವೈಕುಂಠ ಬಾಳಿಗಾರವರು ಗೋಪಾಲಗೌಡರನ್ನು ಸದನದಿಂದ ಹೊರಗೆ ಹೋಗಬೇಕೆಂದು ಹೇಳಿದರು. ಅವರು ರಾಜ್ಯಪಾಲರ ಭಾಷಣದ ಪ್ರತಿಯನ್ನು ತುಳಿದರು. ಈ ಸದನದಲ್ಲಿ ಅನೇಕ ವಿಚಾರದಲ್ಲಿ ಚರ್ಚೆ ನಡೆದಿದೆ. ಇದೇ ಸದನದಲ್ಲಿ ನಾನು ರಾಜೀವ್‌ಗಾಂಧಿಯವರ ಬಗ್ಗೆ ಮಾತನಾಡಿದಾಗ ಆ ಕಡೆಯಿಂದ ನನಗೆ ಪುಸ್ತಕದಲ್ಲಿ ಹೊಡೆದರು. ಇಲ್ಲಿ ನನ್ನನ್ನು ಹೊಡೆಯುವುದಕ್ಕೆ ಬಂದರು. ಅವರಲ್ಲಿ ರಾಮಪ್ಪನೂ ಒಬ್ಬ. ಈ ರಾಮಪ್ಪನವರು ಅಂದಿನ ಅಧ್ಯಕ್ಷರ ಕೊಠಡಿಗೆ ಆ ದಿನ ಬಂದರು. ನಿನ್ನನ್ನು ಒದೆಯುತ್ತೇನೆ, ಕಾಲು ಮುರಿಯುತ್ತೇನೆ ಎನ್ನುವ ಭಾಷೆಯನ್ನು ಉಪಯೋಗಿಸಿದರು. ಸ್ವಾಮಿ, ನಾನು ಈ ರಾಜ್ಯದಲ್ಲಿ ನಾಲ್ಕು ಕೋಟಿ ಕನ್ನಡಿಗರ ಪರವಾಗಿ ನನ್ನ ಇಡೀ ಜೀವನವನ್ನು ಮುಡುಪಾಗಿ ಇಟ್ಟಿದ್ದೇನೆ. ನನ್ನ ರಕ್ತ ಇರುವವರೆಗೂ ಈ ನಾಡಿಗೋಸ್ಕರ ದುಡಿಯುತ್ತೇನೆ. ಇಂತಹ ಬೂಟಾಟಿಕೆಗೋಸ್ಕರ ನಾನು ಬಂದವನಲ್ಲ. ನನಗೂ ಶಕ್ತಿ ಇದೆ. ಈ ಸದನದ

ಗೌರವಕ್ಕೋಸ್ಕರವಾಗಿ ತಮ್ಮ ಪೀಠದ ಗೌರವಕ್ಕೋಸ್ಕರವಾಗಿ ನಾನು ಕುಳಿತೆ. ನನ್ನ ಅನೇಕ ಮಿತ್ರರು ನೀವು ಏಕೆ ಸುಮ್ಮನೆ ಕುಳಿತಿರಿ ಎಂದು ನನ್ನ ಅಸಹಾಯಕತೆಯ ಬಗ್ಗೆ ಚಿಂತನೆ ಮಾಡುತ್ತಿದ್ದರು. ವಾಟಾಳ್ ನಾಗರಾಜ್‌ರವರು ಕೂಗಾಡತಕ್ಕ ಮನುಷ್ಯ ಕುಳಿತದ್ದು ಏಕೆಂದು ಚಿಂತನೆ ಮಾಡುತ್ತಿದ್ದರು. ನಾನು ಕುಳಿತಿದ್ದು ನಿಮ್ಮ ಮಾರ್ಗದರ್ಶನ ಒಂದಕ್ಕೆ ನಾನು ಕುಳಿತದ್ದು. ನಿಜವಾಗಿಯೂ ಭಯಕ್ಕಲ್ಲ. ವಾಟಾಳ್ ನಾಗರಾಜ್‌ರವರಿಂದ ಸದನಕ್ಕೆ ಅಗೌರವವಾಗಬಹುದು ಎನ್ನುವ ಚಿಂತನೆ ನಿಮಗೆ ಬಾರದೆ ಇರಲಿ ಎಂದು ಕುಳಿತೆ. ಮೊನ್ನೆ ಪ್ರಶ್ನೋತ್ತರ ಕಾಲದಲ್ಲಿ ನಾನು ಎದ್ದು ನಿಂತಾಗ ನೀವು ಹೇಳಿದ ಮಾತಿನಿಂದ ಬಹಳ ನೋವಾಗಿ ಕುಳಿತೆ. ಇವತ್ತೂ ಸಹ ಮತ್ತೆ ವಾಟಾಳ್ ನಾಗರಾಜ್‌ರವರು ಅದೇ ರೀತಿ ಮಾಡಿದರು ಎನ್ನುವ ಭಾವನೆ ಬರಬಹುದೆಂದು ನಾನು ಮಾತನಾಡಲಿಲ್ಲ. ದಯಮಾಡಿ ತಾವು ನಮಗೆ ರಕ್ಷಣೆ ಕೊಡುವುದು ಒಂದೇ ಅಲ್ಲ, ಈ ರೀತಿ ಬಂದು ಮಾತನಾಡತಕ್ಕ ಸದಸ್ಯರ ಬಗ್ಗೆ ತಾವು ಏನು ಹೇಳುತ್ತೀರಿ. ಇಂತಹ ಸದಸ್ಯರು ಇರಬೇಕೇ ?

ಈ ಸದನಕ್ಕೆ ಜನ ನಮ್ಮನ್ನು ಆರಿಸಿ ಕಳುಹಿಸಿರತಕ್ಕದ್ದು ಏತಕ್ಕೋಸ್ಕರ ಸ್ವಾಮಿ ? ಈ ಸದನದಲ್ಲಿ ಯಾವ ರೀತಿಯಲ್ಲಿ ಮಾತನಾಡಬೇಕು, ಹೇಗೆ ಮಾತನಾಡಬೇಕು, ಯಾವ ರೀತಿ ಮಾತನಾಡಬೇಕು ಎನ್ನತಕ್ಕದ್ದು ನನಗೂ ಗೊತ್ತಿದೆ, ತಮಗೂ ಗೊತ್ತಿದೆ. ನಾನು ಈ ಸದನಕ್ಕೆ ಇವತ್ತು ಬಂದಿಲ್ಲ. ಇವತ್ತು ಬಂದರೂ ಸಹ ಈ ರೀತಿ ಮಾತನಾಡುವುದಿಲ್ಲ. ಈ ಸದನಕ್ಕೆ ನಾನೂ ಸಹ ಚುನಾಯಿತನಾಗಿ ಬಂದಿದ್ದೇನೆ. ಇಂತಹ ಅನ್ಯಾಯಗಳನ್ನು, ಇಂತಹ ಪಿತೂರಿಗಳನ್ನು ಅಂದರೆ ಇದು ನಿಜವಾಗಿಯೂ ಪಿತೂರಿ. ಅವರು ಇಲ್ಲಿ ಬಂದು ಹೇಳಿದರು, ನಾನು ಯಾವ ಮಂತ್ರಿಯನ್ನು ಭೇಟಿ ಮಾಡಿದರೆ ನಿನಗೇನು ?

ನನ್ನ ಮನೆಗೆ ಯಾವ ಮಂತ್ರಿ ಬೇಕಾದರೂ ಬರುತ್ತಾರೆ, ನೀನು ಯಾರು ಕೇಳುವುದಕ್ಕೆ? ಈ ರೀತಿಯ ಭಾಷೆಯನ್ನು ಉಪಯೋಗಿಸಿದ್ದಾರೆ. ನಾನು ಸ್ವಲ್ಪ ನಿಮಗೆ ಹೇಳುವುದಾದರೆ, ನಾನು ನಮ್ಮ ಸ್ನೇಹಿತರ ರೀತಿಯಲ್ಲಿ ಎದ್ದಿದ್ದರೆ ಅವನು ನನ್ನ ಮೇಲೆ ಒಂದು ರೀತಿಯ ಕೈಮಾಡತಕ್ಕಂಥ ಪ್ರಸಂಗಕ್ಕೆ ಹೋಗುತ್ತಿತ್ತು. ಇದಕ್ಕೆ ಸಾಕ್ಷಿ ಶ್ರೀಮಾನ್ ಚಂದ್ರೇಗೌಡರು, ನಮ್ಮ ಸಿಂಧ್ಯಾರವರು, ಮಾನ್ಯ ದೇಶಪಾಂಡೆಯವರು, ಶ್ರೀಮಾನ್ ನಾಗಮಾರಪಲ್ಲಿಯವರು; ಹಾಗೂ ಮಾಧುಸ್ವಾಮಿಯವರು. ಇವರನ್ನು ಬೇಕಾದರೆ ಕೇಳಿ. ಅವರು ಯಾವ್ಯಾವ ಭಾಷೆ ಉಪಯೋಗಿಸಿದರು ಎಂದರೆ, ನನ್ನ ಜೀವನದಲ್ಲಿ ಇದುವರೆಗೂ ಹೊರಗಡೆ ಸಹ ನೂರಾರು, ಸಾವಿರಾರು ಚಳುವಳಿಗಳನ್ನು ಮಾಡಿದ್ದೇನೆ. ಸಾವಿರಾರು ಸಲ ಬಂಧನಕ್ಕೆ ಒಳಗಾಗಿದ್ದೇನೆ, ಜೈಲಿಗೆ ಹೋಗಿದ್ದೇನೆ. ಒಂದು ದಿನವಾದರೂ ಈ ರೀತಿಯಾದ ಕೆಟ್ಟ, ಅವಾಚ್ಯ ಶಬ್ದಗಳಿಂದ ಈ ನಾಡಿನ ಜನ ಎಂದೂ ನನಗೆ ಹೇಳಿಲ್ಲ. ಇದು ಅವಿವೇಕದ ಪರಮಾವಧಿ. ಈ ಮಾತನ್ನು ಆ ಶಾಸಕರು ಏನು ಆಡಿದ್ದಾರೆ ಈ ಬಗ್ಗೆ ನನಗಂತೂ ನಿಜವಾಗಿಯೂ ಅತ್ಯಂತ ನೋವಿಗಿಂತ ಹೆಚ್ಚಾಗಿ ಈ ಸದನದಲ್ಲಿ ನಾವು ಕಾರ್ಯ ಮಾಡತಕ್ಕಂಥ ವ್ಯವಸ್ಥೆ ಬಗ್ಗೆ ತಾವು ಹೇಳಿ. ನಾವು ಮಾಡಬೇಕೇ, ಬಿಡಬೇಕೆ ? ಇಲ್ಲ ನಾಗರಾಜ್, ನಿಮಗೆ ಅವಕಾಶ ಕೊಡುವುದಿಲ್ಲ ಎಂದು ತಾವು ಹೇಳುವುದಾದರೆ ನಾನು ಈಗಲೇ ಇಲ್ಲಿ ನೋಡಿ ಲೆಟರ್ ಹೆಡ್ ತಂದಿದ್ದೇನೆ, ತಮಗೆ ರಾಜೀನಾಮೆ ಬರೆದುಕೊಟ್ಟು ಈ ಕ್ಷಣದಲ್ಲೇ ಹೋಗುತ್ತೇನೆ. ತಾವು ಏನು ಹೇಳುತ್ತೀರಿ ಹೇಳಿ.

ಶ್ರೀ ಆರ್. ವಿ. ದೇಶಪಾಂಡೆ:– ಇದು ಬಹಳ ಗಂಭೀರವಾದ ವಿಷಯ. ಏಕೆಂದರೆ ನಾನು ಇಲ್ಲಿ ಕುಳಿತಿದ್ದಾಗ ರಾಮಪ್ಪನವರ ಇಲ್ಲಿ ನಿಂತಿದ್ದರು. ಇದಕ್ಕೆ ಮುಂಚೆ ಅಲ್ಲಿ ಕುಳಿತು ಸಾಕಷ್ಟು ಮಾತಾಯಿತು.

ಶ್ರೀ ವಾಟಾಳ್ ನಾಗರಾಜ್:– ಆಗ ಶ್ರೀ ಬಾಬಾಗೌಡರೂ ಇದ್ದರು. ಏಕೆ ಹೀಗೆ ಮಾತನಾಡುತ್ತಿದ್ದೀರಿ ಎಂದು ಹೇಳಿದರು.

ಶ್ರೀ ಆರ್. ವಿ. ದೇಶಪಾಂಡೆ:– ನಾನು ಶ್ರೀ ವಾಟಾಳ್ ನಾಗರಾಜ್ ಅವರಿಗೆ ಹೇಳಿದೆ. ಅವರು

ಕೂಡಲೇ ರೈಸ್ ಮಾಡಿದಾಗ ನಾನು, ಚಂದ್ರೇಗೌಡರು, ಸಿಂಧ್ಯರವರು ಮಾತನಾಡುತ್ತಾ ತಡೆಯಿರಿ, ಸಭಾಪತಿಯವರ ಪರ್ಮಿಷನ್ ತೆಗೆದುಕೊಂಡ ನಂತರ ವಿಷಯ ರೈಸ್ ಮಾಡಿರಿ ಎಂದು ಹೇಳಿದೆವು. ಇದು ಬಹಳ ಗಂಭೀರವಾದ ಸಮಸ್ಯೆ. ನಾವು ಇಲ್ಲಿ ಕುಳಿತಿರುವುದು ಸರ್ಕಾರವನ್ನು ಪ್ರೈಸ್ ಮಾಡುವುದಕ್ಕೆ ಅಲ್ಲ. ಒಳ್ಳೆ ಕೆಲಸ ಮಾಡಿದರೆ ಪ್ರೈಸ್ ಮಾಡೋಣ. ಆದರೆ ನಾಡಿನ ಜನ ನಮ್ಮ ಮೇಲೆ ಜವಾಬ್ದಾರಿ ಹಾಕಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ಇಲ್ಲಿ ಏನು ಚರ್ಚೆ ಆಗಬೇಕು ಅದನ್ನು ಮಾಡುವುದು ನಮ್ಮ ಕರ್ತವ್ಯ. ಆ ದೃಷ್ಟಿಯಿಂದ ನಿನ್ನೆ ದಿವಸ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಕೆಲವು ನಮ್ಮ ಸ್ನೇಹಿತರು ಕೂಡಿ ಇಲ್ಲಿ ವಿಷಯ ಪ್ರಸ್ತಾಪ ಮಾಡಿದ್ದೇವೆ.' ಇದು ವೈಯಕ್ತಿಕವಾಗಿ ಯಾರ ಬಗ್ಗೆಯೂ ಚರ್ಚೆಯಾಗಿಲ್ಲ. ಆಗ ಒಬ್ಬ ಮಾನ್ಯ ಸದಸ್ಯರು ಎದ್ದು ನಾವು ರಾಜ್ಯದ ಹಿತದೃಷ್ಟಿಯಿಂದ ಏನೂ ಮಾತನಾಡಿಲ್ಲ ಎಂದರು. ಅದನ್ನು ನಾವು ಒಪ್ಪಿಕೊಂಡೆವು'. ಅದನ್ನು ನಾವೇನೂ ಚಾಲೆಂಜ್ ಮಾಡಲಿಲ್ಲ. ಹೀಗಿದ್ದಾಗ ಅವರು ಬಂದು ಲೋಫರ್, ನೀವು ಪಬ್ಲಿಸಿಟಿ ಸಲುವಾಗಿ ಮಾಡಿದ್ದೀರಿ ಎಂದು ಮಾಡಿದರೆ ನಾವು ತಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೆ ? ನಾವು ಇಲ್ಲಿ ವಿರೋಧ ಪಕ್ಷವಾಗಿ ಹೇಗೆ ಕೆಲಸ ಮಾಡಬೇಕು ? ನೀವು ಸರ್ಕಾರದ ಗುಲಾಮರು ಎಂದು ಅವರು ನಮಗೆ ಹೇಳುತ್ತಿದ್ದಾರೆ. ಅಥವಾ ಅಲ್ಲಿ ಕೂಡಿರಿ ಎಂದು ನಮಗೆ ಇನ್‌ಡೈರೆಕ್ಟ್ ಆಗಿ ಹೇಳಿದ್ದಾರೆ. ಆದರೆ ನಾವು ಇಲ್ಲಿ ಎಲ್ಲಿಯವರೆಗೆ ಇರುತ್ತೇವೆ ಅಲ್ಲಿಯವರೆಗೆ ಸರ್ಕಾರ ಏನೇನು ಲೋಪದೋಷಗಳನ್ನು ಮಾಡುತ್ತದೆ ಅದನ್ನು ಎತ್ತಿಹಿಡಿಯಬೇಕಾಗುತ್ತದೆ. ಅವುಗಳ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಬೇಕಾಗುತ್ತದೆ. ಅದು ಬಿಟ್ಟು ರಾಮಪ್ಪನವರು ನಾನೇ ಸರ್ವಜ್ಞ, ನಾನು ಹೇಳಿದ ಹಾಗೆ ಎಲ್ಲಾ ನಡೆಯಬೇಕು ಎಂದು ಹೇಳಿದರೆ ಅದು ನಡೆಯುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾವು ಟಾಲರೇಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ನಾನು ಈ ಸಂದರ್ಭದಲ್ಲಿ ಇಷ್ಟು ಹೇಳುತ್ತೇನೆ. ಏನೆಂದರೆ, ಶ್ರೀ ವಾಟಾಳ್ ನಾಗರಾಜ್ ಅವರು ರಾಜೀನಾಮೆ ಕೊಡುವ ಪ್ರಶ್ನೆ ಬರುವುದಿಲ್ಲ. ಅವರ ಬೇಷರತ್ ಆಗಿ ಇವರ ಕ್ಷಮೆ ಕೇಳಬೇಕಾಗುತ್ತದೆ. ಮತ್ತು ತಾವೂ ಸಹ ಇವರ ಸಹಾಯಕ್ಕೆ ಬರಬೇಕಾಗುತ್ತದೆ. ಇದು ಆಗಿಲ್ಲವಾದರೆ ಬಹಳ ಕಷ್ಟವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಇಲ್ಲಿ ನಮಗೆ ಕೆಲಸ ಮಾಡುವುದಕ್ಕೂ ಬಹಳ ಕಷ್ಟವಾಗಬಹುದು ಮತ್ತು ಇಲ್ಲಿ ಡೆಮಾಕ್ರಸಿ ಇಲ್ಲ, ಡಿಕ್ಟೇಟರ್‌ಶಿಪ್ ಇದೆ ಎನ್ನುವ ಅರ್ಥ ಬರಬಹುದು. ತಮ್ಮ ಮಾರ್ಗದರ್ಶನವನ್ನು ನಾವು ಕೇಳುತ್ತಿದ್ದೇವೆ. ತಾವು ಏನು ಮಾಡುತ್ತೀರಿ ಎಂದು ನೋಡುತ್ತಿದ್ದೇನೆ. ಮತ್ತು ಅವರು ಬೇಷರತ್ ಆಗಿ ಅಪಾಲಜಿ ಕೇಳುವುದಕ್ಕೆ ತಾವು ಆದೇಶ ಮಾಡಬೇಕೆಂದು ತಮ್ಮಲ್ಲಿ ನಾನು ಪ್ರಾರ್ಥಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಅಧ್ಯಕ್ಷರೇ, ಈ ಸದನದಲ್ಲಿ ಬಹಳ ಹಿರಿಯ ಸದಸ್ಯರುಗಳಿದ್ದಾರೆ. ಅಧ್ಯಕ್ಷರಾಗಿದ್ದವರು, ಸಭಾಧ್ಯಕ್ಷರಾಗಿದ್ದವರು ನಾಲ್ಕೈದು ಜನ ಇದ್ದಾರೆ. 25–30 ವರ್ಷಗಳಿಂದ ಶಾಸಕರಾಗಿ, ಮಂತ್ರಿಗಳಾಗಿ ಕೆಲಸ ಮಾಡಿರತಕ್ಕಂಥವರು ಇದ್ದಾರೆ. ಮುಖ್ಯಮಂತ್ರಿಯಾಗಿದ್ದವರು ಇದ್ದಾರೆ. ಇವರೆಲ್ಲ ಇರುವಾಗ ನಾವು ಈ ಸದನದಲ್ಲಿ ಪ್ರವೇಶ ಮಾಡಬೇಕಾದರೆ ಭಯದಿಂದ ಬರುತ್ತೇವೆ. ಸರಸ್ವತಿಯ ದೇಗುಲಕ್ಕೋ, ಮತ್ತೊಂದು ಕಡೆಗೊ ಬರುವ ರೀತಿಯಲ್ಲಿ ನಾವೆಲ್ಲ ಬರುತ್ತೇವೆ. ಆದರೆ ಇವತ್ತು ನಡೆದಂಥ ಪ್ರಸಂಗ, ಶ್ರೀ ವಾಟಾಳ್ ನಾಗರಾಜ್‌ರವರು, ಬಾಬಾಗೌಡರು ಮತ್ತು ನಾವು ಇದ್ದಂಥ ಸಂದರ್ಭದಲ್ಲಿ ನಡೆದಿರತಕ್ಕಂಥಾದ್ದು. ಪ್ರಶ್ನೋತ್ತರ ವೇಳೆ ಅದು. ಜೊತೆಗೆ ಅವರವರ ಸ್ಥಾನದಲ್ಲಿ ಇರಲಿಲ್ಲ. ಅವರು ಇಲ್ಲಿ ಬಂದು ಮಾಡಿದಂಥ ವರ್ತನೆ, ಅವರು ನುಡಿದಂಥ ನುಡಿಗಳು ಬಹುಶಃ ಯಾರೊಬ್ಬ ಶಾಸಕನಿಗೂ ಗೌರವ ತರತಕ್ಕಂಥಾದ್ದು ಅಲ್ಲ ಎಂದು ನಾನು ಬಹಳ ನೊಂದು ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ಬಹಳ ಆಶ್ಚರ್ಯವಾಯಿತು. ಏಕೆಂದರೆ, ಶ್ರೀ ವಾಟಾಳ್ ನಾಗರಾಜ್. ಅವರನ್ನು ನಾನು ಸುಮಾರು 10–11 ವರ್ಷಗಳಿಂದ ನೋಡುತ್ತಿದ್ದೇನೆ. ಅವರು ಬಹಳ ತೀಕ್ಷ್ಣವಾದ ಪ್ರತಿಕ್ರಿಯೆ ವ್ಯಕ್ತ ಮಾಡುತ್ತಿದ್ದವರು. ಆದರೆ ಇವತ್ತು ಅವರು ಹೇಳಿದರು, ತಮ್ಮ ಬಗ್ಗೆ,

ಈ ಸಭೆಯ ಗೌರವದ ಹಿನ್ನೆಲೆಯಲ್ಲಿ ತಾವೇನೂ ಪ್ರತಿಕ್ರಿಯೆ ವ್ಯಕ್ತ ಮಾಡುವುದಕ್ಕೆ ಹೋಗಲಿಲ್ಲ ಎಂದು ಹೇಳಿದರು. ನನಗಂತೂ ಸದನ ಯಾವ ಮಟ್ಟಕ್ಕೆ ಹೋಗುತ್ತದೆ ಎಂದು ಬಹಳ ಭಯವೇ ಆಗಿತ್ತು. ಈಗ ನಾವು ಶ್ರೀ ಯಡಿಯೂರಪ್ಪನವರ ವರ್ತನೆಯನ್ನು ನೋಡಿದೆವು. ಈ ರೀತಿ ರಾಮಪ್ಪನವರು ವರ್ತನೆಯನ್ನು ಮಾಡಿದಾಗ, ನಮಗೆ ಇಲ್ಲಿ ಕುಳಿತುಕೊಂಡು ಕೆಲಸ ಮಾಡತಕ್ಕಂಥಾದ್ದು ನಿಜವಾಗಿಯೂ ಬಹಳ ಕಷ್ಟವಾಗುತ್ತದೆ.

ಈಗ ಬಹುಶಃ ಸರ್ಕಾರದ ವಕ್ತಾರರು ಆಗಿರತಕ್ಕಂತಹ ಮಾನ್ಯ ಘೋರ್ಪಡೆಯವರಾಗಲಿ, ಇಲ್ಲಿ ಇರತಕ್ಕಂಥ 5–6 ಜನ ಹಿರಿಯ ಮಂತ್ರಿಗಳು ಅಂದರೆ ಮಾನ್ಯ ರಾಜಶೇಖರಮೂರ್ತಿಯವರಾಗಲಿ, ಮಾನ್ಯ ರಂಗನಾಥ್‌ರವರಾಗಲಿ, ಇವರು ಯಾರೂ ಇದನ್ನು ಒಪ್ಪುವುದಿಲ್ಲ ಎನ್ನುವುದು ನನಗೆ ಗೊತ್ತಿದೆ. ಆ ವಿಚಾರವಾದರೂ ಏನು ? ಪ್ರಜಾವಾಣಿಯಂತಹ ಜವಾಬ್ದಾರಿ ಪತ್ರಿಕೆಯವರು ಅಲ್ಲಗಳೆದಿದ್ದಾರೆ. ಮಾನ್ಯ ಶಂಕರರೆಡ್ಡಿಯವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಎದ್ದು ನಿಂತುಕೊಂಡು ಹೇಳಿದರು. ನಾವು ಅದನ್ನು ಮೆಚ್ಚುತ್ತೇವೆ. ಮಾನ್ಯ ರಾಮಪ್ಪನವರು ಆಂಧ್ರದ ಮಂತ್ರಿಗಳನ್ನು ಭೇಟಿ ಮಾಡಬಾರದು ಎಂದು ನಾನೇನೂ ಹೇಳುವುದಿಲ್ಲ. ಆದರೆ ಕುಂಬಳಕಾಯಿ ಕಳ್ಳ ಎಂದು ಹೇಳಿದರೆ ಹೆಗಲನ್ನು ಏಕೆ ಇವರು ಮುಟ್ಟಿ ನೋಡಿಕೊಳ್ಳಬೇಕು. ಆಕಸ್ಮಾತ್ ಆಗಿ ಇವರು ಆಂಧ್ರದ ಮಂತ್ರಿಗಳನ್ನು ಭೇಟಿ ಮಾಡಿದ್ದರು ಎಂದೇ ಇಟ್ಟುಕೊಳ್ಳೋಣ. ಇವರು ಹೇಳಬಹುದಾಗಿತ್ತು ನಾನು ಈ ರೀತಿ ಅವರನ್ನು ಭೇಟಿ ಮಾಡಿದ್ದೇನೆ, ನಾನು ಅದನ್ನು ವಿರೋಧ ಮಾಡಿದ್ದೇನೆ, ನೀವು ಸಮಾನಾಂತರ ಕಾಲುವೆ ಮಾಡುತ್ತಿರತಕ್ಕಂಥಾದ್ದು ತಪ್ಪು, ಎನ್ನುವಂತಹ ವಿಚಾರವನ್ನು ಹೇಳಿದ್ದೇನೆ ಎಂದು ಹೇಳಬಹುದಾಗಿತ್ತು. ನಾನು ಬಹಳ ಸಂಯಮದಿಂದ ಮಾನ್ಯ ರಾಮಪ್ಪನವರನ್ನು ಕೇಳಿಕೊಂಡೆ. ನೀವು ತಪ್ಪು ಮಾಡಿದ್ದೀರಿ, ಅವರ ಕ್ಷಮೆ ಕೇಳಿ ಎಂದು ಹೇಳಿದೆ. ಆದರೂ ಸಹಿತ ಬಹಳ ದೊಡ್ಡ ಗಂಟಲಲ್ಲಿ, ಇಡೀ ಸಭೆಗೆ ಅಗೌರವ ತರುವ ರೀತಿಯಲ್ಲಿ, ಅವಾಚ್ಯವಾದ ಶಬ್ದದಲ್ಲಿ, ಅನ್‌ಪಾರ್ಲಿಮೆಂಟರಿ ಅಲ್ಲ, ಬಿಲೋ ದಿ ಬೆಲ್ಟ್ ಎಂದು ಹೇಳಬೇಕಾಗುತ್ತದೆ. ಆ ಶಬ್ದಗಳನ್ನು ಉಪಯೋಗ ಮಾಡಿ, ಬಹಳ ಅಸಭ್ಯತೆಯಿಂದ ನಡೆದುಕೊಂಡಿರತಕ್ಕಂಥ ವರ್ತನೆ, ಈ ಸದನಕ್ಕೆ ಮತ್ತು ನಮ್ಮೆಲ್ಲರಿಗೂ ಸಹ ಗೌರವ ತರತಕ್ಕಂಥಾದ್ದು ಅಲ್ಲ. ಮಾನ್ಯ ಅಧ್ಯಕ್ಷರೇ, ತಾವು ನುರಿತಿರತಕ್ಕಂಥವರು. ತಾವು ಸದನದಲ್ಲಿ ಸದಸ್ಯರಾಗಿ, ಹಲವಾರು ವರ್ಷಗಳ ಕಾಲ ಕೆಲಸ ಮಾಡಿದ್ದೀರಿ. ಈ ಸದನದ ಒಳಗಡೆ ಅಷ್ಟೇ ಅಲ್ಲ, ಈ ಸದನದ ಸುತ್ತ ಇರತಕ್ಕಂಥಾದ್ದಕ್ಕೆ ಸಹ ತಾವು ಕಸ್ಟೋಡಿಯನ್. ಇಲ್ಲಿ ಏನು ನಡೆದರೂ ಸಹ ನೀವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಇವತ್ತು ನಾನು ಏನು ಹೇಳುತ್ತೇನೆಂದರೆ, ವಿರೋಧಪಕ್ಷದ ಸದಸ್ಯರುಗಳಾಗಿ ನಾವು ಕೆಲಸ ಮಾಡದೇ ಹೋದರೆ ಜನ ನಿಮ್ಮನ್ನು ದೂಷಣೆ ಮಾಡುವುದಿಲ್ಲ, ನಮ್ಮನ್ನು ದೂಷಣೆ ಮಾಡುತ್ತಾರೆ. ನೀವು ಶಾಮೀಲಾಗಿ ಇದ್ದೀರಿ, ಸರ್ಕಾರದ ಪೆರೋಲ್ ಮೇಲೆ ನೀವು ಇದ್ದೀರಿ ಎನ್ನುವಂಥಾದ್ದನ್ನು ವಿಶೇಷವಾಗಿ ಮೊದಲನೇ ಬೆಂಚಿನಲ್ಲಿ ಕುಳಿತುಕೊಂಡಿರುವ ನಮ್ಮ ಮೇಲೆ ಹೇಳುತ್ತಾರೆ.

ಆದರಿಂದಾಗಿ ನಮ್ಮ ಕೆಲಸವನ್ನು ಸ್ವತಂತ್ರವಾಗಿ ನಿರ್ವಹಣೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ಇವತ್ತು ನಿಜವಾಗಿಯೂ ಸಹ ಎಲ್ಲಾ ದೃಷ್ಟಿಯಿಂದಲೂ, ಕರ್ನಾಟಕದ ಸಂಸ್ಕೃತಿ ದೃಷ್ಟಿಯಿಂದಲೂ, ವಿಧಾನಸಭೆಯ ಗೌರವವನ್ನು ಎತ್ತಿಹಿಡಿಯುವ ದೃಷ್ಟಿಯಿಂದಲೂ ಈ ರೀತಿ ಆಗಿರತಕ್ಕಂಥಾದ್ದು, ತೀರ ನೋವು, ಅವಮಾನಕರವಾಗಿರತಕ್ಕಂಥ ಒಂದು ಪ್ರಸಂಗ. ನಾನು ಮೊದಲೇ ಹೇಳಿದ ಹಾಗೆ, ಈ ಸದನದಲ್ಲಿ ಅಷ್ಟೇ ಅಲ್ಲ, ಹೊರಗಡೆ ಏನು ನಡೆದರೂ ಸಹ ನಮಗೆ ರಕ್ಷಣೆ ಕೊಡತಕ್ಕ ಬಗ್ಗೆ ನಿಮ್ಮಲ್ಲಿ ಬಹಳ ವಿನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ರಾಮಪ್ಪನವರು ಕ್ಷಮಾಪಣೆ ಕೇಳುವುದರಿಂದ ಮುಗಿಯುವುದಲ್ಲ ಈ ತರಹ ಆಗುತ್ತಿರತಕ್ಕಂಥಾದ್ದು ಇದು ಮೊದಲನೆ ಸಾರಿ ಅಲ್ಲ. ಅವರು ಹಲವಾರು ಸಾರಿ ಗೆದ್ದು ಬಂದಿರಬಹುದು; ಅದು ಬೇರೆ

ವಿಚಾರ. ಅವರು ಮಂತ್ರಿಗಳಾಗಿರಬಹುದು, ಅದು ಬೇರೆ ವಿಚಾರ. ಆದರೆ ಅವರು ನಡೆದುಕೊಂಡಿರತಕ್ಕಂಥ ರೀತಿ ಏನಿದೆ ಇದು ಅವರಿಗೆ ಗೌರವ ತರತಕ್ಕಾಂಥಾದ್ದು ಅಲ್ಲ. ಇದು ಕೇವಲ ಕ್ಷಮಾಪಣೆಯನ್ನು ಕೇಳಿ ಮುಗಿಸತಕ್ಕಂತಹ ವಿಚಾರವಲ್ಲ. ಇದು ಮುಂದೆ ಆಗಬಾರದು. ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನೀವು ಕ್ರಮ ತೆಗೆದುಕೊಳ್ಳದೇ ಹೋದರೆ, ಬೇರೆಯವರೂ ಸಹ ಇದೇ ರೀತಿ ವರ್ತನೆ ಮಾಡುತ್ತಾರೆ. ಅದರಿಂದಾಗಿ ತಾವು ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:- ಈಗ ತಾವು ಸಾಕಷ್ಟು ಜನ ಹಿರಿಯರು ಮಾತನಾಡಿದಿರಿ. ತಮ್ಮ ಮನೋವ್ಯಥೆಯನ್ನು ನಾನು ಅರಿತುಕೊಂಡಿದ್ದೇನೆ. ಈಗ ಶ್ರೀಮಾನ್ ರಾಮಪ್ಪನವರು ಇಲ್ಲ. ಅವರನ್ನು ನಾನು ಕೊಠಡಿಗೆ ಕರೆಯಿಸುತ್ತೇನೆ, ಆಮೇಲೆ ತಮ್ಮನ್ನೂ ಕರೆಯಿಸಿ ಒಂದು ನಿರ್ಣಯಕ್ಕೆ ಬಂದು, ಯಾವ ರೀತಿ ನಾವು ಸದನದ ಘನತೆ, ಗೌರವವನ್ನು ಕಾಪಾಡಿಕೊಂಡು ಹೋಗುವಂತಹ ಕೆಲಸವನ್ನು ಮಾಡಬೇಕು, ಆ ರೀತಿ ಮಾಡೋಣ ಎಂದು ನಾನು ತಮಗೆ ಹೇಳುತ್ತೇನೆ.

†ಶ್ರೀ ಡಿ. ಬಿ. ಚಂದ್ರೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಇಂತಹ ವಿಚಾರಗಳು ಬಂದಾಗ ನಾನು ಮಧ್ಯೆ ಪ್ರವೇಶ ಮಾಡಬಾರದು ಎಂದು ಬಹಳ ಸಂಯಮದಿಂದ ಕಾಯುತ್ತಿದ್ದೆ. ಕಾರಣ ಏನೆಂದರೆ, ನಾನು ಅಲ್ಲಿ ಕುಳಿತ ಅಪರಾಧಕ್ಕಾಗಿ ಇಲ್ಲಿ ನಡೆಯತಕ್ಕಂಥಾದ್ದು ಇತ್ತೀಚಿನ ದಿನಗಳಲ್ಲಿ ಯಾರಿಗೂ ಸಮಾಧಾನ ತರತಕ್ಕಂಥ ಸಂಗತಿ ಅಲ್ಲ. ಅನೇಕ ಘಟನೆಗಳು ನಡೆಯುತ್ತಾ ಇವೆ. ನಾನು ತಮ್ಮಲ್ಲಿ ಒಂದು ಮನವಿ ಮಾಡುತ್ತೇನೆ, ನಮಗೆ ಒಂದು ನಿಯಮಾವಳಿ ಇದೆ. ಆ ನಿಯಮಾವಳಿಯ ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕಂತಹ ನಮ್ಮ ಸಂಪೂರ್ಣ ಜವಾಬ್ದಾರಿ, ನಂಬಿಕೆಯನ್ನು ತಮ್ಮ ಮೇಲೆ ಇಟ್ಟಿರುತ್ತೇನೆ. ಪ್ರತಿ ಸಾರಿ ಚರ್ಚೆ ಮಾಡಿದಾಗಲೂ ಕಾರ್ಯಾಲಯದ ಒಳಗಡ ಕರೆಸುವುದು, ಮಾತನಾಡುವುದು, ಮುಗಿಸುವುದು ಇದು ಆಗಬಾರದು. ಮಾನ್ಯ ರಾಮಪ್ಪನವರ ಬಗ್ಗೆ ನನಗೆ ತುಂಬಾ ಗೌರವ ಇದೆ. ನಾನು ನಿನ್ನೆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಮುನ್ನ, ಸ್ವಲ್ಪ ಮಾಹಿತಿಗಳನ್ನು ಸಂಗ್ರಹಿಸಿ ಇದರ ಬಗ್ಗೆ ಏನಾದರೂ ಹೇಳೋಣವೆಂದು ಇದ್ದೆ. ಸಮಾನಾಂತರ ಕಾಲುವೆಯ ಬಗ್ಗೆ ಸ್ವಲ್ಪ ಇರಿಗೇಷನ್‌ನಲ್ಲಿ ಅನುಭವ ಇರತಕ್ಕಂತಹ ಮಾನ್ಯ ನಂಜೇಗೌಡರಲ್ಲೂ ಕನ್‌ಸಲ್ಟ್ ಮಾಡಿಕೊಂಡು ನಾನು ಬಂದೆ. ಆ ವಿಚಾರವನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಚರ್ಚೆಗೆ ಬಳಸೋಣ ಎಂದು ಇದ್ದೆ. ಅಷ್ಟರಲ್ಲಿ ಮಧ್ಯೆ ಅವರು ಪ್ರಸ್ತಾಪ ಮಾಡಿದರು.

ಪ್ರಜಾವಾಣಿಯಂಥ ಜವಾಬ್ದಾರಿ ಪತ್ರಿಕೆಯ ಮುಖಪುಟದಲ್ಲಿ ಬಂದಿರತಕ್ಕ ಸುದ್ದಿ. ಆಂಧ್ರಪ್ರದೇಶದಿಂದ ನೀರಾವರಿ ಮಂತ್ರಿಗಳು ಬಂದಿದ್ದರು; ಶಾಸಕರ ಜೊತೆ ಸಮಾಲೋಚನೆ ಮಾಡಿದರು ಎಂದು ಹೇಳಿದ್ದಾರೆ. ವಸ್ತುಸ್ಥಿತಿ ಏನೇ ಇರಲಿ, ಮಾನ್ಯ ಶಂಕರರೆಡ್ಡಿಯವರು ವಿವರಣೆ ಕೊಟ್ಟಿದ್ದಾರೆ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಚರ್ಚೆ ಮಾಡಿದ್ದುದು, ಇಡೀ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ. ಕೃಷ್ಣಾ ಜಲಾನಯನ ಪ್ರದೇಶದಲ್ಲಿ, ಎರಡು ಸಾವಿರ ಇಸವಿಯೊಳಗೆ 734 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಬೇಕೆಂದು ಇದ್ದೇವೆ. ಸ್ಕೀಮ್ ಬಿನಲ್ಲಿ ಬರತಕ್ಕಂಥ ನೀರನ್ನು ಆಗಲೇ ಅವರು ಸಮಾನಾಂತರ ಕಾಲುವೆಯಲ್ಲಿ ತೆಗೆದುಕೊಂಡು ಹೋದರೆ, ಆಗಬಹುದಾದ ಪರಿಸ್ಥಿತಿಯನ್ನು ಚರ್ಚೆ ಮಾಡಲೇಬೇಕಾಗುತ್ತದೆ. ಒಂದು ವೇಳೆ, ಅವರ ಬಗ್ಗೆ ವಾಟಾಳ್ ನಾಗರಾಜ್‌ರವರೊ ಅಥವಾ ಇನ್ನು ಯಾರಾದರೂ ಪ್ರಸ್ತಾಪ ಮಾಡಿದ್ದರೆ ಹೇಳಲಿ. ನಾವು ಇಲ್ಲಿ ಪ್ರಸ್ತಾಪ ಮಾಡಿದ ವಿಷಯವೇ ಬೇರೆ. ಆದರೆ ಅವರು ನಡೆದುಕೊಂಡ ನಡವಳಿಕೆಯಿಂದ ತಿಳಿಯುವುದೇನೆಂದರೆ ಬಹುಶಃ ಅವರು ಬಳ್ಳಾರಿ ಜಿಲ್ಲೆಯ ಸರ್ವಾಧಿಕಾರಿ ಎಂದು ಭಾವನೆ ಮಾಡಿರಬೇಕು. ಅದು ಯಾರಿಗೂ ಇಲ. ಶಾಸನಸಭೆಯ ಸದಸ್ಯರಾದ ಮಾತ್ರಕ್ಕೆ, ಅಲ್ಲಿ ತೋಳುಬಲ ಸ್ವಲ್ಪ ಜಾಸ್ತಿ ಇದೆ. ಅಲ್ಲಿಯ ಬಲ, ಇಲ್ಲಿ

ಪ್ರದರ್ಶನವಾಗಬಾರದು. ಅವರು ಒಂದು ನೂರು ವರ್ಷಗಳ ಇತಿಹಾಸವಿರತಕ್ಕಂಥ ಒಂದು ರಾಷ್ಟ್ರೀಯ ಪಕ್ಷಕ್ಕೆ ಸೇರಿದವರು, ಮತ್ತು ಕಾಂಗ್ರೆಸ್ ಪಕ್ಷದ ಶಾಸಕರಾಗಿ, ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಆದರೆ, ಅವರಿಗೆ ಆ ಜವಾಬ್ದಾರಿ ಇಲ್ಲ; ಈ ರಾಜ್ಯದಲ್ಲಿ ಅವರು ಮಂತ್ರಿಗಳಾಗಿದ್ದರು. ಆಮೇಲಾದರೂ ಸ್ವಲ್ಪ ಗೌರವ ಬರುತ್ತದೆ ಎಂದು ತಿಳಿದಿದ್ದೆವು. ಆದರೆ, ಇದು ನಾವೆಲ್ಲರೂ ನೋಡಿರತಕ್ಕಂಥಾದ್ದು ಮತ್ತು ಕೇಳಿರತಕ್ಕಂಥಾದ್ದು. ಆದ್ದರಿಂದ, ತಮಗೆ ಏನು ಹೇಳುತ್ತೇವೆಂದರೆ, ಅವರನ್ನು ಕರೆದು, ಖಾಜಿ ನ್ಯಾಯ ಮಾಡುವುದನ್ನು ಬಿಟ್ಟುಬಿಡೋಣ. ಇದರಲ್ಲಿ ನಮಗೆ ಏನಾದರೂ ಅವಕಾಶ ಇದ್ದರೆ, ನಮ್ಮ ಮಾತಿನಲ್ಲಿ ವಿಶ್ವಾಸ ಇದ್ದರೆ, ಅವಕಾಶ ಕೊಡಿ, ಅವರು ಕೇಳಲಿ. ಆ ರೀತಿ ನಡೆದುಕೊಳ್ಳಬೇಡಿ ಎಂದು ನೀವು ಹೇಳುವುದೇನು ? ಆದರೆ ಏನಾದರೊಂದು ಕಾರ್ಯ ಆಗುವುದಿದ್ದರೆ, ಕಾಂಗ್ರೆಸ್ ಪಕ್ಷದಿಂದ ಅವರನ್ನು ಸಸ್ಪೆಂಡ್ ಮಾಡಬೇಕು. ಆ ಪಕ್ಷಕ್ಕೆ ನಿಜವಾದ ಜವಾಬ್ದಾರಿ ಹಾಗೂ ಗೌರವ ಏನಾದರೂ ಇದ್ದರೆ, ಇಂತಹ ಗೂಂಡಾಗಳನ್ನು ಇಟ್ಟುಕೊಳ್ಳಬಾರದು. ಇದು ಯಾವ ಪಕ್ಷಕ್ಕೂ ಗೌರವ ತರುವುದಿಲ್ಲ. ನಿಮಗೆ ನಾನಿಷ್ಟೇ ಹೇಳುವುದು. ಕಾಂಗ್ರೆಸ್ ಪಕ್ಷದ ಸದಸ್ಯರಾದ ಕಾರಣ, ಈ ರಾಷ್ಟ್ರವನ್ನು ಆಳಿದಂಥ ಶತಮಾನಗಳ ಇತಿಹಾಸವಿರತಕ್ಕಂಥ ಪಕ್ಷದಲ್ಲಿ, ಇಂತಹ ಸದಸ್ಯರನ್ನು ಇಟ್ಟುಕೊಂಡರೆ, ನಿಮಗೂ ಗೌರವ ಬರುವುದಿಲ್ಲ, ಈ ಸದನಕ್ಕೂ ಗೌರವ ಬರುವುದಿಲ್ಲ. ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಆದ್ದರಿಂದ ತಮ್ಮಲ್ಲಿ ನಾನು ಏನು ಹೇಳುತ್ತೇನೆಂದರೆ; ಇದು ಪ್ರಿವಿಲೇಜ್ ಇಷ್ಯೂ. It is the privilege of the Member. I request the Chair to straight away please refer this matter to the Privilege committee. Let the committee go into it. This is all my request.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:-- ನಾನು ಮೊದಮೊದಲು ಬೇರೆ ತಿಳಿದುಕೊಂಡಿದ್ದೆ. ಅವರು ಏನೋ ಚೇಷ್ಟೆ ಮಾಡುತ್ತಿದ್ದಾರೆಂದು ತಿಳಿದುಕೊಂಡಿದ್ದೆ. ನಾನು ಬಹಳ ದಿವಸದಿಂದ ಇಲ್ಲಿಯೇ ಕುಳಿತವನು, ಮಾನ್ಯ ವಾಟಾಳ್ ನಾಗರಾಜರು ಬಹಳ ದಿವಸಗಳಿಂದ ನನ್ನ ಪಕ್ಕದಲ್ಲಿಯೇ ಕುಳಿತವರು. ಇಂತಹ ಶಬ್ದಗಳ ಮೂಲಕ ಚೇಷ್ಟೆ ಮಾಡಿದವರಲ್ಲ. ಇವತ್ತು ಏಕಾಏಕಿ ಇಂತಹ ಶಬ್ದಗಳ ಮೂಲಕ ಚೇಷ್ಟೆ ಏಕೆ ಪ್ರಾರಂಭ ಮಾಡಿದರು ಎಂದು ನನಗೆ ಅನುಮಾನ ಇತ್ತು. ಆಮೇಲೆ ಅವರು, ಎದ್ದು ನಿಂತ ಮೇಲೆ, ಅವರ ಮುಖಭಾವ ಮತ್ತು ಉದ್ವೇಗ ನೋಡಿದಾಗ, ಮಾನ್ಯ ವಾಟಾಳ್ ನಾಗರಾಜರನ್ನು ಎಲ್ಲಿ ಬಡಿಯುತ್ತಾರೋ ಎನ್ನತಕ್ಕ ಭಯಬಂತು. ಈ ಪರಿಸ್ಥಿತಿ ಏಕೆ ಎಂದು ನಾನು ಕೇಳಿದೆ. ಆಮೇಲೆ ಅವರು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಹೋದರು. ಇದನ್ನು ನೋಡಿದರೆ, ನಾವು ಸದಸ್ಯರು ಯಾವುದೋ ಕ್ಷೇತ್ರದ ಅಥವಾ ಬೇರೆ ವಿಷಯ ಮಾತನಾಡಿದರೆ ನಾಳೆ ನಮ್ಮ ಗತಿ ಏನು ಎಂಬ ಚಿಂತೆಯಾಗಿದೆ. ಆದಕಾರಣ, ಸದಸ್ಯರೆಲ್ಲರಿಗೂ ವಿಶ್ವಾಸ ಬರತಕ್ಕಂಥ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

†ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ವಾಟಾಳ್ ನಾಗರಾಜರ ಹತ್ತಿರ ಅವರು ಕುಳಿತುಕೊಂಡು ಮಾತನಾಡುವಾಗ, ನೋಡಿದೆ. ಇಂತಹ ವಿಷಯಗಳು ಬಂದಾಗ, ವಾಟಾಳ್ ನಾಗರಾಜರು ಸುಮ್ಮನೆ ಕೇಳುವವರಲ್ಲ, ಏಕೆ ಸುಮ್ಮನೆ ಕುಳಿತಿದ್ದಾರೆ ಅಂದುಕೊಂಡೆ. ಆಗ ಕೇಳಿದೆ. ಅದಕ್ಕೆ ಈಗ ಪ್ರಶ್ನೋತ್ತರ ನಡೆಯುತ್ತಿದೆ, ಅದರ ಸಲುವಾಗಿ ಸುಮ್ಮನೆ ಕುಳಿತಿದ್ದೇನೆ, ಎಂದರು. ಅವರು, ಇಲ್ಲಿ ಬಂದು ನನಗೆ ಹೇಳುತ್ತಾರೆ, ನಾಚಿಕೆ ಬರುವುದಿಲ್ಲವೇ, ನಮ್ಮ ಹತ್ತಿರ ಯಾರಾದರೂ ಮಂತ್ರಿಗಳು ಬಂದಿರಬಹುದು, ಊಟ ಮಾಡಿರಬಹುದು. ನನ್ನ ಮನೆಗೆ ಬೇಕಾದ ಜನ ಬರುತ್ತಾರೆ, ಇವನು ಯಾರು ಕೇಳುವುದಕ್ಕೆ ಎಂದರು. ಇಂತಹ ಮಾತುಗಳು, ಇನ್ನೂ ಬಹಳ ಇವೆ. ಆ ಮಾತುಗಳನ್ನು ಇಲ್ಲಿ ಹೇಳಬಾರದು. ಇಂತಹ ಮಾತುಗಳನ್ನು ಆಡುವವರಿಗೆ ಬುದ್ಧಿ ಹೇಳಿ ಎಂದರೆ, ಯಾರು ಬುದ್ಧಿ ಹೇಳುವುದು. ನಾವು ಏನಾದರೂ ಮಾತನಾಡಬೇಕಾದರೆ, ಅವರನ್ನು ಕೇಳಿ

ಮಾತನಾಡಬೇಕೇ. ಹಿರಿಯ ಸದಸ್ಯರಿದ್ದಾರೆ, ಅನುಭವಿಗಳಿದ್ದಾರೆ, ಇಲ್ಲಿ ಏನಾದರೂ ಒಳ್ಳೆಯದನ್ನು ಕಲಿಯಬಹುದು, ಒಳ್ಳೆಯದನ್ನು ತಿಳಿದುಕೊಳ್ಳಬಹುದೆಂದು ಇಲ್ಲಿ ಬಂದರೆ, ಅವರು ಇಲ್ಲಿ ಬಂದು ಹಂಗಿಸುವದು, ಮಾಡುವುದೂ ಸರಿಯೇ ? ನಾವೇನೋ ವಿರೋಧ ಪಕ್ಷದಲ್ಲಿದ್ದೇವೆ. ಸರ್ಕಾರದಲ್ಲಿ ಆದಂಥ ಲೋಪದೋಷಗಳನ್ನು ಎತ್ತಿ ತೋರಿಸುವುದು ನಮ್ಮ ಕರ್ತವ್ಯ. ಅದು ಬಿಟ್ಟು, ನಾವು ಅವರನ್ನು ಹೊಗಳುವುದಕ್ಕೆ ಇಲ್ಲಿ ಬಂದಿದ್ದೇವೆಯೇ. ಅವರು ಹೇಳಿದ್ದೇ ಕೇಳಬೇಕೆಂದಾದರೆ, ನಾವು ಬೇರೆ ಕೆಲಸ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಮಾನ್ಯ ಬಾಬಾಗೌಡರು ಹೇಳಿದ್ದುದು ನಿಜ. ನಾಳೆ ಯಾರ ಬಗ್ಗೆ, ಏನಾದರೂ ಒಂದು ಮಾತನಾಡಿದರೆ, ಅವರು ನಮ್ಮ ಪಕ್ಕಕ್ಕೆ ಬಡಿಗೆ ತೆಗೆದುಕೊಂಡು ಬಂದು ಕುಳಿತುಕೊಳ್ಳುತ್ತಾರೆ. ಹೀಗಾದರೆ, ನಾವು ಯಾವ ರೀತಿ ಕೆಲಸ ಮಾಡುವುದು. ಆದ್ದರಿಂದ ಇದನ್ನು ದಯಮಾಡಿ ಪ್ರಿವಿಲೇಜ್‌ಗೆ ಹಾಕಿ. ಅವರನ್ನು ಕರೆದು ಮಾತನಾಡುವುದಲ್ಲ ಇದನ್ನು ಪ್ರಿವಿಲೇಜ್‌ಗೆ ಹಾಕಬೇಕೆಂದು ಒತ್ತಾಯಿಸುತ್ತೇನೆ.

ಅಧ್ಯಕ್ಷರು:– ನಾನು ಈಗಾಗಲೇ ಹೇಳಿದ್ದೇನೆ. ಆ ಸದಸ್ಯರು ಇಲ್ಲಿ ಇಲ್ಲ. ನಾನು ಅವರನ್ನು ಕರೆದು ಮಾತನಾಡುತ್ತೇನೆಂದು ಒಂದೇ ಶಬ್ದದಲ್ಲಿ ಹೇಳಿದೆ. ಯಾವುದೇ ಸದಸ್ಯರಾಗಿರಲಿ, ಅವರ ಘನತೆ, ಗೌರವ ಕಾಪಾಡತಕ್ಕಂಥ ಕರ್ತವ್ಯ ನನ್ನದಾಗಿದೆ.

ಶ್ರೀ ವಾಟಾಳ್ ನಾಗರಾಜ್:– ತಮಗೆ ನಮ್ಮ ಮೇಲೆ ನಂಬಿಕೆ ಇದೆ ತಾನೆ ?

ಅಧ್ಯಕ್ಷರು:– ನಂಬಿಕೆ ಅಂತ ಅಲ್ಲ.....

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು:– ನಾನು ಇದನ್ನು ಪರಿಶೀಲಿಸುತ್ತೇನೆ. ಅವರನ್ನು ಕರೆಯಿಸಿ ಮಾತನಾಡುತ್ತೇನೆ. ನಾನು ಹೇಳುವುದನ್ನು ಸ್ವಲ್ಪ ತಾವು ಅರ್ಥ ಮಾಡಿಕೊಳ್ಳಬೇಕು. ಈಗ ಒಂದು ಕಡೆ ವಾದವನ್ನು ಕೇಳಿದ್ದೇನೆ. ಅವರ ವಾದವನ್ನು ಕೇಳುತ್ತೇನೆ. ಆಗ ನಾನು ಒಂದು ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ. ಅವರು ಏನು ಹೇಳುತ್ತಾರೋ ಕೇಳೋಣ. ಇದೇನು ಹೊರಗಡೆ ನಡೆದಿದ್ದು ಅಲ್ಲ. ಹೊರಗಡೆ ನಡೆದಿದ್ದನ್ನು ಬಂದು ನಾನು ತಮಗೆ ಹೇಳಿದ್ದಲ್ಲ. ಇಲ್ಲಿ ನಡೆದಿದ್ದನ್ನು ಇಡೀ ಸದನದ ಎಲ್ಲರೂ ಹೇಳಿದ್ದಾರೆ. ಅದು ತಮಗೆ ಗೊತ್ತಿದೆ.

ಅಧ್ಯಕ್ಷರು:– ನಾನು ಅರ್ಥ ಮಾಡಿಕೊಂಡಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಇದು ಕೇವಲ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರ ಒಬ್ಬರ ಪ್ರಶ್ನೆ ಅಲ್ಲ. ಇದು ಇಡೀ ಸದನದ ಗೌರವ ಹಕ್ಕಿನ ಪ್ರಶ್ನೆ ಆಗಿದೆ. ಶ್ರೀಮಾನ್ ವಾಟಾಳ್ ನಾಗರಾಜ್‌ರವರು ನಮ್ಮೆಲ್ಲರಿಗೂ ತಿಳಿದಂತೆ ಕರ್ನಾಟಕ ರಾಜ್ಯದಲ್ಲಿ ಕನ್ನಡಕ್ಕಾಗಿ ಹೋರಾಡದಂತಹ ದಿಟ್ಟ ವೀರರಲ್ಲಿ ಅಗ್ರಗಣ್ಯರು. ಈ ವಿಷಯವನ್ನು ಇಷ್ಟು ಜನರು ಅವರ ಸುತ್ತಮುತ್ತ ಇರುವವರು ಹೇಳುವಾಗ ನೂರಕ್ಕೆ ನೂರರಷ್ಟು ಅವರ ಮಾತನ್ನು ನಂಬಬೇಕು. ಆದರೆ ಎಂತಹ ಘೋರ ಅಪರಾಧ ಮಾಡಿದ್ದರೂ ಕೂಡ ಅಪರಾಧಿಯನ್ನು ಕೇಳಿ ತೀರ್ಮಾನ ಮಾಡುತ್ತಾರೆ. ಮಾನ್ಯ ಅಧ್ಯಕ್ಷರು ಹೇಳಿರತಕ್ಕಂಥಾದ್ದು ಸೂಕ್ತ. ಈ ಸಭೆಯ ಗೌರವವನ್ನು, ಹಕ್ಕನ್ನು ರಕ್ಷಣೆ ಮಾಡತಕ್ಕಂಥ ಪೂರ್ಣ ಜವಾಬ್ದಾರಿ ಅಧ್ಯಕ್ಷರದ್ದು. ಅದೇ ರೀತಿ ಅವರ ಮೇಲೆ ನಾವು ಪೂರ್ಣ ಭರವಸೆ ಇಟ್ಟು ನಂಬಬೇಕಾಗಿದೆ. ಅವರು ಈ ಒಂದು ವಿಷಯವನ್ನು ಅಂದರೆ ಇಂತಹ ಒಂದು ಕೃತ್ಯ ಪುನಃ ಆಗದಂತೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಿಯಮ 334ರ ಮೇರೆಗೆ,

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ ದೇವಾಲಯಕ್ಕೆ ಹೊಂದಿಕೊಂಡಿರುವ ಜಮೀನಿನಲ್ಲಿ ಸಮುದಾಯ ಭವನ ಇತ್ಯಾದಿಗಳಿಗೆ ಮೀಸಲಿಡುವ ಬಗ್ಗೆ

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):– ಮಾನ್ಯ ಅಧ್ಯಕ್ಷರೇ ದಕ್ಷಿಣಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ವಾರಂಬಳ್ಳಿ ಗ್ರಾಮದಲ್ಲಿರುವ ಸಾಲಿಕೇರಿಯಲ್ಲಿನ ಶ್ರೀ ಬ್ರಹ್ಮಲಿಂಗ ವೀರಭದ್ರ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಹೊಂದಿಕೊಂಡಂತೆ ಇರುವ ಸರಕಾರಿ ಭೂಮಿಯನ್ನು ಹಾರಾಡಿ ಗ್ರಾಮದ ಸರ್ವೆ ನಂಬರ್ 35–1 ಸ್ಮಶಾನ ಸ್ಥಳವಾಗಿ ಮಾರ್ಪಡಿಸಿರುವ ಕಾರಣ ಸದರಿ ದೇವಸ್ಥಾನದ ಪಾವಿತ್ರ್ಯತೆಗೆ ಧಕ್ಕೆ ಬರುವುದೆಂಬ ಕಾರಣಕ್ಕಾಗಿ ಆ ಸ್ಥಳದಲ್ಲಿ ರುದ್ರಭೂಮಿಯನ್ನು ಮಾಡುವ ಕಾರ್ಯವನ್ನು ಕೈಬಿಡಬೇಕೆಂದು ಅಲ್ಲಿಯ ಸ್ಥಳೀಯ ಭಕ್ತಾದಿಗಳು ಸರಕಾರವನ್ನು ಕೇಳಿಕೊಂಡಿದ್ದಾರೆ. ಆದಕಾರಣ ಯೋಜಿತ ರುದ್ರಭೂಮಿಯನ್ನು ಆ ಸ್ಥಳದಲ್ಲಿ ಮಾಡದೇ ಬೇರೆ ಸೂಕ್ತ ಸ್ಥಳವನ್ನು ಅದಕ್ಕೆ ಗೊತ್ತುಪಡಿಸಿ ಸದರಿ ಜಾಗವನ್ನು ಸಮುದಾಯ ಭವನ ಇತ್ಯಾದಿ ಕಾರ್ಯಕ್ರಮಗಳಿಗಾಗಿ ಮೀಸಲಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ವಾರಂಬಳ್ಳಿ ಗ್ರಾಮದಲ್ಲಿರುವ ಸಾಲಿಕೇರಿಯಲ್ಲಿನ ಶ್ರೀ ಬ್ರಹ್ಮಲಿಂಗ ವೀರಭದ್ರ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಹೊಂದಿಕೊಂಡಿರುವ ಹಾರಾಡಿ ಗ್ರಾಮದ ಸರ್ವೆ ನಂ.35: 1 ರ ಪೈಕಿ 50 ಸೆಂಟ್ಸ್ ಸರ್ಕಾರಿ ಭೂಮಿಯನ್ನು ಸ್ಮಶಾನಕ್ಕಾಗಿ ಮೀಸಲು ಇಡಲು ಯೋಚಿಸಲಾಗಿತ್ತು. ಸದರಿ ದೇವಾಲಯಗಳ ಆಡಳಿತ ಮಂಡಳಿಯ ಹಾಗೂ ಸಾರ್ವಜನಿಕರ ಆಕ್ಷೇಪಣೆಗಳನ್ನು ಪರಿಗಣಿಸಿ ಈ ಪ್ರಸ್ತಾವನೆಯನ್ನು ಕೈಬಿಟ್ಟು ಸ್ಮಶಾನಕ್ಕಾಗಿ ಬೇರೆ ಸೂಕ್ತ ಸ್ಥಳವನ್ನು ಆಯ್ಕೆ ಮಾಡಲು ಉಡುಪಿ ತಹಶೀಲದಾರರಿಗೆ ಜಿಲ್ಲಾಧಿಕಾರಿಗಳು ಅವರ ಕಚೇರಿ ಪತ್ರದ ಸಂಖ್ಯೆ ಎಲ್ಎನ್‌ಡಿ 1 ಪಿಡಿಆರ್ 1040:92–93 ದಿನಾಂಕ 22–2–93ರ ಪ್ರಕಾರ ನಿರ್ದೇಶನ ನೀಡಿರುತ್ತಾರೆ. ಆದುದರಿಂದ, ಈಗ ಈ ಸಮಸ್ಯೆಯು ಬಗೆಹರಿದಂತಾಗಿದೆ.

1.40 ಪಿ.ಎಂ.

2. ಕಲಬೆರಕೆ ಹಾಲು ಮಾರುವ ಬೂತ್‌ಗಳ ವಿರುದ್ಧ ಕ್ರಮ

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ ಶ್ರೀರಾಮಪುರದಲ್ಲಿರುವ ಬಲ್ಕ್‌ವೆಂಡಿಂಗ್ ಬೂತ್ ನಂ: 31ರಲ್ಲಿ ಕಲಬೆರಕೆ ಹಾಲಿನ ಮಾರಾಟಕ್ಕಾಗಿ ಮದರ್ ಡೈರಿಯವರು ಹಲವಾರು ಬಾರಿ ನೋಟೀಸುಗಳನ್ನು ನೀಡಿದ್ದರೂ ಇದರ ಏಜೆನ್ಸಿಯನ್ನು ರದ್ದುಪಡಿಸಲು ಇದುವರೆವಿಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಚೆಕ್ ಬೌನ್ಸಿಂಗ್ ಪ್ರಕರಣದಲ್ಲಿಯೂ ಸಹ ಹಲವಾರು ಬಾರಿ ನೋಟೀಸುಗಳನ್ನು ನೀಡಲಾಗಿದೆ. ಇನ್ನೂ ಕೂಡ ಕಲಬೆರಕೆ ನಡೆಯುತ್ತಿರುವುದಾಗಿ ಸಾರ್ವಜನಿಕ ದೂರುಗಳು ಬಂದಿರುತ್ತವೆ. ಆದ್ದರಿಂದ ಕೂಡಲೆ ಹಠಾತ್ತಾಗಿ ಈ ಮೇಲ್ಕಂಡ ಬೂತಿಗೆ ಸಂಬಂಧಪಟ್ಟ ಅಧಿಕಾರಿಗಳು ಭೇಟಿ ನೀಡಿ ಹಳೆಯ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ ಈ ಏಜೆನ್ಸಿಯನ್ನು ವಿದ್ಯಾವಂತ ನಿರುದ್ಯೋಗಿಗಳಿಗೆ ಕೊಡಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಪಶುಸಂಗೋಪನಾ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ

ಡೈರಿಯ ಅಧೀನದಲ್ಲಿರುವ ಶ್ರೀರಾಮಪುರದಲ್ಲಿರುವ ಬಲ್ಕ್ ವೆಂಡಿಂಗ್ ಬೂತ್ ಸಂಖ್ಯೆ. 318ರಲ್ಲಿ ಪ್ರಾರಂಭದಿಂದ ಇಲ್ಲಿಯವರೆಗೆ 6 ಕಲಬೆರಕೆ ಹಾಗೂ 138 ಬಾರಿ ಚೆಕ್ ಬೌನ್ಸ್ ಪ್ರಕರಣಗಳು ಆಗಿರುತ್ತವೆ. ಈ ಹಿಂದೆ ಕಲಬೆರಕೆ ಮತ್ತು ಚೆಕ್ ಬೌನ್ಸ್ ಪ್ರಕರಣಗಳು ಆದಲ್ಲಿ ಏಜೆನ್ಸಿಗಳಿಗೆ ಎಚ್ಚರಿಕೆ ನೀಡಲಾಗುತ್ತಿತ್ತು. ಚೆಕ್ ಬೌನ್ಸ್ ಪ್ರಕರಣಗಳಿಗೆ ಪ್ರತಿ ಬಾರಿಯೂ ರೂ. 100ದಂಡ ವಿಧಿಸಲಾಗುತ್ತಿತ್ತು. ಈ ಪ್ರಕರಣಗಳ ಸಂಖ್ಯೆ ಜಾಸ್ತಿಯಾದ್ದರಿಂದ ಇದನ್ನು ತಡೆಗಟ್ಟಲು ದಿನಾಂಕ 21–10–92ರಂದು ನಡೆದ ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಕಲಬೆರಕೆ ಮಾಡಿದಂತಹ ಏಜೆನ್ಸಿಗಳಿಗೆ ಮೊದಲನೇ ಬಾರಿಗೆ ರೂ. 2000 ದಂಡ ವಿಧಿಸುವುದು ಹಾಗೂ ಎರಡನೇ ಬಾರಿ ಕಲಬೆರಕೆ ಕಂಡು ಬಂದಲ್ಲಿ ಏಜೆನ್ಸಿ ರದ್ದುಪಡಿಸಲಾಗುವುದು. ಈ ತೀರ್ಮಾನದನ್ವಯ ಶ್ರೀ ರಾಮಪುರದ 318ನೇ ಬೂತಿನಲ್ಲಿ ಒಂದು ಬಾರಿ ಕಲಬೆರಕೆ ಪ್ರಕರಣ ಪತ್ತೆಯಾಗಿದ್ದು, ರೂ.2000–00 ದಂಡ ವಿಧಿಸಲಾಗಿದೆ. ಸದರಿ ಏಜೆನ್ಸಿಯವರು ಈ ದಂಡದ ಹಣವನ್ನು ಪಾವತಿ ಮಾಡದೇ ಇದ್ದು ಇದನ್ನು ಅವರ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲಾಗುವುದು. ದಿನಾಂಕ 11–1–1993ರಂದು ನಡೆದ ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯಲ್ಲಿ ದಿನಾಂಕ 21–10–92ರಂದು ತೆಗೆದುಕೊಂಡ ತೀರ್ಮಾನವನ್ನು ಪುನರ್ ಪರಿಶೀಲಿಸಿ ಕಲಬೆರಕೆಯನ್ನು ಮೊದಲನೆ ಪ್ರಕರಣದಲ್ಲಿಯೇ ಏಜೆನ್ಸಿಯನ್ನು ರದ್ದುಪಡಿಸಲು ತೀರ್ಮಾನಿಸಲಾಗಿದೆ. ಈ ತೀರ್ಮಾನದಂತೆ ನವೆಂಬರ್ 1992ರಿಂದ ಇಲ್ಲಿಯವರೆವಿಗೆ 20 ಏಜೆನ್ಸಿಗಳನ್ನು ಕಲಬೆರಕೆ ಕಾರಣಗಳಿಂದ ರದ್ದು ಪಡಿಸಲಾಗಿದೆ. ಶ್ರೀರಾಮಪುರದ ಬೂತ್ ಸಂಖ್ಯೆ: 318ರಲ್ಲಿ ಮತ್ತೆ ಕಲಬೆರಕೆ ಪ್ರಕರಣ ಪತ್ತೆಯಾದಲ್ಲಿ ದಿನಾಂಕ 11–1–1993ರ ತೀರ್ಮಾನದನ್ವಯ ಏಜೆನ್ಸಿಯನ್ನು ರದ್ದು ಮಾಡಲಾಗುವುದು. ಸದರಿ ಬೂತಿನ ಚೆಕ್ ಬೌನ್ಸಿಂಗ್ ಪ್ರಕರಣಗಳಿಗೆ ಚೆಕ್ ಬೌನ್ಸಿಂಗ್ ಪ್ರಕರಣಗಳೂ ಸಹ ಆದಲ್ಲಿ ಏಜೆನ್ಸಿ ರದ್ದುಪಡಿಸುವ ವಿಚಾರವೂ ಸಹ ಪರಿಶೀಲನೆಯಲ್ಲಿದೆ. ದಿನಾಂಕ 11–1–1993 ರಂದು ಮಾತೃ ಡೈರಿಯ ವ್ಯವಸ್ಥಾಪಕ ಸಮಿತಿ ಸಭೆಯ ತೀರ್ಮಾನದಂತೆ ಶ್ರೀರಾಮಪುರದ 318 ಬೂತಿನಲ್ಲಿ ಕಲಬೆರಕೆ ಪ್ರಕರಣ ಪತ್ತೆಯಾದಲ್ಲಿ ತಕ್ಷಣವೇ ಏಜೆನ್ಸಿಯನ್ನು ರದ್ದುಪಡಿಸಿ ನಿಯಮಾನುಸಾರ ಹೊಸ ಏಜೆನ್ಸಿಯನ್ನು ನೇಮಿಸಲಾಗುವುದು.

3. ಪ್ರೇರಕ–ಪ್ರೇರಕಿಯರಿಗೆ ಗೌರವ ಧನದಲ್ಲಿ ಹೆಚ್ಚಳ

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಸರ್ಕಾರವು ವಿಶ್ವಬ್ಯಾಂಕಿನ ನೆರವಿನೊಂದಿಗೆ ಕರ್ನಾಟಕ ರಾಜ್ಯದಲ್ಲಿ ಸಾಮಾಜಿಕ ಅರಣ್ಯ ಯೋಜನೆಯೊಂದನ್ನು 1984ರಲ್ಲಿ ಸ್ಥಾಪಿಸಿ, ಆ ಯೋಜನೆಯಡಿಯಲ್ಲಿ 1500 ಮತ್ತು ಜವಾಹರ್ ರೋಜ್ಗಾರ್ ಯೋಜನೆಯಡಿಯಲ್ಲಿ 356ಕ್ಕೂ ಹೆಚ್ಚು ಪ್ರೇರಕ: ಪ್ರೇರಕಿಯರನ್ನು ಎಲ್ಲಾ ವಿಧಿವಿಧಾನಗಳ ಮೂಲಕ ನೇಮಿಸಿಕೊಂಡಿದೆ. ಆದರೆ ಅವರಿಗೆ ಸಿಕ್ಕುವ ಗೌರವಧನದಿಂದ ಇಂದಿನ ಕಾಲದಲ್ಲಿ ಜೀವನ ನಿರ್ವಹಿಸಲು ಕಷ್ಟವಾಗಿದೆ. ಏಕೆಂದರೆ ಅತ್ಯಾವಶ್ಯಕ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಅಲ್ಲದೆ ಇವರ ಹುದ್ದೆಗಳನ್ನು ಖಾಯಂ ಸಹ ಮಾಡಿರುವುದಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಮಾನ್ಯ ಅರಣ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

† ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಹೇಳಿಕೆಯನ್ನು ನೀಡುತ್ತೇನೆ.

1. ಕರ್ನಾಟಕ ರಾಜ್ಯದಲ್ಲಿ ವಿಶ್ವಬ್ಯಾಂಕ್ ಮತ್ತು ಸಾಗರೋತ್ತರ ಅಭಿವೃದ್ಧಿ ಪ್ರಾಧಿಕಾರದ ಸಾಮಾಜಿಕ ಅರಣ್ಯ ಯೋಜನೆ 1983ರಿಂದ ಅನುಷ್ಠಾನಗೊಂಡು ಮಾರ್ಚ್ 31, 1992ಕ್ಕೆ ಮುಕ್ತಾಯಗೊಂಡಿತು. ಈ ಯೋಜನೆಯಡಿಯಲ್ಲಿ 1,468 ಜನ ಅರಣ್ಯ ಪ್ರೇರಕರು ಅಂಶಕಾಲಿಕ ಕೆಲಸಗಾರರಾಗಿ ತಿಂಗಳಿಗೆ

ನಿಗದಿತ ಗೌರವಧನ (Honararium) ಪಡೆದುಕೊಂಡು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಸಾಮಾಜಿಕ ಅರಣ್ಯ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸಾಮಾಜಿಕ ಅರಣ್ಯ ಯೋಜನೆಯ ಕೆಲಸಗಳನ್ನು 1992–93ನೇ ಸಾಲಿನಲ್ಲಿ ಮುಂದುವರೆಸಿಕೊಂಡು ಹೋಗಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಯೋಜನೆಯಡಿ ಮಂಜೂರಾಗಿರುವ ಸಿಬ್ಬಂದಿಯನ್ನು 1993–94ನೇ ಸಾಲಿನಲ್ಲಿಯೂ ಮುಂದುವರೆಸಲು ಇಲಾಖೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬರಬೇಕಾಗಿದೆ. 1993–94ರ ಆಯವ್ಯಯ ಅಂದಾಜಿನಲ್ಲಿ ಈ ಯೋಜನೆಗೆ 15.13 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

2. ಕರ್ನಾಟಕ ರಾಜ್ಯ ಅರಣ್ಯ ಪ್ರೇರಕರ ಸಂಘ (ರಿ)ದ ನೌಕರರು ಕಳೆದ ವರ್ಷ ಉಪವಾಸ ಸತ್ಯಾಗ್ರಹ ಮಾಡಿ ಕೆಲವು ಬೇಡಿಕೆಗಳನ್ನು ಸರ್ಕಾರಕ್ಕೆ ಒಪ್ಪಿಸಿದ್ದರು.

1992–93ನೇ ಸಾಲಿನ ಬಜೆಟ್ ಅಧಿವೇಶನದಲ್ಲಿ ಈ ಸಂಬಂಧ ಚರ್ಚೆ ನಡೆದು ಅಧಿವೇಶನದಲ್ಲಿ ಆಶ್ವಾಸನೆ ನೀಡಿದಂತೆ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಅರಣ್ಯ ಪ್ರೇರಕರಿಗೆ ಗೌರವಧನವನ್ನು ಸರ್ಕಾರ ಈಗಾಗಲೇ ಮಾಸಿಕ 500 ರೂಗಳಿಗೆ 1.4.92ರಿಂದಲೇ ಅನ್ವಯಿಸುವಂತೆ ಆದೇಶ ನೀಡಿದೆ. ಜವಾಹರ ರೋಜ್‌ಗಾರ್ ಯೋಜನೆಯಡಿಯಲ್ಲಿ ಕೆಲಸ ಮಾಡುತ್ತಿರುವ ಪ್ರೇರಕರ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಕ್ರಮ ತೆಗೆದುಕೊಳ್ಳುತ್ತದೆ. ಪ್ರೇರಕರ ಇತರ ಬೇಡಿಕೆಗಳ ಬಗ್ಗೆ ದಿನಾಂಕ: 30–3–92ರಂದು ಅಂದಿನ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಚರ್ಚಿಸಿ ಕೆಲವು ನಿರ್ಣಯ ತೆಗೆದುಕೊಳ್ಳಲಾಗಿದ್ದು, ಇಲಾಖೆಯು ಕ್ರಮ ತೆಗೆದುಕೊಳ್ಳುತ್ತದೆ.

3. ದಿನಾಂಕ: 17–2–93ರಿಂದ ಅರಣ್ಯ ಪ್ರೇರಕರು ಮತ್ತೆ ಮುಷ್ಕರ ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈಗ ಅವರು ಈ ಕಳಗೆ ಕಾಣಿಸಿದ ಎರಡು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದಾರೆ.

1. ಅರಣ್ಯ ಪ್ರೇರಕರನ್ನು ಖಾಯಂಗೊಳಿಸುವುದು.

2. ಜವಾಹರ ರೋಜ್‌ಗಾರ್ ಮತ್ತು ಸಾಮಾಜಿಕ ಅರಣ್ಯ ಯೋಜನೆಗಳ ಅರಣ್ಯ ಪ್ರೇರಕರ ನಡುವೆ ಇರುವ ಆರ್ಥಿಕ ಮತ್ತು ಆಡಳಿತಾತ್ಮಕ ತಾರತಮ್ಯವನ್ನು 1–4–88ರಿಂದ ಜಾರಿಗೆ ಬರುವಂತೆ ನಿವಾರಿಸುವುದು.

4. ಅರಣ್ಯ ಪ್ರೇರಕರು ಸಾಮಾಜಿಕ ಅರಣ್ಯೀಕರಣದ ಬಗ್ಗೆ ಸಾಕಷ್ಟು ಅನುಭವವನ್ನು ಪಡೆದುಕೊಂಡಿದ್ದಾರೆ ಮತ್ತು ಕೆಲವರು ಪದವೀಧರರೂ ಇದ್ದಾರೆ. ಬಹಳಷ್ಟು ಅರಣ್ಯ ಪ್ರೇರಕರಿಗೆ ವಿಸ್ತರಣಾ ಕೆಲಸದ ಬಗ್ಗೆ ತರಬೇತಿ ಕೂಡ ಕೊಡಲಾಗಿದೆ. ಇಲಾಖೆಯಲ್ಲಿ ವನಪಾಲಕರು, ವನರಕ್ಷಕರು ಹಾಗೂ ವಾಚರುಗಳ ಹುದ್ದೆಗಳನ್ನು ಭರ್ತಿ ಮಾಡುವಾಗ ಅರಣ್ಯ ಪ್ರೇರಕರಿಗೆ ಅವರ ವಿದ್ಯಾರ್ಹತೆ ಮತ್ತು ದೈಹಿಕ ಅರ್ಹತೆಗಳನ್ನು ಪರಿಗಣಿಸಿ ಸೂಕ್ತ ಹುದ್ದೆಗಳಿಗೆ ಆರಿಸಲು ಅನುಕೂಲವಾಗುವಂತೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಲು ಇಲಾಖೆಗೆ ತಿಳಿಸಲಾಗಿದೆ. ಆ ಪ್ರಸ್ತಾವನೆ ಬಂದ ಮೇಲೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಕಾನೂನು ಇಲಾಖೆ, ಯೋಜನಾ ಇಲಾಖೆ ಮತ್ತು ಹಣಕಾಸು ಇಲಾಖೆಗಳೊಡನೆ ಸಮಾಲೋಚಿಸಿ ತೀರ್ಮಾನ ತೆಗದುಕೊಳ್ಳಲಾಗುವುದು. ಜವಾಹರ್ ರೋಜ್‌ಗಾರ್ ಯೋಜನೆಯದಿಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಕುಂದು ಕೊರತೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗಮನಕ್ಕೆ ತಂದು ಎರಡು ಇಲಾಖೆಗಳ ನೌಕರರಿಗೆ ಸಮನಾಗಿ ನೋಡಿಕೊಳ್ಳಲು ಪ್ರಯತ್ನಿಸಲಾಗುವುದು.

4. ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಗ್ರಾಮಕ್ಕೆ ಶುದ್ಧವಾದ ಕುಡಿಯುವ ನೀರು ಸರಬರಾಜು

ಶ್ರೀ ಡಿ. ಆರ್. ಪಾಟೀಲ್:– "ಧಾರವಾಡ ಜಿಲ್ಲೆ ಗದಗ ತಾಲ್ಲೂಕಿನ ತಿಮ್ಮಾಪುರ ಗ್ರಾಮಕ್ಕೆ ಕುಡಿಯುವ ನೀರು ಪೂರೈಕೆಯ ವಿಷಯ ಕಳೆದ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ. ಈ ವ್ಯವಸ್ಥೆ ಸುಧಾರಿಸಲು ಕೊಳವೆ ಭಾವಿಗಳನ್ನು ಹಾಕಲಾಗಿತ್ತು. ಆದರೆ, ನಂತರ ಈ ಕುಡಿಯುವ ನೀರೂ ಸಹ ಫ್ಲೋರೈಡ್ ಮಿಶ್ರಿತ ನೀರು ಎಂದು ಗೊತ್ತಾಗಿದೆ. ತಿಮ್ಮಾಪುರ ಗ್ರಾಮದ ನಾಗರೀಕರಿಗೆ ಪ್ರತಿನಿತ್ಯ ಫ್ಲೋರೈಡ್ ಇಲ್ಲದ ಶುದ್ಧ ಹಾಗೂ ಸಮರ್ಪಕ ಕುಡಿಯುವ ನೀರು ಪೂರೈಕೆ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಂದ ಹೇಳಿಕೆ ಬಯಸುತ್ತೇನೆ."

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):– ಮಾನ್ಯ ಅಧ್ಯಕ್ಷರೇ, ನೀರಿನಲ್ಲಿ ಫ್ಲೋರೈಡ್ ಇರುವುದು ನಮಗೆ ಗೊತ್ತಿದೆ. ಲಕ್ಕುಂಡಿ ಹಳ್ಳಿಯು ತಿಮ್ಮಾಪುರದಿಂದ 12 ಕಿ.ಮೀ. ದೂರದಲ್ಲಿದೆ. ಅಲ್ಲಿ ನೀರು ಹುಡುಕುತ್ತಾ ಇದ್ದಾರೆ. ಅಲ್ಲಿ ಪೋರ್ಟೆಬಲ್ ವಾಟರ್ ಸಿಕ್ಕರೆ 4 ಕಿ.ಮೀ. ರೈಸ್ ಮಾಡಿ, ನೀರಿನ ಪೂರೈಕೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸವನ್ನು ಆರು ತಿಂಗಳಲ್ಲಿ ಪೂರೈಸುತ್ತೇವೆ.

5. ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು ಸುವ್ಯವಸ್ಥಿತವಾಗಿ ಮುಂದುವರಿಯುವ ಬಗ್ಗೆ–

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು ಸ್ಥಾಪನೆಯಾಗಿ ಸುಮಾರು 22 ವರ್ಷಗಳಾಯಿತು. ಅದು ಈವರೆಗೂ ಲಾಭ ಗಳಿಸಿಲ್ಲ. ಈ ನಿಗಮಕ್ಕೆ ನಾನಾ ಅಭಿವೃದ್ಧಿಗಳಿಗೆ ಕೇಂದ್ರ ಮತ್ತು ರಾಜ್ಯ ಸರಕಾರ ಹಣ ಒದಗಿಸಿದೆ. ಅದು ಎಷ್ಟೆಂಬುದನ್ನು ತಿಳಿಸಬೇಕು. ಈಗ ನಿಗಮದ ಪರಿಸ್ಥಿತಿ ಏನೂ ಚೆನ್ನಾಗಿಲ್ಲ. ನಿಗಮ ಮುಂದುವರಿಯಲು ಸಾಧ್ಯವಿಲ್ಲವೆ ? ಹಾಗಾದಲ್ಲಿ ಮುಂದಿನ ವ್ಯವಸ್ಥೆ ಏನು ? ಅಲ್ಲಿರುವ ನೌಕರರ ಗತಿ ಏನು ? ಬದಲಿ ವ್ಯವಸ್ಥೆ ಏನಾದರೂ ಮಾಡಲಾಗುವುದೆ ? ಈ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳೇನು ? ಅದರ ಕೂಲಂಕುಶ ತನಿಖೆ ಮಾಡಲಾಗುವುದೆ ? ಮೀನುಗಾರರ ಹಿತಕ್ಕಾಗಿ ಸ್ಥಾಪನೆಗೊಂಡ ಈ ನಿಗಮ ಸುವ್ಯವಸ್ಥಿತವಾಗಿ ಮುಂದುವರಿಯಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸುವುದು ಅವಶ್ಯಕವಾಗಿರುತ್ತದೆ. ಈ ಕುರಿತು ಮೀನುಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಸಂತ ಪಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರುಗಳ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು ಇದು 1971ರಂದು ಭಾರತ ಸರ್ಕಾರದ ಕಂಪನಿಗಳ ಕಾಯ್ದೆಯನ್ವಯ ನೋಂದಣಿಯಾಯಿತು.

ಈ ನಿಗಮದ, ಅಧಿಕೃತ ಷೇರು ಬಂಡವಾಳ ರೂ. 3.00 ಕೋಟಿ. ಈ ನಿಗಮಕ್ಕೆ ಸರ್ಕಾರವು ಇದುವರೆಗೆ ಒಂದು ಕೋಟಿ ಹದಿನೈದು ಲಕ್ಷ ರೂಪಾಯಿಗಳನ್ನು ಷೇರು ಬಂಡವಾಳವಾಗಿ ಕೊಟ್ಟಿದೆ. ಮಿಕ್ಕ ಒಂದು ಕೋಟಿ ಹತ್ತು ಲಕ್ಷ ರೂಪಾಯಿಗಳನ್ನು ಮೀನುಗಾರಿಕೆ ಇಲಾಖೆ ನಿರ್ಮಿಸಿದ ಸ್ಥಿರಾಸ್ತಿ ರೂಪದಲ್ಲಿ ವರ್ಗಾಯಿಸಲಾಗಿದೆ. ಭಾರತ ಸರ್ಕಾರವು ಈ ನಿಗಮಕ್ಕೆ ರೂ. 64.50 ಲಕ್ಷಗಳನ್ನು ಕೊಟ್ಟಿದೆ. ಈ ನಿಗಮದ ಹಣಕಾಸಿನ ಪರಿಸ್ಥಿತಿ ಸರಿಯಾಗಿಲ್ಲ. ಇದಕ್ಕೆ ಕಾರಣಗಳೇನೆಂದರೆ – ಹಳೆಯದಾದ ಯಂತ್ರೋಪಕರಣಗಳು, ಕಡಿಮೆ ಉತ್ಪಾದನೆ, ಹೆಚ್ಚಿನ ನಿರ್ವಹಣಾ ಮತ್ತು ಸಿಬ್ಬಂದಿ

ವೆಚ್ಚ. ಮೀನು ಮಾರಾಟದಲ್ಲಿ ಖಾಸಗಿಯವರಿಂದ ಹೆಚ್ಚಿನ ಸ್ಪರ್ಧೆ. ಕರಾವಳಿ ಮೀನು ಉತ್ಪಾದನೆಯಲ್ಲಿ ಏರುಪೇರು.

ಈ ನಿಗಮದ ಮಾಸಿಕ ಆದಾಯ ರೂ. 11.00 ಲಕ್ಷ. ಆದರೆ ಮಾಸಿಕ ಖರ್ಚು ರೂ. 17.00 ಲಕ್ಷ. ಈ ಖರ್ಚನ್ನು ಕಡಿಮೆ ಮಾಡಲು, ಆಡಳಿತ ಮಂಡಳಿಯು ಈಗಾಗಲೇ ತದಡಿ ಮತ್ತು ಕುಳಾಯಿ ಮಂಜುಗಡ್ಡೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಕ್ರಮವಾಗಿ ರೂ. 16.00 ಲಕ್ಷ ಮತ್ತು ರೂ. 12.50 ಲಕ್ಷಕ್ಕೆ ಗುತ್ತಿಗೆ ರೂಪದಲ್ಲಿ ಕೊಟ್ಟಿದೆ. ನಿಗಮವು ಉಲ್ಲಾಳ ಮಂಜುಗಡ್ಡೆ ಕಾರ್ಖಾನೆಯನ್ನೂ ಕೂಡ ರೂ. 4.02 ಲಕ್ಷಗಳಿಗೆ ಗುತ್ತಿಗೆಗೆ ಕೊಡಲು ನಿರ್ಧರಿಸಿದೆ. ಈ ನಿಗಮದಲ್ಲಿ ಒಟ್ಟು 325 ಖಾಯಂ ಮತ್ತು ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ. ಇವರನ್ನು ಈ ನಿಗಮದಲ್ಲಿ ಮುಂದುವರೆಸಲಾಗುವುದು.

ಕರ್ನಾಟಕ ರಾಜ್ಯ ಮಹಾಲೇಖಪಾಲರು, ಬೆಂಗಳೂರು ಇವರು ಈ ನಿಗಮದ ಲೆಕ್ಕ ಪರಿಶೋಧನಾ ಕಾರ್ಯವನ್ನು 1985ರಿಂದ 1989ರ ತನಕ ಮಾಡುವಾಗ ಕೆಲವು ಅಕ್ರಮಗಳು ನಡೆದಿರುವುದಾಗಿ ತಿಳಿಸಿದ್ದಾರೆ. ಇವುಗಳನ್ನು ಸರ್ಕಾರವು ಪರಿಶೀಲಿಸಿ, ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಈ ನಿಗಮವು ಸುಸೂತ್ರವಾಗಿ ನಡೆಯಬೇಕೆಂದು ಮಾನ್ಯ ಸದಸ್ಯರು ನೀಡಿರುವ ಸಲಹೆಯನ್ನು ಒಪ್ಪಿ ಇದರ ಬಗ್ಗೆ ಸೂಕ್ತ ಯೋಜನೆಯನ್ನು ಹಾಕಿಕೊಳ್ಳಲಾಗುವುದು.

6. ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿಗೆ ನೀರು ಸರಬರಾಜಿಗಾಗಿ ಹೆಚ್ಚುವರಿ ಅನುದಾನ ಬಿಡುಗಡೆ

ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಚಿಕ್ಕಮಗಳೂರು ಜಿಲ್ಲಾ ಪರಿಷತ್ತಿನಲ್ಲಿ 1992–93ರ ಸಾಲಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಮತ್ತು ತ್ವರಿತ ನೀರು ಸರಬರಾಜು ಯೋಜನೆಯಲ್ಲಿ ಲೆಕ್ಕ ಶೀರ್ಷಿಕೆ ಸಂಖ್ಯೆ 2215 ಒಟ್ಟು 50 ಲಕ್ಷ ರೂಪಾಯಿಗಳ ಹೆಚ್ಚುವರಿ ಅನುದಾನವು ಜಿಲ್ಲಾ ಪರಿಷತ್ (ಚಿಕ್ಕಮಗಳೂರಿಗೆ) ಅಗತ್ಯವಿದ್ದು ಕೂಡಲೇ ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

(ಶ್ರೀ ಬಿ. ಎಂ. ಇದಿನಬ್ಬರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–

ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಗೆ ಹಣವನ್ನು ಬಿಡುಗಡೆ ಮಾಡುವುದರಲ್ಲಿ ಸ್ವಲ್ಪ ತೊಂದರೆ ಉಂಟಾಗಿದ್ದು ನಿಜ. 1992–93ನೇ ಸಾಲಿನಲ್ಲಿ ರೂ. 99 ಲಕ್ಷ ಅಲೋಕೇಷನ್. ಅದರಲ್ಲಿ 66 ಲಕ್ಷ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಇನ್ನು ರೂ. 33 ಲಕ್ಷ ಬಿಡುಗಡೆಯಾಗಬೇಕಾಗಿದೆ. ಇದಕ್ಕೆ ಮುಖ್ಯ ಕಾರಣವೇನೆಂದರೆ ಗೌವರ್ನಮೆಂಟ್ ಆಫ್ ಇಂಡಿಯಾದಿಂದ 31 ಕೋಟಿ ಏನು ಇದೆ. ಅದರಲ್ಲಿ 22 ಕೋಟಿ ರೂಪಾಯಿಗಳು ಬಂದಿದೆ. ಆದ್ದರಿಂದ ಈ ಜಿಲ್ಲೆಗೆ ತೊಂದರೆಯಾಗಿದೆ. ಈ ಕಾರ್ಯಕ್ರಮಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

7. ವಿದೇಶಗಳಲ್ಲಿ ಉದ್ಯೋಗ ದೊರಕಿಸಿಕೊಂಡ ರಾಜ್ಯ ಸರ್ಕಾರದ ನೌಕರರಿಗೆ ವೇತನ ಸಹಿತ ರಜೆ ಮಂಜೂರು

ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್):– ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಕಛೇರಿಗಳಲ್ಲಿ

ಖಾಯಂ ಹುದ್ದೆಯಲ್ಲಿರುವ ಎಷ್ಟೋ ಮಂದಿ ನೌಕರರು ವಿದೇಶಗಳಲ್ಲಿ ಉದ್ಯೋಗಾವಕಾಶ ಪಡೆಯುವಲ್ಲಿ ಆಸಕ್ತರಾಗಿದ್ದು ರಜೆಯ ಸೌಲಭ್ಯ ಮತ್ತು ಸರಕಾರದ ಸೂಕ್ತ ಉತ್ತೇಜನವಿಲ್ಲದೆ ಅದನ್ನು ಗಳಿಸಲಾರದವರಾಗಿರುತ್ತಾರೆ. ನಮ್ಮ ನೆರೆಯ ರಾಜ್ಯವಾದ ಕೇರಳದಲ್ಲಿ ಹೀಗೆ ವಿದೇಶಗಳಿಗೆ ಹೆಚ್ಚು ವೇತನ ತರುವ ಉದ್ಯೋಗಕ್ಕೆ ಹೋಗಬಯಸುವವರಿಗೆ ಐದು ವರುಷಗಳ ವೇತನರಹಿತ ರಜೆ ಮಂಜೂರು ಮಾಡಲಾಗುತ್ತಿದ್ದು ಅವನ್ನು ಹತ್ತು ವರುಷಗಳಿಗೆ ವಿಸ್ತರಿಸಲು ಯೋಚಿಸಲಾಗುತ್ತಿದೆ ಎಂದು ತಿಳಿದುಬಂದಿದೆ. ವಿದೇಶಗಳಲ್ಲಿ ಹೆಚ್ಚು ವೇತನದ ಹುದ್ದೆ ಗಳಿಸಿದ ನಂತರ ರಾಜ್ಯ ಸರ್ಕಾರದ ನೌಕರಿಗೆ ಈ ತರದ ನೌಕರರು ಮರಳುವ ನಿದರ್ಶನಗಳು ಕಡಿಮೆಯಾದುದರಿಂದ ರಾಜ್ಯದ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಲಭ್ಯವಾಗುವುದು ಮಾತ್ರವಲ್ಲದೆ ವಿದೇಶಗಳಲ್ಲಿ ನೌಕರಿ ಪಡೆದವರಿಂದ ರಾಜ್ಯಕ್ಕೆ ವಿದೇಶಿ ಶೇವಣಿಯೂ ಹರಿದು ಬರುತ್ತದೆ. ಆ ಪ್ರಯುಕ್ತ ನಮ್ಮ ಕರ್ನಾಟಕ ರಾಜ್ಯ ಸರಕಾರವೂ ವಿದೇಶಗಳಲ್ಲಿ ಉದ್ಯೋಗಾವಕಾಶ ದೊರಕಿಸಿಕೊಂಡ ಮತ್ತು ದೊರಕಿಸಿಕೊಳ್ಳುವ ರಾಜ್ಯ ಸರ್ಕಾರಿ ನೌಕರರಿಗೆ ಐದು ವರ್ಷಗಳ ವೇತನ ರಹಿತ ರಜೆ ಮಂಜೂರು ಮಾಡುವ ಕ್ರಮವನ್ನು ರೂಪಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಹೇಳುತ್ತೇನೆ. ಈ ವಿಷಯ ಪರಿಶೀಲನೆ ಮಾಡಲು ಸ್ವಲ್ಪ ಕಾಲಾವಕಾಶ ಬೇಕು. ಇದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಛೇರ್ಮನ್:- ಈಗ ಶ್ರೀ ವಾಟಾಳ್ ನಾಗರಾಜ್ ಅವರು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ:- ಸಭಾಧ್ಯಕ್ಷರೇ, ಶ್ರೀ ವಾಟಾಳ್ ನಾಗರಾಜ್‌ರವರ ಭಾಷಣವನ್ನು ಕುಳಿತು ಕೇಳೋಣ ಅಂದರೆ ಕೋರಂ ಇಲ್ಲ. ನಿಯಮಾವಳಿ ಪ್ರಕಾರ ಮಿನಿಮಮ್ ಕೋರಂ ಬೇಕು. ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕೋರಂ ಬರಲಿ. ಒಂದು ಘಂಟೆ ಕಾಲ ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಸಭಾಧ್ಯಕ್ಷರೇ, ಸಭೆಯನ್ನು ಅರ್ಧ ಘಂಟೆ ಕಾಲ ಮುಂದಕ್ಕೆ ಹಾಕಿ.

ಛೇರ್ಮನ್:- ಸಭೆಯನ್ನು ಅರ್ಧ ಘಂಟೆ ಕಾಲ ಮುಂದೂಡಲಾಗಿದೆ.

(ಸದನವು ಪುನಃ 3.30 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ರಾಜ್ಯಪಾಲರ ಭಾಷಣಕ್ಕ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರಿಗೆ ವಂದನೆಯನ್ನು ಸಲ್ಲಿಸತಕ್ಕ ಭಾಷಣದ ಬಗ್ಗೆ ನಾನು ನಿನ್ನೆ ಮಾತನಾಡುವಾಗ ರಾಜ್ಯಾಂಗದ ಸಮಗ್ರ ಚಿಂತನೆಯನ್ನು ಈ ಸದನದ ಗಮನಕ್ಕೆ ತಂದೆ. ಈ ಒಂದು ರಾಜ್ಯಪಾಲರ ಭಾಷಣ, ಈ ವ್ಯವಸ್ಥೆ ಸಮಗ್ರವಾಗಿ ದೇಶದಲ್ಲಿ ಬದಲಾವಣೆ ಆಗಬೇಕು. ಈ ಬಗ್ಗೆ ಸಮಗ್ರ ಚಿಂತನೆ ಆರಂಭ ಆಗಬೇಕು. ನಾನು ಇಲ್ಲಿ ಏನು ಭಾಷಣವನ್ನು ಮಾಡಿದ್ದೇನೆ, ಈ ಬಗ್ಗೆ ರಾಷ್ಟ್ರಪತಿಯವರನ್ನೂ ಸಹ ಭೇಟಿ ಮಾಡಿ ಈ ಒಂದು ವಿಚಾರ ಇಡೀ ದೇಶಾದ್ಯಂತ ಚಿಂತನೆ ನಡೆಯುವ ರೀತಿ ಮಾಡುವುದಕ್ಕೆ ರಾಷ್ಟ್ರಪತಿಯವರು,

ಪ್ರಧಾನ ಮಂತ್ರಿಯವರು, ದೇಶದ ವಿವಿಧ ಪಕ್ಷಗಳ ಮುಖಂಡರುಗಳನ್ನು ಭೇಟಿ ಮಾಡಿ ಮಾಡಿ, ರಾಜ್ಯಾಂಗದ ತಿದ್ದುಪಡಿ ಆಗಲೇಬೇಕು, ಇಲ್ಲದೆ ಹೋದರೆ ನಾವು ಪ್ರಭಾಪ್ರಭುತ್ವ ಎನ್ನತಕ್ಕಂತಹ ಒಂದು ಮಹತ್ತರವಾದಂತಹ ಬುನಾದಿಯ ಮೇಲೆ ಮತ್ತೆ ರಾಜ್ಯಪಾಲರು ಎನ್ನತಕ್ಕ ಹೆಸರುಗಳು, ರಾಜಭವನ ಎನ್ನತಕ್ಕಂತಹ ಹೆಸರುಗಳು ಮತ್ತು ರಾಜಶಾಹಿಯ ಪದ್ಧತಿಯ ಈ ವ್ಯವಸ್ಥೆ ಏನು ಇದೆ ಈ ಒಂದು ವ್ಯಾಮೋಹಕ್ಕೆ ನಾವು ಹೋಗುವುದಾದರೆ ನನಗಂತೂ ಇದು ಸರಿ ಕಾಣಲಿಲ್ಲ. ನಾನು ಅವತ್ತು ಮಾನ್ಯ ರಾಜ್ಯಪಾಲರನ್ನು , ಅವರ ಭಾಷಣವನ್ನು ವಿರೋಧ ಮಾಡಿದೆ. ಆ ವ್ಯವಸ್ಥೆಯನ್ನು ವಿರೋಧ ಮಾಡಿದೆ. ಆದರೆ ವೈಯಕ್ತಿಕವಾಗಿ ನನಗೆ ರಾಜ್ಯಪಾಲರ ಬಗ್ಗೆ ಬಹಳ ಅಪಾರವಾದಂತಹ ಗೌರವವಿದೆ. ನಾನು ಇದನ್ನು ತಳ್ಳಿ ಹಾಕುವಂತಿಲ್ಲ. ಅವರು ಒಳ್ಳೆಯ ವ್ಯಕ್ತಿಗಳು. ಈ ಒಂದು ವ್ಯವಸ್ಥೆಗೆ ಅವರನ್ನು ದೂಷಣ ಮಾಡತಕ್ಕಂಥದ್ದಲ್ಲ. ಆ ಭಾಷಣವನ್ನು ಸರ್ಕಾರ ತಯಾರು ಮಾಡಿ ಸಚಿವ ಸಂಪುಟ ಒಪ್ಪಿ, ನಂತರ ಅವರನ್ನು ಓದುವುದಕ್ಕೆ ಕರಯತಕ್ಕಂಥದ್ದು ಇದೆ.

ಶ್ರೀ ಮಲ್ಲಾರಿ ಗೌಡ್ ಎಸ್. ಪಾಟೀಲ್:- ಪಾಟಾಳ್ ನಾಗರಾಜ್‌ರವರೇ, ಒಂದು ನಿಮಿಷ ಸನ್ಮಾನ್ಯ ಅಧ್ಯಕ್ಷರೇ, ನಾನು ಆಡಳಿತ ಪಕ್ಷದ ಒಬ್ಬ ಸದಸ್ಯ, ತಾವು ಅಧ್ಯಕ್ಷರು ಇದ್ದೀರಿ, ಇಲ್ಲಿ ಪಾರ್ಲಿಮೆಂಟ್ ಅಫೇರ್ಸ್ ಮಿನಿಸ್ಟರ್ ಇದ್ದಾರೆ. ನಾನು ಒಂದು ಪ್ರಶ್ನೆ ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಸದನದಲ್ಲಿ ಎಷ್ಟು ಜನ ಮಂತ್ರಿಗಳು ಇದ್ದಾರೆ ? ಅವರಿಗೆ ಇಲ್ಲಿ ಅಸೆಂಬ್ಲಿಯಲ್ಲಿ ಇರುವುದಕ್ಕೆ ತೊಂದರೆ ಏನು ? ಈ ಸದನ ನಡೆಯುವ ಕಾಲಕ್ಕೆ ಅವರು ಅವರ ಛೇಂಬರ್‌ನಲ್ಲಿ ಏಕೆ ಇರಬೇಕು ? ಏಕೆಂದರೆ ಇದು ಬಹಳ ದುರ್ದೈವದ ಸಂಗತಿ. ನಮ್ಮಂಥವರಿಗೆ ಮುಂಜಾನೆಯಿಂದ ಸಾಯಂಕಾಲದವರೆಗೆ ಕೂಡುವವರಿಗೆ ತಾವು ಏನಾದರೂ ಹೆಚ್ಚಿನ ಅವಕಾಶ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ. ಏಕೆಂದರೆ ನಮಗೆ 100 ರೂಪಾಯಿ ಕೊಡುವುದರಿಂದ ನಾವು ಇರಲೇಬೇಕು. ಬೇರೆ ಸಮಯದಲ್ಲಿ ಕೋರಂ ಇರುವುದಿಲ್ಲ ಎಂದು ಸಭೆಯನ್ನು ಮುಂದಕ್ಕೆ ಹಾಕುತ್ತೀರಿ. ನಾವು ಮುಂಜಾನೆ ಬಂದವರು ಸಾಯಂಕಾಲದವರೆಗೆ ಇರಲೇಬೇಕು. ಹಾಗಾದರೆ ಅವರು ಮಂತ್ರಿಗಳಾಗಿದ್ದು ಏಕೆ ? ಇದು ನಾನು ಕೇಳುವ ಪ್ರಶ್ನೆ. ಅವರು ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದ್ದಾರೆ. ಬೇರೆ ಮಂತ್ರಿಗಳು ಎಲ್ಲಿ ಹೋಗಿದ್ದಾರೆ, ಎಲ್ಲಿದ್ದಾರೆ, ಅವರು ಇಲ್ಲಿಗೆ ಏಕೆ ಬರುತ್ತಿಲ್ಲ ? ಇದನ್ನು ದಯಮಾಡಿ ತಾವು ಕೇಳಬೇಕು. ಇದು ತಮಗೂ ಕೂಡ ಅಗೌರವ ತರುವಂತಹ ಮಾತಾಗಿದೆ. ಆದ್ದರಿಂದ ತಾವು ಅದಕ್ಕೆ ಏನಾದರೂ ಒಂದು ವಿಶೇಷವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವೈಯಕ್ತಿಕವಾಗಿ ವಿನಂತಿ ಮಾಡುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದಲ್ಲಿ 39 ಜನ ಮಂತ್ರಿಗಳು ಇದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ:- ಯಾವ ಯಾವ ಸಚಿವರು ಯಾವ ಯಾವ ಸದನದಲ್ಲಿ ಇರಬೇಕು ಎಂದು ಕಳುಹಿಸಿದ ವ್ಹಿಪ್ ಪಟ್ಟಿಯ ಪ್ರಕಾರ ಅವರು ಬರಬೇಕಾಗಿತ್ತು. ಅದು ನ್ಯಾಯಸಮ್ಮತ. ಸಚೇತಕರಾದವರು ಈ ವಿಷಯದಲ್ಲಿ ಹೆಚ್ಚು ಗಮನಕೊಟ್ಟು ಸರಿಯಾದ ಚಾಟಿಯನ್ನು ಉಪಯೋಗಿಸಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ:- ಮಾನ್ಯ ಸದಸ್ಯರಾದ ಮಲ್ಲಾರಿಗೌಡ ಪಾಟೀಲರು ಹೇಳಿದ ಮಾತನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ:- ನಾನು ಇಂದು ಆಡಳಿತ ಪಕ್ಷದ ಎಲ್ಲಾ ಸದಸ್ಯರನ್ನು ಅಭಿನಂದಿಸುತ್ತೇನೆ, ಸ್ವಾಮಿ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:- ಈ ಒಂದು ಗೌರವಾನ್ವಿತ ಸಭೆಯ ಕಾರ್ಯಕಲಾಪಗಳನ್ನು ರಾಜ್ಯದ

ನಾಲ್ಕೂವರೆ ಕೋಟಿ ಜನ ನಿರೀಕ್ಷಿಸುತ್ತಿದ್ದಾರೆ. ನಿನ್ನೆಯ ದಿವಸ ದಿನಪತ್ರಿಕೆಗಳಲ್ಲಿ ವಿಧಾನಸೌಧ ಬಿಕೋ ಅನಿಸುತ್ತಿದೆ ಎನ್ನತಕ್ಕ ಮಾತು ಬಂದಿದ್ದನ್ನು ನಮ್ಮ ಜನ ಓದದೇ ಏನಿಲ್ಲ. ಜವಾಬ್ದಾರಿ ಸ್ಥಾನದಲ್ಲಿದ್ದ ಈ ಸಭೆ ನಡೆಯುತ್ತಿದ್ದಾಗ ನಲವತ್ತು ಮಂತ್ರಿಗಳು ಇದ್ದಾಗ್ಯೂ ಕೂಡ ಇವೊತ್ತು ಸಭೆಗೆ ಬಂದು ಹಾಜರಾಗುವುದಿಲ್ಲ ಎಂದರೆ ಅಥವಾ ಕಾರ್ಯಕಲಾಪಗಳಲ್ಲಿ ಸಹಕರಿಸುವುದಿಲ್ಲ ಎಂದಾಗ ದೇಶದ ಜನ ನಮ್ಮನ್ನು ಖಂಡಿತ ಕ್ಷಮಿಸುವುದಿಲ್ಲ.

ಇದು ಯಾವುದೇ ಪಕ್ಷದ ವಿಚಾರವಲ್ಲ. ಇದು ಗೌರವಾನ್ವಿತ ಸಭೆಯ ಕಾರ್ಯಕಲಾಪಗಳ ಪ್ರಶ್ನೆ. ಸರಕಾರ ನಡೆಯತಕ್ಕಂಥ ಪ್ರಶ್ನೆ. ಈ ಹಿನ್ನಲೆಯಲ್ಲಿ ತಾವು ನಿರ್ದಿಷ್ಟವಾದ ಕ್ರಮ ತೆಗೆದುಕೂಂಡು ಸರಕಾರಕ್ಕ ಸೂಚನೆ ಕೊಡಬೇಕು ಇಲ್ಲದಿದ್ದರೆ ತಾವು ಸದನವನ್ನು ಸ್ವಲ್ಪ ಕಾಲ ಮುಂದೂಡಿ, ಕೋರಂಗಾಗಿ ನಾವುಗಳು ಸದಸ್ಯರು ಯಾರಿದ್ದೇವೆ ಅವರಿಗಾದರೂ ಒಂದೆರಡು ದಿವಸಗಳ ರಜೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಈ ಸನ್ನಿವೇಶ ಬಹಳ ವಿಚಿತ್ರವಾಗಿದೆ. ತಮ್ಮ ಮೂಲಕವಾಗಿ ನನ್ನ ಸಲಹೆ ಏನೆಂದರೆ, ಇನ್ನು ಮೇಲೆ ಇವರನ್ನು ವಾರದ ಮಂತ್ರಿಗಳಾಗಿ ಮಾಡಿಬಿಡಿ. ಒಂದು ವಾರಕ್ಕೆ ಇಂತಿಂಥ ಐದು ಜನರು ಮಂತ್ರಿಗಳು ಇಲ್ಲಿ ಬಂದು ಕುಳಿತುಕೊಳ್ಳುವ ಹಾಗೆ ಮಾಡಿದರೆ ಒಳ್ಳೆಯದು. ನಾವು ಇಲ್ಲಿ ಹೇಳುತ್ತಾ ಇರುವುದು ಅರಣ್ಯರೋದನವಾಗಿ ಬಿಟ್ಟಿದೆ. ನನಗಂತೂ ಬಹಳ ಸಂತೋಷವಾಗಿದೆ. ಆಡಳಿತ ಪಕ್ಷದ ನಮ್ಮ ಮಾನ್ಯ ಸದಸ್ಯರುಗಳು ಹಿರಿಯ ಸದಸ್ಯರಾದ ಮಲ್ಲಾರಿಗೌಡರು, ಪುಟ್ಟಸ್ವಾಮಿಗೌಡರು, ಇದಿನಬ್ಬರವರು ಮುಂತಾಗಿ ನಿಮ್ಮ ಕಾರ್ಯವೈಖರಿಯ ಬಗ್ಗೆ ಹೇಳಿದ್ದಾರೆ. ನಿಮ್ಮ ಮಂತ್ರಿಗಳು ಸರಿಯಾಗಿ ಕೆಲಸ ಮಾಡದೆ ಹೋದರೆ ಏನು ಮಾಡಬೇಕಾಗುತ್ತದೆ ಎಂಬುದನ್ನು ಯೋಚನೆ ಮಾಡಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ಯಾವ ಮಂತ್ರಿಗಳು ತಮ್ಮ ಛೇಂಬರ್‌ನಲ್ಲಿ ಇದ್ದಾರೆ, ಯಾರು ಟೂರ್‌ಗೆ ಹೋಗಿದ್ದಾರೆ, ಎಂಬಿತ್ಯಾದಿ ವಿವರಗಳನ್ನು ನಮಗೆ ಕೊಡಬೇಕು, ಇಲ್ಲವಾದರೆ ನಮಗೂ ರಜೆ ಕೊಟ್ಟರೆ ನಾವು ಕೂಡ ಊರಿಗೆ ಹೋಗುತ್ತೇವೆ. ಈ ತರಹದ ವರ್ತನೆ ಏಕೆ? ನಾನು ಕೂಡ ಸಚೇತಕನಾಗಿ ಕೆಲಸ ಮಾಡಿದ್ದೇನೆ, ವಿರೋಧ ಪಕ್ಷದಲ್ಲಿ ಆರು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ, ರೂಲಿಂಗ್ ಪಾರ್ಟಿಯಲ್ಲಿ ಒಂದು ವರ್ಷ ಕೆಲಸ ಮಾಡಿದ್ದೇನೆ, ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಹಾಗಾದರೆ ಇವರಿಗೆ ಮಾತ್ರ ಯಾರೂ ಹೇಳುವವರು ಕೇಳುವವರು ಇಲ್ಲವೇ? 175 ಜನ ರೂಲಿಂಗ್ ಪಾರ್ಟಿಯವರು ಇದ್ದು, ಇವರು 20 ಜನ ಮಂತ್ರಿಗಳೂ ಕೂಡ ಇಲ್ಲಿರುವುದಿಲ್ಲ ಅಂದರೆ, ಅವರುಗಳು ಮಂತ್ರಿಯಾಗಿ ಏಕೆ ಇರಬೇಕು?

ಶ್ರೀ ಬಿ. ಎಂ. ಇದಿನಬ್ಬ:- ಮಾನ್ಯ ಎಂ. ಎಸ್. ಪಾಟೀಲರು ಹೇಳಿದ ಹಾಗೆ, ಇಲ್ಲಿ ನಾವೇ 10 + 15 ಜನರು ಇಲ್ಲಿ ಕುಳಿತಿರುತ್ತೇವೆ. ನಾವುಗಳು ಇಲ್ಲಿ ಬೆಳಗ್ಗಿನಿಂದ ಸಂಜೆಯವರೆಗೆ ಕಾವಲುಗಾರರ ಹಾಗೆ ಇಲ್ಲಿ ಕುಳಿತುಕೊಳ್ಳುವುದು, ಆದರೆ ಮಂತ್ರಿಗಳು ಯಾರೂ ಇಲ್ಲಿ ಕುಳಿತುಕೊಳ್ಳುವುದೇ ಇಲ್ಲ.

ಶ್ರೀ ಎ. ಕೆ. ಅನಂತಕೃಷ್ಣ:- ಕ್ಯಾಪ್ಟಿವ್ ಕೋರಂ ಮೆಂಬರ್ಸ್ ಎಂದು ಹೇಳಬೇಕಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ:- ಕೆಲಸ ಇಲ್ಲದವರು ಮಾತ್ರ ಇಲ್ಲಿಗೆ ಬರುತ್ತಾರೆ ಎಂಬ ಭಾವನೆ ಬರುವ ಹಾಗೆ ಮಾಡಬೇಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಈ ವಿಷಯನ್ನು ಬಹಳ ಸಾರಿ ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ತಂದಿದ್ದಾರೆ. ಇದು ಅಂಥ ಪ್ರಶಂಸನೀಯವಾದಂಥ

ಪರಿಸ್ಥಿತಿಯಲ್ಲ ಎಂಬುದು ನಮಗೂ ಗೊತ್ತಿದೆ. ಇದನ್ನು ಪರಿಹಾರ ಮಾಡುವುದಕ್ಕೆ ನಾವು ಸರ್ವಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಪರಿಹಾರ ಮಾಡುತ್ತೇವೆ ಎಂಬುದು ಉತ್ತರವಲ್ಲ. ಇಲ್ಲಿ ಯಾರು ಮಂತ್ರಿಗಳು ಇಲ್ಲ, ಅದಕ್ಕೆ ಉತ್ತರ ಕೊಡಿ...

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯ:– ಅವರು ಕೇಳುತ್ತಾ ಇರುವುದು ಇಷ್ಟೇನೆ. ಈ ಸರಕಾರಕ್ಕೆ ಪಂಚೇಂದ್ರಿಯಗಳು ಇದ್ದರೆ, ಕೆಲಸ ಮಾಡಲಿ, ಇಲ್ಲದಿದ್ದರೆ ವಾರದ ಮಂತ್ರಿಗಳನ್ನು ನೇಮಕ ಮಾಡಲಿ ಎಂದು ಕೇಳುತ್ತಿದ್ದಾರೆ, ಅದಕ್ಕೆ ತಾವು ಉತ್ತರ ಕೊಡಿ.

ಶ್ರೀ ವೈ. ಕೆ. ರಾಮಯ್ಯ:– ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ಎಲ್ಲಾ ಸಂದರ್ಭಗಳಲ್ಲಿಯೂ ತಮ್ಮ ಹುಸಿನಗೆಯನ್ನು ಸೂಸುತ್ತಾ ಇರುತ್ತಾರೆ. ಅವರು ತಮ್ಮ ಮುಖವನ್ನು ಗಂಟು ಹಾಕಿಕೊಳ್ಳುವುದಿಲ್ಲ. ಕೋಪ ಮಾಡಿಕೊಳ್ಳುವುದಿಲ್ಲ. ಇದು ಬಹಳ ಒಳ್ಳೆಯಗುಣ ಎಂದು ನಾನು ಭಾವಿಸುವುದಿಲ್ಲ. ಯಾವ ಸಂದರ್ಭದಲ್ಲಿ ಯಾವುದನ್ನು ವ್ಯಕ್ತಪಡಿಸಬೇಕೊ ಅದನ್ನು ವ್ಯಕ್ತಪಡಿಸಬೇಕಾಗುತ್ತದೆ. ಗಂಭೀರತೆ ಕೋಪ, ನಗು ಎಲ್ಲವನ್ನೂ ಸಕಾಲಿಕವಾಗಿ ಮಾಡಬೇಕು. ಈ ಸಭೆಯನ್ನು ನಡೆಸಲು ಒಂದು ನಿಮಿಷಕ್ಕೆ ಸಾವಿರಾರು ರೂಪಾಯಿಗಳು ವೆಚ್ಚವಾಗುತ್ತಿದೆ. ಅದನ್ನು ಗಮನದಲ್ಲಿಟ್ಟುಕೊಂಡು, ಆಡಳಿತ ಪಕ್ಷದ ಸ್ನೇಹಿತರು ಎಷ್ಟು ಗಂಭೀರವಾಗಿ ಪ್ರಶ್ನೆಯನ್ನು ಕೇಳಿದ್ದಾರೋ, ಅಷ್ಟೇ ಗಂಭೀರವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ಯಾವ ಮಂತ್ರಿಗಳು ಈ ಸದನದಲ್ಲಿ ಇವತ್ತು ಇರಬೇಕೆಂದು ಪಟ್ಟಿ ಪ್ರಕಾರ ನಿಯಮಿತ ಇದೆ. ಈ ವಿಚಾರದಲ್ಲಿ ಎಲ್ಲಾ ಸರಕಾರಗಳೂ ಮಂತ್ರಿಗಳಿಗೆ ವ್ಹಿಪ್ ಇಷ್ಯೂ ಮಾಡುತ್ತಾರೆ. ಇಂತಿಂಥವರು ಇಂತಿಂಥ ದಿವಸ ವಿಧಾನ ಸಭೆಯಲ್ಲಿ, ವಿಧಾನ ಪರಿಷತ್‌ನಲ್ಲಿ ಇರಬೇಕೆಂದು ಇರುತ್ತದೆ. ಇದು ಎಲ್ಲಾ ಸರಕಾರಗಳಲ್ಲಿಯೂ ಇರುತ್ತದೆ. ನನಗೆ ತಿಳಿದ ಹಾಗೆ, ಮಂತ್ರಿಗಳಿಗೆ ಕೆಲಸ ಜಾಸ್ತಿಯಾಗಿದೆ ಎಂದು ಅವರು ಬಾರದಿರಲು ಕಾರಣವಿಲ್ಲ. ಕಾರಣ, ಒಂದೊಂದು ಖಾತೆಗೆ ನಾಲ್ಕು ಜನರು ಮಂತ್ರಿಗಳಿದ್ದಾರೆ. ಆದ್ದರಿಂದ ಅವರು ಎಲ್ಲೋ ಕುಳಿತುಕೊಂಡು ನಿದ್ರೆ ಮಾಡುವ ಬದಲು ಇಲ್ಲಿ ಬಂದು ನಿದ್ರೆ ಮಾಡಲು ಹೇಳಿ.

ಆದ್ದರಿಂದ ನಾನು ನಮ್ಮ ಸಚಿವರಲ್ಲಿ ಪ್ರಾರ್ಥಿಸುತ್ತೇನೆ. ಮಾನ್ಯ ಸದಸ್ಯರಾದ ಮಲ್ಲಾರಿಗೌಡ ಪಾಟೀಲರು ತಮ್ಮ ಪಕ್ಷದ ಬಾಂಡೇಜನ್ನು ಬಿಟ್ಟು ಎಷ್ಟು ಧೈರ್ಯವಾಗಿ, ಗಂಭೀರವಾಗಿ ಈ ವಿಷಯ ಪ್ರಸ್ತಾಪ ಮಾಡಿದ್ದಾರೋ ದಯಮಾಡಿ ತಾವೂ ಅಷ್ಟೇ ಗಂಭೀರವಾಗಿ ಉತ್ತರ ಕೊಡಬೇಕು ಬರೀ ಹುಸಿನಗೆಯಿಂದ ಉತ್ತರ ಕೊಡುವುದರಿಂದ ಪ್ರಯೋಜನ ಇಲ್ಲ.

SIR AZEEZ SAIT:– I was listening to Hon'ble Member Sri Y. K. Ramaiah. He is a Senior seasoned M.L.A., All the Ministers need not be there. If one Minister is there it is enough. It is the question of joint responsibility. ಅದರಲ್ಲೂ ಕಾನೂನು ಮತ್ತು ಸಂಸದೀಯ ಸಚಿವರು ಒಬ್ಬರಿದ್ದರೆ ಸಾಕು. 40 ಜನ ಸಚಿವರಿದ್ದರೂ 40 ಜನ ಕುಳಿತರೂ ಡ್ರೈವರ್ ಒಬ್ಬನೇ ಬಸ್‌ಗೆ.

(ಗೊಂದಲ)

ಶ್ರೀ ಪಿ. ಜಿ. ಆರ್. ಸಿಂಧ್ಯಾ:– ಅಜೀಜ್ ಸೇಠರು ಹೇಳಿದ್ದು ಇಷ್ಟೆ. ಮುಖ್ಯಮಂತ್ರಿಗಳು ಯಾರೂ ಬೇರೆ ಮಂತ್ರಿಗಳನ್ನೂ ನಂಬುವುದಿಲ್ಲ ಇವರೊಬ್ಬರನ್ನೇ ನಂಬುವುದು. ಅದಕ್ಕೋಸ್ಕರ ಅವರೊಬ್ಬರಿದ್ದರೆ

ಸಾಕು ಎಂದು ಹೇಳಿದರು. ನೀವೇಕೆ ಅದನ್ನು ಅಪಾರ್ಥ ಮಾಡಿಕೊಂಡಿದ್ದೀರಿ ? ನಾನು ಒಪ್ಪುತ್ತೇನೆ. ಶಹಭಾಷ್ ಅಜೀಜ್ ಸೇಠ್.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಶ್ರೀ ರಾಮಯ್ಯನವರು ನನಗೆ ಸಿಟ್ಟಾದರೂ ಬರಲಿ ಎಂದು ಹೇಳುತ್ತಿದ್ದಾರೆ, ಯಾರ ಮೇಲೆ ನಾನು ಸಿಟ್ಟು ಮಾಡುವುದು ಹೇಳಿ. ನಮ್ಮ ಮೇಲೆ ನಾವು ಸಿಟ್ಟುಮಾಡಿಕೊಳ್ಳಬೇಕು. ನಮ್ಮ ಹಿರಿಯ ಸದಸ್ಯರಾದ ಮಲ್ಲಾರಿಗೌಡರು ಮತ್ತು ತಾವುಗಳೆಲ್ಲ ಹೇಳಿದ ವಿಷಯಕ್ಕೆ ವಿರೋಧವಾಗಿ ಹೇಳಲು ನನ್ನ ಹತ್ತಿರ ಏನೂ ವಸ್ತುವಿಲ್ಲ. ಸಭೆಯಲ್ಲಿ ನಮ್ಮ ಸದಸ್ಯರು ಮಂತ್ರಿಗಳು ಇರಲೇಬೇಕು. ಕೊನೇ ಪಕ್ಷ ಇನ್ಯಾವುದಕ್ಕಲ್ಲದಿದ್ದರೂ ನೀವು ಮಾತಾಡುವಾಗ ಎದುರುತ್ತರ ಕೊಡುವುದಕ್ಕಾದರೂ ಇರಬೇಕು. ನಿಮಗೆ ಎದುರುತ್ತರ ಕೊಡುವವರಿಲ್ಲದೇ ಹೋದರೆ ನಿಮ್ಮ ಭಾಷಣಕ್ಕೂ ಅಷ್ಟು ಉತ್ಸಾಹ ಬರುವುದಿಲ್ಲ. ಸಭೆಯಲ್ಲಿ ಘರ್ಷಣೆ ಪ್ರತಿಘರ್ಷಣೆ ಇದ್ದರೆ ಸ್ವಲ್ಪ ಮಜಾ ಬರುತ್ತದೆ. ಈ ವಿಷಯುವನ್ನು ಮುಖ್ಯಮಂತ್ರಿಗಳು, ಸಚೇತಕರು ಎಲ್ಲರೂ ಕುಳಿತು ಚರ್ಚೆ ಮಾಡಿ ಇವಕ್ಕೇನಾದರೂ ರೆಮಿಡಿ ಮಾಡಲೇಬೇಕು. ದಯಮಾಡಿ ತಮ್ಮ ಭಾಷಣ ಮುಂದುವರೆಸಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ:– ಇದಕ್ಕೆ ಖಾಯಂ ಪರಿಹಾರ ಇದೆ, ಅವರೆಲ್ಲ ಎದ್ದು ನಿಂತು ಮಾತನಾಡುತ್ತಿರುವುದೇ ಖಾಯಂ ಪರಿಹಾರ.

ಶ್ರೀ ವಾಟಾಳ್ ನಾಗರಾಜ್:– ಈಗಲೇ ನಲವತ್ತಾಗಿದೆ ಮತ್ತೆ ಅವರನ್ನೂ ಮಾಡಿಕೊಂಡು 75 ಮಾಡುತ್ತೀರ, ಬೇಡ, ಸಾಕಾಗಿಹೋಗಿದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ರೂಲ್ಸ್ ಪ್ರಕಾರ ಅಧ್ಯಕ್ಷರ ಮನಸ್ಸಿಗನುಗುಣವಾಗಿ ನಾವೆಲ್ಲ ನಡೆಯೋಣ.

ಶ್ರೀ ವಾಟಾಳ್ ನಾಗರಾಜ್ :– ಅಜೀಜ್ ಸೇಠ್‌ರಂಥವರು ಈ ಸರ್ಕಾರದಲ್ಲಿ ಸಚಿವರಾದರೆ ಆಸ್ತೀನೆ. ಅದನ್ನು ತಳ್ಳಿಹಾಕುವಂಥದ್ದಲ್ಲ. 5 ವರ್ಷಗಳ ಹೋರಾಟದ ಹಿನ್ನೆಲೆ ಇದೆ. ಆದರೆ ಅವರು ಹೊರಗಿರುವುದು ನಮಗೆ ಒಂದು ರೀತಿ ದುಃಖವೇ ಒಳಗಿದ್ದರೆ ಚೆನ್ನಾಗಿತ್ತು.

ಶ್ರೀ ಅಜೀಜ್ ಸೇಠ್:– ನಾನು ಹೊರಗಿರುವುದೇ ಒಳ್ಳೆಯದು. ಇಲ್ಲದಿದ್ದರೆ ಕಿತ್ತಳೆ ಹಣ್ಣು ಭಾಗ ಮಾಡಿ ಕೊಟ್ಟಂತೆ ಒಂದೊಂದು ಖಾತೆಗೆ ನಾಲ್ಕು ಮಂತ್ರಿಗಳಿದ್ದಾರೆ, ನಾನು ಐದನೆಯವನಾಗುತ್ತಿದ್ದೆ.

ಶ್ರೀ ವಾಟಾಳ್ ನಾಗರಾಜ್:– ಅದು ನಿಜ, ನಾನು ಒಪ್ಪುತ್ತೇನೆ. ಇಂಥವರು ಒಳಗಿದ್ದು, ಯಾರು ಒಳಗಿರಬಾರದಿತ್ತು ಅವರೆಲ್ಲ ಹೊರಗಿದ್ದಿದ್ದರೆ ಒಂದು ಶೋಭೆ ಇರುತ್ತಿತ್ತು. ಅದರ ಬಗ್ಗೆ ತಕರಾರಿಲ್ಲ. ಈಗ ಅವರನ್ನೆಲ್ಲ ಸೇರಿಸಿಕೊಳ್ಳುವುದಕ್ಕೆ ಇಲಾಖೆ ಇಲ್ಲ. ನಾನು ಏಕೆ ಆ ಮಾತು ಎತ್ತಲಿಲ್ಲ ಎಂದರೆ ನಾವು ಇಲ್ಲಿ ಹೇಳಿ ಹೇಳಿ ಸಾಕಾಗಿಹೋಗಿದೆ.

ತಮ್ಮ ಗಮನಕ್ಕೂ ತಂದೆ. ಈಗ ತಮ್ಮಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತಿದ್ದೇನೆ. ನೀವು ಸ್ವಲ್ಪ ಜೋರಾದ ತೀರ್ಮಾನವನ್ನು ನೀವು ತೆಗೆದುಕೊಳ್ಳಬೇಕು. ಯಾರು ಮಂತ್ರಿಗಳು ಈ ಸದನಕ್ಕೆ ಬರುವುದಿಲ್ಲ. ಅವರಿಗೆ ನೀವು ನೇರವಾಗಿ ಒಂದು ಸರಿಯಾದಂಥ ನಿಮ್ಮ ಮಾರ್ಗದರ್ಶನವನ್ನು ಯಾವ ರೂಪದಲ್ಲಿ ಕೊಡುತ್ತೀರಿ. ನೀವು ಕೊಡಲೇಬೇಕು. ಶಿಕ್ಷೆ ಎನ್ನುವುದಕ್ಕಿಂತ ಮೊದಲನೇ ಸಾರಿ ಮಾರ್ಗದರ್ಶನ ಕೊಡಲಿ. ಏಕೆಂದರೆ ತಾವು ಹೇಳಬಹುದು. ನಾನು ತಿಳಿದುಕೊಂಡಿರುವ ಹಾಗೆ, ಪ್ರಜಾಪ್ರಭುತ್ವದ ಈ ಮನೆಯಲ್ಲಿ ತಮ್ಮ ಪೀಠ ಮುಖ್ಯಮಂತ್ರಿಗಳಿಗಿಂತ ಎತ್ತರವಾದಂಥ ಪೀಠ, ಮತ್ತು ಈ ಸದನ ಇದೀ ಸಮಗ್ರ ಕರ್ನಾಟಕವನ್ನು ಪ್ರತಿನಿಧಿಸತಕ್ಕಂಥ ಸದನ. ಇದರಲ್ಲಿ ಅವರು ಮಂತ್ರಿಗಳನ್ನು 40 ಆದರೂ ಮಾಡಿಕೊಳ್ಳಲಿ, 180 ಆದರೂ ಮಾಡಿಕೊಳ್ಳಲಿ.

ಯಾರನ್ನಾದರೂ ಮಾಡಿಕೊಳ್ಳಲಿ. ನಮ್ಮದೇನೂ ಅಭ್ಯಂತರವಿಲ್ಲ, ತಕರಾರಿಲ್ಲ. ಮತ್ತು ಇಲಾಖೆಗಳು ಅವರು ಸಕ್ಕರೆಗಾದರೂ ಮಾಡಿಕೊಳ್ಳಲಿ, ಈರುಳ್ಳಿಗಾದರೂ ಮಾಡಿಕೊಳ್ಳಲಿ, ಬೆಳ್ಳುಳ್ಳಿಗಾದರೂ ಮಾಡಿಕೊಳ್ಳಲಿ, ಬದನೆಕಾಯಿಗಾದರೂ ಮಾಡಿ ಕೊಳ್ಳಲಿ, ಮೆಣಸಿನಕಾಯಿಗಾದರೂ ಮಾಡಿಕೊಳ್ಳಲಿ, ನಮ್ಮದು ತಕರಾರೇನೂ ಇಲ. ನಮ್ಮದು ತಕರಾರು ಎಲ್ಲಿ ಎಂದರೆ, ಈ ರಾಜ್ಯನನ್ನು ಪ್ರತಿನಿಧಿಸತಕ್ಕಂಥ ಈ ದೊಡ್ಡ ಆನೆಗಾತ್ರದ ಮಂತ್ರಿಮಂಡಲ ಏಸಿದ್ದೀರಿ, ಇದರಲ್ಲಿ ಒಬ್ಬರೂ ಇಲ್ಲವಲ್ಲ. ನಮಗೆ ಅಗೌರವಕ್ಕಿಂತ ಹೆಚ್ಚಾಗಿ, ಪ್ರಾಮಾಣಿಕವಾಗಿ ಇಡೀ ರಾಜ್ಯಕ್ಕೆ ನಾವು ಅಗೌರವ ಮಾಡಿದಂತೆ. ರಾಜ್ಯದ ಬೊಕ್ಕಸವನ್ನು ಖರ್ಚು ಮಾಡಿಕೊಂಡು, ಎಲ್ಲ ವ್ಯವಸ್ಥೆಯನ್ನು ಪಡದುಕೊಂಡು ಕಾರು, ಬಾರು ಮನೆ ಮಠ, ಗೂಟ, ಗೂಟದ ಕಾರು ಎಲ್ಲ ಪ್ರತಿಯೊಂದು ವ್ಯವಸ್ಥೆಯನ್ನು…….

ಶ್ರೀ ಹೆಚ್. ಏಕಾಂತಯ್ಯ:– 800 ರೂಪಾಯಿ ಬಾಡಿಗೆ ಮೇಲೆ ಕಂಟೆಸ್ಸಾ ಕಾರೇ ಆಗಬೇಕು. ಬೇರೆಯದು ಇವರಿಗೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಮ್ಮ ಗಮನಕ್ಕೆ ಬಂದಿತ್ತು. ನಿಜವಾಗಿಯೂ ನಿಮಗೆ ದೇವರು ಒಳ್ಳೆಯದು ಮಾಡಿದ. ನೀವೇನಾದರೂ ಆ ಸಚಿವ ಸಂಪುಟಕ್ಕೇನಾದರೂ ಹೋಗಿದ್ದರೆ, ನಾನು ನೀವು ಅಲ್ಲಿಗೆ ಹೋಗಬೇಕು ಎಂದು ಬಯಸಿದ್ದೆ. ಆದರೂ ನೀವು ಅಲ್ಲಿಗೆ ಬಂದದ್ದು ನಿಮಗೆ ಸುದೈವ, ದೇವರ ದಯೆ ಇದೆ ಎಂದು. ಆ ಗೊಂದಲದಲ್ಲಿ ನೀವು ಸಿಕ್ಕಿ, ನಿಮಗೆ ಯಾವುದೇ ಇಲಾಖೆ ಸಿಗದೆ, ನಿಜವಾಗಿಯೂ ಆ ನರಕಯಾತನೆ ಇದೆಯಲ್ಲಾ ಅದು ಯಾರಿಗೂ ಬೇಡ. ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮ ಮಂತ್ರಿಮಂಡಲ ಶ್ರೀ ಕೆ. ಸಿ. ರೆಡ್ಡಿಯವರ ಮಂತ್ರಿಮಂಡಲ ಆ ಕಾಲದಿಂದ ನಾನು ನೋಡಿದ್ದೇನೆ. ಇಂಥ ಮಂತ್ರಿಮಂಡಲ ಅಪ್ಪಟ ಮಾದರಿಯ ಶತಶತಮಾನಗಳ ಕಾಲಚರಿತ್ರೆಯಲ್ಲಿ ಉಳಿಯತಕ್ಕಂಥ ಮಂತ್ರಿಮಂಡಲ. ಅದಕ್ಕೆ ಕಾರಣ, ನಾನೇನು ಅವರನ್ನು ದೂಷಣೆ ಮಾಡುತ್ತಿಲ್ಲ. ನನಗೆ ಈ ಸರ್ಕಾರದ ಕಾಲು ಎಳೆಯಬೇಕು ಎಂದು ಇಲ್ಲ. ನಾನಂತೂ ಪ್ರಾಮಾಣಿಕವಾಗಿ ಹೇಳುತ್ತೇನೆ; ಈ ಸರ್ಕಾರ ಉರುಳಬಾರದು. ಈ ಸರ್ಕಾರ ಉರುಳುವುದಕ್ಕೆ ಭಾರಿ ಸಂಚೇ ನಡೆಯುತ್ತಿದೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ . ಇದು ಬಹಿರಂಗ ಸತ್ಯ. ಅದರಲ್ಲೇನು ಹಿಂದೆ ಮುಂದೆ ಹೇಳತಕ್ಕಂಥ ಮಾತಲ್ಲ. ಆ ಮಂತ್ರಿಗಳಿಗೆ ತಾವು ನೇರವಾಗಿ ಯಾವ ಒಂದು ಒಳ್ಳೆಯ ಮಾತನ್ನು ಹೇಳಬೇಕೋ ಅದನ್ನು ಹೇಳಿ. ನಂತರ ಯಾವ ರೀತಿ ತಾವು ಕಟುವಾಗಿ ಹೇಳಬೇಕೊ ಹೇಳಿ. ನಂತರ ತಾವು ಮಂತ್ರಿಗಳು ಯಾರು ಸದನಕ್ಕೆ ಬರುವುದಿಲ್ಲ ಶಾಸಕರು ಯಾವ ಯಾವ ಸಂದರ್ಭದಲ್ಲಿ ಎಷ್ಟೆಷ್ಟು ಭಾಗವಹಿಸಿದ್ದರು ಎಂದು ಕೊನೆಯ ದಿವಸ ತಾವು ಪತ್ರಕರ್ತರನ್ನು ಕರೆದು ಹೇಳಬೇಕಲ್ಲ. ದಯಮಾಡಿ ಇದು ರಾಜ್ಯದ ಜನತೆಗೆ ಗೊತ್ತಾಗಲಿ. ಎಷ್ಟು ಜನ ಮಂತ್ರಿಗಳು ಇದರಲ್ಲಿ ಆಸಕ್ತಿ ವಹಿಸುತ್ತಾರೆ, ಎಷ್ಟು ಜನ ಶಾಸಕರು ಭಾಗವಹಿಸುತ್ತಿದ್ದಾರೆ. ಇದೆಲ್ಲವನ್ನು ಹೇಳತಕ್ಕಂಥ ಅಧಿಕಾರ ತಮಗೆ ಇದೆ. ದಯಮಾಡಿ ಈ ಸದನದ ಒಂದು ಚಿತ್ರವನ್ನು ತಾವು ಸದನ ಮುಗಿಯುವ ಕೊನೆಯಲ್ಲಿ ಸದನಕ್ಕೆ ತಾವು ಹೇಳಬಹುದು. ಸದನಕ್ಕೆ ಒಂದು ವರದಿಯನ್ನು ದಯಮಾಡಿ ತಾವು ಸಲ್ಲಿಸಿದರೆ ನಿಜವಾಗಿಯೂ ನನಗೆ ಅನಿಸುತ್ತದೆ, ನಮ್ಮ ರಾಜ್ಯದ ನಾಲ್ಕು ಕೋಟಿ ಜನ ಅದನ್ನು ಓದಿಕೊಂಡಾದರೂ ಇವರಿಗೆ ಏನಾದರೂ ಬುದ್ಧಿ ಬರುವುದಾದರೆ ಬರಲಿ. ಏಕೆಂದರೆ, ನಾನು ಭಾಷಣ ಮಾಡುವಾಗ ಯಾರು ಇಲ್ಲ, ಯಾರು ಇಲ್ಲ ಎಂದು ಏಕೆ ಹೇಳಬೇಕು. ಈಗ ಇರುವವರೂ ಹೊರಟುಹೋಗಿ. ನಾವು ಖಾಲಿ ಕುರ್ಚಿಗಳಿಗೆ ಹೇಳಿಬಿಡುತ್ತೇವೆ. ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ತಾವು ನೋಡಿದ್ದೀರಿ. ನಾವು 11 ಗಂಟೆಗೆ ಇಲ್ಲಿಗೆ ಬರುತ್ತೇವೆ. ನೀವು ಎದ್ದು ಹೋಗಿ ಎನ್ನುವವರೆಗೂ ಹೋಗುವುದಿಲ್ಲ. ಅದನ್ನು ತಮಗೆ ಸ್ವಲ್ಪ ಹೇಳುತ್ತೇನೆ. ನೀವು ಹೊರಗಡೆ ಹೋಗಿ ಎನ್ನುವವರೆಗೂ ಹೋಗುವುದಿಲ್ಲ. ಆ ರೀತಿ ನಮಗೆ ಈ ಸದನ ಎಂದರೆ...

ಶ್ರೀ ಹೆಚ್. ಏಕಾಂತಯ್ಯ:- ಎತ್ತಿ ಹಾಕುವವರೆಗೂ ಹೋಗುವುದಿಲ್ಲ.

ಶ್ರೀ ಗೋಪಿನಾಥ ಆರ್. ಸಾಂಡ್ರಾ:- ಕೊನೆಯ ದಿವಸ ಅವರಿಗೆ ಅವಾರ್ಡ್ ಕೊಡುವ ವ್ಯವಸ್ಥೆ ಮಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಅವಾರ್ಡ್‌ಗೋಸ್ಕರ ನಾವು ಇಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಇದು ನನ್ನ ಕರ್ತವ್ಯ. ಪಾಪ, ಇಲ್ಲಿ ಅವರು ನನ್ನ ಬಗ್ಗೆ ಒಳ್ಳೆಯ ಮಾತನ್ನು ಆಡಿರಬಹುದು. ಆದರೆ ಇಲ್ಲಿಗೆ ನಾನು ಬಂದಿರುವುದು ನನ್ನ ಕರ್ತವ್ಯ. ಜನರು ನನ್ನನ್ನು ಚುನಾಯಿಸಿ ಕಳುಹಿಸಿದ ಮೇಲೆ ಇಲ್ಲಿಗೆ ಬರುವುದು ನನ್ನ ಕರ್ತವ್ಯ ಅದರಲ್ಲಿಯೂ ನಾನು ವಿರೋಧ ಪಕ್ಷದಲ್ಲಿರುವಾಗ ಪ್ರಾಮಾಣಿಕವಾಗಿರಬೇಕು. ನಾನಾಗಲೀ, ಸಿಂಧ್ಯರವರಾಗಲೀ, ಏಕಾಂತಯ್ಯನವರಾಗಲೀ, ಬಾಬಾಗೌಡರಾಗಲೀ, ನಂಜುಂಡಸ್ವಾಮಿಯವರಾಗಲೀ ನಾವು ಕೆಲವರು 11 ಗಂಟೆಗೆ ಬಂದರೆ ಸಂಜೆಯವರೆಗೂ ಎದ್ದು ಹೋಗುವುದಿಲ್ಲ. ಇದು ತಮ್ಮ ಗಮನಕ್ಕೂ ಬಂದಿದೆ. ಇದನ್ನು ಬಹುಶಃ ತಾವು ನನ್ನ ಹಾಜರಿ ಪುಸ್ತಕದಲ್ಲಿ ನೋಡಬೇಕು. ಒಂದು ದಿನ ನಾನು ಇಲ್ಲಿಗೆ ಗೈರು ಹಾಜರಾಗಿಲ್ಲ.

ಶ್ರೀ ಬಿ. ಎಂ. ಇದಿನಬ್ಬ:- ಆಡಳಿತ ಪಕ್ಷದಲ್ಲಿಯೂ ಕೆಲವರು ಅದೇ ರೀತಿ ಇದ್ದಾರೆ. ಬೆಳಿಗ್ಗೆ 11 ಗಂಟೆಯಿಂದ 6 ಗಂಟೆಯವರೆಗೆ ಇರುತ್ತಾರೆ. ಒಂದು ದಿವಸ ರಜಾ ಹಾಕದವರೂ ಸಹ ಇದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ:- ಮಾನ್ಯ ವಾಟಾಳ್‌ರವರ ಮುಲಾಜಿಲ್ಲದ ಘೋಷಣೆ ಸರಿ ಇಲ್ಲ.

ಅಧ್ಯಕ್ಷರು:- ತಾವು ಹೇಳಿದ್ದಕ್ಕೆ ಬೆಳಿಗ್ಗೆಯೂ ನಾನು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಅದೇ ರೀತಿ ಈಗ ಅರ್ಧ ಗಂಟೆಯ ಹಿಂದೆ ಮುಖ್ಯಮಂತ್ರಿಯವರನ್ನು ಕರೆಯಿಸಿ ನಾನು ಇದರ ವ್ಯವಸ್ಥೆ ಸರಿಯಾಗಿ ಮಾಡಿಕೊಳ್ಳಿ ಎಂದು ತಿಳಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಈ ಒಂದು ರಾಜ್ಯಪಾಲರ ಭಾಷಣದ ಪದ್ಧತಿ ಬದಲಾವಣೆಯಾಗಬೇಕು ಎನ್ನತಕ್ಕದ್ದು ನನ್ನ ಅಭಿಪ್ರಾಯ. ಈ ನನ್ನ ಅಭಿಪ್ರಾಯವನ್ನು ದೇಶದಲ್ಲಿ ಚಿಂತನೆಗೆ ಬಿಡುತ್ತೇನೆ. ಎಲ್ಲಾ ವರ್ಗದ ಚಿಂತನಾಶೀಲರು ಈ ಬಗ್ಗೆ ಸಮಗ್ರವಾಗಿ ಚಿಂತನೆಯನ್ನು ನಡೆಸಬೇಕು. ಅದು ಅವರಿಗೆ ಬಿಡತಕ್ಕಂಥದ್ದು. ಸಾಮಾನ್ಯವಾಗಿ ನಾನು ಶಾಸಕ ಆಗದೇ ಇದ್ದರೂ ಆಡಳಿತವನ್ನು ನೋಡಿಕೊಂಡು ಬಂದಿದ್ದೇನೆ. ಶ್ರೀಮಾನ್ ಕೆ. ಸಿ. ರೆಡ್ಡಿಯವರ ಕಾಲದಿಂದ ನೋಡಿದ್ದೇನೆ. ಸಮಗ್ರವಾದಂತಹ ಆಡಳಿತವನ್ನು ನಡೆಸಿ ಧೀಮಂತ ಬುನಾದಿಯನ್ನು ಸರ್ಕಾರಕ್ಕೆ, ದೇಶಕ್ಕೆ ನೀಡಿದ್ದಾರೆ. ಆ ಒಂದು ಪರಂಪರೆ ನಮ್ಮಲ್ಲಿ ಇವತ್ತು ಬೆಳೆಯುವುದಕ್ಕೆ ಸಮಗ್ರವಾದಂತಹ ವ್ಯವಸ್ಥೆಯಾಗಬೇಕು. ಶ್ರೀಮಾನ್ ಕೆಂಗಲ್‌ನವರ ಆಡಳಿತದ ಬಗ್ಗೆ ನಾನಂತೂ ಕೇವಲ ಮುಕ್ತಮನಸ್ಸಿನಿಂದ ಹೃದಯಬಿಚ್ಚಿ ಮಾತನ್ನು ಹೇಳುತ್ತಿದ್ದೇನೆ. ಅವರು ಒಬ್ಬ ಧೀಮಂತ ಶಕ್ತಿವಂತ ಆಡಳಿತಗಾರ. ಆವಾಗ ಅಧಿಕಾರ ಹೇಗೆ ಹೋಯಿತು ? ಕರ್ನಾಟಕ ಏಕೀಕರಣದ ಬಗ್ಗೆ ಅವರು ಹೇಳುತ್ತಿದ್ದರು. ನನ್ನ ಅಧಿಕಾರ ಹೋದರೂ ಚಿಂತೆ ಇಲ್ಲ, ನಾನು ಕರ್ನಾಟಕ ಏಕೀಕರಣಕ್ಕೆ ಬೆಂಬಲವನ್ನು ಕೊಡುತ್ತೇನೆಂದು ಹೇಳಿ ಅವತ್ತಿನ ದಿನ ಅಧಿಕಾರವನ್ನೂ ಲೆಕ್ಕಿಸದೆ ಕರ್ನಾಟಕ ಏಕೀಕರಣಕ್ಕೆ ಬೆಂಬಲ ಕೊಟ್ಟಂತಹ ಧೀಮಂತ ಶಕ್ತಿ ಅವರು. ಈ ಬಗ್ಗೆ ಹಿಂದಿನ ಅಧ್ಯಕ್ಷರೂ ಸಹ ಈ ಸದನದಲ್ಲಿ ಅವರ ಒಂದು ಚಿತ್ರವನ್ನು ಹಾಕುತ್ತೇವೆಂದು ವಾಗ್ದಾನ ಮಾಡಿ ಹೇಳಿದ್ದರು. ಚಿತ್ರ ಶಿಲ್ಪಿಗಳು ಅದನ್ನು ಬರೆದು ತಯಾರಿಸಿದ್ದಾರೆ. ತಮ್ಮ ಕಾಲದಲ್ಲಿ ಈ ಸದನವನ್ನು ಕಟ್ಟಿದಂತಹ, ನಾಡಿನ ಶಾಶ್ವತ ಕಳಿತಿಗಿತಕ್ಕಂಥ ಸದನವನ್ನು ಕಟ್ಟಿದಂತಹ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರ ಚಿತ್ರ ರಾರಾಜಿಸುತ್ತದೆಂದು ನಾನಂತೂ ಆಗುಹೊಂಡಿದ್ದೇನೆ. ಅದಕ್ಕೆ ತಮ್ಮ ಅನುಮತಿಯೂ ಇದೆ ತಮ್ಮ ಅನುಮೋದನೆಯೂ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ.

ರಾಜ್ಯದಲ್ಲಿ ಮಂತ್ರಿಮಂಡಲ ವಿಸ್ತರಣೆ ಮಾಡಿದ್ದಾರೆ. ಮಾನ್ಯ ವೀರಪ್ಪಮೊಯಿಲಿಯವರು ಅವರ ಒಂದೊಂದು ಹೇಳಿಕೆಗಳನ್ನು ನಾನು ನೋಡಿಕೊಂಡು ಬಂದಿದ್ದೇನೆ.

ಅವರ ಮಾತುಗಳನ್ನು ನಾನು ಕೇಳಿದ್ದೇನೆ. ಬಹಳ ಉತ್ಸಾಹದಿಂದ ಈ ರಾಜ್ಯಕ್ಕೆ ಒಂದು ಒಳ್ಳೆಯ ಆಡಳಿತವನ್ನು ಕೊಡಬೇಕು ಎನ್ನತಕ್ಕ ಸಂಕಲ್ಪವನ್ನು ಮಾಡಿದ್ದಾರೆ. ಆದರೆ ಅದು ಎಷ್ಟು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರುತ್ತದೆ ಎನ್ನತಕ್ಕದ್ದು ನನಗಂತೂ ಬಹಳ ಸಂಶಯವಾಗಿದೆ. ಯಾವ್ಯಾವ ಶಕ್ತಿಗಳು ಈ ರಾಜ್ಯದ ಆಡಳಿತವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ತಾವು ರಾಜ್ಯವನ್ನು ನಡೆಸಬೇಕೆನ್ನತಕ್ಕ ಶಕ್ತಿಗಳು ಇವೆ, ಯಾವುದೇ ಸರ್ಕಾರ, ಯಾರೇ ಮುಖ್ಯಮಂತ್ರಿಗಳು ಬಂದರೂ ಕೆಲವು ಲಾಭಗಳು, ಶಕ್ತಿಗಳು, ಏನಿವೆ ಆ ಎಲ್ಲಾ ಶಕ್ತಿಗಳನ್ನು ನಾನು ಮರ್ದನ ಮಾಡಿ, ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಹಣವನ್ನು ತಂದು ನಾನು ಸರಿಪಡಿಸುತ್ತೇನೆ ಎನ್ನತಕ್ಕ ಚಿಂತನೆ ಮಾನ್ಯ ವೀರಪ್ಪ ಮೊಯ್ಲಿಯವರಿಗೆ ಇದೆ. ಆದರೆ ಅದು ಆಗುತ್ತದೆ ಎನ್ನತಕ್ಕ ಚಿಂತನೆಗೆ ಅನೇಕ ಅನುಮಾನಗಳು ಒಂದಾದ ಮೇಲೆ ಒಂದು ಬರುತ್ತಿವೆ. ಅವರು ಪ್ರಾರಂಭದ ಸಚಿವ ಸಂಪುಟದಲ್ಲಿ ತೆಗೆದುಕೊಂಡ ಸಚಿವರು ನಿಜವಾಗಿಯೂ ಬಹಳ ಅಪ್ಪಟ, ಕೆಲವರು ಹಿರಿಯ ಸಚಿವರು ಇದ್ದಾರೆ; ನನಗೆ ಬಹಳ ಸಂತೋಷ. ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ಇಲ್ಲಿ ಕುಳಿತಿದ್ದಾರೆ. ಅವರು ಕರ್ನಾಟಕ ಏಕೀಕರಣಕ್ಕೆ ಅಪಾರವಾದಂತಹ ಕೊಡುಗೆಯನ್ನು ಕೊಟ್ಟಂತಹವರು. ಆಮೇಲೆ ಶಾಸಕರೆಲ್ಲ ಈ ರಾಜ್ಯದ ಮಂತ್ರಿಗಳಾದದ್ದೇ ನನಗೆ ಬಹಳ ಸಂತೋಷ.

ಮತ್ತು ಅವರು ನಡೆದುಕೊಳ್ಳತಕ್ಕಂಥ ರೀತಿ, ಅವರು ಈ ಸದನದಲ್ಲಿ ಭಾಗವಹಿಸತಕ್ಕಂಥ ಪರಿಸ್ಥಿತಿ, ಇವೆಲ್ಲವನ್ನೂ ನೋಡಿದಾಗ ನಿಜವಾಗಲೂ ಮೊದಲನೇ ಮಂತ್ರಿಮಂಡಲದಲ್ಲಿ ಹಿರಿಯ ಸಚಿವರುಗಳಾಗಿದ್ದಂಥ ಶ್ರೀ ರಂಗನಾಥ್‌ರವರು, ಶ್ರೀ ರಾಜಶೇಖರಮೂರ್ತಿಯವರು, ಇವರೆಲ್ಲರಿಗೆ ಒಳ್ಳೆಯ ಇತಿಹಾಸ, ಚಾರಿತ್ರ್ಯ ಇದೆ. ಮೊದಲನೆ ಮಂತ್ರಿಮಂಡಲ ರಚಿಸಿದ್ದನ್ನು ನೋಡಿ ಸಂತೋಷವಾಯಿತು. ಆದರೆ ಎರಡನೆ ಬಾರಿ ಯಾವಾಗ ದೊಡ್ಡ ಮಂತ್ರಿ ಮಂಡಲವನ್ನು ರಚಿಸಿದರೋ ಆಗ ಟೀಕೆಗೆ ಗುರಿಯಾದರು. ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪಮೊಯಿಲಿಯವರು ಮೊದಲನೆಯ ಮಂತ್ರಿ ಮಂಡಲವನ್ನು ರಚಿಸಿದಾಗ ಇಡೀ ರಾಜ್ಯದ ಜನತೆ 'ವೀರಪ್ಪಮೊಯಿಲಿಯವರು ಬಹಳಷ್ಟು ಚಿಂತನ ಮಾಡಿ ಶಕ್ತಿಯುತವಾದ ಒಂದು ಮಂತ್ರಿಮಂಡಲವನ್ನು ರಚನೆ ಮಾಡಿದರು' ಎಂದು ತಿಳಿದುಕೊಂಡರು. ಆಗ ಅವರಿಗೆ ಎಲ್ಲಾ ಕಡೆಗಳಿಂದಲೂ ಅಭಿನಂದನೆಯ ಸುರಿಮಳೆಯಾಯಿತು. ಆದರೆ, ಪುನಃ ಮಂತ್ರಿಮಂಡಲವನ್ನು ವಿಸ್ತರಿಸಿದಾಗ ಯಾವ ರಾಜ್ಯದ ಜನತೆಯ ಅಭಿನಂದನೆಗೆ ಪಾತ್ರರಾಗಿದ್ದ ಶ್ರೀಮಾನ್ ವೀರಪ್ಪಮೊಯಿಲಿಯವರು ಅಷ್ಟೇ ಟೀಕೆ, ಅಪವಾದಗಳಿಗೆ ಗುರಿಯಾದರು. ಅದಕ್ಕಿಂತ ಹೆಚ್ಚಾಗಿ ಖಾತೆಗಳ ಹಂಚಿಕೆ ಬಗ್ಗೆಯೂ ಸಾಕಷ್ಟು ಅಪವಾದಗಳಿಗೆ ಗುರಿಯಾದರು. ಅದೂ ಅಲ್ಲದೆ, ಒಂದೊಂದು ಜಿಲ್ಲೆಗೆ 5-6 ಜನ ಮಂತ್ರಿಗಳಂತೆ ಲೆಕ್ಕವಿಲ್ಲದಷ್ಟು ಮಂತ್ರಿಗಳನ್ನಾಗಿ ಮಾಡಿದರು. ಮಂತ್ರಿಯಾದವರ ಹಿಂದೆ ಯಾವುದೇ ವಿವಾದದಂಥ ಒಂದು ಸಣ್ಣ ಕೆಟ್ಟ ಹೆಸರು ಬರಬಾರದು, ಅವರ ಚಾರಿತ್ರ್ಯ ಎಷ್ಟರಮಟ್ಟಿಗೆ ಇದೆ ಎಂಬುದನ್ನೆಲ್ಲಾ ಜರಡಿಯಾಡಿಸಿ ಅಪ್ಪಟವಾಗಿರತಕ್ಕವರನ್ನು ಸಚಿವ ಸಂಪುಟಕ್ಕೆ ತೆಗೆದುಕೊಂಡಿದ್ದರೆ ಅವರು ಸಾಕಷ್ಟು ಯಶಸ್ಸನ್ನು ಗಳಿಸುತ್ತಿದ್ದರೆಂಬುವ ಭಾವನೆ ನನಗಿತ್ತು. ಸಚಿವ ಸಂಪುಟದಲ್ಲಿ ಹಿಂದಿನದು ಮತ್ತು ಈಗಿನದು ಎಲ್ಲಾ ಸೇರಿ ಒಟ್ಟು 40 ಜನ ಮಂತ್ರಿಗಳನ್ನು ಅವರು ಯಾವ ದೃಷ್ಟಿಯಲ್ಲಿ ಮಾಡಿದರೆಂಬುದು ನನಗಂತೂ ಅರ್ಥವಾಗಲಿಲ್ಲ. ಅವರು ಮೊದಲನೇ ಕಂತು ಎಂದು 10 ಜನ ಮಂತ್ರಿಗಳನ್ನು ಮಾಡಬಹುದಿತ್ತು, ಎರಡನೇ ಕಂತು ಎಂದು ಇನ್ನೊಂದು ರೀತಿಯಲ್ಲಿ ಮಾಡಬಹುದಿತ್ತು. ಈ ರೀತಿ ಮಂತ್ರಿಗಳನ್ನಾಗಿ ಮಾಡತಕ್ಕಂಥವರಲ್ಲಿ ಹಿಂದಿನ ಸರ್ಕಾರದಲ್ಲಿ ಬಹಳ ಪ್ರಮುಖರಾಗಿದ್ದಂಥವರು, ಒಳ್ಳೆಯವರು ಯಾರಿದ್ದಾರೋ, ಅವರನ್ನು ಈ ರಾಜ್ಯದ ಹಿತದೃಷ್ಟಿಯಿಂದ ತೆಗೆದುಕೊಳ್ಳಬಹುದಿತ್ತು. ಇದನ್ನು ಒಂದೇ ಸಲ ಒಂದೇ ದೃಷ್ಟಿಯಲ್ಲಿ ನೋಡತಕ್ಕಂಥ

ವ್ಯವಸ್ಥೆಯಾಗಬಾರದಿತ್ತು. ಇದನ್ನು ಮಾಡಿದ್ದಾಗೆ ರಾಜ್ಯಕ್ಕೆ ಒಳ್ಳೆಯ ಕಾಲವಿಷ್ಟು ಕೆಲಸ ಮಾಡುತ್ತಿದ್ದರೆಂದು ನನಗನ್ನಿಸುತ್ತಿತ್ತು. ಇವೊತ್ತು ತಮಗೆ ಯಾವ ಶಕ್ತಿಗಳು ಎಂದು ಹೇಳಿದೆ, ಆ ಶಕ್ತಿಗಳು ಇವರನ್ನು ಸುತ್ತುವರೆದಿವೆ, ಇವು ಒಂದು ರೀತಿಯ ಗ್ರಹಗಳಿದ್ದಂತೆ. ಗ್ರಾನೈಟ್ ಲಾಬಿಯ ಶಕ್ತಿ, ಅಬ್ಕಾರಿ ಲಾಬಿಯ ಶಕ್ತಿ ಮತ್ತು ನೆಲಗಳ್ಳರು. ಈ ರೀತಿ ಒಂದರ ಹಿಂದೆ ಇನ್ನೊಂದು ಚಂದ್ರನನ್ನು ಗ್ರಹಗಳು ಸುತ್ತುವರಿದಂತೆ ಇವರನ್ನು ಸುತ್ತುವರದಿವೆ. ಇವು ಯಾವ ಘಳಿಗೆಯಲ್ಲಾದರೂ ಇವರ ಕುತ್ತಿಗೆ ಹಿಡಿಯುವುದಕ್ಕೆ ತಯಾರಾಗಿವೆ. ಇವರು ಅವರ ವಿರುದ್ಧ ಯುದ್ಧ ಮಾಡುತ್ತೇವೆಂದು ಹೊರಟಿದ್ದಾರೆ. ಈ ಯುದ್ಧದಲ್ಲಿ ಯಾರು ಸೋಲು ಅನುಭವಿಸಬೇಕಾಗುತ್ತದೆನ್ನುವುದು ಇತ್ತೀಚಿನ ದಿನಗಳಲ್ಲಿ ಇವರ ಆಡಳಿತ ವ್ಯವಸ್ಥೆ ನೋಡಿದರೆ ನಿಜವಾಗಿಯೂ ಅತ್ಯಂತ ಶೋಚನೀಯ ಮಂತ್ರಿಮಂಡಲವನ್ನು ರಚಿಸುವಾಗ ಡಾ: ಪ್ರೇಮಚಂದ್ರಸಾಗರ್‌ರವರನ್ನು ಲತ್ತೂ ಕರೆದು ಮಂತ್ರಿಯನ್ನಾಗಿ ಮಾಡಬೇಕೆಂದು ಅವರ ಕುಲಬಾಂಧವರೆಲ್ಲರೂ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ನಮ್ಮವರಿಗೆ ಮಂತ್ರಿ ಸ್ಥಾನ ನೀಡಿ ಎಂದು ಕೇಳಿಕೊಂಡರು. ಕೊನೆಗೂ ಅವರಿಗೊಂದು ಮಂತ್ರಿ ಪದವಿಯನ್ನು ಶ್ರೀಮಾನ್ ವೀರಪ್ಪಮೊಯಿಲಿಯವರು ಕೊಟ್ಟರು. ಮುಖ್ಯಮಂತ್ರಿಯವರ ಜೊತೆಯಲ್ಲಿ ರಾಜಭವನಕ್ಕೆ ಹೋಗಿ ರಾಜ್ಯಪಾಲರಿಂದ ಮಂತ್ರಿ ಪದವಿಯ ಪ್ರಮಾಣ ವಚನ ಸ್ವೀಕಾರ ಮಾಡಿದರು. ತದನಂತರ ಅವರಿಗೂ ಮುಖ್ಯಮಂತ್ರಿಯವರಿಗೂ ಯಾವುದೋ ಕಾರಣಕ್ಕೆ ವಿರಸ ತಲೆದೋರಿದಾಗ ಅದನ್ನು ಪರಿಹರಿಸಿಕೊಳ್ಳಲು ಕುಳಿತು ಮಾತನಾಡುವ ಬದಲು ಮುಖ್ಯಮಂತ್ರಿಗಳಿಗೆ ಎಚ್ಚರಿಕೆ ಕೊಟ್ಟು ರಾಜೀನಾಮೆ ಕೊಡುವ ಮಟ್ಟಕ್ಕೆ ಮಂತ್ರಿಗಳು ಹೋಗುವುದಾದರೆ ಪ್ರಜಾಪ್ರಭುತ್ವ ಎಲ್ಲಿ ಉಳಿಯುತ್ತದೆ ? ಇದು ಪ್ರಜಾಪ್ರಭುತ್ವಕ್ಕೆ ನಿಜವಾಗಿಯೂ ಕಂಟಕವಾಗುತ್ತದೆ. ಇದು ಅತ್ಯಂತ ಶೋಚನೀಯ. ಆದುದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸದನದ ಮೂಲಕ ಕಳಕಳಿಯಿಟ್ಟುಕೊಂಡು ಹೇಳುತ್ತಿದ್ದೇನೆ, ಅಂತಹ ಮಂತ್ರಿಗಳು ದಿನಕ್ಕೆ ಒಬ್ಬೊಬ್ಬರು ರಾಜೀನಾಮೆ ಕೊಟ್ಟರೆ ನಿಮಗೇನೂ ಅಗೌರವವಾಗುವುದಿಲ್ಲ. ಅಂತಹವರನ್ನೆಲ್ಲಾ ಲೆಕ್ಕ ಹಾಕಿ ಯಾರನ್ನು ತೆಗೆಯಬೇಕೋ ತೆಗೆದುಬಿಡಿ. ಸುಮ್ಮನೆ ದಿನಬೆಳಗಾದರೆ ಒಬ್ಬೊಬ್ಬ ಮಂತ್ರಿಗಳು ರಾಜೀನಾಮೆ ಕೊಡುವುದು, ನಿಮ್ಮನ್ನು ಹೆದರಿಸುವುದು ಸರಿಯಲ್ಲ, ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎರಡು ತಿಂಗಳಾಯಿತು. ಇಷ್ಟು ವಿಷಯ ಬಿಟ್ಟರೆ ನಾವು ನಿಮ್ಮ ಮೇಲೆ ಇನ್ನೇನು ಹೇಳಬೇಕಾಗುತ್ತದೆ ? ಇನ್ನು ಮುಂದಿನ ವರ್ಷದ ಆಯವ್ಯಯದ ಸಮಯದಲ್ಲಿ ನೀವು ಏನೇನು ಮಾಡಿದ್ದೀರಿ ಎನ್ನತಕ್ಕವರ ಬಗ್ಗೆ ಒಂದು ದೊಡ್ಡ ಆರೋಪಣಾ ಪಟ್ಟಿ ಮಾಡಿ ಸಲ್ಲಿಸಬಹುದು. ಇದರ, ಇವೊತ್ತಿನ ಪರಿಸ್ಥಿತಿಯಲ್ಲಿ ನೀವು ಹೋಗುತ್ತಿದ್ದೀರಿ, ನಿಮ್ಮ ಕಾಲೆಳೆಯುವತಕ್ಕಂಥ ವ್ಯವಸ್ಥೆ ಸಿದ್ಧವಾಗಿದೆ. ಆದುದರಿಂದ ತಾವು ಇದರ ಬಗ್ಗೆ ಎಚ್ಚರವಹಿಸಲಿಲ್ಲವೆಂದರೆ ಅತ್ಯಂತ ಶೋಚನೀಯವಾದಂಥ ಪರಿಸ್ಥಿತಿಗೆ ತಾವು ಸಿಲುಕುತ್ತೀರಿ.

4.00 ಪಿ.ಎಂ.

ಶ್ರೀಮತಿ ಮೋಟಮ್ಮ:- ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ ಇವತ್ತೇ ಮುಗಿಯಬೇಕಾಗಿದೆ. ಆದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಪೀಠಿಕೆಯಲ್ಲಿಯೇ ಇಷ್ಟೊಂದು ಸಮಯ ತೆಗೆದುಕೊಂಡರೆ ಇನ್ನು ಉಳಿದಿರತಕ್ಕ ಸದಸ್ಯರು ಹೇಗೆ ಮಾತನಾಡಬೇಕೆಂಬುದು ಗೊತ್ತಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: - ಕರ್ನಾಟಕದ ಏಕೀಕರಣ 1956ರಲ್ಲಿ ಆಯಿತು. ಎಲ್ಲೆಲ್ಲಿ ಕನ್ನಡವನ್ನು ಮಾತನಾಡತಕ್ಕ ಜನರಿದ್ದಾರೋ ಅವರೆಲ್ಲರೂ ಕೂಡ ಒಂದಾಗಿ ಸೇರಿ ಇದು ಕರ್ನಾಟಕವಾಗಬೇಕೆಂದು ಹೇಳಿ ಕರ್ನಾಟಕದ ಏಕೀಕರಣಕ್ಕಾಗಿ ದೊಡ್ಡ ಹೋರಾಟವೇ ನಡೆಯಿತು. ಕರ್ನಾಟಕ ಭಾಷಾವಾರು ಪ್ರಾಂತ್ಯವಾಯಿತು. ಇವತ್ತು ನಾವು ಶ್ರೀಮಾನ್ ನಿಜಲಿಂಗಪ್ಪನವರನ್ನು, ಜಿ. ಬಿ. ಹಳ್ಳಿಕೇರಿಯನ್ನು, ಎಸ್. ಆರ್. ಕಂಠಿಯವರನ್ನು, ಅನ್ನದಾನಪ್ಪ ದೊಡ್ಡ ಮೇಟಿ, ಗೋಪಾಲಗೌಡರು, ವಾಲಿ

ಚನ್ನಪ್ಪನವರುಗಳನ್ನು ನೆನೆಯಬೇಕು. ಅವರು ಕರ್ನಾಟಕದ ಏಕೀಕರಣಕ್ಕಾಗಿ ದೊಡ್ಡ ಬುನಾದಿಯನ್ನು ಹಾಕಿ ಕರ್ನಾಟಕ ಏಕೀಕರಣ ಮಾಡಿದ್ದರು. ನಂತರ ಮೈಸೂರಿಗೆ ಕರ್ನಾಟಕವೆಂದು ನಾಮಕರಣ ಮಾಡಿದರು. ಮಹಾಪುರುಷ ಶ್ರೀಮಾನ್ ದೇವರಾಜ ಅರಸುರವರು ನಾವು ಅವರನ್ನು ನೆನೆಯಬೇಕಾಗುತ್ತದೆ. ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ದೊಡ್ಡ ಹೋರಾಟ ನಡೆಯಿತು, ಮೈಸೂರಿನ ಹೆಸರನ್ನು ಬದಲಾವಣೆ ಮಾಡಬಾರದು ಎಂದು ಹೋರಾಟ ನಡೆಯಿತು. ಆದರೆ ಮಾನ್ಯ ದೇವರಾಜ ಅರಸುರವರು ಅಧಿಕಾರಕ್ಕೆ ಬಂದನಂತರ ಕರ್ನಾಟಕ ಎನ್ನತಕ್ಕ ನಾಮಕರಣವನ್ನು ಮಾಡಿದರು. ಶ್ರೀಮಾನ್ ನಿಜಲಿಂಗಪ್ಪನವರು ಕರ್ನಾಟಕ ಏಕೀರಣದ ಪ್ರಥಮ ಅಧ್ಯಕ್ಷರಾದರು. ಹಿಂದೆ ಸಚಿವರಾಗಿದ್ದ ದಿವಂಗತ ಬಸವಲಿಂಗಪ್ಪನವರು ಕರ್ನಾಟಕ ಏಕೀಕರಣಕ್ಕೆ ಕಾರ್ಯದರ್ಶಿಗಳಾಗಿದ್ದರು. ಈ ದೃಷ್ಟಿಯಿಂದ ನೋಡಿದಾಗ ಕರ್ನಾಟಕ ಏಕೀಕರಣ, ಮಂತ್ರಿಕಣ, ಶಕ್ತಿಕಣ, ಕರ್ನಾಟಕಕ್ಕೆ ಒಂದು ಮಂತ್ರ ಶಕ್ತಿ ಇದೆ, ಈ ನಾಡಿನ ಮಣ್ಣಿನಲ್ಲಿ ಒಂದು ಸಮಗ್ರ ಶಕ್ತಿ ಇದೆ.

(ಶ್ರೀ ಜಿ. ಎಸ್. ಆಚಾರ್‌ರವರು ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ನಾವೆಲ್ಲರೂ ಒಂದಾಗಬೇಕು, ಇಡೀ ಭಾರತದ ಉದ್ದಗಲಕ್ಕೂ ಭಾಷಾವಾರು ಪ್ರಾಂತ್ಯ ರಚನೆಯಾದ ಮೇಲೆ ಕರ್ನಾಟಕವಾಯಿತು. ಆದರೆ ಇವತ್ತು ಅನೇಕ ಕಡೆ ಅವರ ಬಗ್ಗೆ ಅಪಸ್ವರ ಬರುತ್ತಿದೆ. ಕರ್ನಾಟಕದ ಏಕೀಕರಣ ಸರಿಯಾಗಿಲ್ಲ, ನಮಗೆ ನ್ಯಾಯ, ನಮಗೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ. ನ್ಯಾಯ ಅನ್ಯಾಯಕ್ಕಲ್ಲ ಕರ್ನಾಟಕವಾದದ್ದು.

ಶ್ರೀ ಎಸ್. ಜಿ. ನಾಯಕ್:- ಮಾನ್ಯ ವಾಟಾಳ್‌ರವರು ಇಂದು ಶ್ರೀ ಮಾನ್ಯ ದೇವರಾಜ ಅರಸುರವರನ್ನು ಹೊಗಳುತ್ತಿದ್ದಾರೆ. ಅವರು ಇದ್ದಾಗ ಅವರ ವಿರುದ್ಧ ಇವರು ಸಿಡಿದೆದ್ದರು. ವಾಟಾಳ್ ನಾಗರಾಜ್, ಗುಂಡೂರಾವ್, ವೀರಪ್ಪಮೊಯ್ಲಿ ಈ ಮೂರು ಜನರು ಹೊರಗೆ ಬಂದರು. ಇವತ್ತು ಅವರನ್ನು ಹೊಗಳುತ್ತಿದ್ದಾರೆ ಇದರೆ ಅವರನ್ನು ಅವತ್ತೆ ಸಾಯಿಸಿ ಬಿಟ್ಟಿದ್ದರು. ಅವರು, ರಘುಪತಿಯವರು ಮತ್ತೆ ಗುಂಡೂರಾವ್‌ರವರು ಸಿಡಿದು ನನ್ನ ಕ್ಷೇತ್ರಕ್ಕೆ ಬಳ್ಳಾರಿಯ ಕಡೆಯಿಂದ ಬಂದಾಗ ಅವರನ್ನು ನಾನು ಬರಮಾಡಿಕೊಂಡೆ. ಅವತ್ತು ಕಾಂಗ್ರೆಸ್ 'ಐ', ಇಂದಿರಾಗಾಂಧಿಯವರ ಕಡೆ ಇದ್ದರು, ನಂತರ ದೇವರಾಜ ಅರಸರನ್ನು ಬಿಟ್ಟು ಬಂದರು.

ಶ್ರೀ ವಾಟಾಳ್ ನಾಗರಾಜ್:- ಪಾಪ ಅವರು ಬಹಳ ಒಳ್ಳೆಯವರು. ಅವರಿಗೆ ಏನೂ ಗೊತ್ತಿಲ್ಲವೆಂದು ಸುಮ್ಮನಿದ್ದೇವೆ.

ಒಬ್ಬ ಮಾನ್ಯ ಸದಸ್ಯರು:- ಏಕೆಂದರೆ ನೀವು ಬೆಳಿಗ್ಗೆ ಒಂದು, ಸಂಜೆ ಒಂದು ಮಾತನಾಡುತ್ತೀರಿ. ಅದಕ್ಕೆ ಅವರು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.- ನಾನು ಬೆಳಿಗ್ಗೆ ಒಂದು ಸಂಜೆ ಒಂದು ಹೇಳುತ್ತೇನಂತೆ. ಅವರಲ್ಲಿಗೂ ಮೂರು ಜನ ಮುಖ್ಯಮಂತ್ರಿಗಳ ಪಾಲಾಗಿ ಹೋದರು. ಮೊದಲು ವೀರೇಂದ್ರ ಪಾಟೀಲ್‌ರವರನ್ನು ಉರುಳಿಸಿದರು, ನಂತರ ಬಂಗಾರಪ್ಪನವರನ್ನು ಉರುಳಿಸಿದರು. ಈಗ ಮೊಯ್ಲಿಯವರನ್ನು ಉರುಳಿಸಲು ತೀರ್ಮಾನ ಮಾಡಿದ್ದೀರ? ಆದುದರಿಂದ ಬೇರ ಪ್ರಶ್ನೆ ಇಲ್ಲಿ ಬೇಡ. ಭಾವೈಕ್ಯತೆ ಬಗ್ಗೆ ಸಮಗ್ರವಾಗಿ ನಮ್ಮ ನೀತಿಯಲ್ಲಿ ಎಂದೆಂದಿಗೂ ಬದಲಾವಣೆಯಾಗಕೂಡದು. ನಮ್ಮ ಕೊನೆಯ ಉಸಿರು ಇರುವವರೆಗೂ ಕರ್ನಾಟಕ ಒಂದೇ, ಕರ್ನಾಟಕ ಬೇರೆ ಎಂದು ಹೇಳತಕ್ಕ ಅಪಸ್ವರ ಬರುವುದಕ್ಕೆ ಸಾಧ್ಯವೇ ಇಲ್ಲ.

ಯಾವುದೇ ಭಾಗಗಳಿಗೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದು ಸರ್ಕಾರದ ಅತ್ಯಂತ ಆದ್ಯ

ಕರ್ತವ್ಯ. ನಮ್ಮ ಈ ಕರ್ನಾಟಕ 1956ರಿಂದ ಇದುವರೆಗೆ ಏನಾಗಿದೆ. 1956ರಲ್ಲಿ ಮುಕ್ಕೋಟಿ ಕನ್ನಡಿಗರು, ಅಂದರೆ 3 ಕೋಟಿ ಕನ್ನಡಿಗರು ಇದ್ದೆವು. ಈಗ ಬರುಬರುತ್ತಾ ಸುಮಾರು 5 ಕೋಟಿಗೆ ಬಂದಿದ್ದೇವೆ. ಈ 5 ಕೋಟಿ ಜನರು ಯಾವ ರೀತಿ ಆದರು ಎಂದರೆ, ಹೊರನಾಡಿನಿಂದ ಅಂದರೆ ಕೇರಳ, ಆಂಧ್ರ, ತಮಿಳ್ನಾಡಿನಿಂದ ಇನ್ನೂ ಬೇರೆ ಬೇರೆ ರಾಜ್ಯಗಳಿಂದ ಕರ್ನಾಟಕಕ್ಕೆ ವಲಸೆ ಬರುತ್ತಿದ್ದಾರೆ. ಸುಮಾರು 1 ಕೋಟಿಗಿಂತ ಹೆಚ್ಚಿಗೆ ಜನರು ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ. ಈ ರೀತಿ ವಲಸೆ ಬರುವುದಾದರೆ, ಭಾಷಾವಾರು ನೀತಿಗೆ ವಿರುದ್ಧ, ಜೊತೆಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ನಮ್ಮ ಮೇಲೆ ತೀವ್ರ ಅಪಾಯವಾಗುತ್ತಿದೆ. ಈ ಬಗ್ಗೆ ಸರ್ಕಾರ ಪರಿಣಾಮಕಾರಿ ಕ್ರಮವನ್ನು ಕೈಗೊಂಡು ಹೊರಗಿನಿಂದ ವಲಸೆ ಬರುತ್ತಿರುವವರನ್ನು ತಡೆಹಿಡಿಯದಿದ್ದರೆ ಕರ್ನಾಟಕದಲ್ಲಿ ಕನ್ನಡಿಗರೇ ಅಲ್ಪಸಂಖ್ಯಾತರಾಗಬೇಕಾದ ಪರಿಸ್ಥಿತಿ ಬರುತ್ತದೆ. ಅಂತಿಮವಾಗಿ ಮತ್ತೊಂದು ಅಸ್ಸಾಂ ಪರಿಸ್ಥಿತಿ ನಮ್ಮ ಕರ್ನಾಟಕದಲ್ಲಿ ನಿರ್ಮಾಣವಾಗುತ್ತದೆ. ಇದರಲ್ಲಿ ಅನುಮಾನವೇ ಇಲ್ಲ. ಯಾರು ಏನನ್ನೇ ಹೇಳಲಿ. ಸರ್ಕಾರವನ್ನು ನಡೆಸುವವರು, ರಾಜ್ಯದ ವಿವಿಧ ಪಕ್ಷಗಳ ಮುಖಂಡರು, ಚಿಂತಕರು ಎಲ್ಲರೂ ಇದನ್ನು ಚಿಂತನೆ ಮಾಡಬೇಕಾಗುತ್ತದೆ. ಆ ಪರಿಸ್ಥಿತಿ ಇಲ್ಲವೆಂದರೆ ಇದು ಬಹಳ ಶೋಚನೀಯ. ತಮಗೆ ಹೇಳುವುದಾದರೆ, ಕೇರಳವಾಗಲೀ, ಆಂಧ್ರವಾಗಲಿ, ತಮಿಳ್ನಾಡು ಆಗಲಿ ಅಲ್ಲಿ ನಮ್ಮಿಂದ ಹೋದಂಥ ಜನರು ಇಷ್ಟು ಇಲ್ಲ. ಇವತ್ತು ನಮ್ಮ ಬೆಳಗಾಂನ ಪರಿಸ್ಥಿತಿ ಏನಾಗಿದೆ, ಮಡಿಕೇರಿ ಗತಿ, ಕೊಡಗಿನ ಗತಿ ಏನಾಗಿದೆ, ಅದೇ ರೀತಿ ಬೆಂಗಳೂರಿನ ಗತಿ ಏನಾಗಿದೆ, ಈ ರೀತಿ ಜಿಲ್ಲಾವಾರು ತೆಗೆದುಕೊಂಡಾಗ ಈ ವಲಸೆಯ ರೋಗ ರಾಜ್ಯದ ಮೂಲೆಮೂಲೆ ಮುಟ್ಟಿ ಅಂತಿಮವಾಗಿ ಕರ್ನಾಟಕದ ಹಿತಕ್ಕೆ, ಕನ್ನಡಿಗರ ಹಿತಕ್ಕೆ, ಕನ್ನಡ ಭಾಷೆಯ ಹಿತಕ್ಕೆ ಧಕ್ಕೆ ಬರುತ್ತದೆ ಇದು ಅಂತಿಮವಾಗಿ ಒಂದು ದೊಡ್ಡ ಯುದ್ಧಕ್ಕೆ ನಾಂದಿ ಆದೀತೆಂಬ ಒಂದು ಎಚ್ಚರಿಕೆಯನ್ನು ನಾನು ಸರ್ಕಾರಕ್ಕೆ ಕೊಡುತ್ತಿದ್ದೇನೆ. ಸರ್ಕಾರ ಇದನ್ನೇ ಪರಿಣಾಮಕಾರಿಯಾಗಿ ಯೋಚನೆ ಮಾಡದಿದ್ದರೆ ನಮ್ಮವರಿಗೆ ಇಲ್ಲಿ ಕೆಲಸವೂ ಇಲ್ಲ, ನಮ್ಮವರಿಗೆ ನಿವೇಶನವಿಲ್ಲ. ನಮ್ಮವರಿಗೆ ಆಸ್ತಿಯೂ ಇಲ್ಲ. ಕೊನೆಗೆ ನಮ್ಮವರಿಗೆ ಉಸಿರಾಡುವುದಕ್ಕೆ ಗಾಳಿಯೂ ಸಿಕ್ಕದಂಥ ಪರಿಸ್ಥಿತಿ ಕರ್ನಾಟಕದಲ್ಲಿ ನಿರ್ಮಾಣವಾಗುತ್ತದೆ.

ಇನ್ನು ಗಡಿ ಸಮಸ್ಯೆ ಬಗ್ಗೆ ನಾವು ಮೊದಲಿಂದಲೂ ಸಮಗ್ರವಾಗಿ ಚಿಂತನೆ ಮಾಡಿದ್ದೇವೆ. ಒಂದು ಹೊರನಾಡ ಕನ್ನಡಿಗರು, ಮತ್ತು ನಮ್ಮ ಗಡಿನಾಡ ಕನ್ನಡಿಗರು. ಹೊರನಾಡ ಕನ್ನಡಿಗರು ಎಂದರೆ ಕಾಸರಗೋಡಿನ ಪರಿಸ್ಥಿತಿ ಒಂದು ಕಾಲದಲ್ಲಿ ಅಚ್ಚ 16 ಆಣೆ ಕನ್ನಡದ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂಬ ಚಿಂತನೆ ಇತ್ತು. ಇವತ್ತು ಕೇವಲ ಕಾಸರಗೋಡು ಅಲ್ಲ. ಇಡೀ ಮಂಗಳೂರು ಕೇರಳಕ್ಕೆ ಹೋಗಬಹುದೇನೋ ಎಂಬ ಪರಿಸ್ಥಿತಿ ಉದ್ಭವವಾಗಿದೆ. ಇದನ್ನು ನಾವು ಚಿಂತನೆ ಮಾಡತಕ್ಕದ್ದು ನಮ್ಮ ಕರ್ತವ್ಯ. ಕಾಸರಗೋಡಿನ ಬಗ್ಗೆ, ಮೈಸೂರು ಜಿಲ್ಲೆಯ ಚಾಮರಾಜನಗರದ ಪಕ್ಕದ ತಾಳವಾಡಿಯ ಬಗ್ಗೆ, ಹೊಸೂರಿನ ಬಗ್ಗೆ, ಅಕ್ಕಲಕೋಟೆಯ ಬಗ್ಗೆ, ಸೊಲ್ಲಾಪುರದ ಬಗ್ಗೆ, ಆದವಾನಿಯ ಬಗ್ಗೆ ಹೀಗೆ ಕನ್ನಡದ ಎಲ್ಲಾ ನೆಲಗಳೂ ಕರ್ನಾಟಕದಿಂದ ಹೊರಗಡೆ ಉಳಿದಿವೆ. ಇವತ್ತು ಏನಾಗಿದೆ ಎಂದರೆ, ಅಲ್ಲಿನ ರಾಜ್ಯಗಳವರು ಇವರನ್ನು ಹೊರಗಿನವರೆಂದು ನಮ್ಮ ರಾಜ್ಯದವರೂ ಈ ಜನರನ್ನು ಹೊರಗಿನವರೆಂದು ಭಾವಿಸಿರುವುದರಿಂದ ಈ ಹೊರನಾಡ ಕನ್ನಡಿಗರಿಗೆ ಅವರಲ್ಲೂ ಅನುಕೂಲವಿಲ್ಲ, ನಮ್ಮಲ್ಲೂ ಅನುಕೂಲವಿಲ್ಲ; ತ್ರಿಶಂಕು ಸ್ವರ್ಗವಾಗಿದ್ದಾರೆ. ಏಕೆಂದರೆ ನಾವೂ ಅವರಿಗೆ ಸಹಕಾರ ಕೊಡುತ್ತಿಲ್ಲ. ಅಲ್ಲಿರುವವರೂ ಸಹಕಾರ ಕೊಡುತ್ತಿಲ್ಲ. ಹೊರನಾಡ ಕನ್ನಡ ಪ್ರದೇಶಗಳಲ್ಲಿ ಕನ್ನಡಿಗರಿಗೆ ಯಾವುದೇ ಸೌಲಭ್ಯಗಳಿಲ್ಲ, ಕನ್ನಡ ಶಾಲೆಗಳಿಲ್ಲ, ಕನ್ನಡಿಗರಿಗೆ ಕೆಲಸವಿಲ್ಲ. ಇಂಥ ನೂರಾರು ಸಮಸ್ಯೆಗಳನ್ನು ಎದುರಿಸುತ್ತಾ, ಅವರು ದೊಡ್ಡ ನರಕಯಾತನೆ ಅನುಭವಿಸುತ್ತಿದ್ದಾರೆ. ಹಾಗಾದರೆ ಗಡಿನಾಡ ಕನ್ನಡಿಗರ ಬಗ್ಗೆ ಸರ್ಕಾರದ ಚಿಂತನೆ ಏನು ? ಗಡಿನಾಡನ್ನು ಬೆಳೆಸುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಒಂದು ಮಾತನ್ನು ಹೇಳುವುದಾದರೆ, ಗಡಿನಾಡಿನ

ಅಭಿವೃದ್ಧಿಯ ಬಗ್ಗೆ ಈ ಸದನದಲ್ಲಿ ಪ್ರಪ್ರಥಮವಾಗಿ ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾದ ವಾರನೇ ದಿನವೇ ನಾನು ಹೇಳಿದೆ. ಕರ್ನಾಟಕದ ಗಡಿನಾಡ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿ, ಈ ಗಡಿಗಳು ಬೆಳೆಯುವುದಕ್ಕೆ ಸಮಗ್ರವಾಗಿ ಹಣದ ಸಹಾಯ ಮಾಡಬೇಕೆಂದು ನಾನು ಹೇಳಿದೆ. ಇವತ್ತು ಈ ರಾಜ್ಯಪಾಲರ ಭಾಷಣದಲ್ಲಿ ಆ ಬಗ್ಗೆ ಒಂದೇ ಒಂದು ಚಿಂತನೆ ಇಲ್ಲ. ಗಡಿನಾಡನ್ನು ಬೆಳೆಸತಕ್ಕ ಚಿಂತನೆ ಸ್ವಲ್ಪವೂ ಇಲ್ಲ.

ಈ ಬಗ್ಗೆಯೂ ಕೂಡ ನಾವು ಸಮಗ್ರವಾದ ಚಿಂತನೆಯನ್ನು ಮಾಡಬೇಕು. ಮಹಾಜನ್ ವರದಿ ಏನಾಯಿತು; ಮಹಾಜನ್ ವರದಿಗೋಸ್ಕರ ನಿರಂತರ ಹೋರಾಟ ನಡೆಯಿತು. ಸಮಗ್ರ ಹೋರಾಟ ನಡೆಯಿತು. ಈ ಹೋರಾಟದ ಅಂತಿಮವಾಗಿ ಮಹಾಜನ್ ವರದಿ ಕೇಂದ್ರ ಸರ್ಕಾರದ ಲೋಕಸಭೆಯ ಹೊರಗಡೆ ಕಸದ ತೊಟ್ಟಿಯಲ್ಲಿ ಬಿದ್ದಿತ್ತು. ಯಾರೂ ಇದರ ಬಗ್ಗೆ ಚಿಂತನೆ ಮಾಡಲಿಲ್ಲ. ಎಷ್ಟು ವರ್ಷ ಬೇಕು, ಮಹಾಜನ್ ವರದಿಯನ್ನು ಕಾರ್ಯಗತ ಮಾಡಲಿಕ್ಕೆ ಎಷ್ಟು ವರ್ಷ ಬೇಕು. ಇದರ ಬಗ್ಗೆ ಸರ್ಕಾರಕ್ಕೆ ಚಿಂತನೆ ಇಲ್ಲ. ಮತ್ತೊಂದು ಕಾಸರಗೋಡಿನ ಬಗ್ಗೆ ತಾಳವಾಡಿಯ ಬಗ್ಗೆ, ಹೊಸೂರಿನ ಬಗ್ಗೆ ಸೊಲ್ಲಾಪುರದ ಬಗ್ಗೆ, ಅಕ್ಕಲಕೋಟೆ, ಅದ್ವಾನಿಯ ಬಗ್ಗೆ ಈ ಎಲ್ಲಾ ಪ್ರದೇಶಗಳ ಬಗ್ಗೆ ಒಂದು ವಿಶೇಷವಾದಂಥ, ಅವರಿಗೆ ಸೌಲಭ್ಯ ದೊರಕಿಸುವುದಕ್ಕೋಸ್ಕರವಾಗಿ ನಮ್ಮ ನಿಯೋಗ ಪಾರ್ಲಿಮೆಂಟ್ ಸದಸ್ಯರನ್ನು ಪ್ರಧಾನಿಗಳನ್ನು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಅಲ್ಲಿನ ಕನ್ನಡಿಗರಿಗೆ ಸೌಲಭ್ಯವನ್ನು ಒದಗಿಸುವುದಕ್ಕೆ ನಾವೆಲ್ಲರೂ ಪಕ್ಷಾತೀತವಾದ ಒಂದು ಪ್ರಯತ್ನವನ್ನು ಮಾಡಬೇಕೆನ್ನುವ ಮಾತನ್ನು ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಇನ್ನು ಕನ್ನಡ ಭಾಷೆಯ ಬೆಳವಣಿಗೆಯ ಬಗ್ಗೆ ಹೇಳುವುದಾದರೆ ಎಲ್ಲಿದೆ ಕನ್ನಡ ಭಾಷೆ, ಏನಾಗಿದೆ ಇವತ್ತು. ನಾವು ಆಡಳಿತ ಕನ್ನಡ ಎಂದು ಹೇಳುತ್ತೇವೆ, ಹೆಸರಿಗೆ ಮಾತ್ರ. ಆದರೆ ಆಡಳಿತ ಕನ್ನಡ ಎಲ್ಲಿದೆ ? ಮೊನ್ನೆ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮುಖ್ಯಮಂತ್ರಿಗಳು ಹೋದರು. ಆ ನಮ್ಮ ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಾದಂಥ ಶ್ರೀಮಾನ್ ವಿಶ್ವನಾಥ್‌ರವರು ಅಲ್ಲಿ ಇದ್ದರು. ಮಾನ್ಯ ವಿಶ್ವನಾಥ್‌ರವರಿಗೆ ಆ ಒಂದು ಇಲಾಖೆಯು ಸಿಕ್ಕಿದ್ದು ನನಗೆ ಬಹಳ ಸಂತೋಷ. ಅವರು ಕನ್ನಡ ಚಳುವಳಿಯಲ್ಲಿ ಹಗಲುರಾತ್ರಿ ಓಡಾಡಿಕೊಂಡಿದ್ದಂಥ ಒಬ್ಬ ವ್ಯಕ್ತಿ, ನನಗೆ ಅತ್ಯಂತ ಸಂತೋಷವಾದಂಥ ಸುದ್ದಿ. ಕನ್ನಡ ಆಡಳಿತ ಭಾಷೆಗೆ, ಕನ್ನಡ ಸಂಸ್ಕೃತಿ ಇಲಾಖೆಗೆ ತಾವು ಕೊಟ್ಟಿರತಕ್ಕದ್ದು ಒಂದು ರಾಜ್ಯ ಮಂತ್ರಿ ಪದವಿ. ಏತಕ್ಕೆ ಸ್ವಾಮಿ, ಇದಕ್ಕೆ ಸಚಿವ ಸಂಪುಟ ದರ್ಜೆಯ ಮಂತ್ರಿಯನ್ನು ಏತಕ್ಕೆ ಕೊಡಲಿಲ್ಲ. ನೀವು ಅಲ್ಲೇ ಕನ್ನಡಕ್ಕೆ ಅಗೌರವ ಮಾಡಿದ್ದೀರಿ ಮಾನ್ಯ ವಿಶ್ವನಾಥ ಬರಬಹುದು, ಇನ್ನೊಬ್ಬರು ಬರಬಹುದು. ಕನ್ನಡ ಸಂಸ್ಕೃತಿ ಇಲಾಖೆಗೆ ವಿಶೇಷವಾಗಿ ಒಬ್ಬ ಸಚಿವ ಸಂಪುಟ ದರ್ಜೆಯ ಮಂತ್ರಿಯನ್ನು ಮಾಡಬೇಕಾಗಿತ್ತು. ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕಾಗಿತ್ತು. ಇದಕ್ಕಾಗಿ ಕನ್ನಡ ಸಂಸ್ಕೃತಿ ಇಲಾಖೆಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ? ಅಲ್ಲಿಂದ ಧಾರಾಳವಾಗಿ ಕನ್ನಡದ ಬಗ್ಗೆ ಧ್ವನಿ ಎತ್ತುವುದಕ್ಕೆ, ಕನ್ನಡದ ಬಗ್ಗೆ ಕೈಮುಗಿಯುವುದಕ್ಕೆ ಯಾವ ಯಾವ ಅಧಿಕಾರವೂ ಇಲ್ಲದಂತೆ ಮಾಡಿದ್ದೀರಿ. ಎಷ್ಟು ಹಣ ನೀವು ಕೊಟ್ಟಿರತಕ್ಕಂಥದ್ದು ? ಈ ಪರಿಸ್ಥಿತಿಯಾದರೆ ಕನ್ನಡಕ್ಕೆ ನೀವು ತೀವ್ರವಾಗಿ ಅಗೌರವ ಮಾಡಿದಂತಾಗುತ್ತದೆ. ಮಾನ್ಯ ಸಚಿವರು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಏನು ಹೇಳಿದರೆಂದರೆ, ಇವತ್ತು ಸಮ್ಮೇಳನ ಮುಗಿದು ನಾಳೆ ವಿಧಾನಸೌಧಕ್ಕೆ ಹೋದ ನಂತರ, ವಿಧಾನಸೌಧದಲ್ಲಿರತಕ್ಕಂಥ ಇಂಗ್ಲೀಷಿನ ನಾಮಫಲಕಗಳಿಗೆಲ್ಲ ಡಾಂಬರ್ ಬಳಿಯುತ್ತೇನೆಂದು ಹೇಳಿದರು. ಈ ರೀತಿ ಹೇಳಿದವರು ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರು. ನಾನು ಅವರು ಹೇಳಿದ ಸಮಯದಿಂದ ಒಂದೇ ಸಮನೆ ಎಚ್ಚರದಿಂದ ನೋಡುತ್ತಿದ್ದೇನೆ. ಯಾವ ನಾಮಫಲಕಕ್ಕೂ ಡಾಂಬರ್ ಹಚ್ಚಲಿಲ್ಲ. ನಾನು ನಾಳೆಯವರೆಗೂ ನೋಡುತ್ತೇನೆ. ಅವರು ಬಳಿಯಲಿಲ್ಲವೆಂದರೆ, ಒಂದನೇ ತಾರೀಖು ನಾನೇ ಬಳಿಯುತ್ತೇನೆ. ಅವರೇ ಹೇಳಿ, ಅಪ್ಪಣೆ ಕೊಡಿಸಿದ್ದಾರೆ. ಸರ್ಕಾರವೇ ಅಪ್ಪಣೆ ಕೊಡಿಸಿದೆ.

ಸರ್ಕಾರದ ಮಂತ್ರಿಗಳು ಹೇಳಿದ್ದಾರೆ ನಾವು ನಾಮಫಲಕಕ್ಕೆ ಡಾಂಬರ್ ಹಾಕುತ್ತೇವೆಂದು ಸರ್ಕಾರದ ಮಂತ್ರಿಗಳು ಹೇಳಿದ್ದಾರೆ. ನಾನು ಆಗಲೇ ಮಂತ್ರಿಗಳ ಬಗ್ಗೆ ಹೇಳಿದೆ. ನಮ್ಮ ಚೌಡರೆಡ್ಡಿಯವರು ಕುಳಿತಿದ್ದಾರೆ. ತಾವು ಬಂದಿದ್ದೀರಿ. ನಿಮಗೆ ಯಾವ ಇಲಾಖೆಯನ್ನು ಕೊಟ್ಟರೂ ನಾವು ಬಹಳ ಸಂತೋಷ ಪಡುತ್ತೇವೆ. ಮಾನ್ಯ ಧರ್ಮಸಿಂಗ್‌ರವರನ್ನು ನೋಡಿದರೆ ನನಗೆ ಬಹಳ ಖುಷಿಯಾಗುತ್ತದೆ. ಮಾನ್ಯ ಧರ್ಮಸಿಂಗ್ ಅವರಾಗಲಿ, ಮಾನ್ಯ ಖರ್ಗೆಯವರಾಗಲಿ, ಮಾನ್ಯ ರಂಗನಾಥ್‌ರವರಾಗಲಿ ಇವರೆಲ್ಲ ಬಹಳ ಲೆಕ್ಕಾಚಾರಸ್ಥರು. ಇವರು ಯಾವ ಮಂತ್ರಿ ಮಂಡಲದಲ್ಲಿಯೇ ಆಗಲಿ ಇವರು ಹೇಗೆ ಬರುತ್ತಾರೆ ನೋಡಿ. ಇವರ ಬಗ್ಗೆ ಸಂತೋಷಪಡುತ್ತೇನೆ. ಎಲ್ಲಾ ಮಂತ್ರಿಮಂಡಲದಲ್ಲೂ ತಾವು ಬರುತ್ತೀರಿ, ಅದಕ್ಕೆ ನನಗಂತೂ ಬಹಳ ಖುಷಿ. ಅದರ ಬಗ್ಗೆ ಎರಡು ಅಭಿಪ್ರಾಯವಿಲ್ಲ. ಮಾನ್ಯ ಧರ್ಮಸಿಂಗ್‌ರವರ ಬಗ್ಗೆ, ಮಾನ್ಯ ಖರ್ಗೆಯವರ ಬಗ್ಗೆ, ಮೊನ್ನೆ ಚೌಡರೆಡ್ಡಿಯವರ ಬಗ್ಗೆ ಎಲ್ಲೋ ಏನೋ ಹೇಳಿಬಿಟ್ಟರು. ಮಾನ್ಯ ಚೌಡರೆಡ್ಡಿಯವರಿಗೆ ಕನ್ನಡದ ಬಗ್ಗೆ ಬಹಳ ಅಪಾರವಾದಂಥ ಒಂದು ಚಿಂತನೆ ಇದೆ. ಆದ್ದರಿಂದ ನನಗೆ ಅನಿಸುತ್ತದೆ, ಇವರಿಗೆ ಸಮಾಜ ಕಲ್ಯಾಣ ಖಾತೆಯನ್ನು ಕೊಟ್ಟಿದ್ದಾರೆ, ಇವರಿಗೆ ಒಂದು ಒಳ್ಳೆಯ ಇಲಾಖೆಯನ್ನು ಕೊಡಲಿ. ಮಾನ್ಯ ಅಧ್ಯಕ್ಷರೇ, ಕೆಲವು ಬಗ್ಗೆ ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಇವರು ವಿಧಾನಸೌಧದಲ್ಲಿಯೇ ನನಗೆ ಕಾರ್ಯಾಲಯ ಬೇಕೆಂದು ಕುಳಿತುಕೊಳ್ಳಲಿಲ್ಲ.

ಶ್ರೀಮತಿ ಮೋಟಮ್ಮ:— ಏಕೆಂದರ ಸಮಾಜ ಕಲ್ಯಾಣ ಖಾತೆ ಒಳ್ಳೆಯದಲ್ಲವೆಂದು ಹೇಳುತ್ತೀರಾ ? ಒಳ್ಳೆಯ ಖಾತೆ ಕೊಡಬೇಕಾಗಿತ್ತು ಎಂದು ಹೇಳಿದಿರಲ್ಲ.

ಶ್ರೀ ವಾಟಾಳ್ ನಾಗರಾಜ್:— ನಾನು ಹಾಗೆ ಹೇಳಲಿಲ್ಲ, ಅವರಿಗೆ ಗೃಹಖಾತೆ ಕೊಟ್ಟು ತಮಗೆ ಸಮಾಜ ಕಲ್ಯಾಣ ಖಾತೆ ಕೊಡಲಿ ಎಂದು ನಾನು ಹೇಳುತ್ತೇನೆ.

ಶ್ರೀಮತಿ ಮೋಟಮ್ಮ:— ಧರ್ಮಸಿಂಗ್ ಅವರಿಗೆ ಸಮಾಜ ಕಲ್ಯಾಣ ಖಾತೆಯ ಜವಾಬ್ದಾರಿ ವಹಿಸಿ ಕೆಲಸ ನಿರ್ವಹಿಸಿದರೆ ಚೆನ್ನಾಗಿ ಕೆಲಸ ಆಗುತ್ತದೆ. ಅಧಿಕಾರಿಗಳನ್ನು ಚೆನ್ನಾಗಿ ಕಂಟ್ರೋಲ್ ಮಾಡುತ್ತಾರೆ. ಅಂಥವರಿಗೆ ಕೊಡಿ ಎಂದು ನೀವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:— ಅವರು ಯಾವ ಇಲಾಖೆ ಕೊಟ್ಟರೂ ಚೆನ್ನಾಗಿ ಮಾಡುತ್ತಾರೆ; ನಾನು ನೋಡಿದ್ದೇನೆ. ಇವರ ಬಗ್ಗೆ ನಾಲ್ಕು ಒಳ್ಳೆಯ ಮಾತು ಹೇಳತಕ್ಕದ್ದು ನನ್ನ ಕರ್ತವ್ಯ. ತಮಗೆ ಮಂತ್ರಿ ಪದವಿ ಸಿಗುತ್ತದೆಂದು ನಮಗೆಲ್ಲರಿಗೂ ಆಸೆ ಇತ್ತು. ಅದರಲ್ಲೇನು ಹಿಂದುಮುಂದು ಇಲ್ಲ. ಇದು ಪಕ್ಷಾತೀತವಾಗಿ ಹೇಳತಕ್ಕ ಮಾತು.

ಶ್ರೀ ಸಿ. ಎಂ. ಲಿಂಗಪ್ಪ:— ಇನ್ನು ಸಿಗುವುದಿಲ್ಲವೆಂದು ಹೇಳುತ್ತೀರಾ ?

ಶ್ರೀ ವಾಟಾಳ್ ನಾಗರಾಜ್:— ನನಗೆ ಅನುಮಾನ ಬಂದಿದೆ. ಏಕೆಂದರೆ ಸಂಖ್ಯೆ ಬಹಳವಾಗಿರುವುದರಿಂದ......

ಶ್ರೀ ಎನ್. ಟಿ. ನಾಯಕ್. ಇವರು ಏನು ಹೇಳುತ್ತಿದ್ದಾರೆಂದರೆ ಗೃಹ ಮಂತ್ರಿಗಳಾಗಿ ಪೋಲೀಸರನ್ನು ಶಿಸ್ತಿನಿಂದ ಇಟ್ಟುಕೊಂಡಿದ್ದರು. ಪೋಲೀಸರಿಗೆ ಶಿಸ್ತಿನಿಂದ ಇರಬೇಕೆಂದು ಹೇಳುತ್ತಿದ್ದರು. ಅದಕ್ಕೋಸ್ಕರ ಅವರಿಗೆ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:— ನಿಜವಾಗಿಯೂ ಮೋಟಮ್ಮನವರು ಈ ಸಭೆಗೆ ಒಂದು ಭೂಷಣ. ಅವರು ಮಂತ್ರಿಗಳಾಗುತ್ತಾರೆಂದು ನಾವೆಲ್ಲರೂ ಭಾವಿಸಿದ್ದೆವು. ನಿಮ್ಮ ಪಕ್ಷದಲ್ಲಿ ಇವರನ್ನು ಮಾಡಿ ಎಂದು ನಾವ್ಯಾರೂ ಹೇಳಿದವರಲ್ಲ. ನೀವು ಸದನದಲ್ಲಿ ಭಾಗವಹಿಸುತ್ತಿರತಕ್ಕದ್ದು, ಮತ್ತು ತಮ್ಮ

ಕಾರ್ಯಕಲಾಪ ನೋಡಿದಾಗ ಅನೇಕರಲ್ಲಿ ತಾವು ಮೊದಲಿಗರು ಎಂಬುದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ಚಂದ್ರೇಗೌಡರೂ ಸಹ ಅದೇ ಅಭಿಪ್ರಾಯ ಪಟ್ಟಿದ್ದರು. ಇಡೀ ನಮ್ಮ ಗುಂಪೆಲ್ಲ ಸಂತೋಷಪಟ್ಟಿದ್ದೆವು.

ಒಬ್ಬ ಮಾನ್ಯ ಸದಸ್ಯರು:- ಮಂತ್ರಿಯಾಗಲಿ ಎಂದು ಸಂತೋಷ.....

ಶ್ರೀ ವಾಟಾಳ್ ನಾಗರಾಜ್:– ಇದ್ದಿದ್ದರೆ ಮಾಡಿಸುತ್ತಿದ್ದಿರಿ. ನೀವು ನೀವೇ ಆಗಬೇಕೆಂದು ಹೋದರೆ ಹೇಗೆ ? ಕರಿಯಣ್ಣ, ನೀವೂ ಮಂತ್ರಿ ಆಗಬೇಕೆಂದರೆ ಅವರ ಗತಿ ಏನು ? ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರಾದ ವಿಶ್ವನಾಥ್‌ರವರು ಇಂಗ್ಲಿಷ್ ನಾಮಫಲಕಗಳಿಗೆಲ್ಲ ಡಾಂಬರು ಬಳಿಯುತ್ತೇವೆಂದು ಹೇಳಿದ್ದನ್ನು ತಾವು ಓದಿದ್ದೀರೋ ಇಲ್ಲವೋ ಗೊತ್ತಿಲ್ಲ, ಓದಿದ್ದೀರಿ. ಅವರು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಷಣ ಮಾಡುವಾಗ ಈ ರೀತಿ ಹೇಳಿದರು. ನಾನು ಮೆಚ್ಚಿದ್ದೆ. ಅಷ್ಟು ದಕ್ಷತೆಯಿಂದ ಈ ಒಂದು ಮಾತನ್ನು ಹೇಳಿದ ಮಂತ್ರಿಗಳನ್ನು ನಾನು ಅಭಿನಂದಿಸುತ್ತೇನೆ. ಆ ಕೆಲಸವನ್ನು ಅವರು ಮಾಡಬೇಕು. ಅವರು ಮಾಡಲಿಲ್ಲವೆಂದರೆ ಒಂದನೇ ತಾರೀಖಿನ ನಂತರ ನಾನೇ ಮಾಡುತ್ತೇನೆ. ಮೇಲ್ಗಡೆ ಇಂಗ್ಲೀಷ್ ಎಲ್ಲೆಲ್ಲಿದೆ ಅಲ್ಲೆಲ್ಲ ಡಾಂಬರ್ ಬಳಿಯಬೇಕಾಗುತ್ತದೆ. ಅದು ಬಿಟ್ಟರೆ ಬೇರೆ ಮಾತು ಇಲ್ಲ. ಬರೀ ಆಡಳಿತ ಭಾಷೆ ಎಂದು ಒಂದು ಹೆಸರು ಹೇಳಿದರೆ ಸಾಧ್ಯವಿಲ್ಲ. ಆಡಳಿತ ಭಾಷೆಗೆ ಸಮಗ್ರವಾದ ಶಕ್ತಿ ಕೊಡಬೇಕು. ಈ ಸದನದಲ್ಲಿಯೇ ಆಡಳಿತ ಭಾಷೆ ಇಲ್ಲ. ಅನೇಕ ಬಾರಿ ಈ ಸದನದಲ್ಲಿ ಇಂಗ್ಲೀಷ್ ಟಿಪ್ಪಣಿಗಳು, ಹೊತ್ತಿಗೆಗಳನ್ನು ಕೊಟ್ಟಾಗ ನಾನು ಹರಿದು ಬಿಸಾಟಿದ್ದೇನೆ. ಈ ಸದನ ಯಾವುದು ಇದೆ ಈ ಸದನದಿಂದ ಮಂಡಲ ಪಂಚಾಯಿತಿಯವರೆಗೂ ಸರ್ಕಾರದ ಸಮಗ್ರ ಆಡಳಿತ ಕನ್ನಡದಲ್ಲಿ ಆಗಬೇಕು. ಈಗ ಕನ್ನಡದಲ್ಲಿ, ಆಗಿದೆಯೆ ? ಸಂಪೂರ್ಣ ಇಲ್ಲ. ಈ ಬಗ್ಗೆ ಕನ್ನಡದಲ್ಲಿ ಸಮಗ್ರ ಆಡಳಿತ ನಡೆದಿದೆಯೇ ಇಲ್ಲವೇ ಎಂಬ ಬಗ್ಗೆ ಒಂದು ಶ್ವೇತಪತ್ರವನ್ನು ಸರ್ಕಾರ ಹೊರಡಿಸಬೇಕು. ಸಮಗ್ರವಾಗಿ ಆಡಳಿತದಲ್ಲಿ ಕನ್ನಡವನ್ನು ಯಾವಾಗಿನಿಂದ ಮಾಡಿದ್ದೇವೆಂದು ಹೇಳಿದ್ದಾರೆ. ಅಂದಿನಿಂದ ಇಂದಿನವರೆಗೆ ಈ ಆಡಳಿತ ಭಾಷೆಯ ಒಂದು ಪ್ರಗತಿ ಏನು, ಎಲ್ಲಿಯವರೆಗೆ ಬೆಳೆದಿದೆ, ಜಿಲ್ಲಾವಾರು, ತಾಲ್ಲೂಕಾವಾರು ಪ್ರತಿ ಇಲಾಖೆಯ ಆಡಳಿತ ಎಲ್ಲವನ್ನು ಲೆಕ್ಕ ಹಾಕಿ ಸರ್ಕಾರ ಶ್ವೇತಪತ್ರವನ್ನು ಹೊರಡಿಸಬೇಕು. ಇಲ್ಲದಿದ್ದರೆ ಆಡಳಿತ ಭಾಷೆ ಎಂದು ಹೇಳತಕ್ಕ ತತ್ವಕ್ಕೆ ಡೋಂಗಿ, ಬುರುಡೆ ಎಂಬ ಕೆಟ್ಟ ಹೆಸರು ಬರುತ್ತದೆ. ನಿಮಗೆ ಕನ್ನಡದ ಬಗ್ಗೆ ನಿಜವಾದ ಗಂಭೀರವಾದ ಚಿಂತನೆ ಇದ್ದರೆ, ಆಸ್ಥೆ ಇದ್ದರೆ, ಹೃದಯವಂತಿಕೆ ಇದ್ದರೆ ಕನ್ನಡ ಆಡಳಿತ ಭಾಷೆಯ ಬಗ್ಗೆ ಸಮಗ್ರವಾದ ಶ್ವೇತಪತ್ರವನ್ನು ಈ ಸದನದ ಮುಂದೆ ಮಂಡಿಸಬೇಕು. ಕನ್ನಡ ಮತ್ತು ಸಂಸ್ಕೃತ ಇಲಾಖೆ ಬಹಳ ಸೊರಗಿದೆ. ಅದು ಬೇರೆ ಇಲಾಖೆಯಷ್ಟು ಚೈತನ್ಯ ಪೂರ್ಣವಾಗಿಲ್ಲ. ಆ ಇಲಾಖೆಗೆ ಹೆಚ್ಚಿನ ಶಕ್ತಿಯನ್ನು ಸರ್ಕಾರ ಕೊಡಬೇಕು ಮತ್ತು ಹೆಚ್ಚಿನ ಹಣ ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕರ್ನಾಟಕದ ಅಕಾಡೆಮಿಗಳ ಬಗ್ಗೆ ಹೇಳುವುದಾದರೆ, ಮೊನ್ನೆ ತುಳು ಅಕಾಡೆಮಿ ಮಾಡಿದಿರಿ, ಕೊಂಕಣಿ ಅಕಾಡೆಮಿ ಮಾಡಿದಿರಿ, ಕೊಡವ ಅಕಾಡೆಮಿ ಮಾಡಿದಿರಿ. ಈಗಿರತಕ್ಕ ಅಕಾಡೆಮಿಗಳಿಗೇ ಏನೂ ಇಲ್ಲ. ಮಾನ್ಯ ಅಧ್ಯಕ್ಷರೆ, ತಮಗೆ ಹೇಳುತ್ತೇನೆ. ಅಕಾಡೆಮಿಗಳನ್ನು ಮಾಡಲಿ ಸಂತೋಷ. ಆದರೆ ಈಗಿರತಕ್ಕ ಅಕಾಡೆಮಿಗಳು ಇವೆಯಲ್ಲ ಸಾಹಿತ್ಯ ಅಕಾಡೆಮಿ, ಸಂಗೀತ ಅಕಾಡೆಮಿ, ನಾಟಕ ಅಕಾಡೆಮಿ – ಇಂಥ ಅಕಾಡೆಮಿಗಳು ಹೆಸರಿಗೆ ಮಾತ್ರ ಇವೆ. ಏಕೆಂದರೆ, ಜಟಕಾದಲ್ಲಿ ಕುಳಿತುಕೊಂಡು ಹೋಗುವುದಕ್ಕೆ ಕೂಡ ಅವರ ಕೈಯಲ್ಲಿ ಮೂರು ಕಾಸು ಇಲ್ಲ.

ಅಕಾಡೆಮಿಗಳ ಅಧ್ಯಕ್ಷರು ಇದ್ದಾರಲ್ಲ, ಪಾಪ ಕರೀಮ್ ಖಾನ್ ಅವರು ಅಧ್ಯಕ್ಷರು, ಬರಗೂರು ರಾಮಚಂದ್ರಪ್ಪನವರು ಅಧ್ಯಕ್ಷರು, ತಿಪ್ಪೇಸ್ವಾಮಿಯವರು ಅಧ್ಯಕ್ಷರು. ಇವತ್ತಿನ ದಿವಸ ಏನಾಗಿದೆ ಎಂದರೆ, ಅವರ ಹತ್ತಿರ ಜಟಕಾ ಗಾಡಿಯಲ್ಲಿ ಕುಳಿತು ಹೋಗುವುದಕ್ಕೆ ಹಣ ಇಲ್ಲ. ವರ್ಷಕ್ಕೆ ಒಂದು

ಸಾರಿ ಪ್ರಶಸ್ತಿಗಳು. ಅವರಿಗೆ ಏನು ಕೊಟ್ಟಿದ್ದೀರಿ ಅಕಾಡಮಿಗಳಿಗೆ ಅದು ನಾಯಿ ದೊಡ್ಡಿಗಿಂತ ಕಡೆ. ಅಕಾಡೆಮಿ ಎಂದು ಹೇಳಿದರೆ ಪಂಡಿತರ ಒಂದು ಸಂಸ್ಥೆ ಅದು ಯಾವ ರೀತಿ ಇರಬೇಕು? ಸರ್ಕಾರದವರು ಇವನ್ನು ಹೇಗೆ ನೋಡಿಕೊಂಡಿದ್ದಾರೆ ಎಂದರೆ ಈ ಅಕಾಡೆಮಿಗಳನ್ನು ನಿಮ್ಮ ಸ್ವಾರ್ಥಕ್ಕೋಸ್ಕರ ಸರಿಯಾಗಿ ಬೆಳೆಸುತ್ತಾ ಇಲ್ಲ. ಈ ಅಧ್ಯಕ್ಷರುಗಳು ಏಕೆ ಒಪ್ಪಿಕೊಳ್ಳುತ್ತಾರೋ ನನಗಂತೂ ಗೊತ್ತಿಲ್ಲ. ಏಕೆ ಒಪ್ಪಿಕೊಳ್ಳುತ್ತಾರೆ ಅದಕ್ಕೆ? ನನ್ನ ಅನೇಕ ಸ್ನೇಹಿತರು ಇದ್ದಾರೆ. ಯಾವ ಪುರುಷಾರ್ಥಕ್ಕೆ ಒಪ್ಪಿಕೊಳ್ಳುತ್ತಾರೆ? ಅಕಾಡೆಮಿಗಳಿಗೆ ಶಕ್ತಿ ಇಲ್ಲ, ಹಣ ಇಲ್ಲ, ಕೈ ಇಲ್ಲ, ಕಾಲು ಇಲ್ಲ, ನಿರ್ಜೀವ ಆಗಿರತಕ್ಕ ಅಕಾಡೆಮಿಗಳನ್ನು ಸರ್ಕಾರ ಇಟ್ಟುಕೊಂಡಿದೆ. ಈ ಅಕಾಡೆಮಿಗಳಿಗೆ ಸ್ವಾಯತ್ತತೆ ಕೊಟ್ಟಿದ್ದೀರಾ? ಉತ್ತಮ ಕಾರ್ಯಾಲಯ ಇದೆಯೇ? ಅವರಿಗೆ ಶಕ್ತಿ ಕೊಟ್ಟಿದ್ದೀರಾ? ಅಧ್ಯಕ್ಷರು ಓಡಾಡುವುದಕ್ಕೆ ವಾಹನ ಕೊಟ್ಟಿದ್ದೀರಾ? ಏನೂ ಇಲ್ಲ. ಇಡೀ ಅಕಾಡೆಮಿಗಳನ್ನು ಕಾಲು ಕಸದಂತೆ ಕಾಣುವ ಸರ್ಕಾರ ಯಾವ ಅಕಾಡೆಮಿ ಮಾಡುತ್ತೀರಿ? ಇನ್ನು ಕನ್ನಡ ಪ್ರಾಧಿಕಾರ. ಏನು ಸ್ವಾಮಿ? ಮೇಲೆ ಮೂರನೇ ಮಹಡಿಯಲ್ಲಿ ಒಂದು ಖಾಲಿ ರೂಮ್ ಕೊಟ್ಟಿದ್ದೀರಿ. ಒಂದು ಹಳೇ ಡಕ್ಕೋ ಮಾಡೆಲ್ ಕಾರು ಕೊಟ್ಟಿದ್ದೀರಿ. ಇದು ಪ್ರಾಧಿಕಾರ. ಯಾವ ಪ್ರಾಧಿಕಾರ? ಇವುಗಳಲ್ಲಿ ಏಕೆ ಅಧ್ಯಕ್ಷರಾಗಿ ನಮ್ಮ ಸ್ನೇಹಿತರುಗಳಿದ್ದಾರೋ ನನಗೆ ಗೊತ್ತಾಗುತ್ತಿಲ್ಲ. ರಾಜೀನಾಮೆಯನ್ನು ಮುಖಕ್ಕೆ ಬರೆದು ಅತ್ತಕಡೆ ಬಿಸಾಕಿ ಹೊರಗೆ ಬರುವುದು ಬಿಟ್ಟು, ಏಕೆ ಬೇಕು? ಇಂತಹ ಅಕಾಡೆಮಿಗಳಿಗೆ, ಪ್ರಾಧಿಕಾರಕ್ಕೆ ಬದುಕುವುದಕ್ಕೆ ಚೈತನ್ಯ ಪೂರ್ಣವಾದ ಶಕ್ತಿಯನ್ನು ಕೊಡುವುದಕ್ಕೆ ಆಗಲಿಲ್ಲ ಎಂದಮೇಲೆ ಅಕಾಡೆಮಿಗಳು ಏಕೆ? ಸಂಗೀತ ನಾಟಕ ಅಕಾಡೆಮಿಯಲ್ಲಿ ಒಬ್ಬ ಕಲಾವಿದನಿಗೂ 500 ರೂಪಾಯಿ ಮಾಸಾಶನ ಕೊಡತಕ್ಕ ಶಕ್ತಿ ಇವತ್ತು ಇಲ್ಲ; ಮೂರು ಕಾಸೂ ಇಲ್ಲ. ವರ್ಷಕ್ಕೆ ಒಂದು ಸಾರಿ ನಾಟಕ ಆಡಿಬಿಟ್ಟು ಮಂತ್ರಿಗಳನ್ನು ಕರೆದು ಹಾರ ಹಾಕಿ ಕಳುಹಿಸತಕ್ಕ ಅಕಾಡೆಮಿ ಆಗಿದೆ. ಅವರಿಗೆ ಶಕ್ತಿ ಇಲ್ಲ. ಅದಕ್ಕೆ ಇಂತಹ ಪರಿಸ್ಥಿತಿಯಾದರೆ ಮತ್ತೆ ಈ ಹೊಸ ಅಕಾಡೆಮಿ ಮಾಡಿದಿರಿ ಪಾಪ ಇವರ ಗತಿ ಏನು? ಮಿಕ್ಕ ಅಕಾಡೆಮಿಗಳನ್ನು ಈಗ ಮಾಡಿದ್ದೀರಿ. ಈ ಅಕಾಡೆಮಿಗಳ ಹಣೇಬರಹ ಅಷ್ಟೇ. ಸರ್ಕಾರ ವಿಶೇಷವಾಗಿ ಈ ಅಕಾಡೆಮಿಗಳನ್ನು ವ್ಯವಸ್ಥಿತವಾಗಿ, ಗೌರವ ಬರತಕ್ಕ ರೀತಿಯಲ್ಲಿ ನಡೆಸಬೇಕು. ಯಾವಾಗ ಈ ಅಕಾಡೆಮಿಗಳಿಗೆ ನೀವು ಅಗೌರವ ಮಾಡಿದ್ದೀರಿ ಇದು ಕನ್ನಡಕ್ಕೆ ಮಾಡಿದ ಅಗೌರವ. ಯಾವಾಗ ಅಗೌರವ ಮಾಡಿದ್ದೀರೋ ಇದು ಚಿತ್ರ ಕಲಾವಿದರಿಗೆ, ಸಂಗೀತಗಾರರಿಗೆ, ನೃತ್ಯಗಾರರಿಗೆ, ಕವಿಗಳಿಗೆ, ಎಲ್ಲರಿಗೂ ನೀವು ಅಗೌರವ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ನಾನು ಹೇಳುತ್ತಿದ್ದೇನೆ.

ಈ ಅಕಾಡೆಮಿಗಳಿಗೆ ಹೆಚ್ಚಿನ ಶಕ್ತಿಯನ್ನು ಕೊಡತಕ್ಕ ಒಂದು ಯೋಚನೆ, ಇವತ್ತು ನಿಮ್ಮ ಆಯವ್ಯಯ ಮಂಡನೆ ಆಗಿದೆ. ಈ ಸಮಯದಲ್ಲಿ ನೀವು ಅದನ್ನು ಉಳಿಸಬೇಕೆಂದು ಹೇಳಿ ತಮಗೆ ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ಕನ್ನಡಕ್ಕೆ ಇನ್ನೂ ನೀತಿಯೇ ಇಲ್ಲ ಎಂದು, ಪತ್ರಿಕೆಯಲ್ಲಿ ಹೇಳಿದ್ದಾರೆ. ಕನ್ನಡಕ್ಕೆ ನೀತಿಯೇ ಇಲ್ಲವಂತೆ. ಎಲ್ಲಕ್ಕೂ ಒಂದು ರೀತಿ ಇದೆ, ಕನ್ನಡಕ್ಕೆ ಇನ್ನೂ ನೀತಿ. ನಿರೂಪಣೆ ಆಗಿಲ್ಲ ಎಂದು ಅವರು ಹೇಳಿದ್ದಾರೆ. ನಮ್ಮ ವಿಶ್ವನಾಥ್ ಅವರು ಹೇಳಿದ್ದುದು, ಅದಕ್ಕೆ ಒಂದು ಅರ್ಥ ಇದೆ. ನಿಜ, ನೀತಿ ಇಲ್ಲ. ಏನು ನೀತಿ ಇದೆ? ಏನಾದರೂ ನೀತಿ ಇರಬೇಕಲ್ಲ? ಇನ್ನೂ ನೀತಿ ನಿರ್ಧಾರ ಆಗಿಲ್ಲ. 1956ರಲ್ಲಿ ಕರ್ನಾಟಕ ಏಕೀಕರಣವಾಗಿ, ಕನ್ನಡ ಆಡಳಿತ ಭಾಷೆಯಾಗಿ ಇನ್ನೂ ಕನ್ನಡಕ್ಕೆ ನೀತಿ ಇಲ್ಲ ಎಂದರೆ ನಾವು ನಿಜಕ್ಕೂ ಕನ್ನಡಕ್ಕೆ ಮಾಡಿದಂತಹ ಅತ್ಯಂತ ಅಪಚಾರ. ಇದರ ಬಗ್ಗೆ ಬೇರೆ ಮಾತೇ ಇಲ್ಲ. ಕನ್ನಡ ಸಂಗೀತ ನಾಟಕ ಅಕಾಡಮಿ ಇದೆ. ಕರ್ನಾಟಕದ ರಂಗಭೂಮಿ ಒಂದು ಕಾಲದಲ್ಲಿ ವೈಭವವಾಗಿ ಮೆರೆದ ರಂಗಭೂಮಿ. ವರದಾಚಾರರು. ಪೀರ್ ಸಾಹೇಬರು, ಸುಬ್ಬಯ್ಯನಾಯ್ಡು ಅವರು, ಗುಬ್ಬಿ ವೀರಣ್ಣನವರು, ಹಿರಣ್ಣಯ್ಯ, ಉತ್ತರ ಕರ್ನಾಟಕದ ಏಣಗಿ ಬಾಳಪ್ಪ ಇವರ ದೊಡ್ಡ ದೊಡ್ಡ ನಾಟಕ

ಕಂಪೆನಿಗಳು ಇದ್ದುವು. ಇವು ಇವತ್ತು ಏನಾಗಿವೆ? ರಂಗಭೂಮಿ ಸಂಪೂರ್ಣ ನಾಶವಾಗಿದೆ. ರಂಗಭೂಮಿ ಕಲಾವಿದರು, ರಂಗಭೂಮಿಯ ಮೇಲೆ ರಾಜರಾಣಿಯರಾಗಿ ಮೆರೆದಂತಹ ರಂಗಭೂಮಿ ಕಲಾವಿದರು ಇವತ್ತು ಬೀದಿಯಲ್ಲಿ ಭಿಕ್ಷೆ ಎತ್ತಿ, ರಸ್ತೆಯಲ್ಲಿ ತಿರುಗಾಡತಕ್ಕ ಪರಿಸ್ಥಿತಿ ಬಂದಿದೆ. ಇದು ಎಂತಹ ಶೋಚನೀಯ ಪರಿಸ್ಥಿತಿ. ನಾಟಕ ಕಂಪೆನಿಗಳು ನೆಲ ಕಚ್ಚಿವೆ. ನಾಟಕ ಕಂಪೆನಿಗಳನ್ನು ಬೆಳೆಸಿ ಉಳಿಸುವ ಬಗ್ಗೆ ನಿಮ್ಮಲ್ಲಿ ಯಾವುದೇ ಯೋಜನೆ ಇಲ್ಲ. ಒಂದು ಕಾಲದಲ್ಲಿ ಗುಬ್ಬಿ ವೀರಣ್ಣನವರ ನಾಟಕದ ಕಂಪೆನಿ ಆಂಧ್ರಕ್ಕೆ ಹೋಗಿ ಕರ್ನಾಟಕ–ಆಂಧ್ರ ಸಾರ್ವಭೌಮ ಎಂದು ಹೆಸರು ಪಡೆದು ಸಾವಿರಾರು ನಾಟಕಗಳನ್ನು ಪ್ರದರ್ಶನ ಮಾಡಿ ಕರ್ನಾಟಕಕ್ಕೆ ಕೀರ್ತಿ ತಂದ ಗುಬ್ಬೀ ಕಂಪೆನಿ ಇವತ್ತು ನೆಲಕಚ್ಚಿವೆ.

ಹಿರಣ್ಣಯ್ಯನವರ ಕಂಪನಿ ನೆಲಕಚ್ಚಿದೆ. ಸುಬ್ಬಯ್ಯನಾಯ್ಡು ಅವರ ಕಂಪನಿಯು ಇಲ್ಲ. ವರದಾಚಾರ್ ಕಂಪನಿ ಇಲ್ಲ. ಅಲ್ಲಿ ಇಲ್ಲಿ ಇದ್ದಂಥ ಕನ್ನಡ ರಂಗಭೂಮಿ ಕಲಾವಿದರ ಗತಿ ಇವತ್ತು ಏನಾಗಿದೆ? ಅವರು ನಿಜವಾಗಲೂ ಬೀದಿಯಲ್ಲಿದ್ದಾರೆ, ಬೀದಿ ಪಾಲಾಗಿದ್ದಾರೆ. ಈ ಕಲಾವಿದರಿಗೆ ನೀವು ಮಾಸಾಶನ ಹೇಗೆ ಕೊಡುತ್ತಿದ್ದೀರಿ ಎಂದರೆ ವರ್ಷಕ್ಕೆ ಐದು ಜನ. ತಮಗೆ ನಾನು ಹೇಳುತ್ತೇನೆ, ಇದೇರೀತಿ ನೀವು ವರ್ಷಕ್ಕೆ ಐದೈದು ಜನರಿಗೆ ಅಂತ ಕೊಡುತ್ತಾ ಹೋದರೆ ಇನ್ನು ಸ್ವಲ್ಪ ವರ್ಷಗಳಲ್ಲಿ ಸಾವಿರ ಕ್ಯಾಂಡಲ್ ಬ್ಯಾಟರಿ ಹಾಕಿ ಹುಡುಕಿದರೂ, ಜಾಹೀರಾತು ಕೊಟ್ಟು ಕಲಾವಿದರಿಗೆ ಹಣ ಕೊಡುತ್ತೇನೆ ಎಂದು ಹೇಳಿದರೂ ಒಬ್ಬ ಕಲಾವಿದನೂ ಸಿಗುವುದಿಲ್ಲ. ಅವರೆಲ್ಲ ಹೋಗಿಬಿಡುತ್ತಾರೆ. ತಮಗೆ ನಾನು ಹೇಳುತ್ತಿದ್ದೇನೆ, ಎಂತೆಂಥ ಕಲಾವಿದರು ಇದ್ದರು ಎಂದರೆ, ಒಳ್ಳೆ ವೆಂಕಟಾಚಲಯ್ಯ ಎನ್ನುವವರು ಆಂಜನೇಯನ ಪಾತ್ರವನ್ನು ಅದ್ಧೂರಿಯಾಗಿ ಮಾಡಿದಂಥವರು ಇವತ್ತು ರಸ್ತೆಯಲ್ಲಿ ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಚಿಕ್ಕಬಸವರಾಜು ಎನ್ನುವವರು ಕೃಷ್ಣನ ಪಾತ್ರವನ್ನು ಮಾಡಿ ರಂಗಭೂಮಿಗೆ ಬಂದರೆ ಕೃಷ್ಣನೇ ಬಂದ ಎಂದು ಹೇಳಿ ಜನ ಕಾಲಿಗೆ ಬೀಳುತ್ತಿದ್ದರು. ದೊಡ್ಡ ಬಸವರಾಜು ಎಂಬುವರು ಶಕುನಿ ಪಾತ್ರವನ್ನು ಮಾಡುತ್ತಿದ್ದಾಗ ಶಕುನಿಯೇ ಬಂದ ಎಂದು ಜನ ಹೇಳುತ್ತಿದ್ದರು. ರಾಮರಾಜು ಅರಸ್ ಎನ್ನತಕ್ಕವರು ಘಟೋದ್ಗಜನ ಪಾತ್ರವನ್ನು ಮಾಡುತ್ತಿದ್ದರು. ಇಂತಹ ದೊಡ್ಡ ಕಲಾವಿದರು ಇವತ್ತು ನೆಲ ಕಚ್ಚಿದ್ದಾರೆ. ಇವತ್ತು ಅವರನ್ನು ಕೇಳುವವರೇ ಇಲ್ಲ. ಗುಬ್ಬಿ ವೀರಣ್ಣ ಕಂಪನಿ ಇವತ್ತು ಎಲ್ಲಿದೆ? ಯಾರೂ ಕೇಳುವವರೇ ಇಲ್ಲ. ಈ ಕಂಪನಿಗಳ ಬಗ್ಗೆ ನಮಗೆ ಒಂದು ಇತಿಹಾಸವೇ ಇದೆ; ಚರಿತ್ರೆ ಇದೆ. ಈ ಕಂಪನಿಗಳನ್ನು ಉಳಿಸತಕ್ಕಂಥ, ಚೈತನ್ಯ ಪೂರ್ಣವಾದಂಥ ಮನಸ್ಸು ನಿಮಗೆ ಬರಲಿಲ್ಲವಲ್ಲ ಎಂದು ಹೇಳುತ್ತಿದ್ದೇನೆ. ನಮ್ಮ ಕಾಲಕ್ಕೆ ಈ ರಂಗ ಭೂಮಿಯ ಅವಸಾನವಾದರೆ ಇದು ಸರಿಯೇ? ತಮಗೆ ಒಂದು ಜ್ಞಾಪಕ ಮಾಡುತ್ತೇನೆ. ಬೆಂಗಳೂರು ನಗರದಲ್ಲಿ ಒಂದು ನಾಟಕವನ್ನು ನೋಡಬೇಕಾದರೆ, ಗುಬ್ಬಿ ವೀರಣ್ಣನವರ ಕಂಪನಿಗೆ ಆಗಿನ ರಾಷ್ಟ್ರಪತಿಗಳು ಡಾ. ರಾಜೇಂದ್ರ ಪ್ರಸಾದ್ ಅವರು ಬಂದು ಒಂದು ಗಂಟೆಕಾಲ ಕುಳಿತಿದ್ದರು. ಎಂ. ಸಿ. ಮಹದೇವಸ್ವಾಮಿಯವರ ಕಂಪನಿಯಲ್ಲಿ ಅಲ್ಲಿ ರಾಜಾವಿಕ್ರಮ ನಾಟಕವನ್ನು ಆಡುವಾಗ ಜವಾಹರ್‌ಲಾಲ್ ನೆಹರೂ ಅವರು ಬಂದು ಒಂದು ಗಂಟೆ ಕುಳಿತಿದ್ದರು. ಅಂಥ ನಾಟಕ ಕಂಪನಿಗಳು ಇವತ್ತು ಮುಳುಗಿ ಹೋಗಿವೆ. ಅವುಗಳ ಬೆಳವಣಿಗೆಗೆ ನಾವು ಏನು ಬುನಾದಿ ಹಾಕಿದ್ದೇವೆ? ಸುಮ್ಮನೆ ನೀವು ಸಂಗೀತ, ನಾಟಕ ಅಕಾಡೆಮಿ ಎಂದು ಹೇಳಿ ಯಾವುದೋ ಒಂದು ಗಲ್ಲಿಯಲ್ಲಿ ಒಂದು ನಾಮಫಲಕ ಹಾಕಿಬಿಟ್ಟರೆ ಉದ್ಧಾರವಾಗುವುದಿಲ್ಲ. ನಿಮಗೆ ಕ್ರಿಯಾಶೀಲ ಶಕ್ತಿ ಬೇಕು. ಇದನ್ನು ನೀವು ಚೈತನ್ಯಪೂರ್ಣವಾಗಿ ಬೆಳೆಸತಕ್ಕಂಥ ಒಂದು ಆರಾಧನೆ ಬೇಕು. ಆದರೆ ಇದ್ಯಾವುದೂ ಇಲ್ಲದೇ ಇರತಕ್ಕಂಥ ಸ್ಥಿತಿಯನ್ನು ನೋಡಿ ನನಗೆ ಬಹಳ ನೋವಾಗಿದೆ.

ಛೇರ್ಮನ್:– ಇನ್ನೂ ಇಪ್ಪತ್ತು ಜನ ಮಾತನಾಡುವವರಿದ್ದಾರೆ. ಸ್ವಲ್ಪ ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್:– ಆಯಿತು, ನಾನು ಸ್ವಾರಸ್ಯಪೂರ್ಣವಾಗಿ ಬೇಗ ಮುಗಿಸುತ್ತೇನೆ.

ಇನ್ನು, ಪತ್ರಿಕಾ ಅಕಾಡೆಮಿ. ನಮ್ಮ ಪತ್ರಕರ್ತರ ಬಗ್ಗೆ ನನಗೆ ಬಹಳ ಚಿಂತನೆ ಇದೆ. ಪತ್ರಿಕಾ ಅಕಾಡೆಮಿಯ ಅಧ್ಯಕ್ಷರ ಹುದ್ದೆ ಖಾಲಿಯಾಗಿ ಮೂರು ವರ್ಷಗಳಾಗಿವೆ. ಯಾವುದೋ ಒಂದು ಜಿಲ್ಲಾಧಿಕಾರಿಗಳ ಆಫೀಸಿನ ಕೆಳಗೆ ಈ ಕಾರ್ಯಾಲಯ ಇದೆ. ಪತ್ರಿಕಾ ಅಕಾಡೆಮಿ ಎಂದು ಹೇಳಿದರೆ ಅದಕ್ಕೆ ಎಂತಹ ಶಕ್ತಿ ಇದೆ ? ಅದರ ಬಗ್ಗೆ ಸರ್ಕಾರಕ್ಕೆ ಗಮನವೇ ಇಲ್ಲ. ಸದಸ್ಯರೂ ಇಲ್ಲ, ಅಧ್ಯಕ್ಷರೂ ಇಲ್ಲ. ಅದನ್ನು ಬೀದಿಗೆ ಹಾಕಿದ್ದೀರಿ. ನಿಮ್ಮ ಮುಖ್ಯಮಂತ್ರಿಗಳ ಪತ್ರಿಕಾ ಕಾರ್ಯದರ್ಶಿಯವರು ಮೇಲೆ ಇದ್ದರು. ಅವರನ್ನು ಕಸ ಹೊಡೆದ ಹಾಗೆ ಮೂಲೆಗೆ ಹಾಕಿದ್ದೀರಿ. ಹಿಂದೆ ಒಂದು ಸುಂದರವಾದ ಕಾರ್ಯಾಲಯವನ್ನು ಅವರಿಗೂ ಕೊಟ್ಟಿದ್ದರು. ಇವತ್ತು ಅವರು ಎಲ್ಲಿ ಹೋದರೋ ಗೊತ್ತಿಲ್ಲ, ಪಾಪ. ಈ ರೀತಿ ಅಕಾಡೆಮಿಗಳನ್ನು ಮಾಡತಕ್ಕಂಥ ಸರಕಾರ ಅದಕ್ಕೆ ನೀವು ಗೌರವವನ್ನು ಕೊಟ್ಟಿಲ್ಲವೆಂದರೆ ಈ ಅಕಾಡೆಮಿಗಳು ಏಕೆ ಬೇಕು ? ಪತ್ರಿಕಾ ಅಕಾಡೆಮಿಗೆ ಹಿಂದೆ ಜಿ. ನಾರಾಯಣ ಅವರು ಅಧ್ಯಕ್ಷರಾಗಿ ಇದ್ದರು; ಖಾದ್ರಿಶಾಮಣ್ಣನವರು ಇದ್ದರು. ಅದಾದನಂತರ ನಮ್ಮ ಹರಿಕುಮಾರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಅದಾದನಂತರ ಯಾರೂ ಇಲ್ಲ. ನಮ್ಮಲ್ಲಿ ಎಂತೆಂಥ ಪತ್ರಕರ್ತರು ಇದ್ದಾರೆ, ಇವತ್ತು ಅವರುಗಳನ್ನು ನೆನೆಯಬೇಕು. ಏಕೆ ನೀವು ಅವರನ್ನು ಕರೆದು ಅಧ್ಯಕ್ಷರನ್ನಾಗಿ ಮಾಡುವುದಿಲ್ಲ ? ಏಕೆ ಅವರನ್ನು ನೀವು ಸೇರಿಸುವುದಿಲ್ಲ ? ಇದು ಅಕಾಡೆಮಿಗೆ ಮಾಡುವಂಥ ತೀವ್ರ ಅಪಚಾರ; ತೀವ್ರ ಅಗೌರವ ಎನ್ನುವ ಮಾತನ್ನು ನಾನು ಅತ್ಯಂತ ಕಳಕಳಿಯಿಂದ ಹೇಳುತ್ತಿದ್ದೇನೆ.

4.30 ಪಿ.ಎಂ.

(ಶ್ರೀ ಬಿ. ಎಂ. ಇದಿನಬ್ಬನವರು, ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು) ಮಾನ್ಯ ಅಧ್ಯಕ್ಷರೇ, ಕನ್ನಡ ಚಿತ್ರರಂಗ ಬೆಳೆಯುವುದಕ್ಕೆ, ಕನ್ನಡ ರಂಗಭೂಮಿ ಕಾರಣ. ಕನ್ನಡ ಚಿತ್ರರಂಗದ ಬೆಳವಣಿಗೆಗೆ, ಕನ್ನಡ ರಂಗಭೂಮಿಯ ಬೆಳಣಿಗೆಗೆ, ಕಿಂಚಿತ್ತು ನನ್ನ ಶರೀರವನ್ನು ದಂಡಿಸಿದ್ದೇನೆ; ನನ್ನ ಶಕ್ತಿಯನ್ನು ವಿನಿಯೋಗಿಸಿದ್ದೇನೆ, ನಾನಾ ರೂಪದಲ್ಲಿ ಹೋರಾಟವನ್ನು ಮಾಡಿದ್ದೇನೆ. ಕನ್ನಡ ಚಿತ್ರಗಳನ್ನು ಒಂದು ಕಾಲದಲ್ಲಿ ಬೆಂಗಳೂರು ನಗರದಲ್ಲಿ ಕೇಳುವವರೇ ಗತಿ ಇರಲಿಲ್ಲ. ಕನ್ನಡ ಚಿತ್ರ ನಟರನ್ನು, ಕೇಳುವವರೇ ಗತಿ ಇರಲಿಲ್ಲ. ರಸ್ತೆ, ರಸ್ತೆಯಲ್ಲಿ, ಬೀದಿ, ಬೀದಿಯಲ್ಲಿ ತಿರುಗಿ, ಕನ್ನಡ ಚಿತ್ರಗಳ ಬೆಳವಣಿಗೆಗೆ ಒಂದು ದೊಡ್ಡ ಹೋರಾಟವನ್ನೇ ಮಾಡಿದ್ದೇವೆ. ಆ ಹೋರಾಟದಲ್ಲಿ ನನಗೆ ಬೂಟ್ಸ್ ಏಟು, ಲಾಠಿ ಏಟು ಎಲ್ಲಾ ಬಿದ್ದಿದೆ. ಆದರೂ ಚಿಂತೆ ಇಲ್ಲ. ನನ್ನ ಉತ್ಸಾಹ, ಅಭಿಮಾನ ಇವೆಲ್ಲವನ್ನೂ ಮುಚ್ಚಿ ನನ್ನನ್ನು ಮೇಲಕ್ಕೆ ತೆಗೆದುಕೊಂಡು ಹೋಯಿತು. ಒಂದು ಕಾಲದಲ್ಲಿ ಕನ್ನಡ ಚಿತ್ರಕ್ಕೆ ಚಿತ್ರಮಂದಿರಗಳೇ ಇರಲಿಲ್ಲ. ಬೆಂಗಳೂರು ನಗರದಲ್ಲಿ ಕನ್ನಡ ಚಿತ್ರ ಹಾಕದೇ ಇರತಕ್ಕಂಥ ಹಿಮಾಲಯ ಟಾಕೀಸ್‌ನಲ್ಲಿ ಕನ್ನಡ ಚಿತ್ರ ಹಾಕಬೇಕಾಗಿತ್ತು. ಇವತ್ತು ಕನ್ನಡ ಚಿತ್ರಗಳ ಬೆಳವಣಿಗೆಗೆ, ಶಕ್ತಿಯುತವಾದಂಥ, ಒಂದು ಶಕ್ತಿಯನ್ನು ಕೊಟ್ಟಿದ್ದೇವೆ. ರಸ್ತೆ, ರಸ್ತೆಯಲ್ಲಿ ಕನ್ನಡದ ಚಳುವಳಿಯನ್ನು ಮಾಡಿ, ರಾಜ್ಯದ ಉದ್ದಗಲಕ್ಕೂ ಚೈತನ್ಯ ಪೂರ್ಣವಾಗಿ, ಜನಸಾಮಾನ್ಯರಲ್ಲಿ ಒಂದು ಎಚ್ಚರವನ್ನು ತಂದಿದ್ದೇವೆ. ಒಂದು ಕಾಲದಲ್ಲಿ ಕನ್ನಡ ಚಿತ್ರ ಎಂದು ಹೇಳಿದರೆ, ಸೌಂದರ್ಯವಾಗಿ, ಸುಂದರವಾಗಿ, ಆನಂದವಾಗಿ ನೋಡತಕ್ಕ ಚಿತ್ರಗಳು ಇದ್ದುವು. ಇವತ್ತು ಕನ್ನಡ ಚಿತ್ರದಲ್ಲಿಯೂ ಸಹ ಬಹಳ ಕೆಟ್ಟ ಚಿತ್ರಗಳು, ಅಸಭ್ಯ ಸಂಭಾಷಣೆಗಳು, ಎರಡು ಅರ್ಥ ಬರತಕ್ಕ ಸಂಭಾಷಣೆಗಳು, ಹೊರಗಿನ ತಾಂತ್ರಿಕ ವರ್ಗ, ನಿರ್ಮಾಪಕರು ಹೊರಗಿನವರು – ಹೇಳುವುದಕ್ಕೆ ಕನ್ನಡ. ಕನ್ನಡ ಸಂಸ್ಕೃತಿ ಇಲ್ಲ, ಕನ್ನಡ ಸಾಹಿತ್ಯ ಇಲ್ಲ, ಕನ್ನಡದ ಹಿನ್ನೆಲೆ ಇಲ್ಲದೇ ಇರತಕ್ಕಂಥ ಚಿತ್ರಗಳು ಇವತ್ತು ಬರುತ್ತಾ ಇವೆ. ಇವತ್ತು ಈ ಉದ್ಯಮ ವ್ಯಾಪಾರವಾಗಿದೆ. ಸುಮ್ಮನೆ ಸುತ್ತುವುದು, ಹಾಡುವುದು. ತಮಿಳುನಾಡಿನಲ್ಲಿ ತೆಗೆದ ಚಿತ್ರಗಳನ್ನು ಹಾಗೆಯೇ ಇಲ್ಲಿ ತಂದು ಮಾಡತಕ್ಕಂಥಾದ್ದು. ಇದು ಸರಿಯಲ್ಲ. ನಮ್ಮಲ್ಲಿ ಎಂತೆಂಥ ನಿರ್ದೇಶಕರು ಇದ್ದಾರೆ. ಒಬ್ಬಿಬ್ಬರ ಬಗ್ಗೆ ನಾನು ಹೇಳುವುದಲ್ಲ. ಇವತ್ತು, ಪುಟ್ಟಣ್ಣನವರು ಇಲ್ಲ. ನಿಜವಾಗಿಯೂ ಅವರ ಕೊನೆಯ ಚಿತ್ರ, ರಂಗನಾಯಕಿ; ಆ ಚಿತ್ರವನ್ನು ನಾನು ಹೋಗಿ ನೋಡಿದೆ. ಆ ರಂಗನಾಯಕಿ ಚಿತ್ರವನ್ನು ಹಾಗೆಯೇ

ಚಿತ್ರ ನೋಡುತ್ತಾ ಇದ್ದರೆ, ಆ ದೃಶ್ಯ ನಮಗೆ ನಾಟಕದಲ್ಲಿದ್ದೇವೇನೋ ಎಂಬ ಕಲ್ಪನೆ ಬರುತ್ತಿತ್ತು. ರಂಗನಾಯಕಿ ಕಥೆ, ಒಂದು ರಂಗಭೂಮಿಯ ಕಥೆ.

ಆ ಕಥೆಯನ್ನು ನೋಡುವಾಗ ನಾಟಕದಲ್ಲೇ ಕುಳಿತಿದ್ದೇವ ಎನಿಸುತ್ತದೆ. ನಮ್ಮ ಕು.ರಾ. ಸೀತಾರಾಮಶಾಸ್ತ್ರಿಗಳು ತಮಗೆ ಗೊತ್ತು, ಅವರನ್ನು ನೆನೆದುಕೊಳ್ಳಬೇಕು. ಇಡೀ ರಾಮಾಯಣವನ್ನೇ ಒಬ್ಬಗೇ ಕವಿ, ರಾಮನ ಅವತಾರ ಎಂದು ಕೊನೆಗೆ ತೆಗೆದುಕೊಂಡು ಬರುತ್ತಾರೆ. ಎಂತಹ ಒಂದು ಕವಿತ್ವ, ಎಂತಹ ಒಂದು ಸಾಹಿತ್ಯ; ಇವತ್ತು ಎಲ್ಲಿದೆ ಸಾಹಿತ್ಯ. ಸಾಹಿತ್ಯವೂ ಇಲ್ಲ, ಸಂಸ್ಕೃತಿಯೂ ಇಲ್ಲ. ನಮ್ಮ ಕಣಗಾಲ್ ಪ್ರಭಾಕರ್ ಶಾಸ್ತ್ರಿಗಳನ್ನು ನಾವು ನೆನೆಮಕೊಳ್ಳಬೇಕು. ಅವರು ಎಂಥ ಶಕ್ತಿಯುತವಾದ ಗಂಡು ಸಾಹಿತಿ. ಇವತ್ತು ಇವರನ್ನೆಲ್ಲಾ ಈ ಸದನದಲ್ಲಿ ನೆನೆದುಕೊಳ್ಳಬೇಕು. ಸತ್ತಿರತಕ್ಕಂಥವರನ್ನು ಇವತ್ತು ನಾವು ನೆನೆಯಬೇಕು. 'ಶ್ರೀಗಂಧ ನಾಡಿನ ತಂಗಾಳಿಯಂತೆ' ಇದು ಎಂಥ ಸಾಹಿತ್ಯ. ಎಷ್ಟು ಸೊಗಸಾದ ಸಾಹಿತ್ಯ, ಇಂಥ ಒಂದೊಂದು ಸಾಹಿತ್ಯ ಅಮೂಲ್ಯವಾದುದು. ಇವತ್ತು ವಿಜಯನಾರಸಿಂಹ, ಸೋರಟ್ ಅಶ್ವತ್, ಇಂತಹ ಅನೇಕ ಜನ ನಮ್ಮಲ್ಲಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಪಾತ್ರವನ್ನು ಮಾಡಿದಂಥವರು, ನಿರ್ದೇಶನವನ್ನು ಮಾಡಿದಂಥವರು, ಕೆಲಸವನ್ನು ಮಾಡಿದಂಥವರು, ಇವತ್ತು ಅನೇಕ ಜನ, ನೂರಕ್ಕೆ 80 ಜನ ಹಿಂದೆ ಉಳಿದಿದ್ದಾರೆ. ಆದಿವಾನಿ ಲಕ್ಷ್ಮೀದೇವಿ, ರಮಾದೇವಿಯವರ ಹೆಸರುಗಳನ್ನು ತಾವು ಕೇಳಿರಬಹುದು. ರಮಾದೇವಿ ಎಂಬುವರು ಒಂದು ಪಾತ್ರ ಮಾಡಿ ಹೊರಗಡೆ ಬಂದರೆ, ಆ ಚಿತ್ರದ ಮೇಲೆ, ಯುದ್ಧ ಮಾಡುವುದಕ್ಕೆ ನಮ್ಮ ಹೆಂಗಸರುಗಳು, ಗಂಡಸರುಗಳು ಅಲ್ಲಿ ಹೋಗುತ್ತಿದ್ದರು. ಆ ಮಟ್ಟದಲ್ಲಿ ಆಕೆ ಚಿತ್ರದಲ್ಲಿ ಮಾಡುತ್ತಿದ್ದರು. ಇವತ್ತು ಅವರು ಎಲ್ಲಿದ್ದಾರೆ. ಬೀದಿಯಲ್ಲಿ ಅವರನ್ನು ಕೇಳುವವರೆ ಇಲ್ಲದೆ ಕುಳಿತಿದ್ದಾರೆ. ಆದ್ದರಿಂದ ಚೈತನ್ಯಪೂರ್ಣವಾಗಿ ಕನ್ನಡ ಚಿತ್ರ ರಂಗ ಬೆಳೆಯುವುದಕ್ಕೆ ವಿಶೇಷವಾದಂಥ ಶಕ್ತಿಯನ್ನು ಕೊಡತಕ್ಕ ಒಂದು ಮಂಡಳಿಯನ್ನು ತಾವು ರಚನೆ ಮಾಡಿ. ಕನ್ನಡ ಸಾಹಿತ್ಯ, ಸಂಸ್ಕೃತಿಗೆ ಹೆಚ್ಚಿನ ಬೆಂಬಲವನ್ನು ಕೊಡತಕ್ಕವರಿಗೆ ತಾವು ಶಕ್ತಿಪೂರ್ಣವಾಗಿ, ಆ ಕನ್ನಡ ಚಿತ್ರರಂಗ, ಬೆಳೆದ ಚಿತ್ರರಂಗ ಉಳಿಸುವುದಕ್ಕೆ ಸರ್ಕಾರ ಸಮಗ್ರವಾದಂಥ ಚಿಂತನೆ ಮಾಡಬೇಕು. ಇವತ್ತು ನಮ್ಮಲ್ಲಿ ಒಂದು ಒಳ್ಳೆಯ ಸ್ಟುಡಿಯೋ ಇಲ್ಲ. ಇರತಕ್ಕಂಥ ಸ್ಟುಡಿಯೋಗೆ ಹೆಚ್ಚಿನ ಸಹಕಾರ ಕೊಡಬೇಕು. ಅಭಿಮಾನ್ ಸ್ಟುಡಿಯೋ ಇದೆ. ಶ್ರೀಮಾನ್ ಬಾಲಕೃಷ್ಣ ಎಂತಹ ನಟ, ಇವತ್ತು ನಾವು ಅವರನ್ನು ನೆನೆದುಕೊಳ್ಳಬೇಕು. ಸುಮಾರು 400 ಚಿತ್ರಗಳನ್ನು ಮೀರಿಸಿ, ಗಿನ್ನಿಸ್ ಪುಸ್ತಕದಲ್ಲಿ ದಾಖಲೆ ಮಾಡುವಂಥ ಒಬ್ಬ ಚಿತ್ರನಟ. ಅವರು ಮೂಲೆಗೆ ಕುಳಿತಿದ್ದಾರೆ. ಪ್ರಪಂಚದಲ್ಲಿ ಒಳ್ಳೆಯ ಕೀರ್ತಿ ಕೊಟ್ಟಂಥ ಅನೇಕ ನಟರು, ಕಲ್ಯಾಣ್‌ಕುಮಾರ್, ಉದಯಕುಮಾರ್, ರಾಜ್‌ಕುಮಾರ್ ಇವರೆಲ್ಲಾ ಒಂದು ಕಾಲದಲ್ಲಿ, ಒಳ್ಳೆಯ ಅದ್ಭುತವಾದಂಥ, ಶಕ್ತಿಯುತವಾದಂಥ, ಬುನಾದಿ ಹಾಕಿಕೊಟ್ಟರು.

ಜಿ. ವಿ. ಅಯ್ಯರ್‌ರವರು, ಗಿರೀಶ್ ಕಾರ್ನಾಡ್ ಇವರೆಲ್ಲರನ್ನು ನೋಡಿದಾಗ, ಮತ್ತು ಇಂದಿನ ಚಿತ್ರಗಳನ್ನು ನೋಡಿದಾಗ ನಮ್ಮ ಚಿತ್ರರಂಗ ಯಾವುದೋ ಒಂದು ಕಾಲದಲ್ಲಿ ಹೋಗುತ್ತಿದೆ ಎಂದು ಅನಿಸುತ್ತಿದೆ. ಪರಭಾಷಾ ಚಿತ್ರಗಳ ಧಾಳಿ ಕರ್ನಾಟಕ ರಾಜ್ಯದಲ್ಲಿ ಆಗುತ್ತಿದೆ. ತಮಿಳುನಾಡಿನಲ್ಲಿ ಕನ್ನಡ ಚಿತ್ರ ಇಲ್ಲ. ಕೇರಳದಲ್ಲಿ ಕನ್ನಡ ಚಿತ್ರ ಇಲ್ಲ. ಆಂಧ್ರದಲ್ಲಿ ಕನ್ನಡ ಚಿತ್ರ ಇಲ್ಲ. ಆದರೆ ಕರ್ನಾಟಕದಲ್ಲಿ ಮಾತ್ರ ತಮಿಳು, ತೆಲುಗು, ಮರಾಠಿ, ಮಲಯಾಳಂ, ಕೊರಿಯ, ಹಿಂದಿ ಯಾವ್ಯಾವ ಭಾಷೆಗಳು ಇವೆ ಆ ಭಾಷೆಗಳ ಚಿತ್ರಗಳು ಇಲ್ಲಿವೆ.

ಛೇರ್ಮನ್:- ಜೀವ ಹೋದರೂ ಕೇರಳದಲ್ಲಿ ಕನ್ನಡ ಚಿತ್ರವನ್ನು ಮಾಡಲಿಕ್ಕೆ ತಯಾರಾಗಿಲ್ಲ. ತಮಿಳುನಾಡಿನವರೂ ಕನ್ನಡ ಚಿತ್ರವನ್ನು ಮಾಡಲಿಕ್ಕೆ ತಯಾರಾಗಿಲ್ಲ.

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಕೇರಳದಲ್ಲಿ ಕನ್ನಡ ಚಿತ್ರವನ್ನು ನೋಡುವ ಜನ ಯಾರೂ

ಇಲ್ಲ. ಬೆಂಗಳೂರು ನಗರದಲ್ಲಿ ಬಹಳ ಜನರು ಇದ್ದಾರೆ. ಆದ್ದರಿಂದ ಬೇರೆ ಭಾಷೆ ಚಿತ್ರಗಳನ್ನು ಮಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮಲ್ಲಿ ಕತ್ತೆಯನ್ನು ಕುದುರೆ ಎನ್ನುವವರು ಬಹಳ ಜನ ಇದ್ದಾರೆ. ಮಾನ್ಯ ಸಾಂಡ್ರಾರವರು ಕತ್ತೆಯನ್ನು ಕುದುರೆ ಎಂದು ಹೇಳುತ್ತಾರೆ. ಅದಕ್ಕೆ ನಾನೇನು ಮಾಡಲಿಕ್ಕೆ ಆಗುತ್ತದೆ ? ಅದಲ್ಲ ಪ್ರಶ್ನೆ ನಮ್ಮ ಆತ್ಮ ಶಕ್ತಿ ಬೇಕು. ನೀವು ಹೇಳಿ, ಕರ್ನಾಟಕದಲ್ಲಿ ಆಜ್ಞೆ ಮಾಡಲು ನಿಮಗೆ ತಾಕತ್ತು ಇದೆಯೇ ? ಇಲ್ಲಿ ತೆಲುಗು, ತಮಿಳು, ಮಲಯಾಳಂ, ಗುಜರಾತಿ – ಎಲ್ಲಾ ಪರಭಾಷೆಯ ಚಿತ್ರಗಳನ್ನು ಬಹಿಷ್ಕರಿಸಿದ್ದೇವೆ. ಇದು ಸರ್ಕಾರದ ಆಜ್ಞೆ, ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರ ಪ್ರದರ್ಶನ ಆಗುವವರೆಗೆ ಕರ್ನಾಟಕ ರಾಜ್ಯದಲ್ಲಿ ಪರಭಾಷೆಯ ಚಿತ್ರಗಳ ಪ್ರದರ್ಶನವಿಲ್ಲವೆಂದು ಹೇಳಿ ಸ್ವಾಮಿ.

ಛೇರ್ಮನ್:- ಕೇರಳದಲ್ಲಿ ಎಲ್ಲಿ ತಿರುಗಾಡಿದರೂ ಕನ್ನಡ ಮಾತನಾಡುವವರು ಹುಡುಕಿದರೂ ನಮಗೆ ಸಿಗುವುದು ಕಷ್ಟ.

ಶ್ರೀ ಗೋಪಿನಾಥ್ ಆರ್. ಸಾಂಡ್ರ:- ಬಾಂಬೆಯಲ್ಲಿ ಕನ್ನಡ ಚಿತ್ರ ಪ್ರದರ್ಶನ ಮಾಡುವುದಕ್ಕೆ ಥಿಯೇಟರ್ ಸಿಗಲಿಲ್ಲ. ಕನ್ನಡ ಚಿತ್ರವನ್ನು ನೋಡಲಿಕ್ಕೆ ಜನಗಳೇ ಬರಲಿಲ್ಲ. ಮೂರು ದಿವಸಗಳಾದ ಮೇಲೆ ಡಬ್ಬಿಯನ್ನು ವಾಪಸ್ಸು ತೆಗೆದುಕೊಂಡು ಬಂದಿದ್ದೇವೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಾನ್ಯ ಛೇರ್ಮನ್‌ರವರು ಪ್ರೋತ್ಸಾಹ ಕೊಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ನಾನು ಮಾನ್ಯ ಇದಿನಬ್ಬರವರನ್ನು ಅತ್ಯಂತ ಪ್ರೀತಿಯಿಂದ ಮೆಚ್ಚಿದ್ದೇನೆ.

ಛೇರ್ಮನ್:- 1978ನೇ ಇಸವಿಯಲ್ಲಿ ಮಾನ್ಯ ನಾಗರಾಜ್‌ರವರು ನನ್ನ ಮನೆಗೆ ಬಂದಿದ್ದರು.

ಶ್ರೀ ಹೆಚ್. ಏಕಾಂತಯ್ಯ:- ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಏನಾದರೂ ಇದು ಉಪಾಯವೆ ?

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರು ಈ ರೀತಿ ಹೇಳಿದರೆ ನನಗೆ ಸಮಯ ಕೊಡಬೇಡಿರೆಂದು ಅಲ್ಲ. ನನ್ನ ಬಗ್ಗೆ ಪ್ರೀತಿಯಿಂದು ಹೇಳುತ್ತಿದ್ದಾರೆ. ಆದ್ದರಿಂದ ತಾವೇನೂ ತಪ್ಪು ತಿಳಿದುಕೊಳ್ಳಬಾರದು. ತಮಗೆ ನಾನು ಹೇಳುತ್ತೇನೆ, ಮಾನ್ಯ ಇದಿನಬ್ಬರವರ ಮನೆಯ ಬಾಗಿಲಿಗೆ ನಾನು ಹೋಗಿದ್ದೇನೆ. ಅವರು ವಾಸ ಮಾಡತಕ್ಕ ಮನೆಯ ಬಾಗಿಲಿಗೆ ಹೋಗಿ ಸನ್ಮಾನ ಮಾಡಿ ಬಂದಿದ್ದೇನೆ. ಇದಿನಬ್ಬರವರಿಗೆ ಕನ್ನಡದ ಬಗ್ಗೆ ಒಂದು ಶ್ರೀಮಂತಿಕೆ ಇದೆ. ಕನ್ನಡದ ಬೆಳವಣಿಗೆಯ ಬಗ್ಗೆ ಅವರಲ್ಲಿ ಶ್ರೀಮಂತಿಕೆ ಇದೆ. ಅವರ ಮನೆಗೆ ನಾನು ಹೋದಾಗ ಅವರು ಒಬ್ಬರು ಸನ್ಯಾಸಿಯ ರೀತಿಯಲ್ಲಿ ಕಾವಿ ಹಾಕಿಕೊಂಡಿದ್ದರು. ಅವರ ಮನೆಗೆ ಹೋದ ತಕ್ಷಣ ಅಲ್ಲಿಯ ಸೌಂದರ್ಯ ನೋಡಿದಾಗ ಒಂದು ಮಠದ ಸ್ವಾಮೀಜಿ ಇದ್ದ ಹಾಗೆ ಇದ್ದರು. ಪೆರದಾಲ, ಕಾಸರಗೋಡಿನ ಕಯ್ಯಾರ ಕಿಞ್ಞಣ್ಣರೈ ಅವರ ಮನೆಗೆ ಹೋಗಿದ್ದೇನೆ. ಕಾರಂತರವರ ಮನೆಗೆ ಹೋಗಿದ್ದೇನೆ. ರಾಷ್ಟ್ರಕವಿಗಳ ಮನೆಗೆ ಹೋಗಿದ್ದೇನೆ. ಬೀದಿಬೀದಿಯಲ್ಲಿ, ರಸ್ತೆರಸ್ತೆಯಲ್ಲಿ ಅವರ ಸೇವೆಯನ್ನು ಮಾಡಿದ್ದೇನೆ. ಇವತ್ತು ನಾನು ಸಂತೋಷಪಡುತ್ತೇನೆ. ಇದಿನಬ್ಬನವರ ಹಾಡನ್ನು ಕೇಳಬೇಕು. ರಾಷ್ಟ್ರಕವಿ ಕುವೆಂಪುರವರ ಕವಿವಾಣಿಯನ್ನು ಅವರು ಹಾಡುತ್ತಾರೆ. ಅದನ್ನು ಕೇಳಬೇಕು, ಎಷ್ಟು ಮೇರು ಅದು ಕುಳಿತುಕೊಂಡು ಕೇಳಬೇಕು ಅನಿಸುತ್ತದೆ, ಕೇಳುತ್ತಾ ಇದ್ದರೆ ಆನಂದ ಬರುತ್ತದೆ. ಅವರು ಆ ಪೀಠದಲ್ಲಿ

ಕುಳಿತುಕೊಂಡಿದ್ದಾರೆ. ಅವರ ಬಗ್ಗೆ ನನಗೆ ಗೌರವವಿದೆ. ನಾನು ಅವರನ್ನು ಒಪ್ಪಿದ್ದೇನೆ, ಮೆಚ್ಚಿದ್ದೇನೆ. ಕನ್ನಡದ ಪ್ರಶ್ನೆ ಬಂದಾಗ ಅವರು ಒಂದು ರೀತಿ ಭಾವಪರವಶರಾಗಿರುತ್ತಾರೆ. ಅವರ ಬಗ್ಗೆ ನನಗೆ ಅತಿ ಹೆಚ್ಚಿನ ಗೌರವ ಇದೆ. ಪರಭಾಷೆ ಚಿತ್ರಗಳ ಧಾಳಿಯನ್ನು ತಡೆಯಲಿಲ್ಲವೆಂದರೆ ನಾವು ನಿಜವಾಗಿಯೂ ಕರ್ನಾಟಕ ರಾಜ್ಯದಲ್ಲಿ ಆರ್ಥಿಕವಾಗಿ ಚಿತ್ರರಂಗದ ಹಣ ಪರಭಾಷೆಯವರಿಗೆ ಹೋಗುತ್ತದೆ. ಕೊನೆಗೆ ಪರಭಾಷೆ ಚಿತ್ರಗಳಿಗೆ ಮನೋರಂಜನೆ ತೆರಿಗೆ ಇಲ್ಲವೆಂದು ಹೇಳಬೇಕು. ಅವುಗಳಿಗೆ ಹೆಚ್ಚಿನ ತೆರಿಗೆಯನ್ನು ಹಾಕಬೇಕು. ಬೇರೆ ರಾಜ್ಯಗಳಲ್ಲಿ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡದಿದ್ದರೆ ನಮ್ಮ ರಾಜ್ಯದಲ್ಲಿ ಪರಭಾಷೆ ಚಿತ್ರಗಳಿಗೆ ಅವಕಾಶವಿಲ್ಲವೆನ್ನತಕ್ಕ ಒಂದು ಕಟ್ಟಾಜ್ಞೆಯನ್ನು ತಾವು ಖಂಡಿತವಾಗಿಯೂ ಮಾಡಲೇಬೇಕು.

ಮಾನ್ಯ ಅಧ್ಯಕ್ಷರೇ, ಕನ್ನಡ ಆಡಳಿತ ಭಾಷೆ ಎಂದು ಹೇಳಿ ನಾವು ಒಪ್ಪಿಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ಆಡಳಿತ ನಡೆಸತಕ್ಕಂಥವರು ಸರ್ಕಾರ, ಮುಖ್ಯಮಂತ್ರಿ. ಮಂತ್ರಿಗಳು ಸರ್ಕಾರ ಹೇಳಿದಂತಹ ಕೆಲಸವನ್ನು ಮಾಡತಕ್ಕಂಥವರು. ಅಧಿಕಾರಿಗಳು, ಐ.ಎ.ಎಸ್. ಅಧಿಕಾರಿಗಳು, ಐಪಿಎಸ್ ಅಧಿಕಾರಿಗಳು, ಹಿರಿಯ ಅಧಿಕಾರಿಗಳು. ಕರ್ನಾಟಕದಲ್ಲಿರತಕ್ಕಂಥ ಪರಭಾಷೆಯ ಅಧಿಕಾರಿಗಳು ಇಡೀ ಭಾರತ ದೇಶದ ಯಾವ ರಾಜ್ಯದಲ್ಲಿ ಇಲ್ಲ. ಇಲ್ಲಿ ನೂರಕ್ಕೆ 80ಭಾಗ ಐಎಎಸ್, ಐಪಿಎಸ್ ಅಧಿಕಾರಿಗಳು ಕನ್ನಡೇತರರು ಇರುವಾಗ ನಿಮ್ಮ ಕನ್ನಡದ ಬೆಳವಣಿಗೆ ಹೇಗೆ ಸಾಧ್ಯ? ಆದ್ದರಿಂದ ಸರ್ಕಾರ ಪರಿಣಾಮಕಾರಿಯಾಗಿ ಕರ್ನಾಟಕದವರೇ ಕರ್ನಾಟಕದ ಕಂತಿನಲ್ಲಿರತಕ್ಕಂಥ ಅಧಿಕಾರಿಗಳನ್ನೇ ಪಡೆಯಲಿಲ್ಲ ಎಂದು ಹೇಳಿದರೆ ತೊಂದರೆಯಾಗುತ್ತದೆ. ಮಾನ್ಯ ಅಧ್ಯಕ್ಷರೆ, ತಮಗೆ ಹೇಳುತ್ತೇನೆ. 10 ವರ್ಷ 20ವರ್ಷಗಳಿಂದ ಇರತಕ್ಕಂಥ ಅಧಿಕಾರಿಗಳು ಇವತ್ತು ಕನ್ನಡ ಕಲಿಯುವುದಕ್ಕೆ ತಯಾರಾಗಿಲ್ಲ. ಕನ್ನಡ ಅವರಿಗೆ ಬರುವುದಿಲ್ಲ. ಈ ದೃಷ್ಟಿ ಇಲ್ಲ ಎಂದು ಹೇಳಿದರೆ ಕಷ್ಟವಾಗುತ್ತದೆ. ಅದಕ್ಕೆ ಒಂದು ಹೊಸ ಚೈತನ್ಯ ಬೇಕು. ಪಾಟೀಲ್ ಪುಟ್ಟಪ್ಪನವರು ನಮ್ಮ ಪ್ರಾಧಿಕಾರದಲ್ಲಿದ್ದರು. ನಿಜವಾಗಿಯೂ ಅದಕ್ಕೆ ಒಂದು ಶಕ್ತಿ ಇಲ್ಲದಿದ್ದರೂ ಅದಕ್ಕೆ ಒಂದು ಶಕ್ತಿ ಕೊಟ್ಟರು. ಇವತ್ತು ಜಿ. ನಾರಾಯಣ್‌ರವರು ಇದ್ದಾರೆ. ಅವರೂ ಕೆಲಸ ಮಾಡಬೇಕೆನ್ನುನ ಅಭಿಪ್ರಾಯವುಳ್ಳವರು. ನಾವು ಅವರೆಲ್ಲರಿಗೂ ಚೈತನ್ಯಪೂರ್ಣಶಕ್ತಿ ಕೊಡಲಿಲ್ಲ ಎಂದು ಹೇಳಿದರೆ ಇದು ಸಾಧ್ಯ ಇಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ.........

ಅಧ್ಯಕ್ಷರು:- ತಮಗೆ ಇನ್ನೂ ಎಷ್ಟು ಸಮಯ ಬೇಕು. ಇನ್ನೂ 10-20 ಜನ ಮಾತನಾಡುವವರಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ನನಗೆ ಇನ್ನೊಂದು 25 ನಿಮಿಷ ಬೇಕು. ಕೊನೆಯಲ್ಲಿ ಒಂದೆರಡು ಕವಿತೆಗಳು ಇವೆ. ಅವುಗಳನ್ನು ನಾನು ತಮ್ಮ ಗಮನಕ್ಕೆ ತಂದು ಮುಗಿಸುತ್ತೇನೆ. ಬಹಳ ಸ್ವಾರಸ್ಯವಾದ ಕೆಲವು ವಿಚಾರಗಳಿವೆ. ಅದಕ್ಕೆ ನಾನು ಅತ್ತ ಇತ್ತ ಹೋಗದೆ ಈ ವಿಚಾರಕ್ಕೇ ಬಂದುಬಿಟ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, 4-45 ನಿಮಿಷಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮೀಟಿಂಗ್ ಕರೆದಿದ್ದಾರೆ. ನಾವು ಹೋಗುತ್ತೇವೆ. ನಿಮ್ಮ ಕವಿತೆ ಕೇಳಿ ಹೋಗಬೇಕೆಂದು ಆಸೆ.

ಶ್ರೀ ವಾಟಾಳ್ ನಾಗರಾಜ್:- ಮಾಡುತ್ತೇವೆ. ನನ್ನ ಕವಿತೆ ಅಲ್ಲ. ಬೇರೆಯವರು ಬರೆದಿರುವುದನ್ನು ನಾನು ನಿಮಗೆ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಐಎಎಸ್, ಐಪಿಎಸ್ ಅಧಿಕಾರಿಗಳು ಯಾರು ಕನ್ನಡ ಅಲ್ಲದವರು ಇದ್ದಾರೆ. ಅವರಿಗೆ ಕಡ್ಡಾಯವಾಗಿ ಇಷ್ಟು ದಿವಸದಲ್ಲಿ ಕನ್ನಡ ಕಲಿಯಲೇಬೇಕೆಂದು ಎಂದು ಹೇಳಬೇಕು. ಮತ್ತು ಯಾರು ಕರ್ನಾಟಕದ ಕೆಲಸವನ್ನು ಬಯಸುತ್ತಾರೆ ಅವರು ಕರ್ನಾಟಕದವರೇ ಆಗಿರಬೇಕು, ಕನ್ನಡನಾಡಿನ ಮಣ್ಣಿನ ಮಕ್ಕಳಾಗಿರಬೇಕು. ಅವರಿಗೇ ಇಲ್ಲಿ ಕೆಲಸ

ಕೊಡಬೇಕು. ಇವತ್ತು ನೂರಕ್ಕೆ 80 ಭಾಗ ಕೇಂದ್ರದ ಕಾರ್ಖಾನೆಗಳಲ್ಲಿ, ಕರ್ನಾಟಕದ ಕಾರ್ಖಾನೆಗಳಲ್ಲಿ ಎಲ್ಲ ಕೆಲಸವೂ ಹೊರಗಡೆಯವರಿಗೆ ಹೋಗಿದೆ. ಕನ್ನಡಿಗರ ಪರಿಸ್ಥಿತಿ ಏನಾಗಿದೆಯೆಂದರೆ, ಹೊರಗಡೆಯವರ ಮನೆ ಮುಂದೆ ಪಾತ್ರೆ ತಿಕ್ಕತಕ್ಕಂಥ ಕೆಲಸ ಆಗಿದೆ. ಇದು ಆಗಬಾರದು. ಈ ಪರಿಸ್ಥಿತಿ ಆದಾಗಲೇ ಅಸ್ಸಾಂ ಪರಿಸ್ಥಿತಿ ಆಗುತ್ತದೆ ಎನ್ನತಕ್ಕಂಥ ಎಚ್ಚರಿಕೆಯ ಗಂಟೆಯನ್ನು ನಾನು ಬಾರಿಸುತ್ತಿದ್ದೇನೆ. ಸರೋಜಿನಿ ಮಹಿಷಿ ವರದಿ ಬಂದು ಎಷ್ಟು ದಿವಸ ಆಯಿತು. ಮಾನ್ಯ ಅಧ್ಯಕ್ಷರೇ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಎಲ್ಲಿದೆ ? ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಮುಖ್ಯಮಂತ್ರಿ ಆದರು. ಅವರು ಸರೋಜಿನಿ ಮಹಿಷಿ ವರದಿಯನ್ನು ಜಾರಿಗೊಳಿಸುತ್ತೇವೆಂದು ಹೇಳಿದರು. ಅವರು ಒಂದು ಉಪಸಮಿತಿಯನ್ನು ಮಾಡಿದರು. ಆಮೇಲೆ ಬಂದಂತಹ ಸರ್ಕಾರ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ. ಆಮೇಲೆ ಬಂಗಾರಪ್ಪನವರು ಬಂದರು. ಸರೋಜಿನಿ ಮಹಿಷಿ ವರದಿ ಎಲ್ಲಿದೆ ಸ್ವಾಮಿ. ಆ ವರದಿಯನ್ನಾದರೂ ನಮಗೆ ತೋರಿಸಿ ಸ್ವಾಮಿ. ತಾವು ಜಾರಿಗೊಳಿಸದಿದ್ದರೂ ಚಿಂತೆ ಇಲ್ಲ, ಆ ವರದಿಯನ್ನಾದರೂ ತೋರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಸಬ್ ಕಮಿಟಿ ಮಾಡಿದ್ದಾರೆ. ಅದಕ್ಕೆ ಶ್ರೀಮಾನ್ ರಂಗನಾಥ್‌ರವರು ಅಧ್ಯಕ್ಷರು. ಮತ್ತೆ ಕರ್ನಾಟಕದಲ್ಲಿ ಎಲ್ಲಾ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಏನಿವೆ ಅವುಗಳಿಂದ ಒಂದೊಂದು ಕಡೆಯಿಂದ ಮಾಹಿತಿ ತರಿಸುತ್ತಿದ್ದಾರೆ. ಎಲ್ಲೆಲ್ಲಿ ನಮ್ಮ ಕರ್ನಾಟಕದ ಕನ್ನಡದವರಿಗೆ ಹೆಚ್ಚಿನ ರೀತಿಯಲ್ಲಿ ಎಂಪ್ಲಾಯ್‌ಮೆಂಟ್ಸ್ ಆಗಿಲ್ಲ ಅಥವಾ ನೌಕರಿ ಸಿಕ್ಕಿಲ್ಲ ತಿಳಿಸಿ ಎಂದು ಅಂಥಾದ್ದನ್ನೆಲ್ಲ ಅವರು ಪರಿಶೀಲನೆ ಮಾಡುತ್ತಿದ್ದಾರೆ. ಮೊನ್ನೆ ಒಂದು ಮೀಟಿಂಗ್ ಆಯಿತು. ಸರೋಜಿನಿ ಮಹಿಷಿ ವರದಿಯನ್ನು ಮೂಲೆಗುಂಪು ಮಾಡಿಲ್ಲ. ಅದರ ಕೆಲಸ ನಡೆಯುತ್ತಿದೆ.

ಶ್ರೀ ವಾಟಾಳ್ ನಾಗರಾಜ್:– ತಾವು ಒಂದು ಉಪ ಸಮಿತಿ ಮಾಡಿದ್ದೀರಿ. ಪ್ರತಿ ಸಾರಿ ಉಪಸಮಿತಿ ಮಾಡಿಕೊಂಡು ಹಾಗೆಯೇ ಸಮಿತಿಯಲ್ಲಿ ಕೊಳೆಯುವುದು. ಇಲ್ಲದಿದ್ದರೆ ನೀವು ಧೈರ್ಯವಾಗಿ ಹೇಳಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಕ್ಯಾಬಿನೇಟ್ ಸಬ್ ಕಮಿಟಿ ಮಾಡಿದ್ದು ಅದನ್ನು ಆಚರಣೆಗೆ ತರವುದಕ್ಕೋಸ್ಕರ.

ಶ್ರೀ ವಾಟಾಳ್ ನಾಗರಾಜ್:– ತಮ್ಮ ಮಾತಿನಲ್ಲಿ ನನಗೆ ನಂಬಿಕೆ ಇದೆ. ತಾವು ಹಿಂದಿನ ಮಂತ್ರಿಮಂಡಲದಲ್ಲಿದ್ದವರು. ಇದೇ ಪರಿಸ್ಥಿತಿಯಾಗಿದ್ದು ತಮಗೆ ಗೊತ್ತಿದೆ, ಆದ್ದರಿಂದ ನಾನು ಹೇಳುವುದೇನೆಂದರೆ, ತಾವು ಸುಮ್ಮನೆ ಈ ರೀತಿ ಹೇಳುವುದರಿಂದ ಆಗುವುದಿಲ್ಲ. ಡಾ. ಸರೋಜಿನಿ ಮಹಿಷಿ ವರದಿಯನ್ನು ಒಂದು ಕಾಮ, ಫುಲ್‌ಸ್ಟಾಪ್ ಬಿಡದೆ ನಾವು ಸಂಪೂರ್ಣವಾಗಿ ಒಪ್ಪಿದ್ದೇವೆ ಎನ್ನತಕ್ಕಂಥ ಒಂದು ತೀರ್ಮಾನ ಕೈಗೊಳ್ಳಿ ಈ ರೀತಿ ತೀರ್ಮಾನ ತಗೊಳ್ಳುವುದರಿಂದ ನಿಮಗೆ ತೊಂದರೆ ಏನಾಗುತ್ತವೆ ? ಇದರ ಬಗ್ಗೆ ಒಂದು ಸಮಗ್ರ ಚಿಂತನೆ ಆಗಲಿ. ಯಾರದೋ ಉದ್ಧಾರಕ್ಕಾಗಿ, ಯಾವುದೋ ಭಾಷೆಯವರನ್ನು ಮೆಚ್ಚಿಸುವುದಕ್ಕೋಸ್ಕರವಾಗಿ ಕನ್ನಡವನ್ನು ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತರನ್ನಾಗಿ ಮಾಡತಕ್ಕಂಥ ನೀತಿಗೆ ತಾವು ಹೋಗಬಾರದು ಎಂದು ಕಳಕಳಿಯಿಂದ ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಚಿತ್ರಮಂದಿರಗಳ ಬಗ್ಗೆ ಹೇಳಬೇಕಾದರೆ, ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳು ಸಿಗುವುದಕ್ಕಿಂತ ಹೆಚ್ಚಾಗಿ ಆ ಚಿತ್ರಮಂದಿರಗಳ ಬಾಡಿಗೆ ಇದೆಯಲ್ಲಾ ಅದು ಅಪಾರವಾದಂಥ ಬಾಡಿಗೆಯಾಗಿದೆ. ಇವತ್ತು ಕನ್ನಡ ಚಿತ್ರಗಳನ್ನು ಶೇಕಡಾವಾರು ಪ್ರದರ್ಶನ ಮಾಡಬೇಕಾದ ಪರಿಸ್ಥಿತಿ ಈ ಬಾಡಿಗೆ ವೃದ್ಧಿಯಿಂದ ಬಂದಿದೆ. ನಾನು 1967ನೇ ಇಸವಿಯಲ್ಲಿ ಈ ಸದನಕ್ಕೆ ಬಂದಾಗಿನಿಂದಲೂ ಸಹಾ ಚಿತ್ರಮಂದಿರಗಳನ್ನು ಸಮಗ್ರವಾಗಿ ರಾಷ್ಟ್ರೀಕರಣ ಮಾಡಿ ಎಂದು ಹೇಳುತ್ತಿದ್ದೇನೆ.

ಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡುವುದರಿಂದ ನಿಜವಾಗಲೂ ಅಲ್ಲಿನ ಕೆಲಸಗಾರರಿಗೆ ಒಳ್ಳೆಯ ಉದ್ಯೋಗದ ಮತ್ತು ಸಂಬಳವನ್ನು ನಾವು ಕೊಟ್ಟ ಹಾಗೆ ಆಗುತ್ತದೆ ಮತ್ತು ಕನ್ನಡ ಚಿತ್ರ ಪ್ರದರ್ಶನಕ್ಕೂ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಇನ್ನು ಚಿತ್ರ ಹಂಚಿಕೆ ಸಂಸ್ಥೆಯವರು 10 ಪರಭಾಷೆ ಚಿತ್ರಗಳನ್ನು ತೆಗೆದುಕೊಂಡು ಒಂದು ಕನ್ನಡ ಚಿತ್ರವನ್ನು ತೆಗೆದುಕೊಂಡುಹೋಗಿ ಎಂದು ಹೇಳುತ್ತಾರೆ. ಪರಭಾಷೆ ಬೆಳವಣಿಗೆಗೆ ಈ ಚಿತ್ರ ಹಂಚಿಕೆ ಸಂಸ್ಥೆಯೇ ಕಾರಣವಾಗಿದೆ.

ಶ್ರೀಮತಿ ಮೋಟಮ್ಮ:- ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸಿನಿಮಾಗಳ ಬಗ್ಗೆ ಸುದೀರ್ಘವಾಗಿ ಹೇಳುತ್ತಿದ್ದಾರೆ. ನಾನು ಕೇಳುವುದೇನೆಂದರೆ, ಬೆಂಗಳೂರಿನಲ್ಲೇ ಎಲ್ಲಾ ಸಿನಿಮಾ ಡೈರೆಕ್ಟರ್‌ಗಳು ಇದ್ದಾರೆ. ಎಷ್ಟು ಕೆಟ್ಟದಾಗಿ ಸಿನಿಮಾಗಳನ್ನು ತೆಗೆಯುತ್ತಿದ್ದಾರೆ. ಅದರ ಬಗ್ಗೆ ನೀವು ಏನಾದರೂ ಕೂಗು ಹಾಕಿದ್ದೀರಾ ? ಆ ಹೆಸರು ಕೇಳಿದರೆ ವಾಂತಿ ಬರುತ್ತದೆ. ಆ ತರಹ ಸಿನಿಮಾಗಳನ್ನು ಮಾಡಬೇಡಿ ಎಂದು ಹೇಳಿ. ಒಳ್ಳೆಯ ಸಿನಿಮಾಗಳನ್ನು ಕನ್ನಡದವರು ಏಕೆ ತೆಗೆಯಬಾರದು ? ಇದರ ಬಗ್ಗೆ ಕೂಗು ಹಾಕಿ ಇಂಥಾ ಕಚಡಾ ಪಿಕ್ಚರ್‌ಗಳನ್ನು ತೆಗೆಯಬಾರದೆಂದು ಹೇಳಿ, ನೋಡೋಣ. ನಾವೂ ನಿಮ್ಮ ಜೊತೆ ಸೇರಿಕೊಳ್ಳುತ್ತೇವೆ. ಒಳ್ಳೆಯ ಚಿತ್ರಗಳನ್ನು ತೆಗೆದರೆ ಸ್ವಲ್ಪ ಮರ್ಯಾದೆ ಬರುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ:- ಒಳ್ಳೆಯ ಕನ್ನಡ ಪಿಕ್ಚರ್‌ಗಳು ಬಂದರೆ ಇತರೆ ಭಾಷೆಯವರು ನೋಡುವುದಕ್ಕೆ ಸಿದ್ಧರಿರುತ್ತಾರೆ. ಜೀವನಚೈತ್ರ, ಉಯ್ಯಾಲೆ, ಗೆಜ್ಜೆಪೂಜೆ ಇಂಥಾ ಒಳ್ಳೆಯ ರೀತಿಯಲ್ಲಿ ಪಿಕ್ಚರ್ ತೆಗೆಯಬೇಕು.

ಛೇರ್ಮನ್:- ಈಗ ತಾವು ಈ ಚಿತ್ರಗಳಲ್ಲಿ ಒಳ್ಳೆಯವು ತರಬೇಕು ಕಳಪೆಯವನ್ನು ನಿಲ್ಲಿಸಿಬಿಡಬೇಕೆಂದು ಹೇಳಿ ನಮ್ಮ ಮುಂದಿನ ಪದ್ಯಕ್ಕೆ ಹೋಗಿಬಿಡಿ. ಸಮಯ ಆಗುತ್ತಾ ಬಂತು.

ಶ್ರೀ ವಾಟಾಳ್ ನಾಗರಾಜ್:- ಹೋಗುತ್ತೇನೆ. ಮೋಟಮ್ಮನವರಲ್ಲಿ ಒಂದು ಮನವಿ ತಾವು ಇದ್ದರೋ ಇಲ್ಲವೋ. ನಾನು ಆಗಲೇ ಇದರ ಬಗ್ಗೆ ಹೇಳಿದೆ. ಕನ್ನಡ ಚಿತ್ರರಂಗದಲ್ಲಿ ಹಿಂದೆ ಎಂತಹ ಒಳ್ಳೆಯ ಚಿತ್ರಗಳು ಬರುತ್ತಿದ್ದವು. ಇವತ್ತು ಕಳಪೆ ಚಿತ್ರಗಳು ಬರುತ್ತಿವೆಯೆಂದು ಹೇಳಿದ್ದೇನೆ. ಎರಡು ಅರ್ಥ ಬರತಕ್ಕಂಥ ಚಿತ್ರಗಳು ಬರುತ್ತಿವೆ. ಒಂದು 'ರಾಮಾಚಾರಿ' ಎಂದು ಕೆಟ್ಟಚಿತ್ರ, ಅದರಲ್ಲಿ ಒಬ್ಬ ತಮಿಳರವನೇ ನಟ. ಅದರಲ್ಲಿ ಕನ್ನಡವನ್ನು ಅವನ ಬಾಯಿಗೆ ತುರುಕುತ್ತಾರೆ. ಅದರಲ್ಲಿ ಕನ್ನಡ ಅಕ್ಷರ ಮಾಲೆಯನ್ನು ಸಂಗೀತದಲ್ಲಿ ಹೇಳಿಸುತ್ತಾರೆ. ಆ ಅಕ್ಷರ ಮಾಲೆಯನ್ನು ಸಂಗೀತದಲ್ಲಿ ಕೇಳಿಬಿಟ್ಟರೆ ಸುಸ್ತು ಹೊಡೆದುಬಿಡುತ್ತೇವೆ. ಅಂಥಾ ಕೆಟ್ಟದಾಗಿ ಆ ಚಿತ್ರವನ್ನು ತಯಾರು ಮಾಡಿದ್ದಾರೆ. ಈ ರೀತಿ ಎರಡು ಅರ್ಥ ಕೊಡತಕ್ಕಂಥ ಕೆಟ್ಟ ಕೆಟ್ಟ ಚಿತ್ರಗಳು, ಕೆಟ್ಟ ಸಂಗೀತ ಇವತ್ತು ಬರುತ್ತಿವೆ. ಉತ್ತಮವಾದ ಚಿತ್ರಗಳು ಬರಬೇಕೆಂದು ನಾನು ಹೇಳುತ್ತಿದ್ದೇನೆ. ಉತ್ತಮ ಕನ್ನಡ ಚಿತ್ರಗಳು ಬರಬೇಕು, ಉತ್ತಮ ಚಿತ್ರ, ಕನ್ನಡ ನಾಡು, ಉತ್ತಮ ಕನ್ನಡ ಭಾಷೆ ಬರಬೇಕಂತಲೇ 30 ವರ್ಷಗಳಿಂದ ನಿರಂತರವಾಗಿ ಹೋರಾಟ ನಡೆದಿದೆ. ಇದರ ಬಗ್ಗೆ ಸಮಗ್ರವಾಗಿ ಹೋರಾಟ ನಡೆದಿದೆ. ಈ ಹೋರಾಟದಿಂದ ಕಡಿಮೆ ಆಯಿತೆಂದಲ್ಲ, ಸಮಗ್ರವಾದ ಚಿಂತನೆ ಈ ಬಗ್ಗೆ ನಡೆದಿದೆ. ಇದರ ಬಗ್ಗೆ ನಮ್ಮ ಕಳಕಳಿ ಇದೆ. ಆಗ ನಾವು ಎಂಥಾ ಚಿತ್ರಗಳಿಗೆ ಬುನಾದಿ ಹಾಕಿದ್ದೆವು. ಇವತ್ತು ಎಂಥಾ ಚಿತ್ರಗಳು ಬರುತ್ತಿವೆ ಎನ್ನತಕ್ಕಂಥ ಚಿಂತನೆ ನಮಗೆ ಇದೆ. ಇದರ ಬಗ್ಗೆ ಬೇರೆ ಮಾತು ಇಲ್ಲಿ ನಾನು ಹೇಳುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಈಗ ಕೃಷ್ಣಾ, ಕಾವೇರಿ ಬಗ್ಗೆ ಸರಕಾರದ ನಿಲುವು ಸ್ಪಷ್ಟವಾಗಬೇಕು. ಮಾನ್ಯ ವೀರಪ್ಪಮೊಯಿಲಿಯವರ ಸರಕಾರ ಬಂದ ನಂತರ ಕೃಷ್ಣಾ, ಕಾವೇರಿ ಬಗ್ಗೆ ಇವತ್ತಿನವರೆಗೂ ನಮ್ಮ ನಿಲುವು ಏನು ಎನ್ನತಕ್ಕಂಥಾದ್ದನ್ನು ಸ್ಪಷ್ಟಪಡಿಸಿಲ್ಲ. ಕಾವೇರಿ ನ್ಯಾಯ ಮಂಡಳಿಯನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ನಾವಂತೂ ಹೇಳಿದ್ದೇವೆ, ಬಚಾವತ್ ತೀರ್ಪನ್ನು ಬಹಿಷ್ಕರಿಸಬೇಕೆಂದು

ಹೇಳಿದ್ದೇವೆ. ಸರ್ಕಾರ ಅದಕ್ಕೆ ಏನು ಹೇಳಿದೆ ? ಏನು ಮಾಡಿದೆ ಎನ್ನತಕ್ಕಂಥ ವಿಷಯ ಇವತ್ತಿನವರೆಗೂ ಬರಲಿಲ್ಲ. ಈ ಬಗ್ಗೆ ಸರ್ಕಾರದ ನಿಲುವು ಏನು ಎಂದು ಸ್ಪಷ್ಟಪಡಿಸಬೇಕು. ಕನ್ನಡ ಸಂಸ್ಕೃತಿಯ ಪ್ರತೀಕವಾಗಿರತಕ್ಕಂಥ ಪುಸ್ತಕ ಪ್ರಾಧಿಕಾರ ಒಂದು ಆಗಬೇಕು. ಒಂದು ಕಾಲದಲ್ಲಿ ಅ. ನ. ಕೃಷ್ಣರಾಯರು, ತಾರಾಸು – ಹೀಗೆ ಬೇರೆ ಬೇರೆ ಸಾಹಿತಿಗಳು ಬರೆದಂಥ ಪುಸ್ತಕಗಳನ್ನು ಓದತಕ್ಕಂಥ ಒಂದು ಪೀಳಿಗೆಯನ್ನೇ ಇಡೀ ರಾಜ್ಯದಲ್ಲಿ ರಚನೆ ಮಾಡಿದ್ದರು. ಅದೇ ರೀತಿ ಇವತ್ತು ಸಹಾ ಒಂದು ಕನ್ನಡ ಪುಸ್ತಕ ಪ್ರಾಧಿಕಾರವನ್ನು ರಚನೆ ಮಾಡಿ, ಪುಸ್ತಕವನ್ನು ಬರೆಯುತಕ್ಕಂಥವರಿಗೆ ಹೆಚ್ಚಿನ ರೀತಿಯಲ್ಲಿ ನೆರವನ್ನು ಕೊಡತಕ್ಕಂಥ ಒಂದು ಕೆಲಸ ಸರ್ಕಾರದಿಂದ ಇವತ್ತು ಆಗಬೇಕಾಗಿದೆ.

ಸಮಗ್ರ ಕನ್ನಡ ಬೆಳವಣಿಗೆಯ ಬಗ್ಗೆ ಒಂದು ಯೋಜನೆಯನ್ನು ಕೊಡಿ. ಈ ಮೂರು ವರ್ಷಗಳಲ್ಲಿ ಸಮಗ್ರ ಕನ್ನಡ ಬೆಳವಣಿಗೆಯ ಬಗ್ಗೆ ನಾವು ಏನೇನು ಮಾಡಬೇಕೆಂಬ ಬಗ್ಗೆ ಒಂದು ಚಿಂತನೆ ಮಾಡಿ, ಅದರ ಸಮಗ್ರ ಕನ್ನಡ ಬೆಳವಣಿಗೆ ಬಗ್ಗೆ ಒಂದು ಸ್ಪಷ್ಟ ನಿಲುವನ್ನು ತಾವು ಮಾಡಬೇಕು. ನಾವು ಮಾಡಿದ ಕನ್ನಡ ವಿಶ್ವವಿದ್ಯಾನಿಲಯ ಮೊನ್ನೆ ನೆರೆ ಹಾವಳಿಯಲ್ಲಿ ಮುಳುಗಿಹೋಯಿತು. ಅದನ್ನು ಇನ್ನೂ ಎತ್ತಲು ಆಗಿಲ್ಲ. ಅಲ್ಲಿದ್ದ ಪುಸ್ತಕಗಳು ಮುಳುಗಿದವು. ಆದರೆ ಪಾಪ ಕುಲಪತಿಗಳು ಮಾತ್ರ ಮೇಲಕ್ಕೆ ಉಳಿದರು. ಕನ್ನಡದ ವಿಶ್ವವಿದ್ಯಾನಿಲಯ ಎಂದು ಹೆಸರು ಹೇಳಿಬಿಟ್ಟಿದ್ದೀರಿ. ಆದರೆ ಅದರ ಬೆಳವಣಿಗೆಗೆ ಏನೇನು ಶಕ್ತಿ ಕೊಡಬೇಕು, ಯಾವ ಯಾವ ರೀತಿಯ ಸಹಕಾರವನ್ನು ಕೊಡಬೇಕು, ಅದ್ಯಾವುದೂ ಆಗಲಿಲ್ಲ. ಇವೊತ್ತಿನವರೆಗೂ ಆ ಕೆಲಸ ಆಗಿಲ್ಲ ಆದರೆ ಅವರು ಎಲ್ಲಿಗೆ ಹೋಗಬೇಕು ? ಹೀಗೆ ಬರೀ ಹೆಸರಿಗೆ ಕನ್ನಡ ಎಂದು ಹೇಳಿಕೊಳ್ಳುವುದೇ ? ಕನ್ನಡ ಭವನ ಕಟ್ಟಿಸುತ್ತೇವೆ ಎಂದು ಹೇಳಿದರು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದರು, ಶಿವಮೂರ್ತಿಯವರು ಆ ಇಲಾಖೆಯ ಸಚಿವರಾಗಿದ್ದರು. ತರಾತುರಿಯಲ್ಲಿ ಅವರ ಸಸ್ತಿರ ಗುದ್ದಲಿ, ಪಿಕಾಸು ಹಿಡಿದು ರವೀಂದ್ರ ಕಲಾಕ್ಷೇತ್ರದ ಹತ್ತಿರ ಶಂಕುಸ್ಥಾಪನೆ ಮಾಡಿಸಿದರು. ಈಗ ಎಲ್ಲಿದೆ ಕನ್ನಡ ಭವನ ? ಏನಾಯಿತು ? ಅದರ ಬಗ್ಗೆ ನಿಮ್ಮ ಸರಕಾರದ ಚಿಂತನೆ ಏನು ? ಅದರ ಬಗ್ಗೆ ನಿಮ್ಮ ಚಿಂತನೆ ಇಲ್ಲ. ಎಷ್ಟು ಜನ ಶಾಸಕರ ಸಚಿವರ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಸೇರಿಸಿದ್ದೇವೆ ಸ್ವಾಮಿ ? ನಿಮ್ಮ ಆತ್ಮಶೋಧನೆ ಮಾಡಿಕೊಳ್ಳಿ. ಹೀಗೆ ನಾವು ಹೇಳುವುದೆಲ್ಲ ವೇದ, ಆದರ ಮಾತನಾಡುವುದು ಬೇರೆ. ಇದರ ಬಗ್ಗೆ ಚಿಂತನೆಯಾಗಬೇಕು. ಕನ್ನಡ ಮಾಧ್ಯಮದ ಬಗ್ಗೆ ಒಂದು ಸ್ಪಷ್ಟವಾದ ನಿಲುವು ಇರಬೇಕು. ಇಂಗ್ಲಿಷ್ ಮಾಧ್ಯಮ ಶಾಲೆಗಳು ನಾಯಿ ಕೊಡೆ ರೀತಿಯಲ್ಲಿ ಬೆಳೆಯಲು ಅವಕಾಶವನ್ನು ಕೊಡತಕ್ಕಂಥವರು, ಕನ್ನಡ ಮಾಧ್ಯಮಕ್ಕೆ ನಾವೇ ಬೆಂಬಲ ಕೊಡದೇ ಇರತಕ್ಕಂಥಾದ್ದು, ಮಂತ್ರಿಗಳು, ಅವರ ಮೊಮ್ಮಕ್ಕಳು, ಎಂದೂ ಕನ್ನಡ ಮಾಧ್ಯಮ ಶಾಲೆಗಳಿಗೆ ಬೆಂಬಲವನ್ನು ಕೊಟ್ಟಿಲ್ಲ. ನಮ್ಮಲ್ಲಿ ಕನ್ನಡ ಶಾಲೆಗಳ ಗತಿ ನಾಯಿಮೊಡ್ಡಿಗಳ ರೀತಿಯಲ್ಲಿ ಆಗಿದೆ. ಅದರ ಬೆಳವಣಿಗೆಗೆ ನಮ್ಮ ಸರಕಾರದವರು ಸರಿಯಾದ ಸಹಕಾರ ಕೊಡುತ್ತಾ ಇಲ್ಲ. ಇಂಗ್ಲೀಷ್ ಗೊತ್ತಿಲ್ಲದ ತಂದೆ ತಾಯಿಗಳಿಗೆ ಅವರ ಮಕ್ಕಳು ಅವರನ್ನು ಮಮ್ಮೀ ಡ್ಯಾಡಿ ಎಂದರೆ ಅವರಿಗೆ ಬಹಳ ಆನಂದ. ಅವರ ಮಕ್ಕಳು ಹೋಗಲಿ, ನಮ್ಮ ನಾಯಿಗಳ ಹತ್ತಿರವೂ ಇಂಗ್ಲೀಷ್‌ನಲ್ಲಿಯೇ ಮಾತನಾಡುತ್ತಾರೆ. ಈ ಪರಿಸ್ಥಿತಿಯು ಬದಲಾವಣೆ ಆಗದಿಲ್ಲ ಎಂದರೆ ನಾವು ನಿಜವಾಗಿಯೂ ಕನ್ನಡದ ಬೆಳವಣಿಗೆ ಬಗ್ಗೆ ಯೋಚನೆ ಮಾಡಲು ಸಾಧ್ಯವಿಲ್ಲ. ಕೇಂದ್ರದಿಂದ ಕರ್ನಾಟಕಕ್ಕೆ ಸಮಗ್ರವಾಗಿ ಅನ್ಯಾಯವಾಗುತ್ತಾ ಇದೆ. ನಮ್ಮ ಲೋಕಸಭಾ ಸದಸ್ಯರುಗಳು, ನಮ್ಮಲ್ಲಿಂದ ಹೋಗಿರತಕ್ಕಂಥ ಮಂತ್ರಿಗಳು, ಅಲ್ಲಿ ಹೋಗಿ ಏನು ಮಾಡಿದ್ದಾರೆ ? ವಿಜಯನಗರದ ಗತಿ ಏನಾಯಿತು ? ಪ್ರತಿ ಸರಕಾರ ಬಂದಾಗ ಕೂಡ ಕನ್ನಡಿಗರ ಮೂಗಿಗೆ ತುಪ್ಪವನ್ನು ಹಚ್ಚುತ್ತಾ ಇದ್ದಾರೆ. ವಿಜಯನಗರ ಎಂದು ಹೇಳುತ್ತಾ ಬಂದಿದ್ದಾರೆ. ಕೋಚ್ ಫ್ಯಾಕ್ಟರಿಯೂ ಇಲ್ಲ, ರೈಲ್ವೇ ಇಲ್ಲ. ನಾವು ಯಾವುದರಲ್ಲಿ ಇದ್ದೇವೆ ? ನಮ್ಮಲ್ಲಿ ಏನಾಗಿದೆ ? ಬೇರೆ ರಾಜ್ಯದವರು ಅವರ ಲೋಕಸಭಾ ಸದಸ್ಯರು, ಮಂತ್ರಿಗಳು, ತಮ್ಮ ರಾಜ್ಯದ ಹಿತಕ್ಕೋಸ್ಕರ ಅಲ್ಲಿ ಪ್ರಧಾನ ಮಂತ್ರಿಗಳ ಹತ್ತಿರ ಹೋರಾಟ ಮಾಡಿ,

ತಮ್ಮ ಹಿತಾಸಕ್ತಿಯನ್ನು ಕಾಪಾಡಿದ್ದಾರೆ. ಆದರೆ ನಮ್ಮವರು ಏನೂ ಇಲ್ಲ. ಈ ಪರಿಸ್ಥಿತಿಯು ನಮ್ಮಲ್ಲಿದ್ದು, ಇದು ಸರಿ ಹೋಗಬೇಕಾದುದು ಅತ್ಯಗತ್ಯ. ನಮ್ಮ ರಾಜ್ಯದಲ್ಲಿ, ಕೊಪ್ಪಳದಲ್ಲಿ ಒಂದು ವಾರದ ಹಿಂದೆ ಕನ್ನಡ ಸಾಹಿತ್ಯ ಸಮ್ಮೇಳನ ನಡೆದು ಹೋಗಿದೆ. ಮಾನ್ಯ ಸಿಂಪಿ ಲಿಂಗಣ್ಣನವರು ಕನ್ನಡದ ಗಂಡು ಭಾಷೆಯಲ್ಲಿ ಈ ನಾಡಿನ ಸಮಗ್ರ ಕನ್ನಡದ ಚಿತ್ರವನ್ನು ಕೊಟ್ಟಿದ್ದಾರೆ. ನಮ್ಮ ಮಂತ್ರಿಗಳು ಅಲ್ಲಿ ಹೋಗಿ ಸಾಹಿತ್ಯ ಪರಿಷತ್ತಿಗೆ ಒಂದು ಕಾರು ಕೊಡುತ್ತೇನೆ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಿಗೆ ಒಂದು ಕಾರು ಕೊಡುತ್ತೇನೆ ಎಂದು ಹೇಳಿದರು. ಯಾವಾಗ ಇವರು ಕಾರು ಕೊಡುವುದು? ಅವರ ಕಾರಿಗೆ ಪೆಟ್ರೋಲ್ ಹಾಕುವವರು ಯಾರು? ಅದಕ್ಕೆ ಡ್ರೈವರ್ ಯಾರು? ಅದನ್ನು ಎಲ್ಲಿ ಇಟ್ಟುಕೊಳ್ಳುವುದು? ಅದಕ್ಕೆ ಪೆಟ್ರೋಲ್ ಹಾಕುವವರು ಯಾರು? ಅದಕ್ಕೆ ಇರುವ ವ್ಯವಸ್ಥೆ ಏನು? ಇದ್ಯಾವುದೂ ಬೇಡವೆ? ಇದಕ್ಕೆ ಒಂದು ಲಂಗು ಲಗಾಮು ಯಾವುದೂ ಬೇಡವೆ? ಇದಕ್ಕೆಲ್ಲಾ ಒಂದು ಸೂಕ್ತ ಯೋಜನೆ ಬೇಡವೆ? ಅದನ್ನು ಮಾಡಿಕೊಂಡು ಹೇಳಿದ್ದೀರಾ? ಅದೆಲ್ಲಾ ಬಿಟ್ಟು ಸಭೆಗಳಲ್ಲಿ ಸುಮ್ಮನೇ ಹೇಳುವುದು ಬೇಡ. ವರ್ಷಕ್ಕೊಂದು ಸಾರಿ ಸಾಹಿತ್ಯ ಸಮ್ಮೇಳನ ನಡೆಯುತ್ತದೆ. ಅಲ್ಲಿಗೆ ಹೋದ ಮಂತ್ರಿಗಳು ಹೀಗೆ ಹೇಳುತ್ತಾ ಬಂದಿದ್ದಾರೆ. ಆದರೂ ಕೂಡ ಯಾವುದೂ ಆಗಿಲ್ಲ. ಸಮಗ್ರವಾದ ಕನ್ನಡದ ಬೆಳವಣಿಗೆ ಇನ್ನೂ ಆಗಿಲ್ಲ. ಅದು ಆಗಬೇಕಾಗಿದ್ದು ಅದನ್ನು ಯಾವ ರೀತಿಯಲ್ಲಿ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು. ಇನ್ನು ರಾಜ್ಯೋತ್ಸವ ಪ್ರಶಸ್ತಿಗಳ ಬಗ್ಗೆ ಹೇಳದಿದ್ದರೇ ಒಳ್ಳೆಯದೆಂದು ಕಾಣುತ್ತದೆ. ಈ ಸಾರಿ ಸುಮಾರು 180 ಜನರಿಗೆ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಯಾರೋ ಒಬ್ಬ ಮಂತ್ರಿಗಳ ಮನೆಯಲ್ಲಿ ಪಾತ್ರೆಗಳನ್ನು ತೊಳೆಯುತಕ್ಕಂಥವರಿಗೂ ಪ್ರಶಸ್ತಿಯನ್ನು ಕೊಟ್ಟಿದ್ದಾರಂತೆ.

ರಾಜ್ಯೋತ್ಸವ ಪ್ರಶಸ್ತಿಗೆ ಬೆಲೆ ಬೇಡವೇ? ಒಂದು ವರ್ಷಕ್ಕೆ ರಾಜ್ಯೋತ್ಸವ ಪ್ರಶಸ್ತಿಯನ್ನು ಎಷ್ಟು ಜನಕ್ಕೆ ನೀಡಬೇಕು. 150-200 ಜನರ ದಂಡು. ಈಗ ಆ ಪ್ರಶಸ್ತಿ ತೆಗೆದುಕೊಳ್ಳುವುದೇ ಒಂದು ಅಗೌರವವಾಗಿದೆ. ಅದನ್ನು ಪಡೆಯಲು ಹೋಗುವುದೇ ಪರಮ ಅನ್ಯಾಯ. ಇಂತಹ ಪ್ರಶಸ್ತಿ ಪಡೆಯುವವರ ಚಾರಿತ್ರ್ಯ ಹಿನ್ನಲೆಗಳ ಬಗ್ಗೆ ಎಲ್ಲರದೂ ಸರಿಯಿಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವರು ನಿಜವಾಗಲೂ ಧೀಮಂತರು, ಶಕ್ತಿವಂತರಿದ್ದಾರೆ. ಆದರೆ ಯಾರ್ಯಾರಿಗೋ ಸಲ್ಲಬೇಕಾದ ಪ್ರಶಸ್ತಿ ಯಾರ್ಯಾರಿಗೋ ಕೊಡುತ್ತಾ ಇರುವುದು ನಿಜವಾಗಲೂ ಅತ್ಯಂತ ಶೋಚನೀಯ. ಮೈಸೂರು ಮತ್ತು ಧಾರವಾಡ ಜಿಲ್ಲೆಗಳು ಸಾಂಸ್ಕೃತಿಕ ಕೇಂದ್ರಗಳು, ಸಾಹಿತಿಗಳ ಕೇಂದ್ರ. ಮೈಸೂರು ಮತ್ತು ಧಾರವಾಡ, ಶಿವಮೊಗ್ಗ ಜಿಲ್ಲೆಗಳು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯಲು ಚೈತನ್ಯ ಪೂರ್ಣವಾದ ಒಂದು ಮಂಡಲಿ ಯಾವುದಾದರೂ ರಚನೆ ಮಾಡಿ. ಇದಕ್ಕೆ ಒಂದು ಯೋಜನೆ ಹಾಕಿ. ಮೈಸೂರು ರಾಜ ಮನೆತನ, ಕೃಷ್ಣರಾಜ ಒಡೆಯರ ಕಾಲದಿಂದ ಕನ್ನಡಕ್ಕೆ ಒಳ್ಳೆಯ ಹೆಸರನ್ನು ತಂದವರು. ಧಾರವಾಡ, ಶಿವಮೊಗ್ಗ, ಮೈಸೂರು, ಜಿಲ್ಲೆಗಳು ಕನ್ನಡ ಸಾಹಿತ್ಯಕ್ಕೆ ಧೀಮಂತ ಕೊಡುಗೆ ಕೊಟ್ಟ ಜಿಲ್ಲೆಗಳು. ಈ ಜಿಲ್ಲೆಗಳ ಬೆಳವಣಿಗೆಗೆ ಹೊಸ ಆಯಾಮ ಕೊಡಬೇಕೆಂದು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಕನ್ನಡದ ದೊಡ್ಡ ಸಂಗ್ರಹಾಲಯ ಬೇಕು. ಕನ್ನಡ ಸಾಹಿತ್ಯ, ಸಂಸ್ಕೃತಿ, ರಂಗಭೂಮಿ ಕಲೆ. ಇವನ್ನೆಲ್ಲ ಪ್ರದರ್ಶನ ಮಾಡುವ ದೊಡ್ಡ ಸಂಗ್ರಹಾಲಯ ಕರ್ನಾಟಕದಲ್ಲಿ ಅತಿ ಮುಖ್ಯವಾಗಿ ರಾಷ್ಟ್ರೀಯ ಮ್ಯೂಜಿಯಂ ತರಹ ಸ್ಥಾಪನೆಯಾಗಬೇಕಾಗಿದೆ. ಕನ್ನಡ ವಿಶ್ವವಿದ್ಯಾಲಯವನ್ನು ಹೆಚ್ಚಿನ ರೀತಿಯಲ್ಲಿ ಬಳಸಬೇಕಾಗಿದೆ. ಆದಿಕವಿ ಪಂಪನಿಂದ ರಾಷ್ಟ್ರಕವಿ ಕುವೆಂಪುವರೆಗೆ ನಮ್ಮ ಸಮಗ್ರ ಚಿಂತನೆ ಇವತ್ತು ಕರ್ನಾಟಕದಲ್ಲಿ ಆಗಬೇಕಾಗಿದೆ. ರಾಷ್ಟ್ರಕವಿ ಕುವೆಂಪು ಅವರಿಗೆ ದೊಡ್ಡ ಭವನ ನಿರ್ಮಾಣವಾಗಿ ಅವರು ಬರೆದಿರುವ ಸಾಹಿತ್ಯವನ್ನೆಲ್ಲ ಆ ಭವನದಲ್ಲಿ ಪ್ರದರ್ಶನ ಮಾಡಬೇಕೆಂದು ಈ ಮೂಲಕ ತಿಳಿಸುತ್ತೇನೆ. ಈ ಕನ್ನಡದ ಬಗ್ಗೆ ಮಾತನಾಡುತ್ತಿದ್ದಾಗ, ಸಾಲಿ ರಾಮಚಂದ್ರರಾಯರ ಕನ್ನಡ ಮಂತ್ರ ಜ್ಞಾಪಕಕ್ಕೆ ಬರುತ್ತದೆ. ಕನ್ನಡದ ಪೂಜೆಗೆ ಪಾವನದ ತುಳಸಿ. ಕನ್ನಡ ನೆಲದ ನೀರುಂಡೊಡಲ್ ನನಗೆ

ದೇವಗಂಗೆ. ಕನ್ನಡ ನೆಲದ ಕಲ್ಲೆನೆಗೆ ಸಾಲಿಗ್ರಾಮ, ಕನ್ನಡಂ ದೈವದುತ್ತಿ, ಕನ್ನಡದ ಶಬ್ದವೆನಗೆ ಓಂಕಾರ, ನೀ ಎನ್ನ ಕನ್ನಡದ ನುಡಿಯೇ ಗಾಯತ್ರಿಗದ್ಭುತ ಮಂತ್ರ ಎನ್ನುವುದೈ ವೆರತು ಕನ್ನಡದ ಸೇವೆಯೆನಗೆ, ಇದನ್ನು ಸಾಲಿ ರಾಮಚಂದ್ರರಾಯರು ಎಷ್ಟು ಸುಂದರವಾಗಿ ಹಾಡಿದ್ದಾರೆ.

ಆದಿಕವಿ ಪಂಪ ಹೇಳಿದ್ದಾರೆ. ಆರಂಕುಶಮಿಟ್ಟೊಡಂ ನೆನೆವುದೆನ್ನ ಮನಂಬನವಾಸಿ ದೇಶಮಂ – ಈ ಬನವಾಸಿ ದೇಶ ಏನಿದೆ ಇದು ರಾಜ್ಯವಲ್ಲ, ಕಾವೇರಿಯಿಂದ ತುಂಗಭದ್ರೆಯವರೆಗೆ ಕರ್ನಾಟಕ ರಾಜ್ಯ ಬೆಳೆದಿತ್ತು ಎಂದು ಬರೆದಿದ್ದಾನೆ. ನೃಪತುಂಗ ಪಂಪನ ಬಗ್ಗೆ ಬರೆದಿದ್ದಾನೆ. ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯಲಂಪಿನ ಇಂದ್ರಿಯಗಳಿಗೆ ಇಂಪುಗಳಿಗೆ ಆಗರವಾದ ಮಾನಿಸರೆ ಮಾನಿಸರ್ ಅಂಥವರಾಗಿ ಪುಟ್ಟಲುಂ ಪುಟ್ಟದಿರ್ದೊಡಂ ಕೋಗಿಲೆಯಾಗಿ ಮೇಣ್ ಮರಿದುಂಬಿಯಾಗಿ ಪುಟ್ಟುವುದು ಈ ಮಣ್ಣಿನೊಳ್ ಬನವಾಸಿ ದೇಶದೊಳ್ – ಕೊನೆಗೆ ಒಂದು ಮರಿದುಂಬಿಯಾಗಿಯಾದರೂ ಈ ನಾಡಿನಲ್ಲಿ ಹುಟ್ಟಬೇಕೆಂಬ ಮಾತನ್ನು ಎಷ್ಟು ಛಂದದಲ್ಲಿ ಹೇಳುತ್ತಿದ್ದಾರೆ. ಅನ್ನವನು ಇಕ್ಕದಲೆ ನನ್ನಿಯನ್ನು ನುಡಿಯದಲೆ ಮನ್ನಣೆಯನೀಯದಿರ್ಪ ಅರಸು ತಾ ಕುನ್ನಿಯಂ ಕಷ್ಟ ಸರ್ವಜ್ಞ – ಇವು ಕನ್ನಡಕ್ಕೆ ಎಂತೆಂಥ ಕೊಡುಗೆಯನ್ನು ಕೊಟ್ಟಿರುವ ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

"ಯುಕ್ತಿ ಸಾಮ್ರಾಜ್ಯದಲ್ಲಿ ಭಕ್ತಿ ಬಡ ಪರದೇಶಿ, ಶಕ್ತಿ ಚತುರತೆಯುಡುಗಿ ನೀನು ಸೋತಂದು, ಉತ್ಕ್ರಮಣದಲ್ಲಿ ಮನವಿ ದೈವವನು ಪಿಡಿದನು, ಭಕ್ತಿ ರಕ್ತದ ಪರಿಗೆ" ಮಂಕುತಿಮ್ಮ ಎಂಥ ಒಂದು ಪರಮಪವಿತ್ರವಾದಂಥ ಮಂಕುತಿಮ್ಮನ ಕಗ್ಗದಲ್ಲಿ ಪರಮಪವಿತ್ರವಾದಂಥ ಒಂದು ಸುಂದರವಾದ ಮಾತನ್ನು ಹೇಳಿದ್ದಾರೆ. ರಾಷ್ಟ್ರಕವಿ ಕುವೆಂಪು "ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯಶಿವ" "ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವರನು ಕೂಡಿಸಿ ಒಲಿಸು" ಇದು ಎಂಥ ಪವಿತ್ರವಾದಂಥದ್ದು. ಬಿ. ಎಂ. ಶ್ರೀ ಅವರು "ಹಾರಲಿ ಏರಲಿ ಕನ್ನಡದ ಬಾವುಟ" ಎಂದು ನಾಡಿಗೆ ಎಂಥ ಒಂದು ಸ್ಫೂರ್ತಿಯನ್ನು ತಂದರು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. "ಹೊಸಚಿಗುರು ಹಳೆ ಬೇರು ಕೂಡಿರಲು ಮರಸೊಬಗು, ಹೊಸ ಯುಕ್ತಿ ಹಳೆತತ್ವದೊಡಗೂಡೆ ಧರ್ಮ, ಋಷಿವಾಕ್ಯದೊಡನೆ ವಿಜ್ಞಾನ, ಕಲೆ ಮೇಳವಿಸೆ, ಜಸವು ಜನಜೀವನಕೆ ಮಂಕುತಿಮ್ಮ". "ಬಿಳಲಿಲ್ಲ, ಬೇರಲ್ಲ, ಮುಂಡ ಕಾಂಡಗಳಲ್ಲ, ತಳಿರಲ್ಲ, ಮಲರಲ್ಲ, ಕಾಯಿ ಹಣ್ಣಲ್ಲ, ಎಲೆ ನೀನು, ವಿಶ್ವ ವೃಕ್ಷದೊಳು ಎಲೆ ಎಳೆಂದು ನೀಂ ತಿಳಿದವನು ನೆರವಾಗು ಮಂಕುತಿಮ್ಮ" ಒಂದೊಂದು ಮಾತೂ ಸಹ ಈವತ್ತು ನಮ್ಮನ್ನು ಒಂದು ವಿಶ್ವಕ್ಕೆ ತೆಗೆದುಕೊಂಡು ಹೋಗತಕ್ಕಂಥ ರೀತಿಯಲ್ಲಿ ಬಹಳ ಅತ್ಯಂತ ಪರಿಣಾಮಕಾರಿಯಾಗಿ ಹೇಳಿದ್ದಾರೆ. ಕನಕದಾಸರಾಗಲಿ, ಪುರಂದರದಾಸರಾಗಲಿ ಎಂಟು ನೂರು ವರ್ಷಗಳ ಹಿಂದೆ ಕ್ರಾಂತಿಯನ್ನು ಎಬ್ಬಿಸಿದ ಬಸವೇಶ್ವರ, ಅಕ್ಕ, ಶರಣರು, ವೀರಶೈವರು, ಜೈನರು ಇವರೆಲ್ಲರೂ ಒಂದು ಉನ್ನತವಾದಂಥ ಶಕ್ತಿಯನ್ನು ಕನ್ನಡ ಸಾಹಿತ್ಯಕ್ಕೆ ಈ ನಾಡಿಗೆ ಕೊಟ್ಟಂಥ ಈ ಪರಿಸ್ಥಿತಿಯಲ್ಲಿ ಅಧ್ಯಕ್ಷರೇ, ನಾನು ತಮಗೆ ಅತ್ಯಂತ ಪ್ರಿಯವಾಗಿ, ನನ್ನ ಭಾಷಣದಲ್ಲಿ ತಾವು ಕನ್ನಡದ ತೀವ್ರ ಅಭಿಮಾನಿಯಾಗಿ, ಕನ್ನಡದ ಒಬ್ಬ ಅತ್ಯಂತ ಚಿಂತಕರಾಗಿ, ಅಧ್ಯಕ್ಷ ಪೀಠದಲ್ಲಿ ಕುಳಿತಿರುವ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ಸಚಿವರು):– ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಒಂದು ಸ್ಪಷ್ಟನೆಯನ್ನು ಕೊಡಬೇಕಾಗಿದೆ. ಬೆಳಿಗ್ಗೆ ನಾನು ಪ್ರಶ್ನೋತ್ತರ ಸಂದರ್ಭದಲ್ಲಿ ಹಾಜರಿ ಇರಲಿಲ್ಲ. ನನ್ನ ಮನೆಯಲ್ಲಿ ಒಂದು ಮದುವೆ ಇದ್ದ ಕಾರಣ ನಿನ್ನೆ ದಿವಸ ನಾನು ಸನ್ಮಾನ್ಯ ಸಭಾಧ್ಯಕ್ಷರನ್ನು ಕಂಡು ನೇರವಾಗಿ ಒಂದು ಪತ್ರವನ್ನು ಬರೆದು ಈ ರೀತಿಯ ಒಂದು ಕಾರ್ಯ ಇರುವುದರಿಂದ ನನಗೆ ಅವಕಾಶವನ್ನು ಮಾಡಿಕೊಡಬೇಕು. ನನ್ನ ಭಾಗಕ್ಕೆ, ನನ್ನ ಇಲಾಖೆ ಇರುವಂಥ ಪ್ರಶ್ನೆಗಳನ್ನು ಮುಂದಿನ ವಾರದಲ್ಲಿ ಹಾಕಬೇಕು ಎಂದು ಹೇಳಿ ನಾನು ಬರವಣಿಗೆಯಲ್ಲಿ ಪ್ರಾರ್ಥನೆ ಮಾಡಿ ನೇರವಾಗಿ ಅವರಿಗೆ

ಸಲ್ಲಿಸಿದ್ದೆ. ಹಾಗಾಗಿ ನಾನು ಬೆಳಿಗ್ಗೆ ಇಲ್ಲಿ ಗೈರು ಹಾಜರಾಗಿದ್ದೆ. ಪತ್ರಿಕೆಗಳಲ್ಲಿ ಅದು ಬಂದಿದೆ. ನಾನು ಯಾವ ವಿಧವಾದಂಥ ಆ ನೀತಿಗೆ ಒಳಪಟ್ಟು ನಡೆದಿಲ್ಲ, ಸಭಾಧ್ಯಕ್ಷರ ಅಪ್ಪಣೆಯಿಲ್ಲದೆ ನಾನು ಗೈರುಹಾಜರಾಗಿದ್ದೇನೆ ಎಂದು. ಅದು ಸತ್ಯವಲ್ಲ ಅಧ್ಯಕ್ಷರೇ, ತಾವು ಅಪ್ಪಣೆ ಕೊಟ್ಟರೆ ನಾನು ಕೊಟ್ಟಿರುವ ಪತ್ರವನ್ನು ಇಲ್ಲಿ ಸಭೆಯ ಮುಂದೆ ಓದುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.– ಮಾನ್ಯ ಅಧ್ಯಕ್ಷರೆ, ಅವರು ಪತ್ರವನ್ನು ಓದತಕ್ಕಂಥ ಅವಶ್ಯಕತೆ ಇಲ್ಲ. ಅಧ್ಯಕ್ಷರಿಗೆ ಪತ್ರ ಬರೆದಿದ್ದರೆ ಬರೆದಿದ್ದೇನೆ ಎಂದು ಹೇಳಿದರೆ ಸಾಕು. ಆದರೆ ಪತ್ರ ಬರೆದ ಕಾರಣಕ್ಕಾಗಿಯೇ ಮುಂದಿನ ವಾರ ತೆಗೆದುಕೊಳ್ಳಿ ಎಂದು ಹೇಳುವ ಅಧಿಕಾರ ಅವರಿಗೆ ಇಲ್ಲ.

ಶ್ರೀ ಎ. ಕೃಷ್ಣಪ್ಪ:– ಅದಕ್ಕೆ ಕಾರಣ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ:– ನಮ್ಮ ಅನುಭವ ಸ್ವಲ್ಪ ಹೇಳಿಬಿಡುತ್ತೇವೆ. ಇಲ್ಲಿ ನಾನು ಪ್ರಿಸ್ಟೀಜ್‌ಗೆ ಕುಳಿತಿಲ್ಲ. I want to put the records straight. ನೀವು ಒಂದು ವೇಳೆ ಇಲ್ಲದಿದ್ದರೆ ನೀವು ಇರುವುದಿಲ್ಲ ಎಂದು ಅಧ್ಯಕ್ಷರಿಗೆ ತಿಳಿಸಿ ನಿಮ್ಮ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಇನ್ನೊಬ್ಬ ಮಂತ್ರಿಯನ್ನು ರಿಕ್ವೆಸ್ಟ್ ಮಾಡಿಕೊಂಡು ದಯಮಾಡಿ ಇದಕ್ಕೆ ಉತ್ತರ ಹೇಳಿ ಎಂದು ಹೇಳಿ ಹೋಗಬೇಕಾಗಿತ್ತು. ನಾವು ಅದಕ್ಕೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಜಂಟಿ ಜವಾಬ್ದಾರಿ ಎಂದು ಹೇಳುತ್ತೇನೆ. ನೀವು ಹೊಸ ಮಂತ್ರಿಯಾದ್ದರಿಂದ ನಾವು ಅದಕ್ಕೆ ಹೆಚ್ಚು ಒತ್ತು ಕೊಡುವುದಿಲ್ಲ. ಅಧ್ಯಕ್ಷರಿಗೆ ಪತ್ರ ಬರೆದುಬಿಟ್ಟರೆ ನಿಮ್ಮ ಕರ್ತವ್ಯ ಮುಗಿಯುವುದಿಲ್ಲ. You should have conveyed your views and requested some of your colleagues. ಉತ್ತರ ಹೇಳಿ ಎಂದು ಹೇಳಿದರೆ ಯಾರಾದರೂ ಹೇಳುತ್ತಾರೆ. 41 ಜನ ಇದ್ದೀರಿ, ಯಾರೂ ಉತ್ತರ ಹೇಳುತ್ತಿರಲಿಲ್ಲವೇ ? ಆದ್ದರಿಂದ ಆ ಪತ್ರ ಓದುವ ಅಗತ್ಯ ಇಲ್ಲ. We believe you. ಒಬ್ಬ ಮಂತ್ರಿ ಅಧ್ಯಕ್ಷರಿಗೆ ಪತ್ರ ಬರೆದಿದ್ದೇನೆ ಎಂದು ಹೇಳಿದರೆ ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಅದಕ್ಕಾಗಿ ಮುಂದಿನ ವಾರ ಹಾಕಿ ಎಂದು ಹೇಳುವ ಅಧಿಕಾರ ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ:– ಈ ಬಗ್ಗೆ ಪ್ರಸ್ತಾಪವಾಗಿಲ್ಲ. ಇದರ ಬಗ್ಗೆ ಪ್ರಸ್ತಾಪ ಯಾವುದೂ ಇಲ್ಲ. ವೈಯಕ್ತಿಕ ಪ್ರಶ್ನೆ ಇಲ್ಲ. ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಇವತ್ತು ತಮಗೆ ಏನು ಮನೆಯಲ್ಲಿ ಕೆಲಸ ಇತ್ತು, ಅದಕ್ಕೆ ಹೋಗಬೇಕು. ಮದುವೆ ಕೆಲಸ ನನ್ನ ಮನೆಯಲ್ಲಿದ್ದರೂ ನಾನು ಹೋಗಬೇಕಾಗುತ್ತದೆ. ಆದರೆ ತಾವು ಆ ಜವಾಬ್ದಾರಿಯನ್ನು ಬೇರೆ ಮಂತ್ರಿಗೆ ಕೊಡಬೇಕಾಗಿತ್ತು. ಇದು ಒಂದು.

ಎರಡನೆಯದು, ಪ್ರಶ್ನೆ ಬಂದಾಗ ಉತ್ತರ ರೆಡಿ ಇಲ್ಲ ಎಂದು ಯಾರಾದರೂ ಮಂತ್ರಿಗಳು ಹೇಳಬೇಕಾಗಿತ್ತು, ಇಷ್ಟೆ. ಮೂರನೆಯದಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಾವು ಮದುವೆಗೆ ಹೋಗಿದ್ದೀರಿ ಎಂದು ಗಮನಕ್ಕೆ ತಂದಾಗ ಅದರ ಬಗ್ಗೆ ಯಾರೂ ಪ್ರಸ್ತಾಪ ಮಾಡಿಲ್ಲ. ತಾವು ಒಳ್ಳೆಯ ಕೆಲಸಕ್ಕೆ ಹೋಗಿದ್ದೀರಿ, ಅದರ ಬಗ್ಗೆ ನಮಗೆ ಏನೂ ಬೇಜಾರು ಇಲ್ಲ. ಆದರೆ ಬೇರೆ ಮಂತ್ರಿಗಳು ಇದಕ್ಕೆ ಉತ್ತರ ಕೊಡಬೇಕಾಗಿತ್ತು ಎಂದು ಅಷ್ಟೇ ನಾವು ಗಮನಕ್ಕೆ ತಂದಿದ್ದೇವೆ. ನಿಮ್ಮ ಒಂದೇ ಇಲಾಖೆಯ ಬಗ್ಗೆ ನಾವು ಮಾತನಾಡಿಲ್ಲ. ಎಲ್ಲಾ ಇಲಾಖೆಗಳಿಂದ ಇವತ್ತು ಸರಿಯಾಗಿ ಉತ್ತರಗಳು ಬರುತ್ತಿಲ್ಲ. ತಡೆಹಿಡಿಯಲಾದ ಪ್ರಶ್ನೆಗಳಿಗೆ ಉತ್ತರ ಬರುತ್ತಿಲ್ಲ. ಹಾಗೂ ವ್ಯಕ್ತಿಗತವಾಗಿ ನಿಮ್ಮ ಬಗ್ಗೆ ಏನೂ ಚರ್ಚೆಯಾಗಿಲ್ಲ. ಹಾಗಾಗಿ ನಿಮ್ಮ ಸ್ಪಷ್ಟೀಕರಣದ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ.

ಛೇರ್ಮನ್:– ನಿಮ್ಮ ಪತ್ರವನ್ನು ಓದುವ ಅಗತ್ಯ ಇಲ್ಲ.

ಶ್ರೀ ಎ. ಕೃಷ್ಣಪ್ಪ:- ಪತ್ರವನ್ನು ಓದುವುದು ಬೇಡ ಎಂದು ಹೇಳಿದ್ದಾರೆ. ಬೇರೆಯವರ ಮಂತ್ರಿಗಳ ಕೈಗೆ ಕೊಟ್ಟು ಹೋಗಬಹುದಾಗಿತ್ತು ಎಂದು ಹೇಳಿದ್ದಾರೆ.

ಛೇರ್ಮನ್:- ಅಧ್ಯಕ್ಷರು ಇದರ ಬಗ್ಗೆ ಆಗಲೇ ಬೇಕಾದಷ್ಟು ಹೇಳಿದ್ದಾರೆ. ಅದರ ವಿಷಯದಲ್ಲಿ ಅಂಥಾದ್ದು ಏನೂ ಇಲ್ಲ.

ಶ್ರೀ ಎ. ಕೃಷ್ಣಪ್ಪ:- ಬೆಳಿಗ್ಗೆ ಸಿ.ಎಲ್.ಪಿ. ಮೀಟಿಂಗ್ ಮುಗಿದಾಗ ಅದನ್ನು ಕೊಟ್ಟು ಹೋಗೋಣ ಎಂದು ಇದ್ದೆ. ಪ್ರಶ್ನೆಗಳಿಗೆ ಸ್ಪಷ್ಟವಾದಂತಹ ಉತ್ತರವನ್ನು ತಯಾರುಮಾಡಿ ಇಟ್ಟಿದೆ. ಆದರೆ ಮುಹೂರ್ತದ ಸಮಯದಲ್ಲಿ ಇಲ್ಲಿಗೆ ಬರುವುದಕ್ಕೆ ಆಗಲಿಲ್ಲ. ನಾನು ನಿನ್ನೆಯೇ ಅಪ್ಪಣೆಯನ್ನು ತೆಗೆದುಕೊಂಡಿದ್ದೇನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರಿದುದು)

†ಪ್ರೊ: ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ):- ಮಾನ್ಯ ಅಧ್ಯಕ್ಷರೆ, ಇದುವರೆಗೂ ಕರ್ನಾಟಕದ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಯಾವ ರೀತಿ ರೂಪಿಸಬೇಕು, ರೂಢಿಸಬೇಕು ಎನ್ನುವಂತಹ ಸುಂದರವಾದ ಭಾಷಣವನ್ನು ಕೇಳುತ್ತಿದ್ದೆವು. ಪಂಪನಿಂದ ಕುವೆಂಪುವರೆಗೂ, ಆ ನಡುವೆ ಬಸವೇಶ್ವರನ ಕ್ರಾಂತಿಯ ಬಗ್ಗೆ ಮಾತು ಬಂತು. ಈ ದೇಶದಲ್ಲಿ ನಡೆದಂತಹ ಎಲ್ಲಾ ಸಾಂಸ್ಕೃತಿಕ ಕ್ರಾಂತಿಗಳು ಸೋತಿವೆ ಎನ್ನುವುದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಸ್ವಲ್ಪ ಕೆಲಸ ಮಾಡಬೇಕಾದಂತಹ ಅಗತ್ಯ ಇದೆ. ಈ ದೇಶದಲ್ಲಿ ನಡೆದ ಎಲ್ಲಾ ಸಾಂಸ್ಕೃತಿಕ ಕ್ರಾಂತಿಗಳು ಈ ದೇಶದ ಮನಸ್ಸನ್ನು ಬದಲಾವಣೆ ಮಾಡುವಂತಹ ಕೆಲಸ ಮಾತ್ರ ಮಾಡಿತೇ ಹೊರತು ಈ ದೇಶದ ದೇಹವನ್ನು ಬದಲಾವಣೆ ಮಾಡುವಂತಹ ಕೆಲಸ ಮಾಡಲಿಲ್ಲ. All the cultural movements tried to change the mind of the society but not the body of the society. When I say body I mean the economy of this Country. ಆ ಕಾರಣ ನಾನು ರಾಜ್ಯಪಾಲರ ಭಾಷಣದಲ್ಲಿ ಒಂದೇ ಒಂದು ವಿಷಯದ ಬಗ್ಗೆ ಮಾತನಾಡುತ್ತೇನೆ. ಪ್ಯಾರಾ 17ರಲ್ಲಿ ಅವರು ಏನು ತಪ್ಪು ಮಾಡಿದ್ದಾರೆ ಆ ತಪ್ಪನ್ನು ಅವರು ಮಾಡುತ್ತಾರೆ ಎಂದು ನನಗೆ ಮುಂಚೆಯೇ ಅನುಮಾನವಿದ್ದುದರಿಂದ ಅವರಿಗೆ ಈ ಅಧಿವೇಶನದ ಪ್ರಕಟಣೆ ಬಂದ ಕೂಡಲೇ ನಾನು ಪತ್ರವನ್ನು ಬರೆದಿದ್ದೆ. ಈ ದೇಶದ ಸಂವಿಧಾನವನ್ನು, ಸಂವಿಧಾನದಲ್ಲಿರುವಂತಹ ವಿಧಿ ವಿಧಾನಗಳನ್ನು ಅನುಸರಿಸದೇ ಕೇಂದ್ರ ಸರ್ಕಾರ ಯಾವುದೋ ಒಂದು ಅಂತರರಾಷ್ಟ್ರೀಯ ಒಪ್ಪಂದಕ್ಕೆ ರುಜು ಹಾಕುವ ಮೂಲಕ ನಮ್ಮ ದೇಶದ ಸಂವಿಧಾನವನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡುವಂತಹ ಒಂದು ರಾಷ್ಟ್ರದ್ರೋಹಿ ಕೆಲಸಕ್ಕೆ ಕೈಹಾಕಿದೆ. ಇದನ್ನು ತಾವು ಈ ರಾಜ್ಯದ ಆಡಳಿತದ ಹೊಣೆಗಾರಿಕೆ ಇರುವಂತಹ ಮನುಷ್ಯ ಆಗಿ ಸಂವಿಧಾನ ಅಧಿಕಾರಿಯಾಗಿ ಇದನ್ನು ಗಣನೆಗೆ ತೆಗೆದುಕೊಂಡು, ಈ ಕೆಲಸ ಏನು ನಡೆಯುತ್ತಿದೆ ಅದರ ಬಗ್ಗೆ ಈ ರಾಜ್ಯದ ವಿಧಾನ ಮಂಡಲದಲ್ಲಿ ಚರ್ಚೆ ಮಾಡುವಂತಹ ಒಂದು ಸಲಹೆಯನ್ನು ಈ ಸರ್ಕಾರಕ್ಕೆ ಕೊಡಬೇಕೆಂದು ನಾನು ಕೇಳಿಕೊಂಡಿದ್ದೇನೆ. ಆ ಕೆಲಸವನ್ನು ರಾಜ್ಯಪಾಲರು ಮಾಡಿಲ್ಲ. ಆ ಕೆಲಸ ಮಾಡದೇ ಇರುವುದರ ಜೊತೆಗೆ ಈ ಸರ್ಕಾರ ಕೂಡ ಏನು ತಪ್ಪು ಮಾಡಿದೆ ಆ ತಪ್ಪಿನ ಜೊತೆಗೆ ತಾವು ಭಾಗಿಗಳಾಗಿ ಈ ಭಾಷಣವನ್ನು ಓದಿದ್ದಾರೆ. ಪ್ಯಾರಾ 17 ಅನ್ನು ನಾನು ಓದುತ್ತೇನೆ. "ಭಾರತ ಸರ್ಕಾರವೂ ಘೋಷಿಸಿರುವ ಉದಾರ ನೀತಿಗೆ ಅನುಸಾರವಾಗಿ..." ಇದಕ್ಕೆ ಮುಂಚೇನೆ ಒಂದು ಮಾತನ್ನು ಹೇಳಬೇಕು.

5.10 ಪಿ.ಎಂ.

ಇದರ ವಿಚಾರವಾಗಿ ನಾನು ಮುಖ್ಯಮಂತ್ರಿಯವರ ಹತ್ತಿರ ಎರಡು ಸಲ ಚರ್ಚೆ ಮಾಡಿದ್ದೇನೆ. ಅಲ್ಲದೆ, 'ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡೋಣ, ಹಾಗೂ ಒಂದು ವಿಚಾರ ಸಂಕಿರಣವನ್ನು ನಾನೇ ಏರ್ಪಾಡು ಮಾಡುತ್ತೇನೆ' ಎನ್ನುವ ಒಂದು ಆಶ್ವಾಸನೆಯನ್ನು ಮುಖ್ಯಮಂತ್ರಿಗಳು ನನಗೆ ಕೊಟ್ಟಿದ್ದರು. ಮತ್ತು 'ನೀವು ಯಾವಾಗ ಇದರ ವಿಷಯವಾಗಿ ಮಾತನಾಡುತ್ತೀರಿ, ತಿಳಿಸಿ, ನಾನೂ ಸಹ ಸದನಕ್ಕೆ ಬಂದು ಕೇಳಬೇಕೆನ್ನುವ ಇಚ್ಛೆ ವ್ಯಕ್ತಪಡಿಸಿದ್ದೇನೆ. ಎಂದು ಕಾನೂನು ಮಂತ್ರಿಗಳು ತಿಳಿಸಿದ್ದರು. ಆದರೆ, ನಾನು ಇದರ ಬಗ್ಗೆ ಯಾವಾಗ ಮಾತನಾಡುತ್ತೇನೆಂದು ನನಗೆ ಗೊತ್ತಿಲ್ಲದಿರುವುದರಿಂದ ಮಾನ್ಯ ಸಭಾಧ್ಯಕ್ಷರಿಗೆ ಮಾತ್ರ ಗೊತ್ತಿರುವುದರಿಂದ ಸಭಾಧ್ಯಕ್ಷರು ಈಗಲಾದರೂ ಕೂಡ ಮಾನ್ಯ ಮಂತ್ರಿಗಳು ಸದನಕ್ಕೆ ಬರಬೇಕೆಂದು ಹೇಳಿ ಕಳುಹಿಸಬಹುದು. ಏಕೆಂದರೆ, ನಾನು ಮಾತನಾಡುತ್ತಿರುವ ವಿಚಾರ ಅತ್ಯಂತ ಮಹತ್ವವಾದುದು. ಇಡೀ ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ ತರುತ್ತಿರುವಂಥ ಒಂದು ವಿಚಾರವಾದ ಕಾರಣ ಈಗಲೂ ಕೂಡ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವಕಾಶವಿದ್ದರೆ ಮುಖ್ಯಮಂತ್ರಿಗಳಿಗೆ ಹೇಳಿ ಕಳುಹಿಸಿ, ಮತ್ತು ಕಾನೂನು ಮಂತ್ರಿಗಳೂ ಸಹ ತಾವಾಗಿಯೇ ಇಚ್ಛೆ ವ್ಯಕ್ತಪಡಿಸಿದ್ದದ್ದರಿಂದ ಅವರಿಗೂ ಕೂಡ ತಾವು ಹೇಳಿ ಕಳುಹಿಸಿ. ಆದ್ದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕಾನೂನು ಮಂತ್ರಿಗಳು ಬಂದ ನಂತರ ಮಾತನಾಡಲೇ ? ಅಥವಾ ಈಗಲೇ ಮುಂದುವರಿಸಲೇ ? ಎಂಬುದನ್ನು ತಾವು ಹೇಳಬೇಕು.

ಛೇರ್ಮನ್:— ತಾವು ತಮ್ಮ ಮಾತನ್ನು ಮುಂದುವರಿಸಿ, ಈಗ ಮಾನ್ಯ ಮಂತ್ರಿಗಳು ಬರುತ್ತಾರೆ.

ಪ್ರೊ. ಎಂ. ಡಿ. ನಂಜುಂಡುಸ್ವಾಮಿ:— ಮಾನ್ಯ ಅಧ್ಯಕ್ಷರೆ, 17ನೇ ಪ್ಯಾರಾದಲ್ಲಿ ಈ ಸರ್ಕಾರ ಮಾಡುತ್ತಿರುವಂಥ ಒಂದು ದೊಡ್ಡ ತಪ್ಪು, ಏನೆಂದರೆ; 'ಭಾರತ ಸರ್ಕಾರವು ಘೋಷಿಸಿರುವ ಉದಾರ ನೀತಿಗನುಸಾರವಾಗಿ ಇನ್ನು ಮುಂದೆ ಕರ್ನಾಟಕದಲ್ಲಿ ನಮ್ಮ ಜನರ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ತ್ವರಿತ ಬದಲಾವಣೆ ತರುವುದಕ್ಕೆ ಅತ್ಯಂತ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಮತ್ತು ಅತ್ಯಾವಶ್ಯಕವಾದ ಪರಿಕರಗಳನ್ನು ಒದಗಿಸುವ ಮೂಲಭೂತ ಕಾರ್ಯಗಳ ಕಡೆಗೆ ನನ್ನ ಸರ್ಕಾರ ತನ್ನ ಗಮನವನ್ನು ಕೇಂದ್ರೀಕರಿಸುತ್ತದೆ. ಹೊಸ ಉದ್ಯಮಗಳನ್ನು ಪ್ರಾರಂಭಿಸಲು ಕರ್ನಾಟಕದಲ್ಲಿರುವ ಅನುಕೂಲಕರ ವಾತಾವರಣದ ಪ್ರಯೋಜನವನ್ನು ಪಡೆದುಕೊಳ್ಳಲು ರಾಜ್ಯದೊಳಗಿನ ಹಾಗೂ ರಾಜ್ಯದ ಹೊರಗಿನ ಖಾಸಗಿ ಉದ್ಯಮಿಗಳಿಗೆ ಸದಾ ಆಹ್ವಾನವಿದೆ. ಅನುಚಿತ ವಿಳಂಬ ಮಾಡದೆ ಭೂಮಿ, ವಿದ್ಯುಚ್ಛಕ್ತಿ, ಸಂಪರ್ಕ, ನೀರು ಇತ್ಯಾದಿ ಅವಶ್ಯಕ ಸೌಲಭ್ಯಗಳನ್ನು ಅವರಿಗೆ ಒದಗಿಸಲಾಗುವುದೆಂದು ಅವರು ಭರವಸೆಯಿಂದಿರಬಹುದು. ಇಷ್ಟಾದ ನಂತರ ಕೊನೆಯ ವಾಕ್ಯ ಏನೆಂದರೆ: 'ಗ್ರಾಮಾಂತರ ಔದ್ಯಮೀಕರಣ ಮತ್ತು ಉದ್ಯೋಗಾವಕಾಶ ಸೃಜನೆಯ ಗತಿಯನ್ನು ತೀವ್ರಗೊಳಿಸುವಲ್ಲಿ ಸರ್ಕಾರವು ಸ್ವತಃ ಪ್ರಯತ್ನಿಸುತ್ತದೆ'. ಈ ಪ್ಯಾರಾದ ಮೊದಲನೇ ವಾಕ್ಯಕ್ಕೂ ಕೊನೆಯ ವಾಕ್ಯಕ್ಕೂ ಯಾವುದೇ ಅರ್ಥಶಾಸ್ತ್ರದಲ್ಲಿ ಸಂಬಂಧ ಕಲ್ಪಿಸುವುದಕ್ಕೆ ಸಾಧ್ಯವೇ ಇಲ್ಲ. ಇಂತಹ ಒಂದು ದೊಡ್ಡ ತಪ್ಪನ್ನು ಈ ಸರ್ಕಾರ ಏಕೆ ಮಾಡುತ್ತಿದೆ ಎಂದರೆ ಹಾಗೂ ರಾಜ್ಯಪಾಲರು ಏಕೆ ಮಾಡಿದ್ದಾರೆಂದರೆ, ನಮ್ಮ ಸುತ್ತ ಮತ್ತು ಈ ಪ್ರಪಂಚದ ಸುತ್ತ ಏನೇನು ಬೆಳವಣಿಗೆಗಳಾಗುತ್ತಿವೆ ಎನ್ನುವುದರ ಪ್ರಜ್ಞೆಯಿಲ್ಲವೆ ಈ ಸರ್ಕಾರ ಕೆಲಸ ಮಾಡುತ್ತಿದೆ. ರಾಜ್ಯಪಾಲರೂ ಸಹ ಆ ಪ್ರಜ್ಞೆಯಿಲ್ಲದೆ ಕೆಲಸ ಮಾಡುತ್ತಿದ್ದಾರೆ. ನಾನು ಈ ಮುಂಚೆ ಅವರಿಗೆ ಏತಕ್ಕೆ ಪತ್ರ ಬರೆದಿದ್ದೇನೆಂದರೆ, ಸಂವಿಧಾನವನ್ನು ರಕ್ಷಣೆ ಮಾಡುವಂತೆ, ಒಂದು ಪ್ರಮಾಣ ವಚನ ಸ್ವೀಕಾರ ಮಾಡಿ ಅವರು ಬಂದಿರುತ್ತಾರೆಂದು, ಯಾವುದೋ ಒಂದು ಅವಿವೇಕಿ ಸರ್ಕಾರ ಪ್ರಜ್ಞೆ ತಪ್ಪಿದೆಯೆಂದರೆ ಅದನ್ನು ಸರಿಪಡಿಸುವಂಥ ಜವಾಬ್ದಾರಿ ಕೂಡ ಸಂವಿಧಾನದಲ್ಲಿ ರಾಜ್ಯಪಾಲರಿಗಿದೆ. ಅದನ್ನು ತಾವು ಮಾಡಬೇಕು ಎಂದು ನಾನು ಅವರಿಗೆ ಪತ್ರ ಬರೆದಿದ್ದೆ. ಆ ಕೆಲಸ ಅವರು ಮಾಡಲಿಲ್ಲ. ಏತಕ್ಕೆ ಈ ವಿರೋಧಾಭಾಸ 17ನೇ

ಪ್ಯಾರಾದಲ್ಲಿ ಸೇರಿದೆ ಎನ್ನುವುದನ್ನು ನಾನು ಬಿಡಿಸಿ ಹೇಳುತ್ತೇನೆ. ಇದನ್ನು ಮಾಡುತ್ತಾರೆ ಎನ್ನುವುದು ಗೊತ್ತಿದ್ದೇ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸಿದ ಕೂಡಲೇ ನಾನು ಒಂದು ತಿದ್ದುಪಡಿ ಕಳುಹಿಸಿದ್ದೆ. ಆದರೆ, ಮಾನ್ಯ ಸಭಾಧ್ಯಕ್ಷರು ಕರೆದಾಗ ನಾನು ಹಾಜರಿರಲಿಲ್ಲ. ನಾನು ಏನು ತಿದ್ದುಪಡಿ ಕಳುಹಿಸಿದ್ದೆ ಎನ್ನುವುದರ ವಿಷಯದ ಮೇಲೆ ಮಾತ್ರ ಮಾತನಾಡುತ್ತೇನೆ. ನಾನು ಕಳುಹಿಸಿದ್ದ ತಿದ್ದುಪಡಿ ಏನೆಂದರೆ;

"But regret that your Government's policies and programmes relating to Agriculture and Industry have not taken due note of the implications and consequences of the policy of liberalisation announced by the Government of India which has its links with the Dunkel Draft Text of the Uruguay Round of talks of the General Agreement of Tariffs and Trade."

ಇದು ನಾನು ಕಳುಹಿಸಿದ್ದ ತಿದ್ದುಪಡಿ. ನಾನು ಕಳುಹಿಸಿರತಕ್ಕ ತಿದ್ದುಪಡಿ ಕಾರಣಕ್ಕೆ ರಾಜ್ಯಪಾಲರ ಭಾಷಣದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಬೇಕು ಎನ್ನತಕ್ಕ ಉದ್ದೇಶವನ್ನು ಇಟ್ಟುಕೊಂಡಿದ್ದಾರೋ ಆ ಉದ್ದೇಶಗಳು ಒಂದೂ ಸಫಲವಾಗುವುದಿಲ್ಲ, ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರಬಹುದು, General Agreement on Tariffs and Trade ಎನ್ನತಕ್ಕ ಒಂದು ಸಂಸ್ಥೆ ಯಾವಾಗ ಅಸ್ತಿತ್ವಕ್ಕೆ ಬಂತು, ಯಾವ ಉದ್ದೇಶಕ್ಕಾಗಿ ಅಸ್ತಿತ್ವಕ್ಕೆ ಬಂತು ಎಂಬುದು. ಎರಡನೆಯ ಮಹಾಯುದ್ಧ. ಆದಮೇಲೆ ಎರಡನೆ ಮಹಾಯುದ್ಧದಲ್ಲಿ ಯಾವ್ಯಾವ ರಾಷ್ಟ್ರಗಳು ಯುದ್ಧದಲ್ಲಿ ಗೆದ್ದವೋ ಅಂಥ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿಯು ಹದಗೆಟ್ಟು ಹೋಗಿತ್ತು. ಆ ರಾಷ್ಟ್ರಗಳು ತಮ್ಮ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳುವುದಕ್ಕೋಸ್ಕರ ಮಾಡಿಕೊಂಡಂಥ ಸಂಸ್ಥೆ ಇದು. ಈ ಸಂಸ್ಥೆಯು ಮಾಡಿಕೊಂಡಂಥ ಎರಡನೆಯ ಉದ್ದೇಶವೇನೆಂದರೆ, ಅದು ತಮಗೆ ನೆನಪು ಇರಬಹುದು. ಎರಡನೆಯ ಮಹಾಯುದ್ಧವು ಆದಮೇಲೆ ಪ್ರಪಂಚದಲ್ಲಿ ಒಂದು ಹೊಸ ಆಲೋಚನೆ ಪ್ರಾರಂಭವಾಯಿತು. ಈ ಎರಡನೆ ಮಹಾಯುದ್ಧದಲ್ಲಿ ಯಾವ್ಯಾವ ರಾಷ್ಟ್ರಗಳು ಗೆದ್ದವೋ ಅವುಗಳ ಗುಲಾಮರಾಗಿ ಯಾವ್ಯಾವ ರಾಷ್ಟ್ರಗಳು ಇದ್ದವೋ ಅಂಥ ರಾಷ್ಟ್ರಗಳಿಗೆ ಸ್ವಯಂ ಆಡಳಿತ ಕೊಡಬೇಕೆಂದು, Principle of self determination ಇದರ ಆಧಾರದ ಮೇಲೆ ವಿಶ್ವಸಂಸ್ಥೆ ರಚನೆಯಾಯಿತು. ಆದರೂ ಈ General Agreement on Tariffs and Trade ಇದರ ಉದ್ದೇಶ ಇದ್ದದ್ದು ಹಳೆಯ ವಸಾಹತು ಶಾಹಿ ಕಳೆಗುಹೋದ ಮೇಲೆ ಹೊಸ ವಸಾಹತು ಶಾಹಿಯನ್ನು ಸ್ಥಾಪನೆ ಮಾಡಿಕೊಳ್ಳುವಂಥ ಮೂಲ ಉದ್ದೇಶದ ಮೇಲೆ ಈ ಸಂಸ್ಥೆ ಸ್ಥಾಪನೆಯಾಯಿತು. to establish neo-colonial relations. ಹೀಗೆ ಪ್ರಾರಂಭವಾದ ಈ ಸಂಸ್ಥೆ; ಈ ವಾಣಿಜ್ಯ ಮತ್ತು ತೆರಿಗೆ ಸಂಸ್ಥೆ. Trade and Tariff ಎಂದರೆ ವಾಣಿಜ್ಯ ಮತ್ತು ತೆರಿಗೆ ಸಂಸ್ಥೆ ಎಂದು. ಇವರು ಈಗ ಹೊಸ ಪ್ರಯತ್ನ ನಡೆಸುತ್ತಿದ್ದಾರೆ. ಈಗ ಏನು ಉರುಗ್ವೆ ಸುತ್ತಿನ ಮಾತುಕತೆ ನಡೆಯುತ್ತಿದೆ, ಈ ಮಾತುಕತೆಯ ಮೂಲಕ 2ನೇ ಮಹಾಯುದ್ಧದಲ್ಲಿ ಯಾವ್ಯಾವ ರಾಷ್ಟ್ರಗಳವರು ಗೆದ್ದರು ಅದನ್ನು ಈಗ 'ಜಿ. 7' ಎಂದು ಕರೆಯುತ್ತೇವೆ. ಈ 'ಜಿ. 7' ಎನ್ನತಕ್ಕ ರಾಷ್ಟ್ರಗಳು ತಮ್ಮ ಪ್ರಭುತ್ವವನ್ನು ಹಲವಾರು ರಾಷ್ಟ್ರಗಳ ಮೇಲೆ ಸ್ಥಾಪನೆ ಮಾಡುವುದಕ್ಕೋಸ್ಕರ 'ಗ್ಯಾಟ್' ಸಂಸ್ಥೆಯನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಈ ಉರುಗ್ವೆ ಸುತ್ತಿನ ಮಾತುಕತೆಯ ಕಾಲಕ್ಕೆ ನೇಮಕವಾದಂಥ Director General on General Agreement on Tariffs and Trade. ಆತನ ಹೆಸರು ಆರ್ಥರ್ ಡಂಕೆಲ್ ಎಂದು. ಅವನು ಒಂದು ಕರಡನ್ನು ತಯಾರು ಮಾಡಿದ್ದಾನೆ. ಅದನ್ನು ಎಲ್ಲಾ ಸದಸ್ಯ ರಾಷ್ಟ್ರಗಳಿಗೆ ಕೊಟ್ಟು ಅದನ್ನು ನೀವುಗಳು ಒಪ್ಪಬೇಕು ಅಥವಾ ಬಿಡಬೇಕು ಎನ್ನತಕ್ಕ ಷರತ್ತನ್ನು ಹಾಕಿದ್ದಾನೆ. ಈಗಾಗಲೇ ನಮ್ಮ ಭಾರತ ಸರ್ಕಾರ ಅದಕ್ಕೆ ಸಿಕ್ಕಿಕೊಂಡಿದೆ. ನೆಹರೂರವರ ಕಾಲದಿಂದ ಮಾಡಿದಂಥ ಪಾಪದ

ಕಾರ್ಯಗಳಿಂದ, ಮತ್ತು ಪಾಪದ ಯೋಜನೆಗಳಿಂದ ಉದ್ಭವವಾಗಿರತಕ್ಕ ಡೆಟ್ ಟ್ರ್ಯಾಪ್ ಎಂದು ಏನು ಹೇಳುತ್ತೇವೆ. ಈಗಾಗಲೆ ನಾವು ಯಾವ ಮಟ್ಟದ ಡೆಟ್ ಟ್ರ್ಯಾಪ್‌ನಲ್ಲಿ ಇದ್ದೇವೆ ಎಂದರೆ, ಇವತ್ತು ಭಾರತದಲ್ಲಿ ಹುಟ್ಟತಕ್ಕಂಥ ಪ್ರತಿಯೊಂದು ಮಗುವೂ ಕೂಡ 1600 ರೂಪಾಯಿಗಳ ವಿದೇಶಿ ಸಾಲವನ್ನು ತಲೆಯಮೇಲೆ ಹೊತ್ತುಕೊಂಡು ಹುಟ್ಟುತ್ತಿಗೆ.

ಶ್ರೀ ಹೆಚ್. ಶಾಂತಯ್ಯ:- ಅದು ಇನ್ನೂ ಹೆಚ್ಚು ಇದೆ.

ಪ್ರೊ। ಎಂ.ಡಿ. ನಂಜುಂಡಸ್ವಾಮಿ:- ಅದು ಇನ್ನೂ ಏನಾದರೂ ಹೆಚ್ಚಾಗಿದ್ದರೆ ಅದಕ್ಕೆ ಪ್ರಧಾನಿ ನರಸಿಂಹರಾಯರು ಹೊಣೆ. ಅಂದರೆ ಪ್ರತಿಯೊಂದು ಮಗುವೂ ಇವತ್ತು ಸುಮಾರು 2000 ರೂಪಾಯಿಗಳ ವಿದೇಶಿ ಸಾಲವನ್ನು ತನ್ನ ತಲೆಯಮೇಲೆ ಹೊತ್ತುಕೊಂಡು ಹುಟ್ಟುತ್ತಿದೆ.

ಈ ಸಾಲ ಏತಕ್ಕೆ ಆಯಿತು ? – Nehruvian model of development ಎಂದು ನಾವು ಏನು ಕರೆಯುತ್ತೇವೆ. ಈ Nehruvian model of development ಕೆಟ್ಟ ನೀತಿಯ ಪರಿಣಾಮ ಇದು. ನಮ್ಮ ದೇಶದ ಕೈಗಾರಿಕೆ ಸಂಪೂರ್ಣವಾಗಿ ವಿದೇಶೀಯರ ಹತೋಟಿಗೆ ಸಿಕ್ಕಿಕೊಂಡಿದೆ. ನೆಹರೂವಿಯನ್ ಮಾಡಲ್‌ನಲ್ಲಿಯೇ ನಮ್ಮ ಕೈಗಾರಿಕೀಕರಣ ಮುಂದುವರೆಯಬೇಕೆಂದರೆ ಮತ್ತೆ ಅವರಿಂದ ಸಾಲದ ಅವಶ್ಯಕತೆ ನಮಗೆ ಇದೆ. ನಾವು ಈ ಕೈಗಾರಿಕಾ ಕ್ಷೇತ್ರವನ್ನು ಬೆಳೆಸಬೇಕಾದರೆ ಈ ಸಾಲದ ಅವಶ್ಯಕತೆ ಇದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿರುವ ಕೇಂದ್ರಸರ್ಕಾರ ಈ ದೇಶದ ಕೈಗಾರಿಕೆಗಳನ್ನು ಉಳಿಸುವುದಕ್ಕೋಸ್ಕರ, ಈ ದೇಶದ ಬಹುಮುಖ್ಯ ಕ್ಷೇತ್ರವಾದ ಕೃಷಿಕ್ಷೇತ್ರವನ್ನು ಸಂಪೂರ್ಣವಾಗಿ ನಾಶ ಮಾಡಿ, ಈ ದೇಶದ ಕೈಗಾರಿಕಾ ಕ್ಷೇತ್ರವನ್ನು ಉಳಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದೇವೆ. ಡಂಕಲ್ ಪ್ರಸ್ತಾವನೆ ಏನಿದೆ ಅದನ್ನು ಸಂಪೂರ್ಣವಾಗಿ ಒಪ್ಪುವಂಥ ಮಾನಸಿಕ ಸಿದ್ಧತೆಯಲ್ಲಿ ಕೇಂದ್ರಸರ್ಕಾರ ಇದೆ. ತಮಗೆ ಹೇಳುವುದಾದರೆ, ಅಯೋಧ್ಯೆಯ ಬಗ್ಗೆ ಬಹಳಷ್ಟು ಚರ್ಚೆ ನಡೆಯುತ್ತಿತ್ತು. ಡಿಸೆಂಬರ್ 6ನೇ ತಾರೀಖು ಬಾಬರಿ ಮಸೀದಿಯನ್ನು ಒಡೆದುಹಾಕಿದರು. ಆ ತಾರೀಖನ್ನು ಯಾರು ನಿಗದಿ ಮಾಡಿದರು ಎಂದು ನಾನು ಹೇಳಬೇಕಾಗಿದೆ. ನವೆಂಬರ್ ತಿಂಗಳಲ್ಲಿ ಅದ್ವಾನಿಯವರು ಬಾನ್‌ಗೆ ಹೋಗಿದ್ದರು. ಅನಂತರ ವಾಷಿಂಗ್‌ಟನ್‌ಗೆ ಹೋಗಿದ್ದರು. ಬಾಬರಿ ಮಸೀದಿಯನ್ನು ಯಾವತ್ತು ಒಡೆಯಬೇಕೆಂದು ತಾರೀಖನ್ನು ನಿಗದಿ ಮಾಡಿದ್ದು ಬಿ.ಜೆ.ಪಿ. ಅಲ್ಲ ವಿಶ್ವ ಬ್ಯಾಂಕ್. ಏಕೆಂದರೆ ಡಿಸೆಂಬರ್ 10ನೇ ತಾರೀಖು ಡಂಕಲ್ ಎಮರ್ಜೆನ್ಸಿ ಮೀಟಿಂಗನ್ನು ಜಿನೀವಾದಲ್ಲಿ ಕರೆದಿದ್ದರು. ನಮ್ಮ ಇಡೀ ದೇಶದ ಗಮನವನ್ನು ಬೇರೆ ಕಡೆಗೆ ಸೆಳೆಯುವುದಕ್ಕಾಗಿ ಡಿಸಂಬರ್ 6ನೇ ತಾರೀಖು ಬಾಬರಿ ಮಸೀದಿಯನ್ನು ನಾಶಮಾಡಿ ಡಿಸೆಂಬರ್ 10ನೇ ತಾರೀಖು ಜಿನೀವಾದಲ್ಲಿ ಎಮರ್ಜೆನ್ಸಿ ಮೀಟಿಂಗ್‌ಗೆ ಹಾಜರಾಗುವುದಕ್ಕೆ ನಮ್ಮ ಕೇಂದ್ರಸರ್ಕಾರದ ವಾಣಿಜ್ಯ ಮಂತ್ರಾಲಯದ ಅಧಿಕಾರಿಗಳು ಹೋದರು. ಅವರು ಬರಿಗೈಯಲ್ಲಿ ಹೋದರು; Without any Government briefings. I was joking at them, may be they have gone there with a ball-pen to sign on the dotted line. ಇವತ್ತೂ ಕೂಡ ಅಪಾಯವಿದೆ. The Union Government might sign on the dotted line ಇದರಿಂದ ಕೃಷಿ ಕ್ಷೇತ್ರಕ್ಕೆ ಏನಾಗುತ್ತದೆಂಬುದನ್ನು ಮೊದಲು ಹೇಳಿ ಅನಂತರ ಕೈಗಾರಿಕಾ ಕ್ಷೇತ್ರಕ್ಕೂ ಈ ಲಿಬರೈಸೇಷನ್ ಪಾಲಿಸಿಯಿಂದ ಏನಾಗುತ್ತದೆ ಎಂಬುದನ್ನು ಹೇಳುತ್ತೇನೆ. ಮುಖ್ಯವಾಗಿ ಡಂಕಲ್ ಪ್ರೊಪೋಸಲ್ಸ್‌ನಲ್ಲಿ ಮೊದಲನೇ ವಿಷಯ total removal of domestic support to agriculture. Total removal of domestic support to agriculture means total abolition of subsidies.

ಇದುವರೆಗೂ ಅಂಥ ಸಬ್ಸಿಡಿಯನ್ನು ಕೊಡುತ್ತಿರಲಿಲ್ಲ. ನಮ್ಮ ದೇಶದಲ್ಲಿ ಕೈಗಾರಿಕಾ ಕ್ಷೇತ್ರಕ್ಕೆ ಏನೇನು ಸಬ್ಸಿಡಿಯನ್ನು ಕೊಡಲಾಗುತ್ತಿದೆ ಅದನ್ನು ತೆಗೆದುಹಾಕಬೇಕೆಂದು ಒತ್ತಡವನ್ನು ತರುತ್ತಿದ್ದಾರೆ. ಇದನ್ನು

ಸರ್ಕಾರ ಮಾಡುತ್ತಿದೆ. ರಸಗೊಬ್ಬರದ ಮೇಲಿನ ಸಬ್ಸಿಡಿಯನ್ನು ತೆಗೆದಿದ್ದೂ ಕೂಡ ವಿಶ್ವಬ್ಯಾಂಕನ್ನು ಸಂತೋಷಗೊಳಿಸುವುದಕ್ಕೆ. ಈಗ ಅಖಿಲ ಭಾರತಮಟ್ಟದಲ್ಲಿ ಪವರ್ ಸಬ್ಸಿಡಿಯನ್ನು ತೆಗೆಯಲು ವಿದ್ಯುಚ್ಛಕ್ತಿ ನೀತಿಯನ್ನು ಮಾಡುತ್ತಿದೆ ಅದು 1 ಯೂನಿಟ್‌ಗೆ 50 ಪೈಸೆಯನ್ನು ನಿಗದಿ ಮಾಡಬೇಕೆಂದು ತೀರ್ಮಾನಕ್ಕೆ ಏನು ಬಂದಿದ್ದಾರೆ ಅದನ್ನೂ ಕೂಡ ವಿಶ್ವಬ್ಯಾಂಕ್‌ನ ಒತ್ತಡಕ್ಕೆ ಮಣಿದೇ ಮಾಡುತ್ತಿರುವುದು. ಅದನ್ನು ಸಂತೋಷಪಡಿಸುವುದಕ್ಕೆ ಕೈಗಾರಿಕಾ ಕ್ಷೇತ್ರಕ್ಕೆ ಏನು ಸಾಲ ಬೇಕೋ ಅದನ್ನು ತರುವುದಕ್ಕೋಸ್ಕರ ಮಾಡುತ್ತಿದ್ದಾರೆ. and they are going to remove the irrigation subsidy also. ಕೇಂದ್ರಸರ್ಕಾರದವರು ನಮಗೆ ಎಷ್ಟು ಸಬ್ಸಿಡಿಯನ್ನು ಕೊಡುತ್ತಿದ್ದರು. ಇಲ್ಲಿ ಇದರ ಬಗ್ಗೆ ಒಂದು ಟೇಬಲ್ ಇದೆ. ಅದನ್ನು ಓದುತ್ತೇನೆ. ಡಂಕಲ್ ಪ್ರೊಪೋಸಲ್ಸ್‌ನಲ್ಲಿ ಸಬ್ಸಿಡಿ ರಿಮೂವಲ್ ವಿಚಾರದಲ್ಲಿ ಏನು ಒತ್ತಡ ಬರುತ್ತಿದೆ ಅದರಲ್ಲಿ ಏನು ಕುತಂತ್ರ ಇದೆ ಎನ್ನುವುದು ಆಗ ಗೊತ್ತಾಗುತ್ತದೆ. ಬೇರೆ ಬೇರೆ ದೇಶಗಳಲ್ಲಿ ರೈತ 100 ರೂಪಾಯಿ ಬೆಳೆ ಬೆಳೆದರೆ ಅದಕ್ಕೆ ಎಷ್ಟೆಷ್ಟು ಸಬ್ಸಿಡಿಯನ್ನು ಕೊಡುತ್ತೇವೆಂಬ ಬಗ್ಗೆ ಒಂದು ಟೇಬಲ್ ಇದೆ. ಇದನ್ನು ತಮಗೆ ಓದಿ ಹೇಳುತ್ತೇನೆ.

ಜಪಾನ್‌ನಲ್ಲಿ ರೈತ 100 ರೂಪಾಯಿನ ಕೃಷಿ ಉತ್ಪಾದನೆ ಮಾಡಿದರೆ ಜಪಾನ್ ಸರ್ಕಾರ 72.50 ಪೈಸೆ ಸಬ್‌ಸಿಡಿ ಕೊಡುತ್ತದೆ. ಪ್ರತಿ ನೂರು ರೂಪಾಯಿಗೆ ಇಷ್ಟು ಸಬ್ಸಿಡಿ ಕೊಡುತ್ತದೆ. ಸೌತ್ ಕೊರಿಯಾ ಪ್ರತಿ 100 ರೂಪಾಯಿಗೆ 60.67 ಪೈಸೆ ಕೊಡುತ್ತದೆ. ಕೊಲಂಬಿಯ ಪ್ರತಿ 100 ರೂಪಾಯಿಗೆ 54.50 ಪೈಸೆ ಕೊಡುತ್ತದೆ. ಯೂರೋಪಿಯನ್ ಕಮ್ಯುನಿಟಿ ಪ್ರತಿ 100 ರೂಪಾಯಿಗೆ 37–00 ರೂಪಾಯಿ ಕೊಡುತ್ತದೆ. ಚೈನಾ 34–17 ಪೈಸೆ ಕೊಡುತ್ತದೆ. ಯುನೈಟೆಡ್ ಸ್ಟೇಟ್, ಆಫ್ ಅಮೇರಿಕಾ ಪ್ರತಿ 100 ರೂಪಾಯಿಗೆ 26–17 ಪೈಸೆ ಕೊಡುತ್ತದೆ. ಫಾರ್ಮರ್ಸ್ ಸೋವಿಯಟ್ ಯೂನಿಯನ್ 25–00 ರೂಪಾಯಿ ಕೊಡುತ್ತದೆ. ಪಾಕಿಸ್ತಾನ್ 21–80 ಪೈಸೆ ಕೊಡುತ್ತದೆ. ಆಸ್ಟ್ರೇಲಿಯಾ 10–33 ಪೈಸೆ ಕೊಡುತ್ತದೆ. ಇಂಡಿಯಾ ಗೊಬ್ಬರದ ಸಬ್‌ಸಿಡಿ ತೆಗೆಯುವುದಕ್ಕೆ ಮುಂಚೆ ಕೃಷಿಗೆ ರೈತರಿಗೆಲ್ಲ, ಕೃಷಿಕ್ಷೇತ್ರಕ್ಕೆ ಕೊಡುತ್ತಾ ಇರತಕ್ಕಂಥ ಸಬ್‌ಸಿಡಿ 2–33 ಪೈಸೆ. ನಾವು ಪೈಪೋಟಿ ಮಾಡಬೇಕಾಗಿರುವುದು ಜಪಾನ್ ರೈತನ 72 ರೂಪಾಯಿ ಸಬ್‌ಸಿಡಿ ರೈತನ ವಿರುದ್ಧ. ಗೊಬ್ಬರದ ಸಬ್‌ಸಿಡಿ ತೆಗೆದುಹಾಕುವುದಕ್ಕೆ ಮುಂಚೆ ನಮಗೆ ಸಿಕ್ಕುತ್ತಿದ್ದ ಸಬ್‌ಸಿಡಿ 2–33 ಪೈಸೆ, ಜಪಾನ್‌ನವರಿಗೆ 72 ರೂಪಾಯಿ. ಗೊಬ್ಬರದ ಸಬ್‌ಸಿಡಿ ತೆಗೆದರೆ 50 ಪೈಸೆಗೆ ಬರುತ್ತೇವೆ. ಇರಿಗೇಷನ್ ಸಬ್‌ಸಿಡಿ ತೆಗೆದರೆ '0'ಗೆ ಬರುತ್ತೇವೆ. ಇದು ವರ್ಲ್ಡ್ ಬ್ಯಾಂಕಿನ ಇಚ್ಛೆ ನೆರವೇರಿಸುವುದಕ್ಕೋಸ್ಕರ. ಇದರಿಂದ ಏನಾಗುತ್ತದೆಂಬುದನ್ನು ತಮಗೆ ಹೇಳುತ್ತೇನೆ. ಏತಕ್ಕೋಸ್ಕರ ಈ ಒತ್ತಡ ತರುತ್ತಿದ್ದಾರೆ. Removal of domestic support to Indian Agriculture is linked with their desire for market access.

ನಮ್ಮ ದೇಶದ ಆಹಾರ ಮಾರ್ಕೆಟನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳತಕ್ಕಂಥ ಅವರ ಅಂತಿಮ ಉದ್ದೇಶ ಏನಿದೆ ಅದಕ್ಕೆ ಸಿದ್ಧತೆ ಮಾಡುವುದಕ್ಕೋಸ್ಕರ ನಮ್ಮ ದೇಶದ ಒಳಗಿನ ಸಬ್‌ಸಿಡಿಗಳನ್ನು ತೆಗೆದು ನಮ್ಮ ದೇಶದ ರೈತನ ಉತ್ಪಾದನಾ ವೆಚ್ಚ ಹೆಚ್ಚು ಮಾಡುವುದು. ನಮ್ಮ ಮಾರ್ಕೆಟನ್ನು ಆಕ್ರಮಿಸಿಕೊಳ್ಳುವುದಕ್ಕೆ ಅವರು ಹಾಕುತ್ತಿರತಕ್ಕಂಥ ಶರತ್ತು ಮುಖ್ಯವಾಗಿ, removal of all non–tariff measures in food trade, ನಾನ್ ಟ್ಯಾರೀಫ್ ಮೆಷರ್ಸ್ ಎಂದರೆ ಮತ್ತೇನೂ ಅಲ್ಲ, ಈಗ ನಮ್ಮ ಕೇಂದ್ರ ಸರ್ಕಾರಕ್ಕೆ ಏನು ಅಧಿಕಾರವಿದೆ ಕೋಟ ನಿಗದಿ ಮಾಡಬಹುದು. ಎಷ್ಟು ಆಮದು ಮಾಡಿಕೊಳ್ಳಬಹುದು, ಮಾಡಬಾರದು ಎಂದು ಹೇಳುವಂಥ ಅಧಿಕಾರ ಈಗ ನಮ್ಮ ಕೇಂದ್ರ ಸರ್ಕಾರಕ್ಕೆ ಉಂಟು. ಅದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ಲೈಸೆನ್ಸ್ ಕೊಡುವಂಥ ಅಧಿಕಾರ ಇನ್ನೂ ಇದೆ. ನಾವೇನಾದರೂ ಡಂಕಲ್ ಪ್ರಸ್ತಾವನೆಗೆ ರುಜು ಹಾಕಿದರೆ, Our Union Government will lose the power of fixing the quota of imports and also lose the power

of licensing imports and will be opening the doors of food market totally which they are trying to call as 'global food market'.

ನಾನ್-ಟ್ಯಾರೀಫ್ ಮೆಷರ್ಸ್ ಎಂದರೆ ಇದೇನೆ. ಈ ನಾನ್ ಟ್ಯಾರೀಫ್-ಮೆಷರ್ಸನ್ನು ತೆಗೆದು ಈಕ್ವಲ್ ಟ್ಯಾರಿಫಿಕೇಷನ್‌ಗೆ ಬರಬೇಕೆಂದು ಅಮೇರಿಕಾ ದೇಶ ನಮ್ಮ ಈ ಡಂಕಲ್ ಪ್ರಸ್ತಾವನೆಯ ಮೂಲಕ ಹೇಳುತ್ತಿದೆ. ಇದಾದರೆ ಏನಾಗುತ್ತದೆಂಬುದನ್ನು ತಾವು ಆಲೋಚನೆ ಮಾಡಬೇಕು. ಅದಕ್ಕಿಂತ ಮುಂಚೆ ನಾನು ಒಂದು ಮಾತನ್ನು ಹೇಳಬೇಕು. ಈ ಡಂಕಲ್ ಪ್ರಸ್ತಾವನೆಯಲ್ಲಿ ಏನಿದೆ ರಿಮೂವಲ್ ಆಫ್ ನಾನ್‌ಟ್ಯಾರೀಫ್ ಮೆಷರ್ಸ್ ಎಂದು ಇದನ್ನು ಈಗಾಗಲೇ ಸರ್ಕಾರ ಮಾಡುತ್ತಿದೆ. ರುಜು ಹಾಕುವುದಕ್ಕೆ ಮುಂಚೇನೆ ಇದರ ಜೊತೆಗೆ ಇನ್ನೂ ಒಂದು ಇದೆ. 'commitment of minimum import of agricultural products'. ಇದು ಒಂದು ಡಂಕಲ್ ಪ್ರಸ್ತಾವನೆಯಲ್ಲಿ ತಂದಿರತಕ್ಕಂಥ ಒತ್ತಡ ನಮ್ಮಂಥ ಸರ್ಕಾರದ ಮೇಲೆ, ನಮ್ಮಂಥ ದೇಶದ ಮೇಲೆ. ಡಂಕಲ್ ಪ್ರಸ್ತಾವನೆಯ ಪ್ರಕಾರ, 1986ರಿಂದ 1989ರವರೆಗೆ ಮೂರು ವರ್ಷ ನಮ್ಮ ದೇಶದಲ್ಲಿ ನಾವು ಆಹಾರವನ್ನು ಏನು ಕನ್‌ಸ್ಯೂಮ್ ಮಾಡಿದ್ದೇವೆ ಅದರ ಮೂರು ಪರ್ಸೆಂಟ್ ಆಹಾರ ಧಾನ್ಯವನ್ನು ನಮಗೆ ಬೇಕೋ ಬೇಡವೋ, ಅವಶ್ಯಕತೆ ಇದೆಯೋ ಇಲ್ಲವೋ, ಕಡ್ಡಾಯವಾಗಿ ನೀವು ಆಮದು ಮಾಡಿಕೊಳ್ಳಲೇಬೇಕು.

ಮೂರು ಪರ್ಸೆಂಟ್‌ನಿಂದ ಪ್ರಾರಂಭವಾಗಿ ಇನ್ನು ಹತ್ತು ವರ್ಷಗಳಲ್ಲಿ ಐದು ಪರ್ಸೆಂಟಿಗೆ ಬರಬೇಕು ಎಂಬ ಒಂದು ಕಂಡೀಷನ್ ಇದೆ. It is a peculiar commitment on minimum import of food grains. ಎಲ್ಲಿಗೆ ವರ್ಕ್‌ಔಟ್ ಆಗುತ್ತದೆಂದರೆ 70 ಲಕ್ಷ ಟನ್ ಆಗುತ್ತದೆ. ಮುಕ್ತ ಆಹಾರ ಮಾರುಕಟ್ಟೆ ಬಾಗಿಲು ತೆರೆಯುವುದರ ಜೊತೆಗೆ We will have to compulsorily import 70 lakh tonnes of food grains, whether we need it or not.

ಈ ವರ್ಷ ಈಗಾಗಲೇ ನಾವು ಸುಮಾರು 5 ಲಕ್ಷ ಟನ್ ಗೋಧಿ ತರಿಸಿದ್ದೇವೆ. ನಮಗೆ ಆ 5 ಲಕ್ಷ ಟನ್ ಗೋಧಿ ಬೇಕಿರಲಿಲ್ಲ. ನಮ್ಮ ಪಂಜಾಬ್ ರೈತರು ಈ ವರ್ಷ ಕೂಡ ಬಹಳ ಹೆಚ್ಚಿಗೆ ಬೆಳೆದಿದ್ದಾರೆ. There is enough buffere stock for two years with the Government of India. ಹೀಗಿದ್ದರೂ ಈ ಗುಲಾಮ ಕೇಂದ್ರ ಸರ್ಕಾರ ವಿಶ್ವ ಬ್ಯಾಂಕಿನಿಂದ ತನ್ನ ಕೈಗಾರಿಕೀಕರಣಕ್ಕೆ ಸಾಲ ಬೇಕೆಂಬ ಕಾರಣಕ್ಕೋಸ್ಕರ ಅವಶ್ಯಕತೆ ಇಲ್ಲದಿದ್ದ 5 ಲಕ್ಷ ಟನ್ ಗೋಧಿಯನ್ನು ಆಮದು ಮಾಡಿಕೊಂಡಿತು. ಇದರಿಂದ ಭಾರತದ ಕೃಷಿ ಮೇಲೆ ಏನು ಪರಿಣಾಮವಾಗುತ್ತದೆ ಎಂದು ಹೆಚ್ಚಿಗೆ ಚರ್ಚೆ ಮಾಡಬೇಕಾಗಿಲ್ಲ. ಅದರ ಜೊತೆಗೆ ಮತ್ತೊಂದು ಒತ್ತಡ ತರುತ್ತಿದ್ದಾರೆ. ನಾವು ಈಗ ಆಹಾರ ಕ್ಷೇತ್ರದಲ್ಲಿ ಎಕ್ಸ್‌ಪೋರ್ಟ್ ಸಬ್ಸಿಡಿ ಎಂದು ಏನು ಕೊಡುತ್ತಿದ್ದೇವೆ ಆ ಎಕ್ಸ್‌ಪೋರ್ಟ್ ಸಬ್ಸಿಡಿಯನ್ನು 36 ಪರ್ಸೆಂಟ್ ಇಳಿಸಬೇಕು, ಬಡ್ಜೆಟ್ಟಿನಲ್ಲಿಯೇ ಇಳಿಸಬೇಕು. ಬಡ್ಜೆಟ್ ಮಂಡಿಸಿದ ಮೇಲೆ ನಾವು ನೋಡಬೇಕು, ಈ ಗುಲಾಮ ಕೇಂದ್ರ ಸರ್ಕಾರ ಈ ಬಡ್ಜೆಟ್ಟಿನಲ್ಲಿಯೇ 36 ಪರ್ಸೆಂಟ್ ಎಕ್ಸ್‌ಪೋರ್ಟ್ ಸಬ್ಸಿಡಿ ಇಳಿಸಿದೆಯೇ ಎಂದು. ಇಳಿಸಿರುತ್ತೆ, ನನಗೆ ಗೊತ್ತು ಅಂಥ ಗುಲಾಮ ಹಣಕಾಸಿನ ಮಂತ್ರಿಯನ್ನು ನಾವು ಹೊಂದಿದ್ದೇವೆ. ಇದೆಲ್ಲದರ ಪರಿಣಾಮ ನಮ್ಮ ದೇಶದ ಕೃಷಿ ಕ್ಷೇತ್ರದ ಮೇಲೆ ಏನಾಗುತ್ತದೆಂದು ನಾವು ಆಲೋಚಿಸಬೇಕು. ಅವರು ತೋರಿಕೆಗೆ ಅಮೆರಿಕಾದ, ರೈತನಿಗೆ ಕೊಡುತ್ತಿರುವ ಸಬ್ಸಿಡಿಯನ್ನು ತೆಗೆಯಬಹುದು. ಈಗಾಗಲೇ ತೆಗೆಯುತ್ತಿದ್ದಾರೆ, ಅಮೆರಿಕಾದಿಂದ ನಮಗೆ ವರದಿಗಳು ಬಂದಿವೆ. ಅಮೆರಿಕಾ ದೇಶದ ರೈತನನ್ನು ಅವರು ಒಕ್ಕಲೆಬ್ಬಿಸಿದ್ದಾರೆ. ಅಮೆರಿಕಾದಲ್ಲಿ ಈಗಾಗಲೇ ಬಹಳ ಜನ ರೈತರು ವ್ಯವಸಾಯ ಬಿಟ್ಟು ನಿರುದ್ಯೋಗಿಗಳಾಗಿದ್ದಾರೆ. ಇದನ್ನು ಏನಾದರೂ ನಾವು ಒಪ್ಪಿದರೆ ನಮ್ಮ ದೇಶದ ಮೇಲೆ ಏನು ಪರಿಣಾಮವಾಗುತ್ತದೆ ? When we lose the power of licencing

imports, when we lose the power of fixing the quota of imports, when we submit ourselves to this compulsory import commitment..

ದೇಶದ ಒಳಗಡೆ ಏನು ಕೃಷಿ ಉತ್ಪಾದನೆ ಇದೆ ಅದರ ಮೇಲೆ ನೇರ ಪರಿಣಾಮ ಇದೆ.

ಛೇರ್ಮನ್:– ಇನ್ನೂ 20 ಜನ ಮಾತನಾಡಲಿಕ್ಕೆ ಇದ್ದಾರೆ. ಸ್ವಲ್ಪ ಬೇಗ ಮುಗಿಸಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಇದು ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಮುಖ್ಯ ಮಂತ್ರಿಗಳು ಇರುತ್ತಾರೆಂಬ ಭಾವನೆ ಇತ್ತು. ಕಾನೂನು ಮಂತ್ರಿಗಳು ಇರುತ್ತೇನೆಂದು ಹೇಳಿದ್ದರು. ಬೇಡ ಎಂದರೆ ಖಾಲಿ ಖರ್ಚಿಗೆ ಹೇಳಿ ಪ್ರಯೋಜನ ಇಲ್ಲ. ನಿಜವಾಗಿ ಮಾತನಾಡುವುದಕ್ಕೆ ಆಸಕ್ತಿ ಇರಲಿಲ್ಲ. ಮಾತನಾಡಿ ಏನು ಪ್ರಯೋಜನ ? ನೀವು ಕೇಳುತ್ತಿದ್ದೀರಿ, ಸಂತೋಷ. ಆದರೆ......

ಶ್ರೀ ಹೆಚ್. ಏಕಾಂತಯ್ಯ:– ಇದು ಬಹಳ ದುರಂತದ ವಿಚಾರ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭ ಮಾಡಿ 225 ಜನ ಇರುವ ಈ ವಿಧಾನ ಸಭೆಯಲ್ಲಿ ಕೇವಲ 3–4 ಜನರಿಗೆ ಸೀಮಿತಗೊಳಿಸಿ ಯಾವುದೇ ವೇಳೆಯನ್ನು ನಿಗದಿ ಮಾಡದೆ ಪ್ರಮುಖವಾದ ವಿಚಾರ ಚರ್ಚೆ ಇಲ್ಲದೆ ಈ ದೇಶದ ಹಿತವನ್ನು ಕಾಪಾಡಲಿಕ್ಕೆ ಸಾಧ್ಯವಾಗುತ್ತದೆ ಮತ್ತು ಸರ್ಕಾರದ ನೀತಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಂಥ ಚರ್ಚೆಗೆ ಅವಕಾಶ ಕೊಡದೆ ವಿಧಾನಸಭೆ ನಡೆಸುವುದಾದರೆ ಅರ್ಥ ಇದೆಯೆ ? ನಮ್ಮ ನಿಯಮಗಳನ್ನೆಲ್ಲ ಗಾಳಿಗೆ ತೂರಿ ಮೊದಲು ಮಾತನಾಡುವವರಿಗೆ ಗಂಟೆಗಟ್ಟಲೆ ಅವಕಾಶ ಕೊಟ್ಟು, ಕೊನೆಯಲ್ಲಿ 20 ಜನ ಮಾತನಾಡಬೇಕೆಂದು ಹೇಳುವುದಾದರೆ ಅರ್ಥಪೂರ್ಣ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆಯೆ ? ತಾವು ಆಲೋಚಿಸಬೇಕು. ಮಾನ್ಯ ಅಧ್ಯಕ್ಷರಲ್ಲಿ ನಾನು ವಿನಂತಿಸುತ್ತೇನೆ. ಈ ರೀತಿ ಮಾಡುವುದರ ಮೂಲಕ ಈ ಒಂದು ವಿಧಾನಸಭೆಯಲ್ಲಿ ಯಾವ ರೀತಿ ಅರ್ಥಪೂರ್ಣ ಚರ್ಚೆಯಾಗಬೇಕೋ ಆ ಚರ್ಚೆಯನ್ನು ಮೊಟಕು ಮಾಡುವುದಕ್ಕೆ, ಸರ್ಕಾರದ ನೀತಿಯನ್ನು ಬಹಿರಂಗವಾಗಿ ಯಾರು ಮನಸ್ಸು ಮಾಡುತ್ತಾರೆ ಅಂಥವರಿಗೆ ಕಾಲಾವಕಾಶ ಕೊಡದೆ ಇರುವ ನೀತಿಯನ್ನು ಅನುಸರಿಸುತ್ತಿದ್ದೀರಿ, ಅದಕ್ಕೆ ಸರ್ಕಾರದ ಪ್ರೇರಣೆ ಇದೆಯೇನೋ ಎಂಬ ಅನುಮಾನ ಬರುತ್ತದೆ.

ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು ಮತ್ತು ಏನು ನಿಯಮಾವಳಿ ಇದೆಯೋ ಅದರ ಪ್ರಕಾರ ಮಾನ್ಯ ಸದಸ್ಯರು ಯಾರೇ ಮಾತನಾಡುವುದಾದರೆ ಅದಕ್ಕೆ ಒಂದು ಮಿತಿಯನ್ನು ಹಾಕಬೇಕಾಗುತ್ತದೆ. ಒಂದು ಅರ್ಥಪೂರ್ಣವಾದ ಚರ್ಚೆಗೆ ಅವಕಾಶ ಮಾಡಿ ಕೊಡದೇ ಔಪಚಾರಿಕವಾದ ಚರ್ಚೆಗೆ ಗಂಟೆಗಟ್ಟಲೆ ಅವಕಾಶ ಕೊಟ್ಟರೆ ನಾವು ಏನು ಮಾಡಬೇಕು ? ಅದಕ್ಕೆ ದಯವಿಟ್ಟು ವಿನಂತಿ ಮಾಡಿಕೊಳ್ಳುತ್ತೇನೆ. ಒಂದಲ್ಲ, ಎರಡು ದಿವಸವಾಗಲಿ. ಮಾನ್ಯ ನಂಜುಂಡಸ್ವಾಮಿಯವರು ಮಾತನಾಡುವಷ್ಟು ಮಾತನಾಡಲಿ. ಮುಖ್ಯಮಂತ್ರಿಗಳು ಇರುತ್ತಾರೋ, ಸರ್ಕಾರದ ಮಂತ್ರಿಗಳು ಇರುತ್ತಾರೋ ಅದು ಬೇರೆ ವಿಚಾರ, ಅದು ಅವರಿಗೆ ಬೇಕಾಗಿಲ್ಲ. ಆದರೆ ಈ ದೇಶದ ಜನಕ್ಕೋಸ್ಕರ ಈ ವಿಚಾರಗಳನ್ನು ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಅವಶ್ಯಕವಿದ್ದರೆ ಸೋಮವಾರವೂ ಇದನ್ನು ಮುಂದುವರಿಸಬಹುದು.

ಶ್ರೀ ಎ. ಕೆ. ಅನಂತಕೃಷ್ಣ:– ಇದು ಬಹಳ ದೀರ್ಘವಾಗಿ ಚರ್ಚೆ ಆಗಬೇಕಾದ ವಿಷಯ. ಕೇವಲ ಸಾಂಪ್ರದಾಯಿಕವಾಗಿ ಮಾನ್ಯ ರಾಜ್ಯಪಾಲರ ಒಂದು ಭಾಷಣದ ಮೇಲೆ ಕೆಲವು ಕಾಟಾಚಾರದ ಮಾತುಗಳನ್ನು ಇಲ್ಲಿ ಹೇಳಿ ತೀರ್ಮಾನ ಮಾಡಿಕೊಂಡು ಹೋಗುವುದು ಎಂದರೆ ನಾವು ನಮ್ಮ ರಾಜ್ಯಕ್ಕೆ ನಿಷ್ಠಾವಂತರಾಗಿ ಸೇವೆ ಮಾಡಿದ ಹಾಗೆ ಆಗುವುದಿಲ್ಲವೆಂದು ನಾನೂ ಭಾವಿಸುತ್ತೇನೆ. ಆದುದರಿಂದ ನಾನು ಪ್ರಾರಂಭದಿಂದಲೂ ಕುಳಿತಿದ್ದೇನೆ; ನನಗೂ ಒಂದು ಅವಕಾಶ ಸಿಗುತ್ತದೆ

ಸುದೀರ್ಘವಾಗಿ ವಿಶ್ಲೇಷಣೆ ಮಾಡೋಣ ಎಂದು ಕುಳಿತಿದ್ದೇನೆ. ಪ್ರೊಫೆಸರ್ ನಂಜುಂಡಸ್ವಾಮಿಯವರ ವಿಚಾರ ಕೇಳುತ್ತಾ ಇರಬೇಕಾದರೆ ನನ್ನ ಮನಸ್ಸು ಮತ್ತಷ್ಟು ಕರಗುತ್ತಿದೆ. ನಾಳೆ ಎಲ್ಲಾ ಚರ್ಚೆ ನಡೆಯಬೇಕಾಗಿರುವುದಕ್ಕೆ ನಾವು ಕ್ರಿಕೆಟ್ ಮ್ಯಾಚ್ ನೋಡುವುದಕ್ಕೆಂದು ಹೇಳಿ ಆ ಒಂದು ಕಾರಣ ಏನೇ ಇರಲಿ ಅದು ಎರಡನೆಯ ಮಾತು. ರಾಜ್ಯದ ಆರ್ಥಿಕ, ಸಾಮಾಜಿಕ ಹಿತದೃಷ್ಟಿಯಿಂದ ಚಿಂತನೆ ಮಾಡತಕ್ಕ ಒಂದು ಸದನ, ಸಮಾವೇಶ. ಇದಕ್ಕೆ ಅವಕಾಶ ಇಲ್ಲದೇ ನಾಳೆ ಕ್ರಿಕೆಟ್ ಮ್ಯಾಚ್ ನೋಡಬೇಕೆಂದು ರಜ ಕೊಟ್ಟರಿ. ಮತ್ತೆ ಶನಿವಾರ ಹಾಗೂ ಭಾನುವಾರ ರಜ. ಸೋಮವಾರ ಮುಖ್ಯಮಂತ್ರಿಗಳ ಉತ್ತರ ಇಲ್ಲವೇ ಮಂಗಳವಾರ ಉತ್ತರ. ಎಂದರೆ ನಮ್ಮ ಮಾತನ್ನು ಏನು ಕೇಳಿ ಅವರು ಉತ್ತರ ಕೊಡುತ್ತಾರೆ ? ನಮ್ಮ ಭಾವನೆಗಳು ಏನು ಕೇಳಿ ಅವರು ಉತ್ತರ ಕೊಡುತ್ತಾರೆ ಎಂದು ನನ್ನ ಮನಸ್ಸಿಗೆ ಕಾಡಿಸುತ್ತಿದೆ. ಮಾನ್ಯ ನಂಜುಂಡಸ್ವಾಮಿಯವರು ಹೇಳುತ್ತಿರುವಾಗ, ನಾವು ಈ ರಾಷ್ಟ್ರದಲ್ಲಿ ಒಂದು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಸಂಪಾದಿಸಬೇಕಂದು ಮಹಾತ್ಮಾ ಗಾಂಧೀಜಿಯವರು ಹೇಳುತ್ತಿದ್ದರು.

ಛೇರ್ಮನ್:- ಇಲ್ಲಿ ನಿಮ್ಮ ಹೆಸರು ಉಂಟು ಆಗ ಮಾತನಾಡಿ.

ಶ್ರೀ ಎ. ಕೆ. ಅನಂತಕೃಷ್ಣ:- ನಾನು ಭಾಷಣ ಮಾಡುತ್ತಿಲ್ಲ. ತಮ್ಮಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಆದುದರಿಂದ ತಾವು ಇವತ್ತು ಪ್ರೊಫೆಸರ್ ನಂಜುಂಡಸ್ವಾಮಿ ಅವರಿಗೆ ಎಷ್ಟು ಬೇಕೋ ಅವಕಾಶ ಕೊಡಿ. ನಾವೂ ಸಾಕಷ್ಟು ಮಾತನಾಡಬೇಕಾಗಿದೆ. ನಮಗೂ ಅವಕಾಶ ಕೊಡಿ. ದಯವಿಟ್ಟು ನಮ್ಮ ವಾಕ್ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಬೇಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಏಕಾಂತಯ್ಯನವರು ಮಾತನಾಡುತ್ತಾ ಪ್ರಮುಖವಾದ ವಿಷಯಕ್ಕಿಂತ ಸಮಯ ಅಪ್ರಮುಖವಾದ ವಿಷಯಕ್ಕೇ ಹೆಚ್ಚು ಹೋಗುತ್ತಿದೆ ಎಂದು ಹೇಳಿದರು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಕಾಲದಲ್ಲಿ ಆಡಳಿತ ಪಕ್ಷದವರು ನಾವೂ ಬೇರೆ ವಿಚಾರದಲ್ಲಂತೂ ಸಮಯ ತೆಗೆದುಕೊಂಡಿಲ್ಲ. ಒಬ್ಬರೂ ಮಾತನಾಡಿಲ್ಲ. ಇದ್ದ ಎಲ್ಲ ಸಮಯವನ್ನು ವಿರೋಧಪಕ್ಷದವರೇ ತೆಗೆದುಕೊಂಡಿದ್ದಾರೆ. ಈಗ ಅವರೇ ಈ ರೀತಿ ಹೇಳಿದರೆ ನಾನು ಏನು ಹೇಳಬೇಕು ? ಇದು ಒಂದು ಅಪರೂಪವಾದ ಅವಕಾಶ ವಿರೋಧಪಕ್ಷದವರಿಗೆ ಸಿಕ್ಕಿದೆ. ಆಡಳಿತ ಪಕ್ಷದವರು ಏನೂ ಸಮಯವನ್ನು ತೆಗೆದುಕೊಳ್ಳದೇ ಇದ್ದಾಗ, ಎಲ್ಲಾ ಸಮಯವೂ ವಿರೋಧಪಕ್ಷದವರಿಗೆ ಸಿಗುವ ಸಂದರ್ಭದಲ್ಲಿ ಅದನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡು ಶ್ರೀಮಾನ್ ನಂಜುಂಡಸ್ವಾಮಿಯವರಂತಹವರ ಚರ್ಚೆಗೆ ಹೆಚ್ಚು ಅರ್ಥಪೂರ್ಣ ಬರುವ ರೀತಿಯಲ್ಲಿ ಪ್ರಯತ್ನ ಮಾಡಬೇಕಾದವರು ವಿರೋಧ ಪಕ್ಷದವರು....

ಶ್ರೀ ಬಸವರಾಜ ರಾಯರೆಡ್ಡಿ:- ನೀವು ಈ ಮಾತನ್ನು ಏಕೆ ಹೇಳುತ್ತಿದ್ದೀರಿ ಎಂದು ನನಗೆ ಗೊತ್ತು.

ಶ್ರೀ ಕಾಗೋಡು ತಿಮ್ಮಪ್ಪ:- ರಾಯರೆಡ್ಡಿಯವರೇ, ಸಮಯ ಏನಾದರೂ ವ್ಯರ್ಥ ಆಗಿದ್ದರೆ ತಮ್ಮ ಕಡೆಯಿಂದ ಆಗಿರಬಹುದೇ ವಿನಹ ನಮ್ಮ ಆಡಳಿತ ಪಕ್ಷದಿಂದ ಖಂಡಿತಾ ಆಗಿಲ್ಲ. ವಾಸ್ತವಿಕವಾಗಿ ಈ ಸಾರಿಯಂತೂ ಒಬ್ಬರೂ ಮಾತನಾಡಿಲ್ಲ.

5.40 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್:- ತಾವು ಸಭೆಯಲ್ಲಿ ಇಲ್ಲವೇ ಇಲ್ಲ, ಸಮಯ ಹೋಗುವುದು ಎಲ್ಲಿ ಬಂತು ?

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡದಿರಬೇಕಾದರೆ ಅದಕ್ಕೆ ಬೇರೆ ಬೇರೆ ಕಾರಣಗಳು ಇವೆ. ಅವರು ನಾವು ಯಾರೂ

ಮಾತನಾಡಲಿಲ್ಲವೆಂದರೆ ನಾವು ಒಪ್ಪುವುದಕ್ಕೆ ತಯಾರಾಗಿಲ್ಲ. ದಿವಸಕ್ಕೆ ಒಂದೊಂದು ಕಂಬ ಉರುಳುತ್ತಾ ಇವೆ. ಯಾವ ಘಳಿಗೆಯಲ್ಲಿ ಏನು ಮಾಡಬೇಕೆನ್ನುವ ಚಿಂತೆಯಲ್ಲಿ ಅವರು ಮಗ್ನರಾಗಿದ್ದಾರೆ. ಆದ್ದರಿಂದ ಅವರ ಅಸಹಾಯಕತೆಯನ್ನು ನಮ್ಮ ಮೇಲೆ ಹಾಕುವುದು ಸರಿಯಲ್ಲ. ನಮಗೆ ಸಿಕ್ಕಿರತಕ್ಕ ಸಮಯವನ್ನು ಸಮರ್ಪಕವಾಗಿ, ಸರಿಯಾಗಿ ನಾವು ಉಪಯೋಗಿಸಿಕೊಳ್ಳುತ್ತಾ ಇದ್ದೇವೆ. ಅವರು ಹೆಚ್ಚಿಗೆ ಸಮಯವನ್ನು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಮಗೆ ನ್ಯಾಯಸಮ್ಮತವಾಗಿ ಎಷ್ಟು ಸಮಯ ದೊರೆಯಬೇಕೋ ಅದಕ್ಕಿಂತ ಹೆಚ್ಚಿಗೆ ಸಮಯ ನಮಗೆ ದೊರೆತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ಅವರಿಗೆ ಸಿಕ್ಕಿರುವಂತಹ ಸಮಯದ ಬಗ್ಗೆ ಸಂತೋಷಪಡಬೇಕು. ಆಡಳಿತ ಪಕ್ಷದವರು ಉಪಯೋಗ ಮಾಡಿಕೊಳ್ಳದಿರುವ ಸಂಪೂರ್ಣವಾದ ಸಮಯವನ್ನು ನಿಮಗೆ ಕೊಟ್ಟಿರುವುದಕ್ಕಾಗಿ ನಮಗೆ ನೀವು ಕಾಂಪ್ಲಿಮೆಂಟ್ ಮಾಡಬೇಕಾದಂತಹ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ನಿನ್ನೆ ಶುರು ಮಾಡಿದ್ದರು, ಇವತ್ತು ಸಂಜೆಯ ತನಕ ಮಾತನಾಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನನ್ನ ಮೇಲೆ ಏತಕ್ಕೆ ಕೋಪ ? ನಾನಂತೂ ಏತಕ್ಕೆ ಇಷ್ಟು ಹೊತ್ತು ಮಾತನಾಡಿದೆ ಅಂದರೆ, 185 ಜನ ನಿಮ್ಮವರು ಎಲ್ಲಿ ಹೋಗಿದ್ದಾರೆ ? ನಿಮ್ಮವರು ಒಬ್ಬರೂ ಇಲ್ಲ. ಇವರು 8–10 ಜನ ಬಂದು ಕುಳಿತುಕೊಂಡಿದ್ದಾರೆ. ಅತ್ತೆಮನೆ ಮಾಡಿದ ಹಾಗೆ ಮಾಡಿಕೊಂಡಿದ್ದಾರೆ. ಯಾವಾಗ ಬೇಕಾದರೂ ಬರಬಹುದು, ಯಾವಾಗ ಬೇಕಾದರೂ ಹೋಗಬಹುದು.

ಛೇರ್ಮನ್:– ಒಳ್ಳೆಯ ರೀತಿಯಲ್ಲಿ ಮಾತನಾಡುತ್ತಿದ್ದಾರೆ, ಪ್ರೊಫೆಸರ್‌ರವರು ಮಾತನಾಡಿ.

ಶ್ರೀ ಸಿ. ಬೈರೇಗೌಡ:– 180 ಜನಕ್ಕೆ 21 ಜನರು ಇದ್ದಾರೆ.

ಛೇರ್ಮನ್:– ಪ್ರೊಫೆಸರ್‌ರವರು ಅರ್ಥಪೂರ್ಣವಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಅವಕಾಶ ಕೊಡಿ. ಮಾನ್ಯ ನಂಜುಂಡಸ್ವಾಮಿಯವರು ಮಾತನಾಡಲಿಕ್ಕೆ ಅವಕಾಶ ಕೊಡಿ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ:– ಅರ್ಥಪೂರ್ಣವಾಗಿ ಮುಂದುವರಿಯುವುದಿಲ್ಲವೆಂದು ಕಾಣುತ್ತದೆ. ಏಕೆಂದರೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನನಗೆ ಮಾತು ಪ್ರಾರಂಭ ಮಾಡುವುದಕ್ಕೆ ಇಚ್ಛೆ ಇರಲಿಲ್ಲ. ಇದು ಎಷ್ಟು ಗಂಭೀರವಾದುದು ಎನ್ನುವುದಕ್ಕೆ ತಮಗೆ ಇದನ್ನು ಕಳುಹಿಸಿಕೊಡುತ್ತೇನೆ. ಇದು ಇಲ್ಲಿ ಮಾನ್ಯ ಸಭಾಧ್ಯಕ್ಷರಿಗೆ ಕಾಣಿಸುತ್ತಿರಬಹುದು. (ಈ ಹಂತದಲ್ಲಿ ಸಭೆಗೆ ಒಂದು ಪುಸ್ತಕವನ್ನು ತೋರಿಸಿದರು) ಇದರಲ್ಲಿ ನಂಬರ್ ನಿಮಗೆ ಕಾಣಿಸುತ್ತಿರಬಹುದು 4736866. This is the patent number of this Rat. ಪೇಟೇಂಟಿಂಗ್ ಬಂದಾಗ ಹೇಳಬೇಕಾಗುತ್ತದೆ. Provisions for Patenting suggested in the Dunkel Draft Text. ಅಲ್ಲಿಗೆ ಬಂದಾಗ ನಾನು ಹೇಳಬೇಕು. ಅಲ್ಲಿಗೆ ಸೋಮವಾರ ಬರಬಹುದು. ನಾನು ತಮಾಷೆಗೆ ಹೇಳುತ್ತಿಲ್ಲ. ಆವೊಂದು ಆಶ್ವಾಸನೆಯನ್ನು ಕೊಟ್ಟರೆ ನಾನು ಮಾತು ಮುಂದುವರಿಸುತ್ತೇನೆ, ಇಲ್ಲದಿದ್ದರೆ ಮುಂದುವರಿಸುವುದಿಲ್ಲ. ಇವತ್ತೇ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಏನಿದೆ ? ಮತ್ತೆ ನನಗೆ ಆಶ್ವಾಸನೆ ಕೊಡಿಸಿ.

ಶ್ರೀ ಎ. ಕೆ. ಅನಂತಕೃಷ್ಣ:– ಡೆಟ್‌ಟ್ರ್ಯಾಪ್‌ಗೆ ಹೋಗುವ ಕಾಲ ಬರುತ್ತಾ ಇದೆ.

Prof. M. D. NANJUNDA SWAMY:– You are right. ಅಂತಹ ಡೆಟ್‌ಟ್ರ್ಯಾಪ್ ಎಲ್ಲಿ ಬಂತು ? You will lose your sovereignity and become slaves of United States

permanently. ಇದು ಅಂತಹ ವಿಷಯ. ನನಗೆ ನೀವು ಕಾಲ ನಿಗದಿ ಮಾಡಿದರೆ ನಿಜವಾಗಿಯೂ ನನ್ನಿಂದ ಮಾತನಾಡುವುದಕ್ಕಾಗುವುದಿಲ್ಲ. ನೀವು ಆ ಆಶ್ವಾಸನೆಯನ್ನು ಕೊಟ್ಟರೆ ನಾನು ಮಾತು ಮುಂದುವರಿಸುತ್ತೇನೆ. Otherwise I cannot discuss with free mind, definitely not. I have not spoken to my satisfaction today.

ಛೇರ್ಮನ್:- ಈಗ 45 ನಿಮಿಷಗಳಾಯಿತು, ತಾವು ಮಾತನಾಡಿ.

ಪ್ರೊ:- ಎಂ. ಡಿ. ನಂಜುಂಡಸ್ವಾಮಿ:- ಯಾವಾಗ ಮುಗಿಯುತ್ತದೆಯೋ ಆಗ ಮುಗಿಯುತ್ತದೆ ಈ ಒಪ್ಪಂದ ಆದರೆ ಆಯಿತು. ನನಗೆ ಅಷ್ಟರಲ್ಲೇ ಮುಗಿಸಿ, ಇಷ್ಟರಲ್ಲೇ ಮುಗಿಸಿ ಅಂದರೆ ಅದು ನನ್ನಿಂದ ಸಾಧ್ಯವಿಲ್ಲ. ಏಕೆಂದರೆ ಇದು ಅಂತಹ ಮುಖ್ಯವಾದ ವಿಚಾರ. ಈ ಆಹಾರ ಮಾರ್ಕೆಟ್‌ನಲ್ಲಿ ಇಷ್ಟು ಬದಲಾವಣೆಯನ್ನು ಅಮೇರಿಕಾ ಸರ್ಕಾರ ವಿಶ್ವಬ್ಯಾಂಕ್ ಮೂಲಕ ನಮ್ಮ ಮೇಲೆ ಒತ್ತಡ ತರುತ್ತಿದೆ ಎನ್ನುವುದನ್ನು ನಾವು ಒಪ್ಪಿದರೆ ಏನು ಪರಿಣಾಮವಾಗುತ್ತದೆ ? We will be losing all the flexibility; we have now in the agriculture sector. ಫ್ಲೆಕ್ಸಿಬಲಿಟಿ ಎಂದರೆ ನಮಗೆ ಆಹಾರದ ಬಿಕ್ಕಟ್ಟು ಬಂದಾಗ ಯಾವ್ಯಾವ ಕ್ಷೇತ್ರದಲ್ಲಿ ಪ್ರೋತ್ಸಾಹ ಕೊಡಬೇಕು ಯಾವ್ಯಾವ ಉತ್ಪಾದನೆಯನ್ನು ನಾವು ರೂಪಿಸಬೇಕು, ಯಾವ್ಯಾವ ಕ್ಷೇತ್ರದಲ್ಲಿ ನಾವು ಪ್ರೋತ್ಸಾಹ ಕೊಟ್ಟು ಉತ್ಪಾದನೆಯನ್ನು ಹೆಚ್ಚು ಮಾಡಿಕೊಳ್ಳಬೇಕು ಎಂಬ ಈ ಒಂದು ಫ್ಲೆಕ್ಸಿಬಿಲಿಟಿ ಈಗ ಏನಿದೆ ಅದನ್ನು ಸಂಪೂರ್ಣವಾಗಿ ನಾವು ಕಳೆದುಕೊಂಡು ಬಿಡುತ್ತೇವೆ. ಮತ್ತೆ ಕೆಲವರು ವಾದ ಮಾಡುತ್ತಾರೆ. American agriculture is subsidised heavily. ಇದರ ಜೊತೆಗೆ ಅಮೇರಿಕ ಮತ್ತೊಂದು ಕುತಂತ್ರವನ್ನು ಮಾಡಿದೆ. American grain traders are being subsidised heavily. ಬಹುರಾಷ್ಟ್ರೀಯ ಸಂಸ್ಥೆಗಳು, ಆಹಾರಧಾನ್ಯಗಳ ವ್ಯಾಪಾರಸ್ಥರು ಎಂದು ಏನು ಹೇಳುತ್ತೇವೆ, ಅವರಿಗೆ ಅತ್ಯಂತ ದೊಡ್ಡ ಪ್ರಮಾಣದ ಸಹಾಯಧನವನ್ನು ಅಮೇರಿಕಾ ಸರ್ಕಾರ ಕೊಡುತ್ತಿದೆ. ಸಭಾಧ್ಯಕ್ಷರೇ, ತಮಗೆ ನೆನಪು ಇರಬೇಕು. ನಮ್ಮ ಸಂಘದ ಸಹೋದ್ಯೋಗಿಗಳು ಕಾರ್ಗಿಲ್ ಸಂಸ್ಥೆಯನ್ನು ಪ್ರವೇಶ ಮಾಡಿ ಬೆಂಕಿ ಹಾಕಿದರು. ಆ ಕಾರ್ಗಿಲ್ ಸಂಸ್ಥೆ it is the 6th biggest grain trader in the whole world and it is the biggest beneficiary of subsidies from the American Government. ನಾವು ಈ ಆಹಾರ ಮಾರುಕಟ್ಟೆ ಬಾಗಿಲನ್ನು ತೆಗೆದರೆ these multinational Corporation are capable of selling sunflower oil at the rate of Rs. 20/- per kg. ಅವರು 20 ರೂಪಾಯಿಗೆ ಸನ್‌ಫ್ಲವರ್ ಸೀಡ್ ಆಯಿಲನ್ನು ತಂದು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಾರೆ. Sunflower oil is heavily subsidised; it is in surplus. ತಮಗೆ ನೆನಪಿದೆಯೋ ಗೊತ್ತಿಲ್ಲ. 70ರ ದಶಕದವರೆಗೆ ಅಮೆರಿಕಾ ದೇಶದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಆಹಾರವನ್ನು ಬೆಳೆಯುತ್ತಿದ್ದರು. ಅಷ್ಟು ಬೆಳೆದು ವಿಶ್ವದ ಆಹಾರ ಮಾರುಕಟ್ಟೆಯ ಬೆಲೆಗಳು ಕುಸಿಯಬಾರದು ಎಂದು ಹೇಳಿ ಹೆಚ್ಚುವರಿ ಏನಿತ್ತು ಅದನ್ನು ಸಮುದ್ರಕ್ಕೆ ತೆಗೆದುಕೊಂಡು ಹೋಗಿ ಬಿಸಾಕುತ್ತಿದ್ದರು. ಅಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಹಾಲು ಮತ್ತು ಗಿಣ್ಣು ತಯಾರಾಗುತ್ತಿತ್ತು. ಬೆಣ್ಣೆ ತೆಗೆಯುತ್ತಿದ್ದರು. Mountains of butter and cheese were poisoned with copper sulphate. ಇದು 1970ನೇ ಇಸವಿವರೆಗೆ ಆಯಿತು. 70ರಿಂದ 90ರವರೆಗೆ ಮತ್ತೊಂದು ನೀತಿಯನ್ನು ಅವರು ಅಳವಡಿಸಿಕೊಂಡರು. ಅಮೇರಿಕಾದ ರೈತನಿಗೆ ಹೇಳಿದರು. ಏನೆಂದರೆ, ನಿನ್ನ ಜಮೀನಿನಲ್ಲಿ ಅರ್ಧ ಬೆಳೆಯಬೇಡ ಬೀಳು ಬಿಟ್ಟುಬಿಡು, ಅದರಲ್ಲಿ ಏನು ಬೆಳೆಯುತ್ತಿತ್ತು ಅದನ್ನು ನಾವು ಕೊಡುತ್ತೇವೆ ಎಂದರು. just to keep the international prices at a particular level.

ಈಗ ಅವರು ಮೂರನೇ ಒಂದು ಕಾರ್ಯಕ್ರಮವನ್ನು ಹಾಕಿದ್ದಾರೆ. ಜಮೀನನ್ನು ಏಕೆ

ಬೀಳುಬಿಡಬೇಕು; ಆಹಾರ ಧಾನ್ಯವನ್ನು ಸಮುದ್ರಕ್ಕೆ ಏಕೆ ಎಸೆಯಬೇಕು ? ನಮ್ಮಂಥ ದೇಶಗಳನ್ನು ಮಾರುಕಟ್ಟೆಗಳಾಗಿ ಪರಿವರ್ತಿಸಿಕೊಂಡರೆ ಆಯಿತಲ್ಲ ? ಇದು ಮೂರನೇ ಕಾರ್ಯಕ್ರಮ. ಅಮೇರಿಕ ಬಂಡವಾಳಶಾಹಿ ಎಂದು ಏನು ಕರೆಯುತ್ತೇವೆ, ಅಥವಾ American imperialism ಎಂದು ಏನು ಕರೆಯುತ್ತೇವೆ ಅವರ ಮೂರನೇ ಕಾರ್ಯಕ್ರಮ. ಅವರು ಹೆಚ್ಚುವರಿ ಏನು ಬೆಳೆಯುತ್ತಿದ್ದಾರೆ, ಅದಕ್ಕೆ ಮಾರ್ಕೆಟ್ ಸೃಷ್ಟಿ ಮಾಡಿಕೊಳ್ಳುವಂಥ ಕಾರ್ಯಕ್ರಮ GATT ಮುಖಾಂತರ ಅಮೇರಿಕ ಪ್ರಧಾನವಾಗಿ ಈ ಪ್ರಯತ್ನ ಮಾಡುತ್ತಿದೆ. ಸಂಪೂರ್ಣವಾಗಿ ನಮ್ಮನ್ನು ಗುಲಾಮರನ್ನಾಗಿ ಮಾಡುವಂಥ ಒಂದು ಸಿದ್ಧತೆ ನಡೆದಿದೆ. ನಮ್ಮ ದೇಶದಲ್ಲಿ ಬೆಳೆಯದೇ ಇದ್ದರೆ ಏನು ಎಂದು ಕೆಲವರು ಹೇಳುತ್ತಾರೆ. ಭಾರತಕ್ಕೆ ಸೋವಿ ದರದಲ್ಲಿ ಅಮೇರಿಕಾದಿಂದ ಆಹಾರ ಬರುವುದಾದರೆ ಕೇಂದ್ರ ಸರ್ಕಾರ ಕಣ್ಣುಮುಚ್ಚಿಕೊಂಡು ಈ ಡಂಕಲ್ ಪ್ರಸ್ತಾವನೆಗೆ ರುಜು ಹಾಕಿದರೆ, ಈ ಪರಿಸ್ಥಿತಿಗೆ ನಾವು ಬಂದು ಮುಟ್ಟುತ್ತೇವೆ. ನಾವು ಏನಾದರೂ ಆಹಾರ ಮಾರುಕಟ್ಟೆ ತೆಗೆದರೆ ಅವರು ನಮ್ಮಲ್ಲಿ ಇವತ್ತಿನ ಬೆಲೆಗಳಲ್ಲಿ ಏನು ಆಹಾರ ಮಾರಾಟ ಆಗುತ್ತಿದೆ, ಅದರ ಅರ್ಧ ಬೆಲೆಗೆ ನಮ್ಮ ಮಾರುಕಟ್ಟೆಗೆ ಪ್ರವೇಶ ಮಾಡುವುದಕ್ಕೆ ಅವರು ತಯಾರಾಗಿದ್ದಾರೆ; ಅದು ಅಡುಗೆ ಎಣ್ಣೆ ಇರಬಹುದು, ಸಕ್ಕರೆ ಇರಬಹುದು, ಅಕ್ಕಿ ಇರಬಹುದು, ಗೋಧಿ ಇರಬಹುದು, ಏನೇ ಇರಬಹುದು. ಅವರು ಬಂದು ಈ ರೀತಿ ನಮ್ಮ ಮಾರುಕಟ್ಟೆಗೆ ಪ್ರವೇಶ ಮಾಡಿದ ಕೂಡಲೇ ಒಂದೇ ವರ್ಷದಲ್ಲಿ ಈ ದೇಶದಲ್ಲಿ ಏನು ಸಣ್ಣ ರೈತರು ಎಂದು ಇದ್ದಾರೆ, ಐದು ಎಕರೆಗಿಂತ ಕಡಿಮೆ ಹಿಡುವಳಿದಾರರು ಇದ್ದಾರೆ, ಅವರು ಮುಂದಿನ ವರ್ಷ ವ್ಯವಸಾಯ ಮಾಡುವುದಕ್ಕೆ, ಸಾಧ್ಯವೇ ಇಲ್ಲ.

ಇವತ್ತು ಮಾರ್ಕೆಟ್‌ನಲ್ಲಿ ಸೇಂಗಾ ಎಣ್ಣೆ ಕೆ.ಜಿ. 35 ರೂಪಾಯಿಗೆ ವ್ಯಾಪಾರ ನಡೆಯುತ್ತಾ ಇರಬಹುದು, 37 ರೂಪಾಯಿ ಇರಬಹುದು. ಅಮೇರಿಕಾ ದೇಶ ಬಹಳ ದೊಡ್ಡ ಪ್ರಮಾಣದಲ್ಲಿ ಶೇಂಗಾ ಬೆಳೆಯುತ್ತದೆ. ಅವರು ಶೇಂಗಾ ಎಣ್ಣೆಯನ್ನು 25 ರೂಪಾಯಿಗೆ ತಂದು, ಮಾರ್ಕೆಟ್‌ಗೆ ಬಿಡುಗಡೆ ಮಾಡಿದರೆ ಸಾಕು, ಮುಂದಿನ ವರ್ಷ ನಾವು ಶೇಂಗಾ ಬಿತ್ತನೆ ಮಾಡುವುದಕ್ಕೇ ಆಗುವುದಿಲ್ಲ. ಅವರೇನಾದರೂ ಬೀಟ್ ಷುಗರ್ ತೆಗೆದುಕೊಂಡು ಬಂದು, 5 ರೂಪಾಯಿ ಕೆ.ಜಿ.ಗೆ. ಮಾರ್ಕೆಟ್‌ಗೆ ಬಿಡುಗಡೆ ಮಾಡಿದರೆ, ಮುಂದಿನವರ್ಷ ನಾವು ಕಬ್ಬು ನೆಡುವ ಹಾಗೆಯೇ ಇಲ್ಲ. Something in all cases. ಒಂದೇ ವರ್ಷದಲ್ಲಿ ಕೋಟ್ಯಾಂತರ ಜನ ಸಣ್ಣ ರೈತರು ಬೀದಿ ಪಾಲಾಗುತ್ತಾರೆ. ಆಗಲೂ ಅಮೇರಿಕಾದವರು, ನೀವು ಏಕೆ ಬೆಳೆಯಬೇಕು ನಾವೇ ಕಡಿಮೆ ದರದಲ್ಲಿ ಕೊಡುತ್ತೇವಲ್ಲ ಎಂದು ಹೇಳುತ್ತಾರೆ. ಕಡಿಮೆ ದರದಲ್ಲಿ ತೆಗೆದುಕೊಳ್ಳುವುದಕ್ಕೆ ನಮ್ಮ ಹತ್ತಿರ ರೂಪಾಯಿ ಇದೆಯೇ ? You are already in a balance of payment crisis. ನಿಮ್ಮ ಹತ್ತಿರ ವಿದೇಶಿ ವಿನಿಮಯ ಎಲ್ಲಿದೆ, ಅವರು ಸೋಡಿ ದರದಲ್ಲಿ ಕೊಟ್ಟರೂ ಕೂಡ ತೆಗೆದುಕೊಳ್ಳುವುದಕ್ಕೆ ಎಲ್ಲಿದೆ; ಶಕ್ತಿ ಎಲ್ಲಿದೆ. With the result we will be getting into a bigger balance of payment crisis which we call as "debt–trap", a debt–trap of such a magnitude that you cannot come out of that trap permanently.

ಇಂತಹ ಒಂದು ಯುಗಕ್ಕೆ ಕೇಂದ್ರಸರ್ಕಾರದವರು ನಮ್ಮನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಮತ್ತೊಂದು ಘೋರವಾದಂಥ ಬೆಳವಣಿಗೆ ಆಗಿದೆ. Patenting of plants and other life forms. ಬರೀ ಗಿಡಗಳನ್ನು, ಸಸ್ಯಗಳನ್ನು ಪೇಟೆಂಟ್ ಮಾಡುವುದಲ್ಲ. Even genes, ಜೀನ್ಸ್ ಎಂದರೆ, ವಂಶದಿಂದ ವಂಶಕ್ಕೆ ಏನು ಗುಣಗಳನ್ನು ವರ್ಗಾವಣೆ ಮಾಡುತ್ತದೆ, ಇದನ್ನು ನಾವು ವಂಶವಾಹಿ ಎಂದು ಕರೆಯುತ್ತೇವೆ. ಅದು ನಮ್ಮಲ್ಲೂ ಉಂಟು, ಸಸ್ಯಗಳಲ್ಲೂ ಉಂಟು. ಆ ಸೂಕ್ಷ್ಮಾಣುಗಳೇನಿದೆ, they transfer character from generation to generation. ಆ ಜೀನ್ಸನ್ನು ಪೇಟೆಂಟ್ ಮಾಡುವಂಥ ಒಂದು ಅವಕಾಶ ಮಾಡಿಕೊಡಬೇಕು, ನಿಮ್ಮ ಇಂಡಿಯನ್

ಪೇಟೆಂಟ್ ಲಾನಲ್ಲಿ ಎನ್ನುವ ಒತ್ತಡ. ಈಗಾಗಲೇ ಎಲ್ಲಾ ರೀತಿಯ ಜೀವಾಣುಗಳನ್ನು ಪೇಟೆಂಟ್ ಮಾಡಿಕೊಳ್ಳುವಂಥ ಒಂದು ಅವಕಾಶವನ್ನು ಅಮೇರಿಕಾ ದೇಶ ಸುಪ್ರೀಂ ಕೋರ್ಟ್‌ಗೆ ಕೊಟ್ಟುಬಿಟ್ಟಿದೆ. ಅದರ ಅಂಗವಾಗಿಯೇ ನಾನು ತಮಗೆ ಕಳುಹಿಸಿಕೊಟ್ಟಿದ್ದು. ಆ ಇಲಿ ಪೇಟೆಂಟ್ ಆಗಿರುವುದು. ನಾವೇನಾದರೂ ಒಪ್ಪಿದರೆ ಪೇಟೆಂಟಿಂಗ್ ಎಲ್ಲಿಗೆ ಬರುತ್ತೆ ಎಂದರೆ, ಬೆಳಿಗ್ಗೆ ಡಿ. ಆರ್. ಪಾಟೀಲರು ಒಂದು ಪ್ರಶ್ನೆ ಕೇಳಿದರು; Bio-fertilisers and bio-pesticides ಎಂದು. ನಮ್ಮ ತಾತನ ಕಾಲದಲ್ಲಿ ನಾವೇನು ಮಾಡುತ್ತಿದ್ದೆವು, ಹಸಿರು ಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರ ಎಂದು ಅದನ್ನು ಮಾಡುವ ಹಕ್ಕು ಇಲ್ಲದಂಥ ಒಂದು ಸ್ಥಿತಿಗೆ ನಾವು ಬರುತ್ತೇವೆ, because they are out to patent even microbes. ಸೂಕ್ಷ್ಮಾಣುಗಳನ್ನೂ ಪೇಟೆಂಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವಂಥ ಒಂದು ಒತ್ತಡವನ್ನು ಈ ಡಂಕಲ್ ಪ್ರಪೋಸಲ್ ಮೂಲಕ ತರುತ್ತಾ ಇದ್ದಾರೆ. ನೀವು ಬಯೋ ಫರ್ಟಿಲೈಸರ್ಸ್ ಮಾಡುವುದಕ್ಕಾಗುವುದಿಲ್ಲ, ಬಯೋ ಪೆಸ್ಟಿಸೈಡ್ಸ್ means ನಮ್ಮ ತಾತಂದಿರ ಕಾಲದಲ್ಲಿ ಇತ್ತಲ್ಲ, ಒಂದು ಹುಳುವನ್ನು ಇನ್ನೊಂದು ಹುಳ ತಿಂದು ನಾವು ಬೆಳೆ ಬೆಳೆಯುತ್ತಾ ಇದ್ದೆವಲ್ಲ, i.e., bio – pesticides. ಆ ಕೀಟಗಳನ್ನೂ ಪೇಟೆಂಟ್ ಮಾಡುವಂಥ ಅವಕಾಶ ನಮ್ಮ ಇಂಡಿಯನ್ ಪೇಟೆಂಟ್ ಲಾದಲ್ಲಿ ಮಾಡಿಕೊಡಬೇಕು ಎನ್ನುವಂಥ ಒತ್ತಡ ಡಂಕಲ್ ಪ್ರಸ್ತಾವನೆಯಲ್ಲಿದೆ. ಇದಕ್ಕೂ ರುಜು ಹಾಕುವುದಕ್ಕೆ ನಮ್ಮ ಕೇಂದ್ರಸರ್ಕಾರ ತಯಾರಾಗಿದೆ. ಸಸ್ಯಗಳಿಗೆ ಪೇಟೆಂಟ್ ಮಾಡುವುದೆಂದರೆ, ಜೀನ್ಸ್‌ಗೆ ಪೇಟೆಂಟ್ ಮಾಡುವುದು ಎಂದರೆ, ಸೀಡ್ಸ್‌ಗೆ ಪೇಟೆಂಟ್ ಮಾಡುವುದು. ಪೇಟೆಂಟಿಂಗ್ ಸೀಡ್ಸ್. ಆ ಕಾರಣಕ್ಕೆ ನಾವು ಕಾರ್ಗಿಲ್ ಸಂಸ್ಥೆಗೆ ಬೆಂಕಿ ಹಾಕಿದ್ದುದು.

ಏಕೆಂದರೆ, ಕಾರ್ಗಿಲ್ ಸಂಸ್ಥೆಯಲ್ಲಿ ಕೆಲಸ ಮಾಡಿದವರೆಲ್ಲಾ ಈಗ ಅಮೇರಿಕಾ ಸರ್ಕಾರದಲ್ಲಿ ಸಲಹೆಗಾರರಾಗಿದ್ದಾರೆ. Even most of the officials working in GATT were also in the service of Cargill.

ಬಹುರಾಷ್ಟ್ರೀಯ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದವರೆಲ್ಲಾ ಈಗ ಗ್ಯಾಟ್ ಸಂಸ್ಥೆಯಲ್ಲಿ ಅಧಿಕಾರಿಗಳಾಗಿದ್ದಾರೆ. Their loyal is to this multinational corporation.

ಅವರು ಬರೆದ ಬರವಣಿಗೆಯಲ್ಲಿ, ಟಿಪ್ಪಣಿಗಳಲ್ಲಿ ಹೇಳುತ್ತಾರೆ. One who controls the seeds, controls the farmers, and one who controls the trade in foodgrains, controls the nation.

ಈ ಎರಡನೇ ಕಾರ್ಯಕ್ರಮಗಳು. ಡಂಕಲ್ ಪ್ರಸ್ತಾವನೆಯ ಒಟ್ಟು ಸಾರಾಂಶ ಇಷ್ಟೇ. Controlling the seeds and controlling the farmers, and controlling the trade in foodgrains and controlling the country. ಎರಡೇ ಇದರಿಂದ ಪರಿಣಾಮ ಏನಾಗುತ್ತದೆ ಎಂದರೆ, On one hand we will be losing all traditional seeds and on the other, we become dependent on these patented seeds.

ಪೇಟೆಂಟ್ ಏಕೆ ಹೇಳುತ್ತಿದ್ದಾರೆಂದರೆ, ಕಾರ್ಗಿಲ್ ಸಂಸ್ಥೆ ಉತ್ತರ ಕರ್ನಾಟಕದಲ್ಲಿ ಈಗಾಗಲೇ ಸೂರ್ಯಕಾಂತಿ ಬೀಜ ಮಾರಾಟ ಮಾಡುತ್ತಿದೆ. ಅದನ್ನು ಈಗಾಗಲೇ ನಮ್ಮ ರೈತರು ಒಂದು ಬೆಳೆ ಬೆಳೆದಿದ್ದಾರೆ. ಆ ಬೆಳೆಯಲ್ಲಿ ಏನು ಬೀಜ ಬರುತ್ತದೆ ಅದನ್ನು ಆ ರೈತರು ಮತ್ತೆ ಉಪಯೋಗಿಸಬಾರದು. ಉಪಯೋಗಿಸಿದರೆ ಅದು ಅಪರಾಧ. ಏಕೆಂದರೆ ಅವನ ಪೇಟೆಂಟ್ ಹಕ್ಕು ಎಲ್ಲಾ ಜನರೇಶನ್‌ಗೂ ಅನ್ವಯಿಸುತ್ತದೆ. ಆ ಕಾರಣ ಅದನ್ನು ಉಪಯೋಗಿಸಬಾರದು. ಅವನು ಮತ್ತೆ ಪೇಟೆಂಟೆಡ್ ಸೀಡ್ಸ್ ತೆಗೆದುಕೊಳ್ಳಬೇಕು. ತೆಗೆದುಕೊಳ್ಳಬೇಕಾದರೆ ಕಾರ್ಗಿಲ್ ಸಂಸ್ಥೆಯಿಂದಲೇ ತೆಗೆದುಕೊಳ್ಳಬೇಕು. If this continues over a period of three or four years we will be dependent on

this patented seeds only. ಇದನ್ನು ಎಲ್ಲಿ ಜಾರಿಗೆ ತರುವುದಕ್ಕಾಗುತ್ತದೆಂದು ತಾವು ಕೇಳಬಹುದು. ಇಂತಹ ಒಂದು ದೊಡ್ಡ ದೇಶದಲ್ಲಿ ಇಷ್ಟೊಂದು ದೊಡ್ಡದಾದ ಜನಸಂಖ್ಯೆ ಇದೆ, ಅದನ್ನು ಹೇಗೆ ಜಾರಿಗೆ ತರುತ್ತಾರೆ. ನಾವು ಹೇಳಿದೆವು ಯಾರಾದರೂ ಬಂದು ಕೇಳಿದರೆ ನಿನ್ನ ಬೀಜ ಹಾಕಿದ್ದೀಯಾ ಇಲ್ಲಾ ಕಾರ್ಗಿಲ್ ಬೀಜ ಹಾಕಿದ್ದೀಯಾ ಕಾರ್ಗಿಲ್ ಬೀಜ ಹಾಕಿದ್ದೇವೆಂದರೆ ಮೆಟ್ಟು ತೆಗೆದುಕೊಳ್ಳುತ್ತೇವೆ ಎಂದು ನಾನು ಹೇಳಿದೆ. ಅದನ್ನು ಜಾರಿಗೆ ತರುವುದಕ್ಕೆ ಆಗುವುದಿಲ್ಲ ಎಂದು ಹೇಳುವ ಬದಲು ಮೆಟ್ಟು ತೆಗೆದುಕೊಳ್ಳುತ್ತೇವೆ ಎಂದು ಹೇಳಿದೆ. ಆದರೆ ಅದಕ್ಕೂ ಏನೊಂದು ಅಳವಡಿಸಿದ್ದಾರೆ ಎಂದರೆ, ಕಾನೂನು ಮಂತ್ರಿಗಳು ಇಲ್ಲಿ ಇರಬೇಕಾಗಿತ್ತು ಎಂದು ನಾನು ಹೇಳಿದ್ದುದು. The burden of proof is reversed.

ಮಾನ್ಯ ಅಧ್ಯಕ್ಷರೇ, ಇದು ಎಷ್ಟು ಚೆನ್ನಾಗಿದೆ. ನಮ್ಮ ದೇಶದಲ್ಲಿ ರೈತರು ನೂರಕ್ಕೆ 76 ಎಂದು ನಾನು ಹೇಳುತ್ತಿದ್ದೇನೆ. ಆ 76 ಜನಗಳಿಗೆ ಬೇರೆ ಒಂದು ಕ್ರಿಮಿನಲ್ ಲಾ, ಬೇರೆ ಒಂದು ಕ್ರಿಮಿನಲ್ ಪ್ರೊಸೀಜರ್. ನಮ್ಮ ಕ್ರಿಮಿನಲ್ ಲಾನಲ್ಲಿ ಬರ್ಡನ್ ಆಫ್ ಪ್ರೂಫ್ ಫಿರ್ಯಾದಿ ಮೇಲೆ ಇದೆ, ಆರೋಪಿ ಮೇಲೆ ಇಲ್ಲ. The burden of proof is reverse in the Dunkel proposals wherein the multinational corporation has to just file a complaint against the farmer and the farmer has to prove that he is innocent. Anglo–Saxon jurisprundenceಗೆ French jurisprudenceನ hybridisation. ತಮಗೆ ಗೊತ್ತಿರಬಹುದು. ಇಡೀ ಪ್ರಪಂಚದಲ್ಲಿ Anglo – Saxon jurisprudance ಇರುವುದು, where the accused is innocent till he is proved guilty, but in the French jurisprudence, the accussed is guilty till he proves himself innocent.

ಇಂಡಿಯಾ ದೇಶದ ರೈತರನ್ನು ಇಂತಹ ಒಂದು ಬರ್ಡನ್ ಆಫ್ ಪ್ರೂಫ್‌ನ ಪ್ರಿನ್ಸಿಪಲ್ ಒಳಗೆ ತರುವಂತಹ ಕೆಲಸ ಈ ಡಂಕಲ್ ಪ್ರಸ್ತಾವನೆ ಮಾಡುತ್ತಿದೆ. ನೀವು ಡಂಕಲ್ ಪ್ರಸ್ತಾವನೆಗೆ ರುಜು ಹಾಕಿದರೆ ಸಂವಿಧಾನದಲ್ಲಿ ಏನೋ ತಿದ್ದುಪಡಿಗಳು ಆಗಿ ಹೋಗಿಬಿಡುತ್ತವೆ. it touches upon various subjects which are in the state list.

ಅದಕ್ಕೆ ಆವತ್ತು ನಾನು ನಿಮ್ಮದು ರಾಜ್ಯ ಸರ್ಕಾರವೋ ಇಲ್ಲವೇ ಮುನಿಸಿಪಾಲಿಟಿಯೋ ಎಂದು ಕೇಳಿದ್ದುದು. ಕೇಂದ್ರ ಸರ್ಕಾರ ನಿಮ್ಮನ್ನು ಮುನಿಸಿಪಾಲಿಟಿ ತರಹ ಟ್ರೀಟ್ ಮಾಡುತ್ತಿದೆ. You are behaving as a municipality, not as a State Government because agriculture is still in the State list. ಸ್ಟೇಟ್ ಲಿಸ್ಟ್‌ನಲ್ಲಿದ್ದೂ ಡಂಕಲ್ ಪ್ರಸ್ತಾವನೆಯ ಕೃಷಿ ವಿಭಾಗ ನೇರವಾಗಿ ಇಷ್ಟೊಂದು ಪರಿಣಾಮಕಾರಿಯಾಗಿ ಮಾಡುವಾಗಲೂ, ನಮ್ಮ ದೇಶದ ಎಲ್ಲಾ ರಾಜ್ಯ ಸರ್ಕಾರಗಳು ಕಣ್ಣು ಮುಚ್ಚಿಕೊಂಡಿವೆ ಎಂದರೆ ಅವುಗಳನ್ನು ರಾಜ್ಯ ಸರ್ಕಾರಗಳೆಂದು ಸಂವಿಧಾನದಲ್ಲಿ ಕರೆಯುವುದೇ ಆಗುವುದಿಲ್ಲ. They are all municipalities. ಮತ್ತೆ ಇನ್ನೊಂದು ಅಪಾಯ ಇದೆ. ಇದುವರೆಗೂ ಬೀಜ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಇಟ್ಟುಕೊಂಡೇ ಬಂದವರು ನಾವು. ಹೊಸ ಹೊಸ ತಳಿಗಳನ್ನು ಕಂಡುಹಿಡಿದವರು ನಾವೇ, ರೈತರು ಭತ್ತ ಏನೂ ನೈಸರ್ಗಿಕವಾಗಿ ಬೆಳೆಯಲಿಲ್ಲ. ಮೊದಲನೆಯ ತಳಿ ಭತ್ತವನ್ನು ಹುಲ್ಲಿನ ಜಾತಿಗಳನ್ನು ಹೈಬ್ರಿಡೈಸ್ ಮಾಡುವ ಮೂಲಕ ಕಂಡು ಹಿಡಿದಿದ್ದು ಭಾರತದ ರೈತರು. Before that there was no paddy; there was no rice. ನಮ್ಮಲ್ಲಿ ಕೃಷಿ ಯಾವ ರೀತಿ ಪ್ರಾರಂಭವಾಯಿತೆಂದರೆ, ಬೀಜ ಉತ್ಪಾದನೆ, ಬೀಜದ ಹೈಬ್ರಿಡೈಸೇಷನ್ ಮಾಡಿದಂಥ ವಿಜ್ಞಾನಿಗಳು ಭಾರತದ ರೈತರು. ಹುಲ್ಲಿನ ಜಾತಿಗಳನ್ನು ಸಂಕೀರ್ಣ ಮಾಡಿ, ಮೊದಲನೆಯ ಭತ್ತದ ಬೀಜ ತಯಾರು ಮಾಡಿದ್ದು ಭಾರತದ ರೈತರು. ಇದೇ ರೀತಿ ಬೇರೆ ಬೇರೆ ದೇಶಗಳ ರೈತರು ಬೇರೆ

ಬೇರೆ ಬೆಳೆಗಳನ್ನು ಕಂಡು ಹಿಡಿದಿದ್ದಾರೆ. ಈ ಒಂದು ಮುಕ್ತ ಸಂಶೋಧನೆ ಪ್ರಯೋಗಕ್ಕೆ ಏನು ಅವಕಾಶ ಇದೆ, ಇದಕ್ಕೆ ಈ ಪೇಟೆಂಟಿಂಗ್‌ನಿಂದ ಸಂಪೂರ್ಣ ಧಕ್ಕೆ ಬರುತ್ತದೆ. ಏಕೆಂದರೆ, ಪೇಟೆಂಟ್ ಮಾಡುವಾಗ ಅವರ ಸಂಶೋಧನೆ ಏನಿದೆ ಆ ಸಂಶೋಧನೆಯನ್ನು ಪ್ರಕಟ ಮಾಡಬೇಕು ಎನ್ನುವಂಥದ್ದು, ಏನೂ ಅವರ ಮೇಲೆ ಷರತ್ತು ಇಲ್ಲ. ಅವರು ಪ್ರಕಟಣೆ ಮಾಡಬೇಕಾಗಿಲ್ಲ ಎನ್ನುವುದಕ್ಕೇ ಪೇಟೆಂಟ್ ಎನ್ನುವುದು. There will be a big constraint on research and scientific knowledge which I have been calling as Capitalists censorship of knowledge.

ಇದು ಗ್ಯಾಟ್ ಸಂಸ್ಥೆಗೂ ಅಧಿಕಾರ ಇಲ್ಲ, ಅಮೆರಿಕಾ ದೇಶಕ್ಕೂ ಅಧಿಕಾರ ಇಲ್ಲ. Because our stand is that knowledge is not a property and knowledge cannot be patented. Knowledge is a product of societal relations and societal activity and knowledge is the property of society, and it should never be allowed to be patented.

ಆ ಕಾರಣ, ನಮ್ಮ ಒತ್ತಾಯ ಇನ್ನೂ ಒಂದು ಕುತಂತ್ರ ಇದೆ. ಈ ಪೇಟೆಂಟಿಂಗ್‌ಗೆ ಅವಕಾಶ ಕೊಟ್ಟರೆ ನಾನು ಹೇಳುತ್ತಿದ್ದೆ, ಬಯೋ ಪೆಸ್ಟಿಸೈಡ್ಸ್ ಇರುವುದಿಲ್ಲ, ಬಯೋ ಫರ್ಟಿಲೈಸರ್ಸ್ ಇರುವುದಿಲ್ಲ. ಸೀಡ್ ಫ್ರೀಡಂ ಎಂದು ಏನು ಹೇಳುತ್ತೇವೆ, ಬೀಜ ಸ್ವಾತಂತ್ರ್ಯ, ಆ ಬೀಜ ಸ್ವಾತಂತ್ರ್ಯವೂ ಇರುವುದಿಲ್ಲ. ಮತ್ತೆ ಅವರು ನಮ್ಮಂಥ ದೇಶಗಳಿಗೆ ಏನು ಹೇಳುತ್ತಿದ್ದಾರೆ ಎಂದರೆ ರಫ್ತು ಮಾಡುವುದಕ್ಕೆ ನಿಮಗೂ ಮುಕ್ತ ಅವಕಾಶ ಉಂಟು ಎಂದು ಹೇಳುತ್ತಿದ್ದಾರೆ. ನಮ್ಮಲ್ಲೂ ಕೆಲವರು ಅವಿವೇಕಿಗಳು ಇದ್ದಾರೆ. Indian agriculture will get a boost because it can export to other countries and it will be greatly benefited ಎಂದು ಹೇಳುತ್ತಾರೆ. ಅಕಸ್ಮಾತ್ ಏನಾದರೂ ಆ ಒಂದು ಶಕ್ತಿ ಬಂತು ಎಂದು ಇಟ್ಟುಕೊಂಡರೂ the American imperialists and those white imperialists have another provision in Dunkel proposals i.e., sanitary measures. ಅಂದರೆ ಏನು ? ನೀನು ಏನು ಕೃಷಿ ಉತ್ಪಾದನೆ ಮಾಡಿದ್ದೀಯ ಅದು ನಮ್ಮ ಆರೋಗ್ಯದ ಒಂದು ವ್ಯವಸ್ಥೆ ಏನಿದೆ ಅದಕ್ಕೆ ತಕ್ಕ ಹಾಗಿಲ್ಲ ಎಂದು ಹೇಳುವ ಅಧಿಕಾರ ಅವರು ಇಟ್ಟುಕೊಂಡಿದ್ದಾರೆ. ನೀವು ಏನೋ ಗೋಧಿ ಬೆಳೆದಿರಿ, ಶೇಂಗಾ ಬೆಳೆದಿರಿ ಅದನ್ನು ರಫ್ತು ಮಾಡಬೇಕೆಂದು ಇದ್ದೀರಿ. ಈ ಸ್ಯಾನಿಟರಿ ಕಂಡೀಷನ್ಸ್ ಹಾಕಿ ಅವರು ನಿಮ್ಮದನ್ನು ತಿರಸ್ಕರಿಸಬಹುದು. ಅಂದರೆ ಯಾವ ಮಟ್ಟದ ಗುಲಾಮಗಿರಿಗೆ ನಾವು ಸಿಕ್ಕುತ್ತೇವೆಂದು ತಾವು ಆಲೋಚನೆ ಮಾಡಬೇಕು. ಆ ಕಾರಣ ಕೇವಲ ಕೃಷಿ ಕ್ಷೇತ್ರದಲ್ಲಿ ನಾವು ಏನಾದರೂ ಈ ಡಂಕಲ್ ಪ್ರಸ್ತಾವನೆಯನ್ನು ಒಪ್ಪಿಕೊಂಡರೆ ಈ ರಾಜ್ಯಪಾಲರ ಭಾಷಣದಲ್ಲಿ ಏನೇನು ಮಾಡಬೇಕೆಂದು ತಾವು ಇದ್ದೀರಿ, ಒಂದು ಪೈಸೆ ಕೆಲಸ ಆಗುವುದಿಲ್ಲ. ಒಂದೇ ವರ್ಷದಲ್ಲಿ ಕೃಷಿ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ ಸಣ್ಣ ಹಿಡುವಳಿದಾರರು ಏನಿದ್ದಾರೆ ಅವರು ವ್ಯವಸಾಯ ಬಿಟ್ಟು ಭಿಕ್ಷೆಬೇಡುವುದಕ್ಕೆ ಶಹರಿಗೆ ಬರಬೇಕಾಗುತ್ತದೆ. 4–5 ಕೋಟಿ ಜನ ಇದ್ದರೆ, ಆ 5 ಕೋಟಿ ಜನರಲ್ಲಿ 1 ಕೋಟಿ ಜನ ಈ ಸಣ್ಣ ಹಿಡುವಳಿದಾರರು ಒಂದೇ ವರ್ಷದಲ್ಲಿ ನಿರುದ್ಯೋಗಿಗಳಾಗುತ್ತಾರೆ.

ಕೃಷಿ ಕೂಲಿಗಾರರಂತೂ ಬಿಡಿ, ಅವರು ಈಗಾಗಲೇ ಅರೆ ಉದ್ಯೋಗಿಗಳು. ಅವರೂ ಪೇಟೆಗೆ ಬರುತ್ತಾರೆ. ಮುಂದೆ ಲಾ ಅಂಡ್ ಆರ್ಡರ್ ಸಿಚ್ಯುವೇಶನ್ ಏನಾಗಬಹುದೆಂದು ಮಾನ್ಯ ಸಭಾಧ್ಯಕ್ಷರು ಊಹೆ ಮಾಡಿಕೊಳ್ಳಬೇಕು. ಒಂದು ಕೋಟಿ ಜನ ರೈತರು ನಿರುದ್ಯೋಗಿಗಳಾಗಿ ಪೇಟೆಗೆ ಬಂದರೆ ಲಾ ಅಂಡ್ ಆರ್ಡರ್ ಪರಿಸ್ಥಿತಿ ಏನಾಗಬಹುದೆಂದು ಸ್ವಲ್ಪ ಊಹೆ ಮಾಡಬೇಕು. ಏನಿಲ್ಲ, ಅವರುಗಳು ನಿಮ್ಮ ಮನೆಗಳಿಗೇ ನುಗ್ಗುತ್ತಾರೆ. ಆದ್ದರಿಂದ ಆ ಒಂದು ಪರಿಸ್ಥಿತಿಯನ್ನು ಊಹಿಸಿಕೊಳ್ಳುವುದೂ ಕೂಡ ಕಷ್ಟವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ನನಗೆ ಆಶ್ವಾಸನೆ ಕೊಟ್ಟಿದ್ದರು. ಬಜೆಟ್ ಅಧಿವೇಶನಕ್ಕೆ

ಮುಂಚೆ ಮತ್ತೆ ಒಂದು ಸಿಂಪೋಸಿಯಂನ್ನು ನಾನೇ ಏರ್ಪಾಡು ಮಾಡುತ್ತೇನೆ ಎಂದಿದ್ದರು. ಆದರೆ ಅದನ್ನೆಲ್ಲಾ ಮಾಡಿ ನಂತರ ಬಜೆಟನ್ನು ಮಂಡಿಸಬೇಕಾಗಿತ್ತು. ಅದಲ್ಲದಿದ್ದರೆ ನೀವೇನು ಇಲ್ಲಿ ಕೈಗಾರಿಕೆ, ಕೃಷಿ ಎಂದು ಮಾತನಾಡುತ್ತೀರಿ ? ನಾನು ಬರೀ ಕೃಷಿ ಬಗ್ಗೆ ಮಾತನಾಡಿದ್ದೇನೆ. ಇನ್ನು ನೀವೇನಾದರೂ ಲಿಬರಲ್ ಕೈಗಾರಿಕಾ ನೀತಿಯನ್ನು ಅಳವಡಿಸಿದರೆ, ಈ ದೇಶದಲ್ಲಿ ಯಾವ ಮಟ್ಟದಲ್ಲಿ ನಿರುದ್ಯೋಗ ಸೃಷ್ಟಿಯಾಗುತ್ತದೆ ಎನ್ನುವುದನ್ನೂ ಕೂಡ ತಾವು ಲೆಕ್ಕ ಹಾಕಬೇಕು. ಬೆಳಿಗ್ಗೆ ಇಲ್ಲಿ ನನ್ನ ಹತ್ತಿರ ದೊಡ್ಡ ಕೈಗಾರಿಕಾ ಮಂತ್ರಿಗಳಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಬಂದಿದ್ದರು. 8ನೇ ತಾರೀಖು ಒಂದು ಮೀಟಿಂಗ್ ಮಾಡೋಣ, ಬಿಡದಿ ಮತ್ತು ಸಾಸನೂರುಗಳಲ್ಲಿ ಜಪಾನ್ ಕೈಗಾರಿಕಾ ವಸಾಹತು ಬರುತ್ತಾ ಇದೆಯಲ್ಲ ಅದನ್ನು ತಾವು ವಿರೋಧ ಮಾಡುತ್ತಾ ಇದ್ದೀರಿ, ಅದರ ಬಗ್ಗೆ ಚರ್ಚೆ ಮಾಡೋಣ, ಏನೂ ಅಪಾಯವಿಲ್ಲವೆಂದು ನನಗೆ ಸಮಾಧಾನ ಮಾಡಲು ನೋಡುತ್ತಾ ಇದ್ದರು. ಡಂಕೆಲ್ ಪ್ರಸ್ತಾವನೆಯಲ್ಲಿಯೇ ಈ ಉದಾರ ಕೈಗಾರಿಕಾ ನೀತಿ ಏನಿದೆ, with 100% equity you are allowing multi–national companies to come into this country. ಅವರು ಇಲ್ಲಿ ನಮ್ಮನ್ನು ಉದ್ಧಾರ ಮಾಡುವುದಕ್ಕೆ ಬರುತ್ತಿದ್ದಾರೆಂದು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಹೇಳಿದರು. They are not coming here as philanthropists at all. They are coming here as imperialists. They are coming here as colonialists. ಅವರು ಎಂಥ ಕೈಗಾರಿಕೆಗಳನ್ನು ಇಲ್ಲಿಗೆ ತೆಗೆದುಕೊಂಡು ಬರುತ್ತಾರೆ ಎಂದರೆ ಸ್ವಯಂಚಾಲಿತ ಕೈಗಾರಿಕೆಗಳು, ಕಂಪ್ಯೂಟರೈಸ್ಡ್ ಇಂಡಸ್ಟ್ರೀಸ್. ಅವರು ಏತಕ್ಕಾಗಿ ನಮ್ಮಲ್ಲಿ ಬರುತ್ತಿದ್ದಾರೆಂದರೆ ನಮ್ಮಲ್ಲಿರುವ ರಿಸೋರ್ಸ್‌ಸನ್ನು ಉಪಯೋಗಿಸಿ, ರಫ್ತು ಮಾಡಲು ಯೋಗ್ಯವಾದಂಥ ಸಿದ್ಧ ವಸ್ತುಗಳನ್ನು ತಯಾರು ಮಾಡಿ, ನಮ್ಮ ದೇಶದ ರಫ್ತು ವ್ಯವಹಾರ ಇದೆಯೆಲ್ಲ ಅದನ್ನು ಜಾಸ್ತಿ ಮಾಡುವುದಕ್ಕೆ ಬರುತ್ತಿದ್ದಾರೆ, ಅದರಿಂದ ಬಹಳ ಲಾಭವಾಗುತ್ತದೆ ಎಂದು ಮಾನ್ಯ ಮನ್‌ಮೋಹನ್ ಸಿಂಗ್‌ರವರು ಹೇಳುತ್ತಿದ್ದಾರೆ. But what really happens is just this. ಅಂಥ ಕೈಗಾರಿಕೆಗಳು ಬರುವುದರಿಂದ, ನಮ್ಮಲ್ಲಿ ನೈಸರ್ಗಿಕ ಸಂಪತ್ತು ಏನಿದೆ ಅದು ಬಹಳ ವೇಗದಲ್ಲಿ ನಮ್ಮ ದೇಶದಿಂದ ಆಚೆಗೆ ಹೋಗುತ್ತದೆಯೇ ಹೊರತು, ಅದರಲ್ಲಿ ನಾವು ಉತ್ಪಾದಕರೂ ಆಗುವುದಿಲ್ಲ, ಬಳಕೆದಾರರೂ ಆಗುವುದಿಲ್ಲ. Definitely they will be manufacturing finished products which are fit for export only. So, we will not be participants either in production or consumption. But we will be just on–lookers and looting of all our natural resources by white imperialists. ಇದು ಆಗುವ ಪರಿಣಾಮ. ಇದರಿಂದಾಗಿ ಯಾವ ಮಟ್ಟದ ನಿರುದ್ಯೋಗ ಸೃಷ್ಟಿಯಾಗುತ್ತದೆ ಎಂಬುದನ್ನು ಕೂಡ ನಾವು ಆಲೋಚನೆ ಮಾಡಬೇಕು. ಇವೊತ್ತೂ ಕೂಡ ನಾನು ಈ ಸರಕಾರಕ್ಕೆ ಒತ್ತಾಯ ಮಾಡುತ್ತಾ ಇದ್ದೇನೆ. ಇವರು ರಾಜ್ಯ ಸರಕಾರವಾಗಿದ್ದರೆ ಕೇಂದ್ರ ಸರಕಾರಕ್ಕೆ ಪತ್ರವನ್ನು ಬರೆಯಬೇಕು.

6.10 ಪಿ.ಎಂ.

ನಮ್ಮ ಜೊತೆಯಲ್ಲಿ ಚರ್ಚೆ ಮಾಡದೆ, ನಮ್ಮ ಅಭಿಪ್ರಾಯವನ್ನು ನೀವು ತೆಗೆದುಕೊಳ್ಳದೆ ಡಂಕಲ್ ಪ್ರಸ್ತಾವನೆಯ ಬಗ್ಗೆ ಏನು ತೀರ್ಮಾನ ಮಾಡಬೇಕೆಂದು ಎಂದು ಇದ್ದೀರಿ ಅದರಲ್ಲಿ ಮುಂದುವರಿಯಬಾರದು. ಇಲ್ಲ ಎಂದು ಹೇಳಿದರೆ ನನ್ನಂತಹ ಪ್ರಜೆಗಳು ಈ ದೇಶದಲ್ಲಿ ನಿಮ್ಮನ್ನು ರಾಷ್ಟ್ರದ್ರೋಹಿಗಳು ಎಂದು ಕರೆಯಬೇಕಾಗುತ್ತದೆ. ಇವತ್ತು ಯಾರು ಅಧಿಕಾರದಲ್ಲಿ ಇದ್ದೀರಿ, ಈ ದೇಶದ ಸ್ವಾತಂತ್ರ್ಯಕ್ಕೆ ಏನು ಧಕ್ಕೆ ಬರುತ್ತಿದೆ, ಈ ದೇಶವನ್ನು ಖಾಯಂ ಗುಲಾಮಗಿರಿಗೆ ನೀವೆಲ್ಲ ತಳ್ಳುವುದಕ್ಕೆ ಹೊರಟಿದ್ದೀರಿ, ಇಂತಹ ಕೆಲಸವನ್ನು ಮಾಡಿದಂತಹ ರಾಷ್ಟ್ರದ್ರೋಹಿಗಳು ಎಂದು ನಾನು ಕರೆಯಬೇಕಾಗುತ್ತದೆ. ಆ ಕಾರಣ ಇವತ್ತು ತಾವು ಆಲೋಚನೆಯನ್ನು ಮಾಡಿರಿ. ನಮ್ಮ ಸರ್ಕಾರದ

ವತಿಯಿಂದ ಕೇಂದ್ರ ಸರ್ಕಾರಕ್ಕೆ ಈ ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಒಂದು ಪತ್ರವನ್ನು ಬರೆಯಬೇಕು. ಇಂತಹ ಅವಿವೇಕಿ ಕೆಲಸವನ್ನು ಮಾಡಬೇಡಿ ಎಂದು. ಇಂತಹ ಮುಖ್ಯವಾದಂತಹ ವಿಷಯವನ್ನು ಇಡೀ ದೇಶದಲ್ಲಿ ಎಲ್ಲಾ ಜನ ಪ್ರತಿನಿಧಿಗಳು ಚರ್ಚೆ ಮಾಡಬೇಕು. This should be discussed in all the State Legislatures before any decision is taken by the Union Government. ಇಲ್ಲ ಎಂದು ಅಂದರೆ ತಮ್ಮ ಮೂಲಕ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಈ ಸರ್ಕಾರಕ್ಕೆ ಅಷ್ಟೇ ಅಲ್ಲ, ಕೇಂದ್ರ ಸರ್ಕಾರಕ್ಕೂ ಕೊಡುತ್ತಿದ್ದೇನೆ. ಈ ದೇಶದ ರೈತರು ಇಂತಹ ಸರ್ಕಾರಗಳನ್ನು ಮೆಟ್ಟಿನಿಂದ ಹೊಡೆದು ಕಿತ್ತೆಸೆಯುತ್ತಾರೆ. ಇಷ್ಟು ಮಾತನಾಡಲು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:– ಇಲ್ಲಿ 25 ಹೆಸರುಗಳು ಉಂಟು ಇವತ್ತು ಈ ಚರ್ಚೆ ಮುಗಿಯಬೇಕೆಂದು ತೀರ್ಮಾನವಾಗಿದೆ. ಹಾಗಿರುವಾಗ ಬೇಗ ತಾವು ಮುಗಿಸಿ.

ಶ್ರೀ ಹೆಚ್. ಏಕಾಂತಯ್ಯ:– ಸೋಮವಾರಕ್ಕೆ ಮುಂದುವರೆಸೋಣ.

ಶ್ರೀ ಎ. ಕೆ. ಅನಂತಕೃಷ್ಣ:– ಆ ತಪ್ಪು ನಮ್ಮದಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಯೋಚನೆ ಮಾಡಬೇಕಾಗಿತ್ತು. ಅದರಲ್ಲಿ ಬಹಳಷ್ಟು ಪ್ರಭಾವಶಾಲಿಗಳು ವಿರೋಧ ಪಕ್ಷದವರೇ ಇದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್:– ಇನ್ನೂ 25 ಜನ ಮಾತನಾಡುವವರು ಇದ್ದಾರೆ ಎಂದು ಹೇಳುತ್ತಿದ್ದೀರಿ. ಇದು ಇವತ್ತು ಮುಗಿಯಬೇಕೆಂದರೆ ಸಾಧ್ಯವಿಲ್ಲ. ಈ ಸದನದಲ್ಲಿ ಅವರವರ ಕ್ಷೇತ್ರದ ಜನರ ಅಭಿಪ್ರಾಯವನ್ನು ಏನು ವ್ಯಕ್ತಪಡಿಸಬೇಕು ಅದನ್ನು ವ್ಯಕ್ತಪಡಿಸಲು ಅವಕಾಶವನ್ನು ಕೊಡಬೇಕು. ರಾಜ್ಯಪಾಲರ ಭಾಷಣದ ಮೇಲೆ ನಂತರ ಬಜೆಟ್ ಮೇಲೆ ಭಾಷಣ ಮಾಡಿ ಎಂದು ಹೇಳುತ್ತೀರಿ. ಇದರಲ್ಲಿಯೂ ಅವಕಾಶ ಸಿಗದೇ ಹೋದರೆ ಏನು ಪ್ರಯೋಜನ ? ಇನ್ನು ಎಲ್ಲಿ ಅವಕಾಶವನ್ನು ಮಾಡಿಕೊಡುತ್ತೀರಿ ? ತಾವು ಇದನ್ನು ಪುನಃ ಪರಿಶೀಲನೆ ಮಾಡಿ ಎಲ್ಲರಿಗೂ ಅವಕಾಶ ಮಾಡಿಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಸೋಮವಾರಕ್ಕೆ ಮುಂದಕ್ಕೆ ಹಾಕುವುದು ಉತ್ತಮ.

ಛೇರ್ಮನ್:– ಇವತ್ತೇ ಮುಗಿಯಬೇಕೆಂದು ತೀರ್ಮಾನವಾಗಿದೆ.

†ಶ್ರೀ ಎ. ಕೆ. ಅನಂತಕೃಷ್ಣ:– ನಾನು ರಾಜ್ಯಪಾಲರ ಭಾಷಣಕ್ಕೆ ನನ್ನ ವಂದನೆಯನ್ನು ಅರ್ಪಿಸುತ್ತಾ ಮತ್ತು ಬೆಂಬಲವನ್ನು ಸೂಚಿಸುತ್ತಾ, ನನ್ನ ಕೆಲವು ಅಭಿಪ್ರಾಯಗಳನ್ನು ಹೇಳಬಯಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ:– ಬಿಸಿನೆಸ್ ಅಡ್ವೈಸರಿ ಕಮಿಟಿ ಏನು ತೀರ್ಮಾನ ಮಾಡಿಬಿಡುತ್ತು, ಆ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಮೊದಲು ನಾವು ಸಮಯವನ್ನು ನಿಗದಿ ಮಾಡುತ್ತಿದ್ದೆವು. ಒಂದೊಂದು ಪಕ್ಷಕ್ಕೆ ಇಷ್ಟು ಸಮಯ ಎಂದು ನಿಗದಿ ಮಾಡುತ್ತಿದ್ದೆವು. ಈಗ ಅದೂ ಆಗುತ್ತಿಲ್ಲ. ಈಗ ಆಳುವ ಪಕ್ಷದವರು ಮೋಷನ್ ಮೂವ್ ಮಾಡಿದ್ದಾರೆ; ಸೆಕೆಂಡ್ ಮಾಡಿದ್ದಾರೆ ಅವರೇ ಪುನಃ ಈಗ ಎಷ್ಟು ಸಮಯಬೇಕೆಂದು ಹೇಳಿದರೆ, ನಾವು ಕುಳಿತಿರಬೇಕೋ ಬೇಡವೋ ಎನ್ನುವ ನಿರ್ಧಾರವನ್ನು ಮಾಡುತ್ತೇವೆ. ಸಮಯ ಪ್ರಜ್ಞೆಯನ್ನು ನಾವೇ ಹಾಕಿಕೊಳ್ಳಬೇಕಾದಂತಹ ಪರಿಸ್ಥಿತಿಗೆ ನಾವು ಹೋಗಿದ್ದೇವೆ. ಆದ್ದರಿಂದ ಅವರಿಗೆ ಎಷ್ಟು ಸಮಯಬೇಕೆಂದು ಹೇಳಿದರೆ ನಮಗೆ ಅನುಕೂಲವಾಗುತ್ತದೆ. ಪ್ರತಿಯೊಬ್ಬರು ಒಂದೊಂದು ಗಂಟೆ ಮಾತನಾಡುತ್ತಿದ್ದರೆ ಹೇಗೆ ?

ಛೇರ್ಮನ್:– ಇಲ್ಲಿ ಅನೇಕ ಪ್ರಮುಖರ ಹೆಸರುಗಳು ಉಂಟು. ಆದ್ದರಿಂದ ಇವತ್ತೇ ಮುಗಿಯಬೇಕೆಂದು ನಿಶ್ಚಯವಾಗಿದೆ.

ಶ್ರೀ ಡಿ. ಬಿ. ಚಂದ್ರೇಗೌಡ:– ಸರ್ಕಾರದ ಕಡೆಯವರೇ ಸಹಾಯ ಮಾಡದೇ ಇದ್ದರೆ ಹೇಗೆ. ಅದಕ್ಕೆ ಕೋ ಆಪರೇಷನ್ ಅಲ್ಲಿಂದ ಬರಬೇಕು. ನಿಮ್ಮ ಕಡೆಯಿಂದ ಸಹಕಾರ ಬರಬೇಕು.

ಶ್ರೀ ಎ. ಕೆ. ಅನಂತಕೃಷ್ಣ:– ನಮ್ಮ ಸಹಕಾರ ನಿಮಗೆ ಇದೆ.

ಶ್ರೀ ಡಿ. ಬಿ. ಚಂದ್ರೇಗೌಡ:– ನಿಮ್ಮ ವಂದನಾ ನಿರ್ಣಯವನ್ನು ಪ್ರಪೋಸ್ ಮಾಡಿ ಸೆಕೆಂಡ್ ಮಾಡಿದ್ದಾರೋ ಅದರ ಬಗ್ಗೆ ನಾವು ಮಾತನಾಡುತ್ತಿದ್ದೇವೆ.

ಶ್ರೀ ಎ. ಕೆ. ಅನಂತಕೃಷ್ಣ:– ಎಷ್ಟು ಸಮಯವನ್ನು ತೆಗೆದುಕೊಂಡಿದ್ದಾರೆ ನೋಡಿ. ಪ್ರಾರಂಭದಲ್ಲಿ ಭಾಷಣ ಮಾಡಿದ್ದೇ ಇಬ್ಬರು. ಮೂವ್ ಮಾಡಿದವರು, ಸೆಕೆಂಡ್ ಮಾಡಿದವರು ಅವರಿಬ್ಬರು ಎಷ್ಟು ಸಮಯವನ್ನು ತೆಗೆದುಕೊಂಡಿದ್ದಾರೆಂಬುದನ್ನು ನೋಡಿ. ತದನಂತರ ಉಳಿದವರು ಎಷ್ಟು ಸಮಯವನ್ನು ತೆಗೆದುಕೊಂಡಿದ್ದಾರೆಂದು ನೋಡಬೇಕು.

ಛೇರ್ಮನ್:– ಮುಂದುವರಿಸಿ ನೋಡೋಣ.

ಶ್ರೀ ಎ. ಕೆ. ಅನಂತಕೃಷ್ಣ:– ತಾವು ಹೇಳಿದರೆ ಸೋಮವಾರ ಪ್ರಾರಂಭ ಮಾಡುತ್ತೇನೆ. ಸೋಮವಾರ ನನ್ನ ಭಾಷಣವನ್ನು ಮುಂದುವರೆಸುತ್ತೇನೆ.

ಛೇರ್ಮನ್:– ಈಗ ಮುಂದುವರಿಸಿ.

ಶ್ರೀ ಎ. ಕೆ. ಅನಂತಕೃಷ್ಣ:– ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ನನ್ನ ವಂದನೆಯನ್ನು ಮತ್ತು ಬೆಂಬಲವನ್ನು ಸೂಚಿಸುತ್ತಾ, ನಾನು ಕೆಲವು ಅಭಿಪ್ರಾಯಗಳನ್ನು ಇಲ್ಲಿ ಹೇಳಬಯಸುತ್ತೇನೆ. ಡಿಸೆಂಬರ್ ಆರನೆಯ ತಾರೀಖಿನ ದಿನ ಅಯೋಧ್ಯೆಯಲ್ಲಿ ಏನು ಘಟನೆ ನಡೆಯಿತು, ಆ ಒಂದು ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೋಮು ಗಲಭೆಗಳು ಸಂಭವಿಸಿದಾಗ ರಾಜ್ಯಮಟ್ಟದಲ್ಲಿ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೆ ಪೊಲೀಸ್ ಇಲಾಖೆಯವರಿಂದ ಬಹಳ ಪ್ರಯತ್ನ ನಡೆಯಿತು, ಅವರ ದಕ್ಷತೆಯಿಂದ ಶಾಂತಿ ಸ್ಥಾಪನೆಯಾಯಿತು ಎಂದು ಒಂದು ಅಭಿಪ್ರಾಯವನ್ನು ರಾಜ್ಯಪಾಲರ ಭಾಷಣದಲ್ಲಿ ಸೂಚಿಸಲಾಗಿದೆ. ಪೊಲೀಸ್ ಇಲಾಖೆಯವರು ದಕ್ಷತೆಯಿಂದ ಕೆಲಸವನ್ನು ಮಾಡಿದ್ದಾರೆ ಎನ್ನುವುದನ್ನು ನಾನು ವಿರೋಧ ಮಾಡುತ್ತಿಲ್ಲ. ಆದರೆ ನಮ್ಮ ರಾಜ್ಯದ ನಾಗರೀಕರು ಜಾತ್ಯಾತೀತ ನಾಗರೀಕರು, ಶಾಂತಿಪ್ರಿಯರು. ಸಂಘಟಿತರಾಗಿ ಎಷ್ಟರಮಟ್ಟಿಗೆ ಶಾಂತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ ಎನ್ನುವುದನ್ನು ಮತ್ತು ಪೊಲೀಸರಿಂದ ಏನು ಎಕ್ಸಸ್ ಆಯಿತು. ಆ ವಿಷಯವನ್ನು ಪ್ರಸ್ತಾಪ ಮಾಡಿದ್ದರೆ ಬಹಳ ಚೆನ್ನಾಗಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ:– ಮಂತ್ರಿಗಳಿಲ್ಲ, ಅಧಿಕಾರಿಗಳು ಇಲ್ಲ, ಸದಸ್ಯರು ಇಲ್ಲ. ಪತ್ರಿಕೆಯವರಿಲ್ಲ. ಹೀಗಿರುವಾಗ ತಾವು ಯಾರಿಗೋಸ್ಕರ ಮಾತನಾಡುತ್ತೀರಿ ?

ಶ್ರೀ ಹೆಚ್. ಏಕಾಂತಯ್ಯ:– ಇಲ್ಲಿ ಅಧಿಕಾರಿಗಳು ಇಲ್ಲ, ಪತ್ರಿಕೆಯವರೂ ಇಲ್ಲ, ಸದಸ್ಯರೂ ಇಲ್ಲ, ಯಾರಿಗೋಸ್ಕರ, ಏತಕ್ಕೆ ಮಾತನಾಡುತ್ತಿದ್ದೀರಿ.

ಶ್ರೀ ಎ. ಕೆ. ಅನಂತಕೃಷ್ಣ:– ಆಯಿತು; ಸೋಮವಾರ ಮಾತನಾಡುತ್ತೇನೆ ಬಿಡಿ.

ಛೇರ್ಮನ್:– ನೀವು ಪ್ರಾರಂಭ ಮಾಡಿ.

ಶ್ರೀ ಎ. ಕೆ. ಅನಂತಕೃಷ್ಣ:– ವಿರೋಧಪಕ್ಷದವರು ನಮ್ಮಪಕ್ಷದ ವಿರುದ್ಧವಾಗಿ ಹೇಳಿದ್ದಾರೆ, ನಮ್ಮ ರಾಜ್ಯಸರ್ಕಾರದ ವಿರುದ್ಧವಾಗಿ ಹೇಳಿದ್ದಾರೆ, ಕೇಂದ್ರ ಸರ್ಕಾರದ ವಿರುದ್ಧವಾಗಿ ಹೇಳಿದ್ದಾರೆ. ಅದರ

ಬಗ್ಗೆ ಎಲ್ಲ ಹೇಳಬೇಕು ಎಂದು ಹೇಳಿದರೆ ಅವರೆಲ್ಲರೂ ಇದ್ದು ಕೇಳುವ ಒಂದು ಸಮಾಧಾನ ಇದ್ದರೆ ತಾನೇ ?

ಶ್ರೀ ವಾಟಾಳ್ ನಾಗರಾಜ್:– ನಾವಂತೂ ತಾವು ಎಷ್ಟು ಹೊತ್ತು ಮಾತನಾಡಿದರೂ ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಎ. ಕೆ. ಅನಂತಕೃಷ್ಣ:– ನೀವು ಆಕ್ಷೇಪಣೆ ಮಾಡಿದ್ದು ಕನ್ನಡ ರಾಜ್ಯ, ಕನ್ನಡ ಭಾಷೆ, ಕನ್ನಡಸಾಹಿತ್ಯ – ಸಂಸ್ಕೃತಿ ಬಗ್ಗೆ. ಅದರ ಬಗ್ಗೆ ನಮಗೂ ನಿಮಗೂ ಭಿನ್ನಾಭಿಪ್ರಾಯ ಇರಲಿಕ್ಕೇ ಸಾಧ್ಯವೇ ಇಲ್ಲ. ಮಾನ್ಯ ಯಡಿಯೂರಪ್ಪನವರು ಸಾಕಷ್ಟು ಇಲ್ಲಿ ಪ್ರಚೋದನೆ ಮಾಡುವಂತಹ ರೀತಿಯಲ್ಲಿ ಭಾಷಣವನ್ನು ಮಾಡಿದ್ದಾರೆ. ಅವರಿಗೆ ಸರಿಯಾದ ಒಂದು ಜವಾಬನ್ನು ಕೊಡದಿದ್ದರೆ, ನಮ್ಮ ಪಕ್ಷದ ನಿಲುವೇನು ಎಂದು ಹೇಳದಿದ್ದರೆ ಅದನ್ನು ನಾವು ಕರ್ನಾಟಕ ರಾಜ್ಯದ ಜನತೆಗೆ ತಿಳಿಸುವುದಾದರೂ ಹೇಗೆ ? ಆದ್ದರಿಂದ ನಾನು ತಮ್ಮಲ್ಲಿ ಬಹಳ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ನನಗೆ ಸೋಮವಾರ ಮುಂದುವರಿಸುವುದಕ್ಕೆ ಅವಕಾಶವನ್ನು ಕೊಡಿ ಈಗ ಯಾರೂ ಕೇಳುವವರು ಇಲ್ಲ. ಕಡೆಗೆ ಕೋರಂ ಇಲ್ಲದಂಥ ಪರಿಸ್ಥಿತಿಯೂ ಬಂದು, ಈ ಸಭೆಯನ್ನೇ ಮುಂದಕ್ಕೆ ಹಾಕಿದರೆ ಒಳ್ಳೆಯದು.

ಛೇರ್ಮನ್:– ಇನ್ನು ಹತ್ತು–ಹದಿನೈದು ಜನರು ಮಾತನಾಡುವವರು ಇದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇದುವರೆಗೆ ವಿರೋಧ ಪಕ್ಷದವರು ಏನೇನು ಮಾತನಾಡಿದ್ದಾರೆ, ಅವೆಲ್ಲ ಪತ್ರಿಕೆಗಳಲ್ಲಿ ಸವಿಸ್ತಾರವಾದಂಥ ಪ್ರಚಾರವಾಗಿದೆ.

ಅದು ನಮ್ಮ ಪಕ್ಷದ ವಿರುದ್ಧ ಆಗಿದೆ. ಸರ್ಕಾರದ ವಿರುದ್ಧ ಆಗಿದೆ. ಕೇಂದ್ರ ಸರ್ಕಾರದ ವಿರುದ್ಧ ಆಗಿದೆ. ಅದರಲ್ಲಿಯೂ ಭಾರತೀಯ ಜನತಾ ಪಕ್ಷದ ನಾಯಕರಾದ ಮಾನ್ಯ ಯುಡಿಯ್ಯೂರಪ್ಪನವರ ಭಾಷಣ ಕೋಮುವಾರು ಪದ್ಧತಿಯ ಪರವಾಗಿ ಬಹಳಷ್ಟು ಪ್ರಚಾರ ಆಗಿದೆ. ಅದಕ್ಕೆ ವಿರುದ್ಧವಾಗಿ ನಾವು ಹೇಳಬೇಕೆಂದು ಇದ್ದರೆ ಆ ಪ್ರಚಾರ ಪತ್ರಿಕೆಗಳಲ್ಲಿ ಆಗಬೇಕೋ ಬೇಡವೇ, ಆ ಪ್ರಚಾರ ಜನಸ್ತೋಮಕ್ಕೆ ಗೊತ್ತಾಗದೆ ಹೋದರೆ ನಮ್ಮನ್ನು ಏನು ತಿಳಿದುಕೊಳ್ಳುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಅನಂತಕೃಷ್ಣರವರು ಹೇಳುವುದೇನೆಂದರೆ, ಪತ್ರಿಕಾ ವರದಿಗಾರರು ಕೂಡ ಇಲ್ಲ. ಸದನದಲ್ಲಿ ಕೋರಂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಒಬ್ಬರು ಹಿರಿಯ ಸದಸ್ಯರು ಮಾತನಾಡುವ ಕಾಲಕ್ಕೆ ಅವರಿಗೆ ಸರಿಯಾದಂತಹ ವಾತಾವರಣ ಇಲ್ಲದೆ ಇದ್ದರೆ ಏನು ಮಾತನಾಡುವುದಕ್ಕೆ ಆಗುತ್ತದೆ. ಯಾರ ಎದುರಿಗೆ ಮಾತನಾಡುವದು ?

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್:– ಹುಡುಗಾಟಿಕೆ ವ್ಯವಹಾರ ನಡೆದ ಹಾಗೆ ಆಗಬಾರದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಒಬ್ಬ ಹಿರಿಯ ಸದಸ್ಯರು ಮಾತನಾಡುವ ಕಾಲದಲ್ಲಿ ಇಲ್ಲಿ ಸರಿಯಾದಂತಹ ವಾತಾವರಣ ಇಲ್ಲದೇ ಇದ್ದರೆ ಏನು ಪ್ರಯೋಜನ.

ಛೇರ್ಮನ್:– ಮಂತ್ರಿಗಳು ಏನು ಅಭಿಪ್ರಾಯ ಹೇಳುತ್ತಾರೆ.

ಶ್ರೀ ಎ. ಕೆ. ಅನಂತಕೃಷ್ಣ:– ತಾವು ಅಧ್ಯಕ್ಷರಿರುವಾಗ ನಾನು ಮಾತನಾಡುತ್ತೇನೆ. ಆದರೆ ಇದರಿಂದ ಸಾರ್ವಜನಿಕರ ಮೇಲೆ ಏನು ಪರಿಣಾಮ ಆಗುತ್ತದೆ.

ಶ್ರೀ ಚೌಡರೆಡ್ಡಿ:– ಪತ್ರಿಕೆಯವರೂ ಇಲ್ಲ ಯಾರು ಇಲ್ಲ ಮುಂದೆ ಹಾಕೋಣ.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಸಚಿವರು ಸ್ವಲ್ಪ ಈ ಕಡೆ ಗಮನಕೊಡಬೇಕು. ನಾನು ಮಾತನಾಡುತ್ತೇನೆ. ನೀವು ಇಬ್ಬರೆ ಇದ್ದರೂ ಮಾತನಾಡುತ್ತೇನೆ. ನನಗೆ ಯಾವ ಚಿಂತೆ ಇಲ್ಲ. ಇಡೀ ಜೀವನವೆಲ್ಲ ಹಾಗೆಯೇ ನಡೆದಿದೆ.

ಶ್ರೀ ವಾಟಾಳ್ ನಾಗರಾಜ್:– ತಮ್ಮ ಕಷ್ಟವನ್ನು ನಾನು ಒಪ್ಪಿದೆ, ನಾನು ಇರುತ್ತೇನೆ. ಕುಳಿತುಕೊಳ್ಳಿ ಮಾತನಾಡೋಣ.

ಶ್ರೀ ಎ. ಕೆ. ಅನಂತಕೃಷ್ಣ:– ನೀವು ಒಬ್ಬರೆ ಇದ್ದಾಗ ನಾನು ಮಾತನಾಡಿದ್ದೇನೆ. ನಾನು ಹೇಳುವುದು ಮುಖ್ಯವಾದ ವಿಷಯವೇನೆಂದರೆ.

ಶ್ರೀ ಎಂ. ಪಿ. ಕೇಶವಮೂರ್ತಿ:– ಮಾನ್ಯ ಅನಂತಕೃಷ್ಣರವರು ಮಾತನಾಡುವುದು ಪೇಪರ್‌ನಲ್ಲಿ ನಿಮ್ಮ ಭಾಷಣ ಪ್ರಚಾರವಾಗಿದ್ದರೆ ಚೆನ್ನಾಗಿತ್ತು. ಆದರೆ ಪತ್ರಿಕಾವರದಿಗಾರರು ಯಾರೂ ಇಲ್ಲ.

ಶ್ರೀ ಎ. ಕೆ. ಅನಂತಕೃಷ್ಣ:– ನಮ್ಮ ವಿರುದ್ಧ ಪ್ರಹಾರವಾಗಿದೆ.

ಶ್ರೀ ವಾಟಾಳ್ ನಾಗರಾಜ್:– ಅವರನ್ನು ಕರೆಯಿಸುವುದಕ್ಕೆ ಈ ಸದನಕ್ಕೆ ಅಧಿಕಾರ ಇಲ್ಲ.

ಶ್ರೀ ಎ. ಕೆ. ಅನಂತಕೃಷ್ಣ:– ನಾನು ಒಬ್ಬನೇ ಅಲ್ಲ. ಬೇರೆ ನಮ್ಮವರು ಎಲ್ಲಾ ಮಾತನಾಡಬೇಕಾಗಿದ್ದಾರೆ ಕರ್ನಾಟಕದ ಜನತೆಗೆ ತಿಳುವಳಿಕೆಯನ್ನು ಕೊಡುವುದಾದರೂ ಹೇಗೆ ? ಮಾನ್ಯ ಯಡಿಯೂರಪ್ಪನವರು ಹೇಳಿದ್ದನ್ನೆಲ್ಲ ಸರಿ ಎಂದು ಜನ ತೀರ್ಮಾನ ಮಾಡಿಕೊಳ್ಳಬೇಕೆ ? ಇಲ್ಲ ಬೇರೆ ಯಾರಾದರೂ ನಮ್ಮ ವಿರುದ್ಧ ಭಾಷಣ ಮಾಡಿದ್ದೆಲ್ಲಾ ಸರಿ ಎಂದು ತಿಳಿದುಕೊಳ್ಳಬೇಕೇ ? ತಾವು ಅದನ್ನು ಅರ್ಥಮಾಡಿಕೊಳ್ಳಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಸದಸ್ಯರ ರಕ್ಷಣೆಗೆ ತಾವು ಬರಬೇಕಾಗುತ್ತದೆ. ಏಕೆಂದರೆ, ಪತ್ರಿಕಾ ವರದಿಗಾರರು ಇಲ್ಲ, ಸದನದಲ್ಲಿ ಸದಸ್ಯರು ಇಲ್ಲ, ಕೋರಂ ಇಲ್ಲ. ಯಾರ ಮುಂದೆ ಮಾತನಾಡುವುದು. ತಾವು ಸದಸ್ಯರ ರಕ್ಷಣೆಗೆ ಬರಬೇಕಾಗುತ್ತದೆ. ಇವತ್ತು ಮುಂದಕ್ಕೆ ಹಾಕಿ ಸೋಮವಾರ ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಛೇರ್ಮನ್:– ಇವತ್ತು ಸ್ವಲ್ಪ ಪ್ರಾರಂಭ ಮಾಡಿ.

ಶ್ರೀ ಎ. ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೆ, ಯಾರಿಗೆ ಹೇಳೋಣ, ಮುಖ್ಯಮಂತ್ರಿಗಳು ಇಲ್ಲ, ಉಪ ಮುಖ್ಯಮಂತ್ರಿಗಳು ಇಲ್ಲ, ಪ್ರತಿಭಾವಂತ ಹಿರಿಯ ಮಂತ್ರಿಗಳು ಇಲ್ಲ.

ಶ್ರೀ ಹೆಚ್. ಏಕಾಂತಯ್ಯ:– 4 ಜನ ಮಂತ್ರಿಗಳು, 4 ಜನ ಸದಸ್ಯರುಗಳು ಇದ್ದು, ಯಾರಿಗೋಸ್ಕರ ಭಾಷಣ ಮಾಡಬೇಕು.

ಶ್ರೀ ಎ. ಕೆ. ಅನಂತಕೃಷ್ಣ:– ನನಗೇನೂ ಅಧಿಕಾರಿಗಳು ಬೇಕಾಗಿಲ್ಲ. ಪತ್ರಿಕಾ ಪ್ರತಿನಿಧಿಗಳು ಕೂಡ ಇಲ್ಲ ಅಂದರೆ ನಮ್ಮ ಅಭಿಪ್ರಾಯವನ್ನು ಜನಸ್ತೋಮಕ್ಕೆ ತಿಳಿಸುವವರು ಯಾರು ? ನಮ್ಮ ರೆಕಾರ್ಡ್ಸ್‌ನಲ್ಲಿ ಹೋದರೆ ಆಗಿಹೋಯಿತೇ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:– ಈ ರೀತಿ ಮಾಡಿದರೆ ಯಾವುದೇ ಪ್ರಯೋಜನವಾಗುವುದಿಲ್ಲ. ನಾವು ಸುಮ್ಮನೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಇಲ್ಲಿ ಕುಳಿತುಕೊಳ್ಳುವುದು. ತಾವು ಬೆಲ್ ಹಾಕಿ ಸದಸ್ಯರನ್ನು ಕರೆಸಿದರೆ. ಈಗ ಯಾರು ಬರುತ್ತಾರೆ. ನಾನು

ತಮ್ಮಲ್ಲಿ ವೈಯಕ್ತಿಕವಾಗಿ ವಿನಂತಿ ಮಾಡುತ್ತೇನೆ. ಈ ತರದ ವಾತಾವರಣದಲ್ಲಿ ಮಾತನಾಡಿ ಅಂದರೆ ಅವರು ಏನು ಮಾತನಾಡುತ್ತಾರೆ.

ಶ್ರೀ ಎ. ಕೆ. ಅನಂತಕೃಷ್ಣ:– ನಾನು ಬಹಳ ಕಳಕಳಿಯಿಂದ ತಮ್ಮಲ್ಲಿ ಹೇಳುತ್ತೇನೆ. ನಾವು ದಿನಗಟ್ಟಲೆ ಬೆಳಿಗ್ಗೆಯಿಂದ ರಾತ್ರಿಯವರೆಗೆ ಕುಳಿತುಕೊಂಡು ಕೊನೇ ಘಳಿಗೆಯಲ್ಲಿ ನಮಗೆ ಮಾತನಾಡಿ ಎಂದು ಹೇಳಿದರೆ ಯಾವ ಉತ್ಸಾಹದಿಂದ, ಎಷ್ಟರಮಟ್ಟಿಗೆ ಮಾತನಾಡುವುದಕ್ಕೆ ಸಾಧ್ಯವಾಗುತ್ತದೆ ?

ಛೇರ್ಮನ್:– ಈ ಬಗ್ಗೆ ಸಂಸದೀಯ ವ್ಯವಹಾರಗಳ ಮಂತ್ರಿಗಳ ಅಭಿಪ್ರಾಯವನ್ನು ಕೇಳೋಣ. ಇಲ್ಲಿ ಕೋರಂ ಇಲ್ಲ, ಪತ್ರಿಕಾ ವರದಿಗಾರರು ಇಲ್ಲ ಅಂದರೆ ಏನು ಮಾಡಬೇಕು. ಇನ್ನೂ 10–15 ಜನ ಮಾತನಾಡುವವರು ಇದ್ದಾರೆ.

ಶ್ರೀ ಎ. ಕೆ. ಅನಂತಕೃಷ್ಣ:– ಇಂಗ್ಲೀಷ್ ಭಾಷೆಯಲ್ಲಿ ಒಂದು ಮಾತನ್ನು ಹೇಳುತ್ತಾರೆ. Delayed justice is denied justice. ಹಾಗೆ ನಮಗೆ ಡಿಲೈಡ್ ಆಪರ್‌ಚ್ಯುನಿಟಿ ಏನು ಕೊಡುತ್ತಿದ್ದೀರಿ ಅದು ಡಿಲೈಡ್ ಪ್ರಿವಿಲೇಜ್ ಎಂದು ನಾನು ಹೇಳುತ್ತೇನೆ. ಆದ್ದರಿಂದ ತಾವು ಬಹಳ ಗಂಭೀರವಾಗಿ ಯೋಚನೆ ಮಾಡಿ ನಮಗೆ ನೀವು ರಕ್ಷಣೆಯನ್ನು ಕೊಡಬೇಕು. ನಮ್ಮ ಮಂತ್ರಿಗಳು ವಿರೋಧ ಪಕ್ಷದವರು 3–4 ದಿವಸ ಯಥೇಚ್ಛವಾಗಿ ಮಾತನಾಡುತ್ತಿದ್ದಾರೆ, ಒಬ್ಬರಿಗೊಬ್ಬರಿಗೆ ಪರಸ್ಪರ ಜಗಳ ನಡೆಯುತ್ತಿದೆ ಅಂದರೆ ಅದಕ್ಕೆ ಸಂಪೂರ್ಣ ಅವಕಾಶವನ್ನು ಕೊಟ್ಟು ಅದನ್ನೆಲ್ಲಾ ನಾನು ಕೇಳಿಕೊಳ್ಳುತ್ತಾ ಕುಳಿತುಕೊಳ್ಳುವಂತೆ ಮಾಡಿ, ನಮಗೆ ಈಗ ಮಾತನಾಡುವ ಅಂದರೆ ಏನು ಮಾತನಾಡುವುದು ಯಾರಿಗೆ ಮಾತನಾಡುವುದು ಮಾನ್ಯ ವಾಟಾಳ್ ನಾಗರಾಜ್‌ರವರೆ ನಿಮಗೆ ಗೊತ್ತು. ನಿಮ್ಮ ಕಡೆ ನಾವು ಎಷ್ಟರಮಟ್ಟಿಗೆ ಅಭಿಮಾನ ಪೂರ್ವಕವಾಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:– ನಾವು ಎಷ್ಟು ಗಂಭೀರವಾಗಿ ಕುಳಿತಿದ್ದೇವೆಂದು ನಿಮಗೆ ಗೊತ್ತು.

ಶ್ರೀ ಎ. ಕೆ. ಅನಂತಕೃಷ್ಣ:– ಈ ದೇಶಕ್ಕೆ ನಾನು ಏನು ಹೇಳಿದೆ ಎಂದು ನೀವೆಲ್ಲಾ ಹೇಳುತ್ತೀರಾ ? ಅಧ್ಯಕ್ಷರು ಆ ಪ್ರೊಸೀಡಿಂಗ್ಸ್ ಅನ್ನು ಏನಾದರೂ ರಿಲೀಸ್ ಮಾಡುತ್ತಾರೆಯೇ ? ಇಲ್ಲಿ ಅಫಿಷಿಯಲ್ಸ್ ಏನು ರೆಕಾರ್ಡ್ ಮಾಡುತ್ತಾರೆ ಅದನ್ನು ನಾಳೆ ಪತ್ರಿಕೆಯಲ್ಲಿ ಅನಂತಕೃಷ್ಣರವರು ಈ ತರಹ ಭಾಷಣ ಮಾಡಿದರು ಎಂದು ರಿಲೀಸ್ ಮಾಡುತ್ತೀರಾ ? ಬೇರೆ ಸದಸ್ಯರು ಈ ತರಹ ಭಾಷಣ ಮಾಡಿದರು ಎಂದು ರಿಲೀಸ್ ಮಾಡುತ್ತೀರಾ ? ನಾವು ಚುನಾಯಿತ ಸದಸ್ಯರು, ಸಾರ್ವಜನಿಕ ಪ್ರತಿನಿಧಿಗಳಾಗಿ ಬಂದಿದ್ದೇವೆ. ನಮ್ಮ ಮತದಾರರು ನಾವು ಏನು ಮಾಡಿದ್ದೇವೆಂದು ತಿಳಿದುಕೊಳ್ಳಬೇಕಾಗಿದೆ. We have to serve a dual purpose. ಸಾರ್ವಜನಿಕರು ನಾವು ಇಲ್ಲಿ ಏನು ಜವಾಬ್ದಾರಿಯುತವಾಗಿ ನಡೆದುಕೊಂಡಿದ್ದೇವೆ. ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು ಮತ್ತೊಂದು ನಮ್ಮಲ್ಲಿ ಅಧಿಕಾರಿಗಳು ಏನಿದ್ದಾರೆ ಅವರು ಕೇಳಿಕೊಂಡು ಯಾವ ತರಹ ನಡೆದುಕೊಳ್ಳಬೇಕೆಂದು ಅವರು ಮಾಡಬೇಕು. ಎಲ್ಲದಕ್ಕಿಂತ ಹೆಚ್ಚಾಗಿ ನಮ್ಮ ಸರ್ಕಾರದವರು ಮಂತ್ರಿವರ್ಯರು ನಮ್ಮ ಅಭಿಪ್ರಾಯ ಏನು ಎನ್ನುವುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

ಬಹಳಷ್ಟು ಸವಿಸ್ತಾರವಾದಂಥ, ತೀವ್ರತೆಯಿಂದ, ನಿಷ್ಠೆಯಿಂದ, ದಕ್ಷತೆಯಿಂದ, ರಾಷ್ಟ್ರಪ್ರೇಮದಿಂದ ಪ್ರೊ: ನಂಜುಂಡಸ್ವಾಮಿಯವರು ಏನು ಮಾತನಾಡಿದ್ದಾರೆ ? ಅವರು ಕೇಂದ್ರ ಸರ್ಕಾರವನ್ನು ಟೀಕೆ ಮಾಡಿದ ವಿಷಯದಲ್ಲಿ ನನ್ನ ಭಿನ್ನಾಭಿಪ್ರಾಯವಿರಬಹುದು. ಆದರೆ, ಅವರು ಮೂಲಭೂತವಾಗಿ ಯಾವ ವಿಷಯಗಳನ್ನು ಮಾತನಾಡಿದ್ದಾರೆ, ನಮ್ಮ ಆರ್ಥಿಕ ಪರಿಸ್ಥಿತಿಯ ಬಗ್ಗೆ ಏನು ಮಾತನಾಡಿದ್ದಾರೆ, ಅಲ್ಲದೆ, ನಾವು ಆರ್ಥಿಕ ಗುಲಾಮಗಿರಿಯನ್ನು ಮಾಡುವುದಕ್ಕೆ ಹೋಗಿದ್ದೇವೆನ್ನುವ ವಿಷಯವನ್ನು ಸಹ ಹೇಳಿದ್ದಾರೆ. ಅದನ್ನು ಕೇಳಿದವರ್ಯಾರು ? ಅದನ್ನು ಅರ್ಥಮಾಡಿಕೊಳ್ಳುವವರು ಯಾರು ?

ಜನತೆಯ ಅಭಿಪ್ರಾಯವನ್ನು ಬದಲಾವಣೆ ಮಾಡಬೇಕೆನ್ನುವುದು ಬೇಕಾಗಿದೆಯಲ್ಲ. ಅವರು ಒಂದು ಮಾತನ್ನು ಹೇಳಿದರು. ಏನೆಂದರೆ, We are only attempting a change in the mind and not in the body. ಇದರಿಂದ ಏನಾಗುತ್ತದೆಂದರೆ, ನಮ್ಮ ಮೈಂಡ್‌ಅನ್ನು ಬದಲಾಯಿಸುವಂತಿಲ್ಲ, ಶರೀರದ ಪ್ರಶ್ನೆಯಂತೂ ಬರುವುದಿಲ್ಲ. That's why I am appealing to you. ನನಗೆ ಸೋಮವಾರ ದಿವಸವಾದರೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಛೇರ್ಮನ್:- ಸೋಮವಾರ ಅವಕಾಶ ಕೊಡೋಣ ಈಗ ತಮ್ಮ ಮಾತನ್ನು ಮುಂದುವರೆಸಿ.

ಶ್ರೀ ಎ. ಕೆ. ಅನಂತಕೃಷ್ಣ:- ನಾನು ಯಾರಿಗೆ ಹೇಳಲಿ ? ನಾನು ಮೂರು ಅಂಶಗಳನ್ನು ತಮ್ಮ ಮುಂದಿಟ್ಟೆ. ನಾನು ಸಾರ್ವಜನಿಕರ ಪ್ರತಿನಿಧಿಯಾಗಿ ಇಲ್ಲಿ ಬಂದು ಮಾತನಾಡುತ್ತಿದ್ದೇನೆ. ನಾನು ಏನು ಮಾತನಾಡಿದೆನೆಂದು ಸಾರ್ವಜನಿಕರಿಗೆ ಗೊತ್ತಾಗುವುದು ಹೇಗೆ ?

ಛೇರ್ಮನ್:- ತಮಗೆ ಮಾತನಾಡುವುದಕ್ಕೆ ಎಷ್ಟು ಅವಧಿಯವರೆಗೆ ಅವಕಾಶವಿದೆಯೋ, ಅಷ್ಟರವರೆಗೆ ಮಾತನಾಡಿ.

ಶ್ರೀ ಎ. ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೆ, ನನಗೆ ಸಮಂಜಸವಾದ ಒಂದು ಉತ್ತರವನ್ನು ಕೊಡಿಸಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ನಾನು ಇದರ ಬಗ್ಗೆ ಸಭಾಧ್ಯಕ್ಷರ ಹತ್ತಿರ ಮಾತನಾಡಿದ್ದೇನೆ, ಅವರು ಈಗ ಬಂದು ತಮ್ಮ ತೀರ್ಮಾನವನ್ನು ಪ್ರಕಟಿಸುತ್ತಾರೆ. ಅದುವರೆವಿಗೂ ತಮ್ಮ ಮಾತನ್ನು ಮುಂದುವರೆಸಿ. I am honest, I am very earnest about it.

ಶ್ರೀ ಎ. ಕೆ. ಅನಂತಕೃಷ್ಣ:- ನಾನು ಏನು ಮಾತನಾಡಲಿ ? ಏನು ದಾಖಲೆಯಾಗುತ್ತದೆ ?

ಶ್ರೀ ಹೆಚ್. ಏಕಾಂತಯ್ಯ:- ಈ ಹಿಂದೆ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಏನು ತೀರ್ಮಾನವಾಗಿದೆ, ಆ ತೀರ್ಮಾನದಂತೆ ಸಭೆಯ ಕಾರ್ಯ – ಕಲಾಪಗಳು ನಡೆದಿದೆಯೆ ? ಒಂದು ವೇಳೆ ಆ ರೀತಿ ಕಟ್ಟು–ನಿಟ್ಟಾಗಿ ನಡೆಯಬೇಕೆಂದಿದ್ದರೆ, ಅದಕ್ಕೆ ಬೇಕಾದಂಥ ರೀತಿಯಲ್ಲಿ ತಾವು ವೇಳೆಯನ್ನು ಗೊತ್ತುಪಡಿಸಿದ್ದೀರಾ ? ನಾನು ಮಾನ್ಯ ಅಧ್ಯಕ್ಷರಲ್ಲಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ತಾವು ಇವೊತ್ತು ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತೀರ್ಮಾನಿಸಿರುವಂತೆ ಇವೊತ್ತೇ ಈ ವಿಷಯವನ್ನು ಪೂರ್ತಿಗೊಳಿಸಬೇಕೆಂದಿದ್ದರೆ ಅದಕ್ಕೆ ಬೇಕಾದಂಥ ರೀತಿ ಅಂದರೆ, ಮೊದಲು ಇಂತಿಂಥ ಪಕ್ಷದವರು ಅಥವಾ ಇಂತಿಂಥ ಸದಸ್ಯರುಗಳು ಇಂತಿಷ್ಟು ವೇಳೆ ಮಾತನಾಡಬೇಕೆಂದು ನಿಗದಿಪಡಿಸುವ ಕಾರ್ಯಕ್ರಮ ತೆಗೆದುಕೊಂಡಿದ್ದರೆ, ಆರೂವರೆ ಗಂಟೆಯೊಳಗೆ ತಾವು ಈ ಮಾತನ್ನು ಹೇಳಬಹುದಿತ್ತು. ಅದನ್ನು ಕೈಬಿಟ್ಟು ಒಬ್ಬೊಬ್ಬರಿಗೆ 3–4 ಗಂಟೆಗಳ ಕಾಲ ಮಾತನಾಡುವುದಕ್ಕೆ ಅವಕಾಶಕೊಟ್ಟಂಥ ರೀತಿಯಲ್ಲಿ ಈ ಸಭೆಯ ಕಾರ್ಯಕಲಾಪವನ್ನು ನಡೆಸಿ, ಸದನದ ಕಾರ್ಯ ಕಲಾಪಗಳ ಸಲಹಾ ಸಮಿತಿಯ ಶಿಫಾರಸ್ಸುಗಳನ್ವಯ ಇವೊತ್ತೇ ಪೂರೈಸಬೇಕೆಂದರೆ ಅದು ಸರಿಯಾದ ಕ್ರಮವಲ್ಲ. ಅಲ್ಲದೆ, ಹಿಂದಿನ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನದ ಪ್ರಕಾರ ಸಭೆಯ ಕಾರ್ಯಕಲಾಪಗಳು ಅದಕ್ಕೆ ಹೊರತಾಗಿ ನಡೆದಿದೆಯ ? ನಡೆದಿಲ್ಲವೆ ? ತಿಳಿಸಿ.

ಶ್ರೀ ಎ. ಕೆ. ಅನಂತಕೃಷ್ಣ:- ನಾನು ಒಂದು ವಿಷಯವನ್ನು ಹೇಳುತ್ತಿದ್ದೇನೆ. ಈ ಹಿಂದೆ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿಯು ಮಾಡಿದಂಥ ತೀರ್ಮಾನಗಳನ್ನು ಬದಲಾವಣೆ ಮಾಡಲಿಲ್ಲವೆ ? ಅದನ್ನು ನಾವು ಈ ಮೂರು ವರ್ಷಗಳಲ್ಲಿ ಅನುಭವಿಸಿಲ್ಲವೆ ? ಅನಂತರ ಸದನದ

ಕಾರ್ಯಕಲಾಪಗಳ ಸಲಹಾ ಸಮಿತಿ ತೀರ್ಮಾನ ಮಾಡಿದೆ. Has it got a statutory compulsion? ಎಷ್ಟು ಸಮಯ ವಿರೋಧ ಪಕ್ಷದವರಿಗೆ ಬೇಕು, ಎಷ್ಟು ಸಮಯ ಇತರ ಪಕ್ಷಗಳವರಿಗೆ ಬೇಕೆಂದು ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ನಿಗದಿಪಡಿಸಿದೆಯೆ ?

ಛೇರ್ಮನ್:- ಈಗ ಸದನದಲ್ಲಿ ಕೋರಂ ಇಲ್ಲದಿರುವುದರಿಂದ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದರ ಬಗ್ಗೆ ಸರಿಯಾದ ವಿವರಣೆಯನ್ನು ಕೊಡಬೇಕು. ಮಾನ್ಯ ಸದಸ್ಯರು ತಮ್ಮ ಮಾತನ್ನು ನಾಳೆ ಮುಂದುವರೆಸುತ್ತೇನೆಂದು ಹೇಳುತ್ತಿದ್ದಾರೆ. ಈ ಬಗ್ಗೆ ತಮ್ಮ ಅಭಿಪ್ರಾಯ ಏನೆಂದು ಹೇಳಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ಸದರಿ ವಿಷಯದ ಮೇಲಿನ ಚರ್ಚೆಯನ್ನು ಇವೊತ್ತೇ ಮುಕ್ತಾಯಗೊಳಿಸಬೇಕೆಂದು ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತೀರ್ಮಾನವಾಗಿದೆ. ಇದಕ್ಕೆ ಸೋಮವಾರ ದಿವಸ ಉತ್ತರ ಕೊಡಬೇಕಾಗಿದೆ. ಅಲ್ಲದೆ, ಸಂವಿಧಾನಕ್ಕೆ ಆಗಿರತಕ್ಕಂಥ ತಿದ್ದಪಡಿಯನ್ನು ಒಪ್ಪುವಂಥ ನಿರ್ಣಯವನ್ನು ಪಾಸ್ ಮಾಡಬೇಕೆಂದು ಸಹ ತೀರ್ಮಾನಿಸಲಾಗಿದೆ. ಇವೊತ್ತು ಚರ್ಚೆ ಮುಕ್ತಾಯವಾಗಿಲ್ಲವೆನ್ನುವುದು ಕಾಣುತ್ತದೆ. ಆದುದರಿಂದ, ಮಾನ್ಯ ಸದಸ್ಯರೆಲ್ಲಾ ಒಪ್ಪಿದರೆ ಸೋಮವಾರ ದಿವಸ ಪ್ರಶ್ನೋತ್ತರ ಕಾಲ ಬಿಟ್ಟು 9 ಗಂಟೆಗೆ ಪ್ರಾರಂಭ ಮಾಡೋಣ. You cannot have the cake and eat it also ಇಲ್ಲದಿದ್ದರೆ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ತೀರ್ಮಾನಿಸಿದಂತೆ, ಅದಕ್ಕೆ ವಿರುದ್ಧವಾಗಿ ಪುನಃ ಸೋಮವಾರ ಸದರಿ ವಿಷಯದ ಮೇಲೆ ಚರ್ಚೆ ನಡೆಸಲು ಮೂರು ಗಂಟೆಗಳ ಕಾಲವಾದರೂ ಅವಕಾಶ ಕೊಡಬೇಕಾಗುತ್ತದೆ. ಆದುದರಿಂದ, ಸೋಮವಾರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಚರ್ಚೆ ನಡೆಸಿ, 12 ಗಂಟೆಯ ನಂತರ ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಬೇಕಾದ್ದರೆ ಕಲಾಪವನ್ನು ಸಾಯಂಕಾಲ 6 ಗಂಟೆಯವರೆಗೂ ಸಹ ನಡೆಸಬಹುದು.

ಪ್ರಶ್ನೋತ್ತರ ಕಾಲವನ್ನು ಬಿಟ್ಟರೆ, ಶೂನ್ಯ ವೇಳೆಯ ಕಾರ್ಯಕಲಾಪಗಳನ್ನು ಬಿಟ್ಟು ಸೋಮವಾರ ಬೆಳಿಗ್ಗೆ 9 ಗಂಟೆಗೆ ಸೇರಬಹುದೆಂದು ನನ್ನ ಅಭಿಪ್ರಾಯ. ತಾವು ದಯಮಾಡಿ ಹಿರಿಯ ಸದಸ್ಯರಾದ ಏಕಾಂತಯ್ಯನವರು ಇದ್ದೀರಿ ಇದರ ಬಗ್ಗೆ ಹೇಳಬೇಕು. ಏಕೆಂದರೆ ಇದು ಪರಸ್ಪರ ಒಪ್ಪಿಗೆ ಇಲ್ಲದೆ ಮಾಡುವುದಕ್ಕೆ ಆಗುವುದಿಲ್ಲ. ತಾವು ಅನುಭವಸ್ಥರಿದ್ದೀರಿ, ತಿಳಿದಿರತಕ್ಕವರಿದ್ದೀರಿ, ತಾವು ಇದರ ಬಗ್ಗೆ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಹೆಚ್. ಏಕಾಂತಯ್ಯ:- ಪ್ರಶ್ನೋತ್ತರವು ನಮ್ಮ ಮತ್ತು ನಿಮ್ಮ ಬಹಳ ಮುಖ್ಯವಾದಂಥ ವಿಭಾಗ ಮೊದಲ ಒಂದು ಗಂಟೆ ಪ್ರಶ್ನೋತ್ತರವನ್ನು ಮಾಡಿ ನಂತರ ಉಳಿದಿರತಕ್ಕದನ್ನು ಸಂಜೆ 6-7 ಗಂಟೆಯವರೆಗೆ ಬೇಕಾದರೂ ಮಾಡಿ ನಮ್ಮ ಅಭ್ಯಂತರನಿಲ್ಲ. ಆದ್ದರಿಂದ ಸೋಮವಾರ 9 ಗಂಟೆಗೆ ಸೇರೋಣ ಮತ್ತೆ ಸತತವಾಗಿ ಸಂಜೆ 6 ಗಂಟೆಯವರೆಗೆ ಬೇಕಾದರೂ ಚರ್ಚೆಯನ್ನು ಮಾಡಲು ನಾವು ತಯಾರಾಗಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಪ್ರಶ್ನೋತ್ತರವನ್ನು ಮಾತ್ರ ತಡೆಹಿಡಿಯಬೇಡಿ.

ಶ್ರೀ ಹೆಚ್. ಏಕಾಂತಯ್ಯ:- ಪ್ರಶ್ನೋತ್ತರವನ್ನು ಬಿಟ್ಟು ಉಳಿದಿರತಕ್ಕದನ್ನು ತಡೆಹಿಡಿಯುವುದರಲ್ಲಿ ನಮ್ಮ ತಕರಾರು ಇಲ್ಲ.

ಶ್ರೀ ಎ. ಕೆ. ಅನಂತಕೃಷ್ಣ:- 9ರಿಂದ 10 ಗಂಟೆಯವರೆಗೆ ಪ್ರಶ್ನೋತ್ತರ ಕಾಲವನ್ನು ಮಾಡಿ ನಂತರ ನಿಮ್ಮ ಡಿಬೇಟನ್ನು ಪ್ರಾರಂಭ ಮಾಡೋಣ.

ಛೇರ್ಮನ್:– ಹಾಗಾದರೆ ಶೂನ್ಯ ವೇಳೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:– ಮೊದಲು ಶೂನ್ಯವೇಳೆ ಎಂಬುದೇ ಇರಲಿಲ್ಲ, ತಾವು ಅನುಮತಿಯನ್ನು ಕೊಟ್ಟರೆ ಮಾತ್ರ ಶೂನ್ಯ ವೇಳೆ ಇರುತ್ತಿತ್ತು.

ಶ್ರೀ ಹಾರ್‍ನಹಳ್ಳಿ ರಾಮಸ್ವಾಮಿ:– ಸಭಾಧ್ಯಕ್ಷರು ಬರತ್ತಾರೆ. ಅನಂತರ ಅವರ ಮುಖಾಂತರ ಇದನ್ನು ಅನೌನ್ಸ್ ಮಾಡಿಸಿಬಿಡೋಣ ? After taking the consensus of the House, definitely the Chair is empowered to take the decision. The Hon. Speaker is of the opinion that if the Members agree, we may give up the Question Hour also and take it up tomorrow at 9.00 A.M. However, it should not becc me a bad precedent.

ಶ್ರೀ ಹೆಚ್. ಏಕಾಂತಯ್ಯ:– ಯಾವುದೇ ಒಂದು ವಿಶೇಷವಾದಂಥ ಕಾರಣವಿಲ್ಲದೆ ಪ್ರಶ್ನೋತ್ತರ ಕಾಲಾವಧಿಯನ್ನು ಬಿಡಬಾರದು, ಆ ರೀತಿ ಆಗಬಾರದು ಎನ್ನತಕ್ಕ ದೃಷ್ಟಿಯಿಂದ ನಾನ ಹೇಳಿದ್ದೇನೆ. ನನ್ನ ಪ್ರಶ್ನೆ ಏನೆಂದರೆ, ವಿಶೇಷವಾದಂಥ ಕಾರಣವಿದ್ದಾಗ ಮಾತ್ರ ಪ್ರಶ್ನೋತ್ತರ ಕಾಲವನ್ನು ಕಡಿತಗೊಳಿಸಿರುವುದನ್ನು ನೋಡಿದ್ದೇವೆ, ಆ ದೃಷ್ಟಿಯಿಂದ ತಮಗೆ ಹೇಳುತ್ತಿದ್ದೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಸೋಮವಾರ ಬೆಳಿಗ್ಗೆ 9 ಗಂಟೆಗೆ ಸಭೆಯನ್ನು ಮುಂದುವರೆಸಬಹುದು. ಆ ದಿವಸ ಬೆಳಿಗ್ಗೆ ಒಂದು ಗಂಟೆ ಪ್ರಶ್ನೋತ್ತರಗಳು ಅನಂತರ 12 ಗಂಟೆಯವರೆಗೆ ಚರ್ಚೆಯನ್ನು ಮುಂದುವರೆಸಿ, 12 ಗಂಟೆಗೆಯ ನಂತರ ಉತ್ತರವನ್ನು ಕೊಟ್ಟು ಮುಂದೆ ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಏನು ಕಾರ್ಯಕಲಾಪಗಳನ್ನು ನಿಗದಿ ಮಾಡಿದ್ದಾರೋ ಅದನ್ನು ಮಾಡೋಣ.

ಶ್ರೀ ವಾಟಾಳ್ ನಾಗರಾಜ್:– ಸಭೆಯನ್ನು 9 ಗಂಟೆಗೆ ಇಟ್ಟುಕೊಳ್ಳುವಲ್ಲಿ ನನ್ನ ಅಭ್ಯಂತರವಿಲ್ಲ, ಆದರೆ ಹೊರಗಿನಿಂದ ಸದಸ್ಯರುಗಳು 9 ಗಂಟೆಗೆ ಬರಲು ಸಾಧ್ಯವಾಗುತ್ತದೆಯೆ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಬರುತ್ತಾರೆ, ಬರಬೇಕಾಗುತ್ತದೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತಾವೇ ಮಾಡಿರತಕ್ಕ ತೀರ್ಮಾನಕ್ಕೆ ವಿರುದ್ಧವಾಗಿ ಹೋಗುತ್ತಿದ್ದೀರಲ್ಲ ?

ಶ್ರೀ ಸಿ. ಬೈರೇಗೌಡ:– ನೀವು ಬೆಳಿಗ್ಗೆ 9 ಗಂಟೆಗಲ್ಲ ಬೇಕಾದರೆ 7 ಗಂಟೆಗೆ ಇಟ್ಟುಕೊಳ್ಳಿ, ನಾವುಗಳು ಬರುತ್ತೇವೆ. ಆದರೆ ನಮ್ಮ ಎದುರುಗಡೆ ಇರತಕ್ಕ ಸದಸ್ಯರುಗಳು ಬರುವುದಿಲ್ಲ.

ಶ್ರೀಹಾರನಹಳ್ಳಿ ರಾಮಸ್ವಾಮಿ:– ಅವರೆಲ್ಲರನ್ನೂ ಕರೆಯಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ಮಂತ್ರಿಗಳು ಇರುವುದಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಸೋಮವಾರ ನಮ್ಮ ಶಾಸಕರನ್ನು, ಮಂತ್ರಿಗಳನ್ನು ಕರೆಸತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ:– ಪುನಃ ಆಭಾಸವಾಗುತ್ತದೆ, ದಯಮಾಡಿ ಆ ರೀತಿ ಮಾಡಬೇಡಿ, ಇದರ ಮೇಲೆ ನಿಮ್ಮ ಇಷ್ಟ, ನೀವು 9 ಗಂಟೆಗೆ ಎಂದರೆ ನಾವು 7 ಗಂಟೆಗೇ ಬರುತ್ತೇವೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಸಭೆಯನ್ನು ಸೋಮವಾರ 9–30ಕ್ಕೆ ಮುಂದುವರೆಸಬಹುದು.

ಛೇರ್ಮನ್:- ಈ ಸಭೆಯನ್ನು ಸೋಮವಾರ ಅಂದರೆ 1-3-1993ರ ಬೆಳಿಗ್ಗೆ 9-30ಕ್ಕೆ ಮುಂದುವರೆಸಲಾಗಿದೆ.

(ಸದನವು 6.35ಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ: ಒಂದನೇ ಮಾರ್ಚ್ ಮಾಹೆ 1993ರ ಸೋಮವಾರದಂದು ಬೆಳಿಗ್ಗೆ 9-30 ಘಂಟೆಗೆ ಸೇರಲು ನಿಶ್ಚಯಿಸಿತು).

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನಸಭೆ

ಸೋಮವಾರ 1 ನೇ ಮಾರ್ಚ್ 1993 ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-50 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯದಲ್ಲಿ ಹೊಸ ರೈಲು ಮಾರ್ಗಗಳ ಪ್ರಾರಂಭ

163 (339): ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):—

ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹೊಸದಾಗಿ ರೈಲು ಮಾರ್ಗಗಳನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದೆ;

ಆ) ಹಾಗಿದ್ದಲ್ಲಿ, ಆ ಮಾರ್ಗಗಳು ಯಾವುವು;

ಇ) ಬೆಂಗಳೂರು–ಮೈಸೂರು ರೈಲು ಮಾರ್ಗವು ಬೇಗನೆ ಮುಗಿಸುವಂತೆ ಸರ್ಕಾರದವರು ಕೇಂದ್ರಕ್ಕೆ ಒತ್ತಾಯ ಮಾಡಿರುವರೆ;

ಈ) ಕೊಂಕಣ ರೈಲ್ವೆ ಮಾರ್ಗಕ್ಕೆ ಇದುವರೆಗೂ ರಾಜ್ಯ ಸರ್ಕಾರದವರು ಒದಗಿಸಿರುವ ಹಣವೆಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):–

ಅ) ತಿಳಿಸಲಾಗುವುದು.

ಆ) 1. ಗುಲ್ಬರ್ಗಾ–ಬೀದರ್
2. ಬೆಂಗಳೂರು – ವರ್ತುಲ ರೈಲ್ವೆ
3. ಕೊಟ್ಟೂರು – ಹರಿಹರ ರೈಲ್ವೆ
4. ಚಾಮರಾಜನಗರ --ಸತ್ಯಮಂಗಲಂ – ಮೆಟ್ಟುಪಾಳ್ಯಂ

ಇ) ಬೆಂಗಳೂರು – ಮೈಸೂರು ರೈಲ್ವೆ ಮಾರ್ಗವು ಪೂರ್ಣಗೊಂಡಿದ್ದು ರೈಲು ಸಂಚಾರವು ನಡೆಯುತ್ತಿದೆ.

ಈ) ಈವರೆವಿಗೂ ಒಟ್ಟು ರೂ.42.50 ಕೋಟಿ ಹಣವನ್ನು ರಾಜ್ಯ ಸರ್ಕಾರವು ಕೊಂಕಣ ರೈಲ್ವೆ ಮಾರ್ಗಕ್ಕಾಗಿ ಒದಗಿಸಿರುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ:– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ರಾಜ್ಯದಲ್ಲಿ ಹೊಸದಾಗಿ ರೈಲ್ವೆ ಮಾರ್ಗಗಳನ್ನೂ ಪ್ರಾರಂಭಿಸಲು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದೇ ಎಂದು ಕೇಳಿರುವುದಕ್ಕೆ, ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದೆಂದು ಹೇಳಿದ್ದೀರಿ. ಇದರಲ್ಲಿ 4 ರೈಲ್ವೆ ಮಾರ್ಗಗಳನ್ನು ಸೇರಿಸಿದ್ದೀರಿ. ಇದರಲ್ಲಿ ಅತಿ ಮುಖ್ಯವಾದುದು ಬೆಂಗಳೂರು ಮತ್ತು ಮೀರಜ್. ಇದು ಸುಮಾರು ಕರ್ನಾಟಕ ರಾಜ್ಯದ 6-7 ಜಿಲ್ಲೆಗಳಿಗೆ ಅನುಕೂಲವಾಗುವಂಥದ್ದು. ಬೆಂಗಳೂರು ಮತ್ತು ಮೀರಜ್ ಇದನ್ನು ಬ್ರಾಡ್ಗೇಜ್ ಆಗಿ ಕನ್‌ವರ್ಟ್ ಮಾಡಲು ಅದನ್ನು ಇದರಲ್ಲಿ ಸೇರಿಸಿಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಕೆ.ಹೆಚ್. ರಂಗನಾಥ್:– ಈಗ ಬೆಂಗಳೂರು–ತುಮಕೂರು ಬ್ರಾಡ್‌ಗೇಜ್ ಕೆಲಸ ನಡೆಯುತ್ತಿದೆ. ಮೀರಜ್ ಎಂದರೆ ವಯಾ ತುಮಕೂರು, ಅರಸೀಕೆರೆಗೆ ಹಾಗೆಯೇ ಹೋಗುತ್ತದೆ.

ಶ್ರೀ ಎಂ.ವಿ. ವೆಂಕಟಪ್ಪ:– ನಾಲ್ಕು ರೈಲ್ವೆ ಮಾರ್ಗಗಳನ್ನು ಏನು ತೋರಿಸಿದ್ದೀರಿ, ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಬರೆದಿದ್ದೀರಾ ? ಅಥವಾ ಬರೆಯಬೇಕೇ ?

ಶ್ರೀ ಕೆ.ಹೆಚ್. ರಂಗನಾಥ್:– ಬರೆದಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಕಳೆದ ವಾರ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ವರ್ತುಲ ರೈಲ್ವೆಯನ್ನು ಏಪ್ರಿಲ್ 1993ರಿಂದ ಪ್ರಾರಂಭಿಸುತ್ತೇವೆಂದು ಪತ್ರಿಕೆಗಳಲ್ಲಿ ಹೇಳಿದ್ದಾರೆ. ಅದು ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಬಂದಿದೆಯೆ ? ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿದ್ದೀರಾ ? ಕೇಂದ್ರ ಸರ್ಕಾರದವರು ಇದಕ್ಕೆ ದುಡ್ಡು ಕೊಡುತ್ತಿದ್ದಾರೆಯೆ ? ರಾಜ್ಯ ಸರ್ಕಾರದಿಂದ ಎಷ್ಟು ದುಡ್ಡು ಈ ವರ್ಷದ ಬಜೆಟ್ಟಿನಲ್ಲಿ ಇಟ್ಟುಕೊಂಡಿದ್ದೀರಿ ? ಅಥವಾ ಕೇವಲ ರಾಜಕೀಯ ಪ್ರಚಾರಕ್ಕೋಸ್ಕರ ಘೋಷಣೆ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್:– ರಾಜಕೀಯ ಪ್ರಚಾರ ಅಲ್ಲ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ ಆ ಸಮಾರಂಭದಲ್ಲಿ ಕೇಂದ್ರದ ರೈಲ್ವೆ ಮಂತ್ರಿಗಳು ಕೂಡ ಇದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ಖಚಿತವಾಗಿ ಪ್ರಶ್ನೆ ಕೇಳಿದ್ದೇನೆ. 1993–94ನೇ ಇಸವಿಯ ಹಣಕಾಸಿನ ವರ್ಷ ಏಪ್ರಿಲ್ ಒಂದರಿಂದ ಪ್ರಾರಂಭವಾಗುತ್ತದೆ, ಅಂದರೆ ಇನ್ನು 31 ದಿವಸ ಇದೆ. ಈಗ ಆಯವ್ಯಯ ನಮ್ಮ ಮುಂದೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಹತ್ತು ಪರ್ಸೆಂಟ್ ಹಣವನ್ನು ಬಜೆಟ್ಟಿನಲ್ಲಿ ಇಟ್ಟದ್ದೇವೆಂದು ಹೇಳಿದ್ದಾರೆ. ಆದರೆ ಬಜೆಟ್ಟಿನಲ್ಲಿ ಹಣ ಇಟ್ಟಿಲ್ಲ. ತಾವು ಸಂಬಂಧಪಟ್ಟ ಮಂತ್ರಿಗಳು ಇದ್ದೀರಿ. ಆದ್ದರಿಂದ ತಮ್ಮಲ್ಲಿ ವಿನಂತಿಸುವುದು ಏನೆಂದರೆ ರೀ–ಅಪ್ರೋಪ್ರಿಯೇಷನ್‌ನಲ್ಲಿ ಹತ್ತು ಪರ್ಸೆಂಟ್ ದುಡ್ಡು ಇಡುವವರಿದ್ದೀರಾ ? ಏತಕ್ಕೆ ಕೇಳಿದೆ ಎಂದರೆ, ಮುಖ್ಯಮಂತ್ರಿಗಳು ಹೋದ ಕಡೆಗಳಲ್ಲೆಲ್ಲ ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆಂದು ಘೋಷಣೆ ಮಾಡುತ್ತಿದ್ದಾರೆ. ಬರೀ ಘೋಷಣೆಯಲ್ಲೇ ಸರ್ಕಾರ ಕುಳಿತಿದೆ. ಇದನ್ನು ಕೇವಲ ರಾಜಕೀಯ ಉದ್ದೇಶಕ್ಕೋಸ್ಕರ ಮಾಡಿದಿರಾ ?ಅಥವಾ ಇನ್ನು ಯಾರನ್ನಾದರೂ ಪ್ಲೀಜ್ ಮಾಡುವುದಕ್ಕೆ ಮಾಡಿದಿರಾ ? ವರ್ತುಲ ರೈಲ್ವೆ ಮಾಡಬೇಕಾದರೆ ಒಂದೆರಡು ಕೋಟಿ ರೂಪಾಯಿಗಳನ್ನಾದರೂ ಇಟ್ಟುಕೊಂಡಿದ್ದೀರಾ ?

ಶ್ರೀ ಕೆ.ಹೆಚ್.ರಂಗನಾಥ್:– ಆದಕ್ಕೆ ಹೇಳಿದೆ ಘೋಷಣೆಗೋಸ್ಕರ ಅಲ್ಲ ಎಂದು. ಕೇಂದ್ರದ ರೈಲ್ವೆ ಮಂತ್ರಿಗಳು ಇದ್ದಾಗ ರಾಜ್ಯದ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ವಿಷದವಾದ ಪ್ರಸ್ತಾಪವನ್ನು ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಮಾಡಬಹುದು.

ಶ್ರೀ ಎಂ.ವಿ. ವೆಂಕಟಪ್ಪ:– ಬೆಂಗಳೂರು ನಗರದಲ್ಲಿ ವರ್ತುಲ ರೈಲ್ವೆ ಇದೆಯಲ್ಲ ಅದಕ್ಕೆ ಎಷ್ಟು ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೀರಿ ?

ಶ್ರೀ ಕೆ.ಹೆಚ್. ರಂಗನಾಥ್:– ಈಗ ಆ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಪ್ರಶ್ನೆ ಸಂಖ್ಯೆ 1213-ತುಮಕೂರು ಜಿಲ್ಲೆಯ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ.

ಶ್ರೀ ಆರ್.ಬಿ. ಚೌಧುರಿ:– ಪ್ರಶ್ನೆ 167(492) ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟಿಗೆ ವರ್ಗಾಯಿಸಲ್ಪಟ್ಟಿದೆ.

ಶ್ರೀ ಅಂಜನಾಮೂರ್ತಿ:- ನನಗೆ ಉತ್ತರ ಕಳುಹಿಸಿದ್ದಾರೆ. ಒಂದೆರಡು ಕ್ಲಾರಿಫಿಕೇಷನ್ ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:- ನನಗೆ ಸ್ವಲ್ಪ ಸಮಯ ಕೊಟ್ಟರೆ ನಾನು ಇದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು:- ಆ ಪ್ರಶ್ನೆಯನ್ನು ನೀರಾವರಿ ಇಲಾಖೆಗೆ ವರ್ಗಾಯಿಸಿರುವುದರಿಂದ ಅದನ್ನು ತಡೆಹಿಡಿದಿರುತ್ತೇನೆ.

ಹೇಮಾವತಿ ನಾಲಾ ವಲಯ ತುಮಕೂರು ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ಬಗ್ಗೆ.

168 (167): ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):—

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕಳೆದ ಐದು ವರ್ಷಗಳಿಂದ ಹೇಮಾವತಿ ನಾಲಾ ವಲಯ, ತುಮಕೂರು ವ್ಯಾಪ್ತಿಯಲ್ಲಿ ಎಷ್ಟು ಮಂದಿ ಸಹಾಯಕ ಇಂಜಿನಿಯರ್ ಮತ್ತು ಎಷ್ಟು ಮಂದಿ ಕಿರಿಯ ಇಂಜಿನಿಯರ್‌ಗಳು ಸೇವೆ ಸಲ್ಲಿಸುತ್ತಿದ್ದಾರೆ;

ಆ) ಐದು, ಆರು ವರ್ಷಗಳಿಂದ ಅಲ್ಲಿಯೇ ಸೇವೆ ಮಾಡುತ್ತಿರುವ ಕಾರಣ ಏನು;

ಇ) ಪರಸ್ಪರ ವರ್ಗಾವಣೆ ಆಧಾರದ ಮೇಲೆ ಎಷ್ಟು ವರ್ಷದಿಂದ ಎಷ್ಟು ಮಂದಿ ಕೆಲಸ ನಿರ್ವಹಿಸುತ್ತಿದ್ದಾರೆ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) 1. ಸಹಾಯಕ ಇಂಜಿನಿಯರುಗಳು 48 ಮಂದಿ
2. ಕಿರಿಯ ಇಂಜಿನಿಯರುಗಳು 29 ಮಂದಿ.

ಆ) ಮೇಲಿನ ನೌಕರರು ವಲಯದಿಂದ ಹೊರಗೆ ವರ್ಗವಾಗದಿದ್ದ ಕಾರಣ ಈ ವಲಯದಲ್ಲಿಯೇ ಮುಂದುವರಿಯುತ್ತಿದ್ದಾರೆ.

ಇ) 16 ಸಹಾಯಕ ಇಂಜಿನಿಯರುಗಳ, 8 ಕಿರಿಯ ಇಂಜಿನಿಯರುಗಳು ಒಂದು ಮತ್ತು ಎರಡು ವರ್ಷಗಳಿಗೂ ಮೇಲ್ಪಟ್ಟು ಕೆಲಸ ನಿರ್ವಹಿಸುತ್ತಿದ್ದಾರೆ.

ಶ್ರೀ ಕೆ. ಲಕ್ಕಣ್ಣ:- ಹೇಮಾವತಿ ಯೋಜನೆ, ತುಮಕೂರು ಭಾಗದಲ್ಲಿ ಅಸಿಸ್ಟೆಂಟ್ ಇಂಜಿನಿಯರ್‌ಗಳು ಮತ್ತು ಜೂನಿಯರ್ ಇಂಜಿನಿಯರ್‌ಗಳು ಸುಮಾರು 10-12ವರ್ಷಗಳಿಂದ ಸೇವೆ ಮಾಡುತ್ತಿದ್ದಾರೆ. ಅವರು ಪರಸ್ಪರ ವರ್ಗಾವಣೆ ಅಲ್ಲಿಯೇ ಮಾಡಿಕೊಂಡು ಇದುವರೆಗೂ ಬೇರೆ ಕಡೆ ವರ್ಗಾವಣೆಯಾಗಿಲ್ಲ. ಏತಕ್ಕೋಸ್ಕರ ವರ್ಗಾವಣೆ ಮಾಡಿಲ್ಲವೆಂದು ನೀರಾವರಿ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಈ ವಲಯದಲ್ಲಿ ಎರಡು ವೃತ್ತ ಕಛೇರಿಗಳಿವೆ, 8 ವಿಭಾಗ ಕಛೇರಿಗಳಿವೆ, 32 ಉಪವಿಭಾಗ ಕಛೇರಿಗಳಿವೆ; ಡಿಸೆಂಬರ್ 1992ರಿಂದೀಚೆಗೆ ಎರಡು ಹೇಮಾವತಿ ನಾಲಾ ವಿತರಣಾ ವಿಭಾಗ ಕಛೇರಿಗಳು ಮತ್ತು 7 ಉಪ ವಿಭಾಗ ಕಛೇರಿಗಳು ಸೃಷ್ಟಿಯಾಗಿವೆ. ಐದು ವರ್ಷಕ್ಕೆ ಮೇಲ್ಪಟ್ಟು 48ಸಹಾಯಕ ಇಂಜಿನಿಯರ್‌ಗಳು 29ಕಿರಿಯ ಇಂಜಿನಿಯರ್‌ಗಳು ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಹೊರಗೆ ವರ್ಗಾವಣೆ ಹೊಂದಿರದ ಪ್ರಯುಕ್ತ ಈ ವಲಯದಲ್ಲಿಯೇ ಒಂದು ಸ್ಥಳದಿಂದ ಇನ್ನೊಂದು

ಸ್ಥಳಕ್ಕೆ ಸರ್ಕಾರಿ ನೌಕರರ ಕೋರಿಕೆಯಂತೆ 16 ಮಂದಿ ಸಹಾಯಕ ಇಂಜಿನಿಯರ್‌ಗಳು ಮತ್ತು 8 ಮಂದಿ ಕಿರಿಯ ಇಂಜಿನಿಯರ್‌ಗಳು ಪರಸ್ಪರ ವರ್ಗಾವಣೆ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ.

ಶ್ರೀ ಕೆ.ಲಕ್ಕಣ್ಣ:- ಆ ವಲಯದಿಂದ ಬೇರೆ ಕಡೆ ವರ್ಗಾವಣೆ ಏತಕ್ಕೆ ಮಾಡಬಾರದೆಂದು ಕೇಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ:- ಸಾರ್ವಜನಿಕ ಹಾಗೂ ಸರ್ಕಾರದ ಹಿತದೃಷ್ಟಿಯಿಂದ ಒಂದು ವಲಯದಿಂದ ಇನ್ನೊಂದು ವಲಯಕ್ಕೆ ವರ್ಗಾವಣೆಯಾಗುವುದರಿಂದ ಕೆಲಸ ಇನ್ನೂ ಚೆನ್ನಾಗಿ ನಡೆಯುತ್ತೆಂಬುದು ಸರ್ಕಾರದ ಗಮನಕ್ಕೆ ಬಂದರೆ ಅದನ್ನು ಮಾಡುವುದಕ್ಕೆ ತಯಾರಾಗಿದ್ದೇವೆ.

ಮಾನ್ಯ ಅಧ್ಯಕ್ಷರೇ, ಪ್ರಶ್ನೆ 1279ಕ್ಕೆ ಒಂದು ವಾರದ ಕಾಲವಕಾಶಬೇಕೆಂದು ತಮಗೆ ಆಗಲೇ ಕೇಳಿಕೊಂಡಿದ್ದೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಯಾವುದೇ ವಿವರಗಳನ್ನು ಸಂಗ್ರಹ ಮಾಡಬೇಕಾಗಿಲ್ಲ. ಎಲ್ಲಾ ಇಲಾಖೆ ಮುಖ್ಯಸ್ಥರಲ್ಲೇ ಸಿಗುತ್ತದೆ. ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಒದು ತಿಂಗಳೊಳಗಾಗಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯುತ್ತಿದ್ದೇನೆಂದು ಹಿಂದಿನ ಅಧಿವೇಶನದಲ್ಲಿ ಹೇಳಿದ್ದರು. ಮಂಜೂರಾತಿ ಪಡೆಯಲಾಗಿದೆಯೇ ಎಂದು ಕೇಳಿದ್ದೇನೆ. ಇದಕ್ಕೆ ಏನು ವಿವರ ಬೇಕು ? ಮತ್ತೆ 1993-94ರ ಆಯವ್ಯಯದಲ್ಲಿ 50 ಕೋಟಿ ಒದಗಿಸುತ್ತೇನೆಂದು ಹೇಳಿದರು. ಆದರೆ ಕೇವಲ 5 ಕೋಟಿಯನ್ನು ಬಡ್ಜೆಟ್ಟಿನಲ್ಲಿ ಒದಗಿಸಲಾಗಿದೆ. ಸರ್ಕಾರ ಈ ತುಂಗಾ ಮೇಲ್ದಂಡೆ ನೀರಾವರಿ ವಿಚಾರವಾಗಿ ಸಂಪೂರ್ಣ ನಿರ್ಲಕ್ಷ್ಯ ತಾಳಿದೆ. ಈ ಪ್ರಶ್ನೆಗೆ ಉತ್ತರ ಕೊಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಈ ಬಗ್ಗೆ ಸರ್ಕಾರ ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡುತ್ತಿಲ್ಲ. ಇದನ್ನು ಕೇಂದ್ರಕ್ಕೆ ಕಳುಹಿಸಿ 3 ವರ್ಷ ಆಯಿತು. ಇನ್ನೂ ಕೂಡಾ.....

ಅಧ್ಯಕ್ಷರು:- ಮುಂದಿನವಾರ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೇನೆ. ಸರಿಯಾದ ಉತ್ತರ ಹೇಳುವುದಕ್ಕೆ ಅವಕಾಶ ಕೇಳಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಇದಕ್ಕೇ ಕೇಂದ್ರದಿಂದ ಮಂಜೂರಾತಿ ಪಡೆಯಲು ಆಗದಿದ್ದರೆ ಕರ್ನಾಟಕದ ಯಾವ ಯೋಜನೆಗೂ ಮಂಜೂರಾತಿ ಪಡೆಯುವುದಕ್ಕಾಗುವುದಿಲ್ಲ.

ಅಧ್ಯಕ್ಷರು:- ಮಂಜೂರಾತಿ ಆಗಿಲ್ಲ ಎಂದು ಉತ್ತರ ಹೇಳಿಲ್ಲ. ಸರಿಯಾದ ಉತ್ತರ ಹೇಳುವುದಕ್ಕೆ ಕಾಲಾವಕಾಶ ಕೇಳಿದ್ದಾರೆ. ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಇಲಾಖೆಯವರೇ ಕೊಡತಕ್ಕ ಉತ್ತರ. ಆದಕ್ಕೆ ಹಣ ಒದಗಿಸಿಲ್ಲ, ಮಂಜೂರಾತಿ ಕೊಟ್ಟಿಲ್ಲ. ಉತ್ತರ ಪಡೆಯುವುದಕ್ಕೇ ಇಷ್ಟು ಕಠಿಣವಾದರೆ ಈ ಸರ್ಕಾರಕ್ಕೆ ನೀರಾವರಿ ಮಾಡುವುದಕ್ಕೆ ಸಾಧ್ಯವೇ ಎನ್ನುವ ಸಂಶಯ ರೈತರಿಗೆ ಬರುತ್ತದೆ. ಇನ್ನು ಸಿಬ್ಬಂದಿ ನೇಮಿಸುವ ಬಗ್ಗೆ ವಿವರಣೆ ಕೇಳಿದ್ದು, ಇದಕ್ಕೆ ಸಿಬ್ಬಂದಿಯನ್ನು ಪ್ರತ್ಯೇಕವಾಗಿ ನೇಮಿಸಿದ್ದೀರಿ. ಮುಖ್ಯ ಎಂಜಿನಿಯರ್.......

ಶ್ರೀ ಎಸ್.ಎಂ. ಕೃಷ್ಣ:- ಉತ್ತರಕ್ಕೆ ಒಂದು ವಾರ ಕಾಲಾವಕಾಶ ಕೇಳಿದ್ದೇನೆ. ಇದನ್ನು ಇಷ್ಟೊಂದು ದೊಡ್ಡ ಚರ್ಚಾಸ್ಪದವಾದಂಥ ವಿಚಾರವನ್ನಾಗಿ ಮಾಡಬೇಕಾದ ಅಗತ್ಯತೆ ಇಲ್ಲ.

ಅಧ್ಯಕ್ಷರು:- ಈಗ ಮುಂದಿನ ಪ್ರಶ್ನೆ.

ಶ್ರೀ ಬಿ.ಹೆಚ್. ಬನ್ನೀಕೋಡ್:- ಕೇಂದ್ರ ಸರ್ಕಾರದ ಒಪ್ಪಿಗೆ ಪಢೆಯಲು ತಾವು ಪ್ರಯತ್ನ ಪಡಬೇಕು. ಇದಕ್ಕೆ ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ:- ಅದಕ್ಕೆ ಮುಂದಿನ ವಾರ ಉತ್ತರ ಕೊಡುತ್ತೇನೆ.

ಕೊಡಗು ಜಿಲ್ಲೆಯ ರಸ್ತೆಗಳ ದುರಸ್ತಿ

172 (801): ಶ್ರೀಮತಿ ಸುಮಾ ವಸಂತ (ವೀರಾಜಪೇಟೆ):—

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯಲ್ಲಿ ರಸ್ತೆಗಳು ತೀರಾ ಹದಗೆಟ್ಟಿದ್ದು ವಾಹನಗಳ ಓಡಾಟಕ್ಕೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಗಳನ್ನು ಸುಸ್ಥಿತಿಯಲ್ಲಿಡುವುದಕ್ಕಾಗಿ ಶಾಶ್ವತ ವ್ಯವಸ್ಥೆ ಕೈಗೊಳ್ಳುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ರಸ್ತೆಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕ ಬಂದಿರುತ್ತದ.

ಆ) ಒಟ್ಟು 125.72 ಲಕ್ಷ ರೂ.ಗಳ ವೆಚ್ಚದಲ್ಲಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ವಾರ್ಷಿಕ ದುರಸ್ತಿ, ವಿಶೇಷ ದುರಸ್ತಿ, ಅಭಿವೃದ್ಧಿ ಕಾರ್ಯಕ್ರಮ ಹಾಗೂ ಮಳೆಹಾನಿ ದುರಸ್ತಿ ಯೋಜನೆಯಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಪ್ರತಿವರ್ಷವೂ ಲಭ್ಯವಾಗುವ ನಿರ್ವಹಣಾ ಅನುದಾನದ ಅಡಿಯಲ್ಲಿ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಅನುವಾಗುವಂತೆ ಕ್ರಮಬದ್ಧವಾದ ಮರು ಡಾಂಬರೀಕರಣ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲಾಗುವುದು.

ಶ್ರೀಮತಿ ಸುಮಾ ವಸಂತ:– ಮಾನ್ಯ ಅಧ್ಯಕ್ಷರೇ, 125 ಲಕ್ಷ ರೂಪಾಯಿ ವೆಚ್ಚದಲ್ಲಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲು ಪ್ರಯತ್ನ ಪಡುತ್ತಿದ್ದೇವೆಂದಿದ್ದಾರೆ. ಈ ಹಣವನ್ನು ಬಿಡುಗಡೆ ಮಾಡಿದ್ದಾರೆಯೇ ? ಯಾವ ಹೆಡ್ ಆಫ್ ಅಕೌಂಟ್‌ನಲ್ಲಿ ಹಣ ಬಿಡುಗಡೆ ಮಾಡಿದ್ದಾರೆ ? ಮತ್ತು ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಯಾವಾಗ ಮಾಡುತ್ತಾರೆ ?

ಶ್ರೀ ಕೆ.ಹೆಚ್. ರಂಗನಾಥ್:– 125 ಲಕ್ಷ ರೂಪಾಯಿ, ಬಿಡುಗಡೆ ಮಾಡಿರುವುದು ಅಲ್ಲ. ಅದು ಇಟ್ಟಿರತಕ್ಕ ಹಣ. ಈಗ ಮಳೆಗಾಲದಲ್ಲಿ ಹಾನಿಯಾಗಿರುವುದಕ್ಕೆ ಜಿಲ್ಲಾ ಪರಿಷತ್ತಿನಿಂದ 14 ಲಕ್ಷ, 30 ಸಾವಿರ ರೂಪಾಯಿ ಬಿಡುಗಡೆ ಮಾಡಿ ಕೆಲಸ ಮಾಡಿಸಲಾಗಿದ.

ಶ್ರೀಮತಿ ಸುಮ ವಸಂತ:– ಮಳೆಹಾನಿ ದುರಸ್ತಿ ಯೋಜನೆಯಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಹೇಳಿದ್ದಾರೆ. ನಮ್ಮ ಕೊಡಗು ಜಿಲ್ಲೆಗೆ ಪರಿಹಾರಕ್ಕ 50 ಸಾವಿರ ಮಾತ್ರ ಮಳೆ ಹಾನಿಯಲ್ಲಿ ಕೊಟ್ಟಿದ್ದಾರೆ. ಇದು ರಸ್ತೆಗೆ ಕೊಟ್ಟಿದ್ದಲ್ಲ. ಅದು ಮನೆ ಬಿದ್ದು ಹೋಗಿರುವುದಕ್ಕೆ ಪರಿಹಾರ ಕೊಡುವುದಕ್ಕೆ ಆಗುತ್ತದೆ. ಕಳೆದ ಬಡ್ಜೆಟ್ ಸೆಷನ್‌ನಲ್ಲಿ ನಾನು ಪ್ರಶ್ನೆ ಕೇಳಿದ್ದ. ಇದೇ ರೀತಿ ಉತ್ತರ ಹೇಳಿದರು. ಅಧಿಕಾರಿಗಳನ್ನು ಕೇಳಿದರೆ ಜಲ್ಲಿ ಇಲ್ಲ ಟಾರ್ ಇಲ್ಲ, ಹಣ ಇಲ್ಲ, ಎಲ್‌ಓಸಿ ಬರಲಿಲ್ಲ, ಗ್ಯಾಂಗ್ ಕೂಲೀಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಕಳೆದ 7 ವರ್ಷಗಳಿಂದ ಪ್ಲಾನ್‌ನಲ್ಲಿ ಯಾವುದೇ ಒಂದು ರಸ್ತೆ ಕಾಮಗಾರಿ ಬಜೆಟ್‌ನಲ್ಲಿ ಸೇರಿಲ್ಲ. ನಾನ್ ಪ್ಲಾನ್‌ನಲ್ಲಿ ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ನಾನ್ ಪ್ಲಾನ್‌ನಲ್ಲಿ ಯಾವುದೇ ಹಣ ಇಲ್ಲ. ಆದ್ದರಿಂದ ಇದಕ್ಕೆ ಸರ್ಕಾರ ಇನ್ನಾದರೂ ಹೆಚ್ಚಿನ ಆದ್ಯತೆ ಕೊಟ್ಟು ಸ್ಪೆಷಲ್ ಗ್ರಾಂಟ್ ಕೊಟ್ಟು ಕೊಡಗು ಜಿಲ್ಲೆಯಲ್ಲಿ ಕೆಲಸ ಮಾಡಿಸುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ವ್ಯಾಪ್ತಿಯಲ್ಲಿ 310 ಕಿಲೋಮೀಟರ್ ರಾಜ್ಯ ಹೆದ್ದಾರಿ ಇದೆ, 604 ಕಿಲೋಮೀಟರ್ ಮುಖ್ಯ ಜಿಲ್ಲಾ ರಸ್ತೆಗಳು ಇವೆ.

1823 ಕಿಲೋಮೀಟರ್ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರತಕ್ಕಂಥ ರಸ್ತೆಗಳು ಇವೆ. ಹೀಗಾಗಿ ಒದಗಿಸಿರತಕ್ಕಂಥ ಹಣ ಸಾಕಾಗುತ್ತದೆ ಎಂದು ನಾನು ಭಾವಿಸಿಲ್ಲ. ಆದರೆ ಕಾರಣಾಂತರದಿಂದ ಹಣ ಒದಗಿಸುವುದಕ್ಕೆ ಆಗಿಲ್ಲ ಮತ್ತು ರಸ್ತೆಗಳು ತುಂಬಾ ಹಾಳಾಗಿರತಕ್ಕಂಥಾದ್ದು ನಿಜ. ಇದಕ್ಕೋಸ್ಕರವೇ ಪ್ರತ್ಯೇಕವಾಗಿ ಒಂದು ಕಾರ್ಯಕ್ರಮ ಹಾಕಿಕೊಂಡು 125 ಲಕ್ಷ ರೂಪಾಯಿ ವ್ಯವಸ್ಥೆಯನ್ನು ಮಾಡಲಾಗಿದೆ. ಇನ್ನೂ ಹೆಚ್ಚು ಮಾಡಬೇಕಾದ್ದು ಇದೆ. ಸುಮಾರು ವರ್ಷಗಳಿಂದ ಕೆಲಸವಾಗಿಲ್ಲವೆಂದು ಏನು ಮಾನ್ಯ ಸದಸ್ಯಣಿಯವರು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಗಮನದಲ್ಲಿ ಇಟ್ಟುಕೊಂಡು, ಮುಂದಿನ ವರ್ಷ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀಮತಿ ಸುಮಾ ವಸಂತ:– ನಮ್ಮಲ್ಲಿ ಮಳೆ ತುಂಬಾ ಜಾಸ್ತಿ. ಕಳೆದ ವರ್ಷ ಮಳೆಯಲ್ಲಿ ತುಂಬಾ ರಸ್ತೆ ಹಾಳಾಗಿ ಹೋಗಿದೆ. ಈಗಾಗಲೇ ಮೂರು ತಿಂಗಳು ಕಳೆದು ಹೋಗಿದೆ. ಇನ್ನು ಎರಡು ತಿಂಗಳಲ್ಲಿ ಮಾತ್ರ ನಮ್ಮಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ. ಬೇರೆ ಜಿಲ್ಲೆಯ ಹಾಗೆ ನಮ್ಮ ಜಿಲ್ಲೆಯಲ್ಲಿ ಮಳೆ ಪ್ರಾರಂಭವಾದರೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ ಈ ಕಾಮಗಾರಿ ಕೆಲಸವನ್ನು ಇನ್ನು ಎರಡು ತಿಂಗಳಲ್ಲಿ ಮುಗಿಸಿಕೊಡುವುದಕ್ಕೆ ಪ್ರಯತ್ನ ಪಡುತ್ತೀರ ? ಹೇಗೆ ತಿಳಿಸಿ.

ಶ್ರೀ ಕೆ.ಹೆಚ್. ರಂಗನಾಥ್:– ಮಳೆ ಪ್ರಾರಂಭವಾಗುವುದು ಇನ್ನು ಜೂನ್ 7ನೇ ತಾರೀಖಿನಿಂದ. ನಾವು ಮಾರ್ಚ್ ಏಪ್ರಿಲ್‌ನಲ್ಲಿ ಕೆಲಸ ಪ್ರಾರಂಭಮಾಡುತ್ತೇವೆ.

ಬೆಳಗಾವಿ ತಾಲ್ಲೂಕಿನ ಮಾಯಚ ಗ್ರಾಮದಲ್ಲಿ 110 ಕೆವಿ. ಉಪ ಕೇಂದ್ರ ಸ್ಥಾಪನೆ

175 (596): ಶ್ರೀ ಬಿ.ಐ. ಪಾಟೀಲ್ (ಉಚ್ಚಗಾಂವ್):—

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಳಗಾವಿ ತಾಲ್ಲೂಕು ಮಾಯಚಿ ಗ್ರಾಮದಲ್ಲಿ 110 ಕವಿ ಉಪ ಕೇಂದ್ರ ಸ್ಥಾಪಿಸಬೇಕೆನ್ನುವುದು ಪ್ರಸ್ತಾಪ ಇದೆಯೇ;

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಎಸ್.ಎಂ.ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹೌದು.

ಆ) ಇದರ ಸಮಾಪಣ ಕೆಲಸವನ್ನು 1994ರ ಮಾರ್ಚ್ ವೇಳೆಗೆ ಪೂರ್ಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ.

SRI B.I. PATIL (UCHAGAON):- It is very necessary to establish a 110 KV Sub–Station at Maeche Village. In last Session, Government has promised that the work of 110 KV Sub–Station at Maeche Village Will be taken up during the Year 1992-93. But the work is not yet started. The farmers are going to harass me. I therefore, request Government through you Speaker Sir, that the work must be taken up on priority basis.

ಶ್ರೀ ಎಸ್.ಎಂ. ಕೃಷ್ಣ:– ಬೆಳಗಾವಿ ತಾಲ್ಲೂಕು ಮಾಯಚಿ ಗ್ರಾಮದಲ್ಲಿ 550 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಒಂದು 110 ಕ.ವಿ. ಉಪ ಕೇಂದ್ರ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆಯುವ್ಯಯದಲ್ಲಿ ಪ್ರಾಥಮಿಕ ಕೆಲಸಗಳಿಗಾಗಿ 15 ಲಕ್ಷ ರೂಪಾಯಿಗಳನ್ನು ಏರ್ಪಾಡು ಮಾಡಲಾಗಿದೆ. ಈ ಉದ್ದೇಶಿತ ಉಪ ಕೇಂದ್ರ, ಹುಬ್ಬಳ್ಳಿ, ಬೆಳಗಾವಿ ....

SRI B.I. PATIL:- I want the answer in English. I don't know Kannada.

ಶ್ರೀ ವಾಟಾಳ್ ನಾಗರಾಜ್.- ತಾವು ಅರ್ಥ ಮಾಡಿಕೊಳ್ಳಬೇಕು, ರಾಜ್ಯದ ಶಾಸನ ಸಭೆಯ ಸದಸ್ಯರಾಗಿದ್ದೀರಿ, ಕನ್ನಡವನ್ನು ಕಲಿಯಬೇಕು, ಅರ್ಥ ಮಾಡಿಕೊಳ್ಳಬೇಕು. ನೀವು ನನಗೆ ಕುಳಿತುಕೊಳ್ಳಬೇಕು ಎಂದು ಹೇಳಬೇಕೋ, ಹೇಗೆ ಅವರ ಬಗ್ಗೆ ನನಗೆ ಕೋಪ ಬರುತ್ತಾ ಇಲ್ಲ, ಅನುಕಂಪವಾಗುತ್ತದೆ. ಏಕೆಂದರೆ ಈರೀತಿ ಪೆದ್ದುಪೆದ್ದಾಗಿ ಮಾತನಾಡುತ್ತಿದ್ದಾರಲ್ಲ ಎಂದು.

ಶ್ರೀ ಎಸ್.ಎಂ. ಕೃಷ್ಣ:- ಅದರ ಕೆಲಸ ನಡೆಯುತ್ತಿದೆ.

MR. SPEAKER:- He is requesting you to give the reply in English.

ಶ್ರೀ ಎಸ್.ಎಂ. ಕೃಷ್ಣ:- ವಾಟಾಳ್ ನಾಗರಾಜ್‌ರವರೇ, ನೀವು ಒಂದು ಒರಿಯೆಂಟೇಷನ್ ಕೋರ್ಸ್ ಶುರು ಮಾಡಿ. ನಮ್ಮ ಸದನದಲ್ಲಿ ಯಾರಿಗೆ ಕನ್ನಡ ಬರುವುದಿಲ್ಲವೋ ಅವರಿಗೆ ಹೇಳಿಕೊಡಿ.

ಶ್ರೀ ವಾಟಾಳ್ ನಾಗರಾಜ್:- ಕನ್ನಡ ಪಕ್ಕಾ ಬರುತ್ತದೆ ಅವರಿಗೆ. ಇದೊಂದು ಸೋಗು, ರಾಜಕೀಯ ಅಷ್ಟೆ.

SRI B.I. PATIL:- Understanding in Kannada is trouble some to me. I don't know perfectly.

ಶ್ರೀ ಟಿ.ಬಿ. ಜಯಚಂದ್ರ:- ಸಭಾಧ್ಯಕ್ಷರೆ, ನಾನು ಅವರ ಪಕ್ಕದಲ್ಲೇ ಕುಳಿತಿರುತ್ತೇನೆ. ಅವರಿಗೆ ಕನ್ನಡ ಅರ್ಥವಾಗುತ್ತದೆ. ನಾನು ನೋಡುತ್ತಿರುತ್ತೇನೆ. ಇದರಲ್ಲಿ ಅವರಿಗೆ ಕನ್ನಡ ಗೊತ್ತಿಲ್ಲದ ಪ್ರಶ್ನೆ ಬರುವುದಿಲ್ಲ.

SRI B.I. PATIL:- I want the answer in English Sir.

ಶ್ರೀ ಎಸ್.ಎಂ. ಕೃಷ್ಣ:- ನೀವು ಇಂಗ್ಲೀಷ್‌ನಲ್ಲೇ ಕೇಳಿ ನನಗೆ ಅರ್ಥವಾಗುತ್ತದೆ. ನಾನು ಕನ್ನಡದಲ್ಲೇ ಉತ್ತರ ಹೇಳುತ್ತೇನೆ. ಪ್ರಾಥಮಿಕ ಕೆಲಸ, ಸಮೀಕ್ಷೆ, ಭೂಮಿ ಸರಿ ಮಾಡುವುದು ಇತ್ಯಾದಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದನ್ನು 1994ರ ಮಾರ್ಚ್ ವೇಳೆಗೆ ಪೂರ್ಣಗೊಳಿಸಬೇಕು ಎಂದು ನಾವು ಟೈಂ ಇಟ್ಟುಕೊಂಡಿದ್ದೇವೆ.

SRI K.C. MODAGEKAR DESAI:- Mr. Speaker Sir, The Government has declared that area as an industrial area. Considering this point as raised by Mr. B.I. Patil, transformers and pumpsets of the farmers are getting burnt out. Therefore, I am requesting you to include this 110 KV Sub-Station in the current year's Budget and make provision accordingly.

SRI S.M. KRISHNA:- The allocations are already made. Now we cannot tamper with that. But, to our time frame, by 1994 it should be operable.

ಶ್ರೀ ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ ಚುಕ್ಕೆ ಪ್ರಶ್ನೆ 835ಕ್ಕೆ ಸಮಯವನ್ನು ಕೋರಲಾಗಿದೆ.

ಅಧ್ಯಕ್ಷರು:– ಅವರಿಗೆ ಒಂದು ವಾರ ಟೈಮ್ ಬೇಕಂತೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೇ, ನಾನು ಪ್ರಶ್ನೆ ಕೇಳುವುದಿಲ್ಲ. ಒಂದು ವರ್ಷದಿಂದ ಕಷ್ಟಪಟ್ಟು ಈ ಪ್ರಶ್ನೆ ಇವತ್ತು ಬಂದಿದೆ. ತುಮಕೂರು ಇಲ್ಲಿಗೆ ಕೇವಲ 70 ಕಿ.ಮೀ. ದೂರದಲ್ಲಿದೆ ಇನ್ನೂ ಉತ್ತರ ಒದಗಿಸುವುದಕ್ಕಾಗಿಲ್ಲ ಎಂದರೆ ಹೇಗೆ ? ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ತೊಂದರೆ ಏನು ? ಉತ್ತರ ಯಾರಾದರೂ ಕೊಟ್ಟಿಲ್ಲವೋ ಅಥವಾ ಸರ್ಕಾರ ಕೊಡುವುದಕ್ಕೆ ಸಾಧ್ಯವಿಲ್ಲವೋ ? ಕಾರಣ ಕೊಟ್ಟರೆ ನಮಗೆ ಅರ್ಥವಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಇವತ್ತು ಇರತಕ್ಕ ಮುಖ್ಯ ಪ್ರಶ್ನೆಗಳಿಗೆ ಸದಸ್ಯರು ಇಲ್ಲ. ಇರುವ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಇಲ್ಲ. ಸರ್ಕಾರ ಈ ರೀತಿ ಮಾಡಿದರೆ ಹೇಗೆ ?

ಶ್ರೀ ವಾಟಾಳ್ ನಾಗರಾಜ್:– ಸದನವನ್ನು ಮುಂದೂಡುವ ಸಮಯದಲ್ಲಿ ಬಹಳ ಸದಸ್ಯರು ಇರಲಿಲ್ಲ. 11 ಗಂಟೆಗೆ ಸೇರುತ್ತದೆಂದು ಬಹಳ ಜನ ಸದಸ್ಯರು ತಿಳಿದುಕೊಂಡಿದ್ದಾರೆ. ಆ ದಿವಸ 9.30ಕ್ಕೆ ಸೇರಬೇಕೆಂದು ಏಕಾಏಕಿ ಬದಲಾವಣೆ ಆದಾಗ ಸಭೆಯಲ್ಲಿ 8 ಜನ ಇದ್ದೆವು. ನಮ್ಮ ಕಡೆ 3 ಜನ ಇದ್ದರು. ಆದ್ದರಿಂದ ಇವತ್ತು ಅನೇಕ ಜನ 9.30ಕ್ಕೆ ಬರುವುದಕ್ಕೆ ಅವಕಾಶ ಆಗಿಲ್ಲ. ಆವತ್ತು 9.30ಕ್ಕೆ ಸೇರುವುದರ ಬಗ್ಗೆ ನಿರ್ಣಯ ಮಾಡುವುದು ಬೇಡ ಎಂದು ನಾನು ಸಂಸದೀಯ ಸಚಿವರಿಗೆ ಹೇಳಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಬಂದಿರುವವರಿಗೂ ಉತ್ತರ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಬೆಳಗಾಂ, ಬಿಜಾಪುರ, ಕಾರವಾರ, ಬೀದರ್ ಭಾಗದಿಂದ ಬರುವ ಸದಸ್ಯರು 9.30ಕ್ಕೆ ಬರುವುದಕ್ಕೆ ಕಷ್ಟವಾಗುತ್ತದೆ. 3 ದಿವಸ ರಜ ಇದ್ದು ಈ ಬೆಳಿಗ್ಗೆ ಶಾಸಕರ ಭವನಕ್ಕೆ ಬಂದು ಇಲ್ಲಿಗೆ ಬರಬೇಕು. ಇವತ್ತು ಬೆಳಿಗ್ಗೆ ಕರೆಂಟ್ ಬೆಂಗಳೂರಿನಲ್ಲಿ ಇಲ್ಲ. ಬಿಸಿ ನೀರು ಇಲ್ಲ. ಸ್ನಾನ ಮಾಡಿಕೊಂಡು ಬರುವುದಕ್ಕೆ ತಡವಾಗಿದೆ. ಇವತ್ತು ರಾಜ್ಯಕ್ಕೆ ಸಂಬಂಧಪಟ್ಟ ಮಹತ್ವದ ಪ್ರಶ್ನೆಗಳು ಇವೆ. ಈ ಪ್ರಶ್ನೆಗಳನ್ನು ಕೇಳಲು ಸದಸ್ಯರಿಲ್ಲದಿದ್ದರೆ ತಾವೇ ಹಾಕಬಹುದು. ಇಲ್ಲದಿದ್ದರೆ ಇವುಗಳನ್ನು ತಡೆಹಿಡಿದು ಮುಂದಿನ ಸಾರಿ ಅವರಿಗೆ ಅವಕಾಶ ಮಾಡಿಕೊಡುವುದಕ್ಕೆ ತಮಗೆ ಅಧಿಕಾರ ಇದೆ.

ಅಧ್ಯಕ್ಷರು:– ಆಯಿತು.

ಶ್ರೀ ಎಂ.ವಿ. ವೆಂಕಟಪ್ಪ:– ಪ್ರತಿ ಸೋಮವಾರ ನಾನು ಮುಳಬಾಗಿಲಿನಿಂದ ಬೆಳಿಗ್ಗೆ 11 ಗಂಟೆಗೆ ಬರುವುದು ವಾಡಿಕೆ. ಬೆಳಿಗ್ಗೆ ಪತ್ರಿಕೆ ನೋಡಿ ನಾನು ಬಂದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಬೆಳಿಗ್ಗೆ ನೀರು ಇಲ್ಲದೆ ನಾನು ಇನ್ನೂ ಸ್ನಾನ ಮಾಡಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:– ಆದ್ದರಿಂದ ಇನ್ನು ಮುಂದೆ ಸೋಮವಾರದ ದಿವಸ ಬೆಳಿಗ್ಗೆ ಬೇಗನೆ ಸದನ ಸೇರುವುದು ಬೇಡ.

ಅಧ್ಯಕ್ಷರು:– ಆಯಿತು.

ಶ್ರೀ ಬಿ.ಹೆಚ್. ಬನ್ನಿಕೋಡ್:– ಇವತ್ತು ಬಹಳ ಮಹತ್ವದ ಪ್ರಶ್ನೆಗಳ ಬಗ್ಗೆ ಸದಸ್ಯರು ಬಂದಿಲ್ಲ. ರಾಜ್ಯದ ಹಿತದೃಷ್ಟಿಯಿಂದ ಇವನ್ನು ಬೇರೆ ದಿವಸ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:– ಅವಕಾಶ ಮಾಡಿಕೊಡುತ್ತೇನೆ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳು. ಅದನ್ನು ಆ ನಂತರ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರಾಜ್ಯದಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನ

ಶ್ರೀ ವೈ.ಕೆ. ರಾಮಯ್ಯ:– ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ತಮ್ಮ ಗಮನಕ್ಕೆ ಈ ವಿಚಾರವನ್ನು ನಾಲ್ಕಾರು ಸಾರಿ ತಂದಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆ ಈ ಸರ್ಕಾರಕ್ಕೆ ಆಸಕ್ತಿ ಇಲ್ಲ. ಈ ಸರ್ಕಾರಕ್ಕೆ ಆಸೆ ಇಲ್ಲ. ಈ ವಿಷಯವನ್ನು ಚರ್ಚೆ ಮಾಡಬೇಕು ಎಂದು ಕಳೆದ ಅಧಿವೇಶನದಲ್ಲೇ ನಿಯಮ 68ರ ಕೆಳಗೆ ತಂದೆ; ಆ ಸದನದಲ್ಲಿ ಅವಕಾಶ ಆಗಿಲ್ಲ. ಈ ಸಾರಿ 4ನೇ ತಾರೀಖು ಕೊಟ್ಟಿದ್ದೇನೆ. ಇವತ್ತಿನ ದಿವಸದವರೆಗೂ ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಸಿಕ್ಕಿಲ್ಲ. ಇದಕ್ಕೆ ಕಾರಣ ಏನೆಂದು ಕೇಳುತ್ತೇನೆ. ಈ ರಾಜ್ಯದ ರೈತರಿಗೆ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ ಬೇಡವೇ ? ಬರೀ ಸಂಬಳ ಸಾರಿಗೆ, ಟಿಎ ಡಿಎ ಬಗ್ಗೆ ಚರ್ಚೆ ಮಾಡಿ ಎದ್ದು ಹೋಗೋಣವೇ ? ನಿಯಮ 68ರ ಪ್ರಕಾರ ಕೃಷ್ಣ ಮತ್ತು ಕಾವೇರಿ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ಇರುವ ತೊಂದರೆ ಬಗ್ಗೆ, ಕೊರತೆ ಬಗ್ಗೆ ಮತ್ತು ಕೊರತೆ ನಿವಾರಣೆ ಬಗ್ಗೆ ಚರ್ಚೆ ಮಾಡುವುದಕ್ಕೆ ಯಾವಾಗ ಅವಕಾಶ ಕೊಡುತ್ತೀರಿ ?

ಅಧ್ಯಕ್ಷರು:– ಪರಿಶೀಲನೆ ಮಾಡಿ ತಮಗೆ ಹೇಳುತ್ತೇನೆ.

ಶ್ರೀ ವೈ.ಕೆ.ರಾಮಯ್ಯ:– ಅವತ್ತೇ ಪರಿಶೀಲನೆ ಮಾಡುತ್ತೇನೆಂದು ಹೇಳಿದಿರಿ. ಮೀಟಿಂಗ್ ಕರೆಯುತ್ತೇನೆಂದು 2 ತಿಂಗಳ ಹಿಂದೆಯೇ ಸರ್ಕಾರ ಹೇಳಿತ್ತು. ಆ ಪ್ರಕಾರ ಇವತ್ತಿನವರೆಗೂ ಮುಖ್ಯಮಂತ್ರಿಗಳು ಚರ್ಚೆ ಮಾಡಿಲ್ಲ. ತಮಗೆ ಕೇಳಿದರೆ ಪರಿಶೀಲಿಸುತ್ತೇನೆ ಎಂದು ಹೇಳುತ್ತಿದ್ದೀರಿ. ಸದನದ ಮುಂದೆ ಇಂತಹ ಗಂಭೀರವಾದ ವಿಷಯವನ್ನು ಚರ್ಚೆಗೆ ತರಲು ಪರಿಶೀಲನೆ ಮಾಡಿ ಗಹನವಾಗಿ ಚಿಂತನೆ ಮಾಡುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ.

ನಿಯಮಾವಳಿ ಪ್ರಕಾರ ತಂದಿದ್ದೇನೆ. ತಾವು ಯಾವತ್ತು ತೆಗೆದುಕೊಳ್ಳುತ್ತೀರಿ ಎಂದು ದಯವಿಟ್ಟು ಅಪ್ಪಣೆ ಕೊಟ್ಟರೆ ಸಾಕು. ತಾವು ಸ್ವಲ್ಪ ಹೇಳಬೇಕು. ನಾಳೆ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು:– ಸರ್ಕಾರದ ಕಡೆಯಿಂದ ಉತ್ತರ ಬಂದ ನಂತರ ಅದನ್ನು ನೋಡಿಕೊಂಡು ಹೇಳಬೇಕಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ:– ನಿಯಮ 68ರ ಪ್ರಕಾರ ಚರ್ಚೆಯಾಗಬೇಕು. ದಯವಿಟ್ಟು ತಮ್ಮ ಕಾರ್ಯದರ್ಶಿಯವರನ್ನು ಕೇಳಿ, ಹೇಗೆ ಮಾಡಬೇಕು ಎಂದು.

ಅಧ್ಯಕ್ಷರು:– ತಾವು ಉತ್ತರ ಹೇಳಿ, ನಾನು ಹೇಳಿದ್ದೇನೆ. ನೀನು ನನ್ನನ್ನು ಖಂಡಿತವಾಗಿ ಯಾವಾಗ ಕೊಡುತ್ತೀರಿ, ಏನು ಮಾಡುತ್ತೀರಿ ಎಂದು ಕೇಳುವುದಕ್ಕೆ ಆಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ:– ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು:– ಅವಕಾಶ ಮಾಡಿಕೊಡುತ್ತೇನೆ ಎಂದು ನಾನು ಹೇಳಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಸ್ವಲ್ಪ ಹೇಳಿ ಸ್ವಾಮಿ.

ಅಧ್ಯಕ್ಷರು:– ನಾನು ಪರಿಶೀಲನೆ ಮಾಡಿ ತೆಗೆದುಕೊಳ್ಳುತ್ತೇನೆ. ನಿಮಗೆ ಹೇಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ತಾವು ಕಳೆದ ವಾರವೂ ಇದೇ ರೀತಿ ಹೇಳಿದ್ದೀರಿ.

ಅಧ್ಯಕ್ಷರು:– ಇವತ್ತು ನಾನು ಹೇಳುತ್ತೇನೆ. ಕುಳಿತುಕೊಳ್ಳಿ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ನೆಲಮಂಗಲ ಮತ್ತು ಕೊರಟಗೆರೆ ತಾಲ್ಲೂಕುಗಳ ರಸ್ತೆಗಳ ಡಾಂಬರೀಕರಣ

164(991): ಶ್ರೀ. ಸಿ. ವೀರಭದ್ರಯ್ಯ (ಕೊರಟಗೆರೆ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ನೆಲಮಂಗಲ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಎಷ್ಟು ಕಿ.ಮೀ. ರಸ್ತೆಗೆ ಟಾರು ಹಾಕಲಾಗಿದೆ;

ಆ) ಇಂತಹ ಟಾರ್ ರಸ್ತೆಗೆ ಈ ತಹಲ್‌ವರೆವಿಗೂ ಎಷ್ಟು ಹಣ ಖರ್ಚಾಗಿದೆ; (ತಾಲ್ಲೂಕುವಾರು ವಿವರ ಕೊಡುವುದು);

ಇ) ಉಳಿದ ರಸ್ತೆಗಳಿಗೆ ಟಾರು ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):-

ಅ) ನೆಲಮಂಗಲ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ರಸ್ತೆಗಳ ಉದ್ದ ಕೆಳಕಂಡಂತಿದೆ.

	ಲೋ.ಇ.	ಜಿ.ಪ.
ನೆಲಮಂಗಲ	59.00 ಕಿ.ಮೀ.	26.00 ಕಿ.ಮೀ.
ಕೊರಟಗೆರೆ	101.00 ಕಿ.ಮೀ.	15.00 ಕಿ.ಮೀ.
ಒಟ್ಟು	160.00 ಕಿ.ಮೀ.	41.00 ಕಿ.ಮೀ.

ಆ) 1992-93ನೇ ಸಾಲಿನಲ್ಲಿ ಡಾಂಬರು ಹಾಕಲು ಮಾಡಿರುವ ವೆಚ್ಚ ಕೆಳಕಂಡಂತಿದೆ.

	ಲೋ.ಇ.	ಜಿ.ಪ.
ನೆಲಮಂಗಲ	17.19 ಲಕ್ಷ ರೂ.	3.90 ಲಕ್ಷ ರೂ.
ಕೊರಟಗೆರೆ	9.54 ಲಕ್ಷ ರೂ.	4.50 ಲಕ್ಷ ರೂ.
ಒಟ್ಟು	26.72 ಲಕ್ಷ ರೂ.	8.40 ಲಕ್ಷ ರೂ.

ಇ) ಉಳಿದ ರಸ್ತೆಗಳಿಗೆ ಡಾಂಬರು ಹಾಕಿಸಲು ಅನುದಾನ ಲಭ್ಯತೆಯ ಅನುಸಾರವಾಗಿ ಹಂತಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಾಥಮಿಕ ಅಂದಾಜು

165 (344): ಶ್ರೀ ಜಿ. ರಾಜುಗೌಡ (ಹನೂರು):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಪ್ರಾಥಮಿಕ ಅಂದಾಜು ವೆಚ್ಚ ಎಷ್ಟು;

ಆ) ಈಗ ಭಾರತ ಸರ್ಕಾರದ ಯೋಜನಾ ಆಯೋಗವು ಪ್ರಥಮ ಹಂತವಾಗಿ ಎಷ್ಟು ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲು ಅನುಮೋದಿಸಿದೆ;

ಇ) ಈ ಯೋಜನೆಯ ಮೊದಲನೇ ಹಂತದಲ್ಲಿ ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿ ಮಾಡಲಾಗುವುದು;

ಈ) ಮೊದಲನೆ ಹಂತವನ್ನು ಚುರುಕುಗೊಳಿಸಲು ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) 58.20 ಕೋಟಿ ರೂ.ಗಳು

ಆ) 1214.97 ಕೋಟಿ ರೂ.ಗಳ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಪರಿಷ್ಕೃತ ಅಂದಾಜಿಗೆ ಯೋಜನಾ ಆಯೋಗವು 1990ರಲ್ಲಿ ಅಂಗೀಕಾರ ನೀಡಿರುತ್ತದೆ.

ಇ) ಮೊದಲ ಘಟ್ಟದ ಈ ಯೋಜನೆಯಿಂದ 4.25 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗುತ್ತದೆ.

ಈ) ಮೊದಲ ಘಟ್ಟದ ಯೋಜನೆಯನ್ನು ಹಂತ ಹಂತವಾಗಿ ನಿರ್ಮಾಣ ಮಾಡಲಾಗುತ್ತಿದ್ದು. ಯೋಜನೆಯನ್ನು ತ್ವರಿತಗೊಳಿಸುವ ದೃಷ್ಟಿಯಿಂದ ಮೊದಲ ಮತ್ತು 2ನೇ ಹಂತದ ಯೋಜನೆಗಳಿಗೆ ವಿಶ್ವ ಬ್ಯಾಂಕ್ ನೆರವು ಪಡೆಯಲಾಗಿದೆ.

Length of Irrigation Roads in Sindhanur Taluk.

171 (342): Sri B. Hampanagowda (Sindhanur):–

Will the Deputy Chief Minister be pleased to state.

a) what is the length of Irrigation Roads in Sindhanur Taluk;

b) whether any provision has been made in the current year's Budget for taking up repairs to these Irrigation Roads?

Sri S.M. KRISHNA (Deputy Chief MInister):–

a) The total length of Irrigation Roads in Sindhanoor Taluk is 232.40 K.M.

b) as 5.00 lakhs has been allotted to Sindhanoor Division during the current year 1992-93.

ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಕೆಲಸ ನಿಧಾನ ಆಗುತ್ತಿರುವ ಬಗ್ಗೆ

173 (732): ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕ್‌ನಿಂದ ನೆರವು ಪಡೆದಿದ್ದರೂ ಇಂಜಿನಿಯರುಗಳ ಕೊರತೆಯಿಂದ ಕೆಲಸ ವಿಳಂಬವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಇ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಶೇಕಡಾ 80 ರಷ್ಟು ಈ ಭಾಗದ ಜನರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಸರ್ಕಾರ ನಿರ್ಧಾರ ಮಾಡಿರುವುದು ನಿಜವೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) ಹೌದು.

ಆ) ಸರ್ಕಾರವು ಇಂಜಿನಿಯರುಗಳ ನೇಮಕಾತಿ ಬಗ್ಗೆ ನೇಮಕಾತಿ ಸಮಿತಿಯನ್ನು ರಚಿಸಿದ್ದು, ಈ ವಿಷಯದಲ್ಲಿ ಕಾರ್ಯೋನ್ಮುಖವಾಗಿದೆ.

ಇ) ಸರ್ಕಾರಿ ಆದೇಶಗಳ ಅನ್ವಯ ಶೇಕಡಾ 75 ಭಾಗ ಹುದ್ದೆಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆ ಭಾಗದಲ್ಲಿ ಇರುವ ಅಭ್ಯರ್ಥಿಗಳಿಗೆ ನಿಗದಿಪಡಿಸಿದೆ.

ಬೆಳಗಾವಿ ಜಿಲ್ಲೆಯ ಕಾಡಾದವರಿಂದ ಹಣ ಮಂಜೂರಾತಿ

180 (986): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಕಾಡಾದವರು ಈ ವರ್ಷ ಎಷ್ಟು ಎಷ್ಟು ಹಣವನ್ನು ಯಾವ ಯಾವ ಕೆಲಸಗಳಿಗೆ ಒದಗಿಸಿರುವುದು ಹಾಗೂ ಈ ವರ್ಷ ಇಲ್ಲಿಯವರೆಗೆ ಯಾವ ಯಾವ ಕೆಲಸಕ್ಕಾಗಿ ಎಷ್ಟು ಎಷ್ಟು ಹಣವನ್ನು ಖರ್ಚು ಮಾಡಿರುವರು; (ಕೆಲಸದ ಹೆಸರು ಹಾಗೂ ಎಲ್ಲ ಸಂಪೂರ್ಣ ವಿವರ ಕೊಡುವುದು);

ಆ) ಕಾಡಾ ಅಧಿಕಾರಿಗಳು ಈ ವರ್ಷ ಹೊಲ ಸಮಪಾತಳಿ ಮಾಡುವ ಸಲುವಾಗಿ ಎಷ್ಟು ಕೆಲಸಗಳಿಗೆ ಒಪ್ಪಿಗೆ ನೀಡಿರುವರು; (ಕೆಲಸದ ಹೆಸರು ಮತ್ತು ಬ್ಯಾಂಕಿನಿಂದ ಹಣ ಒದಗಿಸಿದ್ದಲ್ಲಿ ಬ್ಯಾಂಕಿನ ಹೆಸರು ಎಲ್ಲ ಸಂಪೂರ್ಣ ವಿವರ ಕೊಡುವುದು);

ಇ) ಒಂದು ವೇಳೆ ಹೊಲ ಸಮಪಾತಳಿ ಮಾಡುವ ಸಲುವಾಗಿ ಕಾಡಾ ಅಧಿಕಾರಿಗಳು ಯಾವುದೇ ಕೆಲಸ ತೆಗೆದುಕೊಳ್ಳದೇ ಇದ್ದಲ್ಲಿ ಅಂಥ ಅಧಿಕಾರಿಗಳ ಮೇಲೆ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು;

ಈ) ಮಾನ್ಯ ಕಂದಾಯ ಸಚಿವರು ಅಧ್ಯಕ್ಷತೆಯಲ್ಲಿ ಬೆಳಗಾವಿ ಜಿಲ್ಲಾಧಿಕಾರಿಗಳವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಬೈಲಹೊಂಗಲ ತಾಲೂಕಿನ ಉಡಕೇರಿ ಗ್ರಾಮದ ಜನರು ಕಾಡಾ ಇಲಾಖೆಯಿಂದ ತೆಗೆದುಕೊಂಡ ಸಾಲವನ್ನು ಸೂಟ ಬಿಡಬೇಕೆಂದು ನಿರ್ಣಯಿಸಿದ್ದು ಈ ಬಗ್ಗೆ ಕಾಡಾ ಅಧಿಕಾರಿಗಳು ಸೂಟ ಬಿಡಲು ಯಾವ ಕ್ರಮ ಕೈಗೊಂಡಿರುವರು;

ಉ) ಹಾಗಿದ್ದಲ್ಲಿ ಮಾನ್ಯಮಂತ್ರಿಗಳ ಆದೇಶದ ಪ್ರಕಾರ ಇನ್ನೂವರೆಗೂ ಯಾವುದೇ ಕ್ರಮ ಕೈಗೊಳ್ಳದೇ ಇದ್ದಲ್ಲಿ ಇನ್ನು ಮೇಲೆ ಆದಗೂ ರೈತರ ಸಾಲವನ್ನು ಸೂಟ ಬಿಡುವ ಸಲುವಾಗಿ ಸರ್ಕಾರದವರು ಕ್ರಮ ಕೈಗೊಳ್ಳುವುದೇ ?

ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):-

ಅ) ಕಾಡಾ, ಘಟಪ್ರಭಾ ಮತ್ತು ಮಲಪ್ರಭಾ ಯೋಜನೆ, ಬೆಳಗಾವಿ ಅಡಿಯಲ್ಲಿ ಈ ವರ್ಷ ತೆಗೆದುಕೊಂಡ ಕೆಲಸಗಳ ವಿವರ ಅದಕ್ಕಾಗಿ ಒದಗಿಸಿರುವ ಹಣ ಹಾಗೂ ಇದುವರೆಗೆ ಆ ಕೆಲಸಗಳಿಗೆ ಖರ್ಚಾದ ಹಣದ ವಿವರಗಳನ್ನು ಅನುಬಂಧ – 1 ರಲ್ಲಿ ಒದಗಿಸಲಾಗಿದೆ.

ಅ) ಈ ವರ್ಷ 12,000 ಹೆ.ರಷ್ಟು ರೈತರ ಭೂಮಿಯನ್ನು ಸಮಪಾತಳಿ ಮಾಡುವ ಯೋಜನೆಯನ್ನು ಕಾಡಾ ಅಧಿಕಾರಿಗಳು ಹಾಕಿಕೊಂಡಿರುತ್ತಾರೆ. ಮೂಲ ಸಮಪಾತಳಿ ಕೆಲಸದ ಸಲುವಾಗಿ ಈ ವರ್ಷ ಬ್ಯಾಂಕುಗಳು ಕಾಡಾದ ಮೂಲಕ ಇದುವರೆಗೆ ಯಾವುದೇ ಹಣ ಒದಗಿಸಿರುವುದಿಲ್ಲ.

ಆ) ಈ ವರ್ಷ 12,000 ಹೆ.ರಷ್ಟು ರೈತರ ಭೂಮಿಯನ್ನು ಸಮಪಾತಳಿ ಮಾಡುವ ಯೋಜನೆ ಹಾಕಿಕೊಂಡಿದ್ದು ಇದುವರೆಗೆ 5223 ಹೆ.ರಷ್ಟು ಪ್ರಗತಿ ಸಾಧಿಸಿದೆ ಹಾಗೂ ಈ ಬಗ್ಗೆ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲು ಅಧಿಕಾರಿಗಳು ಕ್ರಮ ಜರುಗಿಸುತ್ತಿರುವುದರಿಂದ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಬಗ್ಗೆ ಮಾಹಿತಿಯು ಕಾಡಾಕ್ಕೆ ಇದುವರೆಗೂ ಬಂದಿರುವುದಿಲ್ಲ. ಆದರೆ ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು 11-2-93ರಂದು ಕಾಡಾದ ಗಮನಕ್ಕೆ ಬಂದಿದ್ದು ಈ ವಿಷಯದ ಬಗ್ಗೆ ಕಾಡಾ ಅಧಿಕಾರಿಗಳು ಸೂಕ್ತ ಮಾಹಿತಿ ಸಂಗ್ರಹಿಸಿ ವರದಿಯನ್ನು ಸರ್ಕಾರಕ್ಕೆ ಕಳುಹಿಸುವಲ್ಲಿ ಕಾರ್ಯ ತತ್ಪರರಾಗಿದ್ದಾರೆ.

ಉ) ಕಾಡಾ ಅಧಿಕಾರಿಗಳು ಈ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿರುವುದರಿಂದ ಅವರಿಂದ ಈ ಬಗ್ಗೆ ವರದಿ ಬಂದ ಕೂಡಲೇ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ – 1

ಮಲಪ್ರಭಾ ಮತ್ತು ಘಟಪ್ರಭಾ, ಕಾಡಾ, ಬೆಳಗಾಂ

1992–93ನೇ ಸಾಲಿನಲ್ಲಿ ತೆಗೆದುಕೊಂಡ ಕೆಲಸಗಳ ವಿವರ, ಅದಕ್ಕಾಗಿ ಒದಗಿಸಿರುವ ಹಣ ಹಾಗೂ ಇದುವರೆವಿಗೂ ಕೆಲಸಗಳಿಗೆ ಖರ್ಚಾದ ಹಣದ ವಿವರ:

ಕ್ರ.ಸಂ.	ಕೆಲಸದ ವಿವರ	ವಾರ್ಷಿಕ ಕಾರ್ಯಕ್ರಮ 1992–93	ಪ್ರಗತಿ
1.	ಕಾಡಾ ಸಿಬ್ಬಂದಿ ವೆಚ್ಚ	40.00	32.52
2.	ಅಂತರ್ಜಲ ಸಮೀಕ್ಷೆ ಮತ್ತು ಅನ್ವೇಷಣೆ	2.00	3.41
3.	ಭೂ ಅಭಿವೃದ್ಧಿ ಕೆಲಸ	200.00	142.93
4.	ಜಮೀನಿನ ನೀರಾವರಿ ಮತ್ತು ಕಾಲುವೆಗಳ ನಿರ್ಮಾಣ	200.00	49.96
5.	ಸಣ್ಣ ಮತ್ತು ಮಧ್ಯಮ ಹಿಡುವಳಿದಾರರಿಗೆ ಸಬ್ಸಿಡಿ	4.00	0.50
6.	ವಾರಾಬಂದಿ	40.00	12.35
7.	ಅಳವಡಿಕೆ ಮತ್ತು ಪ್ರತ್ಯಕ್ಷತೆ	4.00	–
8.	ಯೋಜನೆ ಅಭ್ಯಾಸ ಮತ್ತು ಸಂಶೋಧನೆ	3.00	–
9.	ಬಸಿಗಾಲುವೆಗಳು	20.00	–
10.	ವಿಶೇಷ ಘಟಕ ಯೋಜನೆ	44.48	–

11.	ಆಯಕಟ್ ರಸ್ತೆಗಳು	45.00	20.49
12.	ವಸತಿ ಸೌಲಭ್ಯ	5.00	0.98
13.	ಉಗ್ರಾಣಗಳನ್ನು ಕಟ್ಟುವುದು	2.00	–
14.	ರೈತ ಭಾಗವಹಿಸುವಿಕೆ ಮತ್ತು ನಿರ್ವಹಣೆ	1.00	–
15.	ಜವಳು ಭೂಮಿಯನ್ನು ಕೃಷಿಯೋಗ್ಯ ಮಾಡುವಿಕೆ	2.00	–
16.	ಭೂ ಅಭಿವೃದ್ಧಿ ತರಬೇತಿ ಕೇಂದ್ರ	–	–
17.	ಭೂ ಅಂತರ್ಜಲ ಸಂಶೋಧನೆ	2.00	–
18.	ಇತರೆ	5.00	3.25
	ಒಟ್ಟು	629.48	265.40

ಶಹಾಪುರ–ಶೋರಾಪುರ ಕ್ಷೇತ್ರಕ್ಕೆ ಸೇರಿದ ರಸ್ತೆಗಳ ದುರಸ್ತಿ

176 (1033): ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್, (ಶಹಾಪುರ):–

ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಪುರ–ಶೋರಾಪುರ ಕ್ಷೇತ್ರಕ್ಕೆ ಸೇರಿದ ಸುರಪುರ ಕೆಂಭಾವಿ ಲೋಕೋಪಯೋಗಿ ರಸ್ತೆ ಹಾಳಾಗಿದ್ದು, ಇದನ್ನು ನೀರಾವರಿ ಇಲಾಖೆಯವರು ವಹಿಸಿಕೊಂಡಿರುವರೆ;

ಆ) ಹಾಗಿದ್ದಲ್ಲಿ, ಇದನ್ನು ಕೃಷ್ಣಾ ಮೇಲ್ದಂಡೆ (ಅಚ್ಚುಕಟ್ಟು ರಸ್ತೆ) ಯೋಜನೆಯಲ್ಲಿ ಕೈಕೊಳ್ಳಲಾಗುವುದೇ;

ಇ) ದುರಸ್ತಿ ಕಾಮಗಾರಿಯನ್ನು ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಈ ರಸ್ತೆಯು ಸಧ್ಯಕ್ಕೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿದ್ದು ಇದನ್ನು ನೀರಾವರಿ ಇಲಾಖೆಯ ಕೃಷ್ಣ ಮೇಲ್ದಂಡೆ ಯೋಜನೆಗೆ ಹಸ್ತಾಂತರಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಈ ದಿಕ್ಕಿನಲ್ಲಿ ಆದಷ್ಟು ಶೀಘ್ರವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ಇ) ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಈ ರಸ್ತೆಯ ಸುಧಾರಣೆಯ ಕಾಮಗಾರಿಯನ್ನು 1994-95ರಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸರ್ಕಾರದಲ್ಲಿ ಹರಿಜನ – ಗಿರಿಜನರನ್ನು ವಕೀಲರನ್ನಾಗಿ ನೇಮಕ.

178 (754): ಶ್ರೀ ಕರಿಯಣ್ಣ (ಹೊಳೇಹೊನ್ನೂರು):–

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ವಕೀಲರನ್ನು ಕೋರ್ಟುಗಳಲ್ಲಿ ಸರ್ಕಾರಿ ವಕೀಲರನ್ನಾಗಿ ನೇಮಕ ಮಾಡಲಾಗಿದೆ;

ಆ) ಅವರಲ್ಲಿ ಹರಿಜನ–ಗಿರಿಜನರ ಸಂಖ್ಯೆ ಎಷ್ಟು;

ಇ) ಹರಿಜನ–ಗಿರಿಜನರಿಗೆ ನೇಮಕ ಮಾಡಲು ಏನು ತೊಂದರೆ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) 98 ಜನ ವಕೀಲರನ್ನು ನೇಮಕಾತಿ ಮಾಡಲಾಗಿದೆ.

ಆ) 05 ಹರಿಜನರು
04 ಗಿರಿಜನರು

ಇ) ಹರಿಜನ ಗಿರಿಜನರನ್ನು ಸರ್ಕಾರಿ ವಕೀಲರನ್ನಾಗಿ ನೇಮಕಾತಿ ಮಾಡಲು ಸಾಕಷ್ಟು ಅರ್ಜಿಗಳನ್ನು ಸಲ್ಲಿಸದೆ ಇರುವುದರಿಂದ ಅವರನ್ನು ಸರ್ಕಾರಿ ವಕೀಲರನ್ನಾಗಿ ನೇಮಕಾತಿ ಮಾಡಲು ಸಾಧ್ಯವಾಗಲಿಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಸರ್ಕಾರಿ ವಕೀಲರಾಗಿ ನೇಮಕಾತಿ ಬಯಸಿ ಅರ್ಜಿ ಬಂದಲ್ಲಿ ಅವರ ಅರ್ಹತೆಯನ್ನು ಪರಿಶೀಲಿಸಿ ಸರ್ಕಾರ ವಕೀಲರಾಗಿ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ ದಿನಾಂಕ 26ನೇ ತಾರೀಖು ಫೆಬ್ರವರಿ 93ರಂದು ವಿಧಾನಸಭೆಯ ಅಧಿವೇಶನ ಇಲ್ಲದಿದ್ದ ಕಾರಣ ಆ ದಿನದ ಚುಕ್ಕೆ ಗುರುತಿನ ಎಂಟನೇ ಪಟ್ಟಿಯ 20 ಪ್ರಶ್ನೆಗಳ ಪೈಕಿ ನಾಲ್ಕು ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಚುಕ್ಕೆ ಗುರುತಿಲ್ಲದ ಎಂಟನೇ ಪಟ್ಟಿಯ 76 ಪ್ರಶ್ನೆಗಳ ಪೈಕಿ 20 ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಈ ದಿನ 1.3.93ರ ಲಿಖಿತ ಮೂಲಕ ಉತ್ತರಿಸುವ ಒಂಭತ್ತನೆಯ ಪಟ್ಟಿಯ 68 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ.

1121, 1296, 1307, 1326, 1305, 1281, 1280,1275, 1264, 11, 60, 36, 98, 663, 340, 877, 565, 731, 839, 837, 548, 864, 547, 455, 989, 994, 546, 343, 1177, 1178, 1180, 1181, 1131 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ 35 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಮೊಕದ್ದಮೆಗಳು

437 (1306): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):–

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಇನ್ನೂ ವಿಲೇವಾರಿ ಆಗದೇ ಇರುವ ಮೊಕದ್ದಮೆಗಳು ಎಷ್ಟು;

ಆ) ಅವು ಯಾವ ಯಾವ ನ್ಯಾಯಾಲಯಗಳಲ್ಲಿವೆ; (ವಿವರ ನೀಡುವುದು);

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) 31–12–1992ರಲ್ಲಿದ್ದಂತೆ (ಉಚ್ಚ ನ್ಯಾಯಾಲಯವನ್ನು ಒಳಗೊಂಡಂತೆ).

6,07,814 ಸಿವಿಲ್ ಪ್ರಕರಣಗಳು ಮತ್ತು 5,12,883 ಕ್ರಿಮಿನಲ್ ಪ್ರಕರಣಗಳಾಗಿರುತ್ತವೆ.

ಆ)	ಸಿವಿಲ್	ಕ್ರಿಮಿನಲ್
1. ಉಚ್ಚ ನ್ಯಾಯಾಲಯ	1,12,637	2,527
2. ಜಿಲ್ಲಾ ನ್ಯಾಯಾಲಯಗಳು (ನಗರ ಸಿವಿಲ್ ನ್ಯಾಯಾಲಯಗಳನ್ನು ಒಳಗೊಂಡಂತೆ)	1,43,203	19,675
3. ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳಲ್ಲಿ (ಸಣ್ಣ ವ್ಯಾಜ್ಯಗಳ ನ್ಯಾಯಾಲಯ ಮತ್ತು ಸಿ.ಎಂ.ಎಂ. ನ್ಯಾಯಾಲಯಗಳು ಒಳಗೊಂಡಂತೆ)	1,08,371	95,702
4. ಮುನ್ಸಿಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯಗಳು (ಸಂಚಾರಿ ನ್ಯಾಯಾಲಯಗಳನ್ನೊಳಗೊಂಡಂತೆ)	2,43,603	3,94,979
ಒಟ್ಟು	6,07,814	5,12,883

ರಾಜ್ಯದ ನೀರಾವರಿ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ನೆರವು.

439 (1206): ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ಸಾಲದ ಮೊತ್ತ ಬಾರದಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಸರ್ಕಾರ ವಿಶ್ವ ಬ್ಯಾಂಕಿನಿಂದ ಈ ಸಾಲದ ಬಿಡುಗಡೆಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆಯಡಿಯಲ್ಲಿ ರಾಜ್ಯದ ಕೆಲವು ನೀರಾವರಿ ಯೋಜನೆಗಳಿಗೆ ಮತ್ತು ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಎರಡನೇ ಹಂತಕ್ಕೆ ವಿಶ್ವ ಬ್ಯಾಂಕ್ ನೆರವು ನೀಡುತ್ತಲಿದೆ. ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಎರಡನೇ ಹಂತಕ್ಕೆ ಯೋಜನೆಯಿಂದ ನಿರ್ವಸತಿ ಹೊಂದುವ ಜನರ ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನದಲ್ಲಿ ಆದ ವಿಳಂಬದಿಂದಾಗಿ ವಿಶ್ವ ಬ್ಯಾಂಕ್ ನವೆಂಬರ್ 1992ರಿಂದ ತಾತ್ಕಾಲಿಕವಾಗಿ ನೆರವನ್ನು ಸ್ಥಗಿತಗೊಳಿಸಿದೆ.

ಆ) ಕೃಷ್ಣ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಎರಡನೇ ಹಂತದ ಪುನರ್ವಸತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ವಿಶ್ವ ಬ್ಯಾಂಕ್‌ನವರ ನಿಬಂಧನೆಗಳೆಲ್ಲವನ್ನು ಈಗ ಒಪ್ಪಿಕೊಂಡಿರುವರಿಂದ ಶೀಘ್ರದಲ್ಲೇ ನೆರವು ಪುನರಾರಂಭವಾಗುವ ನಿರೀಕ್ಷಣೆಯಿದೆ.

ಕೃಷ್ಣ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕಿನಿಂದ ಬಂದ ನೆರವಿನ ಮೊತ್ತ

440 (1295): ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಯು.ಕೆ.ಪಿ.ಗೆ ವಿಶ್ವ ಬ್ಯಾಂಕ್ ನೆರವಿನಿಂದ ನೀಡಲಾದ ಹಣವೆಷ್ಟು; ಹಾಗೂ ನೆರವು ಮುಂದುವರೆಯುತ್ತಿದೆಯೇ;

ಆ) ಕಳೆದ ಎರಡು ವರ್ಷದಲ್ಲಿ ಸರ್ಕಾರವು ಬಿಡುಗಡೆ ಮಾಡಿದ ಹಣವೆಷ್ಟು;

ಇ) ಇದರಲ್ಲಿ ಖರ್ಚಾದ ಹಣವೆಷ್ಟು ಹಾಗೂ ಬಾಕಿ ಉಳಿದ ಹಣವೆಷ್ಟು;

ಈ) ಎಷ್ಟು ಹೆಕ್ಟೇರ್ ಜಮೀನಿಗೆ ನೀರು ಒದಗಿಸಲಾಗಿದೆ;

ಉ) ಈ ಯೋಜನೆ ಪೂರ್ತಿಗೊಳಿಸಿದರೆ ಒಟ್ಟು ಎಷ್ಟು ಸಾವಿರ ಹೆಕ್ಟೇರಿಗೆ ನೀರು ಒದಗಿಸಲು ಗುರಿ ಹಾಕಿಕೊಳ್ಳಲಾಗಿದೆ;

ಊ) ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣಾ (ಉಪ ಮುಖ್ಯಮಂತ್ರಿಗಳು):—

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಮೊದಲ ಘಟ್ಟದ 2ನೇ ಹಂತಕ್ಕೆ 245 ಮಿಲಿಯನ್ ಡಾಲರ್‌ಗಳ ನೆರವನ್ನು ವಿಶ್ವ ಬ್ಯಾಂಕ್ ನೀಡಲಿದೆ. ಯೋಜನೆಯಿಂದ ನಿರ್ವಸತಿ ಹೊಂದುವ ಜನರ ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯಕ್ರಮದ ಅನುಷ್ಠಾನದಲ್ಲಿ ಆದ ವಿಳಂಬದಿಂದಾಗಿ ನವೆಂಬರ್ 1992ರಿಂದ ನೆರವನ್ನು ವಿಶ್ವ ಬ್ಯಾಂಕ್ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ವಿಶ್ವ ಬ್ಯಾಂಕ್‌ನವರ ನಿಬಂಧನೆಗಳೆಲ್ಲವನ್ನೂ ಈಗ ಒಪ್ಪಿಕೊಂಡಿರುವುದರಿಂದ ನೆರವನ್ನು ಸಧ್ಯದಲ್ಲೇ ಪುನರಾರಂಭಿಸುವುದಕ್ಕೆ ಶಿಫಾರಸ್ಸು ಮಾಡುವುದಾಗಿ ವಿಶ್ವ ಬ್ಯಾಂಕ್ ಪರಿವೀಕ್ಷಣಾ ತಂಡವು ಆಶ್ವಾಸನೆ ನೀಡಿದೆ.

ಆ) ಮತ್ತು ಇ) ವಿವರಗಳು ಕೆಳಗಿನಂತಿವೆ:—

ವರ್ಷ	ಆಯುವ್ಯಯದಲ್ಲಿ ನಿಗದಿ ಮಾಡಿದ ಮೊತ್ತ	ಬಿಡುಗಡೆ ಮಾಡಿ ಖರ್ಚಾದ ಮೊತ್ತ
1990–91	80 ಕೋಟಿ ರೂ.	69.08 ಕೋಟಿ ರೂ.
1991–92	107 ಕೋಟಿ ರೂ.	98.15 ಕೋಟಿ ರೂ.

ಈ) ಈ ಯೋಜನೆಯಿಂದ ಮಾರ್ಚ್ 92ರವರೆಗೆ 1,29,606 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

ಉ) ಈ ಯೋಜನೆಯ ಮೊದಲ ಘಟ್ಟದಿಂದ ಒಟ್ಟು 4,25,000 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಗುರಿ ಇದೆ.

ಊ) ಮೊದಲ ಘಟ್ಟದ ಯೋಜನೆಯನ್ನು 1996ರ ವೇಳೆಗೂ ಮತ್ತು 2ನೇ ಘಟ್ಟದ ಯೋಜನೆಯನ್ನು 2000 ಇಸವಿ ವೇಳೆಗೂ ಪೂರ್ಣಗೊಳಿಸುವ ಉದ್ದೇಶವಿದೆ.

ಹುಬ್ಬಳ್ಳಿ—ಧಾರವಾಡ ರಾಷ್ಟ್ರೀಯ ಹೆದ್ದಾರಿ ರಸ್ತೆ ಕೆಲಸ ಪ್ರಾರಂಭಿಸುವುದು.

441 (1273): ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ):—

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ - ಧಾರವಾಡ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆಯು ಎಷ್ಟು ಕಿ.ಮೀ. ತೆಗೆದುಕೊಳ್ಳಲಾಗಿದೆ. ಸದರಿ ಕೆಲಸವು ಎಂದು ಪ್ರಾರಂಭವಾಗಿದೆ; ಮತ್ತು ಕೆಲಸಕ್ಕೆ ಎಷ್ಟು ಕಿ.ಮೀ. ರಸ್ತೆ ದುರಸ್ತಿಯಾಗಿದೆ, ಹಾಗೂ ಈಗ ಎಷ್ಟು ಹಣ ಖರ್ಚು ಮಾಡಲಾಗಿದೆ.

ಆ) ಸದರಿ ರಸ್ತೆಯನ್ನು ಎಷ್ಟು ದಿವಸಗಳಲ್ಲಿ ಪೂರ್ತಿಗೊಳಿಸಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಹುಬ್ಬಳ್ಳಿ-ಧಾರವಾಡ (ರಾಷ್ಟ್ರೀಯ ಹೆದ್ದಾರಿ ನಂ.4) ಬೈಪಾಸ್ ರಸ್ತೆ ನಿರ್ಮಾಣದ ಪ್ರಥಮ ಹಂತದ 17.425 ಕಿ.ಮೀ. ಉದ್ದದ ರಸ್ತೆಯ ಸಿ.ಡಿ. ಕೆಲಸವನ್ನು 1987ರಲ್ಲೂ ಹಾಗೂ ಬಲ್ಕಿ ಡಾಂಬರ್ ಕೆಲಸವನ್ನು 1990ರಲ್ಲೂ ಪ್ರಾರಂಭಿಸಲಾಗಿದೆ. ಈ 17.425 ಕಿ.ಮೀ. ರಸ್ತೆಯ ಸಿ.ಡಿ. ಕೆಲಸವು ಮುಗಿದಿದೆ; ಈ ಕಾಮಗಾರಿಗೆ ಈವರೆಗೆ ಸುಮಾರು 350 ಲಕ್ಷ ರೂ.ಗಳು ವೆಚ್ಚವಾಗಿರುತ್ತವೆ.

ಆ) ಪ್ರಥಮ ಹಂತದ 17.425 ಕಿ.ಮೀ. ದೂರದ ಬೈಪಾಸ್ ರಸ್ತೆ ಕೆಲಸವನ್ನು ಡಿಸೆಂಬರ್ 1993ರ ವೇಳೆಗೆ ಮುಗಿಸುವ ಸಂಭವ ಇದೆ.

ಕೃಷ್ಣ-ಕಾವೇರಿ ಯೋಜನೆಗೆ ಖರ್ಚಾದ ಹಣ

442 (1307): ಶ್ರೀ ಪಾಟೀಲ್ ನಾಗರಾಜ್ (ಚಾಮರಾಜನಗರ):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ, ಕಾವೇರಿ ಯೋಜನೆಗಳಿಗೆ ಇದುವರೆಗೆ ಮಾಡಿರುವ ಖರ್ಚೆಷ್ಟು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) 1992ರ ಡಿಸೆಂಬರ್ ಅಂತ್ಯದವರೆಗೆ ಮಾಡಿರುವ ಖರ್ಚು

	(ಕೋಟಿ ರೂ.ಗಳಲ್ಲಿ)
1. ಕೃಷ್ಣಾ ಯೋಜನೆಗಳು	1987.55
2. ಕಾವೇರಿ ಯೋಜನೆಗಳು	1243.23

ಬೆಂಗಳೂರಿನಿಂದ — ಕಣ್ಣಾನೂರಿಗೆ ರಾಷ್ಟ್ರೀಯ ಹೆದ್ದಾರಿ.

447 (1278): ಶ್ರೀ ಡಿ.ಕೆ. ಶಿವಕುಮಾರ (ಸಾತನೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಿಂದ ಕನಕಪುರ - ಮಳವಳ್ಳಿ, ಮೈಸೂರು ಮುಖಾಂತರ ಕಣ್ಣಾನೂರಿಗೆ ರಾಷ್ಟ್ರೀಯ ಹೆದ್ದಾರಿಯನ್ನು ಸ್ಥಾಪಿಸಲು ಸರ್ಕಾರದ ಯೋಜನೆಯಲ್ಲಿದೆಯೇ;

ಆ) ಹಾಗಿದ್ದಲ್ಲಿ, ಈ ಹೆದ್ದಾರಿ ಸ್ಥಾಪಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಕೆ.ಹೆಚ್. ರಂಗನಾಥ್. (ಲೋಕೋಪಯೋಗಿ ಸಚಿವರು):-

ಅ) ಇದೆ.

ಆ) ಪ್ರಸ್ತಾವನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ಬಗ್ಗೆ ಶೀಘ್ರ ಒಪ್ಪಿಗೆಗಾಗಿ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಲಾಗುತ್ತಿದೆ.

ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರೈಸಲು ತಗಲುವ ವೆಚ್ಚ

448 (1328): ಶ್ರೀ ಶಿವಶೇಖರಪ್ಪಗೌಡ ಶಿರವಾಳ, (ಶಹಾಪುರ):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಚಾವತ್ ಆಯೋಗದ ವರದಿಯ ಪ್ರಕಾರ 2000 ಇಸವಿಯೊಳಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರೈಸಲು ಪ್ರತಿವರ್ಷ ತಗಲುವ ವೆಚ್ಚವೆಷ್ಟು ?

ಆ) ಮೇಲ್ದಂಡ ಯೋಜನೆಯನ್ನು ಪೂರೈಸಲು ಸರ್ಕಾರದವರು ಆದ್ಯತೆ ಮೇಲೆ ಹಣವನ್ನೊದಗಿಸುವರೆ;

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮೇಲೆ 1992ರ ಮಾರ್ಚ್ ಕೊನೆಯವರೆಗೆ ಆಗಿರುವ ವೆಚ್ಚ 728.44 ಕೋಟಿ ರೂ.ಗಳು. 1–4–92ರಲ್ಲಿದ್ದಂತೆ ಬಾಕಿ ಕಾಮಗಾರಿಗಳ ಅಂದಾಜು ವೆಚ್ಚ ಸುಮಾರು 780 ಕೋಟಿ ರೂ. (escalation ಸೇರಿಲ್ಲ). 1993–94ನೇ ಸಾಲಿನ ಆಯವ್ಯಯದಲ್ಲಿ ಈ ಯೋಜನೆಗೆ 198.4 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವ ದೃಷ್ಟಿಯಿಂದ ಮುಂಬರುವ ಸಾಲುಗಳಲ್ಲಿ ಅಗತ್ಯಕ್ಕೆ ತಕ್ಕಂತೆ ಹಣ ಒದಗಿಸಲಾಗುವುದು. 2ನೇ ಘಟ್ಟದ ಯೋಜನಾ ವರದಿಯು ತಯಾರಿಕೆಯ ಅಂತಿಮ ಹಂತದಲ್ಲಿದ್ದು ವರದಿಯನ್ನು ತಯಾರಿಸಿದ ನಂತರವೇ ಅಂದಾಜು ವೆಚ್ಚದ ವಿವರ ಗೊತ್ತಾಗುತ್ತದೆ.

ಆ) ಹೌದು.

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕಾಮಗಾರಿ ಕೆಲಸಕ್ಕೆ ಹಣದ ಮಂಜೂರಾತಿ

449 (1308): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲು 12 ಲಕ್ಷ ರೂ.ಗಳನ್ನು ಸರ್ಕಾರ ಮಂಜೂರು ಮಾಡುವುದಾಗಿ ಭರವಸೆ ನೀಡಿರುವುದು ನಿಜವೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) 1990-91ನೇ ಸಾಲಿನಲ್ಲಿ ಪ್ರತಿ ವಿಧಾನ ಸಭಾಕ್ಷೇತ್ರದಲ್ಲಿ 12 ಲಕ್ಷ ರೂ.ಗಳ ರಸ್ತೆ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದ್ದು, 1991-92ರಲ್ಲಿ ಮುಂದುವರೆದಿದ್ದು, 1992-93ನೇ ಸಾಲಿನಲ್ಲಿ ಈ ಕಾರ್ಯಕ್ರಮವು ಮುಕ್ತಾಯವಾಗುತ್ತದೆ.

1992-93ನೇ ಸಾಲಿನಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಯ ವಿಸ್ತೀರ್ಣ

451 (1274): ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ 1992-93ನೇ ಸಾಲಿನಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೆ ಏರಿಸಲಾಗಿದೆ;

ಆ) ಹಾಗಿದ್ದಲ್ಲಿ, ಧಾರವಾಡ ಜಿಲ್ಲೆಯಲ್ಲಿ ಯಾವ ಯಾವ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡು ಮೇಲ್ದರ್ಜೆಗೆ ಏರಿಸಲಾಗಿದೆ;

ಇ) ಸದರಿ ರಸ್ತೆಗಳ ಪೈಕಿ ಎಷ್ಟು ಕಿ.ಮೀ. ಕಾಮಗಾರಿಯನ್ನು ತೆಗೆದುಕೊಳ್ಳಲಾಗಿದೆ; ಮತ್ತು ಈಗ ಎಷ್ಟು ಹಣ ಖರ್ಚು ಮಾಡಲಾಗಿದೆ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):--

ಅ) 10000 ಕಿ.ಮೀ.

ಆ) ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಇ) 1993-94ರ ಸಾಲಿನಿಂದ ಸದರಿ ರಸ್ತೆಗಳ ಅಭಿವೃದ್ಧಿಯನ್ನು ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಅನುಬಂಧ

(ಧಾರವಾಡ ಜಿಲ್ಲೆ)

ಕ್ರ. ಸಂ.	ರಸ್ತೆಗಳ ಹೆಸರು	ಉದ್ದ ಕಿ.ಮೀ.	ಪ್ರಸಕ್ತ ದರ್ಜೆ	ಮೇಲ್ದರ್ಜೆಗೇರಿಸುವ ದರ್ಜೆ
1	2	3	4	5
1.	ಪಿ.ಬಿ. ಕ್ರಾಸ್ ರಸ್ತೆಯಿಂದ ಲೋಕೂರ್‌ವರೆಗಿನ ರಸ್ತೆ, ನರೇಂದ್ರ ಮಂಗಳಗಟ್ಟಿ, ಕುರುಬಗಟ್ಟೆ ಮಾರ್ಗವಾಗಿ.	11.80	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
2.	ಧಾರವಾಡ – ಗೋವಾ ರಸ್ತೆಯಿಂದ ಕಲಕೇರಿವರೆಗಿನ ರಸ್ತೆ ಮುಗದ ಮಾರ್ಗವಾಗಿ.	3.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
3.	ತೇಗೂರಿನಿಂದ – ಮಂಡಿಹಾಳ ರಸ್ತೆ ರಾಮಾಪುರ, ವೀರಾಪುರ ಕಲ್ಲಾಪೂರ ಮಾರ್ಗವಾಗಿ.	14.40	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
4.	ಬೆಳ್ಳಿಗಟ್ಟಿಯಿಂದ ಧಾರವಾಡ – ಹಳಿಯಾಳ ರಸ್ತೆಗೆ ಕೂಡು ರಸ್ತೆ ಮಾನಗುಂಡಿ ಮಾನಸೂರ ಮಾರ್ಗವಾಗಿ ಕಲಗಟಗಿಗೆ ಕೂಡು ರಸ್ತೆ.	10.80	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
5.	ವೆಂಕಟಾಪೂರ – ಮದನ ಭಾವಿ ರಸ್ತೆ ಮುಗಳಿ ಮಾರ್ಗವಾಗಿ	8.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
6	ಆದವಟಗಿ – ಬೆಂಬೆ ರಸ್ತೆ ಡೋರಿ ಮಾರ್ಗವಾಗಿ ತಾಲೂಕಾಹದ್ದಿನವರೆಗೆ	11.20	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
7.	ನಿಗದಿ – ದೇವಗಿರಿ ದೇವರ ಹುಬ್ಬಳ್ಳಿ ಮತ್ತು ಲಾಲಗಟ್ಟೆ ಮಾರ್ಗವಾಗಿ	5.50	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
8.	ಜಾಲಮಟ್ಟಿ – ಬಣದೂರ ರಸ್ತೆ	24.60	ಇತರ ಜಿಲ್ಲಾ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
9.	ಮಾಲ್ವಿಯಿಂದ ತಾಲೂಕಾ ಹದ್ದಿನವರೆಗಿನ ರಸ್ತೆ ಬೆಳಗಲಿ ವೀರಾಪುರ ಕರಡಿಕೊಪ್ಪ, ಕುರಡಿಕೆರೆ ಮಾರ್ಗವಾಗಿ	16.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
10.	ಸವಣೂರ – ಶಿರವಾಡ ರಸ್ತೆ	2.80	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ

(ಮುಂದುವರೆದಿದೆ)

1	2	3	4	5
11. ಶಿರವಾಡದಿಂದ ಬೆಳಗಲಿ ಕ್ರಾಸ್‌ವರೆಗಿನ ರಸ್ತೆ		5.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
12. ಗೋಕುಲ ಕ್ರಾಸ್‌ನಿಂದ ಕಣವಿ – ಹೊನ್ನಾಪುರವರೆಗಿನ ರಸ್ತೆ ಧಾರವಾಡ ಕಲಘಟಗಿ ರಸ್ತೆಗೆ ಕೂಡುವವರೆಗೆ		8.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
13. ಉಣಕಲ್ ಹುಬ್ಬಳ್ಳಿ ರಸ್ತೆ ಧಾರವಾಡ ಕಲಘಟಗಿ ರಸ್ತೆಗೆ ಕೂಡುವವರೆಗೆ		9.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
14. ಸುಳ್ಳದಿಂದ ಬೆಂಗೇರಿವರೆಗಿನ ರಸ್ತೆ		11.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
15. ಇಂಗಳ ಹಳ್ಳಿಗೆ ಕೂಡು ರಸ್ತೆ		3.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
16. ಯಮನೂರ – ತಿರ್ಲಾಪುರ ಬ್ಯಾಹಟ್ಟಿ ರಸ್ತೆ		7.20	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
17. ಭದ್ರಾಪುರ – ಕೋಳಿವಾಡ ಬೆಂಚಲಿ ತಾಲೂಕಾ ಹದ್ದಿನವರೆಗೆ		8.50	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
18. ಸವಣೂರ – ಶಿರವಾಡ ರಸ್ತೆ ಕಿ.ಮೀ. 20.00 ರಿಂದ 37.50ರವರೆಗೆ (ಮುಂದುವರೆದಿದ).		17.50	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
19. ಹುಲಗೂರ – ಎರವಟ್ಟಿ ರಸ್ತೆ		17.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
20. ರಾಷ್ಟ್ರೀಯ ಹೆದ್ದಾರಿ 4ನ್ನು ಕೂಡುವ ಕುಂದಗೋಳದಿಂದ ರಾಮನಕೊಪ್ಪ ರಸ್ತೆ		16.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
21. ಸಂಗೂರ – ತಿಳವಳ್ಳಿ – ಅನವಟ್ಟಿ ರಸ್ತೆ ಹಾವೇರಿ ತಾಲ್ಲೂಕಿನಲ್ಲಿ		13.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
22. ನೆಲೋಗಲ್‌ನಿಂದ ಹೊಂಬರಡಿವರೆಗಿನ ರಸ್ತೆ (ರಾ.ಹೆ.4 ರಿಂದ) ಕುಡುಚ ಕೋಡಿಹಳ್ಳಿ, ಮಾರ್ಗವಾಗಿ ತಾಲ್ಲೂಕು ಹದ್ದಿನವರೆಗೆ)		8.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
23. ಜಂಗಮನಕೊಪ್ಪದಿಂದ ಕಲಕೋಟಿವರೆಗಿನ ರಸ್ತೆ ಕರಜಗಿ		10.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
ಮಾರ್ಗವಾಗಿ ಶಿರಸಿ – ಮಾಳಕಾಲ್ಮೂರು ರಸ್ತೆಯಿಂದ		13.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
24. ಗುತ್ತಲದಿಂದ [illegible] ರಸ್ತೆ ಬೆಳವಗಿ ಮಾರ್ಗವಾಗಿ				
25. ಬ್ಯಾಡಗಿಯಿಂದ ತಿಳವಳ್ಳಿವರೆಗಿನ ರಸ್ತೆ		29.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ

1	2	3	4	5
	26. ಕಬ್ಬೂರಿ – ಮಬ್ಬೂರ ಕ್ರಾಸ್‌ದಿಂದ ಹರಿಹರಾಸಮುದ್ರಗಿ ರಸ್ತೆಗೆ ಕೂಡುವ ರಸ್ತೆ ಚಿಕ್ಕಬಳ್ಳಾಪುರ ಮತ್ತು ಸೋಡಂಬಿ ಮಾರ್ಗವಾಗಿ	15.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	27. ಬ್ಯಾಡಗಿಯಿಂದ – ಕದರಮಂಡಲಗಿ ವರೆಗಿನ ರಸ್ತೆ (ರಾಷ್ಟ್ರೀಯ ಹೆದ್ದಾರಿ 4ನ್ನು ಕೂಡುವವರೆಗೆ)	7.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	28. ರಾಣೇಬೆನ್ನೂರ ಬೇಲೂರ ರಸ್ತೆ (ಮೇಡ್ಲೇರಿ ಕ್ರಾಸ್‌ನಿಂದ ಬೇಲೂರವರೆಗೆ)	13.50	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	29. ರಾಣೇಬೆನ್ನೂರ ಮೇಡ್ಲೇರಿ ರಸ್ತೆ	14.40	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	30. ರಾಣೇಬೆನ್ನೂರ ಹಿರೇಬಿದರಿ ರಸ್ತೆ (ಮೇಡ್ಲೇರಿ ಕ್ರಾಸ್‌ದಿಂದ ಐರಣಿ – ಹಿರೇಬಿದರಿವರೆಗೆ)	20.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	31. ಜನಸ್ಥಾನಿ – ಚಿಕ್ಕೇಲೂರ ರಸ್ತೆ	11.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	32. ಮಾಸೂರು – ಶಿಕಾರಿಪುರ ರಸ್ತೆ ತಾಲ್ಲೂಕ ಹದ್ದಿನವರೆಗೆ (ಶಿವಮೊಗ್ಗ ಜಿಲ್ಲೆಗೆ ಕೂಡಿಸಲು)	6.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	33. ಬ್ಯಾಡಗಿ – ರಟ್ಟಿಹಳ್ಳಿ ರಸ್ತೆ ಹಿರೇಕೆರೂರ ತಾಲ್ಲೂಕಿನಲ್ಲಿ	10.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	34. ತಾವರಗಿ – ತುಮ್ಮಿನ ಕಟ್ಟೆ ರಸ್ತೆಯಿಂದ ಬಿಲ್ಲಹಳ್ಳಿವರೆಗಿನ ರಸ್ತೆ ಮಾಸೂರ ಗುತ್ತಲ ರಸ್ತೆಗೆ ಕೂಡಲು ಜೋಗಿಹಳ್ಳಿ ಕ್ಯಾತನಕೆರೆ ಹಿರೇಯುಬ ಚಿಕ್ಕಡಜಿ ಮಾಗನೂರ ಜೋಡ ನೇಸ್ವಿ ಮಾರ್ಗವಾಗಿ	15.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	35. ತಾವರಗಿ – ತುಮ್ಮಿನ ಕಟ್ಟೆ ರಸ್ತೆ	8.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	36. ಸಂಗೂರ – ತಿಳವಳ್ಳಿ ಅನವಟ್ಟಿ ರಸ್ತೆ ಕಿ.ಮಿ. 6.0ದಿಂದ ಕಿ.ಮೀ. 23.60 ವರೆಗೆ	23.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	37. ಹಾನಗಲ್ – ಬೊಮ್ಮನಹಳ್ಳಿ ರಸ್ತೆ ಗಂಗಮೂಲದ ತಡಸ ರಸ್ತೆಯನ್ನು ಕೂಡಲು ಬೀಚಪಳ್ಳಿ ಹುಲ್ಲತ್ತಿ ಮಾರ್ಗವಾಗಿ ಕಿ.ಮೀ 6.0ರಿಂದ 19.90 ರವರೆಗೆ	19.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	38. ಹಾನಗಲ್‌ದಿಂದ ಆರಳೇಶ್ವರ ರಸ್ತೆ ಅಕ್ಕಿವಳ್ಳಿ ಮಾರ್ಗವಾಗಿ ಕಿ.ಮೀ.0ರಿಂದ 8.50 ರವರೆಗೆ	8.50	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ

1	2	3	4	5
39.	ಪ್ರಾನಾ–ಬಂಗಳೂರು ರಸ್ತೆಯಿಂದ ಕುನ್ನೂರದವರೆಗಿನ ರಸ್ತೆ	6.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
40.	ಮುಗಳಿಯಿಂದ ದುಂಡಸಿವರೆಗಿನ ರಸ್ತೆ ಗೋಟಗೋಡಿ ಮಾರ್ಗವಾಗಿ	3.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
41.	ಶಿಗ್ಗಾವಿಯಿಂದ ಕೋಣನಕೇರಿವರೆಗಿನ ರಸ್ತೆ	9.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
42.	ಬಂಕಾಪುರದಿಂದ ಬಾಡದವರೆಗಿನ ರಸ್ತೆ	6.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
43.	ಸುವರ್ಣಗಿರಿಯಿಂದ ಚಿರವಾಡದವರೆಗಿನ ರಸ್ತೆ (ಮುಂದುವರೆದಿದೆ)	20.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
44.	ಮಲಸೋಟ–ಕುರ್ತಕೋಟಿ ಅಂತೂರು ಬೆಂಗಳೂರು ನೀಲಗುಂದ––ಚಿಂಚಲಿ––ಮುಳಗುಂದ ರಸ್ತೆ	20.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
45.	ಬಿ.ಜಿ. ರಸ್ತೆಯಿಂದ ಚಿಕ್ಕಹಂದಿಗೋಳ–ಬೆಳಹೋಡ ಮಾದಗಾಸೂರ ರಸ್ತೆ	11.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
46.	ಚಿಂಚಲಿ ಕೋಳಿವಾಡದಿಂದ ಬಿ.ಜಿ.ರಸ್ತೆಗೆ ಕೂಡುವ ರಸ್ತೆ (ತಾಲೂಕ ಹದ್ದಿನವರೆಗೆ)	5.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
47.	ಬಿಂಕದ ಕಟ್ಟೆ ಅಸುಂಡಿ–ಮಾಲಸಮುದ್ರದಿಂದ ಕಾ.ಕೈ.ಇ.ರಸ್ತೆಯವರೆಗೆ ಕೂಡುರಸ್ತೆ	5.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
48.	ಬಿಂತೂರ–ಬೆಂತೂರಿನಿಂದ ಅಣ್ಣಿಗೇರಿ ರಸ್ತೆ	6.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
49.	ಶಿರವಡಿ–ನರಗುಂದ ರಸ್ತೆ	8.00	ಇತರೆ ಜಿಲ್ಲಾ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
50.	ನವಲಗುಂದ – ಶಲವಡಿ ರಸ್ತೆ	20.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
51.	ಯಮನೂರ–ತಿರ್ಲಾಪುರ–ನೋಂಬ	12.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
	ರಸ್ತೆ	10.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
52.	ಇಬ್ರಾಹಿಂಪುರ–ಹಳ್ಳಿಕೇರಿ–ಅಣ್ಣಿಗೇರಿ ರಸ್ತೆ	18.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
53.	ಬೋಗಾ ಚಕ್ಕಲಿ ನರೇಗಲ ಅಬ್ಬಿಗೇರಿ ರಸ್ತೆ	14.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
54.	ಜಕ್ಕಲಿ ಮಾರನಬಸರಿ ಹಾಲಕೇರಿ ರಸ್ತೆ (ತಾಲೂಕ ಹದ್ದಿನವರೆಗೆ)	10.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
55.	ಅಬ್ಬಿಗೇರಿ–ಮಾಡಿಹಾಳ–ಹಾಲಕೇರಿ ರಸ್ತೆ (ತಾಲೂಕ ಹದ್ದಿನವರೆಗೆ)			

1	2	3	4	5
56.	ಹೊಸಳ್ಳಿ–ಇಟಗಿ–ಮುಶಿಗೇರಿ ರಸ್ತೆ	8.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
57.	ಶಲವಡಿಯಿಂದ ನರಗುಂದ ರಸ್ತೆ	8.00	ಇತರ ಜಿಲ್ಲಾ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
58.	ಸಿರುಗೋಳ–ಕೋಣ್ಣೂರ ರಸ್ತೆ	5.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
59.	ಅಚಮಟ್ಟಿ ಕ್ರಾಸ್‌ದಿಂದ ಕಲಬಾಳ ರಸ್ತೆ	12.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
60.	ಶಿರೋಳ–ಹಡ್ಲಿ ಸಂರಕೋಡ ರಸ್ತೆ	13.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
61.	ಬೆಳವಣಿಕಿ–ಕೌಜಗೇರಿ–ಮಾಳವಾಡ–ಅಸುಂಟಿ ಇಂದ ಹೊಳೆ ಆಲೂರ – ಶಿರೋಳ ರಸ್ತೆಗೆ ಕೂಡು ರಸ್ತೆ	12.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
62.	ಬರದೂರ – ಹಳ್ಳಿ ಗುಡಿ ರಸ್ತೆ	17.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
63.	ಡಿಂಬಳ – ಕಲಕೇರಿ ರಸ್ತೆ	17.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
64.	ಶಿಮುಷ್ಪುರ–ಹರಲಾಪುರದಿಂದ ಬಿ.ಜಿ. ರಸ್ತೆವರೆಗೆ ಕೂಡು ರಸ್ತೆ	9.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
65	ಕೆಲಿಸಿ ರುಂಬ – ವೆಂಕಟಾಪುರ – ಸೊರಟೂರ ರಸ್ತೆ	6.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
66.	ಮಾಗಡಿ–ಯಳವತ್ತಿ–ಯತ್ತಿನಹಳ್ಳಿ ಸಂಪಿ ರಸ್ತೆ	12.00	ಇತರ ಜಿಲ್ಲಾ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
67.	ಲಕ್ಷ್ಮೇಶ್ವರ – ದೇವಿ ಹಾಳ್ ಪೇಟ್. ಬಸ್ನಿ ಅತ್ರಹಳ್ಳಿ ದೇವಿಹಾಳ ರಸ್ತೆ	14.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
68.	ಹಮ್ಮಿಗಿ – ತಳಗಿ ರಸ್ತೆ ಬಿದ್ರಹಳ್ಳಿ ತೋಳಲಿ – ಹೆಬ್ಬಾಳ ಕೂಗನೂರ – ಬಾಳೆಹೊಸೂರು ಮಾರ್ಗವಾಗಿ	21.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ
69.	ಇಟಗಿ – ಗುಸ್ತಲ ರಸ್ತೆ (ತಾಲ್ಲೂಕು ಹದ್ದಿನವರೆಗೆ)	3.00	ಹಳ್ಳಿ ರಸ್ತೆ	ಜಿಲ್ಲಾ ಮುಖ್ಯ ರಸ್ತೆ

ಕೃಷ್ಣಾ ಏತ ಮತ್ತು ಕಾವೇರಿ ಏತ ನೀರಾವರಿ ಯೋಜನೆಗಳ ರದ್ದತಿ.

453 (೨೨೮): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) –

ಸಣ್ಣ ನೀರಾವರಿ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಏತ ನೀರಾವರಿ ಹಾಗೂ ಕಾವೇರಿ ಏತ ನೀರಾವರಿ ಯೋಜನೆಗಳನ್ನು ರದ್ದು ಪಡಿಸಲಾಗಿದೆಯೇ;

ಆ) ಕೃಷ್ಣಾ ಏತ ಮತ್ತು ಕಾವೇರಿ ಏತ ನೀರಾವರಿ ನಿಗಮ ಎಂದು ಅಸ್ತಿತ್ವದಲ್ಲಿ ಬಂದಿತು;

ಇ) ಇಲ್ಲಿಯವರೆಗೆ ಆ ನಿಗಮ ಪ್ರಾರಂಭವಾದಾಗಿನಿಂದ ಎಷ್ಟು ಹಣ ಸಂಬಳಕ್ಕಾಗಿ ಹಾಗೂ ಇತರ ಖರ್ಚುಗಳಿಗಾಗಿ ಮಾಡಲಾಗಿದೆ;

ಈ) ಆ ಯೋಜನೆ ಕೆಲಸಕ್ಕಾಗಿ ಇಲ್ಲಿಯವರೆಗೆ ಎಷ್ಟು ಜಮೀನನ್ನು ಸ್ವಾಧೀನಪಡಿಸಲಾಗಿದೆ ಮತ್ತು ಎಷ್ಟು

ಕೆಲಸಗಳನ್ನು ಮುಗಿಸಲಾಗಿದೆ ಮತ್ತು ಇನ್ನುಳಿದ ಕೆಲಸಗಳು ಯಾವ ಹಂತದಲ್ಲಿವೆ (ಸವಿಸ್ತಾರವಾಗಿ) ಮಾಹಿತಿಯನ್ನು ಕೊಡುವುದು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):--

ಅ) ಎರಡೂ ಏತ ನೀರಾವರಿ ನಿಗಮಗಳನ್ನು ರದ್ದು ಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ದಿ: 9-........ – 86ರಂದು, ಕಾವೇರಿ ಜಲಾನಯನ ಏತ ನೀರಾವರಿ ನಿಗಮ ದಿ: 2-6-86 ಅಸ್ತಿತ್ವಕ್ಕೆ ಬಂದಿರುತ್ತದೆ.

ಇ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮವು ಇಲ್ಲಿಯವರೆಗೆ
ಸಂಬಳ ಮತ್ತಿತರ : 332.12 ಲಕ್ಷ ಖರ್ಚು ಮಾಡಿದೆ ಬಾಬ್ತುಗಳಿಗಾಗಿ
ಕಾಮಗಾರಿಗಳಿಗಾಗಿ : 13.02 ಲಕ್ಷ ಖರ್ಚು ಮಾಡಿದೆ.

ಕಾವೇರಿ ಜಲಾನಯನ ಏತ ನೀರಾವರಿ ನಿಗಮವು ಇಲ್ಲಿಯವರೆಗೆ
ಸಂಬಳ ಮತ್ತಿತರ ಬಾಬ್ತುಗಳಿಗಾಗಿ : ರೂ. 268.08 ಲಕ್ಷ ಖರ್ಚು ಮಾಡಿದೆ.
ಕಾಮಗಾರಿಗಳಿಗಾಗಿ : ರೂ. 98.29 ಲಕ್ಷ ಖರ್ಚು ಮಾಡಿದೆ.

ಈ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮವು ಇಲ್ಲಿಯವರೆಗೆ ಅಭಿವೃದ್ಧಿ ಕೆಲಸಗಳಿಗಾಗಿ 13.02 ಲಕ್ಷ ರೂ.ಗಳನ್ನು ಖರ್ಚು ಮಾಡಿದೆ. ಈ ನಿಗಮದಿಂದ 8 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಯಾವುದೇ ಯೋಜನೆಯು ಪೂರ್ಣಗೊಂಡಿರುವುದಿಲ್ಲ.

ಕಾವೇರಿ ಜಲಾನಯನ ಏತ ನೀರಾವರಿ ನಿಗಮವು ಇಲ್ಲಿಯವರೆಗೆ ಅಭಿವೃದ್ಧಿ ಕೆಲಸಗಳಿಗಾಗಿ 98.29 ಲಕ್ಷ ರೂ.ಗಳನ್ನು ಖರ್ಚು ಮಾಡಿದೆ. ಈ ನಿಗಮದಿಂದ 17 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಯಾವುದೇ ಯೋಜನೆಯು ಪೂರ್ಣಗೊಂಡಿರುವುದಿಲ್ಲ. (ವಿವರಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ).

ಅನುಬಂಧ

ಕೃಷ್ಣಾ ಮತ್ತು ಕಾವೇರಿ ಜಲಾನಯನ ಏತ ನೀರಾವರಿ ನಿಗಮಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳು:–

ಕ್ರ ಸಂ.	ಏತ ನೀರಾವರಿ ಯೋಜನೆಯ ಹೆಸರು	ಜಿಲ್ಲೆ ತಾಲ್ಲೂಕು	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಅಚ್ಚುಕಟ್ಟು ಹೆಕ್ಟೇರ್ ಗಳಲ್ಲಿ	ಖರ್ಚು ವರಾ ಲಕ್ಷ ರೂ. ಗಳಲ್ಲಿ
	ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ				
1.	ಅಡಿಹುಡಿ ತೊದಲಬಾಗಿ ಏತ ನೀರಾವರಿ ಯೋಜನೆ	ಬಿಜಾಪುರ ಜಮಖಂಡಿ	324.532	1490	1.380
2.	ಲಿಂಗಾಪುರ ಏತ ನೀರಾವರಿ	ಬಿಜಾಪುರ ಬೀಳಗಿ	80.295	405	0.158
3.	ಕರಡಗಾ ಏತ ನೀರಾವರಿ	ಬೆಳಗಾಂ ಚಿಕ್ಕೋಡಿ	31.499	121	0.226
4.	ವಾಸನ್ ಏತ ನೀರಾವರಿ	ಧಾರವಾಡ ಹಾನಗಲ್	51.587	347	0.803
5.	ಹೆಳೂರ್ ಏತ ನೀರಾವರಿ	ಧಾರವಾಡ ಹಿರೇಕೆರೂರು	197.793	890	0.025
6.	ಚಿಕ್ಕನಹಿಸಬಿ	ಬಿಜಾಪುರ ಬಾದಾಮಿ	86.958	486	2.690
7.	ಬಸಲೇಬೈಲ	ಉತ್ತರ ಕನ್ನಡ ಯಲ್ಲಾಪುರ	24.007	102	0.034
8.	ರಾಮನಗರ	ಉತ್ತರ ಕನ್ನಡ ಸುಪಾ	23.228	39.50	0.058
9.	ಇತರೆ ಯೋಜನೆಗಳ ಸರ್ವೇಕ್ಷಣೆಗಾಗಿ ಮಾಡಿದ ವೆಚ್ಚ				0.647
		ಒಟ್ಟು :	819.989	3930.50	13.022 ಲಕ್ಷ ರೂ.ಗಳು

ಕಾವೇರಿ ಜಲಾನಯನ ಏತ ನೀರಾವರಿ ನಿಗಮ, ಮೈಸೂರು

1. ತಲಕಾಡು	ಮೈಸೂರು ಟಿ.ನರಸೀಪುರ	47.92	188	6.570
2. ಮೇದಿನಿ	ಮೈಸೂರು ಟಿ. ನರಸೀಪುರ	90.18	405	8.90
3. ಮುಡುಕುತೊರೆ 2ನೇ ಹಂತ	ಮೈಸೂರು ಟಿ.ನರಸೀಪುರ	279.30	810	14.27
4. ಬೀರಂಬಳ್ಳಿ	ಮೈಸೂರು ಹೆಚ್.ಡಿ. ಕೋಟೆ	41.40	172	8.77
5. ಚಿಕ್ಕನಂದಿ	ಮೈಸೂರು ಹೆಚ್.ಡಿ. ಕೋಟೆ	55.71	283	5.99
6. ಹುಲಿಕೆರೆ	ಮಂಡ್ಯ ಮದ್ದೂರು	23.97	202	8.19
7. ಕಾಡುಕೊತ್ತನಹಳ್ಳಿ	ಮಂಡ್ಯ ಮದ್ದೂರು	10.90	47	2.93
8. ಅತಗೂರು ಮಾಚಳ್ಳಿ	ಮಂಡ್ಯ ಮದ್ದೂರು	40.09	162	9.1
9. ಮುಲ್ಲಕ್ಯಾತನಹಳ್ಳಿ	ಮಂಡ್ಯ ಮಳವಳ್ಳಿ	44.02	149	10.45
10. ಸಂಜಾಪುರ	ಮಂಡ್ಯ ಮಳವಳ್ಳಿ	23.31	162	4.07
11. ಕೊಟ್ಟಗೆರೆ	ಕೊಡಗು ವೀರಾಜಪೇಟೆ	22.95	81	1.94
12. ಕಾಡನೂರು	ಹಾಸನ ಅರಕಲಗೂಡು	22.95	81	3.74
ಕೆ. ಗೊಲ್ಲಹಳ್ಳಿ	ಬೆಂಗಳೂರು ಬೆಂಗಳೂರು (ದ)	40.53	223	4.69

14. ನೆಮ್ಮಾರ್	ಚಿಕ್ಕಮಗಳೂರು ಶೃಂಗೇರಿ	12.33	41	2.48
15. ಬೊಮ್ಮಾಲಾಪುರ	ಚಿಕ್ಕಮಗಳೂರು ಕೊಪ್ಪ	12.80	45	2.26
16. ಬಂಡಿಗಾಡಿ	ಚಿಕ್ಕಮಗಳೂರು ಕೊಪ್ಪ	18.18	67	3.12
17. ಕರಮುರಗುಂಡಿ	ದಕ್ಷಿಣ ಕನ್ನಡ ಬಂಟ್ವಾಳ	23.50	124	0.54
18. ಹುಚ್ಚನಕೊಪ್ಪಲು	ಹಾಸನ ಹೊಳೆನರಸೀಪುರ	–	–	0.22 (ಈ ಯೋಜನೆಯನ್ನು ಸಣ್ಣ ನೀರಾವರಿ ವಲಯಕ್ಕೆ ಫೆಬ್ರವರಿ 90ರಲ್ಲಿ ವರ್ಗಾಯಿಸಲಾಗಿದೆ)
	ಒಟ್ಟು:	838	3242	98.29

ಕುಮುದ್ವತಿ ನದಿಗೆ ಕಟ್ಟಲಾಗುವ ಬ್ಯಾರೇಜ್ ಅಡ್ಡಗೋಡೆಯ ಕೆಲಸದ ಪ್ರಗತಿ

457 (81): ಶ್ರೀ ಕೆ.ಬಿ. ಕೋಳಿವಾಡ (ರಾಣೇಬೆನ್ನೂರು):–

ಸಣ್ಣ ನೀರಾವರಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಣೇಬೆನ್ನೂರು ತಾಲ್ಲೂಕು ಕುಮುದ್ವತಿ ನದಿಗೆ ಕಟ್ಟುವ ಲಿಂಗದಹಳ್ಳಿ ಬ್ಯಾರೇಜ್, ನಿಟ್ಟೂರ್ ಬ್ಯಾರೇಜ್, ಚಿಕ್ಕಮಾಗನೂರು ಹಾಗೂ ಹಿರೇಮಾಗನೂರು ಬ್ಯಾರೇಜ್ ಅಡ್ಡಗೋಡೆ ಯಾವ ಹಂತದಲ್ಲಿದೆ;

ಆ) ಸದರಿ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರು ಮತ್ತು ತಾಂತ್ರಿಕ ಒಪ್ಪಿಗೆ ಕೊಡಲಾಗಿದೆಯೇ;

ಇ) ಹಾಗಿದ್ದಲ್ಲಿ ಮುಂಬರುವ 1993–94ರ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗುವುದು ?

ಡಾ|| ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯಮಂತ್ರಿ):–

ಅ) ಲಿಂಗದಹಳ್ಳಿ ಬ್ಯಾರೇಜ್: ಈ ಯೋಜನೆಯು ಡಿಪಿಎಪಿ ಅಡಿಯಲ್ಲಿ 1986–87ನೇ ಸಾಲಿನಲ್ಲಿ 24.96 ಲಕ್ಷ ರೂ.ಗಳಿಗೆ ಮಂಜೂರಾತಿ ಹೊಂದಿದ್ದು ಜಿಲ್ಲಾ ಪರಿಷತ್ ವತಿಯಿಂದ ಕಾಂಕ್ರೀಟ್ ಕೆಲಸ ನಡೆದಿದ್ದು ಇದುವರೆಗೆ 9.44 ಲಕ್ಷ ರೂ.ಗಳು ವೆಚ್ಚವಾಗಿದೆ. 5.00 ಲಕ್ಷ ರೂ.ಗಳ ಮೊತ್ತ ಮೀರಿರುವ ಕಾಮಗಾರಿಗಳಿಗೆ ಅನುದಾನವನ್ನು ನಿಲ್ಲಿಸಿರುವುದರಿಂದ ಕೆಲಸವು ಸ್ಥಗಿತಗೊಂಡಿದೆ. ಉಳಿಕೆ ಕೆಲಸ ಮುಗಿಸಲು 30.00 ಲಕ್ಷ ರೂ.ಗಳು ಬೇಕಾಗುವುದು.

ನಿಟ್ಟೂರು ಬ್ಯಾರೇಜ್:– ಈ ಯೋಜನೆಗೆ 48.38 ಲಕ್ಷರೂ.ಗಳ ಅಂದಾಜು ತಯಾರಾಗಿದ್ದು ಇದರಿಂದ 208 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಿದೆ. ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. 92–93ನೇ ಆಯವ್ಯಯ ಪಟ್ಟಿಯಲ್ಲಿ 17.00 ಲಕ್ಷ ರೂ. ಅನುದಾನ ಸೇರಿದೆ.

ಆ) ಚಿಕ್ಕಮಾಗನೂರು ಮತ್ತು ಹಿರೇಮಾಗನೂರು ಬ್ಯಾರೇಜ್:

ಈ ಕಾಮಗಾರಿಯು ಯಾವ ಅನುಮೋದಿತ ಕಾರ್ಯಕ್ರಮದಲ್ಲಿಯೂ ಸೇರಿರುವುದಿಲ್ಲ. ಇದರ ಅಂದಾಜು ಪಟ್ಟಿ ತಯಾರಿಸಬೇಕಾಗಿದೆ.

ಲಿಂಗದಹಳ್ಳಿ ಬ್ಯಾರೇಜ್‌ಗೆ ಮಾತ್ರ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಒಪ್ಪಿಗೆ ದೊರೆತಿದೆ. ಉಳಿದ ಬ್ಯಾರೇಜ್‌ಗಳಿಗೆ ಮಂಜೂರಾತಿ ದೊರೆತಿಲ್ಲ.

ಇ) ಲಿಂಗದಹಳ್ಳಿ ಬ್ಯಾರೇಜ್‌ಗೆ ಆಧ್ಯತೆ ಮೇಲೆ ಪರಿಶೀಲಿಸಲಾಗುವುದು.

ನಿಟ್ಟೂರು ಬ್ಯಾರೇಜ್‌ಗೆ 93–94ನೇ ಸಾಲಿನಲ್ಲಿ 18.00 ಲಕ್ಷ ರೂ. ಅನುದಾನ ಒದಗಿಸಿದೆ.

ಚಿಕ್ಕಮಾಗನೂರು ಮತ್ತು ಹಿರೇಮಾಗನೂರು ಇದು ತಾಂತ್ರಿಕ ಮತ್ತು ಆರ್ಥಿಕ ಶಕ್ಯವಿದ್ದಲ್ಲಿ ಹಣದ ಲಭ್ಯತೆ ಮೇರೆಗೆ ಪರಿಶೀಲಿಸಲಾಗುವುದು. 93–94ನೇ ಸಾಲಿನ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಸಿದ್ದಾಪುರ – ಹಳ್ಳಿಹೊಳೆ – ಮುದೂರು - ಜಡ್ಕಲ್ ರಸ್ತೆ ಅಭಿವೃದ್ಧಿ

459 (155): ಶ್ರೀ ಜಿ.ಎಸ್. ಆಚಾರ್ (ಬೈಂದೂರು):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಸಿದ್ದಾಪುರ – ಹಳ್ಳಿಹೊಳೆ – ಮುದೂರು – ಜಡ್ಕಲ್ ರಸ್ತೆಯ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆ ಯಾವ ಕ್ರಮ ಕೈಗೊಂಡಿದೆ;

ಆ) ತಾಲ್ಲೂಕಿನ ಅತ್ಯಂತ ಹಿಂದುಳಿದ ಭಾಗದಲ್ಲಿ ಹಾದುಹೋಗುವ ಈ ರಸ್ತೆಯ ಸಂಪೂರ್ಣ ಅಭಿವೃದ್ಧಿಗೆ ಎಷ್ಟು ವೆಚ್ಚ ಹಾಗೂ ಸಮಯ ತಗಲುವುದು;

ಇ) ರಸ್ತೆಯ ಮಹತ್ವದ ದೃಷ್ಟಿಯಿಂದ ಅದಕ್ಕೆ ಆದ್ಯತೆ ನೀಡಲಾಗುವುದೇ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ಆ ರಸ್ತೆಯ ಅತಿ ಅಗತ್ಯವಿರುವ ಕಾಮಗಾರಿಗಳಾದ 34.50ನೇ ಕಿ.ಮೀ.ನಲ್ಲಿ ಒಂದು ಸೇತುವೆ ನಿರ್ಮಾಣ ಹಾಗೂ 3 ಕಿ.ಮೀ.ಉದ್ದಕ್ಕೆ ಜಲ್ಲಿ ಹಾಕಿ ಡಾಂಬರು ಮಾಡುವ ಮತ್ತು ವಿಶೇಷ ದುರಸ್ತಿ, ವಾರ್ಷಿಕ ನಿರ್ವಹಣೆ ಇವುಗಳನ್ನು ಒಟ್ಟು 13.03 ಲಕ್ಷದ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಆ ರಸ್ತೆಯ ಸರ್ವತೋಮುಖಿ ಅಭಿವೃದ್ಧಿ ಅಂದರೆ ರಸ್ತೆಯನ್ನು ಸಂಪೂರ್ಣವಾಗಿ ಜಲ್ಲಿ ಪದರ ಒದಗಿಸಿ ಡಾಂಬರು ಮಾಡುವುದು ಮತ್ತು ಮೋರಿಗಳ ನಿರ್ಮಾಣ ಇತ್ಯಾದಿಗಳನ್ನು ಕೈಗೊಳ್ಳಲು ಒಟ್ಟು ರೂ. 120.00 ಲಕ್ಷ ಬೇಕಾಗಬಹುದು. ಅನುದಾನ ಪೂರ್ಣ ದೊರೆತಲ್ಲಿ ಸುಮಾರು 3 ವರ್ಷಗಳ ಕಾಲಾವಧಿ ಬೇಕಾಗುತ್ತದೆ.

ಇ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿನ ಈ ರಸ್ತೆಯನ್ನು ಇತ್ತೀಚೆಗೆ ಮೇಲ್ದರ್ಜೆಗೇರಿಸಿ

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡಿದ್ದು ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು.

ರಾಜ್ಯದ ನೀರಾವರಿ ಯೋಜನೆಗಳಿಗೆ ಪ್ರಾಧಾನ್ಯತೆಯ ಮೇಲೆ ಹಣ ಬಿಡುಗಡೆ

461 (208): ಶ್ರೀ ಗುರುಪಾದಪ್ಪ ನಾಗಮ್ಮಾರ್‌ಪಳ್ಳಿ (ಔರಾದ್):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1984 ರಿಂದ 1988ರವರೆಗೆ ರಾಜ್ಯದ ನೀರಾವರಿ ಯೋಜನೆಗಳಿಗಾಗಿ ಪ್ರತಿ ವರ್ಷ ಬಿಡುಗಡೆ ಮಾಡಲಾದ ಹಣದ ಪ್ರಮಾಣವೆಷ್ಟು; (ಪ್ರತಿಯೊಂದು ಯೋಜನೆಯ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು);

ಆ) 1989 ರಿಂದ 1992 ರವರೆವಿಗೆ ರಾಜ್ಯದ ನೀರಾವರಿ ಯೋಜನೆಗಳಿಗೆ ಬಿಡುಗಡೆ ಮಾಡಲಾದ ಹಣದ ಪ್ರಮಾಣಹೆಷ್ಟು;

ಇ) ರಾಜ್ಯದ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿ ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಮುಂಬರುವ ವರ್ಷಗಳಲ್ಲಿ ಆಧ್ಯತೆಯ ಮೇಲೆ ನೀರಾವರಿ ಯೋಜನೆಗಳಿಗಾಗಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಆ) 880.49 ಕೋಟಿ ರೂ.ಗಳು (1.4.89 ರಿಂದ 31.12.92ರವರೆಗೆ)

ಇ) ಹೌದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 208ರ ವಿವರಣಾ ಪಟ್ಟಿ

ಕ್ರ. ಸಂ.	ಯೋಜನೆಯ ಹೆಸರು	ಖರ್ಚಾದ ಹಣ (ಕೋಟಿ ರೂ.ಗಳಲ್ಲಿ)				
		1984-85	1985-86	1986-87	1987-88	1988-89
1	2	3	4	5	6	8
ಅ.	**ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆ ಕಾಮಗಾರಿಗಳು:**					
1.	ಕೃಷ್ಣಾ ಮೇಲ್ದಂಡೆ	41.42	46.45	53.13	43.47	50.12
2.	ರಾಷ್ಟ್ರೀಯ ಜಲ ನಿರ್ವಹಣೆ ಯೋಜನೆ	–	–	–	1.15	3.86
3.	ಘಟಪ್ರಭ – 3	9.53	9.23	9.87	10.84	10.06
4.	ಮಲಪ್ರಭ	11.58	12.21	15.01	13.45	15.56
5.	ಬೆಣ್ಣೆ ತೋರಾ	0.79	1.11	1.63	2.11	2.28
6.	ಭದ್ರ	1.65	1.35	0.85	1.03	3.39

7. ತುಂಗಭದ್ರ ಎಡದಂಡೆ ಕಾಲುವೆ	5.88	5.39	3.39	5.83	2.60
8. ತುಂಗಭದ್ರ ಬಲದಂಡೆ ಕೆಳಮಟ್ಟದ ಕಾಲುವೆ	0.52	0.17	–	–	–
9. ತುಂಗಭದ್ರ ಬಲದಂಡೆ ಮೇಲ್ಗಾಲುವೆ	0.42	0.43	0.47	0.81	1.55
10. ಹಿಪ್ಪರಗಿ	–	–	0.15	0.50	0.25
11. ತುಂಗಭದ್ರ ಯೋಜನೆ ನವೀಕರಣ	0.12	0.12	–	–	–
12. ಕೃಷ್ಣರಾಜಸಾಗರ ನವೀಕರಣ	2.59	2.19	2.48	2.78	2.44
13. ಕಾರಂಜ	4.58	2.82	9.15	5.78	7.29
14. ವರಾಹಿ	0.25	0.26	0.20	0.11	0.23
15. ದುಧಗಂಗಾ	–	–	–	1.07	1.00
16. ಭದ್ರಾ ನವೀಕರಣ	–	–	–	–	–
17. ಇತರೆ	–	–	1.44	0.56	–
ಒಟ್ಟು ಭಾರಿ ಯೋಜನೆಗಳು	79.88	81.73	97.77	89.44	100.62
18. ಅಮರ್ಜ	0.21	0.22	1.03	0.64	0.93
19. ಮುಲ್ಲಾಮಾರಿ ಮೇಲ್ದಂಡೆ	1.13	0.91	0.77	1.75	2.16
20. ಮುಲ್ಲಾಮಾರಿ ಕೆಳದಂಡೆ	0.28	0.26	0.23	0.28	0.70
21. ಸೌದಾಗರ್	0.23	0.12	0.12	0.26	–
22. ಹಿರೇಹಳ್ಳ	0.09	1.44	0.11	0.09	0.23
23. ಮಸ್ಕಿನಾಲಾ	0.06	0.20	0.09	0.06	0.11
24. ರಾಣಿಕೆರೆ ಪೂರಕ ನಾಲೆ	0.26	0.36	0.44	0.26	0.42
25. ಮಂಚನಬೆಲೆ	1.30	1.98	2.21	1.60	2.57
26. ತಾರಕ	0.50	0.28	0.38	0.41	–
27. ಹೊಟೆಹೊಳೆ	1.23	1.21	1.05	1.76	0.27
28. ಚುಲ್ಕಿನಾಲಾ	0.09	0.08	0.57	0.17	0.22
29. ಹೋಡಿರಾಯನಹಳ್ಳ	–	–	–	0.01	–
30. ಗಂಡೋರಿ ನಾಲಾ	–	–	–	0.03	0.05
31. ತೀತಾ	0.34	0.34	0.04	–	–
32. ಕೃಷ್ಣ ಏತ ನೀರಾವರಿ					

ನಿಗಮ	–	–	–	–	2.39
33. ಇತರೆ	0.24	0.66	–	–	
ಒಟ್ಟು ಮಧ್ಯಮ ಯೋಜನೆಗಳು	5.96	8.06	7.04	7.32	10.05
ಯೋಜನೇತರ ಕಾಮಗಾರಿಗಳು					
1. ಹಾರಂಗಿ	9.73	11.03	10.11	5.63	6.55
2. ಹೇಮಾವತಿ	30.07	36.02	35.98	29.82	32.22
3. ಕಬಿನಿ	9.74	11.94	12.86	6.26	7.41
4. ಕೃಷ್ಣರಾಜಸಾಗರ ಬಲದಂಡೆ ಕಾಲುವೆ	2.18	2.86	3.45	2.82	2.49
5. [illegible]	0.18	0.52	0.90	1.45	1.12
ಒಟ್ಟು ಭಾರಿ ಯೋಜನೆಗಳು	51.90	62.37	63.30	45.98	49.79
6. ಅರ್ಕಾವತಿ	0.78	1.58	1.45	0.48	0.30
7. ಬಿಕ್ಕಿ ಹೊಳೆ	0.48	0.77	0.49	0.47	0.62
8. ಇಗ್ಗಲೂರು	0.35	0.48	0.77	0.49	0.40
9. ನಲ್ಲೂರು ಅಮಾನಿಕರೆ	0.61	0.19	0.07	–	
10. [illegible]ತೊರೆ ಹಳ್ಳ	0.13	0.17	0.23	0.20	0.14
11. ಚಿಕ್ಕಹೊಳೆಯಿಂದ ಸುವರ್ಣಾವತಿಗೆ [illegible]ಮಾರ್ಗಪಲ್ಲಟ	0.17	0.43	0.31	0.03	–
12. ಸುವರ್ಣಾವತಿ	–	–	–	–	–
13. [illegible]	–	–	–	0.37	0.76
14. ಕಾವೇರಿ ಏತ ನೀರಾವರಿ ನಿಗಮ	–	–	–	–	3.11
ಒಟ್ಟು ಮಧ್ಯಮ ಯೋಜನೆಗಳು	2.52	3.62	3.32	2.09	5.33
ಒಟ್ಟು (ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು)	139.71	155.78	171.43	144.83	165.79
ಆ. ಸಣ್ಣ ನೀರಾವರಿ	20.64	32.45	36.24	24.18	30.85
ಒಟ್ಟು (ಅ + ಆ)	160.35	188.23	207.64	169.01	196.64

ಚಿಕ್ಕೋಡಿ ತಾಲ್ಲೂಕು ಮೂಲಕ ಹಾದು ಹೋಗುವ ಕಬ್ಬೂರು ನಾಲಾ ಕಾರ್ಯ

463 (231): ಶ್ರೀ ಎಸ್.ಎಸ್. ಭೀಮಣ್ಣನವರ್ (ಚಿಕ್ಕೋಡಿ):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಮೂಲಕ ಹಾದು ಹೋಗುವ ಕಬ್ಬೂರು ನಾಲಾ (ಹಿಡಕಲ್ ಜಲಾಶಯದಿಂದ) ಕಾರ್ಯವನ್ನು ಎಂದು ಪ್ರಾರಂಭಗೊಳಿಸಲಾಯಿತು;

ಆ) ಈ ಕಾರ್ಯಕ್ಕೆ ಇದುವರೆವಿಗೂ ಆಗಿರುವ ವೆಚ್ಚವೆಷ್ಟು;

ಇ) ಈ ನಾಲಾ ಕಾರ್ಯವನ್ನು ಎಂದು ಪೂರ್ಣಗೊಳಿಸಲಾಗುವುದು;

ಈ) ಈ ನಾಲಾ ಪೂರ್ಣಗೊಂಡ ನಂತರ ಅಚ್ಚುಕಟ್ಟಿಗೊಳಪಡುವ ಪ್ರದೇಶದ ವಿಸ್ತೀರ್ಣವೆಷ್ಟು ? (ಹಳ್ಳಿವಾರು ವಿವರಗಳನ್ನೊದಗಿಸುವುದು);

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) ಹಿಡಕಲ್ ಜಲಾಶಯದಿಂದ ಕಬ್ಬೂರು ನಾಲಾ ಎಂಬ ಹೆಸರಿನ ಕಾಲುವೆ ಇರುವುದಿಲ್ಲ. ಆದರೆ ಚಿಕ್ಕೋಡಿ ತಾಲ್ಲೂಕಿನ ಮೂಲಕ ಹಾಯ್ದು ಕಬ್ಬೂರು ಸುರಂಗ ಮಾರ್ಗದ ಮೂಲಕ ಹೋಗುವ ಚಿಕ್ಕೋಡಿ ಶಾಖಾ ಕಾಲುವೆಯ ನಿರ್ಮಾಣ ಕಾರ್ಯವನ್ನು 1973ರಲ್ಲಿ ಪ್ರಾರಂಭಿಸಲಾಯಿತು.

ಆ) 14.05 ಕೋಟಿ ರೂ.ಗಳು.

ಇ) ಈ ಶಾಖಾ ಕಾಲುವೆಯ ಕಾಮಗಾರಿಗಳನ್ನು ಎಲ್ಲಾ ರೀತಿಯಿಂದಲೂ 1996ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಈ) ವಿವರಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ 231ರ ಉತ್ತರಕ್ಕೆ ಅನುಬಂಧ

ಚಿಕ್ಕೋಡಿ ಉಪ ಕಾಲುವೆಯ ಅಡಿಯಲ್ಲಿ ಪ್ರಯೋಜನ ಪಡೆಯುವ ಹಳ್ಳಿಗಳು

ಅ.ನಂ.	ಹಳ್ಳಿಗಳು	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
1	2	3
1.	ಇಂಗಳಿ	332
2.	ಹೊಸೂರು	448
3.	ಯರನಾಳ	274
4.	ಯರಗಟ್ಟಿ	358
5.	ಬಡಕುಂದ್ರಿ	333
6.	ಕುರಣಿ	754
7.	ಸುಲ್ತಾನಪೂರ	194
8.	ಬೆನವಾಡ	94
9.	ಮದಮಕ್ಕನಾಳ	121

10.	ಬಸ್ತವಾಡ	49
11.	ಗೌಡವಾಡ	20
12.	ಅರ್ಜುನವಾಡ	18
13.	ನೋಗಿನಾಳ	120
14.	ಅವರಗೋಳ	134
15.	ಶಿರಗಾಂವ	95
16.	ಕೊಟಬಾಗಿ	412
17.	ಚಿಕಾಲ ಗುಡ್ಡ	201
18.	ಗುಡನ್ನ	407
19.	ಜಾಂಗಟಿ ಹ ಳ	221
20.	ಶಿರಢಾಣ	131
21.	ಕಡಹಟ್ಟಿ	431
22.	ಬೆಲ್ಲದ ಬಾಗೇವಾಡಿ	181
23.	ಧೂಪದಾಳ	130
24.	ಪಾಮಲದಿನ್ನಿ	624
25.	ಮಲ್ಲಾಪೂರ	398
26.	ಬಡಿಗವಾಡ	20
27.	ದಂಡಾಪೂರ	356
28.	ಜಾಗನೂರ	833
29.	ವಿಜಯನಗರ	417
30.	ಕಬ್ಬೂರ	376
31.	ಮದಾಪೂರ	207
32.	ನೀಪನಾಳ	327
33.	ಮಂಜೂರ್	193
34.	ಕೊಟಬಾಗಿ	144
35.	ದೇವಾಪೂರ ಹಟ್ಟಿ	90
36.	ಕಂಕಣವಾಡಿ	54
37.	ಸೌಂಸುದ್ದಿ	18
38.	21 ರಿಂದ 25ನೇ ಬ್ಲಾಕ್‌ನಲ್ಲಿಯ ವಿಸ್ತೀರ್ಣ ಮತ್ತು ಗೋಕಾಕ ಮತ್ತು ಚಿಕ್ಕೋಡಿ ತಾಲ್ಲೂಕಿನಲ್ಲಿಯ ಬ್ಲಾಕ್ ನಂ.-20ರ ವಿಸ್ತೀರ್ಣ	18673
39.	ಸಿಬಿಸಿ ಮೇಲೆ ಬರುವ ಯಾತ ನೀರಾವರಿಯ ಪ್ರದೇಶ ಮತ್ತು ಇನ್ನೂ ತನಿಖೆಯ ಹಂತದಲ್ಲಿರುವ ಪ್ರದೇಶದ ವಿಸ್ತೀರ್ಣ. (ಹುಕ್ಕೇರಿ ತಾಲ್ಲೂಕು)	5966
	ಒಟ್ಟು	34154 ಹೆಕ್ಟೇರು

ಮೂಡಿಗೆರೆ ತಾಲ್ಲೂಕು ದಾರದಹಳ್ಳಿ ಊರಬಾಗಿಲು ಕೆರೆ ದುರಸ್ತಿ

464 (243): ಶ್ರೀಮತಿ ಮೋಟಮ್ಮ (ಮೂಡಿಗೆರೆ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನ ದಾರದಹಳ್ಳಿ ಊರ ಬಾಗಿಲು ಕೆರೆ ದುರಸ್ತಿ ಕಾರ್ಯ ಯಾವಾಗ ಮಂಜೂರಾಗಿತ್ತು;

ಆ) ಅದಕ್ಕಾಗಿ ಎಷ್ಟು ಹಣ ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಪ್ರದೇಶದ ಜಮೀನಿಗೆ ನೀರು ಒದಗಿಸಲಾಗುವುದು;

ಇ) ಇದರ ದುರಸ್ತಿ ಕಾರ್ಯ ಪ್ರಾರಂಭ ಮಾಡದಿರಲು ಕಾರಣವೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ದಿ: 2-1-91ರಂದು ಮಂಜೂರಾಗಿದೆ.

ಆ) 7.50 ಲಕ್ಷ ರೂ.ಗಳಿಗೆ ಮಂಜೂರು ಮಾಡಲಾಗಿದೆ.

38.80 ಹೆಕ್ಟೇರುಗಳಿಗೆ ನೀರೊದಗಿಸಲಾಗುವುದು

ಇ) ಈ ಕಾಮಗಾರಿಗೆ 1992-93 ಸಾಲಿನಲ್ಲಿ 3.00 ಲಕ್ಷ ರೂ.ಗಳ ಅನುದಾನ ದೊರೆತಿದ್ದು ಜಿಲ್ಲಾಪರಿಷತ್ತಿನಿಂದ ಕಾಮಗಾರಿಯು ಈಗಾಗಲೇ ಪ್ರಾರಂಭಗೊಂಡಿದೆ. ಇತ್ತೀಚೆಗೆ ಈ ಕಾಮಗಾರಿಯನ್ನು ಸಣ್ಣ ನೀರಾವರಿ ವಲಯ ವಹಿಸಿಕೊಂಡಿದ್ದು ಅದನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಿಂಧನೂರು ತಾಲ್ಲೂಕಿನಲ್ಲಿ ರಾಷ್ಟ್ರೀಯ ನೀರು ಸರಬರಾಜು ಯೋಜನೆ

465 (341): ಶ್ರೀ ಬಿ. ಹಂಪನಗೌಡ (ಸಿಂಧನೂರು):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಿಂಧನೂರು ತಾಲ್ಲೂಕಿನಲ್ಲಿಯ 55ನೇ ಹಾಗೂ 40ನೇ ಉಪ ಕಾಲುವೆಯನ್ನು (ಎನ್.ಡಬ್ಲ್ಯು.ಎಂ.ಪಿ.) ರಾಷ್ಟ್ರೀಯ ನೀರು ಸರಬರಾಜು ಯೋಜನೆಯಲ್ಲಿ ತೆಗೆದುಕೊಳ್ಳುವ ಉದ್ದೇಶವು ಸರ್ಕಾರಕ್ಕೆ ಇರುವುದೇ;

ಆ) ಹಾಗಿದ್ದಲ್ಲಿ ಈ ಕಾಲುವೆಯ ದುರಸ್ತಿ ಕೆಲಸಗಳನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) ೫೫ನೇ ಉಪ ಕಾಲುವೆಯ ಪ್ರಸ್ತಾವನೆಯು ಇದೆ.

40ನೇ ಉಪಕಾಲುವೆಯ ಪ್ರಸ್ತಾವನೆಯು ಇರುವುದಿಲ್ಲ.

ಆ) ೧೯೯೩-೯೪ರಲ್ಲಿ ಪ್ರಾರಂಭಿಸುವ ಉದ್ದೇಶವಿದೆ.

ಮುಳಬಾಗಿಲು ಪ್ರಥಮ ದರ್ಜೆ ಕಾಲೇಜು ಕಟ್ಟಡ ಮತ್ತು ನಿವೇಶನ

467 (877): ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಳಬಾಗಿಲು ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮತ್ತು ಸ್ಥಿರಾಸ್ತಿಗಳನ್ನು ಸರ್ಕಾರದ ವಶಕ್ಕೆ ದಿನಾಂಕ 13–11–91ರಂದು ವಶಪಡಿಸಿಕೊಂಡಿದ್ದು, ಸದರಿ ಕಾಲೇಜಿನ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಳ್ಳಲು ಆದೇಶ ಕೋರಿ ದಿನಾಂಕ 3–1–92ರಂದು ಕಾಲೇಜು ನಿರ್ದೇಶಕರಿಂದ ಲೋಕೋಪಯೋಗಿ ಕಾರ್ಯದರ್ಶಿಯವರಿಗೆ ಪತ್ರ ಹೋಗಿದ್ದರೂ ಕ್ರಮ ಕೈಗೊಳ್ಳದಿರಲೂ ಕಾರಣಗಳೇನು;

ಆ) ಈ ವಿಳಂಬಕ್ಕೆ ಕಾರಣರಾದವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಈ ಕಾಲೇಜಿನ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಆದೇಶ ಹೊರಡಿಸುವುದು ಯಾವಾಗ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ಈ ಬಗ್ಗೆ ಸರ್ಕಾರಕ್ಕೆ ಮುಖ್ಯ ಇಂಜಿನಿಯರ್‌ರವರ ಕಛೇರಿಯಿಂದ ದಿನಾಂಕ 17.2.1993ರಲ್ಲಿ ಪ್ರಸ್ತಾವನೆ ಬಂದಿದ್ದು ಅದು ಪರಿಶೀಲನೆಯ ಹಂತದಲ್ಲಿದೆ. ಹೀಗಾದಾಗ್ಯೂ ಈಗಾಗಲೇ ಲೋಕೋಪಯೋಗಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಿ ಆದೇಶವನ್ನು ನಿರೀಕ್ಷಿಸಿ ದುರಸ್ತಿಯ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿರುತ್ತಾರೆ.

ಆ) ಅಲ್ಲದೆ ಜಿಲ್ಲಾಧಿಕಾರಿಗಳಿಂದ ಮಂಜೂರಾದ 75,000–00 ರೂ.ಗಳಲ್ಲಿ ಸದರಿ ಕಟ್ಟಡದ ಮೇಲ್ಛಾವಣಿಯನ್ನು ರಿಪೇರಿ ಮಾಡಲಾಗಿದೆ.

ಇ) ಈ ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿರುವುದರಿಂದ ಜಾಗ್ರತೆಯಾಗಿ ಕ್ರಮ ಕೈಗೊಳ್ಳಲಾಗುವುದು.

ಸೋಮವಾರಪೇಟೆ ತಾಲ್ಲೂಕಿನ ಕೆರೆಗಳ ಹೂಳೆತ್ತುವ ಕಾರ್ಯದ ಬಗ್ಗೆ

468 (564): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):–

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸೋಮವಾರಪೇಟೆ ತಾಲ್ಲೂಕಿನ ಅನೇಕ ಕೆರೆಗಳ ಹೂಳು ತೆಗೆಯದೆ ಇರುವುದರಿಂದ ರೈತರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅದನ್ನು ಯಾವಾಗ ತೆಗೆಸಲಾಗುವುದು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ಸಚಿವರು):–

ಅ) ಹೌದು

ಆ) ಹಣಕಾಸಿನ ಲಭ್ಯತೆಯ ಮೇಲೆ ಹೂಳು ತೆಗೆಯುವ ಕಾಮಗಾರಿಯನ್ನು ಹಂತ ಹಂತವಾಗಿ ಕೈಗೊಳ್ಳಲಾಗುವುದು.

ಕುಶಾಲನಗರದಿಂದ ಹಾಸನಕ್ಕೆ ಹೋಗುವ ರಸ್ತೆ ದುರಸ್ತಿ

470 (563): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯ ಕುಶಾಲನಗರದಿಂದ ಹಾಸನಕ್ಕೆ ಶಿರಂಗಾಲ ಮಾರ್ಗವಾಗಿ ಹೋಗುವ ರಸ್ತೆಯು ತುಂಬಾ ಹಾಳಾಗಿದ್ದು, ಕಳೆದ 10 ವರ್ಷಗಳಿಂದಲೂ ರಿಪೇರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅದನ್ನು ಯಾವಾಗ ದುರಸ್ತಿ ಮಾಡಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಈ ರಸ್ತೆಯನ್ನು ಪ್ರತಿ ವರ್ಷವೂ ನಿರ್ವಹಣಾ ಅನುದಾನದಲ್ಲಿ ದುರಸ್ತಿ ಪಡಿಸಲಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಈ ರಸ್ತೆಯ ದುರಸ್ತಿಗಾಗಿ ಒಟ್ಟು ರೂ. 11.45 ಲಕ್ಷ ವೆಚ್ಚ ಮಾಡಲಾಗಿದೆ. ಈ ರಸ್ತೆಯ ಮೇಲ್ಮೈಯು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಅತಿ ಕೆಟ್ಟು ಹೋದ ಭಾಗಗಳ ವಿಶೇಷ ದುರಸ್ತಿಯನ್ನು ಹಾಗೂ ಅಡ್ಡ ಮೋರಿಗಳ ದುರಸ್ತಿಯನ್ನು ಒಟ್ಟು 4.81 ಲಕ್ಷ ರೂ.ಗಳ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ. ಇದರಲ್ಲಿ 1.5 ಕಿ.ಮೀ ಉದ್ದ ರಸ್ತೆಯ ಭಾಗವನ್ನು ಮರು ಡಾಂಬರೀಕರಣ ಮಾಡಲಾಗುವುದು.

ಹೊಳೇಹೊನ್ನೂರು – ಚನ್ನಗಿರಿ, ದಾವಣಗೆರೆ ರಸ್ತೆ ಡಬ್ಬಲ್ ರೋಡ್ ಮಾಡುವುದು

472 (757): ಶ್ರೀ ಕರಿಯಣ್ಣ (ಹೊಳೆಹೊನ್ನೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ--ಚನ್ನಗಿರಿ ರಸ್ತೆಯನ್ನು ಡಬಲ್ ರೋಡು ಆಗಿ ಪರಿವರ್ತನೆ ಮಾಡಲಾಗುವುದೆ;

ಆ) ಇದರಂತೆ ಬಹು ಮುಖ್ಯವಾದ ಈ ರಸ್ತೆಯನ್ನು ಚನ್ನಗಿರಿ–ಹೊಳೆಹೊನ್ನೂರು–ಶಿವಮೊಗ್ಗದವರೆವಿಗೆ ಡಬ್ಬಲ್ ರಸ್ತೆ ಮಾಡಲಾಗುವುದೆ;

ಇ) ಇದನ್ನು ಡಬ್ಬಲ್ ರಸ್ತೆ ಮಾಡುವುದರಿಂದ ಶಿವಮೊಗ್ಗ–ಹೊಳೆಹೊನ್ನೂರು–ಚನ್ನಗಿರಿ-ದಾವಣಗೆರೆ ಜನಗಳಿಗೆ ಅನುಕೂಲವಾಗುವುದು ನಿಜವೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಸದ್ಯದಲ್ಲಿ ಈ ರಸ್ತೆಯನ್ನು ಜೋಡಿ ರಸ್ತೆ ಮಾಡುವ ಪ್ರಸ್ತಾಪ ಇರುವುದಿಲ್ಲ.

ಆ) ಸಧ್ಯದಲ್ಲಿ ಈ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಇ) ಅನುಕೂಲವಾಗುವುದು.

ಭದ್ರಾವತಿ–ಚೆನ್ನಗಿರಿ–ದಾವಣಗೆರೆ ಮುಖ್ಯ ರಸ್ತೆಯ ದ್ಯಾಮಣ್ಣನ ಕೆರೆಯ ಸೇತುವೆ ರಿಪೇರಿ

473 (756): ಶ್ರೀ ಕರಿಯಣ್ಣ (ಹೊಳೆಹೊನ್ನೂರು):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾರೀಖು 16–11–92 ಹಾಗೂ 17–11–92ರಂದು ಬಿದ್ದ ಭಾರೀ ಮಳೆಯಿಂದ ಒಡೆದು ಹೋದ ಭದ್ರಾವತಿ–ಚನ್ನಗಿರಿಯ ಮುಖ್ಯ ರಸ್ತೆಯ ದ್ಯಾಮಣ್ಣನ ಕೆರೆಕೋಡಿ ಸೇತುವೆಯನ್ನು ಯಾವಾಗ ದುರಸ್ತಿಯನ್ನು ಮಾಡಲಾಗುವುದು;

ಆ) ಇದನ್ನು ತಕ್ಷಣ ನಿರ್ಮಾಣ ಮಾಡದಿದ್ದರೆ, ಭದ್ರಾವತಿ–ಚನ್ನಗಿರಿ – ದಾವಣಗೆರೆ ಮತ್ತು ಚಿತ್ರದುರ್ಗಕ್ಕೆ ಹೋಗುವುದಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ಈಗಾಗಲೇ ಪರ್ಯಾಯ ರಸ್ತೆ ನಿರ್ಮಾಣ ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡಲಾಗಿದೆ ಮತ್ತು ಸೇತುವೆಯ ಪುನರ್ ನಿರ್ಮಾಣಕ್ಕಾಗಿ ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಹೌದು.

ಭದ್ರಾ ಡ್ಯಾಂ ಒಳಗಡೆ ಬರುವ ನೀರಿನಿಂದ ಆವೃತವಾದ ಗ್ರಾಮಗಳ ವರ್ಗಾವಣೆಗೆ ಹಣ ಬಿಡುಗಡೆ

474 (755): ಶ್ರೀ ಕರಿಯಣ್ಣ (ಹೊಳೆಹೊನ್ನೂರು):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1991–92ನೇ ಸಾಲಿನಲ್ಲಿ ಭದ್ರಾ ನೀರಾವರಿ ಪ್ರದೇಶದಲ್ಲಿ ರಸ್ತೆ, ಸೇತುವೆ, ಗ್ರಾಮಗಳ ವರ್ಗಾವಣೆ ಫೀಡರ್ ಚಾನಲ್ ಮಾಡಲು ವರ್ಷಕ್ಕೆ 5ಕೋಟಿಯಂತೆ 3ವರ್ಷಕ್ಕೆ ಹಣ ಕೊಡಬೇಕೆಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತೀರ್ಮಾನವಾಗಿರುವುದು ನಿಜವೆ;

ಆ) ಹಾಗಿದ್ದಲ್ಲಿ ಆ ಬಗ್ಗೆ ಹಣ ಬಿಡುಗಡೆಯಾಗುತ್ತಿರುವುದೇ;

ಇ) ಇಲ್ಲದಿದ್ದರೆ, ಇದಕ್ಕೆ ಕಾರಣವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ದಿನಾಂಕ 21.3.91 ರಂದು ನಡೆಸಿದ ಸಭೆಯಲ್ಲಿ ಇಂತಹ ತೀರ್ಮಾನ ಕೈಗೊಳ್ಳಲಾಯಿತು.

ಆ) 1991–92ನೇ ಸಾಲಿನಲ್ಲಿ ಭದ್ರಾ ಯೋಜನೆಯ ಕಾಮಗಾರಿಗಳಿಗೆ 5.25 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಯಿತು. 1992–93ನೇ ಸಾಲಿನಲ್ಲಿ ಭದ್ರಾ ಯೋಜನೆಗೆ 6.00 ಕೋಟಿ ರೂ.ಗಳ ಅನುದಾನವನ್ನು ನೀಡಲಾಗಿದೆ.

ಇ) ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಭದ್ರಾ ನಾಲೆಯು ಒಡೆದಿರುವುದನ್ನು ರಿಪೇರಿ ಮಾಡುವ ವಿಚಾರ

475 (753): ಶ್ರೀ ಕರಿಯಣ್ಣ (ಹೊಳೇಹೊನ್ನೂರು):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಯ ಬಿ.ಆರ್. ಪ್ರಾಜೆಕ್ಟ್‌ನಲ್ಲಿರುವ ಭದ್ರಾ ಡ್ಯಾಂನ ಭದ್ರಾ ನಾಲೆ ಒಡೆದಿರುವುದನ್ನು ಯಾವಾಗ ದುರಸ್ತಿ ಮಾಡಲಾಗುವುದು;

ಆ) ಇದು ತಡವಾಗಲು ಕಾರಣವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಖಾಯಂ ದುರಸ್ತಿ ಕಾಮಗಾರಿಯನ್ನು ಇನ್ನು 2–3 ವರ್ಷಗಳ ಅವಧಿಯಲ್ಲಿ ಮುಗಿಸಲು ಉದ್ದೇಶಿಸಲಾಗಿದೆ.

ಆ) ಒಡೆದು ಹೋಗಿರುವ ಕಲ್ಲು ಗಾರೆ ಗೋಡೆಯನ್ನು ಸಂಪೂರ್ಣವಾಗಿ ತೆಗೆದುಹಾಕಿ ಅದರ ತಳಪಾಯ ಭೂಗರ್ಭ ರಚನೆಯನ್ನು ತೀವ್ರವಾಗಿ ಪರಿವೀಕ್ಷಿಸಿ ನಂತರ ಖಾಯಂ ದುರಸ್ತಿಯ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ. ಸ್ಥಳದ ಅಭಾವ ಹಾಗೂ ಒಡೆದು ಹೋಗಿರುವ ಕಲ್ಲುಗಾರೆ ಗೋಡೆಯ ಭಾರಿ ಪ್ರಮಾಣದ ಕಲ್ಲುಗಳನ್ನು ಮೇಲಕ್ಕೆ ಎತ್ತಿ ದೂರ ಸಾಗಿಸುವ ಉಪಕರಣಗಳ ಅಭಾವದಿಂದಾಗಿ ಈ ಕಾಮಗಾರಿಯನ್ನು ಪ್ರಾರಂಭಿಸಲು ತಡವಾಗಿದೆ.

ಭದ್ರ ಮೇಲ್ದಂಡೆ ಯೋಜನೆಯ ಬಗ್ಗೆ

478 (838): ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾ ಮೇಲ್ದಂಡೆ ಯೋಜನೆಯು 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿರುವುದೇ;

ಆ) ಭದ್ರಾ ಮೇಲ್ದಂಡೆ ಯೋಜನೆ ಕಾರ್ಯಗತವಾಗಲು ಇರುವ ನ್ಯೂನತೆಗಳಾವುವು;

ಇ) ಯೋಜನೆಯನ್ನು ಕೈಗೊಳ್ಳುವುದು ಯಾವಾಗ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹೌದು.

ಆ) ಭದ್ರಾ ಮೇಲ್ದಂಡೆ ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದ್ದು, ಈ ಕೆಳಕಂಡ ವಿಚಾರಗಳ ಹಿನ್ನೆಲೆಯಲ್ಲಿ ಸದರಿ ಯೋಜನೆಯ ಸಾಧ್ಯತೆ ಅಥವಾ ಅಸಾಧ್ಯತೆ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗಿದೆ:

ಇ) 1. ಕೃಷ್ಣಾ ಕೊಳ್ಳದ ಸಮಗ್ರ ಯೋಜನೆ ಅಡಿ ಭದ್ರಾ ಮೇಲ್ದಂಡೆ ಯೋಜನೆಗೆ ಕೇವಲ 8 ಟಿಎಂಸಿ ನೀರು ಲಭ್ಯವಿದೆ.

2. ಈ ಯೋಜನೆಯಿಂದ ಅರಣ್ಯ ಪ್ರದೇಶ ಹಾಗೂ ಕಾಫಿ ತೋಟಗಳನ್ನೊಳಗೊಂಡಂತೆ ಆಗುವ ಮುಳುಗಡೆ ಹಾಗೂ ಪರಿಸರದ ಹಿನ್ನೆಲೆ.

3. ಈ ಯೋಜನೆಯ ನಾಲೆಯ ಮೊದಲನೆ 50 ಮೈಲಿಗಳರೆಗೆ ನೀರಾವರಿ ಸಾಧ್ಯತೆ ಇಲ್ಲದೇ ಇರುವುದು.

4. ಸದರಿ ಯೋಜನೆಯಿಂದ ಮೆ: ಕುದುರೆಮುಖ ಕಬ್ಬಿಣ ಅದುರು ಸಂಸ್ಥೆಯ ಹಲವು ರಚನೆಗಳು ಮುಳುಗಡೆ.

ಹಾಸನ ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಹಣ ಬಿಡುಗಡೆ

482 (955): ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಿಂದ ಹಾಸನ ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ, ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿಗಾಗಿ ಪ್ರತಿ ವರ್ಷ ಬಿಡುಗಡೆಯಾದ ಹಣವೆಷ್ಟು;

ಆ) ಪ್ರತಿ ತಾಲ್ಲೂಕಿನಲ್ಲಿ ಡಾಮರು ಹಾಕಿದ ರಸ್ತೆಗಳ ಉದ್ದವೆಷ್ಟು; ಹಾಗೂ ಜಲ್ಲಿ ಕಲ್ಲು ಹಾಕಿದ ರಸ್ತೆಗಳ ಉದ್ದವೆಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ವಿವರಗಳು ಕೆಳಕಂಡಂತಿದೆ:-

ತಾಲ್ಲೂಕಿನ ಹೆಸರು	ರಸ್ತೆಗಳ ಅಬಿವೃದ್ಧಿಗಾಗಿ ಬಿಡುಗಡೆಯಾದ ಹಣ (ಲಕ್ಷ ರೂ.ಗಳಲ್ಲಿ)		
	1990-91	1991-92	1992-93
ಹಾಸನ	24,769	45.63	32.474
ಬೇಲೂರು	20.314	28.142	28.818
ಚನ್ನರಾಯಪಟ್ಟಣ	33.746	34.094	53.413
ಅರಸಿಕೆರೆ	31.89	49.564	46.134
ಹೊಳೆನರಸೀಪುರ	29.933	31.442	46.093
ಅರಕಲಗೂಡು	16.964	17.216	23.645
ಸಕಲೇಶಪುರ	25.133	24.600	37.833
ಆಲೂರು	4.842	4.869	7.906
ಒಟ್ಟು	187.591	235.557	276.316

ಆ) ವಿವರಗಳು ಕೆಳಕಂಡಂತಿವೆ

ತಾಲ್ಲೂಕಿನ ಹೆಸರು ಹೆಸರು	ಡಾಂಬರು ಹಾಕಿರುವ ಉದ್ದ (ಕಿ.ಮೀ.ಗಳಲ್ಲಿ)	ಜಲ್ಲಿ ಹಾಕಿರುವ ಉದ್ದ (ಕಿ.ಮೀ.ಗಳಲ್ಲಿ)
ಹಾಸನ	165.90	101.20
ಬೇಲೂರು	170.80	69.80
ಚನ್ನರಾಯಪಟ್ಟಣ	248.30	163.50

ಅರಸೀಕೆರೆ	217.50	109.10
ಹೊಳೆನರಸೀಪುರ	216.55	149.10
ಅರಕಲಗೂಡು	139.30	68.30
ಸಕಲೇಶಪುರ	154.00	99.00
ಆಲೂರು	49.70	57.20
ಒಟ್ಟು	1362.05	817.20

ಕೃಷ್ಣಾ ಮೇಲ್ದಂಡೆ ಯೋಜನೆಗೆ ಬಳಕೆಯಾಗದೆ ಉಳಿದಿರುವ ಹಣ

484 (987): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಸುಮಾರು 37 ಕೋಟಿ ರೂ. ಹಣ ಬಳಕೆಯಾಗದೇ ಉಳಿದಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಈ ಹಣವನ್ನು ಬಳಕೆ ಮಾಡದೇ ಇದ್ದುದ್ದಕ್ಕಾಗಿ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು;

ಇ) ಬಳಕೆಯಾಗದೇ ಇದ್ದ ಹಣವನ್ನು ಲ್ಯಾಪ್ಸ್ ಮಾಡುತ್ತಿರುವುದರಿಂದ ಈ ಯೋಜನೆ ಕುಂಠಿತವಾಗುತ್ತಿರುವುದು ನಿಜವೆ;

ಈ) ಈ ವರ್ಷ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದ್ದಿತು ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):-

ಅ) ಪ್ರಸಕ್ತ 1992-93ನೇ ಸಾಲಿನಲ್ಲಿ ಈ ಯೋಜನೆಗೆ 155 ಕೋಟಿ ರೂ.ಗಳ ಅನುದಾನವಿದ್ದು ಡಿಸೆಂಬರ್ 1992ರ ಕೊನೆಯ ವೇಳೆಗೆ 76.25 ಕೋಟಿ ರೂ. ವೆಚ್ಚವಾಗಿದೆ. ಬಳಕೆಯಾಗದೆ ಉಳಿಯುವ ಹಣದ ವಿವರವು ಆರ್ಥಿಕ ವರ್ಷ ಮುಗಿದ ನಂತರವೇ ತಿಳಿದು ಬರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉತ್ತರವು (ಅ) ನಲ್ಲಿರುವಂತೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕಿನ ಚಿಕ್ಕಬುದನೂರು ನೀರಾವರಿ ಕೆಲಸ ಪ್ರಾರಂಭ

486 (990): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಚಿಕ್ಕ ಬುದನೂರ ನೀರಾವರಿ ಕೆಲಸ ತೆಗೆದುಕೊಳ್ಳಲು

ಎಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆಯೆಂದು ಮತ್ತು ಎಷ್ಟು ಹಣವನ್ನು ಇದಕ್ಕೆ ಮಂಜೂರು ಮಾಡಲಾಯಿತು;

ಆ) ಈ ಕೆಲಸಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಎಂದು ನೀಡಲಾಯಿತು;

ಇ) ತಾಂತ್ರಿಕ ಮಂಜೂರಾತಿಯನ್ನು ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ) ಹಾಗಿದ್ದಲ್ಲಿ ವಿನಾ ಕಾರಣ ವಿಳಂಬ ಮಾಡಲಿಕ್ಕೆ ಹತ್ತಿದ ಅಧಿಕಾರಿಗಳ ಮೇಲೆ ಸರ್ಕಾರದವರು ಕ್ರಮ ಕೈಗೊಳ್ಳುವರೆ;

ಉ) ಈ ವರ್ಷ ಕೆಲಸಕ್ಕೆ ಎಷ್ಟು ಹಣ ಒದಗಿಸಲಾಗಿದೆ ಮತ್ತು ಈ ವರ್ಷ ಆಯವ್ಯಯದಲ್ಲಿ ಒದಗಿಸಿದ ಹಣವನ್ನು ಖರ್ಚು ಮಾಡಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೆ;

ಊ) ಈ ಯೋಜನೆಯಿಂದ ಒಟ್ಟು ಎಷ್ಟು ಎಕರೆ ನೀರಾವರಿಯಾಗುವುದು ಮತ್ತು ಈ ಯೋಜನೆಯಿಂದ ಯಾವ ಯಾವ ಗ್ರಾಮದ ಜನರಿಗೆ ಲಾಭ ಪಡೆದುಕೊಳ್ಳಲು ಅನುಕೂಲವಾಗುವುದು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) 129.36 ಲಕ್ಷ ರೂ. ಅಂದಾಜಿಗೆ ಸರ್ಕಾರಿ ಆದೇಶ ನೀಇ 117 ಸನೀಬೆ 91 ದಿನಾಂಕ: 13.1.93ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಆ) ದಿನಾಂಕ 16.2.93

ಇ) ಉತ್ತರ (ಅ)ದ ಮೇರೆಗೆ ಉದ್ಭವಿಸುವುದಿಲ್ಲ.

ಈ) ಉತ್ತರ (ಅ)ದ ಮೇರೆಗೆ ಉದ್ಭವಿಸುವುದಿಲ್ಲ.

ಉ) 92-93ನೇ ಸಾಲಿನಲ್ಲಿ 40.00 ಲಕ್ಷ ರೂ. ಅನುದಾನ ಒದಗಿಸಲಾಗಿದ್ದು; ಇದನ್ನು ಖರ್ಚು ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುವುದು.

ಊ) 1186 ಎಕರೆ ಚಿಕ್ಕಬುದನೂರು ಹಿರೇಬುದನೂರು ಮತ್ತು ಕುಟರನಟ್ಟಿ ಗ್ರಾಮಗಳ ಜನರು ಲಾಭ ಪಡೆಯುವರು.

ಕೊರಟಗೆರೆ ಟೌನ್ ಪ್ರಧಾನ ರಸ್ತೆಯ ರಿಪೇರಿ

487 (992): ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):-

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊರಟಗೆರೆ-ಮಧುಗಿರಿ ರಸ್ತೆ ಅಂದರೆ ಕೊರಟಗೆರೆ ಟೌನ್‌ನಲ್ಲಿ ಹಾದು ಹೋಗುವ ಪ್ರಧಾನ ರಸ್ತೆಯಲ್ಲಿ ಗುಂಡಿ ಬಿದ್ದು ಬಸ್ಸುಗಳು ಓಡಾಡಲು ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ರಸ್ತೆಯ ಎರಡು ಪಕ್ಕದಲ್ಲಿ ಡ್ರೈನೇಜು ಮಾಡಿ ರಸ್ತೆ ರಿಪೇರಿ ಅಥವಾ ರೀಅಸ್ಫಾಲ್ಟಿಂಗ್ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಈ ಭಾಗದ ರಸ್ತೆಯು ಸುಸ್ಥಿತಿಯಲ್ಲಿದ್ದು ಸಂಚಾರಕ್ಕೆ ತೊಂದರೆ ಆಗಿರುವುದಿಲ್ಲ.

ಆ) ಕೊರಟಗೆರೆ ಪಟ್ಟಣ ವ್ಯಾಪ್ತಿಯಲ್ಲಿ ಇರುವ ರಸ್ತೆಯ ಭಾಗದ ಮರು ಡಾಂಬರೀಕರಣವನ್ನು 0.65 ಲಕ್ಷ ರೂ.ಗಳ ಅಂದಾಜಿನಲ್ಲಿ ಮಾಡಲಾಗುತ್ತಿದ್ದು, ಮಾರ್ಚಿ 93ರ ಒಳಗೆ ಪೂರ್ಣಗೊಳಿಸಲಾಗುವುದು. ನಗರ ಪ್ರದೇಶ ವ್ಯಾಪ್ತಿಯಲ್ಲಿ ಮೋರಿಗಳನ್ನು ಕೊರಟಗೆರೆ ಮಂಡಲ ಪಂಚಾಯಿತ್‌ನವರು ಮಾಡಬೇಕಿರುತ್ತದೆ.

Express Highway Between Mysore–Bangalore

489 (993): Sri G. Puttaswamy Gowda (Holenarasipur):–

Will the Minister for Public Works be pleased to state.

a) whether there is any proposal for the Express Highway between Mysore–Bangalore;

b) whether any survey has been made in this regard;

c) if so, the estimated cost of the above work;

d) the amount, if any, spent so far;

e) when the above work will be taken up?

Sri K.H. RANGANATH (Minister for Public Works):–

a) Yes.

b) Preliminary surveys are conducted.

c) Rs. 200 Crores.

d) Rs. 17.98 Lakhs on Surveys.

e) The proposal is under examination of Government.

ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬ್ಯಾರೇಜ್ ನಿರ್ಮಾಣ ಕಾರ್ಯ

490 (995): ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷ್ಣಾ ನದಿಗೆ ಅಡ್ಡಲಾಗಿ ಹಿಪ್ಪರಗಿ ಬ್ಯಾರೇಜ್ ನಿರ್ಮಾಣ ಕಾರ್ಯವನ್ನು ಸರ್ಕಾರವು ಕೈಗೆತ್ತಿಕೊಂಡಿದೆಯೇ;

ಆ) ಇಲ್ಲಿಯವರೆಗೆ ವೆಚ್ಚವಾದ ಹಣ;

ಇ) ಸದರಿ ಬ್ಯಾರೇಜ್ ಪೂರ್ಣಗೊಂಡ ನಂತರ ನೀರಾವರಿಯಾಗುವ ಎಕರೆ ಪ್ರದೇಶ;

ಈ) ಹಿಪ್ಪರಗಿ ಬ್ಯಾರೇಜನ್ನು 8ನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಪೂರ್ಣಗೊಳಿಸಲಾಗುತ್ತದೆಯೇ;

ಉ) ಸದರಿ ಬ್ಯಾರೇಜನ್ನು ಪೂರ್ಣಗೊಳಿಸಲು ಬೇಕಾದ ಹಣ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ಹೌದು.

ಆ) 1104 ಲಕ್ಷ ರೂ.ಗಳು

ಇ) ಈ ಯೋಜನೆಯಿಂದ 59692 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಲಿದೆ.

ಈ) 8ನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು.

ಉ) 1.4.1992ರಲ್ಲಿ ಇದ್ದಂತೆ ಬಾಕಿ ಕಾಮಗಾರಿಯನ್ನು ಮುಗಿಸಲು ಬೇಕಾದ ಅಂದಾಜು ಮೊತ್ತ ರೂ.246.74 ಕೋಟಿ ರೂ.ಗಳು (ಎಸ್ಕಲೇಶನ್ ಸೇರಿಲ್ಲ).

ಸವಣೂರು ಹತ್ತಿರ ವರದಾ ನದಿಯ ಸೇತುವೆ ಕುರಿತು

492 (549): ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ ಸವಣೂರ ವರದಾನದಿಯ ಹತ್ತಿರ ವರದಾ ಸೇತುವೆ ಕಟ್ಟಿದ್ದ ಕುರಿತು ಟೋಲ್ ಕಲೆಕ್ಷನ್ ವಾಹನಗಳಿಗೆ ಎಷ್ಟು ವರ್ಷದಿಂದ ಎಷ್ಟು ಹಣಕ್ಕೆ ಪ್ರಾರಂಭ ಮಾಡಲಾಗಿದೆ;

ಆ) 1992ನೇ ಇಸ್ವಿಯಲ್ಲಿ ವರದಾ ಸೇತುವೆ ಟೋಲ್ ಕಲೆಕ್ಷನ್ ಟೆಂಡರಿಗೆ ಎಷ್ಟು ಅರ್ಜಿಗಳು ಬಂದಿದ್ದವು ಮತ್ತು ಅವು ಎಷ್ಟು ಹಣಕ್ಕೆ ಬಂದಿದ್ದವು ಹಾಗೂ ಅವುಗಳನ್ನು ಯಾರಿಗೆ ಕೊಡಲಾಗಿದೆ;

ಇ) ಸದರಿ ಸೇತುವೆ ಬಳಿ ಹಣ ವಸೂಲಿಯಿಂದ ವಾಹನಗಳ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿಯ ಮೇಲೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇನ್ನೂ ಎಷ್ಟು ದಿವಸ ಸದರಿ ಟೋಲ್ ಕಲೆಕ್ಷನ್ ಕಾರ್ಯಕ್ರಮ ಇಟ್ಟುಕೊಳ್ಳಲಾಗಿದೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ದಿನಾಂಕ 1.9.90ರಿಂದ ಟೋಲ್ ಕಲೆಕ್ಷನ್ (ಶುಲ್ಕ ವಸೂಲಾತಿ)ಯನ್ನು ಮಾಡಲಾಗುತ್ತಿದೆ. ಟೆಂಡರ್‌ಗೆ ನೀಡಲಾದ ಮೌಲ್ಯ 61.11 ಲಕ್ಷ ರೂ.ಗಳು.

ಆ) 1) 1.4.92 ರಿಂದ 31.3.93ರ ಅವಧಿಗೆ 11 ಟೆಂಡರುಗಳು ಬಂದಿದ್ದವು ಅವುಗಳ ವಿವರ ಪಟ್ಟಿ 'ಅ'ನಲ್ಲಿ ಲಗತ್ತಿಸಲಾಗಿದೆ.

2. ಈ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಟೋಲ್ ದರವನ್ನು ಪರಿಷ್ಕರಿಸಿದ್ದರಿಂದ ಒಂದು ತಿಂಗಳಿಗೆ ಮಾತ್ರವೇ ಗುತ್ತಿಗೆಯು ಚಾಲ್ತಿಯಲ್ಲಿದ್ದು, ಮತ್ತೆ 1.5.92ರಿಂದ 31.3.93ರ ಅವಧಿಗೆ ಗುತ್ತಿಗೆ ಕರೆಯಲಾಯಿತು. ಅತ್ಯಧಿಕ ಮೊತ್ತವನ್ನು ಸೂಚಿಸಿದ ಗುತ್ತಿಗೆದಾರರು ಕರಾರು ಮಾಡಿಕೊಳ್ಳದಿದ್ದುದರಿಂದ, ಆದರ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಇಲಾಖಾವತಿಯಿಂದಲೇ 1.5.92 ರಿಂದ 5.7.92ರವರೆಗೆ ಟೋಲ್ ವಸೂಲಾತಿಯನ್ನು

ಮಾಡಲಾಯಿತು. 6.7.92 ರಿಂದ 31.3.93ರವರೆಗೆ ಮತ್ತೆ ಗುತ್ತಿಗೆ ಕರೆದು ಅತ್ಯಧಿಕ ಮೊತ್ತದ ಗುತ್ತಿಗೆದಾರರಿಗೆ ಗುತ್ತಿಗೆ ನೀಡಲಾಯಿತು. ಈ ಸಂಬಂಧದಲ್ಲಿ ಬಂದಿದ್ದ ಗುತ್ತಿಗೆಗಳ ವಿವರಗಳನ್ನು ಪಟ್ಟಿ 'ಇ'ನಲ್ಲಿ ಲಗತ್ತಿಸಲಾಗಿದೆ.

ಇ) ಶುಲ್ಕ ವಸೂಲಾತಿಯ ಸಮಯದಲ್ಲಿ ಸ್ವಲ್ಪ ಸಮಯ ವ್ಯಯವಾಗುವ ಸಂಭವ ಇರುತ್ತದೆ. ಇದನ್ನು ಸುಗಮಗೊಳಿಸುವ ಸಲುವಾಗಿ ಸುಮಾರು 100 ಮೀಟರ್ ಉದ್ದಕ್ಕೆ ರಸ್ತೆಯನ್ನು ಅಗಲಗೊಳಿಸಿ, 3 ಟೋಲ್ ವಸೂಲಾತಿ ಬೂತ್‌ಗಳನ್ನು ನಿರ್ಮಿಸಲಾಗಿದೆ.

ಈ) ಸುಮಾರು 1994ರ ಮಧ್ಯದವರೆಗೂ ಟೋಲ್ ವಸೂಲಾತಿ ಮುಂದುವರಿಸುವ ಸಂಭವ ಇದೆ.

ಪಟ್ಟಿ 'ಅ'

1.4.92 ರಿಂದ 31.3.1993ರ ಅವಧಿಗೆ ಬಂದಿದ್ದ ಟೆಂಡರುಗಳು:

	ಟೆಂಡರುದಾರರ ಹೆಸರು	ಸೂಚಿಸಿದ್ದ ಹಣ (ರೂ.ಗಳಲ್ಲಿ)
1.	ಡಿ.ಜಿ. ರಘುನಾಥ್	1,06,55,555-00
2.	ಬಿ.ಎಂ. ರವೀಂದ್ರ	1,05,70,000-00
3.	ಎ. ಜಾರ್ಜ್	1.03,79,895-00
4,	ಎಂ.ಜಿ. ಮೆಲಂಟಾ	1,03,10,000-00
5.	ಸತ್ಯೇಂದ್ರಪ್ಪ	1.02,24,048-00
6.	ಎಸ್. ವೆಂಕಟರಮಣ	97,00,000-00
7.	ಬಿ.ಬಿ. ಬನವಳ್ಳಿ	95,00,000-00
8.	ಬಿ. ರಾಮದಾಸ	93,93,939-00
9.	ಎನ್.ಹೆಚ್. ಕೋನರೆಡ್ಡಿ	85,00,000-00
10.	ದುರ್ಗಾಂಬಿಕಾ	77,77,777-00
11.	ಸಿ. ಕೃಷ್ಣಾ	73,00,365-00

ಪಟ್ಟಿ 'ಇ'

1-7-1992ರಿಂದ 31-3-1993ರ ಅವಧಿಗೆ ಬಂದಿದ್ದ ಟೆಂಡರುಗಳು

1.	ಎನ್.ಹೆಚ್. ಕೋನರೆಡ್ಡಿ	1,19,00,000-00
2.	ಎಂ.ಜಿ. ಮೆಲಂಟಾ	1,06,60,000-00
3.	....	1,00,00,000-00
4.	ಬಿ.ಆರ್. ಚೆನ್ನಾರೆಡ್ಡಿ	95,51,000-00

ದೇವರ ಹೊನ್ನಾಳಿಯ ಏತ ನೀರಾವರಿ

493 (454): ಡಾ।। ಡಿ.ಬಿ. ಗಂಗಪ್ಪ (ಹೊನ್ನಾಳಿ):-

ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೊನ್ನಾಳಿ ತಾಲ್ಲೂಕಿನ ದೇವರ ಹೊನ್ನಾಳಿಯ ಹತ್ತಿರ ಏತ ನೀರಾವರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಉದ್ದೇಶಿಸಿದೆಯೇ;

L.A. Vol-4.

ಆ) ಹಾಗಿದ್ದಲ್ಲಿ, ಅದು ಈಗ ಯಾವ ಹಂತದಲ್ಲಿದೆ ?

ಡಾ।। ಬಿ.ಆರ್. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಹೌದು.

ಆ) ಈ ಯೋಜನೆಯ ಶಕ್ಯತೆ ಮತ್ತು ನೀರಿನ ಲಭ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೆಂಗಳೂರು–ಮೈಸೂರು ಹೆದ್ದಾರಿಯ ಅಭಿವೃದ್ಧಿ

495 (827): ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ದಿನೇದಿನೇ ವಾಹನಗಳ ಸಂಚಾರ ಹೆಚ್ಚಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ವಾಹನ ಸಂಚಾರದ ಅಧಿಕ ಒತ್ತಡ ತಾಳಲು ಮತ್ತು ವಾಹನ ಸಂಚಾರವನ್ನು ಸುಗಮಗೊಳಿಸುವ ದೃಷ್ಟಿಯಿಂದ ಬೆಂಗಳೂರು–ಮೈಸೂರು ಹೆದ್ದಾರಿಯನ್ನು ಅಭಿವೃದ್ಧಿಗೊಳಿಸಲು ಸರ್ಕಾರವು ಕೈಗೊಂಡ ಕ್ರಮವೇನು;

ಇ) ಈ ಹೆದ್ದಾರಿಯು ಅನೇಕ ಪಟ್ಟಣದ ವ್ಯಾಪ್ತಿಯಲ್ಲಿ ಹಾದು ಹೋಗುತ್ತಾ ಇದ್ದು, ಸಂಚಾರದ ಒತ್ತಡವನ್ನು ನಿವಾರಿಸಲು, ಬೈಪಾಸ್ ರಸ್ತೆಗಳನ್ನು ನಿರ್ಮಿಸಲು ಸರ್ಕಾರ ಆಲೋಚಿಸಿದೆಯೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬಂದಿದೆ.

ಆ) ವರ್ಷಕ್ಕೆ ಒಂದು ಕಿ.ಮೀ.ಗೆ ರೂ. 15,000–00ರಂತೆ ಹಣವನ್ನು ವಾರ್ಷಿಕ ನಿರ್ವಹಣೆಗಾಗಿದೆ ಹಾಗೂ ಎಲ್ಲಾ ಶೀರ್ಷಿಕೆಯಡಿ ಲಭ್ಯವಾದ 75ಲಕ್ಷ ರೂ.ಗಳ ಅನುದಾನವನ್ನು ಉಪಯೋಗಿಸಿಕೊಂಡು ರಸ್ತೆ ಮೇಲ್ಮೈ ಅಭಿವೃದ್ಧಿ, ರಸ್ತೆಗಳ ತಿರುವುಗಳ ಸರಳೀಕರಣ, ಸೇತುವೆಗಳ ವಿಸ್ತರಣೆ, ಹಳೇ ಸೇತುವೆಗಳ ಪುನರ್ ನಿರ್ಮಾಣ ಮುಂತಾದ ಅಭಿವೃದ್ಧಿ ಕೆಲಸ ಮಾಡಲಾಗುತ್ತಿದೆ.

ಇ) ರಾಮನಗರ ಹಾಗೂ ಚೆನ್ನಪಟ್ಟಣ ವ್ಯಾಪ್ತಿಯಲ್ಲಿ ಈಗಾಗಲೇ ಬೈಪಾಸ್ ನಿರ್ಮಿಸಲಾಗಿದ್ದು ಉಪಯೋಗದಲ್ಲಿದೆ. ಮಂಡ್ಯ ಹಾಗೂ ಶ್ರೀರಂಗಪಟ್ಟಣದ ವ್ಯಾಪ್ತಿಯಲ್ಲಿ ಬೈಪಾಸ್ ರಸ್ತೆಗಳ ನಿರ್ಮಾಣದ ಪ್ರಸ್ತಾವವು ಇರುವುದಿಲ್ಲ.

ಕನಸಗೇರಿ ಏತ ನೀರಾವರಿಯ ಅಂದಾಜು

496 (456): ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ):–

ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯಲ್ಲಿ ಬರುವ ಕನಸಗೇರಿ ಏತ ನೀರಾವರಿ ಯೋಜನೆಯ ಅಂದಾಜು ವೆಚ್ಚ ಎಷ್ಟು;

ಆ) 1986-87ರಲ್ಲಿ ಆ ಯೋಜನೆ ಮಂಜೂರಾಗಿದ್ದು ನಿಜವೇ, ಹಾಗಿದ್ದಲ್ಲಿ ಸದರಿ ಕೆಲಸವನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;

ಇ) ಈ ಯೋಜನೆಯಿಂದ ಎಷ್ಟು ಸಾವಿರ ಎಕರೆ ನೀರಾವರಿಯಾಗುವುದು ಹಾಗೂ ಇದರಿಂದ ಲಾಭವಾಗುವ ಹಳ್ಳಿಗಳು ಯಾವುವು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ರೂ. 212.414 ಲಕ್ಷಗಳು (ಪ್ರಾಥಮಿಕ ತನಿಖಾ ವರದಿ ಮೇರೆಗೆ).

ಆ) ಇಲ್ಲ. ಈ ಯೋಜನೆಯ ವಿವರವಾದ ತನಿಖೆ ನಡೆಯುತ್ತಿದ್ದು ಶಕ್ಯಾನುಸಾರ ಮತ್ತು ಹಣದ ಲಭ್ಯತೆ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಬಗ್ಗೆ ಪರಿಗಣಿಸಲಾಗುವುದು.

ಇ) ಸುಮಾರು 4000 ಎಕರೆಗಳು ಈ ಯೋಜನೆಯಿಂದ ಲಾಭ ಪಡೆಯುವ ಹಳ್ಳಿಗಳು. 1. ಕನಸಗೇರಿ 2. ಸೀಗಿಹೊಳೆ 3. ಉರುಬಿನ ಹಟ್ಟಿ 4. ಬೆಂಚನಮರಡಿ 5. ಈರನಟ್ಟಿ 6. ಅಕ್ಕ ತಂಗಿಯರ ಹಾಳ 7. ಮಡಿವಾಳ 8. ದಾಸನಟ್ಟಿ ಮತ್ತು 9. ಗದ್ದಿಹೊಳೆ.

ಎಲ್.ಓ.ಸಿ.ಗಾಗಿ ಪ್ರತಿ ಜಿಲ್ಲೆಗಳಿಗೆ ಬಿಡುಗಡೆಯಾದ ಹಣ

498 (1179): ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ 3 ತಿಂಗಳುಗಳಲ್ಲಿ ಪ್ರತಿ ಜಿಲ್ಲೆಗಳಿಗೆ ಎಲ್.ಓ.ಸಿ. ಗಾಗಿ ಬಿಡುಗಡೆ ಮಾಡಿದ ಹಣವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಎಲ್.ಓ.ಸಿ. ಬಿಡುಗಡೆ ಮಾಡಿದ ಮೇಲೆ ಮುಖ್ಯ ಅಭಿಯಂತರು ಎಲ್.ಓ.ಸಿ. ಉಪಯೋಗ ಮಾಡಿದ ವಸ್ತುಗಳ ಖರೀದಿಗಾಗಿ ಮಾತ್ರ ಹಣ ವಿನಿಯೋಗಿಸಿದ್ದು ಇದಕ್ಕೆ ಸರ್ಕಾರದ ಕಡಿವಾಣವೇನು;

ಇ) ರಸ್ತೆಗಳ ಹಾಗೂ ಸಾರ್ವಜನಿಕ ಕೆಲಸಗಳನ್ನು ಮಾಡುವುದಕ್ಕಾಗಿ ಉಪಯೋಗಿಸಬೇಕಾದ ಹಣವನ್ನು ಮನಸಾರೆ ಖರ್ಚು ಮಾಡಿದ್ದು ಇದರಿಂದ ಸಾರ್ವಜನಿಕರ ಉಪಯೋಗಕ್ಕಾಗಿ ಖರ್ಚು ಮಾಡಬೇಕಾಗಿರುವ ಹಣವನ್ನು ಸರ್ಕಾರಿ ಆದೇಶದ ವಿರುದ್ಧ ಖರ್ಚು ಮಾಡಿದ ಅಧಿಕಾರಿಗಳ ವಿರುದ್ಧ ಯಾವ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು;

ಈ) ಕಳೆದ 3 ತಿಂಗಳುಗಳಲ್ಲಿ ಲೋಕೋಪಯೋಗಿ ಇಲಾಖೆ ಉತ್ತರ ವಲಯಕ್ಕೆ ಪ್ರತಿ ತಿಂಗಳು ಎಷ್ಟು ಎಲ್.ಓ.ಸಿ.ಗಾಗಿ ಬಿಡುಗಡೆ ಮಾಡಲಾಗಿರುವ ಹಣವೆಷ್ಟು ಖರ್ಚು ಮಾಡಲಾಗಿರುವ ಉದ್ದೇಶ ಯಾವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಕಳೆದ 3 ತಿಂಗಳಿನಲ್ಲಿ ಒಟ್ಟು 2038.44 ಲಕ್ಷ ರೂ.ಗಳ ಹಣ ಭರವಸೆ ಪತ್ರಗಳನ್ನು ಬಿಡುಗಡೆ ಮಾಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ).

ಆ) ಮುಖ್ಯ ಅಭಿಯಂತರವರು ಕಾರ್ಯಪಾಲಕ ಅಭಿಯಂತರವರಿಗೆ ಕೆಲಸದ ಬಿಲ್ಲುಗಳ ಪಾವತಿಗಾಗಿ ವಿನಿಯೋಗಿಸಿಕೊಳ್ಳಲು ಬೇಡಿಕೆ ಆದರಿಸಿ ಬಿಡುಗಡೆ ಮಾಡುತ್ತಾರೆ. ವಸ್ತುಗಳ ಖರೀದಿಗಾಗಿ ಮಾತ್ರವೇ ಹಣ ವಿನಿಯೋಗಿಸುವುದಕ್ಕೆ ಅವಕಾಶ ಇರುವುದಿಲ್ಲ.

ಇ) ಇಂತಹ ಪ್ರಕರಣಗಳು ಕಂಡು ಬಂದಿರುವುದಿಲ್ಲ. ನಿರ್ದಿಷ್ಟ ಪ್ರಕರಣಗಳು ಗಮನಕ್ಕೆ ಬಂದಲ್ಲಿ ಸೂಕ್ತ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಉತ್ತರ ವಲಯಕ್ಕೆ ಒಟ್ಟು 972.44 ಲಕ್ಷ ರೂ.ಗಳ ಹಣ ಭರವಸೆ ಪತ್ರ ಬಿಡುಗಡೆ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ. ಮಂಜೂರಾದ ಕಾಮಗಾರಿಗಳ ಬಿಲ್ಲುಗಳನ್ನು ತೀರುವಳಿ ಮಾಡಲು ಖರ್ಚು ಮಾಡಲಾಗಿದೆ.

ಪ್ರಶ್ನೆ ಸಂಖ್ಯೆ 1179ಕ್ಕೆ ಅನುಬಂಧ

ಜಿಲ್ಲೆಗಳು	ಕಳೆದ ಮೂರು ತಿಂಗಳಲ್ಲಿ (ನವೆಂಬರ್ 92) ಡಿಸೆಂಬರ್ 92 ಹಾಗೂ (ಜನವರಿ 93)ರಲ್ಲಿ ಬಿಡುಗಡೆ ಮಾಡಲಾದ ಹಣ ಭರವಸೆ ಪತ್ರ
	(ಲಕ್ಷ ರೂ.ಗಳಲ್ಲಿ)
1. ದಕ್ಷಿಣ ವಲಯ	
1. ಬೆಂಗಳೂರು	390.01
2. ಮೈಸೂರು	170.86
3. ಕೋಲಾರ	43.68
4. ತುಮಕೂರು	41.97
5. ಮಂಡ್ಯ	49.66
6. ಹಾಸನ	92.90
7. ಚಿಕ್ಕಮಗಳೂರು	48.60
8. ದಕ್ಷಿಣ ಕನ್ನಡ	35.75
9. ಕೊಡಗು	24.00
10. ಶಿವಮೊಗ್ಗ	101.67
11. ಚಿತ್ರದುರ್ಗ	66.00
ಒಟ್ಟು	1066.00
2. ಉತ್ತರ ವಲಯ	
1. ಧಾರವಾಡ	216.63
2. ಉತ್ತರ ಕನ್ನಡ	62.80
3. ಬೆಳಗಾಂ	166.56
4. ಬಿಜಾಪುರ	107.04
5. ಗುಲ್ಬರ್ಗಾ	86.76
6. ಬೀದರ್	70.52
7. ಬಳ್ಳಾರಿ	125.75
8. ರಾಯಚೂರು	136.38
ಒಟ್ಟು	972.44

ರಾಜ್ಯದ ಪಿ.ಡಬ್ಲ್ಯೂ.ಡಿ ರಸ್ತೆಗಳ ರಿಪೇರಿಗಾಗಿ ಬಿಡುಗಡೆಯಾದ ಹಣ

502 (1119): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ 1992–93ನೇ ವರ್ಷದಲ್ಲಿ ಪಿಡಬ್ಲ್ಯೂಡಿ ರಸ್ತೆಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು; ಹಾಗೂ ಖರ್ಚಾಗಿರುವ ಹಣವೆಷ್ಟು;

ಆ) ಪಿ.ಡಬ್ಲ್ಯೂ.ಡಿ. ರಸ್ತೆಗಳು ನದುರಸ್ತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಇ) ತಕ್ಷಣ ರಸ್ತೆಗಳ ದುರಸ್ತಿ, ಕಾಮಗಾರಿ, ಹೊಂಡ ಮುಚ್ಚುವುದು, ಮರು ಡಾಂಬರು ಹಾಕುವುದು ಇತ್ಯಾದಿಗಳಿಗೆ ಹಣ ಬಿಡುಗಡೆ ಮಾಡಲಾಗುವುದೇ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ರಸ್ತೆಗಳಿಗೆ 1992-93ನೇ ಸಾಲಿನಲ್ಲಿ ನಿಗದಿತವಾಗಿರುವ ಅನುದಾನ ಹಾಗೂ ವೆಚ್ಚದ ವಿವರ ಕೆಳಕಂಡಂತಿದೆ:–

	ನಿಗದಿತವಾಗಿರುವ ಅನುದಾನ	ಡಿಸೆಂಬರ್ 92 ರಿಂದ 93ರವರೆಗೆ ಆಗಿರುವ ವೆಚ್ಚ
	(ಲಕ್ಷ ರೂ.ಗಳಲ್ಲಿ)	
ಯೋಜನೆ	351.00	555.52
ಯೋಜನೇತರ	4894.59	3096.31
	5395.59	3651.83

ಆ) ಲೋಕೋಪಯೋಗಿ ರಸ್ತೆಗಳಲ್ಲಿ ಸಾಮಾನ್ಯವಾಗಿ ಸಂಚಾರಕ್ಕೆ ಅಡಚಣೆ ಆಗುವಷ್ಟು ಮಟ್ಟಿಗೆ ನಾದುರಸ್ತಿಯಲ್ಲಿರುವುದಿಲ್ಲ.

ಇ) ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ಲಭ್ಯ ಮಾಡಿರುವ ನಿರ್ವಹಣಾ ಅನುದಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಿರ್ವಹಿಸಲಾಗುತ್ತಿದೆ. ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಸಾಧ್ಯತೆ ಇರುವುದಿಲ್ಲ.

ದಿನಾಂಕ 26.2.1993ರ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ರೇಷ್ಮೆ ಗೂಡಿನ ಬೆಲೆಯ ಬಗ್ಗೆ

153(1205): ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):–

ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ರೇಷ್ಮೆಗೂಡಿನ ಬೆಲೆ ಕಡಿಮೆಯಾಗಿ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ರೀತಿ ಬೆಲೆ ಕಡಿಮೆಯಾಗಲು ಕಾರಣಗಳೇನು ?

ಇ) ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಡಾ|| ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ) ಹೌದು.

ಆ) ಆಮದು ಮಾಡಿಕೊಂಡಿರುವ ರೇಷ್ಮೆಯು ಮಾರುಕಟ್ಟೆಯಲ್ಲಿ ದೊರೆಯುತ್ತಿರುವುದರಿಂದ.

ಇ) ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಹಾಗೂ ಕೇಂದ್ರ ಜವಳಿ ಮಂತ್ರಿಯವರೊಂದಿಗೆ ಚರ್ಚಿಸಲಾಗಿದೆ. ಇದಕ್ಕನುಗುಣವಾಗಿ ಒಂದು ನಿಯೋಗವನ್ನು

ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗುವುದಾಗಿ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಲಾಗಿದೆ. ಈ ದಿಶೆಯಲ್ಲಿ ಕೇಂದ್ರದ ಜವಳಿ ಖಾತೆ ಮಂತ್ರಿಯವರು ಪತ್ರ ಬರೆದು ಈ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಹಾಸನದ ಕಿಂಕೋ ಕಾರ್ಖಾನೆ ಕುರಿತು

157 (585): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ):–

ಭಾರಿ ಮತ್ತು ಮಾಧ್ಯಮ ಕೈಗಾರಿಕಾ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನದ ಕಿಂಕೋ ಕಾರ್ಖಾನೆಯವರು ಕೆ.ಎಸ್.ಆರ್.ಟಿ.ಸಿ.ಗೆ ವಹಿಸಿಕೊಡಲು ಸರ್ಕಾರ ನಿರ್ಧರಿಸಿದೆಯೇ;

ಆ) ಈ ನಿರ್ಧಾರ ಕಾರ್ಯಗತವಾಗಲು ಇನ್ನೆಷ್ಟು ಕಾಲಾವಕಾಶ ಬೇಕಾಗುವುದು (ವಿವರ ಕೊಡಿ) ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಆ) ಉದ್ಭವಿಸುವುದಿಲ್ಲ.

ಮೈಸೂರು ನಗರದ ನೆಹರು ಲೋಕದ ಬಗ್ಗೆ

361 (1210): ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):–

ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಉದ್ದೇಶಿತ ನೆಹರೂ ಲೋಕಕ್ಕೆ ಸೇರಿದ ಪ್ರದೇಶದ ವಿಸ್ತೀರ್ಣವೆಷ್ಟು;

ಆ) ಈ ನೆಹರೂ ಲೋಕಕ್ಕೆ ಸೇರಿದ್ದ ಪ್ರದೇಶದಲ್ಲಿ ಭೂ ಬದಲಾವಣೆ ನೀಡಲಾಗಿರುವ ಜಮೀನು ವಿಸ್ತೀರ್ಣವೆಷ್ಟು;

ಇ) ನೆಹರೂ ಲೋಕದ ಪ್ರದೇಶದಿಂದ ಭೂ ಬದಲಾವಣೆ ಪಡೆದವವುಗಳ ಹೆಸರುಗಳೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) 4038 ಎಕರೆಗಳು.

ಆ) ಇದುವರೆವಿಗೂ ಯಾವುದೇ ಜಮೀನಿನ ಭೂ ಉಪಯೋಗ ಬದಲಾವಣೆ ಆಗಿರುವುದಿಲ್ಲ.

ಇ) ಯಾರೂ ಇಲ್ಲ.

ಮೈಸೂರು ರೇಷ್ಮೆ ಬಿತ್ತನೆ ವಲಯದ ಅಭಿವೃದ್ಧಿಯ ಬಗ್ಗೆ

363 (668): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1992–93ನೇ ವರ್ಷದಲ್ಲಿ ಮೈಸೂರು ಬಿತ್ತನೆ ವಲಯದಲ್ಲಿ ವಿವಿಧ ಯೋಜನೆಗಳಲ್ಲಿ ರೇಷ್ಮೆ ಇಲಾಖೆಗೆ ಖರ್ಚು ಮಾಡಿದ ಹಣ ಎಷ್ಟು;

ಆ) ಯೋಜನೆಗಳ ಅನುಷ್ಠಾನ ಯಾವ ಹಂತದಲ್ಲಿ ಇದೆ ಮತ್ತು ಯಾವಾಗ ಪೂರ್ಣಗೊಳ್ಳುವುದು ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಆ) 441.58 ಲಕ್ಷ ರೂಪಾಯಿಗಳು.

ಅ) 1. ಬಿತ್ತನೆ ವಲಯದ ರೈತರಿಗೆ ಹುಳು ಸಾಕುವ, ಮನೆ ಕಟ್ಟಲು, ಉಪಕರಣಗಳನ್ನು ಕೊಳ್ಳಲು ಮತ್ತು ಕೊಳವೆ ಬಾವಿ ತೋಡಲು ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರ ಬ್ಯಾಂಕುಗಳ ಮುಖಾಂತರ ಸಾಲ ಕೊಡುವ ಯೋಜನೆ ಮೂರು ವರ್ಷಗಳದ್ದಾಗಿದ್ದು, ಇದನ್ನು 1991-92ರ ಕೊನೆಯಲ್ಲಿ ಕಾರ್ಯರೂಪಕ್ಕೆ ತಂದಿದ್ದು 1993-94ರ ಅಂತ್ಯದಲ್ಲಿ ಪೂರ್ಣಗೊಳ್ಳುತ್ತದೆ.

2. ಕರ್ನಾಟಕ ರೇಷ್ಮೆ ಕೃಷಿ ಯೋಜನೆ 2ನೇ ಹಂತದಲ್ಲಿ ಪಿ4 ಮತ್ತು ಪಿ3 ರೇಷ್ಮೆ ಕೃಷಿ ತೋಟಗಳ ಅಭಿವೃದ್ಧಿ ಗ್ರೈನೇಜುಗಳ ಅಭಿವೃದ್ಧಿ ಹಾಗೂ ಮಾದರಿ ಚಾಕಿ ಸಾಕಣೆ ಕೇಂದ್ರಗಳ ಸ್ಥಾಪನೆಯಡಿಯಲ್ಲಿ ಈಗಾಗಲೇ 35 ಕಾಮಗಾರಿಗಳು ಪೂರ್ತಿಯಾಗಿದ್ದು ಉಳಿದವುಗಳು ಮಾರ್ಚ್ 94ರ ಒಳಗೆ ಪೂರ್ತಿಗೊಳ್ಳುವವು.

ಗೌರವಧನ ಹೆಚ್ಚಿಸುವ ಬಗ್ಗೆ

366 (409): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):-

ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಒಟ್ಟು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಖ್ಯೆ ಎಷ್ಟು;

ಆ) ಐಸಿಡಿಎಸ್ ಯೋಜನೆಗೆ ಕೇಂದ್ರ ಸರ್ಕಾರದ ಸಹಾಯ ಧನವೆಷ್ಟು;

ಇ) ಮಹಾರಾಷ್ಟ್ರ ಹಾಗೂ ಗೋವಾದಲ್ಲಿರುವಂತೆ ರಾಜ್ಯದಲ್ಲಿರುವ ಅಂಗನವಾಡಿ ಉದ್ಯೋಗಿಗಳಿಗೆ ಗೌರವ ಧನ ಕೊಡದಿರಲು ಕಾರಣವೇನು;

ಈ) ಇತ್ತೀಚೆಗೆ ಕೇಂದ್ರ ಸರ್ಕಾರ ಹೆಚ್ಚಿಸಿರುವ ಗೌರವಧನವನ್ನು ಕೊಡಲಾಗಿದೆಯೇ;

ಉ) ರಾಜ್ಯ ಸರ್ಕಾರವೂ ಸಹ ಇವರ ಗೌರವಧನವನ್ನು ಏಕೆ ಹೆಚ್ಚಿಸಬಾರದು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) 24397 ಅಂಗನವಾಡಿ ಕಾರ್ಯಕರ್ತೆಯರು
24397 ಅಂಗನವಾಡಿ ಸಹಾಯಕಿಯರು

ಆ) ಕೇಂದ್ರ, 118 ಐಸಿಡಿಎಸ್ ಯೋಜನೆಗಳ ಆಡಳಿತಾತ್ಮಕ ವೆಚ್ಚವನ್ನು ಕೇಂದ್ರ ಸರ್ಕಾರವೇ ಭರಿಸುತ್ತಿದೆ. ಮತ್ತು 30 ರಾಜ್ಯ ವಲಯದ ಯೋಜನೆಗಳ ಆಡಳಿತಾತ್ಮಕ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸುತ್ತಿದೆ. ಕೇಂದ್ರ ಹಾಗೂ ರಾಜ್ಯ ವಲಯದ ಯೋಜನೆಗಳ ಪೌಷ್ಟಿಕ ಆಹಾರದ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ. 1992-93ನೇ ಸಾಲಿನಲ್ಲಿ ಇದಕ್ಕೆ ಒದಗಿಸಲಾಗಿರುವ ಆಯವ್ಯಯವು ಈ ಕೆಳಗಿನಂತಿದೆ.

	ಕೇಂದ್ರ	ರಾಜ್ಯ	(ರೂ.ಲಕ್ಷ ಗಳಲ್ಲಿ)
ಆಡಳಿತಾತ್ಮಕ ವೆಚ್ಚ	2219.07	326.84	
ಪೌಷ್ಠಿಕ ಆಹಾರದ ವೆಚ್ಚ	123.40	2222.59	
ಒಟ್ಟು	2342.47	2549.43	

ಇ) ಕೇಂದ್ರ ಸರ್ಕಾರವು ಇತ್ತೀಚೆಗೆ ಗೌರವಧನವನ್ನು ಹೆಚ್ಚಿಸಿರುವುದರಿಂದ ರಾಜ್ಯ ಸರ್ಕಾರವು ಪುನಃ ಗೌರವಧನವನ್ನು ಹೆಚ್ಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಹೌದು.

ಉ) ಪ್ರಶ್ನೆ ಭಾಗ (3)ಕ್ಕೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ರೇಷ್ಮೆ ಬೆಳೆಗಾರರ ತೊಂದರೆ ಬಗ್ಗೆ

367 (662): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೇಷ್ಮೆ ಗೂಡಿನ ಬೆಲೆ ಕಡಿಮೆಯಾಗಿ ಬೆಳೆಗಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ರೀತಿ ಬೆಲೆ ಕಡಿಮೆಯಾಗಲು ಕಾರಣವೇನು;

ಇ) ರೈತರ ಮತ್ತು ದಾರ ಬಿಚ್ಚುವವರ ತೊಂದರೆಯನ್ನು ನೀಗಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಡಾ॥ ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ) ಹೌದು.

ಆ) ಹೊರದೇಶದಿಂದ ಆಮದು ಮಾಡಿಕೊಂಡಿರುವ ರೇಷ್ಮೆ ಮಾರುಕಟ್ಟೆಯಲ್ಲಿ ದೊರೆಯುತ್ತಿರುವುದರಿಂದ.

ಇ) ರೇಷ್ಮೆಯನ್ನು ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಹಾಗೂ ಕೇಂದ್ರ ಜವಳಿ ಮಂತ್ರಿಯವರೊಂದಿಗೆ ಚರ್ಚಿಸಲಾಗಿದೆ. ಇದಕ್ಕನುಗುಣವಾಗಿ ಒಂದು ನಿಯೋಗವನ್ನು ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗುವುದಾಗಿ ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಲಾಗಿದೆ. ಈ ದಿಶೆಯಲ್ಲಿ ಕೇಂದ್ರದ ಜವಳಿ ಖಾತೆ ಮಂತ್ರಿಯವರು ಪತ್ರ ಬರೆದು ಈ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ.

Regarding Chawki Rearing Centres in Serculture Department.

368 (412): Sri. Y.K. Ramaiah (Kunigal):–

Will the Minister of State for Sericulture be pleased to state?

a) how many Chawki Rearing Centres are there in the Sericulture Department of the State;

b) out of these No. of working and No. of closed Chawki Rearing Centres;

c) how many centres are proposed to start during the year?

Dr. G. PARAMESWARA (Minister of State for Sericulture):--

a) 1841

b) Working : 1777
Closed : 64

c) None.

ರಾಜ್ಯದಲ್ಲಿ ಮಹಿಳಾ ಆಯೋಗವನ್ನು ಸ್ಥಾಪಿಸುವ ಬಗ್ಗೆ

377 (794): ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್):–

ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಹಿಳಾ ಆಯೋಗವು ಅಸ್ತಿತ್ವದಲ್ಲಿದೆಯೇ;

ಆ) ಇಲ್ಲದಿದ್ದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ರೀತಿಯಲ್ಲಿಯೇ ರಾಜ್ಯದಲ್ಲೂ ಮಹಿಳಾ ಆಯೋಗವನ್ನು ಸ್ಥಾಪನೆ ಮಾಡುವ ಉದ್ದೇಶ ಸರ್ಕಾರದ ಗಮನದಲ್ಲಿದೆಯೇ;

ಇ) ಇದ್ದಲ್ಲಿ ಅದನ್ನು ಯಾವಾಗ ಸ್ಥಾಪಿಸಲಾಗುವುದು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ಇಲ್ಲ.

ಆ) ಹೌದು.

ಇ) ಕರಡು ಮಸೂದೆ ತಯಾರಾಗಿದ್ದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯು ಕರಡು ಮಸೂದೆಯನ್ನು ಪರಿಶೋಧನೆ ಮಾಡುತ್ತಿದೆ. ಪರಿಶೋಧನೆಯಾದ ಕರಡು ಮಸೂದೆಗೆ ಸಚಿವ ಸಂಪುಟದ ಒಪ್ಪಿಗೆ ಪಡೆದು ವಿಧಾನಸಭೆ ಮುಂದೆ ಮಂಡಿಸಲಾಗುವುದು.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದು.

378 (195): ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್):–

ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯಾವುದಾದರೂ ಯೋಜನೆಗಳನ್ನು ರೂಪಿಸಿದೆಯೇ;

ಆ) ಹಾಗಿದ್ದಲ್ಲಿ, ಆ ಯೋಜನೆಗಳು ಯಾವುವು;

ಇ) ಕಳೆದ 3 ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ ಎಷ್ಟು ಹಣವನ್ನು ಖರ್ಚು ಮಾಡಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು);

ಈ) ನಿರುದ್ಯೋಗಿ ಪದವೀಧರರಿಗೆ ಸಣ್ಣ ಕೈಗಾರಿಕೆಗಳಲ್ಲಿ ತೊಡಗಲು ಅನುಕೂಲವಾಗುವಂತೆ ಯಾವುದಾದರೂ ಯೋಜನೆಯನ್ನು ರೂಪಿಸಿದೆಯೇ ? ಹಾಗಿದ್ದಲ್ಲಿ ಆ ಯೋಜನೆಯ ವಿವರಗಳೇನು ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ) ಹೌದು.

ಆ) ಸರ್ಕಾರವು ಈ ಕೆಳಕಂಡ ಪ್ರಮುಖ ಯೋಜನೆಗಳನ್ನು ಸಣ್ಣ ಕೈಗಾರಿಕಾ ಘಟಕಗಳ ಅಭಿವೃದ್ಧಿಗೆ ರೂಪಿಸಿದೆ.

1. ಬಂಡವಾಳ ಹೂಡಿಕೆಯಲ್ಲಿ ಸಹಾಯಧನ
2. ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ
3. ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಬೀಜಧನ ಸಾಲ
4. ಕೈಗಾರಿಕಾ ಮಳಿಗೆಗಳನ್ನು ಕಟ್ಟಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮದಲ್ಲಿ ಬಂಡವಾಳ ಹೂಡಿಕೆ.
5. ರೋಗಗ್ರಸ್ಥ ಸಣ್ಣ ಕೈಗಾರಿಕಾ ಘಟಕಗಳ ಪುನಃಶ್ಚೇತನಕ್ಕೆ ಬೀಜಧನ ಸಾಲ.

ಇ) ಕಳೆದ 3 ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಪ್ರಮುಖವಾದ ವಿವಿಧ ಯೋಜನೆಗಳಲ್ಲಿ ಖರ್ಚು ಮಾಡಿದ ಹಣದ ವಿವರ ಈ ಕೆಳಗಿನಂತಿದೆ.

ಯೋಜನೆ	ವರ್ಷದಲ್ಲಿ ಆದ ವೆಚ್ಚ (ರೂ. ಲಕ್ಷಗಳಲ್ಲಿ)		
	89-90	90-91	91-92
1. ಬಂಡವಾಳ ಹೂಡಿಕೆ ಸಹಾಯ ಧನ	291.665	308.550	1401.44
2. ಉದ್ಯಮಶೀಲತಾ ಅಭಿವೃದ್ಧಿ	6.00	4.50	5.00
3. ಸಣ್ಣ ಅತಿ ಸಣ್ಣ ಕೈಗಾರಿಕೆಗಳಿಗೆ ಬೀಜಧನ ಸಾಲ	99.301	97.655	104.552
4. ಕೈಗಾರಿಕಾ ಮಳಿಗೆ ಕಟ್ಟಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಲ್ಲಿ ಬಂಡವಾಳ ಹೂಡಿಕೆ	80.00	75.00	200.00
5. ರೋಗಗ್ರಸ್ಥ ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳ ಪುನಃಶ್ಚೇತನಕ್ಕೆ ಬೀಜಧನ ಸಾಲ	20.00	20.00	31.34

ಜಿಲ್ಲಾವಾರು ಬಿಡುಗಡೆ ಮಾಡಿದ ಬಂಡವಾಳ ಹೂಡಿಕೆ ಸಹಾಯಧನ ಮತ್ತು ಸಣ್ಣ ಅತಿ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಿದ ಬೀಜಧನ ಸಾಲದ ವಿವರಗಳನ್ನು ಅನುಕ್ರಮವಾಗಿ

ಅನುಬಂಧ I ಮತ್ತು II ರಲ್ಲಿ ವಿವರಿಸಿದೆ.

ಈ) ಭಾರತ ಸರ್ಕಾರವು ವಿದ್ಯಾವಂತ ನಿರುದ್ಯೋಗ ಯುವಕ ಯುವತಿಯರಿಗೆ ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ಉದ್ಯಮ ಸ್ಥಾಪಿಸಲು ಸ್ವಯಂ ಉದ್ಯೋಗ ಯೋಜನೆಯನ್ನು ಘೋಷಿಸಿದೆ. ಈ ಯೋಜನೆಯನ್ವಯ ನಿರುದ್ಯೋಗಿ ಪದವೀಧರರು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ರೂ. 35,000 ರವರೆಗೆ ಸಾಲ ಪಡೆಯಲು ಅರ್ಹರಾಗಿರುತ್ತಾರೆ.

ANNEXURE-I

(Rs. in lakhs)

Subsidy released for the last 3 years in Karnataka State

Sl. No.	Name of the District	1989–90	1990–91	1991–92
1.	Bangalore (R)	5.105	0.450	78.72
2.	Bangalore (U)	1.31	–	226.20
3.	Belgaum	23.00	21.00	100.64
4.	Bellary	13.00	13.43	41.97
5.	Bidar	2.00	34.63	58.00
6.	Bijapur	8.33	19.01	12.00
7.	Chitradurga	26.07	2.98	105.17
8.	Chickmagalur	49.04	38.38	23.50
9.	Mangalore (D.K.)	–	–	118.19
10.	Dharwad	5.00	13.96	50.00
11.	Gulbarga	27.43	10.59	80.43
12.	Hassan	9.98	10.50	12.32
13.	Kolar	32.26	5.91	86.45
14.	Mercara	2.75	9.19	13.62
15.	Mandya	19.00	9.99	63.35
16.	Mysore	29.00	33.49	112.59
17.	Raichur	2.95	8.72	23.22
18.	Shimoga	14.00	25.12	82.22
19.	Tumkur	1.97	28.50	72.00
20.	Karwar	19.47	22.70	40.85
	Total:	291.665	308.550	1401.44

ANNEXURE-II

Expenditure incurred towards Seed Margin Money to New SSI/Tiny Units in Karnataka State.

(Rs. in Lakhs)

Sl. No.	Name of the District	1989-90	1990-91	1991-92
1.	Bangalore (R)	5.00	4.05	–
2.	Bangalore (U)	2.362	–	2.10
3.	Belgaum	4.00	4.84	5.994
4.	Bellary	3.295	1.50	1.558
5.	Bidar	3.096	2.80	2.50
6.	Bijapur	3.110	1.795	1.857
7.	Chitradurga	8.00	7.21	3.758
8.	Chickmagalur	1.96	3.088	3.997
9.	Mangalore (D.K.)	8.00	9.813	11.521
10.	Dharwad	9.986	14.997	12.596
11.	Gulbarga	2.983	3.50	8.00
12.	Hassan	4.202	4.607	3.657
13.	Kolar	6.00	–	9.566
14.	Mercara	2.217	1.994	0.53
15.	Mandya	5.784	2.991	3.488
16.	Mysore	4.906	10,465	11,508
17.	Raichur	5.00	5.00	8.00
18.	Shimoga	8.00	8.50	3.947
19.	Tumkur	7.00	6.252	5.256
20.	Karwar	4.40	4.253	4.619
	Total :	99.301	97.655	104.552

ಬೀದರ್ ಜಿಲ್ಲೆಯಲ್ಲಿ ರೇಷ್ಮೆ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವ ಬಗ್ಗೆ

379 (194): ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್):–

ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಔರಾದ್ ತಾಲ್ಲೂಕಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಅಲ್ಲಿನ

ರೈತರು ರೇಷ್ಮೆ ಬೆಳೆಯನ್ನು ಬೆಳೆಯುತ್ತಿರುವುದರಿಂದ ಬೀದರ್ ಜಿಲ್ಲೆಯಲ್ಲಿ ಮತ್ತು ಔರಾದ್ ತಾಲ್ಲೂಕಿನ ರೈತರುಗಳಿಗೆ ವ್ಯವಸಾಯವನ್ನು ಪ್ರೋತ್ಸಾಹಿಸುವ ಸಲುವಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಆ) ಔರಾದ್ ತಾಲ್ಲೂಕಿನಲ್ಲಿ ಬೆಳೆದ ರೇಷ್ಮೆ ಗೂಡುಗಳನ್ನು ಸುಮಾರು 900 ಕಿ.ಮೀ. ದೂರದಲ್ಲಿರುವ ರಾಮನಗರ ಚನ್ನಪಟ್ಟಣದಲ್ಲಿರುವ ರೇಷ್ಮೆಗೂಡಿನ ಮಾರುಕಟ್ಟೆಗೆ ತೆಗೆದುಕೊಂಡು ಮಾರಾಟ ಮಾಡುವಲ್ಲಿ ರೈತರು ಪಡೆಯುತ್ತಿರುವ ತೀವ್ರ ತೊಂದರೆಯನ್ನು ತಪ್ಪಿಸುವ ಸಲುವಾಗಿ ಔರದಾಬಾದಿನಲ್ಲಿಯೇ ಒಂದು ರೇಷ್ಮೆ ಗೂಡಿನ ಮಾರುಕಟ್ಟೆಯನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ) 1. ಒಳ್ಳೆ ಗುಣಮಟ್ಟದ ಮೊಟ್ಟೆಗಳನ್ನು ಒದಗಿಸಲು ಒಂದು ಮಾದರಿ ಗ್ರೈನೇಜನ್ನು ಸ್ಥಾಪಿಸಲಾಗಿದೆ. ಇದು ಆಧುನಿಕ ಕೋಲ್ಡ್‌ಸ್ಟೋರೇಜ್ ಹೊಂದಿದೆ.
2. ತಾಂತ್ರಿಕ ಸಲಹೆಯನ್ನು ರೈತರಿಗೆ ಕೊಡಲು ಈಗಾಗಲೇ 4 ತಾಂತ್ರಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
3. ಚಾಕಿ ಹುಳು ಸಾಕಾಣಿಕೆಗೆ 21 ಚಾಕಿ ಸಾಕಣೆ ಕೇಂದ್ರಗಳನ್ನು ಸ್ಥಾಪಿಸಿದೆ.
4. ಗೂಡಿನ ಮಾರಾಟಕ್ಕೆ ಒಂದು ಮಾರುಕಟ್ಟೆ ಸ್ಥಾಪಿಸಿದೆ.
5. 3 ನೂಲು ಬಿಚ್ಚಾಣಿಕೆ ಘಟಕಗಳನ್ನು ಸ್ಥಾಪಿಸಲಾಗಿದೆ.
6. ಒಂದು ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ ಸ್ಥಾಪಿಸಲಾಗಿದೆ.
7. ರೇಷ್ಮೆ ಬೆಳೆಗಾರರಿಗೆ ಹೊಸದಾಗಿ ರೇಷ್ಮೆ ಕೃಷಿ ತೆಗದುಕೊಳ್ಳುವವರಿಗೆ ತರಬೇತಿ ಕೊಡಲಾಗುತ್ತಿದೆ.
8. ರೇಷ್ಮೆ ಕೃಷಿಕರು ತಾವು ಉತ್ಪನ್ನ ಮಾಡಿದ ಗೂಡನ್ನು ಅಲ್ಲೇ ಇರುವ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ಒಂದು ಕೆ.ಜಿ. ಗೂಡಿಗೆ 5 ರೂ. ಪ್ರೋತ್ಸಾಹ ಧನ ಕೊಡಲಾಗುತ್ತಿದೆ.
9. ಒಂದು ಕೆ.ಜಿ. ರೇಷ್ಮೆ 50 ರೂ. ಪ್ರೋತ್ಸಾಹ ಧನ ಕೊಡಲಾಗುತ್ತಿದೆ.
10. ಬೈವೋಲ್ಟೈನ್ ಗೂಡನ್ನು ಉತ್ಪನ್ನ ಮಾಡಲು ಪ್ರೋತ್ಸಾಹ ಧನ ಕೊಡಲಾಗುತ್ತಿದೆ.
11. ಡಿ.ಪಿ.ಎ.ಪಿ. ಯೋಜನೆಯಡಿಯಲ್ಲಿ ಹಿಪ್ಪುನೇರಳೆ ಸಸ್ಯಗಳನ್ನು ಉಚಿತವಾಗಿ ರೈತರಿಗೆ ವಿತರಣೆ ಮಾಡಲಾಗುತ್ತಿದೆ.
12. ರೇಷ್ಮೆ ಕೃಷಿಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾಗಿರುವುದರಿಂದ ಅವರನ್ನು ಪ್ರೋತ್ಸಾಹಿಸಲು ಅವರಿಗೆ ಚಾಕಿ ಸಾಕಾಣಿಕಾ ಕೇಂದ್ರವನ್ನು ಸ್ಥಾಪಿಸಲು ನೂಲು ಬಿಚ್ಚಾಣಿಕೆ ಘಟಕ ಸ್ಥಾಪಿಸಲು ಅಥವಾ ರೇಷ್ಮೆ ಕೃಷಿಗೆ ಬೇಕಾದ ಸೋಂಕು ನಿರೋಧಕಗಳನ್ನು ಮತ್ತು ಹುಳು ಸಾಕಾಣಿಕೆಗೆ ಬೇಕಾದ ಸಲಕರಣೆಗಳನ್ನು ಮಾರಾಟ ಮಾಡಲು ಮೂಲ ಬಂಡವಾಳ ಒದಗಿಸುವ ಕಾರ್ಯಕ್ರಮ ಇದೆ. ಇದರಲ್ಲಿ ಶೇಕಡ 75 ರಷ್ಟು ಅನುದಾನದ ಪ್ರಕಾರ ಬಿಡುಗಡೆ ಮಾಡಲಾಗುತ್ತಿದೆ.

ಆ) ಸರ್ಕಾರವು ಹೊಸ ಪ್ರದೇಶಗಳ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಗೂಡುಗಳನ್ನು ವಹಿವಾಟು ಮಾಡಲು ಒಂದು ಕೆ.ಜಿ. ಗೂಡಿಗೆ ರೂ. 5–00 ರಂತೆ ಪ್ರೋತ್ಸಾಹ ಧನ ನೀಡಲಾಗುತ್ತಿದ್ದರೂ ರೇಷ್ಮೆ ಬೆಳೆಗಾರರು ದೂರದಲ್ಲಿರುವ ರಾಮನಗರ ರೇಷ್ಮೆಗೂಡಿನ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಮತ್ತು ಪ್ರೋತ್ಸಾಹದಾಯಕವಾದ ಬೆಲೆ ದೊರೆಯುತ್ತಿರುವುದರಿಂದ ಗೂಡನ್ನು ಮಾರಲು ಬಂದು ಹೋಗುತ್ತಿರುತ್ತಾರೆ.

ಹುಡ್ಕೋ ಯೋಜನೆ ಕುರಿತು

381 (490): ಶ್ರೀ ಅಂಜನಮೂರ್ತಿ (ನೆಲಮಂಗಲ):–

ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ 1989ರಿಂದ 1992ರವರೆಗೆ ನಿರ್ಮಿತವಾಗಿರುವ ಮನೆಗಳ ಸಂಖ್ಯೆ ಎಷ್ಟು;

ಆ) ಈ ಉದ್ದೇಶಕ್ಕಾಗಿ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು ಹಾಗೂ ಅದರ ಪೂರ್ಣ ಉಪಯೋಗವಾಗಿದೆಯೇ;

ಇ) ಹಾಗಿದ್ದಲ್ಲಿ, ಅನೇಕ ಕಡೆಗಳಲ್ಲಿ ಮನೆಗಳು ಅಪೂರ್ಣಗೊಂಡಿರಲು ಕಾರಣಗಳೇನು ಹಾಗೂ ಅವುಗಳನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಗೋಪಿನಾಥ ಸಾಂಗ್ರ (ವಸತಿ ಸಚಿವರು):–

ಅ)	ಮಂಜೂರಾದ ಮನೆಗಳು	ಪೂರ್ಣಗೊಂಡ ಮನೆಗಳು	ಪ್ರಗತಿ	ಪ್ರಾರಂಭವಾಗದಿರುವ ಮನೆಗಳು
1989–90	48135	17985	19626	10524
1990–91	22458	1416	3342	17700
	70593	19401	22968	28224

1990–91ರ ಸಾಲಿನ ಮನೆಗಳನ್ನು ಆಶ್ರಯ ಯೋಜನೆಗೆ ವಿಲೀನಗೊಳಿಸಿದ ಪ್ರಯುಕ್ತ ಹುಡ್ಕೋ ಸಾಲ ಬಂದಿರುವುದಿಲ್ಲ. ಆದಾಗ್ಯೂ 10 ಜಿಲ್ಲೆಗಳು ಸರ್ಕಾರ ಬಿಡುಗಡೆ ಮಾಡಿದ ಸಹಾಯ ಧನವನ್ನಾಧರಿಸಿ ಮನೆ ನಿರ್ಮಾಣ ಕೆಲಸ ಕೈಗೆತ್ತಿಕೊಂಡಿರುತ್ತಾರೆ.

ಆ) 1989–90 ಮತ್ತು 1990–91 ನೇ ಸಾಲಿನ ಮನೆಗಳಿಗೆ ಕ್ರಮವಾಗಿ ರೂ. 1203.37 ಹಾಗೂ 743.00 ಲಕ್ಷ ಸಂಪೂರ್ಣ ಸಹಾಯ ಧನ ಸರ್ಕಾರದಿಂದ ಬಿಡುಗಡೆಯಾಗಿದ್ದ ಹುಡ್ಕೋದಿಂದ ರೂ. 879.54 ಲಕ್ಷ ಸಾಲದ ಬಾಬ್ತು ಬಿಡುಗಡೆಯಾಗಿದ್ದು ಅದರಲ್ಲಿ ಕರ್ನಾಟಕ ಗೃಹ ಮಂಡಳಿ ರೂ. 554.84 ಲಕ್ಷ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಿದೆ.

ಇ) ಹುಡ್ಕೋ ಸಂಸ್ಥೆ ಕರ್ನಾಟಕ ಗೃಹ ಮಂಡಳಿಗೆ ಮನೆಗಳ ಪ್ರಗತಿಯನ್ನಾಧರಿಸಿ ಕಂತಿನ ಹಣವನ್ನು ಬಿಡುಗಡೆ ಮಾಡುತ್ತದೆ. ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಲು ಎಲ್ಲಾ ಜಿಲ್ಲಾ ಪರಿಷತ್ತುಗಳಿಗೆ ನಿರ್ದೇಶನ ನೀಡಲಾಗಿದೆ ಹಾಗೂ ಕರ್ನಾಟಕ ಗೃಹ ಮಂಡಳಿಗೆ ಬಿಡುಗಡೆ ಮಾಡಿರುವ ಸಾಲವನ್ನು ತಕ್ಷಣ ಜಿಲ್ಲಾ ಪರಿಷತ್ತುಗಳಿಗೆ ಕೊಡಲು ನಿರ್ದೇಶನ ನೀಡಿದೆ.

ಬ್ಯಾಕ್‌ಲಾಗ್ ನೇಮಕಾತಿ ಬಗ್ಗೆ

382 (250): ಶ್ರೀ ಅಂಜನಾಮೂರ್ತಿ (ನೆಲಮಂಗಲ):–

ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಪ್ರತಿಯೊಂದು ಇಲಾಖೆಯಲ್ಲಿಯೂ ಅದರಲ್ಲಿಯೂ ವಿಶೇಷವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸರ್ಕಾರದ ಆದೇಶದ ಪ್ರಕಾರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರನ್ನು ವಿಶೇಷ ನೇಮಕಾತಿ ಅಡಿಯಲ್ಲಿ ಬಡ್ತಿ ನೀಡುವ ಸಂದರ್ಭದಲ್ಲಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಜನಾಂಗದವರನ್ನು ಕಡೆಗಾಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಕ್ತ ಆದೇಶ ನೀಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವರ್ಗದವರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ;

ಇ) ಸಂಬಂಧಿಸಿದ ಇಲಾಖೆಯಲ್ಲಿ ಇಲಾಖಾ ಪರೀಕ್ಷೆಯಲ್ಲಿ ನಿಗದಿತ ವೇಳೆಯಲ್ಲಿ (ಅಂದರೆ 1986–87ನೇ ಸಾಲಿನಲ್ಲಿ) ತೇರ್ಗಡೆ ಹೊಂದಿದ್ದರೂ ಸಹ ಮತ್ತು ಬಡ್ತಿಯ ಅಂಚಿನಲ್ಲಿಯೂ ಇದ್ದರೂ ಸಹ ವಿಳಂಬ ನೀತಿಯನ್ನು ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸರ್ಕಾರದ ಆದೇಶಗಳ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಂದ ವಿವಿಧ ವೃಂದದಲ್ಲಿ ಬಡ್ತಿಯಿಂದ ತುಂಬಬೇಕಾದ ಹುದ್ದೆಗಳಲ್ಲಿ ಈ ವರ್ಗದವರನ್ನು ಕಡೆಗಾಣಿಸಿರುವುದಿಲ್ಲ.

ಆ) ಪ್ರಶ್ನೆ ಸಂಖ್ಯೆ: 'ಅ' ರಲ್ಲಿ ನೀಡಿರುವ ಉತ್ತರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಯಾವುದೇ ರೀತಿಯ ಅನ್ಯಾಯವಾಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲಾಖೆಯಲ್ಲಿ ಬಡ್ತಿಯನ್ನು ನೀಡುವಲ್ಲಿ ಯಾವುದೇ ವಿಳಂಬ ನೀತಿಯನ್ನು ಅನುಸರಿಸುತ್ತಿಲ್ಲ.

ಈ) (ಆ) ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಬಗ್ಗೆ

383 (251): ಶ್ರೀ ಅಂಜನಮೂರ್ತಿ (ನೆಲಮಂಗಲ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1990 ರಿಂದ ಇಂದಿನವರೆಗೆ ನೆಲಮಂಗಲ ಮತ ಕ್ಷೇತ್ರದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕೊಳವೆ ಬಾವಿ ತೋಡಿಸಲು ಎಷ್ಟು ಮನವಿ ಅರ್ಜಿ ಬಂದಿದೆ;

ಆ) ಅವುಗಳಲ್ಲಿ ಎಷ್ಟನ್ನು ಕಾರ್ಯಗತಗೊಳಿಸಲಾಗಿದೆ ಹಾಗೂ ಕೊರೆದ ಎಷ್ಟು ಕೊಳವೆ ಬಾವಿಗಳು ವಿಫಲಗೊಂಡಿದೆ;

ಇ) ಪಾಯಿಂಟ್ ಗುರ್ತಿಸುವ ಭೂಗರ್ಭ ತಜ್ಞರಿಂದ ಅವ್ಯವಹಾರ ನಡೆಯುತ್ತಿರುವ ಬಗ್ಗೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಫಲಾನುಭವಿಗಳು ಅನೇಕ ದೂರುಗಳು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮಂತ್ರಿಗಳು):–

ಅ) 264 ಮನವಿ ಅರ್ಜಿಗಳು ಬಂದಿವೆ.

ಆ) ಜಲಬಿಂದು ಗುರ್ತಿಸಲು ಸರ್ವೆ ಮಾಡಲಾದ 223 ಸ್ಥಳಗಳಲ್ಲಿ 46 ಸ್ಥಳಗಳಲ್ಲಿ ನೀರು ಇರುವ ಸಾಧ್ಯತೆ ಇದೆ ಎಂದು ಕಂಡುಬಂದಿತು. ಈ 46 ಜಾಗಗಳಲ್ಲಿ ಕೊರೆದ ಬಾವಿಗಳಲ್ಲಿ 34 ಬಾವಿಗಳು ಯಶಸ್ವಿಯಾಗಿವೆ.

ಇ) ಹೌದು. ಒಬ್ಬ ಭೂ ಗರ್ಭತಜ್ಞರ ಮೇಲೆ ದಿನಾಂಕ 19–2–92ರಂದು ದೂರು ಬಂದಿದೆ.

ಈ) ಈ ದೂರನ್ನು (ಬಾವಿ ಕೊರೆಯುವ ಆಗಿನ ಗುತ್ತಿಗೆದಾರರಾಗಿದ್ದ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮದವರಿಗೆ ತಿಳಿಸಲಾಗಿ ಅವರು ಸಂಬಂಧಪಟ್ಟ ಭೂ ವಿಜ್ಞಾನಿಗೆ ನೀಡಿದ್ದ ಗುತ್ತಿಗೆಯನ್ನು ರದ್ದುಪಡಿಸಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಸಾಶನ ಸೌಲಭ್ಯದ ಕುರಿತು

392 (10): ಬಿ.ಎಂ. ಇದಿನಬ್ಬ (ಉಳ್ಳಾಲ):–

ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1990-91, 91–92ನೇ ಡಿಸೆಂಬರ್ ಅಖೈರ್‌ವರೆಗೆ ಎಷ್ಟು ಜನರಿಗೆ ವಿಧವಾ ಮಸಾಶನ ವೇತನ, ವೃದ್ಧಾಪ್ಯವೇತನ ಅಂಗವಿಕಲ ವೇತನ, ನೀಡಲಾಗಿದೆ; (ತಾಲ್ಲೂಕುವಾರು ವಿವರ ಬೇರೆ ಬೇರೆಯಾಗಿ ನೀಡುವುದು);

ಆ) ಇನ್ನು ವಿಲೇವಾರಿಯಾಗದೆ ಬಾಕಿ ಉಳಿದಿರುವ ಅರ್ಜಿಗಳೆಷ್ಟು;

ಇ) ಅವುಗಳ ವಿಲೇವಾರಿ ಯಾವಾಗ ಮಾಡಲಾಗುವುದು ?

ಶ್ರೀ. ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ)	ವೃದ್ಧಾಪ್ಯ	ಅಂಗವಿಕಲ ವೇತನ	ವಿಧವಾ ಮಸಾಶನ
1990–91	621	48	1225
1991–92	542	73	1118
1992–93	363	427	680

(ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಅ'ನಲ್ಲಿ ಕೊಡಲಾಗಿದೆ)

ಆ)	ವೃದ್ಧಾಪ್ಯ	ಅಂಗವಿಕಲ	ವಿಧವಾ
ಬಾಕಿ ಉಳಿದಿರುವ ಅರ್ಜಿಗಳು	117	101	153

(ತಾಲ್ಲೂಕುವಾರು ವಿವರಗಳನ್ನು ಅನುಬಂಧ 'ಆ'ನಲ್ಲಿ ಕೊಡಲಾಗಿದೆ)

ಇ) ಬಾಕಿ ಉಳಿದಿರುವ ಅರ್ಜಿಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡಲು ಜಿಲ್ಲಾಧಿಕಾರಿಯವರಿಗೆ ಸೂಚನೆ ನೀಡಲಾಗುವುದು.

ಅನುಬಂಧ 'ಅ'

ಕ್ರ. ಸಂ.	ತಾಲ್ಲೂಕಿನ ಹೆಸರು	1990-91			1991-92			1992-93 (ಡಿಸೆಂಬರ್ ಅಂತ್ಯದವರೆಗೆ)		
		ವೃ	ವಿ	ಅಂಗ	ವೃ	ವಿ	ಅಂಗ	ವೃ	ವಿ	ಅಂಗ
1.	ಕುಂದಾಪುರ	46	131	5	57	104	4	15	42	32
2.	ಉಡುಪಿ	57	175	3	77	222	17	45	141	79
3.	ಕಾರ್ಕಳ	30	78	1	48	96	4	48	48	38
4.	ಮಂಗಳೂರು	94	188	4	114	239	7	65	146	86
5.	ಬಂಟ್ವಾಳ	268	441	24	162	303	24	135	206	112
6.	ಬೆಳ್ತಂಗಡಿ	47	89	3	36	63	10	18	21	31
7.	ಪುತ್ತೂರು	65	99	8	37	71	7	30	52	37
8.	ಸುಳ್ಯ	14	24	0	11	20	0	[illegible]	24	12
	ಒಟ್ಟು	621	1225	48	542	1118	73	363	680	427

ಅನುಬಂಧ 'ಆ'

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ವೃದ್ಧಾಪ್ಯ ವೇತನ	ವಿಧವಾ	ಅಂಗವಿಕಲ
1.	ಕುಂದಾಪುರ	11	20	7
2.	ಉಡುಪಿ	11	19	13
3.	ಕಾರ್ಕಳ	10	13	16
4.	ಮಂಗಳೂರು	33	52	18
5.	ಬಂಟ್ವಾಳ	22	19	19
6.	ಬೆಳ್ತಂಗಡಿ	14	14	11
7.	ಪುತ್ತೂರು	15	14	15
8.	ಸುಳ್ಯ	1	2	2
		117	153	101

ಮಂಗಳೂರು ಬೆಂಗ್ರೆ ಮಹಾನಗರ ಪಾಲಿಕೆ ಸೇರ್ಪಡೆ ಕುರಿತು

393 (9): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ಬೆಂಗ್ರೆ ಪ್ರದೇಶದ ಒಟ್ಟು ಜನಸಂಖ್ಯೆ ಎಷ್ಟು;

ಆ) ಈ ಪ್ರದೇಶವನ್ನು ಮಹಾನಗರ ಪಾಲಿಕೆ ಮಂಗಳೂರಿಗೆ ಸೇರ್ಪಡೆ ಮಾಡದೆ ಇರಲು ಕಾರಣವೇನು;

ಇ) ಅಲ್ಲಿನ ಜನತೆಗೆ ಅಭಿವೃದ್ಧಿ ಕಾರ್ಯಗಳು ಇಲ್ಲದೆ ಕಷ್ಟಕ್ಕೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬೆಂಗ್ರೆ ಪ್ರದೇಶಗಳನ್ನು ಶೀಘ್ರ ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಿಕೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ) ಅಂದಾಜು 15,000.

ಆ) ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಬಂದಿದೆ.

ಈ) ಬೆಂಗ್ರೆ ಪ್ರದೇಶವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಸೇರಿಸಲು ಕ್ರಮ ಜರುಗಿಸಲಾಗುತ್ತಿದೆ.

ಅಂಗನವಾಡಿ ಫಲಾನುಭವಿಗಳಿಗೆ ಪೌಷ್ಠಿಕ ಆಹಾರ

400 (908): ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಕೊಡುತ್ತಿರುವ ಪೌಷ್ಠಿಕ ಆಹಾರ ಯಾವುದು;

ಆ) ಸ್ಥಳೀಯ ಪೌಷ್ಠಿಕ ಆಹಾರವನ್ನೊದಗಿಸಲು ಸರ್ಕಾರಕ್ಕೆ ಇರುವ ತೊಂದರೆಗಳಾವುವು;

ಇ) ರಾಜ್ಯದಲ್ಲಿ ಎಲ್ಲಾ ಕಡೆ ಒಂದೇ ರೀತಿಯ ಪೌಷ್ಠಿಕ ಆಹಾರ ನೀಡಲು ಸರ್ಕಾರ ಕ್ರಮ ಕೈಕೊಳ್ಳುವುದೇ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) 13 ಜಿಲ್ಲೆಗಳ 94 ಶಿಶು ಅಭಿವೃದ್ಧಿ ಯೋಜನೆಗಳಲ್ಲಿ ಕೇರ್ ಕರ್ನಾಟಕದವರು ಕೇರ್ ಆಹಾರ ಸರಬರಾಜು ಮಾಡುವ ಸಿಎಸ್‌ಬಿ:ಸಿಎಸ್‌ಎಂ ಮತ್ತು ಸೋಯಾ ಎಣ್ಣೆಯನ್ನೂ 7 ಜಿಲ್ಲೆಗಳ 46 ಯೋಜನೆಗಳಲ್ಲಿ ಸ್ಥಳೀಯ ಆಹಾರವನ್ನೂ ಅಂದರೆ ಅಕ್ಕಿ, ಕಾಳುಗಳು ಮತ್ತು ದಾಲಿಯಾದಿಂದ ತಯಾರಿಸಲಾದ ಸಿಹಿ ಅಥವಾ ಖಾರ ಪದಾರ್ಥಗಳನ್ನು ಮತ್ತು ಶಕ್ತಿಯುತ ಆಹಾರವನ್ನೂ ಬೆಂಗಳೂರು ನಗರದ 2 ಯೋಜನೆಗಳಲ್ಲಿ ಮಿಲ್ಕ್ ಬ್ರೆಡ್‌ನ್ನೂ ವಿತರಿಸಲಾಗುತ್ತಿದೆ.

ಆ) ಕೇರ್ ಸಂಸ್ಥೆಯು ಶಿಶು ಅಭಿವೃದ್ಧಿ ಯೋಜನೆಗಳ ಪೌಷ್ಠಿಕ ಆಹಾರ ಕಾರ್ಯಕ್ರಮಕ್ಕಾಗಿ ಉಚಿತವಾಗಿ ಆಹಾರ ಪದಾರ್ಥಗಳನ್ನು ನೀಡುತ್ತಿರುವುದರಿಂದ ರಾಜ್ಯ ಸರ್ಕಾರದ ವೆಚ್ಚದಲ್ಲಿ ಬಹಳ ಮಟ್ಟಿಗೆ ಉಳಿತಾಯವಾಗುತ್ತಾದ್ದರಿಂದಲೂ ಮತ್ತು ಸಿಎಸ್‌ಬಿ:ಸಿಎಸ್‌ಎಂ ಹಾಗೂ ಸೋಯ ಎಣ್ಣೆಗಳಲ್ಲಿ ಹೆಚ್ಚು ಪೌಷ್ಠಿಕಾಂಶ ಮಕ್ಕಳ ಪೋಷಣೆಗೆ ಲಭ್ಯವಾಗುವುದರಿಂದಲೂ ಸ್ಥಳೀಯ ಆಹಾರವನ್ನು ಕೊಡುವುದರಿಂದಲೂ ಸರ್ಕಾರದ ಹಣ ವ್ಯಯವನ್ನು ಹೆಚ್ಚು ಮಾಡಬೇಕಾದ್ದರಿಂದ ಭಾರತ ಸರ್ಕಾರದ ಸೂಚನೆಯಂತೆ ಹಾಗೆ ಮಾಡಲಾಗುತ್ತಿದೆ.

ಇ) ಕೇರ್ ಕಾರ್ಯಕ್ರಮವು ಇಡೀ ರಾಜ್ಯದಲ್ಲಿ ವಿಸ್ತಾರಗೊಂಡಾಗ, ಈ ಸಲಹೆಯನ್ನು ಪರಿಶೀಲಿಸಬಹುದು.

ಚಿನ್ನಪ್ಪ ರೆಡ್ಡಿ ವರದಿಯನ್ನು ಜಾರಿಗೊಳಿಸುವುದು

403 (977): ಶ್ರೀ ಡಿ.ಆರ್. ಪಾಟೀಲ್ (ಗದಗ್):-

ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿಂದುಳಿದ ವರ್ಗಗಳ ಬಗ್ಗೆ ಚಿನ್ನಪ್ಪ ರೆಡ್ಡಿ ವರದಿಯನ್ನು ಜಾರಿಗೊಳಿಸಲು ಇರುವ ತೊಂದರೆ ಏನು ಹಾಗೂ ಇದನ್ನು ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) ಚಿನ್ನಪ್ಪ ರೆಡ್ಡಿಯವರ ವರದಿಯು ರಾಜ್ಯ ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಯಲ್ಲಿದ್ದು ಉಪ ಸಮಿತಿಯ ಶಿಫಾರಸ್ಸುಗಳನ್ನು ಸಚಿವ ಸಂಪುಟ ಪರಿಶೀಲಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೈಸೂರು ನಗರದಲ್ಲಿ ಕೊಳಚೆ ನಿರ್ಮೂಲನ ಮಂಡಳಿ ಕಾರ್ಯಕ್ರಮ

418 (33): ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):-

ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದಲ್ಲಿ ರಾಜ್ಯ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಪ್ರಸಕ್ತ ವರ್ಷ ನಿರ್ಮಿಸಿದ ಮನೆಗಳೆಷ್ಟು;

ಆ) ಎಲ್ಲಾ ಫಲಾನುಭವಿಗಳಿಗೆ ಮನೆ ಕೊಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ) 184 ಮನೆಗಳನ್ನು 1992-93ರ ಸಾಲಿನಲ್ಲಿ ಕಟ್ಟೋಣಿಕೆಗೆ ತೆಗೆದುಕೊಂಡಿದ್ದು, 40 ಮನೆಗಳು ಸಂಪೂರ್ಣವಾಗಿವೆ. ಉಳಿದವು ಪ್ರಗತಿಯಲ್ಲಿದೆ.

ಆ) ಮೈಸೂರು ನಗರದಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ಜಾಗವು ಸರ್ಕಾರಕ್ಕೆ ಅಥವಾ ಮಂಡಳಿಗೆ ಸೇರಿದ ಜಾಗದಲ್ಲಿ ಮನೆಗಳನ್ನು ಕಟ್ಟುತ್ತಲಿದ್ದು ಉಳಿದ ಖಾಸಗೀ ಜಾಗದಲ್ಲಿರುವ ಕೊಳಚೆ ಪ್ರದೇಶಗಳಲ್ಲಿ ಭೂಸ್ವಾಧೀನಪಡಿಸಿಕೊಳ್ಳಲು ಮಂಡಳಿ ಮುಂದುವರೆದಿದ್ದು, ಹಾಗೂ ಲ್ಯಾಂಡ್ ಬ್ಯಾಂಕ್ ಯೋಜನೆಯಲ್ಲಿ ಅಭಿವೃದ್ಧಿ ಪ್ರಾಧಿಕಾರದಿಂದ ಜಾಗ ಪಡೆದು ಅಲ್ಲಿಯೂ ಕೂಡ ಮಂಡಳಿ ಮನೆ ಕಟ್ಟುತ್ತಾ ಬಂದಿದೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ಲಿಖಿತ ಪ್ರಶ್ನೆಗಳಿಗೆ ಉತ್ತರವೇ ಇಲ್ಲವೆಂದರೆ ಏನು ಮಾಡಬೇಕು ? ತಾವು ನಮ್ಮ ರಕ್ಷಣೆಗೆ ಬರಬೇಕು.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ನನ್ನ ಮೂರು ಪ್ರಶ್ನೆಗಳಿಗೆ ಒಂದಕ್ಕೂ ಉತ್ತರ ಇಲ್ಲ.

ಶ್ರೀ ವಾಟಾಳ್ ನಾಗರಾಜ್:– ನಾನು ಅನೇಕ ಬಾರಿ ಅಧ್ಯಕ್ಷರ ಗಮನಕ್ಕೆ ತಂದದ್ದೂ ಆಯಿತು; ಇದಕ್ಕೆ ಉತ್ತರವಾದರೂ ಬೇಡವೆ ?

ಶ್ರೀ ಬಿ.ಎಚ್. ಬನ್ನಿಕೋಡ್:– ಈ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಸರ್ಕಾರಕ್ಕೆ ಏನಾಗಿದೆ ? ದಯವಿಟ್ಟು ತಾವು ಅವರಿಗೆ ಸೂಚನೆ ಕೊಡಿ. ಉತ್ತರವೇ ಇಲ್ಲವೆಂದ ಮೇಲೆ ನಾವು ಏನು ಮಾಡಬೇಕು ?

ಶ್ರೀ ಬಿ.ಎಚ್. ಬನ್ನಿಕೋಡ್:– ಲಿಖಿತ ಪ್ರಶ್ನೆಗಳಿಗೆ ಎಷ್ಟಕ್ಕೆ ತಾವು ಉತ್ತರ ಕೊಟ್ಟಿದ್ದೀರಿ ಎಂದು ಸ್ಪಷ್ಟವಾಗಿ ಹೇಳಿ. ಇವತ್ತು ಇರತಕ್ಕಂಥ ಪ್ರಶ್ನೆಗಳು ಎಷ್ಟು ಮತ್ತು ಕೊಟ್ಟಿರುವ ಉತ್ತರಗಳು ಎಷ್ಟು ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಒಂದಕ್ಕಾದರೂ ಉತ್ತರ ಬರುವುದಿಲ್ಲ ಎಂದರೆ ನಾವು ಏನು ಮಾಡಬೇಕು ? ತಾವು ಸರ್ಕಾರಕ್ಕೆ ಸರಿಯಾಗಿ ಆದೇಶ ಕೊಡಬೇಕು.

ಅಧ್ಯಕ್ಷರು:– ನಾನು ಅವರಿಗೆ ಆದೇಶ ಕೊಡುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಎಲ್ಲರೂ ಒಟ್ಟಿಗೆ ಮಾತನಾಡಿದರೆ ನಮಗೆ ಏನೂ ಅರ್ಥವಾಗುವುದಿಲ್ಲ. ಯಾರು ಕೂಡ ಉತ್ತರ ಕೊಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಡಂಕಲ್ ಪ್ರಸ್ತಾವನೆಯನ್ನು ವಿರೋಧಿಸಲು ಡೆಲ್ಲಿಗೆ ಹೊರಟ ರೈತರ ಬಂಧನ

† ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ, ತಮ್ಮ ಪರವಾನಗಿಯನ್ನು ಪಡೆದು ಒಂದು ವಿಚಾರವನ್ನು ಈ ಸದನದಲ್ಲಿ ......

ಅಧ್ಯಕ್ಷರು:– ಇವತ್ತು ಯಾವುದೂ ಇಲ್ಲ ......

ಶ್ರೀ ಪಿ.ಜಿ.ಆರ್. ಸಿಂಧ್ಯ:– ದಯವಿಟ್ಟು ಕೇಳಿ. ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಏಕೆಂದರೆ ಇದು ಮಹತ್ವದ ವಿಚಾರ ಇದೆ. ಈಗ ಕರ್ನಾಟಕ ರಾಜ್ಯದಲ್ಲಿ ಡಂಕಲ್ ಪ್ರಸ್ತಾವನೆ ಬಗ್ಗೆ ವಿರೋಧ ಮಾಡುವುದಕ್ಕೆ ಸಾವಿರಾರು ಜನರು ಡೆಲ್ಲಿಗೆ ಹೋಗತಕ್ಕಂಥ ಸಂದರ್ಭದಲ್ಲಿ ರೈತರಿಗೆ ಪ್ರಯಾಣ ಮಾಡಲಿಕ್ಕೆ ಆಗಿಲ್ಲ. ಮೈಸೂರು–ರೈಲ್ವೆ ನಿಲ್ದಾಣವನ್ನು ರೈತರು ವಶಪಡಿಸಿಕೊಂಡಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ಸರ್ಕಾರದ ಧೋರಣೆ ಏನು ? ಸರ್ಕಾರ ಈ ವಿಚಾರದಲ್ಲಿ ಏನು ಮಾಡುತ್ತಿದೆ ? ಇದರಿಂದ ಪ್ರಯಾಣಿಕರಿಗೆ ಅನಾನುಕೂಲವಾಗುವುದಿಲ್ಲವೇ ? ಇವತ್ತು ಇಡೀ ರಾಜ್ಯದಿಂದ ಹೋಗತಕ್ಕಂಥ ಎಲ್ಲ ಪ್ರಯಾಣಿಕರಿಗೂ ಸಹಿತ ಬೆಂಗಳೂರು ಮತ್ತು ಹುಬ್ಬಳ್ಳಿ ಪ್ರಯಾಣ ನಿಂತಿರುವುದರಿಂದ ಮೈಸೂರು ಮೂಲಕ ಹೋಗತಕ್ಕಂಥ ಸಂಭವ ಇದೆ. ಈ ವಿಚಾರದಲ್ಲಿ ಈ ಸಂದರ್ಭದಲ್ಲಿ ಸರ್ಕಾರ ಏನು ಮಾಡುತ್ತಿದೆ ? ಸರ್ಕಾರದ ಧೋರಣೆ ಏನು ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಸರ್ಕಾರ ಏನಾದರೂ ಹೇಳಿಕೆಯನ್ನು ಕೊಡಬೇಕು. ಈಗ ಮುಖ್ಯಮಂತ್ರಿಗಳು ಏನು ಮಾಡುತ್ತಾರೆ ಎಂದರೆ, ಸದನ ನಡೆಯತಕ್ಕಂಥ ಸಂದರ್ಭದಲ್ಲಿ ಸಹಿತ, ತಾವು ಸಂಸದೀಯ ವ್ಯವಹಾರಗಳಲ್ಲಿ ಬಹಳ ತಿಳುವಳಿಕೆ ಇರತಕ್ಕಂಥವರು ಎಂದು ಹೇಳಿಕೊಂಡರೂ ಸಹಿತ ಅನೇಕ ಮಹತ್ತರವಾದ ನೀತಿಗಳು ಇರತಕ್ಕಂಥ

ಸರ್ಕಾರದ ನಿಯಮಗಳು ಇರತಕ್ಕಂಥ ವಿಚಾರಗಳಲ್ಲೂ ಸಹಿತ ಸದನದ ಹೊರಗಡೆ ಸದನಕ್ಕೆ ಹಕ್ಕುಚ್ಯುತಿ ಬರುವ ರೀತಿಯಲ್ಲಿ ಹೇಳಿಕೆಗಳನ್ನು ಕೊಡುತ್ತಲೇ ಇರುತ್ತಾರೆ.

ಹಿಂದುಳಿದ ವರ್ಗದವರ ಆಯೋಗ ರಚನೆ ಬಗ್ಗೆ ಹೇಳಿದ್ದಾರೆ. ಈಗ ಸದನ ನಡೆಯುತ್ತಾ ಇದೆ, ಇಂತಹ ಸಂದರ್ಭದಲ್ಲಿ, ಇಲ್ಲಿ ಒಂದು ಸಂದರ್ಭ ತೆಗೆದುಕೊಂಡು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದರೆ: ಆ ರೀತಿ ಮಾಡಿ ಎಂದು ಎಲ್ಲಾ ಹೇಳಬಹುದಿತ್ತು. ಎಲ್ಲೋ ಹೋದರು ಪತ್ರಿಕೆಯಲ್ಲಿ ಪ್ರಕಟಣೆಯ ವಿವರಣೆ ಕೊಟ್ಟರು. ಇಂತಹ ಮಹತ್ವದ ವಿಚಾರದ ಬಗ್ಗೆ ತಾವು ದಯ ಮಾಡಿ, ಸರ್ಕಾರದ ಮೂಲಕವಾಗಿ ನಮಗೆ ಉತ್ತರವನ್ನು ಕೊಡಿಸಬೇಕು. ಇವತ್ತು ಆ ರೈತರ ಗತಿ ಏನಾಗಿದೆ, ಅವರನ್ನು ಯಾವ ರಾಜ್ಯದ ಜೈಲಿಗೆ ಕಳುಹಿಸಿದ್ದೀರಿ, ಹೊರ ರಾಜ್ಯದ ಜೈಲಿಗೆ ಏನಾದರೂ ಕಳುಹಿಸಿದ್ದೀರಾ ಅಥವಾ ನಮ್ಮ ಜೈಲಿನಲ್ಲಿಯೇ ಇಟ್ಟಿದ್ದೀರಾ ? ನಮ್ಮ ಬಿ.ಜೆ.ಪಿ. ಕಾರ್ಯಕರ್ತರುಗಳನ್ನು ನೀವು ಬಂಧಿಸಿದ್ದೀರಿ. ತಾವು, ಅವತ್ತು ಒಳ್ಳೆಯ ಉತ್ತರವನ್ನು ಕೊಟ್ಟಿದ್ದೀರಿ. ಇದಾದ ನಂತರ ಅವರ ಗತಿ ಏನಾಗಿದೆ, ಅವರು ಎಲ್ಲಿದ್ದಾರೆ, ಇದಕ್ಕೆಲ್ಲಾ ಉತ್ತರ ಕೊಡತಕ್ಕದ್ದು ಸರ್ಕಾರದ ಜವಾಬ್ದಾರಿ, ತಪ್ಪಿಸಿಕೊಳ್ಳುವುದು ಒಂದು ಭಾಗ. ಆದರೆ ವಸ್ತು ಸ್ಥಿತಿ ಏನು ? ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ, ಎಷ್ಟು ಜನರನ್ನು ಬಿಡುಗಡೆ ಮಾಡಿದ್ದೀರಿ. ಅವರನ್ನು ಜೈಲಿನಲ್ಲಿ ಎಲ್ಲೆಲ್ಲಿ ಇಟ್ಟಿದ್ದೀರಿ. ಇದು ಒಂದು ಭಾಗ. ಅದಕ್ಕಿಂತ ಹೆಚ್ಚಾಗಿ, ಇವತ್ತು ಮೈಸೂರು ನಿಲ್ದಾಣವನ್ನು ರೈತ ಸಂಘದವರು ವಶ ಮಾಡಿಕೊಂಡಿದ್ದಾರೆ. ನಾಳೆ ಬೆಂಗಳೂರು ನಿಲ್ದಾಣವನ್ನೂ ವಶ ಮಾಡಿಕೊಳ್ಳುತ್ತಾರೆ. ನಾಡಿದ್ದು ಮತ್ತೊಂದು ವಶ ಮಾಡಿಕೊಳ್ಳುತ್ತಾರೆ. ಇದರ ಬಗ್ಗೆ ಸರ್ಕಾರದ ಧೋರಣೆ ಏನು ? ಇದು ಪ್ರಜಾಪ್ರಭುತ್ವದಲ್ಲಿ ರೈತರ ಹಕ್ಕು. ಅವರ ವಿಚಾರಗಳನ್ನು ಮಂಡನೆ ಮಾಡುವುದಕ್ಕೆ ಅವಕಾಶ ಇದೆಯೋ ಇಲ್ಲವೋ ಅವರಲ್ಲಿ ಕೆಲವರು ರೈಲ್ವೆ ಟಿಕೆಟ್ ಇಲ್ಲದಿರುವವರೂ ಇರಬಹುದು ಮತ್ತು ಎಲ್ಲರೂ ಟಿಕೆಟ್ ತೆಗೆದುಕೊಳ್ಳದೇ ಹೋಗುತ್ತಾರೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ಈ ಕಾರಣದಿಂದಾಗಿ, ಸರ್ಕಾರದ ನಿಲುವೇನು ? ನಿಮ್ಮ ಪಕ್ಷದ ಬಹಳ ದೊಡ್ಡ ಮುಖಂಡರು ಹಾಗೂ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಗುಂಡೂರಾವ್‌ರವರು ಏನು ಹೇಳಿಕೆ ಕೊಟ್ಟಿದ್ದಾರೆಂದರೆ, ನಿಜವಾಗಿಯೂ ಈ ಸರ್ಕಾರ ಇಲ್ಲವೆಂಬ ಭಾವನೆ ಹೇಳಿದ್ದಾರೆ.

ಅಧ್ಯಕ್ಷರು:- ನಾನು ಇದಕ್ಕೆ ಅಲೋ ಮಾಡುವುದಿಲ್ಲ. ತಾವು ರೈತರ ಬಗ್ಗೆ ಕೇಳಿದಿರಿ, ನಾನು ಒಪ್ಪಿಕೊಳ್ಳುತ್ತೇನೆ. ಅದು ಬಿಟ್ಟು, ಪೇಪರಿನಲ್ಲಿ ಬಂದಿರುವುದೆಲ್ಲವನ್ನೂ ಇಲ್ಲಿ ಹೇಳುವುದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಗುಂಡೂರಾವ್‌ರವರು ಕೊಟ್ಟಿರತಕ್ಕಂಥ ಹೇಳಿಕೆಯನ್ನು ತಾವು ಅಪ್ರಕೃತ ಎಂದು ಹೇಳಿದರೆ, ನಾನು ಪ್ರಸ್ತಾಪ ಮಾಡುವುದಿಲ್ಲ. ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ, ಗುಂಡೂರಾವ್‌ರವರು ಈ ಸರ್ಕಾರದ ಬಗ್ಗೆ ಏನು ಹೇಳಿದ್ದಾರೆ ಎಂಬುದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ತಮ್ಮ ಪರವಾನಗಿ ಇಲ್ಲದೆ ಏನು ನಡೆದುಕೊಳ್ಳುವುದಕ್ಕೆ ತಯಾರಿಲ್ಲ. ನಾನು ಇಷ್ಟೇ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಎಷ್ಟು ಸಾವಿರ ಜನ ರೈತರನ್ನು ಬಂಧನ ಮಾಡಿದ್ದೀರಿ, ಅವರ ಮೇಲೆ ಯಾವ ಯಾವ ಕೇಸುಗಳನ್ನು ಹಾಕಿದ್ದೀರಿ, ಅವರ ಹತ್ತಿರ ಟಿಕೆಟ್ ಇರಲಿಲ್ಲವೇ, ಅವರನ್ನು ಯಾವ ಜೈಲಿಗೆ ಕಳುಹಿಸಿದ್ದೀರಿ, ಅದನ್ನು ಪ್ರಿವೆಂಟ್ ಮಾಡುವುದಕ್ಕೆ ಏಕೆ ಪ್ರಯತ್ನ ಮಾಡುತ್ತಿದ್ದೀರಿ. ಮೈಸೂರು ರೈಲ್ವೆ ನಿಲ್ದಾಣವನ್ನು ಎಷ್ಟು ಹೊತ್ತಿಗೆ ಪ್ರಯಾಣಿಕರಿಗೆ ಅನುಕೂಲವಾಗುವ ರೀತಿಯಲ್ಲಿ, ಪೊಲೀಸ್ ಮೂಲಕವೋ, ಆರ್ಮಿ ಮೂಲಕವೋ ಅಥವಾ

ಮತ್ತೊಂದು ಮೂಲಕವೋ ಜನಸಾಮಾನ್ಯರಿಗೆ ಉಪಯೋಗವಾಗುವ ರೀತಿಯಲ್ಲಿ ವಶಪಡಿಸಿಕೊಂಡಿರತಕ್ಕ ನಿಲ್ದಾಣವನ್ನು ಅನುಕೂಲ ಮಾಡಿಕೊಡುತ್ತೀರಿ. ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಹಾರನಹಳ್ಳಿ ರಾಮಸ್ವಾಮಿಯವರು ಎಲ್ಲದಕ್ಕೂ ಉತ್ತರವನ್ನು ತರಿಸಿ ಹೇಳುತ್ತೇನೆಂದು ಬಹಳ ಚೆನ್ನಾಗಿ ಹೇಳುತ್ತಾರೆ. ಇದರಿಂದ ಏನೂ ಉಪಯೋಗವಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು ಅಥವಾ ಉಪ ಮುಖ್ಯಮಂತ್ರಿಗಳು ಇದ್ದಾರೆ. ಇವರು ಸರ್ಕಾರದ ನೇತಾರರು, ಇದರ ಬಗ್ಗೆ ತಮ್ಮ ನಿಲುವೇನು ಎನ್ನುವುದನ್ನು ನಮಗೆ ತಿಳಿಸಬೇಕು. ಇದು ನನಗೆ ಮಾತ್ರ ಮುಖ್ಯವಲ್ಲ. ಇಡೀ ರಾಜ್ಯದ ಜನತೆ ಇದಕ್ಕಾಗಿ ಕಾಯುತ್ತಿದ್ದಾರೆ. ಈ ಸದನದ ಮೂಲಕ ತಿಳಿದುಕೊಳ್ಳಬೇಕೆಂದು ಬಯಸುತ್ತಾರೆ. ಇದರ ಬಗ್ಗೆ ತಾವು ಹೇಳಬೇಕೆಂದು ಬಹಳ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ತಾವು ಇವತ್ತು ಸಂಜೆಯೊಳಗಾಗಿ ಹೇಳಿಕೆ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ನಾನು ಮೈಸೂರಿನಿಂದ ಬಂದಿದ್ದೇನೆ. ಅಲ್ಲಿಯ ಪರಿಸ್ಥಿತಿ, ಗಂಭೀರವಾದ ವಾತಾವರಣ ನಿರ್ಮಾಣವಾಗಿದೆ. ಸರ್ಕಾರದವರು ಜವಾಬ್ದಾರಿಯಿಂದ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂಬ ಬಗ್ಗೆ ರೈತರ ಜೊತೆ ಮಾತುಕತೆ ಮಾಡಬೇಕಾಗಿತ್ತು. ಕೊನೆಯ ಪಕ್ಷ ಒಬ್ಬ ಜಿಲ್ಲಾಧಿಕಾರಿಯೂ ಕೂಡ ರೈಲ್ವೆ ನಿಲ್ದಾಣಕ್ಕೆ ಹೋಗಿ ಏನು ಸಮಸ್ಯೆ ಎಂದು ಕೇಳಿಲ್ಲ; ಯಾರೂ ಹೋಗಿಲ್ಲ. ಮಂತ್ರಿಮಂಡಲದವರೂ ಹೋಗಿಲ್ಲ. ಮೈಸೂರು ಒಂದೇ ಅಲ್ಲ, ಇಡೀ ಕರ್ನಾಟಕದ ಎಲ್ಲಾ ರೈಲ್ವೆ ನಿಲ್ದಾಣಗಳಲ್ಲೂ ರೈತರು ಉಪವಾಸದಿಂದ ಕುಳಿತಿದ್ದಾರೆ ಮತ್ತು ಅನೇಕರನ್ನು ಬಂಧಿಸಿದ್ದಾರೆ. ಈ ರಾಜ್ಯದಲ್ಲಿ ಒಂದು ಸರ್ಕಾರ ಇದೆಯೆಂದು ನಾವು ಅಂದುಕೊಂಡಿದ್ದೇವೆ. ಸರ್ಕಾರ ಇದ್ದ ಮೇಲೆ ಅದರಲ್ಲೂ ಈಗ ಶಾಸನಸಭೆ ನಡೆಯುತ್ತಿದೆ. ಮೊದಲು ಸರ್ಕಾರ, ಈ ರಾಜ್ಯದಲ್ಲಿ ಏನು ನಡೆದಿದೆ ಎಂಬ ಬಗ್ಗೆ ಸದನದಲ್ಲಿ ಹೇಳಿಕೆ ಕೊಡುವುದು ಸರ್ಕಾರದ ಕರ್ತವ್ಯ. ತಮ್ಮ ಗಮನಕ್ಕೆ ಬಂದಂತೆ, ಬಿ.ಜೆ.ಪಿ. ಕಾರ್ಯಕರ್ತರ ಬಂಧನವಾದಾಗ ಮಾನ್ಯ ಸಂಸದೀಯ ಸಚಿವರು ಹೇಳಿದರು, ಸಂಜೆಯೊಳಗಾಗಿ ಉತ್ತರವನ್ನು ಕೊಡುತ್ತೇವೆಂದು ಹೇಳಿ, ಇದುವರೆಗೂ ಉತ್ತರವೇ ಬರಲಿಲ್ಲ. ಕಾರ್ಯಕರ್ತರನೇಕರನ್ನು ಬಂಧಿಸಿ ಬಳ್ಳಾರಿ ಜೈಲಿಗೆ ಹಾಕಿದ್ದಾರೆ, ಗುಲ್ಬರ್ಗಾ ಜೈಲಿಗೆ ಹಾಕಿದ್ದಾರೆ. ಅನೇಕ ಜನ ಮುಖಂಡರೂ, ಪದಾಧಿಕಾರಿಗಳೂ ಬೇರೆ ಬೇರೆ ಕಡೆ ಇದ್ದಾರೆ. ನಿನ್ನೆ ರೈತರು ಸಾವಿರಾರು ಜನ ರೈತರು, ಕರ್ನಾಟಕದ ಉದ್ದಗಲಕ್ಕೂ ರೈಲ್ವೆ ನಿಲ್ದಾಣದಲ್ಲಿ ಅಡಿಗೆ ಮಾಡಿಕೊಂಡು ಇದ್ದಾರೆ, ಕೆಲವರಿಗೆ ಆಹಾರ ಸಿಕ್ಕದೆ, ಕೆಲವರಿಗೆ ಊಟ ಸಿಕ್ಕಿಲ್ಲ, ಕೆಲವರು ಸ್ಟೇಷನ್‌ನಲ್ಲಿದ್ದಾರೆ, ಕೆಲವರನ್ನು ಬಂಧಿಸಿದ್ದಾರೆ. ಕೆಲವರನ್ನು ನ್ಯಾಯಾಲಯಕ್ಕೆ ತೆಗೆದುಕೊಂಡು ಹೋಗಿದ್ದಾರೆ. ಈ ವಾತಾವರಣ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಈ ಸರ್ಕಾರ ನಿಜವಾಗಿಯೂ ಪ್ರಾಮಾಣಿಕವಾಗಿ, ರೈತರ ಬಗ್ಗೆ ಏನು ನಡೆದಿದೆ, ಇದುವರೆಗೂ ದೆಹಲಿಗೆ ಹೋಗತಕ್ಕ ರೈತರನ್ನು ಯಾವ ರೀತಿ, ತಡೆದಿದ್ದೀರಿ, ತಡೆಯುವುದಕ್ಕೆ ಕಾರಣ ಏನು ಯಾವ ಯಾವ ಮೊಕದ್ದಮೆಗಳನ್ನು ಹಾಕಿದ್ದೀರಿ, ಏನು ಉದ್ದೇಶ ಇವೆಲ್ಲವನ್ನೂ ಹೇಳಬೇಕು. ಇವತ್ತು ರೈತಸಂಘದ ಮುಖಂಡರಾದ ನಂಜುಂಡಸ್ವಾಮಿಯವರು ಇಲ್ಲ, ಬಾಬಾ ಗೌಡರು ಇಲ್ಲ. ಅವರನ್ನೂ ಬಂಧಿಸಿದ್ದೀರಾ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಯಾವತ್ತೂ ಅವರು ಸದನಕ್ಕೆ ಬರತಕ್ಕವರು, ಇಂದು ಅವರು ಸದನದಲ್ಲಿ ಇಲ್ಲ, ಅವರು ಸದನಕ್ಕೆ ಬರಬೇಕು ಅಥವಾ ಬೆಳಗಾವಿಯಲ್ಲಿ ಏನಾದರೂ ಬಂಧಿಸಿದ್ದೀರಾ, ಧಾರವಾಡದಲ್ಲಿ ನಂಜುಂಡಸ್ವಾಮಿಯವರನ್ನು ಬಂಧಿಸಿದ್ದೀರಾ ? ಈ ಪರಿಸ್ಥಿತಿಯಲ್ಲಿ ಉದ್ಭವವಾಗುತ್ತದೆ. ದಯಮಾಡಿ, ತಾವು ಇದರ ಬಗ್ಗೆ ಪರಿಣಾಮಕಾರಿಯಾಗಿ ಹೇಳಿಕೆಯನ್ನು ಕೊಡಬೇಕೆಂದು ತಮ್ಮ ಮೂಲಕ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಬಿ.ಎಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೇ, ಒಟ್ಟಾರೆ ರೈತರ ಸಮಸ್ಯೆ ಎಂದರೆ, ಅವನು ಬೆಳೆದ ಬೆಳೆಗೆ ಯೋಗ್ಯ ಬೆಲೆ ಇಲ್ಲ. ಗೊಬ್ಬರದ ಬೆಲೆ ಏರಿಕೆ ಈ ಬಗ್ಗೆ ಹಿಂದಿನ ಸಭೆಯಲ್ಲೂ ಪ್ರಸ್ತಾಪ ಮಾಡಿದ್ದೇನೆ. ಆಗ ಸರ್ಕಾರದವರು ಏನಾದರೂ ಬೆಂಬಲ ಬೆಲೆ ಕೊಟ್ಟು ಮಾಡೋಣ ಎಂದು ಹೇಳಿದರು. ಈಗ ಸಮಸ್ಯೆ ಬಹಳ ದೊಡ್ಡದಾಗಿದೆ. ಅದಕ್ಕೆ ಅವರೆಲ್ಲಾ ಸಂಘಟಿತರಾಗಿ ಸರ್ಕಾರಕ್ಕೆ ತಿಳಿಯ ಬಯಸುವುದಕ್ಕೆ ಸರ್ಕಾರದ ಜೊತೆ ಚರ್ಚೆ ಮಾಡಲಿಕ್ಕೆ ಹೊರಟಿದ್ದರು. ಅನೇಕ ಕಡೆ ರೈತರು ಬೆಳೆದಂತಹ ಬೆಳೆಗೆ ಯೋಗ್ಯ ಬೆಲೆ ಇಲ್ಲ, ಗೊಬ್ಬರ ಏರಿಕೆ ವಿಚಾರ ಇರಬಹುದು ಅಥವಾ ಡಂಕಲ್ ಪ್ರಸ್ತಾಪ ಇರಬಹುದು. ಇದು ಇವತ್ತು ಹೇಗೆ ನಡೆಯುತ್ತಿದೆ ಎಂದರೆ, ರೈತ ಬಹಳ ಸಂಕಷ್ಟದಲ್ಲಿದ್ದಾನೆ. ದೇಶದ ಸಂಪತ್ತನ್ನು ಅವನು ಉತ್ಪತ್ತಿ ಮಾಡುತ್ತಾನೆ. ಇವತ್ತು ಬೇರೆಯವರು ಬಂದು ಈ ದೇಶದ ಆರ್ಥಿಕ ರಂಗವನ್ನು ಮತ್ತು ರೈತರನ್ನು ಶೋಷಣೆ ಮಾಡುವುದು ಸರಿಯಲ್ಲ ಎಂದು ಹೇಳಿ ಡೆಲ್ಲಿಗೆ ಹೊರಟಿದ್ದಂತಹ ರೈತರನ್ನು ಅರೆಸ್ಟ್ ಮಾಡಿದ್ದೀರಿ. ಈ ರಾಜ್ಯದಲ್ಲಿ ಅವರ ಸಮಸ್ಯೆಗಳನ್ನು ಬಗೆಹರಿಸುವುದು ಹೇಗೆ? ಇವತ್ತು ರಾಷ್ಟ್ರದ್ರೋಹ, ದೇಶದ್ರೋಹ ಕೆಲಸ ಮಾಡುವಂತಹವರಿಗೆ ಅವಕಾಶವಿದೆ. ಆದರೆ ಇವತ್ತು ದುಡಿಯತಕ್ಕ ರೈತ ತನ್ನ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಲು, ನ್ಯಾಯ ಕೇಳಲು ಹೋದ ರೈತರನ್ನು ಅರೆಸ್ಟ್ ಮಾಡಿದ್ದೀರಿ, ರೈತ ನಾಯಕರನ್ನು ಅರೆಸ್ಟ್ ಮಾಡಿದ್ದೀರಿ. ರೈತ ಮುಖಂಡರನ್ನು ಅರೆಸ್ಟ್ ಮಾಡಿದ್ದೀರಿ. ದಯಮಾಡಿ ಸ್ಪಷ್ಟವಾದ ವಿವರಗಳನ್ನು ಹೇಳಿ. ರೈತರ ಬಗ್ಗೆ, ರೈತ ನಾಯಕರ ವಿವರಗಳನ್ನು ಹೇಳಿ. ಎಷ್ಟು ಜನ ರೈತರನ್ನು ರೈತ ಮುಖಂಡರನ್ನು ಅರೆಸ್ಟ್ ಮಾಡಿದ್ದೀರಿ. ಅವರೆಲ್ಲರನ್ನೂ ಈ ಕೂಡಲೇ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

† ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಕಳೆದ ವಾರ ಈ ರಾಷ್ಟ್ರದಲ್ಲಿ ಬಿ.ಜೆ.ಪಿ. ಕಾರ್ಯಕರ್ತರನ್ನು ಬಂಧಿಸಿದಾಗ ಅದು ಸರಿಯೋ ತಪ್ಪೋ ಅದನ್ನು ನಾವು ಸಮರ್ಥನೆ ಮಾಡಿದೆವು. ಸರ್ಕಾರಕ್ಕೆ ಬೆನ್ನು ತಟ್ಟುವಂಥ ಮಾತನ್ನು ಹೇಳಿದೆವು. ಕಾರಣ ಅವರು ಅಯೋಧ್ಯೆಯಲ್ಲಿ ಸಭೆ, ಭಜನೆ ಮಾಡುತ್ತೇವೆ ಎಂದು ಹೇಳಿ ಮಸೀದಿ ಕೆಡವಿ ಹಾಕಿದರು. ಅದರ ಹಿನ್ನೆಲೆಯಲ್ಲಿ ತಾವು ತೆಗೆದುಕೊಂಡಂತಹ ತೀರ್ಮಾನಕ್ಕೆ ನಾವು ಬೆಂಬಲ ಕೊಟ್ಟಿದ್ದೇವೆ. ಆದರೆ ಡಂಕಲ್ ಪ್ರೊಪೋಸಲ್ ಯಾವುದು ಇದೆ ಆ ಪ್ರೊಪೋಸಲ್ ಅನ್ನು ರೈತರು ಪ್ರತಿಭಟನೆ ಮಾಡುವುದಕ್ಕೆ ರಾಷ್ಟ್ರದ ರಾಜ್ಯಧಾನಿಯಲ್ಲಿ ಸಭೆ ಸೇರುತ್ತಿದ್ದಾರೆ. ಆ ಸಭೆ ಸೇರುವುದಕ್ಕೆ ಕರ್ನಾಟಕ ರಾಜ್ಯದ ರೈತರು ಹೊರಟಿದ್ದಾರೆ. ಅಂತಹ ಒಂದು ಉತ್ತಮವಾದ ಕೆಲಸವನ್ನು ಮಾಡಲಿಕ್ಕೆ ಹೊರಟಂತಹ ರೈತರನ್ನು ತಡೆಗಟ್ಟತಕ್ಕಂಥಾದ್ದು ಅವರನ್ನು ಬಂಧಿಸತಕ್ಕಂಥಾದ್ದು ಕಾನೂನು ದೃಷ್ಟಿಯಿಂದ ಅಷ್ಟೇ ಅಲ್ಲ, ನೀತಿ ದೃಷ್ಟಿಯಿಂದಲೂ ಕೂಡ ಒಳ್ಳೆಯದಲ್ಲ. ಆದ್ದರಿಂದ ನಾನು ಈ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೈತರ ಬಗ್ಗೆ ಆಗಲಿ, ನೀರಾವರಿ ಬಗ್ಗೆ ಆಗಲಿ ನೀವು ಏನಾದರೂ ನಿರ್ಲಕ್ಷ್ಯ ತೋರಿಸಿದರೆ ಬಹಳ ದಿವಸ ಅಧಿಕಾರದಲ್ಲಿ ಉಳಿಯುವುದಿಲ್ಲ. ಸಾವಿರಾರು ಜನ ರೈತರನ್ನು ಹಿಡಿದು ಜೈಲಿಗೆ ಹಾಕಿದ್ದೀರಿ. ರೈತರು ರೈಲ್ವೆ ಸ್ಟೇಶನ್‌ನಲ್ಲಿ ಅನ್ನ ನೀರಿಲ್ಲದೆ ಕುಳಿತುಕೊಂಡಿದ್ದಾರೆ. 41 ಜನ ಮಂತ್ರಿಗಳಲ್ಲಿ ಯಾರನ್ನಾದರೂ ಒಬ್ಬರನ್ನು ಕಳುಹಿಸಿ ವರದಿ ತರಿಸಿ ಈ ಸದನಕ್ಕೆ ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೊಂದು ಪ್ರಾರ್ಥನೆ ನಾನು ವಿನಯದಿಂದ ಈ ಸಂದರ್ಭದಲ್ಲಿ ಮಾಡಿಕೊಳ್ಳುವುದೇನೆಂದರೆ, ನೀವು ಸಹ ಸರ್ಕಾರದಲ್ಲಿ ಕೆಲಸ ಮಾಡಿದ್ದೀರಿ. ಆಗಿದ್ದರೂ ಸಹ ತಾವೂ ರೈತ ಮಕ್ಕಳು ಎಂದು ಭಾವಿಸಿದ್ದೇನೆ. ನಾನು ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸದನದಲ್ಲಿ ಯಾವುದೇ ಒಂದು ವಿಷಯವನ್ನು ಆದ್ಯತೆ ಮೇಲೆ ತೆಗೆದುಕೊಂಡಾಗ ರೈತರ ಸಮಸ್ಯೆಗಳಿಗೆ ಆದ್ಯತೆ ಕೊಡುವಂಥಾದ್ದರ ಬಗ್ಗೆ ಅತ್ಯಂತ ಹೆಚ್ಚಿನ ಆಸಕ್ತಿಯನ್ನು ತೋರಿಸಬೇಕು. ನಾವು ಕೇಳಬೇಕು. ನಾವು ತಮ್ಮ ಮೇಲೆ ಒತ್ತಾಯ ಮಾಡಬೇಕಾಗುತ್ತದೆ. ಇದು ಈ ರಾಜ್ಯದ

ಲಕ್ಷಾಂತರ ಜನರ ಸಮಸ್ಯೆ ಅದನ್ನು ಚರ್ಚೆ ಮಾಡುವುದಕ್ಕೆ ಅನುಮತಿ ಇಲ್ಲ ಅಂದರೆ ಹೇಗೆ ಅಂತಹ ಸಂದರ್ಭ ಬಂದಾಗ ವಿನಯದಿಂದ ಚೌಕಟ್ಟಿನ ಒಳಗೆ ಒತ್ತಾಯ ತರುತ್ತೇವೆ. ಅದಕ್ಕೂ ಸಾಧ್ಯವಿಲ್ಲದೆ ಹೋದರೆ ಹೊರಗಡೆ ಹೋಗಬೇಕಾಗುತ್ತದೆ. ನಾನು ಸರ್ಕಾರದಲ್ಲಿ ನೇರವಾಗಿ ಪ್ರಶ್ನೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ವಿರೋಧಪಕ್ಷದಲ್ಲಿ 4 ಜನರು ಇರಲಿ, 10 ಜನರು ಇರಲಿ, ಅದು ಬೇರೆ ಪ್ರಶ್ನೆ. ಆ ರೈತರನ್ನು ಬಂಧಿಸಿದ್ದಕ್ಕೆ ಕಾರಣವೇನು ? ಅದಕ್ಕೆ ನನಗೆ ನೇರ ಉತ್ತರ ಬೇಕು. ಸಂಸದೀಯ ಸಚಿವರು ಹುಸಿ ನಗೆ ನಕ್ಕು ಉತ್ತರ ಕೊಟ್ಟರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಏತಕ್ಕೆ ತಾವು ರೈತರನ್ನು ಬಂಧಿಸಿದ್ದೀರಿ. ಈ ವಿಷಯದಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಬೇಕು.

†ಶ್ರೀ ಆರ್.ವಿ ದೇಶಪಾಂಡೆ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೇ, ನಾನು ಇದಕ್ಕಿಂತ ಮುಂಚಿತವಾಗಿ ತಮ್ಮ ಕೊಠಡಿಗೆ ಬಂದು ಈ ವಿಷಯ ರೈಜ್ ಮಾಡಲಿಕ್ಕೆ ತಮ್ಮ ಅಪ್ಪಣೆ ಪಡೆದಿದ್ದೆ. ನನಗೆ ಆಶ್ಚರ್ಯವಾಗುತ್ತಿದೆ. ಈ ಸರ್ಕಾರಕ್ಕೆ ಏನಾಗಿದೆ ಎಂದು ಗೊತ್ತಾಗುತ್ತಿಲ್ಲ. ನಮ್ಮ ಕಡೆ ದೈತ್ಯವಾದ ಶಕ್ತಿ ಇದೆ. ನಾವು 190 ಜನ ಶಾಸ್ತಕರು ಆರಿಸಿ ಬಂದಿದ್ದೇವೆ ನಾವು ಬುಲ್ಡೋಜರ್‌ನಿಂದ ಸರ್ಕಾರ ನಡೆಸಬೇಕು ಎನ್ನುವ ವಿಚಾರ ಏನಾದರೂ ನಿಮ್ಮದು ಇದೆಯೇ ? ನಿಜವಾಗಿಯೂ ಪ್ರಜಾಪ್ರಭುತ್ವ ಪ್ರಕಾರ ಸರ್ಕಾರ ನಡೆಸಬೇಕು ಎಂದು ನಂಬಿಕೆ ಇದೆಯೋ ಈ ಬಗ್ಗೆ ನಮಗೆ ಸಾಕಷ್ಟು ಅನುಮಾನ ಇದೆ. ಏಕೆಂದರೆ, ಇವತ್ತು ರೈತರು ತಮ್ಮ ಹೋರಾಟದಲ್ಲಿ ದೆಹಲಿಗೆ ಹೋಗಬೇಕಂದಾಗ ರೈತರನ್ನು ತಡೆಯುವ ಪ್ರಶ್ನೆ ಏನಿತ್ತು ? ಕೇಂದ್ರ ಸರ್ಕಾರದ ನೀತಿ ವಿರುದ್ಧ, ಡಂಕಲ್ ಪ್ರಪೋಸಲ್ ವಿರುದ್ಧ ರೈತರು ಹೊರಟಿದ್ದಾರೆ. ತಾವು ಸಹ ಹೇಳಿದ್ದೀರಿ. ಬಜೆಟ್ ಸ್ಪೀಚ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ. ಇದು ಬಹಳ ಸೀರಿಯಸ್ ಸಮಸ್ಯೆ ಇದೆ. ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆಂದು ಹೇಳಿದಾಗ ಮತ್ತು ರೈತರು ಆ ಬಗ್ಗೆ ಹೋರಾಟ ಮಾಡುವುದಕ್ಕೆ ದೆಹಲಿಗೆ ಹೋಗುತ್ತೇವೆಂದು ಹೇಳಿದಾಗ ರೈತರನ್ನು ತಡೆಯುವುದಕ್ಕೆ ಕಾರಣ ಏನು ? ಏನು ಸಮಸ್ಯೆ ನಿಮಗೆ ? ನಾವಾಗಲೀ, ನೀವಾಗಲೀ ರೈತರು ನಮ್ಮ ಬೆನ್ನೆಲುಬು ಎಂದು ಹೇಳುತ್ತೇವೆ. ಆದರೆ ರೈತರು ತಮ್ಮ ಸಮಸ್ಯೆಗಳ ಬಗ್ಗೆ ಹೋರಾಟ ಮಾಡುವಂಥ ಸಮಯದಲ್ಲಿ ರೈತರನ್ನು ತಡೆಯುವುದು ಸರಿಯಲ್ಲವೆಂದು ನಾವು ಹೇಳುತ್ತೇವೆ. ಸರ್ಕಾರಕ್ಕೆ ಏನಾಗಿದೆಯೆಂದು ನಮಗೆ ಗೊತ್ತಾಗುವುದಿಲ್ಲ. ದಯ ಮಾಡಿ ನಾನು ಬಹಳ ವಿನಯದಿಂದ ಹೇಳುತ್ತೇನೆ, ತಾವು ಬೇಜವಾಬ್ದಾರಿಯಿಂದ ಇದ್ದೀರಿ. ಅವರ ಸಮಸ್ಯೆ ಬಗ್ಗೆ ನಿಮಗೆ ಚಿಂತನೆ ಇಲ್ಲ. ಏಕೆಂದರೆ ನಿಮ್ಮ ಸಮಸ್ಯೆಯೇ ನಿಮಗೆ ಹೆಚ್ಚಾಗಿದೆ. ನೀವು ಪ್ರತಿಯೊಂದು ಕಡೆಯೂ ವಿಚಾರ ಮಾಡಬೇಕು. ತಾವು ಖಾಯಂ ಆಗಿ ಅಲ್ಲೇ ಕುಳಿತುಕೊಳ್ಳುವುದಿಲ್ಲ. ತಾವು ಈ ಕಡೆ ಕೂರುವ ಸಂದರ್ಭ ಬರಬಹುದು. ಆಗ ತಾನೇ ಒಂದು ಚಳುವಳಿ ಮಾಡಬೇಕೆಂದಾಗ ಈ ತರಹ ಆದರೆ ಏನು ಆಗಬಹುದು. ಮಾನ್ಯ ಮುಖ್ಯಮಂತ್ರಿಗಳು ದಕ್ಷ ಸರ್ಕಾರ ಕೊಡುತ್ತೇನೆ, ಡೆಮೊಕ್ರೆಟಿಕ್ ಆಗಿ ನಾವು ಹೋಗುತ್ತೇವೆ ಎಂದು ಹೇಳಿದ್ದಾರೆ. ಇವತ್ತಿಗೆ ಅವರ 100 ದಿವಸದ ಆಡಳಿತ ಆಯಿತು. ಅವರು ಅಧಿಕಾರಕ್ಕೆ ಬಂದು ನೂರು ದಿವಸ ಆಗಿರಬಹುದು. ಕಾರ್ಯಕ್ರಮವನ್ನು ಏನೂ ಮಾಡಿಲ್ಲ. ಆದ್ದರಿಂದ ಇವತ್ತು ಎಷ್ಟು ರೈತರನ್ನು ಬಂಧಿಸಿದ್ದೀರಿ ಅವರನ್ನೆಲ್ಲಾ ರಿಲೀಸ್ ಮಾಡಬೇಕು, ಜೊತೆಗೆ ಸರ್ಕಾರ ಅನ್‌ಕಂಡೀಷನಲ್ ಅಪಾಲಜಿ ಕೇಳಬೇಕೆಂದು ಹೇಳುತ್ತೇನೆ. ಇನ್ನೋಸೆಂಟ್ ಫಾರ್ಮರ್ಸ್ ಅನ್ನು ಯಾವುದೂ ತಪ್ಪು ಇಲ್ಲದವರನ್ನು ಏನು ಅರೆಸ್ಟ್ ಮಾಡಿಸಿದ್ದೀರಿ ಅವರನ್ನು ಸರ್ಕಾರ ತಕ್ಷಣ ರಿಲೀಸ್ ಮಾಡಬೇಕು. ಮಾನ್ಯ ಅಧ್ಯಕ್ಷರೇ, ಮತ್ತೊಂದು ಸಮಸ್ಯೆ ತಮ್ಮ ಗಮನಕ್ಕೆ ತಂದಿದ್ದೇನೆ. ಈ ಪರ್ಮನೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಕಮಿಟಿ ಅಪಾಯಿಂಟ್ ಮಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ಆ ವಿಷಯವನ್ನು ಆಮೇಲೆ ಮಾತನಾಡೋಣ. ಈಗ ಇದಕ್ಕೆ ಸರ್ಕಾರ ಉತ್ತರ ಕೊಡಲಿ.

†ಶ್ರೀ ಸಿ. ಭೈರೇಗೌಡ:– ಮಾನ್ಯ ಅಧ್ಯಕ್ಷರೇ, ಈ ದಿವಸ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿವೆಯೆಂದು ನಮಗೆ ಅರ್ಥವಾಗುತ್ತಿಲ್ಲ. ಈ ದೇಶದಲ್ಲಿ ಹಗಲು ದರೋಡೆ ಮಾಡತಕ್ಕಂಥ ದರೋಡೆಗಾರರಿದ್ದಾರೆ, ಎಲ್ಲಾ ವ್ಯವಹಾರಗಳನ್ನು ನಡೆಸಿ ಅಧಿಕಾರದಲ್ಲಿ ಕುಳಿತಿರತಕ್ಕಂಥವರು ಇದ್ದಾರೆ, ಮಾಡಬಾರದ್ದನ್ನೆಲ್ಲಾ ಮಾಡುತ್ತಿರತಕ್ಕಂಥ ಜನ ಈ ದೇಶದಲ್ಲಿ ಇದ್ದಾರೆ. ಇವರನ್ನೆಲ್ಲಾ ಬಿಟ್ಟು ಈ ದೇಶಕ್ಕೆ ಅನ್ನ ಕೊಡುತ್ತಿರತಕ್ಕಂಥ, ಈ ದೇಶಕ್ಕೆ ಬಟ್ಟೆ ಕೊಡುತ್ತಿರತಕ್ಕಂಥ ರೈತರುಗಳು ಅವರ ಕಷ್ಟವನ್ನು ಹೇಳಿಕೊಳ್ಳಬೇಕೆಂದು ಹೇಳಿ ಇವತ್ತು ರೈತರು ಅಷ್ಟಿಷ್ಟು ಸಂಘಟಿತರಾಗಿ ಹೋಗುತ್ತಿರತಕ್ಕಂಥ ಸಂದರ್ಭದಲ್ಲಿ ಅವರನ್ನು ಹೀನಾಮಾನವಾಗಿ ಬಂಧಿಸಿ, ರೈಲಿನಲ್ಲಿ ಕುಳಿತಿರತಕ್ಕಂಥವರನ್ನು ಇಳಿಸಿ, ಅವರುಗಳಿಗೆ ಪೊಲೀಸ್ ಸ್ಟೇಷನ್ ಮತ್ತು ಜೈಲಿನ ದರ್ಶನ ಮಾಡಿಸತಕ್ಕಂಥ ಹೇಯ ಕೃತ್ಯವನ್ನು ಈ ಎರಡೂ ಸರ್ಕಾರಗಳು ಮಾಡುತ್ತಿವೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಸ್ವಾಮಿ, 1980–83 ಮಧ್ಯದಲ್ಲಿ ಇಲ್ಲಿ ಅಧಿಕಾರ ಗದ್ದುಗೆಯಲ್ಲಿ ತಾವು ಕುಳಿತಿದ್ದೀರಿ. ನಿಮಗೆ ರಕ್ತದ ದಾಹ ಹೆಚ್ಚಾಗಿ ಆ ಸಂದರ್ಭದಲ್ಲಿ 139 ರೈತರನ್ನು ಸಾಯಿಸಿದ್ದಿರಿ. ಅದನ್ನು ಮರೆಯಬೇಡಿ. ಅದರ ಫಲ ಏನೆಂದು ನೀವು ಆಮೇಲೆ ಅನುಭವಿಸಿದ್ದೀರಿ. ಈಗ ಪುನಃ ಅದೇ ಫಲವನ್ನು ಅನುಭವಿಸುತ್ತೀರಿ. ರೈತ ಸಂಘದವರು ಮಾತ್ರ ರೈತರೆಂದು ನೀವು ತಿಳಿದುಕೊಂಡಿದರೆ ಅದು ನಿಮ್ಮ ತಪ್ಪು ಕಲ್ಪನೆ. ಇವತ್ತು ಮಾಡಿರತಕ್ಕಂಥಾದ್ದು ಕೇವಲ ರೈತ ಸಂಘದವರಿಂದ ಮಾತ್ರವಲ್ಲ, ಇಡೀ ರೈತ ವರ್ಗದವರನ್ನು ಬಂಧಿಸತಕ್ಕಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ. ಏನು ಸ್ವಾಮಿ, ಅವರಿಗೆ ಇರತಕ್ಕಂಥ ಕಷ್ಟವನ್ನು ಹೇಳಿಕೊಳ್ಳಲು ಈ ದೇಶದ ರಾಜಧಾನಿ ದೆಹಲಿಯಲ್ಲಿರತಕ್ಕಂಥ ಪ್ರಧಾನಿಯವರಿಗೆ ನೇರವಾಗಿ ಸಮಸ್ಯೆಗಳನ್ನು ಮುಟ್ಟಿಸಬೇಕೆಂದು ಅವರು ಹೋಗುತ್ತಿದ್ದರು. ಅವರೇನು ದೆಹಲಿಗೆ ಹೋಗಿ ಮಂದಿರವನ್ನು ಕಟ್ಟುವ ಪ್ರಯತ್ನ ಮಾಡುತ್ತಿದ್ದರಾ ? ಅಥವಾ ಮಸೀದಿ ಉರುಳಿಸುವುದಕ್ಕೆ ಹೋಗಿದ್ದರೇ ? ಆಗ ಮಸೀದಿ ಉರುಳಿಸುವುದಕ್ಕೆ ನೀವೇ ಶಾಮೀಲಾಗಿದ್ದಿರಿ. ಮಸೀದಿಯನ್ನು ಉಳಿಸಿದೀರೋ ಮಂದಿರವನ್ನು ಕಟ್ಟುವುದಕ್ಕೆ ನೀವೇ ಶಾಮೀಲಾಗಿದ್ದಿರಿ. ಮಂದಿರ ಕಟ್ಟತಕ್ಕಂಥ ಕೆಲಸ ನೀವೇ ಮಾಡುತ್ತಿದ್ದೀರಿ. ಇದ್ಯಾವುದನ್ನೂ ಮಾಡತಕ್ಕಂಥಾದ್ದಕ್ಕೆ ಹೊರಟವರಲ್ಲಾ ಈ ರೈತರು ಈ ದೇಶದ ಮುಂದಿನ ಭವಿಷ್ಯ ಅಂದರೆ ಈ ದೇಶದಲ್ಲಿ ವ್ಯವಸಾಯ ಉಳಿಯಬೇಕೇ ಅಳಿಯಬೇಕೇ ಎನ್ನತಕ್ಕಂಥಾದ್ದು ರೈತರನ್ನು ಕಾಡಿಸುತ್ತಿದೆ.

ಇದು ರೈತರನ್ನು ಸರ್ವನಾಶ ಮಾಡತಕ್ಕಂಥ ಪ್ರಯತ್ನ. ಅದು ಮೊನ್ನೆ ಕೇಂದ್ರದವರು ಇಟ್ಟಿರತಕ್ಕಂಥ ಬಜೆಟ್ ಇರಬಹುದು, ನಿಮ್ಮ ಬಜೆಟ್ ಇರಬಹುದು ಅಥವಾ ಗೊಬ್ಬರದ ದರವನ್ನು ಮೂನ್ನೂರಕ್ಕೆ ಏರಿಸಿದ್ದು ಇರಬಹುದು, ಇವೊತ್ತು ನಿಮ್ಮ ಸರಕಾರ ಆಲೋಚನೆ ಮಾಡುತ್ತಿರತಕ್ಕಂಥ ಡಂಕೆಲ್ ಪ್ರಸ್ತಾವನೆ ಇರಬಹುದು. ಅದು ಏನಾದರೂ ದೇಶದಲ್ಲಿ ಜಾರಿಗೆ ಬಂದರೆ ರೈತರು ನಿರ್ನಾಮವಾಗುತ್ತಾರೆ. ಅಂಥ ಸಂದರ್ಭವು ಎದುರು ಬಂದಾಗ ಇರತಕ್ಕಂಥ ವಾಸ್ತವಾಂಶವನ್ನು, ಈ ದೇಶದಲ್ಲಿರತಕ್ಕಂಥ ರೈತರು ಉಳಿಯಬೇಕು, ಈ ದೇಶದ ಜನರಿಗೆ ಹೊರ ದೇಶದಿಂದ ಅನ್ನ, ಬಟ್ಟೆಯನ್ನು ತರಬಾರದು ಅದನ್ನು ನಾವೇ ಈ ದೇಶದಲ್ಲಿ ಉತ್ಪಾದನೆ ಮಾಡಬೇಕು, ಆ ಮೂಲಕ ದೇಶಕ್ಕೆ ಒಳಿತನ್ನುಂಟು ಮಾಡಬೇಕೆಂದು ನಮ್ಮ ರೈತರು ಮನಸ್ಸು ಮಾಡಿದ್ದಾರೆ. ಅಂಥವರನ್ನು ಬಂಧಿಸಿ ಜೈಲ್‌ನಲ್ಲಿ ಇಡುತ್ತೀರಿ ಅಂದರೆ ನಿಮಗೆ ಏನು ಹೇಳಬೇಕು ? ಆದರೆ ನಿಮಗೆ ಎಚ್ಚರಿಕೆಯನ್ನು ಕೊಡುತ್ತೇನೆ.1980–83ರವರೆಗೆ ಏನಾಯಿತು ಅದರ ಪುನರಾವರ್ತನೆಯಾಗುತ್ತದೆ. ಯಾರೂ ಶಾಶ್ವತರು ಅಲ್ಲ, ಇದನ್ನು ದಯಮಾಡಿ ಅರ್ಥ ಮಾಡಿಕೊಳ್ಳಿ. ಹೀಗೆ ಎಚ್ಚೆತ್ತುಕೊಂಡು ನಡೆದರೆ ನಿಮ್ಮ ಉಳಿದ ಎರಡು ವರ್ಷಗಳ ಕಾಲಾವಧಿಯವರೆಗಾದರೂ ಉಳಿಯುತ್ತೀರಿ. ಇಲ್ಲವಾದಲ್ಲಿ ಆ ರೈತರು ಏರಿಸತಕ್ಕಂಥ ವಿಷ ಜ್ವಾಲೆ ನಿಮ್ಮನ್ನು ಸುಡುತ್ತದೆ. ಅದರಲ್ಲಿ ನೀವು ಬೆಂದು ಬೂದಿಯಾಗುತ್ತೀರಿ. ಆದ್ದರಿಂದ ಈಗಲೆ ಎಚ್ಚರಿಕೆಯನ್ನು ವಹಿಸಿ, ಯಾರ್ಯಾರನ್ನು ಇಂದು ಬಂಧಿಸಿದ್ದೀರಿ, ಅವರನ್ನು ಬೇಷರತ್

ಆಗಿ ಬಿಡುಗಡೆ ಮಾಡತಕ್ಕಂಥಾದ್ದು ಅಲ್ಲದೇನೆ, ಅವರು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳಲು ಡೆಲ್ಲಿಗೆ ಹೋಗುವ ಪ್ರಯತ್ನವನ್ನು ನಡೆಸಿದ್ದಾರೆ. ಅವರನ್ನು ಡೆಲ್ಲಿಗೆ ತಲುಪಿಸತಕ್ಕಂಥ ಒಂದು ಪ್ರಯತ್ನವನ್ನಾದರೂ ಮಾಡಿ. ಮದ್ರಾಸ್‌ನಲ್ಲಿ ಕೂಡ ನಮ್ಮ ರೈತರ ಬಂಧನವಾಗಿದೆ ಎಂದು ತಿಳಿದಿದೆ. ಅವರ ಕಷ್ಟಸುಖವನ್ನು ಸರಕಾರದವರು ಯಾರಾದರೂ ವಿಚಾರಿಸಿದ್ದೀರಾ ? ನಮ್ಮ ರೈತರು ಮದ್ರಾಸ್‌ಗೆ ದರೋಡೆ ಮಾಡಲು ಹೋಗಿದ್ದಾರೆಯೇ ? ಯಾರ ತಲೆ ಒಡೆಯಲು ಹೋಗಿದ್ದಾರೆಯೇ ? ಅಥವಾ ಎಲ್‌ಟಿಟಿ ಚಟುವಟಿಕೆಗಳನ್ನು ಮಾಡಲು ಹೋಗಿದ್ದಾರೋ, ಏನೂ ಇಲ್ಲ ಅವರೂ ಕೂಡ ಈ ಆದೇಶದ ರಾಜಧಾನಿಯನ್ನು ತಲುಪಬೇಕೆಂದು ಹೋದವರು. ಅಂಥವರಿಗೆ ಅಲ್ಲಿ ಅನ್ನ ಆಹಾರವನ್ನು ಕೊಟ್ಟಿರತಕ್ಕಂಥವರು ಯಾರು ? ಅವರ ಪರಿಸ್ಥಿತಿ ಏನಾಗಿದೆ ಎಂದು ವಿಚಾರಿಸಿದ್ದೀರಾ ? ಹೀಗೆ ನಾವು ಮಾತ್ರ ಅಧಿಕಾರದ ಗದ್ದುಗೆಯಲ್ಲಿ ಆರಾಮವಾಗಿದ್ದೇವೆ ಎಂದು ತಿಳಿದುಕೊಂಡಿದ್ದರೆ, ಅದು ಮೂರ್ಖತನದ ಪರಮಾವಧಿ ಎಂದು ನಾನು ಹೇಳಬೇಕಾಗುತ್ತದೆ. ಆದ್ದರಿಂದ ದಯ ಮಾಡಿ ಹೀಗೆ ಸುಮ್ಮನೆ ಕುಳಿತಿರುವುದನ್ನು ಬಿಟ್ಟು ಮದ್ರಾಸ್‌ನಲ್ಲಿರತಕ್ಕಂಥ ರೈತರನ್ನು ಡೆಲ್ಲಿಗೆ ತಲುಪಿಸತಕ್ಕಂಥ ಏರ್ಪಾಡನ್ನು ಮಾಡಿ.

ಇಲ್ಲಿರತಕ್ಕಂಥ ರೈತರು, ಬೆಂಗಳೂರಿಗೆ ಬಂದಿರತಕ್ಕಂಥ ರೈತರು, ಡೆಲ್ಲಿಗೆ ಹೋಗಬೇಕೆಂದು ರೈತರು ಏನು ಪ್ರಯತ್ನ ಮಾಡುತ್ತಾ ಇದ್ದಾರೆ, ಅವರನ್ನು ಡೆಲ್ಲಿಗೆ ತಲುಪಿಸತಕ್ಕಂಥ ವ್ಯವಸ್ಥೆ ಮಾಡಿ. ಮೈಸೂರು–ಬೆಂಗಳೂರು ರೈಲನ್ನು ಕೂಡ ನೀವು ನಿಲ್ಲಿಸಿದ್ದೀರಿ. ಹೀಗೆ ಮಾಡುವುದನ್ನು ಮುಂದುವರಿಸಿಕೊಂಡು ಹೋದರೆ ರೈತರ ಸಿಟ್ಟಿನ ಜ್ವಾಲೆಯಲ್ಲಿ ಸುಟ್ಟು ಬೂದಿಯಾಗುವ ಕಾಲ ದೂರವಿಲ್ಲ ಎಂದು ಹೇಳಿ, ರೈತರನ್ನು ಕೆಣಕತಕ್ಕಂಥ ಕೆಲಸವನ್ನು ದಯವಿಟ್ಟು ಮಾಡಬೇಡಿ ಎಂದು ಎಚ್ಚರಿಕೆ ಕೊಡುತ್ತೇನೆ. ಆ ಕಡೆ ಕುಳಿತಿರುವವರು ಯಾರೂ ರೈತರು ಇಲ್ಲ ಎಂದು ನಾನು ಮಾತನಾಡುತ್ತಾ ಇಲ್ಲ. ರೈತರ ಬಗ್ಗೆ ಕಾಳಜಿ ಇರುವವರೂ ಕೂಡ ಇದ್ದೀರಿ. ರೈತರ ಹಿತ ಕೇವಲ ರೈತ ಸಂಘದವರಿಗೆ ಅಥವಾ ನಮಗೆ ಮಾತ್ರ ಅಲ್ಲ, ಎಲ್ಲರಿಗೂ ಇದೆ. ಇದನ್ನು ಪಕ್ಷಾತೀತವಾಗಿ ನೋಡತಕ್ಕಂಥಾದ್ದು. ಆದ್ದರಿಂದ ಸಧ್ಯಕ್ಕೆ ಏನು ಏರ್ಪಾಡು ಮಾಡಬೇಕೋ ಅದನ್ನು ಮಾಡಿ ಎಂದು ತಮ್ಮ ಮೂಲಕ ಸರಕಾರಕ್ಕೆ ಸೂಚಿಸ ಬಯಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಮುಖ್ಯಮಂತ್ರಿಗಳು ಬಂದು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:– ಅವರನ್ನು ಬಿಡುಗಡೆ ಮಾಡುತ್ತೀರೋ ಇಲ್ಲವೋ ಎಂದು ಹೇಳಿ. ಈ ತರಹ ಬಂಧಿಸಿರತಕ್ಕಂಥಾದ್ದು ಒಳ್ಳೆಯದಲ್ಲ.

ಶ್ರೀ ವೈ.ಕೆ ರಾಮಯ್ಯ:– ರೈತರನ್ನು ಜೈಲಿನಲ್ಲಿಟ್ಟು ಇಲ್ಲಿ ಸಭೆಯಲ್ಲಿ ನಾವು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ ......

(ಗೊಂದಲ)

(ಮಾನ್ಯ ಸದಸ್ಯರಾದ ವೈ.ಕೆ. ರಾಮಯ್ಯನವರು ಮತ್ತು ವಾಟಾಳ್ ನಾಗರಾಜ್‌ರವರು ಸದನದ ವೆಲ್‌ನಲ್ಲಿ ಬಂದು ನಿಂತು ಘೋಷಣೆ ಕೂಗಿದರು)

ಶ್ರೀ ಆರ್.ವಿ. ದೇಶಪಾಂಡೆ:– ಇದು ಬಹಳ ಮಹತ್ವವಾದಂತಹ ಸಮಸ್ಯೆ. ಇದು ಪತ್ರಿಕೆಗಳಲ್ಲಿ ಬಂದಿದೆ. ರೈತರು ಧರಣಿ ಮಾಡುವುದಕ್ಕೆ ಹೋಗಿಲ್ಲ, ಮರ್ಡರ್ ಮಾಡುವುದಕ್ಕೆ ಹೋಗಿಲ್ಲ. ತಮ್ಮ ಅಧಿಕಾರದ ಸಲುವಾಗಿ, ತಮ್ಮ ಹಕ್ಕಿನ ಸಲುವಾಗಿ ಹೋರಾಟ ಮಾಡಿರುವಾಗ ಸರ್ಕಾರಕ್ಕೆ ಸಮಯ ಬೇಕೆಂಬುದಿಲ್ಲ. ನೀವು ನೇರವಾಗಿ ಹೇಳಬಹುದು. ಇವತ್ತು ನಾವು ಎಲ್ಲಾ ರೈತರನ್ನು ಬಿಡುಗಡೆ

ಮಾಡುತ್ತಿದ್ದೇವೆ, ಇಲ್ಲ ಮಾಡುತ್ತೇವೆ ಎಂದು ಹೇಳಬಹುದು. ತಾವು ಮುಖ್ಯಮಂತ್ರಿಗಳು ಬಂದಿದ್ದರೆ ಉತ್ತರ ಕೊಡುತ್ತಿದ್ದರು ಎಂದು ಹೇಳುತ್ತಿದ್ದೀರಿ. ನಮಗೆ ಉತ್ತರ ಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ನಾನು ನನಗೆ ತಿಳಿದ ಉತ್ತರವನ್ನು ಕೊಡುತ್ತಿದ್ದೆ. ಆದರೆ ವಿರೋಧ ಪಕ್ಷದ ನಾಯಕರು, ಹಿಂದೆ ಸಂಸದೀಯ ಸಚಿವರು ಹೇಳಿಬಿಟ್ಟರೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ It is an insult to me as well as to the Government. I am entitled to give a reply on behalf of the Government. ಬಹಳ ಮುಖ್ಯವಾದಂತಹ ವಿಷಯವನ್ನು, ನಮ್ಮ ದೇಶದ ರೈತರಿಗೆ ಸಂಬಂಧಪಟ್ಟ ವಿಷಯವನ್ನು ಎತ್ತಿದ್ದಾರೆ. ವಿವರಗಳನ್ನು ಕೇಳಿದ್ದಾರೆ. ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ? ಏಕೆ ಅರೆಸ್ಟ್ ಮಾಡಿದ್ದಾರೆ? ಎಂಬುದನ್ನು ಕೇಳಿದ್ದೀರಿ. ಇದೆಲ್ಲವನ್ನು ನಿಂತ ಕಡೆಯಲ್ಲಿ ಉತ್ತರ ಕೊಡುವುದಕ್ಕೆ ನೀವೇ ಈ ಜಾಗದಲ್ಲಿ ಇದ್ದರೂ ಸಾಧ್ಯವಾಗುತ್ತಿರಲಿಲ್ಲ. ಹೋಮ್ ಕಮೀಷನರ್‌ಗೆ ಹೇಳಿ ಕಳುಹಿಸಿದ್ದೇವೆ, ಬರುತ್ತಾರೆ.

ಶ್ರೀ ಸಿ. ಬೈರೇಗೌಡ:- ಉತ್ತರವನ್ನು ಕೊಡಬೇಕು.

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ನಮಗೆ ರಕ್ಷಣೆಯನ್ನು ಕೊಡಬೇಕು. ಮಾನ್ಯ ಸದಸ್ಯರುಗಳು ಮಾತನಾಡುವಾಗ ನಾವು ಯಾರು ಎದ್ದು ಮಾತನಾಡಲಿಲ್ಲ. ಅಡಚಣೆಯನ್ನು ಮಾಡಲಿಲ್ಲ. ಆದರೆ ನಾವು ಮಾತನಾಡುವಾಗ ಏನಾದರೂ ಉತ್ತರ ಕೊಡಬೇಕಾದರೆ ಎಲ್ಲಾ ಒಟ್ಟಾಗಿ ನಿಂತು ವಿರೋಧ ಮಾಡುತ್ತಾರೆ. ಇದು ಸರಿಯಲ್ಲ. ನಾನು ಏನು ಹೇಳುವುದು ಇದೆಯೋ ಅದನ್ನು ಹೇಳಿದ ಮೇಲೆ ಅವರಿಗೆ ಸಮಾಧಾನ ಆಗದೇ ಹೋದರೆ ಪುನಃ ಕೇಳಲಿ, ಹೇಳುತ್ತೇನೆ. ಮುಖ್ಯಮಂತ್ರಿಗಳು ಬಂದ ಮೇಲೆ ವಿಚಾರ ಮಾಡೋಣ. ನಾನು ಮೊದಲೇ ವಿರೋಧ ಪಕ್ಷದ ನಾಯಕರಿಗೆ ಹೇಳಿದ್ದೆ. ಬಹಳ ಮುಖ್ಯವಾದಂತಹ ವಿಷಯವನ್ನು ಎತ್ತಿದ್ದಾರೆ. ಪಾಲಿಸಿ ಮ್ಯಾಟರ್‌ನ ಔಟ್ ಸೈಡ್ ದಿ ಹೌಸ್, ಹೌಸ್ ನಡೆಯುತ್ತಿರುವಾಗ ಹೇಳಿದರು ಎಂದು ಹೇಳಿದ್ದಾರೆ. ಅದಕ್ಕೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಮುಖ್ಯಮಂತ್ರಿಗಳೇ ಉತ್ತರ ಕೊಡಬೇಕು, ಅವರೇ ಬರುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಹಿರಿಯರಾದಂತ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರನ್ನು ನೀವು ಏಕೆ ಉತ್ತರ ಕೊಡುತ್ತೀರಿ? ಕೊಡಬೇಡಿ, ಎಂದು ಹೇಳಿಲ್ಲ. ಆ ದಿನ ಹಾರ್ಟಿಕಲ್ಚರ್ ಮಿನಿಸ್ಟರ್ ಇದ್ದರು. concern Minister was present in the House. ಹಾರ್ಟಿಕಲ್ಚರಲ್ ಮಿನಿಸ್ಟರ್ ಇಲ್ಲಿ ಇದ್ದರೂ ಆ ಸಮಯದಲ್ಲಿ ಅವರು ಏನು ಹೇಳಿದರು ಎಂದರೆ ಕನ್ಸರನ್ ಮಿನಿಸ್ಟರ್ ಇದ್ದಾಗ ಡಿಪಾರ್ಟ್‌ಮೆಂಟ್ ಮಿನಿಸ್ಟರ್ ಇದ್ದಾಗ ಅವರೇ ಉತ್ತರ ಕೊಡಬೇಕಾಗುತ್ತದೆ. ಕೆಲವು ಸಲ ಏನೂ ಬರದ ಹೊಸ ಮಿನಿಸ್ಟರ್ ಇರುತ್ತಾರೆ, ಆಗ ನಾವು ಒಮ್ಮೆ ಹೇಳಬೇಕಾಗುತ್ತದೆ. ಆದರೆ ಕೆಲವು ಗಂಭೀರವಾದಂತಹ ಸಮಸ್ಯೆಗಳು ಇರುತ್ತವೆ. ಯಾವ ಮಿನಿಸ್ಟರ್ ಅಲ್ಲಿ ಇದ್ದಾರೆ ಉತ್ತರ ಕೊಡುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದಾರೆ ಆಗ ಇವರು ಹೇಳುವುದಕ್ಕೆ ಹೋಗಬಾರದು. ಒಂದು ವೇಳೆ ಅವರಿಗೆ ಉತ್ತರ ಹೇಳುವುದಕ್ಕೆ ಬರುವುದಿಲ್ಲ ಅಥವಾ ಹೊಸಬರು ಇದ್ದಾರೆ ಎಂದರೆ ಆಗ ನಾವು ಬೇಡ ಎನ್ನುವುದಿಲ್ಲ.ಹಾಗಾಗಿ ತಾವು ತಪ್ಪು ತಿಳಿದುಕೊಳ್ಳುವುದು ಬೇಡ. ಈಗ ನಮಗೆ ಸರ್ಕಾರದಿಂದ ಬೇಕಾಗಿರುವುದು ಏನೆಂದರೆ, ರೈತರು ಬೀಹೈಂಡ್ ದಿ ಬಾರ್ಸ್ ಇದ್ದಾರೋ ಅವರನ್ನು ತಕ್ಷಣ ರಿಲೀಜ್ ಮಾಡಬೇಕು. ಇದಕ್ಕೆ ಮುಖ್ಯಮಂತ್ರಿಗಳನ್ನು ಕಂಡು ಕೇಳುವ ಪ್ರಶ್ನೆ ಇಲ್ಲ. ಹಾಗಾಗಿ ತಕ್ಷಣ ತಾವು ರೈತರನ್ನು ರಿಲೀಜ್ ಮಾಡಬೇಕು. ಇಲ್ಲದಿದ್ದರೆ, ಈ ಮನೆ ಅಡ್‌ಜರ್ನ್ ಮಾಡಿ, ಇಲ್ಲದಿದ್ದರೆ ಧರಣಿ ಮಾಡಬೇಕಾಗುತ್ತದೆ.

(ಶ್ರೀ ವೈ.ಕೆ. ರಾಮಯ್ಯನವರು ವೆಲ್‌ನಲ್ಲಿ ಬಂದು ರೈತರನ್ನು ಬಿಡಗಡೆ ಮಾಡದಿದ್ದರೆ ಈ ಸದನ ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಕೂಗುತ್ತಿದ್ದರು)

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಈಗ ಕೆಲವು ವಿವರಗಳನ್ನು ಕಳುಹಿಸಿದ್ದಾರೆ. ಇದನ್ನು ಓದಿ ತಮ್ಮ ಗಮನಕ್ಕೆ ತರುತ್ತೇನೆ. ತಾವು ಹೇಳಿದಂತಹ ವಿಷಯದಲ್ಲಿ ಎಲ್ಲ ಸಂಪೂರ್ಣವಾದಂತಹ ಸಹಮತವಿದೆ. ಆದರೆ ವಿವರಗಳನ್ನು ತರಿಸಿ ಹೇಳಬೇಕು. ಸುಮ್ಮನೆ ಹೇಳಿದರೆ, ಸುಮ್ಮನೆ ಹೇಳುತ್ತಾ ಇದ್ದೀರಾ, ಎಂದು ನೀವು ಹೇಳುತ್ತೀರಾ.

ಶ್ರೀ ವೈ.ಕೆ ರಾಮಯ್ಯ:– ವಿವರಗಳನ್ನು ತರಿಸುವವರೆಗೂ ಈ ಸದನ ಅಡ್‌ಜರ್ನ್ ಆಗಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಸಭೆ ಏಕೆ ಅಡ್‌ಜರ್ನ್ ಆಗಬೇಕು. ಸಭೆಯಲ್ಲಿ ಎಲ್ಲರೂ ಹೇಳಿದ ಹಾಗೆ ಸಭೆ ನಡೆಯಬೇಕು. ಅದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ತೀರ್ಮಾನ ಮಾಡುತ್ತಾರೋ ಅದು ಜಾರಿಗೆ ಬರುವುದಿಲ್ಲ. ಇದೇ ಸಭೆಯಲ್ಲಿ ಕುಳಿತು ಏನು ತೀರ್ಮಾನ ಮಾಡುತ್ತೇವೊ ಅದು ಜಾರಿಗೆ ಬರುವುದಿಲ್ಲ. ಮೊನ್ನೆ ಈ ಸಭೆ ಅಡ್‌ಜರ್ನ್ ಆಗುವುದಕ್ಕೆ ಮುಂಚೆ ಇವತ್ತು ಮುಖ್ಯಮಂತ್ರಿಗಳ ರಿಪ್ಲೈ ಮಾತ್ರ ಇದೆ ಎಂದು ತೀರ್ಮಾನವಾಗಿತ್ತು. ಇವತ್ತು ಸಭೆ 11 ಗಂಟೆಗೆ ಸೇರುವುದು ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ಎಂದು ಇತ್ತು. ಆದರೆ ಆ ಕಡೆ ಇದ್ದವರು, ಈ ಕಡೆ ಇದ್ದವರೆಲ್ಲಾ ಇಲ್ಲ ಇಲ್ಲ 9.30ಕ್ಕೆ ಸಭೆ ಸೇರಲಿ, ನಾವು ಒಂದೆರಡು ತಾಸು ಮಾತನಾಡುತ್ತೇವೆ, ನಂತರ ಮುಖ್ಯಮಂತ್ರಿಗಳು ಒಟ್ಟಿಗೆ ಉತ್ತರವನ್ನು ಕೊಡಲಿ ಎಂದು ಹೇಳಿದರು.

ಅದರಂತೆ ನಾವು ಒಪ್ಪಿಕೊಂಡೆವು ಮತ್ತು ಜಿರೋ ಅವರ್ ಬೇಡ, ಇವತ್ತಿನ ಬಿಸಿನೆಸ್ ಇವತ್ತು ಮುಗಿದು ಹೋಗಲಿ ಎಂದು ಎಲ್ಲರೂ ಒಪ್ಪಿಕೊಂಡರು. ಆದರೂ ಬಹಳ ಮುಖ್ಯವಾದ ವಿಷಯವನ್ನು ಮಾನ್ಯ ಸದಸ್ಯರು ಎತ್ತಿದ್ದರಿಂದ ನಾವು ಯಾರೂ ತಕರಾರು ಮಾಡಲಿಲ್ಲ. ಅವರು ಹೇಳಿದ್ದಕ್ಕೆ ವಿವರಗಳನ್ನು ತರಿಸುತ್ತಿದ್ದೇವೆ. ಇನ್ನು ಒಂದು ಅರ್ಧ ಗಂಟೆಯ ಒಳಗೆ ಮುಖ್ಯಮಂತ್ರಿಗಳು ಬರುತ್ತಾರೆ. ಅವರು ತಮಗೆ ಉತ್ತರವನ್ನು ಕೊಡುತ್ತಾರೆ. ನಾನು ಉತ್ತರವನ್ನು ಕೊಟ್ಟರೆ ತಮಗೆ ಸಮಾಧಾನವಾಗುವುದಿಲ್ಲ. ಆ ಪಾಲಿಸಿ ಮ್ಯಾಟರ್‌ನಲ್ಲಿ ನಾನು ಉತ್ತರ ಕೊಡುವುದಕ್ಕೆ ಸಾಧ್ಯವೇ? ಸಾಧ್ಯವಿಲ್ಲ. ತಾವು ಸ್ವಲ್ಪ ಅರ್ಧ ಗಂಟೆ ಟೈಮ್ ಕೊಡಿ.

ಶ್ರೀ ವೈ.ಕೆ. ರಾಮಯ್ಯ:– ಸದನವನ್ನು ಅರ್ಧ ಗಂಟೆ ಅಡ್ಜರ್ನ್ ಮಾಡಿ.

ಅಧ್ಯಕ್ಷರು:– ಅರ್ಧ ಗಂಟೆ ಬಿಟ್ಟು ಅವರು ಸ್ಟೇಟ್‌ಮೆಂಟ್ ಕೊಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ:– ಮಾನ್ಯ ಮಂತ್ರಿಗಳು ವಿವರಗಳನ್ನು ತರಿಸಬೇಕೆಂದು ಹೇಳುತ್ತಿದ್ದಾರೆ. ಮೊದಲು ಬೇಷರತ್ ಆಗಿ ರೈತರನ್ನು ಬಿಡಲಿ, ಆಮೇಲೆ ಎಷ್ಟು ಜನ ರೈತರನ್ನು ಬಿಟ್ಟಿದ್ದೇವೆ ಎನ್ನತಕ್ಕ ವಿವರ ಕೊಡಲಿ, ಮೊದಲು ರೈತರ ಬಿಡುಗಡೆ ಆಗಲಿ.

ಅಧ್ಯಕ್ಷರು:– ಶ್ರೀ ವಾಟಾಳ್‌ನಾಗರಾಜ್‌ರವರೆ, ಅರ್ಧ ಗಂಟೆ ಆದ ಮೇಲೆ ಸ್ಟೇಟ್‌ಮೆಂಟ್ ಕೊಡುತ್ತಾರೆ, ಕುಳಿತುಕೊಳ್ಳಿ.

ಶ್ರೀ ವೈ.ಕೆ. ರಾಮಯ್ಯ:– ತಮ್ಮ ಸ್ಥಾನಕ್ಕೆ ಗೌರವ ಕೊಟ್ಟು, ಸರ್ಕಾರ ಅರ್ಧ ಗಂಟೆಯಲ್ಲಿ ಹೇಳಿಕೆಯನ್ನು ಕೊಡುತ್ತಾರೆ ಎನ್ನುವುದಕ್ಕೆ ನಂಬಿಕೆ ಇಟ್ಟು ನಾನು ಅಲ್ಲಿ ಹೋಗಿ ಕುಳಿತುಕೊಳ್ಳುತ್ತೇನೆ. ಅರ್ಧ ಗಂಟೆಯಲ್ಲಿ ಬರದೆ ಇದ್ದರೆ ಮುವ್ವತ್ತೊಂದನೇ ನಿಮಿಷಕ್ಕೆ ಮತ್ತೆ ಗಲಾಟೆ ಶುರುವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಅರ್ಧ ಗಂಟೆಯೊಳಗೆ ಎಲ್ಲಾ ವಿವರಗಳನ್ನು ತರಿಸಬೇಕು ಮತ್ತು ಮುಖ್ಯಮಂತ್ರಿಗಳು ಈ ಸದನಕ್ಕೆ ಬರುವುದಕ್ಕೆ ಹೇಳಬೇಕು.

ಹಿಂದುಳಿದ ವರ್ಗಗಳ ಆಯೋಗದ ರಚನೆಯ ಪ್ರಕಟಣೆಯನ್ನು ಸದನದಲ್ಲಿ ಮಾಡದಿರುವ ಬಗ್ಗೆ

ಶ್ರೀ ಆರ್.ವಿ. ದೇಶಪಾಂಡೆ:- .ಅರ್ಧ ಗಂಟೆಯಲ್ಲಿ ಉತ್ತರ ಕೊಡುತ್ತೇವೆಂದು ಹೇಳಿರುತ್ತಾರೆ. ನಾವು ಸಮಯ ಕೊಡಬೇಕಾಗುತ್ತದೆ. ನಾವು ಕೊಡುತ್ತೇವೆ. ಮಾನ್ಯ ಅಧ್ಯಕ್ಷರೇ, ಮತ್ತೊಂದು ತಮ್ಮ ವಿಷಯ ತಮ್ಮ ಗಮನಕ್ಕೆ ತಂದಿದ್ದೇನೆ. ಈ ಸರ್ಕಾರದವರು ಒಂದು ಪರ್ಮನೆಂಟ್ ಬ್ಯಾಕ್‌ವರ್ಡ್ ಕ್ಲ್ಯಾಸ್ಟ್ ಕಮೀಷನ್ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ, ಅದು ಸಂತೋಷ.

ಇದನ್ನು ಗೌರ್ನರ್ ಸ್ಪೀಚ್‌ನಲ್ಲಿ ಸಹ ಅವರು ಹೇಳಿದರು. ಕಳೆದ 2 ವರ್ಷಗಳಿಂದ ಗೌರ್ನರ್ ಸ್ಪೀಚ್‌ನಲ್ಲಿ ಅವರು ಹೇಳುತ್ತಾ ಬಂದಿದ್ದಾರೆ. ಈ ವರ್ಷವೂ ಇದೆ. ಆದ್ದರಿಂದ ಸುಪ್ರೀಮ್ ಕೋರ್ಟ್ ಆದೇಶ ನವೆಂಬರ್‌ನಲ್ಲಿ ಇತ್ತು, ಪರ್ಮನೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ಅಪಾಯಿಂಟ್ ಮೆಂಟ್ ಮಾಡಬೇಕೆಂದು. ಆದ್ದರಿಂದ ನಾವು ಸ್ವಾಗತ ಮಾಡುತ್ತೇವೆ. ಪ್ರಶ್ನೆ ಏನು ಇದೆ ಎಂದರೆ, When the House is in session, was it proper on the part of the Government to announce the Permanent Backward Classes Commission, outside the House? It is not only the breach of privilege but also breach of propriety. ಹಾಗಾಗಿ ಇವತ್ತು ಇಡೀ ಸದನಕ್ಕೆ ಸರ್ಕಾರ ಅಗೌರವ ತಂದಿದೆ. We have no other alternative remedy but to move breach of privilege motion against the Government. ಒಳ್ಳೆಯ ಕೆಲಸ, ಆದರ ಬಗ್ಗೆ ನಮ್ಮ ಸಂದೇಹ ಇಲ್ಲ. ನಾವು ಸ್ವಾಗತ ಮಾಡುತ್ತೇವೆ. ಆದರೆ ಸದನ ನಡೆದಾಗ ಹೊರಗಡೆ ಅನೌನ್ಸ್ ಮಾಡುವ ಅವಶ್ಯಕತೆ ಏನಿತ್ತು? ತಾವು ಇಡೀ ಸದನಕ್ಕೆ ಅಗೌರವ ತೋರಿಸಿದ್ದೀರಿ. ಸಭಾಪತಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವೂ ಸಹಾ ಗಂಭೀರವಾಗಿ ಈ ಸಮಸ್ಯೆಯನ್ನು ನೋಡಬೇಕಾಗುತ್ತದೆ. ಶ್ರೀ ಚಿನ್ನಪ್ಪ ರೆಡ್ಡಿ ಕಮೀಷನ್ ರಿಪೋರ್ಟ್ ಕೊಟ್ಟು 3 ವರ್ಷ ಆಯಿತು. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ, ಆ ರಿಪೋರ್ಟ್ ಬಂದ ನಂತರ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದರು. ಬಂಗಾರಪ್ಪನವರು ಎರಡು ಗೌರ್ನರ್ ಅಡ್ರಸ್‌ನಲ್ಲಿ ಇಮ್ಮಿಡಿಯೆಟ್ ಆಗಿ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿದರು. ಮಾನ್ಯ ವೀರಪ್ಪಮೊಯಿಲಿಯವರೂ ಹೇಳಿದ್ದಾರೆ. ಆದರ ಬಗ್ಗೆ ನಿಮಗೆ ಚಿಂತನೆ ಇಲ್ಲ. ಯಾವ ರಿಪೋರ್ಟ್ ನಿಮ್ಮ ಕೈಯಲ್ಲಿ ಇದೆ, ನಿಮಗೆ ಅಧಿಕಾರ ಬಂದು ಮೂರುವರೆ ವರ್ಷವಾಯಿತು. ರಿಪೋರ್ಟ್ ಬಂದು 3 ವರ್ಷವಾಯಿತು, ಆ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡುವುದರಲ್ಲಿ ನಿಮಗೆ ಯಾವ ಚಿಂತನೆಯೂ ಇಲ್ಲ. ಆದರಿಂದ ಒಂದು ಸ್ಪಷ್ಟನೆಯಾಗುತ್ತದೆ; ಹಿಂದುಳಿದ ಜನಾಂಗದ ಬಗ್ಗೆ ನಿಮಗೆ ಏನೂ ಚಿಂತನೆ ಇಲ್ಲ. ಯಾವ ಕಾಳಜಿಯೂ ಇಲ್ಲ; ಯಾವ ಮಮತೆಯೂ ಇಲ್ಲ ಅಥವಾ ಅವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಸುಧಾರಿಸಬೇಕು ಎನ್ನುವ ಚಿಂತನೆಯೂ ಇಲ್ಲ. ತಾವು ಕೇವಲ ಪೊಲಿಟಿಕಲ್ ಸ್ಟಂಟ್ ಮಾಡುತ್ತಿದ್ದೀರಿ. ಇದು ತಪ್ಪು ಎಂದು ನಾನು ಹೇಳುತ್ತೇನೆ. ಹಾಗೆ ನಿಮಗೆ ನಿಜವಾಗಿ ಕಮಿಟ್‌ಮೆಂಟ್ ಇದ್ದರೆ ಜಸ್ಟೀಸ್ ರೆಡ್ಡಿ ಕಮೀಷನ್ ರಿಪೋರ್ಟ್ ಇಂಪ್ಲಿಮೆಂಟ್ ಮಾಡಿ ಮತ್ತು ಇವತ್ತು ಏನು Breach of privilege and breach of propriey ಮಾಡಿದ್ದೀರಿ ಆದರ ಬಗ್ಗೆ ಸರ್ಕಾರಕ್ಕೆ ತಾವು ಸಹ ತರಾಟೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ ಮತ್ತು ಅಲಾಯಿದ ನಾವು breach of privilege ಸಹ move ಮಾಡುತ್ತಾ ಇದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ ಆದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವ ಪ್ರಶ್ನೆಯಲ್ಲ ಎಂದು ಹೇಳುತ್ತೇನೆ. ಈ ಸಭೆ ನಡೆಯುವಾಗ ಹಿಂದುಳಿದ ವರ್ಗಗಳ ಆಯೋಗ ರಚನೆ ಮಾಡುತ್ತೇವೆ ಎಂಬ ಹೇಳಿಕೆಯನ್ನು

ಸದನದ ಹೊರಗಡೆ ಕೊಟ್ಟಿದ್ದಾರೆ. ಹಿಂದುಳಿದ ವರ್ಗಗಳ ಆಯೋಗ ರಚನೆ ಮಾಡುವುದನ್ನೂ ನಾವೆಲ್ಲರೂ ಸ್ವಾಗತ ಮಾಡುತ್ತೇವೆ. ಅದು ಈ ಸದನದಲ್ಲಿ ಚರ್ಚೆಗೆ ಬಂದಿದ್ದರೆ ಇನ್ನೂ ಹೆಚ್ಚಿನ ಮಹತ್ತರವಾದ ಸಲಹೆಗಳನ್ನು ನಾವು ಕೊಡತಕ್ಕ ಒಂದು ಅನುಕೂಲ ವಾತಾವರಣವನ್ನು ಸರ್ಕಾರಕ್ಕೆ ನಿರ್ಮಾಣ ಮಾಡಬಹುದಾಗಿತ್ತು. ಏಕಾಏಕಿ ಇಂತಹವರನ್ನು ಸದಸ್ಯರನ್ನಾಗಿ ನೇಮಕ ಮಾಡಿದ್ದೇವೆ ಎಂದು ಹೊರಗಡೆ ಯಾವುದೋ ಈ ಸಭೆಯಲ್ಲಿ ಹೇಳಿಕೆಯನ್ನು ಕೊಡುವುದಾದರೆ ಈ ಸದನಕ್ಕೆ ಅಗೌರವ ತೋರಿಸಿದಂತಾಗುತ್ತದೆ. ಈ ಸದನಕ್ಕೆ ಬಹಳ ಮಹತ್ತರವಾದ ಹಕ್ಕುಗಳಿವೆ. ಆ ಹಕ್ಕುಗಳನ್ನು ಗಾಳಿಗೆ ತೂರಿದ್ದಾರೆ. ಸದನದ ಗೌರವವನ್ನು ಗಾಳಿಗೆ ತೂರಿದ್ದಾರೆ. ಈ ಎಲ್ಲವನ್ನೂ ಗಾಳಿಗೆ ತೂರಿ ಹಿಂದುಳಿದ ವರ್ಗದ ಆಯೋಗವನ್ನು ರಚನೆ ಮಾಡಿದ್ದೇವೆ ಎಂದು ಹೊರಗಡೆ ಹೇಳಿಕೆ ನೀಡಿರುವುದು ನಿಜವಾಗಿಯೂ ಬಹಳ ಗುರುತರವಾದ ಮತ್ತು ಗಂಭೀರವಾಧ ಪ್ರಶ್ನೆ. ಆದ್ದರಿಂದ ಇದನ್ನು ಹಕ್ಕುಚ್ಯುತಿ ಸಮಿತಿಗೆ ತಾವೇ ನೇರವಾಗಿ ಕಳುಹಿಸಬಹುದು ಎಂದು ತಮ್ಮನ್ನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದು ಮುಖ್ಯಮಂತ್ರಿಗಳು ಮಾಡಿರತಕ್ಕ ಅಪರಾಧ ಎಂದು ನಾನು ಹೇಳುತ್ತಿದ್ದೇನೆ. ಮುಖ್ಯಮಂತ್ರಿಗಳು ಈ ಸದನಕ್ಕೆ ಅಗೌರವ ತೋರಿಸಿದ್ದಾರೆ ಎಂದು ಹೇಳುತ್ತಿದ್ದೇನೆ. ಆದುದರಿಂದ ಮಾನ್ಯ ಅಧ್ಯಕ್ಷರು ತಾವೇ ನೇರವಾಗಿ ಮುಖ್ಯಮಂತ್ರಿಗಳ ಮೇಲೆ ಹಕ್ಕುಚ್ಯುತಿಯನ್ನು ತರಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ನಾನು ಸರ್ಕಾರಕ್ಕೆ ಹೇಳಿದ್ದೇನೆ. ಇಂತಹ ಹೇಳಿಕೆಗಳನ್ನು ಹೊರಗಡೆ ಕೊಡುವುದಕ್ಕಿಂತ ಸದನ ನಡೆಯುವ ಸಮಯದಲ್ಲಿ ಸದನದಲ್ಲಿ ಮಾಡಬೇಕೆಂದು ಈಗಾಗಲೇ ಅವರ ಗಮನಕ್ಕೆ ತಂದಿದ್ದೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಇದರ ಬಗ್ಗೆ ಸರ್ಕಾರ ಏನು ಹೇಳುತ್ತದೆ ?

ಶ್ರೀ ವಾಟಾಳ್ ನಾಗರಾಜ್:- ಸರ್ಕಾರದ ನೀತಿ ಇದರ ಬಗ್ಗೆ ಏನು ಎಂಬುದನ್ನು ಸರ್ಕಾರ ತಿಳಿಸಬೇಕು. ಸದನ ನಡೆಯತಕ್ಕ ಕಾಲದಲ್ಲಿ ಹೊರಗಡೆ ಹೇಳಿಕೆ ಕೊಡುವುದು ಸರಿಯೋ ತಪ್ಪೋ ಎಂಬುದನ್ನು ಸರ್ಕಾರದವರು ಹೇಳಲಿ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ ಸರಿಯೋ, ತಪ್ಪೋ ಎಂಬ ಬಗ್ಗೆ ಹೇಳಿಕೆ ಕೊಡಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ನನ್ನ ತಿಳಿವಳಿಕೆ ಪ್ರಕಾರ ಇದು ಪಾಲಿಸಿ ಡಿಸಿಷನ್ ಅಲ್ಲ, ಏತಕ್ಕೆಂದರೆ, ಸುಪ್ರೀಮ್ ಕೋರ್ಟ್‌ನ ತೀರ್ಮಾನದಲ್ಲಿ ಇದನ್ನು ಮಾಡಲೇಬೇಕು ಎಂದು ಇದೆ. ಕಮೀಷನ್ ಮಾಡಬೇಕೆಂದು ತೀರ್ಮಾನ ಆಗಿದೆ. ಅದನ್ನು ಆಚರಣೆಗೆ ತರುವುದು ಮಾತ್ರ ಇತ್ತು. ಒಂದು ಪಕ್ಷ ಈ ಶಾಸನ ಸಭೆಯಲ್ಲಿ ಈ ಕಮೀಷನ್ ಮಾಡುವುದು ಬೇಡ ಎಂದರೂ ಸಹ ಸುಪ್ರೀಮ್ ಕೋರ್ಟ್ ತೀರ್ಮಾನದ ಪ್ರಕಾರ ಇದನ್ನು ಮಾಡಲೇಬೇಕು. ಆದುದರಿಂದ ಈ ಆಯೋಗ ರಚನೆ ಮಾಡಬೇಕೇ, ಬೇಡವೇ ಎನ್ನುವ ಪ್ರಶ್ನೆ ಒಂದು ದೊಡ್ಡ ಪಾಲಿಸಿ ಡಿಸಿಷನ್ ಆಗಿರುವುದಿಲ್ಲ. ಆದರೂ ಈ ಸಭೆಯ ಮುಂದೆ ಅನೌನ್ಸ್ ಮಾಡಬೇಕಾಗಿತ್ತು ಎಂದು ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲ ನಾಯಕರೂ ಹೇಳುತ್ತಿರುವ ವಾದದಲ್ಲಿ ಪುಷ್ಟಿ ಇದೆ. ಏತಕ್ಕೆಂದರೆ, ಎಲ್ಲ ವಿಷಯದಲ್ಲೂ, ಎಲ್ಲಾ ಆಡಳಿತ ವಿಷಯದಲ್ಲೂ ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. We have to take the house into confidence. ಯಾವ ಸಂದರ್ಭದಲ್ಲಿ ಆ ಮಾತನ್ನು ಹೇಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನೇಮಕ ಮಾಡಿದ್ದಾರೆ ಇಲ್ಲವೋ ಗೊತ್ತಿಲ್ಲ. ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಆದರೆ ಮೆಂಬರುಗಳ ಹೆಸರುಗಳು ಯಾವುದರಲ್ಲಿ ಇಲ್ಲ. ಆದುದರಿಂದ ಅವರು ಬಂದು ತಿಳಿಸುತ್ತಾರೆ. ಅಲ್ಲಿಯವರೆಗೆ ದಯವಿಟ್ಟು ಕಾಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ:- ಮಾನ್ಯ ಅಧ್ಯಕ್ಷರೇ, ಹೋದ ಗುರುವಾರ ಮಾನ್ಯ ಉಪ

ಮುಖ್ಯಮಂತ್ರಿಯವರು ನಮ್ಮ ಕೋಲಾರ ಜಿಲ್ಲೆಯ ಎಲ್ಲಾ ಶಾಸಕರನ್ನು ಕರೆದು ನಮ್ಮ ಕಷ್ಟಗಳನ್ನು ವಿಚಾರಿಸಿದರು. ನಮಗೆ ಇರತಕ್ಕ ಕಷ್ಟ ಏನೆಂದರೆ ಪವರ್ ಪ್ರಾಬ್ಲಂ. ನಮ್ಮ ಜಿಲ್ಲೆಯಲ್ಲಿ ಸುಮಾರಾಗಿ ಒಂದು ಲಕ್ಷ ಪಂಪುಸೆಟ್ಟುಗಳು ಇರುವುದರಿಂದ ನೀರನ್ನು 300-400 ಅಡಿಯಿಂದ ಎತ್ತಬೇಕು. ಸರಿಯಾದ ವೋಲ್ಟೇಜ್ ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಪ್ರತಿಯೊಂದು ತಾಲ್ಲೂಕಿನ ಬಗ್ಗೆ ಡಿಟೇಲಾಗಿ, ಇನ್‌ಡಿವಿಜ್ಯೂವಲ್‌ಆಗಿ ಸುಮಾರು ಮೂರು ಗಂಟೆಗಳ ಕಾಲ ನಮ್ಮ ಜಿಲ್ಲೆಯ ಶಾಸಕರುಗಳನ್ನು ಕರೆದು ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ವೋಲ್ಟೇಜ್ ಇದೆ ಎಂಬುದನ್ನೆಲ್ಲಾ ಉಪಮುಖ್ಯಮಂತ್ರಿಯವರು ವಿಚಾರಿಸಿದರು, ಬಹಳ ಸಂತೋಷ. ಅವತ್ತೇ ಬಿಗ್ ಇಂಡಸ್ಟ್ರಿಯಲಿಸ್ಟ್‌ಗಳಿಗೆ ಶೇಕಡಾ 25ರಷ್ಟು ಪವರ್ ಕಟ್ ಹಿಂದಿನಿಂದಲೇ ಜಾರಿಗೆ ಬರುತ್ತದೆ ಎಂದು ಉಪಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟಿದ್ದಾರೆ, ಸಂತೋಷ. ಇದರಿಂದ ನಮಗೆ ಇನ್ನೂ ಹೆಚ್ಚು ಸಂತೋಷವಾಯಿತು. ನಾನು ನಮ್ಮ ತಾಲ್ಲೂಕಿನಲ್ಲಿ ಮೂರು ದಿವಸಗಳಿಂದ ಇದ್ದಾಗ ಸ್ವಲ್ಪ ಹೆಚ್ಚೂ ಕಡಿಮೆ ಆಲೂಗಡ್ಡೆ ಒಣಗಿ ಹೋಗಿರುವುದು ಹಾಗೂ ರೇಷ್ಮೆ ಹಾಳಾಗಿರುವುದು ನೋಡಿದೆ. ವೋಲ್ಟೇಜ್ ಕಡಿಮೆಯಾದರೆ ಬೋರ್‌ವೆಲ್ ಮೂರುನೂರು, ನಾಲ್ಕುನೂರು ಅಡಿಗಳಿಂದ ನೀರನ್ನು ಎತ್ತುವುದಿಲ್ಲ. ಎರಡನೆಯದಾಗಿ ಮುಳಬಾಗಿಲು ಟೌನ್‌ಗೆ ಡ್ರಿಂಕಿಂಗ್ ವಾಟರ್‌ಗೆ ವೋಲ್ಟೇಜ್ ಸರಿಯಾಗಿಲ್ಲದೆ ನೀರನ್ನು ಎತ್ತುವುದಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತಿದೆ ಈಗ ಶೇಕಡಾ 25ರಷ್ಟು ಪವರ್ ಕಟ್ ದೊಡ್ಡ ಕೈಗಾರಿಕಾ ಉದ್ಯಮಿಗಳಿಗೆ ಏನು ವಿಧಿಸಿದೆ ಅದನ್ನು ಅಧಿಕಾರಿಗಳು ಪುನಃ ಅವರಿಗೆ ಏನಾದರೂ ರೆಸ್ಟೋರ್ ಮಾಡಿದ್ದಾರೆಯೇ ಎಂಬ ಅನುಮಾನ ನಮಗೆ ಬರುತ್ತಿದೆ. ಏತಕ್ಕೆಂದರೆ ಮೂರು ದಿವಸಗಳಿಂದ ನಮಗೆ ವೋಲ್ಟೇಜ್ ಇಲ್ಲ. ನಮ್ಮ ಮುಳಬಾಗಿಲ ವಿಷಯ ನಾನು ಹೇಳುತ್ತಿದ್ದೇನೆ. ಅಲ್ಲಿ ವೋಲ್ಟೇಜ್ ಒಂದು ಚೂರು ಇಂಪ್ರೂವ್ ಆಗಿಲ್ಲ. ಈ ರೀತಿಯಾಗಿ ಶೇಕಡ 25ರಷ್ಟು ಕಟ್ ಮಾಡಿ ಅದನ್ನು ನಮ್ಮ ಜಿಲ್ಲೆಗೆ ಡೈವರ್ಟ್ ಮಾಡಿದ್ದರೆ ನಮಗೆ ಸರಿಯಾದ ವೋಲ್ಟೇಜಿನಲ್ಲಿ ವಿದ್ಯುತ್ ದೊರಕುತ್ತಿತ್ತು. ಈಗ ಏನೂ ಇಂಪ್ರೂವ್‌ಮೆಂಟ್ ಆಗಿಲ್ಲ. ಆದ್ದರಿಂದ ತಾವು ಈ ದಿನ ಸಂಜೆಯೊಳಗೆ ವೆರಿಫೈ ಮಾಡಿಸಿ ನಮ್ಮ ಜಿಲ್ಲೆಗೆ ಪವರ್ ಸಪ್ಲೈ ಇಂಪ್ರೂವ್ ಮಾಡಿದರೆ ರೈತರೆಲ್ಲ ಬದುಕುತ್ತಾರೆ.

ಶ್ರೀ ಸಿ. ಭೈರೇಗೌಡ:- ಅದೇ ವಿಚಾರದಲ್ಲಿ ....

ಅಧ್ಯಕ್ಷರು:- ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ, ಈ ವಿಷಯದ ಬಗ್ಗೆ ಸಾಕಷ್ಟು ಎಲ್ಲಾ ಮಾನ್ಯ ಸದಸ್ಯರುಗಳು ಅವೊತ್ತು ಹೇಳಿದ್ದಾರೆ. ಉಪ ಮುಖ್ಯಮಂತ್ರಿಗಳು ನಿಮ್ಮನ್ನೆಲ್ಲಾ ಕರೆದು ಮಾತುಕತೆ ನಡೆಸಿದ್ದಾರೆ. ಆದ್ದರಿಂದ ಪುನಃ ಪುನಃ ಈ ವಿಷಯದ ಬಗ್ಗೆ ಪ್ರಸ್ತಾಪ ಬೇಡ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಸರ್ಕಾರ ಬಹು ಪ್ರಯತ್ನ ಮಾಡಿದೆ, ಸರ್ಕಾರ ಏನು ಪ್ರಯತ್ನಿಸಿಲ್ಲ ಎಂದು ನಾನು ಹೇಳತಕ್ಕವನಲ್ಲ. ಮಂಡಲಿಯಿಂದಲೂ ಸಹ ಸರಿಪಡಿಸುವ ಪ್ರಯತ್ನ ನಡೆದಿದೆ. ಆದರೂ ಕೂಡ ನಾವು ಇಂದು ನಮ್ಮ ಕ್ಷೇತ್ರಗಳಲ್ಲಿ ನಗೆಪಾಟಲೀಗೀಡಾಗಿದ್ದೇವೆ. ಮೊನ್ನೆ ನನ್ನ ಕ್ಷೇತ್ರದಲ್ಲಿ ಎಲ್ಲ ಕಡೆ ಹೋಗಿಬಂದಿದ್ದೇನೆ. ಜನ ನಮ್ಮನ್ನು ನೋಡಿ ನಗುತ್ತಾರೆ. ಏನಪ್ಪ ನೀವು ಇಷ್ಟೆಲ್ಲ ಪ್ರಯತ್ನ ಮಾಡಿದರೂ ಮೊದಲಿಗಿಂತ ಈಗ ಕಡಿಮೆ ಪವರ್ ಸಿಗುತ್ತಾ ಇದೆ. ಏನಾಗಿದೆ ಇದಕ್ಕೆ ಎಂದು ಕೇಳುತ್ತಿದ್ದಾರೆ. ಆದ್ದರಿಂದ ಉಪ ಮುಖ್ಯಮಂತ್ರಿಗಳು ತೆಗೆದುಕೊಂಡಿರುವ ಕ್ರಮಗಳ ಉಪಯೋಗ ಜನರಿಗೆ ಇನ್ನೂ ಮುಟ್ಟಿಲ್ಲ, ಎಲ್ಲೋ ಲೋಪವಾಗಿದೆ. ಇದನ್ನು ದಯವಿಟ್ಟು ಸರಿಪಡಿಸುವ ಪ್ರಯತ್ನ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಮಾನ್ಯ ವೆಂಕಟಪ್ಪನವರು ಮತ್ತು ಭೈರೇಗೌಡರು ಪ್ರಸ್ತಾಪ ಮಾಡಿರುವ ವಿಚಾರಗಳು ಬಹಳ ಗಂಭೀರವಾದುವು. ಆ ಭಾಗದ

ರೈತರಿಗೆ ಬಹಳ ಸಮಸ್ಯಾತ್ಮಕ ವಾತಾವರಣವನ್ನು ಸೃಷ್ಟಿ ಮಾಡಿವೆ. 20 ದೊಡ್ಡ ಕೈಗಾರಿಕೆಗಳಿಗೆ 40 ರಿಂದ 60 ಪರ್ಸೆಂಟ್ ವಿದ್ಯುತ್ ಖೋತ ಹೆಚ್ಚು ಮಾಡಿರುವುದನ್ನು ಅವತ್ತಿನಿಂದಲೇ ಜಾರಿಗೆ ತಂದಿದ್ದೇವೆ. ಆದರಿಂದಾಗಿ ಕೊಂಚ ಮಟ್ಟಿಗಾದರೂ ಪರಿಸ್ಥಿತಿ ಸುಧಾರಣೆಯಾಗುತ್ತದೆಂಬ ಆಶಾಭಾವನೆ ನಮ್ಮಲ್ಲಿತ್ತು. ಆದರೆ ಮಾನ್ಯ ಸದಸ್ಯರು ಕೊಟ್ಟಿರುವ ಮಾಹಿತಿ ಆಧಾರದ ಮೇಲೆ ಮತ್ತೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಸಾಯಂಕಾಲದೊಳಗೆ ಸದನಕ್ಕೆ ನನ್ನ ಅಭಿಪ್ರಾಯಗಳನ್ನು ತಿಳಿಸುತ್ತೇನೆ.

ನಿಯಮ 334ರ ಮೇರೆಗೆ

1. ಬೆಂಗಳೂರು ನಗರದ ರಸ್ತೆಗಳ ದುರಸ್ತಿ

ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):– ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರಗ ಒಂದೆರಡು ರಸ್ತೆಗಳನ್ನು ಬಿಟ್ಟರೆ ಉಳಿದ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಾಗಿರುವುದಿಲ್ಲ. ಸಾಮಾನ್ಯವಾಗಿ ಮಳೆಗಾಲ ಕಳೆದ ನಂತರ ನವೆಂಬರ್ ಮಾಹೆಯಲ್ಲಿ ಕೆಲಸ ಪ್ರಾರಂಭವಾಗಿ ಫೆಬ್ರವರಿಯೊಳಗಾಗಿ ರಸ್ತೆ ರಿಪೇರಿ ಕೆಲಸ ಮುಗಿಯುತ್ತಿತ್ತು. ಈ ಬಾರಿ ಯಾರೂ ಈ ಕಡೆ ಗಮನ ಹರಿಸಿರುವುದಿಲ್ಲ. ಕೆಲವು ರಸ್ತೆಗಳಲ್ಲಿ ಹಳ್ಳಗಳಿದ್ದು ರಾತ್ರಿ ಕಾಲದಲ್ಲಿ ವಾಹನ ಸಂಚಾರಕ್ಕೆ ಬಹಳ ಕಷ್ಟವಾಗುತ್ತಿದೆ. ಸಾಲದಕ್ಕೆ ಕೆಲವು ಕಡೆ ರಸ್ತೆ ದೀಪಗಳೂ ಇಲ್ಲದೇ ಇರುವ ಕಾರಣ ಮತ್ತಷ್ಟು ತೊಂದರೆಯಾಗುತ್ತಿದೆ. ಈ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರು ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ, ಮಾಹಿತಿ ಬರುವುದು ಸ್ವಲ್ಪ ಲೇಟಾಗಿದೆ ದಯವಿಟ್ಟು ಟೈಮ್ ಕೊಡಬೇಕು.

2. ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ ಮತ್ತು ಸೋಮವಾರ ಪೇಟೆಗಳಲ್ಲಿ ಮನೆ ನಿವೇಶನಗಳ ಹಂಚಿಕೆ

ಶ್ರೀಮತಿ ಸುಮಾ ವಸಂತ್(ವಿರಾಜ ಪೇಟೆ):– ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ಮಡಿಕೇರಿ, ವೀರಾಜಪೇಟೆ ಮತ್ತು ಸೋಮವಾರಪೇಟೆಗಳಲ್ಲಿ ಮನೆ ನಿವೇಶನಗಳನ್ನು ಹಂಚುವ ಬಗ್ಗೆ ಆಯಾ ಸ್ಥಳಗಳಲ್ಲಿ ನಿವೇಶನ ಮಂಜೂರು ಮಾಡದಂತೆ ಹಾಗೂ ಮಂಜೂರಾತಿಗೆ ಸರ್ಕಾರಕ್ಕೆ ಕಳುಹಿಸಬೇಕೆಂದೂ ಸರ್ಕಾರ ಅಧಿಸೂಚನೆ ನೀಡಿರುವುದಾಗಿ ತಿಳಿದುಬಂದಿದೆ. ನಿವೇಶನ ಮಂಜೂರಾತಿಗೆ ಸಂಬಂಧಪಟ್ಟ ಎಲ್ಲ ಅರ್ಜಿಗಳು ಜಿಲ್ಲಾಧಿಕಾರಿಗಳಲ್ಲಿ ಉಳಿದಿದೆ. ನಿವೇಶನಕ್ಕಾಗಿ ಕೊಡುವ ಮೂರುಮುಕ್ಕಾಲು ಸೆಂಟು ಜಾಗವನ್ನು ಸರ್ಕಾರವೇ ಮಂಜೂರು ಮಾಡುವುದನ್ನು ಬಿಟ್ಟುಕೊಟ್ಟಲ್ಲಿ ಬಡಜನರಿಗೆ ಅನುಕೂಲವಾಗುವಂಥ ತೀರ್ಮಾನ ತೆಗೆದುಕೊಂಡ ಬಗ್ಗೆ ಸದನಕ್ಕೆ ಹೇಳಿಕೆ ಕೊಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆ ನೀಡುತ್ತಿದ್ದೇನೆ. ರಾಜ್ಯ ಸರ್ಕಾರವು ವೈಯಕ್ತಿಕವಾಗಿ ಹಾಗೂ ಖಾಸಗಿ ಸಂಸ್ಥೆಗಳಿಗಾಗಿ ಸರ್ಕಾರ ಜಮೀನನ್ನು ಮಂಜೂರು ಮಾಡುವ ಮೊದಲು ಸರ್ಕಾರದ ಮಂಜೂರಾತಿಯನ್ನು ಪಡೆಯಲು ಸಂಬಂಧಿಸಿದ ಅಧಿಕಾರಿಗಳಿಗೆ ಆದೇಶಿಸಲಾಗಿದೆ. ಸದರಿ ಪೂರ್ವಭಾವಿ ಷರತ್ತನ್ನು 1989ರಿಂದ ವಿಧಿಸಲಾಗಿದೆ. ಏಕೆಂದರೆ, ಮಂಜೂರಾತಿ ಮಾಡುವ ಅಧಿಕಾರಿಗಳು ಯಥೇಚ್ಛವಾಗಿ ಜಮೀನನ್ನು ಮಂಜೂರು ಮಾಡುತ್ತಿದ್ದರು. ಸರ್ಕಾರಿ ಜಮೀನಿನಲ್ಲಿ ನಿವೇಶನಗಳನ್ನು ವಿತರಣೆ ಮಾಡುವ ವಿಚಾರದಲ್ಲಿಯೂ, ಜಿಲ್ಲಾಧಿಕಾರಿಗಳು

ನಿವೇಶನಗಳನ್ನು ಮಂಜೂರು ಮಾಡುವ ಮೊದಲು ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕೆಂದು ಸೂಚಿಸಿರುತ್ತದೆ. ಆದರೂ ಕೂಡ ಆಶ್ರಯ ಯೋಜನೆಯಲ್ಲಿ ನಿವೇಶನಗಳನ್ನು ವಿತರಣೆ ಮಾಡುವ ವಿಷಯದಲ್ಲಿ ಅವಶ್ಯವಿದ್ದಲ್ಲಿ ಗೋಮಾಳ ಜಮೀನನ್ನು ಉಪಯೋಗಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಪ್ರಾಧಿಕಾರ ನೀಡಿರುತ್ತದೆ. ಆದರೆ ನಗರ ಪ್ರದೇಶಗಳಲ್ಲಿ ನಿವೇಶನಗಳನ್ನು ಹಂಚಬೇಕಾದರೆ, ಭೂ ಮಂಜೂರಾತಿ ನಿಯಮಗಳ ಅನುಸಾರವಾಗಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯುವುದು ಅವಶ್ಯವಾಗಿದೆ.

3. ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ಗೊರೂರು ಹತ್ತಿರ ಹೇಮಾವತಿ ನದಿಗೆ ಡ್ಯಾಂ ಕಟ್ಟಿಸುವುದರಿಂದ ಹಾಸನ ತಾಲ್ಲೂಕಿನ ಫಲವತ್ತಾದ ಜಮೀನು ಮುಳುಗಡೆಯಾಗಿರುವುದು.

ಶ್ರೀ ಕೆ.ಹೆಚ್. ಹನುಮೇಗೌಡ(ಹಾಸನ):- ಮಾನ್ಯ ಅಧ್ಯಕ್ಷರೇ, ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ, ಗೊರೂರು ಹತ್ತಿರ ಹೇಮಾವತಿ ನದಿಗೆ ಡ್ಯಾಂ ಕಟ್ಟಿದ್ದು ಇದರಿಂದ ಹಾಸನ ತಾಲ್ಲೂಕಿನ ಫಲವತ್ತಾದ ಅಡಿಕೆ, ತೆಂಗು ಬೆಳೆಯುತ್ತಿದ್ದ ಬಾಗಾಯ್ತು ಮತ್ತು ತರಿ ಜಮೀನು ಮುಳುಗಡೆಯಾಗಿದೆ. ಡ್ಯಾಂನಿಂದ ಮುಳುಗಡೆಯಾದ ರೈತರು ಗೊರೂರಿನ ಅಕ್ಕಪಕ್ಕ ಖುಷ್ಕಿ ಜಮೀನನ್ನು ಪಡೆದು ವ್ಯವಸಾಯ ಮಾಡುತ್ತಿರುತ್ತಾರೆ. ಈ ರೀತಿ ಮುಳುಗಡೆಯಾದ ರೈತರ ಜಮೀನಿಗೆ ನೀರು ಒದಗಿಸಲು ಮತ್ತು ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶಕ್ಕೆ ಶಾಶ್ವತ ಪರಿಹಾರ ಕ್ರಮವಾಗಿ ಆಂಜನೇಯಪುರದ ಹತ್ತಿರ ಒಂದು ಏತ ನೀರಾವರಿ ಯೋಜನೆಯನ್ನು ಸರ್ಕಾರ ಈಗ್ಗೆ ಎರಡು ವರ್ಷಗಳ ಹಿಂದೆ ಮಂಜೂರು ಮಾಡಿತು. ಈ ಏತ ನೀರಾವರಿ ಯೋಜನೆಯು ಕಾರ್ಯಗತವಾಗಲು ಟೆಕ್ನಿಕಲ್ ಬೋರ್ಡ್‌ನಲ್ಲಿ ಮಂಜೂರಾಗಿದೆ ಮತ್ತು ಆಡಳಿತಾತ್ಮಕ ಮಂಜೂರಾತಿ ಕೂಡ ಆಗಿದೆ. ಈಗ್ಗೆ ಒಂದು ವರ್ಷದ ಹಿಂದೆ ಟರ್ನ್ ಕೀ ಬೇಸಿಸ್‌ನಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಲು ಟೆಂಡರನ್ನು ಸಹ ಕರೆದಿದ್ದು ಆರು ತಿಂಗಳ ಮೇಲಾಗಿದೆ. ಈ ಟೆಂಡರಿಗೆ ಸರ್ಕಾರ ಮಂಜೂರಾತಿ ನೀಡಿಲ್ಲವೆಂದು ತಿಳಿಯಿತು. ಈ ಏತ ನೀರಾವರಿ ಯೋಜನೆಯನ್ನು 1979ನೇ ಇಸವಿಯಲ್ಲಿ ಕಾರ್ಯಗತ ಮಾಡಲು ಅಂದಾಜು ವೆಚ್ಚ ತಯಾರಾಗಿದ್ದು ಅದರ ಅಂದಾಜು ವೆಚ್ಚ ಆಗ ಸುಮಾರು 2 ಕೋಟಿ ರೂಪಾಯಿ ಇದ್ದು, ಈಗ ಇದೇ ಕೆಲಸ 14 ವರ್ಷಗಳ ನಂತರ ಸುಮಾರು 10 ಕೋಟಿ ರೂಪಾಯಿಗಳು ಆಗಲಿದೆ. ಈ ಕೆಲಸವನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡದಿದ್ದರೆ ಈ ಯೋಜನೆಯ ವೆಚ್ಚ ವರ್ಷವೊಂದಕ್ಕೆ 15ರಿಂದ 20ರಷ್ಟು (ಶೇಕಡ) ಜಾಸ್ತಿ ಆಗುವುದಲ್ಲದೆ ಈ ಯೋಜನೆಯಿಂದ ಉಪಯೋಗ ಪಡೆಯುವ ರೈತರ ಆರ್ಥಿಕ ಸ್ಥಿತಿಯು ಸುಧಾರಿಸದೇ ದುಸ್ಥಿತಿಗೆ ಒಳಪಡಿಸಿದಂತಾಗಿದೆ. ಈ ಕಾರಣಗಿಂದ ಆಂಜನೇಯಪುರದ ಏತ ನೀರಾವರಿ ಯೋಜನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಆಂಜನೇಯಪುರ ಏತ ನೀರಾವರಿ ಯೋಜನೆ ಮುಖ್ಯವಾಗಿ ಹೇಮಾವತಿ ಜಲಾಶಯದಲ್ಲಿ ಮುಳುಗಡೆಯಾದ ಹಳ್ಳಿಗಳಲ್ಲಿನ ಜನರಿಗೆ ಪುನರ್‌ವಸತಿ ಕಲ್ಪಿಸಿರುವ ಜಮೀನುಗಳಿಗೆ ನೀರುಣಿಸುವ ಯೋಜನೆಯಾಗಿದೆ.

ಈ ಯೋಜನೆಯಿಂದ ಹೇಮಾವತಿ ಜಲಾಶಯಗಲ್ಲಿ ಜಮೀನುಗಳನ್ನು ಕಳೆದುಕೊಂಡ ಹಾಸನ ತಾಲ್ಲೂಕಿನ ಕಟ್ಟಾಯ ಹೋಬಳಿ 45 ಹಳ್ಳಿಗಳ ರೈತರಿಗೆ ಜಲಾಶಯದ ಮುಂದಂಡೆಯಿಂದ ನೀರನ್ನು

ಎತ್ತಿ ಏತ ನೀರಾವರಿ ಯೋಜನೆಯ ಮೂಲಕ 14,904 ಎಕರೆಗೆ ನೀರಾವರಿ ಕಲ್ಪಿಸುವ ಉದ್ದೇಶವಿದೆ. ಈ ಯೋಜನೆಗೆ 0.78 ಟಿಎಂಸಿ ನೀರಿನ ಅವಶ್ಯಕತೆಯಿದ್ದು ಇದರಡಿಯಲ್ಲಿ ಖಾರೀಫ್–ಅರೆ ನೀರಾವರಿ ಬೆಳೆಗಳನ್ನು ಬೆಳೆಯಲು ಉದ್ದೇಶಿಸಲಾಗಿದೆ.

ಮುಖ್ಯ ಇಂಜಿನಿಯರ್ ಹೇಮಾವತಿ ಜಲಾಶಯ ಯೋಜನೆ ಗೊರೂರು, ಅವರು ಈ ಏತ ನೀರಾವರಿ ಯೋಜನೆಗೆ 1990–91ರ ದರಪಟ್ಟಿಯ ಪ್ರಕಾರ ರೂ. 1005.00 ಲಕ್ಷಗಳಿಗೆ ಅಂದಾಜನ್ನು ಸಿದ್ಧಪಡಿಸಿ ಮೇ 1990ರ ಮಾಹೆಯಲ್ಲಿ ಸರ್ಕಾರಕ್ಕೆ ಕಳುಹಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ನೀಇ 66 ಎನ್‌ಎಚ್‌ಪಿ 90 ದಿನಾಂಕ 17–12–1991ರಂದು ಆಡಳಿತಾತ್ಮಕ ಮಂಜೂರಾತಿ ನೀಡಿತು.

ಈ ಯೋಜನೆಯನ್ನು ಕಾರ್ಯಗತಗೊಳಿಸಲು ಮೊದಲ ಹಂತವಾಗಿ ಆಗಮನ ಕಾಲುವೆ ಜಾಕ್‌ವೆಲ್, ರೈಸಿಂಗ್ ಮೈನ್, ವಿತರಣಾ ತೊಟ್ಟಿ ಮತ್ತು ಇದಕ್ಕೆ ಸಂಬಂಧಿಸಿದಂತೆ ಪಂಪು ಮತ್ತು ಮೋಟಾರುಗಳ ವಿನ್ಯಾಸ, ಜೋಡಣೆ ಮತ್ತು ಒಂದು ವರ್ಷ ನಿರ್ವಹಣೆ ಮಾಡಲು ಕೋಟೇಶನ್‌ಗಳನ್ನು ಟರ್ನ್ ಕೀ ಆಧಾರದಲ್ಲಿ ಮಾರ್ಚ್ 1992ರಲ್ಲಿ ಕರೆದಿದ್ದು ಅವುಗಳನ್ನು ಮುಖ್ಯ ಇಂಜಿನಿಯರ್‌ರವರು ಆಗಸ್ಟ್ 1992ರಲ್ಲಿ ಸರ್ಕಾರಕ್ಕೆ ಅನುಮೋದನೆಗಾಗಿ ಕೋರುತ್ತಾ ಕಳುಹಿಸಿ ಕೊಟ್ಟಿರುತ್ತಾರೆ. ಸರ್ಕಾರವು ಕೋಟೇಶನ್‌ಗಳನ್ನು ವಿವಿಧ ಹಂತಗಳಲ್ಲಿ ಪರಿಶೀಲಿಸಿ ಕೋಟೇಶನ್‌ನಲ್ಲಿ ಕೆಲವಾರು ನ್ಯೂನತೆಗಳು ಕಂಡುಬಂದಿದ್ದರಿಂದ ಈ ಕೆಲಸಕ್ಕೆ ಮತ್ತೊಮ್ಮೆ ಕೋಟೇಶನ್‌ಗಳನ್ನು ಕೂಡಲೆ ನಿಯಮಾನುಸಾರ ಕರೆಯುವಂತೆ ಮುಖ್ಯ ಇಂಜಿನೀಯರ್‌ರವರಿಗೆ ಈಗಾಗಲೇ ತಿಳಿಸಿದೆ.

ಈ ಯೋಜನೆಯಡಿಯಲ್ಲಿ ಎಡ ಮತ್ತು ಬಲದಂಡೆ ಕಾಲುವೆಗಳ ಸರ್ವೆ ಕೆಲಸ ನಡೆಯುತ್ತಿದ್ದು ಇದರ ಮಣ್ಣು ಅಗೆತದ ಕೆಲಸವನ್ನು ಶೀಘ್ರದಲ್ಲೇ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

4. 1990ನೇ ಇಸವಿಯ ಕೋಮುಗಲಭೆಗಳಲ್ಲಿ ಉಂಟಾದ ನಷ್ಟಕ್ಕೆ ಪರಿಹಾರ

SRI SADATH ALI KHAN (Channapatna):– Mr Speaker, will the Hon. Chief Minister be pleased to state:

a) whether it is a fact that the Hon. Chief Minister of Karnataka has given assurance on the floor of the Assembly to the following matters;

b) the cases which has been registered during the communal riots during 1990 all over the State to be withdrawn including Sec. 302 of IPC.

c) promise of Government appointments given to their kith and kin (Blood relation) to their family who lost their lives in the communal riots through out the State;

d) the comensation and interest–free loan of Rs.50,000/– to the sufferers who have lost their properties in the communal riots in the State;

e) if so, the reason for inordinate delay to provide Government appointments to their kith and kins which is pending since last three years;

f) the reasons for not releasing the compensation and interest free loan as per reassessment which is also pending since last 3 years;

g) what action has been taken by the Government to release the compensation of Rs. 50,000/- to missing person's family during the communal riots in the State; (three of them in Channapatna Taluk);

h) when all the above matters will be cleared; Definite time limit may be given

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ವಿವರಗಳನ್ನು ಕಲೆ ಹಾಕುತ್ತಿದ್ದೇನೆ. ಅದನ್ನು ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ.

ಪ್ರಕಟಣೆ

ಅಧ್ಯಕ್ಷರು:- ವಿಧಾನಸಭಾ ಸದಸ್ಯರಾದ ಶ್ರೀ ನಾರಾಯಣರಾವ್ ಮನಹಳ್ಳಿಯವರನ್ನು ದಿನಾಂಕ 21-2-1993ರಂದು 4.15 ಗಂಟೆಗೆ ಬೀದರ್ ಟೌನಿನ ಕೆ.ಇ.ಬಿ. ಕಾಲೋನಿಯಲ್ಲಿ ಸಿ.ಆರ್.ಪಿ.ಸಿ. ಕಾಯಿದೆಯ 144ನೇ ಕಲಮಿನ ಮೇರೆಗೆ ವಿಧಿಸಲಾಗಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ್ದರಿಂದ ಅವರನ್ನು ಬಂಧಿಸಿ ಭಾರತ ದಂಡ ಸಂಹಿತೆಯ 188ರ ಕಲಮಿನ ಮೇರೆಗೆ ಮೊಕದ್ದಮೆಯನ್ನು ದಾಖಲು ಮಾಡಿ ಪೋಲೀಸ್ ಕಸ್ಟಡಿಯಲ್ಲಿಡಲಾಗಿದೆಯೆಂದು ಬೀದರಿನ ಜಿಲ್ಲಾ ಪೋಲೀಸ್ ಅಧಿಕಾರಿಯವರಿಂದ ಸಂದೇಶ ಬಂದಿರುತ್ತದೆ. ಹಾಗೂ ವಿಧಾನ ಸಭಾ ಸದಸ್ಯರುಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಶ್ರೀ ರುಕ್ಮಯ್ಯ ಪೂಜಾರಿಯವರುಗಳನ್ನು ದಿನಾಂಕ 22-2-1993ರಂದು ಸಂಜೆ 6.15ಗಂಟೆಗೆ ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿ ಸಿ.ಆರ್.ಪಿ.ಸಿ.ಯ ಕಾಯಿದೆ 151 ಮತ್ತು 107ರ ಕಲಂಗಳ ಮೇರೆಗೆ ಬಂಧಿಸಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆಯೆಂದು ಸಬ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್, ಕೆಂಗೇರಿ ಗೇಟ್ ಪೋಲೀಸ್ ಠಾಣೆ, ಬೆಂಗಳೂರು ಸಿಟಿ ಇವರಿಂದ ಸಂದೇಶ ಬಂದಿರುತ್ತದೆ.

ಶ್ರೀ ಅಜೀಜ್ ಸೇಠ್:- ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಒಂದು ಸ್ಟೇಟ್‌ಮೆಂಟನ್ನು ಮಾಡಬೇಕು.

Mr. SPEAKER:- I am getting it examined.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆ

† ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ನಾನು ವಂದನಾಪೂರ್ವಕವಾದ ಬೆಂಬಲವನ್ನು ಸೂಚಿಸುತ್ತಾ, ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಪ್ರಪ್ರಥಮವಾಗಿ ಡಿಸೆಂಬರ್ 6ನೇ ತಾರೀಖಿನ ದಿನ ಮತ್ತು ತದ ನಂತರ ರಾಷ್ಟ್ರಾದ್ಯಂತ ಮತ್ತು ರಾಜ್ಯದಾದ್ಯಂತ ಏನು ಕೋಮು ಗಲಭೆಗಳು ನಡೆಯಿತು, ಅಂತಹ ಸಂದರ್ಭದಲ್ಲಿ ಪೋಲೀಸ್ ಇಲಾಖೆಯವರಿಂದ ಶಾಂತಿ ಸ್ಥಾಪನೆ ಮಾಡುವುದಕ್ಕೆ ಸಾಧ್ಯ ಆಯಿತು ಎನ್ನುವ ಮಾತನ್ನು ಹೇಳಿದ್ದಾರೆ. ಮತ್ತು ಅದೇ ಸಮಯದಲ್ಲಿ ನೊಂದವರಿಗೆಲ್ಲ ಸೂಕ್ತ ಪರಿಹಾರವನ್ನು ಕೂಡ ಕೊಟ್ಟಾಗಿದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಇದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಆದರೆ ಅದೇ ಸಮಯದಲ್ಲಿ, ಕೋಮು ಗಲಭೆಯನ್ನು ತಡೆಗಟ್ಟುವಂತಹುದರಲ್ಲಿ ಲಕ್ಷಾಂತರ ಸಾರ್ವಜನಿಕರು ಶಾಂತಿಪ್ರಿಯರಾಗಿ, ಜಾತ್ಯಾತೀತರಾಗಿ ಪೋಲೀಸರೊಂದಿಗೆ ಸಾಕಷ್ಟು ಸಹಕಾರವನ್ನು ಕೊಟ್ಟು ತಡೆ ಹಾಕಿದರು ಎನ್ನುವ ಮಾತನ್ನು ಹೇಳಿದ್ದರೆ ಬಹಳ ಚೆನ್ನಾಗಿತ್ತೆಂದು ನಾನು ಭಾವಿಸುತ್ತೇನೆ. ಏಕೆ ಶಾಂತಿ ಪ್ರಿಯ, ಜಾತ್ಯಾತೀತ ಶೇಕಡಾ 80 ಭಾಗ ಜನತೆಯ ಮೇಲೆ ಆ ವಿಶ್ವಾಸ, ಅಭಿಮಾನ

ತೋರಿಸಲಿಲ್ಲ. ಅವರನ್ನು ಅಭಿನಂದಿಸಲಿಲ್ಲ ಎನ್ನುವುದು ನನಗೆ ಆಶ್ಚರ್ಯ ಏನಿಸುತ್ತಿದೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಸ್ಮರಿಸಲೇಬೇಕಾಗುತ್ತದೆ. ಹಿಂದೆ ಸಾಕಷ್ಟು ಸರ್ಕಾರಗಳು ಮತ್ತು ಮಾನ್ಯ ವೀರೇಂದ್ರಪಾಟೀಲರ ಕಾಲದಲ್ಲಿಯೂ ಕೂಡ ಕೋಮು ಗಲಭೆಗಳು ಆಗುವುದಕ್ಕೆ ಅಲ್ಲಿನ ಜಿಲ್ಲೆಯ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಆಗಲಿ, ಡೆಪ್ಯುಟಿ ಕಮೀಷನರ್ ಆಗಿರಲಿ ಅವರನ್ನೂ ಜವಾಬ್ದಾರರನ್ನಾಗಿ ಮಾಡುತ್ತೇವೆಂದು ಜವಾಬ್ದಾರಿ ಹೊರಿಸುತ್ತೇವೆಂದು ಹೇಳಿದ್ದರು. ಮೊನ್ನೆ ನಡೆದ ಕೋಮು ಗಲಭೆಯಲ್ಲಿ ಇಂತಹ ಒಂದು ತೀವ್ರವಾದ ಘಟನೆ ಆಗಿದ್ದರೂ ಕೂಡ ಯಾವುದೇ ಒಂದು ಪೊಲೀಸ್ ಅಧಿಕಾರಿಯಾಗಲೀ ಅಥವಾ ಜಿಲ್ಲಾಧಿಕಾರಿ ಆಗಲಿ ಯಾವುದೇ ರೀತಿಯಾದ ಒಂದು ಜವಾಬ್ದಾರಿಯನ್ನು ಕೂಡ ಅವರ ಮೇಲೆ ಹೇರಲಿಲ್ಲ, ಅವರ ವಿಷಯವಾಗಿ ಯಾವುದೇ ಒಂದು ಕ್ರಮವನ್ನು ಕೂಡ ತೆಗೆದುಕೊಳ್ಳಲಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೆಯೇ ನಮ್ಮ ರಾಜ್ಯಮಟ್ಟದಲ್ಲಿ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟಿನವರು ಈ ಕೋಮು ಗಲಭೆ ಆಗುವುದಕ್ಕೆ ಮುಂಚಿತವಾಗಿ ಸಾಕಷ್ಟು ಮಾಹಿತಿಗಳನ್ನು ಪಡೆದು ಮುನ್ನೆಚ್ಚರಿಕೆಯಾಗಿ ಸರ್ಕಾರಕ್ಕೂ ಮತ್ತು ಪೋಲೀಸ್ ಇಲಾಖೆಯವರಿಗೆ ಕೊಡಬೇಕಾಗಿದ್ದು ಅತ್ಯಾವಶ್ಯಕ ಆಗಿತ್ತು.

ಈ ಕೆಲಸದಲ್ಲಿ ಬಹಳ ವಿಫಲರಾಗಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬಯಸುತ್ತೇನೆ. ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಈ ಸದನಕ್ಕೆ ತಿಳಿಸಬೇಕೆಂದು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಒಂದು ಸ್ಪೆಷಲ್ ಆಕ್ಷನ್ ಫೋರ್ಸ್ ಏರ್ಪಾಡು ಮಾಡುತ್ತೇವೆಂದು ಹೇಳಿದ್ದಾರೆ. ಇಂತಹ ಗಲಭೆಗಳನ್ನು ಎದುರಿಸುವುದಕ್ಕೋಸ್ಕರ ಇದನ್ನು ಮಾಡುತ್ತೇವೆಂದು ಹೇಳಿದ್ದಾರೆ. ನಾನಾದರೂ ಹೇಳಬಯಸುತ್ತೇನೆ, ಇಂತಹ ದುರ್ಘಟನೆ ಆದ ಮೇಲೆ ಕ್ರಮ ವಹಿಸುವುದು ಬಹಳ ಸುಲಭ. ಆದರೆ ದುರ್ಘಟನೆ ಆಗದ ರೀತಿಯಲ್ಲಿ ಕ್ರಮ ವಹಿಸಬೇಕಾಗಿದ್ದು ಅತ್ಯಾವಶ್ಯಕ. prevention is better than cure ಎಂದು ಹೇಳುತ್ತಾರೆ. ಆ ಕೆಲಸವನ್ನು ನಮ್ಮ ಸರ್ಕಾರದವರು ಮಾಡಬೇಕಾದದ್ದು ಅತ್ಯಾವಶ್ಯಕ. ಇನ್ನೊಂದು ವಿಷಯವನ್ನು ಮುಖ್ಯವಾಗಿ ಹೇಳಬಯಸುವುದೇನೆಂದರೆ, ನನಗೆ ಆದ ಒಂದು ಅನುಭವ ಹೇಳುತ್ತೇನೆ. ನಮ್ಮ ಪೊಲೀಸ್ ಇಲಾಖೆಯಲ್ಲಿ ಜಾತ್ಯಾತೀತ ಮನೋಭಾವನೆವುಳ್ಳಂತಹ ಒಂದು ಪೊಲೀಸ್ ಫೋರ್ಸ್ ಇಲ್ಲ. ಅವರು ಪಕ್ಷಪಾತದ ದೃಷ್ಟಿಯಲ್ಲಿ ಸಾರ್ವಜನಿಕರನ್ನು ಗಮನಿಸುತ್ತಾರೆ ಎನ್ನುವುದು ಒಂದು ಮತ್ತು ಇಂತಹ ಸಂದರ್ಭಗಳಲ್ಲಿ ಜಾತಿ ಮನೋಭಾವನೆಯನ್ನು ಇಟ್ಟುಕೊಂಡು ಒಂದು ಜಾತಿಯವರು ಮತ್ತೊಂದು ಜಾತಿಯವರ ಮೇಲೆ ಮಾಡಬಾರದಂತಹ ಅಕ್ರಮಗಳನ್ನೆಲ್ಲ ಮಾಡುತ್ತಾರೆ ಎನ್ನುವಂತಹ ನಿದರ್ಶನಗಳು ನನಗೆ ಸಾಕಷ್ಟು ಬಂದಿದೆ. ಶಿವಾಜಿನಗರ ಕ್ಷೇತ್ರದಲ್ಲಿ ನಡೆದಂತಹ ಗಲಭೆಗಳ ಸಮಯದಲ್ಲಿ ನಾನು ನೋಡಿದ್ದೇನೆ. ಆ ರೀತಿ ಆಗದ ರೀತಿಯಲ್ಲಿ ಪೊಲೀಸ್ ಫೋರ್ಸ್‌ನ್ನು ಒಂದು ಸೆಕ್ಯುಲರ್ ಫೋರ್ಸ್ ಆಗಿ ತರಬೇತಿ ಕೊಡುವುದು ಅತ್ಯಾವಶ್ಯಕವೆಂದು ನಾನು ಭಾವಿಸುತ್ತೇನೆ. ಎಂದಿನವರೆಗೆ ಜಾತ್ಯಾತೀತ ಮನೋಭಾವನೆಯನ್ನು ಬೆಳೆಸಿಕೊಳ್ಳುವಂತಹ ಪೊಲೀಸ್ ಫೋರ್ಸ್ ಇರುವುದಿಲ್ಲ ಅಲ್ಲಿಯವರೆಗೆ ಪೊಲೀಸರಿಂದ ನ್ಯಾಯ ದೊರಕಿಸಿಕೊಳ್ಳುವುದು ಬಹಳ ಕಷ್ಟವಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಗಲಭೆಗಳು ಕಡಿಮೆ ಆಗುವುದಕ್ಕಿಂತ ಹೆಚ್ಚಾಗಿ ದುರ್ಘಟನೆಗಳು ಹೆಚ್ಚಾಗುವುದಕ್ಕೆ ಅವಕಾಶವಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಹೆಣ್ಣುಮಕ್ಕಳಿಗೆ ಪ್ರೊಟೆಕ್ಷನ್ ಕೊಡುವುದಕ್ಕೆ ಸ್ಪೆಷಲ್ಲಾಗಿ ಪೊಲೀಸ್ ಠಾಣೆಯನ್ನು ಪ್ರಥಮತಃ ಬೆಂಗಳೂರಿನಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಮಾತ್ರ ಅಲ್ಲ, ಎಲ್ಲ ಜಿಲ್ಲಾ ಮುಖ್ಯ ನಗರಗಳಲ್ಲಿಯೂ ಮಾಡುತ್ತೇವೆ ಎನ್ನತಕ್ಕ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದಕ್ಕೆ ನನ್ನ ವಂದನೆಗಳು. ಆದರೆ ಸ್ಪೆಷಲ್ ಪೊಲೀಸ್ ಸ್ಟೇಷನ್ ಎನ್ನುವುದಕ್ಕಿಂತ ಹೆಚ್ಚಾಗಿ ಹೆಣ್ಣು ಮಕ್ಕಳನ್ನು

ಪೊಲೀಸ್ ಇಲಾಖೆಯಲ್ಲಿ ತಯಾರು ಮಾಡಿ ಪ್ರತಿಯೊಂದು ಪೊಲೀಸ್ ಸ್ಟೇಷನ್‌ನಲ್ಲಿಯೂ ಕೂಡ ಸಾಕಷ್ಟು ಸಂಖ್ಯೆಯಲ್ಲಿ ಪ್ರಭಾವಿತ ಪೊಲೀಸ್ ಹೆಣ್ಣು ಮಕ್ಕಳ ಅಧಿಕಾರಿಗಳನ್ನು ನೇಮಿಸುವುದು ಬಹಳ ಅತ್ಯಾವಶ್ಯಕವಾಗಿದೆ ಎಂದು ನಾನು ಹೇಳುತ್ತೇನೆ. ಏಕೆಂದರೆ ರಾಜ್ಯಪಾಲರ ಭಾಷಣದಲ್ಲಿ ರಾಜ್ಯಪಾಲರೇ ಹೇಳಿದ್ದಾರೆ. ಪೊಲೀಸ್ ಸ್ಟೇಷನ್ನಿಗೆ ಹೋಗುವುದಕ್ಕೆ ಹೆಣ್ಣು ಮಕ್ಕಳು ಬಹಳ ಭಯಪಡುತ್ತಾರೆ, ಆದಕಾರಣ ನಾವು ಹೆಣ್ಣು ಮಕ್ಕಳಿಗೆ ಸ್ಪೆಷಲ್ ಪೊಲೀಸ್ ಸ್ಟೇಷನ್ ಮಾಡುತ್ತೇವೆಂದು ಹೇಳಿದ್ದಾರೆ. ಹೆಣ್ಣು ಮಕ್ಕಳಿಗೆ ಪೊಲೀಸ್ ಸ್ಟೇಷನ್ ಸ್ಪೆಷಲ್ ಆಗಿ ಇರುವ ಜಾಗ ಬಿಟ್ಟರೆ ಉಳಿದ ಕಡೆ ಹೆಣ್ಣು ಮಕ್ಕಳು ಭಯಪಡುವವರು ಸ್ಟೇಷನಿಗೆ ಹೋಗುವುದಿಲ್ಲ. ಅದಕ್ಕೆ ಯಾವ ರೀತಿ ಪರಿಹಾರವನ್ನು ಕೊಡಬೇಕು ಎನ್ನುವುದನ್ನು ತೀವ್ರವಾಗಿ ನಾವು ಯೋಚನೆಯನ್ನು ಮಾಡಬೇಕಾಗಿದ್ದರೆ, ಹೆಚ್ಚು ಹೆಚ್ಚು ಹೆಣ್ಣು ಮಕ್ಕಳಿಗೆ ತರಬೇತಿಯನ್ನು ಕೊಟ್ಟು ಸ್ಟೇಷನ್‌ನಲ್ಲಿ ನೇಮಕ ಮಾಡುವುದು ಅತ್ಯಾವಶ್ಯಕವಾಗಿದೆ ಎಂದು ನಾನು ಹೇಳುತ್ತೇನೆ. ಅದಕ್ಕಿಂತ ಹೆಚ್ಚಾಗಿ ಹೆಣ್ಣು ಮಕ್ಕಳ ಮೇಲೆ ಈ ಸಮಾಜದಲ್ಲಿ ಅತ್ಯಾಚಾರಗಳು ಆಗುತ್ತಿವೆ; ಆ ಅತ್ಯಾಚಾರಗಳನ್ನು ತಡೆಯುವುದಕ್ಕೆ ಪ್ರತಿಯೊಂದು ಸಂದರ್ಭದಲ್ಲಿಯೂ ಪೊಲೀಸಿನವರಿಂದ ರಕ್ಷಣೆ ಸಿಗುವುದು ಕಷ್ಟವಾಗುತ್ತದೆ. ಬಹಳ ದೂರದೂರದ ಜಾಗದಲ್ಲಿ ಘಟನೆ ಆಗುತ್ತಿರಬೇಕಾದರೆ ಘಟನೆ ಮುಗಿದ ನಂತರ ಪೊಲೀಸ್‌ನವರ ಸಹಾಯ ಸಹಕಾರ ಸಿಗುವುದಕ್ಕೆ ಅವಕಾಶವಿದೆಯೇ ಹೊರತು ಘಟನೆ ನಡೆಯದೆ ಇರುವ ರೀತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಹೆಣ್ಣು ಮಕ್ಕಳಿಗೆ ತೀವ್ರ ರೀತಿಯಲ್ಲಿ ಕರಾಟೆ, ಕುಂಗ್‌ಫೂ ಮತ್ತು ಕಲ್ಲರಿ ಫೈಟ್ ತರಬೇತಿಯನ್ನು ಕೊಟ್ಟು ಅವರು ಅವರನ್ನೇ ರಕ್ಷಣೆ ಮಾಡಿಕೊಳ್ಳುವಂತಹ ಸಹಾಯವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ತಾವು ಮುಖ್ಯಮಂತ್ರಿಗಳಾಗುವುದಕ್ಕಿಂತ ಮುಂಚೆ ಹಿಂದಿನ ಆಡಳಿತದಲ್ಲಿ ಒಂದು ಮೇಜರ್ ಸರ್ಜರಿ ಆಗಬೇಕೆಂದು ಹೇಳಿ ಮತ್ತೆ ಈ ಸರ್ಕಾರ ಬಂದಾದ ಮೇಲೆ ಮೇಜರ್ ಸರ್ಜರಿ ಮಾಡುತ್ತೇವೆಂದು ಹೇಳಿರುವುದನ್ನು ಅನಾವಶ್ಯಕವಾಗಿ ತಪ್ಪು ಕಲ್ಪನೆಗಳಿಗೆ ತಪ್ಪು ಅಭಿಪ್ರಾಯಗಳಿಗೆ ಮಾತು ಬರುತ್ತಿದೆ ಎನ್ನುವಂತಹ ಭಾವನೆ ಬಂದಿದೆ. ಆ ತಪ್ಪು ಭಾವನೆ, ತಪ್ಪು ಕಲ್ಪನೆ ಏನು ಬರುತ್ತಿದೆ ಅದನ್ನು ದೂರ ಮಾಡುವಂತಹ ಪ್ರಯತ್ನವನ್ನು ಮುಖ್ಯಮಂತ್ರಿಗಳು ಮಾಡಿ ಈ ಸದನಕ್ಕೆ ಈ ನಮ್ಮ ರಾಜ್ಯದ ಜನತೆಗೆ ತಿಳಿಸಬೇಕು. ಆ ಮೇಜರ್ ಸರ್ಜರಿ ಏನು? ಯಾವ ರೀತಿ, ಯಾವ್ಯಾವ ಕಡೆ, ಯಾವ ತರಹ ನಡೆಯುತ್ತದೆ, ಅದರಿಂದ ಜನಕ್ಕೆ ಏನು ಒಳ್ಳೆಯ ಆಡಳಿತ ಸಿಗುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ಪರಿಣಾಮಕಾರಿಯಾಗಿ ತಿಳುವಳಿಕೆಯನ್ನು ಕೊಡುವಂತಹ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ. ನನಗೆ ಗೊತ್ತಿದೆ ಸರ್ಜನ್ ಅಂದ ಮೇಲೆ ಜನಕ್ಕೆಲ್ಲ ತಿಳಿಯುವ ರೀತಿಯಲ್ಲಿ ಸರ್ಜರಿ ಮಾಡುವುದಿಲ್ಲ. ಯಾವ ಸಮಯದಲ್ಲಿ ಎಲ್ಲಿ ಯಾವ ತರಹ ಸರ್ಜರಿ ಮಾಡಬೇಕು, ಆಪರೇಷನ್ ಥಿಯೇಟರಿನಲ್ಲಿ ಮಾಡುವಂತಹ ಕೆಲಸ ಮಾಡುತ್ತಾರೆ. ಮುಖ್ಯಮಂತ್ರಿಗಳು ಆ ಕೆಲಸವನ್ನು ಮಾಡುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ಸರ್ಜನ್ ಸರ್ಜರಿ ಮಾಡಿದ ಮೇಲೆ ಪೇಷೆ ಬದುಕಿದ್ದಾನೆಯೋ ಸತ್ತಿದ್ದಾನೆಯೋ, ಗುಣಮುಖಿ ಹೊಂದಿದ್ದಾನೆಯೋ ಎನ್ನುವುದು ಜನತೆಗೆ ಗೊತ್ತಾಗುತ್ತದೆ. ಅದೇ ರೀತಿಯಾಗಿ ರಾಜ್ಯದ ನಾಗರೀಕರಿಗೆ ಯಾವ ತರಹ ಸರ್ಜರಿ ಮಾಡುತ್ತಿದ್ದಾರೆ, ಏನು ಮಾಡುತ್ತಿದ್ದಾರೆ ಎನ್ನುವುದು ಜನತೆಗೆ ಅಚ್ಚರಿಯಾಗುವ ರೀತಿಯಲ್ಲಿ ಅದರ ಕ್ರಮದ ವಿವರವನ್ನು ಕೊಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಸರ್ಜರಿ ಮಾಡುವಂತಹ ಕಾರ್ಯಕ್ರಮದಲ್ಲಿ ಹಿಂದೆ ಯಾರ್ಯಾರೂ ಯಾವ್ಯಾವ ಆಡಳಿತ ವರ್ಗ ಏನು ತಪ್ಪು ಮಾಡಿದೆ ಅದರ ಮೇಲೆ ಏನು ಕ್ರಮ ವಹಿಸಬೇಕು ಎನ್ನುವಾಗ ತೀವ್ರವಾದಂತಹ ಅಕ್ರಮಗಳನ್ನು ನಡೆಸಿದಂತಹ ಐ.ಎ.ಎಸ್. ಆಫೀಸರ್ ಆಗಲಿರಲಿ, ಕೆ.ಎ.ಎಸ್. ಆಫೀಸರ್ ಆಗಿರಲಿ, ಉದಾಹರಣೆಗಾಗಿ ಬಿ.ಡಿ.ಎ.ನಲ್ಲಿ ಕೆ.ಇ.ಬಿ.ಯಲ್ಲಿ ಮತ್ತು ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಏನು ಅಕ್ರಮ ನಡೆದು ಹೋಗಿದೆ, ನೂರಾರು ಕೋಟಿ ರೂಪಾಯಿಗಳ

ದುರುಪಯೋಗವಾಗಿದೆ, ಅನ್ಯಾಯವಾಗಿದೆ, ಪೋಲಾಗಿದೆಯೋ, ಆ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾವ ತರಹದ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ಜನರು ನಿರೀಕ್ಷಿಸುತ್ತಿದ್ದಾರೆ. ಆ ರೀತಿ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಹಣ ದುರುಪಯೋಗವಾಗಿರುವ ವಿಷಯ ಎಲ್ಲರಿಗೂ ಗೊತ್ತಿದೆ. ಅದಕ್ಕಾಗಿ ಇವೊತ್ತು ಬೆಂಗಳೂರು ನಗರದಲ್ಲಿ ಯಾವುದೇ ಒಂದು ಪೌರ ಸೌಲಭ್ಯಕ್ಕೆ ಸಂಬಂಧಪಟ್ಟಂತೆ ಕಾರ್ಯಕ್ರಮಗಳು ನಡೆಯುತ್ತಿಲ್ಲ, ಹಣದ ಕೊರತೆಯಿರುವುದರಿಂದ ಕಾರ್ಯಕ್ರಮಗಳು ನಡೆಯುತ್ತಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳು ಹೇಳುತ್ತಿದ್ದಾರೆ. ಅಂತಹ ಅಧಿಕಾರಿಗಳ ಮೇಲೆ ತಾವು ಈಗಲಾದರೂ ಯಾವ ರೀತಿ ತೀವ್ರ ಕ್ರಮ ತೆಗೆದುಕೊಳ್ಳುತ್ತೀರೆಂದು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ವಿವರಣೆ ಕೊಡುವುದು ಸೂಕ್ತವೆಂದು ಹೇಳುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ಶಿವಾನಂದ ಎಚ್. ಕೌಜಲಗಿಯವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನನಗೆ ಒಂದು ಶಂಕೆ ಏನೆಂದರೆ ಒಬ್ಬ ಐ.ಎ.ಎಸ್. ಅಧಿಕಾರಿ ಒಂದು ಅಕ್ರಮ ಮಾಡಿದ್ದರೆ ಮತ್ತೊಬ್ಬ ಐ.ಎ.ಎಸ್. ಅಧಿಕಾರಿ ಆ ಅಕ್ರಮವನ್ನು ಮುಚ್ಚಿಡುವ ಪ್ರಯತ್ನ ನಡೆಸಿ ಅಕ್ರಮ ಮಾಡಿದಂಥ ಐ.ಎ.ಎಸ್. ಅಧಿಕಾರಿಗಳ ಮೇಲೆ ಮೇಲಿರುವ ಐ.ಎ.ಎಸ್. ಅಧಿಕಾರಿಗಳು ಯಾವುದೇ ಕಠಿನ ಕ್ರಮ ತೆಗೆದುಕೊಳ್ಳುವಂಥ ಪ್ರಯತ್ನ ಇದುವರೆವಿಗೂ ಮಾಡಿದಂತೆ ಕಾಣುತ್ತಿಲ್ಲ. ಈ ರೀತಿಯ ವ್ಯವಸ್ಥೆಯಾದರೆ ಜನರಿಗೆ ಒಳ್ಳೆಯ ಆಡಳಿತ ಕೊಡುವುದಕ್ಕಾಗುತ್ತದೆಯೇ ? ವಿಶ್ವಾಸಭರಿತವಾದಂಥ ಆಡಳಿತ ಕೊಡುವುದಕ್ಕೆ ಎಲ್ಲಿ ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ನಂತರ ಲೋಕಾಯುಕ್ತರ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ಸದನದಲ್ಲಿ ಬಹುತೇಕ ಮಾನ್ಯ ಸದಸ್ಯರುಗಳಿಗೆ ಲೋಕಾಯುಕ್ತದ ಮೇಲೆ ವಿಶ್ವಾಸವಿಲ್ಲವೆಂದು ನಾನು ಹೇಳುತ್ತೇನೆ, ಈಗಲೂ ಪದೇ ಪದೇ ಹೇಳುತ್ತಿದ್ದೇನೆ. ಸದನದ ಬಹುತೇಕ ಸದಸ್ಯರುಗಳು ವರ್ಷ ವರ್ಷ ತಮ್ಮ ಆಸ್ತಿ–ಪಾಸ್ತಿಗಳ ವಿವರಗಳನ್ನು ಲೋಕಾಯುಕ್ತಕ್ಕೆ ಸಲ್ಲಿಸುತ್ತಿಲ್ಲ. ಕಾರಣ, ಅವರಿಗೆ ಲೋಕಾಯುಕ್ತದ ಮೇಲೆ ಸ್ವಲ್ಪವೂ ಗೌರವ, ನಂಬಿಕೆ, ವಿಶ್ವಾಸವಿಲ್ಲವೆಂದು ಕಾಣುತ್ತದೆ. ನಾನಂತೂ ನನ್ನ ಆಸ್ತಿ–ಪಾಸ್ತಿಗಳ ವಿವರಗಳನ್ನು ಲೋಕಾಯುಕ್ತಕ್ಕೆ ಸೂಕ್ತ ಸಮಯದಲ್ಲಿ ಕೊಟ್ಟಿದ್ದೇನೆ. ನನ್ನ ಆಸ್ತಿ–ಪಾಸ್ತಿಗಳ ವಿವರಗಳನ್ನು ಸಲ್ಲಿಸಿದ ನಂತರವೂ ನನಗೆ ಅನಾವಶ್ಯಕವಾಗಿ ಗೊಂದಲವೆಬ್ಬಿಸುವ ರೀತಿಯಲ್ಲಿ ಲೋಕಾಯುಕ್ತದವರು ನನಗೆ ತೊಂದರೆ ಕೊಟ್ಟಿದ್ದರು. ಇದರ ಬಗ್ಗೆ ನಾನು ತೀವ್ರವಾಗಿ ಪ್ರತಿಭಟಿಸಿದ ನಂತರ ಅವರು ಒಪ್ಪಿಕೊಂಡರು. ಆಸ್ತಿ–ಪಾಸ್ತಿಗಳ ಸತ್ಯಾಂಶ ಆಧರಿಸಿದ ವಿವರಗಳನ್ನು ಕೊಟ್ಟರೂ ಸಹ ಆ ವಿವರಗಳು ಸರಿಯಿಲ್ಲವೆಂದು ಲೋಕಾಯುಕ್ತದವರು ಹೇಳಬೇಕಾದರೆ ರಾಜ್ಯದ ಜನತೆಗೆ ನಂಬಿಕೆಗೆ ಅರ್ಹವಾದಂಥ ಒಳ್ಳೆಯ ಆಡಳಿತವನ್ನು ಕೊಡುವುದಕ್ಕಾಗುತ್ತದೆಯೆ ? ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನು ಕರಪ್ಟ್ ಪ್ರಾಕ್ಟೀಸ್‌ನ ನೋಡುವ ಸಲುವಾಗಿ ವಿಶೇಷ ನ್ಯಾಯಾಧೀಶರುಗಳ ನೇಮಕ. ಇದರಲ್ಲಿ ಹೆಚ್ಚಾಗಿ ಮೈನರ್ ಆಫೆನ್ಸ್, ಮೈನಲ್ ಪೆನಾಲ್ಟಿ ಹಾಕುವುದಕ್ಕೆ ಶೀಘ್ರವಾಗಿ ನ್ಯಾಯಾಧೀಶರ ನೇಮಕ ಮಾಡಬೇಕೆಂದು ಹೇಳುತ್ತಾರೆ. ಆದರೆ, ಮೇಜರ್ ಅಫೆನ್ಸ್, ಮೇಜರ್ ಪೆನಾಲ್ಟಿಗಳಲ್ಲಿ ಯಾವಾಗ ಕ್ರಮ ಕೈಗೊಳ್ಳುತ್ತಾರೆ ? ಎಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ ? ಕ್ರಮ ತೆಗೆದುಕೊಂಡದ್ದಕ್ಕೆ ಎಷ್ಟು ಮಾಹಿತಿಗಳಿವೆ ? ಮುಂದಕ್ಕೆ ಯಾವ ರೀತಿ ಮಾಡುತ್ತಾರೆ ? ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ತಿಳಿಸಬೇಕು. ಇಲ್ಲದೆ ಹೋದರೆ, ಶುದ್ಧ ಆಡಳಿತ ಕೊಡುತ್ತೇವೆ, ಮೇಜರ್ ಸರ್ಜರಿ ಹಿಂದೆ ಮಾಡಬೇಕಾಗಿತ್ತು, ಈಗ ಮಾಡುತ್ತಿದ್ದೇವೆಂದರೆ ಅರ್ಥಪೂರ್ಣವಾಗಿ ಜನರಿಗೆ ನಂಬಿಕೆ ಬರಲು ಸಾಧ್ಯವಿಲ್ಲವೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮತ್ತು ಡೈರೆಕ್ಟರ್

ಜನರಲ್, ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಅಂಡ್ ಟ್ರೈನಿಂಗ್, ಇದು ನಮ್ಮಲ್ಲಿ ಬಹಳ ಕಾಲದಿಂದ ಇದೆ. ಇದರ ಹೆಸರು ನಾಮಕರಣವಾಗಿ ಬದಲಾಗಿರುವುದನ್ನು ಬಿಟ್ಟರೆ ಕಾರ್ಯತಃ ಪರಿಣಾಮಕಾರಿಯಾಗಿ ತರಬೇತಿ ಕೊಡುವಂಥ ಕೆಲಸವನ್ನು ಸರ್ಕಾರದ ಮುಖಾಂತರ ನಡೆದುಕೊಂಡು ಬಂದಿದ್ದೆ; ಆಗಿದ್ದರೆ, ಎಲ್ಲೆಲ್ಲಿ ತರಬೇತಿ ನಿಲ್ಲಿಸಲಾಗಿದೆಯೋ ಅಲ್ಲೆಲ್ಲಾ ತರಬೇತಿ ಕೊಡಲಾಗಿದ್ದರೆ ಪುನಃ ಈ ತರಹ ಹೊಸ ನಾಮಕರಣ ಮಾಡಿ ಮತ್ತೊಂದು ತರಬೇತಿ ಎಂದು ಹೇಳಿ ಜನತೆಯ ಕಣ್ಣಿಗೆ ಮಣ್ಣೆರಚುವ ಕೆಲಸ ಮಾಡುವುದು ಸೂಕ್ತವಲ್ಲವೆಂದು ಹೇಳುತ್ತಿದ್ದೇನೆ. ಇದುವರೆಗೆ ಯಾರು ಮಾಡಿಲ್ಲ, ಏತಕ್ಕೆ ಮಾಡಿಲ್ಲವೆಂದು ಹೇಳುವ ಸಂದರ್ಭದಲ್ಲಿ ಯಾವ ಜವಾಬ್ದಾರಿಯುತ ಅಧಿಕಾರಿಯನ್ನು ಆ ಟ್ರೈನಿಂಗ್ ಇನ್ಸ್‌ಟ್ಯೂಷನ್‌ಗೆ ನೇಮಕ ಮಾಡಿದ್ದಾರೋ, ಅವರು ಏಕೆ ಸರಿಯಾಗಿ ಟ್ರೈನಿಂಗ್ ಕೊಟ್ಟಿಲ್ಲವೆನ್ನುವುದರ ಬಗ್ಗೆ ವಿವರಣೆ ಕೊಡುವುದು ಅತ್ಯಾವಶ್ಯಕವಾಗಿದೆ ಮತ್ತು ಯಾರು ಸರಿಯಾಗಿ ಟ್ರೈನಿಂಗ್ ಕೊಡದೆ ಕಮಿಟೆಡ್ ಆಗಿ ಕೆಲಸ ಮಾಡಿಲ್ಲವೊ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 40 ವರ್ಷಗಳ ಮೇಲಾದರೂ ಇನ್ನೂ ನಾವು ತರಬೇತಿ ಕೊಡುತ್ತಿದ್ದೇವೆಂದರೆ ಏನರ್ಥ ? ಈಗ ತರಬೇತಿ ಹೊಂದಿರುವ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ? ಅವರು ಏಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲ ? ತರಬೇತಿ ಹೊಂದಿದ ಅಧಿಕಾರಶಾಹಿಗಳು ಕೆಲಸ ಮಾಡುತ್ತಿದ್ದಾರೆಯೇ ಎಂದು ಈ ಸಂದರ್ಭದಲ್ಲಿ ನಾವು ತೀವ್ರತರವಾಗಿ ಯೋಚಿಸಬೇಕಾಗಿದೆ. ಅಲ್ಲದೆ ಈ ಪ್ರೊಫೆಷನಲ್ ಇನ್ಸ್‌ಟಿಟ್ಯೂಷನ್ಸ್ ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದ್ದು, ಸುಪ್ರೀಂ ಕೋರ್ಟ್ ಕೂಡ ಇದರ ಕುರಿತು ಒಂದು ತೀರ್ಪು ಕೊಟ್ಟಿದೆ. ಇದರ ಬಗ್ಗೆ ಒಂದೇ ಒಂದು ಸಣ್ಣ ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಆದುದರಿಂದ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ, ಮಂತ್ರಿಗಳಲ್ಲಿ ಬಹಳ ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಏನೆಂದರೆ, ಯಾವ ಕೆಲವು ಮಂತ್ರಿಗಳ ಮೇಲೆ ಅಪಾದನೆಗಳು ಬಂದಿವೆಯೋ, ಯಾರು ಕ್ಯಾಪಿಟೇಷನ್ ಫೀ ಮತ್ತು ವ್ಯಾಪಾರೋದ್ಯಮದಂಥ ಒಂದು ಎಜುಕೇಷನ್ ಇನ್ಸ್‌ಟ್ಯೂಷನ್ ನಡೆಸುತ್ತಿದ್ದಾರೋ, ಅಂತಹವರಿಗೆಲ್ಲಾ ನೇರವಾಗಿ, ಪರೋಕ್ಷವಾಗಿ ಇಲ್ಲವೆ ಪ್ರತ್ಯಕ್ಷವಾಗಿ ತಮ್ಮ ಬೆಂಬಲವನ್ನು ಕೊಡುತ್ತಿರುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ.

ಆ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕು ಮತ್ತು ಯಾರ‍್ಯಾರು ಮಂತ್ರಿಗಳು ಈ ಒಂದು ವಿದ್ಯಾಸಂಸ್ಥೆಗಳ ಜೊತೆಯಲ್ಲಿ ಸಂಬಂಧವನ್ನು ಇಟ್ಟುಕೊಂಡಿದ್ದಾರೋ ಅದನ್ನು ತಕ್ಷಣವೇ ತ್ಯಜಿಸಬೇಕೆಂದು ಹೇಳುತ್ತಿದ್ದೇನೆ ಮತ್ತು ಈ ಸದನದಲ್ಲಿ ಅಂಥವರುಗಳು ನಮಗೂ ಅಂಥ ವಿದ್ಯಾ ಸಂಸ್ಥೆಗಳಿಗೂ ಯಾವುದೇ ಸಂಬಂಧವಿಲ್ಲವೆಂದು ಮತ್ತು ಅದಕ್ಕೆ ಬೆಂಬಲವನ್ನು ಕೊಡುವುದಿಲ್ಲವೆಂದು ಪ್ರತಿಜ್ಞಾಪೂರ್ವವಾಗಿ ಹೇಳಬೇಕಾಗಿರತಕ್ಕದ್ದು ಅತ್ಯವಶ್ಯಕವಾಗಿದೆ.

ಶ್ರೀ ಸಿ. ಬೈರೇಗೌಡ:– ನಮಗೆ ತಾವು ಹೇಳುತ್ತಿರುವ ಅನೇಕ ವಿಚಾರಗಳಲ್ಲಿ ಮಾಹಿತಿ ಇಲ್ಲ. ತಾವು ದಯಮಾಡಿ ಅದರ ಬಗ್ಗೆ ಮಾಹಿತಿಯನ್ನು ಕೊಡಬೇಕು. ಇಂಥಿಂಥ ಮಂತ್ರಿಗಳ ಪಾಲು ಇಂಥಿಂಥ ವಿದ್ಯಾಸಂಸ್ಥೆಯ ಮೇಲೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇದೆ ಎಂಬ ಬಗ್ಗೆ ಮಾಹಿತಿಯನ್ನು ತಾವು ಹೇಳಿದರೆ ತಮ್ಮ ಜೊತೆಗೆ ನಾವೂ ಕೂಡ ಧ್ವನಿಗೂಡಿಸಲು ಅವಕಾಶ ಸಿಗುತ್ತದೆ. ಆದುದರಿಂದ ತಾವು ದಯ ಮಾಡಿ ಅದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ ತಮಗೆ ಕೃತಜ್ಞನಾಗಿರುತ್ತೇನೆ.

ಶ್ರೀ ಎ.ಕೆ. ಅನಂತಕೃಷ್ಣ:– ಇದು ಪತ್ರಿಕೆಯಲ್ಲಿ ಬಂದಿರತಕ್ಕ ವರದಿ ಎಂದು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಎಲ್ಲಾ ಸದಸ್ಯರು ಪತ್ರಿಕೆಯನ್ನು ಓದಿರುತ್ತಾರೆ. ನಾನು ನೇರವಾಗಿ ಹೇಳುತ್ತಿದ್ದೇನೆ, ಸುತ್ತಿ

ಬಳಸಿ ಹೇಳುವುದಿಲ್ಲ, ನನಗೆ ಯಾವ ವ್ಯಕ್ತಿಯ ಮೇಲೂ ವೈಷಮ್ಯವಿಲ್ಲ. ಪತ್ರಿಕೆಯಲ್ಲಿ ವರದಿಯಾಗಿದೆ, ಜನತೆಯಲ್ಲಿ ಸಂಶಯ ಬಂದಿದೆ.

ಶ್ರೀ ಸಿ. ಬೈರೇಗೌಡ:– ಈ ರೀತಿಯಾಗಿ ಅರ್ಥಂಬರ್ಥ ಹೇಳುವುದು ಬೇಡ.

ಶ್ರೀ ಎ.ಕೆ. ಅನಂತಕೃಷ್ಣ:– ನಾನು ಹೇಗೆ ಮಾತನಾಡಬೇಕು, ಏನು ಮಾಡಬಾರದು ಎಂಬುದನ್ನು ಕಂಟ್ರೋಲ್ ಮಾಡುವ ವರು ಅಧ್ಯಕ್ಷರು. ಅಧ್ಯಕ್ಷರೇ ತಾವು ನನ್ನ ರಕ್ಷಣೆಗೆ ಬರಬೇಕು.

ಶ್ರೀ ಸಿ. ಬೈರೇಗೌಡ:– ತಮ್ಮಲ್ಲಿ ಮಾಹಿತಿಯನ್ನು ಕೊಡಿ ಎಂದು ವಿನಂತಿ ಮಾಡಿಕೊಂಡೆವು, ಆದರೆ ತಾವು ಅದನ್ನು ಕೊಡದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ, ನಮ್ಮ ವಿನಂತಿಯನ್ನು ತಮ್ಮ ಮುಂದೆ ಇಡುತ್ತಿದ್ದೇವೆ.

ಶ್ರೀ ಎ.ಕೆ. ಅನಂತಕೃಷ್ಣ:– ಈ ವಿಷಯವು ಪತ್ರಿಕೆಯಲ್ಲಿ ವರದಿಯಾಗಿದೆ. ಇದರಿಂದಾಗಿ ಜನರಲ್ಲಿ ಒಂದು ರೀತಿಯ ಸಂಶಯಕ್ಕೆ ಕಾರಣವಾಗಿದೆ. ಆದ್ದರಿಂದ ಸುಪ್ರೀಮ್ ಕೋರ್ಟ್‌ನವರು ಕೊಟ್ಟ ತೀರ್ಮಾನಕ್ಕೆ ಸೂಕ್ತವಾದ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಬೇಕಾಗಿದೆ. ಮಂತ್ರಿಮಂಡಲ ನಡೆದುಕೊಳ್ಳಬೇಕಾಗಿದೆ, ನಮ್ಮ ಸದಸ್ಯರುಗಳು ನಡೆದುಕೊಳ್ಳಬೇಕಾಗಿದೆ ನಾವು ಆ ವಿಷಯದಲ್ಲಿ ಬಹಳ ತೀವ್ರವಾಗಿ ಭಾಗಿಯಾಗಿದ್ದೇವೆಂದು ಹೇಳಬೇಕಾಗಿರತಕ್ಕ ಅತ್ಯವಶ್ಯಕತೆ ಇದೆ. It is a matter of policy, it is a matter of principle; it is a matter of ethics. ಆ ವಿಷಯದಲ್ಲಿ ತೀರ್ಮಾನ ಮಾಡಿಕೊಳ್ಳಿ. details will take care of themselves..... ಇನ್ನು ಎಕ್ಸೈಜ್ ವಿಷಯದ ಬಗ್ಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ನಮಗೆ ಯಾವ ಎಕ್ಸೈಜ್‌ನ ಲಾಬಿಯೊಂದಿಗೆ ಯಾವುದೇ ಸಂಬಂಧವಿಲ್ಲವೆಂದು ಹೇಳುವಾಗ ಮತ್ತು ಅದರೊಂದಿಗೆ ಸಂಬಂಧವಿಲ್ಲದಿದ್ದರೂ ಕೂಡ ಅದರ ನಿಯಂತ್ರಣವು ನಮ್ಮ ಆಡಳಿತದ ಮೇಲೆ ಇಲ್ಲ ಎನ್ನುವುದನ್ನು ನಿರ್ದಾಕ್ಷಿಣ್ಯವಾಗಿ, ನಿರ್ಧಾರವಾಗಿ ಜನತೆಗೆ ಅರ್ಥವಾಗುವ ರೀತಿಯಲ್ಲಿ ಹೇಳಬೇಕಾಗಿದೆ. ಉದಾಹರಣೆಗೆ ಬೆಂಗಳೂರು ನಗರದಲ್ಲಿ ಕನ್‌ಜೆಸ್ಟೆಡ್ ಏರಿಯಾ ಎಂದು ಏನು ಹೇಳುತ್ತೇವೆ. Places of worship ಎಂದು ಏನು ಹೇಳುತ್ತೇವೆ. ವಿದ್ಯಾ ಕೇಂದ್ರವೆಂದು ಏನು ಹೇಳುತ್ತೇವೆ, ಸ್ಲಮ್ಸ್ ಎಂದು ಏನು ಹೇಳುತ್ತೇವೆ, ಹರಿಜನ ಗಿರಿಜನರು ವಾಸ ಮಾಡತಕ್ಕ ಸ್ಥಳವೇನಿದೆ, ಯಾವುದೇ ಕುಡಿತದ ಅಭ್ಯಾಸವಿಲ್ಲದೇ ಇರತಕ್ಕ ಮೈನಾರಿಟಿಯ ಜನರು ವಾಸ ಮಾಡತಕ್ಕ ಕನ್‌ಜೆಸ್ಟೆಡ್ ಏರಿಯಾ ಏನು ಇದೆ ಅಂಥ ಕಡೆಗಳಲ್ಲಿ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಸಾರಾಯಿ ಅಂಗಡಿಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದನ್ನು ತೆಗೆದು ಹಾಕಬೇಕೆಂದು ಜನತೆ ಪದೇ ಪದೇ ಸರ್ಕಾರಕ್ಕೆ ಮೊರೆ ಹೋಗುತ್ತಿದ್ದಾರೆ, ಅಲ್ಲಿಯ ಜನರು ನಮ್ಮಂತಹವರಲ್ಲೂ ಬಹಳ ಹೇಳುತ್ತಿದ್ದಾರೆ. ನಾವೂ ಸಹ ಪದೇ ಪದೇ ಈ ಸದನದಲ್ಲಿ ಅವನ್ನು ತೆಗೆದು ಹಾಕಬೇಕೆಂದು ಹೇಳುತ್ತಿದ್ದೇವೆ. ಉದಾಹರಣೆಗೆ ಹೇಳಬೇಕೆಂದರೆ, ಶಿವಾಜಿನಗರ ವಿಭಾಗದಲ್ಲಿ ಬ್ರಾಡ್‌ವೇ ರೋಡ್‌ನಲ್ಲಿ ಒಂದು ದೊಡ್ಡ ಸಾರಾಯಿ ಅಂಗಡಿ ಇದೆ. ಅದನ್ನು ಇಡೀ ಬೆಂಗಳೂರಿಗೆ ದೊಡ್ಡ ಸಾರಾಯಿ ಅಂಗಡಿ ಎಂದು ಹೇಳುತ್ತಾರೆ. ಅದರ ಸುತ್ತಮುತ್ತ ಚರ್ಚ್‌ಗಳಿವೆ, ದೇವಸ್ಥಾನಗಳು, ಶಾಲೆಗಳು, ಹರಿಜನ ಗಿರಿಜನರು, ಮತ್ತು ಇದನ್ನು ವಿರೋಧ ಮಾಡತಕ್ಕಂಥ ಮುಸಲ್ಮಾನರು ಇದ್ದಾರೆ. ಈ ಅಂಗಡಿಯನ್ನು ಅಲ್ಲಿಂದ ತೆಗೆದು ಹಾಕಬೇಕೆಂದು ನಾವು ಹೋದ ಸಾರಿಯೇ ಹೇಳಿದ್ದೆವು. ಆಗ ಮಂತ್ರಿಗಳಾಗಿದ್ದಂಥ ಶ್ರೀಮಾನ್ ಧರ್ಮಸಿಂಗ್‌ರವರು ಅದನ್ನು ಖಂಡಿತಾ ತೆಗೆಸಿ ಹಾಕುತ್ತೇವೆಂದು ಸಾಕಷ್ಟು ಸಾರಿ ಹೇಳಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಹೇಳಿದ್ದೇನೆಂದು ಹೇಳಿದ್ದಾರೆ. ನಾವುಗಳು ಅವರಲ್ಲಿ ಪದೇ ಪದೇ ಅದನ್ನು ತೆಗಿಸಲೇಬೇಕೆಂದು ಹೇಳಿದ್ದೇವೆ. ಹಿಂದೆ ಮಾನ್ಯ ರಘುಪತಿಯವರು ಸದಸ್ಯರಾಗಿದ್ದಾಗ ಒಂದು ಸತ್ಯಾಗ್ರಹವನ್ನು ಮಾಡಿ ಆ ಅಂಗಡಿಯನ್ನು ತೆಗೆಸಿಹಾಕಬೇಕೆಂದು ಹೇಳಿದ್ದರು. ಹೀಗೆ ಹಮೀದ್

ಷಾ, ರೋಶನ್ ಬೇಗಂ ಮುಂತಾದ ಸದಸ್ಯರುಗಳೂ ಸಹ ಹೋರಾಟ ಮಾಡಿದರು. ಆ ಸರ್ಕಾರದಿಂದ ಹಿಡಿದು ಇವತ್ತಿನವರೆಗೂ ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ಪ್ರತಿಯೊಬ್ಬ ಸದಸ್ಯರು ಹೋರಾಟ ಮಾಡಿದರೂ ಕೂಡ ಇವತ್ತಿನವರೆಗೂ ಆ ಸಾರಾಯಿ ಅಂಗಡಿಯನ್ನು ಅಲ್ಲಿಂದ ತೆಗೆಸಿ ಹಾಕುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಧರ್ಮಸಿಂಗ್‌ರವರು ಹಿಂದೆ ಮಂತ್ರಿಗಳಾಗಿದ್ದಾಗ ಅದನ್ನು ತೆಗೆಸಿ ಹಾಕುವುದರ ಸಲುವಾಗಿ ಸಾಕಷ್ಟು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಹೀಗಿದ್ದರೂ ಕೂಡ ಇದನ್ನು ತೆಗೆದು ಹಾಕಲು ಆಗಿಲ್ಲವೆಂದರೆ ತಮ್ಮ ಮುಖಾಂತರ ಸರ್ಕಾರಕ್ಕೆ ಪ್ರಶ್ನೆ ಕೇಳಬಯಸುತ್ತೇನೆ. ಈ ಎಕ್ಸೈಜ್ ಲಾಬಿ ಈ ಸರ್ಕಾರವನ್ನು ನಡೆಸುತ್ತಿದ್ದೆಯೊ ಅಥವಾ ಸರ್ಕಾರ ಇದರ ಮೇಲೆ ಯಾವುದಾದರೂ ನಿಯಂತ್ರಣವನ್ನು ಇಟ್ಟುಕೊಂಡಿದೆಯೇ ಎಂಬ ಒಂದು ಸಣ್ಣ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮಾನ್ಯ ಧರ್ಮಸಿಂಗ್‌ರವರು ಕನ್‌ಸರ್ನ್ ಡೆಪ್ಯುಟಿ ಕಮೀಷನರ್, ಎಕ್ಸೈಜ್‌ರವರು ಬಂದು ನಿಮ್ಮಲ್ಲಿ ಮಾತನಾಡುತ್ತಾರೆ. ಅದನ್ನು ಆ ಜಾಗದಿಂದ ಶಿಫ್ಟ್ ಮಾಡುತ್ತೇವೆ ಎಂದು ಹೇಳಿದರು ಮತ್ತು ಬೆಂಗಳೂರು ಮಹಾ ನಗರಪಾಲಿಕೆಯವರು ಅದನ್ನು ಶಿಫ್ಟ್ ಮಾಡಲಿಕ್ಕೆ ಎಂದು ಹೇಳಿ ಕಂಟೋನ್‌ಮೆಂಟ್ ರೈಲ್ವೆ ಸ್ಟೇಷನ್ ಹತ್ತಿರ ಒಂದು ನಿವೇಶನವನ್ನು ನಿಗದಿ ಮಾಡಿ ಎಕ್ಸೈಸ್ ಡಿಪಾರ್ಟ್‌ಮೆಂಟ್ ಪೊಜಿಷನ್ ತೆಗೆದುಕೊಳ್ಳುವುದಕ್ಕೆ ಪದೇ ಪದೇ ಅವರ ಬಾಗಿಲಿಗೆ ಹೋಗಿ ಹೇಳುತ್ತಿದ್ದಾರೆ. ಆದರೆ ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರು ಇವತ್ತಿನವರೆಗೆ ಆ ನಗರಪಾಲಿಕೆಯ ನಿವೇಶನವನ್ನು ತೆಗೆದುಕೊಂಡು ಬ್ರಾಡ್‌ವೇ ರೋಡಿನಲ್ಲಿರುವ ಲಿಂಕ್ ಶಾಪ್‌ನ್ನು ಶಿಫ್ಟ್ ಮಾಡಲಿಕ್ಕೆ ತಯಾರಾಗಿಲ್ಲ. ಎಕ್ಸೈಸ್ ಡಿಪಾರ್ಟಮೆಂಟ್ ಈ ಎಕ್ಸೈಸ್ ಲಾಬಿ ಏನಿದೆ, ಆ ಕಂಟ್ರಾಕ್ಟರುಗಳಿಗೆ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೋ ಇಲ್ಲವೇ ಎಕ್ಸೈಸ್ ಡಿಪಾರ್ಟ್‌ಮೆಂಟಿನ ಕಮೀಷನರ್ ಆಫ್ ಎಕ್ಸೈಸ್ ಮತ್ತು ಡೆಪ್ಯುಟಿ ಕಮೀಷನರ್ ಕಂಟ್ರಾಕ್ಟರ್ಸ್ ಮೇಲೆ ನಿಯಂತ್ರಣ ಇಟ್ಟುಕೊಂಡಿರುತ್ತಾರೋ, ಯಾರು ಯಾರಿಗೆ ತಲೆ ತಗ್ಗಿಸುತ್ತಾರೋ ಸಾರ್ವಜನಿಕ ಹಿತದೃಷ್ಟಿಗೆ ತದ್ವಿರುದ್ಧವಾಗಿ ಎನ್ನುವುದನ್ನು ನಾನು ಬಹಳ ನಮ್ರತೆಯಿಂದ ನೊಂದು ಹೇಳಬೇಕಾಗಿದೆ. ಆದ್ದರಿಂದ ತಮ್ಮಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಆ ರಸ್ತೆಯಲ್ಲಿರುವ arrack ಶಾಪ್‌ನ್ನು ಶಿಫ್ಟ್ ಮಾಡದೆ ಹೋದರೆ ಪ್ರಚಂಡವಾದ ಒಂದು ಹೋರಾಟವನ್ನು ಮಾಡಬೇಕಾಗುತ್ತದೆ. ಅದಾದ ಮೇಲೆ ನನ್ನ ಜನರ ಸಹಾಯವನ್ನು ಪಡೆದು ಧರಣಿ ಕುಳಿತುಕೊಳ್ಳುತ್ತೇನೆ. ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ; ಒಂದು arrack ಶಾಪನ್ನು ತೆಗೆಯುವುದಕ್ಕಾಗುವುದಿಲ್ಲವೆಂದರೆ ಏನು ಅರ್ಥ. ಗಾಂಧಿ ನಗರದಲ್ಲಿ ಮೇಯರ್‌ರವರು ಒಂದು ಕೂಗು ಹಾಕಿದ ತಕ್ಷಣ ಗಾಂಧಿನಗರದಲ್ಲಿದ್ದಂಥ arrack ಶಾಪ್‌ನ್ನು ತೆಗೆಯುವುದಕ್ಕೆ ಆಯಿತು. ಇದು ಬಹಳ ಕಾಲದಿಂದಲೂ ಹೋರಾಟ ನಡೆಯುತ್ತಿರತಕ್ಕಂಥನ್ನು ತೆಗೆಯುವುದಕ್ಕೆ ಆಗುವುದಿಲ್ಲವೆಂದರೆ ನಾವು ಆ ಸರ್ಕಾರವನ್ನು ಕೊಡುವುದಾದರೂ ಹೇಗೆ? ದಕ್ಷ ಸರ್ಕಾರವನ್ನು ಕೊಡುವುದಾದರೂ ಹೇಗೆ? ನಿಷ್ಪಯಾದ ಸರ್ಕಾರವನ್ನು ಕೊಡುವುದಾದರೂ ಹೇಗೆ ಎಂದು ಹೇಳುತ್ತೇನೆ. ಯಾವ ರೀತಿ ಆಡಳಿತವನ್ನು ಯಾರಿಗಾಗಿ ಕೊಡುತ್ತಿದ್ದೇವೆ. ನಾವು ಆಡಳಿತವನ್ನು ಕೊಡುತ್ತಾ ಇದ್ದೆವೆಯೋ ಎನ್ನುವಂಥದ್ದನ್ನು ನಾವು ಈ ಸಂದರ್ಭದಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇಂಥ ಒಂದು ದ್ವಂದ್ವ ವಾದವನ್ನು ನಾನು ತಮ್ಮ ಮುಂದೆ ಇಡುತ್ತಿಲ್ಲ. ನಾನು ಹೋರಾಟಕ್ಕೆ ಇಳಿದೇ ಇಳಿಯುತ್ತೇನೆ. ತಮ್ಮ ಒಂದು ರಕ್ಷಣೆಯನ್ನು ಪಡೆದು ಇಲ್ಲಿ ಧರಣಿಯನ್ನು ಕುಳಿತುಕೊಳ್ಳುತ್ತೇನೆ; ಇನ್ನು ಒಂದು ತಿಂಗಳೊಳಗೆ ಆ ಅರ್ರ್ಯಾಕ್ ಶಾಪ್‌ನ್ನು ಶಿಫ್ಟ್ ಮಾಡದೆ ಹೋದರೆ ಅದನ್ನು ಶಿಫ್ಟ್ ಮಾಡಲೇಬೇಕು. ತದನಂತರ ಆ ಭಾಗದಲ್ಲಿಯೂ ಕೂಡ ನಾನು ಸಾಕಷ್ಟು ಚಳುವಳಿಯನ್ನು ಮಾಡಿಸುತ್ತೇನೆ. ಅದರಿಂದಾಗಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಏನಾದರೂ ಕ್ರಿಯೇಟ್ ಆದರೆ ಸರ್ಕಾರಕ್ಕೆ ಅದರ ಜವಾಬ್ದಾರಿ ನನ್ನದಾಗುವುದಿಲ್ಲ. ಈ ಸರ್ಕಾರದ್ದೇ ಪೂರ್ಣವಾದ ಜವಾಬ್ದಾರಿಯಾಗುತ್ತದೆಂದು ಈ

ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಸಾರ್ವಜನಿಕ ಪರವಾಗಿ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರು ತಾವೇನಾದರೂ ಬೆಂಬಲ ಕೊಟ್ಟರೆ ತಮಗೂ ನಾನು ಎಚ್ಚರಿಕೆ ಕೊಡುತ್ತೇನೆ.

ಇನ್ನು ಪ್ರೈವೇಟೇಷನ್ ಪ್ರೈವೇಟ್ ಎಂಟರ್‌ಪ್ರೈಸೆಸ್ ಬಗ್ಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಹೊರ ರಾಜ್ಯಗಳಿಂದ ಬರುವಂಥವರಿಗೆ ಒಂದು ಕರೆ ಕೊಟ್ಟಿದ್ದೀರಿ. ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಸಹಾಯ ಮಾಡುತ್ತೇವೆ, ವಿದ್ಯುಚ್ಛಕ್ತಿ ಕೊಡುತ್ತೇವೆ, ನಿವೇಶನಗಳನ್ನು ಕೊಡುತ್ತೇವೆ, ಸಬ್ಸಿಡಿ ಕೊಡುತ್ತೇವೆ, ಪ್ರತಿಯೊಂದು ವಿಷಯದಲ್ಲಿ ಅವರು ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಎಲ್ಲಾ ಅನುಕೂಲಗಳನ್ನು ಮಾಡಿ ಕೊಡುತ್ತೇವೆಂದು ಹೇಳಿರುತ್ತೀರಿ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಹೊರರಾಜ್ಯಗಳಿಂದ ಬಂದಿರತಕ್ಕಂಥವರೇ ಹೆಚ್ಚಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಸಫಲರಾಗಿ ಮಾಡುತ್ತಿರುತ್ತಾರೆ. ರಾಜ್ಯಮಟ್ಟದಲ್ಲಿರುವಂಥ ಕೈಗಾರಿಕೋದ್ಯಮಿಗಳು ಸಣ್ಣ ಕೈಗಾರಿಕೆಗಳನ್ನು ನಡೆಸುತ್ತಿರುವವರು ಬಹಳ ಕಡಿಮೆ. ಅವರ ಕೈಯಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ. ಹೊರ ರಾಜ್ಯಗಳಿಂದ ಬಂದವರು ಒಂದು ಕಾಂಪಿಟೇಷನ್ ಎಷ್ಟರ ಮಟ್ಟಿಗೆ ಇದೆ ಎಂದು ಹೇಳಿದರೆ ಅವರು ಕೊಟ್ಯಾಂತರ ರೂಪಾಯಿಗಳ ಲಂಚ ರುಷುವತ್ತುಗಳನ್ನು ಕೊಟ್ಟು, ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ಸರ್ವೀಸೆಸ್ ಎಲ್ಲಾ ಪ್ರೊವೈಡ್ ಮಾಡಿ ಅವರು ಬದುಕಿಕೊಂಡು ಹೋಗುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರುವ ಕನ್ನಡಿಗರು ಯಾವುದೇ ಕಾರಣಕ್ಕೂ ತಲೆ ಎತ್ತಲಿಕ್ಕೆ ಸಾಧ್ಯವಾಗುತ್ತಿಲ್ಲ. ಅವರಿಗೆ ಸಾಕಷ್ಟು ಡಿಸ್‌ಕರೇಜ್ ಕೊಡುವಂಥ ಪ್ರಯತ್ನ ನಮ್ಮ ಕೈಗಾರಿಕಾ ಇಲಾಖೆ ಮಾಡುತ್ತಿದೆ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಹೇಳುತ್ತಿದ್ದೇನೆ. ಯಾರು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ನಡೆಸುವಂಥ ಶಕ್ತಿಯನ್ನು ಹೊಂದಿರುತ್ತಾರೆ, ಯಾರು ಯುವಕರಿದ್ದಾರೆ ಅಂಥವರಿಗೆ ಹೆಚ್ಚು ಹೆಚ್ಚು ಸಹಾಯ ಕೊಟ್ಟು, ಸಹಕಾರವನ್ನು ತೋರಿಸಿ, ಹಣದ ಸಹಾಯ ಮಾಡಿ, ಮಾರ್ಕೆಟಿಂಗ್ ವಿಷಯದಲ್ಲಿ ಸಾಕಷ್ಟು ಅವರಿಗೆ ತರಬೇತಿಯನ್ನು ಕೊಟ್ಟು ಅದೆಲ್ಲವನ್ನು ಮಾಡಿದರೆ ಕರ್ನಾಟಕದಲ್ಲಿರುವ ಕನ್ನಡಿಗರು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಪ್ರಗತಿಯನ್ನು ಸಾಧಿಸುವುದಕ್ಕೆ ಅನುಕೂಲವಾಗುತ್ತದೆ ಮತ್ತು ಕನ್ನಡಿಗರಿಗೆ ಸಾಕಷ್ಟು ಪ್ರಮಾಣದಲ್ಲಿ ಕೆಲಸವನ್ನು ಕೊಡಲಿಕ್ಕೂ ಸಾಧ್ಯವಾಗುತ್ತದೆ. ಅಧನ್ನು ಬಿಟ್ಟು ನಮ್ಮ ರಾಜ್ಯಕ್ಕೆ ಬಂದು ಹೆಚ್ಚು ಪ್ರಮಾಣದಲ್ಲಿ ನಿಮಗೆ ಲಂಚ ರುಷುವತ್ತುಗಳನ್ನು ಕೊಟ್ಟು, ಅದಕ್ಷತೆಯಿಂದ ನಡೆಸಿ, ರಾಜ್ಯದ ಹಿತಚಿಂತನೆ ಇಲ್ಲದಂಥ ಒಂದು ಕೆಲಸವನ್ನು ಮಾಡಿ, ನಮಗೆ ಮತ್ತಷ್ಟು ಹೆಚ್ಚು ರೀತಿಯಲ್ಲಿ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್, ಹೌಸಿಂಗ್ ಪ್ರಾಬ್ಲಮ್, ಟ್ರಾಫಿಕ್ ಪ್ರಾಬ್ಲಮ್, ಎಲ್ಲಾ ರೀತಿಯಲ್ಲೂ ಪ್ರಾಬ್ಲಮ್‌ಗಳನ್ನು ಜಾಸ್ತಿ ಮಾಡುವುದಕ್ಕೆ ಸಹಾಯ ಮಾಡುವಂಥ ಕೆಲಸ ಮಾಡಬಾರದೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅವರು ಯಾರಿಂದ ದುಡ್ಡನ್ನು ತೆಗೆದುಕೊಳ್ಳುತ್ತಾರೆಂದರೆ, ಬಂದ ಕೂಡಲೇ 10 ಲಕ್ಷ ರೂಪಾಯಿಗಳ ಬಂಡವಾಳವನ್ನು ತೊಡಗಿಸಿ ಎರಡು ಕೋಟಿ ರೂಪಾಯಿಗಳವರೆಗೆ ನಮ್ಮ ರಾಜ್ಯದಲ್ಲಿರುವ ಬ್ಯಾಂಕ್‌ಗಳ ಮೂಲಕ ತೆಗೆದುಕೊಳ್ಳುತ್ತಾರೆ. ಕೆ. ಐ.ಡಿ.ಸಿ.ಯಿಂದ ತೆಗೆದುಕೊಳ್ಳುತ್ತಾರೆ, ಕೆ.ಐ.ಐ.ಡಿ.ಸಿ.ಯಿಂದ ತೆಗೆದುಕೊಳ್ಳುತ್ತಾರೆ. ಪ್ರತಿಯೊಂದನ್ನು ನಮ್ಮ ರಾಜ್ಯ ಸರ್ಕಾರದ ಸಹಾಯದಿಂದ ತೆಗೆದುಕೊಂಡು ಅವರು ಬದುಕುತ್ತಾರೆ. ಅದೇ ರೀತಿಯ ಸಹಾಯವನ್ನು ನಮ್ಮ ರಾಜ್ಯದಲ್ಲಿರುವ ಕನ್ನಡಿಗರಿಗೆ ಏತಕ್ಕೆ ಕೊಡಬಾರದು, ಏತಕ್ಕೆ ನಮ್ಮವರಿಗೆ ಉತ್ತೇಜನ ಕೊಡಬಾರದು? ಬೆಂಬಲವನ್ನು ಏತಕ್ಕೆ ಸೂಚಿಸಬಾರದು ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಹೆಚ್ಚು ಹೆಚ್ಚು ಪ್ರೈವೇಟೇಷನ್‌ಗೆ ಅವಕಾಶ ಮಾಡಿದರೆ ultimately it would be a comulative disaster but the economy for State ಎಂದು ನಾನು ಹೇಳುತ್ತೇನೆ. ಇನ್ನು ಅರ್ಬನೈಸೇಷನ್ ವಿಷಯದಲ್ಲಿ ಹೇಳುವುದಾದರೆ ಈಗ ಇರುವ ಅರ್ಬನ್ ಪಾಲೀಸಿ ನನಗೆ ಅರ್ಥವಾಗುತ್ತಿಲ್ಲ. ನಾನು ಈ ಸದನದಲ್ಲಿ ಪದೇ ಪದೇ

ಹೇಳುತ್ತಲೇ ಇದ್ದೇನೆ. ಬೆಂಗಳೂರು ನಗರಕ್ಕೆ ಸೀಮಿತವಾಗಿ ನಾನು ಹೇಳುತ್ತೇನೆ. ಸುಮಾರು 100 ವರ್ಷಗಳಿಂದ ಬೆಂಗಳೂರು ನಗರ ಅರ್ಬನ್ ಪ್ಲಾನಿಂಗ್‌ನಲ್ಲಿ ಏನು ಆಗಿದೆ ಎಂದು ಹಿಂದೆ ಹೇಳಿದ್ದೇನೆ, ಮತ್ತೆ ಹೇಳುತ್ತೇನೆ. ದಯವಿಟ್ಟು ಕ್ಷಮಿಸಬೇಕು. 100 ವರ್ಷಗಳ ಕೆಳಗೆ ಯಾವ ಮುಸಲ್ಮಾನ್ ಅಲ್ಪಸಂಖ್ಯಾತರು ಯಾವ ಯಾವ ವಿಭಾಗದಲ್ಲಿ ಯಾವ ರೀತಿ ಜೀವನ ನಡೆಸುತ್ತಿದ್ದಾರೊ ಅದಕ್ಕಿಂತ ಕೆಟ್ಟ ಜೀವನವನ್ನು ಇವತ್ತು ಅವರು ನಡೆಸುತ್ತಿದ್ದಾರೆ. ಯಾವ ಹರಿಜನ ಗಿರಿಜನರು ಯಾವ ಯಾವ ಇದ್ದರೊ ಅದೇ ಜನ ಹೆಚ್ಚು ಸಂಖ್ಯೆಯಲ್ಲಿ ಅದೇ ರೀತಿಯಾವ ಜೀವನ ನಡೆಸುತ್ತಿದ್ದಾರೆ. ಹಳ್ಳಿಗಳಿಂದ ಹತ್ತಾರು ಸಾವಿರ ಎಕರೆ ಜಮೀನು ತೆಗೆದುಕೊಂಡು ಬೆಂಗಳೂರು ನಗರದಲ್ಲಿ ಯೋಜನೆಯನ್ನು ಹಾಕಿ ಏನು ಅರ್ಬನ್ ಪ್ಲಾನಿಂಗ್ ಡೆವೆಲಂಪ್‌ಮೆಂಟ್ ಮಾಡಿದ್ದೆವೊ ಅದರಿಂದ ಬಂದ ಲಾಭವೆಲ್ಲ ಆ ಹಳ್ಳಿ ಜನಕ್ಕೆ ಇಲ್ಲದೆ ಆ ಹಳ್ಳಿಗಳು ಹಾಗೆಯೇ ಕೊಂಪೆಗಳಾಗುತ್ತಿವೆ. ಹಾಗೆಯೇ ಹಿಂದುಳಿದ ವರ್ಗಗಳು, ಶೋಷಿತ ವರ್ಗಗಳು ಬೆಂಗಳೂರು ನಗರದಾದ್ಯಂತ ಅದೇ ಶೋಷಣೆಗೆ ಒಳಪಟ್ಟು ಹಾಗೆಯೇ ಉಳಿದುಕೊಂಡು ಬಂದಿವೆ. ಬೆಂಗಳೂರು ನಗರವನ್ನು ಸವಿಸ್ತಾರವಾಗಿ ಯೋಜಿತವಾಗಿ ಬೆಳೆಸುವುದಕ್ಕಾಗಿ ಸ್ಲಮ್ಸ್ ಎಂದು ನಾವು ಕ್ರಿಯೇಟ್ ಮಾಡಿದೆವು. ಆದರೆ ಸ್ಲಮ್ಸ್‌ನಲ್ಲಿರುವವರು ಬೆಂಗಳೂರು ನಗರವನ್ನು ಕಟ್ಟುವುದರಲ್ಲಿ ಪ್ರಯತ್ನ ಮಾಡಿದರು, ಕಷ್ಟಪಟ್ಟರೂ ಅದೇ ಸ್ಲಮ್‌ಗಳಲ್ಲಿದ್ದಾರೆ. ಬೆಂಗಳೂರು ನಗರದಲ್ಲಿ ನಾಲ್ಕು ಹಿಂದುಳಿದ ಭಾಗಗಳು ಏನಿವೆ ಅವು ನೂರು ವರ್ಷಗಳಿಂದ ಹಾಗೆಯೇ ಇನ್ನೂ ಬಹುತೇಕ ಹೊಲಸು ಕೊಂಪೆಗಳಾಗಿಯೇ ಉಳಿದುಕೊಂಡಿವೆ ವರ್ಷಗಳ ನಂತರವೂ ಏನೊಂದು ಬದಲಾವಣೆಯಾಗದೆ ಹಾಗೆಯೇ ಉಳಿದಿವೆ. ಅರ್ಬನ್ ಪ್ಲಾನಿಂಗ್ ಅಂಡ್ ಡೆವಲೆಪ್‌ಮೆಂಟ್ ಏನಿದೆ ಅದನ್ನು ಹೆಚ್ಚು ಪ್ರಮಾಣದಲ್ಲಿ ಮಾಡುತ್ತಿದ್ದೇವೆಂದು ಹೇಳಿ ದೊಡ್ಡ ಲೆವೆಲ್‌ನಲ್ಲಿ ಹೈಪವರ್ ಕಮಿಟಿಯನ್ನು ಇಟ್ಟುಕೊಂಡು ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ, ಇದು ಕೇವಲ ಬ್ಯೂರೋಕ್ರಾಟ್ಸ್ ಕಮಿಟಿಗಳಾಗಿ ಬ್ಯೂರೋಕ್ರಾಟಿಕ್ ಅಪ್ರೋಚ್ ಆಗಿ ಪಾಪ್ಯುಲರ್ ಇಂಟೆರೆಸ್ಟ್ ಕೈಬಿಟ್ಟು ಮಾಡುವಂಥ ಕೆಲಸಗಳು ನಡೆದುಕೊಂಡು ಬರುತ್ತಿದೆ. ಆದ್ದರಿಂದ ತಮ್ಮಲ್ಲಿ ಈ ಸರ್ಕಾರವನ್ನು ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಯಾವುದೇ ಒಂದು ಸಾಧಾರಣ ನಾಗರೀಕರ ಪರವಾಗಿ, ಅವರ ಬೆಳವಣಿಗೆಗಾಗಿ, ಅವರ ಅಭಿವೃದ್ಧಿಗಾಗಿ ಅವರ ಪ್ರಗತಿಗಾಗಿ ಮಾಡಬೇಕಾದಾಗ ಸಾಧಾರಣವಾಗಿ ಜನತಾ ಪ್ರತಿನಿಧಿಗಳು ಯಾರು ಕಮಿಟೆಡ್ ರೆಪ್ರಸಂಟೆಟೀವ್ಸ್ ಎಂದು ಇರುತ್ತಾರೋ ಆ ವಿಷಯಗಳಲ್ಲಿ ಸಾಕಷ್ಟು ಕಮಿಟ್‌ಮೆಂಟ್ಸ್ ಇರುತ್ತದೆ. ಹಾನೆಸ್ಟ್ ಇರುತ್ತದೆ ಅಂಥಾವರನ್ನು ಸೇರಿಸಿ ಒಂದು ನಾನ್–ಅಫಿಷಿಯಲ್ಸ್ ಕಮಿಟಿಯನ್ನು ಮಾಡಿದಾಗ ಮಾತ್ರ ಅದು ಸರಿಯಾದ, ಉಪಯುಕ್ತವಾದ ಕಮಿಟಿಯಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡುವಂಥ ಕಮಿಟಿಯಾಗುತ್ತದೆ.

ಅದು ಕೇವಲ ಬ್ಯೂರೋಕ್ರೆಟ್ಸ್ ಕಮಿಟಿಯಾದರೆ ಏನು 100 ವರ್ಷಗಳಿಂದ ಇದುವರೆವಿಗೂ ಬ್ಯೂರೋಕ್ರಾಟ್ಸ್ ಪ್ಲಾನಿಂಗ್ ಅಂಡ್ ಡೆವಲಪ್‌ಮೆಂಟ್ ಮಾಡಿಕೊಂಡು ಬಂದಿರುತ್ತಾರೆ. ಅದು ಯಾವ ಬೆನಿಫಿಷಿಯರೀಸ್‌ಗೂ, ಯಾವ ಸಾಧಾರಣ ಶೋಷಿತ ವರ್ಗಕ್ಕೂ ಹೋಗಿಲ್ಲ, ಆ ಜನ ಹಾಗೆಯೇ ಆಗುತ್ತಾರೆ. ಅದೇ ರೀತಿಯಲ್ಲಿ ಮೊನ್ನೆ ಮೊನ್ನೆ ತಾನೆ ಒಂದು ರ್‍ಯಾಪಿಡ್ ಟ್ರಾನ್ಸ್‌ಪೋರ್ಟ್ ಸಿಸ್ಟಮ್‌ನಲ್ಲಿ ಒಂದು ಹೈಪವರ್ ಕಮಿಟಿ ಎಂದು ಮಾಡಿದರು. ಅದರಲ್ಲೂ ಕೂಡ ಈ ಸದನದ ಸದಸ್ಯರನ್ನಾಗಲಿ, ಪಾರ್ಲಿಮೆಂಟ್ ಸದಸ್ಯರನ್ನಾಗಲಿ, ಬೆಂಗಳೂರು ನಗರದ ನಾಗರೀಕರು ಅದರಲ್ಲೂ ಯಾರು ಬಹಳ ಕಾಲದಿಂದ ಅನುಭವ ಪಡೆದಂಥವರು ಮತ್ತು ನಿಷ್ಠೆಯುಳ್ಳಂಥವರನ್ನೂ ಕೂಡ ಸೇರಿಸಿ ಮಾಡಲಿಲ್ಲ. ಎಲ್ಲೋ ಕುಳಿತುಕೊಂಡರು, ಎಲ್ಲೋ ಕುಳಿತುಕೊಂಡು ತೀರ್ಮಾನಗಳನ್ನು ಮಾಡಿದರು. ಅದರ ಹೊರೆಯನ್ನು ಬೆಂಗಳೂರು ನಗರದ ನಾಗರೀಕರ ಮೇಲೆ ಹೇರಿದರು. ಅದು ಯಾವಾಗ ಅನುಷ್ಠಾನಕ್ಕೆ ಬರುತ್ತದೆ, ಹೇಗೆ ಬರುತ್ತದೆ, ಈ ಜನತೆ ಅವರ ಸಂಕಷ್ಟಗಳನ್ನು ಹೇಗೆ ಎದುರಿಸುತ್ತಾರೆ ಎನ್ನುವ ಮಾತು ಇಲ್ಲ. ಆದ್ದರಿಂದ ನಾನು ಬಹಳ ಒತ್ತಾಯ ಪೂರ್ವಕವಾಗಿ ಹೇಳುತ್ತೇವೆ. ಸರ್ಕಾರ ಯಾವುದೇ

ಸಂದರ್ಭದಲ್ಲಿ ಯೋಜನೆ ಮಾಡುವಂತಹ ಒಂದು ಸಮಿತಿಯನ್ನು ಮಾಡಿದ್ದೇ ಆದರೆ ಸಾರ್ವಜನಿಕ ಪ್ರಗತಿಗಾಗಿ, ಅಭಿವೃದ್ಧಿಗಾಗಿ, ಕಲ್ಯಾಣಕ್ಕಾಗಿ ಮಾಡುವುದಾದರೆ ನಾನ್ –ಅಫಿಷಿಯಲ್ ಮೆಂಬರ್ಸ್‌ನ್ನು ಕೂಡ ಸೂಕ್ತವಾದಂಥವರನ್ನು, ಅನುಭವಸ್ಥರನ್ನು, ನಿಷ್ಠಾವಂತರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಬೇಕು. ಅದನ್ನು ಮಾಡಿದಾಗ ಮಾತ್ರ ಆ ಸಮಿತಿ ಒಂದು ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಆಗುತ್ತದೆ.

ಸಾರ್ವಜನಿಕರ ಹಿತದೃಷ್ಟಿಯನ್ನು ಪ್ರತಿಬಿಂಬಿಸುವುದಕ್ಕೆ ಅನುಕೂಲವಾಗುತ್ತದೆಂಬ ಮಾತನ್ನು ಹೇಳಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಟ್ರಾಫಿಕ್ ಪ್ರಾಬ್ಲಂ ಎಷ್ಟಾಗುತ್ತಿದೆ ಎಂದು ಪದೇ ಪದೇ ಹೇಳುತ್ತಿದ್ದೇವೆ. ಒಂದು ಕಡೆಯೂ ಪಾರ್ಕ್ ಮಾಡುವುದಕ್ಕಾಗುವುದಿಲ್ಲ. ಎಲ್ಲಿ ಪಾರ್ಕಿಂಗ್ ಮಾಡಕೂಡದು ಅಂಥ ಕಡೆಗಳಲ್ಲಿ ಪಾರ್ಕಿಂಗ್‌ಗೆ ಪೊಲೀಸ್ ಅಧಿಕಾರಿಗಳು ಹೆಚ್ಚಿನ ಅವಕಾಶ ಮಾಡಿಕೊಡುತ್ತಿದ್ದಾರೆ. ಎಲ್ಲಿ ಪಾರ್ಕಿಂಗ್ ಮಾಡಬೇಕೋ ಅಲ್ಲಿ ಮಾಡುವುದಕ್ಕೆ ಅವಕಾಶ ಮಾಡುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಸಲಹೆ ಮಾಡುತ್ತೇನೆ. ಬೆಂಗಳೂರು ನಗರದಲ್ಲಿ ಚರ್ಚ್‌ಗಳ ಹತ್ತಿರ, ಶಾಲೆಗಳ ಹತ್ತಿರ, ಮಸೀದಿಗಳ ಹತ್ತಿರ ಎಲ್ಲೆಲ್ಲಿ ಅನಾವಶ್ಯಕವಾಗಿ ಜನ ಬಂದು ಕಾರ್ ಪಾರ್ಕಿಂಗ್ ಮಾಡುತ್ತಾರೆ ಆ ಭಾಗದಲ್ಲಿ ಪಾರ್ಕಿಂಗ್ ನಿಷೇಧ ಮಾಡಲೇಬೇಕು. ಬಹಳ ದೂರ ಪಾರ್ಕಿಂಗ್ ಮಾಡಿ ಮಕ್ಕಳಾಗಿರಲಿ, ಹಿರಿಯರಾಗಿರಲಿ ನಡೆದುಕೊಂಡು ಆ ಜಾಗಕ್ಕೆ ಹೋಗತಕ್ಕ ಕೆಲಸ ಮಾಡಬೇಕು. ಆ ರೀತಿ ಮಾಡದಿದ್ದರೆ ಅಲ್ಲಿ ಆಕ್ಸಿಡೆಂಟ್ಸ್ ಜಾಸ್ತಿ ಆಗುತ್ತದೆ. ಬಾಲ್ಡ್ವಿನ್ ಗರ್ಲ್ಸ್ ಹೈಸ್ಕೂಲ್ ಹತ್ತಿರ ಪಾರ್ಕಿಂಗ್ ಮಾಡಬೇಡಿ ಎಂದು ಹೇಳಿದ್ದೇನೆ. ಅಲ್ಲಿ ನನಗೆ 4 ಸಾರಿ ಆಕ್ಸಿಡೆಂಟ್ ಆಗಿದೆ. ಡಬಲ್ ಲೈನ್ ಪಾರ್ಕಿಂಗ್ ರಿಚ್‌ಮಂಡ್ ರೋಡ್‌ನಲ್ಲಿ ರೀನೇಜ್ ಸ್ಟ್ರೀಟ್‌ನಲ್ಲಿ ಮಾಡುತ್ತಾರೆ. ಪೊಲೀಸರು ಇದರ ಕಡೆ ಗಮನ ಕೊಡುತ್ತಿಲ್ಲ. ಬಿಷಪ್ ಕಾಟನ್ ಬಾಯ್ಸ್ ಸ್ಕೂಲ್, ಗರ್ಲ್ಸ್ ಸ್ಕೂಲ್ ಹತ್ತಿರ ಸೋಫಿಯ ಕಾನ್‌ವೆಂಟ್ ಹತ್ತಿರ ಎಲ್ಲ ಪಾರ್ಕಿಂಗ್ ಮಾಡುವುದರಿಂದ ಆಕ್ಸಿಡೆಂಟ್‌ಗಳು ಬಹಳ ಆಗುತ್ತಿವೆ. ಬೇಡವೆಂದರೂ ಪೊಲೀಸರು ಕೇಳುತ್ತಿಲ್ಲ. ಕಾರ್ ಓನರ್ಸ್ ಮತ್ತು ಲಕ್ಸುರಿ ಲೈಫ್ ಲೀಡ್ ಮಾಡುವವರಿಗೆ ಮಾತ್ರವೇ ಈ ಬೆಂಗಳೂರು ನಗರ ಇರುವುದು ಬಡ ಪಾದಚಾರಿಗಳು, ಸೈಕಲ್ ಮೇಲೆ ಸವಾರಿ ಮಾಡುವವರಿಗೆ ಜನಸಾಮಾನ್ಯರಿಗೆ ರಸ್ತೆ ಅನುಕೂಲವಾಗಿದೆಯೇ ಎಂದು ನಾವು ಯೋಚಿಸಬೇಕಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಟ್ರಾಫಿಕ್ ಪೊಲೀಸ್ ಇಲಾಖೆಯವರಿಗೆ ತೀವ್ರ ಆದೇಶ ಕೊಡಬೇಕು. ಪಾರ್ಕಿಂಗ್ ಇಂಥ ಸ್ಥಳದಲ್ಲಿ ತೆಗೆದುಹಾಕಬೇಕು, ಇಂಥ ಸ್ಥಳಗಳಲ್ಲಿ ಮಾಡಬಾರದೆಂದು ಹೇಳಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಇನ್ನೊಂದು ಮುಖ್ಯವಾದ ವಿಚಾರವೆಂದರೆ, ಬೆಂಗಳೂರು ನಗರದಲ್ಲಿ ಸರ್ಫೇಸ್ ಪಾರ್ಕಿಂಗ್ ಸಾಧ್ಯತೆ ಇಲ್ಲ. ಆದಕ್ಕಾಗಿ ನಾವು ಹೈರೈಸ್ ಬಿಲ್ಡಿಂಗ್ ಕಟ್ಟುವಾಗ ಬೇಸ್‌ಮೆಂಟ್ ಪಾರ್ಕಿಂಗ್ ಮಾಡಬೇಕೆಂದು ಲೈಸೆನ್ಸ್ ಕೊಟ್ಟಿದ್ದೇವೆ. ಆದರೆ ಬೇಸ್‌ಮೆಂಟ್ ಪಾರ್ಕಿಂಗ್‌ಗೆ ಲೈಸೆನ್ಸ್ ತೆಗೆದುಕೊಂಡು ಬೇಸ್‌ಮೆಂಟ್ ಪಾರ್ಕಿಂಗ್ ಮಾಡದೆ ರೆಸ್ಟೋರೆಂಟ್ಸ್ ವ್ಯಾಪಾರಕ್ಕೆ ಹೀಗೆ ನಾನಾ ಕಾರಣಕ್ಕೆ ದುರುಪಯೋಗವಾಗುತ್ತಿದೆ. ಇಲ್ಲಿ ಹೇಳುತ್ತಿದ್ದಾರೆಯೇ ಹೊರತು ಯಾವುದೇ ತೀವ್ರ ಕ್ರಮ ಕಟ್ಟಡದ ಓನರ್ ಮೇಲಾಗಲಿ, ಲೈಸೆನ್ಸ್ ದುರುಪಯೋಗ ಮಾಡಿದವರ ಮೇಲಾಗಲಿ ತೆಗೆದುಕೊಂಡಿಲ್ಲ. ಅಂದ ಮೇಲೆ ನಾವು ನಿಷ್ಠೆಯ ಆಡಳಿತ, ದಕ್ಷ ಆಡಳಿತ, ಸ್ವಚ್ಛ ಆಡಳಿತ, ಸಾರ್ವಜನಿಕರ ಅನುಕೂಲಕ್ಕಾಗಿ ಆಡಳಿತ ಕೊಡುತ್ತೇವೆಂದರೆ ಏನು ಅರ್ಥ ಇದೆಯೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇನ್ನು ಪೋಲೀಸ್ ಇಲಾಖೆಯ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಆಗಿಂದಾಗ್ಗೆ ಸದನದಲ್ಲಿ ಹೈವೇ ರಾಬರಿ, ಡೇಲೈಟ್ ರಾಬರಿ ವಿಷಯ ಕೇಳುತ್ತಿದ್ದೇವೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ಗೊತ್ತಿಲ್ಲ. ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ, ಹೈವೇ ರಾಬರಿ ತಡೆಗಟ್ಟಬಹುದು, ಡೇಲೈಟ್ ರಾಬರಿ ತಡೆಗಟ್ಟಬಹುದು. ಆದರೆ ಪೊಲೀಸ್ ಠಾಣೆಗಳಲ್ಲಿ ಏನು ರಾಬರಿ ನಡೆಯುತ್ತಿದೆ

ಅದನ್ನು ತಡೆಗಟ್ಟುವುದಕ್ಕೆ ಇವರಿಂದ ಸಾಧ್ಯವಾಗಿಲ್ಲ. ಅಮಾಯಕರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಬಂದು ಅವರಿಗೆ ಅಮಾನುಷವಾಗಿ ಕಷ್ಟ ಕೊಟ್ಟು ಏರೋಪ್ಲೇನ್ ಹಾಕಿ ಅವರನ್ನು ಬಲಿ ಹಾಕಿ ಅವರಿಂದ ಸಹಸ್ರಾರು ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಮಾಹಿತಿ ಕೊಡಬೇಕೆಂದರೆ ನನ್ನ ಹತ್ತಿರ ಇದೆ. ಈ ಸಂದರ್ಭದಲ್ಲಿ ಒಂದು ಮಾಹಿತಿ ಮಾತ್ರ ಹೇಳುತ್ತೇನೆ. ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಠಾಣೆಗೆ ಜನವರಿ 16 ರಂದು ಆಡುಗೋಡಿ – ಮಡಿವಾಳದಿಂದ ದೂರ ಇರುವ ಸ್ಥಳದಿಂದ ಹರಿಜನ ಯುವಕನನ್ನು ಕಮರ್ಷಿಯಲ್ ಪೋಲೀಸ್ ಸ್ಟೇಷನ್ ಹನುಮಂತರಾಯಪ್ಪ ಎಂಬುವವರು ವೈಯಕ್ತಿಕ ದ್ವೇಷಕ್ಕಾಗಿ ಹಿಡಿದುಕೊಂಡು ಬಂದು ಠಾಣೆಯಲ್ಲಿ ಹಾಕಿ ಬರೀ ಮೈ ಮಾಡಿ ಹೊಡೆದು ಹೀನಾಮಾನವಾಗಿ ಅಮಾನುಷ ಕೃತ್ಯ ನಡೆಸಿ ಏರೋಪ್ಲೇನ್ ಹಾಕಿ ತೊಂದರೆ ಕೊಟ್ಟು ಅವನ ಕೈಯಲ್ಲಿ ಎರಡು ಚೆಕ್‌ಗಳಿಗೆ, ಒಂದು ಲಕ್ಷದ 25 ಸಾವಿರ ರೂಪಾಯಿನದು ಒಂದು, ಇನ್ನೊಂದು ಬ್ಲಾಂಕ್ ಚೆಕ್ ಸಹಿ ಮಾಡಿಸಿ ತೆಗೆದುಕೊಂಡು, ಬಿಳಿ ಕಾಗದದ ಮೇಲೆ ಮತ್ತೊಂದು ಸಹಿ ಮಾಡಿಸಿ ಬಹಳ ತೊಂದರೆ ಕೊಡುವುದರ ಜೊತೆಗೆ, ಅವರ ಹೆಂಡತಿಯನ್ನು ಬರಮಾಡಿಕೊಂಡು ಆಕೆಯ ಮೈಮೇಲಿದ್ದ ಒಡವೆಗಳನ್ನು ಕಿತ್ತುಕೊಂಡು ಪೋಲೀಸರ ಕೈಯಲ್ಲಿ ಕಳುಹಿಸಿ ಮಾರ್ವಾಡಿ ಪಾನ್ ಬ್ರೋಕರ್ ಹತ್ತಿರ ಕೊಟ್ಟು 5 ಸಾವಿರ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಆ ಸಬ್‌ಇನ್ಸ್‌ಪೆಕ್ಟರ್ 5 ಸಾವಿರ ರೂಪಾಯಿಗಳನ್ನು ಠಾಣೆಯಲ್ಲಿ ಕಿತ್ತುಕೊಂಡಿದ್ದಾರೆ. ಈ ವಿಷಯವನ್ನು ಯಾರಿಗಾದರೂ ಹೇಳುತ್ತೇನೆಂದಗೆ ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಕೆ ಹಾಕಿದ್ದಾರೆ. ಎಂ.ಎಲ್.ಎ.ಗಳಿಗೆ, ಮೇಲಧಿಕಾರಿಗಳಿಗೆ, ವಕೀಲರಿಗೆ, ಪತ್ರಿಕೆಯವರಿಗೆ ಯಾರಿಗಾದರೂ ಹೇಳಿದರೆ ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಸಿದ್ದಾರೆ. ಧೈರ್ಯ ಮಾಡಿ ನನ್ನ ಹತ್ತಿರ ಬಂದ ಮೇಲೆ ಠಾಣೆಯ ಇನ್ಸ್‌ಪೆಕ್ಟರ್‌ಗೆ ಕಾಂಟಾಕ್ಟ್ ಮಾಡಿ ಆದರೂ ಆ ಯುವಕ ನಾನು ಆ ಬಗ್ಗೆ ಸಬ್ ಇನ್ಸ್‌ಪೆಕ್ಟರ್ ಹತ್ತಿರ ಮಾತನಾಡಿದರೆ ಆತ ಬಹಳ ದುರಹಂಕಾರದಿಂದ ಮಾತನಾಡಿದ.

ಏನ್ರಿ ಒಬ್ಬ ಬಡವನನ್ನು ಹಿಡಿದುಕೊಂಡು ಬಂದು ಅವಮರ್ಯಾದೆ ಮಾಡಿದ್ದೀರಿ ಅಂದ ನಿಮ್ಮಂತಹವರು ಸಿಕ್ಕರೆ ನಿಮಗೂ ಮಾಡುತ್ತೇವೆ, ಎಲ್ಲರಿಗೂ ಮಾಡುತ್ತೇವೆಂದು ಹೇಳಿದ. ಇ ದುರ್ಮಾರ್ಗತನ, ಇಷ್ಟು ದುರಹಾಂಕರತನ ಪೋಲೀಸ್ ಠಾಣೆಗಳಲ್ಲಿ ನಡೆಯುತ್ತಿದೆ. ಯಾರಾ ಸಾರ್ವಜನಿಕರು ಕಂಪ್ಲೈಂಟ್ ಮಾಡುವುದಕ್ಕೆ ಹೋದರೆ ಅವರನ್ನೇ ಹೊಡೆಯುವುದು. ಇದು ಮೇಲೆ ನಾನು ಅಲ್ಲಿನ ಇನ್ಸ್‌ಪೆಕ್ಟರ್ ಡಿಸೌಜರವರನ್ನು ಕಾಂಟಾಕ್ಟ್ ಮಾಡಿದಾಗ, ಅವರು ನನ್ನ ಮನೆಗೆ ಬಂದು ನನ್ನ ಹತ್ತಿರ ಮಾತನಾಡಿದ ಮೇಲೆ ಅವರು ಕ್ರಮ ತೆಗೆದುಕೊಂಡ ಮೇಲೆ ಎರಡು ಚೆಕ್‌ಗಳನ್ನು ವಾಪಸ್ಸು ಕೊಡಿಸಿದ್ದಾರೆ. ಮೊದಲು ಬಿಳಿ ಪೇಪರ್ ಮೇಲೆ ಸಹಿ ಮಾಡಿದ್ದನ್ನು ವಾಪಸ್ಸು ಕೊಟ್ಟಿಲ್ಲ. ಹೆಂಡತಿಯ ಮೈಮೇಲಿದ್ದ ಆಭರಣಗಳನ್ನು ಒತ್ತೆಯಿಟ್ಟು 5 ಸಾವಿರ ಕೊಟ್ಟಿದ್ದಾರೆ ಅದನ್ನು ಕೇಳಿದಾಗ ಮೊದಲು ಕೊಡುವುದಿಲ್ಲವೆಂದರು. ನಾನು ಬೆದರಿಸಿ ಹೇಳಿದೆ. ನೀವು ನ್ಯಾಯಸಮ್ಮತವಾಗಿ, ಧರ್ಮವಾಗಿ ವಾಪಸ್ಸು ಕೊಡಲಿಲ್ಲವೆಂದರೆ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿ ಮುಖ್ಯಮಂತ್ರಿಗಳ ಟೇಬಲ್ ಮೇಲೆ 5 ಸಾವಿರ ರೂಪಾಯಿ ಬರುವ ಹಾಗೆ ಮಾಡುತ್ತೇನೆಂದು ಬೆದರಿಸಿದ ಮೇಲೆ ಇವತ್ತು 4 ಸಾವಿರ ರೂಪಾಯಿಗಳನ್ನು ಕೊಡುತ್ತೇನೆಂದು ನಿನ್ನೆ ರಾತ್ರಿ ಫೋನ್ ಮಾಡಿದ್ದಾರೆ. ಹೀಗೆ ಬೆಂಗಳೂರು ನಗರದ ಠಾಣೆಗಳಲ್ಲಿ ಇಂತಹ ಅವ್ಯವಹಾರಗಳು, ಅಕ್ರಮಗಳು ನಡೆಯುತ್ತಿವೆ ಎಂದರೆ ಇನ್ನು ದೂರ ದೂರ ಪ್ರದೇಶಗಳಲ್ಲಿ ಏನಾಗುತ್ತಿದೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ.. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಬಹಳ ಕಳಕಳಿಯಿಂದ ಬೇಡಿಕೊಳ್ಳುವುದೇನೆಂದರೆ ಪೋಲೀಸ್ ಠಾಣೆಗಳಲ್ಲಿ ಯಾವ ರೀತಿ ಉಸ್ತುವಾರಿ ಇದೆ, ಎಲ್ಲೆಲ್ಲಿ ಇದೆ, ಈ ರೀತಿ ನಡೆಯದಂತೆ ಏನು ಮಾಡುತ್ತಿದ್ದಾರೆ, ಇದು ನಡೆದಿದ್ದರೆ ಈ ರೀತಿ ನಡೆಯುವುದಕ್ಕೆ ಏಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಮೇಲಧಿಕಾರಿಗಳು ಏನು ಮಾಡುತ್ತಿದ್ದಾರೆ ? 15 ದಿವಸ, 1 ತಿಂಗಳಿಗೆ

ಒಂದು ಸಲ ಮೇಲಧಿಕಾರಿಗಳು ಇನ್ಸ್‌ಪೆಕ್ಷನ್‌ಗೆ ಹೋಗುತ್ತಿದ್ದಾರಲ್ಲ ಏನು ಇನ್ಸ್‌ಪೆಕ್ಷನ್ ಮಾಡಿದ್ದಾರೆ ಈ ಅಕ್ರಮಗಳು ದೌರ್ಜನ್ಯಗಳು ನಡೆದಿರುವುದನ್ನು ನೋಡಿದ್ದಾರೆಯೆ ಎಂದು ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ನಾನು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಮೇಲಧಿಕಾರಿಗಳನ್ನು ಬರ ಮಾಡಿಕೊಂಡು ಅವರ ಸಭೆಯಲ್ಲಿ ಈ ವಿಷಯವಾಗಿ ಚರ್ಚೆ ಮಾಡಿ ಇನ್ನು ಮುಂದೆ ಯಾವುದೇ ಒಂದು ಠಾಣೆಯಲ್ಲಿ ಅಮಾಯಕರ ಮೇಲೆ ಅತ್ಯಾಚಾರ, ಅನ್ಯಾಯಗಳು ಹಲ್ಲೆ ಆಗದಿರುವಂತೆ ನೋಡಿಕೊಂಡು ಸಾರ್ವಜನಿಕರಿಗೆ ಪೊಲೀಸ್ ಠಾಣೆಗಳ ಬಗ್ಗೆ ವಿಶ್ವಾಸ, ನಂಬಿಕೆ ಬರುವಂತಹ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ನಾನು ಈ ಸಮಯದಲ್ಲಿ ಹೇಳುತ್ತಿದ್ದೇನೆ.

ಇನ್ನು ಪವರ್ ಜನರೇಷನ್ ಮತ್ತು ಡಿಸ್ಟ್ರಿಬ್ಯೂಷನ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಕಬ್ಬನ್‌ಪೇಟೆ, ಸಂಪಂಗಿರಾಮನಗರ, ಶಿವಾಜಿನಗರ, ಶಾಂತಿನಗರ, ಮೈಸೂರು ಬ್ಯಾಂಕ್, ಬಳೇಪೇಟೆ – ಇಲ್ಲಿ ಸಾಕಷ್ಟು ಜನ ನೇಯ್ಗೆಯವರು ಇದ್ದಾರೆ. ಅವರಲ್ಲಿ ಬಹಳ ಬಡವರೂ ಇದ್ದಾರೆ, ಬಹಳ ಅನುಕೂಲಸ್ಥರೂ ಇದ್ದಾರೆ. ಬಹಳ ಅನುಕೂಲಸ್ಥರಿಗೆ ಯಾವ ರೀತಿಯಲ್ಲೋ ಪವರ್ ಸಪ್ಲೈಯಾಗುತ್ತದೆ. ಆದರೆ ಕಡು ಬಡವರು ಒಂದೆರಡು ಪವರ್ ಲೂಮ್ಸ್ ಇಟ್ಟುಕೊಂಡಿರುತ್ತಾರೆ, ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ಪವರ್ ಸಪ್ಲೈಯಾಗುತ್ತಿಲ್ಲ. ದಿನಗೂಲಿಯ ಮೇಲೆ ಕೆಲಸ ಮಾಡುವವರಿಗೆ ಸಂಬಳ ಕೊಡುವಷ್ಟಕ್ಕೂ ಪವರ್ ಸಪ್ಲೈಯಾಗುತ್ತಿಲ್ಲ. ಅವರು ಉತ್ಪಾದನೆ ಮಾಡಿ ವ್ಯಾಪಾರ ಮಾಡಿ ಬದುಕುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪವರ್ ಸಪ್ಲೈ ಸರಿಯಾದ ರೀತಿಯಲ್ಲಿ ರ್‍ಯಾಷನಲೈಸ್ ಮಾಡಿ ಹಂತ ಹಂತಗಳಲ್ಲಿ ಯೂನಿಫಾರಂ ಆಗಿ ಯಾವ ಸಮಯದಲ್ಲಿ ಪವರ್ ಸಪ್ಲೈ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಿ ಕೆ.ಇ.ಬಿ.ಯವರು ತೀರ್ಮಾನ ಮಾಡುವುದು ಸೂಕ್ತವೆಂದು ಪವರ್ ಮಿನಿಸ್ಟರ್ ಅವರಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತಿದ್ದೇನೆ. ಅವರು ಪ್ರತ್ಯೇಕವಾಗಿ ಒಂದು ಸಭೆಯನ್ನು ಕರೆದಾಗ ನಾನು ಹೇಳಿದ್ದೇನೆ. ಈಗ ಮತ್ತೆ ಅದನ್ನೇ ಹೇಳುತ್ತೇನೆ. ಪವರ್ ಸಪ್ಲೈ ಇರ್‌ರ್‍ಯಾಷನಲ್ ಆಗಿ ಡಿಸ್ಕ್ರಿಮಿನೇಟಾಗಿ ಡಿಸ್ಟ್ರಿಬ್ಯೂಟ್ ಆಗುತ್ತಿರುವುದರಿಂದ ಜನಸಾಮಾನ್ಯರಿಗೆ ಅದರಲ್ಲೂ ಸಣ್ಣ ಪುಟ್ಟ ಕೈಗಾರಿಕೆಗಳವರಿಗೆ ಬಹಳ ತೊಂದರೆಯಾಗುತ್ತಿದೆ. ಆಮೇಲೆ ಪವರ್ ಲೀಕ್ ಮತ್ತು ಪವರ್ ಥೆಫ್ಟ್ ಆಗುತ್ತಿರುವ ಬಗ್ಗೆ ಹೇಳುತ್ತಿದ್ದಾರೆ. ದೊಡ್ಡ ದೊಡ್ಡ ಕೈಗಾರಿಕೆಗಳವರು ಕೆ.ಇ.ಬಿ.ಗೆ ಲಕ್ಷಾಂತರ ರೂಪಾಯಿ ನಷ್ಟವಾಗುವ ರೀತಿಯಲ್ಲಿ ಪವರನ್ನು ಕಳ್ಳತನ ಮಾಡುತ್ತಾರೆ. ಅವರ ಮೇಲೆ ಶಿಸ್ತು ಕ್ರಮವನ್ನು ತೀವ್ರವಾಗಿ ಏತಕ್ಕೆ ತೆಗೆದುಕೊಳ್ಳುತ್ತಿಲ್ಲ? ಒಂದು ರೀತಿ ಅವರ ಮೇಲೆ ರೈಡ್ ಮಾಡಿದರೂ ಕ್ರಮ ತೆಗೆದುಕೊಂಡಿದ್ದು ಸಾರ್ವಜನಿಕರಿಗೆ ಗೊತ್ತಾಗುತ್ತಿಲ್ಲ. ಅದರ ಬಗ್ಗೆ ಈ ಸಂದರ್ಭದಲ್ಲಿ ಅವರನ್ನು ಕೇಳಬಯಸುತ್ತೇನೆ.

ಇನ್ನು ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲ. ಬಹಳ ದಿವಸಗಳಿಂದಲೂ ಕೇಳುತ್ತಿದ್ದೇನೆ. ಔಷಧಿಗಳು ಇದ್ದರೂ ಸರಿಯಾದ ರೀತಿಯಲ್ಲಿ ರೋಗಿಗಳಿಗೆ ವಿತರಣೆಯಾಗುತ್ತಿಲ್ಲ. ಉದಾಹರಣೆಗೆ ಬೋರಿಂಗ್ ಅಂಡ್ ಲೇಡಿಕರ್ಜನ್ ಆಸ್ಪತ್ರೆಯಲ್ಲಿ ಸಾರ್ಕ್ ನಡೆದ ಸಮಯದಲ್ಲಿ ಒಳ್ಳೆಯ ಎಕ್ಯುಪ್‌ಮೆಂಟ್‌ಗಳನ್ನು ತಂದರು. ಅಲ್‌ಟ್ರಾಸೌಂಡ್ ಯೂನಿಟ್, ಇಂಡೋ ಸ್ಕೋಪಿಕ್ ಯೂನಿಟ್, ಡಯಾಲಿಸಿಸ್ ಯೂನಿಟ್ – ಹೀಗೆ ಸಾಕಷ್ಟು ತಂದರು. ಒಳ್ಳೆಯ ಎಕ್ವಿಪ್‌ಮೆಂಟ್ಸ್ ಒಳ್ಳೆಯ ಆಧುನಿಕವಾಗಿ ಬಹಳ ಚೆನ್ನಾಗಿ ಮಾಡಿದರು. ಫೈವ್ ಸ್ಟಾರ್ ಟ್ರೀಟ್‌ಮೆಂಟ್ ಕೊಡುವುದಕ್ಕಿಂತ ಹೆಚ್ಚು ಟ್ರೀಟ್‌ಮೆಂಟ್ ಕೊಡುವ ರೀತಿಯಲ್ಲಿ ಮಾಡಿದರು. ಏಕೆಂದರೆ, ಅವೊತ್ತು ಬೇರೆ ಬೇರೆ ರಾಷ್ಟ್ರಗಳ ಪ್ರಧಾನ ಮಂತ್ರಿಗಳು, ಮಂತ್ರಿಗಳು ದೊಡ್ಡ ದೊಡ್ಡ ಅಧಿಕಾರಿಗಳು ಬರುತ್ತಾರೆ, ನಮ್ಮ ಪ್ರಧಾನ ಮಂತ್ರಿಗಳು ಬರುತ್ತಾರೆಂದು ಮಾಡಿದರು. ಅದು ಆದ ಮೇಲೆ ಅವೊಂದು ಎಕ್ಯುಪ್‌ಮೆಂಟ್‌ಗಳನ್ನು ಯಾವ ಉದ್ದೇಶಕ್ಕೆ ತಂದರೋ, ರೋಗಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಯೋಚನೆ ಮಾಡಿದ್ದರೋ ಅದೆಲ್ಲ ಇವತ್ತು ಬಹಳ ಕಡಿಮೆ ದರ್ಜೆಗೆ ಇಳಿದು ಹೋಗಿದೆ.

ಅವನ್ನು ರಿಪೇರಿ ಮಾಡಬೇಕು ಎಂದು ಅಲ್ಲಿನ ಸೂಪರಿಂಟೆಂಡೆಂಟ್ ಸರ್ಕಾರಕ್ಕೆ ಕಾಗದ ಬರೆದರೆ, ಸರ್ಕಾರದಿಂದ ಸಮಂಜಸವಾದಂತಹ ಉತ್ತರವೇ ಬರುವುದಿಲ್ಲ. ಇವತ್ತಿನ ಪರಿಸ್ಥಿತಿಯನ್ನು ನಾನು ಹೇಳುವುದಾದರೆ, ಅಲ್ಲಿನ ಸುಪರಿಂಟೆಂಡೆಂಟ್ ಹತ್ತಿರ ಕ್ಯಾಷ್ ಬ್ಯಾಲೆನ್ಸ್ ನಿಲ್‌ಗೆ ಬಂದಿದೆಯೆಂತೆ. ಮೂರು ದಿನದ ಕೆಳಗೆ ಅವರ ಹತ್ತಿರ 18 ರೂಪಾಯಿ. ಕ್ಯಾಷ್ ಬ್ಯಾಲೆನ್ಸ್ ಇತ್ತಂತೆ. ಅವರ ಕೈಯಲ್ಲಿ ಹಣವೇ ಇಲ್ಲ ಎಂದರೆ ಅವರು ಯಾವ ರೀತಿ ರೋಗಿಗಳಿಗೆ ಮದ್ದನ್ನು ಮತ್ತು ಇಂಜೆಕ್ಷನ್‌ನ್ನು ಕೊಂಡುಕೊಳ್ಳುವುದಕ್ಕೆ ಬರುತ್ತದೆ. ಯಾವ ರೀತಿಯಲ್ಲಿ ರೋಗಿಗೆ ಕೊಡಬೇಕಾದಂತಹ ಒಂದು ಟ್ರೀಟ್‌ಮೆಂಟ್ ಕೊಡುವುದಕ್ಕೆ ಸಾಧ್ಯ ಆಗುತ್ತದೆ. ಮನಸ್ಸಿಗೆ ಬಹಳ ನೋವಾಗುವಂತಹ ಒಂದು ಪರಿಸ್ಥಿತಿ ಅಲ್ಲಿ ಇದೆ. ಆದುದರಿಂದ ನಾನು ತಮ್ಮ ಮೂಲಕ ಕಳಕಳಿಯಿಂದ ಬೇಡಿಕೊಳ್ಳುವುದೇನೆಂದರೆ, ಯಾವುದೇ ಒಂದು ಆಸ್ಪತ್ರೆ ನಿರ್ಮಾಣ ಮಾಡುವುದಾಗಿರಲಿ, ಅಲ್ಲಿಗೆ ಹೆಚ್ಚುವರಿ ಡಾಕ್ಟರ್‌ಗಳನ್ನು ಪೋಸ್ಟ್ ಮಾಡುವುದಾಗಿರಲಿ ಅಥವಾ ಟ್ರಾನ್ಸ್‌ಫರ್ ಮಾಡುವುದಾಗಿರಲಿ, ಸ್ಪೆಷಲಿಸ್ಟ್ ಅನ್ನು ಮಾಡುವುದಾಗಿರಲಿ ಮಾಡಿದ ಮೇಲೆ ಅವರಿಂದ ಸೂಕ್ತವಾದ ಪ್ರಮಾಣದಲ್ಲಿ ಕೆಲಸ ತೆಗೆದುಕೊಳ್ಳಬೇಕು, ಮತ್ತು ರೋಗಿಗಳಿಗೆ ಅನುಕೂಲವಾದಂತಹ ಚಿಕಿತ್ಸೆ ಆಗಬೇಕು. ಅದನ್ನು ಮಾಡುವುದಕ್ಕೆ ಆಗಲಿಲ್ಲ ಎಂದರೆ ಏಕೆ ಆಗಲಿಲ್ಲವೆಂದು ನಮ್ಮ ಸರ್ಕಾರ ತೀವ್ರವಾಗಿ ಗಮನಹರಿಸಬೇಕು. ಏಕೆ ಸೆಕ್ರೆಟರಿ ಲೆವೆಲ್‌ನಲ್ಲಿ ಆಗುತ್ತಿಲ್ಲ, ಡೈರೆಕ್ಟರ್ ಲೆವೆಲ್‌ನಲ್ಲಿ ಆಗುತ್ತಿಲ್ಲ, ಆಸ್ಪತ್ರೆ ಸೂಪರಿಂಟೆಂಡೆಂಟ್ ಲೆವೆಲ್‌ನಲ್ಲಿ ಆಗುತ್ತಿಲ್ಲ ಎಂದು ಗಮನಿಸಬೇಕಾಗಿ ಬರುತ್ತದೆ. ನಾನು ಬಹಳವಾಗಿ ವಿಚಾರಣೆ ಮಾಡಿದಾಗ, ಮೇಲುಗಡೆ ಇರುವ ಅಧಿಕಾರಿಗಳಿಗೂ ಮತ್ತು ಅಲ್ಲಿನ ಸೂಪರಿಂಟೆಂಡೆಂಟ್ ಅವರಿಗೂ ಸರಿಯಾದ ಹೊಂದಾಣಿಕೆ ಇಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಹೊಂದಾಣಿಕೆ ಇಲ್ಲದಂತಹ ಉಸ್ತುವಾರಿ ಮೇಲು ವರ್ಗ ಏಕೆ ಇರಬೇಕು, ಮೇಲಿನ ಅಧಿಕಾರಿಗಳು ಏಕೆ ಇರಬೇಕು. ಆಸ್ಪತ್ರೆಗಳಲ್ಲಿ ಜನತೆಯನ್ನು ತಬ್ಬಲಿಗಳನ್ನಾಗಿ ಏತಕ್ಕಾಗಿ ಮಾಡಬೇಕು, ಇದರ ಬಗ್ಗೆ ನಾವು ತೀವ್ರವಾಗಿ ಯೋಚನೆ ಮಾಡಬೇಕಾಗುತ್ತದೆ. ಮೊನ್ನೆ ನನಗೆ ಒಂದು ವಿಷಯ ತಿಳಿದು ಬಂತು. ನಾವು ಸಾರ್ಕ್ ಟೈಂನಲ್ಲಿ ಎಕ್ವಿಪ್‌ಮೆಂಟ್ಸ್ ತೆಗೆದುಕೊಂಡು ಬಂದಾಗ, ನಮ್ಮಲ್ಲಿ ಸೂಕ್ತವಾದಂತಹ ಟ್ರೈಂಡ್ ಪ್ರೊಫೆಷನಲ್ಸ್, ಆ ಎಕ್ವಿಪ್‌ಮೆಂಟ್ಸ್‌ನ್ನು ಉಪಯೋಗ ಮಾಡುವಂತಹವರು ಇರಲಿಲ್ಲ. ತದನಂತರ ಸಾಧಾರಣವಾಗಿ ಏನೋ ಒಂದು ಟ್ರೈನಿಂಗ್ ಕೊಟ್ಟಿದ್ದಾರೆ. ಅದು ಕೆಟ್ಟು ಹೋದರೆ ಸರಿ ಮಾಡುವವರು ಇಲ್ಲ. ಯಾರು ಈ ಎಕ್ವಿಪ್‌ಮೆಂಟ್ಸ್‌ನ್ನು ಸಪ್ಲೈ ಮಾಡಿದ್ದಾರೆ ಅವರಿಂದ ಸರಿ ಮಾಡಿಸಿಕೊಳ್ಳುವುದಕ್ಕೆ ಸರಿಯಾದ ಒಂದು ಕ್ರಮವನ್ನು ವಹಿಸಲಿಲ್ಲ. ಅಂದ ಮೇಲೆ ಇದರಿಂದ ಯಾರಿಗೆ ತೊಂದರೆ ಆಗುತ್ತಾ ಇದೆ. ಆಸ್ಪತ್ರೆಗಳ ವಿಷಯ ಈ ರೀತಿ ಇದೆ. ನಾನು ಮೂರು ವರ್ಷಗಳಿಂದ ಈ ಸದನದಲ್ಲಿ ಕೇಳುತ್ತಿದ್ದೇನೆ. ಇಬ್ಬರೂ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ, ಹೆಲ್ತ್ ಮಿನಿಸ್ಟರ್‌ಗೆ ಹೇಳಿದ್ದೇನೆ. ಒಬ್ಬ ಮಾಜಿ ಅಧ್ಯಕ್ಷರೂ, ಅವರು ಇಲ್ಲೇ ಇದ್ದಾರೆ.

ಬೋರಿಂಗ್ ಹಾಸ್ಪಿಟಲ್‌ನಲ್ಲಿ ಸರಿಯಾದಂತಹ ಒಂದು ಮಾರ್ಚ್ಯುಯರಿ ಇರಬೇಕು. ಸರಿಯಾದಂತಹ ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಇರಬೇಕು ಮತ್ತು ಅದಕ್ಕೆ ಪೋಸ್ಟ್ ಮಾರ್ಟಂ ಡಿಪಾರ್ಟ್‌ಮೆಂಟ್ ಇರಬೇಕು. ಅದು ಇಲ್ಲದೇ ಹೋದರೆ ಸಹಸ್ರಾರು ಜನಕ್ಕೆ ಬಹಳ ತೊಂದರೆ ಆಗುತ್ತಾ ಇದೆ. ಅದಕ್ಕಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬೇಕಾಗಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದೂರದಿಂದ ಬರುವವರ ಕಡೆಗೆ ಗಮನ ಕೊಡುವುದಿಲ್ಲ. ಆ ಮಾರ್ಚುಯರಿಯಲ್ಲಿ ಹೋಗಿ ನೋಡಿದರೆ 8–10–15 ಹೆಣಗಳು ಒಂದರ ಮೇಲೆ ಬಿದ್ದಿರುತ್ತವೆ. ನಾವು ಹೆಣಕ್ಕೆ ಏನು ಗೌರವ ಕೊಡುತ್ತಿದ್ದೇವೆ ಎಂದು ಸರ್ಕಾರಿ ಆಸ್ಪತ್ರೆಯಲ್ಲಿ ಹೋಗಿ ನೋಡಬೇಕಾಗಿದೆ. ಹೆಣದ ವಾರಸುದಾರರು ಯಾರಾದರೂ ಹೋಗಿ ಈ ತರಹ ಹೆಣದ ಮೇಲೆ ಹೆಣ ಬಿದ್ದಿರುವುದನ್ನು ನೋಡಿದರೆ, ಅವರ ಮನಸ್ಸಿನ ಮೇಲೆ ಎಷ್ಟು ಕೆಟ್ಟ ಪರಿಣಾಮವಾಗುತ್ತದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಇಷ್ಟು

ಅಮಾನವೀಯತೆಯಿಂದ, ಅಮಾನುಷ ರೀತಿಯಲ್ಲಿ ನಾವು ನಡೆದುಕೊಳ್ಳುತ್ತಿದ್ದೇವೆ. ಬೋರಿಂಗ್ ಆಸ್ಪತ್ರೆಯಲ್ಲಿ ಎಲ್ಲಾ ಅನುಕೂಲವಾಗಿದೆ, ಕಟ್ಟಡ ಆಗಿದೆ, ಕೋಲ್ಡ್ ಸ್ಟೋರೇಜ್ ಪ್ಲಾಂಟ್ ಆಗಿದೆ. ಆದರೂ ಪೋಸ್ಟ್‌ಮಾರ್ಟಂ ಡಿಪಾರ್ಟ್‌ಮೆಂಟ್‌ನ್ನು ಈವರೆಗೂ ಏತಕ್ಕಾಗಿ ವ್ಯವಸ್ಥೆ ಮಾಡಿಲ್ಲ, ಇದನ್ನು ತಕ್ಷಣ ವ್ಯವಸ್ಥೆ ಮಾಡಬೇಕು, ಮಾಡದೇ ಹೋದರೆ ಜನಕ್ಕೆ ತೊಂದರೆಯಾಗುತ್ತದೆ. ಈ ಒಂದು ಕೆಲಸ ಹಣದುಬ್ಬರದಿಂದ ಮಾಡುತ್ತಿಲ್ಲ ಎಂದು ಹೇಳುವುದರಲ್ಲಿ ಅರ್ಥ ಇಲ್ಲ. ಏಕೆಂದರೆ ಬೋರಿಂಗ್ ಅಂಡ್ ಲೇಡಿ ಕರ್ಜನ್ ಹಾಸ್ಪಿಟಲ್, ರಾಜ್ಯ ಮಟ್ಟದಲ್ಲೇ ಬಹಳ ದೊಡ್ಡ ಆಸ್ಪತ್ರೆ, ಒಳ್ಳೆಯ ಕೀರ್ತಿ ಶ್ರೇಷ್ಠವಾದಂತಹ ಹೆಸರನ್ನು ಪಡೆದಂತಹ ಒಂದು ಆಸ್ಪತ್ರೆ. ಒಳ್ಳೆಯ ಪರಿಣತೆ ಹೊಂದಿದಂತಹ ಡಾಕ್ಟರುಗಳು ಇದ್ದಾರೆ. ಅಂತಹ ಜಾಗದಲ್ಲಿ ಏತಕ್ಕೆ ನಿಮಗೆ ನಂಬಿಕೆ ಇಲ್ಲ. ವಿಕ್ಟೋರಿಯ ಆಸ್ಪತ್ರೆಗೂ, ಬೋರಿಂಗ್ ಆಸ್ಪತ್ರೆಗೂ ಮಲತಾಯಿ ಧೋರಣೆ ಏಕೆ ? ದಯವಿಟ್ಟು ಇದಕ್ಕೆಲ್ಲಾ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಕೊಡಬೇಕೆಂದು ತಮ್ಮ ಮೂಲಕ ನಾನು ಕೇಳಬಯಸುತ್ತೇನೆ. ನಾನು ಬಹಳ ಮಾತನಾಡಬೇಕಾಗಿತ್ತು. ಆದರೆ ಸಮಯದ ಅಭಾವ ಇರುವುದರಿಂದ ಇಷ್ಟಕ್ಕೇ ನಿಲ್ಲಿಸುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ನಾನು ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ರೈತರನ್ನು ಬಂಧಿಸಿರುವ ವಿಚಾರದಲ್ಲಿ ಅರ್ಧಗಂಟೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬಂದು ಹೇಳಿಕೆ ಕೊಡುತ್ತಾರೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ಆ ತರಹ ಹೇಳಿ ಅರ್ಧ ಗಂಟೆಯಲ್ಲಿ ಒಂದು ಗಂಟೆಯಾಯಿತು. ಮಾನ್ಯ ಸದಸ್ಯರ ಭಾಷಣ ಸಹ ಮುಗಿದಿದೆ. ರೈತರು ಬಿಡುಗಡೆಯಾಗುವವರೆಗೆ ಈ ಸದನ ನಡೆಯುವ ಹಾಗೆ ಇಲ್ಲ. ಮುಖ್ಯಮಂತ್ರಿಗಳು ಈ ಸಭೆಗೆ ಬರುತ್ತಾರೋ ಬಿಡುತ್ತಾರೋ ನನಗೆ ಗೊತ್ತಿಲ್ಲ. ಆದರೆ ಸರ್ಕಾರದವರು ಹೇಳಿದ್ದಾರೆ. ಅರ್ಧ ಗಂಟೆಯಲ್ಲಿ ಹೇಳಿಕೆ ಕೊಡುತ್ತೇವೆಂದು ಹೇಳಿದ್ದಾರೆ. ಅದರಂತೆ ಹೇಳಿಕೆ ಕೊಡಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮುಖ್ಯಮಂತ್ರಿಗಳು ಬರುತ್ತಾರೆ ಉತ್ತರ ಕೊಡುತ್ತಾರೆ.

† ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಮೆಮೋರಾಂಡಮ್ ಎಂದು ನಾನು ಹೇಳುತ್ತೇನೆ. ವಂದನಾ ನಿರ್ಣಯವನ್ನು ನಾನು ವಿರೋಧಿಸುತ್ತಾ ರಾಜ್ಯಪಾಲರ ಭಾಷಣ ನೋಡಿದರೆ ಅದರಲ್ಲಿ ಏನೇನೂ ಇಲ್ಲ. ಹಿಂದೆಯೂ ಬಹಳ ನೋಡಿದ್ದೇವೆ. ಈಗ ನೋಡಿದರೆ ಅದರಲ್ಲಿ ಯಾವ ಹುರುಳು ಇಲ್ಲದೇ ಇರತಕ್ಕ ರಾಜ್ಯಪಾಲರ ಭಾಷಣ ಆಗಿದೆ. ಈ ಪದ್ಧತಿಯನ್ನು ಏಕೆ ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. ಇದು ನಿಜವಾಗಿಯೂ ಬಹಳ ಖಂಡನೀಯವಾದುದು. ಈಗ ತಾವು ಅದರ ಮೇಲೆ ಮಾತನಾಡಲು ತಾವು ಅನುಮತಿ ಕೊಟ್ಟಿದ್ದೀರಿ. ನಾನು ಬಹಳ ಜಾಸ್ತಿ ಮಾತನಾಡುವುದಿಲ್ಲ. ಸ್ವಲ್ಪ ಹೊತ್ತು ಮಾತನಾಡುತ್ತೇನೆ.

ಚೇರ್ಮನ್:- ತಾವು ಮಾತನಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾತನಾಡಬಹುದೆಂದರೆ ಬಹಳ ಸಂತೋಷ. ಅವರು ಯಾರೂ ಇರುವುದೇ ಇಲ್ಲ. ಮಂತ್ರಿಗಳು ಜಾಸ್ತಿಯಾಗಿದ್ದಾರೆ. ಯಾರೂ ಇರುವುದಿಲ್ಲ. ನಾವು ಹೇಳುವುದನ್ನು ಅವರು ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಏಕೆಂದರೆ ಸರ್ಕಾರದ ಗತಿ ಏನಾಗಿದೆಯೋ ಗೊತ್ತಿಲ್ಲ. ಸರ್ಕಾರ ಇದೆಯೋ ಇಲ್ಲವೋ ಎಂದು ನಾನು ಕೇಳುತ್ತಿದ್ದೇನೆ. ವಿರೋಧ ಪಕ್ಷದ ನಾಯಕರು ಹೇಳುವುದನ್ನು ಯಾರೂ ಕೇಳುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:- ಇಡೀ ಸಭೆಯನ್ನು ಸಂಸದೀಯ ಸಚಿವರಾದ ಹಾರನಹಳ್ಳಿ ರಾಮಸ್ವಾಮಿಯವರಿಗೆ ಬಿಟ್ಟಿದ್ದಾರೆ. ಏಕೆಂದರೆ, ಪಾಪ ಅವರು ಹಿಂದೆ ಬಂದರೆ ಒದೆಯಬೇಡಿ, ಮುಂದೆ

ಬಂದರೆ ಹಾಯುಬೇಡಿ. ಆವೊಂದು ಸೌಜನ್ಯವಾಗಿರತಕ್ಕವರು. ಮಾನ್ಯ ಖರ್ಗೆಯವರು ಇಲ್ಲಿ ಕುಳಿತುಕೊಳ್ಳುತ್ತಿದ್ದರು. ಅವರ ಪೀಠ ಯಾವಾಗ ಬದಲಾವಣೆಯಾಯಿತೋ ಗೊತ್ತಿಲ್ಲ, ಅವರು ಹಿಂದಕ್ಕೆ ಹೋಗಿದ್ದಾರೆ. ಅದೇ ರೀತಿಯಲ್ಲಿ ಮಾನ್ಯ ಹಿರಿಯ ಸಚಿವರಾದ ರಂಗನಾಥ್‌ರವರು ಮುಂದೆ ಕುಳಿತುಕೊಳ್ಳುತ್ತಿದ್ದರು. ಅವರು ಹಿಂದಕ್ಕೆ ಹೋಗಿದ್ದಾರೆ. ಮಾನ್ಯ ಚೌಧ್ರಿಯವರು ಹಿಂದಕ್ಕೆ ಹೋಗಿದ್ದಾರೆ. ಒಬ್ಬೊರಿಗೊಬ್ಬರು ಮಾತನಾಡುತ್ತಿದ್ದಾಗ. ಅಧಿಕಾರಿಗಳು ಇರಬೇಕೆಂದು ಇಲ್ಲ, ಅಧಿಕಾರಿಗಳ ಗ್ಯಾಲರಿಯಲ್ಲಿ ಮುಂದಿನ ಕುರ್ಚಿಗಳಲ್ಲಿ ಒಬ್ಬರೂ ಇಲ್ಲ. ಅಲ್ಲಿ ಕುಳಿತಿರುವವರಿಗೆ ನಾವು ಏನು ಹೇಳುತ್ತಿದ್ದೇವೆ ಅದಕ್ಕೆ ಸ್ಪಂದಿಸುತ್ತಾರೋ ಏನೋ ಗೊತ್ತಿಲ್ಲ. ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಿದ್ದಾರೆಂದು ನಮಗೆ ಅರ್ಥವಾಗುತ್ತಿಲ್ಲ. ಪರಿಸ್ಥಿತಿ ಹೀಗಾಗಿದೆ ? ಈ ಸಭೆಯ ವ್ಯವಸ್ಥೆ ಬರುತ್ತಾ ಬರುತ್ತಾ ಈ ಸಭೆಯ ವ್ಯಕ್ತಿತ್ವಕ್ಕೆ ಧಕ್ಕೆ ಬರುವ ರೀತಿ ಸರ್ಕಾರ ನಡೆದುಕೊಳ್ಳುತ್ತಿದೆ. ಇದು ನಿಜವಾಗಿಯೂ ಒಳ್ಳೆಯದಲ್ಲ. ಪಾಪ, ಮಾತು ಎತ್ತಿದರೆ ಸಂಸದೀಯ ಸಚಿವರ ಮೇಲೆ ನಮ್ಮದು ಧಾಳಿಯಾಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಗುರುಪಾದಪ್ಪನವರು ಹೇಳುವುದು ಅರ್ಥವಾಗುವುದಿಲ್ಲವೆಂದರೆ ಬೀದರ್ ಕನ್ನಡ ಎಂತಲೋ ಹೇಗೆ ?

ಶ್ರೀ ವಾಟಾಳ್ ನಾಗರಾಜ್:– ಏಕೆ ಅರ್ಥವಾಗಲಿಲ್ಲವೆಂದರೆ, ನಮ್ಮ ಗುರುಪಾದಪ್ಪ ನಾಗ್ಮಾರಪಲ್ಲಿಯವರು ಹೇಳತಕ್ಕ ಭಾಷಣವನ್ನು ಕೇಳಿ ಅದನ್ನು ಬರೆದುಕೊಳ್ಳತಕ್ಕವರು ಒಬ್ಬರೂ ಕಾಣಿಸುತ್ತಿಲ್ಲವೆಂದು ಹೇಳಿದ್ದೇನೆ. ಏಕೆಂದರೆ ಒಬ್ಬರೂ ಇಲ್ಲ. ಅದು ಗೋರ್ಕಲ್ಲ ಮೇಲೆ ಮಳೆ ಬಿದ್ದರೆ ಹೇಗೆ ಆಗುತ್ತದೋ ಹಾಗೆ ಆಗಿದ. ನಮಗೆ ಅರ್ಥವಾಗುವುದಿಲ್ಲವೆಂದು ಅಲ್ಲ. ನಾವು ಹೇಗೆ ಬೇಕಾದರೂ ಮಾತನಾಡಿಕೊಳ್ಳುತ್ತೇವೆ. ಯಾರಿಗೆ ಅರ್ಥವಾಗಬೇಕೆಂದರೆ ಅವರು ಹೇಳತಕ್ಕ ಮಾತು ಸರ್ಕಾರಕ್ಕೆ ಅರ್ಥವಾಗಬೇಕು. ರಾಜ್ಯಪಾಲರ ಭಾಷಣದ ಬಗ್ಗೆ ನಾವು ಯಾರ ಮುಂದೆ ಹೇಳಬೇಕು ? ಭಾಷಣವನ್ನು ಯಾರೂ ಕೇಳುವುದಿಲ್ಲ ಮತ್ತು ಬರೆದುಕೊಳ್ಳತಕ್ಕವರೂ ಇಲ್ಲ. ಈ ಪರಿಸ್ಥಿತಿಯಾದರೆ ನಾವು ಯಾರ ಮುಂದೆ ಹೇಳಬೇಕು.

ಚೇರ್ಮನ್:– ಮಾನ್ಯ ಮಂತ್ರಿಗಳಿಗೆ ನೆನಪಿನ ಶಕ್ತಿ ಹೆಚ್ಚು ಇದೆ. ಬರೆದುಕೊಳ್ಳಬೇಕೆಂದೇನೂ ಇಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ನಾನು ಬರೆದುಕೊಳ್ಳುತ್ತಿದ್ದೆ. ಮಾನ್ಯ ನಾಗರಾಜ್‌ರವರು ಮತ್ತು ಇತರ ಮಿತ್ರರು ಸಂಸದೀಯ ವ್ಯವಹಾರಗಳ ಸಚಿವರು ಬರೆದುಕೊಳ್ಳಬೇಕಾಗಿಲ್ಲ, ಬರೆದುಕೊಳ್ಳುವವರು ಅಲ್ಲಿದ್ದಾರೆಂದು ಹೇಳಿದರು. ಈಗ ಅವರಿಗೆ ಬಿಟ್ಟಿದ್ದೇನೆ. kindly take it in lighter vein.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಸಂಸದೀಯ ಸಚಿವರು ಹೇಳಿದ ಪ್ರಕಾರ ಕಡತದಲ್ಲಿ ಹೋಯಿತು. ನಾವು ಯಾರೂ ಬರೆದುಕೊಳ್ಳುವುದಿಲ್ಲ ಅವರು ಇದ್ದಾರೆಂದು ಹೇಳಿದರೆ ಹಾಗಾದರೆ ಹೋಗೋಣ ಬನ್ನಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಹಾಗಾದರೆ ಮಂತ್ರಿಗಿರಿಯನ್ನು ಅವರಿಗೇ ಕೊಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್:– ನಿಮ್ಮ ಸರ್ಕಾರ ಇಲ್ಲಿಗೆ ಬಂದು ಬಾವಿಗ ಬಿದ್ದು ಹೋಯಿತು. ಅಂದರೆ, ಬಾವಿಯಲ್ಲಿ ಬಿದ್ದುಹೋಯಿತು. ಈ ಪರಿಸ್ಥಿತಿ ಇದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ನೋಡಿ, ನಾನು ಆ ಕಡೆ ಹೇಳಿದ ಹಾಗೆಯೇ ಇದೆ. ಕುಳಿತರೂ

ತಪ್ಪು, ನಿಂತರೂ ತಪ್ಪು. ಮಾಡಿದರೂ ತಪ್ಪು, ಮಾಡದೇ ಇದ್ದರೂ ತಪ್ಪು. ನೀವು ಸರಿ ಅಂತ ಒಂದು ಮಾತು ಹೇಳಿ. ಎರಡು ಮಾತು ತಪ್ಪು ಅಂತ ಹೇಳಿ. ಅದಕ್ಕೆ ಬೆಲೆ ಬರುತ್ತದೆ. ಎಲ್ಲವನ್ನೂ ತಪ್ಪು ಎಂದರೆ ಯಾವುದಕ್ಕೂ ಬೆಲೆ ಬರುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ಯಾವುಗಾದರೂ ಸರಿಯಾಗಿ ಮಾಡಿದ್ದೀರಿ ಹೇಳಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ನಿಮಗೆ ಮಸೀದಿ ಒಡೆಯುವುದು ಬಿಟ್ಟರೆ ಯಾವುದೂ ಒಳ್ಳೆಯದಾಗಿ ಕಾಣುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:– ನಿಮಗೆ ಹಗಲು ರಾತ್ರಿ ಮಸೀದಿಯದ್ದೇ ಚಿಂತೆಯಾಗಿ ಬಿಟ್ಟಿದೆಯಲ್ಲ. ನಮಗೆ ಅದೇ ಬೇಜಾರು. ನಿಂತರೂ ಅದೇ, ಕುಳಿತರೂ ಅದೇ. ನಿಮಗೆ ಏಕೆ ಈ ಚಿಂತೆ ಬಂತು ಎಂದು ನಮಗೆ ಅರ್ಥವಾಗುತ್ತಿಲ್ಲ. ಈ ಸದನಕ್ಕೆ ಬರುವವರು ಕೆಲಸ ಇಲ್ಲದೇ ಇರುವವರು ಎನ್ನುವ ಅಭಿಪ್ರಾಯ ಆಗಿದೆ. ಹೊರಗಡೆ ಎಲ್ಲಾ ಕೆಲಸ ಮುಗಿಸಿಕೊಂಡು ಆಮೇಲೆ ಆರಾಮವಾಗಿ ಕೆಲವರು ಸದನಕ್ಕೆ ಬರುತ್ತಾರೇನೋ ಎನ್ನುವ ಪರಿಸ್ಥಿತಿಯನ್ನು ಈ ಸರ್ಕಾರ ತಂದುಬಿಟ್ಟಿದೆ. ಇದು ನಿಜಕ್ಕೂ ನಾಚಿಕೆಗೇಡಿತನ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಇಲ್ಲಿ ಒಂದು ಪ್ರಶ್ನೆ ಏನಾಗಿದೆ ಎಂದರೆ, ಇವರು ಬಹಳ ಗೊಂದಲಕ್ಕಂತೂ ಸಿಕ್ಕಿದ್ದಾರೆ. ಅದನ್ನು ತಾವು ಒಪ್ಪುತ್ತೀರಿ. ಇಲ್ಲಿರುವ ಬಹುತೇಕ ಜನ ಒಪ್ಪುತ್ತಾರೆ. ಇವತ್ತು ಪತ್ರಿಕೆಯಲ್ಲಿ ಮಾಜಿ ಮುಖ್ಯಮಂತ್ರಿಯವರು ದೊಡ್ಡದಾಗಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ಸರ್ಕಾರವನ್ನು ಕಿತ್ತುಹಾಕುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅವರಲ್ಲೇ ಈ ರೀತಿಯ ಗೊಂದಲ ನಿರ್ಮಾಣವಾಗಿದೆ; ನಿಜವಾಗಿ ಏನು ನಡೆದಿದೆ ಎಂದು ನಮಗೂ ಅರ್ಥವಾಗುತ್ತಿಲ್ಲ. ಮೂರು–ಮೂರು ದಿವಸಕ್ಕೂ ಮುಖ್ಯಮಂತ್ರಿಗಳ ಬದಲಾವಣೆ. ಈಗ ಮಂತ್ರಿಮಂಡಲದ ಗಾತ್ರವನ್ನು ಕಡಿಮೆ ಮಾಡಿಲ್ಲವೆಂದರೆ ನಿಮ್ಮ ಸರ್ಕಾರವನ್ನು ಕೆಳಗಿಳಿಸಿಯೇ ಇಳಿಸುತ್ತೇನೆ ಎಂದು ಅವರು ಬಹಿರಂಗವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಹಾಗೆ ಮಾಡುವುದಕ್ಕೆ ಹೋದರೆ ಎಲ್ಲ ಪಕ್ಷಗಳ ಹುಳುಕುಗಳನ್ನು ತಗೆದುಕೊಂಡು ಹೇಳಬೇಕಾಗುತ್ತದೆ. ಹೀಗೆ ಮಾಡಿದರೆ, ನಮ್ಮ ಕಾಲವನ್ನು ವ್ಯರ್ಥ ಮಾಡಬೇಕಾಗಿ ಬರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ:– ಸರ್ಕಾರವನ್ನು ತೆಗೆಯುವುದು, ಬಿಡುವುದು ಅವರವರ ಇಂಟರ್ನಲ್ ಮ್ಯಾಟರ್ ಆಯಿತು. ಇದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ಅವರು ಪ್ರೆಸಿಡೆಂಟ್ ರೂಲ್ ಇಂಪೋಸ್ ಮಾಡಿಸುತ್ತೇನೆ ಎಂದು ಹೇಳಿರುವುದು ನಮಗೆಲ್ಲ ಭಯವಾಗಿದೆ. ಇದರಿಂದ ನಮ್ಮ ಹಕ್ಕಿಗೂ ಚ್ಯುತಿಯುಂಟಾಗಿದೆ. ನಮಗೆ ಇದರ ಬಗ್ಗೆ ಚಿಂತನೆ ಇದೆ. ನಿಮ್ಮ ನಿಮ್ಮ ಜಗಳ ಏನಾಗಿದೆ, ಅದು ನಮ್ಮೆಲ್ಲರ ಮೇಲೂ ಪರಿಣಾಮ ಮಾಡುತ್ತಿದೆ. ಇದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ನೀವು ಮಂತ್ರಿಮಂಡಲದ ಗಾತ್ರ ಕಡಿಮೆ ಮಾಡುತ್ತೀರಾ ಅಥವಾ ಡಿಸಾಲ್ವ್ ಮಾಡುತ್ತೀರಾ ?

ಶ್ರೀ ವಾಟಾಳ್ ನಾಗರಾಜ್:– ಗುಂಡೂರಾಯರಿಗೆ ಈಗ ಪ್ರಣಬ್ ಮುಖರ್ಜಿ ಅಲ್ಲಿ ಮಂತ್ರಿಯಾಗಿದ್ದಾರೆ, ದಿನೇಶ್‌ಸಿಂಗ್ ಮಂತ್ರಿಯಾಗಿದ್ದಾರೆ. ಇದೇನು ಪಿತೂರಿ ನಡೆಯುತ್ತಿದೆಯೇ ?

ಸರ್ಕಾರದವರು ವಜಾ ಮಾಡತಕ್ಕಂಥ ಸಂಚು, ಶಾಸನಸಭೆವಜಾ ಆಗಬೇಕು. ಪಿತೂರಿ, ಹೇಳುವುದಾದರೆ ಪರಿಸ್ಥಿತಿ ಏನಾಗಿದೆ? ನಾವು ಎಂದೆಂದೂ ಈ ರಾಜ್ಯದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು, ಅಧ್ಯಕ್ಷರ ಆಳ್ವಿಕೆ ಬರಬಾರದು ಎಂದು ಹೇಳುವವರು ನಾವು. ಆದರೆ ಈ ಪರಿಸ್ಥಿತಿ ನಿರ್ಮಾಣವಾದರೆ ಹೇಗೆ ಪ್ರತಿದಿನ ಅವರ ಪಕ್ಷದ ಮುಖಂಡರುಗಳು ಈ ರೀತಿ ಹೇಳಿಕೆ ಕೊಡುತ್ತಾ ಇದ್ದರೆ, ಏನಾಗಿದೆ? ಅವರು ಸರ್ಕಾರವನ್ನೇ ವಜಾ ಮಾಡುತ್ತೇನೆ ಎಂದು ಹೇಳಿದ್ದಾರೆ. ಇದು ಸರಿ ಅಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ.....

ಶ್ರೀ ಬಿ.ಎಸ್. ಯಡಿಯೂರಪ್ಪ:– ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇಬ್ಬರು ಇದ್ದಾರೆ. ಉಪ ಮುಖ್ಯಮಂತ್ರಿಗಳಾಗಲೀ, ಮುಖ್ಯಮಂತ್ರಿಗಳಾಗಲೀ ಯಾರಾದರೂ ಒಬ್ಬರು ಬರುವುದಕ್ಕೆ ತಾವು ಆದೇಶ ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ನಾನು ಏಕೆ ಹೇಳಿದೆಯೆಂದರೆ Sri R. Gundu Rao is responsible Member in your Party. He is an ex–Chief Minister. He is Congress Working Committee Member also. He is an important person of your Party. ಹಾಗಾಗಿ ಹೇಳುತ್ತಿದ್ದೇವೆ.

ಶ್ರೀ ಕೆ.ಹೆಚ್. ರಂಗನಾಥ್:– ಪ್ರಸ್ತುತ ಸಮಯದಲ್ಲಿ ಅವರು ಸದನದ ಸದಸ್ಯರು ಅಲ್ಲ. ಹೊರಗಡೆ ಅವರು ಅಭಿಪ್ರಾಯ ವ್ಯಕ್ತಪಡಿಸಿದರೆ ಅದಕ್ಕೆ ಏಕೆ ಅಷ್ಟು ಮಹತ್ವ ಕೊಡಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ:– ಇವತ್ತು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ....

ಚೇರ್ಮನ್:– ಗುರುಪಾದಪ್ಪ ಅವರ ಭಾಷಣ ಮುಗಿಯಿತು. ಆಮೇಲೆ ನಾನು ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಗುಂಡೂರಾಯರು ಹೇಳಿದ್ದಾರೆ. ಎಲ್ಲಿ ವಜಾ ಮಾಡುತ್ತಾರೋ ಎಂದು ನಮಗೆ ಭಯವಾಗಿದೆ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್:– ನೀವು ಧೈರ್ಯವಂತರು ಎಂದು ತಿಳಿದುಕೊಂಡಿದ್ದೆ. ಇನ್ನೂ ಎರಡು ವರ್ಷ ಸದಸ್ಯರಾಗಿರುತ್ತೀರಿ. ಇನ್ನು ಚುನಾವಣೆಗೆ ಹೋಗತಕ್ಕಂಥಾದ್ದು 1994ರ ನವೆಂಬರ್‌ಗೆ. ಅದಕ್ಕೆ ಏಕೆ ವಿಚಾರ ಮಾಡುತ್ತೀರಿ; ಹೆದರಬೇಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಂತ್ರಿ ಮಂಡಲದ ಸದಸ್ಯರ ಸಂಖ್ಯೆ 41 ಆಗಿದೆ. ಇಷ್ಟಾದರೂ ಖಾತೆಗಳು ಇನ್ನೂ ಹಾಗೆಯೇ ಇವೆ. ಸಕ್ಕರೆಗೆ ಮಂತ್ರಿ ಇದ್ದಾರೆ. ಬೆಲ್ಲಕ್ಕೆ ಇಲ್ಲ, ಈರುಳ್ಳಿಗೆ ಇಲ್ಲ, ಬೆಳ್ಳುಳ್ಳಿಗೆ ಇಲ್ಲ; ಹುಣಸೆಹಣ್ಣಿಗೆ ಇಲ್ಲ. ಇಷ್ಟೊಂದು ಖಾಲಿ ಇವೆ. ಇಷ್ಟು ಮಂತ್ರಿಗಳಿದ್ದರೂ ಇಲ್ಲಿ ಇಬ್ಬರು–ಮೂವರು ಮಾತ್ರ ಇದ್ದಾರೆ. ಎಲ್ಲಾ ಮಂತ್ರಿಗಳು ಇಲ್ಲಿ ಒಂದು ಸಾರಿಯಾದರೂ ಇರುತ್ತಾರಾ? 41 ಜನ ಮಂತ್ರಿಗಳು ಇಲ್ಲಿ ಕುಳಿತುಕೊಂಡರೂ ಕೋರಮ್ ಆಗುತ್ತದೆ. ಮೊನ್ನೆ ಕೋರಂ ಇಲ್ಲದೆ ತಾವು ಸಭೆಯನ್ನು ಮುಂದಕ್ಕೆ ಹಾಕಿದ್ದೀರಿ. ಸದನಕ್ಕೆ ಮಂತ್ರಿಗಳೇ ಬರುವುದಿಲ್ಲ. ಏನೋ ನಡೆಯುತ್ತಿದೆ ಎನ್ನುವುದಂತೂ ಖಚಿತವಾಗಿದೆ. ಗುಂಡೂರಾಯರು ಹೇಳಿದ ಮಾತಿನಲ್ಲಿ ಸತ್ಯಾಂಶ ಇದೆಯೆಂಬುದು ಈ ಸಂದರ್ಭದಲ್ಲಿ ಕಾಣುತ್ತದೆ.

ಸನ್ಮಾನ್ಯ ಅಧ್ಯಕ್ಷರೇ, ಈಗ ನೋಡಿದರೆ ಜನರಿಗೆ ಎಷ್ಟು ಕಷ್ಟವಾಗಿದೆ. ಹಳ್ಳಿಯಲ್ಲಿ ಯುವಕರ ಗತಿ ಏನಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬಂದರು, ಸಂತೋಷ. ತಾವು ಬಂದರೆ ನಮಗೆ ಸಂತೋಷ ತಾವು ಬಂದರೆ ಸಮಾಧಾನ. ಒಂದು ಕಡೆ ರೈತರಿಗೆ ಕಷ್ಟ, ಒಂದು ಕಡೆ ಸರ್ಕಾರದಲ್ಲಿ ದುಡ್ಡು ಇಲ್ಲ. ಪರಿಸ್ಥಿತಿ ಎಷ್ಟು ಕೆಟ್ಟುಹೋಗಿದೆ ಎಂದರೆ, ಜಿಲ್ಲಾಪರಿಷತ್ತಿಗೆ ಹಣ ಕೊಡುತ್ತೇವೆಂದು ಹೇಳಿದ್ದಾರೆ; ಅಲ್ಲಿ ಹೋದರೆ, ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡುವುದಕ್ಕೆ ಹಣ ಇಲ್ಲ, ಯಾವ ರೋಡಿಗೂ ದುಡ್ಡು ಇಲ್ಲ ಎಂದು ಹೇಳುತ್ತಾರೆ. ಇವತ್ತು ರೋಡುಗಳ ಮೇಲೆ ನಡೆಯುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ರೋಡುಗಳ ಮೇಲೂ ಮೊಣಕಾಲು ಉದ್ದದ ಗುಳಿಗಳು ಬಿದ್ದಿವೆ. ಯಾವ ಒಂದು ರೋಡೂ ಸರಿ ಇಲ್ಲ. ಯಾವಾಗ ಈ ಪರಿಸ್ಥಿತಿ ಸರಿಹೋಗುತ್ತದೆ, ಮಂತ್ರಿಮಂಡಲವನ್ನು ಹೆಚ್ಚಿಸಿವರೆ ಸರಿಹೋಗುತ್ತದೆಯೇ ಅಥವಾ ರೋಡ್ ಬಗ್ಗೆ, ನೀರಾವರಿ ಬಗ್ಗೆ ಏನಾದರೂ ಯೋಜನೆಗಳು ಇವೆಯೋ ಎಂಬುದನ್ನು ತಾವು ಹೇಳಬೇಕು. ರೈತರ ಬಗ್ಗೆ ಯಾವ ಯೋಜನೆಗಳೂ ಇಲ್ಲ, ನೀರಾವರಿ ಬಗ್ಗೆ ಇಲ್ಲ. ಇಂತಹ ಗತಿ ಒದಗಿ ಬಂದರೆ ಏನಾಗುತ್ತದೆ. ಮೊನ್ನೆ ನಾನು ಊರಿಗೆ ಹೋಗಿ, ಇವತ್ತು ಬೆಳಿಗ್ಗೆ ಬಂದಿದ್ದೇನೆ. ಅಲ್ಲಿ ನೋಡಿದರೆ ಕುಡಿಯುವುದಕ್ಕೆ ನೀರು ಇಲ್ಲ, ಜನ ಬೇಕಾದಷ್ಟು ಗಲಾಟೆ ಮಾಡುತ್ತಿದ್ದಾರೆ, ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತು ಕುಡಿಯುವುದಕ್ಕೆ ನೀರು ಇಲ್ಲ, ನಾಳೆಯ ಗತಿ ಏನಾಗುತ್ತದೆ ? ಇನ್ನು ಒಂದು ತಿಂಗಳು ಹೋದರೆ ನೀರೇ ಸಿಗುವುದಿಲ್ಲ. ನಾನು ಮೊದಲೂ ಕೂಡ ಈ ಸಭೆಯಲ್ಲಿ ಹೇಳಿದ್ದೇನೆ. ನೀರಿನ ಪರಿಸ್ಥಿತಿ ಗಂಭೀರವಾಗಿದೆ, ಎಲ್ಲೆಲ್ಲಿ ಗಂಭೀರವಾಗಿದೆ ಅಂತಹ ಊರುಗಳಲ್ಲಿ ನೀರಿನ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಇದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದೂ ಹೇಳಿದ್ದೇನೆ. ಇವತ್ತಿಗೂ ಕೂಡ ಇದರ ಬಗ್ಗೆ ಯಾರ್ಯಾರೂ ಗಮನಹರಿಸಿಲ್ಲ. ಈ ವಿಚಾಗವಾಗಿ ಯಾರೂ ಹೋಗುವ ಹಾಗಿಲ್ಲ. ನೋಡುವ ಹಾಗಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ದುಡ್ಡಿಲ್ಲವೆಂದು ಹೇಳುತ್ತಾರೆ, ಇಂತಹ ಪರಿಸ್ಥಿತಿ ಇದೆ. ಒಂದು ಕಡೆ ಸರ್ಕಾರದವರು ನೀರಿನ ಬಗ್ಗೆ ಬೇಕಾದಷ್ಟು ಹಣ ಇದೆ ಎಂದು ಹೇಳುತ್ತಾರೆ. ಆದರೆ ಅಲ್ಲಿ ಹೋದರೆ, ನೀರಿಗೆ ದುಡ್ಡು ಇಲ್ಲವೆಂದು ಹೇಳುತ್ತಾರೆ. ಕುಡಿಯುವ ನೀರಿಗೆ ಹಣ ಕೊಡಲೇಬೇಕು, ಇದನ್ನು ಇನ್ನೂ ಯಾವಾಗ ಕೊಡುವುದು. ಗಾಳಿ ದೇವರು ಕೊಡುತ್ತಾನೆ, ನೀರನ್ನು ಸರ್ಕಾರದವರು ಒದಗಿಸಬೇಕು. ಇನ್ನು ರೋಡ್ ಬೇಕು, ಬಸ್ ಬೇಕು, ರೈತರು, ಜನಸಾಮಾನ್ಯರು ತಿರುಗಾಡುವುದಕ್ಕೆ ಬಸ್ ಬೇಕು. ಒಂದು ಕಡೆ ಬಸ್ ಬೇಡ, ಒಂದು ಕಡೆ ರೋಡ್ ಬೇಡ, ಒಂದು ಕಡೆ ಅಣೆಕಟ್ಟು ಕಟ್ಟಿಸಿಲ್ಲ, ಒಟ್ಟಿನಲ್ಲಿ ಯಾವುದೂ ಇಲ್ಲ. ನೀರಾವರಿ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಏನು ಗತಿಯಾಗಿದೆ ಎಂದರೆ, ನಮ್ಮಲ್ಲಿ ನೀರಾವರಿ ಬಹಳ ಇದೆ. ಮೊನ್ನೆ ನಾನು ಪ್ರಶ್ನೆ ಕೇಳಿದಾಗ ಉತ್ತರವನ್ನೂ ಕೊಟ್ಟಿದ್ದಾರೆ. ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ಬರತಕ್ಕಂಥಾದ್ದು ಗೋದಾವರಿ ಬೇಸಿನ್ ಒಂದೇ. ಕೃಷ್ಣಾ, ಕಾವೇರಿ ಯಾವುದೂ ಬರುವುದಿಲ್ಲ. ಬೀದರ್ ಜಿಲ್ಲೆಯಲ್ಲಿ ಬರತಕ್ಕಂಥಾದ್ದು, ಸಣ್ಣದು ಒಂದೇ ಒಂದು ಗೋದಾವರಿ. ಇದರ ಬಗ್ಗೆ ಪ್ರಶ್ನೆ ಕೇಳಿದರೆ ಸರ್ಕಾರದಲ್ಲಿ ಮಾಹಿತಿ ಇಲ್ಲ. ಬಚಾವತ್ ಅವಾರ್ಡ್ ಪ್ರಕಾರ 17 ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ಇದೆ. ಇದರ ಬಗ್ಗೆ ಇವತ್ತಿಗೂ ನಮ್ಮಲ್ಲಿ ಮಾಹಿತಿ ಇಲ್ಲವೆಂದು ಹೇಳಿದ್ದಾರೆ. ನಿಜಾಂಶ ಒಳಗಡೆ ಎಷ್ಟು ನೀರು ಹೋಗುತ್ತದೆಯೋ, ಹೊರಗಡೆ ಎಷ್ಟು ನೀರು ಹೋಗುತ್ತದೆಯೋ ಗೊತ್ತಿಲ್ಲ. ಬಚಾವತ್ ಅವಾರ್ಡ್ ಪ್ರಕಾರ ಯಾವ ಯಾವ ಕೆರೆಗಳಿಗೆ ನೀರು ಹೋಗಬೇಕೆಂದು ಕೇಳಿದರೆ ಸರ್ಕಾರದಲ್ಲಿ ಮಾಹಿತಿ ಇಲ್ಲ. ನಾನು ಹಳಿದೆ, 2-50 ಟಿ.ಎಂ.ಸಿ. ನೀರು ಏನು ಇದೆ, ಅದರಲ್ಲಿ 0-65 ಉಪಯೋಗ ಮಾಡಿದ್ದೇವೆ, ಇನ್ನು 1.85 ಹಾಗೆಯೇ ಉಳಿದಿದೆ, ಇದನ್ನು ಯಾವಾಗ ಉಪಯೋಗ ಮಾಡುತ್ತೀರಿ ಎಂದು ಕೇಳಿದೆ. ಇದರ ಬಗ್ಗೆ ಇವತ್ತಿಗೂ ಉತ್ತರ ಇಲ್ಲ ಮತ್ತು ಯಾವಾಗ ಉಪಯೋಗ ಮಾಡುತ್ತೇವೆ ಎಂಬುದನ್ನೂ ಹೇಳುವುದಿಲ್ಲ. ಇನ್ನು ಕಾರಂಜಾ ಯೋಜನೆ ಎಷ್ಟು ವರ್ಷವಾಯಿತು, ಇನ್ನೂ ಮಾಡುತ್ತಲೇ ಇದ್ದಾರೆ. 1991ರಲ್ಲಿ ಇದರ ಬಗ್ಗೆ ಉತ್ತರವೇ ಇಲ್ಲ. 1992ರಲ್ಲಿ ನೀವು ಉತ್ತರ

ಹೇಳುವುದಕ್ಕೆ ತಯಾರಿಲ್ಲ, ಉತ್ತರವನ್ನು ಒದಗಿಸಿಲ್ಲ. ನಾನು ಇದರ ಬಗ್ಗೆ ಪ್ರಶ್ನೆ ಕೇಳಿದ್ದೇನೆ. 1984 ರಿಂದ 1992ರವರೆಗಿನ ವಿವರಗಳ ಬಗ್ಗೆ ಪ್ರಶ್ನೆ ಕೇಳಿದ್ದೇನೆ, ಉತ್ತರ ಮಾತ್ರ ಇಲ್ಲ. ಹಿಂದೆ 1989ರವರೆಗೆ ಅದನ್ನು ಕೊಟ್ಟಿದ್ದೀರಿ. ಒಂದು ಸಾರಿ 9 ಕೋಟಿ, ಒಂದು ಸಾರಿ 4 ಕೋಟಿ ಕೊಟ್ಟು ಬರೀ ಜಮೀನು ಖರೀದಿ ಮಾಡುವುದಕ್ಕೆ ಅಥವಾ ಜನರಿಗೆ ಸಂಬಳ ಕೊಡುವುದಕ್ಕೆ ಮಾತ್ರ ಆಗಿದೆಯೇ ಹೊರತು, ನೀರಾವರಿ ಮಾತ್ರ ಯಾವ ಉದ್ಧಾರ ಆಗಿಲ್ಲ. ಅಂದರೆ, 2 ಸಾವಿರ ಇಸವಿಯೊಳಗೆ ನೀರಾವರಿ ಮಾಡುತ್ತಾರೆಯೇ ಅಥವಾ ನಮ್ಮ ಹಕ್ಕು ಹೋಗುತ್ತದೆಯೋ ಎಂಬ ಭಯ ಬಂದಿದೆ. ನಾನು ಪದೇ ಪದೇ ಸರ್ಕಾರಕ್ಕೆ ಹೇಳುತ್ತೇನೆ. ನಮ್ಮಲ್ಲಿರತಕ್ಕ ಸಣ್ಣ ಸಣ್ಣ ನೀರಾವರಿ ....

ಶ್ರೀ ಕೆ.ಹೆಚ್. ರಂಗನಾಥ್:– ಈ ವರ್ಷ ನೀರಾವರಿಗೆ ಬಜೆಟ್ ಅಲಾಟ್‌ಮೆಂಟ್ ಜಾಸ್ತಿ ಇದೆ. ಯಾವಾಗಲೂ ಕೊಡದೇ ಇರುವಷ್ಟು ನೀರಾವರಿಗೆ ಮತ್ತು ಪವರ್‌ಗೆ ಕೊಡಲಾಗಿದೆ. ಸರ್ಕಾರದ ಆದ್ಯತೆ, ನೀರಾವರಿ ಮಾಡಬೇಕು ಪವರ್ ಪ್ರೊಡಕ್ಷನ್ ಹೆಚ್ಚು ಆಗಬೇಕೆಂಬುದೇ ಆಗಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ತಾವು ನೀರಾವರಿ ಹೆಚ್ಚು ಮಾಡಿದರೆ ಬಹಳ ಸಂತೋಷ, ನಾನು ಸ್ವಾಗತಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಆಯವ್ಯಯದಲ್ಲಿ ನೀರಾವರಿಗೆ ಹೆಚ್ಚು ಹಣ ಕೊಟ್ಟಿರುವುದಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದರೆ, ಈ ನೀರಾವರಿಗಾಗಿ ಕೆಲಸ ಮಾಡಿರುವುದಕ್ಕೆ ಕೊಡಬೇಕಾದ ಬಾಕಿ ಹಣ ಎಷ್ಟಿದೆ ಎನ್ನುವುದನ್ನೂ ತಿಳಿಸಬೇಕು. ಆಗ ಗೊತ್ತಾಗುತ್ತದೆ. ಇದಕ್ಕೂ ಉತ್ತರ ಕೊಡಬೇಕು. "ಅಳಿಯನ ಕುರುಡು ಬೆಳಗಾದ ಮೇಲೆ" ಎಂದ ಹಾಗೆ ಗೊತ್ತಾಗುತ್ತದೆ. ಹೇಮಾವತಿ ಡೀಪ್ ಕಟ್‌ನ ಒಂದೇ ಒಂದು ಚಾನಲ್ ಕೆಲಸಕ್ಕೆ ಸರ್ಕಾರ ಕೊಡಬೇಕಾದ ಹಣ 11 ಕೋಟಿ ರೂಪಾಯಿಗಳು. ಇದೂ ಕೂಡ ತಮ್ಮ ಗಮನದಲ್ಲಿರಲಿ. ಪುಸ್ತಕದ ಬದನೇಕಾಯಿ ಕೊಟ್ಟರೆ, ಸಾರು ಮಾಡುವುದಕ್ಕಾಗುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ನೀರಾವರಿಗೆ ತಾವು ಹೆಚ್ಚಿನ ಹಣ ಕೊಟ್ಟಿದ್ದೀರಿ, ಸಂತೋಷ. ನಾನು ಕೇಳತಕ್ಕಂಥಾದ್ದು ಇಷ್ಟೇ. ಕೇಳುವುದು; ನಮ್ಮ ಜಿಲ್ಲೆಗೆ ಸಂಬಂಧಿಸಿದ್ದು ಮಾತ್ರ. ಇಡೀ ರಾಜ್ಯದ್ದು ನಾನು ಕೇಳಲಿಲ್ಲ. ಆ ಜಿಲ್ಲೆಯಲ್ಲಿ ಬರತಕ್ಕಂಥ ಗೋದಾವರಿ ಬೇಸಿನ್‌ನಲ್ಲಿ ಬರತಕ್ಕಂಥ 17 ಟಿ.ಎಂ.ಸಿ. ನೀರನ್ನು ಯಾವಾಗ ಉಪಯೋಗ ಮಾಡುತ್ತೀರಿ. ಅದರ ಬಗ್ಗೆ ಪ್ರಶ್ನೆ ಹಾಕಿದರೆ ಉತ್ತರ ಕೊಡತಕ್ಕಂಥ ಸೌಜನ್ಯ ಸರ್ಕಾರಕ್ಕೆ ಇಲ್ಲ. ನಮ್ಮ ಹತ್ತಿರ ಮಾಹಿತಿ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನನ್ನ ಹತ್ತಿರ ದಾಖಲೆಗಳು ಇವೆ. ತಂದು ತೋರಿಸುತ್ತೇನೆ. ಅಂದರೆ ಇವತ್ತಿನವರೆಗೂ ಅದರ ಬಗ್ಗೆ ಎಲ್ಲಿಲ್ಲೂ ಇಲ್ಲ. ಅದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೋ? 26 ಕೆರೆಗಳು ಇವೆ. ಅಧಿಕಾರಿಗಳು, ನಾವು ರಿಪೋರ್ಟ್ ಮಾಡಿ ಕಳುಹಿಸಿದ್ದೇವೆ. ಸರ್ಕಾರದಲ್ಲಿ ಮಾಹಿತಿ ಸಿಗುವುದಿಲ್ಲ. ಅಂದರೆ ಎಂತಹ ಅಸಮಾಧಾನಕರವಾದ ಮಾತು. ನೀಲಾವರಿ ಬಗ್ಗೆ ತಾವು ಆದ್ಯತೆ ಕೊಡಬೇಕು. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ ಇವತ್ತು ರೋಡ್‌ಗಳ ಮೇಲೆ ಜನರು ನಡೆಯುವುದಕ್ಕೆ ಆಗುವುದಿಲ್ಲ. ತಾವು ಲೋಕೋಪಯೋಗಿ ಮಂತ್ರಿಗಳಾಗಿದ್ದೀರಿ, ತಮಗೆ ಗೊತ್ತಿದೆ. ಇವತ್ತು ಬೆಳಿಗ್ಗೆ ತಾವು ಹೌದು ನಮ್ಮ ಗಮನಕ್ಕೆ ಬಂದಿದೆ ಎಂದು ಉತ್ತರ ಹೇಳಿದಿರಿ. ಮಡಿಕೇರಿ ಬಗ್ಗೆ ಹೇಳಿದಿರಿ. ರೋಡಿನದು ಬಹಳ ಕೆಟ್ಟ ಪರಿಸ್ಥಿತಿ ಇದೆ ಎಂದು ಹೇಳಿದಿರಿ. ಇದು ಇಡೀ ಎಲ್ಲಾ ಜಿಲ್ಲೆಗಳಲ್ಲೂ ಇದೆ. ಪ್ರತಿ ಜಿಲ್ಲೆಯಲ್ಲಿ ಇಂತಿಷ್ಟು ಕಿಲೋಮೀಟರ್ ಯಾವ ಯಾವ ಲೋಕೋಪಯೋಗಿ ರೋಡ್ ಇದೆ, ಅದನ್ನೆಲ್ಲಾ ಸರಿಪಡಿಸುತ್ತೇವೆ ಎಂದು ಹೇಳಬೇಕು. ಹಳ್ಳಿಯಲ್ಲಿರತಕ್ಕಂಥ ಜನರಿಗೆ ವಿಧಾನಸಭಾ ತೆಗೆದುಕೊಂಡು ಹೋಗಿ ಅಲ್ಲಿ ಇಡಬೇಕಾಗಿಲ್ಲ. ಅವರಿಗೆ ಬೇಕಾಗಿದ್ದು ರೋಡ್, ಬಸ್ಸು, ಶಾಲಾ ಶಿಕ್ಷಕರು, ಅಂಗನವಾಡಿ ಅವರಿಗೆ ಊರಿನಲ್ಲಿ ಏನು ಸೌಲಭ್ಯ ಬೇಕೋ ಅದು ಮಾತ್ರ ಕೊಟ್ಟರೆ ಸಾಕು.

ಅವರು ನಿಮ್ಮನ್ನು ವಿಧಾನಸಭಾ ಕೇಳುತ್ತಾರೋ, ರಾಜ್ಯಸಭಾ ಕೇಳುತ್ತಾರೋ ಅವರು ಏನೂ ಕೇಳುವುದಿಲ್ಲ. ಆ ಸಾಮಾನ್ಯ ಸವಲತ್ತು ತಾವು ಅವರಿಗೆ ಒದಗಿಸಿಕೊಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ಕೆಲವು ಕಡೆ ಕೋರ್ಟ್ ಗುಮಾಸ್ತರು ಶಿಕ್ಷಕರು ಇದ್ದಾರೆ. ಕೋರ್ಟ್ ಗುಮಾಸ್ತ ಎಂದರೆ ನಿಮಗೆ ಗೊತ್ತೆ ಇಲ್ಲ. ಒಬ್ಬ ಶಿಕ್ಷಕ ಸಂಬಳ ತೆಗೆದುಕೊಳ್ಳುತ್ತಾನೆ ಅವರು ಸಂಬಳ ತೆಗೆದುಕೊಂಡು ನೂರು ರೂಪಾಯಿ ಕೊಟ್ಟು ಇನ್ನೊಬ್ಬನನ್ನು ಅಲ್ಲಿ ಇಡುತ್ತಾನೆ. ಅವನು ಕೋರ್ಟ್ ಗುಮಾಸ್ತೆ ಎಂದು. ಆ ಊರಿನಲ್ಲಿ ಶಿಕ್ಷಕ ಇರುವುದಿಲ್ಲ. ಈ ಪರಿಸ್ಥಿತಿ ಇದ್ದರೆ ಹೇಗೆ ? ಒಂದು ಕಡೆ ರಾಮರಾಜ್ಯ ಎಂದು ಹೇಳುತ್ತೀರಿ. ಒಂದು ಕಡೆ ಪಂಚಾಯತ್ ರಾಜ್ ಮೇಲೆ ನಿಮಗೆ ವಿಶ್ವಾಸ ಇಲ್ಲ. ನೀವು ಅಮೆಂಡ್‌ಮೆಂಡ್ಸ್ ಎಲ್ಲಾ ಬೇರೆ ಬೇರೆ ಮಾಡುತ್ತಿದ್ದೀರಿ. ಅದನ್ನು ಯಾರೇ ತರಲಿ, ಅದರ ಬಗ್ಗೆ ನಿಮಗಂತೂ ವಿಶ್ವಾಸ ಇಲ್ಲ.

ಅಧಿಕಾರಿ ವಿಕೇಂದ್ರಿಕರಣ ಆದ ಮೇಲೆ ನಿಮಗೆ ಸಮಾಧಾನ ಇಲ್ಲ. ಯಾರೂ ಯಾರಾದರೂ ಬರಲಿ. ನನಗೆ ಅನಿಸಿದ್ದನ್ನು ನಾನು ಹೇಳುತ್ತಿದ್ದೇನೆ. ತಾವು ಕೂಡ ಮೊನ್ನೆ ರೋಜ್‌ಗಾರ್ ಯೋಜನೆ ಬಗ್ಗೆ ಅಮೆಂಡ್‌ಮೆಂಡ್ಸ್ ತಂದರಲ್ಲ ಪಂಚಾಯತಿ ಎಲೆಕ್ಷನ್ ಮಾಡುವುದನ್ನು ಬಿಟ್ಟು ಜಿಲ್ಲಾಧಿಕಾರಿಗಳಿಗೆ ನೀವು ಅಧಿಕಾರ ಕೊಟ್ಟರಿ. ಇದು ಅಧಿಕಾರ ವಿಕೇಂದ್ರಿಕರಣ ಮಾಡತಕ್ಕಂಥ ವ್ಯವಸ್ಥೆಯೇ ? ಸರ್ಕಾರದ ಅಧೀನದಲ್ಲೇ ಎಲ್ಲಾ ಇರಬೇಕು. ಜನರ ಕೈಯಲ್ಲಿ ಅಧಿಕಾರ ಇರಬಾರದು. ನಿಜವಾಗಿಯೂ ಜನರ ಪ್ರತಿನಿಧಿಗಳು ಇದ್ದು ಜನರ ಕಷ್ಟವನ್ನು ನೋಡತಕ್ಕಂಥ ವ್ಯವಸ್ಥೆ ಇಲ್ಲಿ ಆಗಬೇಕು. ಅದು ಆಗಿಲ್ಲ. ಒಂದೊಂದೇ ಅಲ್ಲ, ನೀರಾವರಿದು ಆ ಪ್ರಕಾರ, ರೋಡಿನದು ಈ ಪ್ರಕಾರ. ಮೊನ್ನೆ ನಾನು ಡಾಕ್ಟರ್ಸ್ ಬಗ್ಗೆ ಹೇಳಿದೆ. ಹಳ್ಳಿಗಳಿಗೆ ಹೋದರೆ ಡಾಕ್ಟರ್ಸ್ ಇಲ್ಲವೆಂದು ಜನ ನಮ್ಮನ್ನು ಘೇರಾವ್ ಮಾಡುತ್ತಾರೆ. ಯಾವ ಆಸ್ಪತ್ರೆಗಳಲ್ಲೂ ಡಾಕ್ಟರ್ಸ್ ಇಲ್ಲ. ನಮ್ಮಲ್ಲಿ 6 ವರ್ಷಗಳಿಂದ ಡಾಕ್ಟರ್ಸ್ ಇಲ್ಲ. 7 ದಾವಾಖಾನೆಗಳು ಇವೆ. ಅಲ್ಲಿ ಕತ್ತೆಗಳು ಮತ್ತು ನಾಯಿಗಳು ಇರುವುದು. ಆ ದಾವಾಖಾನೆಗಳಲ್ಲಿ ಡಾಕ್ಟರ್ಸ್ ಇಲ್ಲ, ಕಾಂಪೌಂಡರ್ಸ್ ಇಲ್ಲ, ಏನೇನೂ ಇಲ್ಲ. ಔಷಧಿ ಇಲ್ಲ. ಏಕೆ ಈ ರೀತಿ ಆಗುತ್ತಿದೆ, ಎಲ್ಲಿಗೆ ಬಂದಿದೆ ಪರಿಸ್ಥಿತಿ. ತಾವು ಇಷ್ಟೊಂದು ಜನ ಮಂತ್ರಿಗಳನ್ನು ಇಟ್ಟುಕೊಂಡಿದ್ದೀರಿ. ಬರೀ ಮಂತ್ರಿಗಳನ್ನು ಹೆಚ್ಚು ಮಾಡುವುದರಿಂದಲೇ ವ್ಯವಸ್ಥೆ ಸರಿ ಆಗುತ್ತದೆಯೋ ಅಥವಾ ಈ ವ್ಯವಸ್ಥೆಯನ್ನು ಯಾವಾಗ ಸರಿ ಮಾಡುತ್ತೀರಿ ? ಹಳ್ಳಿಯಲ್ಲಿರತಕ್ಕಂಥ ಪರಿಸ್ಥಿತಿಯನ್ನು ಹಸನು ಮಾಡಲು ತಾವು ಏನಾದರೂ ಪಣ ತೊಟ್ಟಿದ್ದೀರೋ ಇಲ್ಲವೋ ? ಪಣ ತೊಡತಕ್ಕಂಥ ಆದ್ಯತೆ ಏನಾದರೂ ತಮಗೆ ಇದೆಯೋ ಇಲ್ಲವೋ ? ಈಗ ರೈತರು ಗೊಬ್ಬರದ ಬಗ್ಗೆ ಹೇಳಬೇಕಾದರೆ, ಗೊಬ್ಬರವನ್ನು ಡೀ ಕಂಟ್ರೋಲ್ ಮಾಡಿದ ಮೇಲೆ ರೈತರಿಗೆ ಬಹಳ ಕೆಟ್ಟ ಪರಿಸ್ಥಿತಿ ಆಗಿದೆ. ಅಮೇರಿಕಾದಂತಹ ದೇಶದಲ್ಲಿ ಗೊಬ್ಬರಕ್ಕೆ ಸಬ್ಸಿಡಿ ಕೊಡುತ್ತಾರೆ, ನಮ್ಮ ದೇಶದಲ್ಲಿ ಇಲ್ಲ ಅಂತ ಅಂದರೆ ನಾವು ಎಷ್ಟು ಮುಂದುವರಿದಿದ್ದೇವೆ ಸ್ವಾಮಿ. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ಹೇಳುವುದಿಲ್ಲ. ಅದು ಕೇಂದ್ರ ಸರ್ಕಾರದ್ದು ಕೇಂದ್ರ ಸರ್ಕಾರದ್ದು ಎಂದು ಹೇಳುತ್ತೀರಿ. ಸಬ್ಸಿಡಿ ಬಂದರೆ ತಾವೇನು ಮಾಡುತ್ತೀರಿ ಎಂದರೆ ಕಂಪನಿಗಳಿಗೆ ಹಂಚುತ್ತೀರಿ. ಮಹಾರಾಷ್ಟ್ರ ಆಗಲಿ, ತಮಿಳುನಾಡು ಆಗಲಿ, ಆಂಧ್ರ ಆಗಲಿ ಸಬ್ಸಿಡಿಯನ್ನು ಸಹಕಾರ ಸಂಸ್ಥೆಗಳ ಮುಖಾಂತರ ಕೊಡುತ್ತಾರೆ. ಆದರೆ ನೀವಿಲ್ಲಿ 17 ಕೋಟಿ ರೂಪಾಯಿಗಳನ್ನು ಪ್ರೈವೇಟ್ ಕಂಪನಿಗಳಿಗೆ ಹಂಚಿಬಿಟ್ಟರಿ. ಈಗ 34 ಕೋಟಿ ರೂಪಾಯಿಗಳು ಬಂದಿದೆ, ಅದಕ್ಕೆ ತಾವು ಯಾವ ವ್ಯವಸ್ಥೆ ಮಾಡುತ್ತೀರೋ ನಮಗೆ ಗೊತ್ತಿಲ್ಲ. ಅದನ್ನು ಸಹಕಾರ ಸಂಘಗಳ ಮುಖಾಂತರ ಹಂಚುತ್ತೀರೋ ಅಥವಾ ಪ್ರೈವೇಟ್ ಕಂಪನಿಗಳಿಗೆ ಈ 17 ಕೋಟಿ ರೂಪಾಯಿಗಳು ಕೊಟ್ಟಂತೆ ಕೊಟ್ಟು ಬಿಡುತ್ತೀರೋ ಎನ್ನುವುದನ್ನು ಕೂಡ ತಾವು ಹೇಳಬೇಕಾಗುತ್ತದೆ.

ಈ ಗೊಬ್ಬರದಿಂದ ಆರ್ಥಿಕ ಪರಿಸ್ಥಿತಿ ಮೇಲೆ ಎಷ್ಟು ಪರಿಣಾಮ ಆಗಿದೆ. ಇದರ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟ ಇಲ್ಲ. ರೈತರಿಗೆ ಎಷ್ಟು ತೊಂದರೆ ಆಗಿದೆ. ಒಂದು ಕಡೆ ಕ್ರಿಮಿಕೀಟಗಳ ತೊಂದರೆ. ಇನ್ನೊಂದು ಕಡೆ ಕೊಬ್ಬರದ ತೊಂದರೆ ಗೊಬ್ಬರ ರೀ–ಕಂಟ್ರೋಲ್ ಆದ ಮೇಲೆ ಪರಿಸ್ಥಿತಿ ಬಹಳ

ಕೆಟ್ಟುಹೋಗಿದೆ. ಜನರ ಬೆಳೆ ಮೇಲೆ ಪರಿಣಾಮವಾಗಿದೆ. ಆರ್ಥಿಕ ಪರಿಸ್ಥಿತಿ ಮೇಲೆ ಪರಿಣಾಮ ಆಗಿದೆ. ಅಮೇರಿಕಾ ದೊಡ್ಡ ದೇಶ, ಮುಂದುವರಿದ ದೇಶ ಅಲ್ಲಿ ಸಬ್ಸಿಡಿ ಇಟ್ಟುಕೊಂಡಿದ್ದಾರೆ. ನಮ್ಮಲ್ಲಿ ಏಕೆ ಇರಕೂಡದು.. ಇದರ ಬಗ್ಗೆ ಸರ್ಕಾರದ ನೀತಿ ನಿರೂಪಣೆ ಏನೂ ಇಲ್ಲ. 17 ಕೋಟಿ ರೂಪಾಯಿ ಸಬ್ಸಿಡಿ ಕೊಟ್ಟಿದ್ದನ್ನು ತಾವು ಕಂಪೆನಿಗಳಿಗೆ ಹಂಚಿದಿರಿ. ಆಂಧ್ರ, ಮಹಾರಾಷ್ಟ್ರ ರಾಜ್ಯಗಳವರು ಫೆಡರೇಷನ್ ಮುಖಾಂತರ ಕೊಟ್ಟಿದ್ದಾರೆ. ಇನ್ನು 34 ಕೋಟಿ ರೂಪಾಯಿಗಳು ನಿಮಗೆ ಬಂದಿದೆ. ಅದನ್ನೂ ಕೂಡ ಯಾವ ರೀತಿಯಲ್ಲಿ ಹಂಚುತ್ತೀರಿ, ತಮ್ಮ ನಿಲುವು ಏನು ? ಸಹಕಾರ ಸಂಘಗಳ ಮುಖಾಂತರ ಹಂಚುತ್ತೀರೋ ಅಥವಾ ಪ್ರೈವೇಟ್ ಕಂಪನಿಗಳ ಮುಖಾಂತರ ಹಂಚುತ್ತೀರೋ, ತಾವು ಇದರ ಬಗ್ಗೆ ನೋಡಬೇಕಾಗುತ್ತದೆ. ತಮ್ಮ ನೀತಿ ಸ್ಪಷ್ಟವಾಗಿರಬೇಕಾಗುತ್ತದೆ. ಏಕೆಂದರೆ ರೈತರಿಗೆ ಅನುಕೂಲವಾಗಬೇಕು. ಪ್ರೈವೇಟ್ ಕಂಪನಿಗಳಿಗೆ ತಮ್ಮ ಗೊಬ್ಬರ ಮಾರುವುದು ಒಂದೇ ಯೋಚನೆ ಇರುತ್ತದೆ.

ಸಹಕಾರ ಸಂಘಗಳು ಯಾರಿಗೆ ಬೇಕು, ಎಲ್ಲಿ ಬೇಕು, ಏನು ಪರಿಸ್ಥಿತಿ ಇದೆ ಎನ್ನುವುದನ್ನು ಬಹಳ ಮುಖ್ಯವಾಗಿದೆ. ಹೋದ ಸಾರಿ ನಾನು ಕೇಳಿದಾಗ, ಅದರ ಬಗ್ಗೆ ಡಿಟೇಲ್ ಮಾಹಿತಿ ಈಗಿಲ್ಲ. ಆಮೇಲೆ ಹೇಳುತ್ತೇನೆ ಎನ್ನುವ ಎಂಬ ಮಾತನ್ನು ಹೇಳಿದಿರಿ. ನಾವು ಅಗ್ರಿಕಲ್ಚರ್ ಬಗ್ಗೆ ನೀತಿ ನಿರೂಪಣೆ ಮಾಡಬೇಕಾಗಿದೆ. ಇವತ್ತಿನ ದಿವಸ ತೊಗರಿಬೇಳೆ ಹೋಗಿದೆ ರೈತರ ಕಷ್ಟ ಎಷ್ಟಾಗಿದೆ ? ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಇದ್ದಿಲ್ಲ. ಸಾಯಂಕಾಲದೊಳಗೆ ಸ್ಟೇಟ್‌ಮೆಂಟ್ ಕೊಡಿಸುತ್ತೇನೆಂದು ಅಧ್ಯಕ್ಷರು ಹೇಳಿದರು. ಜೋಳದ ಬಗ್ಗೆ, 240 ರೂಪಾಯಿ ಸಪೋರ್ಟ್ ಪ್ರೈಸ್ ಫಿಕ್ಸ್ ಮಾಡಿದಿರಿ. ಇದನ್ನು ನಮ್ಮಲ್ಲಿ ಯಾರೂ ತೆಗೆದುಕೊಳ್ಳುತ್ತಿಲ್ಲ. ಹತ್ತಿಯ ಪರಿಸ್ಥಿತಿಯೂ ಅದೇ ರೀತಿ ಇದೆ. ಉದ್ದಿನ ಪರಿಸ್ಥಿತಿ, ಕುಸುಬೆ ಪರಿಸ್ಥಿತಿ ಅದೇ ರೀತಿ ಇದೆ. ಸನ್ ಫ್ಲವರ್, ಮೆಕ್ಕೆ ಜೋಳದ ಪರಿಸ್ಥಿತಿಯೂ ಅದೇ ಇದೆ. ಯಾರೂ ತೆಗೆದುಕೊಳ್ಳುವುದಿಲ್ಲ. ಇಂತಹವು ಎಷ್ಟು ಎಂದು ಹೇಳುತ್ತೀರಿ. ಯಾರು ಖರೀದಿ ಮಾಡುವವರು ? ಮಹಾರಾಷ್ಟ್ರ ಸರ್ಕಾರದವರು ಖರೀದಿ ಮಾಡುತ್ತಾರೆ, ನೀವು ಏಕೆ ಖರೀದಿ ಮಾಡುವುದಿಲ್ಲ ? ಸಪೋರ್ಟ್ ಪ್ರೈಸ್‌ನಲ್ಲಿ ನೀವೂ ಕೊಂಡುಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕು. ಒಂದು ಕಡೆ ರೈತರಿಗೆ ಅನುಕೂಲ ಮಾಡುವುದಕ್ಕೆ ಸಪೋರ್ಟ್ ಪ್ರೈಸ್ ಮಾಡಿದ್ದೇವೆಂದು ಅವತ್ತು ಹೇಳಿದಿರಿ. ಇವತ್ತಿಗೂ ಇದರ ಬಗ್ಗೆ ಉತ್ತರ ಹೇಳಲಿಲ್ಲ. ಮುಖ್ಯಮಂತ್ರಿಯವರು ಬಂದ ಮೇಲೆ ನಾವು ಹೇಳುತ್ತೇವೆಂದು ರಾಮಸ್ವಾಮಿಯವರು ಹೇಳಿದರು. ಇವತ್ತು ಮುಖ್ಯಮಂತ್ರಿಯವರು ಬಂದ ಮೇಲೂ ಈ ಮಾತು ಹೇಳಲಿಲ್ಲ. ಸಪೋರ್ಟ್ ಪ್ರೈಸ್ ಬಗ್ಗೆ ತಾವು ಏನು ನಿಲುವು ತೆಗೆದುಕೊಳ್ಳುತ್ತೀರಿ ಎಂದು ಮುಖ್ಯಮಂತ್ರಿಯವರು ಹೇಳಬೇಕಾಗುತ್ತದೆ. ಯಾವೊತ್ತು ನಿರ್ಣಯ ತೆಗೆದುಕೊಳ್ಳುತ್ತೀರಿ ? ಎಲ್ಲಾ ತೊಂದರೆಯಾಗಿ, ರೈತರು ಹಾಳಾಗಿ, ಬೀದಿಗೆ ಹೋದ ಮೇಲೆ ನೀವು ನಿರ್ಣಯ ತೆಗೆದುಕೊಳ್ಳುತ್ತೀರೋ ? ಅಥವಾ ಅವರು ಜೀವಂತ ಇದ್ದಾಗ ನಿರ್ಣಯ ತೆಗೆದುಕೊಳ್ಳುತ್ತೀರೋ ? ಇದರ ಬಗ್ಗೆ ತಾವು ಬಹಳ ಗಮನ ಕೊಡಬೇಕಾಗುತ್ತದೆ. ರೈತರ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ. ಅವರು ಉದ್ಧಾರವಾಗಿ ಜೀವಂತವಾಗಿರಬೇಕಾದರೆ ನೀವು ಅವರೆಬೆಳೆ ಬೆಳೆಗಳಿಗೆ ಸಪೋರ್ಟ್ ಪ್ರೈಸ್ ಕೊಡಬೇಕು. ಮೊನ್ನೆ ನಾನು ಊರಿಗೆ ಹೋಗಿದ್ದಾಗ ಆಂಧ್ರದಿಂದ ಬಂದಿದ್ದಾರೆ, ಕೋಳಿಗೆ ಹಾಕುವುದಕ್ಕೆ ಜೋಳ ತೆಗೆದುಕೊಡಿ ಎಂದು. 60 ರೂಪಾಯಿ, 70 ರೂಪಾಯಿ 120 ರೂಪಾಯಿ ಮಾಡಿದ್ದಾರೆ. ಅವರ ಕಷ್ಟ ಎಷ್ಟಾಗಿರಬೇಕು ಹೇಳಿ ? 240 ರೂಪಾಯಿ ಎಂದು ಫಿಕ್ಸ್ ಮಾಡಿ ನೀವು ಮನೆಯಲ್ಲಿ ಕುಳಿತುಕೊಂಡು ಬಿಟ್ಟರೆ ಯಾರಿಗೆ ಅನುಕೂಲ ಸ್ವಾಮಿ ಇದು ? ಯಾರ ಉದ್ಧಾರದ ಸಲುವಾಗಿ ಇದು ? ಈ ನೀತಿ ಬಗ್ಗೆ ಸರ್ಕಾರದವರು ಗಮನವನ್ನು ಎಂದೆಂದೂ ಹರಿಸುವುದಿಲ್ಲ. ಏಕೆ ಇದರ ಬಗ್ಗೆ ಹೇಳುವುದಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಇದರ ಬಗ್ಗೆ ತಾವು ಏನಾದರೂ ನಿರ್ಣಯ ತೆಗೆದುಕೊಂಡು ಸಪೋರ್ಟ್ ಪ್ರೈಸ್ ಬಗ್ಗೆ ಆದೇಶ ಕೊಟ್ಟು

ಯಾರ ಮುಖಾಂತರ ಖರೀದಿ ಮಾಡಿಸುತ್ತೀರೋ ಮಾಡಿಸಿ. ಎರಡು ದಿವಸದಲ್ಲಿ ಹೇಳುತ್ತೇವೆಂದು ಹೇಳಿದ್ದರು. ಇವತ್ತಿನ ದಿವಸ ಮುಖ್ಯಮಂತ್ರಿಯವರು ಮಾತನಾಡುತ್ತಾರೋ ಏನೋ ಗೊತ್ತಿಲ್ಲ. ಅದರ ಬಗ್ಗೆ ಏನಾದರೂ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಸಹಕಾರ ಸಂಸ್ಥೆಯಲ್ಲಿ ಬಡ್ಡಿ ಮನ್ನಾ ಮತ್ತು ಸಾಲ ಮನ್ನ. ಬಗ್ಗೆ ನಾನು ವಿರೋಧ ಇದ್ದೇನೆ. ಏಕೆಂದರೆ ಇದು ಒಳ್ಳೆಯ ನೀತಿ ಅಲ್ಲ. ರೈತರ ಆರ್ಥಿಕ ಪರಿಸ್ಥಿತಿ ಮುಂದೆ ಬರತಕ್ಕಂಥ ನೀತಿ ಅಲ್ಲ. ಅವರನ್ನು ಸೋಮಾರಿಗಳನ್ನಾಗಿ ಮಾಡತಕ್ಕಂಥ ನೀತಿ ಅದು. ನಾವು ಶಹಭಾಸ್‌ಗಿರಿ ಪಡೆದುಕೊಳ್ಳುವುದಕ್ಕೆ ಮತ್ತು ಓಟು ತೆಗೆದುಕೊಳ್ಳುವುದಕ್ಕೆ ಹೇಳಬೇಕೇ ಹೊರತು ಇದನ್ನು ಯಾರೇ ಹೇಳಿದರೂ ತಪ್ಪು. ಉದಾಹರಣೆಗಾಗಿ ಹೇಳುವುದಾದರೆ 1983ರಲ್ಲಿ ಮನ್ನಾ ಮಾಡಿದರು. ಮೊದಲು ಏನು ಒಬ್ಬ ಸಾಲ ಮಾಡಿದ್ದ ಅವನು 83ರವರೆಗೂ ಹಾಗೆಯೇ ಉಳಿದ 1983ರಲ್ಲಿ ಮನ್ನಾ ಆದಾಗ ಅವನದೆಲ್ಲಾ ಹೋಯಿತು. ಪುನಃ 84ರಲ್ಲಿ ಸಾಲ ತೆಗೆದುಕೊಂಡ, ಹಾಗೆಯೇ ಕುಳಿತುಕೊಂಡ, 1986ರಲ್ಲಿ ಒಂದು ಸಾರಿ ಮನ್ನಾ ಆಯಿತು. ಪುನಃ 1986ರಲ್ಲಿ ಅವನಿಗೆ ಕ್ಲಿಯರ್ ಆಯಿತು. ಆದಮೇಲೆ 1987ರಲ್ಲಿ ಪುನಃ ಸಾಲ ತೆಗೆದುಕೊಂಡ ಮತ್ತು 89ರವರೆಗೆ ಹಾಗೇ ಕುಳಿತುಕೊಂಡ. 89ರಲ್ಲಿ ಮನ್ನಾ ಆಯಿತಲ್ಲಾ ಆಗ ಮತ್ತೆ ಅವನಿಗೆ ಮನ್ನಾ ಆಯಿತು. ಇದು ಯಾರಿಗೆ ಲಾಭ ಆಗುತ್ತದೆಂದರೆ, ಯಾರು ಭಂಡರಿದ್ದಾರೆ, ಯಾರು ಕೊಡುವುದಿಲ್ಲ, ಅಂಥವರಿಗೆ ಲಾಭ. ಯಾರು ಸರಿಯಾಗಿ ಕೊಡುತ್ತಾರೋ ಅವನಿಗೆ ಅನುಕೂಲ ಇಲ್ಲ. ಕೊಟ್ಟವನಿಗೆ ಏಕೆ ಅನುಕೂಲವಾಗಬಾರದು ? ಕೊಟ್ಟವನಿಗೆ ಏನು ಕೊಟ್ಟಿದ್ದೀರಿ ? ಯಾರು ಸಾಲವನ್ನು ರೆಗ್ಯುಲರಾಗಿ ಮರುಪಾವತಿ ಮಾಡುತ್ತಾನೋ ಅವನಿಗೆ ಏನಾದರೂ ಪ್ರೈಸ್ ಇಟ್ಟಿದ್ದರೆ ಅವರಿಗೆ ಏನಾದರೂ ಸಹಾಯ ಸಿಕ್ಕಿದೆಯೇ ಎಂದರೆ ಇಲ್ಲ. ಅವನ ಮೇಲೆ ಪುನಃ ಒತ್ತಾಯ. ಯಾರು ಸಾಲ ಕೊಡುವುದಿಲ್ಲವೋ ಅವನಿಗೆ ಮನ್ನಾ. ಇದು ಸರಿಯಾದ ವ್ಯವಸ್ಥೆಯಲ್ಲ. ಇದರ ಜೊತೆಯಲ್ಲಿ ಸಂಪೂರ್ಣವಾದ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಸಂಪೂರ್ಣ ಸಾಲ ಕೊಡಬೇಕಾದರೆ ನಬಾರ್ಡ್ ನೀತಿ ಬದಲಾವಣೆ ಮಾಡಬೇಕಾಗುತ್ತದೆ. ನಬಾರ್ಡ್ ನೀತಿ ಬದಲಾವಣೆ ಮಾಡಬೇಕಾದರೆ ಸರ್ಕಾರದವರು ಅದಕ್ಕೆ ಹೇಳಬೇಕು. ನಬಾರ್ಡ್ ನೀತಿ ಹೇಗೆ ಬದಲಾಯಿಸಬೇಕು ? ರೈತ 10 ಎಕರೆಯಲ್ಲಿ ಕಬ್ಬು ಬೆಳೆದರೆ ಅವನಿಗೆ 10 ಎಕರೆಗೂ ಸಾಲ ಕೊಡುವುದಿಲ್ಲ. ಕೊಡುವುದೇ 2 ಎಕರೆಗೆ 2500 ರೂಪಾಯಿ ಒಂದು ಎಕರೆಗೆ ಕೊಡುತ್ತೀರಿ. 200 ರೂಪಾಯಿ ಜೋಳಕ್ಕೆ, 300 ರೂಪಾಯಿ ಹತ್ತಿಗೆ – ಹೀಗೆ ಟೆಕ್ನಿಕಲ್ ಕಮಿಟಿ ರಿಪೋರ್ಟ್ ಪ್ರಕಾರ ನೀವು ಕೊಡುತ್ತಿದ್ದೀರಿ. 50 ಎಕರೆ ಇದ್ದವರಿಗೆ 50 ಎಕರೆಗೂ ನೀವು ದುಡ್ಡು ಕೊಡುವುದಿಲ್ಲ. ಏಕೆ ಕೊಡುವುದಿಲ್ಲ ? ಇದಕ್ಕೆ ಕಾರಣ ಏನು ? ಮಿನಿಮಂ ಇನ್‌ವಾಲ್ವ್‌ಮೆಂಟ್ ಡಿಸಿಸಿ ಬ್ಯಾಂಕ್‌ಗೆ ಇರುವುದರಿಂದ ತೊಂದರೆಯಾಗುತ್ತದೆ.

ಆದ್ದರಿಂದ ಈ ನೀತಿಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಈ ನೀತಿ ಬದಲಾವಣೆ ಮಾಡಬೇಕಾದರೆ ತಾವು ಕೇಂದ್ರ ಸರ್ಕಾರಕ್ಕೆ ಬರೆಯಬೇಕು. ಮಿನಿಮಂ ಇನ್‌ವಾಲ್ವ್‌ಮೆಂಟ್ ಏನಿದೆ. ಅದು 40 ಪರ್‌ಸೆಂಟ್ ಆಗಲೀ ಅಥವಾ 40 ಪರ್‌ಸೆಂಟ್‌ಗೆ ಓನ್ ಫಂಡ್ ಹಾಕಬೇಕಾಗುತ್ತದೆ. ಯಾವುದೇ ಜಿಲ್ಲಾ ಬ್ಯಾಂಕ್ ಆಗಲೀ, ಅಪೆಕ್ಸ್ ಬ್ಯಾಂಕ್ ಆಗಲೀ ಕೊಡಬೇಕಾದರೆ 40 ಪರ್‌ಸೆಂಟ್‌ನಷ್ಟು ಓನ್ ಫಂಡ್. ಸ್ವತಃ ದುಡ್ಡು ಕೊಟ್ಟು, 60 ಪರ್‌ಸೆಂಟ್ ನಬಾರ್ಡ್ ಕೊಡಬೇಕು. ಅದರಲ್ಲಿ 7 ಪರ್‌ಸೆಂಟ್ ಬಡ್ಡಿಯನ್ನು ನಾವು ರೈತರಿಗೆ ಕೊಡಬೇಕಾಗುತ್ತದೆ. 13 ಪರ್‌ಸೆಂಟ್‌ನಷ್ಟು ಡಿಪಾಸಿಟ್ ಇಟ್ಟುಕೊಂಡು ಇಷ್ಟು ಕೊಡಬೇಕಾಗುತ್ತದೆ ಅಂದರೆ ನಮಗೆ ಎಷ್ಟು ಲುಕ್ಸಾನಿದೆ, ಅದಕ್ಕಾಗಿ ಯಾವ ಬ್ಯಾಂಕುಗಳೂ ಇದನ್ನು ಒಪ್ಪುವುದಿಲ್ಲ. ಇದಕ್ಕೆ ಈ ನೀತಿ ನಿರೂಪಣೆ ಬದಲಾಯಿಸುವುದಕ್ಕಾಗಿ ತಾವು ಕೇಂದ್ರ ಸರ್ಕಾರಕ್ಕೆ ಬರೆದು ಅದನ್ನು ಬದಲಾವಣೆ ಮಾಡಬೇಕು. ಆಗ ಮಾತ್ರ ರೈತನಿಗೆ ಸಂಪೂರ್ಣ ಸಾಲ ಕೊಟ್ಟು ಅವನ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲವೆಂದರೆ ಸಾಧ್ಯವಾಗುವುದಿಲ್ಲ. ಅದಕ್ಕೆ ತಾವುಗಳು ಏನಾದರೂ ಮಾಡಿ ಈ ಒಂದು ವ್ಯವಸ್ಥೆಯನ್ನು ನಿರೂಪಣೆ

ಮಾಡಿ, ನೀತಿ ರೂಪಣೆಯನ್ನು ಬದಲಾಯಿಸಿದರೆ ರೈತರ ಆರ್ಥಿಕ ಪರಿಸ್ಥಿತಿಯು ಮುಂದೆ ಸಹಕಾರ ಸಂಸ್ಥೆಗಳ ಮೂಲಕ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲಾ ರೀತಿಯ ಯೋಜನೆಗಳು ನಮ್ಮಲ್ಲಿವೆ, ಆದರೆ ಅಡ್ಡಿ ಅಡಚಣೆಗಳು ಎಲ್ಲಿವೆ ? ಸರಕಾರದ ಸಹಾಯ ಏತಕ್ಕಾಗಿ ಬೇಕೆಂದರೆ ಕೇಂದ್ರ ಸರಕಾರವನ್ನು ಕೇಳಿ, ಇರುವ ನೀತಿಯನ್ನು ಬದಲಾಯಿಸಬೇಕು. ಇದನ್ನು ಬಿಟ್ಟು ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳುವುದು ಸರಿಯಲ್ಲ. ಅದನ್ನು ಸರಿಪಡಿಸಬೇಕು. ಆದರೆ ಇರುವ ವ್ಯವಸ್ಥೆಯನ್ನು ಸರಿಪಡಿಸಬೇಕು. ಒಂದು ವೇಳೆ ಆ ಸಹಕಾರ ಸಂಸ್ಥೆಗಳಲ್ಲಿ ಯಾರು ಕೆಟ್ಟವರಿದ್ದಾರೆ, ಅವರಿಗೆ ಏನು ಶಿಕ್ಷೆ ಕೊಡಬಯಸುತ್ತೀರೋ ಅದನ್ನು ಕೊಡಿ ಅಥವಾ ಯಾವುದೇ ಕ್ರಮವನ್ನು ತೆಗೆದುಕೊಳ್ಳುತ್ತೀರೋ ಅದನ್ನು ಮಾಡಿ. ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಅದನ್ನು ಖಂಡಿತ ಒಪ್ಪುತ್ತೇನೆ. ಆದರೆ ಯಾರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಪ್ರೋತ್ಸಾಹಧನವನ್ನು ಕೊಡಬೇಕು. ತಾವು ಬೇರೆ ಡಿಪಾರ್ಟ್‌ಮೆಂಟ್‌ಗೆ ಹೋಲಿಕೆ ಮಾಡಿ ನೋಡಿದಾಗ ಸಹಕಾರ ಸಂಘಗಳಲ್ಲಿ ಎಷ್ಟು ಪರ್‌ಸೆಂಟ್ ಸೋರಿಕೆ ಆಗಿದೆ ಎಂದು ಹೇಳುತ್ತೀರಾ ? ಅದನ್ನು ಪರಿಶೀಲಿಸಿದರೆ ಅದು 6 ಪರ್‌ಸೆಂಟ್‌ನಷ್ಟು ಕೂಡ ಬರುವುದಿಲ್ಲ. ಇಷ್ಟಿದ್ದರೂ ಕೂಡ ಸಹಕಾರಿಗಳೆಲ್ಲರೂ ಕೆಟ್ಟವರು ಎಂದು ಹೇಳುವುದು ಸರಿಯಲ್ಲ. ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಎಷ್ಟೆಷ್ಟು ಸೋರಿ ಹೋಗಿದೆ ಎಂಬ ಬಗ್ಗೆ ಪತ್ತೆ ಹಚ್ಚಿ. ಸಹಕಾರಿ ವಲಯದಲ್ಲಿ ಹೀಗೆ ಆಗಿದ್ದರೂ ಅದನ್ನು ಪತ್ತೆ ಹಚ್ಚಿ ತಪ್ಪಿತಸ್ಥರನ್ನು ಶಿಕ್ಷಿಸಿ, ಬೇಡಿ ಎಂದು ಹೇಳುವುದಿಲ್ಲ. ಆದರೆ ಯಾರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಅವರಿಗೆ ಸಹಕಾರ ನೀಡಬೇಕು. ಹೀಗೆ ಮಾಡಿದರೆ ಅದರಿಂದ ಚೆನ್ನಾದ ವ್ಯವಸ್ಥೆಯು ಬರುತ್ತದೆ. ಈ ಒಂದು ಮಹತ್ವದ ಕಾರ್ಯವನ್ನು ಸರಕಾರದವರು ಹೇಗೆ ಮಾಡಬೇಕೆಂಬುದನ್ನು ನೋಡಬೇಕು. ಒಟ್ಟಿನಲ್ಲಿ ನೀತಿ ನಿರೂಪಣೆಯನ್ನು ಬದಲಾಯಿಸಬೇಕು. ಈಗ ಬಡ್ಡಿ ವಿಚಾರ. ಈ ವಿಚಾರದಲ್ಲಿ ಕೇಂದ್ರ ಸರಕಾರದವರಿಗೆ ನಮ್ಮ ಸರಕಾರದವರು ತಿಳಿಸಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಈ ಮೂಲಕ ಸಣ್ಣ ಸೊಸೈಟಿಗಳು ಏಕೆ ಹಾಳಾಗುತ್ತಾ ಇವೆ ? ಒಬ್ಬ ಸಣ್ಣ ರೈತರು ಒಂದು ಸಾವಿರ ರೂಪಾಯಿಗಳ ಸಾಲವನ್ನು ತೆಗೆದರೆ ಬಡ್ಡಿ ಇನ್ನೂರು ರೂಪಾಯಿಗಳು ಆಗುತ್ತದೆ. ಅವರು ವಸೂಲು ಮಾಡಿ ಜಿಲ್ಲಾ ಬ್ಯಾಂಕ್‌ಗೆ ಕಟ್ಟುವಾಗ ಏನು ಮಾಡುತ್ತಾರೆ ಅಂದರೆ ಬಡ್ಡಿ ಹಣ ಸೇರಿ 1200 ರೂಪಾಯಿಗಳನ್ನು ಮೂಲದಲ್ಲಿಯೇ ತೆಗೆದುಕೊಳ್ಳುತ್ತಾರೆ. ಹಾಗಾದರೆ ಅವನ ಗತಿ ಏನಾಗಬೇಕು ? ಈ ನಿಯಮಗಳು ಹೋಗಿ, ಅಸಲಿಗೆ ಅಸಲು, ಬಡ್ಡಿಗೆ ಬಡ್ಡಿ ತೆಗೆದುಕೊಂಡರೆ ಈ ವ್ಯತ್ಯಾಸ ಬರುವುದಿಲ್ಲ. ಜಿಲ್ಲಾ ಬ್ಯಾಂಕ್‌ಗಳು ಹಳ್ಳಿಗಳ ಸೊಸೈಟಿಗಳಿಗೆ 220 ಕೋಟಿ ಸಾಲ ಕೊಟ್ಟರೆ 43 ಕೋಟಿ ವ್ಯತ್ಯಾಸವಿದೆ. ಆ ವ್ಯತ್ಯಾಸ ಹೇಗೆ ಹೋಗುತ್ತದೆ ? ಎಲ್ಲಿ ತಪ್ಪಾಗಿದೆ ? ಈ ಬಡ್ಡಿಯ ಲೆಕ್ಕದಲ್ಲಿ ಹೇಳುವುದಾದರೆ, ಕೆಲವು ಕಡೆಗಳಲ್ಲಿ ತಿಂದು ಹೋಗಿದೆ ಕೆಲವು ಕಡೆಗಳಲ್ಲಿ ಸಂಬಳದ ಲೆಕ್ಕ ಹಾಕಿದ್ದಾರೆ. ಅದಕ್ಕಾಗಿ ಅಲ್ಲಿರತಕ್ಕ ಕಾರ್ಯದರ್ಶಿಯವರು ಅದರ ಬಗ್ಗೆಯೂ ಒಂದು ನೀತಿಯನ್ನು ನಿರೂಪಣೆ ಮಾಡಬೇಕಾಗಿದೆ. ಅದನ್ನು ಯಾವ ಪ್ರಕಾರವಾಗಿ ಮಾಡಬೇಕು ? ಈ ಬಗ್ಗೆ ಮತ್ತು ಇತರ ವಿಷಯಗಳ ಬಗ್ಗೆ ಮಾನ್ಯ ಅಜ್ಜೀಬಾಳ್ ಕಮಿಟಿಯವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಆ ರಿಪೋರ್ಟ್ ಪ್ರಕಾರ ತಾವು ಅಮಲ್‌ಬಜಾವಣಿ ತರಬೇಕು. ಈ ತರಹ ಮಹಾರಾಷ್ಟ್ರದಲ್ಲಿ ಕೆಲವು ಕಡೆಗಳಲ್ಲಿ ಜಾರಿಯಲ್ಲಿದೆ. ಹೀಗೆ 43 ಕೋಟಿ ರೂಪಾಯಿಗಳು ಏಕೆ ನಷ್ಟವಾಗುತ್ತಿದೆ ಎಂಬ ಬಗ್ಗೆ ಹೇಳುತ್ತಿದ್ದೇನೆ. ಸೆಕ್ರೆಟರಿಗಳು ಈ ವಿಚಾರದಲ್ಲಿ ಎಲ್ಲಾ ಕಡೆಗಳಲ್ಲಿಯೂ ಪ್ರತಿಭಟನೆ ಮಾಡುವಾಗ ನಾವು ಹೇಳಿದ್ದು ನಿಜ ಎಂದು 25 ಸಾವಿರ ಸೊಸೈಟಿಗಳು ಇವೆ, 15 ಸಾವಿರ ವರ್ಕಿಂಗ್‌ನಲ್ಲಿ ಇವೆ. ಅಲ್ಲಿಗೆ 34 ಕೋಟಿ ಸಂಬಳ ಆಯಿತು. ಇದರಲ್ಲಿ ಸರಕಾರದವರು 17 ಕೋಟಿಗಳನ್ನಾದರೂ ಕೊಟ್ಟು, 25 ಪರ್‌ಸೆಂಟ್ ಅಪೆಕ್ಸ್ ಬ್ಯಾಂಕ್, 15 ಪರ್‌ಸೆಂಟ್ ಡಿಸಿಸಿ ಬ್ಯಾಂಕ್, 10 ಪರ್‌ಸೆಂಟ್ ಸೊಸೈಟಿಯವರು ಕೊಡಬೇಕೆಂದು ಈ ಪ್ರಕಾರವಾಗಿ ಮಾಡಿ. ಅಪೆಕ್ಸ್ ಬ್ಯಾಂಕ್‌ನವರು ತಿಂಗಳಿಗೆ ನಾಲ್ಕೈದು ಕೋಟಿ ಲಾಭ ಮಾಡುತ್ತಾರೆ ಎಂದು ಕೇಳುವುದು

ನಿಜ. ಅದಕ್ಕೆ ಒಂದು ಫಂಡ್‌ನ್ನು ಕ್ರಿಯೇಟ್ ಮಾಡಿ ಅದರ ಬಡ್ಡಿಯಲ್ಲಿ ಸಂಬಳವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಹೀಗೆ ನಮ್ಮ ಸಹಕಾರಿ ಸಂಸ್ಥೆಗಳು ಚೆನ್ನಾಗಿ ನಡೆದು ಮುಂದು ಬರಬೇಕಾದರೆ ನಮ್ಮಲ್ಲಿರುವ ನೀತಿ ನಿಯಮಗಳನ್ನು ಅವಶ್ಯಕವಾದಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ನಮ್ಮದು ಬಹಳ ಕೊನೆಯ ತಾಲ್ಲೂಕು. ನನ್ನ ಹೆಸರು ಎಲ್ಲಕ್ಕಿಂತ ಮೊದಲು. ಒಂದನೇ ಕ್ಷೇತ್ರ. ಆದರೆ ಎಲ್ಲಕ್ಕಿಂತ ಕೆಳಗಿದ್ದೇನೆ. ನಮ್ಮನ್ನು ಯಾರೂ ನೋಡುವುದಿಲ್ಲ.

ಬ್ಯಾಂಕ್ ಚೇರ್‌ಮನ್ ಬೇರೆ, ನಮ್ಮನ್ನು ಯಾರು ಕೇಳುವರರು ಇಲ್ಲ. ನಾವು ಇದ್ದೇವೆ ಎಂದು ಸರ್ಕಾರದವರು ಒಂದು ಮಾತು ಹೇಳುವುದಿಲ್ಲ. ಅವರಿಗೆ ಅವರದೇ ತೊಂದರೆಯಾಗಿದೆ. ಅದನ್ನು ಸರಿಪಡಿಸಿಕೊಳ್ಳುವುದೇ ಕಷ್ಟವಾಗಿದೆ. ಈಗ ಯಾರು ಯಾರು ರಾಜೀನಾಮೆ ಕೊಡುತ್ತಾರೋ ಏನೇನೋ ಆಗಿದೆಯೋ. ನನ್ನದು ಒಂದು ಸಲಹೆ ಇದೆ. ಅದೇನೆಂದರೆ, ಮಂತ್ರಿಗಳಿಗೆ ತೊಂದರೆಯಾಗಿದ, ಮಂತ್ರಿಗಳಿಗೆ ಮನೆ ಇಲ್ಲ, ಕಾರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಯಾರು ಕೇಳದೆ ನೀವು ಎಂ.ಎಲ್.ಎ. ಆಗಿದ್ದೀರಾ. ಯಾರನ್ನು ಕೇಳದೆ ಮಾರ್ಕೆಟಿಂಗ್ ಫೆಡರೇಷನ್ ಚೇರ್‌ಮನ್ ಆಗಿದ್ದೀರಾ, ಯಾರೂ ಕೇಳದೆ ಅಫೆಕ್ಸ್ ಬ್ಯಾಂಕ್ ಚೇರ್‌ಮನ್ ಆಗಿದ್ದೀರಾ, ಸುಮಾರು 200 ಕೋಟಿ ರೂಪಾಯಿಗಳನ್ನು ಸಾಲ ಕೊಡುತ್ತೇವೆಂದು ಹೇಳಿದರೆ ನಿಮ್ಮನ್ನು ಎಲ್ಲರೂ ಕೇಳುತ್ತಾನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಹಾಗೆ ಜನ ಕೇಳಿದ್ದಾರೆಂದು ಹೇಳಿದೆ. ನಮ್ಮ ಕ್ಷೇತ್ರದಲ್ಲಿ ಕುಡಿಯುವುದಕ್ಕೆ ನೀರು ಇಲ್ಲವೆಂದು 5 ವರ್ಷಗಳಿಂದ ಹೇಳುತ್ತಿದ್ದೇನೆ. ಯಾರೊಬ್ಬರು ಕೇಳುವುದಿಲ್ಲ 20 ಕೋಟಿ ರೂಪಾಯಿಗಳು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೇ, ಈಗ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ನೀರು ಇಲ್ಲ, ಅದಕ್ಕೆ ಯಾರೂ ಕೇಳಿಲ್ಲ ಎನ್ನುವಂತಹ ಅಪಾದನೆ ಸರಿಯಲ್ಲ. ಅವರಿಗೆ ಗೊತ್ತಿದೆ ಪೈಪ್‌ವಾಟರ್ ಸಪ್ಲೈನಲ್ಲಿ ಅವರ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಸುಮಾರು 30–35 ಹಳ್ಳಿಗಳಿಗೆ ಸರ್ಕಾರ ಹಣವನ್ನು ಖರ್ಚು ಮಾಡಿ ಕೊಟ್ಟಿದೆ. ಇನ್ನೂ ಕೂಡ ಏನು ಮಾಡಿಲ್ಲ ಎಂದ ಹೇಳುವುದು ಸರಿಯಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಸಭಾಧ್ಯಕ್ಷರೇ, 30 ಹಳ್ಳಿಗಳಿಗೆ ಸರ್ಕಾರ ಹಣ ಖರ್ಚು ಮಾಡಿದೆ ಸಂತೋಷ, ಆದರೆ ಅದರಲ್ಲಿ ನೀರೇ ಇಲ್ಲ. ಬಾವಿಯಲ್ಲಿ ನೀರೇ ಇಲ್ಲ; ಕೊಳವೆ ಇದೆ, ಟ್ಯಾಂಕ್ ಇದೆ, ಭಾರಿ ದೊಡ್ಡ ಟ್ಯಾಂಕ್ ಮತ್ತು ಹತ್ತುವುದಕ್ಕೆ ಮೆಟ್ಟಲು ಇದೆ, ನೀರು ಮಾತ್ರ ಇಲ್ಲ. ಅದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ದಪ್ಪ ದಪ್ಪ ಕೊಳವೆಗಳೇ ಇವೆ, ನೀರೇ ಇಲ್ಲ. ಅದನ್ನು ತೆಗೆದುಕೊಂಡು ಏನು ಮಾಡುವುದು. ಅದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ, ಈ ನೀರಿನ ವ್ಯವಸ್ಥೆಯ ಬಗ್ಗೆ ಪ್ರತಿಯೊಂದು ಸಾರಿಯೂ ನಾನು ಹೇಳುತ್ತಿದ್ದೇನೆ. ನಾನು ಹೋದ ಸಾರಿಯೂ ಹೇಳಿದ್ದೆ. ಕೆಲವು ಲಂಬಾಣಿ ತಂಡಗಳಲ್ಲಿ 5 ಕಿಲೋಮೀಟರ್ ದೂರದಿಂದ ನೀರು ತಂದು ಮಂಚದ ಮೇಲೆ ಕುಳಿತುಕೊಂಡು ಕೆಳಗೆ ಬುಟ್ಟಿ ಇಟ್ಟು ಸ್ನಾನ ಮಾಡಿ ಕೆಳಗಿನ ಬುಟ್ಟಿಯಲ್ಲಿರುವ ನೀರಿನಲ್ಲಿ ಬಟ್ಟೆ ಒಗೆಯುತ್ತಾರೆ. ಈ ಒಂದು ಪರಿಸ್ಥಿತಿಯಲ್ಲಿ, ಎಷ್ಟು ಕಷ್ಟವಿರಬಹುದು. ಈ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲವೆಂದರೆ ಇದನ್ನು ಯಾವಾಗ ಸರಿಪಡಿಸುತ್ತೀರಿ. ಆದಷ್ಟು ಬೇಗ ಈ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕು. ಇನ್ನು ಮಂತ್ರಿಗಳಿಗೆ ತೊಂದರೆಯಾಗಿದೆ. ಇದು ಯಾವಾಗ ಪರಿಹಾರವಾಗುತ್ತದೆ ಎಂದರೆ ಈಗ 41 ಜನ ಮಂತ್ರಿಗಳು ಇದ್ದಾರೆ. ಅವರಿಗೆ ಕಾರು ಇಲ್ಲ, ಅವರು ಬಾಡಿಗೆ ಕಾರು ತಂದಿದ್ದಾರೆ. ಶ್ರೀ ಧರ್ಮಸಿಂಗ್ ಅವರಿಗೆ ಮೊನ್ನೆ ಹೇಳಿದ್ದೆ. ಒಂದು ಹಾಸ್ಟೆಲ್ ಕಟ್ಟಿರಿ, ಹಾಸ್ಟೆಲ್ ಕಟ್ಟಿದರೆ ಎಲ್ಲಾ ಮಂತ್ರಿಗಳು ಒಂದು ಕಡೆ ಇರುತ್ತಾರೆ ಒಂದು ಬಸ್ಸು ಮಾಡಿದರೆ

ಎಲ್ಲರಿಗೂ ಹೋಗುವುದಕ್ಕೆ ಬರುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದೆ. ಬಾಡಿಗೆ ಕಾರು ಏಕೆ ಬೇಕು.

ಶ್ರೀ ವಾಟಾಳ್ ನಾಗರಾಜ್:– ನಿಮಗೆ ಸಹಕಾರ ಸಚಿವರ ಬೆಂಬಲ ಇದೆ ತಾನೆ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಇದೆ, ನಾನು ಅದು ಹೇಳುತ್ತಿಲ್ಲ. ಬಹಳ ಸಚಿವರಿಗೆ ಮನೆ ಇಲ್ಲದೆ ತೊಂದರೆಯಾಗಿದೆ. ಕಾರುಗಳನ್ನು ಬಾಡಿಗೆಗೆ ತಂದಿದ್ದಾರೆ. ಒಂದು ಒಳ್ಳೆಯ ಹಾಸ್ಟೆಲ್ ಕಟ್ಟಿ. ಈಗ 40–50 ಜನ ಇದ್ದಾರೆ ಇನ್ನು, 10 ಜನ ಮಂತ್ರಿಗಳು ಆಗಬಹುದು. ಒಂದು ದೊಡ್ಡ ಹಾಸ್ಟೆಲ್ ಕಟ್ಟಿ, ಎಲ್ಲಾ ಮಂತ್ರಿಗಳು ಒಂದು ಕಡೆ ಇದ್ದರೆ ಬಂದು ಹೋಗುವವರಿಗೆ ಅನುಕೂಲವಾಗುತ್ತದೆ. ಅವರು ಅಲ್ಲಿ ಇಲ್ಲಿ ಮನೆಗಳನ್ನು ಹುಡುಕಿಕೊಂಡು ಹೋಗುವುದು ತಪ್ಪುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ವರ್ಕಿಂಗ್ ವುಮೆನ್ ಹಾಸ್ಟೆಲ್ ಇದ್ದ ಹಾಗೆ ವರ್ಕಿಂಗ್ ಮಿನಿಸ್ಟರ್ಸ್ ಹಾಸ್ಟೆಲ್ ಎಂದು ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್:– ಎಲ್ಲಿ ಮಾಡುವುದು ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಬೆಂಗಳೂರಿನಲ್ಲಿ ಎಲ್ಲಾದರೂ ಚೆನ್ನಾಗಿ ಇರುವ ಜಾಗ, ಜನ ಬರುವುದಕ್ಕೆ ಅನುಕೂಲ ಆಗಬೇಕು. ಅಂತಹ ಕಡೆ ಮಾಡಿ. ಇಲ್ಲಿಂದ ಒಂದು ಬಸ್ಸು ಮಾಡಬೇಕು, ಹೋಗುವುದಕ್ಕೆ ಬರುವುದಕ್ಕೆ. ಈ ರೀತಿ ಮಾಡಿದರೆ ಬಹಳ ಅನುಕೂಲವಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ತಾವು ಇದರ ಬಗ್ಗೆ ಪರಿಶೀಲನೆ ಮಾಡಿ, ಮುಖ್ಯ ಮಂತ್ರಿಗಳು ವಿಚಾರ ಮಾಡಬೇಕಾಗುತ್ತದೆ. ಈ ರೀತಿ ಮಾಡಿದರೆ ಮಂತ್ರಿಗಳಿಗೆ ತೊಂದರೆ ತಪ್ಪುತ್ತದೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಸಚಿವರಿಂದ ಹೇಳಿಕೆ

ರೈತ ಸಂಘದ ಸದಸ್ಯರ ದಸ್ತಗಿರಿ

† ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):– ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತಿದ್ದೇನೆ. ಡಂಕಲ್ ಒಪ್ಪಂದವನ್ನು ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘವು ಮಾರ್ಚ್ 3 ಮತ್ತು 4 ರಂದು ದೆಹಲಿಯ ಬೋಟ್ ಕ್ಲಬ್ ಮೈದಾನದಲ್ಲಿ ಮತ ಪ್ರದರ್ಶನ ನಡೆಸಲು ಕರೆ ನೀಡಿದೆ. ಬೆಂಗಳೂರು, ಮಂಡ್ಯ, ಕೊಡಗು, ಗುಲ್ಬರ್ಗ, ರಾಯಚೂರು ಹಾಗೂ ಶಿವಮೊಗ್ಗ ಜಿಲ್ಲೆಗಳಿಂದ ಸುಮಾರು 15 ಸಾವಿರ ಜನ ರೈತರು ಈ ರ್ಯಾಲಿಯಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು ದಿನಾಂಕ 27–3–93 ರಂದು ರಾಯಚೂರು, ಬೆಳಗಾಂ, ಗುಲ್ಬರ್ಗಾ, ಮೈಸೂರು ಮತ್ತು ಮಂಗಳೂರುಗಳಿಂದ ದೊಡ್ಡ ಪ್ರಮಾಣದಲ್ಲಿ ರೈತರು ರೈಲ್ವೆ ಪ್ರವಾಸ ಮಾಡಲು ಬರತೊಡಗಿದರು. ಇವರು ಟಿಕೆಟು ಹೊಂದಿರಲಿಲ್ಲವಾದ್ದರಿಂದ ಪ್ರವಾಸ ಮಾಡಲು ರೈಲ್ವೆಯವರು ಅವಕಾಶ ಕೊಡಲಿಲ್ಲ. ಅದೇ ದಿನ ಸುಮಾರು 2500 ರೈತರು ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಜಮಾಯಿಸಿ ನಂತರ ರೈಲ್ವೆ ಅತಿಥಿ ಗೃಹಕ್ಕೆ ಮೆರವಣಿಗೆಯಲ್ಲಿ ತೆರಳಿದರು. ಅಲ್ಲಿ ಶ್ರೀ ಕೆ.ಎಸ್. ಪುಟ್ಟಣ್ಣಯ್ಯ, ಮಂಡ್ಯ ಜಿಲ್ಲೆಯ ರೈತ ಸಂಘದ ನಾಯಕರು ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ರೈತರೆಲ್ಲರೂ ರೈಲ್ವೆ ಸಚಿವರ ಮನೆಗೆ ಹೋಗಿ ತಮಗೆ ಪ್ರವಾಸ ಮಾಡಲು ಸ್ಥಳಾವಕಾಶ ನೀಡುವವರೆಗೆ ಧರಣಿ ಮಾಡಬೇಕೆಂದು ಕೇಳಿದರು. ಒಂದು ವೇಳೆ ಪೊಲೀಸರು ದಸ್ತಗಿರಿ ಮಾಡಿದರೆ ರೈತರು ತಮ್ಮ ಸ್ಥಳಗಳಿಗೆ ಹೋಗಿ ರಸ್ತೆ ತಡೆ ಚಳುವಳಿ ನಡೆಸಬೇಕೆಂದು ಹೇಳಿದರು. ಈ

ಸಂದರ್ಭದಲ್ಲಿ ಸುಮಾರು 850 ಚಳುವಳಿಗಾರರನ್ನು ಬಂಧಿಸಿ 28-2-93 ರಂದು ಬಿಡುಗಡೆ ಮಾಡಲಾಗಿದೆ. ಮಂಗಳೂರಿನಲ್ಲಿ ಸುಮಾರು 596ಜನ ರೈತರು ಟಿಕೇಟು ಇಲ್ಲದೆ ಪ್ರಯಾಣ ಮಾಡಲು ಪ್ರಯತ್ನಿಸಿದಾಗ ಅವರನ್ನು ಬಂಧಿಸಲಾಯಿತು ಎಂದು ವರದಿಯಾಗಿದೆ. ಇದೇ ರೀತಿ ಮೈಸೂರಿನಲ್ಲಿ ಟಿಕೇಟು ಇಲ್ಲದೆ ಪ್ರಯಾಣ ಮಾಡಲು ಪ್ರಯತ್ನಿಸಿದಾಗ ಅವರನ್ನು ಬಂಧಿಸಲಾಯಿತು ಎಂದು ವರದಿಯಾಗಿದೆ. ಇದೇ ರೀತಿ ಮೈಸೂರಿನಲ್ಲಿ ಟಿಕೇಟು ಇಲ್ಲದೆ ಪ್ರಯಾಣ ಮಾಡಲು ಪ್ರಯತ್ನಿಸಿದ 2500 ಜನ ರೈತರನ್ನು ತಡೆಯಲಾಯಿತು. ಗುಲ್ಬರ್ಗಾದಲ್ಲಿ ಸುಮಾರು ಒಂದು ಸಾವಿರ ಲೋಂಡಾ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ 800 ಜನರನ್ನು ತಡೆಯಲಾಗಿದೆ. ರಾಯಚೂರಿನಲ್ಲಿ 2 ಸಾವಿರ ಜನರನ್ನು ತಡೆಯಲಾಗಿದೆ. ಈ ರೀತಿ ದಸ್ತಗಿರಿ ಮಾಡಿದ ರೈತರನ್ನು ಹೆಚ್ಚು ಕಡಿಮೆ ಬಿಡುಗಡೆ ಮಾಡಲಾಗಿದೆ. ಉಳಿದವರನ್ನು ಕೂಡ ಕೂಡಲೇ ಬಿಡುಗಡೆ ಮಾಡಲಾಗುವುದು.

ಶ್ರೀ ಆರ್.ವಿ. ದೇಶಪಾಂಡೆ:- ಇನ್ನೂ ಎಷ್ಟು ಜನರನ್ನು ನೀವು ಅರೆಸ್ಟ್ ಮಾಡಿದ್ದೀರಿ, ಎಷ್ಟು ಜನ ಡಿಟೆನ್‌ಷನ್‌ನಲ್ಲಿ ಇದ್ದಾರೆ. ಆ ಫಿಗರ್ ನಿಮ್ಮ ಕಡೆ ಇಲ್ಲವೇ ? ತಾವು ಸ್ಪಷ್ಟವಾಗಿ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಿದ್ದೀರಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಇವತ್ತು ಸಂಜೆಯೊಳಗೆ ಬಿಡುಗಡೆಯಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸರ್ಕಾರದ ಹೇಳಿಕೆ ಸತ್ಯಕ್ಕೆ ದೂರವಾಗಿರತಕ್ಕ ವಿಚಾರ. ಯಾರು ಟಿಕೆಟು ಇಲ್ಲದೆ ಇರತಕ್ಕಂಥ ಪ್ರಯಾಣಿಕರು ಇರುತ್ತಾರೆ ಅದು ಈ ಸರ್ಕಾರಕ್ಕೆ ಸೇರಿಲ್ಲ. ರೈಲ್ವೆ ಪೊಲೀಸ್ ಇರುತ್ತಾರೆ. ಅವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ನೀವು ಅವರನ್ನು ಬಂಧಿಸಲಿಕ್ಕೆ ಕಾರಣ ಏನು ? ಅದು ಬಹಳ ಮುಖ್ಯವಾಗಿ ಈ ಸದನಕ್ಕೆ ಬೇಕಾಗಿರತಕ್ಕಂಥದ್ದು. ಅವರನ್ನು ಏಕೆ ಬಂಧಿಸಿದ್ದೀರಿ ? ಅಯೋಧ್ಯೆಯಲ್ಲಿ ರಾಮ ಮಂದಿರವನ್ನು ಕಟ್ಟಲಿಕ್ಕೆ ಅವರು ಮಸೀದಿಯನ್ನು ಕೆಡವಿದರು ಎಂದು ಹೇಳಿ, ಆ ಕಾರಣವನ್ನು ಕೊಟ್ಟು ದೆಹಲಿಯಲ್ಲಿ ಆಗತಕ್ಕ ರ್‍ಯಾಲಿಗೆ ಅವರು ಮತ್ತೇನಾದರೂ ಮಾಡಬಹುದೆಂದು ಹೇಳಿ ಅದನ್ನು ತಡೆಗಟ್ಟುವುದಕ್ಕೆ ಅವರನ್ನು ತಡೆಗಟ್ಟಿದ್ದೀರಿ. ಈಗ ರೈತರು ಡಂಕೆಲ್ ವಿಚಾರ ಏನು ಇದೆ ಅದಕ್ಕೆ ಕೇಂದ್ರ ಸರ್ಕಾರದ ಒಂದು ನೀತಿ ಏನು ಇದೆ ಅದರ ವಿರುದ್ಧ ಪ್ರತಿಭಟನೆ ಮಾಡಲಿಕ್ಕೆ ದೇಶಾದ್ಯಂತ ಎಲ್ಲಾ ರೈತರು ಹೋಗುತ್ತಿದ್ದಾರೆ. ಹಾಗಾದರೆ ದೆಹಲಿ ರ್‍ಯಾಲಿಗೆ ರೈತರು ಹೋಗಬಾರದು ಎನ್ನತಕ್ಕದ್ದು ಕರ್ನಾಟಕ ಸರ್ಕಾರದ ಒಂದು ನೀತಿಯೇ ? ಇದಕ್ಕೆ ಏನಾದರೂ ನಿಮ್ಮ ವಿರೋಧ ಇದೆಯೇ ? After all it is very simply case.

ಮಾನ್ಯ ಅಧ್ಯಕ್ಷರೇ, ಟಿಕೇಟ್ ಇಲ್ಲದೆ ಪ್ರಯಾಣ ಮಾಡಬೇಕೆಂದು ನಾವು ಯಾರೂ ಸಹಿತ ಹೇಳುವುದಿಲ್ಲ. ಟಿಕೇಟು ಇಟ್ಟುಕೊಂಡೇ ಪ್ರಯಾಣ ಮಾಡಬೇಕು. ಟಿಕೇಟು ಇಲ್ಲದೆ ಪ್ರಯಾಣ ಮಾಡಿದರೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥಾದ್ದು ರೈಲ್ವೆ ಪೊಲೀಸರ ಕೆಲಸ. ಅಥವಾ ರೈತರು ಡೆಲ್ಲಿಗೆ ಹೋಗಬಾರದು ಎನ್ನುವುದು ಸರ್ಕಾರದ ಉದ್ದೇಶವೇ ? ಎರಡನೆಯದು, ಎಷ್ಟು ಜನರನ್ನು ನೀವು ಬಂಧನ ಮಾಡಿದ್ದೀರಿ, ಎಲ್ಲರನ್ನೂ ಹೆಚ್ಚು ಕಡಿಮೆ ಬಿಡುಗಡೆ ಮಾಡಿದ್ದೇವೆ ಎನ್ನತಕ್ಕ ಹೇಳಿಕೆಯನ್ನು ಸರ್ಕಾರದಿಂದ ನಾವು ನಿರೀಕ್ಷೆ ಮಾಡುವುದಿಲ್ಲ. ತಾವು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. 15 ಜನರನ್ನು ಅರೆಸ್ಟ್ ಮಾಡಿ 14 ಜನರನ್ನು ಬಿಟ್ಟಿದ್ದೇವೆ. ಇನ್ನು ಒಬ್ಬರನ್ನು ಬಿಟ್ಟಿಲ್ಲ ಅಥವಾ 20 ಸಾವಿರ ಜನರನ್ನು ಅರೆಸ್ಟ್ ಮಾಡಿದ್ದೇವೆ, ಇನ್ನು ಒಂದು ಸಾವಿರ ಜನರನ್ನು ಬಿಡುವವರಿದ್ದೇವೆ. ಇಷ್ಟು ಹೊತ್ತಿಗೆ ಬಿಡುತ್ತೇವೆಂದು ಹೇಳಬೇಕಾಗುತ್ತದೆ. ಇಲ್ಲದೆ ಹೋದರೆ ಹೆಚ್ಚುವರಿ ಉತ್ತರ ಕೊಡುವುದಕ್ಕೆ ನಾವು ಕಾಯತಕ್ಕಂಥ ಅವಶ್ಯಕತೆಯಾದರೂ ಏನಿತ್ತು ? ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳೇ, ದಯಮಾಡಿ ಈ ಒಂದು ರೈತರ ರ್‍ಯಾಲಿಗೆ ಹೋಗಬಾರದು. ನೀವು ಜನಗಳನ್ನು ಕಳುಹಿಸಬಾರದು ಎಂದು ಕೇಂದ್ರ ಸರ್ಕಾರದವರು ತಮಗೇನಾದರೂ ವಿನಂತಿ ಮಾಡಿದ್ದಾರೆಯೇ ? ಈ ಸರ್ಕಾರದ ನೀತಿ ರೈತರು

ಹೋಗಬಾರದೆಂದು ಇದೆಯೇ ? ಎರಡನೆಯದು ನೀವು ಸ್ಪಷ್ಟವಾಗಿ ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ, ಯಾವಾಗ ಅರೆಸ್ಟ್ ಮಾಡಿದ್ದೀರಿ, ಎಲ್ಲಿಟ್ಟಿದ್ದೀರಿ, ಯಾವಾಗ ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ಸಂಖ್ಯೆಯನ್ನು ತಾವು ದಯವಿಟ್ಟು ಕೊಡಬೇಕು.

ಶ್ರೀ ವೈ.ಕೆ. ರಾಮಯ್ಯ:- ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟ ಮೊದಲನೆಯದಾಗಿ ಬಹುಶಃ ಈ ಸದನದಲ್ಲಿರತಕ್ಕ ಎಲ್ಲಾ ರೈತರ ಮಕ್ಕಳು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಈ ರಾಷ್ಟ್ರದ ಕೃಷಿ ನೀತಿ, ಈ ರಾಷ್ಟ್ರದ ರೈತನಿಗೆ ಕೆಟ್ಟದಾಗುತ್ತದೆ ಎನ್ನುವಂತಹ ಡೆಂಕಲ್ ಕಮಿಷನ್ ವರದಿ ವಿರುದ್ಧವಾಗಿ ಪ್ರತಿಭಟನೆ ಮಾಡಲಿಕ್ಕೆ ದೆಹಲಿಗೆ ಹೊರಟಿರುವ ಎಲ್ಲಾ ರೈತರನ್ನು ಪ್ರತಿಭಟನೆ ಮಾಡಲಿಕ್ಕೆ ವ್ಯವಸ್ಥೆ ಮಾಡಿದಂಥ ನನ್ನ ಸ್ನೇಹಿತರನ್ನು ನಾನು ಅಭಿನಂದಿಸುತ್ತೇನೆ ಎರಡನೆಯದು, ಮೂಲಭೂತವಾಗಿ ನನ್ನ ಸ್ನೇಹಿತರಾದಂಥ ಶ್ರೀ ಸಿಂಧ್ಯಾರವರು ಪ್ರಸ್ತಾಪ ಮಾಡಿದಂತೆ ಇವರು ರೈತರನ್ನು ಬಂಧಿಸಿ ಜೈಲಿನಲ್ಲಿ ಇಡಲಿಕ್ಕೆ ಕೊಡುವಂಥ ಕಾರಣ ಸಾಧುವಾದದ್ದಲ್ಲ. ಇವರಿಗೆ ಅದರ ವ್ಯಾಪ್ತಿ ಕೂಡ ಬರುವುದಿಲ್ಲ. ಟಿಕೇಟು ಇಲ್ಲದೆ ರೈಲಿನಲ್ಲಿ ಯಾರಾದರೂ ಪ್ರಯಾಣ ಮಾಡಿದರೆ ಅಂಥವರನ್ನು ಬಂಧಿಸುವಂಥಾದ್ದು, ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥಾದ್ದು ರೈಲ್ವೆಯವರಿಗೆ ಸೇರತಕ್ಕದ್ದು. ಜೊತೆಯಲ್ಲಿ ಅಂತಹ ಪರಿಸ್ಥಿತಿ ಕೂಡ ಇಲ್ಲ. ಸ್ವಾಮಿ, ಇಲ್ಲಿ ಪತ್ರಿಕೆಯಲ್ಲಿ ಒಂದು ವಿಷಯ ವರದಿಯಾಗಿದೆ. ಎಷ್ಟು ಜನ ಟಿಕೆಟ್‌ಲೆಸ್ ಟ್ರಾವಲರ್ಸ್ ಹೋಗುತ್ತಿದ್ದರು ಎನ್ನುವುದರ ಬಗ್ಗೆ ಬಂದಿದೆ. ದಯಮಾಡಿ ಒಂದು ಸೆಂಟೆನ್ಸ್ ಓದುತ್ತೇನೆ. ಡಿ. ವೈ.ಎಸ್.ಪಿ. ಬಡಿಗೇರ, ಪಿಎಸ್‌ಐ ರಿಯಾದ್, ತಿಮ್ಮಪ್ಪ, ವಾದಿರಾಜ್, ಚಂದ್ರಶೇಖರ್ ಹೊಸಗೇರಿ, ಪಾಟೀಲ್ ಚೌಧುರಿ, ಕೃಷ್ಣಪ್ಪನವರುಗಳು ತಮ್ಮ ಸಿಬ್ಬಂದಿಯೊಂದಿಗೆ ಗುಲ್ಬರ್ಗದಲ್ಲಿ ರೈಲನ್ನು ಜಾಲಾಡಿದಾಗ ಎಷ್ಟು ಜನ ಸಿಕ್ಕಿದ್ದಾರೆ ಎಂದರೆ 6 ಜನ ಮಾತ್ರ ಸಿಕ್ಕಿಬಿದ್ದರು.

ಆದುದರಿಂದ the magnitude of the violation has not attracted a serious threat to the Government. ಇದು ಒಂದನೆಯದು. ಇನ್ನು ಎರಡನೆಯದಾಗಿ, ಟಿಕೆಟ್ ಇಲ್ಲದೆ ಅವರು ಏನಾದರೂ ಪ್ರಯಾಣ ಮಾಡಿದರೆ ಅದಕ್ಕೆ ಕ್ರಮ ತೆಗೆದುಕೊಳ್ಳಲು ಜವಾಬ್ದಾರಿ ಇರುವುದು ಕೇಂದ್ರ ಸರ್ಕಾರದ ಅಧೀನದಲ್ಲಿರುವಂತಹ ರೈಲ್ವೆ ಇಲಾಖೆಯವರಿಗೆ. ಆದ್ದರಿಂದ ರಾಜ್ಯ ಸರ್ಕಾರವೇ ನಾವೇ ಪಕ್ಷಾತೀತವಾಗಿ ಇದನ್ನು ಮಾಡಬೇಕಾಗಿತ್ತು. ನನ್ನ ಪ್ರಕಾರ ಯಾವ ಕೃಷಿ ನೀತಿ ಈ ರಾಷ್ಟ್ರದ ಕೃಷಿಕನ ಬದುಕಿಗೆ ಸರ್ವನಾಶ ಆಗುವುದಕ್ಕೆ ನಾಂದಿಯಾಗುತ್ತದೆಯೋ ಅಂತಹ ಕೃಷಿ ನೀತಿಯ ಬಗ್ಗೆ ಪ್ರತಿಭಟನೆಯನ್ನು ಮಾಡಬೇಕಾಗಿದ್ದುದು ರಾಜ್ಯ ಸರ್ಕಾರದ ಕರ್ತವ್ಯವಾಗಿತ್ತು. ಅದನ್ನು ನಾವು ಮಾಡಲಿಲ್ಲ ಎಂದು ಕೊನೆಯ ಪಕ್ಷ ಅವರಾದರೂ ಹೋಗುತ್ತಾದ್ದಾರೆ. ದಯವಿಟ್ಟು ಒಂದು ಕೆಲಸ ಮಾಡಿ. ಈ ರಾಷ್ಟ್ರದ ಹಾಗೂ ರಾಜ್ಯದ ರೈತರ ಬಗ್ಗೆ ನಿಮಗೆ ಏನಾದರೂ ಕರುಣೆ ಇದ್ದರೆ ಅವರಿಗೆ ಒಂದು ವಿಶೇಷ ರೈಲನ್ನು ಮಾಡಿ ಡೆಲ್ಲಿಗೆ ಕಳುಹಿಸಿ. ಯಾವ ಯಾವುದಕ್ಕೋ ಕಳುಹಿಸುತ್ತೀರಿ ಈ ರಾಜ್ಯದ ಒಬ್ಬ ಮುಖ್ಯಮಂತ್ರಿಗಳ ವ್ಯಕ್ತಿ ಪ್ರತಿಷ್ಠೆಯ ಪ್ರದರ್ಶನಕ್ಕಾಗಿ 28 ಲಕ್ಷ ರೂಪಾಯಿಗಳನ್ನು ರೈಲ್ವೆಗೆ ಕೊಟ್ಟಿದ್ದೀರಿ. ಈ ರಾಜ್ಯದ ಮುಖ್ಯಮಂತ್ರಿಗಳ ವೈಯಕ್ತಿಕ ಪ್ರತಿಷ್ಠೆಯ ಪ್ರದರ್ಶನಕ್ಕಾಗಿ 28 ಲಕ್ಷ ರೂಪಾಯಿ ಖರ್ಚು ಮಾಡಿದಂತಹ ಈ ಸರ್ಕಾರ ಈ ರಾಷ್ಟ್ರದ ಕೃಷಿಯ ಕೆಟ್ಟ ನೀತಿ ವಿರುದ್ಧ ಹೋರಾಡುತ್ತಿರುವ ರೈತರಿಗೆ ಒಂದು ರೈಲನ್ನು ಮಾಡಿ ಕಳುಹಿಸಿ, ದೇಶ ಏನೂ ಹಾಳಾಗುವುದಿಲ್ಲ.

ಶ್ರೀ ನಜೀರ್ ಅಹ್ಮದ್:- 28 ಲಕ್ಷ ರೂಪಾಯಿ ವಾಪಸ್ಸು ಬಂದಿದೆ.

ಶ್ರೀ ವೈ.ಕೆ.ರಾಮಯ್ಯ:- ಅದು ನನಗೆ ಗೊತ್ತಿದೆ. ಕೊಟ್ಟಿರುವುದು ನಿಜ. ಅದು ವಾಪಸ್ಸು ಬಂದಿದ್ದರೆ ಇದನ್ನೂ ಸಹ ವಾಪಸ್ ನಾವು ರೈತರಿಂದ ವಸೂಲು ಮಾಡಿ ಕೊಡುತ್ತೇವೆ. ನೀವು ನಿಮ್ಮ ವ್ಯಕ್ತಿ ಪ್ರತಿಷ್ಠೆಯ ಪ್ರದರ್ಶನಕ್ಕಾಗಿ 28ಲಕ್ಷ ರೂಪಾಯಿ ವಾಪಸ್ಸು ಬಂದಿದೆ ಎನ್ನತಕ್ಕ ವಾದ ಮಾಡುವುದಾದರೆ

ರೈತರು ಯಾರು ಯಾರು ದೆಹಲಿಗೆ ಹೋಗಿ ಬರುತ್ತಾರೊ ಅವರುಗಳಿಂದ ಮುಂದಿನ ವರ್ಷ ಬೆಳೆ ಬಂದ ಮೇಲೆ ವಾಪಸ್ ಕೊಡಿಸುತ್ತೇವೆ. ಭತ್ತ, ರಾಗಿ, ಕಬ್ಬು, ಮುಂತಾದ ಬೆಳೆಗಳು ಬಂದ ಮೇಲೆ ಒಬ್ಬೊಬ್ಬರಿಂದ 5–10 ರೂಪಾಯಿಗಳನ್ನು ಕಲೆಕ್ಟ್ ಮಾಡಿ ಕೊಡುತ್ತೇನೆ.

ನೀವು ಅವರಿಗೆ ಒಂದು ರೈಲನ್ನು ಡೆಲ್ಲಿಗೆ ಹೋಗಲು ಮಾಡಿಕೊಡಿ. ನನಗನಿಸುತ್ತದೆ, ಆಕಸ್ಮಾತ್ ರೈತರು ಸಣ್ಣ ಪುಟ್ಟ ತಪ್ಪು ಮಾಡಿದರೂ ಸಹ ನಿಭಾಯಿಸಿ ಅವರನ್ನು ಡೆಲ್ಲಿಗೆ ಕಳುಹಿಸಿಕೊಡುವಲ್ಲಿ ಸರ್ಕಾರ ಕ್ರಮ ತೆಗೆದುಕೊಂಡಿದ್ದರೆ ಅದು ಸಾಧುವಾದ ಮಾರ್ಗವಾಗುತ್ತಿತ್ತು. ಎಂಬುದು ನನ್ನ ಭಾವನೆ. ಅದನ್ನು ಬಿಟ್ಟು ಅವರನ್ನು ಬಂಧಿಸಿ ಜೈಲಿನಲ್ಲಿ ಇಟ್ಟಿರುವ ಕ್ರಮ ಸರಿಯಲ್ಲ. ಈ ವ್ಯಾಪಕವಾದ ಹಿನ್ನೆಲೆಯಲ್ಲಿ ನನಗೆ ಕೆಲವು ವಿವರಣೆ ಬೇಕಾಗಿದೆ. ಈ ಸದನದ ಇಬ್ಬರು ಸದಸ್ಯರು ಅಂದರೆ ಪ್ರೊ. ನಂಜುಂಡಸ್ವಾಮಿಯವರು ಹಾಗೂ ಬಾಬಾಗೌಡಾ ಪಾಟೀಲರು, ನನಗೆ ತಿಳಿದ ಮಟ್ಟಿಗೆ ಈ ಒಂದು ಸಂಘಟನೆಯ ಮುಂಚೂಣಿಯಲ್ಲಿ ಇರತಕ್ಕ ಶಾಸಕರುಗಳು ಅವರಿಬ್ಬರೂ ಇವತ್ತು ಈ ಸದನದಲ್ಲಿ ಗೈರುಹಾಜರಿದ್ದಾರೆ. ಅವರನ್ನು ಏನಾದರೂ ಬಂಧಿಸಿ ಜೈಲಿನಲ್ಲಿ ಇಟ್ಟಿದ್ದಾರೆಯೇ ಎಂಬ ಬಗ್ಗೆ ನನಗೆ ವಿವರಣೆ ಬೇಕಾಗಿದೆ. ಇಷ್ಟನ್ನು ಕೇಳಿಕೊಂಡು ಸಂಜೆಯೊಳಗೆ ಎಲ್ಲಾ ರೈತರುಗಳನ್ನು ಹೊರಗಡೆ ಬಿಟ್ಟು ನಾಳೆ ಸರ್ಕಾರದಿಂಲೇ ಒಂದು ರೈಲನ್ನು ಮಾಡಿ ಅವರನ್ನು ಡೆಲ್ಲಿಗೆ ಕಳುಹಿಸಿ ಕೊಡುವ ಒಂದು ಏರ್ಪಾಟನ್ನು ಮಾಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಚೇರ್‌ಮನ್:– ಈಗ ಮಾನ್ಯ ಯಡಿಯೂರಪ್ಪನವರು ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್:– ನೀವು ಬೆಳಗಾಂನವರು ಆ ಸೀಟ್‌ನಲ್ಲಿ ಕುಳಿತುಕೊಂಡ ತಕ್ಷಣ ನಿಮಗೆ ಏನಾಗುತ್ತದೆ. ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಅದರೆ ನನಗೆ ಒಂದು ಅವಕಾಶವನ್ನು ಕೊಡುತ್ತಾ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಒಂದು ವಿಷಯ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಡಂಕಲ್ ಪ್ರಪೋಸಲ್‌ನ್ನು ಕೇಂದ್ರ ಸರ್ಕಾರ ಅನುಷ್ಠಾನಕ್ಕೆ ತಂದರೆ ರೈತರ ಮೇಲೆ ಒಂದು ದೊಡ್ಡ ಮಾರಕವಾದಂಥ ಪರಿಣಾಮವಾಗುತ್ತದೆ. ನಮ್ಮ ರಾಜ್ಯ ಸರ್ಕಾರವೇ ನಾವು ಇಲ್ಲಿ ಸೇರಿದ ತಕ್ಷಣ ಯಾವುದೇ ಕಾರಣಕ್ಕಾಗಿ ಈ ಡಂಕಲ್ ಪ್ರಪೋಸಲ್‌ನ್ನು ಅನುಷ್ಠಾನಕ್ಕೆ ತರಬಾರದು ಎನ್ನತಕ್ಕ ನಿರ್ಣಯವನ್ನು ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಬೇಕಾಗಿತ್ತು. ಈ ದೇಶದ, ಈ ನಾಡಿನ ರೈತರ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರ ಈ ಬಗ್ಗೆ ಎಚ್ಚರಿಸಿತು ಎನ್ನತಕ್ಕ ಸಂದರ್ಭದಲ್ಲಿ ಒಂದು ರಾಜ್ಯ ಸರ್ಕಾರದ ಕರ್ತವ್ಯವಾಗಿತ್ತು. ಅವರನ್ನು ಡೆಲ್ಲಿಗೆ ಕಳುಹಿಸುವುದಕ್ಕೆ ಬೇಕಾದಂಥ ಸವಲತ್ತುಗಳನ್ನು ಒದಗಿಸಿಕೊಡುವಂತಹ ಕೆಲಸವನ್ನು ಮಾಡಬೇಕಾಗಿತ್ತು. ಇದು ಯಾವುದೋ ಒಂದು ರಾಜಕೀಯ ಪಕ್ಷದ ಸೀಮಿತವಾದ ಬೇಡಿಕೆಯಲ್ಲ. ಇಡೀ ದೇಶದ ರೈತರ ಮೇಲೆ ಇದರಿಂದ ಆಗತಕ್ಕ ಆರ್ಥಿಕ ಹಾಗೂ ಇತರ ಪರಿಣಾಮಗಳನ್ನು ನಾವು ಗಮನಿಸಬೇಕಾಗುತ್ತದೆ. ಇದರಿಂದ ರೈತರ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ; ಈ ದೇಶದ ಜನರ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ವಿದೇಶಿ ಕಪಿ ಮುಷ್ಟಿಯಿಂದ ಹೊರಬರಲು ಒಂದು ದೊಡ್ಡ ಹೋರಾಟವನ್ನು ರೈತ ಸಂಘವು ಇವೊತ್ತು ಮಾಡುತ್ತಿದೆ. ಅದಕ್ಕೆ ಎಲ್ಲರ ಬೆಂಬಲ ಇದೆ. ಇಂತಹ ಸಂದರ್ಭದಲ್ಲಿ ಟ್ರೈನ್‌ನಲ್ಲಿ ಪ್ರಯಾಣ ಮಾಡತಕ್ಕ ರೈತರುಗಳನ್ನು ಬಂಧಿಸತಕ್ಕದು. ಅಂದರೆ ಈ ಹೋರಾಟವನ್ನೇ ಹತ್ತಿಕ್ಕತಕ್ಕ ಒಂದು ಕೆಲಸ ರಾಜ್ಯ ಸರ್ಕಾರ ಮಾಡುತ್ತಾ ಇರುವಂಥಾದ್ದು ನಿಜಕ್ಕೂ ರೈತ ವಿರೋಧಿ ನೀತಿ ಎಂದು ಹೇಳಬೇಕಾಗುತ್ತದೆ. ಆದುದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ದಯ ಮಾಡಿ ಅವರು ನಾಳೆ, ನಾಡಿದ್ದು ಆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಯಾರ್‍ಯಾರನ್ನು ಬಂಧನ ಮಾಡಿದ್ದೀರಿ ಅವರನ್ನು ಕೂಡಲೇ ಬಿಡುಗಡೆ

ಮಾಡಬೇಕು ಹಾಗೂ ಅವರನ್ನು ಕೂಡಲೇ ಡೆಲ್ಲಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯ ಮಾಡುತ್ತೇನೆ.

ನಾನು ನಿಮ್ಮನ್ನು ಕೇಳುತ್ತೇನೆ. ಬಹುಶಃ ಅನೇಕ ಹೋರಾಟಗಳಾಗಿವೆ. ಸಾಮಾನ್ಯ ಬಡ ರೈತ ಇವತ್ತು ಎಚ್ಚರವಹಿಸಿ ನಮಗೆ ಅನ್ಯಾಯವಾಗುತ್ತಿದೆ ಎಂದು ಹೋಗುತ್ತಿರಬೇಕಾದರೆ ಯಾರೋ ಒಬ್ಬಿಬ್ಬರು ಟಿಕೆಟ್ ತೆಗೆದುಕೊಳ್ಳದೆ ಇರಬಹುದು. ಅದನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆ ಮಾಡೋಣ. ಬೇರೆ ಅನುಕೂಲ ಮಾಡಿಕೊಡುವ ಪ್ರಯತ್ನ ಮಾಡೋಣ. ಆದರೆ ಇವತ್ತು ಸನ್ಮಾನ್ಯ ರಾಮಯ್ಯನವರು ಹೇಳಿದ್ದನ್ನು ನಾನು ಪುಷ್ಟೀಕರಣ ಮಾಡುತ್ತೇನೆ. ದಯಮಾಡಿ ತಾವು ಒಂದು ಸ್ಪೆಷಲ್ ಟ್ರೈನ್ನ್ನು ಮಾಡಿ ಅವರನ್ನು ಕಳಿಸಿಕೊಡುವ ವ್ಯವಸ್ಥೆ ಮಾಡಬೇಕು. ರೈತ ಸಮೂಹಕ್ಕೆ ತಾವು ಏನೊಂದು ಅಪರಾಧ ಮಾಡಿದ್ದೀರಿ ಅದನ್ನು ಜನ ಸಹಿಸುವುದಿಲ್ಲ. ಎಲ್ಲರನ್ನೂ ಬಿಡುಗಡೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈಗಾಗಲೇ ಒಂದು ಹೇಳಿಕೆ ಕೊಟ್ಟಿದ್ದಾರೆ. 15 ಸಾವಿರ ಜನ ರೈತರು ಸಹ ಟಿಕೆಟಿಲ್ಲದೆ ಪ್ರಯಾಣ ಮಾಡುವುದಕ್ಕೆ ಹೋಗಿದ್ದರು ಎಂದು ಹೇಳಿಕೆ ಕೊಟ್ಟಿದ್ದೀರಿ. ಇದು ಸತ್ಯಕ್ಕೆ ಬಹಳ ದೂರವಾದದ್ದು. 15 ಸಾವಿರ ರೈತರಿಗೆ ಹಣ ಕೊಟ್ಟೇ ದೆಹಲಿಗೆ ಹೋಗಬೇಕು. ಪುಗಸಟ್ಟೆ ಯಾರೂ ಕರೆದುಕೊಂಡು ಹೋಗುವುದಿಲ್ಲ ಎಂದು ಗೊತ್ತಿರುತ್ತದೆ. ರೈತರಿಗೆ ಗೊತ್ತಿದ್ದೇ ಟಿಕೆಟ್ ತೆಗೆದುಕೊಂಡು ಪ್ರಯಾಣಿಸಲು ರೈತರು ಬಂದಿದ್ದಾರೆ. ಇಲ್ಲೇನು ಪಿತೂರಿ ನಡೆದಿದೆ ಎಂದರೆ ದೆಹಲಿಯಲ್ಲಿ ರೈತರ ಸಮಾವೇಶ ದೊಡ್ಡದಾಗಿ ಸೇರಬೇಕೆಂದು ಮಾಡಿದ್ದಾರೆ. ಈ ಡೆಂಕಲ್ ಪ್ರಪೋಸಲ್ ವಿರುದ್ಧ ಪರಿಣಾಮಕಾರಿಯಾಗಿ ಈ ದೇಶದ ಗಮನ ಸೆಳೆದು ಬಹಳ ದೊಡ್ಡ ಪ್ರತಿಭಟನೆ ಮಾಡಬೇಕೆಂದು ಹೊರಟಿದ್ದಾರೆ, ಇದನ್ನು ಮುರಿಯುವ ತಂತ್ರ ಕೇಂದ್ರ ಸರ್ಕಾರದಿಂದ ನಡೆದಿದೆ. ಒಂದು ವಾರದ ಹಿಂದೆ ಬಿಜೆಪಿ ಕಾರ್ಯಕರ್ತರನ್ನು ಎಲ್ಲ ಕಡೆ ಬಂಧನ ಮಾಡಿ ಯಾರೂ ಕೂಡ ಹೋಗಬಾರದೆಂದು ನಡೆದಿದೆ. ಇವತ್ತೂ ಅದೇ ರೀತಿ ದೆಹಲಿಯಲ್ಲಿ ಯಾವುದೇ ಮೇಳಗಳು ನಡೆಯಬಾರದೆಂಬ ಉದ್ದೇಶ ಕೇಂದ್ರ ಸರ್ಕಾರಕ್ಕಿರುವುದಾದರೆ ತೆರೆಯ ಮರೆಯಲ್ಲಿ ನಿಮಗೇನಾದರೂ ಅವರು ಇದನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆಯೇ ? ಎರಡನೆಯದು, ರೈಲ್ವೆ ಮಂತ್ರಿಗಳ ಮನೆಯ ಮುಂದೆ ಧರಣಿ ನಡೆಯಿತು. ಆದ್ದರಿಂದ ರೈಲ್ವೆ ಮಂತ್ರಿಗಳೂ ಸಹ ಕರ್ನಾಟಕದಿಂದ ಯಾವುದೇ ರೈಲು ದೆಹಲಿಗೆ ಹೋಗಬಾರದೆಂಬ ಪಿತೂರಿಯೇನಾದರೂ ಇದೆಯೋ ? ಇದು ಬಹಳ ಮುಖ್ಯವಾದದ್ದು. ತಾವು ಹೇಳುವ ಪ್ರಕಾರ ಕೆಲವರನ್ನು ಬಿಟ್ಟಿದ್ದೀರಿ, ಇನ್ನೂ ಕೆಲವರನ್ನು ಬಿಡಬೇಕಾಗಿದೆ. ನಿಮ್ಮಲ್ಲಿ ಸ್ಪಷ್ಟವಾದ ಅಂಕಿ ಅಂಶ ಇಲ್ಲ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ರೈತರನ್ನು ಬಂಧಿಸಿದ್ದೀರಿ, ಎಷ್ಟು ಜನರನ್ನು ಬಿಡುಗಡೆಗೊಳಿಸಿದ್ದೀರಿ. ಈಗ ರೈತರನ್ನು ಬಂಧಿಸಲು ಕಾರಣ ಏನು ಎನ್ನುವುದನ್ನು ಪ್ರಮುಖವಾಗಿ ಹೇಳಬೇಕಾದದ್ದು. ನಾನು ಆಗಲೇ ಹೇಳಿದಂತೆ, ನಮ್ಮ ಮಿತ್ರರಾದ ನಂಜುಂಡಸ್ವಾಮಿಯವರನ್ನು, ಬಾಬಾಗೌಡರನ್ನು ಬಂಧಿಸಿದ್ದೀರಿ, ಸಾಮಾನ್ಯವಾಗಿ ಸದಸ್ಯರನ್ನು ಬಂಧಿಸಿದ ತಕ್ಷಣ ಬಂಧಿಸಲಾಗಿದೆ ಎಂದು ಬರುತ್ತದೆ. ಆದ್ದರಿಂದ ರಾಜ್ಯ ಸರ್ಕಾರ ಯಾವ್ಯಾವ ಜೈಲಿನಲ್ಲಿ ಎಷ್ಟು ಜನ ರೈತರನ್ನು ಇಟ್ಟಿದ್ದೀರಿ, ಬಿಡುಗಡೆ ಆಗಬೇಕಾಗಿರುವವರು ಎಷ್ಟು ಜನ ಎಂದು ಸ್ಪಷ್ಟವಾಗಿ ಸರ್ಕಾರ ಉತ್ತರ ಕೊಡಬೇಕು.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ಇಲ್ಲಿಂದ ಹೋಗಿರುವ ನಮ್ಮ ರಾಜ್ಯದ ರೈತರು ಮದ್ರಾಸಿನಲ್ಲೂ ಬಂಧಿತರಾಗಿದ್ದಾರೆ ಎಂದು ಪತ್ರಿಕೆಯಲ್ಲಿ ನಾವು ಓದಿದ್ದೇವೆ. ಮಾನ್ಯ ಸಚಿವರು ಹೇಳಿಕೆಯಲ್ಲಿ ಅಲ್ಲೆಷ್ಟು ಜನ ರೈತರು ಬಂಧಿತರಾಗಿದ್ದಾರೆ, ಅವರ ಯೋಗಕ್ಷೇಮವನ್ನು ಯಾರು ವಿಚಾರಿಸಿಕೊಂಡಿದ್ದಾರೆ ? ನಮ್ಮ ರಾಜ್ಯ ಸರ್ಕಾರ ಮದ್ರಾಸ್ ಸರ್ಕಾರವನ್ನು ಸಂಪರ್ಕಿಸಿ ಏನಾಗಿದೆ ಅದರ ಪರಿಸ್ಥಿತಿ ಎಂದು ಹೇಳಬೇಕೆಂದು ಕೂಡ ಹೇಳಿದ್ದೆ. ಆ ಬಗ್ಗೆ ಸಚಿವರು ಹೇಳಿಕೆಯಲ್ಲಿ ಏನೂ

ಹೇಳಲಿಲ್ಲ. ಇವತ್ತು ಇವರನ್ನು ಬಂಧಿಸಬೇಕಾಗಿರುವುದು ಅನಾವಶ್ಯಕ. ಕೇಂದ್ರಸರ್ಕಾರ ಮತ್ತು ಕಾಂಗ್ರೆಸ್ ಸರ್ಕಾರಗಳು ಎಲ್ಲೆಲ್ಲಿವೆ ಇವೆಲ್ಲ ಕೂಡ ವಾಷಿಂಗ್ಟನ್‌ನಲ್ಲಿರುವ ವಿಶ್ವ ಬ್ಯಾಂಕ್ ಮತ್ತು ಐಎಂಎಫ್‌ಗಳ ಗೊಂಬೆಗಳಾಗಿ ವರ್ತನೆ ಮಾಡುತ್ತಿವೆ, ವಾಶಿಂಗ್ಟನ್ನಿನಲ್ಲಿರುವವರು ನೀವು ಇದನ್ನೆಲ್ಲ ಒಪ್ಪಬೇಕೆಂದು ಹೇಳುತ್ತಾರೆ. ಡೆಂಕಲ್ ಪ್ರಸ್ತಾವವನ್ನು ಒಪ್ಪಬೇಕೆಂದು ಹೇಳುತ್ತಾರೆ ಅವರು ಹೇಳಿದ ಹಾಗೆ ಇವರು ಕುಣಿಯುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್:– ಏನು ಸ್ವಾಮಿ ಡಂಕೆಲ್ ಪ್ರಸ್ತಾವನೆ ಎಂದರೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ನಂಜುಂಡಸ್ವಾಮಿಯವರು ಭಾಷಣ ಮಾಡಿದ್ದಾಗ ನೀವು ಇದ್ದಿರೋ ಇರಲಿಲ್ಲವೋ ಗೊತ್ತಿಲ್ಲ. ವ್ಯವಸಾಯದಲ್ಲಿ ಇಲ್ಲಿಯವರೆಗೆ ನಮ್ಮ ದೇಶದಲ್ಲಿ ಇಲ್ಲದೇ ಇರುವುದು ಏನು ಇದೆ, ಬೀಜ ಆಗಲಿ, ಕೃಷಿ ಪದ್ಧತಿಯಾಗಲಿ, ಹಸು,ಕುರಿ ಕೋಳಿಯಾಗಲಿ ಅವುಗಳ ಉತ್ಪತ್ತಿ ಮಾಡುವುದಾಗಲಿ, ಇವೆಲ್ಲಕ್ಕೂ ಕೈಗಾರಿಕಾ ರಂಗದಲ್ಲಿ ಪೇಟೆಂಟ್ ಎಂದು ಇರುವಂತೆ, ಈ ಪೇಟೆಂಟನ್ನೂ ಬಹುರಾಷ್ಟ್ರೀಯ ಸಂಸ್ಥೆಗಳು ಇಟ್ಟುಕೊಂಡು ನಾಳೆ ಈ ದೇಶದಲ್ಲಿ ಇದೇ ಕಡಲೆಕಾಯಿಯನ್ನು ಬಳೆಯುಬೇಕೆಂದರೆ ಬೆಳೆಯಬೇಕಾಗುತ್ತದೆ. ಹೀಗೆ ವಿವರಣೆ ಕೊಡಬಲ್ಲೆ. ನನಗೆ ಗೊತ್ತಿಲ್ಲವೆಂದು ಪರೀಕ್ಷೆ ಮಾಡಲು ನೀವು ಈ ಪ್ರಶ್ನೆ ಕೇಳಿದ್ದರೆ ನಾನು ಹೇಳಬಲ್ಲೆ.

ಶ್ರೀ ಕೆ.ಹೆಚ್. ರಂಗನಾಥ್:– ನಾನು ನಮ್ಮ ಸಹೋದ್ಯೋಗಿಗಳನ್ನು ಸಹಾ ಡಂಕಲ್ ಪ್ರಪ್ರೋಸಲ್ ಬಗ್ಗೆ ಅದೇನೆಂದು ಕೇಳುತ್ತಿದ್ದೆ. ಹಾಗೆಯೇ ತಮ್ಮನ್ನೂ ಕೇಳಿದೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಹಿರಿಯ ಸಚಿವರಾದಂಥ ರಂಗನಾಥ್‌ರವರು ನಮ್ಮಂಥವರಿಗೆ ಮಾರ್ಗದರ್ಶನ ನೀಡಬೇಕಾಗಿರತಕ್ಕಂಥವರು.

ಶ್ರೀ ಕೆ.ಹೆಚ್. ರಂಗನಾಥ್:– ಬೆಂಗಳೂರಿನಲ್ಲಿ ಅದನ್ನೆಲ್ಲಾ ಮಾಡಿ ಒಡೆದುಹಾಕಿದರಲ್ಲಾ. ಅದನ್ನೆಲ್ಲಾ ಪತ್ರಿಕೆಯಲ್ಲಿ ಓದಿದ ನೆನಪು. ಆದರ ವಿವರ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇದು ಹಾಸ್ಯದಲ್ಲಿ ತಳ್ಳತಕ್ಕಂಥ ಮತ್ತೊಂದು ಕುತಂತ್ರ. ಅಷ್ಟೆ ಬೇರೇನೂ ಇಲ್ಲ.

ಶ್ರೀ ಸಿ. ಬೈರೇಗೌಡ:– ಅದಕ್ಕೆ ವ್ಯವಸಾಯ ಮಂತ್ರಿಗಳಿದ್ದಾರೆ. ದಯವಿಟ್ಟು ಯಾರ್ಯಾರಿಗೆ, ಅದರ ಬಗ್ಗೆ ತಿಳಿದುಕೊಳ್ಳಬೇಕಾಗಿರತಕ್ಕಂಥ ಕುತೂಹಲ ಇರತಕ್ಕಂಥವರಿಗೆ ನೀವು ದಯವಿಟ್ಟು ಒಂದು ಸೆಮಿನಾರನ್ನು ಸರ್ಕಾರದ ಮೂಲಕ ಏರ್ಪಾಡು ಮಾಡಿ. ಏಕೆಂದರೆ ಕೆಲವು ಜನರಿಗೆ ಮಾತ್ರ ಈ ವಿಚಾರಗಳು ಗೊತ್ತಿರಬಹುದು. ಇನ್ನು ಕೆಲವು ಜನರಿಗೆ ಈ ವಿಚಾರಗಳು ಗೊತ್ತಿಲ್ಲದೆ ಕೂಡ ಇರಬಹುದು. ಸನ್ಮಾನ್ಯ ಮಂತ್ರಿಗಳಿಗೇ ಗೊತ್ತಿಲ್ಲ ಎಂದು ಹೇಳಿದರೆ ಇನ್ನು ಸಾಮಾನ್ಯ ಜನರಿಗೆ ಗೊತ್ತಾಗುವುದಾದರೂ ಹೇಗೆ ? ಡಂಕಲ್ ಪ್ರಪೋಸಲ್ ಬಗ್ಗೆ ಜನರು ಅರ್ಥ ಮಾಡಿಕೊಳ್ಳುವುದು ಅವಶ್ಯಕತೆ ಇದೆ. ಆದ್ದರಿಂದ ಸರ್ಕಾರದ ಮೂಲಕ ಒಂದು ಸೆಮಿನಾರನ್ನು ಏರ್ಪಾಡು ಮಾಡತಕ್ಕಂಥ ಅವಶ್ಯಕತೆ ಇತ್ತೆ. ದಯವಿಟ್ಟು ವ್ಯವಸಾಯ ಮಂತ್ರಿಗಳು ಆ ಕೆಲಸವನ್ನು ಮಾಡಬೇಕು ಎಂದು ನಾನು ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ. ರೈತರುಗಳು ದೆಹಲಿಗೆ ಹೋಗಿ ಬರುವುದಕ್ಕೆ ಅವರಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಸರ್ಕಾರವನ್ನು ನಾನು ತಮ್ಮ ಮುಖಾಂತರ ಒತ್ತಾಯ ಪಡಿಸುತ್ತೇನೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಇದಿನಬ್ಬನವರು, ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಬಿ.ಎಂ. ಇದಿನಬ್ಬ:– ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ಬೆಂಬಲಿಸುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಂಸದೀಯ ಸಚಿವರು ಈಗಾಗಲೇ ಸ್ಟೇಟ್‌ಮೆಂಟ್ ಮಾಡಿದ್ದಾರೆ.

ಶ್ರೀ ಆರ್.ವಿ.ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಉತ್ತರವನ್ನು ಕೊಟ್ಟಿದ್ದಾರೆ. ನಮಗೆ ಸಮಾಧಾನವಾಗಿಲ್ಲ. ಕೆಲವು ಸದಸ್ಯರುಗಳು ಏನು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. ಕೇಂದ್ರಸರ್ಕಾರದ ಆದೇಶದಿಂದ ಆ ರೈತರುಗಳನ್ನು ನೀವು ಅರೆಸ್ಟ್ ಮಾಡಿದ್ದೀರಾ ? ಎಷ್ಟೋ ಜನರನ್ನು ಬಿಡುಗಡೆ ಮಾಡಿಲ್ಲ ಎಂಬ ದೂರೂ ಸಹ ಬಂದಿದೆ. ಯಾರನ್ನು ಅರೆಸ್ಟ್ ಮಾಡಿದ್ದೀರಿ, ಅವರುಗಳಿಗೆ ತಿಂಡಿ ವ್ಯವಸ್ಥೆ ಮಾಡಿಲ್ಲ ಮತ್ತು ಅವರ ಬಗ್ಗೆ ಕೋರ್ಟಿಗೂ ಸಹ ರಿಪೋರ್ಟ್ ಮಾಡಿಲ್ಲ ಎಂದು ಬಂದಿದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು. ಅವರುಗಳನ್ನು ಕೋರ್ಟಿಗೆ ರಿಪೋರ್ಟ್ ಮಾಡಬೇಕಾಗಿತ್ತು, ಅದನ್ನು ಮಾಡಿದ್ದೀರಾ ? ಅವರುಗಳಿಗೆ ತಿಂಡಿ ವ್ಯವಸ್ಥೆ ಏನಾದರೂ ಮಾಡಿದ್ದೀರಾ ? ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಡಂಕಲ್ ಪ್ರಪೋಸಲ್ ಬಗ್ಗೆ ಬಹಳಷ್ಟು concern express ಮಾಡಿದ್ದಾರೆ. ಆದರ ಬಗ್ಗೆ ರೈತರು ಹೋರಾಟ ಮಾಡುವಾಗ ಏತಕ್ಕೆ ತಡೆಹಿಡಿದಿರಿ ಎಂದು ಗೊತ್ತಾಗಲಿಲ್ಲ. ರೈತರುಗಳು ದೆಹಲಿಗೆ ಹೋಗುವುದಕ್ಕೆ ಅವರಿಗೆ ಯಾವುದೇ ರೀತಿಯ ಆತಂಕ ಬರಬಾರದು. ಈಗಾಗಲೆ ತಾವು ಬರುವುದಕ್ಕಿಂತ ಮುಂಚೆ ಹೇಳಿದ್ದೇನೆ. ಪುನಃ ನಾನು ವಿವರಕ್ಕೆ ಹೋಗುವುದಿಲ್ಲ. ಅವರು ದೆಹಲಿಗೆ ಹೋಗುವ ವ್ಯವಸ್ಥೆಯಾಗಬೇಕು. ತಾವು ಇದರ ಬಗ್ಗೆ ಸ್ಪಷ್ಟೀಕರಣವನ್ನು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಉಪ ನಾಯಕರು, ಸನ್ಮಾನ್ಯ ಬೈರೇಗೌಡರು, ವೈ.ಕೆ. ರಾಮಯ್ಯನವರು, ಮಾನ್ಯ ಯಡಿಯೂರಪ್ಪನವರು, ಹಾಗೆಯೇ ನಮ್ಮ ವಾಟಾಳ್ ನಾಗರಾಜ್‌ರವರು ಇವತ್ತು ಕೆಲವು ಸ್ಪಷ್ಟೀಕರಣವನ್ನು ಕೇಳಿದ್ದಾರೆ. ಅದಕ್ಕೆ ಸರಿಯಾದಂಥ ಕೆಲವು ವಿವರಗಳನ್ನು ಸಂಸದೀಯ ವ್ಯವಹಾರಗಳ ಸಚಿವರು ಈಗಾಗಲೇ ಒದಗಿಸಿದ್ದಾರೆ. ಎಷ್ಟು ಜನರನ್ನು ತಡೆಹಿಡಿದಿದ್ದಾರೆ, ಎಷ್ಟು ಜನರನ್ನು ಬಂಧಿಸಿದ್ದಾರೆ ಎನ್ನತಕ್ಕಂಥ ವಿವರವನ್ನು ಈಗಾಗಲೇ ಕೊಟ್ಟಿದ್ದಾರೆ. ಸಾಧಾರಣವಾಗಿ ಅವರನ್ನು ಶಿಕ್ಷೆಗೆ ಒಳಪಡಿಸಬೇಕಾದಂಥ ಆವಶ್ಯಕತೆ ಇಲ್ಲ, ಈಗಾಗಲೇ ಅವರನ್ನು ಬಿಡುಗಡೆ ಮಾಡಿದ್ದಾರೆ. ಈಗ ಟಿಕೆಟ್ ಪಡೆದು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದವರನ್ನು ಯಾರನ್ನೂ ತಡೆದು ನಿಲ್ಲಿಸಲಿಲ್ಲ. ಅಂಥ ಅಪಾದನೆಗಳು ಇದ್ದರೆ ದಯಮಾಡಿ ಹೇಳಿ, ನಾವು ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಟಿಕೆಟ್ ತೆಗೆದುಕೊಂಡಿರುವವರನ್ನು ಆ ರೀತಿ ಮಾಡಿಲ್ಲ. ಇದು ನಮ್ಮ ಮಾಹಿತಿ. ಟಿಕೆಟ್ ಪಡೆದವರನ್ನು ತಡೆದಿದ್ದಾರೆ ಎಂಬ ಅಪಾದನೆಯೇನಾದರೂ ಇದ್ದರೆ ದಯಮಾಡಿ ತಿಳಿಸಿ. ನೀವು ತಿಳಿಸದಿದ್ದರೂ ಅದನ್ನ ಎನ್‌ಕ್ವೈರಿ ಮಾಡಿಸುತ್ತೇನೆ. ನಮ್ಮ ಅನುಭವದ ಪ್ರಕಾರ ಆ ರೀತಿ ಇಲ್ಲ. ಇಂಥ ನಿರ್ದಿಷ್ಟವಾದ ಸ್ಥಳದಲ್ಲಿ ಟಿಕೆಟ್ ಇದ್ದವರನ್ನೂ ಬಂಧಿಸಿದ್ದಾರೆ ಎಂಬ ಆಪಾದನೆ ತಮ್ಮದೂ ಕೂಡ ಇಲ್ಲ. ಈ ಬಗ್ಗೆ ಏನು ಅನುಮಾನ ಇದೆ ಆ ಅನುಮಾನ ಇರಬೇಕಾಗಿಲ್ಲ. ಟಿಕೆಟ್ ಇದ್ದವರನ್ನು ನಾವು ಒಬ್ಬರನ್ನೂ ಬಂಧಿಸಿಲ್ಲ. ಇನ್ನು ರೈತ ಮುಖಂಡ ಶಾಸಕರು ಒಬ್ಬರನ್ನೂ ಕೂಡ ಬಂಧಿಸಿಲ್ಲ.

ಈ ತಡೆ ಹಿಡಿದದ್ದು ಮತ್ತು ಬಂಧಿಸಿದ್ದು ನಾವಲ್ಲ, ರೈಲ್ವೆ ಅಧಿಕಾರಿಗಳು ಮತ್ತು ರೈಲ್ವೆ ಪೋಲೀಸರು. ನಾವು ಸಹಾಯ ಮಾಡಿದ್ದು ಅಷ್ಟೆ. ಅವರು ಸಹಾಯ ಕೇಳಿದಾಗ ನಾವು ಸಹಾಯ ಕೊಡುತ್ತೇವೆ. ನಾವೇ ಬಂಧಿಸಿಲ್ಲ. ಬಂಧಿಸಿ ಎಲ್ಲಾದರೂ ಇಡಬೇಕಲ್ಲ. ಜೈಲು ಅವರು ಕೇಳಿದಾಗ ನಾವು ಕೊಟ್ಟಿದ್ದೇವೆ.

ತೆರವು ಮಾಡಿ ಕೊಟ್ಟಿದ್ದೇವೆ. ಅಷ್ಟೇ ಹೊರತು ನಮ್ಮ ಪಾತ್ರ ಅಲ್ಲಿಲ್ಲ. ಅದೂ ಮುಖ್ಯವಾಗಿ ಪಾರ್ಲಿಮೆಂಟಿನಲ್ಲಿ ಕೇಳಬೇಕಾದ ಪ್ರಶ್ನೆಯನ್ನು ಕೇಳಿದ್ದೀರಿ, ಆದರೂ ಸಹ ನಮ್ಮ ಮಾಹಿತಿಯನ್ನು ನಾವು ಕೊಟ್ಟಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ರೈಲ್ವೆ ಪೋಲೀಸಿನವರು ಅಲ್ಲಿ ಅರೆಸ್ಟ್ ಮಾಡಿರತಕ್ಕವರು. ಅರೆಸ್ಟ್ ಮಾಡಿರತಕ್ಕಂಥವರು ಕರ್ನಾಟಕ ರಾಜ್ಯದ ಪೋಲೀಸ್‌ನವರು. ಇಲ್ಲಿ ಸಹಾಯ ಮಾಡಿರುವ ಪ್ರಶ್ನೆ ಅಲ್ಲ. ಕೇಸ್ ಬುಕ್ ಮಾಡಿರತಕ್ಕವರೇ ಕರ್ನಾಟಕ ರಾಜ್ಯದ ಪೋಲೀಸರು. ರೈಲ್ವೆ ಪೊಲೀಸಿನವರು ಇದನ್ನು ಮಾಡಿಲ್ಲ. ರೈಲ್ವೆ ಪೋಲೀಸಿನವರು ಯಾವಾಗ ಅರೆಸ್ಟ್ ಮಾಡತಕ್ಕಂಥವರು ಎಂದರೆ ಟಿಕೆಟ್ ಇಲ್ಲದೆ ಟ್ರೈನ್‌ನಲ್ಲಿ ಕುಳಿತುಕೊಂಡು ಟ್ರೈನ್ ಮೈಸೂರಿನಿಂದ ಹೊರಟು ಬೆಂಗಳೂರಿಗೆ ಹೋಗುವಾಗ ದಾರಿಯಲ್ಲಿ ಅರೆಸ್ಟ್ ಮಾಡತಕ್ಕಂಥಹದು .ಅದಲ್ಲ ಸ್ವಾಮಿ, ಅರೆಸ್ಟ್ ಮಾಡಿರತಕ್ಕಂಥವರು ನಮ್ಮ ರಾಜ್ಯದ ಪೊಲೀಸಿನವರು ನಮ್ಮ ರೈತರುಗಳು ರೈಲ್ವೆ ಸ್ಟೇಷನ್‌ಗೆ ಗುಂಪು ಗುಂಪಿನಲ್ಲಿ ಹೋದ ತಕ್ಷಣ ನಮ್ಮ ರಾಜ್ಯದ ಪೋಲೀಸರು ಅರೆಸ್ಟ್ ಮಾಡಿರುವುದು. ಪತ್ರಿಕೆಯಲ್ಲಿ ಸಹ ವರದಿ ಆಗಿದೆ ನೋಡಿದೆ. ಅದರಿಂದ ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಅದರ ಬಗ್ಗೆಯೇ ನಾನು ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದ್ದಕ್ಕೆ ರೈಲ್ವೆ ಅಧಿಕಾರಿಗಳು, ರೈಲ್ವೇ ಪೊಲೀಸಿನವರು ಬಂಧಿಸಿದ್ದಾರೆ. ಅವರು ಸಹಾಯ ಕೇಳಿದಾಗ ನಾವು ಸಹಾಯ ಕೊಟ್ಟಿದ್ದೇವೆ. ಇದು ಹೊರಗೆ ನಡೆದಂತಹ ಬಂಧನ ಅಲ್ಲ, ರೈಲ್ವೇ ಸ್ಟೇಷನ್‌ನಲ್ಲಿ ಈ ಬಂಧನ ನಡೆದದ್ದು. ತಾವು ಏನಾದರೂ ರೈಲ್ವೆ ಸ್ಟೇಷನ್‌ನ ಹೊರಗಡೆ ಬಂಧನ ನಡೆದಿದ್ದರೆ ದಯಮಾಡಿ ಹೇಳಿ. ಅಂಥಾದ್ದು ಇದ್ದರೆ ಆ ರೀತಿ ಮಾಡಿದ್ದು ತಪ್ಪು, ಅಂತಹದು ನಡೆದಿಲ್ಲ, ನಾನು ಒಪ್ಪಿಕೊಳ್ಳುತ್ತೇನೆ. ಅಂತಹ ಬಂಧನ ಆಗಿಲ್ಲ. ರೈಲ್ವೆ ಸ್ಟೇಷನ್‌ನಲ್ಲಿ ಟಿಕೇಟ್ ಇಲ್ಲದೆ ರೈಲು ಹತ್ತಲು ಪ್ರಯತ್ನ ಮಾಡಿದಾಗ ಇದು ಆಗಿದೆ. ಆದರೆ ಎಲ್ಲಾದರೂ ನಮ್ಮ ತಪ್ಪು ಇದ್ದರೆ ದಯಮಾಡಿ ಹೇಳಿ. ನಾವು ಸಂಬಂಧಪಟ್ಟ ಅಧಿಕಾರಿಗಳು ಎಲ್ಲೆಲ್ಲಿ ತಪ್ಪು ಮಾಡಿದ್ದಾರೆ, ನಾವು ಅದಕ್ಕೆ ಸರಿಯಾದಂತಹ ಶಾಸ್ತಿ ಮಾಡಬಹುದು. ರೈಲ್ವೆ ಸ್ಟೇಷನ್ ಹೊರಗಡೆ ಅಥವಾ ಮೆರವಣಿಗೆ ಹೋಗುವಾಗ ಬಂಧನ ಆಗಿದ್ದರೆ ದಯಮಾಡಿ ತಿಳಿಸಿ, ಬಂಧನ ಆಗಿಲ್ಲ. ನಾನು ಇವತ್ತು ಸ್ಪಷ್ಟೀಕರಣ ಕೊಡುತ್ತಿದ್ದೇನೆ ಅಷ್ಟೆ.

ಇನ್ನು ಡೆಂಕಲ್ ಪ್ರೊಪೋಸಲ್ ಬಗ್ಗೆ ನಮ್ಮ ರಾಜ್ಯದ ವಿಚಾರಗಳನ್ನು ಈಗಾಗಲೇ ನಮ್ಮ ಪ್ರಧಾನಮಂತ್ರಿಯವರಿಗೆ ತಿಳಿಸಿದ್ದೇನೆ ಮತ್ತು ನಮ್ಮ ಬಜೆಟ್‌ನಲ್ಲಿ ಸಹ ಹೇಳಿದ್ದೇನೆ. ಇದರ ಬಗ್ಗೆ ಒಂದು ವಾದ ವಿವಾದ ಇರಬಹುದು. ಈ ಡಂಕಲ್ ವರದಿ ಬಂತು ಎಂದರೆ ಕೇಂದ್ರ ಸರ್ಕಾರದವರು ಇದನ್ನು ಚಾಚೂ ತಪ್ಪದೇ ಅನುಷ್ಠಾನ ಮಾಡುತ್ತಾರೆ ಎನ್ನುವ ಅನುಮಾನಕ್ಕೆ ಆ ಶಂಕೆಗೆ ಅವಕಾಶವಿಲ್ಲ. ಏಕೆಂದರೆ ನಾಳೇ 5ನೇ ತಾರೀಖಿಗೆ ದೆಹಲಿಯಲ್ಲಿ ಕೃಷಿ ಮಂತ್ರಿಗಳು ಕೂಡ ಒಂದು ಸಭೆ ಕರೆದಿದ್ದಾರೆ. ಕರೆದು ಕೃಷಿಯ ನೀತಿಯ ಬಗ್ಗೆ ಚರ್ಚೆ ಮಾಡಲಿಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಕೃಷಿ ಮಂತ್ರಿಗಳನ್ನು ಕೇಂದ್ರ ಸರ್ಕಾರದವರು ಕರೆದಿದ್ದಾರೆ. ನಾವು ಕೂಡ ನಮ್ಮ ರೈತರ ಪರವಾಗಿ ವಾದ ಮಾಡುತ್ತೇವೆ.

ಶ್ರೀ ವೈ.ಕೆ. ರಾಮಯ್ಯ:- ಸರ್ಕಾರದ ನಿಲುವು ಏನು ಎಂದು ಯಾವುದಾದರೂ ಒಂದು ಸಂದರ್ಭದಲ್ಲಿ ತಿಳಿಸಿದರೆ ಅನುಕೂಲವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಬಜೆಟ್ ಸ್ಪೀಚ್‌ನಲ್ಲಿ ಇದೆ ನಾವು ಹೇಳಿದ್ದೇವೆ. In the Budget speech we have also expressed concern ಆದರೆ ಬಜೆಟ್ ಭಾಷಣದ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತದೆ ಆಗ ಅದರ ಬಗೆ ಮಾತನಾಡಿ. ನಾನು ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅದರ

ಬಗ್ಗೆ ವ್ಯಾಪಕವಾದ ಚರ್ಚೆ ಈ ಸದನದಲ್ಲಿ ಆಗಲಿ, ಈ ಸದನದಲ್ಲಿ ಚರ್ಚೆ ಆದ ಮೇಲೆ ನಾವು ಅದಕ್ಕೆ ಸರಿಯಾದಂಥ ಉತ್ತರವನ್ನು ಕೊಡುತ್ತೇವೆ. ಕೇಂದ್ರ ಸರ್ಕಾರ 5ನೇ ತಾರೀಖಿಗೆ ಅಲ್ಲಿ ಕೃಷಿ ಕರಡು ನೀತಿಯ ಬಗ್ಗೆ ಪ್ರಸ್ತಾಪ ಇಟ್ಟುಕೊಂಡಿದೆ. ಈ ಬಗ್ಗೆ ರೈತರ ಪರವಾಗಿ ಏನೂ ತೊಂದರೆ ಆಗದ ಹಾಗೆ ಹೋರಾಟ ಮಾಡತಕ್ಕ ಪ್ರವೃತ್ತಿ ಈ ಸರ್ಕಾರ ಖಂಡಿತವಾಗಿ ಮಾಡುತ್ತೇವೆ. ಪ್ರತಿಭಟನೆ ಮಾಡಲಿಕ್ಕೆ ಸ್ಪೆಷಲ್ ರೈಡ್ ಮಾಡಬೇಕು ಎಂದು ತಾವು ಏನು ಸೂಚನೆ ಕೊಟ್ಟಿದ್ದೀರಿ, ಇದು ಏನಾದರೂ.....

ಶ್ರೀ ಸಿ. ಬೈರೇಗೌಡ:– ಸಾಧನೆಯ ಸಮಾವೇಶಕ್ಕೆ ತಾವು ಯಾವ ಹಣ ಖರ್ಚು ಮಾಡಿದ್ದೀರಿ ? ಏನು ಸಾಧನೆ ಮಾಡಿದ್ದೀರಿ ಕಳೆದ ಮೂರು ವರ್ಷದಿಂದ ? ಏನು ಸಾಧನೆ ಇದೆ ನಿಮ್ಮದು ? ಅದಕ್ಕೆ ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡಲಿಲ್ಲವೇ ನೀವು ?

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ವೈ.ಕೆ. ರಾಮಯ್ಯನವರು ಹಾಗೂ ಬೈರೇಗೌಡರು ಇಂತಹ ಕೆಲಸ ಹಿಂದೆ ಮಾಡಿದ್ದರೆ ಅಂತಹ ಪ್ರಿಸಿಡೆಂಟ್ ಇದ್ದರೆ ನಾವು ಸ್ವಲ್ಪ ವಿಚಾರ ಮಾಡೋಣ.

SRI Y.K. RAMAIAH:– You have created that precedent. ಆ ಪ್ರಿಸಿಡೆಂಟ್ ನಾವಂತೂ ಮಾಡಿಲ್ಲ. ಪಕ್ಷದ ಸಭೆಗೆ ಯಾವತ್ತೂ ರೈಲಿಗೆ ದುಡ್ಡು ಕೊಟ್ಟು ಜನರನ್ನು ಹೊಡೆದಿಲ್ಲ. ನಾವೆಲ್ಲ ಬಸ್ಸು ಗಿಸ್ಸು ಲಾರಿಯಲ್ಲಿ ಹೊಡೆದುಕೊಳ್ಳುತ್ತಿದ್ದೆವು. ರೈಲಿನಲ್ಲಿ ಹೊಡೆಯುವಂತಹ ಪದ್ಧತಿಯನ್ನು ಶುರು ಮಾಡಿದವರೇ ನೀವು. ನಾವು ವ್ಯಾನ್‌ನಲ್ಲಿ ಪಕ್ಕ ಪಕ್ಕದ ಹಳ್ಳಿಯಿಂದ ಜನರನ್ನು ಕರೆಸಿಕೊಳ್ಳುತ್ತಿದ್ದೆವು. ರೈಲಿನಲ್ಲಿ 28 ಲಕ್ಷ ರೂಪಾಯಿಗಳನ್ನು ಕೊಟ್ಟು ಸಮಾವೇಶ ಮಾಡಲಿಕ್ಕೆ ಜನರನ್ನು ಕರೆಸುವಂತಹ ಪ್ರಿಸಿಡೆಂಟ್ ಅನ್ನು ಸೃಷ್ಟಿ ಮಾಡಿದ್ದೇ ನಿಮ್ಮ ಸರ್ಕಾರ. ಹಾಗೆ ಮಾಡುವುದಾದರೆ ರೈತರಿಗೆ ಏಕೆ ಕರುಣೆ ತೋರಬಾರದು ಎನ್ನುವುದು ನನ್ನ ಕೋರಿಕೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಈಗ ಯಾವುದೇ ರೀತಿಯಿಂದ ಪ್ರಜಾ ಪ್ರಭುತ್ವ ಪದ್ಧತಿಯಿಂದ ಮಾಡತಕ್ಕ ಪ್ರತಿಭಟನೆಗೆ ನಾವು, ನಮ್ಮ ಸರ್ಕಾರ ಇಲ್ಲಿ ಅಡ್ಡಿ ಬರುವುದಿಲ್ಲ. ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಇದರ ಬಗ್ಗೆ ರೈತರನ್ನು ತಡೆ ಹಿಡಿದು ನಿಲ್ಲಿಸಬೇಕು, ಅಲ್ಲಿ ರ್‍ಯಾಲಿಗೆ ಭಾಗವಹಿಸಬೇಕು ಎನ್ನುವ ನೀತಿ ಇಲ್ಲ. ಆ ಸೂಚನೆ ಕೂಡ ಕೇಂದ್ರ ಸರ್ಕಾರದ್ದು ಇಲ್ಲ. ರೈಲು ಹೋಗುತ್ತದೆ, ಬರುತ್ತದೆ. ಜನ ಹೋಗುತ್ತಾರೆ ಬರುತ್ತಾರೆ. ಅದಕ್ಕೆ ನಾವೇನೂ ಅಡೆ ತಡೆ ಮಾಡುವುದಿಲ್ಲ; ನಮ್ಮದೇನೂ ಆತಂಕ ಇಲ್ಲ.

ಶ್ರೀ ಬೈರೇಗೌಡ:– ಮದ್ರಾಸ್‌ನಲ್ಲಿರುವವರ ಗತಿ ಏನು ಆಯಿತು ?

ಶ್ರೀ ಎಂ. ವೀರಪ್ಪ ಮೊಯಿಲಿ:– ಅಲ್ಲಿರುವವರು ಸಹ ಸುಕ್ಷೇಮವಾಗಿದ್ದಾರೆ. ಯಾರಿಗೂ ಏನೂ ತೊಂದರೆಯಾಗಿಲ್ಲ.

12.50 ಪಿ.ಎಂ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

(ಮುಂದುವರಿದುದು)

† ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ್):– ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಬಗ್ಗೆ ವಂದನೆಯನ್ನು ಸಲ್ಲಿಸಿದ ಮಾನ್ಯ ಶ್ರೀ ಜಿ.ಎಸ್. ಆಚಾರ್‌ರವರ ವಂದನಾ ಪ್ರಸ್ತಾಪವನ್ನು ಬೆಂಬಲಿಸಿ ಎರಡು ಮಾತುಗಳನ್ನು ಹೇಳಲಿಕ್ಕೆ ನಾನು ಅಪೇಕ್ಷೆ ಪಡುತ್ತಿದ್ದೇನೆ. ಈ ಬಾರಿಯ ರಾಜ್ಯಪಾಲರ ಭಾಷಣ

ಬಹಳ ಅಚ್ಚುಕಟ್ಟಾಗಿ ಬರೇ 13–14ಪುಟದೊಳಗೆ ಅವರು ಸೀಮಿತಗೊಳಿಸಿದ್ದಾರೆ. ಈ 14ಪುಟದೊಳಗೆ ಅವರು ಹೇಳುವುದನ್ನೆಲ್ಲಾ ಬಹಳ ಒಳ್ಳೆಯ ರೀತಿಯಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಅವರು ಆರಂಭ ಮಾಡಿದ ರೀತಿಯೇ ನಿಜವಾದಂತಹ ಪ್ರಜಾಪ್ರಭುತ್ವದ ನೀತಿಗೆ ಅನುಗುಣವಾಗಿ ಪ್ರಸ್ತಾವ ಮಾಡಿದ್ದಾರೆ. "ಸ್ವತಂತ್ರ ಭಾರತದ ಇತಿಹಾಸದಲ್ಲಿಯೇ ಅತ್ಯಂತ ದುರಂತರವಾದ ಘಟನೆಗಳಲ್ಲೊಂದು ಅಯೋಧ್ಯೆಯಲ್ಲಿ 1992ರಲ್ಲಿ ಡಿಸೆಂಬರ್ 6ರಂದು ಸಂಭವಿಸಿತು. ನಮ್ಮ ರಾಷ್ಟ್ರದ ಸರ್ವಧರ್ಮ ಸಮಭಾವದ ಭದ್ರ ಬುನಾದಿಯೇ ಅಲುಗಾಡಿ ಹೋಗಿರುವುದು, ಅಯೋಧ್ಯೆಯ ದುರಂತ ಘಟನೆಗಳ ಭೀಕರ ಪರಿಣಾಮಗಳಲ್ಲಿ ಒಂದು. ರಾಷ್ಟ್ರದ ಹಲವಾರು ಸ್ಥಳಗಳಲ್ಲಿ ಅಧಿಕ ಪ್ರಮಾಣದಲ್ಲಿ ಗುಂಪು, ಘರ್ಷಣೆಗಳು, ಹಿಂಸಾಕೃತ್ಯಗಳು ಹಾಗೂ ಗಲಭೆಗಳು ನಡೆದವು" ಎಂದು ಹೇಳಿ ಪ್ರಾರಂಭಮಾಡಿ ಅದರ ಎಲ್ಲಾ ಚರಿತ್ರೆಯನ್ನು ಅವರು ಹೇಳಿ, ಇಂತಹ ಕೋಮುಗಲಭೆಯನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುವುದನ್ನು ರಾಜ್ಯಪಾಲರು ಆರಂಭದಲ್ಲಿಯೇ ತೆಗೆದುಕೊಂಡಿದ್ದರಿಂದ ನಿಜವಾಗಿಯೂ ಈ ರಾಜ್ಯಪಾಲರ ಭಾಷಣದಲ್ಲಿ ಏನು ಉಂಟು ಎಂದು ಹೇಳುವವರು ಇದ್ದಾರೆ. ಅಲ್ಲಿ ಎಲ್ಲವೂ ಉಂಟು. ಈಗ ಈ ದೇಶದಲ್ಲಿ ಕೋಮು ಸಾಮರಸ್ಯ ಇಲ್ಲದಿದ್ದರೆ, ಈ ದೇಶದಲ್ಲಿ ಸೌಹಾರ್ದತೆ ಇಲ್ಲದಿದ್ದರೆ ಈ ದೇಶದಲ್ಲಿ ಏನು ಮಾಡಿದರೂ ಅದು ಫಲಕಾರಿಯಾಗುವುದಿಲ್ಲ. ಅದು ಜನರಿಗೆ ಮುಟ್ಟುವುದಿಲ್ಲ. ಜನರು ಅದನ್ನು ಅನುಭವಿಸಲಿಕ್ಕೆ ಆಗುವುದಿಲ್ಲ. ಗರ್ಭಕ್ಕೆ ಸುಖ ಇದ್ದರೆ ಮಗುವಿಗೆ ಸುಖ ಎಂದು ಹೇಳತಕ್ಕಂಥ ಗಾದೆಯಾಗಿ ಈ ದೇಶ, ಈ ಪರಿಸರ, ಇಲ್ಲಿರತಕ್ಕಂಥ ಎಲ್ಲಾ ಮತದವರು, ಎಲ್ಲಾ ಜಾತಿಯವರು, ಎಲ್ಲಾ ಉಪಜಾತಿಯವರು ಅನ್ಯೋನ್ಯ ಪ್ರೇಮದಿಂದ ಇದ್ದರೆ ಮಾತ್ರ ಈ ದೇಶದಲ್ಲಿ ಏನು ಅಭಿವೃದ್ಧಿ ಮಾಡಿದರೂ, ಏನು ಪ್ರಗತಿ ಮಾಡಿದರೂ ಅದು ಸಾಧುವಾಗುತ್ತದೆ, ಅದರಿಂದ ಪರಿಣಾಮವಾಗುತ್ತದೆ. ಆದ್ದರಿಂದ ರಾಜ್ಯಪಾಲರು ಹೇಳಿರತಕ್ಕಂಥ ಈ ವಿಚಾರದ ಬಗ್ಗೆ ಕೋಮು ಸೌಹಾರ್ದತೆ ಎಂದು ಹೇಳುವಂಥದ್ದು, ನಮ್ಮ ಮನಸ್ಸಿಗೆ ಕಾಣುವಂತಹದ್ದು ಕೂಡ ಅಗೆ. ಈ ಭಾರತ ದೇಶಕ್ಕೆ ಯಾವ ಕೊರತೆಯೂ ಇಲ್ಲ. ಹಣಕಾಸಿನ ಕೊರತೆ ಕೂಡ ಇಲ್ಲ. ಈ ದೇಶಕ್ಕೆ ಇರತಕ್ಕಂಥ ಅದ್ಭುತ ಕೊರತೆ ಕೋಮು ಸಾಮರಸ್ಯದ ಒಂದೇ ಒಂದು ಕೊರತೆ. ಅದರಿಂದಲೇ ಈ ದೇಶದಲ್ಲಿ ಅಲ್ಲೋಲ ಕಲ್ಲೋಲಗಳು, ಎಲ್ಲಾ ಅನಾಹುತಗಳು, ಎಲ್ಲಾ ಅನಿರೀಕ್ಷಿತಗಳು ಬರುವಂಥದ್ದು ಎಂದು ಅನೇಕ ತಜ್ಞರು ಕೂಡ ಹೇಳುತ್ತಿದ್ದಾರೆ. ಆದ್ದರಿಂದ ಅಂತಹ ಒಂದು ಪರಿಸರವನ್ನು ಈ ದೇಶದಲ್ಲಿ ನಾವು ಉಂಟು ಮಾಡಬೇಕು. ಈ ದೇಶ ಕೋಮು ಸೌಹಾರ್ದದ ದೇಶ. ಭಾರತ ದೇಶ ಸರ್ವಧರ್ಮ ಸಮನ್ವಯ ರೀತಿಯಲ್ಲಿ ನಡೆಯಬೇಕೆಂದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ; ಸಂಸ್ಕೃತಿಯ ದೇಶ. ಇಡೀ ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲರೂ ಅನ್ಯೋನ್ಯ ಪ್ರೇಮದಿಂದ, ಸೌಹಾರ್ದದಿಂದ, ಒಗ್ಗಟ್ಟಿನಿಂದ, ಐಕ್ಯಮತ್ಯದಿಂದ ಕೂಡಿ ಹೋರಾಟ ಮಾಡಿದ್ದರಿಂದ ಸ್ವಾತಂತ್ರ್ಯ ಸಿಕ್ಕಿದೆ. ಹಿಂದುಗಳು, ಮುಸಲ್ಮಾನರು, ಕ್ರೈಸ್ತರು, ಸಿಕ್ಖರು ಬೇಡ, ಬ್ರಿಟಿಷರನ್ನು ಎದುರಿಸುವುದು ಬೇಡ ಎಂದು ಹೇಳಿದಂತಹ ಒಂದೇ ಒಂದು ಸೊಲ್ಲು ಕೂಡ ಇಲ್ಲದೆ ಆ ರೀತಿಯಲ್ಲಿ 30–40 ವರ್ಷಗಳ ಕಾಲ ಹೋರಾಡಿದ್ದರಿಂದ ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ ಎಂದು ನನಗೆ ಗೊತ್ತಿದೆ; ಹಾಗಿದ್ದರೆ ಇವತ್ತು ನಮಗೆ ಇರುವಂಥದ್ದು ಏನೆಂದರೆ ಬಂದಿರತಕ್ಕಂಥ ಈ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವಂಥದ್ದು, ಈ ದೇಶದ ರಕ್ಷಣೆಯನ್ನು ಮಾಡುವಂಥದ್ದು, ಈ ದೇಶದ ಅಭಿವೃದ್ಧಿ ಮಾಡುವಂಥದ್ದು, ಈ ದೇಶದ ಪ್ರಗತಿ ಮಾಡುವಂಥದ್ದು ಕೇಂದ್ರ ಸರ್ಕಾರ ಆಗಲಿ, ರಾಜ್ಯ ಸರ್ಕಾರ ಆಗಲಿ, ಮಾಡತಕ್ಕಂಥ ಪ್ರಗತಿಗೆ ಅನುಗುಣವಾಗಿ ನೆರವು ನೀಡುವಂತಹದ್ದು. ಆದ್ದರಿಂದ ರಾಜ್ಯಪಾಲರು ಭಾಷಣವನ್ನು ಏನು ಆರಂಭ ಮಾಡಿದ್ದಾರೆ, ಅದನ್ನು ಮೂಲಭೂತವಾಗಿ ಆರಂಭ ಮಾಡಿದ್ದಾರೆ. ಅದು ಸಹಜವಾದುದು. ಏಕೆಂದರೆ, ಇವತ್ತು ಈ ದೇಶದಲ್ಲಿ ಕೋಮು ಸೌಹಾರ್ದವನ್ನು ತರಬೇಕು ಎಂದು ಡಿಸೆಂಬರ್ 6ನೇ ತಾರೀಖಿನ ನಂತರ ಎಲ್ಲಾ ಕಡೆಗಳಲ್ಲಿ ವ್ಯವಸ್ಥೆಯಾಗುತ್ತದೆ.

ರಾಜ್ಯಪಾಲರು ಕೂಡ ಇದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತಾ ಇದೆ, ಈ ಕೋಮು ದ್ವೇಷದ ಅನಾಹುತ ಆಗದ ಹಾಗೆ ನಾವು ತಡೆಯಲಿಕ್ಕೆ ಎಲ್ಲಾ ಏರ್ಪಾಡುಗಳನ್ನು ಮಾಡಿದ್ದೇವೆಂದು ಕೂಡ ಹೇಳಿದ್ದಾರೆ. ಅಂದರೆ ಆ ರೀತಿಯಲ್ಲಿ ಪರಿಸ್ಥಿತಿ ಬಂದಿದೆ. ತಮಗೆ ಗೊತ್ತಿರುವ ಹಾಗೆ, ಗುಂಪು ಘರ್ಷಣೆ ಆಯಿತು, ಹಿಂಸೆಯಾಯಿತು, ಅಮಾಯಕರಿಗೆ ಅನ್ಯಾಯವಾಯಿತು, ಅಮಾಯಕರನ್ನು ಕೊಂದರು, ಬಡವರನ್ನು ಕೊಂದರು. ಇದಕ್ಕೆ ಬಲಿ ಬೀಳತಕ್ಕಂಥವರು ಬಡವರು, ಅಮಾಯಕರು, ಏನೂ ಗೊತ್ತಿಲ್ಲದವರು. ಅವತ್ತು ನಡೆದಿರತಕ್ಕಂಥ ಘರ್ಷಣೆಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ಅಂದರೆ ಹುಬ್ಬಳ್ಳಿಯಲ್ಲಿ ಆಗಿದೆ, ಬೆಂಗಳೂರಿನಲ್ಲಿ ಆಗಿದೆ, ಇನ್ನೂ ಅನೇಕ ಕಡೆಗಳಲ್ಲಿ ಆಗಿದೆ. ಮಂಗಳೂರಿನಲ್ಲಿ ಆಗಿದ್ದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಕರ್ಫ್ಯೂ ನಾಲ್ಕು ದಿವಸ ರಾತ್ರಿ ಹಗಲು ಇದ್ದಾಗ ಅಮಾಯಕರು, ಬಡವರು ಹೊರಗೆ ಬರುವುದಕ್ಕೆ ಸಾಧ್ಯವಾಗಿಲ್ಲ, ಯಾವುದೇ ಒಂದು ಕೆಲಸಕ್ಕೆ ಹೋಗಲಿಕ್ಕೆ ಸಾಧ್ಯವಿಲ್ಲ, ಅವರಿಗೆ ಮಾಡಲಿಕ್ಕೆ ಸಾಧ್ಯವಿಲ್ಲ, ಮನೆಯಲ್ಲಿ ಅನ್ನ ಇಲ್ಲ, ಮನೆಯಲ್ಲಿ ಅಕ್ಕಿ ಇಲ್ಲ, ಮನೆಯಲ್ಲಿ ಯಾವ ಕಾಳುಬೇಳೆಗಳು ಇಲ್ಲ. ಪಡಿತರ ಅಂಗಡಿಗಳಿಲ್ಲ, ಯಾವ ಪಡಿತರ ಅಂಗಡಿಗಳು ತೆರೆಯುವುದಿಲ್ಲವೆಂದು ಹೇಳುವಾಗ 4–5 ದಿವಸಗಳ ಕಾಲ ಯಾವ ರೂಪದಲ್ಲಾಗಿರಬಹುವೆಂದು ತಾವು ಆಲೋಚನೆ ಮಾಡಬೇಕು. ಆಗ ಊರಿನವರೆಲ್ಲರೂ ಸೇರಿ ಬೇರೆ ಬೇರೆ ರೂಪದಿಂದ ಹಣವನ್ನು ಸಂಗ್ರಹಿಸಿ, ಬೇರೆ ಬೇರೆ ಕಡೆಯಿಂದ ಅಕ್ಕಿಯನ್ನು ತರಿಸಿ ಅವರಿಗೆಲ್ಲಾ 5–10 ಸೇರಿನಷ್ಟು ಅಕ್ಕಿಯನ್ನು ಕೊಟ್ಟಂಥ ಚಿತ್ರ ನಮ್ಮ ಕಣ್ಣು ಮುಂದಿದೆ. ಇಂತಹ ದುಸ್ಥಿತಿ ನಮ್ಮ ದೇಶಕ್ಕೆ ಬಗಬೇಕ ? ಕೋಮು ಸಾಮರಸ್ಯವನ್ನು ಕಾಪಾಡಿಕೊಳ್ಳತಕ್ಕಂಥ ವ್ಯವಸ್ಥೆ ನಮ್ಮಲ್ಲಿ ಇಲ್ಲವಾದರೆ ಭವಿಷ್ಯದಲ್ಲಿ ಈ ದೇಶ ಹೇಗೆ ಉಳಿಯುವುದಕ್ಕೆ ಸಾಧ್ಯ ? ನಾವು ಈ ದೇಶ ಅಖಂಡವಾಗಿರಬೇಕೆನ್ನತಥವರು. ಆದರೆ, ಹಿಂದೆ ಬ್ರಿಟಿಷರು ಈ ದೇಶವನ್ನು ನಮಗೆ ವಹಿಸಿಕೊಡುವಾಗ 500 ರಾಜರುಗಳಿದ್ದರು. ಆಗ ಸ್ವಾತಂತ್ರ್ಯ ಕೊಟ್ಟಾಗ ಇಂಗ್ಲೆಂಡಿನಲ್ಲಿ ಚಾಣಕ್ಯರಾದ ಅರ್ಥಮಂತ್ರಿಗಳಾಗಿದ್ದಂಥ ಕ್ರಿಪ್ಸ್ ಹೇಳಿದರು: 'ನಾವೇನೋ ಸ್ವಾತಂತ್ರ್ಯ ಕೊಟ್ಟಿದ್ದೇವೆ, ಆದರೆ ಭಾರತೀಯರಿಗೆ ಇದನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಕಾರಣ 500 ಕಾರುಗಳ ಸಮಸ್ಯೆಯಿರುವುದರಿಂದ ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅವರಿಂದ ಸಾಧ್ಯವಾಗುವುದಿಲ್ಲ ಎಂದು ಹೇಳಿದರು. ಆದರೆ, ನಮ್ಮಲ್ಲಿ ಮುಖಂಡರುಗಳಾಗಿದ್ದ ಜವಹರಲಾಲ್ ನೆಹರೂರವರಾಗಲಿ, ಸರ್ದಾರ್ ವಲ್ಲಭಾಯಿ ಪಟೇಲ್ ಅವರಾಗಲಿ, ರಾಜಗೋಪಾಲ ಚಾರಿಯವರಾಗಲಿ ಯಾವ ರೀತಿಯಲ್ಲಿ ಈ 500 ರಾಜರುಗಳನ್ನು ಇಸ್ಪೀಟಿನ ರಾಜರುಗಳನ್ನಾಗಿ ತಲೆಕೆಳಗು ಮಾಡಿ ಕಡೆಗೆ ಉಳಿದಿರತಕ್ಕಂಥ ಹೈದರಾಬಾದಿಗೆ ಸಹ ರಾಜಾಜಿಯವರು ಪ್ರವಾಸ ಮಾಡಿ ಪೋಲೀಸ್ ಆ್ಯಕ್ಷನ್ ಮಾಡಿ ಈ ದೇಶವನ್ನು ಅಖಂಡವಾಗಿಟ್ಟಂಥ ಒಂದು ಚರಿತ್ರೆ ನಮ್ಮ ಮುಂದಿದೆ. ಆದುದರಿಂದ, ಕೋಮು ಸಾಮರಸ್ಯ ಇಲ್ಲದೆ ಹೋದರೆ ಈ ದೇಶ ಮುಂದೆ ಏನಾಗಬಹುದು ಎಂಬುದಕ್ಕೆ ನಾನು ಈ ಒಂದು ಮೇಲಿನ ಉದಾಹರಣೆ ಹೇಳಿದ್ದುದು. ಇವೊತ್ತು ದೇಶದಲ್ಲಿ ಕಾಶ್ಮೀರದ ಪ್ರಶ್ನೆ ಇದೆ, ಪಂಜಾಬಿನ ಪ್ರಶ್ನೆ ಇದೆ, ಅಸ್ಸಾಮಿನ ಪ್ರಶ್ನೆ ಇದೆ, ಅರುಣಾಚಲ, ತಮಿಳುನಾಡು, ಕೇರಳ ಇನ್ನು ಮುಂತಾದ ಅನೇಕ ಪ್ರಶ್ನೆಗಳಿವೆ. ಈ ರೀತಿಯಲ್ಲಿ ದೇಶದ ತುಂಬಾ ಪ್ರಶ್ನೆಗಳು, ಸಮಸ್ಯೆಗಳಿದ್ದರೆ ನಾಳೆ ಈ ದೇಶದ ಗತಿ ಏನಾಗಬಹುದು ? ಆದ್ದರಿಂದ ಈ ದೇಶದಲ್ಲಿ ಸ್ವಾತಂತ್ರ್ಯದ ಕಿಚ್ಚನ್ನು ಉಳಿಸಿಕೊಳ್ಳುವುದಕ್ಕೆ ನಾವು ಪರಸ್ಪರ ವಿಶ್ವಾಸದಿಂದ ಸೌಹಾರ್ದದಿಂದ ಬಾಳಬೇಕಾದ್ದು ಬಹಳ ಅತ್ಯಗತ್ಯ. ಇದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆ. ಇದಕ್ಕೆ ಮುಖ್ಯಮಂತ್ರಿಗಳು ಕೂಡ ಒಳ್ಳೆಯ ರೀತಿಯಲ್ಲಿ ಕಾರ್ಯಾಚರಣೆ ಮಾಡಲಿಕ್ಕೆ ಬಹಳವಾದಂಥ ಕೆಲಸ ಮಾಡಿದ್ದಾರೆ. ಅದೇ ರೀತಿ ಮೊನ್ನೆ ನಡೆದ ಗುಂಪು ಘರ್ಷಣೆಯಲ್ಲಿ ಮೃತರಾದಂಥವರಿಗೆ ಸರ್ಕಾರದ ಪರಿಹಾರ ಧನ ಐವತ್ತು ಸಾವಿರ ರೂಪಾಯಿಗಳಿದ್ದುದು ಎರಡು ಲಕ್ಷ ರೂಪಾಯಿಗಳಿಗೆ ಏರಿಸಿದ ಸರ್ಕಾರದ ಒಂದು ಕಾರ್ಯಕ್ರಮವಾಗಿದೆ. ಅದೇ ರೀತಿ ಘರ್ಷಣೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಹಾನಿಗೀಡಾದವರಿಗೆ 10

ದಿವಸಗಳಲ್ಲಿ ಎಲ್ಲಾ ಪರಿಹಾರ ಸಿಕ್ಕಿದೆ. ಬೇರೆ ಕಡೆ ಪರಿಹಾರ ಸಿಕ್ಕಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಹಾನಿಗೀಡಾದವರಿಗೆ ಪರಿಹಾರ ಕೊಡಬೇಕೆನ್ನುವುದು ಸರ್ಕಾರದ ಒಂದು ನೀತಿ. ಆದುದರಿಂದ, ಕೋಮು ಸೌಹಾರ್ದದ ಬಗ್ಗೆ ಕವಿಗಳೂ ಕೂಡ ಎಂತಹ ಮಾತುಗಳನ್ನು ಹೇಳಿದ್ದಾರೆ. ಮುಖ್ಯವಾಗಿ ಈ ದೇಶದಲ್ಲಿ ಬಡವರ ಪ್ರಶ್ನೆ ಇರುವಂಥಾದ್ದರ ಬಗ್ಗೆ ಡಾ।। ಕುವೆಂಪುರವರು ಹೇಳುತ್ತಾರೆ:

ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಹೊಡೆದಟ್ಟಿ ಓಡಿಸಲು ಬನ್ನಿ
ಓ ಬನ್ನಿ ಸೋದರರೆ ಬೇಗ ಬನ್ನಿ

ಇದರ ಸಾರಂಶವೇನೆಂದರೆ ನೀವು ಗುಡಿಯೊಳಗೆ, ಚರ್ಚಿನೊಳಗೆ ಮಸೀದಿಯೊಳಗೆ ಏನು ಮಾಡಿದರೂ ಏನೂ ಆಗುವುದಿಲ್ಲ. ಇಲ್ಲಿ ಕೋಟಿ ಕೋಟಿ ಬಡವರಿದ್ದಾರೆ, ಅವರ ಅಭ್ಯುದಯಕ್ಕೆ, ಅವರನ್ನು ಮೇಲೆತ್ತುವುದಕ್ಕೆ ಬನ್ನಿ ಎನ್ನುವ ಕರೆಯನ್ನು ಕವಿಗಳು ಇವೊತ್ತು ಕೊಟ್ಟಿದ್ದಲ್ಲ. ಇದು ಸುಮಾರು 25 ವರ್ಷಗಳ ಹಿಂದೆ ಬರೆದಂಥ ಕವಿತೆ. ಆದರೂ ಅದು ಈಗಲೂ ಪ್ರಸ್ತುತವಾಗಿದೆ. ಅದೇ ರೀತಿಯಲ್ಲಿ ದೇಶದಲ್ಲಿ ಯಾರೇ ಇದ್ದರೂ ಕೂಡ ಅಣ್ಣ-ತಮ್ಮಂದಿರಂತೆ ಒಂದೇ ಒಂದು ಬಳಗವಾಗಿ ಒಗ್ಗಟ್ಟಾಗಿದ್ದರೆ ಯಾವ ದೇಶಕ್ಕೂ ಕೂಡ ನಮ್ಮ ದೇಶದ ಮೇಲೆ ಕಣ್ಣಿಡುವುದಕ್ಕೆ, ನಮ್ಮ ಮೇಲೆ ಮತ್ಸರ ತಾಳುವುದಕ್ಕೆ ಇಲ್ಲವೆ ಮೈಮೇಲೆ ಬೀಳುವುದಕ್ಕೂ ಸಾಧ್ಯವಿಲ್ಲ. 1962ನೇ ಇಸವಿಯಲ್ಲಿ ಚೈನಾ ದೇಶ ಯುದ್ಧ ಮಾಡಿತು, 1965ನೇ ಇಸವಿಯಲ್ಲಿ ಚೈನಾ-ಪಾಕಿಸ್ತಾನ ಯುದ್ಧವಾಯಿತು ಮತ್ತು 1971ನೇ ಇಸವಿಯಲ್ಲಿ ಪುನಃ ಪಾಕಿಸ್ತಾನ ಯುದ್ಧ ಮಾಡಿತು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ನಂತರ ದೆಹಲಿಯಲ್ಲಿರುವ ಕೆಂಪುಕೋಟೆಯ ಮೇಲೆ ತಮ್ಮ ರಾಷ್ಟ್ರದ ಪತಾಕೆಗಳನ್ನು ಹಾರಿಸಬೇಕೆಂದು ಮೂರು ಬಾರಿ ಈ ದೇಶದ ಮೇಲೆ ಯುದ್ಧವಾಗಿದೆ. ಇದು ಅನೇಕರಿಗೆ ನೆನಪುಂಟು. ಆದರೆ, ಈ ದೇಶದಲ್ಲಿದ್ದ ಹಿಂದೂಗಳು ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಕ್ಖರು ಒಗ್ಗಟ್ಟಾಗಿ ಹೋರಾಡಿದ್ದರಿಂದ 1962ರಲ್ಲಿ ನಮ್ಮ ದೇಶಕ್ಕೆ ಯುದ್ಧದಲ್ಲಿ ಜಯ ಲಭಿಸಿತು. 1965ರಲ್ಲೂ ಜಯ ಲಭಿಸಿತು ಮತ್ತು 1971ರಲ್ಲೂ ಸಹ ಅಮೋಘ ಜಯ ದೊರಕಿತು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ಒಗ್ಗಟ್ಟಿನ ಬಲದಲ್ಲಿ ನಾವು ಉಳಿಯುತ್ತೇವೆಯೇ ವಿನಹ ಕರಿಗಳಾದ ಕಯ್ಯಾರ ಕಿಜ್ಞಾಣ ರೈ ಅವರು ಹೇಳುತ್ತಾರೆ:

ಹಿಂದೂಗಳೆ, ಮುಸ್ಲಿಮರೇ, ಕ್ರಿಶ್ಚಿಯನ್ನರೆ, ಸಿಖ್ಖರೆ
ಎಲ್ಲರೂ ನಮ್ಮವರೇ ಎದೆಯರಳಲಿ
ರಾಷ್ಟ್ರವೊಂದೆ ಜೀವವಾಗಿ ಭಾರತ ದೇಶವೊಂದೆ ಎಂದು ಸಾರಿರಿ
ಯಾವ ರಕ್ಕಸರು ಇದಿರಿಲ್ಲ ನಾವು ಕಡಗಲಿಗಳು.

ಇದು ಎಷ್ಟು ಅರ್ಥಪೂರ್ಣವಾದ ಮಾತು. ಹಿಂದೂಗಳಾಗಲಿ, ಮುಸ್ಲಿಮರಾಗಲಿ, ಕ್ರಿಶ್ಚಿಯನ್ನರಾಗಲಿ, ಸಿಖ್ಖರಾಗಲಿ ಎಲ್ಲರೂ ಈ ದೇಶದವರೇ, ಅವರಲ್ಲಿ ಎದೆ ಅರಳಬೇಕು, ಎದೆ ಅರಳದಿದ್ದರೆ ಯಾವುದೊಂದು ಗೊತ್ತಾಗುವುದಿಲ್ಲವೆಂಬುದು ಸಾರಂಶ. ಇದೇ ಕವಿ ಮತ್ತೆ ಹೇಳುತ್ತಾರೆ:

ಐಕ್ಯದ ಅಮೃತದ ರಸಕೆ ಜೀವ ಜೀವದ ಬೆಸುಗೆ
ಕೂಡಿಬರೆ ಭೀಮ ಬಲ ನಮ್ಮಲ್ಲುಂಟು
ಹದಿನಾಲ್ಕು ಲೋಕವನು, ಸಪ್ತ ಸಾಗರವನು
ಗೆದ್ದು ದಾಟುವ ಶಕ್ತಿ ಉಂಟು.

ನಾವು ಬಲವಾಗಿ, ಒಗ್ಗಟ್ಟಾಗಿದ್ದರೆ ಈ ದೇಶದಲ್ಲಿ ನಮಗೆ ಭೀಮ ಬಲವುಂಟು ಮತ್ತು ಹದಿನಾಲ್ಕು ಲೋಕಗಳನ್ನು, ಸಪ್ತ ಸಾಗರಗಳನ್ನು ಸಹ ದಾಟುವ ಶಕ್ತಿಯಿದೆಯೆಂದು ಕವಿಗಳು ಹೇಳುತ್ತಿದ್ದಾರೆ. ಈ ಪೀಠಿಕೆಯನ್ನು ನಾನು ಹೆಚ್ಚಾಗಿ ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ಎಲ್ಲಾ ಅಭ್ಯುದಯದಿಂದ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದಂಥ ನೀರಾವರಿಯಾಗಲಿ, ಲೋಕೋಪಯೋಗಿಯಾಗಲಿ, ಮಹಿಳೆಯರ ವಿಚಾರವಾಗಲಿ, ಆಸ್ಪತ್ರೆಯ ವಿಚಾರವಾಗಲಿ ಅವುಗಳ ಗೊತ್ತು–ಗುರಿ, ಉದ್ದೇಶಗಳನ್ನು ಸಮಗ್ರವಾಗಿ ಕಾರ್ಯರೂಪಕ್ಕೆ ತರಬೇಕಾದರೆ, ಕೋಮು ಸೌಹಾರ್ದತೆ ಇದ್ದರೆ ಮಾತ್ರ ಸಲೀಸಾಗಿ ಕಾರ್ಯರೂಪಕ್ಕೆ ತರುವುದಕ್ಕಾಗುತ್ತದೆ. ಕೋಮು ಸೌಹಾರ್ದತೆ ಇಲ್ಲದಿದ್ದರೆ ಎಲ್ಲೆಲ್ಲೂ ಬೇರೆ ರೀತಿಯ ಭೇದ–ಭಾವ, ಒಂದು ರೀತಿಯ ಸಂಶಯ, ಇದರಿಂದ ಏನಾಗುತ್ತದೊ ಎಂದು ಹೇಳತಕ್ಕಂಥ ಭಾವನೆ, ಯಾರಿಗೂ ಒಂದು ಬಲವಿಲ್ಲ. ಒಳ್ಳೆಯ ರೀತಿಯಲ್ಲಿ ಜಾಗರೂಕತೆಯಿಂದ ಎಚ್ಚರಿಕೆಯಿಂದಿರುವುದಕ್ಕೆ ಸಾಧ್ಯವಾಗದಂಥ ಪರಿಸ್ಥಿತಿ ನಿರ್ಮಾಣವಾದರೆ ಯಾವುದೇ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ಹೇಳಬೇಕಾಗಿದೆ.

ಆದುದರಿಂದ ರಾಜ್ಯಪಾಲರು ಈ ಕೋಮುಸೌಹಾರ್ದವನ್ನು ಉಳಿಸಬೇಕೆಂದು ಹೇಳಿದ್ದಾರೆ, ಅದಕ್ಕೆ ಬೇಕಾದಂಥ ಏರ್ಪಾಡುಗಳನ್ನು ನಾವು ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರಲು ನಮ್ಮ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿ ಈಗ ಆಗಿಹೋಗಿರತಕ್ಕ ಘರ್ಷಣೆಯ ಎಲ್ಲಾ ವಿಚಾರಗಳಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಿರತಕ್ಕದ್ದು ನಮ್ಮ ಕಣ್ಣ ಮುಂದೆ ಇದೆ. ಆದುದರಿಂದ ಕೋಮುಸೌಹಾರ್ದ ವಿಷಯವನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸೂಚಿಸಿರುವುದು ಬಹಳ ಸೂಕ್ತವಾದುದು. ಈಗ ನಮಗೆ ಪಂಚಕಜ್ಜಾಯ ಭಕ್ಷ್ಯಭೋಜನವನ್ನು ತಿನ್ನಬೇಕೆಂದು ಹೇಳಿದರೆ ಅದಕ್ಕೆ ಬೇಕಾಗಿರುವ ವಸ್ತುಗಳನ್ನು ತಂದುಕೊಟ್ಟು ನಂತರ ಅದನ್ನು ಒಳ್ಳೆಯ ರೀತಿಯಿಂದ ಮಾಡಬೇಕಾಗುತ್ತದೆ. ಅದಕ್ಕಾಗಿ ಕಿಲುಬು ಇಲ್ಲದ ಪಾತ್ರೆಯನ್ನು ತರಬೇಕು, ಒಂದು ವೇಳೆ ಕಿಲುಬು ಇದ್ದ ಪಾತ್ರೆಯಲ್ಲಿ ಮಾಡಿ ಭಕ್ಷ್ಯ ಬೋಜನವನ್ನು ತಿಂದರೆ ಏನಾಗುತ್ತದೆಂದು ತಾವೇ ಆಲೋಚನೆ ಮಾಡಿ, ಹಾಗೆಯೇ ಈ ದೇಶದಲ್ಲಿ ಕೋಮು ಸೌಹಾರ್ದತೆ ಇಲ್ಲದಿದ್ದರೆ, ಕೋಮು ಸಾಮರಸ್ಯ ಇಲ್ಲದಿದ್ದರೆ ನಾವು ಎಂಥ ಪಂಚ ಕಜ್ಜಾಯವನ್ನು, ಭಕ್ಷ್ಯ ಭೋಜನವನ್ನು ಎಂಥದ್ದೇ ಒಳ್ಳೆಯತನದಿಂದ ಮಾಡಿದ್ದರೂ ಕೂಡ ಅದನ್ನು ದಕ್ಕಿಸಿಕೊಳ್ಳಲು ಆಗುವುದಿಲ್ಲ. ಆದುದರಿಂದ ಕೋಮು ಸೌಹಾರ್ದತೆಯು ಇರಬೇಕಾಗುತ್ತದೆ.

ಇನ್ನು ನಾನು ಹೇಳುವುದು ಕನ್ನಡದ ಬಗ್ಗೆ. ಕನ್ನಡದ ಬಗ್ಗೆಯೂ ಕೂಡ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಕನ್ನಡವನ್ನು ಆಡಳಿತದ ಎಲ್ಲಾ ಹಂತಗಳಲ್ಲಿಯೂ ಬಳಕೆಗೆ ತರಲು ನನ್ನ ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದಾರೆ. ಇದು ಬಹಳ ಸಂತೋಷದ ವಿಚಾರ. ನಾವು ಅನೇಕ ವರ್ಷಗಳಿಂದಲೂ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ಹೇಳುತ್ತಿದ್ದೇವೆ. ಭಾಷಾವಾರು ರಾಜ್ಯಗಳಾದ ಮೇಲೆ, ಕೇರಳ, ತಮಿಳು ನಾಡು, ಆಂಧ್ರಪ್ರದೇಶಗಳು ಅವರವರ ಭಾಷೆಯನ್ನು ಮೇಲಕ್ಕೆ ತರಲು ಪ್ರಯತ್ನ ಮಾಡಿದ್ದಾರೆ, ಅವರ ಸಾಹಿತ್ಯವನ್ನು ಮೇಲೆ ತರಲು ಪ್ರಯತ್ನ ಮಾಡಿದ್ದಾರೆ. ಕೇರಳಕ್ಕೆ ಹೋದರೆ ಒಬ್ಬನೇ ಒಬ್ಬ ಕನ್ನಡ ಮಾತನಾಡುವವನನ್ನು ನಾವು ನೋಡುವುದಕ್ಕೆ

ಸಾಧ್ಯವಿಲ್ಲ. ಹಾಗೆಯೇ ತಮಿಳುನಾಡಿನಲ್ಲಿ ಕನ್ನಡ ಮಾತನಾಡುವವರನ್ನು ನೋಡಲು ಸಾಧ್ಯವಿಲ್ಲ. ಯಾರಾದರೂ ನಮ್ಮ ಸಂಬಂಧಿಕರ ಮನೆ ಇದ್ದರೆ ಮಾತ್ರ ಅಲ್ಲಿಗೆ ಹೋಗಬೇಕಾಗುತ್ತದೆ. ಆದರೆ ಕರ್ನಾಟಕದಲ್ಲಿ ಆ ರೀತಿ ಇಲ್ಲ. ಇಲ್ಲಿ ಔದಾರ್ಯವೋ ಔದಾರ್ಯ. ನೀವು ಯಾವುದಾದರೂ ಒಂದು ಸರ್ಕಲ್‌ಗೆ ಹೋಗಿ ಅಲ್ಲಿ ಕುಳಿತು ಮಾತನಾಡತಕ್ಕ ಗುಂಪನ್ನು ನೋಡಿದರೆ ಕನ್ನಡ ಮಾತನಾಡತಕ್ಕವರು 5 ಪರ್ಸೆಂಟ್ ಇರುವುದಿಲ್ಲ. ಒಂದು ತಮಿಳಿನಲ್ಲಿ ಮಾತನಾಡುತ್ತಾರೆ, ಇಲ್ಲವೆ ತೆಲುಗು ಮಾತನಾಡುವವರೇ ಇರುತ್ತಾರೆ, ಮಂಗಳೂರಿನ ಸರ್ಕಲ್ ಬಳಿ ಹೋಗಿ ನೋಡಿದರೆ ಅಲ್ಲಿ ಮಲೆಯಾಳಿ ಅಲ್ಲದೆ ಬೇರೆ ಮಾತನಾಡುವುದಿಲ್ಲ. ನನ್ನ ಅನಿಸಿಕೆ ಏನೆಂದರೆ, ಇದನ್ನು ಇದೇ ರೀತಿ ಸಡಿಲ ಬಿಟ್ಟರೆ, ಇದೇ ರೀತಿಯ ದಾಕ್ಷಿಣ್ಯ ಭಾವನೆಯನ್ನು ತೋರಿದರೆ ಇನ್ನು 10–15 ವರ್ಷಗಳಲ್ಲಿ ಮಂಗಳೂರನ್ನು ಕೇರಳದವರು ನಮಗೆ ಕೊಡಬೇಕೆಂದು ಕೇಳುತ್ತಾರೆ. ಈ ಬೆಂಗಳೂರನ್ನು ಬೇರೆ ಭಾಷೆಯವರು ನಮಗೆ ಕೊಡಬೇಕೆಂದು ಕೇಳುತ್ತಾರೆ. ಏಕೆಂದರೆ, ಅವರುಗಳು ತಮ್ಮ ಹೆಸರನ್ನು ಚುನಾವಣೆಯ ಪಟ್ಟಿಯಲ್ಲಿ ನಮೂದು ಮಾಡಿ ಚುನಾವಣೆಯಲ್ಲಿ ನಿಲ್ಲುತ್ತಾರೆ, ಮತ್ತೆ ಚುನಾವಣೆಯಲ್ಲಿ ಗೆದ್ದು ಬಂದ ಮೇಲೆ ಅವರ ಬಲವು ತಾನೇ ತಾನಾಗಿ ಹೆಚ್ಚಾಗುತ್ತದೆ. ಕನ್ನಡದ ಬಗ್ಗೆ ರಾಜ್ಯಪಾಲರು ಸೂಚಿಸಿರುವುದನ್ನು ನಾವು ಮಾಡಬೇಕು. ಅದಕ್ಕಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಮಾಡಿದ್ದಾರೆ, ಅದಕ್ಕೆ ಸರಿಯಾದ ಆಡಳಿತವನ್ನು ಮಾಡುವುದಕ್ಕೆ ಶಕ್ತಿಯನ್ನು, ಹಣವನ್ನು ಕೊಡಬೇಕೆಂದು ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗೂ ಸಹ ತಮ್ಮ ಭಾಷಣದಲ್ಲಿ ಅದಕ್ಕೆ ಅಧಿಕಾರ ಮತ್ತು ಒಳ್ಳೆಯ ರೀತಿಯಲ್ಲಿ ಹಣವನ್ನು ಕೊಟ್ಟು ಕಾರ್ಯಾಚರಣೆಯನ್ನು ಮಾಡುವುದಾಗಿ ಸಾಧ್ಯವಾಗುತ್ತದೆ. ಇದಲ್ಲದೆ ಕನ್ನಡ ಸಂಸ್ಕೃತಿ ಇಲಾಖೆ ಕೂಡ ಇದೆ, ಇದಲ್ಲದೆ ಬೇರೆ ಬೇರೆ ಕೂಡ ಇದೆ. ಇವತ್ತು ಕನ್ನಡವು ಆಡಳಿತ ಭಾಷೆಗಾಗಿ ಆಗುವುದು ವಿಧಾನಸೌಧದಿಂದಲೇ, ವಿಧಾನಸೌಧದಿಂದ ಬರತಕ್ಕ ಕಾರ್ಯಕ್ರಮದಲ್ಲಿ ಎಲ್ಲವೂ ಸಹ ಇಂಗ್ಲೀಷ್‌ನಲ್ಲಿ ಇರುತ್ತದೆ, ಅರ್ಧ ಇಲ್ಲವೆ ಅರ್ಧಕ್ಕೂ ಕಡಿಮೆ ಕನ್ನಡದಲ್ಲಿ ಬರುತ್ತದೆ. ಅದು ಸರಿಯಾದುದಲ್ಲ. ಆದ್ದರಿಂದ ವಿಧಾನಸೌಧದಲ್ಲಿ ಅವರು ಎಂಥ ಅಧಿಕಾರಿಯೇ ಆಗಲಿ ಕನ್ನಡದ ನೆಲದಲ್ಲಿ ಇದ್ದ ಮೇಲೆ ಕನ್ನಡದ ಅನ್ನವನ್ನು ತಿನ್ನುವಾಗ ಕನ್ನಡದ ಗಾಳಿಯನ್ನು ಸೇವಿಸುವಾಗ ನಮಗೆ ಕನ್ನಡವೇ ಪ್ರಾಮುಖ್ಯ. ಕನ್ನಡವೇ ತಿಲಕಪ್ರಾಯ. ಕನ್ನಡವೇ ಅಗ್ರಮಾನ್ಯತೆ ಎಂದು ಕನ್ನಡಕ್ಕೆ ಅವರುಗಳು ಪ್ರಾಶಸ್ತ್ಯವನ್ನು ಕೊಟ್ಟು ಮುಂದೆ ಹೋಗಬೇಕೆ ಹೊರತು ಇಲ್ಲದಿದ್ದರೆ ಕನ್ನಡ ಆಡಳಿತ ಭಾಷೆಯಾಗುವುದಕ್ಕೆ ಇನ್ನು ಎಷ್ಟು ವರ್ಷಗಳು ಬೇಕೋ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೆ, ತಮ್ಮ ಹತ್ತಿರ ಕೇಳಿಕೊಳ್ಳುವುದೇನೆಂದರೆ, ಕನ್ನಡ ರಾಜ್ಯದ ಆಡಳಿತ ಭಾಷೆಯಾಗಬೇಕಾದರೆ ವಿಧಾನಸೌಧದ ಎಲ್ಲಾ ವಿಚಾರಗಳು ಕನ್ನಡದಲ್ಲೇ ಬರುವಂತೆ ಮಾಡಬೇಕು. ಬಹಳವಾಗಿ ಮಾತನಾಡಬೇಕೆಂದು ನನ್ನ ಮನಸ್ಸಿನಲ್ಲಿದೆ, ಆದರೆ ಬಜೆಟ್ ಬಗ್ಗೆ ಮಾತನಾಡಲು ಸಮಯ ಸಿಕ್ಕಿದರೆ ಮಾತನಾಡುತ್ತೇನೆ. ಏಕೆಂದರೆ, ನಾನು ಹೇಳತಕ್ಕ ಪ್ರತಿಯೊಂದು ಮಾತೂ ಕೂಡ ನ್ಯಾಯವಾದ ವಿಚಾರವನ್ನು ಹೊಂದಿರುತ್ತದೆ, ಅದನ್ನೇ ನಾನು ಹೇಳುತ್ತೇನೆ; ಸುತ್ತು ಬಳಸಿ ಹೇಳುವುದಿಲ್ಲ. ಇವತ್ತು ನಮ್ಮ ಕರ್ನಾಟಕ ರಾಜ್ಯ ಮೆರೆಯಬೇಕಾದರೆ, ಆದರ್ಶಪ್ರಾಯವಾಗಬೇಕಾದರೆ, ಇಡೀ ದೇಶದಲ್ಲಿ ಅಗ್ರಮಾನ್ಯತೆಯನ್ನು ಪಡೆಯಬೇಕಾದರೆ ನಾವು ಕನ್ನಡಕ್ಕೆ ಕೊಡಬೇಕಾದ ಮಾನ್ಯತೆಯನ್ನು ಕೊಡಬೇಕೆಂದು ಹೇಳುತ್ತೇವೆ. ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಬಗೆಯಲ್ಲಿಯೂ ಶ್ರೀಮಾನ್ ವೀರಪ್ಪ ಮೊಯಿಲಿಯವರ ಮುಖ್ಯಮಂತ್ರಿ ಪದವಿ ಶಕ್ತಿಯಿಂದ ಒಳ್ಳೆಯ ರೀತಿಯಲ್ಲಿ ಆಡಳಿತವಾಗಲಿ ಮತ್ತು ಬಡವರ ಬಗ್ಗೆ ಅವರ ತೆಗೆದುಕೊಂಡ ಕಾರ್ಯಕ್ರಮಗಳು ಬಹಳ ಉದಾತ್ತವಾದುದು. ಅದು ಕಾರ್ಯರೂಪಕ್ಕೆ ಬರತಕ್ಕ ವ್ಯವಸ್ಥೆಗೆ ನಾವೆಲ್ಲರೂ ಸಹಕರಿಸಬೇಕು. ಜನತೆ ಅದಕ್ಕೆ ಸಹಕಾರ ನೀಡಿದರೆ ಮಾತ್ರ ನಿಜವಾಗಿಯೂ ಕರ್ನಾಟಕದಲ್ಲಿ ನಾವು ಏನು ಬಯಸಿದ್ದೇವೋ ಅದನ್ನು ಪಡೆಯಲು ಸಾಧ್ಯವಾಗುತ್ತದೆಂದು ಹೇಳಿ,

ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೇರೂರು):– ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣ ರೈತರ ವಿಚಾರದಲ್ಲಿ ಯಾವುದೇ ರೀತಿಯಲ್ಲೂ ಪ್ರೋತ್ಸಾಹದಾಯಕ ವಿಚಾರವನ್ನೂ ಒಳಗೊಂಡಿಲ್ಲ ರೈತರ ಉತ್ಪಾದನೆಗಳಿಗೆ ಉತ್ತಮ ಬೆಲೆ ಸಿಕ್ಕತಕ್ಕ ವಿಚಾರದಲ್ಲಿ ಸರ್ಕಾರ ವಿಚಾರ ಮಾಡಿಲ್ಲ. ಮಹಾಪೂರದಿಂದ, ಚಂಡಮಾರುತದಿಂದ ಇಡೀ ರಾಜ್ಯದಲ್ಲಿ ರೈತರು ತುಂಬಾ ಹಾನಿಗೆ ಒಳಗಾಗಿದ್ದಾರೆ. ಅವರಿಗೆ ಕೊಡತಕ್ಕ ಪರಿಹಾರ ಇನ್ನೂ ಸಿಕ್ಕಿಲ್ಲ. ಸಾಲವನ್ನು ಮರುಪಾವತಿ ಮಾಡತಕ್ಕ ಸ್ಥಿತಿಯಲ್ಲೇ ರೈತ ಇಲ್ಲ ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಿದೆ. ರಾಜ್ಯದಲ್ಲಿ ಅತಿವೃಷ್ಟಿಯಿಂದ ರೈತರು ಮನೆಗಳನ್ನು ಕಳೆದುಕೊಂಡಿದ್ದಾರೆ. ತಮ್ಮ ಜಾನುವಾರುಗಳನ್ನು ಕಳೆದುಕೊಂಡಿದ್ದಾರೆ. ಬೆಳೆದ ಬೆಳೆಯನ್ನು ಕಳೆದುಕೊಂಡಿದ್ದಾರೆ. ನೂರಾರು ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಸರ್ಕಾರವೇ ಒಪ್ಪಿಕೊಂಡಿದ್ದರೂ ಕೂಡ, ರಾಜ್ಯದ ಜನತೆಗೆ ಅನ್ನವನ್ನು ಕೊಡತಕ್ಕ ರೈತ ಸೃಷ್ಟಿ ವಿಕೋಪಕ್ಕೆ ಒಳಗಾದಾಗ ಅವನಿಗೆ ಯಾವುದೇ ರೀತಿಯ ಪರಿಹಾರವನ್ನು ಕೊಡುವ ಪ್ರಯತ್ನ ಮಾಡಿಲ್ಲ. ಸಾಲದ ಮರುಪಾವತಿ ಮಾಡುವುದಕ್ಕೆ ಆಗದಂಥ ಕಠಿಣ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿರತಕ್ಕ ರೈತನಿಗೆ ಸಕಾಲದಲ್ಲಿ ಸಹಾಯಕ್ಕೆ ಬರತಕ್ಕದ್ದು ಕೇಂದ್ರಸರ್ಕಾರ ಮತ್ತು ರಾಜ್ಯಸರ್ಕಾರದ ನೀತಿಯಾದರೂ ಸಹ ಈ ಸರ್ಕಾರ ಈ ಬಗ್ಗೆ ಒಂದೇ ಒಂದು ಚಕಾರವನ್ನೂ ಹೇಳಿಲ್ಲ. ರೈತರ ಸಾಲ ಮನ್ನಾ ಮಾಡುವ ಬಗ್ಗೆ ಅಥವಾ ಕನಿಷ್ಠ ಬಡ್ಡಿಯನ್ನಾದರೂ ಮನ್ನಾ ಮಾಡುವ ಬಗ್ಗೆಯೂ ಕೂಡ ಸರ್ಕಾರ ಯಾವುದೇ ಮಾತನ್ನೂ ಹೇಳಿಲ್ಲ. ರೈತರಿಗೆ ಕಷ್ಟವಾಗಿರುವುದನ್ನು ಸರ್ಕಾರ ಒಪ್ಪಿಕೊಳ್ಳುತ್ತಿದೆ. ಮಹಾಪೂರದಿಂದಾಗಿ ರೈತರ ಸರ್ವನಾಶವಾಗಿದೆ, ರೈತರು ಮನೆಗಳನ್ನು ಕಳೆದುಕೊಂಡಿದ್ದಾರೆ, ಬೆಳೆ ಹಾಳಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದರೂ ಅವರ ಸಹಾಯಕ್ಕೆ ಬರತಕ್ಕದ್ದು ಅಥವಾ ಅವರನ್ನು ಪುನಶ್ಚೇತನಗೊಳಿಸತಕ್ಕ ಯಾವುದೇ ಅಂಶವನ್ನೂ ಸರ್ಕಾರ ಇದರಲ್ಲಿ ಪ್ರಸ್ತಾಪ ಮಾಡಿಲ್ಲ ಎನ್ನತಕ್ಕದ್ದು ಇದರಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಸರ್ಕಾರ ಒಂದು ಕಡೆ ರಾಸಾಯನಿಕ ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡುತ್ತಿದೆ, ಇನ್ನೊಂದು ಕಡೆ ಮಹಾಪೂರದಲ್ಲಿ ಸಿಕ್ಕಿದವರಿಗೆ ಪರಿಹಾರವನ್ನು ಕೊಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಮತ್ತೊಂದು ಕಡೆ ಮಹಾರಾಷ್ಟ್ರದಲ್ಲಿ ಕೊಡುವಂತೆ ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆಯನ್ನಾದಗೂ ಕೊಟ್ಟು ಕೊಂಡುಕೊಳ್ಳುವ ವ್ಯವಸ್ಥೆ ಇಲ್ಲ. ಮಾನ್ಯ ರಾಜ್ಯಪಾಲರ ಭಾಷಣವನ್ನು ನೋಡಿದರೆ ಈ ಸರ್ಕಾರ ಸಂಪೂರ್ಣವಾಗಿ ರೈತನ ವಿರೋಧವಾಗಿದೆ ಮತ್ತು ರೈತರನ್ನು ದಮನ ಮಾಡುವಂಥ ಕೆಲಸ ಮಾಡುತ್ತಿದ್ದ ಎಂಬುದು ಸ್ಪಷ್ಟವಾಗಿ ಎದ್ದು ಕಾಣುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಈಗಲಾದರೂ ಇದನ್ನು ಪುನರ್ ಪರಿಶೀಲನೆ ಮಾಡಿ ಕನಿಷ್ಠ ರೈತನ ಸಾಲದ ಮೇಲಿನ ಬಡ್ಡಿಯನ್ನಾದರೂ ಮನ್ನಾ ಮಾಡಿ ಮುಂದಿನ ಬೆಳೆಯನ್ನು ಇಡುವುದಕ್ಕೆ ಅನುಕೂಲ ಮಾಡಿಕೊಡುವುದಾಗಿ ಉತ್ತರ ಕೊಡುವ ಕಾಲದಲ್ಲಿ ತಿಳಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ರಾಷ್ಟ್ರದಲ್ಲಿ ಸಂಪತ್ತನ್ನು ಉತ್ಪಾದನೆ ಮಾಡತಕ್ಕದ್ದು ರೈತ ಮತ್ತು ನೀರಾವರಿ ಮಾನ್ಯ ರಾಜ್ಯಪಾಲರು ನೀರಾವರಿಯ ಬಗ್ಗೆ ಹೇಳುತ್ತಾ, ಹಿಂದೆಂದೂ ಇಲ್ಲದಷ್ಟು ಹಣವನ್ನು ಎಂದರೆ ಸುಮಾರು 900 ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತಿರುವುದಾಗಿ ಹೇಳಿದ್ದಾರೆ. ಈ ಬಜೆಟ್‌ನಲ್ಲಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಇವರ ಮಾತನ್ನು ನಾವು ಎಷ್ಟರಮಟ್ಟಿಗೆ ನಂಬಬಹುದೆಂದು ಯೋಚಿಸಬೇಕಾಗಿದೆ. ನೀರಾವರಿಗೆ ಆದ್ಯತೆ ಕೊಡುವ ಬಗ್ಗೆ ಈ ಸರ್ಕಾರ ಹಿಂದೆ ಹೇಳಿರುವಂಥಾದ್ದು ಕೇವಲ ಮೊಸಳೆ ಕಣ್ಣೀರೆನ್ನತಕ್ಕ ಭಾವನೆ ಜನರಲ್ಲಿ ಬರುತ್ತಿದೆ. ಈ ಸರ್ಕಾರದಲ್ಲಿ ಯಾವುದೇ ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳಿಲ್ಲ. ಏಕೆಂದರೆ, 2000ದ ಇಸವಿಯೊಳಗೆ ಕೃಷ್ಣಾ ನೀರನ್ನು ಬಳಸಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಕೃಷ್ಣಾ ಬೇಸಿನ್‌ನ 2ನೇ ಹಂತ ಇನ್ನೂ

ಪ್ರಾರಂಭವಾಗಿಲ್ಲ. ಈ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಎಷ್ಟು ಹಣ ಬೇಕಾಗುತ್ತದೆ. ಸರ್ಕಾರ ಇನ್ನು 6 ವರ್ಷಗಳಲ್ಲಿ ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಪ್ರತಿವರ್ಷ ಎಷ್ಟು ಹಣವನ್ನು ಒದಗಿಸಬೇಕಾಗುತ್ತದೆಂಬುದನ್ನು ಯೋಚನೆ ಮಾಡಿಲ್ಲ. ನಾವು ನೀರಾವರಿಗಾಗಿ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆಂದು ಇವರು ಕೇವಲ ರಾಜಕೀಯವಾಗಿ ಹೇಳುತ್ತಿದ್ದಾರೆಯೇ ಹೊರತು ನಿರ್ದಿಷ್ಟವಾಗಿ ಯಾವುದೇ ಕಾರ್ಯಕ್ರಮವೂ ಅದಕ್ಕೆ ಸಂಬಂಧಪಟ್ಟಂತೆ ಸರ್ಕಾರದಲ್ಲಿಲ್ಲ. ಈ ವಿಚಾರವನ್ನು ಸರ್ಕಾರ ಮನವರಿಕೆ ಮಾಡಿಕೊಂಡಿಲ್ಲ. ರಾಷ್ಟ್ರದ ಸಂಪತ್ತನ್ನು ಉತ್ಪಾದನೆ ಮಾಡತಕ್ಕ ರೈತವರ್ಗದ ಬಗ್ಗೆ, ನೀರಾವರಿಯ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಮನವರಿಕೆ ಮಾಡಿಕೊಳ್ಳಬೇಕು. ಈ ದಿಸೆಯಲ್ಲಿ ಹೆಚ್ಚಿನ ಹಣವನ್ನೊದಗಿಸಲು ಸರ್ಕಾರ ವಿಫಲವಾಗಿದೆ. ಆದ್ದರಿಂದ ಈಗಲಾದರೂ ಸರ್ಕಾರ ಒಂದ ಬದಲಾವಣೆಯನ್ನು ತಂದು ನೀರಾವರಿಗೆ ಮೊದಲನೇ ಆದ್ಯತೆಯನ್ನು ಕೊಡಬೇಕು. ಅನುತ್ಪಾದಕ ಕಾರ್ಯಕ್ರಮಗಳೇನಾದರೂ ಇದ್ದರೆ ಅವುಗಳನ್ನು ಸರ್ಕಾರ ನಾಲ್ಕಾರು ವರ್ಷ ಕೈ ಬಿಟ್ಟರೆ ಏನೂ ಆಗುವುದಿಲ್ಲ.

ಯಾವುದನ್ನೂ ಸಾಧಿಸಲಿಕ್ಕೆ ಆಗುವುದಿಲ್ಲ. ಈ ಕಡೆ ನೀರಾವರಿಯನ್ನು ಮಾಡಲಿಕ್ಕೂ ಆಗುವುದಿಲ್ಲ ಅಥವಾ ಬೇರೆಯದನ್ನು ಮಾಡಲಿಕ್ಕೂ ಆಗುವುದಿಲ್ಲ. 1987ರಿಂದ 1990ನೇ ಇಸವಿಯವರೆಗೆ ಜನತಾ ಮನೆಗಳಿಗೆ ಕೊಡಬೇಕಾದ 42 ಕೋಟಿ ಹಣವನ್ನು ಸರ್ಕಾರ ಬಾಕಿ ಕೊಡಬೇಕು. ಬಡಜನರ ಕಾರ್ಯಕ್ರಮಗಳನ್ನೂ ಮಾಡಲಿಲ್ಲ, ನೀರಾವರಿ ಕಾರ್ಯಕ್ರಮಗಳನ್ನೂ ಪೂರ್ಣಗೊಳಿಸಲಿಲ್ಲ; ತಾಲ್ಲೂಕಿಗೆ ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರು. ಈಗ 500 ಮನೆಗಳಿಗೆ ಬಂದರು. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ತಾಲ್ಲೂಕಿಗೆ ಸಾವಿರ ಅಲ್ಲ ಐನೂರು ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ತಮ್ಮ ಉತ್ತರದಲ್ಲಿ ಹೇಳಬೇಕು. 1987ನೇ ಇಸವಿಯಿಂದ 1990ನೇ ಇಸವಿಯವರೆಗೆ ಜನತಾ ಮನೆಗಳನ್ನು ಏನು ಕಟ್ಟಿದ್ದಾರೆ ನನ್ನ ಒಂದು ತಾಲ್ಲೂಕಿನಲ್ಲಿ ಅಪೂರ್ಣವಾದಂಥ ಮನೆಗಳಿಗೆ ಕೊಡಬೇಕಾಗಿರತಕ್ಕಂಥಾದ್ದು 17 ಲಕ್ಷ 65 ಸಾವಿರ ರೂಪಾಯಿಗಳು. ಅಪೂರ್ಣವಾದ ಮನೆಗಳಿಗೆ ನೀವು ಇಡೀ ಕರ್ನಾಟಕದಲ್ಲಿ 42 ಕೋಟಿ ಹಣವನ್ನು ಕೊಡಲಿಕ್ಕೆ ಬಡಜನರ ಬಗ್ಗೆ ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಯಾವ ಕಾರ್ಯಕ್ರಮ ಇದೆ ಎಂದರೆ ಏನೂ ಇಲ್ಲ. ಹಿಂದುಳಿದವರ ಬಗ್ಗೆ, ಬಡಜನರ ಬಗ್ಗೆ ಇರತಕ್ಕಂಥದ್ದು ನಿಮ್ಮದು ಕೇವಲ ಜನರನ್ನು ಮೋಸ ಮಾಡತಕ್ಕಂಥ ಒಂದು ಕೃತ್ಯ ಎಂದು ಜನರಿಗೆ ಗೊತ್ತಾಗಿದೆ. ದಿನವಹಿ ಜನರು ಕಚೇರಿಗಳಿಗೆ ಓಡಾಡುತ್ತಿದ್ದಾರೆ. ಏನಾಯಿತು, ಹಣ ಬಂದಿದೆ ಎಂದು ಕೇಳುತ್ತಿರುತ್ತಾರೆ. 5ವರ್ಷಗಳಾಯಿತು, ನಮಗೆ 500 ಕೊಟ್ಟಿದ್ದಾರೆ. ಸಾವಿರ ಕೊಟ್ಟಿದ್ದಾರೆ. ಇನ್ನೂ ಹಣ ಪೂರ್ಣ ಕೊಟ್ಟಿಲ್ಲವೆಂದು ತಿರುಗುತ್ತಿದ್ದಾರೆ. ದಯವಿಟ್ಟು ಏನಾದರೂ ಮಾಡಿ ಈ ಬಡಜನರ ನೋವನ್ನು, ಅವರ ಗೋಳನ್ನು ಅರ್ಥ ಮಾಡಿಕೊಂಡು ಅವರಿಗೆ ಪೂರ್ಣ ಹಣವನ್ನು ಕೊಟ್ಟು ಅನಂತರ ನೀವು ಹೊಸ ಮನೆಗಳನ್ನು ಪ್ರಾರಂಭಿಸಿ, ಇನ್ನು ಎಲ್ಲೂ ಮನೆಗಳನ್ನು ಕಟ್ಟಲು ಪ್ರಾರಂಭಿಸಿಲ್ಲ, 1000 ಮನೆಗಳು ಹೋಯಿತು, 500 ಹೋಯಿತು, ಒಂದೂ ಇನ್ನೂ ಪ್ರಾರಂಭವಾಗಿಲ್ಲ. ಮೊದಲು ಹಿಂದೆ ಇದ್ದಂಥ ಅಪೂರ್ಣವಾದಂತ ಜನತಾ ಮನೆಗಳಿಗೆ ಹಣವನ್ನು ಒದಗಿಸುವಂಥ ವ್ಯವಸ್ಥೆ ಮಾಡಿರಿ, ಅನಂತರ ಹೊಸ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಅದರಲ್ಲಿ ಅರ್ಥವಿರುತ್ತದೆ. ಇಲ್ಲದೆ ಹೋದರೆ ಇದು ಅರ್ಥಹೀನವಾಗುತ್ತದೆ, ಜನತೆಯನ್ನು ತಪ್ಪು ದಾರಿಗೆ ಎಳೆಯುವಂಥ ಕೆಲಸವಾಗುತ್ತದೆ. ಜನರು ಇಲ್ಲಿಯವರೆಗೆ ನಂಬಿದ್ದಾರೆ, ಇನ್ನು ಮುಂದೆ ಈ ರೀತಿ ಹೇಳಿದರೆ ನಂಬಲಿಕ್ಕೆ ಸಾಧ್ಯವಾಗುವುದಿಲ್ಲ. ಕಾರ್ಯಕ್ರಮ ಹಾಕಿಕೊಂಡು ಆ ಕಾರ್ಯಕ್ರಮ ಕಾರ್ಯರೂಪಕ್ಕೆ ಬಂದರೆ ಮಾತ್ರ ಜನತೆ ವಿಶ್ವಾಸ ಇಡುತ್ತಾರೆಯೇ ವಿನಹ ಘೋಷಣೆ ಹೇಳುವುದರಿಂದ ಜನತೆ ನಂಬಲಿಕ್ಕೆ ಸಾಧ್ಯವಿಲ್ಲ.

ಇನ್ನು ತಾವೇ ಹೇಳಿದಂತೆ ನಮ್ಮ ಅಪ್ಪರ್ ತುಂಗಾ ಬಗ್ಗೆ ಒಂದು ಮಾತನ್ನು ಮಾನ್ಯ ಅಧ್ಯಕ್ಷರ

ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಸದನದಲ್ಲಿ, ಹಿಂದಿನ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು 'ತುಂಗ ಮೇಲ್ದಂಡೆ ಯೋಜನೆಯಿಂದ 2,34,000 ಏಕರೆಗೆ ನೀರನ್ನು ಒದಗಿಸಬಹುದಾಗಿದೆ. ಇದಕ್ಕೆ 280 ಕೋಟಿ ಹಣಬೇಕು, ಒಂದು ತಿಂಗಳೊಳಗಾಗಿ ಕೇಂದ್ರ ಸರ್ಕಾರದಿಂದ ಈ ಹಣವನ್ನು ಮಂಜೂರು ಮಾಡಿಸುತ್ತೇವೆಂದು ಈ ಸದನಕ್ಕೆ ಹೇಳಿದ್ದರು. ಇವತ್ತಿನವರೆಗೆ ಆ ಕೆಲಸ ಆಗಲಿಲ್ಲ. 6 ವರ್ಷದಲ್ಲಿ ಅದನ್ನು ಪೂರ್ಣಗೊಳಿಸಬೇಕು. ಅದಕ್ಕೆ ಈ ವರ್ಷ 1993–94ಕ್ಕೆ 50 ಕೋಟಿ ರೂಪಾಯಿ ಹಣವನ್ನು ಒದಗಿಸುತ್ತೇವೆಂದು ಹೇಳಿದ್ದರು. ಆ ಮಾತನ್ನೂ ಮಾನ್ಯ ಮುಖ್ಯಮಂತ್ರಿಗಳು ನಡೆಸಲಿಲ್ಲ. ಕೇವಲ 5 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಹಾಗಾದರೆ ಎರಡು ಸಾವಿರ ಇಸವಿಯೊಳಗೆ ಬಚಾವತ್ ಆಯೋಗದ ವರದಿ ಪ್ರಕಾರ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುತ್ತೇವೆಂದು ಘಂಟಾಘೋಷವಾಗಿ ಹೇಳುವಂಥ ಮಾತಿನಲ್ಲಿ ಯಾವ ಅರ್ಥವೂ ಇಲ್ಲ. ಇದು ಕೇವಲ ಘೋಷಣೆಯಾಗಿದೆಯೇ ವಿನಹ ಮನಸ್ಸಿನಿಂದ ಬರತಕ್ಕಂಥ ದೃಢವಾದ ಸಂಕಲ್ಪವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಿಲ್ಲ. ಈ ಸರ್ಕಾರ ಆ ಬಗ್ಗೆ ಯೋಚನೆಯನ್ನೂ ಮಾಡಿಲ್ಲ; ಯೋಜನೆಗಳನ್ನೂ ಮಂಜೂರು ಮಾಡಿಸಲಿಕ್ಕೆ ಪ್ರಯತ್ನ ಮಾಡಲಿಲ್ಲ. ಈ ನೀರಾವರಿ ಯೋಜನೆಗಳು ಕೇಂದ್ರ ಸರ್ಕಾರಕ್ಕೆ ಹೋಗಿ ಎಲ್ಲಾ ವಾಪಸ್ ಬರುತ್ತಿವೆ. ಕೇಂದ್ರ ಸರ್ಕಾರ ಒಂದು ಕಡೆ ತಮಿಳುನಾಡು, ಇನ್ನೊಂದು ಕಡೆ ಆಂಧ್ರ. ಕರ್ನಾಟಕದ ಸಮಗ್ರ ನೀರಾವರಿ ಯೋಜನೆಗಳಿಗೆ ಇವತ್ತು ಆತಂಕ ಮಾಡುತ್ತಿವೆ. ಅವರ ಎಲ್ಲಾ ಯೋಜನೆಗಳು ಮಂಜೂರಾಗುತ್ತಿವೆ, ಕಾರ್ಯ ರೂಪಕ್ಕೆ ಬರುತ್ತಿವೆ. ಆದರೆ ನಮ್ಮ ಯೋಜನೆಗಳು ಕೇಂದ್ರದಿಂದ ಮಂಜೂರಾಗಿ ಬರುತ್ತಿಲ್ಲ. ಹೀಗಿರುವಾಗ ನಮ್ಮ ಸರ್ಕಾರ ಏನು ಮಾಡುತ್ತಿದೆ? ಮೂರು ವರ್ಷಗಳಿಂದ ತುಂಗ ಮೇಲ್ದಂಡೆ ಯೋಜನೆ ಕೇಂದ್ರದಿಂದ ಮಂಜೂರಾಗಲಿಲ್ಲವೆಂದರೆ ನಮ್ಮ ಸರ್ಕಾರ ವಹಿಸಿರತಕ್ಕಂಥ ಪಾತ್ರವೇನು? ಇದರ ಮಂಜೂರಾತಿಯನ್ನು ಪಡೆಯಲಿಕ್ಕೆ ಇನ್ನೂ ಎಷ್ಟು ವರ್ಷಬೇಕು? ಎರಡು ಸಾವಿರ ಇಸವಿಗೆ ಯಾವ ರೀತಿ ಕಾರ್ಯರೂಪಕ್ಕೆ ತರುತ್ತಾರೆ? ಕಾವೇರಿ ಯೋಜನೆಯ ಬಗ್ಗೆ ಬಹಳ ನೊಂದ ಮನಸ್ಸಿನಿಂದ ಹೇಳುತ್ತೇನೆ. ಈ ಯೋಜನೆ ಕೇಂದ್ರದಿಂದ ಮಂಜೂರಾತಿಯನ್ನು ಪಡಲಿಲ್ಲ. ಆದರೆ ಹಣವನ್ನು ಕೊಟ್ಟಿದ್ದೇವೆ, ಕೆಲಸವನ್ನು ಪೂರೈಸುತ್ತೇವೆ. ಇನ್ನೂ ಪೂರ್ಣವಾಗಬೇಕೆಂಬುದು ಎಲ್ಲರ ಇಚ್ಛೆ. ಆ ರೀತಿ ನಮ್ಮ ಯೋಜನೆಗಳಿಗೆ ಎಂದರೆ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕಂಥ ಯೋಜನೆ ಇವತ್ತು ಸರ್ಕಾರದಿಂದ ಮಂಜೂರಾಗಬೇಕು. ಏತಕ್ಕೆ ಸರ್ಕಾರ ಹಣವನ್ನು ಒದಗಿಸಿಲ್ಲ. ಹಳೇ ನೋವಿನಿಂದ ಈ ಮಾತನ್ನು ಹೇಳುತ್ತೇನೆ. ಮಾತೆತ್ತಿದರೆ ಉತ್ತರ ಕರ್ನಾಟಕವೆಂದು ಹೇಳುತ್ತೀರಿ. ಹಳೇ ಮೈಸೂರು ಎಂದು ಹೇಳುತ್ತೀರಿ. ಅಂಕಿ ಸಂಖ್ಯೆಗಳ ಆಧಾರದ ಮೇಲೆ ನೀರಾವರಿಯಲ್ಲಿ ಆಗಿರತಕ್ಕಂಥ ಅನ್ಯಾಯ, ಲೋಕೋಪಯೋಗಿ ಇಲಾಖೆಯಲ್ಲಿ ಆಗಿರತಕ್ಕಂಥ ಅನ್ಯಾಯ ಸಮಗ್ರ ಅಭಿವೃದ್ಧಿಯಲ್ಲಿ ಉತ್ತರ ಕರ್ನಾಟಕಕ್ಕೆ ಆಗಿರತಕ್ಕಂಥ ಅನ್ಯಾಯವನ್ನು ನೋಡಿದರೆ ಇದು ಸ್ಪಷ್ಟವಾಗಿ ಅಂಕಿಸಂಖ್ಯೆಯಲ್ಲಿ ಕಾಣುತ್ತದೆ.

ಎರಡು ಸಾವಿರ ಇಸವಿಯೊಳಗೆ ಇವರು ನೀರಿನ ಬಳಕಗೆ ಮಾಡುವುದಕ್ಕೆ ಯಾವುದೇ ಯೋಜನೆ ಹಾಕಿಕೊಂಡಿಲ್ಲ. ನಮ್ಮ ಕೃಷ್ಣ ನೀರಾವರಿ ಯೋಜನೆಯನ್ನು ಮಂಜೂರು ಮಾಡುವುದಕ್ಕೆ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಆ ಬಗ್ಗೆ ಇವರ ಚಿಂತನೆ ಇಲ್ಲ, ಕಳಕಳಿ ಇಲ್ಲ. ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತೇನೆ, ಸರ್ಕಾರ ಮಲತಾಯಿ ಧೋರಣೆ ಬಿಟ್ಟು ಸ್ಪಷ್ಟವಾಗಿ ರಾಜ್ಯದ ಸಮಗ್ರ ಜನತೆಯ ಅಭಿವೃದ್ಧಿಗಾಗಿ ಹಣ ಇಡಬೇಕೇ ಹೊರತು ಮಲತಾಯಿ ಧೋರಣೆಯನ್ನು ಮುಂದುವರಿಸಿದರೆ ರಾಜ್ಯಕ್ಕೆ ಭಾರಿ ಗಂಡಾಂತರ ತಲೆದೋರುತ್ತದೆ. ಆದಕ್ಕಾಗಿ ಈಗಲಾದರೂ ಸರ್ವರಿಗೆ ಸಮಪಾಲು ಕೊಡತಕ್ಕ ಕೆಲಸ ಮಾಡಿ, ಹಳೇ ಮೈಸೂರು, ಹೊಸ ಮೈಸೂರು, ಈ ಭಾಗ, ಆ ಭಾಗ ಎಂದು ಹೇಳುವುದು

ಬಿಟ್ಟು ಎಲ್ಲೆಲ್ಲಿ ನೀರಾವರಿಯಲ್ಲಿ ಹಿಂದುಳಿದಿದೆ ಅಲ್ಲೆಲ್ಲಾ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಗಮನ ಕೊಡಬೇಕು. ರಾಜ್ಯಪಾಲರ ಭಾಷಣದಲ್ಲಿ ಅದು ಯಾವುದೂ ಕಾಣುತ್ತಿಲ್ಲ. ಮಲೆನಾಡು ಅಭಿವೃದ್ಧಿ ಎಂದು ತಂದರು. ಅದು ಎಲ್ಲಿದೆ ? ಮಲೆನಾಡು ಅಭಿವೃದ್ಧಿ ಇವತ್ತಿಗೂ ಅಸ್ತಿತ್ವದಲ್ಲಿ ಇಲ್ಲ. 1991–92ಕ್ಕೆ ಹತ್ತು ಕೋಟಿ, 1992–93ಕ್ಕೆ 35 ಕೋಟಿ ಎಂದರು. ಅದು ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ. ಇದನ್ನೆಲ್ಲಾ ನೋಡಿದರೆ ರಾಜ್ಯಪಾಲರ ಭಾಷಣ ಒಂದು ಕವಡೆ ಕಿಮ್ಮತ್ತು ಕೂಡಇಲ್ಲ. ರಾಜ್ಯಪಾಲರ ಭಾಷಣದ ಮೂಲಕ ಇಂತಹ ಮಾತುಗಳನ್ನು ಹೇಳಿಸಿ ನಾಡಿನ, ರಾಜ್ಯದ ಅಭಿವೃದ್ಧಿ ಎಂದು ಹೇಳಿ ಆ ದಿಸೆಯಲ್ಲಿ ಒಂದು ಹೆಜ್ಜೆಯೂ ಸಹ ಮುಂದಿಟ್ಟಿಲ್ಲ. ಮಲೆನಾಡು ಅಭಿವೃದ್ಧಿ ಮಂಡಲಿ ಇವೊತ್ತಿಗೂ ಅಸ್ತಿತ್ವಕ್ಕೆ ಬಂದಿಲ್ಲ, ಅದಕ್ಕೆ ಹಣವನ್ನು ಇಟ್ಟಿಲ್ಲ. ಈ ವರ್ಷದ ರಾಜ್ಯಪಾಲರ ಬಾಷಣದಲ್ಲಾಗಲಿ, ಅಯವ್ಯಯದಲ್ಲಾಗಲಿ ಒಂದು ಪೈಸೆಯನ್ನು ಅದಕ್ಕೆ ಇಟ್ಟಿಲ್ಲ. ರೀತಿ ರಾಜ್ಯಪಾಲರಿಂದ ಭಾಷಣ ಮಾಡಿಸಿ ಸರ್ಕಾರ ಜನರನ್ನು ವಂಚಿಸುವುದರ ಜೊತೆಗೆ ರಾಜ್ಯಪಾಲರಿಗೆ ಅವಹೇಳನ ಮಾಡುವ ಕೆಲಸ ಏನು ಮಾಡುತ್ತಿದೆ ಅದನ್ನು ನಿಲ್ಲಿಸಬೇಕು. ಮಲೆನಾಡು ಅಭಿವೃದ್ಧಿಯನ್ನು ತೀವ್ರವಾಗಿ ಪ್ರಾರಂಭಿಸಿ ಅದಕ್ಕೆ ಅವಶ್ಯಕವಿರುವ ಸುಮಾರು 50 ಕೋಟಿ ರೂಪಾಯಿಗಳನ್ನಾದರೂ ಈ ವರ್ಷ ಒದಗಿಸಲಿಕ್ಕೆ ಮರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ಕೋಮು ಸೌಹಾರ್ದತೆ ಬಗ್ಗೆ ಹೇಳುವುದಾದರೆ, ಅದನ್ನು ನಾವು ನೀವು ಎಲ್ಲರೂ ಒಪ್ಪಿದ್ದೇವೆ. ಪ್ರಜಾಪ್ರಭುತ್ವದಲ್ಲಿ, ಭಾರತ ದೇಶದಲ್ಲಿ ಜಾತ್ಯಾತೀತವಾಗಿರಬೇಕು ಪ್ರಜಾಸತ್ತೆ ಬಲವಾಗಿರಬೇಕೆಂದು ಹೇಳುತ್ತಿದ್ದೇವೆ. ಇದನ್ನು ವಿರೋಧ ಮಾಡಿದವರನ್ನು ಖಂಡಿಸುತ್ತಿದ್ದೇವೆ, ಖಂಡಿಸಲೇಬೇಕು. ಆದರೆ ಏತಕ್ಕೆ ಈ ರೀತಿ ನಡೆದಿದೆ ? ಕೋಮು ಗಲಭೆ ಏರುತ್ತಿದೆ ಏತಕ್ಕೆ ? ಜನತೆಯ ಮನಸ್ಸಿನಲ್ಲಿ ಏನು ಭಾವನೆ ಇದೆ, ಇದಕ್ಕೆ ಪ್ರೋತ್ಸಾಹ ಕೊಡುವವರು ಯಾರು ? ಮೇಲ್ನೋಟಕ್ಕೆ ಇಲ್ಲಿ ಕುಳಿತಿರುವ ಬಿಜೆಪಿ ಸ್ನೇಹಿತರು ಎಂಬುದು ಜನತೆಯ ಮನಸ್ಸಿನಲ್ಲಿ ಅಡಗಿದೆ, ಅಂತರಾಳದಲ್ಲಿ ಅಡಗಿದೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳು ಮಾಡಿದಂಥ ತಾರತಮ್ಯದಿಂದ ಜನರು ಆ ಕಡೆ ಒಲಿಯುತ್ತಿದ್ದಾರೆ. ಅದನ್ನು ಮೊದಲು ಸರಿಪಡಿಸಬೇಕು. ಇದಕ್ಕೆ ನಿರ್ದಿಷ್ಟವಾದ ಉದಾಹರಣೆ ಹೇಳುತ್ತೇನೆ, ನಿಷ್ಠೂರವಾಗಿ ಹೇಳಬೇಕಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ನೋಡಿ, ಈ ರಾಜ್ಯದಲ್ಲಿರತಕ್ಕ ಹಿಂದೂ ದೇವಾಲಯಗಳು ಎಷ್ಟು, ಅವರಿಗೆ ಒದಗಿಸತಕ್ಕ ಹಣ ಎಷ್ಟು ಅವುಗಳ ಜೀರ್ಣೋದ್ಧಾರಕ್ಕೆ ಮತ್ತು ಹೊಸ ದೇವಸ್ಥಾನಗಳನ್ನು ಕಟ್ಟಲಿಕ್ಕೆ ಕೊಟ್ಟಿರತಕ್ಕ ಹಣ ಎಷ್ಟು ಮತ್ತು ಬೇರೆ ದೇವಸ್ಥಾನಗಳಿಗೆ ಕೊಟ್ಟಿರತಕ್ಕದ್ದು ಎಷ್ಟು, ಅವುಗಳ ಜೀರ್ಣೋದ್ಧಾರಕ್ಕೆ ಒದಗಿಸಿರತಕ್ಕ ಹಣ ಎಷ್ಟು ?

ಅಲ್ಪಸಂಖ್ಯಾತರು ಯಾರೂ ಈ ಮಾತು ಹೇಳಲಿಲ್ಲ. ಅವರಿಗೆ ಕಡಿಮೆ ಕೊಡಿ, ಹಿಂದೂಗಳ ದೇವಸ್ಥಾನಗಳಿಗೆ ಕಡಿಮೆ ಕೊಡಿ ಎಂದು ಯಾರೂ ಹೇಳಲಿಲ್ಲ. ಆದರೆ ಈ ಸರ್ಕಾರ ಈ ರೀತಿ ಮಾಡುತ್ತಿದೆ. ಎಂಡೋಮೆಂಟ್ ಕಮಿಷನ್, ಚಾರಿಟಿ ಕಮಿಷನ್ ಅಧೀನದಲ್ಲಿ ಬರತಕ್ಕವುಗಳಿಗೆ ಒಂದು ಕೋಟಿ ರೂಪಾಯಿ ಹಣವನ್ನೂ ಸಹ ಒದಗಿಸಿಲ್ಲ. ಅದೇ ಅಲ್ಪ ಸಂಖ್ಯಾತರ ಸಂಘ ಸಂಸ್ಥೆಗಳಿಗೆ, ಮಸೀದಿಗಳಿಗೆ ಅವುಗಳ ಅಭಿವೃದ್ಧಿ ಮಾಡುವುದಕ್ಕೆ ಎಂದು ರಾಜ್ಯಪಾಲರ ಭಾಷಣದಲ್ಲಿ ಎತ್ತಿ ತೋರಿಸುತ್ತಿದ್ದಾರೆ. ಇದು ನಡೆಯುತ್ತಿದೆ. ಒಂದು ಕಡೆ ಸೌಹಾರ್ದತೆ ಹೇಳುವ ಸರ್ಕಾರ ಇನ್ನೊಂದು ಕಡೆ ಜಾತಿ ಜಾತಿಗಳನ್ನು ಎತ್ತಿ ಕಟ್ಟುವುದನ್ನು ಕಾಣುತ್ತಿದ್ದೇವೆ. ಇದನ್ನ ಜನತೆ ಮಾಡುತ್ತಿಲ್ಲ, ಸರ್ಕಾರ ಮಾಡುತ್ತಿದೆ. ಇದನ್ನು ಸರ್ಕಾರ ತಿದ್ದಿಕೊಳ್ಳಬೇಕು. ಹಿಂದುಗಳಿಗೆ ಹಣ ಕೊಡಬೇಡಿ ಎಂದು ಯಾವ ಅಲ್ಪ ಸಂಖ್ಯಾತರೂ ಹೇಳುತ್ತಿಲ್ಲ. ಆದರೆ ನಿಮ್ಮ ಮನಸ್ಸಿನಲ್ಲಿ ಏತಕ್ಕೆ ಈ ಸಂಶಯ ? ಸರ್ವರನ್ನೂ ಸಮಾನವಾಗಿ ಕಾಣಬೇಕೆಂಬ ದೃಷ್ಟಿ ಸರ್ಕಾರಕ್ಕೆ ಇಲ್ಲ. ಸರ್ಕಾರ ತಮ್ಮ ದಾರಿಗೆ ಎಳೆಯುತ್ತಿದೆ. ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಇನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳು ಹೇಗಿದೆ

ಎಂದರೆ, ಆಡಳಿತಾಧಿಕಾರಿಗಳ ಕೈಗೆ ಸಿಕ್ಕಿ ಹದಗೆಟ್ಟಿವೆ. ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಸರ್ಕಾರ ಚುನಾವಣೆ ಮಾಡುತ್ತದೆಂದು ಹೇಳುವುದು ನಿರ್ದಿಷ್ಟವಾಗಿಲ್ಲ. ಈಗಲಾದರೂ ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುತ್ತದೆಯೇ ? ನೌಕರಶಾಹಿಯನ್ನು ಈ ರಾಜ್ಯದಲ್ಲಿ ಸೃಷ್ಟಿಸಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳನ್ನು ಅಧಿಕಾರಿಗಳ ಕೈಗೆ ಕೊಟ್ಟದ್ದು ಖಂಡನೀಯವಾದುದು. ಚುನಾವಣೆಗೆ ನಿರ್ದಿಷ್ಟವಾದ ದಿನಾಂಕವನ್ನು ಕೊಟ್ಟಿಲ್ಲ. ಇದೂ ಕೂಡ ಸಂಶಯಾಸ್ಪದವಾಗಿದೆ. ತಿದ್ದುಪಡಿಯನ್ನು ತಂದು ಚುನಾವಣೆ ಮಾಡಿ, ಆಮೇಲೆ ಅಧಿಕಾರವನ್ನು ಜನರಿಗೆ ಕೊಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ.

1.20 ಪಿ.ಎಂ.

ತಿದ್ದುಪಡಿ ವಿಳಂಬವಾಗುತ್ತಿದೆ. ಕೂಡಲೇ ಚುನಾವಣೆಯನ್ನು ಮಾಡಬೇಕು. ಈ ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತುಗಳನ್ನು ಜನತೆಯ ಪ್ರತಿನಿಧಿಗಳ ಕೈಗೆ ಕೊಡಬೇಕು ಎಂದು ಹೇಳಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ):– ಮಾನ್ಯ ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಕಳೆದ 1989ನೇ ಇಸವಿಯಲ್ಲಿ ಚುನಾವಣೆ ನಡೆದ ಮೇಲೆ ಕಾಂಗ್ರೆಸ್ ಪಕ್ಷ ಬಹುಮತದಲ್ಲಿ ಆರಿಸಲ್ಪಟ್ಟು, ಆ ಪಕ್ಷದ – ನಾಟಕರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದರು. ತದನಂತರ ಐದು ಸಾರಿ ರಾಜ್ಯಪಾಲರ ಭಾಷಣ ಮಾಡಿಸುವುದರ ಮುಖಾಂತರ ಸರ್ಕಾರದ ಮುಖ್ಯಸ್ಥರು ತಮ್ಮ ಸರ್ಕಾರದ ಕಾರ್ಯನೀತಿಯನ್ನು ಸೂಕ್ಷ್ಮವಾಗಿ ತಿಳಿಸಲಿಕ್ಕೆ ಪ್ರಯತ್ನ ಮಾಡಿದಾರೆ. ಈ ಸಾರಿ ರಾಜ್ಯಪಾಲರ ಭಾಷಣದಲ್ಲಿ ಎರಡು ಪ್ರಮುಖವಾದಂತಹ ವಿಷಯಗಳನ್ನು ನಾವು ಕಂಡುಕೊಳ್ಳಬೇಕಾಗಿದೆ. ಮೊದಲನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ, ಹಿಂದಿನ – ವರ್ಷ ಸರ್ಕಾರ ಏನು ಕೆಲಸ ಮಾಡಿತು, ಅದರ ಕಾರ್ಯಕಲಾಪಗಳನ್ನು ಅಥವಾ ಕಾರ್ಯಕ್ರಮಗಳನ್ನು ವಿಶ್ಲೇಷಣೆ ಮಾಡುವುದನ್ನು ಕೈಬಿಟ್ಟಿದೆ ಮತ್ತು ಮುಂದಿನ ವರ್ಷದಲ್ಲಿ ತನ್ನದೇ ಆದಂತಹ ಕಾರ್ಯಕ್ರಮಗಳನ್ನು, ಹೊಸ ಕಾರ್ಯನೀತಿಯನ್ನು ಇಲ್ಲಿ ಹೇಳಿರುವುದನ್ನು ಸಹ ನಾವು ಗಮನಿಸಬೇಕಾಗಿದ. 1989–90–91–92ರ ಸಾಲಿಗೆ ಸಂಬಂಧಪಟ್ಟಂತೆ ರಾಜ್ಯದ ವಿಧಾನ ಮಂಡಲದಲ್ಲಿ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ, ಅವೆಲ್ಲವನ್ನೂ ಹೇಳುವುದಕ್ಕೆ ನನಗೆ ಸಾಕಾದಷ್ಟು ಸಮಯವಿಲ್ಲ: ಆದರೆ 1992ರಲ್ಲಿ ಏನು ವಿಚಾರಗಳನ್ನು ಹೇಳಿದ್ದಾರೆ ಅದನ್ನು ಪರಿಶೀಲನೆ ಮಾಡಿದಾಗ, ಆಗ ಹೇಳಿದಂತಹ ಮಾತುಗಳನ್ನೇ ಪುನಃ 1993ರಲ್ಲಿ ಈಗಿನ ರಾಜ್ಯಪಾಲರ ಮುಖಾಂತರ ಈ ಸರ್ಕಾರ ಹೇಳಿಸಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮೊದಲನೆಯದಾಗಿ ಕಳೆದ ಮೂರುವರೆ – ನಾಲ್ಕು ವರ್ಷಗಳಲ್ಲಿ ಅಂದರೆ 1989ನೇ ಇಸವಿಯಿಂದ ಸರ್ಕಾರ ಏನು ಬಂತು ಅದು ಒಂದೇ ಪಕ್ಷದ ಸರ್ಕಾರ, ಅದನ್ನು ಮಾನ್ಯ ಮುಖ್ಯಮಂತ್ರಿಗಳು ಅಲ್ಲಗಳೆಯುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಒಂದು ವಿಚಾರವನ್ನು ಹೇಳುತ್ತೇನೆ. ಇಲ್ಲಿ ನಾನು ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಂದು ವಿಚಾರವನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. 'ಹೊಸ ಆಡಳಿತಾತ್ಮಕ ಸಂಸ್ಕೃತಿಯನ್ನು ಆರಂಭಗೊಳಿಸಿದೆ' ಎಂಬ ಮಾತನ್ನು ಹೇಳುತ್ತಾರೆ. ಇದು ಯಾರಿಗೆ ಹೊಸದು. ಹಿಂದಿನ ಸರ್ಕಾರಗಳು ಏನು ಇದ್ದವು, ಕಳೆದ ಮೂರು ವರ್ಷಗಳಲ್ಲಿ ಅವರ ಪಕ್ಷದ ಸರ್ಕಾರ ಏನು ಇತ್ತು, ಆ ಸರ್ಕಾರದ ಆಡಳಿತದ ಸಂಸ್ಕೃತಿಗೆ ಇದು ಏನಾದರೂ ಹೊಸದು ಆಗಿದೆಯೇ ? ಹಾಗಿದ್ದರೆ ಹೇಗೆ ಬೇರೆಯಾಗಿದೆ ? ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟತೆಯನ್ನು

ಕೊಡಬೇಕಾಗುತ್ತದೆ. ಹೊಸ ಆಡಳಿತಾತ್ಮಕ ಸಂಸ್ಕೃತಿ ಎಂದು ಏನು ಹೇಳಿದ್ದಾರೆ ಅದು ಯಾರಿಗೆ ಭಿನ್ನವಾದದ್ದು, ಹೇಗೆ ಭಿನ್ನವಾದದ್ದು ಎಂದು ಅವರು ಹೇಳಬೇಕಾಗುತ್ತದೆ. ಅಲ್ಲದೆ ಅವರು ಪ್ರಸ್ತಾಪ ಮಾಡಿದಂತಹ ಎಲ್ಲಾ ವಿಚಾರಗಳನ್ನು ನಾನು ಪ್ರಸ್ತಾಪ ಮಾಡದಿದ್ದರೂ, ಬಹಳ ಮುಖ್ಯವಾಗಿ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ, ಅವರು ಕೋಮು ಘರ್ಷಣೆ ಬಗ್ಗೆ ಮಾತನಾಡಿದ್ದಾರೆ. ಅದರಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಈ ಸರ್ಕಾರ ಎಷ್ಟು ಅಹಂಭಾವದಿಂದ ಕೂಡಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಯಾವ ಉದಾಹರಣೆ ಬೇಕಾಗಿಲ್ಲ. "ಕೋಮು ಹಿಂಸಾಚಾರವನ್ನು ನಿಯಂತ್ರಿಸಲು ನನ್ನ ಸರ್ಕಾರ ತಕ್ಷಣ ಕ್ರಮ ಕೈಗೊಂಡಿತು, ನನ್ನ ಸರ್ಕಾರ ಕೈಗೊಂಡ ಕಟ್ಟುನಿಟ್ಟಾದ ಕ್ರಮದಿಂದಲೇ ಹಿಂಸಾಚಾರ ಮತ್ತಷ್ಟು ಅರಳದಂತೆ ನಿಯಂತ್ರಿಸಲು ಸಾಧ್ಯವಾಯಿತು" ಎಂದು ಹೇಳಿದ್ದಾರೆ. ಈ ದೇಶದ ಬೇರೆ ಯಾವುದೇ ರಾಜಕೀಯ ಪಕ್ಷಗಳಾಗಲಿ, ಅಥವಾ ವಿರೋಧ ಪಕ್ಷಗಳ ಯಾವುದೇ ಶಾಸಕರಾಗಿ, ಯಾವುದೇ ಸಂಘ ಸಂಸ್ಥೆಗಳಾಗಲಿ, ಇದಕ್ಕೆ ಸಹಾಯ ಮಾಡಲಿಲ್ಲವೇ ? ಅವರು ಮಾಡಿದಂತಹ ಸಹಾಯವನ್ನು, ತೋರಿದಂತಹ ಉದಾರ ನೀತಿಯನ್ನು, ನಮ್ಮ ಸಹಕಾರವನ್ನು ನೆನೆಯುವಂತಹ ಒಂದು ಸೌಜನ್ಯ ಸಹ ಈ ಸರ್ಕಾರಕ್ಕೆ ಇಲ್ಲ ಎಂದರೆ ಇದಕ್ಕಿಂತ ಅಹಂಭಾವದಿಂದ ಕೂಡಿದಂತಹ ಮಾತನ್ನು ನಾನು ರಾಜ್ಯಪಾಲರ ಭಾಷಣದಲ್ಲಿ ನೋಡಲಿಲ್ಲ.

ಮಾನ್ಯ ಅಧ್ಯಕ್ಷರೇ, ನಿಜ ಕೋಮು ಸೌಹಾರ್ದ ಸ್ಥಾಪನೆ ಮಾಡುವುದಕ್ಕೆ, ಗಲಭೆ ಪೀಡಿತ ಪ್ರದೇಶದಲ್ಲಿ ನೊಂದಿರುವವರಿಗೆ ಸಹಾಯ ಮಾಡುವುದಕ್ಕೆ, ಗಲಭೆ ಇನ್ನಿತರ ಕಡೆ ವದಂತಿಗಳು ಹರಡದಂತೆ ನೋಡಿಕೊಳ್ಳುವುದಕ್ಕೆ ಕಾಂಗ್ರೆಸ್ ಸರ್ಕಾರ ಬಿಟ್ಟು ಬೇರೆ ಯಾರೂ ಆಸಕ್ತಿ ವಹಿಸಲಿಲ್ಲವೇ ? ಮಾಡಿದ್ದರೆ ಇಂತಹ ಅಹಂಭಾವದ ಮಾತು ಏಕೆ ಬರುತ್ತದೆ. ಕನಿಷ್ಠ ಸೌಜನ್ಯಕ್ಕಾದರೂ ಸಹ ಎಲ್ಲ ರಾಜಕೀಯ ಪಕ್ಷಗಳು ಯಾರೂ ಸಹಾಯ ಮಾಡಿದ್ದಾರೆ ಅಥವಾ ಕೆಲವು ರಾಜಕೀಯ ಪಕ್ಷಗಳು, ಕೆಲವು ಶಾಸಕರು ಅಥವಾ ಕೆಲವು ಸಂಘ ಸಂಸ್ಥೆಗಳಾದರೂ ಸಹಾಯ ಮಾಡಿರೆ ಎಂಬುದನ್ನು ಹೇಳಬೇಕಾಗುತ್ತದೆ. ಈ ಮಾತನ್ನು ಹೇಳದಿರುವುದು ನಿಜವಾಗಿಯೂ ದುಃಖದ ಸಂಗತಿ ಎಂದು ಹೇಳುತ್ತೇನೆ. ಇನ್ನು ನೆರೆ ಹಾವಳಿ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಪ್ರಕೃತಿ ವಿಕೋಪ ನಿಧಿಯಿಂದ 27 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದುದು 75 ಲಕ್ಷವೋ ಏನೋ ಎಂದು ಹೇಳಿದ್ದಾರೆ ಮತ್ತು ಮುಂಗಡ ತೆರಿಗೆಯಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ ಎಂದೂ, ಪ್ರಧಾನ ಮಂತ್ರಿಗಳ ಸೂಚನೆ ಮೇರೆಗೆ ಭಾರತ ಸರ್ಕಾರವು ಈ ಉದ್ದೇಶಕ್ಕಾಗಿ, ಗಣನೀಯವಾಗಿ, ಮಾರ್ಗೋಪಾಯ ಮುಂಗಡ ಹಣವನ್ನು ಬಿಡುಗಡೆ ಮಾಡಿದೆ ಎಂದು ಹೇಳಿದ್ದಾರೆ. ಇದು ಸಹಾಯಧನವೇ ? 30 ಕೋಟಿ ರೂಪಾಯಿಗಳನ್ನು ಮಾತ್ರ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಇವರು ನಮಗೆ 300 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಬೇಕಾಗಿದೆ. 78 ಕೋಟಿ ರೂಪಾಯಿಗಿಂತಲೂ ಹೆಚ್ಚು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಕೇಂದ್ರ ಸರ್ಕಾರದ ಸಹಾಯ ಮಾತ್ರ ಕೇವಲ 30 ಕೋಟಿ ರೂಪಾಯಿಗಳು. ಅದೂ ಸಹ ಕೇಂದ್ರ ಸರ್ಕಾರದ ತೆರಿಗೆ ಪಾಲಿನ ಮುಂಗಡವೇ ಹೊರತು ಯಾವುದೇ ಸಹಾಯ ಧನ ಅಲ್ಲ. ಇದಕ್ಕೆ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳನ್ನು ಹೊಗಳಿದ್ದಾರೆ, ಹೊಗಳಲಿ. ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ವಸ್ತುಸ್ಥಿತಿ ಏನೆಂದರೆ, ಬೇರೆ ರಾಜ್ಯಗಳಿಗೆ ಏನು ಸಹಾಯ ಮಾಡಿದ್ದಾರೆ ಅಥವಾ ಅನುದಾನ ಕೊಟ್ಟಿದ್ದಾರೆ ಅಂತಹ ಅನುದಾನವಾಗಲೀ, ಸಹಾಯಧನವಾಗಲೀ ನಮ್ಮ ರಾಜ್ಯ ಸರ್ಕಾರಕ್ಕೆ ಮಾಡಿಲ್ಲ, ಆದರೂ ಕೂಡ ನಮ್ಮ ರಾಜ್ಯ ಸರ್ಕಾರ ಅವರಿಗೆ ಋಣಿಯಾಗಿದೆ ಎಂದು ಹೇಳಿದ್ದಾರೆ. ಅವರು ಋಣಿಯಾಗಿರಲಿ. ತದನಂತರ ಇವರು ಒಂದು ಹೊಸ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಏನು ಕಾರ್ಯಕ್ರಮ

ಎಂದರೆ, ನೂರು ದಿವಸಗಳ ಕಾರ್ಯಕ್ರಮ. ನಮ್ಮ ಹಿರಿಯ ಸ್ನೇಹಿತರಾದ ಮಾನ್ಯ ಆಚಾರ್ ಅವರು ಹೇಳುತ್ತಿದ್ದರು. ಅವರು ಮುಖ್ಯಮಂತ್ರಿಗಳನ್ನು ಬಿಲ್ ಕ್ಲಿಂಟನ್ ಅವರಿಗೆ ಹೋಲಿಸಿದರು. ಇವರ ಕಾರ್ಯಕ್ರಮಗಳನ್ನು ಅವರ ಕಾರ್ಯಕ್ರಮಗಳಿಗೆ ಹೋಲಿಸಿದರು. ಅದರಿಂದ ಅವರಿಗೆ ತೃಪ್ತಿಯಾಗುವುದಾದರೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಇಂತಹ ಮಾತುಗಳಿಂದ ವಸ್ತುಸ್ಥಿತಿಯನ್ನು ಮುಚ್ಚಬಾರದು. ಇವರ 100 ದಿನಗಳ ಕಾರ್ಯಕ್ರಮದಲ್ಲಿ ಏನು ಮಾಡಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ಇನ್ನು 100 ದಿನಗಳಲ್ಲಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಕೊಡುತ್ತೇವೆ.

13 ಸಾವಿರ ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಲ್ಲಿ ಇಲ್ಲ. ಆ 13 ಸಾವಿರ ಜನರನ್ನು ಏನಾದರೂ ನೇಮಕ ಮಾಡಿಕೊಳ್ಳುತ್ತಾರೆಯೇ. ಇಲ್ಲ. ಅದಕ್ಕಿಂತಲೂ ಹೆಚ್ಚಾಗಿ ಇನ್ನೂ ಕೆಲವು ಮಾತುಗಳನ್ನು ಹೇಳಿದ್ದಾರೆ. 3 ತಿಂಗಳ ಕಾರ್ಯಕ್ರಮದಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ 90 ಕಿ.ಮೀ. ರಸ್ತೆಯನ್ನು ಅಸ್ಫಾಲ್ಟ್ ಮಾಡುತ್ತಾರೆ. ಎಂದರೆ ಒಂದು ಜಿಲ್ಲೆಗೆ ಎಷ್ಟು ಕಿ.ಮೀ. ಆಗುತ್ತದೆ ಸ್ವಾಮಿ ? ನಾಲ್ಕೈದು ಕಿ.ಮೀ.ಗಳು ಆಗುತ್ತದೆ. ಇದು ಒಂದು ಸಾಧನೆಯೇ ?

ಶ್ರೀ ಸಿ. ಬೈರೇಗೌಡ:– ಜಿಲ್ಲೆಗೆ ನಾಲ್ಕೂ ಮುಕ್ಕಾಲು ಕಿ.ಮೀ. ಬರುತ್ತದೆ.

ಶ್ರೀ ಹೆಚ್. ಏಕಾಂತಯ್ಯ:– ಬೇರೆ ರೀತಿಯಲ್ಲಿ ತಯಾರಿಸುವುದು. ಅದು 85 ಕಿ.ಮೀಟರ್‌ಗಳು. ಮತ್ತೆ 25 ಸೇತುವೆಗಳು. ಸ್ವಾಮಿ, ಇದು ಇವರ ಒಂದು ಕಾರ್ಯಕ್ರಮದ ಒಂದು ಚಿತ್ರ. ಈ ರೀತಿಯಾಗಿ ಇನ್ನೂ ಹೇಳಿದ್ದಾರೆ. ಆ ಎಲ್ಲಾ ವಿಚಾರಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ನೂರು ದಿವಸಗಳ ಕಾರ್ಯಕ್ರಮದ ಅಡಿಯಲ್ಲಿ ಏನು ಗುರಿಯನ್ನು ಇಟ್ಟುಕೊಂಡಿದ್ದಾರೆ ಈ ಗುರಿ ಏನು ಹೊಸದಲ್ಲ. 1991–92ನೇ ಸಾಲಿನಲ್ಲಿ ಏನು ಗುರಿಯನ್ನು ಇಟ್ಟುಕೊಂಡಿದ್ದರು, ಅದನ್ನು ಸಾಧಿಸುವುದಕ್ಕೆ ಆಗಿಲ್ಲ, ಆ ಸಾಧನೆಯ ಪೈಕಿ ಕೆಲವು ಗುರಿಗಳನ್ನು ಮಾತ್ರ ಈಗ ಹಾಕಿಕೊಂಡಿದ್ದಾರೆ. ಈ ಮಾತನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಮಾನ್ಯ ಆಚಾರ್ ಅವರು ಮಾನ್ಯ ಮುಖ್ಯಮಂತ್ರಿಗಳನ್ನು ಬಿಲ್ ಕ್ಲಿಂಟನ್ ಅವರಿಗೆ ಹೋಲಿಸುವುದಾದರೆ ಅವರ ಕಾರ್ಯಕ್ರಮಗಳಿಗೆ ಹೋಲಿಸುವುದಾದರೆ ಇದು ಎಷ್ಟರಮಟ್ಟಿಗೆ ಸರಿ ಎನ್ನುವುದನ್ನು ಅವರ ವಿವೇಚನೆಗೆ ಬಿಡುತ್ತೇನೆ. ಇವತ್ತಿನ ದಿವಸ 100 ದಿವಸಗಳ ಕಾರ್ಯಕ್ರಮ ಏನಿದೆ, ಇದರಲ್ಲಿ ಹಾಕಿಕೊಂಡಿರತಕ್ಕ ಗುರಿಗಳನ್ನು ಅವರು ಮುಟ್ಟುವುದಕ್ಕೆ ಸಾಧ್ಯವಿಲ್ಲ. ಇದು ನಿಜಕ್ಕೂ ಅಪಹಾಸ್ಯಕ್ಕೆ ಈಡಾಗತಕ್ಕ ಕಾರ್ಯಕ್ರಮವಾಗಿದೆ ಎನ್ನುವ ಒಂದು ಚಿತ್ರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಈವೊಂದು ಆಡಳಿತಾತ್ಮಕ ಹೊಸ ಸಂಸ್ಕೃತಿ ಏನಿದೆ ಅದರ ಬಗ್ಗೆ ಕೆಲವು ವಿಚಾರಗಳನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ರಾಜ್ಯ ಸ್ಥಾಪನೆಯಾದ ಮೇಲೆ ಅನೇಕ ಮಂತ್ರಿಮಂಡಲಗಳು ಬಂದು ಹೋಗಿವೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಮ್ಮದು ನಿಜವಾಗಲೂ ಬಹಳ ದಕ್ಷತೆಯಿಂದ ಕೆಲಸ ಮಾಡುವ ದೃಷ್ಟಿಯಿಂದ ಈ ಒಂದು ಮಂತ್ರಿಮಂಡಲವನ್ನು ರಚನೆ ಮಾಡಿದ್ದೇನೆ. ಈ ಮಂತ್ರಿಮಂಡಲ ಬಹಳ ಜನರಿಂದ ಕೂಡಿದ್ದಲ್ಲ, ಇದಕ್ಕಿಂತಲೂ ದೊಡ್ಡ ಮಂತ್ರಿಮಂಡಲ ಇತ್ತು ಎಂಬ ಮಾತನ್ನು ಅವರು ಹೇಳಿದರು. 1947ನೇ ಇಸವಿಯಿಂದ ಇಲ್ಲಿಯವರೆಗೆ ಇದ್ದಂತಹ ಮಂತ್ರಿಮಂಡಲಗಳ ಪಟ್ಟಿಯನ್ನು ನಾನು ನೋಡಿದೆ. ಯಾವತ್ತೂ ಸಹ 35 ಜನರಿಗಿಂತ ಹೆಚ್ಚು ಮಂತ್ರಿಗಳು ಇದ್ದಂತಹ ಮಂತ್ರಿಮಂಡಲ ಇರಲಿಲ್ಲ. ಶ್ರೀಮಾನ್ ದೇವರಾಜ ಅರಸ್‌ರವರ ಕಾಲದಲ್ಲಿ ಹಾಗೂ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಕೆಲವು ದಿವಸ ಮಾತ್ರ 35 ಜನರಿಂದ ಕೂಡಿದ್ದ ಮಂತ್ರಿಮಂಡಲ ಇದ್ದಂತಹ ಸರ್ಕಾರ ಇತ್ತು. ಆದರೆ ಇವರು 41 ಜನರ ಮಂತ್ರಿಮಂಡಲವನ್ನು

ರಚನೆ ಮಾಡಿದರು. ಆದರ ಮುಖ್ಯವಾದ ಉದ್ದೇಶವೇನೆಂದರೆ, ಯುದ್ಧದೋಪಾದಿಯಲ್ಲಿ ನಾವು ಕೆಲಸ ಮಾಡಬೇಕಾಗಿದೆ, ಇದುವರೆಗೆ ದೇಶ ಅಭಿವೃದ್ಧಿಯಾಗಲಿ, ಆ ಅಭಿವೃದ್ಧಿಯನ್ನು ಯುದ್ಧದೋಪಾದಿಯಲ್ಲಿ ಸಾಧನೆ ಮಾಡಲಿಕ್ಕೆ ಈವೊಂದು ಮಂತ್ರಿಮಂಡಲ ಅಗತ್ಯವಿದೆಯೆಂದು ಸಮರ್ಥನೆ ಮಾಡಿಕೊಂಡರು. ನಿಜವಾಗಿಯೂ ಈ ನೂರು ದಿವಸಗಳ ಅವಧಿಯಲ್ಲಿ ಈ ಒಂದು ಸಮರ್ಥನೆಗೆ ಏನಾದರೂ ಉದಾಹರಣೆಗಳು ಸಿಕ್ಕಿವೆಯೇ ? ದಕ್ಷತೆಯಿಂದ ಕೂಡಿದಂತಹ, ಭ್ರಷ್ಟಾಚಾರರಹಿತವಾದಂತಹ ಆಡಳಿತವನ್ನು ಕೊಡುವುದರ ಮುಖಾಂತರ ಹೊಸ ಒಂದು ವ್ಯವಸ್ಥೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇನೆ, ಹೊಸ ಆಡಳಿತಾತ್ಮಕ ಸಂಸ್ಕೃತಿಯನ್ನು ತರಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದಂತಹ ಮುಖ್ಯಮಂತ್ರಿಗಳ ಮಾತು ನಮ್ಮ ಊರಿನಲ್ಲಿ ಹೇಳುತ್ತಾರೆ, ಹೊಸದಾಗಿ ಬಂದ 'ಅಗಸ ಗೋಣಿಯನ್ನು ಎತ್ತಿ ಎತ್ತಿ ಒಗೆದ' ಎನ್ನುವ ಹಾಗೆ ಆಗಿದೆ. ವೀರಾವೇಶದಿಂದ ಮಾತನಾಡಿದಂತಹ ಮಾತುಗಳು ಇವತ್ತಿನ ದಿವಸ ಮಾತುಗಳಾಗಿಯೇ ಉಳಿದಿವೆ. ಅವರು ಹೇಳಿದರು, ಸಾಧನೆ ನಮಗೆ ಬಹಳ ಮುಖ್ಯ, ಅಧಿಕಾರ ಮಿತಿಗೊಳಿಸುತ್ತೇನೆ, ಹೊಣೆಗಾರಿಕೆಯಿಂದ ನೋಡಿಕೊಳ್ಳುತ್ತೇನೆ, ಅಧಿಕಾರ ಸರಿಯಾದ ರೀತಿಯಲ್ಲಿ ಉಪಯೋಗವಾಗುವಂತೆ ನೋಡಿಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದರು. ಇವತ್ತಿನ ದಿವಸ ಅಂತಹ ಒಂದೇ ಒಂದು ಉದಾಹರಣೆಯನ್ನು ನಾವು ಕಾಣುತ್ತಿಲ್ಲ. ಅದಕ್ಕೆ ಬದಲಾಗಿ ಇವರ ಸಾಧನೆ ತೀರಾ ಕೆಳಗಿನದು ಆಗಿದೆ. ಹೊಣೆಗಾರಿಕೆಯನ್ನು ನಾನು ಮಾಡುತ್ತೇನೆ, ಅಥವಾ ವಿಲೇ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದರು. ಇವತ್ತು ಯಾವುದರಲ್ಲಿ ಹೊಣೆಗಾರಿಕೆ ಇದೆ ಸ್ವಾಮಿ ? ಇವರು ಹಿಂದೆ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದರು., ಹಿಂದಿನ ಸರ್ಕಾರದ ಪಂಚಸೂತ್ರಗಳನ್ನು ಗೇಲಿ ಮಾಡಿದರು. ಅದು ಪಂಚಸೂತ್ರವಲ್ಲ ಲಂಚಸೂತ್ರವಾಗಿದೆ ಎನ್ನುವ ಮಾತನ್ನು ಹೇಳಿದ್ದರು. ಅವರ ಹೆಸರು ಬೇಕಾದರೆ ಹೇಳುತ್ತೇನೆ. ನಾನು ವೈಯಕ್ತಿಕವಾಗಿ ಹೆಸರು ಹೇಳುವುದಿಲ್ಲ. ಇದೇ ಅರ್ಥ ಬರುವ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಆ ಪಂಚಸೂತ್ರಗಳು ಏನಿವೆ ಆ ಪಂಚಸೂತ್ರಗಳನ್ನೇ ಪುನಃ ತಾವು ಇವತ್ತಿನ ದಿವಸ ಹೇಳುತ್ತಾ ಇದ್ದೀರಿ. ಅದು ಈ ರೀತಿ ಇದೆ.

> "ಸ್ವಚ್ಛ ಆಡಳಿತ ನೀಡಲು ಮತ್ತು ಆಡಳಿತ ವ್ಯವಸ್ಥೆಯಲ್ಲಿ ವಿಶ್ವಾಸಾರ್ಹತೆ ಹಾಗೂ ಪ್ರಾಮಾಣಿಕತೆ ಮೂಡಿಸಲು ನನ್ನ ಸರ್ಕಾರವು ಪ್ರಯತ್ನಿಸುತ್ತದೆ. ಕರ್ತವ್ಯನಿಷ್ಠೆ ಹಾಗೂ ದಕ್ಷತೆಯನ್ನು ರೂಢಿಸಿಕೊಳ್ಳಲು ಅಸಮರ್ಥರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂಥ ಮತ್ತು ಪ್ರಾಮಾಣಿಕ ಹಾಗೂ ದಕ್ಷ ಸರ್ಕಾರಿ ನೌಕರರಿಗೆ ಅವರ ಕಾರ್ಯಕ್ಷೇತ್ರದಲ್ಲಿ ಉತ್ಕೃಷ್ಟತೆ ಸಾಧಿಸಲು ಅಗತ್ಯವಾದ ಎಲ್ಲಾ ಪ್ರೋತ್ಸಾಹಗಳನ್ನು ನೀಡುವಂಥ ಹೊಸ ಆಡಳಿತಾತ್ಮಕ ಸಂಸ್ಕೃತಿಯೊಂದನ್ನು ಬೆಳಸಲಾಗುವುದು."

ಅವರ ಸಚಿವ ಸಂಪುಟದಲ್ಲಿರುವ ಒಬ್ಬ ಸದಸ್ಯರ ಕಾರನ್ನು ಒಬ್ಬ ದುಷ್ಕರ್ಮಿ, ಸಮಾಜಘಾತುಕ ವ್ಯಕ್ತಿ ಉಪಯೋಗಿಸಿದಾಗ ಇವರು ಯಾವ ಕ್ರಮ ತೆಗೆದುಕೊಂಡರು ಸ್ವಾಮಿ ? ಅದನ್ನು ನಾನು ಬೇರೆ ಸಮಯದಲ್ಲಿ ಪ್ರಸ್ತಾಪ ಮಾಡುತ್ತೇನೆ. ಆದರೆ ಈ ಮಾತನ್ನು ಏನು ಹೇಳಿದ್ದಾರೆ. ಈ ಮಾತು ಎಷ್ಟರಮಟ್ಟಿಗೆ ಸುಳ್ಳು ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಭಾಷಣ ಮಾಡುವಂತಹ ಕಾಲದಲ್ಲಿ ಒಂದು ಮಾತನ್ನು ಹೇಳಿದರು. "ಅಸತ್ಯ ಪ್ಲಸ್ ಅಸತ್ಯ ಇಸಿಕೊಲ್ಟು ಸುಳ್ಳು". ನಾನು ಹೇಳುತ್ತೇನೆ, "ಸುಳ್ಳು ಪ್ಲಸ್

ಸುಳ್ಳು ಪ್ಲಸ್ ಸುಳ್ಳು ಇಸಿಕೊಲ್ಲು ವಂಚನೆ" ಎಂದು ನಾನು ಹೇಳುತ್ತೇನೆ. "ವಂಚನೆ ಪ್ಲಸ್ ವಂಚನೆ ಪ್ಲಸ್ ವಂಚನೆ ಇಸಿಕೋಲ್ಲು ಕನ್ನಿಂಗ್‌ನೆಸ್" ಎಂದು ಹೇಳೋಣವೇ. ಇವತ್ತಿನ ದಿವಸ ನಾವು ಹೇಳಿದಂತಹ ಮಾತುಗಳನ್ನು ಎಷ್ಟರಮಟ್ಟಿಗೆ ನಮ್ಮ ಅಧಿಕಾರಾವಧಿಯ ಕಾಲದಲ್ಲಿ ಕಾರ್ಯಗತ ಮಾಡುತ್ತೇವೆ ಎನ್ನುವುದನ್ನು ಆಡಳಿತದ ಗುಣಮಟ್ಟದಿಂದ ಅಳೆಯಬೇಕು. ನಾನು ಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಅಂತಹ ಸಂದರ್ಭದಲ್ಲಿ ತಾವು ನಡೆದುಕೊಂಡ ರೀತಿ ಏನು ? ಯಾರು ಉತ್ತಮವಾದ ತನಿಖೆ ಮಾಡುತ್ತಾರೆ. ದಕ್ಷತೆ ಮತ್ತು ಉತ್ತಮ ಅಧಿಕಾರಿ ಇದ್ದಾರೆ. ಆ ಅಧಿಕಾರಿಯನ್ನು ತಾವು ವರ್ಗಾವಣೆ ಮಾಡಿದ್ದೀರಿ. ಇದು ಪ್ರೋತ್ಸಾಹ ನೀಡುವ ಹೊಸ ಆಡಳಿತಾತ್ಮಕ ಸಂಸ್ಕೃತಿಯೇ ? ಈ ಮಾತುಗಳನ್ನು ಏತಕ್ಕೆ ಹೇಳುತ್ತೀರಿ ? ನೀವು ಹೇಳತಕ್ಕ ಮಾತುಗಳಿಂದ ಸಾರ್ವಜನಿಕರಿಗೆ ಮೋಸ ಮಾಡುವ ದೃಷ್ಟಿಯಲ್ಲಿ ವಂಚನೆ ಮಾಡುವ ದೃಷ್ಟಿಯಲ್ಲಿ ಆ ಪದಗಳ ಉಪಯೋಗವೇ ಹೊರತಾಗಿ ಕಾರ್ಯ ವಿಧಾನಗಳಲ್ಲಿ ಅನುಷ್ಠಾನದ ಸಮಯದಲ್ಲಿ ಏನು ಮಾಡುತ್ತಿದ್ದೀರಿ ? ಅನುಷ್ಠಾನದ ಸಮಯದಲ್ಲಿ ಎಲ್ಲವನ್ನು ಗೌಣವಾಗಿರಿಸಿಕೊಂಡು ನಮಗೆ ಬೇಕಾದವರಿಗೆ ಸಹಾಯ ಮಾಡುವಂತಹ ಒಂದು ಸಂಸ್ಕೃತಿ ಮೊದಲಿನಿಂದಲೂ ಬಂದಿದೆ. ಅದನ್ನು ಕಾಂಗ್ರೆಸ್ ಸಂಸ್ಕೃತಿ ಎಂದು ಹೇಳಿದರೂ ಪರವಾಗಿಲ್ಲ ಅಥವಾ ಆಡಳಿತಾತ್ಮಕ ಸಂಸ್ಕೃತಿ ಎಂದು ಹೇಳಿದರೂ ಪರವಾಗಿಲ್ಲ. ಅಂತಹ ಸಂಸ್ಕೃತಿ ಮುಂದುವರೆಯುತ್ತಿದೆಯೇ ಹೊರತಾಗಿ ಹೊಸ ಆಡಳಿತಾತ್ಮಕ ಸಂಸ್ಕೃತಿಯನ್ನು ಬೆಳೆಸುತ್ತೇವೆ ಎನ್ನುವ ಮಾತನ್ನು ಏನು ಹೇಳಿದ್ದಾರೆ, ಅದು ನಿಜವಾಗಿಯೂ ಸಹ ಅದನ್ನು ಬೆಳೆಸುವ ಯಾವ ಸೂಚನೆಯೂ ಕಂಡುಬರುತ್ತಿಲ್ಲ. ನೀವು ಹೇಳಿದಿರಿ, ನಮ್ಮ ಸಚಿವರು ಎಲ್ಲಿ ಹೋದರೂ ಬೇಕಾದಷ್ಟು ಸ್ಥಳಗಳಲ್ಲಿ ಅಹವಾಲುಗಳನ್ನು ಕೇಳುತ್ತಾರೆ. ಅದಕ್ಕೆ ನಾವು ಕಾಲವನ್ನು ಮೀಸಲಿಡುತ್ತೇವೆ ಎಂದಿರಿ. ನಾನು ಕೇಳುತ್ತೇನೆ, ನಿಮ್ಮಲ್ಲಿ ಇರುವಂಥ ಎಷ್ಟು ಜನ ಅಧಿಕಾರಿಗಳು ಮೂರು ತಿಂಗಳ ಅವಧಿಯಲ್ಲಿ ನಿಮ್ಮ ಕಾರ್ಯದರ್ಶಿಗಳಾಗಲೀ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರಾಗಲೀ, ಅಥವಾ ಸರ್ಕಾರದ ಇಲಾಖೆಯ ಮುಖ್ಯಸ್ಥರಾಗಲೀ ಎಷ್ಟು ಕಡೆ ಟೂರ್ ಮಾಡಿದ್ದಾರೆ ಮತ್ತು ಜನತೆಯ ಸಂಕಷ್ಟಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ ? ಅವರಿಂದ ಬಂದಂಥ ವರದಿ ಏನು ಸ್ವಾಮಿ ? ಇವತ್ತು ಏನು ಹೊಸ ಆಡಳಿತಾತ್ಮಕ ಸಂಸ್ಕೃತಿ ಎಂದು ಹೇಳುತ್ತಾರೆ ಅದರ ಬಗ್ಗೆ ನಾನು ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಹಿಂದೆ ಒಂದು ಕ್ಷೇತ್ರದಲ್ಲಿ ಆಶ್ರಯ ಸಮಿತಿಗಳಲ್ಲಿ ನಡೆದಂಥ ಅವ್ಯವಹಾರಗಳನ್ನು ವಿಚಾರಣೆ ಮಾಡಬೇಕೆಂದು ಹಿಂದಿನ ಸರ್ಕಾರ ಆದೇಶವನ್ನು ಹೊರಡಿಸಿತ್ತು. ಅಂತಹ ಆದೇಶವನ್ನು ರದ್ದು ಮಾಡಿದ್ದೀರಿ. ಇದು ನಿಮ್ಮ ಹೊಸ ಆಡಳಿತಾತ್ಮಕ ಸಂಸ್ಕೃತಿ ಏನು ? ಇವತ್ತಿನ ದಿವಸ ನೀವು ಏನು ಮಾಡುತ್ತಿದ್ದೀರಿ, ಏನು ನುಡಿಯುತ್ತಿದ್ದೀರಿ, ಹೇಗೆ ನಡೆಯುತ್ತಿದ್ದೀರಿ — ಇದನ್ನೆಲ್ಲ ನೋಡಿದಾಗ ಈ ವಿಪರ್ಯಾಸವನ್ನು ನಾನು ಕಾಣುತ್ತಿದ್ದೇವೆ ಹೆಚ್ಚಿನ ವಿಚಾರಕ್ಕೆ ನಾನು ನಂತರ ಹೋಗುತ್ತೇನೆ. ಇಲ್ಲಿ ಹೊಸ ಹೊಸ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಹಿಂದೆ ಬಂಗಾರಪ್ಪನವರ ಸರ್ಕಾರ ಇದ್ದಾಗ ನಾವು ಹೇಳುತ್ತಿದ್ದೆವು. ಅವರ ಸರ್ಕಾರದಲ್ಲಿ ಆಶ್ರಯ, ಅಕ್ಷಯ, ಆರಾಧನಾ, ಹನಿತೆನೆ ಹಸಿರುಕ್ರಾಂತಿ ಮುಂತಾದ ಹೊಸ ಹೊಸ ಶಬ್ದಗಳನ್ನು ಅವರು ಉಪಯೋಗಿಸುತ್ತಿದ್ದರು. ಆದರೆ ನಮ್ಮ ಈಗಿನ ಮುಖ್ಯ ಮಂತ್ರಿಗಳು ಅದಕ್ಕೇನೂ ಕಡಿಮೆ ಇಲ್ಲ. ನಾನು ಸುಮ್ಮನೆ ಬಜೆಟ್‌ನಲ್ಲಿ ಏನು ಹೇಳಿದ್ದಾರೆ ಎಂದು ನೋಡಿದೆ. ಸುಮಾರು ಹತ್ತು ಹೊಸ ಹೆಸರುಗಳನ್ನು ನಾವು ಅಲ್ಲಿ ನೋಡುತ್ತಿದ್ದೇವೆ. ಉದ್ಯೋಗ ಜ್ಯೋತಿ, ಕೆರೆಕಲ್ಯಾಣ, ಸಂಪದ, ಸಾಗರದೀಪ, ಕೌಶಲ್ಯಧಾಮ, ವಸ್ತ್ರಾಧಾರ, ವಿದ್ಯಾವರ್ಣ, ಯಾತ್ರಾ, ಬೆಳ್ಳಿಬೆಳಕು, ಆಶಾಕಿರಣ — ಹೀಗೆ ಹೊಸ ಹೊಸ ಹೆಸರುಗಳನ್ನು ಒಳ್ಳೆಯ ಸಾಹಿತ್ಯ ರೂಪದಲ್ಲಿ, ಏಕೆಂದರೆ ಮುಖ್ಯಮಂತ್ರಿಗಳಿಗೆ ಒಳ್ಳೆಯ ಸಾಹಿತ್ಯ ಇದೆ, ಆ ಸಾಹಿತ್ಯ ಪ್ರೌಢಿಮೆಯನ್ನು ಇಲ್ಲ ಜನತೆಯ ಮುಂದಿಟ್ಟಿದ್ದಾರೆ. ಕೇವಲ ಈ ರೀತಿ ಹೊಸ ಕಾರ್ಯಕ್ರಮಗಳನ್ನು ರೂಪಿಸುವುದರಿಂದ ಈ ದೇಶದ ಜನರ ಕಲ್ಯಾಣ ಆಗುವುದಕ್ಕೆ

ಕ L.A. Vol - 4

ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ನಿಷ್ಠೆಯಿಂದ ಯಾವ ಒಂದು ಕಾರ್ಯಕ್ರಮದ ಫಲ ಈ ದೇಶದ ಸಾಮಾನ್ಯ ಜನರಿಗೆ ಮುಟ್ಟಬೇಕೋ, ಅಂತಹ ಒಂದು ಆಡಳಿತದ ವ್ಯವಸ್ಥೆಯನ್ನು ತರುವುದರ ಮುಖಾಂತರ ಮಾತ್ರ ಅದರ ಫಲ ಜನಸಾಮಾನ್ಯರಿಗೆ ಹೋಗುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ಹಿಂದಿನ ಯಾವುದೇ ಸರ್ಕಾರ ಇರಲಿ, ವಿಚಾರಭ್ರಾಂತಿ ಅಥವಾ ಪ್ರಚಾರಭ್ರಾಂತಿಯಿಂದಾಗಿ ಜನಪ್ರಿಯ ಕಾರ್ಯಕ್ರಮಗಳ ಹೆಸರಿನಲ್ಲಿ ಹಣ ಏನು ಪೋಲಾಗುತ್ತದೆ, ಅದನ್ನು ಈ ಸರ್ಕಾರ ಮುಂದುವರೆಸುವುದಕ್ಕೆ ಪ್ರಯತ್ನ ಮಾಡುತ್ತಿದೆ. ಅದರ ಮುಖಾಂತರ ಜನಪ್ರಿಯತೆಯನ್ನು ಗಳಿಸುವುದಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತಿನ ದಿವಸ ಅನೇಕ ಆರೋಪಗಳನ್ನು ಹಿಂದಿದ್ದ ಸರ್ಕಾರದ ಮೇಲೆ ಮುಂಚೂಣಿಯಲ್ಲಿದ್ದ ಜನ ಮಾಡಿದರು. ಆ ಎಲ್ಲ ವಿಚಾರಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಆದರೆ ಅವತ್ತು ಏನು ಹೇಳುತ್ತಿದ್ದರು ? ಈ ದೇಶದಲ್ಲಿ ಅಧಕ್ಷತೆ ಹೆಚ್ಚಾಗಿದೆ, ಭ್ರಷ್ಟಾಚಾರ ಹೆಚ್ಚಾಗಿದೆ, ಇಲ್ಲಿ ಎಲ್ಲವೂ ಸಹ ಮಾರಾಟವಾಗಿವೆ ಎಂಬ ಮಾತನ್ನು ಹೇಳಿ ಹೋರಾಟ ಮಾಡಿದಂಥ ಜನ ಇವತ್ತು ಅಧಿಕಾರಕ್ಕೆ ಬಂದಿದ್ದಾರೆ. ಈ ಹೋರಾಟದ ಮುಂಚೂಣಿಯಲ್ಲಿದ್ದಂಥ ಜನ ಇವತ್ತು ಏನು ಮಾಡುತ್ತಿದ್ದಾರೆ ? ಇವತ್ತೂ ಸಹ ಇದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅವತ್ತು ಹಗಲು ದರೋಡೆ ಎಂದು ಏನು ಹೇಳುತ್ತಿದ್ದರು. ಅದು ಇವತ್ತು ನಿಂತಿರಬಹುದು. ಆದರೆ ರಾತ್ರಿ ದರೋಡೆ ಮುಂದುವರೆಯುತ್ತಿದೆ. ಒಂದು ಸರ್ಕಾರ ಏನು ಬಹಿರಂಗವಾಗಿ ಭ್ರಷ್ಟಾಚಾರದಲ್ಲಿ ತೊಡಗಿದ್ದರೆ, ಮತ್ತೊಂದು ಸರ್ಕಾರ ಗುಪ್ತವಾಗಿ ಭ್ರಷ್ಟಾಚಾರದಲ್ಲಿ ತೊಡಗುವಂಥ ಒಂದು ರೂಪದಲ್ಲಿ ಕೆಲಸ ಮಾಡಿದರೆ ಅದು ಹೇಗೆ ವಿಭಿನ್ನವಾದ ಸರ್ಕಾರ ಆಗುತ್ತದೆ ? ಅದು ಭ್ರಷ್ಟಾಚಾರ ರಹಿತವಾದ, ದಕ್ಷವಾದಂಥ ಸರ್ಕಾರ ಆಗುವುದಕ್ಕೆ ಸಾಧ್ಯವಿಲ್ಲ. ಯಾವ ಒಂದು ಹೋರಾಟದ ಮುಂಚೂಣಿಯಲ್ಲಿದ್ದಂಥ ಜನ ಇವತ್ತು ಮಂತ್ರಿಮಂಡಲದಲ್ಲಿದ್ದಾರೆ, ಅವರಲ್ಲೂ ಸಹ ಹಿಂದೆ ಇದ್ದಂಥ ಹೋರಾಟದ ಮನೋಭಾವ ಇವತ್ತು ಇಲ್ಲ. ಅದು ಒಂದು ಮಾರಾಟದ ಮನೋಭಾವವಾಗಿ ಮುಂದುವರೆಯುತ್ತಿದೆ. ಇದು ಹಗಲುದರೋಡೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದರು. ಆದರೆ ಅದಕ್ಕೆ ಬದಲಾಗಿ ರಾತ್ರಿ ದರೋಡೆಯಾಗಿ ಇದು ಮುಂದುವರೆಯುತ್ತಿದೆ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ನಾನು ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದರೂ, ಕೇವಲ ಅರ್ಧ ಗಂಟೆ ಸಮಯವನ್ನು ನಿಗದಿ ಮಾಡಿರುವುದರಿಂದ, ಒಂದೆರಡು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣೆಯದ ಪ್ರಸ್ತಾಪದ ಮೇಲೆ ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇನೆ. ಅದು ಈ ರೀತಿ ಇದೆ:

"ಆದರೆ, ಕೃಷಿಗೆ ಸಂಬಂಧಿಸಿದಂತೆ, ಉದ್ದೇಶಿಸಲಾದ ವ್ಯಾಪಾರ ಮತ್ತು ಸುಂಕಗಳ ಸಾಮಾನ್ಯ ಕರಡು ಒಪ್ಪಂದಗಳು ಡಂಕಲ್ ಪ್ರಸ್ತಾವನೆಯ ಬಾಬ್ತು, ರಾಜ್ಯ ಸರ್ಕಾರದ ಧೋರಣೆ ಬಗ್ಗೆ ಹಾಗೂ ಯಾವುದೇ ರೀತಿಯಲ್ಲಿ ಪ್ರಸ್ತಾಪಿಸದೇ ಇರುವುದಕ್ಕೆ ಮತ್ತು ರಾಜ್ಯದ ರೈತರಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಸಾಲ ಸೌಲಭ್ಯ, ಬೆಳೆದ ಬೆಳೆಗಳಿಗೆ ಲಾಭದಾಯಕ ಬೆಲೆ ನಿಗದಿ, ಮತ್ತಿತರ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಯಾವುದೇ ಪ್ರಸ್ತಾಪ ಮಾಡದೇ ಇರುವುದಕ್ಕೆ ಈ ಸದನವು ವಿಷಾದಿಸುತ್ತದೆ".

ಇದನ್ನು ನಾನು 16 ಅಥವಾ 17ನೇ ತಾರೀಖು ಕಳುಹಿಸಿದ್ದೇನೆ. ಇದಾದ ಮೇಲೆ ಸರ್ಕಾರ ಸ್ವಲ್ಪ ಚುರುಕುಗೊಂಡಿದೆ. ಯಾವ ರೀತಿ ಚುರುಕುಗೊಂಡಿದೆ ಎಂದರೆ, ಮುಖ್ಯಮಂತ್ರಿಗಳು ಹೇಳಿದಂತೆ, ಡಂಕಲ್ ಕರಡು ಎಂಬ ಹೆಡ್ಡಿಂಗ್‌ನಲ್ಲಿ ಒಂದು ಪ್ಯಾರಾವನ್ನು ಆಯವ್ಯಯಪತ್ರದಲ್ಲಿ ಹೇಳಿದ್ದಾರೆ. ಕನಿಷ್ಟ ಪಕ್ಷ ಇಷ್ಟೆಲ್ಲಾ ಆದಮೇಲೆ, ಈ ಡಂಕಲ್ ಹೆಸರು ಇಲ್ಲಿ ಪ್ರಸ್ತಾಪವಾಯಿತು. ಮಾನ್ಯ ಗೆಳೆಯರಾದ ರಂಗನಾಥ್‌ರವರು ಆಗಲೇ ಕೇಳುತ್ತಿದ್ದರು. ಈ ಡಂಕಲ್ ಅಂದರೆ ಏನು ಅಥವಾ ಏನು ಪ್ರಸ್ತಾವ ಎಂದು. ಸನ್ಮಾನ್ಯ ಮಂತ್ರಿಗಳೇ, ನಮ್ಮ ರಾಜ್ಯದಲ್ಲಿ ನಮ್ಮ ದೇಶದಲ್ಲಿ ಅನೇಕ ಮಂತ್ರಿಗಳಿದ್ದಾರೆ. ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ ಮಂತ್ರಿಗಳು ಇದ್ದಾರೆ. ಅವರಿಗೆ ಡೆಂಕಲ್ ಅಂದರೆ ಏನು ಎನ್ನುವಂಥ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿದೆ ಎಂದು ಹೇಳಿದರೆ, ಇದಕ್ಕಿಂತ ಹೊಣೆಗೇಡಿತನದ ವಿಷಯ ಬೇರೆ ಇಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂತಹ ಸರ್ಕಾರ ಯಾವುದಾದರೂ ಇದೆಯೇ ? ಕಾರ್ಗಿಲ್, ಡಂಕಲ್ ಎಲ್ಲವೂ ಒಂದೇ ಏನು ಎಂದು ಕೇಳುವಂಥ ಕೃಷಿ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಇದ್ದರು. ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಡಂಕಲ್ ಪ್ರಸ್ತಾವನೆಯು ಅನೇಕ ವಿಚಾರಗಳನ್ನು ಒಳಗೊಂಡಿದೆ. ಮುಖ್ಯವಾಗಿ ನಮ್ಮ ರಾಷ್ಟ್ರದ ಕೈಗಾರಿಕಾ ನೀತಿ ಇರಬಹುದು, ನಮ್ಮ ರಾಷ್ಟ್ರದ ಆರ್ಥಿಕ ನೀತಿ ಇರಬಹುದು ಅದಕ್ಕಿಂತ ಹೆಚ್ಚಾಗಿ, ನಮ್ಮ ರಾಷ್ಟ್ರವು ಅನುಸರಿಸಬೇಕಾದ ಕೃಷಿ ನೀತಿ ಬಗ್ಗೆ ಮಾತ್ರ ನನ್ನ ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ, ಕೃಷಿ ನಮ್ಮ ರಾಜ್ಯದ ವಿಚಾರಗಳಿಗೆ ಸಂಬಂಧಪಟ್ಟಿದ್ದುದು. ಇವತ್ತಿನ ದಿವಸ ಸಂವಿಧಾನದ ಪ್ರಕಾರ, ನಮ್ಮ ರಾಜ್ಯದ ವ್ಯಾಪ್ತಿಗೆ ಸಂಬಂಧಪಟ್ಟಿರುವುದರಿಂದ, ಕೇವಲ ಈ ವಿಚಾರವನ್ನು ಮಾತ್ರ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, General Agreement on Trade and Tariff ಎಂದು ಏನಿದೆ, ಅದರ ಮಹಾನಿರ್ದೇಶಕರ ಆಸ್ಕರ್ ಡಂಕಲ್‌ರವರು ಕೆಲವು ವಿಚಾರಗಳನ್ನೂ, ಕೆಲವು ಪ್ರಸ್ತಾವನೆಗಳನ್ನೂ ಅಭಿವೃದ್ಧಿಶೀಲ ರಾಷ್ಟ್ರಗಳ ಮುಂದೆ ಇಟ್ಟು, ಒಂದು ಒಪ್ಪಂದವನ್ನು ಮಾಡಿಕೊಳ್ಳುವುದು ಅವಶ್ಯ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಏತಕ್ಕೆ ಅವಶ್ಯ ಎನ್ನುವ ಮಾತನ್ನು ಅವರು ಹೇಳುತ್ತಾರೆ. ಅದು ಏನೆಂದರೆ, ಮುಂದುವರಿದ ರಾಷ್ಟ್ರಗಳಲ್ಲಿ ಏನು ಹೆಚ್ಚು ಸಂಪತ್ತು ಇದೆ, ಏನು ಟೆಕ್ನಾಲಜಿ ಇದೆ ಮತ್ತು ಬೇರೆ ಬೇರೆ ವಿಧವಾಗಿ ಸಹಾಯ ಮಾಡುವಂಥ ಸೌಕರ್ಯ ಇದೆ, ಸೌಲಭ್ಯವಿದೆ ಇದು ಎಲ್ಲಾ ಹಿಂದುಳಿದ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೋಗಬೇಕೆಂದೂ, ಇದರಿಂದ ಅವರ ಆರ್ಥಿಕ ಸ್ಥಿತಿ ಉತ್ತಮವಾಗಬೇಕೆಂಬ ಮಾತನ್ನು ಅವರು ಹೇಳಿದ್ದಾರೆ. ಆದರೆ ವಸ್ತುಸ್ಥಿತಿ ಏನಾಗುತ್ತದೆ, ಅದು ಬಹಳ ಮುಖ್ಯ. ಆದರೆ ವಸ್ತುತಃ ಈ ಒಂದು ದೇಶದ ಉತ್ಪಾದನೆಗೆ ಧಕ್ಕೆಯಾಗುವಂಥ ರೀತಿಯಲ್ಲಿ ಈ ಪ್ರಸ್ತಾವನೆ ಇರುವುದನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟ ಮೊದಲನೆಯದಾಗಿ, ಡಂಕಲ್ ಪ್ರಸ್ತಾವನೆ ಏನು ಹೇಳುತ್ತಿದೆ ಎಂದರೆ ಕೃಷಿ ನೀತಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಉದಾರವಾದ ಬೀಜ ನೀತಿಯನ್ನು ನಮ್ಮ ಸರ್ಕಾರವು ಅನುಸರಿಸಬೇಕು. ಈ ಉದಾರವಾದ ಬೀಜ ನೀತಿಯನ್ನು ನಮ್ಮ ಸರ್ಕಾರ ಅನುಸರಿಸುವ ಮುಖಾಂತರ, ಉತ್ಪಾದನೆ ಜಾಸ್ತಿಯಾಗುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕಿಂತ ಮುಂಚಿತವಾಗಿ, ನಮ್ಮ ರಾಷ್ಟ್ರದ ಮತ್ತು ನಮ್ಮ ರಾಜ್ಯದ ವ್ಯವಸಾಯ ಉತ್ಪಾದನೆಯನ್ನು ನಮ್ಮ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಇವತ್ತು ರಾಷ್ಟ್ರದಲ್ಲಿ ಸುಮಾರು 175 ದಶಲಕ್ಷ ಆಹಾರ ಧಾನ್ಯ ಉತ್ಪಾದನೆಯಾಗುತ್ತಿದೆ. ಈ ರೀತಿಯ ಉತ್ಪಾದನೆಯಾಗುವಂಥ ಆಹಾರಧಾನ್ಯ ನಮ್ಮ ದೇಶದ ಜನರಿಗೆ ಸಾಕಾಗುತ್ತಾ ಇಲ್ಲ. 2 ಸಾವಿರ ಇಸವಿ ಒಳಗಾಗಿ ನಮ್ಮ ರಾಷ್ಟ್ರದಲ್ಲಿ 240 ದಶಲಕ್ಷ ಆಹಾರ ಧಾನ್ಯದ ಅವಶ್ಯಕತೆ ಇದೆ.

240 ದಶಲಕ್ಷ ಆಹಾರದ ಅವಶ್ಯಕತೆ ಇದ್ದರೂ ಸಹ ಅಂದರೆ ಪ್ರತಿ ವರ್ಷವೂ ಕನಿಷ್ಟ ಪಕ್ಷ ನಾವು 63 ದಶಲಕ್ಷ ಆಹಾರ ಉತ್ಪನ್ನವನ್ನು ಹೆಚ್ಚಿಗೆ ಮಾಡಬೇಕಾದುದು, ಈಗಿನ ಪರಿಮಿತಿಯಲ್ಲಿ, ಈಗಿನ

ಪ್ರಮಾಣದಲ್ಲಿ ನಮ್ಮ ದೇಶದ ಜನರಿಗೆ ಆಹಾರ ಧಾನ್ಯವನ್ನು ಕೊಡಲಿಕ್ಕೆ ಅವಶ್ಯಕತೆ ಇದೆ. ಆದರೆ ನಮ್ಮ ದೇಶದ ಕಳೆದ ಹಲವಾರು ವರ್ಷಗಳ ಸರಾಸರಿ ಉತ್ಪಾದನೆಯನ್ನು ತೆಗೆದುಕೊಂಡಾಗ ಅಥವಾ ಇತ್ತೀಚಿನ ದಿವಸಗಳಲ್ಲಿ ಏನು ಉತ್ಪಾದನೆ ಆಯಿತು ಅದನ್ನು ಗಮನಕ್ಕೆ ತೆಗೆದುಕೊಂಡಾಗ ಕೇವಲ 42 ದಶಲಕ್ಷ ಉತ್ಪನ್ನ ಮಾತ್ರ ನಮಗೆ ಜಾಸ್ತಿಯಾಗುತ್ತಿದೆ. ಅಂದರೆ ಮೂರನೆ ಒಂದು ಭಾಗದಷ್ಟು ಉತ್ಪಾದನೆ ಕಡಿಮೆ ಆಗುತ್ತಿದೆ. ನಮ್ಮ ರಾಜ್ಯದ ಚಿತ್ರವನ್ನು ತೆಗೆದುಕೊಂಡಾಗ ಹೋದ ವರ್ಷ ನಾವು ಹೆಚ್ಚು ಹೆಚ್ಚು ಉತ್ಪನ್ನಗಳನ್ನು ಮಾಡಬೇಕು ಎಂದು ಹೇಳಿದೆವು. 84 ಲಕ್ಷ ಆಹಾರವನ್ನು ನಾವು 1992–93ರಲ್ಲಿ ಉತ್ಪಾದನೆ ಮಾಡಬೇಕೆನ್ನುವ ಗುರಿಯನ್ನು ಹಾಕಿಕೊಂಡಿದ್ದರೂ ಸಹ ನಮ್ಮ ರಾಜ್ಯದಲ್ಲಿ ಕೇವಲ 73 ಲಕ್ಷ ಟನ್ ಮಾತ್ರ ಉತ್ಪಾದನೆ ಆಯಿತು. ಅಂದರೆ ಶೇಕಡ 11–12ರಷ್ಟು ಕಡಿಮೆ ಆಗಿದೆ. ಇದು ಏತಕ್ಕೋಸ್ಕರ ಕಡಿಮೆ ಆಯಿತು. ನಾವು ಗುರಿಯನ್ನು ಹಾಕಿಕೊಂಡಿದ್ದೇವೆ. 9 ಲಕ್ಷ ಟನ್ ಗೊಬ್ಬರವನ್ನು ಉಪಯೋಗಿಸಬೇಕೆನ್ನುವ ಮಾತನ್ನು ಹೇಳಿದ್ದೇವೆ. ಆದರೆ ನಮ್ಮ ಗೊಬ್ಬರದ ಉಪಯೋಗದಲ್ಲಿ ಕರ್ನಾಟಕ ರಾಜ್ಯ ಶೇಕಡ 20ರಷ್ಟು ಕಡಿಮೆಯಾಗಿ ಕೇವಲ 7 ಲಕ್ಷ ಟನ್‌ಗಳನ್ನು ಮಾತ್ರ ನಾವು ಇವತ್ತಿನ ದಿವಸ ಉಪಯೋಗಿಸಲಿಕ್ಕೆ ಸಾಧ್ಯವಾಗಿದೆ. ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಗೊಬ್ಬರವನ್ನು ಉಪಯೋಗಿಸುವಂತಹ ರಾಷ್ಟ್ರಗಳು ಏನಿವೆ ಅವರು ಒಂದು ಎಕರೆಗೆ 400 ಕೆಜಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದರೆ ಕರ್ನಾಟಕದಲ್ಲಿ ನಾವು ಕೇವಲ 63 ಕೆಜಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ಭಾರತದ್ದು ಸರಾಸರಿ 72 ಕೆಜಿ ಆದರೆ ಇಡೀ ವಿಶ್ವದಲ್ಲಿ ಸರಾಸರಿ 100 ಕೆಜಿ ಆಗಿದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಯಾವಾಗ ನಾವು ಗೊಬ್ಬರದ ಬೆಲೆಯನ್ನು ಹೆಚ್ಚು ಮಾಡಿದ್ದೇವೆ, ಗೊಬ್ಬರಕ್ಕೆ ಕೊಡುವಂತಹ ಸಬ್ಸಿಡಿಯನ್ನು ನಾವು ಕಡಿಮೆ ಮಾಡಿದ್ದೇವೆ. ಅದರ ಉಪಯೋಗ ಕಡಿಮೆಯಾದರೆ ಅದರ ಪರಿಣಾಮ ಈ ದೇಶದ ಆಹಾರ ಉತ್ಪನ್ನದ ಮೇಲೆ ಆಗುತ್ತದೆ ಎನ್ನುವ ಮಾತನ್ನು ಹೇಳಲಿಕ್ಕೆ ನಾನು ಬಯಸುತ್ತೇನೆ. ಇವತ್ತಿನ ದಿವಸ ನಮಗೆ ಬೇಕಾದ ಆಹಾರ ಉತ್ಪನ್ನ ಕಡಿಮೆ ಆಗುವುದಾದರೆ, ಅವರು ಹೇಳುತ್ತಾರೆ, ಇಲ್ಲಾ ಬೇರೆ ರಾಜ್ಯಗಳಿಂದ ಕಳುಹಿಸಿಕೊಡೋಣ ಎನ್ನುವ ಮಾತನ್ನು ಹೇಳುತ್ತಾರೆ. ಅದನ್ನು ಯಾವ ರೀತಿಯಲ್ಲಿ ತರಿಸಿಕೊಳ್ಳಬೇಕು, ಡಂಕಲ್ ಪ್ರಸ್ತಾವನೆಯ ಮುಖಾಂತರ 1986–87ರಲ್ಲಿ ಏನು ನಾವು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ, ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ, ಅದೇ ಪ್ರಮಾಣದಲ್ಲಿ ತರಿಸಿಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಆದರ ಪ್ರಮಾಣ ಎಷ್ಟಾಗುತ್ತದೆ ಇವತ್ತಿನ ಬೆಲೆಯಲ್ಲಿ ಸುಮಾರು 2 ಸಾವಿರ ಕೋಟಿ ರೂಪಾಯಿಗಳ ವಿದೇಶಿ ವಿನಿಮಯವನ್ನು ನಾವು ಖರ್ಚು ಮಾಡಿ ಅಂತಹ ಆಮದನ್ನು ನಾವು ಮಾಡಿಕೊಳ್ಳಬೇಕಾಗಿದೆ. ಇವತ್ತಿನ ದಿವಸ ಡಂಕಲ್ ಪ್ರಸ್ತಾವನೆಯನ್ನು ಏನಾದರೂ ನಾವು ಒಪ್ಪಿದರೆ ಅಥವಾ ಅವರ ನೀತಿಯನ್ನು ಏನಾದರೂ ನಾವು ಒಪ್ಪಿದರೆ ನಮ್ಮ ದೇಶದಲ್ಲಿ ಆಹಾರದ ಉತ್ಪಾದನೆ ಕಡಿಮೆಯಾಗುತ್ತದೆ. ಇವತ್ತಿನ ದಿವಸ ಗೊಬ್ಬರಕ್ಕೆ ಏನು ಸಹಾಯಧನವನ್ನು ಕೊಡುತ್ತಿದ್ದೇವೆ. ಅದರ ಬಗ್ಗೆ ಮಾನ್ಯ ನಂಜುಂಡ ಸ್ವಾಮಿಯವರು ಮಾತನಾಡುತ್ತಾ ಹೇಳಿದರು, ಶೇಕಡ 76ರಷ್ಟು ಕೊಡುವಂತಹ ಉತ್ತರ ಕೋರಿಯಾ ಇರಬಹುದು, ಜಪಾನ್ ಇರಬಹುದು, ಆದರೆ ನಮ್ಮ ದೇಶದಲ್ಲಿ ಶೇಕಡ 2.3ರಷ್ಟು ಸಬ್ಸಿಡಿಯನ್ನು ಕೊಟ್ಟರೂ ಸಹ ಆ ಸಬ್ಸಿಡಿಯನ್ನು ಸಲ್ಲಿಸಬೇಕೆನ್ನುವ ಮಾತನ್ನು ಇವತ್ತಿನ ದಿವಸ ಭಾರತದ ಮಹಾ ನಿರ್ದೇಶಕರು ಏನಿದ್ದಾರೆ ಅವರು ಬಂಡವಾಳಶಾಹಿಗಳ ಪರವಾದಂತಹ ಮಾತನ್ನು ಹೇಳಿದ್ದಾರೆ. ಆದರ ಮುಖಾಂತರ ನಮ್ಮ ದೇಶದ ಉತ್ಪಾದನೆಯನ್ನೇ ಕುಂಠಿತಗೊಳಿಸತಕ್ಕಂಥ ರೀತಿಯಲ್ಲಿ ಈ ಮಾತನ್ನು ಅವರು ಹೇಳುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ಸಬ್ಸಿಡಿಯನ್ನು ನಿಲ್ಲಿಸುವುದರ ಮುಖಾಂತರ ಅದಕ್ಕಿಂತ ಹೆಚ್ಚಾಗಿ ಇನ್ನೊಂದು ಸಬ್ಸಿಡಿಯನ್ನು ನಿಲ್ಲಿಸಲೇಬೇಕೆನ್ನುವ ಮಾತನ್ನು ಹೇಳುತ್ತಾರೆ. ಏನು ನಮ್ಮಲ್ಲಿ ಪಿ.ಡಿ.ಎಸ್. ಎಂದು ಇದೆ, ಪಡಿತರ ಆಹಾರ ವಿತರಣಾ ಪದ್ಧತಿ ಇದೆ. ಆ ಒಂದು [illegible]

ಪದ್ಧತಿಯಿಂದ ಸುಲಭ ದರದಲ್ಲಿ ಯಾರಿಗೆ ಆರ್ಥಿಕವಾಗಿ ಕೊಳ್ಳುವಂತಹ ಶಕ್ತಿ ಇಲ್ಲ ಆ ಜನರಿಗೆ ಕಡಿಮೆ ದರದಲ್ಲಿ ನಾವು ಇವತ್ತಿನ ದಿವಸ ಏನು ಆಹಾರ ಧಾನ್ಯಗಳನ್ನು ಕೊಡುತ್ತೇವೆ ಅದನ್ನು ನಿಲ್ಲಿಸಬೇಕೆನ್ನುವ ಮಾತನ್ನು ಹೇಳುತ್ತಿದ್ದಾರೆ. ಈ ರೀತಿಯಾಗಿ ಏನು ಅವರು ಹೇಳುತ್ತಿದ್ದಾರೆ ಇವೆಲ್ಲವೂ ಸಹ ನಮ್ಮ ದೇಶದಲ್ಲಿ ಆರ್ಥಿಕವಾಗಿ ಹಿಂದುಳಿಯುವಂತಹ ಕಾರ್ಯಕ್ರಮದ ರೂಪ ಇದೆಯೇ ಹೊರತಾಗಿ ಮತ್ತೇನೂ ಅಲ್ಲ. ಅದಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಆಹಾರ ಉತ್ಪಾದನೆ ಕಡಿಮೆಯಾಗುವಂತಹ ರೀತಿಯಲ್ಲಿ ಸಬ್ಸಿಡಿ ನಿಲ್ಲಿಸುವುದರ ಮುಖಾಂತರ ನಮ್ಮ ದೇಶದಲ್ಲಿ ಉತ್ಪಾದನೆಯಾದಂತಹ ಆಹಾರದ ಬೆಲೆ ಹೆಚ್ಚು ಆಗುವಂತಹ ರೀತಿಯಲ್ಲಿ, ನಮ್ಮ ದೇಶದ ರೈತನಿಗೆ ಲಾಭದಾಯಕವಾದ ಬೆಲೆ ಸಿಗದಂತಹ ರೀತಿಯಲ್ಲಿ ಮಾಡುವುದರ ಮುಖಾಂತರ, ವಿಶ್ವದ ಮಾರುಕಟ್ಟೆ ಮುಖಾಂತರ ನಮಗೆ ಬೇಕಾದ್ದನ್ನು ಆಮದು ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಂಡತೆ ಒಂದು ಹೊಸ ತಂತ್ರವನ್ನು ಇವತ್ತಿನ ದಿವಸ ಅವರು ಹೇಳಿದ್ದಾರೆ. ಇವತ್ತಿನ ದಿವಸ ಗೋಧಿ ಬೆಲೆಯನ್ನು ತೆಗೆದುಕೊಳ್ಳೋಣ. ನಮ್ಮ ದೇಶದಲ್ಲಿ ಏನು ಒಂದು ಗೋಧಿ ಬೆಲೆ ಇದೆ ಆ ಬೆಲೆಗೆ ನಾವು ಆಮದು ಮಾಡಿಕೊಳ್ಳುವಂತಹ ಗೋಧಿ ಬೆಲೆಯನ್ನು ಹೋಲಿಕೆ ಮಾಡಿದಾಗ ಒಂದು ಕ್ವಿಂಟಾಲ್‌ಗೆ 250 ರೂಪಾಯಿಗಳಷ್ಟು ಹೆಚ್ಚು ಸಬ್ಸಿಡಿಯನ್ನು ನಾವು ಆಮದು ಮಾಡಿಕೊಳ್ಳುವಂತಹವನಿಗೆ ಕೊಡಬೇಕು. ಅದು ಕೊಟ್ಟರೂ ಪರವಾಗಿಲ್ಲ ಆದರೆ ನಮ್ಮ ರೈತನಿಗೆ ರಿಯಾಯಿತಿ ದರದಲ್ಲಿ ಗೊಬ್ಬರವನ್ನು ಕೊಡುವುದು ಬೇಡ ಅಥವಾ ಸಬ್ಸಿಡಿ ಕೊಡುವುದು ಬೇಡ ಎನ್ನುವಂತಹ ಮಾತನ್ನು ಹೇಳುವಂತಹ ಡೋಂಗಿ ಕೃಷಿ ನೀತಿ ಏನಿದೆ ಸೂಡೋ ಅಗ್ರಿಕಲ್ಚರ್ ಪಾಲಿಸಿ ಎಂದು ಏನು ಹೇಳುತ್ತೇವೆ ಮಾನ್ಯ ಬಿಜೆಪಿಯವರು ಮಾತುಮಾತಿಗೆ ಹೇಳುತ್ತಿರುತ್ತಾರೆ. ಇದು ಸೂಡೋ ಸೋಷಿಯಲಿಜಂ, ಸುಡೋ ಸೆಕ್ಯುಲರಿಜಂ ಎಂದು ಅದಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಎಲ್ಲಾ ರಾಜಕಾರಣಿಗಳೂ ಸಹ ಯಾರು ಕೃಷಿಯ ಪರವಾಗಿ ಇರಬೇಕಾದಂತಹ ಜನ ಇದ್ದೇವೆ ಅವರೆಲ್ಲರೂ ಸಹ ಈ ಡೋಂಗಿ ಕೃಷಿ ನೀತಿಯನ್ನು ಅನುಸರಿಸುವುದರ ಮುಖಾಂತರ ಅಂತಹ ಒಂದು ಪರಿಸ್ಥಿತಿ ನಿರ್ಮಾಣ ಆಗಿದೆ. ಇವತ್ತಿನ ದಿವಸ ಏನು ಈ ಒಂದು ತಿದ್ದುಪಡಿ ಕೊಟ್ಟಿದ್ದೇನೆ. ಇನ್ನೊಂದು ಬಹಳ ಮುಖ್ಯವಾದುದು ಈ ಒಂದು ಪೇಟೆಂಟ್. ಇವತ್ತಿನ ದಿವಸ ಈ ಒಂದು ಬೀಜವನ್ನು ಉತ್ಪಾದನೆ ಮಾಡಲಿಕ್ಕೆ ಬಹುರಾಷ್ಟ್ರೀಯ ಕಂಪನಿಗಳಿಗೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಅಷ್ಟೇ ಅಲ್ಲ, ಯಾವುದಾದರೊಂದು ಬೀಜವನ್ನು ನಾವು ಉತ್ಪಾದನೆ ಮಾಡಿದರೆ ಅದಕ್ಕೆ ಪೇಟೆಂಟ್ ಕೊಡುವಂತಹ ಅಧಿಕಾರವನ್ನು ಪೇಟೆಂಟ್ ಆಕ್ಟ್‌ಗೆ ತಿದ್ದುಪಡಿ ಮಾಡುವುದರ ಮುಖಾಂತರ ಬಹುರಾಷ್ಟ್ರೀಯ ಕಂಪನಿಗಳಿಗೆ ಸಹಾಯ ಮಾಡುವಂತಹ ಒಂದು ಪರಿಸ್ಥಿತಿಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿದೆ ಎನ್ನುವುದು ಅವರ ಪ್ರಸ್ತಾವನೆಯಲ್ಲಿದೆ.

1.50 ಪಿ.ಎಂ.

ಇದರಿಂದ ಏನು ಪರಿಣಾಮವಾಗುತ್ತದೆ ? ನಮ್ಮ ಭಾರತದಲ್ಲಿ ಸುಮಾರು 500 ವರ್ಷಗಳಿಂದ ಅನೇಕ ಕಾಡುತಳಿಗಳಿಂದ, ಅರಣ್ಯದಲ್ಲಿ ಬೆಳೆದಂಥ ತಳಿಗಳಿಂದ ಯಾವುದನ್ನು ತಿನ್ನಬಹುದೋ ಅವುಗಳನ್ನು ಆರಿಸಿಕೊಂಡು ಅದನ್ನು ಅಭಿವೃದ್ಧಿ ಮಾಡಿದ್ದೇವೆ. ನಮ್ಮ ಭಾರತದಲ್ಲಿ ಸುಮಾರು 15 ಸಾವಿರಕ್ಕಿಂತಲೂ ಹೆಚ್ಚು ಸಸ್ಯ ವೈವಿಧ್ಯಗಳಿವೆ. ಈ ವೈವಿಧ್ಯತೆಯ ಫಲವಾಗಿ ಮತ್ತು ಸಂಶೋಧನೆಯ ಫಲವಾಗಿ ಹೊಸ ಧಾನ್ಯಗಳನ್ನಾಗಲೀ ಅಥವಾ ಉತ್ತಮ ತಳಿಯ ಧಾನ್ಯಗಳನ್ನಾಗಿ ಉತ್ಪಾದನೆ ಮಾಡಲಿಕ್ಕೆ ಅವಕಾಶ ನೀಡದಂಥ ಒಂದು ವ್ಯವಸ್ಥೆಯನ್ನು ಇವತ್ತಿನ ದಿವಸ ಡಂಕಲ್ ಪ್ರಸ್ತಾವನೆಯನ್ನು ಒಪ್ಪುವುದರ ಮೂಲಕ ಜಾರಿಗೊಳಿಸಲಿಕ್ಕೆ ನಮ್ಮ ಕೇಂದ್ರ ಸರ್ಕಾರ ಪ್ರಯತ್ನ ಮಾಡುತ್ತಿದೆ. ಇದರಿಂದ ಏನಾಗುತ್ತದೆ ? ಇವತ್ತಿನ ದಿವಸ ನಮ್ಮೂರಿನಲ್ಲಿ ಬೆಳೆದಂಥ ಬತ್ತ ಇರಬಹುದು, ಅಥವಾ ಬೇರೆ ಬೇರೆ ರಾಜ್ಯಗಳಲ್ಲಿ ಏನು ಧಾನ್ಯಗಳಿವೆ, ಅವುಗಳ ಮೇಲೆ ಸಂಶೋಧನೆ ಮಾಡುವಂಥ ಹಕ್ಕನ್ನೂ ಸಹ ಇವತ್ತಿನ ದಿವಸ

ಬಹು ರಾಷ್ಟ್ರೀಯ ಕಂಪನಿಗಳಿಗೆ ಕೊಡುತ್ತಿದ್ದಾರೆ. ಹೊಸ ಬೀಜ ಉತ್ಪಾದನೆಯಾದರೆ ಆ ಬೀಜವನ್ನು ಇವತ್ತಿನ ದಿವಸ ನಾವು ಪಡೆಯಬೇಕಾಗಿದ್ದರೆ ಮತ್ತು ಪುನಃ ಆ ಬೀಜದಿಂದ ಉತ್ಪಾದನೆ ಮಾಡುವಂಥ ಅಧಿಕಾರ ನಮಗಿರುವುದಿಲ್ಲ. ಎಷ್ಟೇ ಬೆಲೆ ಹೇಳಿದರೂ ಸಹ ಆ ಬಹುರಾಷ್ಟ್ರೀಯ ಕಂಪನಿಗಳಿಂದ ಬೀಜಗಳನ್ನು ಕೊಳ್ಳಬೇಕಾಗಿದೆ ಮತ್ತು ಅವುಗಳಿಗೆ ಬರತಕ್ಕಂಥ ರೋಗಗಳನ್ನು ತಡೆಗಟ್ಟುವುದಕ್ಕೆ ಅವರು ಏನು ರಾಸಾಯನಿಕಗಳನ್ನು ಸಿದ್ಧಪಡಿಸುತ್ತಾರೆ ಅವುಗಳನ್ನೇ ಕೊಂಡುಕೊಳ್ಳುವಂಥ ಪದ್ಧತಿ ನಮಗೆ ಬರುತ್ತದೆ. ಇದರಿಂದ ಏನಾಗುತ್ತದೆ ? ಅವರ ಹೇಳಿದ ಬೀಜಗಳನ್ನು ಕೊಂಡುಕೊಳ್ಳಬೇಕು, ಅವರು ಹೇಳಿದಂಥ ರಾಸಾಯನಿಕ ಗೊಬ್ಬರವನ್ನು ಕೊಂಡುಕೊಳ್ಳಬೇಕು ಮತ್ತು ಅವರು ಹೇಳಿದಂಥ ಬೆಲೆಗೆ ನಾವು ಕೊಂಡುಕೊಳ್ಳಬೇಕಾಗುತ್ತದೆ. ಇಷ್ಟನ್ನು ಮಾಡುವುದರ ಮೂಲಕ ನಮ್ಮ ದೇಶದ ಸಾರ್ವಭೌಮತೆಯನ್ನು ಇವತ್ತಿನ ದಿವಸ ಅವರಿಗೆ ಅಡುವು ಇಡಲಿಕ್ಕೆ ಪ್ರಯತ್ನ ಪಟ್ಟಂತೆ ಆಗುವುದಿಲ್ಲವೆ ? ನಿಜವಾಗಿ ನಾವು ಆರ್ಥಿಕವಾಗಿ ಅವರ ದಾಸ್ಯಕ್ಕೆ ಒಳಗಾಗುತ್ತೇವೆಂದು ಹೇಳಿದರೆ ಖಂಡಿತವಾಗಿಯೂ ತಪ್ಪಾಗಲಿಕ್ಕಿಲ್ಲ. ಈ ರೀತಿ ಇರತಕ್ಕಂಥ ಡಂಕಲ್ ಪ್ರಸ್ತಾವನೆಯನ್ನು ಏತಕ್ಕೋಸ್ಕರ ನಾವು ಇಲ್ಲಿ ಚರ್ಚೆ ಮಾಡುವುದಿಲ್ಲ ? ಏತಕ್ಕೋಸ್ಕರ ನಮ್ಮ ಸರ್ಕಾರಕ್ಕೆ ನಿರ್ದಿಷ್ಟವಾದ ನೀತಿ ಇಲ್ಲ ? ಸನ್ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ, ''ಗ್ಯಾಟ್'' (GATT) ಕುರಿತ ಸಮಾಲೋಚನಾ ಸಭೆಗಳ ಮುಂದಿಟ್ಟಿರುವ ಡಂಕಲ್ ಪ್ರಸ್ತಾವನೆಯಲ್ಲಿ ಒಳಗೊಂಡಿರುವ, ವ್ಯಾಪಾರ ಸಂಬಂಧಿ ಬೌದ್ಧಿಕ ಆಸ್ತಿಯ ಹಕ್ಕುಗಳಿಂದ ಉಂಟಾಗುವ ಪರಿಣಾಮಗಳ ಬಗ್ಗೆ ಹೇಳುವುದಾದರೆ, ಅದು ರಾಜ್ಯದ ಹಿತಾಸಕ್ತಿಯ ಮೇಲೆ ಉಂಟು ಮಾಡುವ ಪರಿಣಾಮಗಳ ಬಗ್ಗೆಯೂ ಸರ್ಕಾರ ಪರಿಶೀಲಿಸುತ್ತಿದೆ.'' ಯಾವಾಗ ಸ್ವಾಮಿ ? ಇದು ಎಷ್ಟು ದಿವಸ ಆಯಿತು ? ನಿನ್ನೆ ದಿವಸ ಬಂತೆ ? ಮೊನ್ನೆ ಬಂತೇ ? ಕಳೆದ ಎರಡು ವರ್ಷಗಳಿಂದ ಇದು ನಡೆಯುತ್ತಿದೆ. ಒಂದು ವಿಚಾರ ಸಂಕೀರ್ಣವನ್ನು ಮಾಡಲಿಲ್ಲ. ಅದಕ್ಕಿಂತ ಹೆಚ್ಚಾಗಿ ನಮ್ಮ ರಾಜ್ಯದ ಕೃಷಿ ಮಂತ್ರಿಗಳು ಇದರ ಬಗ್ಗೆ ಯಾವುದೇ ಪ್ರಯತ್ನ ಮಾಡಲಿಲ್ಲ. ನಮ್ಮ ರಾಜ್ಯ ಸರ್ಕಾರವೂ ಸಹಾ ಏನೂ ಮಾಡಲಿಲ್ಲ. ಈಗ ಅವರು ಹೇಳುತ್ತಾರೆ. ''ಈ ಪ್ರಸ್ತಾವನೆಯಿಂದಾಗಿ ಕೃಷಿ, ಆರೋಗ್ಯ ಮತ್ತು ಕೈಗಾರಿಕೆ ಮುಂತಾದ ವಲಯಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆಂದು ಹಾಗೂ ಅದು ಉದ್ಯೋಗಾವಕಾಶಗಳ ಮೇಲೆಯೂ ಪರಿಣಾಮ ಬೀರುತ್ತದೆಂದು ವಿವಿಧ ರಂಗಗಳಲ್ಲಿ ವ್ಯಕ್ತವಾಗಿರುವ ಶಂಕೆಯನ್ನು ಇವರಿಗೆ ಯಾವುದೇ ಶಂಕೆ ಇಲ್ಲ''. ಏಕೆಂದರೆ ಯಾವುದೇ ಒಂದು ನಿರ್ದಿಷ್ಟವಾದಂಥ ನೀತಿ ಈ ಸರ್ಕಾರಕ್ಕಿಲ್ಲ. ಈ ಮಾತನ್ನು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ಇದನ್ನು ಬೇರೆಯವರು ಹೇಳಬೇಕೇ ? ಸರ್ಕಾರಕ್ಕೆ ಏನಾದರೂ ಅಧಿಕಾರ ಇಲ್ಲವೇ ? ಡಂಕಲ್ ಪ್ರಸ್ತಾವನೆಯಿಂದ ಈ ರಾಜ್ಯದ ರೈತರ ಮೇಲೆ ಏನು ಪರಿಣಾಮವಾಗುತ್ತದೆ, ಈ ರಾಜ್ಯದ ಆಹಾರ ಧಾನ್ಯಗಳ ಉತ್ಪಾದನೆ ಮೇಲೆ ಏನು ಪರಿಣಾಮವಾಗುತ್ತದೆ, ರಾಜ್ಯ ಮತ್ತು ರಾಷ್ಟ್ರದ ಸಾರ್ವಭೌಮತ್ವದ ಮೇಲೆ ಏನು ಪರಿಣಾಮ ಬೀರುತ್ತದೆ ? ಅದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಸ್ವಲ್ಪವೂ ಗೊತ್ತಿಲ್ಲ, ಎನ್ನುವ ಮಾತನ್ನು ಈ ವಾಕ್ಯ ಹೇಳುತ್ತದೆಂದರೆ ತಪ್ಪಾಗಲಿಕ್ಕಿಲ್ಲ. ಇಂಥ ಒಂದು ಉದಾಸೀನದಿಂದ ಕೂಡಿದ ಸರ್ಕಾರವನ್ನು ದಕ್ಷ ಸರ್ಕಾರ ಎಂದು ನಾವು ಕರೆಯಬೇಕೇ ? ಅಥವಾ ಈ ದೇಶದ ಜನರ ಹಿತವನ್ನು ಕಾಪಾಡಲಿಕ್ಕೆ ಯಾವುದಾದರೂ ಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂಬ ಮಾತನ್ನು ಹೇಳುತ್ತಿದ್ದೀರಾ ? ಈ ಒಂದು ಸರ್ಕಾರ ಏನಿದೆ ಇದು ಬಾಲಂಗಿ ಸರ್ಕಾರ. ಕೇಂದ್ರ ಸರ್ಕಾರ ಏನು ಮಾಡಿದರೂ ಅದನ್ನು ಒಪ್ಪುವಂಥ ಸರ್ಕಾರ ಇದಾಗಿದೆ ಹೊರತಾಗಿ ಅದಕ್ಕೆ ವಿರುದ್ಧವಾದ ರೀತಿಯಲ್ಲಿ ಈ ಸರ್ಕಾರ ಮಾತನಾಡಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ. ನನ್ನ ಹತ್ತಿರ ಕೆಲವು ಅಂಕಿ ಅಂಶಗಳಿವೆ. ಇವರು ಏನೂ ಹೆದರಬೇಕಾಗಿಲ್ಲ. ಕಾಂಗ್ರೆಸ್ ಪಕ್ಷದ ಪಾರ್ಲಿಮೆಂಟಿನ ಸದಸ್ಯರೇ ಇದನ್ನು ಹೇಳಿದ್ದಾರೆ. ನಾನು ಹೇಳುವಂಥ ಮಾತಲ್ಲ, ಪಾರ್ಲಿಮೆಂಟಿನ ಸದಸ್ಯರೇ ಈ ದೇಶದ ಪ್ರಧಾನ ಮಂತ್ರಿಗೆ ಪತ್ರ ಬರೆದಿದ್ದಾರೆ. ಇದರಿಂದ ದುಷ್ಪರಿಣಾಮವಾಗುತ್ತದೆ,

ಇದನ್ನು ಒಪ್ಪಿಕೊಳ್ಳಬಾರದೆನ್ನುವ ಮಾತನ್ನು ಹೇಳಿದ್ದಾರೆ. ಇದು ಈ ರಾಜ್ಯದ ಮುಖ್ಯಮಂತ್ರಿಗಳಿಗೆ ಮತ್ತು ಮಂತ್ರಿಗಳಿಗೆ ಇದು ಗೊತ್ತಿಲ್ಲವೇ ? ಇದಕ್ಕೆ ಸಂಶಯ ಬೇಕೇ ? ಇದರ ಅರ್ಥವೇನೆಂದರೆ, ಈ ದೇಶದ ರೈತರ ಬಗ್ಗೆ ಮತ್ತು ಉತ್ಪಾದನೆ ಬಗ್ಗೆ ಇವರಿಗೆ ಯಾವುದೇ ಕಾಳಜಿ ಇಲ್ಲ. ಅದಕ್ಕೆ ಬದಲಾಗಿ ತಮ್ಮದೇ ಆದಂಥ ವ್ಯವಹಾರಗಳಲ್ಲಿ ಮಗ್ನವಾಗಿರುವಂಥ ಸರ್ಕಾರ ಇದು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇವರು ಒಂದು ಕಾನೂನನ್ನು ತಂದಿದ್ದಾರೆ. ಇವರು ರೈತರ ಪರ ಎಂಬ ಮಾತನ್ನು ಹೇಳುತ್ತಾರೆ. ಈ ಸರ್ಕಾರದ್ದು ಡೋಂಗಿ ಕೃಷಿ ನೀತಿ ಏನಿದೆ ಅದನ್ನು ಬಯಲಿಗೆ ಎಳೆಯುವುದಕ್ಕೆ ನಾನು ಇಷ್ಟಪಡುತ್ತೇನೆ. 1991ನೇ ಇಸವಿಯಲ್ಲಿ ಒಂದು ಕಾನೂನು ಬಂತು. ಅದು ಕೃಷಿ ಉತ್ಪಾದನಾ ಪ್ರೋತ್ಸಾಹಕರ ಒಂದು ಯೋಜನೆ. ಅಗ್ರಿಕಲ್ಚರಲ್ ಪ್ರೊಡಕ್ಷನ್ ಇನ್‌ಸೆಂಟೀವ್ ಸ್ಕೀಮ್ ಎಂದು. ಕೃಷಿ ಉತ್ಪಾದನಾ ಪ್ರೋತ್ಸಾಹಕರ ಯೋಜನೆ. ಸನ್ಮಾನ್ಯ ಅಧ್ಯಕ್ಷರೇ, ಇದನ್ನು ಅವರು ಕೈಬಿಟ್ಟರು. ಇವರು ಏನು ಕೊಡುತ್ತಿದ್ದರು ? ಯಾರಾದರೂ ತಮ್ಮ ಸಾಲವನ್ನು ವಾಯಿದೆಯೊಳಗಾಗಿ ತೀರಿಸಿದರೆ ಅದರ ಮೇಲೆ ಶೇಕಡಾ 5 ರಷ್ಟು ಬಡ್ಡಿಯನ್ನು ರಿಯಾಯಿತಿ ದರದಲ್ಲಿ ಕೊಡುತ್ತಿದ್ದರು. ಅದನ್ನು ಸರ್ಕಾರ ಬಂದ ಮೇಲೆ ಇಲ್ಲದ ಹಾಗೆ ಮಾಡಿತು. ಅದಕ್ಕಿಂತ ಹೆಚ್ಚಾಗಿ ಈ ಒಂದು ಸರ್ಕಾರ ದೇಶದ ಜನರಿಗೆ ಮತ್ತು ರಾಷ್ಟ್ರಕ್ಕೆ ವಂಚನೆ ಮಾಡಿದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಕೇಂದ್ರ ಸರಕಾರದವರು, ಯಾರು ಈ ಗೊಬ್ಬರದ ಏರಿಕೆಯಿಂದಾಗಿ, ಗೊಬ್ಬರದ ಸಹಾಯಧನವನ್ನು ನಿಲ್ಲಿಸುವುದರ ಮುಖಾಂತರ, ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ತೊಂದರೆಯಾಯಿತು, ಅದಕ್ಕೋಸ್ಕರ , ಅವರು ಆ ಹಣವನ್ನು ಬಿಡುಗಡೆ ಮಾಡಿದ್ದರು. 36 ಕೋಟಿ, 96 ಲಕ್ಷ ರೂಪಾಯಿಗಳನ್ನು ಅವರು ಬಿಡುಗಡೆ ಮಾಡಿದರು. ಇದನ್ನು ಯಾರಿಗೆ ಉಪಯೋಗಿಸಿದರು ? ಈ ಬಗ್ಗೆ ಕೇಂದ್ರ ಸರಕಾರ ಏನು ಸೂಚನೆ ಮಾಡಿದೆ, ಆ ಒಂದು ಕಾರ್ಯಕ್ರಮಕ್ಕೆ ಇದನ್ನು ಉಪಯೋಗಿಸಬೇಕಾದುದು ಅತ್ಯಾವಶ್ಯಕ. ಸಣ್ಣ ಮತ್ತು ಅತಿ ಸಣ್ಣ ರೈತರು ಯಾರಿದ್ದಾರೆ, ಅವರಿಗೆ ಈ ಗೊಬ್ಬರದ ಸಬ್ಸಿಡಿಯನ್ನು ತೆಗೆದುದರಿಂದ ಏನು ತೊಂದರೆಯಾಗಿದೆ ಅದಕ್ಕೆ ಸಹಾಯ ನೀಡುವ ಬಗ್ಗೆ ಇದನ್ನು ಉಪಯೋಗಿಸಬೇಕು, ಒಂದು ವೇಳೆ ನಿಮಗೆ ಅಗತ್ಯ ಕಂಡು ಬಂದರೆ, ನಿಮ್ಮದೇ ಆದಂಥ ಯೋಜನೆಯನ್ನು ಮಾಡಿಕೊಳ್ಳಬಹುದು, ಆ ಯೋಜನೆಗೆ ಕೇಂದ್ರ ಸರಕಾರದ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕೆಂಬ ಮಾತನ್ನು ಕೂಡ ಹೇಳಿದ್ದಾರೆ. finally they have been informed that the State Government may also take up schemes other than those suggested by the Government of India with due consultation with the Department of Agriculture and Co-operation, Government of India, New Delhi. ಇವತ್ತಿನ ದಿವಸ ಈ ಹೆಸರಿನಲ್ಲಿ ಹೊಸ ಯೋಜನೆಯನ್ನು ಏನು ತೆಗೆದುಕೊಂಡಿದ್ದೀರಿ, ಅದಕ್ಕೆ ನೀವು ಕೇಂದ್ರ ಸರಕಾರದ ಒಪ್ಪಿಗೆಯನ್ನು ತೆಗೆದುಕೊಂಡಿದ್ದೀರಾ ? ಇದು ಎಂಥ ಸರಕಾರ ಅಂದರೆ, ಕಳೆದ ಹಲವಾರು ವರ್ಷಗಳಿಂದ ಯಾವ ಬಾವಿಗಳು ವಿಫಲವಾಗಿದ್ದುವು, ವಿಫಲವಾಗಿರುವಂಥ ಬಾವಿಗಳನ್ನು ತೆಗೆದಿರುವಂಥ ಜನರು ಯಾರಿದ್ದಾರೆ, ಅವರಿಗೆ ಹಣವನ್ನು ಕೊಟ್ಟಿರಲಿಲ್ಲ. ಅಂಥವರಿಗೆ ಸುಮಾರು ಐದು ಕೋಟಿಗಿಂತಲೂ ಹೆಚ್ಚಿಗೆ ಹಣವನ್ನು ಕೊಡಬೇಕಾಗಿತ್ತು. ಆ ಹಣ ಕೊಡಲಾರದ ಸರಕಾರ ಈಗ ಅದಕ್ಕಾಗಿ ಎರಡು ಕೋಟಿ ರೂಪಾಯಿಗಳ ಹಣವನ್ನು ತೆಗೆದಿಟ್ಟಿದೆ ಅಂದರೆ, ಇದು ಹಣದ ದುರುಪಯೋಗವಲ್ಲವೆ ? ಅದೇ ರೀತಿಯಾಗಿ ಇವೊತ್ತಿನ ದಿವಸ ಬೇರೆ ಇನ್ನೊಂದು ಯೋಜನೆಯನ್ನೂ ಕೂಡ ಸರಕಾರ ತಂದಿದೆ. ಹೀಗೆ ಸರಕಾರದವರು ಅನೇಕ ತೀರ್ಮಾನಗಳನ್ನು ತೆಗೆದುಕೊಂಡಾಗ ಅದರ ಸಾಧಕಬಾಧಕಗಳ ಬಗ್ಗೆ ನಾವು ಇಲ್ಲಿ ಟೀಕೆ ಮಾಡಿದಾಗ ಮಾತ್ರ ಅದು ಅರ್ಥಪೂರ್ಣವಾಗುತ್ತದೆ. ಹೀಗೆ ಚರ್ಚೆಯಾದರೆ ಸರಕಾರದವರು ಪುನರ್‌ಪರಿಶೀಲನೆ ಮಾಡಲು ಸಹಾಯಕವಾಗುತ್ತದೆ ಎಂಬ ದೃಷ್ಟಿಯಲ್ಲಿ ನಾನಿಲ್ಲಿ ಚರ್ಚೆ ಮಾಡುತ್ತಿದ್ದೇನೆ.

ಇವೊತ್ತು ಸರಕಾರದಲ್ಲಿ 36,96,00,000 ರೂಪಾಯಿಗಳು ಇದ್ದರೆ, ಇದನ್ನು ಈ ವರ್ಷ ಖರ್ಚು ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಈ ದಿಸ್ಸೆಯಲ್ಲಿ ಖರ್ಚು ಮಾಡಲು ಕೇಂದ್ರ ಸರಕಾರದವರು ಹೇಳಿದ ರೀತಿಯಲ್ಲಿ ಪರಿಹಾರವನ್ನು ಯಾವ ಜನರಿಗೆ ಕೊಡಬೇಕಾಗಿತ್ತೋ, ಅವರಿಗೆ ಸಲ್ಲುವ ರೀತಿಯಲ್ಲಿ ಇದನ್ನು ಖರ್ಚು ಮಾಡಬೇಕು. ಅದನ್ನು ಬಿಟ್ಟು ಹೀಗೆ ಮಾಡಿದರೆ ಅದು ದುರುಪಯೋಗವಾಗುವುದಿಲ್ಲವೆ? ಸರಕಾರವು ತನಗೆ ಬೇಕಾದಂಥ ರೀತಿಯಲ್ಲಿ ಹಣವನ್ನು ಉಪಯೋಗಿಸಿಕೊಳ್ಳುವುದಾದರೆ, ಅದನ್ನು ನಾವು ಬಯಲಿಗೆಳೆಯದಿದ್ದರೆ ಅದರಿಂದ ಏನು ಪ್ರಯೋಜನ? ಇವತ್ತಿನ ದಿವಸ 5500 ಜನರ ಬಾವಿಗಳು ಏನು ವಿಫಲವಾಗಿವೆ, ಅವರಿಗೆ ಕೊಡಬೇಕಾದ ಸುಮಾರು ಐದು ಕೋಟಿಗಿಂತ ಹೆಚ್ಚು ಹಣವನ್ನು ಮೂರು ವರ್ಷಗಳಿಂದ ಕೊಟ್ಟಿಲ್ಲ ಎಂದರೆ, ಅದನ್ನು ಈಗ ಎರಡು ಕೋಟಿ ಕೊಡುತ್ತೇವೆ ಎಂದು ಹೇಳುವುದಾದರೆ ಅದು ಎಷ್ಟರ ಮಟ್ಟಿಗೆ ಸರಿಯಾಗುತ್ತದೆ? ಇವೊತ್ತಿನ ದಿವಸ ಬೀಜಗಳನ್ನು ಕೊಡುತ್ತಾ ಇದ್ದಾರೆ. ಅದನ್ನು ಸಬ್ಸಿಡಿ ದರದಲ್ಲಿ ಕೊಡುವ ಬಗ್ಗೆ ಒಂದು ಯೋಜನೆಯನ್ನು ಮಾಡಿದ್ದಾರೆ. ಇದಕ್ಕೂ ಸಹ ಕೇಂದ್ರ ಸರಕಾರದಿಂದ ಯಾವುದೇ ರೀತಿಯ ಒಪ್ಪಿಗೆಯನ್ನು ಪಡೆದಿಲ್ಲ. ಇವೊತ್ತಿನ ದಿವಸ ವಿವಿಧ ಯೋಜನೆಗಳಿಗೆ ಹಣವನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ ಅಥವಾ ರೈತರ ಪರವಾಗಿ ನಾವು ಇದ್ದೇವೆಂಬ ಮಾತನ್ನು ಏನು ಹೇಳುತ್ತಿದ್ದಾರೆ, ಇದನ್ನೆಲ್ಲಾ ಗಮನದಲ್ಲಿ ತೆಗೆದುಕೊಂಡಾಗ ಸರಕಾರ ನಡೆಯುವ ರೀತಿ ಏನಿದೆ, ಹಿಂದಿನ ಸರಕಾರಕ್ಕಿಂತ ಇದು ಯಾವುದೇ ರೀತಿಯಲ್ಲಿ ಭಿನ್ನವಾಗಿಲ್ಲ. ಹಳ್ಳಿ ಜನರು ಇದಕ್ಕಿಂತ ಬಂಗಾರಪ್ಪನವರ ಸರಕಾರವೇ ಚೆನ್ನಾಗಿತ್ತು ಎಂದು ಹೇಳಿಕೊಳ್ಳುವ ಪರಿಸ್ಥಿತಿಯನ್ನು ಇವರು ಮುಟ್ಟುತ್ತಾ ಇದ್ದಾರೆ. ಇವರು ಅನುಸರಿಸತಕ್ಕಂಥ ನೀತಿ ಏನಿದೆ ಅದು ಹಳೆಯ ಸರಕಾರಕ್ಕಿಂತ ಯಾವುದೇ ರೀತಿಯಲ್ಲಿ ಭಿನ್ನವಾಗಿಲ್ಲ ಮತ್ತು ದುಡಿಯುವ ಜನರ ಪರವಾಗಿ ಈ ಸರಕಾರವಿಲ್ಲ ಎನ್ನುವ ಮಾತನ್ನು ಹೇಳಿ, ನನ್ನ ಈ ತಿದ್ದುಪಡಿ ಏನಿದೆ, ಇದನ್ನು ತಾವುಗಳೆಲ್ಲರೂ ಒಪ್ಪಬೇಕು, ಎಂದು ಮಾನ್ಯ ಕಾಂಗ್ರೆಸ್ ಸದಸ್ಯರಲ್ಲಿಯೂ ಕೇಳಿಕೊಳ್ಳುತ್ತೇನೆ. ಏಕೆಂದರೆ, ಏನು ಇವೊತ್ತಿನ ದಿವಸ ಪತ್ರವನ್ನು ಬರೆದಿದ್ದಾರೆ, ನಾನು ಹೇಳಿದಂಥ ಡಂಕಲ್ ಪ್ರಸ್ತಾವನೆ ಬಗ್ಗೆ ಕಾಂಗ್ರೆಸ್‌ನ ಅನೇಕ ಜನ ಎಂ.ಪಿ.ಗಳು ಒಟ್ಟು ಎಲ್ಲರೂ ಸೇರಿ 250 ಜನರಿಗಿಂತ ಹೆಚ್ಚು ಜನ ಎಂ.ಪಿ.ಗಳು ಇದನ್ನು ಸಮರ್ಥನೆ ಮಾಡಿದ್ದಾರೆ. ಆದ್ದರಿಂದ ನಮ್ಮ ಸ್ನೇಹಿತರುಗಳು ಕೂಡ ಈ ಒಂದು ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು ಎಂದು ವಿನಂತಿಸಿಕೊಂಡು ನನಗೆ ಇಷ್ಟು ಕಾಲಾವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ಈ ಸರ್ಕಾರದ ಪಾಲಿಸಿ ಮತ್ತು ಮುಂದಿನ ವರ್ಷದ ಆಕ್ಷನ್ ಪ್ಲಾನ್ ಆಗಿರಬೇಕಾಗಿತ್ತು ಎಂದು ಭಾವಿಸಿದವರಲ್ಲಿ ನಾನು ಒಬ್ಬ. ಆದರೆ ಮೂರು ವರ್ಷದ ರಾಜ್ಯಪಾಲರ ಭಾಷಣವನ್ನು ಓದುತ್ತಾ ಹೋದಾಗ ಈ ಸರ್ಕಾರದ ಗುರಿ ಏನು, ಇವರು ಹೋಗುತ್ತಿರುವ ಮಾರ್ಗ ಏನು, ಇವರ ಉದ್ದೇಶ ಏನು ಎನ್ನುವುದು ಇನ್ನು ಅರ್ಥ ಆಗದೇ ಈ ಸ್ಥಾನದಲ್ಲಿ ನಿಂತಿರುವ ಶಾಸಕ ನಾನು ಎಂದು ತಮಗೆ ಹೇಳಬಯಸುತ್ತೇನೆ. ಒಂದು ಮಾತನ್ನು ತಮಗೆ ಹೇಳಬಯಸುತ್ತೇನೆ. ಇವರು ಯಾವುದೇ ಕ್ಷೇತ್ರದಲ್ಲಿ ಅಂದರೆ ಕೃಷಿ ಇರಬಹುದು, ಅರ್ಥ ವ್ಯವಸ್ಥೆ ಇರಬಹುದು, ಇವುಗಳಲ್ಲಿ ಯಾವ ಒಂದು ಗುರಿಯನ್ನು ಇಟ್ಟುಕೊಂಡಿಲ್ಲ, ಆ ದಿಕ್ಕಿನಲ್ಲಿ ಹೆಜ್ಜೆಯನ್ನು, ನಡಿಗೆಯನ್ನು ಆರಂಭ ಮಾಡಿಲ್ಲ. ಅವರ ನಾಯಕರಾಗಿದ್ದ ಶ್ರೀಮಾನ್ ಗುಂಡೂರಾಯರ ಹೆಸರನ್ನು ಬಳಸಬಹುದು. ಆದರೆ ಇನ್ನೂ ಟೇಕ್ ಆಫ್ ಆಗಿಲ್ಲ ಅಂದರೆ ಇನ್ನೂ ಆರಂಭವೇ ಆಗದ ಸರ್ಕಾರ ಇದು ಎಂದು ಏನು ಹೇಳಿದ್ದಾರೆ ಅದನ್ನೇ ನಾನು ಕೂಡ ಈ ಸಮಯದಲ್ಲಿ ಕ್ವೋಟ್ ಮಾಡುತ್ತೇನೆ. ಏಕೆಂದರೆ ನಾನು ಹೋದ ಸಲ ತಿಳಿದುಕೊಂಡಿದ್ದೆ, ಇವರು ತಹಶೀಲ್ದಾರರನ್ನು ಪ್ರೊಮೋಟ್ ಮಾಡುತ್ತೇವೆ ಎಂದು ತೀರ್ಮಾನ ತೆಗೆದುಕೊಂಡಾಗ,

ಅಸಿಸ್ಟೆಂಟ್ ಕಮೀಷನರ್ ಹುದ್ದೆಯನ್ನು, ಡಿವಿಜನಲ್ ಕಮೀಷನರ್ ಹುದ್ದೆಯನ್ನು ರದ್ದು ಮಾಡುತ್ತೇವೆಂದು ಹೇಳಿದರು. ಆದರೆ ಆ ಎರಡು ಹುದ್ದೆಗಳನ್ನು ಉಳಿಸಿಕೊಂಡು ತಹಸೀಲ್ದಾರರುಗಳಿಗೆ ಮಾತ್ರ ಪ್ರಮೋಷನ್ ಕೊಟ್ಟರು. ಇನ್ನೊಂದು ಕಡೆ ಕೃಷಿಕ್ಷೇತ್ರ ಏನು ವಿಸ್ತರಣೆ ಆಗಲಿಲ್ಲ. ಎಲ್ಲಾ ಅಗ್ರಿಕಲ್ಚರ್ ಅಸಿಸ್ಟೆಂಟ್‌ಗಳು, ಎ.ಒ.ಗಳಾಗಿ ಬಿಟ್ಟರು, ಅಗ್ರಿಕಲ್ಚರ್ ಆಫೀಸರ್‌ಗಳು ಆಗಿಬಿಟ್ಟರು. ಮತ್ತೆ ಏಕಾಏಕಿ ಟ್ರಾನ್ಸ್‌ಫರ್‌ಗಳು, ಪ್ರೊಮೋಷನ್‌ಗಳು ಮಾಡಿದರು. ಇದು ನನಗೆ ಅರ್ಥವಾಗಲಿಲ್ಲ. ಇವತ್ತು ತಹಶೀಲ್ದಾರರು ಕ್ಲಾಸ್ –1 ಆಗುವುದಾದರೆ ಅಸಿಸ್ಟೆಂಟ್ ಕಮೀಷನರ್ ಏನು ಆಗಿದ್ದಾರೆ. ಅವರನ್ನು ಏಕೆ ರದ್ದು ಮಾಡಲಿಲ್ಲ. ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಮಾತನಾಡುತ್ತಾರೆ. ದುಡ್ಡು ಬೇಕೆ ಅಂದರೆ ಒಂದಷ್ಟು ಪ್ರಮೋಷನ್‌ನನ್ನು ಚಾಲೂ ಮಾಡುತ್ತಾರೆ ಎಂದು. ನನ್ನನ್ನು ಒಬ್ಬ ಸಾಮಾನ್ಯ ರೈತ ಕೇಳಿದ, ಸೇಂದಿ ರದ್ದು ಮಾಡುವ ಸರ್ಕಾರ ಡಿ.ಸಿ. ಬೇಕು ಎಂದು ತೀರ್ಮಾನ ಮಾಡಿದೆ. ಬಹಳಷ್ಟು ಎಕ್ಸೈಜ್ ಇನ್ಸ್‌ಪೆಕ್ಟರ್‌ಗಳನ್ನು ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನಾಗಿ ಮಾಡಿದೆ. ಈ ಅವರ ಕೆಳಗೆ ಇರುವವರನ್ನು ಸಬ್ ಇನ್ಸ್‌ಪೆಕ್ಟರ್ ಮಾಡಿದೆ, ಇದೆಲ್ಲ ಏಕೆ ಬೇಕಾಗಿತ್ತು ಎಂದರೆ ಅದಕ್ಕೆ ನಮಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಇವತ್ತು ಟಾಡಿ ಬಾಬನ್ನು ರದ್ದು ಮಾಡಿ ಅರ್‍ಯಾಕ್ ಮತ್ತು ಐ.ಎಮ್.ಎಫ್.ಎಲ್.ನ್ನು ನೋಡಿಕೊಳ್ಳುವುದಕ್ಕೆ ಪ್ರೊಮೋಷನ್ ಕೊಡುತ್ತಾರೆ, ಹೊಸ ಜಿಲ್ಲಾಧಿಕಾರಿಗಳ ಹುದ್ದೆಯನ್ನು ಸೃಷ್ಟಿ ಮಾಡುತ್ತಾರೆ. ಈ ರೀತಿ ನಡೆಯುತ್ತಿರುವ ಸರ್ಕಾರದಲ್ಲಿ ಭಾಷಣ ಮಾಡುತ್ತಾರೆ. ನಮಗೆ ಸಂಬಳ ಕೊಡುವುದಕ್ಕೆ ಬಹಳ ತೊಂದರೆಯಾಗಿದೆ.

ಡೆವಲಪ್‌ಮೆಂಟ್‌ಗೆ ನಮ್ಮ ಹತ್ತಿರ ಹಣ ಕಡಿಮೆ ಉಳಿದಿದೆ ನಾವು ಈ ರಾಜ್ಯದ ಡೆವಲಪ್‌ಮೆಂಟ್‌ನ್ನು ಸಮರ್ಪಕವಾಗಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ಶ್ರೀ ಏಕಾಂತಯ್ಯನವರು ಹೇಳಿದ ಮಾತನ್ನೇ ಪುಷ್ಟೀಕರಿಸಿ ಒಂದು ಮಾತನ್ನು ಹೇಳುತ್ತೇನೆ. ಈ ಸರ್ಕಾರಕ್ಕೆ 41 ಜನ ಮಂತ್ರಿಗಳು ಬರಬೇಕಾಗಿತ್ತೆ? ಯಾವ ಸಮಯದಲ್ಲಿ ಎಂದರೆ ಸಂವಿಧಾನದ 72ನೇ ಅಮೆಂಡ್‌ಮೆಂಟ್‌ನ್ನು ಒಪ್ಪಿಕೊಳ್ಳುತ್ತೇವೆ, 73ನೇ ಅಮೆಂಡ್‌ಮೆಂಟ್ ರ್‍ಯಾಟಿಫೈ ಮಾಡುತ್ತೇವೆ ಅಂದರೆ ಜಿಲ್ಲಾ ಪರಿಷತ್ತಿಗೆ ಸ್ವಾಯತ್ತತೆ ಕೊಡುತ್ತೇನೆ ಎಲ್ಲಾ ಪ್ರಗತಿ ಮಾಡುವ ಇಲಾಖೆಗಳು ಅಥವಾ ಅಭಿವೃದ್ಧಿ ಮಾಡುವ ಇಲಾಖೆಗಳನ್ನು ಜಿಲ್ಲಾಪರಿಷತ್ತಿಗೆ ವರ್ಗಾವಣೆ ಮಾಡುತ್ತೇವೆ. ಅಲ್ಲಿ 20 ಜನ ಮಂತ್ರಿಗಳು, 20 ಜನ ಉಪಾಧ್ಯಕ್ಷರು, 20 ಜನ ಚೀಫ್ ಸೆಕ್ರೆಟರಿಗಳು ಇರುವ ಕಾಲದಲ್ಲೂ ಕೂಡ 41 ಜನ ಮಂತ್ರಿಗಳು ಇವರಿಗೆ ಏಕೆ ಬೇಕಾಗಿತ್ತು? ನನ್ನ ಗೆಳೆಯರು ಕೆಲವರು ಹೇಳುತ್ತಿದ್ದರು. ಇನ್ನು ಕೆಲವು ಮಂತ್ರಿಗಳಿಗೆ ಫೈಲೇ ಹೋಗಿಲ್ಲ. ಅವರು ಕಛೇರಿಗಳಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಆಗಿಲ್ಲ ಎಂದರು. ಏನಾದರೂ ಮಾಡಿದರೆ ಕಿ.ಮೀ.ಗೆ 6ರೂಪಾಯಿಗಳಂತೆ ಅಶೋಕ ಹೋಟೆಲಿನಿಂದ ಕಂಟೆಸಾ ಕಾರನ್ನು ತೆಗೆದುಕೊಂಡು ಬಂದು ಓಡಾಟ ಮಾಡುತ್ತಿದ್ದಾರೆ. ಅವರು ಅಸೆಂಬ್ಲಿಗೆ ಬರುವ ಸೌಜನ್ಯವನ್ನೂ ತೋರಿಸಲಿಲ್ಲ. ನನ್ನ ದುರಾದೃಷ್ಟ, ನಾನು ಕೃಷಿ ಮೂಲ ಉದ್ದೇಶದಿಂದ ಈ ಸಭೆಗೆ ಬಂದವನು. ಈಗ ಪರಿಸ್ಥಿತಿ ಏನಾಗಿದೆ ಎಂದರೆ, ನಾವು ಈ ವಿಧಾನಸಭೆಯ ಸದಸ್ಯರಾಗಿ ಜನರಿಗೆ ಉತ್ತರ ಹೇಳುವ ಸ್ಥಿತಿಯಲ್ಲಿ ಇಲ್ಲ. ಕೃಷಿ ಅವಲಂಬನೆಯಾದ ತೋಟಗಾರಿಕೆಯಲ್ಲಿ ಏನು ಮಾಡಿದ್ದೀರಿ, ರೇಷ್ಮೆ ಇಲಾಖೆಯಲ್ಲಿ ಏನೇನು ಮಾಡಿದ್ದೀರಿ; ಅನಿಮಲ್ ಹಸ್ಬಂಡರಿಯಲ್ಲಿ ಏನು ಮಾಡಿದ್ದೀರಿ ಎಂದು ಕೇಳಿದರೆ ದೊಡ್ಡ ಸೊನ್ನೆ. ಅವರಿಗೆ ಕೊಡತಕ್ಕಂತಹ ಅಲೋಕೇಷನ್ ಸೊನ್ನೆಯಾಗಿದೆ. ಆದರ ಮೇಲೆ ಒಂದೇ ಒಂದು ಭಾಷಣವು ಇಲ್ಲ. ಗೌವರ್ನರ್ ಭಾಷಣದಲ್ಲಿ ಒಂದೇ ಒಂದು ಸೊಲ್ಲು ಇಲ್ಲ. ಕೃಷಿರಂಗದಲ್ಲಿ ತಾವು ಏನು ಮಾಡಬೇಕೆಂದು ಇದ್ದೀರಿ ಎನ್ನುವುದು ಗೊತ್ತಿಲ್ಲ. ಶ್ರೀ ಏಕಾಂತಯ್ಯನವರು ಹೇಳಿದ ಮಾತಿಗೆ ನಾನು ಒಂದು ಮಾತನ್ನು ಸೇರಿಸಿ ಹೇಳುತ್ತೇನೆ. ನೀವು ಏನು ಪ್ರೊಡಕ್ಷನ್ ಇನ್ಸ್‌ಟೀವ್ ಕೊಟ್ಟಿರಿ ಅದರ ಬಗ್ಗೆ ಹೇಳುತ್ತೇನೆ. ಮಾರ್ಚಿ ಎಂಡ್‌ವರೆಗೆ ನೀವು ಇನ್ಸ್‌ಟೀವ್ ಡಿಕ್ಲೇರ್ ಮಾಡಿದರೆ, ಜನವರಿಯಲ್ಲಿ ನನ್ನ ಹಳ್ಳಿಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಬಂದು ದಾವ ಹಾಕಿಸುತ್ತಾರೆ. ಅದು 3 ಪರ್ಸೆಂಟ್

ದಾವ ಫೀಸ್, 165 ರೂಪಾಯಿ ಲಾಯರ್ ಫೀಸ್ ಆಗುತ್ತದೆ. ಯಾವ ಅನುಮಾನವೂ ನಮಗೆ ಮಾಡಲಿಲ್ಲ. ಮತ್ತೆ ಅದನ್ನು ಜುಲೈವರೆಗೆ ಎಕ್ಸ್‌ಟೆಂಡ್ ಮಾಡಿದ್ದೇವೆ, ಡಿಸೆಂಬರ್‌ವರೆಗೆ ಎಕ್ಸ್‌ಟೆಂಡ್ ಮಾಡಿದ್ದೇವೆ ಎಂದು ಹೇಳಿದ್ದೀರಿ, ಆದರೆ ಅಲ್ಲಿ ದಾವ ಆಗಿ ಕೋರ್ಟ್ ಮುಂದೆ ಡಿಕ್ರಿಗಳು ಪಾಸ್ ಆಗುತ್ತಿವೆ. ದಾವ ಹಾಕಬೇಡಿ ಸರ್ಕಾರ ಒಂದು ಘೋಷಣೆ ಮಾಡಿದೆ ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಹೇಳಿದೆ ಮಾರ್ಚಿ ಒಳಗೆ ಕೊಡಬೇಕು ಎಂದು ಸರ್ಕಾರ ಹೇಳಿದೆ, ನೀವು ಜನವರಿಯಲ್ಲೇ ದಾವ ಹಾಕಿದರೆ ನಾವು ಎಲ್ಲಿಗೆ ಹೋಗಬೇಕು ಎಂದು ಕೇಳಿದರೆ ಗೊತ್ತಿಲ್ಲ. ಕೋ–ಆಪರೇಟಿವ್ ಸೊಸೈಟಿ ಸ್ಥಿತಿ ಏನಾಯಿತು ಎಂದು ನನಗೆ ಗೊತ್ತಿಲ್ಲ. ಇವರು ಡೈರಿ ಬಗ್ಗೆ ದೊಡ್ಡ ಭಾಷಣ ಮಾಡಿದ್ದಾರೆ. ಈ ರಾಜ್ಯದಲ್ಲಿ 30 ಸಾವಿರ ಜನರನ್ನು ಸದಸ್ಯರನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ನಾಲ್ಕೂವರೆ ಕೋಟಿ ಜನಸಂಖ್ಯೆ ಇರುವ ಈ ರಾಜ್ಯದಲ್ಲಿ 30 ಸಾವಿರ ಜನರನ್ನು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಸದಸ್ಯರನ್ನಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ರಾಜ್ಯಪಾಲರ ಭಾಷಣದಲ್ಲಿ ಆಗಿರುವ ಘೋಷಣೆ. ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಲಕ್ಷಗಳಲ್ಲಿ ಹೇಳಬೇಕಾದ ಸಂಖ್ಯೆಯನ್ನು ಸಾವಿರಗಳಲ್ಲಿ ಹೇಳುತ್ತಿದ್ದಾರೆ. ಅದು ಒಂದು ತಾಲ್ಲೂಕ್‌ನಲ್ಲಿ ಮಾಡಬಹುದಾದ ಸದಸ್ಯತ್ವ. ಐದು–ಐದೂವರೆ ಸಾವಿರ ಹಾಲು ಸೊಸೈಟಿಗಳು ಇರುವ ಕಡೆ ನೀವು 30 ಸಾವಿರ ಜನರನ್ನು ಒಂದು ಸೊಸೈಟಿಗೆ 5–6 ಜನ ಸದಸ್ಯರನ್ನು ಜಾಸ್ತಿ ಮಾಡುತ್ತೇವೆಂದು ನೀವು ಹೇಳಬೇಕೆ. ಮತ್ತೆ ತಮಗೆ ಪರಿಜ್ಞಾನ ಇರಬೇಕು. ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಾಲು ಹಾಕದೇ ಇರತಕ್ಕಂಥ ರೈತ ನೀವು ಹೇಳಿದಾಕ್ಷಣಕ್ಕೆ ಸದಸ್ಯನಾಗುವುದಕ್ಕೆ ಬರುವುದಿಲ್ಲ. ಅವನು ಅಲ್ಲಿ 180 ದಿವಸ ಹಾಲು ಹಾಕಬೇಕು. ಇಂಥ ಘೋಷಣೆಗಳನ್ನು ರಾಜ್ಯಪಾಲರ ಭಾಷಣದಲ್ಲಿ ಮಾಡಿಕೊಂಡು ಹೋಗುವುದು ಮತ್ತು ಎಲ್ಲಾ ಕ್ಷೇತ್ರದಲ್ಲೂ ಮಂತ್ರಿಗಳನ್ನು ಸಮಾಧಾನ ಮಾಡುವುದಕ್ಕೆ ಒಂದೊಂದು ಪ್ಯಾರಾಗ್ರಾಫ್ ಸೇರಿಸಿಕೊಂಡು ಹೋಗುವುದು, ಇವರದು ಹೀಗೆ ಮಾಡುತ್ತೇವೆ, ಅವರದು ಹಾಗೆ ಮಾಡುತ್ತೇವೆ ಎಂದು ಈ ಭಾಷಣದಲ್ಲಿ ಸೇರಿಸಿರುವುದು ಅಷ್ಟೆ. ಅದು ಬಿಟ್ಟು ಇವರು ಯಾವುದೇ ಮೂಲ ಉದ್ದೇಶವನ್ನು ಟಚ್ ಮಾಡಿಲ್ಲ.

ಆಡಳಿತವನ್ನು ಹೇಗೆ ಸರಿ ಮಾಡುತ್ತೇವೆಂದು ಇಲ್ಲ. ಮಾನ್ಯ ವೀರೇಂದ್ರಪಾಟೀಲರು ಬಂದಾಗಿನಿಂದಲೂ ಹೈಪವರ್ ಕಮಿಟಿ ಮಾಡುತ್ತೇವೆ, ಸ್ಕ್ರೀನಿಂಗ್ ಕಮಿಟಿ ಮಾಡುತ್ತೇವೆ ಎಂದು ಹೇಳುತ್ತಿದ್ದರು. ಅದು ಎಲ್ಲಿಗೆ ಹೋಯಿತೊ ಗೊತ್ತಿಲ್ಲ. ಸ್ವಾಮಿ, ನಮ್ಮ ದೃಷ್ಟಿಯಲ್ಲಿ ಸರ್ಕಾರ ಬದಲಾಗಿಲ್ಲ, ಮಂತ್ರಿಗಳು ಬದಲಾಗಿದ್ದಾರೆ. ಮುಖ್ಯಮಂತ್ರಿಗಳು ಬದಲಾಗಿದ್ದಾರೆ. ಹಿಂದುಗಡೆ ಈ ಸದನದಲ್ಲಿ ಏನು ಘೋಷಣೆ ಮಾಡಿದ್ದೀರಿ, ರಾಜ್ಯಪಾಲರ ಬಾಯಲ್ಲಿ ಹೇಳಿಸಿದ್ದೀರಿ, ಅದನ್ನು ಏನು ಮಾಡಿದ್ದೀರೆಂದು ಯಾರಾದರೂ ಹೇಳುವ ಸೌಜನ್ಯ ತೋರಿಸಿದ್ದೀರ. ನಾನು ಮೂಲಭೂತವಾಗಿ ಕೇಳುತ್ತೇನೆ. ಇವತ್ತು ಅಸಿಸ್ಟೆಂಟ್ ಕಮೀಷನರ್‌ಗಳನ್ನು ಅಲ್ಲಿ ಏಕೆ ಇಟ್ಟಿರಿ ? ಇನ್ನೊಂದು ವಯಸ್ಸಿನ ಬಗ್ಗೆ ದಿಢೀರ್ ಘೋಷಣೆ. ಸರ್ಕಾರಿ ನೌಕರರ ವಯಸ್ಸನ್ನು 58 ರಿಂದ 55ಕ್ಕೆ ಇಳಿಸುತ್ತೇವೆಂದು ಒಂದು ಕಡೆ ಮಾತನಾಡುತ್ತಾರೆ. ಇನ್ನು ಒಂದು ಸಲ, ಇಲ್ಲ 33 ವರ್ಷ ಆದ ಮೇಲೆ ಅವರ ಸೇವೆ ಅಗತ್ಯ ಇಲ್ಲ, ಅದನ್ನು ನಿಲ್ಲಿಸಿ ಬಿಡುತ್ತೇವೆಂದು ಮಾತನಾಡುತ್ತಾರೆ. ಈ ರೀತಿ ರಾಜ್ಯದ ಜನರನ್ನು ಏಕೆ ಕನ್‌ಫ್ಯೂಷನ್‌ಲ್ಲಿ ತಾವು ಇಡುತ್ತಿದ್ದೀರಿ ಎನ್ನುವುದನ್ನು ಹೇಳಬೇಕು. ಸುಮ್ಮನೆ ಒಂದು ರೀತಿ ಆಡಳಿತ ನಡೆದುಕೊಂಡು ಹೋಗುವುದಕ್ಕೆ ತಾವು ಏಕೆ ಬಿಡುತ್ತಿಲ್ಲ. ಕೊನೆಯದಾಗಿ ಶಿಕ್ಷಣ ಕ್ಷೇತ್ರವನ್ನೂ ಕೂಡ ಇವರು ಬಿಟ್ಟಿಲ್ಲ. ಆಡು, ಮೇಕೆ ತರಹ ಇವರು ಮುಟ್ಟದ ಸೊಪ್ಪೇ ಇಲ್ಲ ಪ್ರೈಮರಿ ಎಜುಕೇಷನ್‌ನ್ನು ಸಾರ್ವತ್ರಿಕ ಮಾಡುತ್ತಾರಂತೆ ಇದು ನನಗೆ ಅರ್ಥವಾಗುತ್ತಿಲ್ಲ. ನಾನು ತಿಳಿದ ಮಟ್ಟಿಗೆ ಪ್ರೈಮರಿ ಎಜುಕೇಷನ್ ಈಗಲೂ ಕಂಪಲ್ಸರಿ. ಇದನ್ನು ಏನು ಸಾರ್ವತ್ರಿಕ ಮಾಡುತ್ತೇವೆಂದು ನೀವು ಹೇಳುತ್ತೀರೋ ಗೊತ್ತಿಲ್ಲ. ಹಾಗಾದರೆ ನಿಮ್ಮ ಅಕ್ಷಯ ಏನಾಯಿತು. ನಿಮ್ಮ ಅಕ್ಷಯ ಯೋಜನೆಯಲ್ಲಿ

ಎಷ್ಟು ಜನಕ್ಕೆ ಹಣವನ್ನು ಕೊಟ್ಟಿದ್ದೀರಿ. 3 ತಿಂಗಳು ಬಿಟ್ಟು 4ನೇ ತಿಂಗಳು ಯಾವುದಾದರೂ ಅಕ್ಷಯದಲ್ಲಿ ಹಣ ರಿಲೀಸ್ ಆಗಿರುವ ಒಂದೇ ಒಂದು ತಾಲ್ಲೂಕನ್ನು ನಮ್ಮ ಜಿಲ್ಲೆಯಲ್ಲಿ ಹೇಳುತ್ತೀರಾ ? ಅದು ಸೊನ್ನೆ. ಏನೋ ಹುಡುಗರಿಗೆ ಕೊಡುತ್ತಿದ್ದ ಯೂನಿಫಾರಂ ದುಡ್ಡು, ಟೆಕಸ್ಟ್ ಬುಕ್ ದುಡ್ಡನ್ನು ಡೈವರ್ಟ್ ಮಾಡಿ ನಾವು ಒಂದು ರೂಪಾಯಿ ಕ್ಯಾಷ್ ಕೊಡುತ್ತೇವೆಂದು ಹೇಳಿದ ಜನ ಆ ಸ್ಕೀಮನ್ನು ಮರೆತು ಬಿಟ್ಟರಿ. ಇನ್ನು ಆಶ್ರಯಕ್ಕೆ ಬಂದರೆ, ಪಟ್ಟಣದಲ್ಲಿ ಮುನಿಸಿಪಲ್ ಏರಿಯಾದಲ್ಲಿ, ಸೈಟ್ ಕೊಟ್ಟವರ ಹತ್ತಿರ ಅರ್ಧ ಧಾರಣೆ ವಾಪಸ್ಸು ತೆಗೆದುಕೊಳ್ಳಬೇಕು ಸೈಟ್‌ಗೆ ಬರತಕ್ಕ ಖರ್ಚಿನಲ್ಲಿ ಅರ್ಧ ದುಡ್ಡು ವಾಪಸ್ಸು ತೆಗೆದುಕೊಳ್ಳಿ. ನಮಗೆ ಶಾಸಕರಿಗೆ ಮುಖದ ಮೇಲೆ ಉಗಿಸಲಿಕ್ಕೆ, ಮಾಡಿರುವ ಕಾರ್ಯಕ್ರಮ ಇದು. ಗ್ರಾಮಾಂತರ ಪ್ರದೇಶದಲ್ಲಿ 30" x 40" ಸೈಟ್ ಉಚಿತವಾಗಿ ಕೊಡಿ ಎಂದಿರಿ, ಪಟ್ಟಣಕ್ಕೆ ಬಂದರೆ 20" x 30" ಸೈಟನ್ನು ಅರ್ಧ ಹಣ ವಾಪಸ್ಸು ತೆಗೆದುಕೊಳ್ಳಿ ಎಂದರೆ ಯಾರನ್ನು ಕೇಳುವುದಕ್ಕೆ ಹೋಗೋಣ ಎಲ್ಲಿ ಕೇಳೋಣ. ಭಾರಿ ಬಡವ ಎನ್ನುವವನಿಗೆ 375 ರಿಂದ 400 ರೂಪಾಯಿ ಇವತ್ತು ವಸೂಲಿ ಮಾಡುವ ಸ್ಥಿತಿಗೆ ತಂದು ನಿಲ್ಲಿಸಿದ್ದೀರಿ. ನಾವು ವಸೂಲಿಗೆ ನಿಂತಿದ್ದೇವೆಯೇ ? ಇದನ್ನು ಡ್ರಾಪ್ ಮಾಡಿ, ನಿಮ್ಮ ಆಶ್ರಯ ಒಂದು ಉಚಿತವಾಗಿ ನಿವೇಶನ ಕೊಡಿ ಕಾರ್ಯಕ್ರಮ ಎಂದು ನಿಮ್ಮನ್ನು ಬೇಡಿದೆವು. ಮೇಲೆ ಮನೆ ಕಟ್ಟುವ ಕೆಲಸ. ಸ್ವಾಮಿ ತಮಗೆ ಈ ಸದನದಲ್ಲಿ ಹೇಳುತ್ತೇನೆ.

ಯಾವುದೇ ಪುರುಷಾರ್ಥವಾಗಲಿ ಇದರಲ್ಲಿ ಮಾಡಲಿಲ್ಲ. ಮಂಡಲ ಪಂಚಾಯಿತಿಗಳಿಗೆ ಏನು ಮನೆ ಕೊಡುವ ಅಧಿಕಾರ ಇತ್ತೋ ಅದನ್ನು ಕಬಳಿಸಿದ್ದೀರಿ ಅವರು ಕೊಡಬೇಕಾದ ಮನೆಯನ್ನು ನಾವು ಕೊಡುತ್ತೇವೆ, ನಮ್ಮ ಘನತೆವೆತ್ತ ಭಾರೀ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಂದು ಪ್ರಚಾರ ಮಾಡಿರುವುದು ಬಿಟ್ಟರೆ ನಿಮ್ಮ ಕಾಂಟ್ರಿಬ್ಯೂಷನ್ ಈ ಸ್ಕೀಮ್‌ನಲ್ಲಿ – ಇಲ್ಲ. ಅವರು ಮನೆಗಳನ್ನು ಕಟ್ಟಿಸುತ್ತಿದ್ದರು, ಎಂದು ಕುಳಿತುಕೊಂಡು ರೆಗ್ಯುಲರ್‌ಆಗಿ ಮಾನಿಟರ್ ಮಾಡುತ್ತಿದ್ದರು. ಆ ಬಿ.ಡಿ.ಓ. ಆಫೀಸರ್‌ನವರನ್ನು ನೋಡಬೇಕೇ ? ಡೆಪ್ಯುಟಿ ಕಮಿಷನರ್ ಯಾರ ಮೂಲಕ ಈ ಕೆಲಸ ಮಾಡಿಸಬೇಕು ಎಂದು ಏನೂ ಹೇಳಲಿಲ್ಲ. ಡಿ.ಸಿ.ಯವರಿಗೆ ಇಷ್ಟು, ಕೆಹೆಚ್‌ಬಿಗೆ ಇಷ್ಟು ಎಂದು ಹೇಳಿಕೊಂಡು ಹೋಗುತ್ತಾರೆಂದು ಹೇಳಿದಿರಿ. ಏಕೆ ಇದೆಲ್ಲ ಕನ್‌ಫ್ಯೂಷನ್ ಸೃಷ್ಟಿ ಮಾಡುತ್ತಿದ್ದೀರಿ. ನಿರ್ವಿವಾದವಾಗಿ ಒಪ್ಪಿಕೊಳ್ಳಿ. ಆಡಳಿತ ಮಾಡಲಿಕ್ಕೆ ನಾವು ಶಕ್ತರಲ್ಲ, ನಮ್ಮಲ್ಲಿರುವ ಒಳಜಗಳ ನಮ್ಮನ್ನು ಇವತ್ತು ಆಡಳಿತ ಮಾಡಲಿಕ್ಕೆ ಬಿಟ್ಟಿಲ್ಲ. ಹೋಗಲಿ ಆಡಳಿತ ನಡೆದುಕೊಂಡು ಹೋಗುತ್ತದೆ, ಆಡಳಿತವನ್ನು ಅದರಷ್ಟಕ್ಕೆ ಅದಕ್ಕೆ ಬಿಟ್ಟುಕೊಂಡು ಹೋಗೋಣ ಎಂದರೆ ಈ ದೊಡ್ಡತನವೂ ನಮಗೆ ಇಲ್ಲವೆಂದು ತಾವು ಈ ಸದನದಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ಪ್ರತಿಹಂತದಲ್ಲಿ ಇವತ್ತು ಜನಗಳನ್ನು ಕನ್‌ಫ್ಯೂಸ್ ಮಾಡುತ್ತಿದ್ದೀರಿ. ಅನೇಕ ಸರ್ಕಾರಿ ನೌಕರರು ನಮ್ಮನ್ನು ಕೇಳುತ್ತಾರೆ; ಈ ಗೌರ್ನರ್ ಸ್ಪೀಚ್‌ನಲ್ಲಿ ಏನಾದರೂ ಬಂತೇ ಎಂದು.

33 ವರ್ಷಕ್ಕೆ ಏನಾದರೂ ಡ್ರೈವರ್, ಕ್ಲರ್ಕ್, ಸ್ಟೆನೋಗ್ರಾಫರ್ ರಿಟೈರ್ ಆದರೆ, ಇಲ್ಲ. 58 ಇದ್ದಿದ್ದು 50ಕ್ಕೆ ಏನಾದರೂ ಇಳಿಯಿತೆ ಇಲ್ಲ ನೀವು ಒಂದು ಡ್ರಾಫ್ಟ್ ರೂಲ್ಸ್ ಮಾಡುತ್ತೀರಿ, ಪಬ್ಲಿಷ್ ಮಾಡುತ್ತೀರಿ, ಅದನ್ನು ಅಲ್ಲಿಗೇ ನಿಲ್ಲಿಸಿಬಿಡುತ್ತೀರಿ. 33 ವರ್ಷ ಆದ ಮೇಲೆ ನಿಮ್ಮ ಸೇವೆ ಕ್ಲೋಸ್. ಏಕೆ ಇಂಥವೆಲ್ಲ ಈ ಸ್ಪೀಚ್‌ನಲ್ಲಿ ಹೇಳುವುದಿಲ್ಲ. ನಮಗೆ ಗೊತ್ತಿಲ್ಲ. ನಾನು ಅಂದುಕೊಳ್ಳುತ್ತೇನೆ. ನಿಮಗೆ ಏನೋ ಕಾಣಿಕೆನೊ, ಕಪ್ಪವನ್ನೋ ಯಾರೋ ಕೊಡಬೇಕಾಗಿತ್ತೇನೋ, ತಂದು ಒಪ್ಪಿಸಿಬಿಟ್ಟರು, ಬಾಯಿ ಮುಚ್ಚಿಕೊಂಡು ಬಿಟ್ಟರಿ. ಇನ್ನು ಬೇರೆ ಮಾತೇ ಇಲ್ಲ. ಅವರಿಗೆ ಯಾರಿಗಾದರೂ ಹೆದರಿಸಿದರೆ ಅವರು ತಂದು ಒಂದಷ್ಟು ಇಡುತ್ತಾರೆ. ನನಗೆ ಕೃಷಿ ಇಲಾಖೆಯವರು ಹೇಳುತ್ತಿದ್ದರು. ಪ್ರತಿ ಸಲ ಒಂದು ಸಾಯಿಲ್ ಕನ್ಸರ್‌ವೇಷನ್ ಡಿವಿಜನ್ ಆಗಬೇಕು ಎಂದರೆ ಒಂದಿಷ್ಟು ಕಾಣಿಕೆ ತೆರಬೇಕು ಎಂದು ಹೇಳುತ್ತಿದ್ದರು. 50 ಡಿವಿಜನ್ ಇದ್ದಿದ್ದು 75 ಆಗುತ್ತದೆ. 75 ಇದ್ದದ್ದು 100 ಆಗುತ್ತವೆ. ಸ್ವಾಮಿ

ಅಧ್ಯಕ್ಷರೇ, ಈ ರಾಜ್ಯಕ್ಕೆ ಬರುವ ಗ್ರಾಂಟ್ ಅಷ್ಟೇ ಇರುತ್ತದೆ. ಇನ್ನು ತಾವು ಸೋಶಿಯಲ್ ಫಾರೆಸ್ಟ್ರಿಯಲ್ಲಿ ಏನು ಕೆಲಸ ಮಾಡಿದ್ದೀರೆಂದು ನಾನು ಕೇಳಬೇಕಾಗುತ್ತದೆ. ತಮಗೆ ಒಂದೇ ಒಂದು ಪ್ರಶ್ನೆ ನಾನು ಹಾಕುತ್ತೇನೆ. ನಿಮ್ಮ ಹಣ ಅಲ್ಲ, ಜೆ.ಆರ್.ಒ.ನಲ್ಲಿ ಕೇಂದ್ರ ಸರ್ಕಾರ ಕೊಟ್ಟ ಹಣ ಕೂಡ ಅಂದರೆ 10 ಪರ್ಸೆಂಟ್ ಗ್ರಾಂಟ್‌ನ್ನು ಕೂಡ ಈ ರಾಜ್ಯದಲ್ಲಿ ಖರ್ಚು ಮಾಡಿಲ್ಲ. ನಾನು ಪಣ ತೊಟ್ಟು ಹೇಳುತ್ತಿದ್ದೇನೆ. ಈ ಕಾಂಗ್ರೆಸ್ ಐ ಸರ್ಕಾರಕ್ಕೆ ಫಾರೆಸ್ಟ್ ಆಕ್ಟಿವಿಟೀಸ್‌ನ್ನು ನಿರ್ನಾಮ ಮಾಡುವುದು ಏನಾದರೂ ಇದೆಯೇ ಹೇಳಿ. ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಒಂದಿಷ್ಟು ಗಿಡ ಬೆಳೆಸಬೇಕು ಎಂದರೆ ಬಗರ್ ಹುಕುಮ್‌ನಲ್ಲಿ ಕೊಡಿ ಎಂದು ಹೇಳಿದಿರಿ. ಸಸಿ ಹಾಕುತ್ತಿದ್ದಾರೆ. ಪಿಟ್ ಹೊಡೆದಿದ್ದಾರೆ ಅದನ್ನಾದರೂ ಮಾಡಿಸಿ ಎಂದರೆ ಅಲ್ಲಿ ಏನು ಕೆಲಸ ಆಗಿಲ್ಲ. ಅಷ್ಟೂ ಸೋಷಿಯಲ್ ಫಾರೆಸ್ಟ್ ಗ್ರಾಂಟ್‌ನ್ನು ಮಾರ್ಚ್ 31ಕ್ಕೆ ನಾವು ವಾಪಸ್ಸು ಮಾಡುತ್ತಿದ್ದೇವೆ, ಜಿಲ್ಲಾ ಪರಿಷತ್ತಿನಲ್ಲಿ ನಮ್ಮ ಪ್ರತಿನಿಧಿಗಳು ಇಲ್ಲ, ನಮ್ಮನ್ನು ಇವತ್ತು ಸಭೆಗೆ ಕರೆಯುವುದು ಬಿಟ್ಟು ಬಿಟ್ಟಿದ್ದಾರೆ; ನಾವು ಯಾರನ್ನೂ ಕೇಳುವ ಸ್ಥಿತಿಯಲ್ಲಿ ಇಲ್ಲ.

ಚೇರ್ಮನ್:– ತಾವು ಈಗ ಮುಗಿಸಬೇಕು. ಈಗ ಮುಖ್ಯಮಂತ್ರಿಗಳಿಂದ ಉತ್ತರ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಅವರಿಲ್ಲ. ನಾನು ಇನ್ನು 5 ನಿಮಿಷ ಮಾತನಾಡುತ್ತೇನೆ.

ಚೇರ್ಮನ್:– ಇನ್ನೂ ಒಬ್ಬರು ಮಾತನಾಡುವವರು ಇದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ತಾವು ಸಹಕಾರ ಇಲಾಖೆಯನ್ನಾಗಲಿ, ಕೃಷಿ ಇಲಾಖೆಯನ್ನಾಗಲಿ ತಾತ್ವಿಕವಾಗಿ ನೋಡಬೇಕಾಗುತ್ತದೆ. ಎಲ್ಲಾದರೂ ಕೈಹಾಕಿದರೆ ಅದಕ್ಕೆ ಬೆಂಬಲವಾಗಿ ಪೋಷಣೆ ಮಾಡುವ ಕಾರ್ಯಕ್ರಮವಿದ್ದರೆ ಮಾಡಬೇಕಾಗುತ್ತದೆ. ಮೊದಲನೆಯದಾಗಿ, ಕೃಷಿಯನ್ನು ಆದ್ಯತೆಯ ಮೇರೆಗೆ ಸರ್ಕಾರ ತೆಗೆದುಕೊಳ್ಳಬೇಕು. ನಾವು ಬೆಳೆಯುವ ಮಾಲಿಗೆ ಒಳ್ಳೆಯ ಬೆಲೆಯನ್ನು ಕೊಡಿಸಿಕೊಡಬೇಕು. ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಾನು ಬಾಳೆಯನ್ನು ಬೆಳೆದು ಅದನ್ನು ಮಾರಲು ಮಾಲನ್ನು ತೆಗೆದುಕೊಂಡು ಹೋದರೆ ಲಾಲ್‌ಬಾಗ್ ಸೊಸೈಟಿಯವರು ಇಂಡೆಂಟ್ ಕೊಟ್ಟ ಮೇಲೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಲಾಲ್‌ಬಾಗ್ ಸೊಸೈಟಿಯವರು ತೆಗೆದುಕೊಳ್ಳುವ ಟೈಮ್‌ತನಕ ನಾನು ಕಾಯಬೇಕು. ಅಲ್ಲಿಯ ತನಕ ನಾನು ಮಾರುವ ಹಾಗಿಲ್ಲ. ಬಾಳೆ ಗಿಡಕ್ಕೆ ಇಂತಹ ಸಮಯದಲ್ಲಿ ಕಾಯಿ ಬಿಡು ಎಂದು ಹೇಳತಕ್ಕ ಸಾಮರ್ಥ್ಯ ನಮಗಿಲ್ಲ. ರೈತ ನಿಮ್ಮ ಇಂಡೆಂಟ್ ಮೇಲೆ ಬೆಳೆಯಲು ಆಗುವುದಿಲ್ಲ. ಇನ್ನು ಕಾಟನ್ ಬಗ್ಗೆ ಹೇಳಬೇಕಾದರೆ – ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇವೊತ್ತು ಹತ್ತಿ 500 ರೂಪಾಯಿ, 600 ರೂಪಾಯಿಗೆ ಮಾರಾಟವಾಗುತ್ತದೆ. ಅದನ್ನು ಕೇಳುವುದಿಲ್ಲ. ಇನ್ನು ರಾಗಿ ಬೆಳೆಯುವವನು ನಾನೇ 200 ರೂಪಾಯಿ 250 ರೂಪಾಯಿ ಮೇಲೆ ಒಂದು ಪಲ್ಲ ಮಾರಿದರೆ ಅದು ಒಂದು ದೊಡ್ಡ ಸಾಧನೆ ಮಾಡಿದಂತೆ. ರೈತನಿಗೆ ತಗಲುವ ಖರ್ಚಿನ ಬಗ್ಗೆ ಯಾರೂ ಯೋಚನೆ ಮಾಡುವುದಿಲ್ಲ. ಏನೋ ರಾಜಕಾರಣದಲ್ಲಿ ಕಾಯುತ್ತಿದ್ದೀರಿ. ಮಾಜಿ ಮುಖ್ಯಮಂತ್ರಿ ಶ್ರೀ ಗುಂಡೂರಾವ್‌ರವರು ಇವೊತ್ತು ಮಂತ್ರಿಮಂಡಲದ ಬಗ್ಗೆ ಚೆನ್ನಾಗಿ ಹೇಳಿದ್ದಾರೆ. ಈ ಗವರ್ನ್‌ಮೆಂಟ್ ಇನ್ನೂ ಟೇಕ್‌ಆಫ್ ಆಗಿಲ್ಲವೆಂದು ಹೇಳಿ ನಿಮಗೆ ಒಂದು ತಿಂಗಳ ಗಡವು ಕೊಟ್ಟಿದ್ದಾರೆ. ಒಂದು ತಿಂಗಳೊಳಗಾಗಿ ಮಂತ್ರಿಮಂಡಲ ರೆಡ್ಯೂಸ್ ಇಲ್ಲದಿದ್ದರೆ ಸ್ಕ್ಯಾಂಡಲ್‌ನಲ್ಲಿ ಬಂದು ಇಳಿಯುತ್ತಿರೋ ಅಥವಾ ನೀವಾಗಿಯೋ ಇಳಿಯುತ್ತೀರೋ ನಮಗೆ ಗೊತ್ತಿಲ್ಲ. ಒಂದೊಂದೇ ಸ್ಕ್ಯಾಂಡಲ್ ಬಂದು 5–6 ಜನ ಕಡಿಮೆ ಆದರೆ ನಿಮ್ಮ ಗುರಿ ಸಾಧನೆಯಾಯಿತು ಎಂದು ಭಾವಿಸಬೇಕಾಗುತ್ತದೆ. ಇನ್ನು ಶಿಕ್ಷಣ ಸಚಿವರಲ್ಲಿ ಒಂದು ಬೇಡಿಕೆಯನ್ನಿಡುತ್ತೇನೆ. ನನ್ನ ತಾಲ್ಲೂಕಿನಲ್ಲಿ ಮೂರು ಫಸ್ಟ್‌ಗ್ರೇಡ್ ಕಾಲೇಜುಗಳು ಇವೆ. ಆದರೆ ಅವೆಲ್ಲ ಆರ್ಟ್ಸ್, ಕಾಂಬಿನೇಷನ್ ಕಾಲೇಜುಗಳು.

ಒಂದು ಕಾಲೇಜಿಗೂ ಸೈನ್ಸ್ ಕಾಂಬಿನೇಶನ್ ಕೊಟ್ಟಿಲ್ಲ. ಒಂದು ಕಾಲೇಜಿಗಾದರೂ ಸೈನ್ಸ್ ಕಾಂಬಿನೇಷನ್ ಕೊಡಿ ಎಂದು ಕೇಳಿದ್ದೇನೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಇದರಿಂದ ಹೆಣ್ಣು ಮಕ್ಕಳು ಹಾಗೂ ಹುಡುಗರು ನಮ್ಮ ತಾಲ್ಲೂಕಿನಿಂದ ತುಮಕೂರಿಗೆ ಪ್ರತಿದಿನ ಬಸ್‌ಪಾಸ್‌ನಲ್ಲಿ ಹೋಗಿ ಬರುತ್ತಿದ್ದಾರೆ. ಇನ್ನು ಪ್ರೈಮರಿ ಕಾನ್ವೆಂಟ್‌ಗೆ ಹೋಗತಕ್ಕ ಹುಡುಗರಿಗೆ ಬಸ್ ಪಾಸ್ ಕೊಡುವಂತಹ ವ್ಯವಸ್ಥೆ ಏನು ಇದೆ ಇದರಿಂದ ನಮ್ಮ ಊರಿನ ಮುಂದೆ ಇರತಕ್ಕ ಶಾಲೆಗಳಿಗೆ ಸ್ಟ್ರೆಂಜ್ ಇಲ್ಲ. ಎಲ್ಲರೂ ಪಟ್ಟಣದ ಶಾಲೆಗಳಿಗೆ ಹೋಗುತ್ತಿದ್ದಾರೆ. ಈ ಬಗ್ಗೆ ಕೂಡ ಕ್ರಮ ಕೈಗೊಳ್ಳಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ):– ಸನ್ಮಾನ್ಯ ಅಧ್ಯಕ್ಷರೇ, 1990, 1991, 1992ರಲ್ಲಿ ಮಾಡಿದ ಈ ಮೂರು ವರ್ಷಗಳ ಭಾಷಣವನ್ನು ನೋಡಿದ್ದ ಮೇಲೆ ಈ ಬಾರಿಯ ರಾಜ್ಯಪಾಲರ ಭಾಷಣದಲ್ಲಿ ಹೊಸತನ ಏನೂ ಕಾಣುವುದಿಲ್ಲ ಎಂದು ನನಗನಿಸುತ್ತದೆ. ಈ ವರ್ಷದ ಭಾಷಣದ ಬಗ್ಗೆ ನಾನು ಮಾತನಾಡಬೇಕು. ಅಭಿಪ್ರಾಯಗಳನ್ನು ಕೊಡಬೇಕೆಂದು ನಾನು ಬಹಳ ಪ್ರಯತ್ನವನ್ನು ಮಾಡಿದ್ದೇನೆ.

ಕೋಮು ಸೌಹಾರ್ದತೆ ಬಗ್ಗೆ ರಾಜ್ಯಪಾಲರು ಮಾತನಾಡಿರುವುದನ್ನು ಬಿಟ್ಟರೆ ಬಾಕಿ ಯಾವ ವಿಚಾರದಲ್ಲೂ ಸಹ ಈ ಸರ್ಕಾರ ಹೇಳಿರತಕ್ಕ ವಿಚಾರಗಳ ಬಗ್ಗೆ ನಾವು ಸಮ್ಮತಿ ವ್ಯಕ್ತ ಮಾಡುವುದಕ್ಕಾಗುವುದಿಲ್ಲ. ಇವತ್ತು ನಾವು ಯಾವ ಸ್ಥಿತಿಗೆ ಬಂದಿದ್ದೇವೆ ಎಂದರೆ ಆಡಳಿತ ಪಕ್ಷದ ಸದಸ್ಯರಿಗೆ ಈ ಸರ್ಕಾರ ಬೇಕಾಗಿಲ್ಲ. ಇದು ಬಹಳ ವಿಚಿತ್ರವಾದ ಸನ್ನಿವೇಶ. ಆಡಳಿತ ಪಕ್ಷದ ಸದಸ್ಯರಿಗೆ ಆಡಳಿತ ಪಕ್ಷದ ಮುಖಂಡರಿಗೆ ಈ ಸರ್ಕಾರ ಬೇಕಾಗಿಲ್ಲ. ಇದು ಬಹಳ ವಿಚಿತ್ರವಾದ ಸನ್ನಿವೇಶ. ಆಡಳಿತ ಪಕ್ಷದ ಸದಸ್ಯರಿಗೆ ಆಡಳಿತ ಪಕ್ಷದ ಮುಖಂಡರಿಗೆ ಈ ಸರ್ಕಾರ ಬೇಕಾಗಿಲ್ಲ. ವಿರೋಧಪಕ್ಷದವರು ಅಯ್ಯೋ ಪಾಪ ಈ ಸರ್ಕಾರ ಇನ್ನೂ ಮೂರು ತಿಂಗಳಿರಲಿ ಎಂಬ ಮನೋಭಾವ ವ್ಯಕ್ತಪಡಿಸತಕ್ಕಂಥ ಒಂದು ವಿಚಿತ್ರವಾದ ವಾತಾವರಣ ರಾಜ್ಯದಲ್ಲಿ ಸೃಷ್ಟಿಯಾಗಿದೆ. ಮಾನ್ಯ ಅಧ್ಯಕ್ಷರೇ, ತಾವು ಕಾಂಗ್ರೆಸ್ ಪಕ್ಷದಲ್ಲಿರುವವರು, ಗಾಂಧಿವಾದಿಗಳು. ಸುಮಾರು 25 ವರ್ಷಗಳಿಂದ ಕನ್ನಡ ಸಾಹಿತ್ಯಲೋಕಕ್ಕಷ್ಟೇ ಅಲ್ಲ, ಕರ್ನಾಟಕಕ್ಕೆ ಬಹಳ ಸೇವೆ ಮಾಡಿರತಕ್ಕ ಒಬ್ಬ ಪುಣ್ಯಾತ್ಮರು. ನಿಮ್ಮಂಥವರು ಬಹಳ ಜನ ಈ ಪಾರ್ಟಿಯಲ್ಲಿದ್ದಾರೆ. ಪಾಪ ಮಾನ್ಯ ಆಚಾರ್‌ರವರಿಗೆ ವಂದನಾರ್ಪಣೆ ಸಲ್ಲಿಸಿ ಮಾತನಾಡುವ ಮನಸ್ಸಿರಲಿಲ್ಲ. ಅವರು ಬಹಳ ಕಷ್ಟಪಟ್ಟುಕೊಂಡು ಕ್ಲಿಂಟನ್ ಆಡಳಿತಕ್ಕೆ ಹೋಲಿಸಿದ್ದಾರೆ. ಈ ಭಾಷಣದ ಬಗ್ಗೆ ಅವರಿಗೆ ಏನು ಹೇಳಬೇಕೆಂದು ಗೊತ್ತಾಗಿಲ್ಲ. ಆದರಿಂದ ಕ್ಲಿಂಟನ್‌ಗೆ ಹೋಲಿಕೆ ಮಾಡಿಕೊಂಡರು. ಹಾಗಾದರೂ ಪತ್ರಿಕೆಗಳ ಮುಖಪುಟದಲ್ಲಿ ಒಂದು ಪ್ರಚಾರ ಸಿಗಲಿ ಎಂಬ ಭಾವನೆಯಿಂದ ಶ್ರೀ ವೀರಪ್ಪಮೊಯಿಲಿಯವರ ಆಡಳಿತವನ್ನು ಕ್ಲಿಂಟನ್ ಆಡಳಿತಕ್ಕೆ ಹೋಲಿಕೆ ಮಾಡಿದರು. ವೈಯಕ್ತಿಕವಾಗಿ ನಾನು ಬಂಗಾರಪ್ಪನವರು ಮುಖ್ಯಮಂತ್ರಿಯಾದಾಗ ಒಂದು ದೃಷ್ಟಿಯಿಂದ ಇವರು ಮುಖ್ಯಮಂತ್ರಿಯಾಗಿದ್ದುದು ಸರಿ ಎಂದವನು. ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾದಾಗ ಒಬ್ಬ ನುರಿತ ದಕ್ಷ ಪ್ರಾಮಾಣಿಕ ಮುಖಂಡರಿವರು; ಇವರು ಮುಖ್ಯಮಂತ್ರಿಗಳಾಗಬೇಕೆಂದು ಬಯಸಿದವನು. ಅನಂತರ ಬಂಗಾರಪ್ಪನವರು ಬಂದರು. ಅವರು ಹಿಂದುಳಿದ ವರ್ಗದ ನೇತಾರರು. ಅದ್ಯಾವ ಕಾರಣದಿಂದ ಹೋದರು ಎಂಬ ವಿಶ್ಲೇಷಣೆಗೆ ನನಗೆ ಸಮಯ ಇಲ್ಲ. ನಂತರ ಮೊಯಿಲಿಯವರು ಮುಖ್ಯಮಂತ್ರಿಗಳಾದರು; ಆಮೇಲೂ ಕೂಡ ಪ್ರಾಮಾಣಿಕವಾಗಿ ನಮ್ಮ ಸಮಾಜದ ಅತ್ಯಂತ ಸಣ್ಣ ವರ್ಗದ, ತುಳಿತಕ್ಕೆ ಸಿಕ್ಕಿದ ವರ್ಗದ ಒಬ್ಬ ವ್ಯಕ್ತಿ ಮುಖ್ಯಮಂತ್ರಿಯಾದಾಗ ಕಡೇ ಪಕ್ಷ ಆಡಳಿತ ಸರಿಹೋಗಬಹುದು, ಕಾಂಗ್ರೆಸ್ ಪಾರ್ಟಿಗೆ ಇನ್ನು ಎರಡು ವರ್ಷ ಉಳಿದಿದೆ ಒಳ್ಳೆಯ ಸರ್ಕಾರ ಕೊಟ್ಟು ರಾಜ್ಯದ ಜನತೆಯ ಆಶೋತ್ತರಗಳನ್ನು

ಈಡೇರಿಸಲು ಪ್ರಯತ್ನ ಮಾಡಬಹುದು ಎಂದು ನಾನು ನೋಡಿದೆ. ಕಳೆದ ಮೂರು ವರ್ಷಗಳ ಕಾಲದಲ್ಲಿ ನಾನು 1989ನೇ ಇಸವಿಯಲ್ಲಿ ತಾವು ಮತ್ತೊಮ್ಮೆ ವಿಧಾನಸಭೆಗೆ ಗೆದ್ದು ಬಂದಿರೋ ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದ ಜನತೆಗೆ ಕೊಟ್ಟಿರುವ ಚುನಾವಣಾ ಘೋಷಣೆಯನ್ನು ಅಥವಾ ಮ್ಯಾನಿಫೆಸ್ಟೋವನ್ನು ತರಿಸಿಕೊಂಡು ಓದುವ ಪ್ರಯತ್ನ ಮಾಡಿದೆ, ಸಂಪೂರ್ಣವಾಗಿ ಓದಿದೆ. ನಿಮ್ಮ ಕಾಂಗ್ರೆಸ್ ಪಾರ್ಟಿ ಆಫೀಸಿಗೆ ಒಬ್ಬರನ್ನು ಕಳಿಸಿ ಬಹಳ ಕಷ್ಟಪಟ್ಟು ಆ ಮ್ಯಾನಿಫೆಸ್ಟೋವನ್ನು ಹುಡುಕಬೇಕಾಗಿ ಬಂತು. ಅಲ್ಲಿರುವವರು ಮ್ಯಾನಿಫೆಸ್ಟೋ ನಾವು ಇಲ್ಲಿ ಇಟ್ಟುಕೊಂಡಿಲ್ಲ ಎಂದರು. ವಿಧಾನಸೌಧದಲ್ಲಿ ಅಧಿಕಾರಿ ವರ್ಗದವರನ್ನು ಕೇಳಿದೆ, ಅವರು ಕಾಂಗ್ರೆಸ್ ಪಾರ್ಟಿ ಮ್ಯಾನಿಫೆಸ್ಟೋ ಇಲ್ಲಿ ಏಕಿರುತ್ತದೆ ಎಂದು ಕೇಳಿದರು. ಏಕೆಂದರೆ ಇಂಪ್ಲಿಮೆಂಟೇಶನ್‌ಗೆ ಏನಾದರೂ ಇಟ್ಟುಕೊಂಡಿದ್ದಾರೇನೋ ಅಂದರೆ ಸಿಗಲಿಲ್ಲ. ಕೊನೆಗೆ ಕಾಂಗ್ರೆಸ್ ಪಾರ್ಟಿ ಆಫೀಸಿನಲ್ಲಿ ಹಳೇ ಟ್ರಂಕಿನಲ್ಲಿ ಮುಗ್ಗಲು ವಾಸನೆ ಬರುವ ಒಂದು ಕಡತ ಬಿದ್ದಿತ್ತು. ಆ ಕಡತದಿಂದ ಸೈಕ್ಲೋಸ್ಟೈಲ್ ಕಾಪಿ ಮಾಡಿಸಿಕೊಂಡು ನಾನು ಓದುವ ಪ್ರಯತ್ನ ಮಾಡಿದರೆ ಅದರಲ್ಲಿರುವ ಒಂದು ಅಕ್ಷರವನ್ನೂ ನೀವು ಇಂಪ್ಲಿಮೆಂಟ್ ಮಾಡುವುದಕ್ಕೆ ಆಗಿಲ್ಲ. ಇವತ್ತು ಗುಂಡೂರಾಯರು ಈ ಸರ್ಕಾರಕ್ಕೆ ದೊಡ್ಡ ಬೆದರಿಕೆ ಹಾಕಿದ್ದಾರೆ. ಈ ಸರ್ಕಾರ ಉಳಿಯುವುದಕ್ಕೆ ನಾನು ಬಿಡುವುದಿಲ್ಲ. ಇನ್ನೊಂದು ತಿಂಗಳೊಳಗೆ ಸಚಿವ ಸಂಪುಟವನ್ನು ನೀವು ಪ್ರೂನ್ ಮಾಡದೇಹೋದರೆ ನಿಮ್ಮ ಸರ್ಕಾರ ತೆಗೆಯುತ್ತೇನೆಂಬ ಮಾತನ್ನು ಹೇಳಿದ್ದಾರೆ. ಕಳೆದ 8–10 ದಿವಸಗಳಲ್ಲಿ ಏನೇನು ನಡೆಯುತ್ತಿದೆ ಎಂದು ನಾವು ನೋಡುತ್ತಿದ್ದೇವೆ. ಒಕ್ಕಲಿಗ ಶಾಸಕರೆಲ್ಲ ಒಂದು ಕಡೆ ಸೇರುತ್ತಿದ್ದಾರೆ, ಲಿಂಗಾಯತ ಶಾಸಕರೆಲ್ಲ ಒಂದು ಕಡೆ ಸೇರುತ್ತಿದ್ದಾರೆ, ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ನಮ್ಮ ಅಜೀಜ್‌ಸೇಟ್‌ರವರಿಗೆ ಒಂದು ರೀತಿ ಅಸಮಾಧಾನವಾಗಿ ಅವರು ಒಂದು ರೀತಿಯಲ್ಲಿ ಹೊರಟಿದ್ದಾರೆ. ವಿಧಾನಸಭೆಯಲ್ಲಿರುವ ಕಾಂಗ್ರೆಸ್ಸಿನ 179 ಶಾಸಕರಲ್ಲಿ ಸುಮಾರು 40 ಜನ ಮಾತ್ರ ಬಂದಿರುತ್ತಾರೆ, ಬಾಕಿಯವರೆಲ್ಲ ಇಲ್ಲೇ ಇದ್ದಾರೆ, ಅವರು ಎಲ್ಲೂ ಹೋಗಿಲ್ಲ. ಇಲ್ಲೇ ಕುಳಿತುಕೊಂಡು ಲಾಬಿ ಮಾಡುತ್ತಿದ್ದಾರೆ. ಯಾವ ರೀತಿ ಮಂತ್ರಿಗಳನ್ನು ಬೋಲ್ಡ್ ಮಾಡುವುದು.

2.20 ಪಿ.ಎಂ.

ಯಾವ ರೀತಿ ಮಂತ್ರಿಗಳನ್ನು ಹೊರಗಡೆ ತೆಗೆಯತಕ್ಕಂಥದ್ದು, ಈ ಸರ್ಕಾರವನ್ನು ಉರುಳಿಸುವುದು ಹೇಗೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ನಾನು ಬಹಳ ಜವಾಬ್ದಾರಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮೊದಲನೆಯ ಬಾರಿಗೆ ಮುಖ್ಯಮಂತ್ರಿಗಳಿಗೆ ಈ ಸಚಿವಸಂಪುಟದಲ್ಲಿ ವಿಶ್ವಾಸ ಇಲ್ಲ. ಇವತ್ತು ಮೆಜಾರಿಟಿ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಈ ಸಚಿವ ಸಂಪುಟದ ಸದಸ್ಯರು ಇವರಿಗೆ ಬೆಂಬಲವನ್ನು ಕೊಡುವುದಿಲ್ಲ. ಆ ದೃಷ್ಟಿಯಿಂದಲೇ ಗುಂಡೂರಾಯರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಮಂತ್ರಿಮಂಡಲದಲ್ಲಿರತಕ್ಕಂಥ ಗುಂಡೂರಾಯರು ಬಹಳ ಚೆನ್ನಾಗಿ ಹೇಳಿದ್ದಾರೆ. ಈ ಮಂತ್ರಿಮಂಡಲದಲ್ಲಿರತಕ್ಕಂಥ ಹಿರಿಯ ಸದಸ್ಯರಾಗಿರತಕ್ಕಂಥ ಕೆ.ಹೆಚ್. ರಂಗನಾಥ್‌ರವರು, ಎಸ್.ಎಂ. ಕೃಷ್ಣ ಅವರು, ರಾಜಶೇಖರಮೂರ್ತಿಯವರು, ಎಸ್.ಎಂ. ಯಾಹ್ಯಾರವರು ಇವರೆಲ್ಲರೂ ಮುಖ್ಯಮಂತ್ರಿಗಳನ್ನು ಮುಖ್ಯಮಂತ್ರಿ ಎಂತಲೇ ಕನ್‌ಸಿಡರ್ ಮಾಡಿಲ್ಲ. ಈ ಮಾತನ್ನು ನೇರವಾಗಿ ಹೇಳಿದ್ದಾರೆ. ಬೇರೆ ಯಾರೋ ಬೀದಿಯಲ್ಲಿ ಹೋಗತಕ್ಕಂಥವನೊ ಅಥವಾ ಈ ಕಡೆ ಕುಳಿತಿರತಕ್ಕಂಥ ಸದಸ್ಯರುಗಳು ಈ ಮಾತನ್ನು ಹೇಳಿದ್ದಿದ್ದರೆ ಅದಕ್ಕೆ ಮಹತ್ವ ಬರುತ್ತಿರಲಿಲ್ಲ. ಇವತ್ತು ಏನಾಗಿದೆ, ರಾಜ್ಯದ ಜನತೆ ನಾವು ತಪ್ಪು ಮಾಡಿದೆವು ಎಂದು ಹೇಳಿ ನಿಮಗೆ ಅಧಿಕಾರವನ್ನು ಕೊಟ್ಟರೆ ಮೂರುವರೆ ವರ್ಷಗಳ ಕಾಲದಲ್ಲಿ ನಿಮ್ಮ ಆಡಳಿತ ಯಾವ ಮಟ್ಟಕ್ಕೆ ಹೋಗಿವೆ ಎನ್ನುವುದನ್ನು ಯೋಚನೆ ಮಾಡಿ. ಕರ್ನಾಟಕ ರಾಜ್ಯ ಸರ್ಕಾರಕ್ಕೆ ಮೂರು ವರ್ಷದಲ್ಲಿ ಮೂರು ಜನ ಮುಖ್ಯ ಕಾರ್ಯದರ್ಶಿಗಳನ್ನು ಮಾಡಿದ್ದೀರಿ. ಮೂರು ವರ್ಷ ಮೂರು ತಿಂಗಳಲ್ಲಿ ಮೂರು ಜನ ಡಿ.ಜಿ.ಪಿ.ಗಳಾದರು. ಇವತ್ತು ಯಾವ ಇಲಾಖೆಯನ್ನಾದರೂ ತೆಗೆದುಕೊಳ್ಳಿ, ಇರಿಗೇಷನ್ ಪೋರ್ಟ್‌ಫೋಲಿಯೊ ತೆಗೆದುಕೊಳ್ಳಿ,

ಎಕ್ಸೈಜ್ ಕಮೀಷನರ್ ತೆಗೆದುಕೊಳ್ಳಿ, ಯಾವ ಇಲಾಖೆಯನ್ನೇ ತೆಗೆದುಕೊಂಡು ನೋಡಿದರೂ ಸಹ ಒಂದೊಂದು ವರ್ಷ ಒಬ್ಬೊಬ್ಬ ಅಧಿಕಾರಿಗೆ ಅವರು ಅಲ್ಲಿ ಇದ್ದು ಕೆಲಸ ಮಾಡುವುದಕ್ಕೆ ನೀವು ಅವಕಾಶವನ್ನು ಕೊಟ್ಟಿಲ್ಲ. ಹೀಗಾದರೆ ಹೇಗೆ ಸ್ಥಿರವಾದ ಸರ್ಕಾರವನ್ನು ನೀವು ಕೊಡುತ್ತೀರಿ, ದಯವಿಟ್ಟು ಯೋಚನೆ ಮಾಡಿ. ನಮ್ಮ ಶಿಕ್ಷಣ ಖಾತೆ ಬಗ್ಗೆ ಹೇಳುತ್ತೇನೆ. ಮೂರು ಜನ ಕಾರ್ಯದರ್ಶಿಗಳನ್ನು ಮೂರು ವರ್ಷದಲ್ಲಿ ನೀವು ಬದಲಾವಣೆ ಮಾಡಿದ್ದೀರಿ. ಜನಗಳ ದೃಷ್ಟಿಯಿಂದಾಗಿ ಕಾಂಗ್ರೆಸ್ ಸರ್ಕಾರ ಇದೆ. ನೇತಾರರು ಯಾರೇ ಆಗಿರಬಹುದು, ಮುಖ್ಯಮಂತ್ರಿಗಳು. ಪ್ರತಿ 11 ತಿಂಗಳಿಗೆ, 12 ತಿಂಗಳಿಗೆ ಒಬ್ಬೊಬ್ಬ ಕಾರ್ಯದರ್ಶಿಯನ್ನು ಬದಲಾವಣೆ ಮಾಡುತ್ತಿದ್ದೀರಿ. ಶಿಕ್ಷಣ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಹಣಕಾಸಿನ ಇಲಾಖೆ, ಅಬ್ಕಾರಿ ಇಲಾಖೆ, ಗೃಹ ಇಲಾಖೆ, ಕೈಗಾರಿಕಾ ಇಲಾಖೆ, ಪ್ರತಿಯೊಂದು ಇಲಾಖೆಯಲ್ಲೂ ಸಹ 11 ತಿಂಗಳಿಗೆ, 12 ತಿಂಗಳಿಗೆ ಒಬ್ಬೊಬ್ಬ ಅಧಿಕಾರಿಯನ್ನು ಬದಲಾವಣೆ ಮಾಡಿದ್ದೀರಿ. ಇನ್ನು ಜಿಲ್ಲಾಡಳಿತ ಹೇಗೆ ಇದೆ ಎಂದರೆ, ಒಬ್ಬ ಅಧಿಕಾರಿಯೂ ಸಹ 20 ತಿಂಗಳು ಕಂಪ್ಲೀಟ್ ಮಾಡುವುದಕ್ಕಾಗಿಲ್ಲ. ಪ್ರತಿ 11 ತಿಂಗಳಿಗೆ, 12 ತಿಂಗಳಿಗೆ ಒಟ್ಟು ಜಿಲ್ಲಾಧಿಕಾರಿಯನ್ನು ಬದಲಾವಣೆ ಮಾಡುತ್ತೀರಿ. ಒಬ್ಬ ಎಸ್.ಪಿ.ಯನ್ನು ಬದಲಾವಣೆ ಮಾಡುತ್ತೀರಿ, ಜಿಲ್ಲಾ ಪರಿಷತ್ತಿನ ಒಬ್ಬ ಮುಖ್ಯ ಕಾರ್ಯದರ್ಶಿಯನ್ನು ಬದಲಾವಣೆ ಮಾಡಿದ್ದೀರಿ. ಹೇಗೆ ನೀವು ಭದ್ರವಾದ ಸರ್ಕಾರವನ್ನು ಕೊಡುವುದಕ್ಕಾಗಿದೆ ? ದಯವಿಟ್ಟು ಯೋಚನೆ ಮಾಡಿ. ಪ್ರತಿ ಒಂದು 11 ತಿಂಗಳಿಗೆ, 12 ತಿಂಗಳಿಗೆ ನೀವು ಮುಖ್ಯ ಕಾರ್ಯದರ್ಶಿಗಳನ್ನು, ಕಾರ್ಯದರ್ಶಿಗಳನ್ನು, ಸರ್ಕಾರದ ವಿವಿಧ ಇಲಾಖೆಯ ಮುಖ್ಯಸ್ಥರನ್ನು ಬದಲಾವಣೆ ಮಾಡುವುದರಲ್ಲಿ ಇದೇನು ನೀವು ವ್ಯಾಪಾರ ಮಾಡುತ್ತಿದ್ದೀರಾ ? ಅಥವಾ ಸರ್ಕಾರವನ್ನು ನಡೆಸುತ್ತಿದ್ದೀರಾ ? ಯಾವ ಕಾರಣದಿಂದ ಬದಲಾವಣೆ ಮಾಡುತ್ತಿದ್ದೀರಿ. ಇದಕ್ಕೆ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಪ್ರತಿಯೊಂದು ವರ್ಷಕ್ಕೆ ನೀವು ಕಾರ್ಯದರ್ಶಿಗಳನ್ನು ಬದಲಾವಣೆ ಮಾಡುತ್ತಿದ್ದೀರಲ್ಲಾ, ಇದರ ಉದ್ದೇಶವೇನು ? ಮೊದಲನೇ ಬಾರಿಗೆ ಮುಖ್ಯಮಂತ್ರಿಗಳ ಬಗ್ಗೆ, ಮಂತ್ರಿಗಳ ಬಗ್ಗೆ, ಆಡಳಿತ ಪಕ್ಷದ ಸದಸ್ಯರುಗಳ ಆಪಾದನೆಯನ್ನು ಮಾಡುತ್ತಿದ್ದಾರೆ. ವಿರೋಧಪಕ್ಷದವರ ಮಾತು ಇರಲಿ. ಅದರ ಬಗ್ಗೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ? ಇವತ್ತು ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಹಿಂದೆ ವಿರೋಧ ಪಕ್ಷದಲ್ಲಿ ಕುಳಿತಿದ್ದರು. ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ, ಮಾಡಿರತಕ್ಕಂಥ ಭಾಷಣಗಳನ್ನು ವಿರೋಧ ಪಕ್ಷದ ಜವಾಬ್ದಾರಿ ಸದಸ್ಯರಾಗಿದ್ದಾಗ ಅವರು ಮಾಡಿರತಕ್ಕಂಥ ಭಾಷಣಗಳನ್ನು ನಾನು ತರಿಸಿ ನೋಡಿದೆ. ಪ್ರತಿಯೊಂದು ಭಾಷಣದಲ್ಲೂ ಮೌಲ್ಯಗಳ ಬಗ್ಗೆ, ಬಡ ಜನತೆಯ ಬಗ್ಗೆ ಹಿಂದುಳಿದ ವರ್ಗದವರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ ಭಾಷಣವನ್ನು ಮಾಡಿದ್ದಾರೆ. ಮಾನ್ಯ ಮೊಯಿಲಿಯವರು ಒಂದು ಮಾತನ್ನು ಹೇಳಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರೇ, ಎಲ್ಲ ಪೋರ್ಟ್‌ಫೋಲಿಯೋಗಳನ್ನು ನೀವು ಮೇಜರ್ ಕಮ್ಯುನಿಟೀಸ್‌ಗೆ ಕೊಟ್ಟಿದ್ದೀರಿ, ಲಿಂಗಾಯಿತರು, ಒಕ್ಕಲಿಗರಿಗೆ ಕೊಟ್ಟಿದ್ದೀರಿ. ಹಿಂದುಳಿದ ವರ್ಗದವರಿಗೆ ನೀವು ಕೊಟ್ಟಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನಾದರೂ ಈ ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ. ಎಲ್ಲಿ ಹಣ ಇದೆ, ಎಲ್ಲಿ ಅಧಿಕಾರ ಇದೆ, ಆ ಪೋರ್ಟ್‌ಫೋಲಿಯೋಗಳನ್ನು ಏತಕ್ಕೆ ನೀವು ಇಟ್ಟುಕೊಂಡಿದ್ದೀರಿ ? ರಾಜಶೇಖರಮೂರ್ತಿಯವರಿಗಿಂತ ಬೆಟರ್ ಫೈನಾನ್ಸ್ ಮಿನಿಸ್ಟರ್ ಯಾರು ? ಯಾಹ್ಯಾಗಿಂತ ಬೆಟರ್ ಫೈನಾನ್ಸ್ ಮಿನಿಸ್ಟರ್ ಯಾರು ?

ಏಕೆ ಅವರಿಗೆ ಹಣಕಾಸು ಖಾತೆ ಕೊಟ್ಟಿಲ್ಲ ? ಶ್ರೀ ಕೆ.ಹೆಚ್. ರಂಗನಾಥ್‌ರವರಂಥ ಒಬ್ಬ ಹಿರಿಯ ದಲಿತ, ದಕ್ಷ ಮುಖಂಡರಿಗೆ ಕೆಲಸಕ್ಕೆ ಬಾರದ ಪಿಡಬ್ಲ್ಯೂಡಿ ಖಾತೆ ಕೊಟ್ಟಿದ್ದೀರಿ. ಎಜುಕೇಷನ್ ಅನ್ನು ಎಂಟು ಭಾಗಗಳನ್ನಾಗಿ ಮಾಡಿ ಯಾರು ದಕ್ಷತೆಗೆ, ಪ್ರಾಮಾಣಿಕತೆಗೆ ಹೆಸರಾಗಿರತಕ್ಕಂಥ ಶ್ರೀ ಎಸ್.ಎಂ. ಯಾಹ್ಯಾರವರಿಗೆ ಉನ್ನತ ಶಿಕ್ಷಣ ಖಾತೆ ಕೊಟ್ಟಿದ್ದೀರಿ. ಆ ಖಾತೆಯಲ್ಲಿ ಯೂನಿವರ್ಸಿಟಿ

ಬರುವುದರಿಂದ, ಅಲ್ಲಿಗೊಬ್ಬ ವೈಸ್ ಚಾನ್ಸಲರ್ ಇರುತ್ತಾನೆ, ಅದೊಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಅಲ್ಲಿ ಏನು ಅಧಿಕಾರವಿರುತ್ತದೆ? ಏನು ಹಣ ಕೊಟ್ಟಿದ್ದೀರಿ? ನಿಮ್ಮ ಹತ್ತಿರ ಏಕೆ ಹಣಕಾಸು ಖಾತೆ ಇರಬೇಕು? ನಿಮಗೆ ಕೇಶವಮೂರ್ತಿ ಬಗ್ಗೆ ನಂಬಿಕೆಯಿಲ್ಲವೆ? ನೀವು ಏಕೆ ಅವರಿಗೆ ಗೃಹ ಇಲಾಖೆ ಕೊಡುವುದಕ್ಕಾಗುವುದಿಲ್ಲ? ನೀವು ಏಕೆ ಗೃಹ ಇಲಾಖೆ ಇಟ್ಟುಕೊಂಡಿದ್ದೀರಿ? ನಾನು ಮುಖ್ಯಮಂತ್ರಿಗಳನ್ನು ಅರ್ಥ ಮಾಡಿಕೊಳ್ಳಬಲ್ಲೆ. ಆ ಖಾತೆಯಲ್ಲಿರತಕ್ಕ ಸಿಓಡಿ, ಇಂಟೆಲಿಜೆನ್ಸ್ ವಿಂಗ್ ಅನ್ನು ಮುಖ್ಯಮಂತ್ರಿಗಳು ಇಟ್ಟುಕೊಳ್ಳುವುದು ಸ್ವಾಭಾವಿಕ; ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ, ನೀವೇನು ಮಾಡಿದ್ದೀರಿ ಎಂದರೆ, ಗೃಹಖಾತೆ, ಅಬ್ಕಾರಿ ಖಾತೆಗಳನ್ನು ಇಟ್ಟುಕೊಂಡಿದ್ದೀರಿ. ಇಲ್ಲಿರತಕ್ಕಂಥ ಹಿಂದುಳಿದ ವರ್ಗದ ಮಂತ್ರಿಮಂಡಲದ ಸದಸ್ಯರುಗಳನ್ನು ನಾಮಕಾವಸ್ತೆಗೆ ಉಪ್ಪಿನಕಾಯಿ, ಕರಿಬೇವು ಸೊಪ್ಪಿನಂತೆ ಇಟ್ಟುಕೊಂಡಿದ್ದೀರಿ. ನಿಮಗೆ ಏಕೆ ಖಾತೆಗಳನ್ನು ಸರಿಯಾಗಿ ಹಂಚುವುದಕ್ಕಾಗಿಲ್ಲ? ಅದಕ್ಕೋಸ್ಕರ ಜನರು ಹೇಳುವುದು: "ಬಂಗಾರಪ್ಪ ನಂಬಿ ಕೆಟ್ಟ, ಮೊಯ್ಲಿ ನಂಬದೆ ಕೆಟ್ಟ" ಎಂದು. ನಿಮ್ಮ ಮಂತ್ರಿಮಂಡಲದ ಸಹೋದ್ಯೋಗಿಗಳ ಮೇಲೆ ನಿಮಗೆ ನಂಬಿಕೆ ಇಲ್ಲವಾದರೆ ಅವರು ಹೇಗೆ ನಿಮ್ಮ ಬಗ್ಗೆ ನಂಬಿಕೆ ತೋರಿಸುತ್ತಾರೆ? ನೀವು ಮಾಡಿರುವ ಇನ್ನೊಂದು ಕೆಲಸವೇನೆಂದರೆ, ಯಾರು ದೊಡ್ಡ ಮಂತ್ರಿಗಳೆಂದು ಅನ್ನಿಸಿಕೊಂಡಿದ್ದಾರೆಯೋ, ಅವರನ್ನು ಆಕಸ್ಮಿಕವಾಗಿ ಅತ್ತೂ ಕರೆದು ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಿದರು. ಹಿಂದೆ ನಮ್ಮ ಬಗ್ಗೆ ವೀರಪ್ಪ ಮೊಯಿಲಿಯವರು ಹಾಸ್ಯ ಮಾಡಿದ್ದಾರೆ. 'ಏನು ನೀವು 4–4 ಜನರನ್ನು ಡೆಪ್ಯೂಟಿ ಪ್ರೈಮ್ ಮಿನಿಸ್ಟರುಗಳನ್ನಾಗಿ ಮಾಡುತ್ತಿದ್ದೀರಿ' ಎಂದು. ಈಗ ನಿಮ್ಮ ಸ್ಥಿತಿಗೆ ನಾವೇನು ಹೇಳಬೇಕು? ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಉಪ ಮುಖ್ಯಮಂತ್ರಿ ಹುದ್ದೆಯನ್ನು ಸೃಷ್ಟಿಸಿದಂಥ ಮಹಾತ್ಮರು ನೀವು. ಈ ಉಪ ಮುಖ್ಯಮಂತ್ರಿ ಹುದ್ದೆ ಇರಲೇ ಇಲ್ಲ. It is an unconstitutional post. ಅವರಿಗೆ ಏನು ಅಧಿಕಾರ ಕೊಟ್ಟಿದ್ದೀರಿ? 'ನನಗೆ ವಿದ್ಯುತ್ ಮತ್ತು ನೀರಾವರಿ ಖಾತೆ ಕೊಟ್ಟರೆ ಮಾತ್ರ ಉಪಮುಖ್ಯಮಂತ್ರಿ ಖಾತೆ ವಹಿಸಿಕೊಳ್ಳುತ್ತೇನೆ' ಎಂದು ಅವರು ಜಬರ್‌ದಸ್ತಿನಿಂದ ಹೇಳಿದರು. ಈಗ ಆ ಇಲಾಖೆಗೆ ನಿಮಗೆ ಬೇಕಾಗಿರುವ ಅಧಿಕಾರಿಗಳನ್ನು ಹಾಕಿಕೊಂಡಿದ್ದೀರಿ. ಇದೆಲ್ಲ ನಮಗೆ ಅರ್ಥವಾಗುವುದಿಲ್ಲವೆ? ಎಷ್ಟು ದಿವಸಗಳ ಕಾಲ ಮೋಸ ಮಾಡುವುದಕ್ಕಾಗುತ್ತದೆ? ಇವೊತ್ತು ಮಂತ್ರಿಮಂಡಲ ಎಂದರೆ 3–4 ಜಿಲ್ಲೆಗಳಿಗೆ ಕೊಡತಕ್ಕಂಥಾದ್ದಲ್ಲ;

ಸಚಿವರುಗಳಾದ ಶ್ರೀ ಕೃಷ್ಣಪ್ಪನವರು, ಶ್ರೀ ಕೇಶವಮೂರ್ತಿಯವರು ನನ್ನ ಗೆಳೆಯರು, ಸಹೋದ್ಯೋಗಿಗಳು, ಅವರು ನನ್ನ ಜಿಲ್ಲೆಯವರು, ಒಳ್ಳೆಯ ಜನರು. ಇವರು ಮಂತ್ರಿಗಳಾಗಿರುವುದು ನನಗೆ ತುಂಬಾ ಆನಂದವಾಗಿದೆ. ಆದರೆ, ಇವೊತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಮಂತ್ರಿಗಳಿದ್ದಾರೆಯೆ ಎಂದು ಕೇಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಗೆ 5–8 ಜನ ಮಂತ್ರಿಗಳನ್ನು ಮಾಡಿದ್ದೀರಿ, ಗುಲ್ಬರ್ಗ ಜಿಲ್ಲೆಗೆ ನಾಲ್ಕು ಜನ ಮಂತ್ರಿಗಳನ್ನು ಮಾಡಿದ್ದೀರಿ. ಆರೋಗ್ಯ ಖಾತೆ ವಹಿಸಿಕೊಂಡಿದ್ದ ರೇವಣ್ಣನವರು ರಾಜೀನಾಮೆ ಕೊಟ್ಟರು. ರೇವಣ್ಣನವರು ರಾಜೀನಾಮೆ ಕೊಟ್ಟ ನಂತರ ಆರೋಗ್ಯ ಖಾತೆಯನ್ನು ರಾಮಕೃಷ್ಣರವರಿಗೆ ಕೊಡತಕ್ಕಂಥ ಔದಾರ್ಯ ತೋರಿಸಲಿಲ್ಲ. ಅದನ್ನು ಯಾರಿಗೋ ತಾತ್ಕಾಲಿಕ ಖಾತೆ ಎಂದು ಕೊಡುತ್ತಿದ್ದೀರಿ. ಇದರ ಮರ್ಮವಾದರೂ ಏನು? ಇದರ ಅರ್ಥವೇನು? ನಿಮಗೆ ನಿಮ್ಮ ಸಹೋದ್ಯೋಗಿಗಳಲ್ಲಿ ನಂಬಿಕೆ, ವಿಶ್ವಾಸ ಇಲ್ಲವೆ? ಅಥವಾ ಹಣ ಬರತಕ್ಕಂಥ ಎಲ್ಲಾ ಇಲಾಖೆಗಳನ್ನು ನೀವೇ ಇಟ್ಟುಕೊಳ್ಳಬೇಕೆಂದಿದ್ದೀರಾ? ಹಣ ಬರತಕ್ಕಂಥ ಅಥವಾ ಅಧಿಕಾರ ಇರತಕ್ಕಂಥ ಎಲ್ಲಾ ಇಲಾಖೆಗಳ ಖಾತೆಗಳನ್ನು ನಿಮ್ಮ ಕೈಯಲ್ಲೆ ಏಕೆ ಇಟ್ಟುಕೊಂಡಿದ್ದೀರಿ? ಇದಕ್ಕೆ ಉತ್ತರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಂದ ನಿರೀಕ್ಷಿಸುತ್ತೇನೆ. ಮುಖ್ಯಮಂತ್ರಿಗಳು ಸುಮಾರು 8–10 ವರ್ಷಗಳ ಕಾಲ ಏನು ವಿರೋಧ ಪಕ್ಷದಲ್ಲಿದ್ದು ಅಥವಾ ಆಡಳಿತ ಪಕ್ಷದಲ್ಲಿದ್ದು ಹಿಂದುಳಿದ ವರ್ಗಗಳ ಬಗ್ಗೆ ಮಾಡಿರತಕ್ಕಂಥ ಭಾಷಣಗಳನ್ನು ನೋಡಿದರೆ, ಅವರು ಏನು ಹಿಂದುಳಿದ ವರ್ಗಗಳ

ಬಗ್ಗೆ ಮಾಡಿರತಕ್ಕಂಥ ಭಾಷಣಗಳನ್ನು ನೋಡಿದರೆ, ಅವರು ಏನು ಹಿಂದುಳಿದ ವರ್ಗಕ್ಕೆ ದೊಡ್ಡ ಸಹಾಯ--ಸಹಕಾರವನ್ನು ಮಾಡುತ್ತೇವೆಂಬ ಭಾವನೆ ವ್ಯಕ್ತಪಡಿಸಿದ್ದರು, ಇವೊತ್ತು ಅದು ಸಂಪೂರ್ಣ ಸುಳ್ಳಾಗಿದೆ. ಈಗಾಗಲೇ ಈ ವರ್ಷದ ಬಜೆಟ್ ಮಂಡನೆಯಾಗಿದೆ. ನಾನು ವಿವರವಾಗಿ ಬರುತ್ತೇನೆ. ನನಗೆ ಅಧ್ಯಕ್ಷರು ಸಾಕಷ್ಟು ಸಮಯ ಕೊಟ್ಟಿಲ್ಲ, ಅವರ ಸ್ಥಿತಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಹಿಂದುಳಿದ ವರ್ಗದವರಿಗೆ ನೀವು ಮಾಡಿರತಕ್ಕಂಥಾದ್ದು ಏನು ? ಯಾವ ಇಲಾಖೆಗೆ ನೀವು ಹಣ ಕೊಟ್ಟಿದ್ದೀರಿ, ಎಂಬುದನ್ನು ದಯವಿಟ್ಟು ಹೇಳಿ. ಈಗ ಕೃಷ್ಣಪ್ಪನವರನ್ನು ಗೊಲ್ಲ ಸಮಾಜದ ಮಂತ್ರಿಗಳನ್ನಾಗಿ ಮಾಡುವುದರಿಂದ ಗೊಲ್ಲರಿಗೆ ಒಂದು ಮಾನಸಿಕವಾಗಿ ತೃಪ್ತಿ ಪಡಿಸಬಹುದು ಎಂದು ನಾನು ಒಪ್ಪಿಕೊಳ್ಳುತ್ತೇನೆ, ಅದು ಆಗಬೇಕಾದ ಅವಶ್ಯಕತೆಯಿದೆ. ಮೊದಲನೇ ಬಾರಿ ಒಬ್ಬ ಗೊಲ್ಲ ಜಾತಿಯವರು ಮಂತ್ರಿಗಳಾಗಿರುವುದು ನನಗೆ ಬಹಳ ಸಂತೋಷ ತಂದಿದೆ. ಆದರೆ, ಅವರ ಕೈಗೆ ಹಣ ಕೊಡದೆ ಹೋದರೆ ಅವರು ಹೇಗೆ ಗೊಲ್ಲರಿಗೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಬಂಗಾರಪ್ಪನವರ ಸರ್ಕಾರದ ಬಗ್ಗೆ ನಮಗೆ ಬಹಳ ಭಿನ್ನಾಭಿಪ್ರಾಯ ಇರುವುದು ಬೇರೆ ವಿಚಾರ. ಆದರೆ, ಕಾರ್ಯಕ್ರಮ ಆಧಾರವಾಗಿರತಕ್ಕಂಥ ನಿಮ್ಮ ಸರ್ಕಾರ ಏನು ಮಾಡಿದೆ ಎಂಬುದನ್ನು ದಯವಿಟ್ಟು ತಿಳಿಸಿ. ನೀವು ಮಂಡಿಸಿರುವ ಬಜೆಟ್‌ನಲ್ಲಿ ಒಂದು ಪೈಸೆಯಷ್ಟಾದರೂ ಹಣವನ್ನು ಹಿಂದುಳಿದ ವರ್ಗದವರಿಗೆ ಕೊಟ್ಟಿದ್ದೀರಾ ? ನಿಮ್ಮ ಕಾಲದಲ್ಲಿ ಈ ವರ್ಗದ ಜನಗಳಿಗೆ ಸಹಾಯ ಆಗದೆ ಇದ್ದರೆ ಇನ್ನು ಯಾವ್ಯಾಗ ಸಹಾಯ ಆಗತಕ್ಕಂಥದ್ದು. ಅದು ಸಾಧ್ಯವೇ ಇಲ್ಲ. ಮಾನ್ಯ ವೀರೇಂದ್ರ ಪಾಟೀಲರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಈ ಸರ್ಕಾರ ಮಾನ್ಯ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿ ಮಾಡುತ್ತೇವೆನ್ನತಕ್ಕ ಮಾತನ್ನು ಅವರು ಹೇಳಿದ್ದರು. ನಿಮಗೆ ಅದನ್ನು ಹೇಳತಕ್ಕಂಥ ಧೈರ್ಯ ಇಲ್ಲ.

ಏಕೆಂದರೆ ನಿಮಗೆ ಯಾವಾಗ ಅಧಿಕಾರ ಹೊರಟುಹೋಗುತ್ತದೊ ಎನ್ನತಕ್ಕ ಭಯ ಇದೆ. ಆ ಭಯದ ವಾತಾವರಣದಲ್ಲಿ ನೀವು ಇವತ್ತು ಕೆಲಸವನ್ನು ಮಾಡುತ್ತಿದ್ದೀರಿ. ಇದು ನಮ್ಮ ರಾಜ್ಯದ ದೊಡ್ಡ ದೌರ್ಭಾಗ್ಯವೆಂದು ನಾನಾದರೂ ತಿಳಿದು ಕೊಂಡಿದ್ದೇನೆ. ನಿಮ್ಮದು ಕೇವಲ ಘೋಷಣೆಗಳ ಸರ್ಕಾರವಾಗಿದೆ. 100 ದಿನಗಳ ಕಾರ್ಯಕ್ರಮ ಎಂದು ಮಾಡಿದಿರಿ. ನೀವು 100 ದಿನಗಳಲ್ಲಿ ಮಾಡಿರುವುದು ಏನು ಸ್ವಾಮಿ ? ನಾನು ಕಷ್ಟಪಟ್ಟುಕೊಂಡು ನಮಗೆ ಪರಿಚಯ ಇರುವಂತಹ ಅಧಿಕಾರಿಗಳ ಜೊತೆಯಲ್ಲಿ ಇವರು 100 ದಿನಗಳಲ್ಲಿ ಏನು ಸಾಧನೆ ಮಾಡಿದ್ದಾರೆಂದು ಚರ್ಚೆ ಮಾಡಿದೆ. ಬಜೆಟ್‌ನಲ್ಲಿ ಹಾಕಿರತಕ್ಕಂಥ ರೆಗ್ಯುಲರ್ ಪ್ರೋಗ್ರಾಂ ಅನ್ನು ಎಕ್ಸ್‌ಪಿಡಿಯೆಟ್ ಮಾಡಿ ಇವರಿಗೆ ಅನುಕೂಲವಾಗುವಂತಹ ಕೆಲವು ಪ್ರೋಗ್ರಾಂ ಅನ್ನು ಜಿಲ್ಲಾವಾರು ಕ್ಷೇತ್ರಾವಾರು ರೆಡ್ ಮಾರ್ಕ್‌ನಲ್ಲಿ ಅಂಡರ್‌ಲೈನ್ ಮಾಡಿ, ಈ ಕೆಲಸ ನೀವು ಮುಗಿಸಿಬಿಡಿ ಎಂದು ಮಾಡಿದ್ದಾರೆ. ಕೆಲವು ಕಡೆ ಕೆಲಸವನ್ನು ಮಾಡಿದ್ದಾರೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಅದಕ್ಕೆ ಬೇಕಾಗಿರತಕ್ಕಂಥ ಹಣವನ್ನು ನೀವು ರಿಲೀಸ್ ಮಾಡಿಲ್ಲ. ಇವತ್ತು ಅಧಿಕಾರಿಗಳು ಬಾಯಿ ಬಿಡುವುದಕ್ಕೆ ತಯಾರಿಲ್ಲ, ಅವರು ಪಾಪ ಹೆದರುತ್ತಾರೆ. ಏಕೆಂದರೆ, ಈಗಾಗಲೇ ಸುದ್ದಿ ಹಬ್ಬಿದೆ. ಏಪ್ರಿಲ್, ಮೇನಲ್ಲಿ ಮಾನ್ಯ ಮೊಯಿಲಿಯವರ ಸರ್ಕಾರ ಹೋಗುತ್ತದೆ, ಮಾನ್ಯ ಕೃಷ್ಣರವರು ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳುತ್ತಿದ್ದಾರೆ. ಅವರು ಅಧಿಕಾರಿಗಳು ಏನು ಮಾಡುತ್ತಾರೆ. ಅಲ್ಲಿ ಕೃಷ್ಣರವರು ಮುಖ್ಯಮಂತ್ರಿಗಳಾದ ತಕ್ಷಣ ತಿರುಗ ಅವರ ಜಾಗ ಅವರಿಗೆ ಬೇಕಲ್ಲಾ, ಆದರಿಂದ ಅವರು ಇವತ್ತು ಬಾಯಿ ಬಿಡುವುದಕ್ಕೆ ತಯಾರಿಲ್ಲ. ವಸ್ತು ಸ್ಥಿತಿ ಏನಾಗಿದೆ ಎಂದರೆ, ನಿಮ್ಮ ಸರ್ಕಾರ ದಿವಾಳಿ ಎದ್ದಿದೆ. ಕೈಗಾರಿಕಾ ಇಲಾಖೆಗೆ ಕೊಡಬೇಕಾಗಿರತಕ್ಕಂಥ ಸಬ್ಸಿಡಿಯನ್ನು ನೀವು ಕೊಡುವುದಕ್ಕೆ ಆಗಿಲ್ಲ. ಕಳೆದ ವಾರ ಆಶ್ರಯ ಯೋಜನೆಯಲ್ಲಿ ಒಂದು ಲಕ್ಷ ಮನೆಗಳನ್ನು ಜೂನ್ ಒಳಗಡೆ ಕಟ್ಟಲಿಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಹೇಳಿದರು. ಯಾವ ಜಿಲ್ಲೆಗೆ

ಬಿಡುಗಡೆ ಮಾಡಿದ್ದಾರೆಂದು ಹೇಳಲಿ. ಒಂದು ಜಿಲ್ಲೆಗೂ ಒಂದು ರೂಪಾಯಿಯನ್ನು ಕೊಟ್ಟಿಲ್ಲ. ಆಶ್ರಯ ಯೋಜನೆಯಲ್ಲಿ ಬಡವರಿಗೆ ಕಟ್ಟತಕ್ಕಂಥ ಮನೆಗಳಿಗೆ ಹಣವನ್ನು ಕೊಟ್ಟಿಲ್ಲ. ನೀವು ಅಲೆಗ್ಸಾಂಡರ್‌ರವರನ್ನು ತೆಗೆದು ಲಿನ್ ಅವರನ್ನು ಮಾಡುವುದರಿಂದ, ವಿಶ್ವನಾಥನನ್ನು ತೆಗೆದು ರವೀಂದ್ರನನ್ನು ಕಾರ್ಯದರ್ಶಿಯನ್ನಾಗಿ ಮಾಡುವುದರಿಂದ, ತಿಮ್ಮಪ್ಪನನ್ನು ತೆಗೆದು ಬೋರಪ್ಪನನ್ನು ಮಾಡುವುದರಿಂದ ಕರ್ನಾಟಕದ ಜನತೆಗೆ ಏನೂ ಸಿಗುವುದಿಲ್ಲ. ಕರ್ನಾಟಕ ಜನತೆಗೆ ಏನಾದರೂ ನಿಮ್ಮ ಸರ್ಕಾರದಿಂದ ಅನುಕೂಲ ಸಿಗಬೇಕು ಎಂದರೆ ಹಣ ಕೊಡಬೇಕು. ಮಾನ್ಯ ಕೃಷ್ಣಪ್ಪನವರೇ, ಇವತ್ತು ಏನಾಗಿದೆ ಎಂದರೆ, ನಿಮ್ಮ ಮಂತ್ರಿಗಳಿಗೆ ನಿಮಗೆ ಭಯ. ಮಂತ್ರಿಗಳು ಜನಗಳ ಹತ್ತಿರ ಹೋಗಲಿಕ್ಕೆ ಭಯಗ್ರಸ್ಥರಾಗಿದ್ದಾರೆ. ಏಕೆಂದರೆ, ಜನರು ಎಲ್ಲಿ ಬಂದು ತೀವ್ರವಾಗಿ ಪ್ರತಿಭಟನೆಯನ್ನು ಮಾಡುತ್ತಾರೋ ಎಂದು. ನಿಮ್ಮ ಸರ್ಕಾರಕ್ಕೆ ನಾನು ಅಯ್ಯೋ ಅನ್ನುತ್ತೇನೆ. ರೈತರನ್ನು ನೀವು ಬಂಧನ ಮಾಡಿದ್ದೀರಿ.

ನಮ್ಮ ಬಿ.ಜೆ.ಪಿ . ಮುಖಂಡರನ್ನು, ಕಾರ್ಯಕರ್ತರನ್ನು ಮೊನ್ನೆ ಬಂಧನ ಮಾಡಿದ್ದೀರಿ. ನೀವು ಹಿಂದೆ ಎಂಥೆಂಥ ಮುಖಂಡರನ್ನು ನೋಡಿದ್ದೀರಿ. ಮಾನ್ಯ ದೇವರಾಜ ಅರಸುರವರಂಥ ಧೀಮಂತ ನಾಯಕರನ್ನು ನೋಡಿದ್ದೀರಿ. ಅವರು ಹೌದ್ರಿ ಬಂಧನ ಮಾಡಿದ್ದೇನೆ ಕುಳಿತುಕೊಳ್ಳಿರಿ ಎಂದು ಹೇಳುವರು; ಅರೆಸ್ಟ್ ಮಾಡಿದ್ದೇನೆ ಎಂದು ಹೇಳುವರು. ಆದರೆ ಇವತ್ತು ಹೌದು ಅರೆಸ್ಟ್ ಮಾಡಿಬಿಟ್ಟಿದ್ದೇವೆ, ನಾವೇನೂ ತಪ್ಪು ಮಾಡಿಲ್ಲ, ಕಾನೂನು ಇದೆ, ಪೋಲೀಸಿನವರು, ಕೇಂದ್ರ ಸರ್ಕಾರದವರು ಹೇಳಿದರು, ಅದಕ್ಕೆ ನಾವು ಮಾಡಿದ್ದೇವೆ ಅವರಿಗೆ ಬೆಣ್ಣೆಯನ್ನು ಕೊಟ್ಟಿದ್ದೇವೆ, ಚೆನ್ನಾಗಿ ನೋಡಿಕೊಂಡಿದ್ದೇವೆ, ಬಿಡುಗಡೆ ಮಾಡಿದ್ದೇವೆ, ರೈತರನ್ನೂ ನಾವು ಅರೆಸ್ಟ್ ಮಾಡಿಲ್ಲ, ಸಾಯಂಕಾಲ ಬಿಡುಗಡೆ ಮಾಡಿಬಿಡುತ್ತೇವೆ – ಈ ಸ್ಥಿತಿ ನಿಮಗೆ ಬರುವುದಕ್ಕೆ ಕಾರಣವೇನು ? ಇದನ್ನು ಯೋಚನೆ ಮಾಡಿ. ಇವತ್ತು ಜಾತ್ಯಾತೀತ, ಸಮಾಜವಾದಿ ಶಕ್ತಿಗಳನ್ನು ಈ ದೇಶದಲ್ಲಿ ಬೆಳೆಸಬೇಕು ಎನ್ನತಕ್ಕ ಜನ ನೀವು ದಯವಿಟ್ಟು ಯೋಚನೆ ಮಾಡಿ, ನಿಮ್ಮ ಸ್ಥಿತಿ, ಈ ಸ್ಥಿತಿಗೆ ಬರಲಿಕ್ಕೆ ಕಾರಣವೇನು ? ನಿಮ್ಮಲ್ಲಿ ನಾಯಕತ್ವದ ಕೊರತೆ ಇದೆ. ಹಿಂದೆ ಕಾಂಗ್ರೆಸ್ ಪಾರ್ಟಿಯಲ್ಲಿ ಏನು ಹೇಳುತ್ತಿದ್ದರು ಇವತ್ತು ಅದು ಉಳಿದಿಲ್ಲ. ನೀವು ಬಹಳ ದೀರ್ಘವಾಗಿ ಯೋಚನೆ ಮಾಡಿ. ನಿಮ್ಮ ಸರ್ಕಾರ ಸಂಪೂರ್ಣವಾಗಿ ದಿವಾಳಿ ಎದ್ದಿರತಕ್ಕಂಥ ಸರ್ಕಾರವಾಗಿದೆ. ಎಸ್.ಎಲ್.ಡಿ ಬ್ಯಾಂಕಿಗೆ ನೀವು ಕೊಡಬೇಕಾಗಿರತಕ್ಕಂಥ ಹಣವನ್ನು ಕೊಡುವ ಸ್ಥಿತಿಯಲ್ಲಿಲ್ಲ. ಕೈಗಾರಿಕೆಗಳಿಗೆ ಕೊಡಬೇಕಾಗಿರತಕ್ಕಂಥ ಸಬ್ಸಿಡಿ ಹಣ ನಿಮ್ಮ ಹತ್ತಿರ ಇಲ್ಲ. ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಕೊಡಬೇಕಾಗಿರತಕ್ಕಂಥ ಹಣ ನಿಮ್ಮ ಹತ್ತಿರ ಇಲ್ಲ. ಕರ್ನಾಟಕ ರಾಜ್ಯ ಸರ್ಕಾರದಿಂದ ಕೆಎಸ್‌ಆರ್‌ಟಿಸಿಗಾಗಲಿ, ಕೆಇಬಿಗಾಗಲಿ, ಕೊಡಬೇಕಾಗಿರತಕ್ಕಂಥ ಒಂದು ರೂಪಾಯಿ ಹಣ ನಿಮ್ಮ ಹತ್ತಿರ ಇಲ್ಲ. ಈ ತಿಂಗಳಲ್ಲಿ ಎಂದರೆ ಮಾರ್ಚ್ 31ನೇ ತಾರೀಖಿನೊಳಗೆ 140 ಕೋಟಿ ರೂಪಾಯಿಗಳಷ್ಟು ಕೆಲಸವಾಗಿರುವ ಬಿಲ್‌ಗಳು ಇವತ್ತು ಇದೆ. ನಿಮ್ಮ ನೂರು ದಿವಸಗಳ ಪ್ರೋಗ್ರಾಂಗಳಲ್ಲಿ 140 ಕೋಟಿ ರೂಪಾಯಿಯ ಚೆಕ್‌ಗಳನ್ನು ಇವತ್ತು ಬ್ಯಾಂಕ್‌ನಲ್ಲಿ ಆನರ್ ಮಾಡುತ್ತಿಲ್ಲ. ಟ್ರಜರಿನಲ್ಲಿ ಆನರ್ ಮಾಡುತ್ತಿಲ್ಲ. ಇದಕ್ಕೆ ಏನು ಕಾರಣ ? ನಿಮ್ಮ ಸರ್ಕಾರದಲ್ಲಿ ದುಡ್ಡಿಲ್ಲ. ದೊಡ್ಡದಾಗಿ ಭಾಷಣ ಮಾಡುತ್ತೀರಿ. ವೀರ ಅಭಿಮನ್ಯು ರೀತಿ ನಾನು ಆಗುವುದಿಲ್ಲ, ಅರ್ಜುನನ ರೀತಿಯಲ್ಲಿ, ಕೃಷ್ಣನ ರೀತಿಯಲ್ಲಿ ವ್ಯೂಹಗಳನ್ನು ರಚಿಸಿ ಗೆಲ್ಲುತ್ತೇನೆಂದು ಹೇಳಿದರು. ಏನು ನೀವು ಗೆದ್ದಿರುವುದು ? ನಿಮ್ಮ ಆದಾಯ ಹೆಚ್ಚಿರುವುದು ಏನು ಎಂದು ನನಗೆ ಹೇಳಿ, ಅಂಕಿ ಅಂಶಗಳನ್ನು ಕೊಡಿ. ಸಾರಾಯಿ ಬಾಬ್ತಿನಲ್ಲಿ, ಐಎಂಎಫ್‌ಎಲ್ ಬಾಬ್ತಿನಲ್ಲಿ ಅಥವಾ ಬೇರೆ ಬಾಬ್ತುಗಳಲ್ಲಿ ನಿಮ್ಮ ಸರ್ಕಾರಕ್ಕೆ ಬರತಕ್ಕಂಥ ಆದಾಯದ ಅಂಕಿ–ಅಂಶಗಳೇನಿವೆ, ಖಾತೆಗಳೇನಿವೆ ಅವುಗಳಿಂದ ಈ ಅಂಕಿ–ಅಂಶಗಳ ಪ್ರಕಾರ ನಿಮಗೆ ಎಷ್ಟು ಆದಾಯ ಹೆಚ್ಚಾಗಿದೆ. ಎಂದು ನನಗೆ ಉತ್ತರ ಕೊಡಿ. ಒಂದು ಪೈಸೆಯಷ್ಟು ಹಣ ಹೆಚ್ಚಿಗೆ ಬಂದಿಲ್ಲ. On the contrary, ನೀವು ಅಧಿಕಾರಿಗಳಿಗೆ ಸೂಚನೆ ಕೊಟ್ಟು

ಅದನ್ನು ಮಾಡಿ, ಇದನ್ನು ಮಾಡಿ ಎಂದು ಅಧಿಕಾರಿಗಳಿಂದ ಕಂಟ್ರಾಕ್ಟರುದಾರರುಗಳಿಂದ ಕೆಲಸ ಮಾಡಿಸಿಕೊಂಡು ಇವೊತ್ತು ಅವರು ತಮಗೆ ದುಡ್ಡು ಬಂದಿಲ್ಲವೆಂದು ನಿಮ್ಮ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಆ ಕಾರಣದಿಂದ ನಾನು ಹೇಳುತ್ತಿದ್ದೇನೆ: ನಿಮ್ಮ ಸರ್ಕಾರ ಕೇವಲ ಘೋಷಣೆಗಳ ಮತ್ತು ದಿವಾಳಿ ಎದ್ದಿರತಕ್ಕಂಥ ಒಂದು ಸರ್ಕಾರವಾಗಿದೆ. ರಾಜ್ಯಪಾಲರ ಕಡೆಯಿಂದ ಅನೇಕ ವಿಷಯಗಳ ಬಗ್ಗೆ ದೊಡ್ಡದಾಗಿ ಭಾಷಣ ಮಾಡಿಸಿದ್ದೀರಿ.

ಬಹಳ ದೊಡ್ಡದಾಗಿ ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆಂದು ಹೇಳಿದ್ದೀರಿ. ಪ್ರಾರಂಭದಲ್ಲಿ ನಾವು ಸಹ ಮುಖ್ಯಮಂತ್ರಿಗಳಾಗಿ ವೀರಪ್ಪ ಮೊಯಿಲಿಯವರು ಅಧಿಕಾರ ವಹಿಸಿಕೊಂಡ ತಕ್ಷಣ ಒಂದು ಬದಲಾವಣೆ ತರಬಹುದೆಂದು ಬಯಸಿದ್ದೆವು. ಆದರೆ, ನೀವು 41 ಜನರನ್ನು ಮಂತ್ರಿಗಳನ್ನಾಗಿ ಮಾಡಿ ಇದನ್ನು ಹೇಳಬಾರದಾಗಿತ್ತು. ನಾನು ಮುಖ್ಯಮಂತ್ರಿಯಾದರೆ ಇಲ್ಲಿ ಕುಳಿತು 'ನಾನು ಯಾವೊತ್ತೂ ಸಹ 41 ಜನರನ್ನೊಳಗೊಂಡಂಥ ಮಂತ್ರಿಮಂಡಲವನ್ನು ಮಾಡುವುದಿಲ್ಲ' ಎಂದು ಹೇಳುವುದಿಲ್ಲ. ಆದರೆ, ನೀವು ಈ ಸ್ಥಾನದಲ್ಲಿ ನಿಂತುಕೊಂಡು ಹಿಂದೆ ನಮ್ಮ ಸರ್ಕಾರದ ಬಗ್ಗೆ ನೀವು ಟೀಕೆಗಳನ್ನು ಮಾಡಿರುವ ಭಾಷಣದ ಎಲ್ಲಾ ಪ್ರತಿಗಳನ್ನು ಹಂಚಿದರೆ ನಾನು ಭಾಷಣ ಮಾಡುವ ಅವಶ್ಯಕತೆಯೇ ಇರುವುದಿಲ್ಲ. ನೀವು ವಿರೋಧ ಪಕ್ಷದಲ್ಲಿದ್ದಾಗ, ಆ ಸ್ಥಾನದಲ್ಲಿ ನಿಂತುಕೊಂಡು ಏನು ಒಂದು ಮಾತನ್ನು ಹೇಳಿದಿರಿ, ಆ ಮಾತಿನ ಪ್ರಕಾರ ನಿಮಗೆ ನಡೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಕೆಳಮಟ್ಟದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿದೆಯೇ ? ಇದರಿಂದ ಜನರಿಗೆ ಇವೊತ್ತು ಜಿಗುಪ್ಸೆಯಾಗಿದೆ. ನಮ್ಮ ಆಡಳಿತದ ಕಾಲದಲ್ಲಿ ಭ್ರಷ್ಟಾಚಾರ ಇರಲಿಲ್ಲವೆಂದು ನಾನು ಹೇಳುವುದಿಲ್ಲ. ಭ್ರಷ್ಟಾಚಾರ ಎನ್ನುವುದು ವಿಶ್ವವ್ಯಾಪಿಯಾಗಿರತಕ್ಕಂಥ, ಸದಾಕಾಲ ಇರತಕ್ಕಂಥ ಒಂದು ವಿಚಾರವಾಗಿರುವುದನ್ನು ನಾನು ಒಪ್ಪುತ್ತೇನೆ. ಆದರೆ, ನೀವು ಹೇಳುತ್ತಿದ್ದುದು ಏನು ? 'ರಾಮಕೃಷ್ಣ ಹೆಗಡೆಯವರು ದೇಶವನ್ನು ದರೋಡೆ ಮಾಡಿದರು' ಎಂದು ಹೇಳುತ್ತಿದ್ದ ನಿಮಗೆ ಇವತ್ತು ನಾವು ಏನು ಹೇಳಬೇಕು ? ಇದರ ಬಗ್ಗೆ ದಯವಿಟ್ಟು ವಿಚಾರ ಮಾಡಿ. ಈಗ ಸಮಯ ಮೀರಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೂ ಸಹ ಒಬ್ಬ ವಿರೋಧ ಪಕ್ಷದ ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು ನಾನು ಹೇಳುತ್ತಿದ್ದೇನೆ: 'ಈ ವಿಧಾನಸಭೆಯನ್ನು ವಿಸರ್ಜನೆ ಮಾಡಿ ಎಂದು ಹೇಳುವುದಿಲ್ಲ. ಇನ್ನು ಎರಡು ವರ್ಷ ವಿಧಾನಸಭೆ ಇರಬೇಕೆಂದು ಹೇಳತಕ್ಕಂಥವನು ನಾನು. ಇವೊತ್ತಿನ ಪ್ರಜಾತಂತ್ರ ವ್ಯವಸ್ಥೆ ಜನರ ನಗೆಪಾಟಲಿಗೀಡಾಗಿದೆ. 'ಏನಪ್ಪಾ, ಇವರಿಗೆ ಮಂತ್ರಿಗಳ ಬಗ್ಗೆ ಗೌರವವಿಲ್ಲ, ಶಾಸಕರ ಬಗ್ಗೆ ಗೌರವವಿಲ್ಲ' ಎಂದು ಜನರು ಅಂದುಕೊಳ್ಳುತ್ತಿದ್ದಾರೆ. ಈ ಸ್ಥಿತಿಗೆ ಕಾರಣವೇನು ? ಈ ವ್ಯವಸ್ಥೆಯನ್ನು ನಾವು–ನೀವು ಸೇರಿ ಸರಿ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಚುನಾವಣೆ ಬೇಡ ಎನ್ನುವ ಮಾತನ್ನು ಹೇಳುತ್ತಿದ್ದೇನೆ: ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ಸರ್ವನಾಶ ಖಚಿತ. ಇವೊತ್ತು ಜನರು ನಿಮ್ಮನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಇವೊತ್ತು ನಮ್ಮ ಎಡಭಾಗದಲ್ಲಿ ಕುಳಿತಿರತಕ್ಕಂಥ ಮಿತ್ರರುಗಳು ಈ ಸ್ಥಿತಿಗೆ ಬರಬೇಕಾದರೆ ಕಾರಣ ನೀವು. ಇದನ್ನು ತಾವು ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ. ನಿಮ್ಮ ಒಳಜಗಳ, ನಿಮ್ಮ ವಿಫಲತೆ, ನೀವು ಮಾಡುತ್ತಿರತಕ್ಕಂಥ ತಪ್ಪು ಕಾರ್ಯಕ್ರಮಗಳಿಂದ ಅವರು ಈ ಮಟ್ಟಕ್ಕೆ ಬೆಳೆದಿದ್ದಾರೆ. ಈಗ ಇದನ್ನು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶವಿದೆಯೆಂದು ನನಗಂತೂ ಸಂಶಯವಿದೆ. ನೀವು ಸರಿಪಡಿಸಿಕೊಳ್ಳುವುದು ನಮಗೆ ಬೇಕಾಗಿಲ್ಲ, ಏಕೆಂದರೆ, ನಾವು ಅಧಿಕಾರಕ್ಕೆ ಬರಬೇಕಾಗಿದೆ. ನೀವು ಸರಿಪಡಿಸಿಕೊಳ್ಳದಿರುವುದೇ ಒಳ್ಳೆಯದು. ಆದರೆ, ರಾಜ್ಯದ ಜನತೆಯ ಹಿತದೃಷ್ಟಿಯಿಂದ ನೋಡಬೇಕಾಗುತ್ತದೆ. ನಾವೇನು ಮಾಡಿದ್ದೇವೆ ? ನನ್ನ ಕ್ಷೇತ್ರದ ವಿಚಾರ ಬೇಡ, ಏಕೆಂದರೆ, ನಾನು ಮಂತ್ರಿಯಾಗಿದ್ದು, ಅನಂತರ ವಿರೋಧ ಪಕ್ಷದಲ್ಲಿದ್ದೇನೆ. ನನ್ನ ಕ್ಷೇತ್ರದಲ್ಲಿ ಸ್ವಲ್ಪ ಕೆಲಸ ಮಾಡಿದ್ದೇನೆ. ಯಾರಾದರೂ ಒಬ್ಬ ಶಾಸಕರು ಎದ್ದು ನಿಂತು, ಮೂರುವರೆ ವರ್ಷಗಳಲ್ಲಿ 'ನನ್ನ ಕ್ಷೇತ್ರದಲ್ಲಿ, ಇಂತಿಂಥ ಕೆಲಸಗಳಾಗಿವೆ' ಎಂದು ಧೈರ್ಯವಾಗಿ ಹೇಳಲಿ ನೋಡೋಣ. ಯಾರೂ ಸಹ

ಹೇಳುವುದಕ್ಕಾಗುವುದಿಲ್ಲ. ಕಾರಣವೇನು ? ಹೇಳಿದರೂ ಕೂಡ 'ಎಲ್ಲೋ ನಾಲ್ಕು ಕಿಲೋಮೀಟರ್‌ಗಳಷ್ಟು ದೂರ ರಸ್ತೆಯಾಗಿದೆ' ಎಂದು ಹೇಳುತ್ತಾರೆ.

ಮಾನ್ಯ ಮುಖ್ಯಮಂತ್ರಿಗಳು ಯಾವ್ಯಾವ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಹೊಸ ಕೆಲಸಗಳನ್ನು ಮಂಜೂರು ಮಾಡಿದ್ದಾರೆ ? ಎಷ್ಟೆಷ್ಟು ಪವರ್ ಜನರೇಷನ್ ಜಾಸ್ತಿ ಮಾಡಿದ್ದಾರೆ ? ಎಷ್ಟು ಸಾವಿರ ಕಿಲೋಮೀಟರುಗಳಷ್ಟು ರಸ್ತೆಗೆ ಟಾರ್ ಜಾಸ್ತಿ ಹಾಕಿದ್ದಾರೆ ? ಎಷ್ಟೆಷ್ಟು ಐ.ಪಿ.ಸೆಟ್‌ಗಳನ್ನು ಹಾಕಿದ್ದಾರೆ ? ನೀವು, ಪಾಪ ಹೊಸದಾಗಿ ಬಂದಿದ್ದೀರಿ, 100 ದಿವಸಗಳಲ್ಲಿ 90 ಕಿಲೋಮೀಟರ್‌ಗಳಷ್ಟು ದೂರ ಟಾರ್ ಹಾಕಿದ್ದಾರೆ.

ಇದಕ್ಕೆ ನೂರು ದಿನಗಳ ಕಾರ್ಯಕ್ರಮ ಏಕೆ ಬೇಕಾಗಿತ್ತು ? ನಿಮಗೆ ಅದನ್ನು ಪ್ರಚಾರ ಮಾಡಲು ಎರಡು ಪೇಜು ಅಡ್ವರ್‌ಟೈಸ್‌ಮೆಂಟ್ ಬೇಕಾಗಿತ್ತೇ ? 90 ಕಿ.ಮೀ. ರಸ್ತೆಗೆ ಟಾರನ್ನು ಹಾಕಿರುವುದಕ್ಕೆ ಎರಡು ಪೇಜುಗಳ ಪ್ರಚಾರ ಬೇಕಾಗಿತ್ತೆ ? ಇದಕ್ಕೆ ನಿಮ್ಮ ಹತ್ತಿರ ಉತ್ತರವಿಲ್ಲ, ಅದು ನನಗೆ ಗೊತ್ತು. ನೂರು ದಿನದ ಕಾರ್ಯಕ್ರಮವೆಂದು ಎಲ್ಲಾ ಬೂಟಾಟಿಕೆಯನ್ನು ಮಾಡಿದ್ದೀರಿ. ನೀವು ಸತ್ಯಕ್ಕೆ ದೂರವಾಗಿ ಜನರಿಗೆ ವಂಚನೆಯನ್ನು ಮಾಡತಕ್ಕ ಪರಿಸ್ಥಿತಿಗೆ ಬಂದಿದ್ದೀರಿ. ಇವತ್ತು ಅಧಿಕಾರಿಗಳು ನಮ್ಮ ಹತ್ತಿರ ಬಂದು ಸ್ವಾಮಿ, ಏನಾದರೂ ಮಾಡಿ ಹಣವನ್ನು ರಿಲೀಸ್ ಮಾಡಿಸಿ ಎಂದು ಕೇಳುತ್ತಿದ್ದಾರೆ. ಅವರ ಹೆಸರು, ಅವರ ಇಲಾಖೆಯ ಹೆಸರನ್ನು ನಿಮಗೆ ಹೇಳಬೇಕೆ ? ಹೆಗಡೆಯವರ ಕಾಲದಲ್ಲಿ ಸರ್ಕಾರವನ್ನು ದಿವಾಳಿ ಮಾಡಿಬಿಟ್ಟರು, ದೋಚಿಬಿಟ್ಟರು ಎಂದು ಹೇಳುವವರು, ಎಲ್ಲಿ, ಯಾರಾದರೂ ಮಂತ್ರಿಗಳು ನಿಮ್ಮ ಮೂರುವರೆ ವರ್ಷದ ಆಡಳಿತದಲ್ಲಿ ಏನು ಗಳಿಸಿಬಿಟ್ಟಿದ್ದರೋ ಅದನ್ನು ಹೇಳಿ ನೋಡೋಣ ? ಆಗುದರಿಂದ ಸರ್ಕಾರ ಎನ್ನತಕ್ಕದ್ದು ನಿರಂತರವಾದ ಒಂದು ವ್ಯವಸ್ಥೆ, ಇದರಲ್ಲಿ ಪ್ರತಿ ತಿಂಗಳು, ಪ್ರತಿ ವರ್ಷ ಆದಾಯ ಬರುತ್ತದೆ ಮತ್ತು ಅದಕ್ಕೆ ತಕ್ಕಂತೆ ವೆಚ್ಚವಾಗುತ್ತಾ ಹೋಗುತ್ತದೆ. ಮಾತನಾಡುವುದಕ್ಕೆ ಮುಂಚೆ ಇದನ್ನು ಅರ್ಥ ಮಾಡಿಕೊಳ್ಳಬೇಕು. ಅದರ ಪರಿಮಿತಿಯನ್ನು ತಿಳಿದುಕೊಳ್ಳದೆ ಅಧಿಕಾರಕ್ಕೆ ಬರಬೇಕೆಂದು ಬಾಯಿಗೆ ಬಂದ ಹಾಗೆ ಮಾತನಾಡಿದ್ದೀರ. ಆದರೆ ಇವತ್ತು ನಿಮ್ಮ ಸ್ಥಿತಿ ಏನು ಎಂದು ನೀವು ಯೋಚನೆ ಮಾಡಿ. ನೀವು ಸರ್ವನಾಶವಾಗಬೇಕೆಂದು ನಾನು ಬಯಸತಕ್ಕವನಲ್ಲ. ನಾನು ದೇಶದ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಆದರೆ ನೀವು ಹೋಗುತ್ತಿರುವ ದಾರಿ ಸಂಪೂರ್ಣವಾಗಿ ತಪ್ಪಿದೆ. ಇವತ್ತು ಅಲ್ಪಸಂಖ್ಯಾತರ ಬಗ್ಗೆ ಮಾತನಾಡತಕ್ಕ ಜನರು ಅಲ್ಪಸಂಖ್ಯಾತರ ರಕ್ಷಣೆಗೆ ಏನು ಮಾಡಿದ್ದೀರಿ, ನಾನೇನಾದರು ಅಲ್ಪಸಂಖ್ಯಾತನಾಗಿ ಇದ್ದಿದ್ದರೆ ಒಂದು ಕ್ಷಣ ಈ ಸರ್ಕಾರದಲ್ಲಿ ಇರುತ್ತಿರಲಿಲ್ಲ. ಇವರು ನೂರು ಜನರನ್ನು ಕೊಂದಿದ್ದಾರೆ, ಏಕೆ ಸತ್ತರು ? ಎಷ್ಟು ಪರಿಹಾರವನ್ನು ಕೊಟ್ಟಿದ್ದಾರೆ ? ಇವರು ರಾಜ್ಯಪಾಲರಿಂದ ಭಾಷಣವನ್ನು ಹೇಳುವುದರ ಮೂಲಕ ರಾಜ್ಯಪಾಲರನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ ಅಲ್ಪಸಂಖ್ಯಾತರಿಗೆ ಏನು ರಕ್ಷಣೆ ಕೊಟ್ಟಿರತಕ್ಕದ್ದು ? ಆಡಳಿತ ಪಕ್ಷದ ಮಂತ್ರಿಗಳಾದ, ನನ್ನ ಮಿತ್ರರಾದ ವಿಶ್ವನಾಥ್‌ರವರು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಮಾನ್ಯ ಅಜೀಜ್‌ಸೇಠ್‌ರವರು ವಿರೋಧವಾಗಿದ್ದಾರೆಂದು ಹೇಳಿದ್ದಾರೆ. ಆದರೆ ನನಗೆ ಗೊತ್ತಿದೆ ಅಜೀಜ್ ಸೇಠ್‌ರವರು ಏನು ಎಂದು. ಅಜೀಜ್ ಸೇಠ್‌ರವರು ಯಾವಾಗಲೂ ಕೂಡ ಕನ್ನಡದ ಪರವಾಗಿರತಕ್ಕ ವ್ಯಕ್ತಿ. ಅವರು ಕೇಳಿರತಕ್ಕದ್ದು ಏನು ? ಉರ್ದು ಶಾಲೆಗಳಿಗೆ ಕನ್ನಡ ಪಂಡಿತರನ್ನು ಹಾಕಬೇಕೆಂದು ಹೇಳಿದ್ದಾರೆ, ಅದರಲ್ಲಿ ತಪ್ಪು ಏನಿದೆ ? ಏಕೆ ನಮ್ಮ ಮಕ್ಕಳು ಉರ್ದು ಶಾಲೆಗಳಿಗೆ ಹೋಗುತ್ತಾರೆ ? ಏಕೆ ಅವರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಲು ಆಗಿಲ್ಲ, ಇವರಂತೂ ಮಾಡುವುದಿಲ್ಲ. ನೀವು ಏನೂ ಮಾಡಲಿಲ್ಲವೆಂದು ಅವರು ಹೇಳುತ್ತಾರೆ. ಹಾಗಾದರೆ ನೀವು ಮೂರೂವರೆ ವರ್ಷದಲ್ಲಿ ಏನು ಮಾಡಿದ್ದೀರಿ ? ಇದಕ್ಕೆ ದಯಮಾಡಿ ಉತ್ತರವನ್ನು ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೆ, ನಾನು ಆ ಕಡೆ ಇರತಕ್ಕವರನ್ನು ಮತ್ತು ಈ ಕಡೆ ಇರತಕ್ಕವರನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ನನ್ನ ನಿಲುವು, ನನ್ನ ಪಕ್ಷದ ನಿಲುವು ಏನೆಂದರೆ, ಪ್ರತ್ಯಕ್ಷವಾಗಿ ಉರ್ದು ಶಾಲೆಗಳು ಬೇಡ, ಎಲ್ಲಾ ಮಕ್ಕಳನ್ನು ಒಂದೇ ಶಾಲೆಗೆ, ಒಂದೇ ಕಡೆ ಸೇರಿಸಿ, ಒಂದು ಶಾಲೆಯಲ್ಲಿಯೇ ಅಭ್ಯಾಸವಾಗಲಿ, ಉರ್ದು ಕಲಿಸಿ, ಕನ್ನಡ ಕಲಿಸಿ ಇವರು ಉರ್ದು ಎಂದು ಬೇರೆ ಕಡೆ ಕೂರಿಸಿದರೆ ಇವರು ಜನರ ಜೊತೆ ಹೇಗೆ ಬೆರೆಯುತ್ತಾರೆ ? ನಮ್ಮ ನಿಲುವು ಏನೆಂದರೆ ಕೇವಲ ಓಟಿಗೋಸ್ಕರ ನಾವು ಇರಬಹುದು, ನೀವು ಇರಬಹುದು, ಅವರು ಇರಬಹುದು. ಆದರೆ ಈ ಸಮಾಜವನ್ನು ಪ್ರತ್ಯೇಕವಾಗಿಟ್ಟು ಅದನ್ನು ಹೊರೆಯುವ ಪ್ರಯತ್ನವನ್ನು ಇನ್ನಾದರೂ ನಾವು ಬಿಡೋಣ. ಅದನ್ನು ಈಗಲಾದರೂ ತಿದ್ದಿಕೊಂಡು ನಾವೆಲ್ಲರೂ ಒಂದೇ ತಾಯಿಯ ಮಕ್ಕಳು ಎಂದು ಒಂದು ಶಾಲೆಯಲ್ಲಿ ಓದುವುದು, ಒಂದು ಕೇರಿಯಲ್ಲಿ ವಾಸ ಮಾಡುವುದು. ಪ್ರಾರಂಭ ಆದರೆ ಬಹುಶಃ ದೊಡ್ಡ ಕಲ್ಯಾಣ ಮಾಡಿದಂತಾಗುತ್ತದೆ. ಈ ದಿಕ್ಕಿನಲ್ಲಿ ನಾವು ಯೋಚನೆ ಮಾಡೋಣ.

ಒಬ್ಬ ಮಾನ್ಯ ಸದಸ್ಯರು:- ಕಡೆಯವರೆಗೂ ನಿಮ್ಮ ನಿಲುವು ಒಂದೇ ಇರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸತ್ಯವಾಗಿ ಹೇಳುತ್ತೇನೆ, ಇಲ್ಲದಿದ್ದರೆ ರಾಜಕೀಯದಲ್ಲಿ ಒಂದು ಕ್ಷಣ ಇರುವುದಿಲ್ಲ, ನಾನು ಬದುಕಿರುವವರೆಗೆ ನನ್ನ ನಿಲುವು ಇದೇ. ಅದರ ಬಗ್ಗೆ ನಿಮಗೆ ಯಾವುದೇ ಅನುಮಾನ ಬೇಡ.

ಶ್ರೀ ಅಜೀಜ್ ಸೇಠ್:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಿರತಕ್ಕ ವಿಷಯವನ್ನು ನಾನು ಬಹಳ ವರ್ಷಗಳ ಹಿಂದೆಯೇ ಹೇಳಿದ್ದೇನೆ, ಹೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಅವರು ಹೇಳಿದಂಥ ಶಾಲೆಗಳು ಇಲ್ಲವೆಂದಲ್ಲ. ಉದಾಹರಣೆಗೆ ನಮ್ಮ ಮಿಷಿನ್ ಸ್ಕೂಲ್ ತೆಗೆದುಕೊಳ್ಳೋಣ. ಅಲ್ಲಿ ಎಲ್ಲಾ ಕೋಮಿನ ಮಕ್ಕಳೂ ಸಹ ಇರುತ್ತಾರೆ. ಹಳೆಯ ಮೈಸೂರಿನ ಮಹಾರಾಜರ ಕಾಲದಲ್ಲಿ ಮೈಸೂರಿನ ಎನ್.ಆರ್. ಮೊಹಲ್ಲಾದಲ್ಲಿ ಒಂದು ಸ್ಕೂಲನ್ನು ಮಾಡಿದರು, ಅದರ ಹೆಸರು ಮಾದರಿ ಸ್ಕೂಲ್. ಅದರಲ್ಲಿ ಮರಾಠಿ, ಉರ್ದು, ಕನ್ನಡ, ಇಂಗ್ಲಿಷ್ ಮುಂತಾದವುಗಳೆಲ್ಲ ಇತ್ತು. ಆದರೆ ಇವತ್ತು ಉರ್ದು ಶಾಲೆ, ಕನ್ನಡ ಶಾಲೆ ಎಂದು ಬೇರೆ ಮಾಡಿ ಮಕ್ಕಳಿಗೆ ಸಣ್ಣ ವಯಸ್ಸಿನಿಂದಲೇ ಈ ಒಂದು National integration ಏನು ಅಣ್ಣತಮ್ಮಂದಿರ ಭಾವನೆ ಬರುತ್ತದೋ ಅದು ಇಲ್ಲದಂತಾಗಿದೆ. ಅದರಿಂದ ಅವರು ಬೇರೆ, ಇವನು ಬೇರೆ ಎನ್ನತಕ್ಕ ಸಂಶಯ, ಮನೋಭಾವನೆ ಬರುತ್ತಿದೆ ಇದರ ಬಗ್ಗೆ ನಾನು ಅನೇಕ ಸಲ ಸರ್ಕಾರಕ್ಕೆ ಹೇಳಿದ್ದೇನೆ. ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪ್ರಾಥಮಿಕ ಶಾಲೆ, ಸರ್ಕಾರಿ ಉರ್ದು ಸ್ಕೂಲ್ ಬೇಡ, ಕನ್ನಡ, ತೆಲುಗು, ತಮಿಳು ಎನ್ನತಕ್ಕ ಶಾಲೆಗಳು ಬೇಡ, ಒಂದೇ ಒಂದು ಶಾಲೆ ಇರಲಿ, ಎಲ್ಲಾ ಭಾಷೆಗಳೂ ಇರಲಿ, ಯಾವ್ಯಾವ ಭಾಷೆಯ ಮಕ್ಕಳು ಎಷ್ಟು ಸಂಖ್ಯೆಯಲ್ಲಿರುತ್ತಾರೋ ಅಷ್ಟು ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರನ್ನು ಕೊಡಿ. I agree with Mr. Sindhia.... ನಾನು ಇವತ್ತು ಹೇಳುತ್ತಿದ್ದೇನೆ. ತಾವು ತಮ್ಮ ಭಾಷಣದಲ್ಲಿ ಮಂಗಳೂರಿನಲ್ಲಿ ಏನು ಕನ್ನಡದ ವಿಷಯದಲ್ಲಿ ಮಮತೆ ಪ್ರಿಯವಾಗಿದೆ, ಎಲ್ಲರೂ ಕನ್ನಡ ಮಾತನಾಡುತ್ತಾರೆಂದು ಹೇಳಿದ್ದೀರಿ. ನಾವು ಹಳೇ ಮೈಸೂರಿನಿಂದ ಬಂದಿರತಕ್ಕದ್ದು. ನಮಗೆ ಮಹಾರಾಜರು ಹಳೇ ಮೈಸೂರಿನಲ್ಲಿ ಅಪ್ಷನಲ್ಸ್ ಕನ್ನಡ ಟೀಚರ್‌ಸ್ನು ಕೊಟ್ಟಿದ್ದರು. ಸ್ವಾತಂತ್ರ್ಯ ಬಂದ ಮೇಲೆ ನಮಗೆ ಇದ್ದಂಥ ಟೀಚರನ್ನೂ ಕಿತ್ತು ಹಾಕಿದರು. ಇವತ್ತು ಕನ್ನಡ ಪ್ರೇಮಿ ಸದಸ್ಯರು ಇಲ್ಲಿ ಏನು ಮಾತನಾಡುತ್ತಿದ್ದಾರೆ, ಅಜೀಜ್ ಸೇಠ್‌ರವರಿಂದ ಇದಕ್ಕೆ ವಿರೋಧವಾಗುತ್ತಿದೆ ಎಂದು ಹೇಳುತ್ತಿದ್ದಾರೆ. ನಾನು ದೊಡ್ಡವನೆಂದು ಹೇಳುತ್ತಿಲ್ಲ. ಆದರೆ ಸಂವಿಧಾನ ಇದೆ. 1250 ಮಕ್ಕಳು ಓದುತ್ತಿರುವ ನನ್ನ ಹೈಸ್ಕೂಲಿನಲ್ಲಿ ಒಬ್ಬರೇ ಒಬ್ಬರು ಟೀಚರ್ ಇದ್ದಾರೆ. 950 ಹೆಣ್ಣು ಮಕ್ಕಳು ನನ್ನ

ಸ್ಕೂಲಿನಲ್ಲಿ ಓದುತ್ತಿದ್ದಾರೆ., ಅಲ್ಲಿ ಒಬ್ಬರೇ ಒಬ್ಬರು ಟೀಚರ್ ಇದ್ದಾರೆ. ಇದು ಹೇಗೆ ಸಾಧ್ಯ ? ನಾನು ಈಗ ಮಾನ್ಯ ಸದಸ್ಯರ ಭಾಷಣದ ಮಧ್ಯೆ ಪ್ರವೇಶ ಮಾಡುವುದಿಲ್ಲ. ನಾಳೆ ನಾಡಿದ್ದರಲ್ಲಿ ನಾನು ಒಂದು ಸ್ಟೇಟ್‌ಮೆಂಟ್‌ನ್ನು ಮಾಡುವವನಿದ್ದೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಸರ್ಕಾರದವರು ಮಾಡಲಿ. ಅವರು ಹೇಳಿದಂತೆ ಸರ್ಕಾರ ಮಾಡಿದರೆ, ಅದು ಸೆಕ್ಯುಲರ್, ನ್ಯಾಷನಲ್ ಇಂಟಗ್ರೇಷನ್ ಎಂದು ಹೇಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೇ, ಇನ್ನು ಅಲ್ಪಸಂಖ್ಯಾತರ 15 ಅಂಶಗಳ ಕಾರ್ಯಕ್ರಮಗಳೆಂದು ವಿಶೇಷವಾಗಿ ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಪ್ರಾರಂಭ ಮಾಡಿದಂಥ ಕಾರ್ಯಕ್ರಮ. ಏಕೆಂದರೆ, ಅಲ್ಪಸಂಖ್ಯಾತ ವರ್ಗದಲ್ಲಿ ವಿಶೇಷವಾಗಿ ಮುಸಲ್ಮಾನ ಬಂಧುಗಳಲ್ಲಿ ಬಡತನ ಬಹಳವಾಗಿದೆ, ಅವರನ್ನು ಏನಾದರೂ ಮಾಡಿ ಬಡತನದಿಂದ ಮೇಲಕ್ಕೆ ತರುವುದಕ್ಕೆ ಹಣಕಾಸಿನ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಮಾಡಿದ್ದುದು. ಆದರೆ ಏನು ಮಾಡಿದ್ದಾರೆಂದರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಬಹಳ ಚೆನ್ನಾಗಿ ಪ್ರಿಂಟ್ ಮಾಡಿಸಿದ್ದಾರೆ. ಬಜೆಟ್ ಭಾಷಣದಲ್ಲಿ ಕೂಡ ಹೇಳಿದ್ದಾರೆ. ಆದರೆ ಅವರಿಗೆ ಕಾಸನ್ನು ಮಾತ್ರ ಕೊಟ್ಟಿಲ್ಲ. ಮಾನ್ಯ ಯಾಹ್ಯಾರವರು ಬಹಳ ಕಷ್ಟಪಟ್ಟು ವಕ್ಫ್ ಬೋರ್ಡಿಗೆ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಪ್ರಯತ್ನ ಮಾಡಿ ಮುಖ್ಯಮಂತ್ರಿಗಳ ಜೊತೆ ಜಗಳವಾಡುತ್ತಿದ್ದಾರೆ. ಇದು ನನಗೆ ಗೊತ್ತಿದೆ. ಎಷ್ಟು ಜಾಸ್ತಿ ಮಾಡಿದ್ದಾರೆಂದರೆ, ಸುಮಾರು 63 ಲಕ್ಷ ರೂಪಾಯಿ ಜಾಸ್ತಿ ಮಾಡಿದ್ದಾರೆ. ಇವರ ಜನಸಂಖ್ಯೆ ಇರತಕ್ಕದ್ದಾದರೂ ಎಷ್ಟು ಎಂದರೆ ....

ಶ್ರೀ ಅಜೀಜ್ ಸೇಠ್:– ನಾನು ಇದ್ದಂಥ ಕಾಲದಲ್ಲಿ ಒಂದೊಂದು ಇನ್ಸ್‌ಸ್ಟಿಟ್ಯೂಷನ್ಸ್‌ಗೆ 2 ಲಕ್ಷ, 3 ಲಕ್ಷ ಹೀಗೆ ಕೊಟ್ಟಿದ್ದೆ. ಮಾನ್ಯ ಯಾಹ್ಯಾರವರು ನಾನು, 25 ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಕೊಡುವುದಿಲ್ಲ ಎಂದು ಹೇಳುತ್ತಿದ್ದರು. ಕೊನೇಪಕ್ಷ ಈಗ ಅವರು 1–2 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಅದು ಆ ಸಂಸ್ಥೆಗೆ ಒಂದು ಆಸ್ತಿಯಾದರೂ ಆಗಿರುತ್ತದೆ.

ಶ್ರೀ ಎಸ್.ಎಂ. ಯಾಹ್ಯಾ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಹೇಳಬೇಕಾದ್ದೇನೂ ಇಲ್ಲ. ಆದರೆ ನನ್ನದೊಂದು ನೀತಿ ಇದೆ. ಬಡವರಿಗೆ, ಗ್ರಾಮಾಂತರದಲ್ಲಿ ಮುಸಲ್ಮಾನರಿದ್ದಾರೆ ಅವರಿಗೆ ಕೊಡಬೇಕೆಂದಿದ್ದೇನೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವವರಿಗೆ 1–2 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ನಾನು ತಯಾರಿಲ್ಲ. ಇದುವರೆಗೆ ನಾನು 200 ಇನ್‌ಸ್ಟಿಟ್ಯೂಷನ್‌ಗಳಿಗೆ ಹಣವನ್ನು ಕೊಟ್ಟಿದ್ದೇನೆ. ಗರಿಷ್ಠ ಎಂದರೆ 25 ಸಾವಿರ ರೂಪಾಯಿಗಳು ಅದಕ್ಕಿಂತ ಹೆಚ್ಚಿಗೆ ಎಲ್ಲರಿಗೂ ನಾವು ಕೊಡುವುದಕ್ಕಾಗುವುದಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರುವ ಬಡವರಿಗಂತೂ ಕೊಡುವುದಕ್ಕೇ ಸಾಧ್ಯವಾಗುವುದಿಲ್ಲ. ನಾನು ಈ ಒಂದು ನೀತಿಯನ್ನು ಹಾಕಿಕೊಂಡು ಇದು ಸರಿಯಾದ ಮಾರ್ಗವೆಂದು ತಿಳಿದುಕೊಂಡೇ ಈ ಕೆಲಸವನ್ನು ಮಾಡುತ್ತಿದ್ದೇನೆ. ಇದರಿಂದ ಬಡವರಿಗೆ ಬಹಳಷ್ಟು ಸಂತೋಷವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಮಾನ್ಯ ಅಧ್ಯಕ್ಷರೇ, ನಾನು ಯಾರಿಗೆ ಕೊಡಬೇಕು, ಯಾವ ಪ್ರದೇಶಕ್ಕೆ ಕೊಡಬೇಕು, ಎಷ್ಟು ಕೊಡಬೇಕೆಂಬ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ನಾನಾದರೂ ಹೇಳುತ್ತೇನೆ, ನಿಮ್ಮ ಕಾಂಗ್ರೆಸ್‌ನ ನೀತಿ, ಘೋಷಣೆಗಳ ಪ್ರಕಾರ ಅಲ್ಪ ಸಂಖ್ಯಾತರ ಅಭಿವೃದ್ಧಿ ದೃಷ್ಟಿಯಿಂದ ನೀವು ಎಷ್ಟು ಹಣವನ್ನು ಮುಡುಪಾಗಿಡುತ್ತಿದ್ದೀರಿ ? ಕನಿಷ್ಠ 10 ಕೋಟಿ ರೂಪಾಯಿಗಳನ್ನಾದರೂ ನೀವು ಕೊಡಬೇಕು. ಇದಕ್ಕೆ ಕಾರಣ ಇದೆ. ನಿಮ್ಮಲ್ಲಿ ಎಷ್ಟು ಜನ ಬೀಡಿ ಕಾರ್ಮಿಕರು ಕ್ಷಯರೋಗದಿಂದ ಸಾಯುತ್ತಿದ್ದಾರೆ, ಆ ಜನರ ರೋಗಕ್ಕೆ ಔಷಧಿಗೆ ಹಣವನ್ನು ಕೊಡತಕ್ಕ ಯೋಗ್ಯತೆ ಈ ಸರ್ಕಾರಕ್ಕೆ ... ಅವರ ಓಟು ನಿಮಗೆ ಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ,

ತಾವು ದಕ್ಷಿಣ ಕನ್ನಡ ಜಿಲ್ಲೆಯಿಂದ ಬರುವವರು, ನಿಮ್ಮಲ್ಲಿ ಎಷ್ಟು ಜನರಿಗೆ ಕ್ಷಯರೋಗ ಇದೆ ಎಂಬುದನ್ನು ನೋಡಿದ್ದೀರಾ ?

ಚೇರ್ಮನ್:– ನಮ್ಮಲ್ಲಿ ಬೀಡಿ ಕಟ್ಟುವವರೇ ಜಾಸ್ತಿ. ಆದ್ದರಿಂದ ಅವರಿಗೆ ಕ್ಷಯರೋಗ ಜಾಸ್ತಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಎಸ್.ಡಿ.ಎಸ್. ಸ್ಯಾನಿಟೋರಿಯಂ ಅಲ್ಲ. ಮಂಡ್ಯದಲ್ಲಿರತಕ್ಕ ಸ್ಯಾನಿಟೋರಿಯಂ ಅಲ್ಲ, ಮಂಗಳೂರಿನಲ್ಲಿರತಕ್ಕ ಸ್ಯಾನಿಟೋರಿಯಂಗೆ ಅಥವಾ ಬೇರೆ ಯಾವುದೇ ಸ್ಯಾನಿಟೋರಿಯಂಗೆ ಹೋದರೂ ಔಷಧಿಯನ್ನು ಚೀಟಿಯಲ್ಲಿ ಬರೆದುಕೊಡುತ್ತಾರೆ. ಕಾರಣ ನಿಮ್ಮ ಸರ್ಕಾರದಲ್ಲಿ ಹಣ ಇಲ್ಲ. ಅದು ನಿಮ್ಮ ಸರ್ಕಾರಕ್ಕೆ ಹೊಳೆಯಲಿಲ್ಲವೆ ? ಅಲ್ಪಸಂಖ್ಯಾತರ ಬಗ್ಗೆ ನೀವು ಏತಕ್ಕೆ ಮಾತನಾಡುತ್ತೀರಿ ? ವೋಟಿಗೋಸ್ಕರ ಮಾತನಾಡುತ್ತಿದ್ದೀರಾ ? ದಯವಿಟ್ಟು ನನಗೆ ಉತ್ತರ ಕೊಡಬೇಕು.

ರಾಜ್ಯಪಾಲರ ಭಾಷಣದ ಸಂದರ್ಭವನ್ನು ದುರುಪಯೋಗ ಮಾಡಿಕೊಂಡು ಕೋಮು ಸೌಹಾರ್ದತೆ ತರಲಿಕ್ಕೆ ಎಂದು ಹೇಳಿ, ನೀವೇನು ಅವರ ಬಗ್ಗೆ ಮಾತನಾಡುತ್ತಿದ್ದೀರಿ ಅವರ ತುಟಿಗೆ ತುಪ್ಪ ಹಚ್ಚತಕ್ಕಂಥ ಕೆಲಸ ಮಾಡುತ್ತಿದ್ದೀರಿ. ಹಿಂದುಳಿದ ವರ್ಗದ ಜನರಿಗೂ ಅಷ್ಟೇನೆ. ಇವತ್ತು ಹಿಂದುಳಿದ ಜನರಲ್ಲಿ ಅತಿ ತುಳಿತಕ್ಕೆ ಒಳಗಾಗಿರುವ ಜನರು ಯಾರು ಇದ್ದಾರೆ. ಕೂಲಿ ಮಾಡತಕ್ಕಂಥ ಜನರು ಯಾರು ಇದ್ದಾರೆ ಅವರನ್ನು ಮೇಲಕ್ಕೆ ಎತ್ತಲೆಂದು ಹೇಳಿ ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳದಿದ್ದರೆ ಇನ್ನು ಯಾವಾಗ ಅವರು ಮೇಲೆ ಬರತಕ್ಕಂಥದ್ದು ? ಅವರು ಯಾವುದೇ ಸಮಾಜದವರಾಗಿರಲಿ, ಇವತ್ತು ಮುಖ್ಯಮಂತ್ರಿಗಳ ಸ್ಥಾನ ಏನು ಅವರಿಗೆ ಸಿಕ್ಕಿದೆ ಆ ಸ್ಥಾನದಿಂದ ವಿಶೇಷವಾಗಿ 40 ಕೋಟಿ ರೂಪಾಯಿಗಳನ್ನಾದರೂ ಕೊಟ್ಟಿದ್ದಾರೆ ನಾನು ಮೆಚ್ಚುತ್ತಿದ್ದೆ. ನಾವು ಈ ಕಡೆ ಕುಳಿತುಕೊಂಡು ಎಲ್ಲರೂ ಹೇಳುತ್ತಿದ್ದೆವು ಕೊನೆ ಪಕ್ಷ ಹಿಂದುಳಿದ ವರ್ಗಗಳ ಮುಖ್ಯಮಂತ್ರಿಯಾದುದಕ್ಕೆ ಸಾರ್ಥಕವಾಯಿತೆಂದು, ಆದರ ಇವತ್ತು ತಾವು ಆ ಕೆಲಸ ಮಾಡುವುದಕ್ಕೆ ಹೋಗಲಿಲ್ಲ. ಅದರ ಬದಲಾಗಿ ನೀವು ವೆಚ್ಚ ದುಂದುವೆಚ್ಚವನ್ನು ಕಡಿಮೆ ಮಾಡುತ್ತೇವೆಂದು ಹೇಳಿದಿರಿ. ನಮ್ಮ ಮಾಧುಸ್ವಾಮಿಯುವರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದರು. ಸರ್ಕಾರಿ ಅಧಿಕಾರಿಗಳ ವಯಸ್ಸನ್ನು ಕಡಿಮೆ ಮಾಡುತ್ತೇವೆಂದು ತುತ್ತೂರಿ ಊದಿದಿರಿ; ಮಾನ್ಯ ವೀರೇಂದ್ರ ಪಾಟೀಲ್‌ರವರು ಮುಖ್ಯಮಂತ್ರಿಯಾದ ತಕ್ಷಣವೇ, ಮೂರುವರೆ ವರ್ಷವಾಯಿತು, ಎಲ್ಲಿ ಕಡಿಮೆ ಮಾಡಿದ್ದಾರೆ' ಒಂದು ಇಲಾಖೆಯಲ್ಲಿ ಒಬ್ಬನನ್ನು ತೆಗೆದು ಹಾಕಿರುತ್ತಾರೆಯೇ ? ಇವತ್ತು ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ, 58 ವರ್ಷದ ಆ ಇಷ್ಯೂ it is dead and gone. ಏಕೆ ನೀವು ಇಲ್ಲಿ ಚರ್ಚೆ ಮಾಡಿದಿರಿ ? ಈ ಚರ್ಚೆಗೆ ಅವಕಾಶವನ್ನು ಏತಕ್ಕೆ ಮಾಡಿದಿರಿ. ಅವರು ನೀವು ವಸೂಲಿ ಮಾಡುವುದಕ್ಕೋಸ್ಕರ ಮಾಡುತ್ತಿದ್ದೀರಿ ಎನ್ನುವ ಭಾವನೆ ಬರುತ್ತದೆಂದು ಹೇಳಿದರು. ನಾನು ಅದು ಭಾವನೆಯಲ್ಲ, ನಿಜಾಂಶವೆಂದು ಹೇಳುತ್ತೇನೆ. ಏತಕ್ಕೆ ನೀವು ಇದನ್ನು ಮಾಡಬೇಕಾಗಿತ್ತು. ಮಾಡತಕ್ಕಂಥ ಅವಶ್ಯಕತೆ ಏನಿತ್ತು. ಒಬ್ಬೊಬ್ಬರು ಒಂದೊಂದು ಹೇಳುತ್ತಿರುತ್ತಾರೆ. ಒಬ್ಬೊಬ್ಬರು ಒಂದೊಂದು ಹೇಳುತ್ತೀರಿ. ಒಬ್ಬರು ಪಂಚೆ ಸೂತ್ರ ಎಂದು ಹೇಳುತ್ತಾರೆ. ಅದು ಪಂಚಸೂತ್ರವೋ, ಪಂಚೆಸೂತ್ರವೋ ಆ ಪಂಚೆ ಗಟ್ಟಿಯಾಗಿ ಉಳಿದಿದೆಯೋ ಏನಾಗಿದೆಯೆಂದು ನನಗೆ ಅರ್ಥವಾಗುತ್ತಿಲ್ಲ. ಈ ಸರ್ಕಾರ ಹೋಗುತ್ತಿರತಕ್ಕಂಥ ದಾರಿ ಏನು ? ಈ ಸರ್ಕಾರದವರು ಒಂದು ಕೆಲಸ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ಸ್ವಲ್ಪ ಇದ್ದುದರಲ್ಲಿ ಪೋಲೀಸ್ ಇಲಾಖೆಗೆ ಒಂದು ರೆಕ್ರೂಟ್‌ಮೆಂಟ್ ರೂಲ್ಸ್ ಮಾಡುತ್ತಿದ್ದಾರೆ. ಏತಕ್ಕೆಂದರೆ ಇವರ ರಕ್ಷಣೆ ಬಹಳ ಭಯವಾಗುತ್ತಿದೆ. ಇವರ ಸರ್ಕಾರದ ಅಧಿಕಾರಿಗಳ ಕಚೇರಿ ಇದೆಯಲ್ಲ ಅಲ್ಲಿ ಕತ್ತೆಗಳನ್ನು, ಕುರಿಗಳನ್ನು, ನಾಯಿಗಳನ್ನು ಜನರು ನುಗ್ಗಿಸುತ್ತಿದ್ದಾರೆ. ಇವರು ಅಧಿಕಾರಿಗಳಾಗಿ ಇವತ್ತು ಇಂಥ ಕೆಲಸ ಏನು ಮಾಡುತ್ತಿದ್ದೇನೆಂದು ಹೇಳುವಂಥ ನೈತಿಕ ಸ್ಥೈರ್ಯ

ಉಳಿದಿಲ್ಲ. ಇವರಿಗೆ ಪೋಲೀಸ್ ರಕ್ಷಣೆ ಬೇಕು. ಅದಕ್ಕೋಸ್ಕರವಾಗಿ ಪೋಲೀಸ್ ಇಲಾಖೆಯ ಸಿಬ್ಬಂದಿಯನ್ನು ಸ್ವಲ್ಪ ಜಾಸ್ತಿ ಮಾಡುತ್ತಿದ್ದಾರೆ. ಅವನ್ನು ನಾನು ಒಪ್ಪುತ್ತೇನೆ, ಮೆಚ್ಚುತ್ತೇನೆ. ಅದರ ಅವಶ್ಯಕತೆಯೂ ಇತ್ತು. ಆದರೆ ಇದನ್ನು ಏಕೆ ಮಾಡುತ್ತಿದ್ದಾರೆ ಎಂದರೆ, ಮುಖ್ಯಮಂತ್ರಿಗಳು ಒಂದು ಸರ್ಕ್ಯೂಲರ್ ಕಳುಹಿಸಿದ್ದಾರೆ. ನಾನು ಹೋದರೆ ಮಾತ್ರ ಪೈಲೆಟ್, ಎಸ್‌ಕಾರ್ಟ್ ಬರಬೇಕು. ಉಪ ಮುಖ್ಯಮಂತ್ರಿಗೆ ಒಬ್ಬ ಎಸ್‌ಕಾರ್ಟ್ ಬರಬೇಕು. ಬಾಕಿ ಯಾವ ಮಂತ್ರಿಗಳಿಗೂ ಸಹಿತ ಎಸ್‌ಕಾರ್ಟ್ ಬೇಡ, ಪೈಲೆಟ್ ಬೇಡವೆಂದು ಸರ್ಕ್ಯೂಲರ್ ಕಳುಹಿಸಿದ್ದಾರೆ. ಇದು ಬಹಳ ಒಳ್ಳೆಯದು. ಏತಕ್ಕೆಂದರೆ ಇದು ನಿಮ್ಮ ಆರ್ಥಿಕ ಖರ್ಚಿನ ಮೇಲೆ ಪರಿಣಾಮ ಬೀರುತ್ತದೆ. ಇದು ಬಹಳ ಒಳ್ಳೆಯದು, ಅದಕ್ಕೆ ಅಭಿನಂದಿಸುತ್ತೇನೆ. ಆದರೆ, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ, ನೀವು ಯಾವ ಹೆಸರನ್ನು ಹೇಳಿ ಅಧಿಕಾರಕ್ಕೆ ಬಂದರಲ್ಲಿ ಮೇಜರ್ ಸರ್ಜರಿ, ಇದೇ ಏನು ನಿಮ್ಮ ಮೇಜರ್ ಸರ್ಜರಿ ? ನಿಮ್ಮ ಪ್ರತಿನಿತ್ಯದ, ಪ್ರತಿವಾರದ ಹೆಲಿಕ್ಯಾಪ್ಟರ್‌ನ ಖರ್ಚು ಎಷ್ಟು ? ಇವತ್ತು ಮೊಯಿಲಿಯವರು ಆಕಾಶದಲ್ಲಿ ಹಾರಾಡುತ್ತಿರುವ ಮಂತ್ರಿ ಎಂದು ಜನಸಾಮಾನ್ಯರು ಹೇಳುತ್ತಾರೆ. ಆಕಾಶದಲ್ಲಿ ಹಾರಾಡುತ್ತಿರತಕ್ಕಂಥ ಸುಂದರವಾದ ಪಕ್ಷಿಯಂತಿರತಕ್ಕಂಥ ನಮ್ಮ ಮೊಯಿಲಿಯವರು ಎಂದು ಹೇಳುತ್ತಿದ್ದಾರೆ. ನೀವು ನಮಗೆಲ್ಲ ಹೇಳುತ್ತಿದ್ದೀರಲ್ಲ ನಿಮಗೆ ಗೂಟದ ಕಾರ್ ಬೇಕು, ಪೋಲೀಸ್ ರಕ್ಷಣೆ ಬೇಕು, ನಿಮಗೆ ಹೆಲಿಕ್ಯಾಪ್ಟರ್ ಬೇಕು. ಇನ್ನೂ ನಾಲ್ಕು ಸ್ಪೆಷಲ್ ಪ್ಲೇನ್ ತೆಗೆದುಕೊಳ್ಳಿ. ನಾನು ಈ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡುತ್ತೇನೆ. ಈ ಮಂತ್ರಿಮಂಡಲವನ್ನು ಮ್ಯೂಸಿಕ್ ಚೇರ್ ಹಾಗೆ ಮಾಡಿಬಿಡುವುದು ಒಳ್ಳೆಯದು. ಏತಕ್ಕೆಂದರೆ, ಆಡಳಿತ ಪಕ್ಷದ ಅನೇಕ ನಮ್ಮ ಸ್ನೇಹಿತರಲ್ಲಿ ಒಂದು ಭಾವನೆ ಬಂದಿದೆ. ಸ್ವಲ್ಪ ಮುನಿಸಿಕೊಂಡ ಹಾಗೆ ಮಾಡಿದರೆ ಸಾಕು ನಮಗೇನಾದರೂ ಕೊಡುತ್ತಾರೆಂದು. ಇದನ್ನು ನಾನು ಹೇಳುತ್ತಿಲ್ಲ. ಮಾನ್ಯ ಗುಂಡೂರಾಯರು ಹೇಳಿದ್ದಾರೆ. ಆಡಳಿತಪಕ್ಷದ ಮುಖಂಡರು ಹೇಳಿದ್ದಾರೆ, ಮತ್ತೆ ಕೆಲವರಿಗೆ ಮಂತ್ರಿಗಿರಿಯ ಜವಾಬ್ದಾರಿಯೇ ಗೊತ್ತಿಲ್ಲ. ಸ್ವಲ್ಪ ಅತೃಪ್ತಿಯನ್ನು ವ್ಯಕ್ತಪಡಿಸಿದರೆ ಸಾಕು. ಮಂತ್ರಿಯಾಗಿ ಬಿಡಬಹುದು ಎನ್ನುವ ವಾತಾವರಣ ನಿರ್ಮಾಣವಾಗಿದೆ ಎಂದು ಛೇಡಿಸಿದರು. ಇವರು 42 ಜನರ ಮಂತ್ರಿಮಂಡಲವನ್ನು ಮಾಡಿದ್ದಾರೆ; ಅದಕ್ಕೆ ಯಾರ್ಡ್‌ಸ್ಟಿಕ್ ಏನು ಎಂದರೆ ನನಗೆ ಲಾಯಲ್ ಆಗಿದ್ದರು, ನಾನು ಮುಖ್ಯಮಂತ್ರಿಯಾಗಲಿಕ್ಕೆ ಸಹಾಯ ಮಾಡಿದ್ದರು ಎನ್ನುವುದು ನಾವು ಮಾನ್ಯ ಹುಚ್ಚಮಾಸ್ತಿಗೌಡರನ್ನು ಗುಂಪು ಕಟ್ಟಿಕೊಂಡು ಅವರನ್ನು ಮುಖ್ಯಮಂತ್ರಿ ಮಾಡಿದರೆ ನಾನು ಮಂತ್ರಿಯಾಗಬಹುದು ಎಂದು ಇನ್ನೊಂದು ಅಷ್ಟು ಜನ ಹೊರಟಿದ್ದಾರೆ. ಈ ರೀತಿಯಾದ ಒಂದು ಅಸ್ಥಿರತೆ ಇಡೀ ರಾಜ್ಯ ಸರ್ಕಾರದಲ್ಲಿ ಇವತ್ತು ಸಂಪೂರ್ಣವಾಗಿ ಆಗಿದೆ. ಇದರಿಂದ ಸರ್ಕಾರಿ ಆಡಳಿತ ಯಂತ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಿಮ್ಮ ಸರ್ಕಾರ ದಿವಾಳಿಯಾಗಿದೆ. ನಮ್ಮ ಹತ್ತಿರ ದುಡ್ಡಿಲ್ಲ. ಇಂಥ ಸ್ಥಿತಿ ಇವತ್ತು ಉದ್ಭವವಾಗಿದೆ. ಪಾಪ ನಮ್ಮ ಹಿರಿಯ ಸದಸ್ಯರಾದ ಮಾನ್ಯ ಅನಂತಕೃಷ್ಣರವರು ತಮ್ಮ ಕ್ಷೇತ್ರದ ಆಸ್ಪತ್ರೆಯ ಬಗ್ಗೆ ಮತ್ತು ಪೋಲೀಸ್ ಇಲಾಖೆಯ ನಡವಳಿಕೆಯ ಬಗ್ಗೆ ಉದಾಹರಣೆಯನ್ನು ಕೊಟ್ಟಿದ್ದಾರೆ. ಇದನ್ನೆಲ್ಲ ಕೇಳಿ ನಮ್ಮ ಎದೆ ನಡುಗುತ್ತಿದೆ.

ನಾನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ನಿಮ್ಮ ಸರ್ಕಾರದ ಪಂಚೇಂದ್ರಿಯಗಳು ಕೆಲಸ ಮಾಡಿದರೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು. ಅವರು ಕ್ರಮ ತೆಗೆದುಕೊಳ್ಳುವುದಿಲ್ಲ ಅಥವಾ ಇವತ್ತು ಪಂಚೇಂದ್ರಿಯಗಳು ಕೆಲಸ ಮಾಡುವುದಿಲ್ಲವೆಂದು ಹೇಳಬೇಕಾಗಿದೆ. ಇದರ ಬಗ್ಗೆ ಅನೇಕ ಬಾರಿ ನಾವು ಪ್ರಸ್ತಾಪ ಮಾಡಿದ್ದೇವೆ. ಸರ್ಕಾರ ಚಕಾರ ಎತ್ತುವುದಿಲ್ಲ. ನಿಮ್ಮ ಸರ್ಕಾರಕ್ಕೆ ಏನಾಗಿದೆ ? ಆದುದರಿಂದ ಈ ಘೋಷಣೆಗಳ ಸರ್ಕಾರಕ್ಕೆ ದಿವಾಳಿ ಎದ್ದಿರತಕ್ಕ ಸರ್ಕಾರಕ್ಕೆ ಅಂತ್ಯ ಕಾಲ ಸಮೀಪವಾಗಿದೆ, ಈಗಲಾದರೂ ಎಚ್ಚೆತ್ತುಕೊಳ್ಳಬೇಕೆಂದು ವಿನಂತಿಸಿಕೊಂಡು, ವಿಷಯಕ್ಕೆ ಬರುತ್ತೇನೆ. ಇವತ್ತಿನ ದಿವಸ ಶ್ರೀ ರಮಾನಾಥ್ ರೈ ಅವರು ಮಂತ್ರಿಯಾಗಿದ್ದಾರೆ. ಅವರು ಮಂತ್ರಿಯಾಗಿದ್ದು ಬಹಳ

ಒಳ್ಳೆಯದಾಯಿತು. ಇಲ್ಲದಿದ್ದರೆ ಎಷ್ಟು ಸಾರಿ ಅವರು ಎದ್ದುನಿಂತು ಕೊಳ್ಳಬೇಕಾಗಿತ್ತೋ, ಎಷ್ಟು ಸಾರಿ ತೂಂದರೆ ಕೊಡಬೇಕಾಗಿತ್ತೋ ಗೊತ್ತಿಲ್ಲ. ಈ ಕಡೆ ಒಬ್ಬರು ಇದ್ದರು, ಅವರು ಈಗ ಹೊರಟು ಹೋಗಿದ್ದಾರೆ. ಆದುದರಿಂದ ನಮಗೆ ಮಾತನಾಡುವುದಕ್ಕೆ ಸ್ವಲ್ಪ ಅನುಕೂಲವಾಯಿತು. ಅವರ ಇಲಾಖೆಯಲ್ಲಿ ಸೇರಿದ್ದಾರೆ. ಅದು ಏನೇ ಇರಲಿ. ನಿಮ್ಮ ಸರ್ಕಾರಕ್ಕೆ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಎಲೆಕ್ಷನ್ ಮಾಡಬೇಕೆಂಬ ಆಸೆ ಇದ್ದರೂ ಧೈರ್ಯವಿಲ್ಲ. ನೀವು ಮಣ್ಣು ಮುಕ್ಕುತ್ತೀರಿ ಎಂದು ನಿಮ್ಮ ಸ್ಥಿತಿ ನಿಮಗೆ ಗೊತ್ತಿದೆ. ಅಲ್ಲಿ ದೊಡ್ಡದಾಗಿ ಭಾಷಣ ಮಾಡುತ್ತೀರಿ, ಸಂವಿಧಾನಕ್ಕೆ 73ನೇ ತಿದ್ದುಪಡಿ ತಂದಿದ್ದೇವೆಂದು ಹೇಳುತ್ತೀರಿ. ನಗರ ಪಾಲಿಕೆಗಳ ಕಾನೂನುಗಳಿಗೆ, ಜಿಲ್ಲಾ ಪರಿಷತ್ತುಗಳ ಮತ್ತು ಮಂಡಲ ಪಂಚಾಯಿತಿಗಳ ಕಾನೂನುಗಳಿಗೆ ಅಮೆಂಡ್‌ಮೆಂಟ್ ತಂದಿದ್ದೀರಿ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಡ್ ಮಾಡಿಕೊಂಡಿರಿ. ಕರ್ನಾಟಕದಲ್ಲಿ ಚುನಾವಣೆ ಮಾಡುವುದಕ್ಕೆ ನಿಮಗೆ ಏನಾಗಿದೆ ? ಇವತ್ತು ತಮಗೆ ಗೊತ್ತಿದೆ, ಜಿಲ್ಲಾ ಪರಿಷತ್ತುಗಳ ವ್ಯವಸ್ಥೆ ಬಂದ ಮೇಲೆ ಅಭಿವೃದ್ಧಿ ಕೆಲಸಗಳಲ್ಲಿ ಶೇಕಡ 60ರಷ್ಟು ಕೆಲಸ ಮುಖ್ಯ ಕಾರ್ಯದರ್ಶಿಗಳು ಮಾಡತಕ್ಕದ್ದು. ಪ್ರಾಮಾಣಿಕವಾಗಿ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಸದಸ್ಯರು ಪ್ರಶ್ನೆ ಹಾಕಿಕೊಳ್ಳಬೇಕಾಗಿದೆ. ಎಷ್ಟು ಸಾರಿ ಮುಖ್ಯ ಕಾರ್ಯದರ್ಶಿಗಳು ಆಡಳಿತಾಧಿಕಾರಿಗಳು ಸಭೆ ಕರೆದಿದ್ದಾರೆ ? ನಮ್ಮ ಅಭಿಪ್ರಾಯಗಳಿಗೆ ಎಷ್ಟು ಮನ್ನಣೆ ಕೊಡುತ್ತಿದ್ದಾರೆ ? ಇವತ್ತು ಅವರನ್ನು ಹೇಳುವವರು ಕೇಳುವವರು ಯಾರೂ ಇಲ್ಲ. ಆ ಪರಿಸ್ಥಿತಿಗೆ ಬಂದಿದೆ. ಇದನ್ನು ಒಪ್ಪುತ್ತೀರಾ ? ಏತಕ್ಕೆ ಅವರು ಸಭೆಗಳನ್ನು ಕರೆಯುವುದಿಲ್ಲ ? ನಿಮ್ಮ ಸರ್ಕಾರ ಏತಕ್ಕೆ ಸೂಚನೆ ಕೊಡುವುದಿಲ್ಲ ಎಂದು ಕೇಳುತ್ತೇನೆ. ಮುಖ್ಯ ಕಾರ್ಯದರ್ಶಿಗಳಿಗೆ ತಿಂಗಳಿಗೆ ಒಂದು ಸಾರಿ ಸಭೆ ನಡೆಸಿ ಎಂದು ಕೇಳತಕ್ಕ ಧೈರ್ಯ ನಿಮಗೆ ಇಲ್ಲ. ಏತಕ್ಕೆ ಇದನ್ನು ನೀವು ಮಾಡುತ್ತಿಲ್ಲ ? ನಾವು ಏತಕ್ಕೆ ಚುನಾಯಿತ ಪ್ರತಿನಿಧಿಗಳು ಎಂದು ಇರಬೇಕು. ಶಾಸಕರಿಗೆ ಇದಕ್ಕಿಂತ ಬೇರೆ ಅಪಮಾನ ಏನು ಬೇಕು ? ಎಂ.ಎಲ್.ಎ. ಅಂದರೆ ವಿಧಾನಸಭೆಗೆ ಬಂದು ಭಾಷಣ ಮಾಡಿ ಹೋಗುವುದು ಅಷ್ಟೇ ಕೆಲಸವೇ ? ಅಥವಾ ಅಧಿಕಾರಿಗಳ ಹತ್ತಿರ ಹೋಗಿ ಸೆಲ್ಯೂಟ್ ಹೊಡೆದು ಹೋಗಬೇಕೆ ? ಏತಕ್ಕೆ ಜಿಲ್ಲಾ ಪರಿಷತ್ತು ಮಾಡಿರತಕ್ಕದ್ದು ? ಬಹುತೇಕ ಜಿಲ್ಲಾ ಪರಿಷತ್ತುಗಳು ಇವತ್ತಿನ ದಿವಸ ಸಭೆಗಳನ್ನು ಮಾಡುತ್ತಿಲ್ಲ. ಇದು ತೀರ ಖಂಡನೀಯವಾದ ವಿಚಾರ. ನಿಮ್ಮ ಸರ್ಕಾರಕ್ಕೆ ಪ್ರಜಾತಂತ್ರ ವಿಷಯದಲ್ಲಿ ನಂಬಿಕೆ ಇದ್ದರೆ ಸೂಚನೆ ಕೊಡಿ. ಅವರಿಗೆ ಕಿವಿ ಹಿಂಡಿ ಹೇಳಿ. ತಕ್ಷಣ ಸಭೆಗಳನ್ನು ನಡೆಸಿ ಚುನಾಯಿತ ಪ್ರತಿನಿಧಿಗಳಿಗೆ ಗೌರವ ಕೊಡಿ ಎಂದು ಹೇಳಿ ಅವುಗಳಿಗೆ ಚುನಾವಣೆಗಳನ್ನು ನಡೆಸಬೇಕು. ನನಗೆ ಘೋರ್ಪಡೆಯವರ ಬಗ್ಗೆ ಮತ್ತ ಕೆಲವು ಮಂತ್ರಿಗಳ ಬಗ್ಗೆ ನಮಗೆ ವಿಶ್ವಾಸ ಇದೆ. ಘೋರ್ಪಡೆಯವರಿಗೆ ಈ ಇಲಾಖೆಯನ್ನು ಕೊಟ್ಟಿರುವುದರಿಂದ ಚುನಾವಣೆ ಮಾಡುತ್ತಾರೆಂದು ನಂಬಿದ್ದೇನೆ. ನಾವು ರಾಜ್ಯಪಾಲರ ಭಾಷಣಕ್ಕೆ ಒಂದು ತಿದ್ದುಪಡಿಯನ್ನು ಕಳುಹಿಸಿದ ಕಾರಣ ಇಷ್ಟೆ. ನಾವು ಕರ್ನಾಟಕದಲ್ಲಿ ಈ ಕೆಲಸ ಮಾಡಿದ್ದೇವೆ. ಇಡೀ ಇಂಡಿಯಾ ದೇಶದ ಜನರು ಹೆಗಡೆಯವರು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳುತ್ತಾರೆ. 18 ವರ್ಷ ವಯಸ್ಸಿನ ಯುವ ಜನತೆಗೆ ಮತ ಕೊಡತಕ್ಕ ವಿಷಯದಲ್ಲಿ ಮತ್ತು ಅಧಿಕಾರ ವಿಕೇಂದ್ರಿಕರಣದ ಕೆಲಸದಲ್ಲಿ ನಾವು ಒಂದು ಹೆಜ್ಜೆ ಮುಂದೆ ಹೋಗಿದ್ದೇವೆ. ಅದು ನಮ್ಮ ಆಸ್ತಿ ಎಂದು ನಾನು ಹೇಳುವುದಿಲ್ಲ. ನಾವೆಲ್ಲರೂ ಸೇರಿ ಅದನ್ನು ಮಾಡಬೇಕಾಗಿತ್ತು. ಆ ವ್ಯವಸ್ಥೆಯನ್ನು ಭದ್ರಪಡಿಸಬೇಕಾಗಿತ್ತು. ಮಂಡಲ ಪ್ರಧಾನರಲ್ಲಿ, ಮಂಡಲ ಪಂಚಾಯಿತಿ ಸದಸ್ಯರಲ್ಲಿ ಜಿಲ್ಲಾ ಪರಿಷತ್ತಿನಲ್ಲಿ ಭ್ರಷ್ಟರು ಇದ್ದರೆ ನಮ್ಮಲ್ಲಿ ಭ್ರಷ್ಟರು ಇಲ್ಲವೆ ? ಭ್ರಷ್ಟಾಚಾರ ಒಂದು ವರ್ಗಕ್ಕೆ ಸೀಮಿತವಾಗಿರತಕ್ಕ ವಿಚಾರ ಅಲ್ಲ. ಆದುದರಿಂದ ನಾನು ಒತ್ತಾಯ ಮಾಡುತ್ತಿದ್ದೇನೆ, ಈ ಒಂದು ಅಧಿವೇಶನದ ಸಂದರ್ಭದಲ್ಲಿ ತಾವು ಏನು ಸಂವಿಧಾನ ತಿದ್ದುಪಡಿ ಬಂದಿದೆ ಎಂದು ಹೇಳಿದ್ದೀರಿ, ಆ ತಿದ್ದುಪಡಿ ಮಸೂದೆಯನ್ನು ಇಲ್ಲಿ ಮಂಡಿಸಿ, ಈ ವರ್ಷದಲ್ಲಿ ಎಂದು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆ ಬಗ್ಗೆ ನನಗೆ ನಂಬಿಕೆ ಉಳಿದಿಲ್ಲ.

ಆದರೂ ಕೆಲವು ಮಂತ್ರಿಗಳಿಗೆ ಇನ್ನೂ ಸ್ವಲ್ಪ ಜೀವ ಇರುವುದರಿಂದ, ಅವರಲ್ಲಿ ನಂಬಿಕೆ, ವಿಶ್ವಾಸ ಇಟ್ಟು ಒತ್ತಾಯ ಮಾಡುತ್ತಿದ್ದೇನೆ. ಜೂನ್, ಜುಲೈನಲ್ಲಿ ಚುನಾವಣೆ ಮಾಡಿ. ನಿಮಗೆ ಅನುಕೂಲವಾಗುತ್ತದೆ. ಒಂದು ಪಕ್ಷ ಕಾಂಗ್ರೆಸ್ ಪಕ್ಷ ಜೂನ್, ಜುಲೈನಲ್ಲಿ ಮಂಡಲ ಪಂಚಾಯಿತಿ ಚುನಾವಣೆಯಲ್ಲಿ ಸೋತು ಹೋಯಿತು ಎಂದು ಇಟ್ಟುಕೊಳ್ಳೋಣ. ಜೂನ್ ತಿಂಗಳು ಏನೂ ಮಳೆಗಾಲ ಅಲ್ಲ. ಆಗ ಚುನಾವಣೆ ಮಾಡಿದರೆ ಮತ್ತೆ ವಿಧಾನಸಭಾ ಚುನಾವಣೆ ಬರುವುದು ನವೆಂಬರ್ 94ಕ್ಕೆ. ಅಷ್ಟು ಹೊತ್ತಿಗೆ ಜನರು ಮರೆತುಹೋಗಿರುತ್ತಾರೆ. ನಿಮಗೆ ಒಂದು ರೀತಿ ಟೆಸ್ಟ್ ಮಾಡಿದ ಹಾಗೂ ಆಗುತ್ತದೆ. ಬಿಗಿ ಇದೆಯೋ ಇಲ್ಲವೋ ಎಂದು ನಿಮಗೇ ಗೊತ್ತಾಗುತ್ತದೆ.

ಡಾ।। ವೈ. ನಾಗಪ್ಪ:– ನೀವು ಜಿಲ್ಲಾ ಪರಿಷತ್ತುಗಳನ್ನು ಮಾಡಿದಿರಿ. ಜನರೇ ನಿಮ್ಮನ್ನು ಟೆಸ್ಟ್ ಮಾಡಿದರು. ನೀವು ಜಿಲ್ಲಾ ಪರಿಷತ್ತುಗಳನ್ನು ಮಾಡಿದಾಗ ಹಳ್ಳಿಯಲ್ಲಿ ಇರುವ ಜನರಿಗೆ ಅಧಿಕಾರ ಕೊಡುವುದಕ್ಕೆ ಮಾಡಿಲ್ಲ. Just you want to develop your party at the grass root level at village level and you have decentralised the corruption not the power.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನಮ್ಮ ಮಿತ್ರರಾದ ನಾಗಪ್ಪನವರು ಎರಡು ವಿಚಾರಗಳನ್ನು ಹೇಳಿದ್ದಾರೆ. ಆ ಎರಡನ್ನೂ ನಾನು ಒಪ್ಪುತ್ತೇನೆ. Yes. We wanted tc strenthen our party for the reason, that out party believes in decentralisation; if there is corruption let it be divided what is there? ಅದು ಒಬ್ಬರಿಗೆ ಬೇಕೆ ? ಡಾ।। ನಾಗಪ್ಪನವರ ಬಗ್ಗೆ ನನಗೆ ಬಹಳ ಗೌರವ ಇದೆ. ತಾತ್ವಿಕವಾಗಿ ಚರ್ಚೆ ಮಾಡೋಣವೆಂದರೆ ಮಾಡೋಣ. ಅಧ್ಯಕ್ಷರು ಗಂಟೆ ಬಾರಿಸುವುದರೊಳಗೆ ನಾವು ಕುಳಿತುಕೊಳ್ಳಬೇಕು. ಆದ್ದರಿಂದ ನಿಮಗೆ ನಾನು ಈಲ್ಡ್ ಆಗುವುದಿಲ್ಲ. ಈಗಾಗಲೇ ಒಂದು ಸಾರಿ ಆಗಿದ್ದೇನೆ.

ಶ್ರೀ ಡಿ.ಎ. ಚಿನ್ನಪ್ಪ:– ಜಿಲ್ಲಾ ಪರಿಷತ್ತು ಕಾನೂನು ಮಾಡಿ ಅಧಿಕಾರ ವಿಕೇಂದ್ರೀಕರಣ ಮಾಡಿದೆವು ಎಂದು ಹೇಳಿದರು. ಅದು ನಿಮ್ಮ ಒಳ್ಳೆಯದಕ್ಕೆ ಮಾಡಿದ್ದುದು ಎಂದು ಅವರು ಹೇಳಿದರು. ಕಳೆದ 1989ರ ಚುನಾವಣೆಯಲ್ಲಿ ಆ ಜನರ ಕೈಯಲ್ಲೇ ತಾವು ಸೋತಿರಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಪ್ರಜಾತಂತ್ರ ವ್ಯವಸ್ಥೆಯಲ್ಲಿ ನೀವೂ ಈ ಕಡೆ ಐದಾರು ವರ್ಷ ಇದ್ದು ಇದರ ರುಚಿಯನ್ನೂ ನೋಡಿದ್ದೀರಿ. ಈ ರುಚಿ ಹೇಗಿದೆ ಎಂದು ನಾವೂ ಸ್ವಲ್ಪ ದಿವಸ ನೋಡುತ್ತೇವೆ. ಮಾನ್ಯ ಅಧ್ಯಕ್ಷರೇ, ಜೂನ್ ಒಳಗೆ ಚುನಾವಣೆ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಕಾಂಗ್ರೆಸ್ ಪಕ್ಷದ ಹಾಗೂ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಚುನಾವಣೆ ಮಾಡಬೇಕು. ಇವತ್ತು ನೀವೇ ಇಲ್ಲಿ ಒಪ್ಪಿಕೊಂಡಿದ್ದೀರಿ. ಜಿಲ್ಲಾಪರಿಷತ್ತುಗಳಲ್ಲಿ ಸಭೆಗಳು ನಡೆಯುತ್ತಿಲ್ಲ. ಚುನಾಯಿತ ಪ್ರತಿನಿಧಿಗಳ ಮಾತಿಗೆ ಮೂರು ಕಾಸಿನ ಗೌರವ ಸಿಗುತ್ತಿಲ್ಲ ಎನ್ನುವ ಮಾತನ್ನು ಒಪ್ಪಿದ್ದೀರಿ. ಹಾಗಾದರೆ ಗೌರವ ಬರುವ ಹಾಗೆ ನಾವು ಏಕೆ ಮಾಡಿಕೊಳ್ಳಬಾರದು ? ಚುನಾಯಿತ ಅಧ್ಯಕ್ಷರು ಇದ್ದರೆ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಆದಕಾರಣ ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ನಾನು ಏನು ತಿದ್ದುಪಡಿಯನ್ನು ಕಳುಹಿಸಿದ್ದೇವೆ. ಅದನ್ನು ಸರ್ಕಾರ ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡು ಜೂನ್‌ನಲ್ಲಿ ಚುನಾವಣೆ ಮಾಡಬೇಕೆಂದು ನಾನು ಮತ್ತೊಮ್ಮೆ ಒತ್ತಾಯ ಮಾಡುತ್ತಿದ್ದೇನೆ. ಈ ಸರ್ಕಾರದ ಕೊನೆಯ ಎಚ್ಚರಿಕೆ ಗಂಟೆ ಬಾರಿಸಿದೆ. ಈ ಗಂಟೆ ನಾದವನ್ನು ಕೇಳಿ ಸರಿ ಮಾಡಿಕೊಂಡರೆ ನಿಮಗೆ ಭವಿಷ್ಯ ಇದೆ. ಇಲ್ಲದಿದ್ದರೆ ನೀವು ಈಗಾಗಲೇ ಜಾರಿದ್ದೀರಿ, ಎಡವಿದ್ದೀರಿ, ತಪ್ಪುಗಳನ್ನು ಮಾಡಿದ್ದೀರಿ. ಈಗಲೂ ಬುದ್ಧಿ ಬರಲಿಲ್ಲ ಎಂದರೆ ನೀವು ಅಧಿಕಾರ ಕಳೆದುಕೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ. ನಾವು ವಿಧಾನಸಭೆ ವಿಸರ್ಜನೆ ಮಾಡಿ ಎಂದು

ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಯಡಿಯೂರಪ್ಪನವರಿಗೆ ಅನುಕೂಲ ಆಗುತ್ತದೆಂದು ನನಗೆ ಗೊತ್ತಿದೆ. ನಾನು ವಿಧಾನಸಭೆ ವಿಸರ್ಜನೆ ಮಾಡಿ ಎಂದು ಹೇಳುವುದಿಲ್ಲ. ನಾವೂ ಉಳಿಯಬೇಕಲ್ಲವೇ. ಆದರೆ ನಾನು ಹೇಳುತ್ತಿದ್ದೇನೆ. ನೀವು ಇದನ್ನು ತಿಳಿದುಕೊಂಡು ಇವತ್ತು ಸಾಮಾನ್ಯ ಜನ ಛೀ, ಥೂ, ಎನ್ನುವಷ್ಟು ಮಟ್ಟಿಗೆ ಸರ್ಕಾರ ಹೋಗಿದೆ. ತಾವು ಎಚ್ಚೆತ್ತು ಇದನ್ನು ಗಮನಿಸಬೇಕೆಂದು ಒತ್ತಾಯ ಮಾಡಿ, ನನಗೆ ಸಾಕಷ್ಟು ಸಮಯ ಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮಂಜುನಾಥ್ ಸಿ. ಕುನ್ನೂರು(ಶಿಗ್ಗಾಂವ್) :– ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಮಂಡಿಸಿದ ಭಾಷಣವನ್ನು ನಾನು ಸ್ವಾಗತಿಸುತ್ತಾ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗಾಗಲೇ ಅನೇಕ ಹಿರಿಯ ಸದಸ್ಯರು ಈ ಸದನದಲ್ಲಿ ವಿಶೇಷವಾಗಿ ವಿರೋಧಪಕ್ಷದವರು ನಮ್ಮ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಮಾಡತಕ್ಕ ಸಂದರ್ಭದಲ್ಲಿ ನಮ್ಮ ಪಕ್ಷದಲ್ಲಿ ನಡೆಯತಕ್ಕ ಕೆಲವು ಭಿನ್ನಾಭಿಪ್ರಾಯಗಳ ಬಗ್ಗೆ ಹೆಚ್ಚು ಒತ್ತು ಕೊಟ್ಟು ಹೆಚ್ಚು ಸಮಯವನ್ನು ತೆಗೆದುಕೊಂಡು ಅವರು ಮಾತನಾಡಿದ್ದುದು ಕಂಡುಬಂತು. ಆದರೆ ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಯಾವುದೇ ರಾಜಕೀಯ ಪಕ್ಷದಲ್ಲಿ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಂವಿಧಾನದಲ್ಲಿರುವಂತೆ ಅನೇಕ ರಾಜಕೀಯ ಪಕ್ಷಗಳು ಇವೆ. ಅದರ ಪ್ರಕಾರ ಅವರವರ ಪಕ್ಷದಲ್ಲಿ ಏನೇ ಭಿನ್ನಾಭಿಪ್ರಾಯಗಳು ಇದ್ದರೂ ನಾವು ಧೈರ್ಯವಾಗಿ ಹೇಳಬೇಕೆಂದರೆ ಕಳೆದ ಮೂರು ವರ್ಷಗಳಿಂದ ನಾನು ಈ ಸದನಕ್ಕೆ ಬಂದನಂತರ ಅವೊಂದು ಒಗ್ಗಟ್ಟನ್ನು ಪ್ರದರ್ಶನ ಮಾಡತಕ್ಕ ಸಂದರ್ಭದಲ್ಲಿ ಅನೇಕ ಚುನಾವಣೆಗಳು ಆಗಿವೆ. ಅನೇಕ ನಿರ್ಣಯಗಳನ್ನು ರಾಜ್ಯ ಸಚಿವ ಸಂಪುಟದಲ್ಲಿ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಒಗ್ಗಟ್ಟಾಗಿ ಕಾಂಗ್ರೆಸ್ ಪಕ್ಷದವರು ಮಾಡಿದಂತಹ ಕೆಲಸವನ್ನು ನೋಡಿದರೆ ನಾವು ನಿಜವಾಗಿಯೂ ಮೆಚ್ಚಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಭಿನ್ನಾಭಿಪ್ರಾಯಗಳು ಎಷ್ಟೇ ಇರಲಿ ಕ್ಷೇತ್ರಗಳ ಅಭಿವೃದ್ಧಿ ದೃಷ್ಟಿಯಿಂದ ನೋಡಿದಾಗ ನಾವು ಅನೇಕ ಕೆಲಸಗಳನ್ನು ನಮ್ಮ ನಮ್ಮ ಕ್ಷೇತ್ರಗಳನ್ನು ಮಾಡಿದ್ದೇವೆ, ನಾನಂತೂ ಮಾಡಿದ್ದೇನೆಂದು ಹೇಳಬೇಕಾಗಿದೆ. ಈವೊಂದು ವಿಚಾರಕ್ಕೆ ಪೂರಕವಾಗಿ ನಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ದೃಷ್ಟಿಯಿಂದ ನೋಡಿದಾಗ ನಾವು ಅನೇಕ ಕೆಲಸಗಳನ್ನು ನಮ್ಮ ನಮ್ಮ ಕ್ಷೇತ್ರಗಳ ಇವತ್ತು ಕುಡಿಯುವ ನೀರಿನ ವಿಚಾರವಾಗಲಿ ಮತ್ತು ಜನರಿಗೆ ಅತಿ ಅವಶ್ಯವಾದಂತಹ ಬಸ್‌ಸ್ಟ್ಯಾಂಡ್ ಆಗಲಿ, ಬಸ್ ಡಿಪೋ ಆಗಲಿ ಅಥವಾ ಇನ್ನಿತರ ನೀರಾವರಿ ಚಿಕ್ಕ ಕೆಲಸಗಳನ್ನಾಗಲಿ, ಬ್ಯಾರೇಜ್ ಕಟ್ಟತಕ್ಕ ಸಂದರ್ಭದಲ್ಲಾಗಲಿ ಮತ್ತು ಶಾಲಾ ಕಾಲೇಜುಗಳನ್ನು, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸುವುದಾಗಲೀ ಒಟ್ಟಾರೆ ಅಭಿವೃದ್ಧಿ ಕೆಲಸಗಳಿಗೋಸ್ಕರ ರಾಜ್ಯ ಸರ್ಕಾರದಿಂದ ಹಣವನ್ನು ಪಡೆದುಕೊಂಡು ನಮ್ಮ ಕ್ಷೇತ್ರಗಳ ಅಭಿವೃದ್ಧಿಯನ್ನು ನಾವು ಮಾಡುತ್ತಿದ್ದೇವೆಂದು ಹೇಳಲಿಕ್ಕೆ ನನಗೆ ಬಹಳ ಹೆಮ್ಮೆ ಅನಿಸುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅನೇಕ ಶಾಸಕ ಮಿತ್ರರಲ್ಲಿ ರಾಜಕೀಯ ಭಿನ್ನಾಭಿಪ್ರಾಯಗಳು ಇರಬಹುದು, ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಅದು ಸ್ವಾಭಾವಿಕ. ಅಧಿಕಾರದ ಚುಕ್ಕಾಣಿಯನ್ನು ಹಿಡಿಯುವುದಕ್ಕೋಸ್ಕರ ಅನೇಕರು ತಮ್ಮ ಸ್ಪರ್ಧೆಯನ್ನು, ತಮ್ಮ ಪ್ರಯತ್ನವನ್ನು ಮಾಡಬಹುದು. ಆದರೆ ಕ್ಷೇತ್ರಗಳ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯದಲ್ಲಿ ಸರ್ವತೋಮುಖವಾದ ನಮ್ಮ ಕಾಂಗ್ರೆಸ್ ಪಕ್ಷದ ತತ್ವಗಳ ಸಿದ್ಧಾಂತಕ್ಕೆ ನಾವು ಅಣಿಯಾಗಿ ಸರ್ವದೃಷ್ಟಿಯಿಂದ ನಾವು ಕೆಲಸಗಳನ್ನು ಮಾಡುತ್ತಾ ಬಂದಿದ್ದೇವೆಂದು ಹೇಳುವುದಕ್ಕೆ ನನಗೆ ಬಹಳ ಹೆಮ್ಮೆ ಅನಿಸುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲೂ ಕೂಡ ಇವತ್ತು ವಿಶೇಷವಾಗಿ ಅಯೋಧ್ಯೆಯ ವಿಚಾರವಾಗಿ ಮಾನ್ಯ ಮುಖ್ಯಮಂತ್ರಿಗಳು ವಿಷಯವನ್ನು ಪ್ರಕಟ ಮಾಡಿದ್ದಾರೆ. ಈ ವಿಚಾರವನ್ನು ಇಡೀ ರಾಷ್ಟ್ರದಲ್ಲಿ ನಾವೆಲ್ಲರೂ ಒಪ್ಪಿಕೊಳ್ಳಲೇಬೇಕಾಗಿದೆ. ಶಾಂತಿ ಸೌಹಾರ್ದತೆಯನ್ನು ನಾವು ಕಾಯ್ದುಕೊಂಡು

ಘುನ್ನಡೆಯಬೇಕಾಗಿದೆ. 6ನೇ ಡಿಸೆಂಬರ್ 1992ನೇ ಇಸವಿಯಲ್ಲಿ ಈ ರಾಷ್ಟ್ರದಲ್ಲಿ ಒಂದು ದೊಡ್ಡ ಅನಾಹುತವಾದಾಗ ನಮ್ಮ ರಾಜ್ಯದಲ್ಲಿ ಒಂದು ಶಾಂತಿಯನ್ನು ಕಾಯ್ದುಕೊಳ್ಳುವಲ್ಲಿ ಪರಿಣಾಮಕಾರಿಯಾಗಿ ರಾಜ್ಯಸರ್ಕಾರ ಕೆಲಸವನ್ನು ಮಾಡಿದೆಯೆಂದು ಹೇಳಿದರೆ ತಪ್ಪಾಗಲಾರದು. ರಾಜ್ಯದ ಅನೇಕ ಕಡೆಗಳಲ್ಲಿ ಗಲಭೆಗಳು ಸ್ವಲ್ಪ ಪ್ರಮಾಣದಲ್ಲಿ ಆದಾಗ ತತ್‌ಕ್ಷಣ ಪೋಲೀಸ್ ಸಿಬ್ಬಂದಿಯನ್ನು ಒದಗಿಸಿ, ತತ್‌ಕ್ಷಣ ನಮ್ಮ ರಾಜ್ಯದ ಮುಖ್ಯಮಂತ್ರಿ ಕೂಡ ಅನೇಕ ಕಡೆಗೆ ಪ್ರವಾಸ ಮಾಡಿ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡು ನಾವು ನೋಡಿದ್ದೇವೆ. ಹೀಗಾಗಿ ದೇಶದಲ್ಲಿ ಮುಖ್ಯವಾಗಿ ಶಾಂತಿಯನ್ನು ಕಾಯ್ದುಕೊಂಡು ಹೋಗತಕ್ಕದ್ದು ಪ್ರತಿಯೊಂದು ರಾಜಕೀಯ ಪಕ್ಷದ ಕರ್ತವ್ಯವಾಗಿದೆ. ಆ ನಿಟ್ಟಿನಲ್ಲಿ ನಾವು ಇನ್ನೂ ಹೆಚ್ಚು ಪ್ರಯತ್ನಿಸಬೇಕೆನ್ನುವ ಮಾತನ್ನು ಹೇಳಿದ್ದಾರೆ. ತಮ್ಮ ಕರ್ತವ್ಯದ ಬಗ್ಗೆ ಮತ್ತು ಯಾವ ಕೆಲಸಗಳನ್ನು ಮಾಡಿದ್ದಾರೆನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಅಯೋಧ್ಯೆಯ ವಿಷಯದಲ್ಲಿ ಹೆಚ್ಚು ಮಾತನಾಡದೆ ನಾವೆಲ್ಲರೂ ಒಮ್ಮನಸ್ಸಿನಿಂದ ಈ ದೇಶದಲ್ಲಿ ಸಮಗ್ರತೆಯನ್ನು ಕಾಯ್ದುಕೊಂಡು ಹೋಗಲಿಕ್ಕೆ ಮುಂದೆ ಬರಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ರಾಜ್ಯಪಾಲರ ಭಾಷಣದಲ್ಲಿ ಮಹಿಳೆಯರಿಗಾಗಿ ಒಂದು ಮಹಿಳಾ ಸೆಲ್‌ಅನ್ನು ಪೋಲೀಸ್ ಇಲಾಖೆಯಲ್ಲಿ ನೇಮಕಾತಿ ಮಾಡಿ ಅವರ ಹಕ್ಕು ಮತ್ತು ರಕ್ಷಣೆ ಸಲುವಾಗಿ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದನ್ನು ನಾವು ಸ್ವಾಗತ ಮಾಡಬೇಕಾಗುತ್ತದೆ ಅಲ್ಪಸಂಖ್ಯಾತರ ಸಲುವಾಗಿ 15 ಅಂಶಗಳ ಕಾರ್ಯಕ್ರಮ ಇದೆ. ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಹಾಕಿದಂಥ ಈ ಕಾರ್ಯಕ್ರಮವನ್ನು ನಮ್ಮ ನೆಚ್ಚಿನ ಪ್ರಧಾನಮಂತ್ರಿಗಳಾದ ಶ್ರೀ ನರಸಿಂಹರಾಯರು ಕೂಡ ಈ ಒಂದು ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಇದನ್ನು ದೇಶದಲ್ಲಿ ಪರಿಣಾಮಕಾರಿಯಾಗಿ ಜಾರಿ ಮಾಡುವ ಬಗ್ಗೆ ಒಂದು ಮಹತ್ವವನ್ನು ಹೇಳಿದ್ದಾರೆ. ಅದನ್ನು ನಮ್ಮ ರಾಜ್ಯಸರ್ಕಾರ ಕೂಡ ಸ್ವಾಗತಿಸುತ್ತಾ, ಹದಿನೈದು ಅಂಶಗಳ ಕಾರ್ಯಕ್ರಮವನ್ನು ರೂಪಿಸಿ, ಅವರು ಇನ್ನೂ ಪರಿಣಾಮಕಾರಿಯಾಗಿ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುವಂತೆ ಈ ಕರ್ನಾಟಕ ಮೈನಾರಟೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮತ್ತು ಡೈರೆಕ್ಟೋರೇಟ್ ಆಫ್ ಬ್ಯಾಕ್‌ವರ್ಡ್ ಕ್ಲಾಸಸ್ ಮತ್ತು ಕರ್ನಾಟಕ ರಾಜ್ಯದ ವುಮನ್ಸ್ ಡೆವಲಪ್‌ಮೆಂಟ್‌ವಿಂಗ್ ಎಂದು ವಿಂಗಡಿಸಿ ಅವುಗಳಿಗೆ ತಮ್ಮದೇ ಆದ ಸ್ವಾಯತ್ತತೆಯನ್ನು ನೀಡಿ ಅವುಗಳ ಅಭಿವೃದ್ಧಿಗಾಗಿ ಇವತ್ತು ಪ್ರಯತ್ನವನ್ನು ಮಾಡುತ್ತಿದ್ದಾರೆ ಮತ್ತು ಈ ರಾಜ್ಯದಲ್ಲಿ 1995ನೇ ಇಸವಿಯಲ್ಲಿ ನೆರೆಹಾವಳಿ ಬಂದಾಗ ಎಲ್ಲಾ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಸುಮಾರು 53 ಕೋಟಿ ರೂಪಾಯಿಗಳನ್ನು ಕೂಡ ಬಿಡುಗಡೆ ಮಾಡಿದ್ದಾರೆ. ಕೇಂದ್ರಸರ್ಕಾರದಿಂದ ಬೈ ವೇ ಆಫ್ ವೇಸ್ ಅಂಡ್ ಮೀನ್ಸ್ ಎಂದು ಈ ಹಣವನ್ನು ಬಿಡುಗಡೆ ಮಾಡಿ, ಮನೆ ಕಳೆದುಕೊಂಡವರಿಗೆ, ಮನೆ ಭಾಗಶಃ ಬಿದ್ದವರಿಗೆ, ಜಮೀನುಗಳನ್ನು ಕೂಡ ಕಳೆದುಕೊಂಡವರಿಗೆ, ಅಂತಹ ರೈತರಿಗೆ ವಿಶೇಷವಾಗಿ ನಮ್ಮ ಉತ್ತರಭಾಗದ ಜಿಲ್ಲೆಗಳಾದ ಧಾರವಾಡ, ರಾಯಚೂರು, ಬಳ್ಳಾರಿ, ಬಿಜಾಪುರ, ಚಿತ್ರದುರ್ಗ, ಶಿವಮೊಗ್ಗ – ಈ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಅಧಿಕಾರಿಗಳು ಅವರ ಮನೆಗಳಿಗೆ ಹೋಗಿ ಈ ಪರಿಹಾರಧನವನ್ನು ನೀಡುವ ಸಂದರ್ಭವನ್ನು ನಾವು ನೋಡಿದ್ದೇವೆ. ಎಲ್ಲಾ ಕೆಲಸಗಳನ್ನು ಬದಿಗೊತ್ತಿ ಸತತವಾಗಿ ಮೂರು–ನಾಲ್ಕು ತಿಂಗಳಿಂದ ಈ ಪರಿಹಾರ ಹಣವನ್ನು ನೇರವಾಗಿ ರೈತರ ಹೆಸರಿಗೆ ಚೆಕ್ಕುಗಳನ್ನು ಕೊಟ್ಟು ಅವರಿಗೆ ಪರಿಹಾರ ಧನವನ್ನು ಮುಟ್ಟಿಸತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಮತ್ತು ಇವತ್ತು ಸ್ವಚ್ಛವಾದ ಆಡಳಿತವನ್ನು ಕೊಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಲೋಕಾಯುಕ್ತರ ಕೆಲವು ಬ್ರಾಂಚ್‌ಗಳನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಕೂಡ ಮಾಡುತ್ತಿದ್ದಾರೆ. ಮತ್ತೆ ಪ್ರಿವೆನ್‌ಷನ್ ಆಫ್ ಕರಪ್‌ಶನ್ ಆಕ್ಟ್‌ನಲ್ಲಿ ಸ್ಪೆಷಲ್ ಜಡ್ಜಸನ್ನು ನೇಮಕ ಮಾಡಿ ಸ್ವಚ್ಛವಾದ ಆಡಳಿತವನ್ನು ಕೊಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಮಾತ್ರವಲ್ಲದೆ ಇವತ್ತು ರಾಜ್ಯದಲ್ಲಿ ಯಾರಿಗೆ ಮನೆಗಳಿಲ್ಲ ಮತ್ತು ಯಾರು ವಸತಿಹೀನರಾಗಿದ್ದಾರೆ.

ಅವರು ಗ್ರಾಮಾಂತರ ಪ್ರದೇಶಗಳಲ್ಲಿರಬಹುದು, ಅಥವಾ ಪಟ್ಟಣ ಪ್ರದೇಶಗಳಲ್ಲಿರಬಹುದು ಅವರಿಗೂ ಕೂಡ ಸಂಪೂರ್ಣವಾಗಿ ಅನುಕೂಲ ಮಾಡುವುದಕ್ಕೆ ಒಂದು ಮಾಸ್ಟರ್‌ಪ್ಲಾನ್ ಅನ್ನು ತಯಾರು ಮಾಡಿ ಅದಕ್ಕೆ ಪೂರಕವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳತಕ್ಕಂಥ ಒಂದು ಯೋಜನೆಯನ್ನು ಕೂಡ ಮಾಡಿದ್ದಾರೆ.

ಮಿಲ್ಕ್ ಡೈರಿಗಳಲ್ಲೂ ಕೂಡ ಸುಮಾರು ಮೂವತ್ತು ಸಾವಿರ ಹೊಸ ಸದಸ್ಯರನ್ನು ನೇಮಕ ಮಾಡಿಕೊಳ್ಳತಕ್ಕಂಥ ಗುರಿಯನ್ನು ಹೊಂದಿದ್ದಾರೆ. ಕುರಿ ಮತ್ತು ಉಣ್ಣೆ ಅಭಿವೃದ್ಧಿ ಮತ್ತು ಪೌಲ್ಟ್ರಿ ಡೆವಲಪ್‌ಮೆಂಟ್ ಹಾಗೂ ಮೀನು ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಹಾಗೂ ಮೀನುಗಾರರ ಸ್ಥಿತಿಗತಿಗಳನ್ನು ಸುಧಾರಿಸುವ ಸಲುವಾಗಿ ವಿಶೇಷ ಕಾಳಜಿ ವಹಿಸಿ, ಇದಕ್ಕಾಗಿ ಹೆಚ್ಚಿನ ಹಣವನ್ನು ಒದಗಿಸಿ ಅವುಗಳ ಬಲಸಂವರ್ಧನೆಗೆ ಪ್ರಯತ್ನ ಮಾಡುವಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ವಿದ್ಯುತ್ ವಿಚಾರವಾಗಿ ಹೇಳುವುದಾದರೆ, ನಾವು ಹೆಚ್ಚು ಪವರ್ ಜನರೇಶನ್ ಅನ್ನು ಯಾವ ರೀತಿಯಾಗಿ ಮಾಡಬೇಕು, ಅದಕ್ಕೆ ಹೆಚ್ಚಿ ಪ್ರಾಮುಖ್ಯತೆಯನ್ನು ಕೊಡಬೇಕು, ಸಮಗ್ರವಾಗಿ ಈ ರಾಜ್ಯದಲ್ಲಿ ಎಷ್ಟು ವಿದ್ಯುತ್ ಒದಗುತ್ತಿದೆ ಅದನ್ನು ಯಾವ ರೀತಿ ಹೆಚ್ಚಿಗೆ ಮಾಡಬೇಕು ಎನ್ನುವುದರ ಬಗ್ಗೆ ಹೆಚ್ಚಿನ ಚಿಂತನೆಯನ್ನು ಮಾಡಿದ್ದನ್ನು ಕೂಡ ನಾವು ಸ್ವಾಗತ ಮಾಡಬೇಕಾಗಿದೆ. ನೀರಾವರಿ ಕ್ಷೇತ್ರದಲ್ಲಿ ಕೃಷ್ಣಾ ಬೇಸಿನ್‌ನಲ್ಲಿ ಇರತಕ್ಕಂಥ ಎಲ್ಲಾ ಯೋಜನೆಗಳನ್ನು, ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಬಚಾವತ್ ಅವಾರ್ಡ್ ಪ್ರಕಾರ ಎರಡು ಸಾವಿರ ವರ್ಷದೊಳಗೆ ಮುಗಿಸುತ್ತೇವೆ ಎನ್ನತಕ್ಕಂಥ ಚಿಂತನೆಯನ್ನು ಮಾಡಿ ಹೆಚ್ಚಿನ ಹಣವನ್ನು ಒದಗಿಸುತ್ತೇವೆ ಎಂದು ಹೇಳಿದ್ದಾರೆ. ಕರ್ನಾಟಕದ ನಗರ ಪ್ರದೇಶಗಳ ಜನಸಂಖ್ಯೆಯು 1.38 ಕೋಟಿಯಷ್ಟಾಗಿದ್ದು ಇದು ರಾಜ್ಯ ಜನಸಂಖ್ಯೆಯ ಶೇಕಡ 30.9ರಷ್ಟಾಗುತ್ತದೆ. ಈಗ ರಾಜ್ಯದಲ್ಲಿ 21ನಗರಗಳಿದ್ದು ಅವುಗಳನ್ನು ಕ್ಲಾಸ್ – 1 ಸಿಟಿಗಳೆಂದು ಮಾಡಿ ಬೆಂಗಳೂರಿನ ಎಲ್ಲ ದೃಷ್ಟಿಯ ಅಭಿವೃದ್ಧಿಗಾಗಿ ಪ್ರಯತ್ನ ಮಾಡುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ.

ಚೇರ್ಮನ್:– ತಾವು 10 ನಿಮಿಷ ಮಾತ್ರ ಮಾತನಾಡಬೇಕು, ಈಗಾಗಲೇ 10 ನಿಮಿಷ ಆಗಿದ್ದೀರಿ, 15 ನಿಮಿಷ, ಬೇಗ ಮುಗಿಸಿ.

ಶ್ರೀ ಮಂಜುನಾಥ್ ಸಿ. ಕುನ್ನೂರ್:– ಇನ್ನು ಶಿಕ್ಷಣದ ವಿಚಾರದಲ್ಲಿಯೂ ಕೂಡ, ಪ್ರಾಥಮಿಕ ಶಿಕ್ಷಣದಲ್ಲಿ ಹೆಚ್ಚು ಗುಣಮಟ್ಟವನ್ನು ಸುಧಾರಿಸುವ ಬಗ್ಗೆ ಮತ್ತು ವೃತ್ತಿ ಶಿಕ್ಷಣದಲ್ಲಿ ಸುಮಾರು 1,200 ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದಾರೆ ಮತ್ತು ಟೋಟಲ್ ಲಿಟರಸಿ ಕ್ಯಾಂಪ್ರೆಸ್ ಬಗ್ಗೆ ಈ ರಾಜ್ಯದಲ್ಲಿ ಎರಡು ವರ್ಷದೊಳಗಾಗಿ, ಮುಗಿಸುತ್ತೇವೆಂಬ ಮಾತನ್ನು ಹೇಳಿ, ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಕೊನೆಯದಾಗಿ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಯ್ತಿಗಳ ಚುನಾವಣೆ ಬಗ್ಗೆ ವಿರೋಧ ಪಕ್ಷದ ಸದಸ್ಯರು ಅನೇಕ ಬಾರಿ ಹೇಳುತ್ತಿದ್ದಾರೆ. ಮೊದಲು ಇದ್ದಂಥ ಕಾನೂನು ಎಲ್ಲರಿಗೂ ಅನುಕೂಲವಾಗುವ ದಿಸೆಯಲ್ಲಿ ಇದ್ದಿದ್ದರೆ, ಇಷ್ಟೊಂದು ತಡ ಮಾಡತಕ್ಕಂಥ ಸಂದರ್ಭ ಬರುತ್ತಿರಲಿಲ್ಲ. ಕಾನೂನಿನಲ್ಲಿ, ಅಧಿಕಾರ ವಿಕೇಂದ್ರೀಕರಣ ಯಾವ ರೀತಿಯಾಗಿದೆ, ಯಾವ ರೀತಿ ಎಲ್ಲಾ ಜನರಿಗೆ ಅನುಕೂಲವಾಗಬೇಕಾಗಿದೆ ಈ ದಿಸೆಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವುದು ಅತಿ ಅವಶ್ಯಕತೆ ಇದೆ. ಈ ಬಗ್ಗೆ ನಮ್ಮ ರಾಜ್ಯ ಸರ್ಕಾರದವರು ಶಾಸಕಾಂಗ ಪಕ್ಷದಲ್ಲಿಯೂ ಕೂಡ ಅನೇಕ ಬಾರಿ ಚಿಂತನೆ ಮಾಡಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಸಂವಿಧಾನಕ್ಕೆ ಮಾಡಿರುವ 72–73ನೇ ತಿದ್ದುಪಡಿ ಪ್ರಕಾರ, ಈ ವರ್ಷದಲ್ಲಿ ಚುನಾವಣೆ ಮಾಡುತ್ತೇವೆಂದು ಹೇಳಿರುವುದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಈ ಒಂದು ಕಾರ್ಯಕ್ರಮ

ತೀವ್ರಗತಿಯಲ್ಲಿ ಜರುಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ವಿಧಾನಮಂಡಲದಲ್ಲಿ ರಾಜ್ಯಪಾಲರು ಮಾಡಿದಂಥ ಭಾಷಣದ ಮೇಲೆ ನನಗೆ ಎರಡು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲು ತಮಗೆ ಅಭಿನಂದಿಸಿ ಎರಡು ಮಾತುಗಳನ್ನಾಡುತ್ತೇನೆ. ನಾನು ಕೇವಲ ಮುಂಬೈ ಕರ್ನಾಟಕದಲ್ಲಿ ಯಾವ ಪ್ರಕಾರವಾಗಿ ಅನ್ಯಾಯವಾಗುತ್ತಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತಂದು, ನಂತರ ಉಳಿದ ವಿಷಯಗಳನ್ನು ಹೇಳುತ್ತೇನೆ. ಈ ಹಿಂದೆ ಶ್ರೀಮಾನ್ ವೀರೇಂದ್ರಪಾಟೀಲರು ಇದೇ ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ, ಭಾಷಣ ಮಾಡಿದ್ದರು. ಆ ಕಾಲಕ್ಕೆ ಅವರು ಹೇಳಿದ್ದ ಸಂಗತಿ ನನಗೆ ನೆನಪಿದೆ. ಇವತ್ತಿನ ದಿವಸ ಸರ್ಕಾರದವರು ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ, ಅದನ್ನು ರಾಜ್ಯಪಾಲರ ಬಾಯಿಂದ ಹೇಳಿಸುವಂತಹ ಕೃತಿ ಎಂದು ಹೇಳಿದರು. ಆ ಕಾಲಕ್ಕೆ, ಹೋದ ವರ್ಷ, ಅದಕ್ಕೂ ಹಿಂದಿನ ವರ್ಷ ರಾಜ್ಯಪಾಲರ ಕಡೆಯಿಂದ, ಯಾವ ವಿಷಯದ ಬಗ್ಗೆ ಸರ್ಕಾರದವರು ಮಾತನಾಡಿಸಿದ್ದರೋ, ಆ ವಿಷಯಗಳ ಬಗ್ಗೆ ಸರ್ಕಾರದವರು ಕ್ರಮ ಕೈಗೊಂಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ನೋಡಿಕೊಳ್ಳಬೇಕೆಂದು ಹೇಳಿದ್ದರು. ಅಂದರೆ, ಒಂದು ಕಾಲಕ್ಕೆ ಬೈಬಲ್‌ನಲ್ಲಿ ಹೇಳಿದಂಥ ಸಂಗತಿ ಸಹಿತ ನನಗೆ ನೆನಪಿದೆ. ಆದರೆ, ಹೋದ ವರ್ಷ ಇದೇ ರಾಜ್ಯಪಾಲರ ಭಾಷಣದಲ್ಲಿ, ಇದೇ ಸರ್ಕಾರದವರು ಒಂದು ಮಾತನ್ನು ಹೇಳಿದರು. ಧಾರವಾಡದಲ್ಲಿ ಅಥವಾ ಬೆಳಗಾಮ್‌ನಲ್ಲಿ, ಒಟ್ಟಾರೆ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಮಾಡಲಾಗುವುದು ಎಂದು ಹೇಳಿದರು. ಆ ಹೈಕೋರ್ಟ್ ಪೀಠ ಸ್ಥಾಪನೆ ಸಲುವಾಗಿ, ಇವತ್ತಿನಿಂದ ಯಾವುದೇ ವಿಷಯವನ್ನು ಇದರಲ್ಲಿ ನಮೂದು ಮಾಡಿಲ್ಲ. ಹೈಕೋರ್ಟ್ ಪೀಠ ಉತ್ತರ ಕರ್ನಾಟಕದಲ್ಲಿ ತೆಗೆದುಕೊಳ್ಳುತ್ತೇವೆ ಅಥವಾ ಇಲ್ಲ ಎನ್ನುವ ಬಗ್ಗೆ ಇವತ್ತಿನ ದಿವಸ ಯಾವುದನ್ನೂ ನಮೂದು ಮಾಡಿಲ್ಲ. ಎರಡನೆಯದಾಗಿ, ಟೆಕ್ನಿಕಲ್ ಯೂನಿವರ್ಸಿಟಿ ಸಹಿತ ಪ್ರಾರಂಭ ಮಾಡುತ್ತೇವೆಂದು ಹೋದ ವರ್ಷ ಹೇಳಿದ್ದರು. ಆ ಟೆಕ್ನಿಕಲ್ ಯೂನಿವರ್ಸಿಟಿ ಪ್ರಾರಂಭ ಮಾಡುವ ಸಲುವಾಗಿ ಇದರಲ್ಲಿ ಯಾವುದೇ ಪ್ರಸ್ತಾಪನೆ ಇಲ್ಲ. ಇದೇ ಪ್ರಕಾರವಾಗಿ ಆರೋಗ್ಯ ಯೂನಿವರ್ಸಿಟಿ ಪ್ರಾರಂಭ ಮಾಡುತ್ತೇವೆಂದು ಹೋದ ವರ್ಷ ಹೇಳಿದ್ದರು. ಇವತ್ತಿನ ದಿವಸ ಇದರ ಬಗ್ಗೆ ಯಾವುದೇ ಪ್ರಸ್ತಾವನೆ ಈ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಬಾಂಬೆ-ಕರ್ನಾಟಕ ಏರಿಯಾದಲ್ಲಿ ಬರತಕ್ಕಂಥ ಯಾವುದೇ ಒಂದು ಮಹತ್ವದ ಅಭಿವೃದ್ಧಿ ಕಾರ್ಯಕ್ರಮಗಳ ಒಂದೂ ನಮೂದು ಮಾಡಿಲ್ಲ. ಇನ್ನೊಂದು ತಮಗೆ ಹೇಳುವುದೇನೆಂದರೆ, ಮಲೆನಾಡು ಅಭಿವೃದ್ಧಿ ಸಲುವಾಗಿ ಈ ವರ್ಷ 45 ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ತೆಗೆದಿಟ್ಟಿದ್ದರು. ಇವತ್ತಿನವರೆಗೂ ಒಂದು ರೂಪಾಯಿ ಸಹಿತ ಖರ್ಚಾಗಿಲ್ಲ.

3.20 ಪಿ.ಎಂ.

ಎರಡನೆಯದಾಗಿ ಹೋದ ವರ್ಷ 10 ಕೋಟಿ ರೂಪಾಯಿಗಳನ್ನು ಇಟ್ಟರು. 55 ಕೋಟಿ ರೂಪಾಯಿಗಳನ್ನು ಈ ಮಲೆನಾಡು ಅಭಿವೃದ್ಧಿ ಯೋಜನೆ ಸಲುವಾಗಿ ಕೊಟ್ಟರೂ ಸಹಿತ ಆ ಕಾರ್ಯಕ್ರಮ ಇದುವರೆಗೂ ಪ್ರಾರಂಭವಾಗಿಲ್ಲ. ಅಂದರೆ ಆ ಕಾರ್ಯಕ್ರಮ ಮುಂದಿನ ವರ್ಷ ಜಾರಿಯಲ್ಲಿದೆ ಅಥವಾ ಇಲ್ಲ ಎನ್ನುವುದು ಸಹ ಇವತ್ತಿನ ದಿವಸ ಇಲ್ಲ. ತಾವು ಇದನ್ನು ನೋಡಬಹುದು. ಮಲೆನಾಡು ಅಭಿವೃದ್ಧಿ ಕಾರ್ಯಕ್ರಮ ಅಂದರೆ ಒಬ್ಬ ಕ್ಯಾಬಿನೆಟ್ ಮಿನಿಸ್ಟರ್ ಇದ್ದವರು ಅದಕ್ಕೆ ಚೇರ್ಮನರು. ಎಷ್ಟೊಂದು ಬಹಳ ಸಮಂಜಸ ಇದೆ ನೋಡಿ. ಸ್ಟೇಟ್ ಮಿನಿಸ್ಟರ್ ಇದ್ದವರು ಅದಕ್ಕೆ ಮಿನಿಸ್ಟರ್. ಮಲೆನಾಡು ಅಭಿವೃದ್ಧಿಗೆ ಕ್ಯಾಬಿನೆಟ್ ಮಿನಿಸ್ಟರ್ ಆದ ಶ್ರೀ ಹಾರನಹಳ್ಳಿ

ರಾಮಸ್ವಾಮಿಯವರು ಚೇರ್ಮನರು, ಅದಕ್ಕೆ ನಮ್ಮ ಹಾಲಪ್ಪ ಸ್ಟೇಟ್ ಮಿನಿಸ್ಟರ್ ಇದ್ದವರು ಕನ್‌ಸರ್ನ್ ಮಿನಿಸ್ಟರ್. ಇದು ಎಷ್ಟೊಂದು ವ್ಯತಿರಿಕ್ತ ಇದೆ. ಆಡಳಿತದಲ್ಲಿ ನೂರು ದಿವಸ ಆದರೂ ಸಹ ಇವರು ಒಂದು ಚೇಂಜ್ ಮಾಡಿಲ್ಲ. ಅದೇ ಪ್ರಕಾರವಾಗಿ ಹೈದರಾಬಾದ್ – ಕರ್ನಾಟಕದ ಬಗ್ಗೆ ಕೂಡ ನಾನು ಹೇಳಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಅದಕ್ಕೆ ಯಾರು ಅಧ್ಯಕ್ಷರು ಎಂದು ಇನ್ನೂ ತೀರ್ಮಾನ ಆಗಿಲ್ಲ.

ಶ್ರೀ ಎಸ್.ಎಚ್. ಕೌಜಲಗಿ:– ನೀವೇ ಇವತ್ತಿನವರೆಗೂ ಚೇರ್ಮನ್ ಅದೇ ಪ್ರಕಾರವಾಗಿ ಹೈದರಾಬಾದ್ – ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಶ್ರೀಮಾನ್ ಘೋರ್ಪಡೆಯವರು ಚೇರ್ಮನ್‌ರು. ರಾಯಚೂರಿನಿಂದ ಬಂದಂತಹ ಶ್ರೀ ಶ್ರೀರಂಗದೇವರಾಯಲು ಅವರು ಅದಕ್ಕೆ ಮಿನಿಸ್ಟರ್. ಅಂದರೆ ಒಂದು ನೂರು ದಿವಸ ಆದರೂ ಸಹ ಏನೂ ಆಗಿಲ್ಲ ಈ ಸರ್ಕಾರದವರು ನಾವು ಅಧಿಕಾರಕ್ಕೆ ಬಂದ ತಕ್ಷಣ ಎಲ್ಲವನ್ನೂ ಸರಿಪಡಿಸುತ್ತೇವೆ ಎಂದು ಹೇಳಿದರು. ಇವತ್ತಿನ ತನಕ ಆ ಬೋರ್ಡ್ ಆಗಿಲ್ಲ, ಇವತ್ತಿನ ತನಕ ಆ ಹಣ ಖರ್ಚಾಗಿಲ್ಲ. ಇವತ್ತಿನ ತನಕ ಯಾವುದೇ ಅಭಿವೃದ್ಧಿ ಕಾರ್ಯ ಆಗಿಲ್ಲ. ಇಲ್ಲೇ ಇಂತಹ ಸರ್ಕಾರದ ಅಧೀನದಲ್ಲಿರುವ ಸಂಸ್ಥೆಗಳಲ್ಲಿ ಅಭಿವೃದ್ಧಿ ಆಗದೆ ಇದ್ದಾಗ ಇನ್ನು ಜಿಲ್ಲಾ ಮಟ್ಟದಲ್ಲಿ ಯಾವ ಪ್ರಕಾರ ಆಗುತ್ತದೆ ಎನ್ನತಕ್ಕಂಥಾದ್ದನ್ನು ತಾವು ವಿಚಾರ ಮಾಡಬೇಕಾಗಿದೆ. ಇವತ್ತಿನ ತನಕ ಬೋರ್ಡ್ ಏಕೆ ಮಾಡಿಲ್ಲ ಎಂದು ನೀವೇ ಕೇಳಿಕೊಳ್ಳಬೇಕು. ಹೈದರಾಬಾದ್–ಕರ್ನಾಟಕದ ಹಣ ಏಕೆ ಖರ್ಚಾಗಿಲ್ಲ, ಮಲೆನಾಡು ಅಭಿವೃದ್ಧಿ ಹಣ ಏಕೆ ಖರ್ಚಾಗಿಲ್ಲ ಮಾನ್ಯ ಅಧ್ಯಕ್ಷರೇ, ತಾವು ಸಹ ಒಂದು ಬಾರ್ಡರ್ ಏರಿಯಾದಲ್ಲಿ ಬರುತ್ತೀರಿ. ಬಾರ್ಡರ್ ಏರಿಯಾ ಹಣ ಸಹ ಇವತ್ತಿನವರೆಗೂ ರಿಲೀಜ್ ಆಗಿಲ್ಲ. ನಮ್ಮ ಬೆಳಗಾಂ ಡಿ.ಸಿ.ಯವರು ಪ್ರತಿ ಸಾರಿ ಮೀಟಿಂಗ್‌ನಲ್ಲಿ ಸಾರ್, ಬಾರ್ಡರ್ ಹಣ ರಿಲೀಜ್ ಆಗಿಲ್ಲ ಎಂದು ಹೇಳುತ್ತಾರೆ. ಈ ಅಭಿವೃದ್ಧಿ ಕಾರ್ಯಗಳ ಬಗ್ಗೆ ಈ ಸರ್ಕಾರದಲ್ಲಿ ಯಾವುದೇ ಒಂದು ಆಸಕ್ತಿ ಇಲ್ಲ. ಎರಡನೆಯದಾಗಿ ಈ ಸರ್ಕಾರದಲ್ಲಿ ಹಣ ಇಲ್ಲ. ಹೀಗಾಗಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ನಾನು ತಮಗೆ ಹೇಳುತ್ತೇನೆ. ಆದಕಾರಣ ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಅವುಗಳ ಬಗ್ಗೆ ಯಾವುದೇ ಪ್ರಸ್ತಾವನೆ ಮಾಡಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಬೆಳಗಾಂನಲ್ಲಿ ಮಲಪ್ರಭಾ, ಘಟಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪ್ರದೇಶದ ಜನರ ಅನುಕೂಲತೆಗಾಗಿ ಒಂದು ಕಾಡಾ ಆಫೀಸು ಇದೆ. ಆ ಕಾಡಾ ಆಫೀಸ್‌ನಲ್ಲಿ ತಾವು ವಿಚಾರ ಮಾಡಬಹುದು 1992–93ನೇ ಸಾಲಿನಲ್ಲಿ ಇವಕ್ಕೆ ಇಟ್ಟಂತಹ ಹಣ 6,29,00,000 ರೂಪಾಯಿಗಳು. ಅದರಲ್ಲಿ ಖರ್ಚಾಗಿದ್ದು 2,26,00,000 ಲಕ್ಷ ರೂಪಾಯಿಗಳು. ಅದರಲ್ಲಿ ಬಹಳ ಮಹತ್ವದ್ದು ಅಂದರೆ, ಸಂಬಳಕ್ಕೆ ಎಷ್ಟು ಹೋಗಿದೆ ಅಂದರೆ, 2 ಲಕ್ಷ ರೂಪಾಯಿ ಖರ್ಚಾಗಿದೆ. ಯಾವುದೇ ಒಂದು ಅಭಿವೃದ್ಧಿ ಕೆಲಸಕ್ಕೆ ಈ ಕಾಡಾ ಅಧಿಕಾರಿಗಳು ಹಣ ಖರ್ಚು ಮಾಡಿರುವುದಿಲ್ಲ. ಇದು ಆಡಳಿತದಲ್ಲಿ ಗ್ರಿಪ್ ಇಲ್ಲ ಎಂದು ತೋರಿಸುತ್ತವೆ. ಇವತ್ತಿನ ದಿವಸ ಯಾವುದೇ ಅಡ್ಮಿನಿಸ್ಟ್ರೇಶನ್‌ನಲ್ಲಿ ಗ್ರಿಪ್ ಇರಬೇಕು. ಇವತ್ತು ಮಂತ್ರಿಗಳು ಆದೇಶ ಕೊಟ್ಟರೆ ಸೆಕ್ರೆಟರಿ ಕೇಳಬೇಕು. ಸೆಕ್ರೆಟರಿಗಳು ಆದೇಶ ಕೊಟ್ಟರೆ ಚೀಫ್ ಇಂಜಿನಿಯರ್ಸ್ ಕೇಳಬೇಕು. ಚೀಫ್ ಇಂಜಿನಿಯರ್ಸ್ ಆದೇಶ ಕೊಟ್ಟರೆ ಸೂಪರಿಟೆಂಡೆಂಟ್ ಇಂಜಿನೀಯರ್ ಕೇಳಬೇಕು. ಆದರೆ ಇವತ್ತಿನ ದಿವಸ ನಮ್ಮ ಮಲಪ್ರಭಾ ಪ್ರಾಜೆಕ್ಟ್‌ನಲ್ಲಿ ನೀರಾವರಿ ಕಾರ್ಯದರ್ಶಿಗಳು ಆದೇಶ ಕೊಟ್ಟರೆ ಚೀಫ್ ಇಂಜಿನಿಯರ್ ಕೇಳುವುದಿಲ್ಲ ಮತ್ತೆ ನಮಗೆ ಗೌರ್ನಮೆಂಟ್ ನೋಟಿಫಿಕೇಶನ್ ಬೇಕು ಎಂದು ಕೇಳುತ್ತಾರೆ. 1992–93ರಲ್ಲಿ ಕಾಡಾ ಸಿಬ್ಬಂದಿ ವೆಚ್ಚ 40 ಲಕ್ಷ ರೂಪಾಯಿಗಳು, ಪ್ರಗತಿ 32 ಲಕ್ಷ ರೂಪಾಯಿಗಳು ಎಂದು ಅವರು ಖರ್ಚು ಹಾಕಿದ್ದಾರೆ. ಅನಂತರ ಆಯಕಟ್ಟು ರಸ್ತೆಗಳು 45 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ಆದರೂ 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ವಾರಾಬಂದಿಗೆ 40 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. 12 ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಅದೇ ಪ್ರಕಾರವಾಗಿ ಜಮೀನು ನೀರಾವರಿ ಮತ್ತು

ಕಾಲುವೆಗಳ ನಿರ್ಮಾಣಕ್ಕೆ 2 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, 49 ಲಕ್ಷ ರೂಪಾಯಿ ಖರ್ಚು ಮಾಡುತ್ತಾರೆ ಇಷ್ಟೇ ಅಲ್ಲದೆ, 1 ಕೋಟಿ 49 ಲಕ್ಷ ರೂಪಾಯಿಗಳನ್ನು ಪಿ.ಡಿ. ಅಕೌಂಟ್‌ನಲ್ಲಿ ಆ ಕಾಡಾ ಅಧಿಕಾರಿಗಳು ಇಡುತ್ತಾರೆ. ಅವರು ಪಿ.ಡಿ. ಅಕೌಂಟ್‌ಲ್ಲಿ ಹಣವನ್ನು ಇಡುವ ಉದ್ದೇಶವಾದರೂ ಏನು ? ಅವರು ಹಣವನ್ನು ಪಿ.ಡಿ. ಅಕೌಂಟ್‌ನಲ್ಲಿಟ್ಟು ಖರ್ಚು ಮಾಡುತ್ತಿದ್ದಾರೆ. ಇದು ಕಾಡಾ ಡಿಪಾರ್ಟ್‌ಮೆಂಟ್ ಮಾಡುವ ಕೆಲಸವೇ ? ಆ ಕಾಡಾಕ್ಕೆ ಒಬ್ಬ ಅಡ್ಮಿನಿಸ್ಟ್ರೇಟರ್ ಇದ್ದಾರೆ. ಅವರು ಇನ್‌ಚಾರ್ಜ್ ಅಡ್ಮಿನಿಸ್ಟ್ರೇಟರ್. ನಾವು ಅವರನ್ನು ಕೇಳಿದ ಕೂಡಲೇ ನಾನು ಏನು ಮಾಡುವುದು ಸರ್ಕಾರ ಅಡ್ಮಿನಿಸ್ಟ್ರೇಟರ್ ನೇಮಕ ಮಾಡಿಲ್ಲ ಎಂದು ಕಳೆದ ಒಂದು ವರ್ಷದಿಂದ ಹೇಳುತ್ತಾರೆ. ಇವತ್ತಿನ ದಿವಸ ಅದಕ್ಕೆ ಒಬ್ಬ ಚೇರ್ಮನ್‌ರು ಇಲ್ಲ, ಒಬ್ಬ ಸೆಕ್ರೆಟರಿ ಇಲ್ಲ. ಬರೀ ತಮ್ಮ ಗಾಡಿ, ಬರೇ ತಮ್ಮ ಖರ್ಚು, ತಮ್ಮ ಸಿಬ್ಬಂದಿ ಸಲುವಾಗಿ ಇದೆ. ಇದು ಮಾನ್ಯ ವೀರಪ್ಪ ಮೊಯಿಲಿಯವರ ಮೌಲ್ಯಾಧಾರಿತ ಆಡಳಿತದ ಒಂದು ನಿದರ್ಶನ ಎಂದು ನಾನು ಹೇಳಬಹುದು.

ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಮಲ್ಲಾರಿಗೌಡ ಪಾಟೀಲರು ನೀರಾವರಿ ಸಚಿವರಾಗಿದ್ದಾಗ ಕೆಲವು ಕಡೆ ಹೋದಾಗ ಶಾಸಕರ ಸಭೆಯಲ್ಲಿ ಶಾಲೆಗಳನ್ನು, ಸಮುದಾಯ ಭವನಗಳನ್ನು ತೆಗೆದುಕೊಳ್ಳಲು ಆರ್ಡರ್ ಮಾಡಿದರು. ಅವರ ಆರ್ಡರ್ ಪ್ರಕಾರ ನೀರಾವರಿ ಕಾರ್ಯದರ್ಶಿಗಳು ತಮ್ಮ ಅಂಡರ್ ಸೆಕ್ರೆಟರಿ ಮುಖಾಂತರ G.O. ಹೊರಡಿಸಿಕೊಟ್ಟರು. ಈ ಕೆಲಸಗಳನ್ನು ತೆಗೆದುಕೊಳ್ಳಲು ನಿರ್ದೇಶಿತನಾಗಿದ್ದೇನೆ ಎಂದು. ನಿರ್ದೇಶಿತನಾಗಿದ್ದೇನೆಂದು order ಮಾಡಿದರೂ ಸಹಿತ ಮತ್ತು ಅವರು ಈ ಪ್ರಾಜೆಕ್ಟ್ ರೊಕ್ಕ ಹೆಚ್ಚಾಗಿದೆ ಇವನ್ನು ತೆಗೆದುಕೊಳ್ಳುವುದೋ ಬೇಡವೋ ಎಂದು ಕೇಳಿದ್ದಾರೆ. ಅವರಿಗೆ ಯಾವುದೇ ಕೆಲಸ ಮಾಡಬೇಕು ಎನ್ನತಕ್ಕ ವಿಚಾರ ಇಲ್ಲ. project cost ಹೆಚ್ಚಾಗಿದೆ ಎಂದು ಹೇಳುತ್ತಾರೆ. project cost ಹೆಚ್ಚಾಗಿದೆಯೆಂದು ಅವರು ಸರ್ಕಾರಕ್ಕೆ ಮತ್ತೆ ಬರೆಯುತ್ತಾರೆ. ಅಂದರೆ ನೀರಾವರಿ ಕಾರ್ಯದರ್ಶಿಗಳು ಕೊಟ್ಟಂಥ ಆದೇಶವನ್ನು ಪಾಲಿಸಲಿಕ್ಕೆ ತಯಾರಿಲ್ಲದ ಅಧಿಕಾರಿಗಳು ಇದ್ದಾರೆ. ಅಂಥವರ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರೆಂದು ನಾನು ಕೇಳುತ್ತೇನೆ. ಯಾವುದೇ ಪ್ರಸಂಗದಲ್ಲಿ ಒಂದು ಅಧಿಕಾರಿ ವರ್ಗದವರು, ಸರ್ಕಾರದವರು order ಕೊಟ್ಟ ನಂತರ ಆ order ಚಲಾಯಿಸುವಂಥ ಕರ್ತವ್ಯ ಅಧಿಕಾರಿಗಳದ್ದಿರುತ್ತದೆ. ಆ ಅಧಿಕಾರಿಗಳು, ಇವತ್ತಿನ ದಿವಸ ಏನು ಮಾಡೋಣ, ಎಲ್ಲಿ ರೊಕ್ಕ ಇದೆ, ಈ ಸರ್ಕಾರ ದಿವಾಳಿಯಾಗಿದೆಯೆಂದು ಮೀಟಿಂಗ್‌ನಲ್ಲಿ ಹೇಳುತ್ತಾರೆ. ಈ ಸರ್ಕಾರದಲ್ಲಿ ರೊಕ್ಕ ಇಲ್ಲವೆಂದು ಹೇಳುತ್ತಿದ್ದಾರೆ. ನಾವು ಆ ಕಾಲಕ್ಕೆ ಹೇಳಿದ್ದೇವೆ. ನಮ್ಮ ಬೆಳಗಾಂ ಜಿಲ್ಲೆಯ ಎಲ್ಲಾ ಎಂ.ಎಲ್.ಎ.ಗಳು ಇವತ್ತಿನ ದಿವಸ ಇದ್ದಾರೆ. ಅವರು ಎದ್ದು ನಿಂತು ಇವತ್ತು ನೀರಾವರಿ ಇಲಾಖೆಯಲ್ಲಿ ಕೆಲಸ ನಡೆದಿದೆ ಎಂದು ಹೇಳಲಿ ಇವತ್ತಿನ ದಿವಸ ನೀರಾವರಿ ರಾಜ್ಯ ಸಚಿವರು ನಮ್ಮ ಬೆಳಗಾಂ ಜಿಲ್ಲೆಯವರಿದ್ದಾರೆ. ಇವತ್ತು ಎದ್ದು ನಿಂತು ಅವರೇ ಹೇಳಲಿ. ಬೆಳಗಾಂ ಜಿಲ್ಲೆಯಲ್ಲಿ ನೀರಾವರಿ ಕಾರ್ಯಕ್ರಮಗಳು ಉತ್ತಮ ರೀತಿಯಲ್ಲಿ ನಡೆದಿವೆಯೆಂದು ಹೇಳಲಿ, ನಾನು ಅವರನ್ನು ಕ್ಷಮೆ ಕೇಳುತ್ತೇನೆ. ಇವತ್ತಿನ ದಿವಸ ನಡೆದಿತ್ತು ಎಂದರೆ, ಬರೀ ಖರ್ಚು, ವೆಚ್ಚ ಮತ್ತು ಆಡಳಿತಕ್ಕೆ ಖರ್ಚಾಗಿದೆಯೇ ಹೊರತು ಯಾವುದೇ ಅಭಿವೃದ್ಧಿ ಕೆಲಸ ಆಗಲಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ತಾವು ನೋಡಿರಬಹುದು, ಮೈನರ್ ಇರಿಗೇಷನ್‌ನಲ್ಲಿ 1992–93ನೇ ಸಾಲಿನಲ್ಲಿ 15 ಕೋಟಿ ರೂಪಾಯಿಗಳನ್ನು claim tribunal ಗೆ ಕೊಟ್ಟಿದ್ದಾರೆ. ಯಾರಿಗೆ ಎಂದರೆ contractorಗೆ 15 ಕೋಟಿ ರೂಪಾಯಿಗಳನ್ನು claim tribunalಗೆ ಕೊಡುವುದಕ್ಕೆ ಇವರ ಕಡೆ ರೊಕ್ಕ ಇದೆ. projectಗೆ ರೊಕ್ಕ ಕೇಳಿದರೆ ಇವರ ಕಡೆ ರೊಕ್ಕ ಇಲ್ಲ. ಅದಕ್ಕೆ ಏನು ಹೇಳುತ್ತಾರೆಂದರೆ, ಬೇಕಿಲ್ಲ, ಪ್ರಾಜೆಕ್ಟ್ ಒಳಗೆ ಅಷ್ಟೇ ಕಾಸ್ಟ್ ಇತ್ತು ಎಂದು ಹೇಳುತ್ತಾರೆ. ಆ ಕೆಲಸಕ್ಕೆ ಪ್ರಾಜೆಕ್ಟ್‌ನಲ್ಲಿ ಎಷ್ಟು ಕೆಲಸ ಇತ್ತು, ಅವರು ಸಂದರ್ಭಾನುಸಾರವಾಗಿ ಇವತ್ತು ನೀರಾವರಿ ಮಾಡುವಂಥ ಒಂದು ಕರ್ತವ್ಯ ಇರುತ್ತದೆ. ಅಷ್ಟೇ ಅಲ್ಲದೆ, estimate committeeಗೂ ಸಹಿತ ಇವರು ರೆಸ್ಪೆಕ್ಟ್ ಕೊಡಲಿಕ್ಕಿಲ್ಲ. Estimate

committeeಯಲ್ಲಿ ನಾಲ್ಕು lift irrigation schemes ಅನ್ನು ತೆಗೆದುಕೊಳ್ಳಬೇಕೆಂದು ಒಂದು ಸಲಹೆಯನ್ನು ಕೊಟ್ಟರು. ಆ ಸಲಹೆ ಕೊಟ್ಟರೂ ಸಹಿತ 1993–94, 1992–93ನೇ ಸಾಲಿನಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲಿಕ್ಕೆ ಆ Chief Engineer ತಯಾರಿಲ್ಲ. ಇಂಥ ಅಧಿಕಾರಿಗಳನ್ನು ಇವತ್ತಿನ ದಿವಸ ನಾವು ಕಾಪಾಡಬೇಕಾಗಿದೆ. ಇಂಥ ಅಧಿಕಾರಿಗಳನ್ನು ಈ ಸರ್ಕಾರದವರು ನೋಡಬೇಕಾಗಿದೆ. ಇವರು ಒಳ್ಳೆಯ ರೀತಿಯಿಂದ ಮಾಡಿದ ನಂತರ ಧಕ್ಕ, ಪ್ರಾಮಾಣಿಕ ಅಧಿಕಾರ ಕೊಡುವುದಕ್ಕಾಗುತ್ತದೆ. ಇವತ್ತಿನ ದಿವಸ ತಾವು ನೋಡಬಹುದು, 15 ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಇವರಿಗೆ ರೊಕ್ಕ ಇದೆ. 15 ಕೋಟಿ ರೂಪಾಯಿ ಕೊಟ್ಟಿದ್ದನ್ನು ಹೇಳುತ್ತಿದ್ದೇನೆ. 5 ಕೋಟಿ ರೂಪಾಯಿ lumpsum grant ಇತ್ತು. 5 ಕೋಟಿ ರೂಪಾಯಿ ಹಣವನ್ನು 1992–93ರಲ್ಲಿ ಒಂದೇ ಒಂದು ತಿಂಗಳಲ್ಲಿ ಇವರು ಡ್ರಾ ಮಾಡಿ contractorಗೆ ಅದನ್ನು minor irrigation ಗೆ claim ಮಾಡಿ ಕೊಡುತ್ತಾರೆಂದರೆ ಎಷ್ಟೊಂದು ತಾಪ ಆಗಲಿಕ್ಕಿಲ್ಲವೆಂದು ತಾವು ವಿಚಾರ ಮಾಡಬೇಕು. ಅದಕ್ಕೆ ಏಕೆ ಕೊಡಲಿಲ್ಲ ? ಅದೇ ನೀರಾವರಿ ಮಾಡಲಿಕ್ಕೆ 1 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಈ ಆಫೀಸರ್ ಕೈ ಗಡಗಡ ನಡುಗುತ್ತವೆ ಸ್ವಾಮಿ. ಅದೇ ಇವತ್ತಿನ ದಿವಸ ಅವರು ಒಳ್ಳೆಯ ಕೆಲಸ ಮಾಡಲಿಕ್ಕೆ ತಯಾರಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಒಂದು ಚಿಕ್ಕ ನೀರಾವರಿ ಯೋಜನೆಯನ್ನು ನಾನು suggest ಮಾಡಿದ್ದೆ. 5 ಲಕ್ಷರೂಪಾಯಿ ಖರ್ಚು ಮಾಡಿದರೆ 150 ಎಕರೆ ನೀರಾವರಿಯಾಗುತ್ತದೆ. 2ನೇಹಂತ ನೀರಾವರಿ ಟ್ಯಾಂಕಿನ ಸಲುವಾಗಿ ಅದಕ್ಕೆ ಸರ್ವೆ ಆಗಿದೆ. ಅದನ್ನು ಬಜೆಟ್‌ನಲ್ಲಿ ಹಾಕಲಿಕ್ಕೆ ತಯಾರಿಲ್ಲ. ಅದನ್ನು ಏಕೆ ಹಾಕಲಿಲ್ಲ ಎಂದರೆ ಸರ್ಕಾರದಲ್ಲಿ ರೊಕ್ಕ ಇಲ್ಲವೆಂದು ಹೇಳುತ್ತಾರೆ. ಆದರೆ ಇಂಥಾ claimಗೆ tribunal ನಲ್ಲಿ contractorಗೆ ಕೊಡಲಿಕ್ಕೆ ರೊಕ್ಕ ಇದೆ. ಇದನ್ನು ತಾವು ವಿಚಾರ ಮಾಡಬಹುದು. ಇಷ್ಟೇ ಅಲ್ಲದೆ, ಇವತ್ತಿನ ದಿವಸ ಯಾವುದೇ ಒಬ್ಬ ಅಧಿಕಾರಿ, ಶಾಸಕರು ಹೋದರೆ ಮರ್ಯಾದೆ ಕೊಡುವುದಿಲ್ಲ. ಮೊನ್ನೆ ನಾನು ಮತ್ತು ಸುನಂದಾಪಾಟೀಲ್‌ರವರು ಕೂಡಿಕೊಂಡು 4 ದಿವಸಗಳ ಹಿಂದೆ education departmentನಲ್ಲಿ ಒಬ್ಬ joint secretryಯನ್ನು ಭೆಟ್ಟಿಯಾಗಲಿಕ್ಕೆ ಹೋಗಿದ್ದೆವು. ನಾವು ಎಂ.ಎಲ್.ಎ. ಇದ್ದೇವೆ, ಇವರು ಎಂಎಲ್‌ಸಿ ಇದ್ದಾರೆ ಎಂದಾಗ ಏನ್ರಿ ಕೆಲಸ ಇದ್ರೆ ಮೇಲೆ ಮೇಲೆ ಬಂದು ಉಪದ್ರವ ಕೊಡುತ್ತೀರಿ ಎಂದರು. ಅವರಿಗೆ ಎಷ್ಟೊಂದು ಧೈರ್ಯವಿದೆ ನೋಡಿ. ಇವತ್ತಿನ ದಿವಸ ಅವರ ಗರ್ವ, ಅವರ ಧೈರ್ಯ ಎಷ್ಟಿದೆ ನೋಡಿ. ಒಬ್ಬ clerk ಈ ತರಹ ಮಾತನಾಡುವುದಾದರೆ ಇನ್ನು ಆಫೀಸರ್ ಯಾವ ರೀತಿ ಶಾಸಕರನ್ನು ಮತ್ತು ಮಂತ್ರಿಗಳನ್ನು ನೋಡುತ್ತಾರೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ.

ಈ ಸರಕಾರಕ್ಕೆ ನಾನು ಎಚ್ಚರಿಕೆ ಕೊಡುತ್ತೇನೆ. ನೀವು ಕೂಡ ಒಂದು ಆರ್ಡರ್ ಮಾಡಿದರೆ, ದಯಮಾಡಿ ಇದನ್ನು ಎಕ್ಸಿಕ್ಯೂಟ್ ಮಾಡುತ್ತೀರಾ ಎಂದು ನಿಮ್ಮ ಸೆಕ್ರೆಟರಿಯನ್ನು ಕೇಳಬೇಕಾಗುತ್ತದೆ. ಹಾಗೆಯೇ ನಾನು ಇಂಥ ಒಂದು ಕೆಲಸವನ್ನು ಮಾಡಬೇಕೆಂದಿದ್ದೇನೆ ಅದಕ್ಕೆ ನೀವು ಸಹಕರಿಸುತ್ತೀರಾ ಎಂದು ಕೇಳಬೇಕಾಗುತ್ತದೆ. ಹೀಗೆ ನೀವು ಒಂದು ಕೆಲಸಕ್ಕಾಗಿ ಚೀಫ್ ಇಂಜಿನೀಯರ್‌ರನ್ನು ಕೇಳಿದರೆ, ಅವನು ಸೂಪರಿಂಟೆಂಡೆಂಟ್ ಇಂಜಿನೀಯರ್‌ರನ್ನು ಕೇಳಬೇಕು. ಹೀಗಾಗಿ ಇವತ್ತಿನ ದಿವಸ ಟೆಂಡರ್ ಕರೆದಂಥ ಕೆಲಸಗಳು ಕೂಡ ಪ್ರಾರಂಭವಾಗಿಲ್ಲ. ನಮ್ಮಲ್ಲಿ ಒಂದು ಸಮಾಜ ಮಂದಿರಕ್ಕೆ 4–30 ಲಕ್ಷಕ್ಕೆ ಒಂದು ಟೆಂಡರ್‌ನ್ನು ಕರೆದರು. ಚೀಫ್ ಇಂಜಿನೀಯರ್‌ರವರು ಆ ಕೆಲಸವನ್ನು ತೆಗೆದುಕೊಳ್ಳಬೇಡಿ, ಅದನ್ನು ನಾನು ಪುನಃ ಸರಕಾರಕ್ಕೆ ಬರೆದು ಕೇಳುತ್ತೇನೆ, ಸರಕಾರದಿಂದ ಮತ್ತೊಂದು ಅಪ್ರೂವಲ್ ಬರಬೇಕೆಂದು ಹೇಳುತ್ತಾರೆ. ಸರಕಾರದವರು ಒಮ್ಮೆ ಆದೇಶವನ್ನು ಕೊಡುತ್ತಾರೆ. ಪುನಃ ಅವರಿಗೆ ಏಕೆ ಬರೆಯಬೇಕು ? ಇಂಥ ಕೆಲಸಗಳಿಗೆ ಮಂತ್ರಿಯವರು ಸೆಕ್ರೆಟರಿಗೆ ಕೊಡುತ್ತಾರೆ ಸೆಕ್ರೆಟರಿಯವರು ಚೀಫ್ ಇಂಜಿನೀಯರ್‌ಗೆ ಕೊಡುತ್ತಾರೆ. ಇದು ಇರುವ ಪ್ರೊಸೀಜರ್. ಒಂದು ವೇಳೆ ಮಂತ್ರಿಯವರು ಡೈರೆಕ್ಟ್, ಆಗಿ ಅಧಿಕಾರಿಗೆ ಬರೆದರೆ ಅದನು ತೆಗೆದು...

ಆಜ್ಞೆಯಾಗಿರುವುದಿಲ್ಲ. ನನ್ನ ಕ್ಷೇತ್ರದಲ್ಲಿನ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದಂಥ ಪ್ರದೇಶದ ಬಗ್ಗೆ ಈ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್:– ತಾವುಗಳು ಹೀಗೆ ವೇಗ್ ಆಗಿ ಹೇಳುತ್ತಾ ಹೋದರೆ ನಾವು ಹೇಗೆ ಬರೆದುಕೊಳ್ಳುವುದು ?

ಶ್ರೀ ಶಿವಾನಂದ ಹೆಚ್. ಕೌಜಲಗಿ:– ಚೀಫ್ ಇಂಜಿನಿಯರ್, ಸೆಕ್ರೆಟರಿಯವರು ಇದ್ದಾರೆ ಎಂದು ಹೇಳಿದ್ದೇನೆ. ಅವರೂ ಬರೆದುಕೊಂಡಿರಬಹುದು. ಮಲಪ್ರಭಾ ಯೋಜನೆಯ ಬಗ್ಗೆ ತಿಳಿದುಕೊಳ್ಳಲಿ ಎಂದು ಹೇಳುತ್ತಿದ್ದೇನೆ. ಶರಾವತಿ ಕರ್ಮಕಾಂಡ ಆ ಕಾಲದಲ್ಲಿ ಇತ್ತು, ಈಗ ಮಲಪ್ರಭಾ ಕರ್ಮಕಾಂಡವನ್ನು ಹೇಳಬಹುದು. ಯಾವ ಪ್ರಕಾರವಾಗಿ ಪ್ರತಿ ವರ್ಷವೂ ಒಂದೆರಡು ಕೋಟಿ ರೂಪಾಯಿಗಳನ್ನು ಲಿಫ್ಟ್ ಇರಿಗೇಶನ್ ಸಲುವಾಗಿ ತೆಗೆದಿಡುತ್ತಾರೆ. ಅದನ್ನು ಇವೊತ್ತಿನ ತನಕ ಒಂದನ್ನೂ ಪತ್ರಿಕೆಗಳಲ್ಲಿ ಕೊಟ್ಟಿಲ್ಲ. ಹೀಗೆ ಎರಡು ಕೋಟಿ ರೂಪಾಯಿಗಳ ಸಾಮಾನುಗಳನ್ನು ತೆಗೆದುಕೊಳ್ಳುವಾಗ ಅದನ್ನು ಪತ್ರಿಕೆಗಳಲ್ಲಿ ಹಾಕಿ, ಟೆಂಡರ್ ಕರಯದೇ ಪರ್ಚೇಸ್ ಮಾಡುತ್ತಾರೆ ಅಂದರೆ, ಯಾವ ಪ್ರಕಾರವಾಗಿ ಇವೊತ್ತಿನ ದಿವಸ ನಡೆದಿದೆ ಎಂಬುದನ್ನು ಊಹಿಸಬೇಕು. ಅಲ್ಲಿ ಯಾರೋ ಒಬ್ಬನನ್ನು ಕಂಡು ಅವನಿಂದಲೇ ಮೂರು ಕೊಟೇಶನ್ ತೆಗೆದುಕೊಳ್ಳುತ್ತಾರೆ. ಅದಕ್ಕೆ ಆಗಿಂದಾಗ್ಗೆ ಸಹಿ ಮಾಡಿ ಅಪ್ರೂವಲ್ ಕೊಟ್ಟು ಬಿಡುತ್ತಾರೆ. ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿದರೆ ಪ್ರತಿವರ್ಷ 75 ಲಕ್ಷ ರೂಪಾಯಿಗಳು ಸರಕಾರಕ್ಕೆ ಉಳಿಯುತ್ತದೆ. ಮೊನ್ನೆ ನಮ್ಮ ಬೆಳಗಾವಿ ಜಿಲ್ಲೆಯ ಶಾಸಕರನ್ನು ಕರೆದು ಮಾನ್ಯ ಸಚಿವರಾದ ರಾಜಶೇಖರಮೂರ್ತಿಯವರು ರಿವ್ಯೂ ಮಾಡಿದರು. ಆಗ ಎಲ್ಲರೂ ಪಕ್ಷ ಭೇದ ಮರೆತು ನೀರಾವರಿ ಇಲಾಖೆಯ ಬಗ್ಗೆ ಟೀಕೆಯನ್ನು ಮಾಡಿದ್ದರು. ಆಗ ಎಲ್ಲರೂ ಸಚಿವರಲ್ಲಿ ಈ ಕಾಡ ಮತ್ತು ಇರಿಗೇಶನ್ ಡಿಪಾರ್ಟ್‌ಮೆಂಟ್‌ಗಳನ್ನು ಸುಧಾರಿಸಲು ಕೇಳಿಕೊಂಡರು. ಈ ನಮ್ಮ ಜನರು ಪ್ರಾಜೆಕ್ಟ್‌ನಲ್ಲಿ ತಮ್ಮ ಹೊಲ, ಮನೆ, ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೆ. ಅವರು ತಮಗೆ ಒಂದು ಶಾಲೆ, ಒಂದು ರಸ್ತೆ, ಕುಡಿಯುವ ನೀರು – ಇತ್ಯಾದಿಗಳನ್ನು ಕೇಳಿದರೂ ಕೂಡ ಸರಕಾರಕ್ಕೆ ಕೊಡಲು ಬರುವುದಿಲ್ಲವೆ ? 1964ನೇ ಇಸವಿಯಲ್ಲಿ ಮಾಡಿದಂಥ ಒಂದು ರಸ್ತೆಯನ್ನು ತೆಗೆದುಕೊಂಡು ಇವೊತ್ತಿನ ತನಕವೂ ಹ್ಯಾಂಡ್ ಓವರ್ ಮಾಡದೇ ಇದ್ದಾರೆ. ವರ್ಲ್ಡ್ ಬ್ಯಾಂಕ್‌ನವರು ಹಣ ಕೊಡುವುದಕ್ಕೆ ನಿಲ್ಲಿಸಿದ ಕಾರಣವೂ ಕೂಡ ಈ ಸರಕಾರದವರು ಇಂಥ ಹೊಲಸು ಕೆಲಸವನ್ನು ಮಾಡಿದ್ದರಿಂದ ಆಗಿದೆ. ಹಾಗೆಯೇ ಮಾಡುವುದನ್ನು ನಿಲ್ಲಿಸಿ ಎಂದು ಹೇಳಲು ಅವರೇನೂ ಹುಚ್ಚರಲ್ಲ. ಇವೊತ್ತು ಅಲ್ಲಿ ಅಂಡರ್‌ಗ್ರೌಂಡ್ ಮಾಡಿ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿನ ನಾಲ್ಕೂವರೆ ಕೋಟಿ ಜನಸಂಖ್ಯೆಯಲ್ಲಿ ಮೂರುವರೆ ಕೋಟಿ ಜನಸಂಖ್ಯೆಯು ಹಳ್ಳಿಗಳಲ್ಲಿ ಇದೆ. ಮಲ–ಮೂತ್ರಾದಿಗಳಿಗೆ ಜನರು ಹೋಗಬೇಕಾದರೆ ರಸ್ತೆಯ ಪಕ್ಕಗಳಲ್ಲಿ ಹೋಗಬೇಕು. ಆದರೆ ಬೆಂಗಳೂರು ಮುಂತಾದ ನಗರಗಳಲ್ಲಿರುವವರಿಗೆ ಎಲ್ಲಾ ಸೌಲಭ್ಯಗಳು ಬೇಕು, ಹಳ್ಳಿಯ ಜನರಿಗೆ ಬೇಡ ಎಂದರೇ ಏನರ್ಥ ? ನಿಮ್ಮ ರೀತಿಯಲ್ಲಿ ಬಾಳಲು ಹಳ್ಳಿಯವರಿಗೆ ಅಧಿಕಾರವಿಲ್ಲವೆ ? ಇಂಥ ಎಲ್ಲಾ ವಿಚಾರಗಳನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಿದ ಒಬ್ಬ ಮಂತ್ರಿಯ ಹೆಸರು ಹೇಳಬೇಕಾಗಿದ್ದರೆ ಅದು ಶ್ರೀ ಬಸವಲಿಂಗಪ್ಪನವರದ್ದು. ದಿವಂಗತರು ಇಂಥ ವಿಚಾರಗಳ ಬಗ್ಗೆ ಅಪಾರ ಕಾಳಜಿ ವಹಿಸುತ್ತಿದ್ದರು. ಅಂಥ ಒಬ್ಬ ನಿಷ್ಠಾವಂತ ಸಚಿವ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಬೇರೆ ಯಾರೂ ಇರಲಾರರು ಎಂದು ನಾನು ಅಭಿಮಾನದಿಂದ ಹೇಳಿಕೊಳ್ಳುತ್ತೇನೆ. ಅವರ ಯಾವುದೇ ಕೆಲಸಕಾರ್ಯಗಳು ಮಾನವೀಯತೆಯ ದೃಷ್ಟಿಯಿಂದ ಇರುತ್ತಿತ್ತು. ಅವರು ಒಮ್ಮೆ ಬೆಳಗಾವಿಗೆ ಬಂದಾಗ ನಮ್ಮ ಹಳ್ಳಿಗಳ ಕಡೆಯಲ್ಲಿ ಕಾರ್‌ನಲ್ಲಿ ಹೋಗುತ್ತಿರುವಾಗ ಹೆಣ್ಣು ಮಕ್ಕಳು ಬಹಿರ್ದೆಸೆಗೆ ದಾರಿ ಪಕ್ಕದಲ್ಲಿ ಕುಳಿತಿದ್ದನ್ನು ನೋಡಿ ತುಂಬಾ ನೊಂದುಕೊಂಡು ಜೊತೆಯಲ್ಲಿದ್ದ ನನ್ನನ್ನು

ಕುಳಿತುಕೊಳ್ಳಬೇಕಾದ ಸ್ಥಿತಿಯು ನಿಮಗೆ ಯಾರಿಗೂ ನಾಚಿಕೆ ಉಂಟು ಮಾಡಿಲ್ಲವೇ ಎಂದು ಕೇಳಿದರು. ನಾನು ಅದಕ್ಕೆ ನಮಗೆ ಕ್ಷೇತ್ರದಲ್ಲಿ ಬೇಕಾದ ಸಮುದಾಯ ಭವನ, ಶಾಲೆ ಕಟ್ಟಡಗಳನ್ನು ಮಾಡಲು ಆಗಿಲ್ಲ ಇನ್ನೇನು ಅಂಡರ್‌ಡ್ರೈನೇಜ್ ಮಾಡಲು ಆಗುತ್ತದೆಯೇ ಎಂದು ಭಿನ್ನವಿಸಿಕೊಂಡೆ. ಅವರು ಸೆಕ್ಷನ್ ಐದರ ಪ್ರಕಾರ ಇದನ್ನು ಮಾಡಲು ಆಗುತ್ತದೆ. ಎಂದು ಹೇಳಿ ಆ ಬಗ್ಗೆ ಇರಿಗೇಶನ್ ಸೆಕ್ರೆಟರಿಗೆ ನೋಟೀಸ್ ಕೊಟ್ಟರು. ಕೆಲಸ ಆಯಿತು. ಆದರೆ ಈ ಒಂದು ಕೆಲಸಕ್ಕೆ ಎರಡು ಸಾರಿ ನೋಟೀಸ್ ಕೊಟ್ಟರೂ ಕೂಡ ಯಾರೂ ಗಮನ ಕೊಡದ ಸ್ಥಿತಿಯು ಬಂದಿದೆ. ಅಂಥ ಅಧಕ್ಷ್ಯ ಅಧಿಕಾರಿಗಳು ಅಲ್ಲಿ ಕುಳಿತಿದ್ದಾರೆ. ಒಂದು ಕೋಟಿ ರೂಪಾಯಿ ಖರ್ಚಿಗೆ ಬರುತ್ತದೆ ಎಂದು ಹೇಳುತ್ತಾರೆ. ಅದಕ್ಕೆ ಲೋನ್ ಕೊಡಿ, ಆ ಇಂಡಸ್ಟ್ರೀಗೆ ಕೈಹಾಕಿರಿ. ಇಂತಹ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಈ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ನಮೂದು ಮಾಡಿಲ್ಲ. ಆದಕಾರಣ ಇವತ್ತು ಈ ಮಲಪ್ರಭಾ ಪ್ರಾಜೆಕ್ಟ್‌ನಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಸರಿಪಡಿಸಬೇಕೆಂದು ಹೇಳಿ ಈ ಎರಡು ಮಾತುಗಳನ್ನು ಆಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಹೃತ್ಪೂರ್ವಕವಾಗಿ ವಂದಿಸಿ, ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ):– ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದಿರುವ ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತಾ, ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ರಾಮಜನ್ಮಭೂಮಿ ವಿವಾದದಲ್ಲಿ ಆಗಿರುವ ಗಲಭೆ, ಕಷ್ಟನಷ್ಟಗಳ ಬಗ್ಗೆ ಅನೇಕ ಸದಸ್ಯರು ತಿಳಿಸಿದ್ದಾರೆ. ರಾಮಜನ್ಮಭೂಮಿ ವಿಚಾರದಲ್ಲಿ ಡಿಸೆಂಬರ್ 6ನೇ ತಾರೀಖು ಏಕೆ ಚೂಸ್ ಮಾಡಿಕೊಂಡರು ಎಂಬ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ಮತ್ತು ಕೆಲವು ಜನರು ಅಭಿಪ್ರಾಯಗಳನ್ನು ಹೇಳುತ್ತಾರೆ. ಬಹುಶಃ ಡಿಸೆಂಬರ್ 6ನೇ ತಾರೀಖು ರಾಜ್ಯಾಂಗ ಬರೆದ ಡಾ।। ಅಂಬೇಡ್ಕಾರ್‌ರವರ ನಿಧನರಾದ ದಿವಸ. ಅದರಲ್ಲಿ ಏನೋ ಒಂದು ಸಿಗ್ನಿಫಿಕೆನ್ಸ್ ಇದೆ. ಅಂದರೆ ಅಂಬೇಡ್ಕರವರು ಈ ದೇಶದ ರಾಜ್ಯಾಂಗ ರಚನೆ ಮಾಡುವ ಕಾಲದಲ್ಲಿ ರಾಜ್ಯಾಂಗದಲ್ಲಿ ದೇಶದ ಪ್ರಗತಿ, ಒಂದು ರಾಷ್ಟ್ರತೀತವಾದ ರಾಜ್ಯವಾಗಬೇಕು. ಈ ದೇಶದಲ್ಲಿರುವ ಪ್ರತಿವರ್ಗದ ಜನರಿಗೂ ಅಂದರೆ ರಾಜಕೀಯವಾಗಿ ಮತೀಯವಾಗಿ ಎಲ್ಲಾ ವರ್ಗದ ಜನರಿಗೂ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ರಾಜ್ಯಾಂಗ ಬರೆದಿದ್ದಾರೆ. ಈ ದೇಶದ ಐಕ್ಯತೆಗೆ ಮತ್ತು ಸಮಗ್ರತೆಗೆ ಅನುಕೂಲವಾಗಲಿ ಎಂದು ಮಾಡಿದರು. ಇವರ ದೆಸೆಯಿಂದ ಕೆಲವು ವರ್ಗಗಳಿಗೆ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಸ್ವಲ್ಪ ತೊಂದರೆಗಳು ಉಂಟಾಗಬಹುದು.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಹೀಗೆ ತೊಂದರೆಯಾಗಿರುವ ಜನ ಇದನ್ನು ವಿರೋಧ ಮಾಡುವುದು ಸ್ವಾಭಾವಿಕ. ಆದ್ದರಿಂದ ಈ ವಿಚಾರದಲ್ಲಿ ಡಿಸೆಂಬರ್ 6ನೇ ತಾರೀಖನ್ನೇ ಏತಕ್ಕಾಗಿ ತೆಗೆದುಕೊಂಡರು ಎಂಬುದಕ್ಕೆ ಅರ್ಥ ಸಿಗುತ್ತದೆ. ಅದೇನೇ ಇದ್ದರೂ ನಾವೆಲ್ಲ ಮಾತನಾಡುವಾಗ ಈ ದೇಶ ರಾಮರಾಜ್ಯವಾಗಬೇಕೆಂದು ಮಾತನಾಡುತ್ತೇವೆ. ಈ ರಾಮರಾಜ್ಯದ ಸಿಗ್ನಿಪಿಕೆನ್ಸ್ ಏನು ? ಆಗ ಸರ್ವರೂ ಚೆನ್ನಾಗಿದ್ದರು ಎಂದು ಹೇಳುತ್ತಾರೆ. ಆದರೆ ನಿಮಗೆಲ್ಲರಿಗೂ ಗೊತ್ತಿರುವಂತೆ ರಾಮನ ಕಾಲದಲ್ಲಿ ರಾಮ ಹೇಗೆ ಮಾಡುತ್ತಿದ್ದ ಎಂದರೆ ಅವತ್ತಿನ ಕಾಲದಲ್ಲಿದ್ದ ಧರ್ಮವನ್ನು ಮುಖ್ಯವಾಗಿ ಚತುರ್ವರ್ಣ ಮತ್ತು ಜಾತೀಯತೆಗಳ ವಿಚಾರದಲ್ಲಿ ಅವತ್ತಿನ ಜನ ಏನು ಹೇಳುತ್ತಿದ್ದರು, ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿ, ವರ್ಣವನ್ನು ಅತಿಕ್ರಮಣ ಮಾಡುವಂಥವರಿಗೆ ಕೊನೆಯ ಪಕ್ಷ ಮರಣವನ್ನೂ ವಿಧಿಸುತ್ತಿದ್ದರು ಎಂಬುದಕ್ಕೆ ಅಲ್ಲಿ ನಡೆದ ಶಂಭುಕನ ತಲೆ ತೆಗೆದರಲ್ಲ. ಅಂತಹ ನಿದರ್ಶನವೇ ರಾಮರಾಜ್ಯದ ಮಾದರಿ ಆಡಳಿತ. ಅಂಥಾದ್ದನ್ನು ತರಬೇಕೆಂಬುದು ಇಷ್ಟವೇ ? ಆದ್ದರಿಂದ ಬಹುಶಃ ಅನೇಕರಿಗೆ ವರ್ಣಾಶ್ರಮ ಧರ್ಮದ ರಾಮರಾಜ್ಯದ ಹಿನ್ನೆಲೆಯಲ್ಲಿರುವ ತತ್ವ ಬಹುಶಃ ಇದಕ್ಕೆ ಕಾರಣವಾಗುತ್ತದೆ. ಇದನ್ನು ಹಿಂಬದಿಯಲಿ

ಎತ್ತಿ ಹಿಡಿಯಬೇಕೆಂಬ ಉದ್ದೇಶವಿದೆ ಎಂದು ಅನೇಕರ ಬಾಯಿಯಲ್ಲಿದೆ. ಅದನ್ನು ಪ್ರತ್ಯಕ್ಷವಾಗಿ ಹೇಳುವುದಕ್ಕೆ ಧೈರ್ಯ ಇಲ್ಲದಿದ್ದರೂ ಅದು ಪರೋಕ್ಷವಾಗಿ ಇದೆ ಎಂಬುದು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅದರಲ್ಲೂ ಹಿಂದೂಧರ್ಮದ ಜನಗಳ ಮನೋವೃತ್ತಿ ಗೊತ್ತಾಗುತ್ತದೆ. ಆದ್ದರಿಂದ ರಾಮಜನ್ಮಭೂಮಿ ವಿಚಾರದಲ್ಲಿ ರಾಮರಾಜ್ಯದ ಮಾದರಿ ಇವತ್ತಿನ ಇಂಡಿಯಾ ದೇಶದ ಸಮಾಜದ ಮೇಲೆ ಆಗುವ ಪರಿಣಾಮವನ್ನು ನಾವು ನೋಡಬೇಕು.

ಈ ಪರಿಣಾಮವೇನೆಂದರೆ, 6ನೇ ತಾರೀಖು ಆದಮೇಲೆ ಆಗಿರತಕ್ಕಂಥದ್ದೇ ಅದರ ಪರಿಣಾಮ. ಆದ್ದರಿಂದ ಇದು ರಾಮರಾಜ್ಯದ ಒಂದು ತತ್ವ. ಯಾವುದೇ ಆಗಲಿ, ರಾಮರಾಜ್ಯದ ಒಂದು ಮತೀಯ ತತ್ವ ಎಷ್ಟರಮಟ್ಟಿಗೆ ಇರಬೇಕು ಎಂದು ಹೇಳಿದರೆ, ಆ ಸಮಾಜವನ್ನು ಒಗ್ಗಟ್ಟಾಗಿ ಹಿಡಿದಿಟ್ಟುಕೊಳ್ಳುವುದಕ್ಕೆ ಮತ್ತು ಎಲ್ಲಾ ಜನಗಳನ್ನೂ ಸಮಾನವಾಗಿ ಕಂಡು ಎಲ್ಲಾ ಜನವೂ ಮತವನ್ನು ಅನುಸರಿಸತಕ್ಕಂಥವರು ಎಲ್ಲರೂ ನಾವು ಒಗ್ಗಟ್ಟಾಗಿ, ಎಲ್ಲಾ ಜನಗಳನ್ನೂ ನಾವು ಒಗ್ಗೂಡಿಸತಕ್ಕಂಥ ಒಂದು ಧ್ಯೇಯವನ್ನು ಇಟ್ಟುಕೊಂಡು ಆ ಧ್ಯೇಯವನ್ನು ನಾವು ಕಾರ್ಯರೂಪದಲ್ಲಿ ಕಂಡರೆ ಮಾತ್ರ ಯಾವ ಧರ್ಮವೇ ಆಗಲಿ ಅದು ಸರಿಯಾದುದು ಎಂದು ಹೇಳಬಹುದು. ಒಂದು ವೇಳೆ ಆ ಧರ್ಮದಿಂದ ಸಮಾಜ ಛಿದ್ರಛಿದ್ರವಾಗತಕ್ಕಂಥದು ಏನಾದರೂ ಆದ ಪಕ್ಷದಲ್ಲಿ ಅಂತಹ ಧರ್ಮದಿಂದ ರಾಜಕೀಯ ಕ್ಷೇತ್ರದಲ್ಲೇ ಆಗಲಿ, ಧಾರ್ಮಿಕ ಕ್ಷೇತ್ರದಲ್ಲೇ ಆಗಲಿ, ಮಾನವತೆಯ ದೃಷ್ಟಿಯಿಂದ ಬಹಳ ತೊಂದರೆಯಾಗತಕ್ಕಂಥದ್ದು ಎಂದು ನೀವೆಲ್ಲವೂ ಒಪ್ಪುತ್ತೀರಿ ಎಂದು ನಾನು ತಿಳಿದು ಕೊಂಡಿದ್ದೇನೆ. ಯಾವ ಒಂದು ಧರ್ಮವೇ ಆಗಲಿ, ಒಬ್ಬ ವ್ಯಕ್ತಿಯಿಂದ, ಒಬ್ಬ ವ್ಯಕ್ತಿ ಅಥವಾ ಒಂದು ಗುಂಪಿನ ಜನ ಮತ್ತೊಂದು ಗುಂಪಿನ ಜೊತೆಯಲ್ಲಿ ಹೇಗೆ ನಡೆದುಕೊಳ್ಳಬೇಕು, ಎನ್ನತಕ್ಕಂಥದ್ದನ್ನು ಬೋಧಿಸತಕ್ಕಂಥ ಒಂದು ಧರ್ಮವೇ ನಿಜವಾದಂಥ ಧರ್ಮ. ಹಾಗಿದ್ದರೆ ಮಾತ್ರ ಸಮಾಜದಲ್ಲಿ ಶಾಂತಿ ಮತ್ತು ಸುಖ ದೊರೆಯುವುದಕ್ಕೆ ಸಾಧ್ಯ. ಇವತ್ತಿನ ದಿವಸ ಹಿಂದೂ ಧರ್ಮದಲ್ಲಿ ಇರತಕ್ಕಂಥದ್ದು ಅನೇಕರು ಹೇಳುತ್ತಾರೆ. ಹಿಂದೂ ಧರ್ಮ ಎಂದು ಹೇಳಿದರೆ "It is a religion of temples" ಅದು ನಿಜ. ಹಿಂದೂ ಧರ್ಮದಲ್ಲಿರತಕ್ಕಂಥ ಜನಗಳಿಗೆ ಆ ದೇವಸ್ಥಾನಗಳಲ್ಲಿ ಪೂಜಾರಿ ಕೆಲಸವೇ ಆಗಲಿ, ದೇವಸ್ಥಾನದ ಒಳಗಡೆ ಕೆಲಸ ಮಾಡತಕ್ಕಂಥ ಒಂದು ಕಾರ್ಯ ಎಲ್ಲರಿಗೂ ದೊರಕುವ ಪಕ್ಷದಲ್ಲಿ ಆ ಧರ್ಮ ನಿಜವಾಗಿಯೂ ಅದು ಪ್ರಜಾಪ್ರಭುತ್ವದಲ್ಲಿ ಈಕ್ವಾಲಿಟಿ, ಫ್ರೆಟರ್‌ನಿಟಿ ಇರುತ್ತದೆ ಎಂದು ನಾವು ಭಾವನೆ ಮಾಡಿಕೊಳ್ಳಬಹುದು. ಈ ಪೂಜಾರಿಗಳ ವಿಚಾರದಲ್ಲಿ ಹೇಳುವುದಾದರೆ, ಹಿಂದೂ ಧರ್ಮದಲ್ಲಿರತಕ್ಕಂಥ ಎಲ್ಲಾ ಜಾತಿ ವರ್ಗದ ಜನಗಳಿಗೆಲ್ಲಾ ಆ ಒಂದು ದೇವಸ್ಥಾನದ ಪೂಜಾ ಅವಕಾಶ ಸಿಗಬೇಕು ಅರ್ಚಕರು, ಆಗಮಕಾರರು ಎಂದು ನಾವು ಹೇಳುತ್ತೇವಲ್ಲಾ, ದೇವಸ್ಥಾನದ ಗರ್ಭಾಂಗಣದಲ್ಲಿ ಪೂಜೆ ಮಾಡತಕ್ಕಂಥ ಒಂದು ಅವಕಾಶ ಎಲ್ಲರಿಗೂ ಸಿಕ್ಕಿದರೆ ಮಾತ್ರ ಈ ಒಂದು ಧರ್ಮದಲ್ಲಿ ಒಂದು ಪ್ರಜಾಪ್ರಭುತ್ವದ ಹಿನ್ನೆಲೆ ಇದೆ.

ಆದರೆ ಒಂದು ಸ್ಪಿರಿಟ್ ಇದೆ ಎಂದು ನಾವು ಭಾವನೆ ಮಾಡಿಕೊಳ್ಳಬಹುದು. ಅದು ಇರುವ ತನಕ ಬಹುಶಃ ನಮ್ಮ ದೇಶದಲ್ಲಿ ಹಿಂದೂಗಳಲ್ಲಿ ಎಲ್ಲರೂ ಒಂದು, ಈಕ್ವಾಲಿಟಿ ಇದೆ ಮತ್ತು ಫ್ರಿಟರ್‌ನಿಟಿ ಇದೆ, ಎಲ್ಲರಲ್ಲೂ ಒಂದು ಭ್ರಾತೃಭಾವನೆ ಇದೆ ಎಂದು ಹೇಳಬಹುದು. ಇದೇ ಇದರ ಟೆಸ್ಟ್. ಜೊತೆಗೆ ಈ ಹಿಂದೂ ಧರ್ಮದ ಒಂದು ತತ್ವ, ನೀತಿ ಬೇರೆ ಧರ್ಮಗಳ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎನ್ನತಕ್ಕಂಥದ್ದನ್ನು ನಾವು ನೋಡಬೇಕು. ಇದರಲ್ಲಿ ಯಾವಾಗ ಈಕ್ವಾಲಿಟಿ, ಫ್ರೆಟರ್‌ನಿಟಿ ಇದೆ ಎಂದು ಹೇಳುತ್ತೇವೆ, ಪ್ರಜಾಪ್ರಭುತ್ವದಲ್ಲಿ ಇವು ಬಹಳ ಪ್ರಾಮುಖ್ಯವಾದಂಥ ತತ್ವಗಳು, ಈ ತತ್ವಗಳು ಬೇರೆ ಧರ್ಮಗಳಲ್ಲಿ ಇಲ್ಲದೇ ಇರುವುದರಿಂದ ಅದರ ಮೇಲೆ ಅಡ್ವರ್ಸ್ ಎಫೆಕ್ಟ್ ಏನಾದರೂ ಉಂಟಾದರೆ ನಿಜವಾಗಿಯೂ ಆ ಸಮಾಜದಲ್ಲಿ ಜಗಳ, ಕಲಹ ಮತ್ತು ಘರ್ಷಣೆಗಳು ಆಗತಕ್ಕಂಥದ್ದು ಅನಿವಾರ್ಯ. ಆದರಿಂದ ಒಂದು ಧರ್ಮವನ್ನು ನಾವು ನೋಡುವಾಗ ಆ ಒಂದು ಧರ್ಮ ಇನ್ನೊಂದು

ಧರ್ಮದವರ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ನಾವು ಸಮಾಜದಲ್ಲಿ ಸುಧಾರಣೆ ತರತಕ್ಕಂಥದ್ದು ಇದೆ. ಇಷ್ಟು ಮಾತ್ರ ನಾನು ಇದರ ಬಗ್ಗೆ ಹೇಳಿ ಮತ್ತೆ ಆರ್ಥಿಕ ಕ್ಷೇತ್ರದಲ್ಲಿ ಎಲ್ಲಿಯತನಕ ಯಾವ ಸಮಾಜದಲ್ಲಿಯೇ ಆಗಲಿ ಒಂದು ವರ್ಗ ಇನ್ನೊಂದು ವರ್ಗದ ಮೇಲೆ, ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಗಲಿ ಅಥವಾ ಮತ್ತೆ ನೇರವಾಗಿ ಹೇಳುವುದಾಗಿದ್ದರೆ ಒಂದು ಜಾತಿ ಇನ್ನೊಂದು ಜಾತಿಯ ಮೇಲೆ ತನ್ನ ಪರಿಣಾಮವನ್ನು, ತನ್ನ ಪ್ರಭುತ್ವವನ್ನು ಬೀರಿ ತಾನೇ ತನ್ನ ಪಾಲಿಗಿಂತ ಹೆಚ್ಚಾಗಿ ಒಂದು ಸಿಂಹ ಪಾಲನ್ನೇ ತಾನು ಅನುಭವಿಸಬೇಕು ಎನ್ನತಕ್ಕಂಥ ಒಂದು ಮನೋಭಾವ, ಆ ಒಂದು ಧೋರಣೆ ಇರತಕ್ಕಂಥ ಗುರಿಯೂ ಸಹ ಸಮಾಜದಲ್ಲಿ ಘರ್ಷಣೆಗೆ ಎಡೆಮಾಡುತ್ತದೆ ಎನ್ನುವುದು ಅನಿವಾರ್ಯ. ಆದ್ದರಿಂದ ಇವತ್ತಿನ ದಿವಸ ನಮ್ಮ ರಾಷ್ಟ್ರದಲ್ಲಿರತಕ್ಕಂಥ ನಾನಾ ಜಾತಿಗಳು, ನಾನಾ ವರ್ಗಗಳು, ನಾನಾ ಮತಗಳು ನಾನಾ ರಾಜಕೀಯ ಪಕ್ಷಗಳಲ್ಲಿ ಎಲ್ಲಿಯತನಕ ಆರ್ಥಿಕ ಕ್ಷೇತ್ರದಲ್ಲೇ ಆಗಲಿ, ಸಾಮಾಜಿಕ ಕ್ಷೇತ್ರದಲ್ಲೇ ಆಗಲಿ, ಧಾರ್ಮಿಕ ಕ್ಷೇತ್ರದಲ್ಲೇ ಆಗಲಿ, ಒಂದು ಸಮಾನತೆ, ಭ್ರಾತೃತ್ವ ಇಲ್ಲವೋ, ಎಲ್ಲರೂ, ಒಂದೇ ಸಂಸಾರದಲ್ಲಿರುವ ಅಣ್ಣತಮ್ಮಂದಿರು, ಹಂಚಿಕೊಂಡು ಬಾಳಬೇಕು, ತಿನ್ನಬೇಕು ಎನ್ನತಕ್ಕಂಥ ಮನೋಭಾವ ಸಮಾಜದ ನಾನಾ ವರ್ಗಗಳಲ್ಲಿ ಬರುವುದಿಲ್ಲವೋ ಅಲ್ಲಿಯತನಕ ನಮ್ಮ ದೇಶದಲ್ಲಿ ಈ ಘರ್ಷಣೆ ಎನ್ನತಕ್ಕಂಥದ್ದು ಅತ್ಯಂತ ಅನಿವಾರ್ಯ. ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಬಹುಶಃ ಅನೇಕರು ನನ್ನ ಈ ಅಭಿಪ್ರಾಯವನ್ನು ಒಪ್ಪುತ್ತೀರಿ ಎಂದು ನಾನು ನಂಬಿಕೊಂಡಿದ್ದೇನೆ.

ಇವತ್ತಿನ ದಿವಸ ಯಾವ ಒಂದು ಯೋಜನೆಯನ್ನು ತೆಗೆದುಕೊಂಡರೂ ಸಹ ಪ್ರಮುಖವಾಗಿ ಆರ್ಥಿಕ ಕ್ಷೇತ್ರದಲ್ಲಿ ಯೋಜನೆ ತೆಗೆದುಕೊಂಡರೂ ಯೋಜನೆಯ ಫಲ ಬಹುಶಃ ಅಲ್ಲಿರತಕ್ಕ ಎಲ್ಲಾ ಜನಗಳಿಗೆ ಎಲ್ಲಾ ವರ್ಗದವರಿಗೆ, ಮತ್ತು ಎಲ್ಲಾ ಗುಂಪಿನವರಿಗೆ ಸಿಕ್ಕಿದರೆ ಒಳ್ಳೆಯದು. ಒಂದು ವೇಳೆ ಆ ಯೋಜನೆಯ ಫಲ ಅಥವಾ ನಾನಾ ಯೋಜನೆಗಳಲ್ಲಿನ ಒಂದು ಸೌಲಭ್ಯ, ಅನುಕೂಲ, ಒಂದೇ ವರ್ಗದವರಿಗೆ ಹೋಗುವ ಸ್ಥಿತಿಯಲ್ಲಿ ಆದರೆ ಅದರಿಂದಲೂ ಸಹ ನಾವು ನಮ್ಮ ರಾಜ್ಯಾಂಗದಲ್ಲಿ ಇಟ್ಟುಕೊಂಡಿರತಕ್ಕ ಗುರಿ ಏನು ಇದೆ ಅದಕ್ಕೆ ಆದಾಯವಾಗುತ್ತದೆ ಅಂದರೆ ವರ್ಗದಿಂದ ವರ್ಗಕ್ಕೆ ಗುಂಪಿನಿಂದ ಗುಂಪಿಗೆ, ವ್ಯಕ್ತಿಯಿಂದ ವ್ಯಕ್ತಿಗೆ ಇರತಕ್ಕ ಒಂದು ವರಮಾನ ಬಹಳ ಅಪಾರವಾದ ಅಂತರ ಇರುವ ತನಕ ರಾಜ್ಯಾಂಗದ ಒಂದು ಗುರಿ ಸಾಧನೆಯಾಗುವುದಿಲ್ಲ. ಒಂದು ನಿರ್ದೇಶನ. ಇದನ್ನು ಸಾಧಿಸಲಿಕ್ಕೆ ನಾವು ಎಲ್ಲಿಯವರೆಗೆ ಸರಿಯಾದ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಇಟ್ಟುಕೊಳ್ಳುವುದಿಲ್ಲವೋ ಅಲ್ಲಿಯತನಕ ಯಾವುದೇ ಪ್ರಯೋಜನ ಆಗುವುದಿಲ್ಲ. ಜೊತೆಗೆ ಯಾವ ಯೋಜನೆಗಳೇ ಆಗಲಿ ಆ ಯೋಜನೆಯ ಪರಿಣಾಮ ಏನು, ಅದರ ಫಲ ಹೇಗೆ ಆಯಿತು ಎನ್ನತಕ್ಕ ಒಂದು ರಿವ್ಯೂ ಅಂದರೆ ಪುನರ್ ವಿಮರ್ಶೆ ಮಾಡತಕ್ಕ ಒಂದು ಕಾರ್ಯಕ್ರಮ ಆಗಬೇಕು. ಈ ಒಂದು ಕಾರ್ಯಕ್ರಮ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರೆಗೆ ಬಡವರು ಬಡವರೇ ಆಗಿಯೇ ಉಳಿಯುತ್ತಾರೆ, ಅನುಕೂಲಸ್ಥರು ಇನ್ನೂ ಹೆಚ್ಚಾಗಿ ಅನುಕೂಲಸ್ಥರಾಗಿಯೇ ಇರುತ್ತಾರೆ. ಎಲ್ಲಿಯತನಕ ಈ ರೀತಿಯಾದ ಒಂದು ಗ್ಲೇರಿಂಗ್ ಇನ್ ಈಕ್ವಾಲಿಟೀಸ್ ಈ ಒಂದು ಸಮಾಜದಲ್ಲಿ ಇರುತತ್ತದೆಯೋ ನಮ್ಮ ರಾಷ್ಟ್ರದಲ್ಲಿ ಇರುತ್ತದೆಯೋ ಅಲ್ಲಿಯತನಕ ನಮ್ಮ ಕಾನ್‌ಪ್ಲಿಕ್ಟ್, ಘರ್ಷಣೆ, ಒಬ್ಬೊಬ್ಬರಿಗೆ ಇರತಕ್ಕ ವರ್ಗ ಘರ್ಷಣೆ ತಪ್ಪುವುದಿಲ್ಲ ಎಂದು ನಾನು ಅಭಿಪ್ರಾಯ ಪಡುತ್ತೇನೆ. ಆದ್ದರಿಂದ ಇದನ್ನು ತಪ್ಪಿಸಬೇಕಾಗಿದ್ದರೆ ಯಾವುದೇ ಯೋಜನೆಯಾದರೂ ಸಹ ಆ ಯೋಜನೆಯ ಪುನರ್‌ವಿಮರ್ಶೆ ಇರಬೇಕು. ಅನ್ಯುಯಲ್ ರಿವ್ಯೂ ಅಥವಾ ಪೀರಿಯಾಡಿಕಲ್ ರಿವ್ಯೂ ಆಗುವ ತನಕ ಅಂದರೆ ನಾವು ಕೊಟ್ಟ ಹಣ ಎಷ್ಟು? ಏನು ಆಯಿತು ಎಂದು ಗೊತ್ತಾಗುವುದಿಲ್ಲ. ಅದರಲ್ಲಿಯೂ ಈ ರಿವ್ಯೂ

ಎಲ್ಲಿಯತನಕ ಇರುವುದಿಲ್ಲವೋ ಅಲ್ಲಿಯವರೆಗೆ ಬಡವರಿಗೆ ಕೊಡತಕ್ಕ ಅನೇಕ ಸೌಲಭ್ಯಗಳು ಏನಿವೆ ಅವುಗಳಿಂದ ಅವರು ವಂಚಿತರಾಗುತ್ತಾರೆ.

ಈಗ ಆಹಾರಧಾನ್ಯ ಹಂಚಿಕೆ ಮಾಡುವುದು ಸಣ್ಣ ವಿಚಾರ ಎಂದು ತಿಳಿದುಕೊಂಡಿದ್ದಾರೆ. ಬಡವರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತಾಡಿದ್ದಾರೆ. ರೈತರ ಬಗ್ಗೆ ಬಹಳಷ್ಟು ಹೇಳಿಕೊಂಡರು. ಅವರಿಗೆ ಅನಾನುಕೂಲ ಇದೆ, ತೊಂದರೆ ಇದೆ, ಅವರು ದೇಶದ ಬೆನ್ನೆಲುಬು ಅವರು ಆರ್ಥಿಕವಾಗಿ ಹಿಂದೆ ಉಳಿದಿದ್ದಾರೆ, ಆ ಜನಕ್ಕೆ ಏನೂ ಮಾಡದೆ ಹೊರತು ಈದೇಶದ ಪ್ರಗತಿ ಸಾಧ್ಯ ಆಗುವುದಿಲ್ಲ ಎಂದು ಹೇಳತಕ್ಕ ಮಾತನ್ನು ಒಪ್ಪಿಕೊಳ್ಳೋಣ. ಆದರೆ ರೈತರು ಎಂದು ಹೇಳತಕ್ಕವರು ಆಕ್ಚುಯಲ್ ಕಲ್ಟಿವೇಟರ್ಸ್ ಎಂದರೆ ಖುದ್ದಾಗಿ ವ್ಯವಸಾಯ ಮಾಡತಕ್ಕ ರೈತರು ಎಷ್ಟು ಜನ ನಮ್ಮ ದೇಶದಲ್ಲಿದ್ದಾರೆಂದು ಪ್ರಾಮಾಣಿಕವಾಗಿ ಯಾರಾದರು ಹೇಳಲಿ. ನನಗೆ ತಿಳಿದಮಟ್ಟಿಗೆ ಅನೇಕರು, ತಾವೆಲ್ಲ ಹಳ್ಳಿಯಲ್ಲಿ ಹುಟ್ಟಿದವರು. ಈ ಸದನದಲ್ಲಿರತಕ್ಕ ಮಾನ್ಯ ಸದಸ್ಯರುಗಳು ಹೆಚ್ಚಾಗಿ ಹಳ್ಳಿಯಲ್ಲಿ ಹುಟ್ಟಿದವರೇ. ನಮ್ಮಲ್ಲಿ ಸ್ವಂತವಾಗಿ ವ್ಯವಸಾಯ ಮಾಡತಕ್ಕ ಜನ ಎಷ್ಟು ಇದ್ದಾರೆ? ನಮ್ಮ ಯೋಜನೆಗಳಲ್ಲಿ ಉಳುವವನಿಗೇ ಹೊಲ, ಉಳುವವನಿಗೇ ನೆಲ ಎಂದು ಸಾರಿದ್ದೇವೆ. ಇವತ್ತಿನ ದಿವಸ ಉಳುವವನಿಗೆ ನೆಲ ಸಿಗುವುದಿಲ್ಲ, ಉಳಿಸುವವನಿಗೇ ನೆಲ ಸಿಕ್ಕರೆ ಉಳಿಸುವವನಿಗೆ ನೆಲ, ಉಳುವವನಿಗೆ ಏನೂ ಇಲ್ಲ. ಈ ರೈತ ಕಾರ್ಮಿಕರು ಇದ್ದಾರಲ್ಲ ಅವರ ಬಗ್ಗೆ ಮಾತನಾಡತಕ್ಕ ಜನ ಬಹಳ ಅಪರೂಪ. ಬಹಳ ಕಡಿಮೆ ಅಂಥವರು ಇದ್ದಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಅಂತರಂಗದಲ್ಲಿ ರೈತರ ಬಗ್ಗೆ ಕನಿಕರ ಇರಬಹುದು, ಪ್ರಾಮಾಣಿಕವಾದ ಯೋಚನೆ ಇರಬಹುದು. ಆದರೆ ಅದನ್ನು ಹೊರಗೆ ಹೇಳತಕ್ಕ ಜನಗಳ ಸಂಖ್ಯೆ ಬಹಳ ಕಡಿಮೆ. ಆದ್ದರಿಂದ ಇವತ್ತಿನ ದಿವಸ ರೈತ ಕಾರ್ಮಿಕರ ಬಗ್ಗೆ ಯಾವುದೇ ಯೋಜನೆ ರಾಜ್ಯಪಾಲರ ಭಾಷಣದಲ್ಲಿ ಕಾಣುವುದಿಲ್ಲ. ಇವತ್ತಿನ ದಿವಸ ಬಡವರಿಗೆ ಇರತಕ್ಕ ಯೋಜನೆಯಲ್ಲಿ ಜಿಲ್ಲಾ ಪರಿಷತ್ ಮೂಲಕ ಆಗತಕ್ಕದ್ದರಲ್ಲಿ ಅಪಾರವಾದ ಅನ್ಯಾಯ ಆಗಿದೆ. ಅದರ ಜೊತೆಗೆ ಈ ಯೋಜನೆಗಳಲ್ಲಿ ಸಮಾಜ ಸೇವಕರು ಎನ್ನತಕ್ಕವರು ನಾನಾ ರಾಜಕೀಯ ಪಕ್ಷಗಳಲ್ಲಿ ಇದ್ದಾರೆ. ಈ ಸಮಾಜ ಸೇವಕರಿಂದ ಆಗತಕ್ಕ ಶೋಷಣೆ ಎಲ್ಲೂ ಆಗುತ್ತಿಲ್ಲ. ಸರ್ಕಾರದವರು ಇದರ ಬಗ್ಗೆ ಹಿಂದೆ ರಿವ್ಯೂ ಕಮಿಟಿ ಎಂದು ಏಜೆನ್ಸಿ ನೇಮಕ ಮಾಡಬೇಕೆಂದು ಹೇಳಿದ್ದರು. ಆದಷ್ಟು ಬೇಗ ಇದನ್ನು ಮಾಡಬೇಕು. ಇದರ ಬಗ್ಗೆ ರಿವ್ಯೂ ಆಗಬೇಕು. ಆ ರಿವ್ಯೂ ರಿಪೋರ್ಟ್‌ನ್ನು ಸದನದ ಮುಂದೆ ಇಡಬೇಕು, ಜನಗಳ ಮುಂದೆ ಇಡಬೇಕು. ಆಗ ಅದರ ವಿಚಾರ ಗೊತ್ತಾಗುತ್ತದೆ. ಮತ್ತೊಂದು ವಿಚಾರ ಏನೆಂದರೆ ಬಡವರು, ಹಿಂದುಳಿದವರು ಪರ್ಟಿಕ್ಯೂಲರ್‌ಲಿ ಎಸ್‌ಸಿ/ಎಸ್‌ಟಿ ಜನಗಳಿಗೆ ಸರ್ಕಾರಿ ನೌಕರಿ ಕೊಡಬೇಕು ಎಂದು ರಾಜ್ಯಾಂಗದಲ್ಲಿ ಸ್ಪೆಸಿಫಿಕ್ ಡೈರೆಕ್ಷನ್ ಇವೆ, ಪ್ರಾವಿಜನ್ಸ್ ಕೊಟ್ಟಿದ್ದಾರೆ, ಅನೇಕ ಬ್ಯಾಕ್‌ಲಾಗ್ ಕೊಡಬೇಕು ಎಂದು ಹೇಳಿಕೆ ಕೊಟ್ಟಿದ್ದಾರೆ, ಸರ್ಕಾರ ಒಪ್ಪಿಕೊಂಡಿದೆ. ಆದರೂ ಅನೇಕ ಕಡೆ ಕೊಡುತ್ತಿಲ್ಲ. ಕೊಡದೇ ಇರುವುದಕ್ಕೆ ಕಾರಣವೇನು? ಕೊಡದೇ ಇರುವುದಕ್ಕೆ ಡಿಫಿಕಲ್ಟೀಸ್ ಏನಾದರೂ ಇದೆಯೇ ಅಥವಾ ಟೆಕ್ನಿಕಲ್ ಡಿಫಿಕಲ್ಟೀಸ್ ಏನಾದರೂ ಇದೆಯೇ? ಅಥವಾ ಕಾನ್‌ಫಿಡೆನ್‌ಷಿಯಲ್ ವಿಚಾರ ಹೇಳಬಾರದು, ಎಂದು ಏನಾದರೂ ಇದೆಯೇ? ರಾಜಕೀಯ ದೃಷ್ಟಿಯಿಂದ ಹೊರಗಡೆ ಹೇಳಬಾರದು ಎನ್ನುವುದು ಏನಾದರೂ ಇದೆಯೇ? ಆದ್ದರಿಂದ ನೀವು ಹಿಂದಿನ ಜನಗಳಿಗೆ ಬರಬೇಕಾದ ಬಾಕಿ ಏನೋ ತೆಗೆದುಕೊಂಡಿರಿ, ಅದನ್ನು ಕೊಡುವುದಕ್ಕೆ ಇಷ್ಟು ದಿವಸ ಡಿಲೇ ಆದರೂ ಏಕೆ ಮಾಡುತ್ತಿಲ್ಲ ಎನ್ನುವ ವಿಚಾರವನ್ನು ಇದುವರೆಗೂ ಸರ್ಕಾರ ನಮಗೆ ತಿಳಿಸುತ್ತಾ ಇಲ್ಲ. ಇದರಲ್ಲಿ ಬಹಳ ಅನ್ಯಾಯವಾಗಿತ್ತೆ. ಇವತ್ತಿನ ದಿವಸ ನಾನು ಕೆಲವು ಅಟಾನಮಿಸ್ ಬಾಡಿಸ್ ಆನ್ಯುವಲ್ ರಿಪೋರ್ಟ್ ಅನ್ನು ಮತ್ತು ಸ್ಥಳೀಯ ಸಂಸ್ಥೆಗಳ ರಿಪೋರ್ಟ್ ಅನ್ನು ನೋಡಿದರೆ ಎಷ್ಟೋ ಕಡೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿಯೇ ಇಲ್ಲ. ತಾವು ತಾವೇ ಮಾಡಿಕೊಂಡು ಬಿಟ್ಟಿದ್ದಾರೆ. ಯಾವ ಅಧಿಕಾರವೂ ಇಲ್ಲದೇ ಅಲ್ಲಿರತಕ್ಕಂಥ ಕೆಲವರು ತಮಗೆ

ಬೇಕುಬೇಕಾದವರ ತಮ್ಮ ಜನಗಳಿಗೆ ಕೊಟ್ಟಿದ್ದಾರೆ. ಆದ್ದರಿಂದ ಇಂತಹದ್ದರ ಬಗ್ಗೆ ಹೈ ಪವರ್ ಕಮಿಟಿ ಇದ್ದರೂ ಸಹ ರಿವ್ಯೂ ಮಾಡುತ್ತಿಲ್ಲ. ಜೊತೆಗೆ ಈ ವರ್ಗಗಳ ಜನಗಳಿಗೆ ಅಪಾಯಿಂಟ್‌ಮೆಂಟ್‌ಗಳ ವಿಚಾರಗಳಲ್ಲಾಗಲಿ, ರಿಕ್ರೂಟ್‌ಮೆಂಟ್ ವಿಚಾರಗಳಲ್ಲಾಗಲಿ, ಪ್ರಮೋಷನ್‌ಗಳ ವಿಚಾರದಲ್ಲಾಗಲಿ, ನೋಡುವುದಕ್ಕೆ ಹೈ ಪವರ್ ಕಮಿಟಿ ಇದ್ದರೂ ಸಹ, ಆಕ್ಟ್ ಮಾಡಿದ್ದರೂ ಸಹ ಆ ಕಮಿಟಿಯಲ್ಲಿ. ಇದರ ಬಗ್ಗೆ ಮಾಡಿಸಿ, ಅನೇಕ ರಿಕ್ರೂಟ್‌ಮೆಂಟ್ ರೂಲ್ಸ್ ಆಗಿಯೇ ಇಲ್ಲ. ಇದರ ಬಗ್ಗೆ ಸರ್ಕಾರ ತೀವ್ರವಾದ ಗಮನವನ್ನು ಹರಿಸಬೇಕು. ಬಡವರಿಗೆ ಏನಾದರೂ ಸಿಕ್ಕಿದರೆ ಸರ್ಕಾರಿ ನೌಕರಿ ಒಂದೇ. ಇದರಲ್ಲಾದರೂ ತಾವು ಅನುಕೂಲ ಮಾಡಿಕೊಟ್ಟರೆ ಏನಾದರೂ ಪ್ರಯೋಜನವಾಗುತ್ತದೆ. ಇಲ್ಲದಿದ್ದ ಪಕ್ಷದಲ್ಲಿ ಬರೀ ಓಟಿಗೋಸ್ಕರವಾಗಿ ಈ ಜನಗಳ ಬಗ್ಗೆ ಹೇಳಿದರೆ ಇವತ್ತು ಅಲ್ಲಿ ನಾಳೆ ನಾವು ಹೇಳತಕ್ಕಂಥ ವಿಚಾರ ಇದು ಪ್ರಾಮಾಣಿಕವಲ್ಲ, ನಿಜವಾಗಿಯೂ ಇದೊಂದು ಮೋಸ, ಒಂದು ಕುತಂತ್ರ ಎಂದು ತಿಳಿಯುತ್ತದೆ. ಮತ್ತೊಂದು ವಿಚಾರ ಬಹಳ ಮುಖ್ಯವಾದುದು ಏನೆಂದರೆ, ಸರ್ಕಾರಿ ನೌಕರರಲ್ಲಿ ಎಫಿಶಿಯೆನ್ಸಿ ಎಂದು ತಾವೆಲ್ಲ ಹೇಳುತ್ತೀರಿ, ರಾಜ್ಯಾಂಗದಲ್ಲೂ ಸಹ ಸರ್ಕಾರಿ ನೌಕರಿಗೆ ಎಸ್.ಸಿ/ಎಸ್.ಟಿ.ಯವರನ್ನು ತೆಗೆದುಕೊಳ್ಳಬೇಕಾದರೆ ಎಸ್.ಎಸ್.ಎಲ್.ಸಿ. ಯವರನ್ನು ತೆಗೆದುಕೊಳ್ಳಬೇಕೆಂದು ಇದೆ. ಆದರೆ ಜನರಲ್ ರಿಕ್ರೂಟ್‌ಮೆಂಟ್ ವಿಚಾರದಲ್ಲಿ ಮಾತ್ರ ಸಬ್ಜೆಕ್ಟ್ ಎಫಿಶಿಯನ್ಸಿ ಎಂಬ ಪ್ರಾವಿಜನ್ ಸ್ಪೆಸಿಫಿಕ್ ಆಗಿ ರಾಜ್ಯಾಂಗದಲ್ಲಿ ಇಲ್ಲ. ಒಂದು ವೇಳೆ ಇಲ್ಲದೆ ಇದ್ದರೂ ಅದರ ಬಗ್ಗೆ ಆಕ್ಟ್, ರೂಲ್ಸ್ ಮಾಡಿ ಅದನ್ನು ಮಾಡಬೇಕು. ಜೊತೆಗೆ ಎಫಿಶಿಯನ್ಸಿ ಎಂದರೆ ಏನು ? ಎಫಿಶಿಯೆನ್ಸಿಯನ್ನು ಡಿಟರ್ನ್‌ಮಿನ್ ಮಾಡಬೇಕಾದರೆ ಹೇಗೆ ? ಯಾವ್ಯಾವ ರೀತಿಯಲ್ಲಿ ಅದನ್ನು ಮಾಡಬಹುದು. ಇವತ್ತಿನ ದಿವಸ ಇರತಕ್ಕಂಥ ಎಫಿಶಿಯೆನ್ಸಿ ಅಂದರೆ ಆಲ್ ಮೋಸ್ಟ್ ಆಲ್ ಮಾರ್ಕ್ಸ್, ಈ ಮಾರ್ಕ್ಸ್‌ನ ಮೇಲೆ ನೀವು ಎಫಿಶಿಯೆನ್ಸಿಯನ್ನು ಡಿಟರ್‌ಮಿನ್ ಮಾಡುವುದೇ ಆಗಿದ್ದರೆ ಆ ಒಂದು ಮಟ್ಟ ಸರಿಯೇ ? ಇದನ್ನೆಲ್ಲ ತಾವು ನೋಡಬೇಕು. ಸಬ್ಜೆಕ್ಟ್ ಟು ಮಾರ್ಕ್ಸ್ ತೆಗೆದುಕೊಂಡ ಮಾತ್ರಕ್ಕೆ ಅವನು ಈ ಕೆಲಸ ಮಾಡುವುದು ಸರಿ ಎಂದು ತಿಳಿದುಕೊಳ್ಳುವುದಾದರೆ, ತಾವು ಅಧಿಕಾರದಲ್ಲಿರತಕ್ಕಂಥ ಮಂತ್ರಿ ವರ್ಗದ ಆಫೀಸ್‌ನಲ್ಲಿ ಸೆಕ್ರೆಟೆರಿಯೇಟ್‌ನಲ್ಲಿ ಇರತಕ್ಕಂಥ ಗುಮಾಸ್ತರುಗಳನ್ನು ನೋಡೋಣ. ಅವರು ಮಾಡುವಂತಹ ಕೆಲಸಕ್ಕೂ ಅವರು ಮಾರ್ಕ್ಸ್ ತೆಗೆದುಕೊಂಡಿರುವುದಕ್ಕೂ ಏನು ಸಂಬಂಧ ಎನ್ನುವುದನ್ನು ತಿಳಿದುಕೊಳ್ಳಲು ಒಂದು ಕಮಿಟಿಯನ್ನಾದರೂ ಮಾಡಿ. ಅದರ ಬಗ್ಗೆ ನಿಜವಾಗಿಯೂ ಸತ್ಯಾಂಶವನ್ನು ಹೊರಗಿಡಬೇಕು. ಎಫಿಶಿಯೆನ್ಸಿ ಎನ್ನುವುದು ಬಹಳ ಕುತಂತ್ರ, ಮೋಸ, ಫ್ರಾಡ್ ನಡೆಯುತ್ತಿದೆ. ಇದನ್ನು ಇವತ್ತಿನ ದಿವಸಕ್ಕಾದರೂ for the purpose of fact finding. ನೀವು ಅದನ್ನು ಮಾಡಿದರೆ ಬಹಳ ಒಳ್ಳೆಯದು. ಎಲ್ಲಾ ಜನರಿಗೂ ಇದರಿಂದ ಅನುಕೂಲವಾಗುತ್ತದೆ. ಬಡವರಿಗೆ ಸರ್ಕಾರದ ವಿಚಾರದಲ್ಲಿ, ಸಾರ್ವಜನಿಕರ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಎಲ್ಲರ ವಿಚಾರದಲ್ಲೂ ನಂಬಿಕೆ, ವಿಶ್ವಾಸ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಅನೇಕ ಬಹಳ ಮುಖ್ಯವಾದಂತಹ ವಿಚಾರಗಳು ಅದರಲ್ಲಿಯೂ ಹಿಂದುಳಿದ ಈ ವರ್ಗಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳವರ ವಿಚಾರದಲ್ಲಿ ಹೇಳಬೇಕು ಎಂದು ಇದ್ದೆ. ತಾವು ಇಷ್ಟಾದರೂ ಅವಕಾಶ ಕೊಟ್ಟಿದ್ದಕ್ಕೋಸ್ಕರವಾಗಿ ವಂದನೆಗಳು. ಮತ್ತೊಂದು ಸಂದರ್ಭ ಸಿಕ್ಕಾಗ ನಾನು ಕೆಲವು ವಿಚಾರಗಳನ್ನು ಹೇಳಬೇಕು ಎಂದು ಇದ್ದೇನೆ. ಈಗ ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ವಿದ್ಯುತ್ ಸರಬರಾಜಿನ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದರು. ಅದು ಆದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದರೆ ಸರಿ ಎಂದು ಅನ್ನಿಸುತ್ತದೆ. ಮಾನ್ಯ

ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಅದನ್ನು ನಾವು ಸಮಾಧಾನವಾಗಿ ಕೇಳಬೇಕಾಗುತ್ತದೆ. ತಾವು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದ್ದೀರಿ, ದಯವಿಟ್ಟು ಆ ಹೇಳಿಕೆಯನ್ನು ಕೊಟ್ಟರೆ ಸೂಕ್ತ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):– ಸ್ಟೇಟ್‌ಮೆಂಟ್ ಬಂದರೆ ನಿಮ್ಮ ಸಮಾಧಾನ ಕೆಡುತ್ತದೆ. ಅದಕ್ಕೋಸ್ಕರ ಮುಖ್ಯಮಂತ್ರಿಗಳ ರಿಪ್ಲೈ ಕೇಳಿದರೆ ಆಮೇಲೆ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳಿಂದ ಉತ್ತರ

† ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು):– ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಇವತ್ತು ಸಾಕಷ್ಟು ವಿಶ್ಲೇಷಣೆ, ವಿಮರ್ಶೆ ಮತ್ತು ರಚನಾತ್ಮಕವಾದ ಟೀಕೆಗಳು ಈ ಸದನದಲ್ಲಿ ಬಂದಿದೆ. ಬಹಳ ಸಂತೋಷ ಎಂದರೆ, ಎಲ್ಲಾ ಮುಖಂಡರು ಈ ಕಡೆಯವರು ಹಾಗೂ ಆ ಕಡೆಯವರು ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಾನು ಪ್ರತಿಯೊಬ್ಬರ ಭಾಷಣವನ್ನು ಕೂಡ ನೋಡುತ್ತಾ ಇದ್ದೆ. ಆದರೆ ಹೆಚ್ಚು ಟೀಕೆ ಮಾಡಿಲ್ಲ, ನಾನು ಎಲ್ಲಾ ನೋಡಿದಾಗ ನಮಗೆ ಇನ್ನೂ ಕೆಲವು ದಿವಸಗಳ ಕಾಲ ಕೊಡಬೇಕೆಂದು ತಮ್ಮ ಸದಿಚ್ಛೆ ಇರಬೇಕು. ಆ ಸದ್ಭಾವನೆಗೆ ನಾನು ಮೊದಲು ತಮಗೆ ವಂದನೆಗಳನ್ನು ಸಲ್ಲಿಸುತ್ತಾ ಇದ್ದೇನೆ. ಆದ್ದರೆ ಮತ್ತೊಂದು ವಿಚಾರ ಏನು ನಡೆದಿದೆ ಎಂದರೆ ಹೆಚ್ಚಾಗಿ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಆದ ಮೇಲೆ ಆಯವ್ಯಯ ಮಂಡನೆ ಆಗಬೇಕು. ಆದರೆ ಏತನ್ಮಧ್ಯೆ ಆಯವ್ಯಯ ಮಂಡನೆಯಾದ್ದರಿಂದ ಆಯವ್ಯಯದಲ್ಲಿ ಬರಬೇಕಾದಂತಹ ಅನೇಕ ವಿಚಾರಗಳು, ಆಯವ್ಯಯದಲ್ಲಿ ಚರ್ಚೆ ಆಗಬೇಕಾದಂತಹ ವಿಷಯಗಳು ಈ ಚರ್ಚೆಯಲ್ಲಿ ಬಂದಿದ್ದರಿಂದ ಬಹುಶಃ ಆ ಉತ್ತರಗಳನ್ನು ನಾನು ಆಯವ್ಯಯದ ಚರ್ಚೆಯಲ್ಲಿ ಕೊಟ್ಟಿದ್ದೇನೆ. ಏಕೆಂದರೆ ಅದು ಬಹಳ ಪ್ರಾಮುಖ್ಯವಾದಂತಹ ಚರ್ಚೆ. ಅದನ್ನು ನಾನು ಪ್ರತ್ಯೇಕಿಸಿ ಅದಕ್ಕೆ ಸಮರ್ಪಕವಾದಂತಹ ಉತ್ತರವನ್ನು ಕೊಡತಕ್ಕಂಥ ಒಂದು ಪ್ರಾಮಾಣಿಕವಾದ ಪ್ರಯತ್ನವನ್ನು ಖಂಡಿತವಾಗಿ ಕೂಡ ಮಾಡುತ್ತೇನೆ. ಈಗ ರಾಜ್ಯಪಾಲರ ಭಾಷಣದ ಕೆಲವು ವಿಚಾರಗಳನ್ನು ಹೇಳುವುದು ಇದ್ದರೆ, ಪ್ರಾಮುಖ್ಯವಾಗಿ ಪ್ರವಾಹದ ಬಗ್ಗೆ, ಆಮೇಲೆ ಪ್ರವಾಹದ ವಿಚಾರದಲ್ಲಿ ಸರ್ಕಾರ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಇಲ್ಲಿ ವ್ಯಾಪಕವಾದ ಚರ್ಚೆ ಆಗಿದೆ. ಈಗಾಗಲೇ ನಮ್ಮ ಕಂದಾಯ ಮಂತ್ರಿಗಳು ಇದರ ಬಗ್ಗೆ ಅನೇಕ ವಿಚಾರಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಆದರೆ ಕೆಲವು ವಿಚಾರಗಳ ಬಗ್ಗೆ ಅಂದರೆ ಕ್ರಾಪ್ ಕಾಂಪೆನ್ಸೇಷನ್ ಕೊಡತಕ್ಕದ್ದು ಮತ್ತು ಇರಿಗೇಷನ್ ಪಂಪ್‌ಸೆಟ್ಟಿಗೆ ಪರಿಹಾರ ಕೊಡತಕ್ಕದ್ದು ಈ ಎರಡು ವಿಚಾರಗಳಲ್ಲಿ ಸ್ವಲ್ಪ ತಡವಾಗಿದೆ, ಪರಿಹಾರ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಬಾಕಿದ್ದರ ಬಗ್ಗೆ ಸಾಕಷ್ಟು ಚರ್ಚೆ ಆಗಲಿಲ್ಲ. ಆದರೆ ಇರಿಗೇಷನ್ ಪಂಪ್‌ಸೆಟ್ ಮತ್ತು ಕ್ರಾಪ್ ಕಾಂಪನ್ಸೇಷನ್ ಬಗ್ಗೆ ಇಲ್ಲಿ ಸ್ವಲ್ಪ ಪ್ರಸ್ತಾಪ ಆಗಿದೆ. ಆದರ ಬಗ್ಗೆ ಕೆಲವು ವಾಸ್ತವಾಂಶಗಳನ್ನು ತಮ್ಮ ಎದುರಿಗೆ ಇಡಲಿಕ್ಕೆ ನಾನು ಇಚ್ಛೆ ಪಡುತ್ತೇನೆ. ಈಗಾಗಲೇ ಇರಿಗೇಷನ್ ಪಂಪ್‌ಸೆಟ್ ಬಗ್ಗೆ ಏನು ಪೇಮೆಂಟ್ ಆಗಬೇಕಿತ್ತು. ಅದರ ಬಗ್ಗೆ 1.66 ಕೋಟಿ ರೂಪಾಯಿಗಳನ್ನು ನಿನ್ನೆ ತಾನೇ ನಾವು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ಸ್ವಲ್ಪ ತಡವಾಗಿದ್ದು ಏಕೆಂದರೆ, ಅದರಲ್ಲಿ ಸರಿಯಾದಂತಹ ಮಾಹಿತಿಗಳು ನಮಗೆ ಬರಲಿಕ್ಕೆ ಸ್ವಲ್ಪ ತಡವಾಗಿದೆ. ಸರಿಯಾದಂತಹ ಮಾಹಿತಿಗಳು ಬರದೆ ಅದನ್ನು ನಾವು ನಿರ್ಣಯ ಮಾಡುವುದಕ್ಕೆ ಅಸಾಧ್ಯ ಆಯಿತು. ಇದನ್ನು ಕೊಡಬೇಕೆಂದು ಈಗಾಗಲೇ ನಿರ್ಣಯ ಮಾಡಿದ್ದೇವೆ. ಒಟ್ಟು ಮೂರು ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿ, ಅದರಲ್ಲಿ 1.66ಕೋಟಿ ರೂಪಾಯಿ ಪಂಪ್‌ಸೆಟ್ ಬಗ್ಗೆ ಉಳಿದದ್ದು ಬೇರೆ ಬೇರೆ ಕ್ರಾಪ್ ಕಾಂಪೆನ್ಸೇಷನ್ ಬಗ್ಗೆ ಮತ್ತು ಇನ್ನಿತರ ಕೆಲಸಕ್ಕೆ ಕೂಡ ನಾವು

ಬಿಡುಗಡೆ ಮಾಡಿದ್ದೇವೆ. ಕ್ರಾಪ್ ಕಾಂಪೆನ್ಸೇಷನ್ ಬಗ್ಗೆ ಪೇಮೆಂಟ್ ಮಾಡಬೇಕೆಂದು ನಾವು ಮೂರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇದರಲ್ಲಿ ಒಟ್ಟು 58.18 ಲಕ್ಷರೂಪಾಯಿಗಳನ್ನು ಈ ಹಿಂದೆಯೇ 8,758 ಹೆಕ್ಟೇರ್ ಭೂಮಿಗೆ ಬಿಡುಗಡೆ ಮಾಡಲಾಗಿತ್ತು. ಆದ್ದರಿಂದ ಇನ್ನೂ ಹೆಚ್ಚು ಪಂಪ್‌ಸೆಟ್ .ಬಗ್ಗೆ ಒಪ್ಪಿದ್ದೇವೆ, ಮತ್ತು 500 ರೂಪಾಯಿಗಳನ್ನು ಪರ್ ಹೆಕ್ಟೇರ್ ಪ್ರಕಾರ ಏನು ಬೆಳೆ ಪರಿಹಾರಕ್ಕೆ ನಾವು ಈ ಪ್ರವಾಹದ ಯೋಜನೆಗಳಲ್ಲಿ ಕೊಡುತ್ತೇವೆಂದು ಹೇಳಿದ್ದೇವೆ, ಅದನ್ನು ಒದಗಿಸಲಿಕ್ಕೆ ನಾವು ಕಟಿಬದ್ಧರಾಗಿದ್ದೇವೆ. ಅದನ್ನು ನಾವು ತಕ್ಷಣ ತಡ ಮಾಡದೆ ಬಹುಶಃ ಒಂದು ವಾರದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಬಾಕಿ ಇದೆ, ಅದನ್ನು ಬಿಡುಗಡೆ ಮಾಡುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆದ್ದರಿಂದ ಈ ನೆರೆ ಪರಿಹಾರದ ಕಾರ್ಯಕ್ರಮಗಳಲ್ಲಿ ಎಲ್ಲಿ ಮನೆ ಹಾಳಾಗಿದೆ ಅಥವಾ ಸಂಪೂರ್ಣ ನಾಶ ಆಗಿದೆ ಅದನ್ನು ಕೊಡತಕ್ಕ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ.

ಕ್ರಾಪ್ ಪರಿಹಾರದ ಬಗ್ಗೆ ನಾವು ಹೇಳಿದಂಥ ಮಾತನ್ನು ನಡೆಸಿಕೊಟ್ಟಿದ್ದೇವೆ. ಕ್ಯಾಶ್ ಪರಿಹಾರದ ಬಗ್ಗೆಯೂ ಕೂಡ, ಅದನ್ನು ಈಗಾಗಲೆ ಕೋಡಲಾಗಿದೆ. ಇನ್ನು ಖಾಯಂ ಆಗಿ ಎಲ್ಲೆಲ್ಲಿ, ಅನೇಕ ಸಂದರ್ಭಗಳಲ್ಲಿ ನೆರೆ ಬರುತ್ತದೆಯೋ ಅದು flash floods ಇರಬಹುದು, ಅಥವಾ ಬೇರೆ ನದಿ ತೀರದಲ್ಲಿ ಇರಬಹುದು ಅಥವಾ sea erosion, ಸಮುದ್ರದ ಕೊರೆತದ ವಿಚಾರವಿರಬಹುದು, ಸಂಪೂರ್ಣವಾಗಿ ಇನ್ನು ಮುಂದೆ, ಈ ದಿಸೆಯಲ್ಲಿ ನಮ್ಮ ಜನರು ಆಗಾಗ್ಗೆ ಕಷ್ಟಗಳನ್ನು, ಸವಾಲುಗಳನ್ನು ಎದುರಿಸಬಾರದು, ಅವರಿಗೆ ಶಾಶ್ವತವಾದ ಸರಿಯಾದ ಸ್ಥಳದಲ್ಲಿ ಮನೆಗಳನ್ನು ಕಟ್ಟಿಕೊಡತಕ್ಕಂಥಾದ್ದು ಒಂದು ಭಾಗ ಮತ್ತು ಕೆರೆಭಾವಿಗಳನ್ನು ಸಂರಕ್ಷಣೆ ಮಾಡುವುದಕ್ಕೆ ಮತ್ತು ಅವರ ಆಸ್ತಿಪಾಸ್ತಿಗಳನ್ನು ಸಂರಕ್ಷಣೆ ಮಾಡುವುದಕ್ಕೆ ಏನು ಒಂದು ಮೂಲಭೂತವಾದಂಥ ತಡೆಯನ್ನು, ಮೂಲಭೂತವಾದಂಥ ಪರಿಸ್ಥಿತಿಯನ್ನು, ವಾತಾವರಣವನ್ನು ನಿರ್ಮಾಣ ಮಾಡಬೇಕು, ಇದರ ಬಗ್ಗೆ ಈಗಾಗಲೆ ನಾವು ಕೇಂದ್ರ ಸರ್ಕಾರದ ಮುಖಾಂತರ ವಿಶ್ವ ಬ್ಯಾಂಕಿಗೆ ನಮ್ಮ ಪ್ರಧಾನ ಮಂತ್ರಿಗಳಾದಂಥ ಸನ್ಮಾನ್ಯ ಪಿ.ವಿ. ನರಸಿಂಹರಾಯರ ಆದೇಶದ ಮೇಲೆ ಈಗಾಗಲೇ ಒಂದು ಯೋಜನೆಯನ್ನು ಕಳುಹಿಸಿಕೊಟ್ಟಿದ್ದೇವೆ, ಅದು ಬಂದನಂತರ ಬಹುಶಃ ವ್ಯಾಪಕವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಮುಂದೆ ಬರತಕ್ಕ ಅನಾಹುತಗಳನ್ನು ನೂರಕ್ಕೆ ನೂರು ಪಾಲು ತಪ್ಪಿಸದಿದ್ದರೂ ಕೂಡ ನೂರಕ್ಕೆ ಸುಮಾರು ಎಂಬತ್ತು ಪಾಲು ತಪ್ಪಿಸಲು ಸಾಧ್ಯವಾಗುತ್ತದೆ. ಈ ಕೆಲಸವು ಬಹಳ ಹಿಂದೆಯೇ ಆಗಬೇಕಾಗಿತ್ತು. ಆದರೆ ಕಡೆಯ ಪಕ್ಷ ನಾವು ಅದನ್ನು ಅನುಷ್ಠಾನ ಮಾಡಿ ಬಹುಶಃ ಒಂದು ವರ್ಷದೊಳಗೆ ಅದನ್ನು ಆದ್ಯತೆಯ ಮೇಲೆ ಮಾಡುತ್ತೇವೆ, ವಿಶ್ವ ಬ್ಯಾಂಕು ಈ 300 ಕೋಟಿ ರೂಪಾಯಿಯ ಯೋಜನೆಯನ್ನು ಕ್ಲಿಯರ್ ಮಾಡತಕ್ಕದ್ದು ಇದೆ, ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿಯೂ ಸಹ ಈಗಾಗಲೆ ತೀರ್ಮಾನವಾಗಿದೆ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇವೆ, ಮತ್ತು ವಿಶ್ವಬ್ಯಾಂಕಿನ Executive Director ಬಂದಾಗ ಅವರ ಜೊತೆಯಲ್ಲಿ ಪ್ರತ್ಯೇಕವಾಗಿ ಇದರ ಬಗ್ಗೆ ಚರ್ಚೆ ಮಾಡಿದ್ದೇನೆ, ಈ ಯೋಜನೆ ಆಂಧ್ರಪ್ರದೇಶದಲ್ಲಿ ಈಗಾಗಲೆ ಅನುಷ್ಠಾನದಲ್ಲಿದೆ, ಪ್ರಧಾನಿಯವರು ನಮಗೆ ಮತ್ತು ತಮಿಳುನಾಡಿಗೆ ಈ ಎರಡೂ ರಾಜ್ಯಕ್ಕೆ ಪ್ರತ್ಯೇಕವಾಗಿ ಯೋಜನೆಯನ್ನು ಮಾಡತಕ್ಕ ಒಂದು ದಿಸೆಯಲ್ಲಿ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇನ್ನೊಂದು ಪ್ರಮುಖವಾದಂಥ, ವಿಚಾರವೇನೆಂದರೆ, ಕೋಮುಗಲಭೆಯಲ್ಲಿ ಏನು ಕೆಲವು ಅನಾಹುತಗಳಾಗಿವೆ ಯಾರ್ಯಾರು ಸತ್ತಿದ್ದಾರೆ ಅವರಿಗೆ ಒಂದು ಲಕ್ಷವನ್ನು ಪರಿಹಾರವಾಗಿ ಕೊಡತಕ್ಕ ಕೆಲಸವಾಗಿದೆ, ಅದು ಕರ್ನಾಟಕದ ಯಾವುದೇ ಭಾಗದಲ್ಲಿರಬಹುದು, ಇದಲ್ಲದೆ ಇನ್ನೂ ಒಂದು ಲಕ್ಷ ರೂಪಾಯಿಗಳನ್ನು ಅಂದರೆ ಸತ್ತವರ ಹತ್ತಿರದವರಿಗೆ, ಸಂಬಂಧಿಕರಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಒಂದು ಕಾರ್ಯಕ್ರಮವನ್ನು ಈಗಾಗಲೆ ಅನುಷ್ಠಾನ ಮಾಡಿದ್ದೇವೆ. ಇದರ ಬಗ್ಗೆ ಈಗಾಗಲೆ ಅಂಕಿಸಂಖ್ಯೆಗಳನ್ನು ಕೊಟ್ಟಿರುವುದರಿಂದ ಅದನ್ನು ಪುನಃ

ಉಚ್ಚಾರಣೆ ಮಾಡುವುದಕ್ಕೆ ಹೋಗುವುದಿಲ್ಲ. ಕೋಮುಗಲಭೆಯಲ್ಲಿ ಸತ್ತವರ ಸಂಬಂಧಿಕರಿಗೆ ನಗದು ಪರಿಹಾರವನ್ನು ಕೊಟ್ಟಿದ್ದೇವೆ, ಮತ್ತು ಸತ್ತವರ ಸಂಬಂಧಿಕರಿದ್ದರೆ ಅವರಿಗೆ ಉದ್ಯೋಗವನ್ನು ಕೂಡ ಕೊಡಬೇಕೆಂದು ನಾವು ಈಗಾಗಲೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಯಾರ್ಯಾರು ಗಾಯಗೊಂಡಿದ್ದಾರೆ ಅಂದರೆ incapacitated people ಶಾಶ್ವತವಾಗಿ ಯಾವುದೇ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಂಥವರಿಗೆ ತಿಂಗಳಿಗೆ 250 ರೂಪಾಯಿಗಳನ್ನು ಪೆನ್‌ಷನ್ ಆಗಿಕೊಡಲು ನಿರ್ಣಯವನ್ನು ಮಾಡಿರತಕ್ಕದ್ದು ಮಾತ್ರವಲ್ಲದೆ ಎಲ್ಲಲ್ಲಿ ಅಂಗಡಿಗಳು, ಆಸ್ತಿಪಾಸ್ತಿಗಳು ನಾಶವಾಗಿದೆ ಅವರಿಗೆ ಕೂಡ ನಾವು ಪರಿಹಾರವನ್ನು ಈಗಾಗಲೆ ಕೊಟ್ಟಿದ್ದೇವೆ. ಕಾವೇರಿ ಗಲಭೆಯಲ್ಲಿ ಯಾವ ರೀತಿಯಲ್ಲಿ ನಷ್ಟವಾಗಿ ಪರಿಹಾರವನ್ನು ತುಂಬಿಕೊಟ್ಟೆವೋ ಅದಕ್ಕಿಂತ ಹೆಚ್ಚಿನ ಗಾತ್ರದಲ್ಲಿ ಪರಿಹಾರವನ್ನು ಕೋಮುಗಲಭೆಯಲ್ಲಿ ಆದ ಆಸ್ತಿಪಾಸ್ತಿಯ ನಷ್ಟದವರಿಗೆ ಕೊಟ್ಟಿದ್ದೇವೆ. ತೊಂದರೆಯಾದವರಿಗೆ, ಅನಾಹುತವಾದವರಿಗೆ ಆಯಾಯ ಜಿಲ್ಲೆಯ lead bank or consortium ಬ್ಯಾಂಕಿನ ಜೊತೆಗೆ ಸಂಪರ್ಕಿಸಿ ಅವರಿಗೆ ಬೇಕಾದಂಥ ಹೆಚ್ಚಿನ ಸಾಲವನ್ನು interest subsidy ಕೊಡತಕ್ಕ ಒಂದು ವಿಚಾರವನ್ನು ಹೊಸದಾಗಿ ಪ್ರಾರಂಭ ಮಾಡಿದ್ದೇವೆ. ಈ ಹಿಂದೆ ಕೊಟ್ಟಂಥ ಪರಿಹಾರಕ್ಕಿಂತ, ಹಿಂದೆ ಕೊಟ್ಟಂಥ ಶಾಶ್ವತವಾದ ಪುನರ್ವಸತಿಗಿಂತ ಅತೀ ಹೆಚ್ಚಿನ ಗಾತ್ರದಲ್ಲಿ ಸಹಾಯವನ್ನು, ಕೊಡಲು ಸರ್ಕಾರ ಕ್ರಮಗಳನ್ನು ಈಗಾಗಲೆ ತೆಗೆದುಕೊಂಡಿದೆ.

ಇನ್ನು ಇಲ್ಲಿ ಒಂದೆರಡು ವಿಚಾರಗಳು ಪ್ರಸ್ತಾಪವಾಗುವಾಗ ಸ್ವಲ್ಪ ಹೆಚ್ಚಿಗೆ ಪ್ರಸ್ತಾಪವಾಗಿವೆ. ಅದು 100 ದಿವಸಗಳ ಕಾರ್ಯಕ್ರಮದಲ್ಲಿ ಇವರು ಏನು ಮಾಡಿದ್ದಾರೆಂಬುದು. ನೂರು ದಿವಸಗಳ ಕಾರ್ಯಕ್ರಮ ಎಂದರೆ ಅದು ಈ ಮಂತ್ರಿಮಂಡಲ ಅಧಿಕಾರಕ್ಕೆ ಬಂದಮೇಲೆ ಎಂದು ಅರ್ಥವಲ್ಲ. ಅವತ್ತಿನಿಂದ ಇದು ಪ್ರಾರಂಭವಾಗಿಲ್ಲ. ಅದು 31ನೇ ಮಾರ್ಚಿ 93ರವರೆಗಿನ ಕಾರ್ಯಕ್ರಮ. ಇದನ್ನು ನಾವು ಹೊಸದಾಗಿ ಮಾಡುತ್ತೇನೆಂದು ಅಲ್ಲ. 1992–93ನೇ ಇಸವಿಯಲ್ಲಿ ನಾವು ಏನು ಆಯವ್ಯಯವನ್ನು ಈ ಸದನದಲ್ಲಿ ಮಂಡಿಸಿದ್ದೇವೆ ಅದರ ಕಾರ್ಯಕ್ರಮಗಳು ಸರಿಯಾಗಿ ಅನುಷ್ಠಾನಕ್ಕೆ ಬರಬೇಕು. ಇಡೀ ಸರ್ಕಾರದ ಯಂತ್ರವನ್ನು ಸರಿಯಾಗಿ ಸಜ್ಜುಗೊಳಿಸುವಂಥ ಒಂದು ಕ್ಷಿಪ್ರ ಯೋಜನೆ ಅಷ್ಟೆ. ಮಾನ್ಯ ಸದಸ್ಯರಾದ ಕಾಂತಯ್ಯನವರು ಮಾತನಾಡುವಾಗ ನಾನು ಇಲ್ಲಿದ್ದೆ. ನೂರು ದಿವಸಗಳ ನಾವು ಹೊಸ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ಅರ್ಥವಲ್ಲ.

ಶ್ರೀ ಹೆಚ್. ಏಕಾಂತಯ್ಯ:– 1993–94ನೇ ಸಾಲಿನಲ್ಲಿ ಬಜೆಟ್‌ನಲ್ಲಿ ತಾವು ಏನು ಕಾರ್ಯಕ್ರಮಗಳನ್ನು ಇಟ್ಟಿದ್ದೀರಿ. ಅದನ್ನು ಮಾಡುವುದಾಗಿ ಹೇಳಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಹೊಸ ಕಾರ್ಯಕ್ರಮ ಎಂದು ನಾವೇನೂ ಹೇಳಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ:– ಆದರೆ ಆ ರೀತಿ ನೀವು ಪಬ್ಲಿಸಿಟಿಯನ್ನು ಕೊಡಬಾರದಿತ್ತು. ಏಕೆಂದರೆ, ಮಾನ್ಯ ಆಚಾರ್‌ರವರು ಮಾತನಾಡುವಾಗ ಅದನ್ನು ಹೇಳಿದ್ದಾರೆ. ಸರ್ಕಾರ ನೂರು ದಿವಸದ ಕಾರ್ಯಕ್ರಮಗಳಿಗೆ ಇಷ್ಟೊಂದು ಪಬ್ಲಿಸಿಟಿಯನ್ನು ಕೊಟ್ಟಿರುವುದನ್ನು ನೋಡಿದಾಗ ನಮ್ಮೆಲ್ಲರ ಕಲ್ಪನೆ ಏನಿತ್ತೆಂದರೆ, ತಮ್ಮ ಪ್ರಮಾಣವಚನ ಏನು ನಡೆಯಿತು, ಆಗಲೇ 100 ದಿವಸ ಆಗಿತ್ತು, ಆ ಒಂದು ನೆನಪಿಗಾಗಿ ಇದು ಒಂದು ಹೊಸ ಕಾರ್ಯಕ್ರಮ ಎಂದು ತಿಳಿದುಕೊಂಡಿದ್ದೆವು.

ಶ್ರೀ ಎಂ. ವೀರಪ್ಪಮೊಯಿಲಿ:– ಆಯವ್ಯಯದಲ್ಲಿದ್ದಂಥ ಕಾರ್ಯಕ್ರಮ ಒಂದು ಭಾಗ. ಎರಡನೇ ಭಾಗ ದಕ್ಷತೆಯನ್ನು ಹೆಚ್ಚಿಸುವುದಕ್ಕೆ, ಕಾರ್ಯಕ್ರಮಗಳು ಕ್ಲುಪ್ತ ಕಾಲದಲ್ಲಿ ಆಗತಕ್ಕ ರೀತಿಯಲ್ಲಿ ಆಡಳಿತ ಯಂತ್ರವನ್ನು ಸಿದ್ಧಪಡಿಸತಕ್ಕದ್ದು ಇನ್ನೊಂದು ಮತ್ತು ಇದಕ್ಕೆ ಯಾವುದೇ ರೀತಿಯ ಅಡೆತಡೆ ಆಗಬಾರದೆಂಬುದು. ಏಕೆಂದರೆ 31ನೇ ಮಾರ್ಚಿಯಲ್ಲಿ ಎಲ್ಲಾ ಹಣವನ್ನೂ ಕೊಡುವಂಥ ಪರಿಸ್ಥಿತಿ ಆಗಬಾರದು. ನೂರು ದಿವಸದಲ್ಲಿ ಈ ವರ್ಷದ ಉಳಿದ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ,

ವ್ಯವಸ್ಥಿತವಾಗಿ, ಧಕ್ಷತೆಯಿಂದ, ನಿರ್ಮಲವಾದ ರೀತಿಯಲ್ಲಿ ಜನರಿಗೆ ತಲುಪಿಸುವ ವ್ಯವಸ್ಥೆಯೇ ನೂರು ದಿವಸದ ಕಾರ್ಯಕ್ರಮ. ತಮಗೆ ಕಳುಹಿಸಿರತಕ್ಕ ಪುಸ್ತಕದಲ್ಲಿ ಇದು ಇದೆ. ಇದನ್ನು ಅಡಗಿಸಿಟ್ಟ ಪ್ರಶ್ನೆಯೇ ಇಲ್ಲ. ಆದರೆ ಇದನ್ನು ಅನುಷ್ಠಾನ ಮಾಡತಕ್ಕ ಪ್ರಕ್ರಿಯೆಗೆ ನಾವು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆಯೇ ಹೊರತು ಹೊಸದಾಗಿ ಏನೂ ಇಲ್ಲ. ಇದರಲ್ಲಿ ಕೆಲವು ಹೊಸದೂ ಇರಬಹುದು....

ಶ್ರೀ ಆರ್.ವಿ. ದೇಶಪಾಂಡೆ:– ಯಾವ ತಾರೀಖಿನಿಂದ ನೂರು ದಿವಸ ಪ್ರಾರಂಭವಾಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:– 15ನೇ ಡಿಸೆಂಬರ್‌ನಿಂದ ಪ್ರಾರಂಭವಾಗಿ 31–3–93ಕ್ಕೆ ಮುಗಿಯುತ್ತದೆ.

ಶ್ರೀ ವಾಟಾಳ್ ನಾಗರಾಜ್:– ತಮ್ಮ ಭಾಷಣ ಸರಿಯಾಗಿ ನಿರರ್ಗಳವಾಗಿ ಆಗುತ್ತಿಲ್ಲ......

ಶ್ರೀ ಸಿ. ಬೈರೇಗೌಡ:– ತಾವು ಉತ್ತರ ಕೊಡುವಾಗ ನಿಮ್ಮ ಬಗ್ಗೆ ನಾವು ಬಹಳ ತೀವ್ರವಾಗಿ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ವೀರಪ್ಪ ಮೊಯಿಲಿಯವರನ್ನು ನಾವು ಬಹಳ ವರ್ಷಗಳಿಂದ ನೋಡಿದ್ದೇವೆ. ಅವರು ವಿರೋಧಪಕ್ಷದಲ್ಲಿದ್ದಾಗ ಯಾವ ರೀತಿ ಮಾತನಾಡುತ್ತಿದ್ದರು, ಮಂತ್ರಿಗಳಾಗಿ, ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿ ಯಾವ ರೀತಿ ಉತ್ತರ ಕೊಡುತ್ತಿದ್ದರು ಎಂಬುದನ್ನು ನಾವು ನೋಡಿದ್ದೇವೆ. ಆದರೆ ಇವತ್ತು ಮುಖ್ಯಮಂತ್ರಿಗಳಾಗಿ ಉತ್ತರ ಕೊಡುತ್ತಿರುವುದನ್ನು ನೋಡಿದರೆ ಸ್ವಲ್ಪ ಮಟ್ಟಿಗೆ ಅನುಮಾನ ಬರುತ್ತಿದೆ. ಮಾನ್ಯ ರಾಜ್ಯಪಾಲರ ಭಾಷಣ ಎಷ್ಟು ನೀರಸವಾಗಿದೆಯೋ ಅದಕ್ಕಿಂತ ನೀರಸವಾಗಿ ನಿಮ್ಮ ಉತ್ತರ ಇದೆ. ಇದರ ಬಗ್ಗೆ ನಾವು ಬಹಳ ತೀವ್ರವಾಗಿ ಚರ್ಚೆ ಮಾಡುತ್ತಿದ್ದೇವೆ. ಈ ಪರಿಸ್ಥಿತಿ ಏತಕ್ಕೆ ಆಯಿತೆಂದು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:– ನೀವು ಹೇಳದಿದ್ದರೂ ನಿಮ್ಮ ಧ್ವನಿಯಾದರೂ ಇಂಪಾಗಿರಬೇಕಲ್ಲಾ. ನಿಮ್ಮ ಸುತ್ತಮುತ್ತ ಇರುವವರಿಂದ ಏನಾದರೂ ತೊಂದರೆಯಾಗಿದೆಯೇ ? ಇದರ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ:– ಬೇರೆ ಉದ್ದೇಶದಿಂದ ನಾವು ಇದನ್ನು ಹೇಳುತ್ತಿಲ್ಲ. ಈ ಸದನದ ಹೊರಗೆ ಏನೇನು ನಡೆಯುತ್ತಿದೆ ಎಂಬ ಮಾಹಿತಿ ನಮಗೂ ಇದೆ. ಆದರೆ ಅದನ್ನು ಇಲ್ಲಿ ಬೆರೆಸಿ ಹೇಳುವುದಕ್ಕೆ ನಾನು ತಯಾರಿಲ್ಲ. ನಿಮ್ಮ ಉತ್ತರ ಇವತ್ತು ಮೇಲ್ಮಟ್ಟಕ್ಕೆ ಬರಬೇಕಾಗಿತ್ತು. ಇನ್ನೂ ಬಹಳ ತೀವ್ರವಾಗಿ, ಎತ್ತರಕ್ಕೆ ಇರಬೇಕಾಗಿತ್ತು. ಆದರೆ ಇವತ್ತಿನ ನಿಮ್ಮ ಉತ್ತರ ಬಹಳ ನೀರಸವಾಗಿದೆ. ಆದ್ದರಿಂದ ಈಗಲಾದರೂ ತಮ್ಮ ಉತ್ತರವನ್ನು ಮೇಲ್ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಮುಖ್ಯಮಂತ್ರಿಗಳೇ, ತಾವು ನೂರು ದಿನದ ಕಾರ್ಯಕ್ರಮವನ್ನು ಘೋಷಣೆ ಮಾಡಿರುವುದು ಇಡೀ ರಾಜ್ಯಕ್ಕೆ, ರಾಷ್ಟ್ರಕ್ಕೆ ಗೊತ್ತಿರತಕ್ಕಂಥ ವಿಚಾರ. ಆದರೆ ನೀವು 75ನೇ ದಿವಸದಲ್ಲಿಯೇ ಎಡವುತ್ತಿದ್ದೀರಲ್ಲ ಅದಕ್ಕೆ ನಮಗೆ ಆಯ್ಯೋ ಎನಿಸುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಈ ರೀತಿ ಎಚ್ಚರಿಕೆಯನ್ನು ಕೊಟ್ಟಿದ್ದಕ್ಕೆ ಧನ್ಯವಾದಗಳು. ಸ್ವಲ್ಪ ಸ್ವರ ಕೆಟ್ಟು ಹೋಗಿದೆ.

ಶ್ರೀ ವಾಟಾಳ್ ನಾಗರಾಜ್:– ನೀವು ಸುಮ್ಮನೆ ಎಂದ ತಕ್ಷಣ ಅದು ಹಿಂದುಸ್ಥಾನಿ, ಕರ್ನಾಟಕ ಸಂಗೀತವೆಂದು ನಮಗೆ ಗೊತ್ತಾಗಿಹೋಯಿತು. ಪರಿಸ್ಥಿತಿ ಏನಾಗಿದೆ ಎಂದು ಸ್ವಲ್ಪ ಧಾರಾಳವಾಗಿ ಹೇಳಿ. ಪ್ರತಿಸಾರಿ ನೀವು ಭಾಷಣ ಮಾಡುವಾಗ ಕೇಳಿದ್ದೇವೆ, ನೂರಾರು ಭಾಷಣಗಳನ್ನು ಕೇಳಿದ್ದೇವೆ, ಇವತ್ತು

ನಿಮ್ಮ ಗಂಟಲು ಹಿಡಿಯುತ್ತಿರತಕ್ಕಂಥದ್ದು, ನಿಮ್ಮ ಧ್ವನಿ ಬದಲಾವಣೆಯಾಗಿರುವುದಕ್ಕೆ ಏನಾದರೂ ಕಾರಣಗಳು ಇರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಆ ಕಡೆ ಇರಲಿ, ಈ ಕಡೆ ಇರಲಿ, ನಾವು ಒಬ್ಬರನ್ನು ನಾಯಕರು ಎಂದು ಆಯ್ಕೆ ಮಾಡಿಕೊಂಡ ಮೇಲೆ ಸ್ವಲ್ಪ ಪ್ರಾಮಾಣಿಕವಾಗಿ ಕೆಲಸ ಮಾಡಲಿಕ್ಕೆ ಅವಕಾಶವನ್ನು ಮಾಡಿಕೊಡದೆ ಮಧ್ಯೆ ಮಧ್ಯೆ ಕಾಲೆಳೆಯುವಂಥ ಪ್ರವೃತ್ತಿ ಏನಿದೆ. ಈ ಕೆಟ್ಟಕಾಯಿಲೆ ಏನಿದೆ ಇದರಿಂದ ಯಾರು ಇವತ್ತಿನ ಪರಿಸ್ಥಿತಿಯಲ್ಲಿ ಕೆಲಸ ಮಾಡಲಿಕ್ಕೆ ಆಗದಂಥ ವಿಚಿತ್ರವಾದಂಥ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿಗಳು ಕೆಲಸವನ್ನು ಮಾಡುತ್ತಿದ್ದಾರೆಂದು ಇಷ್ಟು ಮಾತ್ರ ನಾನು ಹೇಳಲಿಚ್ಛೆಪಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೇ, 1992–93ನೇ ಸಾಲಿನ ಆಯವ್ಯಯದಲ್ಲಿರತಕ್ಕಂಥ 100 ದಿವಸದ ಕಾರ್ಯಕ್ರಮವೆಂದು ಹೇಳಿದರು. ಹಣವೇ ಇಲ್ಲವೆಂದು ಹೇಳುತ್ತಾರೆ, ಜಿಲ್ಲಾಪರಿಷತ್ ನಲ್ಲಿಯಾಗಲಿ ಅಥವಾ ಬೇರೆ ಇಲಾಖೆಯಲ್ಲಿಯಾಗಲಿ ಹಣ ಬಿಡುಗಡೆಯಾಗಿಲ್ಲವೆಂದು ಹೇಳುತ್ತಾರೆ. ತಾವು ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರ. ಅಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಆ ನೂರು ದಿವಸದ ಕಾರ್ಯಕ್ರಮದಲ್ಲಿ ಇವತ್ತಿಗೂ ಹಣ ಬಿಡುಗಡೆಯಾಗಿಲ್ಲ. ಆದ್ದರಿಂದ ಹಣವನ್ನು ಬೇಗ ಬಿಡುಗಡೆ ಮಾಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಈಗ ನನ್ನ ಸ್ವಲ್ಪ ಸ್ವರ ಹೋಗಿದೆ ಎಂದು ಹೇಳಿದರೆ ಅದರ ಬಗ್ಗೆ ಬೇರೆ ಏನೂ ಅರ್ಥ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಮಾನಸಿಕವಾಗಿಯೂ, ದೈಹಿಕವಾಗಿಯೂ ಯಾರು ಕೆಡಿಸಲಿಕ್ಕೆ ಸಾಧ್ಯವಿಲ್ಲ. ಮೊದಲಿನಿಂದ ನಾವೆಲ್ಲ ಹೋರಾಟ ಮಾಡಿಕೊಂಡೇ ಬಂದವರು. ಆದ್ದರಿಂದ ಹೆದರಿಸಿ ಕೆಡಿಸತಕ್ಕಂಥ ಪ್ರಶ್ನೆಯೇ ಇಲ್ಲ; ಅದು ಅಷ್ಟು ಸುಲಭವೂ ಇಲ್ಲ. 100 ದಿವಸಗಳ ಕಾರ್ಯಕ್ರಮದ ಒಂದು ಪಟ್ಟಿಯನ್ನು ನಾವು ಕೊಟ್ಟಿದ್ದೇವೆ. ಆ ಪುಸ್ತಕವನ್ನು ತಾವು ಪರಾಂಬರಿಸಿದ್ದೀರೆಂದು ನನ್ನ ಭಾವನೆ. ತಾವೂ ನೋಡಿದ್ದೀರಿ. ಆದ್ದರಿಂದ ಅದರ ಉದ್ದೇಶವೇನೆಂದು ಹೇಳಿದರೆ, ಅನೇಕ ಬಾರಿ ಯೋಜನೆಗಳಿಗೆ ಇಟ್ಟುಕೊಂಡ ಹಣವನ್ನು ನಾವು ಬೇರೆ ಬೇರೆ ರೀತಿಯಲ್ಲಿ ಉಪಯೋಗ ಮಾಡಿಕೊಂಡು ಆ ಯೋಜಿತ ಗುರಿಯನ್ನು ನಾವು ಮುಟ್ಟುವುದಿಲ್ಲ. ಈ 100 ದಿವಸಗಳ ಕಾರ್ಯಕ್ರಮದ ಉದ್ದೇಶವೇನೆಂದರೆ, ಯೋಜಿತ ಗುರಿಯನ್ನು ನೇರವಾಗಿ ತಲುಪಿಸತಕ್ಕಂಥ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಸನ್ಮಾನ್ಯ ಏಕಾಂತಯ್ಯನವರು ಹೇಳುತ್ತಾ ಕೆಲವು ಉದಾಹರಣೆಗಳನ್ನು ಕೊಡಿ ಎಂದು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನು ಬರುತ್ತೇನೆ. ವಿವರವಾದ ಉತ್ತರಕ್ಕೆ ಯಾವ ಪ್ರಶ್ನೆಯನ್ನು ಎತ್ತಿದ್ದೀರಿ ಅದಕ್ಕೆ ಮೊದಲು ಕೊಡೋಣ, ಆಮೇಲೆ ಬಾಕಿದಕ್ಕೆ ಬರೋಣ, ತಾವು ಏನು ನಿರೀಕ್ಷಣೆ ಮಾಡುತ್ತಿದ್ದೀರಿ ಎನ್ನುವುದು ಗೊತ್ತಿದೆ. ಅದಕ್ಕೆ ಸ್ವಲ್ಪ ಕಾದು ನೋಡೋಣ. ಸನ್ಮಾನ್ಯ ಏಕಾಂತಯ್ಯನವರು ನಿಮ್ಮ ಈ 100 ದಿವಸಗಳ ಕಾರ್ಯಕ್ರಮಗಳಲ್ಲಿ ಏನು ಮಾಡಿದ್ದೀರಿ ಎಂದು ಕೆಲವು ಸ್ಯಾಂಪಲ್ಲಾದರೂ ಕೊಡಿ ಎಂದು ಹೇಳಿದರು. ನಾನು ಸ್ಯಾಂಪಲ್ಲೇ ಕೊಡುವುದು. ಏತಕ್ಕೆಂದರೆ, ಸಂಪೂರ್ಣವಾದ ರಿಸಲ್ಟ್ ಯಾವಾಗ ಬರುತ್ತದೆಂದರೆ 100 ದಿವಸಗಳು ಪೂರ್ತಿಯಾದ ಮೇಲೆ, ಕನ್‌ಸಾಲಿಡೇಷನ್ ಯಾವಾಗ ಮಾಡುತ್ತೇವೆ, ಆಗ ಸಂಪೂರ್ಣವಾದಂಥ ಫಲಿತಾಂಶ ಬರುತ್ತದೆ. ಬೇರೆ ಬೇರೆ ಹಂತದಲ್ಲಿ ಈ ಫಲಿತಾಂಶಗಳನ್ನು ಕೊಡಲಿಕ್ಕೆ ಸಾಧಾರಣವಾಗಿ ಒಂದು ಉದಾಹರಣೆಯಾಗಿ ಕೊಡಬಹುದೇ ಹೊರತು ಅದು ಸಂಪೂರ್ಣವಾದ ಒಂದು ವಿಶ್ಲೇಷಣೆಯ ವಿವರವೆಂದು ಹೇಳಲಿಕ್ಕೆ ಆಗುವುದಿಲ್ಲ. ಒಂದು ಉದಾಹರಣೆಯನ್ನು ಹೇಳುವುದಾದರೆ ನಾವು ಈ 100 ದಿವಸಗಳಲ್ಲಿ ಸುಮಾರು 19,236 ಹೆಕ್ಟೇರ್ಸ್ ಇರಿಗೇಷನ್ ಪೊಟೆನ್‌ಷಿಯಲ್ ಆಗಿ ತೆಗೆದುಕೊಳ್ಳುತ್ತೇವೆಂದು ಕಾಣಿಸಿದ್ದೇವೆ. ಏತಕ್ಕೆಂದರೆ ಒಂದು ಉದಾಹರಣೆ ಹೇಳುವುದಾದರೆ ನಮ್ಮ

ಇರಿಗೇಷನ್‌ನಲ್ಲಿ ಒಂದು ಇನ್‌ವೆಸ್ಟ್‌ಮೆಂಟ್ ಇರಬಹುದು, ಬೇರೆ ಇನ್‌ವೆಸ್ಟ್‌ಮೆಂಟ್ ಇರಬಹುದು. ಇರಿಗೇಷನ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ಏನು ಮಾಡುತ್ತೇವೆಂದರೆ, ಗದ್ದೆಗೆ ನೀರು ಕೊಡತಕ್ಕಂಥದ್ದಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ನಾವು ಪೊಟೆನ್‌ಷಿಯಲ್‌ನ್ನು ಕ್ರಿಯೇಟ್ ಮಾಡುತ್ತೇವೆ. ಆದರೆ ಅದನ್ನು ಉಪಯೋಗ ಮಾಡತಕ್ಕಂಥ ದೃಷ್ಟಿಯಲ್ಲಿ ಅಷ್ಟು ಪ್ರಾಮುಖ್ಯತೆಯನ್ನು ಕೊಡುವುದಿಲ್ಲ. ನಾವು ಈ 100 ದಿವಸಗಳಲ್ಲಿ ಆದ್ಯತೆ ಯಾವುದಕ್ಕೆ ಕೊಡುತ್ತೇವೆಂದರೆ ತಮಗೆ ಗೊತ್ತಿರಬಹುದು, ನಾವು ಅನೇಕ ಬಾರಿ ಅದನ್ನು ಪಿ.ಎ.ಸಿ. ಕಮಿಟಿಯಲ್ಲಿಯೂ ಕೂಡ ವಿಮರ್ಶೆ ಮಾಡಿದ್ದೇವೆ. ಕೆಲವು ಬಾರಿ ಮೂರನೇ ಒಂದು ಮಾತ್ರ ಆ ಡ್ಯಾಮ್‌ನಲ್ಲಿ ಉತ್ಪಾದನೆ ಮಾಡಿದ್ದು ಅಥವಾ ದೊಡ್ಡ ಕಾಲುವೆಯಲ್ಲಿ ಹರಿಯತಕ್ಕಂಥ ನೀರು ಅದು ಫೀಲ್ಡ್ ಚಾನಲ್‌ಗೆ ಹೋಗುವುದಿಲ್ಲ, ಗದ್ದೆಗಳಿಗೆ ಹೋಗುವುದಿಲ್ಲ. ಮೂರನೆ ಎರಡಂಶ ಕೆಲವು ಸಾರಿ ಹೋಗುವುದಿಲ್ಲ.

ನಾವು ಇವತ್ತು ಏನು ಮಾಡಿದ್ದೇವೆಂದರೆ, ಅದಕ್ಕೂ ಪ್ರಾಮುಖ್ಯತೆ ಕೊಡಬೇಕು. ಇಲ್ಲದಿದ್ದರೆ ಅಪಾರವಾದ ಬಂಡವಾಳ ನಷ್ಟವಾಗಿ ಹೋಗುತ್ತದೆ, ಅದರಿಂದ ಫಲ ಬರುವುದಿಲ್ಲ. ಯಾವುದೇ ಸಂಪನ್ಮೂಲ ರೀಸೈಕಲ್ ಆದಾಗ ಮಾತ್ರ ಅದರಿಂದ ಫಲ ರೈತನಿಗೆ ಸಿಗುತ್ತದೆ, ಅದರಿಂದ ಹೆಚ್ಚು ಉತ್ಪಾದನೆಯಾಗುತ್ತದೆ ಮತ್ತು ಇನ್‌ವೆಸ್ಟ್‌ಮೆಂಟ್ ಕಾಸ್ಟ್ ಎಫೆಕ್ಟೀವ್ ಆಗುತ್ತದೆ. ಇದಕ್ಕೆ ನೂರು ದಿನಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದೆ. ಇದರಿಂದಾಗಿ 19,236 ಹೆಕ್ಟೇರ್ ಜಾಗವನ್ನು ನೀರಾವರಿಗೆ ಒಳಪಡಿಸಿದ್ದೇವೆ. ಇನ್ನು ಪವರ್ ಉತ್ಪದನೆ ಮಾಡತಕ್ಕದ್ದು ಕೂಡ ಅಷ್ಟೆ. ನೂರು ದಿನಗಳಲ್ಲಿ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡುವುದನ್ನು ಸೇರಿಸಿದ್ದೇವೆ. 16 ಮೆಗಾವ್ಯಾಟ್ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಮಾಡುವುದನ್ನು ನಾವು ಈ ಸಂದರ್ಭದಲ್ಲಿ ನಮ್ಮ ಗ್ರಿಡ್‌ಗೆ ಸೇರಿಸಿದ್ದೇವೆ. ನೂರು ದಿನಗಳ ಕಾರ್ಯಕ್ರಮದಲ್ಲಿ ಇದನ್ನು ಕಾಣಿಸಿದ್ದೇವೆ. ನಾವು ಎಷ್ಟು ವಿದ್ಯುತ್ತನ್ನು ಗ್ರಿಡ್‌ಗೆ ಸೇರಿಸುತ್ತೇವೆ ಎಂದು ಉದ್ದೇಶಿಸಿದ್ದೇವೆ ಅಷ್ಟು ಸಾಧನೆ ಮಾಡಿಯೇ ಮಾಡುತ್ತೇವೆ. ಇದೊಂದು ಉದಾಹರಣೆಯನ್ನು ತಮಗೆ ಕೊಟ್ಟಿದ್ದೇನೆ. ಉಳಿದಂತಹ ಪವರ್ ಪ್ರಾಜೆಕ್ಟ್‌ಗಳಲ್ಲಿ ಈ ವರ್ಷಕ್ಕೆ ಎಷ್ಟು ಉತ್ಪಾದನೆ ನಿಗದಿಯಾಗಿದೆ ಅದನ್ನು ಸೇರಿಸತಕ್ಕ ಗುರಿ ಸಾಧನೆ ಮಾಡುತ್ತೇವೆ. ಇನ್ನು 9715 ಐ.ಪಿ. ಸೆಟ್ಟುಗಳು ಈ ಅವಧಿಯಲ್ಲಿ ಎನರ್ಜೈಸ್ ಆಗಿವೆ. ಇದು ಫಲಿತಾಂಶ. ನಾವು ಸರ್ಟಿಫೈಡ್ ನಸೀಡ್ಸ್‌ನ್ನು ಫಾರ್ಮರ್ಸ್‌ಗೆ ಸಮ್ಮರ್ ಕ್ರಾಪ್ಸ್‌ಗೆ ಕೊಡುತ್ತೇವೆಂದು ನೂರು ದಿನಗಳ ಕಾರ್ಯ ಕ್ರಮದಲ್ಲಿ ಇಟ್ಟಿದ್ದೇವೆ. ಅದರ ಪ್ರಕಾರ 7.1 ಲಕ್ಷ ಕೆ.ಜಿ. ಸರ್ಟಿಫೈಡ್ ಸೀಡ್ಸ್ ಸಪ್ಲೈ ಆಗಿದೆ. 1.92 ಲಕ್ಷ ಆರ್ಟಿಫಿಷಿಯಲ್ ಇನ್ ಸೆಮಿನೇಷನ್ ಮಾಡಿದ್ದೇವೆ. ಇದನ್ನು ಮಾನಿಟರ್ ಮಾಡುವುದರಿಂದ ಕೆಲವು ಸಾರಿ ಬರೀ ಕಾಗದದಲ್ಲಿ ಈ ಗುರಿ ಉಳಿಯುತ್ತದೆ. ಇದನ್ನು ವಿಧಾನಸೌಧದಲ್ಲಿ ಕುಳಿತುಕೊಂಡು ಮಾನಿಟರಿಂಗ್ ಸೆಲ್ ಮಾಡಿಕೊಂಡು ದಿನ ನಿತ್ಯ ಸಂಬಂಧಪಟ್ಟ ಕಾರ್ಯಗತ ಮಾಡತಕ್ಕ ಅಧಿಕಾರಿಗಳಿಗೆ ಸೂಚನೆ ಕೊಟ್ಟು, ತಿಳಿಸಿ ಅನುಷ್ಠಾನ ಮಾಡತಕ್ಕ ವರದಿ ತರಿಸಿ ಡೇ–ಟು–ಡೇ ಬೇಸಿಸ್ ಮಾನಿಟರ್ ಮಾಡುತ್ತೇವೆ. ಅದಕ್ಕೆ ನಾನು ಆ ಸಂದರ್ಭದಲ್ಲಿ ಅನೇಕರಿಗೆ ಆಹ್ವಾನ ಕೊಟ್ಟಿದ್ದೆ ಮಾನಿಟರಿಂಗ್ ಶೆಲ್ ನೋಡಿ ಅಭ್ಯಾಸ ಮಾಡಿ ಎಂದು. ಅಧಿವೇಶನ ನಡೆಯುವಾಗ ಅನೇಕ ವಿಚಾರಗಳು ಮಾಹಿತಿಗೆ ಬರುತ್ತವೆ. ಅದಕ್ಕೋಸ್ಕರ, ಮಾಹಿತಿ ಯೋಜನೆಯ ಗುರಿ ಮತ್ತು ಅನುಷ್ಠಾನ ಈ ಎರಡನ್ನೂ ಸಮತೂಕ ಮಾಡತಕ್ಕ ವ್ಯವಸ್ಥೆ ಮೂರನೆ ಮಹಡಿಯ ಮಾನಿಟರಿಂಗ್ ಸೆಲ್‌ನಲ್ಲಿದೆ. ಅದರಿಂದ ಹೆಚ್ಚಿನ ಮಾಹಿತಿ ಒದಗಿಸಲಿಕ್ಕೆ ಸಾಧ್ಯವಾಗುತ್ತದೆ.

ಆಮೇಲೆ ಕೆಎಸ್‌ಎಫ್‌ಸಿ; ಮತ್ತು ಕೆಎಸ್‌ಎಐಡಿಸಿಗೆ ಕೈಗಾರಿಕೀಕರಣ ಮತ್ತು ಔದ್ಯಮೀಕರಣಕ್ಕೆ ಒಂದು ಗುರಿ ಕೊಟ್ಟಿದ್ದೇವೆ. ಈ ಅವಧಿಯಲ್ಲಿ 53.12 ಕೋಟಿ ರೂಪಾಯಿ ಕೆಎಸ್‌ಎಫ್‌ಸಿಯಿಂದ ಮತ್ತು ಕೆಎಸ್‌ಐಡಿಸಿಯಿಂದ ಇನ್‌ವೆಸ್ಟ್ ಮಾಡತಕ್ಕ ಪರಿಸ್ಥಿತಿಗೆ ತಂದಿದ್ದೇವೆ. ಡಿಸ್‌ಪೋಸಲ್ ಆಫ್ ಫೈಲ್ಸ್ ಬಗ್ಗೆ ಹೇಳುವುದಾದರೆ, ಕೆಲವು ಸಾರಿ ದಕ್ಷತೆ ವಿಚಾರ ಕೂಡ ಇಲ್ಲಿ ಚರ್ಚೆಗೆ ಬಂದಿದೆ. ಏನು ದಕ್ಷತೆ ತೋರಿಸಿದ್ದೀರಿ, ವಿಶೇಷ ಏನಿದೆ ಎಂದು ತಾವು ಕೇಳಿದ್ದೀರಿ. ಫೈಲ್ ಡಿಸ್‌ಪೋಸಲ್ ಆದ ತಕ್ಷಣ

ದಕ್ಷತೆ ಎಂದು ಹೇಳುವುದಿಲ್ಲ. ಆದರೂ ಅದೂ ಕೂಡ ಒಂದು ಪ್ರಾಮುಖ್ಯವಾದ ಅಂಗ. ಮಂತ್ರಿಗಳ ಮತ್ತು ಸೆಕ್ರಟರಿಗಳ ಹಂತದಲ್ಲಿ ಫೈಲ್ಸ್ ಡಿಸ್‌ಪೋಸ್ ಆಗದಿದ್ದರೆ ಕಾರ್ಯಕ್ರಮ ಅನುಷ್ಠಾನವಾಗುವುದಿಲ್ಲ. ಅದೂ ಕೂಡ ಮೂಲಭೂತವಾಗಿರುತ್ತದೆ. ಅದರ ಪ್ರಕಾರ ಫೈಲ್ ಡಿಸ್‌ಪೋಸಲ್ ಡ್ರೈವ್ ಮಾಡಿ, ಡಿಸೆಂಬರ್ 1992ರಲ್ಲಿ 25,576 ಫೈಲ್ಸ್ ಡಿಸ್‌ಪೋಸಲ್ ಆಗಿದೆ. ಜನವರಿ 1993ರಲ್ಲಿ 33,191 ಫೈಲ್ಸ್ ಸೆಕ್ರೆಟರಿಯೇಟ್‌ನಲ್ಲಿ ಡಿಸ್‌ಪೋಸಲ್ ಆಗಿದೆ. ಇನ್ನು ಮಂತ್ರಿಗಳ ಕಛೇರಿಯಲ್ಲಿ ಡಿಸಿಪ್ಲೀನ್ ನಮ್ಮಿಂದಲೇ ಪ್ರಾರಂಭವಾಗಬೇಕೆಂದು ಈ ಒಂದು ನಿಯಮ ಶಿಸ್ತು ನಮ್ಮಿಂದ ಪ್ರಾರಂಭವಾಗಬೇಕೆಂದು ಪ್ರತಿ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅಜೆಂಡಾ ತೆಗೆದುಕೊಂಡಿದ್ದೇವೆ. ಫೈಲ್ಸ್ ಎಷ್ಟು ಪೆಂಡಿಂಗ್ ಇದೆ, ಎಷ್ಟು ಡಿಸ್‌ಪೋಸಲ್ ಆಯಿತು, ಎಷ್ಟು ಉಳಿದಿದೆ ಎಂದು ಮಾಡಿ, ಮಿನಿಸ್ಟರ್ಸ್ ಲೆವಲ್‌ನಲ್ಲಿ 1–1–93ರಿಂದ ಈ ಒಂದು ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಡಿಸ್‌ಪೋಸಲ್ ಅಂದರೆ ಏನು ?

ಶ್ರೀ ಎಂ. ವೀರಪ್ಪ ಮೊಯಿಲಿ:– ಫೈನಲ್ ಆರ್ಡರ್ ಇಶ್ಯೂ ಮಾಡಿದೆ.

4.20 ಪಿ.ಎಂ.

ಅಂತಿಮವಾದ ಆದೇಶವನ್ನು ಕೊಟ್ಟಿದ್ದೇವೆ. ತಾವು ಮಂತ್ರಿಗಳಾಗಿದ್ದವರು, ಡಿಸ್ಪೋಸಲ್ ಅಂದರೆ ಏನು ಎಂದು ತಮಗೆ ಗೊತ್ತಿಲ್ಲವೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಹಾಗಲ್ಲ, "For examination, for reconsideration, kindly examine and put up" ಎಂದರೂ decision taken ಎಂದು ಆಗುತ್ತದೆ. ತಾವು ಏನು ಡಿಸೆಂಬರ್ ಜನವರಿಯಲ್ಲಿ 58ಸಾವಿರ ಫೈಲ್‌ಗಳ ಮೇಲೆ ಡಿಸಿಷನ್ ತೆಗೆದುಕೊಂಡಿದ್ದೇವೆಂದು ಫಿಗರ್ಸ್ ಹೇಳುತ್ತಿದ್ದೀರಿ ಅದನ್ನು ನಂಬುವುದಕ್ಕಾಗುವುದಿಲ್ಲ. ಫೈಲ್ಸ್ ಎಷ್ಟು ಲಕ್ಷ ಪೆಂಡಿಂಗ್ ಇದೆ ಅದರಲ್ಲಿ ಎಷ್ಟು ಡಿಸ್‌ಪೋಸ್ ಆಗಿದೆ ಎಂದು ಹೇಳಿ. ಡಿಸ್‌ಪೋಸ್ ಎಂದರೆ ಏನು ? ನೀವು Decision taken ಎಂದರೆ ಇಂಪ್ಲಿಮೆಂಟೇಷನ್‌ಗೋ ಹೇಗೆ. Decision taken, kindly re–examine and put up ಎಂದರೆ ಇದೂ ಡಿಸಿಷನ್ ಟೇಕನ್ನೇ.

ಶ್ರೀ ಎಂ. ವೀರಪ್ಪ ಮೊಯಿಲಿ:– ಇದು Reminded cases ಅಲ್ಲ ಡಿಸ್ಪೋಸಲ್ ಕೇಸಸ್ ಎಂದರೆ ಅಂತಿಮವಾಗಿ ನಿರ್ಣಯ ತೆಗೆದುಕೊಂಡು ಕಳುಹಿಸದ ಕೇಸ್‌ಗಳು. ನಮ್ಮ ಮಂತ್ರಿಮಂಡಲದಲ್ಲಿ ಕೂಡ 1.1.93ರಲ್ಲಿ ಬಾಕಿ ಇದ್ದ ಫೈಲ್‌ಗಳು 1573, ಈ ಸಂಖ್ಯೆ 1.2.93ಕ್ಕೆ 960ಕ್ಕೆ ಇಳಿಯಿತು. ಸೆಕ್ರೆಟೇರಿಯೇಟ್, ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್, ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಇದೇ ರೀತಿಯ ಪ್ರಕ್ರಿಯೆ ನಡೆಯುತ್ತಾ ಇದೆ. ಇದರ ಪೂರ್ತಿ ವಿವರವನ್ನು ನಾನು 100 ಡೇಸ್ ಆದಮೇಲೆ ಕೊಡುತ್ತೇನೆ. ಇವತ್ತು ಸ್ಯಾಂಪಲ್‌ಗೆ ಇದನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ನಮ್ಮಲ್ಲಿ NICNET system ಎಂದು ಇದೆ. ಅದಕ್ಕೆ ಮುಖ್ಯಮಂತ್ರಿಗಳ ಕಾರ್ಯಾಲಯದಿಂದ, ಡಿಪಿಆರ್‌ನಿಂದ ಡಿಸ್‌ಪೋಸಲ್ ಬಗ್ಗೆ ವಾಚ್‌ಡಾಗ್ ವ್ಯವಸ್ಥೆ ಮಾಡಿದ್ದೇವೆ ನಮ್ಮ ಅಂತಿಮ ಉದ್ದೇಶ ಎಂದರೆ, 100 ಡೇಸ್ ಆದಮೇಲೆ ಪೂರ್ತಿ ಪೆಂಡಿನ್ಸಿ ಮುಗಿಸಿ ಎಲ್ಲಾ ಹಂತದಲ್ಲಿ 15 ದಿವಸಗಳ ಮೇಲೆ ಯಾವುದೇ ರೀತಿಯ ಕಡತ ಆ ಸಂಬಂಧಪಟ್ಟವರಲ್ಲಿ ಬಾಕಿ ಇರಬಾರದು. ಇದು ನಮ್ಮ ಕೊನೆಯ ಉದ್ದೇಶ. ಆದ್ದರಿಂದ ಬ್ಯಾಕ್‌ಲಾಗ್‌ನ್ನು ಇದೇ ಮಾರ್ಚಿ 31ರೊಳಗೆ ಮುಗಿಸಿ, ಇದನ್ನು ವಿಶೇಷವಾಗಿ ಮಾಡುತ್ತೇವೆ. ಮತ್ತೊಂದು ವಿಷಯವನ್ನು ನಾವು ಹೇಳಿದ್ದೇವೆ. ಅಕೌಂಟಬಲಿಟಿ ಬಗ್ಗೆ ನಾವು ಹೇಳಿದ್ದೇವೆ. Authority, achievement ಎಂದು ಬೇರೆ ಬೇರೆ ರೀತಿಯಲ್ಲಿ ನಾವು ಹೇಳಿದ್ದೇವೆ. ಇದರ ಬಗ್ಗೆಯೂ ಕೂಡ ಬೇರೆ ಬೇರೆ ಹಂತದಲ್ಲಿ ಅವರವರ

ಅಧಿಕಾರವನ್ನು ನಿರ್ವಹಿಸುವುದಕ್ಕೆ ಎಲ್ಲಿ ತೊಂದರೆ ಆಗಿದೆ ಅದನ್ನು ನಾವು ಈಗಾಗಲೇ ನೋಡಿ ಅದನ್ನು ನಿರ್ವಹಿಸುತ್ತಿದ್ದೇವೆ. ಮುಖ್ಯವಾಗಿ ನಾವು ಉದ್ಯೋಗವನ್ನು ತುಂಬಿಸತಕ್ಕದ್ದು. ಡಾಕ್ಟರ್ ಹುದ್ದೆಗಳ ಬಗ್ಗೆ ಹೇಳುವುದಾದರೆ ಈ ನೂರು ದಿವಸಗಳಲ್ಲಿ ಎಲ್ಲಿ ಡಾಕ್ಟರ್ ಖಾಲಿ ಹುದ್ದೆಗಳು ಇವೆ ಅವನ್ನು ತುಂಬಿಸುತ್ತೇವೆಂದು ಹೇಳಿದ್ದೇವೆ. ಹಾಗೆಯೇ ಖಾಲಿ ಇರುವ ಟೀಚರ್ಸ್ ಹುದ್ದೆಗಳನ್ನು ತುಂಬಿಸುತ್ತೇವೆಂದು ಹೇಳಿದ್ದೇವೆ. ಸುಮಾರು 899 ಜೂನಿಯರ್ ಕಾಲೇಜು ಲೆಕ್ಚರರ್ಸ್ ಅನ್ನು ಅಪಾಯಿಂಟ್ ಮಾಡತಕ್ಕ ಅಂತಿಮ ನಿರ್ಣಯ ನಾವು ತೆಗೆದುಕೊಂಡಿದ್ದೇವೆ. ಈ 100 ದಿವಸಗಳ ಅವಧಿಯಲ್ಲಿ 899 ಜೂನಿಯರ್ ಕಾಲೇಜ್ ಲೆಕ್ಚರರ್ಸ್ ಆ ಹುದ್ದೆಗಳಲ್ಲಿ ಹಾಜರಾಗುತ್ತಾರೆ. ಇದಕ್ಕೆಲ್ಲಾ ಪ್ರಕ್ರಿಯೆ ಮುಗಿದಿದೆ. ಕೆಲವು ತಾಂತ್ರಿಕ ವಿಚಾರಗಳು ಇದ್ದು ಅದರ ಬಗ್ಗೆಯೂ ಕೂಡ ನಿರ್ಣಯ ಮಾಡಿಕೊಂಡು ಈ ಬಗ್ಗೆ ಅಂತಿಮವಾದ ಪರದೆ ಹಾಕಿದ್ದೇವೆ. ಇನ್ನು 5000 ಪ್ರೈಮರಿ ಶಾಲಾ ಶಿಕ್ಷಕರನ್ನು ತುಂಬಿಸುತ್ತೇವೆಂದು ಹೇಳಿದ್ದೇವೆ. ಅದರ ಪ್ರಕ್ರಿಯೆ ಫೈನಲ್ ನೋಟಿಫಿಕೇಷನ್ ಇಷ್ಯೂ ಆಗಿದೆ within a month or so they will be filled up. ಇನ್ನು ಸುಮಾರು 375 ಡಾಕ್ಟರ್ ಹುದ್ದೆಗಳು ಖಾಲಿಯಾಗಿವೆ. ಅದನ್ನು ತುಂಬಿಸುವುದಕ್ಕೆ ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ. ಮಾರ್ಚಿ 31ನೇ ತಾರೀಖು ಒಳಗೆ ಖಾಲಿ ಇರುವ 375 ವೈದ್ಯರ ಹುದ್ದೆಗಳನ್ನು ತುಂಬಿಸುತ್ತಿದ್ದೇವೆ. ಅದು ಮಾತ್ರವಲ್ಲದೆ, ಮೂರನೇ ನಿರ್ಣಯ ಎಂದರೆ ಬಹಳ ಸಮಯದಿಂದ – special Recruitment of meritorious SC/ST candidates ಅದು ಡ್ರಾಫ್ಟ್ ರೂಲ್ಸ್ ಅಬ್ಜೆಕ್ಷನ್ ಸ್ಟೇಜ್‌ನಲ್ಲಿ ಇದೆ. ಅದನ್ನು ಪರಿಶೀಲನೆ ಮಾಡಿ, ಸಡಿಲ ಮಾಡಿ ಯಾವುದೇ ರೆಕ್ರೂಟ್‌ಮೆಂಟ್ ಬೋರ್ಡ್ ಇಲ್ಲದೇ ಅಂದರೆ ಈ ವರ್ಷ ಪಾಸ್ ಆದರೆ ಬರುವ ವರ್ಷ ಈ ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನ, ವಿಶ್ವವಿದ್ಯಾನಿಲಯದ ಮೆರಿಟೋರಿಯಸ್ ಸ್ಟೂಡೆಂಟ್ಸ್ ಯಾರು ಹೊರಬರುತ್ತಾರೆ ಅವರಿಗೆ ಉದ್ಯೋಗ ಕೊಡಬೇಕು. ಇದು ಒಂದು ಪ್ರವೃತ್ತಿಯಿಂದ ಇರಬೇಕು. ಇದು ಆಟೋಮ್ಯಾಟಿಕ್ ಆಗಿರಬೇಕೆಂದು ಹೇಳಿ ಈಗಾಗಲೇ ಅಂತಿಮ ನೋಟಿಫಿಕೇಷನ್ ಇದರ ಬಗ್ಗೆ ಇಷ್ಯೂ ಮಾಡಿದ್ದೇವೆ.

ಇದೆಲ್ಲ ಮಾಮೂಲಿ ನಿರ್ಣಯಗಳು ಸರಳವಾದ ನಿರ್ಣಯಗಳು ಎಂದು ತಾವು ಹೇಳಬಹುದು. ಆದರೂ ಕೂಡ ಈ ನಿರ್ಣಯಗಳು ಬಾಕಿ ಇತ್ತು. ಈ ನಿರ್ಣಯಗಳು ಅನೇಕ ಹಂತದಲ್ಲಿ ಬೇರೆ ಬೇರೆ ಕಾರಣಗಳಿಂದ, ಬ್ಯೂರೋಕ್ರಾಟಿಕ್ ರೀಸನ್ಸ್‌ನಿಂದ, ತಾಂತ್ರಿಕ ಕಾರಣಗಳಿಂದ ತಡವಾಗಿ ಹೋಗುತ್ತದೆ. 895 ಜೂನಿಯರ್ ಕಾಲೇಜು ಲೆಕ್ಚರರ್ಸ್ ಅಪಾಯಿಂಟ್ ಮಾಡತಕ್ಕ ಪ್ರಕ್ರಿಯೆ ಪ್ರಾರಂಭವಾಗಿ ಸುಮಾರು ಒಂದೂವರೆ ವರ್ಷವಾಗಿದೆ. ಈಗಾಗಲೇ ಆರು ತಿಂಗಳು ಹಿಂದೆ ಇದರ ಆರ್ಡರ್ಸ್ ಹೋಗಬೇಕಾಗಿತ್ತು. ಆದರೆ ಇದನ್ನು ಪರಿಶೀಲನೆ ಮಾಡಿ ಪರಿಷ್ಕರಿಸಿ ಸರಿಯಾದ ಆದೇಶವನ್ನು ಕೊಟ್ಟು ಮಾಡಲಾಗಿದೆ. ನೂರು ದಿವಸಗಳ ಕಾರ್ಯಕ್ರಮದ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಅದು ಪರಿಪೂರ್ಣವಾಗಿದೆಯೆಂದು ನಾನು ಮಾತನಾಡುವುದಿಲ್ಲ. ಆದರೆ ಈ ನೂರು ದಿವಸ ಕಾರ್ಯಕ್ರಮದಲ್ಲಿ ಗುರಿಯೇನು ಇಟ್ಟಿದ್ದೇವೆ ಅದನ್ನು ಸಾಧನೆ ಮಾಡತಕ್ಕ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನವಾಗಿದೆ. ಅದು ಪರಿಪೂರ್ಣವಾಗಿದೆ ಎಂದು ನಮಗೆ ನಾವೇ ಸರ್ಟಿಫಿಕೇಟ್ ಕೊಡಲಕ್ಕೆ ಇಚ್ಛೆ ಪಡುವುದಿಲ್ಲ. ಏಕೆಂದರೆ ನೂರು ದಿವಸಗಳ ಕಾರ್ಯಕ್ರಮ ಖಂಡಿತ ಆಗುತ್ತದೆ ಎನ್ನುವ ವಿಶ್ವಾಸದಿಂದ ಕೆಲವು ವಿವರಗಳನ್ನು ನಾನು ಕೊಟ್ಟಿದ್ದೇನೆ. ತಾವು ದಕ್ಷತೆಯ ಬಗ್ಗೆ ಹೇಳಿದ್ದೀರಿ. ಮಾನ್ಯ ಬೈರೇಗೌಡರು ಎಕ್ಸೈಜ್ ಬಗ್ಗೆ ಹೇಳಿದ್ದಾರೆ. ಏನು ಇಂಪ್ರೂವ್‌ಮೆಂಟ್ ಆಯಿತು ಎಂದು ಕೇಳಿದ್ದಾರೆ. ಅವರು ಕೇಳಿದಾಗ ನಾನು ಕೆಲವು ಉತ್ತರ ಕೊಟ್ಟಿದ್ದೇನೆ. ನನ್ನಲ್ಲಿರುವ ಅಂಕಿಸಂಖ್ಯೆಯ ಪ್ರಕಾರ ಹೇಳುತ್ತೇನೆ. ಏಕೆಂದರೆ ಯಾರ ಹಿಡಿತದಲ್ಲಿ ಯಾರು ಇದ್ದಾರೆ ಬಹುಶಃ ಕೆಲವರ ಹಿಡಿತ ಇಲ್ಲದಿರುವುದಕ್ಕೆ ತಾಪತ್ರಯ ಬರುತ್ತದೆ. ಅದಕ್ಕೆ ಹೆದರಬೇಕಾದ ಮತ್ತು ಅಂಜಬೇಕಾದ ಪ್ರಶ್ನೆಯಿಲ್ಲ. 1993ರ ಜನವರಿಯಲ್ಲಿ

ಕನ್ಸಮ್‌ಷನ್ ಆಫ್ ಅರ್ಯಾಕ್ 63.09 ಲಕ್ಷ ಲೀಟರ್ಸ್ ಆದು ಜನವರಿಯಲ್ಲಿ ಪಿಕ್‌ಅಪ್ ಆಯಿತು. ನವೆಂಬರ್‌ನಲ್ಲಿ 51.94 ಲಕ್ಷ ಲೀಟರ್ಸ್ ಇತ್ತು. ಅಕ್ಟೋಬರ್‌ನಲ್ಲಿ 51.94 ಲಕ್ಷ ಲೀಟರ್ಸ್ ಇತ್ತು. ಅದು ಜನವರಿಗೆ ಬಂದಾಗ 63.09 ಲಕ್ಷ ಲೀಟರ್ಸ್ ಆಯಿತು. 1993ರ ಫೆಬ್ರವರಿಯಲ್ಲಿ ಇದು 65 ಲಕ್ಷ ಲೀಟರ್ಸ್‌ಗೆ ಏರಿದೆ. ಇದರಲ್ಲಿ ದಕ್ಷತೆ ಇದೆಯೋ ಅದಕ್ಷತೆಯಿದೆಯೋ, ನಾವು ವ್ಯಾಪಕವಾಗಿ ಇದನ್ನು ಪತ್ತೆಹಚ್ಚಲಿಕ್ಕೆ ಪ್ರಯತ್ನ ಮಾಡಿದ್ದೇವೆಯೋ ಇಲ್ಲವೋ ಎನ್ನುವುದನ್ನು ತಾವೇ ಹೇಳಬೇಕು. ಇದರಿಂದ ಪ್ರತಿ ತಿಂಗಳು ಏನಾಗುತ್ತಿದೆ ಎಂದರೆ, 1.26 ಕೋಟಿ ಇನ್‌ಕ್ರೀಸ್ ಓವರ್ ಡಿಸೆಂಬರ್ ಆಗಿದೆ. 1.26 ಕೋಟಿ ಇನ್‌ಕ್ರೀಸ್ ಓವರ್ ಜನವರಿಗೆ ಆಗಿದೆ. ಸಾಧಾರಣ ಡಬ್ಬಲ್ ಇನ್‌ಕಂ ಆಗಿದೆ. ನಾನು ಮೊನ್ನೆ ಹೇಳಿದೆ, 3.74 ಕೋಟಿ for the corresponding period January, 92 it has increased to about Rs. 7 Crores.

ತಾವೇ ಆಲೋಚನೆ ಮಾಡಿಕೊಳ್ಳಿ. ನಾವು ಆಡಳಿತ ಬಿಗಿ ಮಾಡಿದ್ದೇವೆಯೋ ಅಥವಾ ಆಡಳಿತವನ್ನು ಸಡಿಲಗೊಳಿಸಿದ್ದೇವೆಯೋ ಎಂಬುದನ್ನು ತಾವು ವಿಶೇಷವಾಗಿ ಈ ಮಾಹಿತಿಯ ಮೇಲೆ ಹೇಳಬೇಕಾಗುತ್ತದೆ. ಐಎಂಎಫ್‌ಎಲ್ ರೆವಿನ್ಯೂ ಬಗ್ಗೆ ನಾನು ಉದಾಹರಣೆಗೆ ಮಾತ್ರ ಹೇಳುತ್ತಿದ್ದೇನೆ. ನಮ್ಮ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ವಿವರವಾಗಿ ಹೇಳುತ್ತೇನೆ. ಅಥವಾ ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಹೇಳುತ್ತೇನೆ. ನವೆಂಬರ್ 1992ರಲ್ಲಿ ಕ್ವಾಂಟಿಟಿ 15.19 ಲಕ್ಷ ಲೀಟರ್ಸ್ ಇದ್ದರೆ ಜನವರಿ 1993ಕ್ಕೆ 19.09 ಲಕ್ಷ ಲೀಟರ್ಸ್‌ಗೆ ಹೋಗಿದೆ ಅಂದರೆ ಸುಮಾರು 4 ಲಕ್ಷ ಲೀಟರ್ಸ್ ಹೆಚ್ಚಾಗಿದೆ. ಫೆಬ್ರವರಿಯಲ್ಲಿ ಪ್ರಾವಿಜನಲ್ ಫಿಗರ್ಸ್ 4 ಲಕ್ಷ ಆಗಬಹುದು. ನಾವು ಇನ್ನೂ ಬಿಗಿ ಹಿಡಿದರೆ ಹೆಚ್ಚಾಗಬಹುದು. ಆದ್ದರಿಂದ ಇವತ್ತು ಇನ್‌ಕ್ರೀಸ್ ಎಷ್ಟಾಗಬಹುದೆಂದು ಹೇಳುವುದಾದರೆ ಸುಮಾರು 3 ಕೋಟಿ ಹೆಚ್ಚಾಗಬಹುದು. ಒಂದೊಂದು ತಿಂಗಳಿನಲ್ಲಿ 3 ಕೋಟಿ ರೂಪಾಯಿ ಹೆಚ್ಚಾದರೆ ಆ ಹಣವನ್ನು ನಾವು ಸಮಾಜಕಲ್ಯಾಣ ಕಾರ್ಯಕ್ರಮಗಳಿಗೆ ಉಪಯೋಗ ಮಾಡಿಕೊಳ್ಳಬಹುದು. ನೀರಾವರಿ ಮತ್ತು ವಿದ್ಯುತ್ ಕಾರ್ಯಕ್ರಮಗಳಿಗೆ ಕೊಟ್ಟಿರತಕ್ಕ ಹಣವನ್ನು ಹೆಚ್ಚಿಸುವುದಕ್ಕೆ ಖಂಡಿತಾ ಸಾಧ್ಯವಿದೆ.

ಆದ್ದರಿಂದ ಜನವರಿ ಮತ್ತು ಫೆಬ್ರವರಿಯಲ್ಲಿ ಪಿಕ್‌ಅಪ್ ಆಗುವುದಕ್ಕೆ ಪ್ರಾರಂಭವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ತಾವು ಮುಖ್ಯಮಂತ್ರಿಗಳಾದ ಮೇಲೆ ಐ.ಎಂ.ಎಫ್.ಎಲ್. ಮತ್ತು ಸಾಚೆಟ್‌ನಲ್ಲಿ ಮಾರಾಟ ಮಾಡುತ್ತಾ ಇರತಕ್ಕಂಥಾದ್ದವರ ಬಗ್ಗೆ ನಿಯಂತ್ರಣ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ, ಇಲ್ಲವೆಂದು ನಾವೇನೂ ಹೇಳುವುದಿಲ್ಲ. ಸ್ವಲ್ಪ ಮಟ್ಟಿಗೆ ನೀವು ಯಶಸ್ವಿಯಾಗಿರಬಹುದು. ಆದರೆ ಇದನ್ನು ಮುಂದುವರೆಸಿಕೊಂಡು ಹೋಗುವುದರ ಬಗ್ಗೆ ನಮಗೆ ಬಹಳ ಸಂಶಯ ಇದೆ. ಏಕೆಂದರೆ ಇವತ್ತು ನಿಮ್ಮ ಮಾಜಿ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. 25 ವರ್ಷಗಳಿಂದ ಈ ಕಾಂಗ್ರೆಸ್ ಪಾರ್ಟಿಯನ್ನು ಸಾಕಿರುವವರೇ ಸಾರಾಯಿ ಮತ್ತು ಹೆಂಡದ ದೊರೆಗಳು. ಈಗ ಅವರನ್ನು ಏಕೆ ವಿರೋಧ ಮಾಡಿಕೊಳ್ಳುವುದು ಎಂದು ಹೇಳಿದ್ದಾರೆ. ಆದ್ದರಿಂದ ನನಗೆ ಸಂಶಯ ಬಂದು ಕೇಳಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್:- ಅದೇ ವಿಷಯದಲ್ಲಿ ಶ್ರೀ ಪ್ರೇಮಚಂದ್ರಸಾಗರ್ ಎನ್ನತಕ್ಕಂಥ ಸಚಿವರು ಸಹ ನಿಮ್ಮ ಹತ್ತಿರ ಹೀಗೆ ಗುದ್ದಾಟ ಮಾಡಿಕೊಂಡು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರು ಅಬ್ಕಾರಿ ಲಾಬಿಗೆ ಅನ್ಯಾಯವಾಗಿದೆ ಎಂದು ಹೇಳಿ ರಾಜೀನಾಮೆ ಕೊಟ್ಟಿರತಕ್ಕಂಥಾದ್ದು ತಮಗೆ ಗೊತ್ತಿರಬಹುದು. ಮತ್ತೆ ಈ ಜನರು ತಮ್ಮ ಸುತ್ತುವರೆದಿರುವುದು ತಮಗೆ ಗೊತ್ತಿದೆ. ಆದ್ದರಿಂದ

ಎಷ್ಟು ದಿವಸ ಎಂದು ಇವರನ್ನು ಹೊರಗೆ ಇಟ್ಟು ನೀವು ಆಡಳಿತವನ್ನು ನಡೆಸಿಕೊಂಡು ಹೋಗುತ್ತೀರಿ, ನಿಮಗೆ ಆ ಧೈರ್ಯ ಇದೆಯೋ ಎಂದು ಕೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ:– ಅವತ್ತು ತಾವು ಇಲ್ಲಿ ಹೇಳಿಕೆ ಕೊಟ್ಟಿರಿ, ನಾನು ಖಂಡಿತವಾಗಿಯೂ ಅದನ್ನು ಮೆಚ್ಚಿದೆ. ಆ ಹೇಳಿಕೆಯನ್ನು ಕೊಟ್ಟ ದಿವಸವೇ ಅದರ ಕಥೆ ಮುಗಿದುಹೋಯಿತು. ಪ್ರಾರಂಭವೂ ಅವತ್ತೇ ಮತ್ತು ಕೊನೆಯೂ ಅವತ್ತೇ ಆಯಿತು. ನಾನು ನಿಮಗೆ ಸವಾಲು ಹಾಕಿ ಹೇಳುತ್ತೇನೆ. ಎಲ್ಲಿ ಎಷ್ಟು ಸಾರಾಯಿ ಸಾಚೆಟ್‌ನಲ್ಲಿ ನಿಮಗೆ ಬೇಕು ? ಬೆಂಗಳೂರಿನಲ್ಲಿ ಬೇಕೆ ? ದೊಡ್ಡಬಳ್ಳಾಪುರದಲ್ಲಿ ಬೇಕೆ ? ಚಿಕ್ಕನಾಯಕನಹಳ್ಳಿಯಲ್ಲಿ ಬೇಕೆ ? ನಾನು ತೋರಿಸಿಕೊಡುತ್ತೇನೆ. ಇಲ್ಲದೇ ಇರತಕ್ಕಂಥ ಒಂದು ಜಾಗವನ್ನು ಹೇಳಿಬಿಡಿ ನೋಡೋಣ. ಸ್ವಲ್ಪ ದಿವಸ ಬೆಂಗಳೂರಿನಲ್ಲಿ ನಿಂತಿತ್ತು. ಈಗ ಬೆಂಗಳೂರಿನಲ್ಲೂ ಪ್ರಾರಂಭವಾಗಿದೆ. ಮಾತ್ರವಲ್ಲ ಎಲ್ಲಾ ಕಡೆಯಲ್ಲೂ ಪ್ರಾರಂಭವಾಗಿದೆ. ಈಗ ಒಂದೊಂದು ಜಿಲ್ಲೆಗೂ ಡಿಸ್ಟಲರಿಯನ್ನು ಕೊಟ್ಟಿದ್ದೀರಿ. ಅಲ್ಲಿ ಅವರದ್ದೇ ಸಾಮ್ರಾಜ್ಯ ನಿರ್ಮಾಣವಾಗಿದೆ. ಆಯಾಯ ಜಿಲ್ಲೆ ಅವರಿಗೆ ಜಾಗೀರಾಗಿಬಿಟ್ಟಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಅಥವಾ ಬೇರೆ ಬೇರೆ ಜಿಲ್ಲೆಗಳ ಎಲ್ಲ ವಿವರಗಳನ್ನೂ ಬೇಕಾದರೆ ನಾನು ಕೊಡುತ್ತೇನೆ. ನಾನು ವಿವರಕ್ಕೆ ಹೋಗುವುದಿಲ್ಲ. ಆದರೆ ಈಗ ಏನು ಹೇಳುತ್ತಿದ್ದೀರಿ ಅದು ಸತ್ಯಕ್ಕೆ ಬಹಳ ದೂರವಾಗಿರತಕ್ಕಂಥಾದ್ದು, ಬಹಳ ಸುಳ್ಳನ್ನು ಹೇಳುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಗೊಂದಲ)

ಡಾ।। ವೈ ನಾಗಪ್ಪ:– ತೋರಿಸುತ್ತೇನೆ ಎಂದು ಸುಮ್ಮನೆ ಹೇಳುತ್ತಿದ್ದೀರಿ...

ಶ್ರೀ ಸಿ. ಬೈರೇಗೌಡ:– ಡಾ।। ನಾಗಪ್ಪನವರಾಗಲೀ ಅಥವಾ ಸರ್ಕಾರವಾಗಲೀ, ಯಾರನ್ನಾದರೂ ನನ್ನ ಜೊತೆಯಲ್ಲಿ ಕಳಿಸಲಿ, ನಾನು ತೋರಿಸಿಕೊಡುತ್ತೇನೆ. ಆಗಲಾದರೂ ಕೂಡ ಇದು ಸುಳ್ಳು ಎಂದು ಒಪ್ಪುತ್ತೀರ !

Dr Y. NAGAPPA:– At hands at your records you have to speak.

ಅಧ್ಯಕ್ಷರು:– ನಾಗಪ್ಪನವರೇ ನೀವು ಕುಳಿತುಕೊಳ್ಳಿ.

ಡಾ।। ವೈ. ನಾಗಪ್ಪ:– ಯಡಿಯೂರಪ್ಪನವರ ಸಾಲಮನ್ನಾ ಮುಗಿದು ಹೋಗಿಬಿಟ್ಟಿತು. ಈಗ ಇವರದ್ದು ಶುರುವಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಯಡಿಯೂರಪ್ಪನವರ ಸಾಲ ಮನ್ನಾ ಅಂತೆ. ನಾನು ಸಾಲ ಕೇಳಲಿಕ್ಕೆ ಬಂದಿಲ್ಲ ಸ್ವಾಮಿ. ನಾಗಪ್ಪನವರೇ, ಈ ಸಾಲ ಮನ್ನಾ ಬಗ್ಗೆ ಬೇರೆ ಕಾರ್ಯಕ್ರಮ ಇದೆ. ಸ್ವಲ್ಪ ಕಾಯಿರಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಅಧ್ಯಕ್ಷರೇ ಅವರು ತಮ್ಮ ಗಮನ ಸೆಳೆಯುವುದಕ್ಕೆ ಹೀಗೆ ಮಾತನಾಡುತ್ತಾರೆ.

(ಗೊಂದಲ)

ಡಾ।। ವೈ. ನಾಗಪ್ಪ:– ನಿಮಗೆ ಆಸೆ ಇಲ್ಲವೇ ? ಈ ಕಡೆಯಲ್ಲಿ ಇರಬೇಕು ಎಂದು ಆಸೆ ಇಲ್ಲವೇನು ? ಅಲ್ಲೇ ಪರ್ಮನೆಂಟ್ ಆಗಿ ಇರಬೇಕು ಎಂದು ಅಂದುಕೊಂಡಿದ್ದೀರಾ ?

ಶ್ರೀ ವಾಟಾಳ್ ನಾಗರಾಜ್:– ಈಗ ಡಾಕ್ಟರ್ ಅವರನ್ನು ಆರೋಗ್ಯ ಸಚಿವರನ್ನಾಗಿ ಮಾಡಲಿ ಎಂದು ನಾವೆಲ್ಲರೂ ಹೇಳುತ್ತಿದ್ದೇವೆ. ಏಕೆಂದರೆ ಆರೋಗ್ಯ ಇಲಾಖೆ ಖಾಲಿ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಈಗ ತಾವೇನು ಪ್ರಶ್ನೆ ಎತ್ತಿದ್ದೀರಿ, ಅದಕ್ಕೆ ಬಹುಶಃ ನನ್ನ ಅಂಕಿ ಅಂಶಗಳು ಉತ್ತರ ಹೇಳುತ್ತವೆ. ಸ್ವಲ್ಪ ಕಾದು ನೋಡಿ. ನಾವು ಹತೋಟಿಗೆ ತೆಗೆದುಕೊಳ್ಳದೇ ಇದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಫಿಗರ್ಸ್‌ನ್ನು ನೋಡಿ.

ಶ್ರೀ ಸಿ. ಬೈರೇಗೌಡ:– ಒಂದೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಆದಾಯ ಈ ಎಕ್ಸೈಜ್ ಇಲಾಖೆಯಿಂದ ಬರುವುದಕ್ಕೆ ಸಾಧ್ಯವಿದೆ. ಈ ವರ್ಷದಲ್ಲಿ 700 ಚಿಲ್ಲರೆ ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಈ ವರ್ಷದಲ್ಲಿ ಇನ್ನು ಉಳಿದಿರತಕ್ಕ ಅವಧಿಯಲ್ಲಿ ಒಂದು ಸಾವಿರ ಕೋಟಿಯಾದರೂ ಮಾಡುವುದಕ್ಕೆ ಸಾಧ್ಯವಿದೆ.

ಈ ಅಂಕಿ ಅಂಶ ನಿಜ ಇಷ್ಟಾಗಿದೆ, ಆದರೆ, ಇದರಲ್ಲಿ ಎಷ್ಟು ಇವತ್ತಿನ ದಿವಸ ಪ್ರಮಾಣದಲ್ಲಿ ದುರ್ವ್ಯವಹಾರ ನಡೆಯುತ್ತಿದೆ, ಆ ಪ್ರಮಾಣ ಕಡಿಮೆಯಾಗಿಲ್ಲ. ನೀವೇ ಆಗಲೀ, ನಾವೇ ಆಗಲಿ ಪೂರ್ತಿಯಾಗಿ ತೊಡೆದುಹಾಕುತ್ತೇವೆಂದು ಹೇಳತಕ್ಕಂಥ ಸುಚ್ಚು ಮಾತನ್ನು ಹೇಳುವುದಕ್ಕೆ ನಾನು ತಯಾರಿಲ್ಲ. ಆದರೆ ಯಾವ ಪ್ರಮಾಣದಲ್ಲಿ ತಡೆಗಟ್ಟಬೇಕಾಗಿತ್ತೋ ಆ ಪ್ರಮಾಣದಲ್ಲಿ ತಡೆಗಟ್ಟಿಲ್ಲ. ಅದು ನನ್ನ ವಾದ.

ಡಾ।। ವೈ. ನಾಗಪ್ಪ:– ನೀವು ಏಕೆ ಈ ಆದಾಯವನ್ನು ಸಾವಿರ ಕೋಟಿಗೆ ಏರಿಸಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾನು ಅರಾಕ್‌ನಲ್ಲಿ ಕನ್‌ಸಂಪ್‌ಷನ್ ಆಫ್ ಬಲ್ಕ್ ಲೀಟರ್ಸ್ ಬಗ್ಗೆ ಈಗಾಗಲೇ ಹೇಳಿದೆ. ಈ ಅಂಕಿ ಅಂಶವನ್ನು ತಾವೇ ನೋಡಿ, ತಾವೇ ನಿರ್ಣಯ ಮಾಡಿ, ತಮಗೆ ಬಿಟ್ಟಿದ್ದು. ಇದರ ಮೇಲೆ ತಾವು ಪ್ರಶ್ನೆ ಹಾಕುವುದಾದರೆ, ಹಾಕಬಹುದು. ಈಗ ಜನವರಿಯಲ್ಲಿ 1991–92ರಲ್ಲಿ ಅರಾಕ್ 59.23 ಬಲ್ಕ್ ಲೀಟರ್ಸ್ ಇದ್ದರೆ,1992–93ಗೆ 19.29 ಲಕ್ಷ ಲೀಟರ್‌ಗೆ ಬಂದಿದೆ. ತಾವೇ ಲೆಕ್ಕ ಹಾಕಿ. ಒಂದೇ ತಿಂಗಳಲ್ಲಿ ಇಷ್ಟು ಬಂದಿದೆ. ಇಲ್ಲಿ ಇಂಥ ಬಹಳ ವಿವರಗಳು ಇವೆ ಬೀರ್‌ನಲ್ಲಿ 1991-92ರಲ್ಲಿ ಅದೇ ಜನವರಿಗೆ 27.35 ಲಕ್ಷ ಲೀಟರ್ ಇದ್ದರೆ, 1992–93ಕ್ಕೆ 36.55 ಲಕ್ಷ ಲೀಟರ್ ಆಗಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಜನವರಿ ನಂತರದ ಪ್ರತಿ ತಿಂಗಳೂ ಖರ್ಚು ಜಾಸ್ತಿಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.– ನಾನು ಅದನ್ನೇ ಹೇಳಿದ್ದು.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಕಳೆದ ವರ್ಷ ಜನವರಿಯಲ್ಲಿ ಎಷ್ಟು ಖರ್ಚಾಗಿದೆ, ಈ ವರ್ಷ ಜನವರಿಯಲ್ಲಿ ಎಷ್ಟು ಖರ್ಚಾಗಿದೆ ? ಇದನ್ನು ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ದಯ ಮಾಡಿ, ನಾನು ಹೇಳಿದ್ದನ್ನು ಅರ್ಥ ಮಾಡಿಕೊಂಡರೆ ಒಳ್ಳೆಯದು. ನಾನು 1992 ಜನವರಿಯ ವಿಚಾರ ಹೇಳಿದೆ. 1993ರ ಜನವರಿ ವಿಚಾರವನ್ನೂ ಹೇಳಿದೆ. ಇದನ್ನು ಕಂಪೇರ್ ಮಾಡಿದ್ದೇನೆ. ಹೆಚ್ಚಾಗಿ 59 ಇದ್ದುದು 61ಕ್ಕೆ ಬಂತು. ಜನವರಿ 1992ಕ್ಕೆ ಅರಾಕ್ 59 ಇದ್ದರೆ, ಜನವರಿ 1993ಗೆ 61.4 ಲ್ಯಾಕ್ ಲೀಟರ್ಸ್ ಬಂತು. ಐ.ಎಂ.ಎಲ್.ಕೂಡ ಅಷ್ಟೆ. ಅದು 13ರಿಂದ 19ಕ್ಕೆ ಬಂತು. ಜನವರಿ ಜನವರಿವರೆಗೆ ವ್ಯವಹಾರ ನಡೆದಿರುವುದನ್ನು ನಾನು ಹೇಳುತ್ತಿದ್ದೇನೆ; ಬೇರೆ ಲೆಕ್ಕ ಅಲ್ಲ. ಬೀರ್‌ನಲ್ಲಿ 27.35 ಲ್ಯಾಕ್ ಲೀಟರ್ ಇದ್ದುದು 36.55 ಲ್ಯಾಕ್ ಲೀಟರ್ಸ್ ಜನವರಿ 1993ಕ್ಕೆ ಬಂದಿದೆ. ಅರಾಕ್‌ನಲ್ಲಿ ಪುನಃ ರೆವಿನ್ಯೂ ರಿಯಲೈಸೇಷನ್ ರುಪೀಸ್ ಇನ್ ಕ್ರೋರ್ಸ್ ಜನವರಿ 1992ಕ್ಕೆ 4.15 ಕೋಟಿ ಇದ್ದರೆ, 1992–93ಕ್ಕೆ 4.30 ಕೋಟಿ ಬಂತು. ಐ.ಎಂ.ಎಲ್.ನಲ್ಲಿ 1991–92ರ ಜನವರಿಗೆ 3.80 ಕೋಟಿ ಇದ್ದರೆ, 1993 ಜನವರಿಗೆ 7.12 ಕೋಟಿ ಬಂತು. I am just repeating it in a consolidated form. ಬೀರ್ ಕೂಡ ಅದೇ ರೀತಿಯಾಗಿದೆ. ಜನವರಿ

1992ಗೆ 60 ಲಕ್ಷ ಇದ್ದರೆ, ಜನವರಿ 1993ರಂದು ಒಂದು ಕೋಟಿ, ಹದಿನಾಲ್ಕು ಲಕ್ಷಕ್ಕೆ ಬಂದಿದೆ. ಫೆಬ್ರವರಿಯಲ್ಲಿ ಇಲ್ಲಿಯವರೆಗೆ, ಫುಲ್ ಫಿಗರ್ 1991-93ಗೆ 73ಲಕ್ಷ ಬಂದಿದ್ದರೆ, it is something more than 1.10 ಕೋಟಿಗೆ ಬಂದಿದೆ. ಈಗ ತಾವೇ ಆಲೋಚನೆ ಮಾಡಿಕೊಳ್ಳಿ; ನಾವು ನಿರ್ಮಲವಾದಂಥ ಗಕ್ಷ ಆಡಳಿತವನ್ನು ಕೊಟ್ಟಿದ್ದೇವೆ ಎಂದು. ಅದು ತಾವು ನೋಡಬೇಕು. ನಾನು ಎಲ್ಲಾ ವಿವರಗಳನ್ನು, ಅಂಕಿಸಂಖ್ಯೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ತಾವು ಅಂದಾಜು ಮಾಡಿಕೊಳ್ಳಬಹುದು. ಒಂದು ರೀತಿಯ, ಸಾರ್ವಜನಿಕವಾದ, the successive Government have been under the grip of liquor lobbies. Whether we could come out from the liquor lobby or not, it is for you to judge. ಆ ಹೋರಿಗೆ ಕೊಂಬು ಹಿಡಿದುಬಿಟ್ಟಿದೆ. ಆದರೆ ಅದಕ್ಕೆ ಹಾಯತಕ್ಕಂಥ ಪ್ರವೃತ್ತಿ ಇದೆ. ಆ ಹೋರಿಗೆ ಹಾಯತಕ್ಕ ಪ್ರವೃತ್ತಿ ಇದೆ. ಅದನ್ನು ನಿಮ್ಮೆಲ್ಲರ ಆಶೀರ್ವಾದದಿಂದ, ಕರ್ನಾಟಕ ರಾಜ್ಯದ ಜನತೆಯ ಆಶೀರ್ವಾದದಿಂದ, ಶಾಸಕರ ಆಶೀರ್ವಾದದಿಂದ ನಾವು ಗಟ್ಟಿಗೆ ಹಿಡಿದೇ ಹಿಡಿಯುತ್ತೇನೆ ಅದನ್ನು ಬಲಿ ಹಾಕುತ್ತೇವೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಅಂಕಿ ಸಂಖ್ಯೆಗಳಲ್ಲಿ ಸ್ಪಷ್ಟ ಇದೆ. ಬಂಗಾರಪ್ಪನವರು ಸಂಪೂರ್ಣವಾಗಿ ಎಕ್ಸೈಜ್ ಲಾಬಿಯ ಹಿಡಿತದಲ್ಲಿದ್ದರು. ತಾವು ಅವರ ಸ್ನೇಹ ಬಿಟ್ಟಿಲ್ಲ, ಹಿಡಿತದಿಂದ ಸ್ವಲ್ಪ ಅಂತರ ಇಟ್ಟುಕೊಂಡು ಸ್ನೇಹ ಇಟ್ಟುಕೊಂಡಿದ್ದೀರಿ. ಪೂರ್ಣ ಪ್ರಯತ್ನ ತಾವು ಇನ್ನೂ ಸಾಧಿಸಿಲ್ಲ. ತಾವು ಸಂಪೂರ್ಣ ಪ್ರಗತಿ ಸಾಧಿಸಿ ಅವರ ಹಿಡಿತದಿಂದ ದೂರ ಇದ್ದು ಹೆಚ್ಚಿನ ಆದಾಯ ತರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಈಗ ಒಳ್ಳೆಯ ಉತ್ತರ ಬೇಕು ಎಂದು ಕೇಳುತ್ತೀರಿ. ಮಧ್ಯೆ ಪ್ರವೇಶ ಮಾಡುತ್ತೀರಿ ನಾನು ಉತ್ತರ ಹೇಗೆ ಕೊಡುವುದು ?

ಅಧ್ಯಕ್ಷರು:-ಮಾನ್ಯ ಸದಸ್ಯರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಪ್ರತಿ ಕ್ಷಣಕ್ಷಣಕ್ಕೂ ತಾವು ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಹೇಗೆ ? ಮುಖ್ಯಮಂತ್ರಿಗಳ ಉತ್ತರವನ್ನು ಸರಿಯಾಗಿ ಆಲಿಸಿ ತಾವು ಪ್ರಶ್ನೆಗಳನ್ನು ತಯಾರು ಮಾಡಿಕೊಳ್ಳಿ. ಕ್ಲಾರಿಫಿಕೇಷನ್ಸ್‌ಗೆ ನಾನು ಸಮಯ ಕೊಡುತ್ತೇನೆ. ಕ್ಷಣಕ್ಷಣಕ್ಕೂ ತಾವು ಮತ್ತು ಮುಖ್ಯಮಂತ್ರಿಗಳು ಮಾತನಾಡುವುದರಿಂದ ಸದನದ ಕಾರ್ಯಕಲಾಪಗಳಿಗೆ ಸ್ವಲ್ಪ ತೊಂದರೆ ಆಗುತ್ತದೆ. ತಾವು ಏನು ಕ್ಲಾರಿಫಿಕೇಶನ್ಸ್-ಕೇಳಬೇಕೋ ಅದನ್ನು ತಯಾರು ಮಾಡಿಕೊಳ್ಳಿ , ನಾನು ಆಮೇಲೆ ಅವಕಾಶ ಕೊಡುತ್ತೇನೆ. ಈಗ ಮುಖ್ಯಮಂತ್ರಿಗಳು ಉತ್ತರ ಕೊಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಈಗ ಒಂದು ವಿಷಯವನ್ನು ತಾವು ಮರೆಯಬಾರದು. ಏಕೆಂದರೆ, ನಾವು ಹೆಚ್ಚುವರಿ ಏನು ಸಾಧನೆ ಮಾಡಿದ್ದೇವೆ. that could be done with the existing Excise Policy. ಎಕ್ಸೈಜ ಪಾಲಿಸಿ ಬಂದಿರುವುದು ಯಾವಾಗ ? 1 ತಾರೀಖು ಜುಲೈ, 1992ರಿಂದ ಎಕ್ಸೈಜ್ ಪಾಲಿಸಿ ಬಂದಿದೆ. 30-6-93ರವರೆಗೂ ಈ ಎಕ್ಸೈಜ್ ಪಾಲಿಸಿ ಇದೆ. ಇದ್ದಂತಹ, ಪ್ರಸಕ್ತವಾದ ಎಕ್ಸೈಜ್ ಪಾಲಿಸಿಯನ್ನು ನಾವು ಅನುಷ್ಠಾನ ಮಾಡಿಕೊಂಡು ಅದರಿಂದ ಹೆಚ್ಚುವರಿ ಸಾಧನೆ ಮಾಡಲಿಕ್ಕೆ ಆಗಿದೆ. you should not forget about it. ಇನ್ನು ನ್ಯೂ ಎಕ್ಸೈಜ್ ಪಾಲಿಸಿಯನ್ನು ನಾವು ಬರುವ ವರ್ಷದಿಂದ ಮಾಡುತ್ತೇವೆ. ಆದರೆ ಕೆಲವು ಮುನ್ಸೂಚನೆ ಕೂಡ ನಾವು ಈಗಾಗಲೇ ಕೊಟ್ಟಿದ್ದೇವೆ. ತಾವು ಆ ಅಮೌಂಟ್ ಬಗ್ಗೆ ಹೇಳಿದಿರಿ. 1992-93ರಲ್ಲಿ ಸುಮಾರು 570 ಕೋಟಿ ರೂಪಾಯಿಗಳವರೆಗೂ ಆದಾಯ ಬರುತ್ತದೆಂದು ನಾವು ನಿರೀಕ್ಷೆ ಮಾಡಿದ್ದೇವೆ. 1993-94ರಲ್ಲಿ ನಾವು 740 ಕೋಟಿ ರೂಪಾಯಿಗಳನ್ನು ಗಳಿಸುತ್ತೇವೆ. Thousand and more Crores ಬಂದರೆ ಅದನ್ನು ಸಾಧನೆ ಮಾಡುತ್ತೇವೆ. 740 ಕೋಟಿ ರೂಪಾಯಿಗಳಿಗಿಂತ ಕಡಿಮೆ ಆಗುವುದಿಲ್ಲ. ಇದರಲ್ಲೇ ತಾವು ಅರ್ಥ ಮಾಡಿಕೊಳ್ಳಬೇಕು. ನಾವು ಈ ಇಚ್ಛಾಶಕ್ತಿಯಿಂದ ಯಾವುದೇ ಫೀಲ್ಡ್‌ನಲ್ಲಿ ಈ ಪಟ್ಟಭದ್ರ

ಹಿತಾಸಕ್ತಿಗಳು ಯಾರಾದರೂ ಇದ್ದರೆ ಅದನ್ನು ನಿಗ್ರಹಿಸಿಕೊಂಡು ನಾವು ಮುಂದೆ ಹೋಗುತ್ತೇವೆ. ಎಂಬ ಛಲದಿಂದ ನಾವು ಇದನ್ನು ಮಾಡಿದ್ದೇವೆಯೇ ಹೊರತು ಅಂಜುಬುರುಕತನದಿಂದ ಇದನ್ನು ಮಾಡಿಲ್ಲ. That shows the courage. It is not the question that I will be shaken or somebody will be shaken. That is not important for me. I have a mandate from my party, I have a mandate from this house and I have a mandate from the people of Karnataka to give a clean and efficient Government and Moily is not important, my Congress Party is important, I must get back to power in 1994. ನಾವು ಪವರ್‌ಗೆ ಎಂದು ಇಚ್ಛೆ ಇದ್ದರೆ ನಮ್ಮ ಪಕ್ಷದವರು ನಮಗೆ ಸಹಾಯ ಮಾಡಿಯೇ ಮಾಡುತ್ತಾರೆ, ಬೆಂಬಲ ಕೊಟ್ಟೇ ಕೊಡುತ್ತಾರೆ. ನಿಮಗೆ ಹೇಳುವುದು ಏನೆಂದರೆ, My party has given a mandate to me to give a clean and efficient Government which I am going to give with the assitance of my Legislators, with the assistance of my Party and with the assistance of my Council of Ministers which I am confident. ಇದಕ್ಕೆ ಹೆದರಬೇಕಾಗಿಲ್ಲ. ಆದ್ದರಿಂದ ತಾವು ಇವತ್ತು ಹೇಳಿದ್ದೀರಿ. For the first time in the state ನಾವು ಎಕ್ಸೈಜ್ ಪಾಲಿಸಿಯಲ್ಲಿ ಬಹಳ ಕ್ರಾಂತಿಕಾರಿಯಾದ ಬದಲಾವಣೆ ಮಾಡಿದ್ದೇವೆ. ತಾವು ನೋಡಿರಬಹುದು. ನಾವು ಅದನ್ನು ಬಹಳ ಹೈಲೈಟ್ ಮಾಡುವುದಕ್ಕೆ ಹೋಗಿಲ್ಲ. Because politically it is not convenient to you, it is politically convenient to us. ಕರ್ನಾಟಕದ ರಾಜ್ಯದ ಜನತೆಯ ಹಿತಾಸಕ್ತಿಯಿಂದ ಇದರ ಅಗತ್ಯ ಇದೆ. ನಾವು ಏನು ಮಾಡಿದ್ದೇವೆ ಎಂದರೆ ಟೆಂಡರ್ ಕಮ್ ಆಕ್ಷನ್ ಮಾಡಿದ್ದೇವೆ. ಇದರಿಂದ ಪರಿಣಾಮ ಏನಾಗುತ್ತದೆ ಎಂದರೆ ಹೈಯೆಸ್ಟ್ ಇನ್‌ಕಮ್ ಬರುತ್ತದೆ. ಯಾವುದೇ ಸಿಂಡಿಕೇಟ್ ಫಾರಮ್ ಮಾಡುವುದಕ್ಕಾಗುವುದಿಲ್ಲ. Methodology, Modus Operandi which is .....there is no secret about it. ತಮಗೂ ಗೊತ್ತಿದೆ, ನನಗೂ ಗೊತ್ತಿದೆ. ಗುಡ್‌ವಿಲ್ ಮನಿ ಕಲೆಕ್ಟ್ ಮಾಡುವುದು, ಬಿಸಿನೆಸ್ ಮಾಡದೇ ಇರತಕ್ಕಂಥವುದ್ದು, ಆ ಗುಡ್‌ವಿಲ್ ಮನಿಯಿಂದ ರಾಜಕೀಯ ಮಾಡತಕ್ಕಂಥ ಪ್ರವೃತ್ತಿ ಇಲ್ಲಿಗೆ ನಿಂತು ಹೋಗುತ್ತದೆ. Take it from me. That is an Office auction, Syndicate auction. A few people try to know. Let the small man in Mandal get, let him also become rich. The plenty will have to be shared, It cannot be manipulated. The age of manipulation in excise auction has been put on end to. We are not going to compromise. Let the small people become Excise Contractor. Why not? ಈಗ ಇದು ಮಂಡಲ ಮಟ್ಟದಲ್ಲಿ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಜಿಲ್ಲಾ ಪರಿಷತ್ತು ಮಟ್ಟದಲ್ಲಿ ಅಲ್ಲ ಅಥವಾ ಡಿವಿಜನಲ್ ಮಟ್ಟದಲ್ಲಿ ಅಲ್ಲ, ಕೊನೆಗೆ ಸ್ಟೇಟ್ ಮಟ್ಟಕ್ಕೆ ಬರುವುದು ಇತ್ತು. ಇದನ್ನು ನಾವು ಅಧಿಕಾರ ವಿಕೇಂದ್ರೀಕರಣ ಮಾಡಿದ್ದೇವೆ. ಏತಕ್ಕೆ ಇಲ್ಲಿ ಬರಬೇಕು. After all, this is a wealth of the State, Wealth of the people. It cannot be concentrated in few hands. So far as, I am in this chair, I will not allow that to happen at any cost. Even if it costs my seat, I will not compromise on that ಇದನ್ನು ನಾವು ಮಾಡಿದ್ದೇವೆ. ನಮ್ಮ ಜನಗಳ ದೃಷ್ಟಿಯಲ್ಲಿ ಇದು ಬೇಕು. ನಮ್ಮ ಪಕ್ಷದ ಹಿತದೃಷ್ಟಿಯಲ್ಲಿ ಇದು ನಮಗೆ ಬೇಕು, ಬಹುಶಃ ನಮ್ಮೆಲ್ಲರ ಹಿತದೃಷ್ಟಿಯಲ್ಲಿ ಸಾರ್ವಜನಿಕ ಜೀವನದಲ್ಲಿ ಕೆಲವು ಕಳಂಕಗಳು ಏನು ಬರುತ್ತಾ ಇದೆ, ಎಕ್ಸೈಜ್ ಲಾಬಿ, ಕ್ಯಾಪಿಟೇಶನ್ ಫೀ ಲಾಬಿ ಎಂದು ಕರೆಯುತ್ತಾರೆ ಅದರಿಂದ ಯಾವುದೇ ಪಕ್ಷವಾಗಿರಲಿ, ಈ ಎರಡು ಲಾಬಿಗಳಿಂದ ರಾಜಕೀಯ ಏನು distort ಆಗಿದೆ, ಕಲುಷಿತವಾಗಿದೆ.

I would like to see at least I can be Martyr for it, so that the future will be benefitted. I don't mind doing it. I would like to flush out this bad money which is being circulated in the politics of the State. I would like to implement it immediately. I think all my people....There is no doubt about it, there is not diffidence about it. Of course, it is a question of breaking the monopoly, it is a question of breaking barriers of status –Quo. Let me become a Martyr to break this barrier which has bound all of us down. Politics has become ..... We have been projected,

ನನಗೆ ಗೊತ್ತಿದೆ, ಅನೇಕರು ನೂರಕ್ಕೆ 99 ಪಾಲು ಜನರು ನಿಮ್ಮ ಪಕ್ಷದಲ್ಲಿದ್ದಾರೆ, ನಮ್ಮ ಪಕ್ಷದಲ್ಲಿದ್ದಾರೆ, pure politicians, to be frank with you. When compared to many other States, ನಮ್ಮ ರಾಜ್ಯದಲ್ಲಿ ಪ್ರಾಮಾಣಿಕರಾದಂಥ, ಶುದ್ಧ ಚಾರಿತ್ರ್ಯವುಳ್ಳಂಥ ರಾಜಕಾರಣಿಗಳು ಬಹಳ ಇದ್ದಾರೆ. I am very proud to say that. ಈ ರಾಷ್ಟ್ರದ ರಾಜಕೀಯ ವಿದ್ಯಮಾನವನ್ನು ನಾನೂ ಕೂಡ ಸಾಕಷ್ಟು ಅಭ್ಯಾಸ ಮಾಡಿದ್ದೇನೆ. ಅಂಥ ಒಂದು ಉಜ್ವಲವಾದಂಥ ರಾಜಕೀಯ ವ್ಯಕ್ತಿತ್ವದ ಪ್ರಭಾವ ವಲಯ ನಮ್ಮ ಕರ್ನಾಟಕದಲ್ಲಿದ್ದರೂ ಕೂಡ, We have been wrongly projected in the North, and wrongly projected in Delhi. I would like to say that, it is not only in the interest of my party but in the interest of all the people here. It is a question of self–respect which has been distorting, which has been mean in the politics of the era of Karnataka. I would like to put an end to it. Let us all come out of it. Some day on the other, some Chief Minister or other will have to take this kind of a decision. I have taken this decision. It is for the future to tell whether I have taken correct decision or not, not for the present. At present there may be some communication gap, there may be little confusion, little misunderstanding I think it will all die down. ಇಷ್ಟನ್ನು ಎಕ್ಸೈಜ್ ವಿಚಾರದಲ್ಲಿ ನಾನು ಹೇಳಿದ್ದೇನೆ. ಇನ್ನೂ ವಿವರವಾಗಿ ಡಿಮ್ಯಾಂಡ್‌ನಲ್ಲಿ ಬರುತ್ತದೆ, ಆಯವ್ಯಯದ ಮೇಲಿನ ಚರ್ಚೆಯಲ್ಲಿ ಬರುತ್ತದೆ. ಆಗ ಇನ್ನೂ ಹೆಚ್ಚಿನ ವಿವರಗಳನ್ನು ಕೊಡುತ್ತೇನೆ. Regarding new poliy, I would like to invite many more suggections. You know, I am open for all suggestions. If you want some more improvement, you can say that. I am ready for open discussion. Now, atleast the credibility of our Government is known to you. Now you can take advantage of it.

SRI B.S. YEDIYURAPPA:– Let us wait and see.

SRI M. VEERAPPA MOILY:– I have given a sample of it. It is for yout to respond. If you don't respond, I think future will blame you and all as please respond. ಇನ್ನು ಈ ಎಲ್‌ಒಸಿಗಳ ಬಗ್ಗೆ ಕೂಡ ಕೆಲವು ವಿಚಾರಗಳು ಇಲ್ಲಿ ಬಂದುವು. ಅದರ ಬಗ್ಗೆ ಆಯವ್ಯಯದಲ್ಲಿ ಮುಂದೆ ಹೆಚ್ಚು ಚರ್ಚೆ ಮಾಡಬಹುದು. Shortfall in External Assistance ಏನಾಯಿತು ಅಂದರೆ 35.06 ಕೋಟಿಗಳು Shortfall was there. ಇದು ಹೊರಗಿನಿಂದ ಬರಬೇಕು. ಇದು ಒಟ್ಟು 69 ಕೋಟಿಗಳ ಶಾರ್ಟ್‌ಫಾಲ್. After deducting

shortfall in External Assistance, ಆ 69ಕೋಟಿಗಳಲ್ಲಿ, ಈಗಾಗಲೇ 57.59ಕೋಟಿಗಳನ್ನು ನಾವು ರಿಲೀಸ್ ಮಾಡಿದ್ದೇವೆ. Even we have made up the shortfall. Of course, initially, I do not want to explain because, it is my Government, even earlier to my taking over, it was my Government, Congress Government. It is for us to sort out. Even if there is some lapse, it is for me to make up. Otherwise, I will not be discharging my duties as a Leader of My Party. I do not want to explain the difficulties. Initially we had some difficulties. I explain it in my budget speech. ನಮ್ಮ ಫೈನಾನ್ಷಿಯಲ್ ಪೊಸಿಷನ್ ಬಗ್ಗೆ ತಮಗೆ ಸಾಧಾರಣವಾದಂಥ ಮಾಹಿತಿ ತಮಗೆ ಇದೆ. ಇನ್ನೂ ಬೇಕಾದರೂ ವಿವರಗಳನ್ನು ಆಯವ್ಯಯದಲ್ಲಿ ನಾವು ಕೊಡುತ್ತೇವೆ. ಇವೊತ್ತು 59.68ಕೋಟಿ ಶಾರ್ಟ್‌ಫಾಲ್ ಏನಿತ್ತು, ಅದರಲ್ಲಿ 57.59 ಕೋಟಿ ಎಲ್‌ಒಸಿ ಇಶ್ಯೂ ಆಗಿದೆ. ಇನ್ನು ಕೆಲವೇ ದಿನಗಳಲ್ಲಿ ಈ ಶಾರ್ಟ್‌ಫಾಲನ್ನು ಕೂಡ ನಾವು ತುಂಬಿಸಿಕೊಡುತ್ತೇವೆ.

ಇನ್ನೊಂದು ಸಂತೋಷದ ವಿಚಾರ ಎಂದರೆ, ವರ್ಲ್ಡ್‌ಬ್ಯಾಂಕ್‌ನವರು ಯುಕೆಪಿಗೆ ತಮ್ಮ ಅಸಿಸ್ಟೆಂಟನ್ನು ಸಸ್ಪೆಂಡ್ ಮಾಡಿದ್ದರು. ಈ ಸಸ್ಪೆನ್‌ಶನ್ ಆರ್ಡರ್‌ನ್ನು ಕ್ಯಾನಲ್ ಬಗ್ಗೆ ಮತ್ತು ಆರ್ ಆರ್ ವರ್ಕ್ ಬಗ್ಗೆ ವರ್ಲ್ಡ್ ಬ್ಯಾಂಕ್‌ನವರು ಸಸ್ಪೆನ್ಷನ್‌ನ್ನು ರಿವೋಕ್ ಮಾಡಿದ್ದಾರೆ. I think on Saturday, the suspension is revoked and they have resumed the lending. ಇದನ್ನು ನಮ್ಮ ನೂರು ದಿವಸಗಳ ಸಾಧನೆಯಲ್ಲಿ ಇಡಬಹುದು. ಏಕೆಂದರೆ ಇದು ನಮ್ಮ ಅಚೀವ್‌ಮೆಂಟ್.

SRI P.G.R. SINDHIA:– That is your own making. The World Bank suspended your own order and they have started the repayment. But who made it? It was your own making.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಸ್ಪೆಂಡ್ ಆದ ಅವಧಿಯಲ್ಲಿ ಪ್ರೋಗ್ರೆಸ್ ನಿಂತು ಹೋಯಿತಲ್ಲ ಆ ಪಾಪಕ್ಕೆ ಕೂಡ ನೀವೇ ಹೊಣೆಯಾಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ಕ್ಷಮಿಸಬೇಕು. ಸ್ವರ ಸರಿಯಿಲ್ಲ ಸ್ವಲ್ಪ ಕೋಲ್ಡ್ ಆಗಿದೆ .....

ಶ್ರೀ ಕೆ.ಹೆಚ್. ರಂಗನಾಥ:– ಲಿಕ್ಕರ್ ವಿಚಾರ ಮಾತನಾಡುತ್ತಿದ್ದಾರೆ, ಹಾಗಾಗಿ ಇನ್ನೂ ಸ್ವಲ್ಪ ವಾರ್ಮ್ ಅಪ್ ಆಗಬೇಕು....

ಶ್ರೀ ಎಂ. ವೀರಪ್ಪ ಮೊಯಿಲಿ:– ಇನ್ನು ಪಿಡಬ್ಲ್ಯೂಡಿ ಬಗ್ಗೆ ಹೇಳುವುದಾದರೆ, LOC for Irrigation and PWD including the Upper Krishna ಇದರ ಬಗ್ಗೆ ಎಲ್‌ಒಸಿ ಕೊಡಲಿಲ್ಲ ಮತ್ತಿತರ ವಿಚಾರಗಳ ಬಗ್ಗೆ ಸಾಕಷ್ಟು ಚರ್ಚೆಯು ಬರುತ್ತಾ ಇದೆ. ಎಲ್‌ಒಸಿ ಇವೊತ್ತಿನ ದಿವಸದ ತನಕ ನಾನು ಹೇಳುತ್ತಾ ಇರುವುದು, ಅವೈಲ್‌ಬಲ್ ಫಾರ್ ಎಲ್‌ಒಸಿ ಕೊಡಬೇಕಾದುದು ಸುಮಾರು 86.30ಕೋಟಿಗಳಿಗೆ. ಅದರಲ್ಲಿ ಎಲ್‌ಒಸಿ ನಾವು ಈಗಾಗಲೇ ಇಶ್ಯೂ ಮಾಡಿದ್ದು 57.59ಕೋಟಿಗಳಿಗೆ. ಬ್ಯಾಲೆನ್ಸ್ ಇರತಕ್ಕಂಥಾದ್ದು 25.71 ಕೋಟಿ. ಅದನ್ನು ಕೂಡ ಒಂದೆರಡು ವಾರಗಳಲ್ಲಿ ಇಶ್ಯೂ ಮಾಡುತ್ತೇವೆ. There will not be any backlog. ಅದನ್ನು ಕೊಡುತ್ತಾ ಇದ್ದೇವೆ. Z.P. ಬಗ್ಗೆ ಇರುವ ವಿವರಗಳನ್ನು ಬೇಕಾದರೆ ನಾನು ಕೊಡುತ್ತೇನೆ. Z.P. ಬಗ್ಗೆ ನಾವು ಅದನ್ನು ರಿವ್ಯೂ ಮಾಡಿದ್ದೇವೆ. ಜವಾಹರ್ ಯೋಜನೆ ಬಗ್ಗೆ ಸಾಕಷ್ಟು ಹಣ ಇಲ್ಲ ಮತ್ತು ಬೇರೆ ಬೇರೆ ರೀತಿಯಲ್ಲಿ ಹಣ ಇಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ನಾವು ಒಂದು ವಾರದ ಹಿಂದೆ ರಿವ್ಯೂ ಮಾಡಿದ್ದೇವೆ. ಆ ಸಮಯದಲ್ಲಿ ನಮಗೆ

ಏನು ಕಂಡು ಬಂದಿದೆ ಅಂದರೆ, ಈ ಬಗ್ಗೆ ಕೆಲವು ಜಿಲ್ಲೆಗಳಲ್ಲಿ ಹಣ ಇದೆ, 2–3 ಜಿಲ್ಲೆಗಳಲ್ಲಿ ಮಾತ್ರ ಹಣದ ಕೊರತೆ ಇದೆ. ಹಾಗೆ ಕೊರತೆ ಇರತಕ್ಕಂಥ ಜಿಲ್ಲೆಗಳಿಗೆ ನಾವು ಹಣ ತುಂಬಿ ಎಲ್‌ಓಸಿ ಇಶ್ಯೂ ಮಾಡಿದ್ದೇವೆ. ಇನ್ನುಳಿದ ಜಿಲ್ಲೆಗಳಿಗೆ ನಾವು ಅನುಮತಿ ಕೊಟ್ಟಿದ್ದೇವೆ, ನಿಮ್ಮಿಂದ ಹಣವನ್ನು ರಿ–ಅಪ್ರೂಪ್ರಿಯೇಟ್ ಮಾಡಿ ಖರ್ಚು ಮಾಡಿ ಎಂದು. ಏಕೆಂದರೆ, ಅಲ್ಲಿ ಹಣ ಉಳಿಯಬೇಕಾದಂಥ ಅವಶ್ಯಕತೆ ಇಲ್ಲ. 2–3 ಜಿಲ್ಲೆಗಳ ಹೊರತು ಬಾಕಿ ಜಿಲ್ಲೆಗಳಲ್ಲಿ ಹಣವಿದೆ. We have ordered for reappropriation and spend the money. ಸುಮಾರು 81.11 ಕೋಟಿಯಲ್ಲಿ 78 ಕೋಟಿ ರೂಪಾಯಿಗಳಿಗೆ ಎಲ್‌ಓಸಿ ಇಶ್ಯೂ ಆಗಿದೆ. ಅಲ್ಲಿ ಇನ್ನೂ ಮೂರು ಕೋಟಿ ಶಾರ್ಟೇಜ್ ಇದೆ, ಅದನ್ನು ನಾವು ಇಶ್ಯೂ ಮಾಡುತ್ತೇವೆ. ಲಾಸ್ಟ್ ವೀಕ್‌ನಲ್ಲಿ ನಾವು ರಿವ್ಯೂ ಮಾಡಿದ್ದ ಅಂಕಿಸಂಖ್ಯೆಗಳನ್ನು ಕೊಡುತ್ತಾ ಇದ್ದೇನೆ. ಈಗ ಉದಾಹರಣೆಗೆ ಹೇಳಿದ್ದೇನೆ. ಇದರ ವಿವರಗಳನ್ನು ನಾವು ಬಜೆಟ್ ಬಂದಾಗ ವಿಶ್ಲೇಷಣೆ ಮಾಡೋಣ. ಏಕೆಂದರೆ, ಕೆಲವು ಕಾಲ ಈ ಒಂದು ಪರಿಸ್ಥಿತಿಯೂ ಇತ್ತು. ನಮ್ಮ ಆರ್ಥಿಕ ಪರಿಸ್ಥಿತಿಯೂ ಆ ರೀತಿಯಲ್ಲಿತ್ತು. ಇದನ್ನು ನಾವು ಸುಧಾರಿಸಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಆದರೆ ಈ ಜವಾಹರ್ ರೋಜ್‌ಗಾರ್ ಯೋಜನೆ ಯಾವುದಾದರೂ ತಾಂತ್ರಿಕ ಕಾರಣದಿಂದ ನಿಂತಿದೆ. ಈಗ ಕೆಲಸ ಪ್ರಾರಂಭವಾಗುವ ಹಾಗೆ ಮಾಡಿದ್ದೇವೆ. ಹಾಗೆಯೇ ಮನೆ ಕಟ್ಟತಕ್ಕಂಥ ಕಾರ್ಯಕ್ರಮದ ಬಗ್ಗೆ ವಿಶೇಷವಾಗಿ ನಾನು ಹೇಳಬೇಕಾಗಿಲ್ಲ. ಆಶ್ರಯದ ವಿಚಾರದಲ್ಲಿ ನಾವು 1992–93ರ ಬಜೆಟ್‌ನಲ್ಲಿ ಕಾರ್ಯಕ್ರಮವನ್ನು ಕೊಟ್ಟಿದ್ದೇವೆ. ಹೀಗೆ ಯಾವುದೇ ಕಾರ್ಯಕ್ರಮವನ್ನು ನಾವು ನಿಲ್ಲಿಸುವುದಿಲ್ಲ. ಯಾವುದೇ ಕಾರ್ಯಕ್ರಮಗಳನ್ನು ಯೋಜನೆಯ ಪ್ರಕಾರವೇ ಅನುಷ್ಠಾನ ಮಾಡುತ್ತೇವೆ.

ಆಶ್ರಯ ಕಾರ್ಯಕ್ರಮದ ವಿವರಕ್ಕೆ ನಾನು ಆಮೇಲೆ ಬರುತ್ತೇನೆ. ಆಶ್ರಯ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ನಾವು ಹೌಸಿಂಗ್ ಬೋರ್ಡಿಗೆ ಕೊಟ್ಟಿದ್ದೇವೆ. ಹಾಗೆ ಕೊಟ್ಟಾಗ ಕೆಲವು ತೊಂದರೆಯಾಗಿದೆ. ಕೆಲವು ತಾಂತ್ರಿಕ ತೊಂದರೆ ಇವೆ ಅಥವಾ ವೈಯಕ್ತಿಕವಾದ ಕಂಟ್ರಾಕ್ಟರ್‌ಗಳ ಕಾರಣಗಳೂ ಕೂಡ ಇವೆ. ಅವನ್ನೆಲ್ಲ ನಾವು ವಿಮರ್ಶೆ ಈಗಾಗಲೇ ಮಾಡಿದ್ದು ಒಂದೊಂದು ಕ್ಷೇತ್ರಕ್ಕೆ 500 ಮನೆಗಳನ್ನು ನೇರವಾಗಿ ಜಿಲ್ಲಾಧಿಕಾರಿಗಳ ಮೂಲಕ ಮಾಡಬೇಕೆಂದು ಈಗಾಗಲೇ ಹಣ ಬಿಡುಗಡೆಯಾಗುತ್ತಿದೆ. ಎಲ್ಲಾ ಕಡೆ ಆಗಿದೆ.

ಶ್ರೀ ವಾಟಾಳ್ ನಾಗರಾಜ್.– ಪೆಟ್ಟಿಗೆ ಮನೆಗಳು ಅಂತ ಕಟ್ಟಿಸ್ತಿದ್ದೀರಿ, ಅವು ಖಂಡಿತ ಬೇಡಿ ಒಳಗಡೆ ಜನ ಸೇರಿದರೆ ಉಸಿರು ಕಟ್ಟಿ ಸತ್ತು ಹೋಗಿಬಿಡುತ್ತಾರೆ. ಅಧ್ಯಕ್ಷರೇ, ಸುಮ್ಮನೆ ಗೋಡೆ ಸೇರಿಸಿದ ಹಾಗೆ, ಒಂದು ತರಹ ಸಿಮೆಂಟ್ ಗೋಡೆಗಳು. ಮೊನ್ನೆ ನಾನು ನೋಡಿಕೊಂಡು ಬಂದೆ. ನನಗೆ ಎರಡು ನಿಮಿಷ ಒಳಗೆ ನುಗ್ಗಿ ಬರುವಷ್ಟು ಹೊತ್ತಿಗೆ ನನಗೇ ಉಸಿರು ಕಟ್ಟಿತು. ಇನ್ನು ಜನಗಳ ಗತಿಯೇನು ? ನಾನು ಹೋಗಿದ್ದೆ, ಖಂಡಿತವಾಗಿ, ಇದೇನು ಆಟದ ಮನೆಗಳು ಇದ್ದ ಹಾಗೆ ಇವೆ. ಅವಕ್ಕೆ ನಿಜವಾಗಿ ಹೇಳುವುದಾದರೆ ಕಿಟಕಿ ಇಲ್ಲ, ಗಾಳಿ ಇಲ್ಲ, ಏನೂ ಇಲ್ಲ ಆ ಪೆಟ್ಟಿಗೆ ಮನೆಗಳನ್ನು ದಯವಿಟ್ಟು ತೆಗೆದು ಹಾಕಿ ಸ್ವಾಮಿ.

ಆಶ್ರಯದ ಬಗ್ಗೆ ವಿವರವಾದ ಹೇಳಿಕೆಯನ್ನು ಆ ಇಲಾಖೆಯ ಡಿಮಾಂಡ್ ಮೇಲೆ ಚರ್ಚೆ ಸಮಯದಲ್ಲಿ ಹೇಳುತ್ತೇವೆ. ಇದರಲ್ಲಿ ಎರಡು ಭಾಗ ಇದೆ. ಒಂದು, ಜಿಲ್ಲಾಧಿಕಾರಿಗಳ ಮೂಲಕ 15 ಸಾವಿರ ರೂಪಾಯಿಗಳಿಗೆ ಏನು ಮನೆ ಮಾಡುತ್ತೇವೆ ಅದು ತಮಗೆ ಬಿಟ್ಟದ್ದುದು. ಫಲಾನುಭವಿಗಳಿಗೇ ನೇರವಾಗಿ ಹಣ ಹೋಗುತ್ತದೆ. 15 ಸಾವಿರಕ್ಕೆ ಒಳ್ಳೆಯ ಮನೆ ಕಟ್ಟಬಹುದು, ಪೆಟ್ಟಿಗೆ ಮನೆ ಕಟ್ಟುವ ಅವಶ್ಯಕತೆ ಇಲ್ಲ.ಲೋಕಲ್ ಮೆಟಿರಿಯಲ್ಸ್ ಉಪಯೋಗ ಮಾಡಿಕೊಂಡು ಹೇಗೆ ಮಾಡುತ್ತೀರೋ ಮಾಡಿ. ಆಮೇಲೆ ಕೆಲವು ಕಂಟ್ರಾಕ್ಟರ್ಸ್‌ಗೆ ಹಣ ಬಿಡುಗಡೆಯಾಗಿದೆ, ಅವರು ಮೆಟೀರಿಯಲ್ಸ್ ಪರ್ಚೇಸ್ ಮಾಡಿದ್ದಾರೆ. ಆದರೂ ಅವರಿಗೆ ಮನೆ ಕಟ್ಟಲಿಕ್ಕೆ ಬಿಡುತ್ತಿಲ್ಲ. ಅಂದರೆ ಯಾರು ಮನೆ

ಕಟ್ಟಲಿಕ್ಕೆ ಪ್ರಾರಂಭ ಮಾಡಿದ್ದಾರೆ ಅಂದರೆ ಪಂಚಾಂಗ ಗೋಡೆಗೆ ಹಾಕಿ ಅಲ್ಲಿ ಪ್ರಯತ್ನ ನಡೆದಿದೆ ಅಂಥವರಿಗೆ We have allowed them to continue. ಇದು ಒಂದು ಲಕ್ಷದ ಚಿಲ್ಲರೆ ಮನೆ ಆಗುತ್ತದೆ. ಜೂನ್ 93ರ ಒಳಗೆ ಆಗುತ್ತದೆ. ಜಿಲ್ಲಾಧಿಕಾರಿಗಳಿಗೆ ಏನು 500 ಮನೆ ಕೊಟ್ಟಿದ್ದೆವು ಅದು ಆಗುತ್ತದೆ. ಪುನಃ 91-92ರಲ್ಲಿ ಸುಮಾರು 2,75,000 ಮನೆಗಳು. ಅವುಗಳಲ್ಲಿ 600 ಮನೆಗಳನ್ನು ಮಾತ್ರ ಈ ಕಂಟ್ರಾಕ್ಟರ್‌ಗಳಿಂದ ಕಟ್ಟಲಿಕ್ಕೆ ಆಯಿತು. ಆ ವ್ಯವಸ್ಥೆ ವ್ಯಾವಹಾರಿಕವಾಗಿ ಸರಿಬರಲಿಲ್ಲ. ಆದರೂ ನಮ್ಮ ಪಕ್ಷದ ಸರ್ಕಾರ ಏನು ಆಶ್ವಾಸನೆ ಕೊಟ್ಟಿತ್ತು. ಅಷ್ಟೂ ಮನೆಗಳನ್ನು ಕಟ್ಟುವ ಕೆಲಸ ನಮ್ಮ ಸರ್ಕಾರ ಮಾಡುತ್ತದೆ. ಆಮೇಲೆ ಜುಲೈ ನಂತರ ಉಳಿದ ಮನೆಗಳನ್ನು ಕಟ್ಟಲು ನಾವು ಹಣ ಬಿಡುಗಡೆ ಮಾಡುತ್ತೇವೆ. Money will not be a problem. Of course, our money is stuck up with the Contractors and the Housing Board. ಅದು ಏನು ಮಾಡಬೇಕೋ ಅದನ್ನು ಪ್ರತ್ಯೇಕವಾಗಿ ಬಗೆ ಹರಿಸುತ್ತೇವೆ. ಹೊಸ ಕಾರ್ಯಕ್ರಮದಲ್ಲಿ ನಾವು ಏನು ಮಾಡಿದ್ದೇವೆ 15 ಸಾವಿರದಲ್ಲಿ ಮನೆ ಸರ್ಕಾರಕ್ಕೆ ಕೊಡಲು ಆಗುವುದಿಲ್ಲ. ಏಕೆಂದರೆ ಅವರಿಗೆ ಒಂದು ನೆರಳಾದರೂ ಬೇಕು. ಅದಕ್ಕೆ ನಾವೊಂದು ಕಾರ್ಯಕ್ರಮ ಕೊಟ್ಟಿದ್ದೇವೆ. ಅದು ಏನೆಂದರೆ, ಒಂದು ಲಕ್ಷ ಮನೆಗಳನ್ನು ಅಂದರೆ 1993-94ರಲ್ಲಿ 3 ಸಾವಿರ ರೂಪಾಯಿ ಕೊಟ್ಟು ಉಳಿ ಮನೆ ಇದ್ದರೆ ಹೆಂಚು ಅಥವಾ ಲೋಕಲ್ ಮೆಟೀರಿಯಲ್ಸ್ ಹಾಕಿ, 3 ಸಾವಿರ ಕೊಟ್ಟರೆ. ಒಂದೊಂದು ಲಕ್ಷ, ಬೇಕಾದರೆ ಒಂದು ಲಕ್ಷವಷ್ಟೇ ಅಲ್ಲ, ಇನ್ನೂ ಹೆಚ್ಚು ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇದೆಲ್ಲ ಜಿಲ್ಲಾ ಪರಿಷತ್ ಮೂಲಕ ಮಾಡುತ್ತೇವೆ ಹೌಸಿಂಗ್ ಬೋರ್ಡ್ ಮೂಲಕವಲ್ಲ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಡಾ॥ ಅಂಬೇಡ್ಕರ್ ಮನೆ ಕಾರ್ಯಕ್ರಮವನ್ನು ವ್ಯಾಪಕವಾಗಿ ಬಹಳ ದೊಡ್ಡ ಗಾತ್ರದಲ್ಲಿ ಮಾಡುತ್ತೇವೆ. ಆದರೆ 15 ಕೋಟಿ ರೂಪಾಯಿ ಯಲಹಂಕ ಹೌಸಿಂಗ್ ಸ್ಕೀಮಿಗೆ ಡೈವರ್ಟಾಗಿಬಿಟ್ಟಿದೆ. ಆದ್ದರಿಂದ ಅದಕ್ಕೂ ಪ್ರತ್ಯೇಕ ಹಣ ಒದಗಿಸಿ ಡಾ॥ ಅಂಬೇಡ್ಕರ್ ಹೌಸಿಂಗ್ ಸ್ಕೀಮ್ ನಿಲ್ಲದ ರೀತಿ ನಾವು ಆದೇಶ ಕೊಟ್ಟಿದ್ದೇವೆ ಮತ್ತು ಹಣವನ್ನೂ ಬಿಡುಗಡೆ ಮಾಡುತ್ತಿದ್ದೇವೆ.

ಇನ್ನು ಸೈಟುಗಳ ಹಂಚುವಿಕೆ ಇದೊಂದು ವ್ಯಾಪಕವಾದ ಕಾರ್ಯಕ್ರಮ. This is one of the programme which was done very well during the year. ಇದು ಬಹಳ ಚೆನ್ನಾಗಿ ಆಗಿದೆ. ಇದರಲ್ಲಿ ಕೆಲವರಿಗೆ ಕೆಲವು ಸಂಶಯ ಬಂದಿದೆ. ಅದೇನೆಂದರೆ ನಾವು ಫಾರೆಸ್ಟ್ ಜಾಗದಲ್ಲಿ ಇದನ್ನು ಮಾಡಬೇಕು ಎಂದು ಹೇಳಿ ಎಲ್ಲೆಲ್ಲಿ de-forestation ಆಗಿದೆ, ಫಾರೆಸ್ಟ್ ಇಲ್ಲದ ಜಾಗ, ಅದನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕಂಥ ಪ್ರಶ್ನೆ ಇಲ್ಲ, ಅಲ್ಲಿ ಹೌಸ್ ಸೈಟುಗಳನ್ನು ಮಾಡಿಯೇ ಮಾಡುತ್ತೇವೆ. ಮತ್ತೊಂದು, ಇನ್ನೊಂದು ಸುದ್ದಿ ಪುರಾವೆಗೆ ಯಾರೂ ಕಿವಿ ಕೊಡಬೇಕಾಗಿಲ್ಲ. We are commited for giving sites and houses.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅಲ್ಲಿ ಏನು ಫಾರೆಸ್ಟ್ ಸೈಟ್ ಕೊಟ್ಟಿದ್ದಾರಲ್ಲಾ ಹೊಸ ಸೈಟ್ ಫಾರಂ ಮಾಡಿ ಕೊಟ್ಟಿಲ್ಲ. ಎಲ್ಲಿ ಆ ಬಡಜನರು ಇದ್ದಾರೆ. ಆ ಬಡ ಜನರಿಗೆ ಸೈಟು ಕೊಟ್ಟಿದ್ದುದು ಒಳ್ಳೆಯ ಕಾರ್ಯಕ್ರಮ. ಸರ್ಕಾರ ಅದನ್ನು ಮಾಡಿದೆ. ಆದರೆ ಇವತ್ತು ಏನಾಯಿತು ಎಂದರೆ, ತಾವು ಮುಖ್ಯಮಂತ್ರಿಯಾದ ನಂತರ wrong signals have gone. ಏನೆಂದರೆ ಗೌರ್ನಮೆಂಟ್ ಆಫ್ ಇಂಡಿಯಾ ಅಬ್ಜೆಕ್ಟ್ ಮಾಡುತ್ತಾರೆ. They have taken objection. ಆದರೆ ಇಲ್ಲಿ ಏನು ಗಿಡ ಇಲ್ಲ, ಮರ ಇಲ್ಲ, ಏನೂ ಇಲ್ಲ, ಅವರ ಗುಡಿಸಲು ಅಲ್ಲಿಯೇ ಇದೆ. ಆ ಬಡ ಜನರಿಗೆ ಒಂದು ಸೈಟು ಕೊಟ್ಟಿದ್ದಾರೆ. ಆದರೆ ತಾವು ಮುಖ್ಯಮಂತ್ರಿಯಾದ ಮೇಲೆ wrong signals have gone.

ಈಗ ಇದನ್ನು ವಿತ್‌ಡ್ರಾ ಮಾಡುತ್ತಾರಂತೆ ಹಾಗಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ನಾವು ಯಾವ ಜನರ ಕೈಯಲ್ಲಿ ಪಟ್ಟಾ ಕೊಟ್ಟಿದ್ದೇವೆ. ಈಗಾಗಲೇ ಅವರ ಮೇಲೆ ಕಿರುಕುಳ ಶುರು ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲೂ ಮಾಡಿದ್ದಾರೆ. ಆದ್ದರಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಾವು ಬಹಳ ಸ್ಪಷ್ಟವಾಗಿ ಆದೇಶ ಕೊಡಬೇಕಾಗುತ್ತದೆ, ಈಗಾಗಲೇ ಯಾರಿಗೆ ನಾವು ಪಟ್ಟಾ ಕೊಟ್ಟಿದ್ದೇವೆ, ಅವರೆಲ್ಲರಿಗೂ ಸರ್ಕಾರದಿಂದ ಪ್ರೊಟೆಕ್ಷನ್ ಸಿಗಬೇಕು. ಆ ಆದ್ಯತೆಯ ಮೇಲೆ ತಾವು ಹೋಗಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಂದು ಫಾರೆಸ್ಟ್ ಲ್ಯಾಂಡ್ ಬಗ್ಗೆ, ಇನ್ನೊಂದು ಯಾವುದೇ ಸಮಸ್ಯೆ ಇಲ್ಲದೆ ನಮ್ಮ ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಏನು ಆಶ್ರಯ ಯೋಜನೆಯಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ, ಇಲ್ಲಿ ಎಲ್ಲಿ ರೆವಿನ್ಯೂ ಲ್ಯಾಂಡ್ ಇಲ್ಲ, ನಮ್ಮ ಸರ್ಕಾರದ್ದು ಯಾವುದೂ ಜಾಗ ಇಲ್ಲ, ಮಾರುಕಟ್ಟೆ ರೇಟಿಗಿಂತ 30 ಪರ್ಸೆಂಟ್ ಜಾಸ್ತಿ ಕೊಡಬಹುದು ಎಂದು ಏನು ನಮಗೆ ಏನು ಆದೇಶ ಕೊಟ್ಟಿದ್ದಾರೋ ಅದರಂತೆ ಜಮೀನುಗಳನ್ನು ಕೊಂಡು ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಎರಡು-ಮೂರು ತಿಂಗಳಾದರೂ ಸಹ, ಗೌರ್ನಮೆಂಟ್‌ಗೆ ಕಳುಹಿಸಿದ್ದೇವೆ ಎಂದು ಅಪ್ರೂವಲ್ ಕೊಟ್ಟಿಲ್ಲ. ಇದುವರೆಗೂ ನಾವು ಸೈಟನ್ನು ಹಂಚುತ್ತಿಲ್ಲ. ಇದು ಒಂದನೆಯದು. ಎರಡನೆಯದು ತಾವು ಮಾತನಾಡಬೇಕಾದರೆ ಅಂಕಿ ಅಂಶಗಳನ್ನು ಕೊಟ್ಟಿರಿ. ಮುಂದೆ ತಾವು ಏನು ಮಾಡುತ್ತೀರಿ, ಅದನ್ನು ನಾವು ಕಾದು ನೋಡುತ್ತೇವೆ, ತಾವು ಮಾಡಿ. ತಾವು ಕೊಟ್ಟಿರತಕ್ಕಂಥ ಅಂಕಿ ಅಂಶದ ಪ್ರಕಾರ ಡಾಕ್ಟರ್ ಅಂಬೇಡ್ಕರ್ ಶತಮಾನೋತ್ಸವ ಸಂದರ್ಭದಲ್ಲಿ ನೀವು ಭರವಸೆಯನ್ನು ಕೊಟ್ಟಂತೆ ತಾಲ್ಲೂಕಿಗೆ ನೂರು ಮನೆ ಕಟ್ಟಬೇಕಾಗಿತ್ತು. ತಾವೇ ಹೇಳಿಕೆಯನ್ನು ಕೊಟ್ಟಿದ್ದೀರಿ ಮತ್ತು ನೀವು ಲಿಖಿತ ಮೂಲಕವೂ ಕೊಟ್ಟಿದ್ದೀರಿ. ಇಡೀ ರಾಜ್ಯದಲ್ಲಿ ಇದುವರೆಗೂ 20 ಮನೆ ಪೂರ್ಣವಾಗಿಲ್ಲ. ಎರಡನೆಯದು ಆಶ್ರಯ ಯೋಜನೆಯಲ್ಲಿ ಎರಡು ಲಕ್ಷದ 35 ಸಾವಿರ ಮನೆಗಳನ್ನು ಏನು ಕಟ್ಟಬೇಕಾಗಿತ್ತು. ತಾವೇ ಕೊಟ್ಟಿರುವಂಥ ಅಂಕಿಅಂಶಗಳ ಪ್ರಕಾರ ಇಡೀ ರಾಜ್ಯದಲ್ಲಿ ಒಟ್ಟು 1579 ಮನೆಗಳನ್ನು ಮಾತ್ರ ತಾವು ಪೂರ್ಣ ಮಾಡಿದ್ದೀರಿ. ಈ ಪರಿಸ್ಥಿತಿ ಇರಬೇಕಾದರೆ ಮಾರ್ಚ್ ಒಳಗೆ ಮುಗಿಸುತ್ತೇವೆ ಎಂದು, ಜೂನ್ ಒಳಗೆ ಮುಗಿಸುತ್ತೇವೆಂದು ಆಮೇಲೆ ಹೇಳಿದಿರಿ. ಜಿಲ್ಲಾಧಿಕಾರಿಗಳಿಗೆ ನೀವು ಇದುವರೆಗೂ ಹಣ ಬಿಡುಗಡೆ ಮಾಡಿಲ್ಲ. ಎರಡು ಲಕ್ಷ ಮೂರು ಲಕ್ಷ ಅಥವಾ ಐದು ಲಕ್ಷ ಕೊಟ್ಟರೆ – 500 ಮನೆಗಳನ್ನು ಎಲ್ಲಿಂದ ಕಟ್ಟುವುದಕ್ಕೆ ಸಾಧ್ಯ ? ಆದ್ದರಿಂದ ದಯ ಮಾಡಿ ಈಗಿರುವ ಅಂಕಿಅಂಶಗಳನ್ನು ಹೋಲಿಸಿಕೊಂಡು ಹಿಂದೆ ಆದಂಥ ತಪ್ಪು ಇನ್ನು ಮುಂದೆ ಆಗುವುದಿಲ್ಲ, ನಾನು ಅದಕ್ಕೆ ಭರವಸೆಯನ್ನು ಕೊಡುತ್ತೇನೆ ಎಂದು ಹೇಳಿ. ಹಿಂದೆ ನಾವು ಮಾಡಿದ್ದೇನೆ ಎಂದು ಏತಕ್ಕೆ ಹೇಳುತ್ತೀರಿ ? ಡಾ।। ಅಂಬೇಡ್ಕರ್ ಶತಮಾನೋತ್ಸವ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ 20 ಮನೆಗಳನ್ನು ಕಟ್ಟದೆ ಮತ್ತೆ ಸೈಟ್‌ಗಳಿಗಾಗಿ ಜಮೀನನ್ನು ಕೊಂಡುಕೊಳ್ಳುತ್ತೇವೆ ಎಂದು ಹೇಳಿ ನಿಮಗೆ ಕಳುಹಿಸಿಕೊಟ್ಟ ಫೈಲು ಡಿಸ್‌ಪೋಸ್ ಮಾಡದೆ ಇನ್ನು ನೂರಾರು ಫೈಲುಗಳು ಪ್ರತಿಯೊಂದು ಜಿಲ್ಲೆಯಲ್ಲಿ ಉಳಿದಿರಬೇಕಾದರೆ ತಾವು ಹೇಗೆ ಕೆಲಸವನ್ನು ಮಾಡುತ್ತೀರಿ ? ಅದನ್ನು ಹೇಗೆ ಹೇಳುತ್ತೀರಿ ?

ಶ್ರೀ ವಾಟಾಳ್ ನಾಗರಾಜ್:- ಉದಾಹರಣೆಗೆ ಹೇಳುತ್ತೇನೆ, ನಮ್ಮ ಒಂದೇ ತಾಲ್ಲೂಕಿನಲ್ಲಿ 50 ಎಕರೆ ಜಾಗವನ್ನು ರೆಡಿ ಮಾಡಿ ಪ್ರತಿಯೊಂದು ಮಾಡಿ ಜಿಲ್ಲಾಧಿಕಾರಿಗಳಿಗೆ ಅವುಗಳನ್ನು ಕಳುಹಿಸಿ ನಾಲ್ಕೂವರೆ ತಿಂಗಳಾಯಿತು. ಇವತ್ತಿನವರೆಗೂ ಹಣ ಇಲ್ಲ. ನಮ್ಮ ಮುಖ್ಯಮಂತ್ರಿಗಳ ಹತ್ತಿರ ನಾನೇ ಹೋಗಿ ಕೇಳಿದೆ. ಅವರಲ್ಲಿ ಹಣ ಕೇಳುವುದಕ್ಕೆ ಹೋಗಿ ಒಂದು ತಿಂಗಳು ಆಗಿಹೋಯಿತು. ಇನ್ನು ಹಣ ಇಲ್ಲ. ಇನ್ನು ಯಾವ ಕಾಲಕ್ಕೆ ಆಶ್ರಯ ಯೋಜನೆಯನ್ನು ಮಾಡುವುದು ? ನಾನು ತಮಗೆ ಹೇಳುತ್ತೇನೆ, ಪ್ರತಿಯೊಂದು ನೋಡಿ, ರೆಡಿ ಮಾಡಿ ಯಾವ ತೊಂದರೆ ಇಲ್ಲದೆ ನಮ್ಮ ಸಮಿತಿ ಸಭೆ ಸೇರಿ ತೀರ್ಮಾನ ತೆಗೆದುಕೊಂಡು ನಾವು ಕಳುಹಿಸಿದ್ದೇವೆ. ಇವತ್ತಿನವರೆಗೂ ಹಣ ಕೊಟ್ಟಿಲ್ಲ. ಎಲ್ಲಾ ತಾಲ್ಲೂಕುಗಳ ಹಣೆಬರಹವೇ ಹೀಗೆ. ತಾವು ಇಲ್ಲಿ ಕುಳಿತುಕೊಂಡು ಹೇಳಿಬಿಡುತ್ತೀರಿ. ಎಲ್ಲಾ

ಜಿಲ್ಲಾಧಿಕಾರಿಗಳಿಗೂ ಹಣ ಬಿಡುಗಡೆ ಮಾಡಿದ್ದೇವೆ. ನಾಳೆ ಬೆಳಿಗ್ಗೆ ನಿಮಗೆ ಬರುತ್ತದೆ, ಸೂರ್ಯ ಉದಯವಾಗುತ್ತಾನೆ ಎಂದು. ಇದು ಆಗುವುದಿಲ್ಲ. ದಯಮಾಡಿ ಸ್ಪಷ್ಟರಾದಂಥ ನಿರ್ದೇಶನವನ್ನು ಕೊಡಿ. ಇಲ್ಲದೇ ಹೋದರೆ ಇದರಿಂದ ಏನೂ ಆಗುವುದಿಲ್ಲ. ಪ್ರತಿ ದಿನ ಎಲ್ಲಾ ಹಳ್ಳಿಗಳಿಗೆ ಹೋದರೆ ಆ ಹಳ್ಳಿಗೆ ನೀವು ಸೈಟ್, ನಿವೇಶನವನ್ನು ಕೊಟ್ಟಿದ್ದೀರಿ, ನಮ್ಮ ಹಳ್ಳಿಗಳಿಗ ಇಲ್ಲ ಎಂಬ ಜನಗಳ ಕೂಗು ಎಲ್ಲಾ ಕಡೆಗೂ ಇದೆ,. ಬರೀ ನನ್ನ ಒಂದು ತಾಲ್ಲೂಕು ಅಲ್ಲ. ನಾನು ಸುಮ್ಮನೆ ನಿಮಗೆ ಉದಾಹರಣೆ ಕೊಟ್ಟೆ ಇದು ಎಲ್ಲಾ ಕಡೆಗೂ ಇದೆ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಎಂದು ಏನು ಹೇಳಿದರು ಅದು ಸ್ವಾಗತಾರ್ಹ. ಆದರೆ ಇರತಕ್ಕಂಥ 87ನೇ ಇಸವಿಯಿಂದ 91ರವರೆಗೆ ಜನತಾ ಮನೆಗಳನ್ನು ಕಟ್ಟಿ ಅಪೂರ್ಣವಾಗಿದೆ. ಆ ಮನೆಗಳಿಗೆ ಹಣ ಕೊಟ್ಟಿಲ್ಲ. ಅವರು ಬಡವರು ಇದ್ದಾರೆ. ಪ್ಲಿಂಗ, ಹಾಕಿದ್ದಾರೆ, ಗೋಡೆ ಹಾಕಿದ್ದಾರೆ, ಅಪೂರ್ಣವಾದಂಥ ಮನೆಗಳಿಗೆ ನಾಲ್ಕೈದು ವರ್ಷಗಳಲ್ಲಿ ಕಟ್ಟಿದಂಥ ಜನತಾ ಮನೆಗಳಿಗೆ ಸರ್ಕಾರ ಹಣ ಕೊಟ್ಟಿಲ್ಲ. ತಾವೇ ಕೊಟ್ಟಂಥ ಅಂಕಿಅಂಶಗಳ ಪ್ರಕಾರ ಇಡೀ ರಾಜ್ಯದಲ್ಲಿ 42 ಕೋಟಿ ರೂಪಾಯಿ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾನು ಇನ್ನೂ ಅಲ್ಲಿಗೆ ಬರಲೇ ಇಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:– ಅದನ್ನು ಮೊದಲು ಕೊಡಿ. ಹೊಸದಾಗಿ ಕಟ್ಟುವುದನ್ನು ಆಮೇಲೆ ಯೋಚನೆ ಮಾಡಿ. ಅವರೂ ಬಡವರು. ಫಲಾನುಭವಿಗಳನ್ನು ಆಯ್ಕೆ ಮಾಡಿ ಐದು ವರ್ಷ ಆಯಿತು. ಅವರು ಮನೆ ಕಟ್ಟಿಕೊಂಡು ಅರ್ಧಂಬರ್ಧ ಆಗಿವೆ. ಅದಕ್ಕೆ ಕೊಡುವ ವ್ಯವಸ್ಥೆ ಏನು ಮಾಡಿದ್ದೀರಿ, ದಯವಿಟ್ಟು ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಅಧ್ಯಕ್ಷರೆ ....

ಚೇರ್ಮನ್:– ತಾವು ಕುಳಿತುಕೊಳ್ಳಿ. ಅವರು ಮುಗಿಸಿದ ಮೇಲೆ ಎಷ್ಟು ಬೇಕಾದರೂ ಕೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– ನಾನು ಬರೀ ಭಾಷಣ ಮಾಡುತ್ತಾ ಇಲ್ಲ. ಒಂದು ಪ್ರಮುಖವಾದ ವಿಚಾರ ಹೇಳುತ್ತೇನೆ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಆಶ್ರಯ' ಯೋಜನೆಯಲ್ಲಿ ಆಗಿರುವಂಥ ವಿಚಾರ ಹೇಳುತ್ತೇನೆ.

ಚೇರ್ಮನ್:– ಆಮೇಲೆ ಹೇಳಿ.

ಶ್ರೀ ಬಸವರಾಜ ರಾಯರೆಡ್ಡಿ:– ಆಶ್ರಯ ಯೋಜನೆಯಲ್ಲಿ ನೀವು 500 ಮನೆಗಳನ್ನು ಕಾನ್ಸ್‌ಸ್ಟಿಟ್ಯೂನ್ಸಿಗೆ ಕೊಟ್ಟಿದ್ದೀರಿ, ನಾವು ಸೆಲೆಕ್ಟ್ ಮಾಡಿದ್ದೇವೆ. 15 ಸಾವಿರ ರೂಪಾಯಿಗಳಿಗೆ ಒಂದು ಮನೆ ಕಟ್ಟಲಿಕ್ಕೆ ಸರ್ಕಾರ ತೀರ್ಮಾನ ಮಾಡಿದೆ. ನಾನು ನಿನ್ನೆಯ ದಿವಸ ಜಿಲ್ಲಾಧಿಕಾರಿಯವರನ್ನು ಕೇಳಿದೆ. 500 ಮನೆಗಳನ್ನು ಪ್ರತಿ ಕ್ಷೇತ್ರವಾರು ಕೊಟ್ಟಿದ್ದಾರೆ, ಇನ್ನೂ ಕಟ್ಟದ ಪ್ರಾರಂಭ ಆಗಿಲ್ಲ ಎಂದು, ಆಗ ನಮ್ಮ ಜಿಲ್ಲಾಧಿಕಾರಿಗಳು ಹೇಳಿದರು, 15 ಸಾವಿರ ರೂಪಾಯಿ ಅಂದಾಜು ವೆಚ್ಚ ಮಾಡಿ ಮನೆ ಕಟ್ಟಬೇಕು ಎಂದರೆ ಕಟ್ಟಲಿಕ್ಕೆ ಸಾಧ್ಯ ಆಗುತ್ತಾ ಇಲ್ಲ ಎಂದರು. ಕರ್ನಾಟಕ ಭೂ ಸೇನಾ ನಿಗಮದವರೂ ಮನೆಗಳನ್ನು ಕಟ್ಟಲಿಕ್ಕೆ ಬರುತ್ತಾ ಇಲ್ಲ ಮತ್ತು ನಮ್ಮಿಂದ ಅಂದರೆ ಜಿಲ್ಲಾಧಿಕಾರಿಗಳ ಪರವಾಗಿ ಕೂಡ ನೀವು ಮನೆ ಕಟ್ಟಲಿಕ್ಕೆ ಕೊಟ್ಟಿದ್ದೀರಿ, ಅವರೂ ಕೂಡ ಮುಂದೆ ಬರುತ್ತಾ ಇಲ್ಲ. ಅದಕ್ಕಾಗಿ ಈ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗಿಲ್ಲ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಒಂದು ಮನೆಯನ್ನೂ ಕಟ್ಟಿಲ್ಲ. ಅವರ ಪ್ರಕಾರ, ಕೊನೆಯ ಪಕ್ಷ 18 ಸಾವಿರ ರೂಪಾಯಿಗಳನ್ನಾದರೂ ನೀವು ಒಂದು ಮನೆಗೆ

ಕೊಡಬೇಕು. ಇಲ್ಲದಿದ್ದರೆ ಮನೆ ಕಟ್ಟುವುದಕ್ಕೆ ಆಗುವುದಿಲ್ಲ ಎಂಬು ಹೇಳುತ್ತಾರೆ. ದಯಮಾಡಿ ತಾವು ಇದರ ಬಗ್ಗೆ ಪರಿಶೀಲನೆ ಮಾಡಬೇಕು.

ಚೇರ್ಮನ್:– ಅವರು ಎಲ್ಲದಕ್ಕೂ ಉತ್ತರ ಹೇಳುತ್ತಾರೆ, ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಈಗ ಆಶ್ರಯ ಬಗ್ಗೆ, ಸೈಟ್ ಬಗ್ಗೆ ಹೇಳಿದ್ದೇನೆ. ಇದು ಬಹಳ ತಾಂತ್ರಿಕವಾದ ಪ್ರಶ್ನೆ. ಎಲ್ಲಿ ಮನೆ ಕೊಡುವುದಕ್ಕೆ ಆಗಿಲ್ಲ, ಜಾಗ ಇಲ್ಲದೇ ಇರುವಂತಹ ಕಡೆ ನಾವು ಸಬ್‌ಸ್ಟಿಟ್ಯೂಟ್ ಲ್ಯಾಂಡ್ ಕೊಡುತ್ತಿದ್ದೇವೆ. ಈ ರೀತಿಯಲ್ಲಿ ನಾವು ಈ ಪ್ರಾಣಾಯಾಮ ಮಾಡುತ್ತಲೇ ಇರುತ್ತೇವೆ; ಅದು ಆಗುವುದೇ ಇಲ್ಲ. ಆ ತಾಂತ್ರಿಕ ದೋಷವನ್ನು ನಾವು ನಿವಾರಣೆ ಮಾಡುತ್ತೇವೆ. ಈಗಾಗಲೇ ಅನೇಕ ಸಮಸ್ಯೆಗಳು ಬಂದಾಗ ನಾವು ಕುಳಿತುಕೊಂಡು ಆ ಸಮಸ್ಯೆಗಳನ್ನು ಪರಿಹಾರ ಮಾಡಿದ್ದೇವೆ. ಆದ್ದರಿಂದ ಎಲ್ಲಿ ಫಾರೆಸ್ಟ್ ಇಲ್ಲ, ಇದ್ದದ್ದು ಫಾರೆಸ್ಟ್ ಲ್ಯಾಂಡ್ ಆಗಿ ವರ್ಗೀಕರಣ ಆಗಿವೆ, ಅದರ ಬಗ್ಗ ಸಬ್‌ಸ್ಟಿಟ್ಯೂಟ್ ಲ್ಯಾಂಡ್ ಕೊಡುತ್ತೇವೆ, ಇಡೀ ಸ್ಟೇಟ್‌ನಲ್ಲಿ ಎಲ್ಲಿಯಾದರೂ ಕೊಟ್ಟು ಆ ತಾಂತ್ರಿಕ ದೋಷ ಏನು ಇದೆ, ಅದನ್ನು ನಿವಾರಣೆ ಮಾಡಿಕೊಳ್ಳುತ್ತೇವೆ. ಹಿಂದೆ ತೆಗೆದುಕೊಳ್ಳುವ ಪ್ರಶ್ನೆ ಇಲ್ಲ, ಅಲಾಟ್ ಮಾಡಿದ್ದನ್ನು ಹಿಂದೆ ತೆಗೆದುಕೊಳ್ಳುವುದಿಲ್ಲ. ಇನ್ನು ಮನೆಯ ಬಗ್ಗೆ ತಾವು ಹೇಳಿದ್ದೀರಿ. ಅಕ್ವೈರ್ ಮಾಡಿದ್ದಕ್ಕೆ ಅಂದರೆ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಹಣ ಇಲ್ಲವೆಂದು ಪ್ರಸ್ತಾಪ ಮಾಡಿದ್ದೀರಿ. ನಾವು ಯೋಚನೆ ಮಾಡುತ್ತಿದ್ದೇವೆ. ಆಗಾಗ ಸೆಕ್ರೆಟರಿಯೇಟ್ ಹಂತಕ್ಕೆ ಬರುವ ಬದಲು ಡೆಪ್ಯೂಟಿ ಕಮೀಷನರ್ ಹತ್ತಿರ ಒಂದು ಕಾರ್ಪಸ್ ಫಂಡ್ ಮಾಡುವುದು. ಅಕ್ವಿಸಿಷನ್ ಪ್ರಶ್ನೆ ಬಂದಾಗ ತಕ್ಷಣ ಆ ಹಣವನ್ನು ಒದಗಿಸಿ ಆ ಕಾರ್ಯಕ್ರಮ ತೆಗೆದುಕೊಂಡು ಎಷ್ಟೆಷ್ಟು ಇದೆ ಎಂದು ವಿಚಾರ ಸಂಗ್ರಹ ಮಾಡಿ ಯಾವ ಜಿಲ್ಲಾಧಿಕಾರಿಗೆ ಎಷ್ಟು ಹಣ ಬೇಕು ಎಂದು ಅದನ್ನೆಲ್ಲಾ ಪರಿಷ್ಕರಣ ಮಾಡಿ, ಅದಕ್ಕೆ ನಾವು ಸರಿಯಾದ ಹಣ ಒದಗಿಸುತ್ತೇವೆ. ಆದ್ದರಿಂದ ಬಾಕಿ ಕಾರ್ಯಕ್ರಮ ಸ್ವಲ್ಪ ಆದರೂ ಕೂಡ ಹೈಟ್ ಮಟ್ಟಿಗೆ ಮಾತ್ರ, ತಾವು 15–20 ದಿವಸ ಕಾದು ನೋಡಿ, ಏನು ಮಾಡುತ್ತೇವೆಂದು ಅಷ್ಟೆ. ಈಗಾಗಲೇ ನೀರಾವರಿ ಮತ್ತು ಪವರ್ ಬಗ್ಗೆ ಹೇಳಿದ್ದೇವೆ. ನಮ್ಮ ಸರ್ಕಾರವಂತೂ ಒಂದು ಸ್ಪಷ್ಟವಾದ ನಿರ್ಣಯ ತೆಗೆದುಕೊಂಡಿದೆ. ನೀರಾವರಿಗೆ ಸುಮಾರು 900 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಅದರಲ್ಲಿ 300 ಕೋಟಿ ರೂಪಾಯಿ ಕಾವೇರಿಗೆ ಮತ್ತು 600 ಕೋಟಿ ರೂಪಾಯಿ ಕೃಷ್ಣಾ ಹಾಗೂ ಉಳಿದ ಪ್ರಾಜೆಕ್ಟ್‌ಗಳಿಗೆ ಕೊಟ್ಟಿದ್ದೇವೆ. ಇನ್ನೂ ಕೂಡ ಇರಿಗೇಷನ್ ಫಂಡ್ ಎಂದು ನಾವು ಈಗಾಗಲೇ ಬಜೆಟ್‌ನಲ್ಲಿ ಒಂದು ಹೊಸ, ನವೀನ ರೀತಿಯಲ್ಲಿ ಆಲೋಚನೆ ಮಾಡಿ ಸುಮಾರು ಅಪ್ರಾಕ್ಸಿಮೇಟ್ಲಿ 500 ಕೋಟಿ ಬಂದರೆ ಸುಮಾರು 1400 ರಿಂದ 1500 ಕೋಟಿ ರೂಪಾಯಿಗಳನ್ನು ಬರೇ ಇರಿಗೇಷನ್ ಸೆಕ್ಟರ್‌ಗೆ ಖರ್ಚು ಮಾಡತಕ್ಕ ಒಂದು ದೊಡ್ಡ ಹೆಜ್ಜೆಯನ್ನು ನಾವು ಇಟ್ಟಿದ್ದೇವೆ. ಇದರಲ್ಲಿ ಕೆಲವು ಕಡೆ ನಾವು ಬಹಳ ರಿಜಿಡ್ ಆಗಿ ಹೋಗುತ್ತೇವೆ. ಅದಕ್ಕೆ ಎಲ್ಲೆಲ್ಲಿ ಲಿಫ್ಟ್ ಇರಿಗೇಷನ್ ಕೋಆಪರೇಟೀವ್ ಸೊಸೈಟಿ ಮಾಡಿಕೊಂಡು ಬೇರೆ ಬೇರೆ ಈ ಇರಿಗೇಷನ್ ಪ್ರಾಜೆಕ್ಟ್‌ಗಳಲ್ಲಿ ಮುಂದೆ ಬರುತ್ತಾರೆ, ಅವರಿಗೆ ನಾವು ಸಬ್ಸಿಡಿ ಕೊಟ್ಟು, ಇಂಟರೆಸ್ಟ್ ಸಬ್ಸಿಡಿ ಕೊಟ್ಟು ನಾವು ಅಂತಹ ಪ್ರೋತ್ಸಾಹ ಕೊಡುತ್ತೇವೆ. ರೈತರೇ ಲಿಫ್ಟ್ ಇರಿಗೇಷನ್ ಮಾಡುವುದಿದ್ದರೆ ಅದನ್ನು ಉಪಯೋಗ ಮಾಡಲಿಕ್ಕೆ ನಾವು ಒಂದು ಪ್ರೋತ್ಸಾಹದಾಯಕವಾದ ಹೊಸ ಯೋಜನೆಯನ್ನು ಈಗಾಗಲೇ ಆಯವ್ಯಯದ ಪಟ್ಟಿಯಲ್ಲಿ ವಿಶೇಷವಾಗಿ ಕಾಣಿಸಿದ್ದೇವೆ. ಇನ್ನು ವಿದ್ಯುತ್ ಬಗ್ಗೆಯೂ ಕೂಡ ಸುಮಾರು 700 ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಒಪ್ಪಿಸಿದ್ದೇವೆ. ಅನಂತರ ವಿಶೇಷವಾಗಿ ನಾವು ಕ್ಯಾಪ್ಟೀವ್ ಜನರೇಷನ್‌ನ ದೊಡ್ಡ ಕೆಪಾಸಿಟಿ ನಮ್ಮಲ್ಲಿದೆ, ಅದು ಐಡಲ್ ಆಗಿದೆ, ಉಪಯೋಗ ಮಾಡಲಿಲ್ಲ, ಅದನ್ನು ಉಪಯೋಗ ಮಾಡತಕ್ಕಂತಹ ಒಂದು ವಿಶೇಷವಾದ ಪ್ರಕ್ರಿಯೆಯನ್ನು ನಾವು ತೆಗೆದುಕೊಂಡಿದ್ದೇವೆ. ಈಗಾಗಲೇ M.O.U. ಹಿಂದಿನ ಮಂತ್ರಿಮಂಡಲ ತೆಗೆದುಕೊಂಡದ್ದನ್ನು ಪರಿಷ್ಕರಣ ಮಾಡಿ, ಸುಮಾರು ಕೆಲವೇ ದಿವಸದಲ್ಲಿ 1500 ಮೆಗಾವ್ಯಾಟ್

ಪವರ್ ಖಾಸಗಿ ಸೆಕ್ಟಾರ್‌ನಲ್ಲಿ ಬರಬೇಕಾಗಿದೆ. ಅದಕ್ಕೆ ಮಾಡಬೇಕಾದ ಯೋಜನೆಗಳನ್ನು ಅನುಷ್ಠಾನ ಮಾಡತಕ್ಕಂಥ ಹಂತದಲ್ಲಿದ್ದೇನೆ. ಈ ಬಗ್ಗೆ ಬಹಳ ಆಶಾದಾಯಕವಾದ ಪರಿಸ್ಥಿತಿ ಬರುತ್ತಾ ಇದೆ.

ಇನ್ನು ಕನ್ನಡವನ್ನು ಆಡಳಿತ ಭಾಷೆಯಾಗಿ ಅನುಷ್ಠಾನ ಮಾಡುವಲ್ಲಿ ನಾವು ಎರಡು ಹೆಜ್ಜೆಗಳನ್ನು ಇಟ್ಟಿದ್ದೇವೆ. ಬಾಕಿ ಕಾರ್ಯಕ್ರಮ ತೆಗೆದುಕೊಂಡು ಅಂದರೆ ಡಾ।। ಸರೋಜಿನಿ ಮಹಿಷಿ ವರದಿಯ ಅನುಷ್ಠಾನದ ವಿಚಾರವನ್ನು ಈಗ ವಿವರವಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಆಡಳಿತದಲ್ಲಿ ಕನ್ನಡ ಭಾಷೆಯನ್ನು ಅನುಷ್ಠಾನಗೊಳಿಸಲು ಅಂದರೆ ಈಗ ಜಿಲ್ಲಾಮಟ್ಟದವರೆಗೆ ಶೇಕಡ 90ರಷ್ಟು ಅನುಷ್ಠಾನವಾಗಿದೆ. ಉಳಿದಂತಹ 10 ಪರ್ಸೆಂಟ್ ಅನ್ನು ಈ ವರ್ಷ ಅನುಷ್ಠಾನ ಮಾಡುತ್ತೇವೆ. ಇನ್ನು ಸೆಕ್ರೆಟರಿಯೆಟ್ ಮಟ್ಟಿಗೆ ನಾವು ಎರಡು ಪ್ರಮುಖವಾದಂತಹ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಎಲ್ಲಾ ಕಡತದಲ್ಲಿ ಕಾರ್ಯದರ್ಶಿಯವರು ಮಾಡಿರಬಹುದು, ಉಪಕಾರ್ಯದರ್ಶಿಯವರು ಮಾಡಿರಬಹುದು, ಮಂತ್ರಿಗಳು ಮಾಡಿರಬಹುದು. ಎಲ್ಲಾ ಟಿಪ್ಪಣಿಗಳನ್ನು ಕನ್ನಡದಲ್ಲಿಯೇ ಜೂನ್ 1,1993 ರಿಂದ ಬರೆಯುವ ಹಾಗೆ ನಾವು ವ್ಯವಸ್ಥೆಯನ್ನು ಮಾಡುತ್ತೇವೆ. ಈಗಾಗಲೇ ಆಗಿದೆ, ಅನೇಕರು ಕನ್ನಡದಲ್ಲಿಯೇ ಟಿಪ್ಪಣಿಗಳನ್ನು ಬರೆಯುತ್ತಿದ್ದಾರೆ. ನಾನು ಕನ್ನಡದಲ್ಲಿಯೇ ಟಿಪ್ಪಣಿಗಳನ್ನು ಬರೆಯುತ್ತಿದ್ದಾರೆ. ನಾನು ಕನ್ನಡದಲ್ಲಿಯೇ ಟಿಪ್ಪಣಿಗಳನ್ನು ಬರೆಯುತ್ತಿದ್ದೇನೆ. ಅನೇಕ ನಮ್ಮ ಮಂತ್ರಿಮಂಡಲದ ಸದಸ್ಯರುಗಳು ಮಾಡುತ್ತಿದ್ದಾರೆ. ಅನೇಕ ಕಾರ್ಯದರ್ಶಿಗಳು ಮಾಡುತ್ತಿದ್ದಾರೆ. ಪೂರ್ಣ ಪ್ರಮಾಣದಲ್ಲಿ ಕನ್ನಡದಲ್ಲಿಯೇ ಸೆಕ್ರೆಟರಿಯೆಟ್‌ನಲ್ಲಿ ಮಂತ್ರಿಮಂಡಲದ ಸದಸ್ಯರುಗಳು ಮಾಡುತ್ತಿದ್ದಾರೆ. ಅನೇಕ ಕಾರ್ಯದರ್ಶಿಗಳು ಮಾತಾಡುತ್ತಿದ್ದಾರೆ. ಪೂರ್ಣ ಪ್ರಮಾಣದಲ್ಲಿ ಕನ್ನಡದಲ್ಲಿಯೇ ಸೆಕ್ರೆಟರಿಯೆಟ್‌ನಲ್ಲಿ ಮಂತ್ರಿಗಳವರೆಗೆ ನಾವು ಟಿಪ್ಪಣಿಗಳನ್ನು ಬರೆಯತಕ್ಕಂಥ ಒಂದು ಕಾರ್ಯಕ್ರಮವನ್ನು ಮಾಡುತ್ತೇವೆ. ಅದನ್ನು ನಾನು ಇಲ್ಲಿ ಘೋಷಣೆ ಮಾಡಲಿಕ್ಕೆ ಇಚ್ಛಿಸುತ್ತಿದ್ದೇನೆ. ಇನ್ನು ಸರ್ಕಾರದ ಆದೇಶಗಳು ಎಲ್ಲವನ್ನೂ ಕೂಡ ಕನ್ನಡದಲ್ಲಿಯೇ ಮಾಡುತ್ತೇವೆ. ಈಗಾಗಲೇ ಆದೇಶಗಳು ಕನ್ನಡದಲ್ಲಿ ಹೋಗುತ್ತಿವೆ. ಆದರೆ ಪರಿಪೂರ್ಣವಾಗಿ ಎಲ್ಲಾ ಆದೇಶಗಳನ್ನೂ ಕೂಡ ಕನ್ನಡ ಭಾಷೆಯಲ್ಲಿಯೇ ಹೊರಡಿಸಬೇಕೆಂದು ಏಪ್ರಿಲ್ 1, 1993ರಿಂದ ಕಟ್ಟುನಿಟ್ಟಾಗಿ ಆಚರಣೆಗೆ ಬರುವ ಹಾಗೆ ನಾವು ಅನುಷ್ಠಾನ ಮಾಡುತ್ತೇವೆ. ಎರಡು ಪ್ರಮುಖವಾದಂತಹ ಘೋಷಣೆಗಳನ್ನು ಮಾಡುತ್ತೇವೆ. ನಮ್ಮ ಕಾರ್ಯದರ್ಶಿಯವರ ಮಟ್ಟದಲ್ಲಿ ಯಾರ್ಯಾರು ಕನ್ನಡದಲ್ಲಿ ಬರೆಯುವುದಕ್ಕೆ ಕಷ್ಟಪಡುತ್ತಾರೆ. ಅವರಿಗೆ ನಾವು ಮೇ ತಿಂಗಳಲ್ಲಿ ತರಬೇತಿ ಕೊಡುತ್ತಿದ್ದೇವೆ. ಸೆಕ್ರೆಟರಿಗಳು ಕನ್ನಡದಲ್ಲಿಯೇ ಪಾಸಾಗಿದ್ದಾರೆ. ಆದರೆ ಟಿಪ್ಪಣಿಯನ್ನು ಬರೆಯುವುದಕ್ಕೆ ತಾಂತ್ರಿಕ ಜ್ಞಾನವನ್ನು ಕೊಡಲಿಕ್ಕೆ ಮೇ ತಿಂಗಳಲ್ಲಿ ಸೆಕ್ರೆಟರೀಸ್‌ಗೆ ತರಬೇತಿಯನ್ನು ಕೊಡುತ್ತೇವೆ. It should not be mistaken that they have not been trained. But to make them perfect, it is only for that. ಅನೇಕರು ಕನ್ನಡದಲ್ಲಿಯೇ ಕೆಲಸ ಮಾಡುತ್ತಿದ್ದಾರೆ. ಕನ್ನಡದಲ್ಲಿಯೇ ಮಾತನಾಡುತ್ತಿದ್ದಾರೆ. ಆದರೆ ಇದರಲ್ಲಿ ಒಂದು ರೀತಿಯ ಸಡಿಲ ಆಗಬಾರದು. There should not be any gap. ಇದನ್ನು ತುಂಬಿಸಲಿಕ್ಕೆ ಈ ಅರ್ಥದಲ್ಲಿ ಹೇಳಿದ್ದೇನೆಯೇ ಹೊರತು ಏನಾದರೂ ಇವರಿಗೆ ತರಬೇತಿ ಕೊಡಲಿಕ್ಕೆ ಈಗ ಏನು ಹಣೆಬರಹ ಬಂದಿತ್ತು ಎಂಬ ಪ್ರಶ್ನೆ ಇಲ. ನಮ್ಮ ವಿಚಾರ ಏನೆಂದು ಹೇಳಿದರೆ ವಾಸ್ತವಿಕವಾಗಿ ಪರಿಣಾಮಕಾರಿಯಾಗಿ ಆಗಬೇಕು. ಏಕೆಂದರೆ ಬಾಯಿ ಮಾತಿನಿಂದ ಅಂದರೆ ತಾವು ಭಾಷಣ ಮಾಡುವುದು, ನಾನು ಭಾಷಣ ಮಾಡುವುದು ಅಥವಾ ಕನ್ನಡ ಪ್ರಾಧಿಕಾರದವರು ಭಾಷಣ ಮಾಡಿ ಇದು ಅಲ್ಲಿ ನಿಲ್ಲಿಸಬಾರದು. ಕನ್ನಡ ಆಡಳಿತ ಭಾಷೆಯಾಗಿ ಪರಿಪೂರ್ಣವಾಗಿ ಕರ್ನಾಟಕದಲ್ಲಿ ಜಾರಿ ಮಾಡಲಿಕ್ಕೆ ಈ ಕೆಲವು ಪರಿಣಾಮಕಾರಿಯಾದಂತಹ ಅಂಶಗಳನ್ನು ಸಂಯೋಜಿಸಲಿಕ್ಕೆ ಇವತ್ತು ಈ ವಿಚಾರವನ್ನು ಹೇಳಿದ್ದೇನೆಯೇ ಹೊರತು ಅನ್ಯಥಾ ಅಲ್ಲ. ಇನ್ನು ಕೆಲವು ವಿಚಾರಗಳನ್ನು ಬಜೆಟ್ ಮೇಲೆ ಮಾತನಾಡುವಾಗ ಹೇಳಲು ಕಾಯ್ದಿರಿಸಬೇಕಾಗುತ್ತದೆ.

ಅದನ್ನು ನಾನು ಇವತ್ತು ಹೇಳಿಲಿಕ್ಕೆ ಹೋಗುವುದಿಲ್ಲ. ಬಹಳ ದೊಡ್ಡ ಗಾತ್ರದ ಮಂತ್ರಿ ಮಂಡಲವನ್ನು ಮಾಡಿದ್ದೀರಿ ಎಂದು ಬಹಳ ದೊಡ್ಡ ಟೀಕೆ ಮಾಡಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ:– ಇವತ್ತು ಒಂದು ಹೇಳಿಕೆ ಬಂದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಈ ಸದನದಲ್ಲಿ ಈ ಟೀಕೆ ಬಂದಿದೆ. ಈ ಸದನದಲ್ಲಿ ಬಂದಂತಹ ಟೀಕೆಗೆ ನಾನು ಉತ್ತರ ಕೊಡಬೇಕಾದ್ದು ನನ್ನ ಕರ್ತವ್ಯವಾಗಿದೆ. ಆ ದೃಷ್ಟಿಯಿಂದ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ಹೌದು, ದೊಡ್ಡ ಗಾತ್ರದ ಮಂತ್ರಿಮಂಡಲ ಆಗಿದೆ. ಇದೊಂದು ರೀತಿಯಲ್ಲಿ ತಪ್ಪು, ಬಹಳ ಕಡಿಮೆ ಗಾತ್ರದ ಮಂತ್ರಿಮಂಡಲ, ಅದು ಐಡಿಯಲ್. ಅದೊಂದು ಆದರ್ಶ. ಆದರೆ ತಾವು ಒಂದು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು. ಇದು ನನ್ನ ವೈಯಕ್ತಿಕವಾದಂತಹ ತಾಪತ್ರಯ ಅಲ್ಲ, ಇಡೀ ರಾಜ್ಯದ ಒಂದು ವ್ಯವಸ್ಥೆಯಾಗಿದೆ. ತಾವೊಂದು ಆಲೋಚನ ಮಾಡಿಕೊಳ್ಳಬೇಕು. ರಾಜಕೀಯ ಅಧಿಕಾರವನ್ನು ನಾವು ಇವತ್ತು ಹಂಚಬೇಕಾಗುತ್ತದೆ. Sharing of political power, it is an important factor in a democracy. ಇದನ್ನು ತಾವು ಒಪ್ಪುತ್ತೀರಿ ? One has to agree, it is an important and dominant factor in the democracy.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರ, ಈಗ Sharing of Political power is very very important factor. We agree ಅದರ ಬಗ್ಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯ ಇಲ್ಲವೇ ಇಲ್ಲ. ನಾವು ಕೇಳುತ್ತಿರತಕ್ಕಂಥಾದ್ದು ಏನೆಂದರೆ, ಶೇರಿಂಗ್ ಆಫ್ ಪವರ್ ಜೊತೆಗೆ ಶೇರಿಂಗ್ ಆಫ್ ಪೋರ್ಟ್‌ಫೋಲಿಯೊ ಏತಕ್ಕೆ ಆಗಲಿಲ್ಲ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ:– ಪೋರ್ಟ್‌ಫೋಲಿಯೋ ವಿಚಾರಕ್ಕೆ ಆಮೇಲೆ ಬರುತ್ತೇನೆ. ವಿಶೇಷ ಗಾತ್ರದ ಮಂತ್ರಿಮಂಡಲದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಹೇಳುತ್ತೇನೆ. ಹೌದು, ನಮ್ಮ ಜಿಲ್ಲೆಗಳಿಗೆ ಪ್ರಾತಿನಿಧ್ಯ ಬೇಕಾಗಿತ್ತು. ಇದೇ ಕೂಗು ಬಹಳ ವರ್ಷಗಳಿಂದ ಕೇಳಿ ಬಂದಿದೆ. ಕಾಂಗ್ರೆಸ್ ಪಕ್ಷ 1989ರಲ್ಲಿ ಅಧಿಕಾರಕ್ಕೆ ಬಂದ ನಂತರ ನಾನು ಮೂರನೇ ಮುಖ್ಯಮಂತ್ರಿಯಾಗಿದ್ದೇನೆ. ಇದು ಜಾತಿ ಪ್ರಶ್ನೆಯಲ್ಲ, ವರ್ಗದ ಪ್ರಶ್ನೆಯಾಗಿದೆ. ನಾನು ಇದನ್ನು ನಿಮಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ, ತಮಗೆಲ್ಲಾ ಗೊತ್ತಿದೆ. ಉದಾಹರಣೆಗೆ, ಈಗ ಬಸವರಾಜ ರಾಯರೆಡ್ಡಿಯವರಿಗೆ ಮಂತ್ರಿ ಸ್ಥಾನ ಕೊಟ್ಟರೆ ಬರೀ ರೆಡ್ಡಿ ಲಿಂಗಾಯಿತ ಎಂದು ಹೇಳುತ್ತಾರೆಯೇ ಹೊರತು ಲಿಂಗಾಯಿತ ರಪ್ರಸೆಂಟೇಷನ್ ಆಗುವುದಿಲ್ಲ. ಮಂಜುನಾಥ ಸಿ. ಕುನ್ನೂರು ಅವರಿಗೆ ಮಂತ್ರಿ ಸ್ಥಾನ ಕೊಟ್ಟರೆ ಗಾಣಿಗರಿಗೆ ಒಂದು ಮಂತ್ರಿ ಸ್ಥಾನ ಸಿಕ್ಕಿತು ಎಂದು ಹೇಳುತ್ತಾರೆಯೇ ವಿನಹ ಎಲ್ಲಾ ಲಿಂಗಾಯಿತರು ಒಪ್ಪುತ್ತಾರೆಯೇ ? ಈಗ ವೀರಪ್ಪ ಮೊಯಿಲಿಯವರಿಗೆ ಕೊಟ್ಟರೆ ಎಲ್ಲಾ ಹಿಂದುಳಿದ ವರ್ಗದವರು ಒಪ್ಪುತ್ತಾರೆಯೇ ? ಆದುದರಿಂದ, ಇಲ್ಲಿ ಈಗ ವಾಸ್ತವಿಕವಾದಂಥ ಪ್ರಶ್ನೆ ಇಡೋಣ. ವೀರಪ್ಪ ಮೊಯಿಲಿಯವರಿಗೆ ಕೊಟ್ಟರೆ ಹಿಂದುಳಿದ ವರ್ಗಗಳ ರೆಪ್ರೆಸೆಂಟೇಷನ್ ಆಗುತ್ತದೆನ್ನುವ ಕೆಲವು aspiration whether you like it or not. ಶ್ರೀಮಾನ್ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾದ ನಂತರ ....

ಶ್ರೀ ಪಿ.ಜಿ.ಆರ್. ಸಿಂಧ್ಯ:– ನೀವು ಈ ಕಡೆ ಕುಳಿತಿದ್ದಾಗ ನಮಗೆ ಏಕೆ ಹೇಳಲಿಲ್ಲ ? ನಾವು ಆಡಳಿತದಲ್ಲಿದ್ದಾಗ ನಾವು 31 ಜನರಿರುವ ಮಂತ್ರಿಮಂಡಲವನ್ನು ರಚಿಸಿದಾಗ ನೀವೇನು ಭಾಷಣ ಮಾಡಿದ್ದೀರೆಂದರೆ, This is a jambo jet cabinet, ಜಂಬೋಜಟ್ ಕ್ಯಾಬಿನೆಟ್ ಎಂದು ಹೇಳಿದ್ದೀರಿ. ಅಲ್ಲದೆ, 'ರಾಮಕೃಷ್ಣ ಹೆಗಡೆಯವರೆ, ಇಕಾನಮಿಕ್ ಖಾತೆಗಳನ್ನೆಲ್ಲಾ ನೀವೇ ಇಟ್ಟುಕೊಂಡಿದ್ದೀರಿ, ಬೇರೆಯವರಿಗೆ ಏಕೆ ಕೊಡಲಿಲ್ಲ ? ನೀವು ಯಾರನ್ನೂ ನಂಬುವುದಿಲ್ಲ, ಹಿಂದುಳಿದ ವರ್ಗದವರಿಗೆ ಒಂದೂ ಎಕನಾಮಿಕ್ ಖಾತೆಯನ್ನು ಕೊಟ್ಟಿಲ್ಲ' ಎಂದು ಹೇಳಿರುವ ನಿಮ್ಮ ಭಾಷಣದ ಮಾತುಗಳನ್ನು ನಾನು ಇವೊತ್ತು ನೋಡಿದೆ. ನೀವು ವಿರೋಧ ಪಕ್ಷದ ನಾಯಕರಾಗಿದ್ದಾಗ ಏನೇನು

ಮಾತನಾಡಿದ್ದೀರಿ, ಅದೆಲ್ಲವನ್ನೂ ನಾನು ಓದಿದ್ದೇನೆ. ಸುಮಾರು ಆರು ವರ್ಷಗಳ ತಮ್ಮ ಭಾಷಣಗಳನ್ನು ಓದಿದ್ದೇನೆ. ನಮ್ಮದು ಜಂಬೋಜಟ್ ಕ್ಯಾಬಿನೆಟ್ ಎಂದು ಹೇಳುತ್ತಿದ್ದರು, ಈಗ ಮಾತ್ರ ಈ ತತ್ವ ಹೇಳುತ್ತಿದ್ದೀರಿ. Sharing of political power important ಎಂದು ಹೇಳಿ ನೀವು ಏಕೆ ಖಾತೆಗಳನ್ನು ಸರಿಯಾಗಿ ಹಂಚಲಿಲ್ಲ? ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಸಹಕಾರ ಖಾತೆ, ಮಾನ್ಯ ಧರ್ಮಸಿಂಗ್‌ರವರಿಗೆ ಸಮಾಜ ಕಲ್ಯಾಣ ಖಾತೆ ಕೊಟ್ಟು ಗೋಪಿನಾಥ ಸಾಂಡ್ರಾರವರಿಗೆ ಏಕೆ ವಸತಿ ಖಾತೆಗಳನ್ನು ಕೊಟ್ಟಿದ್ದೀರಿ? ಇವರ ಖಾತೆಯಲ್ಲಿ ಜನತಾ ಹೌಸಿಂಗ್ ಏನಿದೆ, ಇದನ್ನು ದಯವಿಟ್ಟು ಪಾಲು ಮಾಡಿ.

ಶ್ರೀ ಆರ್.ವಿ. ದೇಶಪಾಂಡೆ:– ತಾವು ಇಲ್ಲಿದ್ದಾಗ ಒಂದು ವಿಚಾರ ಪ್ರಸ್ತಾಪ ಮಾಡಿದಿರಿ. ತಾವು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲನೆಯ ಪತ್ರಿಕಾ ಗೋಷ್ಠಿಯಲ್ಲಿ ತಾವು ಹೇಳಿದ್ದೀರಿ. ಏನೆಂದರೆ, 'ನನ್ನ ಮಂತ್ರಿಮಂಡಲದ ಗಾತ್ರ ಬಹಳ ಸಣ್ಣದು ಇರುತ್ತದೆ, ಅದು ಜಂಬೋಜಟ್‌ನಷ್ಟು ಇರುವುದಿಲ್ಲ, ಎಂದು. ಇದನ್ನು ನಾನು ತಮಗೆ ಜ್ಞಾಪಕ ಮಾಡಿಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಭಾಷಣದ ಧಾಟಿ ನೋಡಿದರೆ ಮತ್ತೆ 10 ಜನರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳುತ್ತಾರೇನೋ ಎನ್ನುವ ಭಯ ಬರುತ್ತಿದೆ. ನೀವು 180 ಜನರಿದ್ದೀರಿ, ಎಲ್ಲರಿಗೂ ಖಾತೆ ಹಂಚಿಕೆಯಾಗಬೇಕೆಂದು ಕಾಣುತ್ತದೆ. ನಿಮ್ಮದೇನೋ ಗೂಢಾರ್ಥ ಇದ್ದಂತೆ ಕಾಣುತ್ತದೆ. ತಾವು ಖಾತೆಗಳನ್ನು ಹಂಚುವಾಗ 'ಸಕ್ಕರೆ' ಮತ್ತು 'ಜವಳಿ' ಎಂಬ ಖಾತೆಗಳನ್ನು ಮಂತ್ರಿಗಳಿಗೆ ಹಂಚಿದ್ದೀರಿ. ಇದನ್ನು ನೋಡಿ ಹಾದಿ–ಬೀದಿಯಲ್ಲಿ ಜನರು ನಗುತ್ತಿದ್ದಾರೆ. ಸಕ್ಕರೆ ಎಂದರೆ ಏನು? ಜವಳಿ ಎಂದರೇನು? ಒಂದೊಂದು ಜಿಲ್ಲೆಗೆ ಒಬ್ಬೊಬ್ಬ ಮಂತ್ರಿಗಳನ್ನು ತೆಗೆದುಕೊಂಡರೂ ಸಹ, ಒಂದು ಕಾಲದಲ್ಲಿ ಮೈಸೂರು ಜಿಲ್ಲೆಗೆ 6 ಜನ ಮಂತ್ರಿಗಳಿದ್ದರು. ಈಗ ಮೈಸೂರು ಜಿಲ್ಲೆಗೆ ಒಂದೂ ಕಾಲು ಕೊಟ್ಟಿದ್ದೀರಿ. ಈ ತರಹ ಜಿಲ್ಲೆಗಳ ಪ್ರಕಾರ ತೆಗೆದುಕೊಂಡರೂ ನೀವು ತೊಂದರೆಗೆ ಸಿಲುಕಿದ್ದೀರಿ. ಹಾಸನ ಜಿಲ್ಲೆಗೆ ಯಾವ ಮಂತ್ರಿಗಳೂ ಇಲ್ಲ. ನೀವು ಖಾತೆಗಳನ್ನು ಹಂಚುವಾಗ ಜಿಲ್ಲಾವಾರು ಸರಿಯಾಗಿಲ್ಲ, ಜಾತಿವಾರು ಸರಿಯಿಲ್ಲ ಮತ್ತು ಹಂಚಿರುವ ಖಾತೆಗಳೇ ಸರಿಯಿಲ್ಲ. ಕೆಂಗಲ್ ಹನುಮಂತಯ್ಯನವರ ಆಡಳಿತದ ಸಮಯದಲ್ಲಿ ಒಂದು ವರದಿ ಕೊಟ್ಟಿದ್ದಾರೆ. ಏನೆಂದರೆ, 224ಜನ ಸದಸ್ಯರುಗಳಲ್ಲಿ ಎಷ್ಟು ಜನ ಮಂತ್ರಿಗಳು ಇರಬೇಕೆಂಬುದರ ಬಗ್ಗೆ ವರದಿ ಕೊಟ್ಟಿದ್ದಾರೆ, ತಾವುಗಳೆಲ್ಲರೂ ಅದನ್ನು ನೋಡಿದ್ದೀರಿ. ಈ ರೀತಿ ಮಾಡುವುದನ್ನು ಬಿಟ್ಟು ತಾವು ಒಂದು ದೊಡ್ಡ ಸರ್ಕಸ್ ಕಂಪನಿ ಮಾಡುತ್ತಾ ಹೋದರೆ ನಮ್ಮ ಪರಿಸ್ಥಿತಿ ಏನು?

ಶ್ರೀ ಸಿ. ಬೈರೇಗೌಡ:– ಈಗ ತಾನೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಿಂಧ್ಯರವರು ಖಾತೆಗಳ ಬಗ್ಗೆ ಮಾತನಾಡಿ ಖಾತೆಗಳಲ್ಲಿ ಏನಿದೆ ಎಂದು ಕೇಳಿದರು. ಏನು ಇರಬೇಕಾಗಿತ್ತು ಎಂದು ನಾನು ಕೇಳುತ್ತಿದ್ದೇನೆ. ಏಕೆಂದರೆ, ಗೂಢಾರ್ಥವಿಟ್ಟುಕೊಂಡು ಮಾತನಾಡಿದರೆ ಅರ್ಥವಿಲ್ಲ. ಖಾತೆಯಲ್ಲಿ ಏನು ಇರಬೇಕಾಗಿತ್ತು ಎಂಬುದನ್ನು ದಯವಿಟ್ಟು ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಹೇಳಿದ್ದಕ್ಕೆ ಧನ್ಯವಾದಗಳು. ಕೆಂಗಲ್ ಹನುಮಂತಯ್ಯನವರು ರಿಪೋರ್ಟ್‌ನ್ನು ದೇವರಾಜ್ ಅರಸುರವರು ಬರುವ ಮೊದಲು ಅಂದರೆ 1969ಕ್ಕಿಂತ ಮೊದಲು ಕೊಟ್ಟರು. ದೇವರಾಜ್ ಅರಸುರವರು ಬರುವ ಮೊದಲು ಅಂದರೆ 1969ಕ್ಕಿಂತ ಮೊದಲು ಕೊಟ್ಟರು. ಅನಂತರ ರಾಷ್ಟ್ರದ ರಾಜಕಾರಣದಲ್ಲಿ, ರಾಜ್ಯದ ರಾಜಕಾರಣದಲ್ಲಿ ಏನು ಒಂದು ಸಾಮಾಜಿಕ, ಆರ್ಥಿಕ ಹೋರಾಟದ ಒಂದು ಪ್ರಜ್ಞೆ ಎಲ್ಲರಲ್ಲೂ ಮೂಡಿದೆ.

The ethos in democracy were totally different. ಬಹುಶಃ ಅದೇ ಹನುಮಂತಯ್ಯನವರೇ 1969ರ ದೇವರಾಜ ಅರಸುರವರು ಆಡಳಿತವಾದ ಮೇಲೆ, 1969ರಲ್ಲಿ

ಇಂದಿರಾಗಾಂಧಿಯುವರ ಕಾಂಗ್ರೆಸ್ ವಿಭಜನೆಯಾದ ಮೇಲೆ ಏನು ಈ ರಾಜ್ಯಕ್ಕೆ ಆಡಳಿತವನ್ನು ಕೊಟ್ಟು, ಶತಶತಮಾನಗಳಿಂದ ತುಳಿಯಲ್ಪಟ್ಟ ಜನರಿಗೆ ಜೀವನದ ಉಸಿರನ್ನು ಕೊಟ್ಟಂಥ ದೇವರಾಜ ಅರಸುರವರು, ಅನಂತರ ಆ ವರದಿ ಬಂದದ್ದರೆ ಆ ವರದಿಯ ಪರಿಸ್ಥಿತಿ ಬೇರೆ ಇತ್ತು. ಇದನ್ನು ಇವತ್ತು ಆಲೋಚನೆ ಮಾಡಬೇಕಾಗಿದೆ. ಆದುದರಿಂದ ಇವತ್ತು there are certain social, economic and political ethos. Whether you like it or not, they have come to stay in our country as well as in our state. ದೇವರಾಜ ಅರಸುರವರು ಆ ಆಸೆಯನ್ನು ಹುಟ್ಟಿಸಿದರೆ, ಆ ಆಸೆ ತಪ್ಪಲ್ಲ, ಯಾವುದೇ ಹೆಸರು ಇಲ್ಲದಂಥ ಅತೀ ಸಣ್ಣ ಜಾತಿ ಯಾವುದು ಇದೆ, ಈಗ ನಮ್ಮಂಥ ಜಾತಿಗೆ ಯಾವ ಹೆಸರು ಇದೆ ? But for these ethos, I would not have stood here as Cheif Minister. That you should remember.

ಶ್ರೀ ವಾಟಾಳ್ ನಾಗರಾಜ್:– ಆದ್ದರಿಂದಲೇ ನಿಮ್ಮನ್ನು ಮುಖ್ಯಮಂತ್ರಿಗಳನ್ನಾಗಿ ನಾವು ಒಪ್ಪಿಕೊಂಡಿದ್ದೇವೆ.

SRI M. VEERAPPA MOILY:– That has been not only accepted in the overall situation but that has been accepted by your Party as a commitment.

SRI P.G.R. SINDHIA:– Who is trying to blame?

ಶ್ರೀ ಎಂ. ವೀರಪ್ಪ ಮೊಯಿಲಿ:– ಆದ್ದರಿಂದ ನಾನು ಆ ವಿಚಾರವನ್ನು ಹೇಳತಕ್ಕದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಿಮಗೆ ನೀರು ಕುಡಿಯುವಂತೆ, ಗಂಟಲು ಕಟ್ಟುವಂತೆ ಮಾಡಿದವರು ನಾವಲ್ಲ, ನಿಮ್ಮವರೇ, ನಾವು ನಿಮಗೆ ಸಹಕಾರವನ್ನು ಕೊಡುತ್ತಿದ್ದೇವೆ. ಆದುದರಿಂದ ನೀವು ನಮ್ಮ ಬಗ್ಗೆ ಒಳ್ಳೆಯ ಮಾತನ್ನು ಹೇಳದೆ, ಇಂಥ ಮಾತನ್ನು ಹೇಳಿದರ ನಮಗೆ ಅರ್ಥವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನಮ್ಮ ಬಗ್ಗೆ ನೀವು ಒಳ್ಳೆಯ ಮಾತನಾಡಬೇಕಾಗಿತ್ತು. ಅದನ್ನು ಬಿಟ್ಟು ನಿಮಗೆ ಯಾರು ಕಾಲನ್ನು ಎಳೆಯುತ್ತಿದ್ದಾರೆ ಅವರ ಬಗ್ಗೆ ಗೂಢಾರ್ಥದಿಂದ ಸುತ್ತಿ ಬಳಸಿ ಹೋಗುತ್ತಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಒಂದೊಂದು ಸಣ್ಣ ಜಾತಿಗೂ ಸಹ ಮೂರು ಜನ ಮಂತ್ರಿಗಳನ್ನು ಮಾಡಿದ್ದೀರಿ. You cannot say like that.

ಶ್ರೀ ಎಂ. ವೀರಪ್ಪ ಮೊಯಿಲಿ:– ಸಣ್ಣ ಜಾತಿಯವರನ್ನು ಏಕೆ ಮಂತ್ರಿಯನ್ನಾಗಿ ಮಾಡಬಾರದು ? ನಿಜವಾಗಿಯೂ ಸಣ್ಣ ಜಾತಿಯವರನ್ನೇ ಮೊದಲು ಮಂತ್ರಿಯನ್ನಾಗಿ ಮಾಡಬೇಕು, ಆಮೇಲೆ ದೊಡ್ಡ ಜಾತಿಯವರನ್ನು ಮಾಡಬೇಕು. ಏಕೆಂದರೆ ಅಧಿಕಾರವನ್ನು ಹಂಚಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಆಂಧ್ರಪ್ರದೇಶದಲ್ಲಿ ಅಂಜಯ್ಯನವರ ಮಂತ್ರಿಮಂಡಲವಿದ್ದಾಗ ಅದೇ ರೀತಿ ಜಾತ್ರೆಯಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ:– ಕರ್ನಾಟಕಕ್ಕೂ, ಆಂಧ್ರಪ್ರದೇಶಕ್ಕೂ ಬಹಳ ವ್ಯತ್ಯಾಸವಿದೆ. ಇಲ್ಲಿರತಕ್ಕ ವರ್ಗ, ಆ ವರ್ಗದ ಜನರಲ್ಲಿ ಬೆಳೆದಂಥ ಪ್ರಜ್ಞೆ– ಇವುಗಳನ್ನು ನಾವು ಅರ್ಥಮಾಡಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಕೆ. ಸಿದ್ದಯ್ಯ:- ಹಿಂದುಳಿದವರು, ಹಿಂದುಳಿದವರು ಎಂದು ಹೇಳಿಕೊಳ್ಳುತ್ತಾರಲ್ಲ, ಅವರಿಗೇಕೆ ಇದು ?

ಶ್ರೀ ವಾಟಾಳ್ ನಾಗರಾಜ್:- ನೀವು ನಿಜವಾಗಿಯೂ ಮತ್ತೆ ಯಾವಾಗ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುತ್ತೀರಿ, ಅದನ್ನಾದರೂ ಹೇಳಿ. ನಮಗೆ ಬಹಳ ಸಂತೋಷ. ನೀವು ಯಾವಾಗ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುತ್ತೀರೆಂದು ಹೇಳಿ.

ಒಬ್ಬ ಮಾನ್ಯ ಸದಸ್ಯ:- ನಿಮ್ಮನ್ನಂತೂ ಮಂತ್ರಿಮಂಡಲಕ್ಕೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ದೊಡ್ಡ ಗಾತ್ರದ ಮಂತ್ರೀಮಂಡಲವನ್ನು ಜಸ್ಟಿಫೈ ಮಾಡುವುದಕ್ಕೆ ನಾನು ಈ ಮಾತನ್ನು ಹೇಳುತ್ತಿಲ್ಲ. ಆದರೆ ಕರ್ನಾಟಕದ, ಈ ರಾಷ್ಟ್ರದ ಕೆಲವು ವಿದ್ಯಮಾನಗಳಿಂದ ಎದ್ದಂಥ ಕೆಲವು ಆಸೆ ಆಕಾಂಕ್ಷೆಗಳ ಮೂಲಕ ರಾಜಕೀಯವಾಗಿ ಒಂದು organisationಹಂಚತಕ್ಕದ್ದು horizontally ಆಗಬೇಕು, vertically ಆಗಬಾರದು. ಸಮಾನಾಂತರವಾಗಿ ಅಧಿಕಾರ ಹಂಚಿಕೆಯ ಪ್ರಕ್ರಿಯೆ ಈ ರಾಷ್ಟ್ರದಲ್ಲಿ, ಈ ರಾಜ್ಯದಲ್ಲಿ 1969ರಲ್ಲೇ ಆಗಿದೆ. ಇದು of course on merit-wise ಮಾತನಾಡುತ್ತಿದ್ದೇವೆ, Merit-wise one has to conform to a small ministry. ಬ್ರಿಟಿಷರು ಸಹ ಇದೇ ತತ್ವವನ್ನು ಮುಂದುನಡೆಸಿದರು, ನಿಮಗೆ ಸ್ವಾತಂತ್ರ್ಯ ಬೇಡ, ನಿಮಗೆ ದೇಶವನ್ನು ಆಳುವ ಸಾಮರ್ಥ್ಯವಿಲ್ಲ, ಬುದ್ಧಿವಂತಿಕೆ ಇಲ್ಲವೆಂದು merit theory ಮಾಡಿಯೇ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಲು ಬ್ರಿಟಿಷರು ಹಿಂದೆಹೋದರು.

ಆಫ್ರಿಕಾದಲ್ಲಿ ನಡೆಯುತ್ತಿರುವುದು ಮೆರಿಟ್ ಥಿಯರಿ. ಬಿಳಿ ಜನರು ಕಪ್ಪು ಜನರನ್ನು ಆಳುವುದಕ್ಕೆ ಸಾಮರ್ಥ್ಯವಿಲ್ಲವೆಂದು ಆ ಥಿಯರಿಯನ್ನು ಇಟ್ಟುಕೊಂಡು ಅಲ್ಲಿ ವಾದ ನಡೆಯುತ್ತಿದೆ. ಹಿಟ್ಲರ್ ಕೂಡ ಮೆರಿಟ್ ಥಿಯರಿ ಇಟ್ಟುಕೊಂಡು ಆರ್ಯರು ಮಾತ್ರ ಈ ವಿಶ್ವವನ್ನು ಆಳುವಂಥ ಶಕ್ತಿಯುಳ್ಳವರೆಂದು ರಾಜ್ಯವನ್ನಾಳಿದ್ದರು. It is all the merit theory in absolute terms. Yes, merit and efficiency will have to be there.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿ ನಾನು ಸಂತೋಷಪಟ್ಟೆ. ಈ ವಾದದಲ್ಲಿ ಯಾವುದೇ ಹುರುಳಿಲ್ಲವೆಂದು ನನ್ನ ಭಾವನೆ. ವಾದವನ್ನು ದಯಮಾಡಿ ತಾವು ದೆಹಲಿಯಲ್ಲಿ ಅಷ್ಟೆ ಮಾಡುತ್ತೀರಾ ? ಈ ರಾಷ್ಟ್ರದ ಅಧ್ಯಕ್ಷರು ಮತ್ತು ಪ್ರಧಾನಿಗಳನ್ನು ನೀವು ಕೇಳುತ್ತೀರಾ ? ಇಲ್ಲಿ ಹಿಂದುಳಿದ ವರ್ಗದವರನ್ನು ಉದ್ಧಾರ ಮಾಡುವುದಕ್ಕೆ ರಾಜಕೀಯ ಅಧಿಕಾರವನ್ನು ಹಂಚಿಕೊಳ್ಳುವ ಭಾಷಣ ಮಾಡುತ್ತಿದ್ದೀರಿ. ಇದೇ ಭಾಷಣವನ್ನು, ಇದೇ ವಾದವನ್ನು ರಾಷ್ಟ್ರಮಟ್ಟದಲ್ಲಿ ಮಾಡಿ ರಾಜಕೀಯ ಅಧಿಕಾರವನ್ನು ಎಲ್ಲರಿಗೂ ಹಂಚತಕ್ಕ ಪ್ರಯತ್ನವನ್ನು ಮಾಡುತ್ತೀರಾ ?

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೆ, ನಮ್ಮ ವಾದ ಯಾವುದೋ ಕಡೆಗೆ ಹೋಗುತ್ತಿದೆ. ಇಲ್ಲಿ ಪ್ರಶ್ನೆ ಏನೆಂದರೆ, ಮಾನ್ಯ ಮೊಯಿಲಿಯವರು ಮೊದಮೊದಲು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು. ಈಗಲೂ ಅದೇ ರೀತಿಯಲ್ಲಿ ಮಾತನಾಡುತ್ತಾರೆಂದು ನಾನು ಆಶಿಸಿದ್ದೆ. ಈ ದೇಶದಲ್ಲಿ ಯಾರು ಪ್ರಧಾನಿಯಾಗುತ್ತಾರೆ, ಯಾರು ಮುಖ್ಯ ಮಂತ್ರಿ ಆಗುತ್ತಾರೆಂಬ ಒಂದೇ ಕಾರಣದಿಂದ ಆ ವರ್ಗದ ಜನರ ಹಿತವನ್ನು ಕಾಪಾಡುವುದಕ್ಕೆ ಸಾಧ್ಯವಾಗಿಲ್ಲ; ಮತ್ತು ಆಗುವುದೂ ಇಲ್ಲ. ಇವತ್ತು ಯಾರಿಗೇ ಅಧಿಕಾರವಿರಲಿ, ಅಧಿಕಾರಕ್ಕೆ ಬಂದವರು ಯಾರು ಶೋಷಿತರಿದ್ದಾರೆ, ಯಾರು ಹಿಂದುಳಿದವರಿದ್ದಾರೆ ಅವರ ಸಮಸ್ಯೆಗಳೇನು ಎಂಬುದನ್ನು ನೋಡಿ ಆ ಸಮಸ್ಯೆಗಳಿಗೆ ಸ್ಪಂದಿಸುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡ ಅದನ್ನು ಅನುಷ್ಠಾನಕ್ಕೆ ತರುವಂಥ ಮನಸ್ಸಿದ್ದರೆ ಅವರು ಯಾವುದೇ ಜಾತಿಗೆ ಸೇರಿದ್ದರೂ ಮಾಡುವುದಕ್ಕೆ ಸಾಧ್ಯವಿದೆ. ಜಾತಿಯ ನೆಪದಲ್ಲಿ ನಾವು ಜನರ ಭಾವನೆಗಳನ್ನು

ಕೆರಳಿಸಿ ಅಧಿಕಾರವನ್ನು ಪಡೆಯುವುದಕ್ಕೆ ಮಾತ್ರ ಈ ಜಾತಿಯನ್ನು, ವರ್ಗಗಳನ್ನು ಉಪಯೋಗಿಸಿಕೊಳ್ಳುತ್ತಿದ್ದೇವೇ ಹೊರತು ಬೇರೆ ಕಾರಣದಿಂದಲ್ಲ. ನಾನಾದರೂ ಕೇಳುತ್ತೇನೆ, ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಹಿಂದುಳಿದ ವರ್ಗದ ಎಲ್ಲಾ ಜನರ ಕಲ್ಯಾಣವಾಗಲಿಲ್ಲ? ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಎಲ್ಲ ಲಿಂಗಾಯಿತರ ಕಲ್ಯಾಣವಾಗಲಿಲ್ಲ? ಅದೇ ರೀತಿ ಮಾನ್ಯ ಕಡಿಗಾಳ್ ಮಂಜಪ್ಪನವರ ಕಾಲದಲ್ಲಿ ಅಥವಾ ಬೇರೆ ಬೇರೆ ಜಾತಿಗೆ ಸೇರಿದಂಥವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಜಾತಿಯ ಎಲ್ಲ ಜನರೂ ಉದ್ಧಾರವಾದರೆ? ಉದ್ಧಾರವಾಗುವುದಕ್ಕೆ ಸಾಧ್ಯವೂ ಇಲ್ಲ. ನಮ್ಮ ಸಮಸ್ಯೆಗಳು ವರ್ಗದ ಆಧಾರದ ಮೇಲೆ ಇದೆ, ನಮ್ಮ ವ್ಯಕ್ತಿಯ ಆಧಾರದ ಮೇಲೆ ಇದೆಯೇ ಹೊರತು ಜಾತಿಯ ಆಧಾರದ ಮೇಲಿಲ್ಲ. ಜಾತಿಯ ಆಧಾರವನ್ನು ನಾವು ಏತಕ್ಕೆ ತೆಗೆದುಕೊಳ್ಳುತ್ತೇವೆಂದರೆ ಇಲ್ಲಿ ಅಧಿಕಾರಕ್ಕೆ ಬರುವುದಕ್ಕೆ ತಗೆದುಕೊಳ್ಳುತ್ತೇವೆ. ಮಾನ್ಯ ವೀರಪ್ಪಮೊಯಿಲಿಯವರಂಥ ಅನುಭವಿ ರಾಜಕಾರಣಿ ಕೇವಲ ಜಾತಿಯ ಆಧಾರದ ಮೇಲೆ ಅಧಿಕಾರವನ್ನು ಹಂಚಿಕೊಳ್ಳುತ್ತಾರೆ, ಜಾತಿಯ ಆಧಾರದ ಮೇಲೆ ಅವರ ಸಮಸ್ಯೆಗಳನ್ನು ಪರಿಹಾರ ಮಾಡುತ್ತಾರೆಂದು ಹೇಳುವುದಾದರೆ ಇದು ಕೇವಲ ಜಾತಿ ಕಾರಣಕ್ಕಾಗಿ ಹೇಳತಕ್ಕ ಮಾತು, ಅಧಿಕಾರಕ್ಕಾಗಿ ಹೇಳತಕ್ಕ ಮಾತಾಗಿದೆಯೇ ಹೊರತು ಇದರಿಂದ ಈ ದೇಶದ ಜನಸಾಮಾನ್ಯರ ಕಲ್ಯಾಣವಾಗುವುದಕ್ಕೆ ಸಾಧ್ಯವಿಲ್ಲ. ಈ ರಾಜಕೀಯ ಸಿದ್ಧಾಂತ ಏನಿದೆ ಇದರ ಆಧಾರದ ಮೇಲೆ ತಾವು ಮಾತನಾಡಬೇಕು. ಮೊನ್ನೆ ಮಾನ್ಯ ಗುಂಡೂರಾಯರು ನಮ್ಮ ಊರಿನಲ್ಲಿ ಮಾತನಾಡುತ್ತಾ, ಕೇವಲ ಬ್ರಾಹ್ಮಣರು ಮಾತ್ರ ಈ ಅಧಿಕಾರವನ್ನು ಮಾಡುವುದಕ್ಕೆ ಸಾಧ್ಯವಿದೆ, ಬೇರೆಯವರಿಗೆ ಯಾರಿಗೂ ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಈ ಮಾತನ್ನು ತಾವು ಒಪ್ಪುತ್ತೀರಾ? ಈ ಸಂವಿಧಾನದಲ್ಲಿ ತಾವು ಏನು ರೂಪಿಸಿಕೊಂಡಿದ್ದೀರಿ ಅದರ ಪ್ರಕಾರ ಎಲ್ಲ ಅಧಿಕಾರಗಳನ್ನು ಸ್ವಾಯತ್ತ ಸದಸ್ಯರು ಮಾಡಬೇಕೆಂದಿದ್ದರೂ ಕೂಡ ನಾವು ಬೇರೆ ಬೇರೆ ಪಕ್ಷಗಳಲ್ಲಿ ನೋಡುತ್ತಿರುವಂತೆ ಕೇವಲ ಒಂದು ವರ್ಗದ ಜನರು ಅಂದರೆ ಅವರು ಲಿಂಗಾಯಿತರು ಇರಬಹುದು, ಬ್ರಾಹ್ಮಣರು ಇರಬಹುದು, ಯಾರಿಗೆ ಇದುವರೆಗೆ ಅಧಿಕಾರದ ಮನಾಪಲಿ ಇತ್ತು, ಯಾರು ಈ ಹಿಡಿತವನ್ನು ಇಟ್ಟುಕೊಂಡಿದ್ದಾರೆ ಅವರು ಈ ಮಾತನಾಡುತ್ತಾರೆ. ಇಲ್ಲಿರತಕ್ಕ ತಾವು ಸಹ ಈ ಮಾತನ್ನಾಡುತ್ತೇವೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:— ತಾವು ಈ ಜಾತಿಯ ವಿಷಯವನ್ನು ಇಲ್ಲಿ ಎತ್ತಬಾರದು. ಈ ಬೋಧನೆಯನ್ನು ತಾವು ಮಾನ್ಯ ವಿ.ಪಿ. ಸಿಂಗ್‌ರವರಿಗೂ ಏತಕ್ಕೆ ಮಾಡಬಾರದು? ಅವರು ಇಡೀ ದೇಶದಲ್ಲಿ ಜಾತಿಯ ರೋಗವನ್ನು ಹರಡಿದವರು.....

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ:— ಮಾನ್ಯ ವಿ.ಪಿ. ಸಿಂಗರಾಗಲಿ, ಮಾನ್ಯ ಚಂದ್ರಶೇಖರ್‌ರವರಾಗಲಿ ತಮ್ಮ ಅಧಿಕಾರವನ್ನು ಏತಕ್ಕೆ ಕಳೆದುಕೊಂಡರೆಂದರೆ ಅದಕ್ಕೆ ಮೇಲ್ಜಾತಿಯ ಜನರ ಪಿತೂರಿಯೇ ಕಾರಣ.

ಶ್ರೀ ಆರ್.ವಿ. ದೇಶಪಾಂಡೆ:— ಯಾವ ಕಾರಣಕ್ಕೆ ವಿ.ಪಿ. ಸಿಂಗರು ತಮ್ಮ ಅಧಿಕಾರವನ್ನು ಕಳೆದುಕೊಂಡರೋ ಅದರಿಂದಾಗಿಯೇ ಇವತ್ತು ಮಾನ್ಯ ಮೊಯಿಲಿಯಂಥವರು ಮುಖ್ಯಮಂತ್ರಿಗಳಾಗಿದ್ದಾರೆ. ತಮಗೆ ಇದು ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:— ಮಾನ್ಯ ಅಧ್ಯಕ್ಷರೇ, ಮಾನ್ಯ ವಿ.ಪಿ. ಸಿಂಗ್‌ರ ಬಗ್ಗೆ ಅವರ ವ್ಯಕ್ತಿತ್ವಕ್ಕೆ ಧಕ್ಕೆ ಬರತಕ್ಕ ರೀತಿಯಲ್ಲಿ ಮಾನ್ಯ ರಾಮಸ್ವಾಮಿಯವರು ಈ ಸದನದಲ್ಲಿ ಮಾತನಾಡಿರುವುದರ ಬಗ್ಗೆ ನಾವು ತೀವ್ರವಾಗಿ ಪ್ರತಿಭಟನೆ ಮಾಡಬೇಕಾಗುತ್ತದೆ.

L.A. Vol-4. (ಗೊಂದಲ) 47

ಶ್ರೀ ಹೆಚ್. ಏಕಾಂತಯ್ಯ.– ಮೊದಲು ಮಾನ್ಯ ಗುಂಡೂರಾಯರ ಹತ್ತಿರ ಪ್ರತಿಭಟನೆ ಮಾಡಿ ಅನಂತರ ನಮ್ಮ ಹತ್ತಿರ ಬನ್ನಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ವಿ.ಪಿ. ಸಿಂಗರು ಜಾತೀಯತೆಯ ಬೀಜವನ್ನು ಹಬ್ಬಿಸಿದರು ಎನ್ನತಕ್ಕ ಮಾತನ್ನು ಏನು ರಾಮಸ್ವಾಮಿಯವರು ಹೇಳಿದ್ದಾರೆ, ಇದು ಸತ್ಯಕ್ಕೆ ದೂರವಾಗಿರತಕ್ಕ ಮಾತು. ನಾವು ಒಂದು ವಿಚಾರವನ್ನು ಒಪ್ಪಿಕೊಳ್ಳಬೇಕು. ಈ ದೇಶದಲ್ಲಿ ನಾವು ಅವರನ್ನು ಒಪ್ಪದೇ ಇರಬಹುದು, ನಾವು ಅವರನ್ನು ವಿರೋಧ ಮಾಡಿರಬಹುದು. ಶ್ರೀಮತಿ ಇಂದಿರಾಗಾಂಧಿಯವರ ನಂತರ ಸೋಷಿಯಲ್ ಜಸ್ಟೀಸ್‌ಗಾಗಿ ಏನಾದರೂ ಹೋರಾಟ ಮಾಡಿದವರು ಎಂದರೆ ಮಾನ್ಯ ವಿ.ಪಿ. ಸಿಂಗರು. ಇವರು ತಮ್ಮ ಅಧಿಕಾರವನ್ನು ಒಂದು ತತ್ವಕ್ಕೋಸ್ಕರ ಕಳೆದುಕೊಂಡರೆಂಬುದನ್ನು ಗಮನಿಸಬೇಕು. ಮಾನ್ಯ ವಿ.ಪಿ. ಸಿಂಗರು, ಪಾಲಿಸೀಸ್ ಜೊತೆಯಲ್ಲಿ, ಪ್ರಿನ್ಸಿಪಲ್ಸ್ ಜೊತೆಯಲ್ಲಿ ಕಾಂಪ್ರೊಮೈಸ್ ಮಾಡಿಕೊಂಡಿದ್ದಿದ್ದರೆ ಖಂಡಿತವಾಗಿ ಅವರು ಅಧಿಕಾರದಲ್ಲಿ ಉಳಿಯಬಹುದಿತ್ತು. ಆದರೆ ಅವರು ಆ ಕೆಲಸವನ್ನು ಮಾಡಲಿಲ್ಲ. ಇವತ್ತು ನಮ್ಮ ಕೇಂದ್ರ ಸರ್ಕಾರದ ಮಂತ್ರಿಗಳು ಬಿಹಾರದಲ್ಲಿ ಏನಿವೆ ಎಂಬುದನ್ನು ಹೇಳುತ್ತಿದ್ದಾರೆ. ಬಿಹಾರದಲ್ಲಿ ನಮ್ಮ ಪಕ್ಷದ ಮುಖ್ಯಮಂತ್ರಿಗಳು ಯಾರಿದ್ದಾರೆ ಅವರ ಬಗ್ಗೆ ತಾವು ವಿಚಾರ ಮಾಡಿ ತಾವು ದಯವಿಟ್ಟು ಜಾತಿಯ ವಿಚಾರವನ್ನು ಹೇಳಬೇಡಿ. ಅದರಲ್ಲೂ ನೀವು ಈ ಮಾತನ್ನು ಮಾತನಾಡಲೇಬಾರದು. ಬೇರೆಯವರು ಮಾತನಾಡಿದರೆ ಅದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಹೇಳುವುದರಲ್ಲಿ ತಪ್ಪಿದ್ದರೆ ಯಾರು ಮಾತನಾಡಿದರೂ ಅದು ತಪ್ಪು.

ಶ್ರೀ ವೈ.ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಜನಸಂಖ್ಯೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹಿಂದುಳಿದ ವರ್ಗದವರಿಗೆ ಅಧಿಕಾರವನ್ನು ಹಂಚುವುದರ ಬಗ್ಗೆ ಪ್ರಸ್ತಾಪ ಮಾಡಿದರು, ಬಹಳ ಸಂತೋಷ. ಆದರೆ ಯಾವುದೋ ಜಾತಿಯ ಒಬ್ಬ ವ್ಯಕ್ತಿಯನ್ನು ಮಂತ್ರಿ ಮಾಗಿದರೆ ಆ ಜಾತಿಯ ಜನರು ಉದ್ಧಾರವಾಗುತ್ತಾರೆ, ಆ ವರ್ಗದ ಜನ ಸ್ವರ್ಗಕ್ಕೆ ಹೋಗುತ್ತಾರೆ ಎನ್ನುವ ಭಾವನೆ ನನಗೆ ಇಲ್ಲ. ಆದರೂ ಪರವಾಗಿಲ್ಲ. ನಾನು ಆಗಲೇ ಒಂದು ಸಾರಿ ಪ್ರಸ್ತಾಪ ಮಾಡಿದ್ದೇನೆ. ಸ್ವಾಮಿ, ಈ ರಾಜ್ಯದಲ್ಲಿರುವ ಜನಸಂಖ್ಯೆಯಲ್ಲಿ 100ಕ್ಕೆ 92 ಭಾಗ ಹಿಂದುಳಿದ ವರ್ಗದವರು ಎಂದು ನಿರ್ಮಾಣ ಮಾಡಿದಂಥ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಇದೆ. ಅದನ್ನು ಯಾರು ಮಾಡಿದರು ಎಂದರೆ ನಾವೇ ಮಾಡಿದ್ದುದು. ನಾನು ಮಂತ್ರಿಯಾಗಿದ್ದಾಗ ನಾವೇ ಮಾಡಿದ್ದುದು ಎಂದು ನಾನು ಭಾವಿಸಿಕೊಳ್ಳುತ್ತೇನೆ, ಹೌದು, ನಮ್ಮ ಜನತಾಪಕ್ಷದವರು ಅಧಿಕಾರದಲ್ಲಿ ಇದ್ದಾಗ ಇಬ್ಬರು ಮುಖ್ಯಮಂತ್ರಿಗಳು ಮುಂದುವರಿದ ವರ್ಗದವರು ಇದ್ದರು. ನಾವು ಆ ಪಾಪ ಮಾಡಿದೆವು. ಈ ಸರ್ಕಾರ ಬಂದು ಮೂರು ವರ್ಷ ಆಯಿತು. ತಾವು ಆ ಪಾಪವನ್ನು ಮಾಡಲು ತೊಡೆಯಿರಿ. ಇನ್ನು 92 ಭಾಗ ಈ ರಾಜ್ಯದ ಜನಸಂಖ್ಯೆಯನ್ನು ಹಿಂದುಳಿದವರು ಎಂದು ಮಾಡಿದಂಥ ಪಾಪದ ಪರಿಸ್ಥಿತಿಯನ್ನು ನಾವು ಸೃಷ್ಟಿ ಮಾಡಿದ್ದೇವೆ. ನೀವು ಯಾವ ಹಿಂದುಳಿದ ವರ್ಗದವರಿಗೆ ನಾಲ್ಕು ಜನರಿಗೆ ಮಂತ್ರಿ ಪದವಿ ಕೊಡದಿದ್ದರೂ ಪರವಾಗಿಲ್ಲ, ಈ ವ್ಯವಸ್ಥೆಯನ್ನು ಮೊದಲು ಕಿತ್ತು ಹಾಕಿ, ಇಚ್ಛಾ ಪ್ರದರ್ಶನ ಮಾಡಿ. ಮಂತ್ರಿಯಾಗಿ ಕೆಲಸ ಮಾಡುವುದರಿಂದ ಯಾರೂ ಉದ್ಧಾರವಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ರಾಮಯ್ಯನವರು ಏನು ಹೇಳಿದರೊ ಅದು ನನಗೆ ಅರ್ಥವಾಗಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ಪುಣ್ಯ ಆದಾಗ ನಾವು ಇದ್ದೆವು, ಪಾಪ ಆದಾಗ ಅವರು ಇದ್ದರು. ಆಗ ನಮಗೆ ಏನು ಗೊತ್ತಾಗಲಿಲ್ಲ ಏನು ಪಾಪ ಏನು ಪುಣ್ಯ ಎಂದು.

(ಗೊಂದಲ)

ಶ್ರೀ ಕರಿಯಣ್ಣ:-- ಮೂವತ್ತು ವರ್ಷಗಳಿಂದ ಎಲ್ಲರ ಉದ್ಧಾರಕ್ಕಾಗಿ ನಾವು ಆಡಳಿತ ಮಾಡುತ್ತಿರುವುದು. ನಮಗೂ ಸಹ ಸ್ವಲ್ಪ ಆಡಳಿತ ಮಾಡಲಿಕ್ಕೆ ಅವಕಾಶ ಕೊಡಬೇಕಾಗುತ್ತದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳುವುದು ಕರೆಕ್ಟಾಗಿದೆ, ಬದಲಾವಣೆಗೆ ಒಪ್ಪಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೆ, ಹೇಳುತ್ತಿಂಬೇಕಾದರೆ ನಾನು ಅರ್ಧದಲ್ಲಿಯೇ ನಿಲ್ಲಿಸಿಬಿಟ್ಟೆ. ಸನ್ಮಾನ್ಯ ದೇವರಾಜ ಅರಸ್‌ರವರು ಈ ಸಾಮಾಜಿಕ ನ್ಯಾಯ ಅಭಿವೃದ್ಧಿಯ ಕೊಂಡಿಯನ್ನು ಇವತ್ತು ಬಿಟ್ಟು ಹೋಗಿದ್ದಾರೆ. ಸಮಾನಾಂತರವಾದ ಸಾಮಾಜಿಕ ನ್ಯಾಯವನ್ನು ಈ ರಾಜ್ಯದ ಜನರಿಗೆ ಮುಟ್ಟಿಸುವವರೆಗೆ ನಮ್ಮ ಸರ್ಕಾರ ವಿರಮಿಸುವುದಿಲ್ಲ. We are going to share this kind of a political, economical and social power to the people. ಬರೀ ಡೀಸೆಂಟ್ರಲೈಸ್ ಪವರ್ ಕೊಂಡು ಹೋಗುವುದಲ್ಲ. ಇವತ್ತು ರಾಜಕೀಯವಾಗಿ, ಆರ್ಥಿಕವಾಗಿ ಸಾಮಾಜಿಕವಾಗಿ ನ್ಯಾಯವನ್ನು ಸಮಾನಾಂತರವಾದ ರೇಖೆಯಲ್ಲಿ ಜನತೆಗೆ ಮುಟ್ಟಿಸತಕ್ಕಂಥ ಸರ್ಕಾರವಾಗಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಅದರ ಬಗ್ಗೆ ತಾವು ಅನುಮಾನ ಇಟ್ಟುಕೊಳ್ಳಬೇಡಿ. ಅವರು ಹೇಳಿದರು, ಅದನ್ನು ಸರಿ ಮಾಡಲೇಬೇಕಾಗುತ್ತದೆ. ಯಾರು ಪಾಪ ಮಾಡಿದರೋ ಪುಣ್ಯ ಮಾಡಿದರೋ ಅದನ್ನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಅದು ಈಗ ಮಾಡೋಣ. ಚಿನ್ನಪ್ಪರೆಡ್ಡಿ ಕಮೀಷನ್ ಇದೆ. ರಾಜ್ಯಪಾಲರ ಭಾಷಣದಲ್ಲಿ ಸುಪ್ರೀಂ ಕೋರ್ಟ್ ಡಿಸಿಷನ್ ಪ್ರಕಾರ ನಾವು ಪರ್ಮನೆಂಟ್ ಬ್ಯಾಕ್‌ವರ್ಡ್‌ಕ್ಲಾಸ್ ಕಮೀಷನ್ ಮಾಡುತ್ತೇವೆಂದು ಹೇಳಿದ್ದುದು ಮಾತ್ರವಲ್ಲ, ಈಗಾಗಲೇ ಸರ್ಕಾರದ ಆದೇಶ ಹೊರಡಿಸಿದ್ದೇವೆ. ಅದು ಯಾರೆಂದು ಇನ್ನೂ ನೇಮಕ ಮಾಡಲಿಲ್ಲ. ಪತ್ರಿಕೆಗಳಲ್ಲಿ ಯಾರನ್ನೋ ನೇಮಕ ಮಾಡಿದ್ದಾರೆಂದು ಬಂದಿದೆ. ಆದರೆ ಯಾರು ಎಂದು ನೇಮಕ ಮಾಡಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಒಂದು ಪರ್ಮನೆಂಟ್ ಕಮೀಷನ್ ಮಾಡಬೇಕೆಂದು ಹೇಳಿದೆ, ಅದರ ಪ್ರಕಾರ ಒಂದು ಪರ್ಮನೆಂಟ್ ಕಮೀಷನ್‌ನ್ನು ಕನ್‌ಸ್ಟಿಟ್ಯೂಟ್ ಮಾಡತಕ್ಕಂಥ ಆದೇಶವನ್ನು ಈಗಾಗಲೇ ನಾವು ಹೊರಡಿಸಿದ್ದೇವೆ. Only in pursuance to the Governor's Address, we issued the Order. That has to be done.

ಶ್ರೀ ಆರ್.ವಿ. ದೇಶಪಾಂಡೆ:– ಪರ್ಮನೆಂಟ್ ಕಮೀಷನ್ ಮಾಡಿದ್ದುದು ಬಹಳ ಸಂತೋಷ, ಅದನ್ನು ಸ್ವಾಗತ ಮಾಡುತ್ತೇವೆ. ಸುಪ್ರೀಮ್ ಕೋರ್ಟ್ ಕೂಡ ಹೇಳಿದೆ. ವರ್ಷವೆಲ್ಲ ಕಳೆದ ಮೂರು ವರ್ಷಗಳ ಗೌವರ್ನರ್ಸ್ ಅಡ್ರೆಸ್ ನೋಡಿ. ಮೂರು ವರ್ಷಗಳ ಗವರ್ನರ್ ಅಡ್ರೆಸ್‌ನಲ್ಲಿ ಪರ್ಮನೆಂಟ್ ಕಮೀಷನ್ ಮಾಡುತ್ತೇವೆಂದು ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆ. ತಾವು ಮಾಡಿದ್ದೀರಿ, ಆದರೆ ನಾನು ಹೇಳುತ್ತೇನೆ. ಸೆಷನ್ ಇದ್ದಾಗ ತಾವು ಇಲ್ಲಿಯಾದರೂ ಅದನ್ನು ಅನೌನ್ಸ್ ಮಾಡಬೇಕಾಗಿತ್ತು.

SRI M. VEERAPPA MOILY:– We have announced. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಪರ್ಮನೆಂಟ್ ಕಮೀಷನ್‌ನನ್ನು ನೇಮಕ ಮಾಡುತ್ತೇವೆಂದು ಹೇಳಿದ್ದೇವೆ. That is a policy statement we have made. Don't you want me to implement what I have said? You must appreciate that I have promptly done it. ಅಷ್ಟೆ, ಅದರಲ್ಲಿ ಏನೂ ಇಲ್ಲ. ದೊಡ್ಡ ಮಂತ್ರಿ ಮಂಡಲ ಮಾಡಿದ್ದರೆ ನಿಜವಾಗಿ ಆ ಸರ್ಕಾರ ದಕ್ಷತೆಯುಳ್ಳ ಸರ್ಕಾರ, ಸರ್ಕಾರದ ಕಾರ್ಯಕ್ರಮವನ್ನು ಇಂಪ್ಲಿಮೆಂಟ್ ಮಾಡತಕ್ಕ ಒಂದು ಪರಿಸ್ಥಿತಿ ಆಗದೆ ಇದ್ದರೆ Yes, come back and question me. Then I can think of reducing the Ministry or whatever I want. ಆದರೆ ಆ ದಕ್ಷತೆಯನ್ನು ಕೊಡಬೇಕೆಂಬ ಉದ್ದೇಶದಿಂದ ಈ

ಮಂತ್ರಿಮಂಡಲವನ್ನು ರಚನೆ ಮಾಡಿದ್ದೇವೆ. ಜನತೆಯ ನಿರೀಕ್ಷೆಯ ಪ್ರಕಾರ ಜನತೆಯ ಸಮಸ್ಯೆಗಳಿಗೆ ಸ್ಪಂದಿಸತಕ್ಕ ಸರ್ಕಾರವನ್ನು ಖಂಡಿತ ಕೊಡುತ್ತೇವೆ. ಸನ್ಮಾನ್ಯ ಏಕಾಂತಯ್ಯನವರು ಕಮ್ಯುನಲ್ ಹಾರ್ಮನಿ ಬಗ್ಗೆ ಹೇಳಿದರು. ಇದು ಬರೀ ಸರ್ಕಾರದ ಕೆಲಸ ಎಂದು ನಮಗೆ ಖಂಡಿತವಾಗಿ ದುರಹಂಕಾರ ಇಲ್ಲ. ಇಡೀ ಕರ್ನಾಟಕ ರಾಜ್ಯದ ಜನತೆ, ಎಲ್ಲಾ ರಾಜಕೀಯ ಪಕ್ಷಗಳು ಇದರ ಬಗ್ಗೆ ಸಂಪೂರ್ಣ ಸಹಕಾರ ಹಸ್ತ ನೀಡಿದ್ದಾರೆ. I am publicly acknowledging it. Human chain, ಮಾನವ ಸರಪಳಿ ಮಾಡಿದ್ದೇವೆ. ಎಲ್ಲಾ ರಾಜಕೀಯ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಬಹುಶಃ state spoonsored attack, aggressive attack on the communal disharmony. This has been done for the first time in this state, in the whole of the country ಫರ್ಸ್ಟ್ ಮೀಟಿಂಗ್‌ಗೆ ಅವರು ಬಂದಿದ್ದರು, ಮಾಡೋಣವೆಂದು ಹೇಳಿದರು. ಕೊನೆಗೆ ಬರುವುದಕ್ಕೆ ಅವರಿಗೆ ಬೇರೆ ಬೇರೆ ತಾಪತ್ರಯ ಇದ್ದಿರಬಹುದು, ಬಂದಿಲ್ಲ. ಯಡಿಯೂರಪ್ಪನವರು BJP is also a party in having sponsored a most aggressive attack against the communal elements. ಯಾವ ರಾಜ್ಯದಲ್ಲಿ ಕೂಡ ಆಗಿರಲಿಲ್ಲ. ಇದಕ್ಕೆ ಸಹಕಾರ ಕೊಟ್ಟ ಎಲ್ಲ ರಾಜಕೀಯ ಪಕ್ಷದವರಿಗೂ ರಾಜ್ಯದ ಜನತೆಗೂ ಅಭಿನಂದಿಸುತ್ತೇನೆ. We are determined to maintain law and order. Law and order ನಲ್ಲಿ This Government will never compromise. ಇದಕ್ಕೆ ಎಲ್ಲರೂ ಸಹಕಾರ ಕೊಡಬೇಕು. ಯಾವಾಗ ಶಾಂತಿ ಇರುವುದಿಲ್ಲ, ಆಗ ಆರ್ಥಿಕ, ಸಾಮಾಜಿಕ, ಮತ್ತು ರಾಜಕೀಯ ಸುಭದ್ರತೆ ಆಗಲಿಕ್ಕೆ ಸಾಧ್ಯವಿಲ್ಲ. A most aggressive industrial policy, we have announced in the budget. ಅದನ್ನು ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ. ಡಾ. ಮನಮೋಹನ್ ಸಿಂಗ್ ಅವರೂ ಕೂಡ ಅಗ್ರಿಕಲ್ಚರ್ ಪಾಲಿಸಿ ಬಗ್ಗೆ ರೆಸ್ಟ್ರಿಕ್ಷನ್ ತೆಗೆಯುವುದು ಮಾತ್ರವಲ್ಲ ಇದರ ಬಗ್ಗೆ ಬೇರೆ ಬೇರ ರೀತಿಯಲ್ಲಿ agriculture to be made profitable. For the first time it is there in para 14 of the budget speech. Our State Government will take full advantage of this policy thrust given by the Government of India. ಮುಂದೆ ಅದರ ಪ್ರಕಾರ ನಮ್ಮ ಅಗ್ರಿಕಲ್ಚರಲ್ ಪಾಲಿಸಿಯನ್ನು ಪ್ರೊನೌನ್ಸ್ ಮಾಡುತ್ತೇವೆ. ತಾವು ರಚನಾತ್ಮಕವಾದಂಥ ಸಲಹೆಗಳನ್ನು ಕೊಟ್ಟಿದ್ದೀರಿ. ತಮ್ಮ ಮತ್ತು ರಾಜ್ಯದ ಜನತೆಯ ನಿರೀಕ್ಷೆಗೆ ಸರಿಯಾಗಿ ತಮ್ಮ ಆಶಯವನ್ನು ಟೀಕೆಯ ನೆರಳಿನಲ್ಲಿ ಏನು ವ್ಯಕ್ತ ಮಾಡಿದ್ದೀರಿ ಅದಕ್ಕೆ ಸರಿಯಾಗಿ ದಕ್ಷತೆಯಿಂದ, ಪ್ರಾಮಾಣಿಕವಾಗಿ ಮತ್ತು ಭ್ರಷ್ಟಾಚಾರ ರಹಿತವಾಗಿ ಖಂಡಿತವಾಗಿ ಮುಂದೆ ನುಗ್ಗಿಕೊಂಡು ಹೋಗುತ್ತೇವೆ. ಯಾವ ರೀತಿಯಲ್ಲೂ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ, ಪ್ರಲೋಭನೆಗೆ ಬಲಿಯಾಗದೆ ನಮ್ಮ ಸರ್ಕಾರ ಮುಂದೆ ನಡೆಯುತ್ತದೆಂದು ಹೇಳಿ ಮಾತನಾಡಲು ಅವಕಾಶ ಮಾಡಿಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ಸುದೈವವೋ ದುರ್ದೈವವೋ ನಾನು ಮಾತನಾಡುವಾಗ ತಾವು ಇರಲಿಲ್ಲ. ತಾವು ಒಂದು ಮಾತು ಹೇಳಿದಿರಿ, ಬಹಳಷ್ಟು ವಿಚಾರಗಳನ್ನು ಬಡ್ಜೆಟ್ ಮೇಲೆ ಮಾತನಾಡುತ್ತೇವೆಂದು ಹೇಳಿದಿರಿ. ನಾನು ಈಗ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಮುಖ್ಯವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇವೆ. ತಾವು ದಕ್ಷ ಮತ್ತು ಕ್ಲೀನ್ ಅಡ್ಮಿನಿಸ್ಟ್ರೇಷನ್ ಕೊಡುತ್ತೇನೆಂದು ಹೇಳಿದಿರಿ. ನಾನು ಹೇಳಿದ್ದೆ, ವರ್ತೂರು ಕ್ಷೇತ್ರದಲ್ಲಿ 'ಆಶ್ರಯ' ಯೋಜನೆಯಲ್ಲಿ, ಏನು ಸೈಟು ಹಂಚಿದ್ದಾರೆ ಅಲ್ಲಿ ಸಾಕಷ್ಟು ಭ್ರಷ್ಟಾಚಾರವಾಗಿದೆ, ಅಧಿಕಾರ ದುರುಪಯೋಗವಾಗಿದೆ, ಕಳೆದ ಅಧಿವೇಶನದಲ್ಲೂ ಕೂಡ ನಾನು ಇದನ್ನು ರೈಸ್ ಮಾಡಿದ್ದೆ. ಪುನಃ ವಿಷಯ ಪ್ರಸ್ತಾಪ ಮಾಡಿದಾಗ ಹೇಳಿದ್ದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಅದರ ಬಗ್ಗೆ ಎನ್‌ಕ್ವೈರಿಗೆ ಆರ್ಡರ್ ಮಾಡಿದರು. ಆದರೆ ತಾವು ಮುಖ್ಯಮಂತ್ರಿಯಾದ ಮೇಲೆ ಆ ಎನ್‌ಕ್ವೈರಿ

ಅಲ್ಲಿಗೆ ನಿಂತಿತು. ಡಿವಿಜನಲ್ ಕಮಿಷನ್‌ರ್ ಯಾವುದೇ ವಿಚಾರಣೆ ಮಾಡದೆ ಯಾವುದೇ ಕ್ರಮ ಕೈಗೊಳ್ಳದೆ ಫೈಲನ್ನು ವಾಪಸ್ಸು ಕಳುಹಿಸಿದರು.

ನಾನು ಹೇಳಿದೆ. ಆ ದಿನ ನಮ್ಮ ಪಕ್ಷದವರು ಅಷ್ಟೇ ಅಲ್ಲ, ತಮ್ಮ ಪಕ್ಷದ ಮಾಜಿ ಕಾಂಗ್ರೆಸ್ ಎಂಎಲ್‌ಎಗಳೂ ಸಹ ಪ್ರಸ್ತಾಪ ಮಾಡಿ ಇದರ ಬಗ್ಗೆ ಎನ್‌ಕ್ವಯರಿ ಆಗಬೇಕೆಂದು ಹೇಳಿದ್ದಾರೆ. ಇದು ತಮ್ಮ ಗಮನಕ್ಕೂ ಬಂದಿರಬಹುದು. ಆ ಭಾಗದ ಮಾನ್ಯ ಶಾಸಕರು. ಈಗ ಸಚಿವರು ಆಗಿರುವವರು ಅದನ್ನು ಡಿನೈ ಮಾಡಿದ್ದಾರೆ, ಅಲ್ಲಿ ನಾವು ಬ್ಲೈಂಡ್ಸ್‌ಗೆ, ಹ್ಯಾಂಡಿಕ್ಯಾಪ್ಡ್ ಜನರಿಗೆ ಕೊಟ್ಟಿದ್ದೇವೆ ಏನೂ ಅನ್ಯಾಯವಾಗಿಲ್ಲನೆಂದು ಹೇಳಿದರು. ಆ ದಿವಸ ನಾನು ಅವರ ರಾಜೀನಾಮೆ ಕೇಳಿಲ್ಲ. ಆ ಬಗ್ಗೆ ಒಂದು ಸಿಓಡಿ ಎನ್‌ಕ್ವಯರಿ ಮಾಡಬೇಕು ಎಂದು ಹೇಳಿದೆ. ತಮ್ಮ ಕಡೆ ಒಂದು ಫೈಲ್ ಕಳುಹಿಸುತ್ತೇನೆ. ಇದನ್ನು ತಾವು ನೋಡಿ. ಯಾರಿಗೆ ಸೈಟ್ ಹಂಚಿದ್ದಾರ ಅವರ ಹೆಸರು ನೋಡಿ. ಅವರ ಹೆಸರ ಮುಂದೆ ತಂದೆತಾಯಿಗಳ ಹೆಸರು ಇಲ್ಲ, ಮತ್ತೆ ಅಡ್ರೆಸ್ ಸಹಾ ಇಲ್ಲ. ವಿವರ ಇಲ್ಲ. ಅವರ ಅಡ್ರೆಸ್ ಇಲ್ಲ ವರ್ತೂರು ಕ್ಷೇತ್ರ ಎಂದರೆ, ಇದು ಬೆಂಗಳೂರಿನ ಸಮೀಪವೇ. ಇವತ್ತು ಬೆಂಗಳೂರಿನಲ್ಲಿ ಏನು ಸೈಟ್ ವ್ಯಾಲ್ಯೂ ಇದೆ ಅದಕ್ಕೆ ಸ್ವಲ್ಪ ಕಡಿಮೆ ಅಲ್ಲಿ ಇರಬಹುದು. ಅಲ್ಲಿ ಬ್ಲೈಂಡ್ಸ್‌ಗೆ, ಹ್ಯಾಂಡಿಕ್ಯಾಪ್ಡ್ ಜನರಿಗೆ ಸೈಟು ಕೊಟ್ಟನೆ ನಾನು ಕೇಳುವುದಿಲ್ಲ. ತಾವು ಈ ಲಿಸ್ಟ್ ನೋಡಿ. ಇದರಲ್ಲಿ ಒಂದು ಹೆಸರಿನಲ್ಲೂ ಸಹ ತಂದೆ ತಾಯಿ ಹೆಸರು, ಅಡ್ರೆಸ್ ಇಲ್ಲ. ಕೇವಲ ಒಂದು ಹೆಸರಿನಲ್ಲಿ ಸರಿಯಾದ ಅಡ್ರೆಸ್, ತಂದೆ ತಾಯಿ ಹೆಸರು ಇದ್ದರೆ ಎನ್‌ಕ್ವಯರಿ ಮಾಡುವುದು ಬೇಡ ಎಂದು ನಾನು ಹೇಳುತ್ತೇನೆ. ಬರೀ ಗಣಪತಿ, ರಘುನಾಥ, ರಾಮಣ್ಣ, ಈ ರೀತಿ ಸೈಟುಗಳನ್ನು ಹಂಚಿದರೆ ಜವಾಬ್ದಾರಿ ಯಾರು ? ನಾನು ನೇರವಾಗಿ ಕೇಳುತ್ತೇನೆ. ಇದರ ಬಗ್ಗೆ ಸಿಓಡಿ ಎನ್‌ಕ್ವಯರಿ ಮಾಡುತ್ತೀರಾ ? ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಎರಡನೆಯದಾಗಿ, ಹುಬ್ಬಳ್ಳಿಯಲ್ಲಿ ಮಂತ್ರಿಗಳ ಕಾರ್ ಸೀಜ್ ಆದ ಬಗ್ಗೆ, ಆರೋಪಿ ದಸ್ತಗಿರಿ ಮಾಡಿದ ಬಗ್ಗೆ ಪ್ರಸ್ತಾಪ ಮಾಡಿದ್ದೆ. ತಾವು ಅದರ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಈ ವಿಚಾರ ಮೇಲಿನ ಮನೆಯಲ್ಲಿ ಬಂತು. ತಾವು ಸಿಓಡಿ ಎನ್‌ಕ್ವಯರಿಗೆ ಒಪ್ಪಿದ್ದೀರಿ. ಎನ್‌ಕ್ವಯರಿ ಮಾಡುವುದು ಬಿಡುವುದು ನಿಮಗೆ ಬಿಟ್ಟಿದ್ದುದು. ಆದರೆ ಅಲ್ಲಿ ಅಧಿಕಾರಿಗಳ ಪ್ರಾಮಾಣಿಕತೆಯನ್ನು ನಿಜವಾಗಿ ಮೆಚ್ಚಬೇಕು. ಏಕೆಂದರೆ ಅಲ್ಲಿ ಅವರು ಆರೋಪಿಯನ್ನು ಅರೆಸ್ಟ್ ಮಾಡಿದ್ದಾರೆ, ಕಾರ್ ಸೀಜ್ ಮಾಡಿದ್ದಾರ. I should appreciate that offficer's courage, because he seized the Minister's car.

ಅಲ್ಲಿ ಸಿಓಡಿ ಎನ್‌ಕ್ವಯರಿಗೆ ಆರ್ಡರ್ ಮಾಡಿದ್ದೀರಿ. ಸಿಓಡಿ ಎನ್‌ಕ್ವಯರಿ ಆಗಬೇಕೆಂದು ಅಲ್ಲಿ ಅಧಿಕಾರಿಯೇ ಕೇಳಿದ್ದುದು. ಇದು ಮಿನಿಸ್ಟರ್ ಕಾನ್‌ಸ್ಟಿಟ್ಯುಯೆನ್ಸಿ ಇದೆ, ಆದ್ದರಿಂದ ಆಗಬೇಕು ಎಂದು ಹೇಳಿದರು. ತಾವು ಇದಕ್ಕೆ ಕ್ರೆಡಿಟ್ ತೆಗೆದುಕೊಳ್ಳುವುದು ಅಲ್ಲ. ಆದರೆ ಇಲ್ಲಿ ಇರುವುದು ಮುಖ್ಯ ಪ್ರಶ್ನೆ ಎರಡು. ಒಂದನೆಯದು ಅಲ್ಲಿ ಇನ್‌ವೆಸ್ಟಿಗೇಷನ್ ಯಾರು ಮಾಡುತ್ತಿದ್ದರೋ ಆ ಆಫೀಸರ್, ಆ ಜೂರಿಸ್ಡಿಕ್ಷನ್ ಆಫೀಸರ್‌ನ್ನು ತಾವು ಟ್ರಾನ್ಸ್‌ಫರ್ ಮಾಡಿದ್ದೀರಿ. ನಿಮ್ಮ ಎಲ್ಲಾ ಮೇಲಿನ ಅಧಿಕಾರಿಗಳು ಆ ಅಧಿಕಾರಿಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಪ್ರಶಸ್ತಿ ಕೊಟ್ಟಿದ್ದಾರೆ. ಆ ಅಧಿಕಾರಿಗೆ ಒಳ್ಳೆಯ ಹೆಸರು ಇದೆ. ದೊಡ್ಡ ದೊಡ್ಡ ಅಧಿಕಾರಿಗಳು ಅವರಿಗೆ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆ ಆಫೀಸರ್‌ನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡಬಾರದೇ ? ನಿಜವಾಗಿಯೂ ಪ್ರಾಮಾಣಿಕವಾಗಿ ಆ ಅಧಿಕಾರಿ ಕೆಲಸ ಮಾಡಿದರು. I appreciate, I admire your officer who has courage to seize the vehicle of the Minister. ಸಿ.ಓ.ಡಿ. ಎನ್‌ಕ್ವಯರಿ ಯಾವಾಗ ಬರುತ್ತದೆ ? When they don't do, when police officer don't enquire, the question of COD comes. ಆದರೆ ತಾವು ಪೊಲೀಸ್ ಆಫೀಸರ್ ಟ್ರಾನ್ಸ್‌ಫರ್ ಮಾಡಿದ್ದೀರಿ. ಏಕೆ ಟ್ರಾನ್ಸ್‌ಫರ್ ಮಾಡಿದ್ದೀರಿ ಎಂದು ಹೇಳುತ್ತಿದ್ದೇನೆ. ಎರಡನೆಯದಾಗಿ, ಅಲ್ಲಿ

ತಹಶೀಲ್ದಾರರು ಯಾರು ಕೆಲಸ ಮಾಡುತ್ತಾರೋ, he is the cousin brother of the accused. ಇದು ಒಂದೇ ಕೇಸ್ ಅಲ್ಲ. 4ನೇ ಕೇಸ್ ಇದು. ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನೀವು ಕ್ರಮ ತೆಗೆದುಕೊಳ್ಳಬೇಕಾಗಿತ್ತು. You should not have transferred that officer. In case ತಪ್ಪಾದರೆ you should have cancelled it and then immediately taken action against the local officer. ಅದು ಬಿಟ್ಟು ಸಿಓಡಿ ಎನ್‌ಕ್ವಯರಿ ಮಾಡಿದ್ದೀರಿ. ನೀವು ಸ್ವಚ್ಛ ದಕ್ಷ ಆಡಳಿತ ಕೊಡುತ್ತೇವೆ ಎಂದು ಹೇಳಿದಿರಿ. ನಾನು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದೆ. ಮೊದಲನೇ ವಿಚಾರದಲ್ಲಿ ಸಿಓಡಿ ಎನ್‌ಕ್ವಯರಿ ಮಾಡಬೇಕು ಎರಡನೇ ವಿಚಾರದಲ್ಲಿ ಯಾವ ಅಧಿಕಾರಿಗೆ ಸರ್ಕಾರ ಸರ್ಟಿಫಿಕೇಟ್ ಕೊಟ್ಟು ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳಿದೆಯೋ ಅಂತಹ ಅಧಿಕಾರಿಗೆ ಏನು ಟ್ರಾನ್ಸ್‌ಫರ್ ಮಾಡುತ್ತಿದ್ದೀರಿ ಅದನ್ನು ಕ್ಯಾನ್ಸಲ್ ಮಾಡಿ. ಮತ್ತೆ ಆರೋಪಿ ತಹಶೀಲ್ದಾರರ ಬ್ರದರ್ ಇದ್ದಾರೆ ಆತನ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಸದನದಲ್ಲಿ ವಿಚಾರ ಬಂದ ಮೇಲೆ ಸಾಕಷ್ಟು ಜನ ತಿಳಿದುಕೊಳ್ಳಲು ಶುರು ಮಾಡಿದ್ದಾರೆ. ಇದರ ಬಗ್ಗೆ ಏನು ಅಭಿಪ್ರಾಯ ಎಂದು ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಸಭಾಧ್ಯಕ್ಷರೆ, ತಾವು ವರ್ತೂರಿನಲ್ಲಿ ಸೈಟು ಕೊಟ್ಟ ಬಗ್ಗೆ ಹೇಳಿದ್ದೀರಿ. ನನಗೆ ತಿಳಿದಮಟ್ಟಿಗೆ ಆ ವರದಿ ಇಲ್ಲ. ಆ ವರದಿ ಇದ್ದರೆ ನಾನು ನೋಡುತ್ತೇನೆ. ಆ ವರದಿ ಯಾವ ತರಹ ಇದೆ ಎಂದು ನಾನು ನೋಡುತ್ತೇನೆ. ವರದಿ ಇಲ್ಲದಿದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರು ಆ ಮಾಹಿತಿಯನ್ನು ತಾವು ನನಗೆ ಒದಗಿಸಿ. ಇದರಲ್ಲಿ ಎರಡು ವಾದ ಇದೆ. ಕೊಟ್ಟ ನಿವೇಶನಗಳನ್ನು ಕ್ಯಾನ್ಸಲ್ ಹೇಗೆ ಮಾಡುವುದು ? ವಿಚಾರಣೆ ಹೇಗೆ ಮಾಡುವುದು ? ಮೊನ್ನೆ ನಮ್ಮ ಕೃಷ್ಣಾಕ್ಕೆ ಸುಮಾರು 900 ಜನ ಬಂದರು. ತಾವು ಬೇಕಾದರೆ ಸ್ವಲ್ಪ ಪರಿಶೀಲನೆ ಮಾಡಿ. 900 ಜನ ಕುರುಡರು, ಕುಂಟರು, they all came. I could witness them. ಅವರ ಹತ್ತಿರ ಹಕ್ಕುಪತ್ರ ಇದೆ. ಅವರು ನೋಡಿ ಸ್ವಾಮಿ ಸೈಟು ರದ್ದಾಗುತ್ತದೆಂದು ನಮಗೆ ವರ್ತಮಾನವಿದೆ. For the first time in the country, such an innovative project is done, for 900 blind people, deal people; for people who cannot walk. I think better you witness it.

ಶ್ರೀ ಆರ್.ವಿ. ದೇಶಪಾಂಡೆ:- ನಾನು ಹೇಳಿದ್ದುದು ತಮಗೆ ಅರ್ಥವಾಗಲಿಲ್ಲ. ಡವ್, ಡೆಫ್, ಬ್ಲೈಂಡ್ ಅವರಿಗೆ ಸೈಟು ಕೊಟ್ಟಿದ್ದರೆ ನಾನು ಸ್ವಾಗತ ಮಾಡುತ್ತೇನೆ, ಅವರಿಗೆ ಕೊಡಿ. ಆದರೆ ಅವರ ಹೆಸರಿನಲ್ಲಿ ಬೇರೆಯವರಿಗೆ ಬೇನಾಮಿ ಕೊಟ್ಟಿದ್ದರೆ ಅದಕ್ಕಾಗಿ ಹೇಳುತ್ತಿದ್ದೇನೆ. Reports reaching me are that in the names of those, benami sites have been given. ಯಾವ ಜನ ಅಲ್ಲಿ ಇಲ್ಲ ಅಂತಹವರಿಗೆ ಕೊಟ್ಟಿದ್ದಾರೆ. ಹಾಗಾಗಿ ನಾನು ನಿಮಗೆ ಹೇಳುತ್ತಿದ್ದೇನೆ, ಎನ್‌ಕ್ವಯರಿ ಮಾಡಲಿಕ್ಕೆ ನಿಮಗೇನು ಕಷ್ಟವಿದೆ ? ನಾನು ಸೈಟು ಕ್ಯಾನ್ಸಲ್ ಮಾಡಿಯೆಂದು ಹೇಳಲಿಲ್ಲ. I have not demanded that.

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ಹೇಳಿದ್ದಕ್ಕೆ ಈ ಮಾತು ಹೇಳಿದ್ದಲ್ಲ. ತಾವು ಇದನ್ನೂ ಕೂಡ ಗಮನಹರಿಸಿ ನೋಡಬೇಕು. ಏಕೆಂದರೆ 900 ಜನ ಕುರುಡರು, ಕುಂಟರು, ಕಿವುದರು ಇವರಿಗೆ ಸೈಟು ಕೊಟ್ಟಿದ್ದರೆ ಅದರ ಬಗ್ಗೆ ಸಿಓಡಿ ಎನ್‌ಕ್ವಯರಿ ಮಾಡಿದರೆ ಅದು ತಡೆಯಾಗುತ್ತದೆ. ಅದನ್ನು ತಾವು ಆಲೋಚನೆ ಮಾಡಬೇಕು. ತಾವು ಮಾಹಿತಿ ಕೊಡಿ. ನಾವು ವಿಚಾರ ಮಾಡುತ್ತೇವೆ, ಅದಕ್ಕೇನೂ ಅನುಮಾನ ಬೇಡ. ಇದನ್ನು ನಾವು ಖಂಡಿತವಾಗಿಯೂ ವಿಚಾರ ಮಾಡುತ್ತೇವೆ. ಆದರೆ ಒಮ್ಮೆಲೇ ರದ್ದು ಮಾಡಿಬಿಡಿಯೆಂದು ತಾವು ಹೇಳುತ್ತೀರಿ, ರದ್ದು ಮಾಡಿದರೆ ಏನಾಗುತ್ತದೆ ?

ಶ್ರೀ ಆರ್.ವಿ. ದೇಶಪಾಂಡೆ:- ಆ ತರಹ ಯಾರು ಹೇಳಿದರು ?

ಶ್ರೀ ಎಂ. ವೀರಪ್ಪ ಮೊಯಿಲಿ:– ನಮ್ಮ ರಾಯರೆಡ್ಡಿಯವರು ರದ್ದು ಮಾಡಿಯೆಂದು ಹೇಳಿದರು. ರದ್ದು ಮಾಡಿದರೆ ಅವರ ದುಃಖಕ್ಕೆ ಕುರುಡು ಆಗುತ್ತದೆ. ನಾನು ಕುರುಡು ಆಗಲಿಕ್ಕೆ ತಯಾರಾಗಿಲ್ಲ. ಕಣ್ಣಿದ್ದು ನಾನು ಕುರುಡನಾಗಲಿಕ್ಕೆ ತಯಾರಾಗಿಲ್ಲ. ನಾನು ಅವರನ್ನು ನೋಡಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ:– ವಿಚಾರಣೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ದೇಶಪಾಂಡೆಯವರು ಹೇಳಿದರು. ಏನಾದರೂ ಬೇನಾಮಿ ಇದ್ದರೆ, ಅದಕ್ಕೆ ಯಾರು ಜವಾಬ್ದಾರರು ? ಅಂತಹದ್ದು ಇದೆಯೆ ? ಇದ್ದರೆ ಯಾರ ತಪ್ಪನ್ನು ಅಡಗಿಸತಕ್ಕ ಪ್ರಯತ್ನ ನಾವು ಮಾಡುವುದಿಲ್ಲ. ಆ ತರಹ ಆದರೆ ಅದಕ್ಕೆ ಯಾರು ಜವಾಬ್ದಾರರು ? ನಮ್ಮ ನಮ್ಮ ಕ್ಷೇತ್ರಗಳಲ್ಲಿ ಯಾರಾದರೂ ಬೇನಾಮಿ ಹೆಸರಿನಲ್ಲಿ ಸೈಟು ಕೊಟ್ಟ ಕೂಡಲೇ ನಾವೇ ಜವಾಬ್ದಾರರು ಎಂದು ಹೇಳಿದರೆ ಬಹುಶಃ ಎಲ್ಲರ ಮೇಲೆ ಸಿಓಡಿ ಎನ್‌ಕ್ವಯರಿ ಆಗಬೇಕಾಗುತ್ತದೆ. ನಮ್ಮ ನಿಮ್ಮ ಕ್ಷೇತ್ರಗಳಲ್ಲಿ ಅಂತಹ ತಪ್ಪುಗಳು ಆಗುತ್ತವೆ ಅಧಿಕಾರಿಗಳು ತಪ್ಪು ಮಾಡುತ್ತಾರೆ. ಅಥವಾ ಮಿಸ್‌ರೆಪ್ರಸೆಂಟೇಷನ್‌ನಿಂದ ತಪ್ಪು ಮಾಡುತ್ತಾರೆ. You are skating on a very wrong path.

ನೀವು ನಿಮ್ಮ ಕ್ಷೇತ್ರಗಳಲ್ಲಿ ಎಲ್ಲವನ್ನು ಪರ್ಸೋನಲ್ ಆಗಿ ವೆರಿಫೈ ಮಾಡಿ ಎಲ್ಲಾ ನೋಡುತ್ತೀರಾ ? ನಾವು ಸ್ವಲ್ಪ ಆಲೋಚನೆ ಮಾಡೋಣ. ಇನ್ನು ಮುಂದೆ ಎಂ.ಎಲ್.ಎಗಳು ಟಾಸ್ಕ್‌ಫೋರ್ಸ್ ಕಮಿಟಿಗೆ ಅಧ್ಯಕ್ಷರಾಗುವುದಕ್ಕೇ ಬರುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ತಾವು ಈ ಮನೆಯನ್ನು ತಪ್ಪುದಾರಿಗೆ ಎಳೆಯುತ್ತಾ ಇದ್ದೀರಿ. ಬ್ಲೈಂಡ್ ಡೆಫ್ ಅಂಡರ್ ಡಮ್ ಜನಗಳಿಗೆ ಸೈಟ್ ಏಕೆ ಕೊಟ್ಟಿದ್ದೀರಿ ಎಂದು ನಾನು ಕೇಳಲಿಲ್ಲ. I have not demanded cancellation. I never demanded the resignation of the Minister. You should know it. I never demanded because he denied. ನಾನು ಇನೋಸೆಂಟ್ ಇದ್ದೇನೆಂದು ಹೇಳಿದ್ದಾರೆ. He has denied. So, I have not demanded the resignation of the Minister. ಬಡವರಿಗೆ ಬ್ಲೈಂಡ್ ಡೆಫ್ ಅಂಡ್ ಡಮ್ ಹ್ಯಾಂಡಿಕ್ಯಾಪ್ ಜನಗಳಿಗೆ ಕೊಟ್ಟರೆ ಅದು ತಪ್ಪೆಂದು ನಾನು ಹೇಳುವುದಿಲ್ಲ. ಅದು ಇಲ್–ಲೀಗಲ್ ಆಗಿದ್ದರೆ ನಾನು ನಿಮ್ಮ ಗಮನಕ್ಕೆ ತರುವುದು ಬೇಡವೆ ? ನಾನು ನಿಮಗೆ ಹೇಳುತ್ತಿದ್ದೇನೆ, ಎನ್‌ಕ್ವಯರಿ ಮಾಡಲಿಕ್ಕೆ ಏನು ಕಷ್ಟ ?

ಶ್ರೀ ಬಸವರಾಜ ರಾಯರೆಡ್ಡಿ:– ಅಕ್ರಮವಾಗಿ ಕೊಟ್ಟಿದ್ದರೆ ಅದನ್ನು ದಯವಿಟ್ಟು ಎನ್‌ಕ್ವಯರಿ ಮಾಡಲಿಕ್ಕೆ ನಾನು ಹೇಳಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ:– ವಿಚಾರಣೆ ಮಾಡುವಂತಹ ಆದೇಶವನ್ನು ಸರ್ಕಾರದವರು ಹೊರಡಿಸಿದ್ದರು. ಅಕ್ರಮ ವ್ಯವಹಾರ ಆಗಿದೆಯೆಂದು ಪರಿಗಣಿಸಿ ಸರ್ಕಾರದವರು ವಿಚಾರಣೆ ಮಾಡಬೇಕೆಂದು ಈಗಾಗಲೇ ಆದೇಶ ಹೊರಡಿಸಿದ್ದಾರೆ.

ಆ ಆದೇಶವನ್ನು ಹೊರಡಿಸಿದ್ದರ ಮೇಲೆ ತಾವು ಅದನ್ನು ರದ್ದು ಮಾಡಿದ್ದೀರಿ. ಇಲ್ಲಿ ಒಂದಂತೂ ನಿಜ. ಮೊದಲು ಆದೇಶ ಹೊರಡಿಸಬೇಕಾದರೆ ಮೇಲ್ನೋಟಕ್ಕೆ ದುರುಪಯೋಗವಾಗಿದೆ. ರುಜುವಾತಾದಂಥ ಕಾರಣ ಇರಬೇಕು. ಒಂದು ಪಕ್ಷ ಅಂತಹ ಕಾರಣ ಇದ್ದರೆ ನಾವು ಏತಕ್ಕೋಸ್ಕರ ರದ್ದುಪಡಿಸಿದಿರಿ ? ಇಲ್ಲಾ, ಸಂಬಂಧಪಟ್ಟ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಮಾಡಿದ್ದರೆ ಯಾರು ಈ ಆದೇಶವನ್ನು ಹೊರಡಿಸಿದರೋ, ಅವರು ಮಂತ್ರಿಗಳಾಗಿರಲೀ, ಅಧಿಕಾರಿಗಳಾಗಿರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ? ಒಂದು ಕಡೆ ಸರ್ಕಾರ ವಿಚಾರಣೆ ಮಾಡಬೇಕು ಎಂಬು ಆದೇಶ

ಹೊರಡಿಸುತ್ತದೆ, ಮತ್ತೊಂದು ಕಡೆ ಯಾವುದೇ ಕಾರಣ ಕೊಡದೆ ರದ್ದುಪಡಿಸುತ್ತೀರಿ. ಹಾಗಾದರೆ ಇದಕ್ಕೆ ಏನು ಅರ್ಥ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಯಾವ ವಿಚಾರಣೆಯನ್ನೂ ಕೂಡ ನಾನು ರದ್ದು ಮಾಡಿಲ್ಲ. ಅದು ಏನು ವಿಚಾರಣೆ ಎಂದು ನಾನು ನೋಡುತ್ತೇನೆ. ಅದು ಎನ್‌ಕ್ವೈರಿಗೆ ಆರ್ಡರ್ ಆಗಿದೆಯೇ ಅಥವಾ ತಾವು ಕೆಲವು ಬೇನಾಮಿ ಆಗಿದೆಯೆಂದು ಹೇಳಿದ್ದೀರಿ. ಖಂಡಿತವಾಗಿಯೂ ನಾನು ವಿಚಾರಣೆ ಮಾಡುತ್ತೇನೆ. ಎರಡನೆಯದಾಗಿ ಹುಬ್ಬಳ್ಳಿ ವಿಚಾರ ಹೇಳಿದ್ದೀರಿ. ಈಗ ನಾನು ಆ ಸದನದಲ್ಲಿಯೂ ಕೂಡ ಸ್ಪಷ್ಟವಾಗಿ ಹೇಳಿದ್ದೇನೆ. ಯಾವ ಸಿ.ಓ.ಡಿ. ಎನ್‌ಕ್ವೈರಿ ಕೂಡ ಮಂತ್ರಿಗಳ ಮೇಲೆ ಆಗಿಲ್ಲ. There is some misunderstanding. There is no enquiry....

ಆದರೆ ಏನು ಒಂದು ಘಟನೆ ಅಥವಾ ಒಂದು an attempt to shoot... ಏನು ಘಟನೆಯಾಗಿದೆ, ಅದರ ಬಗ್ಗೆ ತನಿಖೆ ಮಾಡುವುದಕ್ಕೆ ಸಿ.ಓ.ಡಿ.ಗೆ ಒಪ್ಪಿಸಿದ್ದೇವೆ. Where Anil Kumar Patil is involved. He is the accused. None of the relative's of Minister or Minister himself involved. Let us be clear.

ಶ್ರೀ ಬಿ.ಎಚ್. ಬನ್ನಿಕೋಡ್:– ಅವರ ಕಾರು ಮಾತ್ರ ಇದೆ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಏಕೆಂದರೆ ಮಂತ್ರಿಗಳ ಕಾರಿನ ವಿಷಯ ಬಂದಿದ್ದರಿಂದ, ಅದರ ಪ್ರಸ್ತಾಪ ಬಂದಿದ್ದರಿಂದ, ಆ ಅಲಿಗೇಶನ್ ಇರುವುದರಿಂದ COD ಎನ್‌ಕ್ವೈರಿ ಮಾಡಬೇಕೆ ಎಂದು ಕೇಳಿದರು. I said alright. But ther is no COD enquiry against the Minister. ಇದು ಒಂದು ವಿಚಾರ. ಇನ್ನೊಂದು ವಿಚಾರ ಪೊಲೀಸ್ ಅಧಿಕಾರಿಗಳ ವರ್ಗಾವಣೆ. ನಾವು ಈ ಸದನದಲ್ಲಿ ಮುಖ್ಯಮಂತ್ರಿಯಾಗಿ, ಗೃಹಮಂತ್ರಿಯಾಗಿ ಒಬ್ಬ ಅಧಿಕಾರಿಯ ಬಗ್ಗೆ ಕೆಲವು ವಿಚಾರ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. I would like to take you into confidence and show the file regarding that officer then you see what certificate you give is correct or not.

ಶ್ರೀ ಆರ್.ವಿ. ದೇಶಪಾಂಡೆ:– ಮುಖ್ಯಮಂತ್ರಿಗಳೇ, ನಾನು ಇಲ್ಲಿ ಸರ್ಟಿಫಿಕೇಟ್ ಓದುತ್ತೇನೆ. For Mr. Achuta Rao – a certificate has been given to him on 20–12–90ರಲ್ಲಿ ನೀವು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಇದೆ. One month back your Senior Officers of Hubli have given certificate to this Officer stating that he has done very good work on Ayodhya riots.

SRI M. VEERAPPA MOILY:– Even though I will not require to show the file but as a Leader of the Opposition I will show you the file. Then you tell me whether action in transferring him is correct or not.

ಶ್ರೀ ಸಿ. ಬೈರೇಗೌಡ:– ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಎಕ್ಸೈಸ್ ವಿಚಾರದಲ್ಲಿ ಬಹಳ ಹೇಳಿದ್ದಾರೆ. ಅದರಲ್ಲಿ ನಿಜ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಅದು ಪೂರ್ತಿಯಾಗಿ ನಿಜ ಅಲ್ಲ. ಬೆಂಗಳೂರು ನಗರಕ್ಕೆ, ಒಂದು ನೀತಿಯನ್ನು ಹಾಕಿದ್ದೀರಿ. ಬೆಂಗಳೂರು ನಗರದಲ್ಲಿ ನಿಮ್ಮ ಷೆಡ್ಯೂಲ್ 1–2–3–4 ರವರೆಗೆ ಕೂಡ ಹೋಗುತ್ತದೆ. ಅಂದರೆ ಇಡೀ ಜಿಲ್ಲೆಯನ್ನು ಒಬ್ಬರಿಗೆ ಕೊಡತಕ್ಕದ್ದು. ಬಹಳ ಜನ ಬರಲಿ, ಬಡವರು, ಕಡಿಮೆ ಆದಾಯದವರು ಬರಲಿ ಎನ್ನುವ ಮಾತನ್ನು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ಆದರೆ ಬೆಂಗಳೂರು ಬಿಟ್ಟು ಉಳಿದಿರತಕ್ಕಂಥಾದ್ದಕ್ಕೆ

ಒಂದು ನೀತಿ, ಬೆಂಗಳೂರು ನಗರಕ್ಕೆ ಒಂದು ನೀತಿಯನ್ನು ನೀವು ಅನುಸರಿಸುವುದಕ್ಕೆ ಹೋಗುತ್ತಿದ್ದೀರಿ. ಇದು ಚರ್ಚೆಗೆ ಬಂದಾಗ ನಾನು ವಿವರವಾಗಿ ಹೇಳುತ್ತೇನೆ. ತಾವು ನನ್ನ ಜೊತೆಯಲ್ಲಿ ವಿಚಾರ ವಿನಿಮಯ ಮಾಡುತ್ತೇನೆ ಎಂದು ಹೇಳಿದ್ದೀರಿ. ಅದು ಇಲ್ಲಿಯವರೆಗೆ ಕೂಡ ಆಗಿಲ್ಲ. ಅದನ್ನು ಕಲಿಯತಕ್ಕದ್ದು, ಬಿಡತಕ್ಕದ್ದು ತಮಗೇ ಬಿಟ್ಟಿರತಕ್ಕಂಥ ವಿಚಾರ. ನನಗೆ ಇರತಕ್ಕಂಥ ಅನುಮಾನ ಏನು ಎಂದರೆ, ಬೆಂಗಳೂರು ನಗರಕ್ಕೆ ಒಂದು ನೀತಿ, ಬೆಂಗಳೂರು ನಗರ ಬಿಟ್ಟು ರಾಜ್ಯಕ್ಕೆ ಮತ್ತೊಂದು ನೀತಿಯನ್ನು ತಾವು ಹಾಕಿದ್ದೀರಿ. ಇದರಿಂದ ನೀವು ಈ ಎಕ್ಸೈಸ್ ಲಾಬಿಯಿಂದ ಪೂರ್ತಿಯಾಗಿ ಹೊರಬಂದಿಲ್ಲ; ಬರುವುದಕ್ಕೆ ಸಾಧ್ಯವಿಲ್ಲವೆಂದು ಇದು ಒಂದರಿಂದಲೇ ಸಾಬೀತಾಗುತ್ತದೆ. ಇನ್ನು ಹುಬ್ಬಳ್ಳಿ ಬಗ್ಗೆ ಹೇಳಬೇಕೆಂದರೆ, ಇವತ್ತು ಬೆಳಿಗ್ಗೆ 8.10 ರ ಸಮಯದಲ್ಲಿ ನನಗೆ ಒಂದು ಟೆಲಿಫೋನ್ ಕಾಲ್ ಬಂತು. ಇವತ್ತು ನೀವು ಸಾಂಡ್ರಾ ಅವರ ಕೇಸಿನ ಬಗ್ಗೆ ಪ್ರಸ್ತಾಪ ಮಾಡುತ್ತೀರಂತೆ ಎಂದು. ನಾನು ಅದನ್ನು ಮರೆತಿದ್ದೆ. ಅದು ಏನಪ್ಪ ವಿಚಾರ ಎಂದು ಅವರನ್ನೇ ಕೇಳಿದೆ. ಸಾಂಡ್ರಾ ಅವರ ಕಾರು ಸೀಜ್ ಆಗಿರುವ ವಿಚಾರ ಪ್ರಸ್ತಾಪ ಮಾಡುತ್ತೀರಂತೆ ಎಂದು ಆತ ಹೇಳಿದರು.

ನಾನು ಇನ್ನೂ ಯೋಚನೆ ಮಾಡುತ್ತಿದ್ದೇನೆಂದು ಹೇಳಿದೆ. ಕೊನೆಗೆ ಆ ಕಡೆಯಿಂದ ಟೆಲಿಫೋನ್‌ನಲ್ಲಿ ಏನು ಉತ್ತರ ಬಂತು ಎಂದರೆ, ನಿಮಗೆ ಒಂದು ಕಾಲು ಸರಿ ಇಲ್ಲ. ನಿಜ, ನನಗೆ ಕಾಲು ಸರಿಯಿಲ್ಲ. ಈ ವಿಚಾರವನ್ನು ಪ್ರಸ್ತಾಪ ಮಾಡಿದರೆ, ಇನ್ನೊಂದು ಸರಿಯಾಗಿರತಕ್ಕ ಕಾಲನ್ನೂ ಮುರಿಯುತ್ತೇವೆ ಎಂದು ಫೋನ್‌ನಲ್ಲಿ ಹೇಳಿದರು. ನಾನು, ಫೋನ್‌ನಲ್ಲಿ ಹೆಸರು ಕೇಳಿದೆ, ಯಾರೋ ರಾಜು ಎನ್ನುವವರು ಎಂದು ತಿಳಿಯಿತು. ಯಾವ ರಾಜು, ಏನೋ ನನಗೆ ಗೊತ್ತಿಲ್ಲ. ಒಂದು ಕಾಲು ಸರಿ ಇಲ್ಲ, ಇನ್ನೊಂದು ಕಾಲನ್ನೂ ಮುರಿಯುತ್ತೇವೆ, ಹುಶಾರ್ ಭದ್ರವಾಗಿರಿ. ಈ ವಿಚಾರವನ್ನು ಪ್ರಸ್ತಾಪ ಮಾಡಕೂಡದು ಎಂದ ಬಂತು. ಈ ಫೋನ್ ಕರೆ ಬರದಿದ್ದರೆ, ನಾನು ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಇರಲಿಲ್ಲ. ನಾನು ಇದನ್ನು ಪ್ರಸ್ತಾಪ ಮಾಡುವುದೇ, ಬೇಡವೇ ಎಂಬ ಗೊಂದಲದಲ್ಲಿದ್ದೆ. ಏಕೆಂದರೆ, ದಾರಿಯಲ್ಲಿ ಹೋಗುವವರು ಯಾರೋ, ಫೋನ್‌ನಲ್ಲಿ ಮಾತನಾಡಿದ ತಕ್ಷಣಕ್ಕೆ, ಏನೋ ದೊಡ್ಡದಾಗಿ ಪ್ರಸ್ತಾಪ ಮಾಡಬೇಕೆಂಬ ಉದ್ದೇಶವೂ ನನಗೆ ಇರಲಿಲ್ಲ. ಈ ರೀತಿಯಾಗಿ ಮಾನ್ಯಮಂತ್ರಿಗಳಿಗೆ ಹೇಳಿದೆ ಏನೋ ನನಗೆ ಗೊತ್ತಿಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಸಾಂಡ್ರಾರವರು ಹೇಳಿದರು. ಈ ರೀತಿಯಾಗಿ ನನ್ನಂಥವರಿಗೆ ಹೆದರಿಕೆ ಹಾಕತಕ್ಕ ವಾತಾವರಣ ರಾಜ್ಯದಲ್ಲಿ ನಿರ್ಮಾಣವಾಗುತ್ತಿದೆ. ನಾನು ಇಂತಹ ಹೆದರಿಕೆಗೆ ಹೆದರುವವನಲ್ಲ, ಇದು ಯಾವ ಮಹಾ ದೊಡ್ಡ ವಿಚಾರ. ಇದಕ್ಕಿಂತ ದೊಡ್ಡ ವಿಚಾರಗಳು ಬಂದಿವೆ ಇವತ್ತು ಇಂತಹ ಹೆದರಿಕೆಗೆ, ಹೆದರುವವನೂ, ಮಣಿಯುವವನೂ ನಾನಲ್ಲ. ಈ ತರಹದ ವಾತಾವರಣ ಏನು ನಿರ್ಮಾಣವಾಗುತ್ತಿದೆ, ಇದನ್ನು ದಯಮಾಡಿ ತೀವ್ರವಾಗಿ ಪರಿಗಣಿಸಬೇಕೆಂಬ ಮಾತನ್ನು ಹೇಳುತ್ತೇನೆ. ಆಶ್ರಯ ಯೋಜನೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಮೊದಲು ಒಂದು ಸೈಟಿಗೆ 750 ರೂಪಾಯಿ ಖರ್ಚು ಮಾಡಬೇಕೆಂದು ನಿಗದಿಯಾಗಿತ್ತು. ಈಗ 1,500 ರೂಪಾಯಿಗೆ ನಿಗದಿಪಡಿಸಿದ್ದಾರೆ. ಈಗ 1,500 ರೂಪಾಯಿಗಳಿಗೂ ಕೂಡ ನಿವೇಶನಗಳು, ಗ್ರಾಮಾಂತರ ಪ್ರದೇಶದ ಅನೇಕ ಹಳ್ಳಿಗಳಲ್ಲಿ ಸಿಕ್ಕುವುದಿಲ್ಲ. ಆದ್ದರಿಂದ, ದಯವಿಟ್ಟು ತಾವು ಈ ವಿಚಾರವನ್ನು ಅಂದರೆ, ಒಂದು ಸೈಟಿಗೆ 1,500 ರೂಪಾಯಿಗಳವರೆಗೆ ಖರ್ಚು ಮಾಡಬೇಕೆಂದು ಏನಿದೆ. ಇದು ಪುನಃ ಅಪ್‌ವರ್ಡ್ ರಿವಿಷನ್ ಆಗಬೇಕಾದ ಆವಶ್ಯಕತೆ ಇದೆ. ನನ್ನ ಕ್ಷೇತ್ರದಲ್ಲಿ ಅನೇಕ ಹಳ್ಳಿಗಳಲ್ಲಿ ಈ ಕಾರಣದಿಂದ ಸೈಟು ಕೊಡುವುದಕ್ಕಾಗುತ್ತಾ ಇಲ್ಲ. ಆದ್ದರಿಂದ ಒಂದು ಸೈಟ್ ಬೆಲೆಯನ್ನು ಅಂದರೆ ಕನಿಷ್ಠ 2,000 ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸರ್ಕಾರ ಒಪ್ಪಬೇಕೆಂದು ಅಧ್ಯಕ್ಷರ ಮೂಲಕ ತಮ್ಮಲ್ಲಿ ವಿನಂತಿ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಎಕ್ಸೈಸ್ ವಿಚಾರವಾಗಿ ತಮ್ಮ ಜೊತೆ

ಮಾತುಕತೆ ಮಾಡುತ್ತೇನೆಂದು ಹೇಳಿದೆ, ನಾಳೆಯೇ ಮಾತುಕತೆ ಮಾಡುತ್ತೇನೆ. ಈ ವಿಷಯದಲ್ಲಿ ನಮ್ಮದು ಎರಡು ಸದಸ್ಯರ ಸಬ್ ಕಮಿಟಿ, ಆಮೇಲೆ ಇದು ವಿಸ್ತರಣೆಯಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು ಹಿಂದೆ ಒಂದು ಸಾರಿ ಸಿಕ್ಕಿ ಬಿದ್ದಿದ್ದೀರಿ. ಇನ್ನೊಂದು ಟೇಪ್ ಹೊರಗಡೆ ಬಂದರೆ, ಅದಕ್ಕೆ ನೀವೇ ಜವಾಬ್ದಾರರಾಗುತ್ತೀರಿ. ಇದನ್ನು ತಮಗೆ ಜ್ಞಾಪಕ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಾನು ನಿಮಗೆ ಹೇಳಬೇಕೆಂದಿದೆ. ಅವರು ನಿಮ್ಮ ಕಾರ್ಯಾಲಯಕ್ಕೆ ಬರುವಾಗ, ಅವರನ್ನು ಶೋಧನೆ ಮಾಡಿ, ಒಳಗಡೆ ಸೇರಿಸಿಕೊಳ್ಳಿ, ಯಾವ ಜೇಬಿನಲ್ಲಿ ಏನು ಇಟ್ಟಿರುತ್ತಾರೋ, ಹುಶಾರಾಗಿರಿ. ಏಕೆಂದರೆ, ನಿಮ್ಮ ಬಗ್ಗೆ ನಮಗೆ ಕಾಳಜಿ ಇದೆ, ಏನಾದರೂ ಹೆಚ್ಚು ಕಡಿಮೆ ಆದೀತು.

ಶ್ರೀ ಸಿ. ಬೈರೇಗೌಡ:– ಆ ಸಂಶಯ ಇಟ್ಟುಕೊಳ್ಳಬೇಡಿ, ನಾನು ಅಲ್ಲಿ ಬಂದಾಗ, ಬೇಕಾದರೆ ಎಲ್ಲವನ್ನೂ ತೋರಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಬೈರೇಗೌಡರೇ, ಎಲ್ಲವನ್ನೂ ತೋರಿಸುವುದು ಬೇಡ.

ಶ್ರೀ ವಾಟಾಳ್ ನಾಗರಾಜ್:– ನೀವು, ನಮ್ಮನ್ನೂ ಜೊತೆಯಲ್ಲಿ ಕರೆಯಿರಿ, ಆಗ ಅವರಿಗೆ ಅವಕಾಶ ಸಿಕ್ಕುವುದಿಲ್ಲ. ನೀವು ಸ್ವಲ್ಪ ಯೋಚನೆ ಮಾಡಿ.

ಶ್ರೀ ಎಸ್.ಎಂ. ಕೃಷ್ಣ:– ಬೈರೇಗೌಡರು, ಇವರು ಸೇರಿದಾಗ, ಅವರನ್ನು metal detector ಟೆಸ್ಟ್‌ಗೆ ಅನ್ವಯಿಸಿ ಆಮೇಲೆ ಒಳಗೆ ಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಉಪ ಮುಖ್ಯಮಂತ್ರಿಗಳು ಏನು ಸಲಹೆ ಮಾಡಿದ್ದಾರೆ. ಅದು ಬಹಳ ಒಳ್ಳೆಯ ಸಲಹೆ.

(ಗೊಂದಲ)

ಅಧ್ಯಕ್ಷರು:– ತಾವು ಸಮಾಧಾನದಿಂದ ಕುಳಿತುಕೊಳ್ಳಿ. ಎಲ್ಲಾ ಸದಸ್ಯರಿಗೂ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುತ್ತೇನೆ. ನಾನು ಅವಕಾಶ ಕೊಡುವುದಿಲ್ಲವೆಂದು ಹೇಳಲಿಲ್ಲ. ನೀವೆಲ್ಲರೂ ಒಂದೇ ಸಾರಿ ಎದ್ದುನಿಂತರೆ ಹೇಗೆ?

ಶ್ರೀ ಸಿ. ಬೈರೇಗೌಡ:– ನನಗೆ ಉತ್ತರ ಕೊಡುತ್ತಿದ್ದರು, ಇನ್ನೂ ಎರಡು ವಿಚಾರ ಪ್ರಸ್ತಾಪ ಮಾಡಿದ್ದೇನೆ, ದಯವಿಟ್ಟು, ಅದಕ್ಕೂ ಉತ್ತರ ಹೇಳಲಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಬೆದರಿಕೆ ವಿಚಾರ ಹೇಳಿದಿರಿ, ತಾವು ಏನೂ ಹೆದರಬೇಕಾಗಿಲ್ಲ. ನಮ್ಮ ಸಂಪೂರ್ಣ, ಸಂರಕ್ಷಣೆಯ ಪ್ರಭಾವಳಿಯಲ್ಲಿ ತಾವು ಇರುತ್ತೀರಿ. ಮೂರನೆಯದಾಗಿ, ಆಶ್ರಯ ಯೋಜನೆ ವಿಚಾರ ಹೇಳಿದ್ದೀರಿ. ಅದರ ಬಗ್ಗೆ ತಾವು ಹೇಳಿದುದು ಸರಿ, ವಾಸ್ತವಾಂಶ. ಅನೇಕ ಕಡೆಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಸ್ವಾತಂತ್ರ್ಯ ಕೊಡಬೇಕಾಗುತ್ತದೆ. ಏಕೆಂದರೆ, ಒಂದೊಂದು ಜಾಗದಲ್ಲಿ, ಒಂದೊಂದು ಕ್ರಯ ಇರುತ್ತದೆ. ಒಂದು ಕಡೆ ಮಿತಿ ಹೆಚ್ಚು ಇರುತ್ತದೆ, ಕೆಲವು ಕಡೆಗಳಲ್ಲಿ ಕಡಿಮೆ ಇರುತ್ತದೆ. I agree with you. We will make proper modification.

ಶ್ರೀ ಕರಿಯಣ್ಣ:– ಸ್ವಾಮಿ ಅಧ್ಯಕ್ಷರೇ, ಡಾಕ್ಟರ್ ಅಂಬೇಡ್ಕರ್ ಜನ್ಮದಿನೋತ್ಸವದ ಅಂಗವಾಗಿ ಅವರ ಹೆಸರಿನಲ್ಲಿ ಮನೆಗಳನ್ನು ಕೊಡಬೇಕೆಂದು ಮಾಡಿದೆವು. 1991–92, 1992–93 ಆ ಎರಡು

ವರ್ಷಗಳಲ್ಲಿ ಮನೆಗಳು ಆಗಲಿಲ್ಲ. ಮತ್ತೆ 1993–94 ಆಯಿತು. ಈ ಹಣವನ್ನು ಸರ್ಕಾರ ಬಿಡುಗಡೆ ಮಾಡಲಿಲ್ಲ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಬಂದಿದ್ದ ಹಣ, ಹರಿಜನರಿಗಾಗಿ ಮೀಸಲಿಟ್ಟ ಹಣ. ಆ ಹಣವನ್ನು ಇದುವರೆಗೂ ಒಂದು ಮನೆಗೂ ಸಹ ಖರ್ಚು ಮಾಡಲಿಲ್ಲ. ಈಗ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದರು. ಆದರೆ ಆಶ್ರಯಕ್ಕೆ ಮಾತ್ರ ಜಿಲ್ಲಾಧಿಕಾರಿಗಳಿಗೆ ಹಣ ಕೊಡುತ್ತಿದ್ದಾರೆ. ಡಾ|| ಅಂಬೇಡ್ಕರ್ ಹೆಸರಿನಲ್ಲಿ ಮನೆಗಳನ್ನು ಯಾವಾಗ ಕಟ್ಟುತ್ತೀರಿ, ಯಾವಾಗಿನಿಂದ ಶುರು ಮಾಡುತ್ತೀರಿ ಎಂದು ಹೇಳಬೇಕು. ಯೂನಿವರ್ಸಿಟಿ ಲೆವಲ್‌ನಲ್ಲಿ ಅಮಾಂಗ್ ದಿ ಷೆಡ್ಯೂಲ್ ಕ್ಯಾಸ್ಟ್ ಯಾರು ಫಸ್ಟ್ ಬರುತ್ತಾರೆ ಅವರಿಗೆ ಒಂದು–ಎರಡು–ಮೂರರಂತೆ ಕ್ಲಾಸ್ 1 ಹುದ್ದೆಯನ್ನು ಕೊಡಬೇಕು ಎಂದು ತೀರ್ಮಾನ ತೆಗೆದುಕೊಂಡು ಬಹಳ ದಿವಸ ಆಯಿತು. ಹೈಕೋರ್ಟಿಗೆ ಹೋಯಿತು, ಅಲ್ಲಿಂದ ಬಂತು ಸುಪ್ರೀಂ ಕೋರ್ಟಿಗೆ ಹೋಯಿತು, ಅಲ್ಲಿಂದ ಬಂತು. ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್‌ಗೆ ಹೋಯಿತು. ಅಲ್ಲಿಂದ ಬಂತು. ಇದುವರೆಗೂ ಸಹ ತೀರ್ಮಾನ ತೆಗೆದುಕೊಂಡು ಅವರಿಗೆ ನೌಕರಿ ಕೊಡುತ್ತಿಲ್ಲ. ಸುಮ್ಮನೆ ಕೊಡುತ್ತೇನೆ ಎಂದು ಅವರಿಗೆ ಆಸೆ ತೋರಿಸುವುದು ಬೇಡ. ಕೊಡಿ ಇಲ್ಲದಿದ್ದರೆ, ಆ ಕಾನೂನನ್ನು ತೆಗೆದುಬಿಡಿ. ಕೊಡುವುದಾದರೆ ಡೈರೆಕ್ಟ್ ಆಗಿ ಅವರಿಗೆ ಕೊಡುವಂತಹ ಅವಕಾಶ ಮಾಡಿಕೊಡಬೇಕು. ಇನ್ನೊಂದು ಆಶ್ರಯ ಯೋಜನೆಯ ಬಗ್ಗೆ ನಾವು ನಿನ್ನೆಯೋ ಅಥವಾ ಇವತ್ತೋ ಒಂದು ಪೇಪರ್‌ನಲ್ಲಿ ಓದಿದ್ದೆವು. ಗೋಮಾಳದಲ್ಲಿ ಸಹ ಆಶ್ರಯ ಸೈಟ್‌ಗಳನ್ನು ಮಾಡಬಾರದು, ಗೋಮಾಳ ಮತ್ತು ಕೆರೆ ಹಾಗೂ ಫಾರೆಸ್ಟ್‌ನಲ್ಲಿ ಕೊಡಬಾರದು ಎಂದು ಡಿ.ಸಿ.ಯವರಿಗೆ ಆದೇಶ ಕೊಟ್ಟಿದ್ದಾರಂತೆ. ಈಗ ಊರಿನಲ್ಲಿ ಉಳಿದಿರುವುದೇ ಸ್ವಲ್ಪ ಗೋಮಾಳ. ಅಲ್ಲೇ ಮನೆಗಳು ಇರುವುದು, ಕಟ್ಟಲು ಜಾಗ ಉಳಿದಿರುವುದು ಅಲ್ಲೇ. ಈ ರೀತಿಯ ಆದೇಶ ಹೋದರೆ ನಾವು ಈ ಆಶ್ರಯ ಯೋಜನೆಯಲ್ಲಿ ಮನೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಆದೇಶವನ್ನು ವಾಪಸ್ ತೆಗೆದುಕೊಂಡು ಬಡವರಿಗೆ ನಿವೇಶನ ಹಂಚುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಾನು ಎರಡೇ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಇಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗೆ ಡಿಸೆಂಬರ್ ನಂತರ ಹಣ ಬಿಡುಗಡೆ ಮಾಡಿಲ್ಲ ಎಂದು ನಾನು ಮಾತನಾಡುವಾಗ ಹೇಳಿದೆ ಅನೇಕ ವಿಚಾರಗಳನ್ನು ನಾನು ಮಾತನಾಡಿದ್ದೆ ಅದಕ್ಕೆ ಉತ್ತರ ಕೊಡಲಿಲ್ಲ, ಚಿಂತೆ ಇಲ್ಲ.

ಆದರೆ 25–2–93ರಂದು ಸಂಬಂಧಪಟ್ಟ ಸಚಿವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಜಿಲ್ಲಾ ಪರಿಷತ್ತಿನ ವತಿಯಿಂದ ಅಭಿವೃದ್ಧಿ ಕೆಲಸಗಳು ಏನು ನಡೆದಿವೆ ಅದಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಬೇಕಾದ ಹಣ ಬಿಡುಗಡೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಾಗ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಬಿಡುಗಡೆ ಮಾಡಬೇಕಾಗಿರುವ ಹಣ ಎಷ್ಟು ಎಂದು ಕೇಳಿದಾಗ ಬಿಡುಗಡೆ ಮಾಡಬೇಕಾಗಿರುವ ಮೊತ್ತ 302 ಕೋಟಿ 37 ಲಕ್ಷ ಎಂದು ಉತ್ತರ ಕೊಟ್ಟಿದ್ದಾರೆ. ತಾವು ಇನ್ನು 3 ಕೋಟಿ ಮಾತ್ರ ಇದೆಯೆಂದು ಹೇಳಿದಿರಿ. ಇದು ಸತ್ಯಕ್ಕೆ ದೂರವಾದ ಸಂಗತಿ. ಅದಕ್ಕೆ ನಾನು ವಿನಂತಿ ಮಾಡುತ್ತೇನೆ. ಇವತ್ತು ನಾವು ಮಾರ್ಚಿ ಒಂದನೇ ತಾರೀಖಿನಲ್ಲಿದ್ದೇವೆ. ಎಲ್ಲಾ ಕಡೆ ನಾನು ಪ್ರವಾಸ ಮಾಡಿದ್ದೇನೆ. ನನ್ನ ಜಿಲ್ಲೆಗೆ ನಾನು ಹೋಗಿ ಬಂದಿದ್ದೇನೆ. ಜಿಲ್ಲಾ ಪರಿಷತ್ತಿನಲ್ಲಿ ಆಗಬೇಕಾದ ಎಲ್ಲಾ ಕೆಲಸಗಳು ನಿಂತು ಹೋಗಿವೆ. ಅದಕ್ಕೋಸ್ಕರ ನಿರ್ದಿಷ್ಟವಾಗಿ ಈ ಹಣವನ್ನು ಇನ್ನು ಎರಡು ದಿವಸ, ಮೂರು ದಿವಸಗಳಲ್ಲಿ ಬಿಡುಗಡೆ ಮಾಡುತ್ತೇನೆ ಎಂದು ಹೇಳಬೇಕು. ಸ್ಪಷ್ಟವಾಗಿ ಎಷ್ಟು ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ಇಂದು ನಾವು ಮಾರ್ಚಿ ಒಂದನೇ ತಾರೀಖಿನಲ್ಲಿದ್ದೇವೆ. ಮಾರ್ಚಿ 31ರೊಳಗಾಗಿ ಕೆಲಸ ಮುಗಿಯಬೇಕಾಗಿದೆ. ಎರಡನೆಯದು ಬಹಳ

ಮುಖ್ಯವಾಗಿರುವ ಸಂಗತಿ ಅಂದರೆ, ನೆರಹಾವಳಿಗೆ, ಅತಿವೃಷ್ಟಿಗೆ, ಬರಗಾಲಕ್ಕೆ ಸಿಕ್ಕಿರುವಂತಹ ರೈತರ ಬಗ್ಗೆ ಅನೇಕ ಬಾರಿ ಇಲ್ಲಿ ಚರ್ಚೆ ನಡೆದಿದೆ. ಆ ಸಹಕಾರಿ ಸಂಘಗಳಿಗೆ ಅವನು ಸಾಲ ವಾಪಸ್ಸು ಕಟ್ಟಿಲ್ಲ ಎಂದು ಹೇಳಿ, ನೆರೆ ಹಾವಳಿಗೆ ಸಿಕ್ಕಿರುವ ಸಮಯದಲ್ಲಿ, ಅತಿವೃಷ್ಟಿಗೆ ಸಿಕ್ಕಿರುವಂಥಹ ಈ ಸಂದರ್ಭದಲ್ಲಿ, ಸಂಪೂರ್ಣ ಬೆಳೆನಾಶವಾಗಿರಬೇಕಾಗಿದ್ದರೆ ಸಹಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ನೋಟೀಸ್ ಕೊಟ್ಟು ಇವತ್ತು ಅವನ ಮನೆ, ಮಠ, ಜಮೀನುಗಳು ಹರಾಜು ಆಗುವಂತಹ ಕೆಲಸ ಆಗುತ್ತಿದೆ. ಸುಮಾರು 9 ಪರ್ಸೆಂಟ್ ಬೇರೆ ವಸೂಲಿ, ಜಪ್ತಿ ಕೋರ್ಟ್ ಹರಾಜು– ಇದೆಲ್ಲಾ ಖರ್ಚು ಬರುತ್ತದೆ ಸ್ವಾಮಿ. ಇದರ ಬಗ್ಗೆ ನಾವೆಲ್ಲಾ ವಿರೋಧ ಪಕ್ಷದವರು ಕುಳಿತು ಚರ್ಚೆ ಮಾಡೋಣ. ಈ ರೈತನಿಗೆ ಪರಿಹಾರ ಒದಗಿಸುವ ಬಗ್ಗೆ ಏನು ಮಾಡಬೇಕೆಂದು ಚರ್ಚೆ ಮಾಡೋಣ. ರಾಜ್ಯದ ಉದ್ದಗಲಕ್ಕೂ ಈ ಸಹಕಾರಿ ಸಂಘಗಳಲ್ಲಿ ಸಾಲ ಪಡೆದಂತಹ ರೈತನ ಬಗ್ಗೆ ಏನು ಹರಾಜುಗಳು ನಡೆಯುತ್ತಿವೆ. ದಯಮಾಡಿ ಆ ಹರಾಜುಗಳು ಆಗದಂತೆ ನೋಡಿಕೊಂಡು ಎಲ್ಲರನ್ನೂ ಕರೆದು ಮಾತುಕತೆ ಆಡಿ ಇದರ ಬಗ್ಗೆ ಏನಾದರೂ ಒಂದು ತೀರ್ಮಾನಕ್ಕೆ ಬರುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ? ದಯಮಾಡಿ ಈ ಎರಡು ವಿಷಯಗಳ ಬಗ್ಗೆ ನೇರವಾಗಿ ನಿರ್ದಿಷ್ಟವಾಗಿ ಉತ್ತರ ಕೊಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಕರಿಯಣ್ಣನವರು ಸ್ಪೆಷಲ್ ಕಾಂಪೋನೆಂಟ್ ಪ್ಲಾನ್ ಪ್ರಕಾರ ಹೌಸಿಂಗ್ ಪ್ರೋಗ್ರಾಂ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. 12 ಕೋಟಿ ರೂಪಾಯಿಗಳು ಈಗಾಗಲೇ ಸಮಾಜ ಕಲ್ಯಾಣ ಇಲಾಖೆಯ ಡೈರೆಕ್ಟರ್ ಹತ್ತಿರ ಅವರ ಅಂಬೇಡ್ಕರ್ ಹೌಸಿಂಗ್ ಅಂಡರ್ ಪ್ರೋಗ್ರಾಂನಲ್ಲಿ ಪಿ.ಡಿ. ಅಕೌಂಟ್‌ನಲ್ಲಿದೆ. ಅದನ್ನು ತಕ್ಷಣ ರಿಲೀಸ್ ಮಾಡಲಿಕ್ಕೆ ಹೇಳಿದ್ದೇನೆ. ಈ ವರ್ಷದಲ್ಲೆ ಅದನ್ನು ಕೈಗೆತ್ತಿಕೊಳ್ಳಲಿಕ್ಕೆ ಹೇಳಿದ್ದೇವೆ. ಇನ್ನು 15 ಕೋಟಿ ಏನು ಡೈವರ್ಟ್ ಮಾಡಿದೆ, ಅವನ್ನು ಹೌಸಿಂಗ್ ಬೋರ್ಡ್‌ನವರು ಡೈವರ್ಟ್ ಮಾಡಿದ್ದಾರೆ.

ಇನ್ನು ಆಶ್ರಯ ಕಾರ್ಯಕ್ರಮದಲ್ಲಿ ಗೋಮಾಳ, ಕೆರೆ, ಫಾರೆಸ್ಟ್–ಇದಕ್ಕೆ ಕೊಟ್ಟಂಥ ಜಾಗದ ಬಗ್ಗೆ ಹಿಂದ ತೆಗೆದುಕೊಳ್ಳುತ್ತಾರೆಂದು ತಾವು ಹೇಳಿದ್ದೀರಿ. ಆದರೆ ಆಶ್ರಯ ಕಾರ್ಯಕ್ರಮದಲ್ಲಿ ಸಾರಾಸಗಟಾಗಿ ಗೋಮಾಳ, ಕೆರೆ, ಅರಣ್ಯ, ಆಕ್ರಮಣ ಮಾಡಲಿಕ್ಕೆ ಆಗುವುದಿಲ್ಲ. ನಾವು ಇಲ್ಲಿಯವರೆಗೆ ಏನು ಕೊಟ್ಟಿದ್ದೇವೆ, ಆದರೂ ಕೂಡ ಕೆಲವು ಕಡೆ ಅದು ಇಂಡಿವಿಜುಯಲ್ ಕೇಸಸ್ ಇರಬಹುದು. ಸಾಮಾನ್ಯವಾಗಿ ಕೆರೆಯಲ್ಲಿ ಆಶ್ರಯ ಮನೆ ಕೊಡುವಂಥಾದ್ದು, ಅಂಥಾ ಪ್ರಶ್ನೆಗಳು ಬಂದಿವೆ. ಅದನ್ನೂ ಸಹ ಸ್ವಲ್ಪ ಪರಿಶೀಲನೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಆದರೆ ನಾನು ಈಗಾಗಲೇ ಅದರ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಎಲ್ಲಿ ಫಾರೆಸ್ಟ್ ಇಲ್ಲ, ಎಲ್ಲಿ ಫಾರೆಸ್ಟ್ ಆಗಿ ವರ್ಗೀಕರಣವಾಗಿದೆ, ಅದಕ್ಕೆ ಸಬ್‌ಸ್ಟಿಟ್ಯೂಟ್ ಲ್ಯಾಂಡ್ ಕೊಡುತ್ತೇವೆ. ಆದ್ದರಿಂದ ಅದನ್ನು ಹಿಂದೆ ತೆಗದುಕೊಳ್ಳುವುದಿಲ್ಲ. ಆಶ್ರಯ ಸ್ಕೀಮ್‌ನಲ್ಲಿ ಏನು ಸೈಟ್ ಕೊಟ್ಟಿದ್ದೇವೆ ಅದು ಉಳಿಯುತ್ತದೆ. ಗೋಮಾಳದಲ್ಲಿ ಸಾಮಾನ್ಯವಾಗಿ ನಾವು ಆಶ್ರಯ ಸ್ಕೀಮ್‌ನಲ್ಲಿ ಬಿಡುತ್ತೇವೆ. ಇಂಡಿವಿಜುಯಲ್ ಕೇಸಸ್ ಏನಾದರೂ ಆ ಪ್ರದೇಶದಲ್ಲಿ ಆತಂಕ ಅಥವಾ ಏನಾದರೂ ಪ್ರತಿಭಟನೆ ಇದ್ದರೆ ಅದರ ಬಗ್ಗೆ ನಾವು ನೋಡಬಹುದೇ ಹೊರತು ಸಾಮಾನ್ಯವಾಗಿ ನಾವು ಕೊಡುತ್ತೇವೆ. ಆದ್ದರಿಂದ ಸಾರಾಸಗಟಾಗಿ ನಾವು ಹಿಂದೆ ತೆಗೆದುಕೊಳ್ಳುತ್ತೇವೆ ಎನ್ನುವುದು ಬರೀ ಗಾಳಿಯ ಮಾತು; ಅದು ಸರಿಯಲ್ಲ. ನಾವು ಅದನ್ನು ಉಳಿಸಿಕೊಳ್ಳುತ್ತೇವೆ.

ಶ್ರೀ ಕರಿಯಣ್ಣ:– ಯೂನಿವರ್ಸಿಟಿ ಲೆವಲ್‌ನಲ್ಲಿ ಕ್ಲಾಸ್–1 ಹುದ್ದೆಗೆ ಎಸ್‌ಸಿ/ಎಸ್‌ಟಿಯವರನ್ನು ನೇಮಕ ಮಾಡಿಕೊಳ್ಳುವ ಬಗ್ಗ ಏನು ಹೇಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ:– ನಾನು ಆಗಲೇ ಹೇಳಿದ ಪ್ರಕಾರ, ಇನ್ನು ಮುಂದೆ ಯಾವುದೇ ರೀತಿಯಲ್ಲಿ ಬ್ಯಾಕ್‌ಲಾಗ್ ಆಗಲೀ, ಯಾವುದೇ ರೀತಿಯಲ್ಲಿ ಎಸ್‌ಸಿ/ಎಸ್‌ಟಿ ಪೋಸ್ಟ್‌ನ್ನು ಡೈವರ್ಟ್ ಮಾಡತಕ್ಕಂಥಾದ್ದಕ್ಕೆ ಕಠಿಣವಾದ ಮತ್ತು ಕಟ್ಟುನಿಟ್ಟಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ

ಕಾಂಪ್ರಮೈಸ್ ಇಲ್ಲ. ಏಕೆಂದರೆ, ಬೇರೆ ಬೇರೆ ನೇವನದಲ್ಲಿ ಮೀಸಲಾತಿ ನಿಯಮವನ್ನು ಉಲ್ಲಂಘಿಸುವಂಥಾದ್ದು, ಈ ಪ್ರವೃತ್ತಿ ನಮ್ಮಲ್ಲಿ ಬೆಳೆದುಕೊಂಡು ಬಂದಿದೆ. We are totally putting a stop to it.

ಆಮೇಲೆ ಹಣ ಬಿಡುಗಡೆ ವಿಷಯದಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ಕೇಳಿದರು.

ಹಣ ಬಿಡುಗಡೆಯಾಗಿಲ್ಲವೆಂದು ಹೇಳಿದರು. ನಾನು ಈಗಾಗಲೇ ಅದರ ಬಗ್ಗೆ ಸ್ಪಷ್ಟೀಕರಣ ಕೊಟ್ಟೆ. ತಾವು ಇಲ್ಲೇ ಇದ್ದಿರಬಹುದು. ಆ ಸ್ಪಷ್ಟೀಕರಣ ಪ್ರಕಾರ 3 ಜಿಲ್ಲೆಗಳನ್ನು ಬಿಟ್ಟರೆ ಬಾಕಿ ಜಿಲ್ಲೆಗಳಲ್ಲಿ ಹಣ ಇದೆ. ಬೇರೆ ಬೇರೆ ಕಾರಣದಿಂದ ಮತ್ತು ತಾಂತ್ರಿಕ ಕಾರಣದಿಂದ ಹಣ ಬಿಡುಗಡೆಯಾಗಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಚಿತ್ರದುರ್ಗ ಜಿಲ್ಲೆ, ಅವರ ಹತ್ತಿರ ಹಣ ಇರಲಿಲ್ಲ. ಅದಕ್ಕಾಗಿ ಅವರಿಗೆ 1 ಕೋಟಿ ರೂಪಾಯಿ ಇವತ್ತು ಬಿಡುಗಡೆ ಮಾಡಿದ್ದೇವೆ. ಆಮೇಲೆ ಚಿಕ್ಕಮಗಳೂರು, ಅಲ್ಲಿ ಹಣ ಇರಲಿಲ್ಲ. 1 ಕೋಟಿ ರೂಪಾಯಿಯನ್ನು ಅಲ್ಲಿಗೂ ಬಿಡುಗಡೆ ಮಾಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ಪೈಸೆಯೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾನು ಹೇಳುತ್ತೇನೆ. ಶಿವಮೊಗ್ಗದಲ್ಲಿ 124 ಲಕ್ಷ 43 ಸಾವಿರ ರೂಪಾಯಿ ಇದೆ. ಅದನ್ನು ರೀ–ಅಪ್ರೋಪ್ರಿಯೇಟ್ ಮಾಡಿ ಎಂದು ಅವರಿಗೆ ಅವಕಾಶ ಕೊಟ್ಟಿದ್ದೇವೆ. ಆಮೇಲೆ ಧಾರವಾಡ, ಅವರಲ್ಲಿ 1 ಕೋಟಿ 85 ಲಕ್ಷದ 37 ಸಾವಿರ ರೂಪಾಯಿ ಬ್ಯಾಲನ್ಸ್ ಇದೆ. ಅವರೂ ಕೂಡ ಅದನ್ನು ಉಪಯೋಗ ಮಾಡಲಿಕ್ಕೆ ಅನುಮತಿ ಕೊಡುತ್ತಿದ್ದೇವೆ. ಅವರೂ ರೀ–ಅಪ್ರೊಪ್ರಿಯೇಟ್ ಮಾಡುತ್ತವೆ. ಬೆಳಗಾಂನಲ್ಲಿ 162 ಲಕ್ಷ 68 ಸಾವಿರ ರೂಪಾಯಿ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹಾಗಾದರೆ ಮಂತ್ರಿಗಳು ಉತ್ತರ ಕೊಟ್ಟಿರುವುದಕ್ಕೆ ಏನು ಸ್ವಾಮಿ ? ಅಧ್ಯಕ್ಷರೇ, ತಾವು ನಮ್ಮ ಸಹಾಯಕ್ಕೆ ಬರಬೇಕು. 302 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲವೆಂದು 25–2–93ರಲ್ಲಿ ನನಗೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಈ ಬಗ್ಗೆ ನಾನು ವಿಚಾರಿಸಿದ್ದೇನೆ. ತಮಗೆ ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– 302 ಕೋಟಿ ರೂಪಾಯಿ ಬಿಡುಗಡೆ ಮಾಡಿಲ್ಲವೆಂದು ಮಂತ್ರಿಗಳು ಒಪ್ಪಿಕೊಂಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾನು ಈಗಾಗಲೇ ಹೇಳಿದಂತೆ ಸ್ವಲ್ಪ ಅಕೌಂಟಿಗೆ ಅಡ್ಜೆಸ್ಟ್‌ಮೆಂಟ್‌ನಲ್ಲಿ ವ್ಯತ್ಯಾಸ ಇತ್ತು. ಅದಕ್ಕೆ ಕಳೆದ ವಾರ ನಮ್ಮ ಅಧಿಕಾರಿಗಳು ಆರ್‌ಡಿಪಿಆರ್ ಇಲಾಖೆ ಜೊತೆ ಸೇರಿ ಎಷ್ಟು ಹಣ ಆ ಜಿಲ್ಲೆಯಲ್ಲಿ ಇದ್ದೆ, ಎಷ್ಟು ಹಣ ಬಿಡುಗಡೆ ಮಾಡಬೇಕು ? ಎಂದು ಲೆಕ್ಕ ಹಾಕಿದ್ದಾರೆ. ತಾಂತ್ರಿಕ ಕಾರಣದಿಂದ ಏನಾದರೂ ಅನುಮತಿ ಪಡೆದಿದ್ದರೆ ರೀ–ಅಪ್ರೊಪ್ರಿಯೇಟ್ ಮಾಡಲಿಕ್ಕೆ ನಾವು ಅನುಮತಿ ಕೊಟ್ಟಿದ್ದೇವೆ. Now this is the final talk of the figure, money available ಆದ್ದರಿಂದ ಇದರ ಬಗ್ಗೆ ವ್ಯತ್ಯಾಸ ಇಲ್ಲ. ಎಲ್ಲಿ ಹಣ ಇಲ್ಲ ಅಲ್ಲಿ ನಾವು ಕೂಡಲೇ ಹಣ ಬಿಡುಗಡೆ ಮಾಡುತ್ತೇವೆ. ಹಣದಲ್ಲಿ ವ್ಯತ್ಯಾಸ ಬರುವುದಿಲ್ಲ. ನಿಮಗೆ ಈಗಾಗಲೇ ಹೇಳಿದಂತೆ ಈ ವರ್ಷದ 272.97 ಕೋಟಿ ರೂಪಾಯಿಗಳಲ್ಲಿ ಜಿಲ್ಲಾಪರಿಷತ್ತಿಗೆ ಬಿಡುಗಡೆ ಮಾಡಬೇಕಾದುದು 78 ಕೋಟಿ ರೂಪಾಯಿಗಳು ಮಾತ್ರ. ಆ 78 ಕೋಟಿ ರೂಪಾಯಿಗಳನ್ನು ನಾವು ಈ ತಿಂಗಳು ಅಥವಾ ಬರುವ ತಿಂಗಳು ಬಿಡುಗಡೆ ಮಾಡುತ್ತೇವೆ. ಯಾವ ಕಾರ್ಯಕ್ರಮ ಕೂಡ ನಿಲ್ಲುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನನ್ನ 2ನೇ ಪ್ರಶ್ನೆಗೆ ಉತ್ತರ ಕೊಡಲಿಲ್ಲ

ಹೋಗಬೇಕು ಸ್ವಾಮಿ ? ನಿಮಗೆ ಕೈ ಮುಗಿದು ಕೇಳುತ್ತಿದ್ದೇನೆ. ಅಲ್ಲಿ ಜಮೀನು ಹರಾಜು ಆಗುತ್ತಿದೆ. ತಾವು ಅದಕ್ಕೆ ಏನಾದರೂ ತಡೆ ಆಜ್ಞೆ ಕೊಡುತ್ತೀರಾ ? ಸಹಕಾರ ಸಂಘಗಳಿಂದ ತೆಗೆದುಕೊಂಡಂಥ ಸಾಲಕ್ಕೆ ಜಮೀನುಗಳನ್ನು ಹರಾಜು ಹಾಕುತ್ತಿದ್ದಾರೆ. ನಿನ್ನೆ ದಿವಸ ಶಿಕಾರಿಪುರದಲ್ಲಿ 12 ಜನರದ್ದು ಹರಾಜು ಆಗುತ್ತಿತ್ತು. ನಾನು ಅಧಿಕಾರಿಗಳಿಗೆ ಹೇಳಿ ಬಂದಿದ್ದೇನೆ. ನೀವು ಆಗುವುದಿಲ್ಲ ಅಂದರೆ ನನ್ನದು ವಿರೋಧ, ಇಲ್ಲ ಸ್ವಾಮಿ. ರೈತರ ಪರವಾಗಿ ನಾನು ಒಬ್ಬನೇ ಅಲ್ಲ ವಿರೋಧ ಪಕ್ಷದವರನ್ನು ಕರೆದು, ತಮ್ಮ ಆಡಳಿತ ಪಕ್ಷದವರನ್ನೂ ಕರೆದು ನಂತರ ಮಾತನಾಡುವಿರಂತೆ, ಸಹಕಾರ ಸಂಘಗಳಿಂದ ತೆಗೆದುಕೊಂಡ ಸಾಲ ವಾಪಸ್ ಕಟ್ಟಿಲ್ಲವೆಂದು ಜಮೀನು ಹರಾಜು ಮಾಡಿಸುತ್ತಿದ್ದಾರೆ. ಹರಾಜು ಆಗದಂತೆ ತಡೆ ಆಜ್ಞೆ ಕೊಡಿ. ಇದರ ಜೊತೆಗೆ ನೆರೆ ಹಾವಳಿ ಮತ್ತು ಬರಗಾಲಕ್ಕೆ ತುತ್ತಾಗಿರುವಂಥ ಆಗುವಂಥಾದ್ದನ್ನು ದಯಮಾಡಿ ತಡೆಯಿರೆಂದು ನನ್ನ ವಿನಂತಿ. ಆಗುವುದಿಲ್ಲವೆಂದರೆ ಅದನ್ನೇ ಹೇಳಿ, ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ನೆರೆಪೀಡಿತ ಪ್ರದೇಶದ ರೈತರು ಏನಿದ್ದಾರೆ, ಅವರ ಬಗ್ಗೆ ನಾವು ಪ್ರತ್ಯೇಕವಾಗಿ ವಿಚಾರ ಮಾಡೋಣ. ನಾನು ತಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಮಾತನಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮೊದಲು ಹರಾಜು ಆಗದೇ ಇರುವ ಹಾಗೆ ತಡೆಯಾಜ್ಞೆ ನೀಡಿ. ಆಮೇಲೆ ಬೇಕಾದರೆ ಅದನ್ನು ವಿಚಾರ ಮಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಡೆ ಮಾಡಬೇಕಾದರೆ ತಡೆ ಮಾಡೋಣ; ಮಾತನಾಡಿ.

ಶ್ರೀ ಡಿ. ಹಲಗೇಗೌಡ:– ಮಾನ್ಯ ಅಧ್ಯಕ್ಷರೇ, ಆಶ್ರಯ ಯೋಜನೆಯಲ್ಲಿ ನಿವೇಶನಗಳನ್ನು ಕೊಡುವಾಗ ಈಗ ಕೊಟ್ಟಿರತಕ್ಕಂಥ ಕೆಲವು ಹಳ್ಳಿಗಳಲ್ಲಿ ಎಲ್ಲಿ ಸರ್ಕಾರ ಗೋಮಾಳ ಮತ್ತು ಸರ್ಕಾರಿ ಜಾಗ ಇದೆಯೋ ಅಲ್ಲಿ ಮಾತ್ರ ನಿವೇಶನಗಳನ್ನು ಮಾಡಿದೆ. ಬಹುಪಾಲು ಹಳ್ಳಿಗಳಲ್ಲಿ ಇನ್ನೂ ಕೂಡ ನಿವೇಶನಗಳನ್ನು ಆಶ್ರಯ ಯೋಜನೆಯಲ್ಲಿ ಕೊಡಲಿಕ್ಕೆ ಆಗಲಿಲ್ಲ. ಏತಕ್ಕೆಂದರೆ ಸರ್ಕಾರದ ಜಮೀನು ಯಾವುದೂ ಇರಲಿಲ್ಲ. ಕೆಲವು ಹಳ್ಳಿಗಳಲ್ಲಿ ಗುಂಡು ತೋಪು ಎನ್ನುವ ಹೆಸರಿನಲ್ಲಿ ಅಲ್ಲಿ ಒಂದು ಮರವೂ ಇಲ್ಲದೆ ಬಯಲು ಭೂಮಿಯಾಗಿರುತ್ತದೆ. ಗುಂಡುತೋಪು ಎಂದು ದಾಖಲೆಯಲ್ಲಿ ಮಾತ್ರ ಇರುತ್ತದೆ. ಇಂಥಾ ಕಡೆ ನಿವೇಶನಗಳನ್ನು ಹಂಚಿಕೊಡಿ ಎಂದಾಗ ಅದು ಗುಂಡುತೋಪು, ಅದನ್ನು ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಸರ್ಕಾರದಿಂದ ವಾಪಸ್ಸು ಬಂದಿದೆ. ಆದ್ದರಿಂದ ಇಂಥಾ ಸ್ಥಳಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳನ್ನು ಮಾಡಲಿಕ್ಕೆ ಸರ್ಕಾರ ಒಂದು ವಿಶೇಷ ಆಜ್ಞೆಯನ್ನು ಹೊರಡಿಸುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್:– ಸ್ವಾಮಿ ಅಧ್ಯಕ್ಷರೆ, ನಾನು ಇಲ್ಲಿ 2 ಗಂಟೆ ಸುದೀರ್ಘವಾಗಿ ಭಾಷಣ ಮಾಡಿದೆ. ಕನ್ನಡ ಸಂಸ್ಕೃತಿ, ಕನ್ನಡ ಇತಿಹಾಸ, ಕನ್ನಡ ಆಡಳಿತ ಭಾಷೆ ಬಗ್ಗೆ ಹೇಳಿದೆ. ಆಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರಲಿಲ್ಲ. ಹೋಗಲಿ ಪತ್ರಿಕೆಯಲ್ಲಾದರೂ ಬರುತ್ತದೆಯೇ ಎಂದರೆ ಪತ್ರಿಕೆಗಳಲ್ಲೂ ಒಂದು ಲೈನ್ ಬರಲಿಲ್ಲ. ಅದು ನನ್ನ ದುರಾದೃಷ್ಟವೇನೋ. ಅದರ ಬಗ್ಗೆ ಚಿಂತೆ ಪಡುವುದಿಲ್ಲ.

ಶ್ರೀ ಸಿ ಬೈರೇಗೌಡ:– ನಿಮಗೂ ಪತ್ರಿಕೆಯವರಿಗೂ ಏನೋ ಒಳಸಂಚು ನಡೆದಿದೆ. ನಿಮ್ಮ ವ್ಯವಹಾರ ಇಲ್ಲಿ ಬಿಚ್ಚಬೇಡಿ.

ಶ್ರೀ ವಾಟಾಳ್ ನಾಗರಾಜ್:– ಈಗ ಕನ್ನಡದ ಬೆಳವಣಿಗೆ ಬಗ್ಗೆ ಸರ್ಕಾರ ಏನು ಯೋಜನೆ ಮಾಡುತ್ತದೆ ಎನ್ನತಕ್ಕಂಥ ಚಿಂತನೆ ಸರ್ಕಾರದಲ್ಲಿ ಇಲ್ಲ. ಅದರ ಬಗ್ಗೆ ಏನು ಹೇಳುತ್ತಾರೆ ? ಕನ್ನಡ

ಸಂಸ್ಕೃತಿ ಇಲಾಖೆಯನ್ನು ಸಂಪುಟ ದರ್ಜೆಗೆ ಏರಿಸಬೇಕೆಂದು ಹೇಳಿದ್ದೆ. ಅದರ ಬಗ್ಗೆ ಏನು ಹೇಳುತ್ತಾರೆ? ಕಾವೇರಿ ಮತ್ತು ಕೃಷ್ಣಾ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು? ಕೃಷ್ಣಾ ಬಗ್ಗೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಜೊತೆ ಯಾವತ್ತು ಮಾತುಕತೆ ಆಡತಕ್ಕಂಥಾದ್ದು? ಇದರ ಬಗ್ಗೆ ಸ್ಪಷ್ಟವಾದ ನಿರ್ಧಾರ ಇಲ್ಲ. ಕಾವೇರಿ ನ್ಯಾಯ ಮಂಡಳಿ ಬಗ್ಗೆ ನಮ್ಮ ನಿಲುವು ಏನು ಎನ್ನತಕ್ಕಂಥಾದ್ದು ಹೇಳಿಲ್ಲ. ಇದರ ಬಗ್ಗೆ ಮಾತನಾಡಲು ವಿರೋಧ ಪಕ್ಷದವರನ್ನು ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಕರೆಯುತ್ತಾರೆ? ಮತ್ತು ಯಾವಾಗ ತೀರ್ಮಾನ ಮಾಡುತ್ತಾರೆ ಎನ್ನತಕ್ಕಂಥಾದ್ದು ಒಂದು. ಶ್ರೀಮಾನ್ ಬೈರೇಗೌಡರಿಗೆ ಒಂದು ದೂರವಾಣಿ ಕರೆಯಲ್ಲಿ ನಿಮ್ಮ ಕಾಲು ಮುರಿಯುತ್ತೇವೆಂದು ಹೇಳಿದರೆಂದು ತಿಳಿಸಿದರು. ದೂರವಾಣಿಯಲ್ಲಿ ಏಕೆ? ನನಗೆ ಇಲ್ಲೇ ಬಂದಿತ್ತು. ಸಮಾನಾಂತರ ಕಾಲುವೆಯಿಂದ ಆಂಧ್ರಕ್ಕೆ ನೀರು ತೆಗೆದುಕೊಂಡು ಹೋಗುವುದಕ್ಕೆ ಅಲ್ಲಿನ ಮಂತ್ರಿಗಳಿಂದ ಪಿತೂರಿ ನಡೆಯುತ್ತಿದೆ ಎಂದು ಹೇಳಿದರೆ, ಇಲ್ಲಿ ಸದನದ ಸದಸ್ಯರೊಬ್ಬರು ನನಗೆ ಬಹಳ ದೊಡ್ಡ ಬೆದರಿಕೆ ಒಡ್ಡಿದರು. ಅದು ತಮ್ಮಲ್ಲಿ ಹಕ್ಕುಚ್ಯುತಿ ಇದೆ. ನಾಳೆ ತಮ್ಮ ಅಪ್ಪಣೆ ಪಡೆದು ಅದನ್ನು ತರಬೇಕೆಂದು ಮಾಡಿದ್ದೇನೆ. ಕಾವೇರಿ ಮತ್ತು ಕೃಷ್ಣಾ ಬಗ್ಗೆ ನಮ್ಮ ಸರ್ಕಾರದ ನಿಲುವು ಏನೆಂದು ಸ್ಪಷ್ಟಪಡಿಸಬೇಕು. ಸಮಾನಾಂತರ ಕಾಲುವೆ ಬಗ್ಗೆ ಆಂಧ್ರದ ಮಂತ್ರಿಯೊಬ್ಬರು ಕರ್ನಾಟಕದ ಕಡೆ ಬಂದು ಏನು ನಡೆಸಿದ್ದಾರೆ? ಪಿತೂರಿ ಏನು ನಡೆದಿದೆ? ಇದರ ಬಗ್ಗೆ ಸರ್ಕಾರದ ಮಾಹಿತಿ ಹೇಳತಕ್ಕಂಥಾದ್ದು ಒಂದು. ಇನ್ನು ಅಂತಿಮವಾಗಿ ಮುಖ್ಯಮಂತ್ರಿ ಹತ್ತಿರ ಇರತಕ್ಕಂಥ ಅಧಿಕಾರಿಗಳ ಬಗ್ಗೆ ನನಗೆ ಬಹಳ ನಂಬಿಕೆ ಇದೆ. ಪಾಪ ರವೀಂದ್ರ ಅವರ ಬಗ್ಗೆ ನನಗೆ ನಂಬಿಕೆ ಇದೆ. ಬಹಳ ಒಳ್ಳೆಯ ಅಧಿಕಾರಿಗಳಾಗಿ ಕೆಲಸ ಮಾಡಿರತಕ್ಕಂಥವರು. ಇವತ್ತು ಒಬ್ಬ ಸಚಿವರು ಅವರ ಮಾತಿನಿಂದ ರಾಜೀನಾಮೆ ಕೊಟ್ಟಿದ್ದೇನೆಂದು ಹೇಳತಕ್ಕಂಥ ವಿಷಯ ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು:– ತಾವು ಅವರು ಮಾಡಿದ ಭಾಷಣದ ಬಗ್ಗೆ ಕ್ಲಾರಿಫಿಕೇಷನ್ ಕೇಳಿ, ಪತ್ರಿಕೆಗಳಲ್ಲಿ ಬಂದಿದೆ ಎಂದು, ಅದು ಕ್ಲಾರಿಫಿಕೇಷನ್ ಅಲ್ಲ.

ಶ್ರೀ ಮುಟಾಲ್ ನಾಗರಾಜ್:– ಅದು ಮಂತ್ರಿಗಳೇ ಹೇಳಿರುವ ಮಾತು. ಬೇರೆ ಸದನದಲ್ಲಿ ಹೇಳಿರತಕ್ಕಂಥಾದ್ದು. ಅದು ಪತ್ರಿಕೆಗಳಲ್ಲಿ ಬಂದಿದೆ. ಈ ಸರ್ಕಾರ ಸುಭದ್ರವಾಗಿ ಇರಬೇಕೆಂದು ನಾವು ಪ್ರಾಮಾಣಿಕವಾಗಿ ಹೇಳತಕ್ಕವರು. ಹೆಜ್ಜೆ ಹೆಜ್ಜೆಗೂ ಸರ್ಕಾರವನ್ನು ಬೀಳಿಸಿ, ಆಡಳಿತವನ್ನು ದುರ್ಬಲ ಮಾಡತಕ್ಕಂಥ ವ್ಯಕ್ತಿಗಳು ನಾವಲ್ಲ. ಈ ಸರ್ಕಾರ ಭದ್ರವಾಗಿರಬೇಕೆಂದು ಹೇಳುತ್ತೇವೆ. ಈ ರಾಜ್ಯದಲ್ಲಿ ಮತ್ತೆ ಚುನಾವಣೆಗಳು ಬರುತ್ತಿವೆ, ಶಾಸನ ಸಭೆಯನ್ನು ವಜಾ ಮುಖ್ಯಮಂತ್ರಿಗಳ ಹೇಳಿದ್ದಾರೆ. ಶಾಸನಸಭೆಯನ್ನು ವಜಾ ಮಾಡತಕ್ಕಂಥಾದ್ದು ನಿಮ್ಮ ಪಕ್ಷದ ನಿರ್ಣಯವಾಗಿದೆಯೇ? ಇದು ನಿಮ್ಮ ಪಕ್ಷದ ತೀರ್ಮಾನವೇ ಎಂದು ಹೇಳಬೇಕು.

ಶ್ರೀ ಎ.ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಬ್ರಾಡ್ವೆ ರಸ್ತೆಯಲ್ಲಿರುವ ಅರ್ರ್ಯಾಕ್ ಶಾಪನ್ನು ತೆಗೆದುಹಾಕಬೇಕು ಎಂದು ನನ್ನ ಭಾಷಣದಲ್ಲಿ ಹೇಳಿದೆ. ನಮ್ಮ ಕ್ಷೇತ್ರದಲ್ಲಿ ನಾವು ತಲೆ ಎತ್ತಿಕೊಂಡು ಓಡಾಡುವುದಕ್ಕಾಗುವುದಿಲ್ಲ. ಸುಮಾರು 15 ವರ್ಷಗಳಿಂದ ಸಾರಾಯಿ ಅಂಗಡಿಯನ್ನು ಶಿಫ್ಟ್ ಮಾಡಬೇಕೆಂದು ಹೇಳಿ, ಕಾರ್ಪೊರೇಷನ್ನಿನಿಂದ ಒಂದು ನಿವೇಶನ ಕೂಡ ಕೊಟ್ಟಿವೆ. ಅದನ್ನು ತೆಗೆದುಕೊಳ್ಳಬೇಕೆಂದು ಎಕ್ಸೈಜ್ ಇಲಾಖೆಗೆ ಕಾರ್ಪೊರೇಷನ್‌ನವರು ಒತ್ತಾಯ ಮಾಡುತ್ತಿದ್ದಾರೆ, ಅಬ್ಕಾರಿ ಇಲಾಖೆಯವರು ತೆಗೆದುಕೊಳ್ಳುತ್ತಿಲ್ಲ, ಸಂಬಂಧಪಟ್ಟ ಆರ್ರ್ಯಾಕ್ ಕಂಟ್ರಾಕ್ಟರೂ ಆ ಜಾಗದಿಂದ ಶಿಫ್ಟ್ ಮಾಡುತ್ತಿಲ್ಲ. ಅಲ್ಲಿ ಪೂಜಾಸ್ಥಳ ಹತ್ತಿರವೇ ಇದೆ. ಶಾಲಾಕಾಲೇಜುಗಳು ಇವೆ ಮತ್ತು ಕಡುಬಡವರು ಇದ್ದಾರೆ, ಕುಡಿಯದಿರುವ ಅಲ್ಪಸಂಖ್ಯಾತ ಮುಸಿಲ್ಮಾನರಿದ್ದಾರೆ. ಅದು ಬಹಳ ಕನ್‌ಜೆಸ್ಟೆಡ್ ಏರಿಯ ಹೆವಿ ಟ್ರಾಫಿಕ್ ಇದ್ದೆ, ಟ್ರಾಫಿಕ್ ನ್ಯೂಸೆನ್ಸ್‌ನಿಂದ, ಟ್ರಾಫಿಕ್ ಸಿಚುವೇಶನ್ಸ್ ಕೂಡ

ಬರುತ್ತವೆ. ಇಂಥ ಅರಾಕ್ ಶಾಪನ್ನು ಶಿಫ್ಟ್ ಮಾಡಬೇಕೆಂದು ಬಹಳ ಕಾಲದಿಂದ ಕೇಳಿಕೊಳ್ಳುತ್ತಿದ್ದೇವೆ. ಎರಡು ವರ್ಷಗಳ ಹಿಂದೆ ಧರ್ಮಸಿಂಗ್‌ರವರು ಅಬ್ಕಾರಿ ಮಂತ್ರಿಯಾಗಿದ್ದಾಗ ಅವರಲ್ಲೂ ಬಹಳವಾಗಿ ಕಳಕಳಿಯಿಂದ ಬೇಡಿಕೊಂಡೆವು. ಶಿಫ್ಟ್ ಮಾಡುತ್ತೇವೆ ಎಂದು ಸಾಕಷ್ಟು ಆಶ್ವಾಸನೆ ಕೊಟ್ಟಿದ್ದರು. ಇದುವರೆಗೂ ಆಗಲಿಲ್ಲ. ಆದ್ದರಿಂದ ಈ ಸಲ ಒಂದು ತಿಂಗಳಲ್ಲಿ ಶಿಫ್ಟ್ ಮಾಡದೇ ಹೋದರೆ ನಾನು ಧರಣಿ ಕುಳಿತು ಕೊಳ್ಳುತ್ತೇನೆ. ಆ ಜನಗಳನ್ನು ಸಂಘಟಿಸಿ ಎತ್ತಿ ಕಟ್ಟಿ ಗಲಾಟೆ ಮಾಡುತ್ತೇನೆ. ಆಮೇಲೆ ಲಾ ಅಂಡ್ ಆರ್ಡರ್ ಪ್ರಶ್ನೆ ಬಂದರೆ ನನ್ನ ಜವಾಬ್ದಾರಿ ಇಲ್ಲ ಎಂದು ಹೇಳುತ್ತೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನು ಜವಾಬು ಕೊಡುತ್ತಾರೋ ಕೊಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಹಲಗೇಗೌಡರು ಮತ್ತು ವಾಟಾಳ್ ನಾಗರಾಜ್‌ರವರು ಮತ್ತು ಅನಂತಕೃಷ್ಣ ಅವರು ಕೆಲವು ವಿಚಾರಗಳನ್ನು ಎತ್ತಿದ್ದಾರೆ. ಶ್ರೀ ಹಲಗೇಗೌಡರ ಪ್ರಶ್ನೆಗೆ, ಸನ್ಮಾನ್ಯ ಕರಿಯಣ್ಣನವರ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ತಮಗೆ ಗೊತ್ತಿದೆ, ಗುಂಡು ತೋಪು, ಅಲ್ಲಿ ಅರಣ್ಯ ಇಲ್ಲದಿದ್ದರೆ ನಾವು ಸಾರಾಸಗಟಾಗಿ ಅಲ್ಲ ಸೆಲೆಕ್ಟೀವ್ ಬೇಸಿಸ್ ಮೇಲೆ ಮಾಡುತ್ತೇವೆ, ಅದನ್ನು ಈಗಾಗಲೇ ಹೇಳಿದ್ದೇನೆ. ಆಮೇಲೆ ಶ್ರೀ ವಾಟಾಳ್ ನಾಗರಾಜ್‌ರು ಅನೇಕ ವಿಚಾರಗಳನ್ನು ಹೇಳಿದರು. ಕರ್ನಾಟಕ ನಾಟಕ ಅಕಾಡೆಮಿ, ಶ್ರೀ ಗುಬ್ಬಿ ವೀರಣ್ಣ ನಾಟಕ ಕಂಪೆನಿ, ಶ್ರೀ ಮಾಸ್ಟರ್ ಹಿರಣ್ಣಯ್ಯ ನಾಟಕ ಕಂಪೆನಿಗಳು ದುಸ್ಥಿತಿ ಮತ್ತು ಕಲಾವಿದರಿಗೆ ಮಾಸಾಶನ ಕೊಡುವ ಕುರಿತು ಹೇಳಿದ್ದೀರಿ. ತಾವು ಹೇಳಿದ್ದನ್ನು ಕೇಳಲಿಲ್ಲ ಎಂಬ ಅಭಿಪ್ರಾಯದಲ್ಲಿ ತಾವು ಹೋಗಬಾರದು. ಮಾಸಾಶನ ಮಾರ್ಚಿಯೊಳಗಡೆ ನಾವು ಲಿಸ್ಟ್ ಮಾಡಿ ಪ್ರಕಟಿಸಿ ಕೊಡುತ್ತಾ ಇದ್ದೇವೆ. ಆಮೇಲೆ ಅನೇಕ ಪ್ರಸಿದ್ಧ ನಾಟಕ ಕಂಪೆನಿಗಳು ಇವತ್ತು ದುಸ್ಥಿತಿಯಲ್ಲಿವೆ. ರಂಗ ಚಳುವಳಿಯೇ ಇವತ್ತು ಕಡಿಮೆಯಾಗಿದೆ, ಇದಕ್ಕೆ ಪ್ರೋತ್ಸಾಹ ಬೇಕು, ನನಗೆ ಗೊತ್ತಿದೆ. ರಂಗ ಚಳುವಳಿಯಲ್ಲಿ ನಾಟಕ ಬರೆದು ಆಡಿ ನಿರ್ದೇಶನ ಮಾಡಿ ಅಭ್ಯಾಸ ಇದೆ, ವಿಶೇಷವಾದ ಪ್ರೀತಿಯಿದೆ. ಆದ್ದರಿಂದ ನಮ್ಮ ಈ ವೀಕ್‌ನೆಸನ್ನು ತಾವು ಯಾವಾಗಲೂ ಉಪಯೋಗ ಮಾಡಿಕೊಳ್ಳಬಹುದು ಇದರ ಬಗ್ಗೆ ನಾವು ಒಂದು ಕಾರ್ಯಕ್ರಮ ಮಾಡುತ್ತೇವೆ. ಅದಕ್ಕೆ ಸಂಬಂಧಪಟ್ಟ ಸನ್ಮಾನ್ಯ ಸಚಿವರು ಆ ಬೇಡಿಕೆ ಬಗ್ಗೆ ಉತ್ತರ ಕೊಡುವಾಗ ಉತ್ತರಿಸುವರು. ಇನ್ನು ಪತ್ರಿಕಾ ಅಕೆಡಮಿ ಅಧ್ಯಕ್ಷರನ್ನು ಕೆಲವು ದಿವಸದಲ್ಲೇ ಪ್ರಕಟಣೆ ಮಾಡುತ್ತೇವೆ. ಇನ್ನು ರಾಜ್ಯೋತ್ಸವ ಪ್ರಶಸ್ತಿ ನೀಡುವಲ್ಲಿ ಅರ್ಹತೆ ಪರಿಗಣನೆ ಆಗುವುದಿಲ್ಲ. ನಾನು ಈ ಹಿಂದೆ ಒಂದು ಹೇಳಿಕೆ ಕೊಟ್ಟಿದ್ದೇನೆ. ಇನ್ನು ಮುಂದೆ ರಾಜ್ಯೋತ್ಸವ ಪ್ರಶಸ್ತಿಗಳನ್ನು ಆಯ್ಕೆ ಮಾಡಲು ನಾವು ರಾಜಕಾರಣಿಗಳಲ್ಲ, ಆಯಾ ತಜ್ಞರ ಒಂದು ಸಮಿತಿ ಮಾಡುತ್ತೇವೆ. ಕೇಂದ್ರದಲ್ಲಿ ಒಂದು ತಜ್ಞರ ಸಮಿತಿ ಇದೆ. ತಾವು ರಾಜಕೀಯ ಉದ್ದೇಶದಿಂದ ಮಾಡಿದ್ದೀರಿ ಎಂದು ಹೇಳಿದ್ದೀರಿ, ಆ ಅಪಾದನೆ ನಮ್ಮ ಮೇಲೆ ಬರುವುದು ಬೇಡ. ಈ ಬಗ್ಗೆ ತಮ್ಮ ಜೊತೆ ಮಾತಾಡಿ ಯಾವ ತರದ ಸಮಿತಿ ಮಾಡುವುದು ಎಂದು ನೋಡೋಣ. ಆಮೇಲೆ ಕೃಷ್ಣಾನದಿ ನೀರಿನ ಬಗ್ಗೆ ಹೇಳಿದ್ದೀರಿ. ನಾವು ಈಗಾಗಲೇ ಆ ಕಮಿಟ್‌ಮೆಂಟಿನಲ್ಲೇ ಇಷ್ಟು ಜೋರಾಗಿ ಹೋಗುತ್ತಿದ್ದೇವೆ. ಅಷ್ಟು ಹಣ ಒದಗಿಸಿದ ಉದ್ದೇಶ ಕೂಡ ಅಷ್ಟೇ. ಏನೆಂದರೆ, 2000 ಎ.ಡಿ.ಯಲ್ಲಿ ನಮ್ಮ ಪಾಲಿನ ನೀರನ್ನು ಖಂಡಿತವಾಗಿ ಉಳಿಸಿಕೊಳ್ಳುತ್ತೇವೆ. ಮತ್ತು ನಮ್ಮಲ್ಲಿ ಸರ್‌ಪ್ಲಸ್ ನೀರನ್ನು ಹಂಚಿಕೊಳ್ಳುವ ಬಗ್ಗೆ 2000 ಎ.ಡಿ.ಗೆ ಕಾಯುವ ಬದಲು ಮೊದಲೇ ಮಹಾರಾಷ್ಟ್ರ, ಆಂಧ್ರ ಮತ್ತು ಕರ್ನಾಟಕ ಒಟ್ಟುಕೂತು ಮಾಡಿ ಅದನ್ನು ನಿರ್ಣಯ ಮಾಡಿದರೆ ವಿವಾದಕ್ಕೆ ಸಂಪೂರ್ಣ ಅಂತಿಮ ತೆರೆ ಹಾಕಬಹುದು.

6.20 ಪಿ.ಎಂ.

ಆ ಉದ್ದೇಶದಿಂದಲೇ ನಾವು ಸಭೆಯನ್ನು ಕರೆಯಬೇಕು ಎಂದು ಹೇಳಿ ಎರಡು ಮೂರು ಸಾರಿ ಫಿಕ್ಸ್ ಮಾಡಿದ್ದು, ಸನ್ಮಾನ್ಯ ಸುಧಾಕರ ನಾಯಕರು ಕೂಡ ನೊನ್ನೆ ಮಹಾರಾಷ್ಟ್ರದಲ್ಲಿ 17ನೇ ತಾರೀಖಿಗೆ

ಸಭೆಯನ್ನು ಸೇರಬೇಕಾಗಿತ್ತು. ಅದು ತಮಗೂ ಗೊತ್ತಿದೆ, ರಾಜಕೀಯ ಬೆಳವಣಿಗೆಯಿಂದ ಅಲ್ಲಿ ಸಭೆಯನ್ನು ಸೇರುವುದಕ್ಕೆ ಆಗಿಲ್ಲ. ಮುಂದಿನ ಮುಖ್ಯಮಂತ್ರಿಗಳು ಬಂದಾಗ ಆದಷ್ಟು ಬೇಗ ಈ ಒಂದು ಸಭೆಯನ್ನು ನಡೆಸಿ ಬಹುಶಃ ಕೃಷ್ಣ ನದಿ ನೀರಿನ ಬಗ್ಗೆ ಯಾವುದೇ ವಿವಾದ ಇಲ್ಲದ ಅಂತಿಮ ತೆರೆಯನ್ನು ಎಳೆಯುವುದಕ್ಕೆ ಖಂಡಿತವಾಗಿಯೂ ಸಾಧ್ಯ ಇದೆ. ಸಮಾನಾಂತರ ಕಾಲುವೆಗಳ ಬಗ್ಗೆ ನಮ್ಮ ಹತ್ತಿರ ಪ್ರಸ್ತಾವ ಬಂದಿಲ್ಲ, ಯಾರೂ ಮಾಡಿಲ್ಲ. ಸಮಾನಾಂತರ ಕಾಲುವೆಯನ್ನು ಈಗ ಇರತಕ್ಕಂಥ ಒಂದು ಆಯಕಟ್ಟಿನಲ್ಲಿ ಅದನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ಮಾತುಕತೆ ಎಲ್ಲಿಯಾದರೂ ಮಾಡಿದರೆ ಅದಕ್ಕೆ ನಾವು ಜವಾಬ್ದಾರಿಯಾಗುವುದಿಲ್ಲ. ಆದರೆ ಸರ್ಕಾರದ ಮಟ್ಟಿಗೆ ಈ ಮಾತುಕತೆಯಾಗಿಲ್ಲ. ನಾವು ಒಪ್ಪುವಂಥ ಸಂಭವ ಕೂಡ ಇಲ್ಲ. ಕಾವೇರಿ ಬಗ್ಗೆ ಈಗಾಗಲೇ ಟ್ರಿಬ್ಯೂನಲ್‌ನಲ್ಲಿಯೇ ಇದೆ. ಈಗಾಗಲೇ ನಾವು ಇಬ್ಬರೂ ಹೇಳಿಕೆಯನ್ನು ಕೊಟ್ಟಿದ್ದೇವೆ. ನಾವು ಸ್ಪಷ್ಟ ವಿಚಾರವನ್ನು ಹೇಳಿದ್ದೇವೆ. ಒಂದು ಶತಮಾನದಿಂದ ಆದ ಅನ್ಯಾಯವನ್ನು ನಾವು ಖಂಡಿತವಾಗಿಯೂ ಸರಿಪಡಿಸಿ, ನಮಗೆ ದಕ್ಕಬೇಕಾದಂಥ ಈ ನೀರಿನ ಹಕ್ಕನ್ನು ನಾವು ಉಪಯೋಗ ಮಾಡುತ್ತೇವೆ. ನಾವು ಅದನ್ನು ಸರಿಯಾಗಿ ಮಾಡುತ್ತೇವೆ. ಟ್ರಿಬ್ಯೂನಲ್‌ನಲ್ಲಿ ಕೂಡ ಪರಿಣಾಮಕಾರಿಯಾಗಿ ಒಂದು ಕಾನೂನಿನ ಜಯವನ್ನು ಕೂಡ ನಾವು ಗಳಿಸಿಕೊಳ್ಳುವುದಕ್ಕೆ ಎಲ್ಲ ಪ್ರಯತ್ನವನ್ನು ಮಾಡುತ್ತೇವೆ. ಸಭೆಯನ್ನು ಆದಷ್ಟು ಬೇಗ ಕರೆಯೋಣ. ನಾವೆಲ್ಲಾ ಸೇರಿ ತಾರೀಖನ್ನು ಅದರ ಬಗ್ಗೆ ನಿಗದಿ ಮಾಡೋಣ.

ಶ್ರೀ ಕೆ.ಹೆಚ್. ಹನುಮೇಗೌಡ:- ಮಾತನಾಡುವಾಗಲೆಲ್ಲಾ ಅವರಿಗೆ ಅವಕಾಶ ಕೊಡುತ್ತೀರಿ. ಕ್ಲಾರಿಫಿಕೇಷನ್ ಕೇಳುವುದಕ್ಕೆ ಪೂರ್ತಿಯಾಗಿ ಅವರಿಗೇ ಅವಕಾಶವನ್ನು ಕೊಟ್ಟರೆ ನಾವು ಈ ಕಡೆ ಕುಳಿತಿರುವವರು ಏನು ಮಾಡಬೇಕು ?

ಅಧ್ಯಕ್ಷರು:- ತಾವು ಕುಳಿತುಕೊಂಡು ಸಮಾಧಾನದಿಂದ ಕೇಳಬೇಕು. ತಮಗೆ ನಾನು ಅವಕಾಶವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದೇನೆ. ಪುನಃ ಪುನಃ ಕೇಳುವುದರಲ್ಲಿ ಏನೂ ಅರ್ಥವಿಲ್ಲ, ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸನ್ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳಲ್ಲಿ ಎರಡು ವಿಚಾರಗಳನ್ನು ಕೇಳುತ್ತಿದ್ದೇನೆ. ಈಗ ಮಂತ್ರಿಮಂಡಲದ ಸಂಖ್ಯೆಯನ್ನು ಕಡಿಮೆ ಮಾಡುವುದರ ಬಗ್ಗೆ, ಮತ್ತೆ ನೀವು ಪೋರ್ಟ್‌ಫೋಲಿಯೋಗಳನ್ನು ಹಂಚಿರುವ ಬಗ್ಗೆ ನಾನು ಉತ್ತರವನ್ನು ನಿರೀಕ್ಷೆ ಮಾಡುವುದಿಲ್ಲ. ನಾನು ಒಂದು ತಿದ್ದುಪಡಿಯನ್ನು ಈ ನಿರ್ಣಯದ ಮೇಲೆ ಕಳುಹಿಸಿದ್ದೇನೆ. ಮಾನ್ಯ ನೇಶ ಪಾಂಡೆಯವರು, ಏಕಾಂತಯ್ಯನವರು ಮತ್ತು ನಾನು-ಮೂರು ಜನ ಸೇರಿ ಒಂದು ತಿದ್ದುಪಡಿಯನ್ನು ಕಳುಹಿಸಿದ್ದೇವೆ. ನೀವು ರಾಜ್ಯಪಾಲರ ಭಾಷಣದಲ್ಲಿ ಡಿಸೆಂಬರ್‌ನಲ್ಲಿ ಮಂಡಲ ಪಂಚಾಯಿತಿ, ಜಿಲ್ಲಾಪರಿಷತ್ತಿನ ಚುನಾವಣೆಗಳನ್ನು ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಒಂದು ಕಡೆ ರಾಜ್ಯದ ಜನತೆಗೆ ಭರವಸೆಯನ್ನು ಕೊಟ್ಟಿದ್ದೀರಿ. ನಾವು ಅದನ್ನು ಜೂನ್ ಒಳಗಡೆ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದೇವೆ. ಈ ತಿದ್ದುಪಡಿಯನ್ನು ಸರ್ಕಾರ ಅಂಗೀಕಾರ ಮಾಡುತ್ತದೆಯೇ, ಇಲ್ಲವೇ ? ಸುಪ್ರೀಂ ಕೋರ್ಟ್ ಆದೇಶವನ್ನು ಕೊಟ್ಟಿದೆ, ಅಥವಾ ಸುಪ್ರೀಂ ಕೋರ್ಟಿನ ಆದೇಶವನ್ನು ಮೀರತಕ್ಕಂಥ ಕೆಲಸವನ್ನು ಮಾಡುವುದಕ್ಕೆ ನೀವು ಹೊರಟಿದ್ದೀರಾ ? ಅದಕ್ಕೆ ಉತ್ತರವನ್ನು ದಯಪಿಟ್ಟು ಕೊಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಎರಡನೆಯದಾಗಿ, 5000 ಜನ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರ. ನನ್ನ ಒಂದೇ ಕ್ಷೇತ್ರದಲ್ಲಿ 300 ಶಾಲೆಗಳಲ್ಲಿ 300 ಉಪಾಧ್ಯಾಯರುಗಳ ವೇಕೆನ್ಸೀಸ್ ಇದೆ. ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2500 ಉಪಾಧ್ಯಾಯರುಗಳ ಸಂಖ್ಯೆಯ ಕೊರತೆ ಇದೆ. ಇಡೀ ರಾಜ್ಯದಲ್ಲಿ ಸುಮಾರು

18 ಸಾವಿರ ಅಧ್ಯಾಪಕರ ಕೊರತೆ ಇದೆ. ಈಗ ಐದು ಸಾವಿರ ಜನ ಅಧ್ಯಾಪಕರನ್ನು ನೀವು ನೇಮಕ ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ತಾವು ಏನು 100 ದಿನಗಳ ಕಾರ್ಯಕ್ರಮದಲ್ಲಿ ಉಪಾಧ್ಯಾಯರ ವೇಕೆನ್ಸೀ ಫಿಲಪ್ ಮಾಡುವುದು, ವೈದ್ಯರ ಹುದ್ದೆಗಳನ್ನು ಫಿಲಪ್ ಮಾಡುವುದು ಎಂದು ಹೇಳಿದ್ದೀರಿ, ಇದನ್ನು ಮಾಡುತ್ತೀರಾ ? ಮತ್ತೆ ಬಹಳ ಮುಖ್ಯವಾಗಿ ಈ 100 ದಿನಗಳ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಹಾಗೆ ಅಧಿಕಾರಿಗಳು ಏನು ಹೇಳುತ್ತಿದ್ದಾರೆ ಎಂದರೆ, ನಾವು ಈ ಕೆಲಸವನ್ನು ಮಾಡಿ ಬಿಟ್ಟಿದ್ದೇವೆ. ಹೊಸದಾಗಿ ಏನೂ ಮಾಡಿಲ್ಲ ಎಂದು. ತಾವು 100 ದಿನಗಳ ಕಾಲದ ಕಾರ್ಯಕ್ರಮವನ್ನು ಘೋಷಣೆ ಮಾಡಿದಂಥ ದಿವಸ ತಮ್ಮಲ್ಲಿ ಇದ್ದಂಥ ಉತ್ಸಾಹ, ತಮ್ಮ ಮಾತಿನ ಧ್ವನಿ ಇವತ್ತು ಬಹಳ ಬದಲಾವಣೆಯಾಗಿದೆ, ಸಂತೋಷ. ಏಕೆಂದರೆ ನೀವು ಗ್ರಾಂಡ್ ರಿಯಾಲಿಟೀಸ್‌ಗೆ ಬಂದಿದ್ದೀರಿ. ಅವತ್ತು ಏನು ಮಾಡಿದ್ದೀರಿ ಎಂದರೆ ಈ ವರ್ಷ 93ನೇ ಸಾಲಿನಲ್ಲಿ ಇರತಕ್ಕಂಥ ಬಜೆಟ್‌ನಲ್ಲಿ ಯಾವ ಕೆಲಸಗಳನ್ನು ಮಾಡಬಹುದು ಎಂದು ಅಧಿಕಾರಿಗಳಿಗೆ ಅಂಡರ್‌ಲೈನ್ ಮಾಡಿಕೊಟ್ಟಿದ್ದೀರಿ. ನೀರಾವರಿಗೂ ಅಷ್ಟೇ, 19 ಸಾವಿರ ಹೆಕ್ಟೇರ್ ನೀರಾವರಿಗೆ ಕೊಟ್ಟಿರುವುದು, 16 ಸಾವಿರ ಮೆಗಾವ್ಯಾಟ್ ಪವರ್ ಹೆಚ್ಚು ಮಾಡಿರುವುದು, 9 ಸಾವಿರ ಐಪಿ ಸೆಟ್‌ಗೆ ಕನೆಕ್ಷನ್ ಕೊಡುತ್ತಿರತಕ್ಕಂಥದ್ದು. ನೀವು 100 ದಿನಗಳ ಪ್ರೋಗ್ರಾಮನ್ನು ಅನೌನ್ಸ್ ಮಾಡದಿದ್ದರೆ ಇದು ಆಗುತ್ತಿರಲಿಲ್ಲವೇ ? ನಾರ್ಮಲ್ ಆಗಿ ಈ ವರ್ಷದ ಬಜೆಟ್‌ನಲ್ಲಿ ಇವೆಲ್ಲಾ ಮಾಡುತ್ತೇವೆ ಎಂದು ಹೇಳಿ ನಿಮ್ಮದೇ ಸರ್ಕಾರ ಕಳೆದ ಬಜೆಟ್‌ನಲ್ಲಿ ಅನೌನ್ಸ್ ಮಾಡಿತ್ತು. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತಿದ್ದೇನೆ. 100 ದಿನಗಳ ಪ್ರೋಗ್ರಾಮ್ ಪ್ರಕಾರ ವೇಕೆನ್ಸೀಸ್ ಫಿಲಪ್ ಮಾಡತಕ್ಕಂಥದ್ದು, ಮತ್ತೆ ಪ್ರೋಗ್ರಾಮ್ ಪ್ರಕಾರವಾಗಿ ದುಡ್ಡನ್ನು ರಿಲೀಸ್ ಮಾಡುತ್ತೀರಾ ? ದಯವಿಟ್ಟು ಇದಕ್ಕೆ ಉತ್ತರವನ್ನು ಕೊಡಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯಲ್ಲಿ ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟಿಗೆ ಸೇರಿರತಕ್ಕಂಥ 50-60 ಕೆರೆಗಳು ಒಡೆದು ಹೋಗಿದೆ ಎಂದು ಕೇಳಿದ್ದೇನೆ. ಆ ಕೆರೆಗಳ ರಿಪೇರಿಗೆ ಕನಿಷ್ಠ ಪಕ್ಷ 50 ಲಕ್ಷ ರೂಪಾಯಿ ಬೇಕು ಎಂದು ಸಂಬಂಧಪಟ್ಟ ಇಂಜಿನಿಯರು ನನಗೆ ಹೇಳಿದರು. ಕೆರೆ ಮಧ್ಯದಲ್ಲಿ ಒಡೆಗುಹೋಗಿದೆ.

ಹಿಂದೆ ಇದ್ದ ಬೆಳೆ ಎಲ್ಲಾ ಸರ್ವನಾಶವಾಗಿ ಹೋಗಿದೆ. ಒಂದೊಂದು ಕೆರೆ ಹಿಂದುಗಡೆ ಸುಮಾರು 10–20 ಎಕರೆಯಲ್ಲಿ 2–3 ಅಡಿ ಮರಳು ತುಂಬಿದೆ. ಇಂತಹ ಕೆರೆಗಳನ್ನು ತಕ್ಷಣ ರಿಪೇರಿ ಮಾಡಿಸಬೇಕು. ಇದು ಅವಶ್ಯಕ. ರಿಪೇರಿ ಮಾಡುವುದು ಯಾವಾಗ ? ಇನ್ನು ಎರಡು ತಿಂಗಳು ಕಳೆದರೆ ಮಳೆ ಶುರುವಾಗುತ್ತದೆ. ಅಂತಹ ಕೆರೆಗಳ ರಿಪೇರಿ ಬಗ್ಗೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಹಾಗೂ ಸಂಬಂಧಪಟ್ಟವರನ್ನು ಕೇಳಿದಾಗ ಹಣ ಬಿಡುಗಡೆ ಆಗಿಲ್ಲ ಏನು ಮಾಡುವುದು, ಹೇಗೆ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇದಕ್ಕೆ ಸಂಬಂಧಪಟ್ಟಂತೆ ತಕ್ಷಣ ಹಣ ಕೊಡಬೇಕು. ಏಕೆಂದರೆ, ಈ ವರ್ಷದ ಬೆಳೆ ಹೋಯಿತು. ರೈತರು ಸರ್ವಸ್ವವನ್ನೂ ಕಳೆದುಕೊಂಡರು. ಬೆಳೆ ಹೋಯಿತು, ಗೊಬ್ಬರ ಹೋಯಿತು, ಎಲ್ಲಾ ಹೋಯಿತು. ಕೆರೆ ಮೇಲೆ, ಬಯಲು ಮೇಲೆಲ್ಲಾ ಮರಳು ತುಂಬಿ ಹೋಗಿದೆ. ಆ ಕೆರೆ ಹಿಂಭಾಗದಲ್ಲಿ ಇದ್ದಂತ ಹಲವಾರು ಎಕರೆ ಬಾಳೆ, ಅಡಿಕೆ ತೋಟ ಎಲ್ಲಾ ಸರ್ವ ನಾಶವಾಗಿ ಹೋಗಿದೆ. ಈಗ ಅಂತಹ ಕೆರೆಗಳ ರಿಪೇರಿ ಮತ್ತೆ ಆಗದೇ ಹೋದರೆ ಪುನಃ ಈ ವರ್ಷದ ಮುಂಗಾರು ಮಳೆಯಲ್ಲಿ ನೀರು ಹರಿದು ಮತ್ತೆ ಆ ಕೆರೆಗಳ ಹಿಂಭಾದ ರೈತರೆಲ್ಲಾ ಸರ್ವನಾಶವಾಗಿ ಹೋಗುತ್ತಾರೆ. ದಯಮಾಡಿ ಅಂತಹ ಕೆರೆಗಳ ರಿಪೇರಿಗೆ ಆದ್ಯತೆ ಮೇಲೆ ಎಷ್ಟು ಹಣವನ್ನು ಕೊಡಬೇಕೋ ಅದನ್ನು ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಎರಡನೆಯ ವಿಚಾರವೇನೆಂದರೆ, ಇತ್ತೀಚಿನ ಧಾರಾಕಾರವಾದ ಮಳೆಯಿಂದಾಗಿ ಹಾಸನ ಕೆಲವು ಭಾಗಗಳಲ್ಲಿ ರೋಡುಗಳು ಕೊಚ್ಚಿ ಹೋದುವು. ಬ್ರಿಡ್ಜ್‌ಗಳು ಕೊಚ್ಚಿ

ಹೋದವು. ಇನ್ನೂ ಅನೇಕ ವಿಧವಾದ ಅನಾಹುತಗಳು ಆಯಿತು. ಸರ್ಕಾರದವರು ದುಡ್ಡು ಕೊಟ್ಟರು, ಪೂರ್ತಿ ಕೊಟ್ಟಿಲ್ಲ ಎಂದು ನಾನು ಹೇಳುವುದಿಲ್ಲ; ಈಗ ಕೊಟ್ಟಿರತಕ್ಕ ಹಣ ಸಾಕಾಗುವುದಿಲ್ಲ. ಕೆಲವು ರಿಪೇರಿ ಮಾಡಿದ್ದೇವೆ ಎಂದು ಹೇಳಿದರು. ಆಮೇಲೆ ಅವರನ್ನು ನಾನು ಕೇಳಿದೆ, ಹೋಗಲಿ, ನಿಮಗೆ ಯಾವುದಾದರೂ ಬೇರೆ ದುಡ್ಡು ಇದ್ದರೆ. ಅದನ್ನಾದರೂ ಉಪಯೋಗಿಸಿ ಅರ್ಜೆಂಟಾಗಿ ಆಗಬೇಕಾದ ರಿಪೇರಿ ಮಾಡಿ ಎಂದು ಹೇಳಿದಾಗ ಸಾಕಷ್ಟು ಹಣ ಇಲ್ಲ ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಈಗ ಓದಿದ ಲಿಸ್ಟ್‌ನಲ್ಲಿ ಹಾಸನ ಜಿಲ್ಲಾ ಪರಿಷತ್‌ನಲ್ಲಿ ದುಡ್ಡು ಇರುವ ಹಾಗೆ, ಅಭಿಪ್ರಾಯ ಬರುವ ಹಾಗೆ ಹೇಳಿದರು ಮೂರು ಜಿಲ್ಲಾ ಪರಿಷತ್‌ನಲ್ಲಿ ಹಣ ಇರಲಿಲ್ಲ, ಅವಕ್ಕೆ ಒಂದು ಕೋಟಿ ರೂಪಾಯಿ ಚಿಲ್ಲರೆ ಕೊಟ್ಟಿದ್ದೇವೆಂದು ಹೇಳಿದರು. ಆ ಲಿಸ್ಟ್‌ನಲ್ಲಿ ಹಾಸನ ಜಿಲ್ಲಾ ಪರಿಷತ್ ವಿಚಾರ ಬರಲಿಲ್ಲ. ದಯಮಾಡಿ ಏನಾದರೂ ಹಾಸನ ಜಿಲ್ಲಾ ಪರಿಷತ್‌ನಲ್ಲಿ ಹಣ ಇದ್ದರೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ಅದನ್ನು ಡೈವರ್ಟ್ ಮಾಡಿ ಏನೇನು ಅರ್ಜಂಟಾಗಿ ರಿಪೇರಿ ಆಗಬೇಕಾಗಿದೆಯೋ ಆ ರೀತಿ ಆದ್ಯತೆಯ ಮೇಲೆ ಖರ್ಚು ಮಾಡಿ ಎಂದು ಹೇಳಬೇಕು.

ಅಧ್ಯಕ್ಷರು:– ಹಣ ಬಿಡುಗಡೆ ಮಾಡುವುದಕ್ಕೆ ಕೇಳಿಕೊಳ್ಳಿ.

ಶ್ರೀ ಕೆ.ಹೆಚ್. ಹನುಮೇಗೌಡ:– ಅದೇ ವಿಚಾರ ಹೇಳುತ್ತಿದ್ದೇನೆ, ಅಷ್ಟೇ ಹೇಳುತ್ತಿದ್ದೇನೆ. ಅದಕ್ಕೆ ಉತ್ತರ ಬೇಕು. ನಾವು ಹೋದ ತಕ್ಷಣ ಓಟು ಕೊಟ್ಟ ಜನರು ಕೇಳುತ್ತಾರೆ; ಎಲ್ಲಾ ಕಡೆ ಹೇಗೆ ಆಗುತ್ತಿದೆ ಇಲ್ಲೂ ಹಾಗೆ ಆಗಬೇಕು ಎಂದು ಕೇಳುತ್ತಾರೆ. ಇಲ್ಲಿ ಏಕೆ ಹಾಗೆ ಆಗಲಿಲ್ಲ ಎಂದು ಅವರು ಕೇಳಿದಾಗ ನಮಗೆ ಜವಾಬ್ದಾರಿ ಇದೆ, ನಾವು ಅವರಿಗೆ ಉತ್ತರ ಹೇಳಬೇಕು. ಸಮಯ ಬಂದಿದೆ, ನಾವು ಹೇಳುತ್ತಿದ್ದೇವೆ. ನಾನೇನು ಅರ್ಧ ಗಂಟೆ, ಒಂದು ಗಂಟೆ ಭಾಷಣ ಮಾಡಿಲ್ಲ. ಸುಮ್ಮನೆ ತೆಪ್ಪಗೆ ಕುಳಿತುಕೊಂಡಿದ್ದೇನೆ. ಈಗ ನೀವು ಯಾರು ಮಾತನಾಡಿಲ್ಲವೋ ಆ ಜಿಲ್ಲೆಯ, ಕ್ಷೇತ್ರದ ವಿಚಾರ ಹೇಳುವುದಕ್ಕೆ ಎರಡು ಮೂರು ಮಿನಟ್ ಹೆಚ್ಚು ಹೇಳುವುದಕ್ಕೆ ಅವಕಾಶ ಕೊಟ್ಟರೆ ಇನ್ನೂ ಸ್ವಲ್ಪ ಹೊತ್ತು ಕುಳಿತುಕೊಳ್ಳಬಹುದು. ಇಲ್ಲಿ ಏನಾಗಿದೆ ಎಂದರೆ ಕೆಲವರೇ ಗಂಟೆಗಟ್ಟಲೆ ಮಾತನಾಡುತ್ತಾರೆ; ಕೆಲವರೇ ಕ್ಲಾರಿಫಿಕೇಷನ್ ಕೇಳುತ್ತಾರೆ, ಕೇಳಲಿ. ದೇಶದ ಹಿತದೃಷ್ಟಿಯಿಂದ ಅವರು ಕೇಳುವುದು ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಅಷ್ಟೇ ಪ್ರಮುಖವಾಗಿ ನಾವೂ ಕೇಳುವ ಅಧಿಕಾರ ಇದೆ, ನಮ್ಮ ಕ್ಷೇತ್ರದಲ್ಲಿ ಸಹ ಕೆಲಸಕಾರ್ಯಗಳು ಆಗಬೇಕಾಗಿದೆ.

ಅಧ್ಯಕ್ಷರು:– ತಮಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ದಯಮಾಡಿ ಅದಕ್ಕಾಗಿ ಹೇಳುತ್ತಿದ್ದೇನೆ. ದಯವಿಟ್ಟು ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:– ನಾನು ಅವಕಾಶ ಕೊಟ್ಟಿದ್ದೇನೆ. ತಾವು ಭಾಷಣ ಮಾಡುತ್ತಾ ಹೋದರೆ ಹೇಗೆ ? ನಾನು ಕೊಟ್ಟ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಿ.

ಶ್ರೀ ಕೆ.ಹೆಚ್. ಹನುಮೇಗೌಡ:– ಮಾನ್ಯ ವಾಟಾಳ್ ನಾಗರಾಜ್ ಅವರು ಏನೋ ಅಪ್ಪಣೆ ಕೊಡಿಸುತ್ತಾ ಇದ್ದಾರೆ, ಅರ್ಥವಾಗಲಿಲ್ಲ.

ಅಧ್ಯಕ್ಷರು:– ತಾವು ಕೇಳಿದ್ದಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ನಿಮ್ಮ ಜಿಲ್ಲೆಗೆ ಮಂತ್ರಿಗಳು ಇಲ್ಲ ಎಂದು ಹೇಳಿದೆ, ಅಷ್ಟೆ.

ಅಧ್ಯಕ್ಷರು:– ವಾಟಾಳ್ ನಾಗರಾಜ್ ತಾವು ಕುಳಿತುಕೊಳ್ಳಿ.

ಶ್ರೀ ಕೆ.ಹೆಚ್. ಹನುಮೇಗೌಡ:– ಮಂತ್ರಿ ಇರುವವರೇ ಸಾಕು, ಮಾಡುತ್ತಾರೆ. ಈಗ ಮಂತ್ರಿ, ಬಗೆ

ಪ್ರಸ್ತಾಪ ಇಲ್ಲ. ಈಗ ಆಗಬೇಕಾದ ಕೆಲಸಗಳಿಗೆ ಜಿಲ್ಲಾ ಪರಿಷತ್‌ನಲ್ಲಿ ಹಣ ಇಲ್ಲನೇ ಹೋದರೆ ಹಣ ಕೊಡಬೇಕು. ಹಣ ಇದ್ದರೆ ಆದ್ಯತೆ ಮೇಲೆ ರಿಪೇರಿ ಆಗಬೇಕಾಗಿರತಕ್ಕ ಕೆರೆಗಳ, ರೋಡುಗಳ ಬಗ್ಗೆ ಹಣ ಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳವರನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಈ ಕೋಮು ಗಲಭೆಗಳಲ್ಲಿ ನೊಂದವರಿಗೆ ಪರಿಹಾರ ಕೊಡುವಂತಹ ಮತ್ತು ಅದನ್ನು ನಿಯಂತ್ರಣ ಮಾಡುವುದರಲ್ಲಿ ಸಮರ್ಥವಾದ ಕೆಲಸ ಮಾಡಿದ್ದಕ್ಕೆ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ.

ಅದೇ ಸಂದರ್ಭದಲ್ಲಿ ಬಹುಶಃ ಈ ಬೇಡಿಕೆ ಬಗ್ಗೆ ವಂದನಾ ನಿರ್ಣಯದ ಮೇಲೆ ಭಾಷಣ ಮಾಡುತ್ತಾ ಮಾನ್ಯ ಆಚಾರ್‌ರವರು ಹೇಳಿದರು. ಅವರ ಪಕ್ಷದಲ್ಲಿ ಸಹ ಈ ಬೇಡಿಕೆ ಇದೆ ಎಂದು ನಾನು ಭಾವಿಸುತ್ತೇನೆ. ಈ ಕೋಮು ಗಲಭೆಗಳು ನಡೆದಂತಹ ಸಂದರ್ಭದಲ್ಲಿ ಒಂದೊಂದು ಸ್ಥಳದಲ್ಲಿ ಒಂದೊಂದು ಕಾರಣ ಇದೆ ಎಂದು ನನ್ನ ಭಾವನೆ. ಯಾರು ಇದಕ್ಕೆ ಕಾರಣ ಎನ್ನುವುದನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಹೇಳಬೇಕು. ಕೋಮು ಗಲಭೆಗಳು ನಡೆದಂತಹ ಸ್ಥಳಗಳಲ್ಲಿ, ಯಾವ ಯಾವ ಸ್ಥಳದಲ್ಲಿ ಯಾವ ಪರಿಸ್ಥಿತಿ, ಯಾವ ವ್ಯಕ್ತಿ, ಯಾವ ಸಂದರ್ಭ ಅದಕ್ಕೆ ಕಾರಣ ಏನು ಎನ್ನುವುದಕ್ಕೆ ಒಂದು ವಿಚಾರಣೆಯನ್ನು ಮಾಡಬೇಕು ಎಂದ ನನ್ನ ಪ್ರಾರ್ಥನೆ. ಬಹುಶಃ ನಿಮ್ಮ ಪಕ್ಷದಲ್ಲಿಯೂ ಸಹ ಈ ಬಗ್ಗೆ ನಮ್ಮ ಮೇಲೆ ಒತ್ತಡ ಇದೆ ಎಂದು ನನ್ನ ಭಾವನೆ ಇದೆ. ಮಾನ್ಯ ಆಚಾರ್‌ರವರು ಕೂಡ ಪ್ರಸ್ತಾಪ ಮಾಡಿದ್ದಾರೆ. ಇದನ್ನು ವಿಚಾರಣೆ ಮಾಡುವಂತಹ ಕ್ರಮವನ್ನು ತಾವು ಕೈಗೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ ರಾಜ್ಯದ ಅಬಕಾರಿ ಉದ್ಯಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವ್ಯಕ್ತಮಾಡಿದಂತಹ ಇಚ್ಛಾಶಕ್ತಿ ಕೇಳಲಿಕ್ಕೆ ನನಗಂತೂ ತುಂಬಾ ಆಹ್ಲಾದಕರವಾಗಿತ್ತು.

After a long time, here is a person who is dare enough to express concern about this Excise Department. ಹತ್ತು ವರ್ಷಗಳ ಹಿಂದೆ ಅಂದರೆ ಒಂದು ದಶಕದ ಹಿಂದೆ ನಾವು ಈ ಸದನದಲ್ಲಿ ಬಂದು ಅಲ್ಲಿ ಕುಳಿತುಕೊಂಡಾಗ ನೋಡಿದ್ದೇನೆ. ಮುಖ್ಯಮಂತ್ರಿಗಳಿಗೆ ಈಗ ಫೈಲ್ ಬರುತ್ತದೆ ನನಗೆ ಯಾರಿಗೂ ಫೈಲ್ ಬರುವುದಿಲ್ಲ. ಓದುವುದಕ್ಕೆ ಅವಕಾಶ ಇದೆ, ನಾನು ಓದುತ್ತಿದ್ದೇನೆ. ಹಿಂದೆ ಅವರು ಇಲ್ಲಿ ಕುಳಿತುಕೊಂಡು ಏನೇನು ಹೇಳಿದ್ದಾರೆ ಎನ್ನುವುದನ್ನು ಓದುತ್ತಿದ್ದೇನೆ. ನಾನು ಆಗತಾನೆ ಬಂದಿದ್ದೆ. ಅವರು ಒಂದು ಮಾತನ್ನು ಹೇಳಿದ್ದರು.

ಅಧ್ಯಕ್ಷರು:- ತಾವು ಕ್ಲಾರಿಫಿಕೇಷನ್ ಹೇಳಿ. There is no end to it. ದಯವಿಟ್ಟು ಕ್ಲಾರಿಫಿಕೇಶನ್ ಕೇಳಿ.

ಶ್ರೀ ವೈ.ಕೆ. ರಾಮಯ್ಯ:- ಕ್ಲಾರಿಫಿಕೇಶನ್ ಅನ್ನೇ ಕೇಳುತ್ತಿದ್ದೇನೆ. ಒಂದು ಆದರ್ಶದ ವಿಷಯ ಹೇಳಿದಾಗ, ರಾಮಯ್ಯನವರೇ ಅಷ್ಟೊಂದು ಸೆನ್‌ಸಿಟಿವ್ ಆದರೆ ಪ್ರಯೋಜನ ಆಗುವುದಿಲ್ಲ. ಸಾರ್ವಜನಿಕ ಜೀವನದಲ್ಲಿ ಸ್ವಲ್ಪ ಥಿಕ್‌ಸ್ಕಿನ್ ಆಗಬೇಕೆಂದು ಹೇಳಿದ್ದನ್ನು ರಾತ್ರಿ ಎಲ್ಲಾ ಕುಳಿತುಕೊಂಡು ಓದಿದೆ. ಅದಕ್ಕೆ ಅವರು ಏನು ಇಚ್ಛಾಶಕ್ತಿಯನ್ನು ಪ್ರದರ್ಶನ ಮಾಡಿದ್ದಾರೋ ಅದನ್ನು ಅನುಷ್ಠಾನಕ್ಕೆ ತರುವಂತಹ ಶಕ್ತಿಯನ್ನು ದೇವರು ಅವರಿಗೆ ಕೊಡಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಆಗಲೇ ನಮ್ಮ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ನಮಗೆ ಸ್ವಲ್ಪ ಅನುಮಾನ ಇದೆ ಅಂತಹದ್ದು ಏನೂ ಅನುಮಾನ ಇಲ್ಲ ಎಂದು ಒಂದು ಭರವಸೆಯನ್ನು ಕೊಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಎಲ್.ಓ.ಸಿ. ಬಗ್ಗೆ ಹೇಳುವಾಗ ಪಿ.ಡಬ್ಲ್ಯೂ.ಡಿ. ಮತ್ತು ನೀರಾವರಿ ಇವೆರಡರಿಂದ 23 ಕೋಟಿ ರೂಪಾಯಿ ಮಾತ್ರ ಎಲ್.ಓ.ಸಿ. ಬಾಕಿ ಇದೆ ಎಂದು ಹೇಳಿದ್ದಾರೆ. I [illegible] this figure. If this is true, I am going to resign from this

House. ಯಾರಿಗೆ ಇದನ್ನೆಲ್ಲಾ ಹೇಳುತ್ತಿದ್ದಾರೆ. ಎಲ್ಲರ ಬಗ್ಗೆಯೂ ಸುಮ್ಮನೆ ಕುಳಿತುಕೊಳ್ಳುತ್ತೇನೆ. ಏನೋ ಮಾತನಾಡುತ್ತೇವೆ, ಸುಮ್ಮನೆ ಕುಳಿತುಕೊಳ್ಳುತ್ತೇವೆ. ಅಲ್ಲಿ ಮಳೆಗಾಲದಲ್ಲಿ ಮಿಷನ್‌ಗಳನ್ನು ಎಳೆಯುವುದಕ್ಕೆ ಆಗುವುದಿಲ್ಲ. ಮಳೆಗಾಲದಲ್ಲಿ ದುಡ್ಡನ್ನು ಕೊಟ್ಟರೆ ಕೆಲಸ ಮಾಡುವುದಕ್ಕಾಗುವುದಿಲ್ಲ. ಹೇಮಾವತಿ ಸರ್ಕಲ್ ಒಂದಕ್ಕೆ, ತುಮಕೂರ್ ಸರ್ಕಲ್ ಒಂದಕ್ಕೆ 13 ಕೋಟಿ ರೂಪಾಯಿಗಳ ಬಿಲ್‌ಗಳ ಬಾಕಿ ಇದೆ. Apart from land acquisition, apart from the Establishment Rs. 13 crores is pending. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ಸಂಖ್ಯೆಯು ಬರೀ ಸತ್ಯಕ್ಕೆ ದೂರವಾದುದು ಅಲ್ಲ, ಅತ್ಯಂತ ಅಸತ್ಯವಾದಂತಹ ನೂರಕ್ಕೆ ನೂರು ಹಸಿಸುಳ್ಳಾದಂತಹ ಅಂಕಿ ಸಂಖ್ಯೆಯನ್ನು ಕೊಟ್ಟಿದ್ದಾರೆ. ಆದರೂ ಪರವಾಗಿಲ್ಲ, ಅವರು ಮುಖ್ಯಮಂತ್ರಿಗಳಾಗಿ ಬಂದು ಮೂರು ತಿಂಗಳಾಗಿದೆ. ಯಾವುದೇ ಮಂತ್ರ ದಂಡದ ಮುಖಾಂತರ ಬೊಕ್ಕಸವನ್ನು ತುಂಬಿಸಲಿಕ್ಕೆ ಸಾಧ್ಯವಿಲ್ಲ, ಅದು ನನಗೆ ಗೊತ್ತಿದೆ. ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಇರುವ ದುಡ್ಡನ್ನು ಆದ್ಯತೆಯ ಮೇಲೆ ಅವಶ್ಯಕ ವಸ್ತುಗಳಿಗೆ, ಅವಶ್ಯಕ ಕಾರ್ಯಕ್ರಮಗಳಿಗೆ ಕೊಡುವಂತಹ ಕ್ರಮವನ್ನು ಕೈಗೊಳ್ಳುತ್ತಾರೆಯೇ ? ಇದು ಬಹಳ ಮುಖ್ಯವಾದುದು. ಏಕೆಂದರೆ ಇದರಿಂದ ಕೆಲವು ಕೆಲಸಗಳು ನಿಂತು ಹೋಗುತ್ತವೆ. ಕೋಮು ಗಲಭೆಗಳ ಬಗ್ಗೆ ವಿಚಾರಣೆಯನ್ನು ಮಾಡುತ್ತೀರಾ ? ಆದ್ಯತೆಯ ಮೇಲೆ ನೀರಾವರಿಗೆ ದುಡ್ಡು ಬಿಡುಗಡೆ ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದಂತಹ ಯಾವುದೇ ಪ್ರಶ್ನೆಗಳಿಗೆ ಉತ್ತರ ಕೊಟ್ಟಿಲ್ಲ. ಜಿಲ್ಲಾಪರಿಷತ್ತಿಗೆ 302 ಕೋಟಿ ರೂಪಾಯಿಯನ್ನು ಬಾಕಿ ಕೊಡಬೇಕಾಗಿದೆಯೆಂದು ಮಂತ್ರಿಗಳು ಉತ್ತರ ಕೊಡುತ್ತಾರೆ. ಇವರು ಅಂಕಿಅಂಶಗಳ ವ್ಯತ್ಯಾಸವನ್ನು ಹೇಳುತ್ತಾರೆ. ಸುಮಾರು 36 ಕೋಟಿ ರೂಪಾಯಿ ಸಬ್ಸಿಡಿಯ ಹಣ ಬಿಡುಗಡೆ ಮಾಡಿಲ್ಲ.

ಅಧ್ಯಕ್ಷರು:- ಮಾನ್ಯ ಯಡಿಯೂರಪ್ಪನವರೇ ತಾವು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿಯೂ ಏನೂ ತಿಳಿಯಲಿಲ್ಲ, ಉತ್ತರದಲ್ಲಿಯೂ ಏನೂ ಇಲ್ಲ. ಇವತ್ತು ಈ ಸರ್ಕಾರಕ್ಕೆ ರೈತರ ಬಗ್ಗೆ ಗ್ರಾಮೀಣ ಜನರ ಬಗ್ಗೆ ಏನೂ ಕಳಕಳಿ ಇಲ್ಲ. ಇದನ್ನು ಪ್ರತಿಭಟನೆ ಮಾಡಿ ನಾವು ವಾಕ್‌ಔಟ್ ಮಾಡಿ ಹೋಗುತ್ತಿದ್ದೇವೆ. ಸಬ್ಸಿಡಿ ಹಣ ಬಿಡುಗಡೆ ಮಾಡಿಲ್ಲ. ರೈತರಿಗೆ ಬೇಕಾದಂತಹ ಪರಿಹಾರ ನೀವು ಕೊಡುವುದಕ್ಕೆ ಸಿದ್ಧರಿಲ್ಲ. 36 ಕೋಟಿ ರೂಪಾಯಿಯ ಸಬ್ಸಿಡಿಯಲ್ಲಿ ಒಂದು ಪೈಸೆ ಕೊಡಲಿಲ್ಲ. 302 ಕೋಟಿ ರೂಪಾಯಿಯನ್ನು ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯತಿಗೆ ಕೊಡಬೇಕು, ಅದನ್ನು ಕೊಟ್ಟಿಲ್ಲ. ಅತಿವೃಷ್ಟಿಗೆ ಸಿಕ್ಕಂತಹ ರೈತರಿಗೆ ಮೂರು ತಿಂಗಳಾಯಿತು, ಅದಕ್ಕೆ ಸರಿಯಾದಂತಹ ಪರಿಹಾರವನ್ನು ಒದಗಿಸಿ ಕೊಟ್ಟಿಲ್ಲ. ಇಲ್ಲಿ ನಾವು ತಿಳಿದುಕೊಂಡು ಏನು ಮಾಡೋಣ. ರಾಜ್ಯಪಾಲರ ಭಾಷಣದಲ್ಲಿ ಏನೂ ಇಲ್ಲ. ಆದ್ದರಿಂದ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರು, ಮಾನ್ಯ ಈಶ್ವರಪ್ಪನವರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:- ಇವರು ಸಭಾತ್ಯಾಗ ಮಾಡುವುದನ್ನು ನನಗೆ ಹೇಳಲೇ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ರಾಂಭಜನ್ 6.30ಕ್ಕೆ ಇದೆ, ಅದಕ್ಕೆ ಅವರು ಹೊರಟಿದ್ದಾರೆ.

ಅಧ್ಯಕ್ಷರು:- ಮಾನ್ಯ ಸದಸ್ಯರಾದ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಮಂಡಿಸಿರತಕ್ಕಂಥ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.- ನಮ್ಮ ಪ್ರಶ್ನೆಗೆ ಮುಖ್ಯಮಂತ್ರಿಗಳಿಂದ ಉತ್ತರ ಬಂದಿಲ್ಲ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಸದಸ್ಯರಾದ ಏಕಾಂತಯ್ಯನವರು ನಾನು ಎದ್ದು ನಿಂತಾಗ ತಾವು ಕುಳಿತುಕೊಳ್ಳತಕ್ಕದ್ದು. The Leader of the Opposition can exercise control ones such things. ಮಾನ್ಯ ಏಕಾಂತಯ್ಯನವರು ತಾವು ಮಂಡಿಸಿರತಕ್ಕಂಥ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ. There will be no more clarifications.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೇ, ತಾವು ಸೂಚಿಸಿದಂತೆ ನಾನು ಏನು ತಿದ್ದುಪಡಿ ಕಳುಹಿಸಿದ್ದೇನೆ, ಅದನ್ನು ಹಿಂತೆಗೆದುಕೊಳ್ಳುವುದಕ್ಕೆ, ಪರಿಶೀಲನೆ ಮಾಡುವುದಕ್ಕಿಂತ ಮುಂಚಿತವಾಗಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಏನಂದರೆ, ನಾನು ಕಳುಹಿಸಿದ ತಿದ್ದುಪಡಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದೇ ಒಂದು ಶಬ್ದವನ್ನು ಹೇಳಲಿಲ್ಲ. ನಾನು ತಿದ್ದುಪಡಿಯಲ್ಲಿ ಏನು ಹೇಳಿದ್ದೇನೆಂದರೆ, ಡಂಕೆಲ್ ಪ್ರಸ್ತಾವನೆ ಬಗ್ಗೆ ಏನು ನಮ್ಮ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅನುಸರಿಸಬೇಕಾದಂಥ ಕೃಷಿನೀತಿ ಬಗ್ಗೆ ಬಗ್ಗೆ ರಾಜ್ಯ ಸರ್ಕಾರದ ಧೋರಣೆಯನ್ನು ಇಲ್ಲಿ ಪ್ರಕಟ ಮಾಡಿಲ್ಲ, ಮತ್ತು ಅದರ ಬಗ್ಗೆ ಪ್ರಸ್ತಾಪ ಕೂಡ ಮಾಡಿಲ್ಲ. ಅದಕ್ಕೋಸ್ಕರ ಈ ಸದನವು ವಿಷಾದಿಸುತ್ತದೆಂಬ ಮಾತನ್ನು ತಿದ್ದುಪಡಿ ಮುಖಾಂತರ ತಂದಿದ್ದೇನೆ. ಆದರೆ, ದುರದೃಷ್ಟವಶಾತ್, ಇಂತಹ ಪ್ರಮುಖವಾದಂಥ ತಿದ್ದುಪಡಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಯಾವುದೇ ಪ್ರಸ್ತಾಪ ಇರುವುದಿಲ್ಲವಾದ್ದರಿಂದ ತಿದ್ದುಪಡಿಯನ್ನು ನಾನು ಹಿಂತೆಗೆದುಕೊಳ್ಳದೆ ನಾನು ಒತ್ತಾಯ ಮಾಡುತ್ತೇನೆ

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾಗಿರತಕ್ಕಂಥ ಏಕಾಂತಯ್ಯನವರು ಅಷ್ಟು ಸಿಟ್ಟು ಮಾಡಿಕೊಳ್ಳಬಾರದು.

ಶ್ರೀ ಹೆಚ್. ಏಕಾಂತಯ್ಯ:- ಇದರ ಬಗ್ಗೆ ತಾವು ಉತ್ತರ ಕೊಡದಿದ್ದರೆ ನಾವು ಏನು ಮಾಡಬೇಕು ?

ಶ್ರೀ ಎಂ. ವೀರಪ್ಪ ಮೊಯಿಲಿ:- ನಾನು ಏನು ತಿಳಿದುಕೊಂಡೆನೆಂದರೆ, ಈ ವಿಚಾರವನ್ನು ಆಯವ್ಯಯ ಭಾಷಣದ ಒಂದು ಪ್ಯಾರಾದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಆದುದರಿಂದ, ಬಜೆಟ್ ಭಾಷಣದ ಮೇಲೆ ಉತ್ತರ ಕೊಡುವಾಗ ಇದರ ಬಗ್ಗೆ ಹೇಳೋಣವೆಂದುಕೊಂಡೆ. ಏಕೆಂದರೆ, ಈಗಾಗಲೇ ಕೇಂದ್ರದ ಬಜೆಟ್ ಕೂಡ ಬಂದಿದೆ. Para 14 of Central Finance Minister's Budget. It has far reaching consequences. ಅನಂತರ, 5ನೇ ತಾರೀಖು ಕೇಂದ್ರದ ಕೃಷಿ ಸಚಿವರು ಕರಡು ಕೃಷಿ ನೀತಿಯ ಬಗ್ಗೆ ಒಂದು ಸಭೆ ಕರೆದಿದ್ದಾರೆ. ನಾನು ಈಗಾಗಲೇ ದಂಕೆಲ್ ಪ್ರಸ್ತಾವದ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದೇನೆ. ಅಲ್ಲದೆ, ಈ ವಿಚಾರವನ್ನು 5ನೇ ತಾರೀಖು ಕೇಂದ್ರದ ಸಭೆಯಲ್ಲಿ ಪ್ರಸ್ತಾಪ ಮಾಡುವವನಿದ್ದೇನೆ. ಅಂದಿನ ಸಭೆಯಲ್ಲಿ ಈ ಕುರಿತು ಸಂಪೂರ್ಣವಗಿ ಮಾತು ಕತೆಯಾಡಿದ ನಂತರ ಇಲ್ಲಿ ಅದರ ಬಗ್ಗೆ ಉತ್ತರ ಕೊಟ್ಟರೆ ಅದಕ್ಕೊಂದು ಗಂಭೀರತೆ, ಬರುತ್ತದೆ, ಹೆಚ್ಚು ಪ್ರಾಮುಖ್ಯತೆ ಬರುತ್ತದೆಂಬ ಉದ್ದೇಶವಿಟ್ಟುಕೊಂಡು ನಾನು ಉತ್ತರ ಕೊಡಲಿಲ್ಲವೇ ಹೊರತು ಅನ್ಯಥಾ ಭಾವಿಸಬಾರದು. ತಾವು ಏನು ತಿದ್ದುಪಡಿ ಕೊಟ್ಟಿದ್ದೀರಿ, ಅದರ ಬಗ್ಗೆ ಬಹುಶಃ ನಾನು ದೆಹಲಿಯಿಂದ ಬಂದ ನಂತರ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಸಾಧ್ಯವಿದೆ, ಮತ್ತು ಆಯವ್ಯಯದ ಭಾಷಣದ ಮೇಲೂ ಇದರ ಬಗ್ಗೆ ಚರ್ಚೆ ಮಾಡುವುದಕ್ಕೂ

ಅವಕಾಶವಿರುವುದರಿಂದ ದಯಮಾಡಿ ಅಲ್ಲಿಯವರೆಗೆ ಈ ತಿದ್ದುಪಡಿಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಮುಂದೆ ಇದನ್ನು ಯಾವುದಾದರೊಂದು ರೂಪದಲ್ಲಿ ತಂದು ಚರ್ಚೆ ಮಾಡುವುದಕ್ಕೆ ಖಂಡಿತವಾಗಿ ನಾವು ಅವಕಾಶ ಮಾಡಿಕೊಡುತ್ತೇವೆ.

SRI H. EKANTHAIAH:– It has its own far reaching consequences. ನಾನು ಮಾನ್ಯ ಅಧ್ಯಕ್ಷರಲ್ಲಿ ಹಾಗೂ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಒಂದು ಡೆಂಕಲ್ ಪ್ರಸ್ತಾವನೆ ಬಗ್ಗೆ ರಾಜ್ಯ ಸರ್ಕಾರದ ನೀತಿ ಏನು ? ಇದರ ಬಗ್ಗೆ ಒಂದು ವಿಚಾರ ಮಾಡುತ್ತೇನೆಂದು ತಾವು ಹೇಳಿದಿರಿ. ಅಗ್ರಿಕಲ್ಚರ್ ಸ್ಟೇಟ್ ಲಿಸ್ಟ್‌ನಲ್ಲಿದೆ. ಈ ರಾಜ್ಯಕ್ಕೆ ಸಂಬಂಧಪಟ್ಟ ವಿಷಯವಾಗಿರುವುದರಿಂದ ನಮಗೆ ಕಳಕಳಿ ಇರಬೇಕು, ತಮಗೂ ಸಹ ಕಳಕಳಿ ಇದೆಯೆಂದು ನಾನು ಭಾವಿಸುತ್ತೇನೆ. ತಮಗೆ ಕಳಕಳಿ ಇದ್ದಿದ್ದರೆ ಖಂಡಿತವಾಗಿಯೂ ರಾಜ್ಯ ಸರ್ಕಾರದ ಒಂದು ನೀತಿಯನ್ನು ನಿರೂಪಿಸಬೇಕಾಗಿತ್ತು. ನೀವು ನೀತಿಯನ್ನು ನಿರೂಪಣೆ ಮಾಡುವವರಿದ್ದರೆ, ನಿರೂಪಣೆ ಮಾಡುವುದಕ್ಕಿಂತ ಮುಂಚಿತವಾಗಿ ನೀವು ಸಂಬಂಧಪಟ್ಟ ಶಾಸಕರನ್ನು ಅಥವಾ ಸಂಘ–ಸಂಸ್ಥೆಗಳವರನ್ನು ಕೇಳಿ ನಿಮ್ಮ ಕೃಷಿ ನೀತಿಯನ್ನು ಏನಾದರೂ ನಿರ್ಧಾರ ಮಾಡುತ್ತೀರಾ ? 'ನಮ್ಮ ಕೃಷಿ ನೀತಿ ಈ ರೀತಿ ಇದೆ, ಡೆಂಕಲ್ ಪ್ರಸ್ತಾವನೆಗೆ ನಮ್ಮ ಧೋರಣೆ ಹೀಗಿದೆ, ನೀವು ಇದನ್ನು ಒಪ್ಪಿಕೊಳ್ಳಿ ಇಲ್ಲವೆ ಬಿಡಿ' ಎನ್ನುವ ಮಾತನ್ನಾದರೂ ಹೇಳಬಹುದು. What are the far reaching consequences of this?

ಶ್ರೀ ಎಂ. ವೀರಪ್ಪ ಮೊಯಿಲಿ:–ನಾನು ದೆಹಲಿಗೆ ಸಭೆಗೆ ಹೋಗುವ ಮೊದಲು ಸಂಬಂಧಪಟ್ಟವರ ಜೊತೆ ಮತ್ತು ಸನ್ಮಾನ್ಯ ಶಾಸಕರ ಜೊತೆ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ಅರಿತುಕೊಂಡು ಕೇಂದ್ರದಲ್ಲಿ ವಾದವನ್ನು ಮಂಡಿಸುತ್ತೇವೆ. ಆ ದೃಷ್ಟಿಯಿಂದ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಏಕಾಂತಯ್ಯ:– ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಆಶ್ವಾಸನೆ ಮೇಲೆ ನಾನು ತಿದ್ದುಪಡಿಯನ್ನು ನಾನು ಒತ್ತಾಯ ಮಾಡುವುದಿಲ್ಲ. ಹಿಂತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:– ಮಾನ್ಯ ದೇಶಪಾಂಡೆ ಹಾಗೂ ಸಿಂಧ್ಯರವರು ಮಂಡಿಸಿರುವ ಪ್ರಸ್ತಾವನೆಯನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡರೆ ನಾನು contempt of Supreme Court ಮಾಡಿದಂತಾಗುತ್ತದೆ. ಹಾಗಾಗಿ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ತಯಾರಿಲ್ಲ. ಏಕೆಂದರೆ, ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಚುನಾವಣೆಯನ್ನು 1993ರ ಜೂನ್ ತಿಂಗಳೊಳಗೆ ಮಾಡಬೇಕೆಂಬುದರ ಬಗ್ಗೆ ಸುಪ್ರೀಂ ಕೋರ್ಟಿನ ಸ್ಪಷ್ಟ ಆದೇಶವಿದೆ. ಸರ್ಕಾರ ಸಹ ಅದಕ್ಕೆ ಒಪ್ಪಿಕೊಂಡಿದೆ. ಅಲ್ಲದೆ, ಬಹಳ ವಿಷಾದವಾಗುವ ಸಂಗತಿಯೆಂದರೆ, ರಾಜ್ಯಪಾಲರ ಭಾಷಣದಲ್ಲಿ 1993ರಲ್ಲಿಯೇ ಚುನಾವಣೆ ನಡೆಸಲಾಗುವುದೆಂದು ಹೇಳಿದ್ದಾರೆ. ಸ್ಪೆಸಿಫಿಕ್ಕಾಗಿ ಜೂನ್ ತಿಂಗಳೊಳಗೆ ಮಾಡುತ್ತೇವೆಂದು ಹೇಳಿಲ್ಲ. ಹಾಗಾಗಿ ನಾವು ತಂದಿರುವ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡರೆ I will be making contempt of the Supreme Court ಮಾನ್ಯ ಮುಖ್ಯಮಂತ್ರಿಗಳೂ ಸಹ ಇದರ ಬಗ್ಗೆ ತಮ್ಮ ಉತ್ತರದಲ್ಲಿ ಪ್ರಸ್ತಾಪಿಸಿಲ್ಲ. ಇದರ ಚುನಾವಣೆ ಮಾಡುತ್ತೇವೆಂದು ತಾವು ಹೇಳಿಲ್ಲ. ಆದುದರಿಂದ, ನಮ್ಮ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ನಾವು ಈ ತಿದ್ದುಪಡಿಯನ್ನು ವಂದನಾ ನಿರ್ಣಯದ

ಮೇಲೆ ಕಳುಹಿಸಿರತಕ್ಕ ಉದ್ದೇಶವೇನೆಂದರೆ, ಸರ್ಕಾರ ಇವೊತ್ತು ಯಾವುದೋ ಕಾರಣ ಒಡ್ಡಿ ಚುನಾವಣೆಯನ್ನು ಮುಂದೂಡುವುದಕ್ಕೆ ಪ್ರಯತ್ನ ಮಾಡುತ್ತಿದೆ ಎನ್ನತಕ್ಕಂಥಾದ್ದು ನಮ್ಮ ಭಾವನೆ. ನಾನು ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ತಾವು ಇರಲಿಲ್ಲ.

ನೀವು ಜೂನ್‌ನಲ್ಲಿ ಚುನಾವಣೆಗಳನ್ನು ಮಾಡುವುದರಿಂದ ನಿಮ್ಮ ಪಕ್ಷಕ್ಕೆ ಎಷ್ಟು ಬಹುಮತವಿದೆ, ಅಥವಾ ಅದು ಕಡಿಮೆಯಾಗಿದೆಯೋ ಎಂಬುದನ್ನು ನೋಡಿಕೊಳ್ಳಲು ಒಂದು ರೀತಿಯ ರಿಹರ್ಸಲ್ ಸಹ ಆಗುತ್ತದೆ. ಏಕೆಂದರೆ, ಮುಂದಿನ ನವೆಂಬರ್ ತಿಂಗಳಿನಲ್ಲಿ ವಿಧಾನಸಭೆಯ ಚುನಾವಣೆ ಇರತಕ್ಕಂಥಾದ್ದು. ನೀವು ರಾಜ್ಯಪಾಲರ ಭಾಷಣದಲ್ಲಿ ಹೇಳಿದ ಹಾಗೆ ಡಿಸೆಂಬರ್, ಜನವರಿಯಲ್ಲಿ ಮಾಡಿದರೆ ನಿಮಗೆ ತಪ್ಪುಗಳನ್ನು ಸರಿಮಾಡಿಕೊಳ್ಳಲು ಅವಕಾಶ ಇರುವುದಿಲ್ಲ. ಆದುದರಿಂದ ನಾನು ಜೂನ್‌ನಲ್ಲೇ ಚುನಾವಣೆಯನ್ನು ಮಾಡಿ ಎಂದು ಈ ಸಭೆಯಲ್ಲಿ ಎಷ್ಟು ಹೇಳಿದರೂ ಕೂಡ ನೀವು ಅದನ್ನು ಕೇಳುತ್ತಿಲ್ಲ.

ಅಧ್ಯಕ್ಷರು:- ತಾವು ಪುನಃ ಪುನಃ ಅದನ್ನೇ ಮಾತನಾಡಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಾನು ಈ ತಿದ್ದುಪಡಿಯನ್ನು ಕಳಿಸಿರುವುದು ನಾನು ಅದರ ಬಗ್ಗೆ ಮಾತನಾಡುವುದಕ್ಕೋಸ್ಕರವೇ, ತಾವು ದಯಮಾಡಿ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಅದಕ್ಕೆ ನಿಮಗೆ ಧನ್ಯವಾದವನ್ನು ಅರ್ಪಿಸುತ್ತೇನೆ. ನಾನು ಆಗಲೇ ಹೇಳಿದ್ದೇನೆ. ಬಿಜೆಪಿಯವರಿಗೆ 6–30ಕ್ಕೆ ರಾಮಭಜನೆ ಇದ್ದದ್ದರಿಂದ ಹೋದರು ಎಂದು ಹೇಳಿದೆ. ಅದನ್ನು ಬಿಟ್ಟು ನಾನು ಬೇರೆ ಏನನ್ನೂ ಹೇಳಲಿಲ್ಲ. ನಿಮಗೆ ಅದರಿಂದ ಬೇಜರಾಯಿತೆ ? ಈ ಸದನದಲ್ಲಿ ತಾವು ಕೋಪಿಸಿಕೊಳ್ಳಬಾರದು, ತಾವು ಯಾವಾಗಲೂ ನಗುನಗುತ್ತಿರಬೇಕು.

ಶ್ರೀ ವಾಟಾಳ್ ನಾಗರಾಜ್:– ನಾನು ಸಹ ಅಧ್ಯಕ್ಷರಿಗೆ ಅದೇ ಸಲಹೆಯನ್ನು ಕೊಡಬೇಕೆಂದಿದ್ದೆ, ಆದರೆ ಅವರೇ ಅದನ್ನು ಕೊಟ್ಟಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಮಗೆ ಗೊತ್ತಿದೆ. ಸರ್ಕಾರದ 184 ಶಾಸಕರು ಇಲ್ಲಿದ್ದಾರೆ. ಅವರು ಹೇಳಿದಂತೆ ಮುಖ್ಯಮಂತ್ರಿಗಳು ಕೇಳುತ್ತಾರೆ. ನಾವು ಕೂಡ ಆ ಕಡೆ ಇದ್ದಾಗ ಇದನ್ನೇ ಮಾಡುತ್ತಿದ್ದೆವು. ನಾವು ನಿಮ್ಮ ಹಿತದೃಷ್ಟಿಯಿಂದ ಒತ್ತಾಯ ಮಾಡುವುದೇನೆಂದರೆ, ದಯಮಾಡಿ ಚುನಾವಣೆಯನ್ನು ಜೂನ್ ತಿಂಗಳಲ್ಲಿ ನಡೆಸಿ. ಈಗ ನೋಡಿದರೆ ನಿಮ್ಮಲ್ಲಿ ಎಂದು ಅಭಿಪ್ರಾಯವಿದ್ದಂತೆ ಕಾಣುತ್ತದೆ. ಮಾನ್ಯ ಪಂಚಾಯತ್‌ರಾಜ್ ಸಚಿವರಾದ ಘೋರ್ಪಡೆಯವರು ಮುಖ್ಯಮಂತ್ರಿಗಳಿಗೆ ಅಧಿಕಾರಿಗಳು ನನ್ನ ಜೊತೆಯಲ್ಲಿ ಸಹಕಾರ ಕೊಡುತ್ತಿಲ್ಲವೆಂದು ಪತ್ರವನ್ನು ಬರೆದಿದ್ದಾರಂತೆ, ಅದು ಸಂಜೆಯುವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ನಮಗೆ ಇದು ಅರ್ಥವಾಗುತ್ತಿಲ್ಲ. ಏಕೆಂದರೆ ಈ ಕಾನೂನನ್ನು ಅಮೆಂಡ್‌ಮೆಂಟ್ ಮಾಡಿ, ಈ ಮಸೂದೆಯನ್ನು ಮಾರ್ಚ್ 2ನೇ ವಾರದಲ್ಲಿ ಮಂಡನೆ ಮಾಡಿ, ಅದಕ್ಕೆ ಕಾನೂನನ್ನು ಮಾಡಿಕೊಂಡು ಅನಂತರ ಚುನಾವಣೆಯನ್ನು ಮಾಡತಕ್ಕದ್ದು ಪಂಚಾಯಿತಿರಾಜ್ ಸಚಿವರ ಬಹಳ ಮುಖ್ಯವಾದ ಕೆಲಸ. ಆದರೆ ಅಧಿಕಾರಿಗಳು ಸಹಕಾರ ನೀಡುತ್ತಿಲ್ಲವೆಂದು ಅವರು ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆಂಬ ಸುದ್ದಿ ಇದೆ. ಆದ್ದರಿಂದ ದಯಮಾಡಿ ನಿಮ್ಮ ಪಕ್ಷದ ಹಿತದೃಷ್ಟಿಯಿಂದ, ಈ ಹಿನ್ನೆಲೆಯಲ್ಲಿ ಬಹಳ ಮುಖ್ಯವಾಗಿ ಚುನಾವಣೆಗಳನ್ನು ಮಾಡಿ. ಈಗ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ಜಿಲ್ಲಾ ಪರಿಷತ್ತಿನ ಸಭೆಯನ್ನೇ ಕರೆಯುತ್ತಿಲ್ಲ, ನಾವು ಎಂ.ಎಲ್.ಎ. ಗಳಿಗೆ ಮಂತ್ರಿಗಳನ್ನು ಭೇಟಿ ಮಾಡುವುದು ಮತ್ತು ಇಲ್ಲಿ ಬಂದು ಭಾಷಣ ಮಾಡುವುದು, ಇಲ್ಲದಿದ್ದರೆ ನಮಗೆ ಪರಿಚಯವಿರುವ ಐ.ಎ.ಎಸ್. ಅಧಿಕಾರಿಗಳಿಗೆ ಸಲಾಮ್ ಹೊಡೆಯುವುದು ಈ ಮೂರು ಕೆಲಸ ಬಿಟ್ಟರೆ ಮತ್ತೆ ಬೇರೆ ಯಾವ ಕೆಲಸವೂ ಇಲ್ಲದಂತಾಗಿದೆ. ನನ್ನ ಕ್ಷೇತ್ರದಲ್ಲಿ ಏನು

ಕೆಲಸವಾಗಬೇಕು ಎಂದು ಜಿಲ್ಲಾ ಪರಿಷತ್ತಿಗೆ ಹೋಗಿ ಹೇಳೋಣವೆಂದರೆ ಅವರು ಸಭೆಯನ್ನೇ ಕರೆಯುವುದಿಲ್ಲ. ಇದರಿಂದ ನನಗೆ ಮಾತ್ರವಲ್ಲ, ಆಡಳಿತ ಪಕ್ಷದ ಶಾಸಕರಿಗೂ ಕೂಡ ತೊಂದರೆಯಾಗಿದೆ. ಆದರೆ ಪಾಪ ಅವರು ಮಾತನಾಡುವ ಹಾಗಿಲ್ಲ. ಆದ್ದರಿಂದ ಅವರೆಲ್ಲಾ ಸುಮ್ಮನೆ ಇದ್ದಾರೆ. 2-3 ತಿಂಗಳಿಗೆ ಒಂದು ಸಾರಿ ಜಿಲ್ಲಾ ಪರಿಷತ್ ಸಭೆಯನ್ನು ಕರೆಯುವುದಿಲ್ಲವೆಂದು ಹೇಳುತ್ತಿದ್ದೇನೆ. ಯಾರನ್ನು ಬೇಕಾದರೂ ಕೇಳಿ. ರಾಜ್ಯದ ಹಿತದೃಷ್ಟಿಯಿಂದ ಈ ತಿದ್ದುಪಡಿಯನ್ನು ಏನು ಮಂಡನೆ ಮಾಡಿದ್ದೇನೆ, ತಾವುಗಳು ದಯಮಾಡಿ ಈ ತಿದ್ದುಪಡಿಯನ್ನು ಸ್ವೀಕಾರ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಅವರ ಮನಸ್ಸನ್ನು ಒಲಿಸುತ್ತಿದ್ದೇನೆ.

ಶ್ರೀ ಎ. ನಾಗರಾಜ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಜಿಲ್ಲಾ ಪರಿಷತ್ತಿನ ಸಭೆಗಳನ್ನು ಕರೆಯುತ್ತಿಲ್ಲವೆಂದು ಹೇಳಿದರು. ನಮ್ಮ ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತಿನ ಸಭೆಯನ್ನು ಕ್ರಮಬದ್ಧವಾಗಿ ಕರೆದು ಚರ್ಚೆ ಮಾಡಿ, ತೀರ್ಮಾನಗಳನ್ನು ಮಾಡಿ ಕಾರ್ಯಗತ ಸಹ ಬಹಳ ಚೆನ್ನಾಗಿ ಆಗುತ್ತದೆ. ಆದ್ದರಿಂದ ಜಿಲ್ಲಾ ಪರಿಷತ್ತು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಹಾಗಾದರೆ ಕೋಲಾರಕ್ಕೆ ಚುನಾವಣೆಯನ್ನು ಮಾಡುವುದು ಬೇಡ ಬಿಡಿ, ಅಲ್ಲಿ ಖಾಯಂ ಆಗಿ ಇದೇ ಇಟ್ಟುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ದೇಶಪಾಂಡೆಯವರು ಮತ್ತು ಸಿಂಧ್ಯರವರು ಏನು 1993ರ ಜೂನ್‌ನಲ್ಲಿ ಚುನಾವಣೆಯನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನೇ ಸುಪ್ರೀಮ್ ಕೋರ್ಟ್ ಕೂಡ ಹೇಳಿದೆ, ಅದಕ್ಕೆ ನಾವು, ನೀವು, ಈ ಸದನವೂ ಕೂಡ ಬದ್ದರು. ಇದಕ್ಕೆ ವಾದವಿವಾದವಿಲ್ಲ. ನಾವು ಆದಷ್ಟು ಜಾಗ್ರತೆಯಾಗಿ ಚುನಾವಣೆಯನ್ನು ಮಾಡಬೇಕೆಂದು ನಮ್ಮ ಮಂತ್ರಿಗಳು round the clock, they are working. Perhaps he may bring it in the first or second week.

ಈ ಸದನದಲ್ಲೇ ಈಗ ನಡೆಯುತ್ತಿರುವ ಅಧಿವೇಶನದಲ್ಲೇ ಮಸೂದೆಯನ್ನು ತಂದು ತಾವುಗಳು ಸಹಕಾರ ಕೊಟ್ಟರೆ ಅದನ್ನು ಪಾಸ್ ಮಾಡಿಕೊಂಡು that depends upon you.

ಆದರೆ ಈ ನಿರ್ಣಯವನ್ನು ಮಾಡಬಿಟ್ಟರೆ ಏನಾಗುತ್ತದೆಂದರೆ, ಈ ಅಧಿವೇಶನದಲ್ಲೇ ಆ ಮಸೂದೆ ಬರುತ್ತದೆ, ಮಸೂದೆಯನ್ನು ಮಂಜೂರಾತಿಯನ್ನು ಮಾಡಬೇಕಾಗಿರತಕ್ಕದ್ದು ಈ ಸದನದ ಕರ್ತವ್ಯ. this will restrict that kind of paramountcy. ಈ ಸದನದ ಅಧಿಕಾರ ಏನಿದೆ ಅದರ ಬಗ್ಗೆ ನಾಳೆ ಪ್ರಶ್ನೆ ಮಾಡಿದ ಹಾಗೆ ಆಗುತ್ತದೆ.

ನಮ್ಮ ಸರ್ಕಾರದ ಮೇಲೆ ಪ್ರಶ್ನೆ ಮಾಡಿದ ಹಾಗೆ ಆಗುತ್ತದೆ. ಆದುದರಿಂದ ದಯಮಾಡಿ ಅದು ಚರ್ಚೆಗೆ ಬರಲಿ, ಏಕೆಂದರೆ ಪುನಃ ಈ ರೀತಿಯ if we hesitate to take any action, then whatever you want.....

SRI P.G.R. SINDHIA:- Are you prepared for an election in the month of June?

SRI M. VEERAPPA MOILY:- We have to be prepared. This right is vested with this House.

ಆ ಮಸೂದೆ ಬರುತ್ತದೆ . ಬಂದಾಗ ತಾವು ಅದಕ್ಕೆ ಮಂಜೂರಾತಿಯನ್ನು ಮಾಡಿಕೊಟ್ಟು ಆ ಪ್ರಕ್ರಿಯೆಯನ್ನು ತಯಾರು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. We are anxious to go for elections immediately.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಮುಖ್ಯಮಂತ್ರಿಗಳು ಜೂನ್ ತಿಂಗಳೊಳಗಾಗಿ ಚುನಾವಣೆಯನ್ನು ಮಾಡುತ್ತೇವೆಂದು ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಆದ್ದರಿಂದ ಈ ತಿದ್ದುಪಡಿಯನ್ನು ವಾಪಸ್ ಪಡೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಅದು ನಿಮ್ಮ ಮೇಲೆ ಅವಲಂಬಿಸಿದೆ.

SRI R.V. DESHFANDE:– That depends upon your free will.

ನೀವು ಮೊದಲು ಬಿಲ್ಲನ್ನು ತರಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಆ ಬಿಲ್ಲನ್ನು ತರುವವರು ನಾವೇ, We are not losing any time.

ಶ್ರೀ ಕೆ.ಹೆಚ್. ರಂಗನಾಥ್:– ನಮ್ಮ ಬಿಲ್ಲಿನ ಪ್ರಕಾರ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆಯಬೇಕಾಗುತ್ತೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಾವು ಮಹಾತ್ಮಾಗಾಂಧಿಯವರ ತತ್ವದ ಪ್ರಕಾರ ಹೋಗುತ್ತಿದ್ದೇವೆ. ರಾಮರಾಜ್ಯವಾಗಬೇಕೆಂದು ಹೋಗುತ್ತಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ:– ರಾಮರಾಜ್ಯದ ನಿರ್ಮಾಣವನ್ನು ಮೊದಲು ಮಾಡಿದವರು ನಾವು, ದೀಸೆಂಟ್ರಲೈಸೇಷನ್ ಮಾಡಿದವರು ನಾವು. Karnataka is model to the entire country. ಮಾನ್ಯ ಮುಖ್ಯಮಂತ್ರಿಗಳು ಚುನಾವಣೆಯನ್ನು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಈ ಮಾತನ್ನು ಹಿಂದೆ ಸಹ ಹೇಳಿದ್ದರು, ಪುನಃ ಅದೇ ಮಾತನ್ನು ಹೇಳಿದ್ದಾರೆ. ಹಾಗಾಗಿ ಅವರ ಮಾತಿಗೆ ಗೌರವವನ್ನು ಕೊಟ್ಟು ನಂಬಿಕೆಯನ್ನಿಟ್ಟು ನಾವು ತಂದಿರತಕ್ಕ ತಿದ್ದುಪಡಿಯನ್ನು ವಾಪಸ್ ಪಡೆಯುತ್ತಿದ್ದೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ: ಮಾನ್ಯ ಜಿ.ಎಸ್. ಆಚಾರ್‌ರವರು ಮಂಡಿಸಿರತಕ್ಕ ರಾಜ್ಯಪಾಲರ ಭಾಷಣದ ವಂದನಾರ್ಪಣ ಪ್ರಸ್ತಾವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

"ಫೆಬ್ರವರಿ 12, 1993ರಂದು ವಿಧಾನ ಮಂಡಲದ ಸದಸ್ಯರುನ್ನುದ್ದೇಶಿಸಿ, ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತಿರುವುದು."

'ಪ್ರಸ್ತಾವವನ್ನು ಅಂಗೀಕರಿಸಲಾಯಿತು'

ಅಧ್ಯಕ್ಷರು:– ಈ ಸದನದಲ್ಲಿ ಅಂಗೀಕರಿಸಿದ ನಿರ್ಣಯವನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

Now this House stands adjourned to meat tomorrow at 11 a.m.

(ಸದನವು 6 ಗಂಟೆ 50 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 2 ಮಾರ್ಚ್ ಮಾಹೆ 1993ರ ಮಂಗಳವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು.)

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತದೆ.

ಕರ್ನಾಟಕ ವಿಧಾನ ಸಭೆ

ಮಂಗಳವಾರ 2ನೇಮಾರ್ಚ್ 1993

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.05 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕೊಟ್ಟೂರಿನಲ್ಲಿ ನಡೆದ ಗೋಲಿಬಾರಿನ ಬಗ್ಗೆ ವಿಚಾರಣೆ.

181 (121): ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ಕೊಟ್ಟೂರಿನಲ್ಲಿ ನಡೆದ ಪೋಲೀಸ್ ಗೋಲೀಬಾರಿನ ಬಗ್ಗೆ ವಿಚಾರಣೆಯು ಮುಗಿಗಿದೆಯೇ ?

2) ಇಲ್ಲದಿದ್ದಲ್ಲಿ, ಕೊಟ್ಟೂರು ಪೋಲೀಸ್ ಗೋಲೀಬಾರಿನ ಪ್ರಕರಣವನ್ನು ಸಿ.ಒ.ಡಿ.ಗೆ ದಾಖಲು ಮಾಡಲಾಗಿದೆಯ ? ಅಥವಾ ಮ್ಯಾಜಿಸ್ಟೇರಿಯಲ್ ವಿಚಾರಣೆಯಾಗಿದೆಯೇ ?

3) ಹಾಗಿದ್ದಲ್ಲಿ, ನೊಂದವರಿಗೆ ನೀಡಲಾದ ಪರಿಹಾರದ ಬಗ್ಗೆ ಪೂರ್ಣ ವಿವರಗಳನ್ನು ವ್ಯಕ್ತಿಗತ ಮಾಹಿತಿಯೊಂದಿಗೆ ಒದಗಿಸುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

1. ಹೌದು, ಮುಗಿದಿದೆ.

2. ಮ್ಯಾಜಿಸ್ಟೇರಿಯಲ್ ವಿಚಾರಣೆಯಾಗಿರುತ್ತದೆ.

3. ಮೃತಪಟ್ಟ ಶ್ರೀ ಶಿವನಂಜಪ್ಪ ತಂದೆ ನಾಗಲಿಂಗಪ್ಪ ಮತ್ತು ಶ್ರೀ ದುರುಗಪ್ಪ ತಂದೆ ಈರಪ್ಪ ಇವರ ಎರಡು ಕುಟುಂಬಕ್ಕೂ ತಲಾ 20,000-00 ರೂಪಾಯಿಗಳನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಕೊಡಲಾಗಿದೆ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು:- ಮಾನ್ಯ ಅಧ್ಯಕ್ಷರೇ, ಕೊಟ್ಟೂರು ಫೈರಿಂಗ್ ಕೇಸ್ ಬಗ್ಗೆ ಎನ್‌ಕ್ವಯರಿ ಎಲ್ಲಾ ಕಂಪ್ಲೀಟ್ ಆಗಿದೆ ಹಾಗೂ ಸತ್ತ ಇಬ್ಬರು ಕುಟುಂಬದವರಿಗೆ ತಲಾ 20-20 ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಈ 20 ಸಾವಿರ ಈಗಿನ ಕಾಲಕ್ಕೆ ಏನೂ ಆಗುವುದಿಲ್ಲ. ಎನ್‌ಕ್ವಯರಿ ಆಗಿ ಈಗಾಗಲೇ ಮೂರು ತಿಂಗಳು ಆಯಿತು. ಮೊದಲು ನಾನು ಈ ಕೇಸನ್ನು ಸಿಓಡಿಗೆ ಹಾಕಿ ಎಂದು ಕೇಳಿದ್ದೆ. ಸಿಓಡಿ ತನಿಖೆಯಾಗಿ ರಿಪೋರ್ಟ್ಸ್ ಬಂದರೆ ಅದು ಕರೆಕ್ಟಾಗಿ ಆಗುತ್ತದೆ ಎನ್ನುವ ಒಂದು ಉದ್ದೇಶ ನನಗೆ ಇತ್ತು. ಏಕೆಂದರೆ ಆ ಕ್ಷೇತ್ರದ ಬಗ್ಗೆ ನನಗೆ ಚೆನ್ನಾಗಿ ಗೊತ್ತಿರುವುದರಿಂದ ನಾನು ಕೇಳಿದ್ದೆ, ಅದಕ್ಕೆ ಮ್ಯಾಜಿಸ್ಟೇರಿಯಲ್ ಎನ್‌ಕ್ವಯರಿ ಮಾಡಿದರು. ಎನ್‌ಕ್ವಯರಿ ಮಾಡಿ ಪೂರ್ತಿ ಮಾಹಿತಿ ಕೊಡಿ ಎಂದು ಹೇಳಿದರ ಅವರಿಗೆ 20-20 ಸಾವಿರ ಕೊಟ್ಟಿರುವುದು ಮಾತ್ರ ಹೇಳುತ್ತಾರೆ. ಅಲ್ಲಿ ಯಾರು ಕಳ್ಳರು, ಯಾರು ಇದನ್ನು ಕ್ರಿಯೇಟ್ ಮಾಡಿದ್ದು ಏನೂ ಇಲ್ಲ. ಅಂತಹವರಿಗೆ ಪನಿಷ್‌ಮೆಂಟ್ ಏನು ? ಸಿಕ್ಕಿರುವವರು ಯಾರು ? ಅವರ ಹೆಸರೇನು ಎಂತಹ ಮಾಹಿತಿಯೂ ಇಲ್ಲ. 20 ಸಾವಿರದ ಪರಿಹಾರ ಈಗಿನ ಕಾಲಕ್ಕೆ ಕೊಟ್ಟರೆ ಅದು

ಎಲ್ಲಿ ಆಗುತ್ತದೆ. ಕನಿಷ್ಟ ಒಂದು ಲಕ್ಷ ರೂಪಾಯಿಯಾದರೂ ಕೊಡಬೇಕು. ದುಡಿಯುವಂತಹ ಇಬ್ಬರೂ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ. ನೀವು ಅವರಿಗೆ ಒಂದೊಂದು ಲಕ್ಷ ಕೊಡದೇ ಬರೀ 20–20 ಸಾವಿರ ಕೊಟ್ಟರೆ ಅದು ಭಿಕ್ಷೆ ಬೇಡಿದ ಹಾಗೆ ಆಯಿತು. ದಯಮಾಡಿ ಇದನ್ನು ಒಂದು ಲಕ್ಷ ರೂಪಾಯಿ ಮಾಡಬೇಕು ಎಂದು ಹೇಳುತ್ತೇನೆ. ಈ ಎನ್‌ಕ್ವಯರಿ ಮಾಡಿರುವುದು ಸರಿ ಇಲ್ಲ ಎಂದು ನನಗೆ ಕಾಣುತ್ತದೆ. ಆದರಲ್ಲೂ ಕೊಟ್ಟೂರು ಆಗಾಗ್ಗೆ ಫೇಸ್ ಮಾಡುತ್ತಾ ಇರತಕ್ಕಂತಹ ಪ್ರಾಬ್ಲಮ್ ಇದು. ಅದನ್ನು ಕ್ಲೋಸ್ ಮಾಡಬೇಕಾದರೆ ಸರಿಯಾದ ತನಿಖೆಯಾಗಬೇಕು ಎಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ ಇದು ಮ್ಯಾಜಿಸ್ಟೀರಿಯಲ್ ಎನ್‌ಕ್ವಾಯರಿ ಆಗಿದೆ, ಅದು ಸರಿಯಾದ ರೀತಿಯಲ್ಲಿ, ಆಗಿದೆಯೆಂದು ಸರ್ಕಾರದ ಅಭಿಪ್ರಾಯ. ಎರಡನೆಯದು ಮಾನ್ಯ ಸದಸ್ಯರು 20 ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದಾರೆ ಅದು ಸಾಲದೆಂದು ಹೇಳಿದ್ದಾರೆ. ಅವರ ಅನಿಸಿಕೆ ನಿಜವಿರಬಹುದು. ಆದರೆ ಈಗಿನ ನಿಯಮಗಳ ಪ್ರಕಾರ ಈ ತರಹ ಅಘಾತಗಳಿಗೆ ಯಾವ ಪರಿಹಾರ ಕೊಡುವ ನಿಯಮಗಳು ಇಲ್ಲ. ಆದರೆ ವಿಶೇಷವಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತೆಗೆದು ಅನುಕಂಪದ ಆಧಾರದ ಮೇಲೆ 20–20 ಸಾವಿರ ಕೊಡಲಾಗಿದೆ. ಅದನ್ನು ಹೆಚ್ಚಿಸತಕ್ಕ ಅಭಿಪ್ರಾಯ ಸಧ್ಯಕ್ಕೆ ಸರ್ಕಾರದಲ್ಲಿ ಇಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೆ, ಅನುಕಂಪದಿಂದ ಕೊಡುವ ಹಣವನ್ನು 20 ಸಾವಿರಕ್ಕೆ ನಿಲ್ಲಿಸಬೇಡಿ. ಅನುಕಂಪದ ಆಧಾರದ ಮೇಲೆ ಕೊಡುವುದನ್ನು 1 ಲಕ್ಷ ಮಾಡಿ. 20 ಸಾವಿರ ಕೊಟ್ಟರೆ ಏನೂ ಆಗುವುದಿಲ್ಲ. ದುಡಿಯುವ ಮಕ್ಕಳನ್ನು ಕಳೆದುಕೊಂಡಿದ್ದಾರೆ. ಆ ಸಂಸಾರದಲ್ಲಿ ದುಡಿಯುವ ಮಕ್ಕಳು ಯಾರೂ ಇಲ್ಲ. 1 ಲಕ್ಷವಾದರೂ ಮಾಡಿ. ಅದಕ್ಕೆ ಬೇರೆ ಫಂಡ್ ಇಲ್ಲದಿದ್ದರೆ ಮುಖ್ಯಮಂತ್ರಿಗಳ ಫಂಡ್‌ನಿಂದ ಕೊಡಿಸಿ ಪರವಾಗಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಸಧ್ಯದ ನಿಯಮಗಳಲ್ಲಿ ಅವಕಾಶವಿಲ್ಲ. ನಿಯಮಗಳು ಬದಲಾವಣೆಯಾದರೆ ಪರಿಶೀಲಿಸಬಹುದು.

ಬೆಳಗಾವಿ ತಾಲ್ಲೂಕಿನ ಕೆದನೂರು ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತನೆ.

184 (1217): ಶ್ರೀ ಕೆ.ಸಿ. ಮಾಡಗೇಕರ್ ದೇಸಾಯಿ (ಹೀರೇಬಾಗೇವಾಡಿ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ತಾಲ್ಲೂಕಿನ ಕೆದನೂರು ಗ್ರಾಮದ ಪ್ರಾಕೃತಿಕ ಸೌಂದರ್ಯವನ್ನು ಸರ್ಕಾರ ಗಮನಿಸಿದೆಯೇ ?

ಆ. ಹಾಗಿದ್ದಲ್ಲಿ, ಆ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಘೋಷಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೌದು.

ಆ. ಕೆದನೂರು ಗ್ರಾಮ ಕರ್ನಾಟಕ ಪ್ರವಾಸೋದ್ಯಮ ನೀತಿಯ ರೀತ್ಯ 'ಬಿ' ಗುಂಪಿನಡಿ ಬರುತ್ತದೆ. ಈ ಸ್ಥಳದಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳು ಬಂಡವಾಳ ಹೂಡಿಕೆ ಮೇಲೆ ಶೇಕಡ 20 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡುವುದು.

Sri K.C. Modagekar Desai:– Speaker Sir, the Government has agreed to give 20% as Investment Subsidy apart from incentives and concessions to Private Entrepreneur. Will the Government increase the investment subsidy to 40% atleast, instead of 20%?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಸಭಾಧ್ಯಕ್ಷರೆ, ಸಬ್ಸಿಡಿ ವಿಚಾರ, ಇದು ರಾಜ್ಯದ ಒಂದು ನೀತಿಯಾಗಿದೆ. ಎ, ಬಿ, ಸಿ, ಕ್ಯಾಟಗರಿಯೆಂದು ಮಾಡಿ 'ಬಿ' ಕ್ಯಾಟಗರಿಗೆ 20 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ಸಿ ಕ್ಯಾಟಗರಿಗೆ 25 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ಆದ್ದರಿಂದ ಒಂದೊಂದು ಸ್ಥಳಕ್ಕೆ ಸಬ್ಸಿಡಿ ಕೊಡುವ ವಿಚಾರದಲ್ಲಿ ಬೇರೆ ಬೇರೆ ತರಹ ಕೊಡುವುದಕ್ಕೆ ಬರುವುದಿಲ್ಲ. ಸಬ್ಸಿಡಿಗೆ ಖಾಸಗಿಯವರು ಯಾರಾದರೂ ಮುಂದೆ ಬಂದರೆ ಅವರಿಗೆ ಈ ಪ್ರೇಕ್ಷಣೀಯ ಸ್ಥಳಕ್ಕೆ 20 ಪರ್ಸೆಂಟ್ ಕೊಡಲಿಕ್ಕೆ ಸರ್ಕಾರ ಬದ್ಧವಾಗಿದೆ.

Sri K.C. Modagekar Desai:– Sir, since it is a rural area, I am once again requesting the Government through you Sir, to consider to increase the subsidy and make provision during this financial year.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಸಧ್ಯಕ್ಕೆ ಅದನ್ನು ಮಾಡಲಿಕ್ಕೆ ಬರುವುದಿಲ್ಲ.

ವರಕವಿ ಸರ್ವಜ್ಞ, ಸ್ಮಾರಕ ನಿರ್ಮಾಣ.

185 (1286): ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ವರಕವಿ ಸರ್ವಜ್ಞನ ಜನ್ಮಸ್ಥಳವಾದ ಹಿರೇಕೆರೂರು ತಾಲ್ಲೂಕು ಅಬಲೂರು ಗ್ರಾಮದಲ್ಲಿ ಸರ್ವಜ್ಞನ ಸ್ಮಾರಕ ಹಾಗೂ ಸುವ್ಯವಸ್ಥಿತವಾದ ಸಂಪರ್ಕ ರಸ್ತೆ, ಪ್ರವಾಸಿ ಮಂದಿರ ಇಲ್ಲದೇ ಇರುವುದನ್ನು ಸರ್ಕಾರ ಗಮನಿಸಿದೆಯೇ ?

ಆ. ಅಬಲೂರಿನಲ್ಲಿ ಸರ್ವಜ್ಞ ಸ್ಮಾರಕ, ಪ್ರವಾಸಿ ಮಂದಿರ, ಸ್ಮಾರಕ ಭವನ, ವಗೈರೆ ನಿರ್ಮಿಸಲು ಸರ್ಕಾರ ಯೋಜಿಸಿದೆಯೇ ? ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮವೇನು ?

ಇ. ಈ ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ ? ಈ ಬಗ್ಗೆ ಹಾಕಿಕೊಂಡ ಯೋಜನೆ ಮತ್ತು ತಗಲುವ ವೆಚ್ಚವೆಷ್ಟು ?

ಈ. ಈ ಗ್ರಾಮಕ್ಕೆ ಯಾವ ಯಾವ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು:

ಉ. ಈ ಪ್ರವಾಸಿ ಕೇಂದ್ರಕ್ಕೆ 1993–94ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಮೊತ್ತ ಎಷ್ಟು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು.)

ಅ. ಹೌದು.

ಆ. ಸರ್ವಜ್ಞ ಸ್ಮಾರಕ, ಪ್ರವಾಸಿ ಮಂದಿರ, ಸ್ಮಾರಕ ಭವನ, ವಗೈರೆ ನಿರ್ಮಿಸುವ ಯೋಜನೆ ಪ್ರವಾಸೋದ್ಯಮ ಇಲಾಖೆ ಮುಂದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯವನ್ನು ಸರ್ವಜ್ಞ ಸ್ಮಾರಕ ನಿರ್ಮಿಸುವ ಬಗ್ಗೆ ಪರ್ಯಾಲೋಚಿಸಲು ವಿನಂತಿಲಾಗುವುದು.

ಇ. ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಅಬಲೂರನ್ನು 'ಸಿ' ಗುಂಪಿನಡಿಯಲ್ಲಿ ಸೇರಿಸಿದ್ದು ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಹೆಚ್ಚಿನ ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನೆಗಳನ್ನು ನೀಡಲಾಗುವುದು.

ಈ. ಉದ್ಭವಿಸುವುದಿಲ್ಲ.

ಉ. 1993-94ನೇ ಸಾಲಿನಲ್ಲಿ ಕೈಗೊಳ್ಳಬೇಕಾದ ಯೋಜನೆಗಳ ವಿವರಗಳನ್ನು ಇನ್ನು ರೂಪಿಸಬೇಕಿದೆ. ಸ್ಮಾರಕವನ್ನು ಕಟ್ಟುವ ಬಗ್ಗೆ ಪರಿಗಣಿಸಲಾಗುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೆ, ಸರ್ವಜ್ಞ ಕವಿಯ ಹೆಸರನ್ನು ಎಲ್ಲರೂ ಹೇಳುತ್ತಿದ್ದೇವೆ. ಧಾರವಾಡ ಜಿಲ್ಲೆಯ ಹಿರೇಕೇರೂರು ತಾಲ್ಲೂಕಿನ ಅಬಲೂರಿನಲ್ಲಿ ಜನಿಸಿದ. ಆ ಗ್ರಾಮಕ್ಕೆ ಒಂದು ಒಳ್ಳೆಯ ರಸ್ತೆಯಾಗಲೀ ಒಂದು ಒಳ್ಳೆಯ ಪ್ರವಾಸೀ ಕೇಂದ್ರ ಇಲ್ಲವೆಂದು ಹೇಳಲಿಕ್ಕೆ ನನಗೆ ವಿಷಾದವಾಗುತ್ತದೆ. ಸರ್ಕಾರದವರು ಇದನ್ನು ಪ್ರವಾಸೀ ಕೇಂದ್ರವನ್ನಾಗಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಿರ್ಧಿಷ್ಟವಾಗಿ ಏನೂ ಇಲ್ಲ. ಸ್ಮಾರಕಭವನ ಮಾಡುವ ಬಗ್ಗೆ, ಡಾಂಬರು ರಸ್ತೆ ಮಾಡುವ ಬಗ್ಗೆ ಈ ಐತಿಹಾಸಿಕ ಸ್ಥಳಕ್ಕೆ ಬರುವ ಹೋಗುವ ಜನರಿಗೆ ಸರ್ಕಾರ ಯಾವುದೇ ಸೌಕರ್ಯವನ್ನಾಗಲೀ, ರಸ್ತೆಯ ಸೌಲಭ್ಯ ಮಾಡುವ ಬಗ್ಗೆ ಸ್ಪಷ್ಟವಾದ ಉತ್ತರವಿಲ್ಲ. ದಯವಿಟ್ಟು ಅಲ್ಲಿ ಒಂದು ಸ್ಮಾರಕಭವನ ಮತ್ತು ಡಾಂಬರು ರಸ್ತೆಯನ್ನು ಮಾಡುವುದರ ಜೊತೆಗೆ ಪ್ರವಾಸೀಕೇಂದ್ರವನ್ನು ಮಾಡಲಿಕ್ಕೆ ಇದೇ ವರ್ಷದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕೆಂದು ನಾನು ಕೇಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಮಾನ್ಯ ಸಭಾಧ್ಯಕ್ಷರ, ಕನ್ನಡಿಗರ ಮನೆ ಮಾತಾಗಿರುವ ಸರ್ವಜ್ಞರ ಹುಟ್ಟೂರಾದ ಅಬಲೂರು ಒಂದು ಐತಿಹಾಸಿಕ ಸ್ಥಳ. ಈ ಗ್ರಾಮವು 12ನೆಯ ಶತಮಾನದಲ್ಲಿ ಜೈನರ ಪ್ರಾಬಲ್ಯದಲ್ಲಿತ್ತು. 17ನೆಯ ಶತಮಾನದಲ್ಲಿ ಇಲ್ಲಿ ಸರ್ವಜ್ಞ ಜನಿಸಿ ಆ ಊರು ಖ್ಯಾತಿಯನ್ನು ಹೊಂದಿದೆ. ಪ್ರವಾಸೋದ್ಯಮ ಇಲಾಖೆಯು ಇದನ್ನು ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಿ 'ಸಿ' ಗುಂಪಿನಲ್ಲಿ ಸೇರಿಸಿದೆ. ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆಗೆ ಶೇಕಡ 25ರಷ್ಟು ಸಬ್ಸಿಡಿ ಹಾಗೂ ಇತರ ರಿಯಾಯಿತಿ ಉತ್ತೇಜನಗಳನ್ನು ನೀಡಲಿದೆ ಸರ್ವಜ್ಞರು ಪ್ರಖ್ಯಾತಿ ಹೊಂದಿದ ಕವಿಗಳು. ಎಲ್ಲಾ ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಸರ್ವಜ್ಞ ಕವಿಗಳು ರಚನೆ ಮಾಡಿರತಕ್ಕ ಸಾಹಿತ್ಯ ಮನೆ ಮಾತಾಗಿದೆ. ಸರ್ವಜ್ಞರ ಕವನಗಳನ್ನು ಕೇಳದಿರುವವರು ಕರ್ನಾಟಕ ರಾಜ್ಯದಲ್ಲಿ ಯಾರೂ ಇಲ್ಲ. ದುರದೃಷ್ಟಕರ ಇಷ್ಟು ವರ್ಷಗಳಾದರೂ ಸರ್ವಜ್ಞರ ಒಂದು ಸ್ಮಾರಕಭವನ, ಅಲ್ಲೊಂದು ರೀಸರ್ಚ್ ಸೆಂಟರ್ ಯಾವುದೂ ಆಗಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಗೆ ಇದು ಬರುತ್ತದೆ. ಆದರೂ ಸರ್ವಜ್ಞರ ನೆನಪಿಗೋಸ್ಕರ ಟೂರಿಸಂ ಇಲಾಖೆಯಿಂದ ಸ್ಮಾರಕಭವನ ಕಟ್ಟಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿ ಅವರಿಂದ ಅಂದಾಜು ತರಿಸಿ ಸ್ಮಾರಕಭವನ ಕಟ್ಟಲು ಏನು ಮಾಡಬೇಕೋ ಅದನ್ನು ಮಾಡಲು ನಾವು ಒಪ್ಪಿರುತ್ತೇವೆ.

ಇಥರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಮತ್ತೆ ರೋಡ್ಸ್ ಮಾಡಬೇಕಾದರೆ ಇದು ಪಿ.ಡಬ್ಲ್ಯೂ.ಡಿ.ಗೆ ಬರುತ್ತದೆ. ನನ್ನ ಮಾಹಿತಿ ಪ್ರಕಾರ ಪಿ.ಡಬ್ಲ್ಯೂ.ಡಿ. ಇಲಾಖೆಯವರು ಹಿರೇಕೆರೂರು ಅಬಲೂರು–ಕೋಡಾ ಇಂತಹ ರೋಡ್‌ಗಳನ್ನು ರಿಪೇರಿ ಮಾಡಲು ಅವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ಗೊತ್ತಾಗಿದೆ. ಪಿ.ಡಬ್ಲ್ಯೂ.ಡಿ. ಮಂತ್ರಿಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳನ್ನು ಸೇರಿಸಿ ಒಂದು ಜಂಟಿಸಭೆಯನ್ನು ಕರೆದು ಸರ್ವಜ್ಞ ಹುಟ್ಟಿದ ಸ್ಥಳವನ್ನು ಅಭಿವೃದ್ಧಿಪಡಿಸಲು 93–94ನೇ ಸಾಲಿಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ.

ಶ್ರೀ ಬಿ.ಎಚ್. ಬನ್ನಿಕೋಡ್:– ಮಾನ್ಯ ಸಚಿವರು ಹೇಳಿದರು ತಮ್ಮ ಇಲಾಖೆಯಿಂದ ಸ್ಮಾರಕ ಭವನ ಕಟ್ಟುತ್ತೇವೆ ಎಂದು. ಯಾವಾಗ ಕಟ್ಟಿಸುತ್ತೀರಿ, ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ನಿರ್ದಿಷ್ಟವಾಗಿ ಏನಾದರೂ ಮಾಡುವುದಿದ್ದರೆ ನಿರ್ಣಯ ತೆಗೆದುಕೊಂಡು ಯಾವಾಗ ಮಾಡುತ್ತೀರಿ ? ರಸ್ತೆ ಇಲ್ಲವೆಂದು ಹೇಳಿದರೆ ಸಮಾಲೋಚನೆ ಮಾಡುತ್ತೇವೆ ಎಂದು ಹೇಳಿದರು. ಈಗಾಗಲೇ ಸರ್ಕಾರದ ಮುಂದೆ ಆ ಬಗ್ಗೆ ಇದೆ. ಅವರು ನಿರ್ದಿಷ್ಟವಾಗಿ ಒಂದು ಉತ್ತಮ ರಸ್ತೆಯನ್ನು, ಮತ್ತು ಅಲ್ಲಿ ಪ್ರವಾಸಿ ಮಂದಿರವನ್ನು ಮತ್ತು ಸ್ಮಾರಕಭವನವನ್ನು ತಮ್ಮ ಇಲಾಖೆಯಿಂದ ಮಾಡಬೇಕು. ಮತ್ತು ವಚನ ಪುಸ್ತಕ ಕೂಡ ಸಿಗುತ್ತಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅವುಗಳನ್ನು ಪ್ರಿಂಟ್ ಮಾಡಿಸಿ ಅಲ್ಲಿ ಒಂದು ರೀಸರ್ಚ್ ಇನ್ಸ್ಟಿಟ್ಯೂಟ್ ಅಥವಾ ಮ್ಯೂಸಿಯಂನ್ನು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಹಾಗೂ ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಅದಕ್ಕೇ ನಾನು ಹೇಳಿದ್ದು, ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಗಳನ್ನು ಮತ್ತು ಕನ್ನಡ ಸಂಸ್ಕೃತಿ ಸಚಿವರನ್ನು ಜೊತೆಗೆ ಕರೆದು ಮಾತನಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಈಗಾಗಲೇ ನಾನು ಕನ್ನಡ ಮತ್ತು ಸಂಸ್ಕೃತಿ ಸಚಿವರ ಜೊತೆ ಮಾತನಾಡಿದ್ದೇನೆ. ಅವರು ರೀಸರ್ಚ್ ಸೆಂಟರ್ ಮಾಡುವುದಕ್ಕೆ ಒಪ್ಪಿದ್ದಾರೆ. ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ 93–94ನೇ ಇಸವಿಯಲ್ಲಿ ಈ ಕಾರ್ಯ ಪ್ರಾರಂಭ ಆಗುವುದಕ್ಕೆ ಏನು ಬೇಕೋ ಅದನ್ನು ಏರ್ಪಾಡು ಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಪಿ.ಆರ್. ಸಿಂಧ್ಯ:– ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಈ ವಿಚಾರದಲ್ಲಿ ಸೆಳೆಯುತ್ತಿದ್ದೇನೆ. ಅವರು ಕಲೆ ಬಗ್ಗೆ, ಭಾಷೆ ಬಗ್ಗೆ, ಸಂಸ್ಕೃತಿ ಬಗ್ಗೆ ಬಹಳ ಅಭಿಮಾನ ಇರತಕ್ಕಂಥ ಮುಖ್ಯಮಂತ್ರಿಗಳು. ಸರ್ವಜ್ಞ ಹುಟ್ಟಿರತಕ್ಕಂಥ ನಾಡಿನಿಂದ ಅನೇಕ ಜನ ಮಂತ್ರಿಗಳು ಬಂದಿದ್ದಾರೆ. ತಮ್ಮ ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಂಡಿರತಕ್ಕಂಥ ಮಹನೀಯರೂ ಇದ್ದಾರೆ. ಆದರೆ ಇದನ್ನು ಮರೆತು ಮಾಡದೇ ನಮ್ಮ ಸರ್ಕಾರ ಇರತಕ್ಕಂಥಾದ್ದು ಒಂದು ರೀತಿಯಲ್ಲಿ ನಾಚಿಕೆಗೇಡಿತನದ ವಿಚಾರವೆಂದು ಹೇಳಬೇಕಾಗುತ್ತದೆ. ಇದನ್ನು ಮಾಡಬೇಕೆಂಬ ಉದ್ದೇಶವನ್ನು ಇಟ್ಟಿದ್ದಾರೆ ಮತ್ತು ಭರವಸೆಯನ್ನು ಸಹಿತ ಕೊಟ್ಟಿದ್ದಾರೆ. ಇದಕ್ಕೆ ಬೇಕಾಗಿರತಕ್ಕಂಥ, ಹಣವನ್ನು ತಾವು ಈ ವರ್ಷ ಒದಗಿಸಿಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸಬೇಕಾಗಿ ಕೇಳುತ್ತೇನೆ. ಏಕೆಂದರೆ ಸ್ಮಾರಕ ಮಾಡಬೇಕೆಂದರೆ ಕೊನೆಯ ಪಕ್ಷ ಐವತ್ತು ಲಕ್ಷ, ಒಂದು ಕೋಟಿ ರೂಪಾಯಿ ಬೇಕಾಗುತ್ತದೆ. ಅದನ್ನು ಈ ವರ್ಷದಲ್ಲೇ ಒದಗಿಸಿಕೊಡುವುದಕ್ಕೆ ಸಾಧ್ಯವೇ ಎಂದು ತಾವು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– 1993–94ರಲ್ಲಿ ಅಗತ್ಯವಾದ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಜೀವಾವಧಿ ಶಿಕ್ಷೆಯ ಅವಧಿಯಲ್ಲಿ ಕಡಿತ.

187 (1285): ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು)

ಮಾನ್ಯ ಗೃಹ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಜೀವಾವಧಿ ಶಿಕ್ಷೆಯನ್ನು 14 ವರ್ಷಗಳಿಂದ 10 ವರ್ಷಕ್ಕೆ ಇಳಿಸಲು ಕಳೆದ ವಿಧಾನ ಸಭೆ ಅಧಿವೇಶನದಲ್ಲಿ ಒಪ್ಪಿಗೆ ನೀಡಿದ್ದು, ಈ ವಿಷಯ ಕೇಂದ್ರ ಸರ್ಕಾರಕ್ಕೆ ತಲುಪಿದೆಯೆ ?

ಆ. ಹಾಗಿದ್ದಲ್ಲಿ ಈಗ ಯಾವ ಹಂತದಲ್ಲಿದೆ ?

ಇ. ಸರ್ಕಾರವು 10ವರ್ಷ ಶಿಕ್ಷೆ ಅನುಭವಿಸಿದ ಕೈದಿಗಳಿಗೆ ಅನುಕಂಪದ ಆಧಾರದ ಮೇಲೆ ಬಿಡುಗಡೆ ಮಾಡಲು ಏನಾದರೂ ಕಾರ್ಯಕ್ರಮ ಹಮ್ಮಿಕೊಂಡಿದೆಯೆ ?

ಶ್ರೀ ಬಿ. ರಮಾನಾಥ ರೈ (ಗೃಹ ರಾಜ್ಯ ಸಚಿವರು)

ಅ. ಹೌದು

ಆ. ಕೇಂದ್ರ ಸರ್ಕಾರದಲ್ಲಿ ಬಾಕಿ ಇದೆ

ಇ. ಇಲ್ಲ

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೇ, ಕಳೆದ ವಿಧಾನಸಭೆಯಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಈ ಜೀವಾವಧಿ ಶಿಕ್ಷೆಯನ್ನು 14ವರ್ಷಗಳಿಂದ 10ವರ್ಷಕ್ಕೆ ಇಳಿಸಲು ತೀರ್ಮಾನ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ ಎಂದು ಈಗಾಗಲೇ ತಿಳಿಸಿದ್ದಾರೆ. ಆದರೆ ಹತ್ತು ವರ್ಷಗಳ ಶಿಕ್ಷೆಯ ಅವಧಿಯುನ್ನು ಅನುಕಂಪದ ಆಧಾರದ ಮೇಲೆ ಏನಾದರೂ ಕಡಿಮೆ ಮಾಡಿ ಕೈದಿಗಳನ್ನೂ ಬಿಡುಗಡೆ ಮಾಡುವುದಕ್ಕೆ ಅವಕಾಶ ಇದೆಯೇ ಎಂದು ಕೇಳಿದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಆರ್ಟಿಕಲ್ 161 ಪ್ರಕಾರ ನಮ್ಮ ಸರ್ಕಾರ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಬಹುದಲ್ಲ ? ಎಲ್ಲಾ ರಾಜ್ಯಗಳಲ್ಲೂ ಇದನ್ನು ಮಾಡಿದ್ದಾರೆ. ಹೊಸದಾಗಿ ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾದಾಗ, ಅದಕ್ಕಾದರೂ ಇದನ್ನು ಮಾಡಬೇಕು. ಮೊನ್ನೆ ಅವರು ಕೂಡ ಜೈಲಿಗೆ ವೀಕ್ಷಣೆ ಮಾಡುವುದಕ್ಕೆ ಹೋಗಿ ಬಂದಿದ್ದಾರೆ. ಆದ್ದರಿಂದ ಆರ್ಟಿಕಲ್ 161ರ ಪ್ರಕಾರ ಆದರೂ ಬಿಡಬಹುದಲ್ಲ ಎಂದು ಮಾನ್ಯ ಗೃಹಮಂತ್ರಿಗಳು ಕೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿದ ಪ್ರಶ್ನೆಗೆ ನಾವು ಈಗಾಗಲೇ ಉತ್ತರದಲ್ಲಿ 'ನಾವು ಈ ಒಂದು 14 ವರ್ಷಗಳಿಂದ 10 ವರ್ಷಕ್ಕೆ ಇಳಿಸುವುದಕ್ಕೆ ಸಂಬಂಧಪಟ್ಟಂತೆ ಕೂಲಂಕಶವಾದ ವರದಿಯನ್ನು ರಾಷ್ಟ್ರಪತಿಯವರ ಒಪ್ಪಿಗೆಗಾಗಿ ಕಳಿಸಿಕೊಟ್ಟಿದ್ದೇವೆ. ನಾವು ಅನೇಕ ಸಾರಿ ರಿಮೈಂಡರ್ಸ್ ಕೂಡ ರಾಷ್ಟ್ರಪತಿಗೆ ಕಳಿಸಿದ್ದೇವೆ. ಅವರಿಂದ ಒಪ್ಪಿಗೆ ಬಂದ ತಕ್ಷಣ ನಾವು ಅದನ್ನು ಜಾರಿಗೆ ತರುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್:- ರಾಷ್ಟ್ರಪತಿಯವರದ್ದು ಆಯಿತು. ಆರ್ಟಿಕಲ್ 161ರ ಪ್ರಕಾರ ನಮ್ಮ ಸರ್ಕಾರ ರಾಜ್ಯಪಾಲರಿಗೆ ಶಿಫಾರಸ್ಸು ಮಾಡಬಹುದಲ್ಲ ?

ಶ್ರೀ ಬಿ ರಮಾನಾಥ ರೈ:- ಸನ್ಮಾನ್ಯ ಸದಸ್ಯರ ಭಾವನೆ ನಮಗೂ ಅರ್ಥವಾಗಿದೆ, ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜಿ. ರಾಜುಗೌಡ:- ಕೇಂದ್ರ ಸರ್ಕಾರದ ಅನುಮತಿ ಬರುವವರೆಗೆ, ಈಗಾಗಲೇ 10 ವರ್ಷ

ಶಿಕ್ಷೆ ಅನುಭವಿಸಿರತಕ್ಕ ಖೈದಿಗಳಿಗೆ, ದಯಮಾಡಿ ಪೆರೋಲ್ ಮೇಲೆ ಬಿಡುಗಡೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಬಿ. ರಮಾನಾಥ ರೈ:– ಸನ್ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– 10 ವರ್ಷ ದಾಟಿರತಕ್ಕ ಖೈದಿಗಳು ಎಷ್ಟು ಜನ ಕರ್ನಾಟಕದ ಕಾರಾಗೃಹದಲ್ಲಿದ್ದಾರೆ. ಮತ್ತು 25ನೇ ವರ್ಷದ ಕರ್ನಾಟಕ ರಾಜ್ಯೋತ್ಸವಾದಾಗ 10 ವರ್ಷದವರನ್ನು ಬಿಡುಗಡೆ ಮಾಡಲಾಗಿತ್ತು. ಈಗ ಎಷ್ಟು ಜನರಿದ್ದಾರೆ, ಅವರನ್ನು ಬಿಡುಗಡೆ ಮಾಡತಕ್ಕ ಮನಸ್ಸು ಸರ್ಕಾರಕ್ಕೆ ಇದೆಯೇ ?

ಶ್ರೀ ಬಿ. ರಮಾನಾಥ ರೈ:– ಸನ್ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ, ಸಮರ್ಪಕವಾದ ಉತ್ತರವನ್ನು ಕೊಡಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯಾಪ್ತಿಯಲ್ಲಿ ಸಸ್ಯಗಳ ಬೆಳವಣಿಗೆ ಜಮೀನು

188 (575): ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯಾಪ್ತಿಯಲ್ಲಿ ಸಸ್ಯಗಳ ಬೆಳವಣಿಗೆಗೋಸ್ಕರ ಅವರವರ ಸ್ವಂತ ಜಮೀನುಗಳನ್ನು ಅವರವರಿಗೆ ಎಷ್ಟು ಜನರಿಗೆ ಕೊಡಲಾ (ವಿವರಗಳನ್ನೊದಗಿಸುವುದು):

ಆ. ಯಾವ ಆಧಾರದ ಮೇಲೆ ಅವರವರುಗಳಿಗೆ ಈ ಜಮೀನುಗಳನ್ನು ಸಸ್ಯ ಬೆಳವಣಿಗೆಯ ಉದ್ದೇಶದಿಂದ ಕೊಡಲಾಗಿದೆ ?

ಇ. ಈ ಜಮೀನುಗಳಲ್ಲಿ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರದ ಅನುಮತಿ ಇದೆಯೇ ?

ಈ. ಈ ಜಮೀನುಗಳನ್ನು ಹೊಂದಿರುವವರು ಸರ್ಕಾರದ ಕಾನೂನುಗಳನ್ನು ಉಲ್ಲಂಘಿಸಿರುತ್ತಾರೆಯೇ ?

ಉ. ಹಾಗಿದ್ದಲ್ಲಿ, ಕಾನೂನು ಉಲ್ಲಂಘಿಸಿದವರ ಮೇಲೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಪಟ್ಟಿ 'ಎ' ನಲ್ಲಿ ವಿವರಗಳನ್ನು ಒದಗಿಸಿದೆ.

ಆ. ಸರ್ಕಾರಿ ಆದೇಶದ ಸಂಖ್ಯೆ ಹೆಚ್‌ಯುಡಿ 478, ಎಂಎನ್‌ಎಕ್ಸ್ 86, ದಿನಾಂಕ 1–1–87 ರ ಆಧಾರದ ಮೇಲೆ ಕೊಡಲಾಗಿದೆ.

ಇ. ಸರ್ಕಾರದ ಅನುಮತಿ ಇರುವುದಿಲ್ಲ.

ಈ. ಕೆಲವು ಪ್ರಕರಣಗಳಲ್ಲಿ ಉಲ್ಲಂಘನೆಯಾಗಿರುತ್ತದೆ. ವಿವರಗಳನ್ನು ಪಟ್ಟಿ 'ಎ' ನಲ್ಲಿಯ ಕಾಲಂ 5ರಲ್ಲಿ ನೀಡಲಾಗಿದೆ.

ಉ. ಪ್ರಾಧಿಕಾರದ ಕಾನೂನು ಅಧಿಕಾರಿಗಳ ಜೊತೆ ಸಮಾಲೋಚಿಸಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಅನುಬಂಧ – ಎ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಡಳಿತ ವ್ಯಾಪ್ತಿಯಲ್ಲಿ ಸಸ್ಯಗಳ ಬೆಳವಣಿಗೆಗೋಸ್ಕರ ಅವರವರ ಸ್ವಂತ ಜಮೀನುಗಳನ್ನು ಅವರವರಿಗೇ ವಹಿಸಿಕೊಡಲಾದ ಜಮೀನುಗಳ ವಿವರ ಈ ಕೆಳಕಂಡಂತಿವೆ:

ಅರ್ಜಿದಾರರ ಹೆಸರು: ಖಾತೆದಾರರ ಹೆಸರು ಶ್ರೀ : ಶ್ರೀಮತಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂಟೆ	ಈ ಜಮೀನುಗಳನ್ನು ಹೊಂದಿರುವವರು ಸರ್ಕಾರದ ಕಾನೂನುಗಳನ್ನು ಉಲ್ಲಂಘಿಸಿರುತ್ತಾರೆಯೇ ?
1	2	3	4	5
1. ವೆಂಕಟ ಕೃಷ್ಣಯ್ಯ	ಕೊತ್ತನೂರು	20:2ಎ	1–08	ಸುಮಾರು 1 ಎಕರೆ 30
	ಕೊತ್ತನೂರು	20:2ಬಿ.	1–02	ಗುಂಟೆ ಪ್ರದೇಶದಲ್ಲಿ
	ಕೊತ್ತನೂರು	20:2ಸಿ.	0–18	ನರ್ಸರಿ ಇರುತ್ತದೆ.
			2–28	ಉಳಿದ ಸುಮಾರು 38 ಗುಂಟೆ ಪ್ರದೇಶವು ಖಾಲಿ ಇರುತ್ತದೆ. 38 ಗುಂಟೆ ಪ್ರದೇಶದಲ್ಲಿ ಸರ್ಕಾರದ ಆದೇಶ ಉಲ್ಲಂಘನೆಯಾಗಿದೆ.
2. ಕೆ.ಬಿ. ಲಕ್ಷ್ಮಣ್ ಮತ್ತು ಸಹೋದರರು	ಕೊತ್ತನೂರು	155:3ಎ	2–07	ಸುಮಾರು 9 ಎಕರೆ
		155:3ಬಿ	0–29	ಪ್ರದೇಶದಲ್ಲಿ ನರ್ಸರಿ
		155:3ಸಿ	1–09	ಇದೆ. 3 ಎಕರೆ
		155:3ಡಿ	1–09	ಪ್ರದೇಶದಲ್ಲಿ ಖಾಲಿ
		155:3ಇ	0–24	ಇರುತ್ತದೆ. 3 ಎಕರೆ
		155:3ಎಫ್	0–23	ಪ್ರದೇಶದಲ್ಲಿ ಸರ್ಕಾರದ
		155:3ಜಿ	0–24	ಕಾನೂನು
		155:3ಎಚ್	0–23	ಉಲ್ಲಂಘನೆಯಾಗಿದೆ.
		155:3ಐ	0–26	
		155:3ಜೆ	0–26	
		155:4	3–00	
			12–00	

3. ರಾಮರೆಡ್ಡಿ ಮತ್ತು ಇತರರು	ಸಾರಕ್ಕಿ ಕುಂಟೆ	18:2	1–38	ಸುಮಾರು 38 ಗುಂಟೆ ಪ್ರದೇಶದಲ್ಲಿ ನರ್ಸರಿ ಇದೆ. 1 ಎಕರೆ ಪ್ರದೇಶದಲ್ಲಿ ಸರ್ಕಾರದ ಕಾನೂನು ಉಲ್ಲಂಘನೆಯಾಗಿದೆ.
4. ಜಯಲಕ್ಷ್ಮಿ	ಯಲ್ಲೆಕುಂಟೆ	29:2ಬಿ 29:3ಬಿ 29:4ಬಿ 29:8ಬಿ	0–07 0–15 1–00 0–12 1–34	ಸುಮಾರು 1 ಎಕರೆ ಪ್ರದೇಶದಲ್ಲಿ ನರ್ಸರಿ ಇದೆ. 34 ಗುಂಟೆ ಪ್ರದೇಶ ಖಾಲಿ ಇದೆ. 34 ಗುಂಟೆ ಪ್ರದೇಶದಲ್ಲಿ ಸರ್ಕಾರದ ಕಾನೂನು ಉಲ್ಲಂಘನೆಯಾಗಿದೆ.
5. ವಿ. ಕೃಷ್ಣಪ್ಪ	ಹೆಬ್ಬಾಳ ಅಮಾನಿಕೆರೆ	12	2–29	ಸಧ್ಯಕ್ಕೆ ಈ ಭೂಮಿ ಸಸ್ಯ ಬೆಳವಣಿಗೆಗೆ ಉಪಯೋಗಿಸಲ್ಪಡುತ್ತಿದೆ.
6. ಪ್ಲಾರೆನ್ಸ್ ಲೋಪಜಾ	ವಲಗೇರ ಹಳ್ಳಿ	19:2	7–24	ಸದರಿ ಜಮೀನಿನಲ್ಲಿ ತೆಂಗಿನ ತೋಟ, ಗುಲಾಬಿ ತೋಟ, ಇತರ ರೀತಿಯ ಗಿಡಗಳು ಹಾಗೂ 5 ಕೋಳಿ ಫಾರಂ, ಷೆಡ್‌ಗಳು, ದನದ ಕೊಟ್ಟಿಗೆ ವಾಚ್‌ಮನ್ ಷೆಡ್, ಪಂಪ್ ಹೌಸ್ ಬೋರ್ ವೆಲ್ ಇರುತ್ತವೆ.
7. ಕೆಂಪಯ್ಯ ಸನ್ ಆಫ್ ಮುನಿಯಪ್ಪ	ಸಾರಕ್ಕಿ	67	3-23	ನರ್ಸರಿ ಇರುವುದಿಲ್ಲ.
8. ವೆಂಕಟಪ್ಪ ಬಿನ್ ಮುನಿಯಪ್ಪ ಮತ್ತು ಇತರರು	ಸಾರಕ್ಕಿ	66	4-10	ಸುಮಾರು 1 ಎಕರೆಯಲ್ಲಿ ನರ್ಸರಿ ಇರುತ್ತದೆ. ಉಳಿದ ಭಾಗ ಕಟ್ಟಡಗಳು ಬರುತ್ತಾ ಇದೆ.
9. ಸಿ. ವೆಂಕಟಪ್ಪ ಮತ್ತು ಇತರರು	ಇತರರು	75:1	2-33	ನರ್ಸರಿ ಇರುವುದಿಲ್ಲ. ಕಟ್ಟಡಗಳು ಬರುತ್ತಾ ಇವೆ.

10. ಮುನಿಯಪ್ಪ ಮತ್ತು ಇತರರು	ತಾಯಪ್ಪನ ಹಳ್ಳಿ	12:2	1-10	ನರ್ಸರಿ ಇರುವುದಿಲ್ಲ.
11. ವರಸ್ವಾಮಿ ಮತ್ತು ಇತರರು	ಅರಕೆರೆ	12:3	1-00	ಆದರ್ಶ ಡೆವಲಪರ್ಸ್ ಅವರು ಅಪಾರ್ಟಮೆಂಟ್ ಕಟ್ಟುತ್ತಿದ್ದಾರೆ.
12. ಎಂ. ಶ್ರೀನಿವಾಸಲು, ಎಂ.ಆರ್. ರಮೇಶ್	ಅರಕೆರೆ	100	1-13	ನರ್ಸರಿಯನ್ನು ಬಿಟ್ಟು ಬೇರೆ ಉದ್ದೇಶಕ್ಕೆ ಉಪಯೋಗಿಸಲಾಗುತ್ತಿಲ್ಲ.
13. ಎಂ.ಆರ್. ರಮೇಶ್	ಅರಕೆರೆ	100:1	1-02	
14. ಎಂ.ಆರ್. ರಮೇಶ್	ಅರಕೆರೆ	103	5-16	
			7-16	
		ಒಟ್ಟು	49-20	

ಶ್ರೀ ಕೆ. ಲಕ್ಕಣ್ಣ:- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಸುತ್ತ, ಜಮೀನ್ದಾರರಿಗೆ, ಸಸ್ಯಗಳ ನರ್ಸರಿ ಮಾಡುವುದಕ್ಕೋಸ್ಕರ 14 ಸಂಸ್ಥೆಯವರಿಗೆ ಕೊಟ್ಟಿದ್ದಾರೆ. ಅದರಲ್ಲಿ 10-11 ಸಂಸ್ಥೆಯವರು ಕಾನೂನು ಉಲ್ಲಂಘನೆ ಮಾಡಿದ್ದಾರೆ, ಅಲ್ಲಿ ಕಟ್ಟಡಗಳನ್ನು, ಬಹುಮಹಡಿ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. ಅದನ್ನು ಪರಿವರ್ತನೆ ಮಾಡದೇ ಕಟ್ಟುತ್ತಿದ್ದಾರೆ. ಇದರ ಬಗ್ಗೆ ಯಾವುದೇ ಕ್ರಮವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ತೆಗೆದುಕೊಂಡಿಲ್ಲ. ಈ ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು. ಪರಿವರ್ತನೆ ಇಲ್ಲದೆ, ಎಕರೆಗಟ್ಟಲೆ ಸೈಟುಗಳನ್ನು ಮಾಡಿ, ಮನೆಗಳನ್ನು ಮಾಡಿ, ಬಹು ಅಂತಸ್ತಿನ ಕಟ್ಟಗಳನ್ನು ಕಟ್ಟುತ್ತಿದ್ದಾರೆ. ಇದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಅವರಿಗೆ ಕೊಟ್ಟಿರತಕ್ಕ ಜಮೀನಿನಲ್ಲಿ ನರ್ಸರಿ ವಿನಹ ಬೇರೆ ಏನೂ ಮಾಡುವುದಕ್ಕೆ, ಪರವಾನಗಿ ಇಲ್ಲ. ಅಂತಹ ಪರವಾನಗಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೊಡಬಹುದು. ಅವರು ಪರವಾನಗಿಯನ್ನು ತೆಗೆದುಕೊಂಡು ಮಾಡುತ್ತಿದ್ದಾರೆಯೇ ಪರವಾನಗಿ ಇಲ್ಲದೆ ಮಾಡುತ್ತಿದ್ದಾರೆಯೇ ಎನ್ನುವುದನ್ನು ಸರ್ಕಾರ ಪರಿಶೀಲಿಸುತ್ತಿದೆ. ಆ ವರದಿ ಬಂದ ಮೇಲೆ ಮುಂದಿನ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ. ಲಕ್ಕಣ್ಣ:- ಸುಮಾರು ವರ್ಷದಿಂದ ಆ ನರ್ಸರಿ ಭೂಮಿಯಲ್ಲಿ ಕಟ್ಟಡ ಮಾಡುತ್ತಿದ್ದಾರೆ. ನೀವು ವರ್ಷಗಟ್ಟಲೆ ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ, ಅಲ್ಲಿ ಕಟ್ಟಡಗಳು ಬಂದ ಮೇಲೆ ಒಡೆಯುವುದಕ್ಕೆ ಸಾಧ್ಯವಾಗುತ್ತದೆಯೇ ? ಒಂದು ವರ್ಷದಿಂದ ಕಟ್ಟಡ ಕಟ್ಟುತ್ತಿದ್ದಾರೆ, ಆ ಜಾಗ ಪರಿವರ್ತನೆಯಾಗಿದೆಯೇ, ಇದರ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಏಕೆ ಗಮನ ಹರಿಸಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಸುಮಾರು 14 ಜನರಿಗೆ ಸೇರಿರತಕ್ಕಂಥ ಜಮೀನಿನಲ್ಲಿ ಮೇಲ್ನೋಟಕ್ಕೆ ಕಾಣುವ ರೀತಿಯಲ್ಲಿ ಕಟ್ಟಡ ಕಟ್ಟುವವರು 2-3 ಜನರು ಮಾತ್ರ. ಅವರು ಪರವಾನಗಿ

ತೆಗೆದುಕೊಂಡಿದ್ದಾರೋ ಇಲ್ಲವೋ ಎನ್ನುವುದನ್ನು ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ಆದಷ್ಟು ಬೇಗನೆ ವರದಿ ತರಿಸಿ, ಅವರು ಪರವಾನಗಿ ತೆಗೆದುಕೊಳ್ಳದೇ ಇದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಸಾ. ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸಲು ಸಂಸ್ಥೆಯ ವಿಭಜನೆ

189 (865): ಶ್ರೀ ಕೆ.ಹೆಚ್. ಹನುಮೇಗೌಡ, (ಹಾಸನ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸಲು ಸದರಿ ಸಂಸ್ಥೆಯನ್ನು ನಾಲ್ಕು ವಲಯಗಳನ್ನಾಗಿ ಪರಿಗಣಿಸಬೇಕೆಂಬ ಸರ್ಕಾರದ ಆಲೋಚನೆ ಯಾವ ಹಂತದಲ್ಲಿದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಇದು ಸರ್ಕಾರದ ಪರಿಶಿಲನೆಯಲ್ಲಿದೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಅಧ್ಯಕ್ಷರೇ, ಕರ್ನಟಾಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸಲು ಮತ್ತು ಸದರಿ ಸಂಸ್ಥೆಯನ್ನು 4 ವಲಯಗಳನ್ನಾಗಿ ವಿಂಗಡಿಸಬೇಕೆಂಬ ಸರ್ಕಾರದ ಆಲೋಚನೆ ಯಾವ ಹಂತದಲ್ಲಿದೆ ಎಂದು ಕೇಳಿದ್ದಕ್ಕೆ ಇದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಕಳೆದ ಅನೇಕ ವರ್ಷಗಳಿಂದ ಇದೇ ಮಾತನ್ನು ಹೇಳುತ್ತಿದ್ದಾರೆ. ಇದಕ್ಕೆ ಏನಾದರೊಂದು ಸಮಿತಿ ಮಾಡಿ, ಅವರಿಂದ ಮಾಹಿತಿ ಪಡೆದು ಇದರ ಬಗ್ಗೆ ಕಾರ್ಯಪ್ರವೃತ್ತರಾಗುತ್ತೀರಾ ? ಅಥವಾ ಸುಮ್ಮನೆ ಪರಿಶೀಲನೆಯಲ್ಲಿದೆ ಎಂದು ಎಷ್ಟು ವರ್ಷ ಹೀಗೆಯೇ ಹೇಳಿಕೊಂಡು ಹೋಗುತ್ತೀರಿ ? ಮಾಡುವುದಾದರೆ ಎಷ್ಟು ದಿವಸದಲ್ಲಿ ಮಾಡುತ್ತೀರಾ ಎಂಬುದನ್ನು ದಯಮಾಡಿ ತಿಳಿಸಿ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಸಾರಿಗೆ ಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹಿಂದೆ ದೊರ್ರೈರಾಜು ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಲಾಗಿತ್ತು. ಅವರು ಕೂಲಂಕುಷವಾಗಿ ಪರಿಶೀಲನೆ ಮಾಡಿ ಕೆಲವು ಸಲಹೆಗಳನ್ನು ಕೊಟ್ಟರು, ಇದಾದ ನಂತರ, ಅದನ್ನು ತಜ್ಞರ ಸಮಿತಿಗೆ ಕಳುಹಿಸಿ, ಅವರೂ ಕೂಡ ಇದರ ಬಗ್ಗೆ ಪರಿಶೀಲನೆ ಮಾಡಿ, ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈಗ, ಇದನ್ನು ಸಚಿವ ಸಂಪುಟದ ಉಪಸಮಿತಿ ಪರಿಶೀಲನೆ ಮಾಡುತ್ತಿದೆ. ಆದಷ್ಟು ಬೇಗನೆ ಪರಿಶೀಲನೆ ಮಾಡಿ, ಏನು ಮಾಡಬೇಕೆಂದು ತೀರ್ಮಾನ ಮಾಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ:– ಗ್ರಾಮಂತರ ಪ್ರದೇಶಗಳಲ್ಲಿ ಬಸ್ ಪ್ರಯಾಣ ಮಾಡುವುದು ಬಹಳ ದೊಡ್ಡ ಸಾಧನೆ. ಬಸ್ ಹೊರಟ ಜಾಗದಲ್ಲಿಯೇ ಸೀಟುಗಳು ಭರ್ತಿಯಾಗುತ್ತವೆ. ಅಲ್ಲಿಂದ ಸಂಬಂಧಪಟ್ಟ ಸ್ಥಳಕ್ಕೆ ಬರಬೇಕಾದರೆ, ಬಸ್ ಮೇಲೆ ಕುಳಿತುಕೊಂಡು, ಏಣಿ ಮೇಲೆ ಕುಳಿತುಕೊಂಡು ಜನರು ಪ್ರಯಾಣ ಮಾಡುತ್ತಿದ್ದಾರೆ.

ಅವರ ಪರಿಸ್ಥಿತಿಯನ್ನು ನೋಡಿದರೆ ನೋಡಿದವರಿಗೆ ಏನು ಅನಿಸುತ್ತದೆ. ಅವರ ಪಾಡು ಹೇಳುವುದಕ್ಕೆ ಆಗುವುದಿಲ್ಲ. ಅವರನ್ನು ನೋಡಿದರೆ ನೋವಾಗುತ್ತದೆ. ಆ ಹೆಂಗಸರು ಮಕ್ಕಳು ಬಸ್ಸಿನಲ್ಲಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೊಂದು ಏನಾಗುತ್ತದೆ ಅಂದರೆ ಪಟ್ಟಣಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಓದುವಂತಹ ಮಕ್ಕಳಿಗೆ ಪಾಸ್‌ಗಳನ್ನು ಬೇರೆ ಕೊಟ್ಟಿದ್ದೀರಿ. ಬಸ್ಸು ಹೊರಡುವ ಜಾಗದಲ್ಲೇ ಬಸ್ಸು ತುಂಬಿರುವಾಗ ಮಧ್ಯದಲ್ಲಿ ಮಕ್ಕಳಿಗೆ ಸೀಟು ಸಿಗುವುದಿಲ್ಲ. ಹುಡುಗರು ಬೆಳಿಗ್ಗೆಯಿಂದ ಬಸ್ಸಿಗಾಗಿ ನಿಂತು ವಾಪಸ್ ಹೋಗುತ್ತಾರೆ. ಅವರ ತಂದೆ ತಾಯಿಗಳು ನಮ್ಮ ಹುಡುಗ

ತುಂಬಾ ಚೆನ್ನಾಗಿ ಓದುತ್ತಿದ್ದಾನೆಂದು ತಿಳಿದುಕೊಳ್ಳುತ್ತಾರೆ. ಇದರಿಂದ ದೊಡ್ಡ ಘೋರ ಅಪರಾಧವಾಗುತ್ತದೆಂದು ನಾನು ಸರ್ಕಾರವನ್ನು ಮುಂಚೆಯೇ ಎಚ್ಚರಿಸುತ್ತಿದ್ದೇನೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಮಕ್ಕಳ ವಿದ್ಯಾಭ್ಯಾಸ ಸರ್ವನಾಶವಾಗಿದೆ. ಪಾಸ್ ಬೇರೆ ಕೊಟ್ಟಿದ್ದೀರಿ. ಪಾಸ್ ಕೊಡಬಾರದು ಎಂದು ನಾನು ಹೇಳುತ್ತಿಲ್ಲ. ಅದಕ್ಕೆ ತಕ್ಕ ವ್ಯವಸ್ಥೆ ಕೂಡ ಮಾಡಬೇಕಲ್ಲ. ನಾವು ಹೋದ ಕಡೆಗಳಲ್ಲಿ ಹುಡುಗರು ಇದೇ ದೂರು ಹೇಳುತ್ತಾರೆ. ಹೆಂಗಸರು ಮಕ್ಕಳು ಒಂದು ಕಡೆ ದೂರು ಕೊಡುತ್ತಾರೆ. ಇನ್ನೊಂದು ಕಡೆ ಪಾಸ್ ಕೊಟ್ಟ ಹುಡುಗರ ದೂರು. ಇಷ್ಟೊಂದು ಅದ್ವಾನವಾಗಿರುವುದರಿಂದ ತಾವು ನಡೆಸಲಿಕ್ಕೆ ಇಲ್ಲೆಲ್ಲಿ ಸಾಧ್ಯ ಅಲ್ಲಿ ನಡೆಸಿ, ಎಲ್ಲೆಲ್ಲಿ ಸಾಧ್ಯವಿಲ್ಲ ಅಲ್ಲಿ ಪ್ರೈವೇಟ್‌ನವರಿಗೆ ಕೊಟ್ಟು ಏನಾದರೂ ವ್ಯವಸ್ಥೆ ಮಾಡುತ್ತೀರಾ ? ಸಾರ್ವಜನಿಕರ ಹಿತದೃಷ್ಟಿಯಿಂದ ಈ ಕಾರ್ಯಕ್ರಮದಲ್ಲಿ ಎಫಿಷಿಯನ್ಸಿ ಜಾಸ್ತಿ ಮಾಡುತ್ತೇವೆಂದು ಹೇಳಿದ್ದೀರಿ. ಇವತ್ತು ಗ್ರಾಮಾಂತರ ಪ್ರದೇಶದ ಪ್ರಯಾಣಿಕರಿಗೆ ನರಕವಾಗಿದೆ. ದಯವಿಟ್ಟು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ವಿವರಣೆ ಕೊಡಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಾರಿಗೆ ಮಂತ್ರಿಗಳ ಪರವಾಗಿ):- ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಹನುಮೇಗೌಡರು ಹೇಳತಕ್ಕಂಥದ್ದು ಅನುಭವ ಮತ್ತು ನಿಜವಾದಂಥಹ ಅಂಶ. ಜನಗಳಿಗೆ ತುಂಬಾ ತೊಂದರೆ ಆಗಿದೆ. ಆ ದೃಷ್ಟಿಯಿಂದ ಇದನ್ನು ನಾವು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ. ಇದರಲ್ಲಿ ಪುನಃ ಕೆಲವು ಅಂಶಗಳನ್ನು ಅಧ್ಯಯನ ಮಾಡುವುದಕ್ಕೆ ಇಲಾಖೆಗೆ ಸೇರಿರತಕ್ಕಂಥ ಅಧಿಕಾರಿ ವರ್ಗದವರನ್ನು ಸೇರಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಆದಷ್ಟು ಬೇಗ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ ಅವರು ಹೇಳಿದಂತೆ ಇದು ಬಹಳ ಗಂಭೀರವಾಗಿದೆ ಆದಷ್ಟು ಬೇಗ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ದಿನಕರ್ ಸಮಿತಿ ವರದಿಯ ಅನುಷ್ಠಾನ

190 (348): ಶ್ರೀ ಆರ್. ದಯಾನಂದರಾವ್ (ಗಾಂಧಿನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದ ಸಂಚಾರವನ್ನು ಉತ್ತಮ ಪಡಿಸುವ ಬಗ್ಗೆ ಶ್ರೀ ದಿನಕರ್‌ರವರ ನೇತೃತ್ವದಲ್ಲಿ ರಚಿಸಲಾದ ಸಮಿತಿಯು ವರದಿಯನ್ನು ಕೊಟ್ಟಿದೆಯೆ ?

ಆ. ಹಾಗಿದ್ದಲ್ಲಿ, ಈ ವರದಿಯ ಮೇಲೆ ಸರ್ಕಾರ ಕೈಗೊಳ್ಳಬಹುದಾದ ಕ್ರಮವೇನು ?

ಇ. ಶಿಫಾರಸ್ಸಿನನ್ವಯ ಅನುಷ್ಠಾನಕ್ಕೊಳಪಡಿಸಬಹುದಾದ ಮೊಬಲಗು ?

ಈ. ಬೆಂಗಳೂರು ನಗರದಲ್ಲಿ ಸಂಚಾರ ತೊಂದರೆಗಳನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ವೀರಪ್ಪ ಮೊಯಲಿ (ಮುಖ್ಯಮಂತ್ರಿಗಳು):-

ಅ. ಸಮಿತಿ ಯಾವುದನ್ನೂ ರಚಿಸಿರುವುದಿಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಬೆಂಗಳೂರು ನಗರ ಸಂಚಾರಿ ತೊಂದರೆಗಳನ್ನು ಉತ್ತಮಪಡಿಸಲು ಸರ್ಕಾರ ಹಲವು

ಇಲಾಖೆಗಳನ್ನು ಅಂದರೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಗೃಹ ಇಲಾಖೆ, ಕಾಮಗಾರಿ ಇಲಾಖೆ ಮತ್ತು ಇತರೆ ಒಳಪಡಿಸಿಕೊಂಡು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಮಹಾನಗರ ಪಾಲಿಕೆಗೆ ಫುಟ್‌ಪಾತ್‌ಗಳನ್ನು ಕ್ಯಾರೇಜ್ ವೇ (ವಾಹನಗಳ ರಸ್ತೆ) ಮಾಡುವ ಕಾಲಕ್ಕೆ ಅದರ ಅಗಲ ಸರ್ಕಾರದ ಅನುಮತಿ ಇಲ್ಲದೇ ಕಡಿಮೆ ಮಾಡಬಾರದೆಂದು ತಿಳಿಸಿದೆ.

ಗೃಹ ಇಲಾಖೆಯಲ್ಲಿ ಗೃಹ ಆಯುಕ್ತರನ್ನು ಅಧ್ಯಕ್ಷರನ್ನಾಗಿ ಮಾಡಿರುವ ಸಮಿತಿ ಈಗಾಗಲೇ ಸೆಂಟ್ರಲ್ ಟೆಲಿಗ್ರಾಫ್ ಕಛೇರಿಯಿಂದ ಚಾಲುಕ್ಯ ಹೋಟೆಲ್ ಹತ್ತಿರದಲ್ಲಿರುವ ವೃತ್ತದವರೆಗೆ ಈಗಾಗಲೇ ಪರಿವೀಕ್ಷಣೆ ಮಾಡಿ ಹಲವು ಶಿಫಾರಸ್ಸುಗಳನ್ನು ಮಾಡಿದೆ. ಅವುಗಳ ಪೈಕಿ 1993–94ನೇ ಸಾಲಿನಲ್ಲಿ ಸಾಕಷ್ಟು ಹಣ ಒದಗಿಸುವುದು. ಆ ಹಣವನ್ನು ಹಲವು ಉಪಕರಣಗಳಾದಂಥ ಬ್ರೆತ್ ಅನಲೈಸರ್ಸ್ ಸ್ಪೀಡ್ ರಾಡರ್ ಗನ್ಸ್, ಕಂಪ್ಯೂಟರ್ಸ್ ಮತ್ತು ಇತರೆಗಳನ್ನು ಒದಗಿಸುವುದು ಇದೂ ಇಲ್ಲದೆ ಹಲವು ವಾಹನಗಳನ್ನು, ಮೋಟಾರ್ ಸೈಕಲ್‌ಗಳನ್ನು ಒದಗಿಸುವುದು.

ಶ್ರೀ ಆರ್. ದಯಾನಂದರಾವ್:– ಮಾನ್ಯ ಅಧ್ಯಕ್ಷರೇ ಸರ್ಕಾರದ ಗೃಹ ಇಲಾಖೆ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಮತ್ತೆ ಅದರಲ್ಲಿ ಸದಸ್ಯರು ಯಾರ್ಯಾರು ಇದ್ದಾರೆ. ಯಾವಾಗ ಸಮಿತಿ ರಚಿಸಿದ್ದೀರಿ. ಮತ್ತು ಅದರಲ್ಲಿ ಏನಾದರೂ ಶಾಸಕರ ಅಭಿಪ್ರಾಯವನ್ನು ಪಡೆಯುತ್ತೀರಾ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ ದಿನಕರ್‌ರವರು ಸಮಿತಿಯಲ್ಲಿ ಇರಲಿಲ್ಲ. ದಿನಕರ್‌ರವರು ಸ್ವತಃ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇದು ಸರ್ಕಾರದ ಒಳಾಡಳಿತ ಇಲಾಖೆಯ ಆಯಕ್ತರು ಮತ್ತು ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿ ಅವರು ಇದನ್ನು ತೀವ್ರವಾಗಿ ಪರಿಶೀಲನೆ ಮಾಡಿದ್ದಾರೆ. ಮತ್ತು ಕೆಲವು ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಸರ್ಕಾರ ಮತ್ತು ನಗರಪಾಲಿಕೆ ಎರಡೂ ಸಂಸ್ಥೆಗಳೂ ಸೇರಿ ಈ ಒಂದು ಸಮಸ್ಯೆ ಬಗೆಹರಿಸುವುದಕ್ಕೆ ತೀರ್ಮಾನ ಮಾಡಬೇಕು. ಅದರಿಂದ ಒಳಾಡಳಿತ ಇಲಾಖೆಯವರು ಇದರ ಸಂಬಂಧವಾಗಿ ಸೇರಿ ತೀವ್ರವಾಗಿ ಗಮನವನ್ನು ಕೊಟ್ಟಿದ್ದಾರೆ. ನಾವು ಈಗಾಗಲೇ ಉತ್ತರ ಕೊಟ್ಟಿರುವ ಹಾಗೆ ಅನೇಕ ಸ್ಥಳಗಳನ್ನು ಪರಿಶೀಲನೆ ಮಾಡಿದ್ದಾರೆ. ಈಗಾಗಲೇ ನಗರಪಾಲಿಕೆಯವರು ಫ್ಲೈ ಓವರ್ಸ್ ಕಟ್ಟಲು ನೂರು ಕೋಟಿ ರೂಪಾಯಿಗಳ ಒಂದು ಯೋಜನೆ ಮಾಡಿ ಇಟ್ಟುಕೊಂಡಿದ್ದಾರೆ. ಎರಡೂ ಇಲಾಖೆಗಳು ಸೇರಿ ನಗರದಲ್ಲಿರತಕ್ಕಂಥ ಟ್ರಾಫಿಕ್ ಸಮಸ್ಯೆ ಏನು ಇದೆ ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಆರ್ ದಯಾನಂದರಾವ್:– 1993–94ನೇ ಸಾಲಿಗೆ ಟ್ರಾಫಿಕ್ ಇಂಪ್ಲಿಮೆಂಟ್ ಮಾಡಲು ಎಷ್ಟು ಹಣ ಒದಗಿಸಿದ್ದೀರಿ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎ.ಕೆ. ಅನಂತಕೃಷ್ಣ:– ಈ ಸಮಿತಿಯಲ್ಲಿ ಸಾರ್ವಜನಿಕ ಪ್ರತಿನಿಧಿಗಳು ಯಾರಾದರೂ ಇದ್ದಾರೆಯೇ ?

ದಯವಿಟ್ಟು ಸಾರ್ವಜನಿಕ ಪ್ರತಿನಿಧಿಗಳನ್ನು ಸೇರಿಸಿ ಇಂಥಾ ವಿಷಯಗಳಲ್ಲಿ ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂಥ ಸಲಹೆ

ಬಹಳ ಉತ್ತಮವಾದುದು. ಆದನ್ನು ಪರಿಶೀಲಿಸಿ ನಗರದಲ್ಲಿರತಕ್ಕಂಥ ಎಲ್ಲಾ ಶಾಸನ–ಸಭಾ ಸದಸ್ಯರು, ಲೋಕಸಭಾ ಸದಸ್ಯರು, ಇವರನ್ನೆಲ್ಲಾ ಸೇರಿಸಿ, ತೀರ್ಮಾನ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಕೋಮು ಗಲಭೆಗಳಲ್ಲಿ ಮೃತರಾದವರ ಅವಲಂಬಿತರಿಗೆ ಉದ್ಯೋಗ

191 (768): ಶ್ರೀ ಎ.ಎಂ. ಹಿಂಡಸ್‌ಗೇರಿ (ಹುಬ್ಬಳ್ಳಿನಗರ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ನಡೆದ ಮತೀಯ ಗಲಭೆಗಳಲ್ಲಿ ಮೃತಪಟ್ಟವರ ಅವಲಂಬಿತರಿಗೆ ನೌಕರಿ ಕೊಡುವ ಬಗ್ಗೆ ಸರ್ಕಾರವು ನಿರ್ಧರಿಸಿದೆಯೇ;

ಆ. ಹಾಗಿದ್ದಲ್ಲಿ, ಆದೇಶ ಹೊರಡಿಸಲಾಗಿದೆಯೇ ?

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಹೌದು

ಆ. ಪರಿಶೀಲನೆಯಲ್ಲಿದೆ.

ಶ್ರೀ ಎ. ಎಂ. ಹಿಂಡಸ್‌ಗೇರಿ:– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಡೆದ ಮತೀಯ ಗಲಭೆಗಳಲ್ಲಿ ಮೃತಪಟ್ಟವರ ಅವಲಂಬಿತರಿಗೆ ನೌಕರಿ ಕೊಡುವ ಬಗ್ಗೆ ಸರ್ಕಾರ ನಿರ್ಧರಿಸಿದೆಯೇ ಎಂದು ಪ್ರಶ್ನೆ ಕೇಳಿದ್ದೆ. "ಹೌದು" ಎಂದು ಹೇಳಿದ್ದಾರೆ. ಅದೇ 2ನೇ ಪ್ರಶ್ನೆಗೆ ಈ ಬಗ್ಗೆ ಆದೇಶ ಹೊರಡಿಸಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದರೆ, ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಅದು ಕ್ಲಿಯರ್ ಆಗಲಿಲ್ಲ. ಎರಡನೆಯದು 1990–91ನೇ ಇಸವಿಯಲ್ಲಿ ಗಲಭೆಯಾದಂಥ ಕಾಲದಲ್ಲೂ ಮೃತದ ಸಂಬಂಧಪಟ್ಟವರಿಗೆ ನೌಕರಿಗೆ ಕೊಡುತ್ತೇವೆಂದು ಅಶ್ಯೂರೆನ್ಸ್ ಕೊಟ್ಟಿದ್ದರು. ಇನ್ನೂ ಜಾರಿಗೆ ಕೊಟ್ಟಿಲ್ಲ. ಅದಕ್ಕೋಸ್ಕರ ಒಂದು ನಿಗದಿತ ಸಮಯದಲ್ಲಿ ಜಾರಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೀರಾ ? Whether the direction has already been sent to the concerned D.Cs., and other officers?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ತಾತ್ವಿಕವಾಗಿ ಸರ್ಕಾರದವರು ನೌಕರಿ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. 6–1–93ರ ಸಚಿವ ಸಂಪುಟದ ಸಭೆಯಲ್ಲಿ, ಮತೀಯ ಗಲಭೆಯಲ್ಲಿ ಮೃತ ಹೊಂದಿದವರ ಕುಟುಂಬದಲ್ಲಿ ಸಂಪಾದನೆ ಮಾಡುತ್ತಿರುವ ಸದಸ್ಯರು ಮೃತಪಟ್ಟರೆ ಅವರ ಕುಟುಂಬಕ್ಕೆ ಮತ್ತೆ ಬೇರೆ ಯಾವುದೇ ರೀತಿಯಲ್ಲಿ ಆದಾಯ ಇಲ್ಲದಿದ್ದಲ್ಲಿ ಅವರ ಅವಲಂಬಿತರಲ್ಲಿ ಒಬ್ಬರಿಗೆ ಸರ್ಕಾರಿ ನೌಕರಿ ಕೊಡಬಹುದೆಂದು ನಿರ್ಣಯವನ್ನು ತೆಗೆದುಕೊಳ್ಳಲಾಯಿತು. ಅದರಂತೆ ಒಳಾಡಳಿತ ಇಲಾಖೆಯವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗೆ ಕರಡು ನಿಯಮಗಳನ್ನು ರೂಪಿಸುವಂತೆ ಹೇಳಿದೆ. ಕಾನೂನು ಮತ್ತು ಸಂಸದೀಯ ಇಲಾಖೆಯು ಇದರ ನಿಯಮಗಳನ್ನು ರೂಪಿಸಿ ಒಳಾಡಳಿತ ಇಲಾಖೆಗೆ 18–2–93ರಂದು ಹಿಂದಿರುಗಿಸಿರುತ್ತಾರೆ. ಅದು ಪರಿಶೀಲನೆಯಲ್ಲಿದೆ. ಈ ನಿಯಮಗಳನ್ನು ಜಾರಿ ಮಾಡಿದ ನಂತರ ಮತೀಯ ಗಲಭೆಗಳಲ್ಲಿ ಮೃತ ಪಟ್ಟವರ ಕುಟುಂಬದವರಿಗೆ ಸರ್ಕಾರಿ ನೌಕರಿ ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಂದರೆ ಈ ತಿಂಗಳು 18ನೇ ತಾರೀಖು ಒಳಾಡಳಿತ ಇಲಾಖೆಗೆ ಬಂದಿದೆ. ಅದು ಪರಿಶೀಲನೆಯಲ್ಲಿ ಇದೆ. ಆದಷ್ಟು ಬೇಗ ತೀರ್ಮಾನ ಮಾಡಿ ಸಂಬಂಧಪಟ್ಟ ಕುಟುಂಬದವರಿಗೆ ನೌಕರಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎ. ಎಂ. ಹಿಂಡಸ್‌ಗೇರಿ:- ಈ ಹಿಂದೆ ಆಗಿರುವುದಕ್ಕೂ ಇದೇ ಹೇಳುತ್ತಿದ್ದರು. ಮತ್ತೆ ಮೊನ್ನೆ 2-3 ತಿಂಗಳಲ್ಲಿ ಗಲಭೆಯಾದಂಥ ಕಾಲದಲ್ಲಿ ಸುಮಾರು 78 ಜನ ರಾಯಚೂರಿನಲ್ಲಿ ತೀರಿಕೊಂಡರು. ಇದಕ್ಕೆ ರೂಲ್ಸ್ ರೆಗ್ಯುಲೇಷನ್ ಮಾಡಬೇಕೆಂದು ಹೇಳಿ ಟೈಮ್ ಹಾಳಾಗುತ್ತಿದೆ. ಅದಕ್ಕೆ ನಿಗಧಿಯಾದ ಸಮಯದಲ್ಲಿ ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಮತ್ತೆ ಒಂದು ಲಕ್ಷ ರೂಪಾಯಿ ಕೊಟ್ಟಿರುವ ಬಗ್ಗೆ ನನ್ನ ಪ್ರಶ್ನೆಗೆ ಅವತ್ತು ಉತ್ತರಕೊಟ್ಟಿದ್ದರು. ಮೊನ್ನೆ ನಾನು ನನ್ನ ಕಾನ್‌ಸ್ಟಿಟ್ಯೂಯೆನ್ಸಿಗೆ ಹೋಗಿದ್ದಾಗ ಡಿ.ಸಿ.ಯವರನ್ನು ಕೇಳಿದರೆ, ಇನ್ನೂ ತನಕ ನಮಗೆ ಅದರ ಬಗ್ಗೆ ಆರ್ಡರ್ ಬಂದಿಲ್ಲವೆಂದು ಹೇಳುತ್ತಾರೆ. ಇದರಿಂದ ಬಹಳಷ್ಟು ತೊಂದರೆಯಾಗುತ್ತಿದೆ. ನೌಕರಿ ಕೊಡುವುದರಲ್ಲಿ ಆದಷ್ಟು ತೀವ್ರವಾಗಿ ಒಂದು ನಿಗದಿತ ಸಮಯದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಒಂದು ತಿಂಗಳು ಅಥವಾ 15 ದಿವಸ ಎಂದು ಸಮಯ ಹೇಳಬೇಕು. ಮತ್ತು ಧನ ಸಹಾಯ ಏನು ಬಿಡುಗಡೆ ಮಾಡುತ್ತೀರಿ ಅದನ್ನು ಆದಷ್ಟು ತೀವ್ರವಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಆ ವಿಷಯವನ್ನು ನಾವು ಒಪ್ಪುತ್ತೇವೆ. ಆದರೆ it is based on rule of law.

ಸರ್ಕಾರ ಒಂದು ನೀತಿ ನಿರ್ಧಾರ ಮೊದಲು ಮಾಡುತ್ತದೆ. ಅದು ಆಚರಣೆಗೆ ಬರಬೇಕಾದರೆ ಕಾನೂನುಗಳನ್ನು ಮಾಡಿ, ನಿಯಮಗಳನ್ನು ಮಾಡಿ ಆಚರಣೆಗೆ ತರಬೇಕಾಗುತ್ತದೆ. ಅದು ಸ್ವಲ್ಪ ತಡವಾಗುತ್ತದೆ. ಮಾನ್ಯ ಸದಸ್ಯರು ಇದನ್ನು ತಿಳಿದು ಸಹಕರಿಸಬೇಕು.

ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿ.ಎಲ್. 2 ಪರವಾನಗಿ ನೀಡಿಕೆ.

192 (890): ಶ್ರೀ ಟಿ.ಬಿ. ಜಯಚಂದ್ರ (ಕಳಂಬೆಳ್ಳ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿಎಲ್-2 ಪರವಾನಗಿಗಾಗಿ ಹಣ ಕಟ್ಟಿ ಸರ್ಕಾರದ ಅನುಮತಿಗಾಗಿ ಕಾಯುತ್ತಿರುವ ಪರವಾನಗಿದಾರರ ಸಂಖ್ಯೆ ಎಷ್ಟು:

ಆ. ಪರವಾನಗಿದಾರರು ಹಣ ಸಂದಾಯ ಮಾಡಿದ್ದು, ಇದುವರೆಗೂ ಅನುಮತಿ ನೀಡದೆ ಇರಲು ಕಾರಣವೇನು ? ಹಾಗೂ ಪರವಾನಿಗೆ ನೀಡುವುದು ಯಾವಾಗ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ. 152 ಪರವಾನಗಿ ಅರ್ಜಿದಾರರು.

ಆ. ಸಿಎಲ್-2 ಲೈಸೆನ್ಸ್‌ಗಳ ಹೆಚ್ಚಳಿಕೆ ಬಗ್ಗೆ ಹೆಚ್ಚು ಹೆಚ್ಚು ದೂರಿನ ಮನವಿಗಳ ಬರುವಿಕೆ ಇಂದಾಗಿ, ಸಿಎಲ್-2 ಲೈಸನ್ಸ್ ಮಂಜೂರು ಮಾಡುವುದನ್ನು ಸಧ್ಯಕ್ಕೆ ತಡೆಹಿಡಿಯಲಾಗಿದೆ.

1991ರ ಜನ ಗಣತಿ ಆಧಾರದ ಮೇಲೆ ಸಿಎಲ್-2 ಲೈಸೆನ್ಸ್‌ನ ಕೋಟಾವನ್ನು ಪರಿಷ್ಕರಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಿಶೇಷ ಆದ್ಯತೆ ಮೇರೆಗೆ ಸಿಎಲ್-2 ಪರವಾನಗಿಗಾಗಿ ಹಣಕಟ್ಟಿ ಸರ್ಕಾರದ ಅನುಮತಿಗಾಗಿ ಕಾಯುತ್ತಾ ಇರುವ ಪರವಾನಗಿದಾರರ ಸಂಖ್ಯೆ ಎಷ್ಟು ಎಂದು ಪ್ರಶ್ನೆ ಹೇಳಿದ್ದೇನೆ, ಅದಕ್ಕೆ 152 ಜನರು ಎಂದು ತಿಳಿಸಿದ್ದೀರಿ. ಪರವಾನಗಿದಾರರು ಹಣ ಸಂದಾಯ ಮಾಡಿದ್ದು ಇದುವರೆಗೂ ಅನುಮತಿ ನೀಡದೆ ಇರಲು ಕಾರಣ ಏನು ಅಂದರೆ, ಸಿಎಲ್-2

ಲೈಸನ್ಸ್‌ಗಳ ಹೆಚ್ಚಳಿಕೆ ಬಗ್ಗೆ ಹೆಚ್ಚು ಹೆಚ್ಚು ದೂರಿನ ಮನವಿಗಳ ಬರುವಿಕೆಯಿಂದಾಗಿ, ಸಿಎಲ್ – 2 ಲೈಸನ್ಸ್ ಮಂಜೂರು ಮಾಡುವುದನ್ನು ಸಧ್ಯಕ್ಕೆ ತಡೆಹಿಡಿಯಲಾಗಿದೆ, 1991ರ ಜನಗಣತಿ ಆಧಾರದ ಮೇಲೆ ಸಿಎಲ್ – 2ಲೈಸನ್ಸ್ ಕೋಟಾವನ್ನು ಪರಿಷ್ಕರಿಸಲಾಗುವುದು ಎಂದು ತಿಳಿಸಿದ್ದಾರೆ. ನೀವು ವಿಶೇಷ ಆದ್ಯತೆಯ ಮೇರೆಗೆ ಎಂದು ಕೊಟ್ಟಾಗ ಹೀಗೆ ಕೊಟ್ಟಿದ್ದು ಏಕೆ ಮತ್ತು ಕೊಟ್ಟಿದ್ದನ್ನು ತಡೆಹಿಡಿದದ್ದು ಏಕೆ ? 152ರಲ್ಲಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಬರುತ್ತದೆ ಎಂದು ತಿಳಿಸುತ್ತೀರಾ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ತುಮಕೂರು ಜಿಲ್ಲೆಯಲ್ಲಿ ಎಷ್ಟು ಎಂದು ಕೇಳಿದ್ದಾರೆ ಆದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಈ ಲೈಸನ್ಸ್‌ನ್ನು ಕೊಡಬೇಕಾದರೆ ಕೆಲವು ನಿಯಮಗಳು ಇವೆ. ಪಟ್ಟಣಗಳಲ್ಲಿ ಏಳೂವರೆ ಸಾವಿರ ಜನಸಂಖ್ಯೆಗೆ ಒಂದು ಲೈಸನ್ಸ್ ಕೊಡಬೇಕೆಂದು ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ 15 ಸಾವಿರ ಜನಸಂಖ್ಯೆಗೆ ಒಂದು ಕೊಡಬೇಕೆಂದು ಇದೆ. ಈಗಾಗಲೇ ಕೊಟ್ಟಿದ್ದರಲ್ಲಿ ಈ ಒಂದು ಪ್ರಮಾಣಕ್ಕೆ ಮೀರಿ, ಕೊಟ್ಟಿರುವುದರಿಂದ ಸರ್ಕಾರ ಆದನ್ನು ತಡೆಹಿಡಿದಿದೆ. ಸರ್ಕಾರದ ಈಗೀನ ಧೋರಣೆಯ ಪ್ರಕಾರ ಹೆಚ್ಚು ಲೈಸನ್ಸ್‌ಗಳನ್ನು ಕೊಡಬಾರದು ಎಂದು ಇದೆ. ಹಾಗಾಗಿ ಮುಂದಿನ ಲೈಸನ್ಸ್ ಕೊಡುವುದನ್ನು ನಿಲ್ಲಿಸಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ:– ಮಾನ್ಯ ಸಭಾಧ್ಯಕ್ಷರೇ, ನನ್ನ ಪ್ರಶ್ನೆಯನ್ನು ಸನ್ಮಾನ್ಯ ಸಚಿವರು ಅರ್ಥಮಾಡಿಕೊಂಡಿಲ್ಲ. ನೀವು ಲೈಸೆನ್ಸ್ ಕೊಡುವುದಕ್ಕಿಂತ ಮುಂಚೆ ಇರುವ ಎಲ್ಲಾ ನಿಯಮಗಳನ್ನು ಪರಿಶೀಲಿಸಿ ಕೊಡಬೇಕಾಗುತ್ತದೆ. ಹೀಗೆ ಕೊಟ್ಟಾದ ಮೇಲೆ ತಡೆಹಿಡಿಯತಕ್ಕಂಥಾದ್ದು ಏನಿದೆ ? ನೀವು ಪರವಾನಿಗೆಗಳನ್ನು ಹೆಚ್ಚು ಕೊಡಿ ಎಂಬ ಬಗ್ಗೆ ನಾನು ಒತ್ತಾಯ ಮಾಡುವುದಿಲ್ಲ. ನಾನು ಈಗ ಕೇಳುತ್ತಿರುವ ಪ್ರಶ್ನೆಯನ್ನು ಮಾನ್ಯ ಸಚಿವರು ಅರ್ಥಮಾಡಿಕೊಳ್ಳಬೇಕು. ಕುಡಿಯುವವರ ಕಷ್ಟ ತಮಗೆ ಗೊತ್ತಿಲ್ಲ ಎಂದು ಕಾಣುತ್ತದೆ. 1991ರ ಜನಗಣತಿಯ ಆಧಾರದ ಮೇಲೆ ಕೋಟಾವನ್ನು ಫಿಕ್ಸ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಆ ಪ್ರಕಾರ ಕೋಟ ಫಿಕ್ಸ್ ಮಾಡುವಾಗ ಅವರಿಗೆ ಆದ್ಯತೆಯ ಮೇಲೆ ಕೊಡುತ್ತೀರಾ ? ಇವೊತ್ತು ಒಂದು ಲೈಸನ್ಸ್ ಪಡೆಯಲು ಪರವಾನಿಗೆದಾರರಿಗೆ ಎರಡು ಲಕ್ಷ ರೂಪಾಯಿಗಳ ಖರ್ಚು ಆಗುತ್ತದೆ. ಬೇರೆ ಜಿಲ್ಲೆಯ ವಿಚಾರ ನನಗೆ ಗೊತ್ತಿಲ್ಲ, ಆದರೆ ತುಮಕೂರು ಜಿಲ್ಲೆಯಲ್ಲಿ ಒಬ್ಬರು ಎಕ್ಸೈಸ್ ಸೂಪರಿಂಟೆಂಡೆಂಟ್ ಇದ್ದಾರೆ, ಅವರಿಗೆ ಬರೀ 50ಸಾವಿರ ರೂಪಾಯಿಗಳ ಲಂಚವನ್ನೇ ಕೊಡಬೇಕಾಗುತ್ತದೆ. ಹೀಗಿರುವಾಗ ಬೇರೆ ಖರ್ಚುವೆಚ್ಚಗಳು ಒಂದೂವರೆ ಲಕ್ಷ ರೂಪಾಯಿಗಳು ಬರುತ್ತವೆ. ಈಗ ನೀವು ಲೈಸೆನ್ಸ್ ಕೊಡದಿದ್ದರೆ ಅವರು ಕೊಟ್ಟ ಹಣವೂ ಹೋಯಿತು ಕೊಟ್ಟ ಹಣ ವಾಪಸ್ ಬರುವ ಹಾಗಿಲ್ಲ, ನೀವು ಲೈಸೆನ್ಸ್ ಕೊಡುವ ಹಾಗಿಲ್ಲ, ಜನರಿಗೆ ತೊಂದರೆಯಾಗುತ್ತದೆ. ಸರ್ಕಾರದ ದ್ವಂದ್ವ ನೀತಿಗಳು ಏನೇ ಇರಲಿ, ಅದರಿಂದ ಜನರಿಗೆ ತೊಂದರೆಯಾಗಬಾರದು. 1991ರ ಜನಸಂಖ್ಯೆಯ ಆಧಾರದ ಮೇಲೆ ಕೋಟಾ ಫಿಕ್ಸ್ ಮಾಡುವಾಗ ಆದ್ಯತೆಯ ಮೇಲೆ ಕೊಡುತ್ತೀರ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಪರವಾನಿಗೆಯನ್ನು ಕೊಟ್ಟು ನಾವು ಯಾರಿಂದಲೂ ವಾಪಸ್ ತೆಗೆದುಕೊಂಡಿಲ್ಲ. ಪರವಾನಿಗೆಗಾಗಿ ಅರ್ಜಿ ಯಾರು ಕೊಟ್ಟಿದ್ದಾರೆ ಅವರಿಗೆ ಕೊಟ್ಟಿಲ್ಲ ಅಷ್ಟೆ. ತಡೆಹಿಡಿಯಲಾಗಿದೆ ಅಂದರೆ ಮುಂದೆ ಪರವಾನಿಗೆಯನ್ನು ಕೊಡುವುದಿಲ್ಲ ಎಂದು ಅರ್ಥ. ಪರವಾನಗಿ ಕೊಡಬೇಕೆಂದು ಸರ್ಕಾರ ತೀರ್ಮಾನ ಮಾಡಿದರೆ, ಆಗ ತಮ್ಮ ಕೋರಿಕೆಯ ಪ್ರಕಾರ ಆದ್ಯತೆಯ ಮೇಲೆ ಕೊಡುತ್ತೇವೆ.

ಗೃಹ ಇಲಾಖೆಯ ಶೀಘ್ರಲಿಪಿಗಾರರಿಗೆ ಬಡ್ತಿ

194 (692): ಶ್ರೀಮತಿ ಸುಮಾ ವಸಂತ (ವೀರಾಜಪೇಟೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಂಯವಿಟ್ಟು ಉತ್ತರಿಸುವರೇ ?

ಅ. ಗೃಹ ಇಲಾಖೆಯಲ್ಲಿರುವ ಶೀಘ್ರಲಿಪಿಗಾರರೆಷ್ಟು ?

ಆ. ಎಷ್ಟು ಜನ ಶೀಘ್ರಲಿಪಿಗಾರರು, ಶಾಖಾಧೀಕ್ಷಕರಾಗಿ ಬಡ್ತಿ ಹೊಂದಲು ಅರ್ಹರಾಗಿರುತ್ತಾರೆ ?

ಇ. ಶಾಖಾಧೀಕ್ಷಕರ ಎಷ್ಟು ಹುದ್ದೆಗಳು ಖಾಲಿ ಇವೆ ?

ಈ. ಶಾಖಾಧೀಕ್ಷಕರ ಹುದ್ದೆಯನ್ನು ಯಾವ ನಿಯಮದ ಪ್ರಕಾರ ಭರ್ತಿ ಮಾಡಲಾಗುವುದು ಮತ್ತು ಯಾವಾಗ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ. ಒಟ್ಟು 148 ಮಂದಿ ಶೀಘ್ರಲಿಪಿಗಾರರಿರುತ್ತಾರೆ.

ಆ. ಯಾರೂ ಇರುವುದಿಲ್ಲ.

ಇ. ಒಟ್ಟು 6 ಹುದ್ದೆಗಳು ಖಾಲಿ ಇವೆ.

ಈ. ಗೃಹ ರಕ್ಷಕ ದಳ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಯ ಅನ್ವಯ ಅಧೀಕ್ಷಕ ಹುದ್ದೆಯನ್ನು ಪ್ರಥಮ ದರ್ಜೆ ಸಹಾಯಕ ಹಾಗೂ ಶೀಘ್ರಲಿಪಿಗಾರರ ವೃಂದದಿಂದ ಬಡ್ತಿಯ ಮೂಲಕ ಭರ್ತಿ ಮಾಡಲಾಗುತ್ತಿದೆ. ಉಳಿದಂತೆ ಪೋಲೀಸ್, ಕಾರಾಗೃಹ ಮತ್ತು ಅಗ್ನಿಶಾಮಕ ದಳ ಇಲಾಖೆಗಳಲ್ಲಿ ಈ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಪ್ರಥಮ ದರ್ಜೆ ಸಹಾಯಕರಿಗೆ ಬಡ್ತಿ ಕೊಡುವ ಮೂಲಕ ಶಾಖಾಧೀಕ್ಷಕರ ಹುದ್ದೆಯನ್ನು ತುಂಬಲಾಗುತ್ತಿದೆ. ಪೋಲೀಸ್, ಅಗ್ನಿಶಾಮಕ ದಳ ಮತ್ತು ಕಾರಾಗೃಹ ಇಲಾಖೆಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಶಾಖಾಧೀಕ್ಷಕರ ಹುದ್ದೆಗಳನ್ನು ಶೀಘ್ರಲಿಪಿಗಾರರ ವೃಂದದಿಂದಲೂ ಮುಂಬಡ್ತಿ ಮುಖಾಂತರ ತುಂಬಲು ಅವಕಾಶ ಕಲ್ಪಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಸುಮಾ ವಸಂತ್:- ಮಾನ್ಯ ಅಧ್ಯಕ್ಷರೇ, ಈ ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕರ ಹಾಗೂ ಶೀಘ್ರಲಿಪಿಗಾರರ ವೃಂದದಿಂದ ಭರ್ತಿ ಮೂಲಕ ಭರ್ತಿ ಮಾಡಲಾಗುವುಗು ಎಂದು ಹೇಳಿದ್ದಾರೆ. ಹಾಗಾದರೆ ಹಿಂದೆ ಇದ್ದ ಪ್ರಮಾಣ ಮತ್ತು ಈಗ ಇರುವ ಪ್ರಮಾಣವನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಅಧ್ಯಕ್ಷರೇ, ಹೊಸದಾಗಿ ಹುದ್ದೆಗಳನ್ನು ಭರ್ತಿ ಮಾಡಬೇಕಾದರೆ ಸಧ್ಯಕ್ಕೆ ಹೊಸ ನೇಮಕಾತಿಗಳನ್ನು ಮಾಡುವುದಕ್ಕೆ ತಡೆಯಾಜ್ಞೆ ಇದೆ. ಈ ತಡೆಯನ್ನು ತೆರವು ಮಾಡುವವರೆಗೆ ನೇಮಕಾತಿಗಳು ಆಗುವುದಿಲ್ಲ.

ಶ್ರೀಮತಿ ಸುಮಾ ವಸಂತ್:- ಪ್ರಥಮ ದರ್ಜೆ ಸಹಾಯಕರ ಬಗ್ಗೆ ಸರಕಾರದವರು ಒಂದು ಆಶ್ವಾಸನೆ ಕೊಟ್ಟಿದ್ದರು. ಅದನ್ನು ಈಡೇರಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೇ, ಬೈ ಪ್ರೊಮೋಷನ್ ಮುಖಾಂತರ ಮುಂಬಡ್ತಿ ಕೊಡುವಂತಹ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಸಾರಿಗೆ ಮಂತ್ರಿಗಳು ಸದನಕ್ಕೆ ಬಂದಿಲ್ಲ. ಮುಖ್ಯಮಂತ್ರಿಗಳಿಗೆ ಆರೋಗ್ಯ ಚೆನ್ನಾಗಿಲ್ಲ, ಅದುದರಿಂದ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಇದೇನು ಸರ್ವರೋಗಕ್ಕೆ ಸಂಜೀವಿನಿ ಮದ್ದು ಅನ್ನುವ ರೀತಿ ಎಲ್ಲಾ ಇಲಾಖೆಗಳಿಗೂ

ಇವರೆ ಉತ್ತರ ಕೊಡುತ್ತಿದ್ದಾರೆ. ಪ್ರಶ್ನೋತ್ತರ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇರಬೇಕು ಎಂದು ಹೇಳಿ. ಆ ರೀತಿ ಏನಾದರೂ ಸಾರಿಗೆ ಮಂತ್ರಿಗಳು ಹೇಳಿದ್ದರೆ ನಮಗೆ ತಿಳಿಸಬೇಕು.

ಸಭಾಧ್ಯಕ್ಷರು:– ನಮಗೆ ತಿಳಿಸಿದ್ದಾರೆ, ಅವರು ದೆಹಲಿಗೆ ಹೋಗಿದ್ದಾರೆ.

ರಾಜ್ಯದಲ್ಲಿರುವ ನಿರುದ್ಯೋಗಿಗಳಿಗೆ ಆಟೋರಿಕ್ಷಾ ರಹದಾರಿ

195 (943): ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಜನವರಿ 1992ರಿಂದ ಡಿಸೆಂಬರ್ 1992ರ ಅಂತ್ಯದವರೆಗೆ ಎಷ್ಟು ವ್ಯಕ್ತಿಗಳಿಗೆ ಆಟೋರಿಕ್ಷಾ ರಹದಾರಿ ನೀಡಲಾಗಿದೆ (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು) ?

ಆ. ಅವರಲ್ಲಿ ಪರಿಶಿಷ್ಠ ಜಾತಿ; ಪರಿಶಿಷ್ಟ ಪಂಗಡದವರು ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು) ?

ಇ. ಸರ್ಕಾರವು ಆಟೋಗಳಿಗೆ ರಹದಾರಿಗಳನ್ನು ಕೊಡುವುದನ್ನು ನಿಲ್ಲಿಸಿದೆಯೇ ?

ಈ. ಹಾಗಾದರೆ ಯಾವಾಗ ನಿಲ್ಲಿಸಿದೆ ಮತ್ತು ಕಾರಣಗಳೇನು ?

ಉ. ಈ ರಹದಾರಿಗಳನ್ನು ನೀಡಲು ಮಾರ್ಗ ಸೂಚಿ ಏನಾದರೂ ನೀಡಿದೆಯೇ ?

ಊ. ನಿರುದ್ಯೋಗಿ ಪರಿಶಿಷ್ಟ ಜಾತಿ; ಪರಿಶೀಷ್ಟ ಪಂಗಡದವರಿಗೆ ರಹದಾರಿ ನೀಡುವುದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. 10,144 ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ–Iರಲ್ಲಿ ಕೊಡಲಾಗಿದೆ.

ಆ. 469 ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧ–Iರಲ್ಲಿ ಕೊಡಲಾಗಿದೆ.

ಇ. – ಇಲ್ಲಾ –

ಈ. ಪ್ರಶ್ನೆ ಉದ್ಭವಿಸುವುದಿಲ್ಲ.

ಉ. – ಇಲ್ಲಾ –

ಊ. ರಾಜ್ಯದಲ್ಲಿ ಆಟೋರಿಕ್ಷಾ ರಹದಾರಿಗಳನ್ನು ಮಂಜೂರು ಮಾಡುವಲ್ಲಿ ಯಾವುದೇ ತಾರತಮ್ಯ ಇರುವುದಿಲ್ಲ. ಆದರೂ ಸಹ ಪರಿಶಿಷ್ಟ ಜಾತಿ; ಪರಿಶಿಷ್ಟ ಪಂಗಡದ ಅರ್ಜಿದಾರರಿಗೆ ಆದ್ಯತೆ ನೀಡಲಾಗುವುದು.

ANNEXURE – I

AUTORICKSHAW PERMITS ISSUED FROM 1.1.92 TO 31.12.1992 (DISTRICT WISE)

Sl. No.	Name of the District	Permits issued 1.1.92 to 31.12.92	Issued to Scheduled castes/Scheduled tribes
1.	Bangalore	2,172	32
2.	Kolar	416	27
3.	Tumkur	427	54
4.	Mysore	1,613	70
5.	Mandya	72	12
6.	Kodagu	180	–
7.	Hassan	281	05
8.	Mangalore	1,627	81
9.	Shimoga	75	05
10.	Chitradurga	835	32
11.	Chickmagalur	198	–
12.	Belgaum	266	37
13.	Bijapur	173	–
14.	Dharwad	1,074	20
15.	Karwar	266	04
16.	Gulbarga	167	75
17.	Raichur	66	–
18.	Bidar	20	05
19.	Bellary	216	10
	Total	10,144	469

ಶ್ರೀ ಎಂ. ನಾರಾಯಣಸ್ವಾಮಿ:– ಮಾನ್ಯ ಅಧ್ಯಕ್ಷರೇ, ಆಟೋರಿಕ್ಷಾಗಳಿಗೆ ರಹದಾರಿಗಳನ್ನು ಕೊಡುತ್ತೇವೆ. ಅದನ್ನು ನಿರುದ್ಯೋಗಿಗಳಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದೀರಾ ಎಂದು ಕೇಳಿದ್ದೇವೆ. ಜೊತೆಗೆ ಲೈಸನ್ಸ್ ಕೊಡುವಂತಹ ಆಫೀಸ್‌ನಲ್ಲಿ ಹೋಗಿ ಅಧಿಕಾರಿಗಳನ್ನು ಕೇಳಿದರೆ ಅವರು ಅದನ್ನು ಸ್ಟಾಪ್ ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಉತ್ತರದಲ್ಲಿ ಹೇಳಿದ್ದೀರಿ ನಾವು ಯಾವುದು ನಿಲ್ಲಿಸಿಲ್ಲ ಕೊಡುತ್ತಿದ್ದೇವೆಂದು. ಅದರಲ್ಲೂ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಆಗುವುದಿಲ್ಲ. ಕನಿಷ್ಠ ಆಟೋ ಲೈಸನ್ಸ್ ಕೊಡುವುದಕ್ಕೆ ಏನು ತೊಂದರೆ, ಮತ್ತು ಎಸ್.ಸಿ. ಎಸ್.ಟಿ.ಯಲ್ಲಿ ಅನೇಕ ಜನ ನಿರುದ್ಯೋಗಿಗಳು ಇದ್ದಾರೆ. ಅವರಿಗೂ

ಆದ್ಯತೆಯ ಮೇಲೆ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಇದರ ಬಗ್ಗೆ ಪರಿಶೀಲನೆ ಮಾಡಿ ಏನಾದರೂ ವ್ಯವಸ್ಥೆ ಮಾಡುವ ಉದ್ದೇಶ ಇದೆಯೇ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಾರಿಗೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೇ, ನಿಮ್ಮ ವರ್ಗಕ್ಕೆ ಆದ್ಯತೆ ಕೊಡಬೇಕು, ಪರವಾನಗಿ ಕೊಡಬೇಕು ಎನ್ನುವುದು ಸರ್ಕಾರದ ಇರಾದೆ ಸೂಕ್ತ ಡ್ರೈವಿಂಗ್ ಲೈಸನ್ಸ್ ಇತ್ಯಾದಿ ಇಟ್ಟುಕೊಂಡು ಬಂದ ಎಸ್.ಸಿ.ಎಸ್.ಟಿ.ಯವರಿಗೆ ಆದ್ಯತೆಯ ಮೇಲೆ ಸರ್ಕಾರದವರು ಪರವಾನಗಿ ಕೊಡುತ್ತಾರೆ.

ಶ್ರೀ ಎಂ. ನಾರಾಯಣ ಸ್ವಾಮಿ:– ಮಾನ್ಯ ಅಧ್ಯಕ್ಷರೇ, ಎಸ್.ಸಿ.ಎಸ್.ಟಿ.ಗೆ ಕೊಡುತ್ತೇವೆಂದು ಹೇಳಿದರು. ಶೇಕಡಾವಾರು ಪ್ರಕಾರ ಎಸ್.ಸಿ.ಗೆ ಎಷ್ಟು ಎಸ್.ಟಿ.ಗೆ ಎಷ್ಟು ? ಇರತಕ್ಕ ತಾರತಮ್ಯವನ್ನು ನಿವಾರಿಸುತ್ತೀರಾ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಮೋಟಾರ್ ವೆಹಿಕಲ್ ಆಕ್ಟ್ ಪ್ರಕಾರ ಇದರಲ್ಲಿ ಈ ರೀತಿ ರಿಜರ್ವೇಷನ್ ಮಾಡುವುದಕ್ಕೆ ಅವಕಾಶವಿಲ್ಲ. ಲೈಸನ್ಸ್ ಕೊಡುವುದು ಡಿಸ್ಟ್ರಿಕ್ಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರು. ಅವರು ಸ್ಥಳದ ಅವಶ್ಯಕತೆಯ ಆಧಾರದ ಮೇಲೆ ನೋಡಿ ಕೊಡುತ್ತಾರೆ.

ಶ್ರೀ ಎಂ. ನಾರಾಯಣ ಸ್ವಾಮಿ:– ಮಾನ್ಯ ಅಧ್ಯಕ್ಷರೇ, ನಿರುದ್ಯೋಗಿಗಳಿಗೆ ಆಟೋಗಳನ್ನು ಸಪ್ಲೈ ಮಾಡುತ್ತೇವೆ, ಡ್ರೈವಿಂಗ್ ಲೈಸನ್ಸ್ ಕೊಡುತ್ತೇವೆ. ರಹದಾರಿ ವ್ಯವಸ್ಥೆಯನ್ನು ಕೊಡುತ್ತೇವೆ ಎಂದು ಹೋದ ಅಸೆಂಬ್ಲಿಯಲ್ಲೂ ಕೂಡ ಹೇಳಿಕೆಯನ್ನು ಕೊಟ್ಟಿದೆ. ಆದರೆ ಇದುವರೆಗೂ ಒಂದೂ ಕೂಡ ಮಾಡಲಿಲ್ಲ. ಇದರ ಬಗ್ಗೆ ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ ? ಅದನ್ನು ಯಾವಾಗ ಜಾರಿಗೆ ಕೊಡುವ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಡ್ರೈವಿಂಗ್ ಲೈಸನ್ಸ್ ಕೊಡುವುದು ಸರ್ಕಾರದ ಕೆಲಸ ಅಲ್ಲ. ಡ್ರೈವಿಂಗ್ ಬರುತ್ತದೆ ಎಂದು ರೋಡ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯಿಂದ ಜಿಲ್ಲಾಮಟ್ಟದಲ್ಲಿ ತೋರಿಸಿ ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್‌ನಿಂದ ಆ ಲೈಸನ್ಸ್ ತೆಗೆದುಕೊಳ್ಳಬೇಕು. ಅದಾದನಂತರ ಜಿಲ್ಲಾ ಟ್ರಾನ್ಸ್‌ಪೋರ್ಟ್‌ಗೆ ಅರ್ಜಿ ಕೊಡಬೇಕು. ಕಾನೂನಿನ ಪ್ರಕಾರ ಅರ್ಜಿಗಳನ್ನು ಕೊಡಬೇಕಾಗುತ್ತದೆ. ಅದನ್ನು ನಿರುದ್ಯೋಗಿಗಳಿಗೆ ಕೊಡಬೇಕು ಎಂಬ ಉದ್ದೇಶದಿಂದಲೇ ಸಹಸ್ರಾರು ಜನರಿಗೆ ಪರವಾನಗಿಯನ್ನು ಕೊಟ್ಟಿದೆ. ಇದರ ಪರಿಣಾಮವಾಗಿ ಹಾಸನ ಜಿಲ್ಲೆಯಲ್ಲೂ 500 ಆಟೋರಿಕ್ಷಾಗಳಿವೆ. ಇದರಿಂದ ಪೈಪೋಟಿ ಬಂದು ಅನೇಕರಿಗೆ ಆದಾಯ ಕಡಿಮೆ ಬರುತ್ತದೆ. ಇದರಿಂದ ತಮ್ಮ ಜೀವನ ಮಾಡಿಕೊಂಡು ಮಕ್ಕಳು ಮರಿಗಳನ್ನು ನೋಡಿಕೊಳ್ಳುವವರ ತಲೆಯ ಮೇಲೆ ಕಲ್ಲು ಬೀಳದಂತೆ ನೋಡಿಕೊಂಡು, ಹೊಸದಾಗಿ ಪರವಾನಗಿಗಳನ್ನು ವ್ಯವಸ್ಥಿತವಾಗಿ ಕೊಡಬೇಕಾಗುತ್ತದೆ. ಇದು ಒಂದು ವಿಷಚಕ್ರದಂತೆ ಆದ್ದರಿಂದ ಯಾರಿಗೂ ಅನ್ಯಾಯವಾಗದಂತೆ ಎಲ್ಲರಿಗೂ ಅನುಕೂಲವಾಗುವಂತೆ ನೋಡಿ ಮಾಡಬೇಕಾಗುತ್ತದೆ.

ಅಗತ್ಯ ವಸ್ತುಗಳ ಪೂರೈಕೆಯಲ್ಲಿ ಕೊರತೆ

196 (1159): ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನ್ಯಾಯ ಬೆಲೆ ಅಂಗಡಿಗಳಿಗೆ ಆಹಾರ ಧಾನ್ಯಗಳ ಅಡಿಗೆ ತೈಲ ಮತ್ತು ಸೀಮೆ ಎಣ್ಣೆಗಳ ಪೂರೈಕೆ

ಕೊರತೆಯುಂಟಾಗಿರುವುದು ಹಾಗೂ ಬಡ ಜನತೆಗೆ ಸಾಕಷ್ಟು ತೊಂದರೆಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ. ಭಾರತ ಸರ್ಕಾರದಿಂದ ಕಡಿಮೆ ಪೂರೈಕೆಯಿಲ್ಲದೆ ಅಪ್ರಾಮಾಣಿಕ ವ್ಯಾಪಾರಿಗಳು ಪೂರೈಕೆಯಲ್ಲಿ ಕೊರತೆಯುಂಟು ಮಾಡುತ್ತಿರುವ ನಿಂದನೆಗೆ ಗುರಿಯಾಗಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ. ಸಾರ್ವಜನಿಕರ ಕಷ್ಟಗಳನ್ನು ನಿವಾರಿಸಲು ಸರ್ಕಾರವು ಕೈಗೊಂಡ ಯೋಜನೆಯೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ಇಲ್ಲ.

ಆ. ಕೆಲವು ನ್ಯಾಯ ಬೆಲೆ ಅಂಗಡಿಗಳು ದುರ್ವ್ಯವಹಾರ ನಡೆಸಿದ ಪ್ರಕರಣಗಳಿವೆ. ಇಂತಹ ಲೋಪವೆಸಗಿದ ವರ್ತಕರು, ಕಳ್ಳಸಂತೆಕೋರರು ಮತ್ತು ಅಕ್ರಮ ವ್ಯವಹಾರದಲ್ಲಿ ತೊಡಗಿದವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. 1992ರಲ್ಲಿ 217 ವ್ರತಕರ ಪರವಾನಗಿಗಳನ್ನು ರದ್ದು ಮಾಡಲಾಗಿದೆ ಮತ್ತೆ 211 ವರ್ತಕರ ಪರವಾನಗಿಗಳನ್ನು ಅಮಾನತ್ತಿನಲ್ಲಿಡಲಾಗಿದೆ.

ಇ. ರಾಜ್ಯಕ್ಕೆ ಆಹಾರ ಧಾನ್ಯಗಳು, ಸಕ್ಕರೆ ಮತ್ತು ಸೀಮೆ ಎಣ್ಣೆಗಳ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ತನಿಖೆಗಳನ್ನು ತೀವ್ರಗೊಳಿಸಲಾಗಿದೆ, ನ್ಯಾಯಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯಗಳ ಸಾರ್ವಜನಿಕ ವಿತರಣೆಯನ್ನು ಪರಿವೀಕ್ಷಿಸಲು ಜಾಗೃತ ಸಮಿತಿಗಳನ್ನು ರಚಿಸಲಾಗಿದೆ.

ಶ್ರೀ ಎ. ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. (ಇ) ಪ್ರಶ್ನೆಗೆ ರಾಜ್ಯಕ್ಕೆ ಆಹಾರಧಾನ್ಯಗಳು, ಸಕ್ಕರೆ ಮತ್ತು ಸೀಮೆ ಎಣ್ಣೆಗಳ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಹೇಳಿದ್ದಾರೆ. ಕಡಿಮೆ ಇಲ್ಲ ಅಂದ ಮೇಲೆ ಕೇಂದ್ರ ಸರ್ಕಾರದಲ್ಲಿ ಜಾಸ್ತಿ ಏತಕ್ಕೆ ಕೇಳಬೇಕು ?

ಶ್ರೀಮತಿ ಮನೋರಮಾ ಮಧ್ವರಾಜ್:– ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಶ್ರೀ ಪಿ. ಜಿ. ಆರ್. ಸಿಂಧ್ಯರವರು ಈ ಪ್ರಶ್ನೆಯನ್ನು ಹಾಕಿದರು. ತಾವು ಪೂರೈಕೆಯ ಕೊರತೆ ಎಂದು ಹಾಕಿದ್ದೀರಿ. ಪೂರೈಕೆ ಅಂದರೆ ಬರುವ ಸಾಮಾಗ್ರಿಗಳು ಸರಿಯಾದ ಸಮಯಕ್ಕೆ ಬರಲಿಲ್ಲ ಎಂದು ಕೇಳಿದ್ದರೋ ಪೂರೈಕೆ ಎಂದು ಕೇಳಿದ್ದರೋ ಇದು ಸರಿಯಾಗಿ ನಮಗೆ ಅರ್ಥವಾಗಿಲ್ಲ.

ಶ್ರೀ ಎ. ಕೆ. ಅನಂತಕೃಷ್ಣ:– ಅಧ್ಯಕ್ಷರೇ, ಇಂಗ್ಲೀಷಿನಲ್ಲಿ ಇದೆ ಅಂಗಡಿಗಳಲ್ಲಿ ಇಲ್ಲ ಎಂದು ಕನ್ನಡದಲ್ಲಿ ತರ್ಜುಮೆ ಮಾಡುವಾಗ ಅಂಗಡಿಗೆ ಎಂದು ಬಂದಿದೆ. ಅಂಗಡಿ ಒಳಗೆ ಇರುವುದಕ್ಕೂ ಅಂಗಡಿಗೆ ಕೊಡುವುದಕ್ಕೂ ಬಹಳ ವ್ಯತ್ಯಾಸವಾಗುತ್ತದೆ. ನಾನು ಅದನ್ನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ನನಗೆ ತಿಳಿದು ಬಂದ ಹಾಗೆ ಬಹಳ ಕಡಿಮೆ ಅಂಗಡಿಗಳಲ್ಲಿ ಇದೆ. ಜನಕ್ಕೆ ತೊಂದರೆಯಾಗುತ್ತಿದೆ. ಇದನ್ನು ಜನ ಹೇಳುತ್ತಾರೆ, ಅಂಗಡಿಯವರು ಹೇಳುತ್ತಾರೆ. ಆ ವಿಷಯ ನಾನು ಹೇಳಿದೆ ಮೊದಲನೆ ಪ್ರಶ್ನೆಗೆ 'ಇಲ್ಲ' ಎಂದು ಹೇಳಿ ಆರ್‌ಬಿಟ್‌ರರಿಯಾಗಿ ಒಂದು ಆನ್ಸರ್ ಕೊಟ್ಟರು. 3ನೇ (ಈ)ನಲ್ಲಿ, ರಾಜ್ಯಕ್ಕೆ ಆಹಾರ ಧಾನ್ಯಗಳು ಸಕ್ಕರೆ, ಮತ್ತು ಸೀಮೆಎಣ್ಣೆ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ ಎಂದು ಹೇಳಿದ್ದಾರೆ. ಇದು ಮೂಲಭೂತವಾದ ಪ್ರಶ್ನೆ. ನಿಮಗೆ ಕೊರತೆ ಇಲ್ಲ ಅಂದ ಮೇಲೆ ಕೇಂದ್ರ ಸರ್ಕಾರವನ್ನು ಕೇಳುವ ಪ್ರಶ್ನೆ ಎಲ್ಲಿಂದ ಬಂತು ? ದಯಮಾಡಿ ಮಾನ್ಯ ಮಂತ್ರಿಗಳು ಕೊರತೆ ಇದೆ ಎನ್ನುವುದನ್ನು ಹೇಳಬೇಕಾಗಿದ್ದರೆ ಮನಸಾರೆ ಅರ್ಥ ಮಾಡಿಕೊಳ್ಳಬೇಕು. ಅದು ಅಲ್ಲಿಂದ ಎಲ್ಲೆಲ್ಲಿಗೆ ವಿಲೇವಾರಿ ಆಗುತ್ತದೆ ಏನೇನು ಆಗುತ್ತದೆ ಮಾನ್ಯ

ಮಂತ್ರಿಗಳಿಗೆ ಗೊತ್ತಿದೆ. ಈ ನಡುವೆ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡುತ್ತಿದ್ದೀರಿ. ಸರ್‌ಪ್ರೈಸ್ ಇನ್ಸ್‌ಪೆಕ್ಷನ್ ಮಾಡುತ್ತಿದ್ದೀರಿ, ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ನಮ್ಮ ಅಭಿನಂದನೆಗಳು ಅವರಿಗೆ ಇದೆ. ಆದರೆ ಅಧಿಕಾರಿಗಳು ಕೊಟ್ಟಂಥ ಉತ್ತರ ನಮಗೆ ಕೊಡುವಂಥ ಪ್ರಯತ್ನ ಇಲ್ಲಿ ಮಾಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ.

ಶ್ರೀಮತಿ ಮನೋರಮ ಮಧ್ವರಾಜ್:– ಮಾನ್ಯ ಅಧ್ಯಕ್ಷರೇ ನಾನು ಅಧಿಕಾರಿಗಳು ಕೊಟ್ಟಂಥದ್ದನ್ನು ಹೇಳಬೇಕಾಗುತ್ತದೆ. ನಾನು ಉತ್ತರವನ್ನು ತಯಾರು ಮಾಡಿಕೊಡುವುದಕ್ಕೆ ಆಗುವುದಿಲ್ಲ. ಈಗ ನಾನೂ ಕೂಡ ಸರ್‌ಪ್ರೈಸ್ ವಿಸಿಟ್ ಮಾಡುವಾಗ ಜನರ ಒಂದು ಮಾಮೂಲು ಬೇಡಿಕೆ ಎಂದರೆ ಸೀಮೆ ಎಣ್ಣೆ ಸರಿಯಾಗಿ ವಿತರಣೆ ಆಗುವುದಿಲ್ಲ. ಅಲ್ಲಿ ತುಂಬಾ ನ್ಯೂನತೆಗಳು ಇವೆ. ನಾನು ಎಷ್ಟೋ ಲೈಸೆನ್ಸ್‌ಗಳನ್ನು ಕೂಡ ಕ್ಯಾನ್ಸಲ್ ಮಾಡಿದ್ದೇನೆ. ಅಕ್ಕಿ ಬಗ್ಗೆ ನಾವು ಅಂತರ್ ಜಿಲ್ಲಾ ಸಾಗಾಟ ನಿರ್ಬಂಧವನ್ನು ತೆಗೆದು ಹಾಕಿದ ಮೇಲೆ ಅಕ್ಕಿ ಬೆಲೆ ಕಡಿಮೆಯಾಗಿದೆ. ನಿಮಗಿಂತಲೂ ಕಡಿಮೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಂತೂ ಬಹಳ ಕಡಿಮೆ ಉಂಟು. ಹಾಗೆ ಇರುವಾಗ ದಯವಿಟ್ಟು ತಾವು ಸಹ ಸ್ವಲ್ಪ ಸಹಕರಿಸಬೇಕು. ನಾನೂ ಜನರನ್ನು ಮೀಟ್ ಆಗುತ್ತಿದ್ದೇನೆ. ಹೋದಲೆಲ್ಲ ಕನ್ಸ್ಯೂಮರ್ಸ್ ಬರುತ್ತಿದ್ದಾರೆ. ಅವರನ್ನು ಕೇಳುವಾಗ ಆ ಬಗ್ಗೆ ಏನೂ ತಕರಾರು ಇಲ್ಲ. ಆದರೆ ಸೀಮೆಎಣ್ಣೆ ಬಗ್ಗೆ ಅವ್ಯವಹಾರ ಬಹಳಷ್ಟು ಇದೆ. ಇದನ್ನೆಲ್ಲಾ ನಿಲ್ಲಿಸಬೇಕೆಂದು ನನ್ನ ಒಂದು ಅನಿಸಿಕೆ ಕೂಡ. ದಯವಿಟ್ಟು ಸಹಕರಿಸಿ.

ಶ್ರೀ ಎ. ಕೆ. ಅನಂತಕೃಷ್ಣ:– ಈ ಅವ್ಯವಹಾರ ಕಾರಣಕ್ಕಾಗಿ ಅಂಗಡಿಗಳಲ್ಲಿ ಕೊರತೆ ಆಗುತ್ತಾ ಇದೆ. ತಾವು ಏನು ಕೆಲಸ ಮಾಡುತ್ತಿದ್ದೀರಿ ನಮ್ಮ ಅಭಿನಂದನೆಗಳನ್ನು ಹೇಳುತ್ತೇನೆ. ಆದರೆ ದಯವಿಟ್ಟು ಸ್ಟ್ರಿಕ್ಟ್ ಆಗಿ ಇದನ್ನು ಹ್ಯಾಂಡಲ್ ಮಾಡಬೇಕು.

ರಾಜ್ಯ ಪ್ರಶಸ್ತಿಗಳ ಕುರಿತು

197 (1265): ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ 1992ರ ನವೆಂಬರ್ 1ರಂದು ರಾಜ್ಯ ಪ್ರಶಸ್ತಿ ಪಡೆದವರ ಹೆಸರು ವಿಳಾಸ ಮತ್ತು ಕಿರುಪರಿಚಯ ತಿಳಿಸುವುದು ?

ಆ. ರಾಜ್ಯ ಪ್ರಶಸ್ತಿ ನೀಡಲು ಪರಿಗಣಿಸುವ ಅರ್ಹತೆಯ ಅಂಶಗಳಾವುವು ?

ಇ. ಈ ಪ್ರಶಸ್ತಿ ಹಾಗೂ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚವೆಷ್ಟು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ, ರಾಜ್ಯ ಸಚಿವರು)

ಅ. ಹೆಸರು ಮತ್ತು ವಿಳಾಸ ಹಾಗೂ ಕಿರುಪರಿಚಯದ ಪಟ್ಟಿಯನ್ನು ಸದನದ ಮೇಜಿನ ಮೇಲೆ ಇಡಲಾಗಿದೆ.

ಆ. ಆಯಾ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆ.

ಇ. ರೂ. 20,10,600.00

ಶ್ರೀ ಬಸವರಾಜರಾಯರೆಡ್ಡಿ:– ಅಧ್ಯಕ್ಷರೇ, ಈ ವರ್ಷ ಕರ್ನಾಟಕ ರಾಜ್ಯ ಪ್ರಶಸ್ತಿಗೆ 176ಜನಗಳನ್ನು

ಇವರು ಆಯ್ಕೆ ಮಾಡಿದ್ದಾರೆ. ಬಹುಶಃ ಕರ್ನಾಟಕದ ಇತಿಹಾಸದಲ್ಲಿ ಪ್ರಥಮ ಬಾರಿಗೆ ಇಷ್ಟು ಜನಗಳನ್ನು ಆಯ್ಕೆ ಮಾಡಿದ್ದಾರೆಂದು ನನಗನಿಸುತ್ತದೆ. ಈ ರಾಜ್ಯ ಪ್ರಶಸ್ತಿ ನೀಡುವಲ್ಲಿ ಸರ್ಕಾರ ಮತ್ತು ಮಂತ್ರಿಗಳು ತಮಗೆ ಬೇಕು ಬೇಕಾದವರಿಗೆ ಕೊಟ್ಟಿದ್ದಾರೆ. ಇದನ್ನು ಇನ್ನು ಮುಂದೆ ಬದಲಾವಣೆ ಮಾಡಿ, ಒಂದು ಕಮಿಟಿ ಮಾಡಿ ಯೋಗ್ಯತೆ ಇದ್ದವರಿಗೆ ಮಾತ್ರ ಕೊಡುತ್ತೀರೋ ಹೇಗೆ ? ಏಕೆಂದರೆ ಈ ಉತ್ತರದಲ್ಲಿ ನೋಡಿದರೆ ಯಾರು ಯಾರಿಗೋ ಕೊಟ್ಟಿದ್ದಾರೆ. ಅಂದರೆ ಜ್ಯೋತಿಷ್ಯ ಹೇಳುವವರಿಗೆ, ತೋಟಗಾರಿಕೆಯವರಿಗೆ, ಆರ್ಕಿಟೆಕ್ಟ್ಸ್‌ನವರಿಗೆ, ತರಕಾರಿ ಕೆತ್ತನೆ, ತರಕಾರಿ ಹೆಚ್ಚುವವರಿಗೆ, ಕುಸ್ತಿ ಆಡುವವರಿಗೆ, ಹರಿಕಥೆ ಹೇಳುವವರಿಗೆ, ರೈಫಲ್ ಶೂಟಿಂಗ್‌ನವರಿಗೆ, ಪೆಂಡಾಲ್ ಹಾಕುವವರಿಗೆ ಕೊಟ್ಟಿದ್ದಾರೆ. ಇವರೆಲ್ಲಾ ರಾಜ್ಯ ಪ್ರಶಸ್ತಿಗೆ ಯೋಗ್ಯರೇ ಹೇಗೆ ? ಇದರಿಂದ ಸರ್ಕಾರಕ್ಕೆ ಎಷ್ಟು ಲುಕ್ಸಾನು ಆಗುತ್ತದೆ ಮತ್ತು ರಾಜ್ಯ ಪ್ರಶಸ್ತಿ ಕೊಟ್ಟಿದ್ದಕ್ಕಾದರೂ ಬೆಲೆ ಏನು ಬರುತ್ತದೆ ? ದಯವಿಟ್ಟು ಸಚಿವರು ತಿಳಿಸಬೇಕು ಮತ್ತು ಮುಂದಿನ ಸಾರಿ ಈ ಪ್ರಶಸ್ತಿ ಕೊಡುವಾಗ ಇದಕ್ಕೆ ಕಮಿಟಿ ಮಾಡಿ ಯೋಗ್ಯ ಜನರನ್ನು ಆರಿಸಿ ಕೊಡುತ್ತೀರಾ ಹೇಗೆ ? ದಯವಿಟ್ಟು ತಿಳಿಸಬೇಕು, ರಾಜ್ಯಕ್ಕೆ ಗೌರವ ಬರುವ ಹಾಗೆ ಮಾಡಲಿ.

ಶ್ರೀ ಹೆಚ್. ವಿಶ್ವನಾಥ್:– ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಬಹಳ ಸಮಂಜಸವಾಗಿದೆ. ರಾಜ್ಯೋತ್ಸವ ಪ್ರಶಸ್ತಿಯಲ್ಲಿ ಹಿಂದೆ 10 ಜನರಿಗೆ ಮತ್ತು 25 ಜನರಿಗೆ ಇತ್ತು, 70 ಜನರು ಆಯಿತು. 100 ಆಗಿ 180 ಆಗಿದೆ. 180 ರಲ್ಲಿ ಆಯ್ಕೆ ಮಾಡಿದ್ದು 180, ಮೂರು ಜನ ಸರ್ಕಾರಿ ನೌಕರರೆಂದು ತಗೆಯಲಾಗಿತ್ತು, ಒಬ್ಬರಿಗೆ ಎರಡೆರಡು ಸಾರಿ ಕೊಟ್ಟಿದೆ ಎಂದು ತೆಗೆಯಲಾಗಿದೆ. 176 ಜನಕ್ಕೆ ಕೊಡಲಾಗಿದೆ ಮತ್ತು ತಾವು ಹೇಳುವ ಪ್ರಕಾರ ಅದು ಸಚಿವ ಸಂಪುಟದ ಉಪಸಮಿತಿಯಿಂದ ಆಗಿರತಕ್ಕದ್ದು. ಆದ್ದರಿಂದ ಕೆಲವು ರಾಜಕೀಯ ಒತ್ತಡಕ್ಕೂ ಕೂಡ ಬೆಲೆ ಕೊಟ್ಟು ಕೊಡಲಾಗಿದೆ. ಆದ್ದರಿಂದ ಇನ್ನು ಮುಂದೆ ಹೀಗೆ ಆಗದ ಹಾಗೆ, ಕರ್ನಾಟಕ ರಾಜ್ಯ ಪ್ರಶಸ್ತಿಯನ್ನು ಪಡೆದಂಥವರು ಬಹಳ ಅತ್ಯಂತ ಎತ್ತರದ ವ್ಯಕ್ತಿಗಳು ಮತ್ತು ಈ ನಾಡು ನುಡಿಯ ಸೇವೆಗೆ ದುಡಿದಂಥವರಿಗೆ ಕೊಡುತ್ತೇವೆ. ಅದರ ಗೌರವವನ್ನು ಸರ್ಕಾರ ಕಾಪಾಡುತ್ತದೆ.

ಇನ್ನು ಮುಂದೆ ಸಚಿವ ಸಂಪುಟ ಉಪಸಮಿತಿಯಿಂದ ಇದನ್ನು ಹೊರಗತುಪಡಿಸಿ ಅದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡುತ್ತೇನೆ. ನಮ್ಮ ವಿವಿಧ ಅಕಾಡೆಮಿಗಳ ಅಧ್ಯಕ್ಷರುಗಳು ಮತ್ತು ನಮ್ಮ ಸುದ್ದಿ ಮಾಧ್ಯಮಗಳ ಎರಡು ಪ್ರತಿನಿಧಿಗಳು ಮತ್ತು ಗಣ್ಯರು ಸೇರಿದಂತೆ ಒಂದು ಸಮಿತಿಯನ್ನು ರಚನೆ ಮಾಡಿ ಆರು ತಿಂಗಳುಗಳ ಕಾಲ ಇದನ್ನು ಪರಿಷ್ಕರಿಸಿ ಸೂಕ್ತ ಹಾಗೂ ಅರ್ಹತೆ ಇರತಕ್ಕ ಜನರಿಗೆ ಕೊಡುವಂಥಹ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ. ರಾಜ್ಯೋತ್ಸವ ಪ್ರಶಸ್ತಿಯ ಘನತೆಯನ್ನು ಎತ್ತಿ ಹಿಡಿಯುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ.

ಶ್ರೀ ಬಸವರಾಜರಾಯರೆಡ್ಡಿ:– ನಾನು ಏನು ಹೇಳಿದೆ ಎಂದರೆ ತರಕಾರಿ ಹೆಚ್ಚುವವರಿಗೆ ರೈಫಲ್ ಶೂಟಿಂಗ್ ಮಾಡಿದವರಿಗೆ, ಜ್ಯೋತಿಷ್ಯ ಹೇಳುವವರಿಗೆ, ಕುಸ್ತಿ ಆಡುವವರಿಗೆ, ಆರ್ಕಿಟೆಕ್ಟ್ಸ್‌ಗಳಿಗೆ, ಹರಿಕಥೆ ಹೇಳುವವರಿಗೆ ಹಾಗೂ ಪೆಂಡಾಲ್ ಹಾಕುವವರಿಗೆ ಕೊಟ್ಟಿದ್ದಾರೆ. ಇದರಿಂದ ನಮ್ಮ ರಾಜ್ಯದ ಗೌರವ ಕಡಿಮೆಯಾಗಿದೆ. ಈ ಪ್ರಶಸ್ತಿಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಕೆಲವು ಯೋಗ್ಯರಾದ ಜನರಿಗೆ ಕೊಟ್ಟಿದ್ದಾರೆ. ಉದಾಹರಣೆಗೆ ಪ್ರಕಾಶಪಡುಕೋಣೆಗೆ ಕೊಟ್ಟಿದ್ದಾರೆ, ಸಮಾಜ ಸೇವಾಕರ್ತರಾದ ಕೆ. ಎಫ್. ಪಾಟೀಲರೂ ಇದ್ದಾರೆ. ನಾನು ಮೇಲೆ ಹೇಳಿದ ಜನಗಳಿಗೆ ಕೊಟ್ಟಿರುವುದರಿಂದ ಅರ್ಹತೆವುಳ್ಳ ಮಹನೀಯರುಗಳಿಗೆ ಅಗೌರವ ಸಲ್ಲಿಸಿದಂತಾಗುತ್ತದೆ. ಕೆಲವು ಜನ ಮಂತ್ರಿಗಳಿಗೆ ಬೇಕಾಗಿರುವವರೂ ಇದ್ದಾರೆ. ಬೇಕಾದರೆ ಅವರ ಹೆಸರನ್ನು ಹೇಳುತ್ತೇನೆ. ಆದುದರಿಂದ ತಾವು ದಯವಿಟ್ಟು ಅವರಿಗೆ

ಕೊಟ್ಟಿರುವ ಪ್ರಶಸ್ತಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇದಕ್ಕೆ 21 ಲಕ್ಷ ರೂಪಾಯಿ ಖರ್ಚು ಮಾಡಿದ್ದೀರಿ. ಸರ್ಕಾರದ ಹಣ ಈ ರೀತಿಯಲ್ಲಿ ಪೋಲಾಗುತ್ತಿದೆ.

ಶ್ರೀ ಕರಿಯಣ್ಣ:- ಕೆಲವು ಶ್ರಮಜೀವಿಗಳು ನಿಜವಾಗಿ ಅರ್ಹತೆಯುಳ್ಳವರಾಗಿದ್ದಾರೆ. ಕುಸ್ತಿ ಆಡುವವರಿಗೆ ಕೊಡುವುದಿಲ್ಲ ಎಂದರೆ ಹೇಗೆ ? ಸಂಗೀತದವರಿಗೆ ಕೊಡುತ್ತೀರಿ. ಕುಸ್ತಿ ಆಡುವವರಿಗೂ ಕೊಡಬೇಕು.

ಶ್ರೀ ಹೆಚ್. ವಿಶ್ವನಾಥ್:- ಮಾನ್ಯ ಸದಸ್ಯರು ಹೇಳಿದ ಪ್ರಕಾರ ತರಕಾರಿ ಹೆಚ್ಚುವವರಿಗೆ ಕೊಟ್ಟಿಲ್ಲ. ಕೊಬ್ಬರಿಯಲ್ಲಿ ಕೆತ್ತನೆಯನ್ನು ಬಿಡಿಸತಕ್ಕ ಕಲಾಕಾರರಿದ್ದಾರೆ. ಅಂತಹ ಕಲಾಕಾರರಿಗೆ ನಾವು ಕೊಟ್ಟಿರುತ್ತೇವೆ. ಇದನ್ನು ಯಾವ ಕಾರಣಕ್ಕೂ ವಾಪಸ್ಸು ಪಡೆಯುವ ಪ್ರಯತ್ನ ಸರ್ಕಾರ ಮಾಡುವುದಿಲ್ಲ. ಮುಂದೆ ಇದನ್ನು ಸರಿ ಮಾಡಿ ಯೋಗ್ಯರಾದವರಿಗೆ ಕೊಡುವ ಒಂದು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಬಸವರಾಜರಾಯರೆಡ್ಡಿ:- ಈಗ ಕೊಟ್ಟಿದ್ದು ತಪ್ಪು ತಾನೆ ?

ಶ್ರೀ ಹೆಚ್. ಎಂ. ರೇವಣ್ಣ:- ರಾಜ್ಯದ ಪ್ರತಿಷ್ಠಿತ ಈಜುಗಾರರೊಬ್ಬರಿಗೆ ಕೊಟ್ಟಿರುವ ಪ್ರಶಸ್ತಿಯನ್ನು ವಾಪಸ್ಸು ಪಡೆಗುಕೊಂಡಿದ್ದಾರೆ. ನಿಜವಾಗಿಯೂ ಈಜು ರಾಷ್ಟ್ರ ಹಾಗೂ ಅಂತರರಾಷ್ಟ್ರಮಟ್ಟದ ಕ್ರೀಡೆಯಾಗಿದೆ. ಅವರು ರಾಷ್ಟ್ರ, ಅಂತರ್ ರಾಷ್ಟ್ರ ಮಟ್ಟದ ಕ್ರೀಡಾಪಟುಗಳನ್ನು ತಯಾರು ಮಾಡಿದ್ದಾರೆ. ಆದ್ದರಿಂದ ತಾವು ಇದನ್ನು ಮತ್ತೆ ಪರಿಶೀಲಿಸಿ ಅವರಿಗೆ ವಾಪಸ್ಸು ಕೊಡುತ್ತೀರಾ ?

ಶ್ರೀ ಹೆಚ್. ವಿಶ್ವನಾಥ್:- ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀಮತಿ ಮೋಟಮ್ಮ:- ಯಾವುದೇ ವ್ಯಕ್ತಿ ಯಾವುದೇ ಒಂದು ರಂಗದಲ್ಲಿ ಪ್ರತಿಭೆ ಇದ್ದರೆ ಕೊಡಬಾರದು ಎಂಬ ನಿಯಮ ಇರಕೂಡದು. ಗಣ್ಯ ಮಹನೀಯರು ಯಾವ ರಂಗದಲ್ಲಿದ್ದರೂ ಅವರಿಗೆ ಕೊಡಬೇಕು. ಗುಣಕ್ಕೆ ಮತ್ಸರ ಇರಬಾರದು. ರಾಜ್ಯದಲ್ಲಿ ರೈತ ತರಕಾರಿ ಬೆಳೆಯುತ್ತಾನೆ. ಅವನು ಅದರಲ್ಲಿ ಹೆಚ್ಚಿನ ಸಾಧನೆಯನ್ನು ಸಾಧಿಸಿದರೆ ಅವನಿಗೆ ಪ್ರಶಸ್ತಿಯನ್ನು ಕೊಡಬೇಕು, ಅದು ತಪ್ಪಿಲ್ಲ.

ರಾಜ್ಯದಲ್ಲಿರುವ ಯುವಕ ಸಂಘಗಳಿಗೆ ಆರ್ಥಿಕ ನೆರವು

198 (239): ಶ್ರೀಮತಿ ಮೋಟಮ್ಮ (ಮೂಡಿಗೆರೆ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ. ರಾಜ್ಯದಲ್ಲಿ ಎಷ್ಟು ಯುವಕ ಯುವತಿ ಸಂಘಗಳಿವೆ ಹಾಗೂ ಅವುಗಳಿಗೆ ಸ್ವಂತ ಕಟ್ಟಡಗಳಿವೆಯೇ ?

ಆ. ಅವುಗಳ ಕಾರ್ಯಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಲಾಗುತ್ತಿದೆಯೇ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು):-

ಅ. ರಾಜ್ಯದಲ್ಲಿ ಒಟ್ಟು 15573 ಯುವಕ ಯುವತಿ ಮಂಡಳಿಗಳು ಇವೆ.

1) ಯುವಕರ ಸಂಘಗಳು 13890

2) ಯುವತಿ ಮಂಡಳಿಗಳು 1633

ಈ ಯುವಕ/ಯುವತಿ ಸಂಘಗಳ ಪೈಕಿ ಕೆಲವು ಸಂಘಗಳು ಮಾತ್ರ ಸ್ವಂತ ಕಟ್ಟಗಳನ್ನು ಹೊಂದಿವೆ.

ಇ. ಹೌದು.

ಶ್ರೀಮತಿ ಮೋಟಮ್ಮ:- ಅವರು ಉತ್ತರ ಒದಗಿಸಿದ್ದಾಗಿಂದು ಹೇಳಿದ್ದಾರೆ ನಾನು ಕೇಳಿದ ಪ್ರಕಾರ ಉತ್ತರ ಬಂದಿಲ್ಲ. ಅವರು ನನ್ನ ಬಳಿ ಮಾತನಾಡುವಾಗ ಕೆಲವು ವಿಷಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ಸಂದರ್ಭದಲ್ಲಿ ಅವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಯುವಕ ಯುವತಿ ಮಂಡಳಿಗಳು ಏನು ಇವೆ ಅವುಗಳಿಗೆ ಹಣ ಒದಗಿಸಿಲ್ಲ ಎನ್ನುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಹಾಗೆಯೇ ಕಟ್ಟಡ ಇಲ್ಲ ಎನ್ನುವುದನ್ನೂ ಒಪ್ಪಿಕೊಂಡಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಬಯಸುವುದೇನೆಂದರೆ ನಾವು ಯುವಕ ಶಕ್ತಿಯನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ. ಯುವಕ ಶಕ್ತಿಯನ್ನು ಸರಿಯಾಗಿ ಬಳಸಿಕೊಳ್ಳಬೇಕಾದರೆ ಯುವಕ ಯುವತಿ ಮಂಡಳಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಆಕ್ಟಿವೇಟ್ ಮಾಡಬೇಕು ಇದರಿಂದ ಅವರಿಗೆ ಯಾವುದೇ ಹಣಕಾಸಿನ ನೆರವು ಈ ಇಲಾಖೆಯಿಂದ ಸಿಗುತ್ತಿಲ್ಲ. ಜಿಲ್ಲಾ ಹಾಗೂ ತಾಲ್ಲೂಕುಗಳಿಗೆ 1500 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅದು ಏನೇನು ಸಾಲದು. ಈ ಯುವಕ ಯುವತಿ ಮಂಡಳಿಗಳಿಗೆ ಕಟ್ಟಡಗಳನ್ನು ಜಿಲ್ಲಾಪರಿಷತ್ ಮೂಲಕ ಕಟ್ಟಿಸಿಕೊಡುವ ನಿರ್ಣಯವನ್ನು ಹಾಕಿಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಈ ಯುವಕ ಯುವತಿ ಮಂಡಳಿಗಳನ್ನು ಆಕ್ಟಿವೇಟ್ ಮಾಡಲು ಅವುಗಳಿಗೆ ಇಷ್ಟು ಎಂದು ಆರ್ಥಿಕ ನೆರವು ನೀಡಬೇಕು. ಅದಾಗಿ ಸಹಾಯಧನ ಕೊಡಬೇಕು. ಎರಡನೆಯದಾಗಿ ಈ ಒಂದು ಯುವಕ ಯುವತಿ ಮಂಡಳಿಗಳಿಗೆ ಕೆಲವು ಕಾರ್ಯಕ್ರಮಗಳನ್ನು ರೂಪಿಸಿಕೊಡಬೇಕು.

ಅಧ್ಯಕ್ಷರೇ, ಬರೀ ಯುವಕ ಯುವತಿ ಮಂಡಳಿ ಸ್ಥಾಪನೆ ಮಾಡಿ ಅವರನ್ನು ಬೇಜವಾಬ್ದಾರಿಯಾಗಿ ಇಟ್ಟರೆ ಪ್ರಯೋಜನವಾಗುವುದಿಲ್ಲ. ಹಳ್ಳಿಗಳಲ್ಲಿ ಹಳ್ಳಿಯ ಜನತೆಯಲ್ಲಿ ಅವೇರ್‌ನೆಸ್ ಕ್ರಿಯೇಟ್ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಶ್ರಮದಾನ ಶಿಬಿರ ಇರಬಹುದು ಅಥವಾ ಕೋಮು ಸೌಹಾರ್ದತೆ ಉಂಟು ಮಾಡುವ ಕಾರ್ಯಕ್ರಮಗಳನ್ನು ಇವರ ಇಲಾಖೆಯಿಂದ ಏಕೆ ಹಮ್ಮಿಕೊಳ್ಳಬಾರದು ಎನ್ನುವುದು ನನ್ನ ಪ್ರಶ್ನೆ.

ಶ್ರೀ ಹೆಚ್. ವಿಶ್ವನಾಥ್:- ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದ ಯುವಕ ಯುವತಿ ಮಂಡಳಿಗಳಿಗೆ ಸುಮಾರು 15 ಸಹಸ್ರ ರೂಗಳನ್ನು ಸರ್ಕಾರದಿಂದ ಮಂಡಳಿಗಳನ್ನು ಕಟ್ಟಲಿಕ್ಕೆ ಮತ್ತು ಯುವಜನೋತ್ಸವ ಮಾಡಲಿಕ್ಕೂ ಹಣ ಕೊಡುತ್ತಿದ್ದೇವೆ. ಇದರ ಹಣವನ್ನು ನಗದು ರೂಪದಲ್ಲಿ ಇವತ್ತು ನಾವು ಕೊಡುತ್ತಿಲ್ಲ. ಈ ದಿಸೆಯಲ್ಲಿ ಮಾನ್ಯ ಸದಸ್ಯೆಯರ ಸಲಹೆ ಬಹಳ ಸಮರ್ಥವಾಗಿದೆ ಮತ್ತು ಗ್ರಾಮೀಣ ಪ್ರದೇಶದ ಯುವಕ ಯುವತಿಯರನ್ನು ಕ್ರಿಯಾಶೀಲರನ್ನಾಗಿ ಮಾಡುವ ದೃಷ್ಟಿಯಿಂದ ಮುಂದಿನ ವರ್ಷದಿಂದ ಒಂದು ಹೊಸ ಯೋಜನೆಯನ್ನು ತಯಾರು ಮಾಡಿ ಗ್ರಾಮಾಂತರದ ಯುವ ಪ್ರತಿಭೆಯನ್ನು ಸಮರ್ಥವಾಗಿ ಬಳಸುವುದಕ್ಕೆ ಸರ್ಕಾರ ಕಾರ್ಯಕ್ರಮ ರೂಪಿಸುತ್ತದೆ.

ಸಿಂಧನೂರು ಪಟ್ಟಣದ ಗ್ರಾಮಾಂತರ ಆರಕ್ಷಕ ಠಾಣೆ.

199 (739): ಶ್ರೀ ಬಿ. ಹಂಪನಗೌಡ (ಸಿಂಧನೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸಿಂಧನೂರು ಪಟ್ಟಣದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆ ಪ್ರಾರಂಭ ಮಾಡುವ ಉದ್ದೇಶ ಸರ್ಕಾರದ ಗಮನದಲ್ಲಿದೆಯೇ ?

ಆ. ಹಾಗಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ. ಹೌದು.

ಆ. ಆದ್ಯತೆ, ಅಗತ್ಯತೆ ಮತ್ತು ಸಂಪನ್ಮೂಲಗಳನ್ನು ಆಧರಿಸಿ ಠಾಣೆ ತೆರೆಯುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಶ್ರೀ ಬಿ. ಹಂಪನಗೌಡ:- ಅಧ್ಯಕ್ಷರೇ ಉತ್ತರದಲ್ಲಿ, 'ಹೌದು' ಎಂದು ಕೊಟ್ಟಿದ್ದಾರೆ ಮತ್ತು ಎರಡನೆಯದು ಆದ್ಯತೆ ಅಗತ್ಯತೆ ಮತ್ತು ಸಂಪನ್ಮೂಲಗಳನ್ನು ಆಧರಿಸಿ ಪೋಲಿಸ್ ಠಾಣೆ ತೆರೆಯುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು ಎಂದು ಕೊಟ್ಟಿದ್ದಾರೆ. ಈ ವರ್ಷ ಸರ್ಕಾರ ಸುಮಾರು 40 ಪೋಲೀಸ್ ಠಾಣೆಗಳನ್ನೂ ಮಂಜೂರು ಮಾಡಿದೆ. ನನ್ನ ಕ್ಷೇತ್ರದಲ್ಲಿ ಹಲವಾರು ದರೋಡೆ ಕಳ್ಳತನದ ಕೇಸುಗಳು ಸಮಾಜ ಘಾತಕ ಕೆಲಸಗಳು ಆಗುತ್ತಿವೆ. ಪೋಲೀಸ್ ಠಾಣೆ ಬಹಳ ಅವಶ್ಯಕತೆ ಇದೆ. ನಾನು ಆಗಲೇ ಸರ್ಕಾರದ ಮೇಲೆ ಎರಡು ವರ್ಷದಿಂದ ಒತ್ತಾಯ ತರುತ್ತಿದ್ದೇನೆ. ಪೊಲೀಸ್ ಠಾಣೆ ಅವಶ್ಯಕತೆ ಇದೆ. ನನ್ನ ಕ್ಷೇತ್ರದಲ್ಲಿ ಹೋದ ವರ್ಷ ಸುಮಾರು 50 ಲಕ್ಷಕ್ಕೂ ಹೆಚ್ಚು ಎಸ್‌ಬಿಎಂ ಬ್ಯಾಂಕಿನ ದರೋಡೆ, ಜವಳಗೇರಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಕೂಡ ದರೋಡೆಯಾಗಿ ಇಂತಹ ಪ್ರಕರಣಗಳು ಇನ್ನೂ ನಡೆಯುತ್ತಿವೆ ಆದ್ದರಿಂದ ಪೊಲೀಸ್ ಠಾಣೆ ಅವಶ್ಯಕತೆ ಇದೆ. ನಿರ್ದಿಷ್ಟವಾಗಿ ಯಾವಾಗ ಪೋಲಿಸ್ ಠಾಣೆ ಮಂಜೂರು ಮಾಡುತ್ತೀರ ಎನ್ನುವುದನ್ನು ಸಚಿವರು ತಿಳಿಸಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):- ಅಧ್ಯಕ್ಷರೇ, ಸದಸ್ಯರು ಹೇಳಿರುವ ಕಾರಣಗಳಿಗಾಗಿಯೇ ಅಲ್ಲಿ ಅಗತ್ಯ ಇದೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ ಮತ್ತು 93–94ನೇ ಸಾಲಿನಲ್ಲಿ ಎಷ್ಟು ಹೊಸ ಪೊಲೀಸ್ ಠಾಣೆ ತೆರೆಯಬೇಕೆಂದು ಸರ್ಕಾರ ನಿರ್ಧಾರ ಮಾಡುವುದೋ ಆ ಸಂದರ್ಭದಲ್ಲಿ ಈ ಮೂರು ಗ್ರಾಮಗಳು ಸಿಂಧನೂರು, ಸುರುವನಾಳ್, ಬೆಳಗನೂರು ಸ್ಥಳಗಳಲ್ಲಿ ಆದ್ಯತೆ ಮೇಲೆ ಸರ್ಕಾರ ಪೊಲೀಸ್ ಠಾಣೆಗಳನ್ನೂ ಮಂಜೂರು ಮಾಡುವುದನ್ನೂ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ. ಹಂಪನಗೌಡ:- ಅಧ್ಯಕ್ಷರೇ ಈ ವರ್ಷದಲ್ಲಿ ಕೆಲವು ಜಿಲ್ಲೆಗಳಿಗೆ 3–4 ಪೊಲೀಸ್ ಠಾಣೆ ಮಾಡಿದ್ದಾರೆ. ಆದರೆ ನನಗೆ ಅವಶ್ಯಕತೆ ಇದೆ ಕೊಡಿ ಸ್ವಾಮಿ ಎಂದರೆ ಮುಂದೆ ಆದ್ಯತೆ ಮೇಲೆ ತೆಗೆದುಕೊಳ್ಳಲಾಗುವುದು ಎಂಬ ಸರ್ಕಾರದ ಉತ್ತರ ನೋಡಿದರೆ ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಬಿಟ್ಟು ಅವಶ್ಯಕತೆ ಇಲ್ಲದೆ ಕಡೆ ಪೊಲೀಸ್ ಠಾಣೆ ಕೊಟ್ಟಾರೇನೋ ಎನ್ನುವುದು ನನ್ನ ಅನಿಸಿಕೆ. ನನ್ನ ಕ್ಷೇತ್ರದಲ್ಲಿ ಕೂಡ ಮೊನ್ನೆ ಕೋಮುಗಲಭೆಯಾಗಿ ಹಲವಾರು ಘಟನೆಗಳು ಆಗಿದೆ. ಅವಶ್ಯಕತೆ ಜಾಸ್ತಿಯಿರುವುದರಿಂದ ನಾವು ಒತ್ತಾಯ ಮಾಡುತ್ತೇವೆ ಹೊರತಾಗಿ ಶಾಂತಿ ಪಾಲನೆಗಾಗಿ ಇದೇ ವರ್ಷ ಮಂಜೂರು ಮಾಡುವ ಭರವಸೆಯನ್ನು ಈಡೇರಿಸಬೇಕೆಂದು ನಾನು ಒತ್ತಾಯಪಡಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಆಸೆಯಿಂದ ತಾವು ಪ್ರಶ್ನೆ ಕೇಳಿದ್ದೀರಿ, ತಾವು ಹೇಳಿದ ಅಗತ್ಯತೆಯನ್ನು ಸರ್ಕಾರ ಕಂಡಿದೆ. ತಾವು ಹೇಳಿರುವ ಗ್ರಾಮದಲ್ಲಿ ಪೊಲೀಸ್ ಠಾಣೆ ಮಾಡಬೇಕೆಂಬುದನ್ನು ಅತ್ಯಂತ ಸಹಾನುಭೂತಿಯಿಂದ ಸರ್ಕಾರ ಪರಿಶೀಲನೆ ಮಾಡುತ್ತದೆ.

ರಾಜ್ಯದಲ್ಲಿ ಕೆಮಿಕಲ್ಸ್ ಘಟಕಗಳಿಗೆ ಕ್ರಮಪಡಿಸಿದ ಮಧ್ಯಸಾರದ ವಿತರಣೆ

200(1031): ಶ್ರೀ ಶಿವಶೇಖರಪ್ಪ ಗೌಡ ಶಿರವಾಳ (ಶಹಾಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1991–92ನೇ ಸಾಲಿನಲ್ಲಿ ರಾಜ್ಯದ ಕೆಮಿಕಲ್ಸ್ ಘಟಕಗಳಿಗೆ ಸರಬರಾಜು ಮಾಡಲಾದ ರೆಕ್ಟಿಫೈಡ್ ಸ್ಪಿರಿಟ್ ಪ್ರಮಾಣವೆಷ್ಟು ? (ಜಿಲ್ಲಾವಾರು ಹಾಗೂ ಘಟಕವಾರು ಮಾಹಿತಿಯನ್ನು ಒದಗಿಸುವುದು).

ಆ. 1992–93ರಲ್ಲಿ ಯಾವ ಯಾವ ಘಟಕಗಳಿಗೆ ಸ್ಪಿರಿಟ್ ಪ್ರಮಾಣವನ್ನು ಹೆಚ್ಚಿಸಲಾಗಿತ್ತು ? (ಜಿಲ್ಲಾವಾರು ಮಾಹಿತಿಯನ್ನು ನೀಡುವುದು):

ಇ. ಸದರಿ ರೆಕ್ಟಿಫೈಡ್ ಸ್ಪಿರಿಟನ್ನು ಮೇಲ್ಕಂಡ ಘಟಕಗಳು ಉಪಯೋಗಿಸಿವೆಯೇ:

ಈ. ರೆಕ್ಟಿಫೈಡ್ ಸ್ಪಿರಿಟ್ ಉಪಯೋಗಿಸದ ಘಟಕಗಳ ಮೇಲೆ ಸರ್ಕಾರದವರು ಕ್ರಮ ಕೈಗೊಂಡಿರುವರೆ ?

ಉ. ಇಲ್ಲದಿದ್ದಲ್ಲಿ ಅಂತಹ ಘಟಕಗಳ ಲೈಸೆನ್ಸ್ ರದ್ದು ಮಾಡುವ ಬಗ್ಗೆ ಸರ್ಕಾರದವರು ಕೈಗೊಳ್ಳಲಾಗುವ ಕ್ರಮವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. 1991–92ನೇ ಸಾಲಿನಲ್ಲಿ ಒಟ್ಟು 2,67,68,650 ಲೀಟರ್ ರೆಕ್ಟಿಫೈಡ್ ಸ್ಪಿರಿಟ್ಟನ್ನು ಕೆಮಿಕಲ್ ಘಟಕಗಳಿಗೆ ಒದಗಿಸಲಾಗಿದೆ (ವಿವರಗಳನ್ನು ಅನುಬಂಧ 'ಎ' ದಲ್ಲಿ ಒದಗಿಸಲಾಗಿದೆ.)

ಆ. ವಿವರಗಳನ್ನು ಅನುಬಂಧ 'ಬಿ' ದಲ್ಲಿ ನೀಡಲಾಗಿದೆ.

ಇ. - ಹೌದು -

ಈ. ಪ್ರಶ್ನೆ (ಇ)ಗೆ ನೀಡಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ. ರೆಕ್ಟಿಫೈಡ್ ಸ್ಪಿರಿಟ್ ಉಪಯೋಗದ ಬಗ್ಗೆ ಜಂಟಿ ತನಿಖೆ ನಡೆಸಲಾಗುತ್ತಿದೆ. ತನಿಖಾ ವರದಿ ಬಂದ ನಂತರ ಮತ್ತು ಒಂದು ವೇಳೆ ರೆಕ್ಟಿಫೈಡ್ ಸ್ಪಿರಿಟ್ ದುರುಪಯೋಗವಾದದ್ದು ಕಂಡು ಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದೇ ಅಲ್ಲದೆ ಲೈಸೆನ್ಸ್ ರದ್ದು ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ANNEXURE - A

Statement showing the Licence granted to alcohol based Chemical Units during the year 1991-92 (i.e., July 1991 to June '92) (District wise and Quantity supplied to each Unit).

Sl. No.	Name of the Unit	Quantity allotted
1	2	3
I. BANGALORE URBAN DISTRICT		in Litres.
1.	M/s Kayvee Chemical Ind No. 37, Cheemnacandra, Vijayanagar, Bangalore.	4,52,000
2.	M/s Aqa Chemicals Pvt. Ltd., No. 37/B, Jigani Indl. Area, Anekal Tq. Bangalore.	2,13,000
3.	M/s Gayathri Chemical Ind. Pvt. Ltd., No. 255/A, III phase, Bommasandra Indl. Area, Bangalore.	2,42,000
4.	M/s Chem-Tech Plasticizers & Chemicals, No. 362, 7th Main, IV phase. 10th cross, Peenva, Bangalore.	1,21,000
5.	M/s Sri Shakti Chemicals, No 40/3, Kaval Byrasandra, R.T. Nagar, Bangalore	1,51,000
6.	M/s Karnataka Chemicals, No, 63/3B, Goravigere, Hosakote Tq. Bangalore.	5,67,000
7.	M/s Shakti Industrial, No. 5K, Jigani Indl. Area, Anekal Tq Bangalore.	1,93,000
8.	M/s Bangalore Chemical Ind. Plot No. 6, Koramangala Indl. Layout, Bangalore.	1,82,000
9.	M/s Kamal Chemical Lab. No. 3, Kottigepalya, Magadi Road, Bangalore.	4,37,000
10.	M/s Sunitha Chemicals 7th main, Mysore Road, Nayandanahalli, Bangalore	5,95 000
11.	M/s PSS Chemicals Pvt. Ltd., No. 20/A, Kumbalgodu, Bangalore	5,45,000
12.	M/s Medical India. No. 121/A, 8th cross, Koramangala, Bangalore.	63,000
13.	M/s Phosphate Plasticizers Pvt. Ltd., No. 32/A, Peenya Indl. Area, Bangalore.	1,63,000
14.	M/s Karnataka Super Solvents, No. 23, Doddanakundi Indl. Area, Bangalore.	1,24,000

15.	M/s Guru Sai Organics. No. 347, Koramangala. Bangalore.	1,86,000
16.	M/s Duphex Chemicals, No. A/E, Indl. Estate, Peenya Bangalore.	2,18,000
17.	M/s Udayaranga Chemical & Ind., No. 3/A, Indl. Area, Kumbalgodu, Bangalore.	1,79,000
18.	M/s Arihanth Chemo Dyes Pvt. Ltd., Plot No. 231, Bommasandra Indl. Area, Bangalore.	5,45,000
19	M/s Mascot Agro Chemicals, Pvt. Ltd., 93, III Phase, Peenya Indl. Area, Bangalore.	45,000
20.	M/s Poornashree Chemicals, Pvt. Ltd., 15/B-3, Jigani Indl. Area, Anekal Taluk, Bangalore.	5,43,300
21.	M/s Aruna Chemicals, 7th Mile, Mysore Road, Nayandanahalli, Bangalore.	3,56,000
22.	M/s R. C. Chemicals, Pvt. Ltd., Sy. No. 113/1, Gottigere Village, Banneraghatta Road, Bangalore.	1,34,000
23.	M/s Trishul Chemicals, No. 58, Singasandra, Bangalore South.	1,06,000
24.	M/s Pharma Chem. Pvt. Ltd. Plot No. 231/A, Bommasandra Indl. Area, Bangalore.	1,20,000
25.	M/s Gland Chemicals, Pvt. Ltd., Yeshwanthapur. Bangalore.	60,000
26.	M/s Associated Drugs Co., Pvt. Ltd., 13th Mile, Mysore Road, Kumbalgodu, Bangalore.	60,000
27.	M/s Naran Galle & Chemicals Pvt. Ltd., 315, 100 Ft. Road, Indiranagar, Bangalore.	22,500
28	M/s Mahanthesh Chemical Ind. No. 21, Mangalam Palayam Cross, Bommanahalli, Bangalore.	69,000
29	M/s Bhuvaneshwari Chemicals, No. 58/1, Singasandra Post, Bangalore.	---
30.	M/s KIN Eng. Products Pvt. Ltd., F/56, Indl. Estate, Rajajinagar, Bangalore.	16,000
31.	M/s Cipla Ltd , Virgonagar, Bangalore.	3,00,000
32.	M/s Keem-Well Pvt. Ltd. No. 11, Tumkur Road, Bangalore.	7,500

33.	M/s Agro Extracts Pvt. Ltd., No. 16, II Phase, Peerya Indl. Area, Bangalore.	95,000
34.	M/s South Filed Paints & Chemicals, Mahadevapura, Whitefield Road, Bangalore.	9,000
II. BANGALORE RURAL DISTRICT		
1.	M/s Bangalore Solvents, No. 34/c, Hosakote Indl. Area, Bangalore rural district.	3,39,000
2.	M/s Karnataka Solvents, No. 168, Dandupalya, Hoskote Taluk, Bangalore Rural District.	3,86,000
3.	M/s M.M. Swamy & Co., Doddaballapur, Bangalore Rural District.	1,55,000
III. BELGAUM DISTRICT		
1.	M/s S.V.P. Chemicals Pvt. Ltd., Navage, Belgaum.	2,70,000
2.	M/s Aspat Plasticizers, Honagal Indl. Area., Belgaum	5,90,000
IV. BIDAR DISTRICT		
1.	M/s Abhyudaya Chemicals Pvt Ltd., No. 4/A, Kolhar Indl. Area, Bidar.	1,51,000
2.	M/s Sai Chemicals, Humnabad, Bidar.	4,43,000
3	M/s Kamal Orgo Chem Ind. Mousad Indl. Area, Bidar.	3,63,000
4.	M/s Basichem Ind. Kamathana, Bidar.	2,90,000
5.	M/s Deccan Organic Chemicals, Maniknagar, Bidar.	3,35,000
6.	M/s Vani Organics Pvt. Ltd., Kolhar Indl. Area, Bidar.	10,10,000
7.	M/s Primedics Pvt. Ltd., Kolhar Indl. Area, Bidar.	1,33,000
8.	M/s Premier Drugs Pvt. Ltd., Humnabad, Bidar.	3,29,000
9.	M/s Kali Chemicals, Bidar.	45,000
V. CHITRADURGA DISTRICT		
1.	M/s Sri Vinayaka Chemical Ind. Pamearhalli, Davangere, Chitradurga.	3,75,000
2.	M/s Trishul Chemicals, Shivaramagoudanahalli Davanagere Taluk, Chitradurga.	92,000
VI. DAKSHINA KANNADA DISTRICT		
1.	M/s Prashanth Chemicals, Baskampadi, Mangalore	3,03,000

VII. DHARWAD DISTRICT

1.	M/s Suvarna Chemical Works, Anchatagari Vg. Hubli.	1,98,000
2.	M/s Jaya Organics, Terihal, Hubli.	2,23,000
3.	M/s Srinivasa Chemicals, Gokul Road, Hubli.	70,500

VIII. GULBARGA DISTRICT

1.	M/s Commercial Chemical Ind. Indl. Estate, Gulbarga.	67,000
2.	M/s India Chemical & Pharmaceutical Works, Gulbarga.	30,000
3.	M/s Sri Krishna Chemicals, Shivarampur, Gulbarga.	6,09,000

IX. HASSAN DISTRICT

1.	M/s Sri Laxmi Indl. Corporation, B.M. Road, Hassan.	3,39,000

X. KOLAR DISTRICT

1.	M/s Malur Acetate & Allied Products Pvt. Ltd., Malur Indl. Area, Kolar.	4,29,000
2.	V.V. Industries, Narasapura, Kolar.	85,600
3.	M/s Chaithra Chemicals, Chickaballapur, Kolar.	68,000

XI. MANDYA DISTRICT

1.	M/s Mysore Sugar Co., Ltd., A.A. Plant, Mandya.	12,00,000
2.	M/s Sumanth Chemicals, Halasagere, Mandya Taluk.	80,000
3.	M/s Mysore Acetate & Chemicals, Co., Ltd., Mandya.	95,000

XII. MYSORE DISTRICT

1.	M/s Triton Chemicals, Metagalli, Mysore.	1,21,000
2.	M/s Hunsur Chemicals, St. Saw Mill Compound, Hunsur.	3,58,000
3.	M/s Lin Chemical Ind. Pvt. Ltd., K.R.S. Road, Mysore.	6,66,000
4.	M/s Kap Chem Ltd., Belagola Indl. Area, K.R.S. Road, Mysore.	50,50,000
5.	M/s Dolphin Chemicals, Metagalli, Mysore.	2,36,000
6.	M/s Southern Organic Chemicals, Nanjangud	5,40,000
7	M/s Supreme Plasticizers,	

	Plot No. 115/c, Metagalli, Mysore.	
8.	M/s Flavours & Essence Pvt. Ltd., Belavadi, Mysore	19,500
XIII. RAICHUR DISTRICT		
1.	M/s VSG Chemical Ind. Agalakere, Raichur Tq.	3,31,000
2.	M/s Orient Chem Ind. C/81, Indl. Estate, Raichur	2,42,000
3	M/s Munirabad Chemical Co., Munirabad, Koppal Tq.	1,21,000
4.	M/s Siri Organics Pvt. Ltd., Chiksugur Vg. Raichur.	2,15,000
XIV. SHIMOGA DISTRICT		
1.	M/s Sugandha Ind. Tank Mohalla, Shimoga	9,59,000
2	M/s Pragathi Chemicals, Kariganur, Shimoga	1,33,000
XV. TUMKUR DISTRICT		
1.	M/s Nagarjuna Chemicals, Koratagere, Tumkur	2,13,000
XVI. UTTARAKANNADA DISTRICT		
1.	M/s Sharwani Pharmaceuticals, Salkote, Bhatkal Taluk, U.K.	2,46,000
	Total	2,63,64,900

ANNEXURE - 'B'

No OF UNITS WHOSE QUOTA HAS BEEN ENHANCED DURING THE YEAR 1992-93 (DISTRICT WISE)

Sl. No.	Name of the Unit.	Quota sanctioned during 91-92 (Per month) in Lts.	Quota sanctioned during 92-93 with enhancement (per month) in Lts.
1.	M/s Sugandha Ind. Tank Mohalla, Shimoga.	1,20,000	3,60,000
2.	M/s Chem-Tech Plasticizers & Chemicals, 7th main, II Phase, Peenya, Bangalore.	20,000	30,000
3.	M/s Medical India, 8th cross, K.R. Garden, Koramangala, Bangalore.	3,000	6,000
4.	M/s Aga Chemicals (P) Ltd., Anekal Tq. Bangalore.	35,000	50,000
5.	M/s V.V. Industries, Ramasandra Village. Narayanapura, Kolar	11,650	50,000
	Total	1,89,650	4,96,000

ಶ್ರೀ ಶಿವಶೇಖರಪ್ಪಗೌಡ ಶಿರವಾಳ:-- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ 1991-92ನೇ ಸಾಲಿನಲ್ಲಿ ಒಟ್ಟು 2,67,58,550 ಲೀಟರ್ ರೆಕ್ಟಿಫೈಡ್ ಸ್ಪಿರಿಟನ್ನು ಕೆಮಿಕಲ್ ಘಟಕಗಳಿಗೆ ಒದಗಿಸಲಾಗಿದೆ ಎಂದು ಹೇಳಿದ್ದಾರೆ. 'ಆ' ಪ್ರಶ್ನೆ 1992-93ರಲ್ಲಿ ಯಾವ ಯಾವ ಘಟಕಗಳಿಗೆ ಸ್ಪಿರಿಟ್ ಪ್ರಮಾಣವನ್ನು ಹೆಚ್ಚಿಸಲಾಗಿತ್ತು ಎಂದು ಕೇಳಿದ್ದಕ್ಕೆ ವಿವರಗಳನ್ನು ಅನುಬಂಧ 'ಬಿ' ದಲ್ಲಿ ನೀಡಲಾಗಿದೆ ಎಂದು ಹೇಳುತ್ತಾರೆ. ಇ. ಪ್ರಶ್ನೆಗೆ ಸದರಿ ರೆಕ್ಟಿಫೈಡ್ ಸ್ಪಿರಿಟನ್ನು ಕೆಮಿಕಲ್ಸ್ ಘಟಕಗಳು ದುರುಪಯೋಗಿಸುತ್ತಿರುವ ಸಂದರ್ಭಕ್ಕೆ 'ಹೌದು' ಎಂದು ಉತ್ತರವನ್ನು ಹೇಳುತ್ತಾರೆ. ರೆಕ್ಟಿಫೈಡ್ ಸ್ಪಿರಿಟ್ ದುರುಪಯೋಗಿಸಿದ ಘಟಕಗಳ ಮೇಲೆ ಸರ್ಕಾರದವರು ಕ್ರಮ ಕೈಗೊಂಡಿರುವರೆ? ಎಂದಿದ್ದಕ್ಕೆ, ಪ್ರಶ್ನೆ (ಈ) ಗೆ ನೀಡಿದ ಉತ್ತರದಿಂದ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ನನ್ನ (ಉ) ಪ್ರಶ್ನೆಗೆ ಅಂತಹ ಘಟಕಗಳ ಲೈಸೆನ್ಸ್ ರದ್ದು ಮಾಡುವ ಬಗ್ಗೆ ಸರ್ಕಾರದವರು ಕೈಗೊಳ್ಳಲಾಗುವ ಕ್ರಮವೇನು ಎಂದು ನಾನು ಕೇಳಿದ್ದಕ್ಕೆ 'ಉದ್ಭವಿಸುವುದಿಲ್ಲ' ಎಂಬ ತಪ್ಪು ಉತ್ತರವನ್ನು ಮೇಲೆ ಹೇಳುತ್ತಾರೆ. ಆಗ ಕೇಳಿದರೆ ರೆಕ್ಟಿಫೈಡ್ ಸ್ಪಿರಿಟ್ ದುರುಪಯೋಗದ ಬಗ್ಗೆ ಯಾವ ತನಿಖೆ ನಡೆಸಲಾಗುತ್ತಿದೆ. ತನಿಖಾ ವರದಿ ಬಂದ ನಂತರ ಮಾತ್ರ ಒಂದು ವೇಳೆ ರೆಕ್ಟಿಫೈಡ್ ಸ್ಪಿರಿಟ್ ದುರುಪಯೋಗವಾಗಿದ್ದರೆ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಲ್ಲದೆ ಲೈಸನ್ಸ್ ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು

ಹೇಳುತ್ತಾರೆ. 91–92ರಲ್ಲಿ 1,20,000 ಇದ್ದದ್ದು, 92–93ರಲ್ಲಿ 3,60,000 ಆಗಿದೆ. ಕೆಲವು ಘಟಕಗಳ ಪ್ರಮಾಣ 20 ಸಾವಿರ ಇದ್ದುದು 30 ಸಾವಿರ ಆಗಿದೆ. 3 ಸಾವಿರ ಇರುವುದು ಆರು ಸಾವಿರ ಆಗಿದೆ. 35 ಸಾವಿರ ಇರುವುದು 60 ಸಾವಿರ ಆಗಿದೆ. ಮತ್ತು 11,050 ಸಾವಿರ ಇರುವುದು 50 ಸಾವಿರ ಆಗಿದೆ. ಈ ರೀತಿ ಒಮ್ಮಿಂದ ಒಮ್ಮೆಗೆ ಇದನ್ನು ಕೊಡುವುದಕ್ಕೆ ಕಾರಣಗಳೇನು ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೇ, ರೆಕ್ಟಿಫೈಡ್ ಸ್ಪಿರಿಟನ್ನು ಅಲಾಟ್‌ಮೆಂಟ್ ಮಾಡಿರುವುದು, ಪ್ರೋಸೆಸಿಂಗ್ ಸೆಂಟರ್ಸ್, ತಯಾರು ಮಾಡತಕ್ಕಂಥ ಘಟಕಗಳ ಶಕ್ತಿ ಅದರ ಅವಶ್ಯಕತೆ ಆಧಾರದ ಮೇಲೆ ಕಾಲಕಾಲಕ್ಕೆ ಮಂಜೂರು ಮಾಡಿದ್ದಾರೆ. ಆ ಇಲಾಖೆಯವರು ಪರಿಶೀಲನೆ ಮಾಡಿ ಕಾಲಕಾಲಕ್ಕೆ ಮಂಜೂರು ಮಾಡಿದ್ದಾರೆ. ಅದರಿಂದ ವ್ಯತ್ಯಾಸ ಇರುತ್ತದೆ.

ಶ್ರೀ ಎ. ಕೆ. ಅನಂತಕೃಷ್ಣ:– ಅವರು ಇದನ್ನು ತಮ್ಮ ಅಂತರಂಗದಿಂದ ಹೇಳುತ್ತಿದ್ದಾರೆಯೇ ಕೇಳಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮತ್ತೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರು ರೆಕ್ಟಿಫೈಡ್ ಸ್ಪಿರಿಟನ್ನು ಮೇಲ್ಕಂಡ ಘಟಕಗಳು ಉಪಯೋಗಿಸಿವೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಹೇಳಿದ್ದೇವೆ. ಉಪಯೋಗಿಸಿದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದರೂ ಮಾನ್ಯ ಸದಸ್ಯರು ಕೇಳಿದರು ಎನ್ನುವ ಕಾರಣದಿಂದ ಪುನಃ ಪರಿಶೀಲನೆ ಮಾಡಿ ಯಾರ್ಯಾರು ಈ ನಿಯಮಗಳಿಗೆ ವಿರುದ್ಧ ಮಾಡಿದ್ದಾರೆ ಎಂದು ನೋಡಿ ಹಾಗೆ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಕೆ. ಅನಂತಕೃಷ್ಣ:– ಮಾನ್ಯ ಅಧ್ಯಕ್ಷರೇ, ಸಾಕಷ್ಟು ರಾಜಕೀಯ ಪ್ರಭಾವದಿಂದ ಈ ಲೈಸೆನ್ಸ್‌ಗಳಲ್ಲ ಸಿಕ್ಕಿರುವುದು. ಅದರ ದುರುಪಯೋಗ ನಡೆಯುತ್ತಿದೆ ಎಂದು ಎಲ್ಲರಿಗೂ ಗೊತ್ತಿದೆ. ಇದರಿಂದ ರಾಜ್ಯಕ್ಕೂ ನಷ್ಟವಾಗುತ್ತಿದೆ. ಸಾರ್ವಜನಿಕರಿಗೂ ನಷ್ಟವಾಗುತ್ತಿದೆ. ಅದನ್ನು ಇನ್ನು ಪರಿಶೀಲನೆ ಮಾಡುತ್ತೇವೆ ಎಂದರೆ ಅರ್ಥ ಏನಿದೆ ? ಮಾನ್ಯ ಸಚಿವರಾದ ರಾಮಸ್ವಾಮಿಗಳ ಹೃದಯದಿಂದ ಬಂದ ಮಾತುಗಳೇ ? ಅವರ ಅಂತರಂಗದಿಂದ ಬಂದ ಮಾತುಗಳೇ ಇವು ? ಸ್ವಲ್ಪ ನಿಜಸ್ಥಿತಿ ಇದ್ದ ಹಾಗೆ ಹೇಳಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ನಮ್ಮ ಅಂತರಂಗದ ಮಾತನ್ನು ಸರ್ಕಾರದ ಪರವಾಗಿ ಉತ್ತರ ಹೇಳುವಾಗ ಹೇಳುವುದಕ್ಕೆ ಆಗುವುದಿಲ್ಲ. ಸರ್ಕಾರದ್ದು ಮಾತ್ರ ಹೇಳಬೇಕು.

ಶ್ರೀ ಶಿವಶೇಖರಪ್ಪ ಶಿವ ಶಿರಸಾಳ:– ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತಿರುವುದು 91–92ರಲ್ಲಿ 1,20,000 ಇದ್ದದ್ದು 3,60,000 ಆಗಿದೆ. ಈ ಐದು ಯೂನಿಟ್‌ಗಳಿಗೆ ಒಂದು ವರ್ಷದಲ್ಲಿ ಇಷ್ಟು ಜಾಸ್ತಿ ಕೊಡುವುದಕ್ಕೆ ಕಾರಣವೇನು ? ಸರ್ಕಾರ ಇದರ ಬಗ್ಗೆ ವಿವರವನ್ನು ಒದಗಿಸಬೇಕು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಕೆಮಿಕಲ್ ಯೂನಿಟ್‌ಗೆ ಮತ್ತು ಔಷಧ ತಯಾರು ಮಾಡತಕ್ಕಂಥ ಯೂನಿಟ್‌ಗಳಿಗೆ ಇದನ್ನು ಮಂಜೂರು ಮಾಡುತ್ತಿದ್ದಾರೆ. ಒಂದು ವರ್ಷಕ್ಕೆ ಮತ್ತು ಇನ್ನೊಂದು ವರ್ಷಕ್ಕೆ ವ್ಯತ್ಯಾಸ ಏಕೆ ಆಯಿತು ಎಂದು ತಾವು ಕೇಳುತ್ತಿದ್ದೀರಿ. ತಯಾರು ಮಾಡತಕ್ಕಂಥ ಘಟಕಗಳು ತಮ್ಮ ಉತ್ಪಾದನೆಯನ್ನು ಜಾಸ್ತಿ ಮಾಡಿದಾಗ ಜಾಸ್ತಿ ಒದಗಿಸಿದೆ. ಉತ್ಪಾದನೆ ಕಡಿಮೆ ಮಾಡಿದಾಗ ಕಡಿಮೆ ಒದಗಿಸಿದೆ.

ಶ್ರೀ ಎ. ಕೆ. ಅನಂತಕೃಷ್ಣ:– ಅವೆಲ್ಲವೂ ಕಳ್ಳ ಮಾರುಕಟ್ಟೆ ಘಟಕಗಳು.

ಹಲವು ಮಾನ್ಯ ಸದಸ್ಯರು:– ಅದರ ಸಾಮರ್ಥ್ಯ ಹೆಚ್ಚಿಲ್ಲ. ಇದು ಬ್ಲಾಕ್ ಮಾರ್ಕೆಟ್

ನೀಡುವುದಕ್ಕೋಸ್ಕರ ಹೋಗಿರಬಹುದೆಂದು ಕಾಣುತ್ತದೆ. ಏಕೆಂದರೆ ಕೆಮಿಕಲ್‌ನಲ್ಲಾಗಲಿ, ಮೆಡಿಸಿನ್‌ನಲ್ಲಾಗಲಿ ಮಾಡಿಕೊಳ್ಳುವುದಕ್ಕೆ ಅದು ನೇರವಾಗಿ ಒನ್ ಟು ಡಬಲ್ ಒಂದು ವರ್ಷಕ್ಕೆ ಆಗುವುದಕ್ಕೆ ಸಾಧ್ಯವೇ ಇಲ್ಲ.

ಅಧ್ಯಕ್ಷರು:-- ಬೈರೇಗೌಡರೇ, ಕೇಳಿ.

ಶ್ರೀ ಸಿ. ಬೈರೇಗೌಡ:-- ರೆಕ್ಟಿಫೈಡ್ ಸ್ಪಿರಿಟನ್ನು ಏತಕ್ಕೆ ಕೊಟ್ಟಿದ್ದಾರೆ ಏನು ಎಂದು ಹಗಲು ಬೆಳಕು ಎಷ್ಟು ಸ್ಪಷ್ಟವೋ ಅಷ್ಟೇ ಸ್ಪಷ್ಟ. ಅದಕ್ಕೆ ಎಷ್ಟು ಉತ್ತರ ಹೇಳಿದರೂ ಕೂಡ ಸತ್ಯವನ್ನು ನೀವು ಬಚ್ಚಿಡುವುದಕ್ಕಾಗುವುದಿಲ್ಲ ಬಿಡಿ. ಈಗ ಇನ್ನು ಮುಂದೆ ನೀವು ಈ ರೆಕ್ಟಿಫೈಡ್ ಸ್ಪಿರಿಟ್‌ನ್ನು ಕೊಡತಕ್ಕಂಥದ್ದಕ್ಕೆ ಸರ್ಕಾರದ ನೀತಿಯೇನು ? ಮಾನ್ಯ ರಾಮಸ್ವಾಮಿಗಳು ಈಗಾಗಲೇ ಹೇಳಿದ್ದಾರೆ, ಒಪ್ಪಿಕೊಂಡಿದ್ದಾರೆ. ಅಂತರಂಗ ಬೇರೆ, ಸರ್ಕಾರದ ಪರವಾಗಿ ಉತ್ತರ ಕೊಡತಕ್ಕಂಥದ್ದೇ ಬೇರೆ ಎನ್ನತಕ್ಕಂಥ ಮಾತನ್ನು ಒಪ್ಪಿದ್ದಾರೆ. ಇನ್ನು ಮುಂದೆ ನೀವು ಏನು ಮಾಡುತ್ತೀರಿ ? ಯಾವ ಆಧಾರದ ಮೇಲೆ ಕೊಡುತ್ತೀರಿ ? ಹಿಂದೆ ಕೊಟ್ಟಿರತಕ್ಕ ಆಧಾರದ ಮೇಲೆ ಕೊಡುತ್ತೀರಾ ? ಅಥವಾ ಅವಶ್ಯಕತೆ ನೋಡಿಕೊಂಡು 100ಕ್ಕೆ 100ರಷ್ಟು ಜೆನ್ಯೈನ್ ಆಗಿರುವ ಯೂನಿಟ್‌ಗೆ ಮಾತ್ರ ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತೀರಾ ಅಥವಾ ಬೇಕಾಬಟ್ಟಿ ಕೊಡುತ್ತೀರಾ ಎನ್ನುವುದು ಒಂದು. ಈಗ ಕೊಡತಕ್ಕದ್ದು ನೀತಿಗೆ ಎನ್ನುವುದು ನನಗೆ ಗೊತ್ತಿದೆ. ಈಗ ಇನ್ನೊಂದು ಪ್ರಾರಂಭ ಆಗಿದೆ. ಈಗ ಮೀಡಿಯಂ ಗ್ರೇಡ್ ಆಲ್ಕೋಹಾಲ್ ಎಂದು ಕೊಡತಕ್ಕದ್ದು ಹೆಸರಿಗೆ ಮಾತ್ರ ಅದು ಮೀಡಿಯಂ ಗ್ರೇಡ್ ಆಲ್ಕೋಹಾಲ್. ಆದರೆ ಕೊಡುತ್ತಾ ಇರತಕ್ಕದ್ದು ರೆಕ್ಟಿಫೈಡ್ ಸ್ಪಿರಿಟನ್ನೇ ಕೊಡುತ್ತಿದ್ದಾರೆ, ಹೆಸರು ಮಾತ್ರ ಬೇರೆ. ಸರ್ಕಾರ ಇದನ್ನು ಗಮನಿಸಿ ತಕ್ಷಣ ಇದರಲ್ಲಿ ಏನೇನು ದುರ್ವ್ಯವಹಾರ ನಡೆಯುತ್ತಿದೆ ಅದನ್ನು ನಿಲ್ಲಿಸುವುದಕ್ಕೆ ತಾವು ದಯವಿಟ್ಟು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:-- ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬೈರೇಗೌಡರು ಹೇಳಿರತಕ್ಕಂಥ ವಿಷಯವನ್ನು ಸರ್ಕಾರದವರು ಪೂರ್ಣವಾಗಿ ಒಪ್ಪುತ್ತೇವೆ. ಏಕೆಂದರೆ ದುರುಪಯೋಗ ಮಾಡತಕ್ಕದ್ದು, ಬೇರೆ ಬೇರೆ ರೀತಿಯ ಹೆಸರಿನಲ್ಲಿ ಮೋಸ ಮಾಡತಕ್ಕದ್ದು, ಗ್ರಾಹಕರಿಗೆ ಆಗಲಿ ಅಥವಾ ಸರ್ಕಾರಕ್ಕೆ ಆಗಲಿ ತೆರಿಗೆಯನ್ನು ಕೊಡದೆ ತಪ್ಪಿಸಿಕೊಳ್ಳುವುದು, ಎಲ್ಲವನ್ನೂ ಮೂಲೋತ್ಪಾಟನೆ ಮಾಡುತ್ತೇವೆಂದು ಈಗಾಗಲೇ ನಮ್ಮ ಮುಖ್ಯಮಂತ್ರಿಗಳು ಅನೇಕ ಬಾರಿ ಘೋಷಣೆ ಮಾಡಿದ್ದಾರೆ. ಇದರಲ್ಲಿ ಯಾವುದೇ ವ್ಯತ್ಯಾಸ ಇಲ್ಲ. ಈ ರೀತಿಯ ಅಂಶಗಳು ತಮ್ಮ ಗಮನಕ್ಕೆ ಬಂದರೆ ನಮಗೆ ತಿಳಿಸಿ ಸರ್ಕಾರದವರು ಮುಂದಿನ ಕ್ರಮ ತೆಗೆದುಕೊಂಡು ಈ ಮಧ್ಯದ ಲಾಬಿ ಏನು ಇದೆ ಅದನ್ನು ನಡೆಸುವುದಕ್ಕೆ ಬಿಡುವುದಿಲ್ಲ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ:-- ನನ್ನ ಪ್ರಶ್ನೆಗೆ ಉತ್ತರ ಹೇಳಲಿಲ್ಲ. ಈಗ ಕೊಡತಕ್ಕದ್ದನ್ನು ಇದೇ ರೀತಿ ಮುಂದುವರಿಸುತ್ತೀರೋ ಅಥವಾ ಇಲ್ಲವೋ ಎಂದು ಹೇಳಲಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:-- ನಿಮ್ಮ ಪ್ರಶ್ನೆಗೆ ಉತ್ತರದಲ್ಲಿ ಅಡಕವಾಗಿದೆ. ಈಗ ಯಾರ್ಯಾರು ರೆಕ್ಟಿಫೈಡ್ ಸ್ಪಿರಿಟ್ ಅಲಾಟ್‌ಮೆಂಟ್ ಇಟ್ಟುಕೊಂಡಿದ್ದಾರೋ, ಅವರು ಯಾರು ಉಪಯೋಗಿಸುತ್ತಾ ಇಲ್ಲವೋ ಬೇರೆಯವರಿಗೆ ವರ್ಗ ಮಾಡಿ ಮಾರುತ್ತಿದ್ದಾರೋ ಅಂಥವರ ಕೋಟಾವನ್ನು ಸರ್ಕಾರದವರು ಖಚಿತವಾಗಿ ನಿಲ್ಲಿಸುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ:-- ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಈ ಹಿಂದೆ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದ್ದು ಅದರಿಂದ, ಈ ಕೈಗಾರಿಕಾ ಉದ್ದೇಶಗಳಿಗೋಸ್ಕರ ಏನು ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತಿದ್ದಾರೆ ಅವುಗಳನ್ನು ಸರಿಯಾಗಿ

ಉಪಯೋಗಿಸುತ್ತಾ ಇಲ್ಲ ಎನ್ನುವ ವರದಿ ಬಂತು. ವರದಿ ಬಂದ ಮೇಲೆ ಕೆಲವು ಘಟಕಗಳಿಗೆ ಸರ್ಕಾರ ನಿಲ್ಲಿಸಿತ್ತು. ಆದರೆ ತದನಂತರ ಅಂತಹ ಘಟಕಗಳಿಗೆ ಕೈಗಾರಿಕಾ ಉದ್ದೇಶಕ್ಕೋಸ್ಕರ ದುರುಪಯೋಗ ಆಗಿದೆ ಎಂದು ಕಂಡು ಬಂದಿತ್ತೋ ತಾವು ಪುನಃ ಅಂತಹ ಕೈಗಾರಿಕಾ ಘಟಕಗಳಿಗೆ ರೆಕ್ಟಿಫೈಡ್ ಸ್ಪಿರಿಟ್ ಅನ್ನು ಕೊಟ್ಟಿದ್ದೀರಿ. ಅಂದ ಮೇಲೆ ಪುನಃ ಹೊಸ ಸಮಿತಿಯನ್ನು ಮಾಡುವುದು ನಿಮ್ಮ ಉದ್ದೇಶ ಏನು ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ:— ಅಧ್ಯಕ್ಷರೇ, ಕಳೆದ ಮೂರು ತಿಂಗಳ ಹಿಂದೆ ಎಷ್ಟು ರೆಕ್ಟಿಫೈಡ್ ಸ್ಪಿರಿಟ್ ಕೊಡುತ್ತಿದ್ದರೋ ಅದರ ಮೂರನೆಯ ಒಂದು ಭಾಗಕ್ಕೆ ಈಗ ಇಳಿದಿದೆ. ಮೂರನೇ ಎರಡು ಭಾಗವನ್ನು ನಿಲ್ಲಿಸಲಾಗಿದೆ. ಮಾನ್ಯ ಬೈರೇಗೌಡರು ಹೇಳಿದ ಹಾಗೆ ತಮ್ಮ ಗಮನಕ್ಕೂ ಬಂದಿದೆ.

Sri H. Ekanthaiah:– I want to make it very clear.

ಈ ಹಿಂದೆ ರೆಕ್ಟಿಫೈಡ್ ಸ್ಪಿರಿಟ್‌ಅನ್ನು ಕೈಗಾರಿಕಾ ಉದ್ದೇಶಕ್ಕೋಸ್ಕರ ಸರ್ಕಾರದವರು ಏನು ಕೊಟ್ಟಿದ್ದರು ಅವರು ಆ ಕೈಗಾರಿಕಾ ಉದ್ದೇಶಕ್ಕೋಸ್ಕರ ಉಪಯೋಗಿಸುತ್ತಾ ಇರಲಿಲ್ಲ ಎಂದು ಸರ್ಕಾರದ ಒಂದು ಸಮಿತಿ ವರದಿ ಕೊಟ್ಟಿದೆ. ಆ ಸಮಿತಿಯು ವರದಿ ಕೊಟ್ಟ ಮೇಲೆ ರೆಕ್ಟಿಫೈಡ್ ಸ್ಪಿರಿಟ್‌ಅನ್ನು ಕೊಡುವುದನ್ನು ನಿಲ್ಲಿಸಿದ್ದೀರಿ. ಆದರೆ ಪುನಃ ಅಂತಹ ಘಟಕಗಳಿಗೆ ತಾವು ಕೊಟ್ಟಿದ್ದೀರಿ. I am making an allegation.

ಇದು ನಿಜವೇ ?, it is on record.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:— ಕೆಲವು ಯೂನಿಟ್‌ಗಳು ಸರಿಯಾಗಿ ಕೆಲಸ ಮಾಡುತ್ತಾ ಇರಲಿಲ್ಲ ಎಂದು ಗೊತ್ತಾಗಿ ಅದರ ಮೇಲೆ ಇನ್ಸ್‌ಪೆಕ್ಷನ್ಸ್ ಮಾಡಿಸಿ ಕ್ರಮಗಳನ್ನು ಈಗಾಗಲೇ ತೆಗೆದುಕೊಂಡು ಬಹಳ ಕಡಿಮೆ ಕೊಡಲಾಗಿದೆ. ಮೂರನೆಯ ಎರಡು ಭಾಗವನ್ನು ಕಡಿಮೆ ಮಾಡಿ ಮೂರನೇ ಒಂದಕ್ಕೆ ಇಳಿದಿದೆ, ಮತ್ತು ಈಗ ಪ್ರತಿ ದಿನವೂ ಇದರ ಬಗ್ಗೆ ಪರಿಶೀಲನೆ ನಡೆಯುತ್ತಾ ಇದೆ. ಪರಿಶೀಲನೆ ನಡೆದು ಯಾರು ಈ ರೆಕ್ಟಿಫೈಡ್ ಸ್ಪಿರಿಟ್‌ಅನ್ನು ತೆಗೆದುಕೊಂಡರೋ ಯಾರು ಅದನ್ನು ಉಪಯೋಗಿಸುವುದಿಲ್ಲವೋ ಅವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

(ಗೊಂದಲ)

ಹೆಗ್ಗಡದೇವನ ಕೋಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆಯಿಂದ ಅವಶ್ಯಕ ವಸ್ತುಗಳ ವಿತರಣೆ.

182 (1351): ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹೆಗ್ಗದೇವನ ಕೋಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡಲು ಅವಕಾಶ ನೀಡದಿರಲು ಕಾರಣವೇನು ?

ಆ. ಹೆಗ್ಗಡದೇವನಕೋಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲವೇ ?

ಇ. ಸಹಕಾರ ಸಂಘಗಳನ್ನು ಉನ್ನತ ಸ್ಥಿತಿಗೆ ತರಲು ಸರ್ಕಾರದ ಉದ್ದೇಶವಿಲ್ಲವೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):--

ಅ. ಹೆಗ್ಗಡದೇವನಕೋಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯವರು ಆಹಾರ ಪದಾರ್ಥಗಳನ್ನು ನಿಗದಿತ ಸಮಯದಲ್ಲಿ ಎತ್ತುವಳಿ ಮಾಡದೆ ಸಾರ್ವಜನಿಕ ವಿತರಣಾ ಪದ್ಧತಿಗೆ ಲೋಪ ಉಂಟುಮಾಡಿದ್ದರ ಮೇರೆಗೆ ಅವರಿಗೆ ಅನೇಕ ಬಾರಿ ಎಚ್ಚರಿಕೆ ನೀಡಿದ್ದರೂ ಸಹ ಅವರು ಆಹಾರ ಧಾನ್ಯಗಳನ್ನು ಎತ್ತುವಳಿ ಮಾಡದೆ ಹೋದ ಸಂದರ್ಭದಿಂದಾಗಿ ಸಾರ್ವಜನಿಕ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು 1992ನೇ ಮೇ ಮಾಹೆಯಿಂದ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತರವರನ್ನು ಸಗಟು ನಾಮಿನಿಯಾಗಿ ನೇಮಕ ಮಾಡಲಾಗಿರುತ್ತದೆ.

ಆ. ಸರಿ ಇಲ್ಲ.

ಇ. ಇದೆ. ಆದರೆ ಯಾವುದೇ ಸಗಟು ನಾಮಿನಿಗಳು ಸರಿಯಾದ ಸಮಯದಲ್ಲಿ ಕಾರ್ಯನಿರ್ವಹಿಸದಿದ್ದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅಂತಹ ಸಗಟು ನಾಮಿನಿಯನ್ನು ಬದಲಾಯಿಸಬೇಕಾಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್:— ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದೇ ಇರುವುದರಿಂದ ಆಹಾರ ನಿಗಮಕ್ಕೆ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಎರಡನೆಯ ಪ್ರಶ್ನೆಯಲ್ಲಿ ಹೆಗ್ಗಡದೇವನಕೋಟೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಆರ್ಥಿಕ ಪರಿಸ್ಥಿತಿ ಸರಿಯಿಲ್ಲವೇ ಎಂದು ಕೇಳಿದ್ದಕ್ಕೆ 'ಸರಿಯಿಲ್ಲ' ಎಂದು ಉತ್ತರ ನೀಡಿದ್ದಾರೆ. ಈಗ ಆ ಒಂದು ಮಾರುಕಟ್ಟೆ ಸಮಿತಿಗೆ ಎಂಡಿಸಿಸಿ. ಬ್ಯಾಂಕ್, ಮೈಸೂರಿನಿಂದ 15 ಲಕ್ಷ ರೂಪಾಯಿ ಸಾಲವನ್ನು ವ್ಯವಹಾರ ಮಾಡುವುದಕ್ಕೆ ಮಂಜೂರಾತಿ ಮಾಡಿದ್ದಾರೆ. ಅದರ ಬಗ್ಗೆ ಮೈಸೂರು ಜಿಲ್ಲಾಧಿಕಾರಿಗಳು ಪತ್ರವನ್ನು ಬರೆದಿದ್ದಾರೆ. ನಾವು ಸಾಲವನ್ನು ಮಂಜೂರಾತಿ ಮಾಡಿದ್ದೇವೆಂದು ಹೇಳಿದ್ದಾರೆ ಈ ಉತ್ತರ ಸರಿಯಾಗಿ ಇಲ್ಲ.

ಆಹಾರ ಇಲಾಖೆಯವರು ಕೆಎಸ್‌ಎಫ್‌ಸಿಯವರೊಂದಿಗೆ ಶಾಮೀಲಾಗಿದ್ದಾರೆ, ತಹಶೀಲ್ದಾರ್‌ರವರು ಇದರ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇದೆ ಎನ್ನುವಂತಹ ಉತ್ತರವನ್ನು ಬರೆದಿದ್ದಾರೆ ಮತ್ತು ಜಿಲ್ಲಾಧಿಕಾರಿಗಳು 15 ಲಕ್ಷ ರೂಪಾಯಿ ಮಂಜೂರಾತಿಯಾಗಿದೆ ಎಂದು ಬ್ಯಾಂಕ್‌ನವರಿಗೆ ಪತ್ರ ಬರೆದಿದ್ದಾರೆ. ಹೀಗಿದ್ದರೂ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಮೂರನೆಯದಾಗಿ ಅಲ್ಲಿ ಬೇಕಾದಷ್ಟು ಜನ ನೌಕರರು ಇದ್ದಾರೆ. ಈಗ ಅವರಿಗೆಲ್ಲಾ ಕೆಲಸ ಇಲ್ಲ. ಕೆಎಸ್‌ಎಫ್‌ಸಿಯವರು ಈಗ ವಿತರಣೆಯನ್ನು ಮಾಡಲಿಕ್ಕೆ ಹೊರಟಿದ್ದಾರೆ. ಅವರು ಈಗ ಅವರ ಕಛೇರಿಯವರನ್ನು ಕರೆದುಕೊಂಡು ಒಂದು ಬಾಡಿಗೆಗೆ ತೆಗೆದುಕೊಂಡು ಗೋಡೌನ್‌ನಲ್ಲಿ ಇಟ್ಟು ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತಿದ್ದಾರೆ. ಟಿಎಪಿಎಸ್‌ಗೆ ಹಣ ಇದೆ ಎಂದು ಹೇಳಿ ಮಾನ್ಯ ಸಚಿವರಿಗೆ ನಾನು ಪತ್ರವನ್ನು ಬರೆದಿದ್ದೇನೆ. ಅವರು 15 ಲಕ್ಷ ರೂಪಾಯಿ ಮಂಜೂರಾಗಿದೆ 20 ಜನ ನೌಕರರು ಇದ್ದಾರೆ. ಸರಿಯಾಗಿ ವಿತರಣೆ ಮಾಡುತ್ತಾರೆ, ನೀವು ಅವರಿಗೆ ಆಹಾರ ಪದಾರ್ಥಗಳು ಕೊಡಿ ಎಂದು ಹೇಳಿದಾಗ ಅವರು ಸರಿಯಾದ ಜವಾಬ್ದಾರಿಯುತವಾದ ಉತ್ತರ ಕೊಡಲಿಲ್ಲ. ಇವರು ಸಹಕಾರ ಸಂಘಗಳನ್ನು ಉತ್ತೇಜನ ಮಾಡಬೇಕೆಂದು ಒಂದು ಕಡೆ ಹೇಳಿದ್ದಾರೆ. ಈ ನೀತಿ ಏತಕ್ಕೆ?

ಅಧ್ಯಕ್ಷರು:— ತಾವು ಉಪಪ್ರಶ್ನೆಯನ್ನು ಕೇಳಿ.

ಶ್ರೀ ಎಂ. ಪಿ. ವೆಂಕಟೇಶ್:— ಸಹಕಾರ ಸಂಘಕ್ಕೆ ಆಹಾರ ಪದಾರ್ಥಗಳನ್ನು ಕೊಡುವುದಕ್ಕೆ ತೊಂದರೆ ಏನು? ಈಗ ಆರ್ಥಿಕ ಪರಿಸ್ಥಿತಿ ಸರಿ ಇದೆ.

ಶ್ರೀಮತಿ ಮನೋರಮಾ ಮಧ್ವರಾಜ್:- ಮಾನ್ಯ ಅಧ್ಯಕ್ಷರೆ, ನಮ್ಮ ಹೆಗ್ಗಡದೇವನ ಕೋಟೆ ಟಿ.ಎ.ಪಿ.ಸಿ.ಎಂ.ಎಸ್. ಅವರು ಮೇ 1991ರಿಂದ ಏಪ್ರಿಲ್ 1992ರ ತನಕ ನಾವು ಕೊಟ್ಟ 5902 ಮೆಟ್ರಿಕ್ ಟನ್ಸ್ ಅಕ್ಕಿಯನ್ನು ಲ್ಯಾಪ್ಸ್ ಮಾಡಿದ್ದಾರೆ. ಗೋದಿ 1006, ಅದೇ ರೀತಿ ಸಕ್ಕರೆ 1247 ಮೆಟ್ರಿಕ್ ಟನ್‌ಗಳನ್ನು ಲ್ಯಾಪ್ಸ್ ಮಾಡಿದ್ದಾರೆ. ಅವರು ಲ್ಯಾಪ್ಸ್ ಮಾಡಿದಾಗ ಸಾರ್ವಜನಿಕ ವಿತರಣೆ ಪದ್ಧತಿಯ ವ್ಯವಸ್ಥೆಯಲ್ಲಿ ಜನರಿಗೆ ಅನ್ಯಾಯವಾದಾಗ ನಾಳೆ ನಮ್ಮ ಸದನದ ಸದಸ್ಯರುಗಳು ಸಾರ್ವಜನಿಕರು ಕೂಡ ಅವರ ಮೇಲೆ ಗಲಾಟೆ ಮಾಡುತ್ತಿರುತ್ತಾರೆ. ಅದನ್ನು ನೋಡಿ ಕಳೆದ ಮೇ ತಿಂಗಳಿಂದ ನಮ್ಮ ಕರ್ನಾಟಕ ಫುಡ್ ಕಾರ್ಪೊರೇಷನ್‌ನವರಿಗೆ ನಾವು ಹಂಚುವುದಕ್ಕೆ ಕೊಟ್ಟಿದ್ದೇವೆ.

ಶ್ರೀ ಎಂ. ಪಿ. ವೆಂಕಟೇಶ್:- ಮಾನ್ಯ ಅಧ್ಯಕ್ಷರೆ, ಹಿಂದೆ ಸತಕ್ಕೆ ಲಾಸ್ ಆಗುತ್ತಿತ್ತು ಅಂದರೆ ಇವರು ಸಕ್ಕರೆಯನ್ನು ಬೆಳಗಾಂನಲ್ಲಿ ಕೊಡುತ್ತಾರೆ. ನಮ್ಮಲ್ಲಿ ಪಾಂಡವಪುರ, ಮಂಡ್ಯದಲ್ಲಿ ಸಕ್ಕರೆ ಇದೆ. ಇವರು ಅಲಾಟ್‌ಮೆಂಟ್ ಮಾಡುವುದು ಬೆಳಗಾಂಗೆ. ಬೆಳಗಾಂನಿಂದ ಸಕ್ಕರೆಯನ್ನು ತರುವುದಕ್ಕೆ ಹೋದರೆ ಆ ಸೊಸೈಟಿಗಳು ಮುಳುಗಿ ಹೋಗುತ್ತವೆ. ಸಕ್ಕರೆಗೆ ಇವರು ಕೊಡುವ ಲಾಭ ಹತ್ತು ರೂಪಾಯಿ. ಅದಕ್ಕೆ ತರುವುದಕ್ಕೆ 25 ರೂಪಾಯಿ ಖರ್ಚಾಗುತ್ತದೆ, ಸಕ್ಕರೆ ಬೆಳಗಾಂನಿಂದ ಬರಬೇಕು. ಈ ಸಹಕಾರ ಸಂಘ ಹೇಗೆ ಉತ್ತೇಜನವಾಗುತ್ತದೆ. ಇವರು ಗೋಧಿಯನ್ನು ಕೊಡುವುದು ಬೇರೆ ಕಡೆ, ಸಕ್ಕರೆ ಕೊಡುವುದು ಬೇರೆ ಕಡೆ ಟ್ರಾನ್ಸ್‌ಪೋರ್ಟೇಷನ್‌ನಿಂದ ಹಣ ಬಂದಿಲ್ಲ ಮತ್ತು ಸರ್ಕಾರ ಎಷ್ಟು ಪರ್ಸೆಂಟೇಜ್ ಅಂತ ಟ್ರಾನ್ಸ್‌ಪೋರ್ಟೇಷನ್‌ಗೆ ಎಂದು ಕೊಡುತ್ತದೆ. ಆ ಸಬ್ಸಿಡಿ ಹಣವೂ ಸಹ ರಿಲೀಸ್ ಆಗಿಲ್ಲ. ಒಂದು ಕಡೆ ಸಬ್ಸಿಡಿ ಹಣಕ್ಕೆ ಬಡ್ಡಿಯಾಗುತ್ತದೆ. ಇವರು ಕೊಡುವಂತಹ ಆಹಾರ ಪದಾರ್ಥಗಳ ಟ್ರಾನ್ಸ್‌ಪೋರ್ಟೇಷನ್ನಿಗೆ ದುಡ್ಡು ಜಾಸ್ತಿಯಾಗುತ್ತದೆ. ಈ ರೀತಿಯಿಂದ ಆ ಸಹಕಾರ ಸಂಘ ಲಾಸ್ ಆಗಿದೆ. ಈಗ ಅವರ ಆರ್ಥಿಕ ಪರಿಸ್ಥಿತಿ ಸರಿ ಇದೆ. ಈಗ ಒಂದು ಮೂಟೆಗೆ 18 ರೂಪಾಯಿ ಕೊಡುತ್ತಿದ್ದಾರೆ. ಈಗ ಲಾಭದಾಯಕವಾಗಿ ನಡೆಯುತ್ತಿದೆ. ಅಲ್ಲಿ 20 ಜನ ನೌಕರರು ಇದ್ದಾರೆ. ಅವರಿಗೆ 8 ತಿಂಗಳಿಂದ ಸಂಬಳ ಕೊಟ್ಟಿಲ್ಲ. ಆ ಸೊಸೈಟಿಯವರು ರೆಸಲ್ಯೂಷನ್ ಮಾಡುವುದಕ್ಕೆ ಹೊರಟಿದ್ದಾರೆ. ಈಗ ಅವರ ಪರಿಸ್ಥಿತಿ ಸುಧಾರಣೆಯಾಗುತ್ತಿದೆ. ಪ್ರತಿ ತಿಂಗಳು 40 ಸಾವಿರ ರೂಪಾಯಿ ಲಾಭ ಬರುತ್ತದೆ. ಹಿಂದೆ 18 ಸಾವಿರ ರೂಪಾಯಿ ಲಾಸ್ ಪ್ರತಿ ತಿಂಗಳು ಆಗುತ್ತಿತ್ತು. ಈಗ 40 ಸಾವಿರ ರೂಪಾಯಿ ಲಾಭ ಬರುತ್ತದೆ. ಸರ್ಕಾರ ಬೆಲೆಯನ್ನು ಜಾಸ್ತಿ ಮಾಡಿರುವುದರಿಂದ ಲಾಭ ಬರುತ್ತದೆ. ನಾವು ಉತ್ತಮವಾಗಿ ನಡೆಸುತ್ತೇವೆ ಸಾಲ ಮಂಜೂರಾಗಿದೆ, ನಮಗೆ ಕೊಡಿ ಎಂದು ಕೇಳಿದರೆ, ಇವರಿಗೆ ಕೊಡುವುದಕ್ಕೆ ತೊಂದರೆ ಏನು? ಈಗ ಆರ್ಥಿಕ ಪರಿಸ್ಥಿತಿ ಸರಿ ಇದೆ ಎಂದು ಹೇಳುತ್ತಾರೆ.

ಶ್ರೀಮತಿ ಮನೋರಮಾ ಮಧ್ವರಾಜ್:- ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದ ಒಪ್ಪಿಗೆಯನ್ನು ಪಡೆದು ನಮ್ಮ ರಾಜ್ಯ ಸರ್ಕಾರ ಆದೇಶವನ್ನು ಹೊರಡಿಸಿದೆ. ಆಥರೈಸ್ಡ್ ಹೋಲ್ ಸೇಲ್ ಡೀಲರ್ ಪ್ರಿಯಾರಿಟಿಯ ಮೇಲೆ ಕೊಡುವುದಾದರೆ ಕರ್ನಾಟಕ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಕಾರ್ಪೊರೇಷನ್, ಎರಡನೆಯದು ಕೋ-ಆಪರೇಟಿವ್ ಸೊಸೈಟಿ registered under the Karnataka Co-operative Societies Act which have been in existence for the last one year. ಆಗಿರುವಾಗ ಆ ಪ್ರಕಾರ ನಾವು ಕೊಡಲೇ ಬೇಕಾಗುತ್ತದೆ. ಆದೇಶವನ್ನು ಹೊರಡಿಸಿದ ಮೇಲೆ ನಮ್ಮದೆ ಒಂದು ಗೌರ್ನಮೆಂಟ್ ಅಂಡರ್-ಟೇಕಿಂಗ್ಸ್ ನಡೆಸುವುದಾದರೆ ಅದನ್ನು ಬಿಟ್ಟು ನಾವು ಬೇರೆಯವರಿಗೆ ಕೊಡಲಿಕ್ಕೆ ಆಗುವುದಿಲ್ಲ. ಈಗಾಗಲೇ ಆಫೀಸರ್ಸ್ ಎಲ್ಲಾ ಅಲ್ಲಿ ಸೆಟ್ ಆಗಿದ್ದಾರೆ. ಆದ್ದರಿಂದ ಅದನ್ನು ನಾವು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್:- ಮಾನ್ಯ ಆಹಾರ ಇಲಾಖೆಯ ಸಚಿವರಿಗೆ, ಸಹಕಾರ ಇಲಾಖೆಯನ್ನು ಸೇರಿಸಿ ಎಗಡನ್ನು ಕೊಟ್ಟರೆ ಸರಿ ಹೋಗಬಹುದು. ಅವರಿಗೆ ಸಹಕಾರ ಇಲಾಖೆಯ ಸೊಸೈಟಿ ಏನೆಂದು

ಗೊತ್ತಾಗುತ್ತಿಲ್ಲ. ಆಹಾರ ನಿಗಮ ಮಾತ್ರ ಇದೆ ಎಂದು ಹೇಳುತ್ತಾರೆ. ಅಲ್ಲಿ ನೌಕರರು ಇದ್ದಾರೆ. ಸಹಕಾರ ಸಂಘಕ್ಕೆ ಉತ್ತೇಜನ ಹೇಗೆ ಕೊಡಬೇಕೆಂದು ಅವರಿಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು:– ತಾವು ಭಾಷಣವನ್ನು ಮಾಡುತ್ತಿ ರೋ, ಉಪಪ್ರಶ್ನೆಯನ್ನು ಕೇಳುತ್ತೀರೋ.

ಶ್ರೀ ಎಂ. ಪಿ. ವೆಂಕಟೇಶ್:– ಅವರಿಗೆ ಅರ್ಥವೇ ಆಗುತ್ತಿಲ್ಲ.

ಅಧ್ಯಕ್ಷರು:– ತಾವು ಹೋಗಿ ಮಾತನಾಡಿ.

ಶ್ರೀ ಎಂ. ಪಿ. ವೆಂಕಟೇಶ್:– ವ್ಯವಸಾಯೋತ್ಪನ್ನ ಮಾರುಕಟ್ಟೆಯಲ್ಲಿ ಹಣ ಇದೆ. ಅವರು ಉತ್ತಮವಾಗಿ ನಡೆಸುತ್ತಾರೆ ಅವರಿಗೆ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಹೆಗ್ಗಡದೇವನಕೋಟೆಯಲ್ಲಿರುವ ಸಹಕಾರ ಸಂಘದವರ ಆರ್ಥಿಕ ಪರಿಸ್ಥಿತಿ ಸರಿಯಾಗಿದೆ. ಅವರು ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತಾರೆ. ನೀವು ಅದನ್ನು ಅವರಿಗೆ ಕೊಡಿ.

ಅಧ್ಯಕ್ಷರು:– ಅವರು ಪರಿಶೀಲನೆ ಮಾಡುತ್ತಾರೆ.

ತಡೆಹಿಡಿಯಲಾದ ಪ್ರಶ್ನೆಗಳು

ಅಧ್ಯಕ್ಷರು:– ಮಾನ್ಯ ಬಸವರಾಜರಾಯರೆಡ್ಡಿಯವರ ಪ್ರಶ್ನೆ ಸಂಖ್ಯೆ 615ಕ್ಕೆ ಕಾಲಾವಕಾಶವನ್ನು ಕೋರಿದ್ದಾರೆ.

ಶ್ರೀ ಬಸವರಾಜರಾಯರೆಡ್ಡಿ:– ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ಪ್ರಶ್ನೆಯಾಗಿದೆ. ನನಗೆ ಅನ್ನಿಸುತ್ತದೆ ಸರ್ಕಾರದವರು ತಮ್ಮ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಸದನಕ್ಕೆ ಸರ್ಕಾರದವರು ವಂಚನೆಯನ್ನು ಮಾಡುತ್ತಿದ್ದಾರೆ. ನಾನು ಯಾವ್ಯಾವ ಮಂತ್ರಿಗಳ ಮೇಲೆ ಕೇಸ್‌ಗಳು ದಾಖಲಾಗಿದೆ, ಯಾವ್ಯಾವ ಸದಸ್ಯರುಗಳ ಮೇಲೆ ಕೇಸ್‌ಗಳು ದಾಖಲೆಯಾಗಿದೆ ಅಂತಹವರ ಬಗ್ಗೆ ಮಾಹಿತಿ ಕೊಡಿ ಅಂದರೆ, ಎಲ್ಲಾ ಮಾಹಿತಿ ಇದ್ದು ಸರ್ಕಾರ ಏತಕ್ಕೆ ಕೊಡುತ್ತಿಲ್ಲ ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಸಾಂದ್ರರವರ ಒಗ್ಗೆ ಗೊತ್ತಾಗಿದೆ. ಅವರ ಬಗ್ಗೆಯೂ ಉತ್ತರಕೊಡಬೇಕು.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಸರ್ಕಾರ ಕೆಲವು ಸಲ ಪ್ರಶ್ನೆಗಳಿಗೆ ಉತ್ತರ ಕೊಡಲು ಸಮಯ ಕೇಳುತ್ತದೆ. ನಾವೂ ಸಹ ಉತ್ತರಕ್ಕಾಗಿ ಕಾಯಬೇಕಾಗುತ್ತದೆ. ಆದರೆ, ಈ ಪ್ರಶ್ನೆ ಮೂರನೆಯ ಬಾರಿ ಸದನದಲ್ಲಿ ಬರುತ್ತಿದೆ. ಕಳೆದ ಸಲ ಈ ಪ್ರಶ್ನೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು 'ಇದರ ಬಗ್ಗೆ ಎಲ್ಲಾ ಮಾಹಿತಿ ಬಂದಿದೆ, ಇನ್ನೂ ಸ್ವಲ್ಪ ಮಾಹಿತಿ ಸಂಗ್ರಹಿಸಬೇಕಾಗಿರುವುದರಿಂದ ಮುಂದಿನ ಸಲ ಉತ್ತರ ಕೊಡುತ್ತೇವೆ' ಎಂದು ಹೇಳಿದರು. ಸದನದಲ್ಲಿ ಪುನಃ ಇದೇ ಪ್ರಶ್ನೆ ಬಂದಿದ್ದು ಉತ್ತರಕ್ಕಾಗಿ ಮತ್ತೆ ಕಾಯಬೇಕೆಂದು ಹೇಳಿದ್ದಾರೆ. ಆದುದರಿಂದ, ಇದರ ಹಿನ್ನೆಲೆ ಏನೆಂದು ಗೊತ್ತಾಗುತ್ತದೆ. ಸರ್ಕಾರದಲ್ಲಿ ಒಂದು ರೀತಿಯ ಆಂತರಿಕ ಸಮಸ್ಯೆ ನಿರ್ಮಾಣವಾಗಿದೆ, ಭಿನ್ನಮತೀಯ ಚಟುವಟಿಕೆಗಳು ಹೆಚ್ಚಾಗುತ್ತಿದೆ, ಈಗಾಗಲೇ ಗಲಾಟೆ ಶುರುವಾಗಿದೆ, ಹಾಗಾಗಿ ಎಂ.ಎಲ್.ಎ.ಗಳು ಮತ್ತು ಮಂತ್ರಿಗಳು ಎಕ್ಸ್‌ಪೋಸ್ ಆಗಬಹುದೆನ್ನುವ ಭಯದಿಂದ ಉತ್ತರ ಕೊಡುತ್ತಿಲ್ಲ. ಇಲ್ಲದಿದ್ದರೆ ಧೈರ್ಯವಾಗಿ 'ನಮ್ಮ ಎಂ.ಎಲ್.ಎ., ಮಂತ್ರಿಗಳು ಎಕ್ಸ್‌ಪೋಸ್ ಆಗುತ್ತಾರೆ, ಈಗಾಗಲೇ ಭಿನ್ನಮತೀಯ ಚಟುವಟಿಕೆಗಳು ಹೆಚ್ಚಾಗಿವೆ' ಎಂದು ಸ್ಪಷ್ಟವಾಗಿ ಹೇಳಿ.' 'ಇದು ಬಹಳ ಸೂಕ್ಷ್ಮವಾದ ಪ್ರಶ್ನೆ, ಇದಕ್ಕೆ ಉತ್ತರ ಕೊಟ್ಟರೆ ಸರ್ಕಾರಕ್ಕೆ ಕಿರಿಕಿರಿಯಾಗುತ್ತದೆ. ಆದುದರಿಂದ, ಉತ್ತರ ಕೊಡುವುದಿಲ್ಲ' ಎಂದು ಹೇಳಿ. ನೀವು ಈ ಅಧಿವೇಶನವನ್ನು ಇನ್ನೆಷ್ಟು ದಿವಸಗಳ ಕಾಲ ನಡೆಸುತ್ತೀರಿ ? ನಾನು ಸನ್ಮಾನ.

ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳಿಗೆ ಸ್ಪಷ್ಟವಾಗಿ ಕೇಳುತ್ತಿದ್ದೇನೆ: ನೀವು ಈ ಪ್ರಶ್ನೆಗೆ ಉತ್ತರ ಕೊಡುತ್ತೀರೋ ಇಲ್ಲವೊ ? ಉತ್ತರ ಕೊಟ್ಟರೆ ಯಾವಾಗ ಕೊಡುತ್ತೀರಿ ? ಕಳೆದ ಬಾರಿ ಮುಖ್ಯಮಂತ್ರಿಗಳು 'ಮುಂದಿನ ಸಲ ಉತ್ತರ ಕೊಡುತ್ತೇವೆ' ಎಂದು ಹೇಳಿದರು. ನಿಮಗೆ ಆ ಮುಂದಿನ ಸಲ ಬರುವುದು ಯಾವಾಗ ?

ಶ್ರೀ ಪಿ. ಜಿ. ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ತಾವು ಮುಖ್ಯವಾಗಿ ವಿರೋಧ ಪಕ್ಷದಲ್ಲಿರುವ ಸದಸ್ಯರುಗಳ ರಕ್ಷಣೆಗೆ ಬರಬೇಕಾಗುತ್ತದೆ. ನಮಗೆ ತಾವು ಈಗ ಮಾತನಾಡುವುದಕ್ಕೆ ಅವಕಾಶ ಕೊಡದೆ ಹೋದರೂ ಪರವಾಗಿಲ್ಲ, ಆದರೆ, ದಯವಿಟ್ಟು ನಮ್ಮ ಮಾತನ್ನು ಕೇಳಬೇಕು. ನಾನು ಈ ಸಂದರ್ಭದಲ್ಲಿ ತರತಕ್ಕಂಥ ವಿಷಯ ಬಹಳ ಔಚಿತ್ಯವಾದುದು. ಸದನದ ಸಮಯವನ್ನು ಹಾಳುಮಾಡಬೇಕೆಂಬ ಉದ್ದೇಶ ನನಗಿಲ್ಲ. ವಿಷಯವೇನೆಂದರೆ, ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಒಂದು ಖಾಸಗಿ ಮೆಡಿಕಲ್ ಕಾಲೇಜಿಗೆ 40 ಜನ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತೆಗೆದುಕೊಳ್ಳುವ ಬಗ್ಗೆ ಅಡ್ಮಿಷನ್ ಅಪ್ರೂವ್ ಆಗಿರಲಿಲ್ಲ. ಆದರೆ ಮುಖ್ಯಮಂತ್ರಿಗಳು ಪರೀಕ್ಷೆಯ ಹಿಂದಿನ ದಿವಸ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್‌ಗೆ ದೂರವಾಣಿ ಕರೆ ಮಾಡಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾನು ಈ ಪ್ರಶ್ನೆ ಎತ್ತುವುದಿಲ್ಲ. ಮೂರು ಸಾರಿ ಈ ಪ್ರಶ್ನೆಯನ್ನು ಹೆಲ್ಡ್ ಓವರ್ ಮಾಡಿದ್ದರೂ ಇದುವರೆವಿಗೂ ಉತ್ತರ ಬಂದಿಲ್ಲವೆಂದರೆ ಏನರ್ಥ ? ಸರ್ಕಾರಕ್ಕೆ ಏನು ಇದರಿಂದ ಕಿರಿಕಿರಿಯಾಗಿದೆ ? ಇದು ಬಹಳ ಸೂಕ್ಷ್ಮವಾದಂಥ ವಿಚಾರ. ಈಗ ನಾವು ನಮ್ಮ ಕ್ಷೇತ್ರದ ಬಗ್ಗೆ ಯಾವುದೋ ಅಂಕಿ-ಅಂಶಗಳನ್ನು ಪಡೆದುಕೊಳ್ಳಲು ಸದನದಲ್ಲಿ ಪ್ರಶ್ನೆ ಕೇಳುವುದಿಲ್ಲ. ಜನರು ಇವತ್ತು ನಮ್ಮಿಂದ ಏನು ಅಪೇಕ್ಷೆ ಮಾಡುತ್ತಿದ್ದಾರೆ, ಎಂದರೆ-

'ಇವೊತ್ತು ವಿರೋಧಪಕ್ಷದವರು ಸರ್ಕಾರ ಮಾಡತಕ್ಕಂಥ ಎಲ್ಲಾ ಅಕೃತ್ಯಗಳ ಜೊತೆ ಶಾಮೀಲಾಗಿದ್ದಾರೆ' ಎಂದು. ನಾವು ಇರತಕ್ಕಂಥಾದ್ದು ಸರ್ಕಾರ ಮಾಡತಕ್ಕಂಥ ತಪ್ಪನ್ನು ಬಯಲಿಗೆಳೆಯುವುದಕ್ಕೆ, ಈಗ ನಾನು ಪ್ರಸ್ತಾಪ ಮಾಡುತ್ತಿರುವ ವಿಚಾರವೆಂದರೆ, ಐ.ಎಂ.ಸಿ. ಕಡೆಯಿಂದ 15 ದಿವಸಗಳ ಸಮಯ ತೆಗೆದುಕೊಂಡು ಅಡ್ಮಿಷನ್ ಅಪ್ರೂವ್ ಆಗಿದೆಯೆಂದು ಹೇಳುತ್ತಾರೆ. ಹಾಗಾದರೆ, ನಾವು ಇಲ್ಲಿ ಏತಕ್ಕೋಸ್ಕರ ಪ್ರಶ್ನೆ ಕೇಳಬೇಕು ? ಪ್ರಶ್ನೋತ್ತರ ಸಮಯವಾದರೂ ಏಕಿರಬೇಕು ? ಸದನಕ್ಕೆ ಮಂತ್ರಿಗಳು ಬರುವುದಿಲ್ಲ, ತಮ್ಮ ಎಚ್ಚರಿಕೆ ಸರ್ಕಾರವನ್ನು ತಟ್ಟುವುದಿಲ್ಲ. ಆದುದರಿಂದ, ಮಾನ್ಯ ಅಧ್ಯಕ್ಷರು ನಮ್ಮಗಳ ರಕ್ಷಣೆಗೆ ಬರಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಶ್ರೀ ಬಸವರಾಜರಾಯರೆಡ್ಡಿ:- ಮಾನ್ಯ ಅಧ್ಯಕ್ಷರೆ, ನಾನು ಹಿಂದೆ ಸದನದಲ್ಲಿ ಈ ಪ್ರಶ್ನೆ ಕೇಳಿದಾಗ 'ಈಗ ಉತ್ತರಗಳೆಲ್ಲವೂ ತಯಾರಾಗಿವೆ, 3-4 ದಿವಸಗಳಲ್ಲಿ ಕೊಡುತ್ತೇನೆ' ಎಂದು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಬೇಕಾದರೆ ಅವರೇನು ಹೇಳಿದ್ದಾರೆಂಬುದರ ಬಗ್ಗೆ ಕಡತ ತೆಗೆಸಿ. ಈಗ 16 ದಿವಸಗಳಾದುವು, ಮತ್ತೆ 15 ದಿವಸಗಳ ಸಮಯ ನೀವು ಕೇಳುತ್ತಿದ್ದೀರಿ. ಇದಕ್ಕೆ ಉತ್ತರ ಕೊಡುವಂಥವರು ಮಾನ್ಯ ಮುಖ್ಯಮಂತ್ರಿಗಳು. ಅವರು ಈಗ ಸದನದಲ್ಲಿಲ್ಲ, ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ಕರೆಯಿಸಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಬಸವರಾಜರಾಯರೆಡ್ಡಿಯವರಿಗೆ 9ನೇ ತಾರೀಖು ಪಾಸಿಟಿವ್ ಆಗಿ ಉತ್ತರಕೊಡುತ್ತೇವೆ. ಎರಡನೆಯದಾಗಿ, my appeal to the hon. members through you Sir, ಪ್ರಶ್ನೆ ಕೇಳುವಾಗ, ಪ್ರಶ್ನೋತ್ತರ ಕಾಲವಿರುವುದು ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆ. ಆದರೆ, ಅದನ್ನೇ ನೀವು ಅಪ್ರತ್ಯಕ್ಷವಾಗಿ ಟೀಕೆಯ ಒಂದು ಆಯುಧವನ್ನಾಗಿ ಮಾಡಿಕೊಂಡು ಕೇಳುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:- ಇನ್ನು ಸರ್ಕಾರಕ್ಕೆ ನೀವು ಮಂಗಳಾರತಿ ಎತ್ತಬೇಕಾಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ಸಚಿವರು ಸರ್ಕಾರವೆಂದರೆ ದೇವರು, ನಾವು ಬಂದ ತಕ್ಷಣ ಅವರಿಗೆ ಮಂಗಳಾರತಿ ಎತ್ತಬೇಕು ಎಂದು ತಿಳಿದುಕೊಂಡಿದ್ದಾರೆ, ಆ ರೀತಿ ಭಾವನೆ ತಮ್ಮಲ್ಲಿ ಇದ್ದರೆ ಅದು ಸರಿಯಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ನಾನಾದರೂ ನಿಮ್ಮ ಸ್ಥಾನದಲ್ಲಿದ್ದರೆ ಮೊದಲು ಮಾಹಿತಿಯನ್ನು ಕಲೆಕ್ಟ್ ಮಾಡಿಕೊಂಡು ಅದನ್ನು ಉಪಯೋಗ ಮಾಡಿಕೊಂಡು ಸರ್ಕಾರದ ಮೇಲೆ ಅಟ್ಯಾಕ್ ಮಾಡುತ್ತಿದ್ದೆ. ಆದ್ದರಿಂದ ಮಾಹಿತಿಯನ್ನು ತೆಗೆದುಕೊಳ್ಳುವಾಗಲೇ ಜಗಳವಾಡುವುದು ಬೇಡ, ಅಷ್ಟೆ.

ಶ್ರೀ ಬಿ. ಹೆಚ್. ಬನ್ನಿಕೋಡ್:– ಮಾಹಿತಿಯನ್ನು ಕೊಡಲು ತಾವು ಸಿದ್ದರಿಲ್ಲ.

(ಗೊಂದಲ)

ಕುಖ್ಯಾತ ದಂತಚೋರ ವೀರಪ್ಪನ್ ಸೆರೆ.

25 (191): ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತರಿಸುವರೇ ?

ಅ. ಕುಖ್ಯಾತ ದಂತಚೋರ ಹಾಗೂ ಆನೆ ಹಂತಕ ವೀರಪ್ಪನ್‌ನನ್ನು ಹಿಡಿಯುವ ಕಾರ್ಯದಲ್ಲಿ ರಾಜ್ಯ ಸರ್ಕಾರವು ಈವರೆವಿಗೆ ಯಾವ ಪ್ರಗತಿಯನ್ನು ಸಾಧಿಸಿದೆ ?

ಆ. ಈ ವಿಷಯದ ಬಗ್ಗೆ ತಮಿಳುನಾಡು ಸರ್ಕಾರವು ಚುರುಕಾಗಿ ಕೆಲಸ ಮಾಡುತ್ತಿದ್ದು, ರಾಜ್ಯ ಸರ್ಕಾರವು ಈ ಬಗ್ಗೆ ಆಸಕ್ತಿಯನ್ನು ಕಡಿಮೆ ಮಾಡಿರುವುದು ನಿಜವೇ ?

ಇ. ಹಾಗಿದ್ದಲ್ಲಿ, ಹಂತಕನನ್ನು ಪತ್ತೆ ಮಾಡಲು ಕೈಗೊಂಡಿರುವ ಕ್ರಮಗಳೇನು ?

ಈ. ಈ ಕಾರ್ಯಕ್ಕೆ ನೆರವಾಗಲು ಅರಣ್ಯ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಒದಗಿಸಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. 1990 ಜನವರಿ: ಫೆಬ್ರವರಿಯಲ್ಲಿ ಕರ್ನಾಟಕ–ತಮಿಳುನಾಡು ಸರ್ಕಾರಗಳು ಅರಣ್ಯ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆಯಲ್ಲಿ ವೀರಪ್ಪನ್ ಮತ್ತು ಆತನ ತಂಡವನ್ನು ಹಿಡಿಯುವ ಪ್ರಯತ್ನವನ್ನು ಪ್ರಾರಂಭಿಸಿದರು. ಇದರ ಪರಿಣಾವಾಗಿ ವೀರಪ್ಪನ್ ಸಂಗ್ರಹಿಸಿದ್ದ ಲಕ್ಷಾಂತರ ರೂಪಾಯಿಗಳ ಬೆಲೆಯ ಗಂಧದ ಮರವನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. 18–4–90ರಂದು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯ ಅಧಿಕಾರಿಯ ನೇತೃತ್ವದಲ್ಲಿ ಪೊಲೀಸ್ ಮತ್ತು ಅರಣ್ಯ ಅಧಿಕಾರಿಗಳನ್ನು ಹೊಂದಿದ ಟಾಸ್ಕ್ ಫೋರ್ಸನ್ನು ಕರ್ನಾಟಕ ಸರ್ಕಾರವು ರಚಿಸಿತು. ಆಗಿನಿಂದ ವೀರಪ್ಪನ್ ಮತ್ತು ಆತನ ತಂಡವನ್ನು ಹಿಡಿಯಲು ತೀವ್ರ ಪ್ರಯತ್ನವನ್ನು ಮಾಡಲಾಗುತ್ತಿದೆ. ಅರಣ್ಯದಲ್ಲಿ ತೀವ್ರ ಗಸ್ತು ಮತ್ತು ಹುಡುಕಾಟವನ್ನು ನಿರಂತರವಾಗಿ ಮಾಡಲಾಗುತ್ತಿದೆ. ಈ ಪ್ರಯತ್ನದಿಂದ ವೀರಪ್ಪನ್ ತಂಡದ ಸದಸ್ಯರು, ಹಿತೈಷಿಗಳು ಮತ್ತು ಅನೇಕ ಅಪರಾಧಗಳಲ್ಲಿ ತೊಡಗಿದ 69 ಜನರನ್ನು ಈಗಾಗಲೇ ಬಂಧಿಸಲಾಗಿದೆ. ಆತನ ತಂಡದ 5 ಮಂದಿ ಘರ್ಷಣೆಯಲ್ಲಿ ಮರಣ ಹೊಂದಿದ್ದಾರೆ.

ಆ. ವೀರಪ್ಪನ್ ಮತ್ತು ಆತನ ತಂಡದ ಸದಸ್ಯರ ಬಂಧನಕ್ಕಾಗಿ ಕರ್ನಾಟಕ ಮತ್ತು ತಮಿಳುನಾಡು

ಸರ್ಕಾರಗಳು ತೀವ್ರದ ರೀತಿಯ ಪ್ರಯತ್ನವನ್ನು ಮಾಡುತ್ತಿವೆ. ಟಾಸ್ಕ್ ಫೋರ್ಸ್‌ನ ಕಾರ್ಯಾಚರಣೆಯನ್ನು ಚುರುಕುಗೊಳಿಸಲು ಇತ್ತೀಚೆಗೆ ಟಾಸ್ಕ್ ಫೋರ್ಸ್‌ಗೆ ಹೊಸ ಕಮಾಂಡರ್ ಒಬ್ಬರನ್ನು ನೇಮಕ ಮಾಡಲಾಗಿದೆ.

ಇ. ಶ್ರೀ ಎಸ್. ಎಂ. ಬಿದರಿ, ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್‌ರವರನ್ನು ಟಾಸ್ಕ್ ಫೋರ್ಸ್‌ಗೆ ಕಮಾಂಡರ್ ಆಗಿ ರಾಜ್ಯ ಸರ್ಕಾರವು ನೇಮಿಸಿದೆ. ಇವರಿಗೆ ಮಲೆಮಹದೇಶ್ವರ ಬೆಟ್ಟದಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ ದರ್ಜೆಯ ಅಧಿಕಾರಿಯೊಬ್ಬರು ನೆರವಾಗುವರು. ಹನೂರು, ರಾಮಾಪುರ ಮತ್ತು ಮಲೆಮಹದೇಶ್ವರ ಬೆಟ್ಟದ ಪೊಲೀಸ್ ಠಾಣೆಗಳ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಲಾಗಿದ್ದು, ಈ ಮೂರು ಠಾಣೆಗಳಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಗಳನ್ನು ನೇಮಿಸಲಾಗಿದೆ. ಟಾಸ್ಕ್ ಫೋರ್ಸ್‌ನ ಸತತ ಎಚ್ಚರಿಕೆ ಕಾರ್ಯಾಚರಣೆಯಿಂದ ವೀರಪ್ಪನ್ ಮತ್ತು ಆತನ ಸಹಚರರ ಚಟುವಟಿಕೆ ಗಣನೀಯವಾಗಿ ಕಡಿಮೆಯಾಗಿದ್ದು, ಮಲೆಮಹದೇಶ್ವರ ಬೆಟ್ಟ ಪ್ರದೇಶದಲ್ಲಿ ಆನೆಗಳ ದಂತ ಅಪಹರಣ ಮತ್ತ ಶ್ರೀಗಂಧ, ಕಳ್ಳ ಸಾಗಾಣಿಕೆಯ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಈ. ಹೌದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಸನ್ಮಾನ್ಯ ಅಧ್ಯಕ್ಷರೇ ನನಗೆ ಬಹಳ ಸಂತೋಷ, ಎಲ್ಲಾದಕ್ಕೂ ಒಂದೇ ರಾಮಬಾಣದ ಔಷಧಿ ಎಂದು, ಮಾನ್ಯ ರಾಮಸ್ವಾಮಿಯವರೇ ಉತ್ತರವನ್ನು ಕೊಡುತ್ತಿದ್ದಾರೆ ಆಗಲಿ ಸಂತೋಷ. ನಿಮಗೆ ಎಷ್ಟು ತೊಂದರೆ, ಕಷ್ಟವಾಗಿದೆ ಅದನ್ನಾದರೂ ಹೇಳಿ. ನಿಮ್ಮಲ್ಲಿ 40 ಜನ ಮಂತ್ರಿಗಳಿದ್ದರೂ ಕೂಡ ನೀವೇ ಎಲ್ಲದಕ್ಕೂ ಉತ್ತರವನ್ನು ಕೊಡಬೇಕಾಗಿದೆ.

ಕುಖ್ಯಾತ ದಂತಚೋರ ವೀರಪ್ಪನ್ನನ್ನು ಯಾವಾಗ ಹಿಡಿಯುತ್ತೀರಿ ? ಎಂದು ಹಿಡಿಯುತ್ತೀರಿ ? ಅವನು ಎಲ್ಲಿದ್ದಾನೆ ? ವಿಧಾನಸಭೆಯಲ್ಲಿದ್ದಾನೋ ಅಥವಾ ಹೊರಗಡೆ ಇದ್ದಾನೊ ? ಅವನು ವೀರಪ್ಪನೋ ಅಥವಾ ಈರಪ್ಪನೋ ಎಂದು ನನಗೆ ಸರಿಯಾಗಿ ಗೊತ್ತಾಗುತ್ತಿಲ್ಲ. ಅವನನ್ನು ಹಿಡಿಯುವ ಕೆಲಸವನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದರೆ ತಾವು ಪರಿಶೀಲನ ಮಾಡುತ್ತಿದ್ದೇವೆಂದು ಹೇಳಿದ್ದೀರಿ. 1993ರಲ್ಲಿ ಟಾಸ್ಕ್ ಫೋರ್ಸನ್ನು ಮಾಡಿದಿರಿ, ಅವರಲ್ಲಿ ಅವನ ಕಡೆಯುವರು 5 ಜನರು ಸತ್ತರೆಂದು ಹೇಳಿದ್ದೀರಿ ಆದರೆ ನಮ್ಮ ಅಧಿಕಾರಿಗಳು ಎಷ್ಟು ಜನರು ಸತ್ತರೆಂದು ಹೇಳಿಲ್ಲ. ನಮ್ಮಲ್ಲಿ ಎಷ್ಟು ಜನ ಅಧಿಕಾರಿಗಳು ಸತ್ತರು ? ನಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳಿಗೂ ಪೋಲೀಸ್ ಅಧಿಕಾರಿಗಳಿಗೂ ಏನಾದರೂ ಹೊಂದಾಣಿಕೆ ಇದೆಯೆ ಅಥವಾ ಇಲ್ಲವೇ ? ಈಗ ವೀರಪ್ಪನ್ನನ್ನು ಹಿಡಿಯಲು ಹೊಸದಾಗಿ ಶಂಕರ ಬಿದರಿ ಎಂಬ ಅಧಿಕಾರಿಯನ್ನು ನೇಮಕ ಮಾಡಿದ್ದೀರಿ, ಅವರಿಗೆ ಏನಾದರೂ ವಿಶೇಷವಾದಂಥ ಶಸ್ತ್ರಗಳನ್ನು ಕೊಟ್ಟಿದ್ದೀರ ? ಏಕೆಂದರೆ ಹಿಂದೆ ಪೊಲೀಸ್ ಅಧಿಕಾರಿಗಳು ಸತ್ತಂತೆ ಇವರೂ ಆಗಬಾರದು, ಒಳ್ಳೆಯ ಅಧಿಕಾರಿಗಳನ್ನು ಕೊಂದು ಹಾಕಲು ಏನಾದರೂ ಯೋಜನೆ ಮಾಡಿದ್ದೀರೋ ? ಹೋದ ಸಲ ಪೊಲೀಸ್ ಅಧಿಕಾರಿಗಳು ಸತ್ತಾಗಲೇ ತಾವು ಪ್ಯಾರಾಮಿಲಿಟರಿಯನ್ನು ತರಿಸಿ ತಕ್ಷಣ ಹಿಡಿದುಬಿಡುತ್ತೇವೆಂದು ಹೇಳಿದ್ದಿರಿ, ಆದರೆ ಇಲ್ಲಿಯವರೆಗೆ ಪ್ಯಾರಾಮಿಲಿಟರಿ ಬಂದಿಲ್ಲ, ಒಂದು ವೇಳೆ ನಿಮ್ಮಿಂದ ಅವನನ್ನು ಹಿಡಯಲು ಸಾಧ್ಯವಿಲ್ಲವೆಂದರೆ ಕೇಂದ್ರ ಸರ್ಕಾರಕ್ಕೋ, ಸೈನ್ಯಕ್ಕೋ ಕರೆಯಿರಿ ಏನಾದರೂ ಹಿಡಿಯುವ ವ್ಯವಸ್ಥೆಯನ್ನು ಮಾಡುವುದು ಸರ್ಕಾರದ ಮುಂದಿದೆಯೇ ? ತಮಿಳುನಾಡು ಪೋಲಿಸ್‌ನವರಂತೆ ನಾವೂ ಕೂಡ ಚೆನ್ನಾಗಿ ಕೆಲಸ ಮಾಡುತ್ತಿದ್ದೇವೆಂದು ಹೊಗಳಿಕೊಂಡಿದ್ದೀರಿ, ಆದರೆ ತಮಿಳುನಾಡಿನ ಅಧಿಕಾರಿಗಳೂ ಸತ್ತಿಲ್ಲ, ನಮ್ಮಲ್ಲಿ ಮಾತ್ರ ಏಕೆ ಇಷ್ಟು ಅಧಿಕಾರಿಗಳು ಸತ್ತರು ? ಅಧಿಕಾರಿಗಳನ್ನೇ ಸಾಯಿಸುವ ವ್ಯವಸ್ಥೆಯನ್ನೇನಾದರೂ ಮಾಡಿದ್ದೀರೋ ? ದಯಮಾಡಿ ಹೇಳಬೇಕು.

ಶ್ರೀ ಕಾಗೋಡು ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ಇದು ಎಲ್ಲರ ವಿವೇಚನೆಗೆ ಬರತಕ್ಕ

ಪ್ರಶ್ನೆಯಾಗಿದೆ. ನಮ್ಮ ಪೊಲೀಸ್ ಇಲಾಖೆಗೂ ಅರಣ್ಯ ಇಲಾಖೆಯವರಿಗೂ ಪೂರ್ಣವಾದ ಹೊಂದಾಣಿಕೆ ಇದೆ, ಅಲ್ಲಿ ಯಾವುದೇ ರೀತಿಯಾದ ಸಂಶಯಕ್ಕೆ ಕಾರಣವಿಲ್ಲ. ಇದಲ್ಲದೆ ತಮಿಳುನಾಡಿನ ಪೊಲೀಸರಿಗೂ ಕರ್ನಾಟಕದ ಪೊಲೀಸರಿಗೂ ಪೂರ್ಣವಾದಂಥ ಹೊಂದಾಣಿಕೆ, ಪರಸ್ಪರ ಸಹಕಾರ ಮತ್ತು ಪರಸ್ಪರ Exchange of information ನಡೆಯುತ್ತಿದೆ. ಎರಡನೆಯದಾಗಿ, ಅವರು ಮಿಲಿಟರಿಯನ್ನು ಕರೆಸುತ್ತೇವೆಂದು ಹೇಳಿದ್ದಿರಲ್ಲ ಅದೇನಾಯಿತು ಎಂದು ಕೇಳಿದ್ದಾರೆ; ಮಿಲಿಟರಿಯವರಿಂದ ನಮ್ಮ ಪೊಲೀಸ್‌ನವರಿಗೇ ಸೂಕ್ತವಾದಂಥ ವಿಶೇಷವಾದ ಶಿಕ್ಷಣವನ್ನು ಕೊಡಿಸುತ್ತಿದ್ದೇವೆ, ಮಿಲಿಟರಿಯವರನ್ನು ಉಪಯೋಗ ಮಾಡಿಕೊಂಡು ಅವನನ್ನು ಹಿಡಿಯತಕ್ಕ ಯೋಜನೆ ಸಧ್ಯಕ್ಕಂತೂ ಇಲ್ಲ. ಈ ಅಂಕಿ ಅಂಶಗಳನ್ನು ಏಕೆ ಕೊಟ್ಟಿದ್ದೇನೆಂದರೆ ಈಗಾಗಲೆ ನಮ್ಮ 6 ಜನ ಅಧಿಕಾರಿಗಳು ಹೋಗಿದ್ದಾರೆ, ಅವರನ್ನು ನಾವುಗಳು ಕಳೆದುಕೊಂಡಿದ್ದೇವೆ, ಇದರಲ್ಲಿ ಸಾಹಸ ಮತ್ತು ಯುಕ್ತಿ ಎರಡನ್ನೂ ಇಟ್ಟುಕೊಂಡು ಕೆಲಸ ಮಾಡತಕ್ಕ ಶಕ್ತಿ ಶಂಕರ ಬಿದರಿಯವರಿಗೆ ಇದೆ ಎಂದೇ ಅವರಿಗೆ ಅವರ ಒಪ್ಪಿಗೆಯನ್ನು ಪಡೆದೇ ಈ ಕೆಲಸಕ್ಕೆ ಈಗ ನೇಮಕ ಮಾಡಿದ್ದೇವೆ. ಈ ಸಮಸ್ಯೆಯ ಬಾಹುಳ್ಯ ಮಹತ್ವವೇನೆಂದು ತಮಗೆಲ್ಲಾಗೊತ್ತಿದೆ. ಇದು ಎಲ್ಲರ ಮನಸ್ಸಿನಲ್ಲೂ ಕಾಡುತ್ತಿರತಕ್ಕ ಪ್ರಶ್ನೆಯಾಗಿದೆ.

ಯಾರಿಗೂ ಕೂಡ ಇಂಥ ತಾರೀಖಿನೊಳಗೆ ಹಿಡಿಯುತ್ತೇವೆಂದು ಹೇಳತಕ್ಕ ಶಕ್ತಿ ಇಲ್ಲ. ಯಾರಾದರೂ ಕವಡೆ ಹಾಕಿ ಅಥವಾ ಭವಿಷ್ಯವನ್ನು ಹೇಳಿ, ಅಥವಾ ಸಾಯಿಬಾಬಾರವರನ್ನು ಕೇಳಿ ತಿಳಿದುಕೊಳ್ಳಬಹುದೇ ಹೊರತು ಬಾಕಿ ವಿಚಾರವಾದಿಗಳು ಯಾರೂ ಕೂಡ ಇದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಆದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಮ್ಮ ಪೊಲೀಸ್ ಇಲಾಖೆಯವರೂ ಮತ್ತು ಅಧಿಕಾರಿ ವರ್ಗದವರೂ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ತಮ್ಮ ಪ್ರಾಣವನ್ನು ತಮ್ಮ ಜೀವವನ್ನು ಬಲಿದಾನ ಮಾಡಿ ಕೆಲಸ ಮಾಡಿರುವ ಪೊಲೀಸ್‌ನವರಿಗೆ ನಮ್ಮ ಸಹಾನುಭೂತಿಯನ್ನು ತೋರಿಸೋಣ. ಸಾರ್ವಜನಿಕವಾಗಿ ನಮ್ಮ ಬೆಂಬಲವನ್ನು ತೋರಿಸೋಣವೆಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅವರಿಂದಲೇ ನಮ್ಮ ಕೆಲಸನಾಗಬೇಕೆಂದು ನಾನು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಯಾರೂ ಕೂಡ ಇಂಥ ತಾರೀಖಿನಂದೇ ಹಿಡಿಯುತ್ತೇನೆಂದು ಹೇಳುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಯಾದ ಪ್ರಾರಂಭದಲ್ಲೇ ಇನ್ನು ಮೂರು ತಿಂಗಳಲ್ಲೇ ಅವನನ್ನು ಹಿಡಿದು ತರುತ್ತೇನೆಂದು ಹೇಳಿದರು. ಅದಾದನಂತರ ಬಂಗಾರಪ್ಪನವರ ಕಾಲದಲ್ಲಿ ಮಾನ್ಯ ಬಸವಲಿಂಗಪ್ಪನವರು ಅರಣ್ಯ ಇಲಾಖೆಯ ಮಂತ್ರಿಯಾಗಿ ಇನ್ನು ಒಂದು ವಾರದೊಳಗೆ ಅವನನ್ನು ಹಿಡಿದು ತರುತ್ತೇವೆಂದು ಹೇಳಿದರು. ಅದಾದನಂತರ ಬಂಗಾರಪ್ಪನವರು ಹೇಳಿದರು, ಈ ಕ್ಷಣದಲ್ಲಿ ಹಿಡಿದು ತರುತ್ತೇನೆಂದು ಹೇಳಿದರು. ಮಾನ್ಯ ಗೃಹಸಚಿವರಾದ ಧರ್ಮಸಿಂಗ್‌ರವರು ಹೇಳಿದರು, ಇದರಲ್ಲಿ ಯಾವುದೇ ಅನುಮಾನವಾಗಲಿ, ಚಿಂತೆಯಾಗಲೀ ಬೇಡ. ಈ ಕೂಡಲೇ ಅವನನ್ನು ಹಿಡಿದು ತಂದು ಬಿಡುತ್ತೇನೆಂದು. ಈಗ ಮಾನ್ಯ ರಾಮಸ್ವಾಮಿಯವರು ಕವಡೆ ವಿಚಾರವನ್ನು ಹೇಳುತ್ತಿದ್ದಾರೆ. ಕವಡೆ ಇಟ್ಟುಕೊಂಡು ಸರ್ಕಾರದವರು ಮುಖ್ಯ ಕಾರ್ಯದರ್ಶಿಯವರನ್ನು ಮತ್ತು ಡಿ.ಜಿ.ಪಿ.ಯವರನ್ನೂ ಕಳುಹಿಸಿಕೊಟ್ಟು ಇವರನ್ನು ಯಾವಾಗ ಹಿಡಿಯಬಹುದೆಂದು ಕವಡೆಯವರನ್ನು ಕೇಳಿಕೊಂಡು ಬರುವಂತೆ ಹೇಳಬೇಕಾಗಿದೆ. ತಮಗೆ ನಾನು ಹೇಳುತ್ತೇನೆ. 1994ನೇ ಇಸವಿಯೊಳಗಾಗಿ ಅವನನ್ನು ಇವರು ಹಿಡಿಯದೇ ಹೋದರೆ ಅವನು ಚುನಾವಣೆಯಲ್ಲಿ ನಿಂತು ಅವನು ಗೆದ್ದು ಇಲ್ಲಿಗೆ ಬಂದು ಬಿಡುತ್ತಾನೆ. ಅಷ್ಟರೊಳಗೆ ನೀವು ಹಿಡಿಯದಿದ್ದರೆ ಈ ಸದನದ ಗತಿ ಏನಾಗುತ್ತದೆಂಬುದನ್ನು ನೀವು ಯೋಚನೆ ಮಾಡಿ.

ಗೊಂದಲ.

ನಿಮ್ಮ ಸರ್ಕಾರಕ್ಕೆ ಗೌರವ ಬರಬೇಕೆಂದರೆ ಈ ರೀತಿಯ ಮಾತಿನಿಂದ, ಜೋಗುಳವನ್ನು ಹಾಡುವುದರಿಂದ, ಕವಡೆ ಮಾತಿನಿಂದ ಸಾಧ್ಯವಿಲ್ಲ. ನೀವು ದಿನಕ್ಕೆ ಒಂದೊಂದನ್ನು ಹೇಳುತ್ತಿದ್ದೀರಿ. ಗೃಹಮಂತ್ರಿಗಳಾಗಿದ್ದಾಗ ಧರ್ಮಸಿಂಗ್‌ರವರು ಹೇಳಿದರು ನಾವು ಮಿಲಿಟರಿಯನ್ನು ಕರೆಯುತ್ತೇವೆ ಎಂದು ಎಲ್ಲಿ ಸ್ವಾಮಿ ನೀವು ಕರೆಸಿದೀರಿ. ಅಲ್ಲೀ ಜನರು ಸಾಯುತ್ತಿದ್ದಾರೆ. ಅಧಿಕಾರಿಗಳು ಸಾಯುತ್ತಿದ್ದಾರೆ. ಕೋಟಿಗಟ್ಟಲೆ ಸಂಪತ್ತು ಲೂಟಿಯಾಗುತ್ತಿದೆ. ಆದರೂ ಇದರ ಬಗ್ಗೆ ನೀವು ಬೇಜವಾಬ್ದಾರಿಯನ್ನು ತೋರಿಸುತ್ತಿದ್ದೀರಿ. ಇದು ಸರಿಯಲ್ಲ. ನಮ್ಮಿಂದ ಇದು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿ ರಾಜೀನಾಮೆಯನ್ನು ಕೊಡುತ್ತೇವೆಂದು ಹೇಳಿ. ಈ ರೀತಿ ಸುಮ್ಮನೆ ಏತಕ್ಕೆ ಹೀಗೆ ಮಾಡುತ್ತೀರಿ ? ಈ ರೀತಿ ಜೋಗುಳವನ್ನು ಹಾಡತಕ್ಕದ್ದು ಬೇಡ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, 94ನೇ ಇಸವಿಗೆ ವೀರಪ್ಪನ್ ಇಲ್ಲಿಗೆ ಬರುತ್ತಾನೆಂದು ಮಾನ್ಯ ನಾಗರಾಜ್‌ರವರು ಹೇಳುತ್ತಿದ್ದಾರೆ. ಹಾಗಾದರೆ ಇಲ್ಲಿ ಯಾರೂ ಇಲ್ಲವೆಂದು ನಿಮಗೆ ಖಾತ್ರಿ ಆಗಿದೆಯೆ ?

ಶ್ರೀ ನಾಟಾಳ್ ನಾಗರಾಜ್:- ವೀರಪ್ಪನ್ ಛಾಯೇ ಇದೆಯೇ ಹೊರತು ವೀರಪ್ಪನ್ ಬಂದಿದ್ದಾನೆಂದು ನಾನು ಅಂದುಕೊಂಡಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಮಾನ್ಯ ಅಧ್ಯಕ್ಷರೆ, ನಾಗರಾಜ್‌ರವರು ಹೇಳಿದಂತೆ ಅವನೇ ಆರಿಸಿಬಂದು ಇಲ್ಲಿ ಮುಖ್ಯಮಂತ್ರಿಯಾದರೆ ನಾವು ಆಗ ಏನು ಮಾಡಬೇಕು ? ಇದು ಬಹಳ ಕಷ್ಟವಿದೆ. ಆಗ ನಾವು ಏನೂ ಮಾಡುವುದಕ್ಕೆ ಆಗದೆ ಸುಮ್ಮನೆ ಕೂಡಬೇಕಾಗುತ್ತದೆ. ಅವನಿಗೆ ಎಲ್ಲರೂ ಓಟು ಕೊಡಬೇಕಾಗುತ್ತದೆ. ಅವನು ಮುಖ್ಯಮಂತ್ರಿಯಾದ ಮೇಲೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ನಾಟಾಳ್ ನಾಗರಾಜ್:- ಆಗ ಮಲ ಹೊರತಕ್ಕ ಪದ್ಧತಿ ಜಾರಿಗೆ ಬರುತ್ತದೆ, ಆಗ ಎಲ್ಲರೂ ಅದನ್ನು ಹೊರುವುದಕ್ಕೆ ಹೋಗುವುದು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಅವನು ಹೇಳುತ್ತಾನೆ. ಆಗ ನಾವೆಲ್ಲರೂ ಸುಮ್ಮನೆ ಕೂಡಬೇಕಾಗುತ್ತದೆ. ಅಂಥ ಪರಿಸ್ಥಿತಿ ಬಂದರೆ ಏನು ಮಾಡುತ್ತೀರಿ ? ನಾನಾದರೂ ತಮ್ಮನ್ನು ಕೇಳುತ್ತೇನೆ. ಈಗ ನಿಮ್ಮಲ್ಲಿ ಇಷ್ಟೊಂದು ಶಸ್ತ್ರಾಸ್ತ್ರ ಇದ, ಪೋಲಿಸ್ ಇದೆ. ಆದರೆ ನಿಮ್ಮ ಪೋಲೀಸರು ಏನೂ ಕೆಲಸ ಮಾಡುತ್ತಿಲ್ಲವೆಂದು ನಾನು ಹೇಳುತ್ತಿಲ್ಲ. ಅವರ ಮೇಲೆ ದೋಷಾರೋಪಣೆಯನ್ನು ನಾನು ಮಾಡುತ್ತಿಲ್ಲ. ಆದರೆ ಸರ್ಕಾರ ಇದರ ಬಗ್ಗೆ ಮನಸ್ಸು ಮಾಡುತ್ತಿಲ್ಲ.

ಅವನನ್ನು ಹಿಡಿಯಬೇಕೆಂಬ ಮನಸ್ಸು ಇಲ್ಲವೆಂದು ನಾನು ಹೇಳಬೇಕಾಗುತ್ತದೆ. ಏಕೆಂದರೆ, ನಿಮ್ಮಲ್ಲಿ ಹೆಲಿಕ್ಯಾಪ್ಟರ್ ಇದೆ, ಇನ್ನೂ ಬೇರೆ ಬೇರೆ ವೆಹಿಕಲ್ಸ್ ಇವೆ. ಮಿಲಿಟರಿಯನ್ನು ತರಿಸಿ ಮಾಡಿ. ಇದನ್ನು ಏತಕ್ಕೆ ಮಾಡಬಾರದು ? ನಿಮಗೆ ಏನೋ ಭಯವಿದೆ. ನಿಮಗೇನು ತೊಂದರೆ ಇದೆ. ನಿಮ್ಮ ಭಯವನ್ನು ನೋಡಿದರೆ ಅವನೇ ನಿಮ್ಮ ಮುಖ್ಯ ಮಂತ್ರಿಯಾಗುವಂಥ ಅವಕಾಶ ಇದೆ. ಆದ್ದರಿಂದ ಇಂಥ ದಿವಸದೊಳಗೆ ಹಿಡಿಯುತ್ತೇವೆಂದು ಆದರೂ ಹೇಳಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ, ಆತ ಭೂಗತವಾಗಿದ್ದಾನೆ. ಹೊರಗಡೆ ಬರುವುದಕ್ಕೆ ಅಥವಾ ಚುನಾವಣೆಗೆ ನಿಲ್ಲುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅವನು ಭೂಗತವಾಗಿದ್ದರೆ ಎಲ್ಲಿದ್ದಾನೆಂದು ಹೇಳಿ. ಸರ್ಕಾರಕ್ಕೆ ಗೊತ್ತಿದ್ದರೆ ಹೇಳಿ.

ಶ್ರೀ ಬಸವರಾಜರಾಯರೆಡ್ಡಿ:- ನಮ್ಮ ಕಡೆ ಅಂಜನ ಹಾಕುವುದು ಎಂದು ಹೇಳುತ್ತಾರೆ. ಭೂಗತವಾಗಿದ್ದರೆ ಎಲ್ಲಿದ್ದಾನೆಂದು ನೋಡಿ ಹೇಳುತ್ತಾರೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- 3 ತಿಂಗಳಲ್ಲಿ ಮಾಡುತ್ತೇವೆ ಅಂದರು, 1 ವಾರದಲ್ಲಿ ಅಂದರು, ಈ ಕೂಡಲೇ ಎಂದು ಹೇಳಿದರೆಂದು ತಾವೇ ಈಗ ತಾನೇ ಅಪ್ಪಣೆ ಕೊಡಿಸಿದಿರಿ. ಅದೇ ರೀತಿಯ ತಪ್ಪನ್ನು ನಾನು ಮಾಡುವುದಕ್ಕೆ ತಯಾರಿಲ್ಲ. ಇದನ್ನು ನಿಧಾನ ಮಾಡಬೇಕೆಂಬ ಉದ್ದೇಶ ನಮ್ಮಲ್ಲಿ ಯಾರಿಗೂ ಇಲ್ಲ. ಇವನನ್ನು ಜೀವ ಸಹಿತ ಅಥವಾ ಜೀವ ಹೋಗಿದ್ದರೂ ಹಿಡಿದು ಕೀರ್ತಿಯನ್ನು ಸಂಪಾದನೆ ಮಾಡಬೇಕೆಂಬ ಉದ್ದೇಶದಿಂದ ನಮ್ಮ ಪೊಲೀಸ್ ಅಧಿಕಾರಿಗಳು ಸತತ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ಅವರ ಕೆಲಸಕ್ಕೆ ನಾವು ಪ್ರೋತ್ಸಾಹ ಕೊಡೋಣ. ಆದಷ್ಟು ಬೇಗ ಆತನನ್ನು ....

ಶ್ರೀ ವಾಟಾಳ್ ನಾಗರಾಜ್:- ಇನ್ನೂ ನೂರಾರು ಜನ ಅಧಿಕಾರಿಗಳು ಸತ್ತ ಮೇಲೆ ಇವರಿಗೆ ಬುದ್ಧಿ ಬರುತ್ತದೆಂದು ಕಾಣಿಸುತ್ತದೆ. ಇದು ಸರಿಯಲ್ಲ. ದಯವಿಟ್ಟು ನಿಮ್ಮ ಸರ್ಕಾರದ ಪ್ರಾಮಾಣಿಕತೆ ಏನೆಂಬುದನ್ನು ಇಲ್ಲಿ ಹೇಳಿ. ನಮ್ಮ ಕೈಯ್ಯಲ್ಲಿ ಖಂಡಿತ ಇವನನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕ ಮಾತನ್ನಾದರೂ ಇಲ್ಲಿ ಹೇಳಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ನೀವು ಪ್ರತಿಯೊಂದು ಪ್ರಶ್ನೆಯನ್ನೂ ಟೀಕೆಯ ಅಸ್ತ್ರವನ್ನಾಗಿ ಮಾಡುತ್ತಿದ್ದೀರಿ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಇದು ಟೀಕೆ ಮಾಡುವಂಥಾದ್ದು ಅಲ್ಲ, ಇಡೀ ರಾಜ್ಯದಲ್ಲಿ ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ವೀರಪ್ಪನ್‌ನ್ನು ಹಿಡಿಯುವುದಕ್ಕೆ ಸರ್ಕಾರಕ್ಕೆ ಆಗದಿದ್ದರೆ ಈ ರಾಜ್ಯದ ಜನತೆಯನ್ನು ಹೇಗೆ ಕಾಪಾಡುತ್ತಾರೆ ? ಇದರ ಬಗ್ಗೆ ಜನತೆಯಲ್ಲಿ ಸಂಶಯ ಬರುತ್ತಿದೆ,

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಮೆಟಾಡೋರ್ ಮತ್ತು ಟ್ಯಾಕ್ಸಿಗಳಿಗೆ ಪರವಾನಗಿ.

183 (1047): ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1988-89 ರಿಂದ ಇಲ್ಲಿಯವರೆಗೆ ಮೆಟಾಡೋರ್ ವ್ಯಾನುಗಳು ಮತ್ತು ಇತರೆ ವ್ಯಾನುಗಳಿಗೆ ಪ್ರಯಾಣಿಕರನ್ನು ಪ್ರವಾಸಿಗರನ್ನು ಸಾಗಿಸಲು ಎಷ್ಟು ವ್ಯಕ್ತಿಗಳಿಗೆ ಸಂಘಗಳಿಗೆ ಎಷ್ಟೆಷ್ಟು ರಹದಾರಿಗಳನ್ನು ನೀಡಿದೆ (ವಾರ್ಷಿಕವಾರು ಅಂಕಿ ಅಂಶಗಳನ್ನು ಒದಗಿಸುವುದು) ?

ಆ. ಇಂತಹ ವ್ಯಾನುಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಕ್ಕಿಂತ ಕಡಿಮೆ ದರ ತೆಗೆದುಕೊಂಡು ಅವರ ಬಸ್ಸುಗಳೊಂದಿಗೆ ಸ್ಪರ್ಧಾತ್ಮಕವಾಗಿ ಪ್ರಯಾಣಿಕರನ್ನು ಸಾಗಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ. ಹೆಚ್ಚು/ಕಡಿಮೆ ಎಲ್ಲಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಒಳಗೆ ಮತ್ತು

ಮೇಲೆ ಛಾವಣಿ ಮೇಲೆ ಪ್ರಯಾಣಿಕರನ್ನು ಕೊಂಡು ಹೋಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ. ಖಾಸಗಿ ಬಸ್ಸಿನವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನವರಕ್ಕಿಂತ ಕಡಿಮೆ ದರ ಪಡೆದು ಉತ್ತಮ ಲಾಭವನ್ನು ಮಾಡುವರು ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. 1988–89 – ಇಲ್ಲ
1989–90 – ಇಲ್ಲ
1990–91 – ಇಲ್ಲ
1991–92 – 833
1992–93
(ಜನವರಿಗೆ 93ರ
ಅಂತ್ಯದವರೆಗೆ) – 1377

ಆ. ಹೌದು

ಇ. ಹೌದು

ಈ. ಇಲ್ಲ.

ಕೊಪ್ಪಳ ತಾಲ್ಲೂಕಿನ ಅಳವಂಡಿ ಹಾಗೂ ಕಿನ್ನಾಳ ಗ್ರಾಮಗಳಿಗೆ ಬಸ್ ನಿಲ್ದಾಣ.

186 (1854): ಶ್ರೀ ಎಂ. ಬಿ. ದಿವಟರ್, (ಕೊಪ್ಪಳ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೊಪ್ಪಳ ತಾಲ್ಲೂಕಿನ ಅಳವಂಡಿ ಹಾಗೂ ಕಿನ್ನಾಳ ಗ್ರಾಮಗಳಿಗೆ ಬಸ್ ನಿಲ್ದಾಣ ಮಂಜೂರಾಗಿದೆಯೆ ?

ಆ. ಮಂಜೂರಾಗಿದ್ದಲ್ಲಿ, ಅದರ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಅಳವಂಡಿ ಬಸ್ ನಿಲ್ದಾಣ ಮಂಜೂರಾಗಿರುತ್ತದೆ. ಕಿನ್ನಾಳ ಬಸ್ ನಿಲ್ದಾಣವು ಮಂಜೂರಾಗಿರುವುದಿಲ್ಲ.

ಆ. ಅಳವಂಡಿ ಬಸ್ ನಿಲ್ದಾಣದ ಕೆಲಸವನ್ನು 1993–94ನೇ ಸಾಲಿನಲ್ಲಿ ಕೈಗೊಳ್ಳಲಾಗುವುದು. ಕಿನ್ನಾಳದಲ್ಲಿ ನಿವೇಶನವನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗಿದೆ.

ಕೋಮು ಸೌಹಾರ್ದತೆಯನ್ನು ಉತ್ತೇಜಿಸಲು ಮಾನವ ಸರಪಳಿಯ ಮೇಲೆ ಮಾಡಿದ ವೆಚ್ಚ.

193 (734): ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವ ಕಲ್ಯಾಣ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕೋಮು ಸೌಹಾರ್ದತೆಗಾಗಿ 1993ರ ಜನವರಿ–ಫೆಬ್ರವರಿ ತಿಂಗಳಿನಲ್ಲಿ ಮಾನವ ಸರಪಳಿಯನ್ನು ರಾಜ್ಯದಾದ್ಯಂತ ರಚಿಸಲಾಗಿತ್ತೇ ?

ಆ. ಹಾಗಿದ್ದಲ್ಲಿ, ಇದಕ್ಕಾಗಿ ಖರ್ಚು ಮಾಡಿದ ಮೊತ್ತ ಎಷ್ಟು ? (ವಿವಿಧ ಸಂಘ – ಸಂಸ್ಥೆಗಳಿಗಾಗಿ ಮಂಜೂರು ಮಾಡಿದ ಹಣದ ಬಗ್ಗೆ ಜಿಲ್ಲಾವಾರು ಮಾಹಿತಿ ಒದಗಿಸುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ. ಇಲ್ಲ. ದಿನಾಂಕ: 30.1.93ರಂದು ಈ ಕೆಳಕಂಡ ಸ್ಥಳಗಳಲ್ಲಿ ಮಾತ್ರ ಮಾನವ ಸರಪಳಿಯನ್ನು ಏರ್ಪಡಿಸಲಾಗಿತ್ತು.

1. ಹುಬ್ಬಳಿಯಿಂದ ಧಾರವಾಡ
2. ಧಾರವಾಡದಿಂದ ಬೆಳಗಾಂ
3. ಗುಲ್ಬರ್ಗಾದಿಂದ ಬೀದರ್
4. ಬೆಂಗಳೂರಿನಿಂದ ಮೈಸೂರು
5. ಮಂಗಳೂರಿನಿಂದ ಉಡುಪಿ

ಆ. 40 ಲಕ್ಷ ರೂ.ಗಳು (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಲಾಗಿದೆ.)

'ಕೋಮು ಸೌಹಾರ್ದತಾ ಸಪ್ತಾಹ'ದ ಅಂಗವಾಗಿ ಜಿಲ್ಲಾವಾರು ಅನುದಾನ ಬಿಡುಗಡೆ ಮಾಡಿರುವುದನ್ನು ತೋರಿಸುವ ಪಟ್ಟಿ.

ಜಿಲ್ಲೆಗಳು	ರೂಪಾಯಿಗಳು (ಲಕ್ಷಗಳಲ್ಲಿ)
1. ಬೆಂಗಳೂರು (ಗ್ರಾಮಾಂತರ)	5.00
2. ಬೆಳಗಾಂ	5.00
3. ಧಾರವಾಡ	5.00
4. ಗುಲ್ಬರ್ಗಾ	5.00
5. ಬೀದರ್	5.00
6. ಮಂಡ್ಯ	5.00
7. ಮೈಸೂರು	5.00
8. ದಕ್ಷಿಣ ಕನ್ನಡ	5.00
ಒಟ್ಟು	40.00

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ದಿನಾಂಕ 2.3.1993ರ 10ನೇ ಪಟ್ಟಿಯಲ್ಲಿರುವ 86 ಪ್ರಶ್ನೆಗಳ ಪೈಕಿ, ಪ್ರಶ್ನೆಗಳ ಸಂಖ್ಯೆ 577, 523, 769, 488, 351, 99, 576, 737, 738, 1334 ಎ, 959, 1330, 1356, 1946, 1329, 1310, 1292, 1215 ಮತ್ತು 1282 ಈ ಪ್ರಶ್ನೆಗಳನ್ನು ಹೊರತು ಪಡಿಸಿ ಇನ್ನು ಉಳಿದ 57 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದ ಸ್ವಾತಂತ್ರ್ಯ ಯೋಧರಿಗೆ ಸರ್ಕಾರದ ಸೌಲಭ್ಯಗಳು.

504 (1157): ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯದ ಸ್ವಾತಂತ್ರ್ಯ ಯೋಧರಿಗೆ ಸಂಬಂಧಿಸಿದಂತೆ, ಪಿಂಚಣಿ, ಉಚಿತ ಬಸ್ ಪಾಸ್, ವೈದ್ಯಕೀಯ ಸೌಲಭ್ಯ, ನಿವೇಶನ ಮಂಜೂರಾತಿ, ಶಿಕ್ಷಣ ಸೌಲಭ್ಯ ಇತ್ಯಾದಿ ಎಷ್ಟು ಬೇಡಿಕೆಗಳು ಸರ್ಕಾರದ ಮುಂದೆ ಬಾಕಿ ಇವೆ:

2. ಇವುಗಳ ಪೈಕಿ ಸದನದಲ್ಲಿ ನೀಡಿದ ಭರವಸೆಯನ್ನನುಸರಿಸಿ, ಎಷ್ಟು ಬೇಡಿಕೆಗಳನ್ನು ಸರ್ಕಾರ ಪರಿಶೀಲಿಸಿದೆ:

3. ಉಳಿದ ಬೇಡಿಕೆಗಳನ್ನು ಯಾವಾಗ ಪೂರೈಸಲಾಗುವುದು ?

4. ಬಾಕಿ ಇರುವ ಬೇಡಿಕೆಗಳನ್ನು ಪೂರೈಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿ):–

1. ಅನುಬಂಧ 'ಎ'ನ್ನು ಲಗತ್ತಿಸಿದೆ.

2. ಒಂದು –

3. ಉಳಿದ ಬೇಡಿಕೆಗಳನ್ನು ಪರಿಶೀಲಿಸಲಾಗುವುದು.

4. ಸಂಬಂಧಿಸಿದ ಇಲಾಖೆಗಳೊಡನೆ ಸಮಾಲೋಚನೆ ನಡೆಸಿ, ಉಳಿದ ಬೇಡಿಕೆಗಳನ್ನು ಶೀಘ್ರವೇ ಪೂರೈಸಲು ಸೂಕ್ತ ಕ್ರಮ ಜರುಗಿಸಲಾಗುವುದು.

ಅನುಬಂಧ 'ಎ'

ಬೇಡಿಕೆ ನಂ.1.

ಮಾಹೆಯಾನ ಪಿಂಚಣಿ: ರಾಜ್ಯ ಸರ್ಕಾರವು ಸ್ವಾತಂತ್ರ್ಯ ಯೋಧರಿಗೆ ಹಾಗೂ ಅವಲಂಬಿತರಿಗೂ ಮಾಹೆಯಾನ ರೂ. 500.00ರಂತೆ ನೀಡಲಾಗುತ್ತಿದೆ. ಗೋವಾ ಸತ್ಯಾಗ್ರಹಿಗಳಿಗೆ ಮಾಹೆಯಾನ ರೂ. 400.00 ರಂತೆ ನೀಡಲಾಗುತ್ತಿದೆ.

ಬೇಡಿಕೆ ನಂ.2.

ಉಚಿತ ಬಸ್ ಪಾಸ್: ರಾಜ್ಯದ ಸ್ವಾತಂತ್ರ್ಯ ಹೋರಾಟಗಾರರಿಗೆ ವರ್ಷಕ್ಕೆ ಒಂದು ಬಾರಿ ರಾಜ್ಯದ ಯಾವುದೇ ಎರಡು ಸ್ಥಳಗಳ ನಡುವೆ ಕೆ.ಎಸ್.ಆರ್.ಟಿ.ಸಿ ಬಸ್‌ಗಳ ಮೂಲಕ ಉಚಿತವಾಗಿ ಪ್ರವಾಸ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಬೇಡಿಕೆ ನಂ.3.

ವೈದ್ಯಕೀಯ ಸೌಲಭ್ಯಗಳು: ವಾರ್ಷಿಕ ಆದಾಯದ ಮಿತಿಯನ್ನು ರೂ. 3600 ರಿಂದ ರೂ. 8000ಗಳಿಗೆ ಹೆಚ್ಚಿಸಲು ಈಗಾಗಲೇ ಆರೋಗ್ಯ ಇಲಾಖೆಗೆ ಸೂಕ್ತ ಪ್ರಸ್ತಾವನೆ ಕಳುಹಿಸಲಾಗಿದೆ.

ಬೇಡಿಕೆ ನಂ.4.

ನಿವೇಶನ ಹಂಚಿಕೆಯಲ್ಲಿ ಆದ್ಯತೆ ನೀಡುವ ಬಗ್ಗೆ: ಈ ಬೇಡಿಕೆಯನ್ನು ಪರಿಶೀಲಿಸಲು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಿಕೊಡಲಾಗಿದೆ.

ಬೇಡಿಕೆ ನಂ.5.

ಶಿಕ್ಷಣ ಸೌಲಭ್ಯ: ಸರ್ಕಾರೀ ಆಜ್ಞೆ ಸಂಖ್ಯೆ: ಇಡಿ 16ಎಸ್‌ಸಿಎಲ್ 59ದಿನಾಂಕ: 27.11.1959ರ ಆದೇಶವನ್ನು ಪರಿಷ್ಕರಿಸಿ ಈಗಿನ ದರದಲ್ಲಿ ರಾಜಕೀಯ ಸಂತ್ರಸ್ಥರ ಮಕ್ಕಳಿಗೆ ಶಿಕ್ಷಣ ಸೌಲಭ್ಯವನ್ನು ಒದಗಿಸಲು ಶಿಕ್ಷಣ ಇಲಾಖೆಯನ್ನು ಕೋರಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು

505 (61): ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 1990-91, 1991-92ನೇ ಡಿಸೆಂಬರ್ ಆಖೈರುವರೆಗೆ ನಡೆಸಿದ ಸಭೆ ಸಾಂಸ್ಕೃತಿಕ ಕಾರ್ಯಕ್ರಮಗಳು ಎಷ್ಟು ? (ವರ್ಷವಾರು ವಿವರ ನೀಡುವುದು):

ಆ. ಕನ್ನಡ ಸಾಹಿತ್ಯದ 'ಆಡಳಿತ ಭಾಷೆ ಕನ್ನಡ' ಈ ಬಗ್ಗೆ ಏನಾದರೂ ಕಾರ್ಯಕ್ರಮ ನಡೆದಿದೆಯೇ ? (ಇದರಲ್ಲಿ ಅದರ ವಿವರ ನೀಡುವುದು):

ಇ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಸಂಸ್ಕೃತಿ ಇಲಾಖೆ ಅತ್ಯಂತ ಚುರುಕಾಗಿ ಕೆಲಸ ಕಾರ್ಯ ನೇರವೇರಿಸಲು ಸರ್ಕಾರ ಏನಾದರೂ ಕ್ರಮಕೈಗೊಳ್ಳುವುದೇ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು)

ಅ. ಅನುಬಂಧ 1ರಲ್ಲಿ ನೀಡಲಾಗಿದೆ.

ಆ. ನಡೆಸಲಾಗಿದೆ
ಅನುಬಂಧ-2ರಲ್ಲಿ ನೀಡಲಾಗಿದೆ.

ಇ. ಇಲಾಖೆಯು ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿದೆ.

ಅನುಬಂಧ – 1

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 1990–91, 1991–92ರ ಡಿಸೆಂಬರ್ ಆಖೈರುವರೆಗೆ ನಡೆಸಿದ ಸಭೆ, ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ.

1990–91 ಕನ್ನಡ ಕಾರ್ಯಾಗಾರ ಹಾಗೂ ತರಬೇತಿ ಶಿಬಿರಗಳು

1. ಅಧಿಕಾರಿಗಳ ಕಾರ್ಯ ಶಿಬಿರ
   (9.7.90 ರಿಂದ 14.7.90ರವರೆಗೆ)
2. ಅಧಿಕಾರಿಗಳ ಕಾರ್ಯ ಶಿಬಿರ
   (3.12.90 ರಿಂದ 8.12.90ರವರೆಗೆ)
3. ಸರ್ಕಾರದ ಕಾರ್ಯ ಶಿಬಿರ
   (17.9.90 ರಿಂದ 27.9.90ರವರೆಗೆ)
4. ಸರ್ಕಾರದ ಕಾರ್ಯ ಶಿಬಿರ
   (22.10.90 ರಿಂದ 27.10.90ರವರೆಗೆ)
5. ಜಿಲ್ಲಾ ಮಟ್ಟದ ಕಾರ್ಯಾಗಾರ
   (ಒಂದು ದಿನದ್ದು)

ಸಾಂಸ್ಕೃತಿಕ ಕಾರ್ಯಕ್ರಮಗಳು (2ನೇ ಶುಕ್ರವಾರ ಸಾಂಸ್ಕೃತಿಕ ಕಾರ್ಯಕ್ರಮಗಳು)

1. ಪುರಭವನ, ಮಂಗಳೂರು	(8.6.90)	ಸುಗಮ ಸಂಗೀತ
2. ಪುರಭವನ, ಮಂಗಳೂರು	(13.7.90)	ಭರತನಾಟ್ಯ
3. ಪುರಭವನ, ಮಂಗಳೂರು	(10.8.90)	ಯಕ್ಷಗಾನ
4. ಪುರಭವನ, ಮಂಗಳೂರು	(14.9.90)	ಯಕ್ಷಗಾನ
5. ಪುರಭವನ, ಉಡುಪಿ	(28.9.90)	ಭರತನಾಟ್ಯ
6. ಪುರಭವನ, ಕುಂದಾಪುರ	(12.10.90)	ಯಕ್ಷಗಾನ
7. ಪುರಭವನ, ಸುರತ್ಕಲ್	(14.11.90)	ಭರತನಾಟ್ಯ
8. ಪುರಭವನ, ಸುರತ್ಕಲ್	(14.12.90)	ಶಾಸ್ತ್ರೀಯ ಸಂಗೀತ
9. ಪುರಭವನ, ಸುಳ್ಯ	(11.1.91)	ಭರತನಾಟ್ಯ
10. ಪುರಭವನ, ಪುತ್ತೂರು	(8.2.91)	ಸುಗಮ ಸಂಗೀತ
11. ಪುರಭವನ, ಬೆಳ್ತಂಗಡಿ	(8.3.91)	ನಾಟಕ

ಸ್ಥಳೀಯ ಸಂಸ್ಕೃತಿ ಕಾರ್ಯಕ್ರಮಗಳು:

1. ಪುರಭವನ, ಮಂಗಳೂರು	(15.8.90)	ಸ್ಯಾಕ್ಸೋಫೋನ್ ವಾದನ
2. ಸುರತ್ಕಲ್	(25.6.90)	ಯಕ್ಷಗಾನ
3. ಮೂಡಬಿದ್ರಿ	(18.11.90)	ಭರತನಾಟ್ಯ
4. ಸಾಸ್ತಾನ, ಕಾರ್ಕಳ ಮೂಡಬಿದ್ರಿ	(11.12.90)	ಜಾನಪದ ನಾಟಕ
	(13.12.90)	
5. ಮೂಡಬಿದ್ರಿ	(9.2.91)	ಯಕ್ಷಗಾನ
6. ವೇಣೂರು	(30.3.91)	ಯಕ್ಷಗಾನ

ಕೇಂದ್ರ ಕಛೇರಿಯಿಂದ ನಿಯೋಜಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು

1. 8.12.90	ಯಕ್ಷಕಲಾ, ಸೂರತ್ಕಲ್	ಯಕ್ಷಗಾನ
2. 14.11.90	ಶ್ರೀ ವೆಂಕಟೇಶ್ ಮತ್ತು ಬಳಗ	ಕರಗ ನೃತ್ಯ

1991-92ರ ಡಿಸೆಂಬರ್ ಆಖೈರ್‌ವರೆಗೆ

ಕನ್ನಡ ಕಾರ್ಯಾಗಾರ ಮತ್ತು ತರಬೇತಿ ಶಿಬಿರಗಳು

1. ಅಧಿಕಾರಿಗಳ ಕಾರ್ಯ ಶಿಬಿರ – 2
(10.2.92 ರಿಂದ 20.2.92 ರವರೆಗೆ)
(11.6.92 ರಿಂದ 21.6.92 ರವರೆಗೆ)

2. ನೌಕರರ ಕಾರ್ಯಶಿಬಿರ – 4
16.12.91 ರಿಂದ 27.12.91 ರವರೆಗೆ
16.12.91 ರಿಂದ 27.12.91 ರವರೆಗೆ
20.4.92 ರಿಂದ 30.4.92 ರವರೆಗೆ
20.4.92 ರಿಂದ 30.4.92 ರವರೆಗೆ

3. ಜಿಲ್ಲಾ ಮಟ್ಟದ ಕಾರ್ಯಾಗಾರ – 1 ದಿನ (18.2.92)
4. ಜಿಲ್ಲಾ ಮಟ್ಟದ ಕಾರ್ಯಾಗಾರ – 1 ದಿನ (17.10.92)
5. ನೌಕರರ ಕಾರ್ಯ ಶಿಬಿರ (12.10.92 ರಿಂದ 22.10.92)

ಸಾಂಸ್ಕೃತಿಕ ಕಾರ್ಯಕ್ರಮಗಳು (2ನೇ ಶುಕ್ರವಾರ)

1. ಭಾರತೀಯ ವಿದ್ಯಾಭವನ, ಮಂಗಳೂರು	(12.4.91)	ಬೊಂಬೆಯಾಟ
2. ಸೂಳ್ಯ	(14.6.91)	ಭರತನಾಟ್ಯ
3. ಪುತ್ತೂರು	(12.7.91)	ಸ್ಯಾಕ್ಸೋಫೋನ್
4. ಪುರಭವನ ಮಂಗಳೂರು	(29.8.91)	ಯಕ್ಷಗಾನ
5. ಪುರಭವನ ಮಂಗಳೂರು	(27.9.91)	ಭರತನಾಟ್ಯ
6. ಉಡುಪಿ	(18.10.91)	ಯಕ್ಷಗಾನ
7. ಕಾಟಿಪಳ್ಳ	(22.11.91)	ಯಕ್ಷಗಾನ
8. ಸೂಳ್ಯ	(24.12.91)	ಭರತನಾಟ್ಯ
9. ಮಣೂರು	(24.1.92)	ಯಕ್ಷಗಾನ
10. ಮುಲ್ಕಿ	(21.2.92)	ಭರತನಾಟ್ಯ
11. ಪುರಭವನ, ಮಂಗಳೂರು	(22.3.92)	ನಾಟಕ
12. ಪುತ್ತೂರು	(2.4.92)	ಭರತನಾಟ್ಯ
13. ಪುರಭವನ, ಮಂಗಳೂರು	(29.5.92)	ಯಕ್ಷಗಾನ
14. ಪುರಭವನ, ಮಂಗಳೂರು	(26.6.92)	ಯಕ್ಷಗಾನ
15. ಪುರಭವನ, ಮಂಗಳೂರು	(10.7.92)	ಸುಗಮ ಸಂಗೀತ
16. ಪಡುಗೆರೆ	(14.8.92)	ಯಕ್ಷಗಾನ
17. ಪುರಭವನ, ಮಂಗಳೂರು	(28.8.92)	ಸುಗಮ ಸಂಗೀತ

18. ಪುತ್ತೂರು	(11.9.92)	ಭರತನಾಟ್ಯ
19. ಬೈಂದೂರು	(27.11.92)	ಯಕ್ಷಗಾನ
20. ಅತ್ತಾಡಿ	(25.12.92)	ಯಕ್ಷಗಾನ

ಸ್ಥಳೀಯ ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರಗಳು

1. ಪುರಭವನ, ಮಂಗಳೂರು	(15.8.91)	ಸಾಕ್ಸೋಫೋನ್ ವಾದನ
2. ಪುರಭವನ, ಮಂಗಳೂರು	(1.11.91)	ಭರತನಾಟ್ಯ
3. ಕಟೀಲು	(5.1.92)	ಯಕ್ಷಗಾನ
4. ಪುರಭವನ, ಮಂಗಳೂರು	(26.1.92)	ಜಾನಪದ ಗೀತೆ
5. ಪುರಭವನ, ಮಂಗಳೂರು	(15.8.92)	ಭರತನಾಟ್ಯ
6. ಸೂರತ್ಕಲ್	(31.8.92)	ಯಕ್ಷಗಾನ
7. ಬಂಟ್ವಾಳ್	(1.9.92)	ಯಕ್ಷಗಾನ
8. ಪುರಭವನ, ಮಂಗಳೂರು	(1.11.92)	ಭರತನಾಟ್ಯ
9. ಉರ್ವ	(21.11.92)	ಕವಿ ಸಮ್ಮೇಳನ
10. ಕೊಡಿಯಾಲಬೈಲ್	(23.11.92)	ಸಾಂಸ್ಕೃತಿಕ ಕಾರ್ಯಕ್ರಮ

ವಿಶೇಷ ಘಟಕ ಯೋಜನೆಯಡಿ ಸಾಂಸ್ಕೃತಿಕ ಕಾರ್ಯಕ್ರಮಗಳು

1. ಉಳ್ಳಾಲ	(2.3.92)	ಸುಗಮ ಸಂಗೀತ
2. ಬಾಲವನ, ಪುತ್ತೂರು	(10.4.92 ರಿಂದ 16.4.92)	ಜಾನಪದ ಕಲೆಗಳ ತರಬೇತಿ
3. ಪುತ್ತೂರು	(26.9.92)	ಸುಗಮ ಸಂಗೀತ
4. ಅತ್ತಾಡಿ	(15.12.92)	ವಾದ್ಯವಾದನ
5. ಅತ್ತಾಡಿ	(15.12.92)	ಗುಮ್ಮಟಿ ವಾದನ ಮತ್ತು ಹೋಳಿಕುಣಿತ

ಕೇಂದ್ರ ಕಚೇರಿಯಿಂದ ನಿಯೋಜಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರಗಳು:

1. ಪುತ್ತೂರು	(4.8.91)	ಭರತನಾಟ್ಯ
2. ಪುರಭವನ, ಮಂಗಳೂರು	(8.11.91)	ನಾಟಕ
3. ಪುತ್ತೂರು	(13.10.91)	ಯಕ್ಷಗಾನ
4. ಪುತ್ತೂರು	(13.11.91)	ವೈಲಿನ್ ವಾದನ
5. ಕಾರ್ಕಳ	(15.11.91)	ಭಕ್ತಿಗೀತೆ
6. ಮಂಗಳೂರು	(9.12.91)	ಶಾಸ್ತ್ರೀಯ ಸಂಗೀತ
7. ಸೂರತ್ಕಲ್	(10.12.91)	ಶಾಸ್ತ್ರೀಯ ಸಂಗೀತ
8. ಉಡುಪಿ	(18.1.92)	ಜಾನಪದ ನೃತ್ಯ
9. ಮಂಗಳೂರು	(5.2.92)	ಯಕ್ಷಗಾನ
10. ಮಂಗಳೂರು	(8.2.92)	ಯಕ್ಷಗಾನ
11. ಪುತ್ತೂರು	(19.2.92)	ನೃತ್ಯರೂಪಕ
12. ಕಾಸರಗೋಡು	(1.3.92)	ಭರತನಾಟ್ಯ
13. ಪುತ್ತೂರು	(6.4.92)	ಭರತನಾಟ್ಯ

14. ಮಂಗಳೂರು (17.10.92 ರಿಂದ 25.10.92ರವರೆಗೆ) ಪರಬ್ ಕೊಂಕಣಿ ಹಬ್ಬ

ಅನುಬಂಧ – 2

1. ಆಡಳಿತ ಭಾಷೆ ಕನ್ನಡಕ್ಕೆ ಪೂರಕವಾಗಿ ಅಧಿಕಾರಿಗಳ ಮತ್ತು ಸರ್ಕಾರದ ಆಡಳಿತ ಕನ್ನಡ ತರಬೇತಿ.
2. ವಾರಕ್ಕೆ ನಾಲ್ಕು ಕಚೇರಿಗಳಂತೆ ತಿಂಗಳಿಗೆ 16 ಕಚೇರಿಗಳಿಗೆ ಕಡಿಮೆ ಇಲ್ಲದಂತೆ ತನಿಖಾ ಭೇಟಿ.
3. ಜಿಲ್ಲಾ ಮಟ್ಟದ ಕಾರ್ಯಾಗಾರ ಸಮಾಲೋಚನಾ ಗೋಷ್ಠಿ
4. ಕೆ.ಡಿ.ಬಿ. ಸಭೆಯಲ್ಲಿ ಪ್ರಸ್ತಾಪ
5. ಪೂರಕ ಸಾಹಿತ್ಯ ವಿತರಣೆ
6. ಇಲಾಖೆಯಿಂದ ಪ್ರಕಟಿಸಿರುವ ಪುಸ್ತಕಗಳ ಮಾರಾಟ
7. ಜಿಲ್ಲಾಮಟ್ಟದ ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ
8. ಕನ್ನಡ ಬೆರಳಚ್ಚು ಯಂತ್ರಗಳ ವಿತರಣೆ
9. ನಿರುದ್ಯೋಗಿ ಬೆರಳಚ್ಚುಗಾರರಿಗೆ ಜಾಬ್ ಟೈಪಿಂಗ್ ಮಾಡಲು ಕನ್ನಡ ಬೆರಳಚ್ಚು ಯಂತ್ರ ಖರೀದಿಸಲು ಧನಸಹಾಯ
10. ಕನ್ನಡ ಸಂಘ ಸಂಸ್ಥೆಗಳಿಗೆ ಭೇಟಿ ಹಾಗೂ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ನಡೆಸುವುದು.

ಬೆಂಗಳೂರು ನಗರದಲ್ಲಿ ಸೀಮೆಎಣ್ಣೆ ಹಾಕರ್ಸ್ ಲೈಸೆನ್ಸ್‌ಗಳ ಸಂಖ್ಯೆ.

506 (902): ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ನೀಡದ ಸೀಮೆಎಣ್ಣೆ ಹಾಕರ್ಸ್ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ?

ಆ. ಜನವರಿ 1992ರಿಂದ ಡಿಸೆಂಬರ್ 1992ರವರೆಗೆ ಬೆಂಗಳೂರು ನಗರದಲ್ಲಿ ಕಲಬೆರಕೆ ಮತ್ತು ಇತರ ಅಕ್ರಮಗಳ ಕಾರಣದಿಂದಾಗಿ ರದ್ದಾದ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ?

ಇ. ಈ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಹೊಸದಾಗಿ ನೀಡಿದ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ?

ಈ. ಬೆಂಗಳೂರು ನಗರದಲ್ಲಿರುವ ಒಟ್ಟು ಸೀಮೆ ಎಣ್ಣೆ ಪಡಿತರ ಚೀಟಿ ಹೊಂದಿದವರ ಸಂಖ್ಯೆ ಎಷ್ಟು ?

ಉ. 1993–94 ರ ಅವಧಿಯಲ್ಲಿ ಬೇಡಿಕೆಯನ್ನು ಪೂರೈಸಲು ನೀಡಲುದ್ದೇಶಿಸಿದ ಲೈಸೆನ್ಸ್‌ಗಳ ಸಂಖ್ಯೆ ಎಷ್ಟು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. 581

ಆ. 03

ಇ. ಇಲ್ಲ

ಈ. 8,27,831

ಉ. ಇಲ್ಲ

ಉದ್ಯಮಗಳ ಮಾಲಿನ್ಯ ತಡೆಗಟ್ಟಲು ತೆಗೆದುಕೊಂಡ ಕ್ರಮಗಳು

507 (350): ಶ್ರೀ ಆರ್. ದಯಾನಂದ್‌ರಾವ್ (ಗಾಂಧಿನಗರ)

ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ, ಪರಿಸರ ಮತ್ತು ಮಲೆನಾಡು ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಎಷ್ಟು ಮಾಲಿನ್ಯಕಾರಕ ಉದ್ದಿಮೆಗಳನ್ನು ಬೆಂಗಳೂರು ನಗರದಲ್ಲಿ ಪತ್ತೆ ಹಚ್ಚಲಾಗಿದೆ ?

2. ಈ ಉದ್ದಿಮೆಗಳಿಗೆ ಮಾಲಿನ್ಯ ತಡೆಗಟ್ಟಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

387.	Chowda Reddy	L-41	50 x 80	Hosur Sarjapur Road
388.	R.K. Prasad	L-44	50 x 80	Hosur Sarjapur Road
389.	Vinny Fired Fernandes	L-45	50 x 80	Hosur Sarjapur Road
390.	T.H. Hanumantharappa	L-46	50 x 80	Hosur Sarjapur Road
391.	K. Shivamurthy	L-47	50 x 80	Hosur Sarjapur Road
392.	Madanagopal Naik	L-48	50 x 80	Hosur Sarjapur Road
393.	Ugranarasimappa	L-49	50 x 80	Hosur Sarjapur Road
394.	D.S. Nadakani	L-50	50 x 80	Hosur Sarjapur Road
395.	S.V. Naik	L-51	50 x 80	Hosur Sarjapur Road
396.	A.G. Chunchegowda	L-54	50 x 80	Hosur Sarjapur Road
397.	M.S. Pattan	L-55	50 x 80	Hosur Sarjapur Road
398.	K.P. Patil	L-56	50 x 80	Hosur Sarjapur Road
399.	S.G. Khelagi	L-57	50 x 80	Hosur Sarjapur Road
400.	L.T. Thimmappa Hegde	L-58	50 x 80	Hosur Sarjapur Road
401.	S.V. Patil	L-59	50 x 80	Hosur Sarjapur Road
402.	N. Jayanna	L-60	50 x 80	Hosur Sarjapur Road
403.	G. Puttaswamy	L-64	50 x 80	Hosur Sarjapur Road
404.	V.M. Ghadi	L-64	50 x 80	Hosur Sarjapur Road
405.	V.R. Patil	L-65	50 x 80	Hosur Sarjapur Road
406.	Vitt Palil	L-66	50 x 80	Hosur Sarjapur Road
407.	J.K. Kale	L-67	50 x 80	Hosur Sarjapur Road
408.	P.T. Desai	L-68	50 x 80	Hosur Sarjapur Road
409.	K. Goudshab	L-69	50 x 80	Hosur Sarjapur Road
410.	G.S. Shivananjappa	L-70	50 x 80	Hosur Sarjapur Road
411.	Gangahuniah	L-71	50 x 80	Hosur Sarjapur Road
412.	Anasuya Gajanana	L-74	50 x 80	Hosur Sarjapur Road
413.	Prabhurao Jagadhele	L-75	50 x 80	Hosur Sarjapur Road
414.	S. Allum Karibasappa	L-77	50 x 80	Hosur Sarjapur Road
415.	K.P. Nadagowda	L-78	50 x 80	Hosur Sarjapur Road
416.	M.K. Kulkarni	L-79	50 x 80	Hosur Sarjapur Road
417.	S.N. Kalburgi	L-80	50 x 80	Hosur Sarjapur Road
418.	Balyantarao Khanpukar	L-81	50 x 80	Hosur Sarjapur Road
419.	Mohanud Omar	L-82	50 x 80	Hosur Sarjapur Road
420.	M.L. Ustad	L-85	50 x 80	Hosur Sarjapur Road
421.	Chandrakantha Sindha	L-86	50 x 80	Hosur Sarjapur Road
422.	K. Gangadharagowda	L-87	50 x 80	Hosur Sarjapur Road
423.	Basavanagoud Somugod Patil	L-88	50 x 80	Hosur Sarjapur Road
424.	Kattimani	L-89	50 x 80	Hosur Sarjapur Road
425.	Raja Ambhu Naik	L-90	50 x 80	Hosur Sarjapur Road
426.	S.R. Morey	L-91	50 x 80	Hosur Sarjapur Road
427.	B.V. Patil	L-92	50 x 80	Hosur Sarjapur Road
428.	Kalanna Shivananjappa	L-98	50 x 80	Hosur Sarjapur Road
429.	Amanini	L-99	50 x 80	Hosur Sarjapur Road
430.	C.B. Mohamed	L-100	50 x 80	Hosur Sarjapur Road

431.	M. Anandarao	L-101	50 x 80	Hosur Sarjapur Road
432.	C.T. Guddelkaya	L-104	50 x 80	Hosur Sarjapur Road
433.	B.P. Nagaraj	L-105	50 x 80	Hosur Sarjapur Road
434.	Narendra Khany	L-106	50 x 80	Hosur Sarjapur Road
435.	Subhas Chanra Pail	L-107	50 x 80	Hosur Sarjapur Road
436.	S.G. Edke	L-108	50 x 80	Hosur Sarjapur Road
437.	Gachinamath S.G.	L-109	50 x 80	Hosur Sarjapur Road
438.	K. Pratapchand Shetty	L-112	50 x 80	Hosur Sarjapur Road
439.	S.R. Hiremat	L-113	50 x 80	Hosur Sarjapur Road
440.	B.S. Padil	L-114	50 x 80	Hosur Sarjapur Road
441.	Mallikarjuna V. Banni	L-115	50 x 80	Hosur Sarjapur Road
442.	Patil	L-116	50 x 80	Hosur Sarjapur Road
443.	K. Abdul Subhan	L-117	50 x 80	Hosur Sarjapur Road
444.	C. Anandanappa	L-120	50 x 80	Hosur Sarjapur Road
445.	Prabhuraj L. Patil	L-121	50 x 80	Hosur Sarjapur Road
446.	I.G. Sanadi	L-122	50 x 80	Hosur Sarjapur Road
447.	Annapurna Bai	L-123	50 x 80	Hosur Sarjapur Road
448.	K.V. Ravindranathababu	L-124	50 x 80	Hosur Sarjapur Road
449.	S.H. Basanna	L-125	50 x 80	Hosur Sarjapur Road
450.	A. Krishnappa	L-128	50 x 80	Hosur Sarjapur Road
451.	S.S. Bavasar	L-129	50 x 80	Hosur Sarjapur Road
452.	S. Revenna	L-130	50 x 80	Hosur Sarjapur Road
453.	K. Kenchappa	L-131	50 x 80	Hosur Sarjapur Road
454.	Basavaraj	L-132	50 x 80	Hosur Sarjapur Road
455.	K. Mallanna	L-133	50 x 80	Hosur Sarjapur Road
456.	Narasingh Suryavamshi	L-134	50 x 80	Hosur Sarjapur Road
457.	G.Y. Krishna	L-135	50 x 80	Hosur Sarjapur Road
458.	Karumbali Sanjeeva Shetty	L-136	50 x 80	Hosur Sarjapur Road
459.	N. Nanjegowda	L-137	50 x 80	Hosur Sarjapur Road
460.	K.E. Patil	L-140	50 x 80	Hosur Sarjapur Road
461.	K.H. Patil	L-141	50 x 80	Hosur Sarjapur Road
462.	K.B. Koliwada	L-142	50 x 80	Hosur Sarjapur Road
463.	G. Ramakrishna	L-143	50 x 80	Hosur Sarjapur Road
464.	Sumavasanthi	L-144	50 x 80	Hosur Sarjapur Road
465.	S.K. Amin	L-145	50 x 80	Hosur Sarjapur Road
466.	M.V. Venkatappa	L-146	50 x 80	Hosur Sarjapur Road
467.	Venkatagiriyappa	L-147	50 x 80	Hosur Sarjapur Road
468.	Thippamma	L-148	50 x 80	Hosur Sarjapur Road
469.	Baskararao Vital Rao Patil	L-149	50 x 80	Hosur Sarjapur Road
470.	K.S. Nagarathnamma	L-152	50 x 80	Hosur Sarjapur Road
471.	B. Swamy Rao	L-153	50 x 80	Hosur Sarjapur Road
472.	J.S. Deshmukh	L-154	50 x 80	Hosur Sarjapur Road
473.	K. Sanyagowda	L-155	50 x 80	Hosur Sarjapur Road
474.	V.K. Lakshmangowda	L-156	50 x 80	Hosur Sarjapur Road
475.	H.S. Muralidhara	L-157	50 x 80	Hosur Sarjapur Road

476.	N. Lokaiah Naik	L-158	50 x 80	Hosur Sarjapur Road
477.	R.N. Lakshmipathi	L-159	50 x 80	Hosur Sarjapur Road
478.	Gopalamukude Kande	L-160	50 x 80	Hosur Sarjapur Road
479.	Bapurao Hoolsookar	L-161	50 x 80	Hosur Sarjapur Road
480.	S. Narayan Gowda	L-162	50 x 80	Hosur Sarjapur Road
481.	H.N. Najjegowda	L-165	50 x 80	Hosur Sarjapur Road
482.	Basavaraj Havagappa Patil	L-166	50 x 80	Hosur Sarjapur Road
483.	S.S. Kolekebail	L-167	50 x 80	Hosur Sarjapur Road
484.	Maqsood Alikhan	L-168	50 x 80	Hosur Sarjapur Road
485.	B. Doddaboregowda	L-169	50 x 80	Hosur Sarjapur Road
486.	T.M. Manjunatha	L-170	50 x 80	Hosur Sarjapur Road
487.	B.M. Iddinabba	L-177	50 x 80	Hosur Sarjapur Road
488.	Huchamasthigowda	L-172	50 x 80	Hosur Sarjapur Road
489.	Jayavani M. Gowda	L-173	50 x 80	Hosur Sarjapur Road
490.	Basavaraj	L-174	50 x 80	Hosur Sarjapur Road
491.	S. Muniraju	L-175	50 x 80	Hosur Sarjapur Road
492.	L.G. Havanur	L-248	50 x 80	Hosur Sarjapur Road
493.	S. Lingiah	L-175	50 x 80	Hosur Sarjapur Road
494.	B. Ramachandra Reddy	L-250	50 x 80	Hosur Sarjapur Road
495.	K.K. Mahendra Kumar	L-251	50 x 80	Hosur Sarjapur Road
496.	S. Annappa Shetty	L-252	50 x 80	Hosur Sarjapur Road
497.	K.V. Govinda Shetty	L-253	50 x 80	Hosur Sarjapur Road
498.	P.S. Bhagwat	L-254	50 x 80	Hosur Sarjapur Road
499.	G. Shankaregowda	L-255	50 x 80	Hosur Sarjapur Road
500.	Shivashankarappa	L-258	50 x 80	Hosur Sarjapur Road
501.	B.A. Umarabha	L-259	50 x 80	Hosur Sarjapur Road
502.	K.P. Revana Siddappa	L-260	50 x 80	Hosur Sarjapur Road
503.	Ramanatha Rao	L-261	50 x 80	Hosur Sarjapur Road
504.	B.J. Puttaswamy	L-262	50 x 80	Hosur Sarjapur Road
505.	T.H. Narayanaswamy	L-263	50 x 80	Hosur Sarjapur Road
506.	T.V. Krishnappa	L-264	50 x 80	Hosur Sarjapur Road
507.	K. Lakkappa	L-265	50 x 80	Hosur Sarjapur Road
508.	G. Ramdas	L-350	50 x 80	Hosur Sarjapur Road
509.	Muktharunisa	L-351	50 x 80	Hosur Sarjapur Road
510.	Gopalakrishna Kodagi	L-352	50 x 80	Hosur Sarjapur Road
511.	D.A. Chinnappa	L-353	50 x 80	Hosur Sarjapur Road
512.	R.S. Naik	L-354	50 x 80	Hosur Sarjapur Road
513.	L.R. Naik	L-357	50 x 80	Hosur Sarjapur Road
514.	Nazeer Ahmed	L-358	50 x 80	Hosur Sarjapur Road
515.	B. Appaji Gowda	L-359	50 x 80	Hosur Sarjapur Road
516.	Basavangowda	L-360	50 x 80	Hosur Sarjapur Road
517.	Sadashivappa Patil	L-361	50 x 80	Hosur Sarjapur Road
518.	Siddaramaiah	L-362	50 x 80	Hosur Sarjapur Road
519.	R.N. Naik	L-363	50 x 80	Hosur Sarjapur Road
520.	C.R. Niravanappa Shetty	L-364	50 x 80	Hosur Sarjapur Road
521.	B.M. Harakeri	L-367	50 x 80	Hosur Sarjapur Road

522.	M. Virupakshappa	L-368	50 x 80	Hosur Sarjapur Road
523.	H.B. Patil	L-369	50 x 80	Hosur Sarjapur Road
524.	H. Srikanthaiah	L-370	50 x 80	Hosur Sarjapur Road
525.	G.M. Mamtaiah	L-371	50 x 80	Hosur Sarjapur Road
526.	Puttamadamma	L-372	50 x 80	Hosur Sarjapur Road
527.	G. Amaregowda	L-373	50 x 80	Hosur Sarjapur Road
528.	Sharanappa Patil	L-374	50 x 80	Hosur Sarjapur Road
529.	M.R. Divatar	L-377	50 x 80	Hosur Sarjapur Road
530.	K. Rajashekarappa	L-378	50 x 80	Hosur Sarjapur Road
531.	L. Puttaswamy	L-379	50 x 80	Hosur Sarjapur Road
532.	Puttamakki Rathankar	L-380	50 x 80	Hosur Sarjapur Road
533.	Malappa	L-381	50 x 80	Hosur Sarjapur Road
534.	T.G. Sathyanarayana	L-1114	50 x 80	Hosur Sarjapur Road
535.	A. Nagaraju	L-1115	50 x 80	Hosur Sarjapur Road
536.	Vasantha V Saliyana	L-1116	50 x 80	Hosur Sarjapur Road
537.	Kushala K.	L-1117	50 x 80	Hosur Sarjapur Road
538.	S.A. Agadi	L-1118	50 x 80	Hosur Sarjapur Road
539.	S.P. Gangadharappa	L-1119	50 x 80	Hosur Sarjapur Road
540.	M. Veeraswamy	L-1121	50 x 80	Hosur Sarjapur Road
541.	A.D. Beeligowda	L-1120	50 x 80	Hosur Sarjapur Road
542.	Leelavathirai	L-1122	50 x 80	Hosur Sarjapur Road
543.	D.K. Taradevi	L-1123	50 x 80	Hosur Sarjapur Road
544.	H.K. Patil	L-1124	50 x 80	Hosur Sarjapur Road
545.	M.P. Keshavamurthy	L-1125	50 x 80	Hosur Sarjapur Road
546.	M. Shivanna	L-1128	50 x 80	Hosur Sarjapur Road
547.	Mahadevabanakar	L-1129	50 x 80	Hosur Sarjapur Road
548.	R.S. Nadoni	L-1130	50 x 80	Hosur Sarjapur Road
549.	Champanbai Peer Bhogal	L-1131	50 x 80	Hosur Sarjapur Road
550.	A. Balashetty	L-1132	50 x 80	Hosur Sarjapur Road
551.	S.Subbaiah naik	L-1133	50 x 80	Hosur Sarjapur Road
552.	Kamalani	L-1134	50 x 80	Hosur Sarjapur Road
553.	B.H. Lakshmanaiah	L-1135	50 x 80	Hosur Sarjapur Road
554.	Annapurnamma	L-1136	50 x 80	Hosur Sarjapur Road
555.	P.C. Shettar	L-1137	50 x 80	Hosur Sarjapur Road
556.	K. Vasantha Bangera	L-1138	50 x 80	Hosur Sarjapur Road
557.	Y. Manjaiah Shetty	L-1139	50 x 80	Hosur Sarjapur Road
558.	Dr. Sangameshwara Sarda	L-29	50 x 80	Hosur Sarjapur Road
559.	H.B. Dyaveerappa	L-31	50 x 80	Hosur Sarjapur Road

Statement showing the list of Alternative Sites alloted from 1.07.1992.

Name of the Allottee	Site No. & Dimension	Layout	Date of Allotment	Alt. site No.	Layout	Date of allotment Chairman/ Authority	Reason for allotment of alt. site	Whether conform the guidelines of Govt in No. HUD 381 MNX
1	2	3	4	5	6	7	8	9
. Malligowda S. Patil	9 50 x 80	RMV II Stg.	*	2 50 x 80	HSR SEC. IV	14.10.92	Court Stay	Yes
. M.R. Thanga	11 50 x 80	RMV II Stg.	"	3 50 x 80	"	14.10.92	Court Stay	Yes
. S. Bangarappa	13 50 x 80	RMV II Stg.	"	4 50 x 80	"	14.10.92	Court Stay	Yes
T.A. Rangaiah	158/C 50 x 80	RMV II Stg.	"	5 50 x 80	"	14.10.92	Court Stay	Yes
G.B. Shivakumar	315 50 x 80	Sarakki IV	"	6 50 x 80	"	14.10.92	Court Stay	Yes
Baburam Hujre	L-154 50 x 80	H.S.R.	"	7 50 x 80	"	14.10.92	Court Stay	Yes
Savithri Gundi	50 x 80	-	"	8 50 x 80	"	14.10.92	Court Stay	Yes
Saraswathamma	408 50 x 80	Sarakki	"	9 50 x 80	"	14.10.92	Court Stay	Yes
Byre Gowda	50 x 80		"	10 50 x 80	"	14.10.92	Court Stay	Yes
). Narayanappa	50 x 80		"	11 50 x 80	"	14.10.92	Court Stay	Yes
. Sunanda Patil	50 x 60	-	"	14 50 x 80	"	14.10.92	Court Stay	Yes
!. M. Mahadev	50 x 80	-	"	14 50 x 80	"	14.10.92	Court Stay	Yes
;. B.G. Shivappa	20 50 x 80	K.M.L.	"	35 50 x 80	"	14.10.92	Court Stay	Yes
. K.M. Md. Masood	43 50 x 80	S.R.K.	"	38 50 x 80	"	14.10.92	Court Stay	Yes
. D. Mallesh	58 40 x 60	R.M.V.	"	52 40 x 60	"	14.10.92	Court Stay	Yes
. S. Rudrappa	05 40 x 60	RMV II Stg.	**	54 40 x 60	"	14.10.92	Court Stay	Yes
. Shrana Gowda	17 40 x 60	S.R.K.	"	57 40 x 60	"	14.10.92	Court Stay	Yes
. Akudas Anwar	37 40 x 60	S.R.K.	"	66 40 x 60	"	14.10.92	Court Stay	Yes
. V. Dhanjay Kumar	35 40 x 60	S.R.K.	"	67 40 x 60	"	14.10.92	Court Stay	Yes

ıtimation not sent due to Court stay order. xx Intimation not given.

1		2	3	4		5	6	7	8	9
20. Maddegowda	47	40 x 60	S.R.K.	Int. not given	68	40 x 60	HSR Sec. IV.	14.10.92	Court Stay	Yes
21. Miaquiddin	51	40 x 60	S.R.K.	"	69	40 x 60	"	14.10.92	Court Stay	Yes
22. Ja Moinuddin Shariff	41	40 x 60	S.R.K.	"	70	40 x 60	"	14.10.92	Court Stay	Yes
23. Gangappa	39	40 x 60	S.R.K.	"	71	40 x 60	"	14.10.92	Court Stay	Yes
24. Vidyadar Guruji	404	40 x 60	S.R.K.	"	73	40 x 60	"	14.10.92	Court Stay	Yes
25. A.K. Naik	407	40 x 60	S.R.K.	"	74	40 x 60	"	14.10.92	Court Stay	Yes
26. A.V. Agohotri	54	40 x 60	K.M.L.	"	75	40 x 60	"	14.10.92	Court Stay	Yes
27. Ramachandra Veerappa	52	40 x 60	K.M.L.	"	114	40 x 60	"	14.10.92	Court Stay	Yes
28. S.B. Vastrala	56	40 x 60	K.M.L.	"	118	40 x 60	"	14.10.92	Court Stay	Yes
29. R. Ramaiah	58	40 x 60	K.M.L.	"	119	40 x 60	"	14.10.92	Court Stay	Yes
30. A.V. Appuswamy Reddy	60	40 x 60	K.M.L.	"	120	40 x 60	"	14.10.92	Court Stay	Yes
31. N.L. Bellada	62	40 x 60	K.M.L.	"	121	40 x 60	"	14.10.92	Court Stay	Yes
32. D.S. Shankaramurthy	53	40 x 60	K.M.L.	"	122	40 x 60	"	14.10.92	Court Stay	Yes
33. C.V. Venkatarayappa	409	40 x 60	S.R.K.	"	122	40 x 60	"	14.10.92	Court Stay	Yes
34. Allur Hanumanthappa	4	50 x 80	R.M.V.	"	30/B	50 x 80	Nandini	14.10.92	Court Stay	Yes

ರಾಜ್ಯದಲ್ಲಿರುವ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ

522 (353): ಶ್ರೀ ಜಿ. ರಾಜೂಗೌಡ (ಹನೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿರುವ ಒಟ್ಟು ಐ ಎ ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ಹಾಗೂ ಅವರುಗಳ ಒಟ್ಟು ಮಾಸಿಕ ವೇತನ ಎಷ್ಟಾಗುತ್ತದೆ;

ಆ. ಕಳೆದ ಮೂರು ವರ್ಷಗಳಲ್ಲಿ ಆ ಅಧಿಕಾರಿಗಳಿಗೆ ಕಾರು ಕೊಳ್ಳುವ ಮತ್ತು ಮನೆಕಟ್ಟಿಕೊಳ್ಳುವ ಮುಂಗಡ ಹಣ ಎಷ್ಟು ನೀಡಲಾಗಿದೆ.

ಇ. ಸರ್ಕಾರದ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ವೇತನದಲ್ಲಿ ಇದು ಎಷ್ಟನೇ ಒಂದು ಅಂಶವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ. ರಾಜ್ಯದ 262 ಐಎಎಸ್ ಅಧಿಕಾರಿಗಳ ಪೈಕಿ 202 ಅಧಿಕಾರಿಗಳು ರಾಜ್ಯದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರುಗಳ ಮಾಸಿಕ ವೇತನವು (ತುಟ್ಟಿಭತ್ಯೆ ಒಳಗೊಂಡಂತೆ) ರೂ. 17.06 ಲಕ್ಷಗಳಾಗಿರುತ್ತದೆ. (ಅಂದಾಜು)

ಆ. ಕಾರು ಕೊಳ್ಳಲು ಮುಂಗಡ : 27.16 ಲಕ್ಷಗಳು
ಮನೆ ಮುಂಗಡ ಸಾಲ ರೂ. 28.97 ಲಕ್ಷಗಳು

ಇ. 0.009 ಪ್ರತಿಶತವಾಗಿರುತ್ತದೆ.

ಇಪ್ಪತ್ತು ಅಂಶಗಳ ಕಾರ್ಯಕ್ರಮದ ಅನುಷ್ಠಾನಕ್ಕೆ ಸಮಿತಿ

523 (354): ಶ್ರೀ ಬಿ. ರಾಜುಗೌಡ (ಹನೂರು)

ಮಾನ್ಯ ಯೋಜನಾ ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 20 ಅಂಶ ಕಾರ್ಯಕ್ರಮ ಅನುಷ್ಠಾನದ ಮೇಲ್ವಿಚಾರಣೆಗೆ ಯಾವ ಯಾವ ಮಟ್ಟದಲ್ಲಿ ಯಾರ ಯಾರ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ನೇಮಕ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೆ ?

ಆ. ಆ ಸಮಿತಿಗಳ ಸ್ವರೂಪ, ಅದರ ಕಾರ್ಯ ವೈಖರಿ ಏನು ?

ಇ. ಪ್ರಾಮಾಣಿಕ ದಕ್ಷ ಹಾಗೂ ಸ್ವಚ್ಛ ಆಡಳಿತ ವ್ಯವಸ್ಥೆಗೆ ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳೇನು ?

ಶ್ರೀ ಟಿ.ಎಂ. ಮಂಜುನಾಥ್ (ಯೋಜನಾ, ಸಾಂಸ್ಥಿಕ ಹಣಕಾಸು ಹಾಗೂ ಸಾಂಖ್ಯಿಕ ರಾಜ್ಯ ಸಚಿವರು):–

ಅ. ಹೌದು. ಈಗಾಗಲೇ ಸರ್ಕಾರವು ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಉಸ್ತುವಾರು ಮಂತ್ರಿಗಳ ಅಧ್ಯಕ್ಷತೆಯಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು

ಕೇಂದ್ರ ಸ್ಥಾನದ ವಿಧಾನಸಭಾ ಕ್ಷೇತ್ರದ ವಿಧಾನಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಕರ್ನಾಟಕ 20 ಅಂಶ ಕಾರ್ಯಕ್ರಮವನ್ನು ಪರಿಣಾಮಕಾರಿ ಅನುಷ್ಠಾನಗೊಳಿಸುವ ಸಮಿತಿಗಳನ್ನು ರಚಿಸಲಾಗಿದೆ.

ಆ. ರಾಜ್ಯ ಮಟ್ಟ, ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದ ಈ ಸಮಿತಿಗಳ ಸ್ವರೂಪ ಮತ್ತು ಕಾರ್ಯ ವೈಖರಿಯ ವಿವರಗಳನ್ನು ಅನುಕ್ರಮವಾಗಿ ಅನುಬಂಧ–1 ಅನುಬಂಧ–2 ಮತ್ತು ಅನುಬಂಧ–3 ರಲ್ಲಿ ಕೊಡಲಾಗಿದೆ. ಆಡಳಿತದಲ್ಲಿ ದಕ್ಷತೆ, ಶ್ರದ್ಧೆ ಮತ್ತ ಪ್ರಾಮಾಣಿಕತೆಯನ್ನು ಹೆಚ್ಚಿಸಲು ಮತ್ತು ಆಡಳಿತಾತ್ಮಕ ವಿಷಯಗಳನ್ನು ನಿರ್ವಹಿಸುವ ಬಗೆಗಿನ ಕಾರ್ಯ ವಿಧಾನವನ್ನು ಸರಳೀಕರಣಗೊಳಿಸಲು ಪಂಚಸೂತ್ರಗಳನ್ನೊಳಗೊಂಡ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯ 1991 ಇದನ್ನು ಜಾರಿಗೆ ತರಲು ಕಳೆದ ವಿಧಾನ ಮಂಡಲದ ಜಂಟಿ ಆಯ್ಕೆ ಸಮಿತಿಯ ಪರಿಶೀಲನೆಯಲ್ಲಿದೆ. ಈ ವಿಧೇಯಕವು ಕಾನೂನಾದಲ್ಲಿ ನಿರ್ಣಯ ತೆಗೆದುಕೊಳ್ಳುವ ಹಂತಗಳು ಕಡಿಮೆಯಾಗುವುದು ಮತ್ತು ಸಾರ್ವಜನಿಕ ಕೆಲಸಗಳಿಗೆ ಕಾಲಾವಕಾಶ ನಿಗದಿಪಡಿಸಲಾಗುವುದು ಹಾಗೂ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.

ಅನುಬಂಧ–1

ಕರ್ನಾಟಕ 20 ಅಂಶ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ರಾಜ್ಯ ಮಟ್ಟದ ಉನ್ನತ ಸಮಿತಿ:

ಈ ಸಮಿತಿಯ ರಚನೆ ಈ ಕೆಳಕಂಡಂತಿದೆ.

1. ಮುಖ್ಯ ಮಂತ್ರಿಗಳು	..	ಅಧ್ಯಕ್ಷರು
2. ಯೋಜನಾ ಸಚಿವರು	..	ಕಾರ್ಯಧ್ಯಕ್ಷರು
3. ಗ್ರಾಮೀಣಾ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು	..	ಸದಸ್ಯರು
4. ಆರೋಗ್ಯ ಮತ್ತ ಕುಟುಂಬ ಕಲ್ಯಾಣ ಮಂತ್ರಿಗಳು	..	ಸದಸ್ಯರು
5. ಕೃಷಿ ಸಚಿವರು	..	ಸದಸ್ಯರು
6. ಕಾಮಗಾರಿ ಮತ್ತು ನೀರಾವರಿ ಮಂತ್ರಿಗಳು	..	ಸದಸ್ಯರು
7. ಹಣಕಾಸು ಮಂತ್ರಿಗಳು	..	ಸದಸ್ಯರು
8. ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಮಂತ್ರಿಗಳು	..	ಸದಸ್ಯರು
9. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು	..	ಸದಸ್ಯರು
10. ಅಭಿವೃದ್ಧಿ ಆಯುಕ್ತರು	..	ಸದಸ್ಯರು
11. ಆರ್ಥಿಕ ಆಯುಕ್ತರು	..	ಸದಸ್ಯರು
12. ಸರ್ಕಾರದ ಕಾರ್ಯದರ್ಶಿ, ಯೋಜನಾ ಇಲಾಖೆ	..	ಸದಸ್ಯ ಕಾರ್ಯದರ್ಶಿ
13. ಎಲ್ಲಾ ಸಂಬಂಧಪಟ್ಟ ಸರ್ಕಾರದ ಕಾರ್ಯದರ್ಶಿಗಳು:ಇಲಾಖಾ: ಉದ್ದಿಮೆಗಳ ಮುಖ್ಯಸ್ಥರು	..	ಆಹ್ವಾನಿಕರು

ಈ ಸಮಿತಿಯು 3 ತಿಂಗಳಿಗೊಮ್ಮೆ ಸೇರಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಪರಿಶೀಲನೆ

ನಡೆಸುತ್ತದೆ. ಕಾರಣಾಂತರದಿಂದ ಮುಖ್ಯಮಂತ್ರಿಗಳಿಗೆ ಅನುಕೂಲವಾಗದಿದ್ದಲ್ಲಿ ಕಾರ್ಯಧ್ಯಕ್ಷರು ಈ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸುವರು.

ಅನುಬಂಧ – 2

ಕರ್ನಾಟಕ 20 ಅಂಶ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಜಿಲ್ಲಾ ಮಟ್ಟದ ಸಮಿತಿ:

ಈ ಸಮಿತಿಯ ರಚನೆ (ಬೆಂಗಳೂರು ನಗರ ಜಿಲ್ಲೆಯನ್ನು ಹೊರತುಪಡಿಸಿ) ಈ ಕೆಳಕಂಡಂತಿದೆ.

1. ಜಿಲ್ಲೆಯ ಉಸ್ತುವಾರಿ ಸಚಿವರು	..	ಅಧ್ಯಕ್ಷರು
2. ಜಿಲ್ಲಾ ಪರಿಷತ್ ಅಧ್ಯಕ್ಷರು	..	ಸಹ–ಅಧ್ಯಕ್ಷರು
3. ಜಿಲ್ಲೆಯನ್ನು, ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ, ಜಿಲ್ಲೆಯಲ್ಲಿ ವಾಸವಾಗಿರುವ ಸಂಸತ್ ಸದಸ್ಯರು (ಲೋಕಸಭೆ).	..	ಸಹ–ಅಧ್ಯಕ್ಷರು
4. ಜಿಲ್ಲೆಯನ್ನು, ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ ಜಿಲ್ಲೆಯಲ್ಲಿ ವಾಸವಾಗಿರುವ ಸಂಸತ್ ಸದಸ್ಯರು (ರಾಜ್ಯಸಭೆ)	..	ಸಹ–ಅಧ್ಯಕ್ಷರು
5. ಜಿಲ್ಲಾ ಪರಿಷತ್ ಉಪಾಧ್ಯಕ್ಷರು	..	ಸದಸ್ಯರು
6. ಜಿಲ್ಲೆಯಲ್ಲಿನ ತಾಲ್ಲೂಕುಗಳನ್ನು:ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ ವಿಧಾನ ಸಭೆಯ ಸದಸ್ಯರುಗಳು	..	ಸದಸ್ಯರು
7. ಜಿಲ್ಲೆಯಲ್ಲಿ ವಾಸವಾಗಿರುವ:ಜಿಲ್ಲೆಯನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಸದಸ್ಯರುಗಳು	”	ಸದಸ್ಯರು
8. ಜಿಲ್ಲಾ ಪರಿಷತ್‌ಗಳ ಎಲ್ಲಾ ಸ್ಥಾಯೀ ಸಮಿತಿಗಳ ಅಧ್ಯಕ್ಷರುಗಳು	..	ಸದಸ್ಯರು
9. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಬ್ಬ ಪ್ರತಿನಿಧಿ	..	ಸದಸ್ಯರು
10. ಹಿಂದುಳಿದ ವರ್ಗದ ಕೋಮಿನ ಒಬ್ಬ ಪ್ರತಿನಿಧಿ	..	ಸದಸ್ಯರು
11. ಧಾರ್ಮಿಕ ಅಲ್ಪ ಸಂಖ್ಯಾತ ಕೋಮಿನ ಒಬ್ಬ ಪ್ರತಿನಿಧಿ	..	ಸದಸ್ಯರು
12. ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ (ಪ್ರತಿನಿಧಿಯನ್ನು ಬ್ಯಾಂಕು ನಾಮ ನಿರ್ದೇಶನ ಮಾಡಬೇಕು)	..	ಸದಸ್ಯರು
13. ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ	..	ಸದಸ್ಯರು
14. ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿ	..	ಸದಸ್ಯರು
15. ಜಿಲ್ಲಾ ಪರಿಷತ್‌ನ ಉಪಕಾರ್ಯದರ್ಶಿ (ಅಭಿವೃದ್ಧಿ)		ಸದಸ್ಯರು
16. ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು	..	ಸದಸ್ಯರು
17. ಜಿಲ್ಲಾಧಿಕಾರಿ	..	ಸದಸ್ಯ–ಕಾರ್ಯದರ್ಶಿ

18. ಇಲಾಖೆಗಳ (ಸಂಬಂಧಪಟ್ಟ) ಎಲ್ಲಾ ಜಿಲ್ಲಾ ಮುಖ್ಯಸ್ಥರುಗಳು .. ಆಹ್ವಾನಿತರು
19. ಸಹಕಾರಿ ಸಂಸ್ಥೆಗಳ, ಸಾರ್ವಜನಿಕ ವಲಯ ಉದ್ದಿಮೆಗಳ ಮತ್ತು ಶಾಸನಬದ್ಧ ನಿಕಾಯಗಳ ಜಿಲ್ಲಾ ಮಟ್ಟದ ಅಧಿಕಾರಿಗಳು .. ಆಹ್ವಾನಿತರು
20. ಲೀಡ್ ಬ್ಯಾಂಕ್ ಅಧಿಕಾರಿ .. ಆಹ್ವಾನಿತರು

ಜಿಲ್ಲಾ ಮಟ್ಟದ ಸಮಿತಿಯು 3 ತಿಂಗಳಿಗೊಮ್ಮೆ ಸಭೆ ಸೇರುತ್ತದೆ. ಜಿಲ್ಲಾ ಮಟ್ಟದ ಸಮಿತಿಯ ಸದಸ್ಯ ಕಾರ್ಯದರ್ಶಿಯು ಪ್ರತಿ 3 ತಿಂಗಳು ಮುಕ್ತಾಯವಾದ 15 ದಿನಗಳ ನಂತರ ಜಿಲ್ಲಾ ಸಮಿತಿ ಸಭೆಯನ್ನು ಕರೆಯಲು ಅಧ್ಯಕ್ಷರಿಗೆ ಅನುಕೂಲವಾಗ ಬಹುದಾದ ದಿನಾಂಕವನ್ನು ಪಡೆದುಕೊಳ್ಳುವರು. ಹಾಗೆ ಸಭೆಗೆ ನಿಗಧಿಪಡಿಸಿದ ದಿನಾಂಕದಂದು ಸಭೆಯ ಅಧ್ಯಕ್ಷತೆ ವಹಿಸುವ ಸಲುವಾಗಿ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲಾ ಕೇಂದ್ರ ಕಾರ್ಯಸ್ಥಾನಕ್ಕೆ ಭೇಟಿ ಕೊಡಲಾಗದಿದ್ದಲ್ಲಿ ಸಮಿತಿಯು ಯಾರೇ ಸಹ–ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರಬಹುದು. ಸಭೆಯ ಅಧ್ಯಕ್ಷತೆ ವಹಿಸುವ ಸಹ–ಅಧ್ಯಕ್ಷರ ಆದ್ಯತಾ ಕ್ರಮವನ್ನು ಜಿಲ್ಲಾ ಮಟ್ಟದ ಸಮಿತಿಯ ಸದಸ್ಯರ ಪಟ್ಟಿಯಲ್ಲಿ ಕೊಡಲಾಗಿದೆ. ಸಹ–ಅಧ್ಯಕ್ಷರು ಯಾರೂ ಇಲ್ಲದಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಸಮಿತಿಯು ನಿರ್ಧರಿಸಿದಂತೆ ಸದಸ್ಯರಲ್ಲಿ ಯಾರೇ ಒಬ್ಬರು ಸಭೆಯ ಅಧ್ಯಕ್ಷತೆಯನ್ನು ವಹಿಸಬಹುದು.

ಬೆಂಗಳೂರು ನಗರ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ತು ಅಸ್ತಿತ್ವದಲ್ಲಿಲ್ಲದಿರುವುದರಿಂದ ಈ ಜಿಲ್ಲೆಯ ಸಮಿತಿಯಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು, ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್, ಉಪ ಕಾರ್ಯದರ್ಶಿ (ಅಭಿವೃದ್ಧಿ) ಜಿಲ್ಲಾ ಪರಿಷತ್ತು ಇವರುಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿರುವಂತೆ ಉಳಿದೆಲ್ಲ ಸದಸ್ಯರುಗಳಿದ್ದು, ಈ ಸಮಿತಿಯು 3 ತಿಂಗಳಿಗೊಮ್ಮೆ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತದೆ.

ಅನುಬಂಧ – 3

ಕರ್ನಾಟಕ 20 ಅಂಶ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ತಾಲ್ಲೂಕು ಮಟ್ಟದ ಸಮಿತಿ:

ಈ ಸಮಿತಿಯು ಸ್ವರೂಪ ಈ ಕೆಳಕಂಡಂತಿದೆ:

1. ತಾಲ್ಲೂಕು ಕೇಂದ್ರ ಕಾರ್ಯಸ್ಥಾನಗಳ ವಿಧಾನ ಸಭಾ ಕ್ಷೇತ್ರದ ವಿಧಾನ ಸಭಾ ಸದಸ್ಯರು .. ಅಧ್ಯಕ್ಷರು
2. ತಾಲ್ಲೂಕಿನ ಭಾಗವನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು .. ಸಹ–ಅಧ್ಯಕ್ಷರು
3. ತಾಲ್ಲೂಕಿನಲ್ಲಿ ವಾಸವಾಗಿರುವ ವಿಧಾನ ಪರಿಷತ್ ಸದಸ್ಯರು .. –ಅದೇ–
4. ತಾಲ್ಲೂಕನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು (ಲೋಕಸಭಾ : ರಾಜ್ಯಸಭಾ) .. ಸದಸ್ಯರು
5. ತಾಲ್ಲೂಕಿನಲ್ಲಿ ವಾಸವಾಗಿರುವ ಸಂಸತ್ ಸದಸ್ಯರು .. ಸದಸ್ಯರು
6. ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗದ ಒಬ್ಬ ಪ್ರತಿನಿಧಿ .. ಸದಸ್ಯರು
7. ಹಿಂದುಳಿದ ವರ್ಗದ ಕೋಮಿನ ಒಬ್ಬ ಪ್ರತಿನಿಧಿ .. ಸದಸ್ಯರು
8. ಧಾರ್ಮಿಕ ಅಲ್ಪ ಸಂಖ್ಯಾತ ಕೋಮಿನ ಒಬ್ಬ ಪ್ರತಿನಿಧಿ .. ಸದಸ್ಯರು

9. ಪಿ ಸಿ ಎ ಆರ್ ಡಿ ಬ್ಯಾಂಕ್ ಅಧ್ಯಕ್ಷ .. ಸದಸ್ಯರು
10. ಉಪ ವಿಭಾಗಾಧಿಕಾರಿ (ತಮ್ಮ ಅಧಿಕಾರ ವ್ಯಾಪ್ತಿಯಲ್ಲಿನ ತಾಲ್ಲೂಕ್‌ಗಳಲ್ಲಿ ಒಂದೇ ದಿನ ಒಂದಕ್ಕಿಂತ ಹೆಚ್ಚು ಸಮಿತಿ ಸಭೆಯನ್ನು ಕರೆಯಲಾಗಿದ್ದರೆ ಯಾವುದೇ ಸಭೆಯಲ್ಲಿ ಭಾಗವಹಿಸುವ ಆಯ್ಕೆಯ ಅವಕಾಶ ಉಪ ವಿಭಾಗಾಧಿಕಾರಿಯವರಿಗೆ ಇರುತ್ತದೆ). .. ಸದಸ್ಯರು
11. ಟಿ ಎ ಪಿ ಸಿ ಎಂ ಎಸ್ ಅಧ್ಯಕ್ಷ .. ಸದಸ್ಯರು
12. ಡಿ ಸಿ ಸಿ ಬ್ಯಾಂಕಿನ ತಾಲ್ಲೂಕು ಮಟ್ಟದ ಪ್ರತಿನಿಧಿ .. ಸದಸ್ಯರು
13. ತಹಶೀಲ್ದಾರ್ .. ಸದಸ್ಯರು
14. ಕ್ಷೇತ್ರಾಭಿವೃದ್ಧಿ ಅಧಿಕಾರಿ .. ಸದಸ್ಯ –ಕಾರ್ಯದರ್ಶಿ
15. ಸರ್ಕಾರಿ ಇಲಾಖೆ:ಉದ್ದಿಮೆಗಳ (ಸಂಬಂಧಪಟ್ಟ) ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಆಹ್ವಾನಿತರು.

ತಾಲ್ಲೂಕು ಮಟ್ಟದ ಸಮಿತಿಯು 3 ತಿಂಗಳಿಗೊಮ್ಮೆ ಸಭೆ ಸೇರಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸುತ್ತದೆ. ತಾಲ್ಲೂಕು ಮಟ್ಟದ ಸಮಿತಿಯ ಸದಸ್ಯ ಕಾರ್ಯದರ್ಶಿಯು ಪ್ರತಿ 3 ತಿಂಗಳು ಮುಕ್ತಾಯವಾದ 15 ದಿನಗಳ ನಂತರ ಸಂಬಂಧಪಟ್ಟ ಸಮಿತಿ ಸಭೆಗಳನ್ನು ಕರೆಯಲು ಅಧ್ಯಕ್ಷರಿಗೆ ಅನುಕೂಲವಾಗ ಬಹುದಾದ ದಿನಾಂಕವನ್ನು ಪಡೆದುಕೊಳ್ಳುವುದು ಹಾಗೆ ಸಭೆಗೆ ನಿಗಧಿಪಡಿಸಿದ ದಿನಾಂಕದಂದು ಸಬೆಯ ಅಧ್ಯಕ್ಷತೆ ವಹಿಸುವ ಸಲುವಾಗಿ ಅಧ್ಯಕ್ಷರು ತಾಲ್ಲೂಕು ಕೇಂದ್ರ ಕಾರ್ಯ ಸ್ಥಾನಕ್ಕೆ ಭೇಟಿ ಕೊಡಲಾಗದಿದ್ದಲ್ಲಿ, ಸಮಿತಿಯು ಯಾರೇ ಸಹ–ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರಬಹುದು. ಸಭೆಯ ಅಧ್ಯಕ್ಷತೆ ವಹಿಸುವ ಸಹ–ಅಧ್ಯಕ್ಷರ ಆದ್ಯತಾ ಕ್ರಮವನ್ನು ತಾಲ್ಲೂಕು ಮಟ್ಟದ ಸಮಿತಿಯ ಸದಸ್ಯರ ಪಟ್ಟಿಯಲ್ಲಿ ಕೊಡಲಾಗಿದೆ. ಸಹ–ಅಧ್ಯಕ್ಷರು ಯಾರೂ ಇಲ್ಲದಿದ್ದ ಪಕ್ಷದಲ್ಲಿ, ಸಂಬಂಧಪಟ್ಟ ಸಮಿತಿಯು ನಿರ್ಧರಿಸಿದಂತೆ ಸದಸ್ಯರಲ್ಲಿ ಯಾರೇ ಒಬ್ಬರು ಸಭೆಯ ಅಧ್ಯಕ್ಷತೆಯನ್ನು ವಹಿಸುವರು.

ರಾಜ್ಯದಲ್ಲಿ ಸಾಮೂಹಿಕ ವಿಮಾ ಯೋಜನೆ.

524 (330): ಶ್ರೀ ಜಿ. ರಾಜು ಗೌಡ (ಹನೂರು)

ಮಾನ್ಯ ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಸಾಮೂಹಿಕ ವಿಮಾ ಯೋಜನೆಯನ್ನು ಯಾವ ಯಾವ ವರ್ಗದ ಜನರಿಗೆ ವಿಧಿಸಲಾಗಿದೆ:

ಆ. ಈ ಯೋಜನೆಯ ಪ್ರಾರಂಭದಿಂದ ಇದುವರೆವಿಗೆ ಎಷ್ಟು ಜನರು ಪ್ರಯೋಜನ ಪಡೆದಿರುವರು ?

ಶ್ರೀ ರಾಮಲಿಂಗರೆಡ್ಡಿ (ಹಣಕಾಸಿನ ರಾಜ್ಯ ಸಚಿವರು):–

ಅ. ಈ ಯೋಜನೆಯನ್ನು ಖಾಯಂ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆ.

ಆ. ಈ ಯೋಜನೆಯು ಪ್ರಾರಂಭವಾದಾಗಿನಿಂದ ಇದುವರೆಗೆ ಸಾಧಾರಣವಾಗಿ 6,500 –ಮೃತ ನೌಕರರ ಕುಟುಂಬದವರು ವಿಮಾ ಸೌಲಭ್ಯ ಹಾಗೂ ಉಳಿತಾಯ ನಿಧಿಯ ಸೌಲಭ್ಯವನ್ನು ಪಡೆದಿದ್ದಾರೆ.

ಹಾಗೂ ನಿವೃತ್ತಿ ಹೊಂದಿದ ಎಲ್ಲಾ ನೌಕರರಿಗೆ ಉಳಿತಾಯ ನಿಧಿಯ ಹಣವನ್ನು ಶೇಕಡಾ 12ರ ಬಡ್ಡಿಯೊಂದಿಗೆ ಮರುಪಾವತಿ ಮಾಡಲಾಗಿದೆ.

ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕಾಲಿ ಇರುವ ನ್ಯಾಯಮೂರ್ತಿಗಳ ಹುದ್ದೆಗಳ ಭರ್ತಿ.

525 (210): ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಔರಾದ್)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ಉಚ್ಚ ನ್ಯಾಯಾಲಯದಲ್ಲಿರುವ ಒಟ್ಟು ನ್ಯಾಯಾಧೀಶರ ಹುದ್ದೆಗಳ ಸಂಖ್ಯೆ ಎಷ್ಟು:

ಆ. ಇವುಗಳಲ್ಲಿ ಎಷ್ಟು ಹುದ್ದೆಗಳು ಭರ್ತಿಯಾಗಿವೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇವೆ:

ಇ. ಖಟ್ಲೆಗಳ ಶೀಘ್ರ ವಿಲೇವಾರಿಗೆ ಅನುಕೂಲ ಮಾಡಿ ಕೊಡುವ ಸಲುವಾಗಿ ಖಾಲಿ ಇರುವ ನ್ಯಾಯಮೂರ್ತಿಗಳ ಹುದ್ದೆಗಳನ್ನು ತುಂಬಲು ರಾಜ್ಯ ಸರ್ಕಾರ ಅಗತ್ಯ ಕ್ರಮಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ.	1. ಖಾಯಂ ನ್ಯಾಯಾಧೀಶರ ಹುದ್ದೆ	– 28
	2. ಹೆಚ್ಚುವರಿ ನ್ಯಾಯಾಧೀಶರ ಹುದ್ದೆ	– 2
	ಒಟ್ಟು	– 30

ಆ. ಅವುಗಳಲ್ಲಿ

1. ಭರ್ತಿಯಾಗಿರುವ ಹುದ್ದೆಗಳು	24
2. ಖಾಲಿಯಿರುವ ಹುದ್ದೆಗಳು	6

(ಎರಡು–ಹೆಚ್ಚುವರಿ ನ್ಯಾಯಾಧೀಶರ ಹುದ್ದೆಗಳು ಸೇರಿವೆ)

ಇ. ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಯವರು ಮಾಡವುದರಿಂದ ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುವುದು.

ವರದಕ್ಷಿಣೆ ಸಾವುಗಳ ಸಂಖ್ಯೆ.

526 (211): ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರದ್)

ಮಾನ್ಯ ರಾಜ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಳೆದ ವರ್ಷದಿಂದ ಇಂದಿನವರೆಗೆ ಎಷ್ಟು ವರದಕ್ಷಿಣೆ ಸಾವಿನ ಪ್ರಕರಣಗಳು ಪತ್ತೆಯಾಗಿದೆ:

ಆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಷ್ಟು ಜನರಿಗೆ ಶಿಕ್ಷೆಯಾಗಿದೆ:

ಇ. ಇಂತಹ ಪ್ರಕರಣಗಳು ಮರುಕಳಿಸದಂತೆ ತಡೆಗಟ್ಟಲು ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ ?

ಶ್ರೀ ರಮಾನಾಥ್ ರೈ (ಗೃಹರಾಜ್ಯ ಸಚಿವರು):–

ಅ. ಕಳೆದ ವರ್ಷದಲ್ಲಿ (1.1.92ರಿಂದ 31.12.92ರ ವರೆಗೆ) ರಾಜ್ಯದಲ್ಲಿ 209 ವರದಕ್ಷಿಣೆ ಸಾವಿನ

ಪ್ರಕರಣಗಳು ವರದಿಯಾಗಿರುತ್ತದೆ. ಇವುಗಳಲ್ಲಿ 112 ಪ್ರಕರಣಗಳ ತನಿಖೆಯನ್ನು ಸಿಒಡಿಯಲ್ಲಿ ಕೈಗೊಳ್ಳಲಾಗಿದೆ.

ಪ್ರಸಕ್ತ ವರ್ಷದಲ್ಲಿ 1.1.93ರಿಂದ 31.1.93ರ ವರೆಗೆ ರಾಜ್ಯದಲ್ಲಿ 17 ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ 14 ಪ್ರಕರಣಗಳ ತನಿಖೆಯನ್ನು ಸಿಒಡಿಯಿಂದ ಕೈಗೊಳ್ಳಲಾಗಿದೆ.

ಆ. ಸಿಒಡಿಯಲ್ಲಿ ತನಿಖೆಗಾಗಿ ತೆಗೆದುಕೊಂಡ 112 ಪ್ರಕರಣಗಳಲ್ಲಿ 48 ಪ್ರಕರಣಗಳು ತನಿಖೆಯಲ್ಲಿದ್ದು 64 ಪ್ರಕರಣಗಳು ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಇ. ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

1. ರಾಜ್ಯದಲ್ಲಿ ಹೆಚ್ಚುತ್ತಿರುವ ವರದಕ್ಷಿಣೆ ಸಾವು ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತನಿಖೆ ನಡೆಸಲು ಸಿಒಡಿ ಯಲ್ಲಿ ಒಂದು ಪ್ರತ್ಯೇಕ ದಳವನ್ನು ಸರ್ಕಾರವು 1989ರಲ್ಲಿ ಮಂಜೂರು ಮಾಡಿದೆ. ಈ ದಳವು ಇದುವರೆವಿಗೂ ಸುಮಾರು 450ಕ್ಕೂ ಹೆಚ್ಚಿನ ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆಯನ್ನು ಯಶಸ್ವಿಯಾಗಿ ಮಾಡಿ ಮುಗಿಸಿದೆ. ಸರ್ಕಾರವು ದಿನಾಂಕ 25–1–92ರ ತನ್ನ ಆದೇಶದಲ್ಲಿ ವರದಕ್ಷಿಣೆ ನಿಷೇಧ ದಳಕ್ಕೆ ಎರಡು ಉಪ ಆರಕ್ಷಕ ಅಧೀಕ್ಷಕರು, 11 ಮಹಿಳಾ ಪೋಲೀಸ್ ನಿರೀಕ್ಷಕರು, 4 ಪೋಲೀಸ್ ನಿರೀಕ್ಷಕರುಗಳ ಹೆಚ್ಚಿನ ಹುದ್ದೆಗಳನ್ನು ಇತರ ಸಲಕರಣೆಗಳೊಂದಿಗೆ ರೂ. 20,41,450 ರ ವೆಚ್ಚದಲ್ಲಿ ಮಂಜೂರು ಮಾಡಿದೆ.

2. ವರದಕ್ಷಿಣೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಚಾರಣೆಗಾಗಿ, ಬೆಂಗಳೂರಿನಲ್ಲಿ ಒಂದು ವಿಶೇಷ ನ್ಯಾಯಾಲಯವನ್ನು 1990ರ ಆಗಸ್ಟ್ ತಿಂಗಳಿನಿಂದ ಸ್ಥಾಪಿಸಲಾಗಿದೆ. ಇದು ಪ್ರಕರಣಗಳ ಶೀಘ್ರ ವಿಲೇವಾರಿಗೆ ಬಹಳ ಸಹಾಯಕಾರಿಯಾಗಿದೆ.

3. 1992ರಲ್ಲಿ ಈ ನ್ಯಾಯಾಲಯವು 8 ಪ್ರಕರಣಗಳಲ್ಲಿ ಸಂಬಂಧಪಟ್ಟ ಆರೋಪಿಗಳಿಗೆ ಶಿಕ್ಷೆಯನ್ನು ವಿಧಿಸಿದೆ. ಈ ಶಿಕ್ಷೆಯ ಪ್ರಮಾಣವು ಜೀವಾವಧಿ ಶಿಕ್ಷೆಯೂ ಸೇರಿದಂತೆ 7ರಿಂದ 3 ವರ್ಷಗಳ ಅವಧಿಯವರೆಗೆ ಕಾರಾಗೃಹ ವಾಸದ ಶಿಕ್ಷೆಯಾಗಿರುತ್ತದೆ.

4. ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳ ವಿಶ್ಲೇಷಣೆ ನಡೆಸಿ, ಸೂಕ್ತ ಸಲಹೆಗಳನ್ನು ನೀಡಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದ್ದು, ಸರ್ಕಾರದ ಕಾನೂನು ಕಾರ್ಯದರ್ಶಿಯವರು ಇದರ ಮುಖ್ಯಸ್ಥರಾಗಿರುತ್ತಾರೆ. ಪೋಲೀಸ್ ಮಹಾನಿರ್ದೇಶಕರು, ಸರ್ಕಾರದ ಒಳಾಡಳಿತ ಇಲಾಖೆಯ ಕಾರ್ಯದರ್ಶಿಗಳು ಮತ್ತು ಅಭಿಯೋಗ ನಿರ್ದೇಶಕರು ಈ ಸಮಿತಿಯ ಸದಸ್ಯರಾಗಿರುತ್ತಾರೆ.

5. ವರದಕ್ಷಿಣೆ ಸಾವಿನ ಪ್ರಕರಣಗಳ ತನಿಖೆ ಕಾಲದಲ್ಲಿ ಉಂಟಾಗುವ ಲೋಪದೋಶಗಳು ಹಾಗೂ ಅಪರಾಧಿಗಳ ಮೇಲೆ ಶೀಘ್ರ ಕ್ರಮ ಕೈಗೊಳ್ಳಲು ಇರುವ ಅಡೆತಡೆಗಳನ್ನು ನಿವಾರಿಸಲು ಸಾಧ್ಯವಾಗುವಂತೆ ವರದಕ್ಷಿಣೆ ವಿಶೇಷ ಕಾಯಿದೆಗೆ ತಿದ್ದುಪಡಿ ತರುವಂತೆ ಸೂಚಿಸಿ 15 ಅಂಶಗಳುಳ್ಳ ಒಂದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ.

6. ಮಹಿಳೆಯರ ಮೇಲಿನ ದೌರ್ಜನ್ಯಗಳು ಮತ್ತು ವರದಕ್ಷಿಣೆ ಸಾವಿನ ಪ್ರಕರಣಗಳನ್ನು ತನಿಖೆ ಮಾಡುವ ಪೋಲೀಸ್ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳು, ಕಾರ್ಯ ಕಮ್ಮಟಗಳು

ಮತ್ತು ವಿಚಾರ ವಿಮರ್ಶೆಯನ್ನು ಏರ್ಪಡಿಸಿದ್ದು ಸಮಾಜ ಸೇವಕರು, ವೈದ್ಯಕೀಯ ವೃತ್ತಿಯವರು ಕಾನೂನು ಪರಿಣಿತರನ್ನು ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡು ವರದಕ್ಷಿಣೆ ಪಿಡುಗಿನ ಬಗ್ಗೆ ಸಾಮಾಜಿಕ ಅರಿವು ಉಂಟಾಗುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

7. ಮಹಿಳೆಯರ ಮೇಲಿನ ದೌರ್ಜನ್ಯಗಳಲ್ಲಿ ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ವಿಧಿಸಿದ ಬಗ್ಗೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ನೀಡಲಾಗುತ್ತಿದೆ.

8. ವರದಕ್ಷಿಣೆ ಸಾವಿನ ಪ್ರಕರಣಗಳನ್ನು ಘೋರ ಅಪರಾಧವೆಂದು ಪರಿಗಣಿಸಿ ಇಲಾಖೆಯ ಉನ್ನತ ಅಧಿಕಾರಿಗಳ ಅಂದರೆ ಡಿ.ವೈ.ಎಸ್.ಪಿ. ದರ್ಜೆಯ ಅಧಿಕಾರಿಗಳಿಂದ ತನಿಖೆಯನ್ನು ನಡೆಸಲಾಗುತ್ತಿದೆ.

9. ವರದಕ್ಷಿಣೆಯ ಸಮಸ್ಯೆಗಳ ನಿವಾರಣೆಗಾಗಿ ಪೋಲೀಸ್ ಇಲಾಖೆಯ ಅಧಿಕಾರಿಗಳು, ಅಭಿಯೋಜಕರುಗಳು ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಆಗಾಗ ಸಭೆ ಸೇರಿ ಚರ್ಚಿಸಿ, ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಸೌಲಭ್ಯಗಳ ಕೊರತೆ.

527 (212): ಗುರುಪಾದಪ್ಪ ನಾಗ್ಮಾರಪಳ್ಳಿ, (ಔರಾದ್)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಸೌಲಭ್ಯಗಳು (ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ) ಹಾಗೂ ಶುಚಿತ್ವದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ. ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಹೌದು

ಆ. ಎಲ್ಲೆಲ್ಲಿ ಸಾಧ್ಯವೋ ಈ ಸೌಲಭ್ಯವನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 2.72 ಕೋಟಿ ರೂ.ಗಳ ವೆಚ್ಚದಲ್ಲಿ ಸದರಿ ಆರ್ಥಿಕ ವರ್ಷದಲ್ಲಿ ಪ್ರಮುಖ 50 ಬಸ್ ನಿಲ್ದಾಣಗಳನ್ನು ನವೀಕರಿಸಲು ವಿಶೇಷ ಯೋಜನೆಯನ್ನು ರೂಪಿಸಲಾಗಿದೆ. ಇದೇ ಮಾದರಿಯಲ್ಲಿ ಮಿಕ್ಕುಳಿದ ಬಸ್ ನಿಲ್ದಾಣಗಳ ನವೀಕರಣದ ಕಾರ್ಯಕ್ರಮವನ್ನು ಸಹ 93–94ರ ಸಾಲಿನಲ್ಲಿ ಕೈಗೊಳ್ಳಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡಿರುವ ಬಗ್ಗೆ.

528 (168): ಶ್ರೀ ಕೆ. ಲಕ್ಕಣ್ಣ

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಂಡಿರುವುದು ನಿಜವೇ ?

ಆ. ಮನೆಗಳನ್ನ ಕಟ್ಟಿಕೊಂಡಿದ್ದರೆ ಎಷ್ಟು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ ?

ಇ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ವಾಧೀನ ಜಮೀನಿನಲ್ಲಿ ಎಷ್ಟು ಮನೆಗಳಿಗೆ.

ಈ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರದ ಜಮೀನುಗಳಲ್ಲಿ ಎಷ್ಟು ಮನೆಗಳಿವೆ ?

ಉ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಜಮೀನಿನಲ್ಲಿ ಕಟ್ಟಿಕೊಂಡಿರುವ ಮನೆಯ ನಿವೇಶನ ಅವರಿಗೆ ಕೊಡಲು ನಿರ್ಧಾರ ಮಾಡಿದ್ದಾರೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ. ನಿಜ

ಆ. ಸುಮಾರು 6 – 21 ವರ್ಷಗಳಿಂದ

ಇ. ಅಧಿಕೃತ – 20,256
ಅನಧಿಕೃತ – 7, 186 ಒಟ್ಟು 27,436

ಈ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸ್ವಾಧೀನ ಪಡಿಸಿಕೊಂಡ ಜಮೀನುಗಳಲ್ಲಿ ಮಾಹಿತಿ ಇರುತ್ತದೆ. ಅದನ್ನು ಪ್ರಶ್ನೆ 3ರಲ್ಲಿ ತಿಳಿಸಲಾಗಿದೆ.

ಉ. ಸಧ್ಯಕ್ಕೆ ಈ ರೀತಿಯ ಯೋಜನೆಗಳು ಗಮನದಲ್ಲಿಲ್ಲ.

ಮಲೆನಾಡು ಪ್ರದೇಶಾಭಿವೃದ್ಧಿ ಪ್ರಾಧಿಕಾರ.

529 (156): ಜಿ.ಎಸ್. ಆಚಾರ್ (ಬೈಂದೂರು)

ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಲೆನಾಡು ಪ್ರದೇಶಾಭಿವೃದ್ಧಿ ಪ್ರಾಧಿಕಾರದನ್ವಯ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಮಂಜೂರಾಗಿದೆ:

ಆ. ಯಾವ ಯಾವ ಉದ್ದೇಶಕ್ಕೆ ಅದನ್ನು ವಿನಿಯೋಗಿಸಲಾಗುವುದು:

ಇ. ಆಯಾ ಪ್ರದೇಶದ ಆದ್ಯತೆಗಳನ್ನು ಗುರುತಿಸಿ ಯೋಜನೆ ತಯಾರಿಸಲಾಗಿದೆಯೇ ? ಇಲ್ಲವಾದಲ್ಲಿ ಯೋಜನೆ ತಯಾರಿಕೆಗೆ ಮಾರ್ಗದರ್ಶಿ ಸೂತ್ರಗಳೇನು ?

ಶ್ರೀ ಎನ್. ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):-

(ಅ) (ಆ) ಮತ್ತು (ಇ). ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯನ್ನು ರಚಿಸಲಾಗುತ್ತಿದೆ. ಯಾವುದೇ ಜಿಲ್ಲೆಗೆ ಹಣವನ್ನು ಒದಗಿಸಿಲ್ಲ. ಮಂಡಳಿಯು ರಚಿತವಾದ ಮೇಲೆ ಅದು ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸುತ್ತದೆ.

ಕೇಂದ್ರ ಸರ್ಕಾರದ ಯೋಜನೆಗಳಿಗೆ ರಾಜ್ಯಕ್ಕೆ ಬಿಡುಗಡೆಯಾದ ಹಣ.

530 (38): ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992–93ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ರಾಜ್ಯದಲ್ಲಿನ ಕೇಂದ್ರದ ವಿವಿಧ ಯೋಜನೆಗೆ ಬಿಡುಗಡೆ ಮಾಡಿದ ಹಣವೆಷ್ಟು:

ಆ. ಆ ಯೋಜನೆಗಳಾವುವು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಕೇಂದ್ರ ಸರ್ಕಾರವು ರಾಜ್ಯದಲ್ಲಿನ ಕೇಂದ್ರದ ವಿವಿಧ ಯೋಜನೆಗಳಿಗೆ 1992–93ನೇ ಸಾಲಿನಲ್ಲಿ ಡಿಸೆಂಬರ್ 1992ರ ಅಂತ್ಯದವರೆಗೆ ಬಿಡುಗಡೆ ಮಾಡಲಾಗಿರುವ ನೆರವು 196.67 ಕೋಟಿ ರೂಪಾಯಿಗಳು (ತಾತ್ಕಾಲಿಕ ಅಂಕಿ ಸಂಖ್ಯೆಗಳು).

ಆ. ರಾಜ್ಯದಲ್ಲಿನ ಕೇಂದ್ರದ ವಿವಿಧ ಯೋಜನೆಗಳು ಅನೇಕವಾಗಿ ಇರುವುದರಿಂದ ದೊಡ್ಡ ಪ್ರಮಾಣದ ಯೋಜನೆಗಳ ಪಟ್ಟಿಯನ್ನು ಮಾತ್ರ ಅನುಬಂಧದಲ್ಲಿ ತೋರಿಸಲಾಗಿದೆ.

ANNEXURE

ಅನುಬಂಧ

1. Implementation of New Education Technology Programme.
   ಹೊಸ ಶಿಕ್ಷಣ ತಂತ್ರ ವಿಜ್ಞಾನ ಕಾರ್ಯಕ್ರಮದ ಅನುಷ್ಠಾನ.
2. Teacher's Training Programme Operation Black Board.
   ಶಿಕ್ಷಕರ ತರಬೇತಿ ಕಾರ್ಯಕ್ರಮ–ಕಪ್ಪು ಹಲಗೆ ಕಾರ್ಯಚರಣ.
3. Vocationalisation of Secondary education Reserach and Training.
   ಸೆಕೆಂಡರಿ ಶಿಕ್ಷಣ ಅಧ್ಯಯನ ಮತ್ತು ತರಬೇತಿಯ ವೃತ್ತಿಕರಿಸುವುದು.
4. Improvement of Science Education promotion of Science Laboratories.
   ವಿಜ್ಞಾನ ಶಿಕ್ಷಣದ ಸುಧಾರಣ.
5. National Service Scheme.
   ರಾಷ್ಟ್ರೀಯ ಸೇವಾ ಯೋಜನೆ.
6. Development of Sports and Games.
   ಕ್ರೀಡಾ ಅಭಿವೃದ್ಧಿ.
7. Special Component Plan for Scheduled Castes and Tribal Plan.
   ಹರಿಜನರ ವಿಶೇಷ ಘಟಕ ಯೋಜನೆಗೆ ಮತ್ತು ಆದಿವಾಸಿ ಉಪಯೋಜನೆಗೆ
8. Training of Anganawadi Workers in Grama Sevak Training Centres.
   ಗ್ರಾಮ ಸೇವಕಿಯ ತರಬೇತಿ ಕೇಂದ್ರಗಳಲ್ಲಿ ಅಂಗನ್ವಾಡಿ ಕೆಲಸಗಾರರ ತರಬೇತಿ.
9. Bio–technology Research Scheme–Oil palm Cultivation in potential States.
   ಜೈವಿಕ ತಂತ್ರ ಜ್ಞಾನ ಸಂಶೋಧನೆ ಯೋಜನೆ–ತಾಳೆ ಎಣ್ಣೆ ಪ್ರದರ್ಶನ ಯೋಜನೆ.

10. Special Food production programme Maise, Jowar, Ragi.
ವಿಶೇಷ ಆಹಾರ ಉತ್ಪಾದನೆ ಕಾರ್ಯಕ್ರಮ–ಜೋಳ, ರಾಗಿ, ಮುಸುಕಿನ ಜೋಳ.

11. Integrated Development of Tropical and Arid Zone fruits–production and supply of Fruits, Medicinal & Aromatic plants–implementation of drip irrigation.
ಟ್ರೋಪಿಕಲ್ ಮತ್ತು ಆರಿಡ್ ವಲಯ ಹಣ್ಣುಗಳ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ವಲಯ.

12. Comprehensive Land use Management (CLUMP).
ಸಮಗ್ರ ಭೂ ಉಪಯೋಗ ನಿರ್ವಹಣೆ.

13. Minor Forest produce.
ಚಿಕ್ಕಪುಟ್ಟ ಅರಣ್ಯೋತ್ಪತ್ತಿ.

14. Integrated Development of wasteland.
ಬಂಜರು ಭೂಮಿಯ ಸಮಗ್ರ ಅಭಿವೃದ್ಧಿ.

15. Seed Development Agency.
ಬೀಜ ಅಭಿವೃದ್ಧಿ ಏಜನ್ಸಿ.

16. Establishment of National Grid of Rural Godowns for Agricultural produce.
ವ್ಯವಸಾಯ ಉತ್ಪನ್ನಗಳಿಗೆ ಗ್ರಾಮಾಂತರ ಗೋದಾಮುಗಳ ರಾಷ್ಟ್ರೀಯ ಜಾಲದ ಸ್ಥಾಪನೆ.

17. Assistance towards payment of Insurance premium for irrigation borewells drilled after 1987.
ವಿಮಾ ಕಂತು ಪಾವತಿಗಾಗಿ ಸಹಾಯ.

18. Drought prone Areas programme.
ಅನಾವೃಷ್ಟಿಗಳಿಗೊಳಗಾಬಹುದಾದ ಪ್ರದೇಶಗಳ ಕಾರ್ಯಕ್ರಮ.

19. IRD National Scheme of Training of Rural youth for Self Employment (TRYSEM).
ಗ್ರಾಮಾಂತರ ಯುವಜನರನ್ನು ಸ್ವಂತ ಉದ್ಯೋಗದ ತರಬೇತಿ ಬಗ್ಗೆ ರಾಷ್ಟ್ರೀಯ ಸಂಘಟಿತ ಗ್ರಾಮಾಂತರ ಅಭಿವೃದ್ಧಿ ಯೋಜನೆ.

20. Integrated Rural Development programme subsidy.
ಸಮಗ್ರ ಗ್ರಾಮೀಣ ಅಭಿವೃದ್ಧಿ – ಸಹಾಯ ಅನುದಾನ.

21. IRD–Assistance for strengthening of Block lexed Administration.
ಬ್ಲಾಕ್ ಮಟ್ಟದ ಆಡಳಿತದ ಬಲಿವರ್ಧನೆಗಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಹಾಯ.

22. Strengthening of Planning machinery.
ಯೋಜನಾ ವ್ಯವಸ್ಥೆಯನ್ನು ಬಲಪಡಿಸುವುದು.

23. Agricultural Census.
ಕೃಷಿ ಗಣತಿ.

24. Bridges of Inter State Economic importance.
ಅಂತರ ರಾಜ್ಯ ಆರ್ಥಿಕ ಪ್ರಾಮುಖ್ಯತೆಯ ಸೇತುವೆಗಳು.

25. Works of Economic Importance of Bridges
ಆರ್ಥಿಕ ಪ್ರಾಮುಖ್ಯತೆಯುಳ್ಳ ಸೇತುವೆಗಳ ಕಾಮಗಾರಿಗಳು.

26. Postmatric scholarships to ST Students.
ಮೆಟ್ರಿಕ್ ನಂತರ ವಿದ್ಯಾರ್ಥಿವೇತನ ಎಸ್.ಟಿ. ವಿದ್ಯಾರ್ಥಿಗಳು.

27. Girls Hostels for ST Students.
ಬಾಲಕಿಯರ ವಸತಿ ನಿಲಯಗಳು ಪರಿಶಿಷ್ಟ ಎಸ್.ಟಿ.

28. Rural Functional Literacy Project.
ಗ್ರಾಮಾಂತರ ಕಾರ್ಯ ಸಂಬಂಧಿ ಸಾಕ್ಷರತಾ ಯೋಜನೆ.

29. Appointment of Hindi teachers in Non-Hindi speaking states.
ಹಿಂದಿ ಬಳಕೆಯಲ್ಲಿಲ್ಲದ ರಾಜ್ಯಗಳಲ್ಲಿ ಹಿಂದಿ ಶಿಕ್ಷಕರ ನೇಮಕಾತಿ.

30. Post Literacy and Continuing Education through Jana Sikshana Nilayams.
ಜನ ಶಿಕ್ಷಣ ನಿಲಯಗಳ ಮೂಲಕ ಶಿಕ್ಷಣ ಮುಂದುವರಿಕೆ ಮತ್ತು ಸಾಕ್ಷರತೆ.

31. Integrated Education for Disabled Children.
ಅಂಗಹೀನ ಮಕ್ಕಳಿಗೆ ಸಮಗ್ರ ಶಿಕ್ಷಣ.

32. Medical and Public Health.
ವೈದ್ಯಕೀಯ ಮತ್ತು ಜನಾರೋಗ್ಯ.

33. Aids Control Programme.
ಏಯಡ್ಸ್ ನಯಂತ್ರಣ ಕಾರ್ಯಕ್ರಮ.

34. Family Welfare Programme.
ಕುಟುಂಬ ಕಲ್ಯಾಣ ಕಾರ್ಯಕ್ರಮಗಳು.

35. Urban basic Services.
ನಗರ ಪ್ರದೇಶ ಮೂಲ ಸೇವೆಗಳು.

36. Fost Matric scholarships for Scheduled Castes.
ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳು ಎಸ್.ಸಿ.

37. Girls Hostel for Scheduled Castes children.
ಎಸ್.ಸಿ. ಮಕ್ಕಳ ಬಾಲಕಿಯರ ವಸತಿ ನಿಲಯಗಳು.

38. Scheduled Caste Development Corporation.
ಪರಿಶಿಷ್ಟ ಜಾತಿಗಳ ಅಭಿವೃದ್ಧಿ ನಿಗಮಕ್ಕೆ.

39. Removal of Untouchability.
ಅಸ್ಪೃಶ್ಯತಾ ನಿವಾರಣೆ.

40. Boys Hostels for Scheduled Castes.
ಪರಿಶಿಷ್ಟ ಜಾತಿಗಳಿಗಾಗಿ ಬಾಲಕರ ವಿದ್ಯಾರ್ಥಿ ನಿಲಯಗಳು.

41. Training of Craftsmen and Supervisiors upgradation of ITI for improving of quality of Training.
ತರಬೇತಿ ಗುಣಮಟ್ಟ ಹೆಚ್ಚಿಸಲು ಐ.ಟಿ.ಐ. ಉನ್ನತೀಕರಣ ಮೇಲ್ವಿಚಾರಕರು ಮತ್ತು ಕುಶಲ ಕಲೆಗಾರರ ತರಬೇತಿ.

42. Establishment of New I.T.I. for Women.
ಮಹಿಳೆಯರಿಗಾಗಿ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳ ಸ್ಥಾಪನೆ.

43. Modernisation of ITI.
ಕೈಗಾರಿಕೆ ತರಬೇತಿ ಸಂಸ್ಥೆಗಳಿಗೆ ಆಧುನೀಕರಣ.

44. Grants to Voluntary Organisation for Care and Maintenance of Destitute Orphan Children.
ನಿರಾಶ್ರಿತ, ಅನಾಥ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಸ್ವಿಚ್ಛಾ ಸಂಘಟನೆಗಳಿಗೆ ಅನುದಾನ.

45. Integrated Child Development Services.
ಶಿಶುಗಳ ಸಮಗ್ರ ಅಭಿವೃದ್ಧಿ ಸೇವೆಗಳು.

46. Prevention and Control of Juvenile Social Maladjustment.
ಬಾಲಿಶ ಸಾಮಾಜಿಕ ತಪ್ಪು ಹೊಂದಾಣಿಕೆಯ ತಡೆ ಮತ್ತು ನಿಯಂತ್ರಣ.

47. Wheat based Nutrition Programme.
ಗೋಧಿ ಮೂಲದ ಪೋಷಣೆ ಕರ್ಯಕ್ರಮ.

48. Assistance to small and Marginal Farmers to increase agricultural production, subsidy on wells pumpsets Fuel etc on IRD pattern.
ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಾಯ ಐ.ಆರ್.ಡಿ.ಯಂತೆ ಬಾವಿಗಳು ಪಂಪ್ ಸೆಟ್ಟುಗಳು ಇಂಧನ ಇತ್ಯಾದಿಗಳ ಮೇಲೆ ಸಹಾಯಧನ.

49. Intensive Cotton Development Programme.
ಹತ್ತಿ ಅಭಿವೃದ್ಧಿ ತೀವ್ರತರ ಕಾರ್ಯಕ್ರಮ.

50. National Oil seeds Development Programme.
ಎಣ್ಣೆ ಬೀಜಗಳ ಅಭಿವೃದ್ಧಿಗೆ ರಾಷ್ಟ್ರೀಯ ಕಾರ್ಯಕ್ರಮ.

51. Minikit Programme (Millet and Maize).
ಮಿನಿಕಿಟ್ ಕಾರ್ಯಕ್ರಮ (ಮುಸುಕಿನ ಜೋಳ ಮತ್ತು ನವಣೆ)

52. National Pulses Development Project.
ರಾಷ್ಟ್ರ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆ.

53. Oil palm demonstration project.
ತಾಳೆ ಎಣ್ಣೆ ಪ್ರಾತ್ಯಕ್ಷತೆ ಯೋಜನೆ.

54. Soil Conservation in catchments of River valley projects.
ನದಿ ಕಣಿವೆ ಯೋಜನೆಗಳ ಜಲಾಶಯದ ಪ್ರದೇಶಗಳಲ್ಲಿ ಭೂಸಾರ ಸಂರಕ್ಷಣೆ.

55. National Water Shed Development programme for Rainfed Agriculture.
ಮಳೆ ಆಶ್ರಯ ವ್ಯವಸಾಯಕ್ಕಾಗಿ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ.

56. Implementation of Rinderpest Survillance and Containment Vaccination Programme under the Rinderpest Eradication Scheme.
ದೊಡ್ಡರೋಗದ ಕಾವಲು ಮತ್ತು ತಡೆಗಾಗಿ ದೊಡ್ಡರೋಗ ರೋಗ, ಕಾರ್ಯಕ್ರಮ ನಿರ್ಮೂಲನೆ ಯೋಜನೆಯಡಿ ಚುಚ್ಚು ಮದ್ದು.

57. Special Live Stock production programme.
ವಿಶೇಷ ಜೀವ ಜಾತಿಗಳ ಉತ್ಪನ್ನ ಕಾರ್ಯಕ್ರಮ.

58. Provision to Landing & Berthing Facilities for Fishing Craft at Minor ports.
ಸಣ್ಣ ಬಂದರುಗಳಲ್ಲಿ ಮೀನು ಹಿಡಿಯುವ ದೋಣಿಗಳು ಬರಲು ಮತ್ತು ತಂಗಲು ಸೌಲಭ್ಯಗಳು.

59. Fisherman Welfare Fund.
ಮಿನುಗಾರರ ಕಲ್ಯಾಣ ನಿಧಿ.

60. Fish Farmers Development Agency for intensive Development of Inland Fish Culture.
ಒಳನಾಡು ಮೀನು ಸಂವರ್ಧನೆ ತೀವ್ರ ಅಭಿವೃದ್ಧಿಗಾಗಿ ಮತ್ಸ್ಯ ರೈತರ ಅಭಿವೃದ್ಧಿ ಸಂಸ್ಥೆಗಳು.

61. Development of National parks and sanctury.
ನಾಗರಹೊಳೆ ರಾಷ್ಟ್ರೀಯ ಉದ್ಯಾನ.

62. Plantation of Minor Forest including medicinal plants.
ಔಷಧಿ ಸಸ್ಯಗಳನ್ನೊಳಗೊಂಡ ಸಣ್ಣ ಅರಣ್ಯ ನೆಡು ತೋಪುಗಳು.

63. Area Oreiented Fuelwood and Fodder.
ಕಟ್ಟಿಗೆ–ಮೇವುಗಳ ಕ್ಷೇತ್ರ ಅನುಗೊಳಿಸುವಿಕೆ.

64. Integrated Wasteland Development project (NWDA).
ಬಂಜರು ಭೂಮಿ ಸಮಗ್ರ ಅಭಿವೃದ್ಧಿ ಯೋಜನೆಗಳು.

65. Project Elephant.
ಆನೆ ಯೋಜನೆ.

66. Recurring Expenditure for TRYSM Programme.
ಟ್ರೈಸೆಮ್ ಕಾರ್ಯಕ್ರಮಕ್ಕಾಗಿ ಅಮಿತ ವೆಚ್ಚ.

67. National Development and Rural Employment programme, Jawahar Rozgar Yojana.
ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಕಾರ್ಯಕ್ರಮ, ಜವಹಾರ್ ರೋಜಗಾರ್ ಯೋಜನೆ.

68. Command Area Development Programme in selected areas.
ಆಯ್ದ ಪ್ರದೇಶಗಳಲ್ಲಿ ಪ್ರದೇಶಾಭಿವೃದ್ಧಿ ಯೋಜನೆ.

69. National project on demonstration of improved Chulahs (Wood stoves).
ಸುಧಾರಿತ ಚುಲ್ಲಾಗಳ ಪ್ರಾತ್ಯಕ್ಷತೆಗಾಗಿ ರಾಷ್ಟ್ರೀಯ ಯೋಜನೆ (ಸೌದೆ ಒಲೆಗಳು).

70. Biogas Development.
ಜೈವಿಕ ಅನಿಲ ಯಂತ್ರಗಳ ಅಭಿವೃದ್ಧಿ.

71. Handloom Development.
ಕೈಮಗ್ಗ ಅಭಿವೃದ್ಧಿ.

72. Growth Centres.
ಬೆಳವಣಿಗೆಯ ಕೇಂದ್ರಗಳು

73. District Industries Centres.
ಜಿಲ್ಲಾ ಕೈಗಾರಿಕಾ ಕೇಂದ್ರಗಳು.

74. Coir Industries.
ತೆಂಗಿನ ನಾರಿನ ಉದ್ಯಮಗಳು.

ವಾಣಿಜ್ಯ ತೆರಿಗೆ ಇಲಾಖೆಯಿಂದ ಸರ್ಕಾರಕ್ಕೆ ಬರುವ ಆದಾಯ.

531 (37): ಶ್ರೀ ಕೆ. ಹರ್ಷಕುಮಾರ್ ಗೌಡ. (ಚಾಮರಾಜ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1992–93ರ ಸಾಲಿನಲ್ಲಿ ಸರ್ಕಾರದ ಬೊಕ್ಕಸಕ್ಕೆ ವಾಣಿಜ್ಯ ತರೆಗೆಯಿಂದ ಸಂದಾಯವಾದ ಹಣವೆಷ್ಟು ?

ಆ. ಅಬಕಾರಿ ಬಾಬ್ತಿನಿಂದ ಮತ್ತು ಕೈಗಾರಿಕಾ ಕ್ಷೇತ್ರಗಳಿಂದ ಸರ್ಕಾರದವರು ಗಳಿಸಿದ ಹಣವೆಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. 1993 ಜನವರಿ ಅಂತ್ಯಕ್ಕೆ
1968.05 ಕೋಟಿ ರೂ.ಗಳು.

ಆ. (ರೂ. ಕೋಟಿಗಳಲ್ಲಿ)

1. ಅಬಕಾರಿ ಬಾಬ್ತಿನಿಂದ 410.34

2. ಕೈಗಾರಿಕೆಗಳಿಂದ ಏನೂ ಇಲ್ಲ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುಧಾರಣೆ.

532 (12): ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುಧಾರಣೆ ಮಾಡುವ ಕುರಿತು ಸರ್ಕಾರ ಯೋಚಿಸಿದೆಯೇ:

ಆ. ಕನ್ನಡ ಭಾಷಾಭಿವೃದ್ಧಿಗೆ ಹೊಸ ನೀತಿಗಳನ್ನು ಜಾರಿಗೊಳಿಸಲಾಗುವುದೇ:

ಇ. ಹಾಗಿದ್ದಲ್ಲಿ, ಆ ನೀತಿಗಳೇನು ಹಾಗೂ ಸುಧಾರಣೆಗಾಗಿ ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):–

ಅ. ಪರಿಶೀಲಿಸಲಾಗುತ್ತಿದೆ.

ಆ. ಪ್ರಸ್ತುತ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಮುಂದುವರಿಸುವುದೊಂದಿಗೆ ಹೊಸ ನೀತಿಗಳ ಬಗೆಗೆ ಚಿಂತಿಸಲಾಗುತ್ತಿದೆ.

ಇ. ಪ್ರಸ್ತುತ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಮುಂದುವರಿಸುವುದರೊಂದಿಗೆ ಹೊಸ ನೀತಿಗಳ ಬಗ್ಗೆ ಚಿಂತಿಸಲಾಗುತ್ತಿದೆ.

ರಹದಾರಿ ಇಲ್ಲದೆ ನಡೆಯುವ ಖಾಸಗಿ ವಾಹನಗಳು.

533 (406): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಹದಾರಿ ಇಲ್ಲದೆ ಖಾಸಗಿ ವಾಹನಗಳು ಓಡಾಡುತ್ತಿರುವುದರಿಂದ ಸಾರಿಗೆ ಸಂಸ್ಥೆಯ ಆದಾಯಕ್ಕೆ ದಕ್ಕೆ ತಗಲುತ್ತದೆಯಲ್ಲವೇ;

ಆ. ರಹದಾರಿ ಇಲ್ಲದ ವಾಹನಗಳ ಸುಳಿವು ಸಿಕ್ಕಿದರೂ ಸರ್ಕಾರ ಕ್ರಮ ಕೈಗೊಳ್ಳದೆ ಇರುವುದು ನಿಜವೇ;

ಇ. ಇದರಿಂದ ಅನಾವಶ್ಯಕವಾಗಿ ಖಾಸಗಿಯವರಿಗೆ ಲಾಭ ಆಗುತ್ತದೆಯಲ್ಲವೇ:

ಈ. ರಹದಾರಿ ಇಲ್ಲದ ಖಾಸಗೀ ಬಸ್ಸುಗಳನ್ನು ವಾಹನಗಳನ್ನು ಕೂಡಲೇ ರದ್ದುಗೊಳಿಸಲು ಸರ್ಕಾರ ಕ್ರಮಕೈಗೊಳ್ಳುವುದೇ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಹೌದು.

ರಾಜ್ಯ ರಸ್ತೆ ಸಾರಿಗೆಯ ಮಂಗಳೂರು ವಿಭಾಗದಲ್ಲಿ ಸಿಬ್ಬಂದಿಗಳ ಕೊರತೆ.

535 (922): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದಲ್ಲಿ ಎಷ್ಟು ಕಾರ್ಮಿಕರ ಮತ್ತು ಎಷ್ಟು ತಾಂತ್ರಿಕ ಸಿಬ್ಬಂದಿಗಳ ಕೊರತೆ ಇದೇ;

ಆ. ಈ ಕೊರತೆಯನ್ನು ನೀಗಿಸಿ, ಸಿಬ್ಬಂದಿಗಳ ನೇಮಕ ಯಾವಾಗ ಮಾಡಲಾಗುವುದು;

ಇ. ಈ ವಿಭಾಗದಲ್ಲಿ ತಾತ್ಕಾಲಿಕ ನೆಲೆಯಲ್ಲಿ ನೇಮಕ ಮಾಡಿದ ಚಾಲಕರೆಷ್ಟು, ಕಂಡಕ್ಟರ್‌ಗಳೆಷ್ಟು;

ಈ. ಇವರನ್ನು ಖಾಯಂ ಮಾಡಲಾಗುವುದೇ;

ಉ. ಸಿಬ್ಬಂದಿಗಳ ಕೊರತೆ ಎಂಬ ಕಾರಣದಿಂದಾಗಿ ಇಲ್ಲಿನ ದಿನನಿತ್ಯದ ಸಾರಿಗೆ ವ್ಯವಸ್ಥೆಗೆ ತೊಂದರೆಯಾಗದಂತೆ ಮಾಡುವ ಕಾರ್ಯಕ್ಕೆಗೊಳ್ಳಲಾಗುವುದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ.	ತಾಂತ್ರಿಕ ಸಿಬ್ಬಂದಿ	134
	ಇತರೆ ಸಿಬ್ಬಂದಿ	332

ಆ. ಸಾದ್ಯವಾದಷ್ಟು ಶೀಘ್ರದಲ್ಲಿ

ಇ. 180 ಚಾಲಕರು ಮತ್ತು 178 ನಿರ್ವಾಹಕರುಗಳನ್ನು ಈ ವಿಭಾಗದಲ್ಲಿ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ.

ಈ. ಈ ಚಾಲಕ ನಿರ್ವಾಹಕರುಗಳನ್ನು ಪದವೃಂದ ಮತ್ತು ನೇಮಕಾತಿಯ ನಿಯಮಾವಳಿಯಂತೆ ತಾತ್ಕಾಲಿಕವಾಗಿ 90 ದಿನಗಳಿಗೆ ನೇಮಿಸಿಕೊಳ್ಳಲಾಗಿದೆ. ಆದಾಗ್ಯೂ ಈ ನೇಮಕಾತಿ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದು ಅದು ಇನ್ನು ಇತ್ಯರ್ಥವಾಗಿರುವುದಿಲ್ಲ.

ಉ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಹಾಗೂ ಒಳ್ಳೆಯ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲು ಮತ್ತು ದಿನನಿತ್ಯದ ಸಾರಿಗೆ ಸಂಚಾರಕ್ಕಾಗಿ 100 ಚಾಲಕ ನಿರ್ವಾಹಕರುಗಳನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲಾಗಿದೆ. ಸಧ್ಯಕ್ಕೆ ಚಾಲಕ ನಿರ್ವಾಹಕರುಗಳ ಕೊರತೆ ಮಂಗಳೂರು ವಿಭಾಗದಲ್ಲಿ ಇರುವುದಿಲ್ಲ. ಆದರೆ ಬೇರೆ ಸಿಬ್ಬಂದಿಗಳ ಕೊರತೆ ಇದ್ದರೂ ಸಹ ಸಾರ್ವಜನಿಕರಿಗೆ ಸಾರಿಗೆ ವ್ಯವಸ್ಥೆಯನ್ನು ಉತ್ತಮವಾಗಿ ನೀಡಲಾಗುತ್ತಿದೆ.

ರಾಜ್ಯದಲ್ಲಿ ವರದಕ್ಷಿಣೆಯ ಸಾವುಗಳ ಸಂಖ್ಯೆ.

536 (13): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ 1992ನೇ ಡಿಸೆಂಬರ್ ಅಖೈರ್ ವರೆಗೆ ಆಗಿರುವ ವರದಕ್ಷಿಣೆಯ ಸಾವುಗಳೆಷ್ಟು (ವರ್ಷಾವಾರು ವಿವರ ನೀಡುವುದು);

ಆ. ನ್ಯಾಯಾಲಯಗಳಲ್ಲಿ ಹೂಡಲಾದ ಮೊಕದ್ದಮೆಗಳ ಸಂಖ್ಯೆ ಎಷ್ಟು: ಹಾಗೂ ಅಂತಹ ಎಷ್ಟು ಮೊಕದ್ದಮೆಗಳು ದಾವೆಗೆ ಬಾಕಿ ಇವೆ;

ಇ. ಈ ಬಾಬ್ತು ಶಿಕ್ಷೆಗೆ ಒಳಗಾದ ಒಟ್ಟು ಸಂಖ್ಯೆ ಎಷ್ಟು ?

(ಅದು ಎಲ್ಲೆಲ್ಲಿ, ಯಾರ್ಯಾರು ಹಾಗೂ ವಿವರ ನೀಡುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)

ಅ. 664 ವರದಕ್ಷಿಣೆ ಸಾವುಗಳು.

ವರ್ಷ	ಸಂಖ್ಯೆ
1990	– 228
1991	– 227
1992	– 209

(31.12.92ರ ವರೆಗೆ)

ಆ. ನ್ಯಾಯಾಲಯಗಳಲ್ಲಿ ಹೂಡಲಾದ ಮೊಕದ್ದಮೆಗಳ ಸಂಖ್ಯೆ: 299. ಯಾವುದೇ ಮೊಕದ್ದಮೆಗಳು ದಾವೆಗೆ ಬಾಕಿ ಉಳಿದಿರುವುದಿಲ್ಲ.

ಇ. 4 ಜನ ಶಿಕ್ಷೆಗೆ ಒಳಗಾಗಿದ್ದಾರೆ. ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಜಿಲ್ಲೆ: ಪೋ. ಠಾಣೆ: ಮೊಕದ್ದಮ ಸಂಖ್ಯೆ: ಕಾನೂನು ಪ್ರಕರಣ	ಸಂಕ್ಷಿಪ್ತ ಸಾರಾಂಶ	ಮೃತಳ ಹೆಸರು ವಯಸ್ಸು ಘಟನೆಯ ದಿನಾಂಕ ಸಾವಿನ ರೀತಿ	ಆರೋಪಿತರ ಹೆಸರು ಮತ್ತು ಸಂಬಂಧ	ಫಿರ್ಯಾದಿಯ ಹೆಸರು	ಶಿಕ್ಷೆಯ ವಿವರ
2	3	4	5	6	7
ಬೆಂಗಳೂರು ನಗರ ಗಿರಿನಗರ ಪೊಲೀಸ್ ಠಾಣೆ 125:89 ಕಲಂ 498 (ಎ) 306 ಐ.ಪಿ.ಸಿ.	ಈ ಪ್ರಕರಣವು ಶ್ರೀಮತಿ ಸುನಿತಾ ಎಂಬುವವಳ ವರದಕ್ಷಿಣೆ ಸಾವಿಗೆ ಸಂಬಂಧಿಸಿ ದ್ದಾಗಿರುತ್ತದೆ.	ಸುನಿತ 20 ವರ್ಷ, 9.12.1989 ಸುಟ್ಟ ಗಾಯಗಳಿಂದ	1. ಹರಿರಾಮು ಗಂಡ 2. ರಾಧಮ್ಮ ನಾದಿನಿ 3. ಸೀನಪ್ಪ ಭಾವ 4. ರಾಜಮ್ಮ ಅತ್ತೆ	ಶ್ರೀಮತಿ ಸುನಿತ (ಮೃತಳು)	ದಿನಾಂಕ 2.11.91ರಂದು ಬೆಂಗಳೂರು ನಗರದ 22ನೇ ಸತ್ರ ನ್ಯಾಯಾಲಯವು 1 ಮತ್ತು 2ನೇ ಆರೋಪಿಗಳಿಗೆ ಕಲಂ 498 (ಎ) ಐಪಿಸಿಗೆ ಒಂದು ವರ್ಷ ಮತ್ತು 206 ಐಪಿಸಿಗೆ 5 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿದ್ದು, ಎರಡೂ ಶಿಕ್ಷೆಗಳನ್ನು ಒಟ್ಟಾಗಿ ಅನುಭವಿಸಲು ಆದೇಶಿಸಿದೆ.
ಬೆಂಗಳೂರು ನಗರ ಹನುಮಂತ ನಗರ ಪೋ. ಠಾಣೆ 101:90 ಕಲಂ 304 (ಬಿ) ಐಪಿಸಿ.	ಈ ಪ್ರಕರಣವು ಶ್ರೀಮತಿ ಉಮಾದೇವಿ ಎಂಬುವವರ ವರದಕ್ಷಿಣೆ ಸಾವಿಗೆ ಸಂಬಂಧಿಸಿ ದ್ದಾಗಿರುತ್ತದೆ.	ಶ್ರೀಮತಿ ಉಮಾದೇವಿ ನೇಣು ಹಾಕಿಕೊಂಡು	1. ರವಿಕುಮಾರ್ ಗಂಡ 2. ವಾಸು ದೇವನ್ ಭಾವ 3. ಶ್ಯಾಮಲ ಅತ್ತೆ	ಶ್ರೀ ಹಲಗೂರು ಮೃತಳ ತಂದೆ	ಆರೋಪಿಗಳಾದ 1,2 ಮತ್ತು 3ನೇಯವರಿಗೆ ನ್ಯಾಯಾಲಯವು ಅನುಕ್ರಮವಾಗಿ 5, 7 ಮತ್ತು 2 ವರ್ಷಗಳ ಕಠಿಣ ಶಿಕ್ಷೆಯನ್ನು ಕಲಂ 304 (ಬಿ) ಐಪಿಸಿ ಮತ್ತು ಕಲಂ 3, 4 ಡಿ.ಪಿ. ಆಕ್ಟ್ ಅಪರಾಧಕ್ಕೆ ಮಾನ್ಯ ಬೆಂಗಳೂರು 22ನೇ ನ್ಯಾಯಾಲಯವು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

1	2	3	4	5	6	7
3	ಬೆಂಗಳೂರು ನಗರ ಹನುಮಂತ ನಗರ ಪೋ. ಠಾಣೆ 120:90, ಕಲಂ 304(ಬಿ) ಐಪಿಸಿ.	ಈ ಪ್ರಕರಣವು ಶ್ರೀಮತಿ ಗಾಯಿತ್ರಿ ಎಂಬುವವರ ವರದಕ್ಷಿಣೆ ಸಾವಿಗೆ ಸಂಬಂಧಿಸಿದ್ದಾಗಿರುತ್ತದೆ	ಶ್ರೀಮತಿ ಗಾಯತ್ರಿ 24.4.90, ಸುಟ್ಟು ಗಾಯಗಳಿಂದ	1. ಉಮಾ ಕಾಂತ ಗಂಡ 2. ರವಿ ಮೈದುನ 3. ಸರೋಜಮ್ಮ 4. ಭಾಗ್ಯಮ್ಮ	ಟಿ.ಜಿ. ನಂಜುಂಡಪ್ಪ, ಮೃತಳ ತಂದೆ.	1ನೇ ಆರೋಪಿಗೆ ಕಲಂ 3 ಡಿ.ಪಿ. ಆಕ್ಟ್‌ಗೆ 5 ವರ್ಷ ಕಠಿಣ ಶಿಕ್ಷೆ, ಮತ್ತು ಹತ್ತು ಸಾವಿರ ರೂ.ಗಳ ದಂಡ, ದಂಡ ಕಟ್ಟಲು ತಪ್ಪಿದ್ದಲ್ಲಿ ಮತ್ತೆ 6 ತಿಂಗಳ ಶಿಕ್ಷೆ ಹಾಗೂ 2ನೇ ಆರೋಪಿಗೆ 3 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತದೆ. ಆರೋಪಿ 3, 4 ನೇಯವರಿಗೆ ಖುಲಾಸೆ ಮಾಡಲಾಗಿದೆ. ಮತ್ತು ಈ ಆದೇಶವನ್ನು 22ನೇ ಬೆಂಗಳೂರು ಸತ್ರ ನ್ಯಾಯಾಲಯವು ನೀಡಿರುತ್ತದೆ.
4	ಬೆಂಗಳೂರು ನಗರ ತಿಲಕನಗರ ಪೋ. ಠಾಣೆ 113:90 304 (ಬಿ) ಐಪಿಸಿ.	ಈ ಪ್ರಕರಣವು ಶ್ರೀಮತಿ ಸಾಕಮ್ಮ ಎಂಬುವವರ ವರದಕ್ಷಿಣೆ ಸಾವಿಗೆ ಸಂಬಂಧಿಸಿದ್ದಾಗಿರುತ್ತದೆ.	ಶ್ರೀಮತಿ ಸಾಕಮ್ಮ 12-3-1990 ವಿಷ ಸೇವಿಸಿ.	1. ಶಿವಕುಮಾರ ಗಂಡ	ಶ್ರೀಮತಿ ಸಾಕಮ್ಮ (ಮೃತಳು)	ಆರೋಪಿಗೆ ಕಲಂ 396 ಐಪಿಸಿಗೆ 5 ವರ್ಷ ಕಠಿಣ ಶಿಕ್ಷೆ, ಕಲಂ 490 (ಎ) ಗೆ 2 ವರ್ಷ, ಕಲಂ 3 ಡಿ.ಪಿ. ಆಕ್ಟ್ 1 ವರ್ಷ ಕಲಂ 4 ಡಿ.ಪಿ. ಆಕ್ಟ್ 1 ವರ್ಷ ಶಿಕ್ಷೆ ವಿಧಿಸಿ., ಬೆಂಗಳೂರು ನಗರದ 22ನೇ ಸತ್ರ ನ್ಯಾಯಾಲಯವು ಆದೇಶ ನೀಡಿರುತ್ತದೆ.

ಬೆಂಗಳೂರು ನಗರದಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನಡೆಸುತ್ತಿರುವ ಹೊಟೇಲ್ ಮತ್ತು ಉಪಹಾರ ಗೃಹಗಳ ಸಂಖ್ಯೆ.

537 (347): ಶ್ರೀ ಆರ್. ದಯಾನಂದರಾವ್ (ಗಾಂಧಿನಗರ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನಡೆಸುತ್ತಿರುವ ಹೊಟೇಲ್ ಮತ್ತು ಉಪಹಾರ ಗೃಹಗಳ ಸಂಖ್ಯೆ ಎಷ್ಟು ? ಅವುಗಳು ಯಾವ ಸ್ಥಳಗಳಲ್ಲಿವೆ:

ಆ. 1992–93ನೇ ಸಾಲಿನಲ್ಲಿ (ಡಿಸೆಂಬರ್ 92ರ ವರೆಗೆ) ಸದರಿ ಹೊಟೇಲ್‌ಗಳು ಹಾಗೂ ಉಪಹಾರ ಗೃಹಗಳು ಲಾಭ ಅಥವಾ ನಷ್ಟದಲ್ಲಿ ನಡೆಯುತ್ತಿದೆಯೇ:

ಇ. ನಷ್ಟ ಅನುಭವಿಸುತ್ತಿರುವ ಹೊಟೇಲ್ ಉಪಹಾರ ಗೃಹಗಳನ್ನು ಲಾಭ ಬರುವಂತೆ ನಡೆಸಲು ಸರ್ಕಾರದ ಉದ್ದೇಶಿತ ಕ್ರಮವೇನು ?

ಶ್ರೀ ಪೆರಿಕಲ್ ಎಂ. ಮಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೊಟೇಲ್ – 1, ಉಪಹಾರ ಗೃಹ – 1, ಮಯೂರ ಕೆಂಪೇಗೌಡ ಹೊಟೇಲ್ ಮೆಜೆಸ್ಟಿಕ್ ಬಳಿ ಧನ್ವಂತರಿ ರಸ್ತೆಯಲ್ಲಿದೆ. ಮಯೂರ ಉಪಹಾರ ಗೃಹವು ಕಬ್ಬನ್ ಉದ್ಯಾನವನದಲ್ಲಿದೆ.

ಆ. ಹೊಟೇಲ್ ನಷ್ಟದಲ್ಲಿ ನಡೆಯುತ್ತಿದೆ. ಉಪಹಾರ ಗೃಹವು ನಿವ್ವಳ ಲಾಭ ಹೊಂದದೆ ನಡೆಯುತ್ತಿದೆ.

ಇ. ಹೊಟೇಲ್ ನಷ್ಟದಲ್ಲಿ ನಡೆಯುತ್ತಿದ್ದು ವ್ಯಾಪಾರೀ ದೃಷ್ಟಿಯಿಂದ ಲಾಭದಾಯಕವಾಗಿಲ್ಲದಿರುವುದರಿಂದ ಇದನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕರ್ನಾಟಕದ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ ಇರುವ ಬಸ್ಸುಗಳ ಸಂಖ್ಯೆ.

539 (352): ಶ್ರೀ ಆರ್. ದಯಾನಂದರಾವ್ (ಗಾಂಧೀನಗರ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ ಎಷ್ಟು ಬಸ್ಸುಗಳಿವೆ;

ಆ. ಎಷ್ಟು ಬಸ್ಸುಗಳು ಹಾಲಿ ಓಡುತ್ತಿವೆ;

ಇ. ಜನವರಿ 91 ರಿಂದ ಡಿಸೆಂಬರ್ 92ರ ಅಂತ್ಯದವರಗೆ ಖರೀದಿಸಲಾದ ಬಸ್ಸುಗಳೆಷ್ಟು:

ಈ. ಎಲ್ಲಾ ಬಸ್ಸುಗಳೂ ಸುಸ್ಥಿತಿಯಲ್ಲಿ ಇಲ್ಲ ಎಂಬುದು ಹಾಗೂ ಈ ಬಸ್ಸುಗಳನ್ನು ಯಾವ ವರ್ಷದಲ್ಲಿ ಖರೀದಿಸಲಾಯಿತು:

ಉ. ಸುವ್ಯವಸ್ಥಿತ ಸ್ಥಿತಿಯಲ್ಲಿ ಇಲ್ಲದಿರುವ ಬಸ್ಸುಗಳನ್ನು ಯಾವ ಮಾರ್ಗದಲ್ಲಿ ನಡೆಸಲಾಗುತ್ತಿದೆ ಎಂಬುವುದರ ವಿವರ:

ಊ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ಬಸ್ಸುಗಳನ್ನು ಖಾಸಗಿಯವರಿಗಾಗಲೀ ಅಥವಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಗಾಗಲೀ ಕೊಡುವ ಪ್ರಸ್ತಾಪವಿದೆಯೆ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. 17

ಆ. 15

ಇ. ಇಲ್ಲ.

ಈ. ಎಲ್ಲಾ ಬಸ್ಸುಗಳು ಸುಸ್ಥಿತಿಯಲ್ಲಿ ಇಲ್ಲ ಎಂಬುದು ಸತ್ಯಕ್ಕೆ ದೂರ. ಆದರೆ, ಎರಡು ಬಸ್ಸುಗಳನ್ನು ಸುಸ್ಥಿತಿಯಲ್ಲಿದ್ದರೂ ಸಹ, ಅವು ನಿಗಧಿತ ಮೈಲುಗಳನ್ನು ಹಾಗೂ ಅವಧಿಯನ್ನು ಕ್ರಮಿಸಿರುವುದರಿಂದ ಹರಾಜು ಮೂಲಕ ವಿಲೇ ಮಾಡಬೇಕಾಗಿದೆ.

ಉ. ನಡೆಸಲಾಗುತ್ತಿಲ್ಲ ಗ್ಯಾರೇಜಿನಲ್ಲಿ ಇಟ್ಟಿದೆ.

ಊ. ಇಲ್ಲ.

ಬೆಂಗಳೂರು ನಗರಕ್ಕೆ ಪಡಿತರ ಸೀಮೆಎಣ್ಣೆ ಸರಬರಾಜಿನಲ್ಲಿ ಹೆಚ್ಚಳ.

540 (349): ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದ ಪಡಿತರ ಚೀಟಿದಾರರಿಗೆ ವಿತರಣೆ ಮಾಡಲು ಪ್ರತಿ ವಾರಕ್ಕೆ ಎಷ್ಟು ಸೀಮೆ ಎಣ್ಣೆ ಅವಶ್ಯಕತೆ ಇದೆ;

ಆ. ಬೆಂಗಳೂರು ನಗರಕ್ಕೆ ಪ್ರತಿ ವಾರಕ್ಕೆ ಸರಬರಾಜಾಗುತ್ತಿರುವ ಸೀಮೆ ಎಣ್ಣೆ ಪ್ರಮಾಣವೆಷ್ಟು;

ಇ. ಬೆಂಗಳೂರು ನಗರದ ಪಡಿತರ ಚೀಟಿದಾರರಿಗೆ ಹೆಚ್ಚು ಸೀಮೆ ಎಣ್ಣೆ ನೀಡುವ ಸಲುವಾಗಿ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಲು ಕೇಂದ್ರವನ್ನು ಸರ್ಕಾರವು ಕೋರಿದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ಪಡಿತರ ಚೀಟಿದಾರರಿಗೆ– 2642 ಕಿ.ಲೀ. ವಾರಕ್ಕೆ.
ಕೈಗಾರಿಕೆಗಳಿಗೆ– 210 ಕಿ.ಲೀ. ಪ್ರತಿ ತಿಂಗಳಿಗೆ.

ಆ. 2666 ಕಿ.ಲೀ.

ಇ. ರಾಜ್ಯಕ್ಕೆ ಸೀಮೆ ಎಣ್ಣೆ ಹಂಚಿಕೆ ಪ್ರಮಾಣವನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಸತತವಾಗಿ ಒತ್ತಾಯಿಸಲಾಗುತ್ತಿದೆ.

ರಾಜ್ಯದ ಮುಖ್ಯ ಪ್ರವಾಸೋದ್ಯಮ ಸ್ಥಳಗಳಲ್ಲಿ ಸಂಚಾರಿ ಉಪಹಾರ ಗೃಹಗಳು.

541 (346): ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದ ಮುಖ್ಯ ಪ್ರವಾಸೋದ್ಯಮ ಸ್ಥಳಗಳಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು ಸಂಚಾರಿ ಉಪಹಾರ ಗೃಹ (ಸಂಚಾರಿ ವ್ಯಾನ್)ಗಳನ್ನು ನಡೆಸುತ್ತಿದೆಯೇ:

ಆ. ಇಲ್ಲದಿದ್ದಲ್ಲಿ, ಎಲ್ಲಾ ಪ್ರವಾಸಿ ಸ್ಥಾನಗಳಲ್ಲಿ ಸಂಚಾರಿ ಉಪಹಾರ ಗೃಹ (ಸಂಚಾರಿ ವ್ಯಾನ್)ಗಳನ್ನು ನಡೆಸುವ ಪ್ರಸ್ತಾವನೆ ಏನಾದರೂ ಇದೆಯೇ ?

ಶ್ರೀ ಪೆರಿಕಲ್ ಎಂ. ಮಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಇಲ್ಲ.

ಆ. ಸಧ್ಯಕ್ಕೆ ಪ್ರಸ್ತಾವನೆ ಇಲ್ಲ.

ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಬಗ್ಗೆ.

543 (345): ಶ್ರೀ ಎಂ.ವಿ. ವೆಂಕಟಪ್ಪ (ಮುಲಬಾಗಲು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೇಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1989ರಿಂದ ಈಚೆಗೆ ರಾಜ್ಯ ಸರ್ಕಾರದ ಸೇವೆಯಲ್ಲಿರುವ ಯಾವ ಯಾವ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ:

ಆ. ಯಾವ ಕಾರಣಕ್ಕಾಗಿ ಈ ಕೆಲವು ಅಧಿಕಾರಿಗಳ ಮೇಲೆ ಕೈಗೊಂಡಿದ್ದ ಶಿಸ್ತಿನ ಕ್ರಮವನ್ನು ಕೈಬಿಡಲಾಯಿತು ಮತ್ತು ಯಾವ ಕಾರಣಕ್ಕಾಗಿ ಕೆಲವು ಅಧಿಕಾರಿಗಳನ್ನು ಶಿಕ್ಷಿಸಲಾಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಐ.ಎ.ಎಸ್. ಅಧಿಕಾರಿಗಳು:

ಶ್ರೀಯುತರು:

1. ಎಂ. ಶಂಕರನಾರಾಯಣನ್
2. ಕೌಶಿಕ್ ಮುಖರ್ಜಿ
3. ಆರ್. ಕೆ. ಭಾಟಿಯಾ
4. ಡಿ. ತಂಗರಾಜ್
5. ಎಂ. ಮದನ್ ಗೋಪಾಲ್
6. ರಿಚರ್ಡ್ ಕ್ರಾಸ್ಟಾ
7. ಪಿ. ಜಿ. ನಾಯ್ಕ್
8. [illegible]

ಐ.ಪಿ.ಎಸ್. ಅಧಿಕಾರಿಗಳು:

1. ಕೆ. ಎಸ್. ಎನ್. ಚಿಕ್ಕೆರೂರು
2. ಸುಭಾಷ್ ಚಂದ್ರ
3. ಬಿ. ಇ. ಉಮಾಪತಿ

ಆ. ಶ್ರೀ. ಎಂ. ಶಂಕರನಾರಾಯಣನ್, ಐಎಎಸ್ ಮತ್ತು ಶ್ರೀ ಎಂ. ಮದನಗೋಪಾಲ್, ಐಎಎಸ್, ಇವರ ಪ್ರಕರಣಗಳನ್ನು ಸರ್ಕಾರ ಪುನರ್ ಪರಿಶೀಲನೆ ಮಾಡಿ ಶಿಸ್ತಿನ ಕ್ರಮವನ್ನು ಮುಂದುವರಿಸುವ ಅಗತ್ಯವಿಲ್ಲವೆಂದು ನಿರ್ಧಾರ ಕೈಗೊಂಡಿದೆ.

ಶ್ರೀ ರಿಚರ್ಡ್ ಕ್ರಾಸ್ಟಾ, ಐಎಎಸ್, ಇವರ ಪ್ರಕರಣದಲ್ಲಿ ಇವರು ಗೈರು ಹಾಜರಾದ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಯಿತು. ಅವರು ರಾಜೀನಾಮೆ ನೀಡಿದ್ದರಿಂದ ಮುಂದಿನ ಕ್ರಮವನ್ನು ತೆಗೆದುಕೊಂಡಿಲ್ಲ.

ಶ್ರೀ ತಂಗರಾಜ್, ಐಎಎಸ್ ರವರು ಕರ್ನಾಟಕ ಭೂ ಮಂಜೂರಾತಿ ನಿಯಮಗಳನ್ನು ಉಲ್ಲಂಘಿಸಿ ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮ ಇವರಿಗೆ ಜಮೀನು ಮಂಜೂರು ಮಾಡಿದ್ದರಿಂದ ಅವರಿಗೆ ಎಚ್ಚರಿಗೆ ನೀಡಲಾಗಿದೆ.

ಶ್ರೀ ಆರ್.ಕೆ. ಭಾಟಿಯಾ, ಇವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಲಾಗಿ, ಅವರು ನಿರ್ದೋಷಿ ಎಂದು ವಿಚಾರಣಾಧಿಕಾರಿಯವರು ಸರ್ಕಾರಕ್ಕೆ ವರದಿ ಸಲ್ಲಿಸಿದರು. ಅದರಂತೆ ಸರ್ಕಾರವು ವಿಚಾರಣಾಧಿಕಾರಿಗಳ ವರದಿಯನ್ನು ಒಪ್ಪಿಕೊಂಡು ಶ್ರೀ ಆರ್.ಕೆ. ಭಾಟಿಯಾ ಇವರನ್ನು ದೋಷ ಮುಕ್ತರೆಂದು ಪರಿಗಣಿಸಿ, ಶಿಸ್ತಿನ ಕ್ರಮವನ್ನು ಕೈಬಿಡಲಾಯಿತು.

ಶ್ರೀ ಕೌಶಿಕ್ ಮುಖರ್ಜಿ ಇವರ ಮೇಲೆ ಭಾರತ ಸರ್ಕಾರವು ಇಲಾಖಾ ವಿಚಾರಣೆಯನ್ನು ನಡೆಸಿ, ಅವರು ತಪ್ಪಿತಸ್ಥರೆಂದು ಸಾಬೀತಾಗಿದ್ದರಿಂದ, ಅವರ ಈಗಿನ ವೇತನ ಶ್ರೇಣಿಯನ್ನು ಎರಡು ವರ್ಷಗಳ ಅವಧಿಗೆ ಕಡಿಮೆಗೊಳಿಸುವಂತೆ ಶಿಕ್ಷೆಯನ್ನು ವಿಧಿಸಿ ಭಾರತ ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ.

ಶ್ರೀ ಕೆ.ಎಸ್.ಎನ್. ಚಿಕ್ಕರೂರು, ಐಪಿಎಸ್, ಇವರು ಲೋಕಾಯುಕ್ತ ಕಛೇರಿಯಿಂದ ವರ್ಗಾವಣೆಯಾದಾಗ ಕಡತಗಳನ್ನು ಹಿಂದಿರುಗಿಸದಿದ್ದ ಕಾರಣ, ಇವರ ಸಾಬೀತಾದ ಆರೋಪಗಳ ಮೇರೆಗೆ ಒಂದು ವೇತನ ಬಡ್ತಿಯನ್ನು ತಡೆ ಹಿಡಿದು ಶಿಕ್ಷಿಸಲಾಯಿತು.

ಶ್ರೀ ಪಿ.ಜಿ. ನಾಯ್ಕ, ಐಎಎಸ್., ಶ್ರೀ ಬಿ.ಕೆ.ಡಿ. ನೇಗಿ, ಐಎಎಸ್, ಶ್ರೀ ಸುಭಾಷ್ ಚಂದ್ರ, ಐಪಿಎಸ್, ಮತ್ತು ಶ್ರೀ ಬಿ.ಇ. ಉಮಾಪತಿ, ಐಪಿಎಸ್. ಇವರ ಪ್ರಕರಣಗಳು ಬೇರೆ ಬೇರೆ ಹಂತಗಳಲ್ಲಿವೆ ಮತ್ತು ಅಂತಿಮ ನಿರ್ಧಾರವನ್ನು ತೆಗೆದುಕೊಂಡಿಲ್ಲ.

ಟೆಂಪರೆನ್ಸ್ ಬೋರ್ಡ್‌ನ ಸಾಧನೆಗಳು

544 (576): ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಟೆಂಪರೆನ್ಸ್ ಬೋರ್ಡ್ ಯಾವ ತಾರೀಖಿನಿಂದ ಅಸ್ತಿತ್ವಕ್ಕೆ ಬಂದಿರುವುದು:

ಆ. ಈ ಬೋರ್ಡಿನವರು ಇದುವರೆಗೆ ಸಾಧಿಸಿರುವ ಕೆಲಸಗಳಾವುವು:

ಇ. ಈ ಬೋರ್ಡಿಗೆ ಕಳೆದ ಮೂರು ವರ್ಷಗಳಿಂದ ವರ್ಷಕ್ಕೆ ಎಷ್ಟು ಹಣ ಖರ್ಚಾಗಿದೆ (ವಿವರಣೆ ನೀಡುವುದು) ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯನ್ನು ಸರ್ಕಾರವು ದಿನಾಂಕ 24.5.1984ರಲ್ಲಿ ಪುನರ್ರಚಿಸಿದ್ದು, ಈ ದಿನಾಂಕದಿಂದ ಮಂಡಳಿಯು ಅಸ್ಥಿತ್ವದಲ್ಲಿರುವುದು.

ಆ. ಮದ್ಯಪಾನ ಸಂಯಮ ಮಂಡಳಿಯು ಮದ್ಯಪಾನದ ದುಷ್ಪರಿಣಾಮದ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸಿ, ಇವುಗಳ ಸೇವನೆಯಿಂದ ದೂರವಿರುವಂತೆ ಮಾಡಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಮಾಡುತ್ತಿದೆ.

1. ಕುಡಿತದ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸುವ ಕರಪತ್ರ, ಭಿತ್ತಿಪತ್ರ, ಸ್ಟಿಕರ್ಸ್, ಸ್ಟ್ಯಾಂಪ್‌ಗಳ ವಿತರಣೆ.
2. ಹೆದ್ದಾರಿ ಫಲಕಗಳ ಪ್ರದರ್ಶನ.
3. ಕುಡಿತದ ದುಷ್ಪರಿಣಾಮದ ಬಗ್ಗೆ ಸಿನಿಮಾ ಸ್ಲೈಡ್‌ಗಳ ಪ್ರದರ್ಶನ.
4. ದೂರದರ್ಶನದಲ್ಲಿ ಕುಡಿತದ ದುಷ್ಪರಿಣಾಮದ ಬಗ್ಗೆ ಕಿರುಚಿತ್ರ, ವೀಡಿಯೋ ಫಿಲಂ ಹಾಗೂ ಘೋಷಣೆಗಳ ಪ್ರದರ್ಶನ.
5. ಕುಡಿತದ ವ್ಯಸನಿಗಳ ಚಿಕಿತ್ಸೆಗಾಗಿ ಉಚಿತ ಮಾತ್ರೆಗಳ ವಿತರಣೆ.
6. ಸಾಕ್ಷ್ಯಚಿತ್ರಗಳ ತಯಾರಿಕೆ ಮತ್ತು ಪ್ರದರ್ಶನ.
7. ಕುಡಿತದ ದುಷ್ಪರಿಣಾಮ ಮತ್ತು ಮಾದಕ ವಸ್ತುಗಳ ಬಗ್ಗೆ ಬೀದಿ ನಾಟಕದ ಮೂಲಕ ತಿಳುವಳಿಕೆ ಮೂಡಿಸುವುದು.
8. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಮಕ್ಕಳಲ್ಲಿ ಕುಡಿತದ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ರಾಜ್ಯಾದ್ಯಂತ ಚಾರ್ಟುಗಳನ್ನು ಹಾಗೂ ಕರಪತ್ರಗಳನ್ನು ವಿತರಿಸಲಾಗಿದೆ.

ಇ. ಮಂಡಳಿಗೆ ಕಳೆದ ಮೂರು ವರ್ಷಗಳಲ್ಲಿ ಅಂದರೆ 1980-90, 1990-91 ಹಾಗೂ 1991-92ರಲ್ಲಿ ಸರ್ಕಾರದಿಂದ ಕೆಳಕಂಡ ಅನುದಾನ ದೊರೆತಿದ್ದು, ಆಗಿರುವ ವೆಚ್ಚ ಕೆಳಕಂಡಂತಿದೆ.

ವರ್ಷ	ಮಂಜೂರಾಗಿರುವ ಅನುದಾನ	ಆಗಿರುವ ವೆಚ್ಚ
1989–90	10,00,000–00	3,57,825–70
1990–91	9,00,000–00	6,26,910–00
1991–92	9,45,000–00	9,40,671–00

ಸಚಿವರುಗಳ ಉಪಯೋಗಕ್ಕಾಗಿ ಬಾಡಿಗೆ ಕಾಂಟೆಸ್ಸಾ ಕಾರುಗಳು.

545 (733): ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವ ಕಲ್ಯಾಣ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. 1993ರ ಜನವರಿಯಲ್ಲಿ ಹೊಸದಾಗಿ ನೇಮಕರಾದ ಸಚಿವರುಗಳ ಉಪಯೋಗಕ್ಕಾಗಿ ಬೆಂಗಳೂರಿನ ಖಾಸಗಿ ಹೋಟೆಲುಗಳಿಂದ ಕೆಲವು ಕಾಂಟೆಸ್ಸಾ ಹಾಗೂ ಇತರ ಕಾರುಗಳನ್ನು ಬಾಡಿಗೆಗೆ ಪಡೆದಿರುವುದು ನಿಜವೇ;

2. ಹಾಗಿದ್ದಲ್ಲಿ, ಈ ರೀತಿ ಬಾಡಿಗೆ ಪಡೆಯಲಾದ ಕಾರುಗಳ ಸಂಖ್ಯೆ ಎಷ್ಟು:

3. ಈ ಕಾರುಗಳನ್ನು ಎಷ್ಟು ದಿನಗಳ ಕಾಲ ಬಾಡಿಗೆಗೆ ಪಡೆಯಲಾಗಿದೆ:

4. ಬಾಡಿಗೆಯಾಗಿ ನೀಡಿದ ಒಟ್ಟು ಮೊತ್ತವೆಷ್ಟು:

5. ಕುಮಾರ ಕೃಪ ಅತಿಥಿ ಗೃಹದಲ್ಲಿ ಸಾಕಷ್ಟು ಅಂಬಾಸಿಡರ್ ವಾಹನಗಳಿರುವುದು ಸರ್ಕಾರಕ್ಕೆ ತಿಳಿದಿದೆಯೇ:

6. ಹಾಗಿದ್ದಲ್ಲಿ, ಸಚಿವರ ಉಪಯೋಗಕ್ಕಾಗಿ ಖಾಸಗಿ ವ್ಯಕ್ತಿಗಳಿಂದ ಕಾಂಟೆಸ್ಸಾ ಮತ್ತು ಇತರ ಕಾರುಗಳನ್ನು ಬಾಡಿಗೆ ಪಡೆಯಲು ಕಾರಣಗಳೇನು:

7. ಕೇಂದ್ರ ಸಚಿವರುಗಳಿಗೆ ಅಂಬಾಸಿಡರ್ ವಾಹನಗಳನ್ನು ಮಾತ್ರ ಒದಗಿಸಲಾಗಿದೆಯೆಂಬುದನ್ನು ಗಮನದಲ್ಲಿಟ್ಟುಕೊಂಡು, ರಾಜ್ಯದ ಎಲ್ಲಾ ಸಚಿವರುಗಳ ಉಪಯೋಗಕ್ಕಾಗಿ ಅಂಬಾಸಿಡರ್ ವಾಹನಗಳನ್ನು ಮಾತ್ರ ಒದಗಿಸುವ ಬಗ್ಗೆ ಸರ್ಕಾರವು ನೀತಿ ನಿರ್ಧಾರವನ್ನು ರೂಪಿಸುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

1. ಹೌದು.

2. 9 ಕಾರುಗಳು

3. ದಿನಾಂಕ 20.1.93 ರಿಂದ ಪರ್ಯಾಯ ವ್ಯವಸ್ಥೆ ಮಾಡುವವರೆಗೂ.

4. ಬಾಡಿಗೆ ನೀಡಿರುವ ಸಂಸ್ಥೆಯಿಂದ ಬಾಡಿಗೆ ಕ್ಲೇಮ್ ಬಿಲ್‌ಗಳು ಇನ್ನೂ ಬಂದಿರುವುದಿಲ್ಲ.

5. ರಾಜ್ಯಕ್ಕೆ ಭೇಟಿ ನೀಡುವ ರಾಜ್ಯ ಅತಿಥಿಗಳು, ಗಣ್ಯ ವ್ಯಕ್ತಿಗಳು, ಕೇಂದ್ರ ಸರ್ಕಾರ ಹಾಗೂ ಇತರೆ ರಾಜ್ಯಗಳ ಹಿರಿಯ ಅಧಿಕಾರಿಗಳ ಉಪಯೋಗಕ್ಕೆ ಸಾಕಾಗುವಷ್ಟು ಅಂಬಾಸಿಡರ್ ಕಾರುಗಳು ಇರುವುದಿಲ್ಲ..

6. ಸಚಿವರುಗಳಿಗೆ ಅವರ ಕಾರ್ಯ ಗೌರವಕ್ಕೆ ಹಾಗೂ ಹೆಚ್ಚು ಇಂಧನ ಮಿತವ್ಯಯ ಸಾಧಿಸಲು ಅನುಕೂಲವಾಗುವಂತೆ ಕಾಂಟೆಸ್ಸಾ ಕ್ಲಾಸಿಕ್ ಕಾರುಗಳನ್ನೇ ಒದಗಿಸಲಾಗುತ್ತಿದ್ದು, ಸಚಿವ ಸಂಪುಟ ವಿಸ್ತರಣೆಯಲ್ಲಿ ಸಾಕಾಗುವಷ್ಟು ಕಾಂಟೆಸ್ಸಾ ಕ್ಲಾಸಿಕ್ ಕಾರುಗಳು ಕೂಡಲೇ ಇಲ್ಲವಾದ್ದರಿಂದ, ಕೇವಲ ತಾತ್ಕಾಲಿಕವಾಗಿ 9 ಕಾಂಟೆಸ್ಸಾ ಕ್ಲಾಸಿಕ್ ಕಾರುಗಳನ್ನು ಮಾತ್ರ ಬಾಡಿಗೆಗೆ ಪಡೆಯಲಾಗಿದೆ. ಉಳಿದ ಸಚಿವರುಗಳಿಗೆ ಸರ್ಕಾರದ ವಾಹನಗಳನ್ನೇ (ಕಾಂಟೆಸ್ಸಾ ಕ್ಲಾಸಿಕ್) ಒದಗಿಸಲಾಗಿದೆ.

7. ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಕೊಡಿಗೆ ಕ್ರೀಡಾ ಶಾಲೆಯನ್ನು ಕುಶಾಲನಗರಕ್ಕೆ ಸ್ಥಳಾಂತರ ಮತ್ತು ಕುಶಾಲನಗರದಲ್ಲಿ ಸ್ಟೇಡಿಯಂ ನಿರ್ಮಾಣ.

546 (573): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕುಶಾಲನಗರದಲ್ಲಿ ಒಂದ ಕ್ರೀಡಾಂಗಣ ನಿರ್ಮಿಸುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಗಮನದಲ್ಲಿದೆಯೇ:

ಆ. ಇದ್ದಲ್ಲಿ ಯಾವಾಗ ನಿರ್ಮಾಣ ಮಾಡಲಾಗುವುದು:

ಇ. ಕೊಡಿಗೆಯ ಕ್ರೀಡಾಶಾಲೆಯನ್ನು ಕುಶಾಲನಗರಕ್ಕೆ ಸ್ಥಳಾಂತರಿಸಲಾಗುವುದೇ:

ಈ. ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಳಾಂತರಿಸಲಾಗುವುದು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಕ್ರೀಡಾ ರಾಜ್ಯ ಸಚಿವರು):–

ಅ. ಹೌದು.

ಆ. ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತವಾದ ನಿವೇಶನವನ್ನು ಗುರಿತಸಲಾಗಿದ್ದು, ನಿವೇಶನವು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಗೆ ವರ್ಗಾಯಿಸಿದ ಕೂಡಲೇ ಕ್ರೀಡಾಂಗಣದ ನಿರ್ಮಾಣದ ಕಾರ್ಯ ಪ್ರಾರಂಭಿಸಲಾಗುವುದು.

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಸೋಮವಾರ್ಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಬಸ್ ಸ್ಟ್ಯಾಂಡ್.

547 (574): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ ಸರ್ಕಾರದಿಂದ ಬಸ್ ನಿಲ್ದಾಣವನ್ನು ನಿರ್ಮಿಸುವ ಸರ್ವೆ ಕಾರ್ಯ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ. ಬಂದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು:

ಇ. ಇದಕ್ಕೆ ಎಷ್ಟು ಹಣ ಮಂಜೂರು ಮಾಡಲಾಗಿದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಇಲ್ಲ.

ಆ. ನಿವೇಶನ ಸ್ವಾಧೀನಕ್ಕೆ ಪಡೆದ ನಂತರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು.

ಇ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಹೆಂಡ ಮಾರಾಟದಿಂದ ಬಂದ ತೆರಿಗೆ.

548 (738): ಶ್ರೀ ಬಿ. ಹಂಪನಗೌಡ (ಸಿಂಧನೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಎಷ್ಟು ಜಿಲ್ಲೆಗಳಲ್ಲಿ ಹೆಂಡವನ್ನು ಮಾರಲು ಸರ್ಕಾರ ಪರವಾನಿಗೆ ಕೊಟ್ಟಿದೆ ಮತ್ತು

ಹೆಂಡದಿಂದ ಬರುವ ತಿಂಗಳ ಅಬಕಾರಿ ತೆರಿಗೆ ಎಷ್ಟು ? (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು:

ಆ. ರಾಯಚೂರು ಜಿಲ್ಲೆಯಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಹೆಂಡವನ್ನು ಮಾರಲು ಸರ್ಕಾರ ಪರವಾನಿಗೆ ಕೊಟ್ಟಿದೆ ? ಹಾಗೂ ತಾಲ್ಲೂಕು ವಾರು ತಿಂಗಳಿಗೆ ಹೆಂಡದಿಂದ ಬರುವ ಅಬಕಾರಿ ತೆರಿಗೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು):

ಇ. ಹೆಂಡಗ ವ್ಯಾಪಾರ ಮಾಡಲು ಸರ್ಕಾರವು ಏನಾದರು ಕಾನೂನು ನಿಯಮಗಳನ್ನು ಮಾಡಿದೆಯೇ:

ಈ. 1989–90, 1990–91, 1991–92 ಮತ್ತು 1992–93ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯಲ್ಲಿ ಸಾರಾಯಿ ವ್ಯಾಪಾರದಿಂದ ತಿಂಗಳಿಗೆ ಎಷ್ಟು ಹಣ ಸರ್ಕಾರಕ್ಕೆ ಜಮಾವಾಗುವುದು:

ಉ. 1989–90ನೇ ಸಾಲಿನಲ್ಲಿ ರಾಯಚೂರು ತಾಲ್ಲೂಕು ಮತ್ತು ದೇವದುರ್ಗ ತಾಲ್ಲೂಕುಗಳಿಂದ ಹೆಂಡದ ವ್ಯಾಪಾರದಿಂದ ತಿಂಗಳಿಗೆ ಎಷ್ಟು ಅಬಕಾರಿ ತೆರಿಗೆ ಸಂದಾಯವಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಕೆಳಗೆ ಕಾಣಿಸಿರುವ ಮೂರು ಜಿಲ್ಲೆಗಳಲ್ಲಿ

1. ದಕ್ಷಿಣ ಕನ್ನಡ ಜಿಲ್ಲೆ (ಇಡೀ ಜಿಲ್ಲೆ)
2. ಗುಲ್ಬರ್ಗಾ, ಚಿತ್ತಾಪುರ, ಚಿಂಚೋಳಿ, ಸೇಡಂ ಮತ್ತು ಯಾದಗಿರಿ ತಾಲ್ಲೂಕುಗಳು – ಗುಲ್ಬರ್ಗಾ ಜಿಲ್ಲೆ.
3. ರಾಯಚೂರು ಜಿಲ್ಲೆಯ ರಾಯಚೂರು ದೇವದುರ್ಗ ಮಾನ್ವಿ, ಸಿಂಧನೂರು ಮತ್ತು ಲಿಂಗಸಗೂರು ತಾಲ್ಲೂಕುಗಳು.

1991–92ನೇ ಅಬಕಾರಿ ವರ್ಷದಿಂದ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಶೇಂದಿ ಮತ್ತು ಸಾರಾಯಿಯನ್ನು ಒಟ್ಟಿಗೆ ಹರಾಜು ಮಾಡಲಾಯಿತು. ಹೆಂಡದ ಮೇಲೆ ಅಬಕಾರಿ ತೆರಿಗೆ ವಿಧಿಸಿರುವುದಿಲ್ಲ. ಸರ್ಕಾರ ಗುತ್ತಿಗೆ ಬಾಡಿಗೆ ಮಾತ್ರ ವಸೂಲು ಮಾಡುತ್ತದೆ.

ಆ. ರಾಯಚೂರು ದೇವದುರ್ಗ, ಮಾನ್ವಿ, ಸಿಂಧನೂರು ಮತ್ತು ಲಿಂಗಸುಗೂರು ತಾಲ್ಲೂಕುಗಳಲ್ಲಿ ಹೆಂಡದ ಮೇಲೆ ಅಬಕಾರಿ ತೆರಿಗೆ ವಿಧಿಸಲಾಗುವುದಿಲ್ಲ.

ಇ. ಹೌದು.

ಈ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ. ರಾಯಚೂರು ಜಿಲ್ಲೆಯ ಶೇಂದಿಯನ್ನು ಒಟ್ಟಿಗೆ (ಜಿಲ್ಲಾವಾರ) ಹರಾಜು ಮಾಡಿದ್ದು ತಿಂಗಳ ಗುತ್ತಿಗೆ ಹಣ 78,52,100 ರೂಗಳಾಗಿರುತ್ತವೆ. ಆದ್ದರಿಂದ ರಾಯಚೂರು ಮತ್ತ ದೇವದುರ್ಗ ತಾಲ್ಲೂಕುಗಳ ಬಾಡಿಗೆ ಹಣವನ್ನು ನಿಖರವಾಗಿ ಹೇಳಲಾಗುವುದಿಲ್ಲ. ಶೇಂದಿಗೆ ಯಾವ ತೆರಿಗೆಯನ್ನು ವಿಧಿಸುವುದಿಲ್ಲ.

ANNEXURE 'A'

Statement showing month wise revenue realised from sale of arrack in Raichur District for the years 1989-90, 1990-91, 1991-92 and 1992-93 (upto December '92)

Sl. No.	Month	Arrack Shop rentals	Duty on Arrack.	Total
1989-90				
1.	July '89	50,26,536	4,22,812	54,49,348
2.	August '89	36,66,363	4,79,110	41,45,473
3.	September '89	27.62,700	4,91,122	32,53,822
4.	October '89	41,50,400	4,69,111	46,19,511
5.	November '89	23,64,000	5,28,106	28,92,106
6.	December '89	41,30,000	6,46,833	47,76,833
7.	January '90	37,66,800	6,41,021	44,07,821
8.	February '90	44,70,300	5,71,675	50,41,975
9.	March '90	6,90,100	6,27,396	13,17,496
10.	April '90	13,75,100	5,49,093	19,24,193
11.	May '90	71,05,500	6,83,248	77,88,784
12.	June '90	33,37,900	7,34,434	40,72,334
	Total	4,28,45,699	68,43,961	4,96,89,660
1990-91				
1.	July '90	44,31,100	14,44,748	58,75,848
2.	August '90	81,70,000	14,33,796	96,03,796
3.	September '90	58,63,200	12,99,116	71,62,316
4.	October '90	1,10,51,814	13,97,536	1,24,49,350
5.	November '90	99,51,293	14,45,464	1,13,96,757
6.	December '90	1,17,64,325	18,87,274	1,36,51,599
7.	January '91	1,38,82,756	19,39,356	1,58,22,112
8.	February '91	1,13,89,200	15,60,388	1,29,48,588
9.	March '91	2,64,46,800	16,51,589	2,80,98,389
10.	April '91	2,51,90,800	18,30,472	2,70,21,272
11.	May '91	98,00,970	13,69,713	1,11,70,683
12.	June '91	89,92,495	27,44,900	1,17,37,395
	Total	14,69,33,753	2,00,04,352	16,69,38,105

1991-92

1. July '91	1,07,14,465,	17,87,998	1,25,02,463
2. August '91	1,49,53.030	14,17,278	1,63,70,308
3. September '91	1,80,00,000	12,89,225	1,92,89,226
4. October '91	1,60,31,000	14,06,490	1,74,37,490
5. November '91	1,61,51,342	16,04,494	1,77,55,836
6. December '91	1,43,01,160	16,60,594	1,59,61,754
7. January '92	1,29,58,843	18,69,518	1,48,.28,361
8. February '92	1,72,47,549	17,07,756	1,89,55,305
9. March '92	2,04,21,635	12,09,910	2,16,31,545
10..April '92	28,24,613	18,94,216	47,18,829
11. May '92	1,13,79,387	19,88,319	1,33,67,706
12. June '92	1,54,72,387	20,58,025	1,75,30,412
Total	17,04,55,411	1,98,93,824	19,03,49,235

1992-93

1. July '92			
2. August '92	1,67,71,36	14,63,054	1,82,34,417
3. September '92	31,33,82,999	13,36,656	1,47,19,655
4. October '92	1,51,57,997	12,72,348	1,64,30,345
5. November '92	1,77,96,640	14,47,388	1,92,44,028
6. December '92	1,41,29,900	13,23,612	1,54,53,512
	1,74,18,200	17,00,980	1,91,19,180
Total	9,46,57,099	85,44,038	10,32,01,137

ದೇವರಾಯನದುರ್ಗ ಮತ್ತು ನಾಮದ ಚಿಲುಮೆಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆ.

550 (1216): ಶ್ರೀ ಎಸ್. ಶಫಿ ಅಹ್ಮದ್ (ತುಮಕೂರು)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ. ದೇವರಾಯನದುರ್ಗ ಮತ್ತು ನಾಮದ ಚಿಲುಮೆಯನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ ?

ಆ. ರಾಜ್ಯದಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ಸಂಖ್ಯೆ ಹಾಗೂ ಪ್ರೇಕ್ಷಣೀಯ ಸ್ಥಳಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ರೂಪಿಸಿಕೊಂಡಿರುವ ಕಾರ್ಯಕ್ರಮಗಳು ಮತ್ತು ನಿರೀಕ್ಷಿಸಿರುವ ಆದಾಯ ?

ಇ. ಗುರುತಿಸಲ್ಪಟ್ಟ ಹೊಸ ಪ್ರೇಕ್ಷಣೀಯ ಸ್ಥಳಗಳ ಸಂಖ್ಯೆ ಮತ್ತು ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯಗಳು. (ವಿವರಗಳನ್ನು ಒದಗಿಸುವುದು)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ನಾಮದ ಚಿಲುಮೆಯನ್ನು ಒಳಗೊಂಡಂತೆ ಇಡೀ ದೇವರಾಯನದುರ್ಗವನ್ನು ಪ್ರವಾಸೋದ್ಯಮ ಇಲಾಖೆ ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಿದೆ.

ಆ. ಅ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಸಿ' ಗುಂಪಿನಡಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ 250ಕ್ಕೂ ಹೆಚ್ಚು ಸ್ಥಳಗಳನ್ನು ಗುರುತಿಸಲಾಗಿದೆ.

ಆ) ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಖಾಸಗಿ ಉದ್ಯಮಿಗಳನ್ನು ಉತ್ತೇಜಿಸಲು ರಿಯಾಯಿತ ಹಾಗೂ ಉತ್ತೇಜನಗಳನ್ನು ಒಳಗೊಂಡು ಕರ್ನಾಟಕ ಪ್ರವಾಸೋದ್ಯಮ ನೀತಿಯ ಘೋಷಣೆ.

ಇ) ಪ್ರವಾಸಿ ಸೌಲಭ್ಯವನ್ನು ಒದಗಿಸುವುದು ಮತ್ತು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವುದು ಇಲಾಖೆಯ ಮೂಲ ಕರ್ತವ್ಯವಾಗಿದೆ.
ಟೆಕ್‌ಸಾಕ್ ಸಂಸ್ಥೆಯ ಅಧ್ಯಯನದ ರೀತ್ಯ 1990ರಲ್ಲಿ ರಾಜ್ಯ ಸರ್ಕಾರ ಪ್ರವಾಸೋದ್ಯಮದಿಂದ ರೂ. 4,168 ಲಕ್ಷಗಳನ್ನು ಗಳಿಸಿವೆ.

ಇ. ರಾಜ್ಯದ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಗುರುತಿಸಲಾಗಿದೆ.
ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಉತ್ತೇಜನ ಹಾಗೂ ರಿಯಾಯಿತಿಗಳನ್ನು ನೀಡಿ ಖಾಸಗಿ ಉದ್ಯಮಿಗಳನ್ನು ಉತ್ತೇಜಿಸುವುದು.

ಗಾಲಿಗಳ ಮೇಲೆ ಅರಮನೆ ಯೋಜನೆ'ಯನ್ನು ಜಾರಿಗೆ ತರುವ ಬಗ್ಗೆ.

551 (1347): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗಾಲಿಗಳ ಮೇಲೆ ಅರಮನೆ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರವು ರೈಲ್ವೆ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದೆಯೇ ?

ಆ. ಹಾಗಿದ್ದಲ್ಲಿ ರೈಲ್ವೆ ಇಲಾಖೆಗೆ ಸಲ್ಲಿಸಿದ ಪ್ರಸ್ತಾವನೆಯ ವಿವರ:

ಇ. ನಿಯೋಜಿತ ಗಾಲಿಗಳ ಮೇಲೆ ಅರಮನೆ ಯೋಜನೆಯು ಎಂದಿನಿಂದ ಜಾರಿಗೆ ಬರುವುದು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೌದು

ಆ. 1. ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಮಾರ್ಗವು– ಬೆಂಗಳೂರು–ಮೈಸೂರು–ಹಾಸನ–ಹೊಸಪೇಟೆ–ಬೆಂಗಳೂರನ್ನು ಒಳಗೊಂಡಿದೆ.

2. ಪ್ರಮುಖ ಪ್ರವಾಸಿ ಸ್ಥಳಗಳ ವೀಕ್ಷಣೆ.
3. ಸಾಂಸ್ಕೃತಿಕ ಕಾರ್ಯಕ್ರಮಗಳು.

ಇ. ಭಾರತ ಸರ್ಕಾರವು ಅನುಮೋದಿಸಿದ ನಂತರ.

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ.

552 (1334 – ಎ): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರವು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇಧಿಸಿರುವುದೇ ?

ಆ. ಹಾಗಿದ್ದಲ್ಲಿ ವಿಧಾನಸೌಧ ಹಾಗೂ ಮತ್ತಿತರ ಸರ್ಕಾರಿ ಕಛೇರಿಗಳಲ್ಲಿ ಧೂಮಪಾನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ?

ಇ. ಇದುವರೆಗೆ ದಾಖಲೆ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಈ. ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಲು ಏನು ಕ್ರಮ ಜರುಗಿಸಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. ರಾಜ್ಯಾದ್ಯಂತ ಸರ್ಕಾರಿ ಕಛೇರಿಗಳಲ್ಲಿ ಹಾಗೂ ಸರ್ಕಾರದ ನಿಯಂತ್ರಣದಲ್ಲಿ ಇರುವ ಸಾರ್ವಜನಿಕ ಸಂಸ್ಥೆಗಳ ಆವರಣದಲ್ಲಿ ಒಳಗೆ ಧೂಮಪಾನ ಮತ್ತು ಉಗುಳುವುದನ್ನು ನಿಷೇಧಿಸಿ ಕರ್ನಾಟಕ ಪೋಲೀಸ್ ಕಾಯಿದೆ 1963ರ ಸೆಕ್ಷನ್ 92ರ ಉಪ ಸೆಕ್ಷನ್ (1)ರ ಕ್ಲಾಜ್ (ವೈ)ನ ಕಲಂಗಳನ್ನು ವಿಸ್ತರಿಸಿ ದಿನಾಂಕ 8.1.93ರಂದು ಆದೇಶ ಹೊರಡಿಸಿದೆ.

ಆ. ಇಲ್ಲ.

ಇ. ಈ ಬಗ್ಗೆ ಇತ್ತೀಚೆಗಷ್ಟೇ ಆದೇಶಗಳನ್ನು ಹೊರಡಿಸಿರುವುದರಿಂದ ಉಲ್ಲಂಘನೆಯ ವಿರುದ್ಧ ಇನ್ನು ಮುಂದೆ ಪ್ರಕರಣಗಳನ್ನು ದಾಖಲಿಸಲ್ಲು ಕ್ರಮ ಜರುಗಿಸಲಾಗುವುದು.

ಈ. ಇದನ್ನು ಪರಿಶೀಲಿಸಲಾಗುವುದು.

ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಲು ಸರ್ಕಾರದವರು ಕೈಕೊಂಡ ಕ್ರಮಗಳು.

554 (992): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಹೊಸ ಸರ್ಕಾರದವರು ಬಂದ ನಂತರ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಯಾವ ಯಾವ ಕ್ರಮವನ್ನು ಕೈಗೊಂಡಿರುವರು ?

ಆ. ರಾಜ್ಯದಲ್ಲಿ ಇನ್ನೂವರೆಗೂ ಪ್ರತಿಯೊಂದೂ ಇಲಾಖೆಗಳಲ್ಲಿ ಇಂಗ್ಲೀಷ್‌ನಲ್ಲಿಯೇ ಪತ್ರವ್ಯವಹಾರ ನಡೆಯುತ್ತಿದೆ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ. ಸರ್ಕಾರದವರು ಅಂಥ ಇಲಾಖೆಗಳವರ ಮೇಲೆ ಯಾವ ಕ್ರಮ ಕೈಗೊಂಡಿರುವರು ಹಾಗೂ ಇಂಗ್ಲೀಷ್‌ನಲ್ಲಿಯೇ ಪತ್ರವ್ಯವಹಾರ ಮಾಡುತ್ತಿರುವ ಇಲಾಖೆಗಳು ಯಾವುವು ?

ಈ. ಇಂಗ್ಲೀಷಿನಲ್ಲಿಯೇ ಪತ್ರವ್ಯವಹಾರ ಮಾಡುತ್ತಿರುವ ಇಲಾಖೆಗಳ ಮೇಲೆ ಅಥವಾ ಯಾರಾದರೂ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. (1) ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಶಾಸನಬದ್ಧ ಅಧಿಕಾರ ಕೊಡಲು ಹಾಗೂ (2) ಒಂದು ವರ್ಷದ ಅವಧಿಯೊಳಗೆ ರಾಜ್ಯ ಮಟ್ಟದಲ್ಲಿಯೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ. ಪ್ರತಿಯೊಂದೂ ಇಲಾಖೆಗಳಲ್ಲಿ ಇಂಗ್ಲೀಷ್‌ನಲ್ಲಿಯೇ ಎಲ್ಲ ಪತ್ರ ವ್ಯವಹಾರಗಳು ನಡೆಯುತ್ತಿಲ್ಲ. ಕೆಲವು ಇಲಾಖೆಗಳು ಪೂರ್ಣ ಪ್ರಮಾಣದಲ್ಲಿ ಆಡಳಿತದಲ್ಲಿ ಕನ್ನಡವನ್ನು ಬಳಸುತ್ತಿಲ್ಲವೆಂಬುದು ಗಮನಕ್ಕೆ ಬಂದಿದೆ.

ಇ. ಪೂರ್ಣ ಪ್ರಮಾಣದಲ್ಲಿ ಕನ್ನಡವನ್ನು ಬಳಸದೇ ಇರುವ ಇಲಾಖೆಗಳಿಗೆ ಕನ್ನಡವನ್ನೇ ಬಳಸುವಂತೆ ಸೂಚನೆಗಳನ್ನು ನೀಡಲಾಗುತ್ತಿದೆ.

ಈ. ಇಲ್ಲ.

ಭೂಸೇನಾ ನಿಗಮಕ್ಕೆ ಆರ್ಥಿಕ ಮುಗ್ಗಟ್ಟು

555(993): ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಭೂ ಸೇನಾ ನಿಗಮವು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಆ ನಿಗಮಕ್ಕೆ ಆರ್ಥಿಕ ಸಹಾಯವನ್ನು ಮಾಡಲು ಸರ್ಕಾರದವರು ಯಾವ ಕ್ರಮ ಕೈಗೊಂಡಿರುವುರು;

ಇ. ಭೂ ಸೇನಾ ನಿಗಮದವರು ಗುಣಮಟ್ಟದ ಕೆಲಸವನ್ನು ಮಾಡುತ್ತಿರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ, ಆ ನಿಗಮದಲ್ಲಿ ಉತ್ತಮ ದರ್ಜೆಯ ಕೆಲಸ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಉ. ಭೂ ಸೇನಾ ನಿಗಮದವರು ಉತ್ತಮ ದರ್ಜೆಯ ಕೆಲಸ ಮಾಡುತ್ತಿಲ್ಲವೆಂದು ತಿಳಿದು ಆಶ್ರಯ ಯೋಜನೆ ಮನೆಗಳನ್ನು ಕಟ್ಟಲು ಕ್ಯಾಬಿನೇಟ್ ಮೀಟಿಂಗ್‌ನಲ್ಲಿ, ಜಿಲ್ಲಾ ಪರಿಷತ್‌ಗಳಲ್ಲಿ ವಿರೋಧಿಸಿರುವರು ಎಂಬುವುದು ನಿಜವೇ ?

ಊ. ಹಾಗೂ ಅದಕ್ಕಾಗಿ ಹಿಂದಿನ ಸರ್ಕಾರದವರು ಭೂ ಸೇನಾ ನಿಗಮದವರಿಗೆ ಆಶ್ರಯ ಮನೆಗಳನ್ನು ಕಟ್ಟಲು ನಿರಾಕರಿಸಲಾಯಿತು ಎಂಬ ಸಂಗತಿ ನಿಜವೇ:

ಋ. ಭೂ ಸೇನಾ ನಿಗಮದವರು ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಕೆಲಸಗಳನ್ನು ಅರ್ಧಕ್ಕೆ ಮಾಡಿ ನಿಲ್ಲಿಸಿರುವುದು ನಿಜವೇ ? ಹಾಗೂ ನಿಲ್ಲಿಸಿದ ಕೆಲಸಗಳು ಯಾವುವು ಮತ್ತು ಅವುಗಳನ್ನು ಪೂರ್ಣಗೊಳಿಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ?

ಶ್ರೀ ಎಂ. ವೀರಪ್ಪಮೊಯಲಿ (ಮುಖ್ಯ ಮಂತ್ರಿಗಳು):-

ಅ. ಹೌದು

ಆ. ಉದ್ಭವಿಸುವುದಿಲ್ಲ. ಕಾರಣ ಕರ್ನಾಟಕ ಭೂ ಸೇನಾ ನಿಗಮವು ಸ್ವಯಂ ನಡೆಸಬಲ್ಲ ತತ್ವದೊಂದಿಗೆ ರೂಪಿತಗೊಂಡಿದೆ. ಆದ್ದರಿಂದ ಅದು ಸ್ವಂತ ಅವಲಂಬನೆಗೆ ಒಳಪಟ್ಟಿರುತ್ತವೆ.

ಇ. ಭೂ ಸೇನಾ ನಿಗಮದವರು ಸಾಮಾನ್ಯವಾಗಿ ಗುಣ ಮಟ್ಟದ ಕೆಲಸ ಮಾಡುತ್ತಿದ್ದಾರೆ.

ಈ. ಪ್ರಶ್ನೆ 'ಇ' ನಲ್ಲಿ ಉತ್ತರಿಸಿದಂತೆ ಇದು ಉದ್ಭವಿಸುವುದಿಲ್ಲ.

ಉ . ಇಲ್ಲ.

ಊ. ನಿಜವಲ್ಲ. ಇಂಥಹ ಮನೆಗಳನ್ನು ಕಟ್ಟಲು ಕರ್ನಾಟಕ ಗೃಹ ಮಂಡಳಿಗೆ ವಹಿಸಲು ಸರ್ಕಾರ ಕಾರ್ಯ ರೀತಿ ಇದ್ದಿತ್ತು.

ಋ. ಸ್ವಲ್ಪ ಮಟ್ಟಿಗೆ ಇದು ನಿಜ. ಆದರೆ ಹೆಚ್ಚಿನ ಸಂಖ್ಯೆಯ ಕೆಲಸಗಳು ಉತ್ತರ ಕರ್ನಾಟಕದಲ್ಲಿನ ಹೈದರಾಬಾದ್, ಕರ್ನಾಟಕ ಜಿಲ್ಲೆಗಳಾದ ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಮತ್ತು ಬೀದರ್‌ಗಳಲ್ಲಿ ಕಾಮಗಾರಿಗಳು ಪೂರ್ಣವಾಗಿ ಮುಗಿದಿದೆ ಅಥವಾ ಉತ್ತಮ ಪ್ರಗತಿಯಲ್ಲಿರುತ್ತದೆ. ಹೆಚ್ಚಿನ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಇತರೆ ಜಿಲ್ಲೆಗಳಾದ ಧಾರವಾಡ, ಬಿಜಾಪುರ, ಬೆಳಗಾವಿ ಮತ್ತು ಕಾರವಾರಗಳಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಕಾಮಗಾರಿಗಳ ಪ್ರಗತಿಯು ಕುಂಠಿತಗೊಂಡಿರುತ್ತದೆ. ಅಪೂರ್ಣವಾಗಿರುವ ಕಾಮಗಾರಿಗಳನ್ನು ಸಂಪೂರ್ಣಗೊಳಿಸಲು ಮತ್ತು ಆದಕ್ಕೆ ಬೇಕಾಗಿರುವ ಹಣವನ್ನು ಒದಗಿಸಲು ಪ್ರಯತ್ನ ಮಾಡಲಾಗುತ್ತಿದೆ.

ಬೆಳಗಾಂ ಜಿಲ್ಲೆಯ ಗಡಿಪ್ರದೇಶದ ಹಳ್ಳಿಗಳಿಗೆ ಬಾರ್ಡರ್ ಗ್ರಾಂಟ್

556 (994): ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾವಿ ಜಿಲ್ಲೆಯ ಗಡಿ ಪ್ರದೇಶದಲ್ಲಿರುವ ಕನ್ನಡ ಹಳ್ಳಿಗಳಿಗೆ ಈ ವರ್ಷದ ಬಾರ್ಡರ್ ಗ್ರಾಂಟಿನಲ್ಲಿ ಎಷ್ಟು ಹಣ ಇಲ್ಲಿಯವರೆಗೆ ಬಿಡುಗಡೆ ಮಾಡಲಾಗಿದೆ ?

ಆ. ಅದರಲ್ಲಿ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು ಮತ್ತು ಯಾವ ಯಾವ ಕೆಲಸಗಳಿಗೆ ಎಷ್ಟು ಎಷ್ಟು ಹಣ ಖರ್ಚಾಗಿರುವುದು ? (ಸಂಪೂರ್ಣ ವಿವರ ನೀಡುವುದು):

ಇ. ಬೆಳಗಾವಿ ಮತ್ತು ಖಾನಾಪುರ ತಾಲ್ಲೂಕಿನ ಗಡಿ ಪ್ರದೇಶದಲ್ಲಿರುವ ಕನ್ನಡ ಹಳ್ಳಿಗಳಿಗೆ ಬಾರ್ಡರ್ ಗ್ರಾಂಟ್‌ನಲ್ಲಿ ಹಣ ಬಿಡುಗಡೆ ಮಾಡುವಲ್ಲಿ ಹಾಗೂ ಕೆಲಸಗಳನ್ನು ತೆಗೆದುಕೊಳ್ಳುವಲ್ಲಿ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ. ಹಾಗಿದ್ದಲ್ಲಿ ಸರ್ಕಾರದವರು ಕೆಲಸ ತೆಗೆದುಕೊಳ್ಳುವಲ್ಲಿ ಅನ್ಯಾಯವಾಗದಂತೆ ಎಚ್ಚರವಹಿಸುವರೆ:

ಉ. ಬೆಳಗಾವಿ ತಾಲ್ಲೂಕಿನ ಪೈಕಿ ಅರಳಿಕಟ್ಟೆ ಗ್ರಾಮವು ಒಂದು ಅಚ್ಚ ಕನ್ನಡ ಹಳ್ಳಿಯಿದ್ದು ಅಲ್ಲಿ

ಬಾರ್ಡರ್ ಗ್ರಾಂಟಿನಿಂದ ಯಾವುದೇ ಕೆಲಸ ತೆಗೆದುಕೊಂಡಿರುವುದಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಅಲ್ಲಿ ಒಂದು ಸಮುದಾಯ ಭವನ ಕಟ್ಟಲಾಗುವುದೇ ?

ಊ. ಇನ್ನು ಕನ್ನಡ ಮುಂದೆಯಾದರೂ ಬಾರ್ಡರ್ ಗ್ರಾಂಟಿನಿಂದ ಕೆಲಸಗಳನ್ನು ತೆಗೆದುಕೊಳ್ಳಲು ಸೂಚಿಸಲು ಅದಕ್ಕೆ ಕನ್ನಡ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಿ ಎಲ್ಲರಿಗೂ ಅನ್ಯಾಯವಾಗದಂತೆ ನೋಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ:

ಋ. ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಪೈಕಿ ತೋಲಗಿ ಗ್ರಾಮದಲ್ಲಿ ಯುವಕ ಮಂಡಳ ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):-

ಅ. ಬೆಳಗಾವಿ ಜಿಲ್ಲೆಯ ಐದು ಗಿಡ ತಾಲ್ಲೂಕುಗಳಿಗೆ 62.50 ಲಕ್ಷ ರೂ.ಗಳು.

ಆ. ಬಿಲ್ಲುಗಳನ್ನು ಪಾವತಿ ಮಾಡಬೇಕಾಗಿದೆ.

ಇ. ಇಲ್ಲ.

ಈ. ಉದ್ಭವಿಸುವುದಿಲ್ಲ.

ಉ. ಇಲ್ಲ.

ಊ. ಪರಿಗಣಿಸಲಾಗುವುದು.

ಋ. ಪ್ರಸ್ತಾವನೆ ಬಂದರೆ ಪರಿಶೀಲಿಸಲಾಗುವುದು.

ಗ್ರಾಮೀಣ ಪ್ರದೇಶಗಳಲ್ಲಿ ಜನಸಂಖ್ಯೆ ಆಧಾರದ ಮೇಲೆ ಆಹಾರ ವಸ್ತುಗಳ ವಿತರಣೆ.

558 (978): ಶ್ರೀ ಡಿ.ಆರ್. ಪಾಟೀಲ್, (ಗದಗ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಪಟ್ಟಣ ಪ್ರದೇಶದಲ್ಲಿ ಕುಟುಂಬದ ಜನಸಂಖ್ಯೆ ಆಧಾರದ ಮೇಲೆ ಸಕ್ಕರೆಯನ್ನು ಕೊಟ್ಟ ಹಾಗೇ ಉಳಿದ ಪ್ರದೇಶಗಳಲ್ಲಿ ಸಹ ಆಹಾರ ವಸ್ತುಗಳನ್ನು ಕುಟುಂಬದ ಜನಸಂಖ್ಯೆ ಆಧಾರದ ಮೇಲೆ ಕೂಡಲು ಇರುವ ತೊಂದರೆಯೇನು ?

ಆ. ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುವುದು:

ಇ. ಅದೇ ರೀತಿ ಗ್ರಾಮೀಣ ಪ್ರದೇಶಗಳಲ್ಲಿ ಸಹೆತ ಪಡಿತರ ವಸ್ತುಗಳನ್ನು ಕುಟುಂಬದಲ್ಲಿ ಇರುವ ಜನಸಂಖ್ಯೆ ಆಧಾರದ ಮೇಲೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸಬರಾಜು ಸಚಿವರು):-

ಅ. ಬೆಂಗಳೂರು ನಗರವನ್ನು ಹೊರತುಪಡಿಸಿ ಎಲ್ಲಾ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ಪಡಿತರ ಚೀಟಿವಾರು ಪಡಿತರ ವಸ್ತುಗಳನ್ನು ನಿಗಧಪಡಿಸಲಾಗುತ್ತಿದೆ. ರಾಜ್ಯಕ್ಕೆ ಹಂಚಿಕೆಯಾಗುತ್ತಿರುವ ಆಹಾರ ಧಾನ್ಯಗಳ, ಸಕ್ಕರೆ ಇತ್ಯಾದಿಗಳ ಪ್ರಮಾಣ ಅವಶ್ಯಕತೆಗಿಂತ ಅತ್ಯಂತ

ಕಡಿಮೆಯಾಗಿದೆ. ಆದುದರಿಂದ ಬೆಂಗಳೂರಿನಲ್ಲಿ ಜಾರಿಯಲ್ಲಿರುವ ಪದ್ಧತಿಯನ್ನು ಉಳಿದ ಪ್ರಾದೇಶಗಳಿಗೂ ವಿಸ್ತರಿಸುವುದು ಕಷ್ಟ ಸಾಧ್ಯ.

ಆ. ಉದ್ಭವಿಸುವುದಿಲ್ಲ.

ಇ. ಗ್ರಾಮಾಂತರ ಪ್ರದೇಶದಲ್ಲಿ ಪಟ್ಟಣ ಪ್ರದೇಶಗಳಿಗಿಂತ ಹೆಚ್ಚು ಪಡಿತರ ಚೀಟಿಗಳಿದ್ದು ಹಾಗೂ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುತ್ತಿರುವ ಅನುದಾನವು ರಾಜ್ಯದ ಬೇಡಿಕೆಗೆ ಕಡಿಮೆ ಇರುವುದರಿಂದ ಗ್ರಾಮೀಣ ಪ್ರದೇಶದ ಪಡಿತರ ಚೀಟಿದಾರರಿಗೆ ಕುಟುಂಬದ ಜನಸಂಖ್ಯೆ ಆಧಾರದ ಮೇಲೆ ಪಡಿತರಗಳನ್ನು ವಿತರಿಸಲು ಸಾಧ್ಯವಾಗುತ್ತಿಲ್ಲ.

ಕರ್ನಾಟಕ ಪ್ರವಾಸೋದ್ಯಮಕ್ಕೆ ಜಪಾನ್ ದೇಶದ ಹಣ.

560 (958): ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು)

ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಜಪಾನ್ ದೇಶದವರು ಕರ್ನಾಟಕ ಪ್ರವಾಸೋದ್ಯಮಕ್ಕೆ 100 ಕೋಟಿ ರೂ. ಕೊಡಲಿದ್ದಾರೆಂದು ಎರಡು ವರ್ಷದ ಕೆಳಗೆ ಸರ್ಕಾರ ಪ್ರಕಟಿಸಿದ್ದುದು ನಿಜವೆ ?

ಆ. ಹಾಗಿದ್ದಲ್ಲಿ, ಎರಡು ವರ್ಷಗಳು ಕಳೆದರೂ ಹಣ ಬಾರದಿರಲು ಕಾರಣವೇನು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೌದು.

ಆ. ಜಪಾನಿನ ಓ.ಇ.ಸಿ.ಎಫ್. ಸಂಸ್ಥೆಯು ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯನ್ನು ಆಯ್ಕೆ ಮಾಡಿಲ್ಲ.

ಕನ್ನಡ ಪ್ರಾಧಿಕಾರದ ಕರ್ತವ್ಯಗಳು

562 (1357): ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರ ನೇಮಿಸಿರುವ ಕನ್ನಡ ಪ್ರಾಧಿಕಾರದ ಸದಸ್ಯರುಗಳಾರು ?

ಆ. ಪ್ರಾಧಿಕಾರಕ್ಕೆ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು ?

ಇ. ಕನ್ನಡ ಪ್ರಾಧಿಕಾರದ ಜವಾಬ್ದಾರಿ ಮತ್ತು ಕರ್ತವ್ಯಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಅನುಬಂಧ–1ರಲ್ಲಿ ಕೊಟ್ಟಿದೆ.

ಆ. 1992–93ನೇ ಸಾಲಿಗೆ ರೂ. 11.13 ಲಕ್ಷ ಬಿಡುಗಡೆ ಮಾಡಿದೆ. 1993–94ನೇ ಸಾಲಿಗೆ ಆಯವ್ಯಯದಲ್ಲಿ ರೂ. 16.50 ಲಕ್ಷ ಗೊತ್ತುಪಡಿಸಿದೆ.

ಇ. 1. ಆಡಳಿತದಲ್ಲಿ ಕನ್ನಡ ಅನುಷ್ಠಾನ

2. ಸರ್ಕಾರ ಒಪ್ಪಿರುವ ಡಾ. ಸರೋಜಿನಿ ಮಹಿಷಿ ವರದಿ ಶಿಫಾರಸುಗಳನ್ನು ಕಾರ್ಯಗತಗೊಳಿಸಲು ಕಾರ್ಯವಿಧಾನ ರೂಪಿಸುವುದು.

3. ಪ್ರಾಧಿಕಾರದ ಕರ್ತವ್ಯಗಳನ್ನು ಅನುಬಂಧ-2ರಲ್ಲಿ ಕೊಟ್ಟಿದೆ.

ಅನುಬಂಧ - 1

1. ಡಾ. ಸಿದ್ದಯ್ಯ ಪುರಾಣಿಕ
2. ಡಾ. ಹಾ. ಮಾ. ನಾಯಕ
3. ಪ್ರೊ. ಎಸ್. ಎಸ್. ಒಡೆಯರ್
4. ಶ್ರೀ ಬಿ. ಎಂ. ಇದಿನಬ್ಬ
5. ಶ್ರೀ ಶಿವಶರಣಪ್ಪ ವಾಲಿ
6. ಶ್ರೀಮತಿ ಬಿಟಿ.ಲಲಿತಾನಾಯಕ್
7. ಶ್ರೀ ಗೊ. ರು. ಚೆನ್ನಬಸಪ್ಪ, ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು
8. ಡಾ. ಸಿದ್ದಲಿಂಗಯ್ಯ
9. ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ
10. ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
11. ಆಯುಕ್ತರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
12. ನಿರ್ದೇಶಕರು, ಭಾಷಾಂತರ ಇಲಾಖೆ

ಅನುಬಂಧ - 2

1. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಗಳು:-

ಎ. ಸರ್ಕಾರದ ಆಡಳಿತ ಭಾಷಾ ನೀತಿಯ ಅನುಷ್ಠಾನದ ಬಗ್ಗೆ ಬೇರೆ ಬೇರೆ ಇಲಾಖೆಗಳು, ಸಾರ್ವಜನಿಕ ಉದ್ದಿಮೆಗಳು, ಎಲ್ಲ ಸಂಸ್ಥೆಗಳು ಮತ್ತು ಸ್ಥಳೀಯ ನಿಕಾಯಗಳು ಮತ್ತು ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಕೈಗೊಂಡಿರುವ ಕ್ರಮಗಳ ಪರಿಶೀಲನೆ ಮಾಡುವುದು:

ಬಿ. ಸರ್ಕಾರ ಅಂಗೀಕರಿಸಿರುವ ಡಾ. ಸರೋಜಿನಿ ಮಹಿಷಿ ವರದಿಯ ಶಿಫಾರಸುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಅಗತ್ಯವಾದ ಕ್ರಮ ಕೈಗೊಳ್ಳುವುದು:

ಸಿ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಜಾರಿಗೆ ತರುವಲ್ಲಿ ಇರುವ ಅಡಚಣೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು:

ಡಿ. ಕನ್ನಡ ಪರೀಕ್ಷೆಗಳ (ಸೇವಾ ಪರೀಕ್ಷೆ) ಪದ್ಧತಿಯನ್ನು ಕನ್ನಡ ಜ್ಞಾನವನ್ನು ತಿಳಿಯಲು ನಡೆಸಲಾಗುವ ಪರೀಕ್ಷೆಗಳನ್ನು ಈಗಿರುವ ಅಥವಾ ಮುಂದೆ ರೂಪಿಸಬಹುದಾದ ಸಂಬಂಧಪಟ್ಟ ಪಠ್ಯಕ್ರಮಗಳ ಸಿಹತವಾಗಿ ಕಾಲಕಾಲಕ್ಕೆ ಪರಿಶೀಲಿಸುವುದು ಮತ್ತು ಅಗತ್ಯವೆನಿಸಿದರೆ ಇದನ್ನು ಪರಿಷ್ಕರಿಸಲು, ಮಾರ್ಪಡಿಸಲು ಅಥವಾ ನವೀಕರಿಸಲು ರಾಜ್ಯಸರ್ಕಾರಕ್ಕೆ ಸಲಹೆ ನೀಡುವುದು, ಕನ್ನಡ ಬೆರಳಚ್ಚು ಯಂತ್ರಗಳ ತಯಾರಿಕೆ , ಖರೀದಿ ಮತ್ತು ವಿತರಣೆ ಬಗ್ಗೆ ಕಛೇರಿ ಆಧುನೀಕರಣದಲ್ಲಿ ಬಳಸಲಾಗುವ ಕಂಪ್ಯೂಟರ್, ಟೆಲಿಪ್ರಿಂಟರ್ಸ್, ಟೆಲೆಕ್ಸ್ ಇತ್ಯಾದಿ ಆಧುನಿಕ ಉಪಕರಣಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಅಧ್ಯಯನ ಹಾಗೂ ಸಮಾಲೋಚನೆ ನಡೆಸುವುದು ಮತ್ತು ಈ

ಸಂಬಂಧದಲ್ಲಿ ಕನ್ನಡವನ್ನೇ ಸಂಪೂರ್ಣವಾಗಿ ಬಳಸುವುದಕ್ಕೆ ಪ್ರೇರಕವಾಗಬಹುದಾದ ನಿರ್ಣಯಗಳನ್ನು ಕೈಗೊಂಡು ಅದನ್ನು ಕಾರ್ಯಗತಗೊಳಿಸುವುದು;

ಇ. ಅಧಿಕಾರಿಗಳಿಗೆ: ನೌಕರರಿಗೆ ಕನ್ನಡ ಬಳಕೆಗೆ ಅನುಕೂಲವಾದ ತರಬೇತಿ ಕಾರ್ಯಕ್ರಮ, ಶಿಬಿರ, ಪ್ರದರ್ಶನ ಮತ್ತು ವಿಚಾರ ಸಂಕಿರ್ಣಗಳನ್ನು ಏರ್ಪಡಿಸುವುದು ಮತ್ತು ಕನ್ನಡೇತರರಿಗೆ ಕನ್ನಡ ಕಲಿಕೆ ಕಾರ್ಯಕ್ರಮಗಳನ್ನು ಮತ್ತು ಆ ಸಂಬಂಧ ಪಠ್ಯಕ್ರಮ, ಸಾಹಿತ್ಯ ಸಿದ್ಧಪಡಿಸುವುದು:

ಎಫ್ ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದ ಉಪಯುಕ್ತ ಪ್ರಕಟಣೆಗಳನ್ನು ಪ್ರಕಟಿಸುವುದು, ಖರೀದಿಸುವುದು ಮತ್ತು ವಿತರಿಸುವುದು:

ಜಿ. ಕಛೇರಿಗಳಲ್ಲಿ ಬಳಸಲಾಗುವ ಎಲ್ಲಾ ನಮೂನೆಗಳು ಕನ್ನಡದಲ್ಲಿ ಮುದ್ರಣವಾಗುವಂತೆ ನೋಡಿಕೊಳ್ಳುವುದು ಹಾಗೂ ಕನ್ನಡೇತರ ಭಾಷೆಗಳಲ್ಲಿ ಇರಲೇಬೇಕಾದ ನಮೂನೆ, ಪ್ರಕಟಣೆ ಮತ್ತು ರಿಜಿಸ್ಟರುಗಳನ್ನು ಪರಿಶೀಲಿಸಿ, ಮುದ್ರಣಕ್ಕೆ ಅನುಮತಿ ನೀಡುವುದು:

ಎಚ್ ರಾಜ್ಯದಲ್ಲಿ ಹೆಚ್ಚು ಜನಸಂಪರ್ಕ ಹೊಂದಿರುವ ಕೇಂದ್ರ ಸರ್ಕಾರದ ಕಛೇರಿಗಳು, ಬ್ಯಾಂಕುಗಳು, ಅಂಚೆ ಕಚೇರಿಗಳು ಮತ್ತು ಮತ್ತಿತರ ಕಛೇರಿಗಳು ಉದ್ದಿಮೆಗಳಲ್ಲಿ ದೈನಂದಿನ ಬಳಕೆಯಲ್ಲಿರುವ ನಮೂನೆ, ನೋಟೀಸು, ನಾಮ ಫಲಕಗಳಲ್ಲಿ ಕೇಂದ್ರ ಸರ್ಕಾರದ ಭಾಷಾ ನೀತಿಗೆ ಅನುಗುಣವಾಗಿ ಪ್ರಾದೇಶಿಕ ಭಾಷೆಯನ್ನು ಬಳಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು ಮತ್ತು ಈ ಸಂಬಂಧ ಅಂಥ ಕಚೇರಿಗಳೊಂದಿಗೆ ಪತ್ರ ವ್ಯವಹಾರ ಕೈಗೊಳ್ಳುವುದು.

ಐ. ಆಡಳಿತ ಪೂರಕ ಸಾಹಿತ್ಯ ರಚನೆ, ಪರಿಷ್ಕರಣೆ, ಮುದ್ರಣ ಮತ್ತು ವಿತರಣೆ ವಿಷಯಗಳಲ್ಲಿ ತೀರ್ಮಾನ ಕೈಗೊಳ್ಳುವುದು ಮತ್ತು ಈ ಕ್ಷೇತ್ರದಲ್ಲಿನ ಪ್ರಗತಿಯನ್ನು ಆಗಿಂದಾಗ್ಗ ಸಮೀಕ್ಷಿಸಿ ಸೂಕ್ತ ಕ್ರಮ ಸೂಚಿಸುವುದು.

2. ಪ್ರಾಧಿಕಾರದ ಅಧಿಕರ ವ್ಯಾಪ್ತಿ:

ಎ. <u>ಮಾಹಿತಿ ಪಡೆದುಕೊಳ್ಳುವುದು</u>:-

ಪ್ರಾಧಿಕಾರದ ಉದ್ದೇಶಗಳಿಗಾಗಿ, ರಾಜ್ಯ ಸರ್ಕಾರದ ಯಾವ ಅಧಿಕಾರಿಯಿಂದಾದರೂ ಮಾಹಿತಿಯನ್ನು ಕೋರುವುದು ಮತ್ತು ಪಡೆದುಕೊಳ್ಳಬಹುದು ಅಂಥ ಅಧಿಕಾರಿಯು ಪ್ರಾಧಿಕಾರವು ಕೋರಬಹುದಾದ ಮಾಹಿತಿಯನ್ನು ತಪ್ಪದೆ ಒದಗಿಸಬೇಕು.

ಬಿ. <u>ಪ್ರಾಧಿಕಾರದ ನಿರ್ದೇಶನಗಳು</u>:-

ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ತನ್ನ ಯೋಜನೆಯನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಇಲಾಖೆಗಳಿಗೆ ನೀಡಬಹುದಾದ ನಿರ್ದೇಶನಗಳನ್ನು ಇಲಾಖೆಗಳು ಪಾಲಿಸಬೇಕು.

ಸಿ. <u>ಕರ್ತವ್ಯ ಲೋಪವನ್ನು ದಾಖಲಿಸುವ ಮತ್ತು ನಿರ್ದೇಶನಗಳನ್ನು ನೀಡುವ ಅಧಿಕಾರ</u>:-

ಪ್ರಾಧಿಕಾರದ ಉದ್ದೇಶಗಳನ್ನು ನೆರವೇರಿಸುವ ಸಲುವಾಗಿ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಅಥವಾ ಈಗಾಗಲೇ ಜಾರಿಯಲ್ಲಿರುವ ಯಾವುದೇ ಆದೇಶವನ್ನು ರಾಜ್ಯ ಸರ್ಕಾರ ಮತ್ತು ಸ್ಥಳೀಯ ನಿಕಾಯಗಳ ಅಧಿಕಾರಿಗಳು: ನೌಕರರು ಉಲ್ಲಂಘಿಸಿದರೆ ಅಂಥ ಉಲ್ಲಂಘನೆಯನ್ನು ಕರ್ತವ್ಯಲೋಪವೆಂದು ದಾಖಲಿಸಿ, ಅಂಥ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ನೇಮಕಾತಿ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡುವುದು ಮತ್ತು ನೇಮಕಾತಿ ಪ್ರಾಧಿಕಾರವು ಕೈಗೊಂಡ ಕ್ರಮವನ್ನು ಪ್ರಾಧಿಕಾರಕ್ಕೆ ತಿಳಿಸಬೇಕು.

ಡಿ. ಅಧಿಕಾರಿಗಳನ್ನು ಹಾಜರಾಗುವಂತೆ ನಿರ್ದೇಶಿಸುವ ಅಧಿಕಾರ:-

ಪ್ರಾಧಿಕಾರದ ಧ್ಯೇಯ ಮತ್ತು ಉದ್ದೇಶಗಳನ್ನು ಸರಿಯಾಗಿ ಮತ್ತು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಂತೆ ಮಾಡುವ ಸಲುವಾಗಿ ಪ್ರಾಧಿಕಾರವು ರಾಜ್ಯ ಸರ್ಕಾರ, ಸ್ಥಳೀಯ ನಿಕಾಯಗಳ, ಸಾರ್ವಜನಿಕ ಉದ್ದಿಮೆಗಳು ಮತ್ತು ಸರ್ಕಾರದ ಅನುದಾನಗಳನ್ನು ಪಡೆಯುತ್ತಿರುವ ಎಲ್ಲ ಸಂಸ್ಥೆಗಳ ಅಧಿಕಾರಿಗಳು ಅಥವಾ ನೌಕರರನ್ನು ಪ್ರಾಧಿಕಾರದ ಮುಂದೆ ಹಾಜರಾಗುವಂತೆ ನಿರ್ದೇಶಿಸುವ ಅಧಿಕಾರ ನೀಡಲಾಗಿದೆ.

3. ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಶಾಸನಬದ್ಧ ಅಧಿಕಾರವನ್ನು ಕೊಡುವ ಉದ್ದೇಶ ಸರ್ಕಾರಕ್ಕೆ ಇದೆ. ಆ ಬಗ್ಗೆ ಕರಡು ಅಧಿನಿಯಮವನ್ನು ರಚಿಸಲಾಗಿದೆ. ಅಧಿನಿಯಮದ ಪರಿಷ್ಕರಣದ ಹಂತದಲ್ಲಿದೆ.

ಬೇಲೂರು ಪಟ್ಟಣದಲ್ಲಿ ಕ್ರೀಡಾಂಗಣ

563 (1368): ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೇಲೂರು ಪಟ್ಟದಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ: ?

ಆ. ಈ ಕ್ರೀಡಾಂಗಣಕ್ಕಾಗಿ ಅಂದಾಜು ತಯಾರಿಸಲಾಗಿತ್ತೆ ?

ಇ. ಹಾಗಿದ್ದರೆ ಎಷ್ಟು ಹಣ ನಿಗದಿ ಮಾಡಲಾಗಿತ್ತು ?

ಈ. ಈ ಕ್ರೀಡಾಂಗಣ ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):–

ಅ. ಇದೆ.

ಆ. ಹೌದು.

ಇ. ಅಂದಾಜು ವೆಚ್ಚ ರೂ. 16.91 ಲಕ್ಷ.

ಈ. ಸದರಿ ಕ್ರೀಡಾಂಗಣ ನಿರ್ಮಾಣ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ಈ ಪ್ರಸ್ತಾವನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ ತಕ್ಷಣ ನಿರ್ಮಾಣ ಕೆಲಸವನ್ನು ಪ್ರಾರಂಭಿಸಲಾಗುವುದು.

ನೆಲಮಂಗಲ ತಾಲ್ಲೂಕಿಗೆ ಪಡಿತರ ವಸ್ತುಗಳ ವಿತರಣೆ

564 (1346): ಶ್ರೀ ಅಂಜನಮೂರ್ತಿ (ನೆಲಮಂಗಲ)

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ನೆಲಮಂಗಲ ತಾಲ್ಲೂಕಿಗೆ ಪ್ರತಿ ತಿಂಗಳು ಅಗತ್ಯವಿರುವ ಸಕ್ಕರೆ, ಗೋಧಿ ಪಾಮಾಯಿಲ್, ಸೀಮೆಎಣ್ಣೆ ಇನ್ನೂ ಮುಂತಾದ ಅಗತ್ಯ ಪಡಿತರ ವಸ್ತುಗಳ ಪ್ರಮಾಣವೆಷ್ಟು ?

ಆ. ತಾಲ್ಲೂಕಿನಲ್ಲಿ ಅವಶ್ಯಕತೆ ಇರುವಷ್ಟು ಪಡಿತರ ವಸ್ತುಗಳನ್ನು . ಪ್ರತಿ ತಿಂಗಳು ವಿತರಿಸಲಾಗುತ್ತಿದೆಯೇ ?

ಇ. ಈ ವಿತರಣೆಯಲ್ಲಿ ಪ್ರತಿ ತಿಂಗಳು ಖೋತಾ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ. ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಅಕ್ಕಿ	1403 ಕ್ವಿಂಟಾಲ್
ಗೋಧಿ	1158 ಕ್ವಿಂಟಾಲ್
ಸಕ್ಕರೆ	543 ಕ್ವಿಂಟಾಲ್
ಸೀಮೆಎಣ್ಣೆ	163 ಕೆ.ಎಲ್.
ಪಾಮಾಯಿಲ್	–

ಆ. ಜನವರಿ ಮಾಹೆಯಲ್ಲಿ ವಿತರಣೆಗೆ ಬಿಡುಗಡೆ ಮಾಡಲಾದ ಪಡಿತರ ಪ್ರಮಾಣ ಈ ಕೆಳಗಿನಂತಿದೆ.

ಅಕ್ಕಿ	1169 ಕ್ವಿಂಟಾಲ್
ಗೋಧಿ	807 ಕ್ವಿಂಟಾಲ್
ಸಕ್ಕರೆ	499 ಕ್ವಿಂಟಾಲ್
ಸೀಮೆಎಣ್ಣೆ	108 ಕೆ. ಎಲ್.

ಇ. ಹೌದು. ಈ ವಿತರಣೆಯು ಪ್ರತಿ ತಿಂಗಳು ಕೇಂದ್ರ ಸರ್ಕಾರವು ರಾಜ್ಯಕ್ಕೆ ಹಂಚಿಕೆ ಮಾಡುವ ಪ್ರಮಾಣವನ್ನು ಅವಲಂಬಿಸಿದೆ.

ಈ. ಸಕ್ಕರೆ ಮತ್ತು ಸೀಮೆಎಣ್ಣೆ ಮತ್ತು ಇತರ ಪಡಿತರ ವಸ್ತುಗಳ ಹಂಚಿಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರವನ್ನು ಮೇಲಿಂದ ಮೇಲೆ ಕೋರಲಾಗಿದೆ.

ಚುಂಚಿ ಫಾಲ್ಸ್ ಅಭಿವೃದ್ಧಿ

565 (1283): ಶ್ರೀ ಡಿ. ಕೆ. ಶಿವಕುಮಾರ್ (ಸಾತನೂರು):-

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕನಕಪುರ ತಾಲ್ಲೂಕಿನಲ್ಲಿ ಪ್ರವಾಸೋದ್ಯಮ ಕೇಂದ್ರವೆನಿಸಿದ ಚುಂಚಿ ಫಾಲ್ಸ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ. ಹಾಗಿದ್ದಲ್ಲಿ, ಅದರ ಅಭಿವೃದ್ಧಿಗೆ ಸರ್ಕಾರ ಏನು ಯೋಜನೆ ರೂಪಿಸಿಕೊಂಡಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು)

ಅ. ಹೌದು.

ಆ. ಈ ಸ್ಥಳದ ಅಭಿವೃದ್ಧಿಗೆ ಯೋಜನೆ ರೂಪಿಸಿಕೊಂಡಿಲ್ಲ.

ಹೈಕೋರ್ಟ್ ಪೀಠ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸ್ಥಾಪನೆ.

566 (1309) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಹೈಕೋರ್ಟ್ ಪೀಠವನ್ನು ಸ್ಥಾಪಿಸುವಂತೆ ಕೋರಿ ಯಾವ ಯಾವ ಜಿಲ್ಲೆಗಳಿಂದ ಮನವಿ ಬಂದಿವೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಧಾರವಾಡ, ಗುಲ್ಬರ್ಗಾ, ಬೀದರ್, ಬೆಳಗಾವಿ, ವಿಜಾಪುರ, ದಕ್ಷಿಣ ಕನ್ನಡ, ರಾಯಚೂರು ಜಿಲ್ಲೆಗಳಿಂದ ಹೈಕೋರ್ಟ್ ಪೀಠವನ್ನು ಸ್ಥಾಪಿಸುವಂತೆ ಕೋರಿ ಮನವಿ ಬಂದಿವೆ.

ಶಹಾಪುರದಲ್ಲಿ ರಸ್ತೆ ಸಾರಿಗೆ ಸಂಸ್ಥೆ ಡಿಪೋ.

567 (1329): ಶ್ರೀ ಶಿವಶೇಖರಪ್ಪಗೌಡ ಶಿರವಾಳ, (ಶಹಾಪುರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗ ಜಿಲ್ಲೆಯ ಶಹಾಪುರದಲ್ಲಿನ ಕ. ರಾ. ರ. ಸಾ. ಸಂಸ್ಥೆ ಡಿಪೋದಲ್ಲಿನ ಬಸ್‌ಗಳ ಸಂಖ್ಯೆ : ಎಷ್ಟು:

ಆ. ಈ ಪೈಕಿ ಎಷ್ಟು ಬಸ್‌ಗಳು ಚಾಲ್ತಿಯಲ್ಲಿ ಇರುತ್ತವೆ ?

ಇ. ಡಿಪೋಗೆ ಬರುತ್ತಿರುವ ಪ್ರತಿ ತಿಂಗಳ ಆದಾಯವೆಷ್ಟು ?

ಈ. ಎಷ್ಟು ತಿಂಗಳಿಂದ ನಷ್ಟ ಅನುಭವಿಸುತ್ತಿದೆ ?

ಉ. ಇತ್ತೀಚೆಗೆ ಬಸ್ ದರ ಹೆಚ್ಚಿಸಿದ ನಂತರ ಬರುತ್ತಿರುವ ಆದಾಯವೆಷ್ಟು ?

ಶ್ರೀ ಭೀಮಣ್ಣ ಖಂಡ್ರೆ, (ಸಾರಿಗೆ ಸಚಿವರು):–

ಅ. ದಿನಾಂಕ: 24.2.93ಕ್ಕೆ ಶಹಾಪುರ ಘಟಕದಲ್ಲಿ 76 ಬಸ್‌ಗಳು ಇರುತ್ತವೆ.

ಆ. 70 ಬಸ್‌ಗಳು ಚಾಲ್ತಿಯಲ್ಲಿರುತ್ತವೆ.

ಇ. ಏಪ್ರಿಲ್‌ನಿಂದ ಡಿಸೆಂಬರ್ 92ರವರೆಗಿನ ತಿಂಗಳುವಾರು ಸಾರಿಗೆ ಆದಾಯವು (ಟ್ರಾಫಿಕ್ ರೆವಿನ್ಯು) ಈ ಕೆಳಕಂಡಂತಿವೆ.

ಏಪ್ರಿಲ್	31.74 ಲಕ್ಷ ರೂ.ಗಳು
ಮೇ	31.88 ಲಕ್ಷ ರೂ.ಗಳು
ಜೂನ್	27.78 ಲಕ್ಷ ರೂ.ಗಳು
ಜುಲೈ	29.68 ಲಕ್ಷ ರೂ.ಗಳು

ಆಗಸ್ಟ್	26.34 ಲಕ್ಷ ರೂ.ಗಳು
ಸೆಪ್ಟೆಂಬರ್	24.08 ಲಕ್ಷ ರೂ.ಗಳು
ಅಕ್ಟೋಬರ್	26.77 ಲಕ್ಷ ರೂ.ಗಳು
ನವೆಂಬರ್	27.05 ಲಕ್ಷ ರೂ.ಗಳು
ಡಿಸೆಂಬರ್	24.11 ಲಕ್ಷ ರೂ.ಗಳು

ಈ. ಶಹಾಪುರ ಘಟಕವು ದಿನಾಂಕ: 24.7.88ರಂದು ಪ್ರಾರಂಭವಾಗಿದ್ದು, ಇದುವರೆವಿಗೂ ಲಾಭಗಳಿಸಿರುವುದಿಲ್ಲ.

ಉ. ಇತ್ತೀಚೆಗೆ ಬಸ್ ದರ ಏರಿಸಿದ ನಂತರ ದಿನಾಂಕ: 7.2.93ರಿಂದ ಪ್ರತಿ ದಿನದ ಸರಾಸರಿ ಆದಾಯವು 1.13 ಲಕ್ಷಗಳಾಗಿದ್ದು ದಿನಾಂಕ: 18 2.93ರಿಂದ ಬಸ್ ದರದ ಪುನರ್ ಪರಿಷ್ಕರಣದ ನಂತರ ಪ್ರತಿ ದಿನದ ಸರಾಸರಿ ಆದಾಯವು 1.10 ಲಕ್ಷ ರೂ.ಗಳು ಬರುತ್ತಿದೆ.

ಬಂಟ್ವಾಳ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಾಣದ ಬಗ್ಗೆ.

568 (1120): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಂಟ್ವಾಳ ತಾಲ್ಲೂಕಿನಲ್ಲಿ ಒಂದು ಕ್ರೀಡಾಂಗಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ. ಬಂದಿದ್ದರೆ, ಕ್ರೀಡಾಂಗಣ ನಿರ್ಮಿಸಲು ಬೇಕಾಗುವ ಹಣವೆಷ್ಟು: ನಿರ್ಮಿಸಲು ಇದುವರೆವಿಗೂ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):—

ಅ. ಹೌದು.

ಆ. ಕ್ರೀಡಾಂಗಣ ನಿರ್ಮಾಣಕ್ಕೆ ಅವಶ್ಯವಾದ ನಿವೇಶನವನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

1993-94ನೇ ಸಾಲಿಗೆ ಹೆಂಡದ ಅಂಗಡಿಗಳನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಏಲಂ ಮಾಡುವ ಬಗ್ಗೆ.

569 (1121): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1993-94ನೇ ಸಾಲಿಗೆ ಹೆಂಡದ ಅಂಗಡಿಗಳನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಏಲಂ ಮಾಡುವುದೇ ?

ಆ. ಅಂಗಡಿವಾರು ಏಲಂ ಮಾಡುವುದರಿಂದ ನಿರುದ್ಯೋಗಿ ಯುವಕರಿಗೆ ಅನುಕೂಲವಾಗುವುದಿಲ್ಲವೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):—

ಅ. – ಇಲ್ಲ –

ಆ. ಉದ್ಭವಿಸುವುದಿಲ್ಲ

ಕಡಪಟ್ಟಿ ಹಾಗೂ ಸರೋಜಿನಿ ಮಹಿಷಿ ವರದಿಗಳ ಅನುಷ್ಠಾನ.

570 (1132): ಶ್ರೀ ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೇ ?

ಅ. ಕಡಪಟ್ಟಿ ಹಾಗೂ ಸರೋಜಿನಿ ಮಹಿಷಿ ಸಮಿತಿಗಳ ಶಿಫಾರಸ್ಸುಗಳನ್ನು ಸರ್ಕಾರದವರು ಒಪ್ಪಿರುವುದು ನಿಜವಲ್ಲವೆ ?

ಆ. ಹಾಗಿದ್ದಲ್ಲಿ ಸದರಿ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಲಾಗಿದೆಯೇ ?

ಇ. ಹಾಗಿಲ್ಲದಿದ್ದಲ್ಲಿ ಕಾರ್ಯಗತಗೊಳಿಸುವುದರಲ್ಲಿ ವಿಳಂಬವಾಗಿರುವುದಕ್ಕೆ ಕಾರಣಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲ್ಲಿ (ಮುಖ್ಯ ಮಂತ್ರಿಯವರು):–

ಅ. ಹೌದು.

ಆ. ಹೌದು.

ಇ. ಉದ್ಭವಿಸುವುದಿಲ್ಲ.

ಕನಕಪುರ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆ.

571 (1284): ಶ್ರೀ ಡಿ. ಕೆ. ಶಿವಕುಮಾರ್ (ಸಾತನೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕನಕಪುರ ತಾಲ್ಲೂಕಿನಲ್ಲಿ ಅಗ್ನಿಶಾಮಕ ಠಾಣೆ ಇಲ್ಲದೇ ಜನರಿಗೆ ಉಂಟಾಗಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ. ಹಾಗಿದ್ದಲ್ಲಿ ಕನಕಪುರದಲ್ಲಿ ಯಾವಾಗ ಅಗ್ನಿಶಾಮಕ ಠಾಣೆ ಪ್ರಾರಂಭಮಾಡಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. ಹೌದು.

ಆ. ಆದ್ಯತೆ, ಹಾಗೂ ಸಂಪನ್ಮೂಲಗಳನ್ನು ಆಧರಿಸಿ ಮುಂಬರುವ ವರ್ಷಗಳಲ್ಲಿ ಪರಿಶೀಲಿಸಲಾಗುವುದು.

ಅಪಘಾತಗಳು ಹಾಗೂ ಪರಿಹಾರ.

572 (1207): ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ. 1991–92, 1992–93 ಸಾಲುಗಳಲ್ಲಿ ಆಗಿರುವ ಅಪಘಾತಗಳ ಸಂಖ್ಯೆ ಎಷ್ಟು ?

ಇ. ಈ ಸಂಖ್ಯೆಗಳಲ್ಲಿ ಕೆ. ಎಸ್. ಆರ್. ಟಿ. ಸಿ. ಬಸ್‌ಗಳ ಸಂಖ್ಯೆ ಎಷ್ಟು ?

ಈ. ಈ ಅಪಘಾತಗಳ ಪರಿಹಾರಕ್ಕಾಗಿ ಎಷ್ಟು ಹಣ ಬಿಡುಗಡೆ ಆಗಿದೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಹೌದು.

ಆ.

ವರ್ಷ	ಅಪಘಾತಗಳು
1991–92	22707
1992–93	24167

ಇ. ಕ. ರಾ. ರ. ಸಾ. ಸಂಸ್ಥೆಯ ವಾಹನಗಳ ಅಪಘಾತಗಳ ಪಟ್ಟಿ ಈ ಕೆಳಕಂಡಂತಿದೆ.

ವರ್ಷ	ಅಪಘಾತಗಳ ಸಂಖ್ಯೆ
1991–92	2279
1992–93	2049

(ಏಪ್ರಿಲ್ 92ರಿಂದ ಡಿಸೆಂಬರ್ 92ರವರೆಗೆ)

ಈ. ವರ್ಷಾವಾರು ಪರಿಹಾರ ಧನವನ್ನು ನೀಡಿದ ವಿವರ ಈ ಕೆಳಕಂಡಂತಿದೆ.

ವರ್ಷ	ಪರಿಹಾರ ಧನ
1991-92	ರೂ. 581,05,433.00
1992-93	ರೂ. 352,06,000.00

(ಏಪ್ರಿಲ್ 92ರಿಂದ ಡಿಸೆಂಬರ್ 92ರವರೆಗೆ)

ಕ.ರಾ.ರ.ಸಾ.ಸಂಸ್ಥೆ ಬಸ್‌ಗಳಿಂದ ಆಗುತ್ತಿರುವ ತೀವ್ರ ಅಪಘಾತಗಳು.

574 (1311): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಿಂದ ಆಗುತ್ತಿರುವ ತೀವ್ರ ಅಪಘಾತಗಳು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ. ಬಂದಿದ್ದಲ್ಲಿ, ಅದನ್ನು ತಡೆಗಟ್ಟಲು ಕೈಕೊಂಡ ಕ್ರಮಗಳೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಹೌದು.

ಆ. ಕ.ರಾ.ರ.ಸಾ. ಸಂಸ್ಥೆಯಲ್ಲಿ ಅಪಘಾತಗಳನ್ನು ಕಡಿಮೆ ಮಾಡಿ ಸುಖಕರ ಪ್ರಯಾಣಕ್ಕೆ ಅನುವು ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ. ಎಲ್ಲ ಅಪಘಾತಗಳ ಪ್ರಕರಣಗಳನ್ನು ವಿಸ್ತಾರವಾಗಿ ವಿಭಾಗ ಮಟ್ಟದಲ್ಲಿ ತನಿಖೆ ಮಾಡಲಾಗುತ್ತದೆ

ಮತ್ತು ಹೆಚ್ಚಿನ ವೇಗ ಮತ್ತು ನಿರ್ಲಕ್ಷ್ಯದಿಂದ ವಾಹನವನ್ನು ಓಡಿಸುವ ಚಾಲಕ ಹಾಗೂ ಪಾನಮತ್ತರಾಗಿ ಘಾಡಿದ್ದು ರುಜುವಾತಾಗಿದ್ದಲ್ಲಿ ಅಲ್ಲದೆ ಇದರಿಂದಾಗಿ ಪ್ರಾಣ ಕಳೆದುಕೊಂಡವರು, ಗಾಯಗೊಂಡಿದ್ದು ಕಂಡು ಬಂದಲ್ಲಿ ಅಂತಹ ಚಾಲಕರ ಮೇಲೆ ಕೆಲಸದಿಂದ ತೆಗೆದುಹಾಕುವಂತಹ ತೀವ್ರವಾದ ಶಿಕ್ಷೆಯನ್ನು ವಿಚಾರಣೆಗೆ ಒಳಪಡಿಸಿದ ನಂತರ ಕೈಗೊಳ್ಳಲಾಗುತ್ತಿದೆ.

ಆ. ಇದರ ಜೊತೆಗೆ ಪ್ರಾಣಾಂತಿಕ ಅಪಘಾತಕ್ಕೀಡು ಮಾಡಿದ ಚಾಲಕರನ್ನು ಕೂಡಲೇ ಅಮಾನತ್ತುಗೊಳಿಸಿ ಮುಂದಿನ ಶಿಸ್ತು ಕ್ರಮಗಳನ್ನು ಅನುಸರಿಸಲಾಗುತ್ತಿದೆ.

ಇ. ಹೆಚ್ಚಿನ ಅಪಘಾತಕ್ಕೀಡು ಮಾಡಿದ ಚಾಲಕರನ್ನು ಪೋಲೀಸ್ ಇಲಾಖೆಯಲ್ಲಿ ನೀಡುವ ಚಾಲಕ ತರಬೇತಿ ಶಿಕ್ಷಣ ಕೇಂದ್ರಕ್ಕೆ ಮತ್ತು ಸಂಸ್ಥೆಯ ರಿಫ್ರೆಷರ್ ತರಬೇತಿಗಾಗಿ ಕಳುಹಿಸಲಾಗುತ್ತಿದೆ.

ಈ. ಚಾಲಕರ ನೇಮಕಾತಿಯನ್ನು ಕ್ರಮಬದ್ಧಗೊಳಿಸಲು ಹಾಗೂ ಅನುಭವವುಳ್ಳ ಚಾಲಕರನ್ನು ನೇಮಿಸಲು ಸಂದರ್ಶನದಲ್ಲಿ ಕಠಿಣತಮವಾದ ಪರೀಕ್ಷೆ ನಡೆಸಲಾಗುವುದು.

ಉ. ಚಾಲಕರ ನೇಮಕಾತಿಯ ವಯೋಮಿತಿಯನ್ನು 21ರಿಂದ 24ಕ್ಕೆ ಏರಿಸಲಾಗಿದೆ.

ಊ. ಹೊಸದಾಗಿ ನೇಮಕಾತಿ ಮಾಡಿದ ಚಾಲಕರು ತಮ್ಮ ದೈನಂದಿನ ಕಾರ್ಯ ನಿರ್ವಹಿಸುವ ಮುನ್ನ ಕ್ಷೇಮಕರವಾದ ಚಾಲನೆ ಹಾಗೂ ಶಿಸ್ತುಗಳ ಬಗ್ಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ.

ಋ. ಪ್ರಯಾಣಿಕರ ಸುಖಕರ ಪ್ರಯಾಣಕ್ಕಾಗಿ ಅಪಘಾತ ರಹಿತ ಚಾಲಕರಿಗೆ ಬೆಳ್ಳಿಪದಕ ಮತ್ತು ಮುಖ್ಯಮಂತ್ರಿಯವರ ಚಿನ್ನದ ಪದಕ ಕೊಟ್ಟು ಪ್ರೋತ್ಸಾಹಿಸಲಾಗುತ್ತಿದೆ.

ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳ ನಿರ್ಮಾಣ.

575 (1312): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಕ್ರೀಡಾಂಗಣ ಕಟ್ಟಲು ಸರ್ಕಾರ ನಿರ್ಧರಿಸಿದೆ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):-

ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ಕಟ್ಟಲು ಸರ್ಕಾರ ಯೋಜಿಸಿದೆ.

ರಾಜ್ಯಗಳಲ್ಲಿರುವ ಅಕಾಡೆಮಿಗಳ ಅಭಿವೃದ್ಧಿ

576 (1291): ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿರುವ ಅಕಾಡೆಮಿಗಳ ಅಭಿವೃದ್ಧಿಗಾಗಿ ಹಾಗೂ ಅವು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತೆ ಮಾಡಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಆ. ಕಳೆದ ಸಾಲಿನಲ್ಲಿ ಅಕಾಡೆಮಿಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು ? (ಪ್ರತ್ಯೇಕವಾದ ವಿವರ ನೀಡುವುದು):

ಇ. ಅಕಾಡೆಮಿಗಳಿಗೆ ಸದಸ್ಯರನ್ನು ನೇಮಿಸುವಾಗ ಎಲ್ಲಾ ಜಿಲ್ಲೆಯವರಿಗೂ ಆದ್ಯತೆ ನೀಡಲಾಗಿದೆಯೇ ?

ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):--

ಅ. ಅಕಾಡೆಮಿಗಳನ್ನು ರಚಿಸಿ ಆಯಾಯಾ ಅಕಾಡೆಮಿಗಳಿಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಅನುದಾನವನ್ನು ನೀಡಲಾಗುತ್ತಿದೆ.

ಆ. ಅನುಬಂಧದಲ್ಲಿ ನೀಡಲಾಗಿದೆ.

ಆಯಾಯಾ ಕ್ಷೇತ್ರದಲ್ಲಿ ಹೊಂದಿರುವ ಖ್ಯಾತಿ ಶ್ರೇಷ್ಠತೆಯ ಆಧಾರದ ಮೇಲೆ ಸದಸ್ಯರನ್ನು ನಾಮ ನಿರ್ದೇಶನ ಮಾಡಲಾಗುತ್ತದೆ. ಜಿಲ್ಲೆಗಳ ಆಧಾರದ ಮೇಲಲ್ಲ.

ಅನುಬಂಧ

1991-92 ನೇ ಸಾಲಿನಲ್ಲಿ ಅಕಾಡೆಮಿಗಳಿಗೆ ಬಿಡುಗಡೆ ಮಾಡಿದ ಹಣದ ವಿವರ.

1. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ	ರೂ. 8,24,114.00
2. ಕರ್ನಾಟಕ ಸಾಹಿತ್ಯ ಅಕಾಡೆಮಿ	ರೂ. 8,38,066.00
3. ಕರ್ನಾಟಕ ಲಲಿತಕಲಾ ಅಕಾಡೆಮಿ	ರೂ. 7,96,746.00
4. ಕರ್ನಾಟಕ ನಾಟಕ ಅಕಾಡೆಮಿ	ರೂ. 8,18,522.00
5. ಕರ್ನಾಟಕ ಉರ್ದು ಅಕಾಡೆಮಿ	ರೂ. 8,31,967.00
6. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ	ರೂ. 7,40,000.00

ರಾಜ್ಯ ಹಣಕಾಸು ನಿಗಮಕ್ಕೆ ಸಾಲಕ್ಕಾಗಿ ಬಂದ ಅರ್ಜಿಗಳ ಸಂಖ್ಯೆ

577 (1232) ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕಳೆದ ಸಾಲಿನಲ್ಲಿ ಸಾಲ ಕೋರಿ ಕೆ. ಎಸ್. ಎಫ್. ಸಿ. ಗೆ ಎಷ್ಟು ಅರ್ಜಿಗಳು ಬಂದಿವೆ ? (ಜಿಲ್ಲಾವಾರು ಮಾಹಿತಿ ನೀಡುವುದು):

ಆ. ಕಳೆದ ಸಾಲಿನಲ್ಲಿ ಎಷ್ಟು ಜನರಿಗೆ ಎಷ್ಟು ಹಣ ಸಾಲ ನೀಡಲಾಗಿದೆ ಮತ್ತು ಅವುಗಳಲ್ಲಿ ಬಾಕಿ ಉಳಿದಿರುವ ಅರ್ಜಿಗಳೆಷ್ಟು ?

ಇ. ಸಾಲ ನೀಡುವಲ್ಲಿ ಅನಗತ್ಯವಾಗಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ತಪ್ಪಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ. ಕಳೆದ ಸಾಲಿನಲ್ಲಿ ಅಂದರೆ 1991-92ನೇ ಆರ್ಥಿಕ ವರ್ಷದಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಸಾಲ ಕೋರಿ 11,182ಅರ್ಜಿಗಳು ಬಂದಿವೆ. ಜಿಲ್ಲಾವಾರು ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಕೊಟ್ಟಿದೆ.

ಆ. ಕಳೆದ ಸಾಲಿನಲ್ಲಿ (1991-92) 10,611 ಜನರಿಗೆ 332.88 ಕೋಟಿ ರೂಗಳನ್ನು ಮಂಜೂರು ಮಾಡಿದೆ. ಅವುಗಳಲ್ಲಿ 303 ಅರ್ಜಿಗಳು ತಿರಸ್ಕೃತವಾಗಿವೆ. ಮತ್ತು 570 ಅರ್ಜಿಗಳು ಆ ವರ್ಷದ ಕೊನೆಯಲ್ಲಿ ಬಾಕಿ ಉಳಿದುವು 1992-93ರಲ್ಲಿ ಅವು ವಿಲೇವಾರಿಯಾಗಿದೆ.

ಇ. ಇಲ್ಲ. ಈ ರೀತಿಯ ದೃಷ್ಟಾಂತಗಳಿದ್ದಲ್ಲಿ ತ್ವರಿತ ಗತಿಯಲ್ಲಿ ವಿಲೇವಾರಿ ಮಾಡುವಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ಸೂಚನೆ ನೀಡಾಲಗುವುದು.

ಅನುಬಂಧ
ಜಿಲ್ಲಾವಾರು ಸ್ವೀಕೃತವಾದ ಅರ್ಜಿಗಳು

ಕ್ರ. ಸಂ.	ಜಿಲ್ಲೆ	ಸ್ವೀಕೃತ ಅರ್ಜಿಗಳ ಸಂಖ್ಯೆ	ಮೊತ್ತ (ಕೋಟಿ ರೂ.ಗಳಲ್ಲಿ)
1.	ಬೆಂಗಳೂರು	2337	147.01
2.	ಬೆಳಗಾಂ	787	18.77
3.	ಬಳ್ಳಾರಿ	469	15.31
4.	ಬೀದರ್	266	11.80
5.	ಬಿಜಾಪುರ	847	14.71
6.	ಚಿಕ್ಕಮಗಳೂರು	239	8.00
7.	ಚಿತ್ರದುರ್ಗ	489	18.30
8.	ದಕ್ಷಿಣ ಕನ್ನಡ	682	21.37
9.	ಧಾರವಾಡ	790	22.78
10.	ಗುಲ್ಬರ್ಗ	365	14.31
11.	ಹಾಸನ	379	8.47
12.	ಕೊಡಗು	132	2.20
13.	ಕೋಲಾರ	352	18.02
14.	ಮಂಡ್ಯ	280	6.76
15.	ಮೈಸೂರು	1137	23.62
16.	ರಾಯಚೂರು	240	9.85
17.	ಶಿವಮೊಗ್ಗ	600	9.73
18.	ತುಮಕೂರು	601	16.00
19.	ಉತ್ತರ ಕನ್ನಡ	190	5.47
	ಒಟ್ಟು	11182	387.55

ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ನ್ಯಾಯಬೆಲೆ ಅಂಗಡಿಗಳು ವಿತರಿಸಿದ ಆಹಾರ ಪದಾರ್ಥಗಳ ಪ್ರಮಾಣ

578 (1350): ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) -

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಎಲ್ಲಾ ನ್ಯಾಯಬೆಲೆ ಅಂಗಡಿಯವರು ಏಪ್ರಿಲ್ 1992ರಿಂದ 30.1.93ರ ವರೆಗೆ ಎಷ್ಟು ಆಹಾರ ಪದಾರ್ಥಗಳನ್ನು ಪಡೆದು ವಿತರಣೆ ಮಾಡಿದ್ದಾರೆ:

ಆ. ಆಹಾರ ಪದಾರ್ಥಗಳನ್ನು ಪಡೆಯದೆ ವಿತರಣೆ ಮಾಡದೆ ಇರುವ ನ್ಯಾಯಬೆಲೆ ಅಂಗಡಿಗಳೆಷ್ಟು:

ಇ. ಆಹಾರ ಪದಾರ್ಥಗಳನ್ನು ಪಡೆಯದೆ ಇರುವ ನ್ಯಾಯಬೆಲೆ ಅಂಗಡಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):-

ಅ.	ಅಕ್ಕಿ	32,622 ಕ್ವಿಂಟಾಲ್
	ಗೋಧಿ	9,145 ಕ್ವಿಂಟಾಲ್
	ಸಕ್ಕರೆ	5,870 ಕ್ವಿಂಟಾಲ್

ಆ. 8

ಇ. ಸದರಿ 8ನ್ಯಾಯಬೆಲೆ ಅಂಗಡಿಗಳಲ್ಲಿ, ಒಂದನ್ನು ರದ್ದುಪಡಿಸಿದೆ. 4ನ್ಯಾಯಬೆಲೆ ಅಂಗಡಿಗಳನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಮತ್ತು 3 ಅಂಗಡಿಗಳಿಗೆ ಕಾರಣ ಕೇಳುವ ನೋಟೀಸನ್ನು ನೀಡಲಾಗಿದೆ.

ಹೆಚ್.ಕೆ.ಡಿ.ಬಿ.ಯಿಂದ ತೆಗೆದುಕೊಂಡ ರಸ್ತೆ ಕಾಮಗಾರಿಗಳ ವಿವರ

580 (1355): ಶ್ರೀ ಎಂ. ಬಿ. ದಿವಟರ್ (ಕೊಪ್ಪಳ)

ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ರಾಯಚೂರು ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ಮತ್ತು ಕೆ. ಸಿ. ಸಿ.ಯಿಂದ ತೆಗೆದುಕೊಂಡ ರಸ್ತೆ ದುರಸ್ತಿ ಕಾಮಗಾರಿಗಳ ವಿವರಗಳನ್ನು ಕೊಡುವುದು ?

ಶ್ರೀ ರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):-

1. ವಾರಂಪಲ್ಲಿ - ರಾಯಚೂರು ರಸ್ತೆ ದುರಸ್ತಿ
2. ಶ್ರೀರಂಗಪಟ್ಟಣ - ಬೀದರ್ ರಸ್ತೆ 365 ರಿಂದ 475 ಕಿ.ಮೀ.ಗಳು
3. ಲಿಂಗಸುಗೂರು - ಕುಡವಣಿ ರಸ್ತೆ
4. ಸಿಂಧನೂರು - ನರಗುಂದ ರಸ್ತೆ
5. ರಾಯಚೂರು - ಮಾನ್ವಿ ರಸ್ತೆ
6. ರಾಯಚೂರು - ಲಿಂಗಸುಗೂರು ರಸ್ತೆ

7. ರಾಯಚೂರು ನಗರ ಸಭೆ ಪರಿಮಿತಿಯಲ್ಲಿ ಬರುವ ಪಿ.ಡಬ್ಲ್ಯೂ.ಡಿ. ರಸ್ತೆ
8. ಸಿರ್ಸಿ ರಸ್ತೆಯಿಂದ ಐ.ಬಿ.ರಸ್ತೆ (ಎಂಡಿಆರ್)
9. ರಾಯಚೂರು – ಬುರಡೀಪಾದ ರಸ್ತೆ
10. ಯಲಬುರ್ಗ – ಕೊಪ್ಪಳ ರಸ್ತೆ
11. ಕುಷ್ಟಗಿ – ಕೊಪ್ಪಳ ರಸ್ತೆ
12. ಸಿಂಧನೂರು – ಸಿಂಗಾಪುರ ರಸ್ತೆ
13. ಕವಿತಾಳದಿಂದ ಮಾಸ್ಕಿ

ಮೈಸೂರು ನಗರದಲ್ಲಿ ಹೊಸ ಪ್ರಾರಂಭಿಸಿದ ಪೋಲೀಸ್ ಠಾಣೆಗಳ ಸಂಖ್ಯೆ.

581 (1349): ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರು ನಗರದಲ್ಲಿ ಹೊಸದಾಗಿ ಪೋಲೀಸ್ ಠಾಣೆಗಳನ್ನು ಯಾವಾಗ ತೆರೆಯಲಾಗುತ್ತದೆ ? ಅವುಗಳ ಸಂಖ್ಯೆ ಎಷ್ಟು ?

ಆ. ಮೈಸೂರು ನಗರದಲ್ಲಿ ಪೊಲೀಸ್ ಸಿಬ್ಬಂದಿ ಹೆಚ್ಚಳಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ. 1992–93ನೇ ಸಾಲಿಗಾಗಿ ಮೈಸೂರು ನಗರದಲ್ಲಿನ (1) ಉದಯಗಿರಿ (2) ಕುವೆಂಪು ನಗರಗಳಲ್ಲಿ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಿದೆ.

ಆ. ಮೈಸೂರು ನಗರದ ಕಡಿಮೆ ಸಿಬ್ಬಂದಿಯಿರುವ ಕೆಲವು ಪೊಲೀಸ್ ಠಾಣೆಗಳಿಗೆ ಈಗಾಗಲೇ ವಿವಿಧ ವೃಂದದ 276 ಸಿಬ್ಬಂದಿಯನ್ನು ಹೆಚ್ಚಿಸಲು ಮಂಜೂರಾತಿ ನೀಡಿದೆ. ಇನ್ನುಳಿದ ಕಡಿಮೆ ಸಿಬ್ಬಂದಿಯಿರುವ ಠಾಣೆಗಳಿಗೆ ಸಿಬ್ಬಂದಿಯನ್ನು ಹೆಚ್ಚಿಸುವ ಬಗ್ಗೆ ಅಗತ್ಯತೆ, ಆದ್ಯತೆಯನ್ನು ಅನುಸರಿಸಿ ಪರಿಶೀಲಿಸಲಾಗುವುದು.

ಮಲೆನಾಡು ಅಭಿವೃದ್ಧಿ ಮಂಡಲಿಯವರ ಕೆಲಸ ಆರಂಭಿಸುವ ಬಗ್ಗೆ.

582 (957): ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು)

ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೇನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಲೆನಾಡು ಅಭಿವೃದ್ಧಿ ಮಂಡಳಿ ಅಸ್ತಿತ್ವಕ್ಕೆ ಬಂದದ್ದು ಯಾವಾಗ ?

ಆ. 1992-93ನೇ ಸಾಲಿನಲ್ಲಿ ನಿಗದಿಪಡಿಸಿದ್ದ ಹಣವೆಷ್ಟು ?

ಇ. ಇದುವರೆಗೆ ಹಣ ಬಿಡುಗಡೆ ಮಾಡಲಾಗಿದೆಯೇ ಹಾಗಿದ್ದಲ್ಲಿ ಯಾವ ಜಿಲ್ಲೆಗೆ ಯಾವ ಯಾವ ಕೆಲಸಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ?

ಈ. ಬಿಡುಗಡೆಯಾಗದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ಎನ್. ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):–

ಅ. ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ.

ಆ. 35.00 ಕೋಟಿ ರೂ.ಗಳು.

ಇ. ಇಲ್ಲ.

ಈ. ಮಲೆನಾಡು ಅಭಿವೃದ್ಧಿ ಮಂಡಳಿ ರಚನೆಯಾಗದೆ ಇರುವುದರಿಂದ.

ಸಚಿವಾಲಯದ ಇಲಾಖಾ ಉಪಹಾರ ಮಂದಿರದಲ್ಲಿ ನೌಕರರ ಬೇಡಿಕೆ

583 (1331): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕ ಸರ್ಕಾರ ಸಚಿವಾಲಯ ಇಲಾಖಾ ಉಪಾಹಾರ ಮಂದಿರದಲ್ಲಿ ಕೆಲಸ ಮಾಡುವ ನೌಕರರ ಒಟ್ಟು ಸಂಖ್ಯೆ:

ಆ. ಇದರಲ್ಲಿ ಕಳೆದ ಐದು ವರ್ಷಗಳಿಂದ ಕೆಲಸ ಮಾಡುತ್ತಿರುವ ನೌಕರರ ಸಂಖ್ಯೆ ಎಷ್ಟು ?

ಇ. ಈ ನೌಕರರು ಸಚಿವಾಲಯದ ನಾಲ್ಕನೇ ದರ್ಜೆ ನೌಕರರ ಸಮಾನ ವೇತನವನ್ನು ಪಡೆಯುತ್ತಿರುವರೇ ?

ಈ. ಈ ನೌಕರರು ಇತರ 4ನೇ ದರ್ಜೆ ನೌಕರರ ಹಾಗೂ ದಿನವೇತನ ಪಡೇಯುತ್ತಿರುವ ನೌಕರರ ಸಮಾನ ಅವರ ಸೇವೆಯನ್ನು ಕ್ರಮಬದ್ಧಗೊಳಿಸಲು ಒತ್ತಾಯಿಸುತ್ತಿರುವುದು ನಿಜವೇ ?

ಉ. ಸರ್ಕಾರ ಈ ನೌಕರರ ಸೇವೆಯನ್ನು ಸಚಿವಾಲಯದ 4ನೇ ದರ್ಜೆ ನೌಕರರನ್ನಾಗಿ ಪರಿಗಣಿಸಲು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. 66 (ಅರವತ್ತಾರು)

ಆ. 60 (ಅರವತ್ತು)

ಇ. ಈ ನೌಕರರು ಸರ್ಕಾರಿ ನೌಕರರಲ್ಲ. ಇವರನ್ನು ಕರ್ನಾಟಕ ಸರ್ಕಾರ ಸಚಿವಾಲಯದ ಇಲಾಖಾ ಉಪಾಹಾರ ಮಂದಿರದ ಸಮಿತಿಯವರು ನೇಮಿಸಿದ್ದಾರೆ. ಕನಿಷ್ಠ ವೇತನ ಕಾಯ್ದೆಯನ್ನು ಗಮನದಲ್ಲಿ ಇಟ್ಟುಕೊಂಡು ಇವರ ವೇತನವನ್ನು ನಿಗದಿಪಡಿಸಲಾಗಿದೆ.

ಈ. ನೌಕರರು ತಮ್ಮನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ತಮಗೆ ಸರ್ಕಾರಿ ನೌಕರರಿಗೆ ಕೊಡುತ್ತಿರುವ ವೇತನ ಶ್ರೇಣಿಯನ್ನು ಕೊಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುವರು.

ಉ. ಈ ವಿಷಯದಲ್ಲಿ ಕಾನೂನು ಹಾಗೂ ಆರ್ಥಿಕ ಸಮಸ್ಯೆಗಳಿದ್ದು ಇದನ್ನು ಸಮಗ್ರವಾಗಿ ಪರಿಶೀಲಿಸಬೇಕಾಗಿದೆ. ಹಾಗೂ ರಾಜ್ಯಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿರುವ ಇಂತಹದೇ ಸಂಸ್ಥೆಗಳಿಂದ ಬರಲಿರುವ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಒಂದು ನಿರ್ಣಯವನ್ನು ಕೈಗೊಳ್ಳಬೇಕಾಗಿದೆ. ಹೀಗಿದ್ದೂ ಈ ವಿಷಯವನ್ನು ಗಂಭೀರವಾಗಿ ಪರಿಶೀಲಿಸಲಾಗುತ್ತಿದೆ.

ಚಿಕ್ಕಮಗಳೂರು ಜಿಲ್ಲೆಯ ಮುತ್ತೋಡಿ ಅರಣ್ಯದಲ್ಲಿ ರೆಸಾರ್ಟ್ಸ್ ಮತ್ತು ಕಾಟೇಜ್‌ಗಳ ನಿರ್ಮಾಣ.

584 (1334): ಶ್ರೀ ಜಿ. ಪುಟ್ಟಸ್ವಾಮಿಗೌಡ. (ಹೊಳೆನರಸೀಪುರ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಚಿಕ್ಕಮಗಳೂರು ಜಿಲ್ಲೆಯ ಮುತ್ತೋಡಿ ಅರಣ್ಯದಲ್ಲಿ ರೆಸಾರ್ಟ್ಸ್ ಮತ್ತು ಕಾಟೇಜ್‌ಗಳನ್ನು ನಿರ್ಮಿಸಲು ಸರ್ಕಾರವು ಕೇಂದ್ರ ಸರ್ಕಾರಕ್ಕೆ ಯಾವುದಾದರೂ ಪ್ರಸ್ತಾವನೆಯನ್ನು ಕಳುಹಿಸಿದೆಯೆ ?

ಆ. ಹಾಗಿದ್ದಲ್ಲಿ, ಆ ಯೋಜನೆಯ ಅಂದಾಜು ವೆಚ್ಚ;

ಇ. ಕೇಂದ್ರದಿಂದ ಅನುಮೋದನೆ ಪಡೆಯಲು ಈಗಾಗಲೇ ತೆಗೆದುಕೊಂಡ ಕ್ರಮ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೌದು.

ಆ. ರೂ. 1.00 ಕೋಟಿ.

ಇ. ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯಕ್ಕೆ ಈಕ್ವಿಟಿ ಯೋಜನೆಯಡಿಯಲ್ಲಿ ಆರ್ಥಿಕ ನೆರವನ್ನು ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಗಾಲಿಗಳ ಮೇಲೆ ಅರಮನೆಯ ಯೋಜನೆ ಜಾರಿಗೆ ತರುವ ಬಗ್ಗೆ.

585 (1333): ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗಾಲಿಗಳ ಮೇಲೆ ಅರಮನೆಯ ಯೋಜನೆ ಜಾರಿಗೆ ತರುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರವು ಸಲ್ಲಿಸಿದೆಯೇ ?

ಆ. ಹಾಗಿದ್ದಲ್ಲಿ, ಸರ್ಕಾರವು ಪ್ರಸ್ತಾಪಿಸಿರುವ ಮಾರ್ಗ ಯಾವುದು;

ಇ. ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರವು ಅನುಮೋದಿಸಿದೆಯೇ;

ಈ. ಈ ರೈಲು ಎಂದಿನಿಂದ ಜಾರಿಗೆ ಬರುವುದು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೌದು.

ಆ. ಬೆಂಗಳೂರು–ಮೈಸೂರು–ಹಾಸನ (ಹಳೇಬೀಡು–ಬೇಲೂರು)– ಹೊಸಪೇಟೆ (ಹಂಪಿ–ಬಾದಾಮಿ–ಐಹೊಳೆ–ಪಟ್ಟದಕಲ್ಲು)– ಬೆಂಗಳೂರು.

ಇ. ಇಲ್ಲ.

ಈ. ಭಾರತ ಸರ್ಕಾರ ಅನುಮೋದಿಸಿದ ನಂತರ.

ಡಾ. ಸರೋಜಿನಿ ಮಹಿಷಿ ಸಮಿತಿ ವರದಿಯ ಕಾರ್ಯಗತ

586 (1332): ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೇ ?

ಅ. ಡಾ. ಸರೋಜಿನಿ ಮಹಿಷಿ ಸಮಿತಿಯು ಕನ್ನಡಿಗರಿಗೆ ಉದ್ಯೋಗಾವಕಾಶವನ್ನು ಮೀಸಲಿಡುವಂತೆ ಮಾಡಿದ ಶಿಫಾರಸ್ಸನ್ನು ಸರ್ಕಾರವು ಒಪ್ಪಿ ಕಾರ್ಯಗತಗೊಳಿಸಿದೆಯೇ ?

ಆ. ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಇ.ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮಗಳು ಮತ್ತು ಇತರ ಖಾಸಗಿ ಉದ್ಯಮಗಳಲ್ಲಿ ಕನ್ನಡಿಗರಿಗೆ ಆದ್ಯತೆಯ ಮೇರೆಗೆ ಕೆಲಸಗಳನ್ನು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ. ಹಾಗಿದ್ದಲ್ಲಿ, ಸರ್ಕಾರವು ಕೈಗಾರಿಕೆಗಳನ್ನು ನಡೆಸಲು ವಿದ್ಯುತ್ ಶಕ್ತಿ ಮತ್ತು ನೀರು ಸರಬರಾಜು ವ್ಯವಸ್ಥೆ ಒದಗಿಸುವ ಸಂದರ್ಭದಲ್ಲಿ ಕನ್ನಡಿಗರನ್ನು ನೇಮಕ ಮಾಡಿಕೊಳ್ಳಬೇಕೆಂಬ ಷರತ್ತುಗಳನ್ನು ಹಾಕಲಾಗುವುದೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ. ಹೌದು

ಆ. ಡಾ. ಸರೋಜಿನಿ ಮಹಿಷಿ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿದ್ದ ವರದಿಗಳಲ್ಲಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಸರ್ಕಾರವು ಕೆಲವು ಮಾರ್ಪಾಡುಗಳೊಂದಿಗೆ ಆದೇಶ ಸಂಖ್ಯೆ: ಸಿಆಸುಇ 9 ಎಸ್‌ಎಲ್‌ಸಿ 90, ದಿನಾಂಕ 23.11.90ರಲ್ಲಿ ಅಂಗೀಕರಿಸಿ ಹೊರಡಿಸಿದೆ. ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಾರ್ವಜನಿಕ ಉದ್ಯಮಗಳು ಈ ಬಗ್ಗೆ ಆದೇಶಗಳನ್ನು ಹೊರಡಿಸಿದೆ. ಮತ್ತು ಅದರ ಅನುಸರಣಾ ಕ್ರಮಗಳನ್ನು ಮುಂದುವರಿಸಲಾಗುತ್ತಿದೆ. ಇದಲ್ಲದೆ ಈ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಲು ಕಾರ್ಯವಿಧಾನ ರೂಪಿಸುವ ಕಾರ್ಯವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಎಪಿಎಆರ್ 183 ಕೆಓಎಲ್ 92, ದಿನಾಂಕ 11.11.92 ರಂದು ವಹಿಸಿಕೊಡಲಾಗಿದೆ.

ಇ. ಸರ್ಕಾರದಲ್ಲಿ ಲಭ್ಯವಿರುವ ಮಾಹಿತಿಗಳ ಪ್ರಕಾರ ಇಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೂ ಡಾ. ಸರೋಜಿನಿ ಮಹಿಷಿ ಸಮಿತಿ ಶಿಫಾರಸ್ಸುಗಳ ಮೇಲೆ ರಾಜ್ಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಉದ್ಯಮಗಳನ್ನು ಸ್ಥಾಪಿಸುವ ಸಮಯದಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಆದ್ಯತೆ ನೀಡುವ ಷರತ್ತುಗೊಳಪಟ್ಟ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯು ಈಗಾಗಲೆ ಈ ಬಗ್ಗೆ ಸೂಕ್ತ ಸೂಚನೆಗಳನ್ನು ಸುತ್ತೋಲೆ ಸಂಖ್ಯೆ: ಸಿಐ 45ಐಎಪಿ 90,ದಿನಾಂಕ 18.1.91ರಲ್ಲಿ ಹೊರಡಿಸಿದೆ.

ಕನ್ನಡ ಬೆಳವಣಿಗಾಗಿ ಕೈಗೊಂಡಿರುವ ಕ್ರಮಗಳು

588 (1313): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕನ್ನಡ ಬೆಳವಣಿಗೆಗಾಗಿ ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):–

ಅ. ಕನ್ನಡ ಪುಸ್ತಕ ಪ್ರಕರಟಣೆ, ಸಂಘ ಸಂಸ್ಥೆಗಳಿಗೆ ಧನಸಹಾಯ, ಸಾಹಿತಿ ಮತ್ತು ಕಲಾವಿದರಿಗೆ ಪ್ರೋತ್ಸಾಹ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾಯೋಜಿಸುವ ಮೂಲಕ ಕನ್ನಡ ಬೆಳವಣಿಗೆ ಕೈಗೊಳ್ಳಲಾಗಿದೆ.

ಹಣಕಾಸು ಸಂಸ್ಥೆಯವರು ಮಾರಾಟ ಮಾಡಿದ ಕೈಗಾರಿಕೆಗಳ ಸಂಖ್ಯೆ.

589 (1174): ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1.1.92ರಿಂದ 1.1.93ರವರೆವಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯವರು ಮಾರಾಟ ಮಾಡಿರುವ ಕೈಗಾರಿಕೆಗಳೆಷ್ಟು ? (ಕೈಗಾರಿಕೆಗಳ ಮತ್ತು ಪಡೆದವರ ವಿಳಾಸದ ವಿವರ ನೀಡುವುದು)

ಆ. ಈ ಅವಧಿಯಲ್ಲಿ ಬಹಳ ಕಡಿಮೆ ಕೈಗಾರಿಕೆಗಳನ್ನು ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. 1.1.92ರಿಂದ 1.1.93ರ ವರೆಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಮಾರಾಟ ಮಾಡಿದ ಕೈಗಾರಿಕ ಘಟಕಗಳು 243. ಮಾರಾಟದ ಕೈಗಾರಿಕೆಗಳು ಮತ್ತು ಪಡೆದವರ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ಇಲ್ಲ.

ತುಮಕೂರು ಶಾಖಾ ಕಛೇರಿ

ಕ್ರ. ಸಂ.	ಮಾರಾಟವಾದ ಘಟಕದ ಹೆಸರು	ಖರೀದಿಸಿರುವವರ ಹೆಸರು ಮತ್ತು ವಿಳಾಸ
1	2	3
1.	ರಾಂಪ್ರಸಾದ್ ಇಂಡಸ್ಟ್ರೀಸ್ ತುಮಕೂರು	ಶ್ರೀ ಮೊಹಿದ್ದೀನ್ ಸಾಬ್, ಆಂಸಿಲ್ ಐರನ್ ಮರ್ಚೆಂಟ್, ಸಂತೇಪೇಟೆ, ತುಮಕೂರು
2.	ಶ್ರೀನಿವಾಸ ಬೇಕರಿ, ತುಮಕೂರು	ಶ್ರೀ ಅಮೀರ್ಸಾಬ್ ಅಲಿಯಾಸ್ ಸಾಬಾಜಾನ್ ಸಾಬ್ ಮಿಡಿಗೇಶಿ, ಮಧುಗಿರಿ ತಾ
3.	ಶ್ರೀ ಎಸ್. ವಿ. ನಾಗರಾಜು, ಶಿರಾ	ಶ್ರೀ ಅಮೀರ್ ಸಾಬ್ ಅಲಿಯಾಸ್ ಸಾಬಾಜಾನ್ ಸಾಬ್ ಮಿಡಿಗೇಶಿ, ಮಧುಗಿರಿ ತಾ..
4.	ಬ್ರೈಟ್ ಟೈಲರ್ಸ್, ತುಮಕೂರು	ಶ್ರೀ ಮುಸ್ತಾಕ್ ಅಹಮದ್, ವಿನೋಬನಗರ, ತುಮಕೂರು
5.	ಡಿ. ವಿ. ಜಿ. ಬನಿಯನ್ಸ್, ತಿಪಟೂರು	ಶ್ರೀ ಇನಾಯತುಲ್ಲಾಖಾನ್, ಹಳೇ ಐರನ್ ಮರ್ಚೆಂಟ್, ಸಂತೇಪೇಟೆ, ತುಮಕೂರು
6.	ಶಿವರಂಜಿನಿ ಪೆಪ್ಪರ್‌ಮೆಂಟ್ಸ್, ತಿಪಟೂರು	ಶ್ರೀ ವಿರೂಪಾಕ್ಷ, ಹರೀಶ್ ಇಂಡಸ್ಟ್ರೀಸ್, ಬಿ.ಜಿ. ಪಾಳ್ಯ, ರೋಡ್, ತುಮಕೂರು
7.	ರಾಘವೇಂದ್ರ ಹೋಂ ಇಂಡಸ್ಟ್ರೀಸ್	ಶ್ರೀ ಮೊಹಿದಿನ್, ಹಳೇ ಐರನ್ ಮರ್ಚೆಂಟ್ಸ್, ಸಂತೇಪೇಟೆ, ತುಮಕೂರು
8.	ವಿಜಯ ಇಂಡಸ್ಟ್ರೀಸ್, ತುಮಕೂರು	ಶ್ರೀ ಮೆಹಬೂಬ್ ಪಾಶಾ ಬಿ.ಕೆ. ಪರಫ್ಯೂಮರಿ ಇಂಡಸ್ಟ್ರೀಸ್, ಬಾರ್‌ಲೇನ್ ಮುಖ್ಯರಸ್ತೆ, ತುಮಕೂರು
9	ಸೋಮೇಶ್ವರ ಎಂಟರ್‌ಪ್ರೈಸಸ್, ತುಮಕೂರು	ಶ್ರೀ ಜಿ.ಎನ್. ಬಸವರಾಜು, ಶ್ರೀ ಗುರು ಸ್ಟೋರ್ಸ್, ಸುಭಾಷನಗರ, ಗುಬ್ಬಿ.
10.	ಶಾಹನ್ ಎಂಟರ್‌ಪ್ರೈಸಸ್	ಶ್ರೀ ಬಾದಷಾ, ಹಳೇ ಐರನ್ ಮರ್ಚೆಂಟ್, ಸಂತೇಪೇಟೆ, ತುಮಕೂರು

ಬೆಂಗಳೂರು (ಗ್ರಾಮಾಂತರ) ಶಾಖಾ ಕಛೇರಿ

1.	ಮೆಸರ್ಸ್ ಕಾವೇರಿ ರಬ್ಬರ್ ಪ್ರಾಡಕ್ಟ್	ಶ್ರೀ ಪಿ. ಕೆ. ಎಸ್. ಭಟ್, ಮೆ: ಸಂಪಜೆ ರಬ್ಬರ್ ಇಂಡಸ್ಟ್ರೀಸ್ ಸುಭದ್ರ ಟವರ್ಸ್, ದರ್ಬೆ ಪುತ್ತೂರ್, ಡಿ.ಕೆ.
2.	ಮೆ: ಎಲೆಕ್ಟ್ರೋಮೆಕ್ ಎಂಜಿನಿಯರ್ಸ್	ಸ್ವಾಮಿನಾಥನ್ ಮೆಡಿಕಲ್ ಕನ್ಸೆಪ್ಟ್,

		ಬೆಂಗಳೂರು (ಪ್ರೈ) ಲಿ, 1986, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 10
3.	ಮೆ: ಮಂಜುನಾಥ ಎಂಟರ್‌ಪ್ರೈಸಸ್	ಕೆ. ಸುಂದರಂ, ಸುಂದರ್ ಕೆಮಿಕಲ್ಸ್ ಇಂಡಸ್ಟ್ರೀಸ್, ನಂ. 18–ಸಿ, ಶ್ರೀ ಬಾಲಾಜಿ ಕಾಂಪ್ಲೇಕ್ಸ್ ಸುಲ್ತಾನಪೇಟೆ, ಬೆಂಗಳೂರು–53.
4.	ಮೆ: ಉದಯ ಫೈಬರ್ ಇಂಡಸ್ಟ್ರೀಸ್	ಜಿ. ಬೈರಪ್ಪ, ಶಾಯಮಂಗಲಹಳ್ಳಿ ಬಿಡದಿ ಹೋಬಳಿ, ರಾಮನಗರಂ ತಾ.
5.	ಮೆ: ಪವನ್ ಇಂಡಸ್ಟ್ರೀಸ್	ಮೇ: ಸೌಥರನ್ ಫೋಟ್ರೋಗ್ರಾಫಿಸ್, ನಂ. 2366:2451 ಸುಂಕದಕಟ್ಟೆ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು – 91

ಬೆಂಗಳೂರು (ಪೀಣ್ಯ) ಶಾಖಾ ಕಛೇರಿ

1.	ಮೆ: ನಿಮು	ಶ್ರೀಮತಿ. ಶೋಭ ನಾಯಕ್, ನಂ. 5:11, 1ನೇ ಮೈನ್, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 10
2.	ಮೆ: ರವಿರೋಟೋ ಪಾಕ್	ಮೆ: ಸುಬ್ಬಯ್ಯ ಅಸೋಸಿಯೇಟ್ಸ್, ಯಲಹಂಕ ಇಂಡಸ್ಟ್ರೀಸ್, ಎಸ್ಟೇಟ್, ಯಲಹಂಕ, ಬೆಂಗಳೂರು – 64
3.	ಮೆ: ತ್ರಿವೇಣಿ ಹೈಡ್ರೋಲಿಕ್ಸ್	ಮೆ: ಬಸವೇಶ್ವರ ಪ್ರಿಸಿಜನ ಇಂಡಸ್ಟ್ರೀಸ್, ನಂ. ಸಿ–89, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್, 3ನೇ ಸ್ಟೇಜ್, ಪೀಣ್ಯ, ಬೆಂಗಳೂರು–58
4.	ಮೆ: ಅನ್ವರ್ ಸಿಲ್ಕ್ ಟ್ವಿಸ್ಟಿಂಗ್	ಮೆ: ಶ್ರೀ ವಹಿದ್ ಆಗ್, ಮೆ: ಪೀಣ್ಯ ಫೈನ್ ಕಾಂಪೋನೆಂಟ್ಸ್ (ಪ್ರೈವೇಟ್) ಲಿ, 112:2 ದೊಡ್ಡಣ್ಣ ಇಂಡಸ್ಟ್ರಿಯಲ್ ಎಸ್ಟೇಟ್, ಪೀಣ್ಯ 2ನೇ ಸ್ಟೇಜ್, ಬೆಂಗಳೂರು – 58.
5.	ಮೆ: ಸೂಪರ್ ಗೆಲಾಕ್ಸಿ ಡ್ರಗ್ಸ್	ಶ್ರೀ ಮುಕುಂದ್, ಮೆ: ನೆಟ್ ಕಾನ್ ನ್ಯಾಚುರಲ್ ಕಾನ್‌ಸೆಂಟ್ರೇಟ್ಸ್, ನಂ 490 (ಲಿ), 4ನೇ ಫೇಸ್, 4ಐಎ, ಬೆಂಗಳೂರು – 58
6.	ಮೆ: ನರಸಿಂಹ ಇಂಜಿನಿಯರ್ ವರ್ಕ್ಸ್	ಮೆ: ಸ್ಟೀಲ್ ಪ್ರೋಸಸ್ ನಂ 1540, 10ನೇ ಮೇನ್, ಹೆಚ್.ಎ.ಎಲ್, 3ನೇ ಸ್ಟೇಜ್, ಬೆಂಗಳೂರು – 39
7.	ಮೆ: ಅಯ್ಯಂಗಾರ್ ಬೇಕರಿ	ಮೆ: ಎಂ. ವಿ. ಸಾರಂಗ ಪಾಣಿ, ವಿದ್ಯಾರಣ್ಯಪುರ, ಬೆಂಗಳೂರು

8.	ಮೆ: ದೇವೇಂದ್ರ ಗಮ್ ಟೇಪ್	ಮೆ: ಹನುಮಾನ್ ರೀವಿಂಗ್ ಫ್ಯಾಕ್ಟರಿ, ಟ್ಯಾಂಕ್ ಬಂಡ್ ರೋಡ್, ಬೆಂಗಳೂರು-53.
9.	ಮೆ: ಇಂಡಿಯನ್ ಕಾಪರ್ ವೈರ್, ಇಂಡಸ್ಟ್ರೀಸ್	ಮೆ: ಸುರೇಂದ್ರ, ಇಂಜನಿಯರಿಂಗ್ ವರ್ಕ್ಸ್, ಸಿ-139, ಪಿಐಇ 2ನೇ ಸ್ಟೇಜ್, ಬೆಂಗಳೂರು - 58
10.	ಮೆ: ಚಂದ್ ಸಿಲ್ಕ್ ಎಂಪೋರಿಯಂ	ಮೆ: ಎವರ್ ಗ್ರೀನ್, ನಂ. 117:2, 2ನೇ ಸ್ಟೇಜ್, ಪೀಣ್ಯ, ಬೆಂಗಳೂರು - 58.
11.	ಮೆ : ಸೌದ್ ಇಂಜಿನಿಯರಿಂಗ್ ವರ್ಕ್ಸ್	ಮೆ : ಡಿಸೈನ್ ಕನ್‌ಸಲ್ಟೆಂಟ್ ಮತ್ತು ಕಂಪನಿ ಏಜನ್ಸಿ, ನಂ. 676, ಕಸ್ತೂರಿ ಕಾಂಪ್ಲೆಕ್ಸ್, ಮಿಷನ್ ರೋಡ್. ಬೆಂಗಳೂರು - 27
12.	ಮೆ: ಜೆ.ಎಂ.ಎಸ್. ಇಂಜನಿಯರಿಂಗ್ ವರ್ಕ್ಸ್	ಮೆ: ಶ್ರೀ ಶಿವರಾಮ್‌ಚೊಕ್ಕಸಂದ್ರ ಬಿ. ದಾಸರಹಳ್ಳಿ, ಬೆಂಗಳೂರು

ಕೋಲಾರ ಶಾಖಾ ಕಚೇರಿ

1.	ಮಾರುತಿ ಮಿನರಲ್ಸ್ (ಪ್ರೈ) ಲಿ	ಸಸದರ್ ಎಂಟರ್‌ಪ್ರೈಸಸ್, ಮಿಜಿವಾಲ್ ಮೊಹ್ಲಲಾ, ಮುಳಬಾಗಲ್
2.	ಮಾರುತಿ ಅಲ್ಯುಮಿನಿಯಂ ಇಂಡಸ್ಟ್ರೀಸ್	ಶ್ರೀಮತಿ ಆರ್.ಕೆ. ಚಂದ್ರಕಲಾ, ಬೆಂಗಳೂರು.
3.	ಲತಾ ಮಸಾಲ ಇಂಡಸ್ಟ್ರೀಸ್	ಬಿ. ನಾರಾಯಣಸ್ವಾಮಿ, ಕೋಲಾರ, ಬಂಗಾರಪೇಟೆ, ಕೋಲಾರ
4.	ಕಲ್ಕಿ ಎಂಟರ್‌ಪ್ರೈಸಸ್	ಶಿಬೆತುಲ್ಲಾ ಷರೀಫ್, ಸಂತೆ ಗೇಟ್, ಕೋಲಾರ
5.	ಬಾಬ ಇಂಡಸ್ಟ್ರೀಸ್	ಶ್ರೀಮತಿ ಸಹನಾ ಬೇಗಂ, ಎಸ್‌ಎಲ್‌ಎನ್ ಟಾಕೀಸ್ ಬಳಿ, ಚಿಂತಾಮಣಿ ಟೌನ್ ಜಿ. ಶ್ರೀನಿವಾಸಪ್ಪ ಇಲೊವಹಳಗಳ್ಳಿ, ವಿಲೇಜ್, ಬಂಗಾರಪೇಟೆ, ತಾ.
6.	ರಾಮಕೃಷ್ಣ ಬ್ರಿಕ್ಸ್ ಅಂಡ್ ಬ್ರೈಲ್ಸ್ ಫ್ಯಾಕ್ಟರಿ	ವಾಸುರಾಯಪ್ಪ, ಲಡುಪಳ್ಳಿ, ತಂಮಕ್ ಪೋ, ಕೋಲಾರ
7.	ಸರ್ತರಿ ಹೋಟೆಲ್	ಎಸ್. ಶ್ರೀಸಿವಾಸ, ವೆಂಕಟೇಶ್ವರ ಟಾಕೀಸ್, ಶಿಡ್ಲಘಟ್ಟ

ಚಿಕ್ಕಬಳ್ಳಾಪುರ ಶಾಖಾ ಕಛೇರಿ

1.	ಶ್ರೀನಿವಾಸ	ಹೆಚ್. ಕೆ. ಶ್ರೀನಿವಾಸ, ಮ: ಕೆ. ವಿ. ಲಕ್ಷ್ಮಿ ಸಿಲ್ಕ್ ಟೆಕ್ಸ್‌ಟೈಲ್ಸ್, ಬಿ. ಆರ್. ರೋಡ್, ಚಿಕ್ಕಬಳ್ಳಾಪುರ.

ಮೈಸೂರು ಶಾಖಾ ಕಛೇರಿ

1.	ವಿನಾಯಕ ಪ್ಲಾಸ್ಟಿಕ್ ಇಂಡಸ್ಟ್ರೀಸ್ ಮೈಸೂರು	ಶ್ರೀ ಶಂಕರಯ್ಯ, ಕೆ. ಟಿ. ಸ್ಟ್ರೀಟ್, ಮೈಸೂರು
2.	ಭಾವಸಾರ ರೆಡಿಮೇಡ್ ಗಾರ್ಮೆಂಟ್ಸ್. ಮೈಸೂರು	ಶ್ರೀ ಆರ್. ಶೇಖರ್ ಮೆ: ರಾಘವೇಂದ್ರ ಹಾರ್ಡ್‌ವೇರ್, ಗಾಂಧಿ ಸ್ಕ್ವೇರ್, ಮೈಸೂರು.
3.	ಚನ್ನಕೇಶವ ಫರ್ನಿಚರ್, ಪಿರಿಯಾಪಟ್ಟಣ	ಶ್ರೀ ಕೃಷ್ಣಗೌಡ, ಶೆಟ್ಟಹಳ್ಳಿ, ಪೆರಿಯಾಪಟ್ಟಣ ತಾ.
4.	ವಿಜಯ ಫುಡ್ ಸ್ಪೆಷಾಲಿಟೀಸ್, ಮೈಸೂರು	ವಿಜಯ ವೈರ್ ಮತ್ತು ಫಿಲಮೆಂಟ್ಸ್, ಹೆಬ್ಬಾಳ, ಮೈಸೂರು
5.	ಸನ್ ಬೀಮ್ ಇಂಡಸ್ಟ್ರೀಸ್, ಮೈಸೂರು	ನಾಗ್ ಮತ್ತು ನಾಗ್ ಎಂಟರ್‌ಪ್ರೈಸಸ್, ಬನ್ನೇರ್‌ಘಟ್ಟ, ಬೆಂಗಳೂರು.
6.	ಚಂಕ್ರ ಎಂಟರ್‌ಪ್ರೈಸಸ್,	ಶ್ರೀ ಪಿ. ವಿ. ಸುರೇಶ್, ಬನಶಂಕರಿ 5ನೇ ಹಂತ, ಬೆಂಗಳೂರು.
7.	ಕಾಂಚನಾಗಂಗಾ ಕೆಮಿಕಲ್ಸ್, ಮೈಸೂರು	ಶ್ರೀ ಕೆ. ನಾಗರಾಜು, ಯಾದವಗಿರಿ, ಮೈಸೂರು
8.	ಸಪ್ತಗಿರಿ ಮ್ಯಾಚ್ ಇಂಡಸ್ಟ್ರೀಸ್, ಮೈಸೂರು	ಶ್ರೀ ಮನುಕೇಯ, ಕೇರಳ
9.	ಶ್ರೀ ಶಿವಾನಂದ ಶೆಟ್ಟಿ, ಪಿರಿಯಪಟ್ಟಣ	ಶ್ರೀ ಸಯುದ್ ನಿಜಾಮುದ್ದಿನ್, ಮಂಡಿಮೊಹಲ್ಲ, ಮೈಸೂರು
10.	ಸನ್‌ರೈಸ್ ಪ್ಲಾಸ್ಟಿಕ್, ಮೈಸೂರು	ಸ್ಪೆಕ್ಟ್ರೋ ಪಾಲಿಮರ್ಸ್ ಬೆಂಗಳೂರು ಮೊಸ್ ಫರ್ನಿಚರ್ ವರ್ಕ್ಸ್, ಮೈಸೂರು
11.	ಡೈನಾಮಿಕ್ಸ್ ಟೂಲ್ಸ್ ಮತ್ತು ಕಾಂಪೋನೇಟ್ಸ್, ಮೈಸೂರು	ಶ್ರೀ ಜಾವೇದ್ ಮೇಟಗಳ್ಳಿ, ಮೈಸೂರು (ಶೆಡ್ ನಂ. 50)
12.	ಕರ್ನಾಟಕ ಇಂಜನಿಯರಿಂಗ್ ವರ್ಕ್ಸ್, ಮೈಸೂರು	ಶ್ರೀ ಅಕ್ರಮ್ ಖಾನ್ ಬೇಲಿಯಾ ಹಳ್ಳಿ, ಕೆ. ಆರ್. ನಗರ.
13.	ಜಯಶ್ರೀ ಇಂಡಸ್ಟ್ರೀಸ್, ಯಾದವಗಿರಿ, ಮೈಸೂರು	ಕೆನರಾ ಪ್ಯಾಕೇಜಿಂಗ್ ಇಂಡಸ್ಟ್ರೀಸ್, ಹೆಬ್ಬಾಳ, ಮೈಸೂರು

14.	ಪ್ಯೂ ಪ್ರೊನ್, ಹುಣಸೂರು ರಸ್ತೆ, ಮೈಸೂರು	ಶ್ರೀ ಎ. ತನವೀರ್ ಶೇಕ್, ಉದಯಗಿರಿ, ಮೈಸೂರು
15.	ಸೂರ್ಯ ಇಂಜಿನಿಯರಿಂಗ್ ವರ್ಕ್ಸ್, ಮೈಸೂರು	ಸೌರಭ ಎಂಟರ್‌ಪ್ರೈಸಸ್ ಯಾದವಗಿರಿ, ಮೈಸೂರು
16.	ನಂಜುಂಡೇಶ್ವರ ಬೈಂಡಿಂಗ್ ವರ್ಕ್ಸ್, ಮೈಸೂರು,	ಶಕ್ತಿ ಎಂಟರ್‌ಪ್ರೈಸಸ್ ಅಶೋಕ ರಸ್ತೆ, ಪೂರ್ವ ಮೈಸೂರು
17.	ಕರ್ನಾಟಕ ಕ್ರಾಫ್ಟ್ ಕ್ರಿಯೇಶನ್ಸ್, ಮೈಸೂರು	ನಾರಾಯಣ ಎಂಜಿನಿಯರಿಂಗ್ ವರ್ಕ್ಸ್, ಯಾದವಗಿರಿ, ಮೈಸೂರು

ಶಿವಮೊಗ್ಗ ಶಾಖಾ ಕಛೇರಿ

1.	ಸ್ಟಾರ್ ಇಂಡಸ್ಟ್ರಿಯಲ್ ವರ್ಕ್ಸ್, ಶಿವಮೊಗ್ಗ	ರಿಯಾಜ್ ಪಾಶಾ, ಶೇಷಾದ್ರಿಪುರಂ ಶಿವಮೊಗ್ಗ
2.	ಮಂಜುನಾಥ್ ಫ್ಲೋರ್ ಮಿಲ್ ಬಿಲಕಿ, ಭದ್ರಾವತಿ ತಾ.	ಶ್ರೀ ಹನುಮಂತಪ್ಪ, ಕುಂಬಾಲೂರು, ಹೊನ್ನಾಳಿ ತಾಲ್ಲೂಕು
3.	ಟಾಟಾ ಹವಾಯಿ ಚಪ್ಪಲ್ಸ್, ಭದ್ರಾವತಿ	ಶ್ರೀ ಅಕ್ತರ್ ಜಾಲ್, 12ನೇ ಕ್ರಾಸ್, ಬಿ. ಹೆಚ್. ರಸ್ತೆ, ಭದ್ರಾವತಿ
4.	ಕಾಳಿಕಾಂಬ ಇಂಜನಿಯರಿಂಗ್ ವರ್ಕ್ಸ್, ಭದ್ರಾವತಿ	ಶ್ರೀಮತಿ ಮಂಗಳಗೌರಿ, 24, ಉಪ್ಪಾರವೀದಿ, ಹಳೇಪಟ್ಟಣ, ಭದ್ರಾವತಿ
5.	ಶ್ರೀ ಎಸ್. ವೈ. ನಾಗರಾಜರಾವ್, ಭದ್ರಾವತಿ	ಕೆ. ಎಸ್. ಎಫ್. ಸಿ. ಶಿವಮೊಗ್ಗ.

ಮಂಡ್ಯ ಶಾಖಾ ಕಛೇರಿ

1.	ಎಸ್. ಆರ್. ಇಂಜನಿಯರಿಂಗ್, ಎಂ. ಸಿ. ರಸ್ತೆ, ಮಂಡ್ಯ, ಪ್ರೊ. ಕೆ. ಎಸ್. ರವಿಶಂಕರ್	1. ಆಶಿ ಕ್ರಾಫಟ್ಸ್ ಪ್ರೈ.ಲಿ. 41 ೧ನೇ ಮುಖ್ಯ ರಸ್ತೆ ರಾಜಾಜಿನಗರ ಇಂಡಸ್ಟ್ರಿಯಲ್ ಟೌನ್, ಬೆಂಗಳೂರು. 2. ಶಿವ ಪ್ರಸಾದ್ ಇಂಡಸ್ಟ್ರಿಯಲ್ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ, ಬೆಂಗಳೂರು ರಸ್ತೆ, ನಾಗಮಂಗಲ ಪ್ರೊ। ಟಿ. ಎಂ. ಪ್ರಸಾದ್
2.	ಶ್ರೀ ಕೆ. ಆರ್. ಶ್ರೀನಿವಾಸ ಮೂರ್ತಿ, ನಂ. 2085:1, 3ನೇ ಡಿವಿಜನ್, ಕೆ ಇ ಎಸ್. ಕಾಲೋನಿ, ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣ ಎದುರು, ಮಂಡ್ಯ	ಶ್ರೀ ಜಿ. ಕೆ. ಅನಂತರಾಜು, ಮೊ: ಎಸ್‌ಎಲ್‌ಎನ್. ರೈಸ್ ಮಿಲ್, ಎನ್. ಎಂ. ರಸ್ತೆ, ಪಾಂಡವಪುರ

3.	ಕುಶಾಲ್ ಇಂಡಸ್ಟ್ರೀಸ್, ಪ್ರೊ. ಶ್ರೀ. ಚನ್ನಯ್ಯ, 419, ಶಿವಳ್ಳಿ, ಮಂಡ್ಯ ತಾ.	ಶ್ರೀ ಸಿ.ಆರ್. ಆನಂದ್, 8:2 6ನೇ ಮುಖ್ಯ ರಸ್ತೆ, ಶ್ರೀ ಲಕ್ಷ್ಮಿ ನರಸಿಂಹ ಪೂರ್ವ ದೇವಸ್ಥಾನದ ರಸ್ತೆ, ವಿನಾಯಕ ನಗರ, ಮೈಸೂರು
4.	ಮಣಿಕಂಠ ಇಂಜಿನಿಯರಿಂಗ್ ವರ್ಕ್ಸ್, ಪ್ರೊ.ಶ್ರೀ ರಾಮಯ್ಯ ಟಿ. ಆರ್. ಎಕ್ಸ್‌ಟೆನ್‌ಷನ್, ನಾಗಮಂಗಲ	1. ಶ್ರೀ ಎಂ. ವಿ. ಗೋಪಿ. ಸನ್ ಆಫ್. ಕೆ. ಜಿ ವೆಂಕಟೇಗೌಡ, ನಂ. 2786 4ನೇ ಕ್ರಾಸ್, ಗಾಂಧಿನಗರ, ಮಂಡ್ಯ 2. ಶ್ರೀ ಅಫತಬ್ ಅಹಮದ್, ಮೆ: ಸ್ಟಾರ್ ಟೈರ್ ವರ್ಕ್ಸ್, ಹೊಸಹಳ್ಳಿ ಸರ್ಕಲ್, ಮಂಡ್ಯ
5.	ಹೀನಾ ಎಂಟರ್‌ಪ್ರೈಸಸ್ ಪ್ರೊ ಶ್ರೀ ಅಬ್ದುಲ್ ಶಕೂರ್ ಇಂಡಸ್ಟ್ರೀಯಲ್, ಎಸ್ಟೇಟ್ ಗಂಜಾಂ,ಮಂಡ್ಯ . ಶ್ರೀರಂಗಪಟ್ಟಣ ತಾ.	ಸಿದ್ದೇಶ್ವರ ಇಂಡಸ್ಟ್ರೀಸ್, ಪ್ರೊ: ಸಿ. ಚೌಡಯ್ಯ ಅಸೆಸ್‌ಮೆಂಟ್ ನಂ. 120, ಶಿಂತಾಗೆರೆ, ಚಿತ್ತ ಅರಿಶಿನಕೆರೆ, ಹೋಬಳಿ, ಮದ್ದೂರು ತಾ.
6.	ಲಕ್ಷ್ಮಿ ಗ್ರೇನ್ ಥ್ರೆಷಿಂಗ್ ಘಟಕ, ಪ್ರೊ: ವೈ. ಎಸ್. ಸುಬ್ಬಯ್ಯ ಸಿ.ಎ. ಕೊಪ್ಪಲು, ಕ್ಯಾತನಹಳ್ಳಿ, ಪೋ, ಚಿನಕುರುಳಿ ಹೋಬಳಿ, ಪಾಂಡವಪುರ ತಾ. ಮಂಡ್ಯ ಜಿ.	ಶ್ರೀ ಟಿ. ಎಂ. ಪ್ರಕಾಶ್, ಕಾರ್ ಸ್ಟ್ರೀಟ್, ಗಂಜಾಂ, ಶ್ರೀ ರಂಗಪಟ್ಟಣ ತಾ.

ಚಿಕ್ಕಮಗಳೂರು ಶಾಖಾ ಕಛೇರಿ

1.	ಮೆ: ವಿನಾಯಕ ಲಾಡ್ಜ್, ಶೃಂಗೇರಿ	ದೇವೇಂದ್ರ ಹೆಗ್ಡೆ ಕುಲ್ಕರ್ಣಿ, ಶೃಂಗೇರಿ ತಾಲ್ಲೂಕು
2.	ಹೋಟೆಲ್ ವುಡ್‌ಸೈಡ್, ಚಿಕ್ಕಮಗಳೂರು	ಗಣೇಶ್ ಅಂಡ್ ಕಂಪನಿ, ಎಂ. ಜಿ.ರೋಡ್, ಚಿಕ್ಕಮಗಳೂರು
3.	ವೈಷ್ಣವಿ ಅಗರ್‌ಬತ್ತಿ, ಚಿಕ್ಕಮಗಳೂರು	ಎಸ್. ಶ್ರೀಧರ್, ಚಿಕ್ಕಮಗಳೂರು
4.	ಸಿಟಿ ಎಲೆಕ್ಟ್ರಾನಿಕ್ಸ್, ಚಿಕ್ಕಮಗಳೂರು	ಸಿ. ಟಿ. ರಮೇಶ್, ಚಿಕ್ಕಮಗಳೂರು
5.	ಅಲಂಕಾರ ಎಂಜಿನಿಯರಿಂಗ್ ವರ್ಕ್ಸ್, .ಕೊಪ್ಪಳ ತಾ.	ಆರ್. ಎ. ಪರಾಗ್‌ಕಳಸ, ಮುಡಿಗೆರೆ ತಾಲ್ಲೂಕು
6.	ಪರ್‌ಫೆಕ್ಟ್ ಇಂಡಸ್ಟ್ರೀಸ್, ಚಿಕ್ಕಮಗಳೂರು	ಪಿ. ಅಜೀಜ್ ಖಾನ್, ರಾಮನಹಳ್ಳಿ, ಚಿಕ್ಕಮಗಳೂರು
7.	ಸಂತೋಷ್ ಸೆಂಟೆಡ್ ಸುಪಾರಿ	ರಾಜ್‌ಕುಮಾರ, ವಲ್ಲರಿ, ಚಿಕ್ಕಮಗಳೂರು ತಾ.
8.	ಎಸ್.ಆರ್.ಎಸ್. ಫ್ಲೋರ್‌ಮಿಲ್	ಎಂ. ಪಿ. ದಿನೇಶ್, ತರೀಕೆರೆ

9.	ನೇತ್ರಾವತಿ ಮೊಸಾಯಿಕ್ ಟೈಲ್ಸ್	ಭರತರಾಜ್ ಅರಸ್, ಕಾರ್ತಿಕೆರೆ ವಿಲೇಜ್, ಚಿಕ್ಕಮಗಳೂರು
10.	ನ್ಯಾಷನಲ್ ಇಲೆಕ್ಟ್ರಿಕಲ್ ಇಂಡಸ್ಟ್ರೀಸ್	ನಸೀರ್ ಹಳ್ಳಿ. ಐ. ಜಿ. ರೋಡ್, ಚಿಕ್ಕಮಗಳೂರು

ಮಂಗಳೂರು ಶಾಖಾ ಕಛೇರಿ

1.	ಮೆ: ಕುಮಾರ್ ಕನ್‌ಪೆಕ್ಷನರೀಸ್ ಸುಳ್ಯಾ	ಶ್ರೀ ರಾಘವೇಂದ್ರ, ಫೈರ್ ಡೀಲ್ಸ್, ಪುತ್ತೂರು
2.	ಮೆ: ರೋಹಿಣಿ ಆರ್ಟ್ಸ್, ಮಂಗಳೂರು	ಮೆ: ಕಿರಣ ಅಸೋಸಿಯೇಟ್ಸ್, ಜಿ. ಎಂ. ರೋಡ್, ಬಂದರ್, ಮಂಗಳೂರು.
3.	ಮೆ: ಸ್ವಪ್ನ ಗಾರ್ಮೆಂಟ್ಸ್, ಪುತ್ತೂರು	ಶೋಭಾ, ಪೆರ್ನೆ, ಉಪ್ಪಿನಂಗಡಿ, ಪುತ್ತೂರು ತಾ.
4.	ಮೆ: ಪ್ರಶಾಂತ್ ಬೇಕರಿ, ಮುಲ್ಕಿ	ವಿ. ಪ್ರಸನ್ನ, ಪ್ರಸನ್ನ ಬೇಕರಿ, ಜೆಪ್ಪಿನಮೊಗರು, ಮಂಗಳೂರು.
5.	ಮೆ: ಫಾರ್ಮ್ ಇಂಪ್ಲಿಮೆಂಟ್ಸ್, ಮಂಗಳೂರು	ಮೇ: ಕಿರಣ್ ಅಸೋಸಿಯೇಟ್ಸ್, ಜಿ. ಎಂ. ರೋಡ್, ಬೀದರ್

ಹಾಸನ ಶಾಖಾ ಕಛೇರಿ

1.	ಮದನ್ ಕಾಫಿ ವರ್ಕ್ಸ್, ಅರ್ಸಿಕೆರೆ	ಚಂದ್ರಶೇಖರ್, ಮುಖ್ಯ ರಸ್ತೆ, ಕಲ್ಲಿಪೇಟೆ, ಕೂರ್ಗ್ ಡಿಸ್ಟ್ರಿಕ್ಟ್
2.	ಮೋಹನ್ ವುಡ್ ವರ್ಕ್ಸ್, ಅಮೃತೂರ್	ಕೆ. ಹೆಚ್. ವಸಂತಕುಮಾರ್, ರಾಘವೇಂದ್ರನಗರ, ಸಕ್ಲೇಶಪುರ

ಮಡಿಕೇರಿ ಶಾಖಾ ಕಛೇರಿ

1.	ಮೆ: ಹನ್ಸ್ ಗಾರ್ಮೆಂಟ್ಸ್, ಮಡಿಕೇರಿ	ಆರ್. ಎನ್. ಗುಪ್ತ ವಿ.ಎನ್. ವೆಂಕಟೇಶ್, ಬಾಬು ಫರನಿಚರ್ ಮಾರ್ಟ್, ಬಸ್ ಸ್ಟ್ಯಾಂಡ್, ಮಡಿಕೇರಿ ಬಿ.ಡಿ. ಮುತ್ತಣ್ಣ ರಾಯ್ ನಂಜುಂಡ ಲಕ್ಷ್ಮಣರಾಯ್ ಎಂ.ಒ. ಬಶೀರ್ ಬಿ.ಬಿ. ಮಂಜಪ್ಪ ಗೌಸಿಯ ಖಾನ್ ಲಿಂಗಪ್ಪ ಜಿ. ಬಾಲು, ಬಾಬು

2.	ಮೆ: ನೈಜಲ್ ಗಾರ್ಮೆಂಟ್ಸ್, ವೀರಾಜಪೇಟೆ	ಮೊಹಮ್ಮದ್, ಮಂಜುನಾಥ್, ಬಾಲ, ಬಾಬ, ಗೌಳಿ ಸ್ಟ್ರೀಟ್, ಮಡಿಕೇರಿ, ಎಂ. ಎಂ. ಮೊಹ್ಮದ್ ಅಲಿ
3.	ಮೆ: ಶಕ್ತಿ ಮೆಲೋಡೀಸ್, ಗೋಣಿಕೊಪ್ಪ	ಎಲ್. ಪಿ. ಜಯರಾಂ, ಗಣಪತಿ ಸ್ಟ್ರೀಟ್, ಮಡಿಕೇರಿ
4.	ಮೆ: ಶ್ರೀದೇವಿ, ಕೋಲ್ಡ್ ಸ್ಟೋರೇಜ್, ಮಡಿಕೇರಿ	ಎಂ. ಗಣೇಶ್, ವಿ.ಎನ್. ವೆಂಕಟೇಶ್, ಬಾಬು ಫರ್ನಿಚರ್ ಮಾರ್ಟ್ ಬಸ್ ಸ್ಟ್ಯಾಂಡ್, ಮಡಿಕೇರಿ ಎಂ.ಡಿ. ಸುಧಾಕರ್, ಬಾಲಕೃಷ್ಣ, ಮೊಹ್ಮದ್
	ಮೆ: ಶ್ರೀದೇವಿ ಕೋಲ್ಡ್ ಸ್ಟೋರೇಜ್, ಮಡಿಕೇರಿ	ಎಂ. ಡಿ. ಕಾವೇರಪ್ಪ
5.	ಮೆ: ಲಿಂಡೋ ಲಿಮಿಟೆಡ್ ಗಾರ್ಮೆಂಟ್ಸ್, ಚೆಟ್ಟಳ್ಳಿ	ಬಿ. ಆರ್. ವಸಂತಕುಮಾರ್, ಜಿ. ಎಲ್. ಜಂಟ್ರು, ಗೌಸಿಯ ಖಾನ್, ಅಬ್ದುಲ್ ಕರೀಂ, ವೆಂಕಟೇಶ್ ಬಾಬು ಫರ್ನಿಚರ್ ಮಾರ್ಟ್, ಬಸ್ ಸ್ಟ್ಯಾಂಡ್, ಮಡಿಕೇರಿ.
6.	ಪ್ರಿನ್ಸ್ ರಬ್ಬರ್ ಇಂಡಸ್ಟ್ರಿ, ಮಡಿಕೇರಿ	ಶ್ರೀಮತಿ ಫಮಿದ್ ಅಕ್ತರ್, ಪ್ರೊ: ಯೂನಿವರ್ಸಲ್ ಫುಟ್‌ವೇರ್, ಕೂಡ್ಲಿಪೇಟೆ, ಸೋಮವಾರಪೇಟೆ.
7.	ಮೆ: ಫಮೀದ ಕೋಲ್ಡ್ ಸ್ಟೋರೇಜ್ ಕೆಲಂಬೇಸ್	ಮಾ: ಅನುಪಮ ಕಾಫಿ ವರ್ಕ್ಸ್, ಬಸ್ ಸ್ಟ್ಯಾಂಡ್, ವೀರಾಜಪೇಟೆ ತಾ. ಮಡಿಕೇರಿ ಜಿಲ್ಲೆ.
8.	ಮೆ: ಮಮತ ಕೋಲ್ಡ್ ಸ್ಟೋರೇಜ್, ಕುಶಾಲ್‌ನಗರ	1ಈ, ಮುತ್ತಣ್ಣ, ಪ್ರೊ:ತೂರ್ಕ ಚಿಕ್ಕನ್ ಸೆಂಟರ್
9.	ಮೆ: ಮಮತ ಕೋಲ್ಡ್ ಸ್ಟೋರೇಜ್, ವೀರಾಜ್ ಪೇಟೆ	ಶ್ರೀಮತಿ ಕೆ ಕೆ. ಪಾರ್ವತಿ, ನಿಯರ್ ಕ್ಲಾಕ್ ಟವರ್, ವೀರಾಜಪೇಟೆ, ಮಡಿಕೇರಿ.
10.	ಮೆ: ಮಹಾವೀರ ಡಸ್ಟಿನರ್, ವೀರಾಜಪೇಟೆ	ಶ್ರೀ ಡಿ.ಬಿ. ವೇಣುಗೋಪಾಲ; ಬಿ.ಎಂ. ರೋಡ್, ಕುಶಾಲನಗರ, ತಾ. ಮಡಿಕೇರಿ ಡಿಸ್ಟ್ರಿಕ್ಟ್

ಉಡುಪಿ ಶಾಖಾ ಕಛೇರಿ

1.	ಕ್ರಿಷ್ಣ ಕಾಫಿ ವರ್ಕ್ಸ್, ಕುಂದಾಪುರ	ಮೆ: ಸತೀಶ್, ಪ್ರೊ: ಪ್ರಮೀಳ ಕಾಫಿ ವರ್ಕ್ಸ್, ನವುಂದಾ, ಕುಂದಾಪುರ ತಾ.

ಹುಬ್ಬಳ್ಳಿ ಶಾಖಾ ಕಛೇರಿ

1.	ರೇಣುಕಾ ಫ್ಲೋವಾ ಮಿಲ್	ಕೈ.ಡಿ. ಹಲ್ಲಂಗರ್, ಸದಾಶಿವಗಡ, ಕಾರವಾರ
2.	ಯೂನಿಕ್ಯೂ ರಿಪ್ರೆಷಮೆಂಟ್ಸ್	ಸಿ.ಆರ್. ಬಾವಿಕಟ್ಟಿ, ಗಮನಹಟ್ಟಿ ಪೋಸ್ಟ್
3.	ಗಣೇಶ ಬೇಕರಿ	ಯು.ಪಿ. ರಂಗರಾಜ್, ಮೆ: ಐಯ್ಯಂಗಾರ್ ಬೇಕರಿ, ಕೇಶಪ್ಪುರ, ಹುಬ್ಬಳ್ಳಿ
4.	ವೀರಭದ್ರೇಶ್ವರ ಫುಡಸ್ ವರ್ಕ್ಸ	ಗ್ಲೋಬಲ್ 7ಡ್ ಪ್ರಾಡಕ್ಟ್, ತರಿಹಾಲ್ ಇಂಡಸ್ಟ್ರಿಯಲ್ ಏರಿಯಾ, ಹುಬ್ಬಳ್ಳಿ ತಾ.
5.	ಕುಮಾರ್ ಫ್ಯಾಬ್ರಿಕೇಟರ್ಸ್,	ಆರ್. ವೈ.ಕಂಬ್ಳಿ, ಕೆ. ಆರ್. ಕೆನರಾ ಆಟೋ ಸರ್ವಿಸ್, ಪಿ. ಬಿ. ರೋಡ್, ಶಿವಪ್ಪುರ ಕಾಲೋನಿ, ಧಾರವಾಡ
6.	ಆರ್. ಎ. ಬಂಗಳೂರಿ	ಹೆಚ್. ಎ. ಗಾರವಾಡ್ ಸುಭಾಷ್ ನಗರ, ಹಳೇ ಹುಬ್ಬಳ್ಳಿ
7.	ಹಿಮಾಲಯ ಐಸ್ ಅಂಡ್ ಕೋಲ್ಡ್ ಸ್ಟೋರೇಜ್	ಅಶೋಕ ಎನ್. ಕೋಡೆ ಮಹಾವೀರ ಓಣಿ, ಕಲ್ಲಮ್ಮ ಬಡು, ಹುಬ್ಳಿ.
8.	ಪ್ರಕಾಶ್ ಆಯಿಲ್ ಮಿಲ್ಸ್	ವಿ.ಎಸ್. ಅಕ್ಕಿ ಮ್ಯೆನ್ ಬಜಾರ್, ಶಿರಹಟ್ಟಿ
9.	ನರಗುಂದ ಡ್ರಮ್ಸ್ ಅಂಡ್ ಬ್ಯಾರಲ್ಸ್	ವಾ. ರೇಡಿಯೇಟರ್ಸ್ ಅಂಡ್ ಕೂಲಿಂಗ್ ಸಿಸ್ಟಮ್ಸ್, (ಪ್ರೈ) ಲಿ, 719, 4ನೇ ಮುಖ್ಯ ಎಚ್. ಎ. ಎಲ್. 3ನೇ ಸ್ಟೇಜ್, ಬೆಂಗಳೂರು.
10.	ಶ್ರೀ ಕೃಷ್ಣ ಪ್ಲಾಸ್ಟಿಕ್ಸ್	ಶ್ರೀಮತಿ ಆದಿತ್ಯ ಕೃಷ್ಣ ಭಟ್ ಕೇ:ಅಫ್:ಮೆ:ಸ್ಪೆಷಾಲಿಟಿ ಫುಡ್ಸ್, ತರಿಹಾಲ್ ಇಂಡಸ್ಟ್ರೀಯಲ್ ಏರಿಯಾ, ಹುಬ್ಬಳ್ಳಿ
11.	ಇಸ್ಲಾಮಿಯಾ ಹೋಂ ಆಯಿಲ್ ಇಂಡಸ್ಟ್ರೀಸ್	ಶ್ರೀ ರಫೀಖಿಕ್ಯೂ ವಾಚ್ ಮೇಕರ್, ಹಳೇ ಹುಬ್ಬಳ್ಳಿ

ಚಿತ್ರದುರ್ಗ ಶಾಖಾ ಕಛೇರಿ

1.	ಶಿವಶಕ್ತಿ ಪವರ್ ಲೂಮ	ಪಿ. ಎನ್. ಬಸವರಾಜಪ್ಪ ಬಿನ್ ಶಂಕರಪ್ಪ, ಕಾರ್ ಸ್ಟ್ರೀಟ್, ನಾಯಕನ ಹಟ್ಟಿ, ಚಳ್ಳಕೆರೆ ತಾ.
2.	ಮಮತ ಎಂಟರ್‌ಪ್ರೈಸಸ್	ವೈ. ಸಿ. ದೇವರಪ್ಪ, ನಾಯಕನಹಟ್ಟಿ, ಚಳ್ಳಕೆರೆ ತಾ.

3.	ಶಿವೊಗ್ಗ ಶಿತಾಳ್ ಫೈಬರ್	ರೈ. ಸಿ. ದೇವರಪ್ಪ, ನಾಯಕನಹಟ್ಟಿ, ಚಳ್ಳಕೆರೆ ತಾ.
4.	ರೇಣುಕಾ ಕಾಂಡಿಮೆಂಟ್ಸ್	ಪಿ. ಸಿ. ಶಿವಕುಮಾರ್ ಬಿನ್ ಮುನಿವೆಂಕಟಪ್ಪ, ವಿ.ಪಾಳ್ಯ, ಚಿತ್ರದುರ್ಗ
5.	ಲಕ್ಷ್ಮಿ ಜನರಲ್ ಇಂಜನಿಯರಿಂಗ್	ಪಿ. ಕುಮಾರ್, ಸಿ. ಪಿ. ಪಿ. ಕಾಂಪೌಂಡ್, ಬೆಂಗಳೂರು ರೋಡ್, ಚಳ್ಳಕೆರೆ
6.	ಕೌಸಿಕ್ ಕೆಮಿಕಲ್ಸ್	ಅಲ್ಲಾಬಕ್ಷಿ, ನಿಯರ್ ಸಂತೆ ಹೊಂಡ, ಚಿತ್ರದುರ್ಗ
7.	ವಿಶ್ವಕರ್ಮ ಇಂಡಸ್ಟ್ರೀಸ್	ಪಿ. ಎ. ಪ್ರಕಾಶ್, ಜಿ. ಎನ್. ಆಟೋ ಮೆಷಿನ್ ಷಾಪ್, ಪಿ. ಬಿ. ರೋಡ್, ದಾವಣಗೆರೆ.

ಹಾವೇರಿ ಶಾಖಾ ಕಛೇರಿ

1.	ವರ್ಧ ಜಿಸಿಂಗ್ ಮತ್ತು ಪ್ರೆಸಿಂಗ್ ಫ್ಯಾಕ್ಟರಿ, ಹಾವೇರಿ	1. ಎಲ್. ಕೆ. ಇಂಜನಿಯರಿಂಗ್, ಹಾವೇರಿ 2. ಹೆಚ್. ಡಿ.ಉಹ್ಲಾಲ್, ಗುಟ್ಟಲ್, ಹಾವೇರಿ ತಾ. 3. ಡಿ. ಸಿ. ರಾಯ್‌ಕರ್, ಹುಲುಗುರ್, ಶಿಗ್ಗಾಂವಿ ತಾ. ಆರ್. ಜಿ. ಮಟ್ಟದ್, ರಾಣಿಬೆನ್ನೂರು
2.	ಲಕ್ಷ್ಮಿ ಜಿಸಿಂಗ್ ಫ್ಯಾಕ್ಟರಿ, ಹುಲುಗೂರ್ ಶಿಗ್ಗಾಂವಿ	ಡಿ. ಸಿ. ರಾಯಕರ್, ಹುಲುಗೂರು
3	ಚೆನ್ನಬಸವೇಶ್ವರ, ಫ್ಲೋರ್‌ಮಿಲ್, ಹಿರೆಬೆಂಡಗಿರಿ	ಎಂ. ಸಿ. ದುರ್ಗಣ್, ಅಕ್ಕಿಹಾಲುರ್, ಹಾನಗಲ್ ತಾ.
4.	ನೆಲ್ಲವಾಡಿ ಇಂಜನಿಯರಿಂಗ್ ಮತ್ತು ಎಲೆಕ್ಟ್ರಾನಿಕ್ ವರ್ಕ್ಸ್, ಹಾವೇರಿ	ನಾಗರಾಜ್ ಉಲಕುಂದ್ರಿ, ಧಾರವಾಡ
5.	ಕಾಶ್ಮೀರಿ ಇಂಡಸ್ಟ್ರೀಸ್, ಹನಗೋಲ್	ನಾಗರಾಜ್ ಉಲಕುಂದ್ರಿ, ಧಾರವಾಡ ಎಮ್. ಜೆ. ಇನಾಮ್‌ದಾರ್, ಹಾಂಗಲ್ ಟೌನ್.

ದಾವಣಗೆರೆ ಶಾಖಾ ಕಛೇರಿ

1.	ವೆಂಕಟೇಶ್ವರ ಸರ್ವೀಸ್ ಸ್ಟೇಷನ್	ರಮೇಶ್ ಹೆಗಡೆ ಕೇರಾಫ್ ಗೋಪಿ ನಿಲಯ, ನಂ. 1896: 3 ಎ, 3ನೇ ಕ್ರಾಸ್, 4ನೇ ಮುಖ್ಯ ರಸ್ತೆ, ದಾವಣಗೆರೆ

2.	ಹರಿಹರ್ ಫೌಂಡ್ರಿ, ಹರಿಹರ	ಜಿ. ಎಮ್. ಎಂಟರ್‌ಪ್ರೈಸಸ್, ಡಿ.ನಂ. 579, ಬೇತೂರ್ ರೋಡ್, ಜಂಡಿ ಕಟ್ಟೆ, ದಾವಣಗೆರೆ
3.	ರೇವಣಸಿದ್ದೇಶ್ವರ ವೂಲ್ ಕಾರ್ಡಿಂಗ್, ಜಗಳೂರು	ಜಿ. ಎಮ್. ಎಂಟರ್‌ಪ್ರೈಸರ್ಸ್. ಡೋನೆ, ನಂ 579, ಬೇತೂರು ರೋಡ್, ಜಂಡಿ ಕಟ್ಟೆ ಹತ್ತಿರ, ದಾವಣಗೆರೆ

ಗದಗ್ ಶಾಖಾ ಕಛೇರಿ

1.	ಮೆ: ವೀರೇಶ್ವರ ಫ್ಲೋರ್ ಮಿಲ್ ಶಿರಹಟ್ಟಿ ತಾ.	ಶ್ರೀ ಎಸ್. ಸಿ. ಕೊರಿ. ಕಿತ್ತೂರು ವಿಲೇಜ್, ಹಾವೇರಿ ತಾ.

ಬೆಳಗಾವಿ ಶಾಖಾ ಕಛೇರಿ

1.	ಮೆ: ಲಕ್ಷನ್ ಇಂಡಸ್ಟ್ರೀಸ್ ಉದ್ಯಮಬಾಗ್, ಬೆಳಗಾವಿ	ಮೆ: ದೀಪಕ್ ಸ್ಟೀಲ್ ಇಂಡಸ್ಟ್ರೀಸ್, ಹೈ ಸ್ಟ್ರೀಟ್, ಕ್ಯಾಂಪ್, ಬೆಳಗಾವಿ
2.	ಮಾಲ್ತೇಶ್ ಫ್ಯಾಬ್ರಿಕೇಟರ್ಸ್, ಗಾಂಧಿನಗರ, ಬೆಳಗಾವಿ	ಪರ್ವೀನ್ ಇಂಜನಿಯರ್ಸ್
3.	ಮಾಡ್ರನ್ ಬೇಕರಿ, ಮುರಗೋಡು, ತಾ:ಸೌಂದತ್ತಿ	ಬಾಂಬೆ ಬೇಕರಿ, ಗುರುವಾರ ಪೇಟೆ, ಕಿತ್ತೂರು
4.	ಕೆ. ಸಿ. ಕಲ್ಲೂರು	ನಂಪಾದೀ ಟೆಕ್ಸ್‌ಟೈಲ್ (ಪ್ರೈ) ಲಿ. ಗದಗ, ಧಾರವಾಡ ಜಿಲ್ಲೆ
5.	ಕೆ. ಸಿ. ಕಲ್ಲೂರು	ನಂವಾದೀ ಟೆಕ್ಸ್‌ಟೈಲ್ (ಪ್ರೈ) ಲಿ. ಗದಗ, ಧಾರವಾಡ ಜಿಲ್ಲೆ
6.	ಕೆ. ಸಿ. ಕಲ್ಲೂರು	ನಂವಾದೀ ಟೆಕ್ಸ್‌ಟೈಲ್ (ಪ್ರೈ) ಲಿ. ಗದಗ, ಧಾರವಾಡ ಜಿಲ್ಲೆ
7.	ಸಿದ್ದೇಶ್ವರ ಇಂಡಸ್ಟ್ರೀಸ್	ಗರಗಟ್ಟಿ ಎಲೆಕ್ಟ್ರೋಪ್ಲೇಟಿಂಗ್ಸ್, ಶಾಹಾಪುರ, ಬೆಳಗಾವಿ
8.	ದೂದ್‌ಗಂಗಾ ಐಸ್ ಫ್ಯಾಕ್ಟರಿ	ಕೆ. ಜಿ. ಷಾ, ಧಾರವಾಡ ಜಮಕಾನ್ ಹತ್ತಿರ, ಧಾರವಾಡ
9.	ಮ್ಯಾಕ್ಸ್ ಆಯಿಲ್ ಇಂಡಸ್ಟ್ರೀಸ್ ಹಲಗ, ಬೆಳಗಾವಿ	ವಿ. ಎ. ಗಂಗಾಧರ್‌ಮಠ್, ರಾಜನ್ ಕೊಲ್ಲೂರ್, ಶೋರಾಪೂರ, ಗುಲ್ಬರ್ಗ
10.	ನ್ಯಾಷನಲ್ ಪ್ರಿಂಟಿಂಗ್ ಪ್ರೆಸ್, ಬೈಲಹೊಂಗಲ	ಬಸವೇಶ್ವರ ಪ್ರಿಂಟಿಂಗ್ ಪ್ರೆಸ್, ನೇಸರಗಿ, ಬೈಲಹೊಂಗಲ ತಾ.
11.	ಫಾಲ್ಕನ್ ಪ್ಯಾಕೇಜಿಂಗ್ ಇಂಡಸ್ಟ್ರೀಸ್ ಉದ್ಯಮಬಾಗ್ ಬೆಳಗಾವಿ	ಕು: ಶಹೀನಾ ಕಾಜಿ, ವಿಜಯನಗರ, ಬೆಳಗಾವಿ

12.	ಸಿದ್ಧರಾಮೇಶ್ವರ ಟೆಕ್ಸ್‌ಟೈಲ್ಸ್ (ಪ್ರೈ) ಲಿ. ಖಾನಗಾಂವ, ಬೆಳಗಾವಿ ತಾ	ಗ್ರಾಮೋದ್ಯೋಗ ಸಂಘ, ಖಾನಗಾಂವ, ಬೆಳಗಾವಿ ತಾ
13.	ಆರ್. ಆರ್.ಇಂಡಸ್ಟ್ರೀಸ್ ಪ್ಲಾಟ್ ನಂ. 66, ಹೊನಗಾ ಇಂಡಸ್ಟ್ರೀಯಲ್ ಏರಿಯಾ, ಬೆಳಗಾವಿ	ವಿಪ್ರಾಕ್ತಿ ಮಿನರಲ್ಸ್, ಹಿಂದವಾಡಿ, ಬೆಳಗಾವಿ
14.	ಶಾನ್ ಪ್ಯಾಕರ್ಸ್, ಪಂತ್ ಬಾಳೆ ಕುಂದ್ರಿ, ಬೆಳಗಾವಿ	ಬೆಸ್ಟ್ ಪ್ಯಾಕರ್ಸ್, ಮಾಕಲಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾ.
15.	ಕ್ವಾಲಿ ಫ್ಯಾಬ್, ಇಂಜಿನಿಯರ್ಸ್, ಉದ್ಯಮಬಾಗ್, ಬೆಳಗಾವಿ	1) ಫ್ಲೂಯಿಡ್ ಡೈನಾಮಿಕ್ಸ್, ಮಾಜಿ, ಬೆಳಗಾವಿ 2) ಸ್ಕೈಯರ್ ಇಂಜಿನೀರ್, 4ನೇ ಬ್ಲಾಕ್, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು
16.	ವಿ.ಎಂ. ಇಂಜಿನಿಯರ್ಸ್, ತಿನೇ ಗೇಟ್, ಖಾನಾಪುರ ರೋಡ್, ಬೆಳಗಾವಿ	1) ರವಿ ಇಂಡಸ್ಟ್ರೀಸ್, ಮಾಜಿ, ಬೆಳಗಾವಿ 2) ರೇವಣಸಿದ್ದೇಶ್ವರ ಎಲೆಕ್ಟ್ರಿಕ್ ವೆಲ್ಡಿಂಗ್ ಮತ್ತು ಆಟೋ ವರ್ಕ್ಸ್, ಘಟ್ಟಪ್ರಭ
17.	ಶಿಲ್ಲೇಕರ್ ಇಂಜಿನಿಯರ್ಸ್, ಉದ್ಯಮಬಾಗ್, ಬೆಳಗಾವಿ	ಜೀಜಾ ಮಾತ ಇಂಜಿನೀಯರ್ಸ್, ಜಾದವ್ ಕಾಂಪೌಂಡ್, ಉದ್ಯಮಬಾಗ್, ಬೆಳಗಾವಿ
18.	ಭಾರತೀಶ್ ಇಂಜಿನಿಯರಿಂಗ್ ವರ್ಕ್ಸ್, ಉದ್ಯಮಬಾಗ್, ಬೆಳಗಾಂ	ಬೋಸ್ ಇಂಜಿನಿಯರಿಂಗ್ ಕನ್ಸರ್ನ್, ಬೆಳಗಾವಿ
19.	ಅಲ್ಟ್ರಾ ಮೆಟಲ್ಸ್, ಉದ್ಯಮಬಾಗ್, ಬೆಳಗಾವಿ	ಸ್ಕೈಯರ್ ಇಂಜಿನಿಯರಿಂಗ್ ವರ್ಕ್ಸ್, 4ನೇ ಬ್ಲಾಕ್, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು
20.	ಎಲ್ಲಮ್ಮ ಕುಂಕುಂ, ಸೌಂದತ್ತಿ	ಪಟೇಲ್ ಟ್ರೈಲ್ಸ್ ಇಂಡಸ್ಟ್ರೀಸ್, ಹೊನಗ ಇಂಡಸ್ಟ್ರೀಯಲ್ ಏರಿಯಾ, ಬೆಳಗಾವಿ
21.	ಹೈಡ್ರಾಲಿಕ್ಸ್ ಇಂಡಿಯಾ, ಕಕತಿ ಇಂಡಸ್ಟ್ರೀಯಲ್ ಏರಿಯಾ, ಬೆಳಗಾವಿ	ಸುಜಯ ಇಂಜನೀಯರ್ಸ್, ಬೊಂದಲ್ ಗಲ್ಲಿ, ಬೆಳಗಾವಿ
22.	ತಾರಾಬಾಯಿ ಆಯುರ್ವೇದಿಕ್ ಪ್ರಾಡಕಟ್ಸ್, ಒಟೆಗಲ್ಲಿ, ಶಾಹಾಪುರ, ಬೆಳಗಾವಿ	ಡಾ: ಭಟ್, ಎಲ್ಲಮರ್, ಉತ್ತರ ಕನ್ನಡ ಜಿಲ್ಲೆ
23.	ಮಹದೇವ್ ಮೆಟಲ್ ಆರ್ಟ್ಸ್, ಉದ್ಯಮಬಾಗ್, ಬೆಳಗಾವಿ	ಪಿ. ಎನ್. ಪಿ. ಇಂಜಿನಿಯರ್ಸ್ ಮತ್ತು ಫ್ಯಾಬ್ರಿಕೇಟರ್ಸ್, ಉದ್ಯಮಬಾಗ್, ಬೆಳಗಾವಿ

24.	ಆದಿಶಕ್ತಿ ಆಯಿಲ್ ಮಿಲ್. ರಾಮದುರ್ಗ	ಶ್ರೀ ಎಂ. ಎನ್. ಪವಾರ್, ನೆಹರುನಗರ, ಬೆಳಗಾವಿ

ಬಿಜಾಪುರ ಶಾಖಾ ಕಛೇರಿ

1.	ಪ್ರೇಮ ಡಿ. ಹೈಡ್ರೇಶನ್ ಘಟಕ, ಹಿರೇರೂಗಿ, ಇಂಡಿ ತಾ.	ಶ್ರೀ ಆರ್.ಸಿ. ಸಾರ್ ನಾಯಕ್, ಕಂಟ್ರಾಕ್ಟರ್, ಬಿಜಾಪುರ
2.	ಜಗದಾಂಬ ರೆಡಿಮೇಡ್ ಗಾರ್ಮೆಂಟ್ಸ್, ಮಿಂಚನಾಳ, ಎಲ್.ಟಿ.	ಶ್ರೀ ಕೆ.ಎಸ್. ಬೇತ್, ಮಾತೃಕೃಪ, ಟೆಲಿಫೋನ್ ಹೌಸ್ ಹಿಂದೆ, ಸ್ಟೇಷನ್ ರಸ್ತೆ, ಬಿಜಾಪುರ
3.	ಸೃಷ್ಟಿ ಪಾಲಿ ಇಂಡಸ್ಟ್ರೀಸ್, ಬನಹಟ್ಟಿ	ಶ್ರೀ ಸುನೀಲ್ ಬಿ. ಮುಮದಾಪುರ, ವಿದ್ಯಾನಗರ, ರಬಕವಿ
4.	ಎಸ್.ಪಿ. ಸಾಗರ್ ಫೆಸಿಂಗ್ ಘಟಕ, ಕಟ್ಟೆವಾಡಿ	ಕಿಸಾನ್ ಮೆಷಿನರಿ, ಶ್ರೀ ವಿ. ಸನ್ ಗೋಡನ್ಸ್, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಬಿಜಾಪುರ
5	ಶಿವಮೂರ್ತಿ ವೆಲ್ಡಿಂಗ್ ವರ್ಕ್ಸ್, ಬಿಜಾಪುರ	ಶ್ರೀ ಬಿ.ಜಿ. ಬಿರಾದಾರ್, ಮೆ: ಶೀತಲ್ ಇಂಡಸ್ಟ್ರೀಸ್, ಡಿ: 557, ಇಂಡಸ್ಟ್ರಿಯಲ್ ಎಸ್ಟೇಟ್, ಗೋಕುಲ ರಸ್ತೆ, ಹುಬ್ಬಳ್ಳಿ
6.	ಲಕ್ಷ್ಮಿ ಇಂಜಿನಿಯರಿಂಗ್ ವರ್ಕ್ಸ್, ಚಿಕ್ಕಪಡಸಲಗಿ, ಜಮಖಂಡಿ ತಾ.	ಶ್ರೀಮತಿ ಬಕಲವ್ವ ರಾಮಪ್ಪ ಬಡೋಲಿ, ಕೇರಾಫ್ ಚಿಕ್ಕಪಡಸಲಗಿ
7.	ಜನಶಕ್ತಿ ಪ್ರಿಂಟರ್ಸ್, ಬಿಜಾಪುರ	ಶ್ರೀ ಮಲ್ಲೇಶಿ ಆರ್ ತುಂಗಲ್, ಕನಮಡಿ
8.	ಅರವಿಂದ್ ಅಲ್ಯುಮಿನಿಯಂ ಇಂಡಸ್ಟ್ರೀಸ್ ಜಮಖಂಡಿ, ಬಿಜಾಪುರ ಜಿಲ್ಲೆ	ಶ್ರೀ ರಿಯಾಜ್ ಬಾಬಾ ಅಮೀನ್ ಹವೇಲಿ, ಜಂಬಗಿ ರಸ್ತೆ, ಜಮಖಂಡಿ

ಕಾರವಾರ ಶಾಖಾ ಕಛೇರಿ

1.	ರೇಣುಕಾರಾವ್ ಬೇಕರಿ, ಮೂರ್ಕ್ ವಾಡ್, ಹಲಿಯಾಳ್ ಬೇಕರಿ ಪ್ರಾಡಕ್ಟ್	ಶ್ರೀ ಬಿ.ಆರ್. ಸತೀಶ್, ಮೆ: ಸಹ್ಯಾದ್ರಿ ಫುಡ್ ಪ್ರಾಡಕ್ಟ್, ನಂದನಗದ್ದ, ಕಾರವಾರ
2.	ಗುತ್ತಾ ಬೇಕರಿ ಪ್ರಾಡಕ್ಟ್, ಜೊಯ್ಡ, ಎನ್.ಕೆ. ಡಿಸ್ಟ್ರಿಕ್ಟ್	ಶ್ರೀ ಪ್ರೇಮಾನಂದ್, ವಿ. ಗವಾಸ್, ಮೆ: ಆನಂದ ಬೇಕರಿ, ದಾಂಡೇಲಿ

ಬಾಗಲಕೋಟೆ ಶಾಖಾ ಕಛೇರಿ

1.	ಭವಾನಿ ಸಿಲ್ಕ್ ಟ್ವಿಸ್ಟಿಂಗ್ ಫ್ಯಾಕ್ಟರಿ, ಹುಲಿಗಿರಿಗುಡ್ಡ, ಬಾದಾಮಿ ತಾ.	ಮೆ: ಬಾವ್ಸಾನ್ ಸಿಲ್ಕ್ ಟ್ವಿಸ್ಟಿಂಗ್, ಇಲಕಲ್, ಹುನಗುಂದ್ ತಾ.
2.	ಮಹಾಲಕ್ಷ್ಮಿ ಪೆಪ್ಪರ್ ಮೆಂಟ್ ಇಂಡಸ್ಟ್ರೀಸ್ ಮುಧೋಳ್ ತಾ. ಸಿ. ಬಿ. ಕುರ್ತಕೋಟಿ	ಮೆ. ಬಸವೇಶ್ವರ, ಕನ್ಸ್ಟ್ರಕ್ಷನ್ ವರ್ಕ್ಸ್, ಬೆಳಿಹಾಲ್, ಬಾದಾಮಿ ತಾ.

5.	ನಿರ್ಮಲ್ ಆಟೋ ಎಲೆಕ್ಟ್ರಿಕಲ್ಸ್ ಮತ್ತು ಮೆಕಾನಿಕಲ್ ವರ್ಕ್ಸ್, ಮಹಾಲಿಂಗಪುರ, ಮುಧೋಳ್ ತಾ	ಹೆಚ್. ಓ. ಜೈನ್. ಮು: ನೀಲಗೆ ಅಲ್ಯೂಮಿನಿಯಂ ಇಂಡಸ್ಟ್ರೀಸ್, ಮಹಾಲಿಂಗಪುರ, ಮುಧೋಳ್ ತಾ.

ಚಿಕ್ಕೋಡಿ ಶಾಖಾ ಕಛೇರಿ

1.	ಅಂಬಿಕ ಟೈರ್ಸ್ ರಿಮೋಲ್ಡಿಂಗ್ ವರ್ಕ್ಸ್, ಅಥಣಿ	ಮೆ: ಎಂ. ಐ. ಕೋಲ್ಡ್ ರಿಟ್ರೇಡರ್ಸ್, ಪ್ಲೈ ಲಿ. ಖಾನಾಪುರ
2.	ಪೊಪ್ಯುಲರ್ ಲೆದರ್ ಇಂಡಸ್ಟ್ರೀಸ್, ನಿಪ್ಪಾಣಿ	ಮೆ: ಮಾಣಿಕ್‌ಚಂದ್ ಲೆದರ್ ಇಂಡಸ್ಟ್ರೀಸ್, ನಿಪ್ಪಾಣಿ
3.	ಬರ್ಮಷ್ಯ ಕೂಲ್ ಡ್ರಿಂಕ್ಸ್, ಚಿಕ್ಕೋಡಿ ತಾ.	ಮೆ: ಹೀರಬಾಗ, ಬಿ.ಬಿ. ರೋಡ್, ಸಂಕೇಶ್ವರ
4.	ಬಾಹುಬಲಿ ಟೆಕ್ಸ್‌ಟೈಲ್ಸ್, ಚಿಕ್ಕೋಡಿ ತಾಲ್ಲೂಕು	ಮೆ. ಶಂಕರ್ ಬಾಬುರಾವ್ ಪನೇರಿ, ವಾರ್ಡ್ ನಂ. 9, ಡೋರ್ ನಂ. 353, ಸತ್ತರ್‌ಮಾಲಾ ಪಾಟೀಲ್‌ಪೇಟೆ, ಕೊಲ್ಲಾಪುರ
5.	ಖಾಸಿಮ್ ಫ್ಲೋರ್‌ಮಿಲ್, ಬೊಮ್ಮನಾಳ	ಮೆ: ಇಸ್ಮಾಯಿ ರಸುಲ್ ಸಾಬ್, ಲಡಖ್, ಬೊಮ್ಮನಾಳ. ರಾಯಬಾಗ್ ತಾ.
6.	ಡಿ. ಎಲ್. ನಾಯ್ಕ್, ಗೆಲ್ಗಿ, ಹುಕ್ಕೇರಿ ತಾ	ಮೆ: ಪ್ರಭಾಕರ್, ಗಿರಿಯಪ್ಪ, ಹುಂದ್‌ಕರಿ ಬರಡಿ, ರಾಯಬಾಗ್ ತಾ

ಗುಲ್ಬರ್ಗ ಶಾಖಾ ಕಛೇರಿ

1.	ಮಲ್ಲಿಕಾರ್ಜುನ ಆಯಿಲ್ ಮಿಲ್, ಸೊಲ್ಲಾಪುರ ತಾ. ಪಿ ಮತ್ತು ಎಮ್	ಚಂದ್ರಶೇಖರ್, ಮಲ್ಲಿಕಾರ್ಜುನ ಪಾಟೀಲ್ ಗೋಗಿ ಶಹಾಪುರ ಪೋಸ್ಟ್ ಮತ್ತು ತಾ.
2.	ಪವನ್ ಇಂಜಿನಿಯರಿಂಗ್ ವರ್ಕ್ಸ್ ಚಿತ್ತಾಪುರ್ ಪಿ ಮತ್ತು ಎಮ್	ರಮೇಶ್ ಬಾಬು, ಮೆ: ತುಂಗ ಇಂಜಿನಿಯರಿಂಗ್ ವರ್ಕ್ಸ್. ಕಲಾಸಿಪಾಳ್ಯ, ಬೆಂಗಳೂರು

ಬೀದರ್ ಶಾಖಾ ಕಛೇರಿ

1.	ನಿಶಿಯಾ ಇಂಜಿನಿಯರಿಂಗ್ ವರ್ಕ್ಸ್	ನೀಡ್ಸ್ ಇಂಡಸ್ಟ್ರಿಯಲ್ ಕಾರ್ಪೊರೇಶನ್, ಪಿ. ಶಂಕರ್ ರಾಮಲಿಂಗಪ್ಪ, ಪ್ಲಾಟ್ ನಂ. 52, ಬಿ: 53ಎ, ಕೊಲ್ಲಾರ್ ಇಂಡಸ್ಟ್ರಿಯಲ್ ಏರಿಯಾ, ಬೀದರ್

2.	ರೆಬಕಾ ಇಂಜಿನಿಯರಿಂಗ್ ವರ್ಕ್ಸ್	ಜಿ.ಬಿ. ಗೇತುರಾಮನ್, ಪ್ಲಾ. ನಂ.48, ರಸ್ತೆ ಸಂ.6, ಫಿಲಂನಗರ, ಜುಬಿಲಿ ಹಿಲ್ಸ್, ಹೈದರಾಬಾದ್
3.	ಕಮಲ್ ಅಗ್ರೋ ಇಂಡಸ್ಟ್ರೀಸ್	ವಿಜಯಕುಮಾರ್, ಮಂದಾಕನಹಳ್ಳಿ, ಬೀದರ್ ತಾ
4.	ಬೀದರ್ ಇಂಡಸ್ಟ್ರಿಯಲ್ ಫ್ಯಾಬ್ರಿಕೇಶನ್	ಪ್ರಶಾಂತ್, ಶ್ರ--6-6-:1
5.	ಸಂಗಮೇಶ್ವರ ಜನರಲ್ ಇಂಜಿನಿಯರಿಂಗ್ ವರ್ಕ್ಸ್	ಜಗಮೋಹನ್ [illegible]ರ್ ಆಫ್ ಕಲ್ಯಾಣ್ ಕೆಮಿಕಲ್ಸ್, ಉದಗೀರ್ ರಸ್ತೆ, ಬೀದರ್
6.	ಕೊಹಿನೂರ್ ಸೈಕಲ್ ಆ್ಯಕ್ಸಸರೀಸ್	ಕೆ. ಎಸ್. ರೆಡ್ಡಿ, ನಂ. 27, ಬ್ಯಾಂಕರ್ಸ್ ಕಾಲೋನಿ, ಶಿವನಗರ್, ಬೀದರ್
7.	ಬೀದರ್ ಇಂಡಸ್ಟ್ರಿಯಲ್ ಫ್ಯಾಬ್ರಿಕೇಶನ್	ವಿಶಾಲ್ ಖಂಡಸಾರಿ (ಪ್ರೈ) ಲಿ, ಬೀದರ್
8.	ಜ್ಯೋದ್ ನಿಕ್ಕಲ್ ಪಾಲೀಷಿಂಗ್ ಘಟಕ	ಶಬ್ಬೀರ್ ಸನ್ ಆಫ್ ಹಸನ್ ಸಾಬ್, ಬಸವಕಲ್ಯಾಣ, ಬೀದರ್
9.	ವಿಜಯ ಇಂಜಿನಿಯರಿಂಗ್ ವರ್ಕ್ಸ್	ಬಸವೇಶ್ವರ ಇಂಜಿನಿಯರಿಂಗ್ ವರ್ಕ್ಸ್, ಶಾಪ್ ನಂ. 2748, ಗುಂಜ ನಾರಾಯಣಪುರ ರಸ್ತೆ, ಬಸವಕಲ್ಯಾಣ, ಬೀದರ್ ಜಿಲ್ಲೆ
10.	ಪ್ರೆಸ್ಟೀಜ್ ಸ್ಟೀಲ್ ಇಂಡಸ್ಟ್ರೀಸ್	ಆದರ್ಶ ಇಂಜಿನಿಯರಿಂಗ್ ವರ್ಕ್ಸ್, ವೀರಶೆಟ್ಟಿ, ಡಿ: 3, ಇಂಡಸ್ಟ್ರಿಯಲ್ ಎಸ್ಟೇಟ್, ಗಾಂಧಿಗುಂಜ್, ಬೀದರ್
11.	ರಾಜ್ ಇಂಡಸ್ಟ್ರೀಸ್	ನವೀನ್ ಪಿವಿಸಿ ಪೈಪ್ ಘಟಕ. ಪ್ಲಾಟ್ ನಂ: 9, ಕೊಲಾಹರ್ ಇಂಡಸ್ಟ್ರಿಯಲ್ ಏರಿಯಾ, ಬೀದರ್
12.	ತಾಜ್ ಪವರ್ ಲೂಂ ಘಟಕ,	
13.	ತಾಜ್ ಪವರ್ ಲೂಂ ಘಟಕ,	
14.	ತಾಜ್ ಪವರ್ ಲೂಂ ಘಟಕ	ಗಿಯಾಜ್ ಪವರ್ ಲೂಂ, ಹುಲಸೂರುಹಳ್ಳಿ, ಬೀದರ್ ತಾ ಮತ್ತು ಜಿಲ್ಲೆ
15.	ಕರ್ಟಿನ್ ಲ್ಯಾಬ್	ಆಲ್ವಿನ್ ಟೂಲ್ಸ್, 32, ಧನಕೋಟಿ, ರಾಜ್ ಸ್ಟ್ರೀಟ್, ಮದ್ರಾಸ್
16.	ಶಿವಕ್ಯಾಟಲ್ ಫೀಡ್ಸ್ ಘಟಕ	ಶ್ರೀಮತಿ ಸುಜಾತರೆಡ್ಡಿ, ವೈ ಆಫ್ ಅಶೋಕರೆಡ್ಡಿ, ಗಣೇಶ ಆಟೋ ಇಂಡಸ್ಟ್ರೀಸ್, ಹೈದರಾಬಾದ್, ರಘು ಹೀರಾಬಾದ್

17.	ಕಲ್ಯಾಣರಾವ್ ಜಂತ	ಸಂಗಪ್ಪ ಕಲ್ಲಪ್ಪ ಗುಮ್ಮ, ಮಂಜಾಪುರಹಳ್ಳಿ, ಬಾಲ್ಕಿ ತಾ, ಬೀದರ್ ಜಿಲ್ಲೆ
18.	ಧನಲಕ್ಷ್ಮೀ ಆಯಿಲ್ ಎಕ್ಸ್‌ಪೆಲ್ಲರ್	ಶ್ರೀ ಇಕ್ಬಾಲ್‌ಮಿಯಾ, ಸನ್ ಆಫ್ ಮಾನುಮಿಯಾ, ಗಂಜ್ ಏರಿಯಾ, ಬಾಲ್ಕಿ, ಬೀದರ್
19.	ಫಾರ್ಮ ಎನ್ ಬಯಾಟಿಕ್ಸ್	ಫೇರ್ ಟ್ರೈಲ್ಸ್ (ಪ್ರೈ) ಲಿ, ನಂ. 7–1–71, ಅಮೀರ್ ಪೇಟ್, ನೇಚರ್ ಕೇರ್ ಕಾಲೇಜ್ ರಸ್ತೆ, ಹೈದರಾಬಾದ್
20.	ಪ್ರೇಮಗಿರ್	ಕಾಶೀನಾಥ್, ಸನ್ ಆಫ್ ಶಿವಾಜಿ ಜಾಧವ್ ಕೇರಾಫ್ ತೇಗಂಪೂರ್, ಔರದ್ ತಾ, ಬೀದರ್
21.	ದತ್ತಾತ್ರೇಯ ಆಯಿಲ್ ಎಕ್ಸ್‌ಪೆಲ್ಲರ್	ಹಮೀದ್‌ಮಿಯಾ ಸನ್ ಆಫ್ ಸಯ್ಯದ್ ಸಾಬ್ ಘೂಟ್ಗಿ ಹಳ್ಳಿ, ಹುಮನಾಬಾದ್, ಬೀದರ್
22.	ಭ್ರೇಟ್ ಮಷಿನ್ ಟೂಲ್ಸ್	ಮಲ್ಲಿಕಾರ್ಜುನ ಮೆಟಲ್ ವರ್ಕ್ಸ್, ಬಸವೇಶ್ವರ ಚೌಕ, ಗಾಂಧಿಗುಂಜ್ ರಸ್ತೆ, ಬೀದರ್

ರಾಯಚೂರು ಶಾಖಾ ಕಛೇರಿ

1	ಶಿವರಾಜನ್ ಆಯಿಲ್ ಇಂಡಸ್ಟ್ರೀಸ್ ರಾಯಚೂರು	ಆ. ಶಿವಕುಮಾರ್, ಬೆಸ್ತವರ್‌ಪೇಟ್, ರಾಯಚೂರು
2.	ಮೆ: ಸಿಫಾಪ್ ಇಂಜನಿಯರಿಂಗ್ ವರ್ಕ್ಸ್	ಹೆಚ್. ಎನ್. ಯೋಗಿ, ಮೆ: ಪ್ಲಾಸ್ಟಿಕ್ ಟೆಕ್ನಿಕ್ ಇಂಡಸ್ಟ್ರೀಸ್ ಎಸ್ಟೇಟ್, ಗದಗ
3.	ಸೂಪರ್ ಇಂಜನಿಯರಿಂಗ್ ವರ್ಕ್ಸ್ ರಾಯಚೂರು	ಹೆಚ್. ಎನ್. ಯೋಗಿ, ಮೆ: ಪ್ಲಾಸ್ಟಿಕ್ ಟೆಕ್ನಿಕ್ ಇಂಡಸ್ಟ್ರೀಸ್ ಇಂಡಸ್ಟ್ರಿಯಲ್ ಇಸ್ಟೇಟ್, ಗದಗ
4.	ಸಾದಿಕ್ ಇಂಜನಿಯರಿಂಗ್ ವರ್ಕ್ಸ್, ರಾಯಚೂರು	ಹೆಚ್. ಎನ್. ಯೋಗಿ, ಮೆ: ಪ್ಲಾಸ್ಟಿಕ್ ಟೆಕ್ನಿಕ್ ಇಂಡಸ್ಟ್ರೀಸ್ ಇಂಡಸ್ಟ್ರಿಯಲ್ ಎಸ್ಟೇಟ್, ಗದಗ
5.	ಇಂದುಮತಿ ಪ್ರೈಡ್ ಗ್ರಾಮ	ಸತ್ಯನಾರಾಯಣ. ರಾಯಚೂರು
6.	ಮೆ: ತುಂಗರೇಶ್ವರ್ ಜಿನಿಂಗ್ ಫ್ಯಾಕ್ಟರಿ	ಬಸ್ಸಪ್ಪ ಮೆ: ಬಂದೇಶ್ವರ ಜಿನಿಂಗ್ ಫ್ಯಾಕ್ಟರಿ, ರಾಯಚೂರು
7.	ವೆಂಕಟೇಶ್ವರ ಆಯಿಲ್ ಎಕ್ಸ್‌ಪ್ರಾಕ್ಷನ್	ವೆಂಕಟೇಶ್ವರ. ಸಿರಗುಪ್ಪ

8.	ಲಿಂಗರಾಜ್ ಆಯಿಲ್ ಇಂಡಸ್ಟ್ರೀಸ್	ಎಸ್.ಪಿ. ನಾಗರಾಜ್, ರಾಯಚೂರು
9.	ಮೆ: ಯಾಮಿನಿ ಹವಾಯಿ ಮತ್ತು ಲಗರ್ ಚಪ್ಪಲ್	ಸಯಿದ್ ಜಫರ್ ಅಲಿ, ಸಿಂಧನೂರ್
10.	ಮೆ: ಹಲಲಾವ್ರ ದೇಸಾಯಿ ಆಯಿಲ್ ಮಿಲ್	ಕೆ. ಮಹದೇವಪ್ಪ, ರಾಯಚೂರು
11.	ಮೆ: ಲಕ್ಷ್ಮೀನರಸಿಂಹ ಫ್ಲೋರ್ ಮಿಲ್	ಮೌಲಾಲಿ ಗರ್‌ಜಿಲೆ ಹಳ್ಳಿ, ಮಾನ್ವಿ ತಾಲ್ಲೂಕು
12	ಮೆ:ಬಸವೇಶ್ವರ ರೋಟರಿ ಆಯಿಲ್ ಗಾಣ	ಮಿ: ಚಂದ್ರಶೇಖರ್, ಮೆ: ಮಲ್ಲಿಕಾರ್ಜುನ ಇಂಜನಿಯರಿಂಗ್ ವರ್ಕ್ಸ್, ದೇವದುರ್ಗ
14.	ಬಿಂದು ಮಾಧವರಾವ್	ಸಾಲಿಮಾನ್ ಸಾರ್ಟೆ, ಗುಲಬರ್ಗ

ಬಳ್ಳಾರಿ ಶಾಖಾ ಕಛೇರಿ

1.	ಪ್ರೀಮಿಯರ್ ಇಂಡಸ್ಟ್ರೀಸ್, ಹಲಕುಂಡಿ ಹಳ್ಳಿ, ಬಳ್ಳಾರಿ ತಾ	ಮೆ: ಸೆಪ್ಟ್ರಮ್ ಫ್ಯಾಬ್ರಿಕ್ಸ್ (ಪಿ) ಲಿ, 4-ಬಿ, 25ನೇ ವಾರ್ಡ್, ಬಳ್ಳಾರಿ
2.	ಮೆ:ಸನ್–ಕಾನಿಂಗ್ (ಪಿ) ಲಿ, ಹಲಕುಂಡಿ ಹಳ್ಳಿ, ಬಳ್ಳಾರಿ ತಾ	ಮೆ: ಸೆಪ್ಟ್ರಮ್ ಫ್ಯಾಬ್ರಿಕ್ಸ್ (ಪಿ) ಲಿ, 4-ಬಿ, 25ನೇ ವಾರ್ಡ್, ಬಳ್ಳಾರಿ
3.	ಮೆ: ನಸೀಮ್ ಟ್ರೇಡರ್ಸ್, ಬಳ್ಳಾರಿ	ಶ್ರೀ ಮಹ್.ಗಾಸಿ ಪೀರ್ ಐರನ್ ಮರ್ಚೆಂಟ್, ಕಬ್ಲ ಬಜಾರ್, ಬಳ್ಳಾರಿ
4.	ಮೆ:ಸಾಗರ್ ಫುಡ್ ಇಂಡಸ್ಟ್ರೀಸ್, ಹೊಸಪೇಟೆ	ಶ್ರೀ ಪಾಂಡುರಂಗ ಶೆಟ್ಟಿ, ಕಿರಾಣಿ ಮರ್ಚೆಂಟ್, ಎಲ್.ಬಿ. ಸ್ಟ್ರೀಟ್, ಆದೋನಿ (ಆಂಧ್ರ ಪ್ರದೇಶ)
5.	ಮೆ:ಬಿಲಾಲ್ ಇಂಜನಿಯರ್ ವರ್ಕ್ಸ್, ಹೊಸಪೇಟೆ	ಕೆ. ಶೇಕಶವಾಲಿ ಮೆ: ಮೆಹಬೂಬ್ ಸುಭಾನಿ ಲಾತೆ ಮತ್ತು ವೆಲ್ಡಿಂಗ್ ವರ್ಕ್ಸ್, ಹೊಸಪೇಟೆ
6.	ಮೆ: ಬಳ್ಳಾರಿ ಹಿಂದ್ ಇಂಡಸ್ಟ್ರೀಸ್, ಬಳ್ಳಾರಿ	ಶ್ರೀ. ಸೆಲ್ವರಾಜ್, ಮೆ: ಸ್ಟಾನ್ ಇಂಜನಿಯರಿಂಗ್ ವರ್ಕ್ಸ್, ಇಂಡಸ್ಟ್ರಿಯಲ್ ಎಸ್ಟೇಟ್, ಬಳ್ಳಾರಿ
7.	ಮೆ: ಮೋಹನ್ ಫ್ಲೋರ್ ಮಿಲ್	ಟಿ.ಮಲ್ಲಪ್ಪ ಸನ್ ಆಫ್ ಬಾಮ್ಮಿ ಬೆಂಡ್ಡಪ್ಪ ಅಗ್ರಿಕಲ್ಚರಿಸ್ಟ್, ನಾಣಿಕ ಸ್ಟ್ರೀಸ್ಟ್
8.	ಗೀತಾ ಫ್ಲೋರ್ ಮಿಲ್, ಕಾಸಿ ಕಂಪ, ಹಡಗಲಿ ತಾ	ಜಿ ಚನ್ನವೀರಪ್ಪ ಸನ್ ಆಫ್ ಶಿವಮೂರ್ತಪ್ಪ ಪಾಟಿನಾಯಕನ ಹಳ್ಳಿ, ಹೊಸಪೇಟೆ ತಾ

9.	ಲಿಯೋ ರೆಫ್ರಿಜರೇಶನ್ ಸರ್ವೀಸ್, ಬಳ್ಳಾರಿ	ಶ್ರೀ ಎ. ಪಿ. ಸುಂದರವೇಲು, 17/ಬಿ 2 ಮೈನ್ ರೋಡ್, ಕಪ್ಪಗಲ್ ರೋಡ್
10.	ಸಿದ್ದೇಶ್ವರ ರೈಸ್ ಮತ್ತು ಆಯಿಲ್ ಮಿಲ್, ಹೆಚ್. ಬಿ. ಹಳ್ಳಿ, ತಾಲ್ಲೂಕ್	ಮೆ: ಪದ್ಮಾವತಿ ರೈಸ್ ಮಿಲ್, ಹೆಚ್. ಬಿ. ಹಳ್ಳಿ, ತಾಲ್ಲೂಕ್
11.	ಸಾಕ್ ಫೈನ್ ಇಂಡಸ್ಟ್ರೀಸ್, ಹೊಸಪೇಟೆ	ಶ್ರೀನಿವಾಸ ಡಿ. ಕುಲಕರ್ಣಿ ಸನ್ ಆಫ್ ಡಾಕ್ಟರ್ ಎಸ್.ಡಿ. ಕುಲಕರ್ಣಿ, ಕುಷ್ಟಗಿ ತಾ, ರಾಯಚೂರು ಡಿಸ್ಟ್ರಿಕ್ಟ್
12.	ಸೋನ ಫುಡ್ ಪ್ರಾಡಕಟ್ಸ್, ಬಳ್ಳಾರಿ	ಶ್ರೀ ಬಿ ಶಾಂತರಾಮ ಶೆಟ್ಟಿ ಸನ್ ಆಫ್ ಹೋಟಲ್ ರೇಣುಕ, ಬಳ್ಳಾರಿ
13.	ಸಿದ್ದೇಶ್ವರ ಇಂಡಸ್ಟ್ರೀಸ್, ಬಳ್ಳಾರಿ	ಮೆ: ಶ್ರೀನಿವಾಸ ಇಂಡಸ್ಟ್ರೀಸ್, ಇಂಡಸ್ಟ್ರಿಯಲ್ ಏರಿಯಾ, ಬಳ್ಳಾರಿ
14.	ಸಾರ ಇನ್‌ಫರ್‌ಮ್ಯಾಟಿಕ್ಸ್, ಬಳ್ಳಾರಿ	ಮೆ: ವೀರಭದ್ರಪ್ಪ, ಸ್ಟೆನೋ, ಡಿಸ್ಟ್ರಿಕ್ಟ್ ಕೋರ್ಟ್ ಕಾಂಪ್ಲೆಕ್ಸ್, ಬಳ್ಳಾರಿ ಬಾರ್ ಅಸೋಸಿಯೇಷನ್, ಬಳ್ಳಾರಿ
15.	ಮಂಜುನಾಥ ಪಲ್ವರೈಸರ್, ಬಳ್ಳಾರಿ	ಶ್ರೀ ಬಿ. ನೀಲಕಂಠಯ್ಯ, ಪಿ. ಬಿ. ಸಂ. 32, ಬಳ್ಳಾರಿ

ಬೆಂಗಳೂರು (ನಗರ) ಶಾಖಾ ಕಛೇರಿ

1.	ಮೆ: ರಮೇಶ್ ಇಂಡಸ್ಟ್ರೀಸ್, ನಂ. 75, 80 ಫೀಟ್ ರೋಡ್, ಪ್ರಕಾಶ್‌ನಗರ್, ಬೆಂಗಳೂರು – 21	ಮೆ: ಶಾಸ್ತ್ರಿ ಇಂಜನಿಯರಿಂಗ್, ಪ್ರೊ.ಶ್ರೀ ಎಂ. ವಿ. ಸೀತಾರಾಂ, ನಂ.13, ಅಣ್ಣಯ್ಯ ರೋಡ್, ಯಳಚೇನಹಳ್ಳಿ, ಬೆಂಗಳೂರು – 58
2.	ಮೆ: ಮೆಡಿಪ್ಲಾಸ್ಟ್ ಸರ್ಜಿಕಲ್ ಪ್ರಾಡಕ್ಟ್, ಎಂ. ವೀರಸಂದ್ರ ಇಂಡಸ್ಟ್ರಿಯಲ್ ಏರಿಯ, ಆನೇಕಲ್ ತಾ, ಬೆಂಗಳೂರು ಡಿ	ಮೆ: ಸೋಮು ಸಾಲ್ವೆಂಟ್ (ಪ್ರೈ) ಲಿ, ಸಿ–29, ಕೆಎಸ್ಎಸ್‌ಐಡಿಸಿ ಇಂಡಸ್ಟ್ರಿಯಲ್ ಎಸ್ಟೇಟ್, 16 ಕೆ.ಎಂ. ಹೊಸೂರ್ ರೋಡ್. ವೀರಸಂದ್ರ ಪೋ, ಆಫೀಸ್, ಬೆಂಗಳೂರು – 45
3.	ಮೆ: ಪವರ್ ಪ್ರೆಸ್ ಪ್ರಾಡಕ್ಟ್, 6–7, 15ನೇ ಕ್ರಾಸ್, ಕೆಂಪಾಪುರ ಅಗ್ರಹಾರ, ಬೆಂಗಳೂರು – 23	ಮೆ: ರಾಜಲಕ್ಷ್ಮಿ ಇಂಡಸ್ಟ್ರೀಸ್, 138–ಎ–4, 4ನೇ ಕ್ರಾಸ್, 2ನೇ ಮುಖ್ಯ ರಸ್ತೆ, ಪ್ರಕಾಶ್‌ನಗರ, ಬೆಂಗಳೂರು–21
4.	ಮೆ: ಮೆಥಾಪ್ಸ್, ಸಿ–67, ಇಂಡಸ್ಟ್ರಿಯಲ್ ಎಸ್ಟೇಟ್, ರ್‍ಯಾಪಸಂದ್ರ, ಬೆಂಗಳೂರು	ಮೆ: ಪಂಕಜ ಇಂಡಸ್ಟ್ರೀಸ್, 120, ಬಿಹೈಂಡ್ ಫೈಬರ್ ಗ್ಲಾಸ್ ಫ್ಯಾಕ್ಟರಿ, ಸಿ. ನಾರಾಯಣಪುರ, ವೈಟ್ ಫೀಲ್ಡ್ ರೋಡ್, ದೂರವಾಣಿನಗರ, ಪೋ. [illegible]

5.	ಮೆ: ರೈಟ್ ಇಂಜನಿಯರ್ಸ್, ಸಿ–25, ವೀರಸಂದ್ರ, ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು	ಮೆ: ಮ್ಯಾಸೂಲೆಟ್ ಪ್ರಾಡಕ್ಟ್ಸ್, ಸಿ–26, ವೀರಸಂದ್ರ ಇಂಡಸ್ಟ್ರಿಯಲ್ ಎಸ್ಟೇಟ್, ಹೊಸೂರ್ ರೋಡ್, ಬೆಂಗಳೂರು
6.	ಮೆ: ಶಿವಶಕ್ತಿ ಉದ್ಯೋಗ, 4, ಶೇಷಪ್ಪ ಗಾರ್ಡನ್ ಪೋ, ಬನ್ನೇರುಘಟ್ಟ ರೋಡ್, ಬೆಂಗಳೂರು–ಐಐಎಂ	ಮೆ: ಎಸ್. ಎಂ. ಕೆ. ಆಟೋಮಟಿಕ್ಸ್, ನಂ.1052:20, ಮೆಹ್ತ ಕಾಂಪೌಂಡ್, ತ್ರಿವೇಣಿ ರೋಡ್, ಗೋಕುಲ ಎಕ್ಸ್‌ಟೆನ್‌ಷನ್, ಬೆಂಗಳೂರು - 54
7.	ಮೆ:ಜೆಮ್‌ವಿನ್ ಲ್ಯಾಂಪ್ಸ್ ಅಂಡ್ ಎಲೆಕ್ಟ್ರಾನಿಕ್ಸ್, 2, ಕುಡ್ಲು ವಿಲೇಜ್, ಸಿಂಗಸಂದ್ರ ಪೋ, ಬೆಂ – 68	ಶ್ರೀಮತಿ ಎಂ. ಎಸ್. ವಿಜಯಲಕ್ಷ್ಮಿ 1204, 100 ಫೀಟ್ ರೋಡ್, ಹೆಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೆಂ–38
8.	ಮೆ: ಕಾಂತ್ ಕೆಮಿಕಲ್ಸ್ (ಪ್ರೈ) ಲಿ, 60:ಎ, ಜಿಗಣಿ ಇಂಡಸ್ಟ್ರಿಯಲ್ ಏರಿಯ, ಆನೇಕಲ್ ತಾ, ಬೆಂಗಳೂರು ಜಿಲ್ಲೆ	ಮೆ: ಹೈಟ್ ಫೈನ್ ಕೆಮಿಕಲ್ಸ್ (ಪ್ರೈ) ಲಿ, 50–ಬಿ, ಜಿಗಣಿ ಇಂಡಸ್ಟ್ರಿಯಲ್ ಏರಿಯ, ಜಿಗಣಿ, ಬೆಂ–6
9.	ಶ್ರೀ ಪಿ. ಆರ್. ನಟರಾಜ್, 80, ಕೋರಮಂಗಲ ವಿಲೇಜ್, ಬೆಂಗಳೂರು – 34	ಶ್ರೀ ರಾಜು, 1844, 80 ಫೀಟ್ ರೋಡ್, 2ನೇ ಹಂತ, ರಾಜಾಜಿನಗರ, ಬೆಂಗಳೂರು – 10
10.	ಮೆ: ಮರುಧರ್ ಪ್ರೆಸರ್ ಡೈ ಕ್ಯಾಸ್ಟಿಂಗ್, 7–71, 5ನೇ ಕ್ರಾಸ್, ಲಿಂಗರಾಜಪುರ, ಹೆಣ್ಣೂರು ಮುಖ್ಯ ರಸ್ತೆ, ಬೆಂ–84	ಮೆ: ಸ್ಟೈನ್ ಲಿ ಸ್ವಿಚ್‌ಗೇರ್, 1456–1442, ಮಾಗಡಿ ಮುಖ್ಯ ರಸ್ತೆ, ಸುಂಕದಕಟ್ಟೆ, ಬೆಂಗಳೂರು
11.	ಮೆ: ಶ್ರೀವಾಣಿ ಇಂಡಸ್ಟ್ರೀಸ್, 1156, 13ನೇ ಮುಖ್ಯ ರಸ್ತೆ, 5ನೇ ಕ್ರಾಸ್, 3ನೇ ಹಂತ, ಪ್ರಕಾಶ್ ನಗರ, ಬೆಂ–21	ಮೆ: ಮಂಜುನಾಥ ಇಂಡಸ್ಟ್ರೀಸ್, ಶೆಡ್ ನಂ.192, ಗರುಡಾಚಾರ್ ಪಾಳ್ಯ, ಏಪಿಎಸ್‌ಟಿ ಎದುರು
12.	ಮೆ: ಮೂಕಾಂಬಿಕ ಸಿಲ್ಕ್ ಟ್ವಿಸ್ಟಿಂಗ್ ಅಂಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ	ಶ್ರೀಮತಿ ಲಕ್ಷ್ಮಿದೇವಿ, 104, ಸಂಜೀವಪ್ಪ ಕಾಲೋನಿ, ಗೋಕುಲ, ಬೆಂ–54
13.	ಮೆ: ವಿಶ್ವ ಇಂಜಿನಿಯರಿಂಗ್, ಶೆಡ್ ನಂ.4, 137-53–4, ಇಂಡಸ್ಟ್ರಿಯಲ್ ಏರಿಯ, ಕಾಮಾಕ್ಷಿ ಪಾಳ್ಯ	ಮಾಗಡಿ ಮುಖ್ಯ ರಸ್ತೆ, ಬೆಂಗಳೂರು –29

ಪ್ರಧಾನ ಕಛೇರಿ

1.	ಚಾಮುಂಡಿ ಇಂಪ್ರೆಷನ್ಸ್ (ಪ್ರೈ) ಲಿ. ನಂ.207, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು	ವೆಂಕಟೇಶ್ವರ ಇಂಜಿನಿಯರಿಂಗ್ ವರ್ಕ್ಸ್, ಸಿ. 79, ಮೇಟಗಳ್ಳಿ ಇಂಡಸ್ಟ್ರಿಯಲ್ ಎಸ್ಟೇಟ್, ಮೈಸೂರು.

2.	ಜಿ. ಕೆ .ಆರ್. ಇಂಡಸ್ಟ್ರೀಸ್, ಸಿ: 10, ಗಂಜಾಮ್ ಇಂಡಸ್ಟ್ರಿಯಲ್ ಎಸ್ಟೇಟ್, ಶ್ರೀರಂಗಪಟ್ಟಣ	ಕಾವೇರಿ ಪಾಲಿಮರ್ಸ್, ಬನ್ನೇರುಘಟ್ಟ, ಬೆಂಗಳೂರು
3.	ಸೂರಿಮಿಕ್ಸ್ ಪಾಲಿಮರ್ಸ್ (ಪ್ರೈ) ಲಿ, ನಂ.157-ಬಿ, ಬೆಳಗೊಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು	ಒಯಾನ್ ರಬ್ಬರ್ ಮ್ಯಾನುಫ್ಯಾಕ್ಚರ್ಸ್, 23ನೇ ನಾರ್ತ್ ರೋಡ್, 1ನೇ ಮುಖ್ಯ ರಸ್ತೆ, ಬೆಂಗಳೂರು
4.	ಕಬಿನಿ ಪೇಪರ್ಸ್ ಲಿ, ನಂ: 1, ಇಂಡಸ್ಟ್ರಿಯಲ್ ಏರಿಯಾ, ನಂಜನಗೂಡು, ಮೈಸೂರು	ಮ್ಯಾಗ್ನಿಸಂ ಪ್ರಾಡಕ್ಟ್ (ಪ್ರೈ) ಲಿ, ವಿರಗೋನಗರ, ಆವನಹಳ್ಳಿ, ಹಳೇ ಮದ್ರಾಸ್ ರಸ್ತೆ, ಬೆಂಗಳೂರು
5.	ಮೈಸೂರು ರೆಸ್ಪೈನ್ ಅಂಡ್ ಕೆಮಿಕಲ್ಸ್ ಲಿ, ಪ್ಲಾಟ್ ನಂ.2, ಬೆಳವಾಡಿ ಇಂಡಸ್ಟ್ರಿಯಲ್ ಏರಿಯ, ಹುಣಸೂರು ರೋಡ್, ಮೈಸೂರು	ಹೆಚಮ್ ರೆಸೀನ್ಸ್ (ಪ್ರೈ) ಲಿ. 42:43, ಪೀಣ್ಯ ಇಂಡಸ್ಟ್ರಿಯಲ್ ಏರಿಯ, III ಫೇಜ್, ಬೆಂಗಳೂರು
6.	ಕಾವೇರಿ ರಬ್ಬರ್ (ಪ್ರೈ) ಲಿ, ಪ್ಲಾಟ್ ನಂ.1, ಕೊಲ್ಲಾರ್ ಇಂಡಸ್ಟ್ರಿಯಲ್ ಏರಿಯಾ, ಬೀದರ್	ಕರ್ನಾಜ್ ರಬ್ಬರ್ (ಪ್ರೈ) ಲಿ, ಗುರುನಗರ, ಉಬಗಿರಿ ರೋಡ್, ಬೀದರ್
7.	ಗ್ರೀನ್ ಲಿನ್ಸ್ ಆರ್ಗ್ಯಾನಿಕ್ (ಪ್ರೈ) ಲಿ ದೇವಸುಗೂರ್ ಇಂಡಸ್ಟ್ರಿಯಲ್ ಏರಿಯ, ರಾಯಚೂರು	ನಾಗೇಶ್ವರ ಕೆಮಿಕಲ್ಸ್ ಅಂಡ್ ಡ್ರಗ್ಸ್ (ಪ್ರೈ) ಲಿ, ಶ್ರೀನಿವಾಸ ಕಾಂಪ್ಲೆಕ್ಸ್, ಅಮೀರ್ ಪೇಟೆ, ಹೈದ್ರಾಬಾದ್
8.	ಧನಲಕ್ಷ್ಮಿ ಇಂಡಸ್ಟ್ರೀಸ್, ಇಂಡಸ್ಟ್ರಿಯಲ್ ಏರಿಯ, ಹೈದ್ರಾಬಾದ್ ರೋಡ್, ರಾಯಚೂರು	ಶ್ರೀನಿವಾಸ ಇಂಡಸ್ಟ್ರೀಸ್, ಹಿಮಗಿರಿ ಕಾಂಪ್ಲೆಕ್ಸ್, ರೈಲ್ವೆ ಸ್ಟೇಷನ್ ಹತ್ತಿರ, ರಾಯಚೂರು
9.	ವಿನಾಯಕ ಇಂಡಸ್ಟ್ರೀಸ್, ಇಂಡಸ್ಟ್ರಿಯಲ್ ಏರಿಯ, ಹೈದ್ರಾಬಾದ್ ರೋಡ್, ರಾಯಚೂರು	ಶ್ರೀನಿವಾಸ ಇಂಡಸ್ಟ್ರೀಸ್, ಹಿಮಗಿರಿ ಕಾಂಪ್ಲೆಕ್ಸ್, ರೈಲ್ವೆ ಸ್ಟೇಷನ್ ಹತ್ರ, ರಾಯಚೂರು
10.	ಸ್ಕೈ ಕೋಯರ್ ಕನ್ಸುಮರ್ ಪ್ರಾಡಕ್ಟ್ಸ್ (ಪ್ರೈ) ಲಿ, ಪ್ಲಾಟ್ ನಂ. 498, 4ನೇ ಫೇಜ್, ಪೀಣ್ಯ ಇಂಡಸ್ಟ್ರಿಯಲ್ ಏರಿಯ, ಬೆಂ.	ಅಪಿಗೋ ಕಾರ್ಪೋರೇಶನ್, ನಂ. 36-ಜಿ, ಯಶವಂತಪುರ ಇಂಡಸ್ಟ್ರಿಯಲ್ ಸಬ್ ರೂಟ್, 11ನೇ ಸ್ಟೇಜ್, ತುಮಕೂರು ರಸ್ತೆ, ಬೆಂಗಳೂರು ಸದರನ್ ಲ್ಯಾಟೆಕ್ಸ್ (ಪ್ರೈ)ಲಿ, ಬಿ:11: ಡಬ್ಲ್ಯು. ಸಿಪ್ ಕಾಟ್ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್, ಗುಮ್ಮಿಡಿಪಾಂಡಿ, ಚನಿಗಾಯ್, ಎಂಜಿಆರ್ ಡಿಸ್ಟ್ರಿಕ್ಟ್

11.	ಅಲ್ಟನಿಯಾಮಿ ಪ್ಯಾರಾಮಿಟಿಕಲ್ಸ್ (ಪ್ರೈ) ಲಿ, ನಂ. 49, ಬಿ ಅಂಡ್ ಸಿ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಬೆಂಗಳೂರು	ಕ್ರಿಸ್ಟಲ್ ಪೇರೆಂಟಲ್ಸ್ (ಪ್ರೈ) ಲಿ, 48, ಎಂಇಜಿ ಆಫೀಸರ್ಸ್ ಕಾಲೋನಿ, ಬಾಣಸವಾಡಿ, ಬೆಂಗಳೂರು – 3
12.	ಟೈಗರ್ ಎಲೆಕ್ಟ್ರಿಕಲ್ಸ್ (ಪ್ರೈ) ಲಿ ಹೊಸಕೋಟೆ ಇಂಡಸ್ಟ್ರಿಯಲ್ ಬೆಂಗಳೂರು	ಜಗನ್ನಾಥ್ ಪಂಪ್ಸ್–ಪ್ರಿಂಟ್–(ಪ್ರೈ) ಲಿ, ನಂ. 238, ಲನೇ ಅಡ್ಡ ರಸ್ತೆ, 11ನೇ ಮೈನ್, ಎಚ್‌ಎಎಲ್, 11 ಸ್ಟೇಜ್, ಇಂದಿರಾನಗರ, ಬೆಂಗಳೂರು.
13.	ಟೈಟಾನ್ ಸ್ಪ್ರಿಂಗ್ಸ್ ಲಿ, ಹಿರೇಹಳ್ಳಿ, ಇಂಡಸ್ಟ್ರಿಯಲ್ ಏರಿಯ ತುಮಕೂರು	ಮದ್ರಾಸ್ ಸಸ್ಪೆನ್‌ಷನ್ (ಕರ್ನಾಟಕ) ಪ್ರೈ ಲಿ, ಹೊಸಕೋಟೆ ಇಂಡಸ್ಟ್ರಿಯಲ್ ಏರಿಯ, ಬೆಂಗಳೂರು ಜಿಲ್ಲೆ
14.	ಸಾಮ್ರಾಟ್ ಟ್ರಾನ್ಸ್‌ಡರ್ಸ್ ಅಂಡ್ ಮೇಜರ್‌ಮೆಂಟ್ ಪ್ರೈ ಲಿ. ಹೊಸಕೋಟೆ ಇಂಡಸ್ಟ್ರಿಯಲ್ ಏರಿಯ, ಬೆಂಗಳೂರು	ಮದ್ರಾಸ್ ಸಸ್ಪೆನ್‌ಷನ್ (ಕರ್ನಾಟಕ) ಪ್ರೈ ಲಿ, ಹೊಸಕೋಟೆ ಇಂಡಸ್ಟ್ರಿಯಲ್ ಏರಿಯಾ, ಬೆಂಗಳೂರು ಜಿಲ್ಲೆ
15.	ಇಂಟರ್‌ನ್ಯಾಷನಲ್ ಕೋಚ್ ಬಿಲ್ಡರ್ಸ್ ಪ್ರೈ ಲಿ, ಹೊಸಕೋಟೆ ಇಂಡಸ್ಟ್ರಿಯಲ್ ಏರಿಯ, ಬೆಂಗಳೂರು ಜಿಲ್ಲೆ	ವಹೇಜ ಡೆವಲಪ್‌ಮೆಂಟ್ ಕಾರ್ಪೋರೇಶನ್, ಎಂ. ಜಿ. ರೋಡ್, ಬೆಂಗಳೂರು
16.	ರೇಣು ಟೂಲ್ಸ್ (ಪ್ರೈ) ಲಿ. ಕೆಐಚ್‌ಟಿ ಕಾಂಪ್ಲೆಕ್ಸ್, ಸತ್ಯಮಂಗಲ, ಇಂಡಸ್ಟ್ರಿಯಲ್ ಏರಿಯ, ತುಮಕೂರು	ಲಕ್ಷ್ಮೀ ಇಂಡಸ್ಟ್ರಿಯಲ್ ಫ್ಲೋರ್, ಹಳೇ ಮದ್ರಾಸ್ ರಸ್ತೆ, ಬೆಂಗಳೂರು

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

(1) ಮೈಸೂರು ವಿ.ವಿ. ಕುಲಪತಿಯವರ ಬಗ್ಗೆ ಮೇಲಿನ ಆಪಾದನೆ.

† ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೇ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸನ್ಮಾನ್ಯ ಕುಲಪತಿಯವರಿಗೆ ಅನೇಕ ಚಾರ್ಜಸಗಳನ್ನು ಮಾಡಿ ಅಲ್ಲಿಯ ಮಾಜಿ ಸಿಂಡಿಕೇಟ್ ಸದಸ್ಯರು ಮತ್ತು ಜೆ.ಎಸ್.ಎಸ್. ಕಾಲೇಜಿನ ಪ್ರಾಧ್ಯಾಪಕರು ಸರ್ಕಾರಕ್ಕೆ ಮತ್ತು ಕುಲಸಚಿವರಿಗೆ ಮನವಿ ಮಾಡಿಕೊಂಡು ಇಂಥ ಕಾಲದೊಳಗೆ ನೀವು ತನಿಖೆಗೆ ವ್ಯವಸ್ಥೆ ಮಾಡದೆ ಹೋದರೆ ಆಮರಣಾಂತ ಉಪವಾಸ ಕುಳಿತುಕೊಳ್ಳುತ್ತೇವೆಂದು ಹೇಳಿದಾಗ ಕೂಡ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತು, ಕಳೆದ ತಿಂಗಳು 15ನೇ ತಾರೀಖು ಎಲ್ಲರ ಗಮನಕ್ಕೆ ತಂದಾಗಲೂ ಕೂಡ ಇವರು ಯಾವುದೋ ಒಂದು ದೃಷ್ಟಿಯಲ್ಲಿ ಇವತ್ತು ಆ ಮೇಸ್ಟ್ರು ಹೇಳುವುದರಲ್ಲಿ ಅರ್ಥವಿಲ್ಲ, ಸ್ಟೂಡೆಂಟ್ಸ್ ಅವರು ಉಪವಾಸ ಕುಳಿತಿರುವುದರಲ್ಲಿ ಯಾವ ಅರ್ಥವಿಲ್ಲ ಎಂದು ಹೇಳಿ ನಿರ್ಲಕ್ಷ್ಯ ಮಾಡಿದ್ದಾರೆ. ಆ ನಿರ್ಲಕ್ಷ್ಯದಿಂದ ಏನು ಸಮಸ್ಯೆ ಉದ್ಭವವಾಗಿದೆ ಎಂದರೆ ಆ ಮೇಸ್ಟರು ಇವತ್ತಿಗೆ ಮೂರನೇ ದಿವಸವಾಗುತ್ತಿದೆ ಉಪವಾಸ ಕುಳಿತುಕೊಂಡು ಆಕಸ್ಮಾತ್ ಅವರಿಗೆ ಏನಾದರೂ ಹೆಚ್ಚು ಕಡಿಮೆಯಾದರ ಅವರು ಮಾಡಿರುವ ಚಾರ್ಜಸ್‌ಗಳನ್ನು ಸರ್ಕಾರದವರು ಒಪ್ಪುತ್ತಾರಯೇ ಎಂದು ಕೇಳಬೇಕಾಗುತ್ತದೆ. ಅದರಲ್ಲಿ ಪ್ರಮುಖವಾಗಿ ಚಾರ್ಜನ್ನು ಮಾಡಿರುವುದು ಸರ್ಕಾರಕ್ಕೆ ವಿರುದ್ಧವಾಗಿ. ವೈದ್ಯಕೀಯ ಪರೀಕ್ಷೆಯಲ್ಲಿ

ಯಾರೋ ಪ್ರೈಂಮಿನಿಸ್ಟಲ್ ಆಫೀಸಿನಲ್ಲಿರುವವರಿಗೆ ಯುನಿವರ್ಸಿಟಿಯಲ್ಲಿ ಅವಕಾಶವಿಲ್ಲದಿದ್ದರೂ ಮೂರು ಎಕ್ಸಾಮಿನೇಷನ್ಸನ್ನೂ ಮಾಡಿದ್ದಾರೆ. ಮತ್ತೆ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿ ಇದ್ದಂಥ ಮಣ್ಣನ್ನು ಯಾರಿಗೂ ಹೇಳದೆ ಕೇಳದೆ ರೈಲ್ವೆ ಇಲಾಖೆಯವರಿಗೆ ಮಾರಿದ್ದಾರೆ. ಮತ್ತು ದಂತ ಕಾಲೇಜಿನಲ್ಲಿ ಅಟೆಂಡೆನ್ಸ್ ಇಲ್ಲದವರಿಗೆ ನೀವು ಪರೀಕ್ಷೆಗೆ ಕೂಡಿಸಿ ಎಂದು ಕಾಗದ ಬರೆದು ವೈಸ್ ಚಾನ್ಸಲರಿಗೆ ಕೊಡುತ್ತಾರೆ ಎನ್ನುವ ಚಾರ್ಜಸ್‌ಗಳನ್ನು ಕೂಡ ಕೊಟ್ಟರೆ ಈ ಸರ್ಕಾರದವರು ಗಮನವನ್ನು ಕೊಡದೆ ಒಬ್ಬ ಮೇಷ್ಟ್ರ ಜೀವ ಕಳೆಯುತ್ತಿದ್ದಾರೆ. ಅವರು ಮಾಜಿ ಸಿಂಡಿಕೇಟ್ ಸದಸ್ಯರು, ಅವರು ಪ್ರೊಫೆಸರ್, ಅವರು ಅಕಾಡೆಮಿಕ್ ಕೌನ್ಸಿಲರ್ ಎಲೆಕ್ಟ್ ಆದವರು, ಅಕಾಡಮಿಕ್‌ಗೆ ಎಲೆಕ್ಷನ್ ಕಾನ್ಸಿಟ್ಯೂಯನ್ಸಿ ಮಾಡಲಿಕ್ಕೆ ಇವತ್ತಿನವರೆಗೆ ಮೈಸೂರು ಯೂನಿವರ್ಸಿಟಿಯವರು ತಯಾರಾಗಿಲ್ಲ. ಎಂಟು ಜನ ಯಾವ ರೀತಿ ಎಲೆಕ್ಟಾಗಿ ಬರಬೇಕು. ಬೇರೆ ಯೂನಿವರ್ಸಿಟಿ ಅಂದರೆ ಕುವೆಂಪು ಯೂನಿವರ್ಸಿಟಿ, ಅಥವಾ ಬೆಂಗಳೂರು ಯೂನಿವರ್ಸಿಟಿಯಲ್ಲಿ ಆದ ಎಲೆಕ್ಷನ್‌ಗಳಂತೆ ಇಲ್ಲಿ ಮಾಡಿ ಎಂದರೆ ಅದಕ್ಕೂ ವೈಸ್ ಚಾನ್ಸಲರ್ ತಯಾರಾಗಿಲ್ಲ. ಔಟ್ ಸೈಡ್ ದಿ ಸಿಂಡಿಕೇಟ್ ವ್ಯವಹಾರಗಳನ್ನು ತಾವೇನಾದರೂ ಮಾಡುತ್ತೀರಾ ಎಂದು ಕೇಳಿದರೆ ಸರ್ಕಾರದವರು ಏನೂ ಮಾಡಲಿಲ್ಲ. ತಮ್ಮ ಮೂಲಕ ಸರ್ಕಾರದವರನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ, ಈ ಸಮಸ್ಯೆಗೆ ತಾವು ಏನು ಪರಿಹಾರ ಕೊಡುತ್ತೀರಿ ? ಈ ಸಮಸ್ಯೆಗೆ ಸರ್ಕಾರ ಏನು ಆಕ್ಷನ್ ತೆಗೆದುಕೊಳ್ಳುತ್ತಿದೆ ? ಆ ಮೇಷ್ಟ್ರು ಚಂದ್ರಪ್ಪನವರಿಗೆ ಏನು ಹೇಳುತ್ತಾರೆ. ಆಕಸ್ಮಾತ್ ಅವರಿಗೆ ಏನಾದರೂ ಪ್ರಾಣಾಪಾಯವಾದರೆ ಅದಕ್ಕೆ ಯಾರು ಜವಾಬ್ದಾರರೆಂದು ಹೇಳಬೇಕು ? ಸರ್ಕಾರದವರೇ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ತಮಗೆ ಬೇಕಾದಷ್ಟು ಮನವಿಗಳನ್ನು ಕೊಟ್ಟಿದ್ದಾರೆ, ಕೌನ್ಸಿಲ್‌ನಲ್ಲಿ ಇದರ ಬಗ್ಗೆ ಪ್ರಶ್ನೆ ಬಂದಿದೆ. ಕೌನ್ಸಿಲ್‌ನಲ್ಲಿ ತಾವು ಉತ್ತರವನ್ನು ಕೊಟ್ಟಿದ್ದೀರಿ. ತಾವು ಇದಕ್ಕೆಲ್ಲ ಒಂದೇ ಒಂದು ಸಣ್ಣ ಪ್ರತ್ಯುತ್ತರವನ್ನೂ ಕೂಡ ಮಾಡಿಲ್ಲ. ನೀವು ಆ ಯೂನಿವರ್ಸಿಟಿಯ ಬಗ್ಗೆ ಇರುವ ಆರೋಪಗಳನ್ನು ತನಿಖೆ ಮಾಡಿಸುತ್ತೀರಾ, ಇಲ್ಲವೇ ತನಿಖೆ ಆರಂಭ ಮಾಡಲಾಗುವುದಕ್ಕಾಗಿ ಒಂದು ಶೋಕಾಸ್ ನೋಟೀಸ್ ಕೊಡುವಷ್ಟು ಕೃಪೆ ತೋರಿಸಲಿ ಎಂದು ನಾನು ಕೇಳಬಯಸುತ್ತೇನೆ. ಸರ್ಕಾರದವರು ಏನಾದರೂ ಆಶ್ರಯ ಕೊಟ್ಟುಬಿಟ್ಟು ಈ ರೀತಿ ನಡೆಸುತ್ತಾ ಇದ್ದೀರಾ ಅಥವಾ ಮೈಸೂರು ಯೂನಿವರ್ಸಿಟಿ ಚೆನ್ನಾಗಿ ನಡೆಯುವುದು ತಮಗೆ ಬೇಡವೇ ಎಂದು ಕೇಳಬಯಸುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್:– ಮಾನ್ಯ ಅಧ್ಯಕ್ಷರೇ ಈಗ ಅಲ್ಲಿರತಕ್ಕಂಥ ಉಪಕುಲಪತಿಯವರು ಬಹಳ ಶಿಸ್ತಿನಿಂದ ಕೆಲಸ ಮಾಡುತ್ತಿದ್ದಾರೆ. ಅವರ ಬಗ್ಗೆ ಮೈಸೂರು ಜಿಲ್ಲೆಗೆ ಅಷ್ಟೇ ಅಲ್ಲ ಕರ್ನಾಟಕ ರಾಜ್ಯಕ್ಕೆ ಗೊತ್ತಿದೆ. ಅವರು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಅಲ್ಲಿ ಯಾವಾಗಲೂ ಈ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಕೊರತೆ ಇದ್ದೇ ಇರುತ್ತದೆ. ಅವರು ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಜಿ. ಪಿ. ಮಾಧುಸ್ವಾಮಿ:– ಅಲ್ಲಿ ಆಮರಣಾಂತ ಉಪವಾಸ ಮಾಡುತ್ತಿದ್ದಾರೆ. ನಿಮ್ಮ ಸರ್ಕಾರಕ್ಕೆ ಯೋಗ್ಯತೆ ಇದ್ದರೆ ಒಂದು ವಿಚಾರಣೆ ಮಾಡಲಿಕ್ಕೆ ಏನು ತೊಂದರೆ ಎಂದು ನಾನು ಹೇಳುತ್ತಿದ್ದೇನೆ. ವಿಚಾರಣೆ ಮಾಡಿರಿ, ಏನು ಮಾತನಾಡುತ್ತಿದ್ದೀರಿ ?

ಅಧ್ಯಕ್ಷರು:– ಮಾನ್ಯ ಮಾಧುಸ್ವಾಮಿಯವರೇ ತಾವು ಪ್ರಸ್ತಾಪ ಮಾಡಿದ್ದೀರಿ, ತಾವು ಕುಳಿತುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೇ ಗೌರವಾನ್ವಿತ ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು ಎತ್ತಿರತಕ್ಕಂಥ ವಿಷಯದ ಬಗ್ಗೆ ನಾನು ಧ್ವನಿಗೂಡಿಸಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ವಿರುದ್ಧವಾಗಿ ಅಲ್ಲಿರತಕ್ಕಂಥ ಅಧ್ಯಾಪಕ ವರ್ಗದವರಲ್ಲಿ ಕೆಲವರು ಮತ್ತು ವಿದ್ಯಾರ್ಥಿಗಳು ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದಾರೆ. ಉಪಕುಲಪತಿಗಳ ಬಗ್ಗೆ ಕೆಲವು ಗುರುತರವಾದ ಆಪಾದನೆಗಳನ್ನು ಮಾಡಿದ್ದಾರೆ. ಪರಿಸ್ಥಿತಿ ಇದೇ ರೀತಿಯಲ್ಲಿ ಮುಂದುವರಿದರೆ

ವಿಶ್ವವಿದ್ಯಾನಿಲಯದ ಅಕಾಡಮಿಕ್ ಅಟ್ಮಾಸ್ಫೀಯರ್ ಏನಿದೆ, ಶೈಕ್ಷಣಿಕ ವಾತಾವರಣ ಏನಿದೆ ಅದು ಕಲುಷಿತಗೊಳ್ಳತಕ್ಕಂಥ ಒಂದು ಸಂದರ್ಭ ಅಲ್ಲಿ ನಿರ್ಮಾಣವಾಗುತ್ತಿದೆ. ಈಗ ಕುಲಪತಿಗಳ ಬಗ್ಗೆ ವಿದ್ಯಾರ್ಥಿಗಳಾಗಲಿ, ಅಧ್ಯಾಪಕರುಗಳಾಗಲಿ ಮಾಡಿರತಕ್ಕಂಥ ದೂರು ಏನಿದೆ ಆ ದೂರಿನಲ್ಲಿ ಎಷ್ಟು ಹುರುಳಿದೆ, ಸತ್ಯಾಂಶ ಎಷ್ಟಿದೆ ಎನ್ನುವ ಬಗ್ಗೆ ತಾವು ನಮಗೆ ತಿಳಿಸಬೇಕಾಗುತ್ತದೆ. ಆದರೆ ಒಂದಂತು ನಿಜ. ಅಲ್ಲಿರತಕ್ಕಂಥ ಗೌರವಾನ್ವಿತ ಅಧ್ಯಾಪಕರ ವರ್ಗದವರು ಅಮರಣಾಂತ ಉಪವಾಸ ಮಾಡತಕ್ಕಂಥ ಕೊನೆ ಘಟ್ಟವನ್ನು ಅವರು ತಲುಪಿದ್ದಾರೆ. ಇಂಥ ಸಂದರ್ಭಗಳಲ್ಲಿ ನಮ್ಮ ಸರ್ಕಾರ ಇದಕ್ಕೆ ನಿಷ್ಕ್ರಿಯವಾಗಿದೆ.

ವಿಶ್ವವಿದ್ಯಾನಿಲಯಗಳು ನಿಯಮಾವಳಿಗಳಿಗನುಸಾರವಾಗಿ ನಡೆಯದೇ ಇದ್ದ ಸರ್ಕಾರಕ್ಕೆ ಈ ರೀತಿ ಆಪಾದನೆಗಳು ಬಂದಾಗ ಕ್ರಮ ಕೈಗೊಳ್ಳುವುದಕ್ಕೆ ತಾವು ನಿಸ್ಸಹಾಯಕರಾಗಿದ್ದೀರಾ ? ತಮಗೆ ಜ್ಞಾಪಕ ಇರಬಹುದು, ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಬಗ್ಗೆ ದೇಶಪಾಂಡೆಯವರು, ಬೈರೇಗೌಡರು, ನಾನು ಒಂದು ಆಪಾದನೆಯನ್ನು ಈ ಸದನದಲ್ಲಿ ಮಾಡಿದೆವು. ಆದರೆ ಆ ಕುಲಪತಿಗಳು ಯಾವ ಒಂದು ಧೋರಣೆಯಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಅದು ಕುಲಪತಿಗಳ ಸ್ಥಾನಕ್ಕೆ ಗೌರವ ತರತಕ್ಕ ವಿಚಾರ ಅಲ್ಲ. ಬಹಳ ದುಃಖದ ವಿಚಾರ. ಕಳೆದ ಅಧಿವೇಶನದ ಸಂದರ್ಭದಲ್ಲಿ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು. ಇದುವರೆಗೆ ಹೇಳಿಕೆ ಕೊಡುವುದಕ್ಕಾಗಲಿಲ್ಲ. ಅವರು ಇವತ್ತು ಹೊರಟುಹೋಗಿದ್ದಾರೆ. ಅದು ಸತ್ಯ ವಿಚಾರ. ಆದರೆ ಆವತ್ತಿನ ಕುಲಪತಿಗಳ ಮೇಲೆ ನಾವು ಮಾಡಿರತಕ್ಕ ಆಪಾದನೆಗಳು ಗುರುತರವಾದವು ಅದರಿಂದ ನಾವು ಸರ್ಕಾರದಿಂದ ಬಯಸತಕ್ಕದ್ದು ಒಂದು, ಅಲ್ಲಿರತಕ್ಕ ಶೈಕ್ಷಣಿಕ ವಾತಾವರಣವನ್ನು ಹಾಳು ಮಾಡುವುದಕ್ಕೆ ನಾವು ಯಾರೂ ಪ್ರಯತ್ನ ಮಾಡುವುದಿಲ್ಲ. ತಾವು ಇದರ ಬಗ್ಗೆ ಏನು ಮಾಡಬೇಕೆಂದು ತಿಳಿಸಬೇಕಾಗುತ್ತದೆ. ಸರ್ಕಾರದವರು ಏನು ಮಾಡುವವರಿದ್ದೀರಿ ಅಥವಾ ನಿಸ್ಸಹಾಯಕರಾಗಿದ್ದೀರಾ. ನಾವು ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದು, ಯಾರು ಅಮರಣಾಂತ ಉಪವಾಸ ಮಾಡುತ್ತಿದ್ದಾರೆ ಅಧ್ಯಾಪಕರನ್ನು ದಯವಿಟ್ಟು ಕರೆಸಿ ಅಥವಾ ಈ ಸದನದಿಂದ ಅವರಿಗೆ ಅಪೀಲು ಮಾಡಿಕೊಳ್ಳಿ, ಆದಾದನಂತರ ವಿಚಾರಣೆ ಮಾಡಿ ಎಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ:– ಮಾಧುಸ್ವಾಮಿಯವರು ಹೇಳಿರತಕ್ಕ ವಿಚಾರಗಳಲ್ಲಿ ಸ್ಪಂದಿಸಿ ಎರಡು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸರ್ಕಾರ ಅಸೆಂಬ್ಲಿ ಕಮಿಟ್ಸ್ ಆದ ಮೇಲೆ ಯಾವ ರೀತಿ ನಡೆಯುತ್ತಿದೆ ಎಂದು ವಿಚಾರ ಮಾಡಬೇಕಾಗಿದೆ. ಎಲ್ಲಾ ಉತ್ತರಗಳನ್ನು ಒಬ್ಬರೇ ಮಂತ್ರಿಗಳು ಕೊಡುತ್ತಾರೆ. ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಆಶ್ವಾಸನೆ ಕೊಡುತ್ತೀರಾ ಎಂದು ಕೇಳಿದರೆ ಪರಿಶೀಲಿಸುತ್ತೇವೆಂದು ಹೇಳುತ್ತಾರೆ. ಕೆಎಸ್‌ಆರ್‌ಟಿಸಿ ಇರಬಹುದು, ಎಜುಕೇಷನ್ ಇರಬಹುದು, ಯಾವುದೇ ಇರಬಹುದು. ನಮಗೆ ಯಾಹ್ಯಾ ಅವರ ಬಗ್ಗೆ ಅಪಾರವಾದ ಗೌರವ ಇದೆ. ಅವರು ಬಹಳ ಅನುಭವಿಗಳು. ಆದರೆ ಅನೇಕ ಸಾರಿ ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದರೂ ಆ ಪ್ರಾಧ್ಯಾಪಕರಿಂದ ಸರ್ಕಾರಕ್ಕೆ ಅನೇಕ ಪ್ರತಿಭಟನಾ ಮನವಿಗಳು ಬಂದಿದ್ದರೂ ಸರ್ಕಾರ ಒಂದು ಚೂರು ಕಣ್ತೆರೆದು ನೋಡುವುದಕ್ಕೆ ಪ್ರಯತ್ನ ಮಾಡಲಿಲ್ಲ. ಅವರು ಮಾಡತಕ್ಕದ್ದರಲ್ಲಿ ಸತ್ಯಾಂಶ ಇದೆಯೋ ನಿಜವೇ, ಸುಳ್ಳೇ ಎಂದು ಪರಿಶೀಲಿಸಿ, ನೀವು ತಪ್ಪು ಮಾಡುತ್ತಿದ್ದೀರಿ, ಅಥವಾ ಸರಿ ಇದೆ ಎಂದು ಉತ್ತರಿಸಬೇಕಾಗಿತ್ತು. ಆ ವ್ಯವಸ್ಥೆ ಅವ್ಯವಸ್ಥೆ ಆದರೆ ಯಾರಿಗೆ ತೊಂದರೆ ? ಹುಡುಗರಿಗೆ ತೊಂದರೆ, ಯೂನಿವರ್ಸಿಟಿಯವರಿಗೆ ತೊಂದರೆ, ಸರ್ಕಾರಕ್ಕೂ ಕೂಡ ಒಂದು ರೀತಿಯ ಮುಜುಗರ. ಆ ಬಗ್ಗೆ ಇದುವರೆಗೆ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ಆದಕ್ಕಾಗಿ ಕೇಳುವುದಿಷ್ಟೆ: ಆ ವಿಚಾರದಲ್ಲಿ ಯಾವುದೇ ರೀತಿಯಲ್ಲಾದರೂ ಇತ್ಯರ್ಥ ಮಾಡಬೇಕು, ಸರ್ಕಾರ ಒಪ್ಪಿಕೊಳ್ಳಲಿ. ತಪ್ಪು ಮಾಡಿಲ್ಲ ಅಂದರೆ ಅವರಿಗೆ [illegible] ಮಾಡುವುದಕ್ಕೆ ತೊಂದರೆ ಏನು ? ಆ ಬಗ್ಗೆ ವಿಚಾರಣೆ ಮಾಡಿ

ಕ್ರಮವನ್ನು ತೆಗೆದುಕೊಂಡು ಸಮಸ್ಯೆಯನ್ನು ಇತ್ಯರ್ಥ ಪಡಿಸುವುದಕ್ಕೆ ತಾವು ತಯಾರಿದ್ದೀರಾ ? ಎಂದು ಸರ್ಕಾರಕ್ಕೆ ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ:- ಮಾನ್ಯ ಅಧ್ಯಕ್ಷರೆ, ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಮೇಲೆ ನಮ್ಮ ಸ್ನೇಹಿತರು ಒಂದೆರಡು ವಿಚಾರಗಳನ್ನು ಹೇಳಿದ್ದಾರೆ. ಮಾನ್ಯ ಸಿಂಧ್ಯರವರು ಬಹಳ ಉತ್ತಮವಾದ ಮಾತು ಹೇಳಿದ್ದಾರೆ. ಶೈಕ್ಷಣಿಕ ವಾತಾವರಣವನ್ನು ಕೆಡಿಸಬಾರದು ಎಂದು ಹೇಳಿದ್ದಾರೆ. ಯೂನಿವರ್ಸಿಟಿ ನಡೆಯುವಾಗ ಅದರದ್ದೇ ಆದ ಒಂದು ನೀತಿ ಮಟ್ಟ ಇರುತ್ತದೆ. ಯಾವುದೇ ಕುಲಪತಿ ಮೇಲೆ ಈ ರೀತಿ ಎಲ್ಲಾ ಕಂಪ್ಲೈಂಟ್ ಮಾಡಿಕೊಂಡು ಹೋದರೆ ಯೂನಿವರ್ಸಿಟಿ ನಡೆಸುವುದಕ್ಕೆ ಸಾಧ್ಯವಿಲ್ಲ. ಈ ವಿಚಾರದಲ್ಲಿ ಹಲವಾರು ಕಂಪ್ಲೇಂಟ್ ಬಂದಾಗ ನಾನು ಸ್ವತಃ ಹೋಗಿ ನೋಡಿ ಬಂದವನು. ಇವರಿಗೆ ಸಹಾಯ ಮಾಡಬೇಕು, ಅವರಿಗೆ ಸಹಾಯ ಮಾಡಬೇಕೆಂದು ಇಲ್ಲ. ಆದರೆ ಅಲ್ಲಿಯ ವಾತಾವರಣವನ್ನು ಯಾರೂ ಕೆಡಿಸಬಾರದು. ಅದಕ್ಕೆ ತಾವು ಸಹಕಾರಿಯಾಗಿರಬೇಕೇ ಹೊರತು ಆ ವೈಸ್ ಛಾನ್ಸಲರ್ ಮೇಲೆ ನೀವು ಹೇಳುವುದು ಅಲ್ಲ. ಮೈಸೂರು ಜಿಲ್ಲೆಯ ಎಲ್ಲರೂ ಇವರನ್ನು ಒಳ್ಳೆಯ ವೈಸ್ ಛಾನ್ಸಲರ್ ಎಂದು ಹೇಳುತ್ತಾರೆ. ಆ ಕಾರಣದಿಂದ ನೀವು ಹೇಳಿದ್ದು ತಪ್ಪು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಯೋಚನೆ ಮಾಡಬೇಕು, ಈ ರೀತಿ ನಾವು ಅಲಿಗೇಷನ್ ಮಾಡಿಕೊಂಡು ಹೋಗುವುದಾದರೆ ಅಪರಾಧ ಮಾಡುತ್ತಾ ಹೋದರೆ ಯಾವ ವೈಸ್ ಚಾನ್ಸಲರ್ ತಾನೇ ಇರುವುದಕ್ಕೆ ಸಾಧ್ಯವಿದೆ ? ಯಾರೂ ಇರುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅಲಿಗೇಷನ್ ಮಾಡುವುದರಿಂದ ಇಂಡಿಸಿಪ್ಲೈನ್ ಆಗುತ್ತದೆ, ಟೀಚರ್ ಇಂಡಿಸಿಪ್ಲೀನ್ ಆಗುತ್ತದೆ, ಸ್ಟೂಡೆಂಟ್ಸ್ ಇಂಡಿಸಿಪ್ಲೀನ್ ಆಗುತ್ತದೆ. ವೈಸ್ ಛಾನ್ಸಲರ್ ಕೆಲಸ ಮಾಡುವುದಕ್ಕೆ ಅಸಾಧ್ಯವಾಗುತ್ತದೆ. ಅದಕ್ಕಾಗಿ ವಿಚಾರದಲ್ಲಿ ನನ್ನ ಮನಸ್ಸಿನಲ್ಲಿ ಇದ್ದುದ್ದನ್ನು ಆ ಮನೆಯಲ್ಲಿ ಹೇಳಿದೆ, ನಾನು ಸ್ವಂತವಾಗಿ ಯೋಚನೆ ಮಾಡ ಬರುತ್ತೇನೆಂದು ಹೇಳಿದ್ದೇನೆ.

ಎರಡನೆಯದಾಗಿ, ರೀಡರ್ ಚಂದ್ರಪ್ಪನವರು ಕೇಳದೇ, ಹೇಳದೇ, ಪರ್ಮಿಷನ್ ತೆಗೆದುಕೊಳ್ಳದೇ ಅಡ್ಮಿನಿಸ್ಟ್ರೇಟಿವ್ ಆಫೀಸ್ ಎದುರು ಟೆಂಟ್ ಹಾಕಿ ಪೆಂಡಾಲ್ ಹಾಕಿ ನಡೆಸಿದ್ದು ಇಡೀ ಟೀಚರ್ಸ್ ಕಮ್ಯುನಿಟಿಗೆ ವ್ಯಸನ ತರುವ ವಿಚಾರ. ಅವರು ಪರ್ಮಿಷನ್ ಕೇಳಿಲ್ಲ. ಅವರು ಕಾನ್‌ಸ್ಟ್ಯುಯೆಂಟ್ ಕಾಲೇಜ್‌ನಲ್ಲಿ ರೀಡರ್ ಇದ್ದಾರೆ. ಅವರು ಅಲ್ಲಿ ಕುಳಿತು ಆಮರಣಾಂತ ಉಪವಾಸ ಸತ್ಯಾಗ್ರಹ ಎಂದು ಹೇಳಿಬಿಟ್ಟರೆ, ಅದು ಖಂಡಿತವಾಗಿ ಶೈಕ್ಷಣಿಕ ಮಟ್ಟಕ್ಕೆ ಯಾವ ಗೌರವ ತರುವ ವಿಚಾರ ಅಲ್ಲ. ಈ ರೀತಿ ಆಗಬಾರದಾಗಿತ್ತು. ಟೀಚರ್ಸ್‌ಗಳೇ ವೈಸ್ ಛಾನ್ಸಲರ್ ಮೇಲೆ ಸಾಯುವವರೆಗೆ ಸತ್ಯಾಗ್ರಹ ಮಾಡುತ್ತೇವೆಂದರೆ ಅದು ನನಗೆ ಬಹಳ ಬೇಸರವಾಯಿತು. ನಾನು ವಿದ್ಯಾ ಕ್ಷೇತ್ರದಲ್ಲಿ ತಾಳ್ಮೆಯಿಂದ ವಿಚಾರ ಮಾಡುವವನು. ಟೀಚರ್ಸ್ ಕಮ್ಯುನಿಟಿಯಲ್ಲಿ ಬಹಳ ಒಳ್ಳೆಯ ಪ್ರೊಫೆಸರ್ಸ್, ರೀಡರ್ಸ್ ಇದ್ದಾರೆ. ಕೆಲವರು ಈ ರೀತಿ ಮಾಡಿಕೊಂಡು ಹೋದರೆ ಯಾವ ಮಟ್ಟಕ್ಕೆ ನಾವು ಹೋಗುತ್ತಿದ್ದೇವೆಂದು ನನಗೆ ಆಶ್ಚರ್ಯವಾಗುತ್ತದೆ. ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಅವಕಾಶ ಕೊಡಬಾರದು. ಈ ರೀತಿ ಮಾತನಾಡಿಕೊಂಡು ಹೋದರೆ ಅಲ್ಲಿಯ ವಾತಾವರಣ ಪುನಃ ಕೆಡುತ್ತದೆ. ನನ್ನ ಮೇಲೆ ನಂಬಿಕೆ ಇಡಿ, ಏನಾದರೂ ವಿಚಾರ ಇದ್ದರೆ ನಾನು ಮುಂದೆ ನಿಂತು ಸ್ವತಃ ಮಾಡುತ್ತೇನೆಯೇ ಹೊರತು ಇದರ ಮೇಲೆ ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮಾಸ್ಟರ್‌ಗೆ ಪ್ರೊಟೆಸ್ಟ್ ಮಾಡುವ ಅಧಿಕಾರ ಇಲ್ಲ ಎಂದು ಹೇಳುವ ಮಾತನ್ನು ಮಾನ್ಯ ಮಂತ್ರಿಗಳಿಂದ ನಾನು ನಿರೀಕ್ಷೆ ಮಾಡಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಬ್ಬರಿಗೆ 16 ನಂಬರ್ ಬಂದು ಥರ್ಡ್ ವ್ಯಾಲ್ಯುಯೇಷನ್‌ಗೆ ಹೋಗಿದೆ; ಸೆಕೆಂಡ್ ವ್ಯಾಲ್ಯುಯೇಷನ್‌ಗೆ ಹಾಕದೆ ಥರ್ಡ್ ವ್ಯಾಲ್ಯುಯೇಷನ್‌ಗೆ ಅವಕಾಶ ಇಲ್ಲ

LA - Vol - 4

ಎನ್ನುವ ಕಡೆ 16 ನಂಬರ್ ಕೊಟ್ಟು ನಿಮ್ಮ ಪ್ರೈಮಿನಿಸ್ಟರ್ ಆಫೀಸಿನಲ್ಲಿ ಇರುವ ಯಾರೋ ಅಧಿಕಾರಿ ಮಗನಿಗೆ, ಅದಾದ ಮೇಲೆ 17 ನಂಬರ್ ಕೊಡಿಸಿ, ಅದಾದ ಮೇಲೆ 21 ನಂಬರ್ ಕೊಟ್ಟು, ನೀವು ಕೋಡಿಂಗ್ ಕೊಡಬೇಡಿ ಎಂದು ಕೋಡಿಂಗ್ ಕೊಡುವವನಿಗೆ ಯಾವ್ಯಾನಿಗೋ ಹೆಲ್ತ್ ಅಪ್ ಮಾಡಿಸಿ, ಕಂಟ್ರೋಲರ್ ಕರೆದು ನೀನು ಕೋಡ್ ಮಾಡು ಎಂದು ಹೇಳಿ 21 ನಂಬರ್ ಕೊಡಿಸಿ, ಸಬ್ಜೆಕ್ಟ್‌ಂಟ್ ಸವೆಂತ್ ಸೆಮಿಸ್ಟರ್‌ನಲ್ಲಿ ಪರೀಕ್ಷೆ ಕುಳಿತುಕೊಂಡತಂಹ ಒಬ್ಬ ಹುಡುಗನಿಗೆ ನೀವು ಹೀಗೆ ಮಾಡಿದ್ದೀರಿ ಎಂದು ನಿಮ್ಮ ವೈಸ್ ಚಾನ್ಸಲರ್‌ಗೆ ಕೇಳುವುದು ತಪ್ಪು ಎಂದರೆ, ನಾವು ಈ ಸದನದಲ್ಲಿ ಕೇಳಲ್ಲ. ಎರಡನೆಯದಾಗಿ, ನೀವು ಜೆ. ಎಸ್. ಎಸ್. ಕಾಲೇಜಿನ ಕಡತವನ್ನು ತೆಗೆಸಿ ಡೆಂಟಲ್ ಸ್ಟೂಡೆಂಟ್ಸ್‌ಗೆ ಅಟೆಂಡೆನ್ಸ್ ಇಲ್ಲಾ ಎಂದು ಜೆ. ಎಸ್. ಎಸ್. ಕಾಲೇಜು ರಿಜೆಕ್ಟ್ ಮಾಡಿದವರಿಗೆ ಎಕ್ಸಾಮಿನೇಷನ್‌ಗೆ ಕೂಡಿಸಿ ಎಂದು ವೈಸ್ ಛಾನ್ಸಲರ್ ಬರೆದು ಕಳುಹಿಸುತ್ತಾರೆ. ಇಂತಹ ವೈಸ್ ಛಾನ್ಸಲರ್‌ಗೆ ತಾವು ಕಿರೀಟ ಕೊಟ್ಟು ಕುಳ್ಳಿರಿಸುವುದಾದರೆ ಆ ಕಿರೀಟಕ್ಕೆ ತಾವೇ ಪ್ರಾಪ್ತರು ಎಂದು ನಾನು ಭಾವಿಸುತ್ತೇನೆ ಸನ್ಮಾನ್ಯ ಯಾಹ್ಯಾ ಅವರೇ.

ದುರಾದೃಷ್ಟವಶಾತ್ ಮೈಸೂರಿನಲ್ಲಿ ಪಬ್ಲಿಷ್ ಆಗುವ ಪತ್ರಿಕೆಗಳು ಬೆಂಗಳೂರಿಗೆ ಬರುತ್ತಾ ಇಲ್ಲ. ಆ ಭಾಗದಲ್ಲಿ ಮಾತ್ರ ಅವು ಸರ್ಕ್ಯುಲೇಟ್ ಆಗುತ್ತವೆ. ಅವನ್ನು ತಾವು ಸ್ವಲ್ಪ ತರಿಸಿ ಓದಬೇಕಾಗಿದೆ. ಇಡೀ ಜಿಲ್ಲೆ ಹೊಗಳಬೇಕಾದುದು ಇರಲಿಲ್ಲ. ವೈಸ್ ಛಾನ್ಸಲರ್ ಅಕ್ಯಾಡಮಿಕ್ ಪರ್ಸನ್ ಅವರು. ನಮಗೂ ಸಂತೋಷ ಇತ್ತು. ಮಾದಯ್ಯನವರನ್ನು ನಾವು ಬಹಳ ಗೌರವಿಸುತ್ತಿದ್ದವರು. ಆದರೆ ಯಾವ ಸ್ಥಿತಿಗೆ ಹೋಗಿದ್ದಾರೆ ? ಎಷ್ಟು ಟೂರ್ ಮಾಡಿದ್ದಾರೆ ? ಪ್ಲಾಟಿನಂ ಜ್ಯೂಬಿಲಿಯನ್ನು ಇನ್ನೂ 3 ವರ್ಷ ಕಂಟಿನ್ಯೂ ಮಾಡುತ್ತೇನೆಂದು ಡೆಲ್ಲಿಗೆ ಎಷ್ಟು ಸಾರಿ ಹೋಗಿದ್ದಾರೆಂದು ಮಾಹಿತಿ ಕೊಡುತ್ತೀರಾ ? ಅಶೋಕಾ ಹೋಟೆಲನಲ್ಲಿ ಎಷ್ಟು ಸಾರಿ ಉಳಿದಿದ್ದಾರೆ ಎಂದು ಮಾಹಿತಿ ಕೊಡುತ್ತೀರಾ ? ದೆಹಲಿಯ ಕರ್ನಾಟಕ ಭವನದಲ್ಲಿ ಏಕೆ ಇರಲಿಲ್ಲ ? ನೀವು ರೈಲ್ವೇನವರಿಗೆ ಮರಳು ಮಾರಿದಿರಿ. ಕೆಂಪು ಮಣ್ಣು ಯೂನಿವರ್ಸಿಟಿಯಲ್ಲಿ ಗುಂಡಿ ಹಾಕಿ ಯಾರನ್ನು ಕೇಳಿ ಮಾರಿದರು ಎಂದು ಮಾಹಿತಿ ತರಿಸಿ ಕೊಡುತ್ತೀರಾ ? ತಾವು ಸಚಿವರು ಒಬ್ಬ ವ್ಯಕ್ತಿ ಬಗ್ಗೆ ಏಕಾ ಏಕಿ ಪ್ರಶಂಸೆ ಮಾಡಬಾರದು. ಒಬ್ಬ ಸದಸ್ಯ ಛಾರ್ಜ್ ಮಾಡುತ್ತಿದ್ದೇನೆ ಎಂದ ಮೇಲೆ ವಿಚಾರ ಮಾಡುತ್ತೇವೆ ಎನ್ನುವ ಸೌಜನ್ಯ ಇಲ್ಲ ಎಂದರೆ ತಾವು ಏಕೆ ಅವರನ್ನು ವಹಿಸಿಕೊಳ್ಳುತ್ತೀರಿ ? ತಮ್ಮ ಮುಖ್ಯಮಂತ್ರಿಗಳಿಗೆ ಡಾಕ್ಟರೇಟ್, ಕೊಟ್ಟರು ಎಂದು ವಹಿಸಿಕೊಳ್ಳುತ್ತಿದ್ದೀರಾ ? ನಮಗೆ ಗೊತ್ತಿದೆ. ಅಥವಾ ಅವರು ಇನ್ನೇನು ಮಾಡಿದರು ಎಂದು ವಹಿಸಿಕೊಳ್ಳುತ್ತಿದ್ದೀರಿ ನಮಗೆ ಗೊತ್ತಿದೆ. ಡಾಕ್ಟರೇಟ್‌ನ್ನು ಮೈಸೂರು ವಿಶ್ವವಿದ್ಯಾನಿಲಯದವರು ಕೊಟ್ಟಿದ್ದರಿಂದ ತಾವು ವಹಿಸಿಕೊಳ್ಳಬೇಕಾಗುತ್ತದೆ. ಅಧ್ಯಕ್ಷರೇ, ತಾವು ನನ್ನ ರಕ್ಷಣೆಗೆ ಬರಬೇಕು. ಒಬ್ಬ ಮಾಸ್ಟರ್ ಪ್ರೊಟೆಸ್ಟ್ ಮಾಡಬಾರದು ಎಂದರೆ ಹೇಗೆ ? ಅವರು ಸಿಂಡಿಕೇಟ್ ಮೆಂಬರ್ ಆಗಿದ್ದರು, ಅಕ್ಯಾಡಮಿಕ್ ಕೌನ್ಸಿಲ್ ರೆಪ್ರೆಸೆಂಟೇಟೀವ್ ಆಗಿದ್ದರು. ಅಕಾಡಮಿಕ್ ಕೌನ್ಸಿಲ್‌ಗೆ ಇವತ್ತು ಎಲೆಕ್ಷನ್ ಆಗಿಲ್ಲ. ಬೇಕಾದರೆ ಗುರುದೇವ್ ಅವರು ಹೇಳಲಿ. ಅವರು ಸಿಂಡಿಕೇಟ್‌ನಲ್ಲಿದ್ದಾರೆ. 8 ಜನ ಎಲೆಕ್ಟ್ ಆದಮೇಲೆ ಮಾನಸ ಗಂಗೋತ್ರಿಯಿಂದ ಬರಬೇಕಾದ ಇಬ್ಬರು ಮೇಸ್ಟ್ರುಗಳನ್ನು ಚೆಕ್ ಮಾಡಿದ್ದಾರೆ. ಸೀನಿಯರ್ ಲೆಕ್ಚರರ್ ಕೇಡರ್‌ನಲ್ಲಿ ಇಲ್ಲ ಎಂದು ಹೇಳಿ. ಇದೆಲ್ಲಾ ಮಾಡಿಕೊಂಡು ವೈಸ್ ಛಾನ್ಸಲರ್ ರೆಪ್ರೆಸೆಂಟೇಷನ್ ಬ್ಲಾಕ್ ಮಾಡಿಕೊಂಡು ಹೋದರೆ, ಈ ವೈಸ್ ಛಾನ್ಸಲರ್‌ಗೆ ತಾವು ಕಿರೀಟ ಇಟ್ಟುಕೊಂಡು ಹೋದರೆ ಅದು ತಮಗೇ ಬಿಟ್ಟಿದ್ದುದು. ಈ ವಿಷಯವನ್ನು ಸರ್ಕಾರ ಇತ್ಯರ್ಥ ಮಾಡುತ್ತದೆಯೇ ? ಮಾಡುವುದಕ್ಕೆ ಆಸೆ ಆಶೋತ್ತರ ಇದೆಯೇ ? ಪ್ರೊಫೆಸರ್ ಮತ್ತು ಲೆಕ್ಚರರ್ ಕರೆಯಿಸಿ ಹೇಳುತ್ತೀರಾ ? ಮಾದಯ್ಯನವರಿಗೆ ಕೇಳಿ, ಅವರು ಅಂಗಸಂಸ್ಥೆಯಲ್ಲಿ ಕೆಲಸ ಮಾಡುತ್ತಾ ಇಲ್ಲ. ಜೆ.ಎಸ್.ಸ್. ಕಾಲೇಜ್‌ನಲ್ಲಿ ಕೆಲಸ ಮಾಡುವ ರೀಡರ್ ಅವರು.

... protest. Every citizen has a right to protest.

ತಾವು ಇದಕ್ಕೆ ಸ್ಪಷ್ಟೀಕರಣ ಕೊಡಬೇಕು. ಅವರನ್ನು ಕರೆಯಬೇಕು.

ಶ್ರೀ ಗುರುದೇವ್:– ಮಾನ್ಯ ಅಧ್ಯಕ್ಷರೇ, ಶ್ರೀ ಮಾಧುಸ್ವಾಮಿಯವರು ಹಲವಾರು ಆಪಾದನೆಗಳನ್ನು ಮಾಡಿದ್ದಾರೆ. ನಾನು ಈ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಮೆಂಬರ್ ಆಗಿದ್ದು ಮಾನ್ಯ ಸದಸ್ಯರು ಏನು ಕೆಲವೊಂದು ಆಪಾದನೆಗಳನ್ನು ಮಾಡಿದ್ದಾರೆ ಅದರಲ್ಲಿ ಕೆಲವೊಂದು ಸತ್ಯಾಂಶ ಕಂಡುಬಂದರೂ ಉಳಿದವು ಅವರು ಹೇಳಿದ ರೀತಿಯಲ್ಲಿ ನಡೆದಿಲ್ಲ. ಮಂತ್ರಿಗಳು ಹೇಳಿದ ಹಾಗೆ ಚಂದ್ರಪ್ಪನವರು ಏಕಾ ಏಕಿ ಕುಳಿತಿದ್ದು ಅಲ್ಲ. ವೈಸ್ ಛಾನ್ಸಲರ್‌ಗೆ ನೋಟೀಸ್ ಕೊಟ್ಟು ಈ ರೀತಿ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಅವರು ಆ ಎಲೆಕ್ಷನ್ ಬಗ್ಗೆ ಏನು ಆಗಿದೆ ಅದರ ಬಗ್ಗೆ ನೋಟೀಸ್ ಕೊಟ್ಟು ಮುಷ್ಕರ ಹೂಡಿದ್ದಾರೆ. ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತೇನೆ. ಸಂಬಂಧಪಟ್ಟ ಮಾಸ್ಟರ್ ಕರೆಯಿಸಿ ಚರ್ಚೆಮಾಡಿ ಇದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. 12ನೇ ತಾರೀಖು ಚುನಾವಣೆ ಇದೆ.

ಕರ್ನಾಟಕ ಯೂನಿವರ್ಸಿಟಿ ಮತ್ತು ಕುವೆಂಪು ಯೂನಿವರ್ಸಿಟಿಯಲ್ಲಿ ಎಲೆಕ್ಷನ್ ನಡೆದಿದೆ. ಅದೇ ರೀತಿ ಮೈಸೂರು ಯೂನಿವರ್ಸಿಟಿಯಲ್ಲಿ ಮಾಡಬೇಕು ಎಂದು ಮಾನ್ಯ ಮಂತ್ರಿಗಳನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಸ್. ಎಂ. ಯಾಹ್ಯಾ:– ಅಧ್ಯಕ್ಷರೇ ಈ ವಿಷಯವಾಗಿ ನಾನು ಸ್ವಂತ ವಿಚಾರ ಮಾಡಿ ಬರುತ್ತೇನೆ. ಆದರೆ ನಾವು ವಾತಾವರಣವನ್ನು ಕೆಡಿಸುವುದು ಬೇಡ. ಈ ರೀತಿ ಆದರೆ, ಅದು ಅಕಾಡೆಮಿಕ್ ಎಕ್ಸ್‌ಲೆನ್ಸಿಗೆ ಒಳ್ಳೆಯದು ಅಲ್ಲ. ಅದಕ್ಕಾಗಿ ಈ ವಿಷಯವನ್ನು ಇಲ್ಲಿಗೆ ಬಿಟ್ಟುಬಿಡೋಣ.

ಶ್ರೀ ವಾಟಾಳ್‌ನಾಗರಾಜ್:– ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸದನದಲ್ಲಿ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿಕೊಟ್ಟಿದ್ದೆ. ಅದರ ಬಗ್ಗೆ ತಮ್ಮ ಗಮನವನ್ನು ಸೆಳೆದಿದ್ದೆ. ತಾವು ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ? ಅದರ ಬಗ್ಗೆ ತಾವು ಏನಾದರೂ ತಿಳಿಸುತ್ತೀರಾ ?

ಅಧ್ಯಕ್ಷರು:– ನಾನು ತಮಗೆ ಹೇಳಿದ ಹಾಗೆ ಮಾನ್ಯ ರಾಮಪ್ಪನವರನ್ನು ನನ್ನ ಕೊಠಡಿಗೆ ಕರೆಯಿಸಿ ಮಾತನಾಡಿದ್ದೇನೆ. ಅವರು ಒಂದು ದಿನ ಕಾಲಾವಕಾಶ ಕೇಳಿದ್ದಾರೆ.

(2) ಡಂಕಲ್ ವರದಿ ಪ್ರಸ್ತಾವನೆಯ ವಿಚಾರದಲ್ಲಿ ರೈತರನ್ನು ದಸ್ತಗಿರಿ ಮಾಡಿರುವುದು.

† ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೇ ಈ ಸದನದಲ್ಲಿ ರೈತರನ್ನು ಬಿಟ್ಟಿದ್ದೇವೆ ಎಂದು ಸರ್ಕಾರದವರು ಹೇಳಿದರು. ಆದರೆ ಅವರನ್ನು ಬಿಟ್ಟಿಲ್ಲ. ಅಡುಗೋಡಿಯಲ್ಲಿ ಒಂದು ಕಡೆ ಇಟ್ಟಿದ್ದಾರೆ. ನಿನ್ನೆ ದಿವಸ ಅಲ್ಲಿ ರೈತ ಸಂಘದ ಉಪಾಧ್ಯಕ್ಷ ಶ್ರೀಮಾನ್ ಶ್ರೀನಿವಾಸ್‌ರವರು ರಾತ್ರಿ ಫೋನ್ ಮಾಡುತ್ತಿದ್ದರು. ರೈತರನ್ನೆಲ್ಲಾ ಯದ್ವಾತದ್ವ ದಸ್ತಗಿರಿ ಮಾಡಿದ್ದಾರೆ, ಅವರಿಗೆ ಊಟ ಕೊಡುತ್ತಾ ಇಲ್ಲ, ಅವರಿಗೆ ವ್ಯವಸ್ಥೆ ಮಾಡಿಲ್ಲ. ಯಾವುದ್ಯಾವದು ಸ್ಟೇಷನ್‌ಗಳಲ್ಲಿ ಎಲ್ಲೆಲ್ಲೋ ಒಂದು ಕಡೆ ಇಟ್ಟಿದ್ದಾರೆ. ರೈತರುಗಳು ಎಲ್ಲಿ ಹೋಗಿದ್ದಾರೆ ಎನ್ನುವುದು ಗೊತ್ತಿಲ್ಲ. ಈ ಊರಿನಲ್ಲಿ ಬಂದಂತಹ 10 ಸಾವಿರ ಜನ ರೈತರುಗಳು ದಿಕ್ಕಾಪಾಲಾಗಿ ಯಾವುದ್ಯಾವುದೋ ಮೂಲೆಗೆ ಹೊರಟುಹೋಗಿದ್ದಾರೆ. ಇದಕ್ಕೆ ಸರ್ಕಾರ ಸ್ಪಷ್ಟವಾದಂತಹ ಒಂದು ನಿಲುವನ್ನು ನಿನ್ನೆ ಹೇಳಲಿಲ್ಲ. ನಿಜವಾಗಲೂ ನಮಗಂತೂ ಬಹಳ ನೋವಾಗುತ್ತಿದೆ. ಸರ್ಕಾರದವರು ಹೇಳಿದರು ನಾವು ಎಲ್ಲರನ್ನೂ ಬಿಡುಗಡೆ ಮಾಡಿದ್ದೇವೆ ಎಂದು ಆದರೆ ನನಗೆ ಬಂದಿರತಕ್ಕಂತ ಮಾಹಿತಿ ...

ರೈತರಲ್ಲಿ ಎಲ್ಲೋ ನೂರಾರು ಜನರನ್ನು ಬಿಡುಗಡೆ ಮಾಡಿರಬಹುದು. ಕೆಲವು ಕಡೆ ರೈತರುಗಳನ್ನು ತೆಗೆದುಕೊಂಡು ಹೋಗಿ ಕುರಿದೊಡ್ಡಿಗೆ ಕುರಿಗಳನ್ನು ತುಂಬಿದ ಹಾಗೆ ರೈತರನ್ನು ಕಡೆಗಾಣಿಸಿ ನಡೆಸಿಕೊಂಡಿದ್ದಾರೆ. ಆ ರೈತರಿಗೆ ಅನ್ನ ಆಹಾರ ಕೊಟ್ಟಿಲ್ಲ. ಅವರ ಬಟ್ಟೆ ಒಂದು ಕಡೆ ಅವರು ತಂದಿರತಕ್ಕಂಥ ವಸ್ತುಗಳು ಒಂದು ಕಡೆ ಚೆಲ್ಲಾಪಿಲ್ಲಿಯಾಗಿವೆ. ಎರಡನೆಯದಾಗಿ ರೈಲ್ವೆ ನಿಲ್ದಾಣದಲ್ಲಿ ಏನು ಆಯಿತು. ರೈಲುಗಳು ಓಡಬೇಕಾಗಿತ್ತು, ನಾನು ರಾಜ್ಯ ಸರ್ಕಾರದ ಪೋಲೀಸರ ಮೇಲೆ ಆರೋಪಣೆ ಮಾಡುತ್ತಿಲ್ಲ. ರೈಲ್ವೆ ಪೋಲಿಸ್‌ನವರು ಇದನ್ನು ಮಾಡಿರತಕ್ಕಂಥವರು. ಸಂಪೂರ್ಣವಾಗಿ ರೈತರು ಎಲ್ಲಿ ಹೋಗಿದ್ದಾರೆ, ಯಾವ ಮೂಲೆಗೆ ಹೋಗಿದ್ದಾರೆ ಎಂದು ಗೊತ್ತಿಲ್ಲ. ರೈತರ ಸಂಘದ ಉಪಾಧ್ಯಕ್ಷರಾದ ಶ್ರೀಮಾನ್ ಶ್ರೀನಿವಾಸ್‌ರವರು ಎಲ್ಲಾ ಕಡೆ ತಪಾಸಣೆ ಮಾಡುತ್ತಿದ್ದಾರೆ. ರೈತರುಗಳು ಎಲ್ಲಿ ಇದ್ದಾರೆ ಗೊತ್ತಿಲ್ಲ. ದಯವಿಟ್ಟು ಸರ್ಕಾರ ಇದಕ್ಕೆ ಸ್ಪಷ್ಟವಾದಂತಹ ಒಂದು ಹೇಳಿಕೆಯನ್ನು ಕೊಡಬೇಕು ಮತ್ತು ಏನಾಗಿದೆ ಎಂದು ತಿಳಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

†ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಸರ್ಕಾರ ಬಹಳ ಸ್ಪಷ್ಟವಾಗಿ ಇವತ್ತು ಸಾಯಂಕಾಲದೊಳಗಾಗಿ ಎಲ್ಲರನ್ನೂ ಕೂಡ ಬಿಡುಗಡೆ ಮಾಡುತ್ತೇವೆಮ ಎನ್ನುವಂತಹ ಮಾತನ್ನು ಮಾನ್ಯ ಮಂತ್ರಿಗಳು ತಿಳಿಸಿದರು. ಆದರೆ ಆ ಮಾತಿನಂತೆ ಸರ್ಕಾರ ನಡೆದಿಲ್ಲ. ನಾನು ರೈತರನ್ನು ಕೆಣಕಬೇಡಿ ಎಂದು ಮೊನ್ನೆಯ ದಿವಸವೇ ಹೇಳಿದ್ದೇನೆ ದಯವಿಟ್ಟು ಅವರನ್ನು ಕೆಣಕುವಂತಹ ಪ್ರಯತ್ನ ಮಾಡಬೇಡಿ ಎಂದು ಹೇಳಿದರೂ, ಇವರು ಅದೇ ಉದ್ಯೋಗ ಮಾಡುತ್ತಿದ್ದಾರೆ. ಅವರು ಏನೂ ಅಪರಾಧ ಮಾಡಿಲ್ಲ. ದೇಶದಲ್ಲಿ ಇರತಕ್ಕಂತಹ ಜನತೆಗೆ ಅನ್ನ ಬಟ್ಟೆ ಕೊಡುತ್ತಿರತಕ್ಕಂಥವನು ರೈತ. ಗೌರವದಿಂದ ಕಾಣಬೇಕಾಗಿತಕ್ಕಂತಹ ರೈತನನ್ನು, ಇವರು ಬೇಕಾಬಿಟ್ಟಿಯಾಗಿ ನಡೆಸಿಕೊಂಡು, ಬಿಡುಗಡೆ ಮಾಡುತ್ತೇವೆ ಎಂದು ಹೇಳಿಯೂ ಕೂಡ ಬಿಡುಗಡೆ ಮಾಡದೇ ಈ ಸರ್ಕಾರ ಉದ್ಧಟತನ ತೋರಿಸುತ್ತಿದೆ. ರೈತ ಸಂಘದವರು ಇರಬಹುದು. ಆದರೆ ಅವರು ರೈತರು ಎನ್ನುವುದನ್ನು ದಯವಿಟ್ಟು ಸರ್ಕಾರ ಮನಗಾಣಬೇಕು. ರೈತರ ವಿಚಾರದಲ್ಲಿ ಯಾರೇ ಆಗಲಿ ಆ ಪಕ್ಷ, ಈ ಪಕ್ಷ, ಆ ಸಂಘ, ಈ ಸಂಘ ಎಂದು ಹೇಳಿ ವ್ಯತ್ಯಾಸ ಮಾಡುವುದನ್ನು ನಾನು ಖಂಡಿತ ಒಪ್ಪುವುದಿಲ್ಲ. ಇದರ ಮುಂದೆ ಇಡೀ ರೈತ ವರ್ಗ ಇದೆ. ರಾಜ್ಯದಲ್ಲಿ ಇರತಕ್ಕಂತಹ ಎಲ್ಲ ರೈತರೂ ಕೂಡ ಇದ್ದಾರೆ. ಒಂದು ವರ್ಗಕ್ಕೆ ಅಥವಾ ಒಂದು ಗುಂಪಿನ ರೈತರಿಗೆ ಅನ್ಯಾಯವಾದರೆ, ಎಲ್ಲಾ ರೈತರೂ ಇದನ್ನು ಸಹಿಸುವುದಿಲ್ಲ ಎನ್ನುವುದನ್ನು ತಮಗೆ ಗಿಣಿಗೆ ಹೇಳಿದ ಹಾಗೆ ಹೇಳಿದರೂ ಕೂಡ ಸರ್ಕಾರ ಈ ರೀತಿಯಾದಂತಹ ಉದ್ಧಟತನ ತೋರಿಸುತ್ತಿದ್ದೀರಿ. ಇದು ಬಹಳ ಖೇದವಾದ್ದು. ನಾವು ನಿನ್ನೆಯ ದಿವಸವೇ ಹೇಳಿದ್ದೇವೆ ರೈತರನ್ನು ಬಿಡುಗಡೆ ಮಾಡದಿದ್ದರೆ ನಾವು ಸದನವನ್ನು ನಡೆಸುವುದಕ್ಕೆ ಅವಕಾಶ ಕೊಡುವುದಿಲ್ಲ ಎನ್ನುವಂತಹ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಆದರೂ ಸಹ ಇವತ್ತಿನ ದಿವಸ ನೀವು ಬಂಧಿಸಿರತಕ್ಕಂತಹ ರೈತರನ್ನು ಬಿಟ್ಟಿಲ್ಲ.

ಈಗ ನಾವು ಇಲ್ಲಿ ಕುಳಿತುಕೊಂಡು ಏನು ನಡೆಸಬೇಕಾಗಿದೆ. ಏನು ಮಾಡಬೇಕಾಗಿದೆ ? ಹೇಳಿ ನೋಡೋಣ. ಅವರೆಲ್ಲ ಜೈಲಲ್ಲಿ ಇದ್ದಾರೆ. ದೇಶಕ್ಕೆ ಅನ್ನ ಬಟ್ಟೆ ಕೊಡುತ್ತಾ ಇರತಕ್ಕಂತಹ ರೈತರನ್ನು ಜೈಲಲ್ಲಿ ಇಟ್ಟು ನಾವು ಇಲ್ಲಿ ಕೆಲಸ ಮಾಡಬೇಕು ಅಥವಾ ಸದನದಲ್ಲಿ ಇರಬೇಕು ಎಂದರೆ ಇದು ಯಾವ ಪುರುಷಾರ್ಥಕ್ಕೋಸ್ಕರ. ಯಾವ ಪುಣ್ಯ ಸಂಪಾದನೆ ಮಾಡುವುದಕ್ಕೋಸ್ಕರ ನಾವು ಇಲ್ಲಿ ಕುಳಿತಿರಬೇಕಾಗಿದೆ. ನಾನು ಕೊನೆಯ ಸಾರಿ ಆಖೈರಾಗಿ ಹೇಳುತ್ತಿದ್ದೇನೆ ದಯವಿಟ್ಟು ಆ ಕೆಲಸಕ್ಕೆ ಕೈಹಾಕಬೇಡಿ. ಅವರನ್ನು ಈ ತಕ್ಷಣ, ಈ ನಿಮಿಷದಿಂದಲೇ ಬಿಡುಗಡೆ ಮಾಡತಕ್ಕಂತಹ ಎಚ್ಚರವಹಿಸಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

†ಶ್ರೀ ಪಿ. ಜಿ. ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಡಂಕೆಲ್ ವರದಿಯ

ಪ್ರಸ್ತಾವನೆಯ ವಿಚಾರದಲ್ಲಿ ರಾಷ್ಟ್ರದಾದ್ಯಂತ ರೈತರು ಪ್ರತಿಭಟನೆ ಮಾಡುವುದಕ್ಕೆ ಕೇಂದ್ರ ಸರ್ಕಾರ ಅವಕಾಶ ಕೊಡುವುದಿಲ್ಲ ಬೋಟ್ ಕ್ಲಬ್‌ನಲ್ಲಿ ರ್‍ಯಾಲಿ ನಡೆಸುವುದಕ್ಕೆ ಬಿಡುವುದಿಲ್ಲವೆಂದು ಹೇಳಿದರು. ಈಗ ಅದಕ್ಕೆ ಪರ್ಯಾಯವಾಗಿ ದೆಹಲಿಯ ರೆಡ್ ಫೋರ್ಟ್‌ನ ಹಿಂದುಗಡೆ ರ್‍ಯಾಲಿ ಮಾಡಲಿಕ್ಕೆ ಅವಕಾಶ ಸಹಿತ ಮಾಡಿಕೊಟ್ಟಿದ್ದಾರೆ. ಕೇಂದ್ರ ಸರ್ಕಾರದ ಧೋರಣೆ ಸಹ ಬದಲಾವಣೆಯಾಗಿದೆ. ಕಾರಣ ಏನೆಂದರೆ ರೈತರು ಹೇಳತಕ್ಕ ವಿಚಾರದಲ್ಲಿ ಸತ್ಯಾಂಶವಿದೆಯೆಂದು ಹೇಳಿ ಅವಕಾಶ ಕೊಟ್ಟಿದ್ದಾರೆ. ಇವತ್ತು ಬೆಳಿಗ್ಗೆ ಯಾರನ್ನು ಬಂಧನ ಮಾಡಿದ್ದಾರೆ ಅವರು ನೆಂಟರಿಷ್ಟರು ನನ್ನ ಕ್ಷೇತ್ರದವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯವರು ರಾಮನಗರ, ಚನ್ನಪಟ್ಟಣ, ಕನಕಪುರ ಈ ಕಡೆಯಿಂದ ಅವರ ಸಂಬಂಧಿಕರು ಬಂದು ನಮ್ಮ ಸಂಬಂಧಿಕರನ್ನು ಪೋಲೀಸ್‌ನವರು ಅರೆಸ್ಟ್ ಮಾಡಿದ್ದಾರೆ ಅವರು ದೆಹಲಿಗೆ ಹೋಗುತ್ತಿದ್ದರು ಕೆಲವರು ಮದ್ರಾಸ್‌ವರೆಗೂ ಹೋಗುತ್ತಿದ್ದರು ಅವರುಗಳನ್ನೆಲ್ಲ ಅರೆಸ್ಟ್ ಮಾಡಿ ಎಲ್ಲಿ ಇಟ್ಟಿದ್ದಾರೋ ಗೊತ್ತಿಲ್ಲ. ಅವರು ದೆಹಲಿಗೂ ತಲುಪಿಲ್ಲ, ದಾರಿಯಲ್ಲಿ ಎಲ್ಲಿ ಹೋಗುತ್ತಿದ್ದಾರೋ ಗೊತ್ತಿಲ್ಲ. ಅವರನ್ನು ಬಿಡುಗಡೆ ಸಹ ಮಾಡಿಲ್ಲವೆನ್ನುವ ವಿಚಾರವನ್ನು ಹೇಳಿದ್ದಾರೆ. ನಿನ್ನೆ ದಿವಸ ಮಾನ್ಯ ರಾಮಸ್ವಾಮಿಯವರು ಹೇಳಿದರು ತಕ್ಷಣ ಹೇಗೆ ಅಂಕಿಅಂಶಗಳನ್ನು ಕೊಡುವುದೆಂದು, 24 ಗಂಟೆಯ ಸಮಯವನ್ನು ಕೊಟ್ಟಿದ್ದೇವೆ. ಈಗ ಕೇಳುತ್ತಿದ್ದೇವೆ, ಎಷ್ಟು ಜನ ರೈತರನ್ನು ಬಂಧನ ಮಾಡಿದ್ದೀರಿ ? ಎಷ್ಟು ಜನರನ್ನು ಬಿಡುಗಡೆ ಮಾಡಿಲ್ಲ ? ಅವರನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ? ಬಿಡುಗಡೆ ಮಾಡಿಲ್ಲವೆನ್ನುವುದನ್ನು ತಾವು ದಯವಿಟ್ಟು ಈ ಸದನಕ್ಕೆ ತಿಳಿಸಬೇಕು.

† ಶ್ರೀ ಕೆ. ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಈ ಸದನದಲ್ಲಿ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ. ನಾವೇನು ಮಾತನಾಡುತ್ತೇವೆ ಅದರ ಪ್ರಕಾರ ನಡೆದುಕೊಳ್ಳುವುದು ಸ್ವಾಭಾವಿಕ. ಇವರು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಮಾರನೆಯ ದಿನ ಮತ್ತೆ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ ಅದೇ ರೀತಿ ಹಿಂದೆಯೂ ಕೂಡ ಮಾಡಿದ್ದರು. ಬಿ.ಜೆ.ಪಿ.ಯ ಕಾರ್ಯಕರ್ತರನ್ನು ಅರೆಸ್ಟ್ ಮಾಡಿದಾಗ ಇನ್ನು 15 ನಿಮಿಷಗಳಲ್ಲಿ ಬಿಡುತ್ತೇವೆಂದು ಹೇಳಿದರು. ಅದರಲ್ಲಿ ಕೆಲವರನ್ನು ಬಿಟ್ಟರು ಮತ್ತೆ ಕೆಲವರನ್ನು ಜೈಲಿನಲ್ಲಿ ಇಟ್ಟರು. ನಿನ್ನೆ ಮಂತ್ರಿಗಳು ಎಲ್ಲರನ್ನು ಬಿಡುಗೆ ಮಾಡುತ್ತೇವೆಂದು ಹೇಳಿದರು. ಆದರೆ, ಇನ್ನೂ ಅನೇಕರು ಜೈಲಿನಲ್ಲೇ ಇದ್ದಾರೆ. ಏತಕ್ಕೆ ಇನ್ನು ಕೆಲವರನ್ನು ಜೈಲಿನಲ್ಲಿ ಇಟ್ಟಿದ್ದೀರಿ, ಏತಕ್ಕೆ ಈ ರೀತಿ ನಮ್ಮನ್ನು ಅಡ್ಡದಾರಿಗೆ ತೆಗೆದುಕೊಂಡು ಹೋಗುತ್ತೀರೋ ನಮಗೆ ಅರ್ಥವಾಗುತ್ತಿಲ್ಲ. ಸರ್ಕಾರದವರು ಏನು ಉತ್ತರ ಕೊಡುತ್ತಾರೆ, ಆ ಉತ್ತರದ ಪ್ರಕಾರ ನಡೆದುಕೊಳ್ಳಬೇಕು. ಏನೋ ಸಂದರ್ಭಕ್ಕೆ ತಕ್ಕಂತೆ ಒಂದು ಉತ್ತರ ಕೊಡಬೇಕು, ನಮ್ಮನ್ನು ಒಂದು ರೀತಿ ತೃಪ್ತಿಪಡಿಸಬೇಕು, ಅಷ್ಟೇ ಸಾಕು ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರೆ, ದಯವಿಟ್ಟು ಸಭಾಧ್ಯಕ್ಷರು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಅವರು ಏನು ಉತ್ತರ ಕೊಡುತ್ತಾರೆ ಅದಕ್ಕೆ ಅವರು ಬದ್ಧವಾಗಿರಬೇಕು. ಐದು ನಿಮಿಷಗಳಿಗೊಂದು ಉತ್ತರ ಕೊಟ್ಟು ಆ ಉತ್ತರದ ಪ್ರಕಾರ ಸರ್ಕಾರ ಸರಿಯಾಗಿ ನಡೆದುಕೊಂಡಿದೆ ಎಂದು ನಾವು ಸುಮ್ಮನೆ ಕುಳಿತರೂ ನಡೆದು ಹೋಗುತ್ತದೆಂದು ಅದು ಸುಳ್ಳು ಉತ್ತರ ಆಗುತ್ತದೆ. ಆ ದೃಷ್ಟಿಯಿಂದ ನಾನು ನಿಮಗೆ ಕೇಳುವುದು ಇಷ್ಟೇ ಸರ್ಕಾರ ಏನು ಉತ್ತರ ಕೊಡುತ್ತದೆ ಆ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆಂದು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದರು ? ಎಷ್ಟು ಜನರನ್ನು ಬಿಡುಗಡೆ ಮಾಡಿದ್ದಾರೆ ? ಅರೆಸ್ಟ್ ಮಾಡಿದವರನ್ನು ಜೈಲಿನಲ್ಲಿ ಏತಕ್ಕೆ ಇಟ್ಟಿದ್ದೀರಿ ? ನಿನ್ನೆ ಕೊಟ್ಟ ಉತ್ತರಕ್ಕೂ ಇವತ್ತು ಹೇಳುವುದಕ್ಕೂ ವ್ಯತ್ಯಾಸವಾಗುತ್ತಿರುವ ಕಾರಣ ನಾನು ಸರ್ಕಾರಕ್ಕೆ ಹೇಳುವುದು ಇಷ್ಟೆ, ಎಲ್ಲರನ್ನು ಬಿಡುಗಡೆ ಮಾಡಬೇಕು. ಇವತ್ತು ಬಿಡುಗಡೆ ಮಾಡುತ್ತೇವೆಂದು ಉತ್ತರ ಬರುವುದು ಅಷ್ಟು ಸೂಕ್ತವಲ್ಲ. ಅವರೇನು ಉತ್ತರ ಕೊಡುತ್ತಾರೆ ಅದರ ಪ್ರಕಾರ ನಡೆದುಕೊಳ್ಳಬೇಕು. ಇಲ್ಲದಿದ್ದರೆ ನಿಮ್ಮ

ಉತ್ತರದ ಮೇಲೆ ನಂಬಿಕೆ ಇಲ್ಲವೆಂದರೆ ಇಡೀ ರಾಜ್ಯದ ಜನತೆಗೆ ದ್ರೋಹ ಮಾಡಿದಂತಾಗುತ್ತದೆ, ಸದನಕ್ಕೆ ದ್ರೋಹ ಮಾಡಿದಂತಾಗುತ್ತದೆ.

† ಶ್ರೀ ವೈ. ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ನಿನ್ನೆ ನಾವು ಪ್ರಸ್ತಾಪ ಮಾಡಿದಾಗ ಇವತ್ತು ಸಂಜೆ ಒಳಗಾಗಿ ಬಂಧಿಸಿದಂತಹ ಎಲ್ಲಾ ರೈತರನ್ನು ಬಿಡುಗಡೆ ಮಾಡುತ್ತೇವೆಂದು ಸರ್ಕಾರದವರು ನಮಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಇವತ್ತು ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಯನ್ನು ನೋಡಿದರೆ ಬಹುಶಃ ಈ ಸದನಕ್ಕೆ ಕೊಟ್ಟಂತಹ ಏನೊಂದು ವಾಗ್ದಾನವಿತ್ತು ಆ ವಾಗ್ದಾನದ ಪ್ರಕಾರ ಅವರು ನಡೆದುಕೊಳ್ಳಲಿಲ್ಲ. "ರಾಯಚೂರಿನಿಂದ ಬಂದಿರುವ ರೈತರು ನ್ಯಾಯಾಂಗದ ವಶದಲ್ಲಿದ್ದಾರೆ ಈ ಸದನದಲ್ಲಿರುವಂತಹ ಬಹುತೇಕ ನೂರು ಸದಸ್ಯರುಗಳ ಪೈಕಿ 99 ಭಾಗ ಸದಸ್ಯರು ನಾವೆಲ್ಲ ರೈತರಾಗಿದ್ದೇವೆ. ಇಲ್ಲದಿದ್ದರೆ ರೈತರ ಮಕ್ಕಳಾಗಿದ್ದೇವೆ. ಅದೂ ಅಲ್ಲದಿದ್ದರೆ ಅವನು ಬೆಳೆದು ಹಾಕುವಂತಹ ಅನ್ನ ತಿನ್ನುವಂತಹ ಹಂಗಿನಲ್ಲಿ ಬದುಕುತ್ತಿರುವ ವ್ಯಕ್ತಿಗಳು. ಈ ಡೆಫನಿಷನ್‌ನಲ್ಲಿ ಬಾರದೇ ಇರುವವರು ಯಾರೂ ಇಲ್ಲ. ಇಷ್ಟಾದರೂ ಕೂಡ ಸರ್ಕಾರ ಅನ್ನ ಹಾಕುವಂತಹವನ ಬಗ್ಗೆ ಜೀವ ಕೊಡುವವರ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯವಾಗಿ ನಡೆದುಕೊಂಡರೆ ನಾವಂತೂ ಸಹಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೇ, ತಮಗೂ ರೈತ ಕುಟುಂಬದ ಹಿನ್ನೆಲೆ ಇದ್ದರೆ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಪದ ಬಂದಿದೆ, ಈ ಸರ್ಕಾರಕ್ಕೆ ಹೃದಯವಿದ್ದರೆ, ಈ ಸರ್ಕಾರಕ್ಕೆ ರೈತರ ಬಗ್ಗೆ ಗೌರವವಿದ್ದರೆ, ಎಲ್ಲರೂ ಕೈ ಎತ್ತಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿ. ಒಂದೇ ಒಂದು ಪದ ಓದುತ್ತೇನೆ. ದಯಮಾಡಿ ಇದಕ್ಕೆ ಕಾಲಮಿತಿಗೊಳಿಸಬೇಡಿ. ಈ ಸದನ ಇಂತಹ ವಿಷಯಕ್ಕೆ ಇಲ್ಲವೆಂದರೆ ಇನ್ನು ಯಾವ ವಿಷಯವೂ ಬೇಡವೇ ಬೇಡ. ಈ ಸದನದಲ್ಲಿ ರೈತರು ಜೈಲಿನಲ್ಲಿ ಕೊಳೆಯುತ್ತಿರುವ ವಿಷಯವನ್ನು ಚರ್ಚೆ ಮಾಡಲಿಕ್ಕೆ ಅವಕಾಶವಿಲ್ಲವೆಂದರೆ ಆ ವಿಷಯಕ್ಕೆ ಸದನದಲ್ಲಿ ಸಮಯ ಇಲ್ಲವೆಂದರೆ ಈ ಸದನ ಬೇಕಾಗಿಲ್ಲ ಈ ರಾಜ್ಯಕ್ಕೆ. ಆದ್ದರಿಂದ ಒಂದೇ ಒಂದು ಪದ ಓದುತ್ತೇನೆ. ಅದು ಈ ರೀತಿ ಇದೆ. "ಕಟ್ಟಿಟ್ಟ ಮುಖ, ಕೆದರಿದ ಕೂದಲು, ಹೆಗಲ ಮೇಲೆ ಹಸಿರು ಟವಲ್, ಕೈಯಲ್ಲಿ ಬ್ಯಾಗು" ನಿಮಗೆ ನಾಚಿಕೆಯಾಗುವುದು ಬೇಡ ?

ಇಲ್ಲಿ ನೋಡಿ ಸ್ವಾಮಿ, ಹೆಣ್ಣು ಮಕ್ಕಳು, ಇವರು ಮಸೀದಿ ಒಡೆಯುವುದಕ್ಕೆ ಹೋಗುತ್ತಿಲ್ಲ, ಮಂದಿರ ಕಟ್ಟುವುದಕ್ಕೆ ಹೋಗುತ್ತಿಲ್ಲ. ಯಾವುದೇ ಕೂಲಿ ಮಾಡುವುದಕ್ಕೆ ಹೋಗುತ್ತಿಲ್ಲ. ಈ ರಾಷ್ಟ್ರದ ಕೃಷಿ ನೀತಿಯು ಕೃಷಿಕನಿಗೆ ಮಾರಕವಾಗುತ್ತದೆ ಎನ್ನುವಂಥ ಒಂದು ಉತ್ತಮವಾದಂಥ ಕೆಲಸವನ್ನು ಮಾಡಲಿಕ್ಕೆ ಅವರು ಡೆಲ್ಲಿಗೆ ಹೊರಟಿದ್ದಾರೆ. ಅವರು ಏನು ಅಪರಾಧ ಮಾಡಿದ್ದಾರೆ ? Ticketless travelling. ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದರೆ .... What is the punishment for ticketless travelling?

ಅಧ್ಯಕ್ಷರು:- ತಾವು ಪುನಃ ಪುನಃ ಅದನ್ನೇ ಹೇಳುತ್ತಿದ್ದೀರಿ. ನಿನ್ನೆ ದಿವಸ ನೀಡಿದ ಆಶ್ವಾಸನೆ ಏಕೆ ಈಡೇರಿಲ್ಲವೆಂದು ಕೇಳಿ. ಪುನಃ ಅದೇ ವಿಚಾರವನ್ನು ಪ್ರಸ್ತಾಪ ಮಾಡುವುದರಲ್ಲಿ ಅರ್ಥ ಇಲ್ಲ. I have given chance to everybody.

ಶ್ರೀ ವೈ. ಕೆ. ರಾಮಯ್ಯ:- ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದರೆ ರೈಲ್ವೆ ಪೋಲೀಸರು ಇದ್ದಾರೆ, ಅವರು ಹಣ ವಸೂಲು ಮಾಡುತ್ತಾರೆ. ಒಂದಕ್ಕೆ ಎರಡರಷ್ಟು, ನಾಲ್ಕರಷ್ಟು, ಆರರಷ್ಟು ಅವರು ವಸೂಲು ಮಾಡುತ್ತಾರೆ. ವೀರಪ್ಪನ್‌ಅನ್ನು ಹಿಡಿಯಿರಿ ಎಂದರೆ ಕೈಲಾಗಲಿಲ್ಲ. ಬಡ ರೈತನನ್ನು ಹಿಡಿದುಕೊಂಡು ಈ ಸರ್ಕಾರ ಜೈಲಿಗೆ ಹಾಕುತ್ತದೆ. ಹತ್ತಾರು ಜನರನ್ನು ಕೊಂದು ರಕ್ತ ಕುಡಿದಂಥ ವೀರಪ್ಪನ್‌ನ್ನು ಹಿಡಿಯುವುದಕ್ಕೆ ಇವರಿಗೆ ತಾಕತ್ತಿಲ್ಲ, ಮನಸ್ಸಿಲ್ಲ, ಯೋಗ್ಯತೆ ಇಲ್ಲ. ಈ ರಾಷ್ಟ್ರದ ಹಿತಕ್ಕಾಗಿ ಡೆಲ್ಲಿಗೆ ಹೋಗುತ್ತೇವೆ ಎನ್ನತಕ್ಕಂಥ ಹೆಣ್ಣುಮಕ್ಕಳನ್ನು ಹಿಡಿದು ಅರೆಸ್ಟ್ ಮಾಡುತ್ತಾರೆ.

ಆದ್ದರಿಂದ ಇಲ್ಲಿ ಯಾವ ಮಾನ್ಯ ಸಚಿವರು ಉತ್ತರ ಕೊಡುತ್ತಾರೆಂದು ಗೊತ್ತಿಲ್ಲ, ಅದು ಮಾಮೂಲಿ ಉತ್ತರವೆಂದು ಕಾಣುತ್ತದೆ. ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಈ ಹುಸಿನಗೆಯ ಉತ್ತರದಿಂದ ಬಹುಶಃ ಯಾವ ಸಮಸ್ಯೆಯನ್ನೂ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಕೆಲವು ವಿಚಾರಗಳಲ್ಲಿ ತಾವು ಹುಸಿನಗೆಯನ್ನು ಬಿಟ್ಟು ಗಂಭೀರವಾಗಿ ಉತ್ತರವನ್ನು ಕೊಟ್ಟು ಈ ಸಮಸ್ಯೆಗೆ ಪರಿಹಾರ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎಚ್. ಬನ್ನಿಕೋಡ್:– ಮಾನ್ಯ ಅಧ್ಯಕ್ಷರೇ, ಇವತ್ತು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ರೈತರ ಸಮಸ್ಯೆಗಳನ್ನು ಅವರೇ ಸೃಷ್ಟಿಸಿ, ಅವರ ಸಮಸ್ಯೆಗಳ ಪರಿಹಾರಕ್ಕೆ ಯೋಜನೆ ಮಾಡದೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮಾಡಿರತಕ್ಕಂಥ ಅನ್ಯಾಯಗಳ ಬಗ್ಗೆ ಆಲೋಚನೆ ಮಾಡುತ್ತಾ ಇರತಕ್ಕಂಥ ವಿಚಾರವಾದಿಗಳು ಈ ರಾಷ್ಟ್ರದ ರೈತರ ಅಭಿವೃದ್ಧಿಗೆ, ರಾಷ್ಟ್ರದ ಸಂಪತ್ತನ್ನು ಉತ್ಪಾದನೆ ಮಾಡತಕ್ಕಂಥ ರೈತರ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಇದು ಕುಂಠಿತವಾಗುತ್ತದೆ ಎಂದು ಹೇಳುವುದಕ್ಕೆ ಅವರು ಹೊರಟರೆ ಅವರನ್ನು ಅರೆಸ್ಟ್ ಮಾಡತಕ್ಕದ್ದು, ಹಿಂಸೆ ಕೊಡತಕ್ಕದ್ದು ಮಾಡಿ, ಈ ಸದನದಲ್ಲಿ ಅವರೆಲ್ಲರನ್ನೂ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿ ನಂತರ ಇಲ್ಲಿ ಅದಕ್ಕೆ ತದ್ವಿರುದ್ಧವಾಗಿ ನಡೆಯುವುದು ಸರಿಯಲ್ಲ. 1982ನೇ ಇಸವಿ ಪೂರ್ವದಲ್ಲಿ ರೈತರನ್ನು ಇದೇ ಗುಂಡೂರಾಯರ ಸರ್ಕಾರ ವಿರೋಧ ಮಾಡಿಕೊಂಡು ಕಡೆಗೆ ಏನಾಯಿತು ? ಅದನ್ನು ದಯವಿಟ್ಟು ಯೋಚನೆ ಮಾಡಬೇಕು. ಅನ್ನ ಕೊಡತಕ್ಕಂಥ ರೈತನಿಗೆ ವಂಚನೆ ಮಾಡತಕ್ಕದ್ದು ಸರಿಯಲ್ಲ. ಕೊಟ್ಟ ಮಾತಿನಂತೆ ನಡೆಯಬೇಕು. ಇಲ್ಲದೇ ಹೋದರೆ ಶಾಸನ ಸುವ್ಯವಸ್ಥೆ ಕದಡಲಿಕ್ಕೆ ನೀವು ನಾಳೆ ಕಾರಣವಾಗುತ್ತೀರಿ. ಬಹಳ ಎಚ್ಚರಿಕೆಯಿಂದ ಸರ್ಕಾರ ರೈತರ ಜೊತೆಗೆ ವ್ಯವಹರಿಸಬೇಕು ಮತ್ತು ಅವರ ಸಂಕಷ್ಟಗಳನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡಬೇಕೇ ವಿನಹ ಅವರನ್ನು ಶಿಕ್ಷೆಗೆ ಗುರಿಪಡಿಸುವುದು ಸರಿಯಲ್ಲ. ಸರ್ಕಾರ ಕೂಡಲೇ ಎಲ್ಲರನ್ನೂ ಬಿಡುಗಡೆ ಮಾಡಬೇಕು. ಅವರವರ ಊರುಗಳಿಗೆ ವಾಪಸ್ಸು ಕಳಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಅಂಕಿ ಅಂಶಗಳನ್ನು ನನಗೆ ಸ್ಪಷ್ಟವಾಗಿ ಕೊಡಬೇಕು. ನಿನ್ನೆ ದಿವಸ ಎಷ್ಟು ಜನರನ್ನು ಅರೆಸ್ಟ್ ಮಾಡಿದಿರಿ, ಎಷ್ಟು ಜನರನ್ನು ಬಿಟ್ಟಿರಿ ? ಇವತ್ತು ಎಷ್ಟು ಜನರನ್ನು ಬಿಡುತ್ತೀರಿ ? ನ್ಯಾಯಾಂಗ ಕಸ್ಟಡಿಗೆ ಎಷ್ಟು ಜನರನ್ನು ಕೊಟ್ಟಿದ್ದೀರಿ ? ದಯಮಾಡಿ ಎಲ್ಲಾ ವಿವರಗಳನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಊರಿನ ಹೆಣ್ಣು ಮಕ್ಕಳು ಬಂದು ಅಳುತ್ತಾ ಇದ್ದಾರೆ.

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಒಂದು ನಿಮಿಷ ಅವಕಾಶ ಕೊಡಿ ....

ಅಧ್ಯಕ್ಷರು:– ಈಗ ಸಾಕಷ್ಟು ಇದರ ಬಗ್ಗೆ ಚರ್ಚೆಯಾಗಿದೆ. ಅವರು ಏನು ಹೇಳುತ್ತಾರೆ ಎಂದು ಕೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಅವರ ಸಾಮಾನುಗಳನ್ನು ಕಸಿದುಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು:– ನೋಡಿ ಸ್ವಾಮಿ, ಇದೇ ರೀತಿ ಆದರೆ ಸ್ವಲ್ಪ ತೊಂದರೆಯಾಗುತ್ತದೆ. ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ. ನಾನು ಎದ್ದುನಿಂತರೆ ತಾವು ಕುಳಿತುಕೊಳ್ಳಲೇಬೇಕು.

ತಮಗೆ ಅವಕಾಶ ಕೊಟ್ಟೆ, ಸಿಂಧ್ಯಾರವರಿಗೆ ಅವಕಾಶ ಕೊಟ್ಟೆ. ವಾಟಾಳ್ ನಾಗರಾಜ್ ಅವರಿಗೆ ಅವಕಾಶ ಕೊಟ್ಟೆ, ಬೈರೇಗೌಡರಿಗೆ ಕೊಟ್ಟೆ; ವೈ. ಕೆ. ರಾಮಯ್ಯ ಅವರಿಗೆ ಕೊಟ್ಟೆ. ಮಂತ್ರಿಗಳು ಏನು ಹೇಳುತ್ತಾರೋ ಹೇಳಲಿ ಕೇಳೋಣ.

ಶ್ರೀ ಆರ್. ವಿ. ದೇಶಪಾಂಡೆ:– ತಮ್ಮ ಗಮನಕ್ಕೆ ಒಂದು ಮಾತು ಹೇಳುತ್ತೇನೆ. ನಿನ್ನೆಯ ದಿವಸ ಈ ವಿಷಯ ಪ್ರಸ್ತಾಪ ಆಗಿದ್ದಕ್ಕೆ ಸರ್ಕಾರದವರು ಒಂದು ಭರವಸೆಯನ್ನು ಕೊಟ್ಟರು. ನಿನ್ನೆ ಸಂಜೆಯೊಳಗೆ ರೈತರನ್ನು ರಿಲೀಸ್ ಮಾಡುತ್ತೇವೆ, ಊಟ ತಿಂಡಿ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದರು. ಅದಕ್ಕೆ ನಾವು ಗೌರವಕೊಟ್ಟು ನಮ್ಮ ಸದಸ್ಯರು ಧರಣಿ ಮಾಡುವುಥಕ್ಕೆ ಹೋಗಲಿಲ್ಲ. ಸರ್ಕಾರ ಭರವಸೆ ಕೊಟ್ಟು, ಅದನ್ನು ಈಡೇರಿಸಿಲ್ಲ. The assurance given to this House has not been implemented. It is a breach of privilege of this August House. I request you to pull up the Government.

ಏಕೆಂದರೆ, ಈ ಪ್ರಕಾರ ಸದನದಲ್ಲಿ ಬಂದು ಭರವಸೆ ಕೊಟ್ಟು contravene ಮಾಡಿದರೆ I request you to pull them up.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ, ಉತ್ತರ ಕೊಡುವುದಕ್ಕೆ ಮುಂಚೆ, ನಿನ್ನೆ ಬೆಳಗಿನವರೆಗೆ ಪೋಲೀಸ್ ಕಸ್ಟಡಿಗೆ ಬಂದವರ ಪೈಕಿ, ಎಲ್ಲಿ, ಯಾರು ಜೈಲಿನಲ್ಲಿದ್ದಾರೆ ಎನ್ನುವುದನ್ನು ದಯಮಾಡಿ ತಿಳಿಸಿದರೆ, ನೀವು ಹೇಳಿದ ಮಾತಿಗೆ ಅಧ್ಯಕ್ಷರೂ ನಮಗೆ ಹೇಳಬಹುದು.

ಶ್ರೀ ಸಿ. ಬೈರೇಗೌಡ:– ಜೈಲಿಗೆ ಕಳುಹಿಸಿದವರು ನಾವೇ ? ಅರ್ಥವಿಲ್ಲದೆ ಮಾತನಾಡುತ್ತಿದ್ದಾರೆ. ಹೇಳಬೇಕಾದವರು ಅವರು. ನಾವು ರೈತರನ್ನು ದಸ್ತಗಿರಿ ಮಾಡಿದ್ದೇವೆಯೇ ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಗುಲ್ಬರ್ಗಾ ಜೈಲಿನಲ್ಲಿದ್ದಾರೆ, ಬೆಂಗಳೂರು ನಗರದ ಜೈಲಿನಲ್ಲಿದ್ದಾರೆ..........

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ:– ಇದು ನಾಚಿಕೆಗೇಡು ....

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್:– ಅಧ್ಯಕ್ಷರೇ, ಇದು ಸಮಂಜಸವೇ ಎಂಬುದನ್ನು ತಾವೇ ಯೋಚನೆ ಮಾಡಿ. ನಾವು ಅಧಿಕಾರದಲ್ಲಿದ್ದರೆ, ನಿಮ್ಮನ್ನು ಕೇಳುತ್ತೇವೆಯೇ, ಏಕೆ ಜೈಲಿನಲ್ಲಿ ಇಟ್ಟಿದ್ದೀರಿ ಎಂದು ?

ಶ್ರೀ ವಾಟಾಳ್ ನಾಗರಾಜ್:– ಎಲ್ಲರನ್ನೂ ಬಂಧಿಸಿ, ಜಾಮೀನಿನ ಮೇಲೆ ಬಿಡುಗಡೆ ಮಾಡುತ್ತಿದ್ದಾರೆ. ಅವರು ಜಾಮೀನು ಕೊಡುವುದಕ್ಕಾಗುವುದಿಲ್ಲ, ಅವರು ಏನು ಜಾಮೀನು ಕೊಡುವುದಕ್ಕಾಗುತ್ತದೆ ? ಜಾಮೀನು ಪ್ರಕಾರ ನ್ಯಾಯಾಲಯಕ್ಕೆ ಹೋದರೆ, ಯಾರಾದರೂ ಒಬ್ಬರು ಜಾಮೀನು ಕೊಡಲೇಬೇಕಾಗುತ್ತದೆ, ಇವರಿಗೆ ಯಾರು ಕೊಡುತ್ತಾರೆ. ಊರಿನಿಂದ ರೊಟ್ಟಿ ತಂದುಕೊಂಡು, ಗಂಭೀರವಾಗಿ, ರಾಷ್ಟ್ರದ ಹಿತದೃಷ್ಟಿಯಿಂದ ಬಂದಿರುವ ಜನಕ್ಕೆ, ಅವರು ನ್ಯಾಯಾಲಯಕ್ಕೆ ಕಳುಹಿಸಿ, ಜಾಮೀನು ಕೊಟ್ಟರೆ ಹೊರಗಡೆ ಬಿಡುತ್ತೇವೆಂದು ಹೇಳುತ್ತಿದ್ದಾರೆ. ಅನೇಕ ಕಡೆ ಜಾಮೀನು ಕೊಡುವ ಮಟ್ಟದಲ್ಲಿ ಅವರು ಇಲ್ಲ. ಬಡರೈತರು, ನಾವೇನೂ ತಪ್ಪು ಮಾಡಿಲ್ಲ, ಏಕೆ ಜಾಮೀನು ಕೊಡಬೇಕೆಂದು ಹೇಳುತ್ತಿದ್ದಾರೆ. ಇದು ಸರ್ಕಾರದ ಉದ್ಧಟತನ ಎಂದು ನಾವು ಕೇಳಬೇಕಾಗಿದೆ.

ಶ್ರೀ ವೈ. ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಇದು ನಾಚಿಕೆಗೇಡಿನ ಕೆಲಸ. ರೈತರನ್ನು ನಾವಲ್ಲ ಬಂಧಿಸಿರುವವರು, ಅವರೇ ಬಂಧಿಸಿದ್ದಾರೆ, ಅವರೇ ಹೇಳಬೇಕು. ಯಾರನ್ನು, ಎಲ್ಲಿ ಬಂಧಿಸಿದ್ದಾರೆಂಬ ವಿಚಾರವನ್ನು ಅವರೇ ಹೇಳಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್:– ತಾವು ಸರ್ಕಾರಕ್ಕೆ ಸೂಚನೆ ಕೊಡಿ. ಇದು ಕರಾರುರಹಿತ ಕೆಲಸ. ಜಾಮೀನು, ವಗೈರೆ ಸಾಧ್ಯವಿಲ್ಲ. ಒಂದು ವೇಳೆ ಸರ್ಕಾರದವರು ಕರಾರುರಹಿತವಾಗಿ ಈ ಕೂಡಲೇ ಬಿಡುಗಡೆ ಮಾಡದಿದ್ದರೆ, ಇಡೀ ರಾಜ್ಯದಲ್ಲಿ ರೈತರ ಕ್ರಾಂತಿಯಾಗುತ್ತದೆ, ನೀವು ರಾಜ್ಯವನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ, ತಾವು ಅಧಿಕಾರದಿಂದ ಕೆಳಗಿಳಿಯುವುದು ಅನಿವಾರ್ಯವಾಗುತ್ತದೆ. ದಯಮಾಡಿ ಎಲ್ಲರನ್ನೂ ಬೇಷರತ್ತಾಗಿ ಬಿಡುಗಡೆ ಮಾಡಿ.

ಶ್ರೀ ವೈ. ಕೆ. ರಾಮಯ್ಯ:– ನಿಮಗೆ ಗೌರವ ಬರುವುದಿಲ್ಲ, ನಿಮ್ಮ ಸರ್ಕಾರಕ್ಕೆ ಒಳ್ಳೆಯದಾಗುವುದಿಲ್ಲ. ನ್ಯಾಯವಾಗಿ ಉತ್ತರ ಕೊಡಿ, ಎಷ್ಟು ಜನರನ್ನು, ಎಲ್ಲಿ ಬಂಧಿಸಿದ್ದೀರಿ ಎಂದು. ಇದನ್ನು ನಾವು ಹೇಳಬೇಕೇ. ಯಾರನ್ನು ಬಂಧಿಸಿದ್ದೀರಿ, ಯಾರನ್ನು ಜೈಲಿನಲ್ಲಿ ಇಟ್ಟಿದ್ದೀರಿ ಎಂಬುದನ್ನು ನೀವು ಹೇಳಿ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ; ನಾನು ಪೂರ್ತಿ ಉತ್ತರವನ್ನು ಹೇಳುತ್ತೇನೆ. ದಯಮಾಡಿ ಆಲಿಸಿ, ಇದರಲ್ಲಿ ಏನಾದರೂ ತಪ್ಪಿದ್ದರೆ ತಿದ್ದಿಸಿ, ನಾನು ತಿದ್ದಿಕೊಳ್ಳುತ್ತೇನೆ. ಈ ನಿಮಿಷದ ಪರಿಸ್ಥಿತಿಯಲ್ಲಿ ಇಡೀ ರಾಜ್ಯದಲ್ಲಿ ಪೋಲೀಸ್ ಸುಬರ್ದಿನಲ್ಲಿ ಯಾವ ಒಬ್ಬ ರೈತರೂ ಇಲ್ಲ. ಎರಡನೆಯ ಪ್ರಶ್ನೆ, ರಾಯಚೂರಿನಲ್ಲಿ ರೈಲ್ವೆ ಪೋಲೀಸರು ಕೆಲವರ ಮೇಲೆ ಕೇಸುಗಳನ್ನು ಹಾಕುತ್ತಿದ್ದರು. ಕೋರ್ಟಿಗೆ ನಮ್ಮವರೇ ಮೆಮೋ ಹಾಕಿ, ಜಾಮೀನು ಕೇಳಬೇಡಿ, ಹಾಗೆಯೇ ಬಿಡಿ ಎಂದು ಹೇಳಿದ ಮೇಲೆ, ಸೆಲ್ಫ್ ಬಾಂಡ್, ಒಂದು ಮುಚ್ಚಳಿಕೆ ಬರೆದುಕೊಟ್ಟು ಬಿಡಿಸಿಕೊಂಡು ಹೋಗಬೇಕೆಂದು ಆಗಿತ್ತು. ಆದರೆ, ನಾವು ಅವರೇ ಮುಚ್ಚಳಿಕೆ ಬರೆದುಕೊಡುವುದಿಲ್ಲವೆಂದು ಹೇಳಿದರು. ಇದಾದ ಮೇಲೆ ಈಗತಾನೆ ನಾವು ಸೂಚನೆ ಕೊಟ್ಟಿದ್ದೇವೆ. ಇದರ ಅವಶ್ಯಕತೆ ಇಲ್ಲ, ಹಾಗೆಯೇ ಬಿಡಿ ಎಂದು ಕೋರ್ಟಿಗೆ ನಮ್ಮ ಅಧಿಕಾರವರ್ಗದವರು ರಾಯಚೂರಿನಲ್ಲಿ ಇವತ್ತೇ ತಿಳಿಸುವವರಿದ್ದಾರೆ. ಆದ್ದರಿಂದ, ಸೆಲ್ಫ್ ಬಾಂಡ್, ತಾನಾಗಿಯೇ ಮುಚ್ಚಳಿಕೆ ಬರೆದುಕೊಡಬೇಕಾಗಿಲ್ಲ, ಅವರನ್ನು ಬಿಡಬೇಕೆಂದು ಹೇಳಿದ್ದೇವೆ. ಇದಲ್ಲದೆ, ನಿನ್ನೆ ಪ್ರತಿಯೊಬ್ಬರಿಗೂ, ಅವರ ಊರುಗಳಿಗೆ ಹೋಗುವುದಕ್ಕೆ, ಉಚಿತ ಬಸ್ ವ್ಯವಸ್ಥೆ ಮಾಡಿ, ಅವರುಗಳನ್ನು ಊರಿಗೆ ತಲುಪಿಸುವುದಕ್ಕೆ ಸರ್ಕಾರ ಏರ್ಪಾಡು ಮಾಡಿದೆ.

ಶ್ರೀ ವೈ. ಕೆ. ರಾಮಯ್ಯ:– ಅವರನ್ನು ಡೆಲ್ಲಿಗೆ ಕಳುಹಿಸಿ ಎಂದು ಹೇಳಿದರೆ, ಬಸ್ ಮಾಡಿ, ಊರಿಗೆ ಕಳುಹಿಸುತ್ತಿದ್ದೀರಾ ?

(ಗೊಂದಲ)

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಡೆಲ್ಲಿಗೆ ಟಿಕೆಟ್ ತೆಗೆದುಕೊಂಡು ಹೋಗುವುದಕ್ಕೆ ಯಾವ ಅಬಾಧಕವೂ ಇಲ್ಲ. ಮುಂಚಿತವಾಗಿ ಬೇಕಾದರೆ ರೈಲ್ವೆ ಟಿಕೆಟ್ ಮುಂಗಡ ಪಡೆದು ಹೋಗಬಹುದು. ಆದ್ದರಿಂದ ನಾನು ಏಕೆ ತಮ್ಮಲ್ಲಿ ಅರಿಕೆ ಮಾಡಿಕೊಂಡೆ ಎಂದು ಹೇಳಿದರೆ, ನೀವು ನನ್ನ ಉತ್ತರ ಕೇಳಿದ್ದರೆ ಇಷ್ಟೆಲ್ಲಾ ಮಾತನಾಡುತ್ತಿರಲಿಲ್ಲ. ನನಗೆ ಶಹಭಾಸ್‌ಗಿರಿ ಕೊಡುತ್ತಿದ್ದಿರಿ.

ಗಮನ ಸೆಳೆಯುವ ಸೂಚನೆಗಳು:

(1) ಭಾರತ ಸರ್ಕಾರದ ಹತ್ತಿ ನಿಗಮದವರಿಂದ, ಕರ್ನಾಟಕದ ಹತ್ತಿ ಖರೀದಿ.

† ಶ್ರೀ ಎಸ್. ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಅಧ್ಯಕ್ಷರೇ, ಭಾರತ ಸರ್ಕಾರದ

ಹತ್ತಿ ನಿಗಮದವರು, ಕರ್ನಾಟಕ ರಾಜ್ಯದಿಂದ ಹತ್ತಿ ಖರೀದಿ ಮಾಡಲು ಕೃಷಿ ಮಂತ್ರಿಗಳು ಕೈಗೊಂಡಿರುವ ಕ್ರಮದ ಬಗ್ಗೆ, ಕೃಷಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

1.05 ಪಿ.ಎಂ.

† ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ಸರ್ಕಾರ ಪೂರ್ವಭಾವಿಯಾಗಿ ಕೇಂದ್ರ ಮಂತ್ರಿಗಳನ್ನು ಅಧಿಕಾರಿಗಳನ್ನು ನೋಡಿ ಇವರಿಗೆ ಯಾವ ರೀತಿಯಲ್ಲಿ ಸಹಾಯ ಮಾಡುವುದಕ್ಕೆ ಸಾಧ್ಯ. ಆ ದಿಸೆಯಲ್ಲಿ ನಾವು ಎಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆ, ಇದರಿಂದ ದೊಡ್ಡ ಉಪಕಾರ ಆಗಿದೆ. ಕಳೆದ ತಿಂಗಳು 5ನೇ ತಾರೀಖು ನಾನು ಮತ್ತು ವ್ಯವಸಾಯ ಇಲಾಖೆಯ ಕಾರ್ಯದರ್ಶಿಗಳು ನಾವು ಡೆಲ್ಲಿಗೆ ಹೋಗಿ ಅಲ್ಲಿನ ಕಾಮರ್ಸ್ ಮಿನಿಸ್ಟರನ್ನು, ಮತ್ತು ಆಹಾರ ಮಂತ್ರಿಗಳನ್ನು, ವ್ಯವಸಾಯ ಮಂತ್ರಿಗಳನ್ನು ನೋಡಿ ಈ ವಿಷಯದ ಬಗ್ಗೆ ಕೂಡಲೇ ಆಲೋಚನೆ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ರೈತರಿಗೆ ಸಿಗತಕ್ಕಂಥ ಬೆಲೆ ಏನು ಇದೆ ಅದು ಬಹಳ ಕಡಿಮೆ ಆಗಿದೆ. ಅವರು ಬೆಳೆದಿರತಕ್ಕಂಥ ಹತ್ತಿಗೆ ವ್ಯಾಪಾರ ಇಲ್ಲ ಅವರು ಬಹಳ ತೊಂದರೆಯಲ್ಲಿದ್ದಾರೆ ಎಂದು ಹೇಳಿದಾಗ ನಾವು ಸ್ಪಷ್ಟವಾಗಿ ಮುಂದೆ ಮಾತನಾಡಿ ತಿಳಿಸಿದ್ದೇವೆ. ಅವರು ಕೇಂದ್ರ ಹತ್ತಿ ವ್ಯಾಪಾರ ಮಾಡತಕ್ಕಂಥ ಒಂದು ನಿಗಮಕ್ಕೆ ತಿಳಿಸಿದರು. ನೀವು ವ್ಯಾಪಾರ ಮಾಡಬೇಕು ಎಂದು ಸ್ಪಷ್ಟವಾಗಿ ನಮಗೂ ಹೇಳಿದರು ಅವರಿಗೂ ಹೇಳಿದರು. ಈಗಾಗಲೇ ಕೇಂದ್ರ ಸಹಕಾರ ನಿಗಮದವರು ಹತ್ತಿಯನ್ನು ಕೊಂಡುಕೊಂಡಿದ್ದಾರೆ. ಎಷ್ಟು ಹತ್ತಿ ಕೊಂಡುಕೊಂಡಿದ್ದಾರೆ ಎಂದು ಹೇಳಿದರೆ ಸುಮಾರು 1,20,662, ಕ್ವಿಂಟಾಲ್ ಹತ್ತಿಯನ್ನು ಅವರು ವ್ಯಾಪಾರ ಮಾಡಿದ್ದಾರೆ. ಇದು ಅಲ್ಲದೆ, ಅಲ್ಲಿರತಕ್ಕಂಥ ಸಹಕಾರಿ ಮಾರಾಟ ಮಂಡಲಿಯವರು 12 ಸಾವಿರ 802 ಕ್ವಿಂಟಾಲ್ ಹತ್ತಿಯನ್ನು ವ್ಯಾಪಾರ ಮಾಡಿದ್ದಾರೆ. ಈ ರೀತಿ ವ್ಯಾಪಾರ ಮಾಡುವುದಕ್ಕೆ ಪ್ರಾರಂಭ ಮಾಡಿರುವುದರಿಂದ ರೈತರ ಹತ್ತಿ ಮುಂದೆ ಕೆಟ್ಟು ಹೋಗಲು ಬಿಡದೆ ಅವರು ವ್ಯಾಪಾರ ಮಾಡಿದರೆ, ಅವನ ಹೊರೆ ಬಹಳ ಕಡಿಮೆ ಆಗುವುದಕ್ಕೆ ಸಹಾಯ ಆಗುತ್ತದೆ. ಅಷ್ಟು ಮಾತ್ರ ಅಲ್ಲ ಇದಕ್ಕೆ ಬೆಂಬಲ ಬೆಲೆಯನ್ನು ಗೊತ್ತು ಮಾಡಿದ್ದಾರೆ. ಎಷ್ಟು ಗೊತ್ತು ಮಾಡಿದ್ದಾರೆಂದರೆ 1040 ರೂಪಾಯಿ ಕ್ವಿಂಟಾಲ್ ಹತ್ತಿಗೆ ಅದು ಡಿ.ಸಿ.ಎಚ್.–32 ಉಳಿದ ಹತ್ತಿ ಎ ಗ್ರೇಡ್ ಬಿ ಗ್ರೇಡ್ ವಗೈರೆ 780 ರೂಪಾಯಿಗಳು ಕ್ವಿಂಟಾಲ್‌ಗೆ ಬೆಂಬಲ ಬೆಲೆಯನ್ನು ಗೊತ್ತು ಮಾಡಿದ್ದಾರೆ.

ಇನ್ನು ಸರ್ಕಾರ ಏನು ಆಲೋಚನೆ ಮಾಡುತ್ತಿದೆ ಅಂದರೆ ಇನ್ನು ಮುಂದೆ ಎಷ್ಟು ಹತ್ತಿ ಮಾರುಕಟ್ಟೆಗೆ ಬರಬಹುದು ಅದನ್ನು ಕೂಡ ಲೆಕ್ಕ ಹಾಕಿದ್ದೇವೆ. ಸುಮಾರು 8.49 ಲಕ್ಷ ಕ್ವಿಂಟಾಲ್ ಹತ್ತಿ ಮಾರುಕಟ್ಟೆಗೆ ಬರಬಹುದು, ಅದನ್ನು ಯಾವ ರೀತಿ ವ್ಯಾಪಾರ ಮಾಡಬೇಕು ಎನ್ನುವ ಬಗ್ಗೆ ಈಗಾಗಲೇ ಖಚಿತವಾಗಿ ಸಲಹೆ ಕೊಟ್ಟಿದ್ದಾರೆ. ಇದೂ ಅಲ್ಲದೆ ಈಗ ಇರತಕ್ಕಂಥ ಹತ್ತಿ ಮುಂದೆ ಬರತಕ್ಕಂಥ ಹತ್ತಿ ಎಷ್ಟು ಇರಬಹುದು ಅದನ್ನು ಸಕಾಲದಲ್ಲಿ ವ್ಯಾಪಾರ ಮಾಡುವುದಕ್ಕೆ ಹೇಳುತ್ತೇವೆ. ನಾನು ಮತ್ತೆ 5ನೇ ತಾರೀಖು ಅಥವಾ 6ನೇ ತಾರೀಖು ಡೆಲ್ಲಿಗೆ ಹೋಗಿ ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತೆ ಈ ವಿಷಯವನ್ನು ಗಮನಕ್ಕೆ ತಂದು ಮತ್ತೆ ವ್ಯಾಪಾರ ಮಾಡುವುದಕ್ಕೆ ಕೇಳಿ ಬೆಂಬಲ ಬೆಲೆಯನ್ನು ಕೊಡಿಸುವುದಕ್ಕೆ ಸರ್ಕಾರ ಸರ್ವ ಪ್ರಯತ್ನ ಮಾಡುತ್ತದೆ ಅಂತ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಸಂತೋಷ ಪಡುತ್ತೇನೆ.

† ಶ್ರೀ ಎಸ್. ಎಚ್. ಕೌಜಲಗಿ:– ಮಾನ್ಯ ಅಧ್ಯಕ್ಷರೇ, ಈ ಮಂತ್ರಿ ಮಂಡಲದಲ್ಲಿ ನಿಜವಾಗಿಯೂ ಕೆಲವು ಮಂತ್ರಿಗಳು ಕಳಕಳಿ ಇದ್ದಂತಹವರು ಇದ್ದಾರೆಂದು ನಾನು ಬಹಳ ಸಂತೋಷದಿಂದ ಹೇಳುತ್ತೇನೆ. ಅದರಲ್ಲಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ಒಬ್ಬರು. ಅವರು ನಿಜವಾಗಿ ಕೆಲವು ಪ್ರಯತ್ನಗಳನ್ನು ಮಾಡಿದ್ದಾರೆ. ಅದಕ್ಕೆ ನಾನು ಮೊದಲು ತಮ್ಮನ್ನು ಅಭಿನಂದಿಸುತ್ತೇನೆ. ತಾವು ಹತ್ತಿ

ಬೆಲೆ ನಿಗದಿಪಡಿಸಬೇಕೆಂದು ತಿಳಿಸಲು ಡೆಲ್ಲಿಗೆ ಹೋಗಿ ಕಾಮರ್ಸ್ ಮಿನಿಸ್ಟರನ್ನು, ಅಗ್ರಿಕಲ್ಚರ್ ಮಿನಿಸ್ಟರನ್ನು ಕಂಡಿದ್ದೀರಿ ಆದರೆ ಅವರನ್ನು ಕಂಡು ತಾವು ತಮ್ಮ ಪ್ರಯತ್ನವನ್ನು ತಾವು ಮಾಡಿದರೂ ಸಹ ಅವರಿಗೆ ಯಾವುದೇ ಬೆಲೆ ಸಿಕ್ಕಿಲ್ಲ. ತಾವು ಕರ್ನಾಟಕ ರಾಜ್ಯದಲ್ಲಿ 1 ಲಕ್ಷ 18 ಸಾವಿರ ಕ್ವಿಂಟಾಲ್ ಹತ್ತಿ ಸಿ.ಸಿ.ಐ.ನವರು ಖರೀದಿ ಮಾಡಿದ್ದಾರೆಂದು ಹೇಳಿದಿರಿ. ಇನ್ನು 12 ಸಾವಿರ ಹತ್ತಿ ಮಾರಾಟ ಮಂಡಲಿಯವರು ಖರೀದಿ ಮಾಡಿದ್ದಾರೆಂದು ಹೇಳಿದಿರಿ.

ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ತಮಗೆ ಹೇಳುತ್ತೇನೆ, ನಮ್ಮಲ್ಲಿ ಹತ್ತಿ ತೂಗಿಸುವ ಹೆಂಗಸರು ಇಷ್ಟು ಖರೀದಿ ಮಾಡುತ್ತಾರೆ. ಅಷ್ಟನ್ನು ಈ ಸಿಸಿಐನವರು ಖರೀದಿ ಮಾಡ್ತಾರೆಂದರೆ ಇದು ನಮಗೆ ಶೇಮ್ ಅನಿಸುತ್ತದೆ. ಬೇರೆ ರಾಜ್ಯದಲ್ಲಿ ಹತ್ತಿ ಖರೀದಿ ಮಾಡಿರುವುದನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಒಂದು ರೂಪಾಯಿಯಲ್ಲಿ ಒಂದು ನಯೇಪೈಸೆಗಿಂತ ಹೆಚ್ಚು ಖರೀದಿ ಮಾಡಿಲ್ಲ. ಏಕೆಂದರೆ, ಕೇಂದ್ರ ಸರ್ಕಾರವನ್ನು ಕೇಳುವಂಥ ಧೈರ್ಯ ನಮ್ಮಲ್ಲಿ ಇಲ್ಲ. ಬೆಂಬಲ ಬೆಲೆ 1040ರಂತೆ ನಾವು ಬೇಕಾದಷ್ಟು ಹತ್ತಿಯನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಹತ್ತಿ ಬೆಳೆಯುವಂಥ ಪ್ರದೇಶದಿಂದ ಅಧ್ಯಕ್ಷರೇ ತಾವು ಬಂದಿದ್ದೀರಿ. ತಮಗೂ ಸಹಿತ ಇದು ಗೊತ್ತಿದೆ. ಇವತ್ತಿನ ದಿವಸ ನಮ್ಮ ಮಾರ್ಕೆಟ್‌ನಲ್ಲಿ ಐದು ನೂರು, ಆರು ನೂರು, ಏಳು ನೂರು ಇಷ್ಟಕ್ಕೆ ಹತ್ತಿಯನ್ನು ಮಾರಿಸುತ್ತಾರೆ. ಬರಗಾಲದಲ್ಲಿ ಯಾವ ಪ್ರಕಾರ ದನಗಳನ್ನು ಮಾರುತ್ತಾರೋ ಹಾಗೆ ಮಾರಲಿಕ್ಕೆ ಹತ್ತಿದ್ದಾರೆ. ಆದಕಾರಣ ತಾವು ಒಂದು ಮುಖ್ಯ ಕೆಲಸ ಮಾಡಬೇಕು, ಕರ್ನಾಟಕ ಫೆಡರೇಷನ್ ಅವರು ಏನು ಕರ್ನಾಟಕದಲ್ಲಿ ಇದ್ದಾರೆ ಅವರಿಗೆ ಯೋಗ್ಯ ರೇಟ್‌ನಲ್ಲಿ ಸಹಾಯ ಮಾಡಬೇಕು. ಇಷ್ಟು ಕ್ವಿಂಟಾಲ್ ನೀವು ತೆಗೆದುಕೊಳ್ಳಲೇಬೇಕೆಂದು ಹೇಳಿ, ಅವರು ಏನು ಮಾರ್ಜಿನ್ ರೇಟ್ ಇಂಟರೆಸ್ಟ್ ಮೇಲೆ 5 ಕೋಟಿ ರೂಪಾಯಿ ಕೇಳುತ್ತಿದ್ದಾರೆ ಅದನ್ನು ಅವರಿಗೆ ಕೊಟ್ಟು ಖರೀದಿ ಮಾಡಿ ಎಂದು ಹೇಳಿ, ನಮ್ಮಲ್ಲಿರುವ 32 ಸ್ಪಿನ್ನಿಂಗ್ ಮಿಲ್‌ನವರಿಗೆ ಖರೀದಿ ಮಾಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರೆ, ತಾವು ಒಂದು ಗಮನಿಸಬೇಕು. ಹತ್ತಿ ಬೆಲೆ ಕಡಿಮೆಯಾಗಿದೆ, ಆದರೆ ನೂಲಿನ ಬೆಲೆ ಕಡಿಮೆಯಾಗಿಲ್ಲ. ಅದು ಬಹಳ ಮಹತ್ವ ಇದೆ. ಈ ವರ್ಷ ಹತ್ತಿ ಬೆಲೆ ಕಡಿಮೆಯಾದರೆ ನೂಲಿನ ಬೆಲೆ ಏಕೆ ಕಡಿಮೆಯಾಗಲಿಲ್ಲ ? ಆದ್ದರಿಂದ ಇದನ್ನು ತಾವು ಬಹಳ ವಿಚಾರ ಮಾಡಬೇಕು. ನಮ್ಮ ರಾಜ್ಯದಲ್ಲಿ 8 ಲಕ್ಷ ಟನ್ ಹತ್ತಿ ಬರುತ್ತದೆಂದು ಹೇಳುತ್ತಾರೆ, ನಮ್ಮ ಕಡೆಯ ಬೈಲಹೊಂಗಲ, ಗೋಕಾಕ್ ಮಾರ್ಕೆಟ್‌ನಲ್ಲಿ 5 ಲಕ್ಷ ಟನ್ ಹತ್ತಿ ಬೇಕಾದರೆ ನಾನೇ ಕೊಡುತ್ತೇನೆ. 1040 ರೂಪಾಯಿಗೆ ಕೊಡುವುದಕ್ಕೆ ತಯಾರಿದ್ದಾರೆ. ಅವರು 80 ಮತ್ತು 90 ಕೌಂಟ್ ಕೇಳುತ್ತಾರೆ. ನಾವು ಏಕೆ ಕೊಡಬೇಕು 1040 ರೂಪಾಯಿ ಬೆಂಬಲ ಬೆಲೆ ಕೊಡುವಾಗ ? ಇವತ್ತಿನ ದಿವಸ ಕಬ್ಬಿನ ಬೆಲೆ, ರೇಷ್ಮೆ ಬೆಲೆ ಕಡಿಮೆಯಾದರೆ ಎಲ್ಲಾ ಮಂತ್ರಿಗಳು ತಲೆ ಕೆಡಿಸಿಕೊಳ್ಳುತ್ತಾರೆ. ಆದರೆ ಹತ್ತಿ ಬೆಲೆ ಕಡಿಮೆಯಾದರೆ ಯಾರೂ ಗಮನ ಕೊಡುವುದಿಲ್ಲ. ಬಾಂಬೆ ಕರ್ನಾಟಕದ ಕಡೆ ಬೆಳೆಯುವ ಈ ಹತ್ತಿ ಬಗ್ಗೆ ಈ ಸರ್ಕಾರದಲ್ಲಿ ಯಾರು ಕೇಳುವುದಕ್ಕೆ ತಯಾರಿಲ್ಲ. ಆದರೆ ತಮಗೆ ನಿಜವಾಗಿಯೂ ಕಳಕಳಿ ಇದೆ, ಏನೋ ನಿಮ್ಮಂಥ 4 ಮಂದಿ ಇದ್ದರೆ ರಾಜ್ಯದಲ್ಲಿ ಚಲೋ ಕೆಲಸವಾಗುತ್ತದೆಂದು ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಆದರೆ ತಾವು ಮಾಡುವ ಕೆಲಸಕ್ಕೆ ಫಲ ಸಿಗುವುದಿಲ್ಲವೆಂದು ನನಗೂ ಅನಿಸುತ್ತದೆ. ಆ ಕಾರಣ ರಾಜ್ಯದಲ್ಲಿ ರೈತರನ್ನು ಉಳಿಸಬೇಕೆಂದರೆ, ರಾಜ್ಯದಲ್ಲಿರುವ ಎಲ್ಲಾ ಹತ್ತಿಯನ್ನು ಕೊಂಡುಕೊಳ್ಳಬೇಕೆಂದು ಮಾರ್ಕೆಟಿಂಗ್ ಫೆಡರೇಷನ್‌ನವರಿಗೆ ಆರ್ಡರ್ ಕೊಡಿ. ಅದನ್ನು ಕೊಂಡುಕೊಳ್ಳುವುದಕ್ಕೆ 10–15 ಕೋಟಿ ರೂಪಾಯಿಯನ್ನು ಸರ್ಕಾರದಿಂದ ಬಿಡುಗಡೆ ಮಾಡಿ. ಇಂಥ ಒಳ್ಳೆಯ ಕೆಲಸಕ್ಕೆ ತಾವು ರೊಕ್ಕ ಕೊಡುವುದಕ್ಕೆ ತಯಾರಿಲ್ಲ. ಮಾರ್ಕೆಟಿಂಗ್ ಫೆಡರೇಷನ್‌ನವರನ್ನು ಇದನ್ನು ತೆಗೆದುಕೊಳ್ಳಬೇಕು. ತೆಗೆದುಕೊಳ್ಳದಿದ್ದರೆ ಸೂಪರ್ ಸೀಡ್ ಮಾಡುತ್ತೇವೆಂದು ಹೇಳಿ. ಏಕೆ ತೆಗೆದುಕೊಂಡಿಲ್ಲವೆಂದು ಅವರನ್ನು ಕೇಳಿ. ಅವರಿಗೆ ಏನು ಢಿಫಿಕಲ್ಟಿ ಇದೆ ಕೇಳಿ. ಅವರಿಗೆ ಏನಾದರೂ ಢಿಫಿಕಲ್ಟಿ ಇದ್ದರೆ ಅದನ್ನು

ಸಾಲ್ವ್ ಮಾಡಿ. ಆದಕಾರಣ ಸಪೋರ್ಟ್ ಪ್ರೈಸ್ ಏನಿದೆ 1040ರ ಪ್ರಕಾರ ಹತ್ತಿಯನ್ನು ತೆಗೆದುಕೊಳ್ಳಿ. ಸಿಸಿಐ ಅವರ ಹತ್ತಿರ ಮಾತನಾಡುವುದಕ್ಕೆ ನೀವು ಏಕೆ ದೆಹಲಿಗೆ ಹೋಗುತ್ತೀರಿ ? ಆ ದೆಹಲಿ ಆಫೀಸರನ್ನು ಇಲ್ಲಿಗೇ ಕರೆಸಿ ನೀವು ಇಲ್ಲಿ ಕುಳಿತು ಅಧಿಕಾರವನ್ನು ಚಲಾಯಿಸಬೇಕೇ ಹೊರತು ದೆಹಲಿಗೆ ಹೋಗಿ ಅಲ್ಲ. ರೇಷ್ಮೆ ಬೆಳೆಗೆ ಯಾವ ಪ್ರಕಾರ ಬೆಲೆ ಕಡಿಮೆಯಾದರೆ ಎಲ್ಲಾ ಮಂತ್ರಿಗಳು ಹೇಳುತ್ತಾರೋ ಅದೇ ಪ್ರಕಾರ ಇದರ ಬಗ್ಗೆ ಕೂಡ ಎಲ್ಲಾ ಮಂತ್ರಿಗಳು ಹೇಳುವುದಕ್ಕೆ ತಯಾರಿರಬೇಕು ಎಕೆಂದರೆ ಹತ್ತಿ ಬೆಳೆಯುವುದು ಬಾಂಬೆ ಕರ್ನಾಟಕ ಹೊರತು ಮತ್ತೊಂದು ಕಡೆ ಇಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಸಿಸಿಐ ಅವರನ್ನು ಇಲ್ಲಿಗೆ ಕರೆಯಿಸಿ ಇಷ್ಟು ಹತ್ತಿಯನ್ನು ತೆಗೆದುಕೊಳ್ಳುವಂತೆ ತಿಳಿಸಬೇಕೆಂದು ಮತ್ತೊಮ್ಮೆ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೇ, ಹತ್ತಿಯು ಹೊರದೇಶಕ್ಕೆ ಹೋಗುವ ಸಲುವಾಗಿ 16 ಸಾವಿರ ಬೇಲ್‌ನಷ್ಟು ಕೋಟಾ ಕರ್ನಾಟಕ ರಾಜ್ಯಕ್ಕೆ ಸಿಕ್ಕಿದೆ. ಕರ್ನಾಟಕದಿಂದ ಹೊರರಾಜ್ಯಕ್ಕೆ ಕಳುಹಿಸುವ ಎರಡನೆಯ ಕೋಟಾ ನಮಗೆ ಸಿಗಲಿಲ್ಲ. ಅದಕ್ಕಾಗಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಸರ್ಕಾರಕ್ಕೆ ಏನಾದರೂ ಬರೆದು ಹೊಸ ಕೋಟವನ್ನು ಕೊಡಿಸಿ ರೈತರಿಗೆ ಹತ್ತಿ ಪೀಕ್ ಮಾಡಲು ಅನುಕೂಲ ಮಾಡಿಕೊಡುತ್ತೀರಾ ? ನಮ್ಮಲ್ಲಿನ ಜಯಧರ ಹತ್ತಿಯನ್ನು ಹೊರದೇಶದವರು ಕೂಡ ಒಪ್ಪಿಕೊಂಡಿದ್ದಾರೆ. ಗುಜರಾತಿನ ಹತ್ತಿ ಮತ್ತು ನಮ್ಮ ಜಯಧರ ಹತ್ತಿ ಒಂದೇ ಕ್ವಾಲಿಟಿ ಇದೆ. ಕೃಷಿ ಇಲಾಖೆಯವರು ಕೇಂದ್ರ ಟೆಕ್ಸ್‌ಟೈಲ್ ಮಿನಿಸ್ಟರ್‌ಗೆ ಹೇಳಿ, ನಮ್ಮ ಹತ್ತಿಯನ್ನು ಸೆಲೆಕ್ಟ್ ಮಾಡಿ ಪುನಃ ನಮಗೆ ಕೋಟ ಕೊಡಿಸಬೇಕು. ಆಂಧ್ರದವರಿಗೆ ಸಿಕ್ಕಿದೆ, ನಮಗೆ ಸಿಕ್ಕಿಲ್ಲ ಇದರ ಬಗ್ಗೆ ನಿಶ್ಚಿತವಾಗಿ ಸರಕಾರದವರು ಪ್ರಯತ್ನ ಮಾಡಬೇಕು. ಎರಡನೆಯದಾಗಿ ಸಪೋರ್ಟ್ ಬೆಲೆಯ ಬಗ್ಗೆ ತಾವುಗಳು ಮಾರಾಟ ಮಹಾಮಂಡಳಿಗೆ 5 ಕೋಟಿ ಕೊಡುತ್ತೇವೆಂದು ಹೇಳಿದ್ದೀರಿ ಅದನ್ನು ಕೊಡುತ್ತೀರಾ ?

ಶ್ರೀ. ಎನ್. ಹುಚ್ಚಮಾಸ್ತಿಗೌಡ:– ಸಹಕಾರ ಮಹಾಮಂಡಳಿಗೆ ಮುಂದೆ ಬರತಕ್ಕಂಥ ಹತ್ತಿಯು ಸುಮಾರು ಎಂಟು ಲಕ್ಷ ಕ್ವಿಂಟಾಲ್‌ಗಿಂತ ಹೆಚ್ಚಿಗೆ ಬರುತ್ತದೆ ಎಂದು ನಿರೀಕ್ಷೆ ಮಾಡಿ ಈಗಾಗಲೇ ನಿಗದಿ ಮಾಡಿರತಕ್ಕಂಥ ಬೆಂಬಲ ಬೆಲೆಯನ್ನು ಕೊಡಬೇಕೆಂದು ನಾವು ಸ್ಪಷ್ಟವಾಗಿ ತಿಳಿಸಿದ್ದೇವೆ. ಸಹಕಾರ ಮಹಾಮಂಡಳಿಯವರು ಕೊಡತಕ್ಕಂಥ ಬೆಲೆಗೂ ಮತ್ತು ಕೇಂದ್ರದ ನಿಗಮದವರು ಕೊಡತಕ್ಕಂಥ ಬೆಲೆಗೂ ನಾವು ನಿಗದಿ ಮಾಡಿರುವ ಬೆಂಬಲ ಬೆಲೆಗೂ ಯಾವ ವ್ಯತ್ಯಾಸವೂ ಆಗುವುದಿಲ್ಲ ಎಂದು ನಾನು ತಿಳಿಸಿದ್ದೇನೆ. ಆದರೆ ಮಾನ್ಯ ಸದಸ್ಯರು ಏನು ಭಯವನ್ನು ವ್ಯಕ್ತಪಡಿಸಿದ್ದಾರೆ, ಮತ್ತೆ ಮುಂದಿನ ತಿಂಗಳು 2–3ನೇ ತಾರೀಖಿಗೆ ಡೆಲ್ಲಿಗೆ ಹೋಗಿ ಕಾರ್ಯದರ್ಶಿಗಳ ಜೊತೆಗೆ ಅಲ್ಲಿಯ ಟೆಕ್ಸ್‌ಟೈಲ್ ಹಾಗೂ ಕೃಷಿ ಮಂತ್ರಿಗಳ ಸಂದರ್ಶನ ಮಾಡಿ ಅವರ ಜೊತೆಗೆ ಸಮಾಲೋಚನೆ ಮಾಡಿ ನಮ್ಮ ರೈತರಿಗೆ ಆಗುತ್ತಿರುವಂಥ ತೊಂದರೆಯನ್ನು ತಪ್ಪಿಸುವುದಕ್ಕೆ ಸರಿಯಾದ ಪ್ರಯತ್ನವನ್ನು ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡಬಯಸುತ್ತೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ:– ನೀವು ಡೆಲ್ಲಿಗೆ ಹೋಗುತ್ತೇನೆ, ಲಂಡನ್‌ಗೆ ಹೋಗುತ್ತೇನೆ ಎಂದು ಹೇಳಿದರೆ ಆಗುವುದಿಲ್ಲ .....

(ಗೊಂದಲ)

ಅಧ್ಯಕ್ಷರು:– ಶಿವಾನಂದ ಕೌಜಲಗಿಯವರು ಮಂತ್ರಿಗಳು ಉತ್ತರಿಸಿದ್ದಾರೆ, ದಯಮಾಡಿ ಕುಳಿತುಕೊಳ್ಳಬೇಕು.

2) ರಾಜ್ಯ ಹಾಲು ಉತ್ಪಾದಕರ ಒಕ್ಕೂಟಗಳ ರೈತರಿಗೆ ಹಣವನ್ನು ಬಟವಾಡೆ ಮಾಡದಿರುವ ಕುರಿತು.

ಶ್ರೀ ಜಿ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹಾಲು ಉತ್ಪಾದಕ ರೈತರಿಗೆ ಹಣ ತಲುಪದಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

† ಶ್ರೀ ಕೆ. ಎನ್. ನಾಗೇಗೌಡ (ಪಶು ಸಂಗೋಪನೆ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಸಾಲಿನ ಹಾಲು ಸಮೃದ್ಧಿ ಕಾಲದಿಂದ ಹಿಂದೆಂದೂ ಇಲ್ಲದಷ್ಟು ಅಂದರೆ ದಿನಕ್ಕೆ 13 ಲಕ್ಷದಿಂದ 14 ಲಕ್ಷ ಲೀಟರ್‌ಗಳಷ್ಟು ಹಾಲು ಶೇಖರಣೆಯಾಗುತ್ತಿದ್ದು ಕರ್ನಾಟಕ ಹಾಲು ಮಹಾ ಮಂಡಳಿಯ ಡೈರಿಗಳ ಒಟ್ಟು ಸಂಸ್ಕರಣ ಸಾಮರ್ಥ್ಯವು 11 ಲಕ್ಷ ಲೀಟರ್ ಮಾತ್ರವಿದ್ದು, ಉಳಿದ ಹಾಲನ್ನು ನೆರೆ ರಾಜ್ಯಗಳಿಗೆ ಹಾಲು ಉತ್ಪನ್ನಗಳಾಗಿ ಪರಿವರ್ತಿಸಲು ಕಳುಹಿಸಿಕೊಡಬೇಕಾಗಿರುತ್ತದೆ. ಕರ್ನಾಟಕ ರಾಜ್ಯವಲ್ಲದೆ ದೇಶದ ಇತರ ರಾಜ್ಯಗಳಲ್ಲೂ ಹಾಲಿನ ಶೇಖರಣೆ ಜಾಸ್ತಿಯಾಗಿರುವುದರಿಂದ ಹಾಲು ಉತ್ಪನ್ನಗಳ ಮಾರಾಟದ ಬೆಲೆ ಸಾಕಷ್ಟು ಇಳಿಮುಖವಾಗಿರುತ್ತದೆ. ಈ ಕಾರಣದಿಂದಾಗಿ ದಿನಕ್ಕೆ 20 ಲಕ್ಷದಿಂದ 30 ಲಕ್ಷ ಲೀಟರ್‌ವರೆಗೆ ಹಾಲಿನ ಉತ್ಪನ್ನಗಳು ತಯಾರಾಗಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಸಿಗದಿದ್ದ ಕಾರಣ ವ್ಯಾವಹಾರಿಕ ಬಂಡವಾಳವು ಹಾಲಿನ ಉತ್ಪನ್ನಗಳ ರೂಪದಲ್ಲಿ ಸುಮಾರು 30 ಕೋಟಿ ರೂಪಾಯಿಗಳಷ್ಟು ಕೂಡಿಕೊಂಡಿರುವುದರಿಂದ ಹಾಲು ಉತ್ಪಾದಕರಿಗೆ ಹಣವನ್ನು ಬಟವಾಡೆ ಮಾಡಲು ತಡವಾಗಿರುತ್ತದೆ. ಇದನ್ನು ಸರಿದೂಗಿಸಲು ಈಗಾಗಲೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ಹಾಗೂ ಇತರ ಮೂಲಗಳಿಂದ ಸುಮಾರು 24 ಕೋಟಿ ರೂಪಾಯಿಗಳನ್ನು ದುಡಿಯುವ ಬಂಡವಾಳವಾಗಿ ಹಾಲು ಒಕ್ಕೂಟಗಳಿಗೆ ನೀಡಿ ಹಾಲು ಉತ್ಪಾದಕರಿಗೆ ಹಣವನ್ನು ಬಟವಾಡೆ ಮಾಡಲಾಗಿದೆ. ಇನ್ನುಳಿದ ಹಣವನ್ನು ಪಾವತಿಸಲು, 6 ಕೋಟಿ ರೂಪಾಯಿಗಳನ್ನು ನೀಡಬೇಕೆಂದು ಸರ್ಕಾರವನ್ನು ಕೋರಲಾಗಿದೆ. ಆದರೆ, ಸರ್ಕಾರದಿಂದ ಡೈರಿ ಕೊರತೆ ಅನುದಾನಕ್ಕೆ ಅರ್ಹತೆಯಿರುವ ಒಕ್ಕೂಟಗಳಾದ ಧಾರವಾಡ, ಬೆಳಗಾವಿ, ದಕ್ಷಿಣ ಕನ್ನಡ ಹಾಗೂ ಬಿಜಾಪುರ ಒಕ್ಕೂಟಗಳು ತಮ್ಮ ಲೆಕ್ಕ ಪರಿಶೋಧನಾ ವರದಿಯನ್ನು ನೀಡಿದ ನಂತರ ಸರ್ಕಾರದಿಂದ ಕೋರಿರುವ ಅರ್ಧ ಅರ್ಹ ಹಣವನ್ನು ಬಿಡುಗಡೆ ಮಾಡಲು ವ್ಯವಸ್ಥೆ ಮಾಡಲಾಗುವುದು. ಈ ಬಗ್ಗೆ ದಾಸ್ತಾನಿರುವ ಹಾಲಿನ ಪುಡಿಯನ್ನು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಗೆ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದ್ದು, ಅವರಿಂದ ಹಣ ಪಡೆದು ಹಾಲು ಉತ್ಪಾದಕರಿಗೆ ತಕ್ಷಣ ಬಟವಾಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಇದರ ಜೊತೆಗೆ ಸರ್ಕಾರಿ ವಲಯದ ಬ್ಯಾಂಕುಗಳಿಂದ ಸಾಲ ಪಡೆಯಲು ಸಹ ಕ್ರಮವನ್ನು ಈಗಾಗಲೇ ಜರುಗಿಸಲಾಗಿದೆ.

† ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೇ, ನನ್ನಲ್ಲಿರುವ ಮಾಹಿತಿ ಪ್ರಕಾರ 19 ಕೋಟಿ 90 ಲಕ್ಷ ರೂಪಾಯಿಗಳು ಹಾಲು ಉತ್ಪಾದಕರಿಗೆ, ರೈತರಿಗೆ ಬಟವಾಡೆ ಮಾಡಬೇಕಾಗಿದೆ. ಇದರಲ್ಲಿ ಸುಮಾರು 9 ಕೋಟಿ 79 ಲಕ್ಷ ರೂಪಾಯಿಗಳು ಎರಡು ವಾರಕ್ಕಿಂತ ಜಾಸ್ತಿ ಆಗಿರುವುದು. ಅಂದರೆ 5, 6, 7 ವಾರಗಳ ಬಿಲ್. ಸನ್ಮಾನ್ಯ ಮಂತ್ರಿಗಳು ಹೇಳಿದ್ದಾರೆ 30 ಕೋಟಿ ರೂಪಾಯಿಗಳ ದಾಸ್ತಾನು ಕೆ.ಎಂ.ಎಫ್.ನಲ್ಲಿ ಇಟ್ಟಿದ್ದಾರೆ ಎಂದು ಇದು ವಾಸ್ತವಾಂಶಕ್ಕೆ ದೂರವಾದ ವಿಷಯ ಆ ದಾಸ್ತಾನಿನ ಮೇಲೆಯೂ ಕೂಡ ಆಗಲೇ ಇವರು ಸಾಲ ತೆಗೆದುಕೊಂಡಿದ್ದಾರೆ. ಅಪೆಕ್ಸ್ ಬ್ಯಾಂಕಿಗೆ, ಕಮರ್ಷಿಯಲ್ ಬ್ಯಾಂಕಿಗೆ ಆ ದಾಸ್ತಾನನ್ನು ಪ್ಲೆಡ್ಜ್ ಮಾಡಿದ್ದಾರೆ; ಹೈಪಾಥಿಕೇಟ್ ಮಾಡಿದ್ದಾರೆ, ನಾನು ಒಂದನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಇದರ ಬಗ್ಗೆ ತಾವು ಓದಿದ್ದೀರಿ. ಸುಮಾರು 30 ಕೋಟಿ ರೂಪಾಯಿಗಳು ದಾಸ್ತಾನು ಇದೆ, ಸುಮಾರು ಹಣವನ್ನು ರೈತನಿಗೆ ಕೊಡಬೇಕು ಎಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಸರ್ಕಾರದಿಂದ 6 ಕೋಟಿ ರೂಪಾಯಿಗಳನು ಬಿಡುಗಡೆ ಮಾಡಿ, ಸಹಕಾರ ಸಂಘಗಳ ಸದಸ್ಯರಿಗೆ

ಹಾಲಿನ ಬಾಕಿಯನ್ನು ಪಾವತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆ 6 ಕೋಟಿ ರೂಪಾಯಿಗಳು ಎಲ್ಲಿ ಹೋಗಿದೆ ಎಂಬ ಬಗ್ಗೆ ಗೊತ್ತಾಗಲಿಲ್ಲ. ಸನ್ಮಾನ್ಯ ಮಂತ್ರಿಗಳು ಕೊಟ್ಟಿರುವ 6 ಕೋಟಿ ರೂಪಾಯಿಗಳು ಬರುತ್ತದೆ ಎಂದು ಜನರು ದಿನವೂ ಬಂದು ಡೈರಿ ಹತ್ತಿರ ಕೇಳುತ್ತಿದ್ದಾರೆ ನೀವಂತೂ ಕೊಡಲಿಲ್ಲ ಮಂತ್ರಿಗಳು ಕೊಟ್ಟಿರುವ ಹಣವನ್ನಾದರೂ ಕೊಡಿ ಎಂದು ಕೇಳುತ್ತಿದ್ದಾರೆ. ಆ 6 ಕೋಟಿ ರೂಪಾಯಿಗಳು ಬಂದಿಲ್ಲ. ಜೊತೆಗೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. 13–14 ಲಕ್ಷ ರೂಪಾಯಿಗಳ ಫ್ಲಸ್ ಸೀಜನ್ ಬರುತ್ತದೆ ಹನ್ನೆರಡೂವರೆ ಲಕ್ಷ ರೂಪಾಯಿಯಿಂದ 13 ಲಕ್ಷ ಫ್ಲಸ್ ಸೀಜನ್ ಬರುತ್ತದೆ ಎಂದು 2 ತಿಂಗಳು ಆದರೂ ಆ ಪ್ರಶ್ನೆಯನ್ನು ಎತ್ತಲಿಲ್ಲ ಎಂದರೆ ನಮಗೆ ಅರ್ಥವಾಯಿತು. ಡಿಸೆಂಬರ್ ಎಂಡ್‌ನಿಂದ ಜನವರಿ 15 ರವರೆಗೆ, ಇವರು ಬಿಲ್ಲನ್ನು ಕ್ಲಿಯರ್ ಮಾಡುವುದಿಲ್ಲ ಎಂದು, ಇವರು ಏಕೆ 2 ತಿಂಗಳು ಆದರೂ ಪೇಮೆಂಟ್ ಕ್ಲಿಯರ್ ಮಾಡಿಲ್ಲ ಎಂದರೆ ಒಂದು ದುರಂತ ಆಗಿದೆ. ಧಾರಣೆ ನಿಗದಿ ಮಾಡುವಾಗ ಒಂದು ತಪ್ಪಾಗಿದೆ. ಪೌಡರ್‌ಗೆ ಧಾರಣೆ ಮಾಡುವಾಗ ಕೆ.ಜಿ.ಗೆ ಎಷ್ಟು ಖರ್ಚು ತಗಲುತ್ತದೆ. ಇದು ನನಗೆ ತಿಳಿದ ಇನ್‌ಫರ್ಮೇಷನ್ ಪ್ರಕಾರ 72 ರೂಪಾಯಿಗಳ ಖರ್ಚು ಬರುತ್ತದೆ. ಪೌಡರನ್ನು 48 ರೂಪಾಯಿಗಳಿಗೆ ಮಾರಿದ್ದೀರಿ. 48 ರೂಪಾಯಿಯಿಂದ 52 ರೂಪಾಯಿಗಳಿಗೆ ತುಪ್ಪವನ್ನು ಮಾಡಿದ್ದೀರಿ, 38 ರಿಂದ 40 ರೂಪಾಯಿಗಳು ಎಣ್ಣೆ ಇದೆ. ರಾಜ್ಯದಲ್ಲಿ ಮಾರುಕಟ್ಟೆಯ ವ್ಯವಸ್ಥೆ ಏನಾಗಿದೆ ಎಂದರೆ ಯಾರೋ ಬಂದರು ಮಾರಿ ಕೊಂಡು ಹೋದರು. ಪೇಮೆಂಟ್ ಮಾಡದೆ ಇರುವ ಸ್ಥಿತಿ ಏಕೆ ಬಂದಿದೆ ಎಂದರೆ ನನ್ನ ದೃಷ್ಟಿಯಲ್ಲಿ ಸರ್ಕಾರ ಮಧ್ಯೆ ಬಂದುದಕ್ಕೆ ಬಂದಿದೆ.

ಸನ್ಮಾನ್ಯ ಸಚಿವರ ಬಗ್ಗೆ ನಮಗೆ ಗೌರವವಿದೆ. ತಮ್ಮ ಮಾತಿನಂತೆ ನಡೆಯಲಿಲ್ಲ. ಸರ್ಕಾರದಿಂದ 6 ಕೋಟಿ ರೂಪಾಯಿಗಳು ಬಿಡುಗಡೆ ಆಗಲಿಲ್ಲ. ರಾಜ್ಯದ ರೈತ ತಮ್ಮ ಮೇಲೆ ಭಾರಿ ಗೌರವ, ನಂಬಿಕೆ ಇಟ್ಟುಕೊಂಡಿದ್ದಾರೆ. ಶ್ರೀ ನಾಗೇಗೌಡರು 6 ಕೋಟಿ ರೂಪಾಯಿಗಳು ಕೊಡಿಸಿದ್ದಾರೆ. ನಮ್ಮ ಬಿಲ್ಲಿನ ಹಣ ಪಾವತಿಯಾಗುತ್ತದೆ ಎಂದು ಕಾಯುತ್ತಿದ್ದಾರೆ. ತುಮಕೂರು ಡೈರಿ, ಮಂಡ್ಯ ಡೈರಿ, ಧಾರವಾಡ ಡೈರಿ, ಪ್ರತಿಯೊಂದು ಡೈರಿಗೂ 3 ಕೋಟಿ ರೂಪಾಯಿಗಳು ಕೊಡಬೇಕು. ನಿಮ್ಮ ಹತ್ತಿರ ಇಷ್ಟೊಂದು ಪ್ರಾಡಕ್ಟ್ ಇದ್ದರೆ ಏಕೆ ದುಡ್ಡು ಕೊಟ್ಟು ವಾಪಸ್ಸು ತೆಗೆದುಕೊಳ್ಳಬಾರದು. ಮತ್ತೆ ತಮ್ಮ ಯೋಜನೆಯಲ್ಲಿ 12 ಕೋಟಿ ರೂಪಾಯಿಗಳು ಇವತ್ತು ರಿಲೀಜು ಆಗಿಲ್ಲ ಇದಕ್ಕೆ ಆಡಿಟ್ ಏಕೆ ಆಗಬೇಕು. ನನಗೆ ಇದು ಅರ್ಥವಾಗುತ್ತಿಲ್ಲ. ಸರ್ಕಾರಿ ಅನುದಾನದಿಂದ 12 ಕೋಟಿ ರೂಪಾಯಿಗಳು ಏನು ಕೊಡಬೇಕಾಗಿತ್ತೋ ಅದು ಉತ್ತರ ಕರ್ನಾಟಕದ ಭಾಗದಲ್ಲಿ ಇರುವ ಡೈರಿಗಳಿಗೆ ಹೋಗಿಲ್ಲ. ಉತ್ಪಾದಕರಿಗೆ ಕೊಡಬೇಕಾಗಿದ್ದ ದುಡ್ಡಿನಲ್ಲಿ ಇವತ್ತು ಔಷಧಿಗಳು, ಡಾಕ್ಟರ್‌ಗಳಿಗೆ ಹೋಗುತ್ತಿರುವ ಖರ್ಚು, ಅಲ್ಲಿಂದ ಬರಿಸಿದ್ದಾರೆ. ಇವೆಲ್ಲಕ್ಕೂ ಮೀರಿ ತಾವು ಯಾವಾಗ ಹಣವನ್ನು ಕೊಡುತ್ತೀರಿ. ಸರ್ಕಾರದಿಂದ 6 ಕೋಟಿ ರೂಪಾಯಿಗಳು ಕೊಡುವುದಕ್ಕೆ ಏನಾಗಿದೆ. ಏಕೆಂದರೆ ಮಂತ್ರಿಗಳೇ ಕಳಕಳಿಯಿಂದ ಡೈರಿಯನ್ನು ಇನ್ಸ್‌ಪೆಕ್ಟ್ ಮಾಡಿದ್ದಾರೆ. ಅಲ್ಲೆಲ್ಲಾ ಅಸ್ಯೂರ್ ಮಾಡಿದ್ದಾರೆ. ನಾನು ಮಂತ್ರಿಯಾಗಿ ಕೆಲಸ ಮಾಡುತ್ತೇನೆ ಎಂದು, ಅವರು ಹೇಳಿ ತಿಂಗಳಾಯಿತು ಇನ್ನು ದುಡ್ಡು ಬಂದಿಲ್ಲ. ಹಾಲು ಉತ್ಪಾದನೆ ಜಾಸ್ತಿಯಾಗಿ ಪೌಡರ್ ಹೋಯಿತು, ಅಲ್ಲಿ ಡೈರಿಗಳು ನಷ್ಟಕ್ಕೆ ಬಂದಿದೆ. ಪ್ರತಿ ಕೆ.ಜಿ. ಪೌಡರ್ 20–30 ರೂಪಾಯಿಗಳು ನಷ್ಟವಾಗಿದೆ. ಫ್ಲಸ್ ಸೀಜನ್‌ನಲ್ಲಿ ಧಾರಣೆ ಜಾಸ್ತಿ ಮಾಡಿದ್ದೀರಿ, ಆಗಸ್ಟ್, ಸೆಪ್ಟೆಂಬರ್ ನಲ್ಲಿ ಧಾರಣೆ ಜಾಸ್ತಿ ಮಾಡಲಿಕ್ಕೆ ನಾನು ಛೇರ್ಮನ್ ಆಗಿರುವಾಗ ಅವಕಾಶ ಕೊಟ್ಟಿರಲಿಲ್ಲ. ನಿಮ್ಮ ಧಾರಣೆಯನ್ನು ಆಂಧ್ರ ಪ್ರದೇಶ, ಮಹಾರಾಷ್ಟ್ರ ಒಪ್ಪಲಿಲ್ಲ. ಅಲ್ಲೆಲ್ಲಾ ಚೀಪಾಗಿ ಹಾಲು ಸಿಕ್ಕಿತ್ತು ಪೌಡರ್ ಆಯಿತು. ಸೈಂಟಿಫಿಕ್ಕಾಗಿ ನೀವು ಧಾರಣೆಯನ್ನು ನಿಗದಿ ಮಾಡಲಿಲ್ಲ. ನಿಮಗೆ ಇಷ್ಟ ಬಂದಹಾಗೆ ಧಾರಣೆಯನ್ನು ನಿಗದಿ ಮಾಡಿದ್ದೀರಿ. ಜನವರಿ – ಫೆಬ್ರವರಿ ಬಿಟ್ಟು ಧಾರಣೆ ನಿಗದಿ ಮಾಡಬೇಡಿ ಎಂದು ಹೇಳಿದರೆ ನೀವು ಕೇಳಲಿಲ್ಲ. ಇದಕ್ಕೆಲ್ಲಾ ನೀವೇ ಜವಾಬ್ದಾರಿಯಾಗಬೇಕಾಗುತ್ತದೆ. ರೈತರನ್ನು

ಜವಾಬ್ದಾರರನ್ನಾಗಿ ಮಾಡಬಾರದು. ಅದರಲ್ಲೂ ಮಳೆಗಾಲದಲ್ಲಿ ನಮ್ಮ ರೈತರಿಗೆ 30 ಪೈಸೆ ಕಡಿಮೆ ಮಾಡಿದ್ದೀರಿ. ಇದನ್ನು ಸದನದ ಗಮನಕ್ಕೆ ತರಲಿಲ್ಲ, ತಾವು ಹಣ ಕೊಡಲಿಲ್ಲ ಎಂದರೆ ಏನು ? ಇದಕ್ಕೆ ತಾವು ಉತ್ತರ ಹೇಳಬೇಕು. ಇಲ್ಲದೇ ಹೋದರೇ, ರಾಜ್ಯಮಟ್ಟದಲ್ಲಿ ಪ್ರತಿಭಟನೆ ಮಾಡಬೇಕಾಗುತ್ತದೆ. ಕೊಟ್ಟಿರುವ ಹಾಲಿನ ದುಡ್ಡನ್ನು ಕೊಡಲಿಲ್ಲ ಎಂದರೆ ಹೇಗೆ ? ಇದಕ್ಕೆ ತಮ್ಮಿಂದ ಉತ್ತರವನ್ನು ಬಯಸುತ್ತೇವೆ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಮಂತ್ರಿಗಳು ಈ 5 ಕೋಟಿ ರೂಪಾಯಿಗಳನ್ನು ಕೊಡುವಂತೆ ನಾವು ಸರ್ಕಾರವನ್ನು ಕೇಳಿದ್ದೇವೆಂದು ಹೇಳಿದ್ದಾರೆ. ತಾವು ಯಾವಾಗ ಕೇಳಿದ್ದೀರಿ ಸ್ವಾಮಿ. ಕಳೆದ ಎರಡು ತಿಂಗಳಿಂದ ಹಾಲು ಉತ್ಪಾದಕರು ಏನು ಇದ್ದಾರೆ ಅವರಿಗೆ ನೀವು ಹಣವನ್ನು ಬಟವಾಡೆ ಮಾಡಲಿಕ್ಕೆ ಆಗಿಲ್ಲ ಎನ್ನುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ ಎಂದ ಮೇಲೆ ಅವರಿಗೋಸ್ಕರ ತೀವ್ರವಾಗಿ ಹಣವನ್ನು ಪಡೆದು ಬಟವಾಡೆ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಎರಡನೆಯದು as on a particular date ಎಷ್ಟು ಎಷ್ಟು ಹಣವನ್ನು ರೈತರಿಗೆ ಕೊಡಬೇಕಾಗಿದೆ. ನವೆಂಬರ್ ಕೊನೆಯಿಂದಾಗಲೀ ಜನವರಿ ಕೊನೆಯಲ್ಲಾಗಲೀ ಯಾವುದಾದರೂ ಒಂದು ದಿವಸಕ್ಕೆ ಎಷ್ಟು ಬಾಕಿ ಇತ್ತು ಆ ಬಾಕಿ ಹಣವನ್ನು ಬಟವಾಡೆ ಮಾಡಲಿಕ್ಕೆ ಸರ್ಕಾರ ಮಾಡದಂಥ ಪ್ರಯತ್ನ ಏನು ?

† ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ, ಉತ್ತರ ಕೊಡುವಾಗ ಮಾನ್ಯ ಸಚಿವರು ನನ್ನನ್ನು ಮರೆತು ಬಿಟ್ಟಿದ್ದಾರೆ. ನನ್ನ ಹೆಸರು ಹಾಕಲಿಲ್ಲ, ಇರಲಿ ತೊಂದರೆ ಇಲ್ಲ. ಸ್ಪೀಕರ್ ಅವಕಾಶ ಕೊಟ್ಟಿದ್ದಾರೆ. ನಾನು ತಿಳಿದುಕೊಂಡಿದ್ದ ಮಾನ್ಯ ನಾಗೇಗೌಡರು ಈ ಖಾತೆಯ ಜವಾಬ್ದಾರಿ ತೆಗೆದುಕೊಂಡ ನಂತರ ಈ ಸಮಸ್ಯೆಯನ್ನು ಬಹಳ ಪ್ರಾಧಾನ್ಯತೆ ಮೇಲೆ ಅವರು ಬಗೆಹರಿಸುತ್ತಾರೆ ಎಂದು. ಆದರೆ ಅವರು ಈ ಸಮಸ್ಯೆಯನ್ನು ಬಹಳ ಜ್ವಲಂತ ಮಾಡಿದ್ದಾರೆ. ಇವತ್ತು ರಾಜ್ಯದ ರೈತರು ಬಹಳ ಕಷ್ಟದಲ್ಲಿದ್ದಾರೆ ಹಾಲು ಸಪ್ಲೈ ಮಾಡುವವರು ಯಾರು ? ರೈತ ಅದರಲ್ಲಿ ಬಡ ರೈತರು ಮತ್ತು ಕೂಲಿಕಾರರು, ಒಂದು, ಎರಡು ಆಕಳು ಎಮ್ಮೆ ಇಟ್ಟುಕೊಂಡಿರುವವರು. ಆದರೆ ಇವತ್ತು ಅವರು ಈ ಜನರಿಗೆ ಕೊಡಬೇಕಾದ ಬಾಕಿ ಹೇಳಿದ್ದಾರೆ 6 ಕೋಟಿ ರೂಪಾಯಿ ಎಂದು. ಆದರೆ ನಮ್ಮ ಲೆಕ್ಕದ ಪ್ರಕಾರ 18 ರಿಂದ 20 ಕೋಟಿ ರೂಪಾಯಿಗಳು ತಾವು ಪಾವತಿ ಮಾಡಬೇಕಾಗಿದೆ. ಅದರಲ್ಲಿ 7 ರಿಂದ 8 ಕೋಟಿ ರೂಪಾಯಿ 15 ದಿವಸದೊಳಗೆ ಮತ್ತು 15 ದಿವಸ ಮೀರಿ ಸಾಧಾರಣ ಎರಡೂವರೆ ತಿಂಗಳವರೆಗೆ ಮಾಡುವಂಥದ್ದು 8 – 9 ಕೋಟಿ ರೂಪಾಯಿಗಳನ್ನು ಪಾವತಿ ಮಾಡಬೇಕಾಗಿದೆ. ತಾವು ಹೇಳಿದ್ದೀರಿ 6 ಕೋಟಿ ರೂಪಾಯಿ ರಿಲೀಸ್ ಮಾಡಿದ್ದೇವೆಂದು. ರಿಲೀಸ್ ಮಾಡಿದರೆ ಆಗುವುದಿಲ್ಲ. ಅವರು ಹೇಳುತ್ತಾರೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಆ ಹಣ ಆ ರೈತರಿಗೆ ಕೊಡಬೇಕಾಗುತ್ತದೆ. ಎಲ್.ಓ.ಸಿ. ಬ್ಯಾನ್ ಇದೆ. ಹಾಗಾಗಿ ತಮ್ಮ ಪ್ರಭಾವವನ್ನು ಅರ್ಥ ಮಂತ್ರಿಗಳ ಮೇಲೆ ಅಥವಾ ಮುಖ್ಯಮಂತ್ರಿಗಳ ಮೇಲೆ ಎಲ್ಲಿಯವರೆಗೆ ಹಾಕುವುದಿಲ್ಲವೋ ಅಲ್ಲಿಯವರೆಗೆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ ಇಲ್ಲ ? ತಾವು ಎಷ್ಟು ಅಶ್ಯೂರೆನ್ಸ್ ಕೊಟ್ಟರೂ ಸಹ ಈ ಸಮಸ್ಯೆ ಬಗೆಹರಿಸಬೇಕಾದರೆ ಹಣ ಬಿಡುಗಡೆ ಆಗಬೇಕಾಗುತ್ತದೆ. ಇವತ್ತು ಬೆಂಗಳೂರು ಡೈರಿಯಲ್ಲಿ ಒಂದರಲ್ಲಿಯೇ ಎರಡು ಕೋಟಿ ಎಂಭತ್ತೆಂಟು ಲಕ್ಷ ರೂಪಾಯಿಗಳನ್ನೂ ಕೊಡಬೇಕು, ಬೆಳಗಾವಿಯಲ್ಲಿ 40 ಲಕ್ಷ ರೂಪಾಯಿ, ಬಿಜಾಪುರದಲ್ಲಿ 40 ಲಕ್ಷ, ಬಳ್ಳಾರಿಯಲ್ಲಿ 24 ಲಕ್ಷ ರೂಪಾಯಿ, ಧಾರವಾಡದಲ್ಲಿ 80 ಲಕ್ಷ, ಕೋಲಾರದಲ್ಲಿ 250 ಲಕ್ಷ, ಹದಿನೈದು ದಿವಸದೊಳಗೆ ಬೆಳಗಾವಿಯಲ್ಲಿ 1 ಕೋಟಿ 30 ಲಕ್ಷ ಕೊಡಬೇಕಾಗಿದೆ, ಬಿಜಾಪುರದಲ್ಲಿ 92 ಲಕ್ಷ, ಬಳ್ಳಾರಿಯಲ್ಲಿ 48 ಲಕ್ಷ, ಧಾರವಾಡದಲ್ಲಿ 82 ಲಕ್ಷ, ತುಮಕೂರಿನಲ್ಲಿ 2 ಕೋಟಿ 36 ಲಕ್ಷ, ಕೋಲಾರದಲ್ಲಿ 1 ಕೋಟಿ 25 ಲಕ್ಷ ರೂಪಾಯಿ, ಹೀಗೆ ಹಣ ಕೊಡಬೇಕಾಗಿದೆ.

ಈ ಎಲ್ಲಾ ಸಂಸ್ಥೆಗಳಲ್ಲಿ ಇವತ್ತು ಸಾಕಷ್ಟು ದುರ್ವ್ಯವಹಾರ ನಡೆದಿದೆ. ಮೊನ್ನೆ ನಾನು, ಶ್ರೀ ವಾಟಾಳ್ ನಾಗರಾಜ್ ಈ ವಿಷಯವನ್ನು ಎತ್ತಿದ್ದಾರೆ. ಮೈಸೂರಿನಲ್ಲಿ ಯಾವ ಪ್ರಕಾರ ದುರ್ವ್ಯವಹಾರ ನಡೆಯುತ್ತಿದೆ. ರೈತರಿಗೆ ಇಲ್ಲಿ ತಾವು ಹಣ ಕೊಡುತ್ತಿಲ್ಲ, ಟಿ.ಎ., ಡಿ.ಎ., ಬಿಲ್ ಹೆಚ್ಚಾಗುತ್ತಿದೆ. ಕಾರ್ ಪರ್ಚೆಸ್ ಮಾಡುತ್ತಿದ್ದಾರೆ ಆದರೆ ಈ ದುರ್ವ್ಯವಹಾರವನ್ನು ತಾವು ತಡೆಯಬೇಕು. ಎಲ್ಲಿಯ ತನಕ ಈ ಸಮಸ್ಯೆಯನ್ನು ನಿವಾರಿಸುವುದಕ್ಕೆ ಆಗುವುದಿಲ್ಲ ಅಲ್ಲಿಯವರೆಗೆ ಮಿಸ್ ಅಪ್ರೊಪ್ರಿಯೇಷನ್, ಮಿಸ್ ಯೂಸ್ ಇದ್ದೆ ಇರುತ್ತದೆ. ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರ ಹೇಳಿ ? ಈ ಎಲ್ಲಾ ಸಂಸ್ಥೆಗಳು ಇವತ್ತು ದಿವಾಳಿ ಆಗುವ ಹಂತದಲ್ಲಿ ಇವೆ. Majority of them are in losses. ತಾವು 6ಕೋಟಿ ಹಣ ಕೊಡುತ್ತೇವೆಂದು ಹೇಳುತ್ತೀರಿ ಅದು ಉಪಯೋಗವಿಲ್ಲ. ನೇರವಾಗಿ ಸ್ಪಷ್ಟವಾಗಿ ತಾವು ಹೇಳಬೇಕಾಗುತ್ತದೆ ರೈತರಿಗೆ ಬಡಜನರಿಗೆ, ಕೂಲಿಕಾರರಿಗೆ ಸಲ್ಲತಕ್ಕ ಹಾಲಿನ ಪಾವತಿ ಹಣ ಯಾರಿಗೆ ಒಪ್ಪಿಸುತ್ತೀರಿ. ಅದು ಸ್ಪಷ್ಟವಾಗಿ ತಾವು ಹೇಳಬೇಕು ಇಲ್ಲವಾದರೆ ನಾವು ನಮ್ಮ ಮಾಧುಸ್ವಾಮಿ ಹೇಳಿದ ಹಾಗೆ ಬಹಳ ಉಗ್ರವಾಗಿ ಇದರ ಬಗ್ಗೆ ಹೋರಾಟ ಮಾಡುತ್ತೇವೆ. ತಮಗೆ ಗೊತ್ತು ರೈತ ಬಹಳ ಕಷ್ಟದಲ್ಲಿ ಇದ್ದಾನೆ, ಒಂದು ಕಡೆ ಬರಗಾಲ ಒಂದು ಕಡೆ ನೆರೆ ಹಾವಳಿ ಮತ್ತೊಂದು ಕಡೆಯಲ್ಲಿ ಬರ ಬಿದ್ದದೆ. ಈ ರೀತಿ ರೈತ ಕಷ್ಟದಲ್ಲಿ ಇದ್ದಾಗ ತಾವು ಇದಕ್ಕೆ ಒಂದು ಪ್ರಾಧಾನ್ಯತೆ ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡಬೇಕಾಗಿದೆ. ಮತ್ತು ತಾವು ಈ ಸಮಸ್ಯೆ ಬಗೆಹರಿಸುವಾಗ ನಾನು ಒಪ್ಪಿಕೊಳ್ಳುತ್ತೇನೆ ಕೆಲವು ಸಲ ಫೈನಾನ್ಶಿಯಲ್ ಡಿಫಿಕಲ್ಟೀಸ್ ಬಂದಾಗ ತಾವು ಈ ಸಮಸ್ಯೆ ಚರ್ಚೆ ಮಾಡಿ ಬಗೆಹರಿಸಬೇಕು. ಆದರೆ ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿರಿ, ಮತ್ತು ಈ ಸಮಸ್ಯೆ ಬಗೆಹರಿಸಲಿಕ್ಕೆ ಮುಂದೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ತಮ್ಮ ಕಡೆ ಕೇಳಲಿಚ್ಚಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಈ ಇಲಾಖೆಯ ಜವಾಬ್ದಾರಿಯನ್ನು ಮಾನ್ಯ ನಾಗೇಗೌಡರು ನನ್ನ ಸನ್ಮಿತ್ರರು ಹೊತ್ತ ಮೇಲೆ ನಮ್ಮ ರೈತರಿಗ ಉಪಯೋಗ ಆಗುತ್ತದೆ ಎಂದು ನಾವೆಲ್ಲರೂ ಭಾವಿಸಿದ್ದೆವು ....

ಶ್ರೀ ಎಂ. ವಿ. ವೆಂಕಟಪ್ಪ:– ಇಲ್ಲ ಆಗುತ್ತದೆ, ಸಿಂಧ್ಯರವರೇ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ನಮ್ಮ ವೆಂಕಟಪ್ಪನವರು ಹೇಳುತ್ತಾರೆ ಆಗುತ್ತದೆಂದು ಈ ವಿಚಾರ ರೆಕಾರ್ಡನಲ್ಲಿ ಹೋಗಬೇಕು. ಕೋಲಾರ ಜಿಲ್ಲೆಯಲ್ಲಿ 2,50,000.00 ರೂಪಾಯಿಗಳು ಕೆ.ಎಂ.ಎಫ್.ರಿಂದ ಬಾಕಿ ಇದೆ. ಕೆ.ಎಂ.ಎಫ್.ದಿಂದ ನಿಮಗೆ ಹೆಚ್ಚು ಅನುಕೂಲವಾಗಿದೆಯೇ ? ಇವರು ಭಾಷಣ ಮಾಡುತ್ತಿದ್ದಾರೆ ನಿಮ್ಮ ಕಾನ್ಸ್‌ಟಿಟ್ಯೂಯೆನ್ಸಿ ರೈತರು ಏನಾದರೂ ಕೇಳಿಕೊಂಡಿದ್ದಾರೆಯೆ ?

ಶ್ರೀ ಎಂ. ವಿ. ವೆಂಕಟಪ್ಪ:– ಸ್ವಲ್ಪ ಕಾದು ನೋಡಿ ಎಂದು ಹೇಳಿದೆ, ಅಷ್ಟೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಮೂರೂವರೆ ವರ್ಷದಿಂದ ಕಾಯುತ್ತಿದ್ದೇವೆ. ಇನ್ನೂ ಒಂದೂವರೆ ವರ್ಷ ಕಾಯುತ್ತೇವೆ. ಹಾಲು ಉತ್ಪಾದನೆ ಮಾಡುವುದು ಎಷ್ಟು ಕಷ್ಟ ಎನ್ನುವುದು ಚೆನ್ನಾಗಿ ನಿಮಗೂ ಗೊತ್ತು. ವಿಶೇಷವಾಗಿ ಬೆಂಗಳೂರು ಡೈರಿಯನ್ನು ನಂಬಿಕೊಂಡು ನಮ್ಮ ಜಿಲ್ಲೆಯಲ್ಲಿ ಅಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದೇವನಹಳ್ಳಿ, ಹೊಸಕೋಟೆ, ದೊಡ್ಡಬಳಬ್ಬಾಪುರ, ಕನಕಪುರ, ಸಾತನೂರು, ರಾಮನಗರ ಹಾಗೂ ಚೆನ್ನಪಟ್ಟಣಗಳಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅಲ್ಲಿಯ ರೈತರು ಬಹಳ ಕಷ್ಟದಲ್ಲಿದ್ದಾರೆ.

ಶ್ರೀ ಎನ್. ಬೈರೇಗೌಡ:– ನಮ್ಮ ಕೋಲಾರ ಜಿಲ್ಲೆಯಲ್ಲಿ ಎಲ್ಲದಕ್ಕೂ ಜಾಸ್ತಿ ಹಾಲು ಉತ್ಪಾದನೆ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ನಿನ್ನೆ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಸಂಬಂಧದಲ್ಲಿ ಮಾತನಾಡಿ ನಾನು ಈ ಸರ್ಕಾರ ದಿವಾಳಿಯಾಗಿದೆ ಎನ್ನುವ ಮಾತನ್ನು ಹೇಳಿದ್ದೇನೆ. ಅದಕ್ಕೆ ಸಾಕ್ಷಿ ಇದೆ. ಶ್ರೀ ನಾಗೇಗೌಡರೇ ನನಗೆ ಒಂದು ಅರ್ಥವಾಗುತ್ತಿಲ್ಲ, ಸರ್ಕಾರ ಎಂದರೆ ಏನು ? ತಾವೂ ಕೂಡ ವಿರೋಧ ಪಕ್ಷದಲ್ಲಿ ಹತ್ತು ವರ್ಷ ಕೆಲಸ ಮಾಡಿದ್ದೀರಿ. ಕೆ.ಎಂ.ಎಫ್. ಅಧ್ಯಕ್ಷರು ಕಾಗದ ಬರೆದ ಹಾಗೆ ಉತ್ತರ ಕೊಟ್ಟಿದ್ದೀರಿ. ಈ ಸದನಕ್ಕೆ ಬರುವುದಕ್ಕೆ ಮುಂಚೆ ಕಾಲಿಂಗ್ ಅಟೆನ್‌ಶನ್ ನೋಟಿಸ್ ಕೊಟ್ಟ ಮೇಲೆ ಫೈನಾನ್ಸ್ ಸೆಕ್ರೆಟರಿ ಹಾಗೂ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿಕೊಂಡು ಹಣ ಬಿಡುಗಡೆ ಮಾಡುತ್ತೇವೆ ಎಂದು ಕಾಗದ ಬರೆಯುವ ರೀತಿಯಲ್ಲಿ ಈ ಉತ್ತರ ಕೊಟ್ಟಿದ್ದೀರಿ; ಯಾರಿಗೆ ಬೇಕು ಈ ಉತ್ತರ. ಈ ಉತ್ತರವನ್ನು ನಾವು ಏನು ಮಾಡುವುದು. ನೀವು ಇದಕ್ಕೆ ಕಾರಣ ಎಂದು ನಾನು ಹೇಳುವುದಿಲ್ಲ. ಕೆ.ಎಂ.ಎಫ್.ನಲ್ಲಿ ಯಾವ ರೀತಿ ಜನ ಇದ್ದಾರೆ ಎನ್ನುವುದನ್ನು ಹೇಳುತ್ತೇನೆ. ಮಿಲ್ಕ್ ಯುನಿಯನ್ ಅಧ್ಯಕ್ಷರು ಚೆಕ್ಕನ್ನು ನುಂಗಿ ಬಿಟ್ಟಿದ್ದಾರೆ, ಅವರು ಹಣ ಹೊಡೆದಿದ್ದಾರೆ ಎಂದು ನಾನು ಹೇಳುತ್ತಿಲ್ಲ. ಒಂದು ಚೆಕ್ಕನ್ನು ಫೋರ್ಜರಿ ಮಾಡಿದರು. ಗೊತ್ತಾಯಿತು ಕೇಸ್ ಹಾಕುತ್ತಾರೆಂದು, ಅವರು ಆಫೀಸಿಗೆ ಹೋಗಿ ಆ ಚೆಕ್ಕನ್ನು ತೆಗೆದುಕೊಂಡು ಹೊಟ್ಟೆಯೊಳಗೆ ಹಾಕಿಕೊಂಡರು. ಇಂತಹ ಜನ ನಿಮ್ಮ ಇಲಾಖೆಯಲ್ಲಿ ಇರುವಾಗ ನೀವು ಹೇಗೆ ಸರಿ ಮಾಡುತ್ತೀರೋ ನನಗಂತೂ ಗೊತ್ತಿಲ್ಲ. ರೈತರ ಶೋಷಣೆಯನ್ನು ಮಾಡುತ್ತಿದೆ ನಿಮ್ಮ ಸರ್ಕಾರ. ಒಂದು ತಿಂಗಳು, ಎರಡು ತಿಂಗಳು ನಮ್ಮ ರೈತರು ಕಾಯಬೇಕೆ ? ಏತಕ್ಕೆ ಕಾಯಬೇಕು ? ನೀವು ರೈತರಿಗೆ 100 ರೂ. 200 ರೂ. 500 ರೂ. ಎರಡು ಸಾವಿರ ರೂಪಾಯಿ ದುಡ್ಡನ್ನು ಬಾಕಿ ಇಟ್ಟುಕೊಂಡರೆ ರೈತರು ಬದುಕುವುದು ಹೇಗೆ ? ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಬಹಳ ಹೆಚ್ಚು ಬಾಕಿ ಇರತಕ್ಕವರು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ. ನಮ್ಮ ರೈತರ ಪರವಾಗಿ ಪ್ರತಿಭಟನೆ ಮಾಡುತ್ತಿದ್ದೇವೆ. ಸರ್ಕಾರದಲ್ಲಿ ಕಾಗದ ಬರೆಯುತ್ತೇವೆ ಎಂದು ಹೇಳಿದರೆ ಇದು ಸಮಂಜಸವಾದ ಉತ್ತರ ಆಗುವುದಿಲ್ಲ. ಬಡ್ಡಿ ಸಮೇತ ನೀವು ಕೊಡಬೇಕು. ಇಲ್ಲದೆ ಹೋದರೆ ನಾವು ಕೋರ್ಟಿಗೆ ಹೋಗಬೇಕಾಗುತ್ತದೆ. ನಾವು ಕಾಗದ ಬರೆದಿದ್ದೇವೆ, ಹಣ ಬಿಡುಗಡೆ ಮಾಡುತ್ತಾರೆ ಅಂದರೆ ಇದು ಉತ್ತರ ಅಲ್ಲ. ನೀವು ಹಣ ಬಿಡುಗಡೆ ಮಾಡುವವರೆಗೆ ನಾವು ಧರಣಿ ಮಾಡಬೇಕಾಗುತ್ತದೆ. ನಮ್ಮಿಂದ ಹಾಲನ್ನು ತೆಗೆದುಕೊಂಡು ದುಡ್ಡನ್ನು ಕೊಡುವುದಿಲ್ಲವೆಂದು ಹೇಳಿದರೆ ಯಾವ ನ್ಯಾಯ. ನನಗೆ ಇದಕ್ಕೆ ನೇರವಾದ ಉತ್ತರ ಬೇಕು. ಶ್ರೀ ನಾಗೇಗೌಡರೇ ಈ ಎಲ್ಲಾ ವ್ಯವಸ್ಥೆಗೆ ಕಾರಣಕರ್ತರು ಎಂದು ನಾನು ಹೇಳುವುದಿಲ್ಲ. ತಾವು ಬಂದ ಮೇಲೆ ಆರು ಕೋಟಿ ರೂಪಾಯಿಯಲ್ಲಿ ಎರಡು ಕೋಟಿ ರೂಪಾಯಿ ನಿಮ್ಮ ಮುಖ್ಯ ಮಂತ್ರಿಗಳು ಬಿಡುಗಡೆ ಮಾಡಿದ್ದಾರೆಯೇ ? ಹೋಗಲಿ 50 ಲಕ್ಷ ರೂಪಾಯಿಯಾದರೂ ಬಿಡುಗಡೆ ಮಾಡಿದ್ದಾರೆಯೇ, ಇಲ್ಲ. ಅದಕ್ಕೆ ನಾನು ಈ ಸರ್ಕಾರ ದಿವಾಳಿಯಾಗಿದೆ ಎಂದು ಹೇಳುತ್ತೇನೆ. ನಾವು ಇದನ್ನು ಕಾಲಿಂಗ ಅಟೆನ್‌ಶನ್ ಕೇಳಿದ್ದೇವೆ, ಉತ್ತರವಾಗಿ ಇವೊತ್ತು ಸಾಯಂಕಾಲದೊಳಗೆ ಅಥವಾ ನಾಳೆ ಅಥವಾ ಮಾರ್ಚ್ ಹತ್ತರೊಳಗೆ ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಹೇಳಿ. ಆದ್ದರಿಂದ ಸರ್ಕಾರ ರೈತರಿಗೆ ಕ್ಷಮಾಪಣೆ ಕೇಳಬೇಕು, ಹಾಗೂ ಅವರಿಗೆ ಬಡ್ಡಿ ಸಮೇತ ಹದಿನೈದು ದಿವಸಗಳಲ್ಲಿ ದುಡ್ಡನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಇಲ್ಲಿ ನನ್ನ ಮುಖ್ಯ ಪಾಯಿಂಟ್ ಏನೆಂದರೆ ನೀವು ಹಣ ರಿಲೀಜ್ ಮಾಡಿಲ್ಲ ಅಂದರೆ ಪರಿಣಾಮ ಏನಾಗುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಒಂದು ಕಡೆ ರೈತರಿಗೆ ಅನ್ಯಾಯ ಮತ್ತು ಕಷ್ಟ ಆಗಬಹುದು ಮತ್ತೊಂದು ಕಡೆ ನಿಮ್ಮ ಎಂಟೈಯರ್ ಡೈರಿ ಬಂದಾಗುತ್ತದೆ. ಕಾರಣ ಏನೆಂದರೆ ರೈತರು ಇದರ ಮೇಲೆ ಡಿಪೆಂಡ್ ಆಗಿರುತ್ತಾರೆ. ನೀವು ಕೊಡುವ ಹಣದಿಂದ ಅವರು ಜೀವನ ಮಾಡುವುದಿಲ್ಲ, ಹಿಂಡಿ ತವಡು ಪರಚೇಸ್ ಮಾಡಬೇಕು, ಇದರಿಂದ ಸಾಕಷ್ಟು ಸಮಸ್ಯೆಗಳು ಉದ್ಭವವಾಗುತ್ತವೆ. ನಿಮ್ಮ ಎಂಟೈಯರ್ ವರ್ಕಿಂಗ್ ಮೇಲೆ ಇದರ

ಪರಿಣಾಮವಾಗುತ್ತದೆ. ಇನ್ನು ಎರಡನೆಯದಾಗಿ ನೀವು ಹಾಲನ್ನು ಪರಚೇಸ್ ಮಾಡಿದ್ದೀರಿ, ಆ ಹಾಲನ್ನು ಉಪಯೋಗ ಮಾಡಿಕೊಂಡಿದ್ದೀರಿ, ಮಾರಾಟ ಮಾಡಿದ್ದೀರಿ, ಆ ಹಣ ನಿಮಗೆ ಬಂದಿದೆ ಆ ಹಣವನ್ನು ತಾವು ಏನು ಮಾಡಿದಿರಿ ? ಆ ಹಣದಿಂದ ಪೇಮೆಂಟ್ ಮಾಡಬೇಕಾಗಿತ್ತು. ಸರ್ಕಾರದಿಂದ ಬರಬೇಕಾದ ಗ್ರ್ಯಾಂಟ್ ಬಗ್ಗೆ ಮುಂದೆ ನೋಡೋಣ.. What have you done with the money i.e., of Rs. 18–19 crores?

ರೈತರ ಕಡೆಯಿಂದ ಮೂರು ತಿಂಗಳಿಂದ ಬಡ್ಡಿ ಇಲ್ಲದ ಆ ಹಣವನ್ನು ಉಪಯೋಗ ಮಾಡಿಕೊಂಡಿದ್ದೀರಿ ತಾವು ರೈತರಿಗೆ ಬಹಳ ಮೋಸ ಮಾಡುತ್ತಿದ್ದೀರಿ, ಇದು ಒಂದು ದ್ರೋಹ ಮಾಡಿದ ಹಾಗಾಗುತ್ತದೆ.

1.35 ಪಿ.ಎಂ.

ಹಾಗಾಗಿ ಆ ಹಣ ತಗೊಂಡು ಏನು ಮಾಡಿದಿರಿ ? ಅದರ ಉಪಯೋಗ ಮಾಡುತ್ತಿದ್ದೀರಿ ? ತಮ್ಮ ಆರ್ಥಿಕ ಸ್ಥಿತಿ ಸರಿಯಾಗಿಲ್ಲ ಎಂದು ಸರ್ಕಾರಕ್ಕೆ ಸಹಾಯ ಮಾಡುವುದಕ್ಕೆ ತಾವು ಆ ಹಣ ಕೊಟ್ಟಿರೋ ? ಸಂಬಳ ಕೊಡುವುದಕ್ಕೆ ಪೆನ್‌ಶನ್ ಕೊಡುವುದಕ್ಕೆ ಹಣ ಇಲ್ಲ, ಅದು ಬೇರೆ ಪ್ರಶ್ನೆ. ಅದಕ್ಕೇನಾದರೂ ಉಪಯೋಗ ಮಾಡಿದರೋ, ಅದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ವಿ. ವೆಂಕಟಪ್ಪ:– ಬಡ್ಡಿ ಸಮೇತ ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಲಿ ಸ್ವಾಮಿ.

ಶ್ರೀ ಸಿ ಬೈರೇಗೌಡ:– ಇದನ್ನು ಹಾಲು ಅಂತ ತಿಳ್ಕೊಂಡಿದಿರೋ, ಸಾರಾಯಿ ಅಂತ ತಿಳ್ಕೊಂಡಿದ್ದೀರೋ, ಇದು ಅರ್ಥವಿಲ್ಲದ ವ್ಯವಹಾರ. ಹಿಂದಿನ ಸರ್ಕಾರ ಸಾರಾಯಿಗೆ ಕೈ ಹಾಕಿತ್ತು, ಈ ಸರ್ಕಾರ ಹಾಲಿಗೂ ಕೂಡ ಕೈಹಾಕಿದೆ, ಇದು ಆಶ್ಚರ್ಯ.

ಶ್ರೀ ವಾಟಾಳ್ ನಾಗರಾಜ್:– ಸ್ಪಷ್ಟವಾಗಿ ರೈತರಿಗೆ ಬಡ್ಡಿ ಸಮೇತ ಹಣ ಬಿಡುಗಡೆ ಮಾಡುತ್ತೇವೆಂದು ಹೇಳಲಿಲ್ಲ ಅಂದರೆ ನಾವೆಲ್ಲರೂ ಪ್ರತಿಭಟನೆ ಮಾಡಬೇಕಾಗುತ್ತದೆ ಅಧ್ಯಕ್ಷರೇ.

ಶ್ರೀ ಎಂ. ವಿ. ವೆಂಕಟಪ್ಪ:– ಸ್ವಾಮಿ, ಬಡ್ಡಿ ಸಮೇತ ರೈತರಿಗೆ ಕೊಡಲಿ.

ಶ್ರೀ ಕೆ. ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೆ, ನನ್ನ ಉತ್ತರ ಕೇಳಿದ ಮೇಲೆ ವಿಚಾರಗಳು ತಮಗೆ ಗ್ರಹಣ ಆದಮೇಲೆ ಅದು ಸರಿಯಿಲ್ಲ ಅಂತ ಯಾವುದೇ ಪ್ರತಿಭಟನೆ ನೀವು ಮಾಡಿದರೂ ಅದಕ್ಕೆ ನನ್ನ ಸಹಕಾರ ಸಂಪೂರ್ಣ ನಿಮಗಿರುತ್ತದೆ. ಸರ್ಕಾರದ ಜವಾಬ್ದಾರಿ ಏನು, ಒಕ್ಕೂಟಗಳ ಜವಾಬ್ದಾರಿಗಳ ಏನು ? ರೈತರಿಗೆ ಯಾರು ಹಣ ಕೊಡಬೇಕಾಗಿತ್ತು, ಎಲ್ಲಿ ನಿಂತುಹೋಗಿದೆ ಎಂದು ತಾವು ಉತ್ತರ ಕೇಳಿದ ಮೇಲೆ ಪ್ರತಿಭಟನೆ ಮಾಡಿ. ಆದರೆ ವಿರೋಧಪಕ್ಷದ ನಾಯಕರಿಂದ ಇತರ ಸ್ನೇಹಿತರಿಗೂ ಒಂದು ಅಭಿನಂದನೆ ಹೇಳುತ್ತೇನೆ, ರೈತರ ಬಗ್ಗೆ ತಾವು ಕೇಳಿರುವ ಪ್ರಶ್ನೆ ತಮ್ಮ ಕಳಕಳಿ ಏನಿದೆ, ಸರ್ಕಾರದ ಗಮನ ಏನು ಸೆಳೆದಿದ್ದೀರಿ ಅದಕ್ಕೆ ನನ್ನ ಸಂಪೂರ್ಣ ಅಭಿನಂದನೆಗೆ ತಾವು ಅರ್ಹರಿದ್ದೀರಿ. ಆದರೆ ನಮ್ಮ ವ್ಯವಸ್ಥೆ ಹೇಗಿದೆ ಎಂದರೆ, ಇದು ಒಕ್ಕೂಟ, ಅದು ಎಲೆಕ್ಟೆಡ್ ಬಾಡಿಯಾಗಿದೆ. ಅದೇ ರೀತಿ ಡೈರಿಗಳಿಗೂ ಸಹ ಎಲೆಕ್ಟೆಡ್ ಬಾಡಿಗಳಿವೆ, ನಮ್ಮ ಮಾಧುಸ್ವಾಮಿಯವರು ಕೆ.ಎಂ.ಎಫ್.ನಲ್ಲಿ ಚೇರ್ಮನ್ನಾಗಿ ಕೆಲಸ ಮಾಡಿದವರು. ಪ್ರತಿ ಒಕ್ಕೂಟ, ಡೈರಿಗಳಿಗೆ ಚುನಾಯಿತ ಪ್ರತಿನಿಧಿಗಳಿದ್ದಾರೆ. ಅವರದೇ ಆದ ರೀತಿಯಲ್ಲಿ ಹಾಲನ್ನು ಕೊಳ್ಳುತ್ತಾರೆ, ಮಾರಾಟ ಮಾಡುತ್ತಾರೆ. ಇಲ್ಲಿ ಸರ್ಕಾರದ್ದು ಏನೆಂದರೆ ಈ ಕೆ.ಎಂ.ಎಫ್.ಗಾಗಲಿ ಅಥವಾ ಡೈರಿಗಳಿಗಾಗಲಿ ಎಲ್ಲಾದರೂ ಡೈರಿ

ಡಿಫಿಸಿಟ್ ಆದರೆ, ಡೈರಿ ತೊಂದರೆಗೆ ಸಿಕ್ಕಿಕೊಂಡರೆ ರೈತರಿಗೋಸ್ಕರ ಈ ಉದ್ಯಮವನ್ನು ಬಹಳ ಚೆನ್ನಾಗಿ ನೋಡಿಕೊಳ್ಳುವುದಕ್ಕೋಸ್ಕರ ಹೈನುಗಾರಿಕೆ ನೋಡಿಕೊಳ್ಳುವುದಕ್ಕೋಸ್ಕರ ನಾವು ಕಳೆದ 76ರಿಂದ 91 ರವರೆಗೆ 12.05 ಕೋಟಿ ಸಬ್ಸಿಡಿ ಕೊಡಬೇಕೆಂದು ಆಲೋಚಿಸಿಕೊಂಡಿದ್ದೇವು. ಅದೇ ರೀತಿ 11 ಕೋಟಿಯಷ್ಟು ಸರ್ಕಾರ ಕೊಟ್ಟಿಗಿದೆ. ಯಾಪ್ಪನು 6 ಕೋಟಿ ಎಂದರೆ ತಾವು ಏನು ಪ್ರತಿಭಟನೆ ಮಾಡಿದಿರಿ ಇಷ್ಟು ಹೊತ್ತಿನವರೆಗೆ ಆ ಪ್ರತಿಭಟನೆ ಮನಗಂಡು ನಮಗೆ ಈಗ ಬೇರೆ ಮಾರ್ಗವೇ ಇಲ್ಲವೆಂದು ತಿಳಿದು ಸರ್ಕಾರಕ್ಕೆ ಮತ್ತೆ 6 ಕೋಟಿ ಕೊಡಿ ಎಂದು ಪ್ರಸ್ತಾವನೆ ಕಳುಹಿಸಿ ಮುಖ್ಯ ಮಂತ್ರಿಯವರ ಹತ್ತಿರ ಮಾತನಾಡಿ, ಫೈನಾನ್ಸ್ ಸೆಕ್ರೆಟರಿ ಹತ್ತಿರ ಮಾತನಾಡಿ ಅದು ಬರುವ ಹಂತದಲ್ಲಿದೆ ಎನ್ನುವುದು ನಮ್ಮ ಭಾವನೆ. ಇನ್ನೊಂದು ಮಾನ್ಯ ದೇಶಪಾಂಡೆಯವರು ಕೇಳಿದರು. ಹಾಲು ತಗೊಂಡಿರೋರು ಹಣ ಕೊಟ್ಟಿದ್ದಾರೆ ಮಾರಾಟ ಮಾಡಿ ಬಂದ ಹಣವನ್ನು ನೀವು ಏನು ಮಾಡಿದಿರಿ ಎಂದು ನಾನು ವಿರೋಧ ಪಕ್ಷದ ನಾಯಕರಿಗೆ ತಿಳಿಸುತ್ತೇನೆ ಒಟ್ಟು ಈ 13 ಡೈರಿಗಳಿಂದ ಇಲ್ಲಿಯವರೆಗೆ 92–93ರಲ್ಲಿ 18 ಕೋಟಿಯಷ್ಟು ನಷ್ಟವಾಗಿದೆ ಅದಕ್ಕೆ ಕಾರಣ ಏನು ಎಂದು ಬೇರೆ ರೀತಿಯಲ್ಲಿ ಚರ್ಚೆ ಮಾಡೋಣ. ಮತ್ತೆ ಮಾಧುಸ್ವಾಮಿ ಮತ್ತು ಸಿಂಧ್ಯಾರವರು ಹೇಳಿದರು 18 ಕೋಟಿ ಬರಬೇಕು ಎಂದು. ಬೆಂಗಳೂರಿನಲ್ಲಿ 2.85 ಕೋಟಿ, ಎರಡು ವಾರ, ಡ್ಯೂಸ್ ಅಂತ ಕರೆಯುವುದಿಲ್ಲ, ಎರಡು ವಾರದಿಂದ ಮೇಲೆ ಉಳಿದುಕೊಂಡರೆ ಅದು ಓವರ್ ಡ್ಯೂಸ್ ಅಂತ ಕರೆಯುತ್ತೇವೆ. ಬೆಂಗಳೂರು ಡೈರಿಯಲ್ಲಿ ಓವರ್ ಡ್ಯೂಸ್ ಒಂದು ಪೈಸೆ ಇಲ್ಲ, ಬೆಳಗಾಂ ಡೈರಿಯಲ್ಲಿ 1.32 ಕೋಟಿ, ಬಿಜಾಪುರ ಡೈರಿಯಲ್ಲಿ, 92 ಲಕ್ಷ, ಬಳ್ಳಾರಿ ಡೈರಿಯಲ್ಲಿ 48 ಲಕ್ಷ, ಮಂಡ್ಯದಲ್ಲಿ 1.92 ಕೋಟಿ, ಧಾರವಾಡದಲ್ಲಿ 82 ಲಕ್ಷ ಓವರ್ ಡ್ಯೂ ಇದೆ. ಇದು ವಿವರ, ಮೈಸೂರಿನಲ್ಲಿ ಒಂದು ಪೈಸೆ ಓವರ್ ಡ್ಯೂಸ್ ಇಲ್ಲ. ತುಮಕೂರಿನಲ್ಲಿ 2.35 ಕೋಟಿ ಇದೆ.

ಕೋಲಾರದಲ್ಲಿ 1 ಕೋಟಿ 25 ಲಕ್ಷ ಓವರ್ ಡ್ಯೂಸ್ ಇದೆ. ಶಿವಮೊಗ್ಗದಲ್ಲಿ ಬರೀ 25 ಲಕ್ಷ ಇದೆ. ಹಾಲು ಇದೆಯೆಲ್ಲಾ, ಹಾಲನ್ನು ಮದರ್ ಡೈರಿಗೆ ನಾವು ತೆಗೆದುಕೊಳ್ಳುತ್ತೇವೆ. ಕೋಲಾರದಲ್ಲಿ ಹೈಯಸ್ಟ್ ಅಲ್ಲೇ ಉತ್ಪತ್ತಿಯಾಗುವುದು 2 ಲಕ್ಷ 50 ಸಾವಿರ ಲೀಟರ್ ಪರ್ ಡೇ. ಕೋಲಾರದಿಂದ ನಮಗೆ ಬರುತ್ತಿದೆ. ನಾವು ಅಲ್ಲಿಂದ ತೆಗೆದುಕೊಂಡು ಮದರ್ ಡೈರಿಯಿಂದ ಡಿಸ್ಟ್ರಿಬ್ಯೂಟ್ ಮಾಡುತ್ತೇವೆ. ಕೋಲಾರದ ರೈತರು ಯಾರು ಹಾಲನ್ನು ಕೊಟ್ಟಿದ್ದಾರೆ, ಅವರಿಗೆ ನಾವು ಓವರ್ ಡ್ಯೂಸ್ 1 ಕೋಟಿ 25 ಲಕ್ಷ ರೂಪಾಯಿ ಕೊಡಬೇಕು. ಒಟ್ಟು ಈಗ ನಾವು ಅವರು ಹೇಳುವ ರೀತಿ 19 ಕೋಟಿ ರೂಪಾಯಿ ಕೊಡಬೇಕಾಗಿದ್ದರೂ ಸಹ ಹತ್ತು ಕೋಟಿ ರೂಪಾಯಿ ಅದು ನಾರ್ಮಲ್ ಡ್ಯೂಸ್. ಓವರ್ ಡ್ಯೂಸ್ ಇರತಕ್ಕಂಥದ್ದು ಸುಮಾರು 9ಕೋಟಿ 79ಲಕ್ಷ. ಇದರಲ್ಲಿ ಕೆ.ಎಂ.ಎಫ್.ನವು ಕೊಟ್ಟಿದ್ದಾರೆ ಎಂದು ಸದಸ್ಯರು ಕಳಿದ್ದಾರೆ, ನಾನು ಆಗಲೆ ತಮಗೆ ಹೇಳಿದ ಹಾಗೆ 32 ಕೋಟಿಯಷ್ಟು ದಾಸ್ತಾನು ನಮ್ಮಲ್ಲಿ ಇದೆ ಮಾರಾಟವಾಗಲಿಲ್ಲ. ಅವರು ಹೇಳಿದ ಹಾಗೆ 13–14ಲಕ್ಷ ಲೀಟರ್ ಪ್ರತಿದಿನ ಬಂದು ಸುಮಾರು 3897 ಟನ್ ಪುಡಿ, 2980 ಟನ್ ಬೆಣ್ಣೆ, 253 ಟನ್ ತುಪ್ಪ ಅಂದರೆ 32 ಕೋಟಿ ರೂಪಾಯಿಯಷ್ಟು ಇವತ್ತಿನ ದಿವಸ ನಮ್ಮಲ್ಲಿ ದಾಸ್ತಾನು ಇದೆ. ಈ ದಾಸ್ತಾನಿನ ಮೇಲೂ ನಮ್ಮ ಕೆ.ಎಂ.ಎಫ್.ನವರು ಹಣವನ್ನು ಕೊಟ್ಟುಬಿಟ್ಟಿದ್ದಾರೆ. ಅವರುಗಳಿಗೆ ಚೆನ್ನಾಗಿ ಗೊತ್ತಿದೆ ಎಷ್ಟು ಕೊಟ್ಟಿದ್ದಾರೆ ಎಂದು ಅದನ್ನು ಹೇಳುತ್ತಾರೆ. ಸುಮಾರು 16 ಕೋಟಿ ರೂಪಾಯಿಯಷ್ಟು ಕೆ.ಎಂ.ಎಫ್.ನವರು ಈ ಡೈರಿಗಳಿಗೆ ಕೊಟ್ಟಿದ್ದಾರೆ. 16 ಕೋಟಿ ನಮ್ಮ ಕಡೆಯಿಂದ ಕೊಟ್ಟಿದ್ದೇವೆ. ಕೆನರಾ ಬ್ಯಾಂಕನಿಂದ 5 ಕೋಟಿ ರೂಪಾಯಿ ಸಾಲ ತೆಗೆದುಕೊಟ್ಟಿದ್ದೇವೆ, ಪುನಃ ಅಪೆಕ್ಸ್ ಬ್ಯಾಂಕ್‌ನಿಂದ 3 ಕೋಟಿ ಸಾಲ ತೆಗೆದುಕೊಟ್ಟಿದ್ದೇವ, 8 ಕೋಟಿ ರೂಪಾಯಿ ಹಣವನ್ನು ಸಾಲ ತೆಗೆದುಕೊಟ್ಟಿದೆ, 16 ಕೋಟಿ ರೂಪಾಯಿ ಹಣವನ್ನು ಕೆ.ಎಂ.ಎಫ್. ಡೈರಿಗಳಿಗೆ ಕೊಟ್ಟಿದೆ. ಇಷ್ಟೆಲ್ಲಾ ಆದರೂ ಸಹಾ ಡೈರಿಗಳು 18 ಕೋಟಿ ರೂಪಾಯಿ ಅಂದಾಜು ನಷ್ಟ ಬಂದಿದೆ. ಒಂದು ಮಾತು ತಮ್ಮಲ್ಲಿ ಹೇಳುವುದೇನೆಂದರೆ, ನಮಗೆ ಬೇರೆ

ಮಾರ್ಗ ಇಲ್ಲ. ರೈತರಿಗೆ ಕೊಡಲೇಬೇಕು. ಯಾವುದು ಮುಲಾಜು ಏನೂ ಇಲ್ಲ. ನಾನು ಈಗಾಗಲೇ ಡೈರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ನೀವು ಮಾತನಾಡುತ್ತಿರುವುದು 6 ಕೋಟಿ ರೂಪಾಯಿಯನ್ನು ರೈತರಿಗೆ ಪುಕ್ಕಟೆ ಕೊಡುತ್ತಿದ್ದೇವೆ ಎಂದು.

ಶ್ರೀ ಕೆ. ಎನ್. ನಾಗೇಗೌಡ:– ಅದು ಪುಕ್ಕಟೆ ಅಲ್ಲ, ಅದು ಡೈರಿ ಡೆಪಿಸಿಟ್. 12 ಕೋಟಿ ರೂಪಾಯಿ ನಾವು ಸಹಾಯ ಧನ ಎಂದು ಕೊಟ್ಟಿದ್ದೇವೆ.

ಶ್ರೀ ಜೆ. ಪಿ. ಮಾಧುಸ್ವಾಮಿ:– ಡೈರಿಯವರು ಕೊಡಬೇಕೇ, ಸರ್ಕಾರ ಕೊಡಬೇಕೇ ರೈತರಿಗೇನು ಒಂದು ಪೈಸೆ ಜಾಸ್ತಿ ಕೊಡುತ್ತಿಲ್ಲ. ಅದನ್ನು ತಾವು ಅರ್ಥಮಾಡಿಕೊಳ್ಳಬೇಕು. ಆ ಪಾಯಿಂಟ್‌ನ್ನು ಎಸ್‌ಪ್ಲೈನ್ ಮಾಡಿದರೆ ನಾವು ಕುಳಿತು ಕೇಳುತ್ತೇವೆ.

ಶ್ರೀ ಕೆ. ಎನ್. ನಾಗೇಗೌಡ:– ಇಲ್ಲಿ ಒಂದು ಮಾತನ್ನು ತಾವು ಒಪ್ಪಿ ಕೊಳ್ಳಬೇಕು. ಡೈರಿಯವರು ಕೊಡಬೇಕೋ, ಕೆ.ಎಂ.ಎಫ್.ನವರು ಕೊಡಬೇಕೊ ಯಾರು ಕೊಡಬೇಕೋ ರೈತರಿಗೆ ಹಣ ಮುಟ್ಟಬೇಕು. ಇದರಲ್ಲಿ ಎರಡನೆಯ ಮಾತೇ ಇಲ್ಲ. ಇದಕ್ಕೆ ನಾವು ಒಪ್ಪಿರುವುದು. ಮಾನ್ಯ ರಾಮಯ್ಯನವರು ತುಮಕೂರಿನಲ್ಲಿ ಇದ್ದಾಗಲೇ ಹೇಳಿದೆ, ನಿಮ್ಮ ಜಮೀನು ಮಾರಿಕೊಡಿ ಎಂದು ಕೇಳಿದಾಗ ನಾನು ಅಲ್ಲೇ ಹೇಳಿದ ಮಾರಿಕೊಡಬೇಕು ಎಂದು.

ಶ್ರೀ ವೈ. ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ರೈತರಿಗೆ ಸಹಾಯವನ್ನು ಮಾಡುವುದಕ್ಕಂತೂ ಯೋಗ್ಯತೆ ಇಲ್ಲ. ಅವರು ಬೆಳಿಗ್ಗೆ ತಂದು ಹಾಲು ಕೊಟ್ಟರೆ ದುಡ್ಡು ಕೊಡುವುದಕ್ಕೂ ಯೋಗ್ಯತೆ ಇಲ್ಲವೇ ? ಅವರು ಕೊಟ್ಟಿರುವ ಹಾಲಿಗೆ ದುಡ್ಡು ಕೊಡುವುದಕ್ಕೂ ಯೋಗ್ಯತೆ ಇಲ್ಲವೇ ಸರ್ಕಾರಕ್ಕೆ. ಅಲ್ಲಿ ನೀವು ಏತಕ್ಕೆ ಕುಳಿತಿದ್ದೀರಿ ? ನೀವು ರಾಜೀನಾಮೆ ಕೊಟ್ಟು ಈಚೆಗೆ ಬನ್ನಿ.

(ಗೊಂದಲ)

ಶ್ರೀ ಕೆ. ಎನ್. ನಾಗೇಗೌಡ:– ತಾವು ಸಮಾಧಾನದಿಂದ ಕೇಳಬೇಕು. 18 ಕೋಟಿ ರೂಪಾಯಿ ನಷ್ಟ ಏನು ಇದೆ, ಅದರ ಆಸ್ತಿಯನ್ನು ಹರಾಜು ಹಾಕಬೇಕು ಎಂದು ಈ ಸದನ ತೀರ್ಮಾನ ಮಾಡಿದರೆ ಹರಾಜು ಹಾಕೋಣ. ಎಲ್ಲಾ ಕಾರ್ಖಾನೆಗಳನ್ನು, ಕೈಗಾರಿಕೆಗಳನ್ನು ಹರಾಜು ಹಾಕುತ್ತಿದ್ದೇವೆ. ಹಾಗೆ ಇದನ್ನು ಹರಾಜು ಹಾಕೋಣ, ರೈತರಿಗೆ ಸಹಾಯವಾಗುವುದೂ ಬೇಡ ಎಂದು ಈ ಸದನ ಹೇಳಿಕೊಟ್ಟರೆ 13 ಡೈರಿಯನ್ನು ಹರಾಜು ಹಾಕೋಣ. ಆದರೆ ವಾಸ್ತವಾಂಶವನ್ನು ನೋಡಬೇಕು. ರೈತರಿಗೆ ಎರಡು ವಾರದಲ್ಲಿ ಹಣ ಕೊಡಬೇಕು. ಇದಕ್ಕೆ ನಾನು ಈಗಾಗಲೇ ನಾಲ್ಕೈದು ಗೈಡ್‌ಲೈನ್ಸ್‌ಗಳನ್ನು ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:– ಕೊಡಬೇಕು, ಅಲ್ಲ, ಕೊಡುತ್ತೇವೆ ಎಂದು ಹೇಳಿ.

ಶ್ರೀ ಕೆ. ಎನ್. ನಾಗೇಗೌಡ:– ಸರ್ಕಾರ ಕೊಡುವುದಿಲ್ಲ ಸ್ವಾಮಿ ಹಣವನ್ನು. ಡೈರಿಗಳು ಹಣವನ್ನು ಕೊಡುವವರು. 2ವಾರದಲ್ಲಿ ಕೊಡಬೇಕು. ಪ್ರತಿಯೊಂದು ಡೈರಿಯೂ ಸಹಾ ಕಂಟಿನ್‌ಜೆನ್ಸ್ ಫಂಡನ್ನು ಈಗಿನಿಂದಲೇ ರಿಸರ್ವ್ ಫಂಡನ್ನು, ಫೈನಾನ್ಸ್ ಫಂಡನ್ನು ಕ್ರಿಯೇಟ್ ಮಾಡಿಕೊಳ್ಳಬೇಕು. ಮೂರನೆಯದು ಪ್ರತಿಯೊಂದು ಡೈರಿಯೂ ಸಹಾ ಆಡಿಟ್ ಮಾಡಬೇಕು. ನಿಮಗೆ ಹೇಳುವುದಾದರೆ ಆಡಿಟ್ ಆಗಿಲ್ಲ. ಎಷ್ಟರಿಂದ ಆಡಿಟ್ ಆಗಿಲ್ಲ ಎಂದರೆ ಬೆಂಗಳೂರು ಯೂನಿಯನ್ 89ರಿಂದ ಆಡಿಟ್

ಆಗಿಲ್ಲ. ಮೈಸೂರು ಯೂನಿಯನ್ ..... ಅದು ಯಾವುದ್ಯಾವುದೋ ಟ್ರೈಫರ್‌ಕೇಷನ್ಸ್‌ಗಳಿಗೆ ಆಗಿಲ್ಲ. ತುಮಕೂರು ಯೂನಿಯನ್ 87ರಿಂದ ಆಡಿಟ್ ಆಗಿಲ್ಲ.

ಶ್ರೀ ಸಿ. ಬೈರೇಗೌಡ:– ಆಡಿಟನ್ನು ರೈತರು ಮಾಡುತ್ತಾರೆಯೋ ? ಸಹಕಾರ ಇಲಾಖೆಯವರು ಏನು ಮಾಡುತ್ತಿದ್ದಾರೆ ?

(ಗೊಂದಲ)

ಶ್ರೀ ಕೆ. ಎನ್. ನಾಗೇಗೌಡ:– ಆಡಿಟ್‌ನ್ನು ಮಾಡದೇ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಕೆ. ಎಂ. ಎಫ್.ನಿಂದ ಹಣವನ್ನು ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಬೈರೇಗೌಡರೇ, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಎನ್. ನಾಗೇಗೌಡ:– ಮಾನ್ಯ ಸದಸ್ಯರುಗಳಿಗೆ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಾವು ಅವರಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಫೈನಾನ್ಸ್ ಡಿಸಿಪ್ಲಿನ್‌ನ್ನು ಮೆಯಿಂಟೈನ್ ಮಾಡಿಕೊಳ್ಳದೆ, ಸರ್ಕಾರದವರು ಹಣವನ್ನು ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ:– ಆಡಿಟ್ ಬಗ್ಗೆ ದೊಡ್ಡ ವ್ಯಾಖ್ಯಾನ ಆಗುತ್ತಿದೆ. ಡೈರಿಗಳೆಲ್ಲಾ ಕನ್‌ಕರೆಂಟ್ ಆಡಿಟ್ ಮಾಡಿಸುತ್ತಾರೆ. ಸ್ಟ್ಯಾಚುಟರಿ ಆಡಿಟ್ ಮಾಡಿಸಬೇಕಾದ್ದು ನಿಮ್ಮ ಡ್ಯುಟಿ. ಸರ್ಕಾರದ ಡ್ಯೂಟಿ. ಫೋರ್ ಫೋರ್ ಒನ್ ಆಡಿಟ್ ಅವರು ಮಾಡಿಸುತ್ತಾರೆ ?

ಶ್ರೀ ಕೆ.ಎನ್. ನಾಗೇಗೌಡ:– ನಾನು ಮಾಧುಸ್ವಾಮಿಯವರಿಗೆ ಹೇಳಬಯಸುತ್ತೇನೆ.

ಶ್ರೀ ಜ. ಸಿ. ಮಾಧುಸ್ವಾಮಿ:– 5–6 ವರ್ಷದ ಸ್ಟ್ಯಾಚುಟರಿ ಆಡಿಟ್ ನೀವು ಮಾಡಿಸಬೇಕು.

ಶ್ರೀ ಕೆ. ಎನ್. ನಾಗೇಗೌಡ:– ಸ್ಟ್ಯಾಟ್ಯುಟರಿ ಆಡಿಟ್ ಮಾಡಿಸಬೇಕೆಂದು ನಾನು ಈಗಾಗಲೇ ಡೈರೆಕ್ಷನ್ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ವೈ. ಕೆ. ರಾಮಯ್ಯ:– ಇದು ಸಹಕಾರ ಸಚಿವರು ಮಾಡಬೇಕು.

(ಗೊಂದಲ)

ಅಧ್ಯಕ್ಷರು:– ನಾಗರಾಜ ಕುಳಿತುಕೊಳ್ಳಿ.

ಶ್ರೀ ಕೆ. ಎನ್. ನಾಗೇಗೌಡ:– ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಹೇಳಬಹುದು ಈಗ ಸುಮಾರು 18 ಕೋಟಿ ರೂಪಾಯಿ ನಷ್ಟ ಇರತಕ್ಕಂಥಹ ಇದಕ್ಕೆ ಆರು ಕೋಟಿ ರೂಪಾಯಿ ಸಹಾಯ ಧನವಾಗಿ ಸರ್ಕಾರವನ್ನು ಕೇಳಿದ್ದೇವೇ. ಅತ್ಯಂತ ಅಲ್ಪ ಕಾಲದಲ್ಲಿ ಬರುತ್ತದೆ ಎಂಬ ನಂಬಿಕೆ ಇದೆ. ಆದರೆ ನಾಳೆ ಇಮ್ಮಿಡಿಯಟ್ ಆಗಿ ಎರಡು ಕೋಟಿ ರೂಪಾಯಿಗಳ ಲೋನ್ ಬ್ಯಾಂಕಿನಿಂದ ರೈಸ್ ಮಾಡಿ, 60 ಲಕ್ಷ ರೂಪಾಯಿ ತುಮಕೂರಿಗೆ, ಮಂಡ್ಯಕ್ಕೆ 50 ಲಕ್ಷ, ಬೆಳಗಾಂಗೆ 60 ಲಕ್ಷ, ಬಳ್ಳಾರಿಗೆ 15 ಲಕ್ಷ, ಗುಲ್ಬರ್ಗಾಕ್ಕೆ 15 ಲಕ್ಷ ರೂಪಾಯಿ ನಾಳೆ ಪೇಮೆಂಟ್ ಮಾಡಿಸುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ:- ಕೋಲಾರಕ್ಕೆ.

ಶ್ರೀ ಕೆ. ಎನ್. ನಾಗೇಗೌಡ:- ಕೋಲಾರದಲ್ಲಿ ಅಂತಹ ಪ್ರಾಬ್ಲಮ್ ಇಲ್ಲ ಸ್ವಾಮಿ. ಯಾವ್ಯಾವ ಡೈರಿಗಳು ತೊಂದರೆಯಲ್ಲಿದ್ದಾವೆ ಅವುಗಳನ್ನು ನೋಡುತ್ತೇವೆ.

(ಗೊಂದಲ)

ಶ್ರೀ ಕೆ. ಎನ್. ನಾಗೇಗೌಡ:- ಕೋಲಾರಕ್ಕೆ ಎರಡೂವರೆ ಕೋಟಿ ರೂಪಾಯಿ ಇದೆ.

ಅಧ್ಯಕ್ಷರು:- ಈಶ್ವರಪ್ಪ ಕುಳಿತುಕೊಳ್ಳಿ.

ಶ್ರೀ ಕೆ. ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಎಲ್ಲೆಲ್ಲಿ ಸಮಸ್ಯೆಗಳು ಇವೆ, ಅದನ್ನು ಅರ್ಥ ಮಾಡಿಕೊಂಡು ಈಗಾಗಲೇ ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿಕ್ಕೆ ನಾನು ಆದೇಶ ಕೊಟ್ಟಿದ್ದೇನೆ, ಅದನ್ನು ಕೊಡುತ್ತೇನೆ. ಉಳಿದ ಹಣ ಏನು ಇದೆ

(ಗೊಂದಲ)

ಅಧ್ಯಕ್ಷರು:- ಈಗ 334ರ ನಿಯಮದ ಮೇರೆಗೆ ಬರುವ ವಿಷಯಗಳು

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ:- ಸತ್ಯವಾಗಿ ಇದು ರೈತ ವಿರೋಧಿ ನೀತಿ ಇದೆ. 15 ಕೋಟಿ ರೂಪಾಯಿ ನುಕ್ಸಾನು ಆಗಿದ್ದಕ್ಕೆ ರೈತರು ಜವಾಬ್ದಾರರು ಅಲ್ಲ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕಾಗಿತ್ತು. ವಾರದಲ್ಲಿ, 15 ದಿವಸದಲ್ಲಿ ಹಣ ರಿಲೀಸ್ ಮಾಡುತ್ತೇವೆ ಎಂದರು, ರಿಲೀಸ್ ಮಾಡಲಿಲ್ಲ. ಅದಕ್ಕೆ ಪ್ರೊಟೆಸ್ಟ್ ಆಗಿ ನಾವು ವಾಕ್ ಔಟ್ ಮಾಡುತ್ತೇವೆ.

(ಜನತಾ ದಳದ ಸದಸ್ಯರು ವಾಕ್ ಔಟ್ ಮಾಡಿದರು)

ಶ್ರೀ ಕೆ. ಎಸ್. ಈಶ್ವರಪ್ಪ:- ಮಾನ್ಯ ಸಭಾಧ್ಯಕ್ಷರೆ ....

ಅಧ್ಯಕ್ಷರು:- ನಾನು ಅಲೋ ಮಾಡುವುದಿಲ್ಲ.

ಶ್ರೀ ಸಿ. ಬೈರೇಗೌಡ:- ನಮ್ಮ ಕೋಲಾರ ಜಿಲ್ಲೆಯಲ್ಲಿ ರೈತರಿಗೆ ಕೊಡಬೇಕಾಗಿರತಕ್ಕಂಥಹ ಹಣ ಸುಮಾರು ಎರಡೂವರೆ ಕೋಟಿ ರೂಪಾಯಿ ಬಾಕಿ ಇದೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಎಲ್ಲಾ ವಿವರಗಳನ್ನು ಹೇಳಿದ್ದಾರೆ, ತಾವು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ:- ಈ ಸರ್ಕಾರದ ನೀತಿಯನ್ನು ವಿರೋಧ ಮಾಡಿ ನಾವು ಹೊರಗೆ ಹೋಗುತ್ತೇವೆ.

(ಸಮಾಜವಾದಿ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಆರಾಧನಾ ಕಂಟ್ರಾಕ್ಟರುಗಳಿಗೆ ಏನೂ ಇಲ್ಲದೆ ದುಡ್ಡು ಕೊಡುತ್ತಾರೆ. ಆರು ಕೋಟಿ ರೂಪಾಯಿ ರೈತರಿಗೆ ಕೊಡವಿದ್ದರೆ ಹೇಗೆ ? ಇದು ಯಾವ ನ್ಯಾಯ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನನಗೆ ವೈಯುಕ್ತಿಕವಾಗಿ ಇದರ ಬಗ್ಗೆ ವಿರೋಧ ಇಲ್ಲ.

ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕಾಗಿದೆ. ಆದರೆ ಸರಿಯಾಗಿ ಮಾಡುತ್ತಾ ಇಲ್ಲ. ಇವರು ಒಕ್ಕೂಟದ ಪರವಾಗಿ ವಾಲುತ್ತಿದ್ದಾರೆ. ನಾನೂ ಸಹ ಸಭಾ ತ್ಯಾಗ ಮಾಡುತ್ತಿದ್ದೇನೆ.

(ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು:– ನಿಯಮ 334ರ ಮೇರೆಗೆ ಸಭೆಯಲ್ಲಿ ಬರುವ ವಿಷಯಗಳು. ಶ್ರೀ ಹರ್ಷ ಕುಮಾರ್.

(ಗೊಂದಲ)

Mr. Speaker:– It will not go into the record. I told you no further discussion on this.

ಅಧ್ಯಕ್ಷರು:– ಕಾಲ್ ಅಟೆನ್‌ಷನ್ ಕೇಳಿದವರೆಲ್ಲಾ ಹೊರಗಡೆ ಹೋಗಿದ್ದಾರೆ ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:– ಸರ್ಕಾರದ ಧೋರಣೆಯನ್ನು ನಾವು ಪ್ರತಿಭಟನೆ ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ ಈ ವಿಷಯಕ್ಕೆ ಸಂಬಂಧಪಟ್ಟದ್ದು ಅಲ್ಲ, ಬೇರೆ ವಿಷಯದ ಬಗ್ಗೆ ಒಂದು ನಿಮಿಷ ಕೇಳುತ್ತೇನೆ.

ಅಧ್ಯಕ್ಷರು:– ಇಲ್ಲ ಸಾಧ್ಯವಿಲ್ಲ, 334 ಮೇರೆಗೆ ಶ್ರೀ ಹರ್ಷಕುಮಾರ್ ಗೌಡ

ಶ್ರೀ ಹರ್ಷಕುಮಾರ್ ಗೌಡ:– ಮೈಸೂರು ನಗರದ ....

ಅಧ್ಯಕ್ಷರು:– ವಿಷಯಾಂತರಕ್ಕೆ ನಾನು ಅನುಮತಿ ಕೊಡುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ:– ಒಂದೇ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:– ನನ್ನ ಛೇಂಬರಿನಲ್ಲಿ ಬಂದು ಕಾಣಿ ನಾನು ಅವಕಾಶ ಕೊಡುತ್ತೇನೆ. ಪದೇ ಪದೇ ನೀವು ಇಲ್ಲಿ ಕೇಳಿದರೆ ಅವಕಾಶ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ:– ನಿನ್ನೆ ವಿದ್ಯುತ್ ವಿಷಯದ ಬಗ್ಗೆ ಹೇಳಿಕೆಯನ್ನು ಕೊಡುತ್ತೇನೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ತಿಳಿಸಿದ್ದರು. ನಿನ್ನೆ ಅವರು ಹೇಳಿಕೆ ಕೊಡಲಿಲ್ಲ. ಬಹುಶಃ ಇವತ್ತು ಅವರು ತಯಾರಾಗಿ ಬಂದಿದ್ದಾರೆಂದು ಅನಿಸುತ್ತದೆ. ದಯವಿಟ್ಟು ಅವರು ಹೇಳಿಕೆ ಕೊಡಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ನಮ್ಮ ಪರಿಸ್ಥಿತಿ ಬಹಳ ಭೀಕರವಾಗಿ, ಕಠಿಣವಾಗಿ, ಒಂದು ದಿವಸ ತಡವಾದರೂ ಸಹ ಅನಾಹುತವಾಗುತ್ತವೆ. ಪ್ರತಿ ನಿಮಿಷ ಕೂಡ ಅನಾಹುತವಾಗುತ್ತಾ ಇದೆ. ದಯವಿಟ್ಟು ಅದರ ಬಗ್ಗೆ ಹೇಳಿಕೆ ಮಾಡಬೇಕು, ಅಲ್ಲಿರತಕ್ಕ ವಿಷಯದ ಬಗ್ಗೆ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್:-- ವಿದ್ಯುತ್ ವಿಚಾರದ ಬಗ್ಗೆ ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಅಧ್ಯಕ್ಷರು:– ತಂದಿದ್ದೀರಲ್ಲಾ, ಅವರು ಹೇಳುತ್ತಾರೆ, ಹರ್ಷಕುಮಾರ್ ಗೌಡರೆ ....

ನಿಯಮ 334ರ ಮೇರೆಗೆ

(1) ಮೈಸೂರು ನಗರದ ಜಯಲಕ್ಷ್ಮಿಪುರಂನಲ್ಲಿರುವ 5 ಎಕರೆ ಪ್ರದೇಶದಲ್ಲಿ ಆಸ್ಪತ್ರೆ ಕಟ್ಟಲು ಒತ್ತಾಯ.

ಶ್ರೀ ಕೆ. ಹರ್ಷಕುಮಾರ್ ಗೌಡ:-- ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ವಾಣಿವಿಲಾಸ್ ಮೊಹಲ್ಲಾದ ಜಯಲಕ್ಷ್ಮಿಪುರಂನಲ್ಲಿ 5 ಎಕರೆ ಪ್ರದೇಶದಲ್ಲಿನ ಒಂದು ಭಾಗದಲ್ಲಿ ಲಕ್ಷ್ಮೀದೇವಮ್ಮನವರ

ಹೆಸರಿನಲ್ಲಿ ಒಂದು ಹೆರಿಗೆ ಆಸ್ಪತ್ರೆ ಇದೆ. ಉಳಿದ ಪ್ರದೇಶ ಖಾಲಿ ಬಿದ್ದಿದ್ದು ಸ್ಥಳೀಯ ಜನತೆ ಈ ಪ್ರದೇಶದಲ್ಲಿ ಒಂದು ಜನರಲ್ ಆಸ್ಪತ್ರೆ ಕಟ್ಟಲು ಹಲವಾರು ಬಾರಿ ಮನವಿ ಸಲ್ಲಿಸುವ ಮೂಲಕ ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ಇಲಾಖೆ ಈವರಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಮೈಸೂರು ನಗರದ ಪ್ರಸಕ್ತ ಜನಸಾಂದ್ರತೆಯ ದೃಷ್ಟಿಯಿಂದ ಮತ್ತು ಮೈಸೂರಿನ ಪಶ್ಚಿಮ ಭಾಗದ ಜನತೆಯ ದೃಷ್ಟಿಯಿಂದ ಅವಶ್ಯಕವಾಗಿ ಇಲ್ಲಿ ಒಂದು ಜನರಲ್ ಆಸ್ಪತ್ರೆಯು ಅತ್ಯಾವಶ್ಯಕ. ಆದ್ದರಿಂದ ಈ ಜನರಲ್ ಆಸ್ಪತ್ರೆಯನ್ನು ಕಟ್ಟುವಲ್ಲಿ ತುರ್ತಾಗಿ ಕಾರ್ಯೋನ್ಮುಖರಾಗುವ ಮೂಲಕ ಸ್ಥಳೀಯ ಜನತೆಯ ಬಹಳ ದಿನಗಳ ಬೇಡಿಕೆಯನ್ನು ಕಾರ್ಯಗತಗೊಳಿಸಬೇಕೆಂದು ಈ ಮೂಲಕ ಒತ್ತಾಯ ಪೂರ್ವಕವಾಗಿ ಕೋರುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಆರೋಗ್ಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ಮೈಸೂರು ನಗರವು ಮಹಾನಗರ ಪಾಲಿಕೆಯ ಆಡಳಿತ ವ್ಯಾಪ್ತಿಗೊಳಪಟ್ಟಿರುತ್ತದೆ. ನಗರ ಪಾಲಿಕೆಯ ಆಡಳಿತ ವ್ಯಾಪ್ತಿಯಲ್ಲಿ ಆರೋಗ್ಯ ಸೌಲಭ್ಯಗಳನ್ನು ಒದಗಿಸುವ ಮತ್ತು ಸೌಲಭ್ಯಗಳನ್ನು ಉತ್ತಮ ಪಡಿಸುವ ವಿಚಾರ ನಗರ ಪಾಲಿಕೆಯ ಮುಖ್ಯ ಕಾರ್ಯಕ್ರಮದಲ್ಲಿ ಬಂದಾಗಿರುತ್ತದೆ, ನೂತನ ಆಸ್ಪತ್ರೆಗಳನ್ನು ನಗರಪಾಲಿಕೆಯ ಸೀಮೆಯಲ್ಲಿ ಮಂಜೂರು ಮಾಡುವುದು ಸರ್ಕಾರಕ್ಕೆ ಹೆಚ್ಚಿನ ಹೊಣೆಯಾಗುತ್ತದೆ. ಈ ಕಾರಣದಿಂದ ಈ ಆಸ್ಪತ್ರೆಯನ್ನು ನಗರ ಪಾಲಿಕೆಯವರು ಹೆಚ್ಚಿನ ಆಸಕ್ತಿ ವಹಿಸಿ, ಅಭಿವೃದ್ಧಿ ಪಡಿಸಬೇಕಾಗುತ್ತದೆ. ಮತ್ತು ಜನರಲ್ ಆಸ್ಪತ್ರೆಗೆ ಬೇಕಾಗುವ ಕಟ್ಟಡವನ್ನು ವಿನ್ಯಾಸದಂತೆ ಸಿದ್ಧಪಡಿಸಿ, ನಗರ ಪಾಲಿಕಯ ವೆಚ್ಚದಲ್ಲಿಯೇ ಕಟ್ಟಿಸಿಕೊಡಬೇಕಾಗುತ್ತದೆ. 30 ಹಾಸಿಗೆಗಳ ಕಟ್ಟಡದ ಅಂದಾಜು ವೆಚ್ಚ ಪ್ರಸಕ್ತ ಸಾಲಿನ ದರದಂತೆ ಸುಮಾರು 48.00 ಲಕ್ಷ ರೂಪಾಯಿಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಕಟ್ಟಡವನ್ನು ನಗರಪಾಲಿಕೆಯನವರು ಕಟ್ಟಿಸಿಕೊಂಡು ಮುಂದೆ ಬಂದಲ್ಲಿ ಮನವಿಯನ್ನು ಪರಿಶೀಲಿಸಲಾಗುವುದು.

(2) ಹಾಸನ ಕ್ಷೇತ್ರದ ಶಾಂತಿಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆಗೆ ಹೆರಿಗೆ ವಾರ್ಡ್.

ಶ್ರೀ ಕೆ. ಹೆಚ್. ಹನುಮೇಗೌಡ:– ಮಾನ್ಯ ಅಧ್ಯಕ್ಷರೆ, ಹಾಸನ ವಿಧಾನ ಸಭಾ ಕ್ಷೇತ್ರದ ಶಾಂತಿಗ್ರಾಮದಲ್ಲಿ ಒಂದು ಸರ್ಕಾರಿ ಆಸ್ಪತ್ರೆ ಕಳೆದ 30 ವರ್ಷಗಳಿಂದ ಇದೆ. ಈ ಆಸ್ಪತ್ರೆಗೆ ಪ್ರತಿ ನಿತ್ಯ ನೂರಾರು ರೋಗಿಗಳು ಬರುತ್ತಿದ್ದಾರೆ. ಶಾಂತಿಗ್ರಾಮ ಮತ್ತು ಸುತ್ತಮುತ್ತಲ 25ಕ್ಕೂ ಮೇಲ್ಪಟ್ಟ ಗ್ರಾಮಗಳ ಜನರು ಇದೇ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬರುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ ಹೆರಿಗೆ ವಾರ್ಡ್ ಇರುವುದಿಲ್ಲ. ಶಾಂತಿ ಗ್ರಾಮ ಮತ್ತು ಸುತ್ತಮುತ್ತಲ 25 ಗ್ರಾಮಗಳ ಗರ್ಭಿಣಿ ಹೆಂಗಸರಿಗೆ ತೊಂದರೆ ಆದರೆ 14 ಕಿ.ಮೀ. ದೂರದಲ್ಲಿರುವ ಹಾಸನ ಪಟ್ಟಣದ ಜನರಲ್ ಆಸ್ಪತ್ರೆಗೆ ಅಥವಾ 24 ಕಿ.ಮೀ. ದೂರದಲ್ಲಿರುವ ಚನ್ನರಾಯನಪಟ್ಟಣದ ಜನರಲ್ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಸಕಾಲದಲ್ಲಿ ಹೆಂಗಸರು ಹೆರಿಗೆಗೆ ಹೋಗಲಾದರೆ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ವಿಚಾರವನ್ನು ಮನಗಂಡು ಶಾಂತಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ಒಂದು ಹೆರಿಗೆ ವಾರ್ಡನ್ನು ಮಂಜೂರು ಮಾಡುವಂತೆ ಸರ್ಕಾರವನ್ನು ಸ್ಥಳೀಯ ಜನರು ಕಳೆದ 10–15 ವರ್ಷಗಳಿಂದ ಒತ್ತಾಯಿಸುತ್ತಾ ಬಂದಿದ್ದಾರೆ. ಈ ತೊಂದರೆಯನ್ನು ಮನಗಂಡು ಹಾಸನ ಜಿಲ್ಲಾ ಪರಿಷತ್ತಿನವರು ಶಾಂತಿಗ್ರಾಮದ ಸರ್ಕಾರಿ ಆಸ್ಪತ್ರೆಗೆ ಒಂದು ಹೆರಿಗೆ ವಾರ್ಡನ್ನು ಮಂಜೂರು ಮಾಡಿಕೊಡುವಂತೆ ಸರ್ಕಾರಕ್ಕೆ ಮನವಿಯನ್ನು ಕೂಡ ಸಲ್ಲಿಸಿರುತ್ತಾರೆ. ಶಾಂತಿ ಗ್ರಾಮದ ಸರ್ಕಾರಿ ಆಸ್ಪತ್ರೆಗೆ ಒಂದ ಹೆರಿಗೆ ವಾರ್ಡನ್ನು ಮಂಜೂರು ಮಾಡಿಕೊಡಬೇಕೆಂದು ಸ್ಥಳೀಯ ಜನರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಶ್ರೀ ಕೆ.ಹೆಚ್.

ಹನುಮೇಗೌಡರು ಶಾಸಕರು, ದಿನಾಂಕ: 23.11.92 ರಂದು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಬರೆದು ಹಾಸನ ಜಿಲ್ಲೆಯ ಶಾಂತಿಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಒಂದು ಹೆರಿಗೆ ವಾರ್ಡನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಈ ಬಗ್ಗೆ ಸ್ಥಳೀಯರು ಒಂದು ಲಕ್ಷ ರೂಪಾಯಿಗಳ ವಂತಿಗೆ ಹಣವನ್ನು ಕೊಡಲು ಸಿದ್ಧರಿರುವರು ಹಾಗೂ ಕಟ್ಟಡದ ವೆಚ್ಚದ ಉಳಿದ ಭಾಗವನ್ನು ಭರಿಸಲು ಜಿಲ್ಲಾ ಪರಿಷತ್ತು ಆಯವ್ಯಯದಲ್ಲಿ ಅವಕಾಶವಿದೆಯೋ ಎಂಬುದನ್ನು ಪರಿಶೀಲಿಸಿ ಜಿಲ್ಲಾ ಪರಿಷತ್ತಿನ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳ ಜೊತೆ ಪತ್ರ ವ್ಯವಹಾರ ನಡೆದಿದೆ. ಮಾನ್ಯ ಶಾಸಕರು ಕೇಳಿರುವ ಹಾಗೆ ಸ್ಥಳೀಯರಿಂದ ಒಂದು ಲಕ್ಷ ರೂಪಾಯಿಯ ವಂತಿಗೆ ದೊರೆಯುವುದಾದರೆ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಕಟ್ಟಡಕ್ಕೆ ಬೇಕಾಗುವ ಅಂದಾಜಿನ ಉಳಿದ ಮೊತ್ತವನ್ನು 1993–94ನೇ ಸಾಲಿನಲ್ಲಿ ಒದಗಿಸಿದ್ದಲ್ಲಿ 10 ಹಾಸಿಗೆಯುಳ್ಳ ಹೆರಿಗೆ ವಾರ್ಡನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು. ಹಾಗೂ ಈ ವಿಭಾಗಕ್ಕೆ ಬೇಕಾಗಿರುವ ಸಿಬ್ಬಂದಿಯನ್ನು ಮತ್ತು ಇತರ ಅಗತ್ಯ ಉಪಕರಣಗಳನ್ನು ಕಟ್ಟಡ ಪೂರ್ಣಗೊಳ್ಳುವ ಸಮಯಕ್ಕೆ ಒದಗಿಸಲಾಗುವುದು.

(3) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೇನು ಕೃಷಿ

ಶ್ರೀ ಬಿ. ಎಂ. ಇದಿನಬ್ಬ:– ಮಾನ್ಯ ಧ್ಯಕ್ಷರೆ, ರಾಜ್ಯದಲ್ಲಿ ಜೇನುಕೃಷಿಯ ಭವಿಷ್ಯ ಚೆನ್ನಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಕೂಡ ಜೇನು ಕೃಷಿ ವಿಫುಲವಾಗಿದೆ. ಆದರೆ ಈಗ ಜೇನು ಕೃಷಿಗೆ ಅಪಾರ ಹಾನಿಯಾಗಿರುತ್ತದೆ. ಜೇನುನೊಣಗಳ ಮಾರಕ ರೋಗದಿಂದಾಗಿ ನೊಣಗಳು ಸಾಯುತ್ತಿವೆ. ಜೇನುನೊಣಗಳ ರೋಗ ನಿವಾರಣೆ ಜರೂರಿನ ವಿಷಯವಾಗಿರುತ್ತದೆ. ಈ ಕುರಿತು ಸರ್ಕಾರದ ಇಲಾಖೆ ಕಾರ್ಯಕ್ರಮ ತೆಗೆದುಕೊಳ್ಳುವುದು ಅತಿ ಪ್ರಾಮುಖ್ಯ. ಈ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆಯೋ ? ಕೇಂದ್ರ ಸರ್ಕಾರದ ಇತರೆ ರಾಜ್ಯಗಳಿಗೆ ಜೇನು ಕೃಷಿಗೆ ಹೆಚ್ಚಾಗಿ ನೆರವು ನೀಡಿರುತ್ತದೆ. ಆ ಪ್ರಕಾರ ಕರ್ನಾಟಕವೂ ಕನಿಷ್ಠ 5 ಕೋಟಿ ರೂಪಾಯಿಗಳ ನೆರವು ಕೇಳುವುದೇ ? ಈ ಕುರಿತು ಸಣ್ಣ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಣ್ಣ ಕೈಗಾರಿಕ ಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ರಾಜ್ಯದ ಮಲೆನಾಡು ಜಿಲ್ಲೆಯಲ್ಲಿ ಜೇನು ಕೃಷಿಗೆ ಒಳ್ಳೆಯ ಭವಿಷ್ಯ ಇದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೂಡ ಜೇನು ಕೃಷಿ ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ. ಆದರೆ 1992ರ ಪ್ರಾರಂಭದಿಂದ ಜೇನು ಕುಟುಂಬ ಸಂಸಾರಕ್ಕೆ ಥಾಯ್ ಸ್ಯಾಕ್ ಬ್ರೂಡ್ ಎಂಬ ವೈರಸ್ ಕಾಯಿಲೆ ಪ್ರಾರಂಭವಾಗಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗು ಜಿಲ್ಲೆಗಳಲ್ಲಿ ಜೇನು ಕುಟುಂಬಕ್ಕೆ ತುಂಬ ಹಾನಿಯಾಗಿದೆ. ಇದರಿಂದ ಜೇನು ಕೃಷಿಯನ್ನು ಅವಲಂಬಿಸಿರುವ ರೈತರಿಗೆ ಅಪಾರ ನಷ್ಟ ಉಂಟಾಗಿದೆ. ಈ ವೈರಸ್ ಕಾಯಿಲೆಗೆ ಔಷಧಿ ಇಲ್ಲದಿರುವುದರಿಂದ ವೈರಸ್ ಕಾಯಿಲೆಯನ್ನು ಗುಣಪಡಿಸಲು ಸಾಧ್ಯವಾಗಿರುವುದಿಲ್ಲ. ಈ ಕಾಯಿಲೆ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಿಗೂ ಹರಡುತ್ತಿದೆ. ಆದಾಗ್ಯೂ ಈ ಕಾಯಿಲೆ ಹರಡುವಿಕೆಯನ್ನು ನಿಯಂತ್ರಿಸಲು ಮತ್ತು ಕಾಯಿಲೆಯಿಂದ ನಷ್ಟಕ್ಕೆ ಒಳಪಟ್ಟ ಜೇನು ಕೃಷಿಕರಿಗೆ ಪರಿಹಾರ ನೀಡಲು ಸರ್ಕಾರದಿಂದ ಈಗಾಗಲೇ ರೂ. 3.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಮತ್ತು 3.00 ಲಕ್ಷ ರೂ.ಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಲಾಗಿದೆ. ಈ ಕಾಯಿಲೆ ಹರಡುವುದನ್ನು ತಡೆಗಟ್ಟುವುದಕ್ಕೆ ಹಾಗೂ ಜೇನು ಕೃಷಿಯನ್ನು ಪುನರ್ಜೀವನಗೊಳಿಸಲು ರಾಜ್ಯ ಮಟ್ಟದ ಜೇನು ಕುಟುಂಬ ಕಾಯಿಲೆ ನಿಯಂತ್ರಣ ಸಮಿತಿಯನ್ನು ರಚಿಸಲಾಗಿದೆ. ಈ ಕಾಯಿಲೆ ನಿಯಂತ್ರಣ ಕೆಲಸವು ಜರೂರಾಗಿ ನಡೆಯುತ್ತಿದೆ. ಆಫ್ರಿಕನ್ ಮತ್ತು ಇಟಾಲಿಯನ್, ಜೇನು ನೊಣಗಳನ್ನು ಉತ್ತರಪ್ರದೇಶದಲ್ಲಿ ತಂದು ಸಾಕಿರುವಂತೆ ನಮ್ಮ ರಾಜ್ಯದಲ್ಲಿಯೂ ತಂದು ಸಾಕುವ ಬಗ್ಗೆ

ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆದರೆ ಈ ನೊಣಗಳು ನಮ್ಮ ಪರಿಸರಕ್ಕೆ ಹೊಂದಿಕೊಳ್ಳುವುದೇ ಇಲ್ಲವೇ ಎನ್ನುವುದರ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಕೇಂದ್ರ ಸರ್ಕಾರದಿಂದ ಖಾದಿ ಆಯೋಗದ ಮೂಲಕ ಕಾಯಿಲೆ ನಿಯಂತ್ರಣ ಪ್ರಯತ್ನಗಳು ನಡೆಯುತ್ತಿದೆ. ಈ ಬಗ್ಗೆ ಕೇಂದ್ರ ಸರ್ಕಾರದ ನೆರವನ್ನು ಪಡೆಯಲು ಕೋರಲಾಗುವುದು.

(4) ಅರಣ್ಯ ಇಲಾಖೆಯ ಗಾರ್ಡ್ಸ್ ಸಿಬ್ಬಂದಿಗಳ ವರ್ಗಾವಣೆ.

ಶ್ರೀಮತಿ ಸುಮಾ ವಸಂತ (ವಿರಾಜಪೇಟೆ):– ಸನ್ಮಾನ್ಯ ಅಧ್ಯಕ್ಷರೆ, ರಾತ್ರಿ –ಹಗಲು ಕೆಲಸ ಮಾಡಿ ಜನರ ಕಷ್ಟವನ್ನು ನೋಡುತ್ತಿರುವ ಅರಣ್ಯ ಸಿಬ್ಬಂದಿ ವರ್ಗದವರಿಗೆ ಸವಲತ್ತು ನೀಡಬೇಕಾದುದು ಅತಿ ಅವಶ್ಯಕವಾಗಿರುತ್ತದೆ. ಅದೇ ವರ್ಗದ ಸಿಬ್ಬಂದಿಯವರಿಗೆ ಬೇರೆ ಬೇರೆ ಇಲಾಖೆಯಲ್ಲಿದ್ದರೆ ಸಮಾನ ಸವಲತ್ತು ಸಿಗುತ್ತಿತ್ತು, ಇಲ್ಲಿ ಅಪಾರವಾದ ತಾರತಮ್ಯವಾಗಿದೆ. ಕೊಡಗು ಜಿಲ್ಲೆಯಲ್ಲಿ ಬಾರ್ಡರ್ ಸೆಕ್ಯೂರಿಟಿ ರಿಸರ್ವ್ ಪೋಲೀಸರನ್ನು ತಿಂಗಳಿಗೊಮ್ಮೆ ಬದಲಾಯಿಸಿ ಟಿ.ಎ., ಡಿ.ಎ.ಗಳನ್ನು ಮುಂಗಡ ನೀಡಲಾಗುತ್ತಿವೆ. ಆದೇ ಅರಣ್ಯ ಇಲಾಖೆಯ ಗಾರ್ಡ್‌ಗಳಿಗೆ 3–4 ವರ್ಷಗಳಿಂದ ವರ್ಗಾವಣೆ ಇರುವುದಿಲ್ಲ. ಟಿ.ಎ., ಡಿ.ಎ., ಸಹ ಇರುವುದಿಲ್ಲ. ಯಾಗ ಪ್ರಭಾವಕ್ಕೂ ಒಳಗಾಗದ, ಎಲ್ಲಾ ಕಷ್ಟಗಳನ್ನು ಅನುಭವಿಸುವ ಗಾರ್ಡ್‌ಗಳಿಗೆ ಅರು ತಿಂಗಳಿಗೊಮ್ಮೆಯಾದಗೂ ವರ್ಗಾವಣೆ ಮತ್ತು ಟಿ.ಎ., ಡಿ.ಎ., ನೀಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಅರಣ್ಯ ರಕ್ಷಕರನ್ನು, ವಿಭಾಗ ಮಟ್ಟದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಅರಣ್ಯ ಸಂರಕ್ಷಣಾಧಿಕಾರಿಗಳು ವೃತ್ತಮಟ್ಟದಲ್ಲಿ ಅವರ ವೃತ್ತದ ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೂ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಒಂದು ವೃತ್ತದಿಂದ ಮತ್ತೊಂದು ವೃತ್ತಕ್ಕೆ ವರ್ಗಾವಣೆ ಮಾಡಲು ಅಧಿಕಾರ ಹೊಂದಿರುತ್ತಾರೆ. ಸರ್ಕಾರದ ಹಿತ ದೃಷ್ಟಿಯಿಂದ ವರ್ಗಾವಣೆಯಾದ ಅರಣ್ಯ ರಕ್ಷಕರಿಗೆ ಕರ್ನಾಟಕ ಸೇವಾ ನಿಯಮದ ಪ್ರಕಾರ ಅವರು ರೂ. 400–00 ವರ್ಗಾವಣೆ ಅನುಧಾನ. ಅವರು ಮತ್ತು ಅವರ ಕುಟುಂಬದವರಿಗೆ ಪ್ರಯಾಣದ ಖರ್ಚು ಮತ್ತು ಅವರ ಸ್ವಂತ ಸಾಮಾಗ್ರಿಗಳನ್ನು ವರ್ಗಾವಣೆಯಾದ ಸ್ಥಳಕ್ಕೆ ಸಾಗಿಸಲು 1500 ಕೆ.ಜಿ.ಮಿತಿವರೆಗೆ ತಗಲುವ ವೆಚ್ಚವನ್ನು ನೀಡಲಾಗುತ್ತಿದೆ. ಸ್ವಂತ ಸಾಮಾಗ್ರಿಗಳನ್ನು ಸಾಗಿಸಲು ಪ್ರತೀ ಕಿ.ಮೀ.ಗೆ 1500 ಕೆ.ಜಿ.ಗೆ ರೂ. 1.50 ರೋಡ್ ಮೈಲೇಜನ್ನು ಅಥವಾ ರೈಲಿನಲ್ಲಿ ಸಾಗಿಸಿದರೆ ರೈಲ್ವೆ ವೆಚ್ಚವನ್ನು ನೀಡಲಾಗುತ್ತದೆ. ಈ ವರ್ಗಾವಣೆ ವೆಚ್ಚವನ್ನು ಭರಿಸಲು ಎಲ್ಲಾ ವಿಭಾಗಗಳಿಗೆ, ಅನುದಾನವನ್ನು ನೀಡಲಾಗಿದೆ. ಈ ವಿಷಯದ ಬಗ್ಗೆ ಸದ್ಯದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ. ಯಾವುದೆ ಸಮಸ್ಯೆ ಉದ್ಭವಿಸಿದಲ್ಲಿ ಅದನ್ನು ನಿವಾರಿಸಲು ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಅರಣ್ಯ ರಕ್ಷಕರುಗಳಿಗೆ ನಿಗದಿತ ಪ್ರಯಾಣ ವೆಚ್ಚವನ್ನು (ಫಿಕ್ಸ್‌ಡ್ ಟ್ರಾವಲಿಂಗ್ ಅಲೋಯನ್ಸ್) ನೀಡಲಾಗುತ್ತಿಲ್ಲ. ಅವರು ಕೇಂದ್ರ ಸ್ಥಾನದಿಂದ ಕರ್ತವ್ಯದ ಮೇಲೆ 8 ಕಿ.ಮೀ. ಮೇಲೆ ಹೊರಗೆ ಹೋದಾಗ ಮೇಲೆ ಹೇಳಿದ ನಿಯಮದಂತೆ ಪ್ರಯಾಣ ವೆಚ್ಚವನ್ನು ಹಾಗೂ ಅವರಿಗೆ ಭತ್ಯೆ ಪ್ರತಿ 24 ಗಂಟೆಗಳ ತಂಗುವಿಕೆ ರೂ. 25.00ಗಳನ್ನು ನೀಡಲಾಗುತ್ತಿವೆ. ಅವರು ಕಾಲು ನಡುಗೆಯಲ್ಲಿ ಪ್ರಯಾಣ ಮಾಡಿದರೂ ಕೂಡ ನಿಗದಿತ ದರದಲ್ಲಿ ಭತ್ಯೆ ನೀಡಲಾಗುವುದು. ವರ್ಗಾವಣೆಯಾದಾಗ ಅರಣ್ಯ ರಕ್ಷಕರು ತಮ್ಮ ಕ್ಲೇಮುಗಳನ್ನು ಉಪಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸಲ್ಲಿಸಿದ ನಂತರವೇ ಪಾವತಿ ಮಾಡಲಾಗುವುದು.

ಕೋರಿಕೆಯು ಮೇಲೆ ವರ್ಗಾವಣೆಯಾದ ಅರಣ್ಯ ರಕ್ಷಕರುಗಳಿಗೆ, ಯಾವುದೇ ವರ್ಗಾವಣೆ ಭತ್ಯೆ ಮತ್ತು ಅನುದಾನ ನೀಡಲಾಗುವುದಿಲ್ಲ.

(5) ಬೆಳಗಾಂ ತಾಲ್ಲೂಕು ನೀಲಜಿ ಗ್ರಾಮದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ ಪ್ರಾರಂಭ ಮಾಡುವ ಬಗ್ಗೆ.

Sri. K. C. Modgekar Desai (Hirebagewadi):– The Zilla Parishad, Belgaum and the Taluka Panchayat Samithi, Belgaum, have long back resolved for opening of a new Rural Veterinary Dispensary at Nilaji, Taluka and District, Belgaum. I had raised this matter on the floor of the House and the Government had assured me that it would open new RVD at Nilaji. Accordingly, the Governmenmt sanctioned new RVD at Nilaji. However, nothing has been done so far in the matter. I would request the Government to make a Budgetary provision during the current year for opening of the new RVD at Nilaji, Taluka and District, Belgaum. The villagers have come forward to make available the land necessary for the establishment of a new RVD at Nilaji.

ಶ್ರೀ ಕೆ. ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆ, ಬೆಳಗಾಂ ತಾಲ್ಲೂಕು, ನೀಲಜಿ ಗ್ರಾಮದಲ್ಲಿ ಒಂದು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ಇನ್ನೂ ದೊರಕಿರುವುದಿಲ್ಲ. ಸದರಿ ಗ್ರಾಮಕ್ಕೆ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(6) ರಾಜ್ಯದಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ರೈತರ ಜಮೀನಿನ ಸಕ್ರಮ.

ಶ್ರೀ ಜಿ. ರಾಜುಗೌಡ (ಹನೂರು):– ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ರಾಜ್ಯ ಸರ್ಕಾರವು ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ರೈತರುಗಳ ಜಮೀನನ್ನು ಸಕ್ರಮಗೊಳಿಸಲು ತಾಲ್ಲೂಕು ಮಟ್ಟದ ಸಮಿತಿಯನ್ನು ಶಾಸಕರುಗಳ ಅಧ್ಯಕ್ಷತೆಯಲ್ಲಿ ನೇಮಿಸಿ ಕಾರ್ಯಾಚರಣೆ ಮಾಡುತ್ತಿರುವುದು ಸರಿಯಷ್ಟೆ. ಕೆಲವು ರೈತರುಗಳು ಬಹಳ ವರ್ಷಗಳಿಂದಲೂ ವ್ಯವಸಾಯ ಮಾಡಿಕೊಂಡು ಬಂದಿರುವ ಜಮೀನುಗಳು ಸರ್ಕಾರಿ ಕಡತದಲ್ಲಿ ರಸ್ತೆ ಪರಂಪೋಕು, ಓಣಿ ಪರಂಪೋಕು, ಹಳ್ಳ ಪರಂಪೋಕು ಎಂದಿರುತ್ತದೆ. ಆದರೆ ಸಧ್ಯವಿರುವ ಪರಿಸ್ಥಿತಿಯಂತೆ ಅಲ್ಲಿ ಹಳ್ಳವೂ ಇಲ್ಲಾ, ರಸ್ತೆಯೂ ಇಲ್ಲಾ, ಓಣಿಯೂ ಇಲ್ಲಾ. ಆ ಜಮೀನನ್ನು ಸಕ್ರಮಗೊಳಿಸಿದರೆ ಯಾರಿಗೂ ತೊಂದರೆಯಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ತಾಲ್ಲೂಕು ಮಟ್ಟದ ಕೆಲವು ಅಧಿಕಾರಿಗಳು ಇದನ್ನು ಮಾಡಿದರೆ ಸರ್ಕಾರದ ಸೂಚನೆಗೆ ವಿರೋಧವಾಗುತ್ತದೆ ಎಂದು ಹೇಳುತ್ತಿದ್ದಾರೆ. ಆದರೆ ಆ ಜಮೀನುಗಳನ್ನೇ ನಂಬಿ ಹತ್ತಾರು ವರ್ಷಗಳಿಂದ ವ್ಯವಸಾಯ ಮಾಡುತ್ತಿರುವ ಸಣ್ಣ ರೈತರುಗಳಿಗೆ ತೊಂದರೆಯಾಗುವುದಿಲ್ಲವೆ ? ಆದ್ದರಿಂದ ಸ್ಥಳ ತನಿಖೆ ಮಾಡಿ ಯಾರಿಗೂ ತೊಂದರೆಯಾಗದಿದ್ದರೆ, ಅಂಥ ಜಮೀನನ್ನು ಸಕ್ರಮಗೊಳಿಸಬಹುದೆಂದು ಸರ್ಕಾರ ಸುತ್ತೋಲೆ ಕಳುಹಿಸುವುದರಿಂದ ಅನೇಕ ಜನ ಹರಿಜನರಿಗೂ ಹಿಂದುಳಿದವರಿಗೂ ಅನುಕೂಲವಾಗುತ್ತದೆ. ಸರ್ಕಾರದ ಸೂಚನೆಯಂತೆ ಯಾರು ಬಗೈರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೆ, ಅವರುಗಳನ್ನು ಒಕ್ಕಲೆಬ್ಬಿಸಬಾರದು ಎಂದು ಇದೆ. ಇಂಥ ಪರಿಸ್ಥಿತಿಯಲ್ಲಿ

ಅವರುಗಳು ಮಾಡುತ್ತಿರುವ ಜಮೀನುಗಳನ್ನು ಸಕ್ರಮಗೊಳಿಸುವುದರಿಂದ ಅಂಥ ರೈತರುಗಳ ಹಿತವನ್ನು ಕಾಪಾಡಿದಂತಾಗುವುದಿಲ್ಲವೆ ? ಸರ್ಕಾರಿ ತಡತವನ್ನು ನೋಡಿ ಸಕ್ರಮಗೊಳಿಸುವುದಾದರೆ, ಸಮಿತಿಯನ್ನು ನೇಮಿಸುವುದರ ಔಚಿತ್ಯವಾದರೂ ಏನು ? ಇದರ ಬಗ್ಗೆ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಂದಾಯ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೆ, 1964ರ ಭೂ ಕಂದಾಯ ಕಾಯಿದೆ ಕಲಂ 71ರ ಪ್ರಕಾರ ವಿಶೇಷ ಉದ್ದೇಶಗಳಿಗಾಗಿ ಕಂದಾಯ ಇಲಾಖೆಯ ದಾಖಲಾತಿಗಳಲ್ಲಿ ನಮೂದಿಸಲಾಗಿರುವ ದೇವರ ಕಾಡು, ಗುಂಡು ತೋಪು, ಕೆರೆ ಅಂಗಳ, ಫೂಟು ಖರಾಬು, ಖರಾಬು ಹಳ್ಳ, ಸೇಂದಿ ವನ, ಸ್ಮಶಾನದ ಜಮೀನುಗಳನ್ನು, 1964ರ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 94 ಎ ಅಡಿಯಲ್ಲಿ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ರೂಪಿಸಲಾದ ಕಾನೂನು ಪ್ರಕಾರ ತಾಲ್ಲೂಕು ಮಟ್ಟದ ಸಮಿತಿಗಳಿಗೆ ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ. ಹಾಗೆಯೇ, ಸಾರ್ವಜನಿಕ ರಸ್ತೆ, ಕಾಲು ದಾರಿ, ಗಾಡಿ ರಸ್ತೆ, ಮುಂತಾದವುಗಳನ್ನು ಸಮಿತಿಗಳು ಮಂಜೂರು ಮಾಡಲು ರಹ ಇರುವುದಿಲ್ಲ. ಆದುದರಿಂದ, ಇಂತಹ ಜಮೀನುಗಳು ಬಗರ್ ಹುಕುಂ ಸಾಗುವಳಿಯಲ್ಲಿದ್ದರೂ ಸಹಾ, ಸಮಿತಿಗಳು ಮಂಜೂರು ಮಾಡಲು ನಿಷೇಧವಿದೆ.

ಆದಾಗ್ಯೂ, ಇಂತಹ ಜಮೀನುಗಳು ಅವುಗಳ ಲಕ್ಷಣಗಳನ್ನು ಕಳೆದುಕೊಂಡಾಗ ಹಾಗೂ ನಿಯೋಜಿತ ಉದ್ದೇಶಕ್ಕೆ ಉಪಯೋಗವಿಲ್ಲದಿದ್ದಾಗ ಅಂತಹ ಜಮೀನುಗಳನ್ನು ಕಾನೂನಿನ ಪ್ರಕಾರ ಮೀಸಲಾತಿಯಿಂದ ಹೊರತುಪಡಿಸಲು ಅವಕಾಶವಿದೆ. ಈ ರೀತಿ ಹೊರತುಪಡಿಸಲಾದ ಜಮೀನುಗಳನ್ನು ಕಾನೂನಿನ ಅಡಿಯಲ್ಲಿ ವಾಪಸ್ಸು ಪಡೆಯಲು ಪರಿಶೀಲಿಸಲಾಗುವುದು. ಬೇರೆ ಉದ್ದೇಶಕ್ಕೆ ಹಸ್ತಾಂತರಿಸುವ ಅಧಿಕಾರವು ಸರಕಾರಕ್ಕೆ ಮಾತ್ರ ಇರುತ್ತದೆ. ಆದ್ದರಿಂದ, ಅಂತಹ ಹಸ್ತಾಂತರಿಸಲಾಗಿರುವ ಜಮೀನುಗಳನ್ನು ಅರ್ಹ ಉದ್ದೇಶಗಳಿಗೆ ವಿಲ್ ಮಾಡಲು ಪರಿಶೀಲಿಸಲಾಗುವುದು.

(7) ಮಂಗಳೂರು ಗ್ರಾಮಾಂತರ ಪ್ರದೇಶಗಳಲ್ಲಿ ಕ.ರಾ.ರ. ಸಾರಿಗೆ ಇಲಾಖೆಯ ಎಕ್ಸ್‌ಪ್ರೆಸ್ ಮತ್ತು ನಾನ್ ಸ್ಟಾಪ್ ಸರ್ವೀಸ್ ಬಸ್.

ಶ್ರೀ ಎ. ರುಕ್ಮಯ್ಯಪೂಜಾರಿ(ವಿಟ್ಲ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಇಲಾಖೆಯ ಎಕ್ಸ್‌ಪ್ರೆಸ್ ಮತ್ತು ನಾನ್‌ಸ್ಟಾಪ್ ಸರ್ವೀಸಿನ ಬಸ್ಸುಗಳು ಗ್ರಾಮಾಂತರ ಪ್ರದೇಶದ ಹೆಚ್ಚಿನ ಜನರಿಗೆ ಅನುಕೂಲವಾಗುವಂತೆ ಪಾಣೆ ಮಂಗಳೂರು, ಕಲ್ಲಡ್ಕ ಮತ್ತು ಮಾಣಿಗಳಲ್ಲಿ ನಿಲ್ಲಿಸಬೇಕೆಂದು ಊರಿನವರು ಮನವಿ ಸಲ್ಲಿಸಿದ್ದರೂ ಮತ್ತು ಜನಪ್ರತಿನಿಧಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದಿದ್ದರೂ ಸರಿಯಾದ ಕ್ರಮ ತೆಗೆದುಕೊಂಡಿರುವುದಿಲ್ಲ. ಕೆಲವು ಬಸ್ಸುಗಳನ್ನು ನಿಲ್ಲಿಸಬೇಕೆಂದು ಸೂಚಿಸಿದ್ದರೂ ನಿಲ್ಲಿಸುವುದಿಲ್ಲ. ಇದರಿಂದ ಅಸುಪಾಸಿನ ಜನ ಪದೇ ಪದೇ ಒತ್ತಾಯಿಸುತ್ತಾ ಇದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಇಲಾಖೆಗೆ ಲಾಭವಾಗುವ ಮತ್ತು ಜನಸಾಮಾನ್ಯರಿಗೆ ಅನುಕೂಲವಾಗುವ ದೃಷ್ಟಿಯಿಂದ ಇಂಥ ಬಸ್ಸುಗಳು ಪಾಣೆ ಮಂಗಳೂರು ಕಲ್ಲಡ್ಕ, ಮತ್ತು ಮಾಣಿ ನಿಲ್ದಾಣಗಳಲ್ಲಿ ನಿಲ್ಲುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

† ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಾರಿಗೆ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, Pane Mangalore Kalladaka and Mani are situated on National Highway 48 (Mangalore–Bangalore via Sakaleshpur) and they are at a distance of 25, 30, and 35 KMs from Mangalore.

KSRTC is operating 194 trips on National Highway and 48 on Mangalore Puttur State Highway. The types of services are as follows:

Types of Services	:	Number of round trips
1. Ordinary	..	61
2. Express	..	42
3. Non–stop	..	26 (Between Mangalore and Puttur)
4. Semi Luxury	..	22
5. Luxury	..	43
Total	..	194

Ordinary services are stopping at all places. Pane -- Mangalore is at a distance of about 1 KM away from B.C. Road, where all services are stopping. At Kalladaka in addition to 61 ordinary services 6 extra services are also stopping. Mane is another important traffic generating point. At this place 26 express services are stopping in addition to 61 ordinary services.

Express, Non–stop, Semi–Luxury and Luxury services are being operated for the convenience of the different catagories of passengers. The shares in this services are more when compared to the ordinary services. In these services almost all seats are fully occupied at the starting point. Further, providing stops at a short distance of about 5 KMs would defeat the purpose of introducing express, Non–stop, Semi–Luxury and Luxury Types of Services.

The existing services under operation on National Highway 48 on State High Way passing through Pane–Mangalore, Kalladaka and Mane are adequately catering to the existing demand. Therefore, it is considered that there is no need to provide stops for additional express and non–stop services at the said places.

2.05 ಪಿ.ಎಂ.

ಚುನಾವಣಾ ಪ್ರಸ್ತಾವನೆ

ಛೇರ್ಮನ್:– ಈಗ ಚುನಾವಣಾ ಪ್ರಸ್ತಾವನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷಿಣಿಯುವರೆ, ವಿದ್ಯುಚ್ಛಕ್ತಿ ಬಗ್ಗೆ ನಿನ್ನೆ ನಾವು ಪ್ರಸ್ತಾಪ ಮಾಡಿದ್ದೆವು. ಅದರ ಬಗ್ಗೆ ....

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮೊದಲು ಚುನಾವಣಾ ಪ್ರಸ್ತಾವ ಮುಗಿದು ಹೋಗಲಿ.

ಶ್ರೀ ಸಿ. ಬೈರೇಗೌಡ:- ಮೊದಲು ಇದು ಆಗಲಿ. ಅನಂತರ ಅದನ್ನು ಮಾಡಿ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪ ಮುಖ್ಯ ಮಂತ್ರಿಗಳ ಪತ್ತಿರ ನಾವು ಈಗಾಗಲೇ ಮಾತನಾಡಿದ್ದೇವೆ. ಏನೇನು ಬದಲಾವಣೆ ಮಾಡಿದ್ದಾರೆ. ಸರ್ಕಾರ ಇದರ ಬಗ್ಗೆ ಅನುಕೂಲ ಮಾಡಿಕೊಡುವಂತೆ ಹೇಳಿ.

ಛೇರ್ಮನ್:- ಒಬ್ಬೊಬ್ಬರು ಮಾತನಾಡಿ. ಚುನಾವಣೆ ಪ್ರಸ್ತಾವ ಮುಗಿದ ಮೇಲೆ ಇದನ್ನು ತೆಗೆದುಕೊಳ್ಳೋಣ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷಿಣಿಯವರೆ, ನಾನು ಈ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ಮಂತ್ರಿಗಳು) ಅವರು –

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 265(1) ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಬೇಕು;

ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕು;

ಇ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 271(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಈ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 272(1)ನೇ ನಿಯಮದ ಅನುಸಾರವಾಗಿ ಈ ಸಭೆ ಹಕ್ಕುಬಾಧ್ಯತಾ ಸಮಿತಿಗೆ ಏಳು ಜನ ಸದಸ್ಯರನ್ನು ಚುನಾಯಿಸಬೇಕು.

ಉ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 277(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಧೀನ ಶಾಸನ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಬೇಕು.

ಊ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 282(1)ನೇ ನಿಯಮದ ಅನುಸಾರವಾಗಿ ಈ ಸಭೆ ಸರ್ಕಾರಿ ಭರವಸೆಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಬೇಕು.

ಋ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 283(1)ನೇ ನಿಯಮದ ಅನುಸಾರವಾಗಿ ಈ ಸಭೆ ಖಾಸಗಿ ಸದಸ್ಯರ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಗೆ ಹತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ೠ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 286ನೇ ನಿಯಮದ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 288ನೇ ನಿಯಮದ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 353(2)ನೇ ನಿಯಮದ ಅನುಸಾರವಾಗಿ ಈ ಸಭೆ ವಸತಿ ಸೌಕರ್ಯಗಳ ಸಮಿತಿಗೆ ಎಂಟು ಜನ ಸದಸ್ಯರನ್ನು ಚುನಾಯಿಸಬೇಕು.

ಛೇರ್ಮನ್:- ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸರ್ಕಾರಿ ನಿರ್ಣಯಗಳು

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು):- ಮಾನ್ಯ ಅಧ್ಯಕ್ಷಿಣಿಯವರೆ

''ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368(2) ನೇ ಅನುಚ್ಛೇದದ (ಸಿ) ಮತ್ತು (ಇ) ಖಂಡಗಳ ವ್ಯಾಪ್ತಿಯಲ್ಲಿ ಬರುವ 1991ನೇ ಇಸವಿಯ ಸಂವಿಧಾನದ (72ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆಂದು ಸೂಚಿಸುವುದು.

ಪ್ರಸ್ತಾವವನ್ನು ಮಂಡಿಸಲಾಯಿತು.

† ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಇದರ ಬಗ್ಗೆ ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ತಮಗೆಲ್ಲಾ ಗೊತ್ತಿರುವಂತೆ ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಕಾನೂನು ಈ ಹಿಂದೆ ಬಂದಿದೆ. ಈಚೆಗೆ ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ಅನೇಕ ಸ್ಥಳಗಳಲ್ಲಿ ಪ್ರತಿಯೊಂದು ರಾಜ್ಯಗಳಲ್ಲೂ ಇದರ ಬಗ್ಗೆ ಕಮ್ಮಟಗಳನ್ನು ಮಾಡಿ, ಚರ್ಚೆ ಮಾಡಿ, ಸಮಿತಿಗಳನ್ನು ಮಾಡಿ ಚರ್ಚಿಸಿ ಕೊನೆಗೆ ಕೇಂದ್ರ ಸರ್ಕಾರ ಉಭಯ ಸದನಗಳ ಮುಂದೆ ಸಂವಿಧಾನ ತಿದ್ದುಪಡಿಯನ್ನು ತಂದು ಅನಂತರ ಅದು ಜಂಟಿ ಸಮಿತಿಗೆ ಹೋಗಿ ಅಲ್ಲಿ ಸರ್ವಾನುಮತದಿಂದ ಒಪ್ಪಿಗೆಯನ್ನು ಪಡೆದು ಅದು ಉಭಯ ಸದನಗಳ ಮುಂದೆ ಬಂದು ಸರ್ವಾನುಮತದಿಂದ ಅಂಗೀಕಾರವಾಗಿ ಇಲ್ಲಿಗೆ ಬಂದಿದೆ. ಇದು ಸಂವಿಧಾನದ ತಿದ್ದುಪಡಿ. ಇದರ ಮೂಲ ಉದ್ದೇಶ, ಹಕ್ಕು ಮತ್ತು ಕರ್ತವ್ಯಗಳನ್ನು ವಿಕೇಂದ್ರೀಕರಣ ಮಾಡಿ ಗ್ರಾಮಮಟ್ಟದಲ್ಲಿರುವ ಸಂಸ್ಥೆಗಳಿಗೆ ಶಕ್ತಿಯನ್ನು ಅವಕಾಶವನ್ನು ಕೊಡುವಂಥಾದ್ದಾಗಿದೆ. ಬಹಳ ಮುಖ್ಯವಾಗಿ 3 ಅಂಶಗಳು ಇವೆ. ನಮ್ಮ ಕರ್ನಾಟಕದಲ್ಲಿರತಕ್ಕ ಶಾಸನಕ್ಕೂ, ಇದಕ್ಕೂ ಏನು ಸಂಬಂಧವಿದೆ ಎಂದರೆ, ಇದು ಸಂವಿಧಾನಾತ್ಮಕವಾದ ಒಂದು ಸಂಸ್ಥೆಯಾಗಿದೆ. ದೆಹಲಿಯಲ್ಲಿರುವ ರೀತಿಯಲ್ಲಿ ಲೋಕಸಭೆ, ರಾಜ್ಯಸಭೆ ರೀತಿಯಲ್ಲಿ ರಾಜ್ಯ ಶಾಸನಸಭೆಗಳ ರೀತಿಯಲ್ಲಿ, ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮಮಟ್ಟದಲ್ಲಿ ಇದು ಸಂವಿಧಾನಾತ್ಮಕ ಸಂಸ್ಥೆಯಾಗಿದೆ.

ಎರಡನೆಯದಾಗಿ, ಚುನಾವಣಾ ಕಮಿಷನನ್ನು ಮಾಡಿ ಕಾಲಕಾಲಕ್ಕೆ ಚುನಾವಣೆಯನ್ನು ಮಾಡಬೇಕೆಂದು ನಿರ್ಧಾರವಾಗಿದೆ. ಮೂರನೆಯದಾಗಿ, ಪ್ರತ್ಯೇಕ ವಿಷಯಗಳನ್ನು ಅಂದರೆ 11ನೇ ಪರಿಶಿಷ್ಟವನ್ನು ಮಾಡಿ ಅವರಿಗೆ ಅಧಿಕಾರ ಕೊಡಲಾಗಿದೆ. ಹೆಣ್ಣು ಮಕ್ಕಳಿಗೆ ಇದರಲ್ಲಿ ಮೀಸಲಾತಿ, ನಿಮ್ನ ವರ್ಗದವರಿಗೆ ಮೀಸಲಾತಿ, ಕೇವಲ ಸದಸ್ಯತ್ವದಲ್ಲಿ ಮಾತ್ರವಲ್ಲ, ಅಧ್ಯಕ್ಷ ಸ್ಥಾನದಲ್ಲೂ ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳಿಗೆ ಕೊಡಬೇಕೆಂದು ಇದರಲ್ಲಿ ಇದೆ. ಇದು

ಇಡೀ ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲೂ ಒಪ್ಪಿಗೆಯಾಗಿರುವಂಥಾದ್ದು. ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ಮೊದಲೇ ಇದ್ದಂಥ ಸರ್ಕಾರಗಳು ಇದನ್ನು ಪ್ರಾಯೋಗಿಕವಾಗಿ ಮಾಡಿವೆ.

ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಇದ್ದಾಗ ಇದಕ್ಕೆ ಒಂದು ಚಾಲನೆಯನ್ನು ಕೊಟ್ಟಿದ್ದಾರೆ. ಮಾನ್ಯ ರಾಜೀವ್ ಗಾಂಧಿಯವರೂ ಸಹ ಒಂದು ಸಂವಿಧಾನಾತ್ಮಕವಾದಂಥ ಸ್ವರೂಪವನ್ನು ಕೊಟ್ಟು ಮಾಡಿದ್ದಾರೆ. ಇದರ ಆಧಾರದ ಮೇಲೆ ಕರ್ನಾಟಕದಲ್ಲಿ ಪಂಚಾಯತ್ ರಾಜ್ಯ ಸಂಸ್ಥೆಗಳ ಬಗ್ಗೆ ವಿಧೇಯಕಗಳು ಬರುತ್ತಿವೆ, ಅದರ ಬಗ್ಗೆ ಬೇಕಾದಷ್ಟು ಸಮಯದಲ್ಲಿ ಚರ್ಚೆ ಮಾಡಬಹುದು, ಇದರ ಬಗ್ಗೆ, ಕೇಂದ್ರಕ್ಕೆ ತಕ್ಷಣ ನಮ್ಮ ರಾಜ್ಯ ಶಾಸನ ಸಭೆಯ ಒಪ್ಪಿಗೆಯನ್ನು ಕಳುಹಿಸಿಕೊಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸಭೆಯ ಸದಸ್ಯರು ಇದಕ್ಕೆ ಒಪ್ಪಿಗೆ ಕೊಟ್ಟು ಇದನ್ನು ಶಾಸನವಾಗುವ ರೀತಿಯಲ್ಲಿ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್:– ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಚರ್ಚೆಗೆ ಮುಂಚಿತವಾಗಿ ಒಂದು ಹೇಳಿಕೆಯನ್ನು ಕೊಡತಕ್ಕಂಥ ಒಂದು ಸಂಪ್ರದಾಯ ಇದೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ ಇದೇ ರೀತಿಯಲ್ಲಿ ನಗರಪಾಲಿಕೆಗೆ ಸಂಬಂಧಪಟ್ಟಂಥ 73ನೆಯ ತಿದ್ದುಪಡಿಯನ್ನು ಸಭೆಯ ಮುಂದಿಡುತ್ತೇನೆ.

(2) "ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368 (2)ನೆ ಅನುಚ್ಛೇದದ (ಸಿ) ಮತ್ತು (ಇ) ಖಂಡಗಳ ವ್ಯಾಪ್ತಿಯಲ್ಲಿ ಬರುವ 1991ನೇ ಇಸವಿಯ ಸಂವಿಧಾನದ (73ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆಂದು ಸೂಚಿಸುವುದು.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಇದರಲ್ಲೂ ಕೂಡ ಪಂಚಾಯತ್ ರಾಜ್ಯ ಸಂಸ್ಥೆಗಳನ್ನು ಸಂವಿಧಾನಾತ್ಮಕವಾದ ಒಂದು ಸಂಸ್ಥೆಗಳನ್ನಾಗಿ ಯಾವ ರೀತಿ ಮಾಡಿದೆಯೋ ಅದೇ ರೀತಿಯಾಗಿ ಕಾಲಕಾಲಕ್ಕೆ ಚುನಾವಣೆಯಾಗಿ ಚುನಾವಣೆಯ ಕಮೀಷನರ್ ಮೂಲಕ ಚುನಾವಣೆಗಳು ಹಿಡಿತಕ್ಕೆ ಬಂದು, ಪ್ರತ್ಯೇಕ ಹಣಕಾಸು ಫೈನಾನ್ಸ್ ಕಮೀಷನರ್ ಮುಖಾಂತರ ಇದಕ್ಕೆ ದೊರೆಯುವಂತೆ ಮಾಡಿ, ಈ ಆಧಾರದ ಮೇಲೆ, ನಾವು ಪ್ರತಿಯೊಂದು ರಾಜ್ಯವೂ ಪ್ರತ್ಯೇಕವಾದ ವಿಧೇಯಕಗಳನ್ನು ತಂದು ತಮ್ಮೆಲ್ಲರ ಒಪ್ಪಿಗೆಯಿಂದ ಮುಂದುವರಿಸಬೇಕಾಗುತ್ತದೆ. ಆದ್ದರಿಂದ ಇವರೆಡಕ್ಕೂ ಅನುಮತಿ ಕೊಡಬೇಕೆಂದು ಕೋರುತ್ತೇನೆ.

ಛೇರ್ಮನ್:– ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ವಿದ್ಯುತ್ ವೋಲ್ಟೇಜ್ ಕಡತಕ್ಕೆ ಹೇಳಿಕೆ ನೀಡುವಂತೆ ಒತ್ತಾಯ.

† ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ ಅವರು ಮಾತನಾಡುವುದಕ್ಕೆ ಮುಂಚೆ ಮೊನ್ನೆ ಸಭೆಯನ್ನು ಕರೆದಿದ್ದರು ಉಪಮುಖ್ಯಮಂತ್ರಿಗಳು. ಸಭೆಯಲ್ಲಿ ಸುದೀರ್ಘವಾದ ಚರ್ಚೆಯನ್ನು ಕೂಡ ಮಾಡಿದ್ದಾರೆ. ಇದಾದ ನಂತರ ಪ್ರತಿ ದಿನ ಒಂದು ರೀತಿ ನಾನು ಅವರ ಮೇಲೆ ಆರೋಪಣೆ ಮಾಡುತ್ತಿಲ್ಲ ಇವತ್ತೂ ಸಹ ತಮಗೆ ಗೊತ್ತಿರಬಹುದು ವಿದ್ಯುಚ್ಛಕ್ತಿ ಬೆಂಗಳೂರಲ್ಲಿ ಬಹುಭಾಗ ಹೊರಟು ಹೋಗಿದೆ, ಇದು ಕರ್ನಾಟಕದಲ್ಲಿ ಅನೇಕ ಕಡೆ ನಡೆಯುತ್ತಿದೆ. ಬೆಳೆ ನಷ್ಟವಾಗುತ್ತಿದೆ, ಮಾನ್ಯ ಉಪಮುಖ್ಯ ಮಂತ್ರಿಗಳು ಶ್ರಮ ವಹಿಸುತ್ತಿದ್ದಾರೆ, ಅವರ ಬಗ್ಗೆ ಕಾರ್ಯವಾಗಿಲ್ಲವೆಂದು ನಾನು ಹೇಳುತ್ತಿಲ್ಲ. ಇದನ್ನು

ಸ್ಪಷ್ಟವಾಗಿ ಸಭೆ ನಡೆಸಿ ಮತ್ತು ಒಂದು ಚಿಂತನೆಯನ್ನು ಮಾಡುತ್ತಿದ್ದೀರಿ. ಈ ರೀತಿ ತೊಂದರೆಯಾಗತಕ್ಕಂಥದ್ದು ನಿಲ್ಲಬೇಕು. ತಮಗೆ ಗೊತ್ತಿರುವಂತೆ ನನ್ನ ತಾಲ್ಲೂಕಿನ ಬಗ್ಗೆ ಹೇಳುತ್ತಿಲ್ಲ. ಅನೇಕ ತಾಲ್ಲೂಕುಗಳಲ್ಲಿ ಇವತ್ತಿಗೂ ಕೂಡ ಅಲ್ಲಿ ಓಲ್ಟೇಜ್ ಇಲ್ಲದೆ ರೈತರು ಬಹಳ ತೊಂದರೆಯಲ್ಲಿದ್ದಾರೆ. ಸುಮಾರು 5 ಕೋಟಿ ರೂಪಾಯಿಗಳ ಬೆಲೆ ನಾಶವಾಗುತ್ತಿದೆ ಎಂದು ಹೇಳಿ ನಾವು ಮೊದಲಿನಿಂದಲೂ ಒಂದೇ ಸಮನೆ ಕೇಳುತ್ತಿದ್ದೇನೆ. ಇದರ ಬಗ್ಗೆ ಅವರು ಸರಿಪಡಿಸೋಣ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಮಾನ್ಯ ಉಪಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ ತಾವು ಹೇಳಿಕೆಯನ್ನು ಕೊಡಬೇಕು ಮತ್ತು ಅದನ್ನು ಬಹಳ ದಕ್ಷತೆಯಿಂದ ಇಲಾಖೆಯನ್ನು ತರುವುದಕ್ಕೆ ವ್ಯವಸ್ಥೆ ಮಾಡಿ ಇಡೀ ರಾಜ್ಯದ ಜನತೆಗೆ ವಿದ್ಯುಚ್ಛಕ್ತಿಯಿಂದ ಆಗತಕ್ಕಂಥ ತೊಂದರೆಯನ್ನು ತಪ್ಪಿಸಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಆರ್. ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಕೊಡುವುದಕ್ಕೆ ಮುಂಚೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ. ಅದರ ಹೊರತಾಗಿ ನಾನು ತಮಗೆ ಕೇಳುತ್ತಿದ್ದೇನೆ ಬೆಂಗಳೂರು ಸಿಟಿಯಲ್ಲಿ ಏಕೆ ಈ ರೀತಿಯಾಗುತ್ತಿದೆ. ನಾನೆ ನಿನ್ನೆ ರಾತ್ರಿ ಪವರ್ ಫೆಲ್ಯೂರ್ ಆಗಿರುವುದನ್ನು ನೋಡಿದೆ. ಇವತ್ತು ಮುಂಜಾನೆ 6 ಗಂಟೆಯಲ್ಲಿ ಪವರ್ ಫೇಲ್ಯೂರ್ ಆಗಿದೆ. ಪುನಃ ಲೈಟ್ ಹೋಗಿ ಲೈಟ್ ಬಂದಿತು. ಮೂರು ಸಾರ್ತಿ ಲೈಟ್ ಹೋಗಿ ಲೈಟ್ ಬಂದಿದೆ. ಇದು ಏತಕ್ಕೆ ಆಗುತ್ತಿದೆ ಎನ್ನುವುದು ಗೊತ್ತಾಗುತ್ತಿಲ್ಲ. ಪವರ್ ಕಟ್‌ಅನ್ನು ಇಂಪೋಸ್ ಮಾಡಿದ್ದೀರಿ. ಹಾಗಾಗಿ ತಾವು ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದ್ದೀರಿ. ಕೊಡಿ, ಇದರ ಬಗ್ಗೆ ತಾವು ಚಿಂತನೆ ಮಾಡಬೇಕು. ಬಾಂಬೆಯಲ್ಲಿ ಒಂದು ದಿನದಲ್ಲಿ ಒಂದು ಕ್ಷಣವೂ ಲೈಟ್ ಹೋಗುವುದಿಲ್ಲ. ಬೆಂಗಳೂರಿನಲ್ಲಿ ಈ ಪರಿಸ್ಥಿತಿ ಏಕೆ ? ಸಮಸ್ಯೆಗಳು ಇವೆ, ಇಲ್ಲವೆಂದಲ್ಲ, ಅಂದರೆ ಈ ಪ್ರಕಾರವಾಗಿ ಸಮಸ್ಯೆ ಬೆಂಗಳೂರಿನಲ್ಲಿ ಯಾವಾಗಲೂ ಇರಲಿಲ್ಲ. ಇವತ್ತು ಬೆಂಗಳೂರಿನಲ್ಲಿ ದಿನ 4–5 ಸಾರಿ ಲೈಟ್ ಹೋಗುತ್ತಿರುತ್ತದೆ, ಬರುತ್ತಿರುತ್ತದೆ. ಅದರ ಬಗ್ಗೆಯೂ ಕೂಡ ಚಿಂತನೆ ಮಾಡಬೇಕಾಗುತ್ತದೆ. ರೈತರ ಸಮಸ್ಯೆ ಬಹಳ ಜ್ವಲಂತ ಸಮಸ್ಯೆ ಬಹಳ ದೊಡ್ಡ ಸಮಸ್ಯೆ, ಅದರ ಬಗ್ಗೆ ಪರಿಹಾರವನ್ನು ಕಂಡುಹಿಡಿಯಲು ಬಹಳ ಪ್ರಯತ್ನ ಮಾಡುತ್ತಿದ್ದೀರಿ, ಆದರೆ ಪ್ಷವರ್ ಕಟ್ ಮಾಡಿದರೂ ಸಹ ಈ ರೀತಿಯ ಸಮಸ್ಯೆ ಇದೆ ಎಂದರೆ ಇದರ ಬಗ್ಗೆ ಬೇರೆ ಯಾವುದಾದರೂ ಕಾರಣಗಳು ಇರಬಹುದೆಂದು ನಾನು ಭಾವಿಸುತ್ತೇನೆ. ಅದರ ಬಗ್ಗೆಯ ಸ್ವಲ್ಪ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:– ನನಗೆ ಅರ್ಥವಾಗುತ್ತಿಲ್ಲ. ಕರ್ನಾಟಕದಲ್ಲಿರತಕ್ಕದ್ದು ಬೆಂಗಳೂರು ಒಂದೇ ಅಲ್ಲ. ಅನ್ನಕೊಡತಕ್ಕ ರೈತ ಇದ್ದಾನೆ. ಅವನು ಬದುಕಬೇಕು. ಬರೀ ಬೆಂಗಳೂರು ಎಂದು ಕುಳಿತರೆ ಹೇಗೆ ? ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಹೊತ್ತು ಕರೆಂಟ್ ಕೊಡುವುದಿಲ್ಲ. ಅಷ್ಟು ಹೊತ್ತು ಬೆಂಗಳೂರಿನಲ್ಲಿ ಕೊಡಬೇಡಿ.

ಶ್ರೀ ಆರ್. ವಿ. ದೇಶಪಾಂಡೆ:– ಬೈರೇಗೌಡರಿಗೆ ಮಿಸ್ ಅಂಡರ್‌ಸ್ಟುಡ್ ಆಗಿದೆ. ಅವರಿಗೆ ನೀವು ಕರೆಂಟನ್ನು 4 ಅಲ್ಲ 8 ತಾಸು ಕೊಡಿ, ಆದರೆ ಫೆಯಿಲ್ಯೂರ್ ಏತಕ್ಕೆ ಆಗುತ್ತಿದೆ ಎಂದು ಕೇಳಿದೆ.

ಶ್ರೀ. ಸಿ. ಬೈರೇಗೌಡ:– ಬೆಂಗಳೂರಿನಲ್ಲಿರತಕ್ಕವರು ಕಟ್ಟಿಕೊಂಡವಳ ಹೆಂಡತಿ ಮಕ್ಕಳು, ಹಳ್ಳಿಗಳಲ್ಲಿರತಕ್ಕವರು ಇಟ್ಟುಕೊಂಡವಳ ಹೆಂಡತಿ ಮಕ್ಕಳಲ್ಲ. ಹಳ್ಳಿಯಲ್ಲಿ ಏನು ಮಾಡುತ್ತಿದ್ದೀರಿ ಅದೇ ರೀತಿ ಬೆಂಗಳೂರಿನಲ್ಲೂ ಮಾಡಿ. ಮಾನ್ಯ ನಂಜುಂಡಸ್ವಾಮಿಯವರು ಹೇಳಿದ ಹಾಗೆ ಶೇಕಡ 76ರಷ್ಟು ಜನರು ರೈತವರ್ಗದಿಂದ ಬಂದಿರತಕ್ಕವರು ಅವರಿಗೆ ಸಹಾಯ ಮಾಡಬೇಕೆಂದು ಹೇಳಿದರು. ಈಗ ನಾನು ಆ ವಾದವನ್ನು ಮಂಡಿಸುವುದಕ್ಕೆ ಹೋಗುವುದಿಲ್ಲ. ಅವರಿಗೆ ಕನಿಷ್ಟ ಆವಶ್ಯಕತೆ ಕೊಡಿ ಎಂದರೆ

ಅದು ನಿಮ್ಮಿಂದ ಸಾಧ್ಯವಾಗುತ್ತಿಲ್ಲ. ನೀವು ಏನೂ ಪ್ರಯತ್ನ ಮಾಡಲಿಲ್ಲ. ಅಂದರೆ ಪ್ರಯತ್ನ ನಡೆದಿಲ್ಲವೆಂದು ಹೇಳುತ್ತಿಲ್ಲ. ನೀವು ಮಾಡಿರತಕ್ಕ ಪ್ರಯತ್ನ ನಿಷ್ಫಲವಾಗಿದೆ. ರೈತರಿಗೆ ಅದರಿಂದ ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ನಮ್ಮ ಹೊಟ್ಟೆಯಲ್ಲಿ ಬಿದ್ದಿರತಕ್ಕ ಬೆಂಕಿಯನ್ನು ಕಾರುತ್ತಿದ್ದೇವೆ. ಇದನ್ನು ತಾವು ಅರ್ಥ ಮಾಡಿಕೊಳ್ಳಿ. ವಿದ್ಯುಚ್ಛಕ್ತಿ ಮಂಡಲಿಯಲ್ಲಿ ನಡೆಯತಕ್ಕ ವ್ಯವಹಾರ ಸರಿಯಿಲ್ಲ, ಮೊದಲಿನಿಂದ ಕೇಳುತ್ತಿದ್ದೇವೆ, ಸದನದ ಸಮಿತಿ ಮಾಡಿ ಅದರ ಬಗ್ಗೆ ವಿವರವಾದ ಚರ್ಚೆ ಮತ್ತು ಆಳವಾದ ಅಧ್ಯಯನ ಆಗಬೇಕಾಗಿದೆ. ಈ ಖಾತೆ ನಿಮ್ಮ ಕೈಯಲ್ಲಿ ಬಂದ ಮೇಲೆ ಇದರ ಆರೋಗ್ಯ ಸುಧಾರಣೆಯಾಗಿದೆ ಅನ್ನಿಸಿಲ್ಲ. ಇದರ ಆರೋಗ್ಯ ಸುಧಾರಣೆಯಾಗಬೇಕಾದ ಅವಶ್ಯಕತೆ ಇದೆ. ಆದುದರಿಂದ ಸದನದ ಸಮಿತಿ ಮಾಡಿ, ಆರೋಗ್ಯ ಸರಿಪಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅಧ್ಯಕ್ಷರ ಮೂಲಕ ವಿನಂತಿಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ:– ಮೊನ್ನೆ ತಾವು ಸಭೆ ಕರೆದಾಗ ಸ್ಪಷ್ಟಪಡಿಸಿದ್ದೇವೆ. ಇಡೀ ರಾಜ್ಯದಲ್ಲಿ ರೈತರದ್ದು ಒಂದು ರೀತಿಯ ಸಮಸ್ಯೆಯಾಗಿದೆ. ಯಾವ ಯಾವ ಗಂಟೆಯಿಂದ ಯಾವ ಯಾವ ಗಂಟೆಯವರೆಗೆ ಪವರ್ ಬರುತ್ತದೆಂಬ ಕಲ್ಪನೆ ಇಲ್ಲ. ಸ್ಟೇಟ್‌ಮೆಂಟ್ ಮಾಡುವುದಕ್ಕೆ ಮುಂಚೆ ಇಂತಿಂಥ ಏರಿಯಾದಲ್ಲಿ ಇಷ್ಟಿಷ್ಟು ಹೊತ್ತು ಕರೆಂಟ್ ಕೊಡುತ್ತೇವೆಂದು ತಿಳಿಸಿದರೆ ಗೊಂದಲ ಬರುವುದಿಲ್ಲ. ಪರೀಕ್ಷೆಗಳು ಬರುತ್ತವೆ, ವಿದ್ಯಾರ್ಥಿಗಳಿಗೆ ಕರೆಂಟ್ ಬರಲಿಲ್ಲವೆಂದರೆ ಅವರ ಜೀವನದ ಮೇಲೆ ಬಹಳ ಪರಿಣಾಮ ಬೀರುತ್ತದೆ. ದಯವಿಟ್ಟು ಇದನ್ನು ಮಂತ್ರಿಗಳು ಗಮಿಸಬೇಕು. ಮಾರ್ಚ್–ಏಪ್ರಿಲ್–ಮೇ ಈ ಸಂದರ್ಭದಲ್ಲಾದರೂ ವಿದ್ಯಾರ್ಥಿಗಳಿಗೆ ಕರೆಂಟ್ ಸಿಗಲಿಲ್ಲವೆಂದರೆ ಖಂಡಿತ ಅವರು ಸಂಕಟ ಅನುಭವಿಸತಕ್ಕ ಪರಿಸ್ಥಿತಿ ಬರುತ್ತದೆ. ಬೇರೆ ಸಂದರ್ಭದಲ್ಲಿ ಓದದಿದ್ದರೂ ಪರೀಕ್ಷೆ ಕಾಲದಲ್ಲಿ ಓದುತ್ತಾರೆ. ಇವರ ಬಗ್ಗೆ ತಾವು ಗಮನ ಕೊಡಬೇಕು. ಮೂರನೆಯದಾಗಿ, ನಾನು ಸ್ಪಷ್ಟವಾಗಿ ಹೇಳಿದ್ದೇನೆ, ಶಿವಮೊಗ್ಗ ನಗರದಲ್ಲಿ ಇಬ್ಬರು ಲೈನ್‌ಮನ್‌ಗಳು ಎರಡು ಗಂಟೆ ಕೆಲಸ ಮಾಡುತ್ತಾರೆ. ಇದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ? ನಮ್ಮ ವ್ಯವಸ್ಥೆಯಲ್ಲಿ ತಪ್ಪಾಗುತ್ತಿದೆ. ನಗರಸಭೆಯಲ್ಲಿ ಬಲ್ಬ್‌ಗಳು, ಟ್ಯೂಬ್‌ಲೈಟುಗಳು ಇವೆ, ಬೇಕದ ಮೆಟೀರಿಯಲ್ಸ್ ಎಲ್ಲಾ ಇದೆ. ಆದರೆ ಲೈನ್‌ಮೆನ್‌ಗಳು ಇಲ್ಲದೆ ಅಲ್ಲಿನ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಾಗುತ್ತಿಲ್ಲ. ಇವತ್ತಿನ ದಿವಸ ರೈತರು ಯಾವ ರೀತಿ ತೊಂದರೆ ಅನುಭವಿಸುತ್ತಿದ್ದಾರೆ ಅದಕ್ಕೆ ಪರಿಹಾರ ಕೊಡುತ್ತೀರಾ ? ವಿದ್ಯಾರ್ಥಿಗಳಿಗೆ ಏನು ಅನುಕೂಲ ಮಾಡಿಕೊಡುತ್ತೀರಿ ? ಲೈನ್‌ಮೆನ್‌ಗಳಿಗೆ ಕೆಲಸ ಇಲ್ಲ. ಬೆಳಗಿನಿಂದ ಸಂಜೆಯವರೆಗೆ ಎರಡು ಗಂಟೆ ಕೆಲಸ ಮಾಡುತ್ತಾರೆ. ಇಡೀ ಶಿವಮೊಗ್ಗಾದಲ್ಲಿ 6 ಜನ ಲೈನ್‌ಮೆನ್‌ಗಳು ಇದ್ದಾರೆಂದರೆ ಸಮಸ್ಯೆ ಹೇಗೆ ಪರಿಹಾರವಾಗಬೇಕು ? ಈ ವ್ಯವಸ್ಥೆಯ ಬಗ್ಗೆ ಯೋಚಿಸಿ ಸ್ಟೇಟ್‌ಮೆಂಟ್ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ:– ಮಂತ್ರಿಗಳು ಹೆವಿ ಇಂಡಸ್ಟ್ರೀಸ್‌ಗೆ 25 ಪರ್ಸೆಂಟ್ ಕರೆಂಟ್ ಕಟ್ ಮಾಡಿದ್ದಾರೆ. ಅದು ಹೊಸಕೋಟೆಯಲ್ಲೇ ನಿಂತು ಹೋಗಿದೆ. ಬೆಂಗಳೂರು ಸುತ್ತುಮುತ್ತ ರೂರಲ್ ಡಿಸ್ಟ್ರಿಕ್ಟ್‌ನಲ್ಲಿ ಇಂಪ್ರೂವ್ ಆಗಿದೆಯೇ ಹೊರತು ನಮ್ಮ ಕಡೆ ಮಾತ್ರ ಸುಧಾರಣೆಯಾಗಿಲ್ಲ. ಕೋಲಾರ ಜಿಲ್ಲೆಯನ್ನು ತಲುಪಿಲ್ಲ. ನಮ್ಮ ಜಿಲ್ಲೆಗೆ ಎಕ್ಸ್‌ಟ್ರಾ ಓಲ್ಟೇಜ್ ಬೇಕು. 400–450 ಅಡಿಯಿಂದ ಬೋರ್ ವೆಲ್‌ಗಳಲ್ಲಿ ನೀರು ಎತ್ತಬೇಕು. ಅದಕ್ಕೋಸ್ಕರ 25 ಅಲ್ಲ 50 ಪರ್ಸೆಂಟ್ ಹೆವಿ ಇಂಡಸ್ಟ್ರೀಸ್‌ಗಳಿಗೆ ಕೊಡುವುದನ್ನು ಕಟ್ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಮಾಡಬೇಕು. ಕನಿಷ್ಟ ಎರಡು ತಿಂಗಳಾದರೂ ಆ ಒಂದು ವ್ಯವಸ್ಥೆ ಮಾಡಬೇಕು. ನಿನ್ನೆ ತಾನೇ ಮುಂಗಾರು ಮಳೆ ಪ್ರಾರಂಭವಾಗಿದೆ. ಮುಂಗಾರು ಮಳೆ ಚೆನ್ನಾಗಿ ಬಿದ್ದರೆ ಪರಿಸ್ಥಿತಿ ಸುಧಾರಿಸಬಹುದು. ಅಲ್ಲಿಯವರೆಗೆ 50 ಪರ್ಸೆಂಟ್ ಕಟ್ ಮಾಡಿಸಿ ನಮ್ಮ ಜಿಲ್ಲೆಯ ಬಾರ್ಡರ್‌ವರೆಗೆ ಕರೆಂಟ್ ಹೋಗುವಂತೆ ಮಾಡಿ.

ಶ್ರೀ ಷಫಿ ಅಹಮದ್:– ಉಪ ಮುಖ್ಯಮಂತ್ರಿಯವರು ತುಮಕೂರಿಗೆ ಪ್ರವಾಸ ಹೋದಾಗ ಕಣ್ಣಾರೆ

ನೋಡಿದ್ದಾರೆ. ಅಲ್ಲಿ ಸ್ವಾಪ್‌ಗ್ಯಾಪ್ ಅರೇಂಜ್‌ಮೆಂಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ತುಮಕೂರು ನಗರದಲ್ಲಿ ಓಲ್ಟೇಜ್ ಪ್ರಾಬ್ಲಂ ಮತ್ತು ಟ್ರಾನ್ಸ್‌ಫಾರ್ಮರ್‌ಗಳ ಸಮಸ್ಯೆ ಹೆಚ್ಚಿನ ರೀತಿಯಲ್ಲಿರುವುದರಿಂದ ಸ್ವಾಪ್‌ಗ್ಯಾಪ್ ಅರೇಂಜ್‌ಮೆಂಟ್ ಮಾಡಿದರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆವರೇಜ್ 100 ಟ್ರಾನ್ಸಫಾರ್ಮರ್‌ಗಳು ಒಂದೊಂದು ತಾಲ್ಲೂಕಿಗೆ ಬೇಕಾಗಿದೆ. ಇದರಿಂದ ಮಿನಿ ವಾಟರ್ ಸಪ್ಲೈ ಮಾಡುವುದಕ್ಕಾಗುತ್ತಿಲ್ಲ. ಟ್ರಾನ್ಸ್‌ಫಾರ್ಮರಗಳ ಅಗತ್ಯ ಬಹಳವಾಗಿರುವುದರಿಂದ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್:— ಮಾನ್ಯ ಅಧ್ಯಕ್ಷರೇ, ಮಾನ್ಯ ಉಪಮುಖ್ಯಮಂತ್ರಿಗಳು ಮೊನ್ನೆ ದಿವಸ ಸಭೆ ಮಾಡಿ, ಹೈಟೆನ್‌ಷನ್ ಬಳಕೆದಾರರಿಗೆ ಪವರ್ ಕಟ್ ಮಾಡಿದ್ದೇವೆ ಎಂದು ಹೇಳಿದರು. ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಸುಧಾರಣೆ ಆಗುತ್ತದೆಂದು ಹೇಳಿದ್ದು ಪತ್ರಿಕೆಗಳಲ್ಲೆಲ್ಲಾ ಬಂತು. ಆಮೇಲೆ ನಾವು ಊರಿಗೆ ಹೋದೆವು. ನಾವು ಊರಿಗೆ ಹೋದರೆ 4 ದಿವಸ ವಿದ್ಯುತ್ ಸತತವಾಗಿ ಇಲ್ಲ. ನಮ್ಮ ಹಿರೆಕೆರೂರು ತಾಲ್ಲೂಕಿನ ಕೆಲವೊಂದು ಗ್ರಾಮಗಳಲ್ಲಿ ಈ ಪರಿಸ್ಥಿತಿ ಇದೆ. ಮೊದಲು ಬರುತ್ತಿತ್ತು. ಈಗ ಇಲ್ಲವೇ ಇಲ್ಲ. ಏನೋ ತಪ್ಪಾಗಿದೆ. ವ್ಯವಸ್ಥೆ ಸರಿ ಇಲ್ಲ. ದಯಮಾಡಿ ಇದನ್ನು ಮಾಡಬೇಕು. ನಾವು ಪದೇ ಪದೇ ಹೇಳುತ್ತಿದ್ದೇವೆ. ಕುಡಿಯುವ ನೀರು ಇಲ್ಲದೇ ಜನರು ಗೋಳಾಡುತ್ತಿದ್ದರು. ಗಿರಣಿಗಳಲ್ಲಿ ವಿದ್ಯುತ್ ಇಲ್ಲದೇ ಗೋಳಾಡುತ್ತಿದ್ದರು. ಯಾವ ಗ್ರಾಮಕ್ಕೆ ಹೋದರೂ ಸಮಸ್ಯೆ ಇದ್ದೇ ಇದೆ. ಇಷ್ಟೆಲ್ಲಾ ಮಾಡಿದ ಮೇಲೆ ಸ್ವಲ್ಪವಾದರೂ ಸುಧಾರಣೆಯಾಗಬೇಕಾಗಿತ್ತು. ಎಲ್ಲಿ ತಪ್ಪಾಗಿದೆ ಎಂದು ನೋಡಿ ವಿದ್ಯಾರ್ಥಿಗಳಿಗೆ, ರೈತರಿಗೆ ನಿರ್ದಿಷ್ಟ ಅವಧಿಯಲ್ಲಾದರೂ ಕೆಲವು ತಾಸು ವಿದ್ಯುತ್ ಕಣ್ಣು ಮುಚ್ಚಾಲೆ ಆಡಿಸುವುದನ್ನು ತಪ್ಪಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ:— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರದ ಕಿಬ್ಬಳ್ಳಿಗೆ ಹೋಗಿದ್ದರು ಎಂದು ಕೇಳಿದ್ದೆ. ಆ ಭಾಗದಲ್ಲಿ ಫೆಬ್ರವರಿ 18ನೇ ತಾರೀಖು ಏನೋ ಅಗಾಧ ಪರಿಣಾಮ ಆಗುತ್ತದೆಂದು, ಅಲ್ಲಿಯವರೆಗೆ ತಡೆದುಕೊಳ್ಳಬೇಕೆಂದು ಆ ಭಾಗದ ಜನರಿಗೆ ಹೇಳಿ ಅಲ್ಲಿಯವರೆಗೆ ಏನು ಮಾಡುವದು ಬೇಡ ಎಂದು ಹೇಳಿದ್ದೆ. 28ನೇ ತಾರೀಖು ಕಳೆಯಿತು. ಮುಖ್ಯಮಂತ್ರಿಗಳು ನನಗೆ ಮಾತು ಕೊಟ್ಟು ಹಿಂದೆ ಕಾಗದ ಬರೆದಿದ್ದಾರೆ. ಫೆಬ್ರವರಿ 28ನೇ ತಾರೀಖು ಎನಿಕಾಸ್ಟ್ ಕಿಬ್ಬನಳ್ಳಿ ರಿಸೀವಿಂಗ್ ಸ್ಟೇಷನ್ ಛಾರ್ಜ್ ಮಾಡುತ್ತೇವೆಂದು ಹೇಳಿದರು. ನಾನು ಅಲ್ಲಿಯವರೆಗೂ ಕಾದು ನೋಡಿದೆ. 28ನೇ ತಾರೀಖು ದಾಟಿದ ಮೇಲೆ ನಾವು ಅವರಿಗೆ ಮುಖ ತೋರಿಸುವ ಹಾಗೆ ಇಲ್ಲ. ತಾವೂ ಹೋಗಿ ಬಂದಿರಿ. ತಾವು ಹೋಗಿ ದೊಡ್ಡ ಪ್ರಚಾರ ಆಗಿರೋದು. ಸ್ಟೇಷನ್ ಇನಾಗ್ಯುರೇಟ್ ಆಯಿತು, ನೀವು ಏಕೆ ಹೋಗಿಲ್ಲ ಎಂದು ನನಗೆ ಕೇಳಿದರು ನನಗೆ ಗೊತ್ತಿಲ್ಲಪ್ಪ, ಇನಾಗ್ಯುರೇಟ್ ಆಗಿರುವುದೂ ಗೊತ್ತಿಲ್ಲ, ದೊಡ್ಡವರು ಹೋಗಿದ್ದಾರೆ ಬಿಡಿ, ಆನೆ ಹೋಗುವ ದಾರಿಯಲ್ಲಿ ನಾನು ಏಕೆ ಕೇಳುವುದು ಎಂದು ಹೇಳಿದೆ. ಒಂದು ಮಾತು ಹೇಳುವುದಾದರೆ, ಛಾರ್ಜ್ ಮಾಡಿದ ತಕ್ಷಣ ಇಂಪ್ರೂವ್ ಆಗುತ್ತದೆಂದು ನಾನು ಭಾವಿಸಿಲ್ಲ. ನಮ್ಮ 3–4 ತಾಲ್ಲೂಕುಗಳಲ್ಲಿ ಯಾವುದೇ ಸ್ಟೇಷನ್ ಕೆಪಾಸಿಟಿ ಅಡಿಕ್ವೇಟ್ ಆಗಿಲ್ಲ. ತುರುವೇಕೆರೆ ಇಲ್ಲ, ಚಿಕ್ಕನಾಯಕನಹಳ್ಳಿ ಇಲ್ಲ, ತಿಪಟೂರೂ ಇಲ್ಲ. ತಕ್ಷಣ ಸ್ಟೇಷನ್ ಕೆಪಾಸಿಟಿ ಜಾಸ್ತಿ ಮಾಡಿಸಿದರೆ ಆಗುತ್ತದೆ. ಕಿಬ್ಬನಹಳ್ಳಿ ಸ್ಟೇಷನ್‌ಗೆ ಹೋಗಿ ಬಂದಿದ್ದೀರಿ. ತಮ್ಮ ಹೇಳಿಕೆಯಲ್ಲಿ ಆ ಬಗ್ಗೆಯೂ ಸೇರಿಸಿ ಹೇಳಬೇಕೆಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ:— ಮಾನ್ಯ ಅಧ್ಯಕ್ಷಿಣಿಯವರೇ, ಉಪಮುಖ್ಯಮಂತ್ರಿಯವರು ನಮ್ಮನ್ನೆಲ್ಲಾ ಕರೆದು ಹೇಳಿದ್ದಾರೆ. ಅಷ್ಟಾದರೂ ಮಾಡಿದರಲ್ಲಾ ಎಂದು ನಾನು ಅವರಿಗೆ ಅಭಿನಂದಿಸುತ್ತೇನೆ. ನಾನು ಎರಡು ಸಲಹೆಗಳನ್ನು ಮಾನ್ಯ ಉಪಮುಖ್ಯಮಂತ್ರಿಗಳಿಗೆ ಕೊಡುತ್ತೇನೆ.

ಮಿನಿ ವಾಟರ್ ಸಪ್ಲೈ ಸ್ಕೀಮ್ ಹಾಗೂ ರೂರಲ್ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಪಿಹೆಚ್‌ಇ ಇಲಾಖೆಯವರು ಕಂಪ್ಲೀಟ್ ಮಾಡಿಕೊಂಡು ಕಳೆದ 2 ತಿಂಗಳು 3 ತಿಂಗಳು, 1 ವರ್ಷದಿಂದ ಕ್ಯಾದಿದ್ದಾರೆ, ಅವರು ಪವರ್‌ಗಾಗಿ ಕಾದಿದ್ದಾರೆ, ಟ್ರಾನ್ಸ್‌ಫಾರ್ಮರ್ಸ್‌ಗಳು ಇಲ್ಲ ಎಂದು ಕಾದಿದ್ದಾರೆ ಈ ಸ್ಕೀಮ್‌ಗಳನ್ನು ಮಾಡಿರುವ ಉದ್ದೇಶವೇನು ? ಯಾವುದು ವಿಲೇಜ್‌ಗಳು ಕ್ರಿಟಿಕಲ್ ಇವೆ, ಎಲ್ಲಿ ಬೋರ್ವೆಲ್‌ಗಳನ್ನು ಹಾಕಿದರೂ ನೀರು ಸಿಗುವುದಿಲ್ಲ, ದೂರದಿಂದ ನೀರನ್ನು ತರಬೇಕು, ಸಫಿಶಿಯೆಂಟ್ ನೀರು ಸಿಗುವುದಿಲ್ಲ ಅಂತಹ ಕಡೆ ಮಾಡಿಕೊಟ್ಟಿದ್ದಾರೆ. ಇವತ್ತು ತಾವು ಒಂದು ಜನರಲ್ ಆರ್ಡರ್ ಮಾಡಬೇಕೆಂದು ಹೇಳುತ್ತೇನೆ. ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಎಲ್ಲೆಲ್ಲಿ ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳಿಗೆ ಹಳ್ಳಿಗಳಲ್ಲಿ ವಿದ್ಯುತ್ ಕೇಳಿದ್ದಾರೆ ಅಲ್ಲಿಗೆ ತಕ್ಷಣ ಮೊದಲ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಎರಡನೆಯದಾಗಿ, ನಮ್ಮ ಕೋಲಾರ ಜಿಲ್ಲೆಯವರು ಒಳ್ಳೆಯ ತೋಟಗಾರಿಕೆ ಬೆಳೆ ಬೆಳೆಯುತ್ತಾರೆ. ಅಲ್ಲಿ ಒಂದೊಂದು ತಾಲ್ಲೂಕಿನಲ್ಲಿ 5–6 ಸಬ್‌ಸ್ಟೇಷನ್‌ಗಳು ಇವೆ. ನಮ್ಮ ಕ್ಷೇತ್ರದಲ್ಲಿ ಒಂದೇ ಒಂದು ಸ್ಟೇಷನ್ ಇದೆ. ನಮ್ಮದು 2 ವಿಧಾನ ಸಭಾ ಕ್ಷೇತ್ರ. ನಮ್ಮ ತಾಲ್ಲೂಕಿನ ಜನರ ಪರವಾಗಿ ನಿಮಗೆ ಚಿರಋಣಿಯಾಗಿರುತ್ತೇನೆ. ದಯಮಾಡಿ ನಮಗೆ 63 ಕೆವಿಎ ಸಬ್‌ಸ್ಟೇಷನ್ ಕೊಡದೇ ಇದ್ದರೆ ಬಹಳ ಕಷ್ಟವಾಗುತ್ತದೆ. ನೆಲಗಳ್ಳರು ನಮ್ಮ ತಾಲ್ಲೂಕಿಗೆ ಬರುವುದಕ್ಕೆ ಶುರು ಮಾಡಿದ್ದಾರೆ. ಬೆಂಗಳೂರಿನಲ್ಲಿ ಮಾಡಿದವರು ಅಲ್ಲಿಗೆ ಬರುವುದಕ್ಕೆ ಶುರು ಮಾಡಿದ್ದಾರೆ. ಈಗ ಏನಾಗಿದೆ ಎಂದರೆ, ನಮ್ಮ ತಾಲ್ಲೂಕು ವೇಗವಾಗಿ ಬೆಳೆಯುತ್ತಿದೆ. ಓವರ್ ನೈಟ್ ಇಂಡಸ್ಟ್ರೀಗಳು ಬರುತ್ತವೆ. ಇದು ಅರ್ಥವಾಗುವುದಿಲ್ಲ. ಒಬ್ಬ ತಮಿಳುನಾಡಿನಿಂದ ನಮ್ಮಲ್ಲಿ ಬಂದು ಇಂಡಸ್ಟ್ರೀ ಮಾಡಿದ್ದಾನೆ. ಅಲ್ಲಿ ನೂರು ಜನರಲ್ಲಿ ಆರು ಜನ ಕರ್ನಾಟಕದವರಿಗೆ ಕೆಲಸ ಕೊಟ್ಟಿದ್ದಾನೆ. ಉಳಿದ 94 ಜನರನ್ನು ಸೇಲಂನಿಂದ ಕರೆದುಕೊಂಡು ಬಂದಿದ್ದಾನೆ ಅವನು.

ಶ್ರೀ ವಾಟಾಳ್ ನಾಗರಾಜ್:– ಬಹಳ ದೊಡ್ಡ ಕರ್ಮಕಾಂಡ ಇದು. ಇದರ ಬಗ್ಗೆ ಒಂದು ದೊಡ್ಡ ಚರ್ಚೆಯಾಗಬೇಕು. ಉದ್ಯೋಗವನ್ನು ಯಾರಿಗೆ ಕೊಟ್ಟಿದ್ದಾರೆಂದು ನೋಡಬೇಕಾಗುತ್ತದೆ. ಕನ್ನಡಿಗರಿಗೇ ಉದ್ಯೋಗ ಕೊಡುವುದಾದರೆ ನಾವು ಕರೆಂಟ್ ಕೊಡುತ್ತೇವೆಂದು ಹೇಳಬೇಕಾಗುತ್ತದೆ ನೀವು. ಈ ಬಗ್ಗೆ ಸದನದಲ್ಲಿ ಒಂದು ಕಾಯಿದೆ ತಂದರೆ ಒಳ್ಳೆಯದು.

ಶ್ರೀ ಪಿ. ಜಿ. ಆರ್. ಸಿಂಧ್ಯ:– ಈಗ ಏನಾಗುತ್ತದೆ ಎಂದು ಹೇಳಿದರೆ ಒನ್ ಥರ್ಡ್ ಆಫ್ ಅವರ ಕರೆಂಟ್ ನೀವು ಏನು ಪಾಸ್ ಮಾಡಿಸುತ್ತೀರಿ ನಮ್ಮ ತಾಲ್ಲೂಕಿಗೆ, ಆ 1/3 is consumed for 90 fellows of Tamil Nadu who are working there. ನಾವು ಈಗ ಏನು ಮಾಡಲಿಕ್ಕೂ ನಿಸ್ಸಹಾಯಕರಾಗಿದ್ದೇವೆ. ನಿಮಗೆ ಶರಣಾಗತರಾಗಿದ್ದೇವೆ. ದಯವಿಟ್ಟು ನಮಗೆ 63 ಕೆವಿಎ ಸ್ಟೇಷನ್ ಕೊಡಿ, ಇಲ್ಲದಿದ್ದರೆ ನಿಜವಾಗಿಯೂ ಬಹಳ ತೊಂದರೆ ಆಗುತ್ತದೆ. ಈ ವಿಷಯವಾಗಿ ನಿಮ್ಮನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಹಾಗೂ ಕೆಇಬಿಯಲ್ಲಿ ಬಹಳ ವಿಚಾರಗಳು ಇವೆ. ತಮಗೆ ಸಲಹೆ ಕೊಡುವುದಕ್ಕೆ ಇಲ್ಲಿ ತಿಳಿದಂತವರು ಬಹಳ ಜನ ಇದ್ದಾರೆ. ಮಾನ್ಯ ಮಾಧುಸ್ವಾಮಿಯವರು ಮಾತನಾಡಿದ್ದನ್ನು ಕೇಳಿ, ಅವರು ಕೆಇಬಿಯ ಯಾವುದೇ ಚೀಫ್ ಇಂಜಿನಿಯರ್‌ಗೂ ಕಡಿಮೆ ಇಲ್ಲ. ಈ ವಿಚಾರವಾಗಿ ತಿಳಿದುಕೊಳ್ಳುವುದಕ್ಕೆ ನಿಮಗೆ ಸಹಾಯ ಮಾಡುವುದಕ್ಕೂ ಅನುಕೂಲವಾಗುತ್ತದೆ. ಒಂದು ಹೌಸ್ ಕಮಿಟಿ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:– ಮಾನ್ಯ ಅಧ್ಯಕ್ಷಿಣಿಯವರೇ ಒಂದೇ ಒಂದು ಪ್ರಶ್ನೆಯನ್ನು ನಾನು ಉಪಮುಖ್ಯಮಂತ್ರಿಗಳ ಮುಂದಿಡಲಿಕ್ಕೆ ಇಷ್ಟಪಡುತ್ತೇನೆ. ಈಗ ನಾವೆಲ್ಲರೂ ಕತ್ತಲಿನಲ್ಲಿ ಇದ್ದೇವೆ, ಕರೆಂಟ್ ಇಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಬೆಂಗಳೂರು ನಗರದಲ್ಲಿ ನಿಮ್ಮ ಕೆಇಬಿ ಅಧ್ಯಕ್ಷರು ರಾಜೀನಾಮೆ ಕೊಟ್ಟ ಮೇಲೆ ಹೆಚ್. ಟಿ. ಕರೆಂಟನ್ನು ಅಥವಾ ಕಾರ್ಖಾನೆಗಳಿಗೆ 15

ದಿವಸಗಳೊಳಗಾಗಿ ಎಷ್ಟು ನೂರು ಜನರಿಗೆ ಎಷ್ಟು ಅಶ್ವಶಕ್ತಿ ವಿದ್ಯುತ್ತನ್ನು ಮಂಜೂರು ಮಾಡಿದ್ದಾರೆ ದಯವಿಟ್ಟು ತಿಳಿಸಿರಿ. ಕೆಇಬಿ ಅಧ್ಯಕ್ಷರು ಇದ್ದಂತಹ ಸಂದರ್ಭದಲ್ಲಿ, ಅವರು ರಾಜೀನಾಮೆ ಕೊಟ್ಟಂತಹ ಸಂದರ್ಭದಲ್ಲಿ, ಅವರು ಈ ದೇಶದಲ್ಲಿ ಕರೆಂಟ್ ಇಲ್ಲ, ಕೊಡುವುದು ಬೇಡ ಎಂದು ಎಲ್ಲಾ ಫೈಲುಗಳನ್ನು ಹಾಗೆ ಇಟ್ಟಿದ್ದರು. ಆದರೆ ಇದ್ದಕ್ಕಿದ್ದ ಹಾಗೆ ಎರಡು ವಾರಗಳ ಅವಧಿಯಲ್ಲಿ ಅವರ ಗೈರು ಹಾಜರಿನಲ್ಲಿ ಮತ್ತು ತಮ್ಮ ಗೈರುಹಾಜರಿಯಲ್ಲಿ ಎಷ್ಟು ಕರೆಂಟನ್ನು ಮಂಜೂರು ಮಾಡಿದ್ದಾರೆ. ಯಾವ ಆದ್ಯತೆ ಮೇಲೆ ಕೊಟ್ಟಿದ್ದಾರೆ. ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿ ಏನು ಕೈಗಾರಿಕೆಗೆ ಕೊಟ್ಟಿದ್ದಾರೆ ಅದರ ವಿವರವನ್ನು ಸಭೆಗೆ ತಿಳಿಸಬೇಕು. ಒಂದು ಕಡೆ ಕರೆಂಟ್ ಇಲ್ಲ ಎನ್ನುವ ಮಾತನ್ನು ಹೇಳುತ್ತೇವೆ. ಮತ್ತೊಂದು ಕಡೆ ಕೈಗಾರಿಕಾ ಉದ್ದೇಶಕ್ಕೋಸ್ಕರ ಏನು ಕೊಡಬಾರದು ಎಂದು ತಡೆಹಿಡಿದಂಥ ಮಂಜೂರಾತಿಗಳನ್ನು ಕೇವಲ ಎರಡು ವಾರದಲ್ಲಿ ಅವರಿಗೆ ಗೊತ್ತಿರುವಂಥ ಕಾರಣದಿಂದಾಗಿ ವಿದ್ಯುತ್ತನ್ನು ಮಂಜೂರು ಮಾಡಿದ್ದಾರೆ. I am making this allegation. Please verify.

ಇದಕ್ಕೋಸ್ಕರ ನಾನು ಕೇಳುತ್ತಿದ್ದೇನೆ. ಈ ಆಡಳಿತದಲ್ಲಿ ಏನಾಗಿದೆಯೆಂದರೆ ನಾನು ಅವತ್ತೇ ನಿಮಗೆ ಹೇಳಿದೆ. ಈ ಟ್ರಾನ್ಸ್‌ಫಾರ್ಮರಗಳ ರಿಪೇರಿ ಮಾಡುವುದನ್ನು ನೀವು 14 ಜನ ಪ್ರೈವೇಟ್‌ನವರಿಗೆ ಕೊಟ್ಟಿದ್ದೀರಿ, ರಿಪೇರಿ ಆಗದೇ ಇರುವಂತಹ ಟ್ರಾನ್ಸ್‌ಫಾರ್ಮರ್ಗಳು ರಿಪೇರಿಯಾಗಿದೆ ಎಂದು ಲೆಕ್ಕ ಕೊಟ್ಟು ಇವತ್ತಿನ ದಿವಸ ರಿಪೇರಿ ಹಣವನ್ನು ಪಡೆದಿರತಕ್ಕಂತಹ ಪ್ರಕರಣಗಳು ಇವೆ. ಯಾವುದು ಕೆಟ್ಟರೆ ರಿಪೇರಿ ಮಾಡುವುದು, ಎಲ್ಲಾ ವಿಧವಾದಂತಹ ರಿಪೇರಿಗೆ ನೀವು ಟ್ರಾನ್ಸ್‌ಫಾರ್ಮರ್‌ಗೆ ಇಷ್ಟು ಎಂದು ದುಡ್ಡು ಕೊಡುವುದು. ಇಲ್ಲಿ ಇರುವಂತಹ ಭ್ರಷ್ಟಾಚಾರ ಈ ದೇಶದಲ್ಲಿ ಇನ್ನು ಯಾವ ಇಲಾಖೆಯಲ್ಲೂ ಇಲ್ಲ. ನಾನು ಈಗ 2–3 ಆರೋಪಗಳನ್ನು ಹೇಳಿದ್ದೇನೆ. ದಯವಿಟ್ಟು ತಾವು ಅದನ್ನು ಪರಿಶೀಲನೆ ಮಾಡಿ. ಆಗ ಗೊತ್ತಾಗುತ್ತದೆ. ಇದು ಎಷ್ಟರಮಟ್ಟಿಗೆ ಸರಿಯಾಗಿ ನಡೆಯುತ್ತಿದೆ. ಇವುಗಳನ್ನು ನಿಲ್ಲಿಸಿದರೆ ಮಾತ್ರ ಏನಾದರೂ ಸಾಧ್ಯವಾಗುತ್ತದೆ. ಈ ಟ್ರಾನ್ಸ್‌ಫಾರ್ಮರ್ ರಿಪೇರಿ ಮತ್ತು ವಿದ್ಯುಚ್ಛಕ್ತಿ ಮಂಜೂರಾತಿ ಬಗ್ಗೆ ಯಾವುದೇ ಒಂದು ಗೊತ್ತುಗುರಿ ಇಲ್ಲದ ಹಾಗೆ ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು ಮತ್ತು ಗ್ರಾಮೀಣ ಪ್ರದೇಶದಲ್ಲಿ ಯಾವ ರೀತಿ ವಿದ್ಯುತ್ ಸರಬರಾಜು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ತಾವು ವಿಚಾರಣೆ ಮಾಡಬೇಕು. ಇದಕ್ಕೆ ಸದನದ ಸಮಿತಿಯನ್ನು ತಾವು ಮಾಡಬೇಕು. ಇನ್ನು ಹೆಚ್ಚು ವಿಚಾರಗಳನ್ನು ತಮ್ಮ ಡಿಮ್ಯಾಂಡ್ ಬಂದಾಗ ಹೇಳುತ್ತೇನೆ. ಸಾಧ್ಯವಾದಷ್ಟು ಜಾಗ್ರತೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಿ.

ಶ್ರೀ ಎ. ವಿ. ಉಮಾಪತಿ:– ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರಾದಂತಹ ಸಿಂಧ್ಯಾರವರು ಏನು ಹೇಳಿದರು ಅದೇ ರೀತಿ ಎಲ್ಲಾ ತಾಲ್ಲೂಕುಗಳಲ್ಲಿ ಕೊನೆಯ ಪಕ್ಷ 2–3 ಸ್ಟೇಷನ್ ಇವೆ. ಆದರೆ ನಮ್ಮ ತಾಲ್ಲೂಕಿನಲ್ಲಿ ಕೇವಲ ಒಂದೇ ಒಂದು ಸ್ಟೇಷನ್ ಇದ್ದು, ಕಳೆದ ವರ್ಷದಲ್ಲಿ ನಾವು ಒಂದು ಪ್ರಪೋಸಲ್‌ನ್ನು ನಮ್ಮ ಹೊಳಲ್ಕೆರೆ ಮತ್ತು ಮಾಯಕೊಂಡಕ್ಕೆ ಬೇಕು ಕಳುಹಿಸಿಕೊಟ್ಟಿದ್ದೇವೆ. ಮಾಯಕೊಂಡ ಸ್ಟೇಷನ್ ಈಗಾಗಲೇ ಆಗಿ ಕಾರ್ಯಕ್ರಮ ತೆಗೆದುಕೊಂಡು ಅದನ್ನು ಜಾರಿಗೆ ಕೊಟ್ಟಿದ್ದಾರೆ. ಆದರೆ ಹೊಳಲ್ಕೆರೆ ತಾಲ್ಲೂಕಿನದು ಹಾಗೆಯೇ ನಿಂತಿದೆ. ಹುಬ್ಬಳ್ಳಿಯಲ್ಲಿ ಬೋರ್ಡ್‌ನಲ್ಲಿ ಈ ವಿಚಾರ ಇದೆ ಎಂದು ಮೊನ್ನೆ ಮಾನ್ಯ ಕೆಇಬಿ ಇಂಜಿನಿಯರ್ ಅವರಿಂದ ಉತ್ತರ ಬಂದಿದೆ. ಮಾನ್ಯ ಉಪಮುಖ್ಯಮಂತ್ರಿಗಳು ದಯಮಾಡಿ ನಮ್ಮ ತಾಲ್ಲೂಕಿಗೆ ಜಾಗ್ರತೆಯಾಗಿ ಮಾಡಿಸಿಕೊಡಬೇಕು. ಮತ್ತು ನಮ್ಮ ತಾಲ್ಲೂಕಿನಲ್ಲಿ ಹಿಂದೆ ಯಾವುದೇ ಐಪಿ ಸೆಟ್ಸ್ ಇರಲಿಲ್ಲ. ಈಗ ನಮ್ಮ ಹೊಳಲ್ಕೆರೆ ತಾಲ್ಲೂಕಿನಲ್ಲಿ ಅಂಡರ್‌ಗ್ರೌಂಡ್ ವಾಟರ್ ಪೊಟೆನ್ಷಿಯಾಲಿಟಿ ಜಾಸ್ತಿ ಇರುವುದರಿಂದ ಹೆಚ್ಚು ಹೆಚ್ಚು ಐಪಿ ಸೆಟ್ಸ್ ಆಗಿರುವುದರಿಂದ ನಮಗೆ ಬಹಳ ಪವರ್ ಕೊರತೆಯಾಗಿದೆ. ಅದನ್ನು ಜಾಗ್ರತೆಯಾಗಿ ಉಪಮುಖ್ಯ ಮಂತ್ರಿಗಳು ಮಾಡಿಸಿಕೊಡಬೇಕು.

ಮತ್ತು ಮಾಯಕೊಂಡದ್ದು ಜೊತೆಯಾಗಿ ಹೋಗಿ, ಮಾಯಕೊಂಡದ್ದು ಆಗಿದೆ, ಹೊಳಲ್ಕೆರೆಯದು ಆಗಿಲ್ಲವೆಂದರೆ ಬಹುಶಃ ಊರಿನವರು ಡೆಪ್ಯೂಟಿ ಸ್ಪೀಕರ್ ಅಥವಾ ಮಂತ್ರಿಗಳಾಗಿದ್ದಾರೆ ಎಂದು ಅವರದು ಆಗಿ ನಮ್ಮದು ಆಗದೇ ಉಳಿದಿದೆಯೇ ? ಎಂದು ನಾನು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ, ತಕ್ಷಣವೇ ನಮ್ಮ ಹೊಳಲ್ಕೆರೆ ತಾಲ್ಲೂಕಿಗೆ ಇನ್ನೊಂದು ಸಬ್‌ಸ್ಟೇಷನ್ ಮಾಡಿಕೊಡಬೇಕು. ಮತ್ತು ಆಗಲೇ ಪ್ರಪೋಸಲ್ ಕೇಳಿದಾಗ 4 ಎಕರೆ ಜಮೀನು ಬೇಕು ಎಂದು ಕೇಳಿದ್ದರು, ಆ 4 ಎಕರೆ ಜಮೀನನ್ನು ಕೂಡ ಈಗಾಗಲೇ ಹೊರಕೆರೆ ದೇವರಪುರದಲ್ಲಿ ಕಾದಿರಿಸಲಾಗಿದೆ. ಆದುದರಿಂದ ತಕ್ಷಣವೇ ಕಾರ್ಯಕ್ರಮವನ್ನು ಕೈಗೆತ್ತಿಕೊಂಡು ನಮಗೆ ಸಬ್‌ಸ್ಟೇಷನನ್ನು ಮಾಡಿಕೊಡಬೇಕು. ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಕೆ. ರಾಮಯ್ಯ:– ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಉಪಮುಖ್ಯಮಂತ್ರಿಯವರು ಮತ್ತು ನೀವು ಇಬ್ಬರಿಗೂ ಬೋರ್‌ವೆಲ್ ನೀರು ಹಾಯಿಸಿದ ಅನುಭವವಿಲ್ಲವೆಂದು ನನ್ನ ಭಾವನೆ. ಕೃಷ್ಣರಾಜಸಾಗರದ ನೀರು ಹಾಯಿಸಿಕೊಂಡು ಬತ್ತ ಕಬ್ಬು ಬೆಳೆಯುವಂತಹ ಪುಣ್ಯಾತ್ಮರು. ಅದರಲ್ಲೂ ಉಪ ಮುಖ್ಯಮಂತ್ರಿಯವರ ಹಿನ್ನೆಲೆ ನನಗೆ ಗೊತ್ತಿರುವುದರಿಂದ ಅವರು ಯಾವತ್ತೂ ಬೋರ್ ವೆಲ್ ನೀರು ಹಾಯಿಸುವ ಪ್ರಯತ್ನ ಮಾಡಿಲ್ಲ ಅವರು ನೋಡಿಯೂ ಇಲ್ಲವೆಂದು ನನ್ನ ಭಾವನೆ. ಎರಡೂ ವಿಷಯಗಳು ಪ್ರಾಮುಖ್ಯವಾದವುಗಳು. ನೀರಾವರಿಗೆ ವಿದ್ಯುಚ್ಛಕ್ತಿ ಪಡೆದುಕೊಂಡು ಹೊಲಕ್ಕೆ ಗದ್ದೆಗೆ ನೀರು ಹಾಯಿಸುವುದು ಒಂದು ನಮ್ಮ ವಿದ್ಯುಚ್ಛಕ್ತಿ ಮುಖಾಂತರ ಮನೆಗಳಿಗೆ ಬೆಳಕು ಇಟ್ಟುಕೊಳ್ಳುವುದು ಒಂದು. ತೋಟಗಳಲ್ಲಿ ವಿದ್ಯುಚ್ಛಕ್ತಿ ಇಲಾಖೆಯವರು ಒದಗಿಸುವ ವಿದ್ಯುತ್‌ನ್ನು ಉಪಯೋಗಿಸಿಕೊಂಡು ನೀರು ಹಾಯಿಸುವ ಪರಿಸ್ಥಿತಿ ಬಂದಾಗ ಸುಲಭವಾಗಿ ನಮ್ಮ ಕಣ್ಣೀರು ಸುರಿಯುತ್ತದೆ. ಬೋರ್‌ವೆಲ್‌ನಲ್ಲಿ ನೀರು ಸುರಿಯುವುದಿಲ್ಲ. ತೋಟಕ್ಕೆ ನೀರು ಹಾಯಿಸಲು ಬೋರ್ ವೆಲ್ ಸ್ವಿಚ್ ಆನ್ ಮಾಡಿ ಬಂದರೆ ಆಫ್ ಆಗುತ್ತದೆ. ಒಂದು ದಿನಕ್ಕೆ 10 ಸಾರಿ 20 ಸಾರಿ ಆನ್ ಮಾಡಿಕೊಂಡು ಬರಬೇಕು. ನಿಮಗೆ ಇದರ ಅನುಭವವಾಗಬೇಕಾದರೆ ನೀವು ಎಲ್ಲಿಯಾದರೂ ಕಾರಿನಲ್ಲಿ ಹೋಗುವಾಗ ಕಾರು ನಿಲ್ಲಿಸಿ ಯಾರಾದರೂ ಬೋರ್‌ವೆಲ್ ಹಾಕಿಸಿ ತೋಟ ಮಾಡಿಕೊಂಡಿದ್ದರೆ ದಯಮಾಡಿ ಒಂದೆರಡು ಗಂಟೆ ಅಲ್ಲಿ ಕುಳಿತುಕೊಂಡರೆ ಅಲ್ಲಿ ಆಳುಗಳು ಹೇಳುವಂತಹ ಮಾತನ್ನು ನೀವು ಕೇಳಿದರೆ ಬಹುಶಃ ವಿದ್ಯುಚ್ಛಕ್ತಿ ಉಪಯೋಗಿಸಿಕೊಂಡು ನೀರು ಹಾಯಿಸಿ ತೋಟ ಮಾಡುವಂತಹವರ ಕಷ್ಟ ಅಲ್ಲಿರುವ ಆಳುಗಳ ಮಾತು ಕೇಳಬೇಕು ಬಹಳ ಚೆನ್ನಾಗಿರುತ್ತದೆ. ಎರಡನೆಯ ಅನುಭವವಾಗಬೇಕಾದರೆ ನಮ್ಮ ಊರಿಗೆ ಬನ್ನಿ. ಕುಣಿಗಲ್‌ನಲ್ಲಿ 6 ಗಂಟೆಯಿಂದ 8 ಗಂಟೆಯವರೆಗೆ ಇದ್ದರೆ ಗೊತ್ತಾಗುತ್ತದೆ. ನಿಮಗೆ ಅನುಭವ ಇದೆ. ಏಕೆಂದರೆ ಹಳ್ಳಿಗಳ ಕಡೆಗೆ ನಾಟಕಕ್ಕೆ ಹೋಗಿದ್ದೀರಿ. ನಾಟಕ ಮಾಡುವಾಗ ನಾಟಕದಲ್ಲಿ ಡ್ಯಾನ್ಸ್ ಸೀನ್ಸ್ ಇರುತ್ತದೆ. ಡ್ಯಾನ್ಸ್ ಸೀನ್ ಇರುವಾಗ ಲೈಟನ್ನು ಆಫ್ ಅಂಡ್ ಆನ್ ಮಾಡುತ್ತಾರೆ. ಒಂದು ಸಾರಿ ಆಫ್ ಮಾಡುವುದು ಒಂದು ಸಾರಿ ಆನ್ ಮಾಡುವುದು, ಡ್ಯಾನ್ಸ್ ಮಾಡುವ ಹಾಗೆ ಇವರೂ ವಿದ್ಯುತ್ ಸರಬರಾಜು ಮಾಡುತ್ತಾರೆ. ನಾನು ಒಂದು ಸಾರಿ 6 ಗಂಟೆಯಿಂದ 7 ಗಂಟೆಯವರೆಗೆ ಕುಳಿತುಕೊಂಡು ಲೆಕ್ಕಹಾಕಿಕೊಂಡೆ. 22 ಸಾರಿ ಕರೆಂಟ್ ಆಫ್ ಆಯಿತು. ನಿಮಗೆ ವಿದ್ಯುಚ್ಛಕ್ತಿಯ ವಿತರಣೆ ವ್ಯವಸ್ಥೆ ರಾಜ್ಯದಲ್ಲಿ ಹೇಗೆ ನಡೆಯುತ್ತಿದೆ ಎನ್ನುವುದು ಗೊತ್ತಾಗಬೇಕಾದರೆ ಮಾನ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ ನೀವು ನಿಗೂಢವಾಗಿ ತೋಟದಲ್ಲಿ ನೀರು ಹಾಯಿಸುವಾಗ ಸ್ವಲ್ಪ ಹೊತ್ತು ಇದ್ದು ಬನ್ನಿ. ಇನ್ನು ಮನೆ ಬಳಕೆಯ ವಿದ್ಯುಚ್ಛಕ್ತಿ ವಿತರಣೆ ಹೇಗೆ ಆಗುತ್ತದೆ ಎನ್ನುವುದನ್ನು ಕಾಣಬೇಕಾದರೆ 6 ಗಂಟೆಯಿಂದ 8 ಗಂಟೆಯವರೆಗೆ ನಮ್ಮ ಕುಣಿಗಲ್‌ನಲ್ಲಿ ಇದ್ದು ಬನ್ನಿ. ಇವರೆಡನ್ನು ನೋಡಿದರೆ ಬಹುಶಃ ನಾನು ಆಪಾದನೆಯನ್ನು ಮಾಡುತ್ತಿಲ್ಲ ಇರುವಂತಹ ಪರಿಸ್ಥಿತಿಯನ್ನು ಅವರ ಗಮನಕ್ಕೆ ತರುತ್ತಿದ್ದೇನೆ ಎನ್ನುವುದು ತಮಗೆ

ಗೊತ್ತಾಗುತ್ತದೆ. ಅದನ್ನು ಸರಿಮಾಡಲಿಕ್ಕೆ ತಾವೇನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ದಯಮಾಡಿ ಅದನ್ನು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿ):– ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಸದನದಲ್ಲಿ ಮಾನ್ಯ ಸದಸ್ಯರು ಆಗಿಂದಾಗ್ಗೆ ಪ್ರಸ್ತಾವನೆ ಮಾಡುವ ಕೆಲವು ವಿಚಾರಗಳಲ್ಲಿ ಉತ್ಪ್ರೇಕ್ಷೆ ಇರುತ್ತದೆ. ಆದರೆ ಈ ದಿವಸ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವುದರಲ್ಲಿ ಯಾವ ವಿಧವಾದಂತಹ ಉತ್ಪ್ರೇಕ್ಷೆ ಇಲ್ಲವೆನ್ನತಕ್ಕ ವಿಶ್ವಾಸ ನನಗೆ ಇದೆ. ಅತ್ಯಂತ ಕಠಿಣವಾದ ಪರಿಸ್ಥಿತಿಯನ್ನು ವಿದ್ಯುತ್ ಕ್ಷೇತ್ರದಲ್ಲಿ ನಾವು ಎದುರಿಸುತ್ತಿದ್ದೇವೆ. ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳ ಇವುಗಳೆಲ್ಲವೂ ಕೂಡ ಅತ್ಯಂತ ಕಠಿಣವಾದ ಪರಿಸ್ಥಿತಿಯನ್ನು ಎದುರಿಸತಕ್ಕದ್ದನ್ನು ನಾವು ನಮ್ಮ ಅಭಿಪ್ರಾಯದಲ್ಲಿ ವ್ಯಕ್ತಪಡಿಸುತ್ತಿದ್ದೇವೆ. ನಾವು ಈ ವ್ಯವಸ್ಥೆಯನ್ನು ಶಕ್ತಿಪೂರ್ಣ ಮಾಡದ ಹೊರತು ವಿದ್ಯುತ್ ವಿತರಣೆ ಕಾರ್ಯಕ್ರಮದಲ್ಲಿ ಇಂತಹ ಹೆಚ್ಚು ಕಡಿಮೆಗಳು ಇನ್ನು ಕೆಲವಾರು ದಿವಸ ಕೆಲವಾರು ತಿಂಗಳು ಇರತಕ್ಕದ್ದು ಸ್ವಾಭಾವಿಕ. ಇದರ ವಿಚಾರದಲ್ಲಿ ಇನ್ನು ಬೆಳಕನ್ನು ನಮ್ಮ ವಿದ್ಯುತ್ ಇಲಾಖೆಯ ಬೇಡಿಕೆಗಳು ಬಂದಾಗ ತಾವು ಹೇಳತಕ್ಕದ್ದು ಬಹಳ ಇದೆ.

2.35 ಪಿ.ಎಂ.

ಅದರಿಂದ ನಾನು ಮಾರ್ಗದರ್ಶನ ಪಡೆಯತಕ್ಕದ್ದು ಕೂಡ ಇದೆ. ಮೊನ್ನೆ ನಾನು ಈ ಸದನದಲ್ಲಿ ಮಾಡಿದಂಥ ಹೇಳಿಕೆಯಲ್ಲಿ ಈ ಕೈಗಾರಿಕಾ ಘಟಕಗಳಿಗೆ ವಿದ್ಯಚ್ಛಕ್ತಿ ಖೋತಾವನ್ನು 40 ರಿಂದ 60ಕ್ಕೆ ಏರಿಸಿದ್ದುದರ ಉದ್ದೇಶವಾದರೂ ಕೂಡ ಈ ರಾಜ್ಯದ ಗ್ರಾಮಾಂತರ ಜನಗಳ ಬಗ್ಗೆ ಈ ಸರ್ಕಾರದ ಕಳಕಳಿ ಇದೆ, ಎನ್ನುವುದಕ್ಕೆ ದ್ಯೋತಕವಾಗಿ ಈ ಒಂದು ಖೋಟಾವನ್ನು ಹೆಚ್ಚು ಮಾಡಿಯಾಗಿದೆ. ಇದರಿಂದ ಕೂಡ ನಾವು ಏನು ನಿರೀಕ್ಷೆ ಮಾಡಿದ್ದೆವು ಆ ನಿರೀಕ್ಷಿತ ಪರಿಣಾಮಗಳು ಉಂಟಾಗಿಲ್ಲ ಎನ್ನತಕ್ಕದ್ದು ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕಂಥ ಅಭಿಪ್ರಾಯಗಳಿಂದ ನನಗೆ ಅರ್ಥವಾಗುತ್ತದೆ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು, ಕಷ್ಟ ಸುಖ ವಿಚಾರಿಸಿಕೊಂಡರು ಅಂತ. ಸುಖ ಇಲ್ಲವೇ ಇಲ್ಲ. ಬರೀ ಕಷ್ಟವನ್ನು ನಾನು ವಿಚಾರಿಸಬೇಕು. ಏಕೆಂದರೆ ವಿದ್ಯುಚ್ಛಕ್ತಿ ಚೌಕಟ್ಟಿನಲ್ಲಿ ನನ್ನ ದೃಷ್ಟಿಯಲ್ಲಿ ಇನ್ನೂ ಒಂದೆರಡು ವರ್ಷ ಸುಖದ ಮಾತು ಬರುವುದಿಲ್ಲ. ಬರೀ ಕಷ್ಟ, ಗೋಳಾಟ, ದುಃಖ–ದುಮ್ಮಾನ, ಜಟಿಲವಾದಂಥ ಸಮಸ್ಯೆಗಳು. ಶ್ರೀಮಾನ್ ಏಕಾಂತಯ್ಯನವರು ಈ ಹೊಸ ಘಟಕಗಳಿಗೆ, ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ ಎಂದು ನನ್ನ ಗಮನಕ್ಕೆ ತಂದು ಗಂಭೀರ ಸ್ವರೂಪದ ಆಪಾದನೆಯನ್ನು ಮಾಡಿದ್ದಾರೆ. ಅದನ್ನು ನಾವು ವಿಚಾರಣೆ ಮಾಡಿ ಶ್ರೀ ಏಕಾಂತಯ್ಯನವರಿಗೆ ಸಮಜಾಯಿಶಿಯನ್ನು ಕೊಡುತ್ತೇನೆ. ಮತ್ತೆ ಔಟ್ ಆಫ್ ಟರ್ಮ್ ಯಾವುದಾದರೂ ಕೊಟ್ಟಿದ್ದುದು ಇದ್ದರೆ ಅದರ ಬಗ್ಗೆ ನಾನು ಪುನರ್ ವಿಮರ್ಶೆ ಮಾಡುತ್ತೇನೆ. ಎರಡನೆಯದಾಗಿ, ಟ್ರಾನ್ಸಫಾರ್ಮರ್ಸ್ ರಿಪೇರಿ ವಿಚಾರ. ಈಗ ನಾವು ಅದರ ವಿಚಾರವಾಗಿ ತಲೆಕೆಡಿಸಿಕೊಂಡಿದ್ದೇವೆ. ಎಲ್ಲೆಲ್ಲಿ ಯಾರ್ಯಾರು ತಯಾರು ಮಾಡುತ್ತಾರೆ, ಅವುಗಳೆಲ್ಲವನ್ನೂ ಕೊಳ್ಳತಕ್ಕಂಥ ಸ್ಥಿತಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇದೆ. ಕ.ವಿ.ಕಾ ಅವರು ತಯಾರು ಮಾಡತಕ್ಕಂಥಾದ್ದು ಎಲ್ಲವನ್ನೂ ನಾವೇ ಕೊಳ್ಳುತ್ತಿದ್ದೇವೆ. ಅದು ಸರ್ಕಾರಿ ಕ್ಷೇತ್ರದಲ್ಲಿ ಇರತಕ್ಕಂಥ ಒಂದು ಕೈಗಾರಿಕಾ ಘಟಕ. ಹಾಗೆಯೇ ಮಿನಿಮಮ್ ಸ್ಟ್ಯಾಂಡರ್ಡ್ಸ್ ಏನು ನಮೂದಾಗಿದೆ. ಆ ಚೌಕಟ್ಟಿನಲ್ಲಿ ಬರತಕ್ಕಂಥ ಯಾವುದೇ ಫ್ಯಾಕ್ಟರಿಯವರು ನಮಗೆ ಟ್ರಾನ್ಸ್‌ಫಾರ್ಮರ್ಸ್ ಮಾಡಿಕೊಡುತ್ತೇವೆ ಎಂದು ಹೇಳಿದರೆ, ಏಕೆಂದರೆ ನಾವು ಎನ್.ಜಿ.ಇ.ಎಫ್.ನವರನ್ನು ಮಾಡಿಕೊಡಿ ಎಂದು ಕೇಳಿದ್ದೇವೆ. ಕಿರ್ಲೋಸ್ಕರ್ ಅವರನ್ನು ಮಾಡಿಕೊಡಿ ಎಂದು ಹೇಳಿ ಅವರಿಂದ ಕೂಡ ಕೊಳ್ಳುತ್ತೇವೆ. ಮತ್ತೆ ರಿಪೇರಿ ವಿಚಾರದಲ್ಲಿ ಈ ಸದನ ಏನು ಅಭಿಪ್ರಾಯವನ್ನು ಕೊಡುತ್ತದೆ, ಅದನ್ನು

ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ಮುಖ್ಯವಾಗಿ ಶ್ರೀ ಏಕಾಂತಯ್ಯನವರು ರಿಪೇರಿ ಯಾವ ರೀತಿ ಮಾಡಬೇಕು ಎಂದು ಹೇಳಿ 14 ಜನರಿಗೆ ಮಾತ್ರ ರಿಪೇರಿಗೆ ನಾವು ಪರವಾನಗಿ ಕೊಡುತ್ತಿದ್ದೇವೆ ಎಂದು ಹೇಳಿದರು. ಈ 14 ಜನರನ್ನು ಬೇಕಾದರೆ ತೆಗೆದುಹಾಕೋಣ. ಇನ್ನು 14 ಜನರುಗಳ ಹೆಸರುಗಳನ್ನು ನೀವು ಕೊಡಿ.

ಶ್ರೀ ಎಚ್. ಏಕಾಂತಯ್ಯ:– ನಾನು ಆ ದೃಷ್ಟಿಯಿಂದ ಹೇಳಿಲ್ಲ. ದಯವಿಟ್ಟು ವಿದ್ಯುತ್ ಟ್ರಾನ್ಸಪಾರ್ಮರುಗಳನ್ನು ಏನು ಕೊಳ್ಳುತ್ತೀರಿ, ಹಾಗೆ ಕೊಳ್ಳುವಾಗ ಐ.ಎಸ್.ಐ. ಸ್ಟಾಂಡರ್ಡ್ ಇರತಕ್ಕಂಥಾದ್ದನ್ನು ಕೊಳ್ಳಬೇಕು ಮತ್ತು ಅವುಗಳನ್ನು ಟೆಸ್ಟ್ ಮಾಡಬೇಕು. ಆ ರೀತಿ ಪರೀಕ್ಷೆ ಮಾಡುವುದು ಬೇಡವೆಂದು ವಿದ್ಯುತ್ ಮಂಡಳಿಯವರು ಆರ್ಡರ್ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಾಗಿ ರಿಪೇರಿಯಾದಂಥ ಟ್ರಾನ್ಸಫಾರ್ಮಮರ್ಸ್‌ನ್ನು ಎಷ್ಟು ವೋಲ್ಟ್ಸ್‌ನಿಂದ ಪರೀಕ್ಷೆ ಮಾಡಿಸಬೇಕು ? ನಾಲ್ಕು ನೂರು ವೋಲ್ಟ್ಸ್ ಆದರೆ ಸಾಕಂತೆ. ಇವರಿಗೆ 11 ಕೆ.ವಿ.ಏನೂ ಬೇಕಾಗಿಲ್ಲ. ಈಗ ನಾನು ಇದರ ಬಗ್ಗೆ ಮಧ್ಯಪ್ರವೇಶ ಮಾಡಿ ಹೇಳುವುದಕ್ಕೆ ಸಿದ್ಧನಿಲ್ಲ. ಇದರ ಬಗ್ಗೆ ಡಿಮ್ಯಾಂಡ್ ಬಂದಾಗ ವಿವರವಾಗಿ ಹೇಳುತ್ತೇನೆ. ಪ್ರತಿಯೊಂದೂ ಸಹ, ಯಾರಿಂದ ಕೊಳ್ಳುತ್ತಾರೆ, ಅವರಿಗೆ ಅನುಕೂಲವಾಗುವಂಥ ರೀತಿಯಲ್ಲಿ, ಹಣ ಅಪವ್ಯಯವಾಗುವಂತಹ ರೀತಿಯಲ್ಲಿ ತಮ್ಮ ನೀತಿಯನ್ನು ಮಾಡಿಕೊಂಡಿದ್ದಾರೆ. ಇದರ ಬಗ್ಗೆ ನಾನು ಆಮೇಲೆ ಹೇಳುತ್ತೇನೆ. ತಾವು ಆಮೇಲೆ ವಿಚಾರ ಮಾಡಬಹುದು.

ಶ್ರೀ ಎಸ್. ಎಂ. ಕೃಷ್ಣ:– ಯಾರಿಂದಲಾದರೂ ಟ್ರಾನ್ಸಫಾರ್ಮರ್ ಕೊಂಡುಕೊಂಡರೆ ಅದಕ್ಕೆ ಗ್ಯಾರಂಟಿ ಪೀರಿಯಡ್ ಇರುತ್ತದೆ. ಅಷ್ಟರೊಳಗೆ ಟ್ರಾನ್ಸಫಾರ್ಮರುಗಳು ಕೆಟ್ಟುಹೋದರೆ ಯಾವುದೇ ವಿಧವಾದಂಥ ಆಡಿಶನಲ್ ಚಾರ್ಜಸ್ ಮಾಡದೆ ಅವನೂ ರಿಪೇರಿ ಮಾಡಿಕೊಡಬೇಕಾಗುತ್ತದೆ.

ಶ್ರೀ ಎಚ್. ಏಕಾಂತಯ್ಯ:– ಅದಕ್ಕೋಸ್ಕರ ಐ.ಎಸ್.ಐ. ಸ್ಟಾಂಡರ್ಡನ್ನು ನಿಗದಿಪಡಿಸಬೇಕು. ಅವುಗಳನ್ನು ಟೆಸ್ಟ್ ಮಾಡಲಿಕ್ಕೆ ವಿದ್ಯುತ್ ಮಂಡಲಿಯಲ್ಲಿ ತಮ್ಮದೇ ಆದ ನೀತಿ ಇದೆ. ಆದರೆ ಇವರು ಯಾವುದು ಐ.ಎಸ್.ಐ. ಸ್ಟಾಂಡರ್ಡ್ ಎಂದು ಪರೀಕ್ಷೆ ಮಾಡಬೇಕೋ ಅದನ್ನು ಮಾಡದೆ, ಹಾಗೆಯೇ ಅಂದುಕೊಂಡಿದ್ದರೆಂದು ನನ್ನ ಅಭಿಪ್ರಾಯ.

ಶ್ರೀ ಎಸ್. ಎಂ. ಕೃಷ್ಣ:– ಐ.ಎಸ್.ಐ. ಸ್ಟ್ಯಾಂಡರ್ಡನ್ನು ನಮ್ಮ ವಿದ್ಯುಚ್ಛಕ್ತಿ ಮಂಡಳಿಯವರು ಪಾಲನೆ ಮಾಡದೇ ಹೋದರೆ, ಇನ್ನು ಮೇಲೆ ಐ.ಎಸ್.ಐ. ಸ್ಟ್ಯಾಂಡರ್ಡ್‌ಗೆ ಇದನ್ನು ನಿಗದಿಪಡಿಸುತ್ತಾರೆ. ಇದು ನಾನು ಈ ಸದನಕ್ಕೆ ಕೊಡುತ್ತಾ ಇರತಕ್ಕಂಥ ಭರವಸೆ. ಮತ್ತು ಗ್ಯಾರಂಟಿ ಪೀರಿಯಡ್ ಕೂಡ ....

ಮತ್ತು ಗ್ಯಾರಂಟಿ ಪೀರಿಯಡ್‌ನ್ನೂ ಕೂಡ, ಖಚಿತವಾಗಿ ....

ಶ್ರೀ ವಾಟಾಳ್ ನಾಗರಾಜ್:– ನಿರ್ದಾಕ್ಷಿಣ್ಯವಾಗಿ ಎಂದು ಹೇಳಬಹುದು.

ಶ್ರೀ ಎಸ್.ಎಂ. ಕೃಷ್ಣ:– ಹೌದು, ನಿರ್ದಾಕ್ಷಿಣ್ಯವಾಗಿ. ಈ ಸಂದರ್ಭದಲ್ಲಿ ನನಗೆ ವಾಟಾಳ್ ನಾಗರಾಜರ ಸಹಾಯ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ತಮಗೆ ಶಬ್ದಸಂಪತ್ತು ಬಹಳ ಇದೆ, ನಾವು ಮೆಚ್ಚಿದ್ದೇವೆ. ಅದರಲ್ಲಿ ಎರಡನೆಯ ಅಭಿಪ್ರಾಯ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ:– ನಿರ್ದಾಕ್ಷಿಣ್ಯವಾಗಿ ವಾರಂಟಿ ಪೀರಿಯಡ್‌ನ್ನು ಕೂಡ ನಾವು ಇಂಪ್ಲಿಮೆಂಟ್ ಮಾಡುತ್ತೇವೆ. ಎರಡನೆಯದು ಮಾನ್ಯ ಸಿಂಧ್ಯರವರು, ಕಿರುನೀರು ಸರಬರಾಜು ಯೋಜನೆ ಹಾಗೂ

ದೊಡ್ಡ ನೀರಾವರಿ ಯೋಜನೆಗೆ ಆದ್ಯತೆ ಕೊಡಬೇಕೆಂದು ಹೇಳಿದರು. ಈಗಾಗಲೇ ಈ ಬಗ್ಗೆ ತಾವು ಬಂದಾಗ, ತಮ್ಮ ಜೊತೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲಾಯಿತು. ಇದನ್ನೂ ಕೂಡ ಸಾರ್ವತ್ರಿಕವಾಗಿ consensus ಒಪ್ಪಿಗೆಯಾಗಿ, ಆ ದಿವಸವೇ ಹೇಳಿಕೆಯನ್ನು ಕೊಟ್ಟಿದ್ದೇನೆ. ಈ ಗ್ರಾಮಾಂತರ ಕಿರು ನೀರು ಸರಬರಾಜು ಯೋಜನೆಗೆ, ಅತ್ಯಂತ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಈಗಾಗಲೇ ಪಾಲಿಸಿ ಡಿಕ್ಲರೇಷನ್ ಆಗಿದೆ. ಆಮೇಲೆ, ನಮ್ಮ ಈಶ್ವರಪ್ಪನವರು ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಪರೀಕ್ಷೆಗಳು ಬರುತ್ತಿವೆ, ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತಿದೆ ಎಂದು ಹೇಳಿದ್ದಾರೆ. ಈ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಕಷ್ಟದಲ್ಲಿ ನಾನೂ ಭಾಗಿ. ರಾತ್ರಿ ಹೊತ್ತು ಓದುವಂಥ ಸಮಯದಲ್ಲಿ ವಿದ್ಯುತ್ ದೀಪ ಇರುವುದಿಲ್ಲ, ಇದು ಬಹಳ ಕಠಿಣವಾದ ಪರಿಸ್ಥಿತಿ. ಇದು ನನ್ನ ಅನುಭವಕ್ಕೂ ಬಂದಿರತಕ್ಕಂಥಾದ್ದು. ಮೊನ್ನೆ ಗೊರೂರು ಹೇಮಾವತಿ ನಾಲೆ ಭಾಗದಲ್ಲಿ ಪ್ರವಾಸ ಮಾಡಿ, ಇನ್ನೊಂದು ಪ್ರಾಜೆಕ್ಟ್‌ಗೆ ಹೋದರೆ, ಅಲ್ಲಿ ವಿದ್ಯುಚ್ಛಕ್ತಿ ಇರಲಿಲ್ಲ. ಮಳೆ ಬಂದಿದ್ದರಿಂದಲೂ ವಿದ್ಯುಚ್ಛಕ್ತಿ ಸ್ವಲ್ಪ ಅಸ್ತವ್ಯಸ್ತವಾಗಿದೆ. ವಿರೋಧಪಕ್ಷದ ನಾಯಕರಾದ ದೇಶಪಾಂಡೆಯವರು ಬೆಂಗಳೂರು ನಗರದಲ್ಲಿ ವಿದ್ಯುಚ್ಛಕ್ತಿ ಆಗಿಂದಾಗ್ಗೆ ಹೋಗುತ್ತಿರುವ ಬಗ್ಗೆ ನನ್ನ ಗಮನ ಸೆಳೆದಿದ್ದಾರೆ. ನಮಗೆ ಪ್ರತಿ ದಿವಸ ಸೆಂಟ್ರಲ್ ಫೀಡ್‌ನಿಂದ ಸುಮಾರು 600 ಮೆಗಾವ್ಯಾಟ್ ಬರುತ್ತದೆ. ರಾಮಗುಂಡಂ ಮತ್ತು ಕಲ್ಪಾಕಂ ವಿದ್ಯುತ್ ಕೇಂದ್ರದಿಂದ ನಮಗೆ ಬರತಕ್ಕಂಥ ವಿದ್ಯುಚ್ಛಕ್ತಿ ಏನಿದೆ ಆ ವಿದ್ಯುಚ್ಛಕ್ತಿಯಲ್ಲಿ ಸಾಕಾದಷ್ಟು ವೋಲ್ಟೇಜ್ ಇಲ್ಲ. We are the tail enders.

As far as that power which we get from the central installation in Emarnad Karnataka is at the tail end. As a result of which the power which we get will be of low voltage.

ಅದರಲ್ಲಿ ಮಿನಿಮಂ 400 ವೋಲ್ಟ್ಸ್ ಇರಬೇಕು. ನಮಗೆ ಬರತಕ್ಕಂಥಾದ್ದು 300 ರಿಂದ 310. ಇದನ್ನು ನಮ್ಮ grid ಫೀಡ್ ಮಾಡಿ, ನಮ್ಮ ಗ್ರಿಡ್ ಮೂಲಕ ಹಾಯಿಸಬೇಕಾದರೆ, ಇನ್ನೂ ವೋಲ್ಟೇಜ್ ಕಡಿಮೆಯಾಗುತ್ತದೆ. ನಮಗೆ ಇರತಕ್ಕಂಥ ಬೇಸಿಕ್ ಡಿಫಿಕಲ್ಟ್ ಇದೆ. ನಿನ್ನೆ ಆಂಧ್ರದ ವಿದ್ಯುಚ್ಛಕ್ತಿ ಮಂತ್ರಿಗಳಾದ ಶ್ರೀಮಾನ್ ರೋಸಯ್ಯನವರನ್ನು ಭೇಟಿ ಮಾಡಿ, ನಮಗೆ ಸಹಾಯ ಮಾಡಬೇಕೆಂದು ಕೇಳಿಕೊಂಡೆ. ಏಕೆಂದರೆ, ಸೋಮನಹಳ್ಳಿ ಕೇಂದ್ರ ವಿದ್ಯುತ್ central installation ಸ್ವೀಕರಿಸುತ್ತೇವೆ, ಅಲ್ಲಿ, ನಮಗೆ ಕನಿಷ್ಟ 400 ಬರುವಂಥ ವಿದ್ಯುಚ್ಛಕ್ತಿಯಲ್ಲಿ ಕ್ವಾಲಿಟಿ ಕೊಡಿ ಎಂದು ಹೇಳಿ ಪ್ರಯತ್ನ ಮಾಡಿದೆ. ಅವರು ಅಸೆಂಬ್ಲಿಯಲ್ಲಿದ್ದಾರೆಂದು ನನಗೆ ಗೊತ್ತಾಯಿತು. ಮತ್ತು ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷರೂ ಕೂಡ ಪ್ರತಿದಿವಸವೂ ಆಂಧ್ರದ ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷರ ಜೊತೆ ಮಾತನಾಡುತ್ತಿದ್ದಾರೆ. ಆದ್ದರಿಂದ ಏನಾದರೂ ಕ್ವಾಲಿಟಿ ಪವರ್, from the Central installation ಬರಲಿ ಎಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ನಮ್ಮ ಸ್ನೇಹಿತರಾದ ವೈ. ಕೆ. ರಾಮಯ್ಯನವರು ಹೇಳಿದರು, ಬೋರ್‌ವೆಲ್ ವಿಚಾರವಾಗಿ. ನಾನೇ ನನ್ನ ಜಮೀನಿನಲ್ಲಿ ಮೂರು ಬೋರ್‌ವೆಲ್‌ಗಳನ್ನು ಕೊರೆಸಿದ್ದೇನೆ. ಅದಕ್ಕೆ ಪಂಪ್ ಹಾಕಿಸಿದ್ದೇನೆ. ನನ್ನ ತಮ್ಮ ಆನ್, ಆಫ್ ಮಾಡುತ್ತಲೇ ಇದ್ದಾನೆ. ಆದ್ದರಿಂದ, ನಿಮಗಾದುದು ನನಗೂ ಆಗುತ್ತಾ ಇದೆ. ಮಾನ್ಯ ಸದಸ್ಯರು ತಿಳಿಸಿರುವಂತೆ, ಕೃಷಿ ಕ್ಷೇತ್ರಕ್ಕೆ ಪ್ರಾಧಾನ್ಯತೆ ಕೊಡಬೇಕು. ಮಾಧುಸ್ವಾಮಿಯವರು ಕಿಬ್ಬನಹಳ್ಳಿ ಸ್ಟೇಷನ್ 220 ಕೆ.ವಿ. ಬಗ್ಗೆ ಹೇಳಿದರು. ಕಾಕತಾಳೀಯವಾಗಿ, ನಾನು ಆ ರಸ್ತೆಯಲ್ಲಿ ಹೋಗುತ್ತಾ ಇದ್ದೆ.

ನಾನು ಹೇಮಾವತಿ ಹಾರಂಗಿ ಕಡೆ ಹೋಗಬೇಕೆಂದು ಪ್ರೋಗ್ರಾಂ ಹಾಕಿಕೊಂಡು ಹೋಗಿದ್ದೆ. ರಸ್ತೆಯ ಉದ್ದಗಲಕ್ಕೂ ಜನರು ತಮ್ಮ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಆಗ ನಾನು ಕಿಬ್ಬನಹಳ್ಳಿ ಕ್ರಾಸ್ ಹತ್ತಿರ ಬಂದಾಗ ಜನರು ನನ್ನನ್ನು ನಿಲ್ಲಿಸಿ ಸ್ವಾಮಿ ಇಲ್ಲಿ 220 ಕೆ.ವಿ. ಸ್ಟೇಷನ್ ನಡೆಯುತ್ತಿದೆ ಬನ್ನಿ ಸ್ವಾಮಿ ಎಂದು ಕರೆದುಕೊಂಡು ಹೋದರು. ನಾನು ಹೋಗಿ ನೋಡಿದೆ. ಈಗ ನನಗೆ ಬಂದಿರತಕ್ಕಂಥ ಮಾಹಿತಿ

ಪ್ರಕಾರ ಚಾರ್ಜ್ ಮಾಡಿದ್ದಾರೆ. ಮತ್ತು 100 ಎಂ.ವಿ. ಟ್ರಾನ್ಸ್‌ಫಾರ್ಮರ್ ನಿನ್ನೆಯಿಂದ ಲೋಡ್ ಮಾಡಿದ್ದಾರೆ. ಅಲ್ಲಿ 24 ಗಂಟೆ ಚಾರ್ಜ್ ಮಾಡಿದ್ದಾರೆ. ಈಗ ವೋಲ್ಟೇಜ್ ಉತ್ತಮವಾಗಿದೆ. ಮಾನ್ಯ ಮಾಧುಸ್ವಾಮಿಯವರು ಈ ವಾರಾಂತ್ಯದಲ್ಲಿ ಊರಿಗೆ ಹೋಗಿ ಬಂದ ಮೇಲೆ ನನಗೆ ತಿಳಿಸಬೇಕು ಇನ್ನು ಮಾನ್ಯ ಉಮಾಪತಿಯವರು ಹೊಳಲ್ಕೆರೆಯಲ್ಲಿ ಸ್ಟೇಷನ್ ಆಗಬೇಕೆಂದು ಹೇಳಿದ್ದಾರೆ. ಸಿಂಧ್ಯಾರವರು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ನಮ್ಮ ತಾಲ್ಲೂಕಿಗೂ ರಾತ್ರಿ ಟೈಮ್ ಬನ್ನಿ ಸ್ವಾಮಿ ತಾವು ಬಂದರೆ ಒಂದು ರೌಂಡ್ ಹಾಕಿಕೊಂಡು ಬರೋಣ.

ಶ್ರೀ ಎಂ. ಮುನಿಸ್ವಾಮಿ:– ಸ್ವಾಮಿ ಬೆಂಗಳೂರಿನಲ್ಲಿ ಬೆಳಿಗ್ಗೆ 5 ಗಂಟೆಗೆ ಹೋದರೆ 7 ಗಂಟೆಯವರೆಗೂ ವಿದ್ಯುತ್ ಬರುವುದಿಲ್ಲ. ಒಂದು ದಿನದಲ್ಲಿ 5–6 ಸಾರಿ ವಿದ್ಯುತ್ ಹೋಗುತ್ತದೆ ಹೆಣ್ಣು ಮಕ್ಕಳು ಅಡಿಗೆ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ವಿದ್ಯಾರ್ಥಿಗಳಿಗೆ ತುಂಬ ಕಷ್ಟವಾಗಿದೆ, ಬೆಳಿಗ್ಗೆ ಎದ್ದು ನಾವು ಪತ್ರಿಕೆ ಕೂಡ ಓದುವುದಕ್ಕೆ ಆಗುವುದಿಲ್ಲ. ಬೆಂಗಳೂರು ಪಟ್ಟಣದಲ್ಲಿ ಇದರ ಬಗ್ಗೆ ಬಹಳ ಮುಖ್ಯವಾಗಿ ವ್ಯವಸ್ಥೆ ಮಾಡಬೇಕಾಗಿದೆ.

ಶ್ರೀ ಎಸ್. ಎಂ. ಕೃಷ್ಣ:– ಬೆಂಗಳೂರಿನ ಪರಿಸ್ಥಿತಿ ಇದಕ್ಕೆ ಹೊರತಲ್ಲ. ರಾಜ್ಯದ ಮಿಕ್ಕ ಕಡೆಗಳಲ್ಲಿ ಆದಂತ ಕೆಟ್ಟ ಪರಿಣಾಮ ಬೆಂಗಳೂರಿನಲ್ಲಿಯೂ ಕೂಡ ಆಗುತ್ತಿದೆ. ಮಾನ್ಯ ಸದಸ್ಯರು ತಿಳಿಸಿದಂತೆ ನಾನು ವೋಲ್ಟೇಜ್ ಇಂಪ್ರೂವ್ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಸದನದ ಸಮಿತಿ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಎಸ್. ಎಂ. ಕೃಷ್ಣ:– ಅದಕ್ಕೆ ಬರುತ್ತೇನೆ. ಈಗ ನನ್ನ ಹೇಳಿಕೆಯನ್ನು ಓದುತ್ತೇನೆ.

ಮಾನ್ಯ ಸದಸ್ಯರುಗಳಿಗೆ ತಿಳಿಸಿರುವಂತೆ, ಕೃಷಿ ಕ್ಷೇತ್ರಕ್ಕೆ ಒಳ್ಳೆಯ ವೋಲ್ಟೇಜನ್ನು ನೀಡುವ ಸಲುವಾಗಿ, ದಿನಾಂಕ 25.2.93 ರಿಂದ, 251 ಕೆವಿಎಗೂ ಮೇಲ್ಪಟ್ಟು ಕಂಟ್ರಾಕ್ಟ್ ಡಿಮ್ಯಾಂಡ್ ಉಳ್ಳ ಕೈಗಾರಿಕೆ ಬಳಕೆದಾರರಿಗೆ ಎನರ್ಜಿ ಕಡಿತವನ್ನು ಶೇಕಡ 40ರಿಂದ ಶೇಕಡ 60ರಷ್ಟು ಮತ್ತು ಡಿಮ್ಯಾಂಡ್ ಕಡಿತವನ್ನು ಶೇ.20ರಿಂದ ಶೇ.25ಕ್ಕೆ ಹೆಚ್ಚಿಸಲಾಗಿದೆ.

ಈ ಕ್ರಮದಿಂದ ಕೈಗಾರಿಕೆಗಳ ಸಾಂದ್ರತೆ ಹೆಚ್ಚಿರುವ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ವೋಲ್ಟೇಜ್‌ನಲ್ಲಿ ಸುಧಾರಣೆ ಉಂಟಾಗಿದೆ. ಆದರೆ ಕೃಷಿ ಪ್ರಾಧಾನ್ಯತೆಯನ್ನು ಪಡೆದ ಪ್ರದೇಶಗಳಲ್ಲಿ ಅಂದರೆ, ಕೋಲಾರ, ತುಮಕೂರು, ಚಿತ್ರದುರ್ಗ, ಜಿಲ್ಲೆಗಳಲ್ಲಿ ವೋಲ್ಟೇಜ್ ಸುಧಾರಣೆಯು ಮಹತ್ವದ ಪ್ರಮಾಣದಲ್ಲಿ ಉಂಟಾಗಿಲ್ಲದಿರುವುದು ಕಂಡು ಬಂದಿದೆ.

ಇದಕ್ಕೆ ಮುಖ್ಯ ಕಾರಣ, ಬೆಂಗಳೂರು ಸಮೀಪದ ಸೋಮನಹಳ್ಳಿಯಲ್ಲಿ ಎನ್.ಟಿ.ಪಿ.ಸಿ, ಮತ್ತು ಇತರ ಕೇಂದ್ರ ವಿದ್ಯುತ್ ಉತ್ಪಾದನಾ ಕೇಂದ್ರಗಳು ಸರಬರಾಜು ಮಾಡುತ್ತಿರುವ ವಿದ್ಯುತ್ ಕಡಿಮೆ ವೋಲ್ಟೇಜ್ ಮಟ್ಟದಲ್ಲಿರುವುದು. ಒತ್ತಡದ ಸಮಯಗಳಲ್ಲಿ ಈ ವಿದ್ಯುತ್ ಸರಬರಾಜಿನ ವೋಲ್ಟೇಜ್ 400 ಕೆ.ವಿ.ಗೆ ಪ್ರತಿಯಾಗಿ 300–315 ಕೆ.ವಿ. ಇದ್ದು, ಬಹಳ ಕಡಿಮೆ ಇರುತ್ತದೆ. ಇದು ರಾಜ್ಯದ ಎಲ್ಲಾ ವರ್ಗದ ಗ್ರಾಹಕರುಗಳಿಗೆ ಸರಬರಾಜು ಮಾಡುವ ವಿದ್ಯುತ್ತಿನ ಮೇಲೆ ಪರಿಣಾಮ ಬೀರಿದೆ. ಈ ವಿಷಯದ ಬಗ್ಗೆ ಸಂಬಂಧಿಸಿದ ಸಂಸ್ಥೆಗಳಾದ ಕೇಂದ್ರ ವಿದ್ಯುತ್ ಪ್ರಾಧಿಕಾರಿ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ, ದಕ್ಷಿಣ ವಲಯ ವಿದ್ಯುತ್ ಮಂಡಳಿ ಮತ್ತು ಆಂಧ್ರಪ್ರದೇಶ ಸರ್ಕಾರ ಇವುಗಳೊಡನೆ ವ್ಯವಹರಿಸಿದ್ದರೂ, ವೋಲ್ಟೇಜ್ ಪರಿಸ್ಥಿತಿ ಸುಧಾರಿಸಿಲ್ಲ ಈ ದಿಸೆಯಲ್ಲಿ ನಮ್ಮ ಪ್ರಯತ್ನಗಳು ಮುಂದುವರೆಯುತ್ತಲೇ ಇದೆ.

ನೀರಾವರಿ ಪಂಪುಸೆಟ್ಟುಗಳು ಪ್ರಾಧಾನ್ಯತೆ ಪಡೆದಿರುವ ಪ್ರದೇಶಗಳಲ್ಲೂ ಸಹ ವೋಲ್ಟೇಜನ್ನು ಸುಧಾರಿಸುವ ಸಲುವಾಗಿ 250 ಕೆವಿಎಗೂ ಮೇಲ್ಪಟ್ಟು ಕಂಟ್ರಾಕ್ಟ್ ಡಿಮ್ಯಾಂಡ್ ಉಳ್ಳ ಎಲ್ಲಾ ಕೈಗಾರಿಕೆಗಳ ಮೇಲೆ ವಿಧಿಸಿರುವ ಡಿಮ್ಯಾಂಡ್ ಕಡಿತವನ್ನು ಶೇಕಡ 25 ರಿಂದ ಶೇಕಡ 35ಕ್ಕೆ ಈ ಕೂಡಲೇ ಜಾರಿಗೆ ಬರುವಂತೆ ಹೆಚ್ಚಿಸಲು ನಿರ್ಧರಿಸಿದೆ. ಮತ್ತು ಪರಿಸ್ಥಿತಿಯನ್ನು ಎಚ್ಚರದಿಂದ ಅವಲೋಕಿಸಲಾಗುವುದು. ಈ ಕ್ರಮದಿಂದ ಗ್ರಾಮಾಂತರ ಪ್ರದೇಶಗಳಲ್ಲಿ ವೋಲ್ಟೇಜ್ ಮಟ್ಟದಲ್ಲಿ ಸ್ವಲ್ಪ ಸುಧಾರಣೆಯಾಗುವುದು ಎಂದು ನಾನು ಆಶಿಸುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ:– ಸದನದ ಸಮಿತಿ ಮಾಡಿ ಎಂದು ತಾವೆಲ್ಲಾ ತಿಳಿಸಿದ್ದೀರಿ ಅದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ. ನಿಮ್ಮನ್ನು ನಮ್ಮನ್ನು ಕಾಡಿಸತಕ್ಕಂಥ ಈ ಪಿಡುಗು ನಿವಾರಿಸಲು ತಮ್ಮೆಲ್ಲರ ಬೆಂಬಲ ಅಗತ್ಯ ಇದೆ. ಅದಕ್ಕೆ ತಮ್ಮೆಲ್ಲರ ಬುದ್ಧಿವಂತಿಕೆ ಅನುಭವ ನೀವು ನಮಗೆ ಕೊಡುವುದಾದರೆ ಅದಕ್ಕಿಂತ ಹೆಚ್ಚಿನ ವಿಶೇಷ ಏನೂ ಇಲ್ಲ ಆದ್ದರಿಂದ ಸದನದ ಸಮಿತಿ ಮಾಡಲು ನನ್ನ ಸಂಪೂರ್ಣ ಒಪ್ಪಿಗೆ ಇದೆ ನಾನು ಅದನ್ನು ಸ್ವಾಗತಿಸುತ್ತೇನೆ. ಮಾನ್ಯ ಅಧ್ಯಕ್ಷರೇ ಸದನದ ಸಮಿತಿ ಮಾಡಲಿಕ್ಕೆ ಏನು ಸಲಹೆ ಎಂದಿದೆ ಅದನ್ನು ನಾನು ಸ್ವಾಗತಿಸುತ್ತೇನೆ. ಮಾನ್ಯ ಅಧ್ಯಕ್ಷರು ಸದನದ ಸಮಿತಿ ನೇಮಕ ಮಾಡಿ ಎಂದು ನಾನು ಸಹ ನಿಮ್ಮ ಜೊತೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಧನ್ಯವಾದಗಳು.

ಶ್ರೀ ಸಿ. ಬೈರೇಗೌಡ:– ನಮ್ಮ ಸಲಹೆ ಒಪ್ಪಿದ್ದಕ್ಕೆ ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳು.

ಶ್ರೀ ವಾಟಾಳ್ ನಾಗರಾಜ್:– ನೀವು ನಮ್ಮ ತಾಲ್ಲೂಕಿಗೆ ಬಂದರೆ ಸಂತೋಷ. ಅಥವಾ ನಿಮ್ಮ ಅಧಿಕಾರಿಗಳಲ್ಲಿ ಯಾರನ್ನಾದರೂ ಕಳುಹಿಸಿ ಅಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಿ.

ಶ್ರೀ ಹೆಚ್. ಏಕಾಂತಯ್ಯ:– ನಿಮ್ಮ ತಾಲ್ಲೂಕಿಗೆ ಬಂದರೆ ಅಧಿಕಾರ ಕಳೆದುಕೊಳ್ಳುತ್ತಾರೆಂದು ಪ್ರತೀತಿ ಇದೆಯಲ್ಲ ?

ಶ್ರೀ ಎಸ್. ಎಂ. ಕೃಷ್ಣ:– ಕೆಲವು ಸಮಯ ಆ ತಾಲ್ಲೂಕಿಗೆ ಹೋಗದೆ ಇದ್ದರೂ ಅಧಿಕಾರ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಸುಮ್ಮನೆ ಆ ತಾಲ್ಲೂಕಿನ ಮೇಲೆ ಗೂಬೆ ಕೂರಿಸಿದ್ದಾರೆಯೇ ಹೊರತು ಬೇರೆ ಏನಿಲ್ಲ. ಬರೀ ಅಪಪ್ರಚಾರ. ನಿಜವಾಗಿಯೂ ಅಂತಹ ಸುಂದರವಾದ ತಾಲ್ಲೂಕು ಯಾವುದೂ ಇಲ್ಲ.

ವೈಸ್ ಛೇರ್ಮನ್:– ಈಗ ಸರ್ಕಾರಿ ನಿರ್ಣಯಗಳ ಮೇಲೆ ಚರ್ಚೆ.

ಶ್ರೀ ವಾಟಾಳ್ ನಾಗರಾಜ್:– ಈಗ ಸಭೆಯನ್ನು 30 ನಿಮಿಷ ಮುಂದಕ್ಕೆ ಹಾಕಿದರೆ ಒಳ್ಳೆಯದು ಅನಿಸುತ್ತದೆ. ಸಂಸದೀಯ ಸಚಿವರು ಊಟ ಮಾಡಿಕೊಂಡು ಬಂದಿದ್ದಾರೆ, ಮಾನ್ಯ ಉಪನಾಯಕರೂ ಆರಾಮವಾಗಿ ಊಟ ಮಾಡಿಕೊಂಡು ಬಂದಿದ್ದಾರೆ.

ವೈಸ್ ಛೇರ್ಮನ್ :– ಸಮಸ್ಯೆ ಏನೆಂದರೆ, ಊಟಕ್ಕೆ ಬಿಟ್ಟರೆ ಬೇಗ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ನಾವು ಬಂದುಬಿಡುತ್ತೇವೆ.

ಶ್ರೀ ಆರ್. ವಿ. ದೇಶಪಾಂಡೆ:– 3 ಗಂಟೆಗೆ ಹೇಗೂ ಬಿಸ್‌ನೆಸ್ ಅಡ್ವೈಸರಿ ಕಮಿಟಿ ಇದೆ. ನಾವು ಅಲ್ಲಿಗೆ ಹೋಗಬೇಕಲ್ಲ ! ಈಗ ಸ್ವಲ್ಪ ಹೊತ್ತು ಸದನವನ್ನು ಮುಂದುವರಿಸುವುದು ಒಳ್ಳೆಯದೆಂದು ತಿಳಿಸುತ್ತೇನೆ.

ವೈಸ್ ಛೇರ್ಮನ್:- ಈಗ ಸದನವು ಮುಂದುವರಿದು ಪುನಃ 4.00 ಗಂಟೆಗೆ ಸೇರುತ್ತದೆ.

(ಸದನವು 2.51 ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(4.15 ಗಂಟೆಗೆ ಸಭೆ ಪುನಃ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರಾದ ಶ್ರೀ ವಿ. ಎನ್. ಕೌಜಲಗಿ ಅವರು ಪೀಠದಲ್ಲಿದ್ದರು)

ಸರ್ಕಾರಿ ನಿರ್ಣಯಗಳು

† ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಸಂಸತ್ತಿನ ಉಭಯ ಸದನಗಳಲ್ಲಿ ಈ ಪಂಚಾಯತ್ ಮತ್ತು ಮುನಿಸಿಪಾಲಿಟಿ ಕಾನ್ಸಿಟ್ಯೂಶನಲ್ ಅಮೆಂಡ್‌ಮೆಂಟ್ ಬಿಲ್ 72 ಮತ್ತು 73 ಅವಿರೋಧವಾಗಿ ಪಾಸ್ ಆಗಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಅಷ್ಟೇ ಅಲ್ಲ, The Parliament deserves all compliments. ಏಕೆಂದರೆ ಇಂತಹ ಒಂದು ಕ್ರಾಂತಿಕಾರಕವಾದ ಮಸೂದೆ ಇವತ್ತು ಮೊದಲನೇ ಬಾರಿ ಇಂಟ್ರಡ್ಯೂಸ್ ಆಗಿದೆ.

ಅಧಿಕಾರದ ವಿಕೇಂದ್ರೀಕರಣ ಆಗಬೇಕು. ಅಧಿಕಾರವನ್ನು ಜನಗಳ ಕೈಯಲ್ಲಿ ಕೊಡಬೇಕು. ಸ್ವರಾಜ್ಯ ಅಥವಾ ರಾಮರಾಜ್ಯ ಸ್ಥಾಪನೆಯಾಗಬೇಕು. ಈ ಒಂದು ಕಲ್ಪನೆಗೆ ನಾಂದಿ ಕೊಟ್ಟಿದ್ದುದು ನಮ್ಮ ಸರ್ಕಾರ. ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯಮಂತ್ರಿ ಇದ್ದಾಗ, ನಮ್ಮ ನೀರು ಸಾಹೇಬರು ಇವತ್ತು ನಮ್ಮಲ್ಲಿ ಇಲ್ಲ, ಅವರನ್ನು ನಾವು ನೆನೆಸಬೇಕಾಗುತ್ತದೆ. ಅವರು ಒಂದು ಪ್ರಾಮಾಣಿಕವಾದ ಪ್ರಯತ್ನ ಮಾಡಿದರು. ನಮ್ಮ ಕರ್ನಾಟಕ ಮಸೂದೆ ಇವತ್ತು ಒಂದು ಆದರ್ಶವಾದ ಮಸೂದೆಯಾಗಿದೆ. It is a progressive legislation. ಹಾಗಾಗಿ ಇವತ್ತು ಈ ಒಂದು ಸಂವಿಧಾನ ತಿದ್ದುಪಡಿಯ ಪಂಚಾಯತ್‌ರಾಜ್, ಜಾರಿಗೆ ಬರುವುದಕ್ಕೆ ಮುಂಚೆ, ಇದು ಜಂಟಿ ಸಲಹಾ ಸಮಿತಿಗೆ ರೆಫರ್ ಆಗಿತ್ತು. ಜಂಟಿ ಸಲಹಾ ಸಮಿತಿಯ ಶಿಫಾರಸ್ಸಿನ ಪ್ರಕಾರ, ಇದು ಅವಿರೋಧವಾಗಿ ಪಾಸ್ ಆಗಿದೆ. ಇಲ್ಲಿ ಏನಾಗಿದೆ, ಇದಕ್ಕೆ ಸಂವಿಧಾನದ ವ್ಯಾಲಿಡಿಟಿ ಬಂದಿದೆ. ಮತ್ತು ಪಂಚಾಯತ್ ರಾಜ್ ಮತ್ತು ಮುನಿಸಿಪಾಲಿಟಿಯ ಬೇಸಿಕ್ ಸ್ಟ್ರಕ್ಚರ್ ಏನಿರಬೇಕು, ಇದರ ಒಂದು ರೂಪುರೇಷೆ ನಿರ್ಮಾಣವಾಗಿದೆ, ತಯಾರಾಗಿದೆ. ಇದು ಒಂದು ಸ್ಕೆಲಿಟನ್. This was a skeleton. Skeleton form of Panchayat Raj, Skeleton form of Municipality Raj. ಅದಕ್ಕೆ ಬ್ಲಡ್ ಮತ್ತು ಫ್ಲೆಶ್ ತುಂಬುವ ಜವಾಬ್ದಾರಿ ಸರ್ಕಾರದ ಮೇಲಿದೆ. ಏಕೆಂದರೆ, ಯಾವ ತರಹ ತಿದ್ದುಪಡಿ ಇರಬೇಕು, ಜಿಲ್ಲಾಪರಿಷತ್ತಿಗೆ ಏನು ಅಧಿಕಾರ ಇರಬೇಕು. ಮಂಡಲ್ ಪಂಚಾಯಿತ್ತಿಗೆ ಏನು ಅಧಿಕಾರ ಇರಬೇಕು. ಈ ನಿರ್ಣಯವನ್ನು ಸರ್ಕಾರ ಮಾಡಬೇಕಾಗಿದೆ. Now only a skeleton is given. ಹಾಗಾಗಿ ನಾನು ಹೇಳಿದೆ, ಸಭೆಯಲ್ಲಿ ಗ್ರಾಮಾಭಿವೃದ್ಧಿ ಸಚಿವರು ಇದ್ದರೆ ಒಳ್ಳೆಯದಾಗುತ್ತಿತ್ತು. ಏಕೆಂದರೆ ನೀವು ಎಲ್ಲವನ್ನೂ ಯಾವುದೋ ಒಂದು ತಿದ್ದುಪಡಿಗಾಗಿ, ಪಾರ್ಲಿಮೆಂಟ್ ಹಾಕಿದ ನಮ್ಮ ಜವಾಬ್ದಾರಿ ಇಲ್ಲವೆಂದು ಹೇಳಬಹುದು. ಈ ಸಂವಿಧಾನದ ತಿದ್ದುಪಡಿಯಲ್ಲಿ, ಜಿಲ್ಲಾ ಪರಿಷತ್ ಒಂದು ಫ್ರೇಮ್‌ವರ್ಕ್. ಇದೊಂದು ರೆವಲ್ಯೂಷನರಿ ಮೆಷರ್ ಮತ್ತು the government of India deserve all cheers and compliements from our side as well as the entire Opposition. ಎಲ್ಲಾ ವಿರೋಧಪಕ್ಷಗಳವರೂ ಸಹಕಾರ ಕೊಟ್ಟಿದ್ದಾರೆ. ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ ಪಕ್ಷ ಅಷ್ಟೇ ಅಲ್ಲ, ಎಲ್ಲಾ ವಿರೋಧಪಕ್ಷಗಳೂ ಇದಕ್ಕೆ ಬೆಂಬಲ ಕೊಟ್ಟಿವೆ. ಏಕೆಂದರೆ ಎಲ್ಲರ ವಿಶ್ವಾಸದಿಂದ ಇದು ಬರಬೇಕಾಗಿದೆ. ಈ ವ್ಯವಸ್ಥೆಯಲ್ಲಿ ನಮಗೆ ವಿಶ್ವಾಸವಿಲ್ಲದೇ ಹೋದರೆ, ಈ ದೇಶದಲ್ಲಿ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಈ ದೇಶದಲ್ಲಿರತಕ್ಕ ರೈತರು, ಕಡುಬಡವರ ಸಮಸ್ಯೆ ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಅವರು ಆರ್ಥಿಕ ಉನ್ನತಿಯಾಗುವುದಕ್ಕೆ

ಸಾಧ್ಯವಿಲ್ಲ. ಹಾಗಾಗಿ ಈ ವ್ಯವಸ್ಥೆಯಲ್ಲಿ ನಾವೆಲ್ಲರೂ ವಿಶ್ವಾಸ ಇಡಬೇಕಾಗುತ್ತದೆ. ಅದಕ್ಕಾಗಿ ನಾನು ಹೇಳಿದೆ. ಇವತ್ತು ರಾಜ್ಯ ಸರ್ಕಾರದ ಜವಾಬ್ದಾರಿ ಬಹಳ ಮಹತ್ವ ಇದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇದೇ ಸದನದಲ್ಲಿ, ಇದೇ ಅಧಿವೇಶನದಲ್ಲಿ ಜಿಲ್ಲಾಪರಿಷತ್‌ಗೆ ತಿದ್ದುಪಡಿತರುತ್ತೇವೆ ಎಂದು. ತಿದ್ದುಪಡಿ ತರುವುದಕ್ಕೆ ಮುಂಚೆ ಈ ಎಲ್ಲಾ ವಿಚಾರಗಳ ಬಗ್ಗೆ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಇವತ್ತು ನಿಜವಾಗಿಯೂ ಪವರ್ಸ್, ಡ್ಯೂಟೀಸ್ ಅಥಾರಿಟಿ, ಇದು ಸ್ಟೇಟ್ ಲೆಜಿಸ್ಲೇಚರ್ ತೀರ್ಮಾನ ಮಾಡಬೇಕು. This has not been decided in the constitution amendment. The powers and duties have to be decided and the authority has to be decided by the Legislature. ಹಾಗಾಗಿ ತಿದ್ದುಪಡಿ ತರುವಾಗ, ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಏಕೆಂದರೆ, ಯಾವಾಗ ಜಿಲ್ಲಾಪರಿಷತ್ ಮಸೂದೆ ಜಾರಿಗೆ ತಂದೆವು, ಆಗ ಅದು ಜಂಟಿ ಸಲಹಾ ಸಮಿತಿಗೆ ರೆಫರ್ ಆಗಿತ್ತು. ಅಲ್ಲಿಂದ ಬಂದ ನಂತರ, ಈ ಸದನದಲ್ಲಿ ಪಾಸ್ ಆಯಿತು. ಅದರ ನಂತರ, ಕೆಲವು ಜನರ ಮನಸ್ಸಿನಲ್ಲಿ ಒಂದು ಸಂದೇಹ ಬಂತು. ಈ ವ್ಯವಸ್ಥೆಯಿಂದ ಶಾಸಕರ ಅಧಿಕಾರ ಕಡಿಮೆಯಾಗಿದೆ. ಶಾಸಕರ ಪಾತ್ರ ಇದರಲ್ಲಿ ಏನೂ ಇಲ್ಲ. ಇಂತಹ ಒಂದು ಸಂದೇಹ ಬರುವುದಕ್ಕೆ ಶುರುವಾಯಿತು.

ಆದರಿಂದ ತಾವೇನು ಮಾಡಿದ್ದೀರಿ ತಮ್ಮ ಸರ್ಕಾರ ಬಂದ ನಂತರ 1989ನೇ ಇಸವಿಯ ನಂತರ ಒಂದೊಂದಾಗಿ ಎಲ್ಲಾ ಅಧಿಕಾರಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಶುರು ಮಾಡಿದ್ದೀರಿ. ಇದು ಆಗಬಾರದು. ಮಹಾರಾಷ್ಟ್ರದಲ್ಲಿಯೂ ಸಹ Maharashtra Act was also progressive. But subsequently ಏನಾಯಿತು ಪ್ರಜರ್‌ನಿಂದ ಆ ಜಿಲ್ಲಾಪರಿಷತ್ತು ಅಧ್ಯಕ್ಷರು he became only a figure head. ಮತ್ತು Dy. Commissioners became so powerful they could veto any legislation.

ತಾವು ಇವತ್ತು ಅಧಿಕಾರದಲ್ಲಿದ್ದೀರಿ. ನಾವು ಅಧಿಕಾರಕ್ಕೆ ಬರಬಹುದು ಪುನಃ ತಾವು ಅಧಿಕಾರಕ್ಕೆ ಬರಬಹುದು ಆದರೆ ಇವತ್ತು ಈ ವ್ಯವಸ್ಥೆಯಲ್ಲಿ ವಿಶ್ವಾಸ ಇರಬೇಕಾಗುತ್ತದೆ. ಆದರೆ ನನಗೆ ಸಂತೋಷವಾಗಿದೆ, ಹೆಮ್ಮೆಪಡುತ್ತೇನೆ. ನಮ್ಮ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೆ ಇದರಲ್ಲಿ ಸಾಕಷ್ಟು ವಿಶ್ವಾಸ ಇದೆ. ಏಕೆಂದರೆ ನಾನು ಅವರ ಸ್ಟೇಟ್‌ಮೆಂಟ್ಸನ್ನು ನೋಡಿದ್ದೇನೆ. ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅವರಿಗೆ ವಿಶ್ವಾಸ ಇದೆ. ಅವರು ಪ್ರಾಮಾಣಿಕ ಪ್ರಯತ್ನ ಅವರು ಮಾಡುತ್ತಿದ್ದಾರೆ. ಈಗ ಪಾರ್ಲಿಮೆಂಟ್ ಏನು ಒಂದು ಸ್ಕೆಲಿಟನ್ ಕೊಟ್ಟಿದ್ದೆ, ಅದಕ್ಕೆ ತಾವು ಯಾವ ಪ್ರಕಾರ ಫ್ಲಶ್ ಮತ್ತು ಬ್ಲಡ್ ತುಂಬುತ್ತೀರಿ. ಅದು ನಿಮಗೆ ಬಿಟ್ಟಿದ್ದು. ಯಾವ ಪ್ರಕಾರ ಅಧಿಕಾರ ತಾವು ಕೊಡುತ್ತೀರಿ, ಅಥಾರಿಟಿ ಕೊಡುತ್ತೀರಿ ಅದು ನಿಮಗೆ ಬಿಟ್ಟಂತಹ ಪ್ರಶ್ನೆ. ಹಾಗಾಗಿ ತಾವು ವಿಚಾರ ಮಾಡಬೇಕಾಗಿದೆ. ಇವತ್ತು ನೀವು ಬ್ಯೂರೋಕ್ರಾಟ್ಸ್ ಮೇಲೆ ವಿಶ್ವಾಸ ಇಡಬಾರದು ಎಂದು ನಾನು ಹೇಳುತ್ತಿಲ್ಲ. That is also a wheel of the administration.

ಟೋಟಲಿ ನೀವು ಬ್ಯೂರೋಕ್ರಾಟ್ಸ್ ಮೇಲೆ ಡಿಪೆಂಡ್‌ಆಗಿ ನಾನ್‌ಅಫಿಷಿಯಲ್ಸ್ ಮೇಲೆ ಅವಿಶ್ವಾಸ ಇಟ್ಟರೆ ಆಗುವುದಿಲ್ಲ. ರೆಸ್ಪಾನ್ಸಿಬಿಲಿಟಿ ಕೊಟ್ಟರೆ ಅಕೌಂಟಬಿಲಿಟಿ ಕೇಳುವುದಕ್ಕಾಗುತ್ತದೆ. ರೆಸ್ಪಾನ್ಸಿಬಿಲಿಟಿ ಕೊಡದೆ ಅಕೌಂಟಬಿಲಿಟಿ ಹೇಗೆ ಕೇಳಬೇಕು ನಮ್ಮಲ್ಲಿರುವ ಜಿಲ್ಲಾ ಪರಿಷತ್ತು ಲೆಜಿಸ್ಲೇಷನ್ it is definitely a progressive legislation.

ಸಾಕಷ್ಟು ಅಧಿಕಾರ ನಾವು ಕೊಟ್ಟಿದ್ದೇವೆ, ಆ ಅಧಿಕಾರ ಸಂರಕ್ಷಣೆ ನೀವು ಮಾಡಬೇಕಾಗುತ್ತದೆ. ಹಾಗಾಗಿ ಹೆಚ್ಚಿನ ಅಧಿಕಾರ ಕೊಡಿ, ಆದರೆ ಅಧಿಕಾರ ವಾಪಸ್ಸು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಡಿ. ಇವತ್ತು ನಮ್ಮದು ಟೂ ಟೈರ್ ಸಿಸ್ಟಂ. ಸಂವಿಧಾನ ತಿದ್ದುಪಡಿಯಲ್ಲಿ they have provided a

three tier system but wherever population is less than 20 lakhs they can adopt two tier system ನಮ್ಮಲ್ಲಿ ಈಗ ತ್ರೀಟೈರ್ ಸಿಸ್ಟಂ ಬರಬೇಕಾಗಿದೆ. ಒಂದು ಪಂಚಾಯತ್ ಲೆವಲ್‌ನಲ್ಲಿ ಒಂದು ತಾಲ್ಲೂಕು ಲೆವಲ್‌ನಲ್ಲಿ, ಒಂದು ಜಿಲ್ಲಾ ಪರಿಷತ್ತು ಲೆವಲ್‌ನಲ್ಲಿ ಬರಬೇಕಾಗಿದೆ. ಇದಕ್ಕೆ ಡೀಲಿಮಿಟೇಶನ್ ಆಗಬೇಕಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಇವತ್ತು ತಕ್ಷಣ ಇದಕ್ಕೆ ಕ್ರಮಬದ್ಧವಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಆರ್ಟಿಕಲ್ 40ರ ಪ್ರಕಾರ ಸಂವಿಧಾನ according to directive principles, Panchyat Raj is a State subject. By constitutional amendment, only constitutional validity has been given ಇಲ್ಲಿನ ಮಸೂದೆ ಯಾವ ಪ್ರಕಾರ ಇರಬೇಕು ಯಾವ ಪ್ರಕಾರ ಅಧಿಕಾರ ಕೊಡಬೇಕು ಅದರ ಬಗ್ಗೆ Parliament has not interfered. This we should bear in mind. ಪಾರ್ಲಿಮೆಂಟ್ ಸಂವಿಧಾನಕ್ಕೆ ತಿದ್ದುಪಡಿ ಮಾಡಿದ್ದಾರೆ. ನಮಗೇನೂ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ಬಹಳ ಜನರ ಕಲ್ಪನೆ ಇರಬಹುದು ಅದು ಅಲ್ಲ. ಅವರು ಒಂದು ರೂಪರೇಷೆ ಕೊಟ್ಟಿದ್ದಾರೆ, ಸ್ಕೆಲಿಟನ್ ಕೊಟ್ಟಿದ್ದಾರೆ. ಈ ಪಂಚಾಯತ್‌ರಾಜ್ಯ ಸಿಸ್ಟಂ ಆಂಧ್ರದಲ್ಲಿದೆ, ವೆಸ್ಟ್ ಬೆಂಗಾಲ್‌ನಲ್ಲಿದೆ, ತಮಿಳುನಾಡಿನಲ್ಲಿದೆ, ಮಹಾರಾಷ್ಟ್ರದಲ್ಲಿದೆ, ಮೊನ್ನೆ ಒರಿಸ್ಸಾ. They have given a progressive legislation.

ಮಹಿಳೆಯರಿಗೆ ಒಂದನೇ ಮೂರರಷ್ಟು ರೆಪ್ರೆಸೆಂಟೇಶನ್ ಕೊಟ್ಟಿದ್ದಾರೆ. ಸಂವಿಧಾನ ತಿದ್ದುಪಡಿಯಲ್ಲಿಯೂ ಮಹಿಳೆಯರಿಗೆ ಒನ್ ಥರ್ಡ್ ರೆಪ್ರೆಸೆಂಟೇಶನ್ ಕೊಟ್ಟಿದ್ದಾರೆ. ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಅವರ ಸ್ಟೇಟ್ ಪಾಪ್ಯುಲೇಶನ್ ಏನು ಇದೆ ಆ ಬೇಸಿಸ್ ಮೇಲೆ ರೆಪ್ರೆಸೆಂಟೇಶನ್ ಕೊಟ್ಟಿದ್ದಾರೆ. I think it is an improvement over our Act. Suppose, in a mandal level, they were 1 percent, we used to give them 18%.

ನಮ್ಮ ಆಕ್ಟ್‌ನಲ್ಲೂ ಇತ್ತು. ಮಿನಿಮಮ್ 18 ಪರ್ಸೆಂಟ್ ಮಾಡಿದ್ದೆವು.

We used to give them 18%.

ಎಸ್.ಸಿ.ಎಸ್.ಟಿ.ಯವರಿಗೆ ರೆಪ್ರೆಸೆಂಟೇಶನ್ ಕೊಡಲೇಬೇಕು. But overall representation they will get. ಇಲ್ಲಿ ಅವರ ಸಂಖ್ಯೆಗೆ ಕಡಿಮೆ ಸಿಗುತ್ತಿತ್ತು. ಇವತ್ತು ಅಲ್ಲೂ ಸಹ ಪ್ರಾತಿನಿಧ್ಯ ಸರಿಯಾಗಿ ಸಿಗುವ ಅವಕಾಶ ಈ ಒಂದು ಮಸೂದೆಯಿಂದ ಬಂದಿದೆ. ಇದನ್ನು ಮಾಡುವಾಗ ಈ ನಮ್ಮ ಕರ್ನಾಟಕ ಸಿಸ್ಟಂ it is a most progressive system, ಕೆಲವು ವಿಚಾರ ನಮ್ಮ ಮಸೂದೆಯಲ್ಲಿತ್ತು. ಇವತ್ತು ಸಂವಿಧಾನ ತಿದ್ದುಪಡಿಯಲ್ಲಿ ಕೆಲವು ಪ್ರಾವಿಜನ್ಸ್ ಇದರಲ್ಲಿ ಇನ್‌ಕಾರ್ಪೊರೇಟ್ ಮಾಡಿದ್ದಾರೆ. For example, panchyat raj system features have been incorporated in the Constitutional amendement. As far as finance commission is concerned, reservation is concerned, functions of Zilla Parishad is concerned on all these three counts constitutional amendment speaks. Model of Karnataka, in principle, they have adopted ours. We are proud of it. It is our Government, it was Ramakrishna Hegde's Government which brought this legislation, a progressive legislation. We have respects and rememberance for our Neer Saab, late Nazeer Sab who was also committed to this system.

ಈ ಒಂದು constitution amendment ದಲ್ಲಿ schedule–11ರಲ್ಲಿ ಅಲ್ಲಿ functions

ಏನು ಜಿಲ್ಲಾಪರಿಷತ್ತಿಗೆ ಇರಬೇಕೆಂದು ಇದೆ. That itself was incorporated by us in Zilla Parishad Act as per Section 182. ದಿವಂಗತ ಪ್ರಧಾನಿ ರಾಜೀವ್ ಗಾಂಧಿಯವರು it was his desire to bring 64th Amendment.

He made a sincere and serious attempt also– ಆ ಸಮಯದಲ್ಲಿ ನಮ್ಮ ಪಕ್ಷದ ಅಧ್ಯಕ್ಷರಾದ ವಿ. ಪಿ. ಸಿಂಗ್‌ರವರು ಇದ್ದರು. ಆಗ ಶ್ರೀ ಸನ್ಮಾನ್ಯ ಬೊಮ್ಮಾಯಿಯವರು ನಮ್ಮ ರಾಜ್ಯದ ಮುಖ್ಯ ಮಂತ್ರಿಯವರು ಹಾಗೂ ನಮ್ಮ ಪಕ್ಷದ ಅಧ್ಯಕ್ಷರು, ಅವರ ಅಧ್ಯಕ್ಷತೆಯಲ್ಲಿ ಆಗ ಒಂದು ಸಮಿತಿ ರಚನೆ ಮಾಡಿದರು. ಈಗ ಬೊಮ್ಮಾಯಿ ಸಮಿತಿಯವರು ಒಂದು report ಕೊಟ್ಟರು. ಮಹಿಳೆಯರಿಗೆ 1/3 representation should be given in the Panchayat Raj system, and muncipalities. That is accepted by Government of India now.

ಅದು ಮಾಡಬೇಕು ನೀವು. ನೀವು ಏನು ಮಾಡುತ್ತೀರಿ ನೋಡಬೇಕು. That is accepted.

ರಾಜೀವ್ ಗಾಂಧಿಯವರು ಬಹಳ ಪ್ರಾಮಾಣಿಕವಾದ ಪ್ರಯತ್ನ ಮಾಡಿದರು. ಇಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. But it was struck in Rajya Sabha ಒಂದೆರಡು ಮೂರು ವಿಷಯದಲ್ಲಿ opposition ಮತ್ತು ಅವರಲ್ಲಿ difference ಏನು ಬಂತು ಅಂದರೆ according to his 64th Amendment elections were to be conducted by the Election Commissioner. Government was given more powers. The audit was to be done by the Auditor General. So the opposition did not agree to it. We said, it would encroach upon the rights of the Legislature. ಹಾಗಾಗಿ State election commisision ಚುನಾವಣೆ ಮಾಡಬೇಕು. State Auditor General audit ಮಾಡಬೇಕು. ಅಧಿಕಾರ legislatureಗೆ ಇರಬೇಕು. ಇಷ್ಟೇ difference ಇರಬೇಕು. ಹಾಗಾಗಿ 64th Amendment could not be passed in the Rajya Sabha. Otherwise there was total commitment by Rajiv Gandhi on this.

ಈ ಒಂದು revolutionary measure has come into force ...... revolutionary measure ..... ನಾವು ಇದರಲ್ಲಿ ಎಲ್ಲರೂ ವಿಶ್ವಾಸ ಇಡಬೇಕಾಗುತ್ತದೆ. ಮತ್ತು ಎಲ್ಲಾ ರಾಜಕೀಯ ಪಕ್ಷಗಳು ವಿಶ್ವಾಸ ಇಡಬೇಕಾಗುತ್ತದೆ. ಮತ್ತೆ ಈ system ತಾವು ಬರುವುದಕ್ಕಿಂತ ಮುಂಚೆ ನಾನು ಹೇಳುತ್ತಿದ್ದೆ ಈ systemನಲ್ಲಿ ನಮಗೆ ವಿಶ್ವಾಸ ಇಲ್ಲವಾದರೆ ಈ system ಅನ್ನು ಪ್ರಾಮಾಣಿಕವಾಗಿ ನಾವು ಜಾರಿಗೆ ತರಲಿಲ್ಲವೆಂದರೆ, ಈ ದೇಶದ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಈ ದೇಶದ ಅಭಿವೃದ್ಧಿ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಮೇಲೆ depend ಇದೆ. ಎಲ್ಲಿಯ ತನಕ ಈ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯಾಗುವುದಿಲ್ಲವೋ ಎಲ್ಲಿಯ ತನಕ ಗ್ರಾಮಾಂತರ ಪ್ರದೇಶದ ಜನರ ಅಭಿವೃದ್ಧಿಯಾಗುವುದಿಲ್ಲವೋ, ಅಲ್ಲಿಯ ತನಕ ಈ ದೇಶದ ಅಭಿವೃದ್ಧಿಯಾಗುವುದಿಲ್ಲ. ಈ systemನಲ್ಲಿ ವಿಶ್ವಾಸ ಇಡಬೇಕಾಗುತ್ತದೆ. ಮತ್ತೆ ಇದನ್ನು ಬಲಪಡಿಸಲಿಕ್ಕೆ ಎಲ್ಲಾ ರೀತಿಯಿಂದ ಎಲ್ಲಾ ರಾಜಕೀಯ ಪಕ್ಷಗಳಿಂದ ಆಗಬೇಕಾಗಿದೆ. ಹಾಗಾಗಿ ತಾವು ಎಷ್ಟು progressive measure ತರುತ್ತೀರಿ. ಅಷ್ಟು support ನಿಮಗೆ ಕೊಡುತ್ತೇವೆಂದು assurance ತಮಗೆ ನಾನು ಕೊಡುತ್ತಿದ್ದೇನೆ.

ಇದು ನಮ್ಮ ಕರ್ತವ್ಯ ಎಂದು ನಾವು ತಿಳಿದುಕೊಳ್ಳುತ್ತೇವೆ. 18 ವರ್ಷದ ಯುವಕರಿಗೆ ಮತದಾನ ಹಕ್ಕನ್ನು ನಾವು ಕೊಟ್ಟಿದ್ದೇವೆ. ನಮ್ಮ ಕಾಲದಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿ ಇದ್ದಾಗ ಆ ಅಧಿಕಾರ ನಾವು ಕೊಟ್ಟೆವು. Subsequently it was Rajiv Gandhi who gave even that voting right in the Assembly and Parliament elections also. That was

again our suggestion, our Government's suggestion. ಹಾಗಾಗಿ ಕರ್ನಾಟಕ is pioneer, Karnataka is a revolutionary State in bringing so many progessive revolutionary measures. We are all proud of this. ಎಷ್ಟೋ ವಿಚಾರವನ್ನು Central Government accept ಮಾಡಿದ್ದಾರೆ. Without any party ಪಕ್ಷಾತೀತವಾಗಿ ಮಾಡಿದ್ದಾರೆ. ಹಾಗಾಗಿ ಇದಕ್ಕೆ ನಾವೆಲ್ಲರೂ ಗಮನ ಸೆಳೆಯಬೇಕಾಗಿದೆ. ಹೆಚ್ಚಿನ ಮಹತ್ವವನ್ನೂ ಸಹಾ ಕೊಡಬೇಕಾಗಿದೆ. ಮಹಿಳೆಯರಿಗೆ 1/3 reservation ಕೊಟ್ಟಿದ್ದಾರೆ ಎಸ್ಸಿಎಸ್ಟಿ ಬಗ್ಗೆ ನಾನು ಹೇಳಿದೆ, ಅದನ್ನೂ ಕೊಟ್ಟಿದ್ದಾರೆ. ಎಸ್.ಸಿ.ಎಸ್.ಟಿ. ಗೆ ಏನು reservation ಕೊಡುತ್ತೇವೆ ? ಅದರಲ್ಲಿ agian 1/3 is for women which will be included. ಹಾಗೆಯೇ backward class ಬಗ್ಗೆ reservation ಮಾಡಬೇಕಾಗುತ್ತದೆ. It is a must, ಇವತ್ತು backward classಗೆ ಸಾಕಷ್ಟು representation ನಾವು ಕೊಡಬೇಕಾಗುತ್ತದೆ. ಇದರಲ್ಲಿ ಯಾವ ಸಂಕೋಚ ಸರ್ಕಾರ ಪಡೆಯಬಾರದು. And the constitution also provides for that. I think article 340, there is a provision also that backward classes should be given adequate representations. Backward class representation ಎಷ್ಟು ಇರಬೇಕು ? ಇದರ ಬಗ್ಗೆ ನಾನು ಒಂದೇ ಸಲಹೆ ಮಾಡುತ್ತೇನೆ, it should be scientific ಇಂಥ ಪ್ರಾತಿನಿಧ್ಯ ಕೊಡುವ ವ್ಯವಸ್ಥೆ ಈ ಮಸೂದೆಯಲ್ಲಿ ಆಗಬೇಕಾಗುತ್ತದೆ. Chair persons; chair persons will come as per rotation.

ರೊಟೇಶನ್ ಪ್ರಕಾರ ಎಸ್ಸಿಎಸ್ಟಿ ಬರುತ್ತಾರೆ, ಮಹಿಳೆಯರು ಬರುತ್ತಾರೆ, ಅದೇ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್‌ನವರೂ ಬರುತ್ತಾರೆ. ರಿಸರ್ವೇಶನ್ ಕೂಡ ಸಿಗಬೇಕಾಗಿದೆ. ರೋಟೇಶನ್ ಆಫ್ ಚೇರ್ ಪರ್ಸನ್ ಸಿಗಬೇಕಾಗಿದೆ. ಆ ದೃಷ್ಟಿಯಿಂದ ನಿಮ್ಮ ಮಸೂದೆಯೂ ಇದ್ದರೆ ಅದನ್ನು ನಾವೆಲ್ಲರೂ ಸ್ವಾಗತ ಮಾಡಬೇಕಾಗುತ್ತದೆ. ಇವೊತ್ತು ಮತ್ತೊಂದು ಒಳ್ಳೆಯ ಕೆಲಸ ಏನಾಗಿದೆ ಅಂದರೆ In the constitutional amendment, there is no provision for appointment of Administrator. ತಮ್ಮ ಕಾಲದಲ್ಲಿ ತಾವುಗಳು ಒಂದು ಆರ್ಡಿನೆನ್ಸ್ ತಂದಿದ್ದೀರಿ. Extending and curtailing the term of the Zilla Parishads and Deputy Commissioners were given powers to extend the term, that is not correct . ಯಾವಾಗ ಒಂದು ಮಸೂದೆ ಕೇಂದ್ರ ಸರ್ಕಾರ ಸಂವಿಧಾನಾತ್ಮಕ ವೆಲಿಡಿಟಿ ಕೊಟ್ಟು ಜಾರಿಗೆ ತಂದಿದೆ, ಎಲ್ಲಿ ಅಡ್ಮಿನಿಸ್ಟ್ರೇಟರ್‌ಗೆ ಯಾವುದೇ ತರಹದ ಅವಕಾಶವಿಲ್ಲ, ಅಡ್ಮಿನಿಸ್ಟ್ರೇಟರ್ ನೇಮಕ ಮಾಡಲೂ ಅವಕಾಶವಿಲ್ಲ, ನಮ್ಮ ಮಸೂದೆಯಲ್ಲಿ ಆರು ತಿಂಗಳು ಇತ್ತು, it was for six months and for another six months it could be extended. ತಾವು ಏನು ಮಾಡಿದ್ದೀರಿ ? ಅದಕ್ಕೆ ಒಂದು ಆರ್ಡಿನೆನ್ಸ್ ತಂದು,

Sri M. Y. Ghorpade:– Administrators had already been appointed. ನಾವು ಮಾಡಿದುದು ಅಲ್ಲ. ಟೆಕ್ನಿಕಲ್ ಆಗಿ ಅಮೆಂಡ್‌ಮೆಂಟ್ ಇದೆ. ಇಲ್ಲದೇ ಹೋದರೆ ಹಿಂದೆ ಏನು ಮಾಡಿತ್ತು ಅದು ಸ್ವಲ್ಪ ಇಲ್ಲೀಗಲ್ ಆಗಬಹುದಾಗಿತ್ತು. ಅಂದರೆ ಒಂದು ವರ್ಷದ ಪಿರಿಯಡ್ ಮುಗಿಯುವುದರೊಳಗೆ ನಾವು ತಿದ್ದುಪಡಿಯನ್ನು ..... it is only a techincal thing so that something done in the past does not become illegal at this point of time.

ಶ್ರೀ ಆರ್. ವಿ. ದೇಶಪಾಂಡೆ:– ನಾನು ಏನು ಹೇಳುತ್ತಿದ್ದೇನೆ ಅಂದರೆ ಸಮ್‌ಥಿಂಗ್ ತಾವು ಏನು ಮಾಡಿದ್ದೀರಲ್ಲ ? ಅದರ ಅವಶ್ಯಕತೆ ಇರಲಿಲ್ಲ. In the Zilla Parishad Act, there was a

provision for appointment of Administrator for six months which could be extended by one year. But the point was, when there is no provision for an Administrator in the Panchayat Raj ....

Sri M. Y. Ghorpade:– The simple point is, at the taluka and Zilla level, one year restriction was not there. But at the mandal level there was restriction to appoint Administrator for not more than one year. This one year restriction was only at the Mandal level and not at the taluka and district level. the same thing was made applicable at the mandal level, to get over this difficulty. It is only a technical attempt to get over that difficulty, because in the Act, it is one year at the Mandal level. But there is no one year restriction at the taluka and district level. It is only to get over that difficulty, we have brought it.

ಶ್ರೀ ಆರ್. ವಿ. ದೇಶಪಾಂಡೆ:– ನಾನು ಹೇಳುವುದೇನೆಂದರೆ, ತಾವು ಅಮೆಂಡ್‌ಮೆಂಟ್ ತರುವಾಗ instead of bringing that amendment, ಸುಪ್ರೀಂ ಕೋರ್ಟ್ ಮುಂದೆ ತಾವು ಕಮಿಟ್‌ಮೆಂಟ್ ಮಾಡಿದ್ದೀರಿ. ಜೂನ್ 1993ರೊಳಗಾಗಿ ನಾವು ಚುನಾವಣೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಮಾನ್ಯ ಸಚಿವರು ಕಮಿಟ್‌ಮೆಂಟ್ ಮಾಡಿದ್ದಾರೆ, ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ಹೇಳಿದ್ದಾರೆ. I am asking, what wrong would have been there, if you had brought an ordinance incorporating all these amendments and introducing a bill now?

ನೀವೇನು ಅಡ್ಮಿನಿಸ್ಟ್ರೇಟರ್ ಸಲುವಾಗಿನ ಒಂದು ಆರ್ಡಿನೆನ್ಸ್ ತಂದಿದ್ದೀರಿ. ಅದನ್ನು ತರುವಾಗ you could have brought the other amendments also in the ordinance. Had you brought it, you could have started the process of de-limitation so that the work could have been started before June 1993. Elections could have been held.

ಶ್ರೀ ಎಂ. ವೈ. ಘೋರ್ಪಡೆ:– ಈ ಎಲ್ಲಾ ವಿಷಯಗಳು ನಮ್ಮ ಸೇಲಿಯಂಟ್ ಫೀಚರ್ಸ್‌ಗಳು ಎಂದು ನಾನು ಹೇಳಿದ್ದೇನೆ. ಅದರಲ್ಲಿ ತಾವುಗಳು ಏನು ಹೇಳುತ್ತಾ ಇದ್ದೀರಿ ಅವುಗಳೆಲ್ಲಾ ಸೇರಿವೆ. ನಾವು ಈಗ ಹೊಸ ಕಾನೂನು ಮಾಡಲಿಕ್ಕೆ ಹೊರಟಿದ್ದೇವೆ. ಈ ಮೂರು ಹಂತಗಳಲ್ಲಿ ನಾವು ಚುನಾಯಿತ ಬಾಡೀಸನ್ನು ಮಾಡಬೇಕಾಗಿದ್ದರೆ ಒಂದು ಅಮೆಂಡ್‌ಮೆಂಟ್‌ನಿಂದ ಅಥವಾ ಆರ್ಡಿನೆನ್ಸ್‌ನಿಂದ ಮಾಡುವಂಥಾದ್ದು ಅಲ್ಲ. ವಿಧಾನಸಭೆಯು ಅಧಿವೇಶನದಲ್ಲಿರುವಾಗ ನಾವು ಆರ್ಡಿನೆನ್ಸ್ ತಂದರೆ ತಪ್ಪಾಗುತ್ತದೆ. It is a very historic enactment, new enactment that Karnataka intends to bring before this House in keeping with this 73rd amendment. I would like it to be discussed in this house and then passed. Therefore, I would be the last person to bring a new comprehensive enactment by an oridnance.

ಶ್ರೀ ವಾಟಾಳ್ ನಾಗರಾಜ್:– ಮತ್ತೆ ಯವಾಗ ತರುತ್ತೀರಿ ಅದನ್ನು.

Sri. M.Y. Ghorpade:– In the middle of this month.

Sri R.V. Deshapande:– The Hon'ble Minister is very sincere about it. I have no doubt about that. What I said was, if your intentions were to hold Elections by June 1993, you have to make preparations for de-limiation and other things. What I am stating is that when you could bring an amendment extending the term of the Administrators, what was wrong in bringing these progressive amendments through an ordinance and that could have been discussed in the House afterwards also. So, your process of de-limitation could have been started by now. But you have not done it. Sometimes, we suspect, whether the Government is really interested in conducting the Elections or whether the Government is afraid of the Elections. That is my apprehension. That is my fear. ಚುನಾವಣೆಯಲ್ಲಿ ನಾವು ಗೆಲ್ಲಬಹುದು, ನೀವು ಸೋಲಬಹುದು, ಜನ ಯಾರು ತೀರ್ಮಾನ ಮಾಡುತ್ತಾರೋ ಅವರು ಬರುತ್ತಾರೆ ಆದರೆ ಈ ವ್ಯವಸ್ಥೆಯಲ್ಲಿ ವಿಶ್ವಾಸ ಇರಬೇಕಾವರೆ.

Sri. M.Y. Ghorpade:– I have given a solemn assurance. ಏನೇ ಆಗಲಿ ಈ ವರ್ಷದ ಅಂತ್ಯದಲ್ಲಿ ಈ ಪ್ರಕ್ರಿಯೆಯನ್ನು ನಾವು ಸಂಪೂರ್ಣವಾಗಿ ಪೂರೈಸುತ್ತೇವೆ ಎಂದು ಸ್ಪಷ್ಟವಾಗಿ It is an assurance on behalf of the Government in reply to a specific question raised by him, which is on record.

Sri R. V. Deshapande:– My intention was, because there was commitment from the Government to the Supreme Court, that you would hold elections by June 1993, you have now given scope either for contempt proceedings or again you have to approach the Supreme Court and request the Supreme Court for extension of time.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಈಗಿರುವ ಕಾನೂನಿನಡಿಯಲ್ಲಿ ಚುನಾವಣೆ ನಡೆಸಬೇಕೆಂದು ಸರ್ವೋಚ್ಚ ನ್ಯಾಯಾಲಯ ತಿಳಿಸಿದೆ. ಆ ಕಾನೂನೇ ಇಲ್ಲದೆ ಹೋದರೆ ಸುಪ್ರೀಂ ಕೋರ್ಟಿನ ಡೈರೆಕ್ಷನ್ ತಾನಾಗೇ ಹೊರಟು ಹೋಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ:– ಇಲ್ಲ, ಇಲ್ಲ, ಅವರು ಚುನಾವಣೆಗಳನ್ನು ಮಾಡಬೇಕೆಂದು ತಿಳಿಸಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳಿದ್ದಾರೆ ಅದು ಸರಿಯಲ್ಲ, ಸಂವಿಧಾನದ ತಿದ್ದುಪಡಿಯಲ್ಲಿ ಹೇಳಿದೆ, ಎಲ್ಲಿಯವರೆಗೆ ಈ ತಿದ್ದುಪಡಿ ಅಂಗೀಕಾರ ಆಗುವುದಿಲ್ಲ ಮತ್ತು ಅದು ಕಾನೂನಾಗಿ ಬಂದ ಮೇಲೆ ಒಂದು ವರ್ಷದವರೆಗೆ ಎಲ್ಲಾ ಕಾನೂನುಗಳು ಅಸ್ತಿತ್ವದಲ್ಲಿರುತ್ತವೆ. ಆದ್ದರಿಂದ ಅವರು ಹೇಳುವುದು ಸರಿಯಲ್ಲ.

ಶ್ರೀ ಎಂ. ವೈ. ಘೋರ್ಪಡೆ:– 1971ರ ಸೆನ್ಸಸ್ ಪ್ರಕಾರ ನಾವು ಚುನಾವಣೆ ನಡೆಸುವುದಕ್ಕಾಗುವುದಿಲ್ಲ, 81ನೇ ಸೆನ್ಸಸ್ ನಮ್ಮ ಕಡೆ ಇದ್ದು 91 ಸೆನ್ಸಸ್ ಪ್ರಕಾರ ಮಾಡಬೇಕೆಂದು ಎಲ್ಲರ ಅಪೇಕ್ಷೆ, 91 ಸೆನ್ಸಸ್ ಫಿಗರ್ಸ್ ನಮ್ಮ ಕಡೆ ಇರುವಾಗ ಅದರ ಆಧಾರದ ಮೇಲೆ ನಾವು

ಡಿ-ಲಿಮಿಟೇಶನ್ ಮಾಡುವುದು ಸೂಕ್ತ ಹಳೇ ಸೆನ್ಸಸ್ ಮೇಲೆ ಮಾಡುವುದು ಸರಿಯಿಲ್ಲವೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಶ್ರೀ ಹೆಚ್. ಏಕಾಂತಯ್ಯ:-- ಬೇಡ ಎಂದು ನಾವು ಹೇಳುವುದಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ:– ನಾನು ಏನು ಹೇಳುತ್ತಿದ್ದೇನೆ ಎಂದರೆ ಸುಪ್ರೀಂ ಕೋರ್ಟ್ ತಮಗೆ ಎಲೆಕ್ಷನ್ ಮಾಡಿ ಎಂದು ಹೇಳಿದರು.

Your intentions could have been fulfilled if you had complied with the Supreme Court Order, provided, either you should have brought amendments in the last session or brought an ordinance so that the process of de–limitation could have been started. But you have not done it. So, there is a scope for suspicion.

ಸುಪ್ರೀಂ ಕೋರ್ಟ್‌ನವರು ತಮಗೆ ಎಲೆಕ್ಷನ್ ಮಾಡಿ ಎಂದು ಹೇಳಿದರು, ಅಷ್ಟರಲ್ಲಿ ಗವರ್ನರ್ ಅಡ್ರೆಸ್‌ಗೆ ನಾನೂ ಸಿಂಧ್ಯಾ ಅವರು ಒಂದು ತಿದ್ದುಪಡಿ ಮೂವ್ ಮಾಡಿದ್ದೇವೆ. ಈಗ ಚುನಾವಣೆ ಆಗಬೇಕಾಗಿದೆ. ಚುನಾವಣೆಯಲ್ಲಿ ನಾವು ಗೆಲ್ಲಬಹುದು ನೀವು ಗೆಲ್ಲಬಹುದು, ಸೋಲು ಗೆಲುವನ್ನು ಜನ ತೀರ್ಮಾನ ಮಾಡುತ್ತಾರೆ.

But you have to take care that Zilla Parishats should be the Governing bodies. Sufficient administrative and finance powers will have to be given. But what has happened today? I do not know whether you have thought over that. What are the resources of Zilla Parishats?

Some independent financial powers and administrative powers should also be given.

ಫಂಕ್ಷನ್ ಮಾಡುವುದಕ್ಕೆ ಅವರಿಗೆ ಅಧಿಕಾರ ಇರಬೇಕು. ರಿಸೋರ್ಸ್ ಮೊಬಿಲೈಜ್ ಮಾಡುವುದಕ್ಕೂ ಕೆಲವು ಅಧಿಕಾರವನ್ನು ನೀವು ಕೊಡಬೇಕು. ಮಂಡಲದಲ್ಲಿ ಏನು ಆಗಿದೆ. Small population of three thousand or four thousandಗೆ ಮಂಡಲ ಮಾಡಬೇಕು ಎಂದು ಹೇಳುತ್ತಾರೆ. Whether they will be viable? I am worried on that. ನನಗೆ ಅದರ ಬಗ್ಗೆ ಬಹಳ I am worried about that. ಇವತ್ತು ನಮ್ಮ ಮಲೆನಾಡು ಜಿಲ್ಲೆಯಲ್ಲಿ ನಮ್ಮ ಮಂಡಲ ರಚನೆ ಏನಾಗಿದೆ, ಅದು ವಯಬಲ್ ಇಲ್ಲ. ನಾವು ಅನುದಾನ ಎಂದು ಹೇಳುತ್ತೇವಲ್ಲಾ, ಅದನ್ನು ನಾವು ಏನು ನಮ್ಮ ಮಂಡಲಕ್ಕೆ ಕೊಡುತ್ತೇವೆ That is not sufficient even to pay their salaries.

ನಿಮ್ಮ ಜವಹರ್ ರೋಜ್‌ಗಾರ ಯೋಜನೆಯಿಂದ ಹಣ ಏನು ಬರುತ್ತದೆ, ಅದರಲ್ಲಿ ಮಂಡಲದಿಂದ ಸಣ್ಣ ಪುಟ್ಟ ಕೆಲಸ ಮಾಡುವುದಕ್ಕೆ ಸಾಧ್ಯವಾಗಿದೆಯೇ ವಿನಹಾ ಇವತ್ತು ಇದಕ್ಕೆ ಒಂದು ಫೈನಾನ್ಷಿಯಲ್ ಸ್ಟ್ರೆಂಥ್ ಬಂದಿಲ್ಲ. ಎಷ್ಟು ನಿಮ್ಮ ಪಾಪ್ಯುಲೇಷನ್ ಕಡಿಮೆ ಇದೆ, ಅಷ್ಟು ಪ್ರಾಬ್ಲಮ್ಸ್ ಕ್ರಿಯೇಟ್ ಆಗಬಹುದು. There were some powers for Mandals; they could have generated income from the Fairs, Fisheries etc., There were so many scopes for Mandals to raise resources for Mandals and Zilla Parishats.

Therefore you have lots to give certain responsibilities, duties, financial powers wherein they can also build up resources and try to stand on their own legs also.

ಅಲ್ಲಿಮೇಟ್‌ಲಿ ತನ್ನ ಕಾಲ ಮೇಲೆ ತಾನು ನಿಲ್ಲುವುದಕ್ಕೆ ಸಾಧ್ಯವಾಗಬೇಕು. They should not be like Municipalities. ಮುನಿಸಿಪಾಲಿಟಿ ಪರಿಸ್ಥಿತಿ ಏನಾಗಿದೆ. All Town Municipalities are under the mercy of the Government. ಆಕ್ಟ್ರಾಯ್ ಅಬಾಲಿಷ್ ಆದನಂತರ ಮುನಿಸಿಪಾಲಿಟಿ ಗತಿ ಏನಾಗಿದೆ ? There is nothing.

No Development. ಡೆವಲಪ್‌ಮೆಂಟ್ ಗ್ರ್ಯಾಂಟ್ ಇಲ್ಲಿಂದ ಹೋಗತ್ತದೆ, ಏನು ಆಕ್ಟ್ರಾಯ್ ಕಮೀಷನ್ ಹೋಗುತ್ತದೆ, That is not even sufficient to pay salaries. ಏಕೆಂದರೆ except house tax, there is no other revenue. ಹಾಗಾಗಿ ಜಿಲ್ಲಾ ಪರಿಷತ್ತಾಗಲಿ, ಮುನಿಸಿಪಾಲಿಟಿಯಾಗಲಿ, ಮಂಡಲ ಆಗಲಿ, ಸಿಟಿ ಮುನಿಸಿಪಾಲಿಟಿಯಾಗಲಿ ಅವರಿಗೆ ಒಂದು ಹೆಚ್ಚಿನ ಶಕ್ತಿ ಫೈನಾನ್ಸ್ ಶಕ್ತಿ ತುಂಬುವುದಕ್ಕೆ ತಾವು ಪ್ರಯತ್ನ ಮಾಡಬೇಕು ತಮಗೆ ನಾನು ಸಲಹೆ ಮಾಡುತ್ತಿದ್ದೇನೆ. ಮತ್ತು ಈ ಪ್ಲಾನಿಂಗ್ ಬೋರ್ಡ್, ಬಾಡಿಯನ್ನು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಮಾಡುತ್ತಿದ್ದೀರಿ. ಇದನ್ನು ಮಾಡುವಾಗ I would request you take care ಏನು ಜಿಲ್ಲಾಪರಿಷತ್ತಿನಲ್ಲಿ ಯಾರು ಇರುತ್ತಾರೆ. ನಮ್ಮ ಪಬ್ಲಿಕ್ ರೆಪ್ರೆಸೆಂಟೇಟೀವ್ಸ್ ಇರುತ್ತಾರೆ. ಅವರು ಏನು ಸಲಹೆ ಸೂಚನೆಯನ್ನು ಕೊಡುತ್ತಾರೆ, ಅದಕ್ಕೆ ಇಲ್ಲಿ ಗೌರವ ಸಿಗಬೇಕು. ನಾಳೆ ಜಿಲ್ಲಾ ಪರಿಷತ್ತು ಕೂಡ ಈ ಪರ್ಟಿಕ್ಯುಲರ್ ವರ್ಕ್ಸ್ ಆಗಬೇಕು ಎನ್ನುವ ನಿರ್ಣಯವನ್ನು ತೆಗೆದುಕೊಂಡಾಗ If the Planning Body decides contrary to that, that will be dangerous. That you have to take care. ಜಿಲ್ಲಾ ಸಂಸತ್ತಿನಲ್ಲಿ ಪಬ್ಲಿಕ್ ರೆಪ್ರೆಸೆಂಟೇಟೀವ್ಸ್ ಏನು ಹೇಳುತ್ತಾರೆ, ಎಲೆಕ್ಟೆಡ್ ರೆಪ್ರೆಸೆಂಟೇಟೀವ್ಸ್ ಏನು ಹೇಳುತ್ತಾರೆ, ಅದಕ್ಕೆ ಗೌರವ ಪ್ಲಾನಿಂಗ್ ಬಾಡಿಯಲ್ಲೂ ಸಿಗಬೇಕು. There is no necessity of Zilla Parishats. ಬರೀ ಒಂದು ಪ್ಲಾನಿಂಗ್ ಬಾಡಿ ಇಟ್ಟುಕೊಂಡು ಹೋಗಬಹುದು. ಹಾಗಾಗಿ The Planning Body should also give utmost consideration to the proposals of the Zilla Parishats. That is also very important.

ಆ ದೃಷ್ಟಿಯಿಂದ ಇವತ್ತು ಈ ಲೆಜಿಸ್ಲೇಷನ್ ಏನು ಇದೆ, ಕಾನ್‌ಸ್ಟಿಟ್ಯೂಟ್ ಅಮೆಂಡ್‌ಮೆಂಡ್ ಏನು ಇದೆ, ಅದನ್ನು ಸ್ವಾಗತ ಮಾಡುತ್ತಿದ್ದೇವೆ. ಅಷ್ಟೇ ಅಲ್ಲ ಏನು ಒಂದು ಪಂಚಾಯತ್‌ರಾಜ್ ಮತ್ತು ಜಿಲ್ಲಾಪರಿಷತ್ತು ಇದರ ಬಗ್ಗೆ ಏನು ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಆಗಿದೆ, ಅದೇ ಲೈನ್ಸ್‌ನಲ್ಲಿ ಮುನಿಸಿಪಾಲಿಟಿಯಲ್ಲೂ ಆಗಿದೆ. ಅದರಲ್ಲಿ ಏನೂ ಹೆಚ್ಚಿನ ಭಿನ್ನಾಭಿಪ್ರಾಯ ಇಲ್ಲ. ಹಾಗಾಗಿ ಮುನಿಸಿಪಾಲಿಟಿ ಎಂದು ಹೆಚ್ಚು ಹೇಳುವುದಕ್ಕೆ ಹೋಗಿಲ್ಲ. ಎರಡೂ 72, 73 ಅಮೆಂಡ್‌ಮೆಂಟ್ ಬಿಲ್ಸ್ ಇವತ್ತು ಏನು ತಾವು ರೆಸಲ್ಯೂಷನ್ ಮೂವ್ ಮಾಡಿದ್ದೀರಿ, ಅದಕ್ಕೆ ನಾವು ಸ್ವಾಗತ ಮಾಡುತ್ತೇವೆ.

ಅದಕ್ಕೆ ನಾವು ಬೆಂಬಲವನ್ನು ಕೊಡುತ್ತೇವೆ. ಎಂಟೈರ್ ಕಂಟ್ರಿಯಲ್ಲಿ ಕರ್ನಾಟಕ ಸರ್ಕಾರ ಈಗಾಗಲೇ ಒಂದು ಪ್ರೊಗ್ರೆಸ್ಸೀವ್ ಲೆಜಿಸ್ಲೇಷನ್ ಮಾಡಿದೆ. ಕರ್ನಾಟಕ has a place of pride so far as Zilla Parishats and decentralisation is concerned.

ಆ ಸ್ಥಾನಮಾನ ಗೌರವ ನಮಗೆ ಏನು ಸಿಕ್ಕಿದೆ, ಅದಕ್ಕೆ ಕಳಂಕ ನಿಮ್ಮ ಕಡೆಯಿಂದ ಬರಬಾರದು. ಆ ಒಂದು ಎಚ್ಚರಿಕೆಯನ್ನು ತಾವು ತೆಗೆದುಕೊಂಡು ತಾವು ಒಂದು ಪ್ರೊಗ್ರೆಸ್ಸೀವ್ ಲೆಜಿಸ್ಲೇಷನ್ ತನ್ನಿ.

ಹೆಣ್ಣು ಮಕ್ಕಳಿಗೆ ಈಗಾಗಲೇ ರಿಸರ್ವೇಷನ್ ಪ್ರಾವಿಷನ್ ಇದೆ, ಎಸ್.ಸಿ.ಎಸ್.ಟಿ. ಗೂ ಇದೆ, ಬ್ಯಾಕ್ ವರ್ಡ್ಸ್‌ಗೂ ಸಹಾ ಸಾಕಷ್ಟು ಪ್ರಾವಿಷನ್ ಕೊಟ್ಟು ಒಂದು ಪ್ರೊಗ್ರೆಸ್ಸೀವ್ ಲೆಜಿಸ್ಲೇಷನ್ ತಾವು ತರುತ್ತೀರಿ ಎಂದು ನನಗೆ ವಿಶ್ವಾಸ ಇದೆ. ಇಷ್ಟು ಹೇಳಿ ಮತ್ತೊಮ್ಮೆ ಇದನ್ನು ಸ್ವಾಗತ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

4.45 ಪಿ.ಎಂ.

† ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಕಾನ್ಸ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಬಿಲ್ ಸ್ವಾಗತ ಮಾಡಿರುವುದು ಬಹಳ ಸ್ವಾಗತಾರ್ಹವಾದ ವಿಷಯ. ಕಾರಣ ಇಷ್ಟೇ. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳೆಲ್ಲಾ ಸಹಕಾರ ಕೊಟ್ಟು ಇದನ್ನು ಅವಿರೋಧವಾಗಿ ಪಾಸ್ ಮಾಡಿದ್ದಾರೆ. ಅವರು ಹೇಳಿದಷ್ಟು ಡೀಟೇಲ್ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕಾಂಟ್ರಿಬ್ಯೂಷನ್ನೂ ಇದೆ, ಶ್ರೀ ನಜೀರ್ ಸಾಬ್‌ರವರ ಕಾಂಟ್ರಿಬ್ಯೂಷನ್ನೂ ಇದೆ. ಆದರೆ ಅತೀ ಹೆಚ್ಚಾಗಿ, ಅತೀ ಹೆಚ್ಚು ರಿಸ್ಕ್ ತೆಗೆದುಕೊಂಡು ಶ್ರೀಮಾನ್ ರಾಜೀವ್ ಗಾಂಧಿಯವರು 1989ನೇ ಇಸವಿಯಲ್ಲಿ ಈ ಮಸೂದೆಯನ್ನು ತಂದಾಗ ಬಹುಶಃ ಲೋಕಸಭೆಯಲ್ಲಿ ಪಾಸಾಗಿ ರಾಜ್ಯ ಸಭೆಯಲ್ಲಿ ಬಿದ್ದು ಹೋಯಿತು. ಅದರ ಒಂದು ಹಿನ್ನೆಲೆಯಲ್ಲಿ ಲೋಕಸಭೆಯ ಚುನಾವಣೆ ನಡೆದಿದ್ದು ತಮಗೆಲ್ಲಾ ಗೊತ್ತಿರತಕ್ಕ ವಿಚಾರ. ಆದರೆ ಶ್ರೀ ನರಸಿಂಹರಾಯರು ಬಂದ ಮೇಲೆ ಅದನ್ನು ಏನಾದರೂ ಮಾಡಿ ಪಾಸ್ ಮಾಡಬೇಕೆಂದು ಹೇಳಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ, ವಿರೋಧ ಪಕ್ಷದವರನ್ನೆಲ್ಲಾ ಸೇರಿಸಿ, ಗ್ರಾಮರಾಜ್ಯ, ರಾಮ ರಾಜ್ಯ ಎನ್ನುವ ಗಾಂಧೀಜಿಯವರ ಕನಸು ಏನು ಇತ್ತು ಅದನ್ನು ಜಾರಿಗೆ ತರಬೇಕೆಂದು ನಿಶ್ಚಯ ಮಾಡಿದರು. ನಂತರ ಅವರು ವಿರೋಧ ಪಕ್ಷದ ನಾಯಕರನ್ನು ಕರೆಯಿಸಿ ಮೊದಲೇ ಅವರಿಗೆಲ್ಲಾ ಸಮಾಧಾನ ಮಾಡಿ, ಯಾವ್ಯಾವ ಕಾಲದಲ್ಲಿ ಏನು ಮಾಡಬೇಕೆಂದು ಹೇಳಿ ಈ ಕಾನೂನನ್ನು ಪಾಸ್ ಮಾಡಿದ್ದಾರೆ. ಇಲ್ಲಿ ಮೂರ್ನಾಲ್ಕು ವಿಚಾರಗಳು ನಮಗೆ ಹೊಸದಾಗಿ ಕಾಣುತ್ತವೆ. ಬಹುಶಃ ನಮ್ಮ ಹಿಂದಿನ ಜಿಲ್ಲಾ ಪರಿಷತ್ ಮಸೂದೆಯಲ್ಲಿ ರಿಸರ್ವೇಷನ್ಸ್ ಇರಲಿಲ್ಲ. ಅಂದರೆ ಸಾಮಾಜಿಕ ನ್ಯಾಯ ಎಂದು ನಾವು ಏನು ಹೇಳುತ್ತೇವೆ, ಷೆಡ್ಯೂಲ್ಡ್ ಕ್ಯಾಸ್ಟ್‌ಗಾಗಲೀ ಅಥವಾ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಆಗಲಿ ಅಥವಾ ಸ್ತ್ರೀಯರಿಗೆ ಆಗಲಿ 25 ಪರ್ಸೆಂಟ್ ಎಕ್ಸಿಸ್ಟಿಂಗ್ ಆಕ್ಟ್‌ನಲ್ಲಿತ್ತು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 33 ಪರ್ಸೆಂಟ್ ಮಾಡಿದ್ದಾರೆ. ಅಂದರೆ ಮೂರನೇ ಒಂದು ಭಾಗ ಸೆಂಟ್ರಲ್ ಆಕ್ಟ್ ಏನು ಇದೆ, ಅವರು ಏನು ಸ್ಕೆಲಿಟನ್ ಎಂದು ವಿರೋಧ ಪಕ್ಷದ ನಾಯಕರು ಏನು ಹೇಳಿದರು. ಅದಕ್ಕೆ ನಾವು ಫ್ಲೆಶ್, ಕೈ ಕಾಲು, ಕಣ್ಣು ಎಲ್ಲ ನಾವು ತುಂಬಬೇಕು ಎಂದು ಹೇಳಿದರು ಅದು ಸತ್ಯ. ಅದರಲ್ಲಿ 25 ಪರ್ಸೆಂಟ್ ಇದ್ದದ್ದು ರಾಜೀವ್ ಗಾಂಧಿಯವರು 33 ಪರ್ಸೆಂಟ್ ಮಾಡಿದ್ದಾರೆ. ಅದು ಬಹಳ ಸ್ವಾಗತಾರ್ಹ. ಸದಸ್ಯತ್ವದಲ್ಲಿ ಮಾತ್ರವಲ್ಲ, ಈವನ್ ಛೇರ್ ಪರ್ಸನ್ಸ್‌ನಲ್ಲಿ ಕೂಡ ಮಾಡಿದ್ದಾರೆ. ಉದಾಹರಣೆಗೆ ನಮ್ಮ ರಾಜ್ಯದಲ್ಲಿ 2532 ಮಂಡಲಗಳು ಇವೆ. ಅದರಲ್ಲಿ ಇವತ್ತು ಮೂರನೆಯ ಒಂದು ಭಾಗ ಸ್ತ್ರೀಯರು ಪ್ರಧಾನರಾಗುತ್ತಾರೆ. ಆಮೇಲೆ ಶೆಡ್ಯೂಲ್ಡ್ ಕ್ಯಾಸ್ಟ್‌ನವರು ಸುಮಾರು 850 ಪ್ರಧಾನರಾಗುತ್ತಾರೆ. 2532ರಲ್ಲಿ ಅವರ ಒಂದು ಪಾಪ್ಯುಲೇಷನ್ ಪ್ರಕಾರ in proportion to the population in the State

ಸ್ವಲ್ಪ ಹೆಚ್ಚು ಕಡಿಮೆ ಅವರು ಶೆಡ್ಯೂಲ್ಡ್ ಕ್ಯಾಸ್ಟ್ ಆಗುತ್ತಾರೆ. ಆದರೆ ಈಗ ಎಕ್ಸಿಸ್ಟಿಂಗ್ ಆಕ್ಟ್ ಪ್ರಕಾರ ಶೆಡ್ಯೂಲ್ಡ್ ಕ್ಯಾಸ್ಟ್‌ನ ಪ್ರಧಾನರು ಎಷ್ಟು ಇದ್ದಾರೆ ಎಂದರೆ not even 20 out of 532 s.c., people have become Pradhans. ಅಂದರೆ ಸಾಮಾಜಿಕ ನ್ಯಾಯವನ್ನು ನಾವು ಎಲ್ಲಿ ಕೊಡುತ್ತೇವೆಂದು ನೀವು ಅರ್ಥ ಮಾಡಿಕೊಳ್ಳಬೇಕು. ಇದರ ಜೊತೆಗೆ ಈ ಬ್ಯಾಕ್‌ವರ್ಡ್ ಕ್ಲಾಸ್‌ಗೆ

ಆಪ್‌ಷನ್ ಕೊಟ್ಟಿದ್ದಾರೆ. ಆಪ್‌ಷನ್‌ಕೊಟ್ಟರೂ ಈ ಆಕ್ಟ್ ಪ್ರಕಾರ ಕಂಪಲ್ಸರಿಯಾಗಿ ನಾವು ಮಾಡಬೇಕಾಗುತ್ತದೆ. ಬ್ಯಾಕ್‌ವರ್ಡ್ ಕ್ಲಾಸ್‌ನವರು ಬೇಕಾದಷ್ಟು ಜನ ಇವತ್ತು ಇದ್ದಾರೆ. ಅವರಿಗೂ ಸಹ ನಾವು ಕಂಪಲ್ಸರಿಯಾಗಿ ಇಷ್ಟೇ ಪರ್ಸೆಂಟ್ ಎಂದು ಮಾಡಬೇಕಾಗುತ್ತದೆ. ಅಲ್ಲಿ ಒಂದೇ ಒಂದು ಚಿಕ್ಕತೊಡಕು ಎಂದರೆ ನಮ್ಮ ರಾಜ್ಯದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್‌ನ ಸೆನ್ಸಸ್ ಇಲ್ಲ. ನನಗೆ ತಿಳಿದ ಮಟ್ಟಿಗೆ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಛೇರ್‌ಮನ್ ಶ್ರೀ ವೆಂಕಟಸ್ವಾಮಿ ಅವರು ನೀಡಿದಂತಹ ರಿಪೋರ್ಟ್ ಏನು ಇದೆ, ಅದು 1984ರಲ್ಲಿ ಪಬ್ಲಿಶ್ ಆಗಿದೆ. ಅದರಲ್ಲಿ ಎಲ್ಲಾ ಜಿಲ್ಲೆಗಳ ಪ್ರತಿಯೊಂದು ಜಿಲ್ಲಾವಾರು ಬ್ಯಾಕ್‌ವರ್ಡ್ ಕ್ಲಾಸ್‌ನ್ನು ಪರಿಗಣಿಸಿದ್ದಾರೆ. 53 ಕ್ಯಾಸ್ಟ್‌ನ್ನು ಅದರಲ್ಲಿ ಬ್ಯಾಕ್‌ವರ್ಡ್‌ಕ್ಲಾಸ್ ಎಂದು ಪರಿಗಣಿಸಿದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ 32 ಪರ್ಸೆಂಟ್ ನಮ್ಮ ರಾಜ್ಯದಲ್ಲಿ ಬ್ಯಾಕ್‌ವರ್ಡ್ ಕ್ಲಾಸಸ್ ಬರುತ್ತಾರೆ. 32 ಪರ್ಸೆಂಟ್ ಎಂದರೆ it includes the city population also, not the rural population.

ಸಿಟಿ ಪಾಪ್ಯುಲೇಷನ್ ಇವತ್ತು ನಾಲ್ಕು ಕೋಟಿ 48 ಲಕ್ಷದಲ್ಲಿ ಒಂದು ಕೋಟಿ 28 ಲಕ್ಷ ಸಿಟಿ ಪಾಪ್ಯುಲೇಷನ್ ಇದ್ದಾರೆ. According to 91 Census, we have to minus the city population. ಏಕೆಂದರೆ ಅವು ಮುನಿಸಿಪಾಲಿಟಿ, ಕಾರ್ಪೊರೇಷನ್ ಆಂಡ್ ಮೆಟ್ರೋಪಾಲಿಟನ್‌ನಲ್ಲಿ ಬರುತ್ತಾರೆ. We have to minus the city population. ಆ ರೂರಲ್ ಏರಿಯಾದಲ್ಲಿ, ಎಷ್ಟು ಬರುತ್ತದೋ in proportion to the backward classes ಎಂದು ನಾವು ಮಾಡಬೇಕಾಗುತ್ತದೆ. ಇನ್ನೊಂದು ನಾನು ಕ್ಯಾಲ್‌ಕ್ಯುಲೇಟ್ ಮಾಡಿದ್ದೇನೆ. ಉದಾಹರಣೆಗೆ ಬೆಳಗಾಂ ಧಾರವಾಡ ಜಿಲ್ಲೆಯಲ್ಲಿ 58 ರಿಂದ 60 ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸಸ್ ಇದ್ದರೆ, ಮಂಡ್ಯ ಮತ್ತು ಹಾಸನ ಜಿಲ್ಲೆಯಲ್ಲಿ 23 ಪರ್ಸೆಂಟ್ ಇದ್ದಾರೆ. ಮಂಡ್ಯ ಮತ್ತು ಹಾಸನ ಜಿಲ್ಲೆಯಲ್ಲಿ 32 ಪರ್ಸೆಂಟ್ ಎಂದು ನಾವು ಏನು ಹೇಳುತ್ತೇವೆ ಬ್ಯಾಕ್‌ವರ್ಡ್ ಕ್ಲಾಸ್ ಅನ್ನು we cannot implement blanketly ಎಲ್ಲಾ ಕಡೆ 32 ಪರ್ಸೆಂಟ್ ಕೊಡುವುದಕ್ಕೆ ಆಗುವುದಿಲ್ಲ. ಯಾವುದೋ ಒಂದು ಮಂಡಲ್ ಇರುತ್ತದೆ, ಅಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಇರುವುದಿಲ್ಲ. ಎಂದು ಇಟ್ಟುಕೊಳ್ಳೋಣ. ಒಂದು ನೂರು ಜನ ಇರುತ್ತಾರೆ, we cannot insist 32% there.

ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಏನು ಹೇಳುತ್ತಾರೆ. ಅವರು ಬಿಲ್ ತರುವಾಗ in proportion to the population–you have to mention, that is specific.

ಇಲ್ಲದೇ ಇದ್ದರೆ ಏನಾಗುತ್ತದೆ ಎಂದರೆ ನಾಳೆ ಹೈಕೋರ್ಟಿಗೆ ಹೋಗುತ್ತಾರೆ. ಏಕೆಂದರೆ ಮಂಡ್ಯ ಜಿಲ್ಲೆಯಲ್ಲಿ 23 ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಇದೆ You cannot insist 32%. ಬೆಳಗಾಂ ಜಿಲ್ಲೆಯಲ್ಲಿ 60 ಪರ್ಸೆಂಟ್ ಇದ್ದು you cannot insist 32%. ಮಿಕ್ಕದ್ದನ್ನು ಅವರಿಗೆ ಅನ್ಯಾಯ ಮಾಡುವುದು ಚೆನ್ನಾಗಿಲ್ಲ. ಆದ್ದರಿಂದ ಅವರು ಬಿಲ್ ತರುವಾಗ 'in proportion to the population in a particular area, –taluk, distirct or Mandal.'

ಆ ರೀತಿ ತಂದರೆ ಉತ್ತಮ ಎಂದು ಹೇಳುತ್ತೇನೆ. ಆಮೇಲೆ ಇನ್ನು ಒಂದು ವಿಷಯ. ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಪಿ. ಜಿ. ಆರ್. ಸಿಂಧ್ಯರವರು ನಿನ್ನೆ ಚುನಾವಣೆಗಳನ್ನು ಜೂನ್ ಕೊನೆಯ ಒಳಗೆ ಮಾಡಬೇಕು ಎಂದು ಹೇಳಿದರು. ಮಾನ್ಯ ಮಂತ್ರಿಗಳು ಪತ್ರಿಕಾ ಹೇಳಿಕೆಯನ್ನು ನೀಡಿ, ಡಿಸೆಂಬರ್ ಕೊನೆಯೊಳಗೆ ಚುನಾವಣೆ ನಾವು ಮಾಡಿಯೇ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಹೇಳಿರುವುದು ಸರಿಯಾಗಿದೆ. ಕಾರಣ ಏಕೆಂದರೆ ನಾವು ರಿಸರ್ವೇಷನ್ ಕೊಡದೇ ಇದ್ದರೆ ಸಾಮಾಜಿಕ ನ್ಯಾಯವನ್ನು ಕೊಟ್ಟ ಹಾಗೆ ಆಗುವುದಿಲ್ಲ. ಈವತ್ತು ಜೂನ್‌ನಲ್ಲಿ ಮಾಡುವುದಿದ್ದರೆ ನಾವು ಈ ಅಮೆಂಡ್‌ಮೆಂಟನ್ನು ತರುವುದಕ್ಕೆ ಆಗುವುದಿಲ್ಲ. 1971ರ ಜನಗಣತಿ ಪ್ರಕಾರ ಇದೆ,

ಅದರಿಂದ ಎಕ್ಸಿಸ್ಟಿಂಗ್ ಆಕ್ಟ್‌ನಲ್ಲಿ ನಾವು ಮಾಡುವುದಕ್ಕೆ ಆಗುವುದಿಲ್ಲ. 71ರಿಂದ 91ರವರೆಗೆ ಅನೇಕ ಜಾತಿಗಳು ಇದರಲ್ಲಿ ಸೇರಿದೆ. ಇವತ್ತು ಶೆಡ್ಯೂಲ್ಡ್ ಕ್ಯಾಸ್ಟ್ ಆಗಲೀ, ಅಥವಾ ಬೇರೆ ಕ್ಯಾಸ್ಟ್ ಆಗಲಿ ನಾವು ಅದನ್ನು ಐಡೆಂಟಿಫೈ ಮಾಡಬೇಕಾಗುತ್ತದೆ. ಆದಕ್ಕೋಸ್ಕರ ನನ್ನ ಒಂದು ಅಭಿಪ್ರಾಯದಲ್ಲಿ ಅವರು ತೆಗೆದುಕೊಂಡಿರುವಂತಹ ನಿಲುವು ಸರಿಯಾಗಿದೆ.

ಮೂರನೆಯದು ನಮ್ಮ ಒಂದು ಡೀ-ಲಿಮಿಟೇಷನ್ ಪ್ರಾವಿಜನ್ ಏನು ಇದೆ. ಅವರ ಮನಸ್ಸಿನಲ್ಲಿ ಇರುವುದು ಇದರ ಎರಡರಷ್ಟು ಮಾಡುವುದು ಉತ್ತಮವೆಂದು. ನಮ್ಮ ತಾಲ್ಲೂಕಿನಲ್ಲಿ ಒಂದು ಮಂಡಲ ಇದೆ, 45 ಹಳ್ಳಿಗಳು ಅದರಲ್ಲಿ ಇದೆ. ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಬೇಕಾಗಿದ್ದರೆ ಮೂರು ಬಸ್ ಛೇಂಜ್ ಮಾಡಬೇಕು. ಆ 45 ಹಳ್ಳಿಗಳನ್ನು ಸಾಧ್ಯವಾದರೆ ಅರ್ಧರ್ಧ ಮಾಡಬಹುದು. 2532 ಮಂಡಲ ಇದೆ. ಐದು ಸಾವಿರ ಅಥವಾ ಆರು ಸಾವಿರಕ್ಕೆ ಒಂದು ಮಂಡಲದಂತೆ ಮಾಡಬಹುದು. ಮೊನ್ನೆ ದಿವಸ ಅವರು ಪತ್ರಿಕಾ ಹೇಳಿಕೆಯಲ್ಲಿ ಐದು ಸಾವಿರದಿಂದ ಎಂಟು ಸಾವಿರ ಎಂದು ಹೇಳಿದ್ದಾರೆ ಅದು ಸರಿಯಾಗಿದೆ ಎಂದು ನನಗೆ ಅನಿಸುತ್ತದೆ. ಇವೆಲ್ಲದರ ಜೊತೆಗೆ ತಾವು ಜೂನ್ ಕೊನೆಯೊಳಗೆ ಸೆನ್ಸಸ್, ಇನ್ನೊಂದು ರಿಸರ್ವೇಷನ್ಸ್, ಮತ್ತೊಂದು 25ರೊಳಗೆ ಪ್ಯಾರೆಲಲ್ ಆಫ್ ಈವೆಂಟ್ಸ್ ಅನ್ನು ಜೂನ್‌ನಲ್ಲಿ ಮಾಡಬೇಕಾಗಿದ್ದರೆ ಅನೌನ್ಸ್ ಮಾಡಬೇಕಾಗುತ್ತದೆ. ಅದು ಮೇ ಅಲ್ಲ, ಮೇ 25ನೇ ತಾರೀಖು ಸುಮಾರು ಆರೇಳು ಜಿಲ್ಲೆಗಳಲ್ಲಿ ಮಳೆ ಪ್ರಾರಂಭವಾಗುತ್ತದೆ. ಕೂರ್ಗ್, ಸೌತ್ ಕೆನರಾ, ನಾರ್ತ್ ಕೆನರಾ, ಧಾರವಾಡ್, ಬೆಳಗಾಂ, ಒಂದು ಸಲ ಅಲ್ಲಿ ಮಳೆ ಪ್ರಾರಂಭವಾಯಿತು ಎಂದರೆ ಅಲ್ಲಿ ನಾವು ಯಾವ ಚುನಾವಣೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಈ ಒಂದು ಕಾರಣದಿಂದ ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ, ಅದರಂತೆ ಸುಪ್ರೀಂ ಕೋರ್ಟಿನ ಮುಂದೆ ಹೋಗುವುದು ಅವರಿಗೆ ಅವಶ್ಯಕತೆ ಇದೆ. ವಿರೋಧ ಪಕ್ಷದವರೆಲ್ಲಾ ಅದಕ್ಕೆ ಸಹಕರಿಸಬೇಕು. ಸುಪ್ರೀಂ ಕೋರ್ಟಿನವರೂ ಸಹ ಈ ರೀತಿ ಸಂದರ್ಭ ಬಂದಿದೆ ಎಂದರೆ ಅವರೂ ಸಹ ಒಪ್ಪುತ್ತಾರೆಂದು ಹೇಳಿ ಈ ಕಾನ್ಸ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಬಿಲ್ ಏನು ಇದೆ ಅಥವಾ ಪಂಚಾಯತ್ ರಾಜ್ ಇರಬಹುದು. ಮುನಿಸಿಪಾಲಿಟಿ ಇರಬಹುದು. ಎರಡನ್ನೂ ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್):– ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನನ್ನ ಮಿತ್ರರು ಹೇಳಿರುವ ರೀತಿ ಬಹುಶಃ ಈ ಒಂದು ತಿದ್ದುಪಡಿಯನ್ನು ಸಂಸತ್ತಿನ ಮುಂದೆ ತರುವಾಗ ಕೊಟ್ಟಿರುವಂತಹ ಟಿಪ್ಪಣಿಯಲ್ಲಿ ನಮೂದು ಆಗಿರುವ ರೀತಿ ಈ ದೇಶಕ್ಕೆ ಸ್ವಾತಂತ್ರ್ಯ ಬಂದು 40 ವರ್ಷದ ಮೇಲಾದರೂ, ಗ್ರಾಮ ಸ್ವರಾಜ್ಯದ ಪರಿಕಲ್ಪನೆಗೆ ಸಂವಿಧಾನದ ಚೌಕಟ್ಟಿನಲ್ಲಿ ತರುವಂತಹ ಪ್ರಯತ್ನ ನಡೆದಿದೆ. ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ ನಮ್ಮ ಸಂವಿಧಾನದಲ್ಲಿ ಅವು ಸತ್ತು ಹೋಗಿರಲಿಲ್ಲ ಅಷ್ಟೇ. ಜೀವಂತವಾಗಿ ಇದ್ದರು ಸಹ ಅವುಗಳ ಅನುಷ್ಠಾನ ಈ ದೇಶದ ಜನತೆಗೆ ಅಧಿಕಾರ ಕೊಡುವುದರಲ್ಲಿ ಅನ್ನ ಬಟ್ಟೆ ಕೊಡುವುದರಲ್ಲಿ ಅಷ್ಟೊಂದು ನಿರೀಕ್ಷಿತ ಮಟ್ಟಕ್ಕೆ ಹೋಗಿರಲಿಲ್ಲ. ಅದಕ್ಕಾಗಿ ದಿವಂಗತ ರಾಜೀವ್ ಗಾಂಧಿಯವರನ್ನು ನಾನು ಅಭಿನಂದಿಸುತ್ತೇನೆ. ಗ್ರಾಮ ಸ್ವರಾಜ್ಯದ ಕಲ್ಪನೆ ಬಹುಶಃ ಇವತ್ತಿನದಲ್ಲ. ಸ್ವಾತಂತ್ರ್ಯ ಪೂರ್ವಕ್ಕೂ ಕೂಡ ಗ್ರಾಮ ಸ್ವರಾಜ್ಯದ ಕಲ್ಪನೆ ಇತ್ತು. ಸ್ವಾತಂತ್ರ್ಯ ಆದ ಮೇಲೆ ಶ್ರೀಮಾನ್ ಎಸ್. ಕೆ. ಡೇಅವರು ಜವಾಹರ್‌ಲಾಲ್ ನೆಹರೂ ನೇತೃತ್ವದಲ್ಲಿ ಕೂಡ 1956ರಿಂದ ಈ ಜನರಿಗೆ ಸ್ವಾತಂತ್ರ್ಯ ಕೊಡಬೇಕು, ಅಧಿಕಾರ ಕೊಡಬೇಕು ಎನ್ನುವಂತಹ ಪ್ರಯತ್ನಗಳು ನಡೆದೇ ಇದ್ದವು.

ಈ ಪ್ರಯತ್ನಕ್ಕೆ ಆಧಾರ ಮಹಾತ್ಮ ಗಾಂಧೀಜಿಯವರು ಬದುಕಿದ್ದಾಗ ಒಂದು ಮಾತನ್ನು ಹೇಳುತ್ತಿದ್ದರು: 'ಸರ್ವರಿಗೂ ಸಮಪಾಲು, ಅಷ್ಟು ಸಾಲದು, ಸರ್ವರಿಗೂ ಸಮಬಾಳು' ಎಂದು.

ಬಹುಶಃ ಇದನ್ನು ಆಧಾರವಾಗಿಟ್ಟುಕೊಂಡು ಅವೊತ್ತಿನ ನಮ್ಮ ನಾಯಕರು ಪ್ರಯತ್ನಪಟ್ಟರು. ಮತ್ತೆ ಮುಂದಕ್ಕೆ ಹೋಗಿ ಅವರು ಹೇಳುತ್ತಾರೆ; 'ಇಂದಿಗೆ ಮುಗಿಯಿತು ಓವರ್ಲೋರ್ವರ ಗವರ್ನರ ಕಾಲ ಇದು ಸರ್ವರ ಕಾಲ' ಎಂದು. ಅಂದರೆ, ಏನು ಕೆಲವೇ ಜನಗಳಲ್ಲಿ ಅಧಿಕಾರ ಕೇಂದ್ರೀಕೃತವಾಗಿತ್ತೋ, ಆ ದಿನ ಹೆಚ್ಚು ಜನಗಳಿಗೆ ಅಧಿಕಾರ ಹಂಚುವಂಥ ಒಂದು ಕಾರ್ಯಕ್ರಮ. ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿರುವ 220 ಜನ ಸದಸ್ಯರಲ್ಲಿ ಕೇಂದ್ರೀಕೃತವಾಗಿರತಕ್ಕಂಥ ಅಧಿಕಾರವನ್ನು ಸುಮಾರು 2000–3000 ಜನರಿಗೆ ಹಂಚಿಕೆಯಾಗುವಂಥ ಪುಣ್ಯದ ಕೆಲಸವಿದು. ಒಂದು ಹಂತದಲ್ಲಿ ನನ್ನ ಸ್ನೇಹಿತರು ಹೇಳಿದಂತೆ 'ಎಂಎಲ್‌ಎಗಳಿಗೆ ಏನೂ ಕೆಲಸವಿಲ್ಲದಂತಾಗುತ್ತದೆ, ಅವರಿಗೆ ಅಧಿಕಾರವಿಲ್ಲದಂತೆ ಎಲ್ಲ ಅಧಿಕಾರವನ್ನು ತೆಗೆದುಕೊಂಡು ಹೋಗಿ ಜಿಲ್ಲಾ ಪರಿಷತ್ತಿಗೆ ಕೊಡುತ್ತಾರೆ ಎಂದು. 1980ರ ದಶಕದಲ್ಲಿ ನಾವು ಪ್ರಯೋಗ ಮಾಡಿದಾಗಲೂ ಈ ಮಾತು ಕೇಳಿಬಂತು. ಇಷ್ಟೆಲ್ಲಾ ಆದರೂ ಈ ಪ್ರಯತ್ನ ನಡೆಯಿತು. ಜವಹರಲಾಲ ನೆಹರೂರವರ ಕಾಲದಲ್ಲೂ ನಡೆಯಿತು. ಅವೊತ್ತು ಗ್ರಾಮ ಪಂಚಾಯಿತಿ ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಗಳನ್ನು ಅಸ್ತಿತ್ವಕ್ಕೆ ತಂದರು. ಅದಾದ ನಂತರ ಮಾನ್ಯ ರಾಮಕೃಷ್ಣ ಹೆಗಡೆಯವರು ಉಪ ಮಂತ್ರಿಗಳಾದಂಥ ಕಾಲದಲ್ಲಿ ಒಂದು ಅತ್ಯಂತ ಕ್ರಾಂತಿಕಾರಕವಾದಂಥ ಕಾನೂನನ್ನು ತಂದು, ಅದು ಪಕ್ಷದ ಸಭೆಯಲ್ಲಿ ವಿಫಲವಾಗಿ ಬಹುಶಃ ಹಿರಿಯರಿಗೆ ಗೊತ್ತಿದೆಯೆಂದು ಕಾಣುತ್ತದೆ. ಅದರ ಆಧಾರದ ಮೇಲೆ ಅವರು ಸನ್ಮಾನ್ಯ ನಿಜಲಿಂಗಪ್ಪನವರಿಗೆ ರಾಜೀನಾಮೆ ಕೊಡುವುದಕ್ಕೆ ಹೋಗಿದ್ದರು. ಹೀಗೆ ಏನು ಗ್ರಾಮ ಸ್ವರಾಜ್ಯದ ಪರಿಕಲ್ಪನೆ ಇದೆ, ಇದು ಅನೇಕ ಜನರ ಪ್ರಯತ್ನದಿಂದ ಕಾರ್ಯರೂಪಕ್ಕೆ ತರುವಂಥಾದ್ದು ನಡೆದಿದೆ. ಆದರೆ, ಒಂದು ಮಾತನ್ನು ತಮ್ಮ ಗಮನಕ್ಕೆ ಈ ಸದನದಲ್ಲಿ ನಾನು ತರುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ನಾವು ಮಾಡುವಂಥ ಕಾನೂನುಗಳು ನಾವು ತರುವಂಥ ಈ ವ್ಯವಸ್ಥೆ ಅನೇಕ ಸಲ ಸೋಲುತ್ತವೆ. ಅದಕ್ಕೆ ಕಾರಣ ಅವುಗಳ ಅನುಷ್ಠಾನದಲ್ಲಿ ನಮ್ಮ ವಿಫಲತೆ. ಆದುದರಿಂದ, ಇಂದು ನಾವು ಮಾಡಿದಂಥ ಯಾವುದೇ ಒಂದು ಪ್ರಯತ್ನ ವಿಫಲವಾಗಿದ್ದರೆ ಅದಕ್ಕೆ ಮುಖ್ಯ ಕಾರಣ ಅದನ್ನು ಅನುಷ್ಠಾನಕ್ಕೆ ತರುವಂಥ ಹಂತದಲ್ಲಿರುವಂಥಾದ್ದು. ಈ ಗ್ರಾಮ ಸ್ವರಾಜ್ಯದ ಪರಿಕಲ್ಪನೆಗೆ ಸಂವಿಧಾನಾತ್ಮಕವಾದಂಥ ಚೌಕಟ್ಟನ್ನು ನಿರ್ಮಾಣ ಮಾಡುವಂಥ ಈ ಸಂದರ್ಭದಲ್ಲಿ ಈ ಸದನದ ಮುಂದಿರುವಂಥ ಬಿಲ್ಲನ್ನು ಸಂಸತ್ತಿನ ಮುಂದೆ ತಂದಾಗ ಅಲ್ಲಿ ಒಂದು ಮಾತನ್ನು ಹೇಳುತ್ತಾರೆ. ಯಾವ ಕಾರಣಕ್ಕೆ ಇದನ್ನು ತರಬೇಕಾಗಿತ್ತೆಂದರೆ ... "reasons including the absence of regular elections, prolonged supersessions of the institutions."

ಕಾರಣ, ಯಾವ ಕಾರಣಕ್ಕೆ ಈ ಒಂದು ಸಂವಿಧಾನದ ತಿದ್ದುಪಡಿಯನ್ನು ಸನ್ಮಾನ್ಯ ರಾಜೀವ್ ಗಾಂಧಿಯವರು ತರುವುದಕ್ಕೆ ಪ್ರಯತ್ನ ಪಟ್ಟರು ಎಂದರೆ, absence of regular elections ಇದೊಂದು ಕಾರಣ, ಮತ್ತೊಂದು prolonged supersessions of the institutions ಇವೊತ್ತು ಈ ರಾಜ್ಯ ಸರ್ಕಾರದವರು ಮಾಡುತ್ತಿರುವುದು ಸತ್ತು ಸ್ವರ್ಗದಲ್ಲಿರುವಂಥ ರಾಜೀವ್ ಗಾಂಧಿಯವರು ಮೆಚ್ಚತಕ್ಕಂಥಾದ್ದಲ್ಲ. ಮಾನ್ಯ ಸದಸ್ಯರಾದ ವೆಂಕಟಪ್ಪನವರು ಈಗ ತಾನೇ ಒಂದು ಮಾತನ್ನು ಹೇಳಿದರು, ಅಲ್ಲದೆ ಶ್ರೀ ಹಾರ್ನಳ್ಳಿ ರಾಮಸ್ವಾಮಿಯವರು ಸಹ ಒಂದು ಕಾರಣ ಹೇಳಿದರು: 'ಹೀಗೆ ನೀವು ಕುಂಟು ನೆಪಗಳನ್ನು ಹಾಕಿಕೊಂಡು ಜನರಿಗೆ ಕೊಡಬೇಕಾಗಿರತಕ್ಕಂಥ ಅಧಿಕಾರವನ್ನು ಕೊಡುವುದನ್ನು ಮುಂದೂಡಿದರೆ ವಂಚನೆ ಮಾಡಿದರೆ, ಯಾವ ಉದ್ದೇಶ ಸಾಧನೆಗಾಗಿ ರಾಜೀವ ಗಾಂಧಿಯವರು ಈ ಸಂವಿಧಾನದ ತಿದ್ದುಪಡಿ ತಂದರೋ, ಆ ವ್ಯಕ್ತಿಯ ಆತ್ಮಕ್ಕೆ ನೀವು ದ್ರೋಹ ಬಗೆದಂತಾಗುತ್ತದೆ. ನೀವು 1991ರ ಜನಸಂಖ್ಯೆ ಮಾಹಿತಿ ಇಲ್ಲವೆಂದು ಕೇಳುತ್ತಿದ್ದೀರಿ, ಈಗ ಅದು ನಿಮ್ಮ ಕೈಯಲ್ಲಿದೆ. ತಿದ್ದುಪಡಿ ಮಾಡಬೇಕೆಂದು ಹೇಳುತ್ತಿದ್ದೇವೆ. ಇವೊತ್ತು ತಿದ್ದುಪಡಿ ತಂದರೆ ನಾವು ಕೈ ಎತ್ತುತ್ತೇವೆ, ನಾಳೆ ತಿದ್ದುಪಡಿ ತಂದರೂ ಕೈ ಎತ್ತುತ್ತೇವೆ, ಚುನಾವಣೆ ಬಗ್ಗೆ ನೋಟಿಫಿಕೇಷನ್

ಬಿಡುಗಡೆ ಮಾಡಿ. ಆದುದರಿಂದ ನಾನು ನಿಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದೇನೆ: ಈ ರಾಜ್ಯದ ಪಂಚಾಯತ್‌ರಾಜ್ ಸಚಿವರು ಜನರ ಕೈಗೆ ಅಧಿಕಾರ ಕೊಡುವುದರಲ್ಲಿ ಅತ್ಯಂತ ಉತ್ಸುಕರಾಗಿದ್ದಾರೆ. ಆದರೆ, ಸಂಸದೀಯ ವ್ಯವಹಾರಗಳ ಖಾತೆ ಸಚಿವರು ಅದಕ್ಕೆ ಏಕೋ ಮನಸ್ಸು ಕೊಡುತ್ತಿಲ್ಲ. ಸರ್ಕಾರದಲ್ಲಿರುವ ಕೆಲವರಿಗೆ ಚುನಾವಣೆಯನ್ನು ನಡೆಸಬೇಕೆಂಬ ಮನಸ್ಸು ಕೆಲವರಿಗಿದೆಯೆಂಬುದು— ನನ್ನ ಭಾವನೆ, ಇದ ಸರಿಯಾದುದಲ್ಲ. ಈ ಎಲ್ಲಾ ನೆಪಗಳನ್ನು ಬದಿಗೊತ್ತಿ ಚುನಾವಣೆಗಳನ್ನು ನಡೆಸಿ ತಮಗೆ ಪುಣ್ಯಾತ್ಮರಾದವರು ಯಾರು ಅಧಿಕಾರ ಕೊಟ್ಟಿದ್ದಾರೋ ಅವರಿಗೆ ಅಧಿಕಾರ ಕೊಡುವಂಥ ಪುಣ್ಯದ ಕೆಲಸವನ್ನು ಮಾಡುವ ದಿಟ್ಟತನದಲ್ಲಿ ತಾವು ದಯವಿಟ್ಟು ಸೋಲಬೇಡಿ.

ಸನ್ಮಾನ್ಯ ಅಧ್ಯಕ್ಷರೆ, ಇನ್ನು ಈ ವಿಷಯದಲ್ಲಿ ಹೆಚ್ಚಾಗಿ ಪ್ರಸ್ತಾಪ ಮಾಡತಕ್ಕ ಅವಶ್ಯಕತೆ ಇಲ್ಲ. ಏಕೆಂದರೆ ನಾನು ಆಗಲೇ ಹೇಳಿದಂತೆ 1985–86ರಲ್ಲಿ ಹಾಲಿ ಕರ್ನಾಟಕದಲ್ಲಿ ಇರತಕ್ಕ ಪಂಚಾಯತ್ ರಾಜ್ ಕಾನೂನನ್ನು ತಂದೆವೊ, ಅದನ್ನು ಚರ್ಚೆ ಮಾಡುವುದಕ್ಕೆ ನನಗೆ ತಿಳಿದಿರತಕ್ಕ ಮಾಹಿತಿಯ ಪ್ರಕಾರ ಕರ್ನಾಟಕದಿಂದ ಕೆಲವು ಜನರನ್ನು ರಾಜೀವ್ ಗಾಂಧಿಯವರ ಆಪ್ತರು ಕರೆಸಿಕೊಂಡು ಚರ್ಚೆ ಮಾಡಿದ್ದಾರೆ. ಒಂದು ದೃಷ್ಟಿಯಲ್ಲಿ ಕೆಲವೇ ಕೆಲವು ಮಾರ್ಪಾಡುಗಳನ್ನು ಬಿಟ್ಟರೆ, ಕರ್ನಾಟಕದಲ್ಲಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಯಾವ ಗ್ರಾಮ ಸ್ವರಾಜ್ಯದ ಸ್ವರೂಪವನ್ನು ಕೊಟ್ಟು ಕಾನೂನನ್ನು ತಂದಿದ್ದರೋ ಅದಕ್ಕೂ ಇದಕ್ಕೂ ಹೆಚ್ಚಿನ ಬದಲಾವಣೆ ಕಾಣುವುದಿಲ್ಲ. ಇಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. 243 (ಎಫ್)ನಲ್ಲಿ ಹಿಂದುಳಿದವರಿಗೆ ಮೀಸಲಾತಿಯನ್ನು ಇಡಬೇಕು ಎಂಬುದು ರಾಜ್ಯಕ್ಕೆ ಬಿಟ್ಟಿದೆ ಎಂದು ಹೇಳಿದೆ. ಇದನ್ನು ನಮ್ಮ ರಾಜ್ಯದ ವಿಧಾನಸಭೆಗೆ ಅಥವಾ ಸರ್ಕಾರಕ್ಕೆ ಬಿಟ್ಟಿದ್ದಾರೆ. ಈ ಒಂದು ವಿಷಯದಲ್ಲಿ ಮಾತ್ರ ಸ್ವಲ್ಪ ಗೊಂದಲವಿದೆ, ನಮ್ಮಲ್ಲಿ ಹಿಂದುಳಿದಿರುವವರು ಯಾರು ಎಂಬುದನ್ನು ಗುರುತಿಸುವುದರಲ್ಲಿ ಸ್ವಲ್ಪ ಗೊಂದಲವಾಗಿದೆ. ಈಗಾಗಲೇ ಮಾನ್ಯ ವೆಂಕಟಪ್ಪನವರು ಒಂದು ಗೊಂದಲದ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಮತ್ತೊಂದು ಗೊಂದಲವೇನೆಂದರೆ ಈಗ ಇರತಕ್ಕ ಹಿಂದುಳಿದ ವರ್ಗಗಳ ಪಟ್ಟಿ ಏನು ಇದೆ ಅದರ ಆಧಾರದ ಮೇಲೆ ಇವರು ಏನಾದರೂ ಮೀಸಲಾತಿಯನ್ನು ಮಾಡುವುದಾದರೆ ಬಹುಶಃ ಅದರ ಉದ್ದೇಶ ಸಫಲವಾಗುವುದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ:— ಸನ್ಮಾನ್ಯ ಅಧ್ಯಕ್ಷರೆ, ನನ್ನ ಮಾನ್ಯ ಮಿತ್ರರಾದ ರಾಮಯ್ಯನವರ ಗಮನಕ್ಕೆ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ನಿನ್ನೆ ದಿನ ಸಹ ಅವರಿಗೂ ನಮಗೂ ಈ ಸದನದಲ್ಲಿ ವಾಗ್ವಾದವಾಯಿತು. ನಾವು ಬಹಳ ದೊಡ್ಡ ಪಾಪವನ್ನು ಮಾಡಿದ್ದೇವೆ, ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗೆ 92 ಪರ್ಸೆಂಟ್ ಕವರೇಜ್ ಕೊಟ್ಟಿದ್ದೇವೆ ಆ ಪಾಪಕ್ಕೆ ನಾನು ಹೊಣೆ ಎನ್ನತಕ್ಕ ಮಾತನ್ನು ಅವರು ಹೇಳಿದ್ದಾರೆ. ಅವರೂ ಸಹ ಮಂತ್ರಿಮಂಡಲದಲ್ಲಿ ಇದ್ದರು. ಆ ಕೆಲಸವನ್ನು ನಾವು ಏಕೆ ಮಾಡಿದೆವು ಎಂದರೆ ಅವತ್ತು ನಾವು ವೆಂಕಟಸ್ವಾಮಿ ಆಯೋಗ ಮಾಡಿದ್ದೂ ಕೂಡ ಸುಪ್ರೀಮ್ ಕೋರ್ಟ್‌ನ ಆದೇಶದ ಮೇರೆಗೆ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ, ಇದು ತಮಗೆಲ್ಲರಿಗೂ ಗೊತ್ತಿರತಕ್ಕದ್ದು, ತಿಳಿದಿರತಕ್ಕ ವಿಚಾರ. ತಾತ್ಕಾಲಿಕವಾಗಿ ಯಾವಾಗ ಹಾವನೂರ್ ರವರು ಕೊಟ್ಟಿರತಕ್ಕ ವರದಿಯನ್ನು ಒಪ್ಪಲು ಸಾಧ್ಯವಿಲ್ಲ ಮತ್ತು ವೆಂಕಟಸ್ವಾಮಿಯವರ ಆಯೋಗದ ತಾತ್ಕಾಲಿಕವಾಗಿ ಕೇವಲ ವಿದ್ಯಾಭ್ಯಾಸಕ್ಕಾಗಿ, ಉದ್ಯೋಗದ ಉದ್ದೇಶಕ್ಕಾಗಿ ಆ ಆಜ್ಞೆಯನ್ನು ಮಾಡಿದ್ದೇ ಹೊರತು ನಾವು ಸ್ಪಷ್ಟವಾಗಿ ಅವರೇ ಹಿಂದುಳಿದ ವರ್ಗದವರು ಬಾಕಿ ಇರುವವರ ಹಿಂದುಳಿದ ವರ್ಗದವರಲ್ಲಿ ಅಥವಾ ಮೇಲ್ ಜಾತಿಯಲ್ಲಿ ಇರತಕ್ಕವರು ಕೆಲವರು ಏನು ಅಲ್ಲಿ ಸೇರಿದ್ದಾರೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಅವರು ಹಿಂದುಳಿದಿರತಕ್ಕ ವರ್ಗವೆಂದು ಶಾಶ್ವತವಾಗಿ ಗುರುತಿಸಬೇಕೆಂಬ ಉದ್ದೇಶದಿಂದ ಅದನ್ನು ಮಾಡಲಿಲ್ಲ ಎಂಬುದನ್ನು ಅವರು ಈ ಸಂದರ್ಭದಲ್ಲಿ ಗಮನಿಸುತ್ತಾರೆಂದು ಸ್ಪಷ್ಟೀಕರಣವನ್ನು ಕೊಡಬಯಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ:- ನಾನು ಹೇಳಿದ್ದು ಇಂಥ ಪರಿಸ್ಥಿತಿ ಇದೆ ಎಂದು ಅಷ್ಟೆ. ಸುಪ್ರೀಂ ಕೋರ್ಟ್‌ನ ಆಜ್ಞೆಯನ್ನು ಪರಿಪಾಲನೆ ಮಾಡುವುದಕ್ಕಾಗಿ ಆ ಪರಿಸ್ಥಿತಿ ಸೃಷ್ಟಿಯಾಯಿತೋ ಅಥವಾ ಯಾವುದೋ ಒಂದು ರಾಜಕೀಯ ಪಕ್ಷವು ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಆ ಪರಿಸ್ಥಿತಿ ಸೃಷ್ಟಿಯಾಯಿತೋ, ಅಥವಾ ಯಾವುದೋ ಒಬ್ಬ ವ್ಯಕ್ತಿಯನ್ನು, ಒಂದು ಹಿಂದುಳಿದ ವರ್ಗದ ಜನರನ್ನು ಸುಪ್ರೀತಗೊಳಿಸಲು ಈ ಪರಿಸ್ಥಿತಿ ಸೃಷ್ಟಿಯಾಯಿತೋ ಎಂಬ ಬಗ್ಗೆ ಇಲ್ಲಿ ವಾದ ಮಾಡಿಲ್ಲ. ಸುಪ್ರೀಂ ಕೋರ್ಟ್‌ನ ಆದೇಶದ ಪರಿಪಾಲನೆ ಏನು ಇದೆ ಅದರ ಪ್ರಕಾರ ಇರಬಹುದು, ಅದರಲ್ಲಿ ಅವರು ಒಂದು ವಾದ ಮಾಡುತ್ತಾರೆ, ನನ್ನದೊಂದು ವಾದ, ಮತ್ತೊಬ್ಬರದು ಮತ್ತೊಂದು ವಾದ, ಅದಕ್ಕೆ ನಾನು ವಾದ ಮಾಡಲು ಹೋಗುವುದಿಲ್ಲ, ಈ ಪರಿಸ್ಥಿತಿ ಇದೆ ಎನ್ನುವುದನ್ನು ಮಾತ್ರ ಹೇಳುತ್ತೇನೆ.

ಅದರ ಬಗ್ಗೆ ಚರ್ಚೆ ಬೇಡ. ನನ್ನ ಪ್ರಾರ್ಥನೆ ಇಷ್ಟೆ. ಈ ಪರಿಸ್ಥಿತಿಯಲ್ಲಿ ಮೀಸಲಾತಿಯನ್ನು ನೀವು ಹಿಂದುಳಿದ ವರ್ಗದವರಿಗೆ ಕೊಡುವುದರಿಂದ ಇದರಲ್ಲಿ ಯಾವ ಉದ್ದೇಶವನ್ನು ಸಾಧನೆ ಮಾಡಬೇಕೆಂದು ಅಂದುಕೊಂಡಿದ್ದೇವೆ ಆ ಉದ್ದೇಶ ಸಾಧನೆಯಾಗಲಾರದು. ಆದ್ದರಿಂದ ತಮ್ಮ ಕೈ ಚಳಕದಿಂದ ಯಾವುದಾದರೂ ಉತ್ತಮ ಮಾರ್ಗವನ್ನು ಕಂಡುಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಚುನಾವಣೆಗಳನ್ನು ನಡೆಸುವುದಕ್ಕೆ ಇದಕ್ಕಾಗಿಯೇ ಒಂದು ಚುನಾವಣಾ ಆಯೋಗವನ್ನು ಸರ್ಕಾರ ನೇಮಕಾತಿ ಮಾಡಬೇಕೆಂದಿದೆ. ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. Whether it means that we have to constitute a separate Election Commision for Panchyat elections, or whether it can be done by the already existing State Election Commission.

ಏಕೆಂದರೆ ರಾಷ್ಟ್ರದ ಚುನಾವಣಾ ಆಯೋಗದ ಹಿಡಿತದಲ್ಲಿ ಕೆಲಸ ಮಾಡುತ್ತಿರುವ ರಾಜ್ಯದ ಚುನಾವಣಾ ಆಯೋಗ ಏನಿದೆ ಈ ಚುನಾವಣಾ ಆಯೋಗಕ್ಕೇ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡತಕ್ಕ ಅಧಿಕಾರ ಬರುತ್ತದೆಯೇ ? ಅಥವಾ whether you are going to constitute a separate Panchayat Election Commission.

ಈ ಒಂದು ಕ್ಲಾರಿಫಿಕೇಷನ್ ನನಗೆ ಅವಶ್ಯಕವಾಗಿ ಬೇಕಾಗಿದೆ. ಇಲ್ಲಿ ಒಂದು ಉತ್ತಮವಾದ ಪ್ರೊವಿಷೋ ಕೂಡ ಇದೆ. ಪ್ರತಿ ವರ್ಷ ಈ ಸಂಸ್ಥೆಗಳು ಮಾಡುವ ಕೆಲಸ, ಇದರ ಆರ್ಥಿಕ ಆಗು ಹೋಗುಗಳನ್ನು ವಿಮರ್ಶೆ ಮಾಡಿ ಅದರ ಆಧಾರದ ಮೇಲೆ ತೆಗೆದುಕೊಂಡ ಕ್ರಮಗಳನ್ನೂ ಕೂಡ ಕ್ರೋಢೀಕರಿಸಿ ಸದನದ ಮುಂದಿಡಬೇಕೆಂಬುದು ಅತ್ಯಂತ ಉತ್ತಮವಾದ ಭಾಗ ಇದು. ಅಂದರೆ ಪ್ರತಿ ವರ್ಷ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು, ಜಿಲ್ಲಾ ಪಂಚಾಯಿತಿಗಳು ಕೆಲಸ ಮಾಡುವ ರೀತಿ ನೀತಿಗಳನ್ನು ವಿಮರ್ಶೆ ಮಾಡುವುದಕ್ಕೆ, ಅಕೌಂಟ್ಸನ್ನು ಹೇಳುವುದಕ್ಕೆ ಇಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಪರಿಸ್ಥಿತಿಯನ್ನು ಸೃಷ್ಟಿ ಮಾಡಿದೆ. ಆದರೆ ಒಂದೇ ಒಂದು ನನಗೆ ಅನುಮಾನ ಎಂದರೆ, ಫೈನಾನ್ಸ್ ಕಮೀಷನ್‌ನವರು ಕೊಟ್ಟಂಥ ರಿಪೋರ್ಟ್‌ನ ಮೇಲೆ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಇರುವಂತೆ ಒಂದು ತಿದ್ದುಪಡಿಯನ್ನು ತರಬೇಕೆಂದು ನನ್ನ ಪ್ರಾರ್ಥನೆ. ಏಕೆಂದರೆ ದಿನನಿತ್ಯ ನೋಡುತ್ತಿದ್ದೇವೆ. ಅನೇಕ ರೀತಿಯ ಆಯೋಗಗಳ ವರದಿಗಳು ಸದನದ ಮುಂದೆ ಬಂದು ಚರ್ಚೆಯಾಗುತ್ತಿವೆ. ಆದರೆ ತಪ್ಪಿತಸ್ಥರಿಗೆ ಛಾಟಿ ಏಟು ಕೊಡತಕ್ಕ, ಅವರಿಗೆ ಶಿಕ್ಷೆ ಕೊಡುವಂಥ ಅಥವಾ ಅವರನ್ನು ಕೆಲಸದಿಂದ ತೆಗೆದು ಹಾಕಿದಂಥ ಒಂದು ಘಟನೆಯೂ ಕೂಡ ಈ ಸಭೆಯ ಮುಂದೆ ಬರುತ್ತಿಲ್ಲ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ ತಾವು ತಿದ್ದುಪಡಿಯನ್ನು ತಂದಿರುವ ಫೈನಾನ್ಸ್ ಕಮಿಷನ್‌ನ ರಿಪೋರ್ಟ್‌ನ ಆಧಾರದ ಮೇಲೆ ಯಾವು ವಿಧವಾದ ಕ್ರಮಗಳನ್ನು ತಾವು

ಸಂಸ್ಥೆಗಳ ಹಣವನ್ನು ನುಂಗಿ ಹಾಕಿದಾಗ, ಅನ್ನ ಕೊಡುವವರನ್ನೇ ಆಳಿನಂತೆ ನೋಡುವಂಥ ನಿಮ್ಮ ನೌಕರ ಶಾಹಿಯ ನಡವಳಿಕೆಗಳು ನಿಮ್ಮ ಗಮನಕ್ಕೆ ಬಂದಾಗ ಯಾವ ರೀತಿ ಕ್ರಮ ತೆಗೆದುಕೊಂಡು ಯಾವ ಶಿಕ್ಷೆಯನ್ನು ಕೊಡುತ್ತೀರೆಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನ ಹೆಚ್ಚಿನ ವಿಷಯಗಳನ್ನು ಇದರ ಬಗ್ಗೆ ಪ್ರಸ್ತಾಪ ಮಾಡಬೇಕಾಗುವುದಿಲ್ಲ. ಈ ಸಂಸ್ಥೆಗಳಿಗೆ ಯಾವ ಯಾವ ಇಲಾಖೆಗಳು ಬರುತ್ತವೆ ಎಂಬ ಪಟ್ಟಿಯನ್ನು ಕೊಟ್ಟಿದ್ದೀರಿ. 11ನೇ, ಷೆಡ್ಯೂಲ್ ......

Dr. Y. Nagappa:– Wherever Mandal Panchayats are not working satisfactorily, it can be superceded. It is the Old Act.

ಶ್ರೀ ವೈ. ಕೆ. ರಾಮಯ್ಯ:– ಸೂಪರ್ ಸೀಡ್ ಮಾಡಬಹುದು, ಆದರೆ 6 ತಿಂಗಳೊಳಗೆ ಚುನಾವಣೆಯನ್ನು ಮಾಡಬೇಕೆಂದು ಒಂದು ಕಾನೂನು ಇದೆ. ಈ ಕಾನೂನು ನಮ್ಮ ರಾಜ್ಯಕ್ಕೆ ಬಂದಿತ್ತೋ ಇಲ್ಲವೋ ನನಗಂತೂ ಗೊತ್ತಿಲ್ಲ. ನಾನು ಮೊದಲೇ ಈ ಕಾನೂನನ್ನು ತರಿಸಿಕೊಂಡು 2–3 ಸಾರಿ ಓದಿದ್ದೇನೆ. ಇನ್ನೊಂದು ಬಹಳ ಪ್ರಮುಖವಾದ ಅಂಶವೆಂದರೆ, ಈಗ ತಾವು ಚುನಾವಣೆಯನ್ನು ಮುಂದಕ್ಕೆ ಹಾಕಿದಂತೆ ಇನ್ನು ಮುಂದೆ ಇಂಥ ಕುಂಟು ನೆಪಗಳನ್ನು ಹೇಳಿಕೊಂಡು ಚುನಾವಣೆಗಳನ್ನು ಮುಂದಕ್ಕೆ ಹಾಕುವುದಕ್ಕಾಗುವುದಿಲ್ಲ. Notification can be issued even before the expiry of 5 years period, just like Assembly Elections.

ಆಗ ಸಂವಿಧಾನಾತ್ಮಕವಾದ ಸ್ವರೂಪ ಇರಲಿಲ್ಲ. ಈಗ ಸಂವಿಧಾನಾತ್ಮಕ ಸ್ವರೂಪವನ್ನು ಕೊಟ್ಟಿದ್ದಾರೆ.

ಇಷ್ಟನ್ನು ಹೇಳಿ ಸನ್ಮಾನ್ಯ ಅಧ್ಯಕ್ಷರೇ ಇನ್ನು 11ನೇ ಷೆಡ್ಯೂಲ್‌ನ ಕೆಲವು ವಿಷಯಗಳನ್ನು ಸೇರಿಸಿದ್ದಾರೆ, ಯಾವ ಯಾವ ವಿಷಯಗಳನ್ನು ನೀವು ಸೇರಿಸಿದ್ದೀರೋ ಆ ವಿಷಯಗಳನ್ನು ಇತ್ತೀಚಿನ ದಿವಸಗಳಲ್ಲಿ ಜಿಲ್ಲಾಪರಿಷತ್ತಿನಿಂದ ಕಿತ್ತುಕೊಳ್ಳತಕ್ಕಂಥ ಪ್ರಯತ್ನ ಮಾಡಿದ್ದೀರಿ. ನಾನು ಆಗಲೇ ಹೇಳಿದ ಮಾನ್ಯ ರಾಜೀವ್ ಗಾಂಧಿಯವರು ಕಂಡ ಕನಸನ್ನು ಕಾರ್ಯರೂಪಕ್ಕೆ ತರಲು ನಿಮ್ಮ ಕೈಗೆ ಕೊಟ್ಟರೆ ಅದಕ್ಕೆ ಅಪಚಾರ ಮಾಡುತ್ತಿದ್ದೀರೆಂದು ನಾನು ಆಗಲೇ ಹೇಳಿದೆ ಇದಕ್ಕೆ ಮೂಲಪುರುಷರು, ಕಾರಣಕರ್ತರು, ಆಲೋಚನೆ ಮಾಡಿದಂಥ ಮಾನ್ಯ ರಾಜೀವ್ ಗಾಂಧಿಯವರನ್ನು ನಾನು ಅಭಿನಂದಿಸುತ್ತೇನೆ. ಆದರೆ ಆ ವ್ಯಕ್ತಿಯ ಕನಸು ಏನಿತ್ತು ಅದನ್ನು ನನಸು ಮಾಡಬೇಕೆಂದು ನಿಮ್ಮ ಕೈಯಲ್ಲಿ ಕೊಟ್ಟರೆ, ಸತ್ತು ಸ್ವರ್ಗದಲ್ಲಿರುವ ಪುಣ್ಯಾತ್ಮನಿಗೆ ಅಪಚಾರ ಬಗೆಯುತ್ತಿದ್ದೀರಿ. ಇದರಲ್ಲಿರತಕ್ಕಂಥ ಅನೇಕ ವಿಷಯಗಳನ್ನು ದಂಇವಿಟ್ಟು ಮುಂದಿನ ಚುನಾವಣೆಗಳು ಆಗುವವರೆಗೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರತಕ್ಕಂಥ ಯಾವುದೇ ಕೆಲಸಗಳನ್ನು ಸರ್ಕಾರ ಕಿತ್ತುಕೊಂಡು ಅವರ ಅಧಿಕಾರವನ್ನು ಮೊಟಕುಗೊಳಿಸಲಾರದೆಂದು ನನ್ನ ಪ್ರಾರ್ಥನೆ ಮಾಡಿಕೊಂಡು, ನಾನು ಈ 72 ಮತ್ತು 73 ನೇ ತಿದ್ದುಪಡಿಗೆ ನಮ್ಮ ರಾಜ್ಯಸರ್ಕಾರದ ರ್‍ಯಾಟಿಫಿಕೇಶನ್ ಏನು ಕೇಳಿರುತ್ತಾರೆ, ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಜಿ. ಆರ್. ಸಿಂಧ್ಯ:– ಸನ್ಮಾನ್ಯ ಅಧ್ಯಕ್ಷರೇ ಈ ದಿವಸ ಈ ಸದನದ ಮುಂದೆ ಕರ್ನಾಟಕ ರಾಜ್ಯ ಸರ್ಕಾರ ಮಂಡಿಸಿರತಕ್ಕಂಥ ಸಂವಿಧಾನದ 72 ಮತ್ತು 73ನೇ ತಿದ್ದುಪಡಿಗೆ ಅನುಗುಣವಾಗಿ ಇರತಕ್ಕಂಥ ಒಂದು ನಿರ್ಣಯವನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತಾ, ಅತ್ಯಂತ ಸಂತೋಷದಿಂದ ಈ ಸಂದರ್ಭದಲ್ಲಿ ಸರ್ಕಾರದ ಈ ನಿಲುವನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಈ ಸಂದರ್ಭದಲ್ಲಿ ನಮ್ಮ ಮಿತ್ರರಾದ ಮತ್ತು ವಿರೋಧಪಕ್ಷದ ನಾಯಕರಾದ ಸನ್ಮಾನ್ಯ ದೇಶಪಾಂಡೆಯವರು ಮತ್ತಿತರ ಸ್ನೇಹಿತರುಗಳು ಏನು ಸನ್ಮಾನ್ಯ ರಾಮಕೃಷ್ಣ ಹೆಗ್ಗಡೆಯವರನ್ನು ಸನ್ಮಾನ್ಯ ನಜೀರ್ ಸಾಹೇಬರನ್ನು ಮತ್ತೆ ಸನ್ಮಾನ್ಯ ರಾಜೀವ್ ಗಾಂಧಿಯವರನ್ನು ನೆನಸಿಕೊಂಡಿರುತ್ತಾರೆ, ನಾನು

ಸಹಿತ ಆ ಒಂದು ಕೆಲಸವನ್ನು ಮಾಡಲಿಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಒಂದು ಬದಲಾವಣೆಯನ್ನು ತಂದು ಮಾಡಿದಂಥ ಕೆಲಸವನ್ನು ಮಾನ್ಯ ರಾಜೀವ್ ಗಾಂಧಿಯವರು ಇಡೀ ರಾಷ್ಟ್ರ ವ್ಯಾಪ್ತಿಯಾಗಿರತಕ್ಕಂಥ ದೇಶದ ಎಲ್ಲಾ ಭಾಗಗಳಲ್ಲೂ ಸಹಿತ ಈ ಒಂದು ಸ್ವಾತಂತ್ರ್ಯದ ವಿಕೇಂದ್ರೀಕರಣದ ಫಲ ಸಾಮಾನ್ಯ ಮನುಷ್ಯನಿಗೂ ತರಿಸಬೇಕೆನ್ನುವ ದೃಷ್ಟಿಯಿಂದಾಗಿ ಒಂದು ನಿರ್ಣಯವನ್ನು ಮಾಡಿ ಹೋಗಿದ್ದಾರೆ. ಅದನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಮಾಡಿದರು, ರಾಜೀವ್ ಗಾಂಧಿಯವರು ಮಾಡಿದರು ಮತ್ತೊಬ್ಬರು ಮಾಡಿದರು ಎನ್ನುವುದಕ್ಕಿಂತ ಸ್ವಾತಂತ್ರ್ಯ ಬಂದ ಹೊಸದರಲ್ಲಿಯೇ ಈ ಕೆಲಸ ಆಗಬೇಕಾಗಿತ್ತು. ಇವತ್ತು ಗ್ರಾಮೀಣ ಪ್ರದೇಶದಲ್ಲಿರತಕ್ಕ ವಾತಾವರಣವನ್ನು ಸಂಪೂರ್ಣವಾಗಿ ನಾವು ಹದಗೆಡಿಸಿದ್ದೇವೆ. ಇವತ್ತು ನನಗಂತೂ ಸಂಪೂರ್ಣವಾದ ವಿಶ್ವಾಸವಿದೆ ಮಾನ್ಯ ಮೊಯ್ಲಿಯವರು ಮಾಡಿರತಕ್ಕಂಥ ಒಂದು ಒಳ್ಳೆಯ ಕೆಲಸವೆಂದರೆ ಮಾನ್ಯ ಘೋರ್ಪಡೆಯವರನ್ನು ಮಂತ್ರಿ ಮಾಡಿರತಕ್ಕಂಥದ್ದು ಅವರು ಸ್ವಾಭಾವಿಕವಾಗಿ ಮಂತ್ರಿಯಾಗಿರತಕ್ಕಂಥವರು. ಆದರೆ ಅವರಿಗೆ ಗ್ರಾಮೀಣ ಅಭಿವೃದ್ಧಿಯ ಇಲಾಖೆಯನ್ನು ಕೊಟ್ಟಿರತಕ್ಕಂಥದ್ದು. ಅವರು ಸಂಡೂರಿಗೆ ಮಂತ್ರಿಯಾಗಿದ್ದಾಗ ನಾನು ಶಾಸಕರಾಗಿ ಅವರ ಕ್ಷೇತ್ರಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಗ್ರಾಮೀಣ ಪ್ರದೇಶದ ಜನತೆಗೆ ಸಹಾಯ ಮಾಡತಕ್ಕಂಥದ್ದು ಬಹಳ ದೊಡ್ಡ ಕೆಲಸವೆಂದು ನಾನು ತಿಳಿದುಕೊಂಡಿಲ್ಲ. ಹಣ ಕೊಡತಕ್ಕಂಥದ್ದು ನಾಲ್ಕು ಜನರಿಗೆ ಕೆಲಸ ಮಾಡಿಸತಕ್ಕಂಥದ್ದು, ಉದ್ಯೋಗ ಕೊಡತಕ್ಕಂಥದ್ದಲ್ಲ. ಜನಗಳು ಅಭಿವೃದ್ಧಿ ಕೆಲಸಗಳಲ್ಲಿ ಭಾಗವಹಿಸುವಂತೆ ಮಾಡತಕ್ಕಂಥದ್ದು, ಮೋಟಿವೇಷನ್ ಆ ಕೆಲಸವನ್ನು ಮಾನ್ಯ ಘೋರ್ಪಡೆಯವರು ಮಾಡಿದ್ದಾರೆ. ನನಗೆ ಬಹಳ ಹೆಮ್ಮೆ ಇವತ್ತು 60ರ ಗಡಿಯನ್ನು ದಾಟಿರತಕ್ಕಂಥ ಮಾನ್ಯ ಘೋರ್ಪಡೆಯವರು ಅತ್ಯಂತ ಪ್ರಾಮಾಣಿಕತೆಗೆ ಮತ್ತು ಗ್ರಾಮೀಣಾಭಿವೃದ್ಧಿಯ ಜನತೆಯ ಹೃದಯಕ್ಕೆ ಸ್ಪಂದನ ಮಾಡತಕ್ಕಂಥವರು ನಮ್ಮ ಘೋರ್ಪಡೆಯವರು. ಅವರಿಗೆ ಈ ಇಲಾಖೆ ಈ ದಿವಸ ಸಿಕ್ಕಿರತಕ್ಕಂಥದ್ದು ಬಹಳ ಸಂತೋಷ. ಇತ್ತೀಚಿನ ದಿನಗಳಲ್ಲಿ ಅವರ ಜೊತೆಯಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ನನ್ನ ಕೊನೆಯ ಆಸೆ ಇದು ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಇದೊಂದು ಕೆಲಸವನ್ನು ನಾನು ಏನಾದರೂ ಮಾಡಿ ಡಿಸೆಂಬರ್ ಒಳಗಡೆ ಮುಗಿಸಬೇಕೆಂದು ಇದ್ದೇನೆಂದು ಹೇಳಿದರು. ನಮಗೆ ಬಹಳ ಸಂತೋಷವಾಯಿತು. ಇಂಥ ಮಂತ್ರಿಗಳು ಸಹಿತ ಇದ್ದಾರೆ, ಇವತ್ತು ನಿಜವಾಗಿಯೂ ಸಹಿತ ಇವರು ಈ ಕೆಲಸ ಮಾಡುತ್ತಾರೆ ಎನ್ನತಕ್ಕಂಥ ವಿಶ್ವಾಸ ನಮಗೆಲ್ಲರಿಗೂ ಇದೆ. ಆದರಿಂದಲೇ ನಾನು ಹೇಳಿದೆ ಅತ್ಯಂತ ಸಂತೋಷದಿಂದ ಈ ನಿರ್ಣಯವನ್ನು ನಾನು ಸ್ವಾಗತ ಮಾಡುತ್ತಿದ್ದೇನೆಂದು.

5.15 ಪಿ.ಎಂ.

ಮಾನ್ಯ ಅಧ್ಯಕ್ಷರೆ, ಈ ಸರ್ಕಾರದ ಒಂದು ವ್ಯವಸ್ಥೆ ಏನಿದೆ, ಆಡಳಿತ ವ್ಯವಸ್ಥೆ ಏನಿದೆ ಇದು ಹೊಸದೇನಲ್ಲ. ನನಗನ್ನಿಸುತ್ತದೆ, ನೂರಿನ್ನೂರು ವರ್ಷಗಳ ಹಿಂದ ರಾಜ್ಯದಲ್ಲಿ ರಾಷ್ಟ್ರದಲ್ಲಿ ಈ ವ್ಯವಸ್ಥೆ ಇತ್ತು. ಹಳ್ಳಿಗಳಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಎಷ್ಟು ಒಳ್ಳೆಯ ವ್ಯವಸ್ಥೆ ಇತ್ತೆಂದರೆ ಅರಳಿ ಮರದ ಕೆಳಗೆ ಕುಳಿತುಕೊಂಡು ವಿಚಾರ ವಿನಿಮಯ ಮಾಡುತ್ತಿದ್ದರು. ಒಂದೊಂದು ಬೀದಿಗೆ ಒಂದೊಂದು ಜಾತಿಗೆ ಒಬ್ಬೊಬ್ಬ ಮುಖಂಡ ಇರುತ್ತಿದ್ದ. ಗಾಣಿಗರಲ್ಲಿ, ಕುರುಬರಲ್ಲಿ, ಅಗಸರಲ್ಲಿ ಹೀಗೆ ಒಂದೊಂದು ಜಾತಿಗೆ ಒಬ್ಬೊಬ್ಬ ಯಜಮಾನ. ಯಾರೂ ಕೋರ್ಟಿಗೆ, ಪೊಲೀಸ್ ಠಾಣೆಗೆ ಹೋಗಬಾರದೆಂಬ ಭಾವನೆ ಇತ್ತು. ಹಿಂದುಳಿದ ವರ್ಗದವರು ಎಂದು ಹೇಳುತ್ತೇವೆ. ನನ್ನ ಕ್ಷೇತ್ರದಲ್ಲಿ ಕಾಡುಕುರುಬರು, ಬಿಲ್ಲವರು ಎಂಬ ಜನರು ಇದ್ದಾರೆ. ಅವರ ಜಾತಿಯ ಯಜಮಾನ ಪೊಲೀಸ್ ಠಾಣೆಗೆ ಹೋಗಬಾರದೆಂದು ಹೇಳಿದರೆ ಹೋಗುವುದಿಲ್ಲ. ಎಂತಹ ವ್ಯವಸ್ಥೆ ಇತ್ತು ಎಂದರೆ, ನಮ್ಮ ದೇಶದ ನಿಜವಾದ ಪರಂಪರೆ ನಮ್ಮ ಭಾರತ ದೇಶದ ನಿಜವಾದ ಹಿಂದು ಧರ್ಮ ಅದು. ಅದನ್ನು

ಪಾಲಿಸಿಕೊಂಡು ಬಂದಿಲ್ಲ. ಅದನ್ನು ನಾವು ಸಂಪೂರ್ಣವಾಗಿ ನಾಶ ಮಾಡಿದೆವು. ಗಾಂಧೀಜಿಯವರು ಸತ್ತ ನಂತರ ಹುಟ್ಟಿದವರು ನಾವು. ಗಾಂಧೀಜಿಯವರು ಸ್ವಾತಂತ್ರ್ಯಕ್ಕಾಗಿ ಏನು ಹೋರಾಟ ಮಾಡಿದರು ಎಂಬುದನ್ನು ನಾವು ಪುಸ್ತಕದಲ್ಲಿ ಓದಿದ್ದೇವೆ ಅಷ್ಟೆ. ಅವರು ನಿಜವಾದ ಗ್ರಾಮ ರಾಜ್ಯದ ಕಲ್ಪನೆಯನ್ನು ನಮ್ಮ ಮುಂದಿಟ್ಟು ಈ ಕಾರಣದಿಂದ ಸ್ವಾತಂತ್ರ್ಯದ ನಿಜವಾದ ಒಂದು ಅರ್ಥ ಏನು, ಪ್ರಜೆಗಳಿಂದ, ಪ್ರಜೆಗಳಿಗೋಸ್ಕರ, ಪ್ರಜೆಗಳಿಗಾಗಿ ಎಂಬ ಮಾತನ್ನು ನಾವು ಹೇಳುತ್ತೇವೆ ಅದನ್ನು ಈ ಒಂದು ಗ್ರಾಮ ಸ್ವರಾಜ್ಯದ ಮೂಲಕ ಮಾಡಬೇಕೆಂಬ ಉದ್ದೇಶದಿಂದ ಹೋಗಿದ್ದರೂ ಅದನ್ನು ಇವತ್ತು ನಾವು ಮಾಡಲಿಕ್ಕೆ ಹೊರಟಿದ್ದೇವೆ. ಆದರೆ ವಾತಾವರಣವನ್ನು ನಾವು ಕೆಡಿಸಿದ್ದೇವೆ. ಹೇಗೆ ಕೆಡಿಸಿದ್ದೇವೆಂದರೆ ಇವತ್ತು ಎಲ್ಲಾ ಕಾರ್ಯಕ್ರಮಗಳಲ್ಲಿ ಸಹ ಅದನ್ನು ಕಾಣಬಹುದು. ಅದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಜನತಾ ಹೌಸಿಂಗ್ ಸ್ಕೀಮನ್ನು 1971ಲ್ಲಿ ಇಂಟ್ರಡ್ಯೂಸ್ ಮಾಡಿದೆವು. ದಿ|| ದೇವರಾಜ ಅರಸು ಅವರನ್ನು ಮೆಚ್ಚಬೇಕು. ಕರ್ನಾಟಕದಲ್ಲಿ ಏನು ಮನೆಗಳನ್ನು ಕಟ್ಟಿದ್ದೇವೆ ಅದನ್ನು ನೋಡಿ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಅಲ್ಲಿಗೆ ಹೋದರೆ ಅವರು ಬಹಳ ಹಿಂದುಳಿದಿದ್ದಾರೆ. ನಮ್ಮ ಕರ್ನಾಟಕಕ್ಕೆ ಬಿಹಾರದಿಂದ ಕೆಲವು ಶಾಸಕರು ಬಂದಿದ್ದರು. ಅವರಿಗೆ ಜನತಾ ಮನೆಗಳನ್ನು ಕಟ್ಟಿದ್ದೇವೆಂದರೆ ನಂಬಲಿಕ್ಕೆ ಸಾಧ್ಯವಿಲ್ಲ. ಅವರು ತಮ್ಮ ಯಾವ ಕಾರ್ಯಕ್ರಮಗಳಿಗೂ ಹೋಲಿಸುವುದಕ್ಕೆ ಸಾಧ್ಯವಿಲ್ಲ. ಅಂಥ ಒಂದು ಕಾರ್ಯಕ್ರಮ ಇದು. ಗುಡಿಸಿಲಿನಲ್ಲಿ ಇರತಕ್ಕ ಜನರಿಗೆ ಒಂದು ಮನೆಯನ್ನು ಸೂರನ್ನು ಕೊಡಬೇಕೆಂದು ಈ ಕಾರ್ಯಕ್ರಮವನ್ನು ಇಟ್ಟುಕೊಂಡೆವು. ಮೂರು ಸಾವಿರ ರೂಪಾಯಿ ಸಾಲ ಮತ್ತು ಮೂರು ಸಾವಿರ ರೂಪಾಯಿ ಗ್ರ್ಯಾಂಟ್ ಕೊಟ್ಟು ಅವನ ಮನೆಯನ್ನು ಅವನೇ ಕಟ್ಟಿಕೊಳ್ಳಬೇಕು.

ಆ ಮನೆ ನನ್ನದು ಎಂದು ಆಗಬೇಕು ಜನತಾ ಮನೆ ಕೊಡುತ್ತಿದ್ದಾರೆಂದರೆ ಯಾರು ಸಹಿತ ಸಾಲ ವಾಪಸ್ಸು ಕೊಡಬೇಕಾಗಿಲ್ಲವೆಂಬ ಭಾವನೆ ಬಂದಿದೆ. ಸರ್ಕಾರದವರು ಕಟ್ಟಿಸಿಕೊಂಡು ಹೋಗುತ್ತಾರೆ, ನಾವು ಹೋಗಿ ಸೇರಿಕೊಳ್ಳುವುದು ಎಂಬ ಭಾವನೆ ಬಂದಿದೆ. 5–6 ಲಕ್ಷ ಮನೆಗಳಿಗೆ ಹುಡ್ಕೋದಿಂದ ಸಾಲ ತೆಗೆದು ಕಟ್ಟಿಸಿ ಕೊಟ್ಟರೆ ಒಬ್ಬನಿಗೂ ಸಾಲ ವಾಪಸ್ಸು ಕೊಡುವ ಇಚ್ಛೆ ಇಲ್ಲ. ಓಟಿಗೋಸ್ಕರ, ತುಟಿಗೆ ತುಪ್ಪ ಹಚ್ಚಿ ಏನು ಮೋಟಿವೇಟ್ ಮಾಡಬೇಕು ಅದನ್ನು ಸಂಪೂರ್ಣವಾಗಿ ಹಾಳು ಮಾಡಿದ್ದೇವೆ. ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಹೇಳುವುದಾದರೆ, ಹಳ್ಳಿಯಲ್ಲಿರತಕ್ಕ ಯಾವುದೇ ಕೆರೆಕುಂಟೆಯಲ್ಲಿ ಬೇಸಿಗೆ ಬಂತು ಎಂದರೆ ಗಾಡಿ ಕಟ್ಟಿಕೊಂಡು ಗೋಡನ್ನು ಹೊಲಗಳಿಗೆ ಹೊಡೆಯುತ್ತಿದ್ದ ಪರಿಸ್ಥಿತಿ ಇತ್ತು. ಫಲವತ್ತಾದ ಮಣ್ಣನ್ನು ಹೊಲಕ್ಕೆ ಹಾಕುತ್ತಿದ್ದೇವೆ. ಇವತ್ತು ಏನು ಯೋಚನೆ ಮಾಡುತ್ತಿದ್ದಾರೆಂದರೆ ವರ್ಲ್ಡ್ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಬಂದು ಡಿಸಿಲ್ಟ್ ಮಾಡಬೇಕೆಂದು. ಈ ರಾಜ್ಯದಲ್ಲಿರತಕ್ಕ ಮಾನವ ಸಂಪನ್ಮೂಲವನ್ನು ಓಟಿಗೋಸ್ಕರ ನಿರ್ಜೀವ ಮಾಡಿ ಸಂಪೂರ್ಣ ಸಮಾಧಿ ಮಾಡಿ ಫಲವತ್ತಾದ ಮಣ್ಣನ್ನು ಹಾಳು ಮಾಡಿದ್ದೇವೆ. ಇವತ್ತು ಯಾರೂ ಅದನ್ನು ಉಪಯೋಗ ಮಾಡತಕ್ಕ ಸ್ಥಿತಿಯಲ್ಲಿ ಇಲ್ಲ. ನಾನು ಪಕ್ಷಾತೀತವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಾವು ಹೆಗಡೆಯವರ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಬಹುದು, ಆದರೆ ಗ್ರಾಮೀಣ ಸ್ವರಾಜ್ಯ ಅಥವಾ ಈ ಒಂದು ಪಂಚಾಯತ್‌ರಾಜ್ ವ್ಯವಸ್ಥೆಯ ನಿಜವಾದ ಅಧಿಕಾರ ವಿಕೇಂದ್ರಿಕರಣ ಮಾಡಿದ್ದು ಐದು ಸಾವಿರ ಜನ, 50 ಸಾವಿರ ಜನ ಸದಸ್ಯರನ್ನು ಮಾಡಬೇಕೆಂಬ ಉದ್ದೇಶದಿಂದ ಅಲ್ಲ. 4 ಕೋಟಿ ಜನರು ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು, ಮಣ್ಣಿನ ಸಂರಕ್ಷಣೆ ಮಾಡಬೇಕು, ಕಾಡನ್ನು ಬೆಳಸಬೇಕು, ಮಕ್ಕಳನ್ನು ಹೆಚ್ಚಿಗೆ ಮಾಡಬಾರದು, ಹಳ್ಳಿಯ ಪರಿಸರವನ್ನು ಸುಂದರವಾಗಿಡಬೇಕು, ಹಳ್ಳಿಯಿಂದ ಪೋಲೀಸ್ ಠಾಣೆಗೆ ಹೋಗಬಾರದು, ಹಳ್ಳಿಯಲ್ಲೇ ರಾಜ್ಯ ನಡೆಯಬೇಕು ಎಂದು ಪ್ರಪಂಚದ ದೊಡ್ಡ ರಾಷ್ಟ್ರದ ಶಕ್ತಿಯಾದ ಚೈನಾ ಇರಬೇಕಾದರೆ ಅದಕ್ಕೆ ಕಾರಣ ಅದು ಎಂದು ನಂಬಿರತಕ್ಕವನು ನಾನು. ಆದರೆ ಅದಕ್ಕೆ ವಿರುದವಾಗಿ ನಾವು ಮಾಡಿಕೊಂಡು ಬಂದಿದ್ದೇವೆ.

ಈ ಸಾಲದ ಮನ್ನಾ ಮಾಡತಕ್ಕದ್ದು, ನಮ್ಮ ಪಕ್ಷದವರು ಮಾಡಿರಬಹುದು. ಇದಕ್ಕಿಂತಲೂ ಮೂರ್ಖತನದ ಪರಮಾವಧಿ ಬೇರೆ ಇಲ್ಲ. ನಾನೂ ನಮ್ಮ ಪಕ್ಷದ ವೇದಿಕೆಯಲ್ಲಿ ಹಲವಾರು ಬಾರಿ ನಾವು ಮಾಡುತ್ತಿರತಕ್ಕದ್ದು ತಪ್ಪು ಎಂದು ಹೇಳಿದ್ದೇನೆ. ಇನ್ನು ಆಶ್ರಯದಲ್ಲಿ ಸೈಟ್ ಹಂಚಬೇಕು. ಮೊನ್ನೆ ಭಾನುವಾರ ನಮ್ಮ ಕ್ಷೇತ್ರದಲ್ಲಿ ಸೈಟ್ ಹಂಚಲು ಹೋಗಿದ್ದೆ. 6 ಗಂಟೆಗೆ ಅಲ್ಲಿ ಆಶ್ರಯದಲ್ಲಿ ಹಂಚತಕ್ಕದ್ದು. ಏನು ಸಿಂಧ್ಯಾ ಅವರೇ, ರೋಡ್ ಪಕ್ಕದಲ್ಲಿ ಇರುವುದು 2–3 ಸಾವಿರಕ್ಕೆ ಮಾರಾಟ ಆಗಿದೆ ಎಂದು ಹೇಳಿದರು. ನನ್ನ ಮೇಲೆ ಅನುಮಾನವೇ ಎಂದಿದ್ದಕ್ಕೆ ಉತ್ತರವೇ ಇಲ್ಲ. ಮೌನಂ ಸಮ್ಮತಿ ಸೂಚನಂ. ನಾಚಿಕೆ ಆಗಬೇಕು. ಯಾವುದೇ ಹಳ್ಳಿಗೆ ಹೋಗಿ ಊರಿನಲ್ಲಿ ಇರತಕ್ಕ ಕಡುಬಡವರ ಪಟ್ಟಿ ಕೊಡಿ ಎಂದರೆ, ಇಲ್ಲ ನನಗೆ ಒಂದು ಬೇಕು. ವಿಡೋ ಪೆನ್‌ಷನ್. ನಾನು ಎಲ್ಲಿಗೇ ಹೋದರೂ, ನನಗೆ ಗಂಡ ಇಲ್ಲ ಆಸ್ತಿ ಇಲ್ಲ,ಮಕ್ಕಳು ಇದ್ದರೂ ಮಕ್ಕಳು ಇಲ್ಲ ಎಂದು ಹೇಳುತ್ತಾರೆ. ಇದನ್ನು ಗಂಡಸರೂ ಹೇಳುತ್ತಾರೆ, ಹೆಂಗಸರೂ ಹೇಳುತ್ತಾರೆ. ಹೆಂಗಸರ ಬಗ್ಗೆ ಹೇಳುವಾಗ ಗಂಡಸರು ಏನು ಕಡಿಮೆ ಇಲ್ಲ. ಏನಮ್ಮ ನಿನ್ನ ಗಂಡ ಇಲ್ಲವೇ, ನನ್ನ ಜೊತೆ ಆತ ಓದಿದವನು, ಅವನು ಏನಾದ ಎಂದು ಕೇಳಿದರೆ ಬಿಟ್ಟುಬಿಟ್ಟಿದ್ದಾನೆ ಸ್ವಾಮಿ, ನನ್ನ ಕಷ್ಟ ನೋಡುವವರು ಇಲ್ಲ ಎಂದು ಹೇಳುತ್ತಾಳೆ. ಸಂಪೂರ್ಣವಾಗಿ ಮೋಟಿವೇಷನ್ ಹಾಳು ಮಾಡಿ ಸರ್ಕಾರಕ್ಕೆ ಓಟು ಕೊಟ್ಟರೆ ಆಗುತ್ತದೆ ಎನ್ನುವ ವಾತಾವರಣ ಉಂಟುಮಾಡಿದ್ದಾರೆ. ಇವತ್ತು ಮಂಡಲ ಪಂಚಾಯಿತಿ ಅಧಿಕಾರ ವಿಕೇಂದ್ರೀಕರಣದ ಅವಶ್ಯಕತೆ ಕೇವಲ ಅಧಿಕಾರದ ಬದಲಾವಣೆಗೋಸ್ಕರ ಅಲ್ಲ. ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯ ಜೊತೆಗೆ ಪ್ರಜೆಗಳು ಪ್ರತಿನಿಧಿಗಳಾಗಬೇಕು. 400 ಜನರಿಗೆ ಪ್ರತಿನಿಧಿ ಮಾಡತಕ್ಕದ್ದನ್ನು ಸ್ವಾಗತ ಏಕೆ ಮಾಡುತ್ತೇವೆಂದರೆ 400 ಜನರೂ ಸಹಾ ನಮ್ಮ ಊರಿಗೆ ಕೊಡತಕ್ಕ ಹಣ, ನಮ್ಮ ಊರಿಗೆ ಬಂದಿರತಕ್ಕ ಹಣ ಇದು ಎಂದು ತಿಳಿಯಬೇಕು. ಇವತ್ತು ನಾವು ಜಿಲ್ಲಾಪರಿಷತ್ತು ಮಂಡಲ ಪಂಚಾಯಿತಿ ಮಾಡಿದ್ದೇವೆ. ಕಂಟ್ರಾಕ್ಟರ್ಸ್ ಬೇನಾಮಿ. ಮಂಡಲ ಪಂಚಾಯಿತಿ ಸದಸ್ಯರ ಹೆಸರಿನಲ್ಲಿ ಬೇರೆಯವರು ಮಾಡುತ್ತಾರೆ. ಬರುವುದನ್ನು ಹಂಚಿಕೊಳ್ಳುತ್ತಾರೆ. ಇನ್ನು ಗ್ರಾಮ ಸಭೆಗಳನ್ನು ಸರಿಯಾಗಿ ಮಾಡಿಲ್ಲ. ಎಲ್ಲೂ ಮಾಡಿಲ್ಲ. ಮತ್ತು ನಮ್ಮಲ್ಲಿ ಕೆಲವರಿಗೆ ಪಾಳೇಗಾರಿಗೆ ಪ್ರವೃತ್ತಿ ಇದೆ. ನಾನು ಎಂ. ಎಲ್. ಎ. ಆದ ಮೇಲೆ ನಾನು ಹೇಳಿದ್ದೇ ಅಲ್ಲಿ ನಡೆಯಬೇಕು. ಆ ಕ್ಷೇತ್ರದವರು ಏನಾದರೂ ಕಂದಾಯ ಮಂತ್ರಿಗಳಾಗಿ ಅಲ್ಲಿ ಹೋದರೆ ಅಲ್ಲಿನ ವಿಲೇಜ್ ಅಕೌಂಟೆಂಟ್ ಎದ್ದು ನಿಂತು ಸೆಲ್ಯೂಟ್ ಹೊಡೆಯಬೇಕೆಂಬ ಪಾಳೇಗಾರಿಕೆ ಪ್ರವೃತ್ತಿ ನಮ್ಮಲ್ಲಿ ಬೆಳೆದಿದೆ ಎಂದು ಹೇಳತ್ತೇನೆ. ಅದು ಏನೇ ಇರಲಿ ಈ ಒಂದು ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಮಾಡಿದ್ದಾಯಿತು. ಅದನ್ನು ಸ್ವಾಗತ ಮಾಡಬೇಕು. ನಮ್ಮ ಜಿಲ್ಲಾಪರಿಷತ್ತು ಕಾನೂನು ಏನು ಮಾಡಿದ್ದೇವೆ ಅದರಲ್ಲಿ ಕೆಲವು ಸುಧಾರಣೆಗಳನ್ನು ಮಾಡಬೇಕು. ಇದು ಸರ್ವ ಶ್ರೇಷ್ಠ ಎಂದು ಹೇಳುವುದಿಲ್ಲ. ಎಲ್ಲವೂ ಸರ್ವಕಾಲಕ್ಕೂ ಶ್ರೇಷ್ಠ ಅಲ್ಲ. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನಕ್ಕೆ 73 ತಿದ್ದುಪಡಿಗಳು ಆಗಿವೆ. ಇಡೀ ಸಂವಿಧಾನವನ್ನೇ ಬದಲಾವಣೆ ಮಾಡಬೇಕೆನ್ನತಕ್ಕ ಕಾಲ ಬಂದಿರುವಾಗ ಇದು ಸರ್ವಕಾಲಕ್ಕೂ ಶ್ರೇಷ್ಠ ಎಂದು ಹೇಳುವುದಕ್ಕೆ ನಾನು ತಯಾರಿ ಇಲ್ಲ. ಆದರೂ ಕೂಡ ಇವತ್ತಿನ ದಿವಸ ಮಸೂದೆಗೆ ಒಂದೆರಡು ಬದಲಾವಣೆಯನ್ನು ತಾವು ಮಾಡುವವರಿದ್ದೀರಿ. ಈ ಅಧಿವೇಶನದಲ್ಲೇ ಅದನ್ನು ತಾವು ಮಂಡಿಸುತ್ತಿದ್ದೀರಿ ಎಂದು ಹೇಳುತ್ತಾ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ನಾವು ಅದನ್ನು ಮಾಡಿಲ್ಲ, ಅದನ್ನು ನೀವು ಮಾಡಿ. ವೆಂಕಟಪ್ಪನವರು, ನೀವು ಏಕೆ ಮಾಡಲಿಲ್ಲ ಎಂದು ಕೇಳುತ್ತಾರೆ. ನೀವು ಮಾಡಿ ಸ್ವಾಮಿ.

ಶ್ರೀ ಎಂ. ವಿ. ವೆಂಕಟಪ್ಪ:– ನಾನು ಯಾವಾಗ ಕೇಳಿದೆ ?

ಶ್ರೀ ವಾಟಾಳ್ ನಾಗರಾಜ್:– ನಿಮ್ಮ ಕಾಲು ಕೆರೆದಿದ್ದಾರೆ ಅಷ್ಟೇ.

ಶ್ರೀ ಪಿ. ಜಿ. ಆರ್. ಸಿಂಧ್ಯ:– ನಾನು ಯಾರ ಜೊತೆಯೂ ಜಗಳ ಮಾಡುವುದಿಲ್ಲ. ನನ್ನ

ಅಭಿಪ್ರಾಯದಲ್ಲಿ ಹೇಳುವುದಾದರೆ, ಜಿಲ್ಲಾ ಪರಿಷತ್ತಿನ ಅಧ್ಯಕ್ಷರನ್ನು ನೇರವಾಗಿ ಚುನಾವಣೆ ಮಾಡತಕ್ಕದ್ದು ಒಳ್ಳೆಯದು. ಜಿಲ್ಲೆಯವರೂ ಎಲ್ಲರೂ ಕೂಡ ಭಾಗವಹಿಸಬೇಕು. ಏಕೆಂದರೆ ಜಿಲ್ಲಾ ಪರಿಷತ್ತಿನಮೆಂಬರ್ ಇರುವಾಗ ಅವರ ಒತ್ತಡ ಏನು ಇರುತ್ತದೆ, ಅಧಿಕಾರಿಗಳ ಮೇಲೆ ಹೀಗೆ ಮಾಡಿ ಹಾಗೆ ಮಾಡಿ ಎಂದು, ನಮ್ಮ ಮೆಂಟಲ್ ಏನಿದೆ ಅದು ಅಷ್ಟೊಂದು ಮೆಚ್ಯೂರ್ ಆಗಿಲ್ಲ. 51 ಪರ್ಸೆಂಟ್‌ಗೆ ಮೆಜಾರಿಟಿ ಎಂದು ಹೇಳಿದ್ದೀರಿ. 51ಕ್ಕೆ ಮೆಜಾರಿಟಿ ಮಾಡುವುದಾದರೆ, ನಿಮ್ಮ ಪಾರ್ಟಿಯಲ್ಲೂ ಈಗ ನೋಡುತ್ತಿದ್ದೀರಿ. ನಮ್ಮ ಪಾರ್ಟಿಯಲ್ಲಿ ಜಗಳ ಆಡಿ ಇಲ್ಲಿಗೆ ಬಂದು ಕುಳಿತಿದ್ದೇವೆ. ನೀವೂ ಅದೇ ಕೆಲಸಕ್ಕೆ ಹೋಗುತ್ತಿದ್ದೀರಿ. ಪ್ರತಿಯೊಂದು ಜಿಲ್ಲೆಯಲ್ಲೂ ಅದು ಆಗುವುದು ಬೇಡ. ನೇರವಾಗಿ ಜಿಲ್ಲಾಪರಿಷತ್ತಿನ ಅಧ್ಯಕ್ಷರನ್ನು ಆಯ್ಕೆ ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇನ್ನು ಎರಡನೆಯದಾಗಿ ಮಂಡಲ ಪ್ರಧಾನರನ್ನು ಹಿಂದುಳಿದ ವರ್ಗದವರಿಗೆ, ಷೆಡ್ಯೂಲ್ಡ್ ಕಾಸ್ಟ್‌ನವರಿಗೆ ಮತ್ತು ವುಮನ್ ಅವರಿಗೆ ನಾವು ರಿಸರ್ವೇಶನ್ ಇಟ್ಟಿಲ್ಲ.

ಶ್ರೀ ಎಂ. ವೈ. ಘೋರ್ಪಡೆ:– ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಡೈರೆಕ್ಟ್ ಎಲೆಕ್ಷನ್ ಮಾಡಬೇಕೆಂದು ಹೇಳುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ:– ನನ್ನ ಅಭಿಪ್ರಾಯದಲ್ಲಿ ಮಂಡಲ ಪ್ರಧಾನ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಮತ್ತು ಜಿಲ್ಲಾಪರಿಷತ್ ಅಧ್ಯಕ್ಷರುಗಳನ್ನು ಐದು ವರ್ಷಕ್ಕೆ ಒಂದು ಸಾರಿ ಟರ್ಮ್ ಫಿಕ್ಸ್ ಮಾಡಿ ಡೈರೆಕ್ಟ್ ಎಲೆಕ್ಷನ್ ಮಾಡಿ. ಆಗ ಅವನನ್ನು ತೆಗೆದು ಹಾಕುವುದಕ್ಕೆ ಆಗುವುದಿಲ್ಲ. ಇವತ್ತಿನಾಗೆ ಅವರನ್ನು ಜಗ್ಗಿಸುವುದಕ್ಕೆ ಹೋಗುವುದಿಲ್ಲ. ಇವತ್ತು ಮಹಿಳೆಯರಿಗೆ ಎಷ್ಟೊಂದು ಕಷ್ಟವಾಗುತ್ತಿದೆ ನೀವೇ ನೋಡುತ್ತಾ ಇದ್ದಿರಿ. ಪ್ರತಿಯೊಬ್ಬ ಮುಖ್ಯ ಮಂತ್ರಿಗಳಿಗೆ ಇವತ್ತು ಏನಾಗಿದೆ ಅಂದರೆ ಅವರು ನಮ್ಮೆಲ್ಲರನ್ನು ಸಂತೃಪ್ತಿಯಾಗಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಅವರಿಗೆ ಕಷ್ಟವಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ:– 2/3 ಮೆಜಾರಿಟಿ ಬೇಕೆಂದು ಆಸೆ ಇಟ್ಟುಕೊಳ್ಳಬೇಕೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ:– ನಾನು ಹೇಳುವುದು 2/3, 1/3 ಬೇಡ, 50 ಪರ್ಸೆಂಟ್ ಸಹ ಬೇಡ, ಡೈರೆಕ್ಟ್ ಎಲೆಕ್ಷನ್ ಮಾಡಬೇಕೆಂದು ನನ್ನ ಅಭಿಪ್ರಾಯ. ನನ್ನ ಅನುಭವದ ಮಾತು ಹೇಳುತ್ತಿದ್ದೇನೆ. ಪ್ರಧಾನರು, ಜಿಲ್ಲಾಪರಿಷತ್ ಅಧ್ಯಕ್ಷರು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರನ್ನು ಬೈ ರೊಟೇಶನ್ ಸಿಸ್ಟಮ್ ಇಂತಿಂಥ ಡಿಸ್ಟ್ರಿಕ್ಟ್‌ನಲ್ಲಿ ಇಂತಿಂಥವರು ಷೆಡ್ಯೂಲ್ಡ್ ಕಾಸ್ಟ್‌ನವರು ಪ್ರಧಾನರು ಆಗಬೇಕು. ಇಂತಹ ತಾಲ್ಲೂಕಿನಲ್ಲಿ ಷೆಡ್ಯುಲ್ಡ್ ಕಾಸ್ಟ್‌ನವರು ಪ್ರೆಸಿಡೆಂಟ್ ಆಗಬೇಕೆಂದು ರಿಸರ್ವೇಶನ್ ಮಾಡಿ. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಐದು ವರ್ಷಕ್ಕೆ ಅದನ್ನು ಚೇಂಜ್ ಮಾಡಿ. ರೊಟೇಶನ್ ಸಿಸ್ಟಮ್ ಮಾಡಿ. ಅದನ್ನು ಪರ್ಮನೆಂಟ್ ಮಾಡಿಯೆಂದು ನಾನು ಹೇಳುವುದಿಲ್ಲ. ಷೆಡ್ಯುಲ್ಡ್ ಕಾಸ್ಟ್ ರೆಪ್ರಸೆಂಟೇಷನ್‌ಗೆ ನಾವು ಅನ್ಯಾಯ ಮಾಡಿದ್ದೇವೆ. ನಾವು ತಪ್ಪು ಮಾಡಿದ್ದೇವೆ. ಅದೇ ರೀತಿ ಮಹಿಳೆಯರಿಗೂ ಸಹ ರೊಟೇಶನ್ ಸಿಸ್ಟಮ್‌ನಲ್ಲಿ ಜಿಲ್ಲಾ ಪರಿಷತ್ ಅಧ್ಯಕ್ಷ ಸ್ಥಾನ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷಸ್ಥಾನ ಹಾಗೂ ಮಂಡಲ ಪಂಚಾಯಿತಿ ಅಧ್ಯಕ್ಷ ಸ್ಥಾನವನ್ನು ಬೈ ರೊಟೇಶನ್‌ನಲ್ಲಿ ರಿಸರ್ವ್ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ಈಗಿರುವ ಪ್ರಧಾನರು, ಉಪಪ್ರಧಾನರು, ಜಿಲ್ಲಾ ಪರಿಷತ್‌ನ ಸದಸ್ಯರು ಅವರೆಲ್ಲ ಬಹಳ ಲಂಚಕೋರರು, ಭ್ರಷ್ಟರು ಆಗಿದ್ದಾರೆನ್ನುವುದನ್ನು ನಾವು ಈ ಸಭೆಯಲ್ಲಿ ಕೇಳಿದ್ದೇವೆ. ಮಂತ್ರಿಗಳ ಮೇಲೂ ಆಪಾದನೆ ಇದೆ.

ಶಾಸಕರ ಮೇಲೂ ಆಪಾದನೆ ಇದೆ. ಇವತ್ತು ಅವರ ಮೇಲೆ ವಿಶ್ವಾಸವಿಲ್ಲವೆಂದರೆ ನಮ್ಮ ಮೇಲೂ ನಮಗೆ ವಿಶ್ವಾಸವಿಲ್ಲವೆಂದಾಗುತ್ತದೆ. ನಾವು ಚುನಾಯಿತ ಪ್ರತಿನಿಧಿಗಳು ಐದು ವರ್ಷಕ್ಕೊಂದು ಸಾರಿ ಆರಿಸಿ ಬರುತ್ತೇವೆ. ಅವರ ಮೇಲೆ ನಾವು ಏಕೆ ವಿಶ್ವಾಸ ಇಟ್ಟುಕೊಳ್ಳಬಾರದು. ಅನೇಕರಲ್ಲಿ ಒಂದು

ತಪ್ಪು ಕಲ್ಪನೆಯಿದೆ. ಇದೊಂದು ಪಾಳೇಗಾರಿಕೆ ಪ್ರವೃತ್ತಿ ಅದು ಹೋಗಬೇಕು. ನಾನು ಈಗ ತುರ್ತಾಗಿ ನಮ್ಮ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ಏನಾದರೂ ಮಾಡಿ ಈ ಅಧಿವೇಶನದಲ್ಲಿಯೇ ಇದರ ಒಪ್ಪಿಗೆಯನ್ನು ಪಡೆದು ಎರಡು ತಿಂಗಳಿನೊಳಗೆ ಡೀ-ಲಿಮಿಟೇಶನ್ ಕಾನ್ಸ್ಟಿಟ್ಯುಯೆನ್ಸಿ ಮಾಡಿಕೊಂಡು ಜೂನ್ ತಿಂಗಳಿನಲ್ಲಿ ಎಲೆಕ್ಷನ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಏಕೆಂದರೆ ಇದು ನಿಮ್ಮ ಪಾರ್ಟಿಗೂ ಅನುಕೂಲವಾಗುತದೆ. Whether you have lost the ground ಇವತ್ತು ಗೊತ್ತಾಗುತ್ತದೆ. ನೀವು ಡಿಸೆಂಬರ್ ಜನವರಿಯಲ್ಲಿ ಎಲೆಕ್ಷನ್ ಮಾಡುವುದಕ್ಕೆ ಹೋದರೆ ನಿಮಗೆ ಆಚೆಗೆ ಉಳಿಯುವುದು ಕೇವಲ 8ತಿಂಗಳು. ನೀವು 8ತಿಂಗಳುಗಳಲ್ಲಿ ಕರೆಕ್ಷನ್ ಮಾಡಿಕೊಳ್ಳಲಿಕ್ಕೆ ಆಗೋಲ್ಲ. ಇವತ್ತು ಪಕ್ಷ ಬಿಡಿ, ದೇಶವೇ ಛಿದ್ರಛಿದ್ರವಾಗಿರುವಾಗ ಪಾರ್ಟಿಗಳು ಎಲ್ಲಿ ಉಳಿಯುತ್ತವೆ ? ಜಾತ್ಯಾತೀತ ಸಮಾಜವಾದಿ ಶಕ್ತಿಗಳು ಉಳಿಯುವಂತಾಗುತ್ತದೆ. ಆ ಕಾರಣದಿಂದ ನಾನು ಹೇಳುತ್ತಿದ್ದೇನೆ. ಏನೋ ನಾಳೆ ಕಾಂಗ್ರೆಸ್ ಪಕ್ಷಕ್ಕೆ ಬಂದು ಮಂತ್ರಿಯಾಗಬೇಕೆಂದು ಮತ್ತೊಂದು ದೃಷ್ಟಿಯನ್ನು ನಾನು ಇಟ್ಟುಕೊಂಡಿಲ್ಲ. ಇದಕ್ಕಿಂತ ವರ್ಸ್ಟ್ ನಾನು ನೋಡಿದ್ದೇನೆ. ಈಗ ಎಲ್ಲಿದೆ ಕಾಂಗ್ರೆಸ್ ? ಕಾಂಗ್ರೆಸ್ ಪಕ್ಷ ಭದ್ರವಾಗಿದ್ದಂತಹ ಸಂದರ್ಭದಲ್ಲಿ ಇವತ್ತು ನಾನು ಯಾರನ್ನು ಹೊಗಳಿದ್ದೇನೆ ರಾಜೀವ್ ಗಾಂಧಿಯವರನ್ನು, ಯಾರನ್ನು ತೆಗಳಿದ್ದೇನೆ ಶ್ರೀಮತಿ ಇಂದಿರಾ ಗಾಂಧಿಯವರನ್ನು ಅವರ ಜೊತೆಯಲ್ಲಿ ನಾನು ಹೋರಾಟ ಮಾಡಿದ್ದೇನೆ. ಅದಲ್ಲ ಪ್ರಶ್ನೆ, ಇವತ್ತು ಜಾತ್ಯಾತೀತತೆಯ ತಳಹದಿಯ ಮೇಲೆ ಸಾರ್ವಭೌಮತ್ವದ ಒಂದು ರಾಷ್ಟ್ರ ಮಾಡಬೇಕಾದರೆ ನಾವೆಲ್ಲರೂ ಒಂದು ದೃಷ್ಟಿಯಿಂದ ಒಟ್ಟು ಕೆಲಸ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ತಾವು ಜೂನ್‌ನಲ್ಲಿ ಎಲೆಕ್ಷನ್ ಮಾಡಬೇಕೆಂದು ಇಲ್ಲಿ ಮತ್ತೆ ಜಿಲ್ಲಾಪರಿಷತ್‌ಗಳಲ್ಲಿ ಮುಖ್ಯ ಕಾರ್ಯದರ್ಶಿಗಳನ್ನು ಅಡ್ಮಿನಿಸ್ಟ್ರೇಟರ್ ಎಂದು ಮಾಡಿದ್ದೀರಿ. ಅವರು ಎಂಎಲ್‌ಎಗಳಿಗೆ ಮೂರು ಕಾಸಿನ ಬೆಲೆಯನ್ನು ಕೊಡುತ್ತಿಲ್ಲ. ಗೌರವ ಕೊಡುವುದು ಇರಲಿ, ನಮ್ಮ ಸ್ವಂತ ಕೆಲಸಕ್ಕೆ ಹೇಳುತ್ತಾರೆನ್ನುವ ಭಾವನೆ ಅವರಲ್ಲಿ ಬಂದಿದೆ. ಸ್ವಾಮಿ ನಾನು ತಮಗೆ ಹೇಳಬೇಕಾದರೆ ಒಂದು ಹಳ್ಳಿಗೆ ನಾನು ಮೂರು ಸಾರಿ ಹೋಗುತ್ತೇನೆ. ಒಂದು ತಿಂಗಳಿನಲ್ಲಿ 10 ದಿವಸಗಳ ಕಾಲ ನಾನು ಹಳ್ಳಿಗಳಲ್ಲಿರುತ್ತೇನೆ. ಆದರೆ ನಮ್ಮ ಮಾತಿಗೆ ಮೂರು ಕಾಸಿನ ಬೆಲೆ ಸಿಗುತ್ತಿಲ್ಲ. ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಅಧಿಕಾರಿಗಳಿಗೆ ತಾವು ಕಡಿವಾಣ ಹಾಕಬೇಕು.

ಶ್ರೀ ನಾಗರಾಜ್ ಅವರು ಹೇಳಿದರು, ಕೋಲಾರ ಜಿಲ್ಲೆಯಲ್ಲಿ ನಮ್ಮಲ್ಲಿ ಸಭೆ ಮಾಡುತ್ತಾರೆ, ಬಹಳ ಚೆನ್ನಾಗಿದೆ ಎಂದು. ಹಾಗೆಯೇ ಮತ್ತೊಬ್ಬರು ಹೇಳಿದರು. ಆದರೆ ಬಹುತೇಕ ಜಿಲ್ಲಾ ಪರಿಷತ್ತಿನ ಸಭೆಗಳು ನಡೆಯುತ್ತಿಲ್ಲ. ಎಲ್ಲಿ ಕೆಲಸ ಆಗಬೇಕೋ, ಅಲ್ಲಿ ಆಗುತ್ತಿಲ್ಲ. ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 1992–93ರ ಆಕ್ಷನ್ ಪ್ಲಾನ್‌ಅನ್ನು ಜನವರಿಯಲ್ಲಿ ಅಪ್ರೂವ್ ಮಾಡಿದ್ದಾರೆ. ಯಾರ ಹತ್ತಿರ ಹೋಗಿ ಹೇಳಬೇಕು ಹೇಳಿ ? ಯಾವ ಪ್ರೋಗ್ರಾಮ್‌ಗಳನ್ನು 360 ದಿವಸಗಳಲ್ಲಿ ಅಪ್ರೂವ್ ಮಾಡಿ ಇಂಪ್ಲಿಮೆಂಟ್ ಮಾಡಬೇಕೋ, ಅದನ್ನು ಜನವರಿ–ಫೆಬ್ರವರಿಯಲ್ಲಿ ಅಪ್ರೂವ್ ಮಾಡಿದರೆ ಇನ್ನು 30 ದಿವಸಗಳಲ್ಲಿ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಸಿಮೆಂಟ್, ಕಬ್ಬಿಣವನ್ನು ಇಂಜಿನಿಯರುಗಳು ತಂದು ಜೋಡಿಸಿಕೊಳ್ಳಬೇಕು ಅಷ್ಟೆ. ಈ ಸ್ಥಿತಿ ಬಂದಿದೆ. ನಾನು ತಮ್ಮನ್ನು ಕಾರಣಕರ್ತರೆಂದು ಹೇಳಿ ದೂಷಣೆ ಕೊಡಬೇಕೆಂದು ಹೇಳುತ್ತಿಲ್ಲ. ಆದರೆ ಪರಿಸ್ಥಿತಿ ಹಾಗೆ ಇದೆ. ನಮ್ಮ ಮಾತಿಗೆ ಬೆಲೆ ಇಲ್ಲ. ಆದ್ದರಿಂದ ಈ ಅಧಿಕಾರಿ ಶಾಹಿಗೆ ಕಡಿವಾಣ ಹಾಕಬೇಕೆಂದು ಹೇಳಿ, ಸಾಕಷ್ಟು ಸಮಯವನ್ನು ತಾವು ನನಗೆ ಒದಗಿಸಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ, ಈ ಒಂದು ಸಂವಿಧಾನದಲ್ಲಿ ಬದಲಾವಣೆ ತಂದಿರತಕ್ಕದ್ದನ್ನು ಸ್ವಾಗತ ಮಾಡಿ ಸರ್ಕಾರ ತೆಗೆದುಕೊಂಡಿರತಕ್ಕಂಥ ಕ್ರಮವನ್ನು ಸಹಿತ ನಾನು ಸ್ವಾಗತ ಮಾಡಿ ಚುನಾವಣೆಗಳನ್ನು ಜೂನ್ ತಿಂಗಳಲ್ಲಿ ಮಾಡಬೇಕೆಂದು ಒತ್ತಾಯ ಮಾಡಿ ನನ ಮಾತನು ಮುಗಿಸುತ್ತೇನೆ.

ಅಧ್ಯಕ್ಷರು:- ಐದು ನಿಮಿಷಗಳಲ್ಲಿ ಮುಗಿಸಿ.

† ಶ್ರೀ ಡಿ. ಆರ್. ಪಾಟೀಲ್ (ಗದಗ್):- ಮಾನ್ಯ ಅಧ್ಯಕ್ಷರೇ, ಸರ್ಕಾರ ತಂದಿರುವ ಕೇಂದ್ರ ಸರ್ಕಾರದ 72ನೇ ತಿದ್ದುಪಡಿಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀ ಸಿಂಧ್ಯರವರು ಮಾತನಾಡುವಾಗ ತಾವು ತಂದಂಥ ಪಂಚಾಯತ್‌ರಾಜ್ ಮಸೂದೆಯಲ್ಲಿ ಏನೇನು ಲೋಪದೋಷಗಳು ಇದ್ದವು ಎನ್ನುವುದನ್ನು ಅವರು ಒಪ್ಪಿಕೊಂಡರು. ನಿಜವಾಗಿಯೂ ರಾಜಕೀಯದಲ್ಲಿರುವ ಎಲ್ಲಾ ನಾಯಕರಿಗೆ ಈ ರೀತಿ ಭಾವನೆ ಇತ್ತು ಎಂದರೆ ಬಹುತೇಕ ಈ ಬದಲಾವಣೆ 1989ರ ಪೂರ್ವದಲ್ಲಿ ಶ್ರೀ ರಾಜೀವ್ ಗಾಂಧಿಯವರು ಬದುಕಿದ್ದಾಗಲೇ ನಮ್ಮ ದೇಶದಲ್ಲಿ ಬರುತ್ತಿತ್ತು. ಆದರೆ ದುರ್ದೈವಕ್ಕೆ ಆಗ ಕೇಂದ್ರ ಸರ್ಕಾರದಲ್ಲಿದ್ದ ಅವರ ಪಕ್ಷದ ನಾಯಕರಿಗೆ ತಮ್ಮ ವೈಯಕ್ತಿಕ ಪ್ರತಿಷ್ಠೆಗಾಗಿ ಆಗ ಈ ತಿದ್ದುಪಡಿಯನ್ನು ಸೋಲಿಸಿದ್ದರಿಂದ ಕಳೆದ ನಾಲ್ಕು ವರ್ಷಗಳವರೆಗೆ ನಾವು ಅದರ ದಾರಿ ಕಾಯಬೇಕಾದ ಪ್ರಸಂಗ ಬಂತು. ಪರವಾಗಿಲ್ಲ ನಾಲ್ಕು ವರ್ಷ ತಡವಾದರೂ ಕೂಡ ಇವತ್ತು ಗ್ರಾಮಾಂತರ ಭಾಗದಲ್ಲಿ ಕೆಲಸ ಮಾಡುವಂಥ ಜನರಿಗೆ ರಾಜ್ಯ ಸರ್ಕಾರಗಳು ಯಾವುದೇ ರೀತಿಯ ತೊಂದರೆ ಪಡದ ಹಾಗೆ ಪಂಚಾಯತ್ ರಾಜ್ಯಗಳನ್ನು ನಡೆಸಿಕೊಂಡು ಹೋಗತಕ್ಕಂಥ ಒಂದು ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಎಲ್ಲಾ ಪಕ್ಷದವರು ಇವತ್ತು ಒಂದಾಗಿದ್ದೇವೆ. ದಳದವರು ಒಂದಾಗಿದ್ದಾರೆ, ಮಾರ್ಕ್ಸಿಸ್ಟ್ ಒಂದಾಗಿದ್ದಾರೆ ಮತ್ತು ಬಿಜೆಪಿಯವರು ಒಂದಾಗಿದ್ದಾರೆ. ಆಗ ಆಗಿರಲಿಲ್ಲ, ಈಗಲಾದರೂ ಆಗಿದ್ದಾರೆ. 72ನೇ ತಿದ್ದುಪಡಿಯಲ್ಲಿ ಈ ದೇಶದಲ್ಲಿ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ಸಲುವಾಗಿ ಏನು ಒಂದು ರಿಸರ್ವೇಶನ್ ಇಟ್ಟಿದ್ದರು, ಅದು ನಿಜವಾದ ಕ್ರಾಂತಿಕಾರಕ ಕೊಡುಗೆ. 1984ರಲ್ಲಿ ನಮ್ಮ ರಾಜ್ಯದಲ್ಲಿ ಪಂಚಾಯತ್ ರಾಜ್ ಮಸೂದೆ ಪಾಸ್ ಆದಾಗ, ಬಹುತೇಕ ಎಲ್ಲಾ ಜನರಿಗೆ ಅಧಿಕಾರ ಹೋಗುತ್ತದೆ ಎನ್ನುವ ಕಲ್ಪನೆ ಶ್ರೀ ನಜೀರ್‌ಸಾಬ್ ಅವರಿಗೆ ಇತ್ತು ನಾನು ಅವರ ಜೊತೆಯಲ್ಲಿ ಮಾತನಾಡಿದ್ದಾಗ ಅಧಿಕಾರ ಅವರವರ ಜನಸಂಖ್ಯೆಯ ಆಧಾರದ ಮೇಲೆ ಸಿಗುವ ಹಾಗೆ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ ಪಾಟೀಲರೇ ಎಂದು ನನಗೆ ಹೇಳಿದ್ದರು. ಅದರಲ್ಲಿ ಅವರು ಸೋತರು. ಬಹುತೇಕ ಅವರ ಪಕ್ಷದಲ್ಲಿ ಅದಕ್ಕೆ ವಿರೋಧ ಬಂದಿರಬಹುದು. ಅವರು ಆಗೇನು ಸೋತರು ಅದನ್ನು ಸರಿಪಡಿಸುವ ಕೆಲಸ ಈಗ ಆಗಿದೆ. ಇದು ನಿಜವಾದ ಗಾಂಧೀಜಿಯವರು ಕಂಡಂಥ ಪಂಚಾಯತ್‌ರಾಜ್ ಕಲ್ಪನೆ. ಇಲ್ಲದಿದ್ದರೆ ಈಗಿರುವ ವ್ಯವಸ್ಥೆಯೊಳಗೆ ಆ ಗ್ರಾಮದ ಬಲಿಷ್ಠರು ಪ್ರಧಾನರಾಗಬೇಕು ಇಲ್ಲವೇ ಬಲಿಷ್ಠರ ಮಾತು ಕೇಳುವಂಥ ಬಡಜನರು ಆ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕು. ಅವರು ತಮ್ಮ ಸ್ವಂತ ಶಕ್ತಿಯಿಂದ ಅಧಿಕಾರಗಳಿಸುವ ವ್ಯವಸ್ಥೆ ಇರಲಿಲ್ಲ. ಅದು ಇವತ್ತು ಬದಲಾವಣೆಯಾಗುತ್ತಿದೆ. ಅವರಿಗೆ ರಿಸರ್ವೇಶನ್ ಅನ್ನು ಘಟನಾಬದ್ಧವಾಗಿ ಕೊಡುವುದರಿಂದ ಅವರು ಸ್ವಾಭಿಮಾನದಿಂದ ಈ ಅಧಿಕಾರವನ್ನು ನಡೆಸತಕ್ಕಂಥ ಒಂದು ವ್ಯವಸ್ಥೆಯನ್ನು ನಾವು ರೂಪಿಸಿ ಕೊಡುತ್ತಿದ್ದೇವೆ. ನನಗೆ ಬಹಳ ಸಂತೋಷ ಇವತ್ತು ಘೋರ್ಪಡೆ ಸಾಹೇಬರು ಇಂತಹ ಒಂದು ಮಹತ್ತರ ತಿರುವು ನಮ್ಮ ರಾಷ್ಟ್ರದ ರಾಜಕೀಯದಲ್ಲಿ ಸಿಗುವ ಸಮಯದಲ್ಲಿ ಪಂಚಾಯತ್‌ರಾಜ್ ಅಧಿಕಾರ ವಹಿಸಿಕೊಂಡಿದ್ದಾರೆ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ರೀತಿ ಕೆಲಸ ಮಾಡಬಹುದು, ಜನರನ್ನು ಯಾವ ರೀತಿ ಅರ್ಪಣಾಭಾವದಿಂದ ಕೆಲಸ ಮಾಡುವುದುಕ್ಕೆ ಹಚ್ಚಬಹುದು, ಜನರಲ್ಲಿ ಇರುವಂಥ ಲೋಪದೋಷಗಳು ಏನು, ಅವರು ಸಮಷ್ಟಿಯಾಗಿ ಏನು ಅನ್ಯಾಯ ಮಾಡಬಹುದು, ಏನು ಅನ್ಯಾಯ ಮಾಡಲಿಕ್ಕಿಲ್ಲ ಎಂದು ಸಂಪೂರ್ಣವಾದ ಅನುಭವ ಹಿನ್ನಲೆ ಅವರಿಗೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಕೆಲಸ ಮಾಡಿ, ಅಲ್ಲಿನ ಓರೆಕೋರೆಗಳನ್ನು ಸರಿಯಾಗಿ ತಿಳಿದುಕೊಂಡಿರತಕ್ಕಂಥ ಅವರ ಅನುಭವದ ಆಳದಿಂದ ಬರತಕ್ಕಂಥ ಮಸೂದೆಯ ತಿದ್ದುಪಡಿ ಅಥವಾ ಸಮಗ್ರ ಒಂದು

ಮಸೂದೆ ಏನು ನಮ್ಮ ರಾಜ್ಯಕ್ಕೆ ಬರುತ್ತದೆ, ಅದು ಯಾವುದೇ ಲೋಪದೋಷಗಳನ್ನು ಒಳಗೊಂಡಿರುವುದಿಲ್ಲ ಎಂಬ ಭಾವನೆ ನನಗೆ ಇದೆ.

ಇವತ್ತು, ನಾವೆಲ್ಲರೂ ಗ್ರಾಮಸಭೆ ಮಾಡುತ್ತಾ ಇರುತ್ತೇವೆ. ಬಹುತೇಕ ನಮ್ಮ ಜಿಲ್ಲೆಯಲ್ಲಿ ಮೊದಲನೇ ಗ್ರಾಮಸಭೆ ಸರಿಯಾಗಿ ನಡೆಯಿತು, ಮುಂದೆ ಈ ಗ್ರಾಮಸಭೆ ಸರಿಯಾಗಿ ನಡೆಯಲೇ ಇಲ್ಲ. ಪ್ರಧಾನರು ಮತ್ತಿತರ 3–4 ಮಂದಿ ಕೂಡಿ, ತಮಗೆ ಏನು ಬೇಕೋ ಅದನ್ನು ಬರೆದುಕೊಂಡು ಗ್ರಾಮಸಭೆಯಲ್ಲಿ ಆದಂಥ ಠರಾವು ಎಂದು ಹೇಳಿ, ಮೇಲಧಿಕಾರಿಗಳಿಗೆ ಮತ್ತು ಜಿಲ್ಲಾಪರಿಷತ್ತಿಗೆ ಕಳುಹಿಸುವಂಥ ಒಂದು ಪರಿಪಾಠವನ್ನು ನೋಡಿದ್ದೇವೆ. ಏಕೆಂದರೆ, ಗ್ರಾಮಸಭೆ ವಿಚಾರವಾಗಿ, ಈ ಕಾನೂನಿನಲ್ಲಿಯೇ ಲೋಪ ಇದೆ. ಈ ಗ್ರಾಮ ಸಭೆಗೆ ಕೋರಂ ಇಲ್ಲ, ಗ್ರಾಮಸಭೆಗೆ ಕೋರಂ ಇರಬೇಕೆಂದು ಈಗಿರತಕ್ಕ ಮಸೂದೆಯಲ್ಲಿ ಇಲ್ಲ. ಹೀಗಾಗಿ, ಅಲ್ಲಿಯ ಸದಸ್ಯರು ಮತ್ತು ಅವರ ಮನೆಯವರೇ ಕೂಡಿದರೆ ಸಾಕು, ಅದು ಒಂದು ಕಾನೂನು ಬದ್ಧ ಗ್ರಾಮಸಭೆ. ದಯಮಾಡಿ ಘೋರ್ಪಡೆ ಸಾಹೇಬರು ಈ ಚ್ಯುತಿಯನ್ನು ಬದಲು ಮಾಡಬೇಕು. ಕನಿಷ್ಠ ಪ್ರತಿಶತ 10 ಜನ ಸದಸ್ಯರು ಆ ಸಭೆಯಲ್ಲಿ ಭಾಗವಹಿಸಿದರೆ ಮಾತ್ರ ಗ್ರಾಮಸಭೆ ಮಾಡಬೇಕು ಎಂಬ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಇಲ್ಲದೇ ಹೋದರೆ, ಕೋರಂ ಇಲ್ಲದ ಸಭೆಗೆ ಏನು ಕಿಮ್ಮತ್ತು ಇರುತ್ತದೆ, ಇವತ್ತು ಕೋರಂ ಬಗ್ಗೆ ಕಾಳಜಿ ಮಾಡಲಾರದಂಥ ಪರಿಸ್ಥಿತಿ ಬಂದಿದೆ. ಆದ್ದರಿಂದ ಈ ಕೋರಂ ಬಗ್ಗೆ ಒಂದು ಪ್ರಾವಿಷನ್ ಮಾಡಬೇಕು. ಮತ್ತು ಗ್ರಾಮಸಭೆಗಳು ಬಹಳ ಎಫೆಕ್ಟೀವ್ ಆಗಿ ಕೆಲಸ ಮಾಡುವಂಥ ವ್ಯವಸ್ಥೆ ಮಾಡಬೇಕು. ಇವತ್ತು ನಾವು ನೋಡುತ್ತಿದ್ದೇವೆ. ಎಷ್ಟೋ ಮಂಡಲ ಪಂಚಾಯ್ತಿಗಳಲ್ಲಿ ಜವಹರ್ ರೋಜ್‌ಗಾರ್ ಯೋಜನೆಯಿಂದ, ಒಂದೊಂದು ಮಂಡಲಕ್ಕೆ 3–4 ಲಕ್ಷ ರೂಪಾಯಿಗಳು ಪ್ರತಿವರ್ಷ ಕೊಟ್ಟಿರುತ್ತಾರೆ. ಎಷ್ಟೋ ಮಂಡಲ್ ಪಂಚಾಯ್ತಿಯೊಳಗೆ ಕಾರ್ಯಗಳು ಆಗದೇ ಪ್ರಧಾನರು, ಸದಸ್ಯರು ಮತ್ತು ಅಲ್ಲಿನ ಕಾರ್ಯದರ್ಶಿಯವರು ಕೂಡಿಕೊಂಡು, ಬರೀ ಕಾಗದ ಪತ್ರದೊಳಗೇ ಕೆಲಸ ಮಾಡಿ, ದುಡ್ಡು ತಿನ್ನುವಂಥ ಅನೇಕ ಪ್ರಕರಣಗಳನ್ನು ನಾವು ಅನುಭವದಿಂದ ನೋಡಿದ್ದೇವೆ. ಆಗ ದುರ್ದೈವ ಏನಾಗುತ್ತಿದೆ, ನಾವು ರಾಜಕೀಯದಲ್ಲಿರುವಂತ ಜನ, ಯಾರಾದರೂ ತಪ್ಪು ಮಾಡಿದರೆ, ನೀವು ತಪ್ಪು ಮಾಡಿದ್ದೀರಿ ಎಂದು ಹೇಳುವಂಥ ಮನೋಧೈರ್ಯ ನಮಗೆ ಇರುವುದಿಲ್ಲ. ಏಕೆಂದರೆ, ಮುಂದೆ ಚುನಾವಣೆಯಲ್ಲಿ ಅವರ ಮತ ಬೇಕಾಗಿರುವುದರಿಂದ, ನಾವು ಮೂಕಪ್ರೇಕ್ಷಕರಾಗಿರುವಂಥ ಪರಿಸ್ಥಿತಿ ಇರುತ್ತದೆ. ಘೋರ್ಪಡೆ ಸಾಹೇಬರಿಗೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಗ್ರಾಮದಲ್ಲಿರುವಂತೆ ಯೋಜನೆಗಳಿಗೆ, ಆಯಾ ಗ್ರಾಮ ಸಭೆಯೊಳಗೆ ಪರ್ಮಿಷನ್ ಸಿಗಬೇಕು. ಮುಂದೆ ಆ ಕೆಲಸಕ್ಕೆ ಎಷ್ಟೆಷ್ಟು ಖರ್ಚಾಗುತ್ತದೆ ಎಂಬುದನ್ನು ಪೂರ್ತಿಯಾಗಿ ವಿಮರ್ಶೆ ಮಾಡುವಂಥ ಕಾನೂನುಬದ್ಧ ಹಕ್ಕು ಗ್ರಾಮಸಭೆಯವರಿಗೆ ಇರಬೇಕು. ಇದರಿಂದ ಅನೇಕ ಲೋಪ ದೋಷಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ.

ಇಲ್ಲದಿದ್ದರೆ ಮುಂದೆ ಬರುವ ಸರಪಂಚರಾಗಲೀ ಅಥವಾ ಪಂಚಾಯಿತ್ ಪ್ರಧಾನರು, ತಾವೇನೆಂದು ಕರೆಯುತ್ತೀರೋ ಮತ್ತು ಸೆಕ್ರೆಟರಿಯವರು ಗುಳುಂ ಮಾಡುವಂಥ ವ್ಯವಸ್ಥೆ ಹಾಗೆಯೇ ಮುಂದುವರಿಯುತ್ತದೆ. ಇದನ್ನು ಬದಲು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆಮೇಲೆ ರಿಸರ್ವೇಷನ್ ವಿಚಾರವನ್ನು ಪದಾಧಿಕಾರಿಗಳ ಮಟ್ಟಕ್ಕೂ ತೆಗೆದುಕೊಂಡು ಹೋಗಿರುವುದರಿಂದ, ಬಹುತೇಕವಾಗಿ ರಾಜೀವ್ ಗಾಂಧಿಯವರು ಇದನ್ನು ಇಚ್ಛೆಪಟ್ಟಿದ್ದರು ಎಂದು ನಾನು ತಿಳಿದಿದ್ದೇನೆ. ಪಂಚಾಯಿತಿಯವರು ಪಕ್ಷಾತೀತವಾಗಿ ಬರಬೇಕು. ಇಲ್ಲವೆಂದರೆ, ರಿಸರ್ವೇಷನ್ ಇಡುತ್ತೇವೆ ಎಂಬ ಪ್ರಸಂಗವನ್ನು ಕಲ್ಪಿಸಿಕೊಳ್ಳಬೇಕು. ಗದಗ್ ತಾಲ್ಲೂಕಿನಲ್ಲಿ ರಿಸರ್ವೇಷನ್ ಇಟ್ಟೆವು, ಲೇಡೀಸ್‌ಗೆ ರಿಸರ್ವೇಷನ್ ಆಯಿತು ಎಂದು ತಿಳಿಯಿರಿ. ನಾವು ಪಕ್ಷದಿಂದ ಚುನಾವಣೆ ಮಾಡುವುದಕ್ಕೆ ಹೊರಟರೆ, ಕಾಂಗ್ರೆಸ್ ಪಕ್ಷದಿಂದ ಯಾವ ಮಹಿಳಾ ಅಭ್ಯರ್ಥಿಯೂ ಆರಿಸಿ ಬರಲಿಲ್ಲವೆಂದು ಹೇಳಿದರೆ, ಯಾವ

ರೀತಿ ಲೇಡೀಸ್‌ಗೆ ಪಟ್ಟ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ? ಬಹುತೇಕ ನೇರ ಚುನಾವಣೆಯಾಗಬೇಕು ಎಂಬ ಇಚ್ಛೆ ಹಿಂದಿನ ಪ್ರಧಾನಿಯವರಿಗೆ ಇರಬೇಕೆಂದು ನನ್ನ ಭಾವನೆ. ತಾವು ದಯಮಾಡಿ ವಿಚಾರ ಮಾಡಿ. ಪಂಚಾಯತ್ ಚುನಾವಣೆಗಳು ಪಕ್ಷಾತೀತವಾದರೆ ಹೆಚ್ಚು ಅನುಕೂಲವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ, ವೈಷಮ್ಯ, ದ್ವೇಷ, ಅಸೂಯೆ ಕಡಿಮೆಯಾಗುತ್ತವೆ. ಮತ್ತು ಯೋಗ್ಯ ಜನ ಅಧಿಕಾರಕ್ಕೆ ಬರುತ್ತಾರೆ. ನಾವೆಲ್ಲರೂ ಊರೊಳಗೆ ಪಕ್ಷಾತೀತವಾದ ಪರಿಧಿ ದಾಟಿ ವಿಚಾರ ಮಾಡುವುದಾದರೆ, ಯಾವಾಗಲೂ ಯೋಗ್ಯರನ್ನು ಆರಿಸಬಹುದು. ನಾವೆಲ್ಲರೂ ಅಂತಹ ಸಂಸ್ಕೃತಿಯಲ್ಲಿ ಬಂದಿರುವುದಿಂದ, ದಯಮಾಡಿ, ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ಅಧಿಕಾರಿಗಳನ್ನು ನೇಮಿಸುವುದಕ್ಕೆ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತ್ತಿ ಹಾಗೂ ತಾಲ್ಲೂಕು ಪಂಚಾಯಿತ್ತಿ ಸಮಿತಿಯ ಪರಿಮಿತಿಯಲ್ಲಿ, ನೌಕರರು ಯಾರು ಇರುತ್ತಾರೆ ಇವತ್ತು ಶಾಲಾ ಶಿಕ್ಷಕರನ್ನು ರಾಜ್ಯಮಟ್ಟದಲ್ಲಿ ನೇಮಿಸಿ ಕಳುಹಿಸುತ್ತಾರೆ. ಒಂದು ಸಾರಿ ನೇಮಿಸಿ ಕಳುಹಿಸಿದರೆ, 35 ವರ್ಷಗಳವರೆಗೆ ಅವರಗೆ ನೌಕರಿ ಶಾಶ್ವತ. ಎಷ್ಟೋ ಶಾಲಾ ಮಾಸ್ತರು ಶಾಲೆಯಲ್ಲಿ ಕಲಿಸುವುದಕ್ಕೆ ಹೋಗುವುದಿಲ್ಲ. ಆದರೆ, ಈ ಅಧಿಕಾರವನ್ನು ಪಂಚಾಯಿತ್ತಿಯವರಿಗೆ ಕೊಟ್ಟು, ಕಾಂಟ್ರಾಕ್ಟ್ ಮೇಲೆ ನೇಮಕ ಮಾಡಬೇಕು. ಏಕೆಂದರೆ, ಅವರು ಅಧಿಕಾರದಲ್ಲಿರುವವರೆಗೆ ಅಂದರೆ 5 ವರ್ಷಗಳವರೆಗೆ ಕಾಂಟ್ರಾಕ್ಟ್ ಮೇಲೆ ಶಿಕ್ಷಕರನ್ನು ನೇಮಕ ಮಾಡುವುದಕ್ಕೆ ಅಧಿಕಾರ ಕೊಡಬೇಕು. 5 ವರ್ಷವಾದ ಮೇಲೆ ಬರುವಂಥ ಜನ, ಇವರು ಯೋಗ್ಯವಾಗಿ ಶಾಲೆ ಕಲಿಸಿದರೆ, ಅಂತಹ ಮಾಸ್ತರನ್ನು ವಿಸ್ತರಣೆ ಮಾಡಬೇಕು. ಇಲ್ಲದಿದ್ದರೆ ಅವರನ್ನು ಮನೆಗೆ ಕಳುಹಿಸಬಹುದು ಅಂತಹ ಒಂದು ಕಾನೂನು ಮಾಡಿಕೊಡುವುದರಿಂದ ಅವರ ಮೇಲೆ ಹತೋಟಿ ಬರುತ್ತದೆ. ಇಲ್ಲದಿದ್ದರೆ ಅವರ ಮೇಲೆ ಯಾರ ಹತೋಟಿ ಬರುವುದಿಲ್ಲ. ರಾಜ್ಯ ಸರ್ಕಾರದ ಹತೋಟಿ ಬರುವುದಿಲ್ಲ, ಜಿಲ್ಲಾ ಪರಿಷತ್ತಿನ ಹತೋಟಿ ಕೂಡ ಬರುವುದಿಲ್ಲ ....

ಅಧ್ಯಕ್ಷರು:– ಟೈಮ್ ಆಯಿತು ತಾವು ಮುಗಿಸಿ. ಸಾಕು, ವಾಟಾಳ್ ನಾಗರಾಜ್‌ರವರೇ ತಾವು ಮಾತನಾಡಿ. ತಮಗೆ 5 ನಿಮಿಷ ಟೈಮ್ ಕೊಟ್ಟಿದ್ದೇನೆ.

† ಶ್ರೀ ವಾಟಾಳ್ ನಾಗರಾಜ್:– 10 ನಿಮಿಷ ಕೊಡಿ. ಮಾನ್ಯ ಅಧ್ಯಕ್ಷರೇ, ಸಂವಿಧಾನದ 72–73ಕ್ಕೆ ತಿದ್ದುಪಡಿ ಏನು ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಾಮಿ ಈ ಗ್ರಾಮರಾಜ್ಯದ ಬಗ್ಗೆ ಚಿಂತನೆ, ಇವತ್ತು ಪ್ರಾರಂಭವಾದುದು ಅಲ್ಲ. ಹಿಂದೆ ಕೇಂದ್ರದಲ್ಲಿ ಮಂತ್ರಿಗಳಾಗಿದ್ದಂತಹ ಎಸ್.ಕೆ.ಡೇ. ಅವರು ಇದರ ಬಗ್ಗೆ ಗಮನಹರಿಸಿದ್ದರು. ಅನಂತರ ಅಶೋಕ ಮಹ್ತಾರವರು ಅವರ ಜೊತೆಯಲ್ಲಿ ಜಯಪ್ರಕಾಶ್ ನಾರಾಯಣ್‌ರವರು ಮತ್ತು ನಿಜಲಿಂಗಪ್ಪನವರು ಗ್ರಾಮರಾಜ್ಯದ ಕಲ್ಪನೆ ಕೊಟ್ಟಂತಹ ದೊಡ್ಡ ದೊಡ್ಡ ಮಹಾನ್ ವ್ಯಕ್ತಿಗಳು. ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ರಾಮಕೃಷ್ಣ ಹೆಗಡೆಯವರು ಪಂಚಾಯತ್ ರಾಜ್ಯದ ಉಪ ಮಂತ್ರಿಗಳಾಗಿದ್ದರು. ತಮಗೂ ಗೊತ್ತಿದೆ. ಅಲ್ಲಿಂದ ಇಲ್ಲಿಯವರೆಗೂ ಒಂದು ರೀತಿಯಾದಂತಹ ಜಿಲ್ಲಾ ಪರಿಷತ್ತು ನಮ್ಮಲ್ಲಿ ಇತ್ತು. ತಾಲ್ಲೂಕು ಬೋರ್ಡ್ ಇತ್ತು, ಇದು ಒಂದಲ್ಲ ಒಂದು ರೀತಿಯಲ್ಲಿ ಬಂದಿದೆ. ಇವತ್ತು ತಂದಿರತಕ್ಕಂಥ ತಿದ್ದುಪಡಿ ಪರಿಣಾಮಕಾರಿಯಾಗಿದೆ. ಯಾರಿಗೆ ಪ್ರಾಮಾಣಿಕವಾಗಿದೆ. ಶ್ರೀಮಾನ್ ಸಿಂಧ್ಯಾರವರು ಹೇಳಿದಂತೆ ಶ್ರೀಮಾನ್ ಘೋರ್ಪಡೆಯವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಒಂದು ತಿದ್ದುಪಡಿ ಬಹಳ ಪರಿಣಾಮಕಾರಿಯಾಗಿ ಆಗಬೇಕು ನನ್ನ ಕಾಲದಲ್ಲಿ ನಾನು ಮಾಡಬೇಕು ಎನ್ನುವ ಚಿಂತನೆ ಅವರಿಗೆ ಇದೆ. ಅವರು ರಾಜ ಮನೆತನದಿಂದ ಬಂದಿದ್ದರೂ ಸಹ ಪ್ರಜಾಪ್ರಭುತ್ವದ ಬಗ್ಗೆ ಆಸಕ್ತಿ ಇದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್‌ಗಳ ಮೂಲಕ ಅಧಿಕಾರ ವಿಕೇಂದ್ರಿಕರಣ ಮಾಡಲು ಪ್ರಾಮಾಣಿಕರಾಗಿದ್ದಾರೆ. ಈ ವಿಷಯದಲ್ಲಿ ಒಂದು ಚಿಂತನೆ ಆಗಬೇಕು ಯಾವುದೇ ಮಂಡಲ ಪಂಚಾಯತಿಯ ಚುನಾವಣೆ ಆಗಲಿ ಗ್ರಾಮ ಪಂಚಾಯತಿಯ ಚುನಾವಣೆ ಆಗಲಿ ಜಿಲ್ಲಾ ಪರಿಷತ್ತು

ಚುನಾವಣೆ ಆಗಲಿ ಈ ವಿಷಯುದಲ್ಲಿ ಪಕ್ಷರಹಿತವಾದ ಚುನಾವಣೆ ಆಗಬೇಕು ಎನ್ನುವುದು ನನ್ನ ವಾದ.

ಪಕ್ಷರಹಿತವಾದ ಚುನಾವಣೆ ಆಗಲಿಲ್ಲ ಅಂದರೆ ನಾವು ಪ್ರತಿ ಹಳ್ಳಿಗಳಲ್ಲಿ ಯುದ್ಧವನ್ನು ಘೋಷಣೆ ಮಾಡಿದಂತಾಗುತ್ತದೆ. ಆದ್ದರಿಂದ ಗ್ರಾಮಗಳ ಮಟ್ಟದಲ್ಲಿ ಪಕ್ಷರಹಿತವಾದ ಚುನಾವಣೆ ಆಗುವುದು ಅತಿ ಮುಖ್ಯ ನೇರವಾಗಿ ಚುನಾವಣೆ ಆಗಬೇಕೆಂದು ಕೆಲವರು ವಾದ ಮಾಡುತ್ತಿದ್ದಾರೆ. ಪ್ರಧಾನರು ಮತ್ತು ಜಿಲ್ಲಾ ಪರಿಷತ್ತು ಅಧ್ಯಕ್ಷರು ತಾಲ್ಲೂಕು ಬೋರ್ಡ್ ಅಧ್ಯಕ್ಷರು ನೇರವಾಗಿ ಚುನಾವಣೆಗೆ ಒಪ್ಪುವುದಿಲ್ಲ. ನೇರವಾಗಿ ಚುನಾಯಿತರಾದ ಒಬ್ಬ ಅಧ್ಯಕ್ಷರು ನಮ್ಮ ಸದಸ್ಯರ ಮಾತಿಗೆ ಬೆಲೆ ಕೊಡುವುದಿಲ್ಲ. ಅವನು ಅಧ್ಯಕ್ಷನಾಗಿ ಇರುತ್ತಾನೆ. ಅವನನ್ನು ತೆಗೆದು ಹಾಕುವುದಕ್ಕೆ ಆಗುವುದಿಲ್ಲ. ಆ ಒಂದು ತೀರ್ಮಾನಕ್ಕೆ ಮಾನ್ಯಮಂತ್ರಿಗಳು ಒಪ್ಪುವುದಾರೆ ಸಂವಿಧಾನದಲ್ಲಿ ತೀವ್ರವಾದ ಬದಲಾವಣೆ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ನೇರ ಚುನಾವಣೆ ಮಾಡಿ ಎಂದು ಕೇಳತಕ್ಕಂಥ ಪರಿಸ್ಥಿತಿ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ನೇರ ಚುನಾವಣೆ ಆದರೆ ನಾವ್ಯಾರು ಇಲ್ಲಿ ಮಾತನಾಡುವ ಪ್ರಶ್ನೆ ಬರುವುದಿಲ್ಲ ನೇರ ಚುನಾವಣೆ ಆರೋಗ್ಯಕರ ಅಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ ಮತ್ತು ಈ ಚುನಾವಣೆಗಳು ಕಾಲಕಾಲಕ್ಕೆ ಸರಿಯಾಗಿ ಆಗಬೇಕು ಎನ್ನತಕ್ಕಂಥದ್ದು ಅತಿ ಮುಖ್ಯವಾದುದು. ಇವತ್ತು ತಾವು ಯಾವುದೇ ಕಾರಣಕ್ಕೆ ಆಡಳಿತಾಧಿಕಾರಿಗಳನ್ನು ನೇಮಿಸತಕ್ಕಂಥ ವ್ಯವಸ್ಥೆ ಆಗಬಾರದು. ಇವತ್ತಿನ ಪರಿಸ್ಥಿತಿಯಲ್ಲಿ ತಿದ್ದುಪಡಿ ಮಾಡಿ ಚುನಾವಣೆ ಮಾಡಿ ಅದು ಬಿಟ್ಟು ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ್ದು ಸರಿಯಲ್ಲ. ನಿಜವಾಗಿ ರಾಜೀವ್ ಗಾಂಧಿಯವರು ಇದನ್ನು ತಂದಾಗ ಅವರ ಕಲ್ಪನೆ ಏನಿತ್ತು, ಅದೇ ಕಲ್ಪನೆ ತಾವು ತಂದಿದ್ದೀರಿ. ಅವರು ಬದುಕಿದ್ದಿದ್ದರೆ ಸಂತೋಷ ಪಡುತ್ತಿದ್ದರು. ಈ ದೇಶದಲ್ಲಿ ಈ ಒಂದು ವ್ಯವಸ್ಥೆಯನ್ನು ನೋಡಿ ಸಂತೋಷಪಡತಕ್ಕಂಥ ವಿಚಾರ ಎಂದು ನನಗನಿಸುತ್ತದೆ. ಈ ತಿದ್ದುಪಡಿಯನ್ನು ಮಾಡುವಾಗ ಮಣಿಶಂಕರ್ ಅಯ್ಯರ್ ಒಟ್ಟಿಗೆ ಸೇರಿ ಅವರು ಕುಳಿತುಕೊಂಡು ಈ ವ್ಯವಸ್ಥೆ ಸರಿಮಾಡಬೇಕೆಂದು ಹೇಳಿದರು. ಲೋಕಸಭಾ ಸದಸ್ಯರಾಗಿರುವಂತಹ ಮಣಿಶಂಕರ್ ಅಯ್ಯರ್ ಅವರ ಜೊತೆಯಲ್ಲಿ ಮಾತನಾಡಿ ಒಂದು ಹೊಸ ಆಯಾಮ ಕೊಡಬೇಕೆನ್ನುವ ಚಿಂತನೆ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್ ಆದೇಶ ಇದೆ ಜೂನ್ ತಿಂಗಳೊಳಗೆ ಚುನಾವಣೆ ಮಾಡಬೇಕೆಂದು, ಇಲ್ಲಿ ಏನಾದರೂ ಸ್ವಲ್ಪ ತಿದ್ದುಪಡಿ ಆಗಬೇಕಾಗಿದೆ ಚರ್ಚೆ ಆಗಬೇಕಾಗಿದೆ, ಚರ್ಚೆ ಆದ ನಂತರ ನೀವು ಮತ್ತೆ ಮರು ವಿಂಗಡಣೆ ಎಂದು ಹೇಳಿ ಚುನಾವಣೆ\ಡಿಸೆಂಬರ್ ತಿಂಗಳಲ್ಲಿ ಮಾಡುತ್ತೇವೆಂದು ಹೇಳುತ್ತಿದ್ದೀರಿ.

5.45 ಪಿ.ಎಂ.

ಅಧ್ಯಕ್ಷರೇ, ಡಿಸೆಂಬರ್ ತಿಂಗಳ ನಂತರ ನಮ್ಮ ಶಾಸನ ಸಭೆ ಚುನಾವಣೆಗೆ 11 ತಿಂಗಳು ಸಮಯ ಇರುತ್ತದೆ. ಶಾಸನ ಸಭೆ ಚುನಾವಣೆ ಬರುತ್ತಿದೆ, ಈ ಚುನಾವಣೆಗೆ ಹೋದರೆ ಆಗುವುದಿಲ್ಲವೆಂದು ಏನಾದರೂ ಒಂದು ನೆವ ತರುತ್ತಾರೆಂದು ನಾನು ಈ ಸದನದಲ್ಲಿ ಹೇಳುತ್ತೇನೆ. ನಿಮ್ಮದು ಎಷ್ಟೇ ಪ್ರಾಮಾಣಿಕ ಪ್ರಯತ್ನ ಇದ್ದರೂ ಡಿಸೆಂಬರ್ ತಿಂಗಳೊಳಗೆ ಚುನಾವಣೆಯಾಗುತ್ತದೆಂದು ನಾನು ಅಂದುಕೊಂಡಿಲ್ಲ. ಅತ್ಯಂತ ಭಯ ಭೀತಿಯಿಂದ ಬರುತ್ತಿದೆ. ಚುನಾವಣೆ ಮಾಡುತ್ತೇವೆಂದರೆ ಈಗಲಾದರೂ ನಿಮ್ಮ ಒಂದು ಚುನಾವಣೆ ಪ್ರಕ್ರಿಯೆ ಆಗಬೇಕಲ್ಲ ? ಕ್ಷೇತ್ರ ವಿಂಗಡಣೆಯಾಗಬೇಕಾಗಿದೆ. ಇದರ ಬಗ್ಗೆ ಚರ್ಚೆ ನಡೆದಿದೆ. ತಾವೂ ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕವರು. 1967 ಮತ್ತು 72 ರಲ್ಲಿ ಪಟ್ಟಣ ಪ್ರದೇಶದಲ್ಲಿ ನಾನು ಚುನಾವಣೆಯಲ್ಲಿ ಗೆದ್ದಾಗ ನನಗೆ ಇಷ್ಟೊಂದು ಮಾನಸಿಕ ತೊಂದರೆಗಳು ಅಥವಾ ಚಿಂತನೆಗಳು ಇರಲಿಲ್ಲ. ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಒಬ್ಬ ಶಾಸಕರಿಗೆ. ಶ್ರೀಮಾನ್ ಸಿಂಧ್ಯಾ ರವರು ಏನು ಹೇಳಿದರು ? ಅಧಿಕಾರ ವರ್ಗ ಯಾವ ರೀತಿ ಅವರನ್ನು

ಕಾಣುತ್ತದೆ ಅಂದರೆ, ಚುನಾಯಿತ ಪ್ರತಿನಿಧಿಗಳ ಒಂದು ರೀತಿಯ ಗುಲಾಮಗಿರಿ ಸಂಕೇತವಾಗಿ ಕಾಣುತ್ತಾರೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ತಹಶೀಲ್ದಾರ್ ಆಫೀಸಿನ ಒಬ್ಬ ಶೇಕ್‌ದಾರ್‌ನನ್ನು ನಾವು ವರ್ಗಾವರ್ಗಿ ಮಾಡಿಸಲಿಲ್ಲವೆಂದರೆ ಜನ ಏನು ಹೇಳುತ್ತಾರೆ ಗೊತ್ತೇನು ? ಶಾಸಕರ ಕೈಯಲ್ಲಿ ಏನೂ ಆಗುವುದಿಲ್ಲ ಅದನ್ನು ಮಾಜಿ ಶಾಸಕರು ಮಾಡಿಸಿಕೊಂಡು ಬಂದರೆಂದು ಹೇಳುತ್ತಾರೆ. ನಿಮ್ಮ ಹತ್ತಿರ ಅರ್ಜಿ ತರಬೇಕು, ನಿಮ್ಮ ಹತ್ತಿರ ಅರ್ಜಿ ತಂದಾಗ ನೀವು ಗ್ರಾಮಾಂತರ ಪ್ರದೇಶದ ಯಾವುದೇ ಪಕ್ಷದವರಾಗಿದ್ದರೂ ಮಂತ್ರಿಗಳ ಮೇಲೆ ನಾವು ಏನು ಮಾತನಾಡುವ ಹಾಗಿಲ್ಲ. ಮಾತನಾಡಿತು ಅಂದರೆ ನಾಳೆ ನೀವು ಏನು ಮಾಡುತ್ತೀರಿ ಗೊತ್ತು ಇರಲಿ ಬಿಡ್ರಿ, ಇವರಿಗೆ ವರ್ಗಾವರ್ಗಿ ಏಕೆ ಮಾಡಬೇಕು ? ಇವೆಲ್ಲಾ ಕೆಲವು ಇರುತ್ತವಲ್ಲಾ ? ಈ ರಾಜಕೀಯದಿಂದ, ಇದು ಬರೀ ಒಂದೇ ಅಲ್ಲ. ಇಂಥಾ ನೂರೆಂಟು ಪರಿಸ್ಥಿತಿಗಳಿಗೆ ನಾವು ಅರ್ಜಿಯನ್ನು ನಿಮ್ಮ ಮುಂದೆ ಹಿಡಿದುಕೊಂಡು ಬರಬೇಕು. ಮೋರಿ ಕೆಲಸಕ್ಕೆ ಬರಬೇಕು, ರಸ್ತೆ ಕೆಲಸಕ್ಕೆ ಬರಬೇಕು, ಪ್ರತಿಯೊಂದಕ್ಕೂ ಬರಬೇಕು. ನಾವು ಪಟ್ಟಣ ಪ್ರದೇಶಗಳಿಂದ ಗೆದ್ದು ಬಂದಿದ್ದಾಗ ಇಷ್ಟೊಂದು ಸಮಸ್ಯೆ ಇರಲಿಲ್ಲ. ಇವತ್ತು ನಾನು ಪ್ರತಿವಾರ ಶನಿವಾರ, ಭಾನುವಾರ ಕನಿಷ್ಟ 10 ಹಳ್ಳಿ ಅಥವಾ 5 ಹಳ್ಳಿಗೆ ಹೋಗಿಯೇ ಹೋಗುತ್ತೇನೆ. ನನಗಂತೂ ಆ ಜನತೆಯ ವಿಶ್ವಾಸ, ಆ ಅಭಿಮಾನ ನೋಡಿ ಸಂತೋಷಪಡುತ್ತೇನೆ. ಅಲ್ಲಿ ಸ್ವಯಂ ನ್ಯಾಯಾಲಯಗಳಿವೆ. ಅಲ್ಲಿ ಎರಡು ವರ್ಗಗಳಿವೆ, ನಾಯಕ, ಪರಿವಾರ, ಉಪ್ಪಾರರು, ಇವರು ಯಾವ ಸಂವಿಧಾನದಲ್ಲೂ ಇಲ್ಲದೇ ಇರತಕ್ಕಂಥ ಕಟ್ಟುಕಟ್ಟಳೆಗಳು ಮತ್ತು ನ್ಯಾಯ ಮಂಡಳಿಯನ್ನು ರಚನೆ ಮಾಡಿಕೊಂಡಿದ್ದಾರೆ. ಅವರು ಏನಾದರೂ ತೀರ್ಮಾನಕ್ಕೆ ಬಂತು ಎಂದರೆ ಅದೇ ಅಂತಿಮ ತೀರ್ಮಾನ. ಅಂಥಾ ಒಂದು ವೈವಿಧ್ಯಮಯವಾಗಿರತಕ್ಕಂಥಾದ್ದು. ಮಾನ್ಯ ಅಧ್ಯಕ್ಷರೆ, ಈ ಒಂದು ಪರಿಸ್ಥಿತಿಯಲ್ಲಿ ಜಿಲ್ಲಾಪರಿಷತ್ತಿನ ವ್ಯವಸ್ಥೆ ಏನಾಗಿದೆಯೆಂದು ತಮಗೆ ಗೊತ್ತಿದೆ . ಜಿಲ್ಲಾಪರಿಷತ್ತಿನಲ್ಲಿ ಕೈ ಕಿತ್ತುಹಾಕಿದ್ದಾರೆ, ಕಾಲು ಕಿತ್ತುಹಾಕಿದ್ದಾರೆ, ಕಣ್ಣು ಕಿತ್ತಿದ್ದಾರೆ. ಒಂದು ಕುರುಡು ವ್ಯವಸ್ಥೆ ಅಂಗಹೀನವಾದ ವ್ಯವಸ್ಥೆಯನ್ನು ಇವತ್ತು ಜಿಲ್ಲಾಪರಿಷತ್ತಿನಲ್ಲಿ ಇಟ್ಟಿದ್ದಾರೆ. ಅಲ್ಲಿ ಏನೇನೂ ವ್ಯವಸ್ಥೆ ಇಲ್ಲ. ಸಧ್ಯ, ಸುದೈವದಿಂದ ಈ ಒಂದು ತಿದ್ದುಪಡಿಯಿಂದ ಅದಕ್ಕೆ ಜೀವ, ಶಕ್ತಿ ಬರುತ್ತದೆ. ಮತ್ತೊಂದು ತಮಗೆ ಹೇಳಿಬಿಡುತ್ತೇನೆ, ವಿಧಾನಪರಿಷತ್ತಿನ ಬಗ್ಗೆ ಎಷ್ಟು ಪ್ರಾಮಾಣಿಕವಾಗಿ ಹೇಳುತ್ತೇನೆಂದರೆ, ಪಶ್ಚಿಮ ಬಂಗಾಳದಲ್ಲಿ ಮೇಲ್ಮನೆ ಇಲ್ಲ, ತಮಿಳುನಾಡಿನಲ್ಲಿ ವಿಧಾನಪರಿಷತ್ತು ಇಲ್ಲ, ನಾವು ಲಕ್ಷ ಜನರ ಮುಂದೆ ಹೋಗಿ ಚುನಾವಣೆಯಲ್ಲಿ ಗೆದ್ದು ಬರಬೇಕೆಂದರೆ ಒಂದು ದೊಡ್ಡ ಆಕಾಶದಿಂದ ಭೂಮಿಗೆ ಇಳಿಯಬೇಕು. ವಿಧಾನ ಪರಿಷತ್ತಿನಲ್ಲಿ 75 ಜನ ಗಂಭೀರವಾಗಿ, ಆರಾಮವಾಗಿ ಬಂದು ಅಲ್ಲಿ ಕುಳಿತುಬಿಡುತ್ತಾರೆ. ಇದರ ಬಗ್ಗೆ ಚಿಂತನೆಯಾಗಬೇಕು. ವಿಧಾನಪರಿಷತ್ತು ಒಂದು ಬಿಳಿ ಆನೆ. ವಿಧಾನಪರಿಷತ್ತು ಬೇಕೆ ? ರಾಜಕಾರಣಿಗಳನ್ನು ಸೃಷ್ಟಿ ಮಾಡತಕ್ಕಂಥಾದ್ದು, ನಿಮಗೆ ಯಾರು ಯಾರು ಬೇಕೋ ಅವರನ್ನು ನಾಮಕರಣ ಮಾಡುವುದಕ್ಕೆ, ಎಲ್ಲಾ ವರ್ಗದಿಂದ ನಾಮಕರಣ ಮಾಡುತ್ತಾರೆ. ನಾವು ಯಾವ ವರ್ಗದಿಂದ ಬಂದಿದ್ದೇವೆ ? ನಾವು ಜನರಿಂದ ಮತ ಪಡೆದು ಬಂದಿರತಕ್ಕಂಥ ಜನ. ನಾನು ಯಾರನ್ನೂ ಕುರಿತು ಹೇಳುತ್ತಿಲ್ಲ. ಅನೇಕ ಜನ ವಿಧಾನ ಪರಿಷತ್ತಿನಿಂದ ಬಂದಿರತಕ್ಕವರು ಮಂತ್ರಿಗಳಾಗಿದ್ದಾರೆ. ನಿಮ್ಮ ಅಧಿಕಾರವನ್ನು ಕಿತ್ತು ಹಾಕಬೇಕೆಂಬ ಭಾವನೆಯಿಂದ ನಾನು ಹೇಳುತ್ತಿಲ್ಲ. ನಿಮ್ಮನ್ನು ಕುರಿತು ಮಾತನಾಡುತ್ತಿಲ್ಲ. ಒಂದು ನೀತಿಯ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ತಾವು ಇದರ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕು. ಕೇವಲ ಕರ್ನಾಟಕದ ಪ್ರಶ್ನೆ ಇದಲ್ಲ. ಇಡೀ ದೇಶದಲ್ಲಿ ಇದರ ಬಗ್ಗೆ ಚಿಂತನೆಯಾಗಬೇಕು. ರಾಜ್ಯ ಸಭೆ, ಮತ್ತು ವಿಧಾನಪರಿಷತ್ತು ಈ ಎರಡೂ ದೇಶದ ಒಂದು ದೊಡ್ಡ ಭಂಡಾರವನ್ನು ಖರ್ಚು ಮಾಡತಕ್ಕಂಥಾದ್ದು. ಈ ಬಗ್ಗೆ ಸರ್ಕಾರ ಸಂವಿಧಾನಾತ್ಮಕವಾಗಿ ಒಂದು ತೀರ್ಮಾನಕ್ಕೆ ಬರಬೇಕು. ಇದರ ಬಗ್ಗೆ ಒಂದು ಚಿಂತನೆಯಾಗಬೇಕು ಎನ್ನತಕ್ಕಂಥಾದ್ದು ನನ್ನ ಒಲವು.

ವಿಧಾನಪರಿಷತ್‌ನ್ನೇನು ರದ್ದು ಮಾಡುವ ವಿಚಾರದಲ್ಲಿ ನಮ್ಮ ಕರ್ನಾಟಕವನ್ನು ಮಾತ್ರ ಉದ್ದೇಶಿಸಿ

ಹೇಳುತ್ತಾ ಇಲ್ಲ. ಈ ದೇಶದ ಎಲ್ಲಾ ವಿಧಾನಪರಿಷತ್‌ಗಳ ಬಗ್ಗೆ ಒಂದು ಚಿಂತನೆಯಾಗಬೇಕು. ಏಕೆಂದರೆ ತಾವುಗಳು ಪಂಚಾಯತಿ ತಿದ್ದುಪಡಿಯನ್ನು ತರುವಾಗ, ಜಿಲ್ಲಾಪರಿಷತ್ ವ್ಯವಸ್ಥೆಯನ್ನು ಮಾಡುವಾಗ ಇಂಥ ಒಂದು ವ್ಯವಸ್ಥೆ ಇರಬೇಕೆ ಎಂಬ ಬಗ್ಗೆಯೂ ಚಿಂತನೆ ಮಾಡಬೇಕಾಗುತ್ತದೆ. ಆದ್ದರಿಂದ ಈ ತಿದ್ದುಪಡಿಯನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಜಿ. ನಾಯಕ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಜನತಾ ದಳದ ಉಪನಾಯಕರು ಏನು ಮಾತನಾಡಿದರು ನಾನು ಅದನ್ನು ವಿರೋಧಿಸುತ್ತೇನೆ. ಈ ನಮ್ಮ ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯತ್ ವ್ಯವಸ್ಥೆಯಿಂದ ಏನಾಗಿದೆ ಎಂಥ ಅನಾಹುತವಾಗಿದೆ ಎಂಬ ಬಗ್ಗೆ ಹೇಳಬಯಸುತ್ತೇನೆ. ಈ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ವ್ಯವಸ್ಥೆಯು ನಮ್ಮ ದೇಶದಲ್ಲಿ ಬೇರೆ ಎಲ್ಲಿಯೂ ಇಲ್ಲ. ಇದು ನಮ್ಮಲ್ಲಿ ಹೇಗೆ ಬಂತು ಎಂಬ ಬಗ್ಗೆ ಮಾತ್ರ ಹೇಳಬಯಸುತ್ತೇನೆ. ಇದು ಹಿಂದಿನ ಸರಕಾರ ಇದ್ದಾಗ ಮಾನ್ಯ ನಜೀರ್ ಸಾಬ್‌ರವರನ್ನು ಬಂಗಾಳದ ಕಲ್ಕತ್ತಕ್ಕೆ ಕಳುಹಿಸಿದರು. ಅವರು ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಇಲ್ಲಿ ಅಡಾಪ್ಟ್ ಮಾಡಿದರು. ಆದರೆ ಇಲ್ಲಿ ಅದು ಏನಾಗಿದೆ ? ಡೈರೆಕ್ಟ್ ಆಗಿ ಮಂಡಲಪಂಚಾಯತಿಯೊಳಗೆ ಅವರಿಗೆ ಅಧಿಕಾರ ಕೊಟ್ಟುಬಿಟ್ಟು, 250 ಓಟು ತೆಗೆದುಕೊಂಡು ಮಂಡಲಪಂಚಾಯತ್‌ನ ಚೇರ್‌ಮನ್ ಆಗುತ್ತಾನೆ. ಇವರು ಐದಾರು ಲಕ್ಷ ರೂಪಾಯಿಗಳನ್ನು ಒಂದೊಂದು ಮಂಡಲಪಂಚಾಯತ್‌ಗೆ ಕೊಟ್ಟಿದ್ದಾರೆ. ನಮ್ಮಲ್ಲಿ ಗ್ರಾಮಪಂಚಾಯತಿ ಮುಖ್ಯವಾದುದು. ಇದನ್ನು ನಾನು ಅನುಮೋದಿಸುತ್ತಾ ಇದ್ದೇನೆ. ಪ್ರತಿನಿಧಿಗಳು ಗ್ರಾಮ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಆರಿಸಿ ಬರಬೇಕು. ಆಗ ನಮ್ಮಲ್ಲಿ ಸ್ವಚ್ಛವಾದ ಸರಕಾರವು ಬರುತ್ತದೆ. ಗ್ರಾಮ ಮಟ್ಟದಲ್ಲಿ ಸೆಲೆಕ್ಟ್ ಮಾಡಿದರೆ ತಾಲ್ಲೂಕು ಮಟ್ಟದಲ್ಲಿ ಅವರು ಇವರನ್ನು ಖರೀದಿ ಮಾಡಿಬಿಟ್ಟು ಹಾಳು ಮಾಡುತ್ತಾರೆ. ಆದಕ್ಕೋಸ್ಕರ ಗ್ರಾಮ ಪಂಚಾಯತ್‌ರಾಜ್ ಬರಬೇಕೆಂದು ನಾನು ಇದನ್ನು ಅನುಮೋದಿಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ:– ಮಾನ್ಯ ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶದ ಈಗಿನ ದುಸ್ಥಿತಿಗೆ ಒಂದು ರೀತಿಯಲ್ಲಿ ಬೆಳಕು ಚೆಲ್ಲುವ ರೀತಿಯಲ್ಲಿ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ತರುತ್ತಾ ಇದೆ ಎಂದು ಹೇಳುತ್ತಾ, ತಿದ್ದುಪಡಿಗೆ ಸ್ವಾಗತವನ್ನು ಕೋರುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಒಂದು ರೀತಿಯಲ್ಲಿ ಮೌಢ್ಯತೆಯಲ್ಲಿ ಇರುವಂಥ ಸ್ಥಿತಿಯು ಈ ದೇಶದ ಅನೇಕ ಭಾಗಗಳಲ್ಲಿದೆ. ಆಡಳಿತವು ಆ ಗ್ರಾಮಾಂತರ ಪ್ರದೇಶದ ಜನರ ಕೈಯಲ್ಲಿ ಸಿಕ್ಕರೆ, ಆ ಒಂದು ಮೌಢ್ಯತೆಯು ಹೋಗಿ ಆಡಳಿತವನ್ನು ನಡೆಸುವಂಥ ಒಂದು ಅವಶ್ಯಕತೆಯನ್ನು ಮತ್ತು ಸ್ವಾಭಿಮಾನವನ್ನು ಕೂಡ ಜಾಗ್ರತಿಗೊಳಿಸುತ್ತದೆ ಎಂಬ ವಿಚಾರದಲ್ಲಿ ನಂಬಿಕೆ ಇಟ್ಟಿರತಕ್ಕಂಥ ವ್ಯಕ್ತಿ ನಾನಾಗಿದ್ದೇನೆ. ಇಂಥ ಸಂದರ್ಭದಲ್ಲಿ ಈ ಒಂದು ತಿದ್ದುಪಡಿಯನ್ನು ತಂದಿರುವಂಥ ಸಂದರ್ಭದಲ್ಲಿ ನಮ್ಮ ದೇಶಕ್ಕೆ ಖಂಡಿತಾ ಉಜ್ವಲ ಭವಿಷ್ಯ ಇದೆ ಎಂದು ಹೇಳಬಹುದು. ಆದರೆ ಈ ಒಂದು ತಿದ್ದುಪಡಿಯನ್ನು ತರುತ್ತಿರುವಂಥ ಸಂದರ್ಭದಲ್ಲಿ ಅನೇಕ ವ್ಯಕ್ತಿಗಳನ್ನು ನಾವು ನೆನೆಸಿಕೊಳ್ಳುತ್ತಿದ್ದೇವೆ. ನಾವು ದಿವಂಗತ ರಾಜೀವ್ ಗಾಂಧಿಯವರನ್ನು, ನಜೀರ್ ಸಾಬ್‌ರವರನ್ನು ಮತ್ತು ಶ್ರೀ ರಾಮಕೃಷ್ಣ ಹೆಗಡೆಯವನ್ನು ನೆನೆಸಿಕೊಳ್ಳುತ್ತಿದ್ದೇವೆ. ಅವುಗಳು ಇಂಥ ಒಂದು ಕ್ರಾಂತಿಕಾರಿ ಹೆಜ್ಜೆಯನ್ನು ಇಡಲು ಅನುಕೂಲ ಮಾಡಿಕೊಟ್ಟರು ಎಂದು ನೆನಪಿಸಿಕೊಳ್ಳುತ್ತಿದ್ದೇವೆ. ಮಾನ್ಯ ಘೋರ್ಪಡೆಯವರು ಕೂಡ ಅಂಥ ವ್ಯಕ್ತಿಗಳಲ್ಲಿ ಒಬ್ಬರಾಗಬೇಕು. ನಿಮಗೆ ತಿದ್ದುಪಡಿಯನ್ನು ಮಾಡಲು ಸರ್ಕಾರ ಅವಕಾಶ ಮಾಡಿಕೊಡುತ್ತದೆಯೋ ಇಲ್ಲವೋ ಗೊತ್ತಿಲ್ಲ. ಮೂರು ವರ್ಷಗಳಿಂದ ನಿಮ್ಮ ಸರ್ಕಾರವೇ ಇದೆ. ಇಷ್ಟರಲ್ಲಿ ತಿದ್ದಪಡಿಯನ್ನು ತರುವುದಕ್ಕೆ ಕಷ್ಟವಾಗುತ್ತಿರಲಿಲ್ಲ. ಇಂತ ತಿದ್ದುಪಡಿಯನ್ನು ತರಲು ಖಂಡಿತಾ ನಿಮಗೆ ಅವಕಾಶ ಇತ್ತು. ಯಾರೂ ಕೂಡ ನಿಮಗೆ ಅಡ್ಡಿ ಬರಲಿಲ್ಲ. ಏನಾದರೂ ಲೋಪದೋಷಗಳು [illegible] ಮಾಡಿ ಎಂದು ಹೇಳುತ್ತಾ ಬಂದಿದ್ದೇವೆ. ಆದರೆ ನೀವುಗಳು

ಏನೋ ಕಾರಣಗಳನ್ನು ಕೊಟ್ಟು ತಳ್ಳುತ್ತಾ ಬರುತ್ತಾ ಇದ್ದೀರಿ. ಸುಪ್ರೀಂ ಕೋರ್ಟ್‌ನ ಒಂದು ತೀರ್ಪನ್ನು ಕೂಡ ನೀವು ಮೀರಿ ಹೋಗುತ್ತಿರುವ ಒಂದು ಶೋಚನೀಯ ಸ್ಥಿತಿಯು ನಿಮ್ಮಲ್ಲಿ ಕಾಣುತ್ತವೆ. ಡಿಸೆಂಬರ್ ಮುಗಿದ ಕೂಡಲೇ ಮತ್ತೇನಾದರೂ ಕಾರಣಗಳನ್ನು ಕೊಟ್ಟು ಮುಂದಕ್ಕೆ ತಳ್ಳುವ ಕೆಲಸವನ್ನು ಮಾಡುತ್ತೀರಿ ಎಂದು ಕಾಣುತ್ತದೆ.

ಕ್ರಾಂತಿಕಾರಿ ಹೆಜ್ಜೆ ಇಟ್ಟ ನಮ್ಮ ದೇಶದ ವ್ಯಕ್ತಿಗಳ ಸಾಲಿಗೆ ನೀವು ಸೇರಬೇಕಾಗುತ್ತದೆ. ಈಗಾಗಲೇ ಸಾಕಷ್ಟು ತಿದ್ದುಪಡಿಗಳಾಗಿರಬಹುದು. ಏನು ತರಬೇಕೆಂಬ ಕಲ್ಪನೆ ನಿಮಗಿದೆ, ತಾವು ಸಾಕಷ್ಟು ಅನುಭವಸ್ಥರಿದ್ದೀರಿ ಬುದ್ಧಿವಂತರಿದ್ದೀರಿ, ಗ್ರಾಮಾಂತರ ಪ್ರದೇಶದ ಜನರಿಗೆ ಆಡಳಿತ ಕೊಡಬೇಕೆಂಬ ಅಪೇಕ್ಷೆಯುಳ್ಳ ಜನರಿದ್ದೀರಿ, ಇಡೀ ಸರ್ಕಾರ ಸದನ ವಿರೋಧ ಮಾಡುತ್ತದೆ ಎಂದು ಅನಿಸಿದರೂ ಕೂಡ ನಾವೆಲ್ಲರೂ ನಿಮ್ಮ ಜೊತೆ ಬರುವುದಕ್ಕೆ ತಯಾರಿದ್ದೇವೆ. ಬೇಗ ತಿದ್ದುಪಡಿ ತಂದು ಈ ಸದನದ ಮುಂದಿಡಿ, ತಕ್ಷಣ ಚುನಾವಣೆ ಮಾಡಿ. ಡಿಸೆಂಬರ್ ತನಕ ಏಕೆ ಕಾಯಬೇಕಾಗಿದೆ? ಈ ಜೂನ್ ಒಳಗೆ ತೆಗೆದುಕೊಂಡು ಬಂದರೆ ಅನೇಕ ವ್ಯಕ್ತಿಗಳ ಸಾಲಿಗೆ ತಾವು ಸೇರುವವರಿದ್ದೀರಿ. ಇನ್ನು ಅನೇಕ ತಿದ್ದುಪಡಿಗಳು ಬರಬಹುದು. ನಾಳೆ ಏನು ತಿದ್ದುಪಡಿ ತರುತ್ತೀರಿ ಅದೇ ಪರಿಪೂರ್ಣ ಆಗದೇ ಇರಬಹುದು. ಇವತ್ತಿನ ಪರಿಸ್ಥಿತಿ ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರದಿಂದ ಆಡಳಿತಾಧಿಕಾರಿಗಳನ್ನು ಹಾಕಿದ್ದಾರೆ, ಅವರು ಆಡಳಿತಾಧಿಕಾರಿಗಳಲ್ಲ, ಸರ್ವಾಧಿಕಾರಿಗಳು. ನನಗನ್ನಿಸುತ್ತೆ ನಿಮ್ಮ ಮಾತು ಅವರು ಕೇಳುವುದಿಲ್ಲ. ಮಂತ್ರಿಗಳು ಮುಖ್ಯಮಂತ್ರಿಗಳು ಹೇಳಿದರೂ ಕೂಡ ಕೇಳುವುದಿಲ್ಲ. ಅವರಿಗೆ ಬುದ್ಧಿ ಕಲಿಸಬೇಕಾದರೆ ತಕ್ಷಣ ಚುನಾವಣೆ ಮಾಡಿದರೆ ಮಾತ್ರ ನಮ್ಮ ಸರ್ಕಾರಕ್ಕಾಗಲೀ ನಿಮಗಾಗಲೀ ಗೌರವ ಬರುತ್ತದೆ. ಇಲ್ಲದಿದ್ದರೆ ತಿದ್ದುಪಡಿ ತರುತ್ತೇವೆಂದು ಬೇರೆ ಬೇರೆ ಕಾರಣಗಳನ್ನು ಕೊಟ್ಟು ಮುಂದೆ ಹಾಕುತ್ತಾ ಹೋದರೆ ಈ ರಾಜ್ಯದ ಜನ ಖಂಡಿತ ನಿಮ್ಮನ್ನು ಕ್ಷಮಿಸುವುದಿಲ್ಲ. ಆ ಶಾಪಕ್ಕೆ ಮತ್ತೆ ನೀವು ಗುರಿಯಾಗುತ್ತೀರಿ. ನಿಮಗೆ ಮಾತ್ರ ಈ ಅವಕಾಶ ಸಿಕ್ಕಿದೆ. 224 ಜನರಲ್ಲಿ ನಿಮ್ಮೊಬ್ಬರಿಗೆ ಮಾತ್ರ ಸಿಕ್ಕಿರುವ ಅವಕಾಶ ಇದು, ಮುಖ್ಯಮಂತ್ರಿಗಳಿಗೂ ಸಿಗಲಿಕ್ಕಿಲ್ಲ, ಇಂತಹ ಅವಕಾಶವನ್ನು ಸದುಪಯೋಗ ಮಾಡಿಕೊಂಡು ತಕ್ಷಣ ತಿದ್ದುಪಡಿ ತಂದರೆ ಚುನಾವಣೆ ನಡೆಸಿ ಗ್ರಾಮಾಂತರ ಪ್ರದೇಶದಲ್ಲಿರುವ ಜನರ ಮೌಢ್ಯತೆ ಹೋಗಲು ಅನುಕೂಲವಾಗುತ್ತದೆ. ಅವರಿಗೆ ಸ್ವಾಭಿಮಾನ ಬರುತ್ತದೆ. ಗ್ರಾಮಾಂತರ ಪ್ರದೇಶದ ಜನರ ಸ್ಥಿತಿ ನಿಮಗೆ ಗೊತ್ತಿದೆ. ಗ್ರಾಮೀಣ ಹೆಣ್ಣು ಮಕ್ಕಳಿಗೆ ಕಕ್ಕಸಿಗೆ ಹೋಗುವ ವ್ಯವಸ್ಥೆ ಇಲ್ಲ. ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳನ್ನು ಕೇವಲ ಹೆಣ್ಣು ಅಂತ ನಾವು ಯೋಚಿಸದೆ ಮಾತೃದೇವೋಭವ ಅಂತ ಕರೆಯುವ ಆ ಹೆಣ್ಣು ಮಕ್ಕಳ ಸ್ಥಿತಿ ಹೇಗಿದೆ? ರಸ್ತೆಯಲ್ಲಿ ಕೂರುತ್ತಿದ್ದಾರೆ. ಇದಕ್ಕೆಲ್ಲಕ್ಕೂ ಕೂಡ ಜಿಲ್ಲಾಪರಿಷತ್ ಮಂಡಲಪಂಚಾಯಿತಿ ಚುನಾವಣೆ ನಡೆಸಿ ಅವರ ಕೈಗೇ ಅಧಿಕಾರ ಕೊಟ್ಟರೆ ಸ್ವಾಭಿಮಾನ ಬರುತ್ತದೆ, ಮೌಢ್ಯತೆ ದೂರವಾಗುತ್ತದೆ. ಇದೆಲ್ಲಕ್ಕೂ ನೀವು ಕಾರಣವಾಗಬೇಕೆಂದು ತಿಳಿಸುತ್ತ ಈ ದಿಕ್ಕಿನಲ್ಲಿ ನೀವು ಪ್ರಯತ್ನ ಮಾಡಿ ಯಶಸ್ವಿಯಾಗಬೇಕೆಂದು ಕೋರಿ ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇನೆ.

ಅಧ್ಯಕ್ಷರು:- ಈಗ ಸರ್ಕಾರಿ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವು ಹೀಗಿದೆ: ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368 (2)ನೇ ಅನುಚ್ಛೇದ ಮತ್ತು (ಸಿ) ಮತ್ತು (ಇ) ಖಂಡಗಳ ವ್ಯಾಪ್ತಿಯಲ್ಲಿ ಬರುವ 1991ರ ಸಂವಿಧಾನದ 72ನೇ ತಿದ್ದುಪಡಿ ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ ಎಂದು ಸೂಚಿಸುವುದು.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಅನುಮೋದನೆ ನೀಡಲಾಯಿತು)

ಅಧ್ಯಕ್ಷರು:- ಎರಡನೆಯ ಪ್ರಸ್ತಾವ ಹೀಗಿದೆ: ಸಂಸತ್ತಿನ ಉಭಯ ಸದನಗಳಿಂದ ಅಂಗೀಕರಿಸಲ್ಪಟ್ಟ

ಬರುವ 1991ನೇ ಸಂವಿಧಾನದ 73ನೇ ತಿದ್ದುಪಡಿ ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ ಎಂದು ಸೂಚಿಸುವುದು.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಅನುಮೋದನೆ ಮಾಡಲಾಯ್ತು)

ಪ್ರಕಟಣೆ:-

ಅಧ್ಯಕ್ಷರು:– ಈಗ ಒಂದು ಪ್ರಕಟಣೆ ಇದೆ: ಈ ದಿನ ನಡೆದ ಸದನ ಕಾರ್ಯಕಲಾಪಗಳ ಸಲಹಾ ಸಮಿತಿಯ ಶಿಫಾರಸಿನಂತೆ ಸದನವು ಪ್ರಸ್ತುತ ಅಧಿವೇಶನವು ಪೂರ್ಣಗೊಳ್ಳುವತನಕ ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ 1 ಗಂಟೆಯಿಂದ ಊಟದ ವಿರಾಮವನ್ನು ಹೊರತುಪಡಿಸಿ ಕಾರ್ಯಕಲಾಪ ನಡೆಸಲು ತೀರ್ಮಾನಿಸಲಾಯಿತು.

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

Printed by Joint Director, Government Text Book Press, Mysore

WD - 191 - GTBPM - 680 - 7-8-1994

PRINTED BY THE JOINT DIRECTOR,
AT THE GOVERNMENT TEXT BOOK PRESS, MYSORE.

KSA LIBRARY, B'lore
B020639
328.32402 548 LAD,1993
JJ48